
ಶ್ರೀಮಹಾಭಾರತ



ವ್ಯಾಸ ಮಹಾಭಾರತದ ಮೂಲ ಸಂಸ್ಕೃತ ಶ್ಲೋಕಗಳೊಂದಿಗೆ
ಸರಳ ಕನ್ನಡ ಅನುವಾದ

ಶಾಂತಿ ಪರ್ವ: ಭಾಗ 1

ಅನುವಾದಕ: ರಮೇಶ್ ಬಿ.ಎಮ್.



ಬನದಕೊಪ್ಪದ ಶ್ರೀ ಲಕ್ಷ್ಮೀನಾರಾಯಣ ದೇವರು

ಪರಿವಿಡಿ

ರಾಜಧರ್ಮ ಪರ್ವ 10

ಕರ್ಣಾಭಿಜ್ಞಾನ 11

ಕರ್ಣಶಾಪ 23

ಕರ್ಣಾಸ್ತ್ರಪ್ರಾಪ್ತಿ 31

ದುರ್ಯೋಧನ ಸ್ವಯಂವರದಲ್ಲಿ ಕನ್ಯಾಹರಣ 41

ಕರ್ಣವೀರ್ಯಕಥನ 47

ಸ್ತ್ರೀಶಾಪ 51

ಯುಧಿಷ್ಠಿರ ಪರಿವೇದನೆ 54

ಅರ್ಜುನ ವಾಕ್ಯ 66

ಯುಧಿಷ್ಠಿರ ವಾಕ್ಯ 77

ಭೀಮವಾಕ್ಯ 87

ಅರ್ಜುನವಾಕ್ಯೇ ಋಷಿ-ಶಕುನಿಸಂವಾದ ಕಥನ 95

ನಕುಲವಾಕ್ಯ 103

ಸಹದೇವವಾಕ್ಯ 113

ದ್ರೌಪದೀವಾಕ್ಯ 118

ಅರ್ಜುನವಾಕ್ಯ 128

ಭೀಮವಾಕ್ಯ 144
ಯುಧಿಷ್ಠಿರವಾಕ್ಯ 151
ಜನಕೋಽಪಖ್ಯಾನ 158
ಯುಧಿಷ್ಠಿರವಾಕ್ಯ 170
ದೇವಸ್ಥಾನವಾಕ್ಯ 177
ಅರ್ಜುನವಾಕ್ಯ 188
ವ್ಯಾಸವಾಕ್ಯ 193
ಶಂಖ-ಲಿಖಿತೋಽಪಖ್ಯಾನ 197
ಹಯಗ್ರೀವೋಽಪಖ್ಯಾನ 205
ಸೇನಜಿದುಪಾಖ್ಯಾನ 216
ಯುಧಿಷ್ಠಿರವಾಕ್ಯ 228
ಅಶ್ಮ-ಜನಕ ಸಂವಾದ 237
ಷೋಡಶ-ರಾಜಕೀಯೋಽಪಖ್ಯಾನ 252
ನಾರದ-ಪರ್ವತೋಪಾಖ್ಯಾನ 292
ಸುವರ್ಣಷ್ಠೀವ್ಯುಪಾಽಖ್ಯಾನ 303
ಪ್ರಾಯಶ್ಚಿತ್ತವಿಧಿ 316
ಪ್ರಾಯಶ್ಚಿತ್ತೀಯೋಪಾಖ್ಯಾನ 323

ಯುಧಿಷ್ಠಿರನ ಹಸ್ತಿನಾಪುರ ಪ್ರವೇಶ 369
ಚರ್ವಾಕಚರಿತ ಕಥನ 381
ರಾಜ್ಯಾಭಿಷೇಕ 394
ಭೀಮಾದಿಕರ್ಮನಿಯೋಗ 400
ಶ್ರಾದ್ಧಕ್ರಿಯಾ 406
ಕೃಷ್ಣನಾಮಶತಸ್ತುತಿ 409
ಗೃಹವಿಭಾಗ 416
ಕೃಷ್ಣಂಪ್ರತಿ ಯುಧಿಷ್ಠಿರವಾಕ್ಯ 420
ಭೀಷ್ಮಸ್ತವರಾಜಃ 436
ಜಾಮದಗ್ನೇಯೋಽಪಖ್ಯಾನ 463
ಕೃಷ್ಣವಾಕ್ಯ 487
ಯುಧಿಷ್ಠಿರಾದ್ಯಾಗಮನ 503
ಭೀಷ್ಮಾಭಿಗಮನ 512
ಕೃಷ್ಣವಾಕ್ಯ 519
ಯುಧಿಷ್ಠಿರಾಶಾಸನ 529
ಯುಧಿಷ್ಠಿರಾದಿ ಸ್ವಸ್ಥಾನಗಮನ 564
ಸೂತ್ರಾಧ್ಯಾಯ 573

ವರ್ಣಾಶ್ರಮಧರ್ಮಕಥನ 610
ಇಂದ್ರ-ಮಾಂಧಾತ ಸಂವಾದ 646
ಬೃಹಸ್ಪತಿ-ಕೌಸಲ್ಯ ಸಂವಾದ 689
ಪುರೂರವಪವನಸಂವಾದ 747
ಐಲಕಶ್ಯಪಸಂವಾದ 755
ಮುಚುಕುಂದೋಪಾಖ್ಯಾನ 767
ಕೈಕೇಯೋಪಾಖ್ಯಾನ 788
ವಾಸುದೇವ-ನಾರದ ಸಂವಾದ 828
ಅಮಾತ್ಯಪರೀಕ್ಷಾ – ಕಾಲಕವೃಕ್ಷೀಯೋಪಾಖ್ಯಾನ 837
ಸಭ್ಯಾದಿಲಕ್ಷಣಕಥನ 856
ಇಂದ್ರ-ಬೃಹಸ್ಪತಿ ಸಂವಾದ 872
ಅಮಾತ್ಯವಿಭಾಗ 876
ದುರ್ಗಪರೀಕ್ಷಾ 885
ರಾಷ್ಟ್ರಗುಪ್ತ್ಯಾದಿಕಥನ 895
ಕೋಶಸಂಚಯಪ್ರಕಾರಕಥನ 906
ರಾಷ್ಟ್ರಗುಪ್ತ 915
ಉತಥ್ಯಗೀತಾ 923

ವಾಮದೇವಗೀತಾ..... 949

ವಿಜಿಗೀಷಮಾಣವೃತ್ತ..... 969

ಇಂದ್ರಾಂಬರೀಷ ಸಂವಾದ..... 992

ಸೇನಾನೀತಿಕಥನ..... 1014

ಇಂದ್ರ-ಬೃಹಸ್ಪತಿ ಸಂವಾದ..... 1049

ಕಾಲಕವೃಕ್ಷೀಯ..... 1065

ಗಣವೃತ್ತ..... 1098

ಮಾತೃಪಿತೃಗುರುಮಹಾತ್ಮ್ಯ..... 1106

ಸತ್ಯಾನೃತ ವಿಭಾಗ..... 1116

ದುರ್ಗಾತಿತರಣ..... 1125

ವ್ಯಾಘ್ರ-ಗೋಮಾಯುಸಂವಾದ..... 1133

ಉಷ್ಟ್ರಶಿರೋಗ್ರೀವ ಕಥನ..... 1158

ಸರಿತ್ಸಾಗರ ಸಂವಾದ..... 1164

ಟಿಟ್ಟಿಭಕ..... 1169

ಋಷಿರ್ಸಂವಾದ..... 1183

ರಾಜಧರ್ಮಕಥನ..... 1209

ದಂಡಸ್ವರೂಪಾದಿಕಥನ..... 1231

ವಸುಹೋಮ-ಮಾಂಧಾತೃ ಸಂವಾದ
(ದಂಡೋತ್ಪತ್ಯುಪಾಖ್ಯಾನ)..... 1246
ಕಾಮಂದಾಂಗಾರಿಷ್ಟ ಸಂವಾದ..... 1261
ಶೀಲವರ್ಣನ..... 1269
ಋಷಭ-ಸುಮಿತ್ರ ಸಂವಾದ (ಋಷಭ ಗೀತಾ)..... 1287
ಯಮ-ಗೌತಮ ಸಂವಾದ..... 1311
ಆಪದ್ಧರ್ಮ ಪರ್ವ..... 1329
ಕಾಪವ್ಯಾನುಶಾಸನ..... 1351
ಶಕುಲಾಖ್ಯಾನ..... 1362
ಮಾರ್ಜರ-ಮೂಷಕ ಸಂವಾದ..... 1370
ಬ್ರಹ್ಮದತ್ತ-ಪೂಜನೀ ಸಂವಾದ..... 1430
ಕಣಿಕ-ಶತ್ರುಂತಪ ಸಂವಾದ..... 1464
ವಿಶ್ವಾಮಿತ್ರ-ಶ್ವಪಚ ಸಂವಾದ..... 1485
ಕಪೋತ-ಲುಬ್ಧಕ ಸಂವಾದ..... 1528
ಇಂದ್ರೋತ-ಪಾರಿಕ್ಷಿತೀಯ ಸಂವಾದ..... 1563
ಗೃಧ್ರಜಂಬುಕ ಸಂವಾದ..... 1588
ಶಲ್ಮಲಿ-ಪವನ ಸಂವಾದ..... 1622

ಖಡ್ಗೋತ್ಪತ್ತಿ 1714
ಕೃತಘ್ನಗೌತಮೋಪಾಖ್ಯಾನ 1754

||ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ||

ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

ಶ್ರೀ ಮಹಾಭಾರತ

ಶಾಂತಿಪರ್ವ



ರಾಜಧರ್ಮ[1] ಪರ್ವ

[1] ಈ ಪರ್ವಕ್ಕೆ ರಾಜಧರ್ಮಾನುಶಾಸನ ಪರ್ವವೆಂಬ ಹೆಸರೂ ಇದೆ (ಗೀತಾ ಪ್ರೆಸ್).

ಕರ್ಣಾಭಿಜ್ಞಾನ

ಶುದ್ಧಿಕಾರ್ಯಗಳನ್ನಾಚರಿಸುತ್ತಾ ಗಂಗಾತೀರದಲ್ಲಿ ಒಂದು ತಿಂಗಳು ಉಳಿದುಕೊಂಡಿದ್ದ ಪಾಂಡವರ ಬಳಿ ಬ್ರಹ್ಮರ್ಷಿಸತ್ತಮರು ಆಗಮಿಸಿದುದು (1-8). ಯುಧಿಷ್ಠಿರನ ಮನಃಸ್ಥಿತಿಯ ಕುರಿತು ನಾರದನು ಕೇಳಲು ಯುಧಿಷ್ಠಿರನು ಜ್ಞಾತಿವಧೆಗೆ ತಾನು ಕಾರಣನಾದೆನೆಂದು ಶೋಕಿಸುವುದು (9-17). ಯುಧಿಷ್ಠಿರನು ಕರ್ಣನ ಕುರಿತು ಶೋಕಿಸುತ್ತಾ, ರಣರಂಗದಲ್ಲಿ ಕರ್ಣನ ರಥಚಕ್ರಗಳನ್ನು ಭೂಮಿಯು ಏಕೆ ನುಂಗಿಬಿಟ್ಟಳು ಎಂದು ನಾರದನನ್ನು ಕೇಳಿದುದು (18-45).

12001001 ವೈಶಂಪಾಯನ ಉವಾಚ|
12001001a ಕೃತೋದಕಾಸ್ತೇ ಸುಹೃದಾಂ ಸರ್ವೇಷಾಂ ಪಾಂಡುನಂದನಾಃ|
12001001c ವಿದುರೋ ಧೃತರಾಷ್ಟ್ರಶ್ಚ ಸರ್ವಾಶ್ಚ ಭರತಸ್ತ್ರಿಯಃ||
12001002a ತತ್ರ ತೇ ಸುಮಹಾತ್ಮಾನೋ ನ್ಯವಸನ್ಕುರುನಂದನಾಃ|
12001002c ಶೌಚಂ ನಿವರ್ತಯಿಷ್ಯಂತೋ ಮಾಸಮೇಕಂ ಬಹಿಃ ಪುರಾತ್||

ವೈಶಂಪಾಯನನು ಹೇಳಿದನು: "ಪಾಂಡುನಂದನರು, ವಿದುರ, ಧೃತರಾಷ್ಟ್ರ ಮತ್ತು ಸರ್ವ ಭರತಸ್ತ್ರೀಯರು ಎಲ್ಲ ಸುಹೃದಯರಿಗೂ ಉದಕ ಕ್ರಿಯೆಗಳನ್ನು ಪೂರೈಸಿದರು. ಬಳಿಕ ಮಹಾತ್ಮ ಕುರುನಂದನರು ಶುದ್ಧಿಕಾರ್ಯಗಳನ್ನಾಚರಿಸುತ್ತಾ ಒಂದು ತಿಂಗಳ ಕಾಲ ಪುರದ ಹೊರಗೆ ಗಂಗಾತೀರದಲ್ಲಿಯೇ ಉಳಿದುಕೊಂಡರು.

12001003a ಕೃತೋದಕಂ ತು ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್|
12001003c ಅಭಿಜಗ್ಮುರ್ಮಹಾತ್ಮಾನಃ ಸಿದ್ಧಾ ಬ್ರಹ್ಮರ್ಷಿಸತ್ತಮಾಃ||

ಉದಕ ಕ್ರಿಯೆಗಳನ್ನು ಪೂರೈಸಿದ ರಾಜಾ ಧರ್ಮಾತ್ಮ ಯುಧಿಷ್ಠಿರನಲ್ಲಿಗೆ ಮಹಾತ್ಮ ಸಿದ್ಧ ಬ್ರಹ್ಮರ್ಷಿಸತ್ತಮರು ಆಗಮಿಸಿದರು.

12001004a ದ್ವೈಪಾಯನೋ ನಾರದಶ್ಚ ದೇವಲಶ್ಚ ಮಹಾನೃಷಿಃ|
12001004c ದೇವಸ್ಥಾನಶ್ಚ ಕಣ್ವಶ್ಚ ತೇಷಾಂ ಶಿಷ್ಯಾಶ್ಚ ಸತ್ತಮಾಃ||
12001005a ಅನ್ಯೇ ಚ ವೇದವಿದ್ವಾಂಸಃ ಕೃತಪ್ರಜ್ಞಾ ದ್ವಿಜಾತಯಃ|
12001005c ಗೃಹಸ್ಥಾಃ ಸ್ನಾತಕಾಃ ಸರ್ವೇ[2] ದದೃಶುಃ ಕುರುಸತ್ತಮಮ್||

ದ್ವೈಪಾಯನ, ನಾರದ, ಮಹಾನ್ ಋಷಿ ದೇವಲ, ದೇವಸ್ಥಾನ, ಕಣ್ವ ಮತ್ತು ಅವನ ಸತ್ತಮ ಶಿಷ್ಯರು, ಅನ್ಯ ವೇದವಿದ್ವಾಂಸರೂ, ಕೃತಪ್ರಜ್ಞ ದ್ವಿಜಾತಿಯರೂ, ಗೃಹಸ್ಥರೂ, ಸ್ನಾತಕರೂ ಎಲ್ಲರೂ ಕುರುಸತ್ತಮನನ್ನು ಕಂಡರು.

12001006a ಅಭಿಗಮ್ಯ ಮಹಾತ್ಮಾನಃ ಪೂಜಿತಾಶ್ಚ ಯಥಾವಿಧಿ|
12001006c ಆಸನೇಷು ಮಹಾರ್ಹೇಷು ವಿವಿಶುಸ್ತೇ ಮಹರ್ಷಯಃ||

ಆಗಮಿಸಿದ ಮಹಾಋಷಿಗಳು ಯಥಾವಿಧಿಯಾಗಿ ಪೂಜಿಸಲ್ಪಟ್ಟು ಅಮೂಲ್ಯ ಆಸನಗಳಲ್ಲಿ ಕುಳಿತುಕೊಂಡರು.

12001007a ಪ್ರತಿಗೃಹ್ಯ ತತಃ ಪೂಜಾಂ ತತ್ಕಾಲಸದೃಶೀಂ ತದಾ|
12001007c ಪರ್ಯುಪಾಸನ್ಯಥಾನ್ಯಾಯಂ ಪರಿವಾರ್ಯ ಯುಧಿಷ್ಠಿರಮ್||
12001008a ಪುಣ್ಯೇ ಭಾಗೀರಥೀತೀರೇ ಶೋಕವ್ಯಾಕುಲಚೇತಸಮ್|

[2] ಸಂತೋ (ಗೀತಾ ಪ್ರೆಸ್).

12001008c ಆಶ್ವಾಸಯಂತೋ ರಾಜಾನಂ ವಿಪ್ರಾಃ ಶತಸಹಸ್ರಶಃ||

ಆ ಶೋಕಸಮಯಕ್ಕೆ ತಕ್ಕುದಾದ ಪೂಜೆಗಳನ್ನು ಸ್ವೀಕರಿಸಿ ನೂರಾರು ಸಹಸ್ರಾರು ವಿಪ್ರರು ಆ ಪುಣ್ಯ ಭಾಗೀರಥೀ ತೀರದಲ್ಲಿ ಶೋಕವ್ಯಾಕುಲ ಚೇತಸ ರಾಜ ಯುಧಿಷ್ಠಿರನನ್ನು ಯಥಾನ್ಯಾಯವಾಗಿ ಗೌರವಿಸಿ ಸುತ್ತುವರೆದು ಕುಳಿತು ಸಮಾಧಾನಪಡಿಸುತ್ತಿದ್ದರು.

12001009a ನಾರದಸ್ತ್ವ ಬ್ರವೀತ್ಕಾಲೇ ಧರ್ಮಾತ್ಮಾನಂ ಯುಧಿಷ್ಠಿರಮ್|
12001009c ವಿಚಾರ್ಯ ಮುನಿಭಿಃ ಸಾರ್ಧಂ ತತ್ಕಾಲಸದೃಶಂ ವಚಃ[3]||

ಆ ಸಮಯದಲ್ಲಿ ಇತರ ಮುನಿಗಳೊಂದಿಗೆ ವಿಚಾರಿಸಿ ನಾರದನು ಆ ಕಾಲಕ್ಕೆ ತಕ್ಕುದಾದ ಈ ಮಾತುಗಳನ್ನು ಧರ್ಮಾತ್ಮ ಯುಧಿಷ್ಠಿರನಿಗೆ ಹೇಳಿದನು:

12001010a ಭವತೋ ಬಾಹುವೀರ್ಯೇಣ ಪ್ರಸಾದಾನ್ಮಾಧವಸ್ಯ ಚ|
12001010c ಜಿತೇಯಮವನಿಃ ಕೃತ್ಸ್ನಾ ಧರ್ಮೇಣ ಚ ಯುಧಿಷ್ಠಿರ||

“ಯುಧಿಷ್ಠಿರ! ನಿನ್ನ ಬಾಹುವೀರ್ಯದಿಂದ ಮತ್ತು ಮಾಧವನ ಪ್ರಸಾದದಿಂದ ನೀನು ಈ ಇಡೀ ಭೂಮಿಯನ್ನು ಧರ್ಮಪೂರ್ವಕವಾಗಿ ಗೆದ್ದಿರುವೆ!

12001011a ದಿಷ್ಟ್ಯಾ ಮುಕ್ತಾಃ ಸ್ಥ ಸಂಗ್ರಾಮಾದಸ್ಮಾಲ್ಲೋಕಭಯಂಕರಾತ್|
12001011c ಕ್ಷತ್ರಧರ್ಮರತಶ್ಚಾಪಿ ಕಚ್ಚಿನ್ನೋದಸಿ ಪಾಂಡವ||

ಸೌಭಾಗ್ಯವಾಶಾತ್ ನೀನು ಆ ಲೋಕಭಯಂಕರ ಸಂಗ್ರಾಮದಿಂದ ಮುಕ್ತನಾಗಿರುವೆ. ಪಾಂಡವ! ಕ್ಷತ್ರಧರ್ಮರತನಾಗಿದ್ದುಕೊಂಡು

[3] ಸಂಭಾಷ್ಯ ಮುನಿಭಿಃ ಸಾರ್ಧಂ ಕೃಷ್ಣದ್ವೈಪಾಯನಾದಿಭಃ|| (ಗೀತಾ ಪ್ರೆಸ್).



ಈಗಲಾದರೂ ಸಂತೋಷದಿಂದಿರುವೆಯಲ್ಲವೇ?

12001012a ಕಚ್ಚಿಚ್ಚ ನಿಹತಾಮಿತ್ರಃ ಪ್ರೀಣಾಸಿ ಸುಹೃದೋ ನೃಪ|
12001012c ಕಚ್ಚಿಚ್ಚ್ರಿಯಮಿಮಾಂ ಪ್ರಾಪ್ಯ ನ ತ್ವಾಂ ಶೋಕಃ ಪ್ರಬಾಧತೇ||

ನೃಪ! ಅಮಿತ್ರರನ್ನು ಸಂಹರಿಸಿ ಮಿತ್ರರಿಗೆ ಪ್ರೀತಿಯನ್ನುಂಟುಮಾಡಿರುವೆ ತಾನೇ? ಈ ಶ್ರೀಯನ್ನು ಪಡೆದ ನಿನ್ನನ್ನು ಬೇರೆ ಯಾವ ಶೋಕವೂ ಬಾಧಿಸುತ್ತಿಲ್ಲ ತಾನೇ?"

12001013 ಯುಧಿಷ್ಠಿರ ಉವಾಚ|
12001013a ವಿಜಿತೇಯಂ ಮಹೀ ಕೃತ್ಸ್ನಾ ಕೃಷ್ಣಬಾಹುಬಲಾಶ್ರಯಾತ್|
12001013c ಬ್ರಾಹ್ಮಣಾನಾಂ ಪ್ರಸಾದೇನ ಭೀಮಾರ್ಜುನಬಲೇನ ಚ||

ಯುಧಿಷ್ಠಿರನು ಹೇಳಿದನು: "ಕೃಷ್ಣನ ಬಾಹುಬಲವನ್ನಾಶ್ರಯಿಸಿ, ಬ್ರಾಹ್ಮಣರ ಪ್ರಸಾದದಿಂದ ಮತ್ತು ಭೀಮಾರ್ಜುನರ ಬಲದಿಂದ ಇಡೀ ಭೂಮಿಯನ್ನೇ ಗೆದ್ದಾಯಿತು!

12001014a ಇದಂ ತು ಮೇ ಮಹದ್ದುಃಖಂ ವರ್ತತೇ ಹೃದಿ ನಿತ್ಯದಾ|
12001014c ಕೃತ್ವಾ ಜ್ಞಾತಿಕ್ಷಯಮಿಮಂ ಮಹಾಂತಂ ಲೋಭಕಾರಿತಮ್||

ಆದರೆ ಲೋಭಕ್ಕಾಗಿ ಈ ಮಹಾ ಜ್ಞಾತಿಕ್ಷಯವನ್ನು ಮಾಡಿದೆನಲ್ಲಾ ಎಂಬ ಮಹಾದುಃಖವು ನಿತ್ಯವೂ ನನ್ನ ಹೃದಯದಲ್ಲಿ ನೆಲೆಗೊಂಡಿದೆ!

12001015a ಸೌಭದ್ರಂ ದ್ರೌಪದೇಯಾಂಶ್ಚ ಘಾತಯಿತ್ವಾ ಪ್ರಿಯಾನ್ಸುತಾನ್|
12001015c ಜಯೋಽಯಮಜಯಾಕಾರೋ ಭಗವನ್ ಪ್ರತಿಭಾತಿ ಮೇ||

ಭಗವನ್! ಪ್ರಿಯ ಸುತರಾದ ಸೌಭದ್ರ ಮತ್ತು ದ್ರೌಪದೇಯರನ್ನು ಸಾಯಗೊಳಿಸಿ ನನಗೆ ಈ ಜಯವೂ ಸೋಲಾಗಿ ಕಾಣುತ್ತಿದೆ.

12001016a ಕಿಂ ನು ವಕ್ಷ್ಯತಿ ವಾರ್ಷ್ಣೇಯೀ ವಧೂರ್ಮೇ ಮಧುಸೂದನಮ್|
12001016c ದ್ವಾರಕಾವಾಸಿನೀ ಕೃಷ್ಣಮಿತಃ ಪ್ರತಿಗತಂ ಹರಿಮ್||

ಇಲ್ಲಿಂದ ಕೃಷ್ಣನು ಹಿಂದಿರುಗಿದಾಗ ನನ್ನ ಸೊಸೆ ವಾರ್ಷ್ಣೇಯೀ ಸುಭದ್ರೆಯು ಮಧುಸೂದನನಿಗೆ ಏನೆನ್ನುವಳು? ದ್ವಾರಕಾವಾಸಿಗಳು ಹರಿಯನ್ನು ಏನೆಂದು ಪ್ರಶ್ನಿಸುವರು?

12001017a ದ್ರೌಪದೀ ಹತಪುತ್ರೇಯಂ ಕೃಪಣಾ ಹತಬಾಂಧವಾ|
12001017c ಅಸ್ಮತ್ಪ್ರಿಯಹಿತೇ ಯುಕ್ತಾ ಭೂಯಃ ಪೀಡಯತೀವ ಮಾಮ್||

ಪುತ್ರರನ್ನೂ ಬಾಂಧವರನ್ನೂ ಕಳೆದುಕೊಂಡ ದ್ರೌಪದಿಯು ದೀನಳಾಗಿದ್ದಾಳೆ. ನಮ್ಮ ಪ್ರಿಯಹಿತದಲ್ಲಿಯೇ ನಿರತಳಾಗಿದ್ದ ಅವಳು ಈಗ ನನ್ನನ್ನು ಪೀಡಿಸುತ್ತಿರುವಳೋ ಎನ್ನುವಂತೆ ನನಗನ್ನಿಸುತ್ತದೆ.

12001018a ಇದಮನ್ಯಚ್ಚ ಭಗವನ್ಯತ್ತ್ವಾಂ ವಕ್ಷ್ಯಾಮಿ ನಾರದ|
12001018c ಮಂತ್ರಸಂವರಣೇನಾಸ್ಮಿ ಕುಂತ್ಯಾ ದುಃಖೇನ ಯೋಜಿತಃ||

ಭಗವನ್! ನಾರದ! ಜೊತೆಗೆ ಇನ್ನೊಂದು ದುಃಖದ ಕುರಿತು ನಿನಗೆ ಹೇಳುತ್ತೇನೆ. ಕುಂತಿಯು ರಹಸ್ಯವಾಗಿಟ್ಟಿದ್ದುದನ್ನು ಕೇಳಿ ಅತೀವ ದುಃಖಿತನಾಗಿದ್ದೇನೆ.

12001019a ಯೋಽಸೌ ನಾಗಾಯುತಬಲೋ ಲೋಕೇಽಪ್ರತಿರಥೋ ರಣೇ|
12001019c ಸಿಂಹಖೇಲಗತಿರ್ಧೀಮಾನ್ ಘೃಣೀ ದಾಂತೋ[4] ಯತವ್ರತಃ||
12001020a ಆಶ್ರಯೋ ಧಾರ್ತರಾಷ್ಟ್ರಾಣಾಂ ಮಾನೀ ತೀಕ್ಷ್ಣಪರಾಕ್ರಮಃ|
12001020c ಅಮರ್ಷೀ ನಿತ್ಯಸಂರಂಭೀ ಕ್ಷೇಪ್ತಾಸ್ಮಾಕಂ ರಣೇ ರಣೇ||

[4] ದಾತಾ (ಗೀತಾ ಪ್ರೆಸ್).

12001021a ಶೀಘ್ರಾಸ್ತ್ರಶ್ಚಿತ್ರಯೋಧೀ ಚ ಕೃತೀ ಚಾದ್ಭುತವಿಕ್ರಮಃ|
12001021c ಗೂಢೋತ್ಪನ್ನಃ ಸುತಃ ಕುಂತ್ಯಾ ಭ್ರಾತಾಸ್ಮಾಕಂ ಚ ಸೋದರಃ||

ಹತ್ತುಸಾವಿರ ಆನೆಗಳ ಬಲವಿದ್ದ, ಲೋಕದಲ್ಲಿಯೇ ಅಪ್ರತಿಮ ಮಹಾರಥ, ರಣದಲ್ಲಿ ಸಿಂಹದಂತೆ ಸಂಚರಿಸುತ್ತಿದ್ದ ಧೀಮಾನ್, ದಯಾಳು, ಅಭಿಮಾನೀ, ತೀಕ್ಷ್ಣ ಪರಾಕ್ರಮಿ, ಧಾರ್ತರಾಷ್ಟ್ರರ ಆಶ್ರಯ, ಅಸಹನಶೀಲ, ನಿತ್ಯಕೋಪೀ, ರಣರಣದಲ್ಲಿಯೂ ನಮ್ಮನ್ನು ಸೋಲಿಸುತ್ತಿದ್ದ ಆ ಶೀಘ್ರಾಸ್ತ್ರ, ಚಿತ್ರಯೋಧೀ, ಧನುರ್ವೇದ ಪಂಡಿತ, ಅದ್ಭುತ ವಿಕ್ರಮಿಯು ರಹಸ್ಯದಲ್ಲಿ ಹುಟ್ಟಿದ ಕುಂತಿಯ ಮಗ ಮತ್ತು ನಮ್ಮ ಸಹೋದರ ಅಣ್ಣನಾಗಿದ್ದನು!

12001022a ತೋಯಕರ್ಮಣಿ ಯಂ ಕುಂತೀ ಕಥಯಾಮಾಸ ಸೂರ್ಯಜಮ್|
12001022c ಪುತ್ರಂ ಸರ್ವಗುಣೋಪೇತಮವಕೀರ್ಣಂ ಜಲೇ ಪುರಾ||

ಉದಕಕ್ರಿಯೆಗಳನ್ನು ಮಾಡುತ್ತಿದ್ದಾಗ ಕುಂತಿಯು ಸೂರ್ಯನಿಂದ ಹುಟ್ಟಿದ ಆ ಸರ್ವಗುಣೋಪೇತ ಪುತ್ರನನ್ನು ಹಿಂದೆ ನೀರಿನಲ್ಲಿ ತೇಲಿಸಿ ಬಿಟ್ಟಿದುದನ್ನು ನಮಗೆ ಹೇಳಿದಳು.

[5]12001023a ಯಂ ಸೂತಪುತ್ರಂ ಲೋಕೋಽಯಂ ರಾಧೇಯಂ ಚಾಪ್ಯಮನ್ಯತ|
12001023c ಸ ಜ್ಯೇಷ್ಠಪುತ್ರಃ ಕುಂತ್ಯಾ ವೈ ಭ್ರಾತಾಸ್ಮಾಕಂ ಚ ಮಾತೃಜಃ||

ಈ ಲೋಕವು ಯಾರನ್ನು ರಾಧೇಯ ಸೂತಪುತ್ರನೆಂದು ಅಪಮಾನಿಸುತ್ತಿತ್ತೋ ಅವನು ಕುಂತಿಯ ಜ್ಯೇಷ್ಠಪುತ್ರ ಮತ್ತು ನಮ್ಮ

[5] ಇದಕ್ಕೆ ಮೊದಲು ಈ ಒಂದು ಶ್ಲೋಕಾರ್ಧವಿದೆ: ಮಂಜೂಷಾಯಾಂ ಸಮಾಧಾಯ ಗಂಗಾಸ್ರೋತಸ್ಯಮಜ್ಜಯತ್| (ಗೀತಾ ಪ್ರೆಸ್).

ತಾಯಲ್ಲಿ ಹುಟ್ಟಿದ ನಮ್ಮ ಅಣ್ಣನಾಗಿದ್ದನು.

12001024a ಅಜಾನತಾ ಮಯಾ ಸಂಖ್ಯೇ ರಾಜ್ಯಲುಬ್ಧೇನ ಘಾತಿತಃ|
12001024c ತನ್ಮೇ ದಹತಿ ಗಾತ್ರಾಣಿ ತೂಲರಾಶಿಮಿವಾನಲಃ||

ಅದನ್ನು ತಿಳಿಯದೇ ನಾನು ರಾಜ್ಯಲೋಭದಿಂದ ರಣದಲ್ಲಿ ಅವನನ್ನು ಕೊಲ್ಲಿಸಿದೆ. ಅಗ್ನಿಯು ಹತ್ತಿಯರಾಶಿಯನ್ನು ಹೇಗೋ ಹಾಗೆ ಅದು ನನ್ನ ಅಂಗಾಂಗಳನ್ನು ಸುಡುತ್ತಿದೆ.

12001025a ನ ಹಿ ತಂ ವೇದ ಪಾರ್ಥೋ ಽಪಿ ಭ್ರಾತರಂ ಶ್ವೇತವಾಹನಃ|
12001025c ನಾಹಂ ನ ಭೀಮೋ ನ ಯಮೌ ಸ ತ್ವಸ್ಮಾನ್ವೇದ ಸುವ್ರತಃ||

ಅವನು ಅಣ್ಣನೆಂದು ಶ್ವೇತವಾಹನ ಪಾರ್ಥನಿಗಾಗಲೀ, ನನಗಾಗಲೀ, ಭೀಮನಿಗಾಗಲೀ, ಯಮಳರಿಗಾಗಲೀ ತಿಳಿದಿರಲಿಲ್ಲ. ಆದರೆ ನಾವು ಅವನ ಸಹೋದರರೆಂದು ಆ ಸುವ್ರತನಿಗೆ ತಿಳಿದಿತ್ತು!

12001026a ಗತಾ ಕಿಲ ಪೃಥಾ ತಸ್ಯ ಸಕಾಶಮಿತಿ ನಃ ಶ್ರುತಮ್|
12001026c ಅಸ್ಮಾಕಂ ಶಮಕಾಮಾ ವೈ ತ್ವಂ ಚ ಪುತ್ರೋ ಮಮೇತ್ಯಥ||

ನಮ್ಮೊಡನೆ ಶಾಂತಿಯನ್ನು ಬಯಸಿ ಪೃಥೆಯು ಅವನ ಬಳಿ ಹೋಗಿ "ನೀನು ನನ್ನ ಮಗ" ಎಂದು ಹೇಳಿದ್ದಳೆಂದು ನಾವು ಕೇಳಿದ್ದೇವೆ.

12001027a ಪೃಥಾಯಾ ನ ಕೃತಃ ಕಾಮಸ್ತೇನ ಚಾಪಿ ಮಹಾತ್ಮನಾ|
12001027c ಅತಿಪಶ್ಚಾದಿದಂ ಮಾತರ್ಯವೋಚದಿತಿ ನಃ ಶ್ರುತಮ್||

ಆದರೆ ಆ ಮಹಾತ್ಮನು ಪೃಥೆಯು ಬಯಸಿದಂತೆ ಮಾಡಲಿಲ್ಲ. ಅದೂ ಅಲ್ಲದೆ ಅವನು ತಾಯಿಗೆ ಇದನ್ನು ಹೇಳಿದನೆಂದು ನಾವು ಕೇಳಿದ್ದೇವೆ.

12001028a ನ ಹಿ ಶಕ್ಷ್ಯಾಮ್ಯಹಂ ತ್ಯಕ್ತುಂ ನೃಪಂ ದುರ್ಯೋಧನಂ ರಣೇ|

12001028c ಅನಾರ್ಯಂ ಚ ನೃಶಂಸಂ ಚ ಕೃತಘ್ನಂ ಚ ಹಿ ಮೇ ಭವೇತ್‌॥

“ರಣದಲ್ಲಿ ನೃಪ ದುರ್ಯೋಧನನ್ನು ತ್ಯಜಿಸಲು ನಾನು ಶಕ್ತನಿಲ್ಲ. ನಾನು ಅನಾರ್ಯನೂ, ಕ್ರೂರಿಯೂ, ಕೃತಘ್ನನೂ ಆಗುವುದು ಬೇಡ!

12001029a ಯುಧಿಷ್ಠಿರೇಣ ಸಂಧಿಂ ಚ ಯದಿ ಕುರ್ಯಾಂ ಮತೇ ತವ|
12001029c ಭೀತೋ ರಣೇ ಶ್ವೇತವಾಹಾದಿತಿ ಮಾಂ ಮಂಸ್ಯತೇ ಜನಃ‌॥

ನಿನ್ನ ಸಲಹೆಯಂತೆ ನಾನೇನಾದರೂ ಯುಧಿಷ್ಠಿರನೊಡನೆ ಸಂಧಿಮಾಡಿಕೊಂಡರೆ ರಣದಲ್ಲಿ ಶ್ವೇತವಾಹನನಿಗೆ ಹೆದರಿ ಹೀಗೆ ಮಾಡಿದೆನೆಂದು ಜನರು ತಿಳಿದುಕೊಳ್ಳುತ್ತಾರೆ.

12001030a ಸೋಽಹಂ ನಿರ್ಜಿತ್ಯ ಸಮರೇ ವಿಜಯಂ ಸಹಕೇಶವಮ್‌|
12001030c ಸಂಧಾಸ್ಯೇ ಧರ್ಮಪುತ್ರೇಣ ಪಶ್ಚಾದಿತಿ ಚ ಸೋಽಬ್ರವೀತ್‌॥

ಸಮರದಲ್ಲಿ ನಾನು ಕೇಶವನೊಡನೆ ವಿಜಯ ಅರ್ಜುನನನ್ನು ಸೋಲಿಸಿದ ನಂತರ ಧರ್ಮಪುತ್ರನೊಂದಿಗೆ ಸಂಧಿಮಾಡಿಕೊಳ್ಳುತ್ತೇನೆ” ಎಂದು ಅವನು ಹೇಳಿದನಂತೆ.

12001031a ತಮವೋಚತ್ಕಿಲ ಪೃಥಾ ಪುನಃ ಪೃಥುಲವಕ್ಷಸಮ್‌|
12001031c ಚತುರ್ಣಾಮಭಯಂ ದೇಹಿ ಕಾಮಂ ಯುಧ್ಯಸ್ವ ಫಲ್ಗುನಮ್‌॥

ಪುನಃ ಪೃಥೆಯು ಆ ವಿಶಾಲವಕ್ಷಸ್ಥಳನಿಗೆ “ಬೇಕಾದರೆ ಫಲ್ಗುನನೊಡನೆ ಯುದ್ಧಮಾಡು, ಆದರೆ ಉಳಿದ ನಾಲ್ವರಿಗೆ ಅಭಯವನ್ನು ನೀಡು” ಎಂದು ಕೇಳಿಕೊಂಡಳಂತೆ!

12001032a ಸೋಽಬ್ರವೀನ್ಮಾತರಂ ಧೀಮಾನ್ವೇಪಮಾನಃ ಕೃತಾಂಜಲಿಃ|
12001032c ಪ್ರಾಪ್ತಾನ್ವಿಷಹ್ಯಾಂಶ್ಚತುರೋ ನ ಹನಿಷ್ಯಾಮಿ ತೇ ಸುತಾನ್‌॥

ಆಗ ಆ ಧೀಮಂತನು ನಡುಗುತ್ತಾ ಅಂಜಲೀಬದ್ಧನಾಗಿ ತಾಯಿಗೆ "ನಿನ್ನ ಆ ನಾಲ್ವರು ಮಕ್ಕಳೂ ನನ್ನಿಂದಾಗಿ ವಿಷಮ ಸ್ಥಿತಿಯನ್ನು ಹೊಂದಿದರೂ ನಾನು ಅವರನ್ನು ಸಂಹರಿಸುವುದಿಲ್ಲ.

12001033a ಪಂಚ್ಯೈವ ಹಿ ಸುತಾ ಮಾತ[6]ರ್ಭವಿಷ್ಯಂತಿ ಹಿ ತೇ ಧ್ರುವಮ್|
12001033c ಸಕರ್ಣಾ ವಾ ಹತೇ ಪಾರ್ಥೇ ಸಾರ್ಜುನಾ ವಾ ಹತೇ ಮಯಿ[7]||

ಪಾರ್ಥನು ಹತನಾದರೆ ಕರ್ಣ ಮತ್ತು ನಾನು ಹತನಾದರೆ ಅರ್ಜುನನೂ ಸೇರಿ ನಿನಗೆ ಐವರು ಮಕ್ಕಳು ಇರುತ್ತಾರೆ. ಮಾತೇ! ಇದು ಸತ್ಯ!"

12001034a ತಂ ಪುತ್ರಗೃದ್ಧಿನೀ ಭೂಯೋ ಮಾತಾ ಪುತ್ರಮಥಾಬ್ರವೀತ್|
12001034c ಭ್ರಾತೄಣಾಂ ಸ್ವಸ್ತಿ ಕುರ್ಯಿರ್ಥಾ ಯೇಷಾಂ ಸ್ವಸ್ತಿ ಚಿಕೀರ್ಷಸಿ||

ಪುತ್ರಪ್ರಿಯಳಾದ ಆ ಮಾತೆಯು ತನ್ನ ಮಗನಿಗೆ ಪುನಃ "ನೀನು ಯಾರಿಗೆ ಮಂಗಳವನ್ನುಂಟುಮಾಡಲು ಬಯಸುತ್ತೀಯೋ ಆ ಸಹೋದರರಿಗೆ ಮಂಗಳವನ್ನುಂಟುಮಾಡು!" ಎಂದು ಹೇಳಿದಳಂತೆ.

12001035a ತಮೇವಮುಕ್ತ್ವಾ ತು ಪೃಥಾ ವಿಸೃಜ್ಯೋಪಯಯೌ ಗೃಹಾನ್|
12001035c ಸೋಽರ್ಜುನೇನ ಹತೋ ವೀರೋ ಭ್ರಾತಾ ಭ್ರಾತ್ರಾ ಸಹೋದರಃ||

ಪೃಥೆಯು ಹಾಗೆ ಹೇಳಲು ಅವರಿಬ್ಬರೂ ಬೀಳ್ಕೊಂಡು ತಮ್ಮ ತಮ್ಮ ಮನೆಗಳಿಗೆ ತೆರಳಿದರಂತೆ. ಆ ವೀರನೇ ಅರ್ಜುನನಿಂದ ಹತನಾದನು.

---

[6] ದೇವಿ (ಗೀತಾ ಪ್ರೆಸ್).

[7] ಸಾರ್ಜುನಾ ವಾ ಹತೇ ಕರ್ಣೇ ಸಕರ್ಣಾ ವಾ ಹತೇಽರ್ಜುನೇ| (ಗೀತಾ ಪ್ರೆಸ್).

ಅಣ್ಣನನ್ನು ತಮ್ಮನು ಸಂಹರಿಸಿದನು!

12001036a ನ ಚೈವ ವಿವೃತೋ ಮಂತ್ರಃ ಪೃಥಾಯಾಸ್ತಸ್ಯ ವಾ ಮುನೇ|
12001036c ಅಥ ಶೂರೋ ಮಹೇಷ್ವಾಸಃ ಪಾರ್ಥೇನಾಸೌ ನಿಪಾತಿತಃ||

ಮುನೇ! ಈ ರಹಸ್ಯವನ್ನು ಪೃಥೆಯಾಗಲೀ ಕರ್ಣನಾಗಲೀ
ಅಂತ್ಯದವರೆಗೂ ಹೊರಗೆಡಹಲೇ ಇಲ್ಲ! ಈಗ ಆ ಶೂರ
ಮಹೇಷ್ವಾಸನು ಪಾರ್ಥನಿಂದ ಹತನಾಗಿದ್ದಾನೆ.

12001037a ಅಹಂ ತ್ವಜ್ಞಾಸಿಷಂ ಪಶ್ಚಾತ್ ಸ್ವಸೋದರ್ಯಂ ದ್ವಿಜೋತ್ತಮ|
12001037c ಪೂರ್ವಜಂ ಭ್ರಾತರಂ ಕರ್ಣಂ ಪೃಥಾಯಾ ವಚನಾತ್ ಪ್ರಭೋ||

ದ್ವಿಜೋತ್ತಮ! ಪ್ರಭೋ! ಅವನ ಮರಣಾನಂತರವೇ ನಾನು ಪೃಥೆಯ
ವಚನದಂತೆ ಕರ್ಣನು ನಮ್ಮ ಸಹೋದರನೆಂದೂ, ನಮ್ಮೆಲ್ಲರ
ಮೊದಲು ಹುಟ್ಟಿದ ಅಣ್ಣನೆಂದೂ ತಿಳಿದುಕೊಂಡೆನು.

12001038a ತೇನ ಮೇ ದೂಯತೇಽತೀವ ಹೃದಯಂ ಭ್ರಾತೃಘಾತಿನಃ|
12001038c ಕರ್ಣಾರ್ಜುನಸಹಾಯೋಽಹಂ ಜಯೇಯಮಪಿ ವಾಸವಮ್||

ಸಹೋದರನನ್ನು ಕೊಲ್ಲಿಸಿದ ನನ್ನ ಈ ಹೃದಯವು ಅತೀವವಾಗಿ
ದುಃಖಿಸುತ್ತಿದೆ. ಕರ್ಣಾರ್ಜುನರ ಸಹಾಯದಿಂದ ನಾನು ವಾಸವನನ್ನೂ
ಜಯಿಸಬಹುದಾಗಿತ್ತು!

12001039a ಸಭಾಯಾಂ ಕ್ಲಿಶ್ಯಮಾನಸ್ಯ ಧಾರ್ತರಾಷ್ಟ್ರೈರ್ದುರಾತ್ಮಭಿಃ|
12001039c ಸಹಸೋತ್ಪತಿತಃ ಕ್ರೋಧಃ ಕರ್ಣಂ ದೃಷ್ಟ್ವಾ ಪ್ರಶಾಮ್ಯತಿ||

ಸಭೆಯಲ್ಲಿ ದುರಾತ್ಮ ಧಾರ್ತರಾಷ್ಟ್ರರಿಂದ ಕಷ್ಟಕ್ಕೊಳಗಾದಾಗ
ಒಮ್ಮೆಲೇ ಮೇಲೇರುತ್ತಿದ್ದ ನನ್ನ ಕ್ರೋಧವು ಕರ್ಣನನ್ನು

ನೋಡಿದೊಡನೆಯೇ ತಣ್ಣಗಾಗುತ್ತಿತ್ತು!

12001040a ಯದಾ ಹ್ಯಸ್ಯ ಗಿರೋ ರೂಕ್ಷಾಃ ಶೃಣೋಮಿ ಕಟುಕೋದಯಾಃ|
12001040c ಸಭಾಯಾಂ ಗದತೋ ದ್ಯೂತೇ ದುರ್ಯೋಧನಹಿತೈಷಿಣಃ||
12001041a ತದಾ ನಶ್ಯತಿ ಮೇ ಕ್ರೋಧಃ ಪಾದೌ ತಸ್ಯ ನಿರೀಕ್ಷ್ಯ ಹ|
12001041c ಕುಂತ್ಯಾ ಹಿ ಸದೃಶೌ ಪಾದೌ ಕರ್ಣಸ್ಯೇತಿ ಮತಿರ್ಮಮ||

ಸಭೆಯಲ್ಲಿ ದ್ಯೂತವನ್ನಾಡುತ್ತಿದ್ದಾಗ ದುರ್ಯೋಧನನ ಹಿತೈಷಿ ಕರ್ಣನ ಕಠೋರ ಚುಚ್ಚುಮಾತುಗಳನ್ನು ಕೇಳಿ ಉಂಟಾದ ನನ್ನ ಕೋಪವು ಅವನ ಪಾದಗಳನ್ನು ನೋಡಿದೊಡನೆಯೇ ನಾಶವಾಗುತ್ತಿತ್ತು. ಕರ್ಣನ ಆ ಎರಡು ಪಾದಗಳು ಕುಂತಿಯ ಪಾದಗಳಂತಿದ್ದವು ಎಂದು ನನಗೆ ಅನ್ನಿಸುತ್ತಿತ್ತು.

12001042a ಸಾದೃಶ್ಯಹೇತುಮನ್ವಿಚ್ಚನ್ ಪೃಥಾಯಾಸ್ತವ ಚೈವ ಹ|
12001042c ಕಾರಣಂ ನಾಧಿಗಚ್ಛಾಮಿ ಕಥಂ ಚಿದಪಿ ಚಿಂತಯನ್||

ಪೃಥೆಯ ಮತ್ತು ಅವನ ಪಾದಗಳ ಸಾದೃಶ್ಯತೆಯ ಕಾರಣವೇನೆಂದು ಎಷ್ಟೇ ಚಿಂತಿಸಿದರೂ ನನಗೆ ಆ ಕಾರಣವು ತಿಳಿದಿರಲಿಲ್ಲ.

12001043a ಕಥಂ ನು ತಸ್ಯ ಸಂಗ್ರಾಮೇ ಪೃಥಿವೀ ಚಕ್ರಮಗ್ರಸತ್|
12001043c ಕಥಂ ಚ ಶಪ್ತೋ ಭ್ರಾತಾ ಮೇ ತತ್ತ್ವಂ ವಕ್ತುಮಿಹಾರ್ಹಸಿ||

ಸಂಗ್ರಾಮದಲ್ಲಿ ಅವನ ರಥಚಕ್ರಗಳನ್ನು ಭೂಮಿಯು ಹೇಗೆ ನುಂಗಿಬಿಟ್ಟಳು? ನನ್ನ ಸಹೋದರನು ಹೇಗೆ ಶಪಿತನಾದನು? ಇದನ್ನು ನೀನು ನನಗೆ ಹೇಳಬೇಕು!

12001044a ಶ್ರೋತುಮಿಚ್ಛಾಮಿ ಭಗವಂಸ್ತ್ವತ್ತಃ ಸರ್ವಂ ಯಥಾತಥಮ್|

12001044c ಭವಾನ್ ಹಿ ಸರ್ವವಿದ್ವಿದ್ವಾಽಲ್ಲೋಕೇ ವೇದ ಕೃತಾಕೃತಮ್॥

ಭಗವನ್! ಅವೆಲ್ಲವನ್ನೂ ಯಥಾವತ್ತಾಗಿ ಕೇಳಬಯಸುತ್ತೇನೆ. ನೀನು ಲೋಕದಲ್ಲಿ ನಡೆದುಹೋದ ಮತ್ತು ನಡೆಯಲಿರುವ ಎಲ್ಲವನ್ನೂ ತಿಳಿದಿದ್ದೀಯೆ.””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಕರ್ಣಾಭಿಜ್ಞಾನೇ ಪ್ರಥಮೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಕರ್ಣಾಭಿಜ್ಞಾನವೆನ್ನುವ ಮೊದಲನೇ ಅಧ್ಯಾಯವು.

೨

ಕರ್ಣಶಾಪ

ಕರ್ಣನು ಹೇಗೆ ಶಪಿತನಾದನೆನ್ನುವುದನ್ನು ನಾರದನು ಯುಧಿಷ್ಠಿರನಿಗೆ ವಿವರಿಸಲು ಪ್ರಾರಂಭಿಸಿದುದು – ಕ್ಷತ್ರಿಯರನ್ನು ಶಸ್ತ್ರಪೂತರನ್ನಾಗಿಸಲು ದೇವತೆಗಳ ಸಂಕಲ್ಪದಂತೆ ಕುಂತಿಯಲ್ಲಿ ದೇವಗರ್ಭನಾಗಿದ್ದ ಕರ್ಣನಿಗೆ ಸೂತಪುತ್ರತ್ವ ಪ್ರಾಪ್ತಿಯಾದುದು (1-5). ಅರ್ಜುನನನ್ನು ಮೀರಿಸಬೇಕೆಂಬ ಆಸೆಯಿಂದ ದ್ರೋಣನಲ್ಲಿ ಬ್ರಹ್ಮಾಸ್ತ್ರವನ್ನು ಕೇಳಿದ ಕರ್ಣನಿಗೆ ದ್ರೋಣನು ನಿರಾಕರಿಸಿದುದು (6-14). ಕರ್ಣನು ಪರಶುರಾಮನಲ್ಲಿಗೆ ಹೋಗಿ ತಾನು ಓರ್ವ ಭಾರ್ಗವನೆಂದು ಹೇಳಿಕೊಂಡು ಅವನ ಶಿಷ್ಯನಾದುದು (15-18). ತಿಳಿಯದೇ ಓರ್ವ ಬ್ರಾಹ್ಮಣನ ಗೋವನ್ನು ಕೊಂದ ಕರ್ಣನಿಗೆ “ನಿನ್ನ ಪ್ರತಿಸ್ಪರ್ಧಿಯೊಡನೆ ಯುದ್ಧಮಾಡುವಾಗ ನಿನ್ನ ರಥಚಕ್ರವನ್ನು ಭೂಮಿಯು

12002001 ವೈಶಂಪಾಯನ ಉವಾಚ|
12002001a ಸ ಏವಮುಕ್ತಸ್ತು ಮುನಿರ್ನಾರದೋ ವದತಾಂ ವರಃ|
12002001c ಕಥಯಾಮಾಸ ತತ್ಸರ್ವಂ ಯಥಾ ಶಪ್ತಃ ಸ ಸೂತಜಃ||

ವೈಶಂಪಾಯನನು ಹೇಳಿದನು: “ಯುಧಿಷ್ಠಿರನು ಹೀಗೆ ಹೇಳಲು ಮಾತನಾಡುವವರಲ್ಲಿ ಶ್ರೇಷ್ಠ ಮುನಿ ನಾರದನು ಸೂತಜನು ಹೇಗೆ ಶಪಿತನಾದನೆನ್ನುವುದೆಲ್ಲವನ್ನೂ ಹೇಳಿದನು.

12002002a ಏವಮೇತನ್ಮಹಾಬಾಹೋ ಯಥಾ ವದಸಿ ಭಾರತ|
12002002c ನ ಕರ್ಣಾರ್ಜುನಯೋಃ ಕಿಂ ಚಿದವಿಷಹ್ಯಂ ಭವೇದ್ರಣೇ||

“ಮಹಾಬಾಹೋ! ಭಾರತ! ರಣದಲ್ಲಿ ಕರ್ಣಾರ್ಜುನರು ಜಯಿಸಲಾರದವರು ಯಾರೂ ಇಲ್ಲ ಎಂದು ನೀನು ಹೇಳಿದುದು ಸತ್ಯ.

12002003a ಗುಹ್ಯಮೇತತ್ತು ದೇವಾನಾಂ ಕಥಯಿಷ್ಯಾಮಿ ತೇ ನೃಪ|
12002003c ತನ್ನಿಬೋಧ ಮಹಾರಾಜ ಯಥಾ ವೃತ್ತಮಿದಂ ಪುರಾ||

ನೃಪ! ದೇವತೆಗಳ ಈ ರಹಸ್ಯವನ್ನು ನಿನಗೆ ಹೇಳುತ್ತೇನೆ. ಮಹಾರಾಜ! ಹಿಂದೆ ನಡೆದುದನ್ನು ಕೇಳು.

12002004a ಕ್ಷತ್ರಂ ಸ್ವರ್ಗಂ ಕಥಂ ಗಚ್ಚೇಚ್ಛಸ್ತ್ರಪೂತಮಿತಿ ಪ್ರಭೋ|
12002004c ಸಂಘರ್ಷಜನನಸ್ತಸ್ಮಾತ್ಕನ್ಯಾಗರ್ಭೋ ವಿನಿರ್ಮಿತಃ||

ಪ್ರಭೋ! ಶಸ್ತ್ರಗಳಿಂದ ಪವಿತ್ರರನ್ನಾಗಿಸಿ ಕ್ಷತ್ರಿಯರನ್ನು ಸ್ವರ್ಗಕ್ಕೆ ಹೇಗೆ ಕರೆಯಿಸಿಕೊಳ್ಳಬೇಕೆಂದು ನಿಶ್ಚಯಿಸಿ ಸಂಘರ್ಷವನ್ನು ಹುಟ್ಟಿಸುವುದಕ್ಕೋಸ್ಕರ ಕನ್ಯೆ ಕುಂತಿಯಲ್ಲಿ ಗರ್ಭವನ್ನಿರಸಲಾಯಿತು.

12002005a ಸ ಬಾಲಸ್ತೇಜಸಾ ಯುಕ್ತಃ ಸೂತಪುತ್ರತ್ವಮಾಗತಃ|
12002005c ಚಕಾರಾಂಗಿರಸಾಂ ಶ್ರೇಷ್ಠೇ ಧನುರ್ವೇದಂ ಗುರೌ ತವ||

ತೇಜಾಯುಕ್ತನಾದ ಆ ಬಾಲಕನು ಸೂತಪುತ್ರತ್ವವನ್ನು ಪಡೆದನು. ನಿನ್ನ ಗುರುವಾದ ಆಂಗಿರಸ ಶ್ರೇಷ್ಠ ದ್ರೋಣನಲ್ಲಿ ಧನುರ್ವೇದವನ್ನು ಕಲಿತನು.

12002006a ಸ ಬಲಂ ಭೀಮಸೇನಸ್ಯ ಫಲ್ಗುನಸ್ಯ ಚ ಲಾಘವಮ್|
12002006c ಬುದ್ಧಿಂ ಚ ತವ ರಾಜೇಂದ್ರ ಯಮಯೋರ್ವಿನಯಂ ತಥಾ||
12002007a ಸಖ್ಯಂ ಚ ವಾಸುದೇವೇನ ಬಾಲ್ಯೇ ಗಾಂಡಿವಧನ್ವನಃ|
12002007c ಪ್ರಜಾನಾಮನುರಾಗಂ ಚ ಚಿಂತಯಾನೋ ವ್ಯದಹ್ಯತ||

ಅವನು ಭೀಮಸೇನನ ಬಲವನ್ನೂ, ಫಲ್ಗುನನ ಹಸ್ತಲಾಘವವನ್ನೂ, ರಾಜೇಂದ್ರ! ನಿನ್ನ ಬುದ್ಧಿಯನ್ನೂ, ಯಮಳರ ವಿನಯವನ್ನೂ, ಗಾಂಡೀವಧನ್ವಿಯೊಡನೆ ವಾಸುದೇವನಿಗಿದ್ದ ಸಖ್ಯವನ್ನೂ, ನಿಮ್ಮ ಮೇಲೆ ಪ್ರಜೆಗಳಿಗಿದ್ದ ಅನುರಾಗವನ್ನೂ ನೋಡಿ ಬಾಲ್ಯದಲ್ಲಿಯೇ ಅಸೂಯೆಯಿಂದ ಸುಡುತ್ತಿದ್ದನು.

12002008a ಸ ಸಖ್ಯಮಗಮದ್ಬಾಲ್ಯೇ ರಾಜ್ಞಾ ದುರ್ಯೋಧನೇನ ವೈ|
12002008c ಯುಷ್ಮಾಭಿರ್ನಿತ್ಯಸಂದ್ವಿಷ್ಟೋ ದೈವಾಚ್ಚಾಪಿ ಸ್ವಭಾವತಃ||

ಬಾಲ್ಯದಲ್ಲಿಯೇ ಅವನು ರಾಜಾ ದುರ್ಯೋಧನನ ಸಖ್ಯದಲ್ಲಿ ಬಂದನು. ದೈವೇಚ್ಛೆಯಿಂದ ಸ್ವಭಾವತಃ ಅವನು ನಿತ್ಯವೂ ನಿಮ್ಮನ್ನು ದ್ವೇಷಿಸುತ್ತಿದ್ದನು.

12002009a ವಿದ್ಯಾ[8]ಧಿಕಮಥಾಲಕ್ಷ್ಯ ಧನುರ್ವೇದೇ ಧನಂಜಯಮ್|
12002009c ದ್ರೋಣಂ ರಹಸ್ಯುಪಾಗಮ್ಯ ಕರ್ಣೋ ವಚನಮಬ್ರವೀತ್||

ಧನಂಜಯನು ಧನುರ್ವೇದವಿದ್ಯೆಯಲ್ಲಿ ತನ್ನನ್ನೂ ಮೀರಿಸಿರುವುದನ್ನು ನೋಡಿ ಕರ್ಣನು ರಹಸ್ಯದಲ್ಲಿ ದ್ರೋಣನ ಬಳಿಸಾರಿ ಹೀಗೆಂದನುಃ

12002010a ಬ್ರಹ್ಮಾಸ್ತ್ರಂ ವೇತ್ತುಮಿಚ್ಛಾಮಿ ಸರಹಸ್ಯನಿವರ್ತನಮ್|
12002010c ಅರ್ಜುನೇನ ಸಮೋ ಯುದ್ಧೇ ಭವೇಯಮಿತಿ ಮೇ ಮತಿಃ||

“ಹಿಂತೆಗೆದುಕೊಳ್ಳುವ ರಹಸ್ಯದೊಂದಿಗೆ ಬ್ರಹ್ಮಾಸ್ತ್ರವನ್ನು ತಿಳಿದುಕೊಳ್ಳ ಬಯಸುತ್ತೇನೆ. ಯುದ್ಧದಲ್ಲಿ ಅರ್ಜುನನ ಸಮನಾಗಬೇಕೆಂದು ನನ್ನ ನಿಶ್ಚಯವು.

12002011a ಸಮಃ ಪುತ್ರೇಷು ಚ ಸ್ನೇಹಃ ಶಿಷ್ಯೇಷು ಚ ತವ ಧ್ರುವಮ್|
12002011c ತ್ವತ್ಪ್ರಸಾದಾನ್ನ ಮಾಂ ಬ್ರೂಯುರಕೃತಾಸ್ತ್ರಂ ವಿಚಕ್ಷಣಾಃ||

ನಿಮ್ಮ ಸ್ನೇಹವು ನಿಶ್ಚಯವಾಗಿಯೂ ಪುತ್ರರಲ್ಲಿ ಮತ್ತು ಶಿಷ್ಯರಲ್ಲಿ ಸಮನಾಗಿದೆ. ಆದುದರಿಂದ ನನ್ನನ್ನು ಅಸ್ತ್ರಗಳಲ್ಲಿ ಅಸಂಪೂರ್ಣನೆಂದು ತಿಳಿದವರು ಕರೆಯದಂತೆ ಅನುಗ್ರಹಿಸಿ.”

12002012a ದ್ರೋಣಸ್ತಥೋಕ್ತಃ ಕರ್ಣೇನ ಸಾಪೇಕ್ಷಃ ಫಲ್ಗುನಂ ಪ್ರತಿ|
12002012c ದೌರಾತ್ಮ್ಯಂ ಚಾಪಿ ಕರ್ಣಸ್ಯ ವಿದಿತ್ವಾ ತಮುವಾಚ ಹ||

ಕರ್ಣನು ಹಾಗೆ ಹೇಳಲು ಕರ್ಣನ ದುರಾತ್ಮತೆಯನ್ನು ತಿಳಿದು, ಫಲ್ಗುನನ ಕುರಿತು ಪಕ್ಷಪಾತವಿದ್ದ ದ್ರೋಣನು ಅವನಿಗೆ ಹೇಳಿದನುಃ

[8] ವೀರ್ಯಾ (ಗೀತಾ ಪ್ರೆಸ್).

12002013a ಬ್ರಹ್ಮಾಸ್ತ್ರಂ ಬ್ರಾಹ್ಮಣೋ ವಿದ್ಯಾದ್ಯಥಾವಚ್ಚರಿತವ್ರತಃ|
12002013c ಕ್ಷತ್ರಿಯೋ ವಾ ತಪಸ್ವೀ ಯೋ ನಾನ್ಯೋ ವಿದ್ಯಾತ್ಕಥಂ ಚನ||

“ವ್ರತನಿರತನಾಗಿರುವ ಬ್ರಾಹ್ಮಣನಾಗಲೀ ತಪಸ್ವಿಯಾದ ಕ್ಷತ್ರಿಯನಾಗಲೀ ಬ್ರಹ್ಮಾಸ್ತ್ರವನ್ನು ತಿಳಿದುಕೊಳ್ಳಬಹುದು. ಬೇರೆ ಯಾರೂ ಎಂದೂ ಅದನ್ನು ತಿಳಿದುಕೊಳ್ಳಲಾರರು!”

12002014a ಇತ್ಯುಕ್ತೋಽಂಗಿರಸಾಂ ಶ್ರೇಷ್ಠಮಾಮಂತ್ರ್ಯ ಪ್ರತಿಪೂಜ್ಯ ಚ|
12002014c ಜಗಾಮ ಸಹಸಾ ರಾಮಂ ಮಹೇಂದ್ರಂ ಪರ್ವತಂ ಪ್ರತಿ||

ಆಂಗಿರಸ ಶ್ರೇಷ್ಠನು ಹೀಗೆ ಹೇಳಲು ಅವನನ್ನು ಪ್ರತಿಪೂಜಿಸಿ ಅನುಮತಿಯನ್ನು ಪಡೆದು ಕೂಡಲೇ ಮಹೇಂದ್ರ ಪರ್ವತದಲ್ಲಿದ್ದ ರಾಮನ ಬಳಿ ನಡೆದನು.

12002015a ಸ ತು ರಾಮಮುಪಾಗಮ್ಯ ಶಿರಸಾಭಿಪ್ರಣಮ್ಯ ಚ|
12002015c ಬ್ರಾಹ್ಮಣೋ ಭಾರ್ಗವೋಽಸ್ಮೀತಿ ಗೌರವೇಣಾಭ್ಯಗಚ್ಚತ||

ಅವನು ರಾಮನ ಬಳಿಸಾರಿ ಗೌರವದಿಂದ ಶಿರಸಾ ಸಮಸ್ಕರಿಸಿ “ನಾನು ಭಾರ್ಗವ ವಂಶದ ಬ್ರಾಹ್ಮಣ!” ಎಂದು ಹೇಳಿದನು.

12002016a ರಾಮಸ್ತಂ ಪ್ರತಿಜಗ್ರಾಹ ಪೃಷ್ಟ್ವಾ ಗೋತ್ರಾದಿ ಸರ್ವಶಃ|
12002016c ಉಷ್ಯತಾಂ ಸ್ವಾಗತಂ ಚೇತಿ ಪ್ರೀತಿಮಾಂಶ್ಚಾಭವದ್ಭೃಶಮ್||

ಗೋತ್ರ ಮೊದಲಾದ ಎಲ್ಲವನ್ನೂ ಕೇಳಿ ತಿಳಿದುಕೊಂಡು ರಾಮನು ಅವನನ್ನು “ಸ್ವಾಗತ! ಇಲ್ಲಿಯೇ ಇರು!” ಎಂದು ಅವನನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿದನು.

12002017a ತತ್ರ ಕರ್ಣಸ್ಯ ವಸತೋ ಮಹೇಂದ್ರೇ ಪರ್ವತೋತ್ತಮೇ|

12002017c ಗಂಧರ್ವ್ಯೈ ರಾಕ್ಷಸ್ಯೈರ್ಯಕ್ಷ್ಯೈರ್ದೇವ್ಯೈಶ್ಚಾಸೀತ್ಸಮಾಗಮಃ||

ಉತ್ತಮ ಮಹೇಂದ್ರಪರ್ವತದಲ್ಲಿ ವಾಸಿಸುತ್ತಿರುವಾಗ ಗಂಧರ್ವ-ರಾಕ್ಷಸ-ಯಕ್ಷ-ದೇವತೆಗಳೊಂದಿಗೆ ಕರ್ಣನ ಸಂದರ್ಶನವೂ ಆಯಿತು.

12002018a ಸ ತತ್ರೇಷ್ವಸ್ತ್ರಮಕರೋದ್ ಭೃಗುಶ್ರೇಷ್ಠಾದ್ಯಥಾವಿಧಿ|
12002018c ಪ್ರಿಯಶ್ಚಾಭವದತ್ಯರ್ಥಂ ದೇವಗಂಧರ್ವರಕ್ಷಸಾಮ್||

ಅಲ್ಲಿ ಅವನು ಭೃಗುಶ್ರೇಷ್ಠನಿಂದ ಯಥಾವಿಧಿಯಾಗಿ ಅಸ್ತ್ರಗಳನ್ನು ಕಲಿತುಕೊಂಡನು ಮತ್ತು ದೇವ-ಗಂಧರ್ವ-ರಾಕ್ಷಸರ ಪ್ರಿಯಪಾತ್ರನೂ ಆದನು.

12002019a ಸ ಕದಾ ಚಿತ್ಸಮುದ್ರಾಂತೇ ವಿಚರನ್ನಾಶ್ರಮಾಂತಿಕೇ|
12002019c ಏಕಃ ಖಡ್ಗಧನುಷ್ಪಾಣಿಃ ಪರಿಚಕ್ರಾಮ ಸೂತಜಃ||

ಒಮ್ಮೆ ಸೂತಜ ಕರ್ಣನು ಆಶ್ರಮ ಸಮೀಪದಲ್ಲಿ ಸಮುದ್ರತೀರದಲ್ಲಿ ಖಡ್ಗ-ಧನುಷ್ಪಾಣಿಯಾಗಿ ಒಬ್ಬನೇ ಸಂಚರಿಸುತ್ತಿದ್ದನು.

12002020a ಸೋಽಗ್ನಿಹೋತ್ರಪ್ರಸಕ್ತಸ್ಯ ಕಸ್ಯ ಚಿದ್ಬ್ರಹ್ಮವಾದಿನಃ|
12002020c ಜಘಾನಾಜ್ಞಾನತಃ ಪಾರ್ಥ ಹೋಮಧೇನುಂ ಯದೃಚ್ಛಯಾ||

ಪಾರ್ಥ! ಅಲ್ಲಿ ಅವನು ಅಗ್ನಿಹೋತ್ರದಲ್ಲಿ ತೊಡಗಿದ್ದ ಯಾರೋ ಒಬ್ಬ ಬ್ರಹ್ಮವಾದಿನಿಯ ಹೋಮಧೇನುವನ್ನು ತಿಳಿಯದೇ ಆಕಸ್ಮಿಕವಾಗಿ ಕೊಂದುಬಿಟ್ಟನು.

12002021a ತದಜ್ಞಾನಕೃತಂ ಮತ್ವಾ ಬ್ರಾಹ್ಮಣಾಯ ನ್ಯವೇದಯತ್|
12002021c ಕರ್ಣಃ ಪ್ರಸಾದಯಂಶ್ಚೈನಮಿದಮಿತ್ಯಬ್ರವೀದ್ವಚಃ||

ತಾನು ತಿಳಿಯದೇ ಮಾಡಿದ ಆ ಕೃತ್ಯವನ್ನು ಬ್ರಾಹ್ಮಣನಿಗೆ



ಹೇಳಿಕೊಂಡನು. ಅವನನ್ನು ಪ್ರಸನ್ನಗೊಳಿಸಲು ಕರ್ಣನು ಈ ಮಾತನ್ನಾಡಿದನು:

12002022a ಅಬುದ್ಧಿಪೂರ್ವಂ ಭಗವನ್ ಧೇನುರೇಷಾ ಹತಾ ತವ|
12002022c ಮಯಾ ತತ್ರ ಪ್ರಸಾದಂ ಮೇ ಕುರುಷ್ವೇತಿ ಪುನಃ ಪುನಃ||

“ಭಗವನ್! ಮೊದಲೇ ತಿಳಿದುಕೊಳ್ಳದೇ ಅಜ್ಞಾನದಿಂದ ನಿನ್ನ ಈ ಹಸುವನ್ನು ಕೊಂದುಬಿಟ್ಟೆನು! ನನ್ನ ಮೇಲೆ ಕರುಣೆ ತೋರಬೇಕು” ಎಂದು ಪುನಃ ಪುನಃ ಕೇಳಿಕೊಂಡನು.

12002023a ತಂ ಸ ವಿಪ್ರೋಽಬ್ರವೀತ್ಕ್ರುದ್ಧೋ ವಾಚಾ ನಿರ್ಭರ್ತ್ಸಯನ್ನಿವ|
12002023c ದುರಾಚಾರ ವಧಾರ್ಹಸ್ತ್ವಂ ಫಲಂ ಪ್ರಾಪ್ನುಹಿ ದುರ್ಮತೇ||

ಆ ವಿಪ್ರನಾದರೋ ಕ್ರುದ್ಧನಾಗಿ ಅವನನ್ನು ಹೆದರಿಸುವನೋ ಎನ್ನುವಂತೆ ಹೀಗೆ ಹೇಳಿದನು: “ದುರ್ಮತೇ! ನಿನ್ನ ಈ ದುರಾಚಾರವು ವಧಾರ್ಹವು. ಇದರ ಫಲವನ್ನು ನೀನು ಪಡೆಯುತ್ತೀಯೆ!

12002024a ಯೇನ ವಿಸ್ಪರ್ಧಸೇ ನಿತ್ಯಂ ಯದರ್ಥಂ ಘಟಸೇಽನಿಶಮ್|
12002024c ಯುಧ್ಯತಸ್ತೇನ ತೇ ಪಾಪ ಭೂಮಿಶ್ಚಕ್ರಂ ಗ್ರಸಿಷ್ಯತಿ||

ಯಾರೊಂದಿಗೆ ನೀನು ನಿತ್ಯವೂ ಸ್ಪರ್ಧಿಸುತ್ತೀಯೋ ಮತ್ತು ಯಾರನ್ನು ಕೊಲ್ಲಲು ನೀನು ಅಹೋರಾತ್ರಿ ಪ್ರಯತ್ನಿಸುವೆಯೋ ಅವನೊಡನೆ ಯುದ್ಧಮಾಡುವಾಗ ಪಾಪಿಯಾದ ನಿನ್ನ ರಥಚಕ್ರವನ್ನು ಭೂಮಿಯು ನುಂಗಿಬಿಡುತ್ತದೆ!

12002025a ತತಶ್ಚಕ್ರೇ ಮಹೀಗ್ರಸ್ತೇ ಮೂರ್ಧಾನಂ ತೇ ವಿಚೇತಸಃ|
12002025c ಪಾತಯಿಷ್ಯತಿ ವಿಕ್ರಮ್ಯ ಶತ್ರುರ್ಗಚ್ಚ ನರಾಧಮ||

ನೆಲದಲ್ಲಿ ಹುಗಿದುಹೋದ ಚಕ್ರವನ್ನು ನೋಡಿ ಕಂಗಾಲಾದ ನಿನ್ನ ಶಿರವನ್ನು ಶತ್ರುವು ವಿಕ್ರಮದಿಂದ ಕೆಳಗುರುಳಿಸುತ್ತಾನೆ! ಹೊರಟುಹೋಗು ನರಾಧಮ!

12002026a ಯಥೇಯಂ ಗೌರ್ಹತಾ ಮೂಢ ಪ್ರಮತ್ತೇನ ತ್ವಯಾ ಮಮ|
12002026c ಪ್ರಮತ್ತಸ್ಯೈವಮೇವಾನ್ಯಃ ಶಿರಸ್ತೇ ಪಾತಯಿಷ್ಯತಿ||

ಮೂಢ! ಹೇಗೆ ನೀನು ಪ್ರಮತ್ತತೆಯಿಂದ ನನ್ನ ಗೋವನ್ನು ಸಂಹರಿಸಿದೆಯೋ ಹಾಗೆ ನೀನು ಪ್ರಮತ್ತನಾಗಿದ್ದಾಗ ಅನ್ಯನು ನಿನ್ನ ಶಿರವನ್ನು ಕೆಳಗುರುಳಿಸುತ್ತಾನೆ!"

12002027a ತತಃ ಪ್ರಸಾದಯಾಮಾಸ ಪುನಸ್ತಂ ದ್ವಿಜಸತ್ತಮಮ್|
12002027c ಗೋಭಿರ್ಧನೈಶ್ಚ ರತ್ನೈಶ್ಚ ಸ ಚೈನಂ ಪುನರಬ್ರವೀತ್||

ಅನಂತರ ಕರ್ಣನು ಆ ದ್ವಿಜಸತ್ತಮನನ್ನು ಪುನಃ ಗೋವು-ಧನ-ರತ್ನಗಳಿಂದ ಪ್ರಸನ್ನಗೊಳಿಸಲು ಪ್ರಯತ್ನಿಸಲು, ಅವನು ಪುನಃ ಹೀಗೆ

ಹೇಳಿದನು:

12002028a ನೇದಂ ಮದ್ವ್ಯಾಹೃತಂ ಕುರ್ಯಾತ್ಸರ್ವಲೋಕೋಽಪಿ ವೈ ಮೃಷಾ|
12002028c ಗಚ್ಚ ವಾ ತಿಷ್ಠ ವಾ ಯದ್ವಾ ಕಾರ್ಯಂ ತೇ ತತ್ಸಮಾಚರ||

"ಸರ್ವಲೋಕಗಳಿಗೂ ಇದನ್ನು ಸುಳ್ಳನ್ನಾಗಿಸಲು ಸಾಧ್ಯವಿಲ್ಲ! ಹೋಗು ಅಥವಾ ಇಲ್ಲಿಯೇ ಇರು! ನೀನು ಏನು ಮಾಡಿದರೂ ವ್ಯರ್ಥವೇ ಸರಿ!"

12002029a ಇತ್ಯುಕ್ತೋ ಬ್ರಾಹ್ಮಣೇನಾಥ ಕರ್ಣೋ ದೈನ್ಯಾದಧೋಮುಖಃ|
12002029c ರಾಮಮಭ್ಯಾಗಮದ್ ಭೀತಸ್ತದೇವ ಮನಸಾ ಸ್ಮರನ್||

ಬ್ರಾಹ್ಮಣನು ಹೀಗೆ ಹೇಳಲು ಕರ್ಣನು ದೈನ್ಯದಿಂದ
ಅಧೋಮುಖನಾಗಿ ಅದನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ
ಭಯಗೊಂಡವನಾಗಿ ರಾಮನ ಬಳಿ ಹೋದನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಕರ್ಣಶಾಪೋ ನಾಮ ದ್ವಿತೀಯೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಕರ್ಣಶಾಪವೆನ್ನುವ ಎರಡನೇ ಅಧ್ಯಾಯವು.

೩

ಕರ್ಣಾಸ್ತ್ರಪ್ರಾಪ್ತಿ

ಪರಶುರಾಮನಿಂದ ಬ್ರಹ್ಮಾಸ್ತ್ರವನ್ನು ಕಲಿತುಕೊಂಡ ಕರ್ಣನು ಗುರುವಿನ ಪ್ರೀತಿಪಾತ್ರನಾಗಿದ್ದುದು (1-4). ಪರಶುರಾಮನು ಸೌಹಾರ್ದತೆಯು ಬೆಳೆದಿದ್ದ ಕರ್ಣನ ತೊಡೆಯ ಮೇಲೆ ತನ್ನ ಶಿರವನ್ನಿತ್ತು ವಿಶ್ವಾಸದಿಂದ

ಮಲಗಿದ್ದಾಗ ಕ್ರಿಮಿಯೊಂದು ಕರ್ಣನ ತೊಡೆಯನ್ನು ಕೊರೆದು ಹರಿದ ರಕ್ತವು ತಾಗಿ ಪರಶುರಾಮನು ಎಚ್ಚರಗೊಂಡಿದುದು (5-11). ಕ್ರಿಮಿಯ ರೂಪದಲ್ಲಿದ್ದ ರಾಕ್ಷಸನು ಶಾಪವಿಮೋಚನನಾದುದು (12-24). ಕರ್ಣನು ಬ್ರಾಹ್ಮಣನಲ್ಲವೆಂದು ತಿಳಿದುಕೊಂಡ ಪರಶುರಾಮನು ಕೋಪದಿಂದ "ನಿನ್ನ ವಧೆಯ ಕಾಲವಲ್ಲದಾಗ ಮತ್ತು ನಿನ್ನ ಸಮಾನರೊಡನೆ ಯುದ್ಧಮಾಡುವಾಗ ಮಾತ್ರ ಬ್ರಹ್ಮಾಸ್ತ್ರವು ನಿನಗೆ ಹೊಳೆಯುತ್ತದೆ" ಎಂಬ ಶಾಪವನ್ನಿತ್ತಿದುದು (25-33).

12003001 ನಾರದ ಉವಾಚ|
12003001a ಕರ್ಣಸ್ಯ ಬಾಹುವೀರ್ಯೇಣ ಪ್ರಶ್ರಯೇಣ[9] ದಮೇನ ಚ|
12003001c ತುತೋಷ ಭೃಗುಶಾರ್ದೂಲೋ ಗುರುಶುಶ್ರೂಷಯಾ ತಥಾ||

ನಾರದನು ಹೇಳಿದನು: "ಕರ್ಣನ ಬಾಹುವೀರ್ಯ, ಪರಿಶ್ರಮ, ಜಿತೇಂದ್ರಿಯತೆ ಮತ್ತು ಗುರುಶುಶ್ರೂಷೆಗಳಿಂದ ಭೃಗುಶಾರ್ದೂಲನು ಸಂತುಷ್ಟನಾದನು.

12003002a ತಸ್ಮೈ ಸ ವಿಧಿವತ್ಕೃತ್ಸ್ನಂ ಬ್ರಹ್ಮಾಸ್ತ್ರಂ ಸನಿವರ್ತನಮ್|
12003002c ಪ್ರೋವಾಚಾಖಿಲಮವ್ಯಗ್ರಂ ತಪಸ್ವೀ ಸುತಪಸ್ವಿನೇ||

ಉತ್ತಮ ತಪೋನಿರತನಾಗಿದ್ದ ತಪಸ್ವಿ ರಾಮನು ಅವ್ಯಗ್ರ ಕರ್ಣನಿಗೆ ವಿಧಿವತ್ತಾಗಿ ಸಂಪೂರ್ಣ ಬ್ರಹ್ಮಾಸ್ತ್ರ ಪ್ರಯೋಗ-ಉಪಸಂಹಾರಗಳೊಂದಿಗೆ ಎಲ್ಲವನ್ನೂ ಉಪದೇಶಿಸಿದನು.

12003003a ವಿದಿತಾಸ್ತ್ರಸ್ತತಃ ಕರ್ಣೋ ರಮಮಾಣೋऽssಶ್ರಮೇ ಭೃಗೋಃ|

---

[9] ಪ್ರಣಯೇನ (ಗೀತಾ ಪ್ರೆಸ್).

12003003c ಚಕಾರ ವೈ ಧನುರ್ವೇದೇ ಯತ್ನಮದ್ಭುತವಿಕ್ರಮಃ||

ಬ್ರಹ್ಮಾಸ್ತ್ರವನ್ನು ಕಲಿತುಕೊಂಡ ಅದ್ಭುತವಿಕ್ರಮಿ ಕರ್ಣನು ಭೃಗುವಿನ ಆಶ್ರಮದಲ್ಲಿ ಸಂತೋಷದಿಂದಲೇ ಇದ್ದುಕೊಂಡು ಧನುರ್ವೇದವನ್ನು ಹಸ್ತಗತಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದನು.

12003004a ತತಃ ಕದಾ ಚಿದ್ರಾಮಸ್ತು ಚರನ್ನಾಶ್ರಮಮಂತಿಕಾತ್|
12003004c ಕರ್ಣೇನ ಸಹಿತೋ ಧೀಮಾನುಪವಾಸೇನ ಕರ್ಶಿತಃ||
12003005a ಸುಷ್ವಾಪ ಜಾಮದಗ್ನ್ಯೋ ವೈ ವಿಸ್ರಂಭೋತ್ಪನ್ನಸೌಹೃದಃ|
12003005c ಕರ್ಣಸ್ಯೋತ್ಸಂಗ ಆಧಾಯ ಶಿರಃ ಕ್ಲಾಂತಮನಾ ಗುರುಃ||

ಅನಂತರ ಒಮ್ಮೆ ರಾಮನು ಕರ್ಣನ ಸಹಿತ ಆಶ್ರಮದ ಬಳಿಯಲ್ಲಿಯೇ ತಿರುಗಾಡುತ್ತಿದ್ದನು. ಆ ಧೀಮಂತನು ಉಪವಾಸದಿಂದ ಕೃಶನಾಗಿದ್ದನು. ಅವನ ಮನಸ್ಸೂ ಕೂಡ ಬಹಳವಾಗಿ ಆಯಾಸಗೊಂಡಿತ್ತು. ಆಗ ಗುರು ಜಾಮದಗ್ನಿಯು ಸೌಹಾರ್ದತೆಯು ಬೆಳೆದಿದ್ದ ಕರ್ಣನ ತೊಡೆಯ ಮೇಲೆ ತನ್ನ ಶಿರವನ್ನಿತ್ತು ವಿಶ್ವಾಸದಿಂದ ಮಲಗಿದನು.

12003006a ಅಥ ಕೃಮಿಃ ಶ್ಲೇಷ್ಮಮಯೋ ಮಾಂಸಶೋಣಿತಭೋಜನಃ|
12003006c ದಾರುಣೋ ದಾರುಣಸ್ಪರ್ಶಃ ಕರ್ಣಸ್ಯಾಭ್ಯಾಶಮಾಗಮತ್||

ಅದೇ ಸಮಯದಲ್ಲಿ ಕಫ, ಮೇಧಸ್ಸು, ಮಾಂಸ-ರಕ್ತಗಳನ್ನೇ ಭುಂಜಿಸುವ, ದಾರುಣವಾಗಿ ಕಚ್ಚಬಲ್ಲ, ದಾರುಣ ಕ್ರಿಮಿಯೊಂದು ಕರ್ಣನ ಬಳಿ ಬಂದಿತು.

12003007a ಸ ತಸ್ಯೋರುಮಥಾಸಾದ್ಯ ಬಿಭೇದ ರುಧಿರಾಶನಃ|
12003007c ನ ಚೈನಮಶಕತ್ಕ್ಷೇಪ್ತುಂ ಹಂತುಂ ವಾಪಿ ಗುರೋರ್ಭಯಾತ್||

ರಕ್ತಾಹಾರಿಯಾದ ಆ ಕ್ರಿಮಿಯು ಅವನ ತೊಡೆಯ ಮೇಲೆ ಕುಳಿತು ತೊಡೆಯನ್ನು ಕೊರೆಯ ತೊಡಗಿತು. ಗುರುವಿನ ಭಯದಿಂದ ಅದನ್ನು ಎತ್ತಿ ಒಗೆಯಲು ಅಥವಾ ಕೊಲ್ಲಲು ಅವನಿಗೆ ಸಾಧ್ಯವಾಗಲಿಲ್ಲ.

12003008a ಸಂದಶ್ಯಮಾನೋಽಪಿ ತಥಾ ಕೃಮಿಣಾ ತೇನ ಭಾರತ|
12003008c ಗುರುಪ್ರಬೋಧಶಂಕೀ ಚ ತಮುಪೈಕ್ಷತ ಸೂತಜಃ||

ಭಾರತ! ಆ ಕ್ರಿಮಿಯು ತನ್ನನ್ನು ಕೊರೆಯುತ್ತಿದ್ದರೂ ಗುರುವಿಗೆ ಎಚ್ಚರವಾಗಬಹುದೆಂಬ ಶಂಕೆಯಿಂದ ಸೂತಜನು ಅದನ್ನು ಉಪೇಕ್ಷಿಸಿದನು.

12003009a ಕರ್ಣಸ್ತು ವೇದನಾಂ ಧೈರ್ಯಾದಸಹ್ಯಾಂ ವಿನಿಗೃಹ್ಯ ತಾಮ್|
12003009c ಅಕಂಪನ್ನವ್ಯಥಂಶ್ಚೈವ ಧಾರಯಾಮಾಸ ಭಾರ್ಗವಮ್||

ವೇದನೆಯು ಸಹಿಸಲಸಾಧ್ಯವಾಗಿದ್ದರೂ ಕರ್ಣನು ಧೈರ್ಯದಿಂದ ಅದನ್ನು ಸಹಿಸಿಕೊಂಡು, ತನ್ನ ದೇಹವನ್ನು ಕಂಪಿಸದೇ ಭಾರ್ಗವನನ್ನು ತೊಡೆಯಮೇಲೆ ಮಲಗಿಸಿಕೊಂಡೇ ಇದ್ದನು.

12003010a ಯದಾ ತು ರುಧಿರೇಣಾಂಗೇ ಪರಿಸ್ಪೃಷ್ಟೋ ಭೃಗೂದ್ವಹಃ|
12003010c ತದಾಬುಧ್ಯತ ತೇಜಸ್ವೀ ಸಂತಪ್ತಶ್ಚೇದಮಬ್ರವೀತ್||

ಕರ್ಣನ ತೊಡೆಯಿಂದ ಹರಿಯುತ್ತಿದ್ದ ರಕ್ತವು ಭೃಗೂದ್ವಹನನ್ನು ಸ್ಪರ್ಷಿಸಲು ಆ ತೇಜಸ್ವಿಯು ಎಚ್ಚೆತ್ತು ಸಂತಪ್ತನಾಗಿ ಹೇಳಿದನುಃ

12003011a ಅಹೋಽಸ್ಯಶುಚಿತಾಂ ಪ್ರಾಪ್ತಃ ಕಿಮಿದಂ ಕ್ರಿಯತೇ ತ್ವಯಾ|
12003011c ಕಥಯಸ್ವ ಭಯಂ ತ್ಯಕ್ತ್ವಾ ಯಾಥಾತಥ್ಯಮಿದಂ ಮಮ||

“ಅಯ್ಯೋ! ರಕ್ತಸ್ಪರ್ಷದಿಂದ ನಾನು ಅಶುಚಿಯಾಗಿಬಿಟ್ಟೆನು! ನೀನೇನು



ಮಾಡಿಬಿಟ್ಟೆ? ಭಯವನ್ನು ತೊರೆದು ಯಥಾವತ್ತಾಗಿ ಏನಾಯಿತೆಂದು ನನ್ನೊಡನೆ ಹೇಳು!"

12003012a ತಸ್ಯ ಕರ್ಣಸ್ತದಾಚಷ್ಟ ಕೃಮಿಣಾ ಪರಿಭಕ್ಷಣಮ್|
12003012c ದದರ್ಶ ರಾಮಸ್ತಂ ಚಾಪಿ ಕೃಮಿಂ ಸೂಕರಸಂನಿಭಮ್||

ಕರ್ಣನು ಅವನಿಗೆ ಕ್ರಿಮಿಯು ತನ್ನ ತೊಡೆಯನ್ನು ಕೊರೆದು ತಿನ್ನುತ್ತಿದ್ದುದನ್ನು ಹೇಳಿದನು. ರಾಮನೂ ಕೂಡ ಹಂದಿಯಂತಿದ್ದ ಆ ಕ್ರಿಮಿಯನ್ನು ನೋಡಿದನು.

12003013a ಅಷ್ಟಪಾದಂ ತೀಕ್ಷ್ಣದಂಷ್ಟ್ರಂ ಸೂಚೀಭಿರಿವ ಸಂವೃತಮ್|
12003013c ರೋಮಭಿಃ ಸಂನಿರುದ್ಧಾಂಗಮಲರ್ಕಂ ನಾಮ ನಾಮತಃ||

ಎಂಟು ಕಾಲುಗಳಿದ್ದ, ತೀಕ್ಷ್ಣ ಹಲ್ಲುಗಳಿದ್ದ, ಸೂಜಿಗಳಂಥ
ರೋಮಗಳಿಂದ ಆವೃತವಾಗಿದ್ದ, ಅಂಗಾಂಗಗಳನ್ನು
ಸಂಕೋಚಿಸಿಕೊಂಡಿದ್ದ ಆ ಕ್ರಿಮಿಯು ಅಲರ್ಕ ಎಂಬ ನಾಮದಿಂದ
ತಿಳಿಯಲ್ಪಟ್ಟಿತ್ತು.

12003014a ಸ ದೃಷ್ಟಮಾತ್ರೋ ರಾಮೇಣ ಕೃಮಿಃ ಪ್ರಾಣಾನವಾಸೃಜತ್|
12003014c ತಸ್ಮಿನ್ನೇವಾಸೃಕ್ಸಂಕ್ಲಿನ್ನೇ ತದದ್ಭುತಮಿವಾಭವತ್||

ರಾಮನ ದೃಷ್ಟಿಮಾತ್ರದಿಂದಲೇ ಕರ್ಣನ ರಕ್ತದಿಂದ
ತೋಯ್ದುಹೋಗಿದ್ದ ಆ ಕ್ರಿಮಿಯು ಪ್ರಾಣವನ್ನು ತೊರೆಯಿತು.
ಅದೊಂದು ಅದ್ಭುತವಾಗಿತ್ತು.

12003015a ತತೋಽಂತರಿಕ್ಷೇ ದದೃಶೇ ವಿಶ್ವರೂಪಃ ಕರಾಲವಾನ್|
12003015c ರಾಕ್ಷಸೋ ಲೋಹಿತಗ್ರೀವಃ ಕೃಷ್ಣಾಂಗೋ ಮೇಘವಾಹನಃ||

ಆಗ ಅಂತರಿಕ್ಷದಲ್ಲಿ ಕರಾಲ ರೂಪಧರಿಸಿದ್ದ, ಕೆಂಪುಕುತ್ತಿಗೆಯ, ಕಪ್ಪು
ದೇಹದ, ಮೇಘವಾಹನ ರಾಕ್ಷಸನು ಕಾಣಿಸಿಕೊಂಡನು.

12003016a ಸ ರಾಮಂ ಪ್ರಾಂಜಲಿರ್ಭೂತ್ವಾ ಬಭಾಷೇ ಪೂರ್ಣಮಾನಸಃ|
12003016c ಸ್ವಸ್ತಿ ತೇ ಭೃಗುಶಾರ್ದೂಲ ಗಮಿಷ್ಯಾಮಿ ಯಥಾಗತಮ್||

ಪೂರ್ಣಮನಸ್ಕನಾದ ಅವನು ರಾಮನಿಗೆ ಕೈಮುಗಿದು ಹೇಳಿದನುಃ
“ಭೃಗುಶಾರ್ದೂಲ! ನಿನಗೆ ಮಂಗಳವಾಗಲಿ! ಎಲ್ಲಿಂದ ಬಂದಿದ್ದೆನೋ
ಅಲ್ಲಿಗೆ ಹೊರಟು ಹೋಗುತ್ತೇನೆ!

12003017a ಮೋಕ್ಷಿತೋ ನರಕಾದಸ್ಮಿ ಭವತಾ ಮುನಿಸತ್ತಮ|
12003017c ಭದ್ರಂ ಚ ತೇಽಸ್ತು ನಂದಿಶ್ಚ ಪ್ರಿಯಂ ಮೇ ಭವತಾ ಕೃತಮ್||

ಮುನಿಸತ್ತಮ! ಈ ನರಕದಿಂದ ನೀನು ನನಗೆ ಬಿಡುಗಡೆಯನ್ನು ನೀಡಿರುವೆ! ನಿನಗೆ ಮಂಗಳವಾಗಲಿ! ನೀನು ನನಗೆ ಪ್ರಿಯವಾದುದನ್ನೇ ಮಾಡಿ ಸಂತೋಷವನ್ನಿತ್ತಿರುವೆ!"

12003018a ತಮುವಾಚ ಮಹಾಬಾಹುರ್ಜಾಮದಗ್ನ್ಯಃ ಪ್ರತಾಪವಾನ್|
12003018c ಕಸ್ತ್ವಂ ಕಸ್ಮಾಚ್ಚ ನರಕಂ ಪ್ರತಿಪನ್ನೋ ಬ್ರವೀಹಿ ತತ್||

ಮಹಾಬಾಹು ಜಾಮದಗ್ನ್ಯ ಪ್ರತಾಪವಾನನು ಅವನಿಗೆ ಹೇಳಿದನು: "ನೀನು ಯಾರು? ಯಾವ ಕಾರಣದಿಂದ ಈ ನರಕದಲ್ಲಿ ಬಿದ್ದಿರುವೆ? ಅದನ್ನು ಹೇಳು!"

12003019a ಸೋಽಬ್ರವೀದಹಮಾಸಂ ಪ್ರಾಗ್ಗೃತ್ಸೋ ನಾಮ ಮಹಾಸುರಃ|
12003019c ಪುರಾ ದೇವಯುಗೇ ತಾತ ಭೃಗೋಸ್ತುಲ್ಯವಯಾ ಇವ||

ಅವನು ಹೇಳಿದನು: "ಅಯ್ಯಾ! ನಾನು ಹಿಂದೆ ಸತ್ಯಯುಗದಲ್ಲಿ ಗೃತ್ಸ ಎಂಬ ಹೆಸರಿನ ಮಹಾಸುರನಾಗಿದ್ದೆ. ವಯಸ್ಸಿನಲ್ಲಿ ನಾನು ಭೃಗುವಿನ ಸಮನಾಗಿದ್ದೆ.

12003020a ಸೋಽಹಂ ಭೃಗೋಃ ಸುದಯಿತಾಂ ಭಾರ್ಯಾಮಪಹರಂ ಬಲಾತ್|
12003020c ಮಹರ್ಷೇರಭಿಶಾಪೇನ ಕೃಮಿಭೂತೋಽಪತಂ ಭುವಿ||

ಭೃಗುವಿನ ಪ್ರಿಯ ಭಾರ್ಯೆಯನ್ನು ನಾನು ಬಲಾತ್ಕಾರದಿಂದ ಅಪಹರಿಸಿದ್ದೆ. ಆ ಮಹರ್ಷಿಯ ಶಾಪದಿಂದ ಕ್ರಿಮಿಯಾಗಿ ಭೂಮಿಯ ಮೇಲೆ ಬಿದ್ದೆ.

12003021a ಅಬ್ರವೀತ್ತು ಸ ಮಾಂ ಕ್ರೋಧಾತ್ತವ ಪೂರ್ವಪಿತಾಮಹಃ|
12003021c ಮೂತ್ರಶ್ಲೇಷ್ಮಾಶನಃ ಪಾಪ ನಿರಯಂ ಪ್ರತಿಪತ್ಸ್ಯಸೇ||



ಕ್ರೋಧಿತನಾದ ನಿನ್ನ ಮುತ್ತಜ್ಜನು ನನಗೆ "ಮೂತ್ರ-ಕಫಗಳನ್ನು ತಿನ್ನುತ್ತಾ ನೀನು ಪಾಪ ನರಕದಲ್ಲಿ ಬೀಳುವೆ!" ಎಂದು ಹೇಳಿದನು.

12003022a ಶಾಪಸ್ಯಾಂತೋ ಭವೇದ್ಬ್ರಹ್ಮನ್ನಿತ್ಯೇವಂ ತಮಥಾಬ್ರುವಮ್|
12003022c ಭವಿತಾ ಭಾರ್ಗವೇ ರಾಮ ಇತಿ ಮಾಮಬ್ರವೀದ್ಭೃಗುಃ||

"ಬ್ರಹ್ಮನ್! ಈ ಶಾಪವು ಅಂತ್ಯವಾಗುವಂತೆ ಅನುಗ್ರಹಿಸು!" ಎಂದು ನಾನು ಕೇಳಿಕೊಳ್ಳಲು "ಭಾರ್ಗವ ರಾಮನಿಂದ ಶಾಪವಿಮೋಚನೆಯಾಗುತ್ತದೆ" ಎಂದು ಭೃಗುವು ಹೇಳಿದನು.

12003023a ಸೋಽಹಮೇತಾಂ ಗತಿಂ ಪ್ರಾಪ್ತೋ ಯಥಾ ನಕುಶಲಂ ತಥಾ|
12003023c ತ್ವಯಾ ಸಾಧೋ ಸಮಾಗಮ್ಯ ವಿಮುಕ್ತಃ ಪಾಪಯೋನಿತಃ||

ಯಾವರೀತಿಯ ಕುಶಲವನ್ನೂ ಕಾಣದೇ ನಾನು ಈ ದುರ್ಗತಿಯನ್ನು ಅನುಭವಿಸಿದೆನು. ಸಾಧುವೇ! ನಿನ್ನ ಸಮಾಗಮದಿಂದಾಗಿ ನಾನು ಈ ಪಾಪಜನ್ಮದಿಂದ ಮುಕ್ತನಾಗಿದ್ದೇನೆ!"

12003024a ಏವಮುಕ್ತ್ವಾ ನಮಸ್ಕೃತ್ಯ ಯಯೌ ರಾಮಂ ಮಹಾಸುರಃ|
12003024c ರಾಮಃ ಕರ್ಣಂ ತು ಸಕ್ರೋಧಮಿದಂ ವಚನಮಬ್ರವೀತ್||

ಹೀಗೆ ಹೇಳಿ ರಾಮನಿಗೆ ನಮಸ್ಕರಿಸಿ ಮಹಾಸುರನು ಹೊರಟುಹೋದನು. ರಾಮನಾದರೋ ಕ್ರೋಧದಿಂದ ಕರ್ಣನಿಗೆ ಹೀಗೆ ಹೇಳಿದನುಃ

12003025a ಅತಿದುಃಖಮಿದಂ ಮೂಢ ನ ಜಾತು ಬ್ರಾಹ್ಮಣಃ ಸಹೇತ್|
12003025c ಕ್ಷತ್ರಿಯಸ್ಯೈವ ತೇ ಧೈರ್ಯಂ ಕಾಮಯಾ ಸತ್ಯಮುಚ್ಯತಾಮ್||

"ಮೂಢ! ಇಂಥಹ ಅತಿದುಃಖವನ್ನು ಬ್ರಾಹ್ಮಣನಾದವನು ಎಂದಿಗೂ ಸಹಿಸಿಕೊಳ್ಳಲಾರ! ನಿನ್ನ ಈ ಧೈರ್ಯವು ಕ್ಷತ್ರಿಯನದ್ದೇ! ನೀನಾಗಿಯೇ ಸತ್ಯವನ್ನು ಹೇಳು!"

12003026a ತಮುವಾಚ ತತಃ ಕರ್ಣಃ ಶಾಪಭೀತಃ ಪ್ರಸಾದಯನ್|
12003026c ಬ್ರಹ್ಮಕ್ಷತ್ರಾಂತರೇ ಸೂತಂ ಜಾತಂ ಮಾಂ ವಿದ್ಧಿ ಭಾರ್ಗವ||

ಶಾಪಕ್ಕೆ ಹೆದರಿದ ಕರ್ಣನು ಅವನನ್ನು ಪ್ರಸನ್ನಗೊಳಿಸುತ್ತಾ ಹೇಳಿದನುಃ "ಭಾರ್ಗವ! ನಾನು ಬ್ರಾಹ್ಮಣ-ಕ್ಷತ್ರಿಯರಿಗೆ ಭಿನ್ನರಾದ ಸೂತರಲ್ಲಿ ಹುಟ್ಟಿದವನೆಂದು ತಿಳಿ.

12003027a ರಾಧೇಯಃ ಕರ್ಣ ಇತಿ ಮಾಂ ಪ್ರವದಂತಿ ಜನಾ ಭುವಿ|
12003027c ಪ್ರಸಾದಂ ಕುರು ಮೇ ಬ್ರಹ್ಮನ್ನಸ್ತ್ರಲುಬ್ಧಸ್ಯ ಭಾರ್ಗವ||

ರಾಧೇಯ ಕರ್ಣನೆಂದು ಭುವಿಯಲ್ಲಿ ಜನರು ನನ್ನನ್ನು ಕರೆಯುತ್ತಾರೆ. ಬ್ರಹ್ಮನ್! ಭಾರ್ಗವ! ಅಸ್ತ್ರಲೋಭಿಯಾದ ನನ್ನ ಮೇಲೆ ಕುರುಣೆತೋರಿಸು!

12003028a ಪಿತಾ ಗುರುರ್ನ ಸಂದೇಹೋ ವೇದವಿದ್ಯಾಪ್ರದಃ ಪ್ರಭುಃ|
12003028c ಅತೋ ಭಾರ್ಗವ ಇತ್ಯುಕ್ತಂ ಮಯಾ ಗೋತ್ರಂ ತವಾಂತಿಕೇ||

ವೇದವಿದ್ಯೆಗಳನ್ನು ನೀಡುವ ಪ್ರಭು ಗುರುವು ತಂದೆಯಂತೆ ಎಂದು ನನಗೆ ಸಂದೇಹವಿರಲಿಲ್ಲ. ಆದುದರಿಂದ ನನ್ನದು ಭಾರ್ಗವ ಗೋತ್ರವೆಂದು ಹೇಳಿ ನಿನ್ನ ಬಳಿ ಬಂದೆ!"

12003029a ತಮುವಾಚ ಭೃಗುಶ್ರೇಷ್ಠಃ ಸರೋಷಃ ಪ್ರಹಸನ್ನಿವ|
12003029c ಭೂಮೌ ನಿಪತಿತಂ ದೀನಂ ವೇಪಮಾನಂ ಕೃತಾಂಜಲಿಮ್||

ನೆಲದ ಮೇಲೆ ಬಿದ್ದು ದೀನನಾಗಿ ಕೈಮುಗಿದು ನಡುಗುತ್ತಿದ್ದ ಅವನಿಗೆ ರೋಷದಿಂದ ನಗುತ್ತಿರುವನೋ ಎನ್ನುವಂತೆ ಆ ಭೃಗುಶ್ರೇಷ್ಠನು ಹೇಳಿದನು:

12003030a ಯಸ್ಮಾನ್ಮಿಥ್ಯೋಪಚರಿತೋ ಅಸ್ತ್ರಲೋಭಾದಿಹ ತ್ವಯಾ|
12003030c ತಸ್ಮಾದೇತದ್ಧಿ ತೇ ಮೂಢ ಬ್ರಹ್ಮಾಸ್ತ್ರಂ ಪ್ರತಿಭಾಸ್ಯತಿ||
12003031a ಅನ್ಯತ್ರ ವಧಕಾಲಾತ್ತೇ ಸದೃಶೇನ ಸಮೇಯುಷಃ|
12003031c ಅಬ್ರಾಹ್ಮಣೇ ನ ಹಿ ಬ್ರಹ್ಮ ಧ್ರುವಂ ತಿಷ್ಠೇತ್ಕದಾ ಚನ||

"ಮೂಢ! ಅಸ್ತ್ರಲೋಭದಿಂದ ನೀನು ನನ್ನೊಡನೆ ಸುಳ್ಳಾಗಿ ನಡೆದುಕೊಂಡಿದುದರಿಂದ ನಿನ್ನ ವಧೆಯ ಕಾಲವಲ್ಲದಾಗ ಮತ್ತು ನಿನ್ನ ಸಮಾನರೊಡನೆ ಯುದ್ಧಮಾಡುವಾಗ ಮಾತ್ರ ಬ್ರಹ್ಮಾಸ್ತ್ರವು ನಿನಗೆ ಹೊಳೆಯುತ್ತದೆಯೆಂದು ತಿಳಿದುಕೋ! ಅಬ್ರಾಹ್ಮನಲ್ಲಿ ಬ್ರಹ್ಮಾಸ್ತ್ರವು

ಎಂದೂ ನಿಲ್ಲುವುದಿಲ್ಲವೆನ್ನುವುದು ಸತ್ಯ!

12003032a ಗಚ್ಛೈದಾನೀಂ ನ ತೇ ಸ್ಥಾನಮನೃತಸ್ಯೇಹ ವಿದ್ಯತೇ|
12003032c ನ ತ್ವಯಾ ಸದೃಶೋ ಯುದ್ಧೇ ಭವಿತಾ ಕ್ಷತ್ರಿಯೋ ಭುವಿ||

ಅನೃತವಾದಿಗೆ ಇಲ್ಲಿ ಯಾವ ಸ್ಥಾನವೂ ಇಲ್ಲ. ಕೂಡಲೇ ಇಲ್ಲಿಂದ ಹೊರಟು ಹೋಗು! ಯುದ್ಧದಲ್ಲಿ ನಿನ್ನ ಸಮಾನ ಕ್ಷತ್ರಿಯನು ಭುವಿಯಲ್ಲಿಯೇ ಇರುವುದಿಲ್ಲ!"

12003033a ಏವಮುಕ್ತಸ್ತು ರಾಮೇಣ ನ್ಯಾಯೇನೋಪಜಗಾಮ ಸಃ|
12003033c ದುರ್ಯೋಧನಮುಪಾಗಮ್ಯ ಕೃತಾಸ್ತ್ರೋಽಸ್ಮೀತಿ ಚಾಬ್ರವೀತ್||

ರಾಮನು ಹೀಗೆ ಹೇಳಲು ನ್ಯಾಯರೀತಿಯಲ್ಲಿ ಅವನಿಂದ ಬೀಳ್ಕೊಂಡು ಅವನು ದುರ್ಯೋಧನನ ಬಳಿಸಾರಿ "ನಾನು ಅಸ್ತ್ರವಿದ್ಯಾಪಾರಂಗತನಾಗಿದ್ದೇನೆ!" ಎಂದು ಹೇಳಿದನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಕರ್ಣಾಸ್ತ್ರಪ್ರಾಪ್ತಿರ್ನಾಮ ತೃತೀಯೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಕರ್ಣಾಸ್ತ್ರಪ್ರಾಪ್ತಿ ಎನ್ನುವ ಮೂರನೇ ಅಧ್ಯಾಯವು.

೪

ದುರ್ಯೋಧನ ಸ್ವಯಂವರದಲ್ಲಿ ಕನ್ಯಾಹರಣ

ಸ್ವಯಂವರದಲ್ಲಿ ದುರ್ಯೋಧನನು ಕಲಿಂಗ ರಾಜಕುಮಾರಿಯನ್ನು ಬಲಾತ್ಕಾರವಾಗಿ ಎತ್ತಿಕೊಂಡು ಹೋದುದು (1-13). ಆಗ ಕರ್ಣನು ಆಕ್ರಮಣಿಸಿದ ರಾಜರನ್ನು ಸೋಲಿಸಿ, ದುರ್ಯೋಧನನನ್ನು ರಕ್ಷಿಸಿದುದು (14-21).

12004001 ನಾರದ ಉವಾಚ|
12004001a ಕರ್ಣಸ್ತು ಸಮವಾಪ್ಯೈತದಸ್ತ್ರಂ ಭಾರ್ಗವನಂದನಾತ್|
12004001c ದುರ್ಯೋಧನೇನ ಸಹಿತೋ ಮುಮುದೇ ಭರತರ್ಷಭ||

ನಾರದನು ಹೇಳಿದನು: "ಭರತರ್ಷಭ! ಭಾರ್ಗವನಂದನನಿಂದ ಆ ಅಸ್ತ್ರವನ್ನು ಪಡೆದು ಕರ್ಣನು ದುರ್ಯೋಧನನೊಂದಿಗೆ ಆನಂದಿಸಿದನು.

12004002a ತತಃ ಕದಾ ಚಿದ್ರಾಜಾನಃ ಸಮಾಜಗ್ಮುಃ ಸ್ವಯಂವರೇ|
12004002c ಕಲಿಂಗವಿಷಯೇ ರಾಜನ್ರಾಜ್ಞಶ್ಚಿತ್ರಾಂಗದಸ್ಯ ಚ||

ರಾಜನ್! ಅನಂತರ ಒಮ್ಮೆ ಕಲಿಂಗದೇಶದ ರಾಜ ಚಿತ್ರಾಂಗದನಲ್ಲಿಗೆ ಸ್ವಯಂವರಕ್ಕೆಂದು ರಾಜರು ಬಂದು ಸೇರಿದರು.

12004003a ಶ್ರೀಮದ್ರಾಜಪುರಂ ನಾಮ ನಗರಂ ತತ್ರ ಭಾರತ|
12004003c ರಾಜಾನಃ ಶತಶಸ್ತತ್ರ ಕನ್ಯಾರ್ಥಂ ಸಮುಪಾಗಮನ್||

ಭಾರತ! ಆ ನಗರದ ಹೆಸರು ಶ್ರೀಮದ್ರಾಜಪುರವೆಂದಿತ್ತು. ಅಲ್ಲಿಗೆ ಕನ್ಯೆಗೋಸ್ಕರ ನೂರಾರು ರಾಜರು ಆಗಮಿಸಿದರು.

12004004a ಶ್ರುತ್ವಾ ದುರ್ಯೋಧನಸ್ತತ್ರ ಸಮೇತಾನ್ಸರ್ವಪಾರ್ಥಿವಾನ್|
12004004c ರಥೇನ ಕಾಂಚನಾಂಗೇನ ಕರ್ಣೇನ ಸಹಿತೋ ಯಯೌ||

ಸರ್ವ ಪಾರ್ಥಿವರೂ ಅಲ್ಲಿ ಸೇರಿರುವರೆಂದು ಕೇಳಿದ ದುರ್ಯೋಧನನು

ಕರ್ಣನೊಂದಿಗೆ ಕಾಂಚನ ರಥದಲ್ಲಿ ಕುಳಿತು ಹೋದನು.

12004005a ತತಃ ಸ್ವಯಂವರೇ ತಸ್ಮಿನ್ಸಂಪ್ರವೃತ್ತೇ ಮಹೋತ್ಸವೇ|
12004005c ಸಮಾಪೇತುರ್ನೃಪತಯಃ ಕನ್ಯಾರ್ಥೇ ನೃಪಸತ್ತಮ||
12004006a ಶಿಶುಪಾಲೋ ಜರಾಸಂಧೋ ಭೀಷ್ಮಕೋ ವಕ್ರ ಏವ ಚ|
12004006c ಕಪೋತರೋಮಾ ನೀಲಶ್ಚ ರುಕ್ಮೀ ಚ ದೃಢವಿಕ್ರಮಃ||
12004007a ಸೃಗಾಲಶ್ಚ ಮಹಾರಾಜ ಸ್ತ್ರೀರಾಜ್ಯಾಧಿಪತಿಶ್ಚ ಯಃ|
12004007c ಅಶೋಕಃ ಶತಧನ್ವಾ ಚ ಭೋಜೋ ವೀರಶ್ಚ ನಾಮತಃ||

ನೃಪಸತ್ತಮ! ನಡೆಯುತ್ತಿದ್ದ ಆ ಸ್ವಯಂವರ ಮಹೋತ್ಸವಕ್ಕೆ ಕನ್ಯೆಗಾಗಿ ಈ ಎಲ್ಲ ನೃಪತಿಯರು ಸೇರಿದ್ದರುಃ ಶಿಶುಪಾಲ, ಜರಾಸಂಧ, ಭೀಷ್ಮಕ, ವಕ್ರ, ಕಪೋತರೋಮ, ನೀಲ, ದೃಢವಿಕ್ರಮಿ ರುಕ್ಮಿ, ಸ್ತ್ರೀರಾಜ್ಯಾಧಿಪತಿ ಮಹಾರಾಜ ಸೃಗಾಲ, ಅಶೋಕ, ಶತಧನ್ವ, ಭೋಜ ಮತ್ತು ವೀರನೆನ್ನುವ ರಾಜ.

12004008a ಏತೇ ಚಾನ್ಯೇ ಚ ಬಹವೋ ದಕ್ಷಿಣಾಂ ದಿಶಮಾಶ್ರಿತಾಃ|
12004008c ಮ್ಲೇಚ್ಚಾಚಾರ್ಯಾಶ್ಚ ರಾಜಾನಃ ಪ್ರಾಚ್ಯೋದೀಚ್ಯಾಶ್ಚ ಭಾರತ||

ಭಾರತ! ಇವರಲ್ಲದೇ ಇನ್ನೂ ಇತರ ಅನೇಕ ದಕ್ಷಿಣದೇಶದವರು, ಮ್ಲೇಚ್ಛರು, ಆರ್ಯರು, ಪೂರ್ವೋತ್ತರ ದಿಕ್ಕಿನ ರಾಜರು ಬಂದಿದ್ದರು.

12004009a ಕಾಂಚನಾಂಗದಿನಃ ಸರ್ವೇ ಬದ್ಧಜಾಂಬೂನದಸ್ರಜಃ|
12004009c ಸರ್ವೇ ಭಾಸ್ವರದೇಹಾಶ್ಚ ವ್ಯಾಘ್ರಾ ಇವ ಮದೋತ್ಕಟಾಃ||

ಅವರೆಲ್ಲರೂ ಕಾಂಚನ ಅಂಗದಗಳನ್ನೂ, ಚಿನ್ನದ ಹಾರಗಳನ್ನೂ ಧರಿಸಿದ್ದರು. ಎಲ್ಲರ ದೇಹಗಳೂ ಕಾಂತಿಯುಕ್ತವಾಗಿದ್ದವು ಮತ್ತು ಎಲ್ಲರೂ ವ್ಯಾಘ್ರರಂತೆ ಮದೋತ್ಕಟರಾಗಿದ್ದರು.

12004010a ತತಃ ಸಮುಪವಿಷ್ಟೇಷು ತೇಷು ರಾಜಸು ಭಾರತ|
12004010c ವಿವೇಶ ರಂಗಂ ಸಾ ಕನ್ಯಾ ಧಾತ್ರೀವರ್ಷಧರಾನ್ವಿತಾ||

ಭಾರತ! ಆ ರಾಜರು ಕುಳಿತುಕೊಂಡಿರಲು ಕನ್ಯೆಯು ಅನೇಕ
ಸೇವಕಿಯರಿಂದ ಸುತ್ತುವರೆಯಲ್ಪಟ್ಟು ರಂಗವನ್ನು ಪ್ರವೇಶಿಸಿದಳು.

12004011a ತತಃ ಸಂಶ್ರಾವ್ಯಮಾಣೇಷು ರಾಜ್ಞಾಂ ನಾಮಸು ಭಾರತ|
12004011c ಅತ್ಯಕ್ರಾಮದ್ಧಾರ್ತರಾಷ್ಟ್ರಂ ಸಾ ಕನ್ಯಾ ವರವರ್ಣಿನೀ||

ಭಾರತ! ರಾಜರ ಹೆಸರುಗಳನ್ನು ಹೇಳುತ್ತಿರುವಾಗ ಆ ವರವರ್ಣಿನೀ
ಕನ್ಯೆಯು ಧಾರ್ತರಾಷ್ಟ್ರ ದುರ್ಯೋಧನನನ್ನು ದಾಟಿ ಮುಂದುವರೆದಳು.

12004012a ದುರ್ಯೋಧನಸ್ತು ಕೌರವ್ಯೋ ನಾಮರ್ಷಯತ ಲಂಘನಮ್|
12004012c ಪ್ರತ್ಯಷೇಧಚ್ಚ ತಾಂ ಕನ್ಯಾಮಸತ್ಕೃತ್ಯ ನರಾಧಿಪಾನ್||

ಆ ರೀತಿ ಅವಳು ತನ್ನನ್ನು ದಾಟಿಹೋದುದನ್ನು ಕೌರವ್ಯ
ದುರ್ಯೋಧನನು ಸಹಿಸಿಕೊಳ್ಳಲಿಲ್ಲ. ಅಲ್ಲಿದ್ದ ನರಾಧಿಪರನ್ನು ಕಡೆಗಣಿಸಿ
ಅವನು ಆ ಕನ್ಯೆಯನ್ನು ತಡೆದನು.

12004013a ಸ ವೀರ್ಯಮದಮತ್ತತ್ವಾದ್ಭೀಷ್ಮದ್ರೋಣಾವುಪಾಶ್ರಿತಃ|
12004013c ರಥಮಾರೋಪ್ಯ ತಾಂ ಕನ್ಯಾಮಾಜುಹಾವ ನರಾಧಿಪಾನ್||
12004014a ತಮನ್ವಯಾದ್ರಥೀ ಖಡ್ಗೀ ಭದ್ಧಗೋಧಾಂಗುಲಿತ್ರವಾನ್|
12004014c ಕರ್ಣಃ ಶಸ್ತ್ರಭೃತಾಂ ಶ್ರೇಷ್ಠಃ ಪೃಷ್ಠತಃ ಪುರುಷರ್ಷಭ||

ಭೀಷ್ಮ-ದ್ರೋಣರ ಆಶ್ರಯವನ್ನು ಪಡೆದಿದ್ದ ವೀರ್ಯಮದದಿಂದ
ಮತ್ತನಾಗಿದ್ದ ಅವನು ಆ ಕನ್ಯೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು
ಅಪಹರಿಸಿದನು. ಭರತರ್ಷಭ! ಆಗ ಗೋಧಾಂಗುಲಿಗಳನ್ನು

ಕಟ್ಟಿಕೊಂಡು ಖಡ್ಗಧಾರಿಯಾಗಿ ರಥವೇರಿ ಶಸ್ತ್ರಭೃತರಲ್ಲಿ ಶ್ರೇಷ್ಠ ಕರ್ಣನು ಅವನನ್ನು ಅನುಸರಿಸಿ ಹೋದನು.

12004015a ತತೋ ವಿಮರ್ದಃ ಸುಮಹಾನ್ರಾಜ್ಞಾಮಾಸೀದ್ಯುಧಿಷ್ಠಿರ|
12004015c ಸಂನಹ್ಯತಾಂ ತನುತ್ರಾಣಿ ರಥಾನ್ಯೋಜಯತಾಮಪಿ||

ಯುಧಿಷ್ಠಿರ! ಆಗ ರಾಜರ ಮಹಾ ಯುದ್ಧವೇ ನಡೆಯಿತು. ಕುಪಿತರಾದ ರಾಜರು ಕವಚಗಳನ್ನು ಧರಿಸಿ ರಥಗಳನ್ನು ಸಿದ್ಧಗೊಳಿಸಿದರು.

12004016a ತೇಽಭ್ಯಧಾವಂತ ಸಂಕ್ರುದ್ಧಾಃ ಕರ್ಣದುರ್ಯೋಧನಾವುಭೌ|
12004016c ಶರವರ್ಷಾಣಿ ಮುಂಚಂತೋ ಮೇಘಾಃ ಪರ್ವತಯೋರಿವ||

ಮೇಘಗಳು ಪರ್ವತಗಳ ಮೇಲೆ ಹೇಗೋ ಹಾಗೆ ಸಂಕ್ರುದ್ಧರಾದ ಅವರು ಕರ್ಣ-ದುರ್ಯೋಧನರ ಮೇಲೆ ಶರವರ್ಷಗಳನ್ನು ಸುರಿಸಿದರು.

12004017a ಕರ್ಣಸ್ತೇಷಾಮಾಪತತಾಮೇಕೈಕೇನ ಕ್ಷುರೇಣ ಹ|
12004017c ಧನೂಂಷಿ ಸಶರಾವಾಪಾನ್ಯಪಾತಯತ ಭೂತಲೇ||

ಕರ್ಣನು ತನ್ನ ಮೇಲೆ ಬೀಳುತ್ತಿದ್ದ ಅವರ ಬಾಣಗಳನ್ನು ಒಂದೊಂದಾಗಿ ಕ್ಷುರದಿಂದ ಕತ್ತರಿಸಿ ಅವರ ಧನುಸ್ಸು-ಬತ್ತಳಿಕೆಗಳನ್ನೂ ಭೂಮಿಯ ಮೇಲೆ ಬೀಳಿಸಿದನು.

12004018a ತತೋ ವಿಧನುಷಃ ಕಾಂಶ್ಚಿತ್ತಾಂಶ್ಚಿದುದ್ಯತಕಾರ್ಮುಕಾನ್|
12004018c ಕಾಂಶ್ಚಿದುದ್ವಹತೋ ಬಾಣಾನ್ರಥಶಕ್ತಿಗದಾಸ್ತಥಾ||

ಆಗ ಕೆಲವರು ಧನುಸ್ಸುಗಳನ್ನು ಕಳೆದುಕೊಂಡಿದ್ದರು. ಕೆಲವರು ಬಾಣಗಳಿಲ್ಲದೇ ಕೇವಲ ಧನುಸ್ಸುಗಳನ್ನು ಎತ್ತಿ ಹಿಡಿದಿದ್ದರು. ಕೆಲವರು ಬಾಣಗಳನ್ನೂ, ರಥ-ಶಕ್ತಿ-ಗದೆಗಳನ್ನೂ ಕಳೆದುಕೊಂಡಿದ್ದರು.

12004019a ಲಾಘವಾದಾಕುಲೀಕೃತ್ಯ ಕರ್ಣಃ ಪ್ರಹರತಾಂ ವರಃ|
12004019c ಹತಸೂತಾಂಶ್ಚ ಭೂಯಿಷ್ಠಾನವಜಿಗ್ಯೇ ನರಾಧಿಪಾನ್||

ಪ್ರಹರಿಗಳಲ್ಲಿ ಶ್ರೇಷ್ಠ ಕರ್ಣನು ತನ್ನ ಹಸ್ತಲಾಘವದಿಂದ ಅವರನ್ನು ಆಯುಧಹೀನರನ್ನಾಗಿಸಿ, ಅವರ ಸಾರಥಿಗಳನ್ನೂ ಸಂಹರಿಸಿ, ಆ ನರಾಧಿಪರನ್ನು ಇನ್ನೂ ಹೆಚ್ಚಿನ ಕಷ್ಟಗಳಿಗೀಡುಮಾಡಿದನು.

12004020a ತೇ ಸ್ವಯಂ ತ್ವರಯಂತೋಽಶ್ವಾನ್ಯಾಹಿ ಯಾಹೀತಿ ವಾದಿನಃ|
12004020c ವ್ಯಪೇಯುಸ್ತೇ ರಣಂ ಹಿತ್ವಾ ರಾಜಾನೋ ಭಗ್ನಮಾನಸಾಃ||

ಸ್ವಯಂ ರಾಜರೇ ಹೋಗು ಹೋಗೆಂದು ಕುದುರೆಗಳನ್ನು ಓಡಿಸುತ್ತಾ, ಭಗ್ನಮಾನಸರಾಗಿ ರಣವನ್ನು ತೊರೆದು ಹೊರಟು ಹೋದರು.

12004021a ದುರ್ಯೋಧನಸ್ತು ಕರ್ಣೇನ ಪಾಲ್ಯಮಾನೋಽಭ್ಯಯಾತ್ತದಾ|
12004021c ಹೃಷ್ಟಃ ಕನ್ಯಾಮುಪಾದಾಯ ನಗರಂ ನಾಗಸಾಹ್ವಯಮ್||

ದುರ್ಯೋಧನನಾದರೋ ಕರ್ಣನಿಂದ ರಕ್ಷಿಸಲ್ಪಟ್ಟು ಸಂತೋಷದಿಂದ ಕನ್ಯೆಯನ್ನು ಕರೆದುಕೊಂಡು ಹಸ್ತಿನಾಪುರ ನಗರಕ್ಕೆ ಪ್ರಯಾಣಿಸಿದನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ದುರ್ಯೋಧನಸ್ವಯಂವರೇ ಕನ್ಯಾಹರಣಂ ನಾಮ
ಚತುರ್ಥೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ದುರ್ಯೋಧನನ ಸ್ವಯಂವರದಲ್ಲಿ ಕನ್ಯಾಹರಣ ಎನ್ನುವ ನಾಲ್ಕನೇ
ಅಧ್ಯಾಯವು.

೫

ಕರ್ಣ ವೀರ್ಯ ಕಥನ

ಕರ್ಣನು ಜರಾಸಂಧನೊಡನೆ ಯುದ್ಧಮಾಡಿ ಮಾಲಿನೀ ನಗರವನ್ನು ಬಹುಮಾನವನ್ನಾಗಿ ಪಡೆದುದು (1-7). ದೇವೇಂದ್ರನಿಗೆ ತನ್ನ ಸಹಜವಾಗಿದ್ದ ಕವಚ-ಕುಂಡಲಗಳನ್ನಿತ್ತು ಅರ್ಜುನನಿಂದ ಕರ್ಣನು ಹತನಾದುದು (8-15).

12005001 ನಾರದ ಉವಾಚ|
12005001a ಆವಿಷ್ಕೃತಬಲಂ ಕರ್ಣಂ ಜ್ಞಾತ್ವಾ ರಾಜಾ ತು ಮಾಗಧಃ|
12005001c ಆಹ್ವಯದ್ದ್ವೈರಥೇನಾಜೌ ಜರಾಸಂಧೋ ಮಹೀಪತಿಃ||

ನಾರದನು ಹೇಳಿದನು: "ಸರ್ವತ್ರ ಖ್ಯಾತವಾಗಿದ್ದ ಕರ್ಣನ ಬಲವನ್ನು ಕೇಳಿ ಮಗಧ ದೇಶದ ರಾಜ ಮಹೀಪತಿ ಜರಾಸಂಧನು ಅವನನ್ನು ದ್ವೈರಥಯುದ್ಧಕ್ಕೆ ಆಹ್ವಾನಿಸಿದನು.

12005002a ತಯೋಃ ಸಮಭವದ್ಯುದ್ಧಂ ದಿವ್ಯಾಸ್ತ್ರವಿದುಷೋರ್ದ್ವಯೋಃ|
12005002c ಯುಧಿ ನಾನಾಪ್ರಹರಣೈರನ್ಯೋನ್ಯಮಭಿವರ್ಷತೋಃ||

ದಿವ್ಯಾಸ್ತ್ರಗಳಲ್ಲಿ ಪರಿಣಿತರಾಗಿದ್ದ ಅವರಿಬ್ಬರ ನಡುವೆ ಯುದ್ಧವು ಪ್ರಾರಂಭವಾಯಿತು. ಯುದ್ಧದಲ್ಲಿ ನಾನಾ ಪ್ರಹಾರಗಳಿಂದ ಅನ್ಯೋನ್ಯರನ್ನು ತೋಯಿಸಿದರು.

12005003a ಕ್ಷೀಣಬಾಣೌ ವಿಧನುಷೌ ಭಗ್ನಖಡ್ಗೌ ಮಹೀಂ ಗತೌ|
12005003c ಬಾಹುಭಿಃ ಸಮಸಜ್ಜೇತಾಮುಭಾವಪಿ ಬಲಾನ್ವಿತೌ||

ಬಾಣಗಳು ಮುಗಿದುಹೋಗಲು, ಧನುಸ್ಸೂ ಇಲ್ಲವಾಗಲು, ಮತ್ತು ಖಡ್ಗಗಳು ತುಂಡಾಗಲು ಆ ಇಬ್ಬರು ಬಲಾನ್ವಿತರೂ ನೆಲದ ಮೇಲೆ ನಿಂತು ಬಾಹುಯುದ್ಧದಲ್ಲಿ ತೊಡಗಿದರು.

12005004a ಬಾಹುಕಂಟಕಯುದ್ಧೇನ ತಸ್ಯ ಕರ್ಣೋ ಽಥ ಯುಧ್ಯತಃ|
12005004c ಬಿಭೇದ ಸಂಧಿಂ ದೇಹಸ್ಯ ಜರಯಾ ಶ್ಲೇಷಿತಸ್ಯ ಹ||

ಬಾಹುಕಂಟಕ[10] ಯುದ್ಧದಲ್ಲಿ ತೊಡಗಿದ್ದ ಕರ್ಣನು ಜರೆಯು ಜೋಡಿಸಿದ್ದ ಜರಾಸಂಧನ ಸಂಧಿಬಂಧವನ್ನು ಭೇದಿಸತೊಡಗಿದನು.

12005005a ಸ ವಿಕಾರಂ ಶರೀರಸ್ಯ ದೃಷ್ಟ್ವಾ ನೃಪತಿರಾತ್ಮನಃ|
12005005c ಪ್ರೀತೋ ಽಸ್ಮೀತ್ಯಬ್ರವೀತ್ಕರ್ಣಂ ವೈರಮುತ್ಸೃಜ್ಯ ಭಾರತ||

ಭಾರತ! ತನ್ನ ಶರೀರವು ವಿಕಾರವಾಗುತ್ತಿರುವನ್ನು ನೋಡಿ ಆ ನೃಪತಿಯು ವೈರವನ್ನು ತೊರೆದು "ನಿನ್ನಿಂದ ನಾನು ಪ್ರೀತನಾಗಿದ್ದೇನೆ!" ಎಂದು ಕರ್ಣನಿಗೆ ಹೇಳಿದನು.

12005006a ಪ್ರೀತ್ಯಾ ದದೌ ಸ ಕರ್ಣಾಯ ಮಾಲಿನೀಂ ನಗರೀಮಥ|
12005006c ಅಂಗೇಷು ನರಶಾರ್ದೂಲ ಸ ರಾಜಾಸೀತ್ಸಪತ್ನಜಿತ್||

---

[10] ಬಾಹುಕಂಟಕ ಯುದ್ಧವನ್ನು ಈ ರೀತಿ ವರ್ಣಿಸಿದ್ದಾರೆ: ಏಕಾಂ ಜಂಘಾಂ ಪದಾಕ್ರಮ್ಯ ಪರಾಮುದ್ಯಮ್ಯ ಪಾಟ್ಯತೇ| ಕೇತಕೀಪತ್ರವಚ್ಚ್ಚತ್ರೋರ್ಯುದ್ಧಂ ತದ್ಬಾಹುಕಂಟಕಂ|| ಅರ್ಥಾತ್ ಕೇದಗೆಯ ಗರಿಯನ್ನು ಎರಡಾಗಿ ಸೀಳುವಂತೆ ಶತ್ರುವಿನ ಒಂದು ಮೊಣಕಾಲನ್ನು ಮೆಟ್ಟಿಕೊಂಡು ಮತ್ತೊಂದು ಮೊಣಕಾಲನ್ನು ಮೇಲಕ್ಕೆತ್ತಿ ಸೀಳುವುದಕ್ಕೆ ಬಾಹುಕಂಟಕಯುದ್ಧವೆಂದು ಹೆಸರು. (ಭಾರತ ದರ್ಶನ/ಗೀತಾ ಪ್ರೆಸ್)

ಅವನು ಪ್ರೀತಿಯಿಂದ ಕರ್ಣನಿಗೆ ಮಾಲಿನೀ ನಗರವನ್ನು ಕೊಟ್ಟನು. ನರಶಾರ್ದೂಲ! ಶತ್ರುವಿಜಯಿ ಅಂಗದ ರಾಜನು ಅದನ್ನು ಆಳಿದನು.

12005007a ಪಾಲಯಾಮಾಸ ಚಂಪಾಂ ತು ಕರ್ಣಃ ಪರಬಲಾರ್ದನಃ|
12005007c ದುರ್ಯೋಧನಸ್ಯಾನುಮತೇ ತವಾಪಿ ವಿದಿತಂ ತಥಾ||

ಪರಬಲಾರ್ದನ ಕರ್ಣನು ದುರ್ಯೋಧನನ ಅನುಮತಿಯಂತೆ ಚಂಪಾಪುರವನ್ನೂ ಆಳುತ್ತಿದ್ದನು. ಅದು ನಿನಗೆ ತಿಳಿದೇ ಇದೆ.

12005008a ಏವಂ ಶಸ್ತ್ರಪ್ರತಾಪೇನ ಪ್ರಥಿತಃ ಸೋಽಭವತ್ಕ್ಷಿತೌ|
12005008c ತ್ವದ್ಧಿತಾರ್ಥಂ ಸುರೇಂದ್ರೇಣ ಭಿಕ್ಷಿತೋ ವರ್ಮಕುಂಡಲೇ||

ಹೀಗೆ ಶಸ್ತ್ರಪ್ರತಾಪದಿಂದ ಅವನು ಭೂಮಿಯಲ್ಲಿ ಖ್ಯಾತನಾದನು. ನಿನ್ನ ಹಿತಕ್ಕಾಗಿ ಸುರೇಂದ್ರನು ಅವನ ಕವಚ-ಕುಂಡಲಗಳನ್ನು ಭಿಕ್ಷೆಯಾಗಿ ಬೇಡಿದನು.

12005009a ಸ ದಿವ್ಯೇ ಸಹಜೇ ಪ್ರಾದಾತ್ಕುಂಡಲೇ ಪರಮಾರ್ಚಿತೇ|
12005009c ಸಹಜಂ ಕವಚಂ ಚೈವ ಮೋಹಿತೋ ದೇವಮಾಯಯಾ||

ದೇವಮಾಯೆಯಿಂದ ಮೋಹಿತನಾದ ಅವನು ಹುಟ್ಟುವಾಗಲೇ ಇದ್ದಿದ್ದ ಕುಂಡಲಗಳನ್ನೂ ಹುಟ್ಟುವಾಗಲೇ ಇದ್ದಿದ್ದ ಕವಚವನ್ನೂ ಇಂದ್ರನಿಗೆ ಕೊಟ್ಟುಬಿಟ್ಟನು.

12005010a ವಿಮುಕ್ತಃ ಕುಂಡಲಾಭ್ಯಾಂ ಚ ಸಹಜೇನ ಚ ವರ್ಮಣಾ|
12005010c ನಿಹತೋ ವಿಜಯೇನಾಜೌ ವಾಸುದೇವಸ್ಯ ಪಶ್ಯತಃ||

ಸಹಜ ಕವಚ-ಕುಂಡಲಗಳಿಂದ ವಿಹೀನನನಾಗಿದ್ದ ಅವನನ್ನು ವಿಜಯ ಅರ್ಜುನನು ವಾಸುದೇವನ ಸಮಕ್ಷಮದಲ್ಲಿಯೇ ಸಂಹರಿಸಿದನು.

12005011a ಬ್ರಾಹ್ಮಣಸ್ಯಾಭಿಶಾಪೇನ ರಾಮಸ್ಯ ಚ ಮಹಾತ್ಮನಃ|
12005011c ಕುಂತ್ಯಾಶ್ಚ ವರದಾನೇನ ಮಾಯಯಾ ಚ ಶತಕ್ರತೋಃ||
12005012a ಭೀಷ್ಮಾವಮಾನಾತ್ಸಂಖ್ಯಾಯಾಂ ರಥಾನಾಮರ್ಧಕೀರ್ತನಾತ್|
12005012c ಶಲ್ಯಾತ್ತೇಜೋವಧಾಚ್ಚಾಪಿ ವಾಸುದೇವನಯೇನ ಚ||
12005013a ರುದ್ರಸ್ಯ ದೇವರಾಜಸ್ಯ ಯಮಸ್ಯ ವರುಣಸ್ಯ ಚ|
12005013c ಕುಬೇರದ್ರೋಣಯೋಶ್ಚೈವ ಕೃಪಸ್ಯ ಚ ಮಹಾತ್ಮನಃ||
12005014a ಅಸ್ತ್ರಾಣಿ ದಿವ್ಯಾನ್ಯಾದಾಯ ಯುಧಿ ಗಾಂಡೀವಧನ್ವನಾ|
12005014c ಹತೋ ವೈಕರ್ತನಃ ಕರ್ಣೋ ದಿವಾಕರಸಮದ್ಯುತಿಃ||

ಬ್ರಾಹ್ಮಣನ ಮತ್ತು ಮಹಾತ್ಮ ರಾಮನ ಶಾಪದಿಂದ, ಕುಂತಿಯ ಮತ್ತು ಶತುಕ್ರತುವಿಗೆ ಮೋಸಹೋಗಿ ನೀಡಿದ ವರದಿಂದ, ರಥಾಥಿರಥರನ್ನು ಎಣಿಸುವಾಗ ಭೀಷ್ಮನು ಅವನನ್ನು ಅರ್ಧರಥನೆಂದು ಹೇಳಿದುದರಿಂದ, ಶಲ್ಯನ ತೇಜೋವಧೆಯಿಂದ, ವಾಸುದೇವನ ನೀತಿ, ಮತ್ತು ರುದ್ರ-ದೇವರಾಜ-ಯಮ-ವರುಣ-ಕುಬೇರ-ದ್ರೋಣ ಮತ್ತು ಮಹಾತ್ಮ ಕೃಪರಿಂದ ದಿವ್ಯಾಸ್ತ್ರಗಳನ್ನು ಪಡೆದಿದ್ದ ಗಾಂಡೀವ ಧನ್ವಿ - ಇವೆಲ್ಲ ಕಾರಣಗಳಿಂದ ದಿವಾಕರ ಸಮಾನ ಕಾಂತಿಯಿದ್ದ ವೈಕರ್ತನ ಕರ್ಣನು ಯುದ್ಧದಲ್ಲಿ ಹತನಾದನು.

12005015a ಏವಂ ಶಪ್ತಸ್ತವ ಭ್ರಾತಾ ಬಹುಭಿಶ್ಚಾಪಿ ವಂಚಿತಃ|
12005015c ನ ಶೋಚ್ಯಃ ಸ ನರವ್ಯಾಘ್ರೋ ಯುದ್ಧೇ ಹಿ ನಿಧನಂ ಗತಃ||

ಹೀಗೆ ಅನೇಕರಿಂದ ಶಾಪಗ್ರಸ್ತನಾಗಿ ಮತ್ತು ಅನೇಕರಿಂದ ವಂಚಿತನಾಗಿ ನಿನ್ನ ಅಣ್ಣ ನರವ್ಯಾಘ್ರನು ಯುದ್ಧದಲ್ಲಿ ನಿಧನಹೊಂದಿದನು. ಅವನಿಗಾಗಿ ಶೋಕಿಸಬೇಡ!””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಕರ್ಣವೀರ್ಯಕಥನಂ ನಾಮ ಪಂಚಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಕರ್ಣವೀರ್ಯಕಥನವೆನ್ನುವ ಐದನೇ ಅಧ್ಯಾಯವು.

೬

ಸ್ತ್ರೀಶಾಪ

ಯುಧಿಷ್ಠಿರನು ಸ್ತ್ರೀಯರಿಗೆ "ರಹಸ್ಯವನ್ನು ಹಿಡಿದಿಟ್ಟುಕೊಳ್ಳಲಾರಿರಿ!" ಎಂದು ಶಪಿಸುವುದು (1-12).

12006001 ವೈಶಂಪಾಯನ ಉವಾಚ|
12006001a ಏತಾವದುಕ್ತ್ವಾ ದೇವರ್ಷಿರ್ವಿರರಾಮ ಸ ನಾರದಃ|
12006001c ಯುಧಿಷ್ಠಿರಸ್ತು ರಾಜರ್ಷಿರ್ದಧ್ಯೌ ಶೋಕಪರಿಪ್ಲುತಃ||

ವೈಶಂಪಾಯನನು ಹೇಳಿದನು: "ಹೀಗೆ ಹೇಳಿ ದೇವರ್ಷಿ ನಾರದನು ಸುಮ್ಮನಾದನು. ರಾಜರ್ಷಿ ಯುಧಿಷ್ಠಿರನಾದರೋ ಶೋಕಸಾಗರದಲ್ಲಿ ಮುಳುಗಿಹೋದನು.

12006002a ತಂ ದೀನಮನಸಂ ವೀರಮಧೋವದನಮಾತುರಮ್|
12006002c ನಿಃಶ್ವಸಂತಂ ಯಥಾ ನಾಗಂ ಪರ್ಯಶ್ರುನಯನಂ ತಥಾ||
12006003a ಕುಂತೀ ಶೋಕಪರೀತಾಂಗೀ ದುಃಖೋಪಹತಚೇತನಾ|
12006003c ಅಬ್ರವೀನ್ಮಧುರಾಭಾಷಾ ಕಾಲೇ ವಚನಮರ್ಥವತ್||

ದೀನಮನಸ್ಕನಾಗಿ ಮುಖ ಕೆಳಗೆಮಾಡಿಕೊಂಡು, ಆತುರನಾಗಿ

ನಾಗದಂತೆ ನಿಟ್ಟುಸಿರುಬಿಡುತ್ತಾ ಕಣ್ಣೀರನ್ನು ಸುರಿಸುತ್ತಿದ್ದ ಅವನಿಗೆ ಶೋಕದಿಂದ ಸುಡುತ್ತಿದ್ದ, ದುಃಖದಿಂದ ಚೇತನವನ್ನೇ ಕಳೆದುಕೊಂಡಿದ್ದ ಕುಂತಿಯು ಮಧುರಭಾಷೆಯಲ್ಲಿ ಕಾಲಕ್ಕೆ ತಕ್ಕಂತಹ ಈ ಮಾತುಗಳನ್ನಾಡಿದಳು:

12006004a ಯುಧಿಷ್ಠಿರ ಮಹಾಬಾಹೋ ನೈನಂ ಶೋಚಿತುಮರ್ಹಸಿ|
12006004c ಜಹಿ ಶೋಕಂ ಮಹಾಪ್ರಾಜ್ಞ ಶೃಣು ಚೇದಂ ವಚೋ ಮಮ||

“ಮಹಾಬಾಹೋ! ಯುಧಿಷ್ಠಿರ! ನೀನು ಈ ರೀತಿ ಶೋಕಿಸಬಾರದು! ಮಹಾಪ್ರಾಜ್ಞ! ಶೋಕವನ್ನು ತೊರೆ! ನನ್ನ ಈ ಮಾತನ್ನು ಕೇಳು!

12006005a ಯತಿತಃ ಸ ಮಯಾ ಪೂರ್ವಂ ಭ್ರಾತ್ರ್ಯಂ ಜ್ಞಾಪಯಿತುಂ ತವ|
12006005c ಭಾಸ್ಕರೇಣ ಚ ದೇವೇನ ಪಿತ್ರಾ ಧರ್ಮಭೃತಾಂ ವರ||

ಧರ್ಮಭೃತರಲ್ಲಿ ಶ್ರೇಷ್ಠ! ನೀವು ಸಹೋದರರೆಂದು ಮೊದಲೇ ಅವನಿಗೆ ತಿಳಿಸಲು ನಾನೂ ಮತ್ತು ಅವನ ತಂದೆ ದೇವ ಭಾಸ್ಕರರು ಪ್ರಯತ್ನಿಸಿದ್ದೆವು.

12006006a ಯದ್ವಾಚ್ಯಂ ಹಿತಕಾಮೇನ ಸುಹೃದಾ ಭೂತಿಮಿಚ್ಚತಾ|
12006006c ತಥಾ ದಿವಾಕರೇಣೋಕ್ತಃ ಸ್ವಪ್ನಾಂತೇ ಮಮ ಚಾಗ್ರತಃ||

ಹಿತವನ್ನು ಬಯಸಿ ಸುಹೃದಯರಿಗೆ ಏನನ್ನು ಹೇಳಬೇಕೋ ಅದನ್ನೇ ದಿವಾಕರನು ಸ್ವಪ್ನದಲ್ಲಿ ಮತ್ತು ನನ್ನ ಸಮಕ್ಷಮದಲ್ಲಿ ಕರ್ಣನಿಗೆ ಹೇಳಿದ್ದನು.

12006007a ನ ಚೈನಮಶಕದ್ಭಾನುರಹಂ ವಾ ಸ್ನೇಹಕಾರಣೈಃ|
12006007c ಪುರಾ ಪ್ರತ್ಯನುನೇತುಂ ವಾ ನೇತುಂ ವಾಪ್ಯೇಕತಾಂ ತ್ವಯಾ||

ದುರ್ಯೋಧನನೊಂದಿಗೆ ಅವನಿಗಿದ್ದ ಸ್ನೇಹದ ಕಾರಣದಿಂದಾಗಿ
ಭಾನುವಾಗಲೀ ನಾನಾಗಲೀ ಕರ್ಣನು ನಿನ್ನೊಡನೆ ಸೇರುವಂತೆ
ಅಥವಾ ಒಂದಾಗಿರುವಂತೆ ಮಾಡಲು ಶಕ್ಯರಾಗಲಿಲ್ಲ.

12006008a ತತಃ ಕಾಲಪರೀತಃ ಸ ವೈರಸ್ಯೋದ್ಧರ್ಷಣೇ ರತಃ|
12006008c ಪ್ರತೀಪಕಾರೀ ಯುಷ್ಮಾಕಮಿತಿ ಚೋಪೇಕ್ಷಿತೋ ಮಯಾ||

ಅನಂತರ ಕಾಲವಶದಿಂದಾಗಿ ಅವನು ನಿಮ್ಮೊಡನೆ ವೈರವನ್ನು
ಬೆಳೆಸುವುದರಲ್ಲಿಯೇ ನಿರತನಾಗಿದ್ದನು ಮತ್ತು ನಿಮಗೆ
ವಿರುದ್ಧವಾಗಿಯೇ ನಡೆದುಕೊಳ್ಳುತ್ತಿದ್ದನು. ಆದುದರಿಂದ ನಾನು
ಅವನನ್ನು ಉಪೇಕ್ಷಿಸಿದೆ!"

12006009a ಇತ್ಯುಕ್ತೋ ಧರ್ಮರಾಜಸ್ತು ಮಾತ್ರಾ ಬಾಷ್ಪಾಕುಲೇಕ್ಷಣಃ|
12006009c ಉವಾಚ ವಾಕ್ಯಂ ಧರ್ಮಾತ್ಮಾ ಶೋಕವ್ಯಾಕುಲಚೇತನಃ||
12006010a ಭವತ್ಯಾ ಗೂಢಮಂತ್ರತ್ವಾತ್ಪೀಡಿತೋಽಸ್ಮೀತ್ಯುವಾಚ ತಾಮ್|

ತಾಯಿಯು ಹೀಗೆ ಹೇಳಲು ಕಣ್ಣಿರುತುಂಬಿದ ಶೋಕವ್ಯಾಕುಲಚೇತನ
ಧರ್ಮಾತ್ಮ ಧರ್ಮರಾಜನು "ನೀನು ಈ ವಿಷಯವನ್ನು
ರಹಸ್ಯವಾಗಿಯೇ ಇಟ್ಟಿದುದರಿಂದ ನಾನು ಬಹಳ ಪೀಡಿತನಾಗಿದ್ದೇನೆ!"
ಎಂದು ತಾಯಿಗೆ ಹೇಳಿದನು.

12006010c ಶಶಾಪ ಚ ಮಹಾತೇಜಾಃ ಸರ್ವಲೋಕೇಷು ಚ ಸ್ತ್ರಿಯಃ||
12006010e ನ ಗುಹ್ಯಂ ಧಾರಯಿಷ್ಯಂತೀತ್ಯತಿದುಃಖಸಮನ್ವಿತಃ||

ಅತಿ ದುಃಖ ಸಮನ್ವಿತನಾದ ಆ ಮಹಾತೇಜಸ್ವಿಯು
ಸರ್ವಲೋಕಗಳಲ್ಲಿನ ಸ್ತ್ರೀಯರಿಗೆ "ರಹಸ್ಯವನ್ನು
ಹಿಡಿದಿಟ್ಟುಕೊಳ್ಳಲಾರಿರಿ!" ಎಂದು ಶಪಿಸಿದನು.

12006011a ಸ ರಾಜಾ ಪುತ್ರಪೌತ್ರಾಣಾಂ ಸಂಬಂಧಿಸುಹೃದಾಂ ತಥಾ|
12006011c ಸ್ಮರನ್ನುದ್ವಿಗ್ನಹೃದಯೋ ಬಭೂವಾಸ್ವಸ್ಥಚೇತನಃ||

ತನ್ನ ಪುತ್ರ-ಪೌತ್ರರನ್ನೂ ಸಂಬಂಧಿ-ಸ್ನೇಹಿತರನ್ನೂ ನೆನಪಿಸಿಕೊಂಡು ರಾಜನು ಉದ್ವಿಗ್ನ ಹೃದಯಿಯಾಗಿ ಅಸ್ವಸ್ಥಚೇತನನಾದನು.

12006012a ತತಃ ಶೋಕಪರೀತಾತ್ಮಾ ಸಧೂಮ ಇವ ಪಾವಕಃ|
12006012c ನಿರ್ವೇದಮಕರೋದ್ಧೀಮಾನ್ ರಾಜಾ ಸಂತಾಪಪೀಡಿತಃ||

ಆಗ ಹೊಗೆಯಿಂದ ತುಂಬಿದ ಅಗ್ನಿಯಂತೆ ಶೋಕಪರೀತಾತ್ಮನಾದ ಆ ಧೀಮಾನ್ ರಾಜನು ಸಂತಾಪಪೀಡಿತನಾಗಿ ವೈರಾಗ್ಯವನ್ನು ತಾಳಿದನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಸ್ತ್ರೀಶಾಪೇ ಷಷ್ಠೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಸ್ತ್ರೀಶಾಪವೆನ್ನುವ ಆರನೇ ಅಧ್ಯಾಯವು.

೭

ಯುಧಿಷ್ಠಿರ ಪರಿವೇದನೆ

ಯುದ್ಧದಲ್ಲಿ ತನ್ನ ಬಂಧುಬಾಂಧವರು ನಾಶವಾದುದರಿಂದ ಪರಿತಾಪಗೊಂಡ ಯುಧಿಷ್ಠಿರನು ರಾಜ್ಯವನ್ನು ತ್ಯಜಿಸಿ ವನವನ್ನು ಸೇರುತ್ತೇನೆಂದು ನಿಶ್ಚಯಿಸಿ ಅರ್ಜುನನಿಗೆ ಹೇಳಿದುದು (1-41).

12007001 ವೈಶಂಪಾಯನ ಉವಾಚ|
12007001a ಯುಧಿಷ್ಠಿರಸ್ತು ಧರ್ಮಾತ್ಮಾ ಶೋಕವ್ಯಾಕುಲಚೇತನಃ|
12007001c ಶುಶೋಚ ದುಃಖಸಂತಪ್ತಃ ಸ್ಮೃತ್ವಾ ಕರ್ಣಂ ಮಹಾರಥಮ್||

ವೈಶಂಪಾಯನನು ಹೇಳಿದನು: "ಧರ್ಮಾತ್ಮ ಯುಧಿಷ್ಠಿರನಾದರೋ ಶೋಕವ್ಯಾಕುಲ ಚೇತನನಾಗಿ ಮಹಾರಥ ಕರ್ಣನನ್ನು ಸ್ಮರಿಸಿಕೊಂಡು ದುಃಖಸಂತಪ್ತನಾಗಿ ಶೋಕಿಸಿದನು.

12007002a ಆವಿಷ್ಟೋ ದುಃಖಶೋಕಾಭ್ಯಾಂ ನಿಃಶ್ವಸಂಶ್ಚ ಪುನಃ ಪುನಃ|
12007002c ದೃಷ್ಟ್ವಾರ್ಜುನಮುವಾಚೇದಂ ವಚನಂ ಶೋಕಕರ್ಶಿತಃ||

ದುಃಖ-ಶೋಕಗಳಿಂದ ಆವಿಷ್ಟನಾಗಿ ಪುನಃ ಪುನಃ ನಿಟ್ಟುಸಿರು ಬಿಡುತ್ತಾ ಶೋಕಕರ್ಶಿತನಾಗಿ ಅರ್ಜುನನನ್ನು ನೋಡಿ ಹೀಗೆಂದನು:

12007003a ಯದ್ಭೈಕ್ಷಮಾಚರಿಷ್ಯಾಮ ವೃಷ್ಣ್ಯಂಧಕಪುರೇ ವಯಮ್|
12007003c ಜ್ಞಾತೀನ್ನಿಷ್ಪುರುಷಾನ್ಕೃತ್ವಾ ನೇಮಾಂ ಪ್ರಾಪ್ಸ್ಯಾಮ ದುರ್ಗತಿಮ್||

"ಒಂದು ವೇಳೆ ನಾವು ವೃಷ್ಣಿ-ಅಂಧಕರ ಪುರದಲ್ಲಿ ಭಿಕ್ಷಾಟನೆಯನ್ನೇ ಮಾಡಿದ್ದರೆ ಬಾಂಧವರನ್ನು ನಿರ್ಮೂಲನ ಮಾಡಿ ಈ ದುರ್ಗತಿಯನ್ನು ಪಡೆಯುತ್ತಿರಲಿಲ್ಲ.

12007004a ಅಮಿತ್ರಾ ನಃ ಸಮೃದ್ಧಾರ್ಥಾ ವೃತ್ತಾರ್ಥಾಃ ಕುರವಃ ಕಿಲ|
12007004c ಆತ್ಮಾನಮಾತ್ಮನಾ ಹತ್ವಾ ಕಿಂ ಧರ್ಮಫಲಮಾಪ್ನುಮಃ||

ನಮ್ಮ ಶತ್ರುಗಳಾದ ಕೌರವರೇ ಸಮೃದ್ಧರೂ ಪರಮಾರ್ಥವುಳ್ಳವರೂ ಆಗಲಿಲ್ಲವೇ? ನಮ್ಮವರನ್ನೇ ಕೊಂದ ನಾವಾದರೋ ಯಾವ ಧರ್ಮಫಲವನ್ನು ಪಡೆದೆವು?

12007005a ಧಿಗಸ್ತು ಕ್ಷಾತ್ರಮಾಚಾರಂ ಧಿಗಸ್ತು ಬಲಮೌರಸಮ್|
12007005c ಧಿಗಸ್ತ್ವಮರ್ಷಂ ಯೇನೇಮಾಮಾಪದಂ ಗಮಿತಾ ವಯಮ್||

ಯಾವುದರಿಂದಾಗಿ ನಾವು ಈ ಆಪತ್ತನ್ನು ಪಡೆದಿದ್ದೇವೋ ಆ ಕ್ಷತ್ರಿಯ ಆಚಾರಕ್ಕೆ ಧಿಕ್ಕಾರ! ಬಲವಂತಿಕೆಗೆ ಧಿಕ್ಕಾರ! ಕ್ರೋಧಕ್ಕೆ ಧಿಕ್ಕಾರ!

12007006a ಸಾಧು ಕ್ಷಮಾ ದಮಃ ಶೌಚಮವೈರೋಧ್ಯಮಮತ್ಸರಃ|
12007006c ಅಹಿಂಸಾ ಸತ್ಯವಚನಂ ನಿತ್ಯಾನಿ ವನಚಾರಿಣಾಮ್||

ವನಚಾರಿಗಳಿಗೆ ಕ್ಷಮೆ, ಇಂದ್ರಿಯನಿಗ್ರಹ, ಶುದ್ಧಿ, ವಿರೋಧಿಸದಿರುವುದು, ಅಸೂಯೆಪಡದಿರುವುದು, ಅಹಿಂಸೆ ಮತ್ತು ಸತ್ಯವಚನಗಳೇ ನಿತ್ಯವೂ ಸಾಧುವೆನಿಸಿಕೊಂಡಿರುವ ಧರ್ಮಗಳು.

12007007a ವಯಂ ತು ಲೋಭಾನ್ಮೋಹಾಚ್ಚ ಸ್ತಂಭಂ ಮಾನಂ ಚ ಸಂಶ್ರಿತಾಃ|
12007007c ಇಮಾಮವಸ್ಥಾಮಾಪನ್ನಾ ರಾಜ್ಯಲೇಶಬುಭುಕ್ಷಯಾ||

ನಾವಾದರೋ ರಾಜ್ಯವನ್ನು ಗಳಿಸಿ ಭೋಗಿಸುವ ಸಲುವಾಗಿ ಲೋಭ, ಮೋಹ, ದಂಭ-ದುರಭಿಮಾನಗಳನ್ನಾಶ್ರಯಿಸಿ ಈ ಅವಸ್ಥೆಯನ್ನು ಪಡೆದುಕೊಂಡಿದ್ದೇವೆ.

12007008a ತ್ರೈಲೋಕ್ಯಸ್ಯಾಪಿ ರಾಜ್ಯೇನ ನಾಸ್ಮಾನ್ಕಶ್ಚಿತ್ಪ್ರಹರ್ಷಯೇತ್|
12007008c ಬಾಂಧವಾನ್ನಿಹತಾನ್ದೃಷ್ಟ್ವಾ ಪೃಥಿವ್ಯಾಮಾಮಿಷೈಷಿಣಃ||

ಭೂಮಿಯ ಆಸೆಯಿಂದಾಗಿ ಬಾಂಧವರು ಹತರಾಗಿರುವುದನ್ನು ನೋಡಿದರೆ ತ್ರೈಲೋಕ್ಯವೇ ನಮ್ಮ ರಾಜ್ಯವಾದರೂ ನಮಗೆ ಎಂದೂ ಸಂತೋಷವೆನಿಸುವುದಿಲ್ಲ!

12007009a ತೇ ವಯಂ ಪೃಥಿವೀಹೇತೋರವಧ್ಯಾನ್ಪೃಥಿವೀಸಮಾನ್|

12007009c ಸಂಪರಿತ್ಯಜ್ಯ ಜೀವಾಮೋ ಹೀನಾರ್ಥಾ ಹತಬಾಂಧವಾಃ||

ಭೂಮಿಗಾಗಿ ನಾವು ಅವಧ್ಯರಾದ ಪೃಥ್ವೀಶರನ್ನು ಸಂಹರಿಸಿ ಈಗ
ಬಾಂಧವರನ್ನು ಕಳೆದುಕೊಂಡು ಅರ್ಥವಿಹೀನರಾಗಿ
ಜೀವಿಸಬೇಕಾಗಿದೆ!

12007010a ಆಮಿಷೇ ಗೃಧ್ಯಮಾನಾನಾಮಶುನಾಂ ನಃ ಶುನಾಮಿವ|
12007010c ಆಮಿಷಂ ಚೈವ ನೋ ನಷ್ಟಮಾಮಿಷಸ್ಯ ಚ ಭೋಜಿನಃ||

ಮಾಂಸದ ತುಂಡಿಗಾಗಿ ಕಚ್ಚಾಡುವ ನಾಯಿಗಳಂತೆ ನಾವು ಆಸೆಪಟ್ಟು
ಯುದ್ಧಮಾಡಿದೆವು. ಆ ಮಾಂಸದ ತುಂಡನ್ನು ತಿನ್ನುವವರೇ
ಇಲ್ಲವಾದಮೇಲೆ ಅದರ ಪ್ರಯೋಜನವಾದರೂ ಏನು?

12007011a ನ ಪೃಥಿವ್ಯಾ ಸಕಲಯಾ ನ ಸುವರ್ಣಸ್ಯ ರಾಶಿಭಿಃ|
12007011c ನ ಗವಾಶ್ವೈನ ಸರ್ವೇಣ ತೇ ತ್ಯಾಜ್ಯಾ ಯ ಇಮೇ ಹತಾಃ||

ಈ ಸಕಲ ಭೂಮಿಗಾಗಿಯಾಗಲೀ, ಸುವರ್ಣ ರಾಶಿಗಳಿಗಾಗಿಯಾಗಲೀ,
ಸಮಸ್ತ ಗೋವು-ಕುದುರೆಗಳಿಗಾಗಿಯಾಗಲೀ ಇವರನ್ನು
ಬಲಿಕೊಡಬಾರದಾಗಿತ್ತು!

12007012a ಸಂಯುಕ್ತಾಃ ಕಾಮಮನ್ಯುಭ್ಯಾಂ ಕ್ರೋಧಾಮರ್ಷಸಮನ್ವಿತಾಃ|
12007012c ಮೃತ್ಯುಯಾನಂ ಸಮಾರುಹ್ಯ ಗತಾ ವೈವಸ್ವತಕ್ಷಯಮ್||

ಕಾಮ-ಕ್ರೋಧಗಳಿಂದ ಕೂಡಿದ್ದ, ಕ್ರೋಧ-ರೋಷಗಳಿಂದ ಕೂಡಿದ್ದ
ಅವರು ಮೃತ್ಯುಯಾನಗಳನ್ನೇರಿ ವೈವಸ್ವತಕ್ಷಯಕ್ಕೆ ತೆರಳಿದರು.

12007013a ಬಹು ಕಲ್ಯಾಣಮಿಚ್ಚಂತ ಈಹಂತೇ ಪಿತರಃ ಸುತಾನ್|
12007013c ತಪಸಾ ಬ್ರಹ್ಮಚರ್ಯೇಣ ವಂದನೇನ ತಿತಿಕ್ಷಯಾ||

ಪಿತೃಗಳು ತಪಸ್ಸು, ಬ್ರಹ್ಮಚರ್ಯೆ, ಸತ್ಯನಿಷ್ಠೆ, ಮತ್ತು ಕ್ಷಮೆಗಳನ್ನು
ಆಚರಿಸಿಕೊಂಡು ಕಲ್ಯಾಣಗುಣಸಂಪನ್ನ ಮಕ್ಕಳನ್ನು ಬಯಸುತ್ತಾರೆ.

12007014a ಉಪವಾಸ್ಯೈಸ್ತಥೇಜ್ಯಾಭಿರ್ವ್ರತಕೌತುಕಮಂಗಲ್ಯೈಃ|
12007014c ಲಭಂತೇ ಮಾತರೋ ಗರ್ಭಾಂಸ್ತಾನ್ಮಾಸಾನ್ದಶ ಬಿಭ್ರತಿ||

ಹಾಗೆಯೇ ತಾಯಂದಿರೂ ಉಪವಾಸ, ಯಜ್ಞ, ವ್ರತ ಮತ್ತು ಅನೇಕ
ಮಂಗಲ ಕಾರ್ಯಗಳ ಮೂಲಕ ಗುಣಶಾಲೀ ಪುತ್ರರನ್ನು
ಪಡೆಯಲೋಸುಗ ಹತ್ತು ತಿಂಗಳ ಗರ್ಭವನ್ನು ಹೊರುತ್ತಾರೆ.

12007015a ಯದಿ ಸ್ವಸ್ತಿ ಪ್ರಜಾಯಂತೇ ಜಾತಾ ಜೀವಂತಿ ವಾ ಯದಿ|
12007015c ಸಂಭಾವಿತಾ ಜಾತಬಲಾಸ್ತೇ ದದ್ಯುರ್ಯದಿ ನಃ ಸುಖಮ್||
12007015e ಇಹ ಚಾಮುತ್ರ ಚೈವೇತಿ ಕೃಪಣಾಃ ಫಲಹೇತುಕಾಃ||

ದೀನರಾದ ತಂದೆ-ತಾಯಿಯರು "ಚೆನ್ನಾದ ಮಗುವು ಹುಟ್ಟುವುದೇ?
ಹುಟ್ಟಿದ ಮಗು ಜೀವಿಸುತ್ತದೆಯೇ? ಬೆಳೆದ ಮೇಲೆ
ಬಲಶಾಲಿಗಳಾಗುತ್ತಾರೆಯೇ? ನಮಗೆ ಸುಖವನ್ನು ನೀಡುತ್ತಾರೆಯೇ?"
ಎಂದೆಲ್ಲ ಆಸೆಗಳನ್ನಿಟ್ಟುಕೊಂಡು ಯೋಚಿಸುತ್ತಿರುತ್ತಾರೆ.

12007016a ತಾಸಾಮಯಂ ಸಮಾರಂಭೋ ನಿವೃತ್ತಃ ಕೇವಲೋಽಫಲಃ|
12007016c ಯದಾಸಾಂ ನಿಹತಾಃ ಪುತ್ರಾ ಯುವಾನೋ ಮೃಷ್ಟಕುಂಡಲಾಃ||

ಅವರ ಪ್ರಯತ್ನ-ಆಕಾಂಕ್ಷೆಗಳು ಈ ಯುದ್ಧದಿಂದಾಗಿ
ನಿಷ್ಫಲವಾಗಿಬಿಟ್ಟವು. ಸುವರ್ಣಕುಂಡಲಗಳನ್ನು ಧರಿಸಿದ್ದ ಅವರ
ಯುವ ಪುತ್ರರು ಹತರಾದರು!

12007017a ಅಭುಕ್ತ್ವಾ ಪಾರ್ಥಿವಾನ್ಭೋಗಾನೃಣಾನ್ಯನವದಾಯ ಚ|

12007017c ಪಿತೃಭ್ಯೋ ದೇವತಾಭ್ಯಶ್ಚ ಗತಾ ವೈವಸ್ವತಕ್ಷಯಮ್‌॥

ಪಾರ್ಥಿವರು ಭೋಗಗಳನ್ನು ಭೋಗಿಸದೇ, ಪಿತೃ-ದೇವತೆಗಳ ಋಣಗಳನ್ನು ತೀರಿಸದೆಯೇ ವೈವಸ್ವತಕ್ಷಯಕ್ಕೆ ಹೋಗಿಬಿಟ್ಟರು!

12007018a ಯದ್ಯೈಷಾಮಂಗ ಪಿತರೌ ಜಾತೌ ಕಾಮಮಯಾವಿವ|
12007018c ಸಂಜಾತಬಲರೂಪೇಷು ತದ್ಯೈವ ನಿಹತಾ ನೃಪಾಃ॥

ತಂದೆ-ತಾಯಿಗಳು ಹುಟ್ಟಿದ ಮಕ್ಕಳ ಬಲ-ರೂಪಗಳನ್ನು ಅನುಭವಿಸಿ ಸಂತೋಷಪಡಬೇಕೆಂದಿರುವಾಗಲೇ ನೃಪರು ಹತರಾಗಿ ಹೋದರು.

12007019a ಸಂಯುಕ್ತಾಃ ಕಾಮಮನ್ಯುಭ್ಯಾಂ ಕ್ರೋಧಹರ್ಷಾ ಸಮಂಜಸಾಃ|
12007019c ನ ತೇ ಜನ್ಮಫಲಂ[11] ಕಿಂ ಚಿದ್ಭೋಕ್ತಾರೋ ಜಾತು ಕರ್ಹಿ ಚಿತ್‌॥

ಕಾಮ-ಕ್ರೋಧಗಳಿಂದ ಕೂಡಿರುವವರು ಮತ್ತು ಕ್ರೋಧ-ಹರ್ಷಗಳಲ್ಲಿ ಸಮತೋಲನವನ್ನಿಟ್ಟುಕೊಂಡಿರದೇ ಇದ್ದವರು ಜನ್ಮಫಲವನ್ನು ಎಂದೂ ಯಾವಕಾರಣಕ್ಕೂ ಭೋಗಿಸಲಾರರು.

12007020a ಪಾಂಚಾಲಾನಾಂ ಕುರೂಣಾಂ ಚ ಹತಾ ಏವ ಹಿ ಯೇಽಹತಾಃ|
12007020c ತೇ ವಯಂ ತ್ವಧಮಾಽಲ್ಲೋಕಾನ್ಪ್ರಪದ್ಯೇಮ ಸ್ವಕರ್ಮಭಿಃ॥

ಕುರು-ಪಾಂಚಾಲರು ಹತರಾದರೂ ಹತರಾಗಿಲ್ಲ[12]. ಆದರೆ ನಮ್ಮ ಕರ್ಮಗಳಿಂದ[13] ನಾವು ಮಾತ್ರ ಅಧಮ ಲೋಕಗಳನ್ನು ಪಡೆದುಕೊಳ್ಳುತ್ತೇವೆ.

---

[11] ಜಯಫಲಂ (ಭಾರತದರ್ಶನ).

[12] ಕೀರ್ತಿ-ಸ್ವರ್ಗಗಳನ್ನು ಪಡೆದು ಅಮರರೇ ಆಗಿದ್ದಾರೆ.

[13] ಅವರ ಸಾವಿಗೆ ಕಾರಣರಾದುದರಿಂದ

12007021a ವಯಮೇವಾಸ್ಯ ಲೋಕಸ್ಯ ವಿನಾಶೇ ಕಾರಣಂ ಸ್ಮೃತಾಃ|
12007021c ಧೃತರಾಷ್ಟ್ರಸ್ಯ ಪುತ್ರೇಣ ನಿಕೃತ್ಯಾ ಪ್ರತ್ಯಪತ್ಸ್ಮಹಿ||

ಲೋಕದ ವಿನಾಶಕ್ಕೇ ನಾವೇ ಕಾರಣವೆಂದು ಹೇಳುತ್ತಾರೆ. ಆದರೆ
ಇದಕ್ಕೆಲ್ಲ ಧೃತರಾಷ್ಟ್ರಪುತ್ರನ ದುಷ್ಟಕರ್ಮಗಳೇ ಸಂಪೂರ್ಣ
ಕಾರಣವು.

12007022a ಸದ್ಯೈವ ನಿಕೃತಿಪ್ರಜ್ಞೋ ದ್ವೇಷ್ಟಾ ಮಾಯೋಪಜೀವನಃ|
12007022c ಮಿಥ್ಯಾವೃತ್ತಃ ಸ ಸತತಮಸ್ಮಾಸ್ವನಪಕಾರಿಷು||

ದ್ವೇಷದಿಂದ ಅವನು ಸದ್ಯೈವವೂ ವಂಚನೆಮಾಡುವುದನ್ನೇ
ಯೋಚಿಸುತ್ತಿದ್ದನು. ಮಾಯೆಗಳನ್ನು ಬಳಸುತ್ತಿದ್ದನು.
ಮಿಥ್ಯಾಚಾರಿಯಾಗಿದ್ದನು. ಸತತವೂ ನಮಗೆ ಅಪಕಾರ ಮಾಡುತ್ತಿದ್ದನು.

12007023a ಅಂಶಕಾಮಾ[14] ವಯಂ ತೇ ಚ ನ ಚಾಸ್ಮಾಭಿರ್ನ ತೈರ್ಜಿತಮ್|
12007023c ನ ತೈರ್ಭುಕ್ತೇಯಮವನಿರ್ನ ನಾರ್ಯೋ ಗೀತವಾದಿತಮ್||

ಬಯಸಿದ್ದಿದು ನಮಗೂ ಸಿಗಲಿಲ್ಲ, ಅವರಿಗೂ ದೊರಕಲಿಲ್ಲ. ನಾವೂ
ಗೆಲ್ಲಲಿಲ್ಲ, ಅವರೂ ಗೆಲ್ಲಲಿಲ್ಲ. ಅವರು ಈ ಭೂಮಿಯನ್ನೂ,
ನಾರಿಯರನ್ನೂ, ಗೀತವಾದ್ಯಗಳನ್ನೂ ಭೋಗಿಸಲಿಲ್ಲ.

12007024a ನಾಮಾತ್ಯಸಮಿತೌ ಕಥ್ಯಂ ನ ಚ ಶ್ರುತವತಾಂ ಶ್ರುತಮ್|
12007024c ನ ರತ್ನಾನಿ ಪರಾರ್ಧ್ಯಾನಿ ನ ಭೂರ್ನ ದ್ರವಿಣಾಗಮಃ||

ಅವರು ಅಮಾತ್ಯರ ಸಲಹೆಗಳನ್ನಾಗಲೀ ತಿಳಿದವರ
ಹಿತವಚನಗಳನ್ನಾಗಲೀ ಕೇಳಲೇ ಇಲ್ಲ. ರತ್ನಗಳಾಗಲೀ,

[14] ನ ಸಕಾಮಾ (ಗೀತಾ ಪ್ರೆಸ್).

ಭೂಮಿಯಾಗಲೀ, ಕಪ್ಪ-ಕಾಣಿಕೆಗಳಾಗಲೀ ಅವರಿಗೆ ಸಂತೋಷವನ್ನು ನೀಡಲಿಲ್ಲ.

[15]12007025a ಋದ್ಧಿಮಸ್ಮಾಸು ತಾಂ ದೃಷ್ಟ್ವಾ ವಿವರ್ಣೋ ಹರಿಣಃ ಕೃಶಃ|
12007025c ಧೃತರಾಷ್ಟ್ರಸ್ಯ ನೃಪತೇಃ ಸೌಬಲೇನ ನಿವೇದಿತಃ||

ನಮ್ಮ ಸಮೃದ್ಧಿಯನ್ನು ನೋಡಿ ದುರ್ಯೋಧನನು ಬಿಳಿಚಿಕೊಂಡು ವಿವರ್ಣನಾಗಿ ಕೃಶನಾಗಿಬಿಟ್ಟಿದ್ದನು. ಅದನ್ನು ಸೌಬಲನು ನೃಪತಿ ಧೃತರಾಷ್ಟ್ರನಿಗೆ ನಿವೇದಿಸಿದನು.

12007026a ತಂ ಪಿತಾ ಪುತ್ರಗೃದ್ಧಿತ್ವಾದನುಮೇನೇಽನಯೇ ಸ್ಥಿತಮ್|
12007026c ಅನವೇಕ್ಷ್ಯೈವ ಪಿತರಂ ಗಾಂಗೇಯಂ ವಿದುರಂ ತಥಾ||
12007026e ಅಸಂಶಯಂ ಧೃತರಾಷ್ಟ್ರೋ ಯಥೈವಾಹಂ ತಥಾ ಗತಃ||

ತಂದೆಯು ಮಗನ ಮೇಲಿನ ಪ್ರೀತಿಯಿಂದಾಗಿ ಅವನ ದುಷ್ಟಯೋಜನೆಗಳಿಗೆ ಅನುಮತಿಯನ್ನಿತ್ತನು. ತಂದೆ ಗಾಂಗೇಯ ಮತ್ತು ವಿದುರರ ಮಾತುಗಳನ್ನೂ ತಿರಸ್ಕರಿಸಿದನು. ಇದರಿಂದಾಗಿಯೇ ಇಂದು ಧೃತರಾಷ್ಟ್ರನು ನನ್ನಂತೆಯೇ ಎಲ್ಲವನ್ನೂ ಕಳೆದುಕೊಂಡಿದ್ದಾನೆ. ಅದರಲ್ಲಿ ಸಂಶಯವೇ ಇಲ್ಲ.

12007027a ಅನಿಯಮ್ಯಾಶುಚಿಂ ಲುಬ್ಧಂ ಪುತ್ರಂ ಕಾಮವಶಾನುಗಮ್|
12007027c ಪತಿತೋ ಯಶಸೋ ದೀಪ್ತಾದ್ಭ್ರಾತಯಿತ್ವಾ ಸಹೋದರಾನ್||

ಅಶುಚಿಯೂ, ಲುಬ್ಧನೂ, ಕಾಮವಶನಾಗಿ ನಡೆದುಕೊಳ್ಳುವವನೂ

---

15 ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕಾರ್ಧವಿದೆ: ಅಸ್ಮಾದ್ದ್ವೇಷೇನ ಸಂತಪ್ತಃ ಸುಖಂ ನ ಸ್ಮೇಹ ವಿಂದತಿ| (ಗೀತಾ ಪ್ರೆಸ್).

ಆಗಿದ್ದ ಪುತ್ರನನ್ನು ನಿಯಂತ್ರಿಸದೇ ಧೃತರಾಷ್ಟ್ರನು ಆ ಸಹೋದರರ ಸಾವಿಗೆ ಕಾರಣನಾಗಿ ಉಜ್ವಲ ಯಶಸ್ಸಿನಿಂದ ಭ್ರಷ್ಟನಾಗಿದ್ದಾನೆ.

12007028a ಇಮೌ ವೃದ್ಧೌ ಚ ಶೋಕಾಗ್ನೌ ಪ್ರಕ್ಷಿಪ್ಯ ಸ ಸುಯೋಧನಃ|
12007028c ಅಸ್ಮತ್ಪ್ರದ್ವೇಷಸಂಯುಕ್ತಃ ಪಾಪಬುದ್ಧಿಃ ಸದ್ಯೈವ ಹಿ||

ನಮ್ಮೊಡನೆ ಸದ್ಯೈವವೂ ದ್ವೇಷಯುಕ್ತನಾಗಿದ್ದ ಆ ಪಾಪಬುದ್ಧಿ ಸುಯೋಧನನು ಈ ಇಬ್ಬರು ವೃದ್ಧರನ್ನೂ ಶೋಕಾಗ್ನಿಯಲ್ಲಿ ನೂಕಿ ಬೀಳಿಸಿ ಹೊರಟು ಹೋದನು!

12007029a ಕೋ ಹಿ ಬಂಧುಃ ಕುಲೀನಃ ಸಂಸ್ತಥಾ ಬ್ರೂಯಾತ್ಸುಹೃಜ್ಜನೇ|
12007029c ಯಥಾಸಾವುಕ್ತವಾನ್ಕ್ಷುದ್ರೋ ಯುಯುತ್ಸುರ್ವೃಷ್ಣಿಸಂನಿಧೌ||

ವೃಷ್ಣಿವೀರರಾದ ಕೃಷ್ಣ ಮತ್ತು ಸಾತ್ಯಕಿಯರ ಸನ್ನಿಧಿಯಲ್ಲಿ ಯುದ್ಧೋತ್ಸುಕನಾಗಿ ಆ ಕ್ಷುದ್ರ ದುರ್ಯೋಧನನು ಹೇಳಿದ ಮಾತನ್ನು ಕುಲೀನನಾದ ಯಾವ ಬಂಧುವು ತಾನೇ ಸುಹೃದಯರ ವಿಷಯದಲ್ಲಿ ಆಡುತ್ತಾನೆ?

12007030a ಆತ್ಮನೋ ಹಿ ವಯಂ ದೋಷಾದ್ವಿನಷ್ಟಾಃ ಶಾಶ್ವತೀಃ ಸಮಾಃ|
12007030c ಪ್ರದಹಂತೋ ದಿಶಃ ಸರ್ವಾಸ್ತೇಜಸಾ ಭಾಸ್ಕರಾ ಇವ||

ಭಾಸ್ಕರನು ತೇಜಸ್ಸಿನಿಂದ ಸರ್ವ ದಿಕ್ಕುಗಳನ್ನೂ ಸುಡುವಂತೆ ನಮ್ಮದೇ ದೋಷದಿಂದಾಗಿ ನಾವು ಶಾಶ್ವತವಾಗಿ ವಿನಾಶಹೊಂದಿದೆವು.

12007031a ಸೋಽಸ್ಮಾಕಂ ವೈರಪುರುಷೋ ದುರ್ಮಂತ್ರಿಪ್ರಗ್ರಹಂ ಗತಃ|
12007031c ದುರ್ಯೋಧನಕೃತೇ ಹ್ಯೇತತ್ಕುಲಂ ನೋ ವಿನಿಪಾತಿತಮ್||

ದುಷ್ಟಮಂತ್ರಿಗಳ ಹಿಡಿತದಲ್ಲಿದ್ದ ನಮ್ಮ ಆ ವೈರಪುರುಷ

ದುರ್ಯೋಧನನು ಮಾಡಿದ ಕರ್ಮಗಳಿಂದಾಗಿಯೇ ನಮ್ಮ ಈ ಕುಲವು ವಿನಾಶವಾಗಿಹೋಯಿತು.

12007031e ಅವಧ್ಯಾನಾಂ ವಧಂ ಕೃತ್ವಾ ಲೋಕೇ ಪ್ರಾಪ್ತಾಃ ಸ್ಮ ವಾಚ್ಯತಾಮ್॥
12007032a ಕುಲಸ್ಯಾಸ್ಯಾಂತಕರಣಂ ದುರ್ಮತಿಂ ಪಾಪಕಾರಿಣಮ್।
12007032c ರಾಜಾ ರಾಷ್ಟ್ರೇಶ್ವರಂ ಕೃತ್ವಾ ಧೃತರಾಷ್ಟ್ರೋಽದ್ಯ ಶೋಚತಿ॥

ಅವಧ್ಯರ ವಧೆಗೈದು ನಾವು ಲೋಕನಿಂದೆಗೆ ಪಾತ್ರರಾದೆವು. ಕುಲದ ಅಂತಕನಂತಿದ್ದ ದುರ್ಮತಿ ಪಾಪಕಾರಿಣಿ ದುರ್ಯೋಧನನನ್ನು ರಾಷ್ಟ್ರೇಶ್ವರನನ್ನಾಗಿ ಮಾಡಿ ರಾಜಾ ಧೃತರಾಷ್ಟ್ರನು ಇಂದು ಶೋಕಿಸುತ್ತಿದ್ದಾನೆ.

12007033a ಹತಾಃ ಶೂರಾಃ ಕೃತಂ ಪಾಪಂ ವಿಷಯಃ ಸ್ವೋ ವಿನಾಶಿತಃ।
12007033c ಹತ್ವಾ ನೋ ವಿಗತೋ ಮನ್ಯುಃ ಶೋಕೋ ಮಾಂ ರುಂಧಯತ್ಯಯಮ್॥

ಶೂರರು ಹತರಾದರು. ಪಾಪಕರ್ಮವು ನಡೆದುಹೋಯಿತು. ರಾಷ್ಟ್ರವೂ ವಿನಾಶವಾಯಿತು. ಶತ್ರುಗಳನ್ನು ಸಂಹರಿಸಿ ಕ್ರೋಧವೇನೋ ಹೊರಟುಹೋಯಿತು. ಆದರೆ ಈ ಶೋಕವು ನನ್ನನ್ನು ಪೀಡಿಸುತ್ತಿದೆ.

12007034a ಧನಂಜಯ ಕೃತಂ ಪಾಪಂ ಕಲ್ಯಾಣೇನೋಪಹನ್ಯತೇ।
[16]12007034c ತ್ಯಾಗವಾಂಶ್ಚ ಪುನಃ ಪಾಪಂ ನಾಲಂ ಕರ್ತುಮಿತಿ ಶ್ರುತಿಃ॥

ಧನಂಜಯ! ಮಾಡಿದ ಪಾಪವನ್ನು ಕಲ್ಯಾಣಕರ್ಮಗಳಿಂದ

---

16 ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಖ್ಯಾಪನೇನಾನುತಾಪೇನ ದಾನೇನ ತಪಸಾಪಿ ವಾ। ನಿವೃತ್ಯಾ ತೀರ್ಥಗಾನಾಚ್ಚು ತಿಸ್ಮೃತಿಜಪೇನ ವಾ॥ (ಗೀತಾ ಪ್ರೆಸ್).

ಉಪಶಮನಗೊಳಿಸಬಹುದು. ಆದರೆ ತ್ಯಾಗಮಾಡಿದವನು ಪುನಃ
ಪಾಪವನ್ನೇ ಮಾಡುವುದಿಲ್ಲ ಎಂದು ಶ್ರುತಿಗಳು ಹೇಳುತ್ತವೆ.

12007035a ತ್ಯಾಗವಾನ್ಜನ್ಮಮರಣೇ ನಾಪ್ನೋತೀತಿ ಶ್ರುತಿರ್ಯದಾ|
12007035c ಪ್ರಾಪ್ತವತ್ಯಾ ಕೃತಮತಿರ್ಬ್ರಹ್ಮ ಸಂಪದ್ಯತೇ ತದಾ||

ತ್ಯಾಗಿಯು ಜನನ-ಮರಣಗಳನ್ನೂ ಹೊಂದುವುದಿಲ್ಲವೆಂದು ಶ್ರುತಿಗಳು
ಹೇಳುತ್ತವೆ. ತ್ಯಾಗಿಯು ನಿಯತ ಬುದ್ಧಿಯುಳ್ಳವನಾಗಿ
ಬ್ರಹ್ಮಸಾಕ್ಷಾತ್ಕಾರವನ್ನು ಸುಲಭವಾಗಿ ಪಡೆದುಕೊಳ್ಳುತ್ತಾನೆ.

12007036a ಸ ಧನಂಜಯ ನಿರ್ದ್ವಂದ್ವೋ ಮುನಿರ್ಜ್ಞಾನಸಮನ್ವಿತಃ|
12007036c ವನಮಾಮಂತ್ರ್ಯ ವಃ ಸರ್ವಾನ್ಗಮಿಷ್ಯಾಮಿ ಪರಂತಪ||

ಧನಂಜಯ! ಜ್ಞಾನಸಮನ್ವಿತನಾದ ಮುನಿಯು
ನಿರ್ದ್ವಂದ್ವನಾಗಿರುತ್ತಾನೆ. ಪರಂತಪ! ನಿಮ್ಮೆಲ್ಲರ ಅನುಮತಿಯನ್ನು
ಪಡೆದು ನಾನು ವನಕ್ಕೆ ಹೋಗುತ್ತೇನೆ.

12007037a ನ ಹಿ ಕೃತ್ಸ್ನತಮೋ ಧರ್ಮಃ ಶಕ್ಯಃ ಪ್ರಾಪ್ತುಮಿತಿ ಶ್ರುತಿಃ|
12007037c ಪರಿಗ್ರಹವತಾ ತನ್ಮೇ ಪ್ರತ್ಯಕ್ಷಮರಿಸೂದನ||

ತ್ಯಾಗಿಯಲ್ಲದವನಿಗೆ ಸಂಪೂರ್ಣ ಧರ್ಮಾಚರಣೆಯು ಶಕ್ಯವಿಲ್ಲವೆಂದು
ಶ್ರುತಿಗಳು ಹೇಳುತ್ತವೆ. ಅರಿಸೂದನ! ಅದನ್ನು ನಾನು ಪ್ರತ್ಯಕ್ಷವಾಗಿ
ಕಂಡುಕೊಂಡಿದ್ದೇನೆ ಕೂಡ.

12007038a ಮಯಾ ನಿಸೃಷ್ಟಂ ಪಾಪಂ ಹಿ ಪರಿಗ್ರಹಮಭೀಪ್ಸತಾ|
12007038c ಜನ್ಮಕ್ಷಯನಿಮಿತ್ತಂ ಚ ಶಕ್ಯಂ ಪ್ರಾಪ್ತುಮಿತಿ ಶ್ರುತಿಃ||

ಪಡೆದುಕೊಳ್ಳಲು ಬಯಸಿದ ನಾನು ಪಾಪದ ರಾಶಿಯನ್ನೇ

ಕೂಡಿಕೊಂಡೆನು. ಜನ್ಮ-ಮೃತ್ಯುಗಳಿಗೆ ಕಾರಣವಾದ ಇದು
ಮುಕ್ತಿಯನ್ನು ನೀಡಲು ಶಕ್ಯವಿಲ್ಲವೆಂದು ಶ್ರುತಿಗಳು ಹೇಳುತ್ತವೆ.

12007039a ಸ ಪರಿಗ್ರಹಮುತ್ಸೃಜ್ಯ ಕೃತ್ಸ್ನಂ ರಾಜ್ಯಂ ತಥೈವ ಚ|
12007039c ಗಮಿಷ್ಯಾಮಿ ವಿನಿರ್ಮುಕ್ತೋ ವಿಶೋಕೋ ವಿಜ್ವರಸ್ತಥಾ||

ಆ ಪಡೆದುಕೊಳ್ಳಬೇಕೆಂಬ ಆಸೆಯನ್ನು ಮತ್ತು ಸಂಪೂರ್ಣ ರಾಜ್ಯವನ್ನು
ತೊರೆದು ವಿಮುಕ್ತನಾಗಿ, ಶೋಕರಹಿತನಾಗಿ, ಮಮತಾರಹಿತನಾಗಿ
ಕಾಡಿಗೆ ಹೊರಟುಹೋಗುತ್ತೇನೆ!

12007040a ಪ್ರಶಾಧಿ ತ್ವಮಿಮಾಮುರ್ವೀಂ ಕ್ಷೇಮಾಂ ನಿಹತಕಂಟಕಾಮ್|
12007040c ನ ಮಮಾರ್ಥೋಽಸ್ತಿ ರಾಜ್ಯೇನ ನ ಭೋಗ್ಯೈರ್ವಾ ಕುರೂತ್ತಮ||

ಕುರೂತ್ತಮ! ಕಂಟಕರನ್ನು ಕಳೆದುಕೊಂಡು ಕ್ಷೇಮದಿಂದಿರುವ ಈ
ಭೂಮಿಯನ್ನು ನೀನು ಆಳು. ನನಗೆ ಈ ರಾಜ್ಯವಾಗಲೀ
ಭೋಗವಾಗಲೀ ಯಾವ ಪ್ರಯೋಜನಕ್ಕೂ ಇಲ್ಲ.”

12007041a ಏತಾವದುಕ್ತ್ವಾ ವಚನಂ ಧರ್ಮರಾಜೋ ಯುಧಿಷ್ಠಿರಃ|
12007041c ವ್ಯುಪಾರಮತ್ತತಃ ಪಾರ್ಥಃ ಕನೀಯಾನ್ಪ್ರತ್ಯಭಾಷತ||

ಹೀಗೆ ಹೇಳಿ ಧರ್ಮರಾಜ ಯುಧಿಷ್ಠಿರನು ಸುಮ್ಮನಾದನು. ಅನಂತರ
ಕುಂತಿಯ ಮಕ್ಕಳಲ್ಲಿ ಕಡೆಯವನಾದ ಪಾರ್ಥನು ಅದಕ್ಕುತ್ತರವಾಗಿ
ಮಾತನಾಡಿದನು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಯುಧಿಷ್ಠಿರಪರಿವೇದನಂ ನಾಮ ಸಪ್ತಮೋಽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ

೮

ಅರ್ಜುನ ವಾಕ್ಯ

ಧನದಿಂದಲೇ ಧರ್ಮವು ಸ್ರವಿಸುತ್ತದೆ ಮತ್ತು ರಾಜನಾದವನು ಯಜ್ಞಯಾಗಾದಿಗಳಿಂದ ಪವಿತ್ರನಾಗಬಲ್ಲನು ಎಂದು ಅರ್ಜುನನು ಯುಧಿಷ್ಠಿರನಿಗೆ ಕ್ಷತ್ರಿಯಧರ್ಮವನ್ನು ತೊರೆಯದಿರಲು ಕೇಳಿಕೊಳ್ಳುವುದು (1-37).

12008001 ವೈಶಂಪಾಯನ ಉವಾಚ|
12008001a ಅಥಾರ್ಜುನ ಉವಾಚೇದಮಧಿಕ್ಷಿಪ್ತ ಇವಾಕ್ಷಮೀ|
12008001c ಅಭಿನೀತತರಂ ವಾಕ್ಯಂ ದೃಢವಾದಪರಾಕ್ರಮಃ||
12008002a ದರ್ಶಯನ್ನೈಂದ್ರಿರಾತ್ಮಾನಮುಗ್ರಮುಗ್ರಪರಾಕ್ರಮಃ|
12008002c ಸ್ಮಯಮಾನೋ ಮಹಾತೇಜಾಃ ಸೃಕ್ಕಿಣೀ ಸಂಲಿಹನ್ಮುಹುಃ||

ವೈಶಂಪಾಯನನು ಹೇಳಿದನು: "ಆಗ ವಾದದಲ್ಲಿ ದೃಢ ಪರಾಕ್ರಮಿಯಾಗಿದ್ದ ಮಹಾತೇಜಸ್ವೀ ಐಂದ್ರಿ ಅರ್ಜುನನು ತನ್ನ ಉಗ್ರ ಪರಾಕ್ರಮವನ್ನು ತೋರಿಸುತ್ತಾ ಅವಡುಗಳನ್ನು ಕಚ್ಚುತ್ತಾ, ಗಹ-ಗಹಿಸಿ ನಗುತ್ತಾ ಈ ನೀತಿತರ ವಾಕ್ಯಗಳನ್ನಾಡಿದನು:

12008003a ಅಹೋ ದುಃಖಮಹೋ ಕೃಚ್ಛ್ರಮಹೋ ವೈಕ್ಲವ್ಯಮುತ್ತಮಮ್|
12008003c ಯತ್ಕೃತ್ವಾಮಾನುಷಂ ಕರ್ಮ ತ್ಯಜೇಥಾಃ ಶ್ರಿಯಮುತ್ತಮಾಮ್||

"ಅಯ್ಯೋ! ಅಮಾನುಷ ಕರ್ಮಗಳನ್ನು ಮಾಡಿ ಪಡೆದಿರುವ ಈ



ಉತ್ತಮ ರಾಜ್ಯಲಕ್ಷ್ಮಿಯನ್ನು ತ್ಯಜಿಸಬೇಕೆಂದಿರುವ ನಿನ್ನ ಈ ನಿರ್ಧಾರವು ಅತ್ಯಂತ ದುಃಖಕರವೂ, ಕಷ್ಟಕರವೂ, ಮಿತಿಮೀರಿದುದೂ ಆಗಿದೆ.

12008004a ಶತ್ರೂನ್ಹತ್ವಾ ಮಹೀಂ ಲಬ್ಧ್ವಾ ಸ್ವಧರ್ಮೇಣೋಪಪಾದಿತಾಮ್|
12008004c ಹತಾಮಿತ್ರಃ ಕಥಂ ಸರ್ವಂ ತ್ಯಜೇಥಾ ಬುದ್ಧಿಲಾಘವಾತ್||

ಶತ್ರುಗಳನ್ನು ಸಂಹರಿಸಿ ಸ್ವಧರ್ಮದಿಂದ ಜಯಿಸಿರುವ ಈ ಭೂಮಿಯನ್ನು ಪಡೆದುಕೊಂಡ ನಂತರ ಎಲ್ಲ ಶತ್ರುಗಳನ್ನು ಕಳೆದುಕೊಂಡ ನೀನು ನಿನ್ನ ಅಲ್ಪಬುದ್ಧಿಯಿಂದ ಅದನ್ನು ಹೇಗೆ ತಾನೇ ತ್ಯಜಿಸಬಲ್ಲೆ?

12008005a ಕ್ಲೀಬಸ್ಯ ಹಿ ಕುತೋ ರಾಜ್ಯಂ ದೀರ್ಘಸೂತ್ರಸ್ಯ ವಾ ಪುನಃ|
12008005c ಕಿಮರ್ಥಂ ಚ ಮಹೀಪಾಲಾನವಧೀಃ ಕ್ರೋಧಮೂರ್ಚಿತಃ||

ಹೇಡಿಗಾಗಲೀ ಸೋಮಾರಿಗಾಗಲಿ ರಾಜ್ಯವು ಹೇಗೆ ಲಭಿಸೀತು? ನಿನಗೆ ರಾಜ್ಯವು ಬೇಡವಾಗಿದ್ದರೆ ಯಾವಕಾರಣಕ್ಕಾಗಿ ಕ್ರೋಧಮೂರ್ಛಿತನಾಗಿ ಮಹೀಪಾಲರನ್ನು ವಧಿಸಿದೆ?

12008006a ಯೋ ಹ್ಯಾಜಿಜೀವಿಷೇದ್ಭೈಕ್ಷ್ಯಂ ಕರ್ಮಣಾ ನೈವ ಕೇನ ಚಿತ್|
12008006c ಸಮಾರಂಭಾನ್ಬುಭೂಷೇತ ಹತಸ್ವಸ್ತಿರಕಿಂಚನಃ||
12008006e ಸರ್ವಲೋಕೇಷು ವಿಖ್ಯಾತೋ ನ ಪುತ್ರಪಶುಸಂಹಿತಃ||

ಎಲ್ಲ ಸಾಧನಗಳಿಲ್ಲವೂ ನಷ್ಟವಾಗಿರುವವನು, ದಟ್ಟ ದರಿದ್ರನು, ಪ್ರಪಂಚದಲ್ಲಿ ಹೇಳಹೆಸರಿಲ್ಲದವನು, ಪುತ್ರ-ಪಶುಗಳಿಲ್ಲದವನು ಭಿಕ್ಷೆಯ ಜೀವನವನ್ನು ನಡೆಸಲು ಅಪೇಕ್ಷಿಸುವುದು ಯೋಗ್ಯವಾಗಿದೆ.

12008007a ಕಾಪಾಲೀಂ ನೃಪ ಪಾಪಿಷ್ಠಾಂ ವೃತ್ತಿಮಾಸ್ಥಾಯ ಜೀವತಃ|
12008007c ಸಂತ್ಯಜ್ಯ ರಾಜ್ಯಮೃದ್ಧಂ ತೇ ಲೋಕೋಽಯಂ ಕಿಂ ವದಿಷ್ಯತಿ||

ನೃಪ! ಸಮೃದ್ಧ ರಾಜ್ಯವನ್ನು ತೊರೆದು, ಕಪಾಲವನ್ನು ಹಿಡಿದು, ಅತ್ಯಂತ ನೀಚವೃತ್ತಿಯಿಂದ ಜೀವಿಸುವ ನಿನ್ನನ್ನು ನೋಡಿ ಈ ಲೋಕವಾದರೂ ಏನೆಂದೀತು?

12008008a ಸರ್ವಾರಂಭಾನ್ಸಮುತ್ಸೃಜ್ಯ ಹತಸ್ವಸ್ತಿರಕಿಂಚನಃ|
12008008c ಕಸ್ಮಾದಾಶಂಸಸೇ ಭೈಕ್ಷ್ಯಂ ಚರ್ತುಂ ಪ್ರಾಕೃತವತ್ಪ್ರಭೋ||

ಪ್ರಭೋ! ಎಲ್ಲವನ್ನೂ ಪರಿತ್ಯಜಿಸಿ, ಮಂಗಳಕರ ಕಾರ್ಯಗಳಿಲ್ಲವುಗಳ ವಿಹೀನನನಾಗಿ, ಓರ್ವ ಸಾಮಾನ್ಯ ಭಿಕ್ಷುಕನಂತೆ ಏಕೆ ತಿರುಗಲು ಬಯಸುತ್ತಿರುವೆ?

12008009a ಅಸ್ಮಿನ್ರಾಜಕುಲೇ ಜಾತೋ ಜಿತ್ವಾ ಕೃತ್ಸ್ನಾಂ ವಸುಂಧರಾಮ್|
12008009c ಧರ್ಮಾರ್ಥಾವಖಿಲೌ ಹಿತ್ವಾ ವನಂ ಮೌಢ್ಯಾತ್ಪ್ರತಿಷ್ಠಸೇ||

ಈ ರಾಜಕುಲದಲ್ಲಿ ಹುಟ್ಟಿ, ಇಡೀ ವಸುಂಧರೆಯನ್ನು ಗೆದ್ದು, ಧರ್ಮಾರ್ಥಗಳೆಲ್ಲವನ್ನೂ ತೊರೆದು ಮೂಢನಾಗಿ ವನಕ್ಕೆ ತೆರಳಲು ಸಿದ್ಧನಾಗಿರುವೆಯಲ್ಲ!

12008010a ಯದೀಮಾನಿ ಹವೀಂಷೀಹ ವಿಮಥಿಷ್ಯಂತ್ಯಸಾಧವಃ|
12008010c ಭವತಾ ವಿಪ್ರಹೀಣಾನಿ ಪ್ರಾಪ್ತಂ ತ್ವಾಮೇವ ಕಿಲ್ಬಿಷಮ್||

ಒಂದು ವೇಳೆ ಈ ಹವಿಸ್ಸು-ಯಜ್ಞಸಾಮಗ್ರಿಗಳನ್ನು ದುಷ್ಟ ಜನರು ನಾಶಗೊಳಿಸಿದರೆ ನಿನ್ನಿಂದಲೇ ವಿಪ್ರರು ನಾಶರಾಗಿ ನಿನಗೇ ಪಾಪವು ತಗಲುತ್ತದೆ.

12008011a ಆಕಿಂಚನ್ಯಮನಾಶಾಸ್ಯಮಿತಿ ವೈ ನಹುಷೋಽಬ್ರವೀತ್|
12008011c ಕೃತ್ಯಾ ನೃಶಂಸಾ ಹ್ಯಧನೇ ಧಿಗಸ್ತ್ವಧನತಾಮಿಹ||

ನಹುಷನು ನಿರ್ಧನನಾಗಿದ್ದಾಗ ಕ್ರೂರ ಕರ್ಮಗಳನ್ನೆಸಗಿ "ನಿರ್ಧನತ್ವಕ್ಕೆ ಧಿಕ್ಕಾರ! ಸರ್ವವನ್ನೂ ತ್ಯಾಗಮಾಡಿ ದಾರಿದ್ರ್ಯವನ್ನು ಅನುಭವಿಸುವುದು ಮುನಿಗಳ ಧರ್ಮವಾಗಿದೆ. ಅದು ರಾಜನ ಧರ್ಮವಲ್ಲ!" ಎಂದು ಹೇಳಿದ್ದನು.

12008012a ಅಶ್ವಸ್ತನಮೃಷೀಣಾಂ ಹಿ ವಿದ್ಯತೇ ವೇದ ತದ್ಭವಾನ್|
12008012c ಯಂ ತ್ವಿಮಂ ಧರ್ಮಮಿತ್ಯಾಹುರ್ಧನಾದೇಷ ಪ್ರವರ್ತತೇ||

ನಾಳೆಗೆಂದು ಸಂಗ್ರಹಿಸದೇ ಆ ದಿನಕ್ಕೆ ಮಾತ್ರ ಭಿಕ್ಷೆಬೇಡುವುದು ಋಷಿಗಳ ಧರ್ಮವೆಂದು ನಿನಗೆ ತಿಳಿದೇ ಇದೆ. ಅದೇ ರೀತಿಯಲ್ಲಿ ಯಾವುದನ್ನು ಕ್ಷತ್ರಿಯ ಧರ್ಮವೆಂದು ಕರೆಯುತ್ತಾರೋ ಅದು ಧನದಿಂದಲೇ ಸಂಪನ್ನವಾಗುತ್ತದೆ.

12008013a ಧರ್ಮಂ ಸಂಹರತೇ ತಸ್ಯ ಧನಂ ಹರತಿ ಯಸ್ಯ ಯಃ|
12008013c ಹ್ರಿಯಮಾಣೇ ಧನೇ ರಾಜನ್ವಯಂ ಕಸ್ಯ ಕ್ಷಮೇಮಹಿ||

ಯಾರ ಧನವನ್ನು ಅಪಹರಿಸಿದರೂ ಅವರ ಧರ್ಮವನ್ನು ಅಪಹರಿಸಿದಂತೆ. ರಾಜನ್! ಧನವನ್ನೇ ಅಪಹರಿಸಿದರೆ ನಾವು ಯಾವ ಧರ್ಮಾಚರಣೆಯನ್ನು ಮಾಡಲು ಸಮರ್ಥರಾಗಿರುತ್ತೇವೆ?

12008014a ಅಭಿಶಸ್ತವತ್ಪ್ರಪಶ್ಯಂತಿ ದರಿದ್ರಂ ಪಾರ್ಶ್ವತಃ ಸ್ಥಿತಮ್|
12008014c ದಾರಿದ್ರ್ಯಂ ಪಾತಕಂ ಲೋಕೇ ಕಸ್ತಚ್ಚಂಸಿತುಮರ್ಹತಿ||

ಪಕ್ಕದಲ್ಲಿ ನಿಂತಿರುವ ದರಿದ್ರನನ್ನು ನೋಡಿ ಜನರು "ಇವನೆಲ್ಲೋ

ಶಾಪಗ್ರಸ್ತನಾಗಿ ಹುಟ್ಟಿದ್ದಾನೆ!” ಎಂದು ಭಾವಿಸುತ್ತಾರೆ. ಪಾತಕವೆಂದೇ ಲೋಕವು ತಿಳಿದಿರುವ ದಾರಿದ್ರ್ಯವನ್ನು ನೀನು ಹೇಗೆ ಪ್ರಶಂಸಿಸುತ್ತಿರುವೆ?

12008015a ಪತಿತಃ ಶೋಚ್ಯತೇ ರಾಜನ್ನಿರ್ಧನಶ್ಚಾಪಿ ಶೋಚ್ಯತೇ|
12008015c ವಿಶೇಷಂ ನಾಧಿಗಚ್ಚಾಮಿ ಪತಿತಸ್ಯಾಧನಸ್ಯ ಚ||

ರಾಜನ್! ಪತಿತನು ಶೋಕದಲ್ಲಿರುತ್ತಾನೆ. ನಿರ್ಧನಿಕನೂ ಶೋಕಿಸುತ್ತಿರುತ್ತಾನೆ. ಆದುದರಿಂದ ಪತಿತ ಮತ್ತು ನಿರ್ಧನಿಕನಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ.

12008016a ಅರ್ಥೇಭ್ಯೋ ಹಿ ವಿವೃದ್ಧೇಭ್ಯಃ ಸಂಭೃತೇಭ್ಯಸ್ತತಸ್ತತಃ|
12008016c ಕ್ರಿಯಾಃ ಸರ್ವಾಃ ಪ್ರವರ್ತಂತೇ ಪರ್ವತೇಭ್ಯ ಇವಾಪಗಾಃ||

ಪರ್ವತಗಳಿಂದ ಅನೇಕ ನದಿಗಳು ಹುಟ್ಟಿ ಹರಿಯುವಂತೆ ಅಲ್ಲಲ್ಲಿಂದ ಕಪ್ಪ-ಕಾಣಿಕೆಗಳ ರೂಪದಲ್ಲಿ ವೃದ್ಧಿಹೊಂದುವ ಐಶ್ವರ್ಯಗಳಿಂದಲೇ ಎಲ್ಲ ಶುಭಕರ್ಮಗಳೂ ಪ್ರವೃತ್ತವಾಗುತ್ತವೆ.

12008017a ಅರ್ಥಾದ್ಧರ್ಮಶ್ಚ ಕಾಮಶ್ಚ ಸ್ವರ್ಗಶ್ಚೈವ ನರಾಧಿಪ|
12008017c ಪ್ರಾಣಯಾತ್ರಾ ಹಿ ಲೋಕಸ್ಯ ವಿನಾರ್ಥಂ ನ ಪ್ರಸಿಧ್ಯತಿ||

ನರಾಧಿಪ! ಅರ್ಥದಿಂದಲೇ ಧರ್ಮ, ಕಾಮ ಮತ್ತು ಸ್ವರ್ಗಗಳ ಸಾಧ್ಯತೆಗಳಿವೆ. ಅರ್ಥವಿಲ್ಲದೇ ಲೋಕದ ಪ್ರಾಣಯಾತ್ರೆಯೇ ನಡೆಯುವುದಿಲ್ಲ.

12008018a ಅರ್ಥೇನ ಹಿ ವಿಹೀನಸ್ಯ ಪುರುಷಸ್ಯಾಲ್ಪಮೇಧಸಃ|
12008018c ವ್ಯುಚ್ಚಿದ್ಯಂತೇ ಕ್ರಿಯಾಃ ಸರ್ವಾ ಗ್ರೀಷ್ಮೇ ಕುಸರಿತೋ ಯಥಾ||

ಗ್ರೀಷ್ಮಋತುವಿನಲ್ಲಿ ಚಿಕ್ಕ-ಪುಟ್ಟ ನದಿಗಳು ಒಣಗಿಹೋಗುವಂತೆ

ಅಲ್ಪಬುದ್ಧಿಯುಳ್ಳ ಮತ್ತು ಧನವಿಹೀನನಾದ ಪುರುಷನ
ಕಾರ್ಯಗಳೆಲ್ಲವೂ ನಾಮಾವಶೇಷವಾಗುತ್ತವೆ.

12008019a ಯಸ್ಯಾರ್ಥಾಸ್ತಸ್ಯ ಮಿತ್ರಾಣಿ ಯಸ್ಯಾರ್ಥಾಸ್ತಸ್ಯ ಬಾಂಧವಾಃ|
12008019c ಯಸ್ಯಾರ್ಥಾಃ ಸ ಪುಮಾಽಲ್ಲೋಕೇ ಯಸ್ಯಾರ್ಥಾಃ ಸ ಚ ಪಂಡಿತಃ||

ಧನವಿರುವವನಿಗೆ ಮಿತ್ರರಿರುತ್ತಾರೆ. ಧನವಿರುವವನಿಗೆ
ಬಾಂಧವರಿರುತ್ತಾರೆ. ಧನವಿದ್ದರೇ ಲೋಕದಲ್ಲಿ
ಪುರುಷನೆನಿಸಿಕೊಳ್ಳುತ್ತಾನೆ. ಐಶ್ವರ್ಯಗಳುಳ್ಳವನನ್ನೇ ಪಂಡಿತನೆಂದೂ
ಕರೆಯುತ್ತಾರೆ.

12008020a ಅಧನೇನಾರ್ಥಕಾಮೇನ ನಾರ್ಥಃ ಶಕ್ಯೋ ವಿವಿತ್ಸತಾ|
12008020c ಅರ್ಥೈರರ್ಥಾ ನಿಬಧ್ಯಂತೇ ಗಜೈರಿವ ಮಹಾಗಜಾಃ||

ದರಿದ್ರನಾದವನು ಬಯಸಿದರೂ ಅಧಿಕ ಧನವನ್ನು ಸಂಪಾದಿಸಲು
ಶಕ್ಯನಾಗುವುದಿಲ್ಲ. ಆನೆಗಳಿಂದ ಮಹಾಗಜಗಳು ಹುಟ್ಟುವಂತೆ
ಧನದಿಂದಲೇ ಅಪಾರ ಸಂಪತ್ತನ್ನು ಗಳಿಸಬಲ್ಲೆವು.

12008021a ಧರ್ಮಃ ಕಾಮಶ್ಚ ಸ್ವರ್ಗಶ್ಚ ಹರ್ಷಃ ಕ್ರೋಧಃ ಶ್ರುತಂ ದಮಃ|
12008021c ಅರ್ಥಾದೇತಾನಿ ಸರ್ವಾಣಿ ಪ್ರವರ್ತಂತೇ ನರಾಧಿಪ||

ನರಾಧಿಪ! ಧರ್ಮ, ಕಾಮ, ಸ್ವರ್ಗ, ಹರ್ಷ, ಕ್ರೋಧ, ವಿದ್ಯೆ, ದಮ,
ಇವೆಲ್ಲವೂ ಧನದಿಂದಲೇ ಹುಟ್ಟುತ್ತವೆ.

12008022a ಧನಾತ್ಕುಲಂ ಪ್ರಭವತಿ ಧನಾದ್ಧರ್ಮಃ ಪ್ರವರ್ತತೇ|
12008022c ನಾಧನಸ್ಯಾಸ್ತ್ಯಯಂ ಲೋಕೋ ನ ಪರಃ ಪುರುಷೋತ್ತಮ||

ಪುರುಷೋತ್ತಮ! ಧನದಿಂದ ಕುಲವು ವೃದ್ಧಿಹೊಂದುತ್ತದೆ ಮತ್ತು

ಧನದಿಂದ ಧರ್ಮವು ಬೆಳೆಯುತ್ತದೆ. ಧನವಿಲ್ಲದವನಿಗೆ ಈ ಲೋಕದಲ್ಲಿ ಸುಖವಿಲ್ಲ.

12008023a ನಾಧನೋ ಧರ್ಮಕೃತ್ಯಾನಿ ಯಥಾವದನುತಿಷ್ಠತಿ|
12008023c ಧನಾದ್ಧಿ ಧರ್ಮಃ ಸ್ರವತಿ ಶೈಲಾದ್ಗಿರಿನದೀ ಯಥಾ||

ನಿರ್ಧನಿಕನು ಧರ್ಮಕೃತ್ಯಗಳನ್ನು ಯಥಾಶಾಸ್ತ್ರವಾಗಿ ಅನುಷ್ಠಾನ ಮಾಡಲು ಸಾಧ್ಯವಿಲ್ಲ. ಶೈಲದಿಂದ ಗಿರಿನದಿಯು ಸ್ರವಿಸುವಂತೆ ಧನದಿಂದಲೇ ಧರ್ಮವು ಸ್ರವಿಸುತ್ತದೆ.

12008024a ಯಃ ಕೃಶಾಶ್ವಃ ಕೃಶಗವಃ ಕೃಶಭೃತ್ಯಃ ಕೃಶಾತಿಥಿಃ|
12008024c ಸ ವೈ ರಾಜನ್ಕೃಶೋ ನಾಮ ನ ಶರೀರಕೃಶಃ ಕೃಶಃ||

ರಾಜನ್! ಕೇವಲ ಶರೀರದಲ್ಲಿ ಕೃಶನಾಗಿರುವವನಿಗೆ ಕೃಶನೆಂದು ಕರೆಯುವುದಿಲ್ಲ. ಅಶ್ವಧನವಿಲ್ಲದವನು, ಗೋಧನವಿಲ್ಲದವನು, ಸೇವಕರಿಲ್ಲದವನು ಮತ್ತು ಅತಿಥಿಗಳಿಲ್ಲದವನನ್ನೂ ಕೃಶನೆಂದೇ ಕರೆಯುತ್ತಾರೆ.

12008025a ಅವೇಕ್ಷಸ್ವ ಯಥಾನ್ಯಾಯಂ ಪಶ್ಯ ದೇವಾಸುರಂ ಯಥಾ|
12008025c ರಾಜನ್ಕಿಮನ್ಯನ್ನಾಶೀನಾಂ ವಧಾದ್ಯಧ್ಯಂತಿ ದೇವತಾಃ||

ರಾಜನ್! ಯಥಾನ್ಯಾಯವಾಗಿ ದೇವಾಸುರರನ್ನು ನೋಡು! ದೇವತೆಗಳು ವೃದ್ಧಿಗಾಗಿ ತಮ್ಮ ದಾಯಾದಿಗಳಾದ ಅಸುರರ ವಧೆಯನ್ನಲ್ಲದೇ ಬೇರೆ ಏನನ್ನು ಬಯಸುತ್ತಾರೆ?

12008026a ನ ಚೇದ್ಧರ್ತವ್ಯಮನ್ಯಸ್ಯ ಕಥಂ ತದ್ಧರ್ಮಮಾರಭೇತ್|
12008026c ಏತಾವಾನೇವ ವೇದೇಷು ನಿಶ್ಚಯಃ ಕವಿಭಿಃ ಕೃತಃ||

ರಾಜನಾದವನು ಇನ್ನೊಬ್ಬರ ಧನವನ್ನು ತೆಗೆದುಕೊಳ್ಳದೇ
ಧರ್ಮಕಾರ್ಯಗಳನ್ನು ಹೇಗೆ ಮಾಡಬಹುದು? ಇದನ್ನೇ
ರಾಜಧರ್ಮವೆಂದು ತಿಳಿದವರು ವೇದಗಳಲ್ಲಿ ನಿಶ್ಚಯಿಸಿದ್ದಾರೆ.

12008027a ಅಧ್ಯೇತವ್ಯಾ ತ್ರಯೀ ವಿದ್ಯಾ ಭವಿತವ್ಯಂ ವಿಪಶ್ಚಿತಾ|
12008027c ಸರ್ವಥಾ ಧನಮಾಹಾರ್ಯಂ ಯಷ್ಟವ್ಯಂ ಚಾಪಿ ಯತ್ನತಃ||

ರಾಜನಾದವನು ವೇದಾಧ್ಯಯನ ಮಾಡುತ್ತಿರಬೇಕು.
ವಿದ್ವಾಂಸನಾಗಿರಬೇಕು. ಸರ್ವಪ್ರಕಾರಗಳಿಂದಲೂ ಧನವನ್ನು
ಸಂಗ್ರಹಿಸಬೇಕು ಮತ್ತು ಪ್ರಯತ್ನಪಟ್ಟು ಯಜ್ಞಗಳನ್ನು ಮಾಡಬೇಕು.

12008028a ದ್ರೋಹಾದ್ದೇವೈರವಾಪ್ತಾನಿ ದಿವಿ ಸ್ಥಾನಾನಿ ಸರ್ವಶಃ|
12008028c ಇತಿ ದೇವಾ ವ್ಯವಸಿತಾ ವೇದವಾದಾಶ್ಚ ಶಾಶ್ವತಾಃ||

ದ್ರೋಹದಿಂದಲೇ ದೇವತೆಗಳು ದಿವಿಯಲ್ಲಿ ಎಲ್ಲ ಸ್ಥಾನಗಳನ್ನೂ
ಪಡೆದಿದ್ದಾರೆ. ಇದನ್ನೇ ದೇವತೆಗಳು ಲೋಕವ್ಯವಸ್ಥೆಯನ್ನಾಗಿ
ಮಾಡಿರುತ್ತಾರೆ. ಶಾಶ್ವತ ವೇದಗಳೂ ಇವನ್ನೇ ಹೇಳುತ್ತವೆ.

12008029a ಅಧೀಯಂತೇ ತಪಸ್ಯಂತಿ ಯಜಂತೇ ಯಾಜಯಂತಿ ಚ|
12008029c ಕೃತ್ಸ್ನಂ ತದೇವ ಚ ಶ್ರೇಯೋ ಯದಪ್ಯಾದದತೇಽನ್ಯತಃ||

ಧನದಿಂದಲೇ ಬ್ರಾಹ್ಮಣರು ಅಧ್ಯಯನಮಾಡುತ್ತಾರೆ.
ತಪಸ್ಸನ್ನಾಚರಿಸುತ್ತಾರೆ. ಯಜ್ಞಮಾಡುತ್ತಾರೆ ಮತ್ತು ಮಾಡಿಸುತ್ತಾರೆ.
ಇವೆಲ್ಲವೂ ಮತ್ತು ಶ್ರೇಯಸ್ಸೂ ಧನದಿಂದಲೇ ದೊರೆಯುತ್ತದೆ.
ಬೇರೆಯಾವುದರಿಂದಲೂ ಅಲ್ಲ.

12008030a ನ ಪಶ್ಯಾಮೋಽನಪಹೃತಂ ಧನಂ ಕಿಂ ಚಿತ್ಕ್ವ ಚಿದ್ವಯಮ್|

12008030c ಏವಮೇವ ಹಿ ರಾಜಾನೋ ಜಯಂತಿ ಪೃಥಿವೀಮಿಮಾಮ್॥

ಇನ್ನೊಬ್ಬನಿಂದ ಅಪಹರಿಸದೇ ಸಂಪಾದಿಸಿರುವ ಕಿಂಚಿತ್ತು ಧನವನ್ನೂ ನಾವು ಕಾಣುವುದಿಲ್ಲ. ಇದೇ ರೀತಿಯಲ್ಲಿ ರಾಜರು ಈ ಭೂಮಿಯನ್ನು ಜಯಿಸುತ್ತಾರೆ.

12008031a ಜಿತ್ವಾ ಮಮತ್ವಂ ಬ್ರುವತೇ ಪುತ್ರಾ ಇವ ಪಿತುರ್ಧನೇ|
12008031c ರಾಜರ್ಷಯೋ ಜಿತಸ್ವರ್ಗಾ ಧರ್ಮೋ ಹ್ಯೇಷಾಂ ನಿಗದ್ಯತೇ॥

ತಂದೆಯ ಆಸ್ತಿಯನ್ನು ಮಕ್ಕಳು ತಮ್ಮದೆಂದೇ ಹೇಳಿಕೊಳ್ಳುವಂತೆ ಶತ್ರುವಿನಿಂದ ಗೆದ್ದ ಭೂಮಿಯನ್ನೂ ರಾಜರು ತಮ್ಮದೆಂದೇ ಹೇಳಿಕೊಳ್ಳುತ್ತಾರೆ. ಈ ರೀತಿ ಧರ್ಮಮಾರ್ಗದಲ್ಲಿ ನಡೆದು ರಾಜರ್ಷಿಗಳು ಸ್ವರ್ಗಗಳನ್ನು ಗೆದ್ದಿದ್ದಾರೆ.

12008032a ಯಥೈವ ಪೂರ್ಣಾದುದಧೇಃ ಸ್ಯಂದಂತ್ಯಾಪೋ ದಿಶೋ ದಶ|
12008032c ಏವಂ ರಾಜಕುಲಾದ್ವಿತ್ತಂ ಪೃಥಿವೀಂ ಪ್ರತಿತಿಷ್ಠತಿ॥

ಮೋಡಗಳ ಮೂಲಕ ಸಮುದ್ರದ ನೀರು ಹತ್ತು ದಿಕ್ಕುಗಳಿಗೂ ಪಸರಿಸುವಂತೆ ರಾಜಕುಲದಿಂದ ವಿತ್ತವು ಪೃಥ್ವಿಯಲ್ಲಿ ಪಸರಿಸಿಕೊಳ್ಳುತ್ತದೆ.

12008033a ಆಸೀದಿಯಂ ದಿಲೀಪಸ್ಯ ನೃಗಸ್ಯ ನಹುಷಸ್ಯ ಚ|
12008033c ಅಂಬರೀಷಸ್ಯ ಮಾಂಧಾತುಃ ಪೃಥಿವೀ ಸಾ ತ್ವಯಿ ಸ್ಥಿತಾ॥

ಈ ಪೃಥ್ವಿಯು ಹಿಂದೆ ದಿಲೀಪನದಾಗಿತ್ತು. ನೃಗ, ನಹುಷ, ಅಂಬರೀಷ ಮತ್ತು ಮಾಂಧಾತರದ್ದಾಗಿತ್ತು. ಅದೇ ಭೂಮಿಯು ಈಗ ನಿನ್ನನ್ನು ಅವಲಂಬಿಸಿದೆ.

12008034a ಸ ತ್ವಾಂ ದ್ರವ್ಯಮಯೋ ಯಜ್ಞಃ ಸಂಪ್ರಾಪ್ತಃ ಸರ್ವದಕ್ಷಿಣಃ|
12008034c ತಂ ಚೇನ್ನ ಯಜಸೇ ರಾಜನ್ಪ್ರಾಪ್ತಸ್ತ್ವಂ ದೇವಕಿಲ್ಬಿಷಮ್||

ರಾಜನ್! ಸರ್ವದಕ್ಷಿಣೆಗಳಿಂದ ಕೂಡಿದ ದ್ರವ್ಯಮಯ ಯಜ್ಞಗಳನ್ನು ನೀನು ಯಜಿಸದೇ ಇದ್ದರೆ ದೇವತೆಗಳಿಗೆಸಗುವ ಪಾಪವನ್ನು ಪಡೆದುಕೊಳ್ಳುವೆ.

12008035a ಯೇಷಾಂ ರಾಜಾಶ್ವಮೇಧೇನ ಯಜತೇ ದಕ್ಷಿಣಾವತಾ|
12008035c ಉಪೇತ್ಯ ತಸ್ಯಾವಭೃಥಂ ಪೂತಾಃ ಸರ್ವೇ ಭವಂತಿ ತೇ||

ರಾಜನು ದಕ್ಷಿಣೆಗಳಿಂದ ಕೂಡಿದ ಅಶ್ವಮೇಧಯಜ್ಞವನ್ನು ಯಜಿಸಿದರೆ ಅದರ ಅವಭೃಥಕ್ಕೆ ಸೇರಿದ ಎಲ್ಲರೂ ಪವಿತ್ರರಾಗುತ್ತಾರೆ.

12008036a ವಿಶ್ವರೂಪೋ ಮಹಾದೇವಃ ಸರ್ವಮೇಧೇ ಮಹಾಮಖೇ|
12008036c ಜುಹಾವ ಸರ್ವಭೂತಾನಿ ತಥೈವಾತ್ಮಾನಮಾತ್ಮನಾ||

ವಿಶ್ವರೂಪೀ ಮಹಾದೇವನು ಸರ್ವಮೇಧವೆಂಬ ಮಹಾ ಯಜ್ಞದಲ್ಲಿ ಸರ್ವಭೂತಗಳನ್ನೂ ಆಹುತಿಯನ್ನಾಗಿತ್ತು ಆತ್ಮಾರ್ಪಣೆಯನ್ನೂ ಮಾಡಿಕೊಂಡನು.

12008037a ಶಾಶ್ವತೋಽಯಂ ಭೂತಿಪಥೋ ನಾಸ್ಯಾಂತಮನುಶುಶ್ರುಮ|
12008037c ಮಹಾನ್ದಾಶರಥಃ ಪಂಥಾ[17] ಮಾ ರಾಜನ್ಕಾಪಥಂ ಗಮಃ||

---

[17] ದಾಶರಥಃ ಪಂಥಾಃ ಎನ್ನುವುದಕ್ಕೆ ಹತ್ತು ರಥಗಳಿರುವ ಯಜ್ಞ ಎಂದು ವ್ಯಾಖ್ಯಾನಮಾಡಿರುತ್ತಾರೆ. ಈ ಹತ್ತು ರಥಗಳು – ಪಶು, ಪತ್ನಿ, ಯಜಮಾನ, ಋಗ್ಯಜುಸ್ಸಾಮವೆಂಬ ಮೂರು ವೇದಗಳು, ಮತ್ತು ನಾಲ್ವರು ಋತ್ವಿಜರು. ದಶರಥಾಶ್ಚ ಪ್ರಚರಂತಿ ಯಸ್ಮಿನ್ ಸಃ ದಶರಥಃ ಸ ಏವ ದಾಶರಥಃ|| (ಭಾರತ

ರಾಜನ್! ಇದೊಂದು ಶಾಶ್ವತ ಮಾರ್ಗವಾಗಿರುವುದು. ಇದು ಕೊನೆಗೊಂಡಿದುದರ ಕುರಿತು ನಾವು ಕೇಳೇ ಇಲ್ಲ. ಹತ್ತು ರಥಗಳುಳ್ಳ ಈ ಯಜ್ಞಗಳ ಮಹಾ ಮಾರ್ಗವನ್ನು ಬಿಟ್ಟು ಕೆಟ್ಟದಾರಿಯಲ್ಲಿ ಹೋಗಬೇಡ!"

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಅರ್ಜುನವಾಕ್ಯೇ ಅಷ್ಟಮೋಽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಅರ್ಜುನ ವಾಕ್ಯ ಎನ್ನುವ ಎಂಟನೇ ಅಧ್ಯಾಯವು.

೯

ಯುಧಿಷ್ಠಿರ ವಾಕ್ಯ

ಯುಧಿಷ್ಠಿರನು ತಾನು ವಾನಪ್ರಸ್ಥ ಮತ್ತು ಸಂನ್ಯಾಸವನ್ನನುಸರಿಸಿ ಜೀವಿಸುತ್ತೇನೆ ಎಂದು ನಿಶ್ಚಯಿಸುವುದು (1-37).

12009001 ಯುಧಿಷ್ಠಿರ ಉವಾಚ|
12009001a ಮುಹೂರ್ತಂ ತಾವದೇಕಾಗ್ರೋ ಮನಃಶ್ರೋತ್ರೇಽಂತರಾತ್ಮನಿ|
12009001c ಧಾರಯಿತ್ವಾಪಿ ತೇ ಶ್ರುತ್ವಾ ರೋಚತಾಂ ವಚನಂ ಮಮ||

ಯುಧಿಷ್ಠಿರನು ಹೇಳಿದನು: "ನನ್ನ ಈ ಮಾತನ್ನು ಏಕಾಗ್ರಚಿತ್ತನಾಗಿ ಕೇಳಿ ಮುಹೂರ್ತಕಾಲ ಮನಸ್ಸು-ಕಿವಿಗಳನ್ನು ಅಂತರಾತ್ಮನಲ್ಲಿ ಸ್ಥಾಪಿಸಿ

ದರ್ಶನ).

ಧ್ಯಾನಮಾಡು. ಆಗ ನಾನು ಹೇಳುವುದು ನಿನಗೆ
ಹಿತಕರವೆನಿಸಬಹುದು.

12009002a ಸಾರ್ಥಗಮ್ಯಮಹಂ ಮಾರ್ಗಂ ನ ಜಾತು ತ್ವತ್ಕೃತೇ ಪುನಃ|
12009002c ಗಚ್ಛೇಯಂ ತದ್ಗಮಿಷ್ಯಾಮಿ ಹಿತ್ವಾ ಗ್ರಾಮ್ಯಸುಖಾನ್ಯುತ||

ನೀನು ಒತ್ತಾಯಿಸುತ್ತಿರುವ ಧನದ ಮಾರ್ಗದಲ್ಲಿ ನಾನು ಪುನಃ
ಹೋಗುವುದಿಲ್ಲ. ಗ್ರಾಮ್ಯಸುಖಗಳನ್ನು ತೊರೆದು ಹೋಗುವಂತಹ
ಮಾರ್ಗದಲ್ಲಿ ಹೋಗುತ್ತೇನೆ.

12009003a ಕ್ಷೇಮ್ಯಶ್ಚೈಕಾಕಿನಾ ಗಮ್ಯಃ ಪಂಥಾಃ ಕೋಽಸ್ತೀತಿ ಪೃಚ್ಚ ಮಾಮ್|
12009003c ಅಥ ವಾ ನೇಚ್ಚಸಿ ಪ್ರಷ್ಟುಮಪೃಚ್ಚನ್ನಪಿ ಮೇ ಶೃಣು||

ಏಕಾಕಿಯಾಗಿ ಹೋಗುವ ಕ್ಷೇಮಮಾರ್ಗವು ಯಾವುದು ಎಂದು ನನ್ನನ್ನು
ಕೇಳು. ಅಥವಾ ನನ್ನನ್ನು ಕೇಳಲು ಇಚ್ಛಿಸದಿದ್ದರೂ ನಾನು
ಹೇಳುವುದನ್ನು ಕೇಳು.

12009004a ಹಿತ್ವಾ ಗ್ರಾಮ್ಯಸುಖಾಚಾರಂ ತಪ್ಯಮಾನೋ ಮಹತ್ತಪಃ|
12009004c ಅರಣ್ಯೇ ಫಲಮೂಲಾಶೀ ಚರಿಷ್ಯಾಮಿ ಮೃಗೈಃ ಸಹ||

ಗ್ರಾಮ್ಯ ಸುಖಾಚಾರವನ್ನು ತೊರೆದು ಮಹಾತಪಸ್ಸನ್ನು ತಪಿಸುತ್ತಾ
ಅರಣ್ಯದಲ್ಲಿ ಫಲಮೂಲಗಳನ್ನು ತಿಂದುಕೊಂಡು ಮೃಗಗಳೊಂದಿಗೆ
ಸಂಚರಿಸುತ್ತೇನೆ.

12009005a ಜುಹ್ವಾನೋಽಗ್ನಿಂ ಯಥಾಕಾಲಮುಭೌ ಕಾಲಾವುಪಸ್ಪೃಶನ್|
12009005c ಕೃಶಃ ಪರಿಮಿತಾಹಾರಶ್ಚರ್ಮಚೀರಜಟಾಧರಃ||

ಎರಡೂ ಕಾಲಗಳಲ್ಲಿ ಶುಚಿಯಾಗಿ ಕಾಲಕ್ಕೆ ತಕ್ಕಂತೆ ಅಗ್ನಿಯಲ್ಲಿ

ಆಹುತಿಗಳನ್ನು ನೀಡುತ್ತೇನೆ. ಮಿತ ಆಹಾರವನ್ನು ಸೇವಿಸಿಕೊಂಡು ನನ್ನ ಶರೀರವನ್ನು ಕೃಶಗೊಳಿಸುತ್ತೇನೆ. ವಲ್ಕಲಗಳನ್ನು ಧರಿಸುತ್ತೇನೆ. ಜಟೆಯನ್ನು ಧರಿಸುತ್ತೇನೆ.

12009006a ಶೀತವಾತಾತಪಸಹಃ ಕ್ಷುತ್ಪಿಪಾಸಾಶ್ರಮಕ್ಷಮಃ|
12009006c ತಪಸಾ ವಿಧಿದೃಷ್ಟೇನ ಶರೀರಮುಪಶೋಷಯನ್||

ಛಳಿ-ಗಾಳಿ-ಬಿಸಿಲುಗಳನ್ನು ಸಹಿಸಿಕೊಳ್ಳುತ್ತೇನೆ. ಹಸಿವು-ಬಾಯಾರಿಕೆ-ಆಯಾಸಗಳನ್ನು ಸಹಿಸಿಕೊಳ್ಳುತ್ತೇನೆ. ವಿಧಿದೃಷ್ಟ ತಪಸ್ಸಿನಿಂದ ಶರೀರವನ್ನು ಶೋಷಿಸುತ್ತೇನೆ.

12009007a ಮನಃಕರ್ಣಸುಖಾ ನಿತ್ಯಂ ಶೃಣ್ವನ್ನುಚ್ಚಾವಚಾ ಗಿರಃ|
12009007c ಮುದಿತಾನಾಮರಣ್ಯೇಷು ವಸತಾಂ ಮೃಗಪಕ್ಷಿಣಾಮ್||

ಅರಣ್ಯದಲ್ಲಿ ವಾಸಿಸುವ ಮುದಿತ ಮೃಗ-ಪಕ್ಷಿಗಳ ಗಟ್ಟಿ ಧ್ವನಿಗಳನ್ನು ಕೇಳಿ ಮನಸ್ಸು-ಕಿವಿಗಳ ಸುಖವನ್ನು ಹೊಂದುತ್ತೇನೆ.

12009008a ಆಜಿಘ್ರನ್ಪೈಶಲಾನ್ಗಂಧಾನ್ಫುಲ್ಲಾನಾಂ ವೃಕ್ಷವೀರುಧಾಮ್|
12009008c ನಾನಾರೂಪಾನ್ವನೇ ಪಶ್ಯನ್ರಮಣೀಯಾನ್ವನೌಕಸಃ||

ಹೂಬಿಟ್ಟಿರುವ ಮರ-ಗಿಡ-ಬಳ್ಳಿಗಳ ಸುಗಂಧಗಳನ್ನು ಸೇವಿಸುತ್ತಾ, ನಾನಾರೂಪಗಳ ರಮಣೀಯ ವನವಾಸಿಗಳನ್ನು ನೋಡುತ್ತಾ ಇರುತ್ತೇನೆ.

12009009a ವಾನಪ್ರಸ್ಥಜನಸ್ಯಾಪಿ ದರ್ಶನಂ ಕುಲವಾಸಿನಃ|
12009009c ನಾಪ್ರಿಯಾಣ್ಯಾಚರಿಷ್ಯಾಮಿ ಕಿಂ ಪುನರ್ಗ್ರಾಮವಾಸಿನಾಮ್||

ವಾನಪ್ರಸ್ಥದಲ್ಲಿರುವವರನ್ನೂ, ಗುರುಕುಲ ವಾಸಿಗಳನ್ನೂ

ಸಂದರ್ಶಿಸುತ್ತೇನೆ. ಅವರಿಗೆ ಅಪ್ರಿಯವಾಗದಂತೆ ನಡೆದುಕೊಳ್ಳುತ್ತೇನೆ. ಇನ್ನು ಪುನಃ ಗ್ರಾಮವಾಸಿಗಳ ಕುರಿತೇನು?

12009010a ಏಕಾಂತಶೀಲೀ ವಿಮೃಶನ್ಪಕ್ವಾಪಕ್ವೇನ ವರ್ತಯನ್|
12009010c ಪಿತೄನ್ದೇವಾಂಶ್ಚ ವನ್ಯೇನ ವಾಗ್ಭಿರದ್ಭಿಶ್ಚ ತರ್ಪಯನ್||

ಏಕಾಂತದಲ್ಲಿದ್ದುಕೊಂಡು ವಿಮರ್ಶಿಸುತ್ತೇನೆ. ಪಕ್ವವಾಗಿರಲಿ ಪಕ್ವವಾಗದಿರಲಿ, ದೊರಕಿದ ಆಹಾರವನ್ನು ಸೇವಿಸಿಕೊಂಡಿರುತ್ತೇನೆ. ವನದಲ್ಲಿ ದೊರಕುವ ಕಂದಮೂಲ-ಫಲಗಳಿಂದ, ನೀರಿನಿಂದ ಮತ್ತು ಉತ್ತಮ ಮಾತುಗಳಿಂದ ಪಿತೃಗಳನ್ನೂ ದೇವತೆಗಳನ್ನೂ ತೃಪ್ತಿಪಡಿಸುತ್ತೇನೆ.

12009011a ಏವಮಾರಣ್ಯಶಾಸ್ತ್ರಾಣಾಮುಗ್ರಮುಗ್ರತರಂ ವಿಧಿಮ್|
12009011c ಸೇವಮಾನಃ ಪ್ರತೀಕ್ಷಿಷ್ಯೇ ದೇಹಸ್ಯಾಸ್ಯ ಸಮಾಪನಮ್||

ಈ ರೀತಿ ಅರಣ್ಯವಾಸಿಗಳಿಗೆ ಶಾಸ್ತ್ರಗಳಲ್ಲಿ ಹೇಳಿರುವ ಉಗ್ರವೂ ಅತಿ ಉಗ್ರವೂ ಆದ ವಿಧಿಗಳನ್ನು ಆಚರಿಸುತ್ತಾ ಈ ದೇಹದ ಸಮಾಪನವನ್ನು ಪ್ರತೀಕ್ಷಿಸುತ್ತೇನೆ.

12009012a ಅಥ ವೈಕೋಽಹಮೇಕಾಹಮೇಕೈಕಸ್ಮಿನ್ವನಸ್ಪತೌ|
12009012c ಚರನ್ಭೈಕ್ಷ್ಯಂ ಮುನಿರ್ಮುಂಡಃ ಕ್ಷಪಯಿಷ್ಯೇ ಕಲೇವರಮ್||

ಅಥವಾ ಮುಂಡನ ಮಾಡಿಕೊಂಡು ಮುನಿಯಾಗಿ ಪ್ರತಿದಿನವೂ ಒಂದೊಂದೇ ವೃಕ್ಷದಿಂದ ಆ ದಿನ ಬಿದ್ದ ಹಣ್ಣನ್ನು ಮಾತ್ರ ಸೇವಿಸುತ್ತಾ ಈ ಶರೀರವನ್ನು ಕ್ಷಯಿಸುತ್ತೇನೆ.

12009013a ಪಾಂಸುಭಿಃ ಸಮವಚ್ಛನ್ನಃ ಶೂನ್ಯಾಗಾರಪ್ರತಿಶ್ರಯಃ|

12009013c ವೃಕ್ಷಮೂಲನಿಕೇತೋ ವಾ ತ್ಯಕ್ತಸರ್ವಪ್ರಿಯಾಪ್ರಿಯಃ||

ಧೂಳಿನಿಂದ ತುಂಬಿಕೊಂಡಿದ್ದು, ಶೂನ್ಯ ಗೃಹದಲ್ಲಿ ಅಥವಾ ಮರದ ಬುಡದಲ್ಲಿ ವಾಸಿಸುತ್ತೇನೆ. ಮತ್ತು ಪ್ರಿಯ-ಅಪ್ರಿಯ ಎಲ್ಲವನ್ನೂ ಪರಿತ್ಯಜಿಸುತ್ತೇನೆ.

12009014a ನ ಶೋಚನ್ನ ಪ್ರಹೃಷ್ಯಂಶ್ಚ ತುಲ್ಯನಿಂದಾತ್ಮಸಂಸ್ತುತಿಃ|
12009014c ನಿರಾಶೀರ್ನಿರ್ಮಮೋ ಭೂತ್ವಾ ನಿರ್ದ್ವಂದ್ವೋ ನಿಷ್ಪರಿಗ್ರಹಃ||

ನಿಂದನೆ-ಸಂಸ್ತುತಿಗಳನ್ನು ಸಮನಾಗಿ ಕಾಣುತ್ತಾ ಶೋಕಿಸುವುದೂ ಇಲ್ಲ ಮತ್ತು ಹರ್ಷಿತನಾಗುವುದೂ ಇಲ್ಲ. ಏನನ್ನೂ ಬಯಸದೇ, ಯಾವುದನ್ನೂ ಅತಿಯಾಗಿ ಪ್ರೀತಿಸದೇ ನಿರ್ದ್ವಂದ್ವನಾಗಿಯೂ ಯಾವುದನ್ನೂ ತೆಗೆದುಕೊಳ್ಳದೇ ಇರುತ್ತೇನೆ.

12009015a ಆತ್ಮಾರಾಮಃ ಪ್ರಸನ್ನಾತ್ಮಾ ಜಡಾಂಧಬಧಿರಾಕೃತಿಃ|
12009015c ಅಕುರ್ವಾಣಃ ಪರೈಃ ಕಾಂ ಚಿತ್ಸಂವಿದಂ ಜಾತು ಕೇನ ಚಿತ್||

ಆತ್ಮಾರಾಮನಾಗಿದ್ದುಕೊಂಡು ಪ್ರಸನ್ನಾತ್ಮನಾಗಿರುತ್ತೇನೆ. ಜಡ-ಅಂಧ-ಕಿವುಡನಂತಿರುತ್ತೇನೆ. ಇನ್ನೊಬ್ಬರಿಂದ ಏನನ್ನೂ ಮಾಡಿಸಿಕೊಳ್ಳುವುದಿಲ್ಲ. ಯಾರೊಂದಿಗೂ ಮಾತನ್ನೂ ಆಡುವುದಿಲ್ಲ.

12009016a ಜಂಗಮಾಜಂಗಮಾನ್ಸರ್ವಾನ್ನವಿಹಿಂಸಂಶ್ಚತುರ್ವಿಧಾನ್|
12009016c ಪ್ರಜಾಃ ಸರ್ವಾಃ ಸ್ವಧರ್ಮಸ್ಥಾಃ ಸಮಃ ಪ್ರಾಣಭೃತಃ ಪ್ರತಿ||

ನಾಲ್ಕು ವಿಧದ ಚರಾಚರ ಪ್ರಾಣಿಗಳಲ್ಲಿ ಯಾರನ್ನೂ ಹಿಂಸಿಸುವುದಿಲ್ಲ. ಸ್ವಧರ್ಮನಿರತರಾಗಿರುವ ಎಲ್ಲ ಪ್ರಜೆಗಳನ್ನೂ ಪ್ರಾಣವಿರುವವನ್ನೂ ಸಮನಾಗಿ ಕಾಣುತ್ತೇನೆ.

12009017a ನ ಚಾಪ್ಯವಹಸನ್ಕಂ ಚಿನ್ನ ಕುರ್ವನ್ಕುಟೀಂ ಕ್ವ ಚಿತ್|
12009017c ಪ್ರಸನ್ನವದನೋ ನಿತ್ಯಂ ಸರ್ವೇಂದ್ರಿಯಸುಸಂಯತಃ||

ಯಾರನ್ನೂ ಹಾಸ್ಯಮಾಡುವುದಿಲ್ಲ. ಯಾರ ಮೇಲೂ
ಕುಪಿತನಾಗುವುದಿಲ್ಲ. ನಿತ್ಯವೂ ಸರ್ವ ಇಂದ್ರಿಯಗಳನ್ನೂ
ನಿಯಂತ್ರಿಸಿಕೊಂಡು ಪ್ರಸನ್ನವದನನಾಗಿರುತ್ತೇನೆ.

12009018a ಅಪೃಚ್ಚನ್ನಕ್ಯಸ್ಯ ಚಿನ್ಮಾರ್ಗಂ ವ್ರಜನ್ಯೇನೈವ ಕೇನ ಚಿತ್|
12009018c ನ ದೇಶಂ ನ ದಿಶಂ ಕಾಂ ಚಿದ್ಗಂತುಮಿಚ್ಚನ್ವಿಶೇಷತಃ||

ಈ ದಾರಿಯು ಎಲ್ಲಿಗೆ ಹೋಗುತ್ತದೆ ಎಂದು ಯಾರನ್ನೂ ಕೇಳದೇ,
ಯಾವುದೋ ಒಂದು ದಾರಿಯನ್ನು ಹಿಡಿದುಕೊಂಡು ಹೋಗುತ್ತೇನೆ.
ವಿಶೇಷವಾಗಿ ಯಾವುದೇ ದೇಶ-ದಿಕ್ಕುಗಳಿಗೆ ಹೋಗಲು ಬಯಸದೇ
ಹೋಗುತ್ತಿರುತ್ತೇನೆ.

12009019a ಗಮನೇ ನಿರಪೇಕ್ಷಶ್ಚ ಪಶ್ಚಾದನವಲೋಕಯನ್|
12009019c ಋಜುಃ ಪ್ರಣಿಹಿತೋ ಗಚ್ಚಂಸ್ತ್ರಸಸ್ಥಾವರವರ್ಜಕಃ||

ಹೋಗುವಾಗ ಏನನ್ನೂ ಅಪೇಕ್ಷಿಸುವುದಿಲ್ಲ. ಹಿಂದಿರುಗಿ
ನೋಡುವುದಿಲ್ಲ. ಸರಳ ಭಾವದಿಂದಿದ್ದು, ಯಾವಾಗಲೂ
ಅಂತರ್ಮುಖಿಯಾಗಿರುತ್ತೇನೆ. ಸ್ಥಾವರ-ಜಂಗಮಗಳನ್ನು ತೊರೆದು
ಮುಂದೆ ಹೋಗುತ್ತಿರುತ್ತೇನೆ.

12009020a ಸ್ವಭಾವಸ್ತು ಪ್ರಯಾತ್ಯಗ್ರೇ ಪ್ರಭವಂತ್ಯಶನಾನ್ಯಪಿ|
12009020c ದ್ವಂದ್ವಾನಿ ಚ ವಿರುದ್ಧಾನಿ ತಾನಿ ಸರ್ವಾಣ್ಯಚಿಂತಯನ್||

ಸ್ವಾಭಾವಿಕವಾಗಿಯೇ ಮುಂದೆ ಏನಾಗುತ್ತದೆಯೋ ಏನು

ದೊರೆಯುತ್ತದೆಯೋ ಅದನ್ನೇ ತಿನ್ನುತ್ತೇನೆ. ದ್ವಂದ್ವಗಳನ್ನೂ
ವಿರುದ್ಧಗಳನ್ನೂ ಯೋಚಿಸದೇ ಮುಂದುವರೆಯುತ್ತಿರುತ್ತೇನೆ.

12009021a ಅಲ್ಪಂ ವಾಸ್ವಾದು ವಾ ಭೋಜ್ಯಂ ಪೂರ್ವಾಲಾಭೇನ ಜಾತು ಚಿತ್|
12009021c ಅನ್ಯೇಷ್ವಪಿ ಚರಽಲ್ಲಾಭಮಲಾಭೇ ಸಪ್ತ ಪೂರಯನ್||

ಅಲ್ಪವಾಗಿರಲೀ ಅಥವಾ ರುಚಿಯಾಗಿರದೇ ಇರಲಿ ಮೊದಲು
ಸಿಕ್ಕಿದುದನ್ನು ತಿನ್ನುತ್ತೇನೆ. ಮೊದಲ ಮನೆಯಲ್ಲಿ ಭಿಕ್ಷೆಯು ಸಿಗದಿದ್ದರೆ
ಅನ್ಯ ಏಳು ಮನೆಗಳಿಗೆ ಹೋಗುತ್ತೇನೆ.

12009022a ವಿಧೂಮೇ ನ್ಯಸ್ತಮುಸಲೇ ವ್ಯಂಗಾರೇ ಭುಕ್ತವಜ್ಜನೇ|
12009022c ಅತೀತಪಾತ್ರಸಂಚಾರೇ ಕಾಲೇ ವಿಗತಭಿಕ್ಷುಕೇ||
12009023a ಏಕಕಾಲಂ ಚರನ್ಭೈಕ್ಷ್ಯಂ ಗೃಹೇ ದ್ವೇ ಚೈವ ಪಂಚ ಚ|
12009023c ಸ್ಪೃಹಾಪಾಶಾನ್ವಿಮುಚ್ಯಾಹಂ ಚರಿಷ್ಯಾಮಿ ಮಹೀಮಿಮಾಮ್||

ಹೊಗೆಯಾಡದೇ ಇರುವ ಮನೆಗೆ, ಒನಕೆಯನ್ನು ತೆಗೆದಿಟ್ಟಿರುವ ಮನೆಗೆ,
ಒಲೆಯ ಬೆಂಕಿಯನ್ನು ಆರಿಸಿದ ಮನೆಗೆ, ಮನೆಯವರೆಲ್ಲರೂ
ಊಟಮಾಡಿಯಾಗಿರುವ ಮನೆಗೆ, ಅಡಿಗೆ ಪಾತ್ರೆಗಳನ್ನು ತೊಳೆದು
ಬದಿಗಿಟ್ಟ ಮನೆಗೆ, ಭಿಕ್ಷುಕರು ಬಂದು ಹೋಗುವ ಸಮಯವು
ಕಳೆದುಹೋದ ನಂತರ ನಾನು ಭಿಕ್ಷೆಗೆ ಹೋಗುವುದಿಲ್ಲ. ಎರಡು
ಅಥವಾ ಮೂರು ಅಥವಾ ಐದು ಮನೆಗಳಿಗೆ ದಿನದಲ್ಲಿ ಒಂದೇ ಸಾರಿ
ಭಿಕ್ಷೆಗೆ ಹೋಗುತ್ತೇನೆ. ಸ್ನೇಹಪಾಶಗಳನ್ನು ತೊರೆದು ಈ ಭೂಮಿಯಲ್ಲಿ
ಸಂಚರಿಸುತ್ತೇನೆ.

12009024a ನ ಜಿಜೀವಿಷುವತ್ಕಿಂ ಚಿನ್ನ ಮುಮೂರ್ಷುವದಾಚರನ್|
12009024c ಜೀವಿತಂ ಮರಣಂ ಚೈವ ನಾಭಿನಂದನ್ನ ಚ ದ್ವಿಷನ್||

ಜೀವಿಸಲು ಇಚ್ಛಿಸುವವನಂತೆ ಅಥವಾ ಸಾಯಲು ಇಚ್ಛಿಸುವವನಂತೆ ವರ್ತಿಸದೇ ಜೀವ-ಮರಣಗಳನ್ನು ಶ್ಲಾಘಿಸುವುದೂ ಇಲ್ಲ, ದ್ವೇಷಿಸುವುದೂ ಇಲ್ಲ.

12009025a ವಾಸ್ಯೈಕಂ ತಕ್ಷತೋ ಬಾಹುಂ ಚಂದನೇನ್ಯೈಕಮುಕ್ಷತಃ|
12009025c ನಾಕಲ್ಯಾಣಂ ನ ಕಲ್ಯಾಣಂ ಚಿಂತಯನ್ನುಭಯೋಸ್ತಯೋಃ||

ನನ್ನ ಒಂದು ಬಾಹುವನ್ನು ಖಡ್ಗದಿಂದ ಗಾಯಗೊಳಿಸಿದ ಮತ್ತು ಇನ್ನೊಂದಕ್ಕೆ ಚಂದನವನ್ನು ಲೇಪಿಸುವ ಇಬ್ಬರ ಕುರಿತೂ ಮಂಗಳವಾದದ್ದನ್ನಾಗಲೀ ಅಮಂಗಳವಾದದ್ದನ್ನಾಗಲೀ ಯೋಚಿಸುವುದಿಲ್ಲ.

12009026a ಯಾಃ ಕಾಶ್ಚಿಜ್ಜೀವತಾ ಶಕ್ಯಾಃ ಕರ್ತುಮಭ್ಯುದಯಕ್ರಿಯಾಃ|
12009026c ಸರ್ವಾಸ್ತಾಃ ಸಮಭಿತ್ಯಜ್ಯ ನಿಮೇಷಾದಿವ್ಯವಸ್ಥಿತಃ||

ಜೀವಿಸಿರುವವನಿಗೆ ಶಕ್ಯವಾದ ಅಭ್ಯುದಯಕ್ರಿಯೆಗಳನ್ನೆಲ್ಲಾ ತ್ಯಜಿಸಿ ಕೇವಲ ಕಣ್ಣು ರೆಪ್ಪೆ ಬಡಿಯುವುದು ಮುಂತಾದ ಕಾರ್ಯಗಳನ್ನೇ ಮಾಡುತ್ತಿರುತ್ತೇನೆ.

12009027a ತೇಷು ನಿತ್ಯಮಸಕ್ತಶ್ಚ ತ್ಯಕ್ತಸರ್ವೇಂದ್ರಿಯಕ್ರಿಯಃ|
12009027c ಸುಪರಿತ್ಯಕ್ತಸಂಕಲ್ಪಃ ಸುನಿರ್ಣಿಕ್ತಾತ್ಮಕಲ್ಮಷಃ||

ಇಂದ್ರಿಯಕ್ರಿಯೆಗಳೆಲ್ಲವನ್ನೂ ತ್ಯಜಿಸಿ ಸಂಕಲ್ಪಶೂನ್ಯನಾಗಿರುತ್ತೇನೆ. ಆತ್ಮಕ್ಕೆ ಅಂಟಿಕೊಂಡಿರುವ ಕಲ್ಮಷಗಳನ್ನು ಸಂಪೂರ್ಣವಾಗಿ ತೆಗೆದುಹಾಕುತ್ತೇನೆ. ನಿತ್ಯವೂ ಇವುಗಳಲ್ಲಿ ಆಸಕ್ತನಾಗಿರುತ್ತೇನೆ.

12009028a ವಿಮುಕ್ತಃ ಸರ್ವಸಂಗೇಭ್ಯೋ ವ್ಯತೀತಃ ಸರ್ವವಾಗುರಾಃ|

12009028c ನ ವಶೇ ಕಸ್ಯ ಚಿತ್ತಿಷ್ಠನ್ಸ್ವಧರ್ಮಾ ಮಾತರಿಶ್ವನಃ||

ಸರ್ವಸಂಗಗಳಿಂದ ವಿಮುಕ್ತನಾಗಿ, ಸರ್ವ ಸ್ನೇಹಬಂಧನಗಳಿಂದ ಅತೀತನಾಗಿ ಯಾರ ವಶದಲ್ಲಿಯೂ ಬಾರದೇ ವಾಯುವಿನ ಧರ್ಮದಂತೆ ಎಲ್ಲಕಡೆ ಸಂಚರಿಸುತ್ತೇನೆ.

12009029a ವೀತರಾಗಶ್ಚರನ್ನೇವಂ ತುಷ್ಟಿಂ ಪ್ರಾಪ್ಸ್ಯಾಮಿ ಶಾಶ್ವತೀಮ್|
12009029c ತೃಷ್ಣಯಾ ಹಿ ಮಹತ್ಪಾಪಮಜ್ಞಾನಾದಸ್ಮಿ ಕಾರಿತಃ||

ಈ ರೀತಿ ವೀತರಾಗನಾಗಿ ಸಂಚರಿಸುತ್ತಾ ಶಾಶ್ವತ ತೃಪ್ತಿಯನ್ನು ಪಡೆಯುತ್ತೇನೆ. ಅಜ್ಞಾನದ ತೃಷ್ಣೆಯಿಂದಾಗಿ ನಾನು ಮಹಾ ಪಾಪವನ್ನು ಮಾಡಿದ್ದೇನೆ.

12009030a ಕುಶಲಾಕುಶಲಾನ್ಯೇಕೇ ಕೃತ್ವಾ ಕರ್ಮಾಣಿ ಮಾನವಾಃ|
12009030c ಕಾರ್ಯಕಾರಣಸಂಶ್ಲಿಷ್ಟಂ ಸ್ವಜನಂ ನಾಮ ಬಿಭ್ರತಿ||

ಕೆಲವು ಮಾನವರು ಕುಶಲ-ಅಕುಶಲ ಕರ್ಮಗಳನ್ನು ಮಾಡಿ, ಕಾರ್ಯ-ಕಾರಣ ನಿಮಿತ್ತದಿಂದ ಸ್ವಜನರನ್ನು ಪಾಲಿಸುತ್ತಾರೆ.

12009031a ಆಯುಷೋಽಂತೇ ಪ್ರಹಾಯೇದಂ ಕ್ಷೀಣಪ್ರಾಯಂ ಕಲೇವರಮ್|
12009031c ಪ್ರತಿಗೃಹ್ಣಾತಿ ತತ್ಪಾಪಂ ಕರ್ತುಃ ಕರ್ಮಫಲಂ ಹಿ ತತ್||

ಆಯುಷ್ಯವು ಕಳೆಯಲು ಕ್ಷೀಣಶರೀರವನ್ನು ಬಿಟ್ಟು ಆ ಪಾಪವನ್ನು ಸ್ವೀಕರಿಸುತ್ತಾರೆ. ಏಕೆಂದರೆ ಕರ್ಮಫಲವು ಕರ್ಮಮಾಡುವವನಿಗೇ ಸೇರುತ್ತವೆ.

12009032a ಏವಂ ಸಂಸಾರಚಕ್ರೇಽಸ್ಮಿನ್ವ್ಯಾವಿದ್ಧೇ ರಥಚಕ್ರವತ್|
12009032c ಸಮೇತಿ ಭೂತಗ್ರಾಮೋಽಯಂ ಭೂತಗ್ರಾಮೇಣ ಕಾರ್ಯವಾನ್||

ರಥದ ಚಕ್ರದಂತೆ ನಿರಂತರವಾಗಿ ತಿರುಗುತ್ತಿರುವ ಈ ಸಂಸಾರಚಕ್ರದಲ್ಲಿ ಭೂತಗ್ರಾಮಗಳು ಒಂದುಸೇರುತ್ತವೆ ಮತ್ತು ಭೂತಗ್ರಾಮಗಳಿಂದ ಕಾರ್ಯನಿರತವಾಗುತ್ತವೆ.

12009033a ಜನ್ಮಮೃತ್ಯುಜರಾವ್ಯಾಧಿವೇದನಾಭಿರುಪದ್ರುತಮ್|
12009033c ಅಸಾರಮಿಮಮಸ್ವಂತಂ ಸಂಸಾರಂ ತ್ಯಜತಃ ಸುಖಮ್||

ಜನ್ಮ-ಮೃತ್ಯು-ಮುಪ್ಪು-ವ್ಯಾಧಿ-ವೇದನೆಗಳಿಂದ ಆಕ್ರಮಿಸಲ್ಪಟ್ಟಿರುವ, ಸಾರವಿಲ್ಲದ ಅಸ್ವಾಸ್ಥ್ಯ ಸಂಸಾರವನ್ನು ತ್ಯಜಿಸಿದವನೇ ಸುಖಿಯು.

12009034a ದಿವಃ ಪತತ್ಸು ದೇವೇಷು ಸ್ಥಾನೇಭ್ಯಶ್ಚ ಮಹರ್ಷಿಷು|
12009034c ಕೋ ಹಿ ನಾಮ ಭವೇನಾರ್ಥೀ ಭವೇತ್ ಕಾರಣತತ್ತ್ವವಿತ್||

ದೇವತೆಗಳೂ ದಿವದಿಂದ ಮತ್ತು ಮಹರ್ಷಿಗಳೂ ತಮ್ಮ ಸ್ಥಾನಗಳಿಂದ ಕೆಳಕ್ಕೆ ಬೀಳುತ್ತಾರೆ. ಹೀಗಿರುವಾಗ ಕಾರಣತತ್ತ್ವವನ್ನು ತಿಳಿದಿರುವ ಯಾರು ತಾನೇ ಈ ಸಂಸಾರವನ್ನು ಬಯಸುತ್ತಾನೆ?

12009035a ಕೃತ್ವಾ ಹಿ ವಿವಿಧಂ ಕರ್ಮ ತತ್ತದ್ವಿವಿಧಲಕ್ಷಣಮ್|
12009035c ಪಾರ್ಥಿವೈರ್ನ್ಯಪತಿಃ ಸ್ವಲ್ಪೈಃ ಕಾರಣೈರೇವ ಬಧ್ಯತೇ||

ವಿವಿಧ ಲಕ್ಷಣಗಳುಳ್ಳ ವಿವಿಧ ಕರ್ಮಗಳನ್ನು ಮಾಡಿದ ರಾಜನನ್ನು ಸ್ವಲ್ಪವೇ ಕಾರಣಕ್ಕಾಗಿ ಅನೇಕ ರಾಜರು ಬಂಧಿಸುತ್ತಾರೆ.

12009036a ತಸ್ಮಾತ್ಪ್ರಜ್ಞಾಮೃತಮಿದಂ ಚಿರಾನ್ಮಾಂ ಪ್ರತ್ಯುಪಸ್ಥಿತಮ್|
12009036c ತತ್ಪ್ರಾಪ್ಯ ಪ್ರಾರ್ಥಯೇ ಸ್ಥಾನಮವ್ಯಯಂ ಶಾಶ್ವತಂ ಧ್ರುವಮ್||

ಆದುದರಿಂದ ಈ ಜ್ಞಾನಾಮೃತವು ಬಹುಕಾಲದಿಂದ ನನ್ನಲ್ಲಿ ಮನೆಮಾಡಿಕೊಂಡಿದೆ. ಇದರ ಮೂಲಕವೇ ನಾನು ಅವ್ಯಯವೂ

ಶಾಶ್ವತವೂ ಸ್ಥಿರವೂ ಆದ ಸ್ಥಾನವನ್ನು ಬಯಸುತ್ತೇನೆ.

12009037a ಏತಯಾ ಸತತಂ ವೃತ್ತ್ಯಾ ಚರನ್ನೇವಂಪ್ರಕಾರಯಾ|
12009037c ದೇಹಂ ಸಂಸ್ಥಾಪಯಿಷ್ಯಾಮಿ ನಿರ್ಭಯಂ ಮಾರ್ಗಮಾಸ್ಥಿತಃ||

ಈ ನಿರ್ಭಯ ಮಾರ್ಗವನ್ನನುಸರಿಸಿ, ಸತತವೂ ಅದರಂತೆಯೇ ನಡೆದುಕೊಂಡು ಇದೇಪ್ರಕಾರವಾಗಿ ಸಂಚರಿಸುತ್ತಾ ದೇಹವನ್ನು ಸಮಾಪನಗೊಳಿಸುತ್ತೇನೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಯುಧಿಷ್ಠಿರವಾಕ್ಯೇ ನವಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಯುಧಿಷ್ಠಿರವಾಕ್ಯ ಎನ್ನುವ ಒಂಭತ್ತನೇ ಅಧ್ಯಾಯವು.

೧೦

ಭೀಮವಾಕ್ಯ

ಭೀಮಸೇನನು ರಾಜನ ಸಂನ್ಯಾಸದ ನಿರ್ಧಾರವನ್ನು ವಿರೋಧಿಸಿ ರಾಜನ ಕರ್ತವ್ಯಪಾಲನೆಯ ಕುರಿತು ಒತ್ತಿ ಹೇಳುವುದು (1-28).

12010001 ಭೀಮ ಉವಾಚ|
12010001a ಶ್ರೋತ್ರಿಯಸ್ಯೇವ ತೇ ರಾಜನ್ಮಂದಕಸ್ಯಾವಿಪಶ್ಚಿತಃ|
12010001c ಅನುವಾಕಹತಾಬುದ್ಧಿರ್ನೈಷಾ ತತ್ತ್ವಾರ್ಥದರ್ಶಿನೀ||

ಭೀಮಸೇನನು ಹೇಳಿದನು: “ರಾಜನ್! ಶ್ರೋತ್ರಿಯಂತೆಯೇ ನಿನ್ನ

ಬುದ್ಧಿಯೂ ಮಂದವಾಗಿಹೋಗಿದೆ! ತತ್ತ್ವಾರ್ಥಗಳನ್ನು ತಿಳಿಯದೇ ಕೇವಲ ಪಠಣಮಾಡುವವನ ಬುದ್ಧಿಯಂತಾಗಿದೆ ನಿನ್ನ ಬುದ್ಧಿಯೂ ಕೂಡ!

12010002a ಆಲಸ್ಯೇ ಕೃತಚಿತ್ತಸ್ಯ ರಾಜಧರ್ಮಾನಸೂಯತಃ|
12010002c ವಿನಾಶೇ ಧಾರ್ತರಾಷ್ಟ್ರಾಣಾಂ ಕಿಂ ಫಲಂ ಭರತರ್ಷಭ||

ಭರತರ್ಷಭ! ರಾಜಧರ್ಮವನ್ನು ನಿಂದಿಸಿ ಆಲಸ್ಯದ ಜೀವನವನ್ನು ನಡೆಸಲು ಯೋಚಿಸಿರುವ ನಿನಗೆ ಧಾರ್ತರಾಷ್ಟ್ರರ ವಿನಾಶದಿಂದ ಯಾವ ಫಲವುಂಟಾಯಿತು?

12010003a ಕ್ಷಮಾನುಕಂಪಾ ಕಾರುಣ್ಯಮಾನೃಶಂಸ್ಯಂ ನ ವಿದ್ಯತೇ|
12010003c ಕ್ಷಾತ್ರಮಾಚರತೋ ಮಾರ್ಗಮಪಿ ಬಂಧೋಸ್ತ್ವದಂತರೇ||

ಕ್ಷತ್ರಧರ್ಮವನ್ನು ಆಚರಿಸುವವನ ಮಾರ್ಗದಲ್ಲಿ ಬಂಧುಗಳ ಕುರಿತು ಕ್ಷಮೆ, ಅನುಕಂಪ, ಕಾರುಣ್ಯ, ಮತ್ತು ಮೃದುತ್ವಗಳು ಇರುವುದಿಲ್ಲ.

12010004a ಯದೀಮಾಂ ಭವತೋ ಬುದ್ಧಿಂ ವಿದ್ಯಾಮ ವಯಮೀದೃಶೀಮ್|
12010004c ಶಸ್ತ್ರಂ ನೈವ ಗ್ರಹೀಷ್ಯಾಮೋ ನ ವಧಿಷ್ಯಾಮ ಕಂ ಚನ||

ನಿನ್ನ ಬುದ್ಧಿಯು ಈ ರೀತಿಯಿದೆಯೆಂದು ಮೊದಲೇ ನಮಗೆ ತಿಳಿದಿದ್ದರೆ ನಾವು ಶಸ್ತ್ರಗಳನ್ನು ಹಿಡಿಯುತ್ತಲೇ ಇರಲಿಲ್ಲ ಮತ್ತು ಯಾರೊಬ್ಬರನ್ನೂ ವಧಿಸುತ್ತಲೂ ಇರಲಿಲ್ಲ.

12010005a ಭೈಕ್ಷ್ಯಮೇವಾಚರಿಷ್ಯಾಮ ಶರೀರಸ್ಯಾ ವಿಮೋಕ್ಷಣಾತ್|
12010005c ನ ಚೇದಂ ದಾರುಣಂ ಯುದ್ಧಮಭವಿಷ್ಯನ್ಮಹೀಕ್ಷಿತಾಮ್||

ಈ ಶರೀರದ ವಿಮೋಚನೆಗಾಗಿ ಭಿಕ್ಷಾವೃತ್ತಿಯನ್ನೇ ಅನುಸರಿಸುತ್ತಿದ್ದೆವು.

ಮಹೀಕ್ಷಿತರ ಈ ದಾರುಣ ಯುದ್ಧವೇ ನಡೆಯುತ್ತಿರಲಿಲ್ಲ.

12010006a ಪ್ರಾಣಸ್ಯಾನ್ನಮಿದಂ ಸರ್ವಮಿತಿ ವೈ ಕವಯೋ ವಿದುಃ|
12010006c ಸ್ಥಾವರಂ ಜಂಗಮಂ ಚೈವ ಸರ್ವಂ ಪ್ರಾಣಸ್ಯ ಭೋಜನಮ್||

ಇವೆಲ್ಲವೂ ಬಲಿಷ್ಠನಾದವನ ಅನ್ನವೆಂದು ತಿಳಿದವರು ಹೇಳುತ್ತಾರೆ.
ಸ್ಥಾವರ-ಜಂಗಮಗಳೆಲ್ಲವೂ ಬಲಿಷ್ಠನ ಭೋಜನ!

12010007a ಆದದಾನಸ್ಯ ಚೈದ್ರಾಜ್ಯಂ ಯೇ ಕೇ ಚಿತ್ಪರಿಪಂಥಿನಃ|
12010007c ಹಂತವ್ಯಾಸ್ತ ಇತಿ ಪ್ರಾಜ್ಞಾಃ ಕ್ಷತ್ರಧರ್ಮವಿದೋ ವಿದುಃ||

ರಾಜ್ಯವನ್ನು ಸ್ವೀಕರಿಸುವಾಗ ವಿರೋಧಿಸುವವರನ್ನು
ಸಂಹರಿಸಬೇಕೆಂದು ಕ್ಷತ್ರಧರ್ಮವನ್ನು ತಿಳಿದ ಪ್ರಾಜ್ಞರು ಹೇಳುತ್ತಾರೆ.

12010008a ತೇ ಸದೋಷಾ ಹತಾಸ್ಮಾಭೀ ರಾಜ್ಯಸ್ಯ ಪರಿಪಂಥಿನಃ|
12010008c ತಾನ್ಹತ್ವಾ ಭುಂಕ್ಷ್ವ ಧರ್ಮೇಣ ಯುಧಿಷ್ಠಿರ ಮಹೀಮಿಮಾಮ್||

ರಾಜ್ಯವನ್ನು ಪಡೆದುಕೊಳ್ಳಲು ಅಡ್ಡಿಯನ್ನುಂಟುಮಾಡಿದ ವೈರಿಗಳನ್ನು
ನಾವು ಸಂಹರಿಸಿದ್ದೇವೆ. ಯುಧಿಷ್ಠಿರ! ಧರ್ಮಪೂರ್ವಕವಾಗಿ ಅವರನ್ನು
ಸಂಹರಿಸಿ ಪಡೆದ ಈ ಭೂಮಿಯನ್ನು ಭೋಗಿಸು!

12010009a ಯಥಾ ಹಿ ಪುರುಷಃ ಖಾತ್ವಾ ಕೂಪಮಪ್ರಾಪ್ಯ ಚೋದಕಮ್|
12010009c ಪಂಕದಿಗ್ಧೋ ನಿವರ್ತೇತ ಕರ್ಮೇದಂ ನಸ್ತಥೋಪಮಮ್||

ಬಾವಿಯನ್ನು ತೋಡಿ ನೀರನ್ನು ಪಡೆಯದೇ ಕೇವಲ ಕೆಸರನ್ನು ಮೈಗೆ
ಹಚ್ಚಿಕೊಂಡು ಮೇಲೆ ಬಂದವನಂತೆ ನಮ್ಮ ಈ ಕರ್ಮವು
ಆಗಬಾರದು!

12010010a ಯಥಾರುಹ್ಯ ಮಹಾವೃಕ್ಷಮಪಹೃತ್ಯ ತತೋ ಮಧು|

12010010c ಅಪ್ರಾಶ್ಯ ನಿಧನಂ ಗಚ್ಚೇತ್ಕರ್ಮೇದಂ ನಸ್ತಥೋಪಮಮ್‌॥

ಮಹಾವೃಕ್ಷವನ್ನೇರಿ ಜೇನನ್ನು ಅಪಹರಿಸಿ ಅದನ್ನು ಸವಿಯುವ ಮೊದಲೇ ನಿಧನಹೊಂದಿದವನಂತೆ ನಮ್ಮ ಈ ಕರ್ಮವು ಆಗಬಾರದು!

12010011a ಯಥಾ ಮಹಾಂತಮಧ್ವಾನಮಾಶಯಾ ಪುರುಷಃ ಪತನ್‌|
12010011c ಸ ನಿರಾಶೋ ನಿವರ್ತೇತ ಕರ್ಮೇದಂ ನಸ್ತಥೋಪಮಮ್‌॥

ಯಾವುದೋ ದೊಡ್ಡ ನಿಧಿಯು ಸಿಗುವ ಆಶಯದಿಂದ ಬಹುದೂರ ಹೋಗಿ ನಿರಾಶನಾಗಿ ಹಿಂದಿರುಗಿದವನಂತೆ ನಮ್ಮ ಈ ಕರ್ಮವು ಆಗದಿರಲಿ!

12010012a ಯಥಾ ಶತ್ರೂನ್ಹತ್ವಾತಯಿತ್ವಾ ಪುರುಷಃ ಕುರುಸತ್ತಮ|
12010012c ಆತ್ಮಾನಂ ಘಾತಯೇತ್ಪಶ್ಚಾತ್ಕರ್ಮೇದಂ ನಸ್ತಥಾವಿಧಮ್‌॥

ಕುರುಸತ್ತಮ! ಶತ್ರುಗಳನ್ನು ಸಂಹರಿಸಿ ನಂತರ ಆತ್ಮಹತ್ಯೆಯನ್ನು ಮಾಡಿಕೊಂಡವನಂತೆ ನಮ್ಮ ಈ ಕರ್ಮವು ಆಗದಿರಲಿ!

12010013a ಯಥಾನ್ನಂ ಕ್ಷುಧಿತೋ ಲಬ್ಧ್ವಾ ನ ಭುಂಜೀತ ಯದೃಚ್ಚಯಾ|
12010013c ಕಾಮೀ ಚ ಕಾಮಿನೀಂ ಲಬ್ಧ್ವಾ ಕರ್ಮೇದಂ ನಸ್ತಥಾವಿಧಮ್‌॥

ಹಸಿವಿನಿಂದ ಬಳಲುತ್ತಿದ್ದವನು ಅನ್ನವನ್ನು ಪಡೆದು ತಿನ್ನಲು ಅಶಕ್ಯನಾದವನಂತೆ, ಕಾಮಿಯು ಕಾಮಿನಿಯನ್ನು ಪಡೆದೂ ಅವಳನ್ನು ಭೋಗಿಸಲು ಅಶಕ್ಯನಾದವನಂತೆ ನಮ್ಮ ಈ ಕರ್ಮವು ಆಗದಿರಲಿ!

12010014a ವಯಮೇವಾತ್ರ ಗರ್ಹ್ಯಾ ಹಿ ಯೇ ವಯಂ ಮಂದಚೇತಸಃ|
12010014c ತ್ವಾಂ ರಾಜನ್ನನುಗಚ್ಚಾಮೋ ಜ್ಯೇಷ್ಠೋಽಯಮಿತಿ ಭಾರತ‌॥

ಭಾರತ! ರಾಜನ್! ಹಿರಿಯವನೆಂದು ತಿಳಿದು ಮಂದಚೇತಸನಾದ ನಿನ್ನನ್ನೇ ಅನುಸರಿಸಿ ಬರುತ್ತಿರುವ ನಾವೇ ನಿಂದನೀಯರು!

12010015a ವಯಂ ಹಿ ಬಾಹುಬಲಿನಃ ಕೃತವಿದ್ಯಾ ಮನಸ್ವಿನಃ|
12010015c ಕ್ಲೀಬಸ್ಯ ವಾಕ್ಯೇ ತಿಷ್ಠಾಮೋ ಯಥೈವಾಶಕ್ತಯಸ್ತಥಾ||

ಬಾಹುಬಲಿಗಳಾದ, ವಿದ್ಯಾವಂತರಾದ, ಜಿತೇಂದ್ರಿಯರಾದ ನಾವೂ ಕೂಡ ಓರ್ವ ಅಸಮರ್ಥ ನಪುಂಸಕನ ಮಾತಿನಂತೆ ನಡೆದುಕೊಳ್ಳುತ್ತಿದ್ದೇವೆ!

12010016a ಅಗತೀನ್ಯಾಗತೀನಸ್ಮಾನ್ನಷ್ಟಾರ್ಥಾನರ್ಥಸಿದ್ಧಯೇ|
12010016c ಕಥಂ ವೈ ನಾನುಪಶ್ಯೇಯುರ್ಜನಾಃ ಪಶ್ಯಂತಿ ಯಾದೃಶಮ್||

ಅನಾಥರಕ್ಷಕರಾದ ನಾವು ಅರ್ಥಹೀನರಾಗಿರುವುದನ್ನು ಜನಗಳು ಹೇಗೆತಾನೇ ನೋಡದೇ ಇರುತ್ತಾರೆ? ಆದುದರಿಂದ ನಾನು ಹೇಳುವುದು ಯುಕ್ತವೋ ಅಯುಕ್ತವೋ ಎನ್ನುವುದನ್ನು ಎಲ್ಲರೂ ಯೋಚಿಸಿರಿ. ಸಮರ್ಥರಾದವರು ಸ್ವಾರ್ಥಸಿದ್ಧಿಗಾಗಿ ಪ್ರಯತ್ನಿಸಲೇ ಬೇಕೆಂದು ನನ್ನ ಅಭಿಪ್ರಾಯ!

12010017a ಆಪತ್ಕಾಲೇ ಹಿ ಸಂನ್ಯಾಸಃ ಕರ್ತವ್ಯ ಇತಿ ಶಿಷ್ಯತೇ|
12010017c ಜರಯಾಭಿಪರೀತೇನ ಶತ್ರುಭಿರ್ವ್ಯಂಸಿತೇನ ಚ||

ಆಪತ್ಕಾಲದಲ್ಲಿ ಮಾತ್ರ ಸಂನ್ಯಾಸವನ್ನು ತೆಗೆದುಕೊಳ್ಳಬೇಕೆಂದು ಉಪದೇಶವಿದೆ. ಮುಪ್ಪಿನಿಂದ ಗಲಿತ ಶರೀರವುಳ್ಳವನೂ, ಶತ್ರುಗಳಿಂದ ವಂಚಿತನಾದವನೂ ಸಂನ್ಯಾಸವನ್ನು ತೆಗೆದುಕೊಳ್ಳಬಹುದು.

12010018a ತಸ್ಮಾದಿಹ ಕೃತಪ್ರಜ್ಞಾಸ್ತ್ಯಾಗಂ ನ ಪರಿಚಕ್ಷತೇ|

12010018c ಧರ್ಮವ್ಯತಿಕ್ರಮಂ ಚೇದಂ ಮನ್ಯಂತೇ ಸೂಕ್ಷ್ಮದರ್ಶಿನಃ||

ಆದುದರಿಂದ ಕೃತಪ್ರಜ್ಞರು ಇದನ್ನು ತ್ಯಾಗವೆಂದು ಪರಿಗಣಿಸುವುದಿಲ್ಲ. ಸೂಕ್ಷ್ಮದರ್ಶಿಗಳು ಇದನ್ನು ಧರ್ಮದ ಅತಿಕ್ರಮವೆಂದೇ ತಿಳಿಯುತ್ತಾರೆ.

12010019a ಕಥಂ ತಸ್ಮಾತ್ಸಮುತ್ಪನ್ನಸ್ತನ್ನಿಷ್ಠಸ್ತದುಪಾಶ್ರಯಃ|
12010019c ತದೇವ ನಿಂದನ್ನಾಸೀತ ಶ್ರದ್ಧಾ ವಾನ್ಯತ್ರ ಗೃಹ್ಯತೇ||

ಅದರಲ್ಲಿಯೇ ಹುಟ್ಟಿ, ಅದರಲ್ಲಿಯೇ ನಿರತನಾಗಿದ್ದುಕೊಂಡಿರುವ, ಮತ್ತು ಅದನ್ನು ಆಶ್ರಯಿಸಿಯೇ ಜೀವಿಸುತ್ತಿರುವ ಯಾರು ತಾನೇ ಕ್ಷತ್ರಿಯ ಧರ್ಮವನ್ನು ನಿಂದಿಸಬಹುದು? ಅವನಲ್ಲಿ ಶ್ರದ್ಧೆಯಿಲ್ಲವೆಂದಾಯಿತಲ್ಲವೇ?

12010020a ಶ್ರಿಯಾ ವಿಹೀನೈರಧನೈರ್ನಾಸ್ತಿಕೈಃ ಸಂಪ್ರವರ್ತಿತಮ್|
12010020c ವೇದವಾದಸ್ಯ ವಿಜ್ಞಾನಂ ಸತ್ಯಾಭಾಸಮಿವಾನೃತಮ್||

ಶ್ರೀಯಿಂದ ವಿಹೀನರಾದವರು, ನಿರ್ಧನರು ಮತ್ತು ನಾಸ್ತಿಕರಿಂದ ಸುತ್ತುವರೆಯಲ್ಪಟ್ಟವರು ವೇದವಾಕ್ಯವಾದ ವಿಜ್ಞಾನವನ್ನು ಸತ್ಯದ ಅಭಾಸವೆಂದೂ ಸುಳ್ಳಿಂದೂ ಪ್ರಚಾರಮಾಡುತ್ತಾರೆ.

12010021a ಶಕ್ಯಂ ತು ಮೌಂಡ್ಯಮಾಸ್ಥಾಯ ಬಿಭ್ರತಾತ್ಮಾನಮಾತ್ಮನಾ|
12010021c ಧರ್ಮಚ್ಚದ್ಮ ಸಮಾಸ್ಥಾಯ ಆಸಿತುಂ ನ ತು ಜೀವಿತುಮ್||

ಮುಂಡನಾಗಿ ಧರ್ಮದ ಸೋಗನ್ನು ಹಾಕಿಕೊಂಡು ತನ್ನ ಹೊಟ್ಟೆಯನ್ನು ಮಾತ್ರ ಹೊರೆದುಕೊಳ್ಳುತ್ತಾ ಇರಬಹುದು. ಆದರೆ ಇದರಿಂದ ಕಾಲಕಳೆಯಬಹುದೇ ಹೊರತು ಜೀವನದ ಸಾರ್ಥಕ್ಯವನ್ನು ಹೊಂದಲು ಸಾಧ್ಯವಾಗುವುದಿಲ್ಲ.

12010022a ಶಕ್ಯಂ ಪುನರರಣ್ಯೇಷು ಸುಖಮೇಕೇನ ಜೀವಿತುಮ್|
12010022c ಅಬಿಭ್ರತಾ ಪುತ್ರಪೌತ್ರಾನ್ದೇವರ್ಷೀನತಿಥೀನ್ಪಿತೄನ್||

ಪುತ್ರ-ಪೌತ್ರರನ್ನು ಸಾಕಲಾಗದವನು ಮತ್ತು ದೇವರ್ಷಿ-ಅತಿಥಿ-ಪಿತೃಗಳನ್ನು ತೃಪ್ತಿಪಡಿಸಲಾಗದವನು ಏಕಾಕಿಯಾಗಿ ಅರಣ್ಯದಲ್ಲಿ ಸುಖವಾಗಿ ಜೀವಿಸಬಹುದು.

12010023a ನೇಮೇ ಮೃಗಾಃ ಸ್ವರ್ಗಜಿತೋ ನ ವರಾಹಾ ನ ಪಕ್ಷಿಣಃ|
12010023c ಅಥೈತೇನ ಪ್ರಕಾರೇಣ ಪುಣ್ಯಮಾಹುರ್ನ ತಾನ್ವನಾಃ||

ಅರಣ್ಯದಲ್ಲಿ ಜೀವಿಸುವುದರಿಂದ ಮಾತ್ರಕ್ಕೆ ಸ್ವರ್ಗವು ದೊರೆಯುವುದಿಲ್ಲ. ಹಾಗಿದ್ದರೆ ಅರಣ್ಯದಲ್ಲಿ ವಾಸಿಸುವ ಜಿಂಕೆ-ಹಂದಿ-ಪಕ್ಷಿಗಳು ಅದೇ ಪ್ರಕಾರವಾಗಿ ಪುಣ್ಯವಂತರೆಂದು ಜನರು ಹೇಳುತ್ತಿದ್ದರು.

12010024a ಯದಿ ಸಂನ್ಯಾಸತಃ ಸಿದ್ಧಿಂ ರಾಜನ್ಕಶ್ಚಿದವಾಪ್ನುಯಾತ್|
12010024c ಪರ್ವತಾಶ್ಚ ದ್ರುಮಾಶ್ಚೈವ ಕ್ಷಿಪ್ರಂ ಸಿದ್ಧಿಮವಾಪ್ನುಯುಃ||

ರಾಜನ್! ಒಂದು ವೇಳೆ ಸಂನ್ಯಾಸದಿಂದ ಸಿದ್ಧಿಯು ದೊರಕುತ್ತದೆಯೆಂತಾದರೆ ಪರ್ವತ-ವೃಕ್ಷಗಳು ಕ್ಷಿಪ್ರವಾಗಿ ಸಿದ್ಧಿಯನ್ನು ಪಡೆದುಕೊಂಡು ಬಿಡುತ್ತಿದ್ದವು!

12010025a ಏತೇ ಹಿ ನಿತ್ಯಸಂನ್ಯಾಸಾ ದೃಶ್ಯಂತೇ ನಿರುಪದ್ರವಾಃ|
12010025c ಅಪರಿಗ್ರಹವಂತಶ್ಚ ಸತತಂ ಚಾತ್ಮಚಾರಿಣಃ||

ಇವುಗಳು ನಿತ್ಯ ಸಂನ್ಯಾಸಿಗಳಂತೆಯೇ ತೋರುತ್ತವೆ. ಯಾರಿಗೂ ಉಪದ್ರವವನ್ನು ಕೊಡುವುದಿಲ್ಲ. ಯಾರಿಂದ ಏನನ್ನೂ

ತೆಗೆದುಕೊಳ್ಳುವುದಿಲ್ಲ. ಸತತವೂ ಆತ್ಮವ್ರತದಲ್ಲಿಯೇ ಇರುತ್ತವೆ.

12010026a ಅಥ ಚೇದಾತ್ಮಭಾಗ್ಯೇಷು ನಾನ್ಯೇಷಾಂ ಸಿದ್ಧಿಮಶ್ನುತೇ|
12010026c ತಸ್ಮಾತ್ಕರ್ಮೈವ ಕರ್ತವ್ಯಂ ನಾಸ್ತಿ ಸಿದ್ಧಿರಕರ್ಮಣಃ||

ನಮ್ಮ ಭಾಗ್ಯಗಳಲ್ಲಿ ಅನ್ಯರ ಸಿದ್ಧಿಗಳು ಪಾಲ್ಗೊಳ್ಳುವುದಿಲ್ಲ. ಆದುದರಿಂದ ಕರ್ಮ-ಕರ್ತವ್ಯಗಳಿಂದಲೇ ಸಿದ್ಧಿಯು ನಮಗೆ ದೊರೆಯುತ್ತದೆ. ಕರ್ಮಗಳನ್ನು ತ್ಯಜಿಸುವುದರಿಂದಲ್ಲ!

12010027a ಔದಕಾಃ ಸೃಷ್ಟಯಶ್ಚೈವ ಜಂತವಃ ಸಿದ್ಧಿಮಾಪ್ನುಯುಃ|
12010027c ಯೇಷಾಮಾತ್ಮೈವ ಭರ್ತವ್ಯೋ ನಾನ್ಯಃ ಕಶ್ಚನ ವಿದ್ಯತೇ||

ಅನ್ಯರ ಭರಣ-ಪೋಷಣ ಮಾಡದೇ ತನ್ನನ್ನೇ ನೋಡಿಕೊಳ್ಳುವುದರಿಂದ ಸಿದ್ಧಿಯು ದೊರೆಯುತ್ತದೆ ಎಂತಾದರೆ ಭೂಮಿಯ ಮೇಲಿರುವ ಎಲ್ಲ ಜಲಚರ ಪ್ರಾಣಿಗಳೂ ಸಿದ್ಧಿಯನ್ನು ಪಡೆಯಬೇಕಾಗಿದ್ದಿತು.

12010028a ಅವೇಕ್ಷಸ್ವ ಯಥಾ ಸ್ಮೈಃ ಸ್ಮೈಃ ಕರ್ಮಭಿರ್ವ್ಯಾಪೃತಂ ಜಗತ್|
12010028c ತಸ್ಮಾತ್ಕರ್ಮೈವ ಕರ್ತವ್ಯಂ ನಾಸ್ತಿ ಸಿದ್ಧಿರಕರ್ಮಣಃ||

ತಮ್ಮ ತಮ್ಮ ಕರ್ಮಗಳಿಂದ ಈ ಅಖಿಂಡ ವಿಶ್ವವೂ ಬಂಧಿಸಿಕೊಂಡಿರುವುದನ್ನು ನೋಡು. ಆದುದರಿಂದ ಕರ್ಮವೇ ಕರ್ತವ್ಯ. ಕರ್ಮಗಳನ್ನು ಮಾಡದೇ ಇರುವುದರಿಂದ ಸಿದ್ಧಿಯು ಇಲ್ಲ."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಭೀಮವಾಕ್ಯೇ ದಶಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಭೀಮವಾಕ್ಯ ಎನ್ನುವ ಹತ್ತನೇ ಅಧ್ಯಾಯವು.

೧೧

ಅರ್ಜುನವಾಕ್ಯೇ ಋಷಿ-ಶಕುನಿಸಂವಾದ ಕಥನ

ಅರ್ಜುನನು ಪಕ್ಷಿರೂಪಧಾರೀ ಇಂದ್ರ ಮತ್ತು ಋಷಿಬಾಲಕರ ಸಂವಾದವನ್ನು ಉಲ್ಲೇಖಿಸುತ್ತಾ ಗೃಹಸ್ಥ ಧರ್ಮ ಪಾಲನೆಯ ಕುರಿತು ಹೇಳಿದುದು (1-28).

12011001 ಅರ್ಜುನ ಉವಾಚ|
12011001a ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್|
12011001c ತಾಪಸ್ಯೈಃ ಸಹ ಸಂವಾದಂ ಶಕ್ರಸ್ಯ ಭರತರ್ಷಭ||

ಅರ್ಜುನನು ಹೇಳಿದನು: "ಭರತರ್ಷಭ! ಈ ವಿಷಯದಲ್ಲಿ ತಾಪಸರು ಮತ್ತು ಶಕ್ರನ ನಡುವೆ ನಡೆದ ಈ ಪುರಾತನ ಐತಿಹಾಸಿಕ ಸಂವಾದವನ್ನು ಉದಾಹರಿಸಿ ಹೇಳುತ್ತಾರೆ.

12011002a ಕೇ ಚಿದ್ಗೃಹಾನ್ಪರಿತ್ಯಜ್ಯ ವನಮಭ್ಯಗಮನ್ದ್ವಿಜಾಃ|
12011002c ಅಜಾತಶ್ಮಶ್ರವೋ ಮಂದಾಃ ಕುಲೇ ಜಾತಾಃ ಪ್ರವವ್ರಜುಃ||

ಹಿಂದೊಮ್ಮೆ ಉತ್ತಮ ಕುಲಗಳಲ್ಲಿ ಹುಟ್ಟಿದ್ದ, ಇನ್ನೂ ಗಡ್ಡ-ಮೀಸೆಗಳು ಹುಟ್ಟಿರದ ಮಂದಬುದ್ಧಿಯ ದ್ವಿಜರು ಮನೆಗಳನ್ನು ತೊರೆದು ವನದ ಕಡೆ ನಡೆದರು.

12011003a ಧರ್ಮೋ ಽಯಮಿತಿ ಮನ್ವಾನಾ ಬ್ರಹ್ಮಚರ್ಯೇ ವ್ಯವಸ್ಥಿತಾಃ|

12011003c ತ್ಯಕ್ತ್ವಾ ಗೃಹಾನ್ಪಿತೃಂಶ್ಚೈವ ತಾನಿಂದ್ರೋಽನ್ವಕೃಪಾಯತ||

ಮನೆ, ಮತ್ತು ತಂದೆ-ತಾಯಂದಿರನ್ನು ತೊರೆದು ಇದೇ ಧರ್ಮವೆಂದು ತಿಳಿದು ಅವರು ಬ್ರಹ್ಮಚರ್ಯದಲ್ಲಿ ನಿರತರಾಗಿದ್ದರು. ಇಂದ್ರನು ಅವರ ಮೇಲೆ ಕೃಪೆದೋರಿದನು.

12011004a ತಾನಾಬಭಾಷೇ ಭಗವಾನ್ಪಕ್ಷೀ ಭೂತ್ವಾ ಹಿರಣ್ಮಯಃ|
12011004c ಸುದುಷ್ಕರಂ ಮನುಷ್ಯ್ಯಶ್ಚ ಯತ್ಕೃತಂ ವಿಘಸಾಶಿಭಿಃ||
12011005a ಪುಣ್ಯಂ ಚ ಬತ ಕರ್ಮ್ಯೇಷಾಂ ಪ್ರಶಸ್ತಂ ಚೈವ ಜೀವಿತಮ್|
12011005c ಸಂಸಿದ್ಧಾಸ್ತೇ ಗತಿಂ ಮುಖ್ಯಾಂ ಪ್ರಾಪ್ತಾ ಧರ್ಮಪರಾಯಣಾಃ||

ಅವನು ಬಂಗಾರದ ಪಕ್ಷಿಯಾಗಿ ಅವರಿಗೆ ಹೇಳಿದನು: "ವಿಘಸ[18]ವನ್ನು ತಿನ್ನುವ ಮನುಷ್ಯರ ಜೀವನವನ್ನು ನಡೆಸುವುದು ತುಂಬಾ ಕಷ್ಟವಾದುದು. ಆದರೆ ಆವರ ಕರ್ಮಗಳು ಪುಣ್ಯಕರವೂ ಪ್ರಶಸ್ತ ಜೀವನವೂ ಅಲ್ಲವೇ? ಧರ್ಮಪರಾಯಣರಾದ ಅವರು ಸಿದ್ಧಿಗಳನ್ನು ಪಡೆದು ಶ್ರೇಷ್ಠ ಗತಿಯನ್ನು ಹೊಂದುತ್ತಾರೆ."

12011006 ಋಷಯ ಊಚುಃ|
12011006a ಅಹೋ ಬತಾಯಂ ಶಕುನಿರ್ವಿಘಸಾಶಾನ್ಪ್ರಶಂಸತಿ|
12011006c ಅಸ್ಮಾನ್ನೂನಮಯಂ ಶಾಸ್ತಿ ವಯಂ ಚ ವಿಘಸಾಶಿನಃ||

---

[18] ವಿಘಸ ಎಂದರೆ ಯಜ್ಞಶೇಷ ಅಥವಾ ಭೋಜನ ಶೇಷ. ಯಜ್ಞಮಾಡಿ ಹೋಮಶೇಷವನ್ನು ಪ್ರಸಾದರೂಪವಾಗಿ ಉಣ್ಣುವವರು ಮತ್ತು ಅತಿಥಿ-ಅಭ್ಯಾಗತರನ್ನು ಸತ್ಕರಿಸಿ ಭೋಜನ ನೀಡಿ ನಂತರ ಉಳಿದ ಅನ್ನವನ್ನು ಭಕ್ಷಿಸುವವರು ವಿಘಸಾಶಿಗಳು. ವಿಘಸವು ಅಮೃತಸಮಾನ – ಅಮೃತಂ ವಿಘಸೋ ಯಜ್ಞ ಶೇಷಭೋಜನ ಶೇಷಯೋಃ|| (ಅಮರ ಕೋಶ)



ಋಷಿಗಳು ಹೇಳಿದರು: "ಅಯ್ಯೋ! ಈ ಪಕ್ಷಿಯು ವಿಘಸವನ್ನು ಸೇವಿಸುವವರನ್ನು ಪ್ರಶಂಸಿಸುತ್ತಿದೆ! ನಾವೂ ವಿಘಸವನ್ನು ಸೇವಿಸುವರಾಗಬೇಕೆಂದು ಉಪದೇಶಿಸುತ್ತಿದೆ!"

12011007 ಶಕುನಿರುವಾಚ|
12011007a ನಾಹಂ ಯುಷ್ಮಾನ್ಪ್ರಶಂಸಾಮಿ ಪಂಕದಿಗ್ಧಾನ್ರಜಸ್ವಲಾನ್|
12011007c ಉಚ್ಚಿಷ್ಟಭೋಜಿನೋ ಮಂದಾನನ್ಯೇ ವೈ ವಿಘಸಾಶಿನಃ||

ಪಕ್ಷಿಯು ಹೇಳಿತು: "ಕೆಸರಿನಿಂದಲೂ ಧೂಳಿನಿಂದಲೂ ಮುಚ್ಚಿರುವ ಪಕ್ಷಿಗಳ ಎಂಜಲನ್ನು ತಿನ್ನುವ ನಿಮ್ಮನ್ನು ನಾನು ಪ್ರಶಂಸಿಸುತ್ತಿಲ್ಲ! ಮೂಢರೇ! ವಿಘಸಾಶಿಗಳು ಬೇರೆಯೇ ಇದ್ದಾರೆ. ಅವರನ್ನು ನಾನು ಪ್ರಶಂಸಿಸುತ್ತಿದ್ದೇನೆ!"

12011008 ಋಷಯ ಊಚುಃ|

12011008a ಇದಂ ಶ್ರೇಯಃ ಪರಮಿತಿ ವಯಮೇವಾಭ್ಯುಪಾಸ್ಮಹೇ|

12011008c ಶಕುನೇ ಬ್ರೂಹಿ ಯಚ್ಚ್ರೇಯೋ ಭೃಶಂ ವೈ ಶ್ರದ್ದಧಾಮ ತೇ||

ಋಷಿಗಳು ಹೇಳಿದರು: "ಇದೇ ಪರಮ ಶ್ರೇಯಸ್ಕರವೆಂದು ನಾವು ಈ ಜೀವನವನ್ನು ನಡೆಸುತ್ತಿರುವೆವು. ಪಕ್ಷಿಯೇ! ಇದಕ್ಕಿಂತಲೂ ಶ್ರೇಯಸ್ಕರವಾದುದಿದ್ದರೆ ಹೇಳು. ನಿನ್ನ ಮಾತಿನ ಮೇಲೆ ನಮಗೆ ಶ್ರದ್ಧೆಯಿದೆ!"

12011009 ಶಕುನಿರುವಾಚ|

12011009a ಯದಿ ಮಾಂ ನಾಭಿಶಂಕಧ್ವಂ ವಿಭಜ್ಯಾತ್ಮಾನಮಾತ್ಮನಾ|

12011009c ತತೋಽಹಂ ವಃ ಪ್ರವಕ್ಷ್ಯಾಮಿ ಯಾಥಾತಥ್ಯಂ ಹಿತಂ ವಚಃ||

ಪಕ್ಷಿಯು ಹೇಳಿತು: "ನನ್ನ ಮಾತನ್ನು ನೀವು ಶಂಕಿಸದಿದ್ದರೆ ನನ್ನಲ್ಲಿ ನಾನೇ ಯೋಚಿಸಿ ವಿಭಜಿಸಿ ನಿಮಗೆ ಒಳ್ಳೆಯದಾಗುವಂತಹ ಹಿತವಚನವನ್ನು ಹೇಳುತ್ತೇನೆ. ಕೇಳಿ!"

12011010 ಋಷಯ ಊಚುಃ|

12011010a ಶೃಣುಮಸ್ತೇ ವಚಸ್ತಾತ ಪಂಥಾನೋ ವಿದಿತಾಸ್ತವ|

12011010c ನಿಯೋಗೇ ಚೈವ ಧರ್ಮಾತ್ಮನ್ ಸ್ಥಾತುಮಿಚ್ಚಾಮ ಶಾಧಿ ನಃ||

ಋಷಿಗಳು ಹೇಳಿದರು: "ಅಯ್ಯಾ! ನಾವು ನಿನ್ನ ಮಾತನ್ನು ಕೇಳುತ್ತೇವೆ! ನಿನಗೆ ಸಿದ್ಧಿಸಾಧಕ ಮಾರ್ಗಗಳು ತಿಳಿದಿವೆ. ಧರ್ಮಾತ್ಮನ್! ನಮಗೆ ಉಪದೇಶಿಸು. ಅದರಂತೆಯೇ ನಾವು ನಡೆದುಕೊಳ್ಳಲು ಬಯಸುತ್ತೇವೆ."

12011011 ಶಕುನಿರುವಾಚ

12011011a ಚತುಷ್ಪದಾಂ ಗೌಃ ಪ್ರವರಾ ಲೋಹಾನಾಂ ಕಾಂಚನಂ ವರಮ್|

12011011c ಶಬ್ದಾನಾಂ ಪ್ರವರೋ ಮಂತ್ರೋ ಬ್ರಾಹ್ಮಣೋ ದ್ವಿಪದಾಂ ವರಃ||

ಪಕ್ಷಿಯು ಹೇಳಿತು: "ನಾಲ್ಕು ಕಾಲುಗಳಿರುವ ಪ್ರಾಣಿಗಳಲ್ಲಿ ಗೋವು ಶ್ರೇಷ್ಠವಾದುದು. ಲೋಹಗಳಲ್ಲಿ ಚಿನ್ನವು ಶ್ರೇಷ್ಠವಾದುದು. ಶಬ್ದಗಳಲ್ಲಿ ಮಂತ್ರವು ಶ್ರೇಷ್ಠವಾದುದು. ಮತ್ತು ಎರಡು ಕಾಲಿರುವ ಮನುಷ್ಯರಲ್ಲಿ ಬ್ರಾಹ್ಮಣರು ಶ್ರೇಷ್ಠ.

12011012a ಮಂತ್ರೋಽಯಂ ಜಾತಕರ್ಮಾದಿ ಬ್ರಾಹ್ಮಣಸ್ಯ ವಿಧೀಯತೇ|
12011012c ಜೀವತೋ ಯೋ ಯಥಾಕಾಲಂ ಶ್ಮಶಾನನಿಧನಾದಿತಿ||

ಬ್ರಾಹ್ಮಣನಿಗೆ ಮಂತ್ರಪೂರ್ವಕವಾದ ಜಾತಕರ್ಮಾದಿ ಸಂಸ್ಕಾರಗಳಿವೆ. ಅವನು ಜೀವಿಸಿರುವಾಗ ಯಥಾಕಾಲದಲ್ಲಿ ಮತ್ತು ನಿಧನದ ನಂತರ ಶ್ಮಶಾನದಲ್ಲಿಯೂ ವಿವಿಧ ಸಂಸ್ಕಾರಗಳಿವೆ.

12011013a ಕರ್ಮಾಣಿ ವೈದಿಕಾನ್ಯಸ್ಯ ಸ್ವರ್ಗ್ಯಃ ಪಂಥಾಸ್ತ್ವನುತ್ತಮಃ|
12011013c ಅಥ ಸರ್ವಾಣಿ ಕರ್ಮಾಣಿ ಮಂತ್ರಸಿದ್ಧಾನಿ ಚಕ್ಷತೇ||

ಬ್ರಾಹ್ಮಣರಿಗೆ ವೈದಿಕ ಕರ್ಮಗಳೇ ಸ್ವರ್ಗದ ಉತ್ತಮ ಮಾರ್ಗವು. ಅವನ ಸರ್ವ ಕರ್ಮಗಳೂ ಮಂತ್ರಸಿದ್ಧ ಎಂದು ಹೇಳುತ್ತಾರೆ.

12011014a ಆಮ್ನಾಯದೃಢವಾದೀನಿ ತಥಾ ಸಿದ್ಧಿರಿಹೇಷ್ಯತೇ|
12011014c ಮಾಸಾರ್ಧಮಾಸಾ ಋತವ ಆದಿತ್ಯಶಶಿತಾರಕಮ್||
12011015a ಈಹಂತೇ ಸರ್ವಭೂತಾನಿ ತದೃತಂ ಕರ್ಮಸಂಗಿನಾಮ್|
12011015c ಸಿದ್ಧಿಕ್ಷೇತ್ರಮಿದಂ ಪುಣ್ಯಮಯಮೇವಾಶ್ರಮೋ ಮಹಾನ್||

ವೇದಗಳು ಇವನ್ನು ದೃಢಪಡಿಸಿವೆ. ಇವುಗಳಿಂದಲೇ ಸಿದ್ಧಿಯೂ ದೊರೆಯುತ್ತದೆ. ಮಾಸ, ಪಕ್ಷ, ಋತು, ಸೂರ್ಯ, ಚಂದ್ರ, ನಕ್ಷತ್ರಗಳು

ಸೂಚಿಸುವ ಯಜ್ಞಗಳನ್ನು ಮಾಡಲು ಎಲ್ಲ ಪ್ರಾಣಿಗಳೂ ಇಚ್ಛಿಸುತ್ತವೆ. ಆದುದರಿಂದ ಕರ್ಮಸಂಗಿಗಳ ಗೃಹಸ್ಥಾಶ್ರಮವೇ ಸಿದ್ಧಿಕ್ಷೇತ್ರವೆಂದೂ ಮಹಾ ಪುಣ್ಯಮಯವೆಂದೂ ಹೇಳುತ್ತಾರೆ.

12011016a ಅಥ ಯೇ ಕರ್ಮ ನಿಂದಂತೋ ಮನುಷ್ಯಾಃ ಕಾಪಥಂ ಗತಾಃ|
12011016c ಮೂಢಾನಾಮರ್ಥಹೀನಾನಾಂ ತೇಷಾಮೇನಸ್ತು ವಿದ್ಯತೇ||

ಕರ್ಮವನ್ನು ನಿಂದಿಸಿ ಕೆಟ್ಟದಾರಿಯಲ್ಲಿ ಹೋಗುವ ಮೂಢ ಮನುಷ್ಯರು ಅರ್ಥಹೀನರಾಗುತ್ತಾರೆ ಎಂದು ತಿಳಿಯಬೇಕು.

12011017a ದೇವವಂಶಾನ್ಪಿತೃವಂಶಾನ್ಬ್ರಹ್ಮವಂಶಾಂಶ್ಚ ಶಾಶ್ವತಾನ್|
12011017c ಸಂತ್ಯಜ್ಯ ಮೂಢಾ ವರ್ತಂತೇ ತತೋ ಯಾಂತ್ಯಶ್ರುತೀಪಥಮ್||

ಮೂಢರು ಶಾಶ್ವತರಾದ ದೇವವಂಶಗಳನ್ನು, ಪಿತೃವಂಶಗಳನ್ನು ಮತ್ತು ಬ್ರಹ್ಮವಂಶಗಳನ್ನು ತೃಪ್ತಿಪಡಿಸುವುದನ್ನು ಬಿಟ್ಟು ತಮ್ಮ ವರ್ತನೆಗಳಿಂದ ಶ್ರುತಿಗಳಿಗೆ ವಿರುದ್ಧ ಮಾರ್ಗದಲ್ಲಿ ಹೋಗುತ್ತಾರೆ.

12011018a ಏತದ್ಧ್ಯೇಽಸ್ತು ತಪೋ ಯುಕ್ತಂ ದದಾನೀತ್ಯೃಷಿಚೋದಿತಮ್|
12011018c ತಸ್ಮಾತ್ತದಧ್ಯವಸತಸ್ತಪಸ್ವಿ ತಪ ಉಚ್ಯತೇ||

ಋಷಿಗಳು ಹಾಕಿಕೊಟ್ಟಿರುವ ಇದೇ ತಪೋಯುಕ್ತವೆನಿಸುತ್ತದೆ. ಅದರಲ್ಲಿಯೇ ನಿರತನಾಗಿರುವವನಿಗೆ ತಪಸ್ವಿ ಮತ್ತು ತಪಸ್ಸು ಎಂದು ಹೇಳುತ್ತಾರೆ.

12011019a ದೇವವಂಶಾನ್ಪಿತೃವಂಶಾನ್ಬ್ರಹ್ಮವಂಶಾಂಶ್ಚ ಶಾಶ್ವತಾನ್|
12011019c ಸಂವಿಭಜ್ಯ ಗುರೋಶ್ಚರ್ಯಾಂ ತದ್ವ್ಯೈ ದುಷ್ಕರಮುಚ್ಯತೇ||

ಶಾಶ್ವತ ದೇವವಂಶಗಳನ್ನೂ, ಪಿತೃವಂಶಗಳನ್ನೂ ಮತ್ತು

ಬ್ರಹ್ಮವಂಶಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ತೃಪ್ತಿಪಡಿಸುವುದು ದುಷ್ಕರವೆಂದು ಗುರುಗಳು ಹೇಳುತ್ತಾರೆ[19].

12011020a ದೇವಾ ವೈ ದುಷ್ಕರಂ ಕೃತ್ವಾ ವಿಭೂತಿಂ ಪರಮಾಂ ಗತಾಃ|
12011020c ತಸ್ಮಾದ್ಗಾರ್ಹಸ್ಥ್ಯಮುದ್ವೋಢುಂ ದುಷ್ಕರಂ ಪ್ರಬ್ರವೀಮಿ ವಃ||

ಇಂತಹ ದುಷ್ಕರ ಕರ್ಮಗಳನ್ನು ಮಾಡಿಯೇ ದೇವತೆಗಳು ಶ್ರೇಷ್ಠ ವೈಭವವನ್ನು ಪಡೆದಿರುತ್ತಾರೆ. ಆದುದರಿಂದ ದುಷ್ಕರವಾದರೂ ಗಾರ್ಹಸ್ಥ್ಯಧರ್ಮವು ಹೆಚ್ಚಿನದೆಂದು ನಾನು ಹೇಳುತ್ತಿದ್ದೇನೆ.

12011021a ತಪಃ ಶ್ರೇಷ್ಠಂ ಪ್ರಜಾನಾಂ ಹಿ ಮೂಲಮೇತನ್ನ ಸಂಶಯಃ|
12011021c ಕುಟುಂಬವಿಧಿನಾನೇನ ಯಸ್ಮಿನ್ಸರ್ವಂ ಪ್ರತಿಷ್ಠಿತಮ್||

ಇಂತಹ ಗೃಹಸ್ಥಾಶ್ರಮದ ತಪಸ್ಸೇ ಶ್ರೇಷ್ಠವಾದುದು ಮತ್ತು ಪ್ರಜೆಗಳ ಹಿತಸಾಧನೆಗೆ ಮೂಲಕಾರಣ ಎನ್ನುವುದರಲ್ಲಿ ಸಂಶಯವಿಲ್ಲ. ಎಲ್ಲ ಕುಟುಂಬವಿಧಿಗಳೂ ಈ ಗೃಹಸ್ಥಾಶ್ರಮದಲ್ಲಿಯೇ ಪ್ರತಿಷ್ಠಿತವಾಗಿವೆ.

12011022a ಏತದ್ವಿದುಸ್ತಪೋ ವಿಪ್ರಾ ದ್ವಂದ್ವಾತೀತಾ ವಿಮತ್ಸರಾಃ|
12011022c ತಸ್ಮಾದ್ವನಂ ಮಧ್ಯಮಂ ಚ ಲೋಕೇಷು ತಪ ಉಚ್ಯತೇ||

ಶೀತೋಷ್ಣ-ಸುಖದುಃಖಗಳೆಂಬ ದ್ವಂದ್ವಗಳಿಗೆ ಅತೀತರಾದ ಮತ್ತು

---

[19] ದಿನದ ಕಾಲವನ್ನು ವಿಭಜಿಸಿ ಯಜ್ಞಗಳ ಮೂಲಕ ದೇವತೆಗಳನ್ನು, ಸ್ವಾಧ್ಯಾಯ-ಬ್ರಹ್ಮಯಜ್ಞಾದಿಗಳ ಮೂಲಕ ಬ್ರಹ್ಮವಂಶೀಯ ಋಷಿಗಳನ್ನೂ, ಮತ್ತು ಶ್ರಾದ್ಧ-ತರ್ಪಣಾದಿಗಳ ಮೂಲಕ ಪಿತೃಗಳನ್ನೂ ತೃಪ್ತಿಪಡಿಸುವುದು ಮತ್ತು ಗುರುಶುಶ್ರೂಷೆಮಾಡುವುದು ದುಷ್ಕರವೆಂದು ವಿಧ್ವಾಂಸರು ಹೇಳುತ್ತಾರೆ.

ಮತ್ಸರ ರಹಿತರಾದ ವಿಪ್ರರು ಗೃಹಸ್ಥಾಶ್ರಮವನ್ನೇ ತಪಸ್ಸೆಂದು ಪರಿಗಣಿಸುತ್ತಾರೆ. ಆದುದರಿಂದ ಈ ಮಧ್ಯಮವ್ರತವನ್ನೇ ತಪಸ್ಸೆಂದು ಲೋಕಗಳು ಹೇಳುತ್ತವೆ.

12011023a ದುರಾಧರ್ಷಂ ಪದಂ ಚೈವ ಗಚ್ಚಂತಿ ವಿಘಸಾಶಿನಃ|
12011023c ಸಾಯಂಪ್ರಾತರ್ವಿಭಜ್ಯಾನ್ನಂ ಸ್ವಕುಟುಂಬೇ ಯಥಾವಿಧಿ||
12011024a ದತ್ತ್ವಾತಿಥಿಭ್ಯೋ ದೇವೇಭ್ಯಃ ಪಿತೃಭ್ಯಃ ಸ್ವಜನಸ್ಯ ಚ|
12011024c ಅವಶಿಷ್ಟಾನಿ ಯೇಽಶ್ನಂತಿ ತಾನಾಹುರ್ವಿಘಸಾಶಿನಃ||

ವಿಘಸಾಶಿಗಳು ಸಾಮಾನ್ಯರು ಜಯಿಸಲು ಅಸಾಧ್ಯವಾದ ಪುಣ್ಯಲೋಕಗಳಿಗೆ ಹೋಗುತ್ತಾರೆ. ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ತಮ್ಮ ಕುಟುಂಬದಲ್ಲಿ ಯಥಾವಿಧಿಯಾಗಿ ಆಹಾರವನ್ನು ವಿಭಾಗಿಸಿ, ದೇವ-ಪಿತೃಗಳಿಗೆ ನಿವೇದನೆ ಮಾಡಿ, ಅತಿಥಿಗಳಿಗೂ ಮತ್ತು ಬಂಧುವರ್ಗದವರಿಗೂ ಭೋಜನಮಾಡಿಸಿ ಉಳಿದುದನ್ನು ಯಾರು ತಿನ್ನುತ್ತಾರೆಯೋ ಅವರನ್ನೇ ವಿಘಸಾಶಿಗಳೆಂದು ಕರೆಯುತ್ತಾರೆ.

12011025a ತಸ್ಮಾತ್ತ್ವಧರ್ಮಮಾಸ್ಥಾಯ ಸುವ್ರತಾಃ ಸತ್ಯವಾದಿನಃ|
12011025c ಲೋಕಸ್ಯ ಗುರವೋ ಭೂತ್ವಾ ತೇ ಭವಂತ್ಯನುಪಸ್ಕೃತಾಃ||

ಆದುದರಿಂದ ಸುವ್ರತ ಸತ್ಯವಾದೀ ವಿಘಸಾಶಿಗಳು ಸ್ವಧರ್ಮದಲ್ಲಿಯೇ ನಿರತರಾಗಿದ್ದುಕೊಂಡು ಯಾವುದೇ ಸಂಶಯಗಳಿಲ್ಲದೇ, ಲೋಕದ ಗುರುಗಳಾಗಿ ವಿರಾಜಿಸುತ್ತಾರೆ.

12011026a ತ್ರಿದಿವಂ ಪ್ರಾಪ್ಯ ಶಕ್ರಸ್ಯ ಸ್ವರ್ಗಲೋಕೇ ವಿಮತ್ಸರಾಃ|
12011026c ವಸಂತಿ ಶಾಶ್ವತೀರ್ವರ್ಷಾ ಜನಾ ದುಷ್ಕರಕಾರಿಣಃ||

ಮಾತ್ಸರ್ಯವಿಲ್ಲದೇ ಇಂತಹ ದುಷ್ಕರ ಗ್ರಹಸ್ಥಾಶ್ರಮಧರ್ಮವನ್ನು ಅನುಸರಿಸಿ ಈ ವಿಘಸಾಶಿಗಳು ತ್ರಿದಿವವನ್ನು ಸೇರಿ ಶಕ್ರನ ಸ್ವರ್ಗಲೋಕದಲ್ಲಿ ಶಾಶ್ವತಕಾಲಗಳ ಪರ್ಯಂತ ವಾಸಮಾಡುತ್ತಾರೆ.”

12011027a ತತಸ್ತೇ ತದ್ವಚಃ ಶ್ರುತ್ವಾ ತಸ್ಯ ಧರ್ಮಾರ್ಥಸಂಹಿತಮ್|
12011027c ಉತ್ಸೃಜ್ಯ ನಾಸ್ತಿಕಗತಿಂ ಗಾರ್ಹಸ್ಥ್ಯಂ ಧರ್ಮಮಾಶ್ರಿತಾಃ||

ಆ ಪಕ್ಷಿಯ ಧರ್ಮಾರ್ಥಗಳಿಂದ ಕೂಡಿದ ಮಾತುಗಳನ್ನು ಕೇಳಿ ಆ ಬ್ರಾಹ್ಮಣರು ನಾಸ್ತಿಕಗತಿಯನ್ನು ಬಿಟ್ಟು ಗೃಹಸ್ಥಧರ್ಮವನ್ನು ಆಶ್ರಯಿಸಿದರು.

12011028a ತಸ್ಮಾತ್ತ್ವಮಪಿ ದುರ್ಧರ್ಷ ಧೈರ್ಯಮಾಲಂಬ್ಯ ಶಾಶ್ವತಮ್|
12011028c ಪ್ರಶಾಧಿ ಪೃಥಿವೀಂ ಕೃತ್ಸ್ನಾಂ ಹತಾಮಿತ್ರಾಂ ನರೋತ್ತಮ||

ನರೋತ್ತಮ! ದುರ್ಧರ್ಷ! ನೀನೂ ಕೂಡ ಧೈರ್ಯವನ್ನು ತಾಳಿ ಶತ್ರುಗಳಿಂದ ರಹಿತವಾಗಿರುವ ಈ ಇಡೀ ಭೂಮಿಯನ್ನು ಆಳು!””

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಅರ್ಜುನವಾಕ್ಯೇ ಋಷಿಶಕುನಿಸಂವಾದಕಥನೇ ಏಕಾದಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಅರ್ಜುನವಾಕ್ಯೇ ಋಷಿ-ಶಕುನಿಸಂವಾದಕಥನ ಎನ್ನುವ ಹನ್ನೊಂದನೇ ಅಧ್ಯಾಯವು.

೧೨

ನಕುಲವಾಕ್ಯ

ಗೃಹಸ್ಥಧರ್ಮವನ್ನು ಪ್ರಶಂಸಿಸುತ್ತಾ ನಕುಲನು ರಾಜಾ ಯುಧಿಷ್ಠಿರನಿಗೆ ತಿಳಿಯ ಹೇಳುವುದು (1-36).

12012001 ವೈಶಂಪಾಯನ ಉವಾಚ|
12012001a ಅರ್ಜುನಸ್ಯ ವಚಃ ಶ್ರುತ್ವಾ ನಕುಲೋ ವಾಕ್ಯಮಬ್ರವೀತ್|
12012001c ರಾಜಾನಮಭಿಸಂಪ್ರೇಕ್ಷ್ಯ ಸರ್ವಧರ್ಮಭೃತಾಂ ವರಮ್||
12012002a ಅನುರುಧ್ಯ ಮಹಾಪ್ರಾಜ್ಞೋ ಭ್ರಾತುಶ್ಚಿತ್ತಮರಿಂದಮಃ|
12012002c ವ್ಯೂಢೋರಸ್ಕೋ ಮಹಾಬಾಹುಸ್ತಾಮ್ರಾಸ್ಯೋ ಮಿತಭಾಷಿತಾ||

ವೈಶಂಪಾಯನನು ಹೇಳಿದನು: "ಅರ್ಜುನನ ಮಾತನ್ನು ಕೇಳಿ ಅರಿಂದಮ ಮಹಾಬಾಹು ವಿಶಾಲವಕ್ಷ ಮಿತಭಾಷೀ ಮಹಾಪ್ರಾಜ್ಞ ನಕುಲನು ಅಣ್ಣನ ಮನಸ್ಸನ್ನು ಬದಲಾಯಿಸಲು ಧರ್ಮಭೃತರಲ್ಲಿ ಶ್ರೇಷ್ಠನಾದ ರಾಜ ಯುಧಿಷ್ಠಿರನನ್ನು ನೋಡಿ ಹೀಗೆ ಹೇಳಿದನು:

12012003a ವಿಶಾಖಿಯೂಪೇ ದೇವಾನಾಂ ಸರ್ವೇಷಾಮಗ್ನಯಶ್ಚಿತಾಃ|
12012003c ತಸ್ಮಾದ್ವಿದ್ಧಿ ಮಹಾರಾಜ ದೇವಾನ್ಕರ್ಮಪಥಿ ಸ್ಥಿತಾನ್||

"ಮಹಾರಾಜ! ವಿಶಾಖಿಯೂಪದಲ್ಲಿ ದೇವತೆಗಳೆಲ್ಲರೂ ಅಗ್ನಿಗಳನ್ನು ಪ್ರತಿಷ್ಠಾಪಿಸಿದ್ದರು. ಇದರಿಂದ ದೇವತೆಗಳೂ ಕರ್ಮಪಥದಲ್ಲಿ ನಿರತರಾಗಿರುತ್ತಾರೆ ಎಂದು ತಿಳಿಯಬಹುದು.

12012004a ಅನಾಸ್ತಿಕಾನಾಸ್ತಿಕಾನಾಂ ಪ್ರಾಣದಾಃ ಪಿತರಶ್ಚ ಯೇ|
12012004c ತೇಽಪಿ ಕರ್ಮೈವ ಕುರ್ವಂತಿ ವಿಧಿಂ ಪಶ್ಯಸ್ವ ಪಾರ್ಥಿವ||

ಪಾರ್ಥಿವ! ಆಸ್ತಿಕ-ಅನಾಸ್ತಿಕರಿಗೆ ಅನ್ನವನ್ನು ದಯಪಾಲಿಸುವ ಪಿತೃಗಳೂ ಕೂಡ ವಿಧಿದೃಷ್ಟವಾದ ಕರ್ಮಗಳನ್ನೇ ಮಾಡುತ್ತಾರೆ

ನೋಡು!

12012004e ವೇದವಾದಾಪವಿದ್ಧಾಂಸ್ತು ತಾನ್ವಿದ್ಧಿ ಭೃಶನಾಸ್ತಿಕಾನ್|
12012005a ನ ಹಿ ವೇದೋಕ್ತಮುತ್ಸೃಜ್ಯ ವಿಪ್ರಃ ಸರ್ವೇಷು ಕರ್ಮಸು|
12012005c ದೇವಯಾನೇನ ನಾಕಸ್ಯ ಪೃಷ್ಠಮಾಪ್ನೋತಿ ಭಾರತ||

ವೇದವಾದಗಳಿಂದ ಮೋಹಗೊಂಡವರು ಹೆಚ್ಚು ನಾಸ್ತಿಕರೆಂದು ತಿಳಿ. ಭಾರತ! ಎಲ್ಲ ಕರ್ಮಗಳಲ್ಲಿ ವೇದೋಕ್ತವಾದವುಗಳನ್ನು ಬಿಟ್ಟುಮಾಡುವ ವಿಪ್ರನು ದೇವಯಾನದ ಮೂಲಕ ಮೇಲಿನ ಸ್ವರ್ಗವನ್ನು ತಲುಪಲಾರ!

12012006a ಅತ್ಯಾಶ್ರಮಾನಯಂ ಸರ್ವಾನಿತ್ಯಾಹುರ್ವೇದನಿಶ್ಚಯಾಃ|
12012006c ಬ್ರಾಹ್ಮಣಾಃ ಶ್ರುತಿಸಂಪನ್ನಾಸ್ತಾನ್ನಿಬೋಧ ಜನಾಧಿಪ||

ವೇದನಿಶ್ಚಯಗಳನ್ನು ತಿಳಿದಿರುವ ಮತ್ತು ಶ್ರುತಿಸಂಪನ್ನರಾದ ಬ್ರಾಹ್ಮಣರು ಈ ಗೃಹಸ್ಥಾಶ್ರಮವು ಎಲ್ಲ ಆಶ್ರಮಗಳಿಗಿಂತ ಅತಿಶಯವಾದುದು ಎನ್ನುತ್ತಾರೆ. ನರಾಧಿಪ! ಅವರು ಹೇಳುವುದನ್ನು ಕೇಳು.

12012007a ವಿತ್ತಾನಿ ಧರ್ಮಲಬ್ಧಾನಿ ಕ್ರತುಮುಖ್ಯೇಷ್ವವಾಸೃಜನ್|
12012007c ಕೃತಾತ್ಮಸು ಮಹಾರಾಜ ಸ ವೈ ತ್ಯಾಗೀ ಸ್ಮೃತೋ ನರಃ||

ಮಹಾರಾಜ! ಧರ್ಮದಿಂದ ಗಳಿಸಿದ ವಿತ್ತವನ್ನು ಮುಖ್ಯ ಕ್ರತುಗಳಿಗೆ ಉಪಯೋಗಿಸಿ ಕೃತಾತ್ಮನಾದ ನರನನ್ನೇ ತ್ಯಾಗೀ ಎಂದು ಹೇಳುತ್ತಾರೆ.

12012008a ಅನವೇಕ್ಷ್ಯ ಸುಖಾದಾನಂ ತಥೈವೋರ್ಧ್ವಂ ಪ್ರತಿಷ್ಠಿತಃ|
12012008c ಆತ್ಮತ್ಯಾಗೀ ಮಹಾರಾಜ ಸ ತ್ಯಾಗೀ ತಾಮಸಃ ಪ್ರಭೋ||

ಮಹಾರಾಜ! ಪ್ರಭೋ! ಗೃಹಸ್ಥಾಶ್ರಮದಲ್ಲಿರುವ ಸುಖವನ್ನು ತ್ಯಜಿಸಿ ನಂತರದ ವಾನಪ್ರಸ್ಥ-ಸನ್ಯಾಸ ಆಶ್ರಮಗಳಲ್ಲಿ ನಿಷ್ಠೆಯನ್ನು ಹೊಂದಿ ಆತ್ಮತ್ಯಾಗ ಮಾಡುವವನನ್ನು ತಾಮಸತ್ಯಾಗೀ ಎಂದು ಹೇಳುತ್ತಾರೆ.

12012009a ಅನಿಕೇತಃ ಪರಿಪತನ್ ವೃಕ್ಷಮೂಲಾಶ್ರಯೋ ಮುನಿಃ|
12012009c ಅಪಾಚಕಃ ಸದಾ ಯೋಗೀ ಸ ತ್ಯಾಗೀ ಪಾರ್ಥ ಭಿಕ್ಷುಕಃ||

ಪಾರ್ಥ! ಮನೆಯಿಲ್ಲದೇ ತನ್ನ ಆಹಾರವನ್ನು ತಾನೇ ತಯಾರಿಸದೇ ಭಿಕ್ಷೆಗಾಗಿ ಎಲ್ಲೆಲ್ಲಿಯೋ ತಿರುಗಾಡುತ್ತಾ ಮರಗಳ ಬುಡವನ್ನೇ ಆಶ್ರಯಿಸಿ ಸದಾ ಯೋಗಯುಕ್ತನಾಗಿ ಸರ್ವಕರ್ಮಗಳನ್ನು ತ್ಯಾಗಮಾಡಿದವನನ್ನು ಭಿಕ್ಷುಕನೆಂದು ಹೇಳುತ್ತಾರೆ.

12012010a ಕ್ರೋಧಹರ್ಷಾವನಾದೃತ್ಯ ಪೈಶುನ್ಯಂ ಚ ವಿಶಾಂ ಪತೇ|
12012010c ವಿಪ್ರೋ ವೇದಾನಧೀತೇ ಯಃ ಸ ತ್ಯಾಗೀ ಗುರುಪೂಜಕಃ||

ವಿಶಾಂಪತೇ! ಕ್ರೋಧ-ಹರ್ಷಗಳನ್ನು ಅನಾದರಿಸಿ, ಅದರಲ್ಲೂ ವಿಶೇಷವಾಗಿ, ಇನ್ನೊಬ್ಬರನ್ನು ದ್ವೇಷಿಸುವುದನ್ನು ಬಿಟ್ಟು, ವೇದಾಧ್ಯಯನದಲ್ಲಿ ನಿರತನಾಗಿ ಗುರುಪೂಜಕನಾದ ವಿಪ್ರನೇ ತ್ಯಾಗಿ.

12012011a ಆಶ್ರಮಾಂಸ್ತುಲಯಾ ಸರ್ವಾನ್ಧೃತಾನಾಹುರ್ಮನೀಷಿಣಃ|
12012011c ಏಕತಸ್ತೇ ತ್ರಯೋ ರಾಜನ್ಗೃಹಸ್ಥಾಶ್ರಮ ಏಕತಃ||

ರಾಜನ್! ಒಮ್ಮೆ ವಿದ್ವಾಂಸರು ಒಂದು ಕಡೆ ಗೃಹಸ್ಥಾಶ್ರಮವನ್ನೂ ಮತ್ತೊಂದು ಕಡೆ ಉಳಿದ – ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸನ್ಯಾಸ – ಈ ಮೂರು ಆಶ್ರಮಗಳನ್ನು ಇಟ್ಟು ಸರ್ವ ಆಶ್ರಮಗಳನ್ನೂ ತುಲನೆಮಾಡಿದರೆಂದು ಹೇಳುತ್ತಾರೆ.

12012012a ಸಮೀಕ್ಷತೇ ತು ಯೋಽರ್ಥಂ ವೈ ಕಾಮಂ ಸ್ವರ್ಗಂ ಚ ಭಾರತ|
12012012c ಅಯಂ ಪಂಥಾ ಮಹರ್ಷೀಣಾಮಿಯಂ ಲೋಕವಿದಾಂ ಗತಿಃ||

ಭಾರತ! ಸಮೀಕ್ಷಿಸಿದಾಗ ಗೃಹಸ್ಥಾಶ್ರಮವೇ ಹೆಚ್ಚಿನದೆಂದು ತಿಳಿಯುತ್ತದೆ. ಏಕೆಂದರೆ ಈ ಆಶ್ರಮದಿಂದ ಇಹದಲ್ಲಿ ಕಾಮಭೋಗಗಳನ್ನೂ ನಂತರ ಸ್ವರ್ಗವನ್ನೂ ಪಡೆಯಬಹುದು. ಇದೇ ಮಹರ್ಷಿಗಳೂ ಲೋಕವಿದರೂ ಬಳಸುವ ಮಾರ್ಗ.

12012013a ಇತಿ ಯಃ ಕುರುತೇ ಭಾವಂ ಸ ತ್ಯಾಗೀ ಭರತರ್ಷಭ|
12012013c ನ ಯಃ ಪರಿತ್ಯಜ್ಯ ಗೃಹಾನ್ವನಮೇತಿ ವಿಮೂಢವತ್||

ಭರತರ್ಷಭ! ಈ ಭಾವದಂತೆ ಮಾಡುವವನೇ ತ್ಯಾಗೀ. ಮನೆಗಳನ್ನು ಪರಿತ್ಯಜಿಸಿ ವಿಮೂಢನಾಗಿ ವನಕ್ಕೆ ಹೋಗುವವನಲ್ಲ!

12012014a ಯದಾ ಕಾಮಾನ್ಸಮೀಕ್ಷೇತ ಧರ್ಮವ್ಯೈತಂಸಿಕೋಽನೃಜುಃ|
12012014c ಅಥೈನಂ ಮೃತ್ಯುಪಾಶೇನ ಕಂಠೇ ಬಧ್ನಾತಿ ಮೃತ್ಯುರಾಟ್||

ಧರ್ಮದ ಸೋಗಿನಿಂದ ಅರಣ್ಯದಲ್ಲಿ ವಾಸಮಾಡುವವನು ಕಾಮಾಸಕ್ತನಾದರೆ ಮೃತ್ಯುರಾಜನು ಕೂಡಲೇ ಅವನ ಕುತ್ತಿಗೆಯನ್ನು ಮೃತ್ಯುಪಾಶದಿಂದ ಬಂಧಿಸುತ್ತಾನೆ.

12012015a ಅಭಿಮಾನಕೃತಂ ಕರ್ಮ ನೈತತ್ಫಲವದುಚ್ಯತೇ|
12012015c ತ್ಯಾಗಯುಕ್ತಂ ಮಹಾರಾಜ ಸರ್ವಮೇವ ಮಹಾಫಲಮ್||

ಮಹಾರಾಜ! ಅಭಿಮಾನದಿಂದ ಮಾಡಿದ ಕರ್ಮಗಳು ಎಂದಿಗೂ ಫಲವನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ. ತ್ಯಾಗಬುದ್ಧಿಯಿಂದ ಮಾಡಿದುದೆಲ್ಲವೂ ಮಹಾಫಲಗಳನ್ನು ಕೊಡುತ್ತವೆ.

12012016a ಶಮೋ ದಮಸ್ತಪೋ ದಾನಂ ಸತ್ಯಂ ಶೌಚಮಥಾರ್ಜವಮ್|
12012016c ಯಜ್ಞೋ ಧೃತಿಶ್ಚ ಧರ್ಮಶ್ಚ ನಿತ್ಯಮಾರ್ಷೋ ವಿಧಿಃ ಸ್ಮೃತಃ||

ಶಮ, ದಮ, ತಪಸ್ಸು, ದಾನ, ಸತ್ಯ, ಶೌಚ, ಸರಳತೆ, ಯಜ್ಞ, ಧೃತಿ, ಧರ್ಮ – ಇವು ಋಷಿಗಳ ನಿತ್ಯವಿಧಿಯೆಂದು ಹೇಳುತ್ತಾರೆ.

12012017a ಪಿತೃದೇವಾತಿಥಿಕೃತೇ ಸಮಾರಂಭೋಽತ್ರ ಶಸ್ಯತೇ|
12012017c ಅತ್ರೈವ ಹಿ ಮಹಾರಾಜ ತ್ರಿವರ್ಗಃ ಕೇವಲಂ ಫಲಮ್||

ಮಹಾರಾಜ! ಗೃಹಸ್ಥಾಶ್ರಮದಲ್ಲಿ ಪಿತೃ-ದೇವತೆಗಳು ಮತ್ತು ಅತಿಥಿಗಳ ಪೂಜೆಗಳು ಕೂಡಿಕೊಂಡಿರುವುದರಿಂದ ಅದನ್ನು ಪ್ರಶಂಸಿಸಿದ್ದಾರೆ. ಇದರಲ್ಲಿಯೇ ಧರ್ಮ-ಅರ್ಥ-ಕಾಮಗಳೆಂಬ ಮೂರು ಫಲಗಳು ಪ್ರಾಪ್ತವಾಗುತ್ತವೆ.

12012018a ಏತಸ್ಮಿನ್ವರ್ತಮಾನಸ್ಯ ವಿಧೌ ವಿಪ್ರನಿಷೇವಿತೇ|
12012018c ತ್ಯಾಗಿನಃ ಪ್ರಸೃತಸ್ಯೇಹ ನೋಚ್ಚಿತ್ತಿರ್ವಿದ್ಯತೇ ಕ್ವ ಚಿತ್||

ಗೃಹಸ್ಥಾಶ್ರಮದಲ್ಲಿಯೇ ಇದ್ದುಕೊಂಡು ವೇದವಿಹಿತ ವಿಪ್ರಕರ್ಮಗಳನ್ನು ಫಲಾಪೇಕ್ಷೆಗಳಿಲ್ಲದೇ ನಿಷ್ಠೆಯಿಂದ ಮಾಡುತ್ತಿರುವ ತ್ಯಾಗಿಗೆ ಪರಲೌಕಿಕ ಉನ್ನತಿಯೂ ಕಡಿದುಹೋಗುವುದಿಲ್ಲ.

12012019a ಅಸೃಜದ್ಧಿ ಪ್ರಜಾ ರಾಜನ್ಪ್ರಜಾಪತಿರಕಲ್ಮಷಃ|
12012019c ಮಾಂ ಯಕ್ಷ್ಯಂತೀತಿ ಶಾಂತಾತ್ಮಾ ಯಜ್ಞೈರ್ವಿವಿಧದಕ್ಷಿಣೈಃ||
12012020a ವೀರುಧಶ್ಚೈವ ವೃಕ್ಷಾಂಶ್ಚ ಯಜ್ಞಾರ್ಥಂ ಚ ತಥೌಷಧೀಃ|
12012020c ಪಶೂಂಶ್ಚೈವ ತಥಾ ಮೇಧ್ಯಾನ್ಯಜ್ಞಾರ್ಥಾನಿ ಹವೀಂಷಿ ಚ||

ರಾಜನ್! ವಿವಿಧ ದಕ್ಷಿಣೆಗಳಿಂದ ಯುಕ್ತವಾದ ಯಜ್ಞಗಳಿಂದ ನನ್ನನ್ನು

ಆರಾಧಿಸುತ್ತಾರೆ ಎಂದೇ ಶಾಂತಾತ್ಮಾ ಅಕಲ್ಮಷ ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನು. ಯಜ್ಞಕ್ಕಾಗಿಯೇ ಅವನು ಔಷಧಿ-ಲತೆಗಳನ್ನೂ, ವೃಕ್ಷಗಳನ್ನೂ, ಪಶುಗಳನ್ನೂ ಮತ್ತು ಮೇಧ-ಅನ್ನಗಳನ್ನೂ, ಹವಿಸ್ಸುಗಳನ್ನೂ ಸೃಷ್ಟಿಸಿದನು.

12012021a ಗೃಹಸ್ಥಾಶ್ರಮಿಣಸ್ತಚ್ಚ ಯಜ್ಞಕರ್ಮ ವಿರೋಧಕಮ್|
12012021c ತಸ್ಮಾದ್ಗಾರ್ಹಸ್ಥ್ಯಮೇವೇಹ ದುಷ್ಕರಂ ದುರ್ಲಭಂ ತಥಾ||

ಗೃಹಸ್ಥಾಶ್ರಮಿಗೆ ಯಜ್ಞಕರ್ಮಗಳು ಮಾಡಲೇ ಬೇಕಾದ ಒಂದು ಬಂಧನ[20]. ಇದರಿಂದಾಗಿ ಗೃಹಸ್ಥಾಶ್ರಮವು ದುಷ್ಕರವೂ ದುರ್ಲಭವೂ ಆಗಿರುತ್ತದೆ.

12012022a ತತ್ಸಂಪ್ರಾಪ್ಯ ಗೃಹಸ್ಥಾ ಯೇ ಪಶುಧಾನ್ಯಸಮನ್ವಿತಾಃ|
12012022c ನ ಯಜಂತೇ ಮಹಾರಾಜ ಶಾಶ್ವತಂ ತೇಷು ಕಿಲ್ಬಿಷಮ್||

ಮಹಾರಾಜ! ಪಶುಧಾನ್ಯಗಳನ್ನು ಸಂಪಾದಿಸಿದ ಯಾವ ಗೃಹಸ್ಥನು ಯಜ್ಞ ಮಾಡುವುದಿಲ್ಲವೋ ಅವನು ಶಾಶ್ವತ ಪಾಪಿಯಾಗುತ್ತಾನೆ.

12012023a ಸ್ವಾಧ್ಯಾಯಯಜ್ಞಾ ಋಷಯೋ ಜ್ಞಾನಯಜ್ಞಾಸ್ತಥಾಪರೇ|
12012023c ಅಥಾಪರೇ ಮಹಾಯಜ್ಞಾನ್ಮನಸ್ಯೇವ ವಿತನ್ವತೇ||

---

[20] ಸಾಧಾರಣವಾಗಿ ವಿರೋಧಕಂ ಎಂಬ ಶಬ್ಧಕ್ಕೆ ವಿರೋಧ ಅಥವಾ ತೊಂದರೆಯನ್ನುಂಟುಮಾಡುವುದು ಎಂಬ ಅರ್ಥವಿದೆ. ಆದರೆ ಈ ಶ್ಲೋಕದಲ್ಲಿ ಈ ಶಬ್ಧಕ್ಕೆ ವ್ಯಾಖ್ಯಾನಕಾರರು – ನಿಗಡಂ ವಿಶೇಷಣಂ ರೋಧಕಂ – ಸರಪಳಿಯಂತೆ ವಿಶೇಷವಾಗಿ ಬಂಧಿಸತಕ್ಕುದು – ಎಂಬ ಅರ್ಥವನ್ನು ಕೊಟ್ಟಿದ್ದಾರೆ. ಗೃಹಸ್ಥನಿಗೆ ಯಜ್ಞಕರ್ಮವು ಒಂದು ಬಂಧನ. ಮಾಡಲೇ ಬೇಕಾದ ಕರ್ಮ ಎಂದು ಅರ್ಥೈಸಿದ್ದಾರೆ.

ಋಷಿಗಳು ಸ್ವಾಧ್ಯಾಯವೆಂಬ ಯಜ್ಞವನ್ನು ಮಾಡುತ್ತಾರೆ. ಇನ್ನು ಕೆಲವರು ಜ್ಞಾನಯಜ್ಞವನ್ನು ಮಾಡುತ್ತಾರೆ. ಇನ್ನೂ ಇತರರು ಮನಸ್ಸಿನಲ್ಲಿಯೇ ಮಹಾಯಜ್ಞಗಳನ್ನು ಮಾಡುತ್ತಿರುತ್ತಾರೆ.

12012024a ಏವಂ ದಾನಸಮಾಧಾನಂ ಮಾರ್ಗಮಾತಿಷ್ಠತೋ ನೃಪ|
12012024c ದ್ವಿಜಾತೇರ್ಬ್ರಹ್ಮಭೂತಸ್ಯ ಸ್ಪೃಹಯಂತಿ ದಿವೌಕಸಃ||

ನೃಪ! ಹೀಗೆ ದಾನ-ಸಮಾಧಾನಗಳ ಮಾರ್ಗವನ್ನು ಹಿಡಿದಿರುವ ಬ್ರಹ್ಮಭೂತ ದ್ವಿಜರನ್ನು ನೋಡಲು ದೇವತೆಗಳೂ ಅಪೇಕ್ಷಿಸುತ್ತಾರೆ.

12012025a ಸ ರತ್ನಾನಿ ವಿಚಿತ್ರಾಣಿ ಸಂಭೃತಾನಿ ತತಸ್ತತಃ|
12012025c ಮಖೇಷ್ವನಭಿಸಂತ್ಯಜ್ಯ ನಾಸ್ತಿಕ್ಯಮಭಿಜಲ್ಪಸಿ||
12012025e ಕುಟುಂಬಮಾಸ್ಥಿತೇ ತ್ಯಾಗಂ ನ ಪಶ್ಯಾಮಿ ನರಾಧಿಪ||

ಅಲ್ಲಲ್ಲಿಂದ ಸಂಗ್ರಹಿಸಿರುವ ವಿಚಿತ್ರ ರತ್ನಗಳನ್ನು ನಾವು ಯಜ್ಞಗಳ ಮೂಲಕವಾಗಿ ಹಂಚಬೇಕಾಗಿದೆ. ಹೀಗಿರುವಾಗ ನೀನು ನಾಸ್ತಿಕನಂತೆ ಮಾತನಾಡುತ್ತಿರುವೆ! ನರಾಧಿಪ! ಕುಟುಂಬದಲ್ಲಿದ್ದುಕೊಂಡು ಸರ್ವಸಂಗಪರಿತ್ಯಾಗಿಯಾಗುವುದನ್ನು ನಾನೆಲ್ಲೂ ನೋಡಿಲ್ಲ.

12012026a ರಾಜಸೂಯಾಶ್ವಮೇಧೇಷು ಸರ್ವಮೇಧೇಷು ವಾ ಪುನಃ|
12012026c ಯ ಚಾನ್ಯೇ ಕ್ರತವಸ್ತಾತ ಬ್ರಾಹ್ಮಣೈರಭಿಪೂಜಿತಾಃ||
12012026e ತೈರ್ಯಜಸ್ವ ಮಹಾರಾಜ ಶಕ್ರೋ ದೇವಪತಿರ್ಯಥಾ||

ಮಹಾರಾಜ! ದೇವಪತಿ ಶಕ್ರನಂತೆ ರಾಜಸೂಯ, ಅಶ್ವಮೇಧ, ಸರ್ವಮೇಧ ಅಥವಾ ಬ್ರಾಹ್ಮಣರಿಂದ ಪೂಜಿತವಾದ ಇನ್ನು ಬೇರೆ ಯಾವುದೇ ಕ್ರತುಗಳನ್ನು ಯಾಜಿಸು.

12012027a ರಾಜ್ಞಃ ಪ್ರಮಾದದೋಷೇಣ ದಸ್ಯುಭಿಃ ಪರಿಮುಷ್ಯತಾಮ್|
12012027c ಅಶರಣ್ಯಃ ಪ್ರಜಾನಾಂ ಯಃ ಸ ರಾಜಾ ಕಲಿರುಚ್ಯತೇ||

ಪ್ರಮಾದದೋಷದಿಂದ ಯಾವ ರಾಜನು ಪ್ರಜೆಗಳಿಗೆ ಕಳ್ಳ-ಕಾಕರಿಂದ ರಕ್ಷಣೆಯನ್ನು ನೀಡುವುದಿಲ್ಲವೋ ಅಂತಹ ರಾಜನಿಗೆ ಕಲಿ ಎಂದು ಕರೆಯುತ್ತಾರೆ.

12012028a ಅಶ್ವಾನ್ಗಾಶ್ಚೈವ ದಾಸೀಶ್ಚ ಕರೇಣೂಶ್ಚ ಸ್ವಲಂಕೃತಾಃ|
12012028c ಗ್ರಾಮಾನ್ಜನಪದಾಂಶ್ಚೈವ ಕ್ಷೇತ್ರಾಣಿ ಚ ಗೃಹಾಣಿ ಚ||
12012029a ಅಪ್ರದಾಯ ದ್ವಿಜಾತಿಭ್ಯೋ ಮಾತ್ಸರ್ಯಾವಿಷ್ಟಚೇತಸಃ|
12012029c ವಯಂ ತೇ ರಾಜಕಲಯೋ ಭವಿಷ್ಯಾಮೋ ವಿಶಾಂ ಪತೇ||

ವಿಶಾಂಪತೇ! ಕುದುರೆಗಳು, ಗೋವುಗಳು, ದಾಸಿಯರು, ಅಲಂಕೃತ ಆನೆಗಳು, ಗ್ರಾಮಗಳು, ಜನಪದಗಳು, ಕ್ಷೇತ್ರಗಳು ಮತ್ತು ಗೃಹಗಳನ್ನು ಮಾತ್ಸರ್ಯವಿಲ್ಲದೇ ದ್ವಿಜರಿಗೆ ಕೊಡದೇ ಇದ್ದರೆ ನಾವೂ ಕೂಡ ಕಲಿರಾಜರಾಗುತ್ತೇವೆ.

12012030a ಅದಾತಾರೋಽಶರಣ್ಯಾಶ್ಚ ರಾಜಕಿಲ್ಬಿಷಭಾಗಿನಃ|
12012030c ದುಃಖಾನಾಮೇವ ಭೋಕ್ತಾರೋ ನ ಸುಖಾನಾಂ ಕದಾ ಚನ||

ದಾನಮಾಡದಿರುವವರು ಮತ್ತು ರಕ್ಷಣೆನೀಡದಿರುವವರು ರಾಜಕಿಲ್ಬಿಷಗಳಿಗೆ ಭಾಗಿಗಳಾಗುತ್ತಾರೆ ಮತ್ತು ದುಃಖವನ್ನೇ ಅನುಭವಿಸುತ್ತಾರೆಯೇ ಹೊರತು ಎಂದೂ ಸುಖಿಗಳಾಗುವುದಿಲ್ಲ.

12012031a ಅನಿಷ್ಟ್ವಾ ಚ ಮಹಾಯಜ್ಞೈರಕೃತ್ವಾ ಚ ಪಿತೃಸ್ವಧಾಮ್|
12012031c ತೀರ್ಥೇಷ್ವನಭಿಸಂತ್ಯಜ್ಯ ಪ್ರವ್ರಜಿಷ್ಯಸಿ ಚೇದಥ||
12012032a ಚಿನ್ನಾಭ್ರಮಿವ ಗಂತಾಸಿ ವಿಲಯಂ ಮಾರುತೇರಿತಮ್|

12012032c ಲೋಕಯೋರುಭಯೋರ್ಭ್ರಷ್ಟೋ ಹ್ಯಂತರಾಲೇ ವ್ಯವಸ್ಥಿತಃ॥

ಇಷ್ಟಿಗಳನ್ನು ಮತ್ತು ಮಹಾಯಜ್ಞಗಳನ್ನು ಮಾಡದೇ, ಪಿತೃಗಳನ್ನು ಪೂಜಿಸದೇ, ತೀರ್ಥಗಳಲ್ಲಿ ಮೀಯದೇ ನೀನು ಅರಣ್ಯಕ್ಕೆ ಹೊರಟೆಯೆಂದಾದರೆ ಭಿರುಗಾಳಿಯ ಹೊಡೆತಕ್ಕೆ ಸಿಲುಕಿ ಒಡೆದು ಚದುರಿಹೋಗುವ ಮೋಡದಂತೆ ನಾಶವಾಗುವೆ. ಇಹ-ಪರ ಲೋಕಗಳೆರಡರಿಂದಲೂ ಭ್ರಷ್ಟನಾಗಿ ಮಧ್ಯದಲ್ಲಿಯೇ ಸಿಲುಕಿಗೊಳ್ಳುವೆ!

12012033a ಅಂತರ್ಬಹಿಶ್ಚ ಯತ್ಕಿಂ ಚಿನ್ಮನೋವ್ಯಾಸಂಗಕಾರಕಮ್।
12012033c ಪರಿತ್ಯಜ್ಯ ಭವೇತ್ತ್ಯಾಗೀ ನ ಯೋ ಹಿತ್ವಾ ಪ್ರತಿಷ್ಠತೇ॥

ಬಹಿರಂಗವಾಗಿ ಮತ್ತು ಅಂತರಂಗವಾಗಿ ಮನಸ್ಸನ್ನು ಯಾವಾಗಲೂ ಸಂಗದಲ್ಲಿ ತೊಡಗಿಸುವಂತಹ ಅಹಂಕಾರ-ಮಮಕಾರಗಳನ್ನು ತೊರೆಯುವುದರಿಂದ ಮಾತ್ರ ತ್ಯಾಗೀ ಎನಿಸಿಕೊಳ್ಳುತ್ತಾನೆಯೇ ಹೊರತು ಕೇವಲ ಗೃಹಸ್ಥಾಶ್ರಮವನ್ನು ತೊರೆಯುವುದರಿಂದಲ್ಲ.

12012034a ಏತಸ್ಮಿನ್ವರ್ತಮಾನಸ್ಯ ವಿಧೌ ವಿಪ್ರನಿಷೇವಿತೇ।
12012034c ಬ್ರಾಹ್ಮಣಸ್ಯ ಮಹಾರಾಜ ನೋಚ್ಚಿತ್ತಿರ್ವಿದ್ಯತೇ ಕ್ವ ಚಿತ್॥

ಮಹಾರಾಜ! ಇಂತಹ ಗೃಹಸ್ಥಾಶ್ರಮದಲ್ಲಿದ್ದುಕೊಂಡು ವೇದಪ್ರಣೀತವಾದ ಮತ್ತು ವಿಪ್ರರು ಗೌರವಿಸುವ ರೀತಿಯಲ್ಲಿ ನಡೆದುಕೊಂಡ ಬ್ರಾಹ್ಮಣನಿಗೆ ಎಂದೂ ಪತನವೆನ್ನುವುದಿರುವುದಿಲ್ಲ.

12012035a ನಿಹತ್ಯ ಶತ್ರೂಂಸ್ತರಸಾ ಸಮೃದ್ಧಾನ್
ಶಕ್ರೋ ಯಥಾ ದೈತ್ಯಬಲಾನಿ ಸಂಖ್ಯೇ।
12012035c ಕಃ ಪಾರ್ಥ ಶೋಚೇನ್ನಿರತಃ ಸ್ವಧರ್ಮೇ
ಪೂರ್ವೈಃ ಸ್ಮೃತೇ ಪಾರ್ಥಿವ ಶಿಷ್ಟಜುಷ್ಟೇ॥

ಪಾರ್ಥ! ಯುದ್ಧದಲ್ಲಿ ಶಕ್ರನು ಹೇಗೆ ದೈತ್ಯಬಲಗಳನ್ನೋ ಹಾಗೆ
ಸಮೃದ್ಧರಾಗಿದ್ದ ಶತ್ರುಗಳನ್ನು ಬೇಗನೆ ಸಂಹರಿಸಿ ಶೋಕಿಸುತ್ತಿರುವ
ನಿನ್ನಂತೆ ಈ ಹಿಂದೆ ರಾಜರಿಗೆ ತಕ್ಕದೆನಿಸಿದ ಸ್ವಧರ್ಮದಲ್ಲಿ
ನಿರತನಾಗಿದ್ದ ಯಾವ ರಾಜನು ತಾನೇ ಶೋಕಿಸಿದ್ದನು?

12012036a ಕ್ಷಾತ್ರೇಣ ಧರ್ಮೇಣ ಪರಾಕ್ರಮೇಣ
ಜಿತ್ವಾ ಮಹೀಂ ಮಂತ್ರವಿದ್ಭ್ಯಃ ಪ್ರದಾಯ|
12012036c ನಾಕಸ್ಯ ಪೃಷ್ಠೇಽಸಿ ನರೇಂದ್ರ ಗಂತಾ
ನ ಶೋಚಿತವ್ಯಂ ಭವತಾದ್ಯ ಪಾರ್ಥ||

ಪಾರ್ಥ! ನರೇಂದ್ರ! ಕ್ಷಾತ್ರಧರ್ಮದ ಪ್ರಕಾರ ಪರಾಕ್ರಮದಿಂದ ಈ
ಮಹಿಯನ್ನು ಗೆದ್ದು, ಮಂತ್ರವತ್ತಾಗಿ ಅದನ್ನು ದ್ವಿಜರಿಗೆ ದಾನಮಾಡಿ,
ನಾಕಕ್ಕಿಂತಲೂ ಮೇಲಿರುವ ಲೋಕಗಳಿಗೆ ಹೋಗುತ್ತೀಯೆ.
ಆದುದರಿಂದ ನೀನು ಶೋಕಿಸುವ ಅವಶ್ಯಕತೆಯಿಲ್ಲ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ನಕುಲವಾಕ್ಯೇ ದ್ವಾದಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ನಕುಲವಾಕ್ಯ ಎನ್ನುವ ಹನ್ನೆರಡನೇ ಅಧ್ಯಾಯವು.

೧೩

ಸಹದೇವವಾಕ್ಯ

ಸಹದೇವನು ಯುಧಿಷ್ಠಿರನಿಗೆ ಮಮತೆ ಮತ್ತು ಆಸಕ್ತಿರಹಿತನಾಗಿ

ರಾಜ್ಯಾಭಾರಮಾಡಲು ಸಲಹೆಯನ್ನು ನೀಡುವುದು (1-13).

12013001 ಸಹದೇವ ಉವಾಚ|
12013001a ನ ಬಾಹ್ಯಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ಭಾರತ|
12013001c ಶಾರೀರಂ ದ್ರವ್ಯಮುತ್ಸೃಜ್ಯ ಸಿದ್ಧಿರ್ಭವತಿ ವಾ ನ ವಾ||

ಸಹದೇವನು ಹೇಳಿದನು: "ಭಾರತ! ಬಾಹ್ಯದ್ರವ್ಯಗಳನ್ನು ತ್ಯಜಿಸುವುದರಿಂದ ಸಿದ್ಧಿಯಾಗುವುದಿಲ್ಲ. ಶಾರೀರಿಕ ದ್ರವ್ಯಗಳಾದ ಅಹಂಕಾರ-ಮಮಕಾರಗಳನ್ನು ತೊರೆಯುವುದರಿಂದ ಸಿದ್ಧಿಯುಂಟಾಗಬಹುದು ಅಥವಾ ಆಗದೆಯೂ ಇರಬಹುದು.

12013002a ಬಾಹ್ಯದ್ರವ್ಯವಿಮುಕ್ತಸ್ಯ ಶಾರೀರೇಷು ಚ ಗೃಧ್ಯತಃ|
12013002c ಯೋ ಧರ್ಮೋ ಯತ್ಸುಖಂ ವಾ ಸ್ಯಾದ್ದ್ವಿಷತಾಂ ತತ್ತಥಾಸ್ತು ನಃ||

ಬಾಹ್ಯದ್ರವ್ಯಗಳಿಂದ ವಿಹೀನನಾಗಿ ಶಾರೀರಿಕ ದ್ರವ್ಯಗಳಲ್ಲಿ ಆಸಕ್ತಿಯಿರುವವನ ಧರ್ಮವು ಯಾವುದೋ ಮತ್ತು ಅಂಥವನಿಗೆ ಯಾವ ಸುಖವು ದೊರೆಯುವುದೋ ಅದು ನಮ್ಮ ಶತ್ರುಗಳ ಧರ್ಮ-ಸುಖಗಳಾಗಲಿ.

12013003a ಶಾರೀರಂ ದ್ರವ್ಯಮುತ್ಸೃಜ್ಯ ಪೃಥಿವೀಮನುಶಾಸತಃ|
12013003c ಯೋ ಧರ್ಮೋ ಯತ್ಸುಖಂ ವಾ ಸ್ಯಾತ್ಸುಹೃದಾಂ ತತ್ತಥಾಸ್ತು ನಃ||

ಶಾರೀರಿಕ ದ್ರವ್ಯಗಳನ್ನು ತ್ಯಜಿಸಿ ಪೃಥ್ವಿಯನ್ನು ಆಳುವವನ ಧರ್ಮವು ಯಾವುದೋ ಮತ್ತು ಅಂಥವನಿಗೆ ಯಾವ ಸುಖವು ದೊರೆಯುವುದೋ ಆ ಧರ್ಮ-ಸುಖಗಳು ನಮ್ಮ ಆತ್ಮೀಯರದ್ದಾಗಲಿ.

12013004a ದ್ವ್ಯಕ್ಷರಸ್ತು ಭವೇನ್ಮೃತ್ಯುಸ್ತ್ರ್ಯಕ್ಷರಂ ಬ್ರಹ್ಮ ಶಾಶ್ವತಮ್|

12013004c ಮಮೇತಿ ಚ ಭವೇನ್ಮೃತ್ಯುರ್ನ ಮಮೇತಿ ಚ ಶಾಶ್ವತಮ್‌॥

“ಮಮ” ಎನ್ನುವ ಎರಡಕ್ಷರಗಳನ್ನು ಅನುಸಂಧಾನ ಮಾಡುವುದರಿಂದ ಮೃತ್ಯುವುಂಟಾಗುತ್ತದೆ. “ನ ಮಮ” ಎಂಬ ಮೂರಕ್ಷರಗಳನ್ನು ಅನುಸಂಧಾನಮಾಡುವುದರಿಂದ ಶಾಶ್ವತ ಬ್ರಹ್ಮಲೋಕವು ಪ್ರಾಪ್ತವಾಗುತ್ತದೆ.

12013005a ಬ್ರಹ್ಮಮೃತ್ಯೂ ಚ ತೌ ರಾಜನ್ನಾತ್ಮನ್ಯೇವ ಸಮಾಶ್ರಿತೌ|
12013005c ಅದೃಶ್ಯಮಾನೌ ಭೂತಾನಿ ಯೋಧಯೇತಾಮಸಂಶಯಮ್‌॥

ರಾಜನ್‌! ಈ ಬ್ರಹ್ಮ-ಮೃತ್ಯುಗಳು ಭೂತಗಳ ಆತ್ಮದಲ್ಲಿಯೇ ಅದೃಶ್ಯರಾಗಿ ಇದ್ದುಕೊಂಡು ಪರಸ್ಪರರ ವಿರುದ್ಧವಾಗಿ ಹೋರಾಡುತ್ತಿರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.

12013006a ಅವಿನಾಶೋಽಸ್ಯ ಸತ್ತ್ವಸ್ಯ ನಿಯತೋ ಯದಿ ಭಾರತ|
12013006c ಛಿತ್ತ್ವಾ ಶರೀರಂ ಭೂತಾನಾಂ ನ ಹಿಂಸಾ ಪ್ರತಿಪತ್ಸ್ಯತೇ॥

ಭಾರತ! ಈ ಸತ್ತ್ವವು ಅವಿನಾಶೀ ಎಂದು ನಿಯಮವಿರುವುದರಿಂದ ಜೀವಿಗಳ ಶರೀರವನ್ನು ಕತ್ತರಿಸಿದರೂ ಆ ಸತ್ತ್ವಕ್ಕೆ ಹಿಂಸೆಯಾಗುವುದಿಲ್ಲ ಎಂದಲ್ಲವೇ?

12013007a ಅಥಾಪಿ ಚ ಸಹೋತ್ಪತ್ತಿಃ ಸತ್ತ್ವಸ್ಯ ಪ್ರಲಯಸ್ತಥಾ|
12013007c ನಷ್ಟೇ ಶರೀರೇ ನಷ್ಟಂ ಸ್ಯಾದ್ವೃಥಾ ಚ ಸ್ಯಾತ್ಕ್ರಿಯಾಪಥಃ॥

ಆದರೆ ಶರೀರದೊಂದಿಗೆ ಸತ್ತ್ವವು ಹುಟ್ಟುತ್ತದೆ ಮತ್ತು ಅದರೊಂದಿಗೆ ವಿನಾಶವೂ ಆಗುತ್ತದೆ ಎಂದು ತಿಳಿದುಕೊಂಡರೆ ನಾವು ಮಾಡುವ ಕ್ರಿಯೆಗಳೆಲ್ಲವೂ ವ್ಯರ್ಥವೇ ಎಂದಾಯಿತಲ್ಲವೇ?

12013008a ತಸ್ಮಾದೇಕಾಂತಮುತ್ಸೃಜ್ಯ ಪೂರ್ವ್ಯೈಃ ಪೂರ್ವತರೈಶ್ಚ ಯಃ|
12013008c ಪಂಥಾ ನಿಷೇವಿತಃ ಸದ್ಭಿಃ ಸ ನಿಷೇವ್ಯೋ ವಿಜಾನತಾ||

ಆದುದರಿಂದ ತಿಳಿದವನು ಏಕಾಂತವನ್ನು ತ್ಯಜಿಸಿ ನಮ್ಮ ಪೂರ್ವಜರು ಮತ್ತು ಅವರ ಪೂರ್ವಜರು ಹಾಗೂ ಸತ್ಪುರುಷರು ಅನುಸರಿಸುವ ಮಾರ್ಗವನ್ನೇ ಅನುಸರಿಸಬೇಕು.

[21]12013009a ಲಬ್ಧ್ವಾಪಿ ಪೃಥಿವೀಂ ಕೃತ್ಸ್ನಾಂ ಸಹಸ್ಥಾವರಜಂಗಮಾಮ್|
12013009c ನ ಭುಂಕ್ತೇ ಯೋ ನೃಪಃ ಸಮ್ಯಗ್ನಿಷ್ಫಲಂ ತಸ್ಯ ಜೀವಿತಮ್||

ಸ್ಥಾವರ-ಜಂಗಮಗಳೊಡನೆ ಇಡೀ ಪೃಥ್ವಿಯನ್ನು ಪಡೆದರೂ ಯಾವ ನೃಪನು ಅದನ್ನು ಭೋಗಿಸುವುದಿಲ್ಲವೋ ಅಂಥವನ ಜೀವನವು ಸಂಪೂರ್ಣವಾಗಿ ನಿಷ್ಫಲವೇ ಸರಿ.

12013010a ಅಥ ವಾ ವಸತೋ ರಾಜನ್ವನೇ ವನ್ಯೇನ ಜೀವತಃ|
12013010c ದ್ರವ್ಯೇಷು ಯಸ್ಯ ಮಮತಾ ಮೃತ್ಯೋರಾಸ್ಯೇ ಸ ವರ್ತತೇ||

ರಾಜನ್! ವನದಲ್ಲಿ ವಾಸವಾಗಿರಲಿ ಅಥವಾ ವನ್ಯಪದಾರ್ಥಗಳಿಂದ ಜೀವನ ನಡೆಸುತ್ತಿರಲಿ – ಯಾರ ಮಮತೆಯು ದ್ರವ್ಯಗಳ ಮೇಲಿರುವುದೋ ಅವನು ಮೃತ್ಯುವಶನಾದಂತೆಯೇ ಸರಿ.

12013011a ಬಾಹ್ಯಾಭ್ಯಂತರಭೂತಾನಾಂ ಸ್ವಭಾವಂ ಪಶ್ಯ ಭಾರತ|

---

[21] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಎರಡು ಅಧಿಕ ಶ್ಲೋಕಗಳಿವೆ: ಸ್ವಾಯಂಭುವೇನ ಮನುನಾ ತಥಾನ್ಯೈಶ್ಚ ಕ್ರವರ್ತಿಭಿಃ| ಯದ್ಯಯಂ ಹ್ಯಧಮಃ ಪಂಥಾಃ ಕಸ್ಮಾತ್ತೈಸ್ತೈರ್ನಿಷೇವಿತಃ|| ಕೃತತ್ರೇತಾದಿಯುಕ್ತಾನಿ ಗಣವಂತಿ ಚ ಭಾರತ| ಯುಗಾನಿ ಬಹುಶಸ್ತೈಶ್ಚ ಭುಕ್ತಯಮವನೀ ನೃಪ|| (ಗೀತಾ ಪ್ರೆಸ್).

12013011c ಯೇ ತು ಪಶ್ಯಂತಿ ತದ್ಭಾವಂ ಮುಚ್ಯಂತೇ ಮಹತೋ ಭಯಾತ್‌॥

ಭಾರತ! ಜೀವಿಗಳ ಹೊರಗಿನ ಮತ್ತು ಒಳಗಿನ ಸ್ವಭಾವವನ್ನು ನೋಡು. ಅವುಗಳ ಭಾವಗಳನ್ನು ತಿಳಿದವನು ಮಹಾಭಯದಿಂದ ಮುಕ್ತನಾಗುತ್ತಾನೆ.

12013012a ಭವಾನ್ಪಿತಾ ಭವಾನ್ಮಾತಾ ಭವಾನ್ಭ್ರಾತಾ ಭವಾನ್ಗುರುಃ|
12013012c ದುಃಖಿಪ್ರಲಾಪಾನಾರ್ತಸ್ಯ ತಸ್ಮಾನ್ಮೇ ಕ್ಷಂತುಮರ್ಹಸಿ‌॥

ನೀನೇ ನನ್ನ ತಂದೆ, ತಾಯಿ, ಅಣ್ಣ ಮತ್ತು ಗುರು. ದುಃಖದಿಂದ ಪ್ರಲಪಿಸುತ್ತಿರುವ ಈ ಆರ್ತನನ್ನು ನೀನು ಕ್ಷಮಿಸಬೇಕು.

12013013a ತಥ್ಯಂ ವಾ ಯದಿ ವಾತಥ್ಯಂ ಯನ್ಮಯ್ಯೈತತ್ಪ್ರಭಾಷಿತಮ್‌|
12013013c ತದ್ವಿದ್ಧಿ ಪೃಥಿವೀಪಾಲ ಭಕ್ತ್ಯಾ ಭರತಸತ್ತಮ‌॥

ಭರತಸತ್ತಮ! ಪೃಥ್ವೀಪಾಲಕ! ಕೇವಲ ಭಕ್ತಿಯಿಂದ ನಾನು ನಿಜವಾಗಿರುವ ಅಥವಾ ಸುಳ್ಳಾಗಿರುವ ಈ ಮಾತುಗಳನ್ನಾಡಿದ್ದೇನೆಂದು ನೀನು ತಿಳಿದುಕೊಳ್ಳಬೇಕು.””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಸಹದೇವವಾಕ್ಯೇ ತ್ರಯೋದಶೋಽಧ್ಯಾಯಃ‌॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಸಹದೇವವಾಕ್ಯ ಎನ್ನುವ ಹದಿಮೂರನೇ ಅಧ್ಯಾಯವು.

೧೪

ದ್ರೌಪದೀವಾಕ್ಯ

ದ್ರೌಪದಿಯು ರಾಜದಂಡಧಾರಣಪೂರ್ವಕ ಪೃಥ್ವಿಯ ಶಾಸನಮಾಡುವಂತೆ ಯುಧಿಷ್ಠಿರನನ್ನು ಪ್ರೇರೇಪಿಸುವುದು (1-39).

12014001 ವೈಶಂಪಾಯನ ಉವಾಚ|

12014001a ಅವ್ಯಾಹರತಿ ಕೌಂತೇಯೇ ಧರ್ಮರಾಜೇ ಯುಧಿಷ್ಠಿರೇ|

12014001c ಭ್ರಾತೃಣಾಂ ಬ್ರುವತಾಂ ತಾಂಸ್ತಾನ್ವಿಧಾನ್ವೇದನಿಶ್ಚಯಾನ್||

12014002a ಮಹಾಭಿಜನಸಂಪನ್ನಾ ಶ್ರೀಮತ್ಯಾಯತಲೋಚನಾ|

12014002c ಅಭ್ಯಭಾಷತ ರಾಜೇಂದ್ರಂ ದ್ರೌಪದೀ ಯೋಷಿತಾಂ ವರಾ||

12014003a ಆಸೀನಮೃಷಭಂ ರಾಜ್ಞಾಂ ಭ್ರಾತೃಭಿಃ ಪರಿವಾರಿತಮ್|

12014003c ಸಿಂಹಶಾರ್ದೂಲಸದೃಶೈರ್ವಾರಣೈರಿವ ಯೂಥಪಮ್||

12014004a ಅಭಿಮಾನವತೀ ನಿತ್ಯಂ ವಿಶೇಷೇಣ ಯುಧಿಷ್ಠಿರೇ|

12014004c ಲಾಲಿತಾ ಸತತಂ ರಾಜ್ಞಾ ಧರ್ಮಜ್ಞಾ ಧರ್ಮದರ್ಶಿನೀ||

12014005a ಆಮಂತ್ರ್ಯ ವಿಪುಲಶ್ರೋಣೀ ಸಾಮ್ನಾ ಪರಮವಲ್ಗುನಾ|

12014005c ಭರ್ತಾರಮಭಿಸಂಪ್ರೇಕ್ಷ್ಯ ತತೋ ವಚನಮಬ್ರವೀತ್||

ವೈಶಂಪಾಯನನು ಹೇಳಿದನು: "ವಿವಿಧ ವೇದನಿಶ್ಚಯಗಳ ಕುರಿತು ತಮ್ಮಂದಿರು ಹೇಳುತ್ತಿದ್ದರೂ ಕೌಂತೇಯ ಧರ್ಮರಾಜ ಯುಧಿಷ್ಠಿರನು ಸುಮ್ಮನಿರಲು ಸತ್ಕುಲಸಂಪನ್ನೆ ವಿಶಾಲಾಕ್ಷಿ ಸ್ತ್ರೀಯರಲ್ಲಿ ಶ್ರೇಷ್ಠೆ ನಿತ್ಯವೂ ವಿಶೇಷ ಅಭಿಮಾನದಿಂದ ಯುಧಿಷ್ಠಿರನ ಸೇವೆಗೈಯುತ್ತಿದ್ದ, ವಿಪುಲಶ್ರೋಣೀ ಧರ್ಮಜ್ಞೆ ಧರ್ಮದರ್ಶಿನೀ ದ್ರೌಪದಿಯು ಆನೆಗಳಿಂದ ಸುತ್ತುವರೆಯಲ್ಪಟ್ಟ ಸಲಗದಂತೆ ಸಹೋದರರ ಮಧ್ಯದಲ್ಲಿ ಕುಳಿತಿದ್ದ ಸಿಂಹಶಾರ್ದೂಲ ರಾಜ ಪತಿಯನ್ನು ನೋಡಿ ಸಾಂತ್ವನ ಪೂರ್ಣವಾದ

ಈ ಮಧುರ ಮಾತುಗಳನ್ನಾಡಿದಳು:

12014006a ಇಮೇ ತೇ ಭ್ರಾತರಃ ಪಾರ್ಥ ಶುಷ್ಯಂತ ಸ್ತೋಕಕಾ ಇವ|
12014006c ವಾವಾಶ್ಯಮಾನಾಸ್ತಿಷ್ಠಂತಿ ನ ಚೈನಾನಭಿನಂದಸೇ||

“ಪಾರ್ಥ! ನಿನ್ನ ಈ ಸಹೋದರರು ಬಾಡಿದ ಮುಖವುಳ್ಳವರಾಗಿದ್ದಾರೆ. ನಿನ್ನನ್ನು ಬೇಡಿಕೊಳ್ಳುತ್ತಿದ್ದರೂ ನೀನು ಅವರನ್ನು ಅಭಿನಂದಿಸುತ್ತಿಲ್ಲ!

12014007a ನಂದಯ್ಯೈತಾನ್ಮಹಾರಾಜ ಮತ್ತಾನಿವ ಮಹಾದ್ವಿಪಾನ್|
12014007c ಉಪಪನ್ನೇನ ವಾಕ್ಯೇನ ಸತತಂ ದುಃಖಭಾಗಿನಃ||

ಮಹಾರಾಜ! ಮದಿಸಿದ ಮಹಾಗಜಗಳಂತಿರುವ ಇವರನ್ನು ಸಂತೋಷಗೊಳಿಸು. ಸತತವೂ ದುಃಖವನ್ನೇ ಅನುಭವಿಸುತ್ತಿರುವ ಅವರನ್ನು ನಿನ್ನ ಮಾತುಗಳಿಂದ ಸಮಾಧಾನಗೊಳಿಸು.

12014008a ಕಥಂ ದ್ವೈತವನೇ ರಾಜನ್ಪೂರ್ವಮುಕ್ತ್ವಾ ತಥಾ ವಚಃ|
12014008c ಭ್ರಾತೄನೇತಾನ್ನ ಸಹಿತಾನ್ನೀತವಾತಾತಪಾರ್ದಿತಾನ್||

ಹಿಂದೆ ದ್ವೈತವನದಲ್ಲಿ ಸಹೋದರರ ಸಹಿತ ಛಳಿ-ಗಾಳಿ-ಬಿಸಿಲುಗಳಿಂದ ಪೀಡಿತರಾಗಿದ್ದಾಗ ನೀನು ಅವರಿಗೆ ಹೇಳಿದ್ದ ಈ ಮಾತುಗಳು ನಿನಗೆ ಹೇಗೆ ಈಗ ನೆನಪಿಲ್ಲ?

12014009a ವಯಂ ದುರ್ಯೋಧನಂ ಹತ್ವಾ ಮೃಧೇ ಭೋಕ್ಷ್ಯಾಮ ಮೇದಿನೀಮ್|
12014009c ಸಂಪೂರ್ಣಾಂ ಸರ್ವಕಾಮಾನಾಮಾಹವೇ ವಿಜಯೈಷಿಣಃ||
12014010a ವಿರಥಾಂಶ್ಚ ರಥಾನ್ಕೃತ್ವಾ ನಿಹತ್ಯ ಚ ಮಹಾಗಜಾನ್|
12014010c ಸಂಸ್ತೀರ್ಯ ಚ ರಥೈರ್ಭೂಮಿಂ ಸಸಾದಿಭಿರರಿಂದಮಾಃ||
12014011a ಯಜತಾಂ ವಿವಿಧೈರ್ಯಜ್ಞೈಃ ಸಮೃದ್ಧೈರಾಪ್ತದಕ್ಷಿಣೈಃ|

12014011c ವನವಾಸಕೃತಂ ದುಃಖಂ ಭವಿಷ್ಯತಿ ಸುಖಾಯ ನಃ||

“ವಿಜಯೇಚ್ಛುಗಳಾದ ನಾವು ಯುದ್ಧದಲ್ಲಿ ದುರ್ಯೋಧನನನ್ನು ವಧಿಸಿ, ರಥಿಗಳನ್ನು ರಥಹೀನರನ್ನಾಗಿಸಿ, ಮಹಾಗಜಗಳನ್ನು ಸಂಹರಿಸಿ, ಕುದುರೆ ಸವಾರರಿಂದ ಕೂಡಿದ ರಥಗಳಿಂದ ಈ ಭೂಮಿಯನ್ನು ಮುಚ್ಚಿ ಸಕಲ ಕಾಮನವಸ್ತುಗಳಿಂದಲೂ ಸಮೃದ್ಧವಾದ ಈ ಮೇದಿನಿಯನ್ನು ಭೋಗಿಸೋಣ. ಸಮೃದ್ಧ ದಾನ-ದಕ್ಷಿಣೆಗಳಿಂದ ಕೂಡಿದ ವಿವಿಧ ಯಜ್ಞಗಳನ್ನು ಯಜಿಸಿ ವನವಾಸದಲ್ಲಿ ಪಡೆದ ದುಃಖವು ಮುಂದೆ ಸುಖದಲ್ಲಿಯೇ ಕೊನೆಗೊಳ್ಳುವಂತೆ ಮಾಡೋಣ!”

12014012a ಇತ್ಯೇತಾನೇವಮುಕ್ತ್ವಾ ತ್ವಂ ಸ್ವಯಂ ಧರ್ಮಭೃತಾಂ ವರ|
12014012c ಕಥಮದ್ಯ ಪುನರ್ವೀರ ವಿನಿಹಂಸಿ ಮನಾಂಸ್ಯುತ||

ಧರ್ಮಭೃತರಲ್ಲಿ ಶ್ರೇಷ್ಠನೇ! ವೀರ! ಇದೇ ಮುಂತಾಗಿ ಆಗ ಸ್ವಯಂ ನೀನೇ ಮಾತನಾಡಿ ಈಗ ಪುನಃ ನಮ್ಮ ಮನಸ್ಸನ್ನು ಏಕೆ ನೋಯಿಸುತ್ತಿರುವೆ?

12014013a ನ ಕ್ಲೀಬೋ ವಸುಧಾಂ ಭುಂಕ್ತೇ ನ ಕ್ಲೀಬೋ ಧನಮಶ್ನುತೇ|
12014013c ನ ಕ್ಲೀಬಸ್ಯ ಗೃಹೇ ಪುತ್ರಾ ಮತ್ಸ್ಯಾಃ ಪಂಕ ಇವಾಸತೇ||

ಹೇಡಿಯು ವಸುಧೆಯನ್ನು ಭೋಗಿಸಲಾರ. ಹೇಡಿಯು ಧನವನ್ನು ಸಂಗ್ರಹಿಸಲಾರ. ಕೆಸರಿನಲ್ಲಿ ಮೀನುಗಳು ಇರಲಾರದಂತೆ ಹೇಡಿಯ ಮನೆಯಲ್ಲಿ ಪುತ್ರರೂ ಇರಲಾರರು.

12014014a ನಾದಂಡಃ ಕ್ಷತ್ರಿಯೋ ಭಾತಿ ನಾದಂಡೋ ಭೂತಿಮಶ್ನುತೇ|



12014014c ನಾದಂಡಸ್ಯ ಪ್ರಜಾ ರಾಜ್ಞಃ ಸುಖಮೇಧಂತಿ ಭಾರತ||

ಭಾರತ! ದಂಡಧಾರಿಯಲ್ಲದ ಕ್ಷತ್ರಿಯನು ಶೋಭಿಸುವುದಿಲ್ಲ. ದಂಡಧಾರಿಯಲ್ಲದವನು ಭೂಮಿಯನ್ನು ಭೋಗಿಸುವುದಿಲ್ಲ. ದಂಡಧಾರಿಯಲ್ಲದ ರಾಜನ ಪ್ರಜೆಗಳು ಸುಖವಾಗಿರುವುದಿಲ್ಲ.

12014015a ಮಿತ್ರತಾ ಸರ್ವಭೂತೇಷು ದಾನಮಧ್ಯಯನಂ ತಪಃ|
12014015c ಬ್ರಾಹ್ಮಣಸ್ಯೈಷ ಧರ್ಮಃ ಸ್ಯಾನ್ನ ರಾಜ್ಞೋ ರಾಜಸತ್ತಮ||

ರಾಜಸತ್ತಮ! ಸರ್ವಭೂತಗಳಲ್ಲಿ ಮಿತ್ರತ್ವ, ದಾನ, ಅಧ್ಯಯನ ಮತ್ತು ತಪಸ್ಸು ಇವು ಬ್ರಾಹ್ಮಣನ ಧರ್ಮ. ರಾಜನದ್ದಲ್ಲ.

12014016a ಅಸತಾಂ ಪ್ರತಿಷೇಧಶ್ಚ ಸತಾಂ ಚ ಪರಿಪಾಲನಮ್|
12014016c ಏಷ ರಾಜ್ಞಾಂ ಪರೋ ಧರ್ಮಃ ಸಮರೇ ಚಾಪಲಾಯನಮ್||

ದುಷ್ಟನಿಗ್ರಹ, ಶಿಷ್ಟ ಪರಿಪಾಲನೆ ಮತ್ತು ಯುದ್ಧದಲ್ಲಿ ಪಲಾಯನ ಮಾಡದಿರುವುದು - ಇವು ರಾಜರ ಪರಮ ಧರ್ಮ.

12014017a ಯಸ್ಮಿನ್ ಕ್ಷಮಾ ಚ ಕ್ರೋಧಶ್ಚ ದಾನಾದಾನೇ ಭಯಾಭಯೇ|
12014017c ನಿಗ್ರಹಾನುಗ್ರಹೌ ಚೋಭೌ ಸ ವೈ ಧರ್ಮವಿದುಚ್ಯತೇ||

ಯಾರಲ್ಲಿ ಕ್ಷಮೆ ಮತ್ತು ಕ್ರೋಧಗಳೆರಡೂ, ದಾನ-ಆದಾನಗಳೆರಡೂ, ಭಯ-ಅಭಯಗಳೆರಡೂ, ನಿಗ್ರಹ-ಅನುಗ್ರಹಗಳೆರಡೂ ಇರುತ್ತವೆಯೋ ಆ ರಾಜನೇ ಧರ್ಮವಿದುವೆಂದು ಹೇಳಬಹುದು.

12014018a ನ ಶ್ರುತೇನ ನ ದಾನೇನ ನ ಸಾಂತ್ವೇನ ನ ಚೇಜ್ಯಯಾ|
12014018c ತ್ವಯೇಯಂ ಪೃಥಿವೀ ಲಬ್ಧಾ ನೋತ್ಕೋಚೇನ ತಥಾಪ್ಯುತ||

ನೀನು ಈ ರಾಜ್ಯವನ್ನು ವೇದಾಧ್ಯಯನದಿಂದಾಗಲೀ,

ದಾನಗಳಿಂದಾಗಲೀ, ಇತರರನ್ನು ಸಾಂತ್ವನಗೊಳಿಸಿದುದರಿಂದಾಗಲೀ, ಯಜ್ಞ-ಯಾಗಗಳನ್ನು ಮಾಡಿದುದರಿಂದಾಗಲೀ, ಅಥವಾ ಇತರರನ್ನು ಬೇಡಿ ಪಡೆದುಕೊಳ್ಳಲಿಲ್ಲ.

12014019a ಯತ್ತದ್ಬಲಮಮಿತ್ರಾಣಾಂ ತಥಾ ವೀರಸಮುದ್ಯತಮ್|
12014019c ಹಸ್ತ್ಯಶ್ವರಥಸಂಪನ್ನಂ ತ್ರಿಭಿರಂಗೈರ್ಮಹತ್ತರಮ್||
12014020a ರಕ್ಷಿತಂ ದ್ರೋಣಕರ್ಣಾಭ್ಯಾಮಶ್ವತ್ಥಾಮ್ನಾ ಕೃಪೇಣ ಚ|
12014020c ತತ್ತ್ವತ್ತ್ವಯಾ ನಿಹತಂ ವೀರ ತಸ್ಮಾದ್ಭುಂಕ್ಷ್ವ ವಸುಂಧರಾಮ್||

ವೀರ! ಅತ್ಯಂತ ವೀರರಾಗಿದ್ದ, ಆನೆ-ಕುದುರೆ-ರಥಗಳೆಂಬ ಮೂರು ಶ್ರೇಷ್ಠ ಸೇನಾಭಾಗಗಳಿಂದ ಸಂಪನ್ನವಾಗಿದ್ದ, ದ್ರೋಣ-ಕರ್ಣ-ಅಶ್ವತ್ಥಾಮ-ಕೃಪರಿಂದ ರಕ್ಷಿತವಾಗಿದ್ದ ಶತ್ರುಸೇನೆಗಳನ್ನು ಸಂಹರಿಸಿ ಗಳಿಸಿದ ಈ ವಸುಂಧರೆಯನ್ನು ನೀನು ಭೋಗಿಸು!

12014021a ಜಂಬೂದ್ವೀಪೋ ಮಹಾರಾಜ ನಾನಾಜನಪದಾಯುತಃ|
12014021c ತ್ವಯಾ ಪುರುಷಶಾರ್ದೂಲ ದಂಡೇನ ಮೃದಿತಃ ಪ್ರಭೋ||

ಮಹಾರಾಜ! ಪುರುಷಶಾರ್ದೂಲ! ಪ್ರಭೋ! ನಾನಾ ಜನಪದಗಳಿಂದ ಕೂಡಿರುವ ಈ ಜಂಬೂದ್ವೀಪವನ್ನು ನೀನು ದಂಡದಿಂದ ಶತ್ರುಗಳನ್ನು ಮರ್ದಿಸಿ ಪಡೆದುಕೊಂಡಿರುವೆ.

12014022a ಜಂಬೂದ್ವೀಪೇನ ಸದೃಶಃ ಕ್ರೌಂಚದ್ವೀಪೋ ನರಾಧಿಪ|
12014022c ಅಪರೇಣ ಮಹಾಮೇರೋರ್ದಂಡೇನ ಮೃದಿತಸ್ತ್ವಯಾ||

ನರಾಧಿಪ! ಮಹಾಮೇರುವಿನ ಕೆಳಭಾಗದಲ್ಲಿರುವ ಜಂಬೂದ್ವೀಪದಂತೆಯೇ ಇರುವ ಇನ್ನೊಂದು ದ್ವೀಪ ಕ್ರೌಂಚವನ್ನು ನೀನು ದಂಡದಿಂದ ಮರ್ದಿಸಿ ಪಡೆದುಕೊಂಡಿರುವೆ.

12014023a ಕ್ರೌಂಚದ್ವೀಪೇನ ಸದೃಶಃ ಶಾಕದ್ವೀಪೋ ನರಾಧಿಪ|
12014023c ಪೂರ್ವೇಣ ತು ಮಹಾಮೇರೋರ್ದಂಡೇನ ಮೃದಿತಸ್ತ್ವಯಾ||

ನರಾಧಿಪ! ಮಹಾಮೇರು ಪರ್ವತದ ಪೂರ್ವದಲ್ಲಿರುವ ಮತ್ತು ಕ್ರೌಂಚದ್ವೀಪದಂತಿರುವ ಶಾಕದ್ವೀಪವನ್ನೂ ಕೂಡ ನೀನು ದಂಡದಿಂದ ಶತ್ರುಗಳನ್ನು ಮರ್ದಿಸಿ ಸ್ವಾಧೀನಪಡೆಸಿಕೊಂಡಿರುವೆ.

12014024a ಉತ್ತರೇಣ ಮಹಾಮೇರೋಃ ಶಾಕದ್ವೀಪೇನ ಸಂಮಿತಃ|
12014024c ಭದ್ರಾಶ್ವಃ ಪುರುಷವ್ಯಾಘ್ರ ದಂಡೇನ ಮೃದಿತಸ್ತ್ವಯಾ||

ಪುರುಷವ್ಯಾಘ್ರ! ಮಹಾಮೇರುವಿನ ಉತ್ತರದಲ್ಲಿರುವ ಶಾಕದ್ವೀಪಕ್ಕೆ ಕೂಡಿಕೊಂಡಿರುವ ಭದ್ರಾಶ್ವವನ್ನೂ ನೀನು ದಂಡದಿಂದ ಶತ್ರುಗಳನ್ನು ಮರ್ದಿಸಿ ಪಡೆದುಕೊಂಡಿರುವೆ.

12014025a ದ್ವೀಪಾಶ್ಚ ಸಾಂತರದ್ವೀಪಾ ನಾನಾಜನಪದಾಲಯಾಃ|
12014025c ವಿಗಾಹ್ಯ ಸಾಗರಂ ವೀರ ದಂಡೇನ ಮೃದಿತಾಸ್ತ್ವಯಾ||

ವೀರ! ಅನೇಕ ದೇಶಗಳಿಂದ ಕೂಡಿರುವ ದ್ವೀಪ-ದ್ವೀಪಾಂತರಗಳನ್ನೂ, ಸಮುದ್ರದ ಆಚೆ ಇರುವ ಎಲ್ಲ ಪ್ರದೇಶಗಳನ್ನೂ ದಂಡದಿಂದಲೇ ಅಧಿಕಾರಕ್ಕೊಳಪಡಿಸಿಕೊಂಡಿರುವೆ.

12014026a ಏತಾನ್ಯಪ್ರತಿಮಾನಿ ತ್ವಂ ಕೃತ್ವಾ ಕರ್ಮಾಣಿ ಭಾರತ|
12014026c ನ ಪ್ರೀಯಸೇ ಮಹಾರಾಜ ಪೂಜ್ಯಮಾನೋ ದ್ವಿಜಾತಿಭಿಃ||

ಭಾರತ! ಮಹಾರಾಜ! ಈ ಅಪ್ರತಿಮ ಕರ್ಮಗಳನ್ನು ಮಾಡಿ ದ್ವಿಜರಿಂದ ಗೌರವಿಸಲ್ಪಟ್ಟರೂ ನಿನಗದು ಸಂತೋಷವನ್ನು ನೀಡುತ್ತಿಲ್ಲ!

12014027a ಸ ತ್ವಂ ಭ್ರಾತೄನಿಮಾನ್ದೃಷ್ಟ್ವಾ ಪ್ರತಿನಂದಸ್ವ ಭಾರತ|

12014027c ಋಷಭಾನಿವ ಸಂಮತ್ತಾನ್ಗಜೇಂದ್ರಾನೂರ್ಜಿತಾನಿವ||

ಭಾರತ! ನಿನ್ನೊಡನೆ ಸಹಕರಿಸಿದ ಈ ನಿನ್ನ ಮದಿಸಿದ ಆನೆಗಳಂತೆ ಮತ್ತು ಗೂಳಿಗಳಂತಿರುವ ಸಹೋದರರನ್ನು ನೋಡಿ ಆನಂದಿಸು!

12014028a ಅಮರಪ್ರತಿಮಾಃ ಸರ್ವೇ ಶತ್ರುಸಾಹಾಃ ಪರಂತಪಾಃ|
12014028c ಏಕೋಽಪಿ ಹಿ ಸುಖಾಯೈಷಾಂ ಕ್ಷಮಃ ಸ್ಯಾದಿತಿ ಮೇ ಮತಿಃ||

ಅಮರರಂತಿರುವ, ಶತ್ರುಗಳ ವೇಗವನ್ನು ತಡೆಯಬಲ್ಲ, ಪರಂತಪರು ಒಬ್ಬೊಬ್ಬರೂ ನನ್ನನ್ನು ಸುಖದಿಂದಿಟ್ಟಿರಲು ಸಮರ್ಥರೆಂದು ನನಗನ್ನಿಸುತ್ತದೆ.

12014029a ಕಿಂ ಪುನಃ ಪುರುಷವ್ಯಾಘ್ರಾಃ ಪತಯೋ ಮೇ ನರರ್ಷಭಾಃ|
12014029c ಸಮಸ್ತಾನೀಂದ್ರಿಯಾಣೀವ ಶರೀರಸ್ಯ ವಿಚೇಷ್ಟನೇ||

ಶರೀರದ ಸರ್ವೇಂದ್ರಿಯಗಳೂ ಮನುಷ್ಯನನ್ನು ಸುಖಪಡಿಸಲು ಶ್ರಮಿಸುವಂತೆ ಈ ಎಲ್ಲ ಪುರುಷವ್ಯಾಘ್ರ ನರರ್ಷಭ ಪತಿಗಳೂ ಪ್ರಯತ್ನಿಸುತ್ತಿದ್ದಾರೆ!

12014030a ಅನೃತಂ ಮಾಬ್ರವೀಚ್ಚ್ವಶ್ರೂಃ ಸರ್ವಜ್ಞಾ ಸರ್ವದರ್ಶಿನೀ|
12014030c ಯುಧಿಷ್ಠಿರಸ್ತ್ವಾಂ ಪಾಂಚಾಲಿ ಸುಖೇ ಧಾಸ್ಯತ್ಯನುತ್ತಮೇ||
12014031a ಹತ್ವಾ ರಾಜಸಹಸ್ರಾಣಿ ಬಹೂನ್ಯಾಶುಪರಾಕ್ರಮಃ|
12014031c ತದ್ವ್ಯರ್ಥಂ ಸಂಪ್ರಪಶ್ಯಾಮಿ ಮೋಹಾತ್ತವ ಜನಾಧಿಪ||

ಸರ್ವದರ್ಶಿನಿಯಾದ ಸರ್ವಜ್ಞೆ ನನ್ನ ಅತ್ತೆ ಕುಂತಿಯು ನನಗೆ ಈ ಸತ್ಯವನ್ನೇ ಹೇಳುತ್ತಿದ್ದಳು: "ಪಾಂಚಾಲೀ! ಅನುತ್ತಮೇ! ತನ್ನ ಪರಾಕ್ರಮದಿಂದ ಸಹಸ್ರಾರು ರಾಜರನ್ನು ಸಂಹರಿಸಿ ಯುಧಿಷ್ಠಿರನು

ನಿನಗೆ ಸುಖವನ್ನು ನೀಡುತ್ತಾನೆ!" ಜನಾಧಿಪ! ಆದರೆ ನಿನ್ನ ಮೋಹದಿಂದಾಗಿ ಆ ಮಾತು ವ್ಯರ್ಥವಾಯಿತೆಂದೇ ನನಗನ್ನಿಸುತ್ತಿದೆ.

12014032a ಯೇಷಾಮುನ್ಮತ್ತಕೋ ಜ್ಯೇಷ್ಠಃ ಸರ್ವೇ ತಸ್ಯೋಪಚಾರಿಣಃ|
12014032c ತವೋನ್ಮಾದೇನ ರಾಜೇಂದ್ರ ಸೋನ್ಮಾದಾಃ ಸರ್ವಪಾಂಡವಾಃ||

ಅಣ್ಣನು ಮರುಳಾದರೆ ತಮ್ಮಂದಿರೂ ಅವನನ್ನು ಅನುಸರಿಸುತ್ತಾರೆ. ರಾಜೇಂದ್ರ! ನಿನ್ನ ಮರುಳುತನದಿಂದಾಗಿ ಪಾಂಡವರೆಲ್ಲರೂ ಮರುಳಾಗುತ್ತಾರೆ!

12014033a ಯದಿ ಹಿ ಸ್ಯುರನುನ್ಮತ್ತಾ ಭ್ರಾತರಸ್ತೇ ಜನಾಧಿಪ|
12014033c ಬದ್ಧ್ವಾ ತ್ವಾಂ ನಾಸ್ತಿಕ್ಯೈಃ ಸಾರ್ಧಂ ಪ್ರಶಾಸೇಯುರ್ವಸುಂಧರಾಮ್||

ಜನಾಧಿಪ! ಒಂದುವೇಳೆ ನಿನ್ನ ಸಹೋದರರು ಮರುಳಾಗಿರದಿದ್ದರೆ ಇಷ್ಟರಲ್ಲಿ ಉಳಿದ ನಾಸ್ತಿಕರೊಂದಿಗೆ ನಿನ್ನನ್ನು ಬಂಧಿಸಿ ಭೂಮಿಯನ್ನು ಆಳುತ್ತಿದ್ದರು!

12014034a ಕುರುತೇ ಮೂಢಮೇವಂ ಹಿ ಯಃ ಶ್ರೇಯೋ ನಾಧಿಗಚ್ಚತಿ|
12014034c ಧೂಪೈರಂಜನಯೋಗೈಶ್ಚ ನಸ್ಯಕರ್ಮಭಿರೇವ ಚ||
12014034e ಭೇಷಜೈಃ ಸ ಚಿಕಿತ್ಸ್ಯಃ ಸ್ಯಾದ್ಯ ಉನ್ಮಾರ್ಗೇಣ ಗಚ್ಚತಿ||

ಈ ರೀತಿ ಮೂಢನಂತೆ ನಡೆದುಕೊಳ್ಳುವವನಿಗೆ ಎಂದಿಗೂ ಶ್ರೇಯಸ್ಸು ದೊರೆಯುವುದಿಲ್ಲ. ಹೀಗೆ ಅಪಮಾರ್ಗದಲ್ಲಿ ಹೋಗುವವನಿಗೆ ಧೂಪಗಳಿಂದಲೂ, ಕಣ್ಣಿಗೆ ಅಂಜನಾದಿಗಳನ್ನು ಹಚ್ಚುವುದರಿಂದಲೂ, ಮೂಗಿಗೆ ಚೂರ್ಣವನ್ನು ಹಾಕುವುದರಿಂದಲೂ, ಮತ್ತು ಇತರ ಔಷಧಿಗಳಿಂದಲೂ ಚಿಕಿತ್ಸೆಗಳನ್ನು ನಡೆಸಬೇಕಾಗುತ್ತದೆ!

12014035a ಸಾಹಂ ಸರ್ವಾಧಮಾ ಲೋಕೇ ಸ್ತ್ರೀಣಾಂ ಭರತಸತ್ತಮ|
12014035c ತಥಾ ವಿನಿಕೃತಾಮಿತ್ಯೈರ್ಯಾಹಮಿಚ್ಛಾಮಿ ಜೀವಿತುಮ್||

ಭರತಸತ್ತಮ! ನಾನು ಲೋಕದ ಸ್ತ್ರೀಯರೆಲ್ಲೆಲ್ಲಾ ಅಧಮಳೆಂದು ಭಾವಿಸುತ್ತೇನೆ. ಶತ್ರುಗಳಿಂದ ಈ ರೀತಿ ಮೋಸಗೊಂಡೆನಾದರೂ ಜೀವಿಸಿರಲು ಇಚ್ಛಿಸುತ್ತೇನೆ!

12014036a ಏತೇಷಾಂ ಯತಮಾನಾನಾಮುತ್ಪದ್ಯಂತೇ ತು ಸಂಪದಃ|
12014036c ತ್ವಂ ತು ಸರ್ವಾಂ ಮಹೀಂ ಲಬ್ಧ್ವಾ ಕುರುಷೇ ಸ್ವಯಮಾಪದಮ್||

ಇವರು ನಿನ್ನನ್ನು ಸಮಾಧಾನ ಪಡೆಸಲು ಪ್ರಯತ್ನಿಸುತ್ತಿದ್ದಾರೆ. ನೀನಾದರೋ ಇಡೀ ಭೂಮಿಯನ್ನೇ ಪಡೆದರೂ ಸ್ವಯಂ ನಿನಗೇ ಆಪತ್ತನ್ನು ತಂದುಕೊಳ್ಳುತ್ತಿದ್ದೀಯೆ!

12014037a ಯಥಾಸ್ತಾಂ ಸಂಮತೌ ರಾಜ್ಞಾಂ ಪೃಥಿವ್ಯಾಂ ರಾಜಸತ್ತಮೌ|
12014037c ಮಾಂಧಾತಾ ಚಾಂಬರೀಷಶ್ಚ ತಥಾ ರಾಜನ್ವಿರಾಜಸೇ||

ರಾಜನ್! ರಾಜಸತ್ತಮರಾದ ಮಾಂಧಾತಾ-ಅಂಬರೀಷರಂತೆ ಎಲ್ಲ ರಾಜರಿಂದಲೂ ಪುರಸ್ಕೃತರಾಗಿ ರಾಜ್ಯಭಾರಮಾಡಿ ನೀನೂ ಕೂಡ ವಿರಾಜಿಸು!

12014038a ಪ್ರಶಾಧಿ ಪೃಥಿವೀಂ ದೇವೀಂ ಪ್ರಜಾ ಧರ್ಮೇಣ ಪಾಲಯನ್|
12014038c ಸಪರ್ವತವನದ್ವೀಪಾಂ ಮಾ ರಾಜನ್ವಿಮನಾ ಭವ||

ರಾಜನ್! ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಾ ಈ ಪರ್ವತ-ವನ-ದ್ವೀಪಗಳಿಂದ ಕೂಡಿದ ದೇವೀ ಪೃಥ್ವಿಯನ್ನು ಆಳುವುದರ ಕುರಿತು ಉದಾಸೀನನಾಗಬೇಡ.

12014039a ಯಜಸ್ವ ವಿವಿಧೈರ್ಯಜ್ಞೈರ್ಜುಹ್ವನ್ನಗ್ನೀನ್ಪ್ರಯಚ್ಚ ಚ|
12014039c ಪುರಾಣಿ ಭೋಗಾನ್ವಾಸಾಂಸಿ ದ್ವಿಜಾತಿಭ್ಯೋ ನೃಪೋತ್ತಮ||

ನೃಪಸತ್ತಮ! ವಿವಿಧ ಯಜ್ಞಗಳಿಂದ ದೇವತೆಗಳನ್ನು ಆರಾಧಿಸು. ಪುರಗಳನ್ನೂ, ಭೋಗವಸ್ತುಗಳನ್ನೂ, ವಸ್ತ್ರಗಳನ್ನೂ ಬ್ರಾಹ್ಮಣರಿಗೆ ದಾನಮಾಡು!""

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ದ್ರೌಪದೀವಾಕ್ಯೇ ಚತುರ್ದಶೋಽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ದ್ರೌಪದೀವಾಕ್ಯ ಎನ್ನುವ ಹದಿನಾಲ್ಕನೇ ಅಧ್ಯಾಯವು.

೧೫

ಅರ್ಜುನವಾಕ್ಯ

ಅರ್ಜುನನು ರಾಜದಂಡದ ಮಹತ್ವವನ್ನು ವರ್ಣಿಸಿದುದು (1-58).

12015001 ವೈಶಂಪಾಯನ ಉವಾಚ|
12015001a ಯಾಜ್ಞಸೇನ್ಯಾ ವಚಃ ಶ್ರುತ್ವಾ ಪುನರೇವಾರ್ಜುನೋಽಬ್ರವೀತ್|
12015001c ಅನುಮಾನ್ಯ ಮಹಾಬಾಹುಂ ಜ್ಯೇಷ್ಠಂ ಭ್ರಾತರಮೀಶ್ವರಮ್||

ವೈಶಂಪಾಯನನು ಹೇಳಿದನು: "ಯಾಜ್ಞಸೇನಿಯ ಮಾತನ್ನು ಕೇಳಿ ಪುನಃ ಅರ್ಜುನನು ಮಹಾಬಾಹು ಜ್ಯೇಷ್ಠ ಭ್ರಾತಾ ಈಶ್ವರ ಯುಧಿಷ್ಠಿರನನ್ನು ಗೌರವಿಸಿ ಈ ಮಾತುಗಳನ್ನಾಡಿದನು:

12015002a ದಂಡಃ ಶಾಸ್ತಿ ಪ್ರಜಾಃ ಸರ್ವಾ ದಂಡ ಏವಾಭಿರಕ್ಷತಿ।
12015002c ದಂಡಃ ಸುಪ್ತೇಷು ಜಾಗರ್ತಿ ದಂಡಂ ಧರ್ಮಂ ವಿದುರ್ಬುಧಾಃ॥

“ದಂಡವು ಪ್ರಜೆಗಳನ್ನು ಆಳುತ್ತದೆ ಹಾಗೂ ರಕ್ಷಿಸುತ್ತದೆ. ಎಲ್ಲರೂ ಮಲಗಿರುವಾಗ ದಂಡವು ಎಚ್ಚೆತ್ತಿರುತ್ತದೆ. ಆದುದರಿಂದ ತಿಳಿದವರು ದಂಡವೇ ಧರ್ಮವೆಂದೂ ಹೇಳುತ್ತಾರೆ.

12015003a ಧರ್ಮಂ ಸಂರಕ್ಷತೇ ದಂಡಸ್ತಥೈವಾರ್ಥಂ ನರಾಧಿಪ।
12015003c ಕಾಮಂ ಸಂರಕ್ಷತೇ ದಂಡಸ್ತ್ರಿವರ್ಗೋ ದಂಡ ಉಚ್ಯತೇ॥

ನರಾಧಿಪ! ದಂಡವು ಧರ್ಮವನ್ನು ರಕ್ಷಿಸುತ್ತದೆ. ದಂಡವು ಅರ್ಥವನ್ನೂ ಹಾಗೆಯೇ ಕಾಮವನ್ನೂ ರಕ್ಷಿಸುತ್ತದೆ. ಆದುದರಿಂದ ದಂಡವು ತ್ರಿವರ್ಗರೂಪವಾಗಿರುವುದೆಂದು ಹೇಳುತ್ತಾರೆ.

12015004a ದಂಡೇನ ರಕ್ಷ್ಯತೇ ಧಾನ್ಯಂ ಧನಂ ದಂಡೇನ ರಕ್ಷ್ಯತೇ।
12015004c ಏತದ್ವಿದ್ವನ್ನುಪಾದತ್ಸ್ವ ಸ್ವಭಾವಂ ಪಶ್ಯ ಲೌಕಿಕಮ್॥

ದಂಡದಿಂದ ಧಾನ್ಯದ ರಕ್ಷಣೆಯಾಗುತ್ತದೆ. ದಂಡದಿಂದ ಧನದ ರಕ್ಷಣೆಯೂ ಆಗುತ್ತದೆ. ಆದುದರಿಂದ ನೀನೂ ದಂಡಧಾರಣೆಮಾಡು ಮತ್ತು ಲೋಕದ ಸ್ವಭಾವದ ಕಡೆ ಗಮನಹರಿಸು!

12015005a ರಾಜದಂಡಭಯಾದೇಕೇ ಪಾಪಾಃ ಪಾಪಂ ನ ಕುರ್ವತೇ।
12015005c ಯಮದಂಡಭಯಾದೇಕೇ ಪರಲೋಕಭಯಾದಪಿ॥
12015006a ಪರಸ್ಪರಭಯಾದೇಕೇ ಪಾಪಾಃ ಪಾಪಂ ನ ಕುರ್ವತೇ।
12015006c ಏವಂ ಸಾಂಸಿದ್ಧಿಕೇ ಲೋಕೇ ಸರ್ವಂ ದಂಡೇ ಪ್ರತಿಷ್ಠಿತಮ್॥

ರಾಜದಂಡದ ಭಯದಿಂದ ಕೆಲವು ಪಾಪಿಗಳು

ಪಾಪಕರ್ಮಗಳನ್ನೆಸಗುವುದಿಲ್ಲ. ಇನ್ನು ಕೆಲವು ಪಾಪಿಗಳು ಯಮದಂಡದ ಭಯದಿಂದ ಮತ್ತು ಪರಲೋಕದ ಭಯದಿಂದ ಪಾಪಕರ್ಮಗಳನ್ನೆಸಗುವುದಿಲ್ಲ. ಕೆಲವು ಪಾಪಿಗಳು ಪರಸ್ಪರರ ಭಯದಿಂದಾಗಿ ಪಾಪಕರ್ಮಗಳನ್ನೆಸಗುವುದಿಲ್ಲ. ಈ ರೀತಿ ಎಲ್ಲವೂ ದಂಡವನ್ನವಲಂಬಿಸಿವೆ ಎಂದು ಲೋಕದಲ್ಲಿ ಸಿದ್ಧವಾಗಿದೆ.

12015007a ದಂಡಸ್ಯೈವ ಭಯಾದೇಕೇ ನ ಖಾದಂತಿ ಪರಸ್ಪರಮ್|
12015007c ಅಂಧೇ ತಮಸಿ ಮಜ್ಜೇಯುರ್ಯದಿ ದಂಡೋ ನ ಪಾಲಯೇತ್||

ದಂಡದ ಭಯವೊಂದರಿಂದಲೇ ಪರಸ್ಪರರನ್ನು ನುಂಗಿಹಾಕುತ್ತಿಲ್ಲ! ರಾಜನು ದಂಡದಿಂದ ಪ್ರಜೆಗಳನ್ನು ಪಾಲಿಸದೇ ಇದ್ದರೆ ಪ್ರಜೆಗಳೆಲ್ಲರೂ ಅನಾಯಕತ್ವವೆಂಬ ಅಂಧಕಾರದಲ್ಲಿ ಮುಳುಗಿಹೋಗುತ್ತಿದ್ದರು!

12015008a ಯಸ್ಮಾದದಾಂತಾನ್ದಮಯತ್ಯಶಿಷ್ಟಾನ್ದಂಡಯತ್ಯಪಿ|
12015008c ದಮನಾದ್ದಂಡನಾಚ್ಚೈವ ತಸ್ಮಾದ್ದಂಡಂ ವಿದುರ್ಬುಧಾಃ||

ಸ್ವೇಚ್ಛಾಚಾರಿಗಳನ್ನು ದಮನಮಾಡುವುದರಿಂದ, ಮತ್ತು ದುಷ್ಟರನ್ನು ಶಿಕ್ಷಿಸುವುದರಿಂದ ಇದನ್ನು ದಂಡವೆನ್ನುತ್ತಾರೆ. ದಮನ-ದಂಡನೆಗಳನ್ನು ಮಾಡುವುದರಿಂದ ಇದನ್ನು ತಿಳಿದವರು ದಂಡ ಎನ್ನುತ್ತಾರೆ.

12015009a ವಾಚಿ ದಂಡೋ ಬ್ರಾಹ್ಮಣಾನಾಂ ಕ್ಷತ್ರಿಯಾಣಾಂ ಭುಜಾರ್ಪಣಮ್|
12015009c ದಾನದಂಡಃ ಸ್ಮೃತೋ ವೈಶ್ಯೋ ನಿರ್ದಂಡಃ ಶೂದ್ರ ಉಚ್ಯತೇ||

ಬ್ರಾಹ್ಮಣರನ್ನು ಮಾತಿನಿಂದ ದಂಡಿಸಬೇಕು. ಕ್ಷತ್ರಿಯರನ್ನು ಅವರ ಊಟಕ್ಕೆ ಸಾಕಾಗುವಷ್ಟೇ ವೇತನವನ್ನು ನೀಡುವುದರ ಮೂಲಕ ದಂಡಿಸಬೇಕು. ಕಪ್ಪ-ಕಾಣಿಕೆಗಳನ್ನು ತೆಗೆದುಕೊಳ್ಳುವುದರ ಮೂಲಕ ವೈಶ್ಯರನ್ನು ದಂಡಿಸಬೇಕು. ಮತ್ತು ಶೂದ್ರರಿಗೆ ದಂಡನೆಯೇ ಇಲ್ಲ

ಎಂದು ಹೇಳುತ್ತಾರೆ.

12015010a ಅಸಂಮೋಹಾಯ ಮತ್ಸ್ಯಾನಾಮರ್ಥಸಂರಕ್ಷಣಾಯ ಚ|
12015010c ಮರ್ಯಾದಾ ಸ್ಥಾಪಿತಾ ಲೋಕೇ ದಂಡಸಂಜ್ಞಾ ವಿಶಾಂ ಪತೇ||

ವಿಶಾಂಪತೇ! ಲೋಕದಲ್ಲಿ ಮನುಷ್ಯರು ಮೋಹಪರವಶರಾಗದಂತೆ ಮಾಡಲು ಮತ್ತು ಧನದ ಸಂರಕ್ಷಣೆಗಾಗಿ ದಂಡವೆಂದು ಕರೆಯಲ್ಪಡುವ ಮರ್ಯಾದೆಯು ಸ್ಥಾಪಿತವಾಗಿದೆ.

12015011a ಯತ್ರ ಶ್ಯಾಮೋ ಲೋಹಿತಾಕ್ಷೋ ದಂಡಶ್ಚರತಿ ಸೂನೃತಃ|
12015011c ಪ್ರಜಾಸ್ತತ್ರ ನ ಮುಹ್ಯಂತಿ ನೇತಾ ಚೇತ್ಸಾಧು ಪಶ್ಯತಿ||

ಎಲ್ಲಿ ಶ್ಯಾಮಲವರ್ಣದ ಕೆಂಪುಕಣ್ಣುಗಳುಳ್ಳ ದಂಡವನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸುತ್ತಾರೆಯೋ ಅಲ್ಲಿ ಪ್ರಜೆಗಳು ಮೋಹಪರವಶರಾಗುವುದಿಲ್ಲ ಮತ್ತು ಅಲ್ಲಿ ಅಸಾಧು ಜನರು ಕಂಡುಬರುವುದಿಲ್ಲ.

12015012a ಬ್ರಹ್ಮಚಾರೀ ಗೃಹಸ್ಥಶ್ಚ ವಾನಪ್ರಸ್ಥೋಽಥ ಭಿಕ್ಷುಕಃ|
12015012c ದಂಡಸ್ಯೈವ ಭಯಾದೇತೇ ಮನುಷ್ಯಾ ವರ್ತ್ಮನಿ ಸ್ಥಿತಾಃ||

ದಂಡದ ಭಯದಿಂದಲೇ ಮನುಷ್ಯರು ಬ್ರಹ್ಮಚಾರೀ, ಗೃಹಸ್ಥ, ವಾನಪ್ರಸ್ಥ ಮತ್ತು ಭಿಕ್ಷುಕ ಮೊದಲಾದ ಆಶ್ರಮಗಳಲ್ಲಿ ಸರಿಯಾಗಿ ನಡೆದುಕೊಂಡಿರುತ್ತಾರೆ.

12015013a ನಾಭೀತೋ ಯಜತೇ ರಾಜನ್ನಾಭೀತೋ ದಾತುಮಿಚ್ಛತಿ|
12015013c ನಾಭೀತಃ ಪುರುಷಃ ಕಶ್ಚಿತ್ಸಮಯೇ ಸ್ಥಾತುಮಿಚ್ಛತಿ||

ರಾಜನ್! ಭಯವಿಲ್ಲದವನು ಯಜ್ಞಮಾಡುವುದಿಲ್ಲ. ಭಯವಿಲ್ಲದವನು

ದಾನವನ್ನೂ ನೀಡಲು ಇಚ್ಛಿಸುವುದಿಲ್ಲ. ಭಯವಿಲ್ಲದ ಪುರುಷನು ತಾನು ಮಾಡಿದ ಪ್ರಮಾಣವಚನಗಳಂತೆಯೂ ನಡೆದುಕೊಳ್ಳುವುದಿಲ್ಲ.

12015014a ನಾಚ್ಚಿತ್ತ್ವಾ ಪರಮರ್ಮಾಣಿ ನಾಕೃತ್ವಾ ಕರ್ಮ ದಾರುಣಮ್|
12015014c ನಾಹತ್ವಾ ಮತ್ಸ್ಯಘಾತೀವ ಪ್ರಾಪ್ನೋತಿ ಮಹತೀಂ ಶ್ರಿಯಮ್||

ಬೆಸ್ತನಂತೆ ಶತ್ರುಗಳ ಮರ್ಮಸ್ಥಾನಗಳನ್ನು ಸೀಳದೇ, ದಾರುಣ ಕರ್ಮಗಳನ್ನೆಸಗದೆ, ಸಂಹರಿಸದೇ ಮಹದ್ಐಶ್ವರ್ಯವನ್ನು ಸಂಪಾದಿಸಲು ಸಾಧ್ಯವಿಲ್ಲ.

12015015a ನಾಘ್ನತಃ ಕೀರ್ತಿರಸ್ತೀಹ ನ ವಿತ್ತಂ ನ ಪುನಃ ಪ್ರಜಾಃ|
12015015c ಇಂದ್ರೋ ವೃತ್ರವಧೇನೈವ ಮಹೇಂದ್ರಃ ಸಮಪದ್ಯತ||

ಶತ್ರುಗಳನ್ನು ಸಂಹರಿಸದೇ ಕೀರ್ತಿಯಿಲ್ಲ, ಸಂಪತ್ತಿಲ್ಲ ಮತ್ತು ಪ್ರಜೆಗಳೂ ಇರುವುದಿಲ್ಲ. ವೃತ್ರನ ವಧೆಗೈದೇ ಇಂದ್ರನು ಮಹೇಂದ್ರಪದವಿಯನ್ನು ಪಡೆದನು!

12015016a ಯ ಏವ ದೇವಾ ಹಂತಾರಸ್ತಾಽಲ್ಲೋಕೋಽರ್ಚಯತೇ ಭೃಶಮ್|
12015016c ಹಂತಾ ರುದ್ರಸ್ತಥಾ ಸ್ಕಂದಃ ಶಕ್ರೋಽಗ್ನಿರ್ವರುಣೋ ಯಮಃ||
12015017a ಹಂತಾ ಕಾಲಸ್ತಥಾ ವಾಯುರ್ಮೃತ್ಯುರ್ವೈಶ್ರವಣೋ ರವಿಃ|
12015017c ವಸವೋ ಮರುತಃ ಸಾಧ್ಯಾ ವಿಶ್ವೇದೇವಾಶ್ಚ ಭಾರತ||

ಈ ರೀತಿ ಹಂತಕರಾದ ದೇವತೆಗಳನ್ನೇ ಲೋಕಗಳು ಬಹಳವಾಗಿ ಪೂಜಿಸುತ್ತವೆ. ರುದ್ರ ಮತ್ತು ಹಾಗೆಯೇ ಸ್ಕಂದ, ಶಕ್ರ, ವರುಣ ಮತ್ತು ಯಮರೂ ಹಂತಾರರೇ! ಭಾರತ! ಕಾಲ, ವಾಯು, ಮೃತ್ಯು, ವೈಶ್ರವಣ, ರವಿ, ವಸವರು, ಮರುತರು, ಸಾಧ್ಯರು, ಮತ್ತು ವಿಶ್ವೇದೇವರೂ ಕೂಡ ಹಂತಾರರೇ!

12015018a ಏತಾನ್ದೇವಾನ್ನಮಸ್ಯಂತಿ ಪ್ರತಾಪಪ್ರಣತಾ ಜನಾಃ|
12015018c ನ ಬ್ರಹ್ಮಾಣಂ ನ ಧಾತಾರಂ ನ ಪೂಷಾಣಂ ಕಥಂ ಚನ||

ಪ್ರತಾಪಗಳಿಂದ ಕೂಡಿರುವ ಈ ದೇವತೆಗಳನ್ನೇ ಜನರು
ನಮಸ್ಕರಿಸುತ್ತಾರೆ. ಬ್ರಹ್ಮನನ್ನಲ್ಲ, ಧಾತಾರನನ್ನಲ್ಲ ಮತ್ತು
ಪೂಷಾಣನನ್ನಲ್ಲ!

12015019a ಮಧ್ಯಸ್ಥಾನ್ಸರ್ವಭೂತೇಷು ದಾಂತಾನ್ಶಮಪರಾಯಣಾನ್|
12015019c ಯಜಂತೇ ಮಾನವಾಃ ಕೇ ಚಿತ್ಪ್ರಶಾಂತಾಃ ಸರ್ವಕರ್ಮಸು||

ಸರ್ವಭೂತಗಳಲ್ಲೂ ಸಮಭಾವದಿಂದಿರುವ ಜಿತೇಂದ್ರಿಯ
ಶಾಂತಿಪರಾಯಣ ದೇವತೆಗಳನ್ನು ಪ್ರಶಾಂತರಾದ ಕೆಲವೇ ಮಾನವರು
ಸರ್ವಕರ್ಮಗಳಲ್ಲಿ ಪೂಜಿಸುತ್ತಾರೆ.

12015020a ನ ಹಿ ಪಶ್ಯಾಮಿ ಜೀವಂತಂ ಲೋಕೇ ಕಂ ಚಿದಹಿಂಸಯಾ|
12015020c ಸತ್ತ್ವೈಃ ಸತ್ತ್ವಾನಿ ಜೀವಂತಿ ದುರ್ಬಲೈರ್ಬಲವತ್ತರಾಃ||

ಲೋಕದಲ್ಲಿ ಕೇವಲ ಅಹಿಂಸೆಯಿಂದ ಜೀವಿಸುತ್ತಿರುವವರ್ಯಾರನ್ನೂ
ನಾನು ಕಾಣುತ್ತಿಲ್ಲ! ಬಲಶಾಲೀ ಸತ್ತ್ವಗಳು ದುರ್ಬಲರ ಸತ್ತ್ವಗಳಿಂದ
ಜೀವಿಸುತ್ತವೆ.

12015021a ನಕುಲೋ ಮೂಷಕಾನತ್ತಿ ಬಿಡಾಲೋ ನಕುಲಂ ತಥಾ|
12015021c ಬಿಡಾಲಮತ್ತಿ ಶ್ವಾ ರಾಜನ್ಶ್ವಾನಂ ವ್ಯಾಲಮೃಗಸ್ತಥಾ||

ರಾಜನ್! ಮುಂಗುಸಿಯು ಇಲಿಗಳನ್ನು, ಬೆಕ್ಕು ಮುಂಗುಸಿಯನ್ನು,
ಬೆಕ್ಕನ್ನು ನಾಯಿ ಮತ್ತು ನಾಯಿಯನ್ನು ಚಿರತೆ ಹೀಗೆ ಒಂದು
ಇನ್ನೊಂದನ್ನು ತಿನ್ನುತ್ತಿರುತ್ತವೆ!

12015022a ತಾನತ್ತಿ ಪುರುಷಃ ಸರ್ವಾನ್ಪಶ್ಯ ಧರ್ಮೋ ಯಥಾಗತಃ|
12015022c ಪ್ರಾಣಸ್ಯಾನ್ನಮಿದಂ ಸರ್ವಂ ಜಂಗಮಂ ಸ್ಥಾವರಂ ಚ ಯತ್||

ಇವೆಲ್ಲವುಗಳನ್ನೂ ಮನುಷ್ಯನು ಕೊಂದು ತಿನ್ನುತ್ತಾನೆ. ಹೀಗೆ ನಡೆದುಕೊಂಡುಬಂದಿರುವ ಧರ್ಮವನ್ನಾದರೋ ನೀನು ನೋಡು! ಸ್ಥಾವರ-ಜಂಗಮಗಳೆಲ್ಲವೂ ಪ್ರಾಣಧಾರಣೆಗೆ ಅನ್ನರೂಪವಾಗಿಯೇ ಇವೆ.

12015023a ವಿಧಾನಂ ದೇವವಿಹಿತಂ ತತ್ರ ವಿದ್ವಾನ್ನ ಮುಹ್ಯತಿ|
12015023c ಯಥಾ ಸೃಷ್ಟೋಽಸಿ ರಾಜೇಂದ್ರ ತಥಾ ಭವಿತುಮರ್ಹಸಿ||

ರಾಜೇಂದ್ರ! ಪ್ರಾಣಿಗಳು ಪ್ರಾಣಿಗಳನ್ನವಲಂಬಿಸಿಯೇ ಜೀವಿಸಬೇಕು ಎಂಬ ಈ ವಿಧಾನವು ದೇವವಿಹಿತವಾದುದು. ತಿಳಿದವನು ಈ ವಿಷಯದಲ್ಲಿ ಭ್ರಾಂತನಾಗುವುದಿಲ್ಲ. ನೀನು ಹೇಗೆ ಸೃಷ್ಟಿಸಲ್ಪಟ್ಟಿರುವಿಯೋ ಅದೇರೀತಿ ನೀನು ಇರಬೇಕಾಗುತ್ತದೆ!

12015024a ವಿನೀತಕ್ರೋಧಹರ್ಷಾ ಹಿ ಮಂದಾ ವನಮುಪಾಶ್ರಿತಾಃ|
12015024c ವಿನಾ ವಧಂ ನ ಕುರ್ವಂತಿ ತಾಪಸಾಃ ಪ್ರಾಣಯಾಪನಮ್||

ಕ್ರೋಧ-ಹರ್ಷಗಳನ್ನು ಹತೋಟಿಯಲ್ಲಿಟ್ಟುಕೊಂಡು ವನವನ್ನು ಸೇರುವ ಮೂಢ ಕ್ಷತ್ರಿಯ ತಾಪಸರು ವಧೆಗೈಯದೇ ಜೀವಂತವಾಗಿರಲಾರರು!

12015025a ಉದಕೇ ಬಹವಃ ಪ್ರಾಣಾಃ ಪೃಥಿವ್ಯಾಂ ಚ ಫಲೇಷು ಚ|
12015025c ನ ಚ ಕಶ್ಚಿನ್ನ ತಾನ್ ಹಂತಿ ಕಿಮನ್ಯತ್ಪ್ರಾಣಯಾಪನಾತ್||

ಕುಡಿಯುವ ನೀರಿನಲ್ಲಿ, ಗೆಡ್ಡೆ-ಗೆಣಸುಗಳಲ್ಲಿ ಮತ್ತು ಹಣ್ಣುಗಳಲ್ಲಿ ಅನೇಕ ಜೀವಿಗಳಿರುತ್ತವೆ. ಇವುಗಳನ್ನು ಕೊಲ್ಲದೇ ಯಾರೂ

ಜೀವಂತವಾಗಿರಲಾರರು!

12015026a ಸೂಕ್ಷ್ಮಯೋನೀನಿ ಭೂತಾನಿ ತರ್ಕಗಮ್ಯಾನಿ ಕಾನಿ ಚಿತ್|
12015026c ಪಕ್ಷ್ಮಣೋಽಪಿ ನಿಪಾತೇನ ಯೇಷಾಂ ಸ್ಯಾತ್ಸ್ಕಂಧಪರ್ಯಯಃ||

ಸೂಕ್ಷ್ಮಯೋನಿಗಳ ಇರುವಿಕೆಯನ್ನು ಕೇವಲ ತರ್ಕದಿಂದ
ಪ್ರಮಾಣೀಕರಿಸಬಹುದು. ನಮ್ಮ ಒಂದು ರೆಪ್ಪೆಯ ಕೂದಲೂ ಅವುಗಳ
ಮೇಲೆ ಬಿದ್ದರೆ ಅವುಗಳ ಅವಯವಗಳು ಮುರಿದುಹೋಗುತ್ತವೆ!

12015027a ಗ್ರಾಮಾನ್ನಿಷ್ಕ್ರಮ್ಯ ಮುನಯೋ ವಿಗತಕ್ರೋಧಮತ್ಸರಾಃ|
12015027c ವನೇ ಕುಟುಂಬಧರ್ಮಾಣೋ ದೃಶ್ಯಂತೇ ಪರಿಮೋಹಿತಾಃ||

ಕ್ರೋಧ-ಮತ್ಸರಗಳನ್ನು ತೊರೆದು ಮುನಿಗಳು ಗ್ರಾಮದಿಂದ ಹೊರಟು
ವನದಲ್ಲಿ ಮೋಹಿತರಾಗಿ ಕುಟುಂಬಧರ್ಮವನ್ನು
ಅನುಸರಿಸುತ್ತಿರುವುದನ್ನು ನಾವು ನೋಡುತ್ತೇವೆ.

12015028a ಭೂಮಿಂ ಭಿತ್ತ್ವೌಷಧೀಶ್ಚಿತ್ತ್ವಾ ವೃಕ್ಷಾದೀನಂಡಜಾನ್ಪಶೂನ್|
12015028c ಮನುಷ್ಯಾಸ್ತನ್ವತೇ ಯಜ್ಞಾಂಸ್ತೇ ಸ್ವರ್ಗಂ ಪ್ರಾಪ್ನುವಂತಿ ಚ||

ಭೂಮಿಯನ್ನು ಹೂಳಿ, ಅಲ್ಲಿರುವ ಔಷಧಿ-ಲತೆಗಳನ್ನು ಕಿತ್ತು, ವೃಕ್ಷ-ಪಕ್ಷಿ-
ಪ್ರಾಣಿಗಳನ್ನು ಹನನಮಾಡಿ, ಯಜ್ಞಗಳನ್ನು ಮಾಡುವ ಮನುಷ್ಯನು
ಸ್ವರ್ಗವನ್ನು ಪಡೆಯುತ್ತಾನೆ.

12015029a ದಂಡನೀತ್ಯಾಂ ಪ್ರಣೀತಾಯಾಂ ಸರ್ವೇ ಸಿಧ್ಯಂತ್ಯುಪಕ್ರಮಾಃ|
12015029c ಕೌಂತೇಯ ಸರ್ವಭೂತಾನಾಂ ತತ್ರ ಮೇ ನಾಸ್ತಿ ಸಂಶಯಃ||

ಕೌಂತೇಯ! ದಂಡನೀತಿಯನ್ನು ಅನುಸರಿಸಿದ್ದೇ ಆದರೆ
ಸರ್ವಭೂತಗಳೂ ಪ್ರಯತ್ನಿಸುವ ಸಿದ್ಧಿಗಳು ದೊರೆಯುತ್ತವೆ

ಎನ್ನುವುದರಲ್ಲಿ ನನಗೆ ಸಂಶಯವೇ ಇಲ್ಲ.

12015030a ದಂಡಶ್ಚೇನ್ನ ಭವೇಲ್ಲೋಕೇ ವ್ಯನಶಿಷ್ಯನ್ನಿಮಾಃ ಪ್ರಜಾಃ|
12015030c ಶೂಲೇ ಮತ್ಸ್ಯಾನಿವಾಪಕ್ವ್ಯನ್ದುರ್ಬಲಾನ್ಬಲವತ್ತರಾಃ||

ಲೋಕದಲ್ಲಿ ದಂಡನೀತಿಯೇ ಇರದಿದ್ದರೆ ಈ ಪ್ರಜೆಗಳು
ವಿನಾಶಹೊಂದುತ್ತಿದ್ದರು. ದೊಡ್ಡ ಮೀನುಗಳು ಚಿಕ್ಕಮೀನುಗಳನ್ನು
ತಿನ್ನುವಂತೆ ಬಲಶಾಲಿಗಳು ದುರ್ಬಲರನ್ನು
ವಿನಾಶಗೊಳಿಸಿಬಿಡುತ್ತಿದ್ದರು.

12015031a ಸತ್ಯಂ ಚೇದಂ ಬ್ರಹ್ಮಣಾ ಪೂರ್ವಮುಕ್ತಂ
ದಂಡಃ ಪ್ರಜಾ ರಕ್ಷತಿ ಸಾಧು ನೀತಃ|
12015031c ಪಶ್ಯಾಗ್ನಯಶ್ಚ ಪ್ರತಿಶಾಮ್ಯಂತ್ಯಭೀತಾಃ
ಸಂತರ್ಜಿತಾ ದಂಡಭಯಾಜ್ಜ್ವಲಂತಿ||

ಸರಿಯಾದ ರೀತಿಯಲ್ಲಿ ಬಳಸಿದ ದಂಡನೀತಿಯು ಪ್ರಜೆಗಳನ್ನು
ರಕ್ಷಿಸುತ್ತದೆಯೆಂಬ ಸತ್ಯವನ್ನು ಬ್ರಹ್ಮನೇ ಹಿಂದೆ ಹೇಳಿದ್ದನು. ಈ
ಅಗ್ನಿಗಳನ್ನಾದರೂ ನೋಡು! ಆರಿಹೋಗುತ್ತಿರುವ ಬೆಂಕಿಯನ್ನು
ಊದಿದಾಗ ದಂಡಭಯದಿಂದಲೇ ಅದು ಪುನಃ ಹತ್ತಿಕೊಂಡು
ಉರಿಯುತ್ತದೆ!

12015032a ಅಂಧಂ ತಮ ಇವೇದಂ ಸ್ಯಾನ್ನ ಪ್ರಜ್ಞಾಯೇತ ಕಿಂ ಚನ|
12015032c ದಂಡಶ್ಚೇನ್ನ ಭವೇಲ್ಲೋಕೇ ವಿಭಜನ್ಸಾಧ್ವಸಾಧುನೀ||

ಒಳ್ಳೆಯದು ಯಾವುದು ಮತ್ತು ಕೆಟ್ಟದು ಯಾವುದು ಎನ್ನುವುದನ್ನು
ವಿಭಜಿಸುವ ದಂಡನೀತಿಯೇ ಈ ಲೋಕದಲ್ಲಿ ಇರದಿದ್ದರೆ
ಪ್ರಜೆಗಳೆಲ್ಲರೂ ಕುರುಡರ ಅಂಧಕಾರವನ್ನು ಅನುಭವಿಸುತ್ತಿದ್ದರು.

12015033a ಯೇಽಪಿ ಸಂಭಿನ್ನಮರ್ಯಾದಾ ನಾಸ್ತಿಕಾ ವೇದನಿಂದಕಾಃ|
12015033c ತೇಽಪಿ ಭೋಗಾಯ ಕಲ್ಪಂತೇ ದಂಡೇನೋಪನಿಪೀಡಿತಾಃ||

ಮರ್ಯಾದೆಗಳನ್ನು ಒಡೆದು ವೇದಗಳನ್ನು ನಿಂದಿಸುವ ನಾಸ್ತಿಕರೂ ಕೂಡ ದಂಡದ ಪೀಡೆಗೊಳಪಟ್ಟು ಮರ್ಯಾದೆಗಳನ್ನು ಮೀರದೇ ಸುಖಪಡುವಂತವರಾಗುತ್ತಾರೆ.

12015034a ಸರ್ವೋ ದಂಡಜಿತೋ ಲೋಕೋ ದುರ್ಲಭೋ ಹಿ ಶುಚಿರ್ನರಃ|
12015034c ದಂಡಸ್ಯ ಹಿ ಭಯಾದ್ಭೀತೋ ಭೋಗಾಯೇಹ ಪ್ರಕಲ್ಪತೇ||

ದಂಡದಿಂದಲೇ ಎಲ್ಲವನ್ನೂ ಗೆಲ್ಲಬಹುದು. ಸ್ವಭಾವದಿಂದಲೇ ಶುಚಿಯಾಗಿರುವ ಮನುಷ್ಯರು ಈ ಲೋಕದಲ್ಲಿ ದುರ್ಲಭ. ದಂಡದ ಭಯದಿಂದಲೇ ಭೀತರಾಗಿ ಮನುಷ್ಯರು ಧರ್ಮವನ್ನನುಸರಿಸಿ ನಡೆದುಕೊಳ್ಳುತ್ತಾರೆ.

12015035a ಚಾತುರ್ವರ್ಣ್ಯಪ್ರಮೋಹಾಯ ಸುನೀತನಯನಾಯ ಚ|
12015035c ದಂಡೋ ವಿಧಾತ್ರಾ ವಿಹಿತೋ ಧರ್ಮಾರ್ಥಾವಭಿರಕ್ಷಿತುಮ್||

ನಾಲ್ಕುವರ್ಣದವರೂ ಆನಂದದಿಂದಿರಲು, ನೀತಿವಂತರಾಗಿ ಬಾಳಲು ಮತ್ತು ಧರ್ಮ-ಅರ್ಥಗಳನ್ನು ರಕ್ಷಿಸಲು ವಿಧಾತನು ದಂಡವನ್ನು ವಿಧಿಸಿದ್ದಾನೆ.

12015036a ಯದಿ ದಂಡಾನ್ನ ಬಿಭ್ಯೇಯುರ್ಮರ್ಯಾಂಸಿ ಶ್ವಾಪದಾನಿ ಚ|
12015036c ಅದ್ಯುಃ ಪಶೂನ್ಮನುಷ್ಯಾಂಶ್ಚ ಯಜ್ಞಾರ್ಥಾನಿ ಹವೀಂಷಿ ಚ||

ದಂಡದ ಭಯವೇ ಇರದಿದ್ದರೆ ಕ್ರೂರಮೃಗಗಳಾಗಲೀ ಪಕ್ಷಿಗಳಾಗಲೀ ಇದೂವರೆಗೆ ಯಜ್ಞ ಪಶುಗಳನ್ನು, ಮನುಷ್ಯರನ್ನು,

ಯಜ್ಞಸಲಕರಣೆಗಳನ್ನು ಮತ್ತು ಹವಿಸ್ಸುಗಳನ್ನು
ತಿಂದುಹಾಕಿಬಿಡುತ್ತಿದ್ದವು.

12015037a ನ ಬ್ರಹ್ಮಚಾರ್ಯಧೀಯೀತ ಕಲ್ಯಾಣೀ ಗೌರ್ನ ದುಹ್ಯತೇ|
12015037c ನ ಕನ್ಯೋದ್ವಹನಂ ಗಚ್ಛೇದ್ಯದಿ ದಂಡೋ ನ ಪಾಲಯೇತ್||

ದಂಡವೆನ್ನುವುದು ಇಲ್ಲದೇ ಇದ್ದಿದ್ದರೆ ಬ್ರಹ್ಮಚಾರಿಯು ಅಧ್ಯಯನ
ಮಾಡುತ್ತಿರಲಿಲ್ಲ, ಕಲ್ಯಾಣೀ ಗೋವು ಹಾಲನ್ನು ನೀಡುತ್ತಿರಲಿಲ್ಲ, ಮತ್ತು
ಕನ್ಯೆಯು ವಿವಾಹವಾಗುತ್ತಿರಲಿಲ್ಲ.

12015038a ವಿಶ್ವಲೋಪಃ ಪ್ರವರ್ತೇತ ಭಿದ್ಯೇರನ್ಸರ್ವಸೇತವಃ|
12015038c ಮಮತ್ವಂ ನ ಪ್ರಜಾನೀಯುರ್ಯದಿ ದಂಡೋ ನ ಪಾಲಯೇತ್||

ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ವಿಶ್ವದಲ್ಲಿ
ಧರ್ಮಲೋಪವಾಗುತ್ತಿತ್ತು. ಸರ್ವ ಸೇತುವೆಗಳೂ
ಮುರಿದುಬೀಳುತ್ತಿದ್ದವು. ನನ್ನದ್ಯಾವುದು ಮತ್ತು ನನ್ನದು ಯಾವುದಲ್ಲ
ಎನ್ನುವ ಭಾವನೆಯೇ ಹುಟ್ಟುತ್ತಿರಲಿಲ್ಲ.

12015039a ನ ಸಂವತ್ಸರಸತ್ರಾಣಿ ತಿಷ್ಠೇಯುರಕುತೋಭಯಾಃ|
12015039c ವಿಧಿವದ್ದಕ್ಷಿಣಾವಂತಿ ಯದಿ ದಂಡೋ ನ ಪಾಲಯೇತ್||

ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ನಿರ್ಭಯದಿಂದ
ವಿಧಿವತ್ತಾಗಿ ಮತ್ತು ದಕ್ಷಿಣೆಗಳೊಂದಿಗೆ ನಡೆಯುತ್ತಿದ್ದ ಸಂವತ್ಸರ
ಸತ್ರಗಳು ನಿಂತುಹೋಗುತ್ತಿದ್ದವು.

12015040a ಚರೇಯುರ್ನಾಶ್ರಮೇ ಧರ್ಮಂ ಯಥೋಕ್ತಂ ವಿಧಿಮಾಶ್ರಿತಾಃ|
12015040c ನ ವಿದ್ಯಾಂ ಪ್ರಾಪ್ನುಯಾತ್ಕಶ್ಚಿದ್ಯದಿ ದಂಡೋ ನ ಪಾಲಯೇತ್||

ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ವಿಧಿಯನ್ನನುಸರಿಸಿ ಯಥೋಕ್ತವಾದ ಆಶ್ರಮ ಧರ್ಮಗಳನ್ನು ನಡೆಸುತ್ತಿರಲಿಲ್ಲ ಮತ್ತು ಯಾರೂ ವಿದ್ಯೆಯನ್ನು ಪಡೆಯುತ್ತಿರಲಿಲ್ಲ.

12015041a ನ ಚೋಷ್ಟ್ರಾ ನ ಬಲೀವರ್ದಾ ನಾಶ್ವಾಶ್ವತರಗರ್ದಭಾಃ|
12015041c ಯುಕ್ತಾ ವಹೇಯುರ್ಯಾನಾನಿ ಯದಿ ದಂಡೋ ನ ಪಾಲಯೇತ್||

ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ಒಂಟೆ-ಎತ್ತು-ಕುದುರೆ-ಹೇಸರಗತ್ತೆ ಮತ್ತು ಕತ್ತೆಗಳನ್ನು ಕಟ್ಟಿದ್ದರೂ ಅವು ಯಾನಗಳನ್ನು ಎಳೆದುಕೊಂಡು ಹೋಗುತ್ತಿರಲಿಲ್ಲ!

12015042a ನ ಪ್ರೇಷ್ಯಾ ವಚನಂ ಕುರ್ಯುರ್ನ ಬಾಲೋ ಜಾತು ಕರ್ಹಿ ಚಿತ್|
12015042c ತಿಷ್ಠೇತ್ಪಿತೃಮತೇ ಧರ್ಮೇ ಯದಿ ದಂಡೋ ನ ಪಾಲಯೇತ್||

ದಂಡದಿಂದ ಪ್ರಜಾಪಾಲನೆಯಾಗದೇ ಇರುತ್ತಿದ್ದರೆ ಸೇವಕರು ಯಜಮಾನನ ಮಾತಿನಂತೆ ನಡೆಯುತ್ತಿರಲಿಲ್ಲ, ಮತ್ತು ಬಾಲಕರು ತಂದೆಯ ಧರ್ಮವನ್ನು ಪಾಲಿಸುತ್ತಿರಲಿಲ್ಲ.

12015043a ದಂಡೇ ಸ್ಥಿತಾಃ ಪ್ರಜಾಃ ಸರ್ವಾ ಭಯಂ ದಂಡಂ ವಿದುರ್ಬುಧಾಃ|
12015043c ದಂಡೇ ಸ್ವರ್ಗೋ ಮನುಷ್ಯಾಣಾಂ ಲೋಕೋಽಯಂ ಚ ಪ್ರತಿಷ್ಠಿತಃ||

ದಂಡದಿಂದ ಮತ್ತು ದಂಡದ ಭಯದಿಂದಾಗಿ ಪ್ರಜೆಗಳೆಲ್ಲರೂ ತಮ್ಮ ತಮ್ಮ ಧರ್ಮಗಳಲ್ಲಿ ನೆಲೆಸಿದ್ದಾರೆ ಎಂದು ತಿಳಿದವರು ತಿಳಿದುಕೊಂಡಿರುತ್ತಾರೆ. ಮನುಷ್ಯರ ಈ ಲೋಕವೂ ಸ್ವರ್ಗವೂ ದಂಡದ ಮೇಲೆಯೇ ಅವಲಂಬಿಸಿದೆ.

12015044a ನ ತತ್ರ ಕೂಟಂ ಪಾಪಂ ವಾ ವಂಚನಾ ವಾಪಿ ದೃಶ್ಯತೇ|
12015044c ಯತ್ರ ದಂಡಃ ಸುವಿಹಿತಶ್ಚರತ್ಯರಿವಿನಾಶನಃ||

ಶತ್ರುನಾಶಕ ದಂಡನೀತಿಯು ಎಲ್ಲಿ ಚೆನ್ನಾಗಿ ಬಳಸಲ್ಪಟ್ಟಿದೆಯೋ ಅಲ್ಲಿ ಮೋಸವಾಗಲೀ, ಪಾಪಕರ್ಮಗಳಾಗಲೀ ಅಥವಾ ವಂಚನೆಯಾಗಲೀ ಕಂಡುಬರುವುದಿಲ್ಲ.

12015045a ಹವಿಃ ಶ್ವಾ ಪ್ರಪಿಬೇದ್ಧೃಷ್ಟೋ ದಂಡಶ್ಚೇನ್ನೋದ್ಯತೋ ಭವೇತ್|
12015045c ಹರೇತ್ಕಾಕಃ ಪುರೋಡಾಶಂ ಯದಿ ದಂಡೋ ನ ಪಾಲಯೇತ್||

ದಂಡದಿಂದ ಆಳದೇ ಇದ್ದರೆ ಹವಿಸ್ಸನ್ನು ನೋಡಿದ ನಾಯಿಯು ಅದನ್ನು ನೆಕ್ಕಲು ಹೋಗುತ್ತದೆ. ಕಾಗೆಯು ಪುರೋಡಾಶವನ್ನೇ ಎತ್ತಿಕೊಂಡು ಹೋಗುತ್ತದೆ.

12015046a ಯದಿದಂ ಧರ್ಮತೋ ರಾಜ್ಯಂ ವಿಹಿತಂ ಯದ್ಯಧರ್ಮತಃ|
12015046c ಕಾರ್ಯಸ್ತತ್ರ ನ ಶೋಕೋ ವೈ ಭುಂಕ್ಷ್ವ ಭೋಗಾನ್ಯಜಸ್ವ ಚ||

ಈ ರಾಜ್ಯವನ್ನು ನಾವು ಧರ್ಮದಿಂದ ಪಡೆದವೋ ಅಥವಾ ಅಧರ್ಮದಿಂದ ಪಡೆದವೋ ಎನ್ನುವುದರ ಕುರಿತು ಯೋಚಿಸುವ ಕಾಲವಿದಲ್ಲ. ಶೋಕಪಡಬೇಡ! ಭೋಗಗಳನ್ನು ಭೋಗಿಸು ಮತ್ತು ಯಜ್ಞಗಳನ್ನು ಮಾಡು!

12015047a ಸುಖೇನ ಧರ್ಮಂ ಶ್ರೀಮಂತಶ್ಚರಂತಿ ಶುಚಿವಾಸಸಃ|
12015047c ಸಂವಸಂತಃ ಪ್ರಿಯೈರ್ದಾರೈರ್ಭುಂಜಾನಾಶ್ಚಾನ್ನಮುತ್ತಮಮ್||

ಶ್ರೀಮಂತರು ಸುಖದಿಂದಲೇ ಶುಭ್ರವಸ್ತ್ರಗಳನ್ನು ಧರಿಸಿ ಧರ್ಮವನ್ನಾಚರಿಸುತ್ತಾರೆ. ಅವರು ಪ್ರಿಯ ಪತ್ನಿಯರೊಂದಿಗೆ ವಾಸಿಸುತ್ತಾರೆ ಮತ್ತು ಉತ್ತಮ ಆಹಾರವನ್ನು ಸೇವಿಸುತ್ತಾರೆ.

12015048a ಅರ್ಥೇ ಸರ್ವೇ ಸಮಾರಂಭಾಃ ಸಮಾಯತ್ತಾ ನ ಸಂಶಯಃ|
12015048c ಸ ಚ ದಂಡೇ ಸಮಾಯತ್ತಃ ಪಶ್ಯ ದಂಡಸ್ಯ ಗೌರವಮ್||

ಸರ್ವ ಸಮಾರಂಭಗಳೂ ಧನದ ಮೇಲೆ ಅವಲಂಬಿಸಿವೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ಧನವು ದಂಡವನ್ನು ಅವಲಂಬಿಸಿದೆ. ದಂಡಕ್ಕಿರುವ ಗೌರವವನ್ನಾದರೂ ನೋಡು!

12015049a ಲೋಕಯಾತ್ರಾರ್ಥಮೇವೇಹ ಧರ್ಮಪ್ರವಚನಂ ಕೃತಮ್|
12015049c ಅಹಿಂಸಾ ಸಾಧುಹಿಂಸೇತಿ ಶ್ರೇಯಾನ್ಧರ್ಮಪರಿಗ್ರಹಃ||

ಲೋಕಯಾತ್ರೆಯ ನಿರ್ವಹಣೆಗೆ ಅಹಿಂಸೆಯು ಸಾಧುವೆಂದು ಧರ್ಮಪ್ರವಚನವನ್ನು ಮಾಡುತ್ತಾರೆ. ಆದರೆ ಹಿಂಸೆಯು ಕೆಲವು ಸಮಯಗಳಲ್ಲಿ ಶ್ರೇಯಸ್ಸನ್ನು ನೀಡುವ ಧರ್ಮಕಾರ್ಯವಾಗಬಹುದು[22].

12015050a ನಾತ್ಯಂತಗುಣವಾನ್ಕಶ್ಚಿನ್ನ ಚಾಪ್ಯತ್ಯಂತನಿರ್ಗುಣಃ|
12015050c ಉಭಯಂ ಸರ್ವಕಾರ್ಯೇಷು ದೃಶ್ಯತೇ ಸಾಧ್ವಸಾಧು ಚ||

ಯಾವುದೇ ಕಾರ್ಯವು ಅತ್ಯಂತ ಗುಣಯುಕ್ತವಾಗಿಯೂ ಅಥವಾ ಅತ್ಯಂತ ನಿರ್ಗುಣವಾಗಿಯೂ ಇರುವುದಿಲ್ಲ. ಸರ್ವಕಾರ್ಯಗಳಲ್ಲಿ ಒಳ್ಳೆಯದು ಯಾವುದು ಮತ್ತು ಯಾವುದು ಒಳ್ಳೆಯದಲ್ಲ ಈ ಎರಡನ್ನೂ ನೋಡಬೇಕಾಗುತ್ತದೆ.

12015051a ಪಶೂನಾಂ ವೃಷಣಂ ಚಿತ್ತ್ವಾ ತತೋ ಭಿಂದಂತಿ ನಸ್ತಕಾನ್|
12015051c ಕೃಷಂತಿ ಬಹವೋ ಭಾರಾನ್ಬಧ್ನಂತಿ ದಮಯಂತಿ ಚ||

---

[22] ಗೋಶಾಲೆಗೆ ಹುಲಿಯು ಬಂದರೆ ಅದನ್ನು ಹಿಂಸಿಸುವುದೇ ಉಚಿತವಾಗುತ್ತದೆ ಏಕೆಂದರೆ ಅದನ್ನು ವಧಿಸದೇ ಇದ್ದರೆ ಅನೇಕ ಗೋವುಗಳ ಹಿಂಸೆಯಾಗುತ್ತದೆ. ಆದುದರಿಂದ ಆರ್ತ-ರಕ್ಷಣಾ ಧರ್ಮದ ಸಿದ್ಧಿಗಾಗಿ ಆ ಹಿಂಸಾಪ್ರಾಣಿಯನ್ನು ವಧಿಸುವುದೇ ಶ್ರೇಯಸ್ಕರವಾಗುತ್ತದೆ. (ಗೀತಾ ಪ್ರೆಸ್)

ಹೋರಿಯ ಬೀಜವನ್ನು ಒಡೆದು, ಕೋಡುಗಳನ್ನು ಕತ್ತರಿಸುತ್ತಾರೆ. ಹೀಗೆ ಕಷ್ಟಕ್ಕೊಳಗಾದ ಹೋರಿಯು ಅತಿ ಭಾರವನ್ನು ಹೊರುತ್ತದೆ ಮತ್ತು ಕಟ್ಟಿದರೆ ಬಂಡಿಯನ್ನು ಎಳೆದುಕೊಂಡೂ ಹೋಗುತ್ತದೆ.

12015052a ಏವಂ ಪರ್ಯಾಕುಲೇ ಲೋಕೇ ವಿಪಥೇ ಜರ್ಜರೀಕೃತೇ|
12015052c ತೈಸ್ತೈರ್ನ್ಯಾಯ್ಯೈರ್ಮಹಾರಾಜ ಪುರಾಣಂ ಧರ್ಮಮಾಚರ||

ಮಹಾರಾಜ! ಅಧರ್ಮದಿಂದ ಜರ್ಜರಗೊಂಡು ಒಡೆದುಹೋಗುತ್ತಿರುವ ಲೋಕವನ್ನು ನ್ಯಾಯ ಮತ್ತು ಪುರಾತನ ಧರ್ಮವನ್ನು ಆಚರಿಸಿ ಆಳು!

12015053a ಯಜ ದೇಹಿ ಪ್ರಜಾ ರಕ್ಷ ಧರ್ಮಂ ಸಮನುಪಾಲಯ|
12015053c ಅಮಿತ್ರಾನ್ಜಹಿ ಕೌಂತೇಯ ಮಿತ್ರಾಣಿ ಪರಿಪಾಲಯ||

ಕೌಂತೇಯ! ಯಜ್ಞಮಾಡು. ದಾನಗಳನ್ನು ನೀಡು. ಪ್ರಜೆಗಳನ್ನು ರಕ್ಷಿಸಿ ಧರ್ಮವನ್ನು ಪಾಲಿಸು. ಶತ್ರುಗಳನ್ನು ಸಂಹರಿಸು ಮತ್ತು ಮಿತ್ರರನ್ನು ಪರಿಪಾಲಿಸು!

12015054a ಮಾ ಚ ತೇ ನಿಘ್ನತಃ ಶತ್ರೂನ್ಮನ್ಯುರ್ಭವತು ಭಾರತ|
12015054c ನ ತತ್ರ ಕಿಲ್ಬಿಷಂ ಕಿಂ ಚಿತ್ಕರ್ತುರ್ಭವತಿ ಭಾರತ||

ಭಾರತ! ಶತ್ರುಗಳನ್ನು ಸಂಹರಿಸುವಾಗ ನಿನಗೆ ದೀನತೆಯುಂಟಾಗದಿರಲಿ! ಭಾರತ! ಶತ್ರುವಿನಾಶದಲ್ಲಿ ಸ್ವಲ್ಪವೂ ಪಾಪವಿಲ್ಲ.

12015055a ಆತತಾಯೀ ಹಿ ಯೋ ಹನ್ಯಾದಾತತಾಯಿನಮಾಗತಮ್|
12015055c ನ ತೇನ ಭ್ರೂಣಹಾ ಸ ಸ್ಯಾನ್ಮನ್ಯುಸ್ತಂ ಮನ್ಯುಮೃಚ್ಚತಿ||

ಆಯುಧಗಳನ್ನು ಹಿಡಿದು ಎದುರಾದವನನ್ನು ಆಯುಧಗಳಿಂದ ಸಂಹರಿಸುವುದರಿಂದ ಭ್ರೂಣಹತ್ಯೆಯ ದೋಷವು ಬರುವುದಿಲ್ಲ. ಏಕೆಂದರೆ ಅಲ್ಲಿ ಕೋಪವು ಕೋಪವನ್ನು ಎದುರಿಸಿ ಹೋರಾಡುತ್ತದೆ.

12015056a ಅವಧ್ಯಃ ಸರ್ವಭೂತಾನಾಮಂತರಾತ್ಮಾ ನ ಸಂಶಯಃ|
12015056c ಅವಧ್ಯೇ ಚಾತ್ಮನಿ ಕಥಂ ವಧ್ಯೋ ಭವತಿ ಕೇನ ಚಿತ್||

ಸರ್ವಜೀವಿಗಳಲ್ಲಿರುವ ಅಂತರಾತ್ಮನು ಅವಧ್ಯ ಎನ್ನುವುದರಲ್ಲಿ ಸಂಶಯವೇ ಇಲ್ಲ. ಅವಧ್ಯವಾದ ಆತ್ಮವನ್ನು ಯಾರುತಾನೇ ಹೇಗೆ ವಧಿಸಬಲ್ಲರು?

12015057a ಯಥಾ ಹಿ ಪುರುಷಃ ಶಾಲಾಂ ಪುನಃ ಸಂಪ್ರವಿಶೇನ್ನವಾಮ್|
12015057c ಏವಂ ಜೀವಃ ಶರೀರಾಣಿ ತಾನಿ ತಾನಿ ಪ್ರಪದ್ಯತೇ||

ಮನುಷ್ಯನು ಹೊಸ ಹೊಸ ಮನೆಗಳಲ್ಲಿ ವಾಸಮಾಡುವಂತೆ ಜೀವವು ಬೇರೆ ಬೇರೆ ಶರೀರಗಳನ್ನು ಪಡೆಯುತ್ತದೆ.

12015058a ದೇಹಾನ್ಪುರಾಣಾನುತ್ಸೃಜ್ಯ ನವಾನ್ಸಂಪ್ರತಿಪದ್ಯತೇ|
12015058c ಏವಂ ಮೃತ್ಯುಮುಖಂ ಪ್ರಾಹುರ್ಯೇ ಜನಾಸ್ತತ್ತ್ವದರ್ಶಿನಃ||

ಹಳೆಯದಾದ ದೇಹಗಳನ್ನು ವಿಸರ್ಜಿಸಿ ಹೊಸ ಶರೀರಗಳನ್ನು ಪಡೆಯುತ್ತದೆ. ಇದನ್ನೇ ತತ್ತ್ವದರ್ಶೀ ಜನರು ಮೃತ್ಯುಮುಖವೆಂದು ಹೇಳುತ್ತಾರೆ.””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಅರ್ಜುನವಾಕ್ಯೇ ಪಂಚದಶೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ

೧೬

ಭೀಮವಾಕ್ಯ

ಅನುಭವಿಸಿದ ದುಃಖಿಗಳನ್ನು ನೆನಪಿಸಿಕೊಡುತ್ತಾ ಭೀಮಸೇನನು ರಾಜನಿಗೆ ಮೋಹವನ್ನು ತೊರೆದು ಮನಸ್ಸನ್ನು ನಿಯಂತ್ರಿಸಿಕೊಂಡು ರಾಜ್ಯಶಾಸನ ಮತ್ತು ಯಜ್ಞಗಳಿಗೆ ಪ್ರೇರೇಪಿಸುವುದು (1-26).

12016001 ವೈಶಂಪಾಯನ ಉವಾಚ|
12016001a ಅರ್ಜುನಸ್ಯ ವಚಃ ಶ್ರುತ್ವಾ ಭೀಮಸೇನೋಽತ್ಯಮರ್ಷಣಃ|
12016001c ಧೈರ್ಯಮಾಸ್ಥಾಯ ತೇಜಸ್ವೀ ಜ್ಯೇಷ್ಠಂ ಭ್ರಾತರಮಬ್ರವೀತ್||

ವೈಶಂಪಾಯನನು ಹೇಳಿದನು: "ಅರ್ಜುನನ ಮಾತನ್ನು ಕೇಳಿ ಅತಿ ಅಸಹನಶೀಲನಾದ ತೇಜಸ್ವೀ ಭೀಮಸೇನನು ಧೈರ್ಯವನ್ನು ತಾಳಿ ಹಿರಿಯಣ್ಣನಿಗೆ ಹೇಳಿದನು:

12016002a ರಾಜನ್ವಿದಿತಧರ್ಮೋಽಸಿ ನ ತೇಽಸ್ತ್ಯವಿದಿತಂ ಭುವಿ|
12016002c ಉಪಶಿಕ್ಷಾಮ ತೇ ವೃತ್ತಂ ಸದ್ಯೈವ ನ ಚ ಶಕ್ನುಮಃ||

"ರಾಜನ್! ನೀನು ಧರ್ಮವನ್ನು ತಿಳಿದಿದ್ದೀಯೆ. ಭುವಿಯಲ್ಲಿ ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ನಿನ್ನಿಂದಲೇ ನಾವು ಸದ್ಯೈವ ಉಪದೇಶಗಳನ್ನು ಪಡೆಯುತ್ತಾ ಬಂದಿದ್ದೇವೆ.

12016003a ನ ವಕ್ಷ್ಯಾಮಿ ನ ವಕ್ಷ್ಯಾಮೀತ್ಯೇವಂ ಮೇ ಮನಸಿ ಸ್ಥಿತಮ್|
12016003c ಅತಿದುಃಖಾತ್ತು ವಕ್ಷ್ಯಾಮಿ ತನ್ನಿಬೋಧ ಜನಾಧಿಪ||

“ನಾನು ಮಾತನಾಡುವುದಿಲ್ಲ! ನಾನು ಮಾತನಾಡುವುದಿಲ್ಲ!” ಎಂದು ನನ್ನ ಮನಸ್ಸಿನ ನಿರ್ಧಾರವಾಗಿತ್ತು. ಆದರೆ ಈಗ ಅತಿ ದುಃಖದಿಂದ ಹೇಳುತ್ತಿದ್ದೇನೆ. ಜನಾಧಿಪ! ಅದನ್ನು ಕೇಳು!

12016004a ಭವತಸ್ತು ಪ್ರಮೋಹೇನ ಸರ್ವಂ ಸಂಶಯಿತಂ ಕೃತಮ್|
12016004c ವಿಕ್ಲವತ್ವಂ ಚ ನಃ ಪ್ರಾಪ್ತಮಬಲತ್ವಂ ತಥೈವ ಚ||

ನಿನ್ನ ಮೋಹಪರವಶದಿಂದಾಗಿ ನಾವು ಮಾಡಿದುದೆಲ್ಲವೂ ಸಂಶಯಾಸ್ಪದವೆನ್ನಿಸುತ್ತಿದೆ. ನಾವು ವ್ಯಾಕುಲಗೊಂಡಿದ್ದೇವೆ ಮತ್ತು ದುರ್ಬಲರಾಗಿದ್ದೇವೆ ಎಂದನ್ನಿಸುತ್ತಿದೆ.

12016005a ಕಥಂ ಹಿ ರಾಜಾ ಲೋಕಸ್ಯ ಸರ್ವಶಾಸ್ತ್ರವಿಶಾರದಃ|
12016005c ಮೋಹಮಾಪದ್ಯತೇ ದೈನ್ಯಾದ್ಯಥಾ ಕುಪುರುಷಸ್ತಥಾ||

ಸರ್ವಶಾಸ್ತ್ರವಿಶಾರದನೂ ಲೋಕದ ರಾಜನೂ ಆಗಿರುವ ನೀನು ಏಕೆ ಹೀಗೆ ಹೇಡಿಯಂತೆ ದೈನ್ಯದಿಂದ ಮೋಹಪರವಶನಾಗಿರುವೆ?

12016006a ಆಗತಿಶ್ಚ ಗತಿಶ್ಚೈವ ಲೋಕಸ್ಯ ವಿದಿತಾ ತವ|
12016006c ಆಯತ್ಯಾಂ ಚ ತದಾತ್ವೇ ಚ ನ ತೇಽಸ್ತ್ಯವಿದಿತಂ ಪ್ರಭೋ||

ಲೋಕದಲ್ಲಿ ನಡೆದುಹೋಗಿರುವ ಮತ್ತು ನಡೆಯುತ್ತಿರುವ ಎಲ್ಲವೂ ನಿನಗೆ ತಿಳಿದೇ ಇದೆ. ಪ್ರಭೋ! ದುರ್ಮಾರ್ಗ-ಸನ್ಮಾರ್ಗಗಳೂ ನಿನಗೆ ತಿಳಿದಿವೆ.

12016007a ಏವಂ ಗತೇ ಮಹಾರಾಜ ರಾಜ್ಯಂ ಪ್ರತಿ ಜನಾಧಿಪ|
12016007c ಹೇತುಮತ್ರ ಪ್ರವಕ್ಷ್ಯಾಮಿ ತದಿಹೈಕಮನಾಃ ಶೃಣು||

ಮಹಾರಾಜ! ಜನಾಧಿಪ! ಹೀಗಿರುವಾಗ ರಾಜ್ಯದ ಕುರಿತು ನಾವು

ಹೇಳುತ್ತಿರುದು ಏಕೆನ್ನುವುದನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು।

12016008a ದ್ವಿವಿಧೋ ಜಾಯತೇ ವ್ಯಾಧಿಃ ಶಾರೀರೋ ಮಾನಸಸ್ತಥಾ|
12016008c ಪರಸ್ಪರಂ ತಯೋರ್ಜನ್ಮ ನಿರ್ದ್ವಂದ್ವಂ ನೋಪಲಭ್ಯತೇ॥

ಶಾರೀರಕ ಮತ್ತು ಮಾನಸಿಕ ಎನ್ನುವ ಎರಡು ರೀತಿಯ ವ್ಯಾಧಿಗಳುಂಟಾಗುತ್ತವೆ. ಒಂದನ್ನಾಶ್ರಯಿಸಿ ಇನ್ನೊಂದು ವ್ಯಾಧಿಯೂ ಹುಟ್ಟಿಕೊಳ್ಳಬಹುದು. ಆದರೆ ಒಂದು ಹುಟ್ಟದೇ ಇನ್ನೊಂದು ಹುಟ್ಟಲಾರದು.

12016009a ಶಾರೀರಾಜ್ಜಾಯತೇ ವ್ಯಾಧಿರ್ಮಾನಸೋ ನಾತ್ರ ಸಂಶಯಃ|
12016009c ಮಾನಸಾಜ್ಜಾಯತೇ ವ್ಯಾಧಿಃ ಶಾರೀರ ಇತಿ ನಿಶ್ಚಯಃ॥

ಶರೀರದಿಂದ ವ್ಯಾಧಿಯು ಹುಟ್ಟಿ ಅದರಿಂದಲೇ ಮನೋವ್ಯಾಧಿಯು ಹುಟ್ಟಿಕೊಳ್ಳುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮನೋವ್ಯಾಧಿಯಿಂದ ಶಾರೀರಿಕ ವ್ಯಾಧಿಯೂ ಉಂಟಾಗುತ್ತದೆ ಎನ್ನುವುದು ನಿಶ್ಚಯವಾದುದು.

12016010a ಶಾರೀರಮಾನಸೇ ದುಃಖೇ ಯೋಽತೀತೇ ಅನುಶೋಚತಿ|
12016010c ದುಃಖೇನ ಲಭತೇ ದುಃಖಂ ದ್ವಾವನರ್ಥೌ ಪ್ರಪದ್ಯತೇ॥

ಮುಗಿದುಹೋಗಿರುವ ಶಾರೀರಿಕ ಮತ್ತು ಮಾನಸಿಕ ದುಃಖಗಳನ್ನು ನೆನಪಿಸಿಕೊಂಡು ಶೋಕಿಸುವವನಿಗೆ ದುಃಖದಿಂದ ದುಃಖವು ದೊರಕುವುದೇ ಹೊರತು ಧರ್ಮಾರ್ಥಗಳು ದೊರಕುವುದಿಲ್ಲ.

12016011a ಶೀತೋಷ್ಣೇ ಚೈವ ವಾಯುಶ್ಚ ತ್ರಯಃ ಶಾರೀರಜಾ ಗುಣಾಃ|
12016011c ತೇಷಾಂ ಗುಣಾನಾಂ ಸಾಮ್ಯಂ ಚ ತದಾಹುಃ ಸ್ವಸ್ಥಲಕ್ಷಣಮ್॥

ಶೀತ, ಉಷ್ಣ ಮತ್ತು ವಾಯು ಈ ಮೂರು ಶರೀರದಲ್ಲಿರುವ ಗುಣಗಳು.

ಈ ಗುಣಗಳ ಸಮಾನತೆಯನ್ನು ಆರೋಗ್ಯದ ಲಕ್ಷಣವೆಂದು ಹೇಳುತ್ತಾರೆ.

12016012a ತೇಷಾಮನ್ಯತಮೋತ್ಸೇಕೇ ವಿಧಾನಮುಪದಿಶ್ಯತೇ|
12016012c ಉಷ್ಣೇನ ಬಾಧ್ಯತೇ ಶೀತಂ ಶೀತೇನೋಷ್ಣಂ ಪ್ರಬಾಧ್ಯತೇ||

ಅವುಗಳಲ್ಲಿ ಯಾವುದಾದರೂ ಒಂದು ಉದ್ರೇಕಗೊಂಡರೆ ಅದರ ಚಿಕಿತ್ಸೆಗೆ ಈ ವಿಧಾನವನ್ನು ಹೇಳಿದ್ದಾರೆ: ಉಷ್ಣದಿಂದ ಶೀತವನ್ನೂ ಶೀತದಿಂದ ಉಷ್ಣವನ್ನೂ ಪರಿಹರಿಸಬಹುದು.

12016013a ಸತ್ತ್ವಂ ರಜಸ್ತಮಶ್ಚೈವ ಮಾನಸಾಃ ಸ್ಯುಸ್ತ್ರಯೋ ಗುಣಾಃ|
[23]12016013c ಹರ್ಷೇಣ ಬಾಧ್ಯತೇ ಶೋಕೋ ಹರ್ಷಃ ಶೋಕೇನ ಬಾಧ್ಯತೇ||

ಸತ್ವ, ರಜಸ್ಸು ಮತ್ತು ತಮ ಈ ಮೂರು ಮನಸ್ಸಿನ ಗುಣಗಳು. ಹರ್ಷದಿಂದ ಶೋಕವು ಉಪಶಮನಗೊಳ್ಳುತ್ತದೆ ಮತ್ತು ಶೋಕದಿಂದ ಹರ್ಷವು ಕುಂದುತ್ತದೆ.

12016014a ಕಶ್ಚಿತ್ಸುಖೇ ವರ್ತಮಾನೋ ದುಃಖಸ್ಯ ಸ್ಮರ್ತುಮಿಚ್ಚತಿ|
12016014c ಕಶ್ಚಿದ್ದುಃಖೇ ವರ್ತಮಾನಃ ಸುಖಸ್ಯ ಸ್ಮರ್ತುಮಿಚ್ಚತಿ||

---

[23] ಹಿಂದೆ ಶೀತ-ಉಷ್ಣ-ವಾಯುಗಳ ಕುರಿತು ಹೇಳುವಾಗ ಇದ್ದಂತೆ ಸತ್ವ-ರಜ-ತಮೋಗುಣಗಳ ಕುರಿತು ಹೇಳುವಾಗಲೂ ಈ ಶ್ಲೋಕಾರ್ಧಗಳನ್ನು ಭಾರತ ದರ್ಶನ ಪ್ರಕಾಶನದಲ್ಲಿ ನೀಡಲಾಗಿದೆ: ತೇಷಾಂ ಗುಣಾನಾಂ ಸಾಮ್ಯಂ ಯತ್ತದಾಹುಃ ಸ್ವಸ್ಥಲಕ್ಷಣಂ|| ತೇಷಾಮನ್ಯತಮೋತ್ಸೇಕೇ ವಿಧಾನಮುಪದಿಶ್ಯತೇ| ಅರ್ಥಾತ್ ಈ ಮೂರು ಗುಣಗಳ ಸಮತೆಯನ್ನು ಆರೋಗ್ಯದ ಲಕ್ಷಣವೆಂದು ಹೇಳುತ್ತಾರೆ. ಅವುಗಳಲ್ಲಿ ಯಾವುದಾದರೂ ಒಂದು ಉದ್ರೇಕಗೊಂಡರೆ ಅದರ ಚಿಕಿತ್ಸೆಗೆ ವಿಧಾನವನ್ನು ಹೇಳಿದ್ದಾರೆ.

ವರ್ತಮಾನದಲ್ಲಿ ಸುಖದಿಂದಿದ್ದರೆ ಕಳೆದುಹೋದ ದುಃಖವನ್ನು
ನೆನಪಿಸಿಕೊಳ್ಳಬೇಕು. ಹಾಗೆಯೇ ವರ್ತಮಾನದಲ್ಲಿ ದುಃಖದಿಂದಿದ್ದರೆ
ಹಿಂದೆ ಪಟ್ಟಿರುವ ಸುಖವನ್ನು ನೆನಪಿಸಿಕೊಳ್ಳಬೇಕು.

12016015a ಸ ತ್ವಂ ನ ದುಃಖೀ ದುಃಖಸ್ಯ ನ ಸುಖೀ ಚ ಸುಖಸ್ಯ ಚ|
12016015c ನ ದುಃಖೀ ಸುಖಜಾತಸ್ಯ ನ ಸುಖೀ ದುಃಖಜಸ್ಯ ವಾ||

ಆದರೆ ನೀನು ಮಾತ್ರ ಈಗ ದುಃಖಿಯಾಗಿದ್ದು ಹಿಂದಿನ ನಮ್ಮ
ದುಃಖಗಳನ್ನು ಸ್ಮರಿಸುತ್ತಿಲ್ಲ ಅಥವಾ ಈಗ ಸುಖಿಯಾಗಿದ್ದು ಹಿಂದಿನ
ನಮ್ಮ ಸುಖಗಳನ್ನು ಸ್ಮರಿಸುತ್ತಿಲ್ಲ ಅಥವಾ ಈಗ ದುಃಖಿಯಾಗಿದ್ದು
ನಮ್ಮ ಹಿಂದಿನ ಸುಖಗಳನ್ನು ಸ್ಮರಿಸುತ್ತಿಲ್ಲ ಅಥವಾ ಈಗ
ಸುಖಿಯಾಗಿದ್ದು ಹಿಂದಿನ ನಮ್ಮ ದುಃಖಗಳನ್ನು ಸ್ಮರಿಸಿಕೊಳ್ಳುತ್ತಿಲ್ಲ.

12016016a ಸ್ಮರ್ತುಮರ್ಹಸಿ ಕೌರವ್ಯ ದಿಷ್ಟಂ ತು ಬಲವತ್ತರಮ್|
12016016c ಅಥ ವಾ ತೇ ಸ್ವಭಾವೋಽಯಂ ಯೇನ ಪಾರ್ಥಿವ ಕೃಷ್ಯಸೇ||

ಕೌರವ್ಯ! ದೈವವು ಎಷ್ಟು ಬಲವತ್ತರವಾಗಿದೆ ಎನ್ನುವುದನ್ನು
ಸ್ಮರಿಸಿಕೊಳ್ಳಬೇಕು. ಪಾರ್ಥಿವ! ಅಥವಾ ಸ್ವಭಾವತಃ ನೀನು
ಶೋಕಪಡುವವನಾಗಿರುವುದರಿಂದ ಈ ರೀತಿ ಶೋಕಿಸುತ್ತಿರುವೆ!

12016017a ದೃಷ್ಟ್ವಾ ಸಭಾಗತಾಂ ಕೃಷ್ಣಾಮೇಕವಸ್ತ್ರಾಂ ರಜಸ್ವಲಾಮ್|
12016017c ಮಿಷತಾಂ ಪಾಂಡುಪುತ್ರಾಣಾಂ ನ ತಸ್ಯ ಸ್ಮರ್ತುಮರ್ಹಸಿ||

ಪಾಂಡುಪುತ್ರರು ನೋಡುತ್ತಿದ್ದಂತೆಯೇ ರಜಸ್ವಲೆಯಾಗಿ
ಏಕವಸ್ತ್ರಳಾಗಿದ್ದ ಕೃಷ್ಣೆಯನ್ನು ಸಭೆಗೆ ಎಳೆತಂದಿರುವುದನ್ನು
ನೋಡಿಯೂ ನೀನು ಅದನ್ನು ನೆನಪಿಸಿಕೊಳ್ಳುತ್ತಿಲ್ಲ!

12016018a ಪ್ರವ್ರಾಜನಂ ಚ ನಗರಾದಜಿನೈಶ್ಚ ನಿವಾಸನಮ್।
12016018c ಮಹಾರಣ್ಯನಿವಾಸಶ್ಚ ನ ತಸ್ಯ ಸ್ಮರ್ತುಮರ್ಹಸಿ॥

ಜಿನವಸ್ತ್ರಗಳನ್ನುಡಿಸಿ ನಗರದಿಂದ ಹೊರಗಟ್ಟಿದುದನ್ನು ಮತ್ತು ಮಹಾ ಅರಣ್ಯದಲ್ಲಿ ನಮ್ಮ ವಾಸವನ್ನು ನೀನು ನೆನಪಿಸಿಕೊಳ್ಳುತ್ತಿಲ್ಲ!

12016019a ಜಟಾಸುರಾತ್ಪರಿಕ್ಲೇಶಂ ಚಿತ್ರಸೇನೇನ ಚಾಹವಮ್।
12016019c ಸೈಂಧವಾಚ್ಚ ಪರಿಕ್ಲೇಶಂ ಕಥಂ ವಿಸ್ಮೃತವಾನಸಿ॥
12016019e ಪುನರಜ್ಞಾತಚರ್ಯಾಯಾಂ ಕೀಚಕೇನ ಪದಾ ವಧಮ್[24]॥

ಜಟಾಸುರನಿಂದಾದ ಕಷ್ಟವನ್ನೂ, ಚಿತ್ರಸೇನನೊಡನೆ ಮಾಡಿದ ಯುದ್ಧವನ್ನೂ ಮತ್ತು ಸೈಂಧವನ ಉಪಟಳವನ್ನೂ ನೀನು ಹೇಗೆ ಮರೆತುಬಿಟ್ಟಿದ್ದೀಯೆ? ಅನಂತರ ಅಜ್ಞಾತವಾಸದಲ್ಲಿ ಕೀಚಕನು ದ್ರೌಪದಿಯನ್ನು ಕಾಲಿನಿಂದ ಒದೆದನು.

[25]12016020a ಯಚ್ಚ ತೇ ದ್ರೋಣಭೀಷ್ಮಾಭ್ಯಾಂ ಯುದ್ಧಮಾಸೀದರಿಂದಮ।
12016020c ಮನಸ್ಯೇಕೇನ ತೇ ಯುದ್ಧಮಿದಂ ಘೋರಮುಪಸ್ಥಿತಮ್॥

ಅರಿಂದಮ! ದ್ರೋಣ-ಭೀಷ್ಮರೊಡನೆ ಹೇಗೆ ಯುದ್ಧವನ್ನು ನಡೆಸಿದೆಯೋ ಹಾಗೆ ನಿನ್ನ ಮನಸ್ಸಿನಲ್ಲಿಯೂ ಈ ಘೋರ ಯುದ್ಧವು

---

[24] ಇದರ ನಂತರ ಈ ಒಂದು ಅಧಿಕ ಶ್ಲೋಕಾರ್ಧವಿದೆ: ದ್ರೌಪದ್ಯಾ ರಾಜಪುತ್ರ್ಯಾಶ್ಚ ಕಥಂ ವಿಸ್ಮೃತವಾನಸಿ। (ಗೀತಾ ಪ್ರೆಸ್).

[25] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಬಲಿನೋ ಹಿ ವಯಂ ರಾಜನ್ ದೇವೈರಪಿ ಸುದುರ್ಜಯಾಃ। ಕಥಂ ಭೃತ್ಯತ್ವಮಾಪನ್ನಾ ವಿರಾಟನಗರೇ ಸ್ಮರ॥ (ಗೀತಾ ಪ್ರೆಸ್).

ನಡೆಯುತ್ತಿದೆ.

12016021a ಯತ್ರ ನಾಸ್ತಿ ಶರೈಃ ಕಾರ್ಯಂ ನ ಮಿತ್ರೈರ್ನ ಚ ಬಂಧುಭಿಃ|
12016021c ಆತ್ಮನೈಕೇನ ಯೋದ್ಧವ್ಯಂ ತತ್ತೇ ಯುದ್ಧಮುಪಸ್ಥಿತಮ್||

ಈಗ ಬಂದೊದಗಿರುವ ಯುದ್ಧದಲ್ಲಿ ನೀನು ನಿನ್ನ ಆತ್ಮದೊಂದಿಗೇ ಯುದ್ಧಮಾಡಬೇಕಾಗುತ್ತದೆ. ಈ ಯುದ್ಧದಲ್ಲಿ ಬಾಣಗಳ ಅಥವಾ ಮಿತ್ರ-ಬಂಧುಗಳ ಕೆಲಸವೇನೂ ಇಲ್ಲ.

12016022a ತಸ್ಮಿನ್ನನಿರ್ಜಿತೇ ಯುದ್ಧೇ ಪ್ರಾಣಾನ್ಯದಿ ಹ ಮೋಕ್ಷ್ಯಸೇ|
12016022c ಅನ್ಯಂ ದೇಹಂ ಸಮಾಸ್ಥಾಯ ಪುನಸ್ತೇನೈವ ಯೋತ್ಸ್ಯಸೇ||

ನೀನೇನಾದರೂ ಈ ಯುದ್ಧದಲ್ಲಿ ಸೋತು ಪ್ರಾಣಗಳನ್ನು ತೊರೆದರೆ ಅನ್ಯ ದೇಹವನ್ನು ಹೊತ್ತು ಪುನಃ ಈ ಶತ್ರುಗಳೊಡನೆ ಹೋರಾಡಬೇಕಾಗುತ್ತದೆ!

12016023a ತಸ್ಮಾದದ್ಯೈವ ಗಂತವ್ಯಂ ಯುದ್ಧಸ್ಯ ಭರತರ್ಷಭ|
[26]12016023c ಏತಜ್ಜಿತ್ವಾ ಮಹಾರಾಜ ಕೃತಕೃತ್ಯೋ ಭವಿಷ್ಯಸಿ||

ಭರತರ್ಷಭ! ಮಹಾರಾಜ! ಆದುದರಿಂದ ಇಂದೇ ನೀನು ಈ ಯುದ್ಧವನ್ನು ಮಾಡಬೇಕು. ಇದನ್ನು ಗೆದ್ದು ನೀನು ಕೃತಕೃತ್ಯನಾಗುವೆ!

12016024a ಏತಾಂ ಬುದ್ಧಿಂ ವಿನಿಶ್ಚಿತ್ಯ ಭೂತಾನಾಮಾಗತಿಂ ಗತಿಮ್|
12016024c ಪಿತೃಪೈತಾಮಹೇ ವೃತ್ತೇ ಶಾಧಿ ರಾಜ್ಯಂ ಯಥೋಚಿತಮ್||

---

[26] ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಪರಮವ್ಯಕ್ತರೂಪಸ್ಯ ವ್ಯಕ್ತಂ ತ್ಯಕ್ತ್ವಾ ಸ್ವಕರ್ಮಭಿಃ| ತಸ್ಮಿನ್ನನಿರ್ಜಿತೇ ಯುದ್ಧೇ ಕಾಮವಸ್ಥಾಂ ಗಮಿಷ್ಯಸಿ|| (ಗೀತಾ ಪ್ರೆಸ್).

ಇರುವವುಗಳು ಬರುತ್ತಿರುತ್ತವೆ ಮತ್ತು ಹೋಗುತ್ತಿರುತ್ತವೆ ಎಂಬ ನಿಶ್ಚಯವನ್ನು ಮಾಡಿ ಪಿತೃ-ಪಿತಾಮಹರು ನಡೆದುಕೊಂಡ ರೀತಿಯಲ್ಲಿ ಮನಸ್ಸು ಮಾಡಿ ಯಥೋಚಿತವಾದ ರಾಜ್ಯವನ್ನು ಆಳು!

12016025a ದಿಷ್ಟ್ಯಾ ದುರ್ಯೋಧನಃ ಪಾಪೋ ನಿಹತಃ ಸಾನುಗೋ ಯುಧಿ|
12016025c ದ್ರೌಪದ್ಯಾಃ ಕೇಶಪಕ್ಷಸ್ಯ ದಿಷ್ಟ್ಯಾ ತ್ವಂ ಪದವೀಂ ಗತಃ||

ದೈವವು ನಡೆಸಿದಂತೆ ಯುದ್ಧದಲ್ಲಿ ಪಾಪೀ ದುರ್ಯೋಧನನು ಅವನ ಅನುಯಾಯಿಗಳೊಂದಿಗೆ ಹತನಾದನು. ಸೌಭಾಗ್ಯವಶಾತ್ ನೀನು ದ್ರೌಪದಿಯ ಕೇಶಪಾಶದ ಅಧಿಕಾರವನ್ನು ಪುನಃ ಪಡೆದುಕೊಂಡಿರುವೆ!

12016026a ಯಜಸ್ವ ವಾಜಿಮೇಧೇನ ವಿಧಿವದ್ದಕ್ಷಿಣಾವತಾ|
12016026c ವಯಂ ತೇ ಕಿಂಕರಾಃ ಪಾರ್ಥ ವಾಸುದೇವಶ್ಚ ವೀರ್ಯವಾನ್||

ಪಾರ್ಥ! ವಿವಿಧ ದಕ್ಷಿಣಾಯುಕ್ತವಾದ ಅಶ್ವಮೇಧವನ್ನು ಯಾಜಿಸು. ನಾವು ಮತ್ತು ವೀರ್ಯವಾನ್ ವಾಸುದೇವನೂ ನಿನ್ನ ಕಿಂಕರರಾಗಿದ್ದೇವೆ!"

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಭೀಮವಾಕ್ಯೇ ಷೋಡಶೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಭೀಮವಾಕ್ಯ ಎನ್ನುವ ಹದಿನಾರನೇ ಅಧ್ಯಾಯವು.

೧೭

ಯುಧಿಷ್ಠಿರವಾಕ್ಯ

ಯುಧಿಷ್ಠಿರನು ಭೀಮಸೇನನ ಮಾತನ್ನು ವಿರೋಧಿಸುತ್ತಾ ಮುನಿವೃತ್ತಿಯ ಮತ್ತು ಜ್ಞಾನೀ ಮಹಾತ್ಮರನ್ನು ಪ್ರಶಂಸಿಸುವುದು (1-23).

12017001 ಯುಧಿಷ್ಠಿರ ಉವಾಚ|
12017001a ಅಸಂತೋಷಃ ಪ್ರಮಾದಶ್ಚ ಮದೋ ರಾಗೋಽಪ್ರಶಾಂತತಾ|
12017001c ಬಲಂ ಮೋಹೋಽಭಿಮಾನಶ್ಚ ಉದ್ವೇಗಶ್ಚಾಪಿ ಸರ್ವಶಃ||
12017002a ಏಭಿಃ ಪಾಪ್ಮಭಿರಾವಿಷ್ಟೋ ರಾಜ್ಯಂ ತ್ವಮಭಿಕಾಂಕ್ಷಸಿ|
12017002c ನಿರಾಮಿಷೋ ವಿನಿರ್ಮುಕ್ತಃ ಪ್ರಶಾಂತಃ ಸುಸುಖೀ ಭವ||

ಯುಧಿಷ್ಠಿರನು ಹೇಳಿದನು: "ಅಸಂತೋಷ, ಪ್ರಮಾದ, ಮದ, ರಾಗ, ಅಪ್ರಶಾಂತತೆ, ಬಲ, ಮೋಹ, ಅಭಿಮಾನ, ಉದ್ವೇಗ ಈ ಎಲ್ಲ ಪಾಪಗುಣಗಳಿಂದ ನೀನು ಆವಿಷ್ಟನಾಗಿರುವೆ. ಆದುದರಿಂದಲೇ ನೀನು ರಾಜ್ಯದ ಕುರಿತು ಆಸೆಪಡುತ್ತಿದ್ದೀಯೆ! ಆಸೆಗಳನ್ನು ತೊರೆದು ಸಂಸಾರಬಂಧನದಿಂದ[27] ವಿಮುಕ್ತನಾಗಿ ಪ್ರಶಾಂತನಾಗಿ ಸುಖದಿಂದ ಬಾಳು!

12017003a ಯ ಇಮಾಮಖಿಲಾಂ ಭೂಮಿಂ ಶಿಷ್ಯಾದೇಕೋ ಮಹೀಪತಿಃ|
12017003c ತಸ್ಯಾಪ್ಯುದರಮೇವೈಕಂ ಕಿಮಿದಂ ತ್ವಂ ಪ್ರಶಂಸಸಿ||

ಇಡೀ ಭೂಮಂಡಲವನ್ನೆ ಆಳುವ ಮಹೀಪತಿಗೂ ಇರುವುದು ಒಂದೇ ಹೊಟ್ಟೆ. ಹೀಗಿದ್ದರೂ ನೀನು ಏಕೆ ಚಕ್ರಾಧಿಪತ್ಯವನ್ನು ಪ್ರಶಂಸಿಸುತ್ತಿರುವೆ?

---

[27] ಆಮಿಷಂ ಬಂಧನಂ ಲೋಕೇ ಕರ್ಮೇಹೋಕ್ತಂ ತಥಾಮಿಷಮ್| ತಾಭ್ಯಾಂ ವಿಮುಕ್ತಃ ಪಾಪಾಭ್ಯಾಂ ಪದಮಾಪ್ನೋತಿ ತತ್ಪರಮ್|| (ಗೀತಾ ಪ್ರೆಸ್).

12017004a ನಾಹ್ನಾ ಪೂರಯಿತುಂ ಶಕ್ಯಾ ನ ಮಾಸೇನ ನರರ್ಷಭ|
12017004c ಅಪೂರ್ಯಾಂ ಪೂರಯನ್ನಿಚ್ಛಾಮಾಯುಷಾಪಿ ನ ಶಕ್ನುಯಾತ್||

ನರರ್ಷಭ! ಮನುಷ್ಯನ ಆಸೆಗಳನ್ನು ಒಂದು ದಿನದಲ್ಲಿ ಅಥವಾ ಒಂದು ತಿಂಗಳಿನಲ್ಲಿ ಪೂರೈಸಲು ಸಾಧ್ಯವಿಲ್ಲ. ಅಪೂರ್ಣವಾಗಿಯೇ ಇರುವ ಈ ಇಚ್ಛೆಗಳನ್ನು ಪೂರೈಸಲು ಇಡೀ ಜೀವಮಾನವೇ ಸಾಕಾಗುವುದಿಲ್ಲ.

12017005a ಯಥೇದ್ಧಃ ಪ್ರಜ್ವಲತ್ಯಗ್ನಿರಸಮಿದ್ಧಃ ಪ್ರಶಾಮ್ಯತಿ|
12017005c ಅಲ್ಪಾಹಾರತಯಾ ತ್ವಗ್ನಿಂ ಶಮಯೌದರ್ಯಮುತ್ಥಿತಮ್||

ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಸಮಿದ್ಧವನ್ನು ಹಾಕದೇ ಹೇಗೆ ಪ್ರಶಾಂತಗೊಳಿಸಬಹುದೋ ಹಾಗೆ ಅಲ್ಪಾಹಾರದಿಂದ ಹೊಟ್ಟೆಯಲ್ಲಿ ಉರಿಯುವ ಹಸಿವೆಯೆಂಬ ಅಗ್ನಿಯನ್ನು ಶಮನಗೊಳಿಸಬಹುದು.

12017005e ಜಯೋದರಂ ಪೃಥಿವ್ಯಾ ತೇ ಶ್ರೇಯೋ ನಿರ್ಜಿತಯಾ ಜಿತಮ್||
12017006a ಮಾನುಷಾನ್ಕಾಮಭೋಗಾಂಸ್ತ್ವಮೈಶ್ವರ್ಯಂ ಚ ಪ್ರಶಂಸಸಿ|
12017006c ಅಭೋಗಿನೋಽಬಲಾಶ್ಚೈವ ಯಾಂತಿ ಸ್ಥಾನಮನುತ್ತಮಮ್||

ಹೊಟ್ಟೆಯನ್ನು ಗೆಲ್ಲುವುದು ಭೂಮಿಯನ್ನು ಗೆಲ್ಲುವುದಕ್ಕಿಂತಲೂ ಶ್ರೇಯಸ್ಕರವಾದುದು. ಮನುಷ್ಯಲೋಕಕ್ಕೆ ಸಂಬಂಧಿಸಿದ ಭೋಗೈಶ್ವರ್ಯಗಳನ್ನು ನೀನು ಪ್ರಶಂಸಿಸುತ್ತಿರುವೆ! ಆದರೆ ಭೋಗಿಸದಿರುವವರು ಮತ್ತು ಅಬಲರೂ ಕೂಡ ಉತ್ತಮ ಸ್ಥಾನಗಳಿಗೆ ಹೋಗುತ್ತಾರೆ!

12017007a ಯೋಗಕ್ಷೇಮೌ ಚ ರಾಷ್ಟ್ರಸ್ಯ ಧರ್ಮಾಧರ್ಮೌ ತ್ವಯಿ ಸ್ಥಿತೌ|
12017007c ಮುಚ್ಯಸ್ವ ಮಹತೋ ಭಾರಾತ್ಯಾಗಮೇವಾಭಿಸಂಶ್ರಯ||

ರಾಷ್ಟ್ರದ ಯೋಗ-ಕ್ಷೇಮಗಳೂ, ಧರ್ಮಾಧರ್ಮಗಳೂ ನಿನ್ನಲ್ಲಿಯೇ ನೆಲಸಿವೆ. ತ್ಯಾಗವನ್ನವಲಂಬಿಸಿ ಈ ಮಹಾಭಾರದ ಹೊರೆಯಿಂದ ಮುಕ್ತಿಹೊಂದು!

12017008a ಏಕೋದರಕೃತೇ ವ್ಯಾಘ್ರಃ ಕರೋತಿ ವಿಘಸಂ ಬಹು|
12017008c ತಮನ್ಯೇಽಪ್ಯುಪಜೀವಂತಿ ಮಂದವೇಗಂಚರಾ ಮೃಗಾಃ||

ಒಂದೇ ಹೊಟ್ಟೆಯುಳ್ಳದ್ದಾದರೂ ಹುಲಿಯು ಬಹಳಷ್ಟು ಎಂಜಲನ್ನು ಚೆಲ್ಲುತ್ತದೆ. ಅನ್ಯ ಮೃಗಗಳು ನಿಧಾನವಾಗಿ ಅದನ್ನೇ ಅನುಸರಿಸಿ ಹೋಗಿ, ಅದು ಚೆಲ್ಲಿರುವ ಆಹಾರವನ್ನು ತಿಂದು ತಮ್ಮ ಜೀವನವನ್ನು ನಡೆಸಿಕೊಳ್ಳುತ್ತವೆ.

12017009a ವಿಷಯಾನ್ಪ್ರತಿಸಂಹೃತ್ಯ ಸಂನ್ಯಾಸಂ ಕುರುತೇ ಯತಿಃ|
12017009c ನ ಚ ತುಷ್ಯಂತಿ ರಾಜಾನಃ ಪಶ್ಯ ಬುದ್ಧ್ಯಂತರಂ ಯಥಾ||

ವಿಷಯಗಳಿಂದ ತನ್ನ ಮನಸ್ಸನ್ನು ಸೆಳೆದುಕೊಂಡು ಯತಿಯು ಸಂನ್ಯಾಸದಲ್ಲಿರುತ್ತಾನೆ. ಆದರೆ ರಾಜನು ವಿಷಯಗಳಿಂದ ತೃಪ್ತನೇ ಆಗುವುದಿಲ್ಲ. ಇವರೀರ್ವರ ಬುದ್ಧಿಗಳಲ್ಲಿರುವ ಅಂತರವನ್ನಾದರೂ ನೋಡು!

12017010a ಪತ್ರಾಹಾರೈರಶ್ಮಕುಟ್ಟೈರ್ದಂತೋಲೂಖಲಿಕೈಸ್ತಥಾ|
12017010c ಅಬ್ಭಕ್ಷೈರ್ವಾಯುಭಕ್ಷೈಶ್ಚ ತೈರಯಂ ನರಕೋ ಜಿತಃ||

ಎಲೆಗಳನ್ನು ತಿನ್ನುವವರು, ಕಲ್ಲುಮೇಲಿಟ್ಟು ಕುಟ್ಟಿದ ಧಾನ್ಯವನ್ನು ತಿನ್ನುವವರು, ಹಲ್ಲಿನಿಂದ ಕಚ್ಚಿ ತಿನ್ನುವುದನ್ನು ಮಾತ್ರ ತಿನ್ನುವವರು, ನೀರನ್ನೇ ಕುಡಿದು ಜೀವಿಸಿರುವವರು, ಮತ್ತು ಗಾಳಿಯನ್ನೇ ಸೇವಿಸಿ ಜೀವಿಸಿರುವವರು ಇವರು ನರಕವನ್ನು ಗೆದ್ದವರು.

12017011a ಯಶ್ಚೇಮಾಂ ವಸುಧಾಂ ಕೃತ್ಸ್ನಾಂ ಪ್ರಶಾಸೇದಖಿಲಾಂ ನೃಪಃ|
12017011c ತುಲ್ಯಾಶ್ಮಕಾಂಚನೋ ಯಶ್ಚ ಸ ಕೃತಾರ್ಥೋ ನ ಪಾರ್ಥಿವಃ||

ಅಖಿಲ ಭೂಮಂಡಲವನ್ನೂ ಆಳುವ ನೃಪ ಮತ್ತು ಕಲ್ಲು-
ಕಾಂಚನಗಳನ್ನು ಒಂದಾಗಿಯೇ ಕಾಣುವ ಯತಿ ಇವರಿಬ್ಬರಲ್ಲಿ ರಾಜನು
ಎಂದೂ ಕೃತಾರ್ಥನೆನಿಸಿಕೊಳ್ಳಲಾರ!

12017012a ಸಂಕಲ್ಪೇಷು ನಿರಾರಂಭೋ ನಿರಾಶೋ ನಿರ್ಮಮೋ ಭವ|
12017012c ವಿಶೋಕಂ ಸ್ಥಾನಮಾತಿಷ್ಠ ಇಹ ಚಾಮುತ್ರ ಚಾವ್ಯಯಮ್||

ಸಂಕಲ್ಪಗಳನ್ನು ಆರಂಭಿಸಬೇಡ. ಆಸೆ ಮತ್ತು ಮಮತೆಗಳಿಲ್ಲದವನಾಗು.
ಶೋಕವಿಲ್ಲದ ಅವ್ಯಯವಾದ ಪರಲೋಕದ ಸ್ಥಾನವನ್ನು ಹೊಂದು.

12017013a ನಿರಾಮಿಷಾ ನ ಶೋಚಂತಿ ಶೋಚಸಿ ತ್ವಂ ಕಿಮಾಮಿಷಮ್|
12017013c ಪರಿತ್ಯಜ್ಯಾಮಿಷಂ ಸರ್ವಂ ಮೃಷಾವಾದಾತ್ಪ್ರಮೋಕ್ಷ್ಯಸೇ||

ಆಸೆಗಳಿಲ್ಲದವರು ಶೋಕಿಸುವುದಿಲ್ಲ. ನೀನೇಕೆ ಆಸೆಗಳಿಗಾಗಿ
ಶೋಕಿಸುತ್ತಿರುವೆ? ಆಸೆಗಳೆಲ್ಲವನ್ನೂ ತ್ಯಜಿಸಿದರೆ ಮಿಥ್ಯಾವಾದದಿಂದ
ಮುಕ್ತನಾಗುವೆ.

12017014a ಪಂಥಾನೌ ಪಿತೃಯಾನಶ್ಚ ದೇವಯಾನಶ್ಚ ವಿಶ್ರುತೌ|
12017014c ಈಜಾನಾಃ ಪಿತೃಯಾನೇನ ದೇವಯಾನೇನ ಮೋಕ್ಷಿಣಃ||

ಪಿತೃಯಾನ ಮಾತು ದೇವಯಾನಗಳೆಂಬ ಎರಡು ದಾರಿಗಳಿವೆ ಎಂದು
ಕೇಳಿದ್ದೇವೆ. ಯಜ್ಞಗಳನ್ನು ಮಾಡಿದವರು ಪಿತೃಯಾನದಲ್ಲಿಯೂ,
ಮೋಕ್ಷವನ್ನು ಪಡೆದವರು ದೇವಯಾನದಲ್ಲಿಯೂ ಹೋಗುತ್ತಾರೆ.

12017015a ತಪಸಾ ಬ್ರಹ್ಮಚರ್ಯೇಣ ಸ್ವಾಧ್ಯಾಯೇನ ಚ ಪಾವಿತಾಃ|

12017015c ವಿಮುಚ್ಯ ದೇಹಾನ್ವೈ ಭಾಂತಿ ಮೃತ್ಯೋರವಿಷಯಂ ಗತಾಃ||

ತಪಸ್ಸು, ಬ್ರಹ್ಮಚರ್ಯ ಮತ್ತು ಸ್ವಾಧ್ಯಾಯಗಳಿಂದ ಪವಿತ್ರರಾದವರು ದೇಹಗಳನ್ನು ತೊರೆದು ಮೃತ್ಯುವಿಗೆ ತುತ್ತಾಗದೇ ಹೊಳೆಯುತ್ತಾ ಬ್ರಹ್ಮಲೋಕವನ್ನು ಸೇರುತ್ತಾರೆ.

12017016a ಆಮಿಷಂ ಬಂಧನಂ ಲೋಕೇ ಕರ್ಮೇಹೋಕ್ತಂ ತಥಾಮಿಷಮ್|
12017016c ತಾಭ್ಯಾಂ ವಿಮುಕ್ತಃ ಪಾಶಾಭ್ಯಾಂ ಪದಮಾಪ್ನೋತಿ ತತ್ಪರಮ್||

ಲೋಕದಲ್ಲಿ ಆಸೆಯು ಒಂದು ಬಂಧನ. ಫಲಸಂಬಂಧಿತ ಕರ್ಮಗಳೂ ಆಸೆಗಳೇ. ಈ ಎರಡರ ಪಾಶಗಳಿಂದ ವಿಮುಕ್ತನಾದವನು ಶ್ರೇಷ್ಠ ಪರಮಪದವನ್ನು ಪಡೆಯುತ್ತಾನೆ.

12017017a ಅಪಿ ಗಾಥಾಮಿಮಾಂ ಗೀತಾಂ ಜನಕೇನ ವದಂತ್ಯುತ|
12017017c ನಿರ್ದ್ವಂದ್ವೇನ ವಿಮುಕ್ತೇನ ಮೋಕ್ಷಂ ಸಮನುಪಶ್ಯತಾ||

ದ್ವಂದ್ವಗಳಿಂದ ಮುಕ್ತನಾಗಿ, ಮೋಕ್ಷವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಜನಕನು ಇದರ ಕುರಿತು ಹೇಳಿದ ಈ ಶ್ಲೋಕಗಳನ್ನು ಉದಾಹರಿಸುತ್ತಾರೆ.

12017018a ಅನಂತಂ ಬತ ಮೇ ವಿತ್ತಂ ಯಸ್ಯ ಮೇ ನಾಸ್ತಿ ಕಿಂ ಚನ|
12017018c ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂ ಚನ||

“ನನ್ನಲ್ಲಿರುವ ಸಂಪತ್ತು ಅನಂತವಾದುದು ಎಂದು ಹೇಳುತ್ತಾರೆ. ಆದರೆ ನನ್ನಲ್ಲಿ ಏನೂ ಇಲ್ಲ. ಮಿಥಿಲೆಯೇ ಹತ್ತಿ ಉರಿದುಹೋದರೂ ಯಾವುದೂ ನನ್ನನ್ನು ಸುಡುವುದಿಲ್ಲ!

12017019a ಪ್ರಜ್ಞಾಪ್ರಾಸಾದಮಾರುಹ್ಯ ನಶೋಚ್ಯಾನ್ಶೋಚತೋ ಜನಾನ್|

12017019c ಜಗತೀಸ್ಥನಿವಾದ್ರಿಸ್ಥೋ ಮಂದಬುದ್ಧೀನವೇಕ್ಷತೇ॥

ಪರ್ವತದ ಮೇಲೆ ನಿಂತು ಕೆಳಗಿನ ಜಗತ್ತನ್ನು ನೋಡುವಂತೆ
ಪ್ರಜ್ಞೆಯೆಂಬ ಪ್ರಾಸಾದವನ್ನೇರಿ ಶೋಕರಹಿತನಾದ ಜ್ಞಾನಿಯು
ಶೋಕಿಸುತ್ತಿರುವ ಮಂದಬುದ್ಧಿಯ ಜನರನ್ನು ನೋಡುತ್ತಿರುತ್ತಾನೆ.

12017020a ದೃಶ್ಯಂ ಪಶ್ಯತಿ ಯಃ ಪಶ್ಯನ್ಸ ಚಕ್ಷುಷ್ಮಾನ್ಸ ಬುದ್ಧಿಮಾನ್|
12017020c ಅಜ್ಞಾತಾನಾಂ ಚ ವಿಜ್ಞಾನಾತ್ಸಂಬೋಧಾದ್ಬುದ್ಧಿರುಚ್ಯತೇ॥

ನೋಡಿ ಅದನ್ನು ಅರ್ಥಮಾಡಿಕೊಂಡವನೇ ಕಣ್ಣುಗಳುಳ್ಳವನು ಮತ್ತು
ಬುದ್ಧಿವಂತನು. ತಿಳಿಯದೇ ಇರುವುದನ್ನು ಅನುಭವ ಪೂರ್ವಕವಾಗಿ
ತಿಳಿಸುವುದೇ ಬುದ್ಧಿ ಎಂದೆನಿಸಿಕೊಳ್ಳುತ್ತದೆ.

12017021a ಯಸ್ತು ವಾಚಂ ವಿಜಾನಾತಿ ಬಹುಮಾನಮಿಯಾತ್ಸ ವೈ|
12017021c ಬ್ರಹ್ಮಭಾವಪ್ರಸೂತಾನಾಂ ವೈದ್ಯಾನಾಂ ಭಾವಿತಾತ್ಮನಾಮ್॥

ಯಾರು ಬ್ರಹ್ಮಭಾವವನ್ನು ಹೊಂದಿರುವ, ವೈದ್ಯರ ಮತ್ತು
ಭಾವಿತಾತ್ಮರ ಮಾತುಗಳನ್ನು ತಿಳಿದುಕೊಳ್ಳುತ್ತಾರೋ ಅವರು ಹೆಚ್ಚು
ಗೌರವಕ್ಕೆ ಪಾತ್ರರು.

12017022a ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ|
12017022c ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ॥

ಯಾವಾಗ ಇರುವವುಗಳ ಪ್ರತ್ಯೇಕತೆಗಳು ಒಂದರಲ್ಲಿಯೇ
ನೆಲೆಗೊಂಡಿವೆಯೆನ್ನುವುದನ್ನು ಕಾಣುತ್ತಾನೋ ಆಗಲೇ ವಿಸ್ತಾರವಾದ
ಬ್ರಹ್ಮದ ಅನುಭವವುಂಟಾಗುತ್ತದೆ.

12017023a ತೇ ಜನಾಸ್ತಾಂ ಗತಿಂ ಯಾಂತಿ ನಾವಿದ್ವಾಂಸೋऽಲ್ಪಚೇತಸಃ|

12017023c ನಾಬುದ್ಧಯೋ ನಾತಪಸಃ ಸರ್ವಂ ಬುದ್ಧೌ ಪ್ರತಿಷ್ಠಿತಮ್‌॥

ವಿದ್ವಾಂಸನಲ್ಲದವನು, ಸಣ್ಣಬುದ್ಧಿಯುಳ್ಳವನು, ತಿಳಿಯದವನು, ತಪಸ್ಸು ಮಾಡದವನು ಆ ಗತಿಯನ್ನು ಹೊಂದಲಾರ. ಎಲ್ಲವೂ ಬುದ್ಧಿಯಲ್ಲಿಯೇ ಪ್ರತಿಷ್ಠಿತವಾಗಿವೆ!””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಯುಧಿಷ್ಠಿರವಾಕ್ಯೇ ಸಪ್ತದಶೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಯುಧಿಷ್ಠಿರವಾಕ್ಯ ಎನ್ನುವ ಹದಿನೇಳನೇ ಅಧ್ಯಾಯವು.

೧೮

ಜನಕೋಽಪಖ್ಯಾನ

ಅರ್ಜುನನು ರಾಜಾ ಜನಕ ಮತ್ತು ಅವನ ರಾಣಿಯ ದೃಷ್ಟಾಂತವನ್ನಿತ್ತು ಯುಧಿಷ್ಠಿರನು ಸಂನ್ಯಾಸಗ್ರಹಣ ಮಾಡುವುದನ್ನು ತಡೆಯುವುದು (1-38).

12018001 ವೈಶಂಪಾಯನ ಉವಾಚ|
12018001a ತೂಷ್ಣೀಂಭೂತಂ ತು ರಾಜಾನಂ ಪುನರೇವಾರ್ಜುನೋಽಬ್ರವೀತ್‌|
12018001c ಸಂತಪ್ತಃ ಶೋಕದುಃಖಾಭ್ಯಾಂ ರಾಜ್ಞೋ ವಾಕ್ಯಲ್ಯಪೀಡಿತಃ॥

ವೈಶಂಪಾಯನನು ಹೇಳಿದನು: “ರಾಜನ ಮಾತಿನ ಮುಳ್ಳುಗಳಿಂದ ಪೀಡಿತನಾದ ಮತ್ತು ಶೋಕ-ದುಃಖಗಳಿಂದ ಸಂತಪ್ತನಾದ ಅರ್ಜುನನು

ಸುಮ್ಮನಾಗಿ ಕುಳಿತಿದ್ದ ರಾಜನಿಗೆ ಪುನಃ ಹೇಳಿದನು:

12018002a ಕಥಯಂತಿ ಪುರಾವೃತ್ತಮಿತಿಹಾಸಮಿಮಂ ಜನಾಃ|
12018002c ವಿದೇಹರಾಜ್ಞಃ ಸಂವಾದಂ ಭಾರ್ಯಯಾ ಸಹ ಭಾರತ||

“ಭಾರತ! ಹಿಂದೆ ವಿದೇಹರಾಜ ಮತ್ತು ಅವನ ಪತ್ನಿ ಇವರ ನಡುವೆ ನಡೆದ ಸಂವಾದವನ್ನು ಜನರು ಉದಾಹರಿಸುತ್ತಾರೆ.

12018003a ಉತ್ಸೃಜ್ಯ ರಾಜ್ಯಂ ಭೈಕ್ಷಾರ್ಥಂ ಕೃತಬುದ್ಧಿಂ ಜನೇಶ್ವರಮ್|
12018003c ವಿದೇಹರಾಜಂ ಮಹಿಷೀ ದುಃಖಿತಾ ಪ್ರತ್ಯಭಾಷತ||

ರಾಜ್ಯವನ್ನು ತ್ಯಜಿಸಿ ಭಿಕ್ಷುವಾಗಿರಲು ನಿಶ್ಚಯಿಸಿದ ಜನೇಶ್ವರ ವಿದೇಹರಾಜನಿಗೆ ದುಃಖಿತಳಾದ ರಾಣಿಯು ಹೇಳಿದುದನ್ನು ಕೇಳು.

12018004a ಧನಾನ್ಯಪತ್ಯಂ ಮಿತ್ರಾಣಿ ರತ್ನಾನಿ ವಿವಿಧಾನಿ ಚ|
12018004c ಪಂಥಾನಂ ಪಾವನಂ ಹಿತ್ವಾ ಜನಕೋ ಮೌಂಡ್ಯಮಾಸ್ಥಿತಃ||

ಐಶ್ವರ್ಯ, ಮಕ್ಕಳು, ಮಿತ್ರರು, ವಿವಿಧ ರತ್ನಗಳು, ಮತ್ತು ಪಾವನ ಗೃಹಸ್ಥಾಶ್ರಮವನ್ನು ತ್ಯಜಿಸಿ ಜನಕನು ತಲೆಬೋಳಿಸಿಕೊಂಡು ಭಿಕ್ಷುವಾಗಲು ನಿಶ್ಚಯಿಸಿದನು.

12018005a ತಂ ದದರ್ಶ ಪ್ರಿಯಾ ಭಾರ್ಯಾ ಭೈಕ್ಷ್ಯವೃತ್ತಿಮಕಿಂಚನಮ್|
12018005c ಧಾನಾಮುಷ್ಟಿಮುಪಾಸೀನಂ ನಿರೀಹಂ ಗತಮತ್ಸರಮ್||

ಭಿಕ್ಷಾವೃತ್ತಿಯನ್ನು ಅವಲಂಬಿಸಿ ಒಂದು ಮುಷ್ಟಿ ಧಾನ್ಯದ ಹಿಟ್ಟನ್ನೇ ತಿನ್ನುತ್ತಿದ್ದ, ನಿರೀಹನಾಗಿದ್ದ, ಮತ್ಸರವನ್ನು ತೊರೆದಿದ್ದ ಅವನನ್ನು ಅವನ ಪ್ರಿಯ ಭಾರ್ಯೆಯು ನೋಡಿದಳು.

12018006a ತಮುವಾಚ ಸಮಾಗಮ್ಯ ಭರ್ತಾರಮಕುತೋಭಯಮ್|

12018006c ಕ್ರುದ್ಧಾ ಮನಸ್ವಿನೀ ಭಾರ್ಯಾ ವಿವಿಕ್ತೇ ಹೇತುಮದ್ವಚಃ॥

ಆ ಮನಸ್ವಿನೀ ಪತ್ನಿಯು ಕ್ರುದ್ಧಳಾಗಿ ಭಯವನ್ನೇ ತೊರೆದಿದ್ದ ಪತಿಯ ಬಳಿಸಾರಿ ಯುಕ್ತಿಯುಕ್ತವಾದ ಈ ಮಾತುಗಳನ್ನಾಡಿದಳು:

12018007a ಕಥಮುತ್ಸೃಜ್ಯ ರಾಜ್ಯಂ ಸ್ವಂ ಧನಧಾನ್ಯಸಮಾಚಿತಮ್।
12018007c ಕಾಪಾಲೀಂ ವೃತ್ತಿಮಾಸ್ಥಾಯ ಧಾನಾಮುಷ್ಟಿರ್ವನೇಽಚರಃ॥

“ಧನ-ಧಾನ್ಯ ಸಮೃದ್ಧವಾಗಿರುವ ನಿನ್ನ ಈ ರಾಜ್ಯವನ್ನು ನೀನೇ ತೊರೆದು ಕಾಪಾಲ ವೃತ್ತಿಯನ್ನೇಕೆ ಹಿಡಿದಿರುವೆ? ಮುಷ್ಟಿ ಧಾನ್ಯವನ್ನು ತಿನ್ನುವುದು ವನಚರರಿಗೆ ಸರಿಯಾದುದು!

12018008a ಪ್ರತಿಜ್ಞಾ ತೇಽನ್ಯಥಾ ರಾಜನ್ವಿಚೇಷ್ಟಾ ಚಾನ್ಯಥಾ ತವ।
12018008c ಯದ್ರಾಜ್ಯಂ ಮಹದುತ್ಸೃಜ್ಯ ಸ್ವಲ್ಪೇ ತುಷ್ಯಸಿ ಪಾರ್ಥಿವ॥

ರಾಜನ್! ನಿನ್ನ ಪ್ರತಿಜ್ಞೆಯೇ ಒಂದಾಗಿದ್ದರೆ ನೀನು ಮಾಡುತ್ತಿರುವುದು ಇನ್ನೊಂದಾಗಿದೆ! ಪಾರ್ಥಿವ! ಮಹಾರಾಜ್ಯವನ್ನು ತ್ಯಜಿಸಿ ಸ್ವಲ್ಪದಲ್ಲಿಯೇ ತೃಪ್ತಿಪಡೆಯುವವನಾಗಿಬಿಟ್ಟಿಯಲ್ಲ!

12018009a ನೈತೇನಾತಿಥಯೋ ರಾಜನ್ದೇವರ್ಷಿಪಿತರಸ್ತಥಾ।
12018009c ಶಕ್ಯಮದ್ಯ ತ್ವಯಾ ಭರ್ತುಂ ಮೋಘಸ್ತೇಽಯಂ ಪರಿಶ್ರಮಃ॥

ರಾಜನ್! ಇಂದು ನೀನು ಅತಿಥಿಗಳನ್ನು, ದೇವರ್ಷಿ-ಪಿತೃಗಳನ್ನು ಸತ್ಕರಿಸಲು ಶಕ್ಯನಾಗಿಲ್ಲ. ನಿನ್ನ ಪರಿಶ್ರಮಗಳೆಲ್ಲವೂ ವ್ಯರ್ಥವಾದಂತೆಯೇ!

12018010a ದೇವತಾತಿಥಿಭಿಶ್ಚೈವ ಪಿತೃಭಿಶ್ಚೈವ ಪಾರ್ಥಿವ।
12018010c ಸರ್ವೈರೇತೈಃ ಪರಿತ್ಯಕ್ತಃ ಪರಿವ್ರಜಸಿ ನಿಷ್ಕ್ರಿಯಃ॥

ಪಾರ್ಥಿವ! ದೇವತೆಗಳು, ಅತಿಥಿಗಳು ಮತ್ತು ಪಿತೃಗಳು ಎಲ್ಲರನ್ನೂ
ಪರಿತ್ಯಜಿಸಿ ನೀನು ನಿಷ್ಕರ್ಮಿಯಾಗಿದ್ದುಕೊಂಡು ತಿರುಗುವೆ!

12018011a ಯಸ್ತ್ವಂ ತ್ರೈವಿದ್ಯವೃದ್ಧಾನಾಂ ಬ್ರಾಹ್ಮಣಾನಾಂ ಸಹಸ್ರಶಃ|
12018011c ಭರ್ತಾ ಭೂತ್ವಾ ಚ ಲೋಕಸ್ಯ ಸೋಽದ್ಯಾನ್ಯೈರ್ಭರ್ಯತಿಮಿಚ್ಚಸಿ||

ಮೂರುವೇದಗಳನ್ನು ತಿಳಿದಿರುವ ಸಹಸ್ರಾರು ವೃದ್ಧ ಬ್ರಾಹ್ಮಣರ
ಪೋಷಕನಾಗಿದ್ದುಕೊಂಡು ಈಗ ಲೋಕದ ಅನ್ಯರಿಂದ
ಪೋಷಣೆಗೊಳ್ಳಲು ಬಯಸುತ್ತಿರುವೆ!

12018012a ಶ್ರಿಯಂ ಹಿತ್ವಾ ಪ್ರದೀಪ್ತಾಂ ತ್ವಂ ಶ್ವವತ್ಸಂಪ್ರತಿ ವೀಕ್ಷ್ಯಸೇ|
12018012c ಅಪುತ್ರಾ ಜನನೀ ತೇಽದ್ಯ ಕೌಸಲ್ಯಾ ಚಾಪತಿಸ್ತ್ವಯಾ||

ಬೆಳಗುತ್ತಿರುವ ಸಂಪತ್ತನ್ನು ತ್ಯಜಿಸಿ ನೀನು ನಾಯಿಯಂತೆಯೇ
ತೋರುತ್ತಿರುವೆ! ಇಂದು ನಿನ್ನ ತಾಯಿಯು ಬಂಜೆಯಾದಳು ಮತ್ತು ನಿನ್ನ
ಪತ್ನಿಯಾದ ಕೌಸಲ್ಯೆ ನಾನು ಪತಿಹೀನಳಾದೆನು!

12018013a ಅಶೀತಿರ್ಧರ್ಮಕಾಮಾಸ್ತ್ವಾಂ ಕ್ಷತ್ರಿಯಾಃ ಪರ್ಯುಪಾಸತೇ|
12018013c ತ್ವದಾಶಾಮಭಿಕಾಂಕ್ಷಂತ್ಯಃ ಕೃಪಣಾಃ ಫಲಹೇತುಕಾಃ||

ಧರ್ಮ-ಕಾಮನೆಗಳನ್ನು ಸಾಧಿಸಿಕೊಳ್ಳಲು ಈ ಕ್ಷತ್ರಿಯರು ನಿನ್ನನ್ನೇ
ಉಪಾಸನೆಮಾಡುತ್ತಿದ್ದಾರೆ. ಆಕಾಂಕ್ಷೆಗಳನ್ನು ಹೊಂದಿರುವ ಈ ದೀನರು
ಫಲಕ್ಕಾಗಿ ನಿನ್ನ ಸೇವೆಯಲ್ಲಿ ತತ್ಪರರಾಗಿದ್ದಾರೆ.

12018014a ತಾಶ್ಚ ತ್ವಂ ವಿಫಲಾಃ ಕುರ್ವನ್ಕಾಽಲ್ಲೋಕಾನ್ಗಮಿಷ್ಯಸಿ|
12018014c ರಾಜನ್ಸಂಶಯಿತೇ ಮೋಕ್ಷೇ ಪರತಂತ್ರೇಷು ದೇಹಿಷು||

ಇವರನ್ನು ವಿಫಲರನ್ನಾಗಿಸಿ ನೀನು ಯಾವ ಲೋಕಗಳಿಗೆ

ಹೋಗುತ್ತೀಯೆ? ರಾಜನ್! ಪರತಂತ್ರರಾದ ಮನುಷ್ಯರಿಗೆ ಮೋಕ್ಷವು ನಿಶ್ಚಯವಾದುದಲ್ಲ.

12018015a ನೈವ ತೇಽಸ್ತಿ ಪರೋ ಲೋಕೋ ನಾಪರಃ ಪಾಪಕರ್ಮಣಃ|
12018015c ಧರ್ಮ್ಯಾನ್ದಾರಾನ್ಪರಿತ್ಯಜ್ಯ ಯಸ್ತ್ವಮಿಚ್ಚಸಿ ಜೀವಿತುಮ್||

ಧರ್ಮಪತ್ನಿಯನ್ನು ಪರಿತ್ಯಜಿಸಿ ಜೀವಿಸಲು ಬಯಸುವ ನಿನಗೆ ಈ ಪಾಪಕರ್ಮದಿಂದ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವು ದೊರಕಲಾರದು.

12018016a ಸ್ರಜೋ ಗಂಧಾನಲಂಕಾರಾನ್ವಾಸಾಂಸಿ ವಿವಿಧಾನಿ ಚ|
12018016c ಕಿಮರ್ಥಮಭಿಸಂತ್ಯಜ್ಯ ಪರಿವ್ರಜಸಿ ನಿಷ್ಕ್ರಿಯಃ||

ಹಾರ-ಗಂಧ-ಅಲಂಕಾರ ಮತ್ತು ವಿವಿಧ ವಸ್ತ್ರಗಳನ್ನು ತ್ಯಜಿಸಿ ಕರ್ತವ್ಯ ಹೀನನಾಗಿ ನೀನು ಏಕೆ ಪರಿವ್ರಾಜಕನಾಗಲು ಬಯಸುವೆ?

12018017a ನಿಪಾನಂ ಸರ್ವಭೂತಾನಾಂ ಭೂತ್ವಾ ತ್ವಂ ಪಾವನಂ ಮಹತ್|
12018017c ಆಢ್ಯೋ ವನಸ್ಪತಿರ್ಭೂತ್ವಾ ಸೋಽದ್ಯಾನ್ಯಾನ್ಪರ್ಯುಪಾಸಸೇ||

ಸರ್ವಭೂತಗಳಿಗೂ ಸರೋವರದಂತಿದ್ದು ನೀನು ಮಹಾ ಪಾವನನಾಗಿದ್ದೆ. ವಿಶಾಲ ವೃಕ್ಷದಂತೆ ನೀನು ಎಲ್ಲರಿಗೂ ನೆರಳನ್ನಿತ್ತು ಸೇವೆಸಲ್ಲಿಸುತ್ತಿದ್ದೆ.

12018018a ಖಾದಂತಿ ಹಸ್ತಿನಂ ನ್ಯಾಸೇ ಕ್ರವ್ಯಾದಾ ಬಹವೋಽಪ್ಯುತ|
12018018c ಬಹವಃ ಕೃಮಯಶ್ಚೈವ ಕಿಂ ಪುನಸ್ತ್ವಾಮನರ್ಥಕಮ್||

ಎಲ್ಲವನ್ನೂ ತೊರೆದು ಬಿದ್ದಿರುವ ಆನೆಯನ್ನು ಮಾಂಸಾಶಿ ಪ್ರಾಣಿಗಳೂ ಕ್ರಿಮಿಗಳೂ ಜೀವಸಹಿತ ತಿಂದುಹಾಕಿಬಿಡುತ್ತವೆ. ಇನ್ನು

ನಿಷ್ಕರ್ಮಿಯಾಗುವ ನಿನ್ನ ಕುರಿತೇನು ಹೇಳುವುದಿದೆ?

12018019a ಯ ಇಮಾಂ ಕುಂಡಿಕಾಂ ಭಿಂದ್ಯಾತ್ತ್ರಿವಿಷ್ಟಬ್ಧಂ ಚ ತೇ ಹರೇತ್।
12018019c ವಾಸಶ್ಚಾಪಹರೇತ್ತಸ್ಮಿನ್ನಕಥಂ ತೇ ಮಾನಸಂ ಭವೇತ್॥

ನಿನ್ನ ಈ ಕಮಂಡಲುವನ್ನು ಯಾರಾದರೂ ಅಪಹರಿಸಿಕೊಳ್ಳಬಹುದು. ನಿನ್ನ ಈ ತ್ರಿದಂಡವನ್ನೇ ಅಪಹರಿಸಿಕೊಂಡು ಹೋಗಬಹುದು. ನೀನು ಉಟ್ಟಿರುವ ವಸ್ತ್ರವನ್ನೂ ಕಿತ್ತುಕೊಳ್ಳಬಹುದು. ಆಗ ನಿನ್ನ ಮನೋಸ್ಥಿತಿಯು ಹೇಗಿರುತ್ತದೆ?

12018020a ಯಸ್ತ್ವಯಂ ಸರ್ವಮುತ್ಸೃಜ್ಯ ಧಾನಾಮುಷ್ಟಿಪರಿಗ್ರಹಃ।
12018020c ಯದಾನೇನ ಸಮಂ ಸರ್ವಂ ಕಿಮಿದಂ ಮಮ ದೀಯತೇ॥
12018020e ಧಾನಾಮುಷ್ಟಿರಿಹಾರ್ಥಶ್ಚೇತ್ಪ್ರತಿಜ್ಞಾ ತೇ ವಿನಶ್ಯತಿ॥

ಎಲ್ಲವನ್ನೂ ತ್ಯಾಗಮಾಡಿ ಒಂದು ಮುಷ್ಟಿ ಹುರಿಧಾನ್ಯವನ್ನು ಅವಲಂಬಿಸಲು ಹೊರಟ ನಿನಗೆ ಎಲ್ಲವೂ ಸಮವೆಂದು ಹೇಗೆ ತೋರುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ! ಮುಷ್ಟಿ ಹುರಿಧಾನ್ಯವನ್ನು ಕೇಳುವುದರಿಂದ ನಿನ್ನ ಈ ಎಲ್ಲವನ್ನೂ ಸಮವೆಂದು ಕಾಣುವೆ ಎನ್ನುವ ಪ್ರತಿಜ್ಞೆಯು ಭಂಗವಾಗುವುದಿಲ್ಲವೇ?[28]

---

[28] ನೀನು ಸಂನ್ಯಾಸಿಯಾದರೂ ನಿನಗೊಂದು ವಸ್ತುವಿನ ಅಗತ್ಯವಿದೆ ಎಂದಾಯಿತು. ಹುರಿದ ಹಿಟ್ಟಿಗೂ ರಾಜ್ಯಕ್ಕೂ ಯಾವ ವ್ಯತ್ಯಾಸವನ್ನೂ ನೀನು ಕಾಣದ ನಂತರ ರಾಜ್ಯವನ್ನಾದರೂ ನೀನು ಏಕೆ ತ್ಯಜಿಸುವೆ? ಕಲ್ಲಿಗೂ ಚಿನ್ನಕ್ಕೂ ವ್ಯತ್ಯಾಸವಿಲ್ಲವೆಂದು ತಿಳಿದ ಮಾತ್ರಕ್ಕೆ ಇರುವ ಚಿನ್ನವೆಲ್ಲವನ್ನೂ ಹೊರಗೆ ಎಸೆಯುವುದಕ್ಕೆ ಅರ್ಥವಿಲ್ಲ. ಜೀವನಕ್ಕಾಗಿ ಹುರಿದ ಹಿಟ್ಟಾದರೂ ಬೇಕೇ ಬೇಕು. ಒಂದು ಬೇಕಾದರೆ ಇನ್ನೊಂದು ಏಕೆ ಬೇಡ? ಯಾವುದೂ ಬೇಡ

12018021a ಕಾ ವಾಹಂ ತವ ಕೋ ಮೇ ತ್ವಂ ಕೋಽದ್ಯ ತೇ ಮಯ್ಯನುಗ್ರಹಃ|
12018021c ಪ್ರಶಾಧಿ ಪೃಥಿವೀಂ ರಾಜನ್ಯತ್ರ ತೇಽನುಗ್ರಹೋ ಭವೇತ್‌||
12018021e ಪ್ರಾಸಾದಂ ಶಯನಂ ಯಾನಂ ವಾಸಾಂಸ್ಯಾಭರಣಾನಿ ಚ||

ಆಗ ನಾನು ನಿನಗೆ ಏನಾಗುತ್ತೇನೆ? ಇಂದು ನನ್ನ ಮೇಲೆ ನಿನಗಿರುವ ಅನುಗ್ರಹಕ್ಕೆ ಏನಾಗುತ್ತದೆ? ರಾಜನ್! ನಿನ್ನ ಅನುಗ್ರಹವಿದ್ದರೆ ಭೂಮಿಯನ್ನು ಆಳು! ಅರಮನೆ, ಉತ್ತಮ ಹಾಸಿಗೆ, ವಾಹನ, ವಸ್ತ್ರಾಭರಣಗಳನ್ನು ಭೋಗಿಸು!

12018022a ಶ್ರಿಯಾ ನಿರಾಶೈರಧನೈಸ್ತ್ಯಕ್ತಮಿತ್ರೈರಕಿಂಚನೈಃ|
12018022c ಸೌಖಿಕ್ಯೈಃ ಸಂಭೃತಾನರ್ಥಾನ್ಯಃ ಸಂತ್ಯಜಸಿ ಕಿಂ ನು ತತ್‌||

ಶ್ರೀಯಿಂದ ನಿರಾಶೆಗೊಂಡ, ನಿರ್ಧನ, ಬಂಧು-ಮಿತ್ರರಿಲ್ಲದ ಮತ್ತು ಅಕಿಂಚನರಾದ ಸಂನ್ಯಾಸಿಗಳು ಸುಖಕ್ಕಾಗಿಯೇ ತಮಗೆ ಬೇಕಾದ ಸಲಕರಣೆಗಳನ್ನು (ಕಮಂಡಲು-ಕೃಷ್ಣಾಜಿನ ಇತ್ಯಾದಿ) ಸಂಗಹಿಸಿಟ್ಟುಕೊಂಡಿರುತ್ತಾರೆ.[29]

ಎಂದು ಹೇಳಿಕೊಂಡು ಮನುಷ್ಯನು ಜೀವಿಸಿರಲಾರನು. ಹುರಿದ ಹಿಟ್ಟನ್ನು ಬಿಡಲಾರದಂತೆ ರಾಜ್ಯವನ್ನೂ ಬಿಡುವ ಅಗತ್ಯವಿಲ್ಲ. (ಭಾರತ ದರ್ಶನ)

[29] ನೀಲಕಂಠರು ಈ ಶ್ಲೋಕಕ್ಕೆ ಹೀಗೆ ಅರ್ಥೈಸಿದ್ದಾರೆ: ಸೌಖಿಕ್ಯೈಃ ಪರಮ ಸುಖಾರ್ಥಿಭಿಃ ಸಂನ್ಯಾಸಿಭಿಃ ಸಂಭೃತಾನರ್ಥಾನ್ ಕುಂಡಿಕಾದೀನ್ ವೀಕ್ಷ್ಯ ಯಃ ಸ್ವಯಮಪಿ ತಥಾ ಕರೋತಿ ಕಿಂ ನು ತತ್ ರಾಜ್ಯಾದಿಕಂ ತ್ಯಜತ್ಯಪಿ ನೈವ ತ್ಯಜತಿ ಕಿಂ ತು ಉಚಿತಂ ಪರಿಗ್ರಹಂ ತ್ಯಕ್ತ್ವಾ ದೈವೋಪಹತತ್ವಾದನುಚಿತಂ ಪರಿಗ್ರಹಾಂತರಮೇವ ಕರೋತಿ. ಇತ್ಯಸಂಗತ್ಯಂ ಅಸ್ಯ ದುರ್ಲಭಮಿತ್ಯರ್ಥಃ – ಅರ್ಥಾತ್ – ಪರಮಸುಖಾಭಿಲಾಷಿಗಳಾದ ಸಂನ್ಯಾಸಿಗಳಿಂದ

12018023a ಯೋಽತ್ಯಂತಂ ಪ್ರತಿಗೃಹ್ಣೀಯಾದ್ಯಶ್ಚ ದದ್ಯಾತ್ಸದೈವ ಹಿ|
12018023c ತಯೋಸ್ತ್ವಮಂತರಂ ವಿದ್ಧಿ ಶ್ರೇಯಾಂಸ್ತಾಭ್ಯಾಂ ಕ ಉಚ್ಯತೇ||

ಯಾವಾಗಲೂ ವಸ್ತುಗಳನ್ನು ಸಂಗ್ರಹಿಸುವುದರಲ್ಲಿ ನಿರತರಾದವರ ಮತ್ತು ಯಾವಾಗಲೂ ದಾನಮಾಡುವವರ ನಡುವಿನ ಅಂತರವನ್ನು ತಿಳಿದುಕೋ! ಇವರಿಬ್ಬರಲ್ಲಿ ಯಾರು ಶ್ರೇಷ್ಠರೆನಿಸಿಕೊಳ್ಳುತ್ತಾರೆ?

12018024a ಸದೈವ ಯಾಚಮಾನೇಷು ಸತ್ಸು ದಂಭವಿವರ್ಜಿಷು|[30]
12018024c ಏತೇಷು ದಕ್ಷಿಣಾ ದತ್ತಾ ದಾವಾಗ್ನಾವಿವ ದುರ್ಹುತಮ್||

ಸಾಧುಗಳಲ್ಲಿ ಮತ್ತು ದಂಭವನ್ನು ತೊರೆದವರಲ್ಲಿ ಯಾವಾಗಲೂ ಬೇಡುವವರಿಗೆ ದಾನಮಾಡಿದ ದಕ್ಷಿಣೆಯು ದಾವಾಗ್ನಿಯಲ್ಲಿ ಹೋಮಮಾಡಿದಂತೆ ವ್ಯರ್ಥವಾಗುತ್ತದೆ.

12018025a ಜಾತವೇದಾ ಯಥಾ ರಾಜನ್ನಾದಗ್ಧ್ವೋಪಶಾಮ್ಯತಿ|

ಸಂಪಾದಿಸಲ್ಪಟ್ಟ ಕಮಂಡಲುವೇ ಮೊದಲಾದವುಗಳನ್ನು ನೋಡಿ ಯಾವನು ತಾನೂ ಹಾಗೆಯೇ ಮಾಡಲು ಹೋಗುತ್ತಾನೋ ಅವನು ರಾಜ್ಯಾದಿಗಳನ್ನು ಪರಿತ್ಯಾಗಮಾಡಿದರೂ ರಾಜೋಚಿತವಾದ ಪರಿಗ್ರಹಕಾರ್ಯವನ್ನು ತ್ಯಜಿಸಿ ದೈವೋಪಹತನಾದುದರಿಂದ ಅನುಚಿತವಾದ ಬೇರೆ ರೀತಿಯ ಪರಿಗ್ರಹವನ್ನೇ ಮಾಡುತ್ತಾನೆ. ರಾಜನಿಗೆ ಯುಕ್ತವಾದ ಕರಾದಿ ಪರಿಗ್ರಹವನ್ನು ಬಿಟ್ಟಂತಾಯಿತು. ಅಹಿತವಾದ ಧಾನಾಮುಷ್ಟಿಯನ್ನು ಪರಿಗ್ರಹಿಸಿದಂತಾಯಿತು. ಆದುದರಿಂದ ಸಂನ್ಯಾಸಿಯಾದರೂ ಸಂಗವು ತಪ್ಪಲೇ ಇಲ್ಲ.

[30] ಭಾರತ ದರ್ಶನದಲ್ಲಿ ಈ ಶ್ಲೋಕಾರ್ಧದ ಬದಲಾಗಿ ಸದೈವ ಯಾಚಮಾನೇಷು ತಥಾ ದಂಭಾನ್ವಿತೇಷು ಚ| ಅರ್ಥಾತ್ ಯಾವಾಗಲೂ ಬೇಡುವವರಿಗೆ ಮತ್ತು ದಾಂಭಿಕನಿಗೆ ಎಂದಿದೆ.

12018025c ಸದ್ಯೈವ ಯಾಚಮಾನೋ ವೈ ತಥಾ ಶಾಮ್ಯತಿ ನ ದ್ವಿಜಃ॥

ರಾಜನ್! ತನ್ನಲ್ಲಿ ಹಾಕಿದ ಕಟ್ಟಿಗೆಯನ್ನು ಸಂಪೂರ್ಣವಾಗಿ ಸುಡದೇ ಅಗ್ನಿಯು ಹೇಗೆ ಪ್ರಶಮನಗೊಳ್ಳುವುದಿಲ್ಲವೋ ಹಾಗೆ ಸದಾ ಬೇಡುವ ದ್ವಿಜನು ಬೇಡುತ್ತಿರುವುದು ದೊರೆಯದೇ ಶಾಂತನಾಗುವುದಿಲ್ಲ.

12018026a ಸತಾಂ ಚ ವೇದಾ ಅನ್ನಂ ಚ ಲೋಕೇಽಸ್ಮಿನ್ಪ್ರಕೃತಿರ್ಧ್ರುವಾ|
12018026c ನ ಚೇದ್ದಾತಾ ಭವೇದ್ದಾತಾ ಕುತಃ ಸ್ಯುರ್ಮೋಕ್ಷಕಾಂಕ್ಷಿಣಃ॥[31]

ಸತ್ಪುರುಷರು, ವೇದಗಳು ಮತ್ತು ಅನ್ನಗಳನ್ನು ಅವಲಂಬಿಸಿಯೇ ಈ ಲೋಕದಲ್ಲಿ ಪ್ರಕೃತಿಯು ಸ್ಥಿರವಾಗಿ ನೆಲೆಸಿದೆ. ದಾನಮಾಡುವ ದಾನಿಗಳು ಇರದಿದ್ದರೆ ಮೋಕ್ಷಗಳನ್ನು ಬಯಸುವ ಮುನಿಗಳು ಎಲ್ಲಿರುತ್ತಿದ್ದರು?

12018027a ಅನ್ನಾದ್ಗೃಹಸ್ಥಾ ಲೋಕೇಽಸ್ಮಿನ್ಭಿಕ್ಷವಸ್ತತ ಏವ ಚ|
12018027c ಅನ್ನಾತ್ಪ್ರಾಣಃ ಪ್ರಭವತಿ ಅನ್ನದಃ ಪ್ರಾಣದೋ ಭವೇತ್॥

ಈ ಲೋಕದಲ್ಲಿ ಅನ್ನವನ್ನು ದಾನಮಾಡುವುದರಿಂದ ಗೃಹಸ್ಥನೆನಿಸಿಕೊಳ್ಳುತ್ತಾನೆ. ಅದೇ ಅನ್ನವನ್ನು ಬೇಡುವವರು

---

[31] ಭಾರತ ದರ್ಶನದಲ್ಲಿ ಈ ಶ್ಲೋಕಕ್ಕೆ ವ್ಯತ್ಯಾಸವಾಗಿರುವ ಶ್ಲೋಕವಿದೆ: ಸತಾಂ ವೈ ದದತೋಽನ್ನಂ ಚ ಲೋಕೇಽಸ್ಮಿನ್ ಪ್ರಕೃತಿರ್ಧ್ರುವಾ| ನ ಚೇದ್ರಾಜಾ ಭವೇದ್ಧಾತಾ ಕುತಃಸ್ಯುರ್ಮೋಕ್ಷಕಾಂಕ್ಷಿಣಃ॥ ಅರ್ಥಾತ್ ಈ ಲೋಕದಲ್ಲಿ ದಾನಿಗಳು ಕೊಡುವ ಅನ್ನವೇ ಸತ್ಪುರುಷರ ಜೀವಿಕೆಗೆ ಶಾಶ್ವತ ಆಧಾರವಾಗಿರುತ್ತದೆ. ಸತ್ಪುರುಷರಿಗೆ ದಾನಮಾಡುವ ರಾಜನಿಗೆ ರಾಜ್ಯವು ಸ್ಥಿರವಾಗಿರುತ್ತದೆ. ರಾಜನು ದಾನಿಯಾಗಿರದಿದ್ದರೆ ಮೋಕ್ಷಾಪೇಕ್ಷಿಗಳಾದ ಮುನಿಗಳು ಎಲ್ಲಿರುತ್ತಿದ್ದರು?

ಸಂನ್ಯಾಸಿಗಳೆನಿಸಿಕೊಳ್ಳುತ್ತಾರೆ. ಅನ್ನದಿಂದಲೇ ಪ್ರಾಣವು ಬೆಳೆಯುತ್ತದೆ. ಆದುದರಿಂದ ಅನ್ನವನ್ನು ದಾನಮಾಡುವವನು ಪ್ರಾಣವನ್ನು ದಾನಮಾಡುವವನಾಗುತ್ತಾನೆ.

12018028a ಗೃಹಸ್ಥೇಭ್ಯೋಽಭಿನಿರ್ವೃತ್ತಾ ಗೃಹಸ್ಥಾನೇವ ಸಂಶ್ರಿತಾಃ|
12018028c ಪ್ರಭವಂ ಚ ಪ್ರತಿಷ್ಠಾಂ ಚ ದಾಂತಾ ನಿಂದಂತ ಆಸತೇ||

ಸಂನ್ಯಾಸಿಗಳು ಗೃಹಸ್ಥಾಶ್ರಮದಿಂದ ನಿರ್ವೃತ್ತರಾದರೂ ಗೃಹಸ್ಥರನ್ನೇ ಆಶ್ರಯಿಸಿರುತ್ತಾರೆ. ಆದುದರಿಂದ ಗೃಹಸ್ಥಾಶ್ರಮವೇ ಸಂನ್ಯಾಸದ ಉಗಮ, ನೆಲೆ ಮತ್ತು ಆಶ್ರಯವಾಗಿದೆ.

12018029a ತ್ಯಾಗಾನ್ನ ಭಿಕ್ಷುಕಂ ವಿದ್ಯಾನ್ನ ಮೌಂಡ್ಯಾನ್ನ ಚ ಯಾಚನಾತ್|
12018029c ಋಜುಸ್ತು ಯೋಽರ್ಥಂ ತ್ಯಜತಿ ತಂ ಸುಖಿಂ ವಿದ್ಧಿ ಭಿಕ್ಷುಕಮ್||

ತ್ಯಾಗದಿಂದ, ವಿದ್ಯೆಯಿಂದ, ಮುಂಡನಮಾಡಿಕೊಂಡಿರುವುದರಿಂದ ಮತ್ತು ಬೇಡುವುದರಿಂದ ಭಿಕ್ಷುವೆನಿಸಿಕೊಳ್ಳುವುದಿಲ್ಲ. ಸರಳನಾಗಿದ್ದು ಯಾರು ಅರ್ಥವನ್ನು ತ್ಯಜಿಸುತ್ತಾನೋ ಅವನೇ ಸುಖೀ ಭಿಕ್ಷುಕನೆಂದು ತಿಳಿ.

12018030a ಅಸಕ್ತಃ ಸಕ್ತವದ್ಗಚ್ಚನ್ನಿಃಸಂಗೋ ಮುಕ್ತಬಂಧನಃ|
12018030c ಸಮಃ ಶತ್ರೌ ಚ ಮಿತ್ರೇ ಚ ಸ ವೈ ಮುಕ್ತೋ ಮಹೀಪತೇ||

ಮಹೀಪತೇ! ಆಸಕ್ತಿಯಿಲ್ಲದಿದ್ದರೂ ಆಸಕ್ತನಂತೆ ಲೋಕವ್ಯವಹಾರಗಳನ್ನು ನಡೆಸಿಕೊಂಡು ಹೋಗುತ್ತಾ ನಿಸ್ಸಂಗನಾಗಿ ಬಂಧನಗಳಿಂದ ಮುಕ್ತನಾಗಿ, ಮಿತ್ರ-ಶತ್ರುಗಳಲ್ಲಿ ಸಮಭಾವದಿಂದ ಇರುವವನು ರಾಜನಾಗಿದ್ದರೂ ಮುಕ್ತನಾದಂತೆ.

12018031a ಪರಿವ್ರಜಂತಿ ದಾನಾರ್ಥಂ ಮುಂಡಾಃ ಕಾಷಾಯವಾಸಸಃ|
12018031c ಸಿತಾ ಬಹುವಿಧೈಃ ಪಾಶೈಃ ಸಂಚಿನ್ವಂತೋ ವೃಥಾಮಿಷಮ್||

ಮುಂಡನಮಾಡಿಕೊಂಡು ಕಾಷಾಯವಸ್ತ್ರಗಳನ್ನು ಧರಿಸಿ ದಾನಗಳಿಗೆ ಅಲೆದಾಡುವವರು ಅನೇಕವಿಧದ ಪಾಶಗಳಿಂದ ಬದ್ಧರಾಗಿ ವೃಥಾ ಕೂಡಿಸಿಕೊಳ್ಳುವ ಆಸೆಯಿಂದಿರುತ್ತಾರೆ.

12018032a ತ್ರಯೀಂ ಚ ನಾಮ ವಾರ್ತಾಂ ಚ ತ್ಯಕ್ತ್ವಾ ಪುತ್ರಾಂಸ್ತ್ಯಜಂತಿ ಯೇ|
12018032c ತ್ರಿವಿಷ್ಟಬ್ಧಂ ಚ ವಾಸಶ್ಚ ಪ್ರತಿಗೃಹ್ಣಂತ್ಯಬುದ್ಧಯಃ||

ಯಾರು ಮೂರು ವೇದಗಳನ್ನೂ, ಅವುಗಳು ಹೇಳಿರುವ ಕರ್ಮಗಳನ್ನೂ, ಪುತ್ರರನ್ನೂ ಪರಿತ್ಯಜಿಸಿ ತ್ರಿದಂಡವನ್ನು ಹಿಡಿದು ಕಾಷಾಯವಸ್ತ್ರವನ್ನು ಪರಿಗ್ರಹಿಸುತ್ತಾರೋ ಅವರು ಬುದ್ಧಿಹೀನರೇ ಸರಿ!

12018033a ಅನಿಷ್ಕಷಾಯೇ ಕಾಷಾಯಮೀಹಾರ್ಥಮಿತಿ ವಿದ್ಧಿ ತತ್|
12018033c ಧರ್ಮಧ್ವಜಾನಾಂ ಮುಂಡಾನಾಂ ವೃತ್ತ್ಯರ್ಥಮಿತಿ ಮೇ ಮತಿಃ||

ಹೃದಯದಲ್ಲಿ ಆಸೆಗಳನ್ನಿಟ್ಟುಕೊಂಡು ಕಾಷಾಯವನ್ನು ಧರಿಸುವುದು ಒಂದು ಸೋಗು ಎಂದೇ ನೀನು ತಿಳಿ. ಧರ್ಮದ ಸೋಗನ್ನು ಹಾಕಿಕೊಂಡು ತಿರುಗಾಡುವ ಮುಂಡರಿಗೆ ಸಂನ್ಯಾಸಿಗಳೆನ್ನುವುದು ವ್ಯರ್ಥವೇ ಸರಿ ಎಂದು ನನಗನ್ನಿಸುತ್ತದೆ.

12018034a ಕಾಷಾಯ್ಯೈರಜಿನೈಶ್ಚೀರೈರ್ನಗ್ನಾನ್ಮುಂಡಾನ್ಜಟಾಧರಾನ್|
12018034c ಬಿಭ್ರತ್ಸಾಧೂನ್ಮಹಾರಾಜ ಜಯ ಲೋಕಾನ್ಜಿತೇಂದ್ರಿಯಃ||

ಮಹಾರಾಜ! ನೀನು ಜಿತೇಂದ್ರಿಯನಾಗಿದ್ದುಕೊಂಡು ಕಾಷಾಯವಸ್ತ್ರಧಾರಿಗಳನ್ನು, ಕೃಷ್ಣಾಜಿನ-ವಲ್ಕಲಗಳನ್ನು

ಉಟ್ಟವರನ್ನೂ, ದಿಗಂಬರರಾದ ಅವಧೂತರನ್ನೂ, ಮುಂಡನ ಮಾಡಿಸಿಕೊಂಡವರನ್ನೂ, ಜಟಾಧಾರಿಗಳನ್ನೂ, ಸಾಧುಗಳನ್ನೂ ಪಾಲಿಸುತ್ತಾ ಲೋಕಗಳನ್ನು ಗೆಲ್ಲು!

12018035a ಅಗ್ನ್ಯಾಧೇಯಾನಿ ಗುರ್ವರ್ಥಾನ್ಕೃತೂನ್ಸಪಶುದಕ್ಷಿಣಾನ್|
12018035c ದದಾತ್ಯಹರಹಃ ಪೂರ್ವಂ ಕೋ ನು ಧರ್ಮತರಸ್ತತಃ||

ಗುರುಗಳ ಅಗ್ನಿಕಾರ್ಯ-ದಾನಗಳಿಗೆ, ಮತ್ತು ಪಶು-ದಕ್ಷಿಣೆಗಳಿಂದ ಕೂಡಿದ ಕ್ರತುಗಳಿಗೆ ದ್ರವ್ಯಸಂಗ್ರಹಗಳನ್ನು ಮಾಡುವವರಿಗಿಂತಲೂ ಹೆಚ್ಚು ಧರ್ಮಪರಾಯಣರಾದವರು ಬೇರೆ ಯಾರಿದ್ದಾರೆ?"

12018036a ತತ್ತ್ವಜ್ಞೋ ಜನಕೋ ರಾಜಾ ಲೋಕೇಽಸ್ಮಿನ್ನಿತಿ ಗೀಯತೇ|
12018036c ಸೋಽಪ್ಯಾಸೀನ್ಮೋಹಸಂಪನ್ನೋ ಮಾ ಮೋಹವಶಮನ್ವಗಾಃ||

ತತ್ತ್ವಜ್ಞ ರಾಜಾ ಜನಕನ ಕುರಿತು ಲೋಕವು ಈ ಗೀತೆಯನ್ನು ಹಾಡುತ್ತದೆ. ಅವನೂ ಕೂಡ ಮೋಹಸಂಪನ್ನನಾಗಿದ್ದನು. ಅವನಂತೆ ನೀನು ಮೋಹವಶನಾಗಬೇಡ!

12018037a ಏವಂ ಧರ್ಮಮನುಕ್ರಾಂತಂ ಸದಾ ದಾನಪರೈರ್ನರೈಃ|
12018037c ಆನೃಶಂಸ್ಯಗುಣೋಪೇತೈಃ ಕಾಮಕ್ರೋಧವಿವರ್ಜಿತಾಃ||
12018038a ಪಾಲಯಂತಃ ಪ್ರಜಾಶ್ಚೈವ ದಾನಮುತ್ತಮಮಾಸ್ಥಿತಾಃ|
12018038c ಇಷ್ಟ್ವಾಽಲ್ಲೋಕಾನವಾಪ್ನ್ಯಾಮೋ ಬ್ರಹ್ಮಣ್ಯಾಃ
ಸತ್ಯವಾದಿನಃ[32]||

---

[32] ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ: ದೇವತಾಥಿತಿಭೂತಾನಾಂ ನಿರ್ವಪಂತೋ ಯಥಾವಿಧಿ| ಸ್ಥಾನಮಿಷ್ಟಮವಾಪ್ನ್ಯಾಮೋ ಬ್ರಹ್ಮಣ್ಯಾಃ ಸತ್ಯವಾದಿನಃ|| (ಗೀತಾ ಪ್ರೆಸ್).

ಹೀಗೆ ನಾವೂ ಕೂಡ ಧರ್ಮವನ್ನನುಸರಿಸುತ್ತಾ ಸದಾ ಇತರರಿಗೆ ದಾನಗಳನ್ನು ನೀಡುತ್ತಾ, ದಯಾಗುಣಸಂಪನ್ನರಾಗಿ, ಕಾಮ-ಕ್ರೋಧಗಳನ್ನು ತೊರೆದು, ಉತ್ತಮ ದಾನಗಳನ್ನು ನೀಡುತ್ತಾ ಪ್ರಜೆಗಳನ್ನು ಪಾಲಿಸೋಣ! ಬ್ರಾಹ್ಮಣಪ್ರಿಯರಾಗಿದ್ದು ಸತ್ಯವಾದಿಗಳಾಗಿದ್ದುಕೊಂಡು ಇಷ್ಟವಾದ ಲೋಕಗಳನ್ನು ಪಡೆದುಕೊಳ್ಳೋಣ!"

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಅರ್ಜುನವಾಕ್ಯೇ ಅಷ್ಟಾದಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಅರ್ಜುನವಾಕ್ಯ ಎನ್ನುವ ಹದಿನೆಂಟನೇ ಅಧ್ಯಾಯವು.

೧೯

ಯುಧಿಷ್ಠಿರವಾಕ್ಯ

ಯುಧಿಷ್ಠಿರನು ತನ್ನ ಮತವನ್ನು ಯತಾರ್ಥವಾಗಿ ಪ್ರತಿಪಾದಿಸಿದುದು (1-26).

12019001 ಯುಧಿಷ್ಠಿರ ಉವಾಚ|
12019001a ವೇದಾಹಂ ತಾತ ಶಾಸ್ತ್ರಾಣಿ ಅಪರಾಣಿ ಪರಾಣಿ ಚ|
12019001c ಉಭಯಂ ವೇದವಚನಂ ಕುರು ಕರ್ಮ ತ್ಯಜೇತಿ ಚ||

ಯುಧಿಷ್ಠಿರನು ಹೇಳಿದನು: "ಅಯ್ಯಾ! ನಾನು ಅಪರ ಮತ್ತು ಪರ ಶಾಸ್ತ್ರಗಳೆರಡನ್ನೂ ತಿಳಿದುಕೊಂಡಿದ್ದೇನೆ. ಕರ್ಮವನ್ನು ಮಾಡು ಮತ್ತು

ತ್ಯಜಿಸು ಇವೆರಡೂ ವೇದವಚನಗಳೇ!

12019002a ಆಕುಲಾನಿ ಚ ಶಾಸ್ತ್ರಾಣಿ ಹೇತುಭಿಶ್ಚಿತ್ರಿತಾನಿ ಚ|
12019002c ನಿಶ್ಚಯಶ್ಚೈವ ಯನ್ಮಾತ್ರೋ ವೇದಾಹಂ ತಂ ಯಥಾವಿಧಿ||

ವಿರೋಧಾಭಾಸವಾದಂತೆ ಚಿತ್ರಿತವಾಗಿರುವ ಈ ಶಾಸ್ತ್ರವಾಕ್ಯಗಳನ್ನು
ಅವುಗಳ ಕಾರಣ-ನಿಶ್ಚಯಗಳೊಂದಿಗೆ ಯಥಾವಿಧಿಯಾಗಿ ನಾನು
ತಿಳಿದುಕೊಂಡಿರುವೆನು.

12019003a ತ್ವಂ ತು ಕೇವಲಮಸ್ತ್ರಜ್ಞೋ ವೀರವ್ರತಮನುಷ್ಠಿತಃ|
12019003c ಶಾಸ್ತ್ರಾರ್ಥಂ ತತ್ತ್ವತೋ ಗಂತುಂ ನ ಸಮರ್ಥಃ ಕಥಂ ಚನ||

ನೀನಾದರೋ ಕೇವಲ ಅಸ್ತ್ರಗಳನ್ನು ತಿಳಿದವನು.
ವೀರವ್ರತಾನುಷ್ಠಾನದಲ್ಲಿರುವವನು. ಶಾಸ್ತ್ರಾರ್ಥವನ್ನು ತತ್ತ್ವತಃ
ತಿಳಿದುಕೊಳ್ಳಲು ನೀನು ಎಂದಿಗೂ ಸಮರ್ಥನಲ್ಲ!

12019004a ಶಾಸ್ತ್ರಾರ್ಥಸೂಕ್ಷ್ಮದರ್ಶೀ ಯೋ ಧರ್ಮನಿಶ್ಚಯಕೋವಿದಃ|
12019004c ತೇನಾಪ್ಯೇವಂ ನ ವಾಚ್ಯೋಽಹಂ ಯದಿ ಧರ್ಮಂ ಪ್ರಪಶ್ಯಸಿ||

ನೀನು ಶಾಸ್ತ್ರಗಳ ಸೂಕ್ಷ್ಮಾರ್ಥಗಳನ್ನು ಕಂಡುಕೊಂಡಿದ್ದರೆ ಮತ್ತು
ಧರ್ಮನಿಶ್ಚಯಗಳ ಕೋವಿದನಾಗಿದ್ದರೆ, ಧರ್ಮವನ್ನು
ಕಂಡುಕೊಂಡಿದ್ದರೆ ನೀನೂ ಕೂಡ ನನಗೆ ಈ
ಮಾತುಗಳನ್ನಾಡುತ್ತಿರಲಿಲ್ಲ!

12019005a ಭ್ರಾತೃಸೌಹೃದಮಾಸ್ಥಾಯ ಯದುಕ್ತಂ ವಚನಂ ತ್ವಯಾ|
12019005c ನ್ಯಾಯ್ಯಂ ಯುಕ್ತಂ ಚ ಕೌಂತೇಯ ಪ್ರೀತೋಽಹಂ ತೇನ ತೇಽರ್ಜುನ||

ಅರ್ಜುನ! ಕೌಂತೇಯ! ಅಣ್ಣನ ಸುಹೃದಯವನ್ನು ತಾಳಿ ನೀನು

ಹೇಳಿದ ನ್ಯಾಯವೂ ಯುಕ್ತವೂ ಆದ ಮಾತಿನಿಂದ
ಸಂತೋಷಗೊಂಡಿದ್ದೇನೆ.

12019006a ಯುದ್ಧಧರ್ಮೇಷು ಸರ್ವೇಷು ಕ್ರಿಯಾಣಾಂ ನೈಪುಣೇಷು ಚ|
12019006c ನ ತ್ವಯಾ ಸದೃಶಃ ಕಶ್ಚಿತ್ತ್ರಿಷು ಲೋಕೇಷು ವಿದ್ಯತೇ||

ಯುದ್ಧಧರ್ಮದ ಸರ್ವ ಕ್ರಿಯೆಗಳಲ್ಲಿ ಮತ್ತು ನೈಪುಣ್ಯತೆಯಲ್ಲಿ ನಿನ್ನ
ಸಮನಾಗಿರುವವರು ಮೂರು ಲೋಕಗಳಲ್ಲೇ ಯಾರೂ ಇಲ್ಲವೆಂದು
ತಿಳಿಯುತ್ತದೆ.

12019007a ಧರ್ಮಸೂಕ್ಷ್ಮಂ ತು ಯದ್ವಾಕ್ಯಂ ತತ್ರ ದುಷ್ಪ್ರತರಂ ತ್ವಯಾ|
12019007c ಧನಂಜಯ ನ ಮೇ ಬುದ್ಧಿಮಭಿಶಂಕಿತುಮರ್ಹಸಿ||

ಧನಂಜಯ! ಆದರೆ ನೀನು ಈಗ ಹೇಳಿರುವ ಧರ್ಮಸೂಕ್ಷ್ಮದ
ಮಾತುಗಳು ನನ್ನ ಬುದ್ಧಿಗೆ ತಿಳಿಯಲಿಲ್ಲ ಎಂದು ಶಂಕಿಸಬಾರದು.

12019008a ಯುದ್ಧಶಾಸ್ತ್ರವಿದೇವ ತ್ವಂ ನ ವೃದ್ಧಾಃ ಸೇವಿತಾಸ್ತ್ವಯಾ|
12019008c ಸಮಾಸವಿಸ್ತರವಿದಾಂ ನ ತೇಷಾಂ ವೇತ್ಸಿ ನಿಶ್ಚಯಮ್||

ನೀನು ಯುದ್ಧಶಾಸ್ತ್ರವನ್ನು ಮಾತ್ರವೇ ತಿಳಿದಿರುವೆ. ನೀನೆಂದೂ ವೃದ್ಧರ
ಸೇವೆಯನ್ನು ಮಾಡಿದವನಲ್ಲ. ಆದುದರಿಂದ ಸಂಕ್ಷಿಪ್ತವಾಗಿಯೂ
ವಿಸ್ತಾರವಾಗಿಯೂ ಇರುವ ಧರ್ಮ ನಿಶ್ಚಯವು ನಿನಗೆ ತಿಳಿಯಲಾರದು!

12019009a ತಪಸ್ತ್ಯಾಗೋ ವಿಧಿರಿತಿ ನಿಶ್ಚಯಸ್ತಾತ ಧೀಮತಾಮ್|
12019009c ಪರಂ ಪರಂ ಜ್ಯಾಯ ಏಷಾಂ ಸೈಷಾ ನೈಃಶ್ರೇಯಸೀ ಗತಿಃ||

ಅಯ್ಯಾ! ತಪಸ್ಸು-ತ್ಯಾಗ ಮತ್ತು ಬ್ರಹ್ಮಜ್ಞಾನ ಇವು ಶ್ರೇಯಸ್ಕರವೆಂದು
ತಿಳಿದವರ ನಿಶ್ಚಯ. ಈ ಮೂರರಲ್ಲಿ ಮೊದಲನೆಯದಕ್ಕಿಂತಲೂ

ಎರಡನೆಯದು ಶ್ರೇಷ್ಠವು ಮತ್ತು ಎರಡನೆಯದಕ್ಕಿಂತಲೂ ಮೂರನೆಯದು ಶ್ರೇಷ್ಠವು.

12019010a ನ ತ್ವೇತನ್ಮನ್ಯಸೇ ಪಾರ್ಥ ನ ಜ್ಯಾಯೋಽಸ್ತಿ ಧನಾದಿತಿ|
12019010c ಅತ್ರ ತೇ ವರ್ತಯಿಷ್ಯಾಮಿ ಯಥಾ ನ್ಯೈತತ್ಪ್ರಧಾನತಃ||

ಪಾರ್ಥ! ಧನಕ್ಕಿಂತಲೂ ಮಿಗಿಲಾದುದು ಇಲ್ಲವೆಂದು ನಿನ್ನ ಅಭಿಪ್ರಾಯವಾಗಿದೆ. ಆದರೆ, ಅದು ಪ್ರಧಾನವಾದುದಲ್ಲವೆನ್ನುವುದನ್ನು ನಾನು ನಿನಗೆ ಹೇಳುತ್ತಿದ್ದೇನೆ.

12019011a ತಪಃಸ್ವಾಧ್ಯಾಯಶೀಲಾ ಹಿ ದೃಶ್ಯಂತೇ ಧಾರ್ಮಿಕಾ ಜನಾಃ|
12019011c ಋಷಯಸ್ತಪಸಾ ಯುಕ್ತಾ ಯೇಷಾಂ ಲೋಕಾಃ ಸನಾತನಾಃ||

ತಪಸ್ಸು ಮತ್ತು ಸ್ವಾಧ್ಯಾಯಗಳಲ್ಲಿ ನಿರತರಾದ ಧಾರ್ಮಿಕ ಜನರು ಕಾಣಸಿಗುತ್ತಾರೆ. ತಪಸ್ಸಿನಿಂದ ಯುಕ್ತರಾದ ಋಷಿಗಳಿಗೆ ಸನಾತನ ಲೋಕಗಳು ದೊರೆಯುತ್ತವೆ.

12019012a ಅಜಾತಶ್ಮಶ್ರವೋ[33] ಧೀರಾಸ್ತಥಾನ್ಯೇ ವನವಾಸಿನಃ|
12019012c ಅನಂತಾ ಅಧನಾ ಏವ ಸ್ವಾಧ್ಯಾಯೇನ ದಿವಂ ಗತಾಃ||

ಶತ್ರುಗಳೇ ಇಲ್ಲದ ಅನ್ಯ ಧೀರ ವನವಾಸಿಗಳು ಬಹಳ ಕಾಲ ಧನವಿಲ್ಲದೇ ಸ್ವಾಧ್ಯಾಯದಲ್ಲಿ ನಿರತರಾಗಿದ್ದುಕೊಂಡು ಸ್ವರ್ಗಕ್ಕೆ ಹೋಗುತ್ತಾರೆ.

12019013a ಉತ್ತರೇಣ ತು ಪಂಥಾನಮಾರ್ಯಾ ವಿಷಯನಿಗ್ರಹಾತ್|
12019013c ಅಬುದ್ಧಿಜಂ ತಮಸ್ತ್ಯಕ್ತ್ವಾ ಲೋಕಾಂಸ್ತ್ಯಾಗವತಾಂ ಗತಾಃ||

---

[33] ಭಾರತದರ್ಶನದಲ್ಲಿ ಅಜಾತಶತ್ರವೋ ಎಂದಿದೆ.

ಅನೇಕ ಆರ್ಯರು ವಿಷಯನಿಗ್ರಹದ ಮೂಲಕ ಮೌಢ್ಯದ ಕತ್ತಲೆಯನ್ನು
ತ್ಯಜಿಸಿ ಉತ್ತರ[34] ಮಾರ್ಗವಾಗಿ ಉತ್ತಮ ಲೋಕಗಳಿಗೆ ಹೋಗಿದ್ದಾರೆ.

12019014a ದಕ್ಷಿಣೇನ ತು ಪಂಥಾನಂ ಯಂ ಭಾಸ್ವಂತಂ ಪ್ರಪಶ್ಯಸಿ|
12019014c ಏತೇ ಕ್ರಿಯಾವತಾಂ ಲೋಕಾ ಯೇ ಶ್ಮಶಾನಾನಿ ಭೇಜಿರೇ||

ದಕ್ಷಿಣ[35] ಮಾರ್ಗದಲ್ಲಿ ತೋರುವ ಪ್ರಕಾಶಮಾನ ಲೋಕಗಳು ಸದಾ
ಶ್ಮಶಾನ ಯಾತ್ರೆಗಳನ್ನು ಮಾಡುತ್ತಿರುವ ಕ್ರಿಯಾವಂತರಿಗಿರುವವು.

12019015a ಅನಿರ್ದೇಶ್ಯಾ ಗತಿಃ ಸಾ ತು ಯಾಂ ಪ್ರಪಶ್ಯಂತಿ ಮೋಕ್ಷಿಣಃ|
12019015c ತಸ್ಮಾತ್ತ್ಯಾಗಃ[36] ಪ್ರಧಾನೇಷ್ಟಃ ಸ ತು ದುಃಖಃ ಪ್ರವೇದಿತುಮ್||

ಮೋಕ್ಷಿಣಿಗಳು ಯಾವ ಮಾರ್ಗದಲ್ಲಿ ಹೋದರೆನ್ನುವುದನ್ನು
ನಿರ್ದಿಷ್ಠವಾಗಿ ಹೇಳುವುದು ಕಷ್ಟ. ಆದುದರಿಂದ ತ್ಯಾಗವು
ಪ್ರಧಾನವಾದುದು. ಆದರೆ ಅದನ್ನು ತಿಳಿದುಕೊಳ್ಳುವುದು ಕಷ್ಟ.

12019016a ಅನುಸೃತ್ಯ ತು ಶಾಸ್ತ್ರಾಣಿ ಕವಯಃ ಸಮವಸ್ಥಿತಾಃ|
12019016c ಅಪೀಹ ಸ್ಯಾದಪೀಹ ಸ್ಯಾತ್ಸಾರಾಸಾರದಿದೃಕ್ಷಯಾ||

ವಿದ್ವಾಂಸರು ಒಂದೆಡೆ ಸೇರಿ ಶಾಸ್ತ್ರಗಳ ಸಾರಾಸಾರಗಳನ್ನು ಪರಿಶೀಲಿಸಿ
ಇವುಗಳಲ್ಲಿ ಯಾವುದರಿಂದ ಬ್ರಹ್ಮಸಾಕ್ಷಾತ್ಕಾರವು ಸಾಧ್ಯ
ಎನ್ನುವುದನ್ನು ಅವಲೋಕಿಸಿದ್ದಾರೆ.

12019017a ವೇದವಾದಾನತಿಕ್ರಮ್ಯ ಶಾಸ್ತ್ರಾಣ್ಯಾರಣ್ಯಕಾನಿ ಚ|

---

34 ದೇವಯಾನದ ಮೂಲಕ

35 ಪಿತೃಮಾರ್ಗ

36 ಭಾರತ ದರ್ಶನದಲ್ಲಿ ತಸ್ಮಾದ್ಯೋಗಃ ಎಂದಿದೆ.

12019017c ವಿಪಾಟ್ಯ ಕದಲೀಸ್ಕಂಧಂ ಸಾರಂ ದದೃಶಿರೇ ನ ತೇ॥

ಕಡಿದುರುಳಿಸಿದ ಬಾಳೆಯ ದಿಂಡಿನಲ್ಲಿ ಸಾರವನ್ನು ಕಾಣದಂತೆ ವೇದವಾದಗಳನ್ನೂ ದಾಟಿ ಮುಂದೆ ಹೋಗಿ ಶಾಸ್ತ್ರ-ಅರಣ್ಯಕಗಳನ್ನು ಪರಿಶೀಲಿಸಿದರೂ ಅವುಗಳಲ್ಲಿ ಅವರು ಸಾರವನ್ನು ಕಾಣಲಿಲ್ಲ.

12019018a ಅಥೈಕಾಂತವ್ಯುದಾಸೇನ ಶರೀರೇ ಪಂಚಭೌತಿಕೇ|
12019018c ಇಚ್ಚಾದ್ವೇಷಸಮಾಯುಕ್ತಮಾತ್ಮಾನಂ ಪ್ರಾಹುರಿಂಗಿತೈಃ॥

ಕೆಲವರು ಪಂಚಭೌತಿಕವಾದ ಈ ಶರೀರದಲ್ಲಿರುವ ಆತ್ಮನು ಸ್ವಭಾವತಃ ಇಚ್ಛೆ-ದ್ವೇಷಗಳಿಂದ ಕೂಡಿದವನು ಎಂದು ಹೇಳುತ್ತಾರೆ.

12019019a ಅಗ್ರಾಹ್ಯಶ್ಚಕ್ಷುಷಾ ಸೋಽಪಿ ಅನಿರ್ದೇಶ್ಯಂ ಚ ತದ್ ಗಿರಾ|
12019019c ಕರ್ಮಹೇತುಪುರಸ್ಕಾರಂ ಭೂತೇಷು ಪರಿವರ್ತತೇ॥

ಆದರೆ ಈ ಆತ್ಮವು ಕಣ್ಣಿಗೆ ಕಾಣಿಸುವುದಿಲ್ಲ. ಮಾತಿನ ಮೂಲಕ ವರ್ಣಿಸಲಾಗುವುದಿಲ್ಲ. ಅದರ ಎದುರಿರುವ ಕರ್ಮಕಾರಣಗಳು ಜೀವಿಗಳಲ್ಲಿ ಪರಿವರ್ತನೆ ಹೊಂದುತ್ತಿರುತ್ತವೆಯೇ ಹೊರತು ಆತ್ಮವು ಪರಿವರ್ತಿತವಾಗದಕ್ಕುದಲ್ಲ.

12019020a ಕಲ್ಯಾಣಗೋಚರಂ ಕೃತ್ವಾ ಮನಸ್ತೃಷ್ಣಾಂ ನಿಗೃಹ್ಯ ಚ|
12019020c ಕರ್ಮಸಂತತಿಮುತ್ಸೃಜ್ಯ ಸ್ಯಾನ್ನಿರಾಲಂಬನಃ ಸುಖೀ॥

ಮನಸ್ಸನ್ನು ಕಲ್ಯಾಣಮಾರ್ಗದಲ್ಲಿ ತೊಡಗಿಸಿ, ಮನಸ್ಸಿನ ಬಾಯಾರಿಕೆಯನ್ನು ನಿಗ್ರಹಿಸಿಕೊಂಡು ಕರ್ಮಗಳ ಪರಂಪರೆಯನ್ನು ತ್ಯಜಿಸಿ ನಿರಾಲಂಬನಾಗಿರುವವನೇ ಪರಮ ಸುಖಿಯು.

12019021a ಅಸ್ಮಿನ್ನೇವಂ ಸೂಕ್ಷ್ಮಗಮ್ಯೇ ಮಾರ್ಗೇ ಸದ್ಭಿರ್ನಿಷೇವಿತೇ|

12019021c ಕಥಮರ್ಥಮನರ್ಥಾಢ್ಯಮರ್ಜುನ ತ್ವಂ ಪ್ರಶಂಸಸಿ||

ಅರ್ಜುನ! ಸಾಧುಗಳು ಬಳಸುವ ಈ ಸೂಕ್ಷ್ಮಗಮ್ಯ ಮಾರ್ಗವಿರುವಾಗ ಅನರ್ಥವಾಗಿರುವ ಅರ್ಥವನ್ನೇಕೆ ನೀನು ಪ್ರಶಂಸಿಸುತ್ತಿರುವೆ?

12019022a ಪೂರ್ವಶಾಸ್ತ್ರವಿದೋ ಹ್ಯೇವಂ ಜನಾಃ ಪಶ್ಯಂತಿ ಭಾರತ|
12019022c ಕ್ರಿಯಾಸು ನಿರತಾ ನಿತ್ಯಂ ದಾನೇ ಯಜ್ಞೇ ಚ ಕರ್ಮಣಿ||

ಭಾರತ! ನಿತ್ಯವೂ ಯಜ್ಞ-ದಾನ ಕರ್ಮಗಳಲ್ಲಿ ನಿರತರಾಗಿದ್ದ ಹಿಂದಿನ ಶಾಸ್ತ್ರವಿದ್ವಾಂಸ ಜನರೂ ಈ ವಿಷಯದಲ್ಲಿ ಇದೇ ಅಭಿಪ್ರಾಯವನ್ನು ತಾಳಿದ್ದರು.

12019023a ಭವಂತಿ ಸುದುರಾವರ್ತಾ ಹೇತುಮಂತೋಽಪಿ ಪಂಡಿತಾಃ|
12019023c ದೃಢಪೂರ್ವಶ್ರುತಾ ಮೂಢಾ ನೈತದಸ್ತೀತಿ ವಾದಿನಃ||

ಆದರೆ ಕಾರಣಗಳನ್ನು ತಿಳಿದುಕೊಂಡಿರುವ ಪಂಡಿತರೂ ಕೂಡ ತಮ್ಮ ಹಿಂದಿನ ದೃಢಸಂಸ್ಕಾರದಿಂದ ಪ್ರಭಾವಿತರಾಗಿ ದುರಾವರ್ತ ಮೂಢರಾಗಿ ಇದು ಹಾಗಲ್ಲ ಎಂದು ವಾದಿಸುತ್ತಾರೆ.

12019024a ಅಮೃತಸ್ಯಾವಮಂತಾರೋ ವಕ್ತಾರೋ ಜನಸಂಸದಿ|
12019024c ಚರಂತಿ ವಸುಧಾಂ ಕೃತ್ಸ್ನಾಂ ವಾವದೂಕಾ ಬಹುಶ್ರುತಾಃ||

ಆತ್ಮನ ಅಮೃತತ್ವವನ್ನು ಒಪ್ಪಿಕೊಳ್ಳದೇ ಬಹುವಿದ್ವಾಂಸರೂ ಜನಸಂಸದಿಗಳಲ್ಲಿ ಅನೃತವಾದಿಗಳಾಗಿ ಇಡೀ ಭೂಮಿಯನ್ನು ಸಂಚರಿಸುತ್ತಿರುತ್ತಾರೆ.

12019025a ಯಾನ್ವಯಂ ನಾಭಿಜಾನೀಮಃ ಕಸ್ತಾನ್ ಜ್ಞಾತುಮಿಹಾರ್ಹತಿ|
12019025c ಏವಂ ಪ್ರಾಜ್ಞಾನ್ಸತಶ್ಚಾಪಿ ಮಹತಃ ಶಾಸ್ತ್ರವಿತ್ತಮಾನ್||

ಅಂಥವರನ್ನು ನಾವೇ ತಿಳಿಯಲಾರೆವು ಎಂದಾದಮೇಲೆ ಸಾಧಾರಣ ಮನುಷ್ಯರು ತಾನೇ ಹೇಗೆ ತಿಳಿದುಕೊಳ್ಳುತ್ತಾರೆ? ಮಹಾ ಪ್ರಾಜ್ಞರಾದ ಸಾಧು ಶಾಸ್ತ್ರಪಂಡಿತರೂ ಇದ್ದಾರೆ.

12019026a ತಪಸಾ ಮಹದಾಪ್ನೋತಿ ಬುದ್ಧ್ಯಾ ವೈ ವಿಂದತೇ ಮಹತ್|
12019026c ತ್ಯಾಗೇನ ಸುಖಮಾಪ್ನೋತಿ ಸದಾ ಕೌಂತೇಯ ಧರ್ಮವಿತ್||

ಕೌಂತೇಯ! ಬುದ್ಧಿಯಿಂದ ಮಹತ್ತನ್ನು ತಿಳಿದುಕೊಂಡವನು ಮಹಾ ತಪಸ್ಸಿನ ಫಲವನ್ನು ಪಡೆಯುತ್ತಾನೆ. ತತ್ತ್ವವಿದನು ಸದಾ ತ್ಯಾಗದಿಂದ ಸುಖವನ್ನು ಹೊಂದುತ್ತಾನೆ.””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಯುಧಿಷ್ಠಿರವಾಕ್ಯೇ ಏಕೋನವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಯುಧಿಷ್ಠಿರವಾಕ್ಯ ಎನ್ನುವ ಹತ್ತೊಂಭತ್ತನೇ ಅಧ್ಯಾಯವು.

೨೦

ದೇವಸ್ಥಾನವಾಕ್ಯ

ಮುನಿವರ ದೇವಸ್ಥಾನನು ರಾಜಾ ಯುಧಿಷ್ಠಿರನಿಗೆ ಯಜ್ಞಾನುಷ್ಠಾನಗಳಿಗೆ ಪ್ರೇರೇಪಿಸಿದುದು (1-14).

12020001 ವೈಶಂಪಾಯನ ಉವಾಚ|
12020001a ತಸ್ಮಿನ್ವಾಕ್ಯಾಂತರೇ ವಕ್ತಾ ದೇವಸ್ಥಾನೋ ಮಹಾತಪಾಃ|

12020001c ಅಭಿನೀತತರಂ ವಾಕ್ಯಮಿತ್ಯುವಾಚ ಯುಧಿಷ್ಠಿರಮ್‌||

ವೈಶಂಪಾಯನನು ಹೇಳಿದನು: "ಈ ಮಧ್ಯದಲ್ಲಿ ಮಹಾತಪಸ್ವಿ ದೇವಸ್ಥಾನನು ಯುಧಿಷ್ಠಿರನಿಗೆ ನೀತಿಯುಕ್ತವಾದ ಈ ಮಾತುಗಳನ್ನು ಹೇಳಿದನು:

12020002a ಯದ್ವಚಃ ಫಲ್ಗುನೇನೋಕ್ತಂ ನ ಜ್ಯಾಯೋಽಸ್ತಿ ಧನಾದಿತಿ|
12020002c ಅತ್ರ ತೇ ವರ್ತಯಿಷ್ಯಾಮಿ ತದೇಕಾಗ್ರಮನಾಃ ಶೃಣು||

"ಧನಕ್ಕಿಂತಲೂ ಹೆಚ್ಚಿನದಾದುದ್ದು ಇಲ್ಲ ಎಂದು ಫಲ್ಗುನನು ಏನು ಹೇಳಿದನೋ ಅದೇ ವಿಷಯದಲ್ಲಿ ನಾನೂ ಕೂಡ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

12020003a ಅಜಾತಶತ್ರೋ ಧರ್ಮೇಣ ಕೃತ್ಸ್ನಾ ತೇ ವಸುಧಾ ಜಿತಾ|
12020003c ತಾಂ ಜಿತ್ವಾ ನ ವೃಥಾ ರಾಜಂಸ್ತ್ವಂ ಪರಿತ್ಯಕ್ತುಮರ್ಹಸಿ||

ಅಜಾತಶತ್ರೋ! ರಾಜನ್‌! ಧರ್ಮದಿಂದಲೇ ನೀನು ಈ ಸಂಪೂರ್ಣ ವಸುಧೆಯನ್ನು ಗೆದ್ದಿರುವೆ. ಹಾಗೆ ಗೆದ್ದಿರುವ ರಾಜ್ಯವನ್ನು ವೃಥಾ ಪರಿತ್ಯಜಿಸುವುದು ಸರಿಯಲ್ಲ.

12020004a ಚತುಷ್ಪದೀ ಹಿ ನಿಃಶ್ರೇಣೀ ಕರ್ಮಣ್ಯೇಷಾ ಪ್ರತಿಷ್ಠಿತಾ|
12020004c ತಾಂ ಕ್ರಮೇಣ ಮಹಾಬಾಹೋ ಯಥಾವಜ್ಜಯ ಪಾರ್ಥಿವ||

ಬ್ರಹ್ಮ ಸಾಕ್ಷಾತ್ಕಾರಕ್ಕೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ ಮತ್ತು ಸಂನ್ಯಾಸಗಳೆಂಬ ನಾಲ್ಕು ಆಶ್ರಮಧರ್ಮಗಳಿವೆ. ಇವುಗಳಲ್ಲಿ ಶ್ರೇಣಿಯೆಂಬುದಿಲ್ಲ. ಇವೆಲ್ಲವೂ ಕರ್ಮದಲ್ಲಿಯೇ ಪ್ರತಿಷ್ಠಿತವಾಗಿವೆ. ಮಹಾಬಾಹೋ! ಪಾರ್ಥಿವ! ಇವುಗಳನ್ನು ಕ್ರಮೇಣವಾಗಿ ಒಂದಾದ

ನಂತರ ಮತ್ತೊಂದನ್ನು ಜಯಿಸುತ್ತಾ ಬಾ!

12020005a ತಸ್ಮಾತ್ತ್ವಾರ್ಥ ಮಹಾಯಜ್ಞೈರ್ಯಜಸ್ವ ಬಹುದಕ್ಷಿಣೈಃ|
12020005c ಸ್ವಾಧ್ಯಾಯಯಜ್ಞಾ ಋಷಯೋ ಜ್ಞಾನಯಜ್ಞಾಸ್ತಥಾಪರೇ||

ಪಾರ್ಥ! ಆದುದರಿಂದ ಬಹುದಕ್ಷಿಣೆಗಳಿಂದ ಯುಕ್ತವಾದ
ಮಹಾಯಜ್ಞಗಳನ್ನು ಯಾಜಿಸು. ಸ್ವಾಧ್ಯಾಯ ಯಜ್ಞದಲ್ಲಿ
ನಿರತರಾಗಿರುವವರು ಋಷಿಗಳು. ಜ್ಞಾನಯಜ್ಞದಲ್ಲಿ
ನಿರತರಾಗಿರುವವರು ಸಂನ್ಯಾಸಿಗಳು.

12020006a ಕರ್ಮನಿಷ್ಠಾಂಸ್ತು ಬುಧ್ಯೇಥಾಸ್ತಪೋನಿಷ್ಠಾಂಶ್ಚ ಭಾರತ|
12020006c ವೈಖಾನಸಾನಾಂ ರಾಜೇಂದ್ರ ವಚನಂ ಶ್ರೂಯತೇ ಯಥಾ||

ಭಾರತ! ರಾಜೇಂದ್ರ! ಕರ್ಮನಿಷ್ಠರು ಮತ್ತು ತಪೋನಿಷ್ಠರು ಇವರ
ಕುರಿತು ತಿಳಿದುಕೊಳ್ಳಬೇಕು. ಈ ವಿಷಯದಲ್ಲಿ ವೈಖಾನಸರು ಈ ರೀತಿ
ಹೇಳಿದ್ದಾರೆ:

12020007a ಈಹತೇ ಧನಹೇತೋರ್ಯಸ್ತಸ್ಯಾನೀಹಾ ಗರೀಯಸೀ|
12020007c ಭೂಯಾನ್ದೋಷಃ ಪ್ರವರ್ಧೇತ ಯಸ್ತಂ ಧನಮಪಾಶ್ರಯೇತ್||

ಧನವನ್ನು ಕೂಡಿಡಬೇಕೆಂದೇ ಧನವನ್ನು ಬಯಸುವುದಕ್ಕಿಂತ ಅದನ್ನು
ಬಯಸದೇ ಇರುವುದೇ ಶ್ರೇಷ್ಠವಾದುದು. ಧನವನ್ನೇ
ಆಶ್ರಯಿಸಿರುವವನಲ್ಲಿ ಅನೇಕ ದೋಷಗಳು ಪುನಃ ಪುನಃ
ಬೆಳೆಯುತ್ತಿರುತ್ತವೆ.

12020008a ಕೃಚ್ಚ್ರಾಚ್ಚ ದ್ರವ್ಯಸಂಹಾರಂ ಕುರ್ವಂತಿ ಧನಕಾರಣಾತ್|
12020008c ಧನೇನ ತೃಷಿತೋಽಬುದ್ಧ್ಯಾ ಭ್ರೂಣಹತ್ಯಾಂ ನ ಬುಧ್ಯತೇ||

ಧನದ ಕಾರಣದಿಂದ ದ್ರವ್ಯವನ್ನು ಹೇಗೆ ವ್ಯಯಮಾಡಬೇಕೆಂದೂ ಕಷ್ಟಪಡುತ್ತಾರೆ. ಧನವನ್ನು ಹೇಗೆ ವ್ಯಯಮಾಡಬೇಕೆಂದು ತಿಳಿಯದೇ ಭ್ರೂಣಹತ್ಯಾದೋಷಕ್ಕೂ ಗುರಿಯಾಗುತ್ತಾರೆ.

12020009a ಅನರ್ಹತೇ ಯದ್ದದಾತಿ ನ ದದಾತಿ ಯದರ್ಹತೇ|
12020009c ಅನರ್ಹಾರ್ಹಾಪರಿಜ್ಞಾನಾದ್ದಾನಧರ್ಮೋ ಽಪಿ ದುಷ್ಕರಃ||

ಅನರ್ಹರಿಗೆ ದಾನನೀಡುವವನು ಮತ್ತು ಅರ್ಹನಾದವನಿಗೆ ದಾನನೀಡದಿರುವವನು ಇವೆರಡೂ ಪಾಪಕರ್ಮಗಳೇ. ಅನರ್ಹರ್ಯಾರು ಮತ್ತು ಅರ್ಹರ್ಯಾರು ಎಂದು ಪರಿಜ್ಞಾನವಿಲ್ಲದಿರುವುದರಿಂದ ದಾನಧರ್ಮಗಳೂ ದುಷ್ಕರವೇ ಸರಿ!

12020010a ಯಜ್ಞಾಯ ಸೃಷ್ಟಾನಿ ಧನಾನಿ ಧಾತ್ರಾ
ಯಷ್ಟಾದಿಷ್ಟಃ ಪುರುಷೋ ರಕ್ಷಿತಾ ಚ|
12020010c ತಸ್ಮಾತ್ಸರ್ವಂ ಯಜ್ಞ ಏವೋಪಯೋಜ್ಯಂ
ಧನಂ ತತೋ ಽನಂತರ ಏವ ಕಾಮಃ||

ಧಾತ್ರನು ಧನವನ್ನು ಯಜ್ಞಕ್ಕಾಗಿಯೇ ಸೃಷ್ಟಿಸಿದ್ದಾನೆ. ಸೃಷ್ಟಿಯ ಮುಖ್ಯ ಉದ್ದೇಶವಾದ ಯಜ್ಞಕ್ಕಾಗಿಯೇ ಮನುಷ್ಯನ ಸೃಷ್ಟಿಯೂ ರಕ್ಷಣೆಯೂ ನಡೆಯುತ್ತಿದೆ. ಆದುದರಿಂದ ಸರ್ವ ಧನವನ್ನೂ ಯಜ್ಞಕ್ಕಾಗಿಯೇ ಉಪಯೋಗಿಸಬೇಕು. ಧನವನ್ನು ಈ ರೀತಿ ಬಳಸಿದ ನಂತರವೇ ಮನುಷ್ಯನು ತನಗೆ ಬೇಕಾದುದನ್ನು ಪಡೆದುಕೊಳ್ಳುತ್ತಾನೆ.

12020011a ಯಜ್ಞೈರಿಂದ್ರೋ ವಿವಿಧೈರನ್ನವದ್ಭಿರ್
ದೇವಾನ್ಸರ್ವಾನಭ್ಯಯಾನ್ಮಹೌಜಾಃ|
12020011c ತೇನೇಂದ್ರತ್ವಂ ಪ್ರಾಪ್ಯ ವಿಭ್ರಾಜತೇ ಽಸೌ

ತಸ್ಮಾದ್ಯಜ್ಞೇ ಸರ್ವಮೇವೋಪಯೋಜ್ಯಮ್‌||

ಇಂದ್ರನು ವಿವಿಧ ಅನ್ನಗಳಿಂದ ಕೂಡಿದ ಯಜ್ಞಗಳನ್ನು ಮಾಡಿಯೇ ಎಲ್ಲ ದೇವತೆಗಳಿಗಿಂತಲೂ ಹೆಚ್ಚಿನ ಓಜಸ್ಸುಳ್ಳವನಾದನು. ಅದರಿಂದಲೇ ಅವನು ಇಂದ್ರತ್ವವನ್ನು ಪಡೆದುಕೊಂಡು ರಾರಾಜಿಸುತ್ತಿದ್ದಾನೆ. ಆದುದರಿಂದ ಯಜ್ಞಕ್ಕಾಗಿಯೇ ಸರ್ವ ಸಂಪತ್ತನ್ನೂ ವಿನಿಯೋಜಿಸಬೇಕು.

12020012a ಮಹಾದೇವಃ ಸರ್ವಮೇಧೇ ಮಹಾತ್ಮಾ
ಹುತ್ವಾತ್ಮಾನಂ ದೇವದೇವೋ ವಿಭೂತಃ|
12020012c ವಿಶ್ವಾಽಲ್ಲೋಕಾನ್ವ್ಯಾಪ್ಯ ವಿಷ್ಟಭ್ಯ ಕೀರ್ತ್ಯಾ
ವಿರೋಚತೇ ದ್ಯುತಿಮಾನ್ಕೃತ್ತಿವಾಸಾಃ‌||

ಮಹಾತ್ಮ ಮಹಾದೇವನೂ ಕೂಡ ಸರ್ವಮೇಧದಲ್ಲಿ ತನ್ನನ್ನು ತಾನೇ ಯಜ್ಞೇಶ್ವರನಿಗೆ ಸಮರ್ಪಿಸಿಕೊಂಡು ದೇವತೆಗಳಿಗೂ ದೇವನಾದನು. ಇದರಿಂದಲೇ ಆ ಕೃತ್ತಿವಾಸನು ಉತ್ತಮ ಕೀರ್ತಿಯಿಂದ ವಿಶ್ವಗಳನ್ನೂ ಲೋಕಗಳನ್ನೂ ವ್ಯಾಪಿಸಿ ಕಾಂತಿಮಂತನಾಗಿ ವಿರಾಜಿಸುತ್ತಾನೆ.

12020013a ಆವಿಕ್ಷಿತಃ ಪಾರ್ಥಿವೋ ವೈ ಮರುತ್ತಃ
ಸ್ಫೀದ್ಧ್ಯಾ ಮರ್ತ್ಯೋ ಯೋಽಜಯದ್ದೇವರಾಜಮ್‌|
12020013c ಯಜ್ಞೇ ಯಸ್ಯ ಶ್ರೀಃ ಸ್ವಯಂ ಸಂನಿವಿಷ್ಟಾ
ಯಸ್ಮಿನ್ಭಾಂಡಂ ಕಾಂಚನಂ ಸರ್ವಮಾಸೀತ್‌||

ಅವಿಕ್ಷಿತನ ಮಗ ಪಾರ್ಥಿವ ಮರುತ್ತನು ಯಜ್ಞದಿಂದಲೇ ಮರ್ತ್ಯನಾಗಿದ್ದರೂ ದೇವರಾಜನನ್ನು ಜಯಿಸಿದ್ದನು. ಅವನ ಯಜ್ಞದಲ್ಲಿ ಸ್ವಯಂ ಲಕ್ಷ್ಮಿಯೇ ಸನ್ನಿಹಿತಳಾಗಿದ್ದಳು. ಅವನ ಯಜ್ಞದಲ್ಲಿ ಎಲ್ಲ

ಪಾತ್ರೆಗಳೂ ಸ್ವರ್ಣಮಯವಾಗಿದ್ದವು.

12020014a ಹರಿಶ್ಚಂದ್ರಃ ಪಾರ್ಥಿವೇಂದ್ರಃ ಶ್ರುತಸ್ತೇ
ಯಜ್ಞೈರಿಷ್ಟ್ವಾ ಪುಣ್ಯಕೃದ್ವೀತಶೋಕಃ|
12020014c ಋದ್ಧ್ಯಾ ಶಕ್ರಂ ಯೋಽಜಯನ್ಮಾನುಷಃ ಸಂಸ್
ತಸ್ಮಾದ್ಯಜ್ಞೇ ಸರ್ವಮೇವೋಪಯೋಜ್ಯಮ್||

ಪಾರ್ಥಿವೇಂದ್ರ ಹರಿಶ್ಚಂದ್ರನ ಕುರಿತು ನೀನು ಕೇಳಿರುವೆ! ಅವನು ಮನುಷ್ಯನೇ ಆಗಿದ್ದರೂ ಶಕ್ರನನ್ನೂ ಪರಾಜಯಗೊಳಿಸಿದ್ದನು. ಅನೇಕ ಯಜ್ಞ-ಇಷ್ಟಿಗಳಿಂದ ಶೋಕರಹಿತನಾಗಿ ಪುಣ್ಯಗಳನ್ನು ಗಳಿಸಿದನು. ಆದುದರಿಂದ ಎಲ್ಲ ಐಶ್ವರ್ಯವನ್ನೂ ಯಜ್ಞಕ್ಕಾಗಿಯೇ ನಿಯೋಗಿಸಬೇಕು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ದೇವಸ್ಥಾನವಾಕ್ಯೇ ವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ದೇವಸ್ಥಾನವಾಕ್ಯ ಎನ್ನುವ ಇಪ್ಪತ್ತನೇ ಅಧ್ಯಾಯವು.

೨೧

ಮುನಿ ದೇವಸ್ಥಾನನು ಯುಧಿಷ್ಠಿರನಿಗೆ ಉತ್ತಮ ಧರ್ಮ ಮತ್ತು ಯಜ್ಞಾದಿಗಳನ್ನು ಮಾಡಲು ಉಪದೇಶಿಸಿದುದು (1-19).

12021001 ದೇವಸ್ಥಾನ ಉವಾಚ|
12021001a ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್|
12021001c ಇಂದ್ರೇಣ ಸಮಯೇ ಪೃಷ್ಟೋ ಯದುವಾಚ ಬೃಹಸ್ಪತಿಃ||

ದೇವಸ್ಥಾನನು ಹೇಳಿದನು: "ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವೊಂದನ್ನು ಉದಾಹರಿಸುತ್ತಾರೆ. ಆಗ ಇಂದ್ರನು ಕೇಳಿದಾಗ ಬೃಹಸ್ಪತಿಯು ಇದನ್ನು ಹೇಳಿದ್ದನು.

12021002a ಸಂತೋಷೋ ವೈ ಸ್ವರ್ಗತಮಃ ಸಂತೋಷಃ ಪರಮಂ ಸುಖಮ್|
12021002c ತುಷ್ಟೇರ್ನ ಕಿಂ ಚಿತ್ಪರತಃ ಸುಸಮ್ಯಕ್ಪರಿತಿಷ್ಠತಿ||

ಸಂತೋಷವೇ ಸ್ವರ್ಗಕ್ಕೆ ಸಮಾನವಾದುದು. ಸಂತೋಷವೇ ಪರಮ ಸುಖಕರವಾದುದು. ಸಂತೋಷವು ನೆಲೆಗೊಂಡಿತೆಂದರೆ ಆ ತೃಪ್ತಿಗಿಂತ ಹೆಚ್ಚಿನದು ಬೇರೆ ಯಾವುದೂ ಇಲ್ಲ.

12021003a ಯದಾ ಸಂಹರತೇ ಕಾಮಾನ್ಕೂರ್ಮೋ ಽಂಗಾನೀವ ಸರ್ವಶಃ|
12021003c ತದಾತ್ಮಜ್ಯೋತಿರಾತ್ಮೈವ ಸ್ವಾತ್ಮನೈವ ಪ್ರಸೀದತಿ||

ಆಮೆಯು ತನ್ನ ಎಲ್ಲ ಅವಯವಗಳನ್ನೂ ಚಿಪ್ಪಿನೊಳಗೆ ಸಂಕೋಚಿಸಿಕೊಳ್ಳುವಂತೆ ಕಾಮಗಳೆಲ್ಲವನ್ನೂ ಒಳಸೆಳೆದುಕೊಂಡಾಗ ಜ್ಯೋತಿಸ್ವರೂಪನಾದ ಅಂತರಾತ್ಮನು ಅಂತಃಕರಣದಲ್ಲಿ ಕಾಣಿಸಿಕೊಳ್ಳುತ್ತಾನೆ.

12021004a ನ ಬಿಭೇತಿ ಯದಾ ಚಾಯಂ ಯದಾ ಚಾಸ್ಮಾನ್ನ ಬಿಭ್ಯತಿ|
12021004c ಕಾಮದ್ವೇಷೌ ಚ ಜಯತಿ ತದಾತ್ಮಾನಂ ಪ್ರಪಶ್ಯತಿ||

ಯಾವುದಕ್ಕೂ ಭಯಪಡದಿದ್ದಾಗ, ಯಾವುದೂ ಭಯವನ್ನುಂಟುಮಾಡದಿದ್ದಾಗ, ಮತ್ತು ಕಾಮ-ದ್ವೇಷಗಳನ್ನು ಜಯಿಸಿದಾಗ ಪರಮಾತ್ಮನು ಕಾಣಿಸಿಕೊಳ್ಳುತ್ತಾನೆ.

12021005a ಯದಾಸೌ ಸರ್ವಭೂತಾನಾಂ ನ ಕ್ರುಧ್ಯತಿ ನ ದುಷ್ಯತಿ|

12021005c ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ||

ಯಾವಾಗ ಕಾರ್ಯದಿಂದಾಗಲೀ, ಮನಸ್ಸಿನಿಂದಾಗಲೀ ಅಥವಾ ಮಾತಿನಿಂದಾಗಲೀ ಸರ್ವಭೂತಗಳಿಗೂ ದ್ರೋಹವನ್ನೆಸಗುವುದಿಲ್ಲವೋ ಮತ್ತು ಇನ್ನೊಬ್ಬರಿಂದ ದ್ರೋಹವಾಗಲೆಂದು ಬಯಸುವುದಿಲ್ಲವೋ ಆಗ ಬ್ರಹ್ಮನ ಅರಿವಾಗುತ್ತದೆ.

12021006a ಏವಂ ಕೌಂತೇಯ ಭೂತಾನಿ ತಂ ತಂ ಧರ್ಮಂ ತಥಾ ತಥಾ|
12021006c ತದಾ ತದಾ ಪ್ರಪಶ್ಯಂತಿ ತಸ್ಮಾದ್ಬುಧ್ಯಸ್ವ ಭಾರತ||

ಕೌಂತೇಯ! ಹೀಗೆ ಇರುವವು ತಮ್ಮ ತಮ್ಮ ಧರ್ಮಗಳನ್ನು ಆಗಾಗ ಅನುಸರಿಸಿಕೊಂಡು ಆಗಾಗ ಬ್ರಹ್ಮನನ್ನು ಕಾಣುತ್ತಿರುತ್ತವೆ. ಭಾರತ! ಅದನ್ನು ತಿಳಿದುಕೋ!

12021007a ಅನ್ಯೇ ಶಮಂ ಪ್ರಶಂಸಂತಿ ವ್ಯಾಯಾಮಮಪರೇ ತಥಾ|
12021007c ನೈಕಂ ನ ಚಾಪರಂ ಕೇ ಚಿದುಭಯಂ ಚ ತಥಾಪರೇ||

ಕೆಲವರು ಶಾಂತಿಯನ್ನು ಪ್ರಶಂಸಿಸುತ್ತಾರೆ. ಇನ್ನು ಕೆಲವರು ವ್ಯಾಯಾಮವನ್ನು ಪ್ರಶಂಸಿಸುತ್ತಾರೆ. ಒಂದನ್ನು ಪ್ರಶಂಸಿಸುವವರು ಇನ್ನೊಂದನ್ನು ಪ್ರಶಂಸಿಸುವುದಿಲ್ಲ. ಕೆಲವರು ಮಾತ್ರ ಇವೆರಡನ್ನೂ ಪ್ರಶಂಸಿಸುತ್ತಾರೆ.

12021008a ಯಜ್ಞಮೇಕೇ ಪ್ರಶಂಸಂತಿ ಸಂನ್ಯಾಸಮಪರೇ ಜನಾಃ|
12021008c ದಾನಮೇಕೇ ಪ್ರಶಂಸಂತಿ ಕೇ ಚಿದೇವ ಪ್ರತಿಗ್ರಹಮ್||

ಒಬ್ಬನು ಯಜ್ಞವನ್ನು ಪ್ರಶಂಸಿಸಿದರೆ ಇತರ ಜನರು ಸಂನ್ಯಾಸವನ್ನು ಪ್ರಶಂಸಿಸುತ್ತಾರೆ. ಒಬ್ಬರು ದಾನವನ್ನು ಪ್ರಶಂಸಿಸಿದರೆ ಇತರರು

ದಾನಸ್ವೀಕರಣೆಯನ್ನೇ ಪ್ರಶಂಸಿಸುತ್ತಾರೆ.

12021008e ಕೇ ಚಿತ್ಸರ್ವಂ ಪರಿತ್ಯಜ್ಯ ತೂಷ್ಣೀಂ ಧ್ಯಾಯಂತ ಆಸತೇ||
12021009a ರಾಜ್ಯಮೇಕೇ ಪ್ರಶಂಸಂತಿ ಸರ್ವೇಷಾಂ ಪರಿಪಾಲನಮ್|
12021009c ಹತ್ವಾ ಭಿತ್ತ್ವಾ ಚ ಚಿತ್ತ್ವಾ ಚ ಕೇ ಚಿದೇಕಾಂತಶೀಲಿನಃ||

ಕೆಲವರಾದರೋ ಎಲ್ಲವನ್ನು ಪರಿತ್ಯಜಿಸಿ ಸುಮ್ಮನಾಗಿ ಧ್ಯಾನದಲ್ಲಿ
ಕುಳಿತುಕೊಂಡುಬಿಡುತ್ತಾರೆ. ಕೆಲವರು ಕೊಂದಾಗಲೀ,
ತುಂಡರಿಸಿಯಾಗಲೀ, ಕಸಿದುಕೊಂಡಾಗಲೀ ರಾಜ್ಯವನ್ನು ಪಡೆದು
ಎಲ್ಲರ ಪರಿಪಾಲನೆಯನ್ನು ಪ್ರಶಂಸಿಸುತ್ತಾರೆ. ಇನ್ನು ಕೆಲವರು
ಏಕಾಂತದಲ್ಲಿರುವುದನ್ನು ಪ್ರಶಂಸಿಸುತ್ತಾರೆ.

12021010a ಏತತ್ಸರ್ವಂ ಸಮಾಲೋಕ್ಯ ಬುಧಾನಾಮೇಷ ನಿಶ್ಚಯಃ|
12021010c ಅದ್ರೋಹೇಣೈವ ಭೂತಾನಾಂ ಯೋ ಧರ್ಮಃ ಸ ಸತಾಂ ಮತಃ||

ಇವೆಲ್ಲವನ್ನೂ ಚೆನ್ನಾಗಿ ಅವಲೋಕಿಸಿ ವಿದ್ವಾಂಸರು ಈ ನಿರ್ಣಯಕ್ಕೆ
ಬಂದಿರುತ್ತಾರೆ. ಇರುವ ಯಾವುದರ ಕುರಿತೂ
ದ್ರೋಹವನ್ನೆಸಗದಿರುವುದೇ ಧರ್ಮವೆಂದು ಸತ್ಯವಂತರ
ಅಭಿಪ್ರಾಯವಾಗಿದೆ.

12021011a ಅದ್ರೋಹಃ ಸತ್ಯವಚನಂ ಸಂವಿಭಾಗೋ ಧೃತಿಃ ಕ್ಷಮಾ|
12021011c ಪ್ರಜನಃ ಸ್ವೇಷು ದಾರೇಷು ಮಾರ್ದವಂ ಹ್ರೀರಚಾಪಲಮ್||

ಯಾರಿಗೂ ದ್ರೋಹಮಾಡದಿರುವುದು, ಸತ್ಯವನ್ನೇ ಹೇಳುವುದು,
ಎಲ್ಲವಕ್ಕೂ ಯಥಾಯೋಗ್ಯವಾದ ಭಾಗಗಳನ್ನು ನೀಡುವುದು, ದಯೆ,
ಕ್ಷಮೆ, ತನ್ನ ಪತ್ನಿಯರಲ್ಲಿ ಮಕ್ಕಳನ್ನು ಪಡೆಯುವುದು, ಮೃದುಸ್ವಭಾವ,

ನಾಚಿಕೆ ಮತ್ತು ಚಾಪಲ್ಯಗಳನ್ನು[37] ತೊರೆದಿರುವುದು ಇವೇ ಧರ್ಮ.

12021012a ಧನಂ ಧರ್ಮಪ್ರಧಾನೇಷ್ಟಂ ಮನುಃ ಸ್ವಾಯಂಭುವೋಽಬ್ರವೀತ್|
12021012c ತಸ್ಮಾದೇವಂ ಪ್ರಯತ್ನೇನ ಕೌಂತೇಯ ಪರಿಪಾಲಯ||

ಧನವೇ ಧರ್ಮಕ್ಕೆ ಪ್ರಧಾನವಾದುದು ಎಂದು ಸ್ವಾಯಂಭು ಮನುವೇ ಹೇಳಿದ್ದಾನೆ. ಕೌಂತೇಯ! ಆದುದರಿಂದ ನೀನು ಅದನ್ನೇ ಪರಿಪಾಲಿಸು.

12021013a ಯೋ ಹಿ ರಾಜ್ಯೇ ಸ್ಥಿತಃ ಶಶ್ವದ್ವಶೀ ತುಲ್ಯಪ್ರಿಯಾಪ್ರಿಯಃ|
12021013c ಕ್ಷತ್ರಿಯೋ ಯಜ್ಞಶಿಷ್ಟಾಶೀ ರಾಜಶಾಸ್ತ್ರಾರ್ಥತತ್ತ್ವವಿತ್||
12021014a ಅಸಾಧುನಿಗ್ರಹರತಃ ಸಾಧೂನಾಂ ಪ್ರಗ್ರಹೇ ರತಃ|
12021014c ಧರ್ಮೇ ವರ್ತ್ಮನಿ ಸಂಸ್ಥಾಪ್ಯ ಪ್ರಜಾ ವರ್ತೇತ ಧರ್ಮವಿತ್||
12021015a ಪುತ್ರಸಂಕ್ರಾಮಿತಶ್ರೀಸ್ತು ವನೇ ವನ್ಯೇನ ವರ್ತಯನ್|
12021015c ವಿಧಿನಾ ಶ್ರಾಮಣೇನೈವ ಕುರ್ಯಾತ್ಕಾಲಮತಂದ್ರಿತಃ||
12021016a ಯ ಏವಂ ವರ್ತತೇ ರಾಜಾ ರಾಜಧರ್ಮವಿನಿಶ್ಚಿತಃ|

ರಾಜ್ಯಸಿಂಹಾಸನಾರೂಢನಾಗಿ ಯಾವ ರಾಜನು ಇಂದ್ರಿಯಗಳನ್ನು ವಶಪಡಿಸಿಕೊಂಡು, ಪ್ರಿಯ-ಅಪ್ರಿಯಗಳನ್ನು ಸಮಾನವಾಗಿ ಕಾಣುತ್ತಾ, ಯಜ್ಞಗಳನ್ನು ಯಾಜಿಸಿ ವಿಘಸಗಳನ್ನು ಭುಂಜಿಸುತ್ತಾ, ರಾಜನೀತಿಯ ಅರ್ಥವನ್ನು ತತ್ತ್ವಶಃ ತಿಳಿದುಕೊಂಡು, ದುಷ್ಟರನ್ನು ಶಿಕ್ಷಿಸುವುದರಲ್ಲಿಯೂ ಶಿಷ್ಟರನ್ನು ರಕ್ಷಿಸುವುದರಲ್ಲಿಯೂ ನಿರತನಾಗಿದ್ದುಕೊಂಡು, ತಾನೂ ಧರ್ಮದಲ್ಲಿ ನಡೆದುಕೊಂಡಿದ್ದು ಪ್ರಜೆಗಳನ್ನೂ ಧರ್ಮವಿದರನ್ನಾಗಿಸಿ ಧರ್ಮದಲ್ಲಿ ನಡೆದುಕೊಳ್ಳುವಂತೆ ಮಾಡಿ, ಮುಪ್ಪಿನಲ್ಲಿ ಸಂಪತ್ತನ್ನು ಪುತ್ರನಿಗಿತ್ತು ವನದಲ್ಲಿ

[37] ಜಿಹ್ವಾ ಚಾಪಲ್ಯ, ದೃಷ್ಟಿ ಚಾಪಲ್ಯ, ಶ್ರವಣಚಾಪಲ್ಯ, ಸ್ಪರ್ಶಚಾಪಲ್ಯ

ವಾನಪ್ರಸ್ಥಾಶ್ರಮದಲ್ಲಿ ಇದ್ದು, ಅರಣ್ಯದಲ್ಲಿಯೂ ವಿಧಿವತ್ತಾಗಿ ಶಾಸ್ತ್ರಗಳ ಶ್ರವಣ ಮತ್ತು ಕರ್ಮಗಳನ್ನು ಮಾಡುತ್ತಿರುವುದು – ಈ ರೀತಿ ನಡೆದುಕೊಳ್ಳುವವನನ್ನು ರಾಜಧರ್ಮದಲ್ಲಿರುವವನು ಎಂದು ನಿಶ್ಚಯಿಸಿದ್ದಾರೆ.

12021016c ತಸ್ಯಾಯಂ ಚ ಪರಶ್ಚೈವ ಲೋಕಃ ಸ್ಯಾತ್ಸಫಲೋ ನೃಪ||
12021016e ನಿರ್ವಾಣಂ ತು ಸುದುಷ್ಪಾರಂ ಬಹುವಿಘ್ನಂ ಚ ಮೇ ಮತಮ್||

ನೃಪ! ಇಂಥವನಿಗೆ ಇಹ-ಪರಗಳೆರಡರಲ್ಲೂ ಶುಭ ಫಲಗಳೇ ದೊರಕುತ್ತವೆ. ಸಂನ್ಯಾಸವು ಬಹಳ ಕಷ್ಟಕರವಾದುದು ಮತ್ತು ಬಹು ವಿಘ್ನಗಳಿಂದ ಕೂಡಿದುದು ಎಂದು ನನ್ನ ಅಭಿಪ್ರಾಯ.

12021017a ಏವಂ ಧರ್ಮಮನುಕ್ರಾಂತಾಃ ಸತ್ಯದಾನತಪಃಪರಾಃ|
12021017c ಆನೃಶಂಸ್ಯಗುಣೈರ್ಯುಕ್ತಾಃ ಕಾಮಕ್ರೋಧವಿವರ್ಜಿತಾಃ||
12021018a ಪ್ರಜಾನಾಂ ಪಾಲನೇ ಯುಕ್ತಾ ದಮಮುತ್ತಮಮಾಸ್ಥಿತಾಃ|
12021018c ಗೋಬ್ರಾಹ್ಮಣಾರ್ಥಂ ಯುದ್ಧೇನ ಸಂಪ್ರಾಪ್ತಾ ಗತಿಮುತ್ತಮಾಮ್||

ಹೀಗೆ ಧರ್ಮಾನುಸರಣೆಯನ್ನು ಮಾಡುವ, ಸತ್ಯನಿಷ್ಠರಾದ, ದಾನಶೀಲರಾದ, ತಪೋನಿರತರಾದ, ದಯೆಯೇ ಮುಂತಾದ ಸದ್ಗುಣಗಳಿಂದ ಪರಿಪೂರ್ಣರಾದ, ಕಾಮ-ಕ್ರೋಧಗಳನ್ನು ಸಂಪೂರ್ಣವಾಗಿ ವರ್ಜಿಸಿ ಪ್ರಜೆಗಳ ಪಾಲನೆಯಲ್ಲಿಯೇ ನಿರತರಾದ, ಶ್ರೇಷ್ಠ ಧರ್ಮವನ್ನಾಶ್ರಯಿಸಿರುವ ರಾಜರು ಗೋ-ಬ್ರಾಹ್ಮಣರ ಸಲುವಾಗಿಯೇ ಯುದ್ಧಮಾಡುತ್ತಾ ಅವಸಾನಾನಂತರದಲ್ಲಿ ಸದ್ಗತಿಯನ್ನು ಹೊಂದುತ್ತಾರೆ.

12021019a ಏವಂ ರುದ್ರಾಃ ಸವಸವಸ್ತಥಾದಿತ್ಯಾಃ ಪರಂತಪ|

12021019c ಸಾಧ್ಯಾ ರಾಜರ್ಷಿಸಂಘಾಶ್ಚ ಧರ್ಮಮೇತಂ ಸಮಾಶ್ರಿತಾಃ||
12021019e ಅಪ್ರಮತ್ತಾಸ್ತತಃ ಸ್ವರ್ಗಂ ಪ್ರಾಪ್ತಾಃ ಪುಣ್ಯೈಃ ಸ್ವಕರ್ಮಭಿಃ||

ಪರಂತಪ! ರುದ್ರರೂ, ವಸುಗಳೂ, ಆದಿತ್ಯರೂ, ಸಾಧ್ಯರೂ, ಅನೇಕ ರಾಜರ್ಷಿಗಳೂ ಅಪ್ರಮತ್ತರಾಗಿ ಇದೇ ಧರ್ಮವನ್ನಾಶ್ರಯಿಸಿ ತಮ್ಮ ತಮ್ಮ ಪುಣ್ಯ ಕರ್ಮಗಳಿಂದ ಸ್ವರ್ಗಲೋಕವನ್ನು ಪಡೆದುಕೊಂಡಿರುವರು.""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ದೇವಸ್ಥಾನವಾಕ್ಯೇ ಏಕವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ದೇವಸ್ಥಾನವಾಕ್ಯ ಎನ್ನುವ ಇಪ್ಪತ್ತೊಂದನೇ ಅಧ್ಯಾಯವು.

೨೨

ಅರ್ಜುನವಾಕ್ಯ

ಅರ್ಜುನನು ಕ್ಷತ್ರಿಯ ಧರ್ಮವನ್ನು ಪ್ರಶಂಸಿಸುತ್ತಾ ಪುನಃ ಯುಧಿಷ್ಠಿರನಿಗೆ ತಿಳಿಯ ಹೇಳುವುದು (1-15).

12022001 ವೈಶಂಪಾಯನ ಉವಾಚ|
12022001a ತಸ್ಮಿನ್ವಾಕ್ಯಾಂತರೇ ವಾಕ್ಯಂ ಪುನರೇವಾರ್ಜುನೋಽಬ್ರವೀತ್|
12022001c ವಿಷಣ್ಣಮನಸಂ ಜ್ಯೇಷ್ಠಮಿದಂ ಭ್ರಾತರಮೀಶ್ವರಮ್||

ವೈಶಂಪಾಯನನು ಹೇಳಿದನು: "ಈ ಮಧ್ಯದಲ್ಲಿ ಅರ್ಜುನನು ಖಿನ್ನಮನಸ್ಕನಾಗಿದ ಹಿರಿಯಣ್ಣ ರಾಜನಿಗೆ ಪುನಃ ಈ

ಮಾತನ್ನಾಡಿದನು:

12022002a ಕ್ಷತ್ರಧರ್ಮೇಣ ಧರ್ಮಜ್ಞ ಪ್ರಾಪ್ಯ ರಾಜ್ಯಮನುತ್ತಮಮ್|
12022002c ಜಿತ್ವಾ ಚಾರೀನ್ನರಶ್ರೇಷ್ಠ ತಪ್ಯತೇ ಕಿಂ ಭವಾನ್ಭೃಶಮ್||

"ಧರ್ಮಜ್ಞ! ನರಶ್ರೇಷ್ಠ! ಕ್ಷತ್ರಧರ್ಮದಿಂದ ಈ ಅನುತ್ತಮ ರಾಜ್ಯವನ್ನು ಪಡೆದೂ ಮತ್ತು ಶತ್ರುಗಳನ್ನು ಗೆದ್ದೂ ಕೂಡ ನೀನು ಏಕೆ ಹೀಗೆ ತುಂಬಾ ಪರಿತಪಿಸುತ್ತಿರುವೆ?

12022003a ಕ್ಷತ್ರಿಯಾಣಾಂ ಮಹಾರಾಜ ಸಂಗ್ರಾಮೇ ನಿಧನಂ ಸ್ಮೃತಮ್|
12022003c ವಿಶಿಷ್ಟಂ ಬಹುಭಿರ್ಯಜ್ಞೈಃ ಕ್ಷತ್ರಧರ್ಮಮನುಸ್ಮರ||

ಮಹಾರಾಜ! ಕ್ಷತ್ರಿಯ ಧರ್ಮವೇನು ಎನ್ನುವುದನ್ನು ನೆನಪಿಸಿಕೋ! ಅನೇಕ ಯಜ್ಞಗಳನ್ನು ಮಾಡುವುದಕ್ಕಿಂತಲೂ ಕ್ಷತ್ರಿಯರಿಗೆ ಸಂಗ್ರಾಮದಲ್ಲಿ ನಿಧನವೇ ವಿಶಿಷ್ಠವಾದುದು.

12022004a ಬ್ರಾಹ್ಮಣಾನಾಂ ತಪಸ್ತ್ಯಾಗಃ ಪ್ರೇತ್ಯಧರ್ಮವಿಧಿಃ ಸ್ಮೃತಃ|
12022004c ಕ್ಷತ್ರಿಯಾಣಾಂ ಚ ವಿಹಿತಂ ಸಂಗ್ರಾಮೇ ನಿಧನಂ ವಿಭೋ||

ಬ್ರಾಹ್ಮಣರಿಗೆ ತಪಸ್ಸು ಮತ್ತು ತ್ಯಾಗ ಇವೇ ಮರಣಾನಂತರ ಪುಣ್ಯಲೋಕಗಳನ್ನು ನೀಡುವ ಧರ್ಮವಿಧಿಯೆಂದು ಹೇಳಿದ್ದಾರೆ. ಪ್ರಭೋ! ಕ್ಷತ್ರಿಯರಿಗೆ ಸಂಗ್ರಾಮದಲ್ಲಿ ನಿಧನವು ವಿಹಿತವಾದುದು.

12022005a ಕ್ಷತ್ರಧರ್ಮೋ ಮಹಾರೌದ್ರಃ ಶಸ್ತ್ರನಿತ್ಯ ಇತಿ ಸ್ಮೃತಃ|
12022005c ವಧಶ್ಚ ಭರತಶ್ರೇಷ್ಠ ಕಾಲೇ ಶಸ್ತ್ರೇಣ ಸಂಯುಗೇ||

ಭರತಶ್ರೇಷ್ಠ! ನಿತ್ಯವೂ ಶಸ್ತ್ರಧಾರಣೆಮಾಡಬೇಕಾದ, ಯುದ್ಧದಲ್ಲಿ ಸಮಯವೊದಗಿದಾಗ ಶಸ್ತ್ರಗಳಿಂದ ವಧೆಯನ್ನೂ ಮಾಡಬೇಕಾದ

ಕ್ಷತ್ರಧರ್ಮವನ್ನು ಮಹಾರೌದ್ರವಾದುದು ಎಂದು ಹೇಳುತ್ತಾರೆ.

12022006a ಬ್ರಾಹ್ಮಣಸ್ಯಾಪಿ ಚೇದ್ರಾಜನ್ ಕ್ಷತ್ರಧರ್ಮೇಣ ತಿಷ್ಠತಃ|
12022006c ಪ್ರಶಸ್ತಂ ಜೀವಿತಂ ಲೋಕೇ ಕ್ಷತ್ರಂ ಹಿ ಬ್ರಹ್ಮಸಂಸ್ಥಿತಮ್||

ರಾಜನ್! ಬ್ರಾಹ್ಮಣನಿಗೆ ಕೂಡ ಕ್ಷತ್ರಧರ್ಮಾನುಸಾರವಾಗಿ
ಜೀವಿಸುವುದು ಪ್ರಶಸ್ತವಾದುದೇ. ಏಕೆಂದರೆ ಲೋಕದಲ್ಲಿ
ಬ್ರಾಹ್ಮಣರಿಂದಲೇ ಕ್ಷತ್ರಿಯರು ಜನಿಸಿದ್ದುದು.

12022007a ನ ತ್ಯಾಗೋ ನ ಪುನರ್ಯಾಚ್ಞೋ ನ ತಪೋ ಮನುಜೇಶ್ವರ|
12022007c ಕ್ಷತ್ರಿಯಸ್ಯ ವಿಧೀಯಂತೇ ನ ಪರಸ್ವೋಪಜೀವನಮ್||

ಮನುಜೇಶ್ವರ! ಕ್ಷತ್ರಿಯನಿಗೆ ತ್ಯಾಗ, ನಂತರ ಯಾಚನೆ ಮತ್ತು
ತಪಸ್ಸುಗಳು ಹಾಗು ಇತರರ ಸ್ವತ್ತಿನಿಂದ ಜೀವನ ನಿರ್ವಹಣೆ ಇವು
ವಿಹಿತವಾಗಿಲ್ಲ.

12022008a ಸ ಭವಾನ್ಸರ್ವಧರ್ಮಜ್ಞಃ ಸರ್ವಾತ್ಮಾ ಭರತರ್ಷಭ|
12022008c ರಾಜಾ ಮನೀಷೀ ನಿಪುಣೋ ಲೋಕೇ ದೃಷ್ಟಪರಾವರಃ||

ಭರತರ್ಷಭ! ರಾಜಾ! ಸರ್ವಾತ್ಮನಾಗಿರುವ ನೀನು
ಸರ್ವಧರ್ಮಗಳನ್ನೂ ತಿಳಿದಿರುವೆ. ಲೋಕದಲ್ಲಿ ನೀನು
ಶ್ರೇಷ್ಠವಾದವುಗಳನ್ನು ಮತ್ತು ಶ್ರೇಷ್ಠವಲ್ಲದವುಗಳನ್ನು ಚೆನ್ನಾಗಿ
ತಿಳಿದುಕೊಂಡಿರುವೆ.

12022009a ತ್ಯಕ್ತ್ವಾ ಸಂತಾಪಜಂ ಶೋಕಂ ದಂಶಿತೋ ಭವ ಕರ್ಮಣಿ|
12022009c ಕ್ಷತ್ರಿಯಸ್ಯ ವಿಶೇಷೇಣ ಹೃದಯಂ ವಜ್ರಸಂಹತಮ್||

ಸಂತಾಪದಿಂದ ಹುಟ್ಟಿರುವ ಶೋಕವನ್ನು ತ್ಯಜಿಸಿ ಮಾಡಬೇಕಾದ

ಕರ್ಮಗಳ ಕವಚವನ್ನು ತೊಡು। ಕ್ಷತ್ರಿಯನ ಹೃದಯವು ವಿಶೇಷವಾಗಿ ವಜ್ರದಂತೆ ಕಠಿಣವಾದುದೆಂದು ಹೇಳುತ್ತಾರೆ.

12022010a ಜಿತ್ವಾರೀನ್ ಕ್ಷತ್ರಧರ್ಮೇಣ ಪ್ರಾಪ್ಯ ರಾಜ್ಯಮಕಂಟಕಮ್।
12022010c ವಿಜಿತಾತ್ಮಾ ಮನುಷ್ಯೇಂದ್ರ ಯಜ್ಞದಾನಪರೋ ಭವ॥

ಮನುಷ್ಯೇಂದ್ರ। ಕ್ಷತ್ರಧರ್ಮದಿಂದ ಶತ್ರುಗಳನ್ನು ಗೆದ್ದು, ಕಂಟಕಗಳಿಲ್ಲದ ರಾಜ್ಯವನ್ನು ಪಡೆದು ವಿಜಿತಾತ್ಮನಾಗಿ ಯಜ್ಞದಾನಪರನಾಗಿರು.

12022011a ಇಂದ್ರೋ ವೈ ಬ್ರಹ್ಮಣಃ ಪುತ್ರಃ ಕರ್ಮಣಾ ಕ್ಷತ್ರಿಯೋಽಭವತ್।
12022011c ಜ್ಞಾತೀನಾಂ ಪಾಪವೃತ್ತೀನಾಂ ಜಘಾನ ನವತೀರ್ನವ॥

ಬ್ರಾಹ್ಮಣ ಪುತ್ರನಾಗಿದ್ದ ಇಂದ್ರನು ತನ್ನ ಕರ್ಮಗಳಿಂದ ಕ್ಷತ್ರಿಯನಾದನು. ಪಾಪವೃತ್ತಿಗಳಲ್ಲಿ ತೊಡಗಿದ್ದ ಎಂಟುನೂರಾಹತ್ತು ಜ್ಞಾತಿಬಾಂಧವರನ್ನು ಸಂಹರಿಸಿದನು.

12022012a ತಚ್ಚಾಸ್ಯ ಕರ್ಮ ಪೂಜ್ಯಂ ಹಿ ಪ್ರಶಸ್ಯಂ ಚ ವಿಶಾಂ ಪತೇ।
12022012c ತೇನ ಚೇಂದ್ರತ್ವಮಾಪೇದೇ ದೇವಾನಾಮಿತಿ ನಃ ಶ್ರುತಮ್॥

ವಿಶಾಂಪತೇ। ಅವನ ಆ ಕರ್ಮವನ್ನು ಗೌರವಿಸುತ್ತಾರೆ ಮತ್ತು ಪ್ರಶಂಸಿಸುತ್ತಾರೆ. ಅದರಿಂದಲೇ ಅವನಿಗೆ ದೇವತೆಗಳ ಇಂದ್ರತ್ವವು ದೊರಕಿತೆಂದು ನಾವು ಕೇಳಿದ್ದೇವೆ.

12022013a ಸ ತ್ವಂ ಯಜ್ಞೈರ್ಮಹಾರಾಜ ಯಜಸ್ವ ಬಹುದಕ್ಷಿಣೈಃ।
12022013c ಯಥೈವೇಂದ್ರೋ ಮನುಷ್ಯೇಂದ್ರ ಚಿರಾಯ ವಿಗತಜ್ವರಃ॥

ಮನುಷ್ಯೇಂದ್ರ। ಮಹಾರಾಜ। ನೀನೂ ಕೂಡ ಇಂದ್ರನಂತೆ ಬಹುದಕ್ಷಿಣೆಗಳಿಂದ ಯುಕ್ತವಾದ ಯಜ್ಞಗಳನ್ನು ಮಾಡಿ ಬಹುಕಾಲ

ನಿಶ್ಚಿಂತನಾಗಿರು.

12022014a ಮಾ ತ್ವಮೇವಂಗತೇ ಕಿಂ ಚಿತ್ ಕ್ಷತ್ರಿಯರ್ಷಭ ಶೋಚಿಥಾಃ|
12022014c ಗತಾಸ್ತೇ ಕ್ಷತ್ರಧರ್ಮೇಣ ಶಸ್ತ್ರಪೂತಾಃ ಪರಾಂ ಗತಿಮ್||

ಕ್ಷತ್ರಿಯರ್ಷಭ! ಹೀಗೆ ಹಿಂದೆಯೂ ನಡೆದುಹೋಗಿದ್ದುದರಿಂದ ನೀನು ಸ್ವಲ್ಪವೂ ಶೋಕಿಸಬೇಕಾಗಿಲ್ಲ. ಕ್ಷತ್ರಧರ್ಮಾನುಸಾರವಾಗಿ ಶಸ್ತ್ರಗಳಿಂದ ಪವಿತ್ರರಾದ ಅವರು ಪರಮ ಗತಿಯನ್ನು ಹೊಂದಿದ್ದಾರೆ.

12022015a ಭವಿತವ್ಯಂ ತಥಾ ತಚ್ಚ ಯದ್ವೃತ್ತಂ ಭರತರ್ಷಭ|
12022015c ದಿಷ್ಟಂ ಹಿ ರಾಜಶಾರ್ದೂಲ ನ ಶಕ್ಯಮತಿವರ್ತಿತುಮ್||

ಭರತರ್ಷಭ! ಈಗ ನಡೆದುಹೋದುದು ಹಾಗೆಯೇ ಆಗಬೇಕಾಗಿತ್ತು. ರಾಜಶಾರ್ದೂಲ! ದೈವದ ನಿಯಮವನ್ನು ಉಲ್ಲಂಘಿಸಿ ನಡೆಯಲು ಯಾರಿಂದಲೂ ಸಾಧ್ಯವಿಲ್ಲ!””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಅರ್ಜುನವಾಕ್ಯೇ ದ್ವಾವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಅರ್ಜುನವಾಕ್ಯ ಎನ್ನುವ ಇಪ್ಪತ್ತೆರಡನೇ ಅಧ್ಯಾಯವು.

೨೩[38]

[38] ಗೀತಾ ಪ್ರೆಸ್ ನಲ್ಲಿ ಈ ಅಧ್ಯಾಯ ಮತ್ತು ಮುಂದಿನ ಅಧ್ಯಾಯಗಳನ್ನು ಸೇರಿಸಿ ಒಂದೇ ಅಧ್ಯಾಯದಲ್ಲಿ ಶಂಖ-ಲಿಖಿತರ ಆಖ್ಯಾನವನ್ನು ಕೊಟ್ಟಿದ್ದಾರೆ.

ವ್ಯಾಸವಾಕ್ಯ

ವ್ಯಾಸನು ಯುಧಿಷ್ಠಿರನಿಗೆ ರಾಜಾ ಸುದ್ಯುಮ್ನನ ದಂಡಧರ್ಮಪಾಲನೆಯ ಮಹತ್ತ್ವವನ್ನು ತಿಳಿಸಿದುದು (1-15).

12023001 ವೈಶಂಪಾಯನ ಉವಾಚ|
12023001a ಏವಮುಕ್ತಸ್ತು ಕೌಂತೇಯೋ ಗುಡಾಕೇಶೇನ ಭಾರತ|
12023001c ನೋವಾಚ ಕಿಂ ಚಿತ್ಕೌರವ್ಯಸ್ತತೋ ದ್ವೈಪಾಯನೋಽಬ್ರವೀತ್||

ವೈಶಂಪಾಯನನು ಹೇಳಿದನು: "ಭಾರತ! ಕೌಂತೇಯ ಗುಡಾಕೇಶನು ಹೀಗೆ ಹೇಳಲು ಕೌರವ್ಯನು ಏನನ್ನೂ ಮಾತನಾಡಲಿಲ್ಲ. ಆಗ ದ್ವೈಪಾಯನನು ಹೇಳಿದನು:

12023002a ಬೀಭತ್ಸೋರ್ವಚನಂ ಸಮ್ಯಕ್ಸತ್ಯಮೇತದ್ಯುಧಿಷ್ಠಿರ|
12023002c ಶಾಸ್ತ್ರದೃಷ್ಟಃ ಪರೋ ಧರ್ಮಃ ಸ್ಮೃತೋ ಗಾರ್ಹಸ್ಥ್ಯ ಆಶ್ರಮಃ||

"ಯುಧಿಷ್ಠಿರ! ಬೀಭತ್ಸುವಿನ ಮಾತು ಸತ್ಯ. ಗೃಹಸ್ಥಾಶ್ರಮವು ಶಾಸ್ತ್ರ-ಸ್ಮೃತಿಗಳಲ್ಲಿ ತೋರಿಸಿಕೊಟ್ಟಿರುವ ಪರಮ ಧರ್ಮವು.

12023003a ಸ್ವಧರ್ಮಂ ಚರ ಧರ್ಮಜ್ಞ ಯಥಾಶಾಸ್ತ್ರಂ ಯಥಾವಿಧಿ|
12023003c ನ ಹಿ ಗಾರ್ಹಸ್ಥ್ಯಮುತ್ಸೃಜ್ಯ ತವಾರಣ್ಯಂ ವಿಧೀಯತೇ||

ಧರ್ಮಜ್ಞ! ಶಾಸ್ತ್ರಗಳಲ್ಲಿರುವಂತೆ ಯಥಾವಿಧಿಯಾಗಿ ಸ್ವಧರ್ಮದಲ್ಲಿ ನಡೆದುಕೋ. ಗೃಹಸ್ಥಧರ್ಮವನ್ನು ತ್ಯಜಿಸಿ ಅರಣ್ಯವನ್ನು ಸೇರುವುದು ನಿನಗೆ ವಿಹಿತವಾದುದಲ್ಲ.

12023004a ಗೃಹಸ್ಥಂ ಹಿ ಸದಾ ದೇವಾಃ ಪಿತರ ಋಷಯಸ್ತಥಾ|

12023004c ಭೃತ್ಯಾಶ್ಚೈವೋಪಜೀವಂತಿ ತಾನ್ಭಜಸ್ವ ಮಹೀಪತೇ॥

ಮಹೀಪತೇ! ದೇವತೆಗಳು, ಪಿತೃಗಳು, ಋಷಿಗಳು ಮತ್ತು ಸೇವಕರು ಗೃಹಸ್ಥರನ್ನೇ ಆಶ್ರಯಿಸಿ ಉಪಜೀವನ ಮಾಡುತ್ತಾರೆ. ಆದುದರಿಂದ ನೀನು ಅವರ ಭರಣ-ಪೋಷಣೆಯನ್ನು ಮಾಡು.

12023005a ವಯಾಂಸಿ ಪಶವಶ್ಚೈವ ಭೂತಾನಿ ಚ ಮಹೀಪತೇ|
12023005c ಗೃಹಸ್ಥೈರೇವ ಧಾರ್ಯಂತೇ ತಸ್ಮಾಜ್ಜ್ಯೇಷ್ಠಾಶ್ರಮೋ ಗೃಹೀ॥

ಮಹೀಪತೇ! ಪಶು-ಪಕ್ಷಿಗಳು ಮತ್ತು ಇತರ ಪ್ರಾಣಿಗಳು ಗೃಹಸ್ಥರನ್ನೇ ಅವಲಂಬಿಸಿವೆ. ಆದುದರಿಂದ ಗೃಹಸ್ಥಾಶ್ರಮವೇ ಹಿರಿದಾದುದು.

12023006a ಸೋಽಯಂ ಚತುರ್ಣಾಮೇತೇಷಾಮಾಶ್ರಮಾಣಾಂ ದುರಾಚರಃ|
12023006c ತಂ ಚರಾವಿಮನಾಃ ಪಾರ್ಥ ದುಶ್ಚರಂ ದುರ್ಬಲೇಂದ್ರಿಯೈಃ॥

ಪಾರ್ಥ! ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮದ ಆಚರಣೆಯು ಅತ್ಯಂತ ಕಠಿಣವಾದುದು. ದುರ್ಬಲ ಇಂದ್ರಿಯಗಳಿರುವವರಿಗೆ ಕಷ್ಟಕರವಾದ ಗೃಹಸ್ಥಾಶ್ರಮವನ್ನು ವಿಮನಸ್ಕನಾಗಿ ನೀನು ಪಾಲಿಸು!

12023007a ವೇದಜ್ಞಾನಂ ಚ ತೇ ಕೃತ್ಸ್ನಂ ತಪಶ್ಚ ಚರಿತಂ ಮಹತ್|
12023007c ಪಿತೃಪೈತಾಮಹೇ ರಾಜ್ಯೇ ಧುರಮುದ್ಧೋಢುಮರ್ಹಸಿ॥

ನಿನ್ನಲ್ಲಿ ಸಂಪೂರ್ಣ ವೇದಜ್ಞಾನವಿದೆ. ಮಹಾ ತಪಸ್ಸನ್ನೂ ತಪಿಸಿದ್ದೀಯೆ. ಪಿತೃ-ಪಿತಾಮಹರ ಈ ರಾಜ್ಯದ ಭಾರವನ್ನು ನೀನು ಹೊರಬಲ್ಲೆ!

12023008a ತಪೋ ಯಜ್ಞಸ್ತಥಾ ವಿದ್ಯಾ ಭೈಕ್ಷಮಿಂದ್ರಿಯನಿಗ್ರಹಃ|
12023008c ಧ್ಯಾನಮೇಕಾಂತಶೀಲತ್ವಂ ತುಷ್ಟಿರ್ದಾನಂ ಚ ಶಕ್ತಿತಃ॥

12023009a ಬ್ರಾಹ್ಮಣಾನಾಂ ಮಹಾರಾಜ ಚೇಷ್ಟಾಃ ಸಂಸಿದ್ಧಿಕಾರಿಕಾಃ|

ಮಹಾರಾಜ! ತಪಸ್ಸು, ಯಜ್ಞ, ವಿದ್ಯೆ, ಭಿಕ್ಷಾಟನೆ, ಇಂದ್ರಿಯನಿಗ್ರಹ, ಧ್ಯಾನ. ಏಕಾಂತಶೀಲತ್ವ, ತೃಪ್ತಿ, ಶಕ್ತಿಯಿದ್ದಷ್ಟು ದಾನ – ಇವು ಬ್ರಾಹ್ಮಣರಿಗೆ ಸಿದ್ಧಿಯನ್ನು ನೀಡುವ ಕ್ರಿಯೆಗಳು.

12023009c ಕ್ಷತ್ರಿಯಾಣಾಂ ಚ ವಕ್ಷ್ಯಾಮಿ ತವಾಪಿ ವಿದಿತಂ ಪುನಃ||
12023010a ಯಜ್ಞೋ ವಿದ್ಯಾ ಸಮುತ್ಥಾನಮಸಂತೋಷಃ ಶ್ರಿಯಂ ಪ್ರತಿ|
12023010c ದಂಡಧಾರಣಮತ್ಯುಗ್ರಂ ಪ್ರಜಾನಾಂ ಪರಿಪಾಲನಮ್||
12023011a ವೇದಜ್ಞಾನಂ ತಥಾ ಕೃತ್ಸ್ನಂ ತಪಃ ಸುಚರಿತಂ ತಥಾ|
12023011c ದ್ರವಿಣೋಪಾರ್ಜನಂ ಭೂರಿ ಪಾತ್ರೇಷು ಪ್ರತಿಪಾದನಮ್||
12023012a ಏತಾನಿ ರಾಜ್ಞಾಂ ಕರ್ಮಾಣಿ ಸುಕೃತಾನಿ ವಿಶಾಂ ಪತೇ|
12023012c ಇಮಂ ಲೋಕಮಮುಂ ಲೋಕಂ ಸಾಧಯಂತೀತಿ ನಃ ಶ್ರುತಮ್||

ನಿನಗೆ ತಿಳಿದಿದ್ದರೂ ಕ್ಷತ್ರಿಯರು ಏನು ಮಾಡಬೇಕು ಎನ್ನುವುದನ್ನು ಹೇಳುತ್ತೇನೆ. ವಿಶಾಂಪತೇ! ಯಜ್ಞ, ವಿದ್ಯಾಭ್ಯಾಸ, ಶತ್ರುಗಳ ಮೇಲೆ ಆಕ್ರಮಣ ಮಾಡುವುದು, ಸಂಪತ್ತಿನ ಕುರಿತು ಅಸಂತೋಷದಿಂದಿರುವುದು, ದಂಡಧಾರಣ, ಉಗ್ರತೆ, ಪ್ರಜೆಗಳ ಪರಿಪಾಲನೆ, ಸಂಪೂರ್ಣ ವೇದಜ್ಞಾನ, ತಪಸ್ಸು, ಸದಾಚಾರ, ಅಪಾರ ಐಶ್ವರ್ಯವನ್ನು ಗಳಿಸುವುದು, ಸತ್ಪಾತ್ರರಲ್ಲಿ ದಾನಮಾಡುವುದು – ಇವು ರಾಜರು ಮಾಡುವ ಪುಣ್ಯ ಕರ್ಮಗಳು. ಇವುಗಳನ್ನು ಮಾಡುವ ರಾಜರು ಇಹ-ಪರಗಳೆರಡನ್ನೂ ಸಾಧಿಸುತ್ತಾರೆಂದು ಕೇಳಿದ್ದೇವೆ.

12023013a ತೇಷಾಂ ಜ್ಯಾಯಸ್ತು ಕೌಂತೇಯ ದಂಡಧಾರಣಮುಚ್ಯತೇ|
12023013c ಬಲಂ ಹಿ ಕ್ಷತ್ರಿಯೇ ನಿತ್ಯಂ ಬಲೇ ದಂಡಃ ಸಮಾಹಿತಃ||

ಕೌಂತೇಯ! ಇವುಗಳಲ್ಲಿ ದಂಡಧಾರಣೆಯೇ ಶ್ರೇಷ್ಠವಾದುದೆಂದು ಹೇಳುತ್ತಾರೆ. ಕ್ಷತ್ರಿಯನಿಗೆ ಬಲವೇ ನಿತ್ಯ. ಬಲದಲ್ಲಿಯೇ ದಂಡವು ಸಮಾಹಿತವಾಗಿರುವುದು.

12023014a ಏತಾಶ್ಚೇಷ್ಟಾಃ ಕ್ಷತ್ರಿಯಾಣಾಂ ರಾಜನ್ಸಂಸಿದ್ಧಿಕಾರಿಕಾಃ|
12023014c ಅಪಿ ಗಾಥಾಮಿಮಾಂ ಚಾಪಿ ಬೃಹಸ್ಪತಿರಭಾಷತ||

ರಾಜನ್! ಈ ಶ್ರೇಷ್ಠ ಕರ್ಮಗಳು ಕ್ಷತ್ರಿಯರಿಗೆ ಸಂಸಿದ್ಧಿಕಾರಕಗಳು. ಇದರ ಕುರಿತು ಬೃಹಸ್ಪತಿಯು ಒಂದು ಗೀತೆಯನ್ನು ಹಾಡಿದ್ದಾನೆ:

12023015a ಭೂಮಿರೇತೌ ನಿಗಿರತಿ ಸರ್ಪೋ ಬಿಲಶಯಾನಿವ|
12023015c ರಾಜಾನಂ ಚಾವಿರೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್||

“ಸರ್ಪವು ಬಿಲದಲ್ಲಿರುವ ಇಲಿಗಳನ್ನು ನುಂಗುವಂತೆ ಭೂಮಿಯು ಶತ್ರುವನ್ನು ವಿರೋಧಿಸದೇ ಇರುವ ರಾಜನನ್ನೂ ದೇಶಪರ್ಯಟನೆಮಾಡದ ಬ್ರಾಹ್ಮಣನನ್ನೂ ನುಂಗಿಹಾಕುತ್ತದೆ!”

12023016a ಸುದ್ಯುಮ್ನಶ್ಚಾಪಿ ರಾಜರ್ಷಿಃ ಶ್ರೂಯತೇ ದಂಡಧಾರಣಾತ್|
12023016c ಪ್ರಾಪ್ತವಾನ್ಪರಮಾಂ ಸಿದ್ಧಿಂ ದಕ್ಷಃ ಪ್ರಾಚೇತಸೋ ಯಥಾ||

ರಾಜರ್ಷಿ ಸುದ್ಯುಮ್ನನೂ ಕೂಡ ದಂಡಧಾರಣೆಯಿಂದಾಗಿ ಪ್ರಾಚೇತಸ ದಕ್ಷನಂತೆ ಪರಮ ಸಿದ್ಧಿಯನ್ನು ಪಡೆದನೆಂದು ಕೇಳಿದ್ದೇವೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ವ್ಯಾಸವಾಕ್ಯೇ ತ್ರಯೋವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ವ್ಯಾಸವಾಕ್ಯ ಎನ್ನುವ ಇಪ್ಪತ್ಮೂರನೇ ಅಧ್ಯಾಯವು.

೨೪೪[39]

ಶಂಖ-ಲಿಖಿತೋಽಪಖ್ಯಾನ

ವ್ಯಾಸನು ಶಂಖ-ಲಿಖಿತರ ಕಥೆಯನ್ನು ಹೇಳಿ ಯುಧಿಷ್ಠಿರನಿಗೆ ರಾಜಧರ್ಮದಲ್ಲಿಯೇ ದೃಢನಾಗಿರಲು ಆಜ್ಞೆಯನ್ನು ನೀಡಿದುದು (1-30).

12024001 ಯುಧಿಷ್ಠಿರ ಉವಾಚ|
12024001a ಭಗವನ್ಕರ್ಮಣಾ ಕೇನ ಸುದ್ಯುಮ್ನೋ ವಸುಧಾಧಿಪಃ|
12024001c ಸಂಸಿದ್ಧಿಂ ಪರಮಾಂ ಪ್ರಾಪ್ತಃ ಶ್ರೋತುಮಿಚ್ಛಾಮಿ ತಂ ನೃಪಮ್||

ಯುಧಿಷ್ಠಿರನು ಹೇಳಿದನು: "ಭಗವನ್! ವಸುಧಾಧಿಪ ನೃಪ ಸುದ್ಯುಮ್ನನು ಯಾವ ಕರ್ಮದಿಂದ ಪರಮ ಸಂಸಿದ್ಧಿಯನ್ನು ಪಡೆದನು ಎನ್ನುವುದನ್ನು ಕೇಳಲು ಬಯಸುತ್ತೇನೆ."

12024002 ವ್ಯಾಸ ಉವಾಚ|
12024002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12024002c ಶಂಖಶ್ಚ ಲಿಖಿತಶ್ಚಾಸ್ತಾಂ ಭ್ರಾತರೌ ಸಂಯತವ್ರತೌ||

ವ್ಯಾಸನು ಹೇಳಿದನು: "ಈ ವಿಷಯದಲ್ಲಿ ಸಂಯತವ್ರತರಾಗಿದ್ದ ಶಂಖ ಮತ್ತು ಲಿಖಿತ ಎನ್ನುವ ಸಹೋದರರ ಪುರಾತನ ಇತಿಹಾಸವನ್ನು

---

[39] ಗೋರಖಪುರ ಸಂಪುಟದಲ್ಲಿ ಮತ್ತು ನೀಲಕಂಠೀಯದಲ್ಲಿ ಈ ಅಧ್ಯಾಯವನ್ನು ೨೩ನೇ ಅಧ್ಯಾಯಕ್ಕೇ ಸೇರಿಸಿದ್ದಾರೆ.

ಉದಾಹರಿಸುತ್ತಾರೆ.

12024003a ತಯೋರಾವಸಥಾವಾಸ್ತಾಂ ರಮಣೀಯೌ ಪೃಥಕ್ ಪೃಥಕ್|
12024003c ನಿತ್ಯಪುಷ್ಪಫಲೈರ್ವೃಕ್ಷೈರುಪೇತೌ ಬಾಹುದಾಮನು||

ಅವರಿಗೆ ಬಾಹುದಾನದಿಯ ತೀರದಲ್ಲಿ ನಿತ್ಯಪುಷ್ಪ-ಫಲಗಳ
ವೃಕ್ಷಗಳಿಂದ ತುಂಬಿದ್ದ ರಮಣೀಯವಾದ ಪ್ರತ್ಯೇಕ ಆಶ್ರಮಗಳಿದ್ದವು.

12024004a ತತಃ ಕದಾ ಚಿಲ್ಲಿಖಿತಃ ಶಂಖಸ್ಯಾಶ್ರಮಮಾಗಮತ್|
12024004c ಯದೃಚ್ಚಯಾಪಿ ಶಂಖೋಽಥ ನಿಷ್ಕ್ರಾಂತೋಽಭವದಾಶ್ರಮಾತ್||

ಹೀಗಿರಲು ಒಮ್ಮೆ ಲಿಖಿತನು ಶಂಖನ ಆಶ್ರಮಕ್ಕೆ ಬಂದನು.
ಅಕಸ್ಮಾತ್ತಾಗಿ ಅದೇ ಸಮದಲ್ಲಿ ಶಂಖನು ಆಶ್ರಮದ ಹೊರಗೆ
ಹೋಗಿದ್ದನು.

12024005a ಸೋಽಭಿಗಮ್ಯಾಶ್ರಮಂ ಭ್ರಾತುಃ ಶಂಖಸ್ಯ ಲಿಖಿತಸ್ತದಾ|
12024005c ಫಲಾನಿ ಶಾತಯಾಮಾಸ ಸಮ್ಯಕ್ಪರಿಣತಾನ್ಯುತ||

ಅಣ್ಣ ಶಂಖನ ಆಶ್ರಮಕ್ಕೆ ಬಂದು ಲಿಖಿತನು ಅಲ್ಲಿ ಚೆನ್ನಾಗಿ ಹಣ್ಣಾಗಿದ್ದ
ಫಲಗಳನ್ನು ವೃಕ್ಷದಿಂದ ಕೆಳಕ್ಕೆ ಬೀಳಿಸಿದನು.

12024006a ತಾನ್ಯುಪಾದಾಯ ವಿಸ್ರಬ್ಧೋ ಭಕ್ಷಯಾಮಾಸ ಸ ದ್ವಿಜಃ|
12024006c ತಸ್ಮಿಂಶ್ಚ ಭಕ್ಷಯತ್ಯೇವ ಶಂಖೋಽಪ್ಯಾಶ್ರಮಮಾಗಮತ್||

ಅವುಗಳನ್ನು ಒಟ್ಟುಹಾಕಿ ಒಂದೆಡೆಯಲ್ಲಿ ಕುಳಿತು ಆ ದ್ವಿಜನು
ನಿಶ್ಚಿಂತೆಯಿಂದ ತಿನ್ನುತ್ತಿದ್ದನು. ಅವುಗಳನ್ನು ತಿನ್ನುತ್ತಿರುವಾಗಲೇ
ಶಂಖನು ಆಶ್ರಮಕ್ಕೆ ಹಿಂದಿರುಗಿದನು.

12024007a ಭಕ್ಷಯಂತಂ ತು ತಂ ದೃಷ್ಟ್ವಾ ಶಂಖೋ ಭ್ರಾತರಮಬ್ರವೀತ್|

12024007c ಕುತಃ ಫಲಾನ್ಯವಾಪ್ತಾನಿ ಹೇತುನಾ ಕೇನ ಖಾದಸಿ||

ಹಣ್ಣುಗಳನ್ನು ತಿನ್ನುತ್ತಿರುವ ಅವನನ್ನು ನೋಡಿ ಶಂಖನು "ಈ
ಹಣ್ಣುಗಳು ಎಲ್ಲಿ ದೊರಕಿದವು? ಏಕೆ ಇವುಗಳನ್ನು ತಿನ್ನುತ್ತಿರುವೆ?"
ಎಂದು ತಮ್ಮನನ್ನು ಕೇಳಿದನು.

12024008a ಸೋಽಬ್ರವೀದ್ಭ್ರಾತರಂ ಜ್ಯೇಷ್ಠಮುಪಸ್ಪೃಶ್ಯಾಭಿವಾದ್ಯ ಚ|
12024008c ಇತ ಏವ ಗೃಹೀತಾನಿ ಮಯೇತಿ ಪ್ರಹಸನ್ನಿವ||

ಅವನು ಅಣ್ಣನ ಬಳಿಹೋಗಿ, ಪಾದಗಳನ್ನು ಮುಟ್ಟಿ ನಮಸ್ಕರಿಸಿ,
ನಗುತ್ತಾ "ಇವುಗಳನ್ನು ನಾನು ಇಲ್ಲಿಂದಲೇ ತೆಗೆದುಕೊಂಡೆ!" ಎಂದನು.

12024009a ತಮಬ್ರವೀತ್ತದಾ ಶಂಖಸ್ತೀವ್ರಕೋಪಸಮನ್ವಿತಃ|
12024009c ಸ್ತೇಯಂ ತ್ವಯಾ ಕೃತಮಿದಂ ಫಲಾನ್ಯಾದದತಾ ಸ್ವಯಮ್||
12024009e ಗಚ್ಚ ರಾಜಾನಮಾಸಾದ್ಯ ಸ್ವಕರ್ಮ ಪ್ರಥಯಸ್ವ ವೈ||

ಇದನ್ನು ಕೇಳಿ ಶಂಖನು ತೀವ್ರ ಶೋಕಸಮನ್ವಿತನಾಗಿ ತಮ್ಮನಿಗೆ
ಹೇಳಿದನು: "ಸ್ವಯಂ ನೀನೇ ಈ ಹಣ್ಣುಗಳನ್ನು
ತೆಗೆದುಕೊಂಡಿದುದರಿಂದ ನೀನು ಕಳ್ಳತನ ಮಾಡಿರುವೆ. ಹೋಗು!
ರಾಜನಲ್ಲಿಗೆ ಹೋಗಿ ನೀನು ಮಾಡಿದ ಕೆಲಸವನ್ನು ಹೇಳಿಕೋ!

12024010a ಅದತ್ತಾದಾನಮೇವೇದಂ ಕೃತಂ ಪಾರ್ಥಿವಸತ್ತಮ|
12024010c ಸ್ತೇನಂ ಮಾಂ ತ್ವಂ ವಿದಿತ್ವಾ ಚ ಸ್ವಧರ್ಮಮನುಪಾಲಯ||
12024010e ಶೀಘ್ರಂ ಧಾರಯ ಚೌರಸ್ಯ ಮಮ ದಂಡಂ ನರಾಧಿಪ||

"ಪಾರ್ಥಿವಸತ್ತಮ! ದಾನವಾಗಿ ಕೊಟ್ಟಿರದ, ಯಾರನ್ನೂ ಕೇಳದೇ
ಮತ್ತು ಯಾರಿಗೂ ಹೇಳದೇ ನಾನು ಫಲವನ್ನು ತಿಂದುಬಿಟ್ಟಿನು. ನನ್ನನ್ನು

ನೀನು ಕಳ್ಳನೆಂದು ತಿಳಿದು ಸ್ವಧರ್ಮವನ್ನು ಅನುಸರಿಸು. ನರಾಧಿಪ!
ಕಳ್ಳನಿಗೆ ದೊರಕುವ ಶಿಕ್ಷೆಯನ್ನು ನನಗೂ ಶೀಘ್ರವಾಗಿ ನೀಡು!””

12024011a ಇತ್ಯುಕ್ತಸ್ತಸ್ಯ ವಚನಾತ್ಸುದ್ಯುಮ್ನಂ ವಸುಧಾಧಿಪಮ್|
12024011c ಅಭ್ಯಗಚ್ಚನ್ಮಹಾಬಾಹೋ ಲಿಖಿತಃ ಸಂಶಿತವ್ರತಃ||

ಮಹಾಬಾಹೋ! ಅವನ ಮಾತಿನಂತೆ ಸಂಶಿತವ್ರತ ಲಿಖಿತನು
ವಸುಧಾಧಿಪ ಸುದ್ಯುಮ್ನನಲ್ಲಿಗೆ ಹೋದನು.

12024012a ಸುದ್ಯುಮ್ನಸ್ತ್ವಂತಪಾಲೇಭ್ಯಃ ಶ್ರುತ್ವಾ ಲಿಖಿತಮಾಗತಮ್|
12024012c ಅಭ್ಯಗಚ್ಚತ್ಸಹಾಮಾತ್ಯಃ ಪದ್ಭ್ಯಾಮೇವ ನರೇಶ್ವರಃ||

ಲಿಖಿತನ ಬರುವಿಕೆಯನ್ನು ದ್ವಾರಪಾಲರಿಂದ ಕೇಳಿದ ನರೇಶ್ವರ
ಸುದ್ಯುಮ್ನನು ಅಮಾತ್ಯರೊಂದಿಗೆ ಕಾಲ್ನಡುಗೆಯಲ್ಲಿಯೇ ಬಂದನು.

12024013a ತಮಬ್ರವೀತ್ಸಮಾಗತ್ಯ ಸ ರಾಜಾ ಬ್ರಹ್ಮವಿತ್ತಮಮ್|
12024013c ಕಿಮಾಗಮನಮಾಚಕ್ಷ್ವ ಭಗವನ್ಕೃತಮೇವ ತತ್||

ಆ ಬ್ರಹ್ಮವಿತ್ತಮನನ್ನು ಸ್ವಾಗತಿಸಿ ರಾಜನು “ಭಗವನ್! ನೀನು ಯಾವ
ಕಾರಣದಿಂದ ಇಲ್ಲಿಗೆ ಆಗಮಿಸಿರುವೆಯೋ ಆ ಕಾರ್ಯವು ಆದಂತೆಯೇ
ತಿಳಿ” ಎಂದನು.

12024014a ಏವಮುಕ್ತಃ ಸ ವಿಪ್ರರ್ಷಿಃ ಸುದ್ಯುಮ್ನಮಿದಮಬ್ರವೀತ್|
12024014c ಪ್ರತಿಶ್ರೌಷಿ ಕರಿಷ್ಯೇತಿ ಶ್ರುತ್ವಾ ತತ್ಕರ್ತುಮರ್ಹಸಿ||

ಹೀಗೆ ಹೇಳಲು ಆ ವಿಪ್ರರ್ಷಿಯು ಸುದ್ಯುಮ್ನನಿಗೆ ಹೇಳಿದನು:
“ಮಾಡುತ್ತೇನೆ ಎಂದು ಮಾತುಕೊಟ್ಟಮೇಲೆ, ನಾನು ಹೇಳುವುದನ್ನು
ಕೇಳಿ ಅದರಂತೆಯೇ ಮಾಡಬೇಕಾಗುತ್ತದೆ!

12024015a ಅನಿಸೃಷ್ಟಾನಿ ಗುರುಣಾ ಫಲಾನಿ ಪುರುಷರ್ಷಭ|
12024015c ಭಕ್ಷಿತಾನಿ ಮಯಾ ರಾಜಂಸ್ತತ್ರ ಮಾಂ ಶಾಧಿ ಮಾಚಿರಮ್||

ಪುರುಷರ್ಷಭ! ರಾಜನ್! ಅವನು ಕೊಡದೆಯೇ ಮತ್ತು ಅವನನ್ನು ಕೇಳದೆಯೇ ನಾನು ಅಣ್ಣನ ಫಲಗಳನ್ನು ತಿಂದಿದ್ದೇನೆ. ಆ ಅಪರಾಧಕ್ಕೆ ಕೂಡಲೇ ನನ್ನನ್ನು ಶಿಕ್ಷಿಸು!"

12024016 ಸುದ್ಯುಮ್ನ ಉವಾಚ|
12024016a ಪ್ರಮಾಣಂ ಚೇನ್ಮತೋ ರಾಜಾ ಭವತೋ ದಂಡಧಾರಣೇ|
12024016c ಅನುಜ್ಞಾಯಾಮಪಿ ತಥಾ ಹೇತುಃ ಸ್ಯಾದ್ಬ್ರಾಹ್ಮಣರ್ಷಭ||

ಸುದ್ಯುಮ್ನನು ಹೇಳಿದನು: "ಬ್ರಾಹ್ಮಣರ್ಷಭ! ನಿನ್ನನ್ನು ಶಿಕ್ಷಿಸಲು ರಾಜನು ಮಾತ್ರ ಅರ್ಹನೆಂದು ಇರುವುದಾದರೆ ನಿನ್ನನ್ನು ಕ್ಷಮಿಸಿ ಕಳುಹಿಸಿಕೊಡಲೂ ಅವನು ಅರ್ಹನಲ್ಲವೇ?

12024017a ಸ ಭವಾನಭ್ಯನುಜ್ಞಾತಃ ಶುಚಿಕರ್ಮಾ ಮಹಾವ್ರತಃ|
12024017c ಬ್ರೂಹಿ ಕಾಮಾನತೋಽನ್ಯಾಂಸ್ತ್ವಂ ಕರಿಷ್ಯಾಮಿ ಹಿ ತೇ ವಚಃ||

ಶುಚಿಕರ್ಮಾ! ಮಹಾವ್ರತ! ನಿನ್ನನ್ನು ನಾನು ಕ್ಷಮಿಸಿದ್ದೇನೆ ಮತ್ತು ಹಿಂದಿರುಗಲು ಅನುಮತಿಯಿತ್ತಿದ್ದೇನೆ. ಮತ್ತೇನಾದರೂ ಅಭಿಲಾಷೆಗಳಿದ್ದರೆ ಅದನ್ನೂ ಹೇಳು. ನಿನ್ನ ಆ ಮಾತನ್ನೂ ನಡೆಸಿಕೊಡುತ್ತೇನೆ.""

12024018 ವ್ಯಾಸ ಉವಾಚ|
12024018a ಚೋದ್ಯಮಾನೋಽಪಿ ಬ್ರಹ್ಮರ್ಷಿಃ ಪಾರ್ಥಿವೇನ ಮಹಾತ್ಮನಾ|
12024018c ನಾನ್ಯಂ ವೈ ವರಯಾಮಾಸ ತಸ್ಮಾದ್ದಂಡಾದೃತೇ ವರಮ್||

ವ್ಯಾಸನು ಹೇಳಿದನು: "ಮಹಾತ್ಮ ಪಾರ್ಥಿವನು ಸಮಾಧಾನ ಪಡಿಸುತ್ತಿದ್ದರೂ ಬ್ರಹ್ಮರ್ಷಿಯು "ಶಿಕ್ಷೆಯ ವರವನ್ನಲ್ಲದೇ ಬೇರೆ ಯಾವ ವರವನ್ನೂ ನಿನ್ನಿಂದ ನಾನು ಸ್ವೀಕರಿಸುವುದಿಲ್ಲ" ಎಂದು ಹಠಹಿಡಿದನು.

12024019a ತತಃ ಸ ಪೃಥಿವೀಪಾಲೋ ಲಿಖಿತಸ್ಯ ಮಹಾತ್ಮನಃ|
12024019c ಕರೌ ಪ್ರಚ್ಛೇದಯಾಮಾಸ ಧೃತದಂಡೋ ಜಗಾಮ ಸಃ||

ಆಗ ಆ ಪೃಥಿವೀಪಾಲನು ಮಹಾತ್ಮ ಲಿಖಿತನ ಎರಡೂ ಕೈಗಳನ್ನೂ ಕತ್ತರಿಸುಂತೆ ಮಾಡಿದನು. ಶಿಕ್ಷೆಯನ್ನು ಪಡೆದ ಅವನು ಹೊರಟುಹೋದನು.

12024020a ಸ ಗತ್ವಾ ಭ್ರಾತರಂ ಶಂಖಮಾರ್ತರೂಪೋಽಬ್ರವೀದಿದಮ್|
12024020c ಧೃತದಂಡಸ್ಯ ದುರ್ಬುದ್ಧೇರ್ಭಗವನ್ ಕ್ಷಂತುಮರ್ಹಸಿ||

ಅವನು ಅಣ್ಣ ಶಂಖನ ಬಳಿ ಹೋಗಿ ಆರ್ತರೂಪನಾಗಿ "ಭಗವನ್! ಶಿಕ್ಷೆಯನ್ನು ಪಡೆದ ಈ ದುರ್ಬುದ್ಧಿಯನ್ನು ಕ್ಷಮಿಸಬೇಕು" ಎಂದು ಕೇಳಿಕೊಂಡನು.

12024021 ಶಂಖ ಉವಾಚ|
12024021a ನ ಕುಪ್ಯೇ ತವ ಧರ್ಮಜ್ಞ ನ ಚ ದೂಷಯಸೇ ಮಮ|
12024021c ಧರ್ಮಸ್ತು ತೇ ವ್ಯತಿಕ್ರಾಂತಸ್ತತಸ್ತೇ ನಿಷ್ಕೃತಿಃ ಕೃತಾ||

ಶಂಖನು ಹೇಳಿದನು: "ಧರ್ಮಜ್ಞ! ನಿನ್ನಮೇಲೆ ಕೋಪವಿಲ್ಲ. ನಿನ್ನನ್ನು ದೂಷಿಸುವುದೂ ಇಲ್ಲ. ಧರ್ಮವನ್ನು ಅತಿಕ್ರಮಿಸಿದುದರಿಂದ ನಿನಗೆ ಈ ಪ್ರಾಯಶ್ಚಿತ್ತವಾಯಿತು.

12024022a ಸ ಗತ್ವಾ ಬಾಹುದಾಂ ಶೀಘ್ರಂ ತರ್ಪಯಸ್ವ ಯಥಾವಿಧಿ|

12024022c ದೇವಾನ್ಪಿತೄನೃಷೀಂಶ್ಚೈವ ಮಾ ಚಾಧರ್ಮೇ ಮನಃ ಕೃಥಾಃ||

ಶೀಘ್ರದಲ್ಲಿಯೇ ನೀನು ಬಹುದಾನದಿಗೆ ಹೋಗಿ ಯಥಾವಿಧಿಯಾಗಿ ದೇವತೆಗಳಿಗೂ, ಪಿತೃಗಳಿಗೂ, ಋಷಿಗಳಿಗೂ ತರ್ಪಣಗಳನ್ನು ನೀಡು. ನಿನ್ನ ಮನಸ್ಸನ್ನು ಅಧರ್ಮದಲ್ಲಿ ತೊಡಗಿಸಬೇಡ!""

12024023 ವ್ಯಾಸ ಉವಾಚ|
12024023a ತಸ್ಯ ತದ್ವಚನಂ ಶ್ರುತ್ವಾ ಶಂಖಸ್ಯ ಲಿಖಿತಸ್ತದಾ|
12024023c ಅವಗಾಹ್ಯಾಪಗಾಂ ಪುಣ್ಯಾಮುದಕಾರ್ಥಂ ಪ್ರಚಕ್ರಮೇ||

ವ್ಯಾಸನು ಹೇಳಿದನು: "ಶಂಖನ ಆ ಮಾತನ್ನು ಕೇಳಿದ ಲಿಖಿತನು ಪುಣ್ಯ ನದಿಯಲ್ಲಿ ಮಿಂದು ತರ್ಪಣಗಳನ್ನು ಕೊಡಲು ಪ್ರಾರಂಭಿಸಿದನು.

12024024a ಪ್ರಾದುರಾಸ್ತಾಂ ತತಸ್ತಸ್ಯ ಕರೌ ಜಲಜಸಂನಿಭೌ|
12024024c ತತಃ ಸ ವಿಸ್ಮಿತೋ ಭ್ರಾತುರ್ದರ್ಶಯಾಮಾಸ ತೌ ಕರೌ||

ಕೂಡಲೇ ಅವನಿಗೆ ಕಮಲದಂತಹ ಕೈಗಳು ಹುಟ್ಟಿಕೊಂಡವು. ವಿಸ್ಮಿತನಾದ ಅವನು ತನ್ನ ಆ ಎರಡೂ ಕೈಗಳನ್ನೂ ಅಣ್ಣನಿಗೆ ತೋರಿಸಿದನು.

12024025a ತತಸ್ತಮಬ್ರವೀಚ್ಚಂಖಿಸ್ತಪಸೇದಂ ಕೃತಂ ಮಯಾ|
12024025c ಮಾ ಚ ತೇಽತ್ರ ವಿಶಂಕಾ ಭೂದ್ದೈವಮೇವ ವಿಧೀಯತೇ||

ಆಗ ಶಂಖನು "ನನ್ನ ತಪಸ್ಸಿನಿಂದಾಗಿ ನಾನೇ ಇದನ್ನು ಹೀಗೆ ಮಾಡಿದೆನು. ಇದರಲ್ಲಿ ಶಂಕೆತಾಳದಿರು. ದೈವವೇ ಎಲ್ಲವನ್ನೂ ಮಾಡಿಸುತ್ತದೆ!" ಎಂದು ಹೇಳಿದನು.

12024026 ಲಿಖಿತ ಉವಾಚ|

12024026a ಕಿಂ ನು ನಾಹಂ ತ್ವಯಾ ಪೂತಃ ಪೂರ್ವಮೇವ ಮಹಾದ್ಯುತೇ|
12024026c ಯಸ್ಯ ತೇ ತಪಸೋ ವೀರ್ಯಮೀದೃಶಂ ದ್ವಿಜಸತ್ತಮ||

ಲಿಖಿತನು ಹೇಳಿದನು: "ಮಹಾದ್ಯುತೇ! ದ್ವಿಜಸತ್ತಮ! ನಿನ್ನ ತಪಸ್ಸಿನ ವೀರ್ಯವು ಈ ತರಹನಾಗಿತ್ತೆಂದರೆ ಮೊದಲೇ ನೀನು ನನ್ನನ್ನು ಪವಿತ್ರನನ್ನಾಗಿ ಮಾಡಬಹುದಿತ್ತಲ್ಲವೇ?"

12024027 ಶಂಖ ಉವಾಚ|
12024027a ಏವಮೇತನ್ಮಯಾ ಕಾರ್ಯಂ ನಾಹಂ ದಂಡಧರಸ್ತವ|
12024027c ಸ ಚ ಪೂತೋ ನರಪತಿಸ್ತ್ವಂ ಚಾಪಿ ಪಿತೃಭಿಃ ಸಹ||

ಶಂಖನು ಹೇಳಿದನು: "ಹೀಗೆ ಮಾಡುವುದೇ ನನ್ನ ಕರ್ತವ್ಯವಾಗಿತ್ತು. ನಿನಗೆ ಶಿಕ್ಷೆಯನ್ನು ವಿಧಿಸುವವನು ನಾನಲ್ಲ! ನಿನಗೆ ದಂಡವನ್ನಿತ್ತು ಆ ನರಪತಿಯೂ, ಪಿತೃಗಳೊಂದಿಗೆ ನೀನೂ ಪವಿತ್ರರಾದಿರಿ!""

12024028 ವ್ಯಾಸ ಉವಾಚ|
12024028a ಸ ರಾಜಾ ಪಾಂಡವಶ್ರೇಷ್ಠ ಶ್ರೇಷ್ಠೋ ವೈ ತೇನ ಕರ್ಮಣಾ|
12024028c ಪ್ರಾಪ್ತವಾನ್ಪರಮಾಂ ಸಿದ್ಧಿಂ ದಕ್ಷಃ ಪ್ರಾಚೇತಸೋ ಯಥಾ||

ವ್ಯಾಸನು ಹೇಳಿದನು: "ಪಾಂಡವಶ್ರೇಷ್ಠ! ದಂಡಧಾರಣೆಯ ಆ ಶ್ರೇಷ್ಠ ಕರ್ಮದಿಂದಾಗಿ ರಾಜಾ ಸುದ್ಯುಮ್ನನು ದಕ್ಷ ಪ್ರಾಚೇತಸನಂತೆ ಪರಮ ಸಿದ್ಧಿಯನ್ನು ಪಡೆದನು.

12024029a ಏಷ ಧರ್ಮಃ ಕ್ಷತ್ರಿಯಾಣಾಂ ಪ್ರಜಾನಾಂ ಪರಿಪಾಲನಮ್|
12024029c ಉತ್ಪಥೇಽಸ್ಮಿನ್ಮಹಾರಾಜ ಮಾ ಚ ಶೋಕೇ ಮನಃ ಕೃಥಾಃ||

ಮಹಾರಾಜ! ಪ್ರಜೆಗಳ ಪರಿಪಾಲನೆಯೇ ಕ್ಷತ್ರಿಯರ ಧರ್ಮ.

ಆದುದರಿಂದ ಇದರ ಕುರಿತು ಶೋಕಿಸಬೇಡ।

12024030a ಭ್ರಾತುರಸ್ಯ ಹಿತಂ ವಾಕ್ಯಂ ಶೃಣು ಧರ್ಮಜ್ಞಸತ್ತಮ|
12024030c ದಂಡ ಏವ ಹಿ ರಾಜೇಂದ್ರ ಕ್ಷತ್ರಧರ್ಮೋ ನ ಮುಂಡನಮ್‌॥

ಧರ್ಮಜ್ಞ! ಸತ್ತಮ! ತಮ್ಮನ ಹಿತವಾಕ್ಯವನ್ನು ಕೇಳು. ರಾಜೇಂದ್ರ! ದಂಡವೇ ಕ್ಷತ್ರಧರ್ಮ. ಮುಂಡನವಲ್ಲ!””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವ್ಯಾಸವಾಕ್ಯೇ ಚತುರ್ವಿಂಶೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವ್ಯಾಸವಾಕ್ಯ ಎನ್ನುವ ಇಪ್ಪತ್ನಾಲ್ಕನೇ ಅಧ್ಯಾಯವು.

೨೫

ಹಯಗ್ರೀವೋಽಪಖ್ಯಾನ

ವ್ಯಾಸನು ಯುಧಿಷ್ಠಿರನಿಗೆ ರಾಜ ಹಯಗ್ರೀವನ ಕಥೆಯನ್ನು ಹೇಳಿ ರಾಜೋಚಿತ ಕರ್ತವ್ಯವನ್ನು ಪಾಲಿಸಲು ಒತ್ತಾಯಿಸಿದುದು (1-33).

12025001 ವೈಶಂಪಾಯನ ಉವಾಚ|
12025001a ಪುನರೇವ ಮಹರ್ಷಿಸ್ತಂ ಕೃಷ್ಣದ್ವೈಪಾಯನೋಽಬ್ರವೀತ್‌|
12025001c ಅಜಾತಶತ್ರುಂ ಕೌಂತೇಯಮಿದಂ ವಚನಮರ್ಥವತ್‌॥

ವೈಶಂಪಾಯನನು ಹೇಳಿದನು: “ಅಜಾತಶತ್ರು ಕೌಂತೇಯನಿಗೆ ಮಹರ್ಷಿ ಕೃಷ್ಣದ್ವೈಪಾಯನನು ಪುನಃ ಈ ಅರ್ಥವತ್ತಾದ

ಮಾತುಗಳನ್ನಾಡಿದನು:

12025002a ಅರಣ್ಯೇ ವಸತಾಂ ತಾತ ಭ್ರಾತೃಣಾಂ ತೇ ತಪಸ್ವಿನಾಮ್|
12025002c ಮನೋರಥಾ ಮಹಾರಾಜ ಯೇ ತತ್ರಾಸನ್ಯುಧಿಷ್ಠಿರ||
12025003a ತಾನಿಮೇ ಭರತಶ್ರೇಷ್ಠ ಪ್ರಾಪ್ನುವಂತು ಮಹಾರಥಾಃ|
12025003c ಪ್ರಶಾಧಿ ಪೃಥಿವೀಂ ಪಾರ್ಥ ಯಯಾತಿರಿವ ನಾಹುಷಃ||

“ಯುಧಿಷ್ಠಿರ! ಮಗೂ! ಭರತಶ್ರೇಷ್ಠ! ಅರಣ್ಯದಲ್ಲಿ ವಾಸಿಸುತ್ತಿರುವಾಗ ತಪಸ್ವಿಗಳಾಗಿದ್ದ ನಿನ್ನ ಮಹಾರಥ ಸಹೋದರರು ಇಟ್ಟುಕೊಂಡಿದ್ದ ಮನೋರಥಗಳನ್ನು ಈಗ ಪೂರೈಸಿಕೊಳ್ಳಲಿ! ಪಾರ್ಥ! ನಹುಷನ ಮಗ ಯಯಾತಿಯಂತೆ ಈ ಭೂಮಿಯ ಮೇಲೆ ಶಾಸನ ಮಾಡು!

12025004a ಅರಣ್ಯೇ ದುಃಖಿವಸತಿರನುಭೂತಾ ತಪಸ್ವಿಭಿಃ|
12025004c ದುಃಖಿಸ್ಯಾಂತೇ ನರವ್ಯಾಘ್ರಾಃ ಸುಖಿಂ ತ್ವನುಭವಂತ್ವಿಮೇ||

ಆ ತಪಸ್ವಿಗಳು ಅರಣ್ಯದಲ್ಲಿ ವಾಸಿಸುತ್ತಿರುವಾಗ ದುಃಖಿಗಳನ್ನು ಅನುಭವಿಸಿದರು. ಆ ದುಃಖಿದ ಅಂತ್ಯದಲ್ಲಿ ನರವ್ಯಾಘ್ರರು ಈಗಲಾದರೂ ಸುಖಿವನ್ನು ಅನುಭವಿಸಲಿ.

12025005a ಧರ್ಮಮರ್ಥಂ ಚ ಕಾಮಂ ಚ ಭ್ರಾತೃಭಿಃ ಸಹ ಭಾರತ|
12025005c ಅನುಭೂಯ ತತಃ ಪಶ್ಚಾತ್ತ್ವಸ್ಥಾತಾಸಿ ವಿಶಾಂ ಪತೇ||

ಭಾರತ! ವಿಶಾಂಪತೇ! ಧರ್ಮ, ಅರ್ಥ, ಮತ್ತು ಕಾಮಗಳನ್ನು ಸಹೋದರರೊಂದಿಗೆ ಅನುಭವಿಸಿ, ಅದರ ನಂತರ ನೀನು ವಾನಪ್ರಸ್ಥವನ್ನು ಕೈಗೊಳ್ಳಬಹುದು.

12025006a ಅತಿಥೀನಾಂ ಚ ಪಿತೄಣಾಂ ದೇವತಾನಾಂ ಚ ಭಾರತ|

12025006c ಆನೃಣ್ಯಂ ಗಚ್ಚ ಕೌಂತೇಯ ತತಃ ಸ್ವರ್ಗಂ ಗಮಿಷ್ಯಸಿ||

ಭಾರತ! ಕೌಂತೇಯ! ಅತಿಥಿಗಳ, ಪಿತೃಗಳ ಮತ್ತು ದೇವತೆಗಳ ಋಣಮುಕ್ತನಾದ ನಂತರ ಹೋಗು! ಆಗ ಸ್ವರ್ಗಕ್ಕೇ ಹೋಗುತ್ತೀಯೆ!

12025007a ಸರ್ವಮೇಧಾಶ್ವಮೇಧಾಭ್ಯಾಂ ಯಜಸ್ವ ಕುರುನಂದನ|
12025007c ತತಃ ಪಶ್ಚಾನ್ಮಹಾರಾಜ ಗಮಿಷ್ಯಸಿ ಪರಾಂ ಗತಿಮ್||

ಕುರುನಂದನ! ಮಹಾರಾಜ! ಸರ್ವಮೇಧ-ಅಶ್ವಮೇಧ ಯಜ್ಞಗಳನ್ನು ಯಾಜಿಸು. ಅದರನಂತರ ಪರಮ ಗತಿಯನ್ನು ಪಡೆಯುವಿಯಂತೆ.

12025008a ಭ್ರಾತೄಂಶ್ಚ ಸರ್ವಾನ್ಕ್ರತುಭಿಃ ಸಂಯೋಜ್ಯ ಬಹುದಕ್ಷಿಣೈಃ|
12025008c ಸಂಪ್ರಾಪ್ತಃ ಕೀರ್ತಿಮತುಲಾಂ ಪಾಂಡವೇಯ ಭವಿಷ್ಯಸಿ||

ಪಾಂಡವೇಯ! ಬಹುದಕ್ಷಿಣೆಗಳಿಂದ ಯುಕ್ತವಾದ ಆ ಎಲ್ಲ ಕ್ರತುಗಳಲ್ಲಿ ನಿನ್ನ ಸಹೋದರರನ್ನೂ ಜೋಡಿಸಿಕೋ! ಇದರಿಂದ ನೀನು ಅಪಾರ ಕೀರ್ತಿಯನ್ನು ಪಡೆಯುತ್ತೀಯೆ.

12025009a ವಿದ್ಮ ತೇ ಪುರುಷವ್ಯಾಘ್ರ ವಚನಂ ಕುರುನಂದನ|
12025009c ಶೃಣು ಮಚ್ಚ ಯಥಾ ಕುರ್ವನ್ಧರ್ಮಾನ್ನ ಚ್ಯವತೇ ನೃಪಃ||

ಪುರುಷವ್ಯಾಘ್ರ! ಕುರುನಂದನ! ನಿನ್ನ ಮಾತುಗಳು ನಮಗೆ ಚೆನ್ನಾಗಿ ಅರ್ಥವಾಗುತ್ತಿವೆ. ಏನು ಮಾಡಿದರೆ ನೃಪನು ಧರ್ಮಚ್ಯುತನಾಗುವುದಿಲ್ಲ ಎನ್ನುವುದನ್ನು ಕೇಳು.

12025010a ಆದದಾನಸ್ಯ ಚ ಧನಂ ನಿಗ್ರಹಂ ಚ ಯುಧಿಷ್ಠಿರ|
12025010c ಸಮಾನಂ ಧರ್ಮಕುಶಲಾಃ ಸ್ಥಾಪಯಂತಿ ನರೇಶ್ವರ||

ಯುಧಿಷ್ಠಿರ! ನರೇಶ್ವರ! ಧನ ಸಂಗ್ರಹಣೆ ಮತ್ತು ದುಷ್ಟ ನಿಗ್ರಹ

ಇವೆರಡೂ ಸಮಾನ ಕ್ಷತ್ರಿಯ ಧರ್ಮಗಳೆಂದು ಧರ್ಮಕುಶಲರು ಸಿದ್ಧಪಡಿಸಿದ್ದಾರೆ.

[40]12025011a ದೇಶಕಾಲಪ್ರತೀಕ್ಷೇ ಯೋ ದಸ್ಯೋರ್ದರ್ಶಯತೇ ನೃಪಃ|
12025011c ಶಾಸ್ತ್ರಜಾಂ ಬುದ್ಧಿಮಾಸ್ಥಾಯ ನೈನಸಾ ಸ ಹಿ ಯುಜ್ಯತೇ||

ದೇಶಕಾಲಗಳನ್ನು ನೋಡಿಕೊಂಡು ಶಾಸ್ತ್ರಗಳಲ್ಲಿ ತೋರಿಸಿರುವ ಬುದ್ಧಿಯನ್ನು ಬಳಸಿ ದಸ್ಯುಗಳನ್ನು ಕಾಣುವ ನೃಪನಿಗೆ ಪಾಪವು ತಗಲುವುದಿಲ್ಲ.

12025012a ಆದಾಯ ಬಲಿಷಡ್ಭಾಗಂ ಯೋ ರಾಷ್ಟ್ರಂ ನಾಭಿರಕ್ಷತಿ|
12025012c ಪ್ರತಿಗೃಹ್ಣಾತಿ ತತ್ಪಾಪಂ ಚತುರ್ಥಾಂಶೇನ ಪಾರ್ಥಿವಃ||

ಪ್ರಜೆಗಳ ಆರನೆಯ ಒಂದು ಭಾಗವನ್ನು ಪಡೆದೂ ಯಾವ ರಾಜನು ರಾಷ್ಟ್ರವನ್ನು ರಕ್ಷಿಸುವುದಿಲ್ಲವೋ ಅವನು ಪ್ರಜೆಗಳು ಮಾಡುವ ಪಾಪಗಳ ನಾಲ್ಕನೆಯ ಒಂದು ಭಾಗವನ್ನೂ ಅನುಭವಿಸುತ್ತಾನೆ.

---

[40] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ನಾಲ್ಕು ಅಧಿಕ ಶ್ಲೋಕಗಳಿವೆ: ಪ್ರತ್ಯಕ್ಷಮನುಮಾನಂ ಚ ಉಪ್ಮಾನಂ ತಥಾऽಗಮಃ| ಅರ್ಥಾಪತ್ತಿಸ್ತಥೈತಿಹ್ಯಂ ಸಂಶಯೋ ನಿರ್ಣಯಸ್ತಥಾ|| ಆಕಾರೋ ಹೀಂಗಿತಶ್ಚೈವ ಗತಿಶ್ರೇಷ್ಠಾ ಚ ಭಾರತ| ಪ್ರತಿಜ್ಞಾ ಚೈವ ಹೇತುಶ್ಚ ದೃಷ್ಟಾಂತೋಪನಯೌ ತಥಾ|| ಉಕ್ತಂ ನಿಗಮನಂ ತೇಷಾಂ ಪ್ರಮೇಯಂ ಚ ಪ್ರಯೋಜನಮ್| ಏತಾನಿ ಸಾಧನಾನ್ಯಾಹುರ್ಬಹುವರ್ಗಪ್ರಸಿದ್ಧಯೇ|| ಪ್ರತ್ಯಕ್ಷಮನುಮಾನಂ ಚ ಸರ್ವೇಷಾಂ ಯೋನಿರಿಷ್ಯತೇ| ಪ್ರಮಾಣಜ್ಞೋ ಹಿ ಶಕ್ನೋತಿ ದಂಡನೀತೌ ವಿಚಕ್ಷಣಃ| ಅಪ್ರಮಾಣವತಾಂ ನೀತೋ ದಂಡೋ ಹನ್ಯಾನ್ಮಹೀಪತಿಮ್|| (ಗೀತಾ ಪ್ರೆಸ್).

12025013a ನಿಬೋಧ ಚ ಯಥಾತಿಷ್ಠನ್ಧರ್ಮಾನ್ನ ಚ್ಯವತೇ ನೃಪಃ|
12025013c ನಿಗ್ರಹಾದ್ಧರ್ಮಶಾಸ್ತ್ರಾಣಾಮನುರುಧ್ಯನ್ನಪೇತಭೀಃ||

ಹೇಗಿದ್ದರೆ ರಾಜನು ಧರ್ಮಗಳಿಂದ ಚ್ಯುತನಾಗುವುದಿಲ್ಲ,
ಧರ್ಮಶಾಸ್ತ್ರಗಳಂತೆ ನಡೆದುಕೊಂಡರೆ ಅಥವಾ ಅವುಗಳಿಗೆ
ವಿರೋಧವಾಗಿ ನಡೆದುಕೊಂಡರೆ ಯಾವ ಅಧೋಗತಿಗಿಳಿಯುತ್ತಾನೆ
ಎನ್ನುವುದನ್ನು ಕೇಳು.

12025013e ಕಾಮಕ್ರೋಧಾವನಾದೃತ್ಯ ಪಿತೇವ ಸಮದರ್ಶನಃ||
12025014a ದೈವೇನೋಪಹತೇ ರಾಜಾ ಕರ್ಮಕಾಲೇ ಮಹಾದ್ಯುತೇ|
12025014c ಪ್ರಮಾದಯತಿ ತತ್ಕರ್ಮ ನ ತತ್ರಾಹುರತಿಕ್ರಮಮ್||

ಕಾಮ-ಕ್ರೋಧಗಳನ್ನು ಅನಾದರಿಸಿ ತಂದೆಯಂತೆ ಎಲ್ಲರನ್ನೂ ಸಮನಾಗಿ
ಕಾಣುವವನಿಗೆ ಪಾಪವಿಲ್ಲ. ಮಹಾದ್ಯುತೇ! ಪ್ರಜೆಗಳ ಕರ್ಮವನ್ನು
ಮಾಡುತ್ತಿರುವಾಗಲೇ ರಾಜನು ದೈವವಶನಾದರೆ ಅದನ್ನು
ಪ್ರಮಾದವೆಂದಾಗಲೀ ಧರ್ಮದ ಅತಿಕ್ರಮವೆಂದಾಗಲೀ
ಹೇಳಲಾಗುವುದಿಲ್ಲ.

12025015a ತರಸಾ ಬುದ್ಧಿಪೂರ್ವಂ ವಾ ನಿಗ್ರಾಹ್ಯಾ ಏವ ಶತ್ರವಃ|
12025015c ಪಾಪೈಃ ಸಹ ನ ಸಂದಧ್ಯಾದ್ರಾಷ್ಟ್ರಂ ಪಣ್ಯಂ ನ ಕಾರಯೇತ್||

ಮೊದಲೇ ಯೋಚಿಸಿಯೋ ಅಥವಾ ತಕ್ಷಣವೋ ಶತ್ರುಗಳನ್ನು
ನಿಗ್ರಹಿಸಲೇಬೇಕು. ಪಾಪಿಗಳೊಂದಿಗೆ ಸಂಧಿಮಾಡಿಕೊಳ್ಳಬಾರದು.
ರಾಷ್ಟ್ರವನ್ನು ಮಾರುಕಟ್ಟೆಯ ವಸ್ತುವನ್ನಾಗಿ ಮಾಡಬಾರದು.

12025016a ಶೂರಾಶ್ಚಾರ್ಯಾಶ್ಚ ಸತ್ಕಾರ್ಯಾ ವಿದ್ವಾಂಸಶ್ಚ ಯುಧಿಷ್ಠಿರ|
12025016c ಗೋಮತೋ ಧನಿನಶ್ಚೈವ ಪರಿಪಾಲ್ಯಾ ವಿಶೇಷತಃ||

ಯುಧಿಷ್ಠಿರ! ಶೂರರನ್ನೂ, ಆರ್ಯರನ್ನೂ, ವಿದ್ವಾಂಸರನ್ನೂ ಸತ್ಕರಿಸಬೇಕು. ಗೋವುಗಳನ್ನು ಪಡೆದಿರುವವರಿಗೂ ಧನಿಗಳಿಗೂ ವಿಶೇಷವಾದ ರಕ್ಷಣೆಯನ್ನು ನೀಡಬೇಕು.

12025017a ವ್ಯವಹಾರೇಷು ಧರ್ಮ್ಯೇಷು ನಿಯೋಜ್ಯಾಶ್ಚ ಬಹುಶ್ರುತಾಃ|
[41]12025017c ಗುಣಯುಕ್ತೇಽಪಿ ನೈಕಸ್ಮಿನ್ವಿಶ್ವಸ್ಯಾಚ್ಚ ವಿಚಕ್ಷಣಃ||

ಧರ್ಮದ ವ್ಯವಹಾರಗಳಲ್ಲಿ ಸಕಲಶಾಸ್ತ್ರಜ್ಞರನ್ನೂ ನಿಯೋಜಿಸಬೇಕು. ಗುಣಯುಕ್ತನಾದರೂ ಒಬ್ಬನಲ್ಲಿಯೇ ರಾಜನು ವಿಶ್ವಾಸವನ್ನಿಡಬಾರದು.

12025018a ಅರಕ್ಷಿತಾ ದುರ್ವಿನೀತೋ ಮಾನೀ ಸ್ತಬ್ಧೋಽಭ್ಯಸೂಯಕಃ|
12025018c ಏನಸಾ ಯುಜ್ಯತೇ ರಾಜಾ ದುರ್ದಾಂತ ಇತಿ ಚೋಚ್ಯತೇ||

ಪ್ರಜೆಗಳನ್ನು ರಕ್ಷಿಸದ, ಉದ್ಧತನಾದ, ದುರಭಿಮಾನೀ, ಮಾನ್ಯರಲ್ಲಿ ಅವಿನೀತನಾಗಿರುವ, ಅನ್ಯರಲ್ಲಿ ದೋಷವನ್ನೇ ಹುಡುಕುವ ರಾಜನು ಪಾಪಯುಕ್ತನನೆಂದು ಹೇಳುತ್ತಾರೆ.

12025019a ಯೇಽರಕ್ಷ್ಯಮಾಣಾ ಹೀಯಂತೇ ದೈವೇನೋಪಹತೇ ನೃಪೇ|

---

[41] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ನಾಲ್ಕು ಅಧಿಕ ಶ್ಲೋಕಗಳಿವೆ: ಪ್ರಮಾಣಜ್ಞಾ ಮಹೀಪಾಲ ನ್ಯಾಯಶಾಸ್ತ್ರಾವಲಂಬಿನಃ| ವೇದಾರ್ಥತತ್ತ್ವವಿದ್ರಾಜಂಸ್ತರ್ಕಶಾಸ್ತ್ರಬಹುಶ್ರುತಾಃ|| ಮಂತ್ರೇ ಚ ವ್ಯವಹಾರೇ ಚ ನಿಯೋಕ್ತವ್ಯಾ ವಿಜಾನತಾ| ತರ್ಕಶಾಸ್ತ್ರಕೃತಾ ಬುದ್ಧಿರ್ಧರ್ಮಶಾಸ್ತ್ರಕೃತಾ ಚ ಯಾ|| ದಂಡನೀತಿಕೃತಾ ಚೈವ ತ್ರೈಲೋಕ್ಯಮಪಿ ಸಾಧಯೇತ್| ನಿಯೋಜ್ಯಾ ದೇವತತ್ತ್ವಜ್ಞಾ ಯಜ್ಞಕರ್ಮಸು ಪಾರ್ಥಿವ|| ವೇದಜ್ಞಾ ಯೇ ಚ ಶಾಸ್ತ್ರಜ್ಞಾಸ್ತೇ ಚ ರಾಜನ್ಸುಬುದ್ಧಯಃ| ಆನ್ವೀಕ್ಷಿಕೀತ್ರಯೀವಾರ್ತಾ ದಂಡನೀತಿಷು ಪಾರಗಾಃ| ತೇ ತು ಸರ್ವತ್ರ ಯೋಕ್ತವ್ಯಾಸ್ತೇ ಚ ಬುದ್ಧೇಃ ಪರಂ ಗತಾಃ|| (ಗೀತಾ ಪ್ರೆಸ್).

12025019c ತಸ್ಕರೈಶ್ಚಾಪಿ ಹನ್ಯಂತೇ ಸರ್ವಂ ತದ್ರಾಜಕಿಲ್ಬಿಷಮ್॥

ರಾಜನಿಂದ ರಕ್ಷಿಸಲ್ಪಡದ ಪ್ರಜೆಗಳು ದೈವಿಕ ಆಪತ್ತಿನಿಂದಲೂ ಕಳ್ಳ-
ಕಾಕರಿಂದಲೂ ವಿನಾಶಹೊಂದುತ್ತಾರೆ. ಅವರ ವಿನಾಶಕ್ಕೆ ಕಾರಣನಾದ
ನೃಪನೇ ಮಹಾಪಾಪಕ್ಕೆ ಗುರಿಯಾಗುತ್ತಾನೆ.

12025020a ಸುಮಂತ್ರಿತೇ ಸುನೀತೇ ಚ ವಿಧಿವಚ್ಚೋಪಪಾದಿತೇ|
12025020c ಪೌರುಷೇ ಕರ್ಮಣಿ ಕೃತೇ ನಾಸ್ತ್ಯಧರ್ಮೋ ಯುಧಿಷ್ಠಿರ॥

ಯುಧಿಷ್ಠಿರ! ಚೆನ್ನಾಗಿ ಸಮಾಲೋಚಿಸಿ, ನೀತಿಯನ್ನನುಸರಿಸಿ,
ಸರ್ವಪ್ರಕಾರದಿಂದಲೂ ಮನುಷ್ಯಪ್ರಯತ್ನವನ್ನು ಮಾಡಿದರೆ ರಾಜನು
ಅಧರ್ಮಿಯೆಂದೆನಿಸಿಕೊಳ್ಳುವುದಿಲ್ಲ.

12025021a ವಿಪದ್ಯಂತೇ ಸಮಾರಂಭಾಃ ಸಿಧ್ಯಂತ್ಯಪಿ ಚ ದೈವತಃ|
12025021c ಕೃತೇ ಪುರುಷಕಾರೇ ತು ನೈನಃ ಸ್ಪೃಶತಿ ಪಾರ್ಥಿವಮ್॥

ಉತ್ತಮವಾಗಿ ಆರಂಭಿಸಿದ ಕಾರ್ಯಗಳು ದೈವವಶದಿಂದ
ಸಿದ್ಧಿಯಾಗದೆಯೂ ಇರಬಹುದು. ಆದರೆ ಪುರುಷಪ್ರಯತ್ನವನ್ನು
ಮಾಡಿದ ಪಾರ್ಥಿವನಿಗೆ ಪಾಪವು ತಗಲುವುದಿಲ್ಲ.

12025022a ಅತ್ರ ತೇ ರಾಜಶಾರ್ದೂಲ ವರ್ತಯಿಷ್ಯೇ ಕಥಾಮಿಮಾಮ್|
12025022c ಯದ್ವೃತ್ತಂ ಪೂರ್ವರಾಜರ್ಷೇರ್ಹಯಗ್ರೀವಸ್ಯ ಪಾರ್ಥಿವ॥
12025023a ಶತ್ರೂನ್ಹತ್ವಾ ಹತಸ್ಯಾಜೌ ಶೂರಸ್ಯಾಕ್ಲಿಷ್ಟಕರ್ಮಣಃ|
12025023c ಅಸಹಾಯಸ್ಯ ಧೀರಸ್ಯ ನಿರ್ಜಿತಸ್ಯ ಯುಧಿಷ್ಠಿರ॥

ರಾಜಶಾರ್ದೂಲ! ಪಾರ್ಥಿವ! ಇದಕ್ಕೆ ಸಂಬಂಧಿಸಿದಂತೆ ಹಿಂದಿನ
ರಾಜರ್ಷಿ ಹಯಗ್ರೀವನ ಕಥೆಯನ್ನು ನಿನಗೆ ಹೇಳುತ್ತೇನೆ. ಯುಧಿಷ್ಠಿರ! ಆ

ಅಕ್ಲಿಷ್ಟಕರ್ಮಿಯು ಅಸಹಾಯಕನಾಗಿದ್ದೂ ಧೀರನಾಗಿ ಶೂರತನದಿಂದ ಶತ್ರುಗಳನ್ನು ಸಂಹರಿಸಿ ಜಯಿಸಿದುದನ್ನು ಹೇಳುತ್ತೇನೆ.

12025024a ಯತ್ಕರ್ಮ ವೈ ನಿಗ್ರಹೇ ಶಾತ್ರವಾಣಾಂ
ಯೋಗಶ್ಚಾಗ್ರ್ಯಃ ಪಾಲನೇ ಮಾನವಾನಾಮ್|
12025024c ಕೃತ್ವಾ ಕರ್ಮ ಪ್ರಾಪ್ಯ ಕೀರ್ತಿಂ ಸುಯುದ್ಧೇ
ವಾಜಿಗ್ರೀವೋ ಮೋದತೇ ದೇವಲೋಕೇ||

ಮಾನವರ ಯೋಗಪಾಲನೆಯಲ್ಲಿ ಅಗ್ರಗಣ್ಯನಾದ ಅವನು ಶತ್ರುಗಳನ್ನು ನಿಗ್ರಹಿಸುವ ಕರ್ಮವನ್ನೆಸಗಿದನು. ಉತ್ತಮ ಯುದ್ಧದಲ್ಲಿ ಈ ಕರ್ಮವನ್ನೆಸಗಿ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ.

12025025a ಸಂತ್ಯಕ್ತಾತ್ಮಾ ಸಮರೇಷ್ವಾತತಾಯೀ
ಶಸ್ತ್ರೈಶ್ಚಿನ್ನೋ ದಸ್ಯುಭಿರರ್ದ್ಯಮಾನಃ|
12025025c ಅಶ್ವಗ್ರೀವಃ ಕರ್ಮಶೀಲೋ ಮಹಾತ್ಮಾ
ಸಂಸಿದ್ಧಾತ್ಮಾ ಮೋದತೇ ದೇವಲೋಕೇ||

ಸಮರದಲ್ಲಿ ದಸ್ಯುಗಳ ಶಸ್ತ್ರಗಳಿಂದ ಛಿನ್ನನಾಗಿ ಈ ಆತತಾಯಿಯು ಅಸುನೀಗಿದ ಈ ಕರ್ಮಶೀಲ ಮಹಾತ್ಮ ಸಿದ್ಧಾತ್ಮ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ.

12025026a ಧನುರ್ಯೂಪೋ ರಶನಾ ಜ್ಯಾ ಶರಃ ಸ್ರುಕ್
ಸ್ರುವಃ ಖಡ್ಗೋ ರುಧಿರಂ ಯತ್ರ ಚಾಜ್ಯಮ್|
12025026c ರಥೋ ವೇದೀ ಕಾಮಗೋ ಯುದ್ಧಮಗ್ನಿಶ್
ಚಾತುರ್ಹೋತ್ರಂ ಚತುರೋ ವಾಜಿಮುಖ್ಯಾಃ||
12025027a ಹುತ್ವಾ ತಸ್ಮಿನ್ಯಜ್ಞವಹ್ನಾವಥಾರೀನ್

ಪಾಪಾನ್ಮುಕ್ತೋ ರಾಜಸಿಂಹಸ್ತರಸ್ವೀ|
12025027c ಪ್ರಾಣಾನ್ಹುತ್ವಾ ಚಾವಭೃಥೇ ರಣೇ ಸ
ವಾಜಿಗ್ರೀವೋ ಮೋದತೇ ದೇವಲೋಕೇ||

ಧನುಸ್ಸೇ ಯೂಪಸ್ತಂಭವಾಗಿದ್ದ, ಮೌರ್ವಿಯೇ ರಜ್ಜುವಾಗಿದ್ದ, ಬಾಣವೇ ಸ್ರುಕ್ಕಾಗಿದ್ದ, ಖಡ್ಗವೇ ಸ್ರುವವಾಗಿದ್ದ, ರಕ್ತವೇ ಆಜ್ಯವಾಗಿದ್ದ, ಬೇಕಾದಲ್ಲಿ ಹೋಗುತ್ತಿದ್ದ ರಥವೇ ವೇದಿಯಾಗಿದ್ದ, ಯುದ್ಧವೇ ಅಗ್ನಿಯಾಗಿದ್ದ, ನಾಲ್ಕು ಕುದುರೆಗಳು ನಾಲ್ಕು ಹೋತೃಗಳಾಗಿದ್ದ ಆ ಯಜ್ಞದಲ್ಲಿ ವೇಗಶಾಲೀ ರಾಜಸಿಂಹನು ಶತ್ರುಗಳನ್ನು ಆಹುತಿಯನ್ನಾಗಿತ್ತು ಪಾಪದಿಂದ ಮುಕ್ತನಾಗಿ ರಣದ ಅವಭೃತದಲ್ಲಿ ತನ್ನ ಪ್ರಾಣವನ್ನೇ ಹೋಮಮಾಡಿದ ಹಯಗ್ರೀಯನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ.

12025028a ರಾಷ್ಟ್ರಂ ರಕ್ಷನ್ಬುದ್ಧಿಪೂರ್ವಂ ನಯೇನ
ಸಂತ್ಯಕ್ತಾತ್ಮಾ ಯಜ್ಞಶೀಲೋ ಮಹಾತ್ಮಾ|
12025028c ಸರ್ವಾಽಲ್ಲೋಕಾನ್ವ್ಯಾಪ್ಯ ಕೀರ್ತ್ಯಾ ಮನಸ್ವೀ
ವಾಜಿಗ್ರೀವೋ ಮೋದತೇ ದೇವಲೋಕೇ||

ಯಜ್ಞಶೀಲ ಮಹಾತ್ಮ ಮನನಶೀಲ ಹಯಗ್ರೀವನು ಬುದ್ಧಿಪೂರ್ವಕ ಸುನೀತಿಯಿಂದ ರಾಷ್ಟ್ರವನ್ನು ರಕ್ಷಿಸುತ್ತಾ ಪ್ರಾಣವನ್ನು ತೊರೆದು ತನ್ನ ಕೀರ್ತಿಯು ಸರ್ವ ಲೋಕಗಳಲ್ಲಿ ವ್ಯಾಪಿಸುವಂತೆ ಮಾಡಿ ದೇವಲೋಕದಲ್ಲಿ ಮೋದಿಸುತ್ತಿದ್ದಾನೆ.

12025029a ದೈವೀಂ ಸಿದ್ಧಿಂ ಮಾನುಷೀಂ ದಂಡನೀತಿಂ
ಯೋಗನ್ಯಾಯೈಃ ಪಾಲಯಿತ್ವಾ ಮಹೀಂ ಚ|

12025029c ತಸ್ಮಾದ್ರಾಜಾ ಧರ್ಮಶೀಲೋ ಮಹಾತ್ಮಾ
ಹಯಗ್ರೀವೋ ಮೋದತೇ ಸ್ವರ್ಗಲೋಕೇ॥

ಧರ್ಮಶೀಲ ಮಹಾತ್ಮ ರಾಜಾ ಹಯಗ್ರೀವನು ದೈವೀ ಸಿದ್ಧಿಯನ್ನೂ ಮಾನುಷ ದಂಡನೀತಿಯನ್ನೂ ಬಳಸಿ ಯೋಗ-ನ್ಯಾಯಗಳಿಂದ ಭೂಮಿಯನ್ನು ಆಳಿ ಸ್ವರ್ಗಲೋಕದಲ್ಲಿ ಮೋದಿಸುತ್ತಿದ್ದಾನೆ.

12025030a ವಿದ್ವಾಂಸ್ತ್ಯಾಗೀ ಶ್ರದ್ದಧಾನಃ ಕೃತಜ್ಞಸ್
ತ್ಯಕ್ತ್ವಾ ಲೋಕಂ ಮಾನುಷಂ ಕರ್ಮ ಕೃತ್ವಾ|
12025030c ಮೇಧಾವಿನಾಂ ವಿದುಷಾಂ ಸಂಮತಾನಾಂ
ತನುತ್ಯಜಾಂ ಲೋಕಮಾಕ್ರಮ್ಯ ರಾಜಾ॥

ವಿದ್ವಾಂಸನೂ, ತ್ಯಾಗಿಯೂ, ಶದ್ಧಾಳುವೂ, ಕೃತಜ್ಞನೂ ಆಗಿದ್ದ ರಾಜಾ ಹಯಗ್ರೀವನು ಮಾನುಷ ಕರ್ಮವನ್ನು ಮಾಡಿ ದೇಹವನ್ನು ತ್ಯಜಿಸಿ ಮೇಧಾವಿಗಳಿಗೂ, ಸರ್ವಸನ್ಮಾನ್ಯರಿಗೂ, ಜ್ಞಾನಿಗಳಿಗೂ ದೊರಕುವ ಲೋಕವನ್ನು ಆಕ್ರಮಣಿಸಿದ್ದಾನೆ.

12025031a ಸಮ್ಯಗ್ವೇದಾನ್ಪ್ರಾಪ್ಯ ಶಾಸ್ತ್ರಾಣ್ಯಧೀತ್ಯ
ಸಮ್ಯಗ್ರಾಷ್ಟ್ರಂ ಪಾಲಯಿತ್ವಾ ಮಹಾತ್ಮಾ|
12025031c ಚಾತುರ್ವರ್ಣ್ಯಂ ಸ್ಥಾಪಯಿತ್ವಾ ಸ್ವಧರ್ಮೇ
ವಾಜಿಗ್ರೀವೋ ಮೋದತೇ ದೇವಲೋಕೇ॥

ಸರ್ವವೇದಗಳನ್ನೂ ಪಡೆದು ಶಾಸ್ತ್ರಗಳನ್ನು ತಿಳಿದುಕೊಂಡು ಸಂಪೂರ್ಣ ರಾಷ್ಟ್ರವನ್ನು ಪಾಲಿಸುತ್ತ, ಸ್ವಧರ್ಮದಿಂದ ಚಾತುರ್ವರ್ಣಗಳನ್ನು ಸಂಸ್ಥಾಪಿಸಿ ಆ ಮಹಾತ್ಮ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ.

12025032a ಜಿತ್ವಾ ಸಂಗ್ರಾಮಾನ್ಪಾಲಯಿತ್ವಾ ಪ್ರಜಾಶ್ಚ
ಸೋಮಂ ಪೀತ್ವಾ ತರ್ಪಯಿತ್ವಾ ದ್ವಿಜಾಗ್ರ್ಯಾನ್|
12025032c ಯುಕ್ತ್ವಾ ದಂಡಂ ಧಾರಯಿತ್ವಾ ಪ್ರಜಾನಾಂ
ಯುದ್ಧೇ ಕ್ಷೀಣೋ ಮೋದತೇ ದೇವಲೋಕೇ||

ಸಂಗ್ರಾಮಗಳನ್ನು ಗೆದ್ದು, ಪ್ರಜೆಗಳನ್ನು ಪಾಲಿಸಿ, ಸೋಮವನ್ನು ಕುಡಿದು, ದ್ವಿಜಾಗ್ರರಿಗೆ ತರ್ಪಣೆಗಳನ್ನಿತ್ತು, ದಂಡನೀತಿಯನ್ನು ಧರಿಸಿ ಪ್ರಜೆಗಳನ್ನು ಪಾಲಿಸಿ, ಯುದ್ಧದಲ್ಲಿ ಅಸುನೀಗಿದ ಹಯಗ್ರೀವನು ದೇವಲೋಕದಲ್ಲಿ ಮೋದಿಸುತ್ತಿದ್ದಾನೆ.

12025033a ವೃತ್ತಂ ಯಸ್ಯ ಶ್ಲಾಘನೀಯಂ ಮನುಷ್ಯಾಃ
ಸಂತೋ ವಿದ್ವಾಂಸಶ್ಚಾರ್ಹಯಂತ್ಯರ್ಹಣೀಯಾಃ|
12025033c ಸ್ವರ್ಗಂ ಜಿತ್ವಾ ವೀರಲೋಕಾಂಶ್ಚ ಗತ್ವಾ
ಸಿದ್ಧಿಂ ಪ್ರಾಪ್ತಃ ಪುಣ್ಯಕೀರ್ತಿರ್ಮಹಾತ್ಮಾ||

ಸಂತರೂ ವಿದ್ವಾಂಸರೂ ಆದ ಮನುಷ್ಯರು ಯಾರ ನಡತೆಯನ್ನು ಅರ್ಹರೀತಿಯಲ್ಲಿ ಶ್ಲಾಘಿಸುತ್ತಿರುವರೋ ಆ ಮಹಾತ್ಮನು ಸ್ವರ್ಗವನ್ನು ಗೆದ್ದು, ವೀರಲೋಕಗಳನ್ನು ಸೇರಿ, ಸಿದ್ಧಿಯನ್ನು ಪಡೆದು ಪುಣ್ಯಕೀರ್ತಿಯನ್ನೂ ಪಡೆದನು.””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವ್ಯಾಸವಾಕ್ಯೇ ಪಂಚವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವ್ಯಾಸವಾಕ್ಯ ಎನ್ನುವ ಇಪ್ಪತ್ತೈದನೇ ಅಧ್ಯಾಯವು.

೨೬

ಸೇನಜಿದುಪಾಖ್ಯಾನ

ಸೇನಜಿತುವಿನ ಉಪದೇಶಯುಕ್ತ ಉದ್ಗಾರಗಳನ್ನು ಉಲ್ಲೇಖಿಸಿ ವ್ಯಾಸನು ಯುಧಿಷ್ಠಿರನಿಗೆ ತಿಳಿಯ ಹೇಳಿದುದು (1-36).

12026001 ವೈಶಂಪಾಯನ ಉವಾಚ|
12026001a ದ್ವೈಪಾಯನವಚಃ ಶ್ರುತ್ವಾ ಕುಪಿತೇ ಚ ಧನಂಜಯೇ|
12026001c ವ್ಯಾಸಮಾಮಂತ್ರ್ಯ ಕೌಂತೇಯಃ ಪ್ರತ್ಯುವಾಚ ಯುಧಿಷ್ಠಿರಃ||

ವೈಶಂಪಾಯನನು ಹೇಳಿದನು: "ಧನಂಜಯನು ಕುಪಿತನಾಗಿರಲು, ದ್ವೈಪಾಯನನ ಮಾತನ್ನು ಕೇಳಿ ಕೌಂತೇಯ ಯುಧಿಷ್ಠಿರನು ವ್ಯಾಸನನ್ನು ಉದ್ದೇಶಿಸಿ ಈ ಮಾತುಗಳನ್ನಾಡಿದನು:

12026002a ನ ಪಾರ್ಥಿವಮಿದಂ ರಾಜ್ಯಂ ನ ಚ ಭೋಗಾಃ ಪೃಥಗ್ವಿಧಾಃ|
12026002c ಪ್ರೀಣಯಂತಿ ಮನೋ ಮೇಽದ್ಯ ಶೋಕೋ ಮಾಂ ನರ್ದಯತ್ಯಯಮ್||

"ಭೂಮಿಯ ಈ ರಾಜ್ಯವೂ ನಾನಾವಿಧದ ಭೋಗಗಳೂ ಇಂದು ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿಲ್ಲ. ಶೋಕವೇ ನನ್ನನ್ನು ಹಿಂಡುತ್ತಿದೆ.

12026003a ಶ್ರುತ್ವಾ ಚ ವೀರಹೀನಾನಾಮಪುತ್ರಾಣಾಂ ಚ ಯೋಷಿತಾಮ್|
12026003c ಪರಿದೇವಯಮಾನಾನಾಂ ಶಾಂತಿಂ ನೋಪಲಭೇ ಮುನೇ||

ಮುನೇ! ವೀರಪತಿಗಳಿಂದಲೂ, ಪುತ್ರರಿಂದಲೂ ವಿಹೀನರಾದ ಸ್ತ್ರೀಯರ ವಿಲಾಪಗಳಿಂದ ನನ್ನ ಮನಸ್ಸಿಗೆ ಶಾಂತಿಯೇ

ದೊರೆಯದಂತಾಗಿದೆ.”

12026004a ಇತ್ಯುಕ್ತಃ ಪ್ರತ್ಯುವಾಚೇದಂ ವ್ಯಾಸೋ ಯೋಗವಿದಾಂ ವರಃ|
12026004c ಯುಧಿಷ್ಠಿರಂ ಮಹಾಪ್ರಾಜ್ಞಂ ಧರ್ಮಜ್ಞೋ ವೇದಪಾರಗಃ||

ಹೀಗೆ ಹೇಳಲು ಯೋಗಜ್ಞಾನಿಗಳಲ್ಲಿ ಶ್ರೇಷ್ಠ ಧರ್ಮಜ್ಞ ವೇದಪಾರಗ ವ್ಯಾಸನು ಮಹಾಪ್ರಾಜ್ಞ ಯುಧಿಷ್ಠಿರನಿಗೆ ಇಂತೆಂದನುಃ

12026005a ನ ಕರ್ಮಣಾ ಲಭ್ಯತೇ ಚಿಂತಯಾ ವಾ
ನಾಪ್ಯಸ್ಯ ದಾತಾ ಪುರುಷಸ್ಯ ಕಶ್ಚಿತ್|
12026005c ಪರ್ಯಾಯಯೋಗಾದ್ವಿಹಿತಂ ವಿಧಾತ್ರಾ
ಕಾಲೇನ ಸರ್ವಂ ಲಭತೇ ಮನುಷ್ಯಃ||

“ಕರ್ಮಮಾಡುವುದರಿಂದಾಗಲೀ ಚಿಂತಿಸುತ್ತಿರುವುದರಿಂದಾಗಲೀ ಬೇಕಾಗಿರುವುದು ಸಿಗುವುದಿಲ್ಲ. ಮನುಷ್ಯನಿಗೆ ಬೇಕಾದುದನ್ನು ಕೊಡುವವರೂ ಯಾರೂ ಇಲ್ಲ. ಪರ್ಯಾಯಯೋಗದಿಂದ ವಿಧಾತ್ರನು ವಿಹಿಸಿದುದೆಲ್ಲವನ್ನೂ ಮನುಷ್ಯನು ಕಾಲ ಬಂದಾಗ ಪಡೆಯುತ್ತಾನೆ.

12026006a ನ ಬುದ್ಧಿಶಾಸ್ತ್ರಾಧ್ಯಯನೇನ ಶಕ್ಯಂ
ಪ್ರಾಪ್ತುಂ ವಿಶೇಷೈರ್ಮನುಜೈರಕಾಲೇ|
12026006c ಮೂರ್ಖೋಽಪಿ ಪ್ರಾಪ್ನೋತಿ ಕದಾ ಚಿದರ್ಥಾನ್
ಕಾಲೋ ಹಿ ಕಾರ್ಯಂ ಪ್ರತಿ ನಿರ್ವಿಶೇಷಃ||

ಬುದ್ಧಿಯಿಂದಾಗಲೀ, ಶಾಸ್ತ್ರಾಧ್ಯಯನದಿಂದಾಗಲೀ ಮನುಷ್ಯನು ಯೋಗವಿರದ ಕಾಲದಲ್ಲಿ ವಿಶೇಷ ಫಲವನ್ನು ಹೊಂದಲು ಸಾಧ್ಯವಿಲ್ಲ. ಕಾಲವು ಒದಗಿಬಂದಿತೆಂದರೆ ಮೂರ್ಖನೂ ಯಥೇಚ್ಛ ಐಶ್ವರ್ಯವನ್ನು ಪಡೆದುಕೊಳ್ಳುತ್ತಾನೆ. ಏಕೆಂದರೆ ಕಾರ್ಯಫಲಗಳಲ್ಲಿ ಕಾಲವೇ

ವಿಶೇಷಪಾತ್ರವನ್ನು ವಹಿಸುತ್ತದೆ.

12026007a ನಾಭೂತಿಕಾಲೇ ಚ ಫಲಂ ದದಾತಿ
ಶಿಲ್ಪಂ ನ ಮಂತ್ರಾಶ್ಚ ತಥೌಷಧಾನಿ|
12026007c ತಾನ್ಯೇವ ಕಾಲೇನ ಸಮಾಹಿತಾನಿ
ಸಿಧ್ಯಂತಿ ಚೇಧ್ಯಂತಿ ಚ ಭೂತಿಕಾಲೇ||

ಯೋಗವಿಲ್ಲದಿರುವಾಗ ಶಿಲ್ಪವಾಗಲೀ, ಮಂತ್ರಗಳಾಗಲೀ, ಔಷಧಿಗಳಾಗಲೀ ಫಲವನ್ನೀಯುವುದಿಲ್ಲ. ಆದರೆ ಇವೇ ಉತ್ತಮ ಯೋಗವಿರುವಾಗ ಕಾಲದ ಪ್ರೇರಣೆಯಿಂದ ಸಿದ್ಧಿಯುಂಟಾಗುತ್ತವೆ.

12026008a ಕಾಲೇನ ಶೀಘ್ರಾಃ ಪ್ರವಿವಾಂತಿ ವಾತಾಃ
ಕಾಲೇನ ವೃಷ್ಟಿರ್ಜಲದಾನುಪೈತಿ|
12026008c ಕಾಲೇನ ಪದ್ಮೋತ್ಪಲವಜ್ಜಲಂ ಚ
ಕಾಲೇನ ಪುಷ್ಯಂತಿ ನಗಾ ವನೇಷು||

ಕಾಲಕ್ಕೆ ಸರಿಯಾಗಿಯೇ ಭಿರುಗಾಳಿಯು ಬೀಸುತ್ತದೆ. ಕಾಲಕ್ಕೆ ತಕ್ಕಂತೆಯೇ ಮೋಡಗಳು ಮಳೆಯನ್ನು ಸುರಿಸುತ್ತವೆ. ಕಾಲಕ್ಕೆ ಸರಿಯಾಗಿಯೇ ಪದ್ಮಗಳು ಅರಳುತ್ತವೆ. ಕಾಲಕ್ಕೆ ತಕ್ಕಂತೆಯೇ ಅರಣ್ಯದ ವೃಕ್ಷಗಳು ಚಿಗುರಿ ಹುಲುಸಾಗುತ್ತವೆ.

12026009a ಕಾಲೇನ ಕೃಷ್ಣಾಶ್ಚ ಸಿತಾಶ್ಚ ರಾತ್ರ್ಯಃ
ಕಾಲೇನ ಚಂದ್ರಃ ಪರಿಪೂರ್ಣಬಿಂಬಃ|
12026009c ನಾಕಾಲತಃ ಪುಷ್ಪಫಲಂ ನಗಾನಾಂ
ನಾಕಾಲವೇಗಾಃ ಸರಿತೋ ವಹಂತಿ||

ಕಾಲಾನುಗುಣವಾಗಿ ರಾತ್ರಿಗಳು ಕಪ್ಪಾಗಿಯೂ ಬೆಳದಿಂಗಳಾಗಿಯೂ

ಇರುತ್ತವೆ. ಕಾಲಕ್ಕೆ ತಕ್ಕಂತೆಯೇ ಚಂದ್ರನು
ಪರಿಪೂರ್ಣ ಬಿಂಬನಾಗುತ್ತಾನೆ. ಅಕಾಲದಲ್ಲಿ ವೃಕ್ಷಗಳು ಪುಷ್ಪ-
ಫಲಗಳನ್ನು ಪಡೆಯುವುದಿಲ್ಲ. ಅಕಾಲದಲ್ಲಿ ನದಿಗಳು
ಪೂರ್ಣವೇಗದಲ್ಲಿ ಹರಿಯುವುದಿಲ್ಲ.

12026010a ನಾಕಾಲಮತ್ತಾಃ ಖಗಪನ್ನಗಾಶ್ಚ
ಮೃಗದ್ವಿಪಾಃ ಶೈಲಮಹಾಗ್ರಹಾಶ್ಚ|
12026010c ನಾಕಾಲತಃ ಸ್ತ್ರೀಷು ಭವಂತಿ ಗರ್ಭಾ
ನಾಯಾಂತ್ಯಕಾಲೇ ಶಿಶಿರೋಷ್ಣವರ್ಷಾಃ||

ಪಕ್ಷಿಗಳಾಗಲೀ, ಸರ್ಪಗಳಾಗಲೀ, ಮೃಗಗಳಾಗಲೀ, ಆನೆಗಳಾಗಲೀ,
ಪರ್ವತಗಳಲ್ಲಿ ವಾಸಿಸುವ ಮಹಾಮೃಗಗಳಾಗಲೀ ಅವುಗಳ ಕಾಲವು
ಬಾರದೇ ಮದಿಸುವುದಿಲ್ಲ. ಸ್ತ್ರೀಯರು ತಮ್ಮ ಕಾಲವು ಬರದೇ
ಗರ್ಭವನ್ನು ಧರಿಸುವುದಿಲ್ಲ. ಅಕಾಲದಲ್ಲಿ ಛಳಿ, ಸೆಖೆ ಮತ್ತು
ಮಳೆಗಳಾಗುವುದಿಲ್ಲ.

12026011a ನಾಕಾಲತೋ ಮ್ರಿಯತೇ ಜಾಯತೇ ವಾ
ನಾಕಾಲತೋ ವ್ಯಾಹರತೇ ಚ ಬಾಲಃ|
12026011c ನಾಕಾಲತೋ ಯೌವನಮಭ್ಯುಪೈತಿ
ನಾಕಾಲತೋ ರೋಹತಿ ಬೀಜಮುಪ್ತಮ್||

ಕಾಲ ಬಾರದೇ ಶಿಶುವು ಹುಟ್ಟುವುದಿಲ್ಲ. ಕಾಲ ಬಾರದೇ ಅದು
ಮಾತನಾಡುವುದೂ ಇಲ್ಲ. ಕಾಲಬಾರದೇ ಅದು ಯೌವನವನ್ನು
ಹೊಂದುವುದಿಲ್ಲ. ಹಾಗೆಯೇ ಕಾಲಬಾರದೇ ಅದು ಸಾಯುವುದೂ
ಇಲ್ಲ.

12026012a ನಾಕಾಲತೋ ಭಾನುರುಪೈತಿ ಯೋಗಂ
ನಾಕಾಲತೋಽಸ್ತಂ ಗಿರಿಮಭ್ಯುಪೈತಿ|
12026012c ನಾಕಾಲತೋ ವರ್ಧತೇ ಹೀಯತೇ ಚ
ಚಂದ್ರಃ ಸಮುದ್ರಶ್ಚ ಮಹೋರ್ಮಿಮಾಲೀ||

ಅಕಾಲದಲ್ಲಿ ಸೂರ್ಯನು ಉದಯಿಸುವುದಿಲ್ಲ ಮತ್ತು ಅಕಾಲದಲ್ಲಿ ಸೂರ್ಯನು ಅಸ್ತಂಗತನೂ ಆಗುವುದಿಲ್ಲ. ಅಕಾಲದಲ್ಲಿ ಚಂದ್ರನಾಗಲೀ ಮಹಾ ಅಲೆಗಳುಳ್ಳ ಸಮುದ್ರವಾಗಲೀ ವರ್ಧಿಸುವುದಿಲ್ಲ ಮತ್ತು ಕ್ಷೀಣಿಸುವುದೂ ಇಲ್ಲ.

12026013a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12026013c ಗೀತಂ ರಾಜ್ಞಾ ಸೇನಜಿತಾ ದುಃಖಾರ್ತೇನ ಯುಧಿಷ್ಠಿರ||

ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾಗಿರುವ, ದುಃಖಾರ್ತನಾಗಿದ್ದ ರಾಜಾ ಸೇನಜಿತುವು ಹೇಳಿದ ಗೀತೆಯನ್ನು ಉದಾಹರಿಸುತ್ತಾರೆ.

12026014a ಸರ್ವಾನೇವೈಷ ಪರ್ಯಾಯೋ ಮರ್ತ್ಯಾನ್ ಸ್ಪೃಶತಿ ದುಸ್ತರಃ|
12026014c ಕಾಲೇನ ಪರಿಪಕ್ವಾ ಹಿ ಮ್ರಿಯಂತೇ ಸರ್ವಮಾನವಾಃ||

“ದುಸ್ತರವಾಗಿ ತಿರುಗುತ್ತಿರುವ ಕಾಲವು ಸರ್ವಮನುಷ್ಯರ ಮೇಲೂ ಪ್ರಭಾವಬೀರುತ್ತದೆ. ಸರ್ವಮಾನವರೂ ಕಾಲವು ಪರಿಪಕ್ವವಾಗಿ ಮರಣಹೊಂದುತ್ತಾರೆ.

12026015a ಘ್ನಂತಿ ಚಾನ್ಯಾನ್ನರಾ ರಾಜಂಸ್ತಾನಪ್ಯನ್ಯೇ ನರಾಸ್ತಥಾ|
12026015c ಸಂಜ್ಞೈಷಾ ಲೌಕಿಕೀ ರಾಜನ್ನ ಹಿನಸ್ತಿ ನ ಹನ್ಯತೇ||

ರಾಜನ್! ಕೆಲವು ಮನುಷ್ಯರು ಕೆಲವರನ್ನು ಸಂಹರಿಸುತ್ತಾರೆ. ಸಂಹರಿಸಿದ ಅವರನ್ನೂ ಇನ್ನು ಕೆಲವರು ಸಂಹರಿಸುತ್ತಾರೆ. ಆದರೆ ಒಬ್ಬರು ಇನ್ನೊಬ್ಬರನ್ನು ಕೊಂದರೆನ್ನುವುದು ಒಂದು ಲೌಕಿಕವಾದ ಸಂಜ್ಞೆಯಾಗಿರುತ್ತದೆ. ನಿಜವಾಗಿ ನೋಡಿದರೆ ಯಾರೂ ಕೊಲ್ಲುವುದಿಲ್ಲ ಯಾರೂ ಕೊಲ್ಲಲ್ಪಡುವುದೂ ಇಲ್ಲ.

12026016a ಹಂತೀತಿ ಮನ್ಯತೇ ಕಶ್ಚಿನ್ನ ಹಂತೀತ್ಯಪಿ ಚಾಪರೇ|
12026016c ಸ್ವಭಾವತಸ್ತು ನಿಯತೌ ಭೂತಾನಾಂ ಪ್ರಭವಾಪ್ಯಯೌ||

ಕೊಲ್ಲುತ್ತಾರೆ ಎಂದು ಕೆಲವರು ಅಭಿಪ್ರಾಯಪಟ್ಟರೆ ಕೊಲ್ಲಲ್ಪಡಲಿಲ್ಲ ಎಂದು ಇತರರು ತಿಳಿದುಕೊಳ್ಳುತ್ತಾರೆ. ಸ್ವಭಾವತಃ ಪ್ರಾಣಿಗಳ ಹುಟ್ಟು ಮತ್ತು ಮರಣ ಇವೆರಡೂ ವಿಧಿವಿಹಿತವಾಗಿವೆ.

12026017a ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ|
12026017c ಅಹೋ ಕಷ್ಟಮಿತಿ ಧ್ಯಾಯನ್ಮೋಕಸ್ಯಾಪಚಿತಿಂ ಚರೇತ್||

ಧನವು ನಷ್ಟವಾಗಲೀ ಅಥವಾ ಪತ್ನಿಯಾಗಲೀ, ಪುತ್ರನಾಗಲೀ ಅಥವಾ ಪಿತನಾಗಲೀ ಮೃತನಾಗಲೀ "ಅಯ್ಯೋ ಕಷ್ಟವೇ!" ಎಂದು ಯೋಚಿಸಿ, ಶೋಕವನ್ನು ಕಡಿಮೆಮಾಡಿಕೊಳ್ಳಬೇಕು.

12026018a ಸ ಕಿಂ ಶೋಚಸಿ ಮೂಢಃ ಸನ್ಮೋಚ್ಯಃ ಕಿಮನುಶೋಚಸಿ|
12026018c ಪಶ್ಯ ದುಃಖೇಷು ದುಃಖಾನಿ ಭಯೇಷು ಚ ಭಯಾನ್ಯಪಿ||

ಆದರೆ ನೀನು ಏಕೆ ಹೀಗೆ ಮೂಢನಾಗಿ ಶೋಕವನ್ನು ಹೆಚ್ಚಿಸಿಕೊಳ್ಳುತ್ತಿರುವೆ? ದುಃಖಿಪಡುವುದರಿಂದ ದುಃಖವೂ ಮತ್ತು ಭಯಪಡುವುದರಿಂದ ಭಯವೂ ಹೆಚ್ಚಾಗುತ್ತದೆ.

12026019a ಆತ್ಮಾಪಿ ಚಾಯಂ ನ ಮಮ ಸರ್ವಾಪಿ ಪೃಥಿವೀ ಮಮ|
12026019c ಯಥಾ ಮಮ ತಥಾನ್ಯೇಷಾಮಿತಿ ಪಶ್ಯನ್ನ ಮುಹ್ಯತಿ||

ನನಗೆ ನಾನೂ ಮತ್ತು ಈ ಸರ್ವ ಭೂಮಿಯೂ ಹೇಗೆ ನನ್ನದಲ್ಲವೋ ಹಾಗೆ ಅನ್ಯರ ದೇಹಗಳೂ, ರಾಜ್ಯಗಳೂ ಅವರದ್ದಲ್ಲ ಎಂದು ಕಾಣುವವನು ಹೀಗೆ ಮೋಹಪಡುವುದಿಲ್ಲ.

12026020a ಶೋಕಸ್ಥಾನಸಹಸ್ರಾಣಿ ಹರ್ಷಸ್ಥಾನಶತಾನಿ ಚ|
12026020c ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್||

ಶೋಕಪಡುವುದಕ್ಕೆ ಸಹಸ್ರಾರು ಕಾರಣಗಳೂ, ಹರ್ಷಿಸುವುದಕ್ಕೆ ನೂರಾರು ಕಾರಣಗಳೂ ಪ್ರತಿದಿನ ಮೂಢನನ್ನು ಕಾಡುತ್ತಿರುತ್ತವೆ. ಆದರೆ ಪಂಡಿತನನ್ನಲ್ಲ!

12026021a ಏವಮೇತಾನಿ ಕಾಲೇನ ಪ್ರಿಯದ್ವೇಷ್ಯಾಣಿ ಭಾಗಶಃ|
12026021c ಜೀವೇಷು ಪರಿವರ್ತಂತೇ ದುಃಖಾನಿ ಚ ಸುಖಾನಿ ಚ||

ಹೀಗೆ ಪ್ರಿಯ-ಅಪ್ರಿಯ ಸಮಯಗಳು ಮತ್ತು ದುಃಖ-ಸುಖಿಗಳು ಜೀವಿಗೆ ಕಾಲಾನುಗುಣವಾಗಿ ಒಂದರ ನಂತರ ಇನ್ನೊಂದು ತಿರುಗಿ ತಿರುಗಿ ಬರುತ್ತಲೇ ಇರುತ್ತವೆ.

12026022a ದುಃಖಮೇವಾಸ್ತಿ ನ ಸುಖಂ ತಸ್ಮಾತ್ತದುಪಲಭ್ಯತೇ|
12026022c ತೃಷ್ಣಾರ್ತಿಪ್ರಭವಂ ದುಃಖಂ ದುಃಖಾರ್ತಿಪ್ರಭವಂ ಸುಖಮ್||

ಜೀವಿಗಳಿಗೆ ದುಃಖವಿರುವುದೇ ಹೊರತು ಸುಖವೆನ್ನುವುದು ಇಲ್ಲ. ಆದುದರಿಂದಲೇ ಅಡಿಗಡಿಗೆ ದುಃಖವೇ ಆಗುತ್ತಿರುತ್ತದೆ. ಆಸೆಗಳಿಂದಲೇ ದುಃಖವು ಹುಟ್ಟುತ್ತದೆ. ದುಃಖದ ವಿನಾಶವೇ ಸುಖ.

12026023a ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್|
12026023c ನ ನಿತ್ಯಂ ಲಭತೇ ದುಃಖಂ ನ ನಿತ್ಯಂ ಲಭತೇ ಸುಖಮ್||

ಸುಖದ ನಂತರ ದುಃಖ ಮತ್ತು ದುಃಖದ ನಂತರ ಸುಖ. ದುಃಖವು ಯಾವಾಗಲೂ ಇರುವುದಿಲ್ಲ ಮತು ಸುಖವೂ ಯಾವಾಗಲೂ ಇರುವುದಿಲ್ಲ.

12026024a ಸುಖಮಂತೇ ಹಿ ದುಃಖಾನಾಂ ದುಃಖಮಂತೇ ಸುಖಸ್ಯ ಚ|
12026024c ತಸ್ಮಾದೇತದ್ದ್ವಯಂ ಜಹ್ಯಾದ್ಯ ಇಚ್ಛೇಚ್ಚಾಶ್ವತಂ ಸುಖಮ್||

ಏಕೆಂದರೆ ಸುಖದ ಅಂತ್ಯವೇ ದುಃಖ ಮತ್ತು ದುಃಖದ ಅಂತ್ಯವೇ ಸುಖ. ಆದುದರಿಂದ ಇವೆರಡನ್ನೂ ತ್ಯಜಿಸಿ ಇಂದು ಶಾಶ್ವತ ಸುಖವನ್ನು ಬಯಸು.

12026025a ಯನ್ನಿಮಿತ್ತಂ ಭವೇಚ್ಚೋಕಸ್ತಾಪೋ ವಾ ದುಃಖಮೂರ್ಚಿತಃ|
12026025c ಆಯಾಸೋ ವಾಪಿ ಯನ್ಮೂಲಸ್ತದೇಕಾಂಗಮಪಿ ತ್ಯಜೇತ್||

ಯಾವಕಾರಣದಿಂದ ಶೋಕವಾಗಲೀ, ತಾಪವಾಗಲೀ, ದುಃಖವಾಗಲೀ, ಆಯಾಸವಾಗಲೀ ಉಂಟಾಗುತ್ತದೆಯೋ ಅದರ ಮೂಲವನ್ನೇ, ಅದು ಶರೀರದ ಒಂದು ಅಂಗವಾಗಿದ್ದರೂ, ಕಿತ್ತೊಗೆಯಬೇಕು.

12026026a ಸುಖಂ ವಾ ಯದಿ ವಾ ದುಃಖಂ ಪ್ರಿಯಂ ವಾ ಯದಿ ವಾಪ್ರಿಯಮ್|
12026026c ಪ್ರಾಪ್ತಂ ಪ್ರಾಪ್ತಮುಪಾಸೀತ ಹೃದಯೇನಾಪರಾಜಿತಃ||

ಸುಖವಾಗಲೀ, ದುಃಖವಾಗಲೀ, ಪ್ರಿಯವಾದದ್ದಾಗಲೀ,
ಅಪ್ರಿಯವಾದದ್ದಾಗಲೀ ಅವುಗಳು ಬಂದಹಾಗೆಯೇ,
ಸೋಲನ್ನಪ್ಪಿಕೊಳ್ಳದೇ, ಸಂತೋಷದಿಂದ ಅನುಭವಿಸಬೇಕು.

12026027a ಈಷದಪ್ಯಂಗ ದಾರಾಣಾಂ ಪುತ್ರಾಣಾಂ ವಾ ಚರಾಪ್ರಿಯಮ್|
12026027c ತತೋ ಜ್ಞಾಸ್ಯಸಿ ಕಃ ಕಸ್ಯ ಕೇನ ವಾ ಕಥಮೇವ ವಾ||

ಅಂಗ! ನಿನ್ನ ಪತ್ನಿಯರಿಗೆ ಅಥವಾ ಮಕ್ಕಳಿಗೆ ಸ್ವಲ್ಪವಾದರೂ ಅಪ್ರಿಯವಾದುದನ್ನು ಮಾಡು. ಆಗ ನೀನು ಯಾರು, ಯಾರಿಗೆ ಸೇರಿದವನು, ಯಾರಿಂದ ಇಲ್ಲಿಗೆ ಬಂದಿರುವೆ ಮತ್ತು ಹೇಗೆ ಬಂದಿರುವೆ ಎನ್ನುವುದನ್ನು ತಿಳಿದುಕೊಳ್ಳುತ್ತೀಯೆ.

12026028a ಯೇ ಚ ಮೂಢತಮಾ ಲೋಕೇ ಯೇ ಚ ಬುದ್ಧೇಃ ಪರಂ ಗತಾಃ|
12026028c ತ ಏವ ಸುಖಮೇಧಂತೇ ಮಧ್ಯಃ ಕ್ಲೇಶೇನ ಯುಜ್ಯತೇ||

ಅತ್ಯಂತ ಮೂಢರಾದವರು ಮತ್ತು ಅತ್ಯಂತ ಬುದ್ಧಿಶಾಲಿಗಳು ಮಾತ್ರ ಈ ಲೋಕದಲ್ಲಿ ಪರಮ ಸುಖವನ್ನು ಹೊಂದುತ್ತಾರೆ. ಮಧ್ಯವರ್ತಿಗಳು ಕ್ಲೇಶಪಡುತ್ತಲೇ ಇರುತ್ತಾರೆ.”

12026029a ಇತ್ಯಬ್ರವೀನ್ಮಹಾಪ್ರಾಜ್ಞೋ ಯುಧಿಷ್ಠಿರ ಸ ಸೇನಜಿತ್|
12026029c ಪರಾವರಜ್ಞೋ ಲೋಕಸ್ಯ ಧರ್ಮವಿತ್ಸುಖದುಃಖವಿತ್||

ಯುಧಿಷ್ಠಿರ! ಭೂತ-ಭವಿಷ್ಯಗಳನ್ನೂ ಲೋಕಗಳ ಧರ್ಮವನ್ನೂ, ಸುಖ-ದುಃಖಗಳನ್ನೂ ತಿಳಿದಿದ್ದ ಮಹಾಪ್ರಾಜ್ಞ ಸೇನಜಿತುವು ಹೀಗೆ ಹೇಳಿದನು:

12026030a ಸುಖೀ ಪರಸ್ಯ ಯೋ ದುಃಖೇ ನ ಜಾತು ಸ ಸುಖೀ ಭವೇತ್|[42]

[42] ಯೇನ ದುಃಖೇನ ಯೋ ದುಃಖೀ ನ ಸ ಜಾತು ಸುಖೀ ಭವೇತ್| ಅರ್ಥಾತ್ ಯಾವನು ತನಗೆ ಒದಗಿದ ಯಾವುದೋ ದುಃಖದಿಂದ ದುಃಖಶೀಲನಾಗಿಯೇ ಇರುತ್ತಾನೆಯೋ ಅವನು ಎಂದಿಗೂ ಸುಖಿಯಾಗುವುದೇ ಇಲ್ಲ ಎಂದು ಭಾರತ

12026030c ದುಃಖಾನಾಂ ಹಿ ಕ್ಷಯೋ ನಾಸ್ತಿ ಜಾಯತೇ ಹ್ಯಪರಾತ್ಪರಮ್‌॥

ಇತರರ ದುಃಖವನ್ನು ನೋಡಿ ಖುಷಿಪಡುವವನಿಗೆ ಸುಖವೆಂಬುದೇ ಇರುವುದಿಲ್ಲ. ದುಃಖಗಳಿಗೆ ಕೊನೆಯೆಂಬುದೇ ಇಲ್ಲ. ಒಂದರ ಮೇಲೆ ಒಂದು ದುಃಖವು ಬರುತ್ತಲೇ ಇರುತ್ತದೆ.

12026031a ಸುಖಂ ಚ ದುಃಖಂ ಚ ಭವಾಭವೌ ಚ
ಲಾಭಾಲಾಭೌ ಮರಣಂ ಜೀವಿತಂ ಚ|
12026031c ಪರ್ಯಾಯಶಃ ಸರ್ವಮಿಹ ಸ್ಪೃಶಂತಿ
ತಸ್ಮಾದ್ಧೀರೋ ನೈವ ಹೃಷ್ಯೇನ್ನ ಕುಪ್ಯೇತ್‌[43]‌॥

ಸುಖ-ದುಃಖಗಳೂ, ಲಾಭ-ನಷ್ಟಗಳೂ, ಜನನ-ಮರಣಗಳು, ಉತ್ಪತ್ತಿ-ವಿನಾಶಗಳೂ ಒಂದಾದ ಮೇಲೆ ಇನ್ನೊಂದರಂತೆ ಪರ್ಯಾಯವಾಗಿ ಜೀವಿಗಳಿಗೆ ತಟ್ಟುತ್ತಲೇ ಇರುತ್ತವೆ. ಆದುದರಿಂದ ಧೀರನಾದವನು ಇವುಗಳ ಕುರಿತು ಹರ್ಷಿಸುವುದೂ ಇಲ್ಲ, ಕುಪಿತನಾಗುವುದೂ ಇಲ್ಲ.

12026032a ದೀಕ್ಷಾಂ ಯಜ್ಞೇ ಪಾಲನಂ ಯುದ್ಧಮಾಹುರ್
ಯೋಗಂ ರಾಷ್ಟ್ರೇ ದಂಡನೀತ್ಯಾ ಚ ಸಮ್ಯಕ್‌|
12026032c ವಿತ್ತತ್ಯಾಗಂ ದಕ್ಷಿಣಾನಾಂ ಚ ಯಜ್ಞೇ
ಸಮ್ಯಗ್‌ ಜ್ಞಾನಂ ಪಾವನಾನೀತಿ ವಿದ್ಯಾತ್‌॥

ಯುದ್ಧವೇ ಯಜ್ಞ ದೀಕ್ಷೆಯೆಂದೂ, ರಾಷ್ಟ್ರವನ್ನು ದಂಡನೀತಿಯಿಂದ

ದರ್ಶನದಲ್ಲಿದೆ.

[43] ಭಾರತ ದರ್ಶನದಲ್ಲಿ “ನ ಕುಪ್ಯೇತ್‌” ಎಂಬುದರ ಬದಲಾಗಿ “ನ ಶೋಚೇತ್‌” ಅಂದರೆ “ಶೋಕಿಸಬಾರದು” ಎಂದಿದೆ.

ಪಾಲಿಸುವುದನ್ನು ಯೋಗವೆಂದೂ, ಯಜ್ಞಗಳಲ್ಲಿ ಸಂಪತ್ತನ್ನು ದಕ್ಷಿಣೆಯಾಗಿ ಕೊಡುವುದನ್ನು ತ್ಯಾಗವನ್ನೂ ರಾಜರಿಗೆ ಪಾವನವಾದುವೆಂದು ಹೇಳುತ್ತಾರೆ. ಅವುಗಳ ಸಂಪೂರ್ಣ ಜ್ಞಾನವಿರಬೇಕು.

12026033a ರಕ್ಷನ್ರಾಷ್ಟ್ರಂ ಬುದ್ಧಿಪೂರ್ವಂ ನಯೇನ
ಸಂತ್ಯಕ್ತಾತ್ಮಾ ಯಜ್ಞಶೀಲೋ ಮಹಾತ್ಮಾ|
12026033c ಸರ್ವಾꣳಲ್ಲೋಕಾನ್ಧರ್ಮಮೂರ್ತ್ಯಾ ಚರಂಶ್ಚಾಪ್ಯೂ
ಊರ್ಧ್ವಂ ದೇಹಾನ್ಮೋದತೇ ದೇವಲೋಕೇ||

ಬುದ್ಧಿಪೂರ್ವಕವಾಗಿ ಸುನೀತಿಯಿಂದ ತನ್ನದೆನ್ನುವುದನ್ನು ತ್ಯಜಿಸಿ ರಾಷ್ಟ್ರವನ್ನು ರಕ್ಷಿಸುತ್ತಾ, ಯಜ್ಞಶೀಲನಾಗಿ ಧರ್ಮವನ್ನು ರಕ್ಷಿಸಲು ಸರ್ವ ಲೋಕಗಳನ್ನೂ ಚರಿಸುವ ಮಹಾತ್ಮನು ದೇಹಾವಸಾನದ ನಂತರ ದೇವಲೋಕದಲ್ಲಿ ಮೋದಿಸುತ್ತಾನೆ.

12026034a ಜಿತ್ವಾ ಸಂಗ್ರಾಮಾನ್ಪಾಲಯಿತ್ವಾ ಚ ರಾಷ್ಟ್ರಂ
ಸೋಮಂ ಪೀತ್ವಾ ವರ್ಧಯಿತ್ವಾ ಪ್ರಜಾಶ್ಚ|
12026034c ಯುಕ್ತ್ವಾ ದಂಡಂ ಧಾರಯಿತ್ವಾ ಪ್ರಜಾನಾಂ
ಯುದ್ಧೇ ಕ್ಷೀಣೋ ಮೋದತೇ ದೇವಲೋಕೇ||

ಸಂಗ್ರಾಮಗಳನ್ನು ಗೆದ್ದು, ರಾಷ್ಟ್ರವನ್ನು ಪಾಲಿಸುತ್ತಾ, ಸೋಮವನ್ನು ಕುಡಿಯುತ್ತಾ, ಪ್ರಜೆಗಳನ್ನು ಅಭಿವೃದ್ಧಿಗೊಳಿಸುತ್ತಾ, ದಂಡಯುಕ್ತನಾಗಿ ಪ್ರಜೆಗಳನ್ನು ಪಾಲಿಸುತ್ತಾ ಯುದ್ಧದಲ್ಲಿ ಮಡಿದ ರಾಜನು ದೇವಲೋಕದಲ್ಲಿ ಮೋದಿಸುತ್ತಾನೆ.

12026035a ಸಮ್ಯಗ್ವೇದಾನ್ಪ್ರಾಪ್ಯ ಶಾಸ್ತ್ರಾಣ್ಯಧೀತ್ಯ

ಸಮ್ಯಗ್ರಾಷ್ಟ್ರಂ ಪಾಲಯಿತ್ವಾ ಚ ರಾಜಾ|
12026035c ಚಾತುರ್ವರ್ಣ್ಯಂ ಸ್ಥಾಪಯಿತ್ವಾ ಸ್ವಧರ್ಮೇ
ಪೂತಾತ್ಮಾ ವೈ ಮೋದತೇ ದೇವಲೋಕೇ||

ಸಂಪೂರ್ಣ ವೇದಗಳನ್ನು ಪಡೆದು, ಶಾಸ್ತ್ರಗಳನ್ನು ಅಧ್ಯಯನ ಮಾಡಿ, ರಾಜ್ಯವನ್ನು ಚೆನ್ನಾಗಿ ಪಾಲಿಸುತ್ತಾ ಚಾತುರ್ವರ್ಣ್ಯವನ್ನು ಸ್ಥಾಪಿಸಿ, ಸ್ವಧರ್ಮದಲ್ಲಿಯೇ ಪೂತಾತ್ಮನಾಗಿರುವ ರಾಜನು ದೇವಲೋಕದಲ್ಲಿ ಮೋದಿಸುತ್ತಾನೆ.

12026036a ಯಸ್ಯ ವೃತ್ತಂ ನಮಸ್ಯಂತಿ ಸ್ವರ್ಗಸ್ಥಸ್ಯಾಪಿ ಮಾನವಾಃ|
12026036c ಪೌರಜಾನಪದಾಮಾತ್ಯಾಃ ಸ ರಾಜಾ ರಾಜಸತ್ತಮಃ||

ಸ್ವರ್ಗಸ್ಥನಾದಮೇಲೂ ಯಾರ ನಡತೆಗಳನ್ನು ಮಾನವರು, ಪೌರಜಾನಪದರು ಮತ್ತು ಅಮಾತ್ಯರು ನಮಸ್ಕರಿಸುತ್ತಾರೋ ಆ ರಾಜನೇ ರಾಜಸತ್ತಮನು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಸೇನಜಿದುಪಾಖ್ಯಾನೇ ಷಡ್ವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಸೇನಜಿದುಪಾಖ್ಯಾನ ಎನ್ನುವ ಇಪ್ಪತ್ತಾರನೇ ಅಧ್ಯಾಯವು.

೨೭[44]

[44] ಈ ಅಧ್ಯಾಯದ ಮೊದಲು ಭಾರತದರ್ಶನದಲ್ಲಿ ಯುಧಿಷ್ಠಿರನು ಅರ್ಜುನನ ಮಾತುಗಳಿಗೆ ಉತ್ತರವಾಗಿ ಸರ್ವತ್ಯಾಗದ ಮಹತ್ವವನ್ನು ಪುನಃ

ಯುಧಿಷ್ಠಿರವಾಕ್ಯ

ಶೋಕವಶನಾದ ಯುಧಿಷ್ಠಿರನು ಶರೀರತ್ಯಾಗಮಾಡಲು ಉದ್ಯತನಾಗಲು ವ್ಯಾಸನು ಅವನನ್ನು ತಡೆದು ತಿಳಿಯ ಹೇಳಿದುದು (1-32).

12027001 ಯುಧಿಷ್ಠಿರ ಉವಾಚ|
12027001a ಅಭಿಮನ್ಯೌ ಹತೇ ಬಾಲೇ ದ್ರೌಪದ್ಯಾಸ್ತನಯೇಷು ಚ|
12027001c ಧೃಷ್ಟದ್ಯುಮ್ನೇ ವಿರಾಟೇ ಚ ದ್ರುಪದೇ ಚ ಮಹೀಪತೌ||
12027002a ವಸುಷೇಣೇ ಚ ಧರ್ಮಜ್ಞೇ ಧೃಷ್ಟಕೇತೌ ಚ ಪಾರ್ಥಿವೇ|
12027002c ತಥಾನ್ಯೇಷು ನರೇಂದ್ರೇಷು ನಾನಾದೇಶ್ಯೇಷು ಸಂಯುಗೇ||
12027003a ನ ವಿಮುಂಚತಿ ಮಾಂ ಶೋಕೋ ಜ್ಞಾತಿಘಾತಿನಮಾತುರಮ್|
12027003c ರಾಜ್ಯಕಾಮುಕಮತ್ಯುಗ್ರಂ ಸ್ವವಂಶೋಚ್ಚೇದಕಾರಕಮ್||

ಪ್ರತಿಪಾದಿಸಿದ ಸುಮಾರು ೩೦ ಶ್ಲೋಕಗಳ ಇನ್ನೊಂದು ಅಧ್ಯಾಯವಿದೆ. ಪುಣೆಯ ಈ ಸಂಪುಟದಲ್ಲಿರದ ಈ ಅಧ್ಯಾಯದಲ್ಲಿರುವ ಧರ್ಮರಾಜನ ಅಭಿಪ್ರಾಯಗಳ ಸಾರಾಂಶವೆಂದರೆ: ಹಣವನ್ನು ಗಳಿಸಿದರೆ ಯಜ್ಞಮಾಡಬೇಕು ಮತ್ತು ದಾನಮಾಡಬೇಕು. ಕೆಸರನ್ನು ತುಳಿದು ತೊಳೆದುಕೊಳ್ಳುವುದಕ್ಕಿಂತ ತುಳಿಯದಿರುವುದೇ ಮೇಲಲ್ಲವೇ? ಹಾಗೆಯೇ ಧನಸಂಗ್ರಹಕ್ಕೆ ಕೈಹಾಕದಿರುವುದೇ ಮೇಲು. ಯಜ್ಞಮಾಡುವುದು ಕಷ್ಟವೇ. ಪಾತ್ರಾಪಾರವಿವೇಕವು ಕಷ್ಟಸಾಧ್ಯವಾದುದರಿಂದ ದಾನಮಾಡುವುದೂ ದುಷ್ಕರವೇ. ಈ ಯಜ್ಞ-ದಾನಾದಿಗಳಿಗಿಂತಲೂ ಶ್ರೇಷ್ಠ ಜ್ಞಾನಮಾರ್ಗವನ್ನು ಅವಲಂಬಿಸಲು ಸಾಧ್ಯವಿರುವಾಗ ಈ ಧನ-ಸಂಗ್ರಹ ಮತ್ತು ಯಜ್ಞ-ದಾನಗಳ ಗೊಂದಲವೇಕೆ?

ಯುಧಿಷ್ಠಿರನು ಹೇಳಿದನು: "ಬಾಲಕ ಅಭಿಮನ್ಯು, ದ್ರೌಪದಿಯ ಐವರು ಮಕ್ಕಳು, ಧೃಷ್ಟದ್ಯುಮ್ನ, ಮಹೀಪತಿಗಳಾದ ದ್ರುಪದ-ವಿರಾಟರು, ಧರ್ಮಜ್ಞ ಪಾರ್ಥಿವ ವಸುಷೇಣ[45]-ಧೃಷ್ಟಕೇತು, ಹಾಗೆಯೇ ನಾನಾದೇಶಗಳಿಂದ ಬಂದಿದ್ದ ಅನ್ಯ ನರೇಂದ್ರರು ಯುದ್ಧದಲ್ಲಿ ಮಡಿದುದರಿಂದ ಜ್ಞಾತಿಘಾತಿಕನಾದ ನನ್ನನ್ನು ಶೋಕವು ಬಿಡುತ್ತಿಲ್ಲ. ರಾಜ್ಯಲೋಭದಿಂದಾಗಿ ನಾನೇ ಈ ಉಗ್ರಕರ್ಮವನ್ನೆಸಗಿದೆನು!

12027004a ಯಸ್ಯಾಂಕೇ ಕ್ರೀಡಮಾನೇನ ಮಯಾ ವೈ ಪರಿವರ್ತಿತಮ್|
12027004c ಸ ಮಯಾ ರಾಜ್ಯಲುಬ್ಧೇನ ಗಾಂಗೇಯೋ ವಿನಿಪಾತಿತಃ||

ಯಾರ ತೊಡೆಯಮೇಲೆ ಹೊರಳಾಡಿ ಆಡುತ್ತಿದ್ದೆನೋ ಆ ಗಾಂಗೇಯನನ್ನೇ ನಾನು ರಾಜಲೋಭದಿಂದ ಕೆಳಗುರುಳಿಸಿದೆನು!

12027005a ಯದಾ ಹ್ಯೇನಂ ವಿಘೂರ್ಣಂತಮಪಶ್ಯಂ ಪಾರ್ಥಸಾಯಕೈಃ|
12027005c ಕಂಪಮಾನಂ ಯಥಾ ವಜ್ರೈಃ ಪ್ರೇಕ್ಷಮಾಣಂ ಶಿಖಂಡಿನಮ್||
12027006a ಜೀರ್ಣಂ ಸಿಂಹಮಿವ ಪ್ರಾಂಶುಂ ನರಸಿಂಹಂ ಪಿತಾಮಹಮ್|
12027006c ಕೀರ್ಯಮಾಣಂ ಶರೈಸ್ತೀಕ್ಷ್ಣೈರ್ದೃಷ್ಟ್ವಾ ಮೇ ವ್ಯಥಿತಂ ಮನಃ||

ಮುದಿಸಿಂಹದಂತಿದ್ದ, ಉನ್ನತ ಕಾಯ ನರಶ್ರೇಷ್ಠ ಪಿತಾಮಹ ಭೀಷ್ಮನು ಅರ್ಜುನನ ವಜ್ರಸದೃಶ ಬಾಣಗಳಿಂದ ಪೀಡಿತನಾಗಿ ಕಂಪಿಸುತ್ತಿರುವಾದ ಶಿಖಂಡಿಯು ಅವನನ್ನು ಎವೆಯಿಕ್ಕದೇ ನೋಡುತ್ತಿದ್ದನು. ಆಗ ಅರ್ಜುನನ ಬಾಣಗಳಿಂದ ಶರೀರಾದ್ಯಂತ ಮುಚ್ಚಲ್ಪಟ್ಟ ನನ್ನ ಆ ನರಸಿಂಹ ಪಿತಾಮಹನನ್ನು ನೋಡಿ ನನ್ನ

[45] ಕರ್ಣ

ಮನಸ್ಸು ಬಹಳವಾಗಿ ವ್ಯಥೆಗೊಂಡಿತ್ತು.

12027007a ಪ್ರಾಙ್ಮುಖಂ ಸೀದಮಾನಂ ಚ ರಥಾದಪಚ್ಯುತಂ ಶರೈಃ|
12027007c ಘೂರ್ಣಮಾನಂ ಯಥಾ ಶೈಲಂ ತದಾ ಮೇ ಕಶ್ಮಲೋಽಭವತ್||

ರಥದಲ್ಲಿ ಪೂರ್ವಾಭಿಮುಖವಾಗಿ ಕುಳಿತು ಶರಗಳಿಂದ ಪೀಡಿತನಾಗಿ ಅವನು ಕುಸಿಯುತ್ತಿರಲು ಮತ್ತು ಪರ್ವತದಂತೆ ಕಂಪಿಸುತ್ತಿರಲು ನನಗೆ ಮೂರ್ಛೆಯೇ ಬಂದಂತಾಗಿತ್ತು.

12027008a ಯಃ ಸ ಬಾಣಧನುಷ್ಪಾಣಿರ್ಯೋಧಯಾಮಾಸ ಭಾರ್ಗವಮ್|
12027008c ಬಹೂನ್ಯಹಾನಿ ಕೌರವ್ಯಃ ಕುರುಕ್ಷೇತ್ರೇ ಮಹಾಮೃಧೇ||
12027009a ಸಮೇತಂ ಪಾರ್ಥಿವಂ ಕ್ಷತ್ರಂ ವಾರಾಣಸ್ಯಾಂ ನದೀಸುತಃ|
12027009c ಕನ್ಯಾರ್ಥಮಾಹ್ವಯದ್ವೀರೋ ರಥೇನೈಕೇನ ಸಂಯುಗೇ||
12027010a ಯೇನ ಚೋಗ್ರಾಯುಧೋ ರಾಜಾ ಚಕ್ರವರ್ತೀ ದುರಾಸದಃ|
12027010c ದಗ್ಧಃ ಶಸ್ತ್ರಪ್ರತಾಪೇನ ಸ ಮಯಾ ಯುಧಿ ಘಾತಿತಃ||

ಯಾವ ಕೌರವ್ಯನು ಬಾಣ-ಧನುಷ್ಪಾಣಿಯಾಗಿ ಕುರುಕ್ಷೇತ್ರದ ಮಹಾಯುದ್ಧದಲ್ಲಿ ಭಾರ್ಗವ ಪರುಶುರಾಮನೊಡನೆ ಅನೇಕ ದಿನಗಳು ಹೋರಾಡಿದನೋ ಆ ಮಹಾವೀರ ಉಗ್ರಾಯುಧ ರಾಜಾ ಚಕ್ರವರ್ತಿ ದುರಾಸದ ನದೀಸುತನು ವಾರಾಣಸಿಯಲ್ಲಿ ಕನ್ಯಾರ್ಥಿಗಳಾಗಿ ಕ್ಷತ್ರಿಯ ರಾಜರೆಲ್ಲಾ ಸೇರಿದ್ದಾಗ ಯುದ್ಧದಲ್ಲಿ ಒಂದೇ ರಥದಿಂದ ಶಸ್ತ್ರಪ್ರತಾಪದಿಂದ ಸುಟ್ಟುಹಾಕಿದ್ದನು. ಅವನನ್ನೇ ನಾನು ಯುದ್ಧದಲ್ಲಿ ಕೊಲ್ಲಿಸಿದೆ!

12027011a ಸ್ವಯಂ ಮೃತ್ಯುಂ ರಕ್ಷಮಾಣಃ ಪಾಂಚಾಲ್ಯಂ ಯಃ ಶಿಖಂಡಿನಮ್|
12027011c ನ ಬಾಣೈಃ ಪಾತಯಾಮಾಸ ಸೋಽರ್ಜುನೇನ ನಿಪಾತಿತಃ||

ತನಗೇ ಮೃತ್ಯುವಾಗಿದ್ದ ಪಾಂಚಾಲ್ಯ ಶಿಖಂಡಿಯನ್ನು ಸ್ವಯಂ ತಾನೇ ರಕ್ಷಿಸಿಕೊಂಡು ಬಂದಿದ್ದ ಅವನನ್ನು ಅರ್ಜುನನು ಬಾಣಗಳಿಂದ ಕೆಳಗುರುಳಿಸಿದನು.

12027012a ಯದ್ಯೈನಂ ಪತಿತಂ ಭೂಮಾವಪಶ್ಯಂ ರುಧಿರೋಕ್ಷಿತಮ್|
12027012c ತದ್ಯೈವಾವಿಶದತ್ಯುಗ್ರೋ ಜ್ವರೋ ಮೇ ಮುನಿಸತ್ತಮ||

ಮುನಿಸತ್ತಮ! ರಕ್ತದಿಂದ ತೋಯ್ದುಹೋಗಿ ಭೂಮಿಯ ಮೇಲೆ ಅವನು ಬೀಳುತ್ತಲೇ ಉಗ್ರ ಜ್ವರವು ನನ್ನನ್ನು ಆವರಿಸಿತು.

12027012e ಯೇನ ಸಂವರ್ಧಿತಾ ಬಾಲಾ ಯೇನ ಸ್ಮ ಪರಿರಕ್ಷಿತಾಃ||
12027013a ಸ ಮಯಾ ರಾಜ್ಯಲುಬ್ಧೇನ ಪಾಪೇನ ಗುರುಘಾತಿನಾ|
12027013c ಅಲ್ಪಕಾಲಸ್ಯ ರಾಜ್ಯಸ್ಯ ಕೃತೇ ಮೂಢೇನ ಘಾತಿತಃ||

ಬಾಲ್ಯದಲ್ಲಿ ಯಾರಿಂದ ಬೆಳೆಯಿಸಲ್ಪಟ್ಟೆವೋ ಮತ್ತು ಯಾರಿಂದ ಪರಿರಕ್ಷಿತಗೊಂಡೆವೋ ಅವನನ್ನೇ ರಾಜ್ಯಲೋಭದಿಂದ ನಾನು ಅಲ್ಪಕಾಲವೇ ಭೋಗಿಸಬಲ್ಲ ಈ ರಾಜ್ಯಕ್ಕಾಗಿ ಸಂಹರಿಸಿದೆನು. ಆದುದರಿಂದ ನಾನು ಪಾಪಿ, ಗುರುಘಾತಿ ಮತ್ತು ಮೂಢನಾಗಿದ್ದೇನೆ.

12027014a ಆಚಾರ್ಯಶ್ಚ ಮಹೇಷ್ವಾಸಃ ಸರ್ವಪಾರ್ಥಿವಪೂಜಿತಃ|
12027014c ಅಭಿಗಮ್ಯ ರಣೇ ಮಿಥ್ಯಾ ಪಾಪೇನೋಕ್ತಃ ಸುತಂ ಪ್ರತಿ||

ಮಹೇಷ್ವಾಸ, ಸರ್ವಪಾರ್ಥಿವರಿಂದ ಪೂಜಿಸಲ್ಪಡುತ್ತಿದ್ದ ಆಚಾರ್ಯನಿಗೆ ರಣರಂಗದಲ್ಲಿ ಅವನ ಮಗನ ಸಂಬಂಧದಲ್ಲಿ ಪಾಪಿಯಾದ ನಾನು ಸುಳ್ಳನ್ನೇ ಹೇಳಿದೆ.

12027015a ತನ್ಮೇ ದಹತಿ ಗಾತ್ರಾಣಿ ಯನ್ಮಾಂ ಗುರುರಭಾಷತ|

12027015c ಸತ್ಯವಾಕ್ಯೋ ಹಿ ರಾಜಂಸ್ತ್ವಂ ಯದಿ ಜೀವತಿ ಮೇ ಸುತಃ||

ಆ ಸಮಯದಲ್ಲಿ ಗುರುವು ನನ್ನೊಡನೆ "ರಾಜನ್! ನನ್ನ ಮಗನು ಜೀವಿಸಿರುವನೋ ಇಲ್ಲವೋ ಸತ್ಯವನ್ನೇ ನುಡಿ!" ಎಂದು ಹೇಳಿದ ಮಾತನ್ನು ನೆನಪಿಸಿಕೊಂಡು ನನ್ನ ದೇಹವೇ ಸುಡುತ್ತಿದೆ.

12027015e ಸತ್ಯಂ ಮಾ ಮರ್ಶಯನ್ವಿಪ್ರೋ ಮಯಿ ತತ್ಪರಿಪೃಷ್ಟವಾನ್||
12027016a ಕುಂಜರಂ ಚಾಂತರಂ ಕೃತ್ವಾ ಮಿಥ್ಯೋಪಚರಿತಂ ಮಯಾ|

ಸತ್ಯವನ್ನು ನಿರ್ಣಯಿಸುವ ಸಲುವಾಗಿ ವಿಪ್ರನು ನನ್ನಲ್ಲಿ ಹೀಗೆ ಪ್ರಶ್ನಿಸಿದ್ದನು. ನಾನು ಆನೆಯನ್ನು ನೆಪವಾಗಿ ಮಾಡಿಕೊಂಡು ಸುಳ್ಳಾಗಿ ನಡೆದುಕೊಂಡೆನು.

12027016c ಸುಭೃಶಂ ರಾಜ್ಯಲುಬ್ಧೇನ ಪಾಪೇನ ಗುರುಘಾತಿನಾ||
12027017a ಸತ್ಯಕಂಚುಕಮಾಸ್ಥಾಯ ಮಯೋಕ್ತೋ ಗುರುರಾಹವೇ|
12027017c ಅಶ್ವತ್ಥಾಮಾ ಹತ ಇತಿ ಕುಂಜರೇ ವಿನಿಪಾತಿತೇ||
12027017e ಕಾನ್ನು ಲೋಕಾನ್ಗಮಿಷ್ಯಾಮಿ ಕೃತ್ವಾ ತತ್ಕರ್ಮ ದಾರುಣಮ್||

ರಾಜ್ಯಕ್ಕಾಗಿ ಅತ್ಯಂತ ಲೋಭಿಯಾಗಿದ್ದ ಪಾಪಿ ಗುರುಘಾತಿ ನಾನು ಸತ್ಯವೆಂಬ ನನ್ನ ಅಂಗಿಯನ್ನು ತೆಗೆದುಹಾಕಿ ಯುದ್ಧದಲ್ಲಿ ಆನೆಯು ಕೆಳಗುರುಳಲು ಅಶ್ವತ್ಥಾಮನು ಹತನಾದನೆಂದು ಗುರುವಿಗೆ ಹೇಳಿದೆನು. ಆ ದಾರುಣ ಕರ್ಮವನ್ನೆಸಗಿದ ನಾನು ಯಾವ ಲೋಕಗಳಿಗೆ ಹೋಗುತ್ತೇನೋ!

12027018a ಅಘಾತಯಂ ಚ ಯತ್ಕರ್ಣಂ ಸಮರೇಷ್ವಪಲಾಯಿನಮ್|
12027018c ಜ್ಯೇಷ್ಠಂ ಭ್ರಾತರಮತ್ಯುಗ್ರಂ ಕೋ ಮತ್ತಃ ಪಾಪಕೃತ್ತಮಃ||

ಸಮರದಲ್ಲಿ ಹಿಂದೆಸರಿಯದೇ ಇದ್ದ ಉಗ್ರನಾಗಿದ್ದ ಹಿರಿಯಣ್ಣ ಕರ್ಣನನ್ನು ಕೊಲ್ಲಿಸಿದೆನು. ನನಗಿಂತಲೂ ಹೆಚ್ಚು ಪಾಪಕೃತ್ಯಗಳನ್ನು ಮಾಡಿದವರು ಬೇರೆ ಯಾರಾದರೂ ಇದ್ದಾರೆಯೇ?

12027019a ಅಭಿಮನ್ಯುಂ ಚ ಯದ್ಬಾಲಂ ಜಾತಂ ಸಿಂಹಮಿವಾದ್ರಿಷು|
12027019c ಪ್ರಾವೇಶಯಮಹಂ ಲುಬ್ಧೋ ವಾಹಿನೀಂ ದ್ರೋಣಪಾಲಿತಾಮ್||

ಗಿರಿಯಲ್ಲಿ ಹುಟ್ಟಿದ ಸಿಂಹದಂತಿದ್ದ ಬಾಲಕ ಅಭಿಮನ್ಯುವನ್ನು ನಾನು ರಾಜ್ಯಲುಬ್ಧನಾಗಿ ದ್ರೋಣನಿಂದ ರಕ್ಷಿತಗೊಂಡಿದ್ದ ವಾಹಿನಿಯನ್ನು ಪ್ರವೇಶಿಸಲು ಬಿಟ್ಟೆನು!

12027020a ತದಾಪ್ರಭೃತಿ ಬೀಭತ್ಸುಂ ನ ಶಕ್ನೋಮಿ ನಿರೀಕ್ಷಿತುಮ್|
12027020c ಕೃಷ್ಣಂ ಚ ಪುಂಡರೀಕಾಕ್ಷಂ ಕಿಲ್ಬಿಷೀ ಭ್ರೂಣಹಾ ಯಥಾ||

ಅಂದಿನಿಂದ ನಾನು ಭ್ರೂಣಹತ್ಯೆಯನ್ನು ಮಾಡಿದ ಪಾಪಿಯಂತೆ ಬೀಭತ್ಸುವನ್ನಾಗಲೀ ಪುಂಡರೀಕಾಕ್ಷ ಕೃಷ್ಣನನ್ನಾಗಲೀ ಕಣ್ಣೆತ್ತಿ ನೋಡಲೂ ಅಸಮರ್ಥನಾಗಿದ್ದೇನೆ.

12027021a ದ್ರೌಪದೀಂ ಚಾಪ್ಯದುಃಖಾರ್ಹಾಂ ಪಂಚಪುತ್ರವಿನಾಕೃತಾಮ್|
12027021c ಶೋಚಾಮಿ ಪೃಥಿವೀಂ ಹೀನಾಂ ಪಂಚಭಿಃ ಪರ್ವತೈರಿವ||

ಐದು ಪರ್ವತಗಳನ್ನು ಕಳೆದುಕೊಂಡ ಪೃಥ್ವಿಯಂತೆ ಐದು ಪುತ್ರರನ್ನು ಕಳೆದುಕೊಂಡ ದ್ರೌಪದಿಯ ದುಃಖವನ್ನು ನೋಡಿ ನಾನೂ ಕೂಡ ಶೋಕಿಸುತ್ತಿದ್ದೇನೆ.

12027022a ಸೋಽಹಮಾಗಸ್ಕರಃ ಪಾಪಃ ಪೃಥಿವೀನಾಶಕಾರಕಃ|
12027022c ಆಸೀನ ಏವಮೇವೇದಂ ಶೋಷಯಿಷ್ಯೇ ಕಲೇವರಮ್||

ಆದುದರಿಂದ ನಾನು ಅಪರಾಧಿಯೂ ಪೃಥ್ವಿಯನ್ನು ನಾಶಪಡಿಸಿದ ಪಾಪಿಯೂ ಆಗಿದ್ದೇನೆ. ಅದಕ್ಕಾಗಿ ನಾನು ಇಲ್ಲಿಯೇ ಕುಳಿತುಕೊಂಡು ಈ ಶರೀರವನ್ನು ಶೋಷಿಸಿಬಿಡುತ್ತೇನೆ.

12027023a ಪ್ರಾಯೋಪವಿಷ್ಟಂ ಜಾನೀಧ್ವಮದ್ಯ ಮಾಂ ಗುರುಘಾತಿನಮ್|
12027023c ಜಾತಿಷ್ವನ್ಯಾಸ್ವಪಿ ಯಥಾ ನ ಭವೇಯಂ ಕುಲಾಂತಕೃತ್||

ಗುರುಘಾತಿಯಾದ ನಾನು ಇಂದು ಪ್ರಾಯೋಪವೇಶವನ್ನು ಮಾಡಿದ್ದೇನೆಂದು ತಿಳಿಯಿರಿ. ಇನ್ನೊಂದು ಜನ್ಮದಲ್ಲಿಯಾದರೂ ನಾನು ಕುಲಾಂತಕನಾಗದೇ ಇರಲಿ.

12027024a ನ ಭೋಕ್ಷ್ಯೇ ನ ಚ ಪಾನೀಯಮುಪಯೋಕ್ಷ್ಯೇ ಕಥಂ ಚನ|
12027024c ಶೋಷಯಿಷ್ಯೇ ಪ್ರಿಯಾನ್ಪ್ರಾಣಾನಿಹಸ್ಥೋಽಹಂ ತಪೋಧನ||

ತಪೋಧನ! ನಾನೂ ಇನ್ನು ಯಾವುದೇ ಕಾರಣಕ್ಕೂ ತಿನ್ನುವುದಿಲ್ಲ ಮತ್ತು ಕುಡಿಯುವುದಿಲ್ಲ. ಇಲ್ಲಿಯೇ ಕುಳಿತು ಪ್ರಿಯ ಪ್ರಾಣಗಳನ್ನು ಬಿಡುತ್ತೇನೆ.

12027025a ಯಥೇಷ್ಟಂ ಗಮ್ಯತಾಂ ಕಾಮಮನುಜಾನೇ ಪ್ರಸಾದ್ಯ ವಃ|
12027025c ಸರ್ವೇ ಮಾಮನುಜಾನೀತ ತ್ಯಕ್ಷ್ಯಾಮೀದಂ ಕಲೇವರಮ್||

ನಿಮಗಿಷ್ಟಬಂದಲ್ಲಿಗೆ ಹೋಗಲು ಅನುಮತಿಯನ್ನು ಕೊಡುತ್ತಿದ್ದೇನೆ. ನೀವೆಲ್ಲರೂ ಪ್ರಸನ್ನರಾಗಿ ಈ ಶರೀರವನ್ನು ತ್ಯಜಿಸಲು ನನಗೆ ಅನುಮತಿಯನ್ನು ನೀಡಿ!””

12027026 ವೈಶಂಪಾಯನ ಉವಾಚ|
12027026a ತಮೇವಂವಾದಿನಂ ಪಾರ್ಥಂ ಬಂಧುಶೋಕೇನ ವಿಹ್ವಲಮ್|

12027026c ಮೈವಮಿತ್ಯಬ್ರವೀದ್ವ್ಯಾಸೋ ನಿಗೃಹ್ಯ ಮುನಿಸತ್ತಮಃ||

ವೈಶಂಪಾಯನನು ಹೇಳಿದನು: "ಬಂಧುಶೋಕದಿಂದ ವಿಹ್ವಲನಾಗಿ ಹೀಗೆ ಮಾತನಾಡುತ್ತಿದ್ದ ಪಾರ್ಥನಿಗೆ ಹೀಗೆಂದೂ ಮಾಡಬಾರದೆಂದು ಹೇಳುತ್ತಾ ಮುನಿಸತ್ತಮನು ಅವನನ್ನು ತಡೆದನು.

12027027a ಅತಿವೇಲಂ ಮಹಾರಾಜ ನ ಶೋಕಂ ಕರ್ತುಮರ್ಹಸಿ|
12027027c ಪುನರುಕ್ತಂ ಪ್ರವಕ್ಷ್ಯಾಮಿ ದಿಷ್ಟಮೇತದಿತಿ ಪ್ರಭೋ||

"ಮಹಾರಾಜ! ಉಕ್ಕಿಬರುತ್ತಿರುವ ಅಲೆಗಳಂತೆ ಈ ರೀತಿ ನೀನು ಶೋಕಿಸಕೂಡದು. ಪ್ರಭೋ! ಆದುದೆಲ್ಲವೂ ಒಳ್ಳೆಯದಾಯಿತೆಂದೇ ನಾನು ನಿನಗೆ ಪುನಃ ಹೇಳುತ್ತೇನೆ.

12027028a ಸಂಯೋಗಾ ವಿಪ್ರಯೋಗಾಶ್ಚ ಜಾತಾನಾಂ ಪ್ರಾಣಿನಾಂ ಧ್ರುವಮ್|
12027028c ಬುದ್ಬುದಾ ಇವ ತೋಯೇಷು ಭವಂತಿ ನ ಭವಂತಿ ಚ||

ಹುಟ್ಟಿದ ಪ್ರಾಣಿಗಳಿಗೆ ಸೇರುವಿಕೆಯು ಅಗಲಿಕೆಯಿಂದಲೇ ಅಂತ್ಯವಾಗುತ್ತದೆ ಎನ್ನುವುದು ನಿಶ್ಚಯವಾದುದು. ನೀರಿನ ಮೇಲಿನ ಗುಳ್ಳೆಗಳಂತೆ ಪ್ರಾಣಿಗಳು ಹುಟ್ಟುತ್ತಿರುತ್ತವೆ ಮತ್ತು ಸಾಯುತ್ತಿರುತ್ತವೆ.

12027029a ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ|
12027029c ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಹಿ ಜೀವಿತಮ್||

ಕೂಡಿಟ್ಟ ಐಶ್ವರ್ಯವು ವಿನಾಶದೊಂದಿಗೆ ಕೊನೆಗೊಳ್ಳುತ್ತವೆ. ಸೇರುವಿಕೆಯು ಅಗಲುವಿಕೆಯಿಂದ ಮತ್ತು ಜನನವು ಮರಣದಿಂದ ಪರ್ಯಾವಸಾನಹೊಂದುತ್ತದೆ.

12027030a ಸುಖಂ ದುಃಖಾಂತಮಾಲಸ್ಯಂ ದಾಕ್ಷ್ಯಂ ದುಃಖಂ ಸುಖೋದಯಮ್|

12027030c ಭೂತಿಃ ಶ್ರೀರ್ಹ್ರೀರ್ಧೃತಿಃ ಸಿದ್ಧಿರ್ನಾದಕ್ಷೇ ನಿವಸಂತ್ಯುತ॥

ಆಲಸಿಗೆ ಸುಖವೂ ದುಃಖವಾಗಿ ಪರಿಣಮಿಸುತ್ತದೆ ಮತ್ತು ದಕ್ಷನಾದವನಿಗೆ ದುಃಖವೂ ಸುಖೋದಯಕ್ಕೆ ಕಾರಣವಾಗುತ್ತದೆ. ಐಶ್ವರ್ಯ, ಲಕ್ಷ್ಮಿ, ಲಜ್ಜೆ, ಧೈರ್ಯ ಮತ್ತು ಕೀರ್ತಿಗಳು ದಕ್ಷನಾದವನಲ್ಲಿ ವಾಸಿಸುತ್ತವೆಯೇ ಹೊರತು ಆಲಸಿಯಲ್ಲಲ್ಲ.

12027031a ನಾಲಂ ಸುಖಾಯ ಸುಹೃದೋ ನಾಲಂ ದುಃಖಾಯ ದುರ್ಹೃದಃ।
12027031c ನ ಚ ಪ್ರಜ್ಞಾಲಮರ್ಥೇಭ್ಯೋ ನ ಸುಖೇಭ್ಯೋಽಪ್ಯಲಂ ಧನಮ್॥

ಸ್ನೇಹಿತರು ಸುಖವನ್ನು ನೀಡಲು ಸಮರ್ಥರಲ್ಲ. ಶತ್ರುಗಳು ದುಃಖವನ್ನು ನೀಡಲೂ ಸಮರ್ಥರಲ್ಲ. ಪ್ರಜೆಗಳು ಸಂಪತ್ತನ್ನು ನೀಡಲು ಸಮರ್ಥರಲ್ಲ ಮತ್ತು ಧನವು ಸುಖವನ್ನು ನೀಡಲು ಸಮರ್ಥವಲ್ಲ.

12027032a ಯಥಾ ಸೃಷ್ಟೋಽಸಿ ಕೌಂತೇಯ ಧಾತ್ರಾ ಕರ್ಮಸು ತತ್ಕುರು।
12027032c ಅತ ಏವ ಹಿ ಸಿದ್ಧಿಸ್ತೇ ನೇಶಸ್ತ್ವಮಾತ್ಮನಾ ನೃಪ॥

ಕೌಂತೇಯ! ನೃಪ! ಬ್ರಹ್ಮನು ಯಾವ ಕರ್ಮಕ್ಕೆಂದು ನಿನ್ನನ್ನು ಸೃಷ್ಟಿಸಿರುವನೋ ಅದನ್ನೇ ಮಾಡು. ಅದರಿಂದಲೇ ನಿನಗೆ ಸಿದ್ಧಿಯಾಗುತ್ತದೆ. ಏಕೆಂದರೆ ನೀನು ಮಾಡಬೇಕಾದ ಕರ್ಮಗಳ ಮೇಲೆ ನಿನಗೆ ಅಧಿಕಾರವಿಲ್ಲ!””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಯುಧಿಷ್ಠಿರವಾಕ್ಯೇ ಸಪ್ತವಿಂಶೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಯುಧಿಷ್ಠಿರವಾಕ್ಯ ಎನ್ನುವ ಇಪ್ಪತ್ತೇಳನೇ ಅಧ್ಯಾಯವು.

೨೮

ಅಶ್ಮ-ಜನಕ ಸಂವಾದ

ಋಷಿ ಅಶ್ಮ ಮತ್ತು ಜನಕನ ಸಂವಾದದ ಮೂಲಕ ಪ್ರಾರಬ್ಧದ ಪ್ರಬಲತೆಯನ್ನು ವರ್ಣಿಸುತ್ತಾ ವ್ಯಾಸನು ಯುಧಿಷ್ಠಿರನಿಗೆ ತಿಳಿಯ ಹೇಳಿದುದು (1-58).

12028001 ವೈಶಂಪಾಯನ ಉವಾಚ|
12028001a ಜ್ಞಾತಿಶೋಕಾಭಿತಪ್ತಸ್ಯ ಪ್ರಾಣಾನಭ್ಯುತ್ಸಿಸೃಕ್ಷತಃ|
12028001c ಜ್ಯೇಷ್ಠಸ್ಯ ಪಾಂಡುಪುತ್ರಸ್ಯ ವ್ಯಾಸಃ ಶೋಕಮಪಾನುದತ್||

ವೈಶಂಪಾಯನನು ಹೇಳಿದನು: "ಜ್ಞಾತಿಶೋಕದಿಂದ ತಪಿಸುತ್ತಾ ಪ್ರಾಣಗಳನ್ನೇ ತೊರೆಯಲು ಸಿದ್ಧನಾಗಿದ್ದ ಪಾಂಡುಪುತ್ರರ ಜ್ಯೇಷ್ಠ ಯುಧಿಷ್ಠಿರನ ಶೋಕವನ್ನು ನೀಗಿಸಲು ವ್ಯಾಸನು ಹೀಗೆ ಹೇಳಿದನು:

12028002 ವ್ಯಾಸ ಉವಾಚ|
12028002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12028002c ಅಶ್ಮಗೀತಂ ನರವ್ಯಾಘ್ರ ತನ್ನಿಬೋಧ ಯುಧಿಷ್ಠಿರ||

ವ್ಯಾಸನು ಹೇಳಿದನು: "ನರವ್ಯಾಘ್ರ! ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಅಶ್ಮಗೀತವೆನ್ನುವ ಪುರಾತನ ಇತಿಹಾಸವೊಂದನ್ನು ಕೇಳು.

12028003a ಅಶ್ಮಾನಂ ಬ್ರಾಹ್ಮಣಂ ಪ್ರಾಜ್ಞಂ ವೈದೇಹೋ ಜನಕೋ ನೃಪಃ|
12028003c ಸಂಶಯಂ ಪರಿಪಪ್ರಚ್ಛ ದುಃಖಿಶೋಕಪರಿಪ್ಲುತಃ||

ದುಃಖ-ಶೋಕಗಳಲ್ಲಿ ಮುಳುಗಿಹೋಗಿದ್ದ ವಿದೇಹ ದೇಶದ ನೃಪ ಜನಕನು ಪ್ರಾಜ್ಞ ಬ್ರಾಹ್ಮಣ ಅಶ್ಮನನ್ನು ಪ್ರಶ್ನಿಸಿದನುಃ

12028004 ಜನಕ ಉವಾಚ|
12028004a ಆಗಮೇ ಯದಿ ವಾಪಾಯೇ ಜ್ಞಾತೀನಾಂ ದ್ರವಿಣಸ್ಯ ಚ|
12028004c ನರೇಣ ಪ್ರತಿಪತ್ತವ್ಯಂ ಕಲ್ಯಾಣಂ ಕಥಮಿಚ್ಚತಾ||

ಜನಕನು ಹೇಳಿದನುಃ "ಕುಟುಂಬದ ಮತ್ತು ಸಂಪತ್ತಿನ ವೃದ್ಧಿ-ವಿನಾಶಗಳುಂಟಾದಾಗ ಕಲ್ಯಾಣವುಂಟಾಗಲು ಮನುಷ್ಯನು ಏನು ಮಾಡಬೇಕು?"

12028005 ಅಶ್ಮೋವಾಚ|
12028005a ಉತ್ಪನ್ನಮಿಮಮಾತ್ಮಾನಂ ನರಸ್ಯಾನಂತರಂ ತತಃ|
12028005c ತಾನಿ ತಾನ್ಯಭಿವರ್ತಂತೇ ದುಃಖಾನಿ ಚ ಸುಖಾನಿ ಚ||

ಅಶ್ಮನು ಹೇಳಿದನುಃ "ಜನನದ ನಂತರ ಸತತವಾಗಿ ದುಃಖ-ಸುಖಗಳು ಮನುಷ್ಯನನ್ನು ಅನುಸರಿಸಿ ಬರುತ್ತಲೇ ಇರುತ್ತವೆ.

12028006a ತೇಷಾಮನ್ಯತರಾಪತ್ತೌ ಯದ್ಯದೇವೋಪಸೇವತೇ|
12028006c ತತ್ತದ್ಧಿ ಚೇತನಾಮಸ್ಯ ಹರತ್ಯಭ್ರಮಿವಾನಿಲಃ||

ಆ ಸುಖ-ದುಃಖಗಳಲ್ಲಿ ಯಾವುದು ಪ್ರಾಪ್ತವಾಗುವುದೋ ಅದೇ ಮನುಷ್ಯನ ಬುದ್ಧಿಯನ್ನು ಗಾಳಿಯು ಮೋಡವನ್ನು ಹಾರಿಸಿಕೊಂಡು ಹೋಗುವಂತೆ ಹಾರಿಸಿಕೊಂಡು ಹೋಗುತ್ತದೆ.

12028007a ಅಭಿಜಾತೋಽಸ್ಮಿ ಸಿದ್ಧೋಽಸ್ಮಿ ನಾಸ್ಮಿ ಕೇವಲಮಾನುಷಃ|
12028007c ಇತ್ಯೇವಂ ಹೇತುಭಿಸ್ತಸ್ಯ ತ್ರಿಭಿಶ್ಚಿತ್ತಂ ಪ್ರಸಿಚ್ಯತಿ||

ನಾನು ಒಳ್ಳೆಯಕುಲದಲ್ಲಿ ಹುಟ್ಟಿದ್ದೇನೆ, ನಾನು ಎಲ್ಲವನ್ನೂ ಸಾಧಿಸಿದ್ದೇನೆ ಮತ್ತು ನಾನು ಸಾಧಾರಣ ಮನುಷ್ಯನಲ್ಲ ಎಂಬ ಈ ಮೂರು ಅಹಂಕಾರಗುಣಗಳು ಮನುಷ್ಯನ ಚಿತ್ತವನ್ನು ತೋಯಿಸಿಬಿಡುತ್ತವೆ.

12028008a ಸ ಪ್ರಸಿಕ್ತಮನಾ ಭೋಗಾನ್ವಿಸೃಜ್ಯ ಪಿತೃಸಂಚಿತಾನ್|
12028008c ಪರಿಕ್ಷೀಣಃ ಪರಸ್ವಾನಾಮಾದಾನಂ ಸಾಧು ಮನ್ಯತೇ||

ಭೋಗಗಳಲ್ಲಿಯೇ ಮನಸ್ಸನ್ನು ತೊಡಗಿಸಿಕೊಂಡು ಪಿತೃಸಂಚಿತ ಸಂಪತ್ತು ಮುಗಿದುಹೋಗಲು ಪರರ ಸ್ವತ್ತನ್ನು ಕಿತ್ತುಕೊಳ್ಳುವುದೇ ಸರಿಯೆಂದು ಭಾವಿಸುತ್ತಾನೆ.

12028009a ತಮತಿಕ್ರಾಂತಮರ್ಯಾದಮಾದದಾನಮಸಾಂಪ್ರತಮ್|
12028009c ಪ್ರತಿಷೇಧಂತಿ ರಾಜಾನೋ ಲುಬ್ಧಾ ಮೃಗಮಿವೇಷುಭಿಃ||

ಮರ್ಯಾದೆಗಳನ್ನು ಮೀರಿ ಇತರರ ಸ್ವತ್ತನ್ನು ಅಪಹರಿಸುವ ಆ ಲುಬ್ಧರನ್ನು ರಾಜನು ಮೃಗಗಳನ್ನು ಬಾಣಗಳಿಂದ ಹೇಗೋ ಹಾಗೆ ಬೇಟೆಯಾಡಿ ವಿರೋಧಿಸುತ್ತಾನೆ.

12028010a ಯೇ ಚ ವಿಂಶತಿವರ್ಷಾ ವಾ ತ್ರಿಂಶದ್ವರ್ಷಾಶ್ಚ ಮಾನವಾಃ|
12028010c ಪರೇಣ ತೇ ವರ್ಷಶತಾನ್ನ ಭವಿಷ್ಯಂತಿ ಪಾರ್ಥಿವ||

ಪಾರ್ಥಿವ! ಇಪ್ಪತ್ತು ಅಥವಾ ಮೂವತ್ತು ವರ್ಷಗಳ ಇಂತಹ ಯುವಕರು ನೂರು ವರ್ಷಗಳ ಪರ್ಯಂತ ಜೀವಿಸುವುದಿಲ್ಲ.

12028011a ತೇಷಾಂ ಪರಮದುಃಖಾನಾಂ ಬುದ್ಧ್ಯಾ ಭೇಷಜಮಾದಿಶೇತ್|
12028011c ಸರ್ವಪ್ರಾಣಭೃತಾಂ ವೃತ್ತಂ ಪ್ರೇಕ್ಷಮಾಣಸ್ತತಸ್ತತಃ||

ಹೀಗೆ ಎಲ್ಲ ಪ್ರಾಣಿಗಳ ವ್ಯವಹಾರಗಳನ್ನೂ ಅಲ್ಲಲ್ಲಿ ನೋಡುತ್ತಾ ಅವರ

ಪರಮದುಃಖಗಳಿಗೆ ಬುದ್ಧಿಯಿಂದ ಯೋಚಿಸಿ ಚಿಕಿತ್ಸೆಗಳನ್ನು
ನಡೆಸಬೇಕು.

12028012a ಮಾನಸಾನಾಂ ಪುನರ್ಯೋನಿರ್ದುಃಖಾನಾಂ ಚಿತ್ತವಿಭ್ರಮಃ|
12028012c ಅನಿಷ್ಟೋಪನಿಪಾತೋ ವಾ ತೃತೀಯಂ ನೋಪಪದ್ಯತೇ||

ಮಾನಸಿಕ ದುಃಖಗಳಿಗೆ ಬುದ್ಧಿಭ್ರಮೆ ಮತ್ತು ಅನಿಷ್ಟಗಳೆಂಬ ಎರಡು
ಕಾರಣಗಳಿವೆ. ಮೂರನೆಯ ಯಾವುದೇ ಕಾರಣವೂ ಇರುವುದಿಲ್ಲ.

12028013a ಏವಮೇತಾನಿ ದುಃಖಾನಿ ತಾನಿ ತಾನೀಹ ಮಾನವಮ್|
12028013c ವಿವಿಧಾನ್ಯುಪವರ್ತಂತೇ ತಥಾ ಸಾಂಸ್ಪರ್ಶಕಾನಿ ಚ||

ಇವೇ ಮೊದಲಾದ ದುಃಖಗಳು ಮಾನವನನ್ನು ಆವರಿಸುತ್ತಿರುತ್ತವೆ.
ಹಾಗೆಯೇ ವಿಷಯಾಸಕ್ತಿಗಳಿಂದಲೂ ದುಃಖಗಳು ಪ್ರಾಪ್ತವಾಗುತ್ತವೆ.

12028014a ಜರಾಮೃತ್ಯೂ ಹ ಭೂತಾನಿ ಖಾದಿತಾರೌ ವೃಕಾವಿವ|
12028014c ಬಲಿನಾಂ ದುರ್ಬಲಾನಾಂ ಚ ಹ್ರಸ್ವಾನಾಂ ಮಹತಾಮಪಿ||

ಮುಪ್ಪು ಮತ್ತು ಸಾವು ಎನ್ನುವವು ಪ್ರಾಣಿಗಳನ್ನು ತಿನ್ನುವಂಥಹ
ತೋಳಗಳಂತೆ. ಅವು ಬಲಶಾಲಿಗಳನ್ನೂ, ದುರ್ಬಲರನ್ನೂ,
ಸಣ್ಣವರನ್ನೂ ಮತ್ತು ದೊಡ್ಡವರನ್ನೂ ತಿನ್ನುತ್ತವೆ.

12028015a ನ ಕಶ್ಚಿಜ್ಜಾತ್ವತಿಕ್ರಾಮೇಜ್ಜರಾಮೃತ್ಯೂ ಹ ಮಾನವಃ|
12028015c ಅಪಿ ಸಾಗರಪರ್ಯಂತಾಂ ವಿಜಿತ್ಯೇಮಾಂ ವಸುಂಧರಾಮ್||

ಸಾಗರ ಪರ್ಯಂತವಾದ ಈ ಭೂಮಿಯನ್ನು ಜಯಿಸಿದರೂ,
ಜರಾಮೃತ್ಯುಗಳನ್ನು ಜಯಿಸಲು ಯಾವ ಮನುಷ್ಯನಿಗೂ ಸಾಧ್ಯವಿಲ್ಲ.

12028016a ಸುಖಂ ವಾ ಯದಿ ವಾ ದುಃಖಂ ಭೂತಾನಾಂ ಪರ್ಯುಪಸ್ಥಿತಮ್|

12028016c ಪ್ರಾಪ್ತವ್ಯಮವಶೈಃ ಸರ್ವಂ ಪರಿಹಾರೋ ನ ವಿದ್ಯತೇ॥

ಕಾಲ-ಕರ್ಮ ಸಂಯೋಗದಿಂದ ಪ್ರಾಪ್ತವಾಗುವ ಸುಖ-
ದುಃಖಗಳಿಲ್ಲವನ್ನೂ ಪ್ರಾಣಿಗಳು ಅವಶ್ಯವಾಗಿ ಅನುಭವಿಸಬೇಕೇ
ಹೊರತು ಅವುಗಳಿಗೆ ಯಾವ ಪರಿಹಾರವೂ ಇಲ್ಲ.

12028017a ಪೂರ್ವೇ ವಯಸಿ ಮಧ್ಯೇ ವಾಪ್ಯುತ್ತಮೇ ವಾ ನರಾಧಿಪ|
12028017c ಅವರ್ಜನೀಯಾಸ್ತೇऽರ್ಥಾ ವೈ ಕಾಂಕ್ಷಿತಾಶ್ಚ ತತೋऽನ್ಯಥಾ॥

ನರಾಧಿಪ! ಮನುಷ್ಯನಿಗೆ ಪೂರ್ವ ವಯಸ್ಸಿನಲ್ಲಿ, ಅಥವಾ ಮಧ್ಯ
ವಯಸ್ಸಿನಲ್ಲಿ ಅಥವಾ ಮುಪ್ಪಿನಲ್ಲಿಯಾಗಲೀ ಈ ಸುಖ-ದುಃಖಗಳನ್ನು
ತ್ಯಜಿಸಲು ಸಾಧ್ಯವಿಲ್ಲ. ಅನುಭವಿಸಬೇಕೇ ಹೊರತು ತಪ್ಪಿಸಿಕೊಳ್ಳಲು
ಸಾಧ್ಯವಿಲ್ಲ.

12028018a ಸುಪ್ರಿಯೈರ್ವಿಪ್ರಯೋಗಶ್ಚ ಸಂಪ್ರಯೋಗಸ್ತಥಾಪ್ರಿಯೈಃ|
12028018c ಅರ್ಥಾನರ್ಥೌ ಸುಖಂ ದುಃಖಂ ವಿಧಾನಮನುವರ್ತತೇ॥

ಅತ್ಯಂತ ಪ್ರಿಯರಾದವರಿಂದ ವಿಯೋಗ, ಅಪ್ರಿಯರೊಡನೆ ಸಹವಾಸ,
ಧನಪ್ರಾಪ್ತಿ, ಧನನಷ್ಟ, ಮತ್ತು ಸುಖ-ದುಃಖಗಳು ಅವರವರ
ಪ್ರಾರಬ್ಧವನ್ನು ಅನುಸರಿಸಿ ಬರುತ್ತಲೇ ಇರುತ್ತವೆ.

12028019a ಪ್ರಾದುರ್ಭಾವಶ್ಚ ಭೂತಾನಾಂ ದೇಹನ್ಯಾಸಸ್ತಥೈವ ಚ|
12028019c ಪ್ರಾಪ್ತಿವ್ಯಾಯಾಮಯೋಗಶ್ಚ ಸರ್ವಮೇತತ್ಪ್ರತಿಷ್ಠಿತಮ್॥

ಪ್ರಾಣಿಗಳ ಹುಟ್ಟು-ಸಾವುಗಳೂ ಲಾಭಾಲಾಭಗಳೂ ಎಲ್ಲವೂ
ಅವರವರು ಪಡೆದುಕೊಂಡು ಬಂದಿರುವ
ಪ್ರಾರಬ್ಧಕರ್ಮಫಲಗಳಲ್ಲಿಯೇ ಪ್ರತಿಷ್ಠಿತವಾಗಿರುತ್ತವೆ.

12028020a ಗಂಧವರ್ಣರಸಸ್ಪರ್ಶಾ ನಿವರ್ತಂತೇ ಸ್ವಭಾವತಃ|
12028020c ತಥೈವ ಸುಖದುಃಖಾನಿ ವಿಧಾನಮನುವರ್ತತೇ||

ಗಂಧ-ವರ್ಣ-ರಸ-ಸ್ಪರ್ಶಗಳು ಸ್ವಾಭಾವಿಕವಾಗಿ ಬಂದು-ಹೋಗುತ್ತಲೇ ಇರುತ್ತವೆ. ಹಾಗೆಯೇ ಸುಖದುಃಖಗಳು ಕರ್ಮಫಲಾನುಸಾರವಾಗಿ ದೈವ ನಿಯಮವನ್ನನುಸರಿಸಿ ಬಂದು-ಹೋಗುತ್ತಿರುತ್ತವೆ.

12028021a ಆಸನಂ ಶಯನಂ ಯಾನಮುತ್ಥಾನಂ ಪಾನಭೋಜನಮ್|
12028021c ನಿಯತಂ ಸರ್ವಭೂತಾನಾಂ ಕಾಲೇನೈವ ಭವಂತ್ಯುತ||

ಸರ್ವಪ್ರಾಣಿಗಳಿಗೂ ಕುಳಿತುಕೊಳ್ಳುವ, ಮಲಗುವ, ತಿರುಗಾಡುವ, ಏಳುವ, ಮತ್ತು ಪಾನ-ಭೋಜನಗಳ ಕಾಲವು ನಿಯತವಾಗಿರುತ್ತದೆ.

12028022a ವೈದ್ಯಾಶ್ಚಾಪ್ಯಾತುರಾಃ ಸಂತಿ ಬಲವಂತಃ ಸುದುರ್ಬಲಾಃ|
12028022c ಸ್ತ್ರೀಮಂತಶ್ಚ ತಥಾ ಷಂಢಾ ವಿಚಿತ್ರಃ ಕಾಲಪರ್ಯಯಃ||

ವೈದ್ಯರೂ ರೋಗಿಗಳಾಗುತ್ತಾರೆ. ಬಲಿಷ್ಠರೂ ದುರ್ಬಲರಾಗುತ್ತಾರೆ. ಸ್ತ್ರೀಸಂಗಗಳನ್ನು ಹೊಂದಿದವರೂ ಷಂಢರಾಗುತ್ತಾರೆ. ಕಾಲದ ವೈಪರೀತ್ಯವು ಹೀಗೆ ವಿಚಿತ್ರವಾದುದು.

12028023a ಕುಲೇ ಜನ್ಮ ತಥಾ ವೀರ್ಯಮಾರೋಗ್ಯಂ ಧೈರ್ಯಮೇವ ಚ|
12028023c ಸೌಭಾಗ್ಯಮುಪಭೋಗಶ್ಚ ಭವಿತವ್ಯೇನ ಲಭ್ಯತೇ||

ಉತ್ತಮ ಕುಲದಲ್ಲಿ ಜನ್ಮ, ವೀರ್ಯ, ಆರೋಗ್ಯ, ಧೈರ್ಯ, ಸೌಭಾಗ್ಯ ಮತ್ತು ಉಪಭೋಗಗಳು ಅದೃಷ್ಟದಿಂದಲೇ ಲಭ್ಯವಾಗುತ್ತವೆ.

12028024a ಸಂತಿ ಪುತ್ರಾಃ ಸುಬಹವೋ ದರಿದ್ರಾಣಾಮನಿಚ್ಚತಾಮ್|
12028024c ಬಹೂನಾಮಿಚ್ಚತಾಂ ನಾಸ್ತಿ ಸಮೃದ್ಧಾನಾಂ ವಿಚೇಷ್ಟತಾಮ್||

ಮಕ್ಕಳೇ ಬೇಡವೆನ್ನುವ ದರಿದ್ರನಿಗೆ ಅನೇಕ ಮಕ್ಕಳಾಗುತ್ತಾರೆ. ಮಕ್ಕಳಾಗಬೇಕೆಂದು ಹಂಬಲಿಸುವ ಶ್ರೀಮಂತನಿಗೆ ಮಕ್ಕಳೇ ಆಗುವುದಿಲ್ಲ. ವಿಧಿಯು ವಿಚಿತ್ರವಾದುದು.

12028025a ವ್ಯಾಧಿರಗ್ನಿರ್ಜಲಂ ಶಸ್ತ್ರಂ ಬುಭುಕ್ಷಾ ಶ್ವಾಪದಂ ವಿಷಮ್|
12028025c ರಜ್ಜ್ವಾ ಚ ಮರಣಂ ಜಂತೋರುಚ್ಚಾಚ್ಚ ಪತನಂ ತಥಾ||

ವ್ಯಾಧಿ, ಅಗ್ನಿ, ನೀರು, ಶಸ್ತ್ರ, ಹಸಿವು, ಅಪಘಾತ, ವಿಷಜ್ವರ, ಬೀಳುವುದು ಇವೇ ಪ್ರಾಣಿಗಳ ಮರಣಕ್ಕೆ ಮುಖ್ಯ ಕಾರಣಗಳಾಗಿರುತ್ತವೆ.

12028026a ನಿರ್ಯಾಣಂ ಯಸ್ಯ ಯದ್ದಿಷ್ಟಂ ತೇನ ಗಚ್ಚತಿ ಹೇತುನಾ|
12028026c ದೃಶ್ಯತೇ ನಾಭ್ಯತಿಕ್ರಾಮನ್ನತಿಕ್ರಾಂತೋ ನ ವಾ ಪುನಃ||

ಯಾರ ಅದೃಷ್ಟದಲ್ಲಿ ಯಾವ ಕಾರಣದಿಂದ ಮರಣಹೊಂದಬೇಕೆಂದಿರುತ್ತದೆಯೋ ಅದೇ ರೀತಿಯಲ್ಲಿ ಮರಣ ಹೊಂದುತ್ತಾರೆ. ಕೆಲವೊಮ್ಮೆ ಧರ್ಮಗಳನ್ನು ಉಲ್ಲಂಘಿಸದೇ ಇರತಕ್ಕವನೂ ಆಪತ್ತಿನಿಂದ ಪಾರಾಗದೇ ಇರುವುದನ್ನು ಕಾಣುತ್ತೇವೆ.

12028027a ದೃಶ್ಯತೇ ಹಿ ಯುವೈವೇಹ ವಿನಶ್ಯನ್ವಸುಮಾನ್ನರಃ|
12028027c ದರಿದ್ರಶ್ಚ ಪರಿಕ್ಲಿಷ್ಟಃ ಶತವರ್ಷೋ ಜನಾಧಿಪ||

ಜನಾಧಿಪ! ಐಶ್ವರ್ಯವಂತನಾದವನು ಯುವಕನಾಗಿರುವಾಗಲೇ ಸತ್ತುಹೋಗುವುದನ್ನು ಮತ್ತು ದರಿದ್ರನಾಗಿ ಕಷ್ಟದಲ್ಲಿರುವವನು ನೂರುವರ್ಷಗಳು ಬದುಕಿರುವುದನ್ನು ನೋಡುತ್ತೇವೆ.

12028028a ಅಕಿಂಚನಾಶ್ಚ ದೃಶ್ಯಂತೇ ಪುರುಷಾಶ್ಚಿರಜೀವಿನಃ|
12028028c ಸಮೃದ್ಧೇ ಚ ಕುಲೇ ಜಾತಾ ವಿನಶ್ಯಂತಿ ಪತಂಗವತ್||

ಯಾರಲ್ಲಿ ಏನೂ ಇರುವುದಿಲ್ಲವೋ ಅಂಥಹ ದರಿದ್ರ ಜನರು ಬಹುಕಾಲ ಬಾಳುತ್ತಾರೆ. ಶ್ರೀಮಂತ ಕುಲದಲ್ಲಿ ಹುಟ್ಟಿದವರು ಪತಂಗಗಳಂತೆ ನಾಶಹೊಂದುತ್ತಾರೆ.

12028029a ಪ್ರಾಯೇಣ ಶ್ರೀಮತಾಂ ಲೋಕೇ ಭೋಕ್ತುಂ ಶಕ್ತಿರ್ನ ವಿದ್ಯತೇ|
12028029c ಕಾಷ್ಠಾನ್ಯಪಿ ಹಿ ಜೀರ್ಯಂತೇ ದರಿದ್ರಾಣಾಂ ನರಾಧಿಪ||

ನರಾಧಿಪ! ಲೋಕದಲ್ಲಿ ಶ್ರೀಮಂತರಿಗೆ ಬಹುಷಃ ಭೋಗಿಸುವ ಶಕ್ತಿಯೇ ಇರುವುದಿಲ್ಲ. ಆದರೆ ದರಿದ್ರನಿಗೆ ಕಟ್ಟಿಗೆಯನ್ನೂ ಜೀರ್ಣಿಸಿಕೊಳ್ಳುವ ಶಕ್ತಿಯಿರುತ್ತದೆ.

12028030a ಅಹಮೇತತ್ಕರೋಮೀತಿ ಮನ್ಯತೇ ಕಾಲಚೋದಿತಃ|
12028030c ಯದ್ಯದಿಷ್ಟಮಸಂತೋಷಾದ್ದುರಾತ್ಮಾ ಪಾಪಮಾಚರನ್||

ಕಾಲಚೋದಿತ ಮನುಷ್ಯನು ನಾನೇ ಇದನ್ನು ಮಾಡುತ್ತೇನೆ ಎಂದು ಭಾವಿಸಿಕೊಳ್ಳುತ್ತಾನೆ. ತನಗಿಲ್ಲವೆಂಬ ಅಸಂತೋಷದಿಂದ ದುರಾತ್ಮನು ಪಾಪಕರ್ಮಗಳನ್ನೆಸಗುತ್ತಾನೆ.

12028031a ಸ್ತ್ರಿಯೋಽಕ್ಷಾ ಮೃಗಯಾ ಪಾನಂ ಪ್ರಸಂಗಾನ್ನಿಂದಿತಾ ಬುಧೈಃ|
12028031c ದೃಶ್ಯಂತೇ ಚಾಪಿ ಬಹವಃ ಸಂಪ್ರಸಕ್ತಾ ಬಹುಶ್ರುತಾಃ||

ಸ್ತ್ರೀಸಂಗ, ದ್ಯೂತ, ಬೇಟೆ, ಸುರಾಪಾನ ಇವುಗಳು ಕೆಟ್ಟ ಹವ್ಯಾಸಗಳೆಂದು ತಿಳಿದವರು ನಿಂದಿಸುತ್ತಾರೆ. ಆದರೆ ತಿಳಿದವರೇ ಹೆಚ್ಚಾಗಿ ಇವುಗಳಲ್ಲಿ ತೊಡಗಿರುವುದನ್ನು ನಾವು ಕಾಣುತ್ತೇವೆ!

12028032a ಇತಿ ಕಾಲೇನ ಸರ್ವಾರ್ಥಾನೀಪ್ಸಿತಾನೀಪ್ಸಿತಾನಿ ಚ|
12028032c ಸ್ಪೃಶಂತಿ ಸರ್ವಭೂತಾನಿ ನಿಮಿತ್ತಂ ನೋಪಲಭ್ಯತೇ||

ಹೀಗೆ ಕಾಲದ ಪ್ರಭಾವದಿಂದಲೇ ಜೀವಿಗಳು – ಇಷ್ಟವಾದವುಗಳು ಮತ್ತು ಇಷ್ಟವಲ್ಲದವುಗಳು – ಎಲ್ಲವನ್ನೂ ಅವರವರ ಅದೃಷ್ಟದ ಪ್ರಕಾರ ಪಡೆಯುತ್ತವೆ.

12028033a ವಾಯುಮಾಕಾಶಮಗ್ನಿಂ ಚ ಚಂದ್ರಾದಿತ್ಯಾವಹಃಕ್ಷಪೇ|
12028033c ಜ್ಯೋತೀಂಷಿ ಸರಿತಃ ಶೈಲಾನ್ಕಃ ಕರೋತಿ ಬಿಭರ್ತಿ ವಾ||

ವಾಯು, ಆಕಾಶ, ಅಗ್ನಿ, ಚಂದ್ರಾದಿತ್ಯರು, ಹಗಲು-ರಾತ್ರಿಗಳು, ನಕ್ಷತ್ರಗಳು ಮತ್ತು ನದೀ-ಪರ್ವತಗಳನ್ನು ಕಾಲವಲ್ಲದೇ ಇನ್ಯಾರು ಸೃಷ್ಟಿಸುತ್ತಾರೆ? ಬೇರೆ ಯಾರು ಇವುಗಳನ್ನು ಹೊರುತ್ತಾರೆ?

12028034a ಶೀತಮುಷ್ಣಂ ತಥಾ ವರ್ಷಂ ಕಾಲೇನ ಪರಿವರ್ತತೇ|
12028034c ಏವಮೇವ ಮನುಷ್ಯಾಣಾಂ ಸುಖಿದುಃಖೇ ನರರ್ಷಭ||

ನರರ್ಷಭ! ಥಳಿ-ಬೇಸಗೆ-ಮಳೆಗಾಲಗಳು ಕಾಲದ ಪ್ರಭಾವದಿಂದಲೇ ಬದಲಾಗುತ್ತಿರುತ್ತವೆ. ಹಾಗೆಯೇ ಮನುಷ್ಯರ ಸುಖ-ದುಃಖಗಳೂ ಬದಲಾಗುತ್ತಿರುತ್ತವೆ.

12028035a ನೌಷಧಾನಿ ನ ಶಾಸ್ತ್ರಾಣಿ ನ ಹೋಮಾ ನ ಪುನರ್ಜಪಾಃ|
12028035c ತ್ರಾಯಂತೇ ಮೃತ್ಯುನೋಪೇತಂ ಜರಯಾ ವಾಪಿ ಮಾನವಮ್||

ಔಷಧಗಳಾಗಲೀ, ಶಾಸ್ತ್ರಗಳಾಗಲೀ, ಹೋಮಗಳಾಗಲೀ ಅಥವಾ ಪುನಃ ಜಪಗಳಾಗಲೀ ಮಾನವನನ್ನು ಮೃತ್ಯುವಿನಿಂದಾಗಲೀ ಮುಪ್ಪಿನಿಂದಾಗಲೀ ರಕ್ಷಿಸುವುದಿಲ್ಲ.

12028036a ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹೋದಧೌ|
12028036c ಸಮೇತ್ಯ ಚ ವ್ಯತೀಯಾತಾಂ ತದ್ವದ್ಭೂತಸಮಾಗಮಃ||

ಮಹಾಸಾಗರದಲ್ಲಿ ಹೇಗೆ ಒಂದು ಕಟ್ಟಿಗೆಯ ತುಂಡು ತೇಲಿಕೊಂಡು ಬಂದು ಇನ್ನೊಂದು ಕಟ್ಟಿಗೆಯ ತುಂಡನ್ನು ಸೇರಿ ಪುನಃ ದೂರ ತೇಲಿಕೊಂಡು ಹೋಗುವುದೋ ಹಾಗೆಯೇ ಜೀವಿಗಳ ಸಮಾಗಮವೂ ಕೂಡ ಕ್ಷಣಿಕವಾಗಿರುತ್ತದೆ.

12028037a ಯೇ ಚಾಪಿ ಪುರುಷೈಃ ಸ್ತ್ರೀಭಿರ್ಗೀತವಾದ್ಯೈರುಪಸ್ಥಿತಾಃ|
12028037c ಯೇ ಚಾನಾಥಾಃ ಪರಾನ್ನಾದಾಃ ಕಾಲಸ್ತೇಷು ಸಮಕ್ರಿಯಃ||

ಸ್ತ್ರೀಯರೊಡನೆ ಗೀತ-ವಾದ್ಯಗಳಿಂದ ಆನಂದಿತರಾಗಿರುವ ಪುರುಷರು ಮತ್ತು ಅನಾಥರಾಗಿ ಪರಾನ್ನವನ್ನೇ ತಿಂದು ಜೀವಿಸುವ ಪುರುಷರು ಇವರೊಬ್ಬಡನೆಯೂ ಕಾಲವು ಒಂದೇ ಸಮನಾಗಿ ವರ್ತಿಸುತ್ತದೆ[46].

12028038a ಮಾತೃಪಿತೃಸಹಸ್ರಾಣಿ ಪುತ್ರದಾರಶತಾನಿ ಚ|
12028038c ಸಂಸಾರೇಷ್ವನುಭೂತಾನಿ ಕಸ್ಯ ತೇ ಕಸ್ಯ ವಾ ವಯಮ್||

ಈ ಸಂಸಾರದಲ್ಲಿ ನಾವು ಅನೇಕಾನೇಕ ಸಹಸ್ರ ತಾಯಿ-ತಂದೆಯರನ್ನೂ, ಪತ್ನಿ-ಮಕ್ಕಳನ್ನೂ ಪಡೆದಿರುತ್ತೇವೆ. ಆದರೆ ಇಂದು ಅವರು ಯಾರಿಗೆ ಸಂಬಂಧಪಟ್ಟವರು? ಅಥವಾ ನಾವು ಯಾರಿಗೆ ಸಂಬಂಧಿಸಿದವರು?

12028039a ನೈವಾಸ್ಯ ಕಶ್ಚಿದ್ಭವಿತಾ ನಾಯಂ ಭವತಿ ಕಸ್ಯ ಚಿತ್|
12028039c ಪಥಿ ಸಂಗತಮೇವೇದಂ ದಾರಬಂಧುಸುಹೃದ್ಗಣೈಃ||

ನಾವು ಯಾರದ್ದೂ ಆಗಿರುವುದಿಲ್ಲ. ಯಾರೂ ನಮ್ಮವರಾಗಿರುವುದಿಲ್ಲ. ಈ ಪತ್ನಿ-ಬಂಧು-ಸ್ನೇಹಿತ ಗಣಗಳು ದಾರಿಯಲ್ಲಿ ಸಿಗುವ

---

[46] ಕಾಲದ ಪರಿಣಾಮವು - ಶ್ರೀಮಂತರಿರಲಿ ಅಥವಾ ದರಿದ್ರರಿರಲಿ ಒಂದೇ ತೆರನಾಗಿರುತ್ತದೆ.

ದಾರಿಹೋಕರು ಅಷ್ಟೆ!

12028040a ಕ್ವಾಸಂ ಕ್ವಾಸ್ಮಿ ಗಮಿಷ್ಯಾಮಿ ಕೋ ನ್ವಹಂ ಕಿಮಿಹಾಸ್ಥಿತಃ|
12028040c ಕಸ್ಮಾತ್ಕಮನುಶೋಚೇಯಮಿತ್ಯೇವಂ ಸ್ಥಾಪಯೇನ್ಮನಃ||
12028040e ಅನಿತ್ಯೇ ಪ್ರಿಯಸಂವಾಸೇ ಸಂಸಾರೇ ಚಕ್ರವದ್ಗತೌ||

“ನಾನು ಯಾರು? ಎಲ್ಲಿಗೆ ಹೋಗುತ್ತಿದ್ದೇನೆ? ನಾನು ಯಾರವನು? ಇಲ್ಲಿಗೇಕೆ ಬಂದಿದ್ದೇನೆ? ಯಾರಿಗೋಸ್ಕರ ಚಿಂತಿಸುತ್ತಿದ್ದೇನೆ?” ಎಂದು ಮನಸ್ಸಿನಲ್ಲಿಯೇ ಯೋಚಿಸುತ್ತಿರಬೇಕು. ಚಕ್ರದಂತೆ ತಿರುಗುತ್ತಿರುವ ಈ ಸಂಸಾರದಲ್ಲಿ ಪ್ರಿಯವಾದುದನ್ನು ಪಡೆಯುವ ಅಥವಾ ಪ್ರಿಯರೊಡನೆ ಸೇರುವ ಕ್ರಿಯೆಗಳು ಅನಿತ್ಯವಾದವು. ಶಾಶ್ವತವಾದವುಗಳಲ್ಲ.

12028041a ನ ದೃಷ್ಟಪೂರ್ವಂ ಪ್ರತ್ಯಕ್ಷಂ ಪರಲೋಕಂ ವಿದುರ್ಬುಧಾಃ|
12028041c ಆಗಮಾಂಸ್ತ್ವನತಿಕ್ರಮ್ಯ ಶ್ರದ್ಧಾತವ್ಯಂ ಬುಭೂಷತಾ||

ಪರಲೋಕವು ಪ್ರತ್ಯಕ್ಷದಲ್ಲಿಲ್ಲ. ಪರಲೋಕವನ್ನು ನೋಡಿದವರು ಯಾರೂ ಇಲ್ಲ ಎನ್ನುವುದನ್ನು ತಿಳಿದವರು ಹೇಳುತ್ತಾರೆ. ಆದರೆ ಆಗಮಗಳನ್ನು ಉಲ್ಲಂಘಿಸದೇ ಅವುಗಳಲ್ಲಿ ಶ್ರದ್ಧೆಯನ್ನಿಡಬೇಕು.

12028042a ಕುರ್ವೀತ ಪಿತೃದೈವತ್ಯಂ ಧರ್ಮಾಣಿ ಚ ಸಮಾಚರೇತ್|
12028042c ಯಜೇಚ್ಚ ವಿದ್ವಾನ್ವಿಧಿವತ್ತ್ರಿವರ್ಗಂ ಚಾಪ್ಯನುವ್ರಜೇತ್||

ವಿದ್ವಾನನು ಪಿತೃ-ದೇವಕಾರ್ಯಗಳನ್ನು ಮತ್ತು ಯಜ್ಞಗಳನ್ನು – ಈ ಮೂರು ವಿಧದ ಕರ್ಮಗಳನ್ನು ವಿಧಿವತ್ತಾಗಿ ನಡೆಸುತ್ತಿರಬೇಕು.

12028043a ಸಂನಿಮಜ್ಜಜ್ಜಗದಿದಂ ಗಂಭೀರೇ ಕಾಲಸಾಗರೇ|
12028043c ಜರಾಮೃತ್ಯುಮಹಾಗ್ರಾಹೇ ನ ಕಶ್ಚಿದವಬುಧ್ಯತೇ||

ಮುಪ್ಪು-ಮರಣಗಳೆಂಬ ಮೊಸಳೆಗಳಿಂದ ಕೂಡಿರುವ ಗಂಭೀರ ಸಮುದ್ರದಂತಿರುವ ಈ ಕಾಲದಲ್ಲಿ ಜಗತ್ತೆಲ್ಲವೂ ಮುಳುಗಿಹೋಗಿದೆ. ಆದರೆ ಯಾರೂ ಇದನ್ನು ತಿಳಿದುಕೊಳ್ಳುವುದಿಲ್ಲ!

12028044a ಆಯುರ್ವೇದಮಧೀಯಾನಾಃ ಕೇವಲಂ ಸಪರಿಗ್ರಹಮ್|
12028044c ದೃಶ್ಯಂತೇ ಬಹವೋ ವೈದ್ಯಾ ವ್ಯಾಧಿಭಿಃ ಸಮಭಿಪ್ಲುತಾಃ||

ಆಯುರ್ವೇದವನ್ನು ಅಧ್ಯಯನ ಮಾಡಿರುವ ಅನೇಕ ವೈದ್ಯರು ಪರಿವಾರ ಸಮೇತರಾಗಿ ನಾನಾ ವ್ಯಾಧಿಗಳಿಗೆ ತುತ್ತಾಗಿರುವುದನ್ನು ಕಾಣುತ್ತೇವೆ.

12028045a ತೇ ಪಿಬಂತಃ ಕಷಾಯಾಂಶ್ಚ ಸರ್ಪಿರ್ಂಷಿ ವಿವಿಧಾನಿ ಚ|
12028045c ನ ಮೃತ್ಯುಮತಿವರ್ತಂತೇ ವೇಲಾಮಿವ ಮಹೋದಧಿಃ||

ಅವರು ವಿವಿಧ ಕಷಾಯಗಳನ್ನೂ ಲೇಹಗಳನ್ನೂ ಸೇವಿಸುತ್ತಲೇ ಇರುತ್ತಾರೆ. ಆದರೂ ಸಮುದ್ರವು ಎಷ್ಟೇ ಪ್ರಯತ್ನಿಸಿದರೂ ತೀರವನ್ನು ಉಲ್ಲಂಘಿಸದಂತೆ ಅವರು ಮೃತ್ಯುವನ್ನು ಮೀರಲಾರರು.

12028046a ರಸಾಯನವಿದಶ್ಚೈವ ಸುಪ್ರಯುಕ್ತರಸಾಯನಾಃ|
12028046c ದೃಶ್ಯಂತೇ ಜರಯಾ ಭಗ್ನಾ ನಗಾ ನಾಗೈರಿವೋತ್ತಮೈಃ||

ರಸಾಯನ ಶಾಸ್ತ್ರವನ್ನು ತಿಳಿದವರೂ ಕೂಡ ಉಪಯುಕ್ತ ರಸಾಯನಪದಾರ್ಥಗಳನ್ನು ಸೇವಿಸಿದರೂ ಬಲಿಷ್ಠ ಆನೆಯಿಂದ ಮುರಿಯಲ್ಪಟ್ಟ ವೃಕ್ಷದಂತೆ ಮುಪ್ಪಿನಿಂದ ಮುರಿಯಲ್ಪಟ್ಟು ಬೀಳುತ್ತಾರೆ.

12028047a ತಥೈವ ತಪಸೋಪೇತಾಃ ಸ್ವಾಧ್ಯಾಯಾಭ್ಯಸನೇ ರತಾಃ|
12028047c ದಾತಾರೋ ಯಜ್ಞಶೀಲಾಶ್ಚ ನ ತರಂತಿ ಜರಾಂತಕೌ||

ಹಾಗೆಯೇ ತಪಸ್ಸಿನಿಂದ ಕೂಡಿ ಸ್ವಾಧ್ಯಾಯ-ಅಭ್ಯಾಸಗಳಲ್ಲಿ ನಿರತರಾದವರೂ, ದಾನಗಳನ್ನಿತ್ತವರೂ ಮತ್ತು ಯಜ್ಞಶೀಲರೂ ಕೂಡ ಮುಪ್ಪು-ಮರಣಗಳನ್ನು ಮೀರುವುದಿಲ್ಲ.

12028048a ನ ಹ್ಯಹಾನಿ ನಿವರ್ತಂತೇ ನ ಮಾಸಾ ನ ಪುನಃ ಸಮಾಃ|
12028048c ಜಾತಾನಾಂ ಸರ್ವಭೂತಾನಾಂ ನ ಪಕ್ಷಾ ನ ಪುನಃ ಕ್ಷಪಾಃ||

ಹುಟ್ಟಿದ ಎಲ್ಲ ಪ್ರಾಣಿಗಳಿಗೂ ಕಳೆದುಹೋದ ದಿನಗಳಾಗಲೀ, ರಾತ್ರಿಗಳಾಗಲೀ, ಮಾಸಗಳಾಗಲೀ, ಪಕ್ಷಗಳಾಗಲೀ, ವರ್ಷಗಳಾಗಲೀ ಪುನಃ ಮರಳಿ ಬರುವುದಿಲ್ಲ.

12028049a ಸೋಽಯಂ ವಿಪುಲಮಧ್ವಾನಂ ಕಾಲೇನ ಧ್ರುವಮಧ್ರುವಃ|
12028049c ನರೋಽವಶಃ ಸಮಭ್ಯೇತಿ ಸರ್ವಭೂತನಿಷೇವಿತಮ್||

ಅಸ್ಥಿರನಾದ ಅಸ್ವತಂತ್ರನಾದ ಮನುಷ್ಯನು ಕಾಲವು ಸನ್ನಿಹಿತವಾದೊಡನೆಯೇ ಸರ್ವಪ್ರಾಣಿಗಳೂ ಹೋಗುವ ಶಾಶ್ವತವಾದ ವಿಶಾಲ ಮೃತ್ಯುಪಥದಲ್ಲಿ ಹೋಗುತ್ತಾನೆ.

12028050a ದೇಹೋ ವಾ ಜೀವತೋಽಭ್ಯೇತಿ ಜೀವೋ ವಾಭ್ಯೇತಿ ದೇಹತಃ|
12028050c ಪಥಿ ಸಂಗತಮೇವೇದಂ ದಾರೈರನ್ಯೈಶ್ಚ ಬಂಧುಭಿಃ||

ದೇಹವೇ ಜೀವವೆಂದು ತಿಳಿದುಕೊಂಡಿರುವವರು ಅಥವಾ ಜೀವವೇ ದೇಹವೆಂದು ತಿಳಿದುಕೊಂಡಿರುವವರು ಇಬ್ಬರೂ ಕೂಡ ದಾರಿಯಲ್ಲಿ ಪತ್ನಿಯೇ ಮೊದಲಾದ ಬಂಧುಗಳೊಡನೆ ಸೇರಿಕೊಂಡು ಸ್ವಲ್ಪಕಾಲವೇ ಇರುತ್ತಾರೆ.

12028051a ನಾಯಮತ್ಯಂತಸಂವಾಸೋ ಲಭ್ಯತೇ ಜಾತು ಕೇನ ಚಿತ್|

12028051c ಅಪಿ ಸ್ವೇನ ಶರೀರೇಣ ಕಿಮುತಾನ್ಯೇನ ಕೇನ ಚಿತ್‌॥

ಯಾರಿಗೂ ಅನಂತವಾದ (ಕೊನೆಯಾಗದ) ಸಂಬಂಧಗಳು ಯಾವಾಗಲೂ ದೊರಕುವುದಿಲ್ಲ. ತನ್ನ ಶರೀರದೊಡನಿರುವ ಸಂಬಂಧವೇ ಅಲ್ಪಕಾಲದ್ದಾಗಿರುವಾಗ ಬೇರೆಯವರೊಡನಿರುವ ಸಂಬಂಧಗಳ ಕುರಿತು ಹೇಳುವುದೇನಿದೆ?

12028052a ಕ್ವ ನು ತೇऽದ್ಯ ಪಿತಾ ರಾಜನ್ಕ್ವ ನು ತೇऽದ್ಯ ಪಿತಾಮಹಃ|
12028052c ನ ತ್ವಂ ಪಶ್ಯಸಿ ತಾನದ್ಯ ನ ತ್ವಾಂ ಪಶ್ಯಂತಿ ತೇऽಪಿ ಚ‌॥

ರಾಜನ್‌! ಈಗ ನಿನ್ನ ತಂದೆಯೆಲ್ಲಿದ್ದಾನೆ? ನಿನ್ನ ಪಿತಾಮಹನೆಲ್ಲಿದ್ದಾನೆ? ಅವರನ್ನು ಇಂದು ನೀನೂ ಕಾಣುತ್ತಿಲ್ಲ. ಅವರಿಗೂ ಕೂಡ ನೀನು ಕಾಣುತ್ತಿಲ್ಲ!

12028053a ನ ಹ್ಯೇವ ಪುರುಷೋ ದ್ರಷ್ಟಾ ಸ್ವರ್ಗಸ್ಯ ನರಕಸ್ಯ ವಾ|
12028053c ಆಗಮಸ್ತು ಸತಾಂ ಚಕ್ಷುರ್ನೃಪತೇ ತಮಿಹಾಚರ‌॥

ನೃಪತೇ! ಯಾವ ಪುರುಷನೂ ಇಲ್ಲಿಂದ ಸ್ವರ್ಗ ಅಥವಾ ನರಕವನ್ನು ಕಂಡಿಲ್ಲ. ಆದರೆ ಆಗಮಗಳೇ ಸತ್ಪುರುಷರಿಗೆ ಕಣ್ಣುಗಳಾಗಿವೆ. ಆದುದರಂತೆ ಅವುಗಳು ಹೇಳುವಂತೆ ನಡೆದುಕೋ!

12028054a ಚರಿತಬ್ರಹ್ಮಚರ್ಯೋ ಹಿ ಪ್ರಜಾಯೇತ ಯಜೇತ ಚ|
12028054c ಪಿತೃದೇವಮಹರ್ಷೀಣಾಮಾನೃಣ್ಯಾಯಾನಸೂಯಕಃ‌॥

ಬ್ರಹ್ಮಚರ್ಯವನ್ನು ನಡೆಸಿ, ಮಕ್ಕಳನ್ನು ಪಡೆದು ಯಜ್ಞಗಳನ್ನು ಮಾಡಬೇಕು. ಈ ರೀತಿ ಪಿತೃ-ದೇವ-ಮಹರ್ಷಿಗಳ ಋಣಗಳನ್ನು ದೋಷವೆಣಿಸದೇ ತೀರಿಸಬೇಕು.

12028055a ಸ ಯಜ್ಞಶೀಲಃ ಪ್ರಜನೇ ನಿವಿಷ್ಟಃ
ಪ್ರಾಗ್ಬ್ರಹ್ಮಚಾರೀ ಪ್ರವಿಭಕ್ತಪಕ್ಷಃ|
12028055c ಆರಾಧಯನ್ಸ್ವರ್ಗಮಿಮಂ ಚ ಲೋಕಂ
ಪರಂ ಚ ಮುಕ್ತ್ವಾ ಹೃದಯವ್ಯಲೀಕಮ್||

ಮೊದಲು ಬ್ರಹ್ಮಚಾರಿಯಾಗಿದ್ದುಕೊಂಡು, ನಂತರ ಸಂತಾನಗಳನ್ನು ಪಡೆದು, ದ್ವಂದ್ವಗಳನ್ನು ಮೀರಿ ಅವಿಭಕ್ತನಾಗಿದ್ದುಕೊಂಡು ಈ ಲೋಕವೇ ಸ್ವರ್ಗವೆಂದು ಆರಾಧಿಸಿ ಹೃದಯದಲ್ಲಿರುವ ಮುಳ್ಳನ್ನು ಕಿತ್ತೊಗೆಯಬೇಕು.

12028056a ಸಮ್ಯಗ್ವಿ ಧರ್ಮಂ ಚರತೋ ನೃಪಸ್ಯ
ದ್ರವ್ಯಾಣಿ ಚಾಪ್ಯಾಹರತೋ ಯಥಾವತ್|
12028056c ಪ್ರವೃತ್ತಚಕ್ರಸ್ಯ ಯಶೋಽಭಿವರ್ಧತೇ
ಸರ್ವೇಷು ಲೋಕೇಷು ಚರಾಚರೇಷು||

ಉತ್ತಮ ಧರ್ಮದಲ್ಲಿಯೇ ನಡೆದುಕೊಂಡು, ಯಥಾವತ್ತಾಗಿ ದ್ರವ್ಯಗಳನ್ನು ಸಂಗ್ರಹಿಸುತ್ತಾ ನಡೆದುಕೊಳ್ಳುವ ನೃಪನ ಯಶಸ್ಸು ಎಲ್ಲ ಲೋಕಗಳಲ್ಲಿಯೂ ವಿಸ್ತರಿಸುತ್ತದೆ.”

12028057 ವ್ಯಾಸ ಉವಾಚ
12028057a ಇತ್ಯೇವಮಾಜ್ಞಾಯ ವಿದೇಹರಾಜೋ
ವಾಕ್ಯಂ ಸಮಗ್ರಂ ಪರಿಪೂರ್ಣಹೇತುಃ|
12028057c ಅಶ್ಮಾನಮಾಮಂತ್ರ್ಯ ವಿಶುದ್ಧಬುದ್ಧಿರ್
ಯಯೌ ಗೃಹಂ ಸ್ವಂ ಪ್ರತಿ ಶಾಂತಶೋಕಃ||

ವ್ಯಾಸನು ಹೇಳಿದನು: “ಹೀಗೆ ಅಶ್ಮನಿಂದ ಈ ಸಮಗ್ರವಾದ,

ಉದಾಹರಣೆಗಳಿಂದ ಪರಿಪೂರ್ಣವಾಗಿದ್ದ ಮಾತುಗಳನ್ನು ಕೇಳಿ ಜನಕನು ವಿಶುದ್ಧ ಮನಸ್ಸುಳ್ಳವನಾಗಿ, ಶೋಕವನ್ನು ತೊರೆದು ಶಾಂತನಾಗಿ ತನ್ನ ಅರಮನೆಗೆ ತೆರಳಿದನು.

12028058a ತಥಾ ತ್ವಮಪ್ಯಚ್ಯುತ ಮುಂಚ ಶೋಕಮ್
ಉತ್ತಿಷ್ಠ ಶಕ್ರೋಪಮ ಹರ್ಷಮೇಹಿ|
12028058c ಕ್ಷಾತ್ರೇಣ ಧರ್ಮೇಣ ಮಹೀ ಜಿತಾ ತೇ
ತಾಂ ಭುಂಕ್ಷ್ವ ಕುಂತೀಸುತ ಮಾ ವಿಷಾದೀಃ||

ಅಚ್ಯುತ! ಇಂದ್ರನ ಸಮಾನನೇ! ಕುಂತೀಸುತ! ಹಾಗೆಯೇ ನೀನೂ ಕೂಡ ಶೋಕವನ್ನು ತೊರೆ! ಎದ್ದೇಳು! ಹರ್ಷವನ್ನು ತಾಳು! ಕ್ಷಾತ್ರಧರ್ಮದಿಂದ ಮಹಿಯನ್ನು ಗೆದ್ದ ನೀನು ಅದನ್ನು ಭೋಗಿಸು! ವಿಷಾದಿಸಬೇಡ!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವ್ಯಾಸವಾಕ್ಯೇ ಅಷ್ಟಾವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವ್ಯಾಸವಾಕ್ಯ ಎನ್ನುವ ಇಪ್ಪತ್ತೆಂಟನೇ ಅಧ್ಯಾಯವು.

೨೯

ಷೋಡಶ-ರಾಜಕೀಯೋಽಪಖ್ಯಾನ

ಶ್ರೀಕೃಷ್ಣನು ನಾರದ-ಸೃಂಜಯರ ಸಂವಾದ ರೂಪದಲ್ಲಿ ಹದಿನಾರು ರಾಜರ ಉಪಾಖ್ಯಾನವನ್ನು ಸಂಕ್ಷಿಪ್ತವಾಗಿ ಹೇಳಿ ಯುಧಿಷ್ಠಿರನ

ಶೋಕನಿವಾರಣೆಗೆ ಪ್ರಯತ್ನಿಸಿದುದು (1-141).

12029001 ವೈಶಂಪಾಯನ ಉವಾಚ|
12029001a ಅವ್ಯಾಹರತಿ ಕೌಂತೇಯೇ ಧರ್ಮಪುತ್ರೇ ಯುಧಿಷ್ಠಿರೇ|
12029001c ಗುಡಾಕೇಶೋ ಹೃಷೀಕೇಶಮಭ್ಯಭಾಷತ ಪಾಂಡವಃ||

ವೈಶಂಪಾಯನನು ಹೇಳಿದನು: "ಕೌಂತೇಯ ಧರ್ಮಪುತ್ರ ಯುಧಿಷ್ಠಿರನು ಸುಮ್ಮನೇ ಕುಳಿತುಕೊಂಡಿರಲು ಗುಡಾಕೇಶ ಪಾಂಡವನು ಹೃಷೀಕೇಶನಿಗೆ ಇಂತೆಂದನು:

12029002a ಜ್ಞಾತಿಶೋಕಾಭಿಸಂತಪ್ತೋ ಧರ್ಮರಾಜಃ ಪರಂತಪಃ|
12029002c ಏಷ ಶೋಕಾರ್ಣವೇ ಮಗ್ನಸ್ತಮಾಶ್ವಾಸಯ ಮಾಧವ||

"ಮಾಧವ! ಜ್ಞಾತಿಶೋಕದಿಂದ ಸಂತಪ್ತನಾಗಿರುವ ಧರ್ಮರಾಜ ಪರಂತಪನು ಈ ಶೋಕಸಾಗರದಲ್ಲಿ ಮುಳುಗಿಹೋಗಿದ್ದಾನೆ. ಅವನಿಗೆ ಸಮಾಧಾನ ಹೇಳು!

12029003a ಸರ್ವೇ ಸ್ಮ ತೇ ಸಂಶಯಿತಾಃ ಪುನರೇವ ಜನಾರ್ದನ|
12029003c ಅಸ್ಯ ಶೋಕಂ ಮಹಾಬಾಹೋ ಪ್ರಣಾಶಯಿತುಮರ್ಹಸಿ||

ಜನಾರ್ದನ! ನಾವೆಲ್ಲರೂ ಪುನಃ ಸಂಶಯಕ್ಕೆ ಸಿಲುಕಿದ್ದೇವೆ. ಮಹಾಬಾಹೋ! ಈ ಶೋಕವನ್ನು ಹೋಗಲಾಡಿಸಬೇಕು!"

12029004a ಏವಮುಕ್ತಸ್ತು ಗೋವಿಂದೋ ವಿಜಯೇನ ಮಹಾತ್ಮನಾ|
12029004c ಪರ್ಯವರ್ತತ ರಾಜಾನಂ ಪುಂಡರೀಕೇಕ್ಷಣೋಽಚ್ಯುತಃ||

ಮಹಾತ್ಮ ವಿಜಯನು ಹೀಗೆ ಹೇಳಲು ಅಚ್ಯುತ ಗೋವಿಂದನು ತಿರುಗಿ ರಾಜನಿಗೆ ಅಭಿಮುಖನಾಗಿ ಕುಳಿತನು.

12029005a ಅನತಿಕ್ರಮಣೀಯೋ ಹಿ ಧರ್ಮರಾಜಸ್ಯ ಕೇಶವಃ|
12029005c ಬಾಲ್ಯಾತ್ಪ್ರಭೃತಿ ಗೋವಿಂದಃ ಪ್ರೀತ್ಯಾ ಚಾಭ್ಯಧಿಕೋऽರ್ಜುನಾತ್||

ಧರ್ಮರಾಜನು ಕೇಶವನ ಮಾತನ್ನು ಯಾವಾಗಲೂ
ಉಲ್ಲಂಘಿಸಿದವನೇ ಅಲ್ಲ. ಏಕೆಂದರೆ ಬಾಲ್ಯದಿಂದಲೂ ಅವನಿಗೆ
ಗೋವಿಂದನೇ ಅರ್ಜುನನಿಗಿಂತ ಅಧಿಕ ಪ್ರಿಯನಾಗಿದ್ದನು.

12029006a ಸಂಪ್ರಗೃಹ್ಯ ಮಹಾಬಾಹುರ್ಭುಜಂ ಚಂದನಭೂಷಿತಮ್|
12029006c ಶೈಲಸ್ತಂಭೋಪಮಂ ಶೌರಿರುವಾಚಾಭಿವಿನೋದಯನ್||

ಆ ಮಹಾಬಾಹು ಶೌರಿಯು ಯುಧಿಷ್ಠಿರನ ಶೈಲಸ್ತಂಭದಂತಿದ್ದ
ಚಂದನಭೂಷಿತ ಭುಜಗಳನ್ನು ಹಿಡಿದು ವಿನೋದದಿಂದ
ಮಾತನಾಡತೊಡಗಿದನು.

12029007a ಶುಶುಭೇ ವದನಂ ತಸ್ಯ ಸುದಂಷ್ಟ್ರಂ ಚಾರುಲೋಚನಮ್|
12029007c ವ್ಯಾಕೋಶಮಿವ ವಿಸ್ಪಷ್ಟಂ ಪದ್ಮಂ ಸೂರ್ಯವಿಬೋಧಿತಮ್||

ಸುಂದರ ಹಲ್ಲುಗಳಿಂದಲೂ ಸುಂದರ ಕಣ್ಣುಗಳಿಂದಲೂ ಕೂಡಿದ್ದ
ಅವನ ಮುಖವು ಸೂರ್ಯೋದಯದ ಸಮಯದಲ್ಲಿ ಸಂಪೂರ್ಣವಾಗಿ
ಅರಳಿದ ಕಮಲದಂತೆ ಪ್ರಕಾಶಿಸುತ್ತಿತ್ತು.

12029008a ಮಾ ಕೃಥಾಃ ಪುರುಷವ್ಯಾಘ್ರ ಶೋಕಂ ತ್ವಂ ಗಾತ್ರಶೋಷಣಮ್|
12029008c ನ ಹಿ ತೇ ಸುಲಭಾ ಭೂಯೋ ಯೇ ಹತಾಸ್ಮಿನ್ರಣಾಜಿರೇ||

“ಪುರುಷವ್ಯಾಘ್ರ! ಶೋಕಿಸಬೇಡ! ಶೋಕವು ನಿನ್ನ ಶರೀರವನ್ನೇ
ಶೋಷಿಸುತ್ತಿದೆ. ರಣರಂಗದಲ್ಲಿ ಹತರಾಗಿರುವವರು ಪುನಃ ನಿನಗೆ
ಸುಲಭದಲ್ಲಿ ದೊರಕುವವರಲ್ಲ!



12029009a ಸ್ವಪ್ನಲಬ್ಧಾ ಯಥಾ ಲಾಭಾ ವಿತಥಾಃ ಪ್ರತಿಬೋಧನೇ|
12029009c ಏವಂ ತೇ ಕ್ಷತ್ರಿಯಾ ರಾಜನ್ಯೇ ವ್ಯತೀತಾ ಮಹಾರಣೇ||

ಸ್ವಪ್ನದಲ್ಲಿ ಪಡೆದುಕೊಂಡ ಧನವು ಎಚ್ಚರವಾದೊಡನೆಯೇ
ಇಲ್ಲವಾಗಿಬಿಡುವಂತೆ ರಾಜನ್! ಮಹಾರಣದಲ್ಲಿ ವಿನಾಶಹೊಂದಿರುವ
ಕ್ಷತ್ರಿಯರು ಪುನಃ ದೊರಕಲಾರರು.

12029010a ಸರ್ವೇ ಹ್ಯಭಿಮುಖಾಃ ಶೂರಾ ವಿಗತಾ ರಣಶೋಭಿನಃ|
12029010c ನೈಷಾಂ ಕಶ್ಚಿತ್ಪ್ರಪೃಷ್ಠತೋ ವಾ ಪಲಾಯನ್ವಾಪಿ ಪಾತಿತಃ||

ರಣಶೋಭಿಗಳಾಗಿದ್ದ ಆ ಎಲ್ಲ ಶೂರರೂ ಯುದ್ಧಕ್ಕೆ
ಅಭಿಮುಖರಾಗಿಯೇ ಪ್ರಾಣಬಿಟ್ಟಿರುವರು. ಅವರಲ್ಲಿ ಯಾರೂ
ಬೆನ್ನುಹಾಕಿ ಅಥವಾ ಪಲಾಯನಮಾಡಿ ಕೆಳಗುರುಳಲಿಲ್ಲ.

12029011a ಸರ್ವೇ ತ್ಯಕ್ತ್ವಾತ್ಮನಃ ಪ್ರಾಣಾನ್ಯುದ್ಧ್ವಾ ವೀರಾ ಮಹಾಹವೇ|
12029011c ಶಸ್ತ್ರಪೂತಾ ದಿವಂ ಪ್ರಾಪ್ತಾ ನ ತಾನ್ಶೋಚಿತುಮರ್ಹಸಿ||[47]

ಆ ವೀರರೆಲ್ಲರೂ ಮಹಾಹವದಲ್ಲಿ ಯುದ್ಧಮಾಡಿ ತಮ್ಮ ಪ್ರಾಣಗಳನ್ನು
ತೊರೆದಿದ್ದಾರೆ. ಶಸ್ತ್ರಗಳಿಂದ ಪವಿತ್ರರಾಗಿ ಸ್ವರ್ಗವನ್ನು ಪಡೆದಿದ್ದಾರೆ.
ಅವರ ಕುರಿತು ಶೋಕಿಸಬಾರದು.

12029012a ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್|

---

[47] ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ: ಕ್ಷತ್ರಧರ್ಮರತಾಃ ಶೂರಾ
ವೇದವೇದಾಂಗಪಾರಗಾಃ| ಪ್ರಾಪ್ತಾ ವೀರಗತಿಂ ಪುಣ್ಯಾಂ ತಾನ್ನ
ಶೋಚಿತುಮರ್ಹಸಿ| ಮೃತಾನ್ಮಹಾನುಭಾವಾಂಸ್ತ್ವಂ ಶೃತ್ವೈವ
ಪೃಥಿವೀಪತೀನ್|| (ಗೀತಾ ಪ್ರೆಸ್).

12029012c ಸೃಂಜಯಂ ಪುತ್ರಶೋಕಾರ್ತಂ ಯಥಾಯಂ ಪ್ರಾಹ ನಾರದಃ॥

ಇದಕ್ಕೆ ಸಂಬಂಧಿಸಿದಂತೆ ಈ ಪುರಾತನ ಇತಿಹಾಸವೊಂದನ್ನು ಉದಾಹರಿಸುತ್ತಾರೆ. ಪುತ್ರಶೋಕಾರ್ತನಾದ ಸೃಂಜಯನಿಗೆ ನಾರದನು ಇದನ್ನು ಹೇಳಿದ್ದನು.

12029013a ಸುಖಿದುಃಖೈರಹಂ ತ್ವಂ ಚ ಪ್ರಜಾಃ ಸರ್ವಾಶ್ಚ ಸೃಂಜಯ|
12029013c ಅವಿಮುಕ್ತಂ ಚರಿಷ್ಯಾಮಸ್ತತ್ರ ಕಾ ಪರಿದೇವನಾ॥

“ಸೃಂಜಯ! ನಾನಾಗಲೀ, ನೀನಾಗಲೀ, ಈ ಎಲ್ಲ ಪ್ರಜೆಗಳಾಗಲೀ ಯಾರೂ ಸುಖ-ದುಃಖಗಳಿಂದ ವಿಮುಕ್ತರಾಗಿರುವುದಿಲ್ಲ. ನಾವೆಲ್ಲರೂ ಒಂದು ದಿನ ಸಾಯುತ್ತೇವೆ. ಅದಕ್ಕಾಗಿ ದುಃಖಿಸುವುದೇಕೆ?

12029014a ಮಹಾಭಾಗ್ಯಂ ಪರಂ ರಾಜ್ಞಾಂ ಕೀರ್ತ್ಯಮಾನಂ ಮಯಾ ಶೃಣು|
12029014c ಗಚ್ಚಾವಧಾನಂ ನೃಪತೇ ತತೋ ದುಃಖಂ ಪ್ರಹಾಸ್ಯಸಿ॥

ನಾನು ಈಗ ವರ್ಣಿಸುವ ರಾಜರ ಪರಮ ಮಹಾಭಾಗ್ಯದ ಕುರಿತು ಕೇಳು. ನೃಪತೇ! ಆಗಿ ಹೋಗಿರುವ ಇವರ ವಿಷಯವನ್ನು ಕೇಳಿ ನಿನ್ನ ದುಃಖವು ದೂರವಾಗಬಹುದು!

12029015a ಮೃತಾನ್ಮಹಾನುಭಾವಾಂಸ್ತ್ವಂ ಶ್ರುತ್ವೈವ ತು ಮಹೀಪತೀನ್|
12029015c ಶ್ರುತ್ವಾಪನಯ ಸಂತಾಪಂ ಶೃಣು ವಿಸ್ತರಶಶ್ಚ ಮೇ॥[48]

ಮೃತರಾಗಿಹೋಗಿರುವ ಮಹಾನುಭಾವ ಮಹೀಪತಿಗಳ ಕುರಿತು ಕೇಳಿ

---

[48] ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ:
ಕ್ರೂರಗ್ರಹಭಿಶಮನಮಾಯುರ್ವರ್ಧನಮುತ್ತಮಮ್| ಅಗ್ರಿಮಾಣಾಂ
ಕ್ಷಿತಿಭುಜಾಮುಪಾದಾನಂ ಮನೋಹರಮ್॥ (ಗೀತಾ ಪ್ರೆಸ್).

ಸಂತಾಪವನ್ನು ಕಳೆದುಕೋ। ವಿಸ್ತಾರವಾಗಿ ಇದನ್ನು ನನ್ನಿಂದ ಕೇಳು।

12029016a ಆವಿಕ್ಷಿತಂ ಮರುತ್ತಂ ಮೇ ಮೃತಂ ಸೃಂಜಯ ಶುಶ್ರುಹಿ|
12029016c ಯಸ್ಯ ಸೇಂದ್ರಾಃ ಸವರುಣಾ ಬೃಹಸ್ಪತಿಪುರೋಗಮಾಃ||
12029016e ದೇವಾ ವಿಶ್ವಸೃಜೋ ರಾಜ್ಞೋ ಯಜ್ಞಮೀಯುರ್ಮಹಾತ್ಮನಃ||

ಸೃಂಜಯ! ಅವಿಕ್ಷಿತನ ಮಗ ಮರುತ್ತನೂ ಮೃತನಾದನೆಂದು ಕೇಳಿದ್ದೇವೆ. ಆ ರಾಜ ಮಹಾತ್ಮನ ಯಜ್ಞದಲ್ಲಿ ವರುಣ-ಬೃಹಸ್ಪತಿಗಳೊಂದಿಗೆ ಇಂದ್ರನನ್ನು ಮುಂದಿಟ್ಟುಕೊಂಡು ದೇವತೆಗಳು ಮತ್ತು ಪ್ರಜಾಪತಿಯೂ ಬಂದಿದ್ದರು.

12029017a ಯಃ ಸ್ಪರ್ಧಾಮನಯಚ್ಚಕ್ರಂ ದೇವರಾಜಂ ಶತಕ್ರತುಮ್|
12029017c ಶಕ್ರಪ್ರಿಯೈಷೀ ಯಂ ವಿದ್ವಾನ್ಪ್ರತ್ಯಾಚಷ್ಟ ಬೃಹಸ್ಪತಿಃ||
12029017e ಸಂವರ್ತೋ ಯಾಜಯಾಮಾಸ ಯಂ ಪೀಡಾರ್ಥಂ ಬೃಹಸ್ಪತೇಃ||

ಅವನು ಯಜ್ಞದಲ್ಲಿ ದೇವರಾಜ ಶತುಕ್ರತುವಿನೊಂದಿಗೆ ಸ್ಪರ್ಧಿಸಿ ಅವನನ್ನೂ ಸೋಲಿಸಿದ್ದನು. ಆಗ ಶಕ್ರಪ್ರಿಯ ವಿದ್ವಾನ್ ಬೃಹಸ್ಪತಿಯು ಯಜ್ಞಮಾಡಿಸುವುದಿಲ್ಲವೆಂದು ನಿರಾಕರಿಸಿದಾಗ ಬೃಹಸ್ಪತಿಯ ತಮ್ಮ ಸಂವರ್ತನು ಮರುತ್ತನಿಂದ ಯಜ್ಞಮಾಡಿಸಿದನು.

12029018a ಯಸ್ಮಿನ್ಪ್ರಶಾಸತಿ ಸತಾಂ ನೃಪತೌ ನೃಪಸತ್ತಮ|
12029018c ಅಕೃಷ್ಟಪಚ್ಯಾ ಪೃಥಿವೀ ವಿಬಭೌ ಚೈತ್ಯಮಾಲಿನೀ||

ನೃಪತಿಗಳಲ್ಲಿ ಶ್ರೇಷ್ಠ ಆ ನೃಪಸತ್ತಮನು ರಾಜ್ಯವಾಳುತ್ತಿದ್ದಾಗ ಚೈತ್ಯಗಳ ಮಾಲೆಗಳಿಂದ ಕೂಡಿದ್ದ ಭೂಮಿಯಲ್ಲಿ ಕೃಷಿಯಿಲ್ಲದೇ ಬೆಳೆಗಳು ಬೆಳೆಯುತ್ತಿದ್ದವು.

12029019a ಆವಿಕ್ಷಿತಸ್ಯ ವೈ ಸತ್ರೇ ವಿಶ್ವೇ ದೇವಾಃ ಸಭಾಸದಃ|
12029019c ಮರುತಃ ಪರಿವೇಷ್ಟಾರಃ ಸಾಧ್ಯಾಶ್ಚಾಸನ್ಮಹಾತ್ಮನಃ||

ಆವಿಕ್ಷಿತ ಮರುತ್ತನ ಆ ಸತ್ರದಲ್ಲಿ ವಿಶ್ವೇದೇವರು ಸಭಾಸದರಾಗಿದ್ದರು. ಮಹಾತ್ಮ ಮರುದ್ಗಣಗಳು ಮತ್ತು ಸಾಧ್ಯರು ಯಜ್ಞದಲ್ಲಿ ಭಾಗವಹಿಸಿದ್ದವರಿಗೆ ಉಣಬಡಿಸುವ ಪರಿಚಾರಕರಾಗಿದ್ದರು[49].

12029020a ಮರುದ್ಗಣಾ ಮರುತ್ತಸ್ಯ ಯತ್ಸೋಮಮಪಿಬಂತ ತೇ|
12029020c ದೇವಾನ್ಮನುಷ್ಯಾನ್ಗಂಧರ್ವಾನತ್ಯರಿಚ್ಯಂತ ದಕ್ಷಿಣಾಃ||

ಮರುತ್ತನ ಆ ಯಜ್ಞದಲ್ಲಿ ಮರುದ್ಗಣಗಳು ಸೋಮವನ್ನು ಕುಡಿದವು. ಮರುತ್ತನು ಕೊಟ್ಟ ದಕ್ಷಿಣೆಯು ದೇವ-ಮನುಷ್ಯ-ಗಂಧರ್ವರು ಯಜ್ಞಗಳಲ್ಲಿ ಕೊಡುವ ದಕ್ಷಿಣೆಗಳಿಗಿಂತ ಹೆಚ್ಚಾಗಿತ್ತು.

12029021a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029021c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯ ಈ ನಾಲ್ಕರಲ್ಲಿ ನಿನಗಿಂತಲೂ ಅಧಿಕನಾಗಿದ್ದ, ಮತ್ತು ನಿನ್ನ ಪುತ್ರನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಮರುತ್ತನೇ ಮರಣಹೊಂದಿದನೆಂದರೆ ನಿನ್ನ ಪುತ್ರನ ವಿಷಯವಾಗಿ ಹೇಳುವುದೇನಿದೆ? ಆದುದರಿಂದ ನಿನ್ನ ಮಗನ ವಿಯೋಗಕ್ಕಾಗಿ ದುಃಖಿಸಬೇಡ!

---

[49] ಐತ್ತರೇಯ ಬ್ರಾಹ್ಮಣದಲ್ಲಿ ಈ ಶ್ಲೋಕವು ಮಂತ್ರರೂಪದಲ್ಲಿದೆ: ಮರುತಃ ಪರಿವೇಷ್ಟಾರೋ ಮರುತ್ತ ಸ್ಯಾವ ಸಂಗೃಹೇ| ಆವಿಕ್ಷಿತಸ್ಯ ಕಾಮಪ್ರೇರ್ವಿಶ್ವೇದೇವಾಃ ಸಭಾಸದಃ||

12029022a ಸುಹೋತ್ರಂ ಚೇದ್ವೈತಿಥಿನಂ ಮೃತಂ ಸೃಂಜಯ ಶುಶ್ರುಮ|
12029022c ಯಸ್ಯೈ ಹಿರಣ್ಯಂ ವವೃಷೇ ಮಘಹ್ವಾನ್ಪರಿವತ್ಸರಮ್||

ಸೃಂಜಯ! ಅತಿಥಿಸತ್ಕಾರದಲ್ಲಿ ನಿರತನಾಗಿದ್ದ ಸುಹೋತ್ರನೂ ಮೃತನಾದನೆಂದು ಕೇಳಿದ್ದೇವೆ. ಅವನ ದೇಶದಲ್ಲಿ ಮಗಹ ಇಂದ್ರನು ಒಂದು ವರ್ಷದ ಕಾಲ ಚಿನ್ನದ ಮಳೆಯನ್ನೇ ಸುರಿಸಿದ್ದನು.

12029023a ಸತ್ಯನಾಮಾ ವಸುಮತೀ ಯಂ ಪ್ರಾಪ್ಯಾಸೀಜ್ಜನಾಧಿಪ|
12029023c ಹಿರಣ್ಯಮವಹನ್ನದ್ಯಸ್ತಸ್ಮಿನ್ಜನಪದೇಶ್ವರೇ||

ಸುಹೋತ್ರನನ್ನು ರಾಜನನ್ನಾಗಿ ಪಡೆದ ಭೂಮಿಯು ವಸುಮತೀ ಎಂಬ ಹೆಸರಿನ ಸಾರ್ಥಕತೆಯನ್ನು ಪಡೆಯಿತು. ಆ ಜನಪದೇಶ್ವರದಲ್ಲಿ ನದಿಗಳು ಸುವರ್ಣದ ನೀರಿನಿಂದ ಹರಿಯುತ್ತಿದ್ದವು.

12029024a ಕೂರ್ಮಾನ್ಕರ್ಕಟಕಾನ್ಕ್ರಾನ್ಮಕರಾನ್ಶಿಂಶುಕಾನಪಿ|
12029024c ನದೀಷ್ವಪಾತಯದ್ರಾಜನ್ಮಘವಾ ಲೋಕಪೂಜಿತಃ||

ರಾಜನ್! ಲೋಕಪೂಜಿತ ಮಘವ ಇಂದ್ರನು ಆ ನದಿಗಳಲ್ಲಿ ಚಿನ್ನದ ಆಮೆ-ಏಡಿ-ಮೊಸಳೆ-ಮೀನು-ಕಡಲಹಂದಿಗಳನ್ನು ಬಿಟ್ಟಿದ್ದನು.

12029025a ಹೈರಣ್ಯಾನ್ಪತಿತಾನ್ದೃಷ್ಟ್ವಾ ಮತ್ಸ್ಯಾನ್ಮಕರಕಚ್ಚಪಾನ್|
12029025c ಸಹಸ್ರಶೋಽಥ ಶತಶಸ್ತತೋಽಸ್ಮಯತ ವೈತಿಥಿಃ||

ನೂರಾರು ಸಾವಿರಾರು ಹಿರಣ್ಮಯ ಮೀನು-ಮೊಸಳೆ-ಆಮೆಗಳು ಬಿದ್ದುದನ್ನು ನೋಡಿ ಅತಿಥಿಸತ್ಕಾರಗಳಲ್ಲಿಯೇ ಆಸಕ್ತನಾಗಿದ್ದ ಸುಹೋತ್ರನು ವಿಸ್ಮಯಗೊಂಡನು.

12029026a ತದ್ಧಿರಣ್ಯಮಪರ್ಯಂತಮಾವೃತ್ತಂ ಕುರುಜಾಂಗಲೇ|

12029026c ಈಜಾನೋ ವಿತತೇ ಯಜ್ಞೇ ಬ್ರಾಹ್ಮಣೇಭ್ಯಃ ಸಮಾಹಿತಃ||

ಕುರುಜಾಂಗಲದ ಎಲ್ಲಕಡೆ ವ್ಯಾಪಿಸಿದ್ದ ಆ ಹಿರಣ್ಯವನ್ನು ಸಮಾಹಿತನಾದ ಸುಹೋತ್ರನು ಯಜ್ಞಗಳನ್ನು ನಡೆಸಿ ಬ್ರಾಹ್ಮಣರಿಗೆ ದಕ್ಷಿಣೆಯನ್ನಾಗಿತ್ತನು.

12029027a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029027c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||
12029027e ಅದಕ್ಷಿಣಮಯಜ್ವಾನಂ ಶ್ವೈತ್ಯ ಸಂಶಾಮ್ಯ ಮಾ ಶುಚಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಸುಹೋತ್ರನೂ ಮೃತನಾದನೆಂದಮೇಲೆ ನಿನ್ನ ಪುತ್ರನ ವಿಷಯದಲ್ಲಿ ಹೇಳುವುದೇನಿದೆ? ದಕ್ಷಿಣೆಗಳನ್ನು ನೀಡದಿದ್ದ, ಯಜ್ಞಗಳನ್ನು ಯಾಜಿಸದಿದ್ದ ಅವನ ಕುರಿತು ಶೋಕಿಸಬೇಡ. ಸಮಾಧಾನ ತಾಳು!

12029028a ಅಂಗಂ ಬೃಹದ್ರಥಂ ಚೈವ ಮೃತಂ ಶುಶ್ರುಮ ಸೃಂಜಯ|
12029028c ಯಃ ಸಹಸ್ರಂ ಸಹಸ್ರಾಣಾಂ ಶ್ವೇತಾನಶ್ವಾನವಾಸೃಜತ್||
12029029a ಸಹಸ್ರಂ ಚ ಸಹಸ್ರಾಣಾಂ ಕನ್ಯಾ ಹೇಮವಿಭೂಷಿತಾಃ|
12029029c ಈಜಾನೋ ವಿತತೇ ಯಜ್ಞೇ ದಕ್ಷಿಣಾಮತ್ಯಕಾಲಯತ್[50]||

ಸೃಂಜಯ! ಅಂಗದೇಶದ ರಾಜ ಬೃಹದ್ರಥನೂ ಕೂಡ

[50] ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ: ಯಃ ಸಹಸ್ರಂ ಸಹಸ್ರಾಣಾಂ ಗಜಾನಾಂ ಪದ್ಮಮಾಲಿನಾಮ್| ಈಜಾನೋ ವಿತತೇ ಯಜ್~ಞೇ ದಕ್ಷಿಣಾಮತ್ಯಕಾಲಯತ್|| (ಗೀತಾ ಪ್ರೆಸ್).

ಮೃತನಾದನೆಂದು ಕೇಳಿದ್ದೇವೆ. ಅವನು ಮಾಡಿದ ವಿಸ್ತಾರ ಯಜ್ಞದಲ್ಲಿ ಹತ್ತು ಲಕ್ಷ ಬಿಳೀ ಕುದುರೆಗಳನ್ನು ಸಿಂಗರಿಸಿ, ಹತ್ತು ಲಕ್ಷ ಹೇಮವಿಭೂಷಿತ ಕನ್ಯೆಯರೊಂದಿಗೆ ದಕ್ಷಿಣೆಯನ್ನಾಗಿತ್ತಿದ್ದನು.

12029030a ಶತಂ ಶತಸಹಸ್ರಾಣಾಂ ವೃಷಾಣಾಂ ಹೇಮಮಾಲಿನಾಮ್|
12029030c ಗವಾಂ ಸಹಸ್ರಾನುಚರಂ ದಕ್ಷಿಣಾಮತ್ಯಕಾಲಯತ್||

ಅವನು ಹತ್ತು ಲಕ್ಷ ಹೇಮಮಾಲೆಗಳನ್ನು ಧರಿಸಿದ್ದ ಹೋರಿಗಳನ್ನು ಮತ್ತು ಗೋವುಗಳನ್ನೂ ಸಹಸ್ರ ಅನುಚರರೊಂದಿಗೆ ದಕ್ಷಿಣೆಯನ್ನಾಗಿತ್ತಿದ್ದನು.

12029031a ಅಂಗಸ್ಯ ಯಜಮಾನಸ್ಯ ತದಾ ವಿಷ್ಣುಪದೇ ಗಿರೌ|
12029031c ಅಮಾದ್ಯದಿಂದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ||

ವಿಷ್ಣುಪದ ಗಿರಿಯಲ್ಲಿ ಅಂಗರಾಜನು ಯಜ್ಞಮಾಡಿದಾಗ ಇಂದ್ರನು ಸೋಮದಿಂದ ಮತ್ತು ಬ್ರಾಹ್ಮಣರು ದಕ್ಷಿಣೆಗಳಿಂದ ಮತ್ತರಾಗಿ ಹೋದರು!

12029032a ಯಸ್ಯ ಯಜ್ಞೇಷು ರಾಜೇಂದ್ರ ಶತಸಂಖ್ಯೇಷು ವೈ ಪುನಃ|
12029032c ದೇವಾನ್ಮನುಷ್ಯಾನ್ಗಂಧರ್ವಾನತ್ಯರಿಚ್ಯಂತ ದಕ್ಷಿಣಾಃ||

ರಾಜೇಂದ್ರ! ಈ ರೀತಿ ಬೃಹದ್ರಥನು ದೇವ-ಮನುಷ್ಯ-ಗಂಧರ್ವರು ಯಜ್ಞಗಳಲ್ಲಿ ನೀಡುವ ದಕ್ಷಿಣೆಗಳಿಗಿಂತ ಹೆಚ್ಚು ದಕ್ಷಿಣೆಗಳನ್ನಿತ್ತು ನೂರಾರು ಯಜ್ಞಗಳನ್ನು ಮಾಡಿದನು.

12029033a ನ ಜಾತೋ ಜನಿತಾ ಚಾನ್ಯಃ ಪುಮಾನ್ಯಸ್ತತ್ಪ್ರದಾಸ್ಯತಿ|
12029033c ಯದಂಗಃ ಪ್ರದದೌ ವಿತ್ತಂ ಸೋಮಸಂಸ್ಥಾಸು ಸಪ್ತಸು||

ಅಂಗರಾಜನು ಏಳು ಸೋಮಸಂಸ್ಥ[51]ಗಳಲ್ಲಿ ಎಷ್ಟು ವಿತ್ತವನ್ನು ಬ್ರಾಹ್ಮಣರಿಗೆ ದಕ್ಷಿಣೆಯನ್ನಾಗಿತ್ತನೋ ಅಷ್ಟು ವಿತ್ತವನ್ನು ದಾನಮಾಡಿದವರು ಹಿಂದೆಯೂ ಹುಟ್ಟಲಿಲ್ಲ, ಮುಂದೆಯೂ ಹುಟ್ಟುವುದಿಲ್ಲ.

12029034a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029034c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಬೃಹದ್ರಥನೂ ಮೃತನಾದನೆಂದಮೇಲೆ ನಿನ್ನ ಪುತ್ರನ ವಿಷಯದಲ್ಲಿ ಶೋಕಿಸಬೇಡ.

12029035a ಶಿಬಿಮೌಶೀನರಂ ಚೈವ ಮೃತಂ ಶುಶ್ರುಮ ಸೃಂಜಯ|
12029035c ಯ ಇಮಾಂ ಪೃಥಿವೀಂ ಕೃತ್ಸ್ನಾಂ ಚರ್ಮವತ್ಸಮವೇಷ್ಟಯತ್||

ಸೃಂಜಯ! ಉಶೀನರನ ಮಗ ಶಿಬಿಯೂ ಕೂಡ ಮೃತನಾದನೆಂದು ಕೇಳಿದ್ದೇವೆ. ಅವನು ಇಡೀ ಪೃಥ್ವಿಯನ್ನು ಚರ್ಮದಂತೆ ತನ್ನ ಸ್ವಾಧೀನದಲ್ಲಿಟ್ಟುಕೊಂಡಿದ್ದನು.

12029036a ಮಹತಾ ರಥಘೋಷೇಣ ಪೃಥಿವೀಮನುನಾದಯನ್|
12029036c ಏಕಚ್ಚತ್ರಾಂ ಮಹೀಂ ಚಕ್ರೇ ಜೈತ್ರೇಣೈಕರಥೇನ ಯಃ||

---

[51] ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ್ಯ, ಷೋಡಶೀ, ವಾಜಪೇಯ, ಅತಿರಾತ್ರ ಮತ್ತು ಆಪ್ತೋರ್ಯಾಮ ಯಜ್ಞಗಳು ಏಳು ಸೋಮಸಂಸ್ಥಗಳು. (ಭಾರತ ದರ್ಶನ/ಗೀತಾ ಪ್ರೆಸ್).

ಅವನು ಮಹಾ ರಥಘೋಷದಿಂದ ಇಡೀ ಪೃಥ್ವಿಯಲ್ಲಿಯೇ
ಪ್ರತಿಧ್ವನಿಗೊಳಿಸುತ್ತಾ ಒಂದೇ ಒಂದು ರಥಯಾತ್ರೆಯಿಂದ ಇಡೀ
ಭೂಮಿಯನ್ನು ಒಂದು ಶಾಸನದಡಿಗೆ ತಂದನು.

12029037a ಯಾವದದ್ಯ ಗವಾಶ್ವಂ ಸ್ಯಾದಾರಣ್ಯೈಃ ಪಶುಭಿಃ ಸಹ|
12029037c ತಾವತೀಃ ಪ್ರದದೌ ಗಾಃ ಸ ಶಿಬಿರೌಶೀನರೋಽಧ್ವರೇ||

ಔಶೀನರ ಶಿಬಿಯು ಇಂದು ಎಷ್ಟು ಗೋವುಗಳಿವೆಯೋ ಮತ್ತು
ಅರಣ್ಯಗಳಲ್ಲಿ ಎಷ್ಟು ಪಶುಗಳಿವೆಯೋ ಅಷ್ಟೇ ಸಂಖ್ಯೆಯ
ಗೋವುಗಳನ್ನು ಯಜ್ಞಗಳಲ್ಲಿ ದಾನವನ್ನಾಗಿತ್ತಿದ್ದನು.

12029038a ನೋದ್ಯಂತಾರಂ ಧುರಂ ತಸ್ಯ ಕಂ ಚಿನ್ಮೇನೇ ಪ್ರಜಾಪತಿಃ|
12029038c ನ ಭೂತಂ ನ ಭವಿಷ್ಯಂತಂ ಸರ್ವರಾಜಸು ಭಾರತ||
12029038e ಅನ್ಯತ್ರೌಶೀನರಾಚ್ಛೈಬ್ಯಾದ್ರಾಜರ್ಷೇರಿಂದ್ರವಿಕ್ರಮಾತ್||

ಭಾರತ! ಎಲ್ಲ ರಾಜರುಗಳಿಗೆ ತುಲನೆ ಮಾಡಿದರೆ, ಇಂದ್ರವಿಕ್ರಮಿ
ರಾಜರ್ಷಿ ಔಶೀನರನಂತೆ ರಾಜ್ಯಭಾರವನ್ನಾಗಲೀ ಮತ್ತು
ಕಾರ್ಯಭಾರವನ್ನಾಗಲೀ ವಹಿಸಲು ಸಮರ್ಥರಾಜನು ಬೇರೆ ಯಾರೂ
ಇರಲಿಲ್ಲ ಮತ್ತು ಮುಂದೆ ಇರುವುದಿಲ್ಲ ಎನ್ನುವುದು ಪ್ರಜಾಪತಿಯ
ಅಭಿಪ್ರಾಯವಾಗಿತ್ತು.

12029039a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029039c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||
12029039e ಅದಕ್ಷಿಣಮಯಜ್ವಾನಂ ತಂ ವೈ ಸಂಶಾಮ್ಯ ಮಾ ಶುಚಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ
ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ

ಶಿಬಿಯೂ ಮೃತನಾದನೆಂದಮೇಲೆ ನಿನ್ನ ಪುತ್ರನ ವಿಷಯದಲ್ಲಿ ಹೇಳುವುದೇನಿದೆ? ದಕ್ಷಿಣೆಗಳನ್ನು ನೀಡದಿದ್ದ, ಯಜ್ಞಗಳನ್ನು ಯಾಜಿಸದಿದ್ದ ಅವನ ಕುರಿತು ಶೋಕಿಸಬೇಡ. ಸಮಾಧಾನ ತಾಳು!

12029040a ಭರತಂ ಚೈವ ದೌಃಷಂತಿಂ ಮೃತಂ ಸೃಂಜಯ ಶುಶ್ರುಮ|
12029040c ಶಾಕುಂತಲಿಂ ಮಹೇಷ್ವಾಸಂ ಭೂರಿದ್ರವಿಣತೇಜಸಮ್||

ಸೃಂಜಯ! ದುಃಷಂತ-ಶಕುಂತಲೆಯರ ಮಗ, ಮಹೇಶ್ವಾಸ, ಮಹಾ ಧನಿಕನೂ ತೇಜಸ್ವಿಯೂ ಆಗಿದ್ದ ಭರತನೂ ಮೃತನಾದನೆಂದು ಕೇಳಿದ್ದೇವೆ.

12029041a ಯೋ ಬದ್ಧ್ವಾ ತ್ರಿಂಶತೋ ಹ್ಯಶ್ವಾನ್ದೇವೇಭ್ಯೋ ಯಮುನಾಮನು|
12029041c ಸರಸ್ವತೀಂ ವಿಂಶತಿಂ ಚ ಗಂಗಾಮನು ಚತುರ್ದಶ||

ಅವನು ದೇವತೆಗಳ ಸಲುವಾಗಿ ಯಮುನಾನದಿಯ ತಟದಲ್ಲಿ ಮುನ್ನೂರು, ಸರಸ್ವತೀ ತೀರದಲ್ಲಿ ಇಪ್ಪತ್ತು ಮತ್ತು ಗಂಗಾತೀರದಲ್ಲಿ ಹದಿನಾಲ್ಕು ಅಶ್ವಮೇಧ ಯಜ್ಞಗಳನ್ನು ನಡೆಸಿದನು.

12029042a ಅಶ್ವಮೇಧಸಹಸ್ರೇಣ ರಾಜಸೂಯಶತೇನ ಚ|
12029042c ಇಷ್ಟವಾನ್ಸ ಮಹಾತೇಜಾ ದೌಃಷಂತಿರ್ಭರತಃ ಪುರಾ||

ಹಿಂದೆ ದುಃಷಂತನ ಮಗ ಮಹಾತೇಜಸ್ವೀ ಭರತನು ಸಹಸ್ರ ಅಶ್ವಮೇಧಗಳಿಂದಲೂ ಮತ್ತು ನೂರು ರಾಜಸೂಯ ಯಜ್ಞಗಳಿಂದಲೂ ದೇವತೆಗಳನ್ನು ತೃಪ್ತಿಪಡಿಸಿದ್ದನು.

12029043a ಭರತಸ್ಯ ಮಹತ್ಕರ್ಮ ಸರ್ವರಾಜಸು ಪಾರ್ಥಿವಾಃ|
12029043c ಖಿಂ ಮರ್ತ್ಯಾ ಇವ ಬಾಹುಭ್ಯಾಂ ನಾನುಗಂತುಮಶಕ್ನುವನ್||

ಮನುಷ್ಯನು ತನ್ನೆರಡು ಬಾಹುಗಳ ಮಾತ್ರದಿಂದ ಆಕಾಶವನ್ನೇರಲು ಹೇಗೆ ಸಾಧ್ಯವಿಲ್ಲವೋ ಹಾಗೆ ವಿಶ್ವದ ಎಲ್ಲ ರಾಜ-ಪಾರ್ಥಿವರೂ ಭರತನಂಥಹ ಮಹಾಕಾರ್ಯಗಳನ್ನು ಮಾಡಲಾರದೇ ಹೋದರು.

12029044a ಪರಂ ಸಹಸ್ರಾದ್ಯೋ ಬದ್ಧ್ವಾ ಹಯಾನ್ವೇದೀಂ ವಿಚಿತ್ಯ ಚ|
12029044c ಸಹಸ್ರಂ ಯತ್ರ ಪದ್ಮಾನಾಂ ಕಣ್ವಾಯ ಭರತೋ ದದೌ||

ಭರತನು ಸಾವಿರಕ್ಕೂ ಅಧಿಕ ಕುದುರೆಗಳನ್ನು ಕಟ್ಟಿ ವೇದಿಗಳನ್ನು ವಿಸ್ತರಿಸಿ ಅಶ್ವಮೇಧಯಾಗಗಳನ್ನು ಮಾಡಿದನು. ಯಜ್ಞಗಳಲ್ಲಿ ಅವನು ಕಣ್ವನಿಗೆ ಸಹಸ್ರ ಚಿನ್ನದ ಕಮಲಗಳನ್ನು ದಾನವಾಗಿ ಕೊಟ್ಟಿದ್ದನು.

12029045a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029045c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಭರತನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029046a ರಾಮಂ ದಾಶರಥಿಂ ಚೈವ ಮೃತಂ ಶುಶ್ರುಮ ಸೃಂಜಯ|
12029046c ಯೋಽನ್ವಕಂಪತ ವೈ ನಿತ್ಯಂ ಪ್ರಜಾಃ ಪುತ್ರಾನಿವೌರಸಾನ್||

ಸೃಂಜಯ! ನಿತ್ಯವೂ ತನ್ನ ಔರಸಪುತ್ರರಂತೆ ಪ್ರಜೆಗಳನ್ನು ಅನುಕಂಪದಿಂದ ಕಾಣುತ್ತಿದ್ದ ದಾಶರಥಿ ರಾಮನೂ ಕೂಡ ಮೃತನಾದನೆಂದು ಕೇಳಿದ್ದೇವೆ.

12029047a ವಿಧವಾ ಯಸ್ಯ ವಿಷಯೇ ನಾನಾಥಾಃ ಕಾಶ್ಚನಾಭವನ್|

12029047c ಸರ್ವಸ್ಯಾಸೀತ್ಪಿತೃಸಮೋ ರಾಮೋ ರಾಜ್ಯಂ ಯದಾನ್ವಶಾತ್‌||

ರಾಮನು ರಾಜ್ಯವಾಳುತ್ತಿದ್ದಾಗ ಅವನ ರಾಜ್ಯದಲ್ಲಿ ಅನಾಥ ವಿಧವೆಯರ್ಯಾರೂ ಇರಲಿಲ್ಲ. ಅವನು ಸರ್ವರಿಗೂ ಪಿತೃಸಮನಾಗಿದ್ದನು.

12029048a ಕಾಲವರ್ಷಾಶ್ಚ ಪರ್ಜನ್ಯಾಃ ಸಸ್ಯಾನಿ ರಸವಂತಿ ಚ|
12029048c ನಿತ್ಯಂ ಸುಭಿಕ್ಷಮೇವಾಸೀದ್ರಾಮೇ ರಾಜ್ಯಂ ಪ್ರಶಾಸತಿ||

ರಾಮನು ರಾಜ್ಯವಾಳುತ್ತಿದ್ದಾಗ ಪರ್ಜನ್ಯನು ಕಾಲಕ್ಕೆ ಸರಿಯಾಗಿ ಮಳೆಸುರಿಸುತ್ತಿದ್ದನು. ಸಸ್ಯಗಳು ರಸವತ್ತಾಗಿದ್ದವು.

12029049a ಪ್ರಾಣಿನೋ ನಾಪ್ಸು ಮಜ್ಜಂತಿ ನಾನರ್ಥೇ ಪಾವಕೋಽದಹತ್‌|
12029049c ನ ವ್ಯಾಲಜಂ ಭಯಂ ಚಾಸೀದ್ರಾಮೇ ರಾಜ್ಯಂ ಪ್ರಶಾಸತಿ||

ರಾಮನು ರಾಜ್ಯವಾಳುತ್ತಿದ್ದಾಗ ಪ್ರಾಣಿಗಳು ನೀರಿನಲ್ಲಿ ಮುಳುಗಿ ಸಾಯುತ್ತಿರಲಿಲ್ಲ. ಅನರ್ಥಕವಾಗಿ ಅಗ್ನಿಯು ಯಾರನ್ನೂ ಸುಡುತ್ತಿರಲಿಲ್ಲ. ಯಾರಿಗೂ ಸರ್ಪಗಳ ಭಯವಿರಲಿಲ್ಲ.

12029050a ಆಸನ್ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಕಾಃ|
12029050c ಅರೋಗಾಃ ಸರ್ವಸಿದ್ಧಾರ್ಥಾಃ ಪ್ರಜಾ ರಾಮೇ ಪ್ರಶಾಸತಿ||

ರಾಮನು ರಾಜ್ಯವಾಳುತ್ತಿದ್ದಾಗ ಸ್ತ್ರೀಯರು ಸಾವಿರವರ್ಷ ಜೀವಿಸುತ್ತಿದ್ದರು ಮತ್ತು ಸಾವಿರ ಮಕ್ಕಳನ್ನು ಪಡೆಯುತ್ತಿದ್ದರು. ಸರ್ವರೂ ಸಿದ್ಧಾರ್ಥರಾಗಿ ಅರೋಗಿಗಳಾಗಿದ್ದರು.

12029051a ನಾನ್ಯೋನ್ಯೇನ ವಿವಾದೋಽಭೂತ್ಸ್ತ್ರೀಣಾಮಪಿ ಕುತೋ ನೃಣಾಮ್‌|
12029051c ಧರ್ಮನಿತ್ಯಾಃ ಪ್ರಜಾಶ್ಚಾಸನ್ರಾಮೇ ರಾಜ್ಯಂ ಪ್ರಶಾಸತಿ||

ರಾಮನು ರಾಜ್ಯವಾಳುತ್ತಿದ್ದಾಗ ಅನ್ಯೋನ್ಯ ಸ್ತ್ರೀಯರಲ್ಲಿಯೇ ಯಾವುದೇ
ವಿವಾದಗಳಿರುತ್ತಿರಲಿಲ್ಲ. ಇನ್ನು ಅನ್ಯೋನ್ಯ ಪುರುಷರಲ್ಲಿ
ವಿವಾದಗಳೇನು? ಪ್ರಜೆಗಳು ನಿತ್ಯವೂ ಧರ್ಮನಿರತರಾಗಿದ್ದರು.

[52]12029052a ನಿತ್ಯಪುಷ್ಪಫಲಾಶ್ಚೈವ ಪಾದಪಾ ನಿರುಪದ್ರವಾಃ|
12029052c ಸರ್ವಾ ದ್ರೋಣದುಘಾ ಗಾವೋ ರಾಮೇ ರಾಜ್ಯಂ ಪ್ರಶಾಸತಿ||

ರಾಮನು ರಾಜ್ಯವಾಳುತ್ತಿದ್ದಾಗ ಮರಗಳು ಉಪದ್ರವಗಳಿಲ್ಲದೇ
ನಿತ್ಯವೂ ಪುಷ್ಪ-ಫಲಗಳನ್ನು ನೀಡುತ್ತಿದ್ದವು. ಎಲ್ಲ ಹಸುಗಳೂ
ಪಾತ್ರೆಗಳ ತುಂಬ ಹಾಲನ್ನು ನೀಡುತ್ತಿದ್ದವು.

12029053a ಸ ಚತುರ್ದಶ ವರ್ಷಾಣಿ ವನೇ ಪ್ರೋಷ್ಯ ಮಹಾತಪಾಃ|
12029053c ದಶಾಶ್ವಮೇಧಾನ್ವಾಜರೂಥ್ಯಾನಾಜಹಾರ ನಿರರ್ಗಲಾನ್||

ಮಹಾತಪಸ್ವಿ ರಾಮನು ಹದಿನಾಲ್ಕು ವರ್ಷ ವನವಾಸವನ್ನು ಮುಗಿಸಿ
ದಶಾಶ್ವಮೇಧಗಳನ್ನು ನೆರವೇರಿಸಿ ನಿರರ್ಗಲ ಭೋಜನಗಳನ್ನಿತ್ತನು.

12029054a ಶ್ಯಾಮೋ ಯುವಾ ಲೋಹಿತಾಕ್ಷೋ ಮತ್ತವಾರಣವಿಕ್ರಮಃ[53]|
12029054c ದಶ ವರ್ಷಸಹಸ್ರಾಣಿ ರಾಮೋ ರಾಜ್ಯಮಕಾರಯತ್[54]||

---

[52] ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಸಂತುಷ್ಟಾಃ
ಸರ್ವಸಿದ್ಧಾರ್ಥಾ ನಿರ್ಭಯಾಃ ಸ್ವೈರಚಾರಿಣಃ| ನರಾಃ ಸತ್ಯವ್ರತಾಶ್ಚಾಸನ್
ರಾಮೇ ರಾಜ್ಯಂ ಪ್ರಶಾಸತಿ|| (ಗೀತಾ ಪ್ರೆಸ್).

[53] ಇದರ ನಂತರ ಈ ಒಂದು ಅಧಿಕ ಶ್ಲೋಕಾರ್ಧವಿದೆ: ಆಜಾನುಬಾಹುಃ
ಸುಮುಖಃ ಸಿಂಹಸ್ಕಂಧೋ ಮಹಾಭುಜಃ| (ಗೀತಾ ಪ್ರೆಸ್).

[54] ಇದರ ನಂತರ ಈ ಒಂದು ಅಧಿಕ ಶ್ಲೋಕಾರ್ಧವಿದೆ:
ಅಯೋಧ್ಯಾಧಿಪತಿರ್ಭೂತ್ವಾ ರಾಮೋ ರಾಜ್ಯಮಕಾರಯತ್| (ಗೀತಾ ಪ್ರೆಸ್).

ಶ್ಯಾಮವರ್ಣದ ಯುವಕ, ಲೋಹಿತಾಕ್ಷ, ಮದಿಸಿದ ಆನೆಯ ವಿಕ್ರಮವುಳ್ಳ ರಾಮನು ಹತ್ತು ಸಾವಿರ ವರ್ಷಗಳು ರಾಜ್ಯಭಾರವನ್ನು ಮಾಡಿದನು.

12029055a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029055c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ರಾಮನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029056a ಭಗೀರಥಂ ಚ ರಾಜಾನಂ ಮೃತಂ ಶುಶ್ರುಮ ಸೃಂಜಯ|
12029056c ಯಸ್ಯೇಂದ್ರೋ ವಿತತೇ ಯಜ್ಞೇ ಸೋಮಂ ಪೀತ್ವಾ ಮದೋತ್ಕಟಃ||
12029057a ಅಸುರಾಣಾಂ ಸಹಸ್ರಾಣಿ ಬಹೂನಿ ಸುರಸತ್ತಮಃ|
12029057c ಅಜಯದ್ಬಾಹುವೀರ್ಯೇಣ ಭಗವಾನ್ಪಾಕಶಾಸನಃ||

ಸೃಂಜಯ! ರಾಜಾ ಭಗೀರಥನೂ ಮೃತನಾದನೆಂದು ಕೇಳಿದ್ದೇವೆ. ಅವನ ಯಜ್ಞದಲ್ಲಿ ಭಗವಾನ್ ಪಾಕಶಾಸನ ಸುರಸತ್ತಮ ಇಂದ್ರನು ಸೋಮವನ್ನು ಕುಡಿದು ಮತೋತ್ಕಟನಾಗಿ ತನ್ನ ಬಾಹುವೀರ್ಯದಿಂದ ಅನೇಕ ಸಹಸ್ರ ಅಸುರರನ್ನು ಗೆದ್ದನು.

12029058a ಯಃ ಸಹಸ್ರಂ ಸಹಸ್ರಾಣಾಂ ಕನ್ಯಾ ಹೇಮವಿಭೂಷಿತಾಃ|
12029058c ಈಜಾನೋ ವಿತತೇ ಯಜ್ಞೇ ದಕ್ಷಿಣಾಮತ್ಯಕಾಲಯತ್||

ಅವನು ಯಜ್ಞಮಾಡುತ್ತಿರುವಾಗ ಹತ್ತು ಲಕ್ಷ ಹೇಮವಿಭೂಷಿತ ಕನ್ಯೆಯರನ್ನು ದಕ್ಷಿಣೆಯಾಗಿ ನೀಡಿದ್ದನು.

12029059a ಸರ್ವಾ ರಥಗತಾಃ ಕನ್ಯಾ ರಥಾಃ ಸರ್ವೇ ಚತುರ್ಯುಜಃ|
12029059c ರಥೇ ರಥೇ ಶತಂ ನಾಗಾಃ ಪದ್ಮಿನೋ ಹೇಮಮಾಲಿನಃ||

ಆ ಕನ್ಯೆಯರೆಲ್ಲರೂ ಪ್ರತ್ಯೇಕ ರಥಗಳಲ್ಲಿ ಕುಳಿತಿದ್ದರು. ಪ್ರತಿ ರಥಕ್ಕೂ ನಾಲ್ಕು ಕುದುರೆಗಳನ್ನು ಕಟ್ಟಿದ್ದರು. ಪ್ರತಿಯೊಂದು ರಥದ ಹಿಂದೂ ಪದ್ಮಗಳಿಂದ ಅಲಂಕೃತಗೊಂಡ ಹೇಮಮಾಲೀ ನೂರು ಆನೆಗಳು ಹೋಗುತ್ತಿದ್ದವು.

12029060a ಸಹಸ್ರಮಶ್ವಾ ಏಕೈಕಂ ಹಸ್ತಿನಂ ಪೃಷ್ಠತೋಽನ್ವಯುಃ|
12029060c ಗವಾಂ ಸಹಸ್ರಮಶ್ವೇಽಶ್ವೇ ಸಹಸ್ರಂ ಗವ್ಯಜಾವಿಕಮ್||

ಒಂದೊಂದು ಆನೆಯ ಹಿಂದೆಯೂ ಸಾವಿರ ಕುದುರೆಗಳು ಅನುಸರಿಸಿ ಹೋಗುತ್ತಿದ್ದವು. ಒಂದೊಂದು ಕುದುರೆಯ ಹಿಂದೆ ಸಹಸ್ರ ಗೋವುಗಳಿದ್ದವು ಮತ್ತು ಒಂದೊಂದು ಗೋವಿನ ಹಿಂದೆಯೂ ಸಹಸ್ರ ಆಡುಗಳಿದ್ದವು.

12029061a ಉಪಹ್ವರೇ ನಿವಸತೋ ಯಸ್ಯಾಂಕೇ ನಿಷಸಾದ ಹ|
12029061c ಗಂಗಾ ಭಾಗೀರಥೀ ತಸ್ಮಾದುರ್ವಶೀ ಹ್ಯಭವತ್ಪುರಾ||

ಹಿಂದೆ ಅವನು ಗಂಗಾತೀರದಲ್ಲಿ ವಾಸಿಸುತ್ತಿದ್ದಾಗ ಗಂಗೆಯು ಬಂದು ಅವನ ತೊಡೆಯಮೇಲೆ ಕುಳಿತುಕೊಳ್ಳುತ್ತಿದ್ದಳು. ಅದರಿಂದ ಅವಳಿಗೆ ಭಾಗೀರಥೀ ಮತ್ತು ಉರ್ವಶೀ ಎಂಬ ಹೆಸರುಗಳು ಬಂದವು.

12029062a ಭೂರಿದಕ್ಷಿಣಮಿಕ್ಷ್ವಾಕುಂ ಯಜಮಾನಂ ಭಗೀರಥಮ್|
12029062c ತ್ರಿಲೋಕಪಥಗಾ ಗಂಗಾ ದುಹಿತೃತ್ವಮುಪೇಯುಷೀ||

ಭೂರಿದಕ್ಷಿಣೆಗಳನ್ನು ನೀಡುತ್ತಾ ಯಜ್ಞಮಾಡುತ್ತಿದ್ದ ಇಕ್ಷ್ವಾಕು ಕುಲದ

ಭಗೀರಥನನ್ನು ತ್ರಿಲೋಕಪಥಗೆ ಗಂಗೆಯು ತಂದೆಯನ್ನಾಗಿ ಮಾಡಿಕೊಂಡಳು.

12029063a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029063c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಭಗೀರಥನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029064a ದಿಲೀಪಂ ಚೈವೈಲವಿಲಂ ಮೃತಂ ಶುಶ್ರುಮ ಸೃಂಜಯ|
12029064c ಯಸ್ಯ ಕರ್ಮಾಣಿ ಭೂರೀಣಿ ಕಥಯಂತಿ ದ್ವಿಜಾತಯಃ||

ಸೃಂಜಯ! ಯಾರ ಮಹತ್ಕಾರ್ಯಗಳನ್ನು ಬ್ರಾಹ್ಮಣರು ಈಗಲೂ ಹೇಳಿಕೊಳ್ಳುತ್ತಾರೋ ಆ ದಿಲೀಪನೂ ಕೂಡ ಮೃತನಾದನೆಂದು ಕೇಳಿದ್ದೇವೆ.

12029065a ಇಮಾಂ ವೈ ವಸುಸಂಪನ್ನಾಂ ವಸುಧಾಂ ವಸುಧಾಧಿಪಃ|
12029065c ದದೌ ತಸ್ಮಿನ್ಮಹಾಯಜ್ಞೇ ಬ್ರಾಹ್ಮಣೇಭ್ಯಃ ಸಮಾಹಿತಃ||

ಆ ವಸುಧಾಧಿಪನು ಮಹಾಯಜ್ಞದಲ್ಲಿ ಬಂದು ಸೇರಿದ್ದ ಬ್ರಾಹ್ಮಣರಿಗೆ ವಸುಸಂಪನ್ನವಾದ ಈ ವಸುಧೆಯನ್ನು ದಾನವನ್ನಾಗಿತ್ತನು.

12029066a ತಸ್ಯೇಹ ಯಜಮಾನಸ್ಯ ಯಜ್ಞೇ ಯಜ್ಞೇ ಪುರೋಹಿತಃ|
12029066c ಸಹಸ್ರಂ ವಾರಣಾನ್ ಹೈಮಾನ್ದಕ್ಷಿಣಾಮತ್ಯಕಾಲಯತ್||

ಅವನು ಯಜಮಾನನಾಗಿದ್ದ ಯಜ್ಞ-ಯಜ್ಞಗಳಲ್ಲಿಯೂ ಪುರೋಹಿತನು

ಸಹಸ್ರ ಸುವರ್ಣದ ಆನೆಗಳನ್ನು ದಕ್ಷಿಣಾರೂಪವಾಗಿ
ಕೊಂಡೊಯ್ಯುತ್ತಿದ್ದನು.

12029067a ಯಸ್ಯ ಯಜ್ಞೇ ಮಹಾನಾಸೀದ್ಯೂಪಃ ಶ್ರೀಮಾನ್ಹಿರಣ್ಮಯಃ|
12029067c ತಂ ದೇವಾಃ ಕರ್ಮ ಕುರ್ವಾಣಾಃ ಶಕ್ರಜ್ಯೇಷ್ಠಾ ಉಪಾಶ್ರಯನ್||

ಅವನ ಯಜ್ಞದಲ್ಲಿ ಶ್ರೀಮಂತವಾದ ಸುವರ್ಣಮಯ ಮಹಾನ್
ಯೂಪವನ್ನು ಸ್ಥಾಪಿಸಲಾಗಿತ್ತು. ಅಲ್ಲಿ ಕರ್ಮಗಳನ್ನು ಮಾಡುತ್ತಾ
ಇಂದ್ರನೇ ಮೊದಲಾದ ದೇವತೆಗಳು ಆ ಯೂಪವನ್ನು ಆಶ್ರಯಿಸಿ
ಕುಳಿತುಕೊಳ್ಳುತ್ತಿದ್ದರು.

12029068a ಚಷಾಲೋ ಯಸ್ಯ ಸೌವರ್ಣಸ್ತಸ್ಮಿನ್ಯೂಪೇ ಹಿರಣ್ಮಯೇ|
12029068c ನನೃತುರ್ದೇವಗಂಧರ್ವಾಃ ಷಟ್ಸಹಸ್ರಾಣಿ ಸಪ್ತಧಾ||

ಆ ಹಿರಣ್ಮಯ ಯೂಪಸ್ತಂಭದ ಸುವರ್ಣದ ಬಳೆಯ ಸುತ್ತಲೂ
ಅರವತ್ತು ಸಾವಿರ ದೇವ-ಗಂಧರ್ವರು ಏಳು ರೀತಿಯ ನರ್ತನಗಳನ್ನು
ಮಾಡುತ್ತಿದ್ದರು.

12029069a ಅವಾದಯತ್ತತ್ರ ವೀಣಾಂ ಮಧ್ಯೇ ವಿಶ್ವಾವಸುಃ ಸ್ವಯಮ್|
12029069c ಸರ್ವಭೂತಾನ್ಯಮನ್ಯಂತ ಮಮ ವಾದಯತೀತ್ಯಯಮ್||

ಅದರ ಮಧ್ಯೆ ಸ್ವಯಂ ವಿಶ್ವಾವಸುವು ವೀಣೆಯನ್ನು ನುಡಿಸುತ್ತಿರಲು ಎಲ್ಲ
ಜೀವಿಗಳೂ ಅವನು ತನಗಾಗಿಯೇ ನುಡಿಸುತ್ತಿದ್ದಾನೆ ಎಂದು
ಭಾವಿಸುತ್ತಿದ್ದರು.

12029070a ಏತದ್ರಾಜ್ಞೋ ದಿಲೀಪಸ್ಯ ರಾಜಾನೋ ನಾನುಚಕ್ರಿರೇ|
12029070c ಯತ್ಸ್ತ್ರಿಯೋ ಹೇಮಸಂಪನ್ನಾಃ ಪಥಿ ಮತ್ತಾಃ ಸ್ಮ ಶೇರತೇ||

ರಾಜ ದಿಲೀಪನಂತಹ ಕರ್ಮಗಳನ್ನು ಮಾಡಲು ಇತರ ರಾಜರು ಸಮರ್ಥರಿರಲಿಲ್ಲ. ಸುವರ್ಣಾಭರಣಗಳನ್ನು ಧರಿಸಿದ್ದ ಸ್ತ್ರೀಯರು ಮತ್ತರಾಗಿ ರಸ್ತೆಯ ಮೇಲೆಯೇ ಮಲಗುತ್ತಿದ್ದರು.

12029071a ರಾಜಾನಮುಗ್ರಧನ್ವಾನಂ ದಿಲೀಪಂ ಸತ್ಯವಾದಿನಮ್|
12029071c ಯೇಽಪಶ್ಯನ್ಸುಮಹಾತ್ಮಾನಂ ತೇಽಪಿ ಸ್ವರ್ಗಜಿತೋ ನರಾಃ||

ಸತ್ಯವಾದಿಯೂ ಉಗ್ರಧನ್ವಿಯೂ ಆಗಿದ್ದ ರಾಜಾ ಮಹಾತ್ಮಾ ದಿಲೀಪನನ್ನು ಸಂದರ್ಶಿಸಿದವರೆಲ್ಲರೂ ಸ್ವರ್ಗಕ್ಕೆ ಹೋದರು!

12029072a ತ್ರಯಃ ಶಬ್ದಾ ನ ಜೀರ್ಯಂತೇ ದಿಲೀಪಸ್ಯ ನಿವೇಶನೇ|
12029072c ಸ್ವಾಧ್ಯಾಯಘೋಷೋ ಜ್ಯಾಘೋಷೋ ದೀಯತಾಮಿತಿ ಚೈವ ಹಿ||

ದಿಲೀಪನ ಅರಮನೆಯಲ್ಲಿ ಸ್ವಾಧ್ಯಾಯಘೋಷ, ಮೌರ್ವಿಯ ಟೇಂಕಾರ ಶಬ್ಧ ಮತ್ತು "ದಾನಮಾಡಿರಿ!" ಎನ್ನುವ ಈ ಮೂರು ಶಬ್ಧಗಳು ನಿಲ್ಲಲೇ ಇಲ್ಲ.

12029073a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029073c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ದಿಲೀಪನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029074a ಮಾಂಧಾತಾರಂ ಯೌವನಾಶ್ವಂ ಮೃತಂ ಶುಶ್ರುಮ ಸೃಂಜಯ|
12029074c ಯಂ ದೇವಾ ಮರುತೋ ಗರ್ಭಂ ಪಿತುಃ ಪಾರ್ಶ್ವಾದಪಾಹರನ್||

ಸೃಂಜಯ! ಯಾರನ್ನು ಮರುತ್ತ ದೇವತೆಗಳು ಅವನ ತಂದೆ ಯುವನಾಶ್ವನ ಬೆನ್ನಿನಿಂದ ಹೊರತೆಗೆದರೋ ಆ ಮಾಂಧಾತನೂ ಮೃತನಾದನೆಂದು ಕೇಳಿದ್ದೇವೆ.

12029075a ಸಂವೃದ್ಧೋ ಯುವನಾಶ್ವಸ್ಯ ಜಠರೇ ಯೋ ಮಹಾತ್ಮನಃ|
12029075c ಪೃಷದಾಜ್ಯೋದ್ಭವಃ ಶ್ರೀಮಾಂಸ್ತ್ರಿಲೋಕವಿಜಯೀ ನೃಪಃ||

ತ್ರಿಲೋಕ ವಿಜಯಿಯಾಗಿದ್ದ ಆ ಶ್ರೀಮಾನ್ ನೃಪ ಮಹಾತ್ಮನು ಮೊಸರು ಬೆರೆಸಿದ ಹಾಲನ್ನು ಕುಡಿದ ಯುವನಾಶ್ವನ ಜಠರದಲ್ಲಿ ಬೆಳೆದವನಾಗಿದ್ದನು.

12029076a ಯಂ ದೃಷ್ಟ್ವಾ ಪಿತುರುತ್ಸಂಗೇ ಶಯಾನಂ ದೇವರೂಪಿಣಮ್|
12029076c ಅನ್ಯೋನ್ಯಮಬ್ರುವನ್ದೇವಾಃ ಕಮಯಂ ಧಾಸ್ಯತೀತಿ ವೈ||

ತಂದೆಯ ತೊಡೆಯಮೇಲೆ ಮಲಗಿದ್ದ ಆ ದೇವರೂಪಿಣೀ ಶಿಶುವನ್ನು ಕಂಡು ದೇವತೆಗಳು ಪರಸ್ಪರರಲ್ಲಿ "ಇವನು ಯಾರ ಹಾಲನ್ನು ಕುಡಿಯುತ್ತಾನೆ?" ಎಂದು ಚರ್ಚಿಸಿದ್ದರು.

12029077a ಮಾಮೇವ ಧಾಸ್ಯತೀತ್ಯೇವಮಿಂದ್ರೋ ಅಭ್ಯವಪದ್ಯತ|
12029077c ಮಾಂಧಾತೇತಿ ತತಸ್ತಸ್ಯ ನಾಮ ಚಕ್ರೇ ಶತಕ್ರತುಃ||

"ನಾನು ಇವನಿಗೆ ಹಾಲುಣ್ಣಿಸುತ್ತೇನೆ!" ಎಂದು ಇಂದ್ರನೇ ಮುಂದೆಬಂದನು. ಶತಕ್ರತುವೇ ಅವನಿಗೆ "ಮಾಂಧಾತ" ಎಂಬ ಹೆಸರನ್ನಿಟ್ಟಿದ್ದನು.

12029078a ತತಸ್ತು ಪಯಸೋ ಧಾರಾಂ ಪುಷ್ಟಿಹೇತೋರ್ಮಹಾತ್ಮನಃ|
12029078c ತಸ್ಯಾಸ್ಯೇ ಯೌವನಾಶ್ವಸ್ಯ ಪಾಣಿರಿಂದ್ರಸ್ಯ ಚಾಸ್ರವತ್||

ಆ ಮಹಾತ್ಮ ಯೌವನಾಶ್ವ ಮಾಂಧಾತನ ಪುಷ್ಟಿಗಾಗಿ ಅವನ ಬಾಯಿಯಲ್ಲಿಟ್ಟ ಇಂದ್ರನ ಬೆರಳೇ ಹಾಲಿನ ಧಾರೆಯನ್ನು ಸುರಿಸಿತ್ತು!

12029079a ತಂ ಪಿಬನ್ಪಾಣಿಮಿಂದ್ರಸ್ಯ ಸಮಾಮಹ್ನಾ ವ್ಯವರ್ಧತ|
12029079c ಸ ಆಸೀದ್ದ್ವಾದಶಸಮೋ ದ್ವಾದಶಾಹೇನ ಪಾರ್ಥಿವ||

ಪಾರ್ಥಿವ! ಇಂದ್ರನ ಬೆರಳಿನಿಂದ ಹಾಲನ್ನು ಕುಡಿದ ಅವನು ಹನ್ನೆರಡು ದಿನಗಳಲ್ಲಿಯೇ ಹನ್ನೆರಡು ವರ್ಷದಷ್ಟು ದೊಡ್ಡದಾಗಿ ಬೆಳೆದಿದ್ದನು!

12029080a ತಮಿಯಂ ಪೃಥಿವೀ ಸರ್ವಾ ಏಕಾಹ್ನಾ ಸಮಪದ್ಯತ|
12029080c ಧರ್ಮಾತ್ಮಾನಂ ಮಹಾತ್ಮಾನಂ ಶೂರಮಿಂದ್ರಸಮಂ ಯುಧಿ||

ಯುದ್ಧದಲ್ಲಿ ಇಂದ್ರಸಮನಾಗಿದ್ದ ಆ ಧರ್ಮಾತ್ಮ ಮಹಾತ್ಮನು ಇಡೀ ಭೂಮಿಯನ್ನೇ ಒಂದು ಆಡಳಿತದ ಅಧೀನವನ್ನಾಗಿಸಿದನು.

12029081a ಯ ಆಂಗಾರಂ ಹಿ ನೃಪತಿಂ ಮರುತ್ತಮಸಿತಂ ಗಯಮ್|
12029081c ಅಂಗಂ ಬೃಹದ್ರಥಂ ಚೈವ ಮಾಂಧಾತಾ ಸಮರೇಽಜಯತ್||

ಮಾಂಧಾತನು ಸಮರದಲ್ಲಿ ಆಂಗಾರನನ್ನೂ, ಮರುತ್ತನನ್ನೂ, ಅಸಿತನನ್ನೂ, ಗಯನನ್ನೂ, ಅಂಗರಾಜ ಬೃಹದ್ರಥನನ್ನೂ ಜಯಿಸಿದ್ದನು.

12029082a ಯೌವನಾಶ್ವೋ ಯದಾಂಗಾರಂ ಸಮರೇ ಸಮಯೋಧಯತ್|
12029082c ವಿಸ್ಫಾರ್ಯೈರ್ಧನುಷೋ ದೇವಾ ದ್ಯೌರಭೇದೀತಿ ಮೇನಿರೇ||

ಯೌವನಾಶ್ವನು ಆಂಗಾರನನ್ನು ಸಮರದಲ್ಲಿ ಎದುರಿಸಿ ಯುದ್ಧಮಾಡುತ್ತಿದ್ದಾಗ ಅವನ ಧನುಸ್ಸಿನ ಟೇಂಕಾರವನ್ನು ಕೇಳಿ ದೇವತೆಗಳು ಅವನು ಆಕಾಶವನ್ನೇ ಸೀಳಿಬಿಡುತ್ತಿದ್ದಾನೋ ಎಂದು ಅಂದುಕೊಂಡಿದ್ದರು.

12029083a ಯತಃ ಸೂರ್ಯ ಉದೇತಿ ಸ್ಮ ಯತ್ರ ಚ ಪ್ರತಿತಿಷ್ಠತಿ|
12029083c ಸರ್ವಂ ತದ್ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ||

ಸೂರ್ಯನು ಉದಯಿಸುವ ಸ್ಥಳದಿಂದ ಹಿಡಿದು ಅವನು ಅಸ್ತಮಿಸುವ ಸ್ಥಳದ ವರೆಗಿನ ಎಲ್ಲವೂ ಯೌವನಾಶ್ವ ಮಾಂಧಾತನ ಕ್ಷೇತ್ರವೆಂದು ಪರಿಗಣಿಸಲ್ಪಟ್ಟಿತ್ತು.

12029084a ಅಶ್ವಮೇಧಶತೇನೇಷ್ಟ್ವಾ ರಾಜಸೂಯಶತೇನ ಚ|
12029084c ಅದದಾದ್ರೋಹಿತಾನ್ಮತ್ಸ್ಯಾನ್ಬ್ರಾಹ್ಮಣೇಭ್ಯೋ ಮಹೀಪತಿಃ||
12029085a ಹ್ಯೈರಣ್ಯಾನ್ಯೋಜನೋತ್ಸೇಧಾನಾಯತಾನ್ದಶಯೋಜನಮ್|
12029085c ಅತಿರಿಕ್ತಾನ್ದ್ವಿಜಾತಿಭ್ಯೋ ವ್ಯಭಜನ್ನಿತರೇ ಜನಾಃ||

ಆ ಮಹೀಪತಿಯು ನೂರು ಅಶ್ವಮೇಧಗಳನ್ನೂ ನೂರು ರಾಜಸೂಯಗಳನ್ನೂ ಮಾಡಿ ಬ್ರಾಹ್ಮಣರಿಗೆ ಹತ್ತು ಯೋಜನಗಳಷ್ಟು ದಪ್ಪವಾಯಿಯೂ ಒಂದು ಯೋಜನದಷ್ಟು ಎತ್ತರವಾಗಿಯೂ ಇರುವ ಸುವರ್ಣಮಯ ರೋಹಿತ ಮತ್ಸ್ಯಗಳನ್ನು ದಾನವನ್ನಾಗಿತ್ತಿದ್ದನು. ಉಳಿದುದನ್ನು ಇತರ ದ್ವಿಜಾತಿಯವರು ಹಂಚಿಕೊಂಡಿದ್ದರು.

12029086a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029086c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಮಂಧಾತನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029087a ಯಯಾತಿಂ ನಾಹುಷಂ ಚೈವ ಮೃತಂ ಶುಶ್ರುಮ ಸೃಂಜಯ|

12029087c ಯ ಇಮಾಂ ಪೃಥಿವೀಂ ಸರ್ವಾಂ ವಿಜಿತ್ಯ ಸಹಸಾಗರಾಮ್‌॥

ಸೃಂಜಯ! ಸಾಗರಪರ್ಯಂತವಾದ ಈ ಇಡೀ ಪೃಥ್ವಿಯನ್ನು ಗೆದ್ದ ನಹುಷನ ಮಗ ಯಯಾತಿಯೂ ಮೃತನಾದನೆಂದು ಕೇಳಿದ್ದೇವೆ!

12029088a ಶಮ್ಯಾಪಾತೇನಾಭ್ಯತೀಯಾದ್ವೇದೀಭಿಶ್ಚಿತ್ರಯನ್ನೃಪ|
12029088c ಈಜಾನಃ ಕ್ರತುಭಿಃ ಪುಣ್ಯೈಃ ಪರ್ಯಗಚ್ಚದ್ವಸುಂಧರಾಮ್‌॥

ಶಮ್ಯಾಪಾತ[55]ದಿಂದ ಭೂಮಿಯನ್ನು ಗುರುತಿಸುತ್ತಾ ಅವನು ಅಲ್ಲಲ್ಲಿಯೇ ಯಜ್ಞ ವೇದಿಗಳನ್ನು ಪ್ರತಿಷ್ಠಾಪಿಸಿ ಪುಣ್ಯ ಕ್ರತುಗಳನ್ನು ಯಾಜಿಸುತ್ತಾ ಇಡೀ ಭೂಮಿಯನ್ನು ಸುತ್ತಿದನು.

12029089a ಇಷ್ಟ್ವಾ ಕ್ರತುಸಹಸ್ರೇಣ ವಾಜಿಮೇಧಶತೇನ ಚ|
12029089c ತರ್ಪಯಾಮಾಸ ದೇವೇಂದ್ರಂ ತ್ರಿಭಿಃ ಕಾಂಚನಪರ್ವತೈಃ‌॥

ಅವನು ಮೂರು ಕಾಂಚನ ಪರ್ವತಗಳಷ್ಟು ದಾನವನ್ನಿತ್ತು ಸಹಸ್ರ ಇಷ್ಟಿ-ಕ್ರತುಗಳಿಂದಲೂ ನೂರು ಅಶ್ವಮೇಧಗಳಿಂದಲೂ ದೇವೇಂದ್ರನನ್ನು ತೃಪ್ತಿಗೊಳಿಸಿದ್ದನು.

12029090a ವ್ಯೂಢೇ ದೇವಾಸುರೇ ಯುದ್ಧೇ ಹತ್ವಾ ದೈತೇಯದಾನವಾನ್‌|
12029090c ವ್ಯಭಜತ್ಪೃಥಿವೀಂ ಕೃತ್ಸ್ನಾಂ ಯಯಾತಿರ್ನಹುಷಾತ್ಮಜಃ‌॥

ನಹುಷನ ಮಗ ಯಯಾತಿಯು ದೇವಾಸುರ ಯುದ್ಧದಲ್ಲಿ ವ್ಯೂಹದಲ್ಲಿದ್ದ

---

55 ಶಮ್ಯಾ ಎಂದರೆ ಸ್ಥೂಲಬುದ್ಧಃ ಕಾಷ್ಠ ದಂಡಃ – ಸ್ಥೂಲವಾದ ಬುಡವಿರುವ ಮರದ ಕೋಲು. ಅದನ್ನು ಬೀಸಿ ಅದು ಬಿದ್ದಲ್ಲೆಲ್ಲಾ ಯಯಾತಿಯು ಯಜ್ಞವೇದಿಗಳನ್ನು ನಿರ್ಮಿಸಿದ್ದನು. ಹೀಗೆ ಮಾಡುತ್ತಾ ಅವನು ಇಡೀ ಭೂಮಿಯನ್ನೇ ತಿರುಗಿದ್ದನು. (ಭಾರತ ದರ್ಶನ/ಗೀತಾ ಪ್ರೆಸ್).

ದೈತ್ಯ-ದಾನವರನ್ನು ಸಂಹರಿಸಿ ಇಡೀ ಭೂಮಿಯನ್ನೇ ತನ್ನ ಮಕ್ಕಳಲ್ಲಿ ವಿಭಜಿಸಿದ್ದನು.

12029091a ಅಂತೇಷು ಪುತ್ರಾನ್ನಿಕ್ಷಿಪ್ಯ ಯದುದ್ರುಹ್ಯುಪುರೋಗಮಾನ್|
12029091c ಪೂರುಂ ರಾಜ್ಯೇಽಭಿಷಿಚ್ಯ ಸ್ವೇ ಸದಾರಃ ಪ್ರಸ್ಥಿತೋ ವನಮ್||

ಯದು-ದ್ರುಹ್ಯ ಮೊದಲಾದ ಮಕ್ಕಳನ್ನು ಅಲ್ಲಲ್ಲಿ ಸಂಸ್ಥಾಪಿಸಿ, ಪೂರುವಿಗೆ ರಾಜ್ಯಾಭಿಷೇಕವನ್ನು ಮಾಡಿ, ಪತ್ನಿಯೊಂದಿಗೆ ವನವಾಸಗ್ಯೈದನು.

12029092a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029092c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಯಯಾತಿಯೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029093a ಅಂಬರೀಷಂ ಚ ನಾಭಾಗಂ ಮೃತಂ ಶುಶ್ರುಮ ಸೃಂಜಯ|
12029093c ಯಂ ಪ್ರಜಾ ವವ್ರಿರೇ ಪುಣ್ಯಂ ಗೋಪ್ತಾರಂ ನೃಪಸತ್ತಮ||

ನೃಪಸತ್ತಮ! ಸೃಂಜಯ! ಪ್ರಜೆಗಳು ಯಾರನ್ನು ಪುಣ್ಯ ರಕ್ಷಕನೆಂದು ತಿಳಿದುಕೊಂಡಿದ್ದರೋ ಆ ನಭಾಗನ ಮಗ ಅಂಬರೀಷನೂ ಮೃತನಾದನೆಂದು ಕೇಳಿದ್ದೇವೆ.

12029094a ಯಃ ಸಹಸ್ರಂ ಸಹಸ್ರಾಣಾಂ ರಾಜ್ಞಾಮಯುತ ಯಾಜಿನಾಮ್|
12029094c ಈಜಾನೋ ವಿತತೇ ಯಜ್ಞೇ ಬ್ರಾಹ್ಮಣೇಭ್ಯಃ ಸಮಾಹಿತಃ||

ಅವನು ಯಜ್ಞ ಮಾಡುತ್ತಿರುವಾಗ ಒಂದು ಲಕ್ಷ ಹತ್ತು ಸಾವಿರ ರಾಜರನ್ನು ಬ್ರಾಹ್ಮಣರ ಸೇವೆಗಾಗಿ ನಿಯಮಿಸಿದ್ದನು.

12029095a ನೈತತ್ಪೂರ್ವೇ ಜನಾಶ್ಚಕ್ರುರ್ನ ಕರಿಷ್ಯಂತಿ ಚಾಪರೇ|
12029095c ಇತ್ಯಂಬರೀಷಂ ನಾಭಾಗಮನ್ವಮೋದಂತ ದಕ್ಷಿಣಾಃ||

“ಈ ಹಿಂದೆ ಇದನ್ನು ಯಾರೂ ಮಾಡಿರಲಿಲ್ಲ ಮತ್ತು ಮುಂದೆ ಕೂಡ ಮಾಡುವವರಿಲ್ಲ!” ಎಂದು ಜನರು ನಾಭಾಗ ಅಂಬರೀಷನ ದಕ್ಷಿಣೆಗಳನ್ನು ಪ್ರಶಂಸಿಸಿದ್ದರು.

12029096a ಶತಂ ರಾಜಸಹಸ್ರಾಣಿ ಶತಂ ರಾಜಶತಾನಿ ಚ|
12029096c ಸರ್ವೇ ಽಶ್ವಮೇಧೈರೀಜಾನಾಸ್ತೇ ಽಭ್ಯಯುರ್ದಕ್ಷಿಣಾಯನಮ್||

ಅವನ ಯಜ್ಞದಲ್ಲಿ ಪಾಲ್ಗೊಂಡಿದ್ದ ಒಂದು ಲಕ್ಷ ಹತ್ತು ಸಾವಿರ ರಾಜರೆಲ್ಲರೂ ಕೂಡ ದಕ್ಷಿಣಾಯನ ಮಾರ್ಗವಾಗಿ ಪುಣ್ಯಲೋಕಗಳನ್ನು ಸೇರಿದರು.

12029097a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029097c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಅಂಬರೀಷನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029098a ಶಶಬಿಂದುಂ ಚೈತ್ರರಥಂ ಮೃತಂ ಶುಶ್ರುಮ ಸೃಂಜಯ|
12029098c ಯಸ್ಯ ಭಾರ್ಯಾಸಹಸ್ರಾಣಾಂ ಶತಮಾಸೀನ್ಮಹಾತ್ಮನಃ||

ಸೃಂಜಯ! ಚಿತ್ರರಥನ ಮಗ ಶಶಬಿಂದುವೂ ಮೃತ್ಯುವಶನಾದನೆಂದು ಕೇಳಿದ್ದೇವೆ. ಆ ಮಾಹಾತ್ಮನಿಗೆ ಒಂದು ಲಕ್ಷ ಪತ್ನಿಯರಿದ್ದರು.

12029099a ಸಹಸ್ರಂ ತು ಸಹಸ್ರಾಣಾಂ ಯಸ್ಯಾಸನ್ಶಶಬಿಂದವಃ|
12029099c ಹಿರಣ್ಯಕವಚಾಃ ಸರ್ವೇ ಸರ್ವೇ ಚೋತ್ತಮಧನ್ವಿನಃ||

ಶಶಬಿಂದುವಿಗೆ ಹತ್ತು ಲಕ್ಷ ಮಕ್ಕಳಿದ್ದರು. ಅವರೆಲ್ಲರೂ ಹಿರಣ್ಯ ಕವಚಗಳನ್ನು ಧರಿಸಿದ್ದರು. ಎಲ್ಲರೂ ಉತ್ತಮ ಧನ್ವಿಗಳಾಗಿದ್ದರು.

12029100a ಶತಂ ಕನ್ಯಾ ರಾಜಪುತ್ರಮೇಕೈಕಂ ಪೃಷ್ಠತೋಽನ್ವಯುಃ|
12029100c ಕನ್ಯಾಂ ಕನ್ಯಾಂ ಶತಂ ನಾಗಾ ನಾಗಂ ನಾಗಂ ಶತಂ ರಥಾಃ||
12029101a ರಥಂ ರಥಂ ಶತಂ ಚಾಶ್ವಾ ದೇಶಜಾ ಹೇಮಮಾಲಿನಃ|
12029101c ಅಶ್ವಮಶ್ವಂ ಶತಂ ಗಾವೋ ಗಾಂ ಗಾಂ ತದ್ವದಜಾವಿಕಮ್||

ಒಬ್ಬೊಬ್ಬ ರಾಜಪುತ್ರನನ್ನೂ ನೂರು ನೂರು ಕನ್ಯೆಯರು ಅನುಸರಿಸಿ ಹೋಗುತ್ತಿದ್ದರು. ಪ್ರತಿಯೊಬ್ಬ ಕನ್ಯೆಯ ಹಿಂದೆಯೂ ನೂರು ನೂರು ಆನೆಗಳು, ಪ್ರತಿಯೊಂದು ಆನೆಯನ್ನೂ ನೂರು ನೂರು ರಥಗಳೂ, ಪ್ರತಿಯೊಂದು ರಥವನ್ನೂ ನೂರು ನೂರು ಸುವರ್ಣಮಾಲೆಗಳಿಂದ ಅಲಂಕೃತ ನೂರು ನೂರು ಉತ್ತಮ ಜಾತಿಯ ಕುದುರೆಗಳೂ, ಪ್ರತಿಯೊಂದು ಕುದುರೆಯನ್ನೂ ನೂರು ನೂರು ಗೋವುಗಳು, ಮತ್ತು ಪ್ರತಿಯೊಂದು ಗೋವನ್ನೂ ನೂರು ನೂರು ಆಡು-ಕುರಿಗಳು ಹಿಂಬಾಲಿಸಿ ಹೋಗುತ್ತಿದ್ದವು.

12029102a ಏತದ್ಧನಮಪರ್ಯಂತಮಶ್ವಮೇಧೇ ಮಹಾಮಖೇ|
12029102c ಶಶಬಿಂದುರ್ಮಹಾರಾಜ ಬ್ರಾಹ್ಮಣೇಭ್ಯಃ ಸಮಾದಿಶತ್||

ಮಹಾರಾಜ ಶಶಬಿಂದುವು ಮಹಾ ಮಖ ಅಶ್ವಮೇಧದಲ್ಲಿ

ಬ್ರಾಹ್ಮಣರಿಗೆ ಇಷ್ಟೊಂದು ಅಪಾರ ಧನವನ್ನು ದಾನವನ್ನಾಗಿತ್ತಿದ್ದನು.

12029103a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029103c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಶಶಬಿಂದುವೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029104a ಗಯಮಾಮೂರ್ತರಯಸಂ ಮೃತಂ ಶುಶ್ರುಮ ಸೃಂಜಯ|
12029104c ಯಃ ಸ ವರ್ಷಶತಂ ರಾಜಾ ಹುತಶಿಷ್ಟಾಶನೋಽಭವತ್||

ಸೃಂಜಯ! ಅಮೂರ್ತರಯಸನ ಮಗ ಗಯನೂ ಮೃತನಾದನೆಂದು ಕೇಳಿದ್ದೇವೆ. ಆ ರಾಜನು ನೂರು ವರ್ಷಗಳ ಕಾಲ ಯಜ್ಞಮಾಡಿ ಯಜ್ಞಾವಶೇಷವನ್ನೇ ಭುಂಜಿಸಿದನು.

12029105a ಯಸ್ಯೈ ವಹ್ನಿರ್ವರಾನ್ಪ್ರಾದಾತ್ತತೋ ವವ್ರೇ ವರಾನ್ಗಯಃ|
12029105c ದದತೋ ಮೇಽಕ್ಷಯಾ ಚಾಸ್ತು ಧರ್ಮೇ ಶ್ರದ್ಧಾ ಚ ವರ್ಧತಾಮ್||
12029106a ಮನೋ ಮೇ ರಮತಾಂ ಸತ್ಯೇ ತ್ವತ್ಪ್ರಸಾದಾದ್ಧುತಾಶನ|

ಅದರಿಂದ ತೃಪ್ತನಾದ ಅಗ್ನಿಯು ಅವನಿಗೆ ವರಗಳನ್ನು ನೀಡಿದಾಗ ಗಯನು ಈ ವರಗಳನ್ನು ಕೇಳಿದ್ದನು: "ಹುತಾಶನ! ದಾನ ಕೊಡುತ್ತಿದ್ದಂತೆಲ್ಲಾ ಅಕ್ಷಯವಾದ ಧನವು ಹಾಗೂ ಧರ್ಮದಲ್ಲಿ ಶ್ರದ್ಧೆಯು ವೃದ್ಧಿಯಾಗುತ್ತಿರಲಿ. ನನ್ನ ಮನಸ್ಸು ಸತ್ಯದಲ್ಲಿಯೇ ಅನುರಕ್ತವಾಗಿರುವಂತೆ ಅನುಗ್ರಹಿಸು!"

12029106c ಲೇಭೇ ಚ ಕಾಮಾಂಸ್ತಾನ್ಸರ್ವಾನ್ಪಾವಕಾದಿತಿ ನಃ ಶ್ರುತಮ್‌॥
12029107a ದರ್ಶೇನ ಪೌರ್ಣಮಾಸೇನ ಚಾತುರ್ಮಾಸ್ಯೈಃ ಪುನಃ ಪುನಃ।
12029107c ಅಯಜತ್ಸ ಮಹಾತೇಜಾಃ ಸಹಸ್ರಂ ಪರಿವತ್ಸರಾನ್‌॥

ಪಾವಕನಿಂದ ಅವನು ತನ್ನ ಎಲ್ಲ ಕಾಮನೆಗಳನ್ನೂ
ಪಡೆದುಕೊಂಡನೆಂದು ಕೇಳಿದ್ದೇವೆ. ಮಹಾತೇಜಸ್ವಿಯಾದ ಅವನು
ಒಂದು ಸಾವಿರ ವರ್ಷಗಳ ಪರ್ಯಂತ ಪುನಃ ಪುನಃ ದರ್ಶ,
ಪೌರ್ಣಮಾಸ ಮತ್ತು ಚಾತುರ್ಮಾಸ ಯಜ್ಞಗಳನ್ನು ಯಾಜಿಸಿದನು.

12029108a ಶತಂ ಗವಾಂ ಸಹಸ್ರಾಣಿ ಶತಮಶ್ವಶತಾನಿ ಚ।
12029108c ಉತ್ಥಾಯೋತ್ಥಾಯ ವೈ ಪ್ರಾದಾತ್ಸಹಸ್ರಂ ಪರಿವತ್ಸರಾನ್‌॥

ಅವನು ಸಹಸ್ರ ವರ್ಷಗಳ ವರೆಗೆ ಪ್ರತಿದಿನವೂ ಮುಂಜಾನೆ ಏಳುತ್ತಲೇ
ಒಂದು ಲಕ್ಷ ಹಸುಗಳನ್ನೂ ಮತ್ತು ಹತ್ತು ಸಾವಿರ ಕುದುರೆಗಳನ್ನೂ
ದಾನವನ್ನಾಗಿ ಕೊಡುತ್ತಿದ್ದನು.

12029109a ತರ್ಪಯಾಮಾಸ ಸೋಮೇನ ದೇವಾನ್ವಿತ್ತೈರ್ದ್ವಿಜಾನಪಿ।
12029109c ಪಿತೄನ್ಸ್ವಧಾಭಿಃ ಕಾಮ್ಯೈಶ್ಚ ಸ್ತ್ರಿಯಃ ಸ್ವಾಃ ಪುರುಷರ್ಷಭ॥

ಆ ಪುರುಷರ್ಷಭನು ಸೋಮದ ಮೂಲಕ ದೇವತೆಗಳನ್ನೂ, ವಿತ್ತದಿಂದ
ದ್ವಿಜಾತಿಯವರನ್ನೂ, ಶ್ರಾದ್ಧ-ತರ್ಪಣಾದಿಗಳಿಂದ ಪಿತೃಗಳನ್ನೂ ಮತ್ತು
ತನ್ನ ಸ್ತ್ರೀಯರನ್ನು ಕಾಮಗಳಿಂದಲೂ ತೃಪ್ತಿಗೊಳಿಸಿದನು.

12029110a ಸೌವರ್ಣಾಂ ಪೃಥಿವೀಂ ಕೃತ್ವಾ ದಶವ್ಯಾಮಾಂ ದ್ವಿರಾಯತಾಮ್‌।
12029110c ದಕ್ಷಿಣಾಮದದದ್ರಾಜಾ ವಾಜಿಮೇಧಮಹಾಮಖೇ॥

ಹತ್ತು ವ್ಯಾಮ ಅಗಲವಾಗಿಯೂ ಇಪ್ಪತ್ತು ವ್ಯಾಮ ಉದ್ದವಾಗಿಯೂ

ಇರುವ ಸುವರ್ಣಭೂಮಿಯನ್ನು ಕಲ್ಪಿಸಿ ಅಶ್ವಮೇಧದ ಮಹಾಮಖದಲ್ಲಿ ದಕ್ಷಿಣೆಯನ್ನಾಗಿ ಅವನು ಕೊಟ್ಟಿದ್ದನು.

12029111a ಯಾವತ್ಯಃ ಸಿಕತಾ ರಾಜನ್ಗಂಗಾಯಾಃ ಪುರುಷರ್ಷಭ|
12029111c ತಾವತೀರೇವ ಗಾಃ ಪ್ರಾದಾದಾಮೂರ್ತರಯಸೋ ಗಯಃ||

ರಾಜನ್! ಗಂಗಾತೀರದಲ್ಲಿ ಎಷ್ಟು ಮರಳು ಕಣಗಳಿವೆಯೋ ಅಷ್ಟೇ ಸಂಖ್ಯೆಯ ಗೋವುಗಳನ್ನು ಅಮೂರ್ತರಯಸನ ಮಗ ಪುರುಷರ್ಷಭ ಗಯನು ದಾನವನ್ನಾಗಿತ್ತಿದ್ದನು.

12029112a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029112c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಗಯನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029113a ರಂತಿದೇವಂ ಚ ಸಾಂಕೃತ್ಯಂ ಮೃತಂ ಶುಶ್ರುಮ ಸೃಂಜಯ|
12029113c ಸಮ್ಯಗಾರಾಧ್ಯ ಯಃ ಶಕ್ರಂ ವರಂ ಲೇಭೇ ಮಹಾಯಶಾಃ||
12029114a ಅನ್ನಂ ಚ ನೋ ಬಹು ಭವೇದತಿಥೀಂಶ್ಚ ಲಭೇಮಹಿ|
12029114c ಶ್ರದ್ಧಾ ಚ ನೋ ಮಾ ವ್ಯಗಮನ್ಮಾ ಚ ಯಾಚಿಷ್ಮ ಕಂ ಚನ||

ಸುಕೃತಿಯ ಮಗ ಮಹಾಯಶಸ್ವಿ ರಂತಿದೇವನೂ ಮೃತನಾದನೆಂದು ಕೇಳಿದ್ದೇವೆ. ಅವನು ಶಕ್ರನನ್ನು ಚೆನ್ನಾಗಿ ಆರಾಧಿಸಿ ಈ ವರವನ್ನು ಪಡೆದುಕೊಂಡಿದ್ದನು: "ನಮ್ಮಲ್ಲಿಗೆ ಬರುವ ಅತಿಥಿಗಳಿಗೆ ಸಾಕಾಗುವಷ್ಟು ನಮ್ಮಲ್ಲಿ ಅನ್ನವು ವೃದ್ಧಿಯಾಗಿರಲಿ. ನಮ್ಮಿಂದ ಯಾವಾಗಲೂ

ಧರ್ಮಶ್ರದ್ಧೆಯು ದೂರವಾಗದಿರಲಿ. ಯಾರಿಂದಲೂ
ಯಾಚಿಸದಿರುವಂತಾಗಲಿ!”

12029115a ಉಪಾತಿಷ್ಠಂತ ಪಶವಃ ಸ್ವಯಂ ತಂ ಸಂಶಿತವ್ರತಮ್|
12029115c ಗ್ರಾಮ್ಯಾರಣ್ಯಾ ಮಹಾತ್ಮಾನಂ ರಂತಿದೇವಂ ಯಶಸ್ವಿನಮ್||

ಸಂಶಿತವ್ರತನಾಗಿದ್ದ ಯಶಸ್ವೀ ಮಹಾತ್ಮ ರಂತಿದೇವನ ಬಳಿ ಗ್ರಾಮ್ಯ
ಮತ್ತು ಅರಣ್ಯ ಪಶುಗಳು ಸ್ವಯಂ ತಾವಾಗಿಯೇ ಬರುತ್ತಿದ್ದವು!

12029116a ಮಹಾನದೀ ಚರ್ಮರಾಶೇರುತ್ಕ್ಲೇದಾತ್ಸ್ರುವೇ ಯತಃ|
12029116c ತತಶ್ಚರ್ಮಣ್ವತೀತ್ಯೇವಂ ವಿಖ್ಯಾತಾ ಸಾ ಮಹಾನದೀ||

ಈ ಪ್ರಾಣಿಗಳ ಮೈತೊಳೆದ ನೀರಿನಿಂದಲೇ ಹುಟ್ಟಿದ್ದರಿಂದ ಆ ನದಿಯು
ಚರ್ಮಣ್ವತೀ[56] ಎಂಬ ಹೆಸರಿನಿಂದ ಪ್ರಖ್ಯಾತವಾಯಿತು!

12029117a ಬ್ರಾಹ್ಮಣೇಭ್ಯೋ ದದೌ ನಿಷ್ಕಾನ್ಸದಸಿ ಪ್ರತತೇ ನೃಪಃ|
12029117c ತುಭ್ಯಂ ತುಭ್ಯಂ ನಿಷ್ಕಮಿತಿ ಯತ್ರಾಕ್ರೋಶಂತಿ ವೈ ದ್ವಿಜಾಃ||
12029117e ಸಹಸ್ರಂ ತುಭ್ಯಮಿತ್ಯುಕ್ತ್ವಾ ಬ್ರಾಹ್ಮಣಾನ್ಸ್ವ ಪ್ರಪದ್ಯತೇ||

ಆ ನೃಪನು ಯಜ್ಞದ ಸದಸ್ಸಿನಲ್ಲಿ ಬ್ರಾಹ್ಮಣರಿಗೆ ಸುವರ್ಣನಾಣ್ಯಗಳನ್ನು
ಯಥೇಚ್ಛವಾಗಿ ಕೊಟ್ಟನು. ಅಲ್ಲಿ ದ್ವಿಜರು “ಈ ನಿಷ್ಕಗಳು ನಿನಗೆ!
ನಿನಗೆ!” ಎಂದು ಕೂಗುತ್ತಿರಲು ರಂತಿದೇವನು ಆ ಬ್ರಾಹ್ಮಣರಿಗೆ
“ನೀವೇ ಈ ಸಹಸ್ರ ನಿಷ್ಕಗಳನ್ನು ಸ್ವೀಕರಿಸಿ!” ಎಂದು ನೀಡುತ್ತಿದ್ದನು.

12029118a ಅನ್ವಾಹಾರ್ಯೋಪಕರಣಂ ದ್ರವ್ಯೋಪಕರಣಂ ಚ ಯತ್|

---

56 ಚರ್ಮರಾಶಿ ಎಂದರೆ ಪ್ರಾಣಿಗಳ ಉತ್ಕ್ಲೇದಾತ್ ಎಂದರೆ ಬೆವರಿನಿಂದ
ಹರಿದ ನದಿ – ಚರ್ಮಣ್ವತೀ – ಇಂದಿನ ಚಂಬಲ್ ನದಿ.

12029118c ಘಟಾಃ ಸ್ಥಾಲ್ಯಃ ಕಟಾಹಾಶ್ಚ ಪಾತ್ರ್ಯಶ್ಚ ಪಿಠರಾ ಅಪಿ||
12029118e ನ ತತ್ಕಿಂ ಚಿದಸೌವರ್ಣಂ ರಂತಿದೇವಸ್ಯ ಧೀಮತಃ||

ಧೀಮಂತ ರಂತಿದೇವನ ಯಜ್ಞದಲ್ಲಿ ಅನ್ವಾಹಾರ್ಯಾಗ್ನಿಯಲ್ಲಿ ಹೋಮಮಾಡಲು ಬೇಕಾದ ದ್ರವ್ಯ-ಉಪಕರಣಗಳು – ಕೊಡಗಳು, ಪಾತ್ರೆಗಳು, ಕಡಾಯಿಗಳು, ಸ್ಥಾಲಿಗಳು, ಮಡಕೆಗಳು ಎಲ್ಲವೂ ಚಿನ್ನದ್ದೇ ಆಗಿದ್ದವು. ಸುವರ್ಣಮಯವಾಗಿರದ ಯಾವ ವಸ್ತುವೂ ಅಲ್ಲಿರುತ್ತಿರಲಿಲ್ಲ.

12029119a ಸಾಂಕೃತೇ ರಂತಿದೇವಸ್ಯ ಯಾಂ ರಾತ್ರಿಮವಸದ್ಗೃಹೇ|
12029119c ಆಲಭ್ಯಂತ ಶತಂ ಗಾವಃ ಸಹಸ್ರಾಣಿ ಚ ವಿಂಶತಿಃ||

ಸಂಕೃತಿಯ ಮಗ ರಂತಿದೇವನ ಮನೆಯಲ್ಲಿ ರಾತ್ರಿ ಉಳಿದ ಅತಿಥಿಗಳು ಇಪ್ಪತ್ತು ಸಾವಿರದ ನೂರು ಗೋವುಗಳನ್ನು ಪಡೆಯುತ್ತಿದ್ದರು.

12029120a ತತ್ರ ಸ್ಮ ಸೂದಾಃ ಕ್ರೋಶಂತಿ ಸುಮೃಷ್ಟಮಣಿಕುಂಡಲಾಃ|
12029120c ಸೂಪಭೂಯಿಷ್ಠಮಶ್ನೀಧ್ವಂ ನಾದ್ಯ ಮಾಂಸಂ ಯಥಾ ಪುರಾ||

ಮಣಿಕುಂಡಲಗಳನ್ನು ಧರಿಸಿದ್ದ ಅವನ ಅಡುಗೆಯವರು “ಇಂದಿನ ಭೋಜನವು ಹಿಂದಿನಂತಿಲ್ಲ. ಆದುದರಿಂದ ಚೆನ್ನಾಗಿ ಭೋಜನ ಮಾಡಿ!” ಎಂದು ಕೂಗಿ ಹೇಳುತ್ತಿದ್ದರು.

12029121a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029121c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ

ರಂತಿದೇವನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029122a ಸಗರಂ ಚ ಮಹಾತ್ಮಾನಂ ಮೃತಂ ಶುಶ್ರುಮ ಸೃಂಜಯ|
12029122c ಐಕ್ಷ್ವಾಕಂ ಪುರುಷವ್ಯಾಘ್ರಮತಿಮಾನುಷವಿಕ್ರಮಮ್||

ಸೃಂಜಯ! ಇಕ್ಷ್ವಾಕುವಂಶಜ, ಪುರುಷವ್ಯಾಘ್ರ, ಅತಿಮಾನುಷವಿಕ್ರಮಿ ಮಹಾತ್ಮ ಸಗರನೂ ಕೂಡ ಮೃತನಾದನೆಂದು ಕೇಳಿದ್ದೇವೆ!

12029123a ಷಷ್ಟಿಃ ಪುತ್ರಸಹಸ್ರಾಣಿ ಯಂ ಯಾಂತಂ ಪೃಷ್ಠತೋಽನ್ವಯುಃ|
12029123c ನಕ್ಷತ್ರರಾಜಂ ವರ್ಷಾಂತೇ ವ್ಯಭ್ರೇ ಜ್ಯೋತಿರ್ಗಣಾ ಇವ||

ಮಳೆಗಾಲದ ನಂತರ ಆಕಾಶದಲ್ಲಿ ನಕ್ಷತ್ರರಾಜ ಚಂದ್ರನನ್ನು ನಕ್ಷತ್ರಗಣಗಳು ಹೇಗೋ ಹಾಗೆ ಸಗರನನ್ನು ಅವನ ಅರವತ್ತು ಸಾವಿರ ಮಕ್ಕಳು ಹಿಂಬಾಲಿಸಿ ಹೋಗುತ್ತಿದ್ದರು.

12029124a ಏಕಚ್ಚತ್ರಾ ಮಹೀ ಯಸ್ಯ ಪ್ರಣತಾ ಹ್ಯಭವತ್ಪುರಾ|
12029124c ಯೋಽಶ್ವಮೇಧಸಹಸ್ರೇಣ ತರ್ಪಯಾಮಾಸ ದೇವತಾಃ||

ಅವನ ಬಾಹುಬಲದಿಂದ ಹಿಂದೆ ಇಡೀ ಭೂಮಿಯು ಒಂದೇ ಛತ್ರದಡಿಯಲ್ಲಿ ಇತ್ತು. ಅವನು ಸಹಸ್ರ ಅಶ್ವಮೇಧಯಜ್ಞಗಳಿಂದ ದೇವತೆಗಳನ್ನು ತೃಪ್ತಿಪಡಿಸಿದನು.

12029125a ಯಃ ಪ್ರಾದಾತ್ಕಾಂಚನಸ್ತಂಭಂ ಪ್ರಾಸಾದಂ ಸರ್ವಕಾಂಚನಮ್|
12029125c ಪೂರ್ಣಂ ಪದ್ಮದಲಾಕ್ಷೀಣಾಂ ಸ್ತ್ರೀಣಾಂ ಶಯನಸಂಕುಲಮ್||
12029126a ದ್ವಿಜಾತಿಭ್ಯೋಽನುರೂಪೇಭ್ಯಃ ಕಾಮಾನುಚ್ಚಾವಚಾಂಸ್ತಥಾ|
12029126c ಯಸ್ಯಾದೇಶೇನ ತದ್ವಿತ್ತಂ ವ್ಯಭಜಂತ ದ್ವಿಜಾತಯಃ||

ಕಾಂಚನದ ಕಂಬಗಳಿದ್ದ ಸರ್ವವೂ ಕಾಂಚನಮಯವಾಗಿದ್ದ, ಪದ್ಮದಲಾಯತಾಕ್ಷೀ ಸ್ತ್ರೀಯರಿಂದ ಸಂಪನ್ನವಾಗಿದ್ದ, ಶಯನಗಳಿಂದ ಕೂಡಿದ್ದ ಪ್ರಾಸಾದವನ್ನೂ ವಿಧ-ವಿಧದ ಕಾಮೋಪಭೋಗ ಸಾಮಾಗ್ರಿಗಳನ್ನೂ ಯೋಗ್ಯ ದ್ವಿಜಾತಿಯವರಿಗೆ ಅವನು ದಾನಮಾಡಿದನು. ಅವನ ಆದೇಶದಂತೆ ದ್ವಿಜಾತಿಯವರು ಆ ವಿತ್ತವನ್ನು ತಮ್ಮಲ್ಲಿಯೇ ಹಂಚಿಕೊಂಡಿದ್ದರು.

12029127a ಖಾನಯಾಮಾಸ ಯಃ ಕೋಪಾತ್ಪೃಥಿವೀಂ ಸಾಗರಾಂಕಿತಾಮ್|
12029127c ಯಸ್ಯ ನಾಮ್ನಾ ಸಮುದ್ರಶ್ಚ ಸಾಗರತ್ವಮುಪಾಗತಃ||

ಒಮ್ಮೆ ಕುಪಿತನಾದ ಅವನು ಈಗ ಸಾಗರವೆಂದು ಹೇಳಿಸಿಕೊಳ್ಳುವ ಭೂಭಾಗವನ್ನು ಅಗೆಯಿಸಿದ್ದನು. ಅವನ ಹೆಸರಿನಿಂದಲೇ ಸಮುದ್ರವು ಸಾಗರವೆಂದು ಕರೆಯಲ್ಪಟ್ಟಿತು.

12029128a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029128c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಸಗರನೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029129a ರಾಜಾನಂ ಚ ಪೃಥುಂ ವೈನ್ಯಂ ಮೃತಂ ಶುಶ್ರುಮ ಸೃಂಜಯ|
12029129c ಯಮಭ್ಯಷಿಂಚನ್ಸಂಭೂಯ ಮಹಾರಣ್ಯೇ ಮಹರ್ಷಯಃ||

ಸೃಂಜಯ! ಮಹಾರಣ್ಯದಲ್ಲಿ ಮಹರ್ಷಿಗಳೆಲ್ಲರೂ ಸೇರಿ ರಾಜನೆಂದು ಅಭಿಷೇಕಿಸಿದ, ವೇನನ ಮಗ ಪೃಥುವೂ ಕೂಡ ಮೃತನಾದನೆಂದು

ಕೇಳಿದ್ದೇವೆ!

12029130a ಪೃಥಯಿಷ್ಯತಿ ವೈ ಲೋಕಾನ್ಪೃಥುರಿತ್ಯೇವ ಶಬ್ದಿತಃ|
12029130c ಕ್ಷತಾಚ್ಚ ನಸ್ತ್ರಾಯತೀತಿ ಸ ತಸ್ಮಾತ್ಕ್ಷತ್ರಿಯಃ ಸ್ಮೃತಃ||

“ಧರ್ಮಮರ್ಯಾದೆಯನ್ನು ಲೋಕದಲ್ಲಿ ಸ್ಥಾಪಿಸುತ್ತಾನೆ” ಎಂದು ಅವನನ್ನು ಪೃಥುವೆಂದು ಕರೆದರು. ಆಪತ್ತಿನಿಂದ ರಕ್ಷಿಸುವವನಾದುದರಿಂದ ಅವನು ಕ್ಷತ್ರಿಯನೆಂದು ಕರೆಯಲ್ಪಟ್ಟನು.

12029131a ಪೃಥುಂ ವೈನ್ಯಂ ಪ್ರಜಾ ದೃಷ್ಟ್ವಾ ರಕ್ತಾಃ ಸ್ಮೇತಿ ಯದಬ್ರುವನ್|
12029131c ತತೋ ರಾಜೇತಿ ನಾಮಾಸ್ಯ ಅನುರಾಗಾದಜಾಯತ||

ವೈನ್ಯ ಪೃಥುವನ್ನು ನೋಡಿದ ಪ್ರಜೆಗಳು “ಇವನಲ್ಲಿ ನಾವು ಅನುರಕ್ತರಾಗಿದ್ದೇವೆ!” ಎಂದರು. ಅವರ ಅನುರಾಗದಿಂದ ಅವನಿಗೆ “ರಾಜ” ಎನ್ನುವ ಹೆಸರೂ ಹುಟ್ಟಿಕೊಂಡಿತು.

12029132a ಅಕೃಷ್ಟಪಚ್ಯಾ ಪೃಥಿವೀ ಪುಟಕೇ ಪುಟಕೇ ಮಧು|
12029132c ಸರ್ವಾ ದ್ರೋಣದುಘಾ ಗಾವೋ ವೈನ್ಯಸ್ಯಾಸನ್ಪ್ರಶಾಸತಃ||

ಪೃಥುವಿನ ರಾಜ್ಯಭಾರದಲ್ಲಿ ಉತ್ತು-ಬಿತ್ತದೇ ಇದ್ದರೂ ಬೆಳೆಯು ಬೆಳೆಯುತ್ತಿತ್ತು. ಎಲೆ-ಎಲೆಗಳಲ್ಲಿ ಜೇನು ಸುರಿಯುತ್ತಿತ್ತು. ಹಸುಗಳು ಬಳ್ಳ-ಬಳ್ಳದಷ್ಟು ಹಾಲನ್ನು ಕರೆಯುತ್ತಿದ್ದವು.

12029133a ಅರೋಗಾಃ ಸರ್ವಸಿದ್ಧಾರ್ಥಾ ಮನುಷ್ಯಾ ಅಕುತೋಭಯಾಃ|
12029133c ಯಥಾಭಿಕಾಮಮವಸನ್ಕ್ಷೇತ್ರೇಷು ಚ ಗೃಹೇಷು ಚ||

ಮನುಷ್ಯರೆಲ್ಲರೂ ಅರೋಗಿಗಳಾಗಿದ್ದರು. ಬೇಕಾದುದನ್ನು ಪಡೆದುಕೊಳ್ಳುತ್ತಿದ್ದರು. ಯಾರಿಗೂ ಭಯವಿರಲಿಲ್ಲ. ಎಲ್ಲರೂ ಅವರವರ

ಇಷ್ಟದಂತೆ ಮನೆಗಳಲ್ಲಿಯೋ ಹೊರಗಡೆಯೋ ನಿಶ್ಚಿಂತರಾಗಿ ವಾಸಿಸುತ್ತಿದ್ದರು.

12029134a ಆಪಃ ಸಂಸ್ತಂಭಿರೇ ಯಸ್ಯ ಸಮುದ್ರಸ್ಯ ಯಿಯಾಸತಃ|
12029134c ಸರಿತಶ್ಚಾನುದೀರ್ಯಂತ ಧ್ವಜಸಂಗಶ್ಚ ನಾಭವತ್‌||

ಅವನು ಸಮುದ್ರವನ್ನು ದಾಟಲು ಹೋಗುವಾಗ ಅದರ ನೀರು ಸ್ತಂಭವಾಗುತ್ತಿತ್ತು. ನದಿಗಳ ಪ್ರವಾಹಗಳೂ ಇಳಿದುಹೋಗುತ್ತಿದ್ದವು. ಅವನ ಧ್ವಜವು ಎಂದೂ ಮುರಿಯಲಿಲ್ಲ!

12029135a ಹೈರಣ್ಯಾಂಸ್ತ್ರಿನಲೋತ್ಸೇಧಾನ್ಪರ್ವತಾನೇಕವಿಂಶತಿಮ್‌|
12029135c ಬ್ರಾಹ್ಮಣೇಭ್ಯೋ ದದೌ ರಾಜಾ ಯೋಽಶ್ವಮೇಧೇ ಮಹಾಮಖೇ‌||

ಅಶ್ವಮೇಧ ಮಹಾಮಖದಲ್ಲಿ ಆ ರಾಜನು ಬ್ರಾಹ್ಮಣರಿಗೆ ಸಾವಿರದ ಇನ್ನೂರು ಮೊಳಗಳಷ್ಟು ಎತ್ತರವಿರುವ ಇಪ್ಪತ್ತೊಂದು ಸುವರ್ಣ ಪರ್ವತಗಳನ್ನು ದಾನವಾಗಿ ಕೊಟ್ಟಿದ್ದನು.

12029136a ಸ ಚೇನ್ಮಮಾರ ಸೃಂಜಯ ಚತುರ್ಭದ್ರತರಸ್ತ್ವಯಾ|
12029136c ಪುತ್ರಾತ್ಪುಣ್ಯತರಶ್ಚೈವ ಮಾ ಪುತ್ರಮನುತಪ್ಯಥಾಃ‌||

ಸೃಂಜಯ! ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯಗಳಲ್ಲಿ ನಿನಗಿಂತಲೂ ಅಧಿಕನಾಗಿದ್ದ, ನಿನ್ನ ಮಗನಿಗಿಂತಲೂ ಹೆಚ್ಚು ಪುಣ್ಯಶಾಲಿಯಾಗಿದ್ದ ಪೃಥುವೂ ಮೃತನಾದನೆಂದಮೇಲೆ ನಿನ್ನ ಪುತ್ರನ ಕುರಿತು ಶೋಕಿಸಬೇಡ.

12029137a ಕಿಂ ವೈ ತೂಷ್ಣೀಂ ಧ್ಯಾಯಸಿ ಸೃಂಜಯ ತ್ವಂ
ನ ಮೇ ರಾಜನ್ವಾಚಮಿಮಾಂ ಶೃಣೋಷಿ|

12029137c ನ ಚೇನ್ಮೋಘಂ ವಿಪ್ರಲಪ್ತಂ ಮಯೇದಂ
ಪಥ್ಯಂ ಮುಮೂರ್ಷೋರಿವ ಸಮ್ಯಗುಕ್ತಮ್‌॥

ರಾಜನ್‌! ಸೃಂಜಯ! ನೀನು ಏಕೆ ಸುಮ್ಮನೇ
ಯೋಚನಾಮಗ್ನನಾಗಿರುವೆ? ನನ್ನ ಈ ಮಾತುಗಳನ್ನು ನೀನು
ಕೇಳುತ್ತಿಲ್ಲವೇ? ಸಾಯುವವನಿಗೆ ಚಿಕಿತ್ಸೆಯು ವ್ಯರ್ಥವಾಗುವಂತೆ ನನ್ನ
ಈ ಪ್ರಲಾಪವು ವ್ಯರ್ಥವಾಗಿಲ್ಲ ತಾನೇ?”

12029138 ಸೃಂಜಯ ಉವಾಚ
12029138a ಶೃಣೋಮಿ ತೇ ನಾರದ ವಾಚಮೇತಾಂ
ವಿಚಿತ್ರಾರ್ಥಾಂ ಸ್ರಜಮಿವ ಪುಣ್ಯಗಂಧಾಮ್‌|
12029138c ರಾಜರ್ಷೀಣಾಂ ಪುಣ್ಯಕೃತಾಂ ಮಹಾತ್ಮನಾಂ
ಕೀರ್ತ್ಯಾ ಯುಕ್ತಾಂ ಶೋಕನಿರ್ಣಾಶನಾರ್ಥಮ್‌॥

ಸೃಂಜಯನು ಹೇಳಿದನು: “ನಾರದ! ನನ್ನ ಈ ಶೋಕವನ್ನು
ವಿನಾಶಗೊಳಿಸಲೋಸುಗ ಪುಣ್ಯಕೃತ ಮಹಾತ್ಮ ರಾಜರ್ಷಿಗಳ
ಕೀರ್ತಿಯುಕ್ತವಾಗಿರುವ ಮತ್ತು ಪವಿತ್ರಗಂಧಸೂಸುವ ಮಾಲೆಯಂತೆ
ವಿಚಿತ್ರಾರ್ಥಗಳುಳ್ಳ ನಿನ್ನ ಮಾತುಗಳನ್ನು ನಾನು ಕೇಳುತ್ತಿದ್ದೇನೆ.

12029139a ನ ತೇ ಮೋಘಂ ವಿಪ್ರಲಪ್ತಂ ಮಹರ್ಷೇ
ದೃಷ್ಟ್ವೈವ ತ್ವಾಂ ನಾರದಾಹಂ ವಿಶೋಕಃ|
12029139c ಶುಶ್ರೂಷೇ ತೇ ವಚನಂ ಬ್ರಹ್ಮವಾದಿನ್
ನ ತೇ ತೃಪ್ಯಾಮ್ಯಮೃತಸ್ಯೇವ ಪಾನಾತ್‌॥

ಮಹರ್ಷೇ! ನಿನ್ನ ಈ ಮಾತುಗಳು ಖಂಡಿತವಾಗಿಯು ವ್ಯರ್ಥವಾಗಿಲ್ಲ.
ನಾರದ! ನಿನ್ನನ್ನು ನೋಡಿದಾಕ್ಷಣವೇ ನಾನು ಶೋಕರಹಿತನಾದೆನು.

ಬ್ರಹ್ಮವಾದಿನ್! ಅಮೃತಸೇವನೆಗೆ ಸಮನಾಗಿದ್ದ ನಿಮ್ಮ ಮಾತುಗಳಿಂದ ಇನ್ನೂ ತೃಪ್ತನಾಗದೇ ಸುಮ್ಮನೇ ಕೇಳುತ್ತಲೇ ಇದ್ದೆ!

12029140a ಅಮೋಘದರ್ಶಿನ್ಮಮ ಚೇತ್ಪ್ರಸಾದಂ
ಸುತಾಘದಗ್ಧಸ್ಯ ವಿಭೋ ಪ್ರಕುರ್ಯಾಃ|
12029140c ಮೃತಸ್ಯ ಸಂಜೀವನಮದ್ಯ ಮೇ ಸ್ಯಾತ್
ತವ ಪ್ರಸಾದಾತ್ಸುತಸಂಗಮಶ್ಚ||

ಅಮೋಘದರ್ಶಿಯೇ! ವಿಭೋ! ನನ್ನ ಮೇಲೆ ಪ್ರಸನ್ನತೆಯಿದ್ದರೆ ಪುತ್ರಶೋಕದಿಂದ ಸುಟ್ಟುಹೋಗಿರುವ ನನ್ನ ಮೃತನಾದ ಮಗನನ್ನು ಪುನಃ ಬದುಕಿಸಿಕೊಡಬೇಕು! ನಿನ್ನ ಪ್ರಸಾದದಿಂದ ನನಗೆ ನನ್ನ ಮಗನೊಡನೆ ಸಮಾಗಮವಾಗಲಿ!"

12029141 ನಾರದ ಉವಾಚ
12029141a ಯಸ್ತೇ ಪುತ್ರೋ ದಯಿತೋಽಯಂ ವಿಯಾತಃ
ಸ್ವರ್ಣಷ್ಠೀವೀ ಯಮದಾತ್ಪರ್ವತಸ್ತೇ|
12029141c ಪುನಸ್ತೇ ತಂ ಪುತ್ರಮಹಂ ದದಾಮಿ
ಹಿರಣ್ಯನಾಭಂ ವರ್ಷಸಹಸ್ರಿಣಂ ಚ||

ನಾರದನು ಹೇಳಿದನು: "ಪರ್ವತನು ನಿನಗೆ ಅನುಗ್ರಹಿಸಿದ್ದ ಸ್ವರ್ಣಷ್ಠೀವೀ ಎಂಬ ಹೆಸರಿನ ಪುತ್ರನು ಹೊರಟುಹೋಗಿದ್ದಾನೆ. ಅವನು ಇನ್ನಿಲ್ಲ. ಆದರೆ ನಾನು ನಿನಗೆ ಸಹಸ್ರವರ್ಷ ಆಯುಸ್ಸುಳ್ಳ ಹಿರಣ್ಯನಾಭನೆನ್ನುವ ಮಗನನ್ನು ನೀಡುತ್ತೇನೆ!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ

ಷೋಡಶರಾಜೋಪಾಖ್ಯಾನೇ ಏಕೋನವಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಷೋಡಶರಾಜೋಪಾಖ್ಯಾನ ಎನ್ನುವ ಇಪ್ಪತ್ತೊಂಭತ್ತನೇ ಅಧ್ಯಾಯವು.

೩೦

ನಾರದ-ಪರ್ವತೋಪಾಖ್ಯಾನ

ಮಹರ್ಷಿ ನಾರದ ಮತ್ತು ಅವನ ಅಳಿಯ ಪರ್ವತರು ಪರಸ್ಪರರನ್ನು ಶಪಿಸಿದುದರ ಕಥೆ (1-42).

12030001 ಯುಧಿಷ್ಠಿರ ಉವಾಚ|
12030001a ಸ ಕಥಂ ಕಾಂಚನಷ್ಠೀವೀ ಸೃಂಜಯಸ್ಯ ಸುತೋಽಭವತ್|
12030001c ಪರ್ವತೇನ ಕಿಮರ್ಥಂ ಚ ದತ್ತಃ ಕೇನ ಮಮಾರ ಚ||

ಯುಧಿಷ್ಠಿರನು ಹೇಳಿದನು: "ಸ್ವರ್ಣಷ್ಠೀವಿಯು ಸೃಂಜಯನ ಸುತನಾದದ್ದು ಹೇಗೆ? ಯಾವ ಕಾರಣಕ್ಕಾಗಿ ಪರ್ವತನು ಅವನನ್ನು ಸೃಂಜಯನಿಗೆ ದಯಪಾಲಿಸಿದನು ಮತ್ತು ಯಾವ ಕಾರಣಕ್ಕಾಗಿ ಸ್ವರ್ಣಷ್ಠೀವಿಯು ಕೌಮಾರ್ಯದಲ್ಲಿಯೇ ಮರಣಹೊಂದಿದನು?

12030002a ಯದಾ ವರ್ಷಸಹಸ್ರಾಯುಸ್ತದಾ ಭವತಿ ಮಾನವಃ|
12030002c ಕಥಮಪ್ರಾಪ್ತಕೌಮಾರಃ ಸೃಂಜಯಸ್ಯ ಸುತೋ ಮೃತಃ||

ಮನುಷ್ಯನಿಗೆ ಒಂದು ಸಾವಿರ ವರ್ಷಗಳ ಆಯುಸ್ಸು ಇರುವಂಥಹ ಆ ಕಾಲದಲ್ಲಿ ಸೃಂಜಯನ ಮಗನು ಕೌಮಾರ್ಯದಲ್ಲಿಯೇ ಹೇಗೆ ಮೃತನಾದನು?

12030003a ಉತಾಹೋ ನಾಮಮಾತ್ರಂ ವೈ ಸುವರ್ಣಷ್ಠೀವಿನೋಽಭವತ್|
12030003c ತಥ್ಯಂ ವಾ ಕಾಂಚನಷ್ಠೀವೀತ್ಯೇತದಿಚ್ಛಾಮಿ ವೇದಿತುಮ್||

ಅವನು ಹೆಸರಿನಲ್ಲಿ ಮಾತ್ರ ಸ್ವರ್ಣಷ್ಠೀವಿಯಾಗಿದ್ದನೋ? ಅಥವಾ ಅವನನ್ನು ಸುವರ್ಣಷ್ಠೀವಿಯೆಂದು ಏಕೆ ಕರೆಯುತ್ತಿದ್ದರು? ಇವೆಲ್ಲವನ್ನೂ ತಿಳಿಯಲು ಬಯಸುತ್ತೇನೆ.”

12030004 ವಾಸುದೇವ ಉವಾಚ|
12030004a ಅತ್ರ ತೇ ಕಥಯಿಷ್ಯಾಮಿ ಯಥಾ ವೃತ್ತಂ ಜನೇಶ್ವರ|
12030004c ನಾರದಃ ಪರ್ವತಶ್ಚೈವ ಪ್ರಾಗೃಷೀ ಲೋಕಪೂಜಿತೌ||

ವಾಸುದೇವನು ಹೇಳಿದನು: “ಜನೇಶ್ವರ! ಅದು ಹೇಗೆ ನಡೆಯಿತೆನ್ನುವುದನ್ನು ನಿನಗೆ ಹೇಳುತ್ತೇನೆ. ಋಷಿಗಳಾದ ನಾರದ-ಪರ್ವತರು ಲೋಕಪೂಜಿತರು.

12030005a ಮಾತುಲೋ ಭಾಗಿನೇಯಶ್ಚ ದೇವಲೋಕಾದಿಹಾಗತೌ|
12030005c ವಿಹರ್ತುಕಾಮೌ ಸಂಪ್ರೀತ್ಯಾ ಮಾನುಷ್ಯೇಷು ಪುರಾ ಪ್ರಭೂ||

ಪ್ರಭೋ! ಹಿಂದೊಮ್ಮೆ ಆ ಸೋದರಮಾವ-ಸೋದರಳಿಯಂದಿರು ಮನುಷ್ಯಲೋಕದಲ್ಲಿ ಸಂಚರಿಸಬೇಕೆಂದು ಬಯಸಿ ದೇವಲೋಕದಿಂದ ಇಲ್ಲಿಗಿಳಿದರು.

12030006a ಹವಿಃಪವಿತ್ರಭೋಜ್ಯೇನ ದೇವ ಭೋಜ್ಯೇನ ಚೈವ ಹ|
12030006c ನಾರದೋ ಮಾತುಲಶ್ಚೈವ ಭಾಗಿನೇಯಶ್ಚ ಪರ್ವತಃ||
12030007a ತಾವುಭೌ ತಪಸೋಪೇತಾವವನೀತಲಚಾರಿಣೌ|
12030007c ಭುಂಜಾನೌ ಮಾನುಷಾನ್ಭೋಗಾನ್ಯಥಾವತ್ಪರ್ಯಧಾವತಾಮ್||

ತಾಪಸಿಗಳಾಗಿದ್ದ ಸೋದರಮಾವ ನಾರದ ಮತ್ತು ಸೋದರಳಿಯ ಪರ್ವತರು ಪವಿತ್ರವಾದ ಹವಿಸ್ಸನ್ನೂ, ದೇವಭೋಜನಕ್ಕೆ ಯೋಗ್ಯವಾದ ಆಹಾರಪದಾರ್ಥಗಳನ್ನೂ ತಿನ್ನುತ್ತಾ, ಮನುಷ್ಯರ ಭೋಗಗಳನ್ನು ಭೋಗಿಸುತ್ತಾ ಸ್ವೇಚ್ಛೆಯಿಂದ ಭೂಮಿಯಲ್ಲಿ ಸಂಚರಿಸುತ್ತಿದ್ದರು.

12030008a ಪ್ರೀತಿಮಂತೌ ಮುದಾ ಯುಕ್ತೌ ಸಮಯಂ ತತ್ರ ಚಕ್ರತುಃ|
12030008c ಯೋ ಭವೇದ್ಧ್ರುದಿ ಸಂಕಲ್ಪಃ ಶುಭೋ ವಾ ಯದಿ ವಾಶುಭಃ||
12030008e ಅನ್ಯೋನ್ಯಸ್ಯ ಸ ಆಖ್ಯೇಯೋ ಮೃಷಾ ಶಾಪೋಽನ್ಯಥಾ ಭವೇತ್||

ಪರಸ್ಪರ ಪ್ರೀತಿಪಾತ್ರರಾಗಿದ್ದ ಅವರು ತಮ್ಮ-ತಮ್ಮಲ್ಲಿಯೇ ಒಂದು ಒಪ್ಪಂದವನ್ನು ಮಾಡಿಕೊಂಡರು: "ಯಾರೊಬ್ಬರಲ್ಲಿ ಯಾವುದೇ ಶುಭ ಅಥವಾ ಅಶುಭ ಸಂಕಲ್ಪವು ಮೂಡಿಕೊಂಡರೂ ಅದನ್ನು ಅನ್ಯೋನ್ಯರಲ್ಲಿ ಹೇಳಿಕೊಳ್ಳಬೇಕು. ಅದನ್ನು ಹೇಳಿಕೊಳ್ಳದೇ ಇದ್ದರೆ ಅಥವಾ ಸುಳ್ಳನ್ನು ಹೇಳಿದರೆ ಅವರು ಶಾಪಕ್ಕೆ ಗುರಿಯಾಗಬೇಕು."

12030009a ತೌ ತಥೇತಿ ಪ್ರತಿಜ್ಞಾಯ ಮಹರ್ಷೀ ಲೋಕಪೂಜಿತೌ|
12030009c ಸೃಂಜಯಂ ಶ್ವೈತ್ಯಮಭ್ಯೇತ್ಯ ರಾಜಾನಮಿದಮೂಚತುಃ||

ಹಾಗೆಯೇ ಆಗಲೆಂದು ಪ್ರತಿಜ್ಞೆಮಾಡಿ ಆ ಇಬ್ಬರು ಲೋಕಪೂಜಿತ ಮಹರ್ಷಿಗಳೂ ಶ್ವೇತಪುತ್ರನ ಮಗ ರಾಜಾ ಸೃಂಜಯನಲ್ಲಿ ಹೋಗಿ ಇಂತೆಂದರು:

12030010a ಆವಾಂ ಭವತಿ ವತ್ಸ್ಯಾವಃ ಕಂ ಚಿತ್ ಕಾಲಂ ಹಿತಾಯ ತೇ|
12030010c ಯಥಾವತ್ಪೃಥಿವೀಪಾಲ ಆವಯೋಃ ಪ್ರಗುಣೀಭವ||
12030010e ತಥೇತಿ ಕೃತ್ವಾ ತೌ ರಾಜಾ ಸತ್ಕೃತ್ಯೋಪಚಚಾರ ಹ||

“ಪೃಥಿವೀಪಾಲ! ನಿನ್ನ ಹಿತಕ್ಕಾಗಿ ನಾವು ಕೆಲವು ಕಾಲ ನಿನ್ನ ಬಳಿಯಲ್ಲಿಯೇ ವಾಸಿಸುತ್ತೇವೆ. ನಾವಿರುವಲ್ಲಿಯವರೆಗೆ ನಮಗೆ ಅನುಕೂಲಕರನಾಗಿರು!” ಹಾಗೆಯೇ ಆಗಲೆಂದು ಹೇಳಿ ರಾಜನು ಅವರಿಬ್ಬರನ್ನೂ ಸತ್ಕರಿಸಿ ಉಪಚರಿಸಿದನು.

12030011a ತತಃ ಕದಾ ಚಿತ್ತೌ ರಾಜಾ ಮಹಾತ್ಮಾನೌ ತಥಾಗತೌ|
12030011c ಅಬ್ರವೀತ್ಪರಮಪ್ರೀತಃ ಸುತೇಯಂ ವರವರ್ಣಿನೀ||

ಆಗ ಒಮ್ಮೆ ಪರಮಪ್ರೀತನಾದ ರಾಜನು ತನ್ನ ವರವರ್ಣಿನೀ ಮಗಳನ್ನು ಆ ಮಹಾತ್ಮರ ಬಳಿ ಕರೆದುಕೊಂಡು ಹೋಗಿ ಹೀಗೆಂದನುಃ

12030012a ಏಕೈವ ಮಮ ಕನ್ಯೈಷಾ ಯುವಾಂ ಪರಿಚರಿಷ್ಯತಿ|
12030012c ದರ್ಶನೀಯಾನವದ್ಯಾಂಗೀ ಶೀಲವೃತ್ತಸಮನ್ವಿತಾ||
12030012e ಸುಕುಮಾರೀ ಕುಮಾರೀ ಚ ಪದ್ಮಕಿಂಜಲ್ಕಸಂನಿಭಾ||

ಅನವದ್ಯಾಂಗಿಯೂ ಶೀಲಚಾರಿತ್ರ್ಯಗಳಿಂದ ಕೂಡಿದವಳೂ, ಕಮಲದ ಕುಸುಮದಂತೆ ಕಾಂತಿಯುಕ್ತಳಾಗಿರುವ ಈ ಸುಂದರ ಯುವತಿಯು ನನ್ನ ಓರ್ವಳೇ ಮಗಳು ಕುಮಾರೀ ಸುಕುಮಾರಿ. ಇವಳು ನಿಮ್ಮ ಸೇವೆಯನ್ನು ಮಾಡುತ್ತಾಳೆ!”

12030013a ಪರಮಂ ಸೌಮ್ಯ ಇತ್ಯುಕ್ತಸ್ತಾಭ್ಯಾಂ ರಾಜಾ ಶಶಾಸ ತಾಮ್|
12030013c ಕನ್ಯೇ ವಿಪ್ರಾವುಪಚರ ದೇವವತ್ಪಿತೃವಚ್ಚ ಹ||

“ತುಂಬಾ ಒಳ್ಳೆಯದಾಯಿತು!” ಎಂದು ಅವರು ಹೇಳಲು ರಾಜನು ಅವಳಿಗೆ “ಕನ್ಯೇ! ದೇವ-ಪಿತೃಗಳಂತೆ ಈ ವಿಪ್ರರನ್ನು ಉಪಚರಿಸು!” ಎಂದು ಶಾಸನವನ್ನಿತ್ತನು.

12030014a ಸಾ ತು ಕನ್ಯಾ ತಥೇತ್ಯುಕ್ತ್ವಾ ಪಿತರಂ ಧರ್ಮಚಾರಿಣೀ|
12030014c ಯಥಾನಿದೇಶಂ ರಾಜ್ಞಸ್ತೌ ಸತ್ಕೃತ್ಯೋಪಚಚಾರ ಹ||

ಆ ಧರ್ಮಚಾರಿಣೀ ಕನ್ಯೆಯು ತಂದೆಗೆ ಹಾಗೆಯೇ ಆಗಲೆಂದು ಹೇಳಿ, ರಾಜನ ನಿರ್ದೇಶನದಂತೆ ಅವರಿಬ್ಬರನ್ನೂ ಸತ್ಕರಿಸಿ ಉಪಚರಿಸಿದಳು.

12030015a ತಸ್ಯಾಸ್ತಥೋಪಚಾರೇಣ ರೂಪೇಣಾಪ್ರತಿಮೇನ ಚ|
12030015c ನಾರದಂ ಹೃಚ್ಚಯಸ್ತೂರ್ಣಂ ಸಹಸ್ಯೈವಾನ್ವಪದ್ಯತ||

ಅವಳ ಉಪಚಾರಗಳಿಂದ ಮತ್ತು ಅಪ್ರತಿಮ ರೂಪದಿಂದ ನಾರದನ ಹೃದಯದಲ್ಲಿ ಮಲಗಿದ್ದ ಕಾಮನು ಒಮ್ಮೆಲೇ ಎದ್ದು ಅವನನ್ನು ಆಕ್ರಮಣಿಸಲಾರಂಭಿಸಿದನು.

12030016a ವವೃಧೇ ಚ ತತಸ್ತಸ್ಯ ಹೃದಿ ಕಾಮೋ ಮಹಾತ್ಮನಃ|
12030016c ಯಥಾ ಶುಕ್ಲಸ್ಯ ಪಕ್ಷಸ್ಯ ಪ್ರವೃತ್ತಾವುಡುರಾಟ್ತನ್ಯೈಃ||

ಶುಕ್ಲಪಕ್ಕದಲ್ಲಿ ಉಡುರಾಜ ಚಂದ್ರನು ಹೇಗೆ ಮೆಲ್ಲ ಮೆಲ್ಲನೇ ವರ್ಧಿಸುತ್ತಾನೋ ಹಾಗೆ ಆ ಮಹಾತ್ಮನ ಹೃದಯದಲ್ಲಿ ಕಾಮವು ವೃದ್ಧಿಯಾಗತೊಡಗಿತು.

12030017a ನ ಚ ತಂ ಭಾಗಿನೇಯಾಯ ಪರ್ವತಾಯ ಮಹಾತ್ಮನೇ|
12030017c ಶಶಂಸ ಮನ್ಮಥಂ ತೀವ್ರಂ ವ್ರೀಡಮಾನಃ ಸ ಧರ್ಮವಿತ್||

ಆದರೆ ಧರ್ಮವಿದುವಾದ ಅವನು ನಾಚಿಕೊಂಡು ತನಗಾಗುತ್ತಿದ್ದ ಮನ್ಮಥನ ತೀವ್ರತೆಯನ್ನು ಸೋದರಳಿಯ ಮಹಾತ್ಮ ಪರ್ವತನಲ್ಲಿ ಹೇಳಿಕೊಳ್ಳಲೇ ಇಲ್ಲ.

12030018a ತಪಸಾ ಚೇಂಗಿತೇನಾಥ ಪರ್ವತೋಽಥ ಬುಬೋಧ ತತ್|

12030018c ಕಾಮಾರ್ತಂ ನಾರದಂ ಕ್ರುದ್ಧಃ ಶಶಾಪೈನಂ ತತೋ ಭೃಶಮ್‌॥

ತನ್ನ ತಪಸ್ಸಿನ ಪ್ರಭಾವದಿಂದ ಅವನ ಇಂಗಿತವನ್ನು ತಿಳಿದುಕೊಂಡ ಪರ್ವತನು ಕ್ರುದ್ಧನಾಗಿ ಕಾಮಾರ್ತನಾದ ನಾರದನಿಗೆ ಭಯಂಕರವಾದ ಈ ಶಾಪವನ್ನಿತ್ತನುಃ

12030019a ಕೃತ್ವಾ ಸಮಯಮವ್ಯಗ್ರೋ ಭವಾನ್ವೈ ಸಹಿತೋ ಮಯಾ|
12030019c ಯೋ ಭವೇದ್ಧ್ರುದಿ ಸಂಕಲ್ಪಃ ಶುಭೋ ವಾ ಯದಿ ವಾಶುಭಃ‌॥
12030020a ಅನ್ಯೋನ್ಯಸ್ಯ ಸ ಆಖ್ಯೇಯ ಇತಿ ತದ್ವೈ ಮೃಷಾ ಕೃತಮ್‌|
12030020c ಭವತಾ ವಚನಂ ಬ್ರಹ್ಮಂಸ್ತಸ್ಮಾದೇತದ್ವದಾಮ್ಯಹಮ್‌॥

“ಏನೇನು ಶುಭಾಶುಭ ಸಂಕಲ್ಪಗಳು ಹುಟ್ಟುತ್ತವೆಯೋ ಅವುಗಳನ್ನು ಅನ್ಯೋನ್ಯರಲ್ಲಿ ಹೇಳಬೇಕು” ಎಂದು ಅವ್ಯಗ್ರನಾಗಿ ನನ್ನೊಡನೆ ಒಪ್ಪೊಂದ ಮಾಡಿಕೊಂಡಿರುವ ನೀನು ಆ ವಚನಕ್ಕೆ ಸುಳ್ಳಾಗಿ ಮಾಡುತ್ತಿರುವೆ! ಬ್ರಹ್ಮನ್‌! ಆದುದರಿಂದ ನಾನು ನಿನಗೆ ಹೀಗೆ ಹೇಳುತ್ತಿದ್ದೇನೆ.

12030021a ನ ಹಿ ಕಾಮಂ ಪ್ರವರ್ತಂತಂ ಭವಾನಾಚಷ್ಟ ಮೇ ಪುರಾ|
12030021c ಸುಕುಮಾರ್ಯಾಂ ಕುಮಾರ್ಯಾಂ ತೇ ತಸ್ಮಾದೇಷ ಶಪಾಮ್ಯಹಮ್‌॥

ಕುಮಾರಿ ಸುಕುಮಾರಿಯ ಕುರಿತು ನಿನ್ನಲ್ಲಿ ಹುಟ್ಟಿರುವ ಈ ಕಾಮದ ಕುರಿತು ನೀನು ನನಗೆ ಈ ಮೊದಲೇ ಹೇಳಲಿಲ್ಲ! ಆದುದರಿಂದ ನಾನು ನಿನ್ನನ್ನು ಶಪಿಸುತ್ತಿದ್ದೇನೆ.

12030022a ಬ್ರಹ್ಮವಾದೀ ಗುರುರ್ಯಸ್ಮಾತ್ತಪಸ್ವೀ ಬ್ರಾಹ್ಮಣಶ್ಚ ಸನ್‌|
12030022c ಅಕಾರ್ಷೀಃ ಸಮಯಭ್ರಂಶಮಾವಾಭ್ಯಾಂ ಯಃ ಕೃತೋ ಮಿಥಃ‌॥

ಬ್ರಹ್ಮವಾದಿಯೂ, ಗುರುವೂ, ತಪಸ್ವೀ ಬ್ರಾಹ್ಮಣನೂ ಆಗಿರುವ ನೀನು

ನಮ್ಮಿಬ್ಬರ ನಡುವೆ ಮಾಡಿಕೊಂಡ ಒಪ್ಪಂದವನ್ನು ಮುರಿದಿರುವೆ!

12030023a ಶಪ್ಸ್ಯೇ ತಸ್ಮಾತ್ಸುಸಂಕ್ರುದ್ಧೋ ಭವಂತಂ ತಂ ನಿಬೋಧ ಮೇ|
12030023c ಸುಕುಮಾರೀ ಚ ತೇ ಭಾರ್ಯಾ ಭವಿಷ್ಯತಿ ನ ಸಂಶಯಃ||

ಆದುದರಿಂದ ಸಂಕ್ರುದ್ಧನಾಗಿ ನಾನು ನಿನ್ನನ್ನು ಶಪಿಸುತ್ತಿದ್ದೇನೆ. ನಾನು ಹೇಳುವುದನ್ನು ಕೇಳು! ಸುಕುಮಾರಿಯು ನಿನ್ನ ಪತ್ನಿಯಾಗುತ್ತಾಳೆ ಎನ್ನುವುದರಲ್ಲಿ ಸಂಶಯವಿಲ್ಲ!

12030024a ವಾನರಂ ಚೈವ ಕನ್ಯಾ ತ್ವಾಂ ವಿವಾಹಾತ್ಪ್ರಭೃತಿ ಪ್ರಭೋ|
12030024c ಸಂದ್ರಕ್ಷ್ಯಂತಿ ನರಾಶ್ಚಾನ್ಯೇ ಸ್ವರೂಪೇಣ ವಿನಾಕೃತಮ್||

ಆದರೆ ಪ್ರಭೋ! ಆ ಕನ್ಯೆಯನ್ನು ವಿವಾಹವಾದೊಡನೆಯೇ ನೀನು ವಾನರ ರೂಪವನ್ನು ತಾಳುತ್ತೀಯೆ! ಸ್ವರೂಪವನ್ನು ಕಳೆದುಕೊಂಡು ಕಪಿಮುಖನಾಗುವ ನಿನ್ನನ್ನು ಜನರು ನೋಡುತ್ತಾರೆ!"

12030025a ಸ ತದ್ವಾಕ್ಯಂ ತು ವಿಜ್ಞಾಯ ನಾರದಃ ಪರ್ವತಾತ್ತದಾ|
12030025c ಅಶಪತ್ತಮಪಿ ಕ್ರೋಧಾದ್ಭಾಗಿನೇಯಂ ಸ ಮಾತುಲಃ||

ಪರ್ವತನ ಆ ಮಾತನ್ನು ಕೇಳಿದ ಸೋದರ ಮಾವ ನಾರದನೂ ಕೂಡ ಕುಪಿತನಾಗಿ ತನ್ನ ಅಳಿಯನನ್ನೂ ಶಪಿಸಿದನು:

12030026a ತಪಸಾ ಬ್ರಹ್ಮಚರ್ಯೇಣ ಸತ್ಯೇನ ಚ ದಮೇನ ಚ|
12030026c ಯುಕ್ತೋಽಪಿ ಧರ್ಮನಿತ್ಯಶ್ಚ ನ ಸ್ವರ್ಗವಾಸಮಾಪ್ಸ್ಯಸಿ||

"ತಪಸ್ಸು, ಬ್ರಹ್ಮಚರ್ಯ, ಸತ್ಯ ಮತ್ತು ದಮಗಳಿಂದ ಯುಕ್ತನಾಗಿದ್ದರೂ, ಧರ್ಮನಿತ್ಯನಾಗಿದ್ದರೂ, ನಿನಗೆ ಸ್ವರ್ಗವಾಸವು ದೊರಕುವುದಿಲ್ಲ!"

12030027a ತೌ ತು ಶಪ್ತ್ವಾ ಭೃಶಂ ಕ್ರುದ್ಧೌ ಪರಸ್ಪರಮಮರ್ಷಣೌ|

12030027c ಪ್ರತಿಜಗ್ಮತುರನ್ಯೋನ್ಯಂ ಕ್ರುದ್ಧಾವಿವ ಗಜೋತ್ತಮೌ॥

ಹೀಗೆ ಕ್ರುದ್ಧರಾಗಿ ಪರಸ್ಪರರನ್ನು ಘೋರವಾಗಿ ಶಪಿಸಿ ಕ್ರುದ್ಧ ಗಜೋತ್ತಮರಂತೆ ಒಬ್ಬರನ್ನೊಬ್ಬರು ಸಹಿಸಿಕೊಳ್ಳಲಾಗದೇ ಅಗಲಿ ಹೊರಟುಹೋದರು.

12030028a ಪರ್ವತಃ ಪೃಥಿವೀಂ ಕೃತ್ಸ್ನಾಂ ವಿಚಚಾರ ಮಹಾಮುನಿಃ|
12030028c ಪೂಜ್ಯಮಾನೋ ಯಥಾನ್ಯಾಯಂ ತೇಜಸಾ ಸ್ವೇನ ಭಾರತ॥

ಭಾರತ! ಮಹಾಮುನಿ ಪರ್ವತನು, ತನ್ನದೇ ತೇಜಸ್ಸಿನಿಂದ ಯಥಾನ್ಯಾಯವಾಗಿ ಪೂಜಿಸಲ್ಪಡುತ್ತಾ, ಭೂಮಿಯನ್ನಿಡೀ ಸಂಚರಿಸಿದನು.

12030029a ಅಥ ತಾಮಲಭತ್ಕನ್ಯಾಂ ನಾರದಃ ಸೃಂಜಯಾತ್ಮಜಾಮ್|
12030029c ಧರ್ಮೇಣ ಧರ್ಮಪ್ರವರಃ ಸುಕುಮಾರೀಮನಿಂದಿತಾಮ್॥

ಅನಂತರ ಧರ್ಮಪ್ರವರ ನಾರದನು ಸೃಂಜಯನ ಮಗಳು ಅನಿಂದಿತೆ ಕನ್ಯೆ ಸುಕುಮಾರಿಯನ್ನು ಧರ್ಮಪ್ರಕಾರವಾಗಿ ಪಡೆದುಕೊಂಡನು.

12030030a ಸಾ ತು ಕನ್ಯಾ ಯಥಾಶಾಪಂ ನಾರದಂ ತಂ ದದರ್ಶ ಹ|
12030030c ಪಾಣಿಗ್ರಹಣಮಂತ್ರಾಣಾಂ ಪ್ರಯೋಗಾದೇವ ವಾನರಮ್॥

ಪಾಣಿಗ್ರಹಣ ಮಂತ್ರಗಳು ಮತ್ತು ಪ್ರಯೋಗಗಳು ಮುಗಿದಾಕ್ಷಣವೇ ಆ ಕನ್ಯೆಯು, ಶಾಪವಿದ್ದಂತೆ, ನಾರದನನ್ನು ವಾನರರೂಪದಲ್ಲಿ ಕಂಡಳು.

12030031a ಸುಕುಮಾರೀ ಚ ದೇವರ್ಷಿಂ ವಾನರಪ್ರತಿಮಾನನಮ್|
12030031c ನೈವಾವಮನ್ಯತ ತದಾ ಪ್ರೀತಿಮತ್ಯೇವ ಚಾಭವತ್॥

ವಾನರನ ಮುಖವನ್ನು ಹೊಂದಿದ್ದ ದೇವರ್ಷಿಯನ್ನು ಸುಕುಮಾರಿಯು

ಅವಮಾನಗೊಳಿಸಲಿಲ್ಲ. ಅವನ ಮೇಲೆ ಪ್ರೀತಿಭಾವವನ್ನೇ ಹೊಂದಿದ್ದಳು.

12030032a ಉಪತಸ್ಥೇ ಚ ಭರ್ತಾರಂ ನ ಚಾನ್ಯಂ ಮನಸಾಪ್ಯಗಾತ್|
12030032c ದೇವಂ ಮುನಿಂ ವಾ ಯಕ್ಷಂ ವಾ ಪತಿತ್ವೇ ಪತಿವತ್ಸಲಾ||

ಪತಿಯ ಸೇವಾನಿರತಳಾಗಿದ್ದ ಅವಳು ಮನಸ್ಸಿನಲ್ಲಿ ಕೂಡ ದೇವ, ಮುನಿ, ಯಕ್ಷರು ಮತ್ತು ಬೇರೆ ಯಾರಲ್ಲಿಯೂ ಪತಿತ್ವವನ್ನು ಕಾಣಲಿಲ್ಲ.

12030033a ತತಃ ಕದಾ ಚಿದ್ ಭಗವಾನ್ಪರ್ವತೋಽನುಸಸಾರ ಹ|
12030033c ವನಂ ವಿರಹಿತಂ ಕಿಂ ಚಿತ್ತತ್ರಾಪಶ್ಯತ್ಸ ನಾರದಮ್||

ಹೀಗಿರಲು ಒಮ್ಮೆ ಭಗವಾನ್ ಪರ್ವತನು ಯಾವುದೋ ಕಾರಣಕ್ಕಾಗಿ ವನದಲ್ಲಿ ವಿಹರಿಸುತ್ತಿರುವಾಗ ಅಲ್ಲಿ ನಾರದನನ್ನು ಕಂಡನು.

12030034a ತತೋಽಭಿವಾದ್ಯ ಪ್ರೋವಾಚ ನಾರದಂ ಪರ್ವತಸ್ತದಾ|
12030034c ಭವಾನ್ಪ್ರಸಾದಂ ಕುರುತಾಂ ಸ್ವರ್ಗಾದೇಶಾಯ ಮೇ ಪ್ರಭೋ||

ಆಗ ಪರ್ವತನು ನಾರದನನ್ನು ಅಭಿವಂದಿಸಿ "ಪ್ರಭೋ! ನಿನ್ನ ಕರುಣೆಯಿಂದ ನಾನು ಸ್ವರ್ಗಕ್ಕೆ ಹೋಗುವಂತೆ ಮಾಡು!" ಎಂದು ಕೇಳಿಕೊಂಡನು.

12030035a ತಮುವಾಚ ತತೋ ದೃಷ್ಟ್ವಾ ಪರ್ವತಂ ನಾರದಸ್ತದಾ|
12030035c ಕೃತಾಂಜಲಿಮುಪಾಸೀನಂ ದೀನಂ ದೀನತರಃ ಸ್ವಯಮ್||

ತನಗಿಂತಲೂ ದೀನನಾಗಿ ಕೈಮುಗಿದು ಕುಳಿತುಕೊಂಡು ಯಾಚಿಸುತ್ತಿದ್ದ ಪರ್ವತನನ್ನು ನೋಡಿ ನಾರದನು ಅವನಿಗೆ ಇಂತೆಂದನುಃ

12030036a ತ್ವಯಾಹಂ ಪ್ರಥಮಂ ಶಪ್ತೋ ವಾನರಸ್ತ್ವಂ ಭವಿಷ್ಯಸಿ|

12030036c ಇತ್ಯುಕ್ತೇನ ಮಯಾ ಪಶ್ಚಾಚ್ಚಪ್ತಸ್ತ್ವಮಪಿ ಮತ್ಸರಾತ್‌॥
12030036e ಅದ್ಯಪ್ರಭೃತಿ ವೈ ವಾಸಂ ಸ್ವರ್ಗೇ ನಾವಾಪ್ಸ್ಯಸೀತಿ ಹ॥

“ನೀನೇ ನನ್ನನ್ನು ಮೊದಲು ವಾನರನಾಗೆಂದು ಶಪಿಸಿದೆ. ಇದನ್ನು
ಕೇಳಿದ ನಾನು ಮತ್ಸರದಿಂದ ಇಂದಿನಿಂದ ನಿನಗೆ ಸ್ವರ್ಗವಾಸವು
ದೊರೆಯದಿರಲಿ ಎಂದು ನಿನ್ನನ್ನೂ ಪ್ರತಿಯಾಗಿ ಶಪಿಸಿದೆನು.

12030037a ತವ ನ್ಯೆತದ್ಧಿ ಸದೃಶಂ ಪುತ್ರಸ್ಥಾನೇ ಹಿ ಮೇ ಭವಾನ್‌|
12030037c ನಿವರ್ತಯೇತಾಂ ತೌ ಶಾಪಮನ್ಯೋಽನ್ಯೇನ ತದಾ ಮುನೀ॥

ನನ್ನ ಪುತ್ರಸ್ಥಾನದಲ್ಲಿರುವ ನೀನು ಈ ರೀತಿ ಮಾಡಬಾರದಾಗಿತ್ತು!”
ಅನಂತರ ಆ ಇಬ್ಬರು ಮುನಿಗಳೂ ಅನ್ಯೋನ್ಯರಿಗಿತ್ತಿದ್ದ ಶಾಪವನ್ನು
ಹಿಂದೆ ತೆಗೆದುಕೊಂಡರು.

12030038a ಶ್ರೀಸಮೃದ್ಧಂ ತದಾ ದೃಷ್ಟ್ವಾ ನಾರದಂ ದೇವರೂಪಿಣಮ್‌|
12030038c ಸುಕುಮಾರೀ ಪ್ರದುದ್ರಾವ ಪರಪತ್ಯಭಿಶಂಕಯಾ॥

ಆಗ ಕಾಂತಿಯುಕ್ತನಾಗಿದ್ದ ದೇವರೂಪೀ ಆ ನಾರದನನ್ನು ನೋಡಿ
ಸುಕುಮಾರಿಯು ಪರಪುರುಷನೆಂಬ ಸಂದೇಹದಿಂದ ಓಡಿಹೋದಳು.

12030039a ತಾಂ ಪರ್ವತಸ್ತತೋ ದೃಷ್ಟ್ವಾ ಪ್ರದ್ರವಂತೀಮನಿಂದಿತಾಮ್‌|
12030039c ಅಬ್ರವೀತ್ತವ ಭರ್ತ್ಯೇಷ ನಾತ್ರ ಕಾರ್ಯಾ ವಿಚಾರಣಾ॥

ಓಡಿಹೋಗುತ್ತಿದ್ದ ಆ ಅನಿಂದಿತೆಯನ್ನು ನೋಡಿ ಪರ್ವತನು
ಇಂತೆಂದನುಃ “ಇವನೇ ನಿನ್ನ ಪತಿ. ಅದರಲ್ಲಿ
ವಿಚಾರಮಾಡಬೇಕಾದುದೇ ಇಲ್ಲ!

12030040a ಋಷಿಃ ಪರಮಧರ್ಮಾತ್ಮಾ ನಾರದೋ ಭಗವಾನ್ಪ್ರಭುಃ|

12030040c ತವ್ಯೈವಾಭೇದ್ಯಹೃದಯೋ ಮಾ ತೇ ಭೂದತ್ರ ಸಂಶಯಃ||

ಈ ಋಷಿ, ಪರಮ ಧರ್ಮಾತ್ಮಾ ಭಗವಾನ್ ಪ್ರಭು ನಾರದನು ನಿನ್ನ ಅಭೇದ್ಯಹೃದಯ ಪತಿ. ಅದರಲ್ಲಿ ನಿನಗೆ ಸಂಶಯವಾಗದಿರಲಿ!"

12030041a ಸಾನುನೀತಾ ಬಹುವಿಧಂ ಪರ್ವತೇನ ಮಹಾತ್ಮನಾ|
12030041c ಶಾಪದೋಷಂ ಚ ತಂ ಭರ್ತುಃ ಶ್ರುತ್ವಾ ಸ್ವಾಂ ಪ್ರಕೃತಿಂ ಗತಾ||
12030041e ಪರ್ವತೋಽಥ ಯಯೌ ಸ್ವರ್ಗಂ ನಾರದೋಽಥ ಯಯೌ ಗೃಹಾನ್||

ಆ ಮಹಾತ್ಮ ಪರ್ವತನು ಬಹುವಿಧವಾಗಿ ಅವಳನ್ನು ಒಪ್ಪಿಸಲು, ತನ್ನ ಪತಿಯು ಶಾಪದೋಷಕ್ಕೊಳಗಾಗಿದ್ದುದನ್ನು ಕೇಳಿ ಸುಕುಮಾರಿಯು ಸ್ವಸ್ಥಚಿತ್ತಳಾದಳು. ಆಗ ಪರ್ವತನು ಸ್ವರ್ಗಕ್ಕೂ ನಾರದನು ಪತ್ನಿಯೊಡನೆ ತನ್ನ ಮನೆಗೂ ತೆರಳಿದರು.

12030042a ಪ್ರತ್ಯಕ್ಷಕರ್ಮಾ ಸರ್ವಸ್ಯ ನಾರದೋಽಯಂ ಮಹಾನೃಷಿಃ|
12030042c ಏಷ ವಕ್ಷ್ಯತಿ ವೈ ಪೃಷ್ಟೋ ಯಥಾ ವೃತ್ತಂ ನರೋತ್ತಮ||

ನರೋತ್ತಮ! ಈ ಮಹಾನೃಷಿ ನಾರದನೇ ಇದರ ಪ್ರತ್ಯಕ್ಷಕರ್ಮಿಯಾಗಿದ್ದನು. ನೀನು ಕೇಳಿದುದನ್ನು ನಡೆದಂತೆ ಇವನೇ ಹೇಳುತ್ತಾನೆ!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ನಾರದಪರ್ವತೋಪಾಖ್ಯಾನೇ ತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ನಾರದಪರ್ವತೋಪಾಖ್ಯಾನ ಎನ್ನುವ ಮೂವತ್ತನೇ ಅಧ್ಯಾಯವು.

೩೧

ಸುವರ್ಣಷ್ಠೀವ್ಯುಪಾಽಖ್ಯಾನ

ಸುವರ್ಣಷ್ಠೀವಿಯ ಜನ್ಮ, ಮೃತ್ಯು ಮತ್ತು ಪುನರ್ಜೀವನದ ವೃತ್ತಾಂತ (1-47).

12031001 ವೈಶಂಪಾಯನ ಉವಾಚ|
12031001a ತತೋ ರಾಜಾ ಪಾಂಡುಸುತೋ ನಾರದಂ ಪ್ರತ್ಯಭಾಷತ|
12031001c ಭಗವನ್ಶ್ರೋತುಮಿಚ್ಛಾಮಿ ಸುವರ್ಣಷ್ಠೀವಿಸಂಭವಮ್||

ವೈಶಂಪಾಯನನು ಹೇಳಿದನು: "ಆಗ ರಾಜಾ ಪಾಂಡುಸುತನು ನಾರದನಿಗೆ "ಭಗವನ್! ಸ್ವರ್ಣಷ್ಠೀವಿಯ ಹುಟ್ಟಿನ ಕುರಿತು ಕೇಳಲು ಬಯಸುತ್ತೇನೆ!" ಎಂದನು.

12031002a ಏವಮುಕ್ತಃ ಸ ಚ ಮುನಿರ್ಧರ್ಮರಾಜೇನ ನಾರದಃ|
12031002c ಆಚಚಕ್ಷೇ ಯಥಾ ವೃತ್ತಂ ಸುವರ್ಣಷ್ಠೀವಿನಂ ಪ್ರತಿ||

ಧರ್ಮರಾಜನು ಹೀಗೆ ಹೇಳಲು ಮುನಿ ನಾರದನು ಸ್ವರ್ಣಷ್ಠೀವಿಯ ಕುರಿತು ನಡೆದುದೆಲ್ಲವನ್ನೂ ವಿವರಿಸಿ ಹೇಳಿದನು.

12031003a ಏವಮೇತನ್ಮಹಾರಾಜ ಯಥಾಯಂ ಕೇಶವೋಽಬ್ರವೀತ್|
12031003c ಕಾರ್ಯಸ್ಯಾಸ್ಯ ತು ಯಚ್ಚೇಷಂ ತತ್ತೇ ವಕ್ಷ್ಯಾಮಿ ಪೃಚ್ಚತಃ||

"ಮಹಾರಾಜ! ಕೇಶವನು ಹೇಳಿದಂತೆಯೇ ನಡೆಯಿತು. ಇದರಲ್ಲಿ ಉಳಿದಿರುವ ವಿಷಯಗಳನ್ನು ನೀನು ಕೇಳಿದೆಯೆಂದು ನಾನು ಹೇಳುತ್ತೇನೆ.

12031004a ಅಹಂ ಚ ಪರ್ವತಶ್ಚೈವ ಸ್ವಸ್ರೀಯೋ ಮೇ ಮಹಾಮುನಿಃ|
12031004c ವಸ್ತುಕಾಮಾವಭಿಗತೌ ಸೃಂಜಯಂ ಜಯತಾಂ ವರಮ್||

ನಾನು ಮತ್ತು ನನ್ನ ಸೋದರಿಯ ಮಗ ಮಹಾಮುನಿ ಪರ್ವತನೂ ವಿಜಯಿಗಳಲ್ಲಿ ಶ್ರೇಷ್ಠ ಸೃಂಜಯನಲ್ಲಿ ಸ್ವಲ್ಪಕಾಲ ಉಳಿಯಲು ಹೋಗಿದ್ದೆವು.

12031005a ತತ್ರ ಸಂಪೂಜಿತೌ ತೇನ ವಿಧಿದೃಷ್ಟೇನ ಕರ್ಮಣಾ|
12031005c ಸರ್ವಕಾಮ್ಯೈಃ ಸುವಿಹಿತೌ ನಿವಸಾವೋಽಸ್ಯ ವೇಶ್ಮನಿ||

ಅಲ್ಲಿ ಅವನಿಂದ ವಿಧಿಪೂರ್ವಕ ಕರ್ಮಗಳಿಂದ ಸಂಪೂಜಿತರಾಗಿ, ಸರ್ವಕಾಮನ ವಸ್ತುಗಳಿಂದ ಸುವಿಹಿತರಾಗಿ ಅವನ ಮನೆಯಲ್ಲಿ ಉಳಿದುಕೊಂಡಿದ್ದೆವು.

12031006a ವ್ಯತಿಕ್ರಾಂತಾಸು ವರ್ಷಾಸು ಸಮಯೇ ಗಮನಸ್ಯ ಚ|
12031006c ಪರ್ವತೋ ಮಾಮುವಾಚೇದಂ ಕಾಲೇ ವಚನಮರ್ಥವತ್||

ಅನೇಕ ವರ್ಷಗಳು ಕಳೆದು ನಾವು ಹೊರಡುವ ಸಮಯ ಬಂದಾಗ ಪರ್ವತನು ನನ್ನೊಡನೆ ಕಾಲಕ್ಕೆ ಉಚಿತವಾದ ಈ ಮಾತನ್ನು ಹೇಳಿದನು:

12031007a ಆವಾಮಸ್ಯ ನರೇಂದ್ರಸ್ಯ ಗೃಹೇ ಪರಮಪೂಜಿತೌ|
12031007c ಉಷಿತೌ ಸಮಯೇ ಬ್ರಹ್ಮಂಶ್ಚಿಂತ್ಯತಾಮತ್ರ ಸಾಂಪ್ರತಮ್||

“ಬ್ರಹ್ಮನ್! ನಾವಿಬ್ಬರೂ ಪರಮಪೂಜಿತರಾಗಿ ಈ ನರೇಂದ್ರನ ಮನೆಯಲ್ಲಿ ವಾಸಮಾಡಿಕೊಂಡಿದ್ದೇವೆ. ಈಗ ಹೊರಡುವ ಸಮಯದಲ್ಲಿ ಅವನಿಗೆ ಉಪಕಾರವನ್ನೆಸಗುವ ಕುರಿತು ಚಿಂತಿಸಬೇಕು.”

12031008a ತತೋಽಹಮಬ್ರುವಂ ರಾಜನ್ಪರ್ವತಂ ಶುಭದರ್ಶನಮ್।
12031008c ಸರ್ವಮೇತತ್ತ್ವಯಿ ವಿಭೋ ಭಾಗಿನೇಯೋಪಪದ್ಯತೇ॥
12031009a ವರೇಣ ಚಂದ್ಯತಾಂ ರಾಜಾ ಲಭತಾಂ ಯದ್ಯದಿಚ್ಚತಿ।
12031009c ಆವಯೋಸ್ತಪಸಾ ಸಿದ್ಧಿಂ ಪ್ರಾಪ್ನೋತು ಯದಿ ಮನ್ಯಸೇ॥

ರಾಜನ್! ಆಗ ನಾನು ಶುಭದರ್ಶನ ಪರ್ವತನಿಗೆ ಇಂತೆಂದೆನು:
“ಅಳಿಯನೇ! ವಿಭೋ! ನೀನೇ ಎಲ್ಲವನ್ನೂ ನಿರ್ಧರಿಸು. ರಾಜನು
ಬಯಸಿದ ವರವನ್ನು ನೀಡಿ ಸಂತುಷ್ಟಿಗೊಳಿಸೋಣ! ನಿನಗೆ
ಒಪ್ಪಿಗೆಯಿದ್ದರೆ ನಮ್ಮ ತಪಸ್ಸಿನ ಸಿದ್ಧಿಯಿಂದ ಅವನಿಗೆ
ಇಷ್ಟವಾದುದನ್ನು ಮಾಡಿಕೊಡೋಣ!”

12031010a ತತ ಆಹೂಯ ರಾಜಾನಂ ಸೃಂಜಯಂ ಶುಭದರ್ಶನಮ್।
12031010c ಪರ್ವತೋಽನುಮತಂ ವಾಕ್ಯಮುವಾಚ ಮುನಿಪುಂಗವಃ॥

ಹೀಗೆ ನನ್ನ ಅನುಮತಿಯನ್ನು ಪಡೆದ ಮುನಿಪುಂಗವ ಪರ್ವತನು
ಶುಭದರ್ಶನ ಸೃಂಜಯನನ್ನು ಕರೆಯಿಸಿ ಈ ಮಾತನ್ನಾಡಿದನು:

12031011a ಪ್ರೀತೌ ಸ್ವೋ ನೃಪ ಸತ್ಕಾರೈಸ್ತವ ಹ್ಯಾರ್ಜವಸಂಭೃತೈಃ।
12031011c ಆವಾಭ್ಯಾಮಭ್ಯನುಜ್ಞಾತೋ ವರಂ ನೃವರ ಚಿಂತಯ॥

“ನೃಪ! ಅತ್ಯಂತ ಸರಳತೆಯಿಂದಲೂ ಪ್ರೀತಿ-ವಿಶ್ವಾಸಗಳಿಂದಲೂ
ನೀನು ಮಾಡಿದ ಸತ್ಕಾರದಿಂದ ನಾವಿಬ್ಬರೂ ಸಂತೋಷಗೊಂಡಿದ್ದೇವೆ.
ನಿನಗೆ ವರವನ್ನು ನೀಡಲು ನಮ್ಮಿಬ್ಬರಲ್ಲೂ ಅನುಮತಿಯಿದೆ. ಯಾವ
ವರಬೇಕೆಂದು ಯೋಚಿಸಿ ಹೇಳು!

12031012a ದೇವಾನಾಮವಿಹಿಂಸಾಯಾಂ ಯದ್ಭವೇನ್ಮಾನುಷಕ್ಷಮಮ್।
12031012c ತದ್ಗೃಹಾಣ ಮಹಾರಾಜ ಪೂಜಾರ್ಹೋ ನೌ ಮತೋ ಭವಾನ್॥

ಮಹಾರಾಜ! ದೇವತೆಗಳಿಗೆ ಹಿಂಸೆಯಾಗದಂಥಹ ಮತ್ತು ಮನುಷ್ಯರು
ನಾಶವಾಗದಂಥಹ ವರವನ್ನು ಪಡೆ! ನೀನು ಪೂಜಾರ್ಹನೆಂದು
ನಮ್ಮಿಬ್ಬರ ಮತ!"

12031013 ಸೃಂಜಯ ಉವಾಚ|
12031013a ಪ್ರೀತೌ ಭವಂತೌ ಯದಿ ಮೇ ಕೃತಮೇತಾವತಾ ಮಮ|
12031013c ಏಷ ಏವ ಪರೋ ಲಾಭೋ ನಿರ್ವೃತ್ತೋ ಮೇ ಮಹಾಫಲಃ||

ಸೃಂಜಯನು ಹೇಳಿದನು: "ನೀವು ಸುಪ್ರೀತರಾಗಿದ್ದೀರಿ
ಎನ್ನುವುದರಿಂದಲೇ ನಾನು ಕೃತಕೃತ್ಯನಾಗಿದ್ದೇನೆ. ಇದೇ ನನಗೆ
ದೊರಕಿರುವ ಪರಮ ಮಹಾ ಫಲವಾಗಿದೆ!""

12031014 ನಾರದ ಉವಾಚ|
12031014a ತಮೇವಂವಾದಿನಂ ಭೂಯಃ ಪರ್ವತಃ ಪ್ರತ್ಯಭಾಷತ|
12031014c ವೃಣೀಷ್ವ ರಾಜನ್ಸಂಕಲ್ಪೋ ಯಸ್ತೇ ಹೃದಿ ಚಿರಂ ಸ್ಥಿತಃ||

ನಾರದನು ಹೇಳಿದನು: "ಇದನ್ನೇ ಮತ್ತೆ ಮತ್ತೆ ಹೇಳುತ್ತಿದ್ದ ಅವನಿಗೆ
ಪರ್ವತನು ಪುನಃ ಹೇಳಿದನು: "ರಾಜನ್! ನಿನ್ನ ಹೃದಯದಲ್ಲಿ
ಬಹುಕಾಲದಿಂದ ಸಂಕಲ್ಪವೇನಿದೆಯೋ ಅದನ್ನೇ ಕೇಳಿಕೋ!"

12031015 ಸೃಂಜಯ ಉವಾಚ
12031015a ಅಭೀಪ್ಸಾಮಿ ಸುತಂ ವೀರಂ ವೀರ್ಯವಂತಂ ದೃಢವ್ರತಮ್|
12031015c ಆಯುಷ್ಮಂತಂ ಮಹಾಭಾಗಂ ದೇವರಾಜಸಮದ್ಯುತಿಮ್||

ಸೃಂಜಯನು ಹೇಳಿದನು: "ವೀರನೂ, ವೀರ್ಯವಂತನೂ,
ದೃಢವ್ರತನೂ, ಆಯುಷ್ಮಂತನೂ, ದೇವರಾಜನ ಸಮದ್ಯುತಿಯೂ ಆದ
ಮಹಾಭಾಗ ಪುತ್ರನನ್ನು ಬಯಸುತ್ತೇನೆ!"

12031016 ಪರ್ವತ ಉವಾಚ

12031016a ಭವಿಷ್ಯತ್ಯೇಷ ತೇ ಕಾಮೋ ನ ತ್ವಾಯುಷ್ಮಾನ್ಭವಿಷ್ಯತಿ|
12031016c ದೇವರಾಜಾಭಿಭೂತ್ಯರ್ಥಂ ಸಂಕಲ್ಪೋ ಹ್ಯೇಷ ತೇ ಹೃದಿ||

ಪರ್ವತನು ಹೇಳಿದನು: "ನಿನ್ನ ಈ ಕಾಮನೆಯು ಈಡೇರುತ್ತದೆ. ಆದರೆ ಅವನು ಆಯುಷ್ಮಾನನಾಗುವುದಿಲ್ಲ. ಏಕೆಂದರೆ ನಿನ್ನ ಹೃದಯದಲ್ಲಿ ದೇವರಾಜನನ್ನು ಪರಾಭವಗೊಳಿಸುವ ಸಂಕಲ್ಪವಿದೆ!

12031017a ಸುವರ್ಣಷ್ಠೀವನಾಚ್ಚೈವ ಸ್ವರ್ಣಷ್ಠೀವೀ ಭವಿಷ್ಯತಿ|
12031017c ರಕ್ಷ್ಯಶ್ಚ ದೇವರಾಜಾತ್ಸ ದೇವರಾಜಸಮದ್ಯುತಿಃ||

ಸುವರ್ಣಷ್ಠೀವನಾಗಿರುವುದರಿಂದ ಅವನು ಸ್ವರ್ಣಷ್ಠೀವಿ ಎಂದೆನಿಸಿಕೊಳ್ಳುತ್ತಾನೆ. ದೇವರಾಜ ಸಮದ್ಯುತಿಯಾದ ಅವನನ್ನು ದೇವರಾಜನಿಂದ ರಕ್ಷಿಸಿಕೊಳ್ಳಬೇಕು!""

12031018 ನಾರದ ಉವಾಚ|
12031018a ತಚ್ಚ್ರುತ್ವಾ ಸೃಂಜಯೋ ವಾಕ್ಯಂ ಪರ್ವತಸ್ಯ ಮಹಾತ್ಮನಃ|
12031018c ಪ್ರಸಾದಯಾಮಾಸ ತದಾ ನೈತದೇವಂ ಭವೇದಿತಿ||

ನಾರದನು ಹೇಳಿದನು: "ಮಹಾತ್ಮ ಪರ್ವತನ ಆ ಮಾತನ್ನು ಕೇಳಿದ ಸೃಂಜಯನು "ಹೀಗಾಗಬಾರದು!" ಎಂದು ಪ್ರಸನ್ನಗೊಳಿಸಲು ಪ್ರಾರ್ಥಿಸಿದನು.

12031019a ಆಯುಷ್ಮಾನ್ಮೇ ಭವೇತ್ಪುತ್ರೋ ಭವತಸ್ತಪಸಾ ಮುನೇ|
12031019c ನ ಚ ತಂ ಪರ್ವತಃ ಕಿಂ ಚಿದುವಾಚೇಂದ್ರವ್ಯಪೇಕ್ಷಯಾ||

"ಮುನೇ! ನಿಮ್ಮ ತಪಸ್ಸಿನಿಂದ ನನ್ನ ಮಗನು

ಆಯುಷ್ಮಂತನಾಗಬೇಕು!" ಆದರೂ ಇಂದ್ರನ ಮೇಲಿನ ಗೌರವದಿಂದ ಪರ್ವತನು ಏನನ್ನೂ ಹೇಳಲಿಲ್ಲ.

12031020a ತಮಹಂ ನೃಪತಿಂ ದೀನಮಬ್ರುವಂ ಪುನರೇವ ತು|
12031020c ಸ್ಮರ್ತವ್ಯೋಽಹಂ ಮಹಾರಾಜ ದರ್ಶಯಿಷ್ಯಾಮಿ ತೇ ಸ್ಮೃತಃ||

ದೀನನಾಗಿದ್ದ ಆ ನೃಪತಿಗೆ ನಾನು ಪುನಃ ಹೇಳಿದೆನು: "ಮಹಾರಾಜ! ನನ್ನನ್ನು ಸ್ಮರಿಸಿಕೋ! ಸ್ಮರಿಸಿದಾಗಲೆಲ್ಲಾ ನಾನು ನಿನಗೆ ಕಾಣಿಸಿಕೊಳ್ಳುತ್ತೇನೆ!

12031021a ಅಹಂ ತೇ ದಯಿತಂ ಪುತ್ರಂ ಪ್ರೇತರಾಜವಶಂ ಗತಮ್|
12031021c ಪುನರ್ದಾಸ್ಯಾಮಿ ತದ್ರೂಪಂ ಮಾ ಶುಚಃ ಪೃಥಿವೀಪತೇ||

ಪೃಥಿವೀಪತೇ! ಪ್ರೇತರಾಜನ ವಶನಾಗುವ ನಿನ್ನ ಪ್ರಿಯಪುತ್ರನನ್ನು ಅದೇ ರೂಪದಲ್ಲಿ ಪುನಃ ನಿನಗೆ ದೊರಕಿಸಿಕೊಡುತ್ತೇನೆ. ಶೋಕಿಸದಿರು!"

12031022a ಏವಮುಕ್ತ್ವಾ ತು ನೃಪತಿಂ ಪ್ರಯಾತೌ ಸ್ವೋ ಯಥೇಪ್ಸಿತಮ್|
12031022c ಸೃಂಜಯಶ್ಚ ಯಥಾಕಾಮಂ ಪ್ರವಿವೇಶ ಸ್ವಮಂದಿರಮ್||

ನೃಪತಿಗೆ ಹೀಗೆ ಹೇಳಿ ನಾವಿಬ್ಬರೂ ಬೇಕಾದಲ್ಲಿಗೆ ಹೊರಟುಹೋದೆವು. ಸೃಂಜಯನೂ ಕೂಡ ಇಚ್ಛಾನುಸಾರವಾಗಿ ತನ್ನ ಅರಮನೆಯನ್ನು ಪ್ರವೇಶಿಸಿದನು.

12031023a ಸೃಂಜಯಸ್ಯಾಥ ರಾಜರ್ಷೇಃ ಕಸ್ಮಿಂಶ್ಚಿತ್ಕಾಲಪರ್ಯಯೇ|
12031023c ಜಜ್ಞೇ ಪುತ್ರೋ ಮಹಾವೀರ್ಯಸ್ತೇಜಸಾ ಪ್ರಜ್ವಲನ್ನಿವ||

ಕೆಲವು ಸಮಯವು ಕಳೆಯಲು ಆ ರಾಜರ್ಷಿ ಸೃಂಜಯನಿಗೆ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವಂಥಹ ಮಹಾವೀರ್ಯ ಪುತ್ರನು

ಜನಿಸಿದನು.

12031024a ವವೃಧೇ ಸ ಯಥಾಕಾಲಂ ಸರಸೀವ ಮಹೋತ್ಪಲಮ್|
12031024c ಬಭೂವ ಕಾಂಚನಷ್ಠೀವೀ ಯಥಾರ್ಥಂ ನಾಮ ತಸ್ಯ ತತ್||

ಸರೋವರದಲ್ಲಿ ನೈದಿಲೆಯು ಹೇಗೋ ಹಾಗೆ ಸಮಯಹೋದಂತೆ
ಅವನು ಬೆಳೆಯತೊಡಗಿದನು. ಅವನ ಹೆಸರಿನ ಯಥಾರ್ಥದಂತೆ
ಅವನು ಸುವರ್ಣವನ್ನೇ ಉಗುಳುತ್ತಿದ್ದನು.

12031025a ತದದ್ಭುತಮಂ ಲೋಕೇ ಪಪ್ರಥೇ ಕುರುಸತ್ತಮ|
12031025c ಬುಬುಧೇ ತಚ್ಚ ದೇವೇಂದ್ರೋ ವರದಾನಂ ಮಹಾತ್ಮನೋಃ||

ಕುರುಸತ್ತಮ! ಆ ಅದ್ಭುತವು ಲೋಕದಲ್ಲಿಯೇ ಪ್ರಚಾರವಾಯಿತು.
ಮಹಾತ್ಮರ ವರದಾನದಿಂದ ಅವನು ಹುಟ್ಟಿರುವನೆಂದು
ದೇವೇಂದ್ರನೂ ತಿಳಿದುಕೊಂಡನು.

12031026a ತತಸ್ತ್ವಭಿಭವಾದ್ಭೀತೋ ಬೃಹಸ್ಪತಿಮತೇ ಸ್ಥಿತಃ|
12031026c ಕುಮಾರಸ್ಯಾಂತರಪ್ರೇಕ್ಷೀ ಬಭೂವ ಬಲವೃತ್ರಹಾ||

ಬೃಹಸ್ಪತಿಯ ಸಲಹೆಯಂತೆ ನಡೆದುಕೊಳ್ಳುತ್ತಿದ್ದ ಆ ಬಲವೃತ್ರಹನು
ಕುಮಾರ ಸ್ವರ್ಣಷ್ಠೀವಿಯ ಭಯದಿಂದ ಅವನನ್ನು ವಧಿಸಲು
ಅವಕಾಶವನ್ನು ಹುಡುಕುತ್ತಿದ್ದನು.

12031027a ಚೋದಯಾಮಾಸ ವಜ್ರಂ ಸ ದಿವ್ಯಾಸ್ತ್ರಂ ಮೂರ್ತಿಸಂಸ್ಥಿತಮ್|
12031027c ವ್ಯಾಘ್ರೋ ಭೂತ್ವಾ ಜಹೀಮಂ ತ್ವಂ ರಾಜಪುತ್ರಮಿತಿ ಪ್ರಭೋ||

ಪ್ರಭು ಇಂದ್ರನು ಮೂರ್ತಿಮತ್ತಾಗಿ ನಿಂತಿದ್ದ ದಿವ್ಯಾಸ್ತ್ರ ವಜ್ರಕ್ಕೆ
“ವ್ಯಾಘ್ರನಾಗಿ ಆ ರಾಜಪುತ್ರನನ್ನು ಸಂಹರಿಸು!” ಎಂದು

ಪ್ರಚೋದಿಸಿದನು.

12031028a ವಿವೃದ್ಧಃ ಕಿಲ ವೀರ್ಯೇಣ ಮಾಮೇಷೋಽಭಿಭವಿಷ್ಯತಿ|
12031028c ಸೃಂಜಯಸ್ಯ ಸುತೋ ವಜ್ರ ಯಥೈನಂ ಪರ್ವತೋ ದದೌ||

“ವಜ್ರ! ವೀರ್ಯದಿಂದ ಪ್ರವೃದ್ಧನಾಗುತ್ತಿರುವ ಸೃಂಜಯನ ಈ ಮಗನು ನನ್ನನ್ನೇ ಪರಾಜಯಗೊಳಿಸುತ್ತಾನೆ. ಹಾಗೆಯೇ ಪರ್ವತನು ವರವನ್ನಿತ್ತಿದ್ದನು!”

12031029a ಏವಮುಕ್ತಸ್ತು ಶಕ್ರೇಣ ವಜ್ರಃ ಪರಪುರಂಜಯಃ|
12031029c ಕುಮಾರಸ್ಯಾಂತರಪ್ರೇಕ್ಷೀ ನಿತ್ಯಮೇವಾನ್ವಪದ್ಯತ||

ಶಕ್ರನು ಹೀಗೆ ಹೇಳಲು ಪರಪುರಂಜಯ ವಜ್ರವು ಕುಮಾರನನ್ನು ಸಂಹರಿಸುವ ಸಲುವಾಗಿ ಸಮಯವನ್ನೇ ಕಾಯುತ್ತಾ ನಿತ್ಯವೂ ಅವನನ್ನು ಅನುಸರಿಸಿಯೇ ಇರುತ್ತಿತ್ತು.

12031030a ಸೃಂಜಯೋಽಪಿ ಸುತಂ ಪ್ರಾಪ್ಯ ದೇವರಾಜಸಮದ್ಯುತಿಮ್|
12031030c ಹೃಷ್ಟಃ ಸಾಂತಃಪುರೋ ರಾಜಾ ವನನಿತ್ಯೋಽಭವತ್ತದಾ||

ಸೃಂಜಯನೂ ಕೂಡ ಕಾಂತಿಯಲ್ಲಿ ದೇವರಾಜನ ಸಮನಾಗಿದ್ದ ಪುತ್ರನನ್ನು ಪಡೆದು ಪರಮ ಹೃಷ್ಟನಾಗಿ ಪತ್ನಿಯೊಡನೆ ಯಾವಾಗಲೂ ವನದಲ್ಲಿಯೇ ಇರುತ್ತಿದ್ದನು.

12031031a ತತೋ ಭಾಗೀರಥೀತೀರೇ ಕದಾ ಚಿದ್ವನನಿರ್ಋರೇ|
12031031c ಧಾತ್ರೀದ್ವಿತೀಯೋ ಬಾಲಃ ಸ ಕ್ರೀಡಾರ್ಥಂ ಪರ್ಯಧಾವತ||

ಹೀಗಿರಲು ಒಮ್ಮೆ ಭಾಗಿರಥೀತೀರದ ನಿರ್ಜನ ಪ್ರದೇಶದಲ್ಲಿ ದಾಯಿಯೊಬ್ಬಳೊಡನಿದ್ದ ಬಾಲಕನು ಅತ್ತಿತ್ತ ಓಡುತ್ತಾ

ಆಟವಾಡುತ್ತಿದ್ದನು.

12031032a ಪಂಚವರ್ಷಕದೇಶೀಯೋ ಬಾಲೋ ನಾಗೇಂದ್ರವಿಕ್ರಮಃ|
12031032c ಸಹಸೋತ್ಪತಿತಂ ವ್ಯಾಘ್ರಮಾಸಸಾದ ಮಹಾಬಲಃ||

ಐದುವರ್ಷದ ಬಾಲಕನಾಗಿದ್ದರೂ ಆನೆಯಂತೆ ವಿಕ್ರಮಿಯಾಗಿದ್ದ ಆ ಮಹಾಬಲಶಾಲಿಯ ಮೇಲೆ ಒಮ್ಮೆಲೇ ಹುಲಿಯೊಂದು ಎರಗಿ ಬಿದ್ದಿತು.

12031033a ತೇನ ಚೈವ ವಿನಿಷ್ಪಿಷ್ಟೋ ವೇಪಮಾನೋ ನೃಪಾತ್ಮಜಃ|
12031033c ವ್ಯಸುಃ ಪಪಾತ ಮೇದಿನ್ಯಾಂ ತತೋ ಧಾತ್ರೀ ವಿಚುಕ್ರುಶೇ||

ತನ್ನನ್ನು ನೋಡಿ ನಡುಗುತ್ತಿದ್ದ ಆ ರಾಜಕುಮಾರನನ್ನು ಹುಲಿಯು ಅಗೆಯಲು ಪ್ರಾಣಶೂನ್ಯನಾದ ಬಾಲಕನು ನೆಲದ ಮೇಲೆ ಬಿದ್ದನು. ದಾಯಿಯು ಗಟ್ಟಿಯಾಗಿ ಚೀರಿಕೊಂಡಳು.

12031034a ಹತ್ವಾ ತು ರಾಜಪುತ್ರಂ ಸ ತತ್ರೈವಾಂತರಧೀಯತ|
12031034c ಶಾರ್ದೂಲೋ ದೇವರಾಜಸ್ಯ ಮಾಯಯಾಂತರ್ಹಿತಸ್ತದಾ||

ದೇವರಾಜನ ಮಾಯೆಯಿಂದ ಬಂದಿದ್ದ ಆ ಹುಲಿಯು ರಾಜಪುತ್ರನನ್ನು ಸಂಹರಿಸಿ ಅಲ್ಲಿಯೇ ಅಂತರ್ಧಾನವಾಯಿತು.

12031035a ಧಾತ್ರ್ಯಾಸ್ತು ನಿನದಂ ಶ್ರುತ್ವಾ ರುದತ್ಯಾಃ ಪರಮಾರ್ತವತ್|
12031035c ಅಭ್ಯಧಾವತ ತಂ ದೇಶಂ ಸ್ವಯಮೇವ ಮಹೀಪತಿಃ||

ಪರಮ ಆರ್ತಳಾಗಿ ರೋದಿಸುತ್ತಿರುವ ದಾಯಿಯ ನಿನಾದವನ್ನು ಕೇಳಿ ಸ್ವಯಂ ಮಹೀಪತಿಯೇ ಆ ಸ್ಥಳಕ್ಕೆ ಧಾವಿಸಿ ಬಂದನು.

12031036a ಸ ದದರ್ಶ ಗತಾಸುಂ ತಂ ಶಯಾನಂ ಪೀತಶೋಣಿತಮ್|
12031036c ಕುಮಾರಂ ವಿಗತಾನಂದಂ ನಿಶಾಕರಮಿವ ಚ್ಯುತಮ್||

ಅಸುನೀಗಿ ಮಲಗಿದ್ದ, ರಕ್ತವನ್ನು ಕಳೆದುಕೊಂಡಿದ್ದ, ಆಕಾಶದಿಂದ ಕೆಳಬಿದ್ದ ಚಂದ್ರನಂತೆ ಆನಂದವನ್ನು ಕಳೆದುಕೊಂಡಿದ್ದ ಮಗನನ್ನು ರಾಜನು ನೋಡಿದನು.

12031037a ಸ ತಮುತ್ಸಂಗಮಾರೋಪ್ಯ ಪರಿಪೀಡಿತವಕ್ಷಸಮ್|
12031037c ಪುತ್ರಂ ರುಧಿರಸಂಸಿಕ್ತಂ ಪರ್ಯದೇವಯದಾತುರಃ||

ಪರಿಪೀಡಿತ ಹೃದಯನಾಗಿ ಅವನು ರಕ್ತದಿಂದ ತೋಯ್ದುಹೋಗಿದ್ದ ಪುತ್ರನನ್ನು ತನ್ನ ತೊಡೆಯಮೇಲಿರಿಸಿಕೊಂಡು ಆತುರನಾಗಿ ಪರಿತಪಿಸಿದನು.

12031038a ತತಸ್ತಾ ಮಾತರಸ್ತಸ್ಯ ರುದಂತ್ಯಃ ಶೋಕಕರ್ಶಿತಾಃ|
12031038c ಅಭ್ಯಧಾವಂತ ತಂ ದೇಶಂ ಯತ್ರ ರಾಜಾ ಸ ಸೃಂಜಯಃ||

ಅವನ ತಾಯಂದಿರೂ ಕೂಡ ಶೋಕಕರ್ಶಿತರಾಗಿ ರೋದಿಸುತ್ತಾ ರಾಜಾ ಸೃಂಜಯನಿದ್ದ ಪ್ರದೇಶಕ್ಕೆ ಓಡಿ ಬಂದರು.

12031039a ತತಃ ಸ ರಾಜಾ ಸಸ್ಮಾರ ಮಾಮಂತರ್ಗತಮಾನಸಃ|
12031039c ತಚ್ಚಾಹಂ ಚಿಂತಿತಂ ಜ್ಞಾತ್ವಾ ಗತವಾಂಸ್ತಸ್ಯ ದರ್ಶನಮ್||

ಆಗ ಆ ರಾಜನು ತನ್ನ ಮನಸ್ಸಿನಲ್ಲಿಯೇ ನನ್ನನ್ನು ಸ್ಮರಿಸಿದನು. ಅವನು ನನ್ನನ್ನೇ ಧ್ಯಾನಿಸುತ್ತಿದ್ದಾನೆಂದು ತಿಳಿದು ನಾನು ಅಲ್ಲಿಗೆ ಹೋಗಿ ದರ್ಶನ ನೀಡಿದೆನು.

12031040a ಸ ಮಯ್ಯೈತಾನಿ ವಾಕ್ಯಾನಿ ಶ್ರಾವಿತಃ ಶೋಕಲಾಲಸಃ|
12031040c ಯಾನಿ ತೇ ಯದುವೀರೇಣ ಕಥಿತಾನಿ ಮಹೀಪತೇ||

ಮಹೀಪತೇ! ಯದುವೀರನು ಈ ಮೊದಲು ನಿನಗೆ ಏನು ಹೇಳಿದ್ದನೋ



ಅದನ್ನು ನಾನು ಶೋಕಲಾಲಸನಾದ ಅವನಿಗೆ ಹೇಳಿದೆನು.

12031041a ಸಂಜೀವಿತಶ್ಚಾಪಿ ಮಯಾ ವಾಸವಾನುಮತೇ ತದಾ|
12031041c ಭವಿತವ್ಯಂ ತಥಾ ತಚ್ಚ ನ ತಚ್ಚಕ್ಯಮತೋಽನ್ಯಥಾ||

ವಾಸವನ ಅನುಮತಿಯನ್ನು ಪಡೆದು ನಾನು ಆ ಮಗುವನ್ನು ಪುನಃ ಬದುಕಿಸಿದೆ ಕೂಡ. ಅದು ಹಾಗೆಯೇ ಆಗಬೇಕಾಗಿದ್ದಿತು. ಇದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಾಗಿರಲಿಲ್ಲ.

12031042a ಅತ ಊರ್ಧ್ವಂ ಕುಮಾರಃ ಸ ಸ್ವರ್ಣಷ್ಠೀವೀ ಮಹಾಯಶಾಃ|
12031042c ಚಿತ್ತಂ ಪ್ರಸಾದಯಾಮಾಸ ಪಿತುರ್ಮಾತುಶ್ಚ ವೀರ್ಯವಾನ್||

ಬಳಿಕ ಮಹಾಯಶೋವಂತನೂ ವೀರ್ಯವಂತನೂ ಆದ ಕುಮಾರ ಸ್ವರ್ಣಷ್ಠೀವಿಯು ತನ್ನ ತಂದೆ-ತಾಯಿಗಳ ಚಿತ್ತವನ್ನು ಪ್ರಸನ್ನಗೊಳಿಸಿದನು.

12031043a ಕಾರಯಾಮಾಸ ರಾಜ್ಯಂ ಸ ಪಿತರಿ ಸ್ವರ್ಗತೇ ವಿಭುಃ|
12031043c ವರ್ಷಾಣಾಮೇಕಶತವತ್ಸಹಸ್ರಂ ಭೀಮವಿಕ್ರಮಃ||

ತನ್ನ ತಂದೆಯು ಸ್ವರ್ಗಗತನಾದ ನಂತರ ಆ ಭೀಮವಿಕ್ರಮಿ ವಿಭುವು ಹನ್ನೊಂದು ಸಾವಿರ ವರ್ಷಗಳ ಪರ್ಯಂತ ರಾಜ್ಯಭಾರವನ್ನು ಮಾಡಿದನು.

12031044a ತತ ಇಷ್ಟ್ವಾ ಮಹಾಯಜ್ಞೈರ್ಬಹುಭಿರ್ಭೂರಿದಕ್ಷಿಣೈಃ|
12031044c ತರ್ಪಯಾಮಾಸ ದೇವಾಂಶ್ಚ ಪಿತೃಂಶ್ಚೈವ ಮಹಾದ್ಯುತಿಃ||

ಆ ಮಹಾದ್ಯುತಿಯು ಆಗ ಅನೇಕ ಭೂರಿದಕ್ಷಿಣೆಗಳಿಂದ ಕೂಡಿದ ಮಹಾಯಜ್ಞಗಳಿಂದ ದೇವತೆಗಳನ್ನೂ ಪಿತೃಗಳನ್ನೂ ತೃಪ್ತಿಪಡಿಸಿದನು.

12031045a ಉತ್ಪಾದ್ಯ ಚ ಬಹೂನ್ಪುತ್ರಾನ್ಕುಲಸಂತಾನಕಾರಿಣಃ|
12031045c ಕಾಲೇನ ಮಹತಾ ರಾಜನ್ಕಾಲಧರ್ಮಮುಪೇಯಿವಾನ್||

ರಾಜನ್! ಕುಲದ ಸಂತಾನವನ್ನು ಮುಂದುವರಿಸಿಕೊಂಡು ಹೋಗುವ ಅನೇಕ ಪುತ್ರರನ್ನು ಹುಟ್ಟಿಸಿ ದೀರ್ಘ ಸಮಯದ ನಂತರ ಅವನು ಕಾಲಧರ್ಮಕ್ಕೊಳಗಾದನು.

12031046a ಸ ತ್ವಂ ರಾಜೇಂದ್ರ ಸಂಜಾತಂ ಶೋಕಮೇತನ್ನಿವರ್ತಯ|
12031046c ಯಥಾ ತ್ವಾಂ ಕೇಶವಃ ಪ್ರಾಹ ವ್ಯಾಸಶ್ಚ ಸುಮಹಾತಪಾಃ||

ರಾಜೇಂದ್ರ! ಕೇಶವ ಮತ್ತು ಮಹಾತಪಸ್ವಿ ವ್ಯಾಸರು ಹೇಳಿದಂತೆ ನೀನೂ ಕೂಡ ನಿನ್ನಲ್ಲಿ ಉಂಟಾಗಿರುವ ಈ ಶೋಕದಿಂದ ಹೊರಟು ಬಾ!

12031047a ಪಿತೃಪೈತಾಮಹಂ ರಾಜ್ಯಮಾಸ್ಥಾಯ ದುರಮುದ್ವಹ|
12031047c ಇಷ್ಟ್ವಾ ಪುಣ್ಯೈರ್ಮಹಾಯಜ್ಞೈರಿಷ್ಟಾಂಲ್ಲೋಕಾನವಾಪ್ಸ್ಯಸಿ||

ಪಿತೃಪಿತಾಮಹರ ಈ ರಾಜ್ಯದಲ್ಲಿ ಅಭಿಷಿಕ್ತನಾಗಿ ರಾಜ್ಯಭಾರನಡೆಸು. ಪುಣ್ಯಕರವಾದ ಮಹಾ ಯಜ್ಞ-ಇಷ್ಟಿಗಳಿಂದ ನಿನಗಿಷ್ಟವಾದ ಲೋಕಗಳನ್ನು ಪಡೆಯುತ್ತೀಯೆ!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಸ್ವರ್ಣಷ್ಠೀವಿಸಂಭವೋಪಾಖ್ಯಾನೇ ಏಕತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಸ್ವರ್ಣಷ್ಠೀವಿಸಂಭವೋಪಾಖ್ಯಾನ ಎನ್ನುವ ಮೂವತ್ತೊಂದನೇ ಅಧ್ಯಾಯವು.

೩೨

ಪ್ರಾಯಶ್ಚಿತ್ತವಿಧಿ

ವ್ಯಾಸನು ಅನೇಕ ಯುಕ್ತಿಗಳಿಂದ ಯುಧಿಷ್ಠಿರನಿಗೆ ತಿಳಿಯ ಹೇಳಿದುದು (1-24).

12032001 ವೈಶಂಪಾಯನ ಉವಾಚ|
12032001a ತೂಷ್ಣೀಂಭೂತಂ ತು ರಾಜಾನಂ ಶೋಚಮಾನಂ ಯುಧಿಷ್ಠಿರಮ್|
12032001c ತಪಸ್ವೀ ಧರ್ಮತತ್ತ್ವಜ್ಞಃ ಕೃಷ್ಣದ್ವೈಪಾಯನೋಽಬ್ರವೀತ್||

ವೈಶಂಪಾಯನನು ಹೇಳಿದನು: "ಶೋಕಿಸುತ್ತಾ ಸುಮ್ಮನೇ ಕುಳಿತಿದ್ದ ರಾಜಾ ಯುಧಿಷ್ಠಿರನಿಗೆ ಧರ್ಮತತ್ತ್ವಜ್ಞ ತಪಸ್ವೀ ಕೃಷ್ಣದ್ವೈಪಾಯನನು ಇಂತೆಂದನು:

12032002a ಪ್ರಜಾನಾಂ ಪಾಲನಂ ಧರ್ಮೋ ರಾಜ್ಞಾಂ ರಾಜೀವಲೋಚನ|
12032002c ಧರ್ಮಃ ಪ್ರಮಾಣಂ ಲೋಕಸ್ಯ ನಿತ್ಯಂ ಧರ್ಮಾನುವರ್ತನಮ್||

"ರಾಜೀವಲೋಚನ! ಪ್ರಜೆಗಳನ್ನು ಪಾಲಿಸುವುದು ರಾಜರ ಧರ್ಮ. ನಿತ್ಯವೂ ಧರ್ಮವನ್ನು ಅನುಸರಿಸುವವನೇ ಲೋಕದಲ್ಲಿ ಧರ್ಮದ ಪ್ರಮಾಣನಾಗಿರುತ್ತಾನೆ.

12032003a ಅನುತಿಷ್ಠಸ್ವ ವೈ ರಾಜನ್ಪಿತೃಪೈತಾಮಹಂ ಪದಮ್|
12032003c ಬ್ರಾಹ್ಮಣೇಷು ಚ ಯೋ ಧರ್ಮಃ ಸ ನಿತ್ಯೋ ವೇದನಿಶ್ಚಿತಃ||

ರಾಜನ್! ಪಿತೃ-ಪಿತಾಮಹರ ದಾರಿಯನ್ನು ಅನುಸರಿಸು. ಬ್ರಾಹ್ಮಣರ ನಿತ್ಯ ಧರ್ಮವೇನೆನ್ನುವುದನ್ನು ವೇದವೇ ನಿಶ್ಚಯಿಸಿದೆ.

12032004a ತತ್ಪ್ರಮಾಣಂ ಪ್ರಮಾಣಾನಾಂ ಶಾಶ್ವತಂ ಭರತರ್ಷಭ|
12032004c ತಸ್ಯ ಧರ್ಮಸ್ಯ ಕೃತ್ಸ್ನಸ್ಯ ಕ್ಷತ್ರಿಯಃ ಪರಿರಕ್ಷಿತಾ||

ಭರತರ್ಷಭ! ಅದರ ಕುರಿತಾದ ಪ್ರಮಾಣಗಳು ಶಾಶ್ವತವಾಗಿ
ವೇದದಲ್ಲಿವೆ. ಬ್ರಾಹ್ಮಣದ ಧರ್ಮವೆಲ್ಲವನ್ನೂ ಕ್ಷತ್ರಿಯನು ರಕ್ಷಿಸುತ್ತಾನೆ.

12032005a ತಥಾ ಯಃ ಪ್ರತಿಹಂತ್ಯಸ್ಯ ಶಾಸನಂ ವಿಷಯೇ ನರಃ|
12032005c ಸ ಬಾಹುಭ್ಯಾಂ ವಿನಿಗ್ರಾಹ್ಯೋ ಲೋಕಯಾತ್ರಾವಿಘಾತಕಃ||

ಯಾವ ಮನುಷ್ಯನು ವಿಷಯಾಸಕ್ತನಾಗಿ ಬ್ರಾಹ್ಮಣರ ಧರ್ಮವನ್ನು
ಉಲ್ಲಂಘಿಸುತ್ತಾನೆಯೋ ಅಂಥಹ ಲೋಕಯಾತ್ರಾವಿಘಾತಕನನ್ನು
ಕ್ಷತ್ರಿಯನು ಎರಡು ಬಾಹುಗಳಿಂದಲೂ ದಮನಮಾಡಬೇಕು.

12032006a ಪ್ರಮಾಣಮಪ್ರಮಾಣಂ ಯಃ ಕುರ್ಯಾನ್ಮೋಹವಶಂ ಗತಃ|
12032006c ಭೃತ್ಯೋ ವಾ ಯದಿ ವಾ ಪುತ್ರಸ್ತಪಸ್ವೀ ವಾಪಿ ಕಶ್ಚನ||
12032006e ಪಾಪಾನ್ಸರ್ವೈರುಪಾಯೈಸ್ತಾನ್ನಿಯಚ್ಚೇದ್ಧಿತಯೇತ ವಾ||

ಮೋಹವಶನಾಗಿ ಯಾರು ಪ್ರಮಾಣವಿರುವ ಧರ್ಮವನ್ನು
ಪ್ರಮಾಣವಿಲ್ಲದ್ದು ಎಂದು ಸಾಧಿಸುತ್ತಾನೆಯೋ ಅವನು ಸೇವಕನೇ
ಆಗಿರಲಿ, ಮಗನೇ ಆಗಿರಲಿ, ತಪಸ್ವಿಯೇ ಆಗಿರಲಿ, ಅಥವಾ ಬೇರೆ
ಯಾರೇ ಆಗಿರಲಿ, ಸರ್ವ ಉಪಾಯಗಳಿಂದ ಆ ಪಾಪಿಯನ್ನು
ದಮನಮಾಡಬೇಕು.

12032007a ಅತೋಽನ್ಯಥಾ ವರ್ತಮಾನೋ ರಾಜಾ ಪ್ರಾಪ್ನೋತಿ ಕಿಲ್ಬಿಷಮ್|
12032007c ಧರ್ಮಂ ವಿನಶ್ಯಮಾನಂ ಹಿ ಯೋ ನ ರಕ್ಷೇತ್ಸ ಧರ್ಮಹಾ||

ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ರಾಜನು ದೋಷವನ್ನು

ಹೊಂದುತ್ತಾನೆ. ನಶಿಸಿಹೋಗುತ್ತಿರುವ ಧರ್ಮವನ್ನು ಯಾವ ರಾಜನು
ರಕ್ಷಿಸುವುದಿಲ್ಲವೋ ಅವನೂ ಕೂಡ ಧರ್ಮಹಂತಕನಾಗುತ್ತಾನೆ.

12032008a ತೇ ತ್ವಯಾ ಧರ್ಮಹಂತಾರೋ ನಿಹತಾಃ ಸಪದಾನುಗಾಃ|
12032008c ಸ್ವಧರ್ಮೇ ವರ್ತಮಾನಸ್ತ್ವಂ ಕಿಂ ನು ಶೋಚಸಿ ಪಾಂಡವ||
12032008e ರಾಜಾ ಹಿ ಹನ್ಯಾದ್ದದ್ಯಾಚ್ಚ ಪ್ರಜಾ ರಕ್ಷೇಚ್ಚ ಧರ್ಮತಃ||

ಪಾಂಡವ! ಸ್ವಧರ್ಮದಲ್ಲಿ ನಡೆದುಕೊಳ್ಳುತ್ತಿದ್ದ ನೀನು
ಧರ್ಮಹಂತಕರನ್ನು ಅವರ ಅನುಯಾಯಿಗಳೊಂದಿಗೆ
ಸಂಹರಿಸಿದ್ದೀಯೆ. ಇದಕ್ಕೆ ಏಕೆ ಶೋಕಿಸುತ್ತಿರುವೆ? ರಾಜನು ತನ್ನ
ಶತ್ರುಗಳನ್ನು ಸಂಹರಿಸಬೇಕು ಮತ್ತು ಪ್ರಜೆಗಳನ್ನು
ಧರ್ಮಪೂರ್ವಕವಾಗಿ ರಕ್ಷಿಸಬೇಕು!"

12032009 ಯುಧಿಷ್ಠಿರ ಉವಾಚ|
12032009a ನ ತೇಽಭಿಶಂಕೇ ವಚನಂ ಯದ್ಭ್ರವೀಷಿ ತಪೋಧನ|
12032009c ಅಪರೋಕ್ಷೋ ಹಿ ತೇ ಧರ್ಮಃ ಸರ್ವಧರ್ಮಭೃತಾಂ ವರ||

ಯುಧಿಷ್ಠಿರನು ಹೇಳಿದನು: "ತಪೋಧನ! ಸರ್ವಧರ್ಮಗಳನ್ನು
ತಿಳಿದಿರುವವರಲ್ಲಿ ಶ್ರೇಷ್ಠ! ನೀನು ಸಮಗ್ರ ಧರ್ಮಗಳನ್ನೂ ಪ್ರತ್ಯಕ್ಷವಾಗಿ
ಕಂಡಿರುವೆ. ನೀವು ಹೇಳುವ ಮಾತಿನಲ್ಲಿ ನನಗೆ ಸ್ವಲ್ಪವೂ ಶಂಕೆಯಿಲ್ಲ.

12032010a ಮಯಾ ಹ್ಯವಧ್ಯಾ ಬಹವೋ ಘಾತಿತಾ ರಾಜ್ಯಕಾರಣಾತ್|
12032010c ತಾನ್ಯಕಾರ್ಯಾಣಿ ಮೇ ಬ್ರಹ್ಮನ್ದಹಂತಿ ಚ ತಪಂತಿ ಚ||

ಬ್ರಹ್ಮನ್! ರಾಜ್ಯದ ಕಾರಣದಿಂದಾಗಿ ನಾನು ಅವಧ್ಯರಾದ ಅನೇಕರನ್ನು
ಸಂಹರಿಸಿದ್ದೇನೆ. ಈ ಅಕಾರ್ಯದಿಂದಲೇ ನಾನು ಸುಡುತ್ತಿದ್ದೇನೆ.
ತಪಿಸುತ್ತಿದ್ದೇನೆ."

12032011 ವ್ಯಾಸ ಉವಾಚ|
12032011a ಈಶ್ವರೋ ವಾ ಭವೇತ್ಕರ್ತಾ ಪುರುಷೋ ವಾಪಿ ಭಾರತ|
12032011c ಹಠೋ ವಾ ವರ್ತತೇ ಲೋಕೇ ಕರ್ಮಜಂ ವಾ ಫಲಂ ಸ್ಮೃತಮ್||

ವ್ಯಾಸನು ಹೇಳಿದನು: "ಭಾರತ! ಆಗಿಹೋದುದಕ್ಕೆ ಈಶ್ವರನೇ ಕರ್ತನಿರಬಹುದು ಅಥವಾ ಪುರುಷನೇ ಕರ್ತನಿರಬಹುದು. ಅದು ಆಕಸ್ಮಿಕವಾಗಿ ಆದುದಾಗಿರಬಹುದು ಅಥವಾ ಮಾಡಿದ ಕರ್ಮಗಳ ಫಲವೇ ಆಗಿರಬಹುದು ಎಂದು ಸ್ಮೃತಿಗಳು ಹೇಳುತ್ತವೆ.

12032012a ಈಶ್ವರೇಣ ನಿಯುಕ್ತಾ ಹಿ ಸಾಧ್ವಸಾಧು ಚ ಪಾರ್ಥಿವ|
12032012c ಕುರ್ವಂತಿ ಪುರುಷಾಃ ಕರ್ಮ ಫಲಮೀಶ್ವರಗಾಮಿ ತತ್||
12032013a ಯಥಾ ಹಿ ಪುರುಷಶ್ಚಿಂದ್ಯಾದ್ವೃಕ್ಷಂ ಪರಶುನಾ ವನೇ|
12032013c ಚೇತ್ತುರೇವ ಭವೇತ್ಪಾಪಂ ಪರಶೋರ್ನ ಕಥಂ ಚನ||

ಪಾರ್ಥಿವ! ಈಶ್ವರನ ನಿಯೋಗದಂತೆಯೇ ಮನುಷ್ಯನು ಒಳ್ಳೆಯ-ಕೆಟ್ಟ ಕರ್ಮಗಳನ್ನು ಮಾಡುತ್ತಾನೆ. ವನದಲ್ಲಿ ಕೊಡಲಿಯಿಂದ ಮರವನ್ನು ಕಡಿಯುವ ಮನುಷ್ಯನಿಗೆ ಪಾಪ ತಗಲುವುದೇ ಹೊರತು ಕೊಡಲಿಗೆ ಎಂದೂ ಪಾಪವು ತಗಲುವುದಿಲ್ಲ. ಅದರಂತೆ ಪುರುಷನು ಮಾಡಿದ ಕರ್ಮಗಳ ಫಲಗಳೆಲ್ಲವೂ ಈಶ್ವರನಿಗೇ ಸಲ್ಲುತ್ತವೆ.

12032014a ಅಥ ವಾ ತದುಪಾದಾನಾತ್ಪ್ರಾಪ್ನುಯುಃ ಕರ್ಮಣಃ ಫಲಮ್|
12032014c ದಂಡಶಸ್ತ್ರಕೃತಂ ಪಾಪಂ ಪುರುಷೇ ತನ್ನ ವಿದ್ಯತೇ||

ಅಥವಾ ಕೊಡಲಿಯನ್ನು ತಯಾರಿಸಿದ ಪುರುಷನೇ ಅದನ್ನು ಹಿಡಿದವನ

ಕರ್ಮಗಳ ಫಲವನ್ನು ಪಡೆಯುತ್ತಾನೆ ಎನ್ನಬಹುದಲ್ಲವೇ?[57]

12032015a ನ ಚೈತದಿಷ್ಟಂ ಕೌಂತೇಯ ಯದನ್ಯೇನ ಫಲಂ ಕೃತಮ್|
12032015c ಪ್ರಾಪ್ನುಯಾದಿತಿ ತಸ್ಮಾಚ್ಚ ಈಶ್ವರೇ ತನ್ನಿವೇಶಯ||

ಕೌಂತೇಯ! ಆದರೆ ಒಬ್ಬನು ಮಾಡಿದ ಕಾರ್ಯಕ್ಕೆ ಮತ್ತೊಬ್ಬನನ್ನು ಹೊಣೆಗಾರನನ್ನಾಗಿಸುವುದು ಸರಿಯಲ್ಲ. ಆದುದರಿಂದ ಕರ್ಮಗಳ ಫಲಗಳನ್ನು ಈಶ್ವರನಲ್ಲಿಯೇ ಇರಿಸು!

12032016a ಅಥ ವಾ ಪುರುಷಃ ಕರ್ತಾ ಕರ್ಮಣೋಃ ಶುಭಪಾಪಯೋಃ|
12032016c ನ ಪರಂ ವಿದ್ಯತೇ ತಸ್ಮಾದೇವಮನ್ಯಚ್ಚುಭಂ ಕುರು||

ಅಥವಾ ಪುರುಷನೇ ಶುಭಾಶುಭ ಕರ್ಮಗಳ ಕರ್ತನೆಂದುಕೊಂಡರೂ ಈಗ ನೀನು ಮಾಡಿದುದು ಅಶುಭಕರ್ಮವೆಂದು ತಿಳಿದುಕೊಳ್ಳಬೇಕಾಗಿಲ್ಲ.

12032017a ನ ಹಿ ಕಶ್ಚಿತ್ಕ್ವ ಚಿದ್ರಾಜನ್ ದಿಷ್ಟ್ಯಾತ್ಪ್ರತಿನಿವರ್ತತೇ|

---

[57] ಕೊಡಲಿಯು ಜಡವಸ್ತು. ಅದಕ್ಕೆ ಕರ್ಮಮಾಡುವ ಸ್ವಾತಂತ್ರ್ಯವೇ ಇಲ್ಲ. ಆದುದರಿಂದ ಅದಕ್ಕೆ ಪಾಪ-ಪುಣ್ಯಗಳ ಲೇಪವೇ ಇಲ್ಲ. ಕೊಡಲಿಯನ್ನು ಹಿಡಿಯುವ ಮನುಷ್ಯನೇ ಕರ್ತೃವಾಗುತ್ತಾನೆ. ಆದುದರಿಂದ ಕೊಡಲಿಯನ್ನು ಹಿಡಿದು ವೃಕ್ಷವನ್ನು ಕತ್ತರಿಸಿವನಿಗೇ ಪಾಪವು ತಗಲುತ್ತದೆ. ಹಾಗಾದರೆ ಕೊಡಲಿಯನ್ನು ಮಾಡಿದವನಿಗಾದರೂ ವೃಕ್ಷವನ್ನು ಕಡಿದ ಪಾಪವು ಬರಬೇಕಾಗಿದ್ದಿತು. ಏಕೆಂದರೆ ವೃಕ್ಷಗಳ ನಾಶಕ್ಕೆ ಕೊಡಲಿಯನ್ನು ತಯಾರಿಸುವವನೇ ಮೂಲ ಕಾರಣನಾಗುತ್ತಾನೆ. ಕೊಡಲಿಯನ್ನ ತಯಾರಿಸಿದುದರಿಂದಲೇ ಮತ್ತೊಬ್ಬನು ವೃಕ್ಷವನ್ನು ಕತ್ತರಿಸಿದುದಲ್ಲವೇ? ಆದುದರಿಂದ ವೃಕ್ಷವನ್ನು ಕತ್ತರಿಸಿದವನಿಗೆ ಪಾಪವಿಲ್ಲ ಎಂದೂ ಹೇಳಬಹುದು.

12032017c ದಂಡಶಸ್ತ್ರಕೃತಂ ಪಾಪಂ ಪುರುಷೇ ತನ್ನ ವಿದ್ಯತೇ॥

ರಾಜನ್! ಎಂದೂ ಯಾರೂ ವಿಧಿನಿಯಮವನ್ನು ಉಲ್ಲಂಘಿಸಿ ಕಾರ್ಯಗಳನ್ನು ಮಾಡುವುದಿಲ್ಲ. ಆದುದರಿಂದ ಕೊಡಲಿಯನ್ನು ತಯಾರಿಸಿದವನಿಗೂ ಕೊಡಲಿಯನ್ನು ಹಿಡಿದು ವೃಕ್ಷವನ್ನು ಕತ್ತರಿಸಿದ ಪುರುಷನಿಗೂ ಪಾಪವಿಲ್ಲವೆಂದು ತಿಳಿಯಬಹುದು.

12032018a ಯದಿ ವಾ ಮನ್ಯಸೇ ರಾಜನ್ದೃಶೇ ಲೋಕಂ ಪ್ರತಿಷ್ಠಿತಮ್|
12032018c ಏವಮಪ್ಯಶುಭಂ ಕರ್ಮ ನ ಭೂತಂ ನ ಭವಿಷ್ಯತಿ॥

ರಾಜನ್! ಒಂದು ವೇಳೆ ಲೋಕವು ಆಕಸ್ಮಿಕವಾಗಿ ಅಥವಾ ಸ್ವಾಭಾವಿಕವಾಗಿಯೇ ನಡೆಯುತ್ತದೆ ಎಂದು ತಿಳಿದುಕೊಂಡರೂ ಹಿಂದಿನ ಕರ್ಮಗಳಲ್ಲಿಯೂ ಮುಂದೆ ಮಾಡುವ ಕರ್ಮಗಳಲ್ಲಿಯೂ ಅಶುಭವೆನ್ನುವುದು ಏನೂ ಇಲ್ಲ[58].

12032019a ಅಥಾಭಿಪತ್ತಿರ್ಲೋಕಸ್ಯ ಕರ್ತವ್ಯಾ ಶುಭಪಾಪಯೋಃ|
12032019c ಅಭಿಪನ್ನತಮಂ ಲೋಕೇ ರಾಜ್ಞಾಮುದ್ಯತದಂಡನಮ್॥

ಈಗ ಲೋಕದಲ್ಲಿ ಶುಭ-ಪಾಪ ಕರ್ಮಗಳ ನಿರ್ಣಯವಿದೆ.

---

[58] ಇದ್ದಕ್ಕಿದ್ದಂತೆಯೇ ಭೂಕಂಪವಾಗುತ್ತದೆ, ಊರುಗಳೇ ನೆಲದಲ್ಲಿ ಹುದುಗಿಹೋಗುತ್ತವೆ. ಸಾವಿರಾರು ಜನರು ಸಾಯುತ್ತಾರೆ. ಇಲ್ಲಿ ಕರ್ತೃ ಯಾರು? ಕಾರಣ ಯಾವುದು? ಫಲಾಫಲಗಳು ಯಾರಿಗೆ? ಎನ್ನುವುದನ್ನು ನಿರ್ಧರಿಸಿ ಹೇಳಲು ಸಾಧ್ಯವೇ ಇಲ್ಲ. ಅಂತೆಯೇ ಭಾರತಯುದ್ಧವು ನಡೆದುದು ಸ್ವಾಭಾವಿಕ. ಇದಕ್ಕೆ ಯಾರೂ ಕಾರಣರಲ್ಲ. ಇದರ ಫಲಾಫಲಗಳೂ ಯಾರಿಗೂ ಸೇರುವುದಿಲ್ಲ!

ಇದಕ್ಕಾಗಿಯೇ ಲೋಕದಲ್ಲಿ ರಾಜನ ದಂಡವು ಸದಾ ಸಿದ್ಧವಾಗಿರುತ್ತದೆ.

12032020a ಅಥಾಪಿ ಲೋಕೇ ಕರ್ಮಾಣಿ ಸಮಾವರ್ತಂತ ಭಾರತ|
12032020c ಶುಭಾಶುಭಫಲಂ ಚೇಮೇ ಪ್ರಾಪ್ನುವಂತೀತಿ ಮೇ ಮತಿಃ||

ಭಾರತ! ಹೀಗಿದ್ದರೂ ಲೋಕದಲ್ಲಿ ಶುಭಾಶುಭಕರ್ಮಗಳು ಚಕ್ರದಂತೆ ಸುತ್ತುತ್ತಲೇ ಇರುತ್ತವೆ. ಆ ಕರ್ಮಗಳಿಗೆ ತಕ್ಕಂತೆ ಕರ್ಮಗಳನ್ನು ಮಾಡಿದವರು ಶುಭಾಶುಭ ಫಲಗಳನ್ನು ಪಡೆಯುತ್ತಾರೆಂದು ನನ್ನ ಅಭಿಪ್ರಾಯ.

12032021a ಏವಂ ಸತ್ಯಂ ಶುಭಾದೇಶಂ ಕರ್ಮಣಸ್ತತ್ಫಲಂ ಧ್ರುವಮ್|
12032021c ತ್ಯಜ ತದ್ರಾಜಶಾರ್ದೂಲ ಮೈವಂ ಶೋಕೇ ಮನಃ ಕೃಥಾಃ||

ರಾಜಶಾರ್ದೂಲ! ಶುಭಕರ್ಮಗಳಿಗೆ ಫಲವು ನಿಶ್ಚಯ. ಇದೇ ಸತ್ಯವಾಗಿರುವಾಗ ನೀನು ಮನಸ್ಸಿನ ಶೋಕವನ್ನು ತ್ಯಜಿಸು.

12032022a ಸ್ವಧರ್ಮೇ ವರ್ತಮಾನಸ್ಯ ಸಾಪವಾದೇಽಪಿ ಭಾರತ|
12032022c ಏವಮಾತ್ಮಪರಿತ್ಯಾಗಸ್ತವ ರಾಜನ್ನ ಶೋಭನಃ||

ಭಾರತ! ರಾಜನ್! ಸ್ವಧರ್ಮದಲ್ಲಿ ನಡೆದುಕೊಳ್ಳುವವನಿಗೂ ಅಪವಾದವೆನ್ನುವುದು ಇದ್ದೇ ಇರುತ್ತದೆ. ಈ ರೀತಿಯ ಆತ್ಮಪರಿತ್ಯಾಗವು ನಿನಗೆ ಶೋಭಿಸುವುದಿಲ್ಲ.

12032023a ವಿಹಿತಾನೀಹ ಕೌಂತೇಯ ಪ್ರಾಯಶ್ಚಿತ್ತಾನಿ ಕರ್ಮಿಣಾಮ್|
12032023c ಶರೀರವಾಂಸ್ತಾನಿ ಕುರ್ಯಾದಶರೀರಃ ಪರಾಭವೇತ್||

ಕೌಂತೇಯ! ಎಲ್ಲ ಕರ್ಮಗಳಿಗೂ ಪ್ರಾಯಶ್ಚಿತ್ತವೆನ್ನುವುದು ಇದ್ದೇ ಇದೆ. ಶರೀರವಿದ್ದವನು ಈ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಬಹುದು.

ಶರೀರವನ್ನು ತ್ಯಜಿಸುವುದು ಪರಾಭವಹೊಂದಿದಂತೆ!

12032024a ತದ್ರಾಜನ್ಜೀವಮಾನಸ್ತ್ವಂ ಪ್ರಾಯಶ್ಚಿತ್ತಂ ಚರಿಷ್ಯಸಿ|
12032024c ಪ್ರಾಯಶ್ಚಿತ್ತಮಕೃತ್ವಾ ತು ಪ್ರೇತ್ಯ ತಪ್ತಾಸಿ ಭಾರತ||

ಭಾರತ! ರಾಜನ್! ನೀನು ಜೀವಿತನಾಗಿದ್ದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬಹುದು. ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳದೇ ಮರಣಹೊಂದಿದರೆ ನೀನು ಲೋಕಾಂತರಗಳಲ್ಲಿಯೂ ಪರಿತಪಿಸಬೇಕಾಗುತ್ತದೆ."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಪ್ರಾಯಶ್ಚಿತ್ತವಿಧೌ ದ್ವಾತ್ರಿಂಶೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಪ್ರಾಯಶ್ಚಿತ್ತವಿಧಿ ಎನ್ನುವ ಮೂವತ್ತೆರಡನೇ ಅಧ್ಯಾಯವು.

೩೩

ಪ್ರಾಯಶ್ಚಿತ್ತೀಯೋಪಾಖ್ಯಾನ

ಸುಹೃದಯರನ್ನು ವಧಿಸಿ ಘೋರ ಪಾಪವನ್ನು ಮಾಡಿರುವುದರಿಂದ ಅದಕ್ಕೆ ಪ್ರಾಯಶ್ಚಿತ್ತವೇನಿದೆಯೆಂದು ಯುಧಿಷ್ಠಿರನು ವ್ಯಾಸನಲ್ಲಿ ಕೇಳಿದುದು (1-12).

12033001 ಯುಧಿಷ್ಠಿರ ಉವಾಚ|
12033001a ಹತಾಃ ಪುತ್ರಾಶ್ಚ ಪೌತ್ರಾಶ್ಚ ಭ್ರಾತರಃ ಪಿತರಸ್ತಥಾ|

12033001c ಶ್ವಶುರಾ ಗುರವಶ್ಚೈವ ಮಾತುಲಾಃ ಸಪಿತಾಮಹಾಃ||
12033002a ಕ್ಷತ್ರಿಯಾಶ್ಚ ಮಹಾತ್ಮಾನಃ ಸಂಬಂಧಿಸುಹೃದಸ್ತಥಾ|
12033002c ವಯಸ್ಯಾ ಜ್ಞಾತಯಶ್ಚೈವ ಭ್ರಾತರಶ್ಚ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಪುತ್ರ-ಪೌತ್ರರು, ಸಹೋದರರು, ತಂದೆಯರು, ಮಾವಂದಿರು, ಗುರುಗಳು, ಸೋದರಮಾವಂದಿರು, ಪಿತಾಮಹರು, ಹಾಗೆಯೇ ಮಹಾತ್ಮ, ಕ್ಷತ್ರಿಯ ಸಂಬಂಧಿಗಳು, ಸಮಾನ ವಯಸ್ಕರು, ಬಾಂಧವರು ಮತ್ತು ಭ್ರಾತರರು ಹತರಾದರು!

12033003a ಬಹವಶ್ಚ ಮನುಷ್ಯೇಂದ್ರಾ ನಾನಾದೇಶಸಮಾಗತಾಃ|
12033003c ಘಾತಿತಾ ರಾಜ್ಯಲುಬ್ಧೇನ ಮಯೈಕೇನ ಪಿತಾಮಹ||

ಪಿತಾಮಹ! ನಾನಾ ದೇಶಗಳಿಂದ ಬಂದು ಸೇರಿದ್ದ ಅನೇಕ ಮನುಷ್ಯೇಂದ್ರರೂ ಕೂಡ ನನ್ನ ಒಬ್ಬನ ರಾಜ್ಯಲೋಭದಿಂದಾಗಿ ಹತರಾದರು!

12033004a ತಾಂಸ್ತಾದೃಶಾನಹಂ ಹತ್ವಾ ಧರ್ಮನಿತ್ಯಾನ್ಮಹೀಕ್ಷಿತಃ|
12033004c ಅಸಕೃತ್ಸೋಮಪಾನ್ವೀರಾನ್ಕಿಂ ಪ್ರಾಪ್ಸ್ಯಾಮಿ ತಪೋಧನ||

ತಪೋಧನ! ಅಂಥಹ ಧರ್ಮನಿತ್ಯ ರಾಜರನ್ನು, ಸೋಮವನ್ನು ಕುಡಿದಿದ್ದ ವೀರರನ್ನು ಸಂಹರಿಸಿದ ನಾನು ಎಂಥಹ ಫಲವನ್ನು ಅನುಭವಿಸಿಯೇನು?

12033005a ದಃಶ್ಯಾಮನಿಶಮದ್ಯಾಹಂ ಚಿಂತಯಾನಃ ಪುನಃ ಪುನಃ|
12033005c ಹೀನಾಂ ಪಾರ್ಥಿವಸಿಂಹೈಸ್ತೈಃ ಶ್ರೀಮದ್ಭಿಃ ಪೃಥಿವೀಮಿಮಾಮ್||

ಶ್ರೀಮಂತರಾಗಿದ್ದ ಪಾರ್ಥಿವಸಿಂಹರಿಂದ ಹೀನಗೊಂಡಿರುವ ಈ ಪೃಥ್ವಿಯ ಕುರಿತು ಪುನಃ ಪುನಃ ಚಿಂತಿಸುತ್ತಾ ಸಂಕಟದಿಂದ ಬೆಂದುಹೋಗಿದ್ದೇನೆ.

12033006a ದೃಷ್ಟ್ವಾ ಜ್ಞಾತಿವಧಂ ಘೋರಂ ಹತಾಂಶ್ಚ ಶತಶಃ ಪರಾನ್|
12033006c ಕೋಟಿಶಶ್ಚ ನರಾನನ್ಯಾನ್ಪರಿತಪ್ಯೇ ಪಿತಾಮಹ||

ಪಿತಾಮಹ! ಘೋರವಾದ ಕುಲವಧೆಯನ್ನೂ, ನೂರಾರು ಶತ್ರುಗಳು ಮತ್ತು ಕೋಟಿ-ಕೋಟಿ ಅನ್ಯರು ಹತರಾದುದನ್ನು ನೋಡಿ ಪರಿತಪಿಸುತ್ತಿದ್ದೇನೆ.

12033007a ಕಾ ನು ತಾಸಾಂ ವರಸ್ತ್ರೀಣಾಮವಸ್ಥಾದ್ಯ ಭವಿಷ್ಯತಿ|
12033007c ವಿಹೀನಾನಾಂ ಸ್ವತನಯೈಃ ಪತಿಭಿರ್ಭ್ರಾತೃಭಿಸ್ತಥಾ||

ತಮ್ಮ ಪುತ್ರರು ಮತ್ತು ಪತಿಯಂದಿರಿಂದ ವಿಹೀನರಾದ ಈ ವರಸ್ತ್ರೀಯರ ಅವಸ್ಥೆಯು ಏನಾಗುವುದು?

12033008a ಅಸ್ಮಾನಂತಕರಾನ್ಘೋರಾನ್ಪಾಂಡವಾನ್ವೃಷ್ಣಿಸಂಹಿತಾನ್|
12033008c ಆಕ್ರೋಶಂತ್ಯಃ ಕೃಶಾ ದೀನಾ ನಿಪತಂತ್ಯಶ್ಚ ಭೂತಲೇ||

ಅವರ ಘೋರ ಅಂತ್ಯಕ್ಕೆ ಕಾರಣರಾದ ನಮ್ಮನ್ನು - ಪಾಂಡವರು ಮತ್ತು ವೃಷ್ಣಿಗಳನ್ನು - ಒಟ್ಟಿಗೇ ಸೇರಿಸಿ ಶಪಿಸುತ್ತಾ ಅವರು ಕೃಶ-ದೀನರಾಗಿ ಭೂಮಿಯ ಮೇಲೆ ಬೀಳುತ್ತಿದ್ದಾರೆ.

12033009a ಅಪಶ್ಯಂತ್ಯಃ ಪಿತೄನ್ ಭ್ರಾತೄನ್ಪತೀನ್ಪುತ್ರಾಂಶ್ಚ ಯೋಷಿತಃ|
12033009c ತ್ಯಕ್ತ್ವಾ ಪ್ರಾಣಾನ್ಪ್ರಿಯಾನ್ಸರ್ವಾ ಗಮಿಷ್ಯಂತಿ ಯಮಕ್ಷಯಮ್||
12033010a ವತ್ಸಲತ್ವಾದ್ದ್ವಿಜಶ್ರೇಷ್ಠ ತತ್ರ ಮೇ ನಾಸ್ತಿ ಸಂಶಯಃ|

12033010c ವ್ಯಕ್ತಂ ಸೌಕ್ಷ್ಮ್ಯಚ್ಚ ಧರ್ಮಸ್ಯ ಪ್ರಾಪ್ಸ್ಯಾಮಃ ಸ್ತ್ರೀವಧಂ ವಯಮ್॥

ದ್ವಿಜಶ್ರೇಷ್ಠ! ತಂದೆಯರು, ಸಹೋದರರು, ಪತಿಗಳು, ಮತ್ತು ಪುತ್ರರನ್ನು ಕಾಣದೇ ಈ ಎಲ್ಲ ಸ್ತ್ರೀಯರೂ ಅವರ ಮೇಲಿನ ವಾತ್ಸಲ್ಯದಿಂದ ತಮ್ಮ ಪ್ರಿಯ ಪ್ರಾಣಗಳನ್ನೇ ತೊರೆದು ಯಮಕ್ಷಯಕ್ಕೆ ಹೋಗುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ! ಧರ್ಮದ ಸೂಕ್ಷ್ಮತೆಯನ್ನು ನೋಡಿದರೆ ಈ ಸ್ತ್ರೀವಧೆಯ ಪಾಪವನ್ನೂ ನಾವು ಪಡೆಯುತ್ತೇವೆ ಎನ್ನುವುದು ವ್ಯಕ್ತವಾಗುತ್ತಿದೆ.

12033011a ತೇ ವಯಂ ಸುಹೃದೋ ಹತ್ವಾ ಕೃತ್ವಾ ಪಾಪಮನಂತಕಮ್|
12033011c ನರಕೇ ನಿಪತಿಷ್ಯಾಮೋ ಹ್ಯಧಃಶಿರಸ ಏವ ಚ॥

ಸುಹೃದಯರ ಈ ವಧೆಯನ್ನು ಮಾಡಿ ನಾವು ಕೊನೆಯಿಲ್ಲದ ಪಾಪವನ್ನು ಮಾಡಿದ್ದೇವೆ. ಇದಕ್ಕಾಗಿ ನಾವು ನರಕದಲ್ಲಿ ತಲೆಕೆಳಗಾಗಿ ಬಿದ್ದಿರುತ್ತೇವೆ!

12033012a ಶರೀರಾಣಿ ವಿಮೋಕ್ಷ್ಯಾಮಸ್ತಪಸೋಗ್ರೇಣ ಸತ್ತಮ|
12033012c ಆಶ್ರಮಾಂಶ್ಚ ವಿಶೇಷಾಂಸ್ತ್ವಂ ಮಮಾಚಕ್ಷ್ವ ಪಿತಾಮಹ॥

ಪಿತಾಮಹ! ಸತ್ತಮ! ಆದುದರಿಂದ ಉಗ್ರ ತಪಸ್ಸಿನಿಂದ ಈ ಶರೀರಗಳನ್ನು ತೊರೆಯುತ್ತೇವೆ. ಈ ಆಶ್ರಮಗಳ ವಿಶೇಷಗುಣಗಳನ್ನು ತಿಳಿಸು!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಪ್ರಾಯಶ್ಚಿತ್ತೀಯೋಪಾಖ್ಯಾನೇ ತ್ರಯೋತ್ರಿಂಶೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ

೩೪

ವ್ಯಾಸನು ಯುಧಿಷ್ಠಿರನಿಗೆ ಕಾಲದ ಪ್ರಬಲತ್ವವನ್ನು ತಿಳಿಸುತ್ತಾ
ದೇವಾಸುರ ಸಂಗ್ರಾಮದ ಉದಾಹರಣೆಯನ್ನಿತ್ತು
ಧರ್ಮದ್ರೋಹಿಗಳನ್ನು ದಮನಗೊಳಿಸುವುದರ ಔಚಿತ್ಯವನ್ನು
ಹೇಳುವುದು ಮತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳುವುದರ
ಅವಶ್ಯಕತೆಯನ್ನು ತಿಳಿಸುವುದು (1-36).

12034001 ವೈಶಂಪಾಯನ ಉವಾಚ|
12034001a ಯುಧಿಷ್ಠಿರಸ್ಯ ತದ್ವಾಕ್ಯಂ ಶ್ರುತ್ವಾ ದ್ವೈಪಾಯನಸ್ತದಾ|
12034001c ಸಮೀಕ್ಷ್ಯ ನಿಪುಣಂ ಬುದ್ಧ್ಯಾ ಋಷಿಃ ಪ್ರೋವಾಚ ಪಾಂಡವಮ್||

ವೈಶಂಪಾಯನನು ಹೇಳಿದನು: "ಯುಧಿಷ್ಠಿರನ ಆ ಮಾತನ್ನು ಕೇಳಿ ಋಷಿ ದ್ವೈಪಾಯನನು ನಿಪುಣ ಬುದ್ಧಿಯಿಂದ ಸಮೀಕ್ಷಿಸಿ ಪಾಂಡವನಿಗೆ ಇಂತೆಂದನು:

12034002a ಮಾ ವಿಷಾದಂ ಕೃಥಾ ರಾಜನ್ಕ್ಷತ್ರಧರ್ಮಮನುಸ್ಮರ|
12034002c ಸ್ವಧರ್ಮೇಣ ಹತಾ ಹ್ಯೇತೇ ಕ್ಷತ್ರಿಯಾಃ ಕ್ಷತ್ರಿಯರ್ಷಭ||

"ರಾಜನ್! ಕ್ಷತ್ರಿಯರ್ಷಭ! ವಿಷಾದಿಸಬೇಡ! ಕ್ಷತ್ರಿಯ ಧರ್ಮವನ್ನು ಸ್ಮರಿಸಿಕೋ! ಈ ಕ್ಷತ್ರಿಯರೆಲ್ಲರೂ ಸ್ವಧರ್ಮಾನುಸಾರವಾಗಿಯೇ ಹತರಾಗಿದ್ದಾರೆ.

12034003a ಕಾಂಕ್ಷಮಾಣಾಃ ಶ್ರಿಯಂ ಕೃತ್ಸ್ನಾಂ ಪೃಥಿವ್ಯಾಂ ಚ ಮಹದ್ಯಶಃ|
12034003c ಕೃತಾಂತವಿಧಿಸಂಯುಕ್ತಾಃ ಕಾಲೇನ ನಿಧನಂ ಗತಾಃ||

ಪೃಥ್ವಿಯ ಸಮಗ್ರ ರಾಜ್ಯಲಕ್ಷ್ಮಿಯನ್ನೂ ಮಹಾ ಯಶಸ್ಸನ್ನೂ
ಆಕಾಂಕ್ಷಿಸುತ್ತಾ ಇವರು ಯಮನು ವಿಧಿಸಿದ ಕಾಲವು
ಸನ್ನಿಹಿತವಾಗುತ್ತಲೇ ನಿಧನ ಹೊಂದಿದರು.

12034004a ನ ತ್ವಂ ಹಂತಾ ನ ಭೀಮೋಽಪಿ ನಾರ್ಜುನೋ ನ ಯಮಾವಪಿ|
12034004c ಕಾಲಃ ಪರ್ಯಾಯಧರ್ಮೇಣ ಪ್ರಾಣಾನಾದತ್ತ ದೇಹಿನಾಮ್||

ನೀನು ಅವರನ್ನು ಸಂಹರಿಸಲಿಲ್ಲ. ಭೀಮನಾಗಲೀ, ಅರ್ಜುನನಾಗಲೀ
ಅಥವಾ ನಕುಲ-ಸಹದೇವರಾಗಲೀ ಅವರನ್ನು ಸಂಹರಿಸಿಲ್ಲ.
ಪರ್ಯಾಯಧರ್ಮದ ಪ್ರಕಾರ ಕಾಲನು ಆ ದೇಹಿಗಳ ಪ್ರಾಣಗಳನ್ನು
ತೆಗೆದುಕೊಂಡಿದ್ದಾನೆ!

12034005a ನ ಯಸ್ಯ ಮಾತಾಪಿತರೌ ನಾನುಗ್ರಾಹ್ಯೋಽಸ್ತಿ ಕಶ್ಚನ|
12034005c ಕರ್ಮಸಾಕ್ಷೀ ಪ್ರಜಾನಾಂ ಯಸ್ತೇನ ಕಾಲೇನ ಸಂಹೃತಾಃ||

ಯಾರಿಗೆ ತಾಯಿ-ತಂದೆಯರಿಲ್ಲವೋ, ಯಾರು ಯಾರಿಗೂ ಎಂದೂ
ಅನುಗ್ರಹಮಾಡುವುದಿಲ್ಲವೋ ಆ ಪ್ರಜೆಗಳ ಕರ್ಮಸಾಕ್ಷೀ ಕಾಲನಿಂದ
ಅವರೆಲ್ಲರೂ ಹತರಾದರು.

12034006a ಹೇತುಮಾತ್ರಮಿದಂ ತಸ್ಯ ಕಾಲಸ್ಯ ಪುರುಷರ್ಷಭ|
12034006c ಯದ್ಧಂತಿ ಭೂತೈರ್ಭೂತಾನಿ ತದಸ್ಯೈ ರೂಪಮೈಶ್ವರಮ್||

ಪುರುಷರ್ಷಭ! ಪ್ರಾಣಿಗಳನ್ನು ಪ್ರಾಣಿಗಳ ಮೂಲಕವೇ ಸಂಹರಿಸುವ
ಈಶ್ವರೀಯ ರೂಪವಿರುವ ಕಾಲನಿಗೆ ಇದೊಂದು ಕೇವಲ
ನಿಮಿತ್ತವಾಗಿತ್ತು.

12034007a ಕರ್ಮಮೂರ್ತ್ಯಾತ್ಮಕಂ[59] ವಿದ್ಧಿ ಸಾಕ್ಷಿಣಂ ಶುಭಪಾಪಯೋಃ|
12034007c ಸುಖಿದುಃಖಿಗುಣೋದರ್ಕಂ ಕಾಲಂ ಕಾಲಫಲಪ್ರದಮ್||

ಶುಭ-ಪಾಪಕರ್ಮಗಳಿಗೆ ಸಾಕ್ಷಿಯಾಗಿರುವ, ಕರ್ಮಗಳ
ಮೂರ್ತಿಮತ್ತಾಗಿರುವ ಆ ಕಾಲನೇ ಕಾಲಾಂತರದಲ್ಲಿ ಪ್ರಾಣಿಗಳಿಗೆ
ಸುಖ-ದುಃಖಿಗಳ ರೂಪದಲ್ಲಿ ಕರ್ಮಫಲಗಳನ್ನು ನೀಡುತ್ತಾನೆ.

12034008a ತೇಷಾಮಪಿ ಮಹಾಬಾಹೋ ಕರ್ಮಾಣಿ ಪರಿಚಿಂತಯ|
12034008c ವಿನಾಶಹೇತುಕಾರಿತ್ವೇ ಯ್ಯೈಸ್ತೇ ಕಾಲವಶಂ ಗತಾಃ||

ಮಹಾಬಾಹೋ! ಅವರ ಕರ್ಮಗಳ ಕುರಿತೂ ಆಲೋಚಿಸು!
ವಿನಾಶಕಾರ್ಯಗಳನ್ನೇ ಮಾಡಿದ ಅವರು ಕಾಲವಶರಾದರು!

12034009a ಆತ್ಮನಶ್ಚ ವಿಜಾನೀಹಿ ನಿಯಮವ್ರತಶೀಲತಾಮ್|
12034009c ಯದಾ ತ್ವಮೀದೃಶಂ ಕರ್ಮ ವಿಧಿನಾಕ್ರಮ್ಯ ಕಾರಿತಃ||

ನಿನ್ನ ನಿಯಮ-ವ್ರತಶೀಲತೆಗಳನ್ನಾದರೂ ಗಮನಿಸು. ವಿಧಿಯು
ನಿನ್ನಂಥವನನ್ನು ಅಧೀನನನ್ನಾಗಿಸಿ ಅವರ ವಿನಾಶದ ಕರ್ಮವನ್ನು
ಮಾಡಿಸಿದೆ!

12034010a ತ್ವಷ್ಟ್ರೈವ ವಿಹಿತಂ ಯಂತ್ರಂ ಯಥಾ ಸ್ಥಾಪಯಿತುರ್ವಶೇ|
12034010c ಕರ್ಮಣಾ ಕಾಲಯುಕ್ತೇನ ತಥೇದಂ ಭ್ರಾಮ್ಯತೇ ಜಗತ್||

ಬಡಗಿಯು ಮಾಡಿದ ಯಂತ್ರವು ಹೇಗೆ ಆಡಿಸುವವನ ವಶದಲ್ಲಿದ್ದು
ಆಡಿಸಿದಂತೆ ಆಡುತ್ತಿರುತ್ತದೆಯೋ ಅದೇ ರೀತಿ ಬ್ರಹ್ಮನಿರ್ಮಿತ ಈ

[59] ಭಾರತದರ್ಶನದಲ್ಲಿ "ಕರ್ಮಸೂತ್ರಾತ್ಮಕಂ" ಎಂಬ ಪಾಠಾಂತರವಿದೆ.

ಜಗತ್ತು ಕಾಲನ ವಶವಾಗಿ ಕಾಲವು ಆಡಿಸಿದಂತೆಯೇ ಆಡುತ್ತಿರುತ್ತದೆ!

12034011a ಪುರುಷಸ್ಯ ಹಿ ದೃಷ್ಟ್ವೇಮಾಮುತ್ಪತ್ತಿಮನಿಮಿತ್ತತಃ|
12034011c ಯದೃಚ್ಚಯಾ ವಿನಾಶಂ ಚ ಶೋಕಹರ್ಷಾವನರ್ಥಕೌ||

ಕಾರಣವೇನೆಂದು ತಿಳಿಯದ ಪುರುಷನ ಹುಟ್ಟು ಮತ್ತು ಸಾವುಗಳು ಕಾಲದ ವಶದಲ್ಲಿವೆ. ಆದುದರಿಂದ ಅವುಗಳಿಗೆ ಶೋಕ-ಹರ್ಷಗಳನ್ನು ತಾಳುವುದಕ್ಕೆ ಅರ್ಥವಿಲ್ಲ.

12034012a ವ್ಯಲೀಕಂ ಚಾಪಿ ಯತ್ತ್ವತ್ರ ಚಿತ್ತವ್ಯೈತಂಸಿಕಂ ತವ|
12034012c ತದರ್ಥಮಿಷ್ಯತೇ ರಾಜನ್ಪ್ರಾಯಶ್ಚಿತ್ತಂ ತದಾಚರ||

ರಾಜನ್! ಆದರೂ ಇವೆಲ್ಲವನ್ನೂ ನೀನೇ ಮಾಡಿರುವೆಯೆಂಬ ಪೀಡೆಯು ನಿನ್ನ ಮನಸ್ಸನ್ನು ಕಲಕಿಸಿ ಪೀಡಿಸುತ್ತಿದೆ. ಅದಕ್ಕಾಗಿ ಪ್ರಾಯಶ್ಚಿತ್ತವಿದೆ. ಅದನ್ನು ಮಾಡಿಕೋ!

12034013a ಇದಂ ಚ ಶ್ರೂಯತೇ ಪಾರ್ಥ ಯುದ್ಧೇ ದೇವಾಸುರೇ ಪುರಾ|
12034013c ಅಸುರಾ ಭ್ರಾತರೋ ಜ್ಯೇಷ್ಠಾ ದೇವಾಶ್ಚಾಪಿ ಯವೀಯಸಃ||

ಪಾರ್ಥ! ಹಿಂದೆ ದೇವಾಸುರರ ನಡುವೆ ನಡೆದ ಯುದ್ಧದ ಕುರಿತು ಕೇಳು. ಸಹೋದರರಾಗಿದ್ದ ದೇವಾಸುರರಲ್ಲಿ ಅಸುರರು ಹಿರಿಯರೂ ದೇವತೆಗಳು ಕಿರಿಯರೂ ಆಗಿದ್ದರು.

12034014a ತೇಷಾಮಪಿ ಶ್ರೀನಿಮಿತ್ತಂ ಮಹಾನಾಸೀತ್ಸಮುಚ್ಚ್ರಯಃ|
12034014c ಯುದ್ಧಂ ವರ್ಷಸಹಸ್ರಾಣಿ ದ್ವಾತ್ರಿಂಶದಭವತ್ಕಿಲ||

ಸಂಪತ್ತಿನ ಕಾರಣದಿಂದಾಗಿ ಅವರ ನಡುವೆ ಕೂಡ ಮಹಾ ಯುದ್ಧವೇ ನಡೆಯಿತು. ಆ ಯುದ್ಧವು ಮೂವತ್ತೆರಡು ಸಾವಿರ ವರ್ಷಗಳ

ಪರ್ಯಂತ ನಡೆಯಿತಂತೆ!

12034015a ಏಕಾರ್ಣವಾಂ ಮಹೀಂ ಕೃತ್ವಾ ರುಧಿರೇಣ ಪರಿಪ್ಲುತಾಮ್|
12034015c ಜಘ್ನುರ್ದೈತ್ಯಾಂಸ್ತದಾ ದೇವಾಸ್ತ್ರಿದಿವಂ ಚೈವ ಲೇಭಿರೇ||

ಭೂಮಿಯನ್ನು ರಕ್ತದಲ್ಲಿಯೇ ಮುಳುಗಿಸಿ ದೈತ್ಯರನ್ನು ಸಂಹರಿಸಿ ದೇವತೆಗಳು ಸ್ವರ್ಗವನ್ನು ಪಡೆದರು.

12034016a ತಥೈವ ಪೃಥಿವೀಂ ಲಬ್ಧ್ವಾ ಬ್ರಾಹ್ಮಣಾ ವೇದಪಾರಗಾಃ|
12034016c ಸಂಶ್ರಿತಾ ದಾನವಾನಾಂ ವೈ ಸಾಹ್ಯಾರ್ಥೇ ದರ್ಪಮೋಹಿತಾಃ||
12034017a ಶಾಲಾವೃಕಾ ಇತಿ ಖ್ಯಾತಾಸ್ತ್ರಿಷು ಲೋಕೇಷು ಭಾರತ|
12034017c ಅಷ್ಟಾಶೀತಿಸಹಸ್ರಾಣಿ ತೇ ಚಾಪಿ ವಿಬುಧೈರ್ಹತಾಃ||

ಭಾರತ! ವೇದಪಾರಂಗತರಾಗಿದ್ದ ಶಾಲಾವೃಕರೆಂದು ಮೂರೂ ಲೋಕಗಳಲ್ಲಿ ಪ್ರಸಿದ್ಧರಾಗಿದ್ದ ಎಂಬತ್ತೆಂಟು ಸಾವಿರ ಬ್ರಾಹ್ಮಣರೂ ದರ್ಪಮೋಹಿತರಾಗಿ ದಾನವರ ಸಹಾಯಾರ್ಥವಾಗಿ ಅವರ ಪಕ್ಷವನ್ನು ಸೇರಿದ್ದರು. ಅವರನ್ನು ಕೂಡ ಸಂಹರಿಸಿ ದೇವತೆಗಳು ಭೂಮಿಯನ್ನು ಪಡೆದರು.

12034018a ಧರ್ಮವ್ಯುಚ್ಚಿತ್ತಿಮಿಚ್ಚಂತೋ ಯೇಽಧರ್ಮಸ್ಯ ಪ್ರವರ್ತಕಾಃ|
12034018c ಹಂತವ್ಯಾಸ್ತೇ ದುರಾತ್ಮಾನೋ ದೇವೈರ್ದೈತ್ಯಾ ಇವೋಲ್ಬಣಾಃ||

ಧರ್ಮಮಾರ್ಗವೇ ಸಂಪೂರ್ಣವಾಗಿ ಕಡಿದುಹೋಗಬೇಕೆಂದು ಬಯಸಿ ಯಾರು ಅಧರ್ಮಪ್ರವರ್ತಕರಾಗುತ್ತಾರೋ ಅಂತಹ ದುರಾತ್ಮರನ್ನು ದೇವತೆಗಳು ಉದ್ಧತರಾದ ದೈತ್ಯರನ್ನು ಹೇಗೋ ಹಾಗೆ ಸಂಹರಿಸುತ್ತಾರೆ.

12034019a ಏಕಂ ಹತ್ವಾ ಯದಿ ಕುಲೇ ಶಿಷ್ಟಾನಾಂ ಸ್ಯಾದನಾಮಯಮ್|
12034019c ಕುಲಂ ಹತ್ವಾಥ ರಾಷ್ಟ್ರಂ ವಾ ನ ತದ್ಧ್ರುತ್ಯೋಪಘಾತಕಮ್||

ಕುಲದಲ್ಲಿ ಒಬ್ಬನನ್ನು ಸಂಹರಿಸುವುದರಿಂದ ಉಳಿದ ಶಿಷ್ಟರಿಗೆ ಕ್ಷೇಮವುಂಟಾಗುತ್ತದೆ ಎಂದಾದರೆ ಅವನನ್ನು ಸಂಹರಿಸುವುದೇ ಯುಕ್ತವಾದುದು. ಹಾಗೆಯೇ ಒಂದು ಕುಲವನ್ನು ಸಂಹರಿಸಿ ರಾಷ್ಟ್ರವನ್ನು ವಿಪತ್ತಿನಿಂದ ಪಾರುಮಾಡಬಹುದಾದರೆ ಅಂತಹ ಕುಲವನ್ನೇ ವಿನಾಶಗೊಳಿಸಬೇಕು.

12034020a ಅಧರ್ಮರೂಪೋ ಧರ್ಮೋ ಹಿ ಕಶ್ಚಿದಸ್ತಿ ನರಾಧಿಪ|
12034020c ಧರ್ಮಶ್ಚಾಧರ್ಮರೂಪೋಽಸ್ತಿ ತಚ್ಚ ಜ್ಞೇಯಂ ವಿಪಶ್ಚಿತಾ||

ನರಾಧಿಪ! ಕೆಲವೊಮ್ಮೆ ಅಧರ್ಮವಾಗಿ ಕಾಣುವ ಕಾರ್ಯವು ಧರ್ಮಕಾರ್ಯವೇ ಆಗಿರುತ್ತದೆ. ಹಾಗೆಯೇ ಧರ್ಮಕಾರ್ಯವಾಗಿ ಕಾಣುವ ಕಾರ್ಯವು ಅಧರ್ಮಕಾರ್ಯವೇ ಆಗಿರಬಹುದು. ಅದನ್ನು ವಿಚಾರಿಸಿ ತಿಳಿದುಕೊಳ್ಳಬೇಕಾಗುತ್ತದೆ.

12034021a ತಸ್ಮಾತ್ಸಂಸ್ತಂಭಯಾತ್ಮಾನಂ ಶ್ರುತವಾನಸಿ ಪಾಂಡವ|
12034021c ದೇವ್ಯೈಃ ಪೂರ್ವಗತಂ ಮಾರ್ಗಮನುಯಾತೋಽಸಿ ಭಾರತ||

ಪಾಂಡವ! ಭಾರತ! ನೀನು ತಿಳಿದವನು. ಆದುದರಿಂದ ನಿನ್ನನ್ನು ನೀನು ಸ್ಥಿರಗೊಳಿಸಿಕೋ! ಹಿಂದೆ ದೇವತೆಗಳು ಹಿಡಿದ ಮಾರ್ಗವನ್ನೇ ನೀನೂ ಕೂಡ ಅನುಸರಿಸಿವೆ!

12034022a ನ ಹೀದೃಶಾ ಗಮಿಷ್ಯಂತಿ ನರಕಂ ಪಾಂಡವರ್ಷಭ|
12034022c ಭ್ರಾತೄನಾಶ್ವಾಸಯೈತಾಂಸ್ತ್ವಂ ಸುಹೃದಶ್ಚ ಪರಂತಪ||

ಪಾಂಡವರ್ಷಭ! ಪರಂತಪ! ಹೀಗಿರುವಾಗ ನೀನು ನರಕಕ್ಕೆ ಹೋಗುವುದಿಲ್ಲ. ನಿನ್ನ ಸಹೋದರರನ್ನೂ ಸುಹೃದಯರನ್ನೂ ಸಂತಯಿಸು!

12034023a ಯೋ ಹಿ ಪಾಪಸಮಾರಂಭೇ ಕಾರ್ಯೇ ತದ್ಭಾವಭಾವಿತಃ|
12034023c ಕುರ್ವನ್ನಪಿ ತಥೈವ ಸ್ಯಾತ್ಕೃತ್ವಾ ಚ ನಿರಪತ್ರಪಃ||
12034024a ತಸ್ಮಿಂಸ್ತತ್ಕಲುಷಂ ಸರ್ವಂ ಸಮಾಪ್ತಮಿತಿ ಶಬ್ದಿತಮ್|
12034024c ಪ್ರಾಯಶ್ಚಿತ್ತಂ ನ ತಸ್ಯಾಸ್ತಿ ಹ್ರಾಸೋ ವಾ ಪಾಪಕರ್ಮಣಃ||

ಯಾರು ಪಾಪಭಾವದಿಂದ ಕಾರ್ಯವನ್ನು ಪ್ರಾರಂಭಿಸಿ ಅದೇ ಪಾಪಭಾವದಿಂದ ಮುಂದುವರೆದು ಕಾರ್ಯವನ್ನು ಪೂರ್ಣಗೊಳಿಸಿದ ನಂತರವೂ ನಾಚಿಕೆಪಟ್ಟುಕೊಳ್ಳುವುದಿಲ್ಲವೋ ಅಂಥವನಲ್ಲಿ ಆ ಮಹಾಪಾಪವು ಸಂಪೂರ್ಣವಾಗಿ ಪ್ರತಿಷ್ಠಿತವಾಗಿರುತ್ತದೆ ಎಂದು ಹೇಳುತ್ತಾರೆ. ಅಂಥವನಿಗೆ ಯಾವ ಪ್ರಾಯಶ್ಚಿತ್ತವೂ ಇರುವುದಿಲ್ಲ. ಆ ಪಾಪಕರ್ಮಿಯ ಪಾಪವು ಸ್ವಲ್ಪವೂ ಕಡಿಮೆಯಾಗುವುದಿಲ್ಲ.

12034025a ತ್ವಂ ತು ಶುಕ್ಲಾಭಿಜಾತೀಯಃ ಪರದೋಷೇಣ ಕಾರಿತಃ|
12034025c ಅನಿಚ್ಚಮಾನಃ ಕರ್ಮೇದಂ ಕೃತ್ವಾ ಚ ಪರಿತಪ್ಯಸೇ||

ನೀನಾದರೋ ಹುಟ್ಟಿನಿಂದಲೇ ಶುದ್ಧಸ್ವಭಾವನಾಗಿರುವೆ! ಇತರರು ಮಾಡಿದ ದೋಷಗಳಿಂದಾಗಿ, ನಿನಗಿಷ್ಟವಿಲ್ಲದಿದ್ದರೂ, ಯುದ್ಧವೆಂಬ ಈ ಕರ್ಮವನ್ನು ನಡೆಸಿ, ಈಗ ಪರಿತಪಿಸುತ್ತಿದ್ದೀಯೆ!

12034026a ಅಶ್ವಮೇಧೋ ಮಹಾಯಜ್ಞಃ ಪ್ರಾಯಶ್ಚಿತ್ತಮುದಾಹೃತಮ್|
12034026c ತಮಾಹರ ಮಹಾರಾಜ ವಿಪಾಪ್ಮೈವಂ ಭವಿಷ್ಯಸಿ||

ಮಹಾರಾಜ! ಇದಕ್ಕೆ ಅಶ್ವಮೇಧ ಮಹಾಯಜ್ಞವು ಪ್ರಾಯಶ್ಚಿತ್ತವೆಂದು

ಹೇಳಲ್ಪಟ್ಟಿದೆ. ಅದನ್ನು ಮಾಡು. ಅದರಿಂದ ಪಾಪವನ್ನು
ಕಳೆದುಕೊಳ್ಳುವೆ!

12034027a ಮರುದ್ಭಿಃ ಸಹ ಜಿತ್ವಾರೀನ್ಮಘವಾನ್ಪಾಕಶಾಸನಃ|
12034027c ಏಕೈಕಂ ಕ್ರತುಮಾಹೃತ್ಯ ಶತಕೃತ್ವಃ ಶತಕ್ರತುಃ||

ಮರುತ್ತುಗಳೊಂದಿಗೆ ಶತ್ರುಗಳನ್ನು ಜಯಿಸುತ್ತಾ ಮಘವಾನ್
ಪಾಕಶಾಸನನು, ಗೆದ್ದಾಗಲೆಲ್ಲಾ ಒಂದೊಂದು ಅಶ್ವಮೇಧವನ್ನು – ಹಾಗೆ
ನೂರು ಯಾಗಗಳನ್ನು ಮಾಡಿ – ಶತ್ರುಕ್ರತುವೆಂದೆನಿಸಿಕೊಂಡನು.

12034028a ಪೂತಪಾಪ್ಮಾ ಜಿತಸ್ವರ್ಗೋ ಲೋಕಾನ್ಪ್ರಾಪ್ಯ ಸುಖೋದಯಾನ್|
12034028c ಮರುದ್ಗಣವೃತಃ ಶಕ್ರಃ ಶುಶುಭೇ ಭಾಸಯನ್ದಿಶಃ||

ಪಾಪರಹಿತನಾಗಿ ಸ್ವರ್ಗವನ್ನು ಜಯಿಸಿ ಸುಖೋದಯ ಲೋಕಗಳನ್ನು
ಪಡೆದು ಮರುದ್ಗಣಗಳಿಂದ ಆವೃತನಾಗಿ ಶಕ್ರನು ದಿಕ್ಕುಗಳನ್ನು
ಬೆಳಗಿಸುತ್ತಾ ಶೋಭಿಸುತ್ತಿದ್ದಾನೆ.

12034029a ಸ್ವರ್ಗಲೋಕೇ ಮಹೀಯಂತಮಪ್ಸರೋಭಿಃ ಶಚೀಪತಿಮ್|
12034029c ಋಷಯಃ ಪರ್ಯುಪಾಸಂತೇ ದೇವಾಶ್ಚ ವಿಬುಧೇಶ್ವರಮ್||

ಸ್ವರ್ಗಲೋಕದಲ್ಲಿ ಮೆರೆಯುತ್ತಿರುವ ಶಚೀಪತಿ ವಿಬುಧೇಶ್ವರನನ್ನು
ಅಪ್ಸರೆಯರೂ, ಋಷಿಗಳೂ ಮತ್ತು ದೇವತೆಗಳೂ
ಉಪಾಸನೆಗೈಯುತ್ತಾರೆ.

12034030a ಸೋಽಯಂ ತ್ವಮಿಹ ಸಂಕ್ರಾಂತೋ ವಿಕ್ರಮೇಣ ವಸುಂಧರಾಮ್|
12034030c ನಿರ್ಜಿತಾಶ್ಚ ಮಹೀಪಾಲಾ ವಿಕ್ರಮೇಣ ತ್ವಯಾನಘ||

ಅನಘ! ನೀನೂ ಕೂಡ ವಿಕ್ರಮದಿಂದ ಮಹೀಪಾಲರನ್ನು ಸೋಲಿಸಿ ಈ

ವಸುಂಧರೆಯನ್ನು ವಶಪಡಿಸಿಕೊಂಡಿರುವೆ!

12034031a ತೇಷಾಂ ಪುರಾಣಿ ರಾಷ್ಟ್ರಾಣಿ ಗತ್ವಾ ರಾಜನ್ಸುಹೃದ್ವ್ರತಃ|
12034031c ಭ್ರಾತೄನ್ಪುತ್ರಾಂಶ್ಚ ಪೌತ್ರಾಂಶ್ಚ ಸ್ವೇ ಸ್ವೇ ರಾಜ್ಯೇऽಭಿಷೇಚಯ||

ರಾಜನ್! ಸುಹೃದಯರೊಂದಿಗೆ ಕೂಡಿಕೊಂಡು ನಿನ್ನಿಂದ ಹತರಾದವರ
ರಾಷ್ಟ್ರ-ಪುರಗಳಿಗೆ ಹೋಗಿ ಅಲ್ಲಿ ಅವರ ಸಹೋದರರನ್ನೋ,
ಪುತ್ರರನ್ನೋ, ಪೌತ್ರರನ್ನೋ, ರಾಜ್ಯಾಭಿಷೇಕ ಮಾಡು.

12034032a ಬಾಲಾನಪಿ ಚ ಗರ್ಭಸ್ಥಾನ್ಸಾಂತ್ವಾನಿ ಸಮುದಾಚರನ್|
12034032c ರಂಜಯನ್ಪ್ರಕೃತೀಃ ಸರ್ವಾಃ ಪರಿಪಾಹಿ ವಸುಂಧರಾಮ್||

ಬಾಲಕರನ್ನಾಗಲೀ ಗರ್ಭದಲ್ಲಿರುವವರನ್ನಾಗಲೀ
ರಾಜನನ್ನಾಗಿಸುವುದಾಗಿ ಸಂತವಿಸಿ ಎಲ್ಲ ಪ್ರಜೆಗಳನ್ನೂ ರಂಜಿಸುತ್ತಾ ಈ
ವಸುಂಧರೆಯನ್ನು ಪಾಲಿಸು!

12034033a ಕುಮಾರೋ ನಾಸ್ತಿ ಯೇಷಾಂ ಚ ಕನ್ಯಾಸ್ತತ್ರಾಭಿಷೇಚಯ|
12034033c ಕಾಮಾಶಯೋ ಹಿ ಸ್ತ್ರೀವರ್ಗಃ ಶೋಕಮೇವಂ ಪ್ರಹಾಸ್ಯತಿ||

ಕುಮಾರರ್ಯಾರೂ ಇಲ್ಲದಿದ್ದ ರಾಜವಂಶದಲ್ಲಿ ಕನ್ಯೆಯರಿದ್ದರೆ
ಅವರಿಗೇ ಪಟ್ಟಾಭಿಷೇಕವನ್ನು ಮಾಡಿಸು. ಹೀಗೆ ಸ್ತ್ರೀವರ್ಗದ
ಕಾಮನೆಗಳನ್ನು ಪೂರೈಸಿ ಅವರ ಶೋಕವನ್ನೂ
ದೂರಮಾಡಿದಂತಾಗುತ್ತದೆ.

12034034a ಏವಮಾಶ್ವಾಸನಂ ಕೃತ್ವಾ ಸರ್ವರಾಷ್ಟ್ರೇಷು ಭಾರತ|
12034034c ಯಜಸ್ವ ವಾಜಿಮೇಧೇನ ಯಥೇಂದ್ರೋ ವಿಜಯೀ ಪುರಾ||

ಭಾರತ! ಹೀಗೆ ಸರ್ವರಾಷ್ಟ್ರಗಳಿಗೂ ಆಶ್ವಾಸನೆಯನ್ನಿತ್ತು ಹಿಂದೆ

ವಿಜಯೀ ಇಂದ್ರನಂತೆ ಅಶ್ವಮೇಧಯಾಗವನ್ನು ಮಾಡು।

12034035a ಅಶೋಚ್ಯಾಸ್ತೇ ಮಹಾತ್ಮಾನಃ ಕ್ಷತ್ರಿಯಾಃ ಕ್ಷತ್ರಿಯರ್ಷಭ|
12034035c ಸ್ವಕರ್ಮಭಿರ್ಗತಾ ನಾಶಂ ಕೃತಾಂತಬಲಮೋಹಿತಾಃ||

ಕ್ಷತ್ರಿಯರ್ಷಭ! ತಮ್ಮದೇ ಕರ್ಮಗಳಿಂದ ಮತ್ತು ಕೃತಾಂತನ ಬಲಕ್ಕೆ ಸಿಲುಕಿ ಮೋಹಿತರಾದ ಮಹಾತ್ಮ ಕ್ಷತ್ರಿಯರ ಕುರಿತು ನೀನು ಶೋಕಿಸಬೇಕಾಗಿಲ್ಲ!

12034036a ಅವಾಪ್ತಃ ಕ್ಷತ್ರಧರ್ಮಸ್ತೇ ರಾಜ್ಯಂ ಪ್ರಾಪ್ತಮಕಲ್ಮಷಮ್|
12034036c ಚರಸ್ವ ಧರ್ಮಂ ಕೌಂತೇಯ ಶ್ರೇಯಾನ್ಯಃ ಪ್ರೇತ್ಯ ಭಾವಿಕಃ||

ಕೌಂತೇಯ! ಕ್ಷತ್ರಧರ್ಮದ ಪ್ರಕಾರವಾಗಿ ದೊರಕಿರುವ ಈ ಅಕಲ್ಮಷ ರಾಜ್ಯವನ್ನು ಪಡೆದು, ಇಹದಲ್ಲಿ ಮತ್ತು ಪರದಲ್ಲಿ ಶ್ರೇಯಸ್ಕರವಾಗಿರುವ ಧರ್ಮದಲ್ಲಿಯೇ ನಡೆದುಕೋ!”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಪ್ರಾಯಶ್ಚಿತ್ತೀಯೋಪಾಖ್ಯಾನೇ ಚತುಸ್ತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಪ್ರಾಯಶ್ಚಿತ್ತೀಯೋಪಾಖ್ಯಾನ ಎನ್ನುವ ಮೂವತ್ನಾಲ್ಕನೇ ಅಧ್ಯಾಯವು.

೩೫

ಯಾವ ಕರ್ಮಗಳನ್ನು ಮಾಡಿದರೆ ಅಥವಾ ಮಾಡದೇ ಇದ್ದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು ಎನ್ನುವುದರ ಕುರಿತಾದ ವಿವೇಚನೆ (1-32).

12035001 ಯುಧಿಷ್ಠಿರ ಉವಾಚ|
12035001a ಕಾನಿ ಕೃತ್ವೇಹ ಕರ್ಮಾಣಿ ಪ್ರಾಯಶ್ಚಿತ್ತೀಯತೇ ನರಃ|
12035001c ಕಿಂ ಕೃತ್ವಾ ಚೈವ ಮುಚ್ಯೇತ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಯಾವಕರ್ಮಗಳನ್ನು ಮಾಡಿ ಮನುಷ್ಯನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು? ಯಾವುದನ್ನು ಮಾಡುವುದರಿಂದ ಅವನಿಗೆ ಪಾಪದ ಬಿಡುಗಡೆಯಾಗುತ್ತದೆ? ಅದನ್ನು ನನಗೆ ಹೇಳು!"

12035002 ವ್ಯಾಸ ಉವಾಚ|
12035002a ಅಕುರ್ವನ್ವಿಹಿತಂ ಕರ್ಮ ಪ್ರತಿಷಿದ್ಧಾನಿ ಚಾಚರನ್|
12035002c ಪ್ರಾಯಶ್ಚಿತ್ತೀಯತೇ ಹ್ಯೇವಂ ನರೋ ಮಿಥ್ಯಾ ಚ ವರ್ತಯನ್||

ವ್ಯಾಸನು ಹೇಳಿದನು: "ವಿಹಿತ ಕರ್ಮಗಳನ್ನು ಮಾಡದಿರುವವನೂ, ಪ್ರತಿಷಿದ್ಧ ಕರ್ಮಗಳನ್ನು ಮಾಡುವವನೂ, ಸುಳ್ಳಾಗಿ ನಡೆದುಕೊಳ್ಳುವವನೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

12035003a ಸೂರ್ಯೇಣಾಭ್ಯುದಿತೋ ಯಶ್ಚ ಬ್ರಹ್ಮಚಾರೀ ಭವತ್ಯುತ|
12035003c ತಥಾ ಸೂರ್ಯಾಭಿನಿರ್ಮುಕ್ತಃ ಕುನಖೀ ಶ್ಯಾವದನ್ನಪಿ||

ಸೂರ್ಯೋದಯ-ಸೂರ್ಯಾಸ್ತಮ ಸಮಯಗಳಲ್ಲಿ ನಿದ್ರೆಮಾಡುವ ಬ್ರಹ್ಮಚಾರಿಯೂ, ಹಾಗೆಯೇ ಉಗುರುಗಳು ಕಪ್ಪಾಗಿರುವವನೂ, ಹಲ್ಲುಗಳು ಕಪ್ಪಾಗಿರುವವನೂ ಪ್ರಾಯಶ್ಚಿತ್ತಕ್ಕೆ ಭಾಗಿಯಾಗುತ್ತಾನೆ.

12035004a ಪರಿವಿತ್ತಿಃ ಪರಿವೇತ್ತಾ ಬ್ರಹ್ಮಘ್ನೋ ಯಶ್ಚ ಕುತ್ಸಕಃ|
12035004c ದಿಧಿಷೂಪತಿಸ್ತಥಾ ಯಃ ಸ್ಯಾದಗ್ರೇದಿಧಿಷುರೇವ ಚ||
12035005a ಅವಕೀರ್ಣೀ ಭವೇದ್ಯಶ್ಚ ದ್ವಿಜಾತಿವಧಕಸ್ತಥಾ|

12035005c ಅತೀರ್ಥೇ ಬ್ರಹ್ಮಣಸ್ತ್ಯಾಗೀ ತೀರ್ಥೇ ಚಾಪ್ರತಿಪಾದಕಃ||
12035006a ಗ್ರಾಮಯಾಜೀ ಚ ಕೌಂತೇಯ ರಾಜ್ಞಶ್ಚ ಪರಿವಿಕ್ರಯೀ|
12035006c ಶೂದ್ರಸ್ತ್ರೀವಧಕೋ ಯಶ್ಚ ಪೂರ್ವಃ ಪೂರ್ವಸ್ತು ಗರ್ಹಿತಃ||

ತಮ್ಮನಿಗೆ ವಿವಾಹವಾದರೂ ವಿವಾಹಿತನಾದಗೇ ಇರುವ ಅಣ್ಣ,
ಅಣ್ಣನಿಗೆ ಮದುವೆಯಾಗುವ ಮೊದಲೇ ವಿವಾಹವಾದ ತಮ್ಮ,
ಬ್ರಹ್ಮಹತ್ಯೆ ಮಾಡಿದವನು, ಇತರರನ್ನು ನಿಂದೆಮಾಡಿದವನು,
ಎರಡನೆಯ ಮದುವೆ ಮಾಡಿಕೊಂಡವಳು,
ಉಪಪತಿಯನ್ನಿಟ್ಟುಕೊಂಡವಳು, ಮತ್ತು ಬ್ರಾಹ್ಮಣನನ್ನು
ಉಪಪತಿಯನ್ನಿಟ್ಟುಕೊಂಡವಳು, ವ್ರತಭಂಗನಾದ ಬ್ರಹ್ಮಚಾರಿ,
ದ್ವಿಜರನ್ನು ಕೊಂದವನು, ಅಪಾತ್ರರಲ್ಲಿ ದಾನಮಾಡಿದವನು,
ಸತ್ಪಾತ್ರರಲ್ಲಿ ದಾನಮಾಡದವನು, ಗ್ರಾಮಗಳನ್ನು ನಾಶಗೊಳಿಸಿದವನು,
ಮಾಂಸವನ್ನು ಮಾರುವವನು, ಅಗ್ನಿಯನ್ನು ತಿರಸ್ಕರಿಸಿದವನು,
ವೇದವನ್ನು ಮಾರುವವನು, ಶೂದ್ರರು ಅಥವಾ ಸ್ತ್ರೀಯರನ್ನು
ವಧಿಸಿದವನು - ಇವರಲ್ಲಿ ಮೊದಲಿನವರು ನಂತರದವರಿಗಿಂಥ ಹೆಚ್ಚು
ಪಾಪಿಷ್ಠರಾಗಿರುತ್ತಾರೆ.

12035007a ವೃಥಾಪಶುಸಮಾಲಂಭೀ ವನದಾಹಸ್ಯ ಕಾರಕಃ|
12035007c ಅನೃತೇನೋಪಚರ್ತಾ ಚ ಪ್ರತಿರೋದ್ಧಾ ಗುರೋಸ್ತಥಾ||
12035008a ಯಶ್ಚಾಗ್ನೀನಪವಿಧ್ಯೇತ ತಥೈವ ಬ್ರಹ್ಮವಿಕ್ರಯೀ|
12035008c ಏತಾನ್ಯೇನಾಂಸಿ ಸರ್ವಾಣಿ ವ್ಯುತ್ಕ್ರಾಂತಸಮಯಶ್ಚ ಯಃ||

ಪಶುಗಳನ್ನು ವಧಿಸಿದವನು, ವನಕ್ಕೆ ಬೆಂಕಿಹಚ್ಚಿಸಿದವನು, ಸುಳ್ಳು
ಹೇಳಿಕೊಂಡು ಜೀವನ ನಡೆಸುವವನು, ಗುರುವನ್ನು
ಅಪಮಾನಗೊಳಿಸಿದವನು, ಮಾಡಿದ ಪ್ರತಿಜ್ಞೆಯನ್ನು

ಉಲ್ಲಂಘಿಸಿದವನು, ಸದಾಚಾರ-ಮರ್ಯಾದೆಗಳನ್ನು
ಉಲ್ಲಂಘಿಸಿದವನು – ಇವರೆಲ್ಲರೂ ಪ್ರಾಯಶ್ಚಿತ್ತ
ಮಾಡಿಕೊಳ್ಳಬೇಕಾಗುತ್ತದೆ.

12035009a ಅಕಾರ್ಯಾಣ್ಯಪಿ ವಕ್ಷ್ಯಾಮಿ ಯಾನಿ ತಾನಿ ನಿಬೋಧ ಮೇ|
12035009c ಲೋಕವೇದವಿರುದ್ಧಾನಿ ತಾನ್ಯೇಕಾಗ್ರಮನಾಃ ಶೃಣು||

ಲೋಕಕ್ಕೂ ವೇದಕ್ಕೂ ವಿರುದ್ಧವಾಗಿರುವ ಮತ್ತು ಮಾಡಬಾರದಿರುವ
ಕಾರ್ಯಗಳ ಕುರಿತು ಹೇಳುತ್ತೇನೆ. ಅವುಗಳನ್ನು ಏಕಾಗ್ರಮನಸ್ಸಿನಿಂದ
ಕೇಳು!

12035010a ಸ್ವಧರ್ಮಸ್ಯ ಪರಿತ್ಯಾಗಃ ಪರಧರ್ಮಸ್ಯ ಚ ಕ್ರಿಯಾ|
12035010c ಅಯಾಜ್ಯಯಾಜನಂ ಚೈವ ತಥಾಭಕ್ಷ್ಯಸ್ಯ ಭಕ್ಷಣಮ್||
12035011a ಶರಣಾಗತಸಂತ್ಯಾಗೋ ಭೃತ್ಯಸ್ಯಾಭರಣಂ ತಥಾ|
12035011c ರಸಾನಾಂ ವಿಕ್ರಯಶ್ಚಾಪಿ ತಿರ್ಯಗ್ಯೋನಿವಧಸ್ತಥಾ||
12035012a ಆಧಾನಾದೀನಿ ಕರ್ಮಾಣಿ ಶಕ್ತಿಮಾನ್ನ ಕರೋತಿ ಯಃ|
12035012c ಅಪ್ರಯಚ್ಚಂಶ್ಚ ಸರ್ವಾಣಿ ನಿತ್ಯಂ ದೇಯಾನಿ ಭಾರತ||
12035013a ದಕ್ಷಿಣಾನಾಮದಾನಂ ಚ ಬ್ರಾಹ್ಮಣಸ್ವಾಭಿಮರ್ಶನಮ್|
12035013c ಸರ್ವಾಣ್ಯೇತಾನ್ಯಕಾರ್ಯಾಣಿ ಪ್ರಾಹುರ್ಧರ್ಮವಿದೋ ಜನಾಃ||

ಸ್ವಧರ್ಮವನ್ನು ಬಿಡುವುದು, ಪರಧರ್ಮವನ್ನು ಆಚರಿಸುವುದು,
ಯಜ್ಞವನ್ನು ಮಾಡಿಸಬಾರದವನಿಂದ ಯಜ್ಞಮಾಡಿಸುವುದು, ತಿನ್ನ
ಬಾರದವುಗಳನ್ನು ತಿನ್ನುವುದು, ಶರಣಾಗತರಾದವನ್ನು
ತೊರೆಯುವುದು, ಸೇವಕರ ಭರಣ-ಪೋಷಣೆ ಮಾಡದಿರುವುದು,
ಉಪ್ಪು-ಬೆಲ್ಲ ಮುಂತಾದವುಗಳನ್ನು ಮಾರುವುದು, ಪಶು-ಪಕ್ಷಿಗಳನ್ನು

ಕೊಲ್ಲುವುದು, ಶಕ್ತಿಯಿದ್ದರೂ ಆಧಾನವೇ ಮೊದಲಾದ ಕರ್ಮಗಳನ್ನು ಮಾಡದೇ ಇರುವುದು, ನಿತ್ಯಕರ್ಮಗಳಾದ ಗೋಗ್ರಾಸ ನೀಡುವುದು ಮುಂತಾದವುಗಳನ್ನು ಮಾಡದೇ ಇರುವುದು, ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಡದೇ ಇರುವುದು, ಬ್ರಾಹ್ಮಣರ ಸ್ವತ್ತನ್ನು ಅಪಹರಿಸುವುದು – ಇವುಗಳು ಮಾಡಬಾರದ ಕರ್ಮಗಳು ಎಂದು ಧರ್ಮವನ್ನು ತಿಳಿದುಕೊಂಡಿರುವವರು ಹೇಳುತ್ತಾರೆ.

12035014a ಪಿತ್ರಾ ವಿಭಜತೇ ಪುತ್ರೋ ಯಶ್ಚ ಸ್ಯಾದ್ಗುರುತಲ್ಪಗಃ|
12035014c ಅಪ್ರಜಾಯನ್ನಧರ್ಮೇಣ ಭವತ್ಯಾಧರ್ಮಿಕೋ ಜನಃ||

ತಂದೆಯಿಂದ ಜಗಳವಾಡಿ ಬೇರೆಯಾಗುವ ಮಗ, ಗುರುಪತ್ನಿಯೊಡನೆ ಮಲಗಿದ ಶಿಷ್ಯ, ಮತ್ತು ಅಧರ್ಮದಿಂದ ಮಕ್ಕಳನ್ನು ಪಡೆಯದೇ ಇರುವವನು - ಇವರು ಅಧಾರ್ಮಿಕ ಜನರು.

12035015a ಉಕ್ತಾನ್ಯೇತಾನಿ ಕರ್ಮಾಣಿ ವಿಸ್ತರೇಣೇತರೇಣ ಚ|
12035015c ಯಾನಿ ಕುರ್ವನ್ನಕುರ್ವಂಶ್ಚ ಪ್ರಾಯಶ್ಚಿತ್ತೀಯತೇ ಜನಃ||

ಯಾವುದನ್ನು ಮಾಡುವುದರಿಂದ ಮತ್ತು ಮಾಡದೇ ಇರುವುದರಿಂದ ಜನರು ಪ್ರಾಯಶ್ಚಿತ್ತಕ್ಕೆ ಭಾಗಿಯಾಗುತ್ತಾರೆ ಎನ್ನುವುದನ್ನು ವಿಸ್ತಾರವಾಗಿ ಹೇಳಿದ್ದಾಯಿತು.

12035016a ಏತಾನ್ಯೇವ ತು ಕರ್ಮಾಣಿ ಕ್ರಿಯಮಾಣಾನಿ ಮಾನವಾನ್|
12035016c ಯೇಷು ಯೇಷು ನಿಮಿತ್ತೇಷು ನ ಲಿಂಪಂತ್ಯಥ ತಚ್ಛೃಣು||

ಈಗ ಮಾನವನು ಯಾವುದೇ ಕರ್ಮಗಳನ್ನು ಮಾಡಿದರೂ ಯಾವ ಕಾರಣಗಳಿಂದ ಅವನಿಗೆ ಪಾಪಗಳು ಅಂಟಿಕೊಳ್ಳುವುದಿಲ್ಲ ಎನ್ನುವುದನ್ನು ಕೇಳು.

12035017a ಪ್ರಗೃಹ್ಯ ಶಸ್ತ್ರಮಾಯಾಂತಮಪಿ ವೇದಾಂತಗಂ ರಣೇ|
12035017c ಜಿಘಾಂಸಂತಂ ನಿಹತ್ಯಾಜೌ ನ ತೇನ ಬ್ರಹ್ಮಹಾ ಭವೇತ್||

ವೇದಾಂತಿ ಬ್ರಾಹ್ಮಣನು ರಣದಲ್ಲಿ ಶಸ್ತ್ರವನ್ನು ಹಿಡಿದು ಕೊಲ್ಲಲು ಬಂದಾಗ ಅವನನ್ನು ಸಂಹರಿಸಿದರೆ ಬ್ರಹ್ಮಹತ್ಯಾ ದೋಷವು ತಗಲುವುದಿಲ್ಲ.

12035018a ಅಪಿ ಚಾಪ್ಯತ್ರ ಕೌಂತೇಯ ಮಂತ್ರೋ ವೇದೇಷು ಪಠ್ಯತೇ|
12035018c ವೇದಪ್ರಮಾಣವಿಹಿತಂ ತಂ ಧರ್ಮಂ ಪ್ರಬ್ರವೀಮಿ ತೇ||

ಕೌಂತೇಯ! ಇದರ ಕುರಿತಾಗಿ ವೇದದಲ್ಲಿ ಮಂತ್ರವೊಂದು ಹೇಳಲ್ಪಟ್ಟಿದೆ. ವೇದಪ್ರಮಾಣವಿಹಿತವಾದ ಆ ಧರ್ಮವನ್ನೇ ನಾನು ನಿನಗೆ ಹೇಳುತ್ತಿದ್ದೇನೆ.

12035019a ಅಪೇತಂ ಬ್ರಾಹ್ಮಣಂ ವೃತ್ತಾದ್ಯೋ ಹನ್ಯಾದಾತತಾಯಿನಮ್|
12035019c ನ ತೇನ ಬ್ರಹ್ಮಹಾ ಸ ಸ್ಯಾನ್ಮನ್ಯುಸ್ತಂ ಮನ್ಯುಮೃಚ್ಛತಿ||

ಬ್ರಾಹ್ಮಣೋಚಿತ ಕರ್ಮಗಳಿಂದ ಭ್ರಷ್ಟನಾಗಿರುವ ಆತತಾಯಿಯನ್ನು ಕೊಲ್ಲುವುದರಿಂದ ಬ್ರಹ್ಮಹಂತಕನಾಗುವುದಿಲ್ಲ. ಕ್ರೋಧವೇ ಕ್ರೋಧವನ್ನು ಎದುರಿಸುತ್ತದೆ.

12035020a ಪ್ರಾಣಾತ್ಯಯೇ ತಥಾಜ್ಞಾನಾದಾಚರನ್ಮದಿರಾಮಪಿ|
12035020c ಅಚೋದಿತೋ ಧರ್ಮಪರಃ ಪುನಃ ಸಂಸ್ಕಾರಮರ್ಹತಿ||

ಪ್ರಾಣಹೋಗುವ ಸಮಯದಲ್ಲಿ ಮತ್ತು ಹಾಗೆಯೇ ಅಜ್ಞಾನದಿಂದ ಮದ್ಯವನ್ನು ಸೇವಿಸಿದರೂ ಧರ್ಮಪರರ ಪ್ರಕಾರ ಅವರಿಗೆ ಪುನಃ ಸಂಸ್ಕಾರವಾಗಲೇಬೇಕು.

12035021a ಏತತ್ತೇ ಸರ್ವಮಾಖ್ಯಾತಂ ಕೌಂತೇಯಾಭಕ್ಷ್ಯಭಕ್ಷಣಮ್|
12035021c ಪ್ರಾಯಶ್ಚಿತ್ತವಿಧಾನೇನ ಸರ್ವಮೇತೇನ ಶುಧ್ಯತಿ||

ಕೌಂತೇಯ! ತಿನ್ನಬಹುದಾದುದರ ಮತ್ತು ತಿನ್ನಬಾರದ ವಿಷಯಗಳ ಕುರಿತು ಎಲ್ಲವನ್ನೂ ಹೇಳಿದ್ದಾಯಿತು. ಪ್ರಾಯಶ್ಚಿತ್ತ ವಿಧಾನದಿಂದ ಈ ಎಲ್ಲ ಪಾಪಗಳಿಂದಲೂ ಶುದ್ಧಿಯಾಗುತ್ತದೆ.

12035022a ಗುರುತಲ್ಪಂ ಹಿ ಗುರ್ವರ್ಥೇ ನ ದೂಷಯತಿ ಮಾನವಮ್|
12035022c ಉದ್ದಾಲಕಃ ಶ್ವೇತಕೇತುಂ ಜನಯಾಮಾಸ ಶಿಷ್ಯತಃ||

ಗುರುವಿನ ಕಾರ್ಯಸಿದ್ಧಿಗಾಗಿ ಗುರುಪತ್ನಿಯೊಡನೆ ಸಂಭೋಗಿಸಿದರೆ ಮನುಷ್ಯನು ದೂಷಿತನಾಗುವುದಿಲ್ಲ. ಉದ್ದಾಲಕನು ಶ್ವೇತಕೇತುವನ್ನು ಶಿಷ್ಯನಿಂದಲೇ ಪಡೆದುಕೊಂಡನು.

12035023a ಸ್ತೇಯಂ ಕುರ್ವಂಸ್ತು ಗುರ್ವರ್ಥಮಾಪತ್ಸು ನ ನಿಬಧ್ಯತೇ|
12035023c ಬಹುಶಃ ಕಾಮಕಾರೇಣ ನ ಚೇದ್ಯಃ ಸಂಪ್ರವರ್ತತೇ||
12035024a ಅನ್ಯತ್ರ ಬ್ರಾಹ್ಮಣಸ್ವೇಭ್ಯ ಆದದಾನೋ ನ ದುಷ್ಯತಿ|
12035024c ಸ್ವಯಮಪ್ರಾಶಿತಾ ಯಶ್ಚ ನ ಸ ಪಾಪೇನ ಲಿಪ್ಯತೇ||

ಗುರುವಿಗಾಗಿ ಮತ್ತು ಆಪತ್ತು ಬಂದಾಗ ಕಳ್ಳತನ ಮಾಡುವುದು ನಿಷೇಧವಲ್ಲ. ಮನಸ್ಸಿನಲ್ಲಿ ಯಾವುದೇ ಕಾಮನೆಗಳನ್ನು ಇಟ್ಟುಕೊಳ್ಳದೇ, ಪುನಃ ಪುನಃ ಕಳ್ಳತನ ಮಾಡದೇ, ಬ್ರಾಹ್ಮಣರದಲ್ಲದವುಗಳನ್ನು ಕಳ್ಳತನ ಮಾಡುವುದರಿಂದ ಮತ್ತು ಕಳ್ಳತನ ಮಾಡಿದುದನ್ನು ಇತರರಿಗೆ ನೀಡುವುದರಿಂದ ದೋಷವೆನಿಸುವುದಿಲ್ಲ. ಕದಿದ ವಸ್ತುವನ್ನು ಸ್ವಂತಕ್ಕೆ ಉಪಯೋಗಿಸಿಕೊಳ್ಳದೇ ಇರುವವನೂ ಪಾಪಲಿಪ್ತನಾಗುವುದಿಲ್ಲ.

12035025a ಪ್ರಾಣತ್ರಾಣೇಽನೃತಂ ವಾಚ್ಯಮಾತ್ಮನೋ ವಾ ಪರಸ್ಯ ವಾ|

12035025c ಗುರ್ವರ್ಥೇ ಸ್ತ್ರೀಷು ಚೈವ ಸ್ಯಾದ್ವಿವಾಹಕರಣೇಷು ಚ॥

ತನ್ನ ಅಥವಾ ಇತರರ ಪ್ರಾಣಾಪತ್ತಿನ ಕಾಲದಲ್ಲಿ, ಗುರುವಿಗಾಗಿ, ಸ್ತ್ರೀಯರಲ್ಲಿ ಮತ್ತು ವಿವಾಹಮಾಡಿಸುವಲ್ಲಿ ಸುಳ್ಳುಹೇಳುವವನು ದೋಷಿಯಾಗುವುದಿಲ್ಲ.

12035026a ನಾವರ್ತತೇ ವ್ರತಂ ಸ್ವಪ್ನೇ ಶುಕ್ರಮೋಕ್ಷೇ ಕಥಂ ಚನ|
12035026c ಆಜ್ಯಹೋಮಃ ಸಮಿದ್ಧೋಽಗ್ನೌ ಪ್ರಾಯಶ್ಚಿತ್ತಂ ವಿಧೀಯತೇ॥

ಸ್ವಪ್ನದಲ್ಲಿ ವೀರ್ಯಸ್ಖಲನವಾದರೆ ಬ್ರಹ್ಮಚಾರಿಯ ವ್ರತದಲ್ಲಿ ಭಂಗವಾಯಿತೆನಿಸುವುದಿಲ್ಲ. ಅದಕ್ಕೆ ಅಗ್ನಿಯಲ್ಲಿ ಸಮಿತ್ತು ಮತ್ತು ತುಪ್ಪದ ಹೋಮವನ್ನೇ ಪ್ರಾಯಶ್ಚಿತ್ತವೆಂದು ಹೇಳುತ್ತಾರೆ.

12035027a ಪಾರಿವಿತ್ಯಂ ಚ ಪತಿತೇ ನಾಸ್ತಿ ಪ್ರವ್ರಜಿತೇ ತಥಾ|
12035027c ಭಿಕ್ಷಿತೇ ಪಾರದಾರ್ಯಂ ಚ ನ ತದ್ಧರ್ಮಸ್ಯ ದೂಷಕಮ್॥

ಅಣ್ಣನು ಪತಿತನಾಗಿದ್ದರೆ ಅಥವಾ ಪರಿವ್ರಾಜಕನಾಗಿದ್ದರೆ ತಮ್ಮನು ಮೊದಲು ವಿವಾಹಮಾಡಿಕೊಂಡರೂ ದೂಷಿತನಾಗುವುದಿಲ್ಲ. ಹಾಗೆಯೇ ಇನ್ನೊಬ್ಬನ ಸ್ತ್ರೀಯು ಸಂತಾನಕ್ಕಾಗಿ ಭಿಕ್ಷೆ ಬೇಡಿದಾಗ ಅವಳೊಡನೆ ಸಂಗಮಾಡಿದರೆ ಅದು ಧರ್ಮದ ದೂಷಕವೆನಿಸಿಕೊಳ್ಳುವುದಿಲ್ಲ.

12035028a ವೃಥಾಪಶುಸಮಾಲಂಭಂ ನೈವ ಕುರ್ಯಾನ್ನ ಕಾರಯೇತ್|
12035028c ಅನುಗ್ರಹಃ ಪಶೂನಾಂ ಹಿ ಸಂಸ್ಕಾರೋ ವಿಧಿಚೋದಿತಃ॥

ಸುಮ್ಮ ಸುಮ್ಮನೇ ವ್ಯರ್ಥವಾಗಿ ಪಶುವಧೆಯನ್ನು ಮಾಡಬಾರದು. ವಿಧಿವತ್ತಾಗಿ ಸಂಸ್ಕಾರಸಹಿತವಾಗಿ ಪಶುವಧೆಯನ್ನು ಮಾಡಿದರೆ ಅದು

ಪಶುಗಳಿಗೆ ಅನುಗ್ರಹವನ್ನು ಮಾಡಿದ ಹಾಗೆಯೇ ಆಗುತ್ತದೆ.

12035029a ಅನರ್ಹೇ ಬ್ರಾಹ್ಮಣೇ ದತ್ತಮಜ್ಞಾನಾತ್ತನ್ನ ದೂಷಕಮ್|
12035029c ಸಕಾರಣಂ ತಥಾ ತೀರ್ಥೇ ಽತೀರ್ಥೇ ವಾ ಪ್ರತಿಪಾದನಮ್||

ಅಜ್ಞಾನದಿಂದ ಅನರ್ಹ ಬ್ರಾಹ್ಮಣನಿಗೆ ದಾನಮಾದಡಿದರೆ ಅದರಲ್ಲಿ ದೋಷವಿಲ್ಲ. ಅಪಾತ್ರನೆಂದು ತಿಳಿದೂ ದಾನಮಾಡಬಾರದು. ಅಥವಾ ಸತ್ಪಾತ್ರನೆಂದು ತಿಳಿದೂ ದಾನಕೊಡದೇ ಇರಬಾರದು.

12035030a ಸ್ತ್ರಿಯಸ್ತಥಾಪಚಾರಿಣ್ಯೋ ನಿಷ್ಕೃತಿಃ ಸ್ಯಾದದೂಷಿಕಾ|
12035030c ಅಪಿ ಸಾ ಪೂಯತೇ ತೇನ ನ ತು ಭರ್ತಾ ಪ್ರದುಷ್ಯತೇ||

ವ್ಯಭಿಚಾರಿಣಿಯಾದ ಪತ್ನಿಯನ್ನು ತಿರಸ್ಕರಿಸುವುದು ಪಾಪವಲ್ಲ. ಅದರಿಂದ ಅವಳೂ ಪವಿತ್ರಳಾಗುವಳು ಮತ್ತು ಪತಿಯೂ ದೋಷವಿಲ್ಲದವನಾಗುವನು.

12035031a ತತ್ತ್ವಂ ಜ್ಞಾತ್ವಾ ತು ಸೋಮಸ್ಯ ವಿಕ್ರಯಃ ಸ್ಯಾದದೂಷಕಃ|
12035031c ಅಸಮರ್ಥಸ್ಯ ಭೃತ್ಯಸ್ಯ ವಿಸರ್ಗಃ ಸ್ಯಾದದೋಷವಾನ್||
12035031e ವನದಾಹೋ ಗವಾಮರ್ಥೇ ಕ್ರಿಯಮಾಣೋ ನ ದೂಷಕಃ||

ಸೋಮದ ತತ್ತ್ವವನ್ನು ತಿಳಿದು ಅದನ್ನು ಮಾರಿದರೆ ಅದರಲ್ಲಿ ದೋಷವಿಲ್ಲ. ಅಸಮರ್ಥನಾದ ಸೇವಕನನ್ನು ವಿಸರ್ಜಿಸುವುದರಲ್ಲಿ ದೋಷವಿಲ್ಲ. ಗೋವುಗಳ ಸಲುವಾಗಿ ಹುಲ್ಲು ಬರಲೆಂದು ಕಾಡನ್ನು ಸುಟ್ಟರೂ ಅದು ದೋಷವೆನಿಸುವುದಿಲ್ಲ.

12035032a ಉಕ್ತಾನ್ಯೇತಾನಿ ಕರ್ಮಾಣಿ ಯಾನಿ ಕುರ್ವನ್ನ ದುಷ್ಯತಿ|
12035032c ಪ್ರಾಯಶ್ಚಿತ್ತಾನಿ ವಕ್ಷ್ಯಾಮಿ ವಿಸ್ತರೇಣೈವ ಭಾರತ||

ಭಾರತ! ಯಾವ ಕರ್ಮಗಳನ್ನು ಮಾಡಿದರೆ ದೋಷವೆಲ್ಲವೆಂದು ಹೇಳಿದ್ದಾಯಿತು. ಈಗ ಪ್ರಾಯಶ್ಚಿತ್ತಗಳ ಕುರಿತು ವಿಸ್ತಾರವಾಗಿ ಹೇಳುತ್ತೇನೆ."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಪ್ರಾಯಶ್ಚಿತ್ತೀಯೇ ಪಂಚಸ್ತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಪ್ರಾಯಶ್ಚಿತ್ತೀಯ ಎನ್ನುವ ಮೂವತ್ತೈದನೇ ಅಧ್ಯಾಯವು.

೩೬

ಪಾಪಕರ್ಮಗಳ ಪ್ರಾಯಶ್ಚಿತ್ತಗಳ ವರ್ಣನೆ (1-46).

12036001 ವ್ಯಾಸ ಉವಾಚ|
12036001a ತಪಸಾ ಕರ್ಮಭಿಶ್ಚೈವ ಪ್ರದಾನೇನ ಚ ಭಾರತ|
12036001c ಪುನಾತಿ ಪಾಪಂ ಪುರುಷಃ ಪೂತಶ್ಚೀನ್ನ ಪ್ರವರ್ತತೇ||

ವ್ಯಾಸನು ಹೇಳಿದನು: "ಭಾರತ! ತಪಸ್ಸಿನಿಂದ, ಕರ್ಮಗಳಿಂದ ಮತ್ತು ದಾನದಿಂದ ಮತ್ತು ಆ ಪಾಪಗಳನ್ನು ಪುನಃ ಮಾಡದೇ ಇರುವುದರಿಂದ ಪುರುಷನು ಪಾಪಗಳನ್ನು ತೊಳೆದುಕೊಂಡು ಪವಿತ್ರನಾಗುತ್ತಾನೆ.

12036002a ಏಕಕಾಲಂ ತು ಭುಂಜಾನಶ್ಚರನ್ಭೈಕ್ಷಂ ಸ್ವಕರ್ಮಕೃತ್|
12036002c ಕಪಾಲಪಾಣಿಃ ಖಟ್ವಾಂಗೀ ಬ್ರಹ್ಮಚಾರೀ ಸದೋತ್ಥಿತಃ||
12036003a ಅನಸೂಯುರಧಃಶಾಯೀ ಕರ್ಮ ಲೋಕೇ ಪ್ರಕಾಶಯನ್|
12036003c ಪೂರ್ಣೈರ್ದ್ವಾದಶಭಿರ್ವರ್ಷೈರ್ಬ್ರಹ್ಮಹಾ ವಿಪ್ರಮುಚ್ಯತೇ||

ಬ್ರಹ್ಮಹತ್ಯೆಯನ್ನು ಮಾಡಿದವನು ಭಿಕ್ಷೆಯನ್ನು ಮಾಡಿಕೊಂಡು ಒಂದೇ ಹೊತ್ತು ಊಟಮಾಡಬೇಕು. ತನ್ನ ಎಲ್ಲ ಕೆಲಸಗಳನ್ನೂ ತಾನೇ ಮಾಡಿಕೊಳ್ಳಬೇಕು. ಕಪಾಲವನ್ನೂ ದಂಡವನ್ನೂ ಹಿಡಿದು ಬ್ರಹ್ಮಚಾರಿಯಾಗಿರಬೇಕು. ಸದಾ ಚಟುವಟಿಕೆಯಿಂದಿರಬೇಕು. ಯಾರಲ್ಲಿಯೂ ದೋಷವನ್ನೆಣಿಸಬಾರದು. ನೆಲದ ಮೇಲೆ ಮಲಗಬೇಕು. ತಾನು ಮಾಡಿದ ಪಾಪವನ್ನು ಜನರಲ್ಲಿ ಹೇಳಿಕೊಳ್ಳಬೇಕು. ಈ ನಿಯಮಗಳನ್ನು ಸಂಪೂರ್ಣ ಹನ್ನೆರಡು ವರ್ಷಗಳವರೆಗೆ ಪಾಲಿಸಿದರೆ ಅವನು ಬ್ರಹ್ಮಹತ್ಯಾದೋಷದಿಂದ ಮುಕ್ತನಾಗುತ್ತಾನೆ.

12036004a ಷಡ್ಭಿರ್ವರ್ಷೈಃ ಕೃಚ್ಛ್ರಭೋಜೀ ಬ್ರಹ್ಮಹಾ ಪೂಯತೇ ನರಃ|
12036004c ಮಾಸೇ ಮಾಸೇ ಸಮಶ್ನಂಸ್ತು ತ್ರಿಭಿರ್ವರ್ಷೈಃ ಪ್ರಮುಚ್ಯತೇ||

ಆರು ವರ್ಷಗಳು ಕೃಚ್ಛ್ರವ್ರತಾನುಸಾರವಾಗಿ ಭೋಜನಮಾಡುತ್ತಿದ್ದರೆ ಅಥವಾ ಮಾಸ-ಮಾಸಗಳಲ್ಲಿಯೂ ಕೃಚ್ಛ್ರವ್ರತಾಚರಣೆ ಮಾಡಿದರೆ ಬ್ರಹ್ಮಹತ್ಯೆಮಾಡಿದ ನರನು ಪವಿತ್ರನಾಗುತ್ತಾನೆ.

12036005a ಸಂವತ್ಸರೇಣ ಮಾಸಾಶೀ ಪೂಯತೇ ನಾತ್ರ ಸಂಶಯಃ|
12036005c ತಥೈವೋಪರಮನ್ರಾಜನ್ನ್ವಲ್ಪೇನಾಪಿ ಪ್ರಮುಚ್ಯತೇ||

ರಾಜನ್! ತಿಂಗಳಿಗೊಮ್ಮೆ ಮಾತ್ರ ಊಟಮಾಡಿಕೊಂಡಿದ್ದರೆ ಒಂದೇ ವರ್ಷದಲ್ಲಿ ಬ್ರಹ್ಮಹತ್ಯೆಮಾಡಿದವನು ಪವಿತ್ರನಾಗುತ್ತಾನೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಅದಕ್ಕೂ ಹೆಚ್ಚು ಕಾಲ ಉಪವಾಸದಿಂದಿದ್ದರೆ ಅತ್ಯಲ್ಪಕಾಲದಲ್ಲಿಯೇ ಬ್ರಹ್ಮಹತ್ಯಾದೋಷದ ನಿವಾರಣೆಯಾಗುತ್ತದೆ.

12036006a ಕ್ರತುನಾ ಚಾಶ್ವಮೇಧೇನ ಪೂಯತೇ ನಾತ್ರ ಸಂಶಯಃ|

12036006c ಯ ಚಾಸ್ಯಾವಭೃಥೇ ಸ್ನಾಂತಿ ಕೇ ಚಿದೇವಂವಿಧಾ ನರಾಃ||
12036007a ತೇ ಸರ್ವೇ ಪೂತಪಾಪ್ಮಾನೋ ಭವಂತೀತಿ ಪರಾ ಶ್ರುತಿಃ|

ಅಶ್ವಮೇಧಯಾಗದಿಂದಲೂ ಬ್ರಹ್ಮಹತ್ಯಾದೋಷದಿಂದ
ಮುಕ್ತನಾಗುವನು ಎನ್ನುವುದರಲ್ಲಿ ಸಂಶಯವಿಲ್ಲ. ಅಶ್ವಮೇಧದ
ಅವಭೃಥಸ್ನಾನ ಮಾಡಿದ ನರನು ಈ ವಿಧದ ಎಲ್ಲ ಪಾಪಗಳಿಂದಲೂ
ಮುಕ್ತನಾಗುತ್ತಾನೆ ಎಂದು ಶ್ರುತಿಗಳು ಹೇಳುತ್ತವೆ.

12036007c ಬ್ರಾಹ್ಮಣಾರ್ಥೇ ಹತೋ ಯುದ್ಧೇ ಮುಚ್ಯತೇ ಬ್ರಹ್ಮಹತ್ಯಯಾ||
12036008a ಗವಾಂ ಶತಸಹಸ್ರಂ ತು ಪಾತ್ರೇಭ್ಯಃ ಪ್ರತಿಪಾದಯನ್|
12036008c ಬ್ರಹ್ಮಹಾ ವಿಪ್ರಮುಚ್ಯೇತ ಸರ್ವಪಾಪೇಭ್ಯ ಏವ ಚ||

ಬ್ರಾಹ್ಮಣರಿಗಾಗಿ ಯುದ್ಧದಲ್ಲಿ ಹತನಾದರೆ ಬ್ರಹ್ಮಹತ್ಯಾದೋಷದಿಂದ
ಮುಕ್ತನಾಗುತ್ತಾನೆ. ಒಂದು ಲಕ್ಷ ಗೋವುಗಳನ್ನು ಪಾತ್ರನಾದವನಿಗೆ
ದಾನಮಾಡಿದರೆ ಬ್ರಹ್ಮಹತ್ಯೆ ಮತ್ತು ಎಲ್ಲ ದೋಷಗಳಿಂದಲೂ
ಮುಕ್ತನಾಗುತ್ತಾನೆ.

12036009a ಕಪಿಲಾನಾಂ ಸಹಸ್ರಾಣಿ ಯೋ ದದ್ಯಾತ್ಪಂಚವಿಂಶತಿಮ್|
12036009c ದೋಗ್ಧ್ರೀಣಾಂ ಸ ಚ ಪಾಪೇಭ್ಯಃ ಸರ್ವೇಭ್ಯೋ ವಿಪ್ರಮುಚ್ಯತೇ||

ಹಾಲುಕೊಡುವ ಇಪ್ಪತ್ತೈದು ಸಾವಿರ ಕಪಿಲ ವರ್ಣದ ಗೋವುಗಳನ್ನು
ದಾನಮಾಡಿದರೆ ಸರ್ವ ಪಾಪಗಳಿಂದ ಮುಕ್ತಿದೊರೆಯುತ್ತದೆ.

12036010a ಗೋಸಹಸ್ರಂ ಸವತ್ಸಾನಾಂ ದೋಗ್ಧ್ರೀಣಾಂ ಪ್ರಾಣಸಂಶಯೇ|
12036010c ಸಾಧುಭ್ಯೋ ವೈ ದರಿದ್ರೇಭ್ಯೋ ದತ್ತ್ವಾ ಮುಚ್ಯೇತ ಕಿಲ್ಬಿಷಾತ್||

ಕರುಗಳಿರುವ ಮತ್ತು ಹಾಲುಕರೆಯುವ ಸಹಸ್ರ ಗೋವುಗಳನ್ನು
ಮರಣಕಾಲದಲ್ಲಿ ದರಿದ್ರ ಸತ್ಪುರುಷರಿಗೆ ದಾನಮಾಡಿದರೆ ಎಲ್ಲ

ಪಾಪಗಳ ವಿಮೋಚನೆಯಾಗುತ್ತದೆ.

12036011a ಶತಂ ತ್ವೈ ಯಸ್ತು ಕಾಂಬೋಜಾನ್ಬ್ರಾಹ್ಮಣೇಭ್ಯಃ ಪ್ರಯಚ್ಚತಿ|
12036011c ನಿಯತೇಭ್ಯೋ ಮಹೀಪಾಲ ಸ ಚ ಪಾಪಾತ್ಪ್ರಮುಚ್ಯತೇ||

ಮಹೀಪಾಲ! ನಿಯಮಾನುಷ್ಠಾನ ಪರರಾದ ಬ್ರಾಹ್ಮಣರಿಗೆ ನೂರು ಕಾಂಬೋಜ ದೇಶದ ಕುದುರೆಗಳನ್ನು ದಾನಮಾಡುವುದರಿಂದಲೂ ಸರ್ವ ಪಾಪಗಳ ವಿಮೋಚನೆಯಾಗುತ್ತದೆ.

12036012a ಮನೋರಥಂ ತು ಯೋ ದದ್ಯಾದೇಕಸ್ಮಾ ಅಪಿ ಭಾರತ|
12036012c ನ ಕೀರ್ತಯೇತ ದತ್ತ್ವಾ ಯಃ ಸ ಚ ಪಾಪಾತ್ಪ್ರಮುಚ್ಯತೇ||

ಭಾರತ! ಕೇವಲ ಒಬ್ಬನ ಮನೋರಥವನ್ನು ಪೂರೈಸುವ ಹಾಗೆ ದಾನಮಾಡಿ ಆ ದಾನದ ಕುರಿತು ಬೇರೆಯವರಲ್ಲಿ ಹೇಳಿಕೊಳ್ಳದೇ ಇದ್ದವನೂ ಪಾಪದಿಂದ ಮುಕ್ತನಾಗುತ್ತಾನೆ.

12036013a ಸುರಾಪಾನಂ ಸಕೃತ್ಪೀತ್ವಾ ಯೋಽಗ್ನಿವರ್ಣಾಂ ಪಿಬೇದ್ದ್ವಿಜಃ|
12036013c ಸ ಪಾವಯತ್ಯಥಾತ್ಮಾನಮಿಹ ಲೋಕೇ ಪರತ್ರ ಚ||

ಸುರಾಪಾನವನ್ನು ಮಾಡಿದ ದ್ವಿಜನು ಕೆಂಪಾಗಿ ಕಾಸಿ ಕುದಿಯುತ್ತಿರುವ ಅಗ್ನಿವರ್ಣದ ಸುರೆಯನ್ನು ಕುಡಿದರೆ ಅವನು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಶುದ್ಧನಾಗುತ್ತಾನೆ.

12036014a ಮೇರುಪ್ರಪಾತಂ ಪ್ರಪತನ್ಜ್ವಲನಂ ವಾ ಸಮಾವಿಶನ್|
12036014c ಮಹಾಪ್ರಸ್ಥಾನಮಾತಿಷ್ಠನ್ಮುಚ್ಯತೇ ಸರ್ವಕಿಲ್ಬಿಷೈಃ||

ಪರ್ವತದಿಂದ ಹಾರಿ ಕೆಳಗೆ ಬೀಳುವುದರಿಂದಲೂ, ಅಗ್ನಿಯನ್ನು ಪ್ರವೇಶಿಸುವುದರಿಂದಲೂ ಮತ್ತು ಮರಣದೀಕ್ಷೆಯನ್ನು ಕೈಗೊಂಡು

ಉತ್ತರಾಭಿಮುಖವಾಗಿ ಪ್ರಯಾಣಿಸುತ್ತಾ ಹಿಮಾಲಯದಲ್ಲಿ ಪ್ರಾಣತ್ಯಾಗಮಾಡುವುದರಿಂದಲೂ ಮನುಷ್ಯನು ಸರ್ವಪಾಪಗಳಿಂದ ವಿಮುಕ್ತನಾಗುತ್ತಾನೆ.

12036015a ಬೃಹಸ್ಪತಿಸವೇನೇಷ್ಟ್ವಾ ಸುರಾಪೋ ಬ್ರಾಹ್ಮಣಃ ಪುನಃ|
12036015c ಸಮಿತಿಂ ಬ್ರಾಹ್ಮಣೈರ್ಗಚ್ಚೇದಿತಿ ವೈ ಬ್ರಾಹ್ಮಣೇ ಶ್ರುತಿಃ||

ಸುರಾಪಾನ ಮಾಡಿದ ಬ್ರಾಹ್ಮಣನು ಬೃಹಸ್ಪತಿಸವ ಎನ್ನುವ ಯಾಗವನ್ನು ಮಾಡುವುದರಿಂದ ಬ್ರಾಹ್ಮಣರ ಸಭೆಗೆ ಪುನಃ ಹೋಗಲು ಅರ್ಹನಾಗುತ್ತಾನೆ ಎಂದು ಶ್ರುತಿಗಳು ಸಾರುತ್ತವೆ.

12036016a ಭೂಮಿಪ್ರದಾನಂ ಕುರ್ಯಾದ್ಯಃ ಸುರಾಂ ಪೀತ್ವಾ ವಿಮತ್ಸರಃ|
12036016c ಪುನರ್ನ ಚ ಪಿಬೇದ್ರಾಜನ್ಸಂಸ್ಕೃತಃ ಶುಧ್ಯತೇ ನರಃ||

ರಾಜನ್! ಸುರಾಪಾನ ಮಾಡಿದ ನರನು ಮಾತ್ಸರ್ಯರಹಿತನಾಗಿ ಭೂದಾನ ಮಾಡುವುದರಿಂದ ಮತ್ತು ಪುನಃ ಸುರಾಪಾನಮಾಡದೇ ಇರುವುದರಿಂದ ಸುಸಂಸ್ಕೃತನೂ ಶುದ್ಧನೂ ಆಗುತ್ತಾನೆ.

12036017a ಗುರುತಲ್ಪೀ ಶಿಲಾಂ ತಪ್ತಾಮಾಯಸೀಮಧಿಸಂವಿಶೇತ್|
12036017c ಪಾಣಾವಾಧಾಯ ವಾ ಶೇಫಂ ಪ್ರವ್ರಜೇದೂರ್ಧ್ವದರ್ಶನಃ||
12036018a ಶರೀರಸ್ಯ ವಿಮೋಕ್ಷೇಣ ಮುಚ್ಯತೇ ಕರ್ಮಣೋಽಶುಭಾತ್|
12036018c ಕರ್ಮಭ್ಯೋ ವಿಪ್ರಮುಚ್ಯಂತೇ ಯತ್ತಾಃ ಸಂವತ್ಸರಂ ಸ್ತ್ರಿಯಃ||

ಗುರುಪತ್ನಿಯೊಡನೆ ಸಮಾಗಮ ಮಾಡಿದವನು ಕಾದ ಶಿಲೆಯ ಮೇಲೆ ಮಲಗಬೇಕು ಅಥವಾ ತನ್ನ ಶಿಶ್ನವನ್ನು ಕತ್ತರಿಸಿಕೊಂಡು, ತಲೆಯನ್ನೆತ್ತಿ ಆಕಾಶವನ್ನೇ ನೋಡುತ್ತಾ ಪ್ರಯಾಣಿಸಬೇಕು. ಈ ರೀತಿ ಶರೀರವನ್ನು ತೊರೆಯುವುದರಿಂದಲೇ ಆ ಅಶುಭಕರ್ಮದ ಪಾಪದಿಂದ

ಮುಕ್ತನಾಗುತ್ತಾನೆ. ಇಂತಹ ಪಾಪಕರ್ಮವನ್ನು ಮಾಡಿದ ಸ್ತ್ರೀಯರು ಒಂದು ವರ್ಷ ಸಂಯಮದಿಂದ ಇದ್ದರೆ ಪಾಪಮುಕ್ತರಾಗುತ್ತಾರೆ.

12036019a ಮಹಾವ್ರತಂ ಚರೇದ್ಯಸ್ತು ದದ್ಯಾತ್ಸರ್ವಸ್ವಮೇವ ತು|
12036019c ಗುರ್ವರ್ಥೇ ವಾ ಹತೋ ಯುದ್ಧೇ ಸ ಮುಚ್ಯೇತ್ಕರ್ಮಣೋಽಶುಭಾತ್||

ಮಹಾವ್ರತ[60]ವನ್ನು ಆಚರಿಸಿದವನು, ಸರ್ವವನ್ನೂ ದಾನಮಾಡಿದವನು ಮತ್ತು ಗುರುವಿನ ಪರವಾಗಿ ಯುದ್ಧದಲ್ಲಿ ಮಡಿದವನು ಈ ಅಶುಭ ಕರ್ಮದಿಂದ ಮುಕ್ತನಾಗುತ್ತಾನೆ.

12036020a ಅನೃತೇನೋಪಚರ್ತಾ ಚ ಪ್ರತಿರೋದ್ಧಾ ಗುರೋಸ್ತಥಾ|
12036020c ಉಪಹೃತ್ಯ ಪ್ರಿಯಂ ತಸ್ಯೈ ತಸ್ಮಾತ್ತಾಪಾತ್ಪ್ರಮುಚ್ಯತೇ||

ಗುರುವಿಗೆ ಪ್ರಿಯವಾದುದನ್ನು ತಂದು ಕೊಡುವುದರಿಂದ ಗುರುವಿಗೆ ಸುಳ್ಳುಹೇಳಿದುದರ ಮತ್ತು ಗುರುವಿಗೆ ವಿರುದ್ಧವಾಗಿ ನಡೆದುಕೊಂಡಿದುದರ ಪಾಪದಿಂದ ಮುಕ್ತನಾಗುತ್ತಾನೆ.

12036021a ಅವಕೀರ್ಣಿನಿಮಿತ್ತಂ ತು ಬ್ರಹ್ಮಹತ್ಯಾವ್ರತಂ ಚರೇತ್|
12036021c ಖರಚರ್ಮವಾಸಾಃ ಷಣ್ಮಾಸಂ ತಥಾ ಮುಚ್ಯೇತ ಕಿಲ್ಬಿಷಾತ್||

ಬ್ರಹ್ಮಚರ್ಯವ್ರತದಿಂದ ಭ್ರಷ್ಟನಾದವನು ಗೋಚರ್ಮವನ್ನು ಹೊದೆದುಕೊಂಡು ಆರು ತಿಂಗಳ ಕಾಲ ಬ್ರಹ್ಮಹತ್ಯಾವ್ರತವನ್ನು ಆಚರಿಸಿದರೆ ಆ ಪಾಪದಿಂದ ಮುಕ್ತನಾಗುತ್ತಾನೆ.

12036022a ಪರದಾರಾಪಹಾರೀ ಚ ಪರಸ್ಯಾಪಹರನ್ ವಸು|

---

[60] ಒಂದು ತಿಂಗಳು ನೀರನ್ನೂ ಕುಡಿಯದೇ ನಿರಾಹಾರಿಯಾಗಿರುವುದಕ್ಕೆ ಮಹಾವ್ರತವೆನ್ನುವರು.

12036022c ಸಂವತ್ಸರಂ ವ್ರತೀ ಭೂತ್ವಾ ತಥಾ ಮುಚ್ಯೇತ ಕಿಲ್ಬಿಷಾತ್‌॥

ಒಂದು ವರ್ಷ ಕಠೋರ ವ್ರತವನ್ನು ಆಚರಿಸಿದರೆ ಪರಸ್ತ್ರೀಯನ್ನು ಮತ್ತು ಪರರ ಸ್ವತ್ತನ್ನು ಅಪಹರಿಸಿದ ಪಾಪದಿಂದ ಮುಕ್ತನಾಗಬಹುದು.

12036023a ಸ್ತೇಯಂ ತು ಯಸ್ಯಾಪಹರೇತ್ತಸ್ಯೈ ದದ್ಯಾತ್ಸಮಂ ವಸು|
12036023c ವಿವಿಧೇನಾಭ್ಯುಪಾಯೇನ ತೇನ ಮುಚ್ಯೇತ ಕಿಲ್ಬಿಷಾತ್‌॥

ಪರರ ಸ್ವತ್ತನ್ನು ಅಪಹರಿಸಿದವನು, ಅದಕ್ಕೆ ಸಮನಾದಷ್ಟು ಸಂಪತ್ತನ್ನು ವಿವಿಧ ಉಪಾಯಗಳಿಂದ ಹಿಂದಿರುಗಿಸಿದರೆ ಆ ಪಾಪದಿಂದ ಮುಕ್ತನಾಗುತ್ತಾನೆ.

12036024a ಕೃಚ್ಛ್ರಾದ್ದ್ವಾದಶರಾತ್ರೇಣ ಸ್ವಭ್ಯಸ್ತೇನ ದಶಾವರಮ್‌|
12036024c ಪರಿವೇತ್ತಾ ಭವೇತ್ಪೂತಃ ಪರಿವಿತ್ತಿಶ್ಚ ಭಾರತ॥

ಭಾರತ! ಪರಿವೇತ್ತ[61] ಮತ್ತು ಪರಿವಿತ್ತಿ[62] ಇವರಿಬ್ಬರಿಗೂ ಹನ್ನೆರಡು ರಾತ್ರಿಗಳು ಜಿತೇಂದ್ರಿಯರಾಗಿದ್ದು ಕೃಚ್ಛ್ರವ್ರತವನ್ನಾಚರಿಸುವುದೇ ಪ್ರಾಯಶ್ಚಿತ್ತವಾಗಿದೆ.

12036025a ನಿವೇಶ್ಯಂ ತು ಭವೇತ್ತೇನ ಸದಾ ತಾರಯಿತಾ ಪಿತೄನ್‌|
12036025c ನ ತು ಸ್ತ್ರಿಯಾ ಭವೇದ್ದೋಷೋ ನ ತು ಸಾ ತೇನ ಲಿಪ್ಯತೇ॥

ಪ್ರಾಯಶ್ಚಿತ್ತವನ್ನು ಮಾಡಿಕೊಂಡ ಪರಿವೇತ್ತಿಯು ವಿವಾಹವಾಗಿ ಪಿತೃಕಾರ್ಯಗಳನ್ನು ಮಾಡುತ್ತಾ ಬಂದರೆ ಅವನ ಪತ್ನಿಗೆ ಯಾವ

---

61 ಅಣ್ಣನಿಗಿಂತ ಮೊದಲು ಮದುವೆಯಾದವನು

62 ತಮ್ಮನ ಮದುವೆಯಾದರೂ ಮದುವೆಯಾಗದೇ ಇರುವವನು

ದೋಷವೂ ಆಗುವುದಿಲ್ಲ. ಅವಳಿಗೆ ಪಾಪಗಳು ಅಂಟಿಕೊಳ್ಳುವುದಿಲ್ಲ.

12036026a ಭಜನೇ ಹ್ಯೃತುನಾ ಶುದ್ಧಂ ಚಾತುರ್ಮಾಸ್ಯಂ ವಿಧೀಯತೇ|
12036026c ಸ್ತ್ರಿಯಸ್ತೇನ ವಿಶುಧ್ಯಂತಿ ಇತಿ ಧರ್ಮವಿದೋ ವಿದುಃ||

ಚಾತುರ್ಮಾಸ್ಯವ್ರತ[63]ದ ಮೂಲಕ ಶುದ್ಧಿಮಾಡಿಕೊಳ್ಳುವ ವಿಧಾನವಿದೆ. ಸ್ತ್ರೀಯರು ಈ ವ್ರತದ ಆಚರಣೆಯಿಂದ ಶುದ್ಧರಾಗುತ್ತಾರೆಂದು ಧರ್ಮವಿದರು ಹೇಳುತ್ತಾರೆ.

12036027a ಸ್ತ್ರಿಯಸ್ತ್ವಾಶಂಕಿತಾಃ ಪಾಪೈರ್ನೋಪಗಮ್ಯಾ ಹಿ ಜಾನತಾ|
12036027c ರಜಸಾ ತಾ ವಿಶುಧ್ಯಂತೇ ಭಸ್ಮನಾ ಭಾಜನಂ ಯಥಾ||

ಪತ್ನಿಯು ಪಾಪಿಯೆಂದು ಶಂಕಿಸಿದರೆ ಅವಳು ಪುನಃ ರಜಸ್ವಲೆಯಾಗುವವರೆಗೆ ಅವಳೊಡನೆ ಕೂಡಬಾರದು. ಭಸ್ಮಲೇಪನದಿಂದ ಪಾತ್ರೆಯು ಶುದ್ಧವಾಗುವಂತೆ ರಜೋದರ್ಶನದಿಂದ ಸ್ತ್ರೀಯರು ಶುದ್ಧರಾಗುತ್ತಾರೆ.

12036028a ಚತುಷ್ಪಾತ್ಸಕಲೋ ಧರ್ಮೋ ಬ್ರಾಹ್ಮಣಾನಾಂ ವಿಧೀಯತೇ|
12036028c ಪಾದಾವಕೃಷ್ಟೌ ರಾಜನ್ಯೇ ತಥಾ ಧರ್ಮೋ ವಿಧೀಯತೇ||

ಧರ್ಮದ ಎಲ್ಲ ನಾಲ್ಕು ಪಾದಗಳೂ ಬ್ರಾಹ್ಮಣರಿಗೆ ವಿಹಿತವಾಗಿವೆ. ರಾಜನಿಗೆ ಧರ್ಮದ ಮೂರು ಪಾದಗಳು ವಿಹಿತವಾಗಿವೆ.

12036029a ತಥಾ ವೈಶ್ಯೇ ಚ ಶೂದ್ರೇ ಚ ಪಾದಃ ಪಾದೋ ವಿಧೀಯತೇ|
12036029c ವಿದ್ಯಾದೇವಂವಿಧೇನೈಷಾಂ ಗುರುಲಾಘವನಿಶ್ಚಯಮ್||

---

[63] ಚಾತುರ್ಮಾಸ್ಯದಲ್ಲಿ ದಿನಬಿಟ್ಟು ದಿನ ಊಟಮಾಡುವ ವಿಧಾನವಿದೆ.

ಹಾಗೆಯೇ ವೈಶ್ಯ ಮತ್ತು ಶೂದ್ರರಿಗೆ ಒಂದೊಂದು ಪಾದ ಕಡಿಮೆ ಧರ್ಮವು ವಿಹಿತವಾಗಿದೆ. ಇದರ ಪ್ರಕಾರ ಪಾಪಗಳ ಮಹತ್ತ್ವತೆ ಮತ್ತು ಲಘುತ್ವಗಳು ಮತ್ತು ಅವುಗಳ ಪ್ರಾಯಶ್ಚಿತ್ತಗಳು ನಿಶ್ಚಯಿಸಲ್ಪಟ್ಟಿವೆ.

12036030a ತಿರ್ಯಗ್ಯೋನಿವಧಂ ಕೃತ್ವಾ ದ್ರುಮಾಂಶ್ಚಿತ್ತ್ವೇತರಾನ್ಬಹೂನ್|
12036030c ತ್ರಿರಾತ್ರಂ ವಾಯುಭಕ್ಷಃ ಸ್ಯಾತ್ಕರ್ಮ ಚ ಪ್ರಥಯೇನ್ನರಃ||

ಪಶು-ಪಕ್ಷಿಗಳನ್ನು ವಧಿಸುವುದರಿಂದ ಮತ್ತು ಅನೇಕ ವೃಕ್ಷಗಳನ್ನು ಕಡಿಯುವುದರಿಂದ ಆದ ಪಾಪವನ್ನು ಮನುಷ್ಯನು ಮೂರುರಾತ್ರಿ ವಾಯುಭಕ್ಷಕನಾಗಿದ್ದು ಉಪವಾಸದಿಂದಿದ್ದರೆ ತೊರೆದುಕೊಳ್ಳುತ್ತಾನೆ.

12036031a ಅಗಮ್ಯಾಗಮನೇ ರಾಜನ್ಪ್ರಾಯಶ್ಚಿತ್ತಂ ವಿಧೀಯತೇ|
12036031c ಆರ್ದ್ರವಸ್ತ್ರೇಣ ಷಣ್ಮಾಸಂ ವಿಹಾರ್ಯಂ ಭಸ್ಮಶಾಯಿನಾ||

ರಾಜನ್! ಸಂಗಮಾಡಬಾರದೇ ಇದ್ದವರೊಡನೆ ಸಂಗಮಾಡಿದರೆ ಆರು ತಿಂಗಳ ಕಾಲ ಒದ್ದೆ ಬಟ್ಟೆಯನ್ನು ಉಟ್ಟುಕೊಂಡು ಸಂಚರಿಸುತ್ತಿರಬೇಕು ಮತ್ತು ಬೂದಿಯ ಮೇಲೆ ಮಲಗಬೇಕು ಎಂಬ ಪ್ರಾಯಶ್ಚಿತ್ತವಿದೆ.

12036032a ಏಷ ಏವ ತು ಸರ್ವೇಷಾಮಕಾರ್ಯಾಣಾಂ ವಿಧಿರ್ಭವೇತ್|
12036032c ಬ್ರಾಹ್ಮಣೋಕ್ತೇನ ವಿಧಿನಾ ದೃಷ್ಟಾಂತಾಗಮಹೇತುಭಿಃ||

ಮಾಡಬಾರದ ಎಲ್ಲ ಕರ್ಮಗಳಿಗೂ ಇದನ್ನೇ ಪ್ರಾಯಶ್ಚಿತ್ತವಾಗಿ ಬ್ರಾಹ್ಮಣಗಳಲ್ಲಿ ವಿಧಾನ-ದೃಷ್ಟಾಂತಗಳ ಮೂಲಕ ವಿಹಿಸಲಾಗಿದೆ.

12036033a ಸಾವಿತ್ರೀಮಪ್ಯಧೀಯಾನಃ ಶುಚೌ ದೇಶೇ ಮಿತಾಶನಃ|
12036033c ಅಹಿಂಸ್ರೋಽಮಂದಕೋಽಜಲ್ಪನ್ಮುಚ್ಯತೇ ಸರ್ವಕಿಲ್ಬಿಷೈಃ||

ಶುಚಿಪ್ರದೇಶದಲ್ಲಿ, ಅಲ್ಪಾಹಾರಗಳನ್ನು ತಿಂದು,

ಅಹಿಂಸಾವ್ರತನಿಷ್ಟನಾಗಿ, ರಾಗ-ದ್ವೇಷ-ಮಾನಾಪಮಾನಶೂನ್ಯನಾಗಿ, ಮೌನಿಯಾಗಿ ಗಾಯತ್ರೀ ಮಂತ್ರವನ್ನು ಜಪಿಸುವವನು ಸರ್ವ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

12036034a ಅಹಃಸು ಸತತಂ ತಿಷ್ಠೇದಭ್ಯಾಕಾಶಂ ನಿಶಿ ಸ್ವಪೇತ್|
12036034c ತ್ರಿರಹ್ನಸ್ತ್ರಿರ್ನಿಶಾಯಾಶ್ಚ ಸವಾಸಾ ಜಲಮಾವಿಶೇತ್||
12036035a ಸ್ತ್ರೀಶೂದ್ರಪತಿತಾಂಶ್ಚಾಪಿ ನಾಭಿಭಾಷೇದ್ವ್ರತಾನ್ವಿತಃ|
12036035c ಪಾಪಾನ್ಯಜ್ಞಾನತಃ ಕೃತ್ವಾ ಮುಚ್ಯೇದೇವಂವ್ರತೋ ದ್ವಿಜಃ||

ತಿಳಿಯದೇ ಪಾಪಮಾಡಿದ ದ್ವಿಜನು ಪಾಪವಿಮೋಚನೆಗಾಗಿ ಹಗಲಿನಲ್ಲಿ ಯಾವಾಗಲೂ ನಿಂತುಕೊಂಡೇ ಇರಬೇಕು. ರಾತ್ರಿಯಲ್ಲಿ ಆಕಾಶವನ್ನೇ ಹೊದ್ದಿಕೊಂಡು ಬಯಲಿನಲ್ಲಿ ಮಲಗಬೇಕು. ಹಗಲು ಮೂರು ಬಾರಿ ಮತ್ತು ರಾತ್ರಿ ಮೂರು ಬಾರಿ ಉಟ್ಟಬಟ್ಟೆಯಲ್ಲಿಯೇ ನೀರಿನಲ್ಲಿ ಮುಳುಗಿ ಸ್ನಾನಮಾಡಬೇಕು. ಈ ವ್ರತವನ್ನಾಚರಿಸುತ್ತಿರುವಾಗ ಸ್ತ್ರೀ-ಶೂದ್ರ-ಪತಿತರಲ್ಲಿ ಮಾತನಾಡಬಾರದು.

12036036a ಶುಭಾಶುಭಫಲಂ ಪ್ರೇತ್ಯ ಲಭತೇ ಭೂತಸಾಕ್ಷಿಕಃ|
12036036c ಅತಿರಿಚ್ಯೇತ್ತಯೋರ್ಯತ್ತು ತತ್ಕರ್ತಾ ಲಭತೇ ಫಲಮ್||

ಪಂಚಭೂತಗಳೇ ಸಾಕ್ಷಿಕವಾಗಿರುವ ಶುಭಾಶುಭಫಲಗಳು ಮರಣದ ನಂತರವೇ ದೊರೆಯುತ್ತವೆ. ಅವುಗಳಲ್ಲಿ ಯಾವ ಕರ್ಮಗಳನ್ನು ಹೆಚ್ಚು ಮಾಡಿರುವನೋ ಅವುಗಳ ಫಲವನ್ನು ಹೆಚ್ಚಾಗಿ ಪಡೆಯುತ್ತಾನೆ.

12036037a ತಸ್ಮಾದ್ದಾನೇನ ತಪಸಾ ಕರ್ಮಣಾ ಚ ಶುಭಂ ಫಲಮ್|
12036037c ವರ್ಧಯೇದಶುಭಂ ಕೃತ್ವಾ ಯಥಾ ಸ್ಯಾದತಿರೇಕವಾನ್||

ಆದುದರಿಂದ ದಾನ, ತಪಸ್ಸು ಮುಂತಾದ ಕರ್ಮಗಳಿಂದ

ಶುಭಫಲಗಳು ಹೆಚ್ಚುತ್ತವೆ. ಅಶುಭ ಕರ್ಮಗಳಿಗಿಂತಲೂ
ಪುಣ್ಯಕರ್ಮಗಳನ್ನು ಹೆಚ್ಚಾಗಿ ಮಾಡಿದರೆ ಪುಣ್ಯಫಲಗಳೇ ಹೆಚ್ಚು
ದೊರೆಯುತ್ತವೆ.

12036038a ಕುರ್ಯಾಚ್ಚುಭಾನಿ ಕರ್ಮಾಣಿ ನಿಮಿತ್ತೇ ಪಾಪಕರ್ಮಣಾಮ್|
12036038c ದದ್ಯಾನ್ನಿತ್ಯಂ ಚ ವಿತ್ತಾನಿ ತಥಾ ಮುಚ್ಯೇತ ಕಿಲ್ಬಿಷಾತ್||

ಶುಭಕರ್ಮಗಳನ್ನು ಮಾಡುತ್ತಿರಬೇಕು; ಪಾಪಕರ್ಮಗಳನ್ನು
ಮಾಡಬಾರದು. ನಿತ್ಯವೂ ಧನವನ್ನು ದಾನಮಾಡುವುದರಿಂದ
ಪಾಪವಿಮುಕ್ತನಾಗುತ್ತಾನೆ.

12036039a ಅನುರೂಪಂ ಹಿ ಪಾಪಸ್ಯ ಪ್ರಾಯಶ್ಚಿತ್ತಮುದಾಹೃತಮ್|
12036039c ಮಹಾಪಾತಕವರ್ಜಂ ತು ಪ್ರಾಯಶ್ಚಿತ್ತಂ ವಿಧೀಯತೇ||

ಪಾಪಗಳಿಗೆ ಅನುರೂಪವಾದ ಪ್ರಾಯಶ್ಚಿತ್ತಗಳನ್ನು ಉದಾಹರಿಸಿದ್ದೇನೆ.
ಮಹಾಪಾತಕವನ್ನು ಬಿಟ್ಟು ಉಳಿದವುಗಳಿಗೆ ಪ್ರಾಯಶ್ಚಿತ್ತಗಳನ್ನು
ಹೇಳಲಾಗಿದೆ.

12036040a ಭಕ್ಷ್ಯಾಭಕ್ಷ್ಯೇಷು ಸರ್ವೇಷು ವಾಚ್ಯಾವಾಚ್ಯೇ ತಥೈವ ಚ|
12036040c ಅಜ್ಞಾನಜ್ಞಾನಯೋ ರಾಜನ್ವಿಹಿತಾನ್ಯನುಜಾನತೇ||

ರಾಜನ್! ತಿಳಿದೋ ಅಥವಾ ತಿಳಿಯದೆಯೋ ಅಭಕ್ಷ್ಯವಾದುದನ್ನು
ಭಕ್ಷಿಸಿದರೆ, ಮತ್ತು ಅವಾಚ್ಯವಾದವುಗಳನ್ನು ಮಾತನಾಡಿದರೆ
ಅವುಗಳಿಗೂ ಪ್ರಾಯಶ್ಚಿತ್ತಗಳನ್ನು ಶಾಸ್ತ್ರಗಳಲ್ಲಿ ಹೇಳಲಾಗಿದೆ.

12036041a ಜಾನತಾ ತು ಕೃತಂ ಪಾಪಂ ಗುರು ಸರ್ವಂ ಭವತ್ಯುತ|
12036041c ಅಜ್ಞಾನಾತ್ಸ್ಖಲಿತೇ ದೋಷೇ ಪ್ರಾಯಶ್ಚಿತ್ತಂ ವಿಧೀಯತೇ||

ತಿಳಿದು ಮಾಡಿದ ಪಾಪಗಳೆಲ್ಲವೂ ಅಧಿಕ ಪಾಪಗಳಾಗುತ್ತವೆ. ಅಜ್ಞಾನದಿಂದ ಮಾಡಿದ ದೋಷಗಳಿಗೆ ಪ್ರಾಯಶ್ಚಿತ್ತಗಳನ್ನು ಹೇಳಿದ್ದಾರೆ.

12036042a ಶಕ್ಯತೇ ವಿಧಿನಾ ಪಾಪಂ ಯಥೋಕ್ತೇನ ವ್ಯಪೋಹಿತುಮ್|
12036042c ಆಸ್ತಿಕೇ ಶ್ರದ್ದಧಾನೇ ತು ವಿಧಿರೇಷ ವಿಧೀಯತೇ||

ಈಗ ಹೇಳಿದ ವಿಧಿಗಳಿಂದ ಪಾಪಗಳನ್ನು ಕಳೆದುಕೊಳ್ಳಲು ಶಕ್ಯವಿದೆ. ಆದರೆ ಆಸ್ತಿಕರಿಗೆ ಮತ್ತು ಶ್ರದ್ಧೆಯುಳ್ಳವರಿಗೆ ಮಾತ್ರ ಈ ವಿಧಿಗಳನ್ನು ಹೇಳಲಾಗಿದೆ.

12036043a ನಾಸ್ತಿಕಾಶ್ರದ್ದಧಾನೇಷು ಪುರುಷೇಷು ಕದಾ ಚನ|
12036043c ದಂಭದೋಷಪ್ರಧಾನೇಷು ವಿಧಿರೇಷ ನ ದೃಶ್ಯತೇ||

ದಂಭದೋಷವೇ ಪ್ರಧಾನವಾಗಿರುವ ನಾಸ್ತಿಕರು ಮತ್ತು ಶ್ರದ್ಧೆಯಿಲ್ಲದ ಪುರುಷರಿಗೆ ಪ್ರಾಯಶ್ಚಿತ್ತವಿಧಿಗಳು ಯಾವುವೂ ಇಲ್ಲ.

12036044a ಶಿಷ್ಟಾಚಾರಶ್ಚ ಶಿಷ್ಟಶ್ಚ ಧರ್ಮೋ ಧರ್ಮಭೃತಾಂ ವರ|
12036044c ಸೇವಿತವ್ಯೋ ನರವ್ಯಾಘ್ರ ಪ್ರೇತ್ಯ ಚೇಹ ಸುಖಾರ್ಥಿನಾ||

ಧರ್ಮಭೃತರಲ್ಲಿ ಶ್ರೇಷ್ಠನೇ! ನರವ್ಯಾಘ್ರ! ಮರಣಾನಂತರದಲ್ಲಿ ಮತ್ತು ಇಹದಲ್ಲಿ ಸುಖವನ್ನು ಬಯಸುವವರು ಶಿಷ್ಟಾಚಾರಿಗಳಾಗಿರಬೇಕು. ಧರ್ಮವನ್ನು ಅನುಸರಿಸಿ ನಡೆದುಕೊಳ್ಳಬೇಕು.

12036045a ಸ ರಾಜನ್ಮೋಕ್ಷ್ಯಸೇ ಪಾಪಾತ್ತೇನ ಪೂರ್ವೇಣ ಹೇತುನಾ|
12036045c ತ್ರಾಣಾರ್ಥಂ ವಾ ವಧೇನೈಷಾಮಥ ವಾ ನೃಪಕರ್ಮಣಾ||

ರಾಜನ್! ಈ ಮೊದಲು ಹೇಳಿದ ಕಾರಣಗಳಿಂದಾಗಿ ನೀನು ನಿನ್ನ ಪಾಪದಿಂದ ಮುಕ್ತನಾಗುವೆ.

12036046a ಅಥ ವಾ ತೇ ಘೃಣಾ ಕಾ ಚಿತ್ಪ್ರಾಯಶ್ಚಿತ್ತಂ ಚರಿಷ್ಯಸಿ|
12036046c ಮಾ ತ್ವೇವಾನಾರ್ಯಜುಷ್ಟೇನ ಕರ್ಮಣಾ ನಿಧನಂ ಗಮಃ||

ಅಥವಾ ಈ ಕರ್ಮಗಳನ್ನು ಮಾಡಿದೆನೆಲ್ಲಾ ಎಂದು
ತಪ್ಪಿತಸ್ಥಭಾವವನ್ನು ಹೊಂದಿದ್ದರೆ ಪ್ರಾಯಶ್ಚಿತ್ತಗಳನ್ನು ಮಾಡಿಕೋ!
ಅನಾರ್ಯಜುಷ್ಟ ಕಾರ್ಯವನ್ನಿಸಗಿ ಆತ್ಮವಿನಾಶವನ್ನು
ಮಾಡಿಕೊಳ್ಳಬೇಡ!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಪ್ರಾಯಶ್ಚಿತ್ತೀಯೇ ಷಟ್ ಸ್ತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಪ್ರಾಯಶ್ಚಿತ್ತೀಯ ಎನ್ನುವ ಮೂವತ್ತಾರನೇ ಅಧ್ಯಾಯವು.

೩೭

ಸ್ವಾಯಂಭುವ ಮನುವುಹೇಳಿದ ಧರ್ಮದ ಸ್ವರೂಪ, ಪಾಪದ ಶುದ್ಧಿಗಾಗಿ ಪ್ರಾಯಶ್ಚಿತ್ತ, ಅಭಕ್ಷ್ಯ ವಸ್ತುಗಳ ವರ್ಣನೆ ಮತ್ತು ದಾನಕ್ಕೆ ಅಧಿಕಾರಿ-ಅನಧಿಕಾರಿಗಳ ವಿವೇಚನೆ (1-43).

12037001 ವೈಶಂಪಾಯನ ಉವಾಚ|
12037001a ಏವಮುಕ್ತೋ ಭಗವತಾ ಧರ್ಮರಾಜೋ ಯುಧಿಷ್ಠಿರಃ|
12037001c ಚಿಂತಯಿತ್ವಾ ಮುಹೂರ್ತಂ ತು ಪ್ರತ್ಯುವಾಚ ತಪೋಧನಮ್||

ವೈಶಂಪಾಯನನು ಹೇಳಿದನು: "ಭಗವಾನ್ ವ್ಯಾಸನು ಹೀಗೆ ಹೇಳಲು
ಧರ್ಮರಾಜ ಯುಧಿಷ್ಠಿರನು ಮುಹೂರ್ತಕಾಲ ಚಿಂತಿಸಿ ಆ
ತಪೋಧನನನ್ನು ಪುನಃ ಪ್ರಶ್ನಿಸಿದನು:

12037002a ಕಿಂ ಭಕ್ಷ್ಯಂ ಕಿಮಭಕ್ಷ್ಯಂ ಚ ಕಿಂ ಚ ದೇಯಂ ಪ್ರಶಸ್ಯತೇ|
12037002c ಕಿಂ ಚ ಪಾತ್ರಮಪಾತ್ರಂ ವಾ ತನ್ಮೇ ಬ್ರೂಹಿ ಪಿತಾಮಹ||

"ಪಿತಾಮಹ! ತಿನ್ನಬಹುದಾದುದು ಯಾವುದು? ತಿನ್ನಬಾರದವುಗಳು ಯಾವುವು? ದಾನಮಾಡಲು ಯಾವುದು ಶ್ರೇಷ್ಠ? ದಾನಮಾಡಲು ಯಾರು ಪಾತ್ರರು ಮತ್ತು ಯಾರು ಅಪಾತ್ರರು ಎನ್ನುವುದನ್ನು ನನಗೆ ಹೇಳು!"

12037003 ವ್ಯಾಸ ಉವಾಚ|
12037003a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12037003c ಸಿದ್ಧಾನಾಂ ಚೈವ ಸಂವಾದಂ ಮನೋಶ್ಚೈವ ಪ್ರಜಾಪತೇಃ||

ವ್ಯಾಸನು ಹೇಳಿದನು: "ಇದಕ್ಕೆ ಸಂಬಂಧಿಸಿದಂತೆ ಬಹಳ ಹಿಂದೆ ನಡೆದ ಸಿದ್ಧರ ಮತ್ತು ಪ್ರಜಾಪತಿ ಮನುವಿನ ನಡುವೆ ನಡೆದ ಸಂವಾದವನ್ನು ಉದಾಹರಿಸುತ್ತಾರೆ.

12037004a ಸಿದ್ಧಾಸ್ತಪೋವ್ರತಪರಾಃ ಸಮಾಗಮ್ಯ ಪುರಾ ವಿಭುಮ್|
12037004c ಧರ್ಮಂ ಪಪ್ರಚ್ಛುರಾಸೀನಮಾದಿಕಾಲೇ ಪ್ರಜಾಪತಿಮ್||

ಹಿಂದೆ ಆದಿಕಾಲದಲ್ಲಿ ತಪೋವ್ರತಗಳಲ್ಲಿ ನಿರತರಾಗಿದ್ದ ಸಿದ್ಧರು ಒಂದಾಗಿ ಧರ್ಮದ ಕುರಿತು ಪ್ರಜಾಪತಿಯಲ್ಲಿ ಕೇಳಿದ್ದರು:

12037005a ಕಥಮನ್ನಂ ಕಥಂ ದಾನಂ ಕಥಮಧ್ಯಯನಂ ತಪಃ|
12037005c ಕಾರ್ಯಾಕಾರ್ಯಂ ಚ ನಃ ಸರ್ವಂ ಶಂಸ ವೈ ತ್ವಂ ಪ್ರಜಾಪತೇ||

"ಪ್ರಜಾಪತೇ! ಅನ್ನವು ಹೇಗಾಗುತ್ತದೆ? ದಾನವು ಹೇಗಾಗುತ್ತದೆ? ಅಧ್ಯಯನ-ತಪಸ್ಸುಗಳು ಹೇಗಾಗುತ್ತವೆ? ಮಾಡಬೇಕಾದ ಕಾರ್ಯಗಳು

ಯಾವುವು? ಮಾಡಬಾರದ ಅಕಾರ್ಯಗಳು ಯಾವುವು? ಇವೆಲ್ಲವನ್ನೂ ನಮಗೆ ಹೇಳು!”

12037006a ತೈರೇವಮುಕ್ತೋ ಭಗವಾನ್ಮನುಃ ಸ್ವಾಯಂಭುವೋಽಬ್ರವೀತ್|
12037006c ಶುಶ್ರೂಷಧ್ವಂ ಯಥಾವೃತ್ತಂ ಧರ್ಮಂ ವ್ಯಾಸಸಮಾಸತಃ||

ಅವರು ಹೀಗೆ ಕೇಳಲು ಭಗವಾನ್ ಸ್ವಾಯಂಭು ಮನುವು ಹೇಳಿದನು: “ಧರ್ಮದ ಕುರಿತು ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ಹೇಗಿರುವುದೋ ಹಾಗೆ ಕೇಳಿರಿ!

12037007a ಅದತ್ತಸ್ಯಾನುಪಾದಾನಂ ದಾನಮಧ್ಯಯನಂ ತಪಃ|
12037007c ಅಹಿಂಸಾ ಸತ್ಯಮಕ್ರೋಧಃ ಕ್ಷಮೇಜ್ಯಾ ಧರ್ಮಲಕ್ಷಣಮ್||

ಕೊಡದಿರುವುದನ್ನು ತೆಗೆದುಕೊಳ್ಳದಿರುವುದು, ದಾನ, ಅಧ್ಯಯನ, ತಪಸ್ಸು, ಅಹಿಂಸೆ, ಸತ್ಯತೆ, ಕೋಪಮಾಡಿಕೊಳ್ಳದಿರುವುದು, ಕ್ಷಮೆ ಮತ್ತು ಯಜ್ಞ - ಇವು ಧರ್ಮದ ಲಕ್ಷಣಗಳು.

12037008a ಯ ಏವ ಧರ್ಮಃ ಸೋಽಧರ್ಮೋಽದೇಶೇಽಕಾಲೇ ಪ್ರತಿಷ್ಠಿತಃ|
12037008c ಆದಾನಮನೃತಂ ಹಿಂಸಾ ಧರ್ಮೋ ವ್ಯಾವಸ್ಥಿಕಃ ಸ್ಮೃತಃ||

ದೇಶ-ಕಾಲಗಳನ್ನನುಸರಿಸಿ ಧರ್ಮವೆನಿಸಿದುದು ಅಧರ್ಮವೂ ಆಗಬಲ್ಲದು. ದಾನಮಾಡದೇ ಇರುವುದು, ಸುಳ್ಳುಹೇಳುವುದು, ಹಿಂಸೆ ಇವುಗಳನ್ನು ದೇಶ-ಕಾಲಗಳನ್ನನುಸರಿಸಿ ಧರ್ಮಕಾರ್ಯಗಳೆಂದೇ ಪರಿಗಣಿಸಲೂಬಹುದು.

12037009a ದ್ವಿವಿಧೌ ಚಾಪ್ಯುಭಾವೇತೌ ಧರ್ಮಾಧರ್ಮೌ ವಿಜಾನತಾಮ್|
12037009c ಅಪ್ರವೃತ್ತಿಃ ಪ್ರವೃತ್ತಿಶ್ಚ ದ್ವೈವಿಧ್ಯಂ ಲೋಕವೇದಯೋಃ||

ದೇಶ-ಕಾಲಗಳನ್ನನುಸರಿಸಿ ಧರ್ಮ ಮತ್ತು ಅಧರ್ಮವೆಂಬ ಎರಡು ವಿಧಗಳನ್ನು ತಿಳಿದುಕೊಳ್ಳಬೇಕು. ಲೋಕಗಳನ್ನು ತಿಳಿದವರು ಅಪ್ರವೃತ್ತಿ ಮತ್ತು ಪ್ರವೃತ್ತಿ[64] ಎಂಬ ಎರಡು ಪ್ರಕಾರಗಳ ಕುರಿತು ಹೇಳುತ್ತಾರೆ.

12037010a ಅಪ್ರವೃತ್ತೇರಮರ್ತ್ಯತ್ವಂ ಮರ್ತ್ಯತ್ವಂ ಕರ್ಮಣಃ ಫಲಮ್|
12037010c ಅಶುಭಸ್ಯಾಶುಭಂ ವಿದ್ಯಾಚ್ಚುಭಸ್ಯ ಶುಭಮೇವ ಚ||
12037011a ಏತಯೋಶ್ಚೋಭಯೋಃ ಸ್ಯಾತಾಂ ಶುಭಾಶುಭತಯಾ ತಥಾ|

ಅಪ್ರವೃತ್ತ ಕರ್ಮಗಳ ಫಲವು ಅಮೃತತ್ವ ಮತ್ತು ಪ್ರವೃತ್ತ ಕರ್ಮಗಳ ಫಲವು ಮರ್ತ್ಯತ್ವ. ಪ್ರವೃತ್ತ ಕರ್ಮಗಳಲ್ಲಿ ಎರಡು ಬಗೆಗಳಿವೆ – ಅಶುಭ ಮತ್ತು ಶುಭ ಕಾರ್ಯಗಳು. ಈ ಎರಡು ಬಗೆಯ ಕರ್ಮಗಳ ಫಲಗಳೂ ಕೂಡ ಶುಭ ಮತ್ತು ಅಶುಭಗಳೆಂದು ವಿಭಾಗಿಸಲ್ಪಟ್ಟಿವೆ.

12037011c ದೈವಂ ಚ ದೈವಯುಕ್ತಂ ಚ ಪ್ರಾಣಶ್ಚ ಪ್ರಲಯಶ್ಚ ಹ||
12037012a ಅಪ್ರೇಕ್ಷಾಪೂರ್ವಕರಣಾದಶುಭಾನಾಂ ಶುಭಂ ಫಲಮ್|

ದೇವತೆಗಳಿಗೆ ಸಂಬಂಧಿಸಿದ, ದೇವತೆಗಳನ್ನೊಳಗೊಂಡ, ತನ್ನ ಪ್ರಾಣವು ಹೋಗುವಾಗ ಅದನ್ನು ಉಳಿಸಿಕೊಳ್ಳಲು ಮಾಡುವ ಅಶುಭ ಕರ್ಮಗಳೂ ಶುಭ ಫಲಗಳನ್ನೇ ಕೊಡುತ್ತವೆ.

12037012c ಊರ್ಧ್ವಂ ಭವತಿ ಸಂದೇಹಾದಿಹ ದೃಷ್ಟಾರ್ಥಮೇವ ವಾ||
12037012e ಅಪ್ರೇಕ್ಷಾಪೂರ್ವಕರಣಾತ್ಪ್ರಾಯಶ್ಚಿತ್ತಂ ವಿಧೀಯತೇ||

---

[64] ಅಹಂಕಾರವಿಲ್ಲದೇ ಕರ್ಮಗಳನ್ನು ಮಾಡಿ ಕರ್ಮಫಲಗಳಲ್ಲಿ ನಿರಾಸಕ್ತನಾಗಿರುವುದು ಅಪ್ರವೃತ್ತಿ; ಅಹಂಕಾರದಿಂದ ಕರ್ಮಗಳನ್ನು ಮಾಡಿ ಅವುಗಳ ಫಲಗಳಲ್ಲಿ ಆಸಕ್ತಿಯನ್ನಿಟ್ಟುಕೊಂಡಿರುವುದು ಪ್ರವೃತ್ತಿ.

ಅಪೇಕ್ಷಪೂರ್ವಕವಾಗಿ ಅಶುಭಕರ್ಮಗಳನ್ನು ಮಾಡಿದವರಿಗೆ, ಮತ್ತು ತಾನು ಮಾಡಿರುವ ಕಾರ್ಯವು ಅಶುಭವಾಗಿರಬಹುದೋ ಎಂದು ಸಂಶಯವಾಗಿರುವ ಕಾರ್ಯವನ್ನು ಮಾಡಿದವರಿಗೆ ಪ್ರಾಯಶ್ಚಿತ್ತಗಳನ್ನು ಹೇಳಲಾಗಿದೆ.

12037013a ಕ್ರೋಧಮೋಹಕೃತೇ ಚೈವ ದೃಷ್ಟಾಂತಾಗಮಹೇತುಭಿಃ|
12037013c ಶರೀರಾಣಾಮುಪಕ್ಲೇಶೋ ಮನಸಶ್ಚ ಪ್ರಿಯಾಪ್ರಿಯೇ||
12037013e ತದೌಷಧೈಶ್ಚ ಮಂತ್ರೈಶ್ಚ ಪ್ರಾಯಶ್ಚಿತ್ತೈಶ್ಚ ಶಾಮ್ಯತಿ||

ಕ್ರೋಧ-ಮೋಹಗಳಿಗೆ ವಶನಾಗಿ ಮನಸ್ಸಿಗೆ ಪ್ರಿಯವನ್ನುಂಟುಮಾಡಲು ಅಥವಾ ಮನಸ್ಸಿಗೆ ಅಪ್ರಿಯವಾದುದನ್ನು ವಿನಾಶಗೊಳಿಸಲು ಮತ್ತು ಹಿಂದೆ ಉದಾಹರಿಸಿದ ದೃಷ್ಟಾಂತಗಳ ಪ್ರಕಾರ ಅಶುಭಕಾರ್ಯವನ್ನೆಸಗಿದರೆ ಅವುಗಳ ಪಾಪಗಳನ್ನು ಶರೀರಬಾಧೆಗಳಿಂದ, ಔಷಧಿಗಳಿಂದ ಮತ್ತು ಮಂತ್ರಗಳಿಂದ ಪ್ರಾಯಶ್ಚಿತ್ತ ಮಾಡಿಕೊಂಡು ನಿವಾರಿಸಿಕೊಳ್ಳಬಹುದು.

12037014a ಜಾತಿಶ್ರೇಣ್ಯಧಿವಾಸಾನಾಂ ಕುಲಧರ್ಮಾಂಶ್ಚ ಸರ್ವತಃ|
12037014c ವರ್ಜಯೇನ್ನ ಹಿ ತಂ ಧರ್ಮಂ ಯೇಷಾಂ ಧರ್ಮೋ ನ ವಿದ್ಯತೇ||

ವರ್ಣ-ಆಶ್ರಮ-ಕುಲಧರ್ಮಗಳನ್ನು ಸಂಪೂರ್ಣವಾಗಿ ವರ್ಜಿಸಿದವರಿಗೆ ಯಾವುದೇ ರೀತಿಯ ಪ್ರಾಯಶ್ಚಿತ್ತಗಳೂ ಇರುವುದಿಲ್ಲ.

12037015a ದಶ ವಾ ವೇದಶಾಸ್ತ್ರಜ್ಞಾಸ್ತ್ರಯೋ ವಾ ಧರ್ಮಪಾಠಕಾಃ|
12037015c ಯದ್ಬ್ರೂಯುಃ ಕಾರ್ಯ ಉತ್ಪನ್ನೇ ಸ ಧರ್ಮೋ ಧರ್ಮಸಂಶಯೇ||

ಧರ್ಮಸಂಶಯವು ಉತ್ಪನ್ನವಾದಾಗ ಯಾವ ಕಾರ್ಯಗಳನ್ನು

ಮಾಡಬೇಕೆನ್ನುವುದನ್ನು ವೇದ-ಶಾಸ್ತ್ರಗಳನ್ನು ತಿಳಿದ ಹತ್ತು ಅಥವಾ ಧರ್ಮಪಾಠಕರಾದ ಮೂರು ಮಂದಿಗಳ ನಿರ್ಣಯದಂತೆ ಮಾಡಬೇಕು.

12037016a ಅರುಣಾ ಮೃತ್ತಿಕಾ ಚೈವ ತಥಾ ಚೈವ ಪಿಪೀಲಕಾಃ|
12037016c ಶ್ಲೇಷ್ಮಾತಕಸ್ತಥಾ ವಿಪ್ರೈರಭಕ್ಷ್ಯಂ ವಿಷಮೇವ ಚ||

ಬ್ರಾಹ್ಮಣನಾದವನು ಕೆಂಪು ಮಣ್ಣನ್ನೂ, ಇರುವೆಗಳನ್ನೂ, ಚಳ್ಳೆಹಣ್ಣನ್ನೂ, ವಿಷವನ್ನೂ ತಿನ್ನಬಾರದು.

12037017a ಅಭಕ್ಷ್ಯಾ ಬ್ರಾಹ್ಮಣೈರ್ಮತ್ಸ್ಯಾಃ ಶಕಲೈರ್ಯೇ ವಿವರ್ಜಿತಾಃ|
12037017c ಚತುಷ್ಪಾತ್ಕಚ್ಚಪಾದನ್ಯೋ ಮಂಡೂಕಾ ಜಲಜಾಶ್ಚ ಯೇ||

ಆಮೆಗಳನ್ನು, ಮುಳ್ಳುಗಳಿರದ ಮೀನುಗಳನ್ನು, ಕಪ್ಪೆಗಳನ್ನೂ ಬಿಟ್ಟು ಬೇರೆ ಯಾವ ಜಲಚರ ಪ್ರಾಣಿಗಳನ್ನೂ ಬ್ರಾಹ್ಮಣರು ತಿನ್ನಬಾರದು.

12037018a ಭಾಸಾ ಹಂಸಾಃ ಸುಪರ್ಣಾಶ್ಚ ಚಕ್ರವಾಕಾ ಬಕಾಃ ಪ್ಲವಾಃ|
12037018c ಕಂಕೋ ಮದ್ಗುಶ್ಚ ಗೃಧ್ರಾಶ್ಚ ಕಾಕೋಲೂಕಂ ತಥೈವ ಚ||
12037019a ಕ್ರವ್ಯಾದಾಃ ಪಕ್ಷಿಣಃ ಸರ್ವೇ ಚತುಷ್ಪಾದಾಶ್ಚ ದಂಷ್ಟ್ರಿಣಃ|
12037019c ಯೇಷಾಂ ಚೋಭಯತೋ ದಂತಾಶ್ಚತುರ್ದಂಷ್ಟ್ರಾಶ್ಚ ಸರ್ವಶಃ||

ಭಾಸ, ಹಂಸ, ಗರುಡ, ಚಕ್ರವಾಕ, ಬಕಪಕ್ಷಿ, ಕಾಗೆ, ಮದು, ಹದ್ದು, ಗಿಡುಗ, ಗೂಬೆ, ಮಾಂಸವನ್ನು ತಿನ್ನುವ ಎಲ್ಲ ಪಕ್ಷಿಗಳು, ನಾಲ್ಕು ಕಾಲಿನ ಕೋರೆಹಲ್ಲುಗಳಿರುವ ಹಿಂಸಮೃಗಗಳು, ಎರಡೂ ಕಡೆ ಹಲ್ಲಿರುವ ಪ್ರಾಣಿಗಳು, ನಾಲ್ಕು ಕೋರೆದಾಡೆಗಳಿರುವ ಪ್ರಾಣಿಗಳು ಇವೆಲ್ಲವೂ ಬ್ರಾಹ್ಮಣರಿಗೆ ಅಭಕ್ಷ್ಯವಾದವುಗಳು.

12037020a ಏಡಕಾಶ್ವಖರೋಷ್ಟ್ರೀಣಾಂ ಸೂತಿಕಾನಾಂ ಗವಾಮಪಿ|

12037020c ಮಾನುಷೀಣಾಂ ಮೃಗೀಣಾಂ ಚ ನ ಪಿಬೇದ್ಬ್ರಾಹ್ಮಣಃ ಪಯಃ॥

ಕುರಿ, ಕುದುರೆ, ಕತ್ತೆ, ಒಂಟೆ, ಮತ್ತು ಜನನವಾಗಿ ಹತ್ತು ದಿನಗಳ ಒಳಗಿನ ಮನುಷ್ಯ ಸ್ತ್ರೀಯ, ಜಿಂಕೆಯ ಮತ್ತು ಹಸುಗಳ ಹಾಲನ್ನು ಬ್ರಾಹ್ಮಣನು ಕುಡಿಯಬಾರದು.

12037021a ಪ್ರೇತಾನ್ನಂ ಸೂತಿಕಾನ್ನಂ ಚ ಯಚ್ಚ ಕಿಂ ಚಿದನಿರ್ದಶಮ್|
12037021c ಅಭೋಜ್ಯಂ ಚಾಪ್ಯಪೇಯಂ ಚ ಧೇನ್ವಾ ದುಗ್ಧಮನಿರ್ದಶಮ್॥

ಪ್ರೇತಾನ್ನ[65] - ಸೂತಿಕಾನ್ನ[66] ಗಳು ಬ್ರಾಹ್ಮಣನಿಗೆ ನಿಷಿದ್ಧ. ಹಾಗೆಯೇ ಕರುಹಾಕಿದ ಹಸುವಿನ ಹಾಲನ್ನು ಮೊದಲ ಹತ್ತುದಿನಗಳು ಕುಡಿಯಬಾರದು.

12037022a ತಕ್ಷ್ಣಶ್ಚರ್ಮಾವಕರ್ತುಶ್ಚ ಪುಂಶ್ಚಲ್ಯಾ ರಜಕಸ್ಯ ಚ|
12037022c ಚಿಕಿತ್ಸಕಸ್ಯ ಯಚ್ಚಾನ್ನಮಭೋಜ್ಯಂ ರಕ್ಷಿಣಸ್ತಥಾ॥

ಬಡಗಿ, ಚರ್ಮಾರ, ವ್ಯಭಿಚಾರಿಣೀ, ಅಗಸ, ವೈದ್ಯ ಮತ್ತು ಗ್ರಾಮರಕ್ಷಕರ ಅನ್ನವನ್ನೂ ತಿನ್ನಬಾರದು.

12037023a ಗಣಗ್ರಾಮಾಭಿಶಸ್ತಾನಾಂ ರಂಗಸ್ತ್ರೀಜೀವಿನಶ್ಚ ಯೇ|
12037023c ಪರಿವಿತ್ತಿನಪುಂಷಾಂ ಚ ಬಂದಿದ್ಯೂತವಿದಾಂ ತಥಾ॥

ಸಮಾಜ-ಗ್ರಾಮಗಳಿಂದ ಬಹಿಷ್ಕೃತನಾದವನ, ನರ್ತಕಿಯರ ಜೀವನವನ್ನು ನಡೆಸುವವರ, ತಮ್ಮನ ವಿವಾಹವಾದ ನಂತರ ವಿವಾಹವಾದವನ, ವಂದಿ-ಮಾಗದರ ಮತ್ತು ಜೂಜಿನಲ್ಲಿ

---

65 ಮರಣವಾದವರ ಮನೆಯಲ್ಲಿ ಹತ್ತು ದಿನಗಳ ಪರ್ಯಂತದ ಊಟ

66 ಜನನವಾದವರ ಮನೆಯಲ್ಲಿ ಹತ್ತು ದಿನಗಳ ಪರ್ಯಂತದ ಊಟ

ಆಸಕ್ತನಾಗಿರುವವನ ಅನ್ನವನ್ನೂ ತಿನ್ನಬಾರದು.

12037024a ವಾರ್ಯಮಾಣಾಹೃತಂ ಚಾನ್ನಂ ಶುಕ್ತಂ ಪರ್ಯುಷಿತಂ ಚ ಯತ್|
12037024c ಸುರಾನುಗತಮುಚ್ಚಿಷ್ಟಮಭೋಜ್ಯಂ ಶೇಷಿತಂ ಚ ಯತ್||

ಎಡಗೈಯಿಂದ ಬಡಿಸಿದ ಅನ್ನ, ಊಟಕ್ಕೆ ಕುಳಿತುಕೊಳ್ಳುವುದಕ್ಕೆ ಮೊದಲೇ ಬಡಿಸಿದ ಅನ್ನ, ಒಂದು ರಾತ್ರಿಯನ್ನು ಕಳೆದಿರುವ ಅನ್ನ, ಮದ್ಯದ ಸಮೀಪದಲ್ಲಿರುವ ಅನ್ನ, ಇನ್ನೊಬ್ಬರಿಗೆ ಬಡಿಸಿ ಉಳಿದ ಅನ್ನ, ಎಲ್ಲರೂ ತಿಂದು ಉಳಿದ ಅನ್ನ ಇವುಗಳನ್ನೂ ತಿನ್ನಬಾರದು.

12037025a ಪಿಷ್ಟಮಾಂಸೇಕ್ಷುಶಾಕಾನಾಂ ವಿಕಾರಾಃ ಪಯಸಸ್ತಥಾ|
12037025c ಸಕ್ತುಧಾನಾಕರಂಭಾಶ್ಚ ನೋಪಭೋಜ್ಯಾಶ್ಚಿರಸ್ಥಿತಾಃ||

ಹಿಟ್ಟು, ಕಬ್ಬಿನರಸ, ತರಕಾರಿ, ಹಾಲು ಇವುಗಳನ್ನು ವಿಕೃತಗೊಳಿಸಿ ತಯಾರಿಸಿದ ಆಹಾರ, ತಯಾರಿಸಿ ಬಹಳ ಸಮಯವಾದ ತಂಬಿಟ್ಟು, ಹುರಿದಹಿಟ್ಟು ಮತ್ತು ಕಲಸಿದ ಅನ್ನ ಇವುಗಳನ್ನೂ ತಿನ್ನಬಾರದು.

12037026a ಪಾಯಸಂ ಕೃಸರಂ ಮಾಂಸಮಪೂಪಾಶ್ಚ ವೃಥಾ ಕೃತಾಃ|
12037026c ಅಭೋಜ್ಯಾಶ್ಚಾಪ್ಯಭಕ್ಷ್ಯಾಶ್ಚ ಬ್ರಾಹ್ಮಣೈರ್ಗೃಹಮೇಧಿಭಿಃ||

ದೇವತಾಪ್ರೀತ್ಯರ್ಥವಾಗಿ ಮಾಡದೇ ಇದ್ದ ಪಾಯಸ, ತಿಲಾನ್ನ, ಮಾಂಸ, ಹೋಳಿಗೆ ಇವುಗಳನ್ನು ಗೃಹಸ್ಥ ಬ್ರಾಹ್ಮಣನು ತಿನ್ನಬಾರದು ಮತ್ತು ಕುಡಿಯಬಾರದು.

12037027a ದೇವಾನ್ಪಿತೄನ್ಮನುಷ್ಯಾಂಶ್ಚ ಮುನೀನ್ಗೃಹ್ಯಾಶ್ಚ ದೇವತಾಃ|
12037027c ಪೂಜಯಿತ್ವಾ ತತಃ ಪಶ್ಚಾದ್ಗೃಹಸ್ಥೋ ಭೋಕ್ತುಮರ್ಹತಿ||

ದೇವತೆಗಳು, ಋಷಿಗಳು, ಪಿತೃಗಳು, ಮನುಷ್ಯ-ಮುನಿಗಳು ಮತ್ತು

ಮನೆಯ ದೇವತೆಗಳನ್ನು ಪೂಜಿಸಿದ ನಂತರವೇ ಗೃಹಸ್ಥನಾದವನು ಊಟ ಮಾಡಬೇಕು.

12037028a ಯಥಾ ಪ್ರವ್ರಜಿತೋ ಭಿಕ್ಷುರ್ಗೃಹಸ್ಥಃ ಸ್ವಗೃಹೇ ವಸೇತ್|
12037028c ಏವಂವೃತ್ತಃ ಪ್ರಿಯೈರ್ದಾರೈಃ ಸಂವಸನ್ಧರ್ಮಮಾಪ್ನುಯಾತ್||

ಪರಿವ್ರಾಜಕ ಭಿಕ್ಷುವಂತೆ ಪತ್ನೀ-ಪುತ್ರರೊಡನೆ ತನ್ನ ಮನೆಯಲ್ಲಿಯೇ ವಾಸಿಸಿರುವ ಗೃಹಸ್ಥನು ಧರ್ಮಫಲಗಳನ್ನು ಪಡೆಯುತ್ತಾನೆ.

12037029a ನ ದದ್ಯಾದ್ಯಶಸೇ ದಾನಂ ನ ಭಯಾನ್ನೋಪಕಾರಿಣೇ|
12037029c ನ ನೃತ್ತಗೀತಶೀಲೇಷು ಹಾಸಕೇಷು ಚ ಧಾರ್ಮಿಕಃ||

ಧಾರ್ಮಿಕನಾಗಿರುವವನು ಯಶಸ್ಸಿಗಾಗಲೀ, ಭಯದಿಂದಾಗಲೀ, ನೃತ್ಯಗೀತೆಗಳಲ್ಲಿ ಮತ್ತು ಹಾಸ್ಯವೃತ್ತಿಗಳಲ್ಲಿ ತೊಡಗಿರುವವರಿಗೆ ದಾನಮಾಡಬಾರದು.

12037030a ನ ಮತ್ತೇ ನೈವ ಚೋನ್ಮತ್ತೇ ನ ಸ್ತೇನೇ ನ ಚಿಕಿತ್ಸಕೇ|
12037030c ನ ವಾಗ್ಘಿನೇ ವಿವರ್ಣೇ ವಾ ನಾಂಗಹೀನೇ ನ ವಾಮನೇ||
12037031a ನ ದುರ್ಜನೇ ದೌಷ್ಕುಲೇ ವಾ ವ್ರತೈರ್ವಾ ಯೋ ನ ಸಂಸ್ಕೃತಃ|
12037031c ಅಶ್ರೋತ್ರಿಯೇ ಮೃತಂ ದಾನಂ ಬ್ರಾಹ್ಮಣೇऽಬ್ರಹ್ಮವಾದಿನಿ||

ಬ್ರಹ್ಮವಾದಿನಿಯಾದ ಬ್ರಾಹ್ಮಣನನ್ನು ಬಿಟ್ಟು ಮತ್ತನಾಗಿರುವವನಿಗೂ, ಹುಚ್ಚನಿಗೂ, ಕಳ್ಳನಿಗೂ, ಪರನಿಂದೆಯನ್ನು ಮಾಡುವವನಿಗೂ, ಮೂಕನಿಗೂ, ಮುಖದಲ್ಲಿ ವರ್ಚಸ್ಸಿಲ್ಲದಿರುವವನಿಗೂ, ಅಂಗವಿಕಲನಿಗೂ, ಗುಳ್ಳನಿಗೂ, ದುಷ್ಟನಿಗೂ, ದುಷ್ಕುಲದಲ್ಲಿ ಹುಟ್ಟಿದವನಿಗೂ, ವ್ರತಗಳನ್ನು ಆಚರಿಸದೇ ಸುಸಂಕೃತನಾಗದೇ ಇರುವವನಿಗೂ, ವೇದದಿಂದ ವಿಹೀನನಾದವನಿಗೂ

ದಾನನೀಡಬಾರದು.

12037032a ಅಸಮ್ಯಕ್ಕೃವ ಯದ್ದತ್ತಮಸಮ್ಯಕ್ಚ ಪ್ರತಿಗ್ರಹಃ|
12037032c ಉಭಯೋಃ ಸ್ಯಾದನರ್ಥಾಯ ದಾತುರಾದಾತುರೇವ ಚ||

ಶ್ರದ್ಧೆಯಿಲ್ಲದೇ ಶಾಸ್ತ್ರವಿಹಿತವಾಗಿ ಅನರ್ಹನಿಗೆ ಕೊಟ್ಟ ದಾನವು ದಾನಕೊಡುವವನಿಗೂ ಮತ್ತು ದಾನವನ್ನು ಸ್ವೀಕರಿಸಿದವನಿಗೂ ಅನರ್ಥಗಳನ್ನುಂಟುಮಾಡುತ್ತದೆ.

12037033a ಯಥಾ ಖದಿರಮಾಲಂಬ್ಯ ಶಿಲಾಂ ವಾಪ್ಯರ್ಣವಂ ತರನ್|
12037033c ಮಜ್ಜತೇ ಮಜ್ಜತೇ ತದ್ವದ್ದಾತಾ ಯಶ್ಚ ಪ್ರತೀಚ್ಚಕಃ||

ಕಗ್ಗಲೀ ಮರದ ತುಂಡನ್ನೋ ಅಥವಾ ಕಲ್ಲುಗುಂಡನ್ನೋ ಆಶ್ರಯಿಸಿ ಸಮುದ್ರವನ್ನು ದಾಟಲು ಹೋದವನಂತೆ ದಾನಕೊಟ್ಟವನೂ ದಾನವನ್ನು ಪರಿಗ್ರಹಿಸಿದವನೂ ಅಧರ್ಮದಲ್ಲಿ ಮುಳುಗಿಹೋಗುತ್ತಾರೆ.

12037034a ಕಾಷ್ಠೈರಾರ್ದ್ರೈರ್ಯಥಾ ವಹ್ನಿರುಪಸ್ತೀರ್ಣೋ ನ ದೀಪ್ಯತೇ|
12037034c ತಪಃಸ್ವಾಧ್ಯಾಯಚಾರಿತ್ರೈರೇವಂ ಹೀನಃ ಪ್ರತಿಗ್ರಹೀ||

ಹಸಿಯಾದ ಕಟ್ಟಿಗೆಯನ್ನು ಹಾಕಿದ ಅಗ್ನಿಯು ಹೇಗೆ ಚೆನ್ನಾಗಿ ಉರಿಯುವುದಿಲ್ಲವೋ ಹಾಗೆ ತಪಸ್ಸು-ಸ್ವಾಧ್ಯಾಯ ಮತ್ತು ಚಾರಿತ್ರಹೀನನಾಗಿರವವನು ದಾನವನ್ನು ಸ್ವೀಕರಿಸಿದರೆ ಅಂಥವನು ಶೋಭಿಸುವುದಿಲ್ಲ.

12037035a ಕಪಾಲೇ ಯದ್ವದಾಪಃ ಸ್ಯುಃ ಶ್ವದೃತೌ ವಾ ಯಥಾ ಪಯಃ|
12037035c ಆಶ್ರಯಸ್ಥಾನದೋಷೇಣ ವೃತ್ತಹೀನೇ ತಥಾ ಶ್ರುತಮ್||

ಆಶ್ರಯಸ್ಥಾನದೋಷಗಳಿಂದ ಶುದ್ಧವಾದ ನೀರನ್ನು ಕಪಾಲದಲ್ಲಿಟ್ಟರೆ

ಅಥವಾ ಹಾಲನ್ನು ನಾಯಿಯ ಚರ್ಮದ ಚೀಲದಲ್ಲಿಟ್ಟರೆ ಹೇಗೋ
ಹಾಗೆ ಆಚಾರಹೀನನಾದವನಲ್ಲಿರುವ ವೇದಗಳೂ
ದೂಷಿತಗೊಳ್ಳುತ್ತವೆ.

12037036a ನಿರ್ಮಂತ್ರೋ ನಿರ್ವ್ರತೋ ಯಃ ಸ್ಯಾದಶಾಸ್ತ್ರಜ್ಞೋಽನಸೂಯಕಃ|
12037036c ಅನುಕ್ರೋಶಾತ್ಪ್ರದಾತವ್ಯಂ ದೀನೇಷ್ವೇವಂ ನರೇಷ್ವಪಿ||

ನಿರ್ಮಂತ್ರನಾಗಿದ್ದರೂ, ವ್ರತಾದಿಗಳನ್ನು ನಡೆಸದೇ ಇದ್ದರೂ,
ಶಾಸ್ತ್ರಜ್ಞಾನಗಳನ್ನು ಹೊಂದಿಲ್ಲದಿದ್ದರೂ, ಅನಸೂಯಕನಾದ ದೀನ
ನರನಿಗೆ ಅನುಕ್ರೋಶದಿಂದ ದಾನವನ್ನು ಕೊಡಬಹುದು.

12037037a ನ ವೈ ದೇಯಮನುಕ್ರೋಶಾದ್ದೀನಾಯಾಪ್ಯಪಕಾರಿಣೇ|
12037037c ಆಪ್ತಾಚರಿತಮಿತ್ಯೇವ ಧರ್ಮ ಇತ್ಯೇವ ವಾ ಪುನಃ||

ಇತರರಿಗೆ ಯಾವಾಗಲೂ ಕೇಡನ್ನೇ ಬಯಸುವವನಿಗೆ, ಅವನು
ದರಿದ್ರನೇ ಆಗಿದ್ದರೂ, ದೀನನೇ ಆಗಿದ್ದರೂ, ಅನುಕಂಪದಿಂದ
ದಾನಮಾಡಬಾರದು.

12037038a ನಿಷ್ಕಾರಣಂ ಸ್ಮ ತದ್ದತ್ತಂ ಬ್ರಾಹ್ಮಣೇ ಧರ್ಮವರ್ಜಿತೇ|
12037038c ಭವೇದಪಾತ್ರದೋಷೇಣ ನ ಮೇಽತ್ರಾಸ್ತಿ ವಿಚಾರಣಾ||

ಬ್ರಹ್ಮವರ್ಜಿತ ಬ್ರಾಹ್ಮಣನಿಗೆ ಕೊಟ್ಟ ದಾನವು ಅಪಾತ್ರನಿಗೆ
ದಾನಮಾಡಿದ ದೋಷದಿಂದ ಕೂಡಿರುವುದರಿಂದ ನಿಷ್ಫಲವಾಗುತ್ತದೆ
ಎನ್ನುವುದರಲ್ಲಿ ವಿಚಾರ ಮಾಡುವುದೇ ಬೇಕಾಗಿಲ್ಲ.

12037039a ಯಥಾ ದಾರುಮಯೋ ಹಸ್ತೀ ಯಥಾ ಚರ್ಮಮಯೋ ಮೃಗಃ|
12037039c ಬ್ರಾಹ್ಮಣಶ್ಚಾನಧೀಯಾನಸ್ತ್ರಯಸ್ತೇ ನಾಮಧಾರಕಾಃ||

ಮರದಿಂದ ತಯಾರಿಸಿದ ಆನೆ, ಚರ್ಮದಿಂದ ತಯಾರಿಸಿದ ಜಿಂಕೆ ಮತ್ತು ಬ್ರಹ್ಮಜ್ಞಾನವಿಹೀನ ಬ್ರಾಹ್ಮಣ ಈ ಮೂವರೂ ಕೇವಲ ನಾಮಧಾರಕಗಳೇ ಹೊರತು ಅವುಗಳಲ್ಲಿ ನಿಜವಾದ ಸತ್ತ್ವವು ಇರುವುದಿಲ್ಲ.

12037040a ಯಥಾ ಷಂಢೋಽಫಲಃ ಸ್ತ್ರೀಷು ಯಥಾ ಗೌರ್ಗವಿ ಚಾಫಲಾ|
12037040c ಶಕುನಿರ್ವಾಪ್ಯಪಕ್ಷಃ ಸ್ಯಾನ್ನಿರ್ಮಂತ್ರೋ ಬ್ರಾಹ್ಮಣಸ್ತಥಾ||

ಷಂಡನು ಸ್ತ್ರೀಯರಲ್ಲಿ, ಅಥವಾ ಹಸುವು ಇನ್ನೊಂದು ಹಸುವಿನಲ್ಲಿ ಹೇಗೆ ಫಲವನ್ನು ಹೊಂದಲಾರದೋ ಮತ್ತು ರೆಕ್ಕೆಗಳಿಲ್ಲದ ಪಕ್ಷಿಯು ಹೇಗೋ ಹಾಗೆ ಮಂತ್ರಗಳಿಲ್ಲದ ಬ್ರಾಹ್ಮಣನೂ ನಿಷ್ಪ್ರಯೋಜಕನು.

12037041a ಗ್ರಾಮಧಾನ್ಯಂ ಯಥಾ ಶೂನ್ಯಂ ಯಥಾ ಕೂಪಶ್ಚ ನಿರ್ಜಲಃ|
12037041c ಯಥಾ ಹುತಮನಗ್ನೌ ಚ ತಥೈವ ಸ್ಯಾನ್ನಿರಾಕೃತೌ||

ಧಾನ್ಯಗಳಿಲ್ಲದ ಗ್ರಾಮ ಮತ್ತು ನೀರಿಲ್ಲದ ಬಾವಿಯಂತೆ ವೇದಗಳಿಲ್ಲದ ಬ್ರಾಹ್ಮಣನಿಗೆ ದಾನವನ್ನಿತ್ತರೆ ಅಗ್ನಿಯಿಲ್ಲದ ಬೂದಿಯಲ್ಲಿ ಹೋಮಮಾಡಿದಷ್ಟೇ ಪ್ರಯೋಜನವಾಗುತ್ತದೆ.

12037042a ದೇವತಾನಾಂ ಪಿತೃಣಾಂ ಚ ಹವ್ಯಕವ್ಯವಿನಾಶನಃ|
12037042c ಶತ್ರುರರ್ಥಹರೋ ಮೂರ್ಖೋ ನ ಲೋಕಾನ್ಪ್ರಾಪ್ತುಮರ್ಹತಿ||

ವೇದವಿದ್ಯಾವಿಹೀನ ಬ್ರಾಹ್ಮಣನು ದೇವತೆಗಳಿಗೆ ಮತ್ತು ಪಿತೃಗಳಿಗೆ ನೀಡುವ ಹವ್ಯ-ಕವ್ಯಗಳನ್ನು ನಾಶಗೊಳಿಸುತ್ತಾನೆ. ಅಂಥಹ ಮೂರ್ಖನು ಧನಾಪಹಾರೀ ಶತ್ರುವಾಗಿ ಉತ್ತಮ ಲೋಕಗಳನ್ನು ಪಡೆಯಲು ಅರ್ಹನಾಗುವುದಿಲ್ಲ.”

12037043a ಏತತ್ತೇ ಕಥಿತಂ ಸರ್ವಂ ಯಥಾ ವೃತ್ತಂ ಯುಧಿಷ್ಠಿರ|
12037043c ಸಮಾಸೇನ ಮಹದ್ಧ್ಯೇತಚ್ಛ್ರೋತವ್ಯಂ ಭರತರ್ಷಭ||

ಯುಧಿಷ್ಠಿರ! ಭರತರ್ಷಭ! ಮಹಾ ಅರ್ಥಯುಕ್ತವಾದ ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಸಂಕ್ಷಿಪ್ತವಾಗಿ ನಿನಗೆ ಹೇಳಿದ್ದೇನೆ."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವ್ಯಾಸವಾಕ್ಯೇ ಸಪ್ತತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವ್ಯಾಸವಾಕ್ಯ ಎನ್ನುವ ಮೂವತ್ತೇಳನೇ ಅಧ್ಯಾಯವು.

೩೮

ಯುಧಿಷ್ಠಿರನ ಹಸ್ತಿನಾಪುರ ಪ್ರವೇಶ

ವ್ಯಾಸ ಮತ್ತು ಕೃಷ್ಣರ ಆಜ್ಞೆಯಂತೆ ಯುಧಿಷ್ಠಿರನು ನಗರವನ್ನು ಪ್ರವೇಶಿಸಿದುದು (1-49).

12038001 ಯುಧಿಷ್ಠಿರ ಉವಾಚ|
12038001a ಶ್ರೋತುಮಿಚ್ಛಾಮಿ ಭಗವನ್ವಿಸ್ತರೇಣ ಮಹಾಮುನೇ|
12038001c ರಾಜಧರ್ಮಾನ್ದ್ವಿಜಶ್ರೇಷ್ಠ ಚಾತುರ್ವರ್ಣ್ಯಸ್ಯ ಚಾಖಿಲಾನ್||

ಯುಧಿಷ್ಠಿರನು ಹೇಳಿದನು: "ಭಗವನ್! ಮಹಾಮುನೇ! ದ್ವಿಜಶ್ರೇಷ್ಠ! ರಾಜಧರ್ಮಗಳನ್ನೂ ಚಾತುರ್ವರ್ಣಗಳ ಧರ್ಮಗಳನ್ನೂ ಸಂಪೂರ್ಣವಾಗಿ ವಿಸ್ತಾರವಾಗಿ ಕೇಳ ಬಯಸುತ್ತೇನೆ.

12038002a ಆಪತ್ಸು ಚ ಯಥಾ ನೀತಿರ್ವಿಧಾತವ್ಯಾ ಮಹೀಕ್ಷಿತಾ|

12038002c ಧರ್ಮ್ಯಮಾಲಂಬ್ಯ ಪಂಥಾನಂ ವಿಜಯೇಯಂ ಕಥಂ ಮಹೀಮ್‌॥

ಮಹೀಕ್ಷಿತನಾಗಿ ನಾನು ಆಪತ್ಕಾಲಗಳಲ್ಲಿ ಯಾವ ನೀತಿಗಳನ್ನು ಬಳಸಬೇಕು? ಧರ್ಮದ ಮಾರ್ಗವನ್ನೇ ಅನುಸರಿಸಿ ನಾನು ಹೇಗೆ ಈ ಭೂಮಿಯನ್ನು ಜಯಿಸಬಲ್ಲೆ?

12038003a ಪ್ರಾಯಶ್ಚಿತ್ತಕಥಾ ಹ್ಯೇಷಾ ಭಕ್ಷ್ಯಾಭಕ್ಷ್ಯವಿವರ್ಧಿತಾ|
12038003c ಕೌತೂಹಲಾನುಪ್ರವಣಾ ಹರ್ಷಂ ಜನಯತೀವ ಮೇ॥

ಭಕ್ಷ್ಯ-ಅಭಕ್ಷ್ಯಗಳಿಂದ ಕೂಡಿದ ಪ್ರಾಯಶ್ಚಿತ್ತ ಪ್ರಕರಣವು ನನ್ನಲ್ಲಿ ಕುತೂಹಲವನ್ನುಂಟುಮಾಡಿದೆ. ಅದನ್ನು ಕೇಳಿ ನನಗೆ ಹರ್ಷವೂ ಆಗುತ್ತಿದೆ.

12038004a ಧರ್ಮಚರ್ಯಾ ಚ ರಾಜ್ಯಂ ಚ ನಿತ್ಯಮೇವ ವಿರುಧ್ಯತೇ|
12038004c ಯೇನ ಮುಹ್ಯತಿ ಮೇ ಚೇತಶ್ಚಿಂತಯಾನಸ್ಯ ನಿತ್ಯಶಃ॥

ಧರ್ಮಾಚರಣೆ ಮತ್ತು ರಾಜ್ಯಾಡಳಿತ ಇವೆರಡೂ ನಿತ್ಯವೂ ಒಂದಕ್ಕೊಂದು ವಿರೋಧವಾಗಿಯೇ ಇರುತ್ತವೆ. ಇದನ್ನೇ ಸದಾ ಚಿಂತಿಸುತ್ತಿರುವ ನಾನು ಒಮ್ಮೊಮ್ಮೆ ಮೋಹಿತನಾಗುತ್ತೇನೆ.””

12038005 ವೈಶಂಪಾಯನ ಉವಾಚ|
12038005a ತಮುವಾಚ ಮಹಾತೇಜಾ ವ್ಯಾಸೋ ವೇದವಿದಾಂ ವರಃ|
12038005c ನಾರದಂ ಸಮಭಿಪ್ರೇಕ್ಷ್ಯ ಸರ್ವಂ ಜಾನನ್ಪುರಾತನಮ್‌॥

ವೈಶಂಪಾಯನನು ಹೇಳಿದನು: “ಆಗ ಮಹಾತೇಜಸ್ವಿ ವೇದವಿದರಲ್ಲಿ ಶ್ರೇಷ್ಠ ವ್ಯಾಸನು ಸರ್ವಜ್ಞ ಪುರಾತನ ನಾರದನನ್ನು ನೋಡಿ ಯುಧಿಷ್ಠಿರನಿಗೆ ಹೇಳಿದನು:

12038006a ಶ್ರೋತುಮಿಚ್ಚಸಿ ಚೇದ್ಧರ್ಮಾನಖಿಲೇನ ಯುಧಿಷ್ಠಿರ|
12038006c ಪ್ರೈಹಿ ಭೀಷ್ಮಂ ಮಹಾಬಾಹೋ ವೃದ್ಧಂ ಕುರುಪಿತಾಮಹಮ್||

ಯುಧಿಷ್ಠಿರ! ಮಹಾಬಾಹೋ! ಅಖಿಲ ಧರ್ಮಗಳನ್ನೂ ನೀನು ತಿಳಿಯಬಯಸಿದುದ್ದಾದರೆ ವೃದ್ಧ ಕುರುಪಿತಾಮಹ ಭೀಷ್ಮನ ಬಳಿ ಹೋಗು!

12038007a ಸ ತೇ ಸರ್ವರಹಸ್ಯೇಷು ಸಂಶಯಾನ್ಮನಸಿ ಸ್ಥಿತಾನ್|
12038007c ಚೇತ್ತಾ ಭಾಗೀರಥೀಪುತ್ರಃ ಸರ್ವಜ್ಞಃ ಸರ್ವಧರ್ಮವಿತ್||

ಆ ಭಾಗೀರಥೀಪುತ್ರ ಸರ್ವಜ್ಞ ಸರ್ವಧರ್ಮಗಳನ್ನೂ ತಿಳಿದುಕೊಂಡಿರುವ ಭೀಷ್ಮನು ನಿನ್ನ ಮನದಲ್ಲಿ ನೆಲೆಸಿರುವ ಸರ್ವ ಸಂಶಯಗಳನ್ನು ನಿವಾರಿಸುತ್ತಾನೆ.

12038008a ಜನಯಾಮಾಸ ಯಂ ದೇವೀ ದಿವ್ಯಾ ತ್ರಿಪಥಗಾ ನದೀ|
12038008c ಸಾಕ್ಷಾದ್ದದರ್ಶ ಯೋ ದೇವಾನ್ಸರ್ವಾನ್ಯಕ್ರಪುರೋಗಮಾನ್||
12038009a ಬೃಹಸ್ಪತಿಪುರೋಗಾಂಶ್ಚ ದೇವರ್ಷೀನಸಕೃತ್ಪ್ರಭುಃ|
12038009c ತೋಷಯಿತ್ವೋಪಚಾರೇಣ ರಾಜನೀತಿಮಧೀತವಾನ್||
12038010a ಉಶನಾ ವೇದ ಯಚ್ಚಾಸ್ತ್ರಂ ದೇವಾಸುರಗುರುರ್ದ್ವಿಜಃ|
12038010c ತಚ್ಚ ಸರ್ವಂ ಸವ್ಯೈಯಾಖ್ಯಂ ಪ್ರಾಪ್ತವಾನ್ಕುರುಸತ್ತಮಃ||

ಯಾರ ಜನನಿಯು ದೇವೀ ದಿವ್ಯ ತ್ರಿಪಥಗಾ ಗಂಗಾನದಿಯೋ, ಯಾರು ಇಂದ್ರನೇ ಮೊದಲಾದ ಸರ್ವ ದೇವತೆಗಳನ್ನು ಸಾಕ್ಷಾತ್ ಕಂಡಿರುವನೋ, ಆ ಕುರುಸತ್ತಮ ಪ್ರಭುವು ಬೃಹಸ್ಪತಿಯೇ ಮೊದಲಾದ ದೇವರ್ಷಿಗಳನ್ನು ಉಪಚಾರಗಳಿಂದ ತೃಪ್ತಿಪಡಿಸಿ ರಾಜನೀತಿಯನ್ನೂ, ದೇವಾಸುರರ ಗುರುವಾದ ದ್ವಿಜ ಶುಕ್ರನಿಂದ ಸರ್ವ

ಶಾಸ್ತ್ರಗಳನ್ನೂ ವ್ಯಾಖ್ಯಾನ ಸಹಿತವಾಗಿ ತಿಳಿದುಕೊಂಡಿದ್ದಾನೆ.

12038011a ಭಾರ್ಗವಾಚ್ಚ್ಯವನಾಚ್ಚಾಪಿ ವೇದಾನಂಗೋಪಬೃಂಹಿತಾನ್।
12038011c ಪ್ರತಿಪೇದೇ ಮಹಾಬುದ್ಧಿರ್ವಸಿಷ್ಠಾಚ್ಚ ಯತವ್ರತಾತ್॥

ಆ ಮಹಾಬುದ್ಧಿಯು ಭಾರ್ಗವ ಚ್ಯವನನಿಂದ ಮತ್ತು ಯತವ್ರತ ವಸಿಷ್ಠನಿಂದ ವೇದಗಳನ್ನು ಅವುಗಳ ಅಂಗಗಳೊಂದಿಗೆ ಪಡೆದಿರುತ್ತಾನೆ.

12038012a ಪಿತಾಮಹಸುತಂ ಜ್ಯೇಷ್ಠಂ ಕುಮಾರಂ ದೀಪ್ತತೇಜಸಮ್।
12038012c ಅಧ್ಯಾತ್ಮಗತಿತತ್ತ್ವಜ್ಞಮುಪಾಶಿಕ್ಷತ ಯಃ ಪುರಾ॥

ಭೀಷ್ಮನು ಪಿತಾಮಹಬ್ರಹ್ಮನ ಜ್ಯೇಷ್ಠ ಪುತ್ರ ದೀಪ್ತತೇಜಸ್ವಿ ಅಧ್ಯಾತ್ಮಗತಿಯ ತತ್ತ್ವಗಳನ್ನು ತಿಳಿದುಕೊಂಡಿರುವ ಸನತ್ಕುಮಾರನಿಂದ ಹಿಂದೆ ಶಿಕ್ಷಣವನ್ನು ಪಡೆದಿದ್ದನು.

12038013a ಮಾರ್ಕಂಡೇಯಮುಖಾತ್ಕೃತ್ಸ್ನಂ ಯತಿಧರ್ಮಮವಾಪ್ತವಾನ್।
12038013c ರಾಮಾದಸ್ತ್ರಾಣಿ ಶಕ್ರಾಚ್ಚ ಪ್ರಾಪ್ತವಾನ್ಭರತರ್ಷಭ॥

ಭರತರ್ಷಭ! ಅವನು ಮಾರ್ಕಂಡೇಯ ಮುಖೇನ ಯತಿಧರ್ಮವನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವನು. ಪರಶುರಾಮನಿಂದ ಮತ್ತು ಇಂದ್ರನಿಂದ ಅಸ್ತ್ರಗಳನ್ನು ಪಡೆದುಕೊಂಡಿರುವನು.

12038014a ಮೃತ್ಯುರಾತ್ಮೇಚ್ಚಯಾ ಯಸ್ಯ ಜಾತಸ್ಯ ಮನುಜೇಷ್ವಪಿ।
12038014c ತಥಾನಪತ್ಯಸ್ಯ ಸತಃ ಪುಣ್ಯಲೋಕಾ ದಿವಿ ಶ್ರುತಾಃ॥

ಮನುಷ್ಯನಾಗಿ ಹುಟ್ಟಿದ್ದರೂ ಮೃತ್ಯುವು ಅವನ ಇಚ್ಛೆಯಂತೆಯೇ ಬರುತ್ತದೆ. ಮಕ್ಕಳಿಲ್ಲದವನಾಗಿದ್ದರೂ ಅವನಿಗೆ ದಿವಿಯ ಪುಣ್ಯಲೋಕಗಳು ದೊರೆಯುತ್ತವೆ ಎಂದು ಕೇಳಿದ್ದೇವೆ.

12038015a ಯಸ್ಯ ಬ್ರಹ್ಮರ್ಷಯಃ ಪುಣ್ಯಾ ನಿತ್ಯಮಾಸನ್ಸಭಾಸದಃ।
12038015c ಯಸ್ಯ ನಾವಿದಿತಂ ಕಿಂ ಚಿತ್ಸಾ ನಜ್ಞೇಯೇಷು ವಿದ್ಯತೇ॥
12038016a ಸ ತೇ ವಕ್ಷ್ಯತಿ ಧರ್ಮಜ್ಞಃ ಸೂಕ್ಷ್ಮಧರ್ಮಾರ್ಥತತ್ತ್ವವಿತ್।
12038016c ತಮಭ್ಯೇಹಿ ಪುರಾ ಪ್ರಾಣಾನ್ಸ ವಿಮುಂಚತಿ ಧರ್ಮವಿತ್॥

ಪುಣ್ಯ ಬ್ರಹ್ಮರ್ಷಿಗಳು ನಿತ್ಯವೂ ಯಾರ ಸಭಾಸದರಾಗಿ
ಉಪಸ್ಥಿತರಾಗಿರುತ್ತಿದ್ದರೋ, ತಿಳಿದುಕೊಂಡಿರಬೇಕಾದ ಜ್ಞಾನಗಳಲ್ಲಿ
ಯಾರಿಗೆ ಯಾವುದೂ ತಿಳಿಯದೇ ಇಲ್ಲವೋ, ಆ ಧರ್ಮಜ್ಞ ಧರ್ಮದ
ಸೂಕ್ಷ್ಮ ಅರ್ಥಗಳನ್ನು ಯಥಾವತ್ತಾಗಿ ತಿಳಿದುಕೊಂಡಿರುವ
ಧರ್ಮವಿದುವು ಪ್ರಾಣಗಳನ್ನು ತೊರೆಯುವ ಮೊದಲು ನೀನು ಅವನ
ಬಳಿಗೆ ಹೋಗು.”

12038017a ಏವಮುಕ್ತಸ್ತು ಕೌಂತೇಯೋ ದೀರ್ಘಪ್ರಜ್ಞೋ ಮಹಾದ್ಯುತಿಃ।
12038017c ಉವಾಚ ವದತಾಂ ಶ್ರೇಷ್ಠಂ ವ್ಯಾಸಂ ಸತ್ಯವತೀಸುತಮ್॥

ಇದನ್ನು ಕೇಳಿದ ದೀರ್ಘಪ್ರಜ್ಞ ಮಹಾದ್ಯುತಿ ಕೌಂತೇಯನು ಸತ್ಯವತೀ
ಸುತ ಮಾತನಾಡುವವರಲ್ಲಿ ಶ್ರೇಷ್ಠ ವ್ಯಾಸನಿಗೆ ಇಂತೆಂದನುಃ

12038018a ವೈಶಸಂ ಸುಮಹತ್ಕೃತ್ವಾ ಜ್ಞಾತೀನಾಂ ಲೋಮಹರ್ಷಣಮ್।
12038018c ಆಗಸ್ಕೃತ್ಸರ್ವಲೋಕಸ್ಯ ಪೃಥಿವೀನಾಶಕಾರಕಃ॥
12038019a ಘಾತಯಿತ್ವಾ ತಮೇವಾಜೌ ಚಲೇನಾಜಿಹ್ಮಯೋಧಿನಮ್।
12038019c ಉಪಸಂಪ್ರಷ್ಟುಮರ್ಹಾಮಿ ತಮಹಂ ಕೇನ ಹೇತುನಾ॥

“ರೋಮಾಂಚನಗೊಳ್ಳುವಂಥಹ ಈ ಮಹಾ ಬಂಧುವಧೆಯನ್ನು ನಡೆಸಿ
ನಾನು ಸರ್ವಲೋಕಕ್ಕೇ ಪೃಥ್ವೀನಾಶಕಾರಕವಾದ
ಅಪರಾಧವನ್ನೆಸಗಿದ್ದೇನೆ. ಋಜುಮಾರ್ಗದಲ್ಲಿಯೇ ಹೋರಾಡುತ್ತಿದ್ದ ಆ

ಭೀಷ್ಮನನ್ನು ವಂಚನೆಯಿಂದ ಘಾತಿಗೊಳಿಸಿ ಈಗ ನಾನು ಯಾವ
ಮುಖವನ್ನಿಟ್ಟುಕೊಂಡು ಧರ್ಮದ ವಿಷಯವಾಗಿ ಅವನನ್ನು ಪ್ರಶ್ನಿಸಲು
ಹೋಗಲಿ? ಅದನ್ನು ಕೇಳುವ ಯೋಗ್ಯತೆಯಾದರೂ ನನಗೆಲ್ಲಿದೆ?"

12038020a ತತಸ್ತಂ ನೃಪತಿಶ್ರೇಷ್ಠಂ ಚಾತುರ್ವರ್ಣ್ಯಹಿತೇಪ್ಸಯಾ|
12038020c ಪುನರಾಹ ಮಹಾಬಾಹುರ್ಯದುಶ್ರೇಷ್ಠೋ ಮಹಾದ್ಯುತಿಃ||

ಆಗ ಚಾತುರ್ವರ್ಣದವರ ಹಿತವನ್ನೇ ಬಯಸುವ ಮಹಾಬಾಹು
ಮಹಾದ್ಯುತಿ ಯದುಶ್ರೇಷ್ಠ ಕೃಷ್ಣನು ಆ ನೃಪತಿಶ್ರೇಷ್ಠನಿಗೆ ಹೇಳಿದನು:

12038021a ನೇದಾನೀಮತಿನಿರ್ಬಂಧಂ ಶೋಕೇ ಕರ್ತುಮಿಹಾರ್ಹಸಿ|
12038021c ಯದಾಹ ಭಗವಾನ್ವ್ಯಾಸಸ್ತತ್ಕುರುಷ್ವ ನೃಪೋತ್ತಮ||

"ನೃಪೋತ್ತಮ! ನಿರ್ಬಂಧಪೂರ್ವಕವಾಗಿ ಈ ರೀತಿ
ಶೋಕಪಡುವುದು ನಿನಗೆ ಸರಿಯಲ್ಲ. ಭಗವಾನ್ ವ್ಯಾಸನು
ಹೇಳಿದಂತೆಯೇ ಮಾಡು!

12038022a ಬ್ರಾಹ್ಮಣಾಸ್ತ್ವಾಂ ಮಹಾಬಾಹೋ ಭ್ರಾತರಶ್ಚ ಮಹೌಜಸಃ|
12038022c ಪರ್ಜನ್ಯಮಿವ ಘರ್ಮಾರ್ತಾ ಆಶಂಸಾನಾ ಉಪಾಸತೇ||

ಮಹಾಬಾಹೋ! ಬೇಸಗೆಯ ಕೊನೆಯಲ್ಲಿ ಜನರು ಮಳೆಗಾಗಿ
ಪರ್ಜನ್ಯನನ್ನು ಹೇಗೋ ಹಾಗೆ ಈ ಬ್ರಾಹ್ಮಣರು ಮತ್ತು
ಮಹಾತೇಜಸ್ವೀ ಸಹೋದರರು ನಿನ್ನನ್ನೇ ಉಪಾಸಿಸುತ್ತಿದ್ದಾರೆ.

12038023a ಹತಶಿಷ್ಟಾಶ್ಚ ರಾಜಾನಃ ಕೃತ್ಸ್ನಂ ಚೈವ ಸಮಾಗತಮ್|
12038023c ಚಾತುರ್ವರ್ಣ್ಯಂ ಮಹಾರಾಜ ರಾಷ್ಟ್ರಂ ತೇ ಕುರುಜಾಂಗಲಮ್||

ಮಹಾರಾಜ! ಅಳಿದುಳಿದ ರಾಜರೆಲ್ಲರೂ ಮತ್ತು ನಿನ್ನ ರಾಷ್ಟ್ರ

ಕುರುಜಾಂಗಲದ ನಾಲ್ಕೂ ವರ್ಣದವರೂ ಇಲ್ಲಿಗೆ ಬಂದು ಸೇರಿದ್ದಾರೆ.

12038024a ಪ್ರಿಯಾರ್ಥಮಪಿ ಚೈತೇಷಾಂ ಬ್ರಾಹ್ಮಣಾನಾಂ ಮಹಾತ್ಮನಾಮ್|
12038024c ನಿಯೋಗಾದಸ್ಯ ಚ ಗುರೋರ್ವ್ಯಾಸಸ್ಯಾಮಿತತೇಜಸಃ||
12038025a ಸುಹೃದಾಂ ಚಾಸ್ಮದಾದೀನಾಂ ದ್ರೌಪದ್ಯಾಶ್ಚ ಪರಂತಪ|
12038025c ಕುರು ಪ್ರಿಯಮಮಿತ್ರಘ್ನ ಲೋಕಸ್ಯ ಚ ಹಿತಂ ಕುರು||


ಪರಂತಪ! ಅಮಿತ್ರಘ್ನ! ಈ ಮಹಾತ್ಮ ಬ್ರಾಹ್ಮಣರ ಸಂತೋಷಕ್ಕಾಗಿ, ಅಮಿತ ತೇಜಸ್ವಿ ಗುರು ವ್ಯಾಸನ ನಿಯೋಗದಂತೆ, ದ್ರೌಪದಿಯೇ ಮೊದಲಾದ ನಮ್ಮ ಸುಹೃದಯರಿಗೆ ಸಂತೋಷವಾಗುವಂತೆ ಮಾಡು. ಲೋಕಕ್ಕೆ ಹಿತವನ್ನುಂಟುಮಾಡು!"

12038026a ಏವಮುಕ್ತಸ್ತು ಕೃಷ್ಣೇನ ರಾಜಾ ರಾಜೀವಲೋಚನಃ|
12038026c ಹಿತಾರ್ಥಂ ಸರ್ವಲೋಕಸ್ಯ ಸಮುತ್ತಸ್ಥೌ ಮಹಾತಪಾಃ||

ಕೃಷ್ಣನು ಹೀಗೆ ಹೇಳಲು ರಾಜೀವಲೋಚನ ರಾಜಾ ಮಹಾತಪಸ್ವಿ ಯುಧಿಷ್ಠಿರನು ಸರ್ವಲೋಕಗಳ ಹಿತಕ್ಕಾಗಿ ಕುಳಿತಲ್ಲಿಂದ ಮೇಲೆದ್ದನು.

12038027a ಸೋಽನುನೀತೋ ನರವ್ಯಾಘ್ರೋ ವಿಷ್ಟರಶ್ರವಸಾ ಸ್ವಯಮ್|
12038027c ದ್ವೈಪಾಯನೇನ ಚ ತಥಾ ದೇವಸ್ಥಾನೇನ ಜಿಷ್ಣುನಾ||
12038028a ಏತೈಶ್ಚಾನ್ಯೈಶ್ಚ ಬಹುಭಿರನುನೀತೋ ಯುಧಿಷ್ಠಿರಃ|
12038028c ವ್ಯಜಹಾನ್ಮಾನಸಂ ದುಃಖಂ ಸಂತಾಪಂ ಚ ಮಹಾಮನಾಃ||

ಹೀಗೆ ಸ್ವಯಂ ಕೃಷ್ಣನಿಂದಲೂ, ದ್ವೈಪಾಯನನಿಂದಲೂ, ದೇವಸ್ಥಾನನಿಂದಲೂ, ಅರ್ಜುನನಿಂದಲೂ ಮತ್ತು ಇತರ ಅನೇಕರಿಂದ ಸಮಾಧಾನಗೊಳಿಸಲ್ಪಟ್ಟ ನರವ್ಯಾಘ್ರ ಯುಧಿಷ್ಠಿರನು ಮಾನಸಿಕ ದುಃಖ-ಸಂತಾಪಗಳನ್ನು ಪರಿತ್ಯಜಿಸಿದನು.



12038029a ಶ್ರುತವಾಕ್ಯಃ ಶ್ರುತನಿಧಿಃ ಶ್ರುತಶ್ರವ್ಯವಿಶಾರದಃ|
12038029c ವ್ಯವಸ್ಯ ಮನಸಃ ಶಾಂತಿಮಗಚ್ಚತ್ಪಾಂಡುನಂದನಃ||

ಶ್ರುತಿಗಳ ವಾಕ್ಯವನ್ನು ಕೇಳಿ, ಶ್ರುತಿಗಳ ಕುರಿತು ಕೇಳುವುದರಲ್ಲಿ ವಿಶಾರದನಾದ ಆ ಶ್ರುತನಿಧಿ ಪಾಂಡುನಂದನನು ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಶಾಂತಿಯುತನಾದನು.

12038030a ಸ ತೈಃ ಪರಿವೃತೋ ರಾಜಾ ನಕ್ಷತ್ರೈರಿವ ಚಂದ್ರಮಾಃ|
12038030c ಧೃತರಾಷ್ಟ್ರಂ ಪುರಸ್ಕೃತ್ಯ ಸ್ವಪುರಂ ಪ್ರವಿವೇಶ ಹ||

ಅನಂತರ ನಕ್ಷತ್ರಗಳಿಂದ ಸುತ್ತುವರೆಯಲ್ಪಟ್ಟ ಚಂದ್ರಮನಂತೆ ಆ ರಾಜನು ಧೃತರಾಷ್ಟ್ರನನ್ನು ಮುಂದೆಮಾಡಿಕೊಂಡು ತನ್ನ ಪುರವನ್ನು ಪ್ರವೇಶಿಸಿದನು.

12038031a ಪ್ರವಿವಿಕ್ಷುಃ ಸ ಧರ್ಮಜ್ಞಃ ಕುಂತೀಪುತ್ರೋ ಯುಧಿಷ್ಠಿರಃ|
12038031c ಅರ್ಚಯಾಮಾಸ ದೇವಾಂಶ್ಚ ಬ್ರಾಹ್ಮಣಾಂಶ್ಚ ಸಹಸ್ರಶಃ||

ಪುರ ಪ್ರವೇಶಮಾಡುವಾಗ ಧರ್ಮಜ್ಞ ಕುಂತೀಪುತ್ರ ಯುಧಿಷ್ಠಿರನು ದೇವತೆಗಳನ್ನೂ, ಸಹಸ್ರಾರು ಬ್ರಾಹ್ಮಣರನ್ನೂ ಅರ್ಚಿಸಿದನು.

12038032a ತತೋ ರಥಂ ನವಂ ಶುಭ್ರಂ ಕಂಬಲಾಜಿನಸಂವೃತಮ್|
12038032c ಯುಕ್ತಂ ಷೋಡಶಭಿರ್ಗೋಭಿಃ ಪಾಂಡುರೈಃ ಶುಭಲಕ್ಷಣೈಃ||
12038033a ಮಂತ್ರೈರಭ್ಯರ್ಚಿತಃ ಪುಣ್ಯೈಃ ಸ್ತೂಯಮಾನೋ ಮಹರ್ಷಿಭಿಃ|
12038033c ಆರುರೋಹ ಯಥಾ ದೇವಃ ಸೋಮೋಽಮೃತಮಯಂ ರಥಮ್||

ಅನಂತರ ದೇವ ಸೋಮನು ಅಮೃತಮಯ ರಥವನ್ನು ಏರುವಂತೆ ಅವನು ಹೊಸತಾದ, ಶುಭ್ರವಾದ, ಕಂಬಳಿ-ಜಿನಗಳನ್ನು ಹೊದೆಸಿದ್ದ, ಶುಭಲಕ್ಷಣಗಳುಳ್ಳ ಬಿಳಿಯಾದ ಹದಿನಾರು ಎತ್ತುಗಳನ್ನು ಕಟ್ಟಿದ್ದ, ಮಂತ್ರಗಳಿಂದ ಅರ್ಚಿತಗೊಂಡಿದ್ದ, ಪುಣ್ಯ ಮಹರ್ಷಿಗಳಿಂದ ಸ್ತುತಿಸಲ್ಪಡುತ್ತಿದ್ದ ರಥವನ್ನು ಏರಿದನು.

12038034a ಜಗ್ರಾಹ ರಶ್ಮೀನ್ಕೌಂತೇಯೋ ಭೀಮೋ ಭೀಮಪರಾಕ್ರಮಃ|
12038034c ಅರ್ಜುನಃ ಪಾಂಡುರಂ ಚತ್ರಂ ಧಾರಯಾಮಾಸ ಭಾನುಮತ್||

ಕೌಂತೇಯ ಭೀಮಪರಾಕ್ರಮಿ ಭೀಮನು ಕಡಿವಾಣಗಳನ್ನು ಹಿಡಿದನು. ಅರ್ಜುನನು ಭಾನುವಂತೆ ಬಿಳುಪಾದ ಚತ್ರವನ್ನು ಹಿಡಿದನು.

12038035a ಧ್ರಿಯಮಾಣಂ ತು ತಚ್ಚತ್ರಂ ಪಾಂಡುರಂ ತಸ್ಯ ಮೂರ್ಧನಿ|
12038035c ಶುಶುಭೇ ತಾರಕಾರಾಜಸಿತಮಭ್ರಮಿವಾಂಬರೇ||

ಅವನ ನೆತ್ತಿಯ ಮೇಲೆ ಹಿಡಿದಿದ್ದ ಆ ಬಿಳುಪಾದ ಕೊಡೆಯು ಆಕಾಶದಲ್ಲಿ

ನಕ್ಷತ್ರಗಳಿಂದ ಸಮಾಕುಲವಾದ ಬಿಳಿಯ ಮೋಡದಂತೆ ಪ್ರಕಾಶಿಸುತ್ತಿತ್ತು.

12038036a ಚಾಮರವ್ಯಜನೇ ಚಾಸ್ಯ ವೀರೌ ಜಗೃಹತುಸ್ತದಾ|
12038036c ಚಂದ್ರರಶ್ಮಿಪ್ರಭೇ ಶುಭ್ರೇ ಮಾದ್ರೀಪುತ್ರಾವಲಂಕೃತೇ||

ವೀರರಾದ ಮಾದ್ರೀಪುತ್ರರಿಬ್ಬರೂ ಚಂದ್ರನ ಕಿರಣಗಳ ಪ್ರಭೆಯುಳ್ಳ ಅಲಂಕೃತವಾದ ಚಾಮರ-ಬೀಸಣಿಗೆಗಳನ್ನು ಹಿಡಿದಿದ್ದರು.

12038037a ತೇ ಪಂಚ ರಥಮಾಸ್ಥಾಯ ಭ್ರಾತರಃ ಸಮಲಂಕೃತಾಃ|
12038037c ಭೂತಾನೀವ ಸಮಸ್ತಾನಿ ರಾಜನ್ದದೃಶಿರೇ ತದಾ||

ರಾಜನ್! ಹಾಗೆ ಸಮಲಂಕೃತರಾಗಿ ರಥದಲ್ಲಿದ್ದ ಆ ಐವರು ಸಹೋದರರು ಪಂಚಮಹಾಭೂತಗಳಂತೆಯೇ ಕಾಣುತ್ತಿದ್ದರು.

12038038a ಆಸ್ಥಾಯ ತು ರಥಂ ಶುಭ್ರಂ ಯುಕ್ತಮಶ್ವೈರ್ಮಹಾಜವೈಃ|
12038038c ಅನ್ವಯಾತ್ಪೃಷ್ಠತೋ ರಾಜನ್ಯುಯುತ್ಸುಃ ಪಾಂಡವಾಗ್ರಜಮ್||

ರಾಜನ್! ಯುಯುತ್ಸುವು ಮಹಾವೇಗದ ಕುದುರೆಗಳನ್ನು ಕಟ್ಟಿದ್ದ ಶುಭ್ರ ರಥದಲ್ಲಿ ಕುಳಿತು ಪಾಂಡವಾಗ್ರಜನನ್ನು ಹಿಂಬಾಲಿಸಿ ಹೋದನು.

12038039a ರಥಂ ಹೇಮಮಯಂ ಶುಭ್ರಂ ಸೈನ್ಯಸುಗ್ರೀವಯೋಜಿತಮ್|
12038039c ಸಹ ಸಾತ್ಯಕಿನಾ ಕೃಷ್ಣಃ ಸಮಾಸ್ಥಾಯಾನ್ವಯಾತ್ಕುರೂನ್||

ಸೈನ್ಯ-ಸುಗ್ರೀವರನ್ನು ಕಟ್ಟಿದ್ದ ಹೇಮಮಯ ರಥದಲ್ಲಿ ಸಾತ್ಯಕಿಯೊಂದಿಗೆ ಕುಳಿತಿದ್ದ ಕೃಷ್ಣನು ಕುರುಗಳನ್ನು ಹಿಂಬಾಲಿಸಿ ಹೋದನು.

12038040a ನರಯಾನೇನ ತು ಜ್ಯೇಷ್ಠಃ ಪಿತಾ ಪಾರ್ಥಸ್ಯ ಭಾರತ|
12038040c ಅಗ್ರತೋ ಧರ್ಮರಾಜಸ್ಯ ಗಾಂಧಾರೀಸಹಿತೋ ಯಯೌ||

ಭಾರತ! ಪಾರ್ಥನ ಜ್ಯೇಷ್ಠ ಪಿತ ಧೃತರಾಷ್ಟ್ರನು ಗಾಂಧಾರಿಯ ಸಹಿತ ಮನುಷ್ಯರು ಹೊತ್ತಿದ್ದ ಪಲ್ಲಕ್ಕಿಯಲ್ಲಿ ಕುಳಿತು ಧರ್ಮರಾಜನ ರಥದ ಮುಂಭಾಗದಲ್ಲಿ ಹೋಗುತ್ತಿದ್ದನು.

12038041a ಕುರುಸ್ತ್ರಿಯಶ್ಚ ತಾಃ ಸರ್ವಾಃ ಕುಂತೀ ಕೃಷ್ಣಾ ಚ ದ್ರೌಪದೀ|
12038041c ಯಾನೈರುಚ್ಚಾವಚೈರ್ಜಗ್ಮುರ್ವಿದುರೇಣ ಪುರಸ್ಕೃತಾಃ||

ಕುಂತಿ, ಕೃಷ್ಣೆ ದ್ರೌಪದಿ ಮತ್ತು ಎಲ್ಲ ಕುರುಸ್ತ್ರೀಯರು ವಿದುರನನನ್ನು ಮುಂದಿಟ್ಟುಕೊಂಡು ತಮತಮಗೆ ಯೋಗ್ಯವಾದ ಪಲ್ಲಕ್ಕಿಗಳಲ್ಲಿ ಕುಳಿತು ಹೋದರು.

12038042a ತತೋ ರಥಾಶ್ಚ ಬಹುಲಾ ನಾಗಾಶ್ಚ ಸಮಲಂಕೃತಾಃ|
12038042c ಪಾದಾತಾಶ್ಚ ಹಯಾಶ್ಚೈವ ಪೃಷ್ಠತಃ ಸಮನುವ್ರಜನ್||

ಅವರ ಹಿಂದೆ ಅನೇಕ ಸಮಲಂಕೃತ ರಥಗಳೂ, ಆನೆಗಳೂ, ಪದಾತಿಗಳೂ ಮತ್ತು ಕುದುರೆಗಳೂ ಸಾಗುತ್ತಿದ್ದವು.

12038043a ತತೋ ವೈತಾಲಿಕೈಃ ಸೂತೈರ್ಮಾಗಧೈಶ್ಚ ಸುಭಾಷಿತೈಃ|
12038043c ಸ್ತೂಯಮಾನೋ ಯಯೌ ರಾಜಾ ನಗರಂ ನಾಗಸಾಹ್ವಯಮ್||

ಆಗ ವೈತಾಲಿಕರು ಮತ್ತು ಸೂತ-ಮಾಗಧರು ಸುಂದರ ವಾಣಿಯಲ್ಲಿ ಸ್ತುತಿಸುತ್ತಿರುವಾಗ ರಾಜನು ಹಸ್ತಿನಾಪುರ ನಗರಕ್ಕೆ ಪ್ರಯಾಣಿಸಿದನು.

12038044a ತತ್ಪ್ರಯಾಣಂ ಮಹಾಬಾಹೋರ್ಬಭೂವಾಪ್ರತಿಮಂ ಭುವಿ|
12038044c ಆಕುಲಾಕುಲಮುತ್ಸೃಷ್ಟಂ ಹೃಷ್ಟಪುಷ್ಟಜನಾನ್ವಿತಮ್||

ಹೃಷ್ಟ-ಪುಷ್ಟ ಜನರಿಂದಲೂ ಜಯಘೋಷಮಾಡುತ್ತಿದ್ದ ಜನರಿಂದಲೂ ಸಮಾಕುಲವಾಗಿದ್ದ ಆ ಮಹಾಬಾಹುವಿನ ಪ್ರಯಾಣವು

ಭುವಿಯಲ್ಲಿಯೇ ಅಪ್ರತಿಮವಾಗಿತ್ತು.

12038045a ಅಭಿಯಾನೇ ತು ಪಾರ್ಥಸ್ಯ ನರೈರ್ನಗರವಾಸಿಭಿಃ|
12038045c ನಗರಂ ರಾಜಮಾರ್ಗಶ್ಚ ಯಥಾವತ್ಸಮಲಂಕೃತಮ್||

ಪಾರ್ಥನು ಪ್ರಯಾಣಿಸುತ್ತಿರುವಾಗ ನಗರವಾಸಿಗಳು ನಗರವನ್ನೂ ರಾಜಮಾರ್ಗವನ್ನೂ ಯಥಾವತ್ತಾಗಿ ಅಲಂಕರಿಸಿದ್ದರು.

12038046a ಪಾಂಡುರೇಣ ಚ ಮಾಲ್ಯೇನ ಪತಾಕಾಭಿಶ್ಚ ವೇದಿಭಿಃ|
12038046c ಸಂವೃತೋ ರಾಜಮಾರ್ಗಶ್ಚ ಧೂಪನೈಶ್ಚ ಸುಧೂಪಿತಃ||

ಬಿಳಿಯ ಹೂಮಾಲೆಗಳಿಂದಲೂ, ಪತಾಕೆಗಳಿಂದಲೂ ಅಲಂಕೃತ ರಾಜಮಾರ್ಗವು ಧೂಪಗಳಿಂದ ಸುಗಂಧಮಯವಾಗಿತ್ತು.

12038047a ಅಥ ಚೂರ್ಣೈಶ್ಚ ಗಂಧಾನಾಂ ನಾನಾಪುಷ್ಪೈಃ ಪ್ರಿಯಂಗುಭಿಃ|
12038047c ಮಾಲ್ಯದಾಮಭಿರಾಸಕ್ತೈ ರಾಜವೇಶ್ಮಾಭಿಸಂವೃತಮ್||

ಚೂರ್ಣಗಳಿಂದಲೂ, ಗಂಧಗಳಿಂದಲೂ, ನಾನಾ ಪುಷ್ಪಗಳ ಗುಚ್ಚಗಳಿಂದಲೂ, ಮಾಲೆಗಳಿಂದಲೂ ರಾಜನ ಅರಮನೆಯು ಅಲಂಕರಿಸಲ್ಪಟ್ಟಿತ್ತು.

12038048a ಕುಂಭಾಶ್ಚ ನಗರದ್ವಾರಿ ವಾರಿಪೂರ್ಣಾ ದೃಢಾ ನವಾಃ|
12038048c ಕನ್ಯಾಃ ಸುಮನಸಶ್ಚಾಗಾಃ ಸ್ಥಾಪಿತಾಸ್ತತ್ರ ತತ್ರ ಹ||

ನಗರದ್ವಾರದಲ್ಲಿ ನೀರಿನಿಂದ ತುಂಬಿದ್ದ ಗಟ್ಟಿಯಾದ ಹೊಸ ಕುಂಭಗಳನ್ನಿಟ್ಟಿದ್ದರು ಮತ್ತು ಸುಮನಸರಾದ ಕನ್ಯೆಯರೂ ಅಲ್ಲಲ್ಲಿ ನಿಂತಿದ್ದರು.

12038049a ತಥಾ ಸ್ವಲಂಕೃತದ್ವಾರಂ ನಗರಂ ಪಾಂಡುನಂದನಃ|

12038049c ಸ್ತೂಯಮಾನಃ ಶುಭೈರ್ವಾಕ್ಯೈಃ ಪ್ರವಿವೇಶ ಸುಹೃದ್ವೃತಃ||

ಹಾಗೆ ಸ್ವಲಂಕೃತವಾದ ನಗರದ್ವಾರವನ್ನು ಸುಹೃದಯರೊಂದಿಗೆ ಪಾಂಡುನಂದನನು ಶುಭವಾಕ್ಯಗಳಿಂದ ಸ್ತುತಿಸಲ್ಪಡುತ್ತಾ ಪ್ರವೇಶಿಸಿದನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಯುಧಿಷ್ಠಿರಪ್ರವೇಶೇ ಅಷ್ಟಾತ್ರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಯುಧಿಷ್ಠಿರಪ್ರವೇಶ ಎನ್ನುವ ಮೂವತ್ತೆಂಟನೇ ಅಧ್ಯಾಯವು.

೩೯

ಚರ್ವಾಕಚರಿತ ಕಥನ

ನಗರವನ್ನು ಪ್ರವೇಶಿಸುವಾಗ ಪುರವಾಸಿಗಳು ಮತ್ತು ಬ್ರಾಹ್ಮಣರಿಂದ ರಾಜಾ ಯುಧಿಷ್ಠಿರನ ಸತ್ಕಾರ ಮತ್ತು ಯುಧಿಷ್ಠಿರನನ್ನು ಅಪೇಕ್ಷಿಸಿದ ಚಾರ್ವಾಕನು ಬ್ರಾಹ್ಮಣರಿಂದ ಹತನಾದುದು (1-37). ಚಾರ್ವಾಕನಿಗೆ ದೊರೆತಿದ್ದ ವರಗಳ ಕುರಿತು ಕೃಷ್ಣನು ತಿಳಿಸಿದುದು (38-49).

12039001 ವೈಶಂಪಾಯನ ಉವಾಚ|
12039001a ಪ್ರವೇಶನೇ ತು ಪಾರ್ಥಾನಾಂ ಜನಸ್ಯ ಪುರವಾಸಿನಃ|
12039001c ದಿದೃಕ್ಷೂಣಾಂ ಸಹಸ್ರಾಣಿ ಸಮಾಜಗ್ಮುರ್ಬಹೂನ್ಯಥ||

ವೈಶಂಪಾಯನನು ಹೇಳಿದನು: "ಪಾರ್ಥರು ಪ್ರವೇಶಿಸುತ್ತಿದ್ದಂತೆ

ಅವರನ್ನು ನೋಡಲು ಸಹಸ್ರಾರು ಪುರವಾಸೀ ಜನರು ಬಂದು ಸೇರಿದರು.

12039002a ಸ ರಾಜಮಾರ್ಗಃ ಶುಶುಭೇ ಸಮಲಂಕೃತಚತ್ವರಃ|
12039002c ಯಥಾ ಚಂದ್ರೋದಯೇ ರಾಜನ್ವರ್ಧಮಾನೋ ಮಹೋದಧಿಃ||

ರಾಜನ್! ಚಂದ್ರೋದಯದ ಸಮಯದಲ್ಲಿ ಉಕ್ಕಿಬರುವ ಸಮುದ್ರದಂತೆ ಸಿಂಗರಿಸಿದ ರಾಜಮಾರ್ಗದ ಬೌಕವು ಅಸಂಖ್ಯಾತ ಜನಸ್ತೋಮದಿಂದ ಶೋಭಿಸುತ್ತಿತ್ತು.

12039003a ಗೃಹಾಣಿ ರಾಜಮಾರ್ಗೇ ತು ರತ್ನವಂತಿ ಬೃಹಂತಿ ಚ|
12039003c ಪ್ರಾಕಂಪಂತೇವ ಭಾರೇಣ ಸ್ತ್ರೀಣಾಂ ಪೂರ್ಣಾನಿ ಭಾರತ||

ರಾಜಮಾರ್ಗದಲ್ಲಿದ್ದ ವಿಶಾಲ ರತ್ನಖಚಿತ ಭವನಗಳು ಸ್ತ್ರೀಯರಿಂದ ತುಂಬಿಹೋಗಿ ಅವರ ಭಾರದಿಂದ ಕಂಪಿಸುತ್ತಿವೆಯೋ ಎಂಬಂತೆ ತೋರುತ್ತಿದ್ದವು.

12039004a ತಾಃ ಶನೈರಿವ ಸವ್ರೀಡಂ ಪ್ರಶಶಂಸುರ್ಯುಧಿಷ್ಠಿರಮ್|
12039004c ಭೀಮಸೇನಾರ್ಜುನೌ ಚೈವ ಮಾದ್ರೀಪುತ್ರೌ ಚ ಪಾಂಡವೌ||

ಆ ಸ್ತ್ರೀಯರು ನಾಚಿಕೊಂಡು ಮೆಲ್ಲನೇ ಯುಧಿಷ್ಠಿರನನ್ನು, ಭೀಮಸೇನ-ಅರ್ಜುನರನ್ನು ಮತ್ತು ಇಬ್ಬರು ಮಾದ್ರೀಪುತ್ರ ಪಾಂಡವರನ್ನು ಪ್ರಶಂಸಿಸುತ್ತಿದ್ದರು.

12039005a ಧನ್ಯಾ ತ್ವಮಸಿ ಪಾಂಚಾಲಿ ಯಾ ತ್ವಂ ಪುರುಷಸತ್ತಮಾನ್|
12039005c ಉಪತಿಷ್ಠಸಿ ಕಲ್ಯಾಣಿ ಮಹರ್ಷೀನಿವ ಗೌತಮೀ||
12039006a ತವ ಕರ್ಮಾಣ್ಯಮೋಘಾನಿ ವ್ರತಚರ್ಯಾ ಚ ಭಾಮಿನಿ|

12039006c ಇತಿ ಕೃಷ್ಣಾಂ ಮಹಾರಾಜ ಪ್ರಶಶಂಸುಸ್ತದಾ ಸ್ತ್ರಿಯಃ||

“ಪಾಂಚಾಲೀ! ಕಲ್ಯಾಣೀ! ಮಹರ್ಷಿಗಳನ್ನು ಸೇವಿಸುತ್ತಿದ್ದ ಗೌತಮಿಯಂತೆ[67] ಈ ಪುರುಷಸತ್ತಮರನ್ನು ಸೇವಿಸುತ್ತಿದ್ದ ನೀನೇ ಧನ್ಯಳು! ಭಾಮಿನೀ! ನೀನು ಮಾಡಿರುವ ವ್ರತಚರ್ಯೆಗಳೂ ಕರ್ಮಗಳೂ ಅಮೋಘವಾದವುಗಳು!” ಮಹಾರಾಜ! ಹೀಗೆ ಸ್ತ್ರೀಯರು ಕೃಷ್ಣೆಯನ್ನು ಪ್ರಶಂಸಿಸುತ್ತಿದ್ದರು.

12039007a ಪ್ರಶಂಸಾವಚನೈಸ್ತಾಸಾಂ ಮಿಥಃಶಬ್ದೈಶ್ಚ ಭಾರತ|
12039007c ಪ್ರೀತಿಜೈಶ್ಚ ತದಾ ಶಬ್ದೈಃ ಪುರಮಾಸೀತ್ಸಮಾಕುಲಮ್||

ಭಾರತ! ರಹಸ್ಯವಾಗಿ ಆಡಿಕೊಳ್ಳುತ್ತಿದ್ದ ಆ ಪ್ರಶಂಸೆಯ ಮಾತುಗಳಿಂದಲೂ ಪ್ರೀತಿಯುಕ್ತ ಮಾತುಗಳಿಂದಲೂ ಆ ಪುರವು ತುಂಬಿಹೋಗಿತ್ತು.

12039008a ತಮತೀತ್ಯ ಯಥಾಯುಕ್ತಂ ರಾಜಮಾರ್ಗಂ ಯುಧಿಷ್ಠಿರಃ|
12039008c ಅಲಂಕೃತಂ ಶೋಭಮಾನಮುಪಾಯಾದ್ರಾಜವೇಶ್ಮ ಹ||

ಯಥಾಯುಕ್ತವಾಗಿ ರಾಜಮಾರ್ಗವನ್ನು ದಾಟಿ, ಶೋಭಾಯಮಾನವಾಗಿ ಅಲಂಕೃತಗೊಂಡಿದ್ದ ರಾಜಭವನವನ್ನು ಯುಧಿಷ್ಠಿರನು ಪ್ರವೇಶಿಸಿದನು.

12039009a ತತಃ ಪ್ರಕೃತಯಃ ಸರ್ವಾಃ ಪೌರಜಾನಪದಾಸ್ತಥಾ|
12039009c ಊಚುಃ ಕಥಾಃ ಕರ್ಣಸುಖಾಃ ಸಮುಪೇತ್ಯ ತತಸ್ತತಃ||

ಆಗ ಎಲ್ಲ ಸಾಮಾನ್ಯ ಜನರೂ, ಪೌರಜನರೂ ಅಲ್ಲಲ್ಲಿ ಸೇರಿಕೊಂಡು

---

[67] ಜಟಿಲಾ

ಕರ್ಣಾನಂದಕರವಾದ ಮಾತುಗಳನ್ನಾಡುತ್ತಿದ್ದರು:

12039010a ದಿಷ್ಟ್ಯಾ ಜಯಸಿ ರಾಜೇಂದ್ರ ಶತ್ರೂನ್ಶತ್ರುನಿಸೂದನ|
12039010c ದಿಷ್ಟ್ಯಾ ರಾಜ್ಯಂ ಪುನಃ ಪ್ರಾಪ್ತಂ ಧರ್ಮೇಣ ಚ ಬಲೇನ ಚ||

“ರಾಜೇಂದ್ರ! ಶತ್ರುನಿಸೂದನ! ಸೌಭಾಗ್ಯವಶಾತ್ ನೀನು ಶತ್ರುಗಳನ್ನು ಜಯಿಸಿರುವೆ. ಸೌಭಾಗ್ಯವಶಾತ್ ನೀನು ಪುನಃ ಧರ್ಮ-ಬಲಗಳನ್ನುಪಯೋಗಿಸಿ ರಾಜ್ಯವನ್ನು ಪಡೆದಿರುವೆ!

12039011a ಭವ ನಸ್ತ್ವಂ ಮಹಾರಾಜ ರಾಜೇಹ ಶರದಾಂ ಶತಮ್|
12039011c ಪ್ರಜಾಃ ಪಾಲಯ ಧರ್ಮೇಣ ಯಥೇಂದ್ರಸ್ತ್ರಿದಿವಂ ನೃಪ||

ಮಹಾರಾಜ! ನೀನು ನೂರು ವರ್ಷಗಳ ಪರ್ಯಂತವಾಗಿ ನಮ್ಮ ರಾಜನಾಗಿರು. ನೃಪ! ಇಂದ್ರನು ದಿವವನ್ನು ಹೇಗೋ ಹಾಗೆ ಧರ್ಮದಿಂದ ಪ್ರಜೆಗಳನ್ನು ಪಾಲಿಸು!”

12039012a ಏವಂ ರಾಜಕುಲದ್ವಾರಿ ಮಂಗಲ್ಯೈರಭಿಪೂಜಿತಃ|
12039012c ಆಶೀರ್ವಾದಾನ್ದ್ವಿಜೈರುಕ್ತಾನ್ಪ್ರತಿಗೃಹ್ಯ ಸಮಂತತಃ||

ರಾಜಭವನದ ದ್ವಾರದಲ್ಲಿ ಈ ರೀತಿ ಮಂಗಲದ್ರವ್ಯಗಳಿಂದ ಪೂಜಿತನಾಗಿ ಅವನು ಎಲ್ಲಕಡೆಗಳಿಂದ ಬರುತ್ತಿದ್ದ ದ್ವಿಜರ ಆಶೀರ್ವಾದಗಳನ್ನು ಸ್ವೀಕರಿಸಿದನು.

12039013a ಪ್ರವಿಶ್ಯ ಭವನಂ ರಾಜಾ ದೇವರಾಜಗೃಹೋಪಮಮ್|
12039013c ಶ್ರುತ್ವಾ ವಿಜಯಸಂಯುಕ್ತಂ ರಥಾತ್ಪಶ್ಚಾದವಾತರತ್||

ದೇವರಾಜನ ಭವನದಂತಿದ್ದ ರಾಜಭವನವನ್ನು ಪ್ರವೇಶಿಸಿ ವಿಜಯ ಘೋಷಗಳಿಂದ ಸಂಯುಕ್ತವಾಗಿದ್ದ ರಥದಿಂದ ಕೆಳಕ್ಕಿಳಿದನು.

12039014a ಪ್ರವಿಶ್ಯಾಭ್ಯಂತರಂ ಶ್ರೀಮಾನ್ಪ್ಲವತಾನ್ಯಭಿಗಮ್ಯ ಚ|
12039014c ಪೂಜಯಾಮಾಸ ರತ್ನೈಶ್ಚ ಗಂಧೈರ್ಮಾಲ್ಯೈಶ್ಚ ಸರ್ವಶಃ||

ಶ್ರೀಯಿಂದ ಬೆಳಗುತ್ತಿದ್ದ ಅರಮನೆಯ ಒಳಭಾಗವನ್ನು ಪ್ರವೇಶಿಸಿ ಅವನು ಕುಲದೇವತೆಗಳ ಸನ್ನಿಧಿಗೆ ಹೋಗಿ ದೇವತೆಗಳೆಲ್ಲರನ್ನೂ ರತ್ನ-ಗಂಧ-ಮಾಲೆಗಳಿಂದ ಪೂಜಿಸಿದನು.

12039015a ನಿಶ್ಚಕ್ರಾಮ ತತಃ ಶ್ರೀಮಾನ್ಪುನರೇವ ಮಹಾಯಶಾಃ|
12039015c ದದರ್ಶ ಬ್ರಾಹ್ಮಣಾಂಶ್ಚೈವ ಸೋಽಭಿರೂಪಾನುಪಸ್ಥಿತಾನ್||

ಶ್ರೀಮಂತನೂ ಮಹಾಯಶಸ್ವಿಯೂ ಆಗಿದ್ದ ಅವನು ಪುನಃ ರಾಜಭವನದಿಂದ ಹೊರಟು ಎದುರಿಗೆ ನೆರೆದಿದ್ದ ಬ್ರಾಹ್ಮಣರನ್ನು ನೋಡಿದನು.

12039016a ಸ ಸಂವೃತಸ್ತದಾ ವಿಪ್ರೈರಾಶೀರ್ವಾದವಿವಕ್ಷುಭಿಃ|
12039016c ಶುಶುಭೇ ವಿಮಲಶ್ಚಂದ್ರಸ್ತಾರಾಗಣವೃತೋ ಯಥಾ||

ಆಶೀರ್ವದಿಸಲು ಅಲ್ಲಿಗೆ ಬಂದು ಸೇರಿದ್ದ ವಿಪ್ರರಿಂದ ಪರಿವೃತನಾದ ಅವನು ವಿಮಲ ಆಕಾಶದಲ್ಲಿ ತಾರಾಗಣಗಳಿಂದ ಸುತ್ತುವರೆಯಲ್ಪಟ್ಟ ಚಂದ್ರನಂತೆ ಶೋಭಿಸಿದನು.

12039017a ತಾನ್ಸ ಸಂಪೂಜಯಾಮಾಸ ಕೌಂತೇಯೋ ವಿಧಿವದ್ದ್ವಿಜಾನ್|
12039017c ಧೌಮ್ಯಂ ಗುರುಂ ಪುರಸ್ಕೃತ್ಯ ಜ್ಯೇಷ್ಠಂ ಪಿತರಮೇವ ಚ||
12039018a ಸುಮನೋಮೋದಕೈ ರತ್ನೈರ್ಹಿರಣ್ಯೇನ ಚ ಭೂರಿಣಾ|
12039018c ಗೋಭಿರ್ವಸ್ತ್ರೈಶ್ಚ ರಾಜೇಂದ್ರ ವಿವಿಧೈಶ್ಚ ಕಿಮಿಚ್ಚಕೈಃ||

ರಾಜೇಂದ್ರ! ಕೌಂತೇಯನು ಗುರು ಧೌಮ್ಯ ಮತ್ತು ದೊಡ್ಡಪ್ಪರನ್ನು

ಮುಂದಿಟ್ಟುಕೊಂಡು ಆ ದ್ವಿಜರನ್ನು ಪುಷ್ಪಗಳಿಂದಲೂ, ಮೋದಕಗಳಿಂದಲೂ, ರತ್ನ-ಹಿರಣ್ಯಗಳಿಂದಲೂ, ಗೋವುಗಳಿಂದಲೂ ಮತ್ತು ವಿವಿಧ ವಸ್ತುಗಳಿಂದಲೂ ಪೂಜಿಸಿದನು.

12039019a ತತಃ ಪುಣ್ಯಾಹಘೋಷೋಽಭೂದ್ದಿವಂ ಸ್ತಬ್ಧೀವ ಭಾರತ|
12039019c ಸುಹೃದಾಂ ಹರ್ಷಜನನಃ ಪುಣ್ಯಃ ಶ್ರುತಿಸುಖಾವಹಃ||

ಭಾರತ! ಆಗ ಆಕಾಶವನ್ನೇ ಸ್ತಬ್ಧಗೊಳಿಸುವಂಥಹ ಪುಣ್ಯಾಹ ಘೋಷವು ಕೇಳಿಬಂದಿತು. ಸುಹೃದಯರಿಗೆ ಕೇಳಿದರೆ ಪುಣ್ಯವನ್ನೂ ಹರ್ಷವನ್ನೂ ತರುವ ಘೋಷಗಳು ಕೇಳಿಬಂದವು.

12039020a ಹಂಸವನ್ನೇದುಷಾಂ ರಾಜನ್ದ್ವಿಜಾನಾಂ ತತ್ರ ಭಾರತೀ|
12039020c ಶುಶ್ರುವೇ ವೇದವಿದುಷಾಂ ಪುಷ್ಕಲಾರ್ಥಪದಾಕ್ಷರಾ||

ರಾಜನ್! ಅಲ್ಲಿ ಹಂಸಗಳಂತೆ ಘೋಷಿಸುತ್ತಿದ್ದ ವೇದವಿದುಷ ದ್ವಿಜರ ಶ್ರೇಷ್ಠ ಪದಾಕ್ಷರಸಂಪನ್ನ ವಾಣಿಯು ಎಲ್ಲರಿಗೂ ಸ್ಪಷ್ಟವಾಗಿ ಕೇಳಿಬರುತ್ತಿತ್ತು.

12039021a ತತೋ ದುಂದುಭಿನಿರ್ಘೋಷಃ ಶಂಖಾನಾಂ ಚ ಮನೋರಮಃ|
12039021c ಜಯಂ ಪ್ರವದತಾಂ ತತ್ರ ಸ್ವನಃ ಪ್ರಾದುರಭೂನ್ನೃಪ||

ನೃಪ! ಆಗ ಮನೋರಮ ದುಂದುಭಿ ಮತ್ತು ಶಂಖಗಳ ನಿರ್ಘೋಷವೂ ಜಯಕಾರ ಧ್ವನಿಯೂ ಕೇಳಿಬಂದವು.

12039022a ನಿಃಶಬ್ದೇ ಚ ಸ್ಥಿತೇ ತತ್ರ ತತೋ ವಿಪ್ರಜನೇ ಪುನಃ|
12039022c ರಾಜಾನಂ ಬ್ರಾಹ್ಮಣಚ್ಚದ್ಮಾ ಚಾರ್ವಾಕೋ ರಾಕ್ಷಸೋಽಬ್ರವೀತ್||

ಆಗ ಅಲ್ಲಿ ವಿಪ್ರಜನರು ಪುನಃ ನಿಃಷಬ್ಧರಾಗಲು ಬ್ರಾಹ್ಮಣ

ವೇಷಧರಿಸಿದ್ದ ರಾಕ್ಷಸ ಚಾರ್ವಾಕನು ರಾಜನನ್ನು ಉದ್ದೇಶಿಸಿ ಹೇಳಿದನು.

12039023a ತತ್ರ ದುರ್ಯೋಧನಸಖಾ ಭಿಕ್ಷುರೂಪೇಣ ಸಂವೃತಃ|
12039023c ಸಾಂಖ್ಯಃ ಶಿಖೀ ತ್ರಿದಂಡೀ ಚ ಧೃಷ್ಟೋ ವಿಗತಸಾಧ್ವಸಃ||

ಆ ದುರ್ಯೋಧನನ ಸಖನು ಭಿಕ್ಷುವಿನ ರೂಪವನ್ನು ಧರಿಸಿ ಅಕ್ಷಮಾಲೆಯನ್ನು ಹಿಡಿದು ಶಿಖಾಧಾರಿಯಾಗಿ ತ್ರಿದಂಡವನ್ನು ಹಿಡಿದು ಧೈರ್ಯಶಾಲಿಯಾಗಿ ತನ್ನ ನಿಜರೂಪವನ್ನು ಮರೆಸಿಕೊಂಡಿದ್ದನು.

12039024a ವೃತಃ ಸರ್ವೈಸ್ತದಾ ವಿಪ್ರೈರಾಶೀರ್ವಾದವಿವಕ್ಷುಭಿಃ|
12039024c ಪರಂಸಹಸ್ರೈ ರಾಜೇಂದ್ರ ತಪೋನಿಯಮಸಂಸ್ಥಿತೈಃ||
12039025a ಸ ದುಷ್ಟಃ ಪಾಪಮಾಶಂಸಮ್ಪಾಂಡವಾನಾಂ ಮಹಾತ್ಮನಾಮ್|
12039025c ಅನಾಮಂತ್ರ್ಯೈವ ತಾನ್ವಿಪ್ರಾಂಸ್ತಮುವಾಚ ಮಹೀಪತಿಮ್||

ರಾಜೇಂದ್ರ! ಆಶೀರ್ವಾದವನ್ನು ನೀಡಲು ಬಂದಿದ್ದ ಆ ಎಲ್ಲ ತಪೋನಿಯಮ ಸಂಸ್ಥಿತ ಸಹಸ್ರಾರು ವಿಪ್ರರ ಮಧ್ಯದಿಂದ ಮಹಾತ್ಮ ಪಾಂಡವರಿಗೆ ಕೇಡನ್ನೇ ಬಯಸುತ್ತಿದ್ದ ಆ ದುಷ್ಟನು ಮುಂದೆ ಬಂದು ವಿಪ್ರರ ಅನುಮತಿಯನ್ನು ಕೇಳದೇ ಮಹೀಪತಿಗೆ ಹೇಳತೊಡಗಿದನು.

12039026a ಇಮೇ ಪ್ರಾಹುರ್ದ್ವಿಜಾಃ ಸರ್ವೇ ಸಮಾರೋಪ್ಯ ವಚೋ ಮಯಿ|
12039026c ಧಿಗ್ಭವಂತಂ ಕುನೃಪತಿಂ ಜ್ಞಾತಿಘಾತಿನಮಸ್ತು ವೈ||

“ಈ ಎಲ್ಲ ದ್ವಿಜರೂ ನಿನಗೆ ಇದನ್ನು ಹೇಳುವ ಭಾರವನ್ನು ನನಗೆ ವಹಿಸಿದ್ದಾರೆ. ಜ್ಞಾತಿಬಾಂಧವರನ್ನು ಸಂಹರಿಸಿದ ಕುನೃಪತಿ ನಿನಗೆ ಧಿಕ್ಕಾರ!

12039027a ಕಿಂ ತೇ ರಾಜ್ಯೇನ ಕೌಂತೇಯ ಕೃತ್ವೇಮಂ ಜ್ಞಾತಿಸಂಕ್ಷಯಮ್|
12039027c ಘಾತಯಿತ್ವಾ ಗುರೂಂಶ್ಚೈವ ಮೃತಂ ಶ್ರೇಯೋ ನ ಜೀವಿತಮ್||

ಕೌಂತೇಯ! ಕುಲನಾಶವನ್ನು ಮಾಡಿರುವ ನಿನಗೆ ಈ ರಾಜ್ಯದಿಂದ ಏನು ಪ್ರಯೋಜನ? ಗುರುಜನರನ್ನೂ ಸಂಹರಿಸಿದ ನಿನಗೆ ಬದುಕಿರುವುದಕ್ಕಿಂತಲೂ ಮರಣವೇ ಶ್ರೇಯಸ್ಕರವಾದುದು!"

12039028a ಇತಿ ತೇ ವೈ ದ್ವಿಜಾಃ ಶ್ರುತ್ವಾ ತಸ್ಯ ಘೋರಸ್ಯ ರಕ್ಷಸಃ|
12039028c ವಿವ್ಯಥುಶ್ಚುಕ್ರುಶುಶ್ಚೈವ ತಸ್ಯ ವಾಕ್ಯಪ್ರಧರ್ಷಿತಾಃ||

ಆ ಘೋರ ರಾಕ್ಷಸನ ಕಠೋರ ಮಾತನ್ನು ಕೇಳಿ ದ್ವಿಜರು ವ್ಯಥಿತರಾಗಿ ಶೋಕಿಸಿದರು.

12039029a ತತಸ್ತೇ ಬ್ರಾಹ್ಮಣಾಃ ಸರ್ವೇ ಸ ಚ ರಾಜಾ ಯುಧಿಷ್ಠಿರಃ|
12039029c ವ್ರೀಡಿತಾಃ ಪರಮೋದ್ವಿಗ್ನಾಸ್ತೂಷ್ಣೀಮಾಸನ್ವಿಶಾಂ ಪತೇ||

ವಿಶಾಂಪತೇ! ಆಗ ಆ ಬ್ರಾಹ್ಮಣರೆಲ್ಲರೂ ರಾಜಾ ಯುಧಿಷ್ಠಿರನೂ ಪರಮ ಉದ್ವಿಗ್ನರೂ ಲಜ್ಜಿತರೂ ಆಗಿ ಏನನ್ನೂ ಮಾತನಾಡದೇ ಸುಮ್ಮನಿದ್ದರು.

12039030 ಯುಧಿಷ್ಠಿರ ಉವಾಚ|
12039030a ಪ್ರಸೀದಂತು ಭವಂತೋ ಮೇ ಪ್ರಣತಸ್ಯಾಭಿಯಾಚತಃ|
12039030c ಪ್ರತ್ಯಾಪನ್ನಂ ವ್ಯಸನಿನಂ ನ ಮಾಂ ಧಿಕ್ಕರ್ತುಮರ್ಹಥ||

ಯುಧಿಷ್ಠಿರನು ಹೇಳಿದನು: "ನಾನು ನಿಮಗೆ ನಮಸ್ಕರಿಸಿ ಕೇಳಿಕೊಳ್ಳುತ್ತಿದ್ದೇನೆ. ನನ್ನ ಮೇಲೆ ಪ್ರಸನ್ನರಾಗಿರಿ! ಎಲ್ಲೆಡೆಯಿಂದ ವ್ಯಸನಭರಿತನಾಗಿರುವ ನನ್ನನ್ನು ನೀವು ಹೀಗೆ ಧಿಕ್ಕರಿಸುವುದು

ಉಚಿತವಲ್ಲ!””

12039031 ವೈಶಂಪಾಯನ ಉವಾಚ|
12039031a ತತೋ ರಾಜನ್ಬ್ರಾಹ್ಮಣಾಸ್ತೇ ಸರ್ವ ಏವ ವಿಶಾಂ ಪತೇ|
12039031c ಊಚುರ್ನೈತದ್ವಚೋಽಸ್ಮಾಕಂ ಶ್ರೇರಸ್ತು ತವ ಪಾರ್ಥಿವ||

ವೈಶಂಪಾಯನನು ಹೇಳಿದನು: “ರಾಜನ್! ವಿಶಾಂಪತೇ! ಆಗ ಆ ಎಲ್ಲ ಬ್ರಾಹ್ಮಣರೂ ಇಂತೆಂದರು: “ಪಾರ್ಥಿವ! ಇವನು ಹೇಳಿದುದು ನಮ್ಮ ಮಾತಲ್ಲ! ಈ ರಾಜ್ಯಶ್ರೀಯು ನಿನ್ನದೇ ಆಗಿರಲಿ!”

12039032a ಜಜ್ಞುಶ್ಚೈವ ಮಹಾತ್ಮಾನಸ್ತತಸ್ತಂ ಜ್ಞಾನಚಕ್ಷುಷಾ|
12039032c ಬ್ರಾಹ್ಮಣಾ ವೇದವಿದ್ವಾಂಸಸ್ತಪೋಭಿರ್ವಿಮಲೀಕೃತಾಃ||

ಆಗ ವೇದವಿದ್ವಾಂಸರಾದ ಮತ್ತು ತಪಸ್ಸಿನಿಂದ ಪವಿತ್ರರಾಗಿದ್ದ ಆ ಮಹಾತ್ಮ ಬ್ರಾಹ್ಮಣರು ತಮ್ಮ ಜ್ಞಾನದೃಷ್ಟಿಯಿಂದ ಚಾರ್ವಾಕನು ಯಾರೆಂದು ತಿಳಿದುಕೊಂಡರು.

12039033 ಬ್ರಾಹ್ಮಣಾ ಊಚುಃ|
12039033a ಏಷ ದುರ್ಯೋಧನಸಖಾ ಚಾರ್ವಾಕೋ ನಾಮ ರಾಕ್ಷಸಃ|
12039033c ಪರಿವ್ರಾಜಕರೂಪೇಣ ಹಿತಂ ತಸ್ಯ ಚಿಕೀರ್ಷತಿ||

ಬ್ರಾಹ್ಮಣರು ಹೇಳಿದರು: “ಇವನು ದುರ್ಯೋಧನನ ಮಿತ್ರ. ಚಾರ್ವಾಕ ಎಂಬ ಹೆಸರಿನ ರಾಕ್ಷಸ. ಪರಿವ್ರಾಜಕನ ರೂಪದಲ್ಲಿ ಇವನು ಅವನ ಹಿತಕ್ಕಾಗಿ ಹೀಗೆ ಮಾಡುತ್ತಿದ್ದಾನೆ.

12039034a ನ ವಯಂ ಬ್ರೂಮ ಧರ್ಮಾತ್ಮನ್ವೈತು ತೇ ಭಯಮೀದೃಶಮ್|
12039034c ಉಪತಿಷ್ಠತು ಕಲ್ಯಾಣಂ ಭವಂತಂ ಭ್ರಾತೃಭಿಃ ಸಹ||

ಧರ್ಮಾತ್ಮನ್! ನಾವು ಹೀಗೆ ಹೇಳಲಾರೆವು. ಈ ಭಯವು ನಿನ್ನಿಂದ ದೂರವಾಗಲಿ! ಎದ್ದೇಳು! ಸಹೋದರರೊಂದಿಗೆ ನಿನ್ನ ಕಲ್ಯಾಣವಾಗಲಿ!""

12039035 ವೈಶಂಪಾಯನ ಉವಾಚ|
12039035a ತತಸ್ತೇ ಬ್ರಾಹ್ಮಣಾಃ ಸರ್ವೇ ಹುಂಕಾರ್ಯೈಃ ಕ್ರೋಧಮೂರ್ಚಿತಾಃ|
12039035c ನಿರ್ಭರ್ತ್ಸಯಂತಃ ಶುಚಯೋ ನಿಜಘ್ನುಃ ಪಾಪರಾಕ್ಷಸಮ್||

ವೈಶಂಪಾಯನನು ಹೇಳಿದನು: "ಅನಂತರ ಆ ಶುಚಿ ಬ್ರಾಹ್ಮಣರೆಲ್ಲರೂ ಕ್ರೋಧಮೂರ್ಚಿತರಾಗಿ ಹುಂಕಾರಗಳಿಂದ ಆ ಪಾಪರಾಕ್ಷಸನನ್ನು ಬೆದರಿಸಿ ಸಂಹರಿಸಿದರು.

12039036a ಸ ಪಪಾತ ವಿನಿರ್ದಗ್ಧಸ್ತೇಜಸಾ ಬ್ರಹ್ಮವಾದಿನಾಮ್|
12039036c ಮಹೇಂದ್ರಾಶನಿನಿರ್ದಗ್ಧಃ ಪಾದಪೋಽಂಕುರವಾನಿವ||

ಇಂದ್ರನ ವಜ್ರಾಘಾತದಿಂದ ಚಿಗುರುಗಳೂ ಸೇರಿ ಭಸ್ಮೀಭೂತವಾಗುವ ವೃಕ್ಷದಂತೆ ಆ ಬ್ರಹ್ಮವಾದಿಗಳ ತೇಜಸ್ಸಿನಿಂದ ಚಾರ್ವಾಕನು ಭಸ್ಮೀಭೂತನಾಗಿ ಕೆಳಗೆ ಬಿದ್ದನು.

12039037a ಪೂಜಿತಾಶ್ಚ ಯಯುರ್ವಿಪ್ರಾ ರಾಜಾನಮಭಿನಂದ್ಯ ತಮ್|
12039037c ರಾಜಾ ಚ ಹರ್ಷಮಾಪೇದೇ ಪಾಂಡವಃ ಸಸುಹೃಜ್ಜನಃ||

ಬಳಿಕ ರಾಜನಿಂದ ಸತ್ಕೃತರಾದ ವಿಪ್ರರು ರಾಜನನ್ನು ಅಭಿನಂದಿಸಿ ತೆರಳಿದರು. ರಾಜಾ ಪಾಂಡವನೂ ಕೂಡ ತನ್ನ ಸುಹೃಜ್ಜನರೊಂದಿಗೆ ಹರ್ಷಿತನಾದನು.

[68]12039038 ವಾಸುದೇವ ಉವಾಚ|
12039038a ಬ್ರಾಹ್ಮಣಾಸ್ತಾತ ಲೋಕೇಽಸ್ಮಿನ್ನರ್ಚನೀಯಾಃ ಸದಾ ಮಮ|
12039038c ಏತೇ ಭೂಮಿಚರಾ ದೇವಾ ವಾಗ್ವಿಷಾಃ ಸುಪ್ರಸಾದಕಾಃ||

ವಾಸುದೇವನು ಹೇಳಿದನು: "ಅಯ್ಯಾ! ಬ್ರಾಹ್ಮಣರು ಈ ಲೋಕದಲ್ಲಿ ನನಗೆ ಸದಾ ಅರ್ಚನೀಯರಾಗಿದ್ದಾರೆ. ಇವರು ಭೂಮಿಯಲ್ಲಿ ಸಂಚರಿಸುವ ದೇವತೆಗಳು! ಇವರು ಕುಪಿತರಾದರೆ ಇವರ ಮಾತುಗಳು ವಿಷವಾಗಿರುತ್ತವೆ.

12039039a ಪುರಾ ಕೃತಯುಗೇ ತಾತ ಚಾರ್ವಾಕೋ ನಾಮ ರಾಕ್ಷಸಃ|
12039039c ತಪಸ್ತೇಪೇ ಮಹಾಬಾಹೋ ಬದರ್ಯಾಂ ಬಹುವತ್ಸರಮ್||

ಅಯ್ಯಾ ಮಹಾಬಾಹೋ! ಹಿಂದೆ ಕೃತಯುಗದಲ್ಲಿ ಚಾರ್ವಾಕನೆಂಬ ರಾಕ್ಷಸನು ಬದರಿಯಲ್ಲಿ ಅನೇಕ ವರ್ಷಗಳು ತಪಸ್ಸನ್ನು ಮಾಡಿದನು.

12039040a ಚಿಂದ್ಯಮಾನೋ ವರೇಣಾಥ ಬ್ರಹ್ಮಣಾ ಸ ಪುನಃ ಪುನಃ|
12039040c ಅಭಯಂ ಸರ್ವಭೂತೇಭ್ಯೋ ವರಯಾಮಾಸ ಭಾರತ||

ಭಾರತ! ಬ್ರಹ್ಮನು ಅವನಿಗೆ ವರವನ್ನು ಕೇಳಿಕೊಳ್ಳುವಂತೆ ಪುನಃ ಪುನಃ ಒತ್ತಾಯಿಸಲು ಅವನು ಸರ್ವಭೂತಗಳಿಂದಲೂ ಅಭಯವನ್ನು ವರವನ್ನಾಗಿ ಕೇಳಿಕೊಂಡನು.

12039041a ದ್ವಿಜಾವಮಾನಾದನ್ಯತ್ರ ಪ್ರಾದಾದ್ವರಮನುತ್ತಮಮ್|
12039041c ಅಭಯಂ ಸರ್ವಭೂತೇಭ್ಯಸ್ತತಸ್ತಸ್ಯೈ ಜಗತ್ಪ್ರಭುಃ||

---

68 ಈ ಅಧ್ಯಾಯದ ಉಳಿದ ಶ್ಲೋಕಗಳನ್ನು ಗೀತಾ ಪ್ರೆಸ್ ಸಂಪುಟದಲ್ಲಿ ಬೇರೆಯೇ ಅಧ್ಯಾಯವನ್ನಾಗಿ ಕೊಟ್ಟಿದ್ದಾರೆ.

ಆಗ ಜಗತ್ಪಭುವು ದ್ವಿಜರಿಗೆ ಅವಮಾನಮಾಡದೇ ಇದ್ದರೆ ಸರ್ವಭೂತಗಳಿಂದಲೂ ಅಭಯವಾಗಲಿ ಎಂದು ಅವನಿಗೆ ಆ ಉತ್ತಮ ವರವನ್ನು ಇತ್ತನು.

12039042a ಸ ತು ಲಬ್ಧವರಃ ಪಾಪೋ ದೇವಾನಮಿತವಿಕ್ರಮಃ|
12039042c ರಾಕ್ಷಸಸ್ತಾಪಯಾಮಾಸ ತೀವ್ರಕರ್ಮಾ ಮಹಾಬಲಃ||

ಆ ವರವನ್ನು ಪಡೆದು ಪಾಪಿ ತೀವ್ರಕರ್ಮಿ ಮಹಾಬಲಿ ಅಮಿತವಿಕ್ರಮಿ ರಾಕ್ಷಸನು ದೇವತೆಗಳನ್ನೂ ಪರಿತಪಿಸತೊಡಗಿದನು.

12039043a ತತೋ ದೇವಾಃ ಸಮೇತ್ಯಾಥ ಬ್ರಹ್ಮಾಣಮಿದಮಬ್ರುವನ್|
12039043c ವಧಾಯ ರಕ್ಷಸಸ್ತಸ್ಯ ಬಲವಿಪ್ರಕೃತಾಸ್ತದಾ||

ಆ ರಾಕ್ಷಸನ ಬಲದಿಂದ ಪೀಡಿತರಾದ ದೇವತೆಗಳು ಒಟ್ಟಾಗಿ ಅವನ ವಧೆಗಾಗಿ ಬ್ರಹ್ಮನಲ್ಲಿ ಕೇಳಿಕೊಂಡರು.

12039044a ತಾನುವಾಚಾವ್ಯಯೋ ದೇವೋ ವಿಹಿತಂ ತತ್ರ ವೈ ಮಯಾ|
12039044c ಯಥಾಸ್ಯ ಭವಿತಾ ಮೃತ್ಯುರಚಿರೇಣೈವ ಭಾರತ||

ಭಾರತ! ಅವ್ಯವ ದೇವನು ಆಗ ಅವರಿಗೆ ಹೇಳಿದನು: "ಅದರ ಕುರಿತು ನಾನು ಈಗಲೇ ನಿರ್ಧರಿಸಿದ್ದೇನೆ. ಬೇಗನೇ ಇವನ ಮರಣವಾಗಲಿದೆ!

12039045a ರಾಜಾ ದುರ್ಯೋಧನೋ ನಾಮ ಸಖಾಸ್ಯ ಭವಿತಾ ನೃಪ|
12039045c ತಸ್ಯ ಸ್ನೇಹಾವಬದ್ಧೋಽಸೌ ಬ್ರಾಹ್ಮಣಾನವಮಂಸ್ಯತೇ||

ಇವನು ದುರ್ಯೋಧನನೆಂಬ ರಾಜನ ಸಖಿನಾಗುವನು. ಅವನ ಸ್ನೇಹಪಾಶದ ಬಂಧನಕ್ಕೊಳಗಾಗಿ ಇವನು ಬ್ರಾಹ್ಮಣರನ್ನು ಅಪಮಾನಿಸುವನು.

12039046a ತತ್ರೈನಂ ರುಷಿತಾ ವಿಪ್ರಾ ವಿಪ್ರಕಾರಪ್ರಧರ್ಷಿತಾಃ|
12039046c ಧಕ್ಷ್ಯಂತಿ ವಾಗ್ಬಲಾಃ ಪಾಪಂ ತತೋ ನಾಶಂ ಗಮಿಷ್ಯತಿ||

ಇವನ ವಿರುದ್ಧಾಚರಣೆಯ ವಾಕ್ಕಲ್ಯದಿಂದ ಅಪಮಾನಿತರಾದ
ಬ್ರಾಹ್ಮಣರು ಕೋಪದಿಂದ ತಮ್ಮ ವಾಗ್ಬಲಗಳಿಂದ ಇವನನ್ನು
ಸುಡುತ್ತಾರೆ. ಆಗ ಈ ಪಾಪಿಯು ನಾಶಹೊಂದುತ್ತಾನೆ!”

12039047a ಸ ಏಷ ನಿಹತಃ ಶೇತೇ ಬ್ರಹ್ಮದಂಡೇನ ರಾಕ್ಷಸಃ|
12039047c ಚಾರ್ವಾಕೋ ನೃಪತಿಶ್ರೇಷ್ಠ ಮಾ ಶುಚೋ ಭರತರ್ಷಭ||

ಭರತಶ್ರೇಷ್ಠ! ಆ ರಾಕ್ಷಸ ಚಾರ್ವಾಕನೇ ಇಂದು ಹೀಗೆ
ಬ್ರಹ್ಮದಂಡದಿಂದ ಹತನಾಗಿ ಬಿದ್ದಿದ್ದಾನೆ. ನೃಪತಿಶ್ರೇಷ್ಠ! ಇದಕ್ಕಾಗಿ
ಶೋಕಿಸಬೇಡ!

12039048a ಹತಾಸ್ತೇ ಕ್ಷತ್ರಧರ್ಮೇಣ ಜ್ಞಾತಯಸ್ತವ ಪಾರ್ಥಿವ|
12039048c ಸ್ವರ್ಗತಾಶ್ಚ ಮಹಾತ್ಮಾನೋ ವೀರಾಃ ಕ್ಷತ್ರಿಯಪುಂಗವಾಃ||

ಪಾರ್ಥಿವ! ಕ್ಷತ್ರಿಯಧರ್ಮದಿಂದ ನಿನ್ನ ಜ್ಞಾತಿಬಾಂಧವ ಮಹಾತ್ಮ
ವೀರ ಕ್ಷತ್ರಿಯ ಪುಂಗವರು ಸ್ವರ್ಗಸ್ಥರಾಗಿದ್ದಾರೆ.

12039049a ಸ ತ್ವಮಾತಿಷ್ಠ ಕಲ್ಯಾಣಂ ಮಾ ತೇ ಭೂದ್ಗ್ಲಾ ನಿರಚ್ಯುತ|
12039049c ಶತ್ರೂನ್ಜಹಿ ಪ್ರಜಾ ರಕ್ಷ ದ್ವಿಜಾಂಶ್ಚ ಪ್ರತಿಪಾಲಯ||

ನೀನು ಈಗ ಕಲ್ಯಾಣಕರ ಕರ್ತವ್ಯಗಳನ್ನು ಮಾಡು. ಅಚ್ಯುತ!
ಶೋಕದಿಂದ ದುರ್ಬಲನಾಗಬೇಡ! ಶತ್ರುಗಳನ್ನು ಸಂಹರಿಸು!
ಪ್ರಜೆಗಳನ್ನು ರಕ್ಷಿಸು! ಮತ್ತು ದ್ವಿಜರನ್ನು ಪಾಲಿಸು!””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಚಾರ್ವಾಕವಧೇ ಏಕೋನಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಚಾರ್ವಾಕವಧೆ ಎನ್ನುವ ಮೂವತ್ತೊಂಭತ್ತನೇ ಅಧ್ಯಾಯವು.

೪೦

ರಾಜ್ಯಾಭಿಷೇಕ

ಯುಧಿಷ್ಠಿರನ ರಾಜ್ಯಾಭಿಷೇಕ (1-22).

12040001 ವೈಶಂಪಾಯನ ಉವಾಚ|
12040001a ತತಃ ಕುಂತೀಸುತೋ ರಾಜಾ ಗತಮನ್ಯುರ್ಗತಜ್ವರಃ|
12040001c ಕಾಂಚನೇ ಪ್ರಾಙ್ಮುಖೋ ಹೃಷ್ಟೋ ನ್ಯಷೀದತ್ಪರಮಾಸನೇ||

ವೈಶಂಪಾಯನನು ಹೇಳಿದನು: "ಆಗ ರಾಜಾ ಕುಂತೀಸುತನು ಕೋಪ-ವ್ಯಸನಗಳನ್ನು ತೊರೆದು ಹೃಷ್ಟನಾಗಿ ಉತ್ತರಾಭಿಮುಖವಾಗಿ ಕಾಂಚನದ ಪರಮಾಸನದಲ್ಲಿ ಕುಳಿತುಕೊಂಡನು.

12040002a ತಮೇವಾಭಿಮುಖೌ ಪೀಠೇ ಸೇವ್ಯಾಸ್ತರಣಸಂವೃತೇ|
12040002c ಸಾತ್ಯಕಿರ್ವಾಸುದೇವಶ್ಚ ನಿಷೀದತುರರಿಂದಮೌ||

ಅವನಿಗೆ ಅಭಿಮುಖವಾಗಿ ಪ್ರಜ್ವಲಿಸುತ್ತಿದ್ದ ಸುವರ್ಣಸಿಂಹಾಸನಗಳಲ್ಲಿ ಅರಿಂದಮ ಸಾತ್ಯಕಿ-ವಾಸುದೇವರು ಕುಳಿತುಕೊಂಡರು.

12040003a ಮಧ್ಯೇ ಕೃತ್ವಾ ತು ರಾಜಾನಂ ಭೀಮಸೇನಾರ್ಜುನಾವುಭೌ|
12040003c ನಿಷೀದತುರ್ಮಹಾತ್ಮಾನೌ ಶ್ಲಕ್ಷ್ಣಯೋರ್ಮಣಿಪೀಠಯೋಃ||



ರಾಜನನ್ನು ಮಧ್ಯದಲ್ಲಿರಿಸಿಕೊಂಡು ಮಹಾತ್ಮ ಭೀಮಸೇನ-
ಅರ್ಜುನರಿಬ್ಬರೂ ಎರಡೂ ಕಡೆಗಳಲ್ಲಿ ಸುಂದರ ಮಣಿಮಯ
ಪೀಠಗಳಲ್ಲಿ ಕುಳಿತುಕೊಂಡರು.

12040004a ದಾಂತೇ ಶಯ್ಯಾಸನೇ ಶುಭ್ರೇ ಜಾಂಬೂನದವಿಭೂಷಿತೇ|
12040004c ಪೃಥಾಪಿ ಸಹದೇವೇನ ಸಹಾಸ್ತೇ ನಕುಲೇನ ಚ||

ಕುಂತಿಯು ಸುವರ್ಣದಿಂದ ಸಮಲಂಕೃತವಾಗಿದ್ದ ಶುಭ್ರ
ದಂತಸಿಂಹಾಸನದಲ್ಲಿ ನಕುಲ-ಸಹದೇವರೊಡನೆ ಕುಳಿತುಕೊಂಡಳು.

12040005a ಸುಧರ್ಮಾ ವಿದುರೋ ಧೌಮ್ಯೋ ಧೃತರಾಷ್ಟ್ರಶ್ಚ ಕೌರವಃ|
12040005c ನಿಷೇದುರ್ಜ್ವಲನಾಕಾರೇಷ್ವಾಸನೇಷು ಪೃಥಕ್ ಪೃಥಕ್||

ಸುಧರ್ಮ, ವಿದುರ, ಧೌಮ್ಯ ಮತ್ತು ಕೌರವ ಧೃತರಾಷ್ಟ್ರರು
ಯಜ್ಞೇಶ್ವರನಂತೆ ಪ್ರಕಾಶಿಸುತ್ತಿದ್ದ ಸಿಂಹಾಸನಗಳಲ್ಲಿ ಪ್ರತ್ಯೇಕ-
ಪ್ರತ್ಯೇಕವಾಗಿ ಕುಳಿತುಕೊಂಡರು.

12040006a ಯುಯುತ್ಸುಃ ಸಂಜಯಶ್ಚೈವ ಗಾಂಧಾರೀ ಚ ಯಶಸ್ವಿನೀ|
12040006c ಧೃತರಾಷ್ಟ್ರೋ ಯತೋ ರಾಜಾ ತತಃ ಸರ್ವ ಉಪಾವಿಶನ್||

ರಾಜಾ ಧೃತರಾಷ್ಟ್ರನು ಕುಳಿತಿದ್ದಲ್ಲಿಯೇ ಯುಯುತ್ಸು, ಸಂಜಯ ಮತ್ತು
ಯಶಸ್ವಿನೀ ಗಾಂಧಾರಿಯರೆಲ್ಲರೂ ಕುಳಿತುಕೊಂಡರು.

12040007a ತತ್ರೋಪವಿಷ್ಟೋ ಧರ್ಮಾತ್ಮಾ ಶ್ವೇತಾಃ ಸುಮನಸೋಽಸ್ಪೃಶತ್|
12040007c ಸ್ವಸ್ತಿಕಾನಕ್ಷತಾನ್ಭೂಮಿಂ ಸುವರ್ಣಂ ರಜತಂ ಮಣೀನ್||

ಅಲ್ಲಿ ಕುಳಿತಿದ್ದ ಧರ್ಮಾತ್ಮ ಯುಧಿಷ್ಠಿರನು ಸುಮನಸ್ಕನಾಗಿ
ಶ್ವೇತಪುಷ್ಪಗಳನ್ನೂ, ಸ್ವಸ್ತಿಕಗಳನ್ನೂ, ಅಕ್ಷತೆಗಳನ್ನೂ, ಭೂಮಿಯನ್ನೂ,

ಸುವರ್ಣವನ್ನೂ, ಬೆಳ್ಳಿಯನ್ನೂ, ಮಣಿಗಳನ್ನೂ ಸ್ಪರ್ಶಿಸಿದನು.

12040008a ತತಃ ಪ್ರಕೃತಯಃ ಸರ್ವಾಃ ಪುರಸ್ಕೃತ್ಯ ಪುರೋಹಿತಮ್।
12040008c ದದೃಶುರ್ಧರ್ಮರಾಜಾನಮಾದಾಯ ಬಹು ಮಂಗಲಮ್॥
12040009a ಪೃಥಿವೀಂ ಚ ಸುವರ್ಣಂ ಚ ರತ್ನಾನಿ ವಿವಿಧಾನಿ ಚ।
12040009c ಅಭಿಷೇಚನಿಕಂ ಭಾಂಡಂ ಸರ್ವಸಂಭಾರಸಂಭೃತಮ್॥
12040010a ಕಾಂಚನೌದುಂಬರಾಸ್ತತ್ರ ರಾಜತಾಃ ಪೃಥಿವೀಮಯಾಃ।
12040010c ಪೂರ್ಣಕುಂಭಾಃ ಸುಮನಸೋ ಲಾಜಾ ಬರ್ಹಿಂಷಿ ಗೋರಸಾಃ॥
12040011a ಶಮೀಪಲಾಶಪುಂನಾಗಾಃ ಸಮಿಧೋ ಮಧುಸರ್ಪಿಷೀ।
12040011c ಸ್ರುವ ಔದುಂಬರಃ ಶಂಖಾಸ್ತಥಾ ಹೇಮವಿಭೂಷಿತಾಃ॥

ಬಳಿಕ ಅಮಾತ್ಯ-ಸೇನಾಪತಿಗಳೇ ಮೊದಲಾದ
ಪ್ರಕೃತಿವರ್ಗದವರೆಲ್ಲರೂ ಪುರೋಹಿತ ಧೌಮ್ಯನನ್ನು
ಮುಂದೆಮಾಡಿಕೊಂಡು ಅನೇಕವಿಧದ ಮಂಗಲ ದ್ರವ್ಯಗಳನ್ನು -
ಮೃತ್ತಿಕೆ, ಚಿನ್ನ, ವಿವಿಧ ರತ್ನಗಳು, ಅಭಿಷೇಕಕ್ಕಾಗಿ ತಂದ ಚಿನ್ನ, ತಾಮ್ರ
ಮತ್ತು ಬೆಳ್ಳಿಯ ಕಲಶಗಳು, ಮತ್ತು ನೀರು ತುಂಬಿದ ಬೆಳ್ಳಿಯ
ಪೂರ್ಣಕುಂಭಗಳು, ಪುಷ್ಪಗಳು, ಬತ್ತದರಳು, ದರ್ಭೆ, ಗೋರಸ, ಬನ್ನಿ,
ಅರಳಿ ಮತ್ತು ಮುತ್ತುಗದ ಸಮಿತ್ತುಗಳು, ಜೇನುತುಪ್ಪ, ತುಪ್ಪ, ಅತ್ತಿಯ
ಮರದಿಂದ ಮಾಡಿದ ಸ್ರುವ, ಸುವರ್ಣ ಭೂಷಿತ ಶಂಖ – ಇವುಗಳನ್ನು
ತಂದು ರಾಜನಿಗೆ ದರ್ಶಿಸಿದರು.

12040012a ದಾಶಾರ್ಹೇಣಾಭ್ಯನುಜ್ಞಾತಸ್ತತ್ರ ಧೌಮ್ಯಃ ಪುರೋಹಿತಃ।
12040012c ಪ್ರಾಗುದಕ್ಪ್ರವಣಾಂ ವೇದೀಂ ಲಕ್ಷಣೇನೋಪಲಿಪ್ಯ ಹ॥

ಅನಂತರ ದಾಶಾರ್ಹನ ಅನುಮತಿಯನ್ನು ಪಡೆದು ಪುರೋಹಿತ

ಧೌಮ್ಯನು ಪೂರ್ವೋತ್ತರ ದಿಕ್ಕುಗಳ (ಈಶಾನ್ಯ) ಕಡೆಗೆ ಸ್ವಲ್ಪ
ಇಳಿಜಾರಾಗಿದ್ದ ಒಂದು ವೇದಿಯನ್ನು ಸಿದ್ಧಗೊಳಿಸಿದನು.

12040013a ವ್ಯಾಘ್ರಚರ್ಮೋತ್ತರೇ ಶ್ಲಕ್ಷ್ಣೇ ಸರ್ವತೋಭದ್ರ ಆಸನೇ|
12040013c ದೃಢಪಾದಪ್ರತಿಷ್ಠಾನೇ ಹುತಾಶನಸಮತ್ವಿಷಿ||
12040014a ಉಪವೇಶ್ಯ ಮಹಾತ್ಮಾನಂ ಕೃಷ್ಣಾಂ ಚ ದ್ರುಪದಾತ್ಮಜಾಮ್|
12040014c ಜುಹಾವ ಪಾವಕಂ ಧೀಮಾನ್ವಿಧಿಮಂತ್ರಪುರಸ್ಕೃತಮ್||

ಆ ವೇದಿಯನ್ನು ಗೋಮಯದಿಂದ ಸಾರಿಸಿ, ಲಕ್ಷಣಯುಕ್ತವಾಗುವಂತೆ
ಮಾಡಿ, ದೃಢಪಾದಗಳಿದ್ದ ಯಜ್ಞೇಶ್ವರನ ಜ್ವಾಲೆಗೆ ಸಮಾನ
ಕಾಂತಿಯುಕ್ತವಾದ ಸರ್ವತೋಭದ್ರವೆಂಬ ಆಸನದ ಮೇಲೆ
ವ್ಯಾಘ್ರಚರ್ಮವನ್ನೂ ಅದರ ಮೇಲೆ ಬಿಳಿಯ ವಸ್ತ್ರವನ್ನೂ ಹೊದಿಸಿ
ಮಹಾತ್ಮ ಯುಧಿಷ್ಠಿರನನ್ನೂ, ದ್ರುಪದಾತ್ಮಜೆ ಕೃಷ್ಣೆಯನ್ನೂ
ಕುಳ್ಳಿರಿಸಿದನು. ಅನಂತರ ಧೀಮಂತ ಧೌಮ್ಯನು ಅಗ್ನಿಯನ್ನು
ಪ್ರತಿಷ್ಠಾಪಿಸಿ ವಿಧಿಮಂತ್ರ ಪೂರ್ವಕವಾಗಿ ಪಟ್ಟಾಭಿಷೇಕಕ್ಕೆ
ಸಂಬಂಧಿಸಿದಂತೆ ಯಜ್ಞೇಶ್ವರನಲ್ಲಿ ಆಜ್ಯಾಹುತಿಗಳನ್ನು
ಸಮರ್ಪಿಸಿದನು.

12040015a ಅಭ್ಯಷಿಂಚತ್ಪತಿಂ ಪೃಥ್ಯಾಃ ಕುಂತೀಪುತ್ರಂ ಯುಧಿಷ್ಠಿರಮ್|
12040015c ಧೃತರಾಷ್ಟ್ರಶ್ಚ ರಾಜರ್ಷಿಃ ಸರ್ವಾಃ ಪ್ರಕೃತಯಸ್ತಥಾ||

ಅನಂತರ ರಾಜರ್ಷಿ ಧೃತರಾಷ್ಟ್ರನೂ ಸರ್ವಪ್ರಜೆಗಳೂ ಕುಂತೀಪುತ್ರ
ಯುಧಿಷ್ಠಿರನನ್ನು ಪೃಥ್ವೀಪತಿಯನ್ನಾಗಿ ಅಭಿಷೇಕಿಸಿದರು.

12040016a ತತೋಽನುವಾದಯಾಮಾಸುಃ ಪಣವಾನಕದುಂದುಭೀಃ|
12040016c ಧರ್ಮರಾಜೋಽಪಿ ತತ್ಸರ್ವಂ ಪ್ರತಿಜಗ್ರಾಹ ಧರ್ಮತಃ||

ಬಳಿಕ ಪಣವ-ಅನಕ-ದುಂದುಭಿಗಳನ್ನು ಬಾರಿಸಲಾಯಿತು.
ಧರ್ಮರಾಜನಾದರೋ ಅವೆಲ್ಲವನ್ನೂ ಧರ್ಮಪೂರ್ವಕವಾಗಿ
ಸ್ವೀಕರಿಸಿದನು.

12040017a ಪೂಜಯಾಮಾಸ ತಾಂಶ್ಚಾಪಿ ವಿಧಿವದ್ಭೂರಿದಕ್ಷಿಣಃ|
12040017c ತತೋ ನಿಷ್ಕಸಹಸ್ರೇಣ ಬ್ರಾಹ್ಮಣಾನ್ಸ್ವಸ್ತಿ ವಾಚಯತ್|
12040017e ವೇದಾಧ್ಯಯನಸಂಪನ್ನಾನ್ಶೀಲವೃತ್ತಸಮನ್ವಿತಾನ್||

ಭೂರಿದಕ್ಷಿಣ ಯುಧಿಷ್ಠಿರನು ಸ್ವಸ್ತಿವಾಚನ ಮಾಡಿದ ವೇದಾಧ್ಯಯನ
ಸಂಪನ್ನರೂ ಶೀಲವರ್ತನ ಸಮನ್ವಿತರೂ ಆದ ಬ್ರಾಹ್ಮಣರನ್ನು
ಸಹಸ್ರಾರು ನಿಷ್ಕಗಳನ್ನಿತ್ತು ವಿಧಿವತ್ತಾಗಿ ಪೂಜಿಸಿದನು.

12040018a ತೇ ಪ್ರೀತಾ ಬ್ರಾಹ್ಮಣಾ ರಾಜನ್ಸ್ವಸ್ತಿ ಊಚುರ್ಜಯಮೇವ ಚ|
12040018c ಹಂಸಾ ಇವ ಚ ನರ್ದಂತಃ ಪ್ರಶಶಂಸುರ್ಯುಧಿಷ್ಠಿರಮ್||

ರಾಜನ್! ಪ್ರೀತರಾದ ಬ್ರಾಹ್ಮಣರು ಹಂಸಗಳಂತೆ ಉಚ್ಚಸ್ವರಗಳಲ್ಲಿ
ಯುಧಿಷ್ಠಿರನಿಗೆ ಜಯಕಾರಗಳನ್ನೂ ಸ್ವಸ್ತಿಮಂತ್ರಗಳನ್ನೂ ಹೇಳಿದರು.

12040019a ಯುಧಿಷ್ಠಿರ ಮಹಾಬಾಹೋ ದಿಷ್ಟ್ಯಾ ಜಯಸಿ ಪಾಂಡವ|
12040019c ದಿಷ್ಟ್ಯಾ ಸ್ವಧರ್ಮಂ ಪ್ರಾಪ್ತೋಽಸಿ ವಿಕ್ರಮೇಣ ಮಹಾದ್ಯುತೇ||

“ಯುಧಿಷ್ಠಿರ! ಮಹಾಬಾಹೋ! ಪಾಂಡವ! ಮಹಾದ್ಯುತೇ!
ಅದೃಷ್ಟವಶಾತ್ ನೀನು ನಿನ್ನ ವಿಕ್ರಮದಿಂದ ವಿಜಯಿಯಾಗಿರುವೆ.
ಅದೃಷ್ಟವಶಾತ್ ಸ್ವಧರ್ಮವನ್ನು ಪಾಲಿಸಿರುವೆ!

12040020a ದಿಷ್ಟ್ಯಾ ಗಾಂಡೀವಧನ್ವಾ ಚ ಭೀಮಸೇನಶ್ಚ ಪಾಂಡವಃ|
12040020c ತ್ವಂ ಚಾಪಿ ಕುಶಲೀ ರಾಜನ್ಮಾದ್ರೀಪುತ್ರೌ ಚ ಪಾಂಡವೌ||

ರಾಜನ್! ಅದೃಷ್ಟದಿಂದಲೇ ನೀನು, ಗಾಂಡೀವಧನ್ವಿ ಪಾಂಡವ,
ಭೀಮಸೇನ ಮತ್ತು ಮಾದ್ರೀಪುತ್ರ ಪಾಂಡವರಿಬ್ಬರೂ
ಕುಶಲಿಗಳಾಗಿರುವಿರಿ!

12040021a ಮುಕ್ತಾ ವೀರಕ್ಷಯಾದಸ್ಮಾತ್ಸಂಗ್ರಾಮಾನ್ನಿಹತದ್ವಿಷಃ|
12040021c ಕ್ಷಿಪ್ರಮುತ್ತರಕಾಲಾನಿ ಕುರು ಕಾರ್ಯಾಣಿ ಪಾಂಡವ||

ಪಾಂಡವ! ಈ ವೀರಕ್ಷಯಕಾರಕ ಯುದ್ಧದಲ್ಲಿ ಹೋರಾಡಿ ಶತ್ರುಗಳಿಂದ
ಮುಕ್ತರಾಗಿರುವಿರಿ! ಈಗ ಕ್ಷಿಪ್ರವಾಗಿ ಮುಂದೆ ಮಾಡಬೇಕಾದ
ಕಾರ್ಯಗಳನ್ನು ಮಾಡು!"

12040022a ತತಃ ಪ್ರತ್ಯರ್ಚಿತಃ ಸದ್ಭಿರ್ಧರ್ಮರಾಜೋ ಯುಧಿಷ್ಠಿರಃ|
12040022c ಪ್ರತಿಪೇದೇ ಮಹದ್ರಾಜ್ಯಂ ಸುಹೃದ್ಭಿಃ ಸಹ ಭಾರತ||

ಭಾರತ! ಅನಂತರ ಪುನಃ ಸತ್ಪುರುಷರಿಂದ ಅರ್ಚಿತನಾದ
ಯುಧಿಷ್ಠಿರನು ಸುಹೃದಯರೊಂದಿಗೆ ಆ ಮಹಾ ರಾಜ್ಯವನ್ನು
ಪಡೆದುಕೊಂಡನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಯುಧಿಷ್ಠಿರಾಭಿಷೇಕೇ ಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಯುಧಿಷ್ಠಿರಾಭಿಷೇಕ ಎನ್ನುವ ನಲ್ವತ್ತನೇ ಅಧ್ಯಾಯವು.

೪೧

ಭೀಮಾದಿಕರ್ಮನಿಯೋಗ

ರಾಜಾ ಯುಧಿಷ್ಠಿರನು ಧೃತರಾಷ್ಟ್ರನ ಅಧೀನದಲ್ಲಿದ್ದುಕೊಂಡು ರಾಜ್ಯಭಾರದ ವ್ಯವಸ್ಥೆಗಾಗಿ ತಮ್ಮಂದಿರು ಮತ್ತು ಇತರರನ್ನು ವಿಭಿನ್ನ ಕಾರ್ಯಗಳಿಗೆ ನಿಯೋಜಿಸಿದುದು (1-18).

12041001 ವೈಶಂಪಾಯನ ಉವಾಚ|
12041001a ಪ್ರಕೃತೀನಾಂ ತು ತದ್ವಾಕ್ಯಂ ದೇಶಕಾಲೋಪಸಂಹಿತಮ್|
12041001c ಶ್ರುತ್ವಾ ಯುಧಿಷ್ಠಿರೋ ರಾಜಾಥೋತ್ತರಂ ಪ್ರತ್ಯಭಾಷತ||

ವೈಶಂಪಾಯನನು ಹೇಳಿದನು: "ಪ್ರಜೆಗಳ ದೇಶ-ಕಾಲೋಚಿತವಾದ ಆ ಮಾತುಗಳನ್ನು ಕೇಳಿ ರಾಜಾ ಯುಧಿಷ್ಠಿರನು ಉತ್ತರಪೂರ್ವಕವಾಗಿ ಈ ಮಾತನ್ನಾಡಿದನು:

12041002a ಧನ್ಯಾಃ ಪಾಂಡುಸುತಾ ಲೋಕೇ ಯೇಷಾಂ ಬ್ರಾಹ್ಮಣಪುಂಗವಾಃ|
12041002c ತಥ್ಯಾನ್ವಾಪ್ಯಥ ವಾತಥ್ಯಾನ್ಗುಣಾನಾಹುಃ ಸಮಾಗತಾಃ||

"ಇಲ್ಲಿ ಸೇರಿರುವ ಬ್ರಾಹ್ಮಣಪುಂಗವರು ನಮ್ಮಲ್ಲಿರುವ ಗುಣಾವಗುಣಗಳನ್ನು ಗಮನಿಸದೇ ಕೇವಲ ಪ್ರೀತಿಯಿಂದ ನಮ್ಮನ್ನು ಗುಣವಂತರೆಂದೇ ಪ್ರಶಂಸಿಸಿರುವುದರಿಂದ ಪಾಂಡುಪುತ್ರರಾದ ನಾವೇ ಈ ಲೋಕದಲ್ಲಿ ಧನ್ಯರು!

12041003a ಅನುಗ್ರಾಹ್ಯಾ ವಯಂ ನೂನಂ ಭವತಾಮಿತಿ ಮೇ ಮತಿಃ|
12041003c ಯತ್ರೈವಂ ಗುಣಸಂಪನ್ನಾನಸ್ಮಾನ್ಬ್ರೂಥ ವಿಮತ್ಸರಾಃ||

ನಾವು ನಿಮ್ಮೆಲ್ಲರ ಅನುಗ್ರಹಕ್ಕೆ ಪಾತ್ರರಾಗಿದ್ದೇವೆಂದು ನನ್ನ ಅಭಿಪ್ರಾಯವಾಗಿದೆ. ಅಸೂಯಾರಹಿತರಾದ ನೀವು ನಮ್ಮನ್ನು ಗುಣಸಂಪನ್ನರೆಂದು ಹೇಳಿದ್ದೀರಿ.

12041004a ಧೃತರಾಷ್ಟ್ರೋ ಮಹಾರಾಜಃ ಪಿತಾ ನೋ ದೈವತಂ ಪರಮ್|
12041004c ಸಾಶನೇಽಸ್ಯ ಪ್ರಿಯೇ ಚೈವ ಸ್ಥೇಯಂ ಮತ್ಪ್ರಿಯಕಾಂಕ್ಷಿಭಿಃ||

ಮಹಾರಾಜ ಧೃತರಾಷ್ಟ್ರನು ನನ್ನ ಪಿತನೂ ಪರಮ ದೈವವೂ ಆಗಿದ್ದಾನೆ. ನನಗೆ ಪ್ರಿಯವನ್ನುಂಟುಮಾಡಲು ಅಪೇಕ್ಷಿಸುವವರು ಅವನ ಶಾಸನದಂತೆಯೇ ನಡೆದುಕೊಳ್ಳಬೇಕು.

12041005a ಏತದರ್ಥಂ ಹಿ ಜೀವಾಮಿ ಕೃತ್ವಾ ಜ್ಞಾತಿವಧಂ ಮಹತ್|
12041005c ಅಸ್ಯ ಶುಶ್ರೂಷಣಂ ಕಾರ್ಯಂ ಮಯಾ ನಿತ್ಯಮತಂದ್ರಿಣಾ||

ಈ ಮಹಾ ಜ್ಞಾತಿವಧೆಯನ್ನು ಮಾಡಿ ನಾನು ಇವನ ಸಲುವಾಗಿಯೇ ಜೀವಿಸಿರುತ್ತೇನೆ. ಆಲಸನಾಗಿರದೇ ನಿತ್ಯವೂ ಇವನ ಶುಶ್ರೂಷಣೆಯನ್ನು ಮಾಡುವುದೇ ನನ್ನ ಕಾರ್ಯವಾಗಿದೆ.

12041006a ಯದಿ ಚಾಹಮನುಗ್ರಾಹ್ಯೋ ಭವತಾಂ ಸುಹೃದಾಂ ತತಃ|
12041006c ಧೃತರಾಷ್ಟ್ರೇ ಯಥಾಪೂರ್ವಂ ವೃತ್ತಿಂ ವರ್ತಿತುಮರ್ಹಥ||

ನಾನು ಸುಹೃದಯರಾದ ನಿಮ್ಮ ಅನುಗ್ರಹಕ್ಕೆ ಪಾತ್ರನಾಗಿರುವುದೇ ಆದರೆ ಧೃತರಾಷ್ಟ್ರನ ವಿಷಯದಲ್ಲಿ ನೀವು ಹಿಂದೆ ಹೇಗೆ ನಡೆದುಕೊಳ್ಳುತ್ತಿದ್ದರೋ ಈಗಲೂ ಹಾಗೆಯೇ ನಡೆದುಕೊಳ್ಳಬೇಕು.

12041007a ಏಷ ನಾಥೋ ಹಿ ಜಗತೋ ಭವತಾಂ ಚ ಮಯಾ ಸಹ|
12041007c ಅಸ್ಯೈವ ಪೃಥಿವೀ ಕೃತ್ಸ್ನಾ ಪಾಂಡವಾಃ ಸರ್ವ ಏವ ಚ|
12041007e ಏತನ್ಮನಸಿ ಕರ್ತವ್ಯಂ ಭವದ್ಭಿರ್ವಚನಂ ಮಮ||

ನನಗೆ, ನಿಮಗೆ ಮತ್ತು ಈ ಜಗತ್ತಿಗೆ ಇವನೇ ಒಡೆಯನು. ಈ ಇಡೀ ಪೃಥ್ವಿ, ಪಾಂಡವರೆಲ್ಲರೂ ಮತ್ತು ನೀವೂ ಇದನ್ನು

ಮನಸ್ಸಿನಲ್ಲಿಟ್ಟುಕೊಂಡು ನಡೆದುಕೊಳ್ಳಬೇಕೆಂದು ನಾನು
ಕೇಳಿಕೊಳ್ಳುತ್ತಿದ್ದೇನೆ.”

12041008a ಅನುಗಮ್ಯ ಚ ರಾಜಾನಂ ಯಥೇಷ್ಟಂ ಗಮ್ಯತಾಮಿತಿ|
12041008c ಪೌರಜಾನಪದಾನ್ಸರ್ವಾನ್ವಿಸೃಜ್ಯ ಕುರುನಂದನಃ|
12041008e ಯೌವರಾಜ್ಯೇನ ಕೌರವ್ಯೋ ಭೀಮಸೇನಮಯೋಜಯತ್||

ರಾಜರು ಮತ್ತು ಪೌರಜನಪದದ ಎಲ್ಲರೂ ಇಷ್ಟಬಂದಂತೆ
ಹೋಗಬಹುದೆಂದು ಕುರುನಂದನನು ಅನುಮತಿಯನ್ನಿತ್ತನು. ಕೌರವ್ಯನು
ಭೀಮಸೇನನನ್ನು ಯುವರಾಜನನ್ನಾಗಿ ನಿಯಮಿಸಿಕೊಂಡನು.

12041009a ಮಂತ್ರೇ ಚ ನಿಶ್ಚಯೇ ಚೈವ ಷಾಡ್ಗುಣ್ಯಸ್ಯ ಚ ಚಿಂತನೇ|
12041009c ವಿದುರಂ ಬುದ್ಧಿಸಂಪನ್ನಂ ಪ್ರೀತಿಮಾನ್ಪ್ರೈ ಸಮಾದಿಶತ್||

ಗುಪ್ತಸಲಹೆಗಳಿಗೆ ಮತ್ತು ನಿರ್ಧಾರಗಳಿಗೆ ಮತ್ತು ಆರುಗುಣ[69]ಗಳ
ವಿಷಯವಾಗಿ ಸಮಾಲೋಚಿಸಲು ಪ್ರೀತಿಪಾತ್ರನಾದ ಬುದ್ಧಿಸಂಪನ್ನ
ವಿದುರನನ್ನು ನಿಯಮಿಸಿಕೊಂಡನು.

12041010a ಕೃತಾಕೃತಪರಿಜ್ಞಾನೇ ತಥಾಯವ್ಯಯಚಿಂತನೇ|
12041010c ಸಂಜಯಂ ಯೋಜಯಾಮಾಸ ಋದ್ಧಮೃದ್ಧ್ಯರ್ಗುಣೈರ್ಯುತಮ್||

ಮಾಡಬೇಕಾದ ಮತ್ತು ಮಾಡಬಾರದ ಕಾರ್ಯಗಳ ಕುರಿತು
ಪರಿಜ್ಞಾನವನ್ನು ನೀಡಲು ಮತ್ತು ಆದಾಯ-ವೆಚ್ಚಗಳ ಕುರಿತು
ಸಮಾಲೋಚಿಸಲು ವೃದ್ಧ-ಪ್ರಾಮಾಣಿಕ ಗುಣ ಸಂಪನ್ನನಾದ

[69] ಸಂಧಿ-ವಿಗ್ರಹ-ಯಾನ-ಆಸನ-ದ್ವೈಧೀಭಾವ-ಸಮಾಶ್ರಯಗಳೆಂಬ ದೇಶಕ್ಕೆ
ಸಂಬಂಧಿಸಿದ ಆರು ಗುಣಗಳು.

ಸಂಜಯನನ್ನು ನಿಯೋಜಿಸಿದನು.

12041011a ಬಲಸ್ಯ ಪರಿಮಾಣೇ ಚ ಭಕ್ತವೇತನಯೋಸ್ತಥಾ|
12041011c ನಕುಲಂ ವ್ಯಾದಿಶದ್ರಾಜಾ ಕರ್ಮಿಣಾಮನ್ವವೇಕ್ಷಣೇ||

ಬಲದ ಅಳತೆಗೂ, ಭತ್ಯ-ವೇತನಗಳ ವಿತರಣೆಗೂ ಮತ್ತು ಕಾರ್ಮಿಕರ ಮೇಲ್ವಿಚಾರಣೆಗೂ ರಾಜನು ನಕುಲನನ್ನು ನಿಯಮಿಸಿಕೊಂಡನು.

12041012a ಪರಚಕ್ರೋಪರೋಧೇ ಚ ದೃಪ್ತಾನಾಂ ಚಾವಮರ್ದನೇ|
12041012c ಯುಧಿಷ್ಠಿರೋ ಮಹಾರಾಜಃ ಫಲ್ಗುನಂ ವ್ಯಾದಿದೇಶ ಹ||

ಶತ್ರುಗಳ ಆಕ್ರಮಣಕ್ಕೂ ದರ್ಪದಲ್ಲಿರುವವರನ್ನು ಮರ್ದಿಸುವುದಕ್ಕೂ ಮಹಾರಾಜ ಯುಧಿಷ್ಠಿರನು ಫಲ್ಗುನನನ್ನು ನಿಯೋಜಿಸಿದನು.

12041013a ದ್ವಿಜಾನಾಂ ವೇದಕಾರ್ಯೇಷು ಕಾರ್ಯೇಷ್ವನ್ಯೇಷು ಚೈವ ಹಿ|
12041013c ಧೌಮ್ಯಂ ಪುರೋಧಸಾಂ ಶ್ರೇಷ್ಠಂ ವ್ಯಾದಿದೇಶ ಪರಂತಪಃ||

ದ್ವಿಜರ ವೇದಕಾರ್ಯಗಳಿಗೆ ಮತ್ತು ಅನ್ಯ ಕಾರ್ಯಗಳಿಗೆ ಪುರೋಹಿತ ಧೌಮ್ಯನನ್ನು ಆ ಪರಂತಪನು ನಿಯಮಿಸಿಕೊಂಡನು.

12041014a ಸಹದೇವಂ ಸಮೀಪಸ್ಥಂ ನಿತ್ಯಮೇವ ಸಮಾದಿಶತ್|
12041014c ತೇನ ಗೋಪ್ಯೋ ಹಿ ನೃಪತೇಃ ಸರ್ವಾವಸ್ಥೋ ವಿಶಾಂ ಪತೇ||

ವಿಶಾಂಪತೇ! ನೃಪತಿಯು ಸಹದೇವನನ್ನು ನಿತ್ಯವೂ ಸಮೀಪದಲ್ಲಿದ್ದುಕೊಂಡು ತನ್ನನ್ನು ರಕ್ಷಿಸುವ ಕಾರ್ಯವನ್ನು ವಹಿಸಿದನು.

12041015a ಯಾನ್ಯಾನಮನ್ಯದ್ಯೋಗ್ಯಾಂಶ್ಚ ಯೇಷು ಯೇಷ್ವಿಹ ಕರ್ಮಸು|
12041015c ತಾಂಸ್ತಾಂಸ್ತೇಷ್ವೇವ ಯುಯುಜೇ ಪ್ರೀಯಮಾಣೋ ಮಹೀಪತಿಃ||

ಅನಂತರ ಪ್ರಸನ್ನಚಿತ್ತನಾದ ಮಹೀಪತಿಯು ಯಾರ್ಯಾರು ಯಾವ್ಯಾವ ಕರ್ಮಗಳಲ್ಲಿ ಸಮರ್ಥರೆಂದು ತಿಳಿದು ಅದರಂತೆಯೇ ಕಾರ್ಯಗಳನ್ನು ವಹಿಸಿಕೊಟ್ಟನು.

12041016a ವಿದುರಂ ಸಂಜಯಂ ಚೈವ ಯುಯುತ್ಸುಂ ಚ ಮಹಾಮತಿಮ್।
12041016c ಅಬ್ರವೀತ್ಪರವೀರಘ್ನೋ ಧರ್ಮಾತ್ಮಾ ಧರ್ಮವತ್ಸಲಃ॥

ಪರವೀರಘ್ನ ಧರ್ಮಾತ್ಮಾ ಧರ್ಮವತ್ಸಲ ಯುಧಿಷ್ಠಿರನು ವಿದುರ-ಸಂಜಯ ಮತ್ತು ಮಹಾಮತಿ ಯುಯುತ್ಸುವಿಗೆ ಈ ರೀತಿ ಹೇಳಿದನು:

12041017a ಉತ್ಥಾಯೋತ್ಥಾಯ ಯತ್ಕಾರ್ಯಮಸ್ಯ ರಾಜ್ಞಃ ಪಿತುರ್ಮಮ।
12041017c ಸರ್ವಂ ಭವದ್ಭಿಃ ಕರ್ತವ್ಯಮಪ್ರಮತ್ತೈರ್ಯಥಾತಥಮ್॥

“ಬೆಳಗಾದೊಡನೆಯೇ ಎದ್ದು ಈ ನನ್ನ ತಂದೆ ರಾಜನ ಕಾರ್ಯವೆಲ್ಲವನ್ನೂ ಯಥಾವತ್ತಾಗಿ ಮಾಡಿಕೊಡಬೇಕಾಗಿರುವುದು ನಿಮ್ಮೆಲ್ಲರ ಕರ್ತವ್ಯವಾಗಿರುತ್ತದೆ.

12041018a ಪೌರಜಾನಪದಾನಾಂ ಚ ಯಾನಿ ಕಾರ್ಯಾಣಿ ನಿತ್ಯಶಃ।
12041018c ರಾಜಾನಂ ಸಮನುಜ್ಞಾಪ್ಯ ತಾನಿ ಕಾರ್ಯಾಣಿ ಧರ್ಮತಃ॥

ಪೌರ-ಜನಪದರ ಎಲ್ಲ ಕಾರ್ಯಗಳನ್ನೂ ರಾಜನ ಅಪ್ಪಣೆಯಂತೆ ನಿತ್ಯವೂ ಪೂರ್ಣಗೊಳಿಸುವುದೂ ನಿಮ್ಮ ಕರ್ತವ್ಯವಾಗಿರುತ್ತದೆ.””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಭೀಮಾದಿಕರ್ಮನಿಯೋಗೇ ಏಕಚತ್ವಾರಿಂಶೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಭೀಮಾದಿಕರ್ಮನಿಯೋಗ ಎನ್ನುವ ನಲ್ವತ್ತೊಂದನೇ ಅಧ್ಯಾಯವು.

೪೨

ಶ್ರಾದ್ಧಕ್ರಿಯಾ

ರಾಜಾ ಯುಧಿಷ್ಠಿರ ಮತ್ತು ಧೃತರಾಷ್ಟ್ರರು ಯುದ್ಧದಲ್ಲಿ ಹತರಾದ ಜ್ಞಾತಿ-ಬಾಂಧವರಿಗೆ ಮತ್ತು ಅನ್ಯ ರಾಜರಿಗೆ ಶ್ರಾದ್ಧಕರ್ಮಗಳನ್ನೆಸಗಿದುದು (1-12).

12042001 ವೈಶಂಪಾಯನ ಉವಾಚ|
12042001a ತತೋ ಯುಧಿಷ್ಠಿರೋ ರಾಜಾ ಜ್ಞಾತೀನಾಂ ಯೇ ಹತಾ ಮೃಧೇ|
12042001c ಶ್ರಾದ್ಧಾನಿ ಕಾರಯಾಮಾಸ ತೇಷಾಂ ಪೃಥಗುದಾರಧೀಃ||

ವೈಶಂಪಾಯನನು ಹೇಳಿದನು: "ಅನಂತರ ಉದಾರಮತಿ ರಾಜಾ ಯುಧಿಷ್ಠಿರನು ಯುದ್ಧದಲ್ಲಿ ಹತರಾದ ಜ್ಞಾತಿ-ಬಾಂಧವರಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಶ್ರಾದ್ಧಗಳನ್ನು ಮಾಡಿಸಿದನು.

12042002a ಧೃತರಾಷ್ಟ್ರೋ ದದೌ ರಾಜಾ ಪುತ್ರಾಣಾಮೌರ್ಧ್ವದೇಹಿಕಮ್|
12042002c ಸರ್ವಕಾಮಗುಣೋಪೇತಮನ್ನಂ ಗಾಶ್ಚ ಧನಾನಿ ಚ||
12042002e ರತ್ನಾನಿ ಚ ವಿಚಿತ್ರಾಣಿ ಮಹಾರ್ಹಾಣಿ ಮಹಾಯಶಾಃ||

ಮಹಾಯಶಸ್ವೀ ರಾಜಾ ಧೃತರಾಷ್ಟ್ರನು ತನ್ನ ಮಕ್ಕಳ ದೇಹಾವಸಾನದ ನಂತರದ ಕರ್ಮಗಳನ್ನು ಮಾಡಿ ಸರ್ವಕಾಮಗುಣೋಪೇತ ಅನ್ನ, ಗೋವುಗಳು, ಧನ, ವಿಚಿತ್ರ ಬೆಲೆಬಾಳುವ ರತ್ನಗಳನ್ನಿತ್ತು ನೆರವೇರಿಸಿದನು.

12042003a ಯುಧಿಷ್ಠಿರಸ್ತು ಕರ್ಣಸ್ಯ ದ್ರೋಣಸ್ಯ ಚ ಮಹಾತ್ಮನಃ|

12042003c ಧೃಷ್ಟದ್ಯುಮ್ನಾಭಿಮನ್ಯುಭ್ಯಾಂ ಹೈಡಿಂಬಸ್ಯ ಚ ರಕ್ಷಸಃ||
12042004a ವಿರಾಟಪ್ರಭೃತೀನಾಂ ಚ ಸುಹೃದಾಮುಪಕಾರಿಣಾಮ್|
12042004c ದ್ರುಪದದ್ರೌಪದೇಯಾನಾಂ ದ್ರೌಪದ್ಯಾ ಸಹಿತೋ ದದೌ||
12042005a ಬ್ರಾಹ್ಮಣಾನಾಂ ಸಹಸ್ರಾಣಿ ಪೃಥಗೇಕೈಕಮುದ್ದಿಶನ್|
12042005c ಧನೈಶ್ಚ ವಸ್ತ್ರೈ ರತ್ನೈಶ್ಚ ಗೋಭಿಶ್ಚ ಸಮತರ್ಪಯತ್||

ಯುಧಿಷ್ಠಿರನು ದ್ರೌಪದೀ ಸಮೇತನಾಗಿ ಮಹಾತ್ಮ ದ್ರೋಣ,
ಧೃಷ್ಟದ್ಯುಮ್ನ, ಅಭಿಮನ್ಯು, ರಾಕ್ಷಸ ಹೈಡಿಂಬಿ, ವಿರಾಟನೇ
ಮೊದಲಾದ ಸುಹೃದಯ-ಉಪಕಾರಿಗಳ, ದ್ರುಪದ-ದ್ರೌಪದೇಯರು
ಒಬ್ಬೊಬ್ಬರನ್ನೂ ಉದ್ದೇಶಿಸಿ ಸಹಸ್ರಾರು ಬ್ರಾಹ್ಮಣರಿಗೆ ಧನ-ವಸ್ತ್ರ-
ರತ್ನ-ಗೋವುಗಳನ್ನಿತ್ತು ತರ್ಪಣಗಳನ್ನಿತ್ತನು.

12042006a ಯೇ ಚಾನ್ಯೇ ಪೃಥಿವೀಪಾಲಾ ಯೇಷಾಂ ನಾಸ್ತಿ ಸುಹೃಜ್ಜನಃ|
12042006c ಉದ್ದಿಶ್ಯೋದ್ದಿಶ್ಯ ತೇಷಾಂ ಚ ಚಕ್ರೇ ರಾಜೌರ್ಧ್ವದೈಹಿಕಮ್||

ಸುಹೃಜ್ಜನರು ಯಾರೂ ಇಲ್ಲದಿದ್ದ ಇನ್ನೂ ಅನ್ಯ ಪೃಥಿವೀಪಾಲರನ್ನು
ಉದ್ದೇಶಿಸಿ ಅವರ ಔರ್ಧ್ವದೈಹಿಕ ಕರ್ಮಗಳನ್ನೂ ಮಾಡಿದನು.

12042007a ಸಭಾಃ ಪ್ರಪಾಶ್ಚ ವಿವಿಧಾಸ್ತಡಾಗಾನಿ ಚ ಪಾಂಡವಃ|
12042007c ಸುಹೃದಾಂ ಕಾರಯಾಮಾಸ ಸರ್ವೇಷಾಮೌರ್ಧ್ವದೈಹಿಕಮ್||

ಆ ಪಾಂಡವನು ಸಭೆಗಳನ್ನೂ, ಅರವಟ್ಟಿಗೆಗಳನ್ನೂ, ವಿವಿಧ
ತಟಾಕಗಳನ್ನೂ ನಿರ್ಮಿಸಿ ಸರ್ವ ಸುಹೃದಯರ ಶ್ರಾದ್ಧಕರ್ಮಗಳನ್ನು
ನೆರವೇರಿಸಿದನು.

12042008a ಸ ತೇಷಾಮನೃಣೋ ಭೂತ್ವಾ ಗತ್ವಾ ಲೋಕೇಷ್ವವಾಚ್ಯತಾಮ್|
12042008c ಕೃತಕೃತ್ಯೋಽಭವದ್ರಾಜಾ ಪ್ರಜಾ ಧರ್ಮೇಣ ಪಾಲಯನ್||

ಅವರ ಋಣಗಳಿಂದ ಮುಕ್ತನಾಗಿ, ಯಾರ ಆಕ್ಷೇಪ-ನಿಂದನೆಗಳಿಗೂ
ಒಳಗಾಗದೇ ಧರ್ಮದಿಂದ ಪ್ರಜೆಗಳನ್ನು ಪಾಲಿಸಿ ರಾಜನು
ಕೃತಕೃತ್ಯನಾದನು.

12042009a ಧೃತರಾಷ್ಟ್ರಂ ಯಥಾಪೂರ್ವಂ ಗಾಂಧಾರೀಂ ವಿದುರಂ ತಥಾ|
12042009c ಸರ್ವಾಂಶ್ಚ ಕೌರವಾಮಾತ್ಯಾನ್ಭೃತ್ಯಾಂಶ್ಚ ಸಮಪೂಜಯತ್||

ಹಿಂದಿನಂತೆ ಧೃತರಾಷ್ಟ್ರ, ಗಾಂಧಾರೀ, ವಿದುರ, ಕೌರವರ ಸರ್ವ
ಅಮಾತ್ಯರನ್ನೂ ಸೇವಕರನ್ನೂ ಸಮನಾಗಿ ಪೂಜಿಸಿದನು.

12042010a ಯಾಶ್ಚ ತತ್ರ ಸ್ತ್ರಿಯಃ ಕಾಶ್ಚಿದ್ಧತವೀರಾ ಹತಾತ್ಮಜಾಃ|
12042010c ಸರ್ವಾಸ್ತಾಃ ಕೌರವೋ ರಾಜಾ ಸಂಪೂಜ್ಯಾಪಾಲಯದ್ಭೃಶಂ||

ವೀರಪತಿಗಳನ್ನು ಮತ್ತು ಮಕ್ಕಳನ್ನು ಕಳೆದುಕೊಂಡಿದ್ದ ಸ್ತ್ರೀಯರೆಲ್ಲರನ್ನೂ
ದಯಾಪರ ಕೌರವ ರಾಜನು ಗೌರವಿಸಿ ಪಾಲಿಸಿದನು.

12042011a ದೀನಾಂಧಕೃಪಣಾನಾಂ ಚ ಗೃಹಾಚ್ಚಾದನಭೋಜನೈಃ|
12042011c ಆನೃಶಂಸ್ಯಪರೋ ರಾಜಾ ಚಕಾರಾನುಗ್ರಹಂ ಪ್ರಭುಃ||

ರಾಜಾ ಪ್ರಭುವು ದೀನರನ್ನೂ, ಅಂಧ-ಕೃಪಣರನ್ನೂ ಮನೆ-ವಸ್ತ್ರ-
ಭೋಜನಗಳಿಂದ ಕೃಪೆದೋರಿ ಅನುಗ್ರಹಿಸಿದನು.

12042012a ಸ ವಿಜಿತ್ಯ ಮಹೀಂ ಕೃತ್ಸ್ನಾಮಾನೃಣ್ಯಂ ಪ್ರಾಪ್ಯ ವೈರಿಷು|
12042012c ನಿಃಸಪತ್ನಃ ಸುಖೀ ರಾಜಾ ವಿಜಹಾರ ಯುಧಿಷ್ಠಿರಃ||

ಅಖಂಡ ಭೂಮಂಡಲವನ್ನೂ ಜಯಿಸಿ, ವೈರಿಗಳ ಋಣಗಳಿಂದಲೂ
ಮುಕ್ತನಾಗಿ, ಶತ್ರುರಹಿತನಾದ ರಾಜಾ ಯುಧಿಷ್ಠಿರನು ಸುಖಿಯಾಗಿ
ವಿಹರಿಸತೊಡಗಿದನು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಶ್ರಾದ್ಧಕ್ರಿಯಾಯಾಂ ದ್ವಿಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಶ್ರಾದ್ಧಕ್ರಿಯೆಗಳು ಎನ್ನುವ ನಲ್ವತ್ತೆರಡನೇ ಅಧ್ಯಾಯವು.

೪೩

ಕೃಷ್ಣನಾಮಶತಸ್ತುತಿ

ಯುಧಿಷ್ಠಿರನು ಭಗವಾನ್ ಶ್ರೀಕೃಷ್ಣನನ್ನು ಸ್ತುತಿಸಿದುದು (1-17).

12043001 ವೈಶಂಪಾಯನ ಉವಾಚ|
12043001a ಅಭಿಷಿಕ್ತೋ ಮಹಾಪ್ರಾಜ್ಞೋ ರಾಜ್ಯಂ ಪ್ರಾಪ್ಯ ಯುಧಿಷ್ಠಿರಃ|
12043001c ದಾಶಾರ್ಹಂ ಪುಂಡರೀಕಾಕ್ಷಮುವಾಚ ಪ್ರಾಂಜಲಿಃ ಶುಚಿಃ||

ವೈಶಂಪಾಯನನು ಹೇಳಿದನು: "ರಾಜ್ಯವನ್ನು ಪಡೆದು ಅಭಿಷಿಕ್ತನಾದ ಮಹಾಪ್ರಾಜ್ಞ ಯುಧಿಷ್ಠಿರನು ಶುಚಿಯಾಗಿ ಕೈಮುಗಿದು ದಾಶಾರ್ಹ ಪುಂಡರೀಕಾಕ್ಷನಿಗೆ ಹೇಳಿದನು:

12043002a ತವ ಕೃಷ್ಣ ಪ್ರಸಾದೇನ ನಯೇನ ಚ ಬಲೇನ ಚ|
12043002c ಬುದ್ಧ್ಯಾ ಚ ಯದುಶಾರ್ದೂಲ ತಥಾ ವಿಕ್ರಮಣೇನ ಚ||
12043003a ಪುನಃ ಪ್ರಾಪ್ತಮಿದಂ ರಾಜ್ಯಂ ಪಿತೃಪೈತಾಮಹಂ ಮಯಾ|
12043003c ನಮಸ್ತೇ ಪುಂಡರೀಕಾಕ್ಷ ಪುನಃ ಪುನರರಿಂದಮ||

"ಕೃಷ್ಣ! ಯದುಶಾರ್ದೂಲ! ನಿನ್ನ ಪ್ರಸಾದದಿಂದ, ನೀತಿ-ಬಲಗಳಿಂದ, ಬುದ್ಧಿ-ವಿಕ್ರಮಗಳಿಂದ ನಾನು ಪಿತೃ-ಪಿತಾಮಹರ ಈ ರಾಜ್ಯವನ್ನು

ಪುನಃ ಪಡೆದುಕೊಂಡಿದ್ದೇನೆ. ಪುಂಡರೀಕಾಕ್ಷ! ಅರಿಂದಮ! ಪುನಃ ಪುನಃ ನಿನಗೆ ನಮಸ್ಕರಿಸುತ್ತೇನೆ.

12043004a ತ್ವಾಮೇಕಮಾಹುಃ ಪುರುಷಂ ತ್ವಾಮಾಹುಃ ಸಾತ್ವತಾಂ ಪತಿಮ್|
12043004c ನಾಮಭಿಸ್ತ್ವಾಂ ಬಹುವಿಧ್ಯೈಃ ಸ್ತುವಂತಿ ಪರಮರ್ಷಯಃ||

ನಿನ್ನನ್ನು ಏಕನೆಂದೂ, ಪುರುಷನೆಂದೂ, ಸಾತ್ವತರ ಪತಿಯೆಂದೂ ಪರಮಋಷಿಗಳು ಅನೇಕ ನಾಮಗಳಿಂದ ಬಹುವಿಧಗಳಲ್ಲಿ ಸ್ತುತಿಸುತ್ತಾರೆ!

12043005a ವಿಶ್ವಕರ್ಮನ್ನಮಸ್ತೇಽಸ್ತು ವಿಶ್ವಾತ್ಮನ್ವಿಶ್ವಸಂಭವ|
12043005c ವಿಷ್ಣೋ ಜಿಷ್ಣೋ ಹರೇ ಕೃಷ್ಣ ವೈಕುಂಠ ಪುರುಷೋತ್ತಮ||

ವಿಶ್ವಕರ್ಮ! ವಿಶ್ವಾತ್ಮನ್! ವಿಶ್ವಸಂಭವ! ವಿಷ್ಣು! ಜಿಷ್ಣು! ಹರಿ! ಕೃಷ್ಣ! ವೈಕುಂಠ! ಪುರುಷೋತ್ತಮ! ನಿನಗೆ ನಮಸ್ಕಾರ!

12043006a ಅದಿತ್ಯಾಃ ಸಪ್ತರಾತ್ರಂ ತು ಪುರಾಣೇ ಗರ್ಭತಾಂ ಗತಃ|
12043006c ಪೃಶ್ನಿಗರ್ಭಸ್ತ್ವಮೇವೈಕಸ್ತ್ರಿಯುಗಂ ತ್ವಾಂ ವದಂತ್ಯಪಿ||

ಹಿಂದೆ ನೀನು ಏಳು ಬಾರಿ ಅದಿತಿಯ ಗರ್ಭದಲ್ಲಿ ಅವತರಿಸಿದೆ[70]!

---

[70] ಸಪ್ತಧಾ ವಿಷ್ಣ್ವಖ್ಯ ಆದಿತ್ಯೋ ವಾಮನಶ್ಚೇತಿ ದ್ವೇಧಾ ಆದಿತ್ಯಾಮೇವ ಜನ್ಮ| ತತಃ ಆದಿತೇಃ ರೂಪಾಂತರೇಷು ಪೃಶ್ನಿಪ್ರಭೃತಿಷು ಕ್ರಮಾತ್ಪೃಶ್ನಿಗರ್ಭ ಪರಶುರಾಮಃ ದಾಶರಥೀರಾಮಃ ಯಾದವೌ ರಾಮಕೃಷ್ಣೌ ಚೇತಿ ಸರ್ವೇಷು ಗರ್ಭೇಷು ಏಕ ಏವ ತ್ವಂ ನ ತು ಪ್ರತಿಗರ್ಭಂ ಭಿನ್ನಃ - ಅರ್ಥಾತ್ ಆದಿತ್ಯ ಮತ್ತು ವಾಮನನಾಗಿ ಎರಡು ಬಾರಿ ಅದಿತಿಯಲ್ಲಿ ಗರ್ಭಸ್ಥನಾಗಿದ್ದನೆಂದೂ, ಅದಿತಿಯ ಪೃಶ್ನಿಯೇ ಮೊದಲಾದ ಜನ್ಮಾಂತರಗಳಲ್ಲಿ ಪರಶುರಾಮ, ರಾಮ, ಬಲರಾಮ ಮತ್ತು ಕೃಷ್ಣರಾಗಿ ಹುಟ್ಟಿದವನು ಒಬ್ಬನೇ ಎಂದು

ನೀನೊಬ್ಬನೇ ಪೃಶ್ನಿಗರ್ಭ[71]ನೆಂದು ಕರೆಯಿಸಿಕೊಂಡಿರುವೆ! ತ್ರಿಯುಗ[72]ನೆಂದೂ ನಿನ್ನನ್ನು ಕರೆಯುತ್ತಾರೆ!

12043007a ಶುಚಿಶ್ರವಾ ಹೃಷೀಕೇಶೋ ಘೃತಾರ್ಚಿರ್ಹಂಸ ಉಚ್ಯಸೇ|
12043007c ತ್ರಿಚಕ್ಷುಃ ಶಂಭುರೇಕಸ್ತ್ವಂ ವಿಭುರ್ದಾಮೋದರೋಽಪಿ ಚ||

ನಿನ್ನನ್ನು ಶುಚಿಶ್ರವ[73], ಹೃಷೀಕೇಶ[74], ಘೃತಾರ್ಚಿ[75], ಹಂಸ ಎಂದು ಕರೆಯುತ್ತಾರೆ. ಮುಕ್ಕಣ್ಣ ಶಂಭು ಮತ್ತು ನೀನು ಒಂದೇ ಆಗಿರುವಿರಿ!

ವ್ಯಾಖ್ಯಾನಕಾರರು ಅರ್ಥೈಸಿದ್ದಾರೆ. [ಭಾರತ ದರ್ಶನ, ಸಂಪುಟ ೨೧, ಪುಟಸಂಖ್ಯೆ ೩೬೫-೩೬೬]

[71] ಪೃಶ್ನಿಯು ಕೃಷ್ಣನ ತಾಯಿ ದೇವಕಿಯು ತನ್ನ ಪೂರ್ವ ಜನ್ಮದಲ್ಲಿ ಸುತಪ ಎಂಬ ಪ್ರಜಾಪತಿಯಾಗಿದ್ದ ವಸುದೇವನ ಪತ್ನಿಯಾಗಿದ್ದಳು. ಆದುದರಿಂದ ಕೃಷ್ಣನಿಗೆ ಪೃಶ್ನಿಗರ್ಭನೆಂಬ ಹೆಸರು. ವಸುದೇವ-ದೇವಕಿಯರು ಸುತಪ-ಪೃಶ್ನಿಯರಾಗಿದ್ದಾಗ ಉಗ್ರ ತಪಸ್ಸನ್ನಾಚರಿಸಿ ಪರಮಾತ್ಮನಲ್ಲಿ ಅವನಂಥಹ ಪುತ್ರನಾಗಬೇಕೆಂದು ಬೇಡಿಕೊಂಡಿದ್ದರು.

[72] ತ್ರಿಯುಗಂ ಎನ್ನುವುದಕ್ಕೆ ವ್ಯಾಖ್ಯಾನಕಾರರು ಮೂರು ಯುಗ್ಮಗಳು ಇರುವಂಥವನು ಎಂದು ಅರ್ಥೈಸಿದ್ದಾರೆ. ಧರ್ಮ-ಜ್ಞಾನ-ವೈರಾಗ್ಯ-ಐಶ್ವರ್ಯ-ಶ್ರೀ-ಯಶಸ್ಸು ಇವೇ ಆ ಮೂರು ಯುಗ್ಮಗಳು. [ಭಾರತ ದರ್ಶನ, ಸಂಪುಟ ೨೧, ಪುಟಸಂಖ್ಯೆ ೩೬೭]

[73] ನಿನ್ನ ಕೀರ್ತಿಯು ಪರಮಪವಿತ್ರವಾದುದು.

[74] ಇಂದ್ರಿಯಗಳ ಪ್ರೇರಕ

[75] ಘೃತದಿಂದ ಹತ್ತಿ ಉರಿಯುವ ಯಜ್ಞೇಶ್ವರ

ನೀನು ವಿಭು[76] ಮತ್ತು ದಾಮೋದರ[77]।

12043008a ವರಾಹೋಽಗ್ನಿರ್ಬೃಹದ್ಭಾನುರ್ವೃಷಣಸ್ತಾರ್ಕ್ಷ್ಯಲಕ್ಷಣಃ|
12043008c ಅನೀಕಸಾಹಃ ಪುರುಷಃ ಶಿಪಿವಿಷ್ಟ ಉರುಕ್ರಮಃ||
12043009a ವಾಚಿಷ್ಠ ಉಗ್ರಃ ಸೇನಾನೀಃ ಸತ್ಯೋ ವಾಜಸನಿರ್ಗುಹಃ|
12043009c ಅಚ್ಯುತಶ್ಚಾನಿರುದ್ಧೋಽರೀಣಾಂ ಸಂಕೃತಿರ್ವಿಕೃತಿರ್ವೃಷಃ||
12043010a ಕೃತವರ್ತ್ಮಾ ತ್ವಮೇವಾದ್ರಿರ್ವೃಷಭಶ್ಚೋ ವೃಷಾಕಪಿಃ|
12043010c ಸಿಂಧುಕ್ಷಿದೂರ್ಮಿಸ್ತ್ರಿಕಕುತ್ತ್ರಿಧಾಮಾ ತ್ರಿವೃದಚ್ಯುತಃ||

ನೀನೇ ವರಾಹ, ಅಗ್ನಿ, ಬೃಹದ್ಭಾನು[78], ವೃಷಣ[79], ತಾರ್ಕ್ಷ್ಯಲಕ್ಷಣ[80], ಅನೀಕಸಾಹ[81], ಪುರುಷ[82], ಶಿಪಿವಿಷ್ಟ[83], ಉರುಕ್ರಮ[84], ವಾಚಿಷ್ಠ, ಉಗ್ರ, ಸೇನಾನೀ, ಸತ್ಯ, ವಾಜಸನಿ[85], ಗುಹ, ಅಚ್ಯುತ, ಅರಿಗಳ

---

[76] ಸರ್ವತ್ರವ್ಯಾಪಕ

[77] ಕೃಷ್ಣನ ತುಂಟತನವನ್ನು ತಡೆಯಲಾರದೇ ಯಶೋದೆಯು ಹಗ್ಗದಿಂದ ಅವನ ಹೊಟ್ಟೆಯನ್ನು ಕಟ್ಟಿ ಆ ಹಗ್ಗವನ್ನು ಒರಳುಕಲ್ಲಿಗೆ ಕಟ್ಟಿದುದರಿಂದ ಕೃಷ್ಣನಿಗೆ ದಾಮೋದರನೆಂಬ ಹೆಸರಾಯಿತು.

[78] ಸೂರ್ಯ

[79] ಧರ್ಮ

[80] ಗರುಡಧ್ವಜ

[81] ಸೇನೆಗಳನ್ನು ಸಹಿಸಿಕೊಳ್ಳತಕ್ಕವನು

[82] ಅಂತರ್ಯಾಮಿ ಪರಮಾತ್ಮ

[83] ಎಲ್ಲರಲ್ಲಿಯೂ ಆತ್ಮರೂಪನಾಗಿರುವವನು

[84] ವಾಮನ

[85] ಅನ್ನದಾತ

ವಿನಾಶಕ, ಸಂಕೃತಿ[86], ವಿಕೃತಿ[87], ವೃಷ[88], ಕೃತವರ್ತ್ಮಾ[89], ಅದ್ರಿ[90], ವೃಷಗರ್ಭ[91], ವೃಷಾಕಪಿ[92], ಸಿಂಧುಕ್ಷಿದೂರ್ಮಿ[93], ತ್ರಿಕಕು[94], ತ್ರಿಧಾಮ, ತ್ರಿವೃದಚ್ಯುತ[95]!

12043011a ಸಮ್ರಾಡ್ವಿರಾಟ್ಸ್ವರಾಟ್ಚೈವ ಸುರರಾಡ್ಧರ್ಮದೋ ಭವಃ|
12043011c ವಿಭುರ್ಭೂರಭಿಭೂಃ ಕೃಷ್ಣಃ ಕೃಷ್ಣವರ್ತ್ಮಾ ತ್ವಮೇವ ಚ||

ನೀನೇ ಸಾಮ್ರಾಟ, ವಿರಾಟ, ಸ್ವರಾಟ, ಮತ್ತು ಸುರರಾಜ! ನೀನೇ ಧರ್ಮದ, ಭವ[96], ವಿಭು[97], ಭೂ, ಅಭಿಭು. ಕೃಷ್ಣ[98], ಕೃಷ್ಣವರ್ತ್ಮಾ[99]!

---

86 ಸಂಸ್ಕಾರ ಸಂಪನ್ನ

87 ಸಂಸ್ಕಾರಗಳಿಲ್ಲದವನು

88 ಧರ್ಮ

89 ಯಜ್ಞಸ್ವರೂಪ

90 ಎಲ್ಲಕ್ಕೂ ಮೂಲ ಕಾರಣನು

91 ಧರ್ಮಗರ್ಭ

92 ಹರಿ-ಹರ ರೂಪಿ

93 ಸಮುದ್ರಸ್ವರೂಪಿ

94 ಕರ್ಮಮಾಡಲು ಯೋಗ್ಯವಾದ ಪೂರ್ವೋತ್ತರ ಮತ್ತು ಈಶಾನ್ಯ ದಿಕ್ಕುಗಳ ಸ್ವರೂಪಿ

95 ಸ್ವರ್ಗದಿಂದ ಚ್ಯುತನಾಗಿ ಅವತರಿಸಿದವನು

96 ಎಲ್ಲವುಗಳ ಉತ್ಪತ್ತಿ ಕಾರಣ

97 ಸರ್ವತ್ರ ವ್ಯಾಪೀ

98 ಎಲ್ಲವನ್ನೂ ತನ್ನ ಕಡೆಗೆ ಆಕರ್ಷಿಸಿಕೊಳ್ಳುವ

99 ಅಗ್ನಿ

12043012a ಸ್ವಿಷ್ಟಕೃದ್ಭಿಷಗಾವರ್ತಃ ಕಪಿಲಸ್ತ್ವಂ ಚ ವಾಮನಃ|
12043012c ಯಜ್ಞೋ ಧ್ರುವಃ ಪತಂಗಶ್ಚ ಜಯತ್ಸೇನಸ್ತ್ವಮುಚ್ಯಸೇ||

ನಿನ್ನನ್ನು ಸ್ವಿಷ್ಟಕೃತು[100]ವೆಂದೂ, ಭಿಷಗಾವರ್ತ[101]ನೆಂದೂ, ಕಪಿಲ, ವಾಮನ, ಯಜ್ಞ, ಧ್ರುವ, ಪತಂಗ[102], ಮತ್ತು ಜಯತ್ಸೇನನೆಂದೂ ಕರೆಯುತ್ತಾರೆ.

12043013a ಶಿಖಂಡೀ ನಹುಷೋ ಬಭ್ರುರ್ದಿವಸ್ಪೃಕ್ತ್ವಂ ಪುನರ್ವಸುಃ|
12043013c ಸುಬಭ್ರುರುಕ್ಷೋ ರುಕ್ಮಸ್ತ್ವಂ ಸುಷೇಣೋ ದುಂದುಭಿಸ್ತಥಾ||
12043014a ಗಭಸ್ತಿನೇಮಿಃ ಶ್ರೀಪದ್ಮಂ ಪುಷ್ಕರಂ ಪುಷ್ಪಧಾರಣಃ|
12043014c ಋಭುರ್ವಿಭುಃ ಸರ್ವಸೂಕ್ಷ್ಮಸ್ತ್ವಂ ಸಾವಿತ್ರಂ ಚ ಪಠ್ಯಸೇ||

ನಿನ್ನನ್ನು ಶಿಖಂಡೀ[103], ನಹುಷ, ಬಭ್ರು[104], ದಿವಸ್ಪೃಕ್[105], ಪುನರ್ವಸು[106], ಸುಬಭ್ರು[107], ಸುಷೇಣ[108], ದುಂದುಭಿ[109],

---

100 ಸಕಲಾಭಿಷ್ಟಗಳನ್ನೂ ನೆರವೇರಿಸಿಕೊಡುವವನು

101 ಅಶ್ವಿನೀ ದೇವತೆಗಳ ತಂದೆ ಸೂರ್ಯ

102 ಗರುಡ

103 ನವಿಲುಗರಿಯನ್ನು ಧರಿಸಿದವನು

104 ಭೂಮಿಯನ್ನು ಧರಿಸಿರುವ ಅನಂತರೂಪೀ

105 ಒಂದೇ ಕಾಲಿನಲ್ಲಿ ಆಕಾಶವನ್ನು ಅಳೆದವನು

106 ಬ್ರಹ್ಮಾದಿದೇವತೆಗಳಲಿ ಅಂತರಾತ್ಮರೂಪನಾಗಿ ಪುನಃ ವಾಸಮಾಡುವವನು

107 ಕಂದುಬಣ್ಣದವನು

108 ಯಜ್ಞದಲ್ಲಿ ಹೇರಳ ಸುವರ್ಣವನ್ನು ದಕ್ಷಿಣೆಯಾಗಿ ಕೊಟ್ಟವನು

109 ದುಂದುಭಿ ಎನ್ನುವ ರಾಕ್ಷಸನನ್ನು ಸಂಹರಿಸಿದವನು

ಗಭಸ್ತಿನೇಮಿ.[110], ಶ್ರೀಪದ್ಮ, ಪುಷ್ಕರ, ಪುಷ್ಪಧಾರೀ, ಋಭು, ವಿಭು, ಸರ್ವಸೂಕ್ಷ್ಮ, ಸಾವಿತ್ರ ಎಂದೂ ಕರೆಯುತ್ತಾರೆ.

12043015a ಅಂಭೋನಿಧಿಸ್ತ್ವಂ ಬ್ರಹ್ಮಾ ತ್ವಂ ಪವಿತ್ರಂ ಧಾಮ ಧನ್ವ ಚ|
12043015c ಹಿರಣ್ಯಗರ್ಭಂ ತ್ವಾಮಾಹುಃ ಸ್ವಧಾ ಸ್ವಾಹಾ ಚ ಕೇಶವ||

ನೀನು ಅಂಭೋನಿಧಿ.[111]ಯು. ನೀನು ಬ್ರಹ್ಮ, ಪವಿತ್ರ ಧಾಮ ಮತ್ತು ಧನ್ವ. ಕೇಶವ! ನಿನ್ನನ್ನು ಹಿರಣ್ಯಗರ್ಭನೆಂದೂ, ಸ್ವಧಾ ಮತ್ತು ಸ್ವಾಹಾ ಎಂದೂ ಕರೆಯುತ್ತಾರೆ.

12043016a ಯೋನಿಸ್ತ್ವಮಸ್ಯ ಪ್ರಲಯಶ್ಚ ಕೃಷ್ಣ
ತ್ವಮೇವೇದಂ ಸೃಜಸಿ ವಿಶ್ವಮಗ್ರೇ|
12043016c ವಿಶ್ವಂ ಚೇದಂ ತ್ವದ್ವಶೇ ವಿಶ್ವಯೋನೇ
ನಮೋಽಸ್ತು ತೇ ಶಾರ್ಙ್ಗಚಕ್ರಾಸಿಪಾಣೇ||

ಕೃಷ್ಣ! ಯಾವುದರ ಯೋನಿ ಮತ್ತು ಪ್ರಲಯನೂ ನೀನಾಗಿರುವೆಯೋ ಆ ವಿಶ್ವವನ್ನು ಮೊದಲು ನೀನೇ ಸೃಷ್ಟಿಸುವೆ. ವಿಶ್ವಯೋನೇ! ಈ ವಿಶ್ವವು ನಿನ್ನದೇ ವಶದಲ್ಲಿದ್ದೆ. ಶಾರ್ಙ್ಗ-ಚಕ್ರ-ಖಡ್ಗಪಾಣಿಯೇ! ನಿನಗೆ ನಮಸ್ಕಾರವು!"

12043017a ಏವಂ ಸ್ತುತೋ ಧರ್ಮರಾಜೇನ ಕೃಷ್ಣಃ
ಸಭಾಮಧ್ಯೇ ಪ್ರೀತಿಮಾನ್ಪುಷ್ಕರಾಕ್ಷಃ|
12043017c ತಮಭ್ಯನಂದದ್ಭಾರತಂ ಪುಷ್ಕರಾಭಿರ್

---

[110] ಕಿರಣಗಳೇ ರಥದ ಚಕ್ರಗಳಾಗಿರುವ ಸೂರ್ಯ

[111] ಸಮುದ್ರ

ವಾಗ್ಭಿರ್ಜ್ಯೇಷ್ಠಂ ಪಾಂಡವಂ ಯಾದವಾಗ್ರ್ಯಃ[112]॥

ಸಭಾಮಧ್ಯದಲ್ಲಿ ಧರ್ಮರಾಜನು ಹೀಗೆ ಸ್ತುತಿಸಲು ಪ್ರಸನ್ನನಾದ ಯಾದವಾಗ್ರ್ಯ ಪುಷ್ಕರಾಕ್ಷ ಕೃಷ್ಣನು ಜ್ಯೇಷ್ಠ ಪಾಂಡವ ಭಾರತನನ್ನು ಉತ್ತಮ ಮಾತುಗಳಿಂದ ಅಭಿನಂದಿಸಿದನು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ವಾಸುದೇವಸ್ತುತೌ ತ್ರಿಚತ್ವಾರಿಂಶೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ವಾಸುದೇವಸ್ತುತಿ ಎನ್ನುವ ನಲ್ವತ್ಮೂರನೇ ಅಧ್ಯಾಯವು.

ಳಳ

ಗೃಹವಿಭಾಗ

ಯುಧಿಷ್ಠಿರನು ನೀಡಿದ ವಿಭಿನ್ನ ಭವನಗಳಲ್ಲಿ ಭೀಮಸೇನಾದಿ ಸಹೋದರರು ಪ್ರವೇಶಿಸಿ ವಿಶ್ರಮಿಸಿದುದು (1-16).

12044001 ವೈಶಂಪಾಯನ ಉವಾಚ|
12044001a ತತೋ ವಿಸರ್ಜಯಾಮಾಸ ಸರ್ವಾಃ ಪ್ರಕೃತಯೋ ನೃಪಃ|
12044001c ವಿವಿಶುಶ್ಚಾಭ್ಯನುಜ್ಞಾತಾ ಯಥಾಸ್ವಾನಿ ಗೃಹಾಣಿ ಚ॥

[112] ದಕ್ಷಿಣಾತ್ಯ ಪಾಠದಲ್ಲಿ ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ: ಏತನ್ನಾಮಶತಂ ವಿಷ್ಣೋರ್ಧರ್ಮರಾಜೇನ ಕೀರ್ತಿತಮ್| ಯಃ ಪಠೇಚ್ಛೃಣುಯಾದ್ವಾಪಿ ಸರ್ವಪಾಪೈಃ ಪ್ರಮುಚ್ಯತೇ॥ (ಗೀತಾ ಪ್ರೆಸ್).

ಅನಂತರ ನೃಪನು ಪ್ರಜೆಗಳೆಲ್ಲರನ್ನೂ ಬೀಳ್ಕೊಟ್ಟನು. ಅವನ
ಅಪ್ಪಣೆಪಡೆದು ಅವರು ತಮ್ಮ ತಮ್ಮ ಮನೆಗಳಿಗೆ ಹೋದರು.

12044002a ತತೋ ಯುಧಿಷ್ಠಿರೋ ರಾಜಾ ಭೀಮಂ ಭೀಮಪರಾಕ್ರಮಮ್|
12044002c ಸಾಂತ್ವಯನ್ನಬ್ರವೀದ್ಧೀಮಾನರ್ಜುನಂ ಯಮಜೌ ತಥಾ||

ಅನಂತರ ರಾಜಾ ಯುಧಿಷ್ಠಿರನು ಭೀಮಪರಾಕ್ರಮಿ ಭೀಮನನ್ನು
ಸಂತವಿಸುತ್ತಾ ಅರ್ಜುನ ಮತ್ತು ಯಮಳರಿಗೆ ಹೇಳಿದನು:

12044003a ಶತ್ರುಭಿರ್ವಿವಿಧೈಃ ಶಸ್ತ್ರೈಃ ಕೃತ್ತದೇಹಾ ಮಹಾರಣೇ|
12044003c ಶ್ರಾಂತಾ ಭವಂತಃ ಸುಭೃಶಂ ತಾಪಿತಾಃ ಶೋಕಮನ್ಯುಭಿಃ||

“ಮಹಾರಣದಲ್ಲಿ ಶತ್ರುಗಳ ವಿವಿಧ ಶಸ್ತ್ರಗಳಿಂದ ನಿಮ್ಮ ಶರೀರಗಳು
ಗಾಯಗೊಂಡಿವೆ. ಶೋಕ-ಕ್ರೋಧಗಳಿಂದ ತಪಿಸಿ ಬಳಲಿದ್ದೀರಿ.

12044004a ಅರಣ್ಯೇ ದುಃಖಿವಸತೀರ್ಮತ್ಕೃತೇ ಪುರುಷೋತ್ತಮಾಃ|
12044004c ಭವದ್ಭಿರನುಭೂತಾಶ್ಚ ಯಥಾ ಕುಪುರುಷೈಸ್ತಥಾ||

ಪುರುಷೋತ್ತಮರಾದ ನೀವು ನನ್ನಿಂದಾಗಿ ಅರಣ್ಯದಲ್ಲಿ,
ಭಾಗ್ಯಹೀನರಂತೆ ವಾಸಿಸಿ ದುಃಖಿಗಳನ್ನು ಅನುಭವಿಸಿದಿರಿ.

12044005a ಯಥಾಸುಖಂ ಯಥಾಜೋಷಂ ಜಯೋಽಯಮನುಭೂಯತಾಮ್|
12044005c ವಿಶ್ರಾಂತಾಽಲ್ಲಬ್ಧವಿಜ್ಞಾನಾನ್ವಃ ಸಮೇತಾಸ್ಮಿ ವಃ ಪುನಃ||

ಯಥಾಸುಖವಾಗಿ ಯಥೇಚ್ಛೆಯಿಂದ ಈ ಜಯವನ್ನು ಅನಂದಿಸಿರಿ!
ಸಂಪೂರ್ಣ ವಿಶ್ರಾಂತಿಯನ್ನು ಪಡೆದು ಸ್ವಸ್ಥಚಿತ್ತರಾದನಂತರ ನಾಳೆ
ಪುನಃ ನಿಮ್ಮೊಡನೆ ಸೇರುತ್ತೇನೆ.”

12044006a ತತೋ ದುರ್ಯೋಧನಗೃಹಂ ಪ್ರಾಸಾದೈರುಪಶೋಭಿತಮ್|

12044006c ಬಹುರತ್ನಸಮಾಕೀರ್ಣಂ ದಾಸೀದಾಸಸಮಾಕುಲಮ್॥
12044007a ಧೃತರಾಷ್ಟ್ರಾಭ್ಯನುಜ್ಞಾತಂ ಭ್ರಾತ್ರಾ ದತ್ತಂ ವೃಕೋದರಃ।
12044007c ಪ್ರತಿಪೇದೇ ಮಹಾಬಾಹುರ್ಮಂದರಂ ಮಘವಾನಿವ॥

ಅನಂತರ ಧೃತರಾಷ್ಟ್ರನ ಅನುಮತಿಯನ್ನು ಪಡೆದು ಅವನು ಪ್ರಾಸಾದಗಳಿಂದ ಶೋಭಿಸುತ್ತಿದ್ದ, ಅನೇಕ ರತ್ನಗಳಿಂದ ಕೂಡಿದ್ದ, ದಾಸೀ-ದಾಸರ ಗುಂಪುಗಳಿದ್ದ ದುರ್ಯೋಧನನ ಅರಮನೆಯನ್ನು ಸಹೋದರ ವೃಕೋದರನಿಗಿತ್ತನು. ಮಂದರವನ್ನು ಇಂದ್ರನು ಹೇಗೋ ಹಾಗೆ ಮಹಾಬಾಹು ಭೀಮಸೇನನು ಅದನ್ನು ಸ್ವೀಕರಿಸಿದನು.

12044008a ಯಥಾ ದುರ್ಯೋಧನಗೃಹಂ ತಥಾ ದುಃಶಾಸನಸ್ಯ ಚ।
12044008c ಪ್ರಾಸಾದಮಾಲಾಸಂಯುಕ್ತಂ ಹೇಮತೋರಣಭೂಷಿತಮ್॥
12044009a ದಾಸೀದಾಸಸುಸಂಪೂರ್ಣಂ ಪ್ರಭೂತಧನಧಾನ್ಯವತ್।
12044009c ಪ್ರತಿಪೇದೇ ಮಹಾಬಾಹುರರ್ಜುನೋ ರಾಜಶಾಸನಾತ್॥

ದುರ್ಯೋಧನನ ಅರಮನೆಯಂತೆಯೇ ಪ್ರಾಸಾದಗಳ ಸಾಲುಗಳಿಂದ ಕೂಡಿದ್ದ, ಹೇಮತೋರಣಭೂಷಿತವಾದ, ದಾಸೀ-ದಾಸರಿಂದ ಸಂಪೂರ್ಣವಾಗಿದ್ದ, ಧನ-ಧಾನ್ಯಗಳಿಂದ ಸಮೃದ್ಧವಾಗಿದ್ದ ದುಃಶಾಸನನ ಅರಮನೆಯನ್ನು ರಾಜಶಾಸನದಂತೆ ಮಹಾಬಾಹು ಅರ್ಜುನನು ಪಡೆದುಕೊಂಡನು.

12044010a ದುರ್ಮರ್ಷಣಸ್ಯ ಭವನಂ ದುಃಶಾಸನಗೃಹಾದ್ವರಮ್।
12044010c ಕುಬೇರಭವನಪ್ರಖ್ಯಂ ಮಣಿಹೇಮವಿಭೂಷಿತಮ್॥
12044011a ನಕುಲಾಯ ವರಾರ್ಹಾಯ ಕರ್ಶಿತಾಯ ಮಹಾವನೇ।
12044011c ದದೌ ಪ್ರೀತೋ ಮಹಾರಾಜ ಧರ್ಮರಾಜೋ ಯುಧಿಷ್ಠಿರಃ॥

ಮಹಾರಾಜ! ದುಃಶಾಸನನ ಅರಮನೆಗಿಂತಲೂ ಶ್ರೇಷ್ಠವಾಗಿದ್ದ, ಕುಬೇರಭವನದಂತಿದ್ದ, ಮಣಿಹೇಮವಿಭೂಷಿತವಾಗಿದ್ದ ದುರ್ಮರ್ಷಣನ ಅರಮನೆಯನ್ನು ಮಹಾವನದಲ್ಲಿ ಅನೇಕ ಕಷ್ಟಗಳನ್ನನುಭವಿಸಿ, ಬಹುಮಾನಕ್ಕೆ ಯೋಗ್ಯನಾಗಿದ್ದ ನಕುಲನಿಗೆ ಧರ್ಮರಾಜ ಯುಧಿಷ್ಠಿರನು ಪ್ರೀತಿಯಿಂದ ಕೊಟ್ಟನು.

12044012a ದುರ್ಮುಖಸ್ಯ ಚ ವೇಶ್ಮಾಗ್ರ್ಯಂ ಶ್ರೀಮತ್ಕನಕಭೂಷಿತಮ್|
12044012c ಪೂರ್ಣಂ ಪದ್ಮದಲಾಕ್ಷೀಣಾಂ ಸ್ತ್ರೀಣಾಂ ಶಯನಸಂಕುಲಮ್||
12044013a ಪ್ರದದೌ ಸಹದೇವಾಯ ಸತತಂ ಪ್ರಿಯಕಾರಿಣೇ|
12044013c ಮುಮುದೇ ತಚ್ಚ ಲಬ್ಧ್ವಾ ಸ ಕೈಲಾಸಂ ಧನದೋ ಯಥಾ||

ಕಾಂತಿಯುಕ್ತವಾಗಿದ್ದ, ಕನಕಭೂಷಿತ, ಪದ್ಮದಲಯತಾಕ್ಷೀ ಸ್ತ್ರೀಯರ ಶಯನಮಂದಿರಗಳಿಂದ ಸಂಪನ್ನವಾಗಿದ್ದ ದುರ್ಮುಖನ ಅಗ್ರ ಅರಮನೆಯನ್ನು ಯುಧಿಷ್ಠಿರನು ಸತತವೂ ಪ್ರಿಯಕಾರಣಿಯಾಗಿದ್ದ ಸಹದೇವನಿಗೆ ಕೊಟ್ಟನು. ಕೈಲಾಸವನ್ನು ಪಡೆದ ಕುಬೇರನಂತೆ ಆ ಅರಮನೆಯನ್ನು ಪಡೆದ ಸಹದೇವನು ಮುದಿತನಾದನು.

12044014a ಯುಯುತ್ಸುರ್ವಿದುರಶ್ಚೈವ ಸಂಜಯಶ್ಚ ಮಹಾದ್ಯುತಿಃ|
12044014c ಸುಧರ್ಮಾ ಚೈವ ಧೌಮ್ಯಶ್ಚ ಯಥಾಸ್ವಂ ಜಗ್ಮುರಾಲಯಾನ್||

ಯುಯುತ್ಸು, ವಿದುರ, ಮಹಾದ್ಯುತಿ ಸಂಜಯ, ಸುಧರ್ಮಾ ಮತ್ತು ಧೌಮ್ಯರು ತಾವು ಹಿಂದೆ ವಾಸಮಾಡುತ್ತಿದ್ದ ಮನೆಗಳಿಗೇ ತೆರಳಿದರು.

12044015a ಸಹ ಸಾತ್ಯಕಿನಾ ಶೌರಿರರ್ಜುನಸ್ಯ ನಿವೇಶನಮ್|
12044015c ವಿವೇಶ ಪುರುಷವ್ಯಾಘ್ರೋ ವ್ಯಾಘ್ರೋ ಗಿರಿಗುಹಾಮಿವ||

ಸಾತ್ಯಕಿಯೊಂದಿಗೆ ಪುರುಷವ್ಯಾಘ್ರ ಶೌರಿಯು, ಗಿರಿಗುಹೆಯನ್ನು

ಪ್ರವೇಶಿಸುವ ವ್ಯಾಘ್ರದಂತೆ, ಅರ್ಜುನನ ಅರಮನೆಯನ್ನು ಪ್ರವೇಶಿಸಿದನು.

12044016a ತತ್ರ ಭಕ್ಷಾನ್ನಪಾನ್ಯೈಸ್ತೇ ಸಮುಪೇತಾಃ ಸುಖೋಷಿತಾಃ|
12044016c ಸುಖಪ್ರಬುದ್ಧಾ ರಾಜಾನಮುಪತಸ್ಥುರ್ಯುಧಿಷ್ಠಿರಮ್||

ಅಲ್ಲಿ ಭಕ್ಷಾನ್ನ ಪಾನೀಯಗಳಿಂದ ತೃಪ್ತರಾಗಿ, ಸುಖವಾಗಿ ರಾತ್ರಿಯನ್ನು ಕಳೆದು, ಸುಖಿಗಳಾಗಿಯೇ ಎಚ್ಚೆತ್ತು ರಾಜ ಯುಧಿಷ್ಠಿರನ ಬಳಿ ಹೋದರು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಗೃಹವಿಭಾಗೇ ಚತುಶ್ಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಗೃಹವಿಭಾಗ ಎನ್ನುವ ನಲ್ವತ್ನಾಲ್ಕನೇ ಅಧ್ಯಾಯವು.

೪೫

ಕೃಷ್ಣಂಪ್ರತಿ ಯುಧಿಷ್ಠಿರವಾಕ್ಯ

ಯುಧಿಷ್ಠಿರನು ಬ್ರಾಹ್ಮಣರಿಗೆ ಮತ್ತು ಆಶ್ರಿತರಿಗೆ ದಾನನೀಡಿ ಸತ್ಕರಿಸಿದುದು; ಕೃಷ್ಣನ ಬಳಿಸಾರಿ ಅವನನ್ನು ಸ್ತುತಿಸಿ ಕತಜ್ಞತೆಯನ್ನು ವ್ಯಕ್ತಪಡಿಸಿದುದು (1-20).

12045001 ಜನಮೇಜಯ ಉವಾಚ|
12045001a ಪ್ರಾಪ್ಯ ರಾಜ್ಯಂ ಮಹಾತೇಜಾ ಧರ್ಮರಾಜೋ ಯುಧಿಷ್ಠಿರಃ|
12045001c ಯದನ್ಯದಕರೋದ್ವಿಪ್ರ ತನ್ಮೇ ವಕ್ತುಮಿಹಾರ್ಹಸಿ||

ಜನಮೇಜಯನು ಹೇಳಿದನು: "ವಿಪ್ರ! ಮಹಾತೇಜಸ್ವಿ ಧರ್ಮರಾಜ ಯುಧಿಷ್ಠಿರನು ರಾಜ್ಯವನ್ನು ಪಡೆದು ಏನು ಮಾಡಿದನೆನ್ನುವುದನ್ನು ನನಗೆ ಹೇಳಬೇಕು.

12045002a ಭಗವಾನ್ವಾ ಹೃಷೀಕೇಶಸ್ತ್ರೈಲೋಕ್ಯಸ್ಯ ಪರೋ ಗುರುಃ|
12045002c ಋಷೇ ಯದಕರೋದ್ವೀರಸ್ತಚ್ಚ ವ್ಯಾಖ್ಯಾತುಮರ್ಹಸಿ||

ಋಷೇ! ತ್ರೈಲೋಕ್ಯದ ಪರಮ ಗುರು ಭಗವಾನ್ ಹೃಷೀಕೇಶನು ಏನು ಮಾಡಿದನೆನ್ನುವುದನ್ನೂ ನನಗೆ ಹೇಳಬೇಕು."

12045003 ವೈಶಂಪಾಯನ ಉವಾಚ|
12045003a ಶೃಣು ರಾಜೇಂದ್ರ ತತ್ತ್ವೇನ ಕೀರ್ತ್ಯಮಾನಂ ಮಯಾನಘ|
12045003c ವಾಸುದೇವಂ ಪುರಸ್ಕೃತ್ಯ ಯದಕುರ್ವತ ಪಾಂಡವಾಃ||

ವೈಶಂಪಾಯನನು ಹೇಳಿದನು: "ರಾಜೇಂದ್ರ! ಅನಘ! ವಾಸುದೇವನನ್ನು ಮುಂದಿಟ್ಟುಕೊಂಡು ಪಾಂಡವರು ಏನು ಮಾಡಿದರೆನ್ನುವುದನ್ನು ಹೇಳುತ್ತೇನೆ. ಕೇಳು.

12045004a ಪ್ರಾಪ್ಯ ರಾಜ್ಯಂ ಮಹಾತೇಜಾ ಧರ್ಮರಾಜೋ ಯುಧಿಷ್ಠಿರಃ|
12045004c ಚಾತುರ್ವರ್ಣ್ಯಂ ಯಥಾಯೋಗಂ ಸ್ವೇ ಸ್ವೇ ಧರ್ಮೇ ನ್ಯವೇಶಯತ್||

ಮಹಾತೇಜಸ್ವಿ ಧರ್ಮರಾಜ ಯುಧಿಷ್ಠಿರನು ರಾಜ್ಯವನ್ನು ಪಡೆದು ನಾಲ್ಕು ವರ್ಣದವರೂ ತಮ್ಮ ತಮ್ಮ ಧರ್ಮಗಳಲ್ಲಿ ಯಥಾಯೋಗವಾಗಿ ಇರುವಂತೆ ವ್ಯವಸ್ಥೆಮಾಡಿದನು.

12045005a ಬ್ರಾಹ್ಮಣಾನಾಂ ಸಹಸ್ರಂ ಚ ಸ್ನಾತಕಾನಾಂ ಮಹಾತ್ಮನಾಮ್|
12045005c ಸಹಸ್ರನಿಷ್ಕಮೇಕೈಕಂ ವಾಚಯಾಮಾಸ ಪಾಂಡವಃ||

ಪಾಂಡವನು ಸಾವಿರ ಮಹಾತ್ಮ ಸ್ನಾತಕ ಬ್ರಾಹ್ಮಣರು ಒಬ್ಬೊಬ್ಬರಿಗೂ ಒಂದೊಂದು ಸಾವಿರ ಸುವರ್ಣನಾಣ್ಯಗಳನ್ನು ದಾನಮಾಡಿದನು.

12045006a ತಥಾನುಜೀವಿನೋ ಭೃತ್ಯಾನ್ಸಂಶ್ರಿತಾನತಿಥೀನಪಿ|
12045006c ಕಾಮ್ಯೈಃ ಸಂತರ್ಪಯಾಮಾಸ ಕೃಪಣಾಂಸ್ತರ್ಕಕಾನಪಿ||

ತನ್ನನ್ನೇ ಆಶ್ರಯಿಸಿ ಜೀವಿಸುತ್ತಿದ್ದ ಸೇವಕರನ್ನು, ಆಶ್ರಿತ ಅತಿಥಿಗಳನ್ನೂ, ದೀನ ಯಾಚಕರನ್ನೂ ಅವರಿಗೆ ಬೇಕಾದವುಗಳನ್ನಿತ್ತು ತೃಪ್ತಿಪಡಿಸಿದನು.

12045007a ಪುರೋಹಿತಾಯ ಧೌಮ್ಯಾಯ ಪ್ರಾದಾದಯುತಶಃ ಸ ಗಾಃ|
12045007c ಧನಂ ಸುವರ್ಣಂ ರಜತಂ ವಾಸಾಂಸಿ ವಿವಿಧಾನಿ ಚ||

ಪುರೋಹಿತ ಧೌಮ್ಯನಿಗೆ ಹತ್ತುಸಾವಿರ ಗೋವುಗಳನ್ನೂ, ಧನ, ಸುವರ್ಣ-ಬೆಳ್ಳಿಗಳ ವಸ್ತುಗಳನ್ನೂ, ವಿವಿಧ ವಸ್ತ್ರಗಳನ್ನೂ ದಾನಮಾಡಿದನು.

12045008a ಕೃಪಾಯ ಚ ಮಹಾರಾಜ ಗುರುವೃತ್ತಿಮವರ್ತತ|
12045008c ವಿದುರಾಯ ಚ ಧರ್ಮಾತ್ಮಾ ಪೂಜಾಂ ಚಕ್ರೇ ಯತವ್ರತಃ||

ಮಹಾರಾಜ! ಕೃಪನಿಗೆ ಗುರುವೃತ್ತಿಯಿಂದ ವಿಶ್ರಾಂತಿಯನ್ನು ದೊರಕಿಸಿದನು. ಆ ಯತವ್ರತ ಧರ್ಮಾತ್ಮನು ವಿದುರನನ್ನೂ ಗೌರವಿಸಿದನು.

12045009a ಭಕ್ಷಾನ್ನಪಾನೈರ್ವಿವಿಧೈರ್ವಾಸೋಭಿಃ ಶಯನಾಸನೈಃ|
12045009c ಸರ್ವಾನ್ಸಂತೋಷಯಾಮಾಸ ಸಂಶ್ರಿತಾನ್ದದತಾಂ ವರಃ||

ಆ ದಾನಿಗಳಲ್ಲಿ ಶ್ರೇಷ್ಠನು ಆಶ್ರಿತ ಜನರೆಲ್ಲರನ್ನೂ ಭಕ್ಷ್ಯ-ಅನ್ನ-ಪಾನಗಳಿಂದ, ವಿವಿಧ ವಸ್ತ್ರಗಳಿಂದ, ಶಯನಾಸನಗಳಿಂದ

ಸಂತೋಷಗೊಳಿಸಿದನು.

12045010a ಲಬ್ಧಪ್ರಶಮನಂ ಕೃತ್ವಾ ಸ ರಾಜಾ ರಾಜಸತ್ತಮ|
12045010c ಯುಯುತ್ಸೋರ್ಧಾರ್ತರಾಷ್ಟ್ರಸ್ಯ ಪೂಜಾಂ ಚಕ್ರೇ ಮಹಾಯಶಾಃ||

ರಾಜಸತ್ತಮ! ದೊರಕಿರುವುದರಿಂದ ಎಲ್ಲರನ್ನೂ ತೃಪ್ತಿಪಡಿಸಿ ರಾಜನು ಮಹಾಯಶಸ್ವಿ ಧಾರ್ತರಾಷ್ಟ್ರ ಯುಯುತ್ಸುವನ್ನೂ ಗೌರವಿಸಿದನು.


12045011a ಧೃತರಾಷ್ಟ್ರಾಯ ತದ್ರಾಜ್ಯಂ ಗಾಂಧಾರ್ಯೈ ವಿದುರಾಯ ಚ|
12045011c ನಿವೇದ್ಯ ಸ್ವಸ್ಥವದ್ರಾಜನ್ನಾಸ್ತೇ ರಾಜಾ ಯುಧಿಷ್ಠಿರಃ||

ಆ ರಾಜ್ಯವನ್ನು ಧೃತರಾಷ್ಟ್ರನಿಗೂ, ಗಾಂಧಾರಿಗೂ ಮತ್ತು ವಿದುರನಿಗೂ ಸಮರ್ಪಿಸಿ ರಾಜಾ ಯುಧಿಷ್ಠಿರನು ಸ್ವಸ್ಥಚಿತ್ತನಾದನು.

12045012a ತಥಾ ಸರ್ವಂ ಸ ನಗರಂ ಪ್ರಸಾದ್ಯ ಜನಮೇಜಯ|
12045012c ವಾಸುದೇವಂ ಮಹಾತ್ಮಾನಮಭ್ಯಗಚ್ಚತ್ಕೃತಾಂಜಲಿಃ||

ಜನಮೇಜಯ! ಹಾಗೆ ನಗರದಲ್ಲಿ ಸರ್ವರನ್ನೂ ಪ್ರಸನ್ನಗೊಳಿಸಿ ಆ ಮಹಾತ್ಮನು ವಾಸುದೇವನ ಬಳಿಸಾರಿ, ಕೈಮುಗಿದು ನಮಸ್ಕರಿಸಿದನು.

12045013a ತತೋ ಮಹತಿ ಪರ್ಯಂಕೇ ಮಣಿಕಾಂಚನಭೂಷಿತೇ|
12045013c ದದರ್ಶ ಕೃಷ್ಣಮಾಸೀನಂ ನೀಲಂ ಮೇರಾವಿವಾಂಬುದಮ್||
12045014a ಜಾಜ್ವಲ್ಯಮಾನಂ ವಪುಷಾ ದಿವ್ಯಾಭರಣಭೂಷಿತಮ್|
12045014c ಪೀತಕೌಶೇಯಸಂವೀತಂ ಹೇಮ್ನೀವೋಪಹಿತಂ ಮಣಿಮ್||
12045015a ಕೌಸ್ತುಭೇನ ಉರಃಸ್ಥೇನ ಮಣಿನಾಭಿವಿರಾಜಿತಮ್|
12045015c ಉದ್ಯತೇವೋದಯಂ ಶೈಲಂ ಸೂರ್ಯೇಣಾಪ್ತಕಿರೀಟಿನಮ್||
12045015e ನೌಪಮ್ಯಂ ವಿದ್ಯತೇ ಯಸ್ಯ ತ್ರಿಷು ಲೋಕೇಷು ಕಿಂ ಚನ||



ಆಗ ಮಣಿಕಾಂಚನಭೂಷಿತ ಮಹಾ ಪರ್ಯಂಕದ ಮೇಲೆ
ಮೋಡಗಳಿಂದ ಕೂಡಿದ ಮೇರು ಪರ್ವತದಂತೆ ನೀಲವರ್ಣದ
ಕೃಷ್ಣನು ಕುಳಿತಿರುವುದನ್ನು ಅವನು ನೋಡಿದನು. ದಿವ್ಯಾಭರಣಗಳನ್ನು
ಧರಿಸಿದ್ದ, ಹೊಂಬಣ್ಣದ ರೇಷ್ಮೆಯ ವಸ್ತ್ರವನ್ನುಟ್ಟಿದ್ದ, ಸುವರ್ಣದಿಂದ
ಸಮಲಂಕೃತವಾದ ನೀಲಮಣಿಯಂತಿದ್ದ ಅವನ ದೇಹವು

ಜಾಜ್ವಲ್ಯಮಾನವಾಗಿತ್ತು. ಉದಯಿಸುತ್ತಿರುವ ಸೂರ್ಯನು ಉದಯಾಚಲವನ್ನು ಪ್ರಕಾಶಗೊಳಿಸುವಂತೆ ಅವನ ವಕ್ಷಸ್ಥಳದಲ್ಲಿದ್ದ ಕೌಸ್ತುಭಮಣಿಯು ಕೃಷ್ಣನನ್ನು ಪ್ರಕಾಶಗೊಳಿಸುತ್ತಿತ್ತು. ಕಿರೀಟವನ್ನು ಧರಿಸಿದ್ದ ಅವನ ಸರಿಸಾಟಿಯಾದವರು ಮೂರು ಲೋಕಗಳಲ್ಲಿ ಯಾರೂ ಇರಲಿಲ್ಲ!

12045016a ಸೋಽಭಿಗಮ್ಯ ಮಹಾತ್ಮಾನಂ ವಿಷ್ಣುಂ ಪುರುಷವಿಗ್ರಹಮ್|
12045016c ಉವಾಚ ಮಧುರಾಭಾಷಃ ಸ್ಮಿತಪೂರ್ವಮಿದಂ ತದಾ||

ಮಾನವ ಶರೀರಿಯಾಗಿದ್ದ ಮಹಾತ್ಮ ವಿಷ್ಣುವಿನ ಬಳಿಸಾರಿ ಯುಧಿಷ್ಠಿರನು ನಸುನಗುತ್ತಾ ಮಧುರಭಾಷೆಯಲ್ಲಿ ಇಂತೆಂದನು:

12045017a ಸುಖೇನ ತೇ ನಿಶಾ ಕಚ್ಚಿದ್ವ್ಯುಷ್ಟಾ ಬುದ್ಧಿಮತಾಂ ವರ|
12045017c ಕಚ್ಚಿಜ್ಜ್ಞಾನಾನಿ ಸರ್ವಾಣಿ ಪ್ರಸನ್ನಾನಿ ತವಾಚ್ಯುತ||

“ಬುದ್ಧಿವಂತರಲ್ಲಿ ಶ್ರೇಷ್ಠನೇ! ಅಚ್ಯುತ! ರಾತ್ರಿಯನ್ನು ಸುಖವಾಗಿ ಕಳೆದೆಯೇ? ನಿನ್ನ ಎಲ್ಲ ಜ್ಞಾನೇಂದ್ರಿಯಗಳೂ ಪ್ರಸನ್ನವಾಗಿವೆಯಲ್ಲವೇ?

12045018a ತವ ಹ್ಯಾಶ್ರಿತ್ಯ ತಾಂ ದೇವೀಂ ಬುದ್ಧಿಂ ಬುದ್ಧಿಮತಾಂ ವರ|
12045018c ವಯಂ ರಾಜ್ಯಮನುಪ್ರಾಪ್ತಾಃ ಪೃಥಿವೀ ಚ ವಶೇ ಸ್ಥಿತಾ||

ಬುದ್ಧಿವಂತರಲ್ಲಿ ಶ್ರೇಷ್ಠ! ನಿನ್ನಲ್ಲಿರುವ ದೇವೀ ಬುದ್ಧಿಯನ್ನೇ ಆಶ್ರಯಿಸಿ ನಾವು ರಾಜ್ಯವನ್ನು ಪಡೆದೆವು ಮತ್ತು ಭೂಮಿಯು ನಮ್ಮ ವಶದಲ್ಲಿ ಬಂದಿದೆ.

12045019a ಭವತ್ಪ್ರಸಾದಾದ್ಭಗವಂಸ್ತ್ರಿಲೋಕಗತಿವಿಕ್ರಮ|
12045019c ಜಯಃ ಪ್ರಾಪ್ತೋ ಯಶಶ್ಚಾಗ್ರ್ಯಂ ನ ಚ ಧರ್ಮಾಚ್ಚ್ಯುತಾ ವಯಮ್||

ಭಗವನ್! ತ್ರಿಲೋಕಗತಿವಿಕ್ರಮ! ನಿನ್ನ ಪ್ರಸಾದದಿಂದ ಜಯವನ್ನೂ ಯಶಸ್ಸನ್ನೂ ಪಡೆದುಕೊಂಡೆವು. ನಾವು ಧರ್ಮದಿಂದಲೂ ಚ್ಯುತರಾಗಲಿಲ್ಲ."

12045020a ತಂ ತಥಾ ಭಾಷಮಾಣಂ ತು ಧರ್ಮರಾಜಂ ಯುಧಿಷ್ಠಿರಮ್|
12045020c ನೋವಾಚ ಭಗವಾನ್ಕಿಂ ಚಿದ್ಧ್ಯಾನಮೇವಾನ್ವಪದ್ಯತ||

ಹಾಗೆ ಮಾತನಾಡುತ್ತಿದ್ದ ಧರ್ಮರಾಜ ಯುಧಿಷ್ಠಿರನಿಗೆ ಏನನ್ನೂ ಹೇಳದೇ ಭಗವಾನನು ಯಾವುದೋ ಧ್ಯಾನದಲ್ಲಿ ಮಗ್ನನಾಗಿದ್ದನು.

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಕೃಷ್ಣಂಪ್ರತಿಯುಧಿಷ್ಠಿರವಾಕ್ಯೇ ಪಂಚಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಕೃಷ್ಣನೊಂದಿಗೆ ಯುಧಿಷ್ಠಿರವಾಕ್ಯ ಎನ್ನುವ ನಲ್ವತ್ತೈದನೇ ಅಧ್ಯಾಯವು.

೪೬

ಯುಧಿಷ್ಠಿರ ಮತ್ತು ಶ್ರೀಕೃಷ್ಣರ ಸಂವಾದ; ಶ್ರೀಕೃಷ್ಣನು ಭೀಷ್ಮನನ್ನು ಪ್ರಶಂಸಿಸಿದುದು ಮತ್ತು ಅವನ ಬಳಿ ಹೋಗಲು ಯುಧಿಷ್ಠಿರನಿಗೆ ಆದೇಶವನ್ನಿತ್ತಿದುದು (1-35).

12046001 ಯುಧಿಷ್ಠಿರ ಉವಾಚ|
12046001a ಕಿಮಿದಂ ಪರಮಾಶ್ಚರ್ಯಂ ಧ್ಯಾಯಸ್ಯಮಿತವಿಕ್ರಮ|
12046001c ಕಚ್ಚಿಲ್ಲೋಕತ್ರಯಸ್ಯಾಸ್ಯ ಸ್ವಸ್ತಿ ಲೋಕಪರಾಯಣ||

ಯುಧಿಷ್ಠಿರನು ಹೇಳಿದನು: "ಅಮಿತವಿಕ್ರಮ! ಪರಮಾಶ್ಚರ್ಯ! ನೀನು ಯಾರಕುರಿತು ಧ್ಯಾನಮಗ್ನನಾಗಿರುವೆ? ಲೋಕಪರಾಯಣ! ಮೂರು



ಲೋಕಗಳೂ ಕುಶಲವಾಗಿವೆ ತಾನೆ?

12046002a ಚತುರ್ಥಂ ಧ್ಯಾನಮಾರ್ಗಂ ತ್ವಮಾಲಂಬ್ಯ ಪುರುಷೋತ್ತಮ|
12046002c ಅಪಕ್ರಾಂತೋ ಯತೋ ದೇವ ತೇನ ಮೇ ವಿಸ್ಮಿತಂ ಮನಃ||

ಪುರುಷೋತ್ತಮ! ದೇವ! ನಾಲ್ಕನೆಯ ಧ್ಯಾನಮಾರ್ಗವನ್ನು ಆಶ್ರಯಿಸಿ ಅಪಕ್ರಾಂತನಾಗಿರುವ ನೀನು ನನ್ನ ಮನಸ್ಸನು ವಿಸ್ಮಯಗೊಳಿಸಿರುವೆ!

12046003a ನಿಗೃಹೀತೋ ಹಿ ವಾಯುಸ್ತೇ ಪಂಚಕರ್ಮಾ ಶರೀರಗಃ|
12046003c ಇಂದ್ರಿಯಾಣಿ ಚ ಸರ್ವಾಣಿ ಮನಸಿ ಸ್ಥಾಪಿತಾನಿ ತೇ||

ಶರೀರದಲ್ಲಿ ಪಂಚಕರ್ಮಗಳನ್ನು ಮಾಡುವ ವಾಯುವನ್ನು ನೀನು ನಿಗ್ರಹಿಸಿರುವೆ. ನಿನ್ನ ಇಂದ್ರಿಯಗಳೆಲ್ಲವನ್ನೂ ಮನಸ್ಸಿನಲ್ಲಿ ಸ್ಥಾಪಿಸಿಕೊಂಡಿರುವೆ.

12046004a ಇಂದ್ರಿಯಾಣಿ ಮನಶ್ಚೈವ ಬುದ್ಧೌ ಸಂವೇಶಿತಾನಿ ತೇ|
12046004c ಸರ್ವಶ್ಚೈವ ಗಣೋ ದೇವ ಕ್ಷೇತ್ರಜ್ಞೇ ತೇ ನಿವೇಶಿತಃ||

ಇಂದ್ರಿಯ-ಮನಸ್ಸುಗಳನ್ನು ಬುದ್ಧಿಯಲ್ಲಿ ಲೀನಗೊಳಿಸಿರುವೆ. ದೇವ! ಸರ್ವಗಣಗಳೂ ನಿನ್ನ ಆತ್ಮನಲ್ಲಿ ಲೀನವಾಗಿವೆ.

12046005a ನೇಂಗಂತಿ ತವ ರೋಮಾಣಿ ಸ್ಥಿರಾ ಬುದ್ಧಿಸ್ತಥಾ ಮನಃ|
12046005c ಸ್ಥಾಣುಕುಡ್ಯಶಿಲಾಭೂತೋ ನಿರೀಹಶ್ಚಾಸಿ ಮಾಧವ||

ಮಾಧವ! ನಿನ್ನ ರೋಮಗಳು ನಿಮಿರಿನಿಂತಿವೆ. ನಿನ್ನ ಮನಸ್ಸು-ಬುದ್ಧಿಗಳು ಸ್ಥಿರವಾಗಿವೆ. ಕಟ್ಟಿಗೆ, ಗೋಡೆ ಮತ್ತು ಶಿಲೆಗಳಂತೆ ನಿಶ್ಚೇಷ್ಟನಾಗಿರುವೆ!

12046006a ಯಥಾ ದೀಪೋ ನಿವಾತಸ್ಥೋ ನಿರಿಂಗೋ ಜ್ವಲತೇಽಚ್ಯುತ|

12046006c ತಥಾಸಿ ಭಗವನ್ದೇವ ನಿಶ್ಚಲೋ ದೃಢನಿಶ್ಚಯಃ॥

ದೇವ! ಗಾಳಿಯಿಲ್ಲದ ಸ್ಥಳದಲ್ಲಿ ದೀಪವೂ ಆತ್ತಿತ್ತ ಅಗಲದೇ ಹೇಗೆ
ಒಂದೇ ಸಮನೆ ಉರಿಯುತ್ತಿರುತ್ತದೆಯೋ ಹಾಗೆ ನೀನು
ದೃಢನಿಶ್ಚಯನಾಗಿ ಶಿಲಾಮೂರ್ತಿಯಂತೆ ಕುಳಿತಿರುವೆ!

12046007a ಯದಿ ಶ್ರೋತುಮಿಹಾರ್ಹಾಮಿ ನ ರಹಸ್ಯಂ ಚ ತೇ ಯದಿ|
12046007c ಚಿಂಧಿ ಮೇ ಸಂಶಯಂ ದೇವ ಪ್ರಪನ್ನಾಯಾಭಿಯಾಚತೇ॥

ದೇವ! ಈ ರಹಸ್ಯವನ್ನು ಕೇಳಲು ನಾನು ಅರ್ಹನಾಗಿದ್ದರೆ ನಮಸ್ಕರಿಸಿ
ಕೇಳಿಕೊಳ್ಳುತ್ತಿರುವ ನನ್ನ ಈ ಸಂಶಯವನ್ನು ದೂರಮಾಡು!

12046008a ತ್ವಂ ಹಿ ಕರ್ತಾ ವಿಕರ್ತಾ ಚ ತ್ವಂ ಕ್ಷರಂ ಚಾಕ್ಷರಂ ಚ ಹಿ|
12046008c ಅನಾದಿನಿಧನಶ್ಚಾದ್ಯಸ್ತ್ವಮೇವ ಪುರುಷೋತ್ತಮ॥

ಪುರುಷೋತ್ತಮ! ನೀನೇ ಕರ್ತ, ನೀನೇ ವಿಕರ್ತ.
ನಾಶಹೊಂದುವವನೂ ನೀನೇ. ಅವಿನಾಶಿಯಾಗಿರುವವನೂ ನೀನೇ.
ಆದಿ-ಅಂತ್ಯಗಳಿಲ್ಲದವನೂ ನೀನೇ!

12046009a ತ್ವತ್ಪ್ರಪನ್ನಾಯ ಭಕ್ತಾಯ ಶಿರಸಾ ಪ್ರಣತಾಯ ಚ|
12046009c ಧ್ಯಾನಸ್ಯಾಸ್ಯ ಯಥಾತತ್ತ್ವಂ ಬ್ರೂಹಿ ಧರ್ಮಭೃತಾಂ ವರ॥

ಧರ್ಮಭೃತರಲ್ಲಿ ಶ್ರೇಷ್ಠನೇ! ಭಕ್ತಿಯಿಂದ ನಿನಗೆ ಶರಣುಬಂದಿರುವ
ಮತ್ತು ಶಿರಸಾ ನಮಸ್ಕರಿಸುತ್ತಿರುವ ನನಗೆ ಈ ಧ್ಯಾನದ ತತ್ತ್ವವನ್ನು
ಯಥಾವತ್ತಾಗಿ ಹೇಳು!””

12046010 ವೈಶಂಪಾಯನ ಉವಾಚ|
12046010a ತತಃ ಸ್ವಗೋಚರೇ ನ್ಯಸ್ಯ ಮನೋ ಬುದ್ಧೀಂದ್ರಿಯಾಣಿ ಚ|

12046010c ಸ್ಮಿತಪೂರ್ವಮುವಾಚೇದಂ ಭಗವಾನ್ವಾಸವಾನುಜಃ||

ವೈಶಂಪಾಯನನು ಹೇಳಿದನು: "ಆಗ ಭಗವಾನ್ ವಾಸವಾನುಜನು ಮನಸ್ಸು-ಬುದ್ಧಿ-ಇಂದ್ರಿಯಗಳನ್ನು ತಮ್ಮ ತಮ್ಮ ಸ್ಥಾನಗಳಲ್ಲಿ ಇರಿಸಿ ಮಂದಹಾಸಬೀರುತ್ತಾ ಈ ಮಾತನ್ನಾಡಿದನು:

12046011a ಶರತಲ್ಪಗತೋ ಭೀಷ್ಮಃ ಶಾಮ್ಯನ್ನಿವ ಹುತಾಶನಃ|
12046011c ಮಾಂ ಧ್ಯಾತಿ ಪುರುಷವ್ಯಾಘ್ರಸ್ತತೋ ಮೇ ತದ್ಗತಂ ಮನಃ||

"ಆರಿಹೋಗುತ್ತಿರುವ ಅಗ್ನಿಯಂತಿರುವ, ಶರತಲ್ಪದಲ್ಲಿ ಮಲಗಿರುವ ಪುರುಷವ್ಯಾಘ್ರ ಭೀಷ್ಮನು ನನ್ನನ್ನು ಧ್ಯಾನಿಸುತ್ತಿದ್ದಾನೆ. ಅವನಲ್ಲಿಯೇ ನನ್ನ ಮನಸ್ಸು ಹೋಗಿತ್ತು.

12046012a ಯಸ್ಯ ಜ್ಯಾತಲನಿಷ್ಪೋಷಂ ವಿಸ್ಫೂರ್ಜಿತಮಿವಾಶನೇಃ|
12046012c ನ ಸಹೇದ್ದೇವರಾಜೋಽಪಿ ತಮಸ್ಮಿ ಮನಸಾ ಗತಃ||

ಮಿಂಚಿನಂತೆ ಹೊರಹೊಮ್ಮುತ್ತಿದ್ದ ಯಾರ ಧನುಸ್ಸಿನ ಟೇಂಕಾರವನ್ನು ದೇವರಾಜನೂ ಕೂಡ ಸಹಿಸಲಸಾಧ್ಯವಾಗಿತ್ತೋ ಆ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046013a ಯೇನಾಭಿದ್ರುತ್ಯ ತರಸಾ ಸಮಸ್ತಂ ರಾಜಮಂಡಲಮ್|
12046013c ಊಢಾಸ್ತಿಸ್ರಃ ಪುರಾ ಕನ್ಯಾಸ್ತಮಸ್ಮಿ ಮನಸಾ ಗತಃ||

ಹಿಂದೆ ಸಮಸ್ತ ರಾಜಮಂಡಲವನ್ನೂ ಪರಾಜಯಗೊಳಿಸಿ ಮೂವರು ಕನ್ಯೆಯರನ್ನು ಯಾರು ಕರೆದುಕೊಂಡು ಹೋಗಿದ್ದನೋ ಆ ಬೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046014a ತ್ರಯೋವಿಂಶತಿರಾತ್ರಂ ಯೋ ಯೋಧಯಾಮಾಸ ಭಾರ್ಗವಮ್|

12046014c ನ ಚ ರಾಮೇಣ ನಿಸ್ತೀರ್ಣಸ್ತಮಸ್ಮಿ ಮನಸಾ ಗತಃ||

ಇಪ್ಪತ್ತು ಮೂರು ರಾತ್ರಿ ಭಾರ್ಗವನೊಂದಿಗೆ ಯುದ್ಧಮಾಡಿ ಯಾರು ರಾಮನಿಂದ ಪರಾಜಯಗೊಳ್ಳಲಿಲ್ಲವೋ ಅವನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046015a ಯಂ ಗಂಗಾ ಗರ್ಭವಿಧಿನಾ ಧಾರಯಾಮಾಸ ಪಾರ್ಥಿವಮ್|
12046015c ವಸಿಷ್ಠಶಿಷ್ಯಂ ತಂ ತಾತ ಮನಸಾಸ್ಮಿ ಗತೋ ನೃಪ||

ನೃಪ! ಅಯ್ಯಾ! ಗಂಗೆಯು ಯಾರನ್ನು ಗರ್ಭವಿಧಾನದಲ್ಲಿ ಧರಿಸಿದ್ದಳೋ ಆ ವಸಿಷ್ಠಶಿಷ್ಯ ಪಾರ್ಥಿವ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046016a ದಿವ್ಯಾಸ್ತ್ರಾಣಿ ಮಹಾತೇಜಾ ಯೋ ಧಾರಯತಿ ಬುದ್ಧಿಮಾನ್|
12046016c ಸಾಂಗಾಂಶ್ಚ ಚತುರೋ ವೇದಾಂಸ್ತಮಸ್ಮಿ ಮನಸಾ ಗತಃ||

ಮಹಾತೇಜಸ್ಸುಳ್ಳ ದಿವ್ಯಾಸ್ತ್ರಗಳನ್ನೂ, ಅಂಗಗಳ ಸಹಿತ ನಾಲ್ಕು ವೇದಗಳನ್ನೂ ಧಾರಣೆಮಾಡಿಕೊಂಡಿರುವ ಆ ಬುದ್ಧಿಮಾನ್ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046017a ರಾಮಸ್ಯ ದಯಿತಂ ಶಿಷ್ಯಂ ಜಾಮದಗ್ನ್ಯಸ್ಯ ಪಾಂಡವ|
12046017c ಆಧಾರಂ ಸರ್ವವಿದ್ಯಾನಾಂ ತಮಸ್ಮಿ ಮನಸಾ ಗತಃ||

ಪಾಂಡವ! ಜಾಮದಗ್ನ್ಯ ರಾಮನ ಪ್ರಿಯ ಶಿಷ್ಯ ಮತ್ತು ಸರ್ವ ವಿದ್ಯೆಗಳ ಆಧಾರ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046018a ಏಕೀಕೃತ್ಯೇಂದ್ರಿಯಗ್ರಾಮಂ ಮನಃ ಸಂಯಮ್ಯ ಮೇಧಯಾ|
12046018c ಶರಣಂ ಮಾಮುಪಾಗಚ್ಚತ್ತತೋ ಮೇ ತದ್ಗತಂ ಮನಃ||

ಇಂದ್ರಿಯಸಮೂಹಗಳನ್ನು ಮನಸ್ಸಿನಲ್ಲಿ ಏಕೀಕರಿಸಿ, ಮನಸ್ಸನ್ನು ಬುದ್ಧಿಯಲ್ಲಿ ಲೀನಗೊಳಿಸಿ ನನ್ನಲ್ಲಿ ಶರಣುಬಂದಿರುವ ಬೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046019a ಸ ಹಿ ಭೂತಂ ಚ ಭವ್ಯಂ ಚ ಭವಚ್ಚ ಪುರುಷರ್ಷಭ|
12046019c ವೇತ್ತಿ ಧರ್ಮಭೃತಾಂ ಶ್ರೇಷ್ಠಸ್ತತೋ ಮೇ ತದ್ಗತಂ ಮನಃ||

ಪುರುಷರ್ಷಭ! ಭೂತ-ಭವ್ಯ-ಭವಿಷ್ಯತ್ತುಗಳನ್ನು ತಿಳಿದಿರುವ ಆ ಧರ್ಮಭೃತರಲ್ಲಿ ಶ್ರೇಷ್ಠ ಭೀಷ್ಮನ ಕಡೆ ನನ್ನ ಮನಸ್ಸು ಹರಿದು ಹೋಗಿತ್ತು.

12046020a ತಸ್ಮಿನ್ಹಿ ಪುರುಷವ್ಯಾಘ್ರೇ ಕರ್ಮಭಿಃ ಸ್ವೈರ್ದಿವಂ ಗತೇ|
12046020c ಭವಿಷ್ಯತಿ ಮಹೀ ಪಾರ್ಥ ನಷ್ಟಚಂದ್ರೇವ ಶರ್ವರೀ||

ಆ ಪುರುಷವ್ಯಾಘ್ರನು ತನ್ನ ಸತ್ಕರ್ಮಗಳ ಫಲವಾಗಿ ಸ್ವರ್ಗಕ್ಕೆ ಹೋಗಿಬಿಟ್ಟರೆ ಈ ಭೂಮಿಯು ಚಂದ್ರನಿಲ್ಲದ ರಾತ್ರಿಯಂತಾಗುತ್ತದೆ.

12046021a ತದ್ಯುಧಿಷ್ಠಿರ ಗಾಂಗೇಯಂ ಭೀಷ್ಮಂ ಭೀಮಪರಾಕ್ರಮಮ್|
12046021c ಅಭಿಗಮ್ಯೋಪಸಂಗೃಹ್ಯ ಪೃಚ್ಚ ಯತ್ತೇ ಮನೋಗತಮ್||

ಯುಧಿಷ್ಠಿರ! ಆ ಭೀಮಪರಾಕ್ರಮಿ ಭೀಷ್ಮ ಗಾಂಗೇಯನ ಬಳಿಹೋಗಿ, ಅವನ ಪಾದಗಳನ್ನು ಹಿಡಿದು, ನಿನ್ನ ಮನಸ್ಸಿನಲ್ಲಿರುವ ಸಂದೇಹಗಳನ್ನು ಕೇಳು.

12046022a ಚಾತುರ್ವೇದ್ಯಂ ಚಾತುರ್ಹೋತ್ರಂ ಚಾತುರಾಶ್ರಮ್ಯಮೇವ ಚ|
12046022c ಚಾತುರ್ವರ್ಣ್ಯಸ್ಯ ಧರ್ಮಂ ಚ ಪೃಚ್ಚೈನಂ ಪೃಥಿವೀಪತೇ||

ಪೃಥಿವೀಪತೇ! ಅವನನ್ನು ಕೇಳಿ ಚತುರ್ವೇದಗಳನ್ನೂ,

ಚತುರ್ಹೋತ್ರಗಳನ್ನೂ[113], ಚತುರಾಶ್ರಮಗಳನ್ನೂ[114],
ಚಾತುರ್ವರ್ಣ್ಯಗಳ ಧರ್ಮಗಳನ್ನೂ ಕೇಳಿ ತಿಳಿದುಕೋ।

12046023a ತಸ್ಮಿನ್ನಸ್ತಮಿತೇ ಭೀಷ್ಮೇ ಕೌರವಾಣಾಂ ಧುರಂಧರೇ|
12046023c ಜ್ಞಾನಾನ್ಯಲ್ಪೀಭವಿಷ್ಯಂತಿ ತಸ್ಮಾತ್ತ್ವಾಂ ಚೋದಯಾಮ್ಯಹಮ್॥

ಕೌರವರ ದುರಂಧರ ಆ ಭೀಷ್ಮನು ಅಸ್ತಂಗತನಾಗಲು ಸಕಲ
ಜ್ಞಾನಗಳೂ ಅವನೊಡನೆ ಅಸ್ತಮಿಸಿಬಿಡುತ್ತವೆ. ಆದುದರಿಂದ ನಿನ್ನನ್ನು
ನಾನು ಈ ರೀತಿ ಪ್ರಚೋದಿಸುತ್ತಿದ್ದೇನೆ.”

12046024a ತಚ್ಚ್ರುತ್ವಾ ವಾಸುದೇವಸ್ಯ ತಥ್ಯಂ ವಚನಮುತ್ತಮಮ್|
12046024c ಸಾಶ್ರುಕಂಠಃ ಸ ಧರ್ಮಜ್ಞೋ ಜನಾರ್ದನಮುವಾಚ ಹ॥

ವಾಸುದೇವನ ಆ ಅರ್ಥವತ್ತಾದ ಉತ್ತಮ ಮಾತನ್ನು ಕೇಳಿ,
ಕಣ್ಣೀರಿನಿಂದ ಗಂಟಲು ಕಟ್ಟಿದ ಧರ್ಮಜ್ಞ ಯುಧಿಷ್ಠಿರನು
ಜನಾರ್ದನನಿಗೆ ಹೇಳಿದನು:

12046025a ಯದ್ಭವಾನಾಹ ಭೀಷ್ಮಸ್ಯ ಪ್ರಭಾವಂ ಪ್ರತಿ ಮಾಧವ|
12046025c ತಥಾ ತನ್ನಾತ್ರ ಸಂದೇಹೋ ವಿದ್ಯತೇ ಮಮ ಮಾನದ॥

“ಮಾಧವ! ಮಾನದ! ಭೀಷ್ಮನ ಪ್ರಭಾವದ ಕುರಿತು ನೀನು ಏನು
ಹೇಳಿದೆಯೋ ಅದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ.

12046026a ಮಹಾಭಾಗ್ಯಂ ಹಿ ಭೀಷ್ಮಸ್ಯ ಪ್ರಭಾವಶ್ಚ ಮಹಾತ್ಮನಃ|
12046026c ಶ್ರುತಂ ಮಯಾ ಕಥಯತಾಂ ಬ್ರಾಹ್ಮಣಾನಾಂ ಮಹಾತ್ಮನಾಮ್॥

---

113 ಹೋತಾ-ಉದ್ಗಾತಾ-ಬ್ರಹ್ಮಾ-ಅಧ್ವರ್ಯು

114 ಬ್ರಹ್ಮಚರ್ಯ-ಗೃಹಸ್ಥ-ವಾನಪ್ರಸ್ಥ-ಸಂನ್ಯಾಸ

ಮಹಾಭಾಗ್ಯ ಮಹಾತ್ಮ ಭೀಷ್ಮನ ಪ್ರಭಾವದ ಕುರಿತು ಮಹಾತ್ಮ ಬ್ರಾಹ್ಮಣರು ಹೇಳುತ್ತಿದ್ದುದನ್ನು ನಾನು ಕೇಳಿದ್ದೇನೆ.

12046027a ಭವಾಂಶ್ಚ ಕರ್ತಾ ಲೋಕಾನಾಂ ಯದ್ಭ್ರವೀತ್ಯರಿಸೂದನ|
12046027c ತಥಾ ತದನಭಿಧ್ಯೇಯಂ ವಾಕ್ಯಂ ಯಾದವನಂದನ||

ಅರಿಸೂದನ! ಯಾದವನಂದನ! ಲೋಕಗಳ ಕರ್ತೃವಾದ ನೀನೂ ಕೂಡ ಇದನ್ನೇ ಹೇಳುತ್ತಿರುವೆಯಾದರೆ ಅದರ ಕುರಿತು ಪುನಃ ಯೋಚಿಸಬೇಕಾದುದೇ ಇಲ್ಲ!

12046028a ಯತಸ್ತ್ವನುಗ್ರಹಕೃತಾ ಬುದ್ಧಿಸ್ತೇ ಮಯಿ ಮಾಧವ|
12046028c ತ್ವಾಮಗ್ರತಃ ಪುರಸ್ಕೃತ್ಯ ಭೀಷ್ಮಂ ಪಶ್ಯಾಮಹೇ ವಯಮ್||

ಮಾಧವ! ನಿನ್ನಲ್ಲಿ ನನಗೆ ಅನುಗ್ರಹಿಸುವ ಮನಸ್ಸಿದ್ದರೆ ನಿನ್ನನ್ನು ಮುಂದೆಮಾಡಿಕೊಂಡು ಭೀಷ್ಮನನ್ನು ನೋಡಬೇಕೆಂಬ ಮನಸ್ಸಾಗುತ್ತಿದೆ.

12046029a ಆವೃತ್ತೇ ಭಗವತ್ಯರ್ಕೇ ಸ ಹಿ ಲೋಕಾನ್ಗಮಿಷ್ಯತಿ|
12046029c ತ್ವದ್ದರ್ಶನಂ ಮಹಾಬಾಹೋ ತಸ್ಮಾದರ್ಹತಿ ಕೌರವಃ||

ಭಗವಾನ್ ಸೂರ್ಯನು ಉತ್ತರಾಯಣಕ್ಕೆ ತಿರುಗಿದೊಡನೆಯೇ ಅವನು ಲೋಕಗಳಿಗೆ ಹೊರಟುಹೋಗುತ್ತಾನೆ. ಆದುದರಿಂದ ಮಹಾಬಾಹೋ! ಆ ಕೌರವನು ನಿನ್ನ ದರ್ಶನಕ್ಕೆ ಅರ್ಹನಾಗಿದ್ದಾನೆ.

12046030a ತವ ಹ್ಯಾದ್ಯಸ್ಯ ದೇವಸ್ಯ ಕ್ಷರಸ್ಯೈವಾಕ್ಷರಸ್ಯ ಚ|
12046030c ದರ್ಶನಂ ತಸ್ಯ ಲಾಭಃ ಸ್ಯಾತ್ತ್ವಂ ಹಿ ಬ್ರಹ್ಮಮಯೋ ನಿಧಿಃ||

ಇಂದು ಅವನಿಗೆ ಕ್ಷರಾಕ್ಷರ ದೇವ ನಿನ್ನ ದರ್ಶನದ ಲಾಭವಾಗಲಿ. ಏಕೆಂದರೆ ನೀನು ಬ್ರಹ್ಮಮಯನೂ ಜ್ಞಾನನಿಧಿಯೂ ಆಗಿರುವೆ!"

12046031a ಶ್ರುತ್ವೈತದ್ಧರ್ಮರಾಜಸ್ಯ ವಚನಂ ಮಧುಸೂದನಃ|
12046031c ಪಾರ್ಶ್ವಸ್ಥಂ ಸಾತ್ಯಕಿಂ ಪ್ರಾಹ ರಥೋ ಮೇ ಯುಜ್ಯತಾಮಿತಿ||

ಧರ್ಮರಾಜನ ಮಾತನ್ನು ಕೇಳಿದ ಮಧುಸೂದನನು ಪಕ್ಕದಲ್ಲಿಯೇ ನಿಂತಿದ್ದ ಸಾತ್ಯಕಿಗೆ ರಥವನ್ನು ಹೂಡಲು ಹೇಳಿದನು.

12046032a ಸಾತ್ಯಕಿಸ್ತೂಪನಿಷ್ಕ್ರಮ್ಯ ಕೇಶವಸ್ಯ ಸಮೀಪತಃ|
12046032c ದಾರುಕಂ ಪ್ರಾಹ ಕೃಷ್ಣಸ್ಯ ಯುಜ್ಯತಾಂ ರಥ ಇತ್ಯುತ||

ಸಾತ್ಯಕಿಯು ಕೇಶವನ ಸಮೀಪದಿಂದ ಹೋಗಿ ದಾರುಕನಿಗೆ ಕೃಷ್ಣನ ರಥವನ್ನು ಸಿದ್ಧಗೊಳಿಸುವಂತೆ ಹೇಳಿದನು.

12046033a ಸ ಸಾತ್ಯಕೇರಾಶು ವಚೋ ನಿಶಮ್ಯ
ರಥೋತ್ತಮಂ ಕಾಂಚನಭೂಷಿತಾಂಗಮ್|
12046033c ಮಸಾರಗಲ್ವರ್ಕಮಯೈರ್ವಿಭಂಗೈರ್
ವಿಭೂಷಿತಂ ಹೇಮಪಿನದ್ಧಚಕ್ರಮ್||
12046034a ದಿವಾಕರಾಂಶುಪ್ರಭಮಾಶುಗಾಮಿನಂ
ವಿಚಿತ್ರನಾನಾಮಣಿರತ್ನಭೂಷಿತಮ್|
12046034c ನವೋದಿತಂ ಸೂರ್ಯಮಿವ ಪ್ರತಾಪಿನಂ
ವಿಚಿತ್ರತಾರ್ಕ್ಷ್ಯಧ್ವಜಿನಂ ಪತಾಕಿನಮ್||
12046035a ಸುಗ್ರೀವಸೈನ್ಯಪ್ರಮುಖೈರ್ವರಾಶ್ವೈರ್
ಮನೋಜವೈಃ ಕಾಂಚನಭೂಷಿತಾಂಗೈಃ|
12046035c ಸುಯುಕ್ತಮಾವೇದಯದಚ್ಯುತಾಯ
ಕೃತಾಂಜಲಿರ್ದಾರುಕೋ ರಾಜಸಿಂಹ||

ರಾಜಸಿಂಹ! ಸಾತ್ಯಕಿಯ ಮಾತನ್ನು ಕೇಳಿದ ದಾರುಕನು

ಕಾಂಚನಗಳಿಂದ ಭೂಷಿತವಾದ, ಮರಕತ-ಸೂರ್ಯಕಾಂತ-
ಚಂದ್ರಕಾಂತ ಮಣಿಗಳ ಕಾಂತಿಯಿಂದ ಕೂಡಿದ್ದ, ಸುವರ್ಣದ
ಪಟ್ಟಿಗಳನ್ನು ಸುತ್ತಿದ್ದ ಚಕ್ರಗಳಿದ್ದ, ಸೂರ್ಯಕಿರಣಗಳಂತೆ
ಹೊಳೆಯುತ್ತಿದ್ದ, ನಾನಾ ವಿಚಿತ್ರ ಮಣಿರತ್ನಗಳಿಂದ ವಿಭೂಷಿತವಾಗಿದ್ದ,
ಉದಯಿಸುತ್ತಿರುವ ಸೂರ್ಯನಂತೆ ಬೆಳಗುತ್ತಿದ್ದ, ವಿಚಿತ್ರ ಗರುಡಧ್ವಜ-
ಪತಾಕೆಗಳುಳ್ಳ, ಅಂಗಾಂಗಳಲ್ಲಿ ಸುವರ್ಣಗಳಿಂದ ಅಲಂಕರಿಸಲ್ಪಟ್ಟ
ಮನೋವೇಗದ ಸುಗ್ರೀವ-ಸೈನ್ಯಪ್ರಮುಖ ಶ್ರೇಷ್ಠ ಅಶ್ವಗಳನ್ನು ಕಟ್ಟಿದ್ದ
ರಥವನ್ನು ಸಿದ್ಧಪಡಿಸಿ ಬಂದು ಕೈಮುಗಿದು ಅಚ್ಯುತನಿಗೆ
ನಿವೇದಿಸಿದನು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಮಹಾಪುರುಷಸ್ತವೇ ಷಟ್ ಚತ್ವಾರಿಂಶೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಮಹಾಪುರುಷಸ್ತವ ಎನ್ನುವ ನಲ್ವತ್ತಾರನೇ ಅಧ್ಯಾಯವು.

೪೭

ಭೀಷ್ಮಸ್ತವರಾಜಃ

ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನು ಭಗವಾನ್ ಶ್ರೀಕೃಷ್ಣನನ್ನು
ಸ್ತುತಿಸಿದುದು (1-72).

12047001 ಜನಮೇಜಯ ಉವಾಚ|
12047001a ಶರತಲ್ಪೇ ಶಯಾನಸ್ತು ಭರತಾನಾಂ ಪಿತಾಮಹಃ|

12047001c ಕಥಮುತ್ಸೃಷ್ಟವಾನ್ದೇಹಂ ಕಂ ಚ ಯೋಗಮಧಾರಯತ್‌॥

ಜನಮೇಜಯನು ಹೇಳಿದನು: "ಶರತಲ್ಪದಲ್ಲಿ ಮಲಗಿದ್ದ ಭರತರ ಪಿತಾಮಹ ಭೀಷ್ಮನು ಹೇಗೆ ದೇಹತ್ಯಾಗ ಮಾಡಿದನು ಮತ್ತು ಆಗ ಅವನು ಯಾವ ಯೋಗಧಾರಣೆ ಮಾಡಿದ್ದನು?"

12047002 ವೈಶಂಪಾಯನ ಉವಾಚ|
12047002a ಶೃಣುಷ್ವಾವಹಿತೋ ರಾಜನ್ಮಚಿರ್ಭೂತ್ವಾ ಸಮಾಹಿತಃ|
12047002c ಭೀಷ್ಮಸ್ಯ ಕುರುಶಾರ್ದೂಲ ದೇಹೋತ್ಸರ್ಗಂ ಮಹಾತ್ಮನಃ‌॥

ವೈಶಂಪಾಯನನು ಹೇಳಿದನು: "ರಾಜನ್! ಕುರುಶಾರ್ದೂಲ! ಶುಚಿಯಾಗಿ ಏಕಮನಸ್ಕನಾಗಿ ಸಾವಧಾನದಿಂದ ಮಹಾತ್ಮ ಭೀಷ್ಮನ ದೇಹತ್ಯಾಗದ ಕುರಿತು ಕೇಳು.

12047003a ನಿವೃತ್ತಮಾತ್ರೇ ತ್ವಯನ ಉತ್ತರೇ ವೈ ದಿವಾಕರೇ|
12047003c ಸಮಾವೇಶಯದಾತ್ಮಾನಮಾತ್ಮನ್ಯೇವ ಸಮಾಹಿತಃ‌॥

ದಿವಾಕರನು ಉತ್ತರಾಯಣಕ್ಕೆ ತಿರುಗಿದೊಡನೆಯೇ ಭೀಷ್ಮನು ಏಕಾಗ್ರಚಿತ್ತನಾಗಿ ತನ್ನ ಮನಸ್ಸನ್ನು ಬುದ್ಧಿಯೊಡನೆ ಮತ್ತು ಬುದ್ಧಿಯನ್ನು ಆತ್ಮನಲ್ಲಿ ಲೀನಗೊಳಿಸಿದನು.

12047004a ವಿಕೀರ್ಣಾಂಶುರಿವಾದಿತ್ಯೋ ಭೀಷ್ಮಃ ಶರಶತೈಶ್ಚಿತಃ|
12047004c ಶಿಶ್ಯೇ ಪರಮಯಾ ಲಕ್ಷ್ಮ್ಯಾ ವೃತೋ ಬ್ರಾಹ್ಮಣಸತ್ತಮೈಃ‌॥
12047005a ವ್ಯಾಸೇನ ವೇದಶ್ರವಸಾ ನಾರದೇನ ಸುರರ್ಷಿಣಾ|
12047005c ದೇವಸ್ಥಾನೇನ ವಾತ್ಸ್ಯೇನ ತಥಾಶ್ಮಕಸುಮಂತುನಾ‌॥
12047006a ಏತೈಶ್ಚಾನ್ಯೈರ್ಮುನಿಗಣೈರ್ಮಹಾಭಾಗೈರ್ಮಹಾತ್ಮಭಿಃ|

12047006c ಶ್ರದ್ಧಾದಮಪುರಸ್ಕಾರೈರ್ವ್ಯತಶ್ಚಂದ್ರ ಇವ ಗ್ರಹೈಃ॥

ನೂರಾರು ಬಾಣಗಳಿಂದ ಚುಚ್ಚಲ್ಪಟ್ಟ ಭೀಷ್ಮನು ಕಿರಣಗಳನ್ನು ಪಸರಿಸುವ ಸೂರ್ಯನಂತೆಯೂ; ವೇದಗಳನ್ನು ತಿಳಿದಿದ್ದ ವ್ಯಾಸ, ಸುರರ್ಷಿ ನಾರದ, ದೇವಸ್ಥಾನ, ವಾತ್ಸ್ಯ, ಅಶ್ಮಕ, ಸುಮಂತು ಮತ್ತು ಇನ್ನೂ ಅನೇಕ ಮಹಾತ್ಮ ಮಹಾಭಾಗ ಮುನಿಗಣಗಳು, ಶ್ರದ್ಧೆ-ಶಮೋಪೇತರಾದ ಬ್ರಾಹ್ಮಣಸತ್ತಮರಿಂದ ಸುತ್ತುವರೆಯಲ್ಪಟ್ಟು, ಗ್ರಹಗಳಿಂದ ಸುತ್ತುವರೆಯಲ್ಪಟ್ಟ ಚಂದ್ರನಂತೆ ಅಪಾರ ಕಾಂತಿಯಿಂದ ಪ್ರಕಾಶಿಸುತ್ತಿದ್ದನು.

12047007a ಭೀಷ್ಮಸ್ತು ಪುರುಷವ್ಯಾಘ್ರಃ ಕರ್ಮಣಾ ಮನಸಾ ಗಿರಾ|
12047007c ಶರತಲ್ಪಗತಃ ಕೃಷ್ಣಂ ಪ್ರದಧ್ಯೌ ಪ್ರಾಂಜಲಿಃ ಸ್ಥಿತಃ॥

ಶರತಲ್ಪದಲ್ಲಿ ಮಲಗಿದ್ದ ಪುರುಷವ್ಯಾಘ್ರ ಭೀಷ್ಮನಾದರೋ ಕೈಮುಗಿದು ಕರ್ಮ-ಮನಸ್ಸು-ವಾಣಿಗಳ ಮೂಲಕ ಕೃಷ್ಣನನ್ನು ಧ್ಯಾನಿಸತೊಡಗಿದನು.

12047008a ಸ್ವರೇಣ ಪುಷ್ಟನಾದೇನ ತುಷ್ಟಾವ ಮಧುಸೂದನಮ್|
12047008c ಯೋಗೇಶ್ವರಂ ಪದ್ಮನಾಭಂ ವಿಷ್ಣುಂ ಜಿಷ್ಣುಂ ಜಗತ್ಪತಿಮ್॥

ಅವನು ಪುಷ್ಟನಾದದ ಸ್ವರದಲ್ಲಿ ಮಧುಸೂದನ, ಯೋಗೇಶ್ವರ, ಪದ್ಮನಾಭ, ಜಿಷ್ಣು, ಜಗತ್ಪತಿ ವಿಷ್ಣುವನ್ನು ಸ್ತುತಿಸತೊಡಗಿದನು.

12047009a ಕೃತಾಂಜಲಿಃ ಶುಚಿರ್ಭೂತ್ವಾ ವಾಗ್ವಿದಾಂ ಪ್ರವರಃ ಪ್ರಭುಮ್|
12047009c ಭೀಷ್ಮಃ ಪರಮಧರ್ಮಾತ್ಮಾ ವಾಸುದೇವಮಥಾಸ್ತುವತ್॥

ಶುಚಿಯಾಗಿ ಆ ವಾಗ್ವಿದರಲ್ಲಿ ಶ್ರೇಷ್ಠ ಪರಮಧರ್ಮಾತ್ಮ ಭೀಷ್ಮನು ಪ್ರಭು ವಾಸುದೇವನನ್ನು ಈ ರೀತಿ ಸ್ತುತಿಸಿದನು:

12047010a ಆರಿರಾಧಯಿಷುಃ ಕೃಷ್ಣಂ ವಾಚಂ ಜಿಗಮಿಷಾಮಿ ಯಾಮ್|
12047010c ತಯಾ ವ್ಯಾಸಸಮಾಸಿನ್ಯಾ ಪ್ರೀಯತಾಂ ಪುರುಷೋತ್ತಮಃ||

"ವಿವರವಾದ ಮತ್ತು ಸಂಕ್ಷೇಪವಾದ ಯಾವ ವಾಣಿಯಿಂದ ಕೃಷ್ಣನನ್ನು ಆರಾಧಿಸುವೆನೋ ಅದರಿಂದಲೇ ಆ ಪುರುಷೋತ್ತಮನು ಸುಪ್ರೀತನಾಗಲಿ!

12047011a ಶುಚಿಃ ಶುಚಿಷದಂ[115] ಹಂಸಂ ತತ್ಪರಃ ಪರಮೇಷ್ಠಿನಮ್|
12047011c ಯುಕ್ತ್ವಾ ಸರ್ವಾತ್ಮನಾತ್ಮಾನಂ ತಂ ಪ್ರಪದ್ಯೇ ಪ್ರಜಾಪತಿಮ್||

ಶುಚಿಯಾಗಿ ತತ್ಪರನಾಗಿ ನನ್ನ ಸರ್ವವನ್ನೂ ಆತ್ಮನಲ್ಲಿ ಯೋಜಿಸಿ ಆ ಶುಚಿಷದ, ಹಂಸ, ಪರಮೇಷ್ಠಿ, ಪ್ರಜಾಪತಿಯನ್ನು ಶರಣುಹೋಗುತ್ತೇನೆ.

[116]12047012a ಯಸ್ಮಿನ್ವಿಶ್ವಾನಿ ಭೂತಾನಿ ತಿಷ್ಠಂತಿ ಚ ವಿಶಂತಿ ಚ|

---

[115] ಶುಚಿಂ ಶುಚಿಪದಂ ಎನ್ನುವ ಪಾಠಾಂತರವಿದೆ (ಭಾರತ ದರ್ಶನ)

[116] ಭಾರತದರ್ಶನದಲ್ಲಿ ಇದರ ಮೊದಲು ಈ ಕೆಳಗಿನ ಮೂರು ಶ್ಲೋಕಗಳು ಸೇರಿಕೊಂಡಿವೆ: (೧) ಅನಾದ್ಯಂತಂ ಪರಂ ಬ್ರಹ್ಮ ನ ದೇವಾನರ್ಷಯೋ ವಿದುಃ| ಏಕೋ ಯಂ ವೇದ ಭಗವಾನ್ ಧಾತಾ ನಾರಾಯಣೋ ಹರಿಃ|| ಅರ್ಥಾತ್: ಆದಿ-ಅಂತ್ಯಗಳಿಲ್ಲದಿರುವ, ಪ್ರರಬ್ರಹ್ಮ ಸ್ವರೂಪನನ್ನು ದೇವತೆಗಳಾಗಲೀ ಋಷಿಗಳಾಗಲಿ ತಿಳಿದುಕೊಂಡಿಲ್ಲ. ಎಲ್ಲರ ಧಾರಣೆ-ಪೋಷಣೆಗಳನ್ನೂ ಮಾಡುವ ನಾರಾಯಣ ಅಥವಾ ಹರಿಯು ಏಕಮಾತ್ರನು. (೨) ನಾರಾಣಾದೃಷಿಗಣಾಸ್ತಥಾ ಸಿದ್ಧಮಹೋರಗಾಃ| ದೇವಾ

12047012c ಗುಣಭೂತಾನಿ ಭೂತೇಶೇ ಸೂತ್ರೇ ಮಣಿಗಣಾ ಇವ||
12047013a ಯಸ್ಮಿನ್ನಿತ್ಯೇ ತತೇ ತಂತೌ ದೃಢೇ ಸ್ರಗಿವ ತಿಷ್ಠತಿ|
12047013c ಸದಸದ್ಧಿತಂ ವಿಶ್ವಂ ವಿಶ್ವಾಂಗೇ ವಿಶ್ವಕರ್ಮಣಿ||
12047014a ಹರಿಂ ಸಹಸ್ರಶಿರಸಂ ಸಹಸ್ರಚರಣೇಕ್ಷಣಮ್|
12047014c ಪ್ರಾಹುರ್ನಾರಾಯಣಂ ದೇವಂ ಯಂ ವಿಶ್ವಸ್ಯ ಪರಾಯಣಮ್||
12047015a ಅಣೀಯಸಾಮಣೀಯಾಂಸಂ ಸ್ಥವಿಷ್ಠಂ ಚ ಸ್ಥವೀಯಸಾಮ್|
12047015c ಗರೀಯಸಾಂ ಗರಿಷ್ಠಂ ಚ ಶ್ರೇಷ್ಠಂ ಚ ಶ್ರೇಯಸಾಮಪಿ||
12047016a ಯಂ ವಾಕೇಷ್ವನುವಾಕೇಷು ನಿಷತ್ಸೂಪನಿಷತ್ಸು ಚ|
12047016c ಗೃಣಂತಿ ಸತ್ಯಕರ್ಮಾಣಂ ಸತ್ಯಂ ಸತ್ಯೇಷು ಸಾಮಸು||
12047017a ಚತುರ್ಭಿಶ್ಚತುರಾತ್ಮಾನಂ ಸತ್ತ್ವಸ್ಥಂ ಸಾತ್ವತಾಂ ಪತಿಮ್|
12047017c ಯಂ ದಿವ್ಯೈರ್ದೇವಮರ್ಚಂತಿ ಗುಹ್ಯೈಃ ಪರಮನಾಮಭಿಃ||
[117]12047018a ಯಂ ದೇವಂ ದೇವಕೀ ದೇವೀ ವಸುದೇವಾದಜೀಜನತ್|

ದೇವರ್ಷಯಶ್ಚೈವ ಯಂ ವಿದುಃ ಪರಮವ್ಯಯಂ|| ಅರ್ಥಾತ್: ಆ ನಾರಾಯಣನಿಂದಲೇ ಋಷಿಗಣಗಳು, ಸಿದ್ಧರೂ, ಮಹಾಸರ್ಪಗಳೂ, ದೇವತೆಗಳೂ, ಮತ್ತು ದೇವರ್ಷಿಗಳೂ ಆವಿರ್ಭವಿಸಿರುತ್ತಾರೆ ಮತ್ತು ಅವನನ್ನು ಪರಮ ಅವ್ಯಯನೆಂದು ತಿಳಿದುಕೊಂಡಿರುತ್ತಾರೆ. (೩)

ದೇವದಾನವಗಂಧರ್ವಾ ಯಕ್ಷರಾಕ್ಷಸಪನ್ನಗಾಃ| ಯಂ ನ ಜಾನಂತಿ ಕೋ ಹ್ಯೇಷ ಕುತೋ ವಾ ಭಗವಾನಿತಿ|| ಅರ್ಥಾತ್: ದೇವ-ದಾನವ ಗಂಧರ್ವರಾಗಲೀ, ಯಕ್ಷ-ರಾಕ್ಷಸ-ಪನ್ನಗಗಳಾಗಲೀ ಈ ಭಗವಂತನು ಯಾರು ಮತ್ತು ಎಲ್ಲಿಂದ ಬಂದನು ಎನ್ನುವದನ್ನು ಅರಿತಿಲ್ಲ.

[117] ಭಾರತದರ್ಶನದಲ್ಲಿ ಈ ಶ್ಲೋಕದ ಮೊದಲು ಇನ್ನೊಂದು ಶ್ಲೋಕವಿದೆ: ಯಸ್ಮಿನ್ನಿತ್ಯಂ ತಪಸ್ತಪ್ತಂ ಯದಂಗೇಷ್ವನುತಿಷ್ಠತಿ| ಸರ್ವಾತ್ಮಾ ಸರ್ವವಿತ್ಸರ್ವಃ ಸರ್ವಜ್ಞಃ ಸರ್ವಭಾವನಃ|| ಅರ್ಥತ್: ಯಾರ ಅನುಗ್ರಹಕ್ಕಾಗಿ ನಿರಂತರ

12047018c ಭೌಮಸ್ಯ ಬ್ರಹ್ಮಣೋ ಗುಪ್ತ್ಯೈ ದೀಪ್ತಮಗ್ನಿಮಿವಾರಣಿಃ॥
12047019a ಯಮನನ್ಯೋ ವ್ಯಪೇತಾಶೀರಾತ್ಮಾನಂ ವೀತಕಲ್ಮಷಮ್।
12047019c ಇಷ್ಟ್ವಾನಂತ್ಯಾಯ ಗೋವಿಂದಂ ಪಶ್ಯತ್ಯಾತ್ಮನ್ಯವಸ್ಥಿತಮ್॥
12047020a ಪುರಾಣೇ ಪುರುಷಃ ಪ್ರೋಕ್ತೋ ಬ್ರಹ್ಮಾ ಪ್ರೋಕ್ತೋ ಯುಗಾದಿಷು।
12047020c ಕ್ಷಯೇ ಸಂಕರ್ಷಣಃ ಪ್ರೋಕ್ತಸ್ತಮುಪಾಸ್ಯಮುಪಾಸ್ಮಹೇ॥

ದಾರದಲ್ಲಿ ಪೋಣಿಸಲ್ಪಟ್ಟ ಮಣಿಗಳಂತೆ ವಿಶ್ವ-ಭೂತಗಳು ಯಾರಲ್ಲಿ ನೆಲೆಸಿ ಸೇರಿಕೊಂಡಿವೆಯೋ ಅವನನ್ನು; ಗಟ್ಟಿಯಾದ ದಾರದಿಂದ ಕಟ್ಟಲ್ಪಟ್ಟ ಹೂವಿನ ಮಾಲೆಯಂತೆ ಯಾರಲ್ಲಿ ಈ ವಿಶ್ವವೇ ದೃಢವಾಗಿ ನಿಂತಿರುವುದೋ ಆ ವಿಶ್ವಾಂಗ ವಿಶ್ವಕರ್ಮಿಯನ್ನು; ವಿಶ್ವಪರಾಯಣನೂ, ಸಹಸ್ರಶಿರಸ್ಸುಗಳುಳ್ಳವನೂ, ಸಹಸ್ರಚರಣಗಳುಳ್ಳವನೂ, ಸಹಸ್ರಾಕ್ಷನೂ, ಮತ್ತು ನಾರಾಯಣನೆಂದು ಕರೆಯಲ್ಪಡುವ ದೇವನನ್ನೂ; ಸೂಕ್ಷ್ಮಗಳಲ್ಲಿ ಸೂಕ್ಷ್ಮನೂ, ಸ್ಥೂಲಗಳಲ್ಲಿ ಸ್ಥೂಲನೂ, ಭಾರವಾದವುಗಳಿಗಿಂತ ಭಾರವಾದವನೂ, ಶ್ರೇಷ್ಠವಾದವುಗಳಲ್ಲಿ ಶ್ರೇಷ್ಠನೂ ಆಗಿರುವವನನ್ನು; ವಾಕ್[118], ಅನುವಾಕ್[119], ನಿಷತ್[120], ಉಪನಿಷತ್ತು ಮತ್ತು ಸತ್ಯ ಸಾಮ[121]ಗಳಲ್ಲಿ ಯಾರನ್ನು ಸತ್ಯಕರ್ಮನೆಂದು ವರ್ಣಿಸುತ್ತಾರೋ

ತಪಸ್ಸನ್ನಾಚರಿಸುವರೋ, ಯಾರು ಎಲ್ಲರ ಹೃದಯಗಳಲ್ಲಿ ವಿರಾಜಮಾನನಾಗಿರುವನೋ, ಯಾರು ಸಮಸ್ತರ ಆತ್ಮಸ್ವರೂಪನೋ, ಅಂತಹ ಸರ್ವಜ್ಞ, ಸರ್ವಭಾವನ, ಸರ್ವನೂ ಆಗಿರುವವನನ್ನು ಶರಣುಹೋಗುತ್ತೇನೆ.

118 ಕರ್ಮಾಂಗಗಳಿಗೆ ಸಂಬಂಧಿಸಿದ ವೇದ ಮಂತ್ರಗಳು

119 ಮಂತ್ರಾರ್ಥಗಳನ್ನು ವಿವರಿಸುವ ಬ್ರಾಹ್ಮಣವೇ ಇತ್ಯಾದಿಗಳು

120 ದೇವತಾದಿಗಳನ್ನು ಸ್ತುತಿಸುವ ಮಂತ್ರಗಳು

121 ಜ್ಯೇಷ್ಠ ಸಾಮ

ಅವನನ್ನು; ನಾಲ್ಕರಿಂದಾದ ಚತುರಾತ್ಮನನ್ನು[122], ಸತ್ಯದಲ್ಲಿ ನೆಲೆಸಿರುವ
ಸಾತ್ವತರ ಒಡೆಯನನ್ನೂ, ದಿವ್ಯವೂ ಗುಹ್ಯವೂ ಆದ ಪರಮ
ನಾಮಗಳಿಂದ ಯಾರನ್ನು ಅರ್ಚಿಸುತ್ತಾರೋ ಆ ದೇವನನ್ನು;
ಭೂಮಿಯಲ್ಲಿ ಬ್ರಹ್ಮಜ್ಞಾನವನ್ನ ರಕ್ಷಿಸಲು ಅರಣಿಯ ಮಂಥನದಿಂದ
ಪ್ರಜ್ವಲಿಸವ ಅಗ್ನಿಯನ್ನು ಹುಟ್ಟಿಸುವಂತೆ ದೇವಕೀ ದೇವೀ ಮತ್ತು
ವಸುದೇವರು ಹುಟ್ಟಿಸಿದ ದೇವನನ್ನು; ಅನಂತ ಮೋಕ್ಷವನ್ನು ಬಯಸಿ,
ಕಾಮನೆಗಳನ್ನು ತ್ಯಜಿಸಿ, ಅನನ್ಯಭಾವದಿಂದ ಆತ್ಮನಲ್ಲಿ
ವ್ಯವಸ್ಥಿತನಾಗಿರವ ಯಾರನ್ನು ಕಾಣುತ್ತಾರೋ ಆ ಕಲ್ಮಷರಹಿತ
ಗೋವಿಂದನನ್ನು; ಪುರಾಣಗಳಲ್ಲಿ ಪುರುಷನೆಂದೂ, ಯುಗಾದಿಗಳಲ್ಲಿ
ಬ್ರಹ್ಮನೆಂದೂ, ಲಯಕಾಲಗಳಲ್ಲಿ ಸಂಕರ್ಷಣನೆಂದೂ ಕರೆಯಲ್ಪಡುವ
ಆದ ಆ ಉಪಾಸ್ಯ ಕೃಷ್ಣನನ್ನು ಉಪಾಸಿಸುತ್ತೇನೆ.

12047021a ಅತಿವಾಯ್ವಿಂದ್ರಕರ್ಮಾಣಮತಿಸೂರ್ಯಾಗ್ನಿತೇಜಸಮ್|
12047021c ಅತಿಬುದ್ಧೀಂದ್ರಿಯಾತ್ಮಾನಂ ತಂ ಪ್ರಪದ್ಯೇ ಪ್ರಜಾಪತಿಮ್||

ಯಾರು ಇಂದ್ರ-ವಾಯುಗಳನ್ನೂ ಮೀರಿಸಿದ ಕಾರ್ಯಗಳನ್ನು
ಮಾಡುವನೋ, ಯಾರ ತೇಜಸ್ಸು ಸೂರ್ಯನ ತೇಜಸ್ಸಿಗಿಂತಲೂ
ಅಧಿಕವಾಗಿರುವುದೋ, ಇಂದ್ರಿಯ-ಮನಸ್ಸು-ಬುದ್ಧಿಗಳಿಗೂ ಯಾರು
ಅತೀತನಾಗಿರುವನೋ ಆ ಪ್ರಜಾಪತಿಗೆ ಶರಣು ಹೋಗುತ್ತೇನೆ.

12047022a ಯಂ ವೈ ವಿಶ್ವಸ್ಯ ಕರ್ತಾರಂ ಜಗತಸ್ತಸ್ಥುಷಾಂ ಪತಿಮ್|

---

[122] ಪರಮಾತ್ಮ-ಜೀವ-ಮನಸ್ಸು-ಅಹಂಕಾರಗಳೆಂಬ ನಾಲ್ಕು ತತ್ತ್ವಗಳಿಂದ
ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧರೆಂಬ ನಾಲ್ಕು ರೂಪಗಳನ್ನು
ತಾಳಿರುವವನು

12047022c ವದಂತಿ ಜಗತೋಽಧ್ಯಕ್ಷಮಕ್ಷರಂ ಪರಮಂ ಪದಮ್‌॥

ಯಾರನ್ನು ವಿಶ್ವಕರ್ತಾರನೆಂದೂ, ಜಗತ್ತಿನಲ್ಲಿರುವುಗಳಿಗೆ
ಒಡೆಯನೆಂದೂ, ಜಗತ್ತಿನ ಅಧ್ಯಕ್ಷನೆಂದೂ ಕರೆಯುತ್ತಾರೋ ಆ ಅಕ್ಷರ
ಪರಮಪದನಿಗೆ ನಮಸ್ಕಾರಗಳು.

12047023a ಹಿರಣ್ಮ್ಯವರ್ಣಂ ಯಂ ಗರ್ಭಮದಿತಿರ್ದೈತ್ಯನಾಶನಮ್‌|
12047023c ಏಕಂ ದ್ವಾದಶಧಾ ಜಜ್ಞೇ ತಸ್ಮೈ ಸೂರ್ಯಾತ್ಮನೇ ನಮಃ‌॥

ಅದಿತಿಯ ಗರ್ಭದಲ್ಲಿ ಉದಿಸಿ ದೈತ್ಯರನ್ನು ನಾಶಪಡಿಸಿದ,
ಒಬ್ಬನಾಗಿದ್ದರೂ ಹನ್ನೆರಡಾಗಿ ಜನಿಸಿದ, ಚಿನ್ನದ ಕಾಂತಿಯನ್ನು
ಹೊಂದಿರುವ ಸೂರ್ಯಾತ್ಮನಿಗೆ ನಮಸ್ಕರಿಸುತ್ತೇನೆ.

12047024a ಶುಕ್ಲೇ ದೇವಾನ್ಪಿತೄನ್ಕೃಷ್ಣೇ ತರ್ಪಯತ್ಯಮೃತೇನ ಯಃ|
12047024c ಯಶ್ಚ ರಾಜಾ ದ್ವಿಜಾತೀನಾಂ ತಸ್ಮೈ ಸೋಮಾತ್ಮನೇ ನಮಃ‌॥

ಶುಕ್ಲಪಕ್ಷಗಳಲ್ಲಿ ದೇವತೆಗಳನ್ನೂ ಕೃಷ್ಣಪಕ್ಷಗಳಲ್ಲಿ ಪಿತೃಗಳನ್ನೂ
ಅಮೃತದಿಂದ ತೃಪ್ತಿಪಡಿಸುವ, ದ್ವಿಜಾತಿಯವರ ರಾಜ
ಸೋಮಾತ್ಮನಿಗೆ ನಮಸ್ಕರಿಸುತ್ತೇನೆ.

12047025a ಮಹತಸ್ತಮಸಃ ಪಾರೇ ಪುರುಷಂ ಜ್ವಲನದ್ಯುತಿಮ್‌|
12047025c ಯಂ ಜ್ಞಾತ್ವಾ ಮೃತ್ಯುಮತ್ಯೇತಿ ತಸ್ಮೈ ಜ್ಞೇಯಾತ್ಮನೇ ನಮಃ‌॥

ಮಹಾ ತಪಸ್ಸಿನ ಆಚೆ ಬೆಳಕಿನಿಂದ ಪ್ರಜ್ವಲಿಸುತ್ತಿರುವ ಯಾವ
ಪುರುಷನನ್ನು ತಿಳಿದು ಮೃತ್ಯುವನ್ನು ಅತಿಕ್ರಮಿಸಬಹುದೋ ಆ
ಜ್ಞೇಯಾತ್ಮನಿಗೆ ನಮಸ್ಕರಿಸುತ್ತೇನೆ.

12047026a ಯಂ ಬೃಹಂತಂ ಬೃಹತ್ಯುಕ್ಥೇ ಯಮಗ್ನೌ ಯಂ ಮಹಾಧ್ವರೇ|

12047026c ಯಂ ವಿಪ್ರಸಂಘಾ ಗಾಯಂತಿ ತಸ್ಮೈ ವೇದಾತ್ಮನೇ ನಮಃ||

ಮಹಾ ಉಕ್ಥಯಜ್ಞದಲ್ಲಿ ಬೃಹಂತನೆಂದೂ, ಮಹಾಧ್ವರದಲ್ಲಿ ಅಗ್ನಿಯೆಂದೂ ಯಾರನ್ನು ವಿಪ್ರಸಂಘಗಳು ಹಾಡುತ್ತಾರೋ ಆ ವೇದಾತ್ಮನಿಗೆ ನಮಸ್ಕರಿಸುತ್ತೇನೆ.

12047027a ಋಗ್ಯಜುಃಸಾಮಧಾಮಾನಂ ದಶಾರ್ಧಹವಿರಾಕೃತಿಮ್|
12047027c ಯಂ ಸಪ್ತತಂತುಂ ತನ್ವಂತಿ ತಸ್ಮೈ ಯಜ್ಞಾತ್ಮನೇ ನಮಃ||

ಋಗ್ಯಜುಃಸಾಮಗಳನ್ನೇ ಆಶ್ರಯಿಸಿ, ಐದು ವಿಧದ ಹವಿಸ್ಸು[123]ಗಳನ್ನು ಹೊಂದಿರುವ, ಗಾಯತ್ರಿಯೇ ಮೊದಲಾದ ಐದು ಛಂದಸ್ಸುಗಳೇ ತಂತುಗಳಾಗಿರುವ ಯಜ್ಞವನ್ನು ಯಾರಕುರಿತು ಮಾಡುತ್ತಾರೋ ಆ ಯಜ್ಞಾತ್ಮನಿಗೆ ನಮಸ್ಕರಿಸುತ್ತೇನೆ.

[124]12047028a ಯಃ ಸುಪರ್ಣೋ ಯಜುರ್ನಾಮ ಚಂದೋಗಾತ್ರಸ್ತ್ರಿವೃಚ್ಚಿರಾಃ|
12047028c ರಥಂತರಬೃಹತ್ಯಕ್ಷಸ್ತಸ್ಮೈ ಸ್ತೋತ್ರಾತ್ಮನೇ ನಮಃ||

---

123 ಧಾನಾಕರಂಭ-ಪರಿವಾಪ-ಪುರೋಡಾಶ-ಪಯಸ್ಯ ಇವು ಐದು ವಿಧದ ಹವಿಸ್ಸುಗಳು.

124 ಇದಕ್ಕೆ ಮೊದಲು ಭಾರತ ದರ್ಶನದಲ್ಲಿ ಈ ಶ್ಲೋಕವಿದೆ: ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ| ಹೂಯತೇ ಚ ಪುನರ್ದ್ವಾಭ್ಯಾಂ ತಸ್ಮೈ ಹೋಮಾತ್ಮನೇ ನಮಃ|| ಅರ್ಥಾತ್: ಆಶ್ರಾವಯ ಎಂಬ ನಾಲ್ಕು ಅಕ್ಷರಗಳು, ಅಸ್ತುಶ್ರೌಷಟ್ ಎಂಬ ನಾಲ್ಕು ಅಕ್ಷರಗಳು, ಯಜ ಎಂಬ ಎರಡಕ್ಷರಗಳು, ಯೇ ಯಜಾಮಹೇ ಎಂಬ ಐದು ಅಕ್ಷರಗಳು, ವಷಟ್ ಎಂಬ ಎರಡಕ್ಷರಗಳು – ಒಟ್ಟು ಹದಿನೇಳು ಅಕ್ಷರಗಳ ಮಂತ್ರದಿಂದ ಹೋಮಮಾಡಲ್ಪಡುವ ಹೋಮಾತ್ಮನಿಗೆ ನಮಸ್ಕರಿಸತ್ತೇನ.

ಯಜುಸ್ಸೆಂಬ ಹೆಸರನ್ನೂ, ಛಂಧಸ್ಸುಗಳೆಂಬ ಅಂಗಾಂಗಗಳನ್ನೂ, ಋಗ್ಯಜುಸ್ಸಾಮಾತ್ಮಿಕ ಯಜ್ಞವೆಂಬ ಶಿರಸ್ಸನ್ನೂ, ರಥಂತರ ಮತ್ತು ಬೃಹತ್ ಗಳನ್ನು ಪ್ರೀತಿವಾಕ್ಯಗಳನ್ನೂ ಹೊಂದಿರುವ ಸುಪರ್ಣ ಎನ್ನುವ ಸ್ತೋತ್ರಾತ್ಮನಿಗೆ ನಮಸ್ಕರಿಸುತ್ತೇನೆ.

12047029a ಯಃ ಸಹಸ್ರಸವೇ ಸತ್ರೇ ಜಜ್ಞೇ ವಿಶ್ವಸೃಜಾಮೃಷಿಃ|
12047029c ಹಿರಣ್ಯವರ್ಣಃ ಶಕುನಿಸ್ತಸ್ಮೈ ಹಂಸಾತ್ಮನೇ ನಮಃ||

ಪ್ರಜಾಪತಿಗಳ ಸಹಸ್ರವರ್ಷಪರ್ಯಂತದ ಯಜ್ಞದಲ್ಲಿ ಸುವರ್ಣಮಯ ರೆಕ್ಕೆಗಳ ಪಕ್ಷಿಯ ರೂಪವನ್ನು ಧರಿಸಿ ಪ್ರಕಟವಾದ ಆ ಋಷಿ ಹಂಸಾತ್ಮನಿಗೆ ನಮಸ್ಕರಿಸುತ್ತೇನೆ.

12047030a ಪದಾಂಗಂ ಸಂಧಿಪರ್ವಾಣಂ ಸ್ವರವ್ಯಂಜನಲಕ್ಷಣಮ್|
12047030c ಯಮಾಹುರಕ್ಷರಂ ನಿತ್ಯಂ ತಸ್ಮೈ ವಾಗಾತ್ಮನೇ ನಮಃ||

ಶ್ಲೋಕಪಾದಗಳ ಸಮೂಹಗಳೇ ಅವಯವಗಳಾಗಿರುವ, ಪದಗಳ ಸಂಧಿಗಳೇ ಗಿಣ್ಣುಗಳಾಗಿರುವ, ಸ್ವರಾಕ್ಷರ-ವ್ಯಂಜನಗಳೇ ಅಲಂಕಾರಪ್ರಾಯವಾಗಿರುವ ದಿವ್ಯಾಕ್ಷರ ಎಂಬ ಹೆಸರಿನಿಂದ ಕರೆಯಲ್ಪಡುವ ವಾಗಾತ್ಮನಿಗೆ ನಮಸ್ಕರಿಸುತ್ತೇನೆ.

[125]12047031a ಯಶ್ಚಿನೋತಿ ಸತಾಂ ಸೇತುಮೃತೇನಾಮೃತಯೋನಿನಾ|

---

[125] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಎರಡು ಶ್ಲೋಕಗಳಿವೆ: (೧) ಯಜ್ಞಾಂಗೋ ಯೋ ವರಾಹೋ ವೈ ಭೂತ್ವಾ ಗಾಮುಜ್ಜಹಾರ ಹ| ಲೋಕತ್ರಯಹಿತಾರ್ಥಾಯ ತಸ್ಮೈ ವೀರಾತ್ಮನೇ ನಮಃ|| ಅರ್ಥಾತ್: ಯಾರು ಮೂರುಲೋಕಗಳ ಹಿತಾರ್ಥವಾಗಿ ಯಜ್ಞಮಯ ವರಾಹರೂಪವನ್ನು ಧರಿಸಿ ಪೃಥ್ವಿಯನ್ನು ರಸಾತಲದಿಂದ ಮೇಲಕ್ಕೆತ್ತಿದನೋ ಆ ವೀರ್ಯಾತ್ಮನಿಗೆ

12047031c ಧರ್ಮಾರ್ಥವ್ಯವಹಾರಾಂಗ್ಯೈಸ್ತಸ್ಮೈ ಸತ್ಯಾತ್ಮನೇ ನಮಃ||

ಧರ್ಮಾರ್ಥವ್ಯವಹಾರಗಳೆಂಬ ಅಂಗಗಳಿಂದಲೂ, ಅಮೃತಯೋನಿ ಸತ್ಯದಿಂದಲೂ ಸತ್ಪುರುಷರು ಅಮರತ್ವವನ್ನು ಹೊಂದಲು ಸೇತುವೆಯನ್ನು ಕಲ್ಪಿಸಿಕೊಡುವ ಸತ್ಯಾತ್ಮನಿಗೆ ನಮಸ್ಕರಿಸುತ್ತೇನೆ.

12047032a ಯಂ ಪೃಥಗ್ಧರ್ಮಚರಣಾಃ ಪೃಥಗ್ಧರ್ಮಫಲೈಷಿಣಃ|
12047032c ಪೃಥಗ್ಧರ್ಮೈಃ ಸಮರ್ಚಂತಿ ತಸ್ಮೈ ಧರ್ಮಾತ್ಮನೇ ನಮಃ||

ಪ್ರತ್ಯೇಕ ಧರ್ಮಾಚರಣೆಗಳುಳ್ಳವರು, ಪ್ರತ್ಯೇಕ ಧರ್ಮಗಳ ಫಲವನ್ನು ಅಪೇಕ್ಷಿಸುವವರು ಯಾರನ್ನು ಪ್ರತ್ಯೇಕ ಧರ್ಮಗಳಿಂದ ಅರ್ಚಿಸುತ್ತಾರೋ ಆ ಧರ್ಮಾತ್ಮನಿಗೆ ನಮಸ್ಕರಿಸುತ್ತೇನೆ.

[126]12047033a ಯಂ ತಂ ವ್ಯಕ್ತಸ್ಥಮವ್ಯಕ್ತಂ ವಿಚಿನ್ವಂತಿ ಮಹರ್ಷಯಃ|
12047033c ಕ್ಷೇತ್ರೇ ಕ್ಷೇತ್ರಜ್ಞಮಾಸೀನಂ ತಸ್ಮೈ ಕ್ಷೇತ್ರಾತ್ಮನೇ ನಮಃ||

ನಮಸ್ಕರಿಸುತ್ತೇನೆ. (೨) ಯಃ ಶೇತೇ ಯಾಗಮಾಸ್ಥಾಯ ಪರ್ಯಂಕೇ ನಾಗಭೂಷಿತೇ| ಫಣಾಸಹಸ್ರರಚಿತೇ ತಸ್ಮೈ ನಿದ್ರಾತ್ಮನೇ ನಮಃ|| ಅರ್ಥಾತ್: ಯಾರು ಯೋಗಮಾಯೆಯನ್ನಾಶ್ರಯಿಸಿ ಶೇಷನಾಗನ ಸಾವಿರ ಹೆಡೆಗಳಿಂದ ರಚಿತವಾದ ದಿವ್ಯಮಂಚದ ಮೇಲೆ ಪವಡಿಸಿರುವನೋ ಆ ನಿದ್ರಾತ್ಮನಿಗೆ ನಮಸ್ಕರಿಸುತ್ತೇನೆ.

[126] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕವಿದೆ: ಯತಃ ಸರ್ವೇ ಪ್ರಸೂಯಂತೇ ಹ್ಯನಂಗಾತ್ಮಾಂಗದೇಹಿನಃ| ಉನ್ಮಾದಃ ಸರ್ವಭೂತಾನಾಂ ತಸ್ಮೈ ಕಾಮಾತ್ಮನೇ ನಮಃ|| ಅರ್ಥಾತ್: ಯಾವ ಅನಂಗದೇಹಿಯಿಂದ ಎಲ್ಲರೂ ಸಂತಾನವನ್ನು ಪಡೆಯುತ್ತಾರೋ ಆ ಸರ್ವಪ್ರಾಣಿಗಳನ್ನೂ ಉನ್ಮತ್ತರನ್ನಾಗಿಸುವ ಕಾಮಾತ್ಮನಿಗೆ ನಮಸ್ಕರಿಸುತ್ತೇನೆ.

ವ್ಯಕ್ತವಾದವುಗಳಲ್ಲಿ ಅವ್ಯಕ್ತನಾಗಿರುವ ಅಥವಾ ಬುದ್ಧಿಯಲ್ಲಿರುವ ಯಾವ ಕ್ಷೇತ್ರಜ್ಞನನ್ನು ಮಹರ್ಷಿಗಳು ಹುಡುಕುತ್ತಾರೆಯೋ ಆ ಕ್ಷೇತ್ರಾತ್ಮನಿಗೆ ನಮಸ್ಕರಿಸುತ್ತೇನೆ.

12047034a ಯಂ ದೃಗಾತ್ಮಾನಮಾತ್ಮಸ್ಥಂ[127] ವೃತಂ ಷೋಡಶಭಿರ್ಗುಣೈಃ|
12047034c ಪ್ರಾಹುಃ ಸಪ್ತದಶಂ ಸಾಂಖ್ಯಾಸ್ತಸ್ಮೈ ಸಾಂಖ್ಯಾತ್ಮನೇ ನಮಃ||

ಹದಿನಾರು ಗುಣ[128]ಗಳಿಂದ ಆವೃತನಾಗಿರುವ ಹದಿನೇಳನೆಯದಾಗಿ ಆತ್ಮಾ ಎಂದು ಸಾಂಖ್ಯಿರು ಕರೆಯುವ ಆ ಆತ್ಮಸ್ಥ ಸಾಂಖ್ಯಾತ್ಮನಿಗೆ ನಮಸ್ಕರಿಸುತ್ತೇನೆ.

12047035a ಯಂ ವಿನಿದ್ರಾ ಜಿತಶ್ವಾಸಾಃ ಸತ್ತ್ವಸ್ಥಾಃ ಸಂಯತೇಂದ್ರಿಯಾಃ|
12047035c ಜ್ಯೋತಿಃ ಪಶ್ಯಂತಿ ಯುಂಜಾನಾಸ್ತಸ್ಮೈ ಯೋಗಾತ್ಮನೇ ನಮಃ||

ನಿದ್ರೆಯಿಲ್ಲದೇ ಶ್ವಾಸಗಳನ್ನು ನಿಯಂತ್ರಿಸಿ ಇಂದ್ರಿಯಗಳನ್ನು ಸಂಯಮದಲ್ಲಿಟ್ಟುಕೊಂಡು ಸತ್ತ್ವದಲ್ಲಿಯೇ ನೆಲೆಸಿಕೊಂಡು ಮನಸ್ಸನ್ನು ಬುದ್ಧಿಯಲ್ಲಿ ಲೀನಗೊಳಿಸಿದ ಯೋಗಿಗಳು ಯಾವ ಜ್ಯೋತಿಯನ್ನು ಕಾಣುತ್ತಾರೋ ಆ ಯೋಗಾತ್ಮನಿಗೆ ನಮಸ್ಕರಿಸುತ್ತೇನೆ.

---

127 ಯಂ ತ್ರಿಧಾತ್ಮಾನಮಾತ್ಮಸ್ಥಂ ಅರ್ಥಾತ್ ಆತ್ಮನಲ್ಲಿರುವ ಸತ್ವ-ರಜಸ್ಸು-ತಮೋ ಎಂಬ ಮೂರು ಗುಣಗಳಿಂದ ಕೂಡಿದವನು ಎನ್ನುವ ಪಾಠಂತರವಿದೆ (ಭಾರತ ದರ್ಶನ).

128 ಹನ್ನೊಂದು ಇಂದ್ರಿಯಗಳು (ಐದು ಜ್ಞಾನೇಂದ್ರಿಯಗಳು (ಶ್ರೋತ್ರ, ತ್ವಕ್ಕು, ಜಕ್ಷುಸು, ಜಿಹ್ವಾ, ಮತ್ತು ನಾಸಿಕ); ಐದು ಕರ್ಮೇಂದ್ರಿಯಗಳು (ವಾಕ್ಕು, ಪಾಣಿ, ಪಾದ, ಪಾಯು ಮತ್ತು ಉಪಸ್ಥ); ಮತ್ತು ಮನಸ್ಸು) ಮತ್ತು ಪಂಚಭೂತಗಳು (ಪೃಥ್ವೀ, ಆಪ್, ತೇಜಸ್ಸು, ವಾಯು, ಆಕಾಶ) – ಒಟ್ಟು ಹದಿನಾರು.

12047036a ಅಪುಣ್ಯಪುಣ್ಯೋಪರಮೇ ಯಂ ಪುನರ್ಭವನಿರ್ಭಯಾಃ|
12047036c ಶಾಂತಾಃ ಸಂನ್ಯಾಸಿನೋ ಯಾಂತಿ ತಸ್ಮೈ ಮೋಕ್ಷಾತ್ಮನೇ ನಮಃ||

ಪುಣ್ಯ-ಪಾಪಗಳು ಕ್ಷಯಹೊಂದಿದ ನಂತರ ಪುನಃ ಹುಟ್ಟು-ಸಾವುಗಳ ಭಯವಿಲ್ಲದ ಶಾಂತ ಸಂನ್ಯಾಸಿಗಳು ಯಾರನ್ನು ಸೇರುತ್ತಾರೆಯೋ ಆ ಮೋಕ್ಷಾತ್ಮನಿಗೆ ನಮಸ್ಕರಿಸುತ್ತೇನೆ.

12047037a ಯೋಽಸೌ ಯುಗಸಹಸ್ರಾಂತೇ ಪ್ರದೀಪ್ತಾರ್ಚಿರ್ವಿಭಾವಸುಃ|
12047037c ಸಂಭಕ್ಷಯತಿ ಭೂತಾನಿ ತಸ್ಮೈ ಘೋರಾತ್ಮನೇ ನಮಃ||

ಸಹಸ್ರಯುಗಗಳ ಅಂತ್ಯದಲ್ಲಿ ಧಗಧಗಿಸುವ ಜ್ವಾಲೆಗಳೊಂದಿಗೆ ಪ್ರಳಯಾಗ್ನಿಯ ರೂಪವನ್ನು ಹೊಂದಿ ಎಲ್ಲವನ್ನೂ ಭಕ್ಷಿಸುವ ಘೋರಾತ್ಮನಿಗೆ ನಮಸ್ಕರಿಸುತ್ತೇನೆ.

12047038a ಸಂಭಕ್ಷ್ಯ ಸರ್ವಭೂತಾನಿ ಕೃತ್ವಾ ಚೈಕಾರ್ಣವಂ ಜಗತ್|
12047038c ಬಾಲಃ ಸ್ವಪಿತಿ ಯಶ್ಚೈಕಸ್ತಸ್ಮೈ ಮಾಯಾತ್ಮನೇ ನಮಃ||

ಇರುವ ಎಲ್ಲವನ್ನೂ ಭಕ್ಷಿಸಿ ಜಗತ್ತನ್ನು ಜಲಮಯವನ್ನಾಗಿಸಿ ಅದರ ಮೇಲೆ ಬಾಲಕನಾಗಿ ಮಲಗುವ ಆ ಮಾಯಾತ್ಮನಿಗೆ ನಮಸ್ಕರಿಸುತ್ತೇನೆ.

[129]12047039a ಸಹಸ್ರಶಿರಸೇ ತಸ್ಮೈ ಪುರುಷಾಯಾಮಿತಾತ್ಮನೇ|

---

[129] ಇದಕ್ಕೆ ಮೊದಲು ಭಾರತದರ್ಶನದಲ್ಲಿ ಈ ಶ್ಲೋಕವಿದೆ: ತದ್ಯಸ್ಯ ನಾಭ್ಯಾಂ ಸಂಭೂತಂ ಯಸ್ಮಿನ್ವಿಶ್ವಂ ಪ್ರತಿಷ್ಠಿತಂ| ಪುಷ್ಕರೇ ಪುಷ್ಕರಾಕ್ಷಸ್ಯ ತಸ್ಮೈ ಪದ್ಮಾತ್ಮನೇ ನಮಃ|| ಅರ್ಥಾತ್: ಯಾರ ನಾಭಿಯಿಂದ ಕಮಲವು ಹುಟ್ಟಿತೋ ಮತ್ತು ಆ ಕಮಲದಲ್ಲಿಯೇ ವಿಶ್ವವು ಪ್ರತಿಷ್ಠಿತವಾಗಿರುವುದೋ ಆ ಪುಷ್ಕರಾಕ್ಷ ಪದ್ಮಾತ್ಮನಿಗೆ ನಮಸ್ಕರಿಸುತ್ತೇನೆ.

12047039c ಚತುಃಸಮುದ್ರಪರ್ಯಾಯಯೋಗನಿದ್ರಾತ್ಮನೇ ನಮಃ॥

ನಾಲ್ಕು ಸಮುದ್ರಗಳನ್ನೂ ಒಂದುಗೂಡಿಸಿ ಹಾಸಿಗೆಯನ್ನಾಗಿಸಿಕೊಂಡು ಅದರ ಮೇಲೆ ಮಲಗುವ ಆ ಸಹಸ್ರಶಿರಸ, ಪುರುಷ, ಅಮಿತಾತ್ಮ, ಯೋಗನಿದ್ರಾತ್ಮನಿಗೆ ನಮಸ್ಕರಿಸುತ್ತೇನೆ.

12047040a ಅಜಸ್ಯ ನಾಭಾವಧ್ಯೇಕಂ ಯಸ್ಮಿನ್ವಿಶ್ವಂ ಪ್ರತಿಷ್ಠಿತಮ್|
12047040c ಪುಷ್ಕರಂ ಪುಷ್ಕರಾಕ್ಷಸ್ಯ ತಸ್ಮೈ ಪದ್ಮಾತ್ಮನೇ ನಮಃ॥

ಹುಟ್ಟೇ ಇಲ್ಲದ ಮತ್ತು ಇಲ್ಲದಿರುವಂತಾಗದ ಯಾರ ಮೇಲೆ ಈ ವಿಶ್ವವು ಪ್ರತಿಷ್ಠಿತವಾಗಿದೆಯೋ ಆ ಪುಷ್ಕರ ಪುಷ್ಕರಾಕ್ಷ ಪದ್ಮಾತ್ಮನಿಗೆ ನಮಸ್ಕರಿಸುತ್ತೇನೆ.

12047041a ಯಸ್ಯ ಕೇಶೇಷು ಜೀಮೂತಾ ನದ್ಯಃ ಸರ್ವಾಂಗಸಂಧಿಷು|
12047041c ಕುಕ್ಷೌ ಸಮುದ್ರಾಶ್ಚತ್ವಾರಸ್ತಸ್ಮೈ ತೋಯಾತ್ಮನೇ ನಮಃ॥

ಯಾರ ಕೇಶರಾಶಿಗಳಲ್ಲಿ ಮೇಘಗಳಿವೆಯೋ, ಯಾರ ಸರ್ವಾಂಗಸಂಧಿಗಳಲ್ಲಿ ನದಿಗಳಿವೆಯೋ, ಮತ್ತು ಯಾರ ಹೊಟ್ಟೆಯಲ್ಲಿ ನಾಲ್ಕೂ ಸಮುದ್ರಗಳಿವೆಯೋ ಆ ತೋಯಾತ್ಮನಿಗೆ ನಮಸ್ಕರಿಸುತ್ತೇನೆ.

[130]12047042a ಯುಗೇಷ್ವಾವರ್ತತೇ ಯೋಽಂಶೈರ್ದಿನರ್ತ್ವಯನಹಾಯನೈಃ|

---

130 ಇದಕ್ಕೆ ಮೊದಲು ಭಾರತದರ್ಶನದಲ್ಲಿ ಈ ಐದು ಶ್ಲೋಕಗಳಿವೆ: (೧) ಯಸ್ಮಾತ್ಸರ್ವಾಃ ಪ್ರಸೂಯಂತೇ ಸರ್ಗಪ್ರಲಯವಿಕ್ರಿಯಾಃ| ಯಸ್ಮಿಂಶ್ಚೈವ ಪ್ರಲೀಯಂತೇ ತಸ್ಮೈ ಹೇತ್ವಾತ್ಮನೇ ನಮಃ॥ ಅರ್ಥಾತ್: ಸೃಷ್ಟಿ-ಪ್ರಳಯ ರೂಪದ ಸಮಸ್ತ ವಿಕಾರಗಳೂ ಯಾರಿಂದ ಹುಟ್ಟುತ್ತವೆಯೋ, ಮತ್ತು ಅಂತ್ಯದಲ್ಲಿ ಯಾರಲ್ಲಿ ಲೀನಗೊಳ್ಳುತ್ತವೆಯೋ ಆ ಹೇತ್ವಾತ್ಮ(ಎಲ್ಲಕ್ಕೂ

12047042c ಸರ್ಗಪ್ರಲಯಯೋಃ ಕರ್ತಾ ತಸ್ಮೈ ಕಾಲಾತ್ಮನೇ ನಮಃ॥

ಯಾರು ಯುಗಯುಗದಲ್ಲಿಯೂ ಯೋಗಮಾಯೆಯಿಂದ
ಅವತರಿಸುವನೋ, ಮಾಸ-ಋತು-ಆಯನ-ಸಂವತ್ಸರಗಳು

ಕಾರಣನಾದವ) ನಿಗೆ ನಮಸ್ಕರಿಸುತ್ತೇನೆ. (೨) ಯೋ ನಿಷಣ್ಣೋ ಭವೇದ್ರಾತ್ರೌ ದಿವಾ ಭವತಿ ವಿಷ್ಠಿತಃ| ಇಷ್ಟಾನಿಷ್ಟಸ್ಯ ಚ ದ್ರಷ್ಟಾ ತಸ್ಮೈ ದ್ರಷ್ಟಾತ್ಮನೇ ನಮಃ॥ ಅರ್ಥಾತ್: ಯಾರು ರಾತ್ರಿಯಲ್ಲಿ ಪ್ರಾಣಿಗಳೆಲ್ಲವೂ ಮಲಗಿ ನಿದ್ರಿಸುತ್ತಿರುವಾಗ ಎಲ್ಲರ ಹೃದಯಗಳಲ್ಲಿಯೂ ಇರುವ ತಾನು ಮಾತ್ರ ಜಾಗ್ರತನಾಗಿಯೇ ಇರುವನೋ, ಯಾರು ಹಗಲಿನಲ್ಲಿ ಪ್ರಾಣಿಗಳ ಕರ್ಮಗಳಿಗೆ ಸಾಕ್ಷಿಯಾಗಿರುವನೋ ಮತ್ತು ಯಾರು ಸದಾಕಾಲ ಪ್ರಾಣಿಗಳ ಇಷ್ಟಾನಿಷ್ಟಗಳನ್ನು ಗಮನಿಸುತ್ತಿರುವನೋ ಆ ದ್ರಷ್ಟಾತ್ಮನಿಗೆ ನಮಸ್ಕರಿಸುತ್ತೇನೆ. (೩) ಅಕುಂಠಂ ಸರ್ವಕಾರ್ಯೇಷು ಧರ್ಮಕಾರ್ಯಾರ್ಥಮುದ್ಯತಂ| ವೈಕುಂಠಂ ಸ್ಯ ಚ ತದ್ರೂಪಂ ತಸ್ಮೈ ಕಾರ್ಯಾತ್ಮನೇ ನಮಃ॥ ಅರ್ಥಾತ್: ಅಡಗಡೆಗಳಿಲ್ಲದೇ ಸರ್ವಕಾರ್ಯಗಳನ್ನು ಮಾಡುವ, ಧರ್ಮಾರ್ಥಕಾರ್ಯಗಳಲ್ಲಿಯೇ ತೊಡಗಿರುವ, ಮತ್ತು ವೈಕುಂಠರೂಪನಾಗಿರುವ ಕಾರ್ಯಾತ್ಮನಿಗೆ ನಮಸ್ಕರಿಸುತ್ತೇನೆ. (೪) ತ್ರಿಃಸಪ್ತಕೃತ್ವೋ ಯಃ ಕ್ಷತ್ರಂ ಧರ್ಮವ್ಯತ್ಕ್ರಾಂತಗೌರವಂ| ಕ್ರುದ್ಧೋ ನಿಜಘ್ನೇ ಸಮರೇ ತಸ್ಮೈ ಶೌರ್ಯಾತ್ಮನೇ ನಮಃ॥ ಅರ್ಥಾತ್: ಕ್ರುದ್ಧನಾಗಿ ಯಾರು ಧರ್ಮಗೌರವವನ್ನು ಉಲ್ಲಂಘಿಸಿದ ಕ್ಷತ್ರಿಯ ಸಮೂಹವನ್ನು ಇಪ್ಪತ್ತೊಂದು ಬಾರಿ ಸಂಹರಿಸಿದನೋ ಆ ಶೌರ್ಯಾತ್ಮನಿಗೆ ನಮಸ್ಕರಿಸುತ್ತೇನೆ. (೫) ವಿಭಜ್ಯ ಪಂಚದಾತ್ಮಾನಂ ವಾಯುರ್ಭೂತ್ವಾ ಶರೀರಗಃ| ಯಶ್ಚೇಷ್ಟಯತಿ ಭೂತಾನಿ ತಸ್ಮೈ ವಾಯ್ವಾತ್ಮನೇ ನಮಃ॥ ಅರ್ಥಾತ್: ಯಾರ ವಾಯುಸ್ವರೂಪವನ್ನ ತಾಳಿ ಎಲ್ಲ ಪ್ರಾಣಿಗಳ ಶರೀರಗಳನ್ನೂ ಪ್ರವೇಶಿಸಿ ತನ್ನನ್ನು ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನಗಳೆಂದು ಐದು ಪ್ರಕಾರವಾಗಿ ವಿಭಾಗಿಸಿಕೊಂಡು ಕ್ರಿಯಾಶೀಲರನ್ನಾಗಿ ಮಾಡುತ್ತಾನೋ ಆ ವಾಯ್ವಾತ್ಮನಿಗೆ ನಮಸ್ಕರಿಸುತ್ತೇನೆ.

ಉರುಳಿದಂತೆ ಸೃಷ್ಟಿ-ಲಯಗಳನ್ನ ನಡೆಸುತ್ತಾನೋ ಆ ಕಾಲಾತ್ಮನಿಗೆ ನಮಸ್ಕರಿಸುತ್ತೇನೆ.

12047043a ಬ್ರಹ್ಮ ವಕ್ತ್ರಂ ಭುಜೌ ಕ್ಷತ್ರಂ ಕೃತ್ಸ್ನಮೂರೂದರಂ ವಿಶಃ|
12047043c ಪಾದೌ ಯಸ್ಯಾಶ್ರಿತಾಃ ಶೂದ್ರಾಸ್ತಸ್ಮೈ ವರ್ಣಾತ್ಮನೇ ನಮಃ||

ಯಾರಿಗೆ ಬ್ರಾಹ್ಮಣನೇ ಮುಖನಾಗಿರುವನೋ, ಸಮಸ್ತ ಕ್ಷತ್ರಿಯರೂ ಭುಜಗಳಾಗಿರುವರೋ, ವೈಶ್ಯರು ಹೊಟ್ಟೆ-ತೊಡೆಗಳಾಗಿರುವರೋ ಮತ್ತು ಯಾರ ಪಾದಗಳಲ್ಲಿ ಶೂದ್ರರು ಆಶ್ರಿತರಾಗಿರುವರೋ ಆ ವರ್ಣಾತ್ಮನಿಗೆ ನಮಸ್ಕರಿಸುತ್ತೇನೆ.

12047044a ಯಸ್ಯಾಗ್ನಿರಾಸ್ಯಂ ದ್ಯೌರ್ಮೂರ್ಧಾ ಖಂ ನಾಭಿಶ್ಚರಣೌ ಕ್ಷಿತಿಃ|
12047044c ಸೂರ್ಯಶ್ಚಕ್ಷುರ್ದಿಶಃ ಶ್ರೋತ್ರೇ ತಸ್ಮೈ ಲೋಕಾತ್ಮನೇ ನಮಃ||

ಯಾರಿಗೆ ಅಗ್ನಿಯು ಮುಖನಾಗಿರುವನೋ, ಸ್ವರ್ಗವು ತಲೆಯಾಗಿರುವುದೋ, ಆಕಾಶವು ನಾಭಿಯಾಗಿರುವುದೋ, ಭೂಮಿಯು ಪಾದಗಳಾಗಿರುವುದೋ, ಸೂರ್ಯನೇ ಕಣ್ಣಾಗಿರುವನೋ, ಮತ್ತು ದಿಕ್ಕುಗಳೇ ಕಿವಿಗಳಾಗಿರುವವೋ ಆ ಲೋಕಾತ್ಮನಿಗೆ ನಮಸ್ಕರಿಸುತ್ತೇನೆ.

12047045a ವಿಷಯೇ ವರ್ತಮಾನಾನಾಂ ಯಂ ತಂ ವೈಶೇಷಿಕೈರ್ಗುಣೈಃ|
12047045c ಪ್ರಾಹುರ್ವಿಷಯಗೋಪ್ತಾರಂ ತಸ್ಮೈ ಗೋಪ್ತ್ರಾತ್ಮನೇ ನಮಃ||

ವೈಶೇಷಿಕ ಗುಣಗಳಿಂದ ಆಕರ್ಷಿತರಾಗಿ ವಿಷಯಸುಖಗಳಲ್ಲಿಯೇ ಇರುವವರನ್ನು ವಿಷಯಗಳಿಂದ ರಕ್ಷಿಸುವವನೆಂದು ಯಾರನ್ನು ಕರೆಯುತ್ತಾರೋ ಆ ಗೋಪ್ತ್ರಾತ್ಮನಿಗೆ ನಮಸ್ಕರಿಸುತ್ತೇನೆ.

12047046a ಅನ್ನಪಾನೇಂಧನಮಯೋ ರಸಪ್ರಾಣವಿವರ್ಧನಃ|

12047046c ಯೋ ಧಾರಯತಿ ಭೂತಾನಿ ತಸ್ಮೈ ಪ್ರಾಣಾತ್ಮನೇ ನಮಃ||

ಅನ್ನ-ಪಾನಗಳೆಂಬ ಇಂಧನರೂಪನಾಗಿ ರಸ-ಪ್ರಾಣಗಳನ್ನು ವೃದ್ಧಿಪಡಿಸುತ್ತಾ ಯಾರು ಪ್ರಾಣಿಗಳನ್ನು ಧರಿಸಿರುವನೋ ಆ ಪ್ರಾಣಾತ್ಮನಿಗೆ ನಮಸ್ಕರಿಸುತ್ತೇನೆ.

12047047a ಪರಃ ಕಾಲಾತ್ಪರೋ ಯಜ್ಞಾತ್ಪರಃ ಸದಸತೋಶ್ಚ ಯಃ|
12047047c ಅನಾದಿರಾದಿರ್ವಿಶ್ವಸ್ಯ ತಸ್ಮೈ ವಿಶ್ವಾತ್ಮನೇ ನಮಃ||[131]

ಯಾರು ಕಾಲಾತೀತನಾಗಿ, ಯಜ್ಞಾತೀತನಾಗಿ, ಪರಕ್ಕಿಂತಲೂ ಅತ್ಯಂತ ಶ್ರೇಷ್ಠನಾಗಿ, ಆದ್ಯಂತರಹಿತನಾಗಿ, ವಿಶ್ವಕ್ಕೇ ಆದಿಭೂತನಾಗಿರುವನೋ ಆ ವಿಶ್ವಾತ್ಮನಿಗೆ ನಮಸ್ಕರಿಸುತ್ತೇನೆ.

[132]12047048a ಯೋ ಮೋಹಯತಿ ಭೂತಾನಿ ಸ್ನೇಹರಾಗಾನುಬಂಧನೈಃ|

---

131 ದಕ್ಷಿಣಾತ್ಯ ಪಾಠದಲ್ಲಿ ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ: ವೈದ್ಯುತೋ ಜಾಠರಶ್ಚೈವ ಪಾವಕಃ ಶುಚಿರೇವ ಚ| ದಹನಃ ಸರ್ವಭಕ್ಷಾಣಾಂ ತಸ್ಮೈ ವಹ್ನ್ಯಾತ್ಮನೇ ನಮಃ|| (ಗೀತಾ ಪ್ರೆಸ್).

132 ಇದಕ್ಕೆ ಮೊದಲು ಈ ನಾಲ್ಕು ಶ್ಲೋಕಗಳಿವೆ: (೧) ಪ್ರಾಣಾನಾಂ ಧಾರಣಾರ್ಥಾಯ ಯೋಽನ್ನಂ ಭುಂಕ್ತೇ ಚತುರ್ವಿಧಮ್| ಅಂತರ್ಭೂತಃ ಪಚತ್ಯಗ್ನಿಸ್ತಸ್ಮೈ ಪಾಕಾತ್ಮನೇ ನಮಃ|| ಪ್ರಾಣಗಳನ್ನು ಧರಿಸಿರಲು ಚತುರ್ವಿಧ ಆಹಾರವನ್ನು ಸೇವಿಸುವ ಮತ್ತು ತಾನೇ ಪ್ರಾಣಿಗಳಲ್ಲಿ ಜಠರಾಗ್ನಿಯಾಗಿ ಆಹಾರವನ್ನು ಪಚನಮಾಡುವ ಆ ಪಾಕಾತ್ಮನಿಗೆ ನಮಸ್ಕರಿಸುತ್ತೇನೆ. (೨) ಪಿಂಗೇಕ್ಷಣಸಟಂ ಯಸ್ಯ ರೂಪಂ ದಂಷ್ಟ್ರಾನಖಾಯುಧಂ| ದಾನವೇಂದ್ರಾಂತಕರಣಂ ತಸ್ಮೈ ದೃಪ್ತಾತ್ಮನೇ ನಮಃ|| ಅರ್ಥಾತ್: ಯಾರ ಕಣ್ಣು-ಕೇಸರಗಳು ಹಳದೀ ಬಣ್ಣದ್ದಾಗಿತ್ತೋ, ಯಾರ ಆಯುಧಗಳು ಕೋರೆದಾಡೆ-ಉಗುರುಗಳಾಗಿದ್ದವೋ ಮತ್ತು ಯಾರು ದಾನವೇಂದ್ರ

12047048c ಸರ್ಗಸ್ಯ ರಕ್ಷಣಾರ್ಥಾಯ ತಸ್ಮೈ ಮೋಹಾತ್ಮನೇ ನಮಃ||


ಯಾರು ಸೃಷ್ಟಿಪರಂಪರೆಯ ರಕ್ಷಣಾರ್ಥವಾಗಿ ಎಲ್ಲ ಪ್ರಾಣಿಗಳನ್ನೂ ಸ್ನೇಹಪಾಶಗಳ ಬಂಧನಗಳಿಂದ ವಿಮೋಹಗೊಳಿಸುತ್ತಾನೆಯೋ ಆ ಮೋಹಾತ್ಮನಿಗೆ ನಮಸ್ಕರಿಸುತ್ತೇನೆ.

12047049a ಆತ್ಮಜ್ಞಾನಮಿದಂ ಜ್ಞಾನಂ ಜ್ಞಾತ್ವಾ ಪಂಚಸ್ವವಸ್ಥಿತಮ್|
12047049c ಯಂ ಜ್ಞಾನಿನೋಽಧಿಗಚ್ಚಂತಿ ತಸ್ಮೈ ಜ್ಞಾನಾತ್ಮನೇ ನಮಃ||

ಈ ಆತ್ಮಜ್ಞಾನವು ಅನ್ನಮಯ-ಪ್ರಾಣಮಯ-ಮನೋಮಯ-ವಿಜ್ಞಾನಮಯ-ಆನಂದಮಯಗಳೆಂಬ ಐದು ಕೋಶಗಳಲ್ಲಿರುವುದೆನ್ನುವುದನ್ನು ತಿಳಿದು ಜ್ಞಾನಯೋಗದ ಮೂಲಕ ಯೋಗಿಗಳು ಯಾರನ್ನು ಸಾಕ್ಷಾತ್ಕರಿಸಿಕೊಳ್ಳುವರೋ ಆ ಜ್ಞಾನಾತ್ಮನಿಗೆ ನಮಸ್ಕರಿಸುತ್ತೇನೆ.

12047050a ಅಪ್ರಮೇಯಶರೀರಾಯ ಸರ್ವತೋಽನಂತಚಕ್ಷುಷೇ|

ಹಿರಣ್ಯಕಶಿಪುವನ್ನು ಅಂತ್ಯಗೊಳಿಸಿದನೋ ಆ ದೃಪ್ತಾತ್ಮನಿಗೆ ನಮಸ್ಕರಿಸುತ್ತೇನೆ. (೩) ಯಂ ನ ದೇವಾ ನ ಗಂಧರ್ವಾ ನ ದೈತ್ಯಾ ನ ಚ ದಾನವಾಃ| ತತ್ತ್ವತೋ ಹಿ ವಿಜಾನಂತಿ ತಸ್ಮೈ ಸೂಕ್ಷ್ಮಾತ್ಮನೇ ನಮಃ|| ಅರ್ಥಾತ್ಃ ಯಾರನ್ನು ದೇವತೆಗಳಾಗಲೀ, ಗಂಧರ್ವರಾಗಲೀ, ದೈತ್ಯರಾಗಲೀ, ದಾನವರಾಗಲೀ ತತ್ತ್ವತಃ ಅರಿಯಲಾರರೋ ಆ ಸೂಕ್ಷ್ಮಾತ್ಮನಿಗೆ ನಮಸ್ಕರಿಸುತ್ತೇನೆ. (೪) ರಸಾತಲಗತಃ ಶ್ರೀಮಾನನಂತೋ ಭಗವಾನ್ವಿಭುಃ| ಜಗದ್ಧಾರಯತೇ ಕೃತ್ಸ್ನಂ ತಸ್ಮೈ ವೀರಾತ್ಮನೇ ನಮಃ|| ಅರ್ಥಾತ್ಃ ರಸಾತಲಕ್ಕೆ ಹೋಗಿ ಇಡೀ ಜಗತ್ತನ್ನೂ ಹೊತ್ತಿರುವ ಶ್ರೀಮಾನ್ ಅನಂತ, ಭಗವಾನ್, ವಿಭು ವೀರಾತ್ಮನಿಗೆ ನಮಸ್ಕರಿಸುತ್ತೇನೆ. (ಭಾರತದರ್ಶನ/ಗೀತಾ ಪ್ರೆಸ್)



12047050c ಅಪಾರಪರಿಮೇಯಾಯ ತಸ್ಮೈ ಚಿಂತ್ಯಾತ್ಮನೇ[133] ನಮಃ||

ಯಾರು ಅಳತೆಗೆ ವಿಷಯವಾಗದೇ ಇರುವ ಶರೀರವನ್ನು
ಹೊಂದಿರುವನೋ, ಯಾರ ಬುದ್ಧಿರೂಪೀ ಕಣ್ಣುಗಳು ಸರ್ವತ್ರ
ವ್ಯಾಪಿಸಿರುವವೋ, ಯಾರಲ್ಲಿ ಅನಂತ ವಿಷಯಗಳ
ಸಮಾವೇಶವಿರುವುದೋ, ಯಾರ ತುದಿಯನ್ನು ಕಾಣಲು

[133] ದಿವ್ಯಾತ್ಮನೇ ನಮಃ (ಗೀತಾ ಪ್ರೆಸ್/ಭಾರತ ದರ್ಶನ).

ಸಾಧ್ಯವಿಲ್ಲವೋ ಆ ಚಿಂತ್ಯಾತ್ಮನಿಗೆ ನಮಸ್ಕರಿಸುತ್ತೇನೆ.

12047051a ಜಟಿನೇ ದಂಡಿನೇ ನಿತ್ಯಂ ಲಂಬೋದರಶರೀರಿಣೇ|
12047051c ಕಮಂಡಲುನಿಷಂಗಾಯ ತಸ್ಮೈ ಬ್ರಹ್ಮಾತ್ಮನೇ ನಮಃ||

ಜಟೆಯನ್ನೂ-ದಂಡವನ್ನೂ ಧರಿಸಿರುವ, ಲಂಬೋದರ ಶರೀರೀ, ಯಾವಾಗಲೂ ಕಮಂಡಲುವನ್ನು ಹಿಡಿದಿರುವ ಬ್ರಹ್ಮಾತ್ಮನಿಗೆ ನಮಸ್ಕರಿಸುತ್ತೇನೆ.

12047052a ಶೂಲಿನೇ ತ್ರಿದಶೇಶಾಯ ತ್ರ್ಯಂಬಕಾಯ ಮಹಾತ್ಮನೇ|
12047052c ಭಸ್ಮದಿಗ್ಧೋರ್ಧ್ವಲಿಂಗಾಯ ತಸ್ಮೈ ರುದ್ರಾತ್ಮನೇ ನಮಃ||

ಶೂಲಿಯೂ, ತ್ರಿದಶೇಶನೂ, ತ್ರ್ಯಂಬಕನೂ, ಮಹಾತ್ಮನೂ, ಭಸ್ಮದಿಗ್ಧನೂ, ಊರ್ಧ್ವಲಿಂಗನೂ ಆದ ರುದ್ರಾತ್ಮನಿಗೆ ನಮಸ್ಕರಿಸುತ್ತೇನೆ.

[134]12047053a ಪಂಚಭೂತಾತ್ಮಭೂತಾಯ[135] ಭೂತಾದಿನಿಧನಾತ್ಮನೇ|
12047053c ಅಕ್ರೋಧದ್ರೋಹಮೋಹಾಯ ತಸ್ಮೈ ಶಾಂತಾತ್ಮನೇ ನಮಃ||

ಪ್ರಾಣಿಗಳಲ್ಲಿ ಪಂಚಭೂತಾತ್ಮನಾಗಿರುವ, ಪ್ರಾಣಿಗಳ ಹುಟ್ಟು-

---

[134] ಇದಕ್ಕೆ ಮೊದಲು ಈ ಶ್ಲೋಕವಿದೆ: ಚಂದ್ರಾರ್ಧಕೃತಶೀರ್ಷಾಯ ವ್ಯಾಲಯಜ್ಞೋಪವಿತಿನೇ| ಪಿನಾಕಶೂಲಹಸ್ತಾಯ ತಸ್ಮೈ ಉಗ್ರಾತ್ಮನೇ ನಮಃ|| ಅರ್ಥಾತ್: ಯಾರ ತಲೆಯಲ್ಲಿ ಅರ್ಧಚಂದ್ರನ ಮುಕುಟವಿರುವುದೋ, ಯಾರು ಸರ್ಪವನ್ನೇ ಯಜ್ಞೋಪವೀತವನ್ನಾಗಿ ಧರಿಸಿರುವನೋ, ಯಾರ ಕೈಯಲ್ಲಿ ಪಿನಾಕವೂ ತ್ರಿಶೂಲವೂ ಇರುವವೋ ಆ ಉಗ್ರಾತ್ಮನಿಗೆ ನಮಸ್ಕರಿಸುತ್ತೇನೆ. (ಭಾರತ ದರ್ಶನ/ಗೀತಾ ಪ್ರೆಸ್).

[135] ಸರ್ವಭೂತಾತ್ಮಭೂತಾಯ (ಗೀತಾ ಪ್ರೆಸ್).

ಸಾವುಗಳಿಗೆ ಕಾರಣನಾಗಿರುವ, ಯಾರಲ್ಲಿ ಕ್ರೋಧ-ದ್ರೋಹ-ಮೋಹಗಳಿಲ್ಲವೋ ಆ ಶಾಂತಾತ್ಮನಿಗೆ ನಮಸ್ಕರಿಸುತ್ತೇನೆ.

12047054a ಯಸ್ಮಿನ್ಸರ್ವಂ ಯತಃ ಸರ್ವಂ ಯಃ ಸರ್ವಂ ಸರ್ವತಶ್ಚ ಯಃ|
12047054c ಯಶ್ಚ ಸರ್ವಮಯೋ ನಿತ್ಯಂ ತಸ್ಮೈ ಸರ್ವಾತ್ಮನೇ ನಮಃ||

ಯಾರಲ್ಲಿ ಸರ್ವವೂ ಇರುವವೋ, ಯಾರಿಂದ ಈ ಎಲ್ಲವೂ ಸೃಷ್ಟಿಸಲ್ಪಟ್ಟಿರುವವೋ, ಯಾರು ಎಲ್ಲದರಲ್ಲಿಯೂ ಇರುವನೋ, ಯಾರು ಎಲ್ಲ ಕಡೆಗಳಲ್ಲಿಯೂ ಇರುವನೋ ಆ ಸರ್ವಮಯ ಸರ್ವಾತ್ಮನಿಗೆ ನಮಸ್ಕರಿಸುತ್ತೇನೆ.

12047055a ವಿಶ್ವಕರ್ಮನ್ನಮಸ್ತೇಽಸ್ತು ವಿಶ್ವಾತ್ಮನ್ವಿಶ್ವಸಂಭವ|
12047055c ಅಪವರ್ಗೋಽಸಿ ಭೂತಾನಾಂ ಪಂಚಾನಾಂ ಪರತಃ ಸ್ಥಿತಃ||

ವಿಶ್ವವನ್ನು ರಚಿಸಿರುವವನೇ! ವಿಶ್ವಾತ್ಮನೇ! ವಿಶ್ವಸಂಭವನೇ! ನಿನಗೆ ನಮಸ್ಕಾರ! ಪಂಚಭೂತಗಳಿಗೂ ಅತೀತನಾದ ನೀನು ಪ್ರಾಣಿಗಳಿಗೆ ಮೋಕ್ಷದಾಯಕನಾಗಿರುವೆ!

12047056a ನಮಸ್ತೇ ತ್ರಿಷು ಲೋಕೇಷು ನಮಸ್ತೇ ಪರತಸ್ತ್ರಿಷು|
12047056c ನಮಸ್ತೇ ದಿಕ್ಷು ಸರ್ವಾಸು ತ್ವಂ ಹಿ ಸರ್ವಪರಾಯಣಮ್||

ಮೂರುಲೋಕಗಳಲ್ಲಿಯೂ ವ್ಯಾಪಿಸಿರುವ ನಿನಗೆ ನಮಸ್ಕಾರ! ಈ ಮೂರು ಲೋಕಗಳ ಆಚೆಯೂ ಇರುವ ನಿನಗೆ ನಮಸ್ಕಾರ! ಎಲ್ಲ ದಿಕ್ಕುಗಳಲ್ಲಿಯೂ ವ್ಯಾಪಿಸಿರುವ ನಿನಗೆ ನಮಸ್ಕಾರ! ಸರ್ವರ ಪರಾಯಣನಾಗಿರುವ ನಿನಗೆ ನಮಸ್ಕಾರ!

12047057a ನಮಸ್ತೇ ಭಗವನ್ವಿಷ್ಣೋ ಲೋಕಾನಾಂ ಪ್ರಭವಾಪ್ಯಯ|

12047057c ತ್ವಂ ಹಿ ಕರ್ತಾ ಹೃಷೀಕೇಶ ಸಂಹರ್ತಾ ಚಾಪರಾಜಿತಃ||

ಭಗವನ್ ವಿಷ್ಣೋ! ಲೋಕಗಳ ಉತ್ಪತ್ತಿ-ವಿನಾಶಗಳ ಕರ್ತನೇ! ನಿನಗೆ ನಮಸ್ಕಾರ! ಹೃಷೀಕೇಶ! ನೀನೇ ಸೃಷ್ಟಿಕರ್ತನೂ ಸಂಹಾರಕರ್ತನೂ ಆಗಿರುವೆ. ಯಾರಿಂದಲೂ ನಿನಗೆ ಪರಾಜಯವಿಲ್ಲ!

12047058a ತೇನ ಪಶ್ಯಾಮಿ ತೇ ದಿವ್ಯಾನ್ಭಾವಾನ್ಹಿ ತ್ರಿಷು ವರ್ತ್ಮಸು|
12047058c ತಚ್ಚ ಪಶ್ಯಾಮಿ ತತ್ತ್ವೇನ ಯತ್ತೇ ರೂಪಂ ಸನಾತನಮ್||

ಮೂರು ಲೋಕಗಳಲ್ಲಿಯೂ ವ್ಯಾಪ್ತವಾಗಿರುವ ನಿನ್ನ ದಿವ್ಯತೆ ಭಾವಗಳನ್ನು ನಾನು ಕಾಣಲಾರೆನು. ಆದರೆ ತತ್ತ್ವದೃಷ್ಟಿಯಿಂದ ನಿನ್ನ ಸನಾತನ ರೂಪವನ್ನು ಕಾಣುತ್ತಿದ್ದೇನೆ.

12047059a ದಿವಂ ತೇ ಶಿರಸಾ ವ್ಯಾಪ್ತಂ ಪದ್ಭ್ಯಾಂ ದೇವೀ ವಸುಂಧರಾ|
12047059c ವಿಕ್ರಮೇಣ ತ್ರಯೋ ಲೋಕಾಃ ಪುರುಷೋऽಸಿ ಸನಾತನಃ||

ಆಕಾಶವು ನಿನ್ನ ಶಿರಸ್ಸಿನಿಂದ ವ್ಯಾಪ್ತವಾಗಿದೆ. ದೇವೀ ವಸುಂಧರೆಯು ನಿನ್ನ ಪಾದಗಳಿಂದ ವ್ಯಾಪ್ತಳಾಗಿದ್ದಾಳೆ. ಮೂರು ಲೋಕಗಳೂ ನಿನ್ನ ವಿಕ್ರಮದಿಂದ ವ್ಯಾಪ್ತವಾಗಿದೆ. ನೀನು ಸನಾತನ ಪುರುಷ!

[136]12047060a ಅತಸೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್|

---

[136] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕವಿದೆ: ದಿಶೋ ಭುಜಾ ರವಿಶ್ಚಕ್ಷುರ್ವೀರ್ಯೇ ಶುಕ್ರಃ ಪ್ರತಿಷ್ಠಿತಃ| ಸಪ್ತ ಮಾರ್ಗಾನಿರುದ್ಧಾಸ್ತೇ ವಾಯೋರಮಿತತೇಜಸಃ|| ಅರ್ಥಾತ್: ದಿಕ್ಕುಗಳೇ ನಿನ್ನ ಭುಜಗಳು. ಸೂರ್ಯನೇ ನಿನ್ನ ಕಣ್ಣುಗಳಲ್ಲಿದ್ದಾನೆ. ಶುಕ್ರನು ನಿನ್ನ ವೀರ್ಯದಲ್ಲಿದ್ದಾನೆ. ಅಮಿತತೇಜಸ್ವೀ ವಾಯುವಿನ ಏಳು ಮಾರ್ಗಗಳನ್ನೂ ನೀನು ತಡೆದಿರುವೆ.

12047060c ಯೇ ನಮಸ್ಯಂತಿ ಗೋವಿಂದಂ ನ ತೇಷಾಂ ವಿದ್ಯತೇ ಭಯಮ್‌||

ಅಗಸೇ ಹೂವಿನ ಕಾಂತಿಯನ್ನು ಹೊಂದಿರುವ, ಪೀತವಾಸಸ, ಅಚ್ಯುತ
ಗೋವಿಂದನನ್ನು ಯಾರು ನಮಸ್ಕರಿಸುತ್ತಾರೋ ಅವರಿಗೆ
ಭಯವೆನ್ನುವುದೇ ತಿಳಿಯದು.

[137]12047061a ಯಥಾ ವಿಷ್ಣುಮಯಂ ಸತ್ಯಂ ಯಥಾ ವಿಷ್ಣುಮಯಂ ಹವಿಃ|

---

137 ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಐದು ಶ್ಲೋಕಗಳಿವೆ: (೧) ಏಕೋಽಪಿ ಕೃಷ್ಣಸ್ಯ ಕೃತಃ ಪ್ರಣಾಮೋ| ದಶಾಶ್ವಮೇಧಾವಭೃಥೇನ ತುಲ್ಯಃ‌‌|| ದಶಾಶ್ವಮೇಧೀ ಪುನರೇತಿ ಜನ್ಮ| ಕೃಷ್ಣಪ್ರಣಾಮೀ ನ ಪುನರ್ಭವಾಯ‌‌|| ಅರ್ಥಾತ್‌: ಕೃಷ್ಣನಿಗೆ ಮಾಡಿದ ಒಂದೇ ಪ್ರಣಾಮವು ಹತ್ತು ಅಶ್ವಮೇಧಯಾಗಗಳ ಅವಭೃಥಸ್ನಾನವನ್ನು ಮಾಡಿದ ಫಲಕ್ಕೆ ಸಮನಾಗಿದೆ. ಆದರೆ ಒಂದೇ ವ್ಯತ್ಯಾಸ. ಹತ್ತು ಅಶ್ವಮೇಧಯಾಗಗಳನ್ನು ಮಾಡಿದವನಿಗೆ ಪುನರ್ಜನ್ಮವು ತಪ್ಪಿದ್ದಲ್ಲ. ಕೃಷ್ಣನಿಗೆ ಪ್ರಣಾಮ ಮಾಡಿದವನಿಗೆ ಪುನರ್ಜನ್ಮವೇ ಇಲ್ಲ. (೨) ಕೃಷ್ಣವ್ರತಾಃ ಕೃಷ್ಣ ಮನುಸ್ಮರಂತೋ| ರಾತ್ರೌ ಚ ಕೃಷ್ಣಂ ಪುನರುತ್ಥಿತಾ ಯೇ‌|| ತೇ ಕೃಷ್ಣದೇಹಾಃ ಪ್ರವಿಶಂತಿ ಕೃಷ್ಣ|ಮಾಜ್ಯಂ ಯಥಾಮಂತ್ರಹುತಂ ಹುತಾಶೇ‌|| ಅರ್ಥಾತ್‌: ಕೃಷ್ಣನನ್ನೇ ವ್ರತವನ್ನಾಗಿಟ್ಟುಕೊಂಡಿರುವ, ಕೃಷ್ಣನನ್ನೇ ಧ್ಯಾನಿಸುತ್ತಿರುವ, ರಾತ್ರಿಯಲ್ಲಿ ಕೃಷ್ಣ ಮತ್ತು ಬೆಳಿಗ್ಗೆ ಎದ್ದಾಗ ಕೃಷ್ಣ ಎಂದು ಸ್ಮರಿಸಿಕೊಳ್ಳುತ್ತಿರುವವರು ಕೃಷ್ಣನ ದೇಹವನ್ನೇ ಪ್ರವೇಶಿಸುತ್ತಾರೆ. ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮಮಾಡಲ್ಪಟ್ಟ ಆಜ್ಯವು ಯಜ್ಞೇಶ್ವರನಲ್ಲಿಯೇ ಲೀನವಾಗುವಂತೆ ಕೃಷ್ಣನಲ್ಲಿಯೇ ಲೀನರಾಗುತ್ತಾರೆ. (೩) ನಮೋ ನರಕಸಂತ್ರಾಸರಕ್ಷಾಮಂಡಲಕಾರಿಣೇ| ಸಂಸಾರನಿಮ್ನಗಾವರ್ತತರಿಕಾಷ್ಠಾಯ ವಿಷ್ಣವೇ‌|| ಅರ್ಥಾತ್‌: ನರಕಭಯಪೀಡಿತರಿಗೆ ರಕ್ಷಾಮಂಡಲವನ್ನು ರಚಿಸುವವನೇ! ಸಂಸಾರವೆಂಬ ಹೊಳೆಯಲ್ಲಿ ಸುಳಿಯನ್ನು

12047061c ಯಥಾ ವಿಷ್ಣುಮಯಂ ಸರ್ವಂ ಪಾಪ್ಮಾ ಮೇ ನಶ್ಯತಾಂ ತಥಾ||

ಸತ್ಯವು ಹೇಗೆ ವಿಷ್ಣುಮಯವಾಗಿರುವುದೋ, ಜಗತ್ತು ಹೇಗೆ
ವಿಷ್ಣುಮಯವಾಗಿರುವುದೋ, ಸರ್ವವೂ ಹೇಗೆ
ವಿಷ್ಣುಮಯವಾಗಿರುವುದೋ ಹಾಗೆ ಈ ಸತ್ಯದ ಪ್ರಭಾವದಿಂದ ನನ್ನ
ಸಕಲ ಪಾಪಗಳೂ ನಾಶಹೊಂದಲಿ.

12047062a ತ್ವಾಂ ಪ್ರಪನ್ನಾಯ ಭಕ್ತಾಯ ಗತಿಮಿಷ್ಟಾಂ ಜಿಗೀಷವೇ|
12047062c ಯಚ್ಚ್ರೇಯಃ ಪುಂಡರೀಕಾಕ್ಷ ತದ್ಧ್ಯಾಯಸ್ವ ಸುರೋತ್ತಮ||

ಸುರೋತ್ತಮ! ಪುಂಡರೀಕಾಕ್ಷ! ನಿನ್ನನ್ನೇ ಅನನ್ಯಶರಣನಾಗಿ
ಶರಣುಹೊಂದಿರುವ ಭಕ್ತನಾದ ಅಭೀಷ್ಟ ಗತಿಯನ್ನು ಇಚ್ಛಿಸುತ್ತಿರುವ
ನನಗೆ ಯಾವುದು ಶ್ರೇಯಸ್ಕರವೆನ್ನುವುದನ್ನು ನೀನೇ ಯೋಚಿಸಿ

ದಾಟಲಿಚ್ಛಿಸುವವರಿಗೆ ತೆಪ್ಪದ ರೂಪದಲ್ಲಿರುವವನೇ! ಮಹಾವಿಷ್ಣುವೇ!
ನಿನಗೆ ನಮಸ್ಕರಿಸುತ್ತೇನೆ. (೪) ನಮೋ ಬ್ರಹ್ಮಣ್ಯದೇವಾಯ
ಗೋಬ್ರಾಹ್ಮಣಹಿತಕರಾಯ ಚ| ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ
ನಮೋ ನಮಃ|| ಅರ್ಥಾತ್: ಬ್ರಹ್ಮಕ್ಕೆ (ತಪಸ್ಸು, ವೇದ, ಬ್ರಾಹ್ಮಣ ಮತ್ತು
ಜ್ಞಾನಗಳಿಗೆ) ಹಿತನಾಗಿರುವ, ಜಗತ್ತಿಗೆ ಹಿತವನ್ನುಂಟುಮಾಡಲು ಗೋ-
ಬ್ರಾಹ್ಮಣರಿಗೆ ಹಿತವನ್ನುಂಟುಮಾಡುವ ಕೃಷ್ಣ ಗೋವಿಂದನಿಗೆ
ನಮಸ್ಕರಿಸುತ್ತೇನೆ. (೫) ಪ್ರಾಣಕಾಂತಾರಪಾಥೇಯಂ
ಸಂಸಾರೋಚ್ಛೇದಭೇಷಜಂ| ದುಃಖಶೋಕಪರಿತ್ರಾಣಂ ಹರಿರಿತ್ಯಕ್ಷರದ್ವಯಂ||
ಅರ್ಥಾತ್: ಹರಿ ಎಂಬ ಎರಡಕ್ಷರವು ಪ್ರಾಣಪ್ರಯಾಣಸಮಯದಲ್ಲಿ
ನಡುಗಾಡಿನ ಬುತ್ತಿಯ ರೂಪದಲ್ಲಿರುತ್ತದೆ. ಸಂಸಾರವೆಂಬ ರೋಗದ
ನಿವಾರಣೆಗೆ ಔಷಧಪ್ರಾಯವಾಗಿದೆ. ಸಕಲವಿಧದ ದುಃಖ-ಶೋಕಗಳನ್ನೂ
ಪರಿಹರಿಸಿ ರಕ್ಷಣೆ ನೀಡುತ್ತದೆ.

ನಿರ್ಧರಿಸು!

12047063a ಇತಿ ವಿದ್ಯಾತಪೋಯೋನಿರಯೋನಿರ್ವಿಷ್ಣುರೀಡಿತಃ|
12047063c ವಾಗ್ಯಜ್ಞೇನಾರ್ಚಿತೋ ದೇವಃ ಪ್ರೀಯತಾಂ ಮೇ ಜನಾರ್ದನಃ||

ಈ ರೀತಿ ವಿದ್ಯೆ-ತಪಸ್ಸುಗಳಿಗೆ ಜನ್ಮಸ್ಥಾನನಾದ ಅಯೋನಿಜ ಭಗವಂತ ವಿಷ್ಣುವು ನನ್ನಿಂದ ಸ್ತುತಿಸಲ್ಪಟ್ಟು ದೇವ ಜನಾರ್ದನನು ನನ್ನಮೇಲೆ ಪ್ರಸನ್ನನಾಗಲಿ!"

[138]12047064a ಏತಾವದುಕ್ತ್ವಾ ವಚನಂ ಭೀಷ್ಮಸ್ತದ್ಗತಮಾನಸಃ|
12047064c ನಮ ಇತ್ಯೇವ ಕೃಷ್ಣಾಯ ಪ್ರಣಾಮಮಕರೋತ್ತದಾ||

ಈ ಮಾತನ್ನು ಹೇಳಿ ಕೃಷ್ಣನಲ್ಲಿಯೇ ಮನಸ್ಸಿಟ್ಟು ಭೀಷ್ಮನು "ನಮಃ ಕೃಷ್ಣಾಯ!" ಎಂದು ಹೇಳಿ ಪ್ರಣಾಮ ಮಾಡಿದನು.

12047065a ಅಭಿಗಮ್ಯ ತು ಯೋಗೇನ ಭಕ್ತಿಂ ಭೀಷ್ಮಸ್ಯ ಮಾಧವಃ|
12047065c ತ್ರೈಕಾಲ್ಯದರ್ಶನಂ ಜ್ಞಾನಂ ದಿವ್ಯಂ ದಾತುಂ ಯಯೌ ಹರಿಃ||

ತನ್ನ ಯೋಗಬಲದಿಂದ ಭೀಷ್ಮನ ಭಕ್ತಿಯನ್ನು ತಿಳಿದುಕೊಂಡ ಮಾಧವ ಹರಿಯು ಅವನಿಗೆ ತ್ರಿಕಾಲದೃಷ್ಟಿಯ ದಿವ್ಯ ಜ್ಞಾನವನ್ನು ನೀಡಲು ಹೊರಟನು.

---

138 ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕವಿದೆ: ನಾರಾಯಣಃ ಪರಂ ಬ್ರಹ್ಮ ನಾರಾಯಣಪರಂ ತಪಃ| ನಾರಾಯಣಃ ಪರೋ ದೇವಃ ಸರ್ವಂ ನಾರಾಯಣಂ ಸದಾ|| ಅರ್ಥಾತ್: ನಾರಾಯಣನೇ ಪರಬ್ರಹ್ಮನು. ನಾರಾಯಣನೇ ಪರಮ ತಪಸ್ಸು. ನಾರಾಯಣನೇ ಎಲ್ಲ ದೇವತೆಗಳಲ್ಲಿಯೂ ಶ್ರೇಷ್ಠ ದೇವನು. ಸರ್ವವೂ ನಾರಾಯಣನೇ!"

[139]12047066a ತಸ್ಮಿನ್ನುಪರತೇ ಶಬ್ದೇ ತತಸ್ತೇ ಬ್ರಹ್ಮವಾದಿನಃ|
12047066c ಭೀಷ್ಮಂ ವಾಗ್ಭಿರ್ಬಾಷ್ಪಕಂಠಾಸ್ತಮಾನರ್ಚುರ್ಮಹಾಮತಿಮ್‌||

ಭೀಷ್ಮನ ಸ್ತೋತ್ರವು ನಿಲ್ಲಲು ಸುತ್ತಲೂ ನೆರೆದಿದ್ದ ಬ್ರಹ್ಮವಾದಿಗಳು ಆನಂದಭಾಷ್ಪದಿಂದ ಕೂಡಿದವರಾಗಿ ಗದ್ಗದಧ್ವನಿಯಲ್ಲಿ ಭೀಷ್ಮನನ್ನು ಪ್ರಶಂಸಿಸಿದರು.

12047067a ತೇ ಸ್ತುವಂತಶ್ಚ ವಿಪ್ರಾಗ್ರ್ಯಾಃ ಕೇಶವಂ ಪುರುಷೋತ್ತಮಮ್‌|
12047067c ಭೀಷ್ಮಂ ಚ ಶನಕೈಃ ಸರ್ವೇ ಪ್ರಶಶಂಸುಃ ಪುನಃ ಪುನಃ||

ಕೇಶವ ಪುರುಷೋತ್ತಮನನ್ನು ಸ್ತುತಿಸುತ್ತಿದ್ದ ಆ ವಿಪ್ರಾಗ್ರ್ಯರು ಎಲ್ಲರೂ ಮೆಲ್ಲನೆ ಪುನಃ ಪುನಃ ಭೀಷ್ಮನನ್ನು ಪ್ರಶಂಸಿಸಿದರು.

12047068a ವಿದಿತ್ವಾ ಭಕ್ತಿಯೋಗಂ ತು ಭೀಷ್ಮಸ್ಯ ಪುರುಷೋತ್ತಮಃ|
12047068c ಸಹಸೋತ್ಥಾಯ ಸಂಹೃಷ್ಟೋ ಯಾನಮೇವಾನ್ವಪದ್ಯತ||

ಭೀಷ್ಮನ ಭಕ್ತಿಯೋಗವನ್ನು ಅರಿತ ಪುರುಷೋತ್ತಮನು ಸಂಹೃಷ್ಟನಾಗಿ ತಕ್ಷಣವೇ ಮೇಲೆದ್ದು ರಥವನ್ನೇರಿ ಕುಳಿತುಕೊಂಡನು.

12047069a ಕೇಶವಃ ಸಾತ್ಯಕಿಶ್ಚೈವ ರಥೇನೈಕೇನ ಜಗ್ಮತುಃ|
12047069c ಅಪರೇಣ ಮಹಾತ್ಮಾನೌ ಯುಧಿಷ್ಠಿರಧನಂಜಯೌ||

ಕೇಶವ-ಸಾತ್ಯಕಿಯರು ಒಂದು ರಥದಲ್ಲಿ ಮತ್ತು ಇನ್ನೊಂದು ರಥದಲ್ಲಿ

---

[139] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆಃ ಯಂ ಯೋಗಿನಃ ಪ್ರಾಪ್ತವಿಯೋಗಕಾಲೇ ಯತ್ನೇನ ಚಿತ್ತೇ ವಿನಿವೇಶಯಂತಿ| ಸ ತಂ ಪುರಸ್ತಾದ್ಧರಿಮೀಕ್ಷಮಾಣಃ ಪ್ರಾಣಾನ್ಜಗೌ ಪ್ರಾಪ್ತಫಲೋಹಿ ಭೀಷ್ಮಃ|| (ಗೀತಾ ಪ್ರೆಸ್).

ಮಹಾತ್ಮ ಯುಧಿಷ್ಠಿರ-ಧನಂಜಯರು ಹೊರಟರು.

12047070a ಭೀಮಸೇನೋ ಯಮೌ ಚೋಭೌ ರಥಮೇಕಂ ಸಮಾಸ್ಥಿತೌ|
12047070c ಕೃಪೋ ಯುಯುತ್ಸುಃ ಸೂತಶ್ಚ ಸಂಜಯಶ್ಚಾಪರಂ ರಥಮ್||

ಭೀಮಸೇನ ಮತ್ತು ನಕುಲ-ಸಹದೇವರು ಒಂದೇ ರಥದಲ್ಲಿ ಕುಳಿತಿದ್ದರು. ಕೃಪ, ಯುಯುತ್ಸು, ಮತ್ತು ಸೂತ ಸಂಜಯರು ಇನ್ನೊಂದು ರಥದಲ್ಲಿದ್ದರು.

12047071a ತೇ ರಥ್ಯೈರ್ನಗರಾಕಾರ್ಯೈಃ ಪ್ರಯಾತಾಃ ಪುರುಷರ್ಷಭಾಃ|
12047071c ನೇಮಿಘೋಷೇಣ ಮಹತಾ ಕಂಪಯಂತೋ ವಸುಂಧರಾಮ್||

ಆ ಪುರುಷರ್ಷಭರು ನಗರಾಕಾರದ ರಥಗಳಲ್ಲಿ ಕುಳಿತು ರಥಚಕ್ರಗಳ ಘೋಷದಿಂದ ಭೂಮಿಯನ್ನೇ ನಡುಗಿಸುತ್ತಾ ಪ್ರಯಾಣಮಾಡಿದರು.

12047072a ತತೋ ಗಿರಃ ಪುರುಷವರಸ್ತವಾನ್ವಿತಾ
ದ್ವಿಜೇರಿತಾಃ ಪಥಿ ಸುಮನಾಃ ಸ ಶುಶ್ರುವೇ|
12047072c ಕೃತಾಂಜಲಿಂ ಪ್ರಣತಮಥಾಪರಂ ಜನಂ
ಸ ಕೇಶಿಹಾ ಮುದಿತಮನಾಭ್ಯನಂದತ||[140]

---

[140] ದಕ್ಷಿಣಾತ್ಯ ಪಾಠದಲ್ಲಿ ಇದರ ನಂತರ ಈ ಮೂರು ಅಧಿಕ ಶ್ಲೋಕಗಳಿವೆ:
ಇತಿ ಸ್ಮರನ್ ಪಠತಿ ಚ ಶಾರ್ಙ್ಗಧನ್ವನಃ ಶೃಣೋತಿ ವಾ
ಯದುಕುಲನಂದನಸ್ತವಮ್| ಸ ಚಕ್ರಭೃತ್ಪ್ರತಿಹತಸರ್ವಕಿಲ್ಬಿಷೋ
ಜನಾರ್ದನಂ ಪ್ರವಿಶತಿ ದೇಹಸಂಕ್ಷಯೇ|| ಸ್ತವರಾಜಃ ಸಮಾಪ್ತೋಯಂ
ವಿಷ್ಣೋರದ್ಭುತಕರ್ಮಣಃ| ಗಾಂಗೇಯೇನ ಪುರಾ ಗೀತೋ
ಮಹಾಪಾತಕನಾಶನಃ|| ಇಮಂ ನರಃ ಸ್ತವರಾಜಂ ಮುಮುಕ್ಷುಃ ಪಠನ್ಮುಚಿಃ

ಆಗ ಪುರುಷೋತ್ತಮನು ಮಾರ್ಗದಲ್ಲಿ ಅನೇಕ ಬ್ರಾಹ್ಮಣರು ಸುಮನಸ್ಕರಾಗಿ ಸ್ತುತಿಸುತ್ತಿದ್ದುದನ್ನು ಕೇಳಿದನು. ಕೇಶಿಹಂತಕ ಕೃಷ್ಣನು ಆನಂದತುಂದಿಲನಾಗಿ ಕೈಮುಗಿದು ಪ್ರಣಾಮಮಾಡುತ್ತಿದ್ದ ಇತರ ಜನರನ್ನು ಅಭಿನಂದಿಸಿದನು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಭೀಷ್ಮಸ್ತವರಾಜೇ ಸಪ್ತಚತ್ವಾರಿಂಶೋಽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಭೀಷ್ಮಸ್ತವರಾಜ ಎನ್ನುವ ನಲ್ವತ್ತೇಳನೇ ಅಧ್ಯಾಯವು.

೪೮

ಜಾಮದಗ್ನೇಯೋಽಪಖ್ಯಾನ

ಪರಶುರಾಮನು ಮಾಡಿದ ಕ್ಷತ್ರಿಯ ಸಂಹಾರದ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ (1-15).

12048001 ವೈಶಂಪಾಯನ ಉವಾಚ|

12048001a ತತಃ ಸ ಚ ಹೃಷೀಕೇಶಃ ಸ ಚ ರಾಜಾ ಯುಧಿಷ್ಠಿರಃ|

12048001c ಕೃಪಾದಯಶ್ಚ ತೇ ಸರ್ವೇ ಚತ್ವಾರಃ ಪಾಂಡವಾಶ್ಚ ಹ||

12048002a ರಥೈಸ್ತೇ ನಗರಾಕಾರೈಃ ಪತಾಕಾಧ್ವಜಶೋಭಿತೈಃ|

ಕಲುಷಿತಕಲ್ಮಷಾಪಹಮ್| ಅತೀತ್ಯ ಲೋಕಾನಮಲಾನ್ ಸನಾತನಾನ್ ಪದಂ ಸ ಗಚ್ಛತ್ಯಮೃತಂ ಮಹಾತ್ಮನಃ|| (ಗೀತಾ ಪ್ರೆಸ್).

12048002c ಯಯುರಾಶು ಕುರುಕ್ಷೇತ್ರಂ ವಾಜಿಭಿಃ ಶೀಘ್ರಗಾಮಿಭಿಃ||

ವೈಶಂಪಾಯನನು ಹೇಳಿದನು: "ಅನಂತರ ಹೃಷೀಕೇಶ, ರಾಜಾ ಯುಧಿಷ್ಠಿರ, ನಾಲ್ವರು ಪಾಂಡವರು, ಮತ್ತು ಕೃಪನೇ ಮೊದಲಾದವರೆಲ್ಲರೂ ಶೀಘ್ರ ಕುದುರೆಗಳನ್ನು ಕಟ್ಟಿದ, ಪತಾಕೆ-ಧ್ವಜಗಳಿಂದ ಶೋಭಿಸುತ್ತಿರುವ, ನಗರಗಳ ಆಕಾರದ ರಥಗಳಲ್ಲಿ ಕುಳಿತು ಕುರುಕ್ಷೇತ್ರಕ್ಕೆ ಪ್ರಯಾಣಿಸಿದರು.

12048003a ತೇऽವತೀರ್ಯ ಕುರುಕ್ಷೇತ್ರಂ ಕೇಶಮಜ್ಜಾಸ್ಥಿಸಂಕುಲಮ್|
12048003c ದೇಹನ್ಯಾಸಃ ಕೃತೋ ಯತ್ರ ಕ್ಷತ್ರಿಯೈಸ್ತೈರ್ಮಹಾತ್ಮಭಿಃ||

ಮಹಾತ್ಮ ಕ್ಷತ್ರಿಯರು ಎಲ್ಲಿ ದೇಹಗಳನ್ನು ತೊರೆದಿದ್ದರೋ ಆ ತಲೆಗೂದಲು-ಮಜ್ಜೆ-ಮೂಳೆಗಳ ಸಮಾಕುಲವಾಗಿದ್ದ ಕುರುಕ್ಷೇತ್ರದಲ್ಲಿ ಅವರು ಇಳಿದರು.

12048004a ಗಜಾಶ್ವದೇಹಾಸ್ಥಿಚಯೈಃ ಪರ್ವತೈರಿವ ಸಂಚಿತಮ್|
12048004c ನರಶೀರ್ಷಕಪಾಲೈಶ್ಚ ಶಂಖೈರಿವ ಸಮಾಚಿತಮ್||

ಅಲ್ಲಿ ಆನೆ-ಕುದುರೆಗಳ ದೇಹಗಳೂ ಮೂಳೆಗಳೂ ಪರ್ವತಗಳೋಪಾದಿಯಲ್ಲಿ ಬಿದ್ದಿದ್ದವು. ಅಲ್ಲಿ ಬಿದ್ದಿದ್ದ ಮನುಷ್ಯರ ತಲೆಬುರುಡೆಗಳು ಶಂಖಗಳಂತೆ ತೋರುತ್ತಿದ್ದವು.

12048005a ಚಿತಾಸಹಸ್ರೈರ್ನಿಚಿತಂ ವರ್ಮಶಸ್ತ್ರಸಮಾಕುಲಮ್|
12048005c ಆಪಾನಭೂಮಿಂ ಕಾಲಸ್ಯ ತದಾ ಭುಕ್ತೋಜ್ಜಿತಾಮಿವ||

ಸಹಸ್ರಾರು ಚಿತೆಗಳು ಉರಿಯುತ್ತಿದ್ದವು. ಕವಚ-ಆಯುಧಗಳು ರಾಶಿ-ರಾಶಿಯಾಗಿ ಬಿದ್ದಿದ್ದವು. ಆಗ ಕುರುಕ್ಷೇತ್ರವು ಕಾಲನ

ಪಾನಭೂಮಿಯಂತೆ ತೋರುತ್ತಿತ್ತು. ಅಲ್ಲಲ್ಲಿ ಬಿದ್ದಿದ್ದ ಮಜ್ಜೆ-ಅಸ್ತಿಗಳು ಕಾಲನು ತಿಂದು ಉಳಿಸಿದ ಎಂಜಲಿನಂತೆ ತೋರುತ್ತಿದ್ದವು.

12048006a ಭೂತಸಂಘಾನುಚರಿತಂ ರಕ್ಷೋಗಣನಿಷೇವಿತಮ್।
12048006c ಪಶ್ಯಂತಸ್ತೇ ಕುರುಕ್ಷೇತ್ರಂ ಯಯುರಾಶು ಮಹಾರಥಾಃ॥

ಭೂತಗಣಗಳು ಸಂಚರಿಸುತ್ತಿದ್ದ ಮತ್ತು ರಾಕ್ಷಸಗಣಗಳಿಂದ ಸಂಸೇವಿಸಲ್ಪಟ್ಟ ಕುರುಕ್ಷೇತ್ರವನ್ನು ನೋಡುತ್ತಾ ಆ ಮಹಾರಥರು ಸಾಗಿದರು.

12048007a ಗಚ್ಚನ್ನೇವ ಮಹಾಬಾಹುಃ ಸರ್ವಯಾದವನಂದನಃ।
12048007c ಯುಧಿಷ್ಠಿರಾಯ ಪ್ರೋವಾಚ ಜಾಮದಗ್ನ್ಯಸ್ಯ ವಿಕ್ರಮಮ್॥

ಹಾಗೆ ಸಾಗುತ್ತಿರುವಾಗ ಸರ್ವಯಾದವರ ನಂದನ, ಮಹಾಬಾಹು ಕೃಷ್ಣನು ಯುಧಿಷ್ಠಿರನಿಗೆ ಜಾಮದಗ್ನಿ ಪರಶುರಾಮನ ವಿಕ್ರಮದ ಕುರಿತು ಹೇಳಿದನುಃ

12048008a ಅಮೀ ರಾಮಹ್ರದಾಃ ಪಂಚ ದೃಶ್ಯಂತೇ ಪಾರ್ಥ ದೂರತಃ।
12048008c ಯೇಷು ಸಂತರ್ಪಯಾಮಾಸ ಪೂರ್ವಾನ್ಕ್ಷತ್ರಿಯಶೋಣಿತೈಃ॥

“ಪಾರ್ಥ! ಇಗೋ ದೂರದಲ್ಲಿ ಕಾಣುತ್ತಿರುವ ಈ ಐದು
ಸರೋವರಗಳಲ್ಲಿ ಹಿಂದೆ ರಾಮನು ಕ್ಷತ್ರಿಯರ ರಕ್ತದಿಂದ
ತರ್ಪಣಗಳನ್ನಿತ್ತಿದ್ದನು.

12048009a ತ್ರಿಃಸಪ್ತಕೃತ್ವೋ ವಸುಧಾಂ ಕೃತ್ವಾ ನಿಃಕ್ಷತ್ರಿಯಾಂ ಪ್ರಭುಃ।
12048009c ಇಹೇದಾನೀಂ ತತೋ ರಾಮಃ ಕರ್ಮಣೋ ವಿರರಾಮ ಹ॥

ಪ್ರಭು ರಾಮನು ಇಪ್ಪತ್ತೊಂದು ಬಾರಿ ಭೂಮಿಯನ್ನು ನಿಃಕ್ಷತ್ರಿಯರನ್ನಾಗಿ

ಮಾಡಿ ಇಲ್ಲಿಯೇ ಆ ಕರ್ಮದಿಂದ ವಿರತನಾದನು.”

12048010 ಯುಧಿಷ್ಠಿರ ಉವಾಚ

12048010a ತ್ರಿಃಸಪ್ತಕೃತ್ವಃ ಪೃಥಿವೀ ಕೃತಾ ನಿಃಕ್ಷತ್ರಿಯಾ ತದಾ|
12048010c ರಾಮೇಣೇತಿ ಯದಾತ್ಥ ತ್ವಮತ್ರ ಮೇ ಸಂಶಯೋ ಮಹಾನ್||

ಯುಧಿಷ್ಠಿರನು ಹೇಳಿದನು: “ರಾಮನು ಇಪ್ಪತ್ತೊಂದು ಬಾರಿ ಪೃಥ್ವಿಯನ್ನು ನಿಃಕ್ಷತ್ರಿಯರನ್ನಾಗಿಸಿದನೆಂದು ಹೇಳಿದೆಯಲ್ಲಾ! ಅದರ ಕುರಿತು ಒಂದು ಮಹಾ ಸಂಶಯವು ನನ್ನಲ್ಲಿದೆ.

12048011a ಕ್ಷತ್ರಬೀಜಂ ಯದಾ ದಗ್ಧಂ ರಾಮೇಣ ಯದುಪುಂಗವ|
12048011c ಕಥಂ ಭೂಯಃ ಸಮುತ್ಪತ್ತಿಃ ಕ್ಷತ್ರಸ್ಯಾಮಿತವಿಕ್ರಮ||

ಅಮಿತವಿಕ್ರಮಿ! ಯದುಪುಂಗವ! ರಾಮನಿಂದ ಕ್ಷತ್ರಬೀಜವು ಭಸ್ಮವಾದ ನಂತರ ಪುನಃ ಹೇಗೆ ಕ್ಷತ್ರಿಯರ ಉತ್ಪತ್ತಿಯಾಯಿತು?

12048012a ಮಹಾತ್ಮನಾ ಭಗವತಾ ರಾಮೇಣ ಯದುಪುಂಗವ|
12048012c ಕಥಮುತ್ಸಾದಿತಂ ಕ್ಷತ್ರಂ ಕಥಂ ವೃದ್ಧಿಂ ಪುನರ್ಗತಮ್||

ಯದುಪುಂಗವ! ಮಹಾತ್ಮಾ ಭಗವನ್ ರಾಮನು ಯಾವ ಕಾರಣದಿಂದ ಕ್ಷತ್ರಿಯರನ್ನು ವಿನಾಶಗೊಳಿಸಿದನು? ಪುನಃ ಕ್ಷತ್ರಿಯರ ವೃದ್ಧಿಯು ಹೇಗಾಯಿತು?

12048013a ಮಹಾಭಾರತಯುದ್ಧೇ ಹಿ ಕೋಟಿಶಃ ಕ್ಷತ್ರಿಯಾ ಹತಾಃ|
12048013c ತಥಾಭೂಚ್ಚ ಮಹೀ ಕೀರ್ಣಾ ಕ್ಷತ್ರಿಯೈರ್ವದತಾಂ ವರ||

ಮಾತನಾಡುವವರಲ್ಲಿ ಶ್ರೇಷ್ಠನೇ! ಮಹಾಭಾರತ ಯುದ್ಧದಲ್ಲಿ ಹೇಗೆ ಕೋಟಿಗಟ್ಟಲೆ ಕ್ಷತ್ರಿಯರು ಹತರಾದರೋ ಹಾಗೆ ಆಗಲೂ ಕೂಡ ಈ

ಭೂಮಿಯು ಕ್ಷತ್ರಿಯರ ಮೃತದೇಹಗಳಿಂದ
ತುಂಬಿಹೋಗಿದ್ದಿರಬಹುದು।

12048014a ಏವಂ ಮೇ ಚಿಂಧಿ ವಾರ್ಷ್ಣೇಯ ಸಂಶಯಂ ತಾರ್ಕ್ಷ್ಯಕೇತನ|
12048014c ಆಗಮೋ ಹಿ ಪರಃ ಕೃಷ್ಣ ತ್ವತ್ತೋ ನೋ ವಾಸವಾನುಜ||

ವಾರ್ಷ್ಣೇಯ। ಗರುಡಧ್ವಜ। ಕೃಷ್ಣ। ವಾಸವಾನುಜ। ನನ್ನ ಈ
ಸಂಶಯವನ್ನು ಹೋಗಲಾಡಿಸು। ನೀನೇ ಸರ್ವ ಆಗಮಗಳ ನಿಗಮ.
ನಿನ್ನ ಹೊರತಾದ ಶಾಸ್ತ್ರಗಳ್ಯಾವುವೂ ಇಲ್ಲ।””

12048015 ವೈಶಂಪಾಯನ ಉವಾಚ|
12048015a ತತೋ ವ್ರಜನ್ನೇವ ಗದಾಗ್ರಜಃ ಪ್ರಭುಃ
ಶಶಂಸ ತಸ್ಯೈ ನಿಖಿಲೇನ ತತ್ತ್ವತಃ|
12048015c ಯುಧಿಷ್ಠಿರಾಯಾಪ್ರತಿಮೌಜಸೇ ತದಾ
ಯಥಾಭವತ್ ಕ್ಷತ್ರಿಯಸಂಕುಲಾ ಮಹೀ||

ವೈಶಂಪಾಯನನು ಹೇಳಿದನು: “ಅನಂತರ ಗದಾಗ್ರಜ ಪ್ರಭು ಕೃಷ್ಣನು
ಅಪ್ರತಿಮ ತೇಜಸ್ವೀ ಯುಧಿಷ್ಠಿರನಿಗೆ ಭೂಮಿಯಲ್ಲಿ ಕ್ಷತ್ರಿಯಸಂಕುಲಗಳ
ವಿನಾಶವು ಹೇಗಾಯಿತೆನ್ನುವುದನ್ನು ಸಂಪೂರ್ಣವಾಗಿ ಅರ್ಥವತ್ತಾಗಿ
ಹೇಳಿದನು.

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ರಾಮೋಪಾಖ್ಯಾನೇ ಅಷ್ಟಚತ್ವಾರಿಂಶೋsಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ರಾಮೋಪಾಖ್ಯಾನ ಎನ್ನುವ ನಲ್ವತ್ತೆಂಟನೇ ಅಧ್ಯಾಯವು.

೪೯

ಕ್ಷತ್ರಿಯರ ವಿನಾಶ ಮತ್ತು ಉತ್ಪನ್ನರಾದುದರ ಕಥೆ (1-80).

12049001 ವಾಸುದೇವ ಉವಾಚ|

12049001a ಶೃಣು ಕೌಂತೇಯ ರಾಮಸ್ಯ ಮಯಾ ಯಾವತ್ಪರಿಶ್ರುತಮ್|
12049001c ಮಹರ್ಷೀಣಾಂ ಕಥಯತಾಂ ಕಾರಣಂ ತಸ್ಯ ಜನ್ಮ ಚ||
12049002a ಯಥಾ ಚ ಜಾಮದಗ್ನ್ಯೇನ ಕೋಟಿಶಃ ಕ್ಷತ್ರಿಯಾ ಹತಾಃ|
12049002c ಉದ್ಭೂತಾ ರಾಜವಂಶೇಷು ಯೇ ಭೂಯೋ ಭಾರತೇ ಹತಾಃ||

ವಾಸುದೇವನು ಹೇಳಿದನು: "ಕೌಂತೇಯ! ಮಹರ್ಷಿಗಳಿಂದ ನಾನು ಹೇಗೆ ಕೇಳಿದ್ದೆನೋ ಹಾಗೆ ರಾಮನ ಜನ್ಮದ ಕಾರಣ, ಆ ಜಾಮದಗ್ನಿಯು ಏಕೆ ಕೋಟಿಗಟ್ಟಲೆ ಕ್ಷತ್ರಿಯರನ್ನು ಸಂಹರಿಸಿದನು ಮತ್ತು ಹತರಾಗಿದ್ದ ರಾಜವಂಶಗಳಲ್ಲಿ ಪುನಃ ಹೇಗೆ ಕ್ಷತ್ರಿಯರು ಹುಟ್ಟಿದರು ಎನ್ನುವುದನ್ನು ಕೇಳು.

12049003a ಜಹ್ನೋರಜಹ್ನುಸ್ತನಯೋ ಬಲ್ಲವಸ್ತಸ್ಯ ಚಾತ್ಮಜಃ|
12049003c ಕುಶಿಕೋ ನಾಮ ಧರ್ಮಜ್ಞಸ್ತಸ್ಯ ಪುತ್ರೋ ಮಹೀಪತಿಃ||

ಜಹ್ನುವೆನ್ನುವ ರಾಜನಿದ್ದನು. ಅವನ ಮಗನೇ ಅಜ. ಬಲ್ಲವನು ಅಜನ ಮಗನಾಗಿದ್ದನು. ಮಹೀಪತಿ ಬಲ್ಲವನಿಗೆ ಕುಶಿಕ ಎಂಬ ಹೆಸರಿನ ಧರ್ಮಜ್ಞ ಮಗನಿದ್ದನು.

12049004a ಉಗ್ರಂ ತಪಃ ಸಮಾತಿಷ್ಠತ್ಸಹಸ್ರಾಕ್ಷಸಮೋ ಭುವಿ|
12049004c ಪುತ್ರಂ ಲಭೇಯಮಜಿತಂ ತ್ರಿಲೋಕೇಶ್ವರಮಿತ್ಯುತ||

ಭುವಿಯಲ್ಲಿ ಸಹಸ್ರಾಕ್ಷನಂತಿದ್ದ ಆ ಕುಶಿಕನು ಅಪರಾಜಿತನಾದ

ತ್ರಿಲೋಕಗಳಿಗೂ ಈಶ್ವರನಾಗುವ ಮಗನನ್ನು ಪಡೆಯಲೋಸುಗ ಉಗ್ರ ತಪಸ್ಸನ್ನಾಚರಿಸಿದನು.

12049005a ತಮುಗ್ರತಪಸಂ ದೃಷ್ಟ್ವಾ ಸಹಸ್ರಾಕ್ಷಃ ಪುರಂದರಃ|
12049005c ಸಮರ್ಥಃ ಪುತ್ರಜನನೇ ಸ್ವಯಮೇವೈತ್ಯ ಭಾರತ||

ಭಾರತ! ಅವನ ಆ ಉಗ್ರತಪಸ್ಸನ್ನು ನೋಡಿ ಸಹಸ್ರಾಕ್ಷ ಪುರಂದರನು, ಕುಶಿಕನು ಬಯಸಿದ ಪುತ್ರನನ್ನು ಪಡೆಯಲು ಸಮರ್ಥನೆಂದು ತಿಳಿದು, ತಾನೇ ಅವನ ಮಗನಾಗಿ ಹುಟ್ಟಿದನು.

12049006a ಪುತ್ರತ್ವಮಗಮದ್ರಾಜಂಸ್ತಸ್ಯ ಲೋಕೇಶ್ವರೇಶ್ವರಃ|
12049006c ಗಾಧಿರ್ನಾಮಾಭವತ್ಪುತ್ರಃ ಕೌಶಿಕಃ ಪಾಕಶಾಸನಃ||

ರಾಜನ್! ಲೋಕೇಶ್ವರ ಈಶ್ವರ ಪಾಕಶಾಸನನು ಗಾಧಿ ಎಂಬ ಹೆಸರಿನಲ್ಲಿ ಕುಶಿಕನ ಪುತ್ರನಾಗಿ ಕೌಶಿಕನೆಂದೂ ಕರೆಯಲ್ಪಟ್ಟನು.

12049007a ತಸ್ಯ ಕನ್ಯಾಭವದ್ರಾಜನ್ನಾಮ್ನಾ ಸತ್ಯವತೀ ಪ್ರಭೋ|
12049007c ತಾಂ ಗಾಧಿಃ ಕವಿಪುತ್ರಾಯ ಸೋರ್ಚೀಕಾಯ ದದೌ ಪ್ರಭುಃ||

ರಾಜನ್! ಪ್ರಭೋ! ಅವನಿಗೆ ಸತ್ಯವತೀ ಎಂಬ ಹೆಸರಿನ ಮಗಳಾದಳು. ಪ್ರಭು ಗಾಧಿಯು ಅವಳನ್ನು ಭೃಗುವಿನ ಮಗ ಋಚೀಕನಿಗೆ ಮದುವೆಮಾಡಿಕೊಟ್ಟನು.

12049008a ತತಃ ಪ್ರೀತಸ್ತು ಕೌಂತೇಯ ಭಾರ್ಗವಃ ಕುರುನಂದನ|
12049008c ಪುತ್ರಾರ್ಥೇ ಶ್ರಪಯಾಮಾಸ ಚರುಂ ಗಾಧೇಸ್ತಥೈವ ಚ||

ಕೌಂತೇಯ! ಕುರುನಂದನ! ಅದರಿಂದ ಪ್ರೀತನಾದ ಭಾರ್ಗವ ಋಚೀಕನು ತನಗೂ ಮತ್ತು ಮಾವ ಗಾಧಿಗೂ ಪುತ್ರರಾಗಬೇಕೆಂಬ

ಇಚ್ಛೆಯಿಂದ ಮಂತ್ರೋಕ್ತವಾದ ಚರುವನ್ನು ಸಿದ್ಧಪಡಿಸಿದನು.

12049009a ಆಹೂಯ ಚಾಹ ತಾಂ ಭಾರ್ಯಾಮೃಚೀಕೋ ಭಾರ್ಗವಸ್ತದಾ|
12049009c ಉಪಯೋಜ್ಯಶ್ಚರುರಯಂ ತ್ವಯಾ ಮಾತ್ರಾಪ್ಯಯಂ ತವ||

ಅನಂತರ ಭಾರ್ಗವ ಋಚೀಕನು ತನ್ನ ಭಾರ್ಯೆಯನ್ನು ಕರೆದು, ವಿಭಾಗಿಸಿದ ಚರುವಿನ ಎರಡು ಭಾಗಗಳನ್ನೂ ತೋರಿಸಿ ಹೇಳಿದನು: "ನೀನು ಒಂದು ಭಾಗವನ್ನೂ ನಿನ್ನ ತಾಯಿಯು ಮತ್ತೊಂದು ಭಾಗವನ್ನೂ ಭಕ್ಷಿಸಿರಿ!

12049010a ತಸ್ಯಾ ಜನಿಷ್ಯತೇ ಪುತ್ರೋ ದೀಪ್ತಿಮಾನ್ಕ್ಷತ್ರಿಯರ್ಷಭಃ|
12049010c ಅಜಯ್ಯಃ ಕ್ಷತ್ರಿಯೈರ್ಲೋಕೇ ಕ್ಷತ್ರಿಯರ್ಷಭಸೂದನಃ||

ಅವಳಲ್ಲಿ ಪ್ರದೀಪ್ತಮಾನ ಕ್ಷತ್ರಿಯರ್ಷಭನು ಜನಿಸುತ್ತಾನೆ. ಆ ಕ್ಷತ್ರಿಯರ್ಷಭಸೂದನನು ಕ್ಷತ್ರಿಯ ಲೋಕಗಳನ್ನು ಜಯಿಸುತ್ತಾನೆ.

12049011a ತವಾಪಿ ಪುತ್ರಂ ಕಲ್ಯಾಣಿ ಧೃತಿಮಂತಂ ತಪೋನ್ವಿತಮ್|
12049011c ಶಮಾತ್ಮಕಂ ದ್ವಿಜಶ್ರೇಷ್ಠಂ ಚರುರೇಷ ವಿಧಾಸ್ಯತಿ||

ಕಲ್ಯಾಣೀ! ಚರುವಿನ ಈ ಭಾಗದಿಂದ ನೀನು ದೃತಿಮಂತನೂ, ತಪೋನ್ವಿತನೂ, ಶಾಂತಾತ್ಮನೂ ಆದ ದ್ವಿಜಶ್ರೇಷ್ಠನನ್ನು ಪುತ್ರನನ್ನಾಗಿ ಪಡೆಯುವೆ!"

12049012a ಇತ್ಯೇವಮುಕ್ತ್ವಾ ತಾಂ ಭಾರ್ಯಾಮೃಚೀಕೋ ಭೃಗುನಂದನಃ|
12049012c ತಪಸ್ಯಭಿರತೋ ಧೀಮಾನ್ವನಮಾರಣ್ಯಮೇವ ಹ||

ತನ್ನ ಪತ್ನಿಗೆ ಹೀಗೆ ಹೇಳಿ ಭೃಗುನಂದನ ಧೀಮಾನ್ ಋಚೀಕನು ತಪಸ್ಸಿಗಾಗಿ ಅರಣ್ಯಕ್ಕೆ ತೆರಳಿದನು.

12049013a ಏತಸ್ಮಿನ್ನೇವ ಕಾಲೇ ತು ತೀರ್ಥಯಾತ್ರಾಪರೋ ನೃಪಃ|
12049013c ಗಾಧಿಃ ಸದಾರಃ ಸಂಪ್ರಾಪ್ತ ಋಚೀಕಸ್ಯಾಶ್ರಮಂ ಪ್ರತಿ||

ಇದೇ ಸಮಯದಲ್ಲಿ ತೀರ್ಥಯಾತ್ರೆಗೈಯುತ್ತಿದ್ದ ನೃಪ ಗಾಧಿಯು ಪತ್ನಿಯೊಂದಿಗೆ ಋಚೀಕನ ಆಶ್ರಮಕ್ಕೆ ಬಂದನು.

12049014a ಚರುದ್ವಯಂ ಗೃಹೀತ್ವಾ ತು ರಾಜನ್ಸತ್ಯವತೀ ತದಾ|
12049014c ಭರ್ತುರ್ವಾಕ್ಯಾದಥಾವ್ಯಗ್ರಾ ಮಾತ್ರೇ ಹೃಷ್ಟಾ ನ್ಯವೇದಯತ್||

ರಾಜನ್! ಆಗ ಸತ್ಯವತಿಯು ಚರುವಿನ ಎರಡು ಭಾಗಗಳನ್ನು ಎತ್ತಿಕೊಂಡು ಹರ್ಷದಿಂದ ತನ್ನ ಪತಿಯ ಮಾತನ್ನು ತಾಯಿಗೆ ತಿಳಿಸಿದಳು.

12049015a ಮಾತಾ ತು ತಸ್ಯಾಃ ಕೌಂತೇಯ ದುಹಿತ್ರೇ ಸ್ವಂ ಚರುಂ ದದೌ|
12049015c ತಸ್ಯಾಶ್ಚರುಮಥಾಜ್ಞಾತಮಾತ್ಮಸಂಸ್ಥಂ ಚಕಾರ ಹ||

ಕೌಂತೇಯ! ಆ ತಾಯಿಯಾದರೋ ಅಜ್ಞಾನವಶಾತ್ ತನಗೆಂದು ಅಭಿಮಂತ್ರಿಸಿದ್ದ ಚರುವನ್ನು ತನ್ನ ಮಗಳಿಗೆ ಕೊಟ್ಟು, ಅವಳಿಗೆಂದಿದ್ದ ಚರುವಿನ ಭಾಗವನ್ನು ತಾನೇ ಭುಂಜಿಸಿದಳು.

12049016a ಅಥ ಸತ್ಯವತೀ ಗರ್ಭಂ ಕ್ಷತ್ರಿಯಾಂತಕರಂ ತದಾ|
12049016c ಧಾರಯಾಮಾಸ ದೀಪ್ತೇನ ವಪುಷಾ ಘೋರದರ್ಶನಮ್||

ಆಗ ಸತ್ಯವತಿಯು ಪ್ರದೀಪ್ತತೇಜಸ್ಸಿನಿಂದ ಕೂಡಿದ ಘೋರವಾಗಿ ಕಾಣುತ್ತಿದ್ದ ಕ್ಷತ್ರಿಯಾಂತಕ ಗರ್ಭವನ್ನು ಧರಿಸಿದಳು.

12049017a ತಾಮೃಚೀಕಸ್ತದಾ ದೃಷ್ಟ್ವಾ ಧ್ಯಾನಯೋಗೇನ ವೈ ತತಃ|
12049017c ಅಬ್ರವೀದ್ರಾಜಶಾರ್ದೂಲ ಸ್ವಾಂ ಭಾರ್ಯಾಂ ವರವರ್ಣಿನೀಮ್||

ರಾಜಶರ್ದೂಲ! ಆಗ ಋಚೀಕನು ಧ್ಯಾನಯೋಗದಿಂದ ಅದನ್ನು ಕಂಡು ತನ್ನ ವರವರ್ಣಿನೀ ಪತ್ನಿಗೆ ಇಂತೆಂದನುಃ

12049018a ಮಾತ್ರಾಸಿ ವ್ಯಂಸಿತಾ ಭದ್ರೇ ಚರುವ್ಯತ್ಯಾಸಹೇತುನಾ|
12049018c ಜನಿಷ್ಯತೇ ಹಿ ತೇ ಪುತ್ರಃ ಕ್ರೂರಕರ್ಮಾ ಮಹಾಬಲಃ||

"ಭದ್ರೇ! ಚರುವು ಅದಲುಬದಲಾಗಿದೆ. ತಾಯಿಯಿಂದ ವಂಚಿತಳಾಗಿರುವೆ. ನಿನಗೆ ಹುಟ್ಟುವ ಮಹಾಬಲಶಾಲೀ ಮಗನು ಕ್ರೂರಕರ್ಮಿಯಾಗುವನು.

12049019a ಜನಿಷ್ಯತೇ ಹಿ ತೇ ಭ್ರಾತಾ ಬ್ರಹ್ಮಭೂತಸ್ತಪೋಧನಃ|
12049019c ವಿಶ್ವಂ ಹಿ ಬ್ರಹ್ಮ ತಪಸಾ ಮಯಾ ತತ್ರ ಸಮರ್ಪಿತಮ್||

ತಪಸ್ಸಿನಿಂದ ಸಕಲ ಬ್ರಹ್ಮತೇಜಸ್ಸನ್ನೂ ಸಪರ್ಪಿಸಿದ್ದ ಆ ಚರುವಿನಿಂದ ಹುಟ್ಟುವ ನಿನ್ನ ತಮ್ಮನು ಬ್ರಹ್ಮಭೂತನೂ ತಪೋಧನನೂ ಆಗುವನು."

12049020a ಸೈವಮುಕ್ತಾ ಮಹಾಭಾಗಾ ಭರ್ತ್ರಾ ಸತ್ಯವತೀ ತದಾ|
12049020c ಪಪಾತ ಶಿರಸಾ ತಸ್ಮೈ ವೇಪಂತೀ ಚಾಬ್ರವೀದಿದಮ್||

ಪತಿಯು ಹೀಗೆ ಹೇಳಲು ಮಹಾಭಾಗೆ ಸತ್ಯವತಿಯು ತನ್ನ ತಲೆಯನ್ನು ಪತಿಯ ಪಾದಗಳಲ್ಲಿರಿಸಿ ಭಯದಿಂದ ನಡುಗುತ್ತಾ ಹೇಳಿದಳುಃ

12049021a ನಾರ್ಹೋಽಸಿ ಭಗವನ್ನದ್ಯ ವಕ್ತುಮೇವಂವಿಧಂ ವಚಃ|
12049021c ಬ್ರಾಹ್ಮಣಾಪಸದಂ ಪುತ್ರಂ ಪ್ರಾಪ್ಸ್ಯಸೀತಿ ಮಹಾಮುನೇ||

"ಮಹಾಮುನೇ! ಭಗವನ್! ಬ್ರಾಹ್ಮಣಾಪಸದನಾದ ಮಗನನ್ನು ಪಡೆಯುವೆನೆಂದು ಈ ರೀತಿ ಈಗ ಹೇಳುವುದು ಸರಿಯಲ್ಲ! ನಾನು

ಅದಕ್ಕೆ ಅರ್ಹಳಲ್ಲ!”

12049022 ಋಚೀಕ ಉವಾಚ|
12049022a ನೈಷ ಸಂಕಲ್ಪಿತಃ ಕಾಮೋ ಮಯಾ ಭದ್ರೇ ತಥಾ ತ್ವಯಿ|
12049022c ಉಗ್ರಕರ್ಮಾ ಭವೇತ್ಪುತ್ರಶ್ಚರುರ್ಮಾತಾ ಚ ಕಾರಣಮ್||

ಋಚೀಕನು ಹೇಳಿದನು: “ಭದ್ರೇ! ನಾನೂ ಕೂಡ ಆ ಆಸೆಯಿಂದ ಸಂಕಲ್ಪಮಾಡಿರಲಿಲ್ಲ. ಆದರೆ ನಿನ್ನ ತಾಯಿಯಿತ್ತ ಚರುವಿನ ಕಾರಣದಿಂದ ನಿನ್ನ ಮಗನು ಉಗ್ರಕರ್ಮಿಯಾಗುತ್ತಾನೆ!”

12049023 ಸತ್ಯವತ್ಯುವಾಚ|
12049023a ಇಚ್ಚ್ಟಽಲ್ಲೋಕಾನಪಿ ಮುನೇ ಸೃಜೇಥಾಃ ಕಿಂ ಪುನರ್ಮಮ|
12049023c ಶಮಾತ್ಮಕಮೃಜುಂ ಪುತ್ರಂ ಲಭೇಯಂ ಜಪತಾಂ ವರ||

ಸತ್ಯವತಿಯು ಹೇಳಿದಳು: “ಜಪಿಸುವವರಲ್ಲಿ ಶ್ರೇಷ್ಠನೇ! ಮುನೇ! ನೀನು ಇಚ್ಛಿಸಿದರೆ ಲೋಕಗಳನ್ನೇ ಸೃಷ್ಟಿಸಬಲ್ಲೆ! ಹೀಗಿರುವಾಗ ಶಾಂತಾತ್ಮಕ ಪುತ್ರನನ್ನು ನನಗೆ ಕೊಡಲಾರೆಯೇ?”

12049024 ಋಚೀಕ ಉವಾಚ|
12049024a ನೋಕ್ತಪೂರ್ವಂ ಮಯಾ ಭದ್ರೇ ಸ್ವೈರೇಷ್ವಪ್ಯನೃತಂ ವಚಃ|
12049024c ಕಿಮುತಾಗ್ನಿಂ ಸಮಾಧಾಯ ಮಂತ್ರವಚ್ಚರುಸಾಧನೇ||

ಋಚೀಕನು ಹೇಳಿದನು: “ಭದ್ರೇ! ಇದಕ್ಕೆ ಮೊದಲು ಎಂದೂ ನಾನು ಸತ್ಯವಾಗದ ಮಾತನ್ನು ಆಡಿರಲಿಲ್ಲ. ಹೀಗಿರುವಾಗ ಅಗ್ನಿಯನ್ನು ಪ್ರತಿಷ್ಠಾಪಿಸಿ ಮಂತ್ರವನ್ನು ಉಚ್ಚರಿಸಿ ಸಿದ್ಧಪಡಿಸಿದ ಚರುವು ಸುಳ್ಳಾಗಲು ಹೇಗೆ ಸಾಧ್ಯ?”

12049025 ಸತ್ಯವತ್ಯುವಾಚ|
12049025a ಕಾಮಮೇವಂ ಭವೇತ್ಪ್ರೋ ಮಮೇಹ ತವ ಚೈವ ಹ|
12049025c ಶಮಾತ್ಮಕಮೃಜುಂ ಪುತ್ರಂ ಲಭೇಯಂ ಜಪತಾಂ ವರ||

ಸತ್ಯವತಿಯು ಹೇಳಿದಳು: "ಜಪಿಸುವವರಲ್ಲಿ ಶ್ರೇಷ್ಠನೇ! ನಮ್ಮ ಮೊಮ್ಮಗನು ಬೇಕಾದರೆ ನೀನು ಹೇಳಿದಂತೆ ಹುಟ್ಟಲಿ. ಆದರೆ ನನ್ನಲ್ಲಿ ಮಾತ್ರ ಈಗ ಶಾಂತಸ್ವಭಾವದ ಮಗನೇ ಹುಟ್ಟುವಂತೆ ಅನುಗ್ರಹಿಸು!"

12049026 ಋಚೀಕ ಉವಾಚ|
12049026a ಪುತ್ರೇ ನಾಸ್ತಿ ವಿಶೇಷೋ ಮೇ ಪೌತ್ರೇ ವಾ ವರವರ್ಣಿನಿ|
12049026c ಯಥಾ ತ್ವಯೋಕ್ತಂ ತು ವಚಸ್ತಥಾ ಭದ್ರೇ ಭವಿಷ್ಯತಿ||

ಋಚೀಕನು ಹೇಳಿದನು: "ವರವರ್ಣಿನೀ! ನನಗೆ ಮಗ-ಮೊಮ್ಮಗರಲ್ಲಿ ವ್ಯತ್ಯಾಸವಿಲ್ಲ. ಭದ್ರೇ! ನೀನು ಹೇಳಿದಂತೆಯೇ ಆಗುತ್ತದೆ!""

12049027 ವಾಸುದೇವ ಉವಾಚ|
12049027a ತತಃ ಸತ್ಯವತೀ ಪುತ್ರಂ ಜನಯಾಮಾಸ ಭಾರ್ಗವಮ್|
12049027c ತಪಸ್ಯಭಿರತಂ ಶಾಂತಂ ಜಮದಗ್ನಿಂ ಶಮಾತ್ಮಕಮ್||

ವಾಸುದೇವನು ಹೇಳಿದನು: "ಅನಂತರ ಸತ್ಯವತಿಯು ಶಾಂತನೂ, ತಪಸ್ಸಿನಲ್ಲಿ ನಿರತನೂ, ಸೌಮ್ಯಸ್ವಭಾವದನೂ ಆದ ಭಾರ್ಗವ ಜಮದಗ್ನಿಯನ್ನು ಪುತ್ರನನ್ನಾಗಿ ಪಡೆದಳು.

12049028a ವಿಶ್ವಾಮಿತ್ರಂ ಚ ದಾಯಾದಂ ಗಾಧಿಃ ಕುಶಿಕನಂದನಃ|
12049028c ಪ್ರಾಪ ಬ್ರಹ್ಮರ್ಷಿಸಮಿತಂ ವಿಶ್ವೇನ ಬ್ರಹ್ಮಣಾ ಯುತಮ್||

ಕುಶಿಕನಂದನ ಗಾಧಿಯು ಸಮಸ್ತಬ್ರಾಹ್ಮಣಗುಣಗಳಿಂದ ಕೂಡಿದ ಮತ್ತು

ನಂತರ ಬ್ರಹ್ಮರ್ಷಿಪದವಿಯನ್ನೂ ಹೊಂದಿದ ವಿಶ್ವಾಮಿತ್ರನನ್ನು ಮಗನನ್ನಾಗಿ ಪಡೆದನು.

12049029a ಆರ್ಚೀಕೋ ಜನಯಾಮಾಸ ಜಮದಗ್ನಿಃ ಸುದಾರುಣಮ್|
12049029c ಸರ್ವವಿದ್ಯಾಂತಗಂ ಶ್ರೇಷ್ಠಂ ಧನುರ್ವೇದೇ ಚ ಪಾರಗಮ್||
12049029e ರಾಮಂ ಕ್ಷತ್ರಿಯಹಂತಾರಂ ಪ್ರದೀಪ್ತಮಿವ ಪಾವಕಮ್|

ಋಚೀಕನ ಮಗ ಜಮದಗ್ನಿಯು ಅಗ್ನಿಯಂತೆ ಬೆಳಗುತ್ತಿದ್ದ ಸುದಾರುಣ, ಸರ್ವವಿದ್ಯಾಂತಗ, ಧನುರ್ವಿದ್ಯಾ ಪಾರಂಗತ, ಕ್ಷತ್ರಿಯಹಂತಕ ಶ್ರೇಷ್ಠ ರಾಮನಿಗೆ ಜನ್ಮವಿತ್ತನು.

12049030a ಏತಸ್ಮಿನ್ನೇವ ಕಾಲೇ ತು ಕೃತವೀರ್ಯಾತ್ಮಜೋ ಬಲೀ||
12049030c ಅರ್ಜುನೋ ನಾಮ ತೇಜಸ್ವೀ ಕ್ಷತ್ರಿಯೋ ಹ್ಯೆಹಯಾನ್ವಯಃ|

ಇದೇ ಸಮಯದಲ್ಲಿ ಹೈಹಯ ಕುಲದಲ್ಲಿ ಕೃತವೀರ್ಯನ ಮಗ ಅರ್ಜುನ ಎಂಬ ಹೆಸರಿನ ಬಲಶಾಲೀ ತೇಜಸ್ವೀ ಕ್ಷತ್ರಿಯನಿದ್ದನು.

12049031a ದದಾಹ ಪೃಥಿವೀಂ ಸರ್ವಾಂ ಸಪ್ತದ್ವೀಪಾಂ ಸಪತ್ತನಾಮ್||
12049031c ಸ್ವಬಾಹ್ವಸ್ತ್ರಬಲೇನಾಜೌ ಧರ್ಮೇಣ ಪರಮೇಣ ಚ|

ಅವನು ತನ್ನದೇ ಬಾಹುಬಲ-ಅಸ್ತ್ರಬಲಗಳಿಂದ ಹಾಗೂ ಪರಮ ಧರ್ಮದಿಂದ ಈ ಸಪ್ತದ್ವೀಪಗಳುಳ್ಳ ಪೃಥ್ವಿಯನ್ನು ಅದರ ಪಟ್ಟಣಗಳೊಂದಿಗೆ ಸುಟ್ಟುಹಾಕಿದನು.

12049032a ತೃಷಿತೇನ ಸ ಕೌರವ್ಯ ಭಿಕ್ಷಿತಶ್ಚಿತ್ರಭಾನುನಾ||
12049032c ಸಹಸ್ರಬಾಹುರ್ವಿಕ್ರಾಂತಃ ಪ್ರಾದಾದ್ಭಿಕ್ಷಾಮಥಾಗ್ನಯೇ|

ಕೌರವ್ಯ! ಒಮ್ಮೆ ಹಸಿವು ಬಾಯಾರಿಕೆಗಳಿಂದ ಬಳಲಿದ್ದ ಚಿತ್ರಭಾನು

ಅಗ್ನಿಯು ಸಹಸ್ರಬಾಹುಗಳಿದ್ದ ವಿಕ್ರಾಂತ ಕಾರ್ತವೀರ್ಯಾರ್ಜುನನಲ್ಲಿ
ಭಿಕ್ಷೆಯನ್ನು ಯಾಚಿಸಿ ಬಂದಿದ್ದನು. ಅವನು ಅಗ್ನಿಗೆ ಭಿಕ್ಷೆಯನ್ನಿತ್ತಿದ್ದನು.

12049033a ಗ್ರಾಮಾನ್ಪುರಾಣಿ ಘೋಷಾಂಶ್ಚ ಪತ್ತನಾನಿ ಚ ವೀರ್ಯವಾನ್‌॥
12049033c ಜಜ್ವಾಲ ತಸ್ಯ ಬಾಣೈಸ್ತು ಚಿತ್ರಭಾನುರ್ದಿಧಕ್ಷಯಾ|

ಗ್ರಾಮ-ಪುರ-ಘೋಷ-ಪಟ್ಟಣಗಳನ್ನೂ ಸುಡಲು ಬಯಸಿ
ಚಿತ್ರಭಾನುವು ಅರ್ಜುನನ ಬಾಣದ ತುದಿಯಿಂದ
ಪ್ರಜ್ವಲಿಸತೊಡಗಿದನು.

12049034a ಸ ತಸ್ಯ ಪುರುಷೇಂದ್ರಸ್ಯ ಪ್ರಭಾವೇನ ಮಹಾತಪಾಃ‌॥
12049034c ದದಾಹ ಕಾರ್ತವೀರ್ಯಸ್ಯ ಶೈಲಾನಥ ವನಾನಿ ಚ|

ಆ ಪುರುಷೇಂದ್ರ ಮಹಾತಪಸ್ವಿ ಕಾರ್ತವೀರ್ಯನ ಪ್ರಭಾವದಿಂದ
ಅಗ್ನಿಯು ಶೈಲ-ವನಗಳನ್ನು ಸುಟ್ಟುಹಾಕಿದನು.

12049035a ಸ ಶೂನ್ಯಮಾಶ್ರಮಾರಣ್ಯಂ ವರುಣಸ್ಯಾತ್ಮಜಸ್ಯ ತತ್‌॥
12049035c ದದಾಹ ಪವನೇನೇದ್ಧಶ್ಚಿತ್ರಭಾನುಃ ಸಹೈಹಯಃ|

ವಾಯುವಿನ ಮತ್ತು ಹೈಹಯನ ಸಹಾಯವನ್ನು ಪಡೆದುಕೊಂಡಿದ್ದ
ಚಿತ್ರಭಾನುವು ಜನಶೂನ್ಯವಾಗಿದ್ದ ವರುಣನ ಮಗ ವಸಿಷ್ಠನ
ಆಶ್ರಮವನ್ನೂ ಸುಟ್ಟುಬಿಟ್ಟನು.

12049036a ಆಪವಸ್ತಂ ತತೋ ರೋಷಾಚ್ಚ ಶಾಪಾರ್ಜುನಮಚ್ಯುತ‌॥
12049036c ದಗ್ಧೋಽಶ್ರಮೇ ಮಹಾರಾಜ ಕಾರ್ತವೀರ್ಯೇಣ ವೀರ್ಯವಾನ್‌|

ಅಚ್ಯುತ! ಮಹಾರಾಜ! ವೀರ್ಯವಾನ್ ಕಾರ್ತವೀರ್ಯನಿಂದ ತನ್ನ
ಆಶ್ರಮವು ಸುಟ್ಟುಹೋಗಲು ರೋಷದಿಂದ ಆಪವ ವಸಿಷ್ಠನು

ಅರ್ಜುನನನ್ನು ಶಪಿಸಿದನುಃ

12049037a ತ್ವಯಾ ನ ವರ್ಜಿತಂ ಮೋಹಾದ್ಯಸ್ಮಾದ್ವನಮಿದಂ ಮಮ॥
12049037c ದಗ್ಧಂ ತಸ್ಮಾದ್ರಣೇ ರಾಮೋ ಬಾಹೂಂಸ್ತೇ ಚೇತ್ಸ್ಯತೇಽರ್ಜುನ।

“ಅರ್ಜುನ! ಮೋಹದಿಂದ ನೀನು ನನ್ನ ಈ ವನವನ್ನೂ ಬಿಡದೇ ಸುಟ್ಟುಹಾಕಿದ ಕಾರಣ ರಣದಲ್ಲಿ ರಾಮನು ನಿನ್ನ ಬಾಹುಗಳನ್ನು ಕತ್ತರಿಸುತ್ತಾನೆ!”

12049038a ಅರ್ಜುನಸ್ತು ಮಹಾರಾಜ ಬಲೀ ನಿತ್ಯಂ ಶಮಾತ್ಮಕಃ॥
12049038c ಬ್ರಹ್ಮಣ್ಯಶ್ಚ ಶರಣ್ಯಶ್ಚ ದಾತಾ ಶೂರಶ್ಚ ಭಾರತ।

ಮಹಾರಾಜ! ಭಾರತ! ಬಲಶಾಲೀ ಅರ್ಜುನನಾದರೋ ನಿತ್ಯವು ಶಮಾತ್ಮಕನಾಗಿದ್ದುಕೊಂಡು ಬ್ರಾಹ್ಮಣರ ಶರಣ್ಯನೂ ದಾನಿಯೂ ಶೂರನೂ ಆಗಿದ್ದನು.

12049039a ತಸ್ಯ ಪುತ್ರಾಃ ಸುಬಲಿನಃ ಶಾಪೇನಾಸನ್ಪಿತುರ್ವಧೇ॥
12049039c ನಿಮಿತ್ತಮವಲಿಪ್ತಾ ವೈ ನೃಶಂಸಾಶ್ಚೈವ ನಿತ್ಯದಾ।

ಆದುದರಿಂದ ನಿತ್ಯವೂ ಅಹಿಂಸಿಯಾಗಿದ್ದ ಅವನು ಆ ಶಾಪದ ಕುರಿತು ಚಿಂತಿಸಲೇ ಇಲ್ಲ. ಆದರೆ ಅವನ ಬಲಶಾಲಿ ಮಕ್ಕಳೇ ತಂದೆಯ ವಧೆ ಮತ್ತು ಆ ಶಾಪವು ಫಲಿಸಲು ಕಾರಣರಾದರು.

12049040a ಜಮದಗ್ನಿಧೇನ್ವಾಸ್ತೇ ವತ್ಸಮಾನಿನ್ಯುರ್ಭರತರ್ಷಭ॥
12049040c ಅಜ್ಞಾತಂ ಕಾರ್ತವೀರ್ಯಸ್ಯ ಹೈಹಯೇಂದ್ರಸ್ಯ ಧೀಮತಃ।

ಭರತರ್ಷಭ! ಹೈಹಯೇಂದ್ರ ಧೀಮಂತ ಕಾರ್ತವೀರ್ಯನಿಗೆ ತಿಳಿಯದಂತೆ ಅವನ ಮಕ್ಕಳು ಜಮದಗ್ನಿಯ ಹೋಮಧೇನುವಿನ

ಕರುವನ್ನು ಅಪಹರಿಸಿಕೊಂಡು ಹೋದರು.

12049041a ತತೋಽರ್ಜುನಸ್ಯ ಬಾಹೂಂಸ್ತು ಚಿತ್ತ್ವಾ ವೈ ಪೌರುಷಾನ್ವಿತಃ॥
12049041c ತಂ ರುವಂತಂ ತತೋ ವತ್ಸಂ ಜಾಮದಗ್ನ್ಯಃ ಸ್ವಮಾಶ್ರಮಮ್।
12049041e ಪ್ರತ್ಯಾನಯತ ರಾಜೇಂದ್ರ ತೇಷಾಮಂತಃಪುರಾತ್ಪ್ರಭುಃ॥

ರಾಜೇಂದ್ರ! ಆಗ ಜಮದಗ್ನಿಯ ಮಗ ಪೌರುಷಾನ್ವಿತ ಪ್ರಭು ರಾಮನು ಅರ್ಜುನನ ಬಾಹುಗಳನ್ನು ತುಂಡರಿಸಿ ಅವನ ಅಂತಃಪುರದಿಂದ ರೋದಿಸುತ್ತಿದ್ದ ಹಸುಕರುವನ್ನು ತನ್ನ ಆಶ್ರಮಕ್ಕೆ ಪುನಃ ಕರೆತಂದನು.

12049042a ಅರ್ಜುನಸ್ಯ ಸುತಾಸ್ತೇ ತು ಸಂಭೂಯಾಬುದ್ಧಯಸ್ತದಾ।
12049042c ಗತ್ವಾಶ್ರಮಮಸಂಬುದ್ಧಂ ಜಮದಗ್ನೇರ್ಮಹಾತ್ಮನಃ॥
12049043a ಅಪಾತಯಂತ ಭಲ್ಲಾಗ್ರೈಃ ಶಿರಃ ಕಾಯಾನ್ನರಾಧಿಪ।
12049043c ಸಮಿತ್ಕುಶಾರ್ಥಂ ರಾಮಸ್ಯ ನಿರ್ಗತಸ್ಯ ಮಹಾತ್ಮನಃ॥

ನರಾಧಿಪ! ಅನಂತರ ಅರ್ಜುನನ ಮಕ್ಕಳು ಮೂಢತನದಿಂದ ಒಟ್ಟಾಗಿ, ಮಹಾತ್ಮ ರಾಮನು ಸಮಿತ್ತು-ದರ್ಬೆಗಳಿಗಾಗಿ ಹೊರ ಹೋಗಿರಲು, ತಪೋನಿರತನಾಗಿದ್ದ ಮಹಾತ್ಮ ಜಮದಗ್ನಿಯ ಶಿರವನ್ನು ಭಲ್ಲಗಳಿಂದ ಕಾಯದಿಂದ ಬೇರ್ಪಡಿಸಿ ಕೆಳಗುರುಳಿಸಿದರು.

12049044a ತತಃ ಪಿತೃವಧಾಮರ್ಷಾದ್ರಾಮಃ ಪರಮಮನ್ಯುಮಾನ್।
12049044c ನಿಃಕ್ಷತ್ರಿಯಾಂ ಪ್ರತಿಶ್ರುತ್ಯ ಮಹೀಂ ಶಸ್ತ್ರಮಗೃಹ್ಣತ॥

ಆಗ ಪಿತೃವಧೆಯನ್ನು ಸಹಿಸಿಕೊಳ್ಳಲಾಗಿದೇ ಅತ್ಯಂತ ಕುಪಿತನಾದ ರಾಮನು ಭೂಮಿಯಲ್ಲಿ ಕ್ಷತ್ರಿಯರೇ ಇಲ್ಲದಂತೆ ಮಾಡುತ್ತೇನೆಂದು ಪ್ರತಿಜ್ಞೆಮಾಡಿ ಶಸ್ತ್ರವನ್ನು ಹಿಡಿದನು.

12049045a ತತಃ ಸ ಭೃಗುಶಾರ್ದೂಲಃ ಕಾರ್ತವೀರ್ಯಸ್ಯ ವೀರ್ಯವಾನ್|
12049045c ವಿಕ್ರಮ್ಯ ನಿಜಘಾನಾಶು ಪುತ್ರಾನ್ಪೌತ್ರಾಂಶ್ಚ ಸರ್ವಶಃ||

ಆಗ ವೀರ್ಯವಾನ್ ಭೃಗುಶಾರ್ದೂಲನು ವಿಕ್ರಮದಿಂದ
ಕಾರ್ತವೀರ್ಯನ ಮಕ್ಕಳು-ಮೊಮ್ಮಕ್ಕಳು ಎಲ್ಲರನ್ನೂ ಸಂಹರಿಸಿದನು.

12049046a ಸ ಹ್ಯೈಹಯಸಹಸ್ರಾಣಿ ಹತ್ವಾ ಪರಮಮನ್ಯುಮಾನ್|
12049046c ಚಕಾರ ಭಾರ್ಗವೋ ರಾಜನ್ಮಹೀಂ ಶೋಣಿತಕರ್ದಮಾಮ್||

ರಾಜನ್! ಸಹಸ್ರಾರು ಹೈಹಯರನ್ನು ಸಂಹರಿಸಿ ಪರಮಕೋಪಿ
ಭಾರ್ಗವನು ರಕ್ತದ ಕೆಸರಿನಿಂದ ಭೂಮಿಯನ್ನೇ ತುಂಬಿಸಿಬಿಟ್ಟನು.

12049047a ಸ ತಥಾ ಸುಮಹಾತೇಜಾಃ ಕೃತ್ವಾ ನಿಃಕ್ಷತ್ರಿಯಾಂ ಮಹೀಮ್|
12049047c ಕೃಪಯಾ ಪರಯಾವಿಷ್ಟೋ ವನಮೇವ ಜಗಾಮ ಹ||

ಹಾಗೆ ಭೂಮಿಯನ್ನು ನಿಃಕ್ಷತ್ರಿಯರನ್ನಾಗಿಸಿ ಆ ಮಹಾತೇಜಸ್ವಿಯು
ಪರಮ ಕೃಪಾವಿಷ್ಟನಾಗಿ ವನಕ್ಕೆ ತೆರಳಿದನು.

12049048a ತತೋ ವರ್ಷಸಹಸ್ರೇಷು ಸಮತೀತೇಷು ಕೇಷು ಚಿತ್|
12049048c ಕ್ಷೋಭಂ ಸಂಪ್ರಾಪ್ತವಾಂಸ್ತೀವ್ರಂ ಪ್ರಕೃತ್ಯಾ ಕೋಪನಃ ಪ್ರಭುಃ||

ಸಹಸ್ರವರ್ಷಗಳು ಕಳೆದನಂತರ ಸ್ವಭಾವತಃ ಕೋಪಿಷ್ಟನಾದ ಪ್ರಭು
ರಾಮನು ಯಾವುದೋ ಒಂದು ಸಮಿತಿಯಲ್ಲಿ ತನ್ನ ಕುರಿತಾದ ಒಂದು
ತೀವ್ರ ಆಕ್ಷೇಪವನ್ನು ಕೇಳಿದನು.

12049049a ವಿಶ್ವಾಮಿತ್ರಸ್ಯ ಪೌತ್ರಸ್ತು ರೈಭ್ಯಪುತ್ರೋ ಮಹಾತಪಾಃ|
12049049c ಪರಾವಸುರ್ಮಹಾರಾಜ ಕ್ಷಿಪ್ತ್ವಾಹ ಜನಸಂಸದಿ||

ಮಹಾರಾಜ! ವಿಶ್ವಾಮಿತ್ರನ ಮೊಮ್ಮಗ, ರೈಭ್ಯನ ಮಗ ಮಹಾತಪಸ್ವೀ

ಪರಾವಸುವು ಜನಸಂಸದಿಯಲ್ಲಿ ಪರಶುರಾಮನನ್ನು ಆಕ್ಷೇಪಿಸುತ್ತಾ ಹೀಗೆ ಹೇಳಿದನು:

12049050a ಯೇ ತೇ ಯಯಾತಿಪತನೇ ಯಜ್ಞೇ ಸಂತಃ ಸಮಾಗತಾಃ|
12049050c ಪ್ರತರ್ದನಪ್ರಭೃತಯೋ ರಾಮ ಕಿಂ ಕ್ಷತ್ರಿಯಾ ನ ತೇ||

"ರಾಮನೇ! ಯಯಾತಿಯು ಸ್ವರ್ಗಲೋಕದಿಂದ ಭೂಮಿಗೆ ಬಿದ್ದ ಸ್ಥಳದಲ್ಲಿ ಯಜ್ಞಭಾಗಿಗಳಾಗಿದ್ದ ಪ್ರತರ್ದನನೇ ಮೊದಲಾದ ಸತ್ಪುರುಷರು ನಿನ್ನ ಪಾಲಿಗೆ ಕ್ಷತ್ರಿಯರಲ್ಲವೇನು?

12049051a ಮಿಥ್ಯಾಪ್ರತಿಜ್ಞೋ ರಾಮ ತ್ವಂ ಕತ್ಥಸೇ ಜನಸಂಸದಿ|
12049051c ಭಯಾತ್ಕ್ಷತ್ರಿಯವೀರಾಣಾಂ ಪರ್ವತಂ ಸಮುಪಾಶ್ರಿತಃ||

ರಾಮ! ನೀನು ಮಿಥ್ಯಾಪ್ರತಿಜ್ಞನು! ಜನಸಂಸಧಿಯಲ್ಲಿ ಹೇಗೆ ನೀನು ನಿನ್ನನ್ನೇ ಪ್ರಶಂಸಿಸಿಕೊಳ್ಳುವೆ? ಕ್ಷತ್ರಿಯ ವೀರರ ಭಯದಿಂದ ನೀನು ಪರ್ವತವನ್ನು ಆಶ್ರಯಿಸಿರುವೆ!"

12049052a ಸ ಪುನಃ ಕ್ಷತ್ರಿಯಶತೈಃ ಪೃಥಿವೀಮನುಸಂತತಾಮ್|
12049052c ಪರಾವಸೋಸ್ತದಾ ಶ್ರುತ್ವಾ ಶಸ್ತ್ರಂ ಜಗ್ರಾಹ ಭಾರ್ಗವಃ||

ಪರಾವಸುವಿನ ಆ ಮಾತನ್ನು ಕೇಳಿ ಭಾರ್ಗವನು ಭೂಮಿಯಲ್ಲಿ ಸಂತಾನಗಳನ್ನು ಪಡೆದಿದ್ದ ನೂರಾರು ಕ್ಷತ್ರಿಯರನ್ನು ಸಂಹರಿಸಲು ಪುನಃ ಶಸ್ತ್ರವನ್ನು ಹಿಡಿದನು.

12049053a ತತೋ ಯೇ ಕ್ಷತ್ರಿಯಾ ರಾಜನ್ಶತಶಸ್ತೇನ ಜೀವಿತಾಃ|
12049053c ತೇ ವಿವೃದ್ಧಾ ಮಹಾವೀರ್ಯಾಃ ಪೃಥಿವೀಪತಯೋಽಭವನ್||

ರಾಜನ್! ಜೀವಿತರಾಗಿದ್ದ ನೂರಾರು ಮಹಾವೀರ್ಯ ಕ್ಷತ್ರಿಯರು

ವೃದ್ಧರಾಗಿ ಪೃಥ್ವೀಪತಿಗಳಾಗಿದ್ದರು.

12049054a ಸ ಪುನಸ್ತಾನ್ಬಹೂನಾಶು ಬಾಲಾನಪಿ ನರಾಧಿಪ|
12049054c ಗರ್ಭಸ್ಥ್ಯಸ್ತು ಮಹೀ ವ್ಯಾಪ್ತಾ ಪುನರೇವಾಭವತ್ತದಾ||

ನರಾಧಿಪ! ಅವನು ಪುನಃ ಬಾಲಕರನ್ನೂ ಬಿಡದೇ ಅವರನ್ನು ಸಂಹರಿಸಿದನು. ಆದರೆ ಗರ್ಭಿಣಿಯರಾಗಿದ್ದ ಕ್ಷತ್ರಿಯಸ್ತ್ರೀಯರಿಂದ ಭೂಮಿಯು ವ್ಯಾಪ್ತವಾಗಿತ್ತು.

12049055a ಜಾತಂ ಜಾತಂ ಸ ಗರ್ಭಂ ತು ಪುನರೇವ ಜಘಾನ ಹ|
12049055c ಅರಕ್ಷಂಶ್ಚ ಸುತಾನ್ಕಾಂಶ್ಚಿತ್ತದಾ ಕ್ಷತ್ರಿಯಯೋಷಿತಃ||

ಮಕ್ಕಳು ಹುಟ್ಟುತ್ತಿದ್ದಂತೆಯೇ ಅವರನ್ನೂ ಪುನಃ ರಾಮನು ಸಂಹರಿಸಿದನು. ಆ ಕೆಲವು ಕ್ಷತ್ರಿಯ ಸ್ತ್ರೀಯರು ತಮ್ಮ ಮಕ್ಕಳನ್ನು ರಕ್ಷಿಸಿಕೊಂಡರು.

12049056a ತ್ರಿಃಸಪ್ತಕೃತ್ವಃ ಪೃಥಿವೀಂ ಕೃತ್ವಾ ನಿಃಕ್ಷತ್ರಿಯಾಂ ಪ್ರಭುಃ|
12049056c ದಕ್ಷಿಣಾಮಶ್ವಮೇಧಾಂತೇ ಕಶ್ಯಪಾಯಾದದತ್ತತಃ||

ಪ್ರಭು ರಾಮನು ಇಪ್ಪತ್ತೇಳು ಬಾರಿ ಭೂಮಿಯನ್ನು ನಿಃಕ್ಷತ್ರಿಯರನ್ನಾಗಿ ಮಾಡಿ ಅಶ್ವಮೇಧದ ಅಂತ್ಯದಲ್ಲಿ ಭೂಮಿಯನ್ನು ಕಶ್ಯಪನಿಗೆ ದಕ್ಷಿಣೆಯನ್ನಾಗಿತ್ತನು.

12049057a ಕ್ಷತ್ರಿಯಾಣಾಂ ತು ಶೇಷಾರ್ಥಂ ಕರೇಣೋದ್ದಿಶ್ಯ ಕಶ್ಯಪಃ|
12049057c ಸ್ರುಕ್ಪ್ರಗ್ರಹವತಾ ರಾಜನ್ಶ್ರೀಮಾನ್ವಾಕ್ಯಮಥಾಬ್ರವೀತ್||

ರಾಜನ್! ಆಗ ಉಳಿದ ಕ್ಷತ್ರಿಯರನ್ನು ರಕ್ಷಿಸುವ ಉದ್ದೇಶದಿಂದ ಶ್ರೀಮಾನ್ ಕಶ್ಯಪನು ಕೈಯಲ್ಲಿ ಸ್ರುಕ್ಕನ್ನು ಹಿಡಿದು ಈ

ಮಾತನ್ನಾಡಿದನು:

12049058a ಗಚ್ಚ ಪಾರಂ ಸಮುದ್ರಸ್ಯ ದಕ್ಷಿಣಸ್ಯ ಮಹಾಮುನೇ|
12049058c ನ ತೇ ಮದ್ವಿಷಯೇ ರಾಮ ವಸ್ತವ್ಯಮಿಹ ಕರ್ಹಿ ಚಿತ್||

“ಮಹಾಮುನೇ! ರಾಮ! ನನ್ನ ಈ ರಾಜ್ಯದಲ್ಲಿ ನೀನು ಯಾವಾಗಲೂ ವಾಸಿಸಬಾರದು. ಸಮುದ್ರದ ದಕ್ಷಿಣತೀರಕ್ಕೆ ಹೊರಟುಹೋಗು!”

12049059a ತತಃ ಶೂರ್ಪಾರಕಂ ದೇಶಂ ಸಾಗರಸ್ತಸ್ಯ ನಿರ್ಮಮೇ|
12049059c ಸಂತ್ರಾಸಾಜ್ಜಾಮದಗ್ನ್ಯಸ್ಯ ಸೋಽಪರಾಂತಂ ಮಹೀತಲಮ್||

ಅನಂತರ ಸಾಗರನು ಜಾಮದಗ್ನಿಯು ತಂಗಲೋಸುಗ ಶೂರ್ಪಾರಕವೆಂಬ ದೇಶವನ್ನು ನಿರ್ಮಿಸಿದನು, ಆ ಭೂಮಿಯನ್ನು ಅಪರಾಂತಭೂಮಿಯೆಂದೂ ಕರೆಯುತ್ತಾರೆ.

12049060a ಕಶ್ಯಪಸ್ತು ಮಹಾರಾಜ ಪ್ರತಿಗೃಹ್ಯ ಮಹೀಮಿಮಾಮ್|
12049060c ಕೃತ್ವಾ ಬ್ರಾಹ್ಮಣಸಂಸ್ಥಾಂ ವೈ ಪ್ರವಿವೇಶ ಮಹಾವನಮ್||

ಮಹಾರಾಜ! ಕಶ್ಯಪನಾದರೋ ಈ ಭೂಮಿಯನ್ನು ಸ್ವೀಕರಿಸಿ, ಅದನ್ನು ಬ್ರಾಹ್ಮಣರಿಗೆ ಕೊಟ್ಟು, ಮಹಾವನವನ್ನು ಪ್ರವೇಶಿಸಿದನು.

12049061a ತತಃ ಶೂದ್ರಾಶ್ಚ ವೈಶ್ಯಾಶ್ಚ ಯಥಾಸ್ವೈರಪ್ರಚಾರಿಣಃ|
12049061c ಅವರ್ತಂತ ದ್ವಿಜಾಗ್ರ್ಯಾಣಾಂ ದಾರೇಷು ಭರತರ್ಷಭ||

ಭರತರ್ಷಭ! ಆಗ ವೈಶ್ಯ-ಶೂದ್ರರು ದ್ವಿಜಾಗ್ರರ ಪತ್ನಿಯರೊಡನೆ ದುರ್ವ್ಯವಹಾರಗಳಲ್ಲಿ ತೊಡಗಿದರು.

12049062a ಅರಾಜಕೇ ಜೀವಲೋಕೇ ದುರ್ಬಲಾ ಬಲವತ್ತರೈಃ|
12049062c ಬಾಧ್ಯಂತೇ ನ ಚ ವಿತ್ತೇಷು ಪ್ರಭುತ್ವಮಿಹ ಕಸ್ಯ ಚಿತ್||

ಅರಾಜಕತೆಯಾಗಿ ಜೀವಲೋಕದಲ್ಲಿ ಬಲಶಾಲಿಗಳು ದುರ್ಬಲರನ್ನು ಬಾಧಿಸತೊಡಗಿದರು. ಸಂಪತ್ತು ಯಾರ ಪ್ರಭುತ್ವದಲ್ಲಿಯೂ ಉಳಿಯಲಿಲ್ಲ.

12049063a ತತಃ ಕಾಲೇನ ಪೃಥಿವೀ ಪ್ರವಿವೇಶ ರಸಾತಲಮ್|
12049063c ಅರಕ್ಷ್ಯಮಾಣಾ ವಿಧಿವತ್ಕ್ಷತ್ರಿಯೈರ್ಧರ್ಮರಕ್ಷಿಭಿಃ||

ಕಾಲಾಂತರದಲ್ಲಿ ಧರ್ಮರಕ್ಷಿಗಳಾದ ಕ್ಷತ್ರಿಯರಿಂದ ವಿಧಿವತ್ತಾಗಿ ರಕ್ಷಿಸಲ್ಪಡದ ಪೃಥ್ವಿಯು ರಸಾತಲವನ್ನು ಪ್ರವೇಶಿಸಿತು.

12049064a ಊರುಣಾ ಧಾರಯಾಮಾಸ ಕಶ್ಯಪಃ ಪೃಥಿವೀಂ ತತಃ|
12049064c ನಿಮಜ್ಜಂತೀಂ ತದಾ ರಾಜಂಸ್ತೇನೋರ್ವೀತಿ ಮಹೀ ಸ್ಮೃತಾ||

ರಾಜನ್! ಮುಳುಗಿಹೋಗುತ್ತಿರುವ ಆ ಭೂಮಿಯನ್ನು ಕಶ್ಯಪನು ತನ್ನ ತೊಡೆಯಲ್ಲಿ ಧರಿಸಿದನು. ಆದುದರಿಂದಲೇ ಈ ಮಹಿಗೆ ಉರ್ವೀ ಎಂದೂ ಕರೆಯಲ್ಪಡುತ್ತದೆ.

12049065a ರಕ್ಷಿಣಶ್ಚ ಸಮುದ್ದಿಶ್ಯ ಪ್ರಾಯಾಚತ್ಪೃಥಿವೀ ತದಾ|
12049065c ಪ್ರಸಾದ್ಯ ಕಶ್ಯಪಂ ದೇವೀ ಕ್ಷತ್ರಿಯಾನ್ಬಾಹುಶಾಲಿನಃ||

ಆಗ ಪೃಥ್ವೀ ದೇವಿಯು ಕಶ್ಯಪನನ್ನು ಪ್ರಸನ್ನಗೊಳಿಸಿ ತನ್ನ ರಕ್ಷಣಾರಾರ್ಥವಾಗಿ ಬಾಹುಶಾಲೀ ಕ್ಷತ್ರಿಯರನ್ನು ಯಾಚಿಸಿದಳು.

12049066a ಸಂತಿ ಬ್ರಹ್ಮನ್ಮಯಾ ಗುಪ್ತಾ ನೃಷು ಕ್ಷತ್ರಿಯಪುಂಗವಾಃ|
12049066c ಹೈಹಯಾನಾಂ ಕುಲೇ ಜಾತಾಸ್ತೇ ಸಂರಕ್ಷಂತು ಮಾಂ ಮುನೇ||

“ಮುನೇ! ಬ್ರಹ್ಮನ್! ನಾನು ಗೌಪ್ಯವಾಗಿ ಸಂರಕ್ಷಿಸಿದ್ದ ಹೈಹಯ ಕುಲದಲ್ಲಿ ಹುಟ್ಟಿದ ಕ್ಷತ್ರಿಯಪುಂಗವ ನರರಿದ್ದಾರೆ. ಅವರು ನನ್ನನ್ನು

ರಕ್ಷಿಸಲಿ!

12049067a ಅಸ್ತಿ ಪೌರವದಾಯಾದೋ ವಿಡೂರಥಸುತಃ ಪ್ರಭೋ|
12049067c ಋಕ್ಷೈಃ ಸಂವರ್ಧಿತೋ ವಿಪ್ರ ಋಕ್ಷವತ್ಯೇವ ಪರ್ವತೇ||

ಪ್ರಭೋ! ವಿಪ್ರ! ಪೌರವ ವಿಡೂರರಥನ ಮಗನಿದ್ದಾನೆ. ಅವನು ಋಕ್ಷವತ್ಪರ್ವತದಲ್ಲಿ ಕರಡಿಗಳಿಂದ ಬೆಳೆಸಲ್ಪಟ್ಟಿದ್ದಾನೆ.

12049068a ತಥಾನುಕಂಪಮಾನೇನ ಯಜ್ವನಾಥಾಮಿತೌಜಸಾ|
12049068c ಪರಾಶರೇಣ ದಾಯಾದಃ ಸೌದಾಸಸ್ಯಾಭಿರಕ್ಷಿತಃ||

ಹಾಗೆಯೇ ಯಜ್ಞಪರಾಯಣನಾದ ಅಮಿತ ತೇಜಸ್ವಿಯಾದ ಸೌದಾಸನ ಮಗನನ್ನು ಪರಾಶರನು ಅನುಕಂಪದಿಂದ ರಕ್ಷಿಸಿಕೊಂಡಿದ್ದಾನೆ.

12049069a ಸರ್ವಕರ್ಮಾಣಿ ಕುರುತೇ ತಸ್ಯರ್ಷೇಃ ಶೂದ್ರವದ್ಧಿ ಸಃ|
12049069c ಸರ್ವಕರ್ಮೇತ್ಯಭಿಖ್ಯಾತಃ ಸ ಮಾಂ ರಕ್ಷತು ಪಾರ್ಥಿವಃ||

ಅವನು ಆ ಋಷಿಯಲ್ಲಿದ್ದುಕೊಂಡು ಶೂದ್ರನಂತೆ ಎಲ್ಲ ಕರ್ಮಗಳನ್ನೂ ಮಾಡುತ್ತಿದ್ದಾನೆ. ಸರ್ವಕರ್ಮನೆಂದು ವಿಖ್ಯಾತನಾಗಿರುವ ಆ ಪಾರ್ಥಿವನು ನನ್ನನ್ನು ರಕ್ಷಿಸಲಿ!

12049070a ಶಿಬೇಃ ಪುತ್ರೋ ಮಹಾತೇಜಾ ಗೋಪತಿರ್ನಾಮ ನಾಮತಃ|
12049070c ವನೇ ಸಂರಕ್ಷಿತೋ ಗೋಭಿಃ ಸೋಽಭಿರಕ್ಷತು ಮಾಂ ಮುನೇ||

ಮುನೇ! ಶಿಬಿಯ ಪುತ್ರ ಮಹಾತೇಜಸ್ವಿಯು ಗೋಪತಿಯೆಂಬ ಹೆಸರಿನಿಂದ ವನದಲ್ಲಿ ಗೋವುಗಳಿಂದ ಸಂರಕ್ಷಿಸಲ್ಪಡುತ್ತಿದ್ದಾನೆ. ಅವನೂ ಕೂಡ ನನ್ನನ್ನು ರಕ್ಷಿಸಲಿ!

12049071a ಪ್ರತರ್ದನಸ್ಯ ಪುತ್ರಸ್ತು ವತ್ಸೋ ನಾಮ ಮಹಾಯಶಾಃ|

12049071c ವತ್ಸ್ಯಃ ಸಂವರ್ಧಿತೋ ಗೋಷ್ಠೇ ಸ ಮಾಂ ರಕ್ಷತು ಪಾರ್ಥಿವಃ॥

ಪ್ರತರ್ದನನ ವತ್ಸ ಎಂಬ ಹೆಸರಿನ ಮಗನು ಮಹಾಯಶಸ್ವಿಯು. ಅವನು ಗೋಶಾಲೆಯಲ್ಲಿ ಹಸುಕರುಗಳ ಜೊತೆಗೆ ಬೆಳೆದಿದ್ದಾನೆ. ಆ ಪಾರ್ಥಿವನು ನನ್ನನ್ನು ರಕ್ಷಿಸಲಿ!

12049072a ದಧಿವಾಹನಪೌತ್ರಸ್ತು ಪುತ್ರೋ ದಿವಿರಥಸ್ಯ ಹ|
12049072c ಅಂಗಃ ಸ ಗೌತಮೇನಾಪಿ ಗಂಗಾಕೂಲೇಽಭಿರಕ್ಷಿತಃ॥

ದಧಿವಾಹನನ ಮೊಮ್ಮಗ, ದಿವಿರಥನ ಮಗ ಅಂಗನನ್ನು ಗೌತಮನು ಗಂಗಾಕೂಲದಲ್ಲಿ ರಕ್ಷಿಸಿಕೊಂಡಿದ್ದಾನೆ.

12049073a ಬೃಹದ್ರಥೋ ಮಹಾಬಾಹುರ್ಭುವಿ ಭೂತಿಪುರಸ್ಕೃತಃ|
12049073c ಗೋಲಾಂಗೂಲೈರ್ಮಹಾಭಾಗೋ ಗೃಧ್ರಕೂಟೇಽಭಿರಕ್ಷಿತಃ॥

ಭೂಮಿಯಲ್ಲಿ ಅತ್ಯಂತ ಪುರಸ್ಕೃತನಾದ ಮಹಾಭಾಗ ಮಹಾಬಾಹು ಬೃಹದ್ರಥನು ಗೃಧ್ರಕೂಟದಲ್ಲಿ ಗೋಲಾಂಗೂಲ[141]ಗಳಿಂದ ರಕ್ಷಿಸಲ್ಪಟ್ಟಿದ್ದಾನೆ.

12049074a ಮರುತ್ತಸ್ಯಾನ್ವವಾಯೇ ತು ಕ್ಷತ್ರಿಯಾಸ್ತುರ್ವಸೋಸ್ತ್ರಯಃ|
12049074c ಮರುತ್ಪತಿಸಮಾ ವೀರ್ಯೇ ಸಮುದ್ರೇಣಾಭಿರಕ್ಷಿತಾಃ॥

ವೀರ್ಯದಲ್ಲಿ ದೇವರಾಜನ ಸಮನಾದ ಮರುತ್ತನ ವಂಶದಲ್ಲಿ ಹುಟ್ಟಿದ ಕ್ಷತ್ರಿಯರಾಜಕುಮಾರನನ್ನು ಸಮುದ್ರನು ರಕ್ಷಿಸಿರುತ್ತಾನೆ. ಅವನೂ ಕೂಡ ನನ್ನನ್ನು ಸಂರಕ್ಷಿಸಲಿ!

---

141 ಗೋವಿನ ಬಾಲದಂಥಹ ಬಾಲವುಳ್ಳ ಒಂದು ಜಾತಿಯ ಕಪಿಗಳು.

12049075a ಏತೇ ಕ್ಷತ್ರಿಯದಾಯಾದಾಸ್ತತ್ರ ತತ್ರ ಪರಿಶ್ರುತಾಃ|
12049075c ಸಮ್ಯಗ್ಗ್ರಾಮಭಿರಕ್ಷಂತು ತತಃ ಸ್ಥಾಸ್ಯಾಮಿ ನಿಶ್ಚಲಾ||

ಅಲ್ಲಲ್ಲಿಯೇ ವಿಖ್ಯಾತರಾಗಿರುವ ಈ ಕ್ಷತ್ರಿಯ ಕುಮಾರರು ನನ್ನನ್ನು ರಕ್ಷಿಸಿದ್ದೇ ಆದರೆ ನಾನು ನಿಶ್ಚಿಂತಳಾಗಿ ಅಚಲಳಾಗಿ ನನ್ನ ಹಿಂದಿನ ಸ್ಥಾನದಲ್ಲಿಯೇ ನಿಲ್ಲುತ್ತೇನೆ.

12049076a ಏತೇಷಾಂ ಪಿತರಶ್ಚೈವ ತಥೈವ ಚ ಪಿತಾಮಹಾಃ|
12049076c ಮದರ್ಥಂ ನಿಹತಾ ಯುದ್ಧೇ ರಾಮೇಣಾಕ್ಲಿಷ್ಟಕರ್ಮಣಾ||

ಇವರ ತಂದೆಯಂದಿರು ಮತ್ತು ಪಿತಾಮಹರು ನನಗಾಗಿ ಯುದ್ಧದಲ್ಲಿ ಅಕ್ಲಿಷ್ಟಕರ್ಮಣಿ ರಾಮನೊಂದಿಗೆ ಹೋರಾಡಿ ಮಡಿದರು.

12049077a ತೇಷಾಮಪಚಿತಿಶ್ಚೈವ ಮಯಾ ಕಾರ್ಯಾ ನ ಸಂಶಯಃ|
12049077c ನ ಹ್ಯಹಂ ಕಾಮಯೇ ನಿತ್ಯಮವಿಕ್ರಾಂತೇನ ರಕ್ಷಣಮ್||

ಅವರ ಮಕ್ಕಳ ಪ್ರತಿ ಇದು ನನ್ನ ಕರ್ತ್ಯವ್ಯವೂ ಹೌದು ಎನ್ನುವುದರಲ್ಲಿ ಸಂಶಯವಿಲ್ಲ. ನಿತ್ಯವೂ ಕೇವಲ ವಿಕ್ರಾಂತದಿಂದ ರಕ್ಷಿಸುವವನನ್ನು ನಾನು ಬಯಸುವುದಿಲ್ಲ!”

12049078a ತತಃ ಪೃಥಿವ್ಯಾ ನಿರ್ದಿಷ್ಟಾಂಸ್ತಾನ್ಸಮಾನೀಯ ಕಶ್ಯಪಃ|
12049078c ಅಭ್ಯಷಿಂಚನ್ಮಹೀಪಾಲಾನ್ಕ್ಷತ್ರಿಯಾನ್ವೀರ್ಯಸಂಮತಾನ್||

ಆಗ ಕಶ್ಯಪನು ಪೃಥ್ವಿಯು ನಿರ್ದಿಷ್ಟಪಡಿಸಿದ ಆ ವೀರ್ಯಸಂಮತ ಕ್ಷತ್ರಿಯರನ್ನು ಕರೆಯಿಸಿ ಮಹೀಪಾಲರನ್ನಾಗಿ ಅಭಿಷೇಕಿಸಿದನು.

12049079a ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಯೇಷಾಂ ವಂಶಾಃ ಪ್ರತಿಷ್ಠಿತಾಃ|
12049079c ಏವಮೇತತ್ಪುರಾ ವೃತ್ತಂ ಯನ್ಮಾಂ ಪೃಚ್ಚಸಿ ಪಾಂಡವ||

ಅವರ ಪುತ್ರ-ಪೌತ್ರರು ಅವರವರ ವಂಶಗಳಲ್ಲಿ ರಾಜ್ಯವಾಳುತ್ತಿದ್ದಾರೆ. ಪಾಂಡವ! ಇದೇ ನೀನು ಕೇಳಿದಂಥಹ ಪುರಾತನ ವೃತ್ತಾಂತ!""

12049080 ವೈಶಂಪಾಯನ ಉವಾಚ|
12049080a ಏವಂ ಬ್ರುವನ್ನೇವ ಯದುಪ್ರವೀರೋ
ಯುಧಿಷ್ಠಿರಂ ಧರ್ಮಭೃತಾಂ ವರಿಷ್ಠಮ್|
12049080c ರಥೇನ ತೇನಾಶು ಯಯೌ ಯಥಾರ್ಕೋ
ವಿಶನ್ಪ್ರಭಾಭಿರ್ಭಗವಾಂಸ್ತ್ರಿಲೋಕಮ್||

ವೈಶಂಪಾಯನನು ಹೇಳಿದನು: "ಧರ್ಮಭೃತರಲ್ಲಿ ಶ್ರೇಷ್ಠ ಯುಧಿಷ್ಠಿರನಿಗೆ ಇದನ್ನು ಹೇಳುತ್ತಾ ಯದುಪ್ರವೀರ ಕೃಷ್ಣನು ರಥದಲ್ಲಿ ಕುಳಿತು ಸೂರ್ಯನು ಹೇಗೆ ತನ್ನ ಕಿರಣಗಳಿಂದ ವಿಶ್ವವನ್ನೇ ಬೆಳಗುವನೋ ಹಾಗೆ ಬೇಗ ಬೇಗ ಮುಂದೆಸಾರಿದನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ರಾಮೋಪಾಖ್ಯಾನೇ ಏಕೋನಪಂಚಾಶತ್ತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ರಾಮೋಪಾಖ್ಯಾನ ಎನ್ನುವ ನಲ್ವತ್ತೊಂಭತ್ತನೇ ಅಧ್ಯಾಯವು.

೫೦

ಕೃಷ್ಣವಾಕ್ಯ

ಕೃಷ್ಣನು ಭೀಷ್ಮನ ಗುಣ-ಪ್ರಭಾವಗಳನ್ನು ವರ್ಣಿಸಿದುದು (1-36).

12050001 ವೈಶಂಪಾಯನ ಉವಾಚ|

12050001a ತತೋ ರಾಮಸ್ಯ ತತ್ಕರ್ಮ ಶ್ರುತ್ವಾ ರಾಜಾ ಯುಧಿಷ್ಠಿರಃ|
12050001c ವಿಸ್ಮಯಂ ಪರಮಂ ಗತ್ವಾ ಪ್ರತ್ಯುವಾಚ ಜನಾರ್ದನಮ್||

ವೈಶಂಪಾಯನನು ಹೇಳಿದನು: "ರಾಮನ ಆ ಕರ್ಮದ ಕುರಿತು ಕೇಳಿದ ರಾಜಾ ಯುಧಿಷ್ಠಿರನು ಪರಮ ವಿಸ್ಮಿತನಾಗಿ ಜನಾರ್ದನನಲ್ಲಿ ಪುನಃ ಕೇಳಿದನು:

12050002a ಅಹೋ ರಾಮಸ್ಯ ವಾಷ್ಣೇ೯ಯ ಶಕ್ರಸ್ಯೇವ ಮಹಾತ್ಮನಃ|
12050002c ವಿಕ್ರಮೋ ಯೇನ ವಸುಧಾ ಕ್ರೋಧಾನ್ನಿಃಕ್ಷತ್ರಿಯಾ ಕೃತಾ||

"ಆಹಾ ಮಹಾತ್ಮ ರಾಮನ ವಿಕ್ರಮವೇ! ವಾಷ್ಣೇ೯ಯ! ಶಕ್ರನಂಥಹ ವಿಕ್ರಮವಿದ್ದ ಅವನು ಕ್ರೋಧದಿಂದ ಈ ವಸುಧೆಯನ್ನು ನಿಃಕ್ಷತ್ರಿಯರನ್ನಾಗಿ ಮಾಡಿದನು!

12050003a ಗೋಭಿಃ ಸಮುದ್ರೇಣ ತಥಾ ಗೋಲಾಂಗೂಲರ್ಕ್ಷವಾನರೈಃ|
12050003c ಗುಪ್ತಾ ರಾಮಭಯೋದ್ವಿಗ್ನಾಃ ಕ್ಷತ್ರಿಯಾಣಾಂ ಕುಲೋದ್ವಹಾಃ||

ಆದರೆ ರಾಮನ ಭಯದಿಂದ ಉದ್ವಿಗ್ನರಾಗಿದ್ದ ಕ್ಷತ್ರಿಯರ ಕುಲೋದ್ಧಾರಕರನ್ನು ಗೋವುಗಳು, ಸಮುದ್ರ, ಗೋಲಾಂಗೂಲ ವಾನರರು ಮತ್ತು ಕರಡಿಗಳು ರಹಸ್ಯದಿಂದ ರಕ್ಷಿಸಿದವು.

12050004a ಅಹೋ ಧನ್ಯೋ ಹಿ ಲೋಕೋಽಯಂ ಸಭಾಗ್ಯಾಶ್ಚ ನರಾ ಭುವಿ|
12050004c ಯತ್ರ ಕರ್ಮೇದೃಶಂ ಧರ್ಮ್ಯಂ ದ್ವಿಜೇನ ಕೃತಮಚ್ಯುತ||

ಆಹಾ! ಈ ಲೋಕವೇ ಧನ್ಯವಾಯಿತು! ಭುವಿಯ ನರರೂ ಭಾಗ್ಯವಂತರೇ! ಅಚ್ಯುತ! ಆ ದ್ವಿಜನು ತನ್ನ ಈ ಕರ್ಮದಿಂದ ಧರ್ಮವನ್ನು ಸ್ಥಾಪಿಸಿದನು!"

12050005a ತಥಾ ಯಾಂತೌ ತದಾ ತಾತ ತಾವಚ್ಯುತಯುಧಿಷ್ಠಿರೌ|
12050005c ಜಗ್ಮತುರ್ಯತ್ರ ಗಾಂಗೇಯಃ ಶರತಲ್ಪಗತಃ ಪ್ರಭುಃ||

ಮಗೂ! ಹೀಗೆ ಅಚ್ಯುತ-ಯುಧಿಷ್ಠಿರರು ಪರಸ್ಪರರಲ್ಲಿ
ಮಾತನಾಡಿಕೊಳ್ಳುತ್ತಾ ಪ್ರಭು ಗಾಂಗೇಯನು ಶರತಲ್ಪತನಾಗಿದ್ದಲ್ಲಿಗೆ
ಬಂದರು.

12050006a ತತಸ್ತೇ ದದೃಶುರ್ಭೀಷ್ಮಂ ಶರಪ್ರಸ್ತರಶಾಯಿನಮ್|
12050006c ಸ್ವರಶ್ಮಿಜಾಲಸಂವೀತಂ ಸಾಯಂಸೂರ್ಯಮಿವಾನಲಮ್||

ಅಲ್ಲಿ ಅವರು ಶರಶಯನದಲ್ಲಿ ಮಲಗಿ ತನ್ನದೇ ರಶ್ಮಿಗಳ ಜಾಲದಿಂದ
ಪ್ರಕಾಶಿಸುತ್ತಿದ್ದ ಸಾಯಂಕಾಲದ ಸೂರ್ಯನ ತೇಜಸ್ಸಿನಿಂದ ಬೆಳಗುತ್ತಿದ್ದ
ಭೀಷ್ಮನನ್ನು ನೋಡಿದರು.

12050007a ಉಪಾಸ್ಯಮಾನಂ ಮುನಿಭಿರ್ದೇವೈರಿವ ಶತಕ್ರತುಮ್|
12050007c ದೇಶೇ ಪರಮಧರ್ಮಿಷ್ಠೇ ನದೀಮೋಘವತೀಮನು||

ಓಘವತೀ ನದಿಯ ತೀರದಲ್ಲಿ, ದೇವತೆಗಳಿಂದ ಶತಕ್ರತುವು ಹೇಗೋ
ಹಾಗೆ ಮುನಿಗಳಿಂದ ಉಪಾಸನೆಗೊಳ್ಳುತ್ತಿರುವ ಆ
ಪರಮಧರ್ಮಿಷ್ಟನನ್ನು ನೋಡಿದರು.

12050008a ದೂರಾದೇವ ತಮಾಲೋಕ್ಯ ಕೃಷ್ಣೋ ರಾಜಾ ಚ ಧರ್ಮರಾಟ್|
12050008c ಚತ್ವಾರಃ ಪಾಂಡವಾಶ್ಚೈವ ತೇ ಚ ಶಾರದ್ವತಾದಯಃ||
12050009a ಅವಸ್ಕಂದ್ಯಾಥ ವಾಹೇಭ್ಯಃ ಸಂಯಮ್ಯ ಪ್ರಚಲಂ ಮನಃ|
12050009c ಏಕೀಕೃತ್ಯೇಂದ್ರಿಯಗ್ರಾಮಮುಪತಸ್ಥುರ್ಮಹಾಮುನೀನ್||

ದೂರದಿಂದಲೇ ಅವನನ್ನು ನೋಡಿದ ಕೃಷ್ಣ, ರಾಜಾ ಧರ್ಮರಾಜ,

ನಾಲ್ವರು ಪಾಂಡವರು, ಮತ್ತು ಶಾರದ್ವತರೇ ಮೊದಲಾದವರು, ಅವರವರ ವಾಹನಗಳಿಂದ ಕೆಳಕ್ಕಿಳಿದು, ಚಂಚಲ ಮನಸ್ಸನ್ನು ನಿಯಂತ್ರಿಸಿಕೊಂಡು, ಇಂದ್ರಿಯಗ್ರಾಮಗಳನ್ನು ಏಕೀಕರಿಸಿಕೊಂಡು ಆ ಮಹಾಮುನಿಗಳ ಬಳಿಬಂದರು.

12050010a ಅಭಿವಾದ್ಯ ಚ ಗೋವಿಂದಃ ಸಾತ್ಯಕಿಸ್ತೇ ಚ ಕೌರವಾಃ|
12050010c ವ್ಯಾಸಾದೀಂಸ್ತಾನೃಷೀನ್ಪಶ್ಚಾದ್ಗಾಂಗೇಯಮುಪತಸ್ಥಿರೇ||

ವ್ಯಾಸನೇ ಮೊದಲಾದ ಋಷಿಗಳನ್ನು ಅಭಿವಾದಿಸಿದ ನಂತರ ಗೋವಿಂದ, ಸಾತ್ಯಕಿ ಮತ್ತು ಕೌರವರು ಗಾಂಗೇಯನ ಬಳಿಸಾರಿದರು.

12050011a ತಪೋವೃದ್ಧಿಂ ತತಃ ಪೃಷ್ಟ್ವಾ ಗಾಂಗೇಯಂ ಯದುಕೌರವಾಃ|
12050011c ಪರಿವಾರ್ಯ ತತಃ ಸರ್ವೇ ನಿಷೇದುಃ ಪುರುಷರ್ಷಭಾಃ||

ಗಾಂಗೇಯನ ತಪೋವೃದ್ಧಿಯ ಕುರಿತು ಕೇಳಿ ಪುರುಷರ್ಷಭ ಯದು-ಕೌರವರು ಎಲ್ಲರೂ ಅವನನ್ನು ಸುತ್ತುವರೆದು ಕುಳಿತುಕೊಂಡರು.

12050012a ತತೋ ನಿಶಮ್ಯ ಗಾಂಗೇಯಂ ಶಾಮ್ಯಮಾನಮಿವಾನಲಮ್|
12050012c ಕಿಂ ಚಿದ್ದೀನಮನಾ ಭೀಷ್ಮಮಿತಿ ಹೋವಾಚ ಕೇಶವಃ||

ಆಗ ಆರಿಹೋಗುತ್ತಿರುವ ಯಜ್ಞೇಶ್ವರನಂತಿದ್ದ ಗಾಂಗೇಯನನ್ನು ನೋಡಿ ಕೇಶವನು ಸ್ವಲ್ಪ ದೀನಮನಸ್ಕನಾಗಿ "ಭೀಷ್ಮ!" ಎಂದು ಹೇಳಿದನು.

12050013a ಕಚ್ಚಿಜ್ಞಾನಾನಿ ತೇ ರಾಜನ್ಪ್ರಸನ್ನಾನಿ ಯಥಾ ಪುರಾ|
12050013c ಕಚ್ಚಿದವ್ಯಾಕುಲಾ ಚ್ಯೈವ ಬುದ್ಧಿಸ್ತೇ ವದತಾಂ ವರ||

"ಮಾತನಾಡುವವರಲ್ಲಿ ಶ್ರೇಷ್ಠನೇ! ರಾಜನ್! ನಿನ್ನ ಜ್ಞಾನಗಳೆಲ್ಲವೂ ಹಿಂದಿನಂತೆಯೇ ಪ್ರಸನ್ನವಾಗಿವೆಯಲ್ಲವೇ? ನಿನ್ನ ಬುದ್ಧಿಗೆ ಯಾವುದೇ

ವ್ಯಾಕುಲಗಳೂ ಇಲ್ಲ ತಾನೇ?

12050014a ಶರಾಭಿಘಾತದುಃಖಾತ್ತೇ ಕಚ್ಚಿದ್ಗಾತ್ರಂ ನ ದೂಯತೇ|
12050014c ಮಾನಸಾದಪಿ ದುಃಖಾದ್ಧಿ ಶಾರೀರಂ ಬಲವತ್ತರಮ್||

ಶರಗಳ ಅಭಿಘಾತದಿಂದ ನಿನ್ನ ಶರೀರವು ನೊಂದು ದುಃಖಿಸುತ್ತಿಲ್ಲ ತಾನೇ? ಏಕೆಂದರೆ ಮಾನಸಿಕ ದುಃಖಕ್ಕಿಂತಲೂ ಶಾರೀರಿಕ ದುಃಖವೇ ಅಧಿಕವಾಗಿರುತ್ತದೆ.

12050015a ವರದಾನಾತ್ಪಿತುಃ ಕಾಮಂ ಚಂದಮೃತ್ಯುರಸಿ ಪ್ರಭೋ|
12050015c ಶಂತನೋರ್ಧರ್ಮಶೀಲಸ್ಯ ನ ತ್ವೇತಚ್ಚಮಕಾರಣಮ್||

ಪ್ರಭೋ! ಧರ್ಮಶೀಲನಾದ ನಿನ್ನ ತಂದೆಯ ವರದಾನದಿಂದ ನೀನು ಇಚ್ಛಾಮರಣಿಯಾಗಿರುವೆ! ಆದರೆ ಅದು ನಿನ್ನ ಶಾಂತಿಗೆ ಕಾರಣವಾಗಲಾರದು!

12050016a ಸುಸೂಕ್ಷ್ಮೋಽಪೀಹ ದೇಹೇ ವೈ ಶಲ್ಯೋ ಜನಯತೇ ರುಜಮ್|
12050016c ಕಿಂ ಪುನಃ ಶರಸಂಘಾತೈಶ್ಚಿತಸ್ಯ ತವ ಭಾರತ||

ಭಾರತ! ಮುಳ್ಳು ಅತ್ಯಂತ ಸೂಕ್ಷ್ಮವಾಗಿದ್ದರೂ ಶರೀರವನ್ನು ಸೇರಿಕೊಂಡು ಹೆಚ್ಚು ನೋವನ್ನುಂಟುಮಾಡುತ್ತದೆ. ಹೀಗಿರುವಾಗ ಬಾಣಗಳ ಸಮೂಹಗಳಿಂದಲೇ ಚುಚ್ಚಲ್ಪಟ್ಟಿರುವ ನಿನ್ನ ವಿಷಯದಲ್ಲಿ ಹೇಳತಕ್ಕದ್ದೇನಿದೆ?

12050017a ಕಾಮಂ ನೈತತ್ತವಾಖ್ಯೇಯಂ ಪ್ರಾಣಿನಾಂ ಪ್ರಭವಾಪ್ಯಯೌ|
12050017c ಭವಾನ್ಹ್ಯಪದಿಶೇಚ್ಚ್ರೇಯೋ ದೇವಾನಾಮಪಿ ಭಾರತ||

ಭಾರತ! ಹುಟ್ಟು-ಸಾವುಗಳು ಪ್ರಾಣಿಗಳಿಗೆ ಇರತಕ್ಕವೇ ಎನ್ನುವ

ಉಪದೇಶವನ್ನು ನಿನಗೆ ನೀಡಲು ನಾನು ಬಯಸುತ್ತಿಲ್ಲ. ಏಕೆಂದರೆ ನೀನು ದೇವತೆಗಳಿಗೂ ಉಪದೇಶನೀಡಲು ಸಮರ್ಥನಾಗಿರುವೆ!

12050018a ಯದ್ಧಿ ಭೂತಂ ಭವಿಷ್ಯಚ್ಚ ಭವಚ್ಚ ಪುರುಷರ್ಷಭ|
12050018c ಸರ್ವಂ ತಜ್ಞಾನವೃದ್ಧಸ್ಯ ತವ ಪಾಣಾವಿವಾಹಿತಮ್||

ಪುರುಷರ್ಷಭ! ಜ್ಞಾನವೃದ್ಧನಾದ ನಿನ್ನಲ್ಲಿ ಭೂತ-ಭವಿಷ್ಯ-ವರ್ತಮಾನಗಳಿಲ್ಲವೂ, ಶಾಸ್ತ್ರ-ವೇದ-ಪುರಾಣ-ಇತಿಹಾಸಗಳಿಲ್ಲವೂ ಪ್ರತಿಷ್ಠಿತವಾಗಿವೆ.

12050019a ಸಂಸಾರಶ್ಚೈವ ಭೂತಾನಾಂ ಧರ್ಮಸ್ಯ ಚ ಫಲೋದಯಃ|
12050019c ವಿದಿತಸ್ತೇ ಮಹಾಪ್ರಾಜ್ಞ ತ್ವಂ ಹಿ ಬ್ರಹ್ಮಮಯೋ ನಿಧಿಃ||

ಮಹಾಪ್ರಾಜ್ಞ! ಪ್ರಾಣಿಗಳ ಸಂಸಾರ ಮತ್ತು ಧರ್ಮದ ಫಲಾನುಭವಗಳನ್ನು ನೀನು ಅರಿತುಕೊಂಡಿದ್ದೀಯೆ. ನೀನು ಬ್ರಹ್ಮಮಯ ನಿಧಿಯಾಗಿರುವೆ!

12050020a ತ್ವಾಂ ಹಿ ರಾಜ್ಯೇ ಸ್ಥಿತಂ ಸ್ಫೀತೇ ಸಮಗ್ರಾಂಗಮರೋಗಿಣಮ್|
12050020c ಸ್ತ್ರೀಸಹಸ್ರೈಃ ಪರಿವೃತಂ ಪಶ್ಯಾಮೀಹೋರ್ಧ್ವರೇತಸಮ್||

ಸಮೃದ್ಧ ರಾಜ್ಯದಲ್ಲಿ ನೀನು ನಿನ್ನ ಎಲ್ಲ ಅಂಗಾಂಗಳೂ ಸದೃಢವಾಗಿದ್ದು, ಅರೋಗಿಯಾಗಿದ್ದು, ಸಹಸ್ರಾರು ಸ್ತ್ರೀಯರಿಂದ ಪರಿವೃತನಾಗಿದ್ದರೂ, ಊರ್ಧ್ವರೇತಸ್ಕನಾಗಿ ಬ್ರಹ್ಮಚರ್ಯೆಯನ್ನು ಪಾಲಿಸಿದುದನ್ನು ನಾನು ಕಂಡಿದ್ದೇನೆ.

12050021a ಋತೇ ಶಾಂತನವಾದ್ಭೀಷ್ಮಾತ್ತ್ರಿಷು ಲೋಕೇಷು ಪಾರ್ಥಿವ|
12050021c ಸತ್ಯಸಂಧಾನ್ಮಹಾವೀರ್ಯಾಚ್ಚೂರಾದ್ಧರ್ಮೈಕತತ್ಪರಾತ್||

12050022a ಮೃತ್ಯುಮಾವಾರ್ಯ ತರಸಾ ಶರಪ್ರಸ್ತರಶಾಯಿನಃ|
12050022c ನಿಸರ್ಗಪ್ರಭವಂ ಕಿಂ ಚಿನ್ನ ಚ ತಾತಾನುಶುಶ್ರುಮ||

ಪಾರ್ಥಿವ! ಈ ಶರಶಯನದಲ್ಲಿ ಮಲಗಿರುವ ಸತ್ಯಸಂಧ,
ಮಹಾವೀರ್ಯ, ಶೂರ. ಧರ್ಮದಲ್ಲಿಯೇ ತತ್ಪರನಾಗಿರುವ ಶಾಂತನವ
ಭೀಷ್ಮನೊಬ್ಬನನ್ನು ಬಿಟ್ಟು ಮೃತ್ಯುವನ್ನೂ ತಡೆದು ನಿಲ್ಲಿಸಬಲ್ಲ
ಮತ್ತೊಬ್ಬನನ್ನು ಈ ಮೂರುಲೋಕಗಳಲ್ಲಿಯೂ ಎಲ್ಲಿಯಾದರೂ
ಹುಟ್ಟಿರುವನೆಂಬುದನ್ನು ನಾನು ಇದೂವರೆಗೂ ಕೇಳಿರುವುದಿಲ್ಲ!

12050023a ಸತ್ಯೇ ತಪಸಿ ದಾನೇ ಚ ಯಜ್ಞಾಧಿಕರಣೇ ತಥಾ|
12050023c ಧನುರ್ವೇದೇ ಚ ವೇದೇ ಚ ನಿತ್ಯಂ ಚೈವಾನ್ವವೇಕ್ಷಣೇ||
12050024a ಅನೃಶಂಸಂ ಶುಚಿಂ ದಾಂತಂ ಸರ್ವಭೂತಹಿತೇ ರತಮ್|
12050024c ಮಹಾರಥಂ ತ್ವತ್ಸದೃಶಂ ನ ಕಂ ಚಿದನುಶುಶ್ರುಮ||

ಸತ್ಯ, ತಪಸ್ಸು, ದಾನ, ಯಜ್ಞಾನುಷ್ಠಾನ, ಧನುರ್ವೇದ, ವೇದ, ನಿತ್ಯವೂ
ಪ್ರಜೆಗಳ ಪರಿಪಾಲನೆ ಇವುಗಳಲ್ಲಿ ನಿನಗೆ ಸಮನಾದ ದಯಾವಂತ,
ಶುಚಿ, ಜಿತೇಂದ್ರಿಯ, ಸರ್ವಭೂತಹಿತರತ, ಮಹಾರಥನ ಕುರಿತು
ಇದೂವರೆಗೆ ನಾನು ಕೇಳಿಲ್ಲ!

12050025a ತ್ವಂ ಹಿ ದೇವಾನ್ಸಗಂಧರ್ವಾನ್ಸಸುರಾಸುರರಾಕ್ಷಸಾನ್|
12050025c ಶಕ್ತ ಏಕರಥೇನೈವ ವಿಜೇತುಂ ನಾತ್ರ ಸಂಶಯಃ||

ನೀನು ಒಂದೇ ರಥದಲ್ಲಿ ಗಂಧರ್ವ-ಸುರ-ಅಸುರ-ರಾಕ್ಷಸರೊಂದಿಗೆ
ದೇವತೆಗಳನ್ನು ಜಯಿಸಲು ಶಕ್ತನೆನ್ನುವುದರಲ್ಲಿ ಸಂಶಯವೇ ಇಲ್ಲ.

12050026a ತ್ವಂ ಹಿ ಭೀಷ್ಮ ಮಹಾಬಾಹೋ ವಸೂನಾಂ ವಾಸವೋಪಮಃ|
12050026c ನಿತ್ಯಂ ವಿಪ್ರೈಃ ಸಮಾಖ್ಯಾತೋ ನವಮೋಽನವಮೋ ಗುಣೈಃ||

ಭೀಷ್ಮ! ಮಹಾಬಾಹೋ! ವಸುಗಳಲ್ಲಿ ನೀನು ಇಂದ್ರಸಮಾನನು. ವಿಪ್ರರು ನಿತ್ಯವೂ ನಿನ್ನನ್ನು ಅಷ್ಟವಸುಗಳ ಅಂಶದಿಂದ ಹುಟ್ಟಿದ ಒಂಭತ್ತನೆಯವನೆಂದೂ, ಗುಣಗಳಲ್ಲಿ ನಿನ್ನ ಸಮನಾಗಿರುವವರು ಯಾರೂ ಇಲ್ಲವೆಂದೂ ವರ್ಣಿಸುತ್ತಾರೆ.

12050027a ಅಹಂ ಹಿ ತ್ವಾಭಿಜಾನಾಮಿ ಯಸ್ತ್ವಂ ಪುರುಷಸತ್ತಮ|
12050027c ತ್ರಿದಶೇಷ್ವಪಿ ವಿಖ್ಯಾತಃ ಸ್ವಶಕ್ತ್ಯಾ ಸುಮಹಾಬಲಃ||

ಪುರುಷಸತ್ತಮ! ನೀನು ಯಾರೆಂದು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ನಿನ್ನ ಶಕ್ತಿ ಮತ್ತು ಮಹಾಬಲಗಳಿಂದ ನೀನು ದೇವತೆಗಳಲ್ಲಿಯೂ ವಿಖ್ಯಾತನಾಗಿರುವೆ!

12050028a ಮನುಷ್ಯೇಷು ಮನುಷ್ಯೇಂದ್ರ ನ ದೃಷ್ಟೋ ನ ಚ ಮೇ ಶ್ರುತಃ|
12050028c ಭವತೋ ಯೋ ಗುಣೈಸ್ತುಲ್ಯಃ ಪೃಥಿವ್ಯಾಂ ಪುರುಷಃ ಕ್ವ ಚಿತ್||

ಮನುಷ್ಯೇಂದ್ರ! ಈ ಭೂಮಿಯ ಮನುಷ್ಯರಲ್ಲಿ ನಿನ್ನ ಸಮಾನ ಗುಣಗಳುಳ್ಳ ಬೇರೆ ಯಾವ ಪುರುಷನನ್ನೂ ನಾನು ನೋಡಲೂ ಇಲ್ಲ ಮತ್ತು ಕೇಳಲೂ ಇಲ್ಲ.

12050029a ತ್ವಂ ಹಿ ಸರ್ವೈರ್ಗುಣೈ ರಾಜನ್ದೇವಾನಪ್ಯತಿರಿಚ್ಯಸೇ|
12050029c ತಪಸಾ ಹಿ ಭವಾನ್ಶಕ್ತಃ ಸ್ರಷ್ಟುಂ ಲೋಕಾಂಶ್ಚರಾಚರಾನ್||

ರಾಜನ್! ನೀನು ಸರ್ವಗುಣಗಳಿಂದಲೂ ದೇವತೆಗಳನ್ನೂ ಅತಿಶಯಿಸಿರುವೆ. ನಿನ್ನ ತಪಸ್ಸಿನಿಂದ ನೀನು ಲೋಕಗಳನ್ನೂ ಚರಾಚರಗಳನ್ನೂ ಸೃಷ್ಟಿಸಲು ಶಕ್ತನಾಗಿರುವೆ.

12050030a ತದಸ್ಯ ತಪ್ಯಮಾನಸ್ಯ ಜ್ಞಾತೀನಾಂ ಸಂಕ್ಷಯೇಣ ವೈ|

12050030c ಜ್ಯೇಷ್ಠಸ್ಯ ಪಾಂಡುಪುತ್ರಸ್ಯ ಶೋಕಂ ಭೀಷ್ಮ ವ್ಯಪಾನುದ||

ಭೀಷ್ಮ! ಜ್ಞಾತಿಬಾಂಧವರ ಸಂಕ್ಷಯದಿಂದ ತಪಿಸುತ್ತಿರುವ ಈ ಜ್ಯೇಷ್ಠ ಪಾಂಡುಪುತ್ರನ ಶೋಕವನ್ನು ನೀನು ನಿವಾರಿಸು!

12050031a ಯೇ ಹಿ ಧರ್ಮಾಃ ಸಮಾಖ್ಯಾತಾಶ್ಚಾತುರ್ವರ್ಣ್ಯಸ್ಯ ಭಾರತ|
12050031c ಚಾತುರಾಶ್ರಮ್ಯಸಂಸೃಷ್ಟಾಸ್ತೇ ಸರ್ವೇ ವಿದಿತಾಸ್ತವ||

ಭಾರತ! ನಾಲ್ಕು ಆಶ್ರಮಧರ್ಮಗಳಿಂದ ಕೂಡಿರುವ ಚಾತುರ್ವರ್ಣಗಳ ಧರ್ಮಗಳೆಲ್ಲವೂ ನಿನಗೆ ಸಂಪೂರ್ಣವಾಗಿ ತಿಳಿದಿವೆ.

12050032a ಚಾತುರ್ವೇದ್ಯೇ ಚ ಯೇ ಪ್ರೋಕ್ತಾಶ್ಚಾತುರ್ಹೋತ್ರೇ ಚ ಭಾರತ|
12050032c ಸಾಂಖ್ಯೇ ಯೋಗೇ ಚ ನಿಯತಾ ಯೇ ಚ ಧರ್ಮಾಃ ಸನಾತನಾಃ||
12050033a ಚಾತುರ್ವರ್ಣ್ಯೇನ ಯಶ್ಚೈಕೋ ಧರ್ಮೋ ನ ಸ್ಮ ವಿರುಧ್ಯತೇ|
12050033c ಸೇವ್ಯಮಾನಃ ಸ ಚೈವಾದ್ಯೋ ಗಾಂಗೇಯ ವಿದಿತಸ್ತವ||

ಭಾರತ! ಗಾಂಗೇಯ! ನಾಲ್ಕು ವೇದಗಳಲ್ಲಿ ಹೇಳಿರುವ ನಾಲ್ಕು ಹೋತೃಗಳ ಕರ್ತವ್ಯಗಳನ್ನೂ, ಸಾಂಖ್ಯಯೋಗವನ್ನೂ, ನಾಲ್ಕೂ ವರ್ಣಗಳವರಿಗೆ ನಿಯಮಿಸಲ್ಪಟ್ಟಿರುವ ಸನಾತನ ಧರ್ಮಗಳನ್ನೂ, ಆದರೆ ಯಾವುದಕ್ಕೂ ವಿರುದ್ಧವಾಗಿರದ ಹಾಗೆ ನಡೆದುಕೊಳ್ಳುವ ಏಕೈಕ ಧರ್ಮವೇನಿದೆಯೋ ಅದನ್ನೂ ನೀನು ತಿಳಿದಿರುವೆ.

12050034a ಇತಿಹಾಸಪುರಾಣಂ ಚ ಕಾರ್ತ್ಸ್ನ್ಯೇನ ವಿದಿತಂ ತವ|
12050034c ಧರ್ಮಶಾಸ್ತ್ರಂ ಚ ಸಕಲಂ ನಿತ್ಯಂ ಮನಸಿ ತೇ ಸ್ಥಿತಮ್||

ಇತಿಹಾಸ-ಪುರಾಣಗಳು ಸಂಪೂರ್ಣವಾಗಿ ನಿನಗೆ ತಿಳಿದಿವೆ. ಸಕಲ

ಧರ್ಮಶಾಸ್ತ್ರಗಳೂ ನಿನ್ನ ಮನಸ್ಸಿನಲ್ಲಿ ನೆಲೆಸಿಬಿಟ್ಟಿವೆ.

12050035a ಯೇ ಚ ಕೇ ಚನ ಲೋಕೇಽಸ್ಮಿನ್ನರ್ಥಾಃ ಸಂಶಯಕಾರಕಾಃ|
12050035c ತೇಷಾಂ ಚೇತ್ತಾ ನಾಸ್ತಿ ಲೋಕೇ ತ್ವದನ್ಯಃ ಪುರುಷರ್ಷಭ||

ಪುರುಷರ್ಷಭ! ಸಂಶಯಾಸ್ಪದವಾದ ಯಾವುದಾದರೂ ಕೆಲವು ವಿಷಯಗಳು ಲೋಕದಲ್ಲಿದ್ದರೆ ಅವುಗಳನ್ನೂ ನಿವಾರಿಸಲು ಈ ಲೋಕದಲ್ಲಿ ನಿನ್ನನ್ನು ಬಿಟ್ಟು ಬೇರೆ ಯಾರೂ ಇಲ್ಲ.

12050036a ಸ ಪಾಂಡವೇಯಸ್ಯ ಮನಃಸಮುತ್ಥಿತಂ
ನರೇಂದ್ರ ಶೋಕಂ ವ್ಯಪಕರ್ಷ ಮೇಧಯಾ|
12050036c ಭವದ್ವಿಧಾ ಹ್ಯುತ್ತಮಬುದ್ಧಿವಿಸ್ತರಾ
ವಿಮುಹ್ಯಮಾನಸ್ಯ ಜನಸ್ಯ ಶಾಂತಯೇ||

ನರೇಂದ್ರ! ಈ ಪಾಂಡವೇಯನ ಮನಸ್ಸಿನಲ್ಲಿ ಹುಟ್ಟಿಕೊಂಡಿರುವ ಶೋಕವನ್ನು ನಿನ್ನ ಬುದ್ಧಿಶಕ್ತಿಯಿಂದ ದೂರಮಾಡು! ಮೋಹಗೊಂಡಿರುವ ಜನರನ್ನು ಶಾಂತಗೊಳಿಸಲು ನಿನ್ನಂಥಹ ಉತ್ತಮ ವಿಶಾಲ ಬುದ್ಧಿಯುಳ್ಳವನಿಗೆ ಮಾತ್ರ ಸಾಧ್ಯ!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಕೃಷ್ಣವಾಕ್ಯೇ ಪಂಚಶತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಕೃಷ್ಣವಾಕ್ಯ ಎನ್ನುವ ಐವತ್ತನೇ ಅಧ್ಯಾಯವು.

೫೧

ಭೀಷ್ಮನು ಕೃಷ್ಣನನ್ನು ಸ್ತುತಿಸಿದುದು ಮತ್ತು ಕೃಷ್ಣನು ಭೀಷ್ಮನನ್ನು ಪ್ರಶಂಸಿಸುತ್ತಾ ಯುಧಿಷ್ಠಿರನಿಗೆ ಧರ್ಮೋಪದೇಶವನ್ನು ನೀಡಲು ಆದೇಶವನ್ನಿತ್ತಿದುದು (1-18).

12051001 ವೈಶಂಪಾಯನ ಉವಾಚ|
12051001a ಶ್ರುತ್ವಾ ತು ವಚನಂ ಭೀಷ್ಮೋ ವಾಸುದೇವಸ್ಯ ಧೀಮತಃ|
12051001c ಕಿಂ ಚಿದುನ್ನಾಮ್ಯ ವದನಂ ಪ್ರಾಂಜಲಿರ್ವಾಕ್ಯಮಬ್ರವೀತ್||

ವೈಶಂಪಾಯನನು ಹೇಳಿದನು: "ವಾಸುದೇವನ ಆ ಮಾತನ್ನು ಕೇಳಿದ ಧೀಮಂತ ಭೀಷ್ಮನು ತನ್ನ ಮುಖವನ್ನು ಸ್ವಲ್ಪವೇ ಮೇಲಕ್ಕೆತ್ತಿ ಕೈಜೋಡಿಸಿ ಹೇಳಿದನು:

12051002a ನಮಸ್ತೇ ಭಗವನ್ವಿಷ್ಣೋ ಲೋಕಾನಾಂ ನಿಧನೋದ್ಭವ|
12051002c ತ್ವಂ ಹಿ ಕರ್ತಾ ಹೃಷೀಕೇಶ ಸಂಹರ್ತಾ ಚಾಪರಾಜಿತಃ||

"ಭಗವನ್! ವಿಷ್ಣುವೇ! ಲೋಕಗಳ ಉದ್ಭವ ಮತ್ತು ನಿಧನ! ನಿನಗೆ ನಮಸ್ಕಾರವು! ಹೃಷೀಕೇಶ! ನೀನೇ ಕರ್ತ, ಸಂಹರ್ತ ಮತ್ತು ಅಪರಾಜಿತ!

12051003a ವಿಶ್ವಕರ್ಮನ್ನಮಸ್ತೇಽಸ್ತು ವಿಶ್ವಾತ್ಮನ್ವಿಶ್ವಸಂಭವ|
12051003c ಅಪವರ್ಗೋಽಸಿ ಭೂತಾನಾಂ ಪಂಚಾನಾಂ ಪರತಃ ಸ್ಥಿತಃ||

ವಿಶ್ವಕರ್ಮನೇ! ವಿಶ್ವಾತ್ಮನೇ! ವಿಶ್ವಸಂಭವನೇ! ನಿನಗೆ ನಮಸ್ಕಾರಗಳು! ನೀನು ಪಂಚಭೂತಗಳಿಗೂ ಅತೀತನಾಗಿದ್ದು ಪ್ರಾಣಿಗಳ ಮೋಕ್ಷಸ್ವರೂಪನಾಗಿರುವೆ!

12051004a ನಮಸ್ತೇ ತ್ರಿಷು ಲೋಕೇಷು ನಮಸ್ತೇ ಪರತಸ್ತ್ರಿಷು|

12051004c ಯೋಗೇಶ್ವರ ನಮಸ್ತೇಽಸ್ತು ತ್ವಂ ಹಿ ಸರ್ವಪರಾಯಣಮ್‌॥

ಮೂರು ಲೋಕಗಳಲ್ಲಿಯೂ ವ್ಯಾಪಕನಾಗಿರುವ ನಿನಗೆ
ನಮಸ್ಕರಿಸುತ್ತೇನೆ. ಮೂರು ಗುಣಗಳಿಗೂ ಅತೀತನಾಗಿರುವ ನಿನಗೆ
ನಮಸ್ಕರಿಸುತ್ತೇನೆ. ಯೋಗೇಶ್ವರ! ಸರ್ವಕ್ಕೂ ಪರಾಯಣನಾಗಿರುವ
ನಿನಗೆ ನಮಸ್ಕರಿಸುತ್ತೇನೆ.

12051005a ಮತ್ಸಂಶ್ರಿತಂ ಯದಾತ್ಥ ತ್ವಂ ವಚಃ ಪುರುಷಸತ್ತಮ|
12051005c ತೇನ ಪಶ್ಯಾಮಿ ತೇ ದಿವ್ಯಾನ್ಭಾವಾನ್ದಿ ತ್ರಿಷು ವರ್ತ್ಮಸು‌॥

ಪುರುಷಸತ್ತಮ! ನೀನು ನನಗೆ ಸಂಬಂಧಿಸಿದಂತೆ ಕೆಲವು
ಮಾತುಗಳನ್ನಾಡಿರುವೆ! ಇದರಿಂದಾಗಿ ಮೂರು ಲೋಕಗಳಲ್ಲಿಯೂ
ವ್ಯಾಪ್ತನಾಗಿರುವ ನಿನ್ನ ದಿವ್ಯತೆಯನ್ನು ಕಾಣುತ್ತಿದ್ದೇನೆ.

12051006a ತಚ್ಚ ಪಶ್ಯಾಮಿ ತತ್ತ್ವೇನ ಯತ್ತೇ ರೂಪಂ ಸನಾತನಮ್‌|
12051006c ಸಪ್ತ ಮಾರ್ಗಾ ನಿರುದ್ಧಾಸ್ತೇ ವಾಯೋರಮಿತತೇಜಸಃ‌॥

ವಾಯುವಿನ ಏಳು ಮಾರ್ಗಗಳನ್ನೂ ತಡೆದಿರುವ ಅಮಿತತೇಜಸ್ವೀ ನಿನ್ನ
ಸನಾತನ ರೂಪವನ್ನು ತತ್ತ್ವತಃ ನಾನು ಕಾಣುತ್ತಿದ್ದೇನೆ.

12051007a ದಿವಂ ತೇ ಶಿರಸಾ ವ್ಯಾಪ್ತಂ ಪದ್ಭ್ಯಾಂ ದೇವೀ ವಸುಂಧರಾ|
12051007c ದಿಶೋ ಭುಜೌ ರವಿಶ್ಚಕ್ಷುರ್ವೀರ್ಯೇ ಶಕ್ರಃ ಪ್ರತಿಷ್ಠಿತಃ‌॥

ನಿನ್ನ ಶಿರಸ್ಸು ಸ್ವರ್ಗದಿಂದ ವ್ಯಾಪ್ತವಾಗಿದೆ. ಪಾದಗಳು ದೇವೀ
ವಸುಂಧರೆಯಿಂದ ವ್ಯಾಪ್ತವಾಗಿವೆ. ನಿನ್ನ ಭುಜಗಳಲ್ಲಿ ದಿಕ್ಕುಗಳೂ,
ಕಣ್ಣುಗಳಲ್ಲಿ ರವಿಯೂ ಮತ್ತು ವೀರ್ಯದಲ್ಲಿ ಶಕ್ರನೂ
ಪ್ರತಿಷ್ಠಿತಗೊಂಡಿದ್ದಾರೆ.



12051008a ಅತಸೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್|
12051008c ವಪುರ್ಹ್ಯನುಮಿಮೀಮಸ್ತೇ ಮೇಘಸ್ಯೇವ ಸವಿದ್ಯುತಃ||

ಅಗಸೇ ಹೂವಿನಂತೆ ಶ್ಯಾಮಲವರ್ಣದವನೂ, ಪೀತಾಂಬರವನ್ನು ಧರಿಸಿರುವವನೂ, ಧರ್ಮದಿಂದ ಚ್ಯುತನಾಗದೇ ಇರುವವನೂ ಆದ ನೀನು ನನಗೆ ಮಿಂಚುಗಳಿಂದ ಕೂಡಿರುವ ಕಾಲಮೇಘದಂತೆ ತೋರುತ್ತಿರುವೆ!

12051009a ತ್ವತ್ಪ್ರಪನ್ನಾಯ ಭಕ್ತಾಯ ಗತಿಮಿಷ್ಟಾಂ ಜಿಗೀಷವೇ|
12051009c ಯಚ್ಚ್ರೇಯಃ ಪುಂಡರೀಕಾಕ್ಷ ತದ್ಧ್ಯಾಯಸ್ವ ಸುರೋತ್ತಮ||

ಪುಂಡರೀಕಾಕ್ಷ! ಸುರೋತ್ತಮ! ಸದ್ಗತಿಯನ್ನು ಬಯಸಿ ನಿನ್ನನ್ನೇ

ಶರಣುಹೊಂದಿರುವ ಈ ಭಕ್ತನಿಗೆ ಯಾವುದು ಶ್ರೇಯಸ್ಸೆಂದು ನೀನೇ ಹೇಳು!"

12051010 ವಾಸುದೇವ ಉವಾಚ|
12051010a ಯತಃ ಖಲು ಪರಾ ಭಕ್ತಿರ್ಮಯಿ ತೇ ಪುರುಷರ್ಷಭ|
12051010c ತತೋ ವಪುರ್ಮಯಾ ದಿವ್ಯಂ ತವ ರಾಜನ್ಪ್ರದರ್ಶಿತಮ್||

ವಾಸುದೇವನು ಹೇಳಿದನು: "ಪುರುಷರ್ಷಭ! ರಾಜನ್! ನಿನಗೆ ನನ್ನಲ್ಲಿ ಪರಮ ಭಕ್ತಿಯಿರುವುದರಿಂದಲೇ ನಾನು ನಿನಗೆ ನನ್ನ ದಿವ್ಯ ರೂಪವನ್ನು ತೋರಿಸಿರುವೆನು!

12051011a ನ ಹ್ಯಭಕ್ತಾಯ ರಾಜೇಂದ್ರ ಭಕ್ತಾಯಾನೃಜವೇ ನ ಚ|
12051011c ದರ್ಶಯಾಮ್ಯಹಮಾತ್ಮಾನಂ ನ ಚಾದಾಂತಾಯ ಭಾರತ||

ರಾಜೇಂದ್ರ! ಭಾರತ! ನನ್ನ ಭಕ್ತನಲ್ಲದವನಿಗೆ, ಭಕ್ತನಾಗಿದ್ದರೂ ಕುಟಿಲಸ್ವಭಾವವಿದ್ದವನಿಗೆ ಮತ್ತು ಮನಃಶಾಂತಿಯಿಲ್ಲದವನಿಗೆ ನನ್ನ ಈ ದಿವ್ಯರೂಪವನ್ನು ತೋರಿಸುವುದಿಲ್ಲ.

12051012a ಭವಾಂಸ್ತು ಮಮ ಭಕ್ತಶ್ಚ ನಿತ್ಯಂ ಚಾರ್ಜವಮಾಸ್ಥಿತಃ|
12051012c ದಮೇ ತಪಸಿ ಸತ್ಯೇ ಚ ದಾನೇ ಚ ನಿರತಃ ಶುಚಿಃ||

ನೀನಾದರೋ ನನ್ನ ಭಕ್ತನಾಗಿರುವೆ. ನಿತ್ಯವೂ ಸರಳಸ್ವಭಾವದಿಂದಿರುವೆ. ನಿತ್ಯವೂ ನೀನು ಜಿತೇಂದ್ರಿಯ ಮತ್ತು ಶುಚಿಯಾಗಿದ್ದುಕೊಂಡು ಸತ್ಯ-ದಾನಗಳಲ್ಲಿ ನಿರತನಾಗಿರುವೆ!

12051013a ಅರ್ಹಸ್ತ್ವಂ ಭೀಷ್ಮ ಮಾಂ ದ್ರಷ್ಟುಂ ತಪಸಾ ಸ್ವೇನ ಪಾರ್ಥಿವ|
12051013c ತವ ಹ್ಯುಪಸ್ಥಿತಾ ಲೋಕಾ ಯೇಭ್ಯೋ ನಾವರ್ತತೇ ಪುನಃ||

ಭೀಷ್ಮ ! ಪಾರ್ಥಿವ ! ನಿನ್ನ ತಪಸ್ಸಿನಿಂದಲೇ ನೀನು ನನ್ನನ್ನು ನೋಡಲು ಅರ್ಹನಾಗಿರುವೆ. ಯಾವಲೋಕಗಳಿಂದ ನೀನು ಪುನಃ ಹಿಂದಿರುಗುವುದಿಲ್ಲವೋ ಅಂಥಹ ಉತ್ತಮ ಲೋಕಕ್ಕೇ ನೀನು ತೆರಳುತ್ತೀಯೆ.

12051014a ಪಂಚಾಶತಂ ಷಟ್ಚ ಕುರುಪ್ರವೀರ
ಶೇಷಂ ದಿನಾನಾಂ ತವ ಜೀವಿತಸ್ಯ|
12051014c ತತಃ ಶುಭೈಃ ಕರ್ಮಫಲೋದಯೈಸ್ತ್ವಂ
ಸಮೇಷ್ಯಸೇ ಭೀಷ್ಮ ವಿಮುಚ್ಯ ದೇಹಮ್‌||

ಕುರುಪ್ರವೀರ ! ಭೀಷ್ಮ ! ನಿನ್ನ ಜೀವಿತದಲ್ಲಿ ಇನ್ನು ಐವತ್ತಾರು ದಿನಗಳು ಮಾತ್ರವೇ ಉಳಿದಿವೆ. ಅದರ ನಂತರ ನಿನ್ನ ಶುಭಕರ್ಮಗಳ ಫಲವಾಗಿ ಈ ದೇಹವನ್ನು ವಿಸರ್ಜಿಸಿ ಉತ್ತಮ ಲೋಕವನ್ನು ಪಡೆಯುವೆ !

12051015a ಏತೇ ಹಿ ದೇವಾ ವಸವೋ ವಿಮಾನಾನ್ಯೆ
ಆಸ್ಥಾಯ ಸರ್ವೇ ಜ್ವಲಿತಾಗ್ನಿಕಲ್ಪಾಃ|
12051015c ಅಂತರ್ಹಿತಾಸ್ತ್ವಾಂ ಪ್ರತಿಪಾಲಯಂತಿ
ಕಾಷ್ಠಾಂ ಪ್ರಪದ್ಯಂತಮುದಕ್ಪತಂಗಮ್‌||

ಪ್ರಜ್ವಲಿಸುತ್ತಿರುವ ಅಗ್ನಿಗಳಂತಿರುವ ಈ ದೇವತೆಗಳು ಮತ್ತು ವಸುಗಳು ವಿಮಾನಸ್ಥರಾಗಿ, ಯಾರಿಗೂ ಕಾಣದಂತೆ, ಸೂರ್ಯನು ಉತ್ತರಕ್ಕೆ ತೆರಳುವುದನ್ನೇ ಕಾಯುತ್ತಿದ್ದಾರೆ ಮತ್ತು ನಿನ್ನ ಪ್ರತ್ಯಾಗಮನವನ್ನು ಎದಿರುನೋಡುತ್ತಿದ್ದಾರೆ !

12051016a ವ್ಯಾವೃತ್ತಮಾತ್ರೇ ಭಗವತ್ಯುದೀಚೀಂ
ಸೂರ್ಯೇ ದಿಶಂ ಕಾಲವಶಾತ್ಪ್ರಪನ್ನೇ|

12051016c ಗಂತಾಸಿ ಲೋಕಾನ್ಪುರುಷಪ್ರವೀರ
ನಾವರ್ತತೇ ಯಾನುಪಲಭ್ಯ ವಿದ್ವಾನ್‌||

ಪುರುಷಪ್ರವೀರ! ಭಗವಾನ್ ಸೂರ್ಯನು ಕಾಲವಶನಾಗಿ
ದಕ್ಷಿಣಾಯನದಿಂದ ಹಿಂದಿರುಗಿದ ಕೂಡಲೇ ಉತ್ತರಾಯಣಕ್ಕೆ
ಕಾಲಿಟ್ಟೊಡನೆಯೇ ನೀನು ಲೋಕಗಳಿಗೆ ತೆರಳುತ್ತೀಯೆ ಮತ್ತು
ವಿದ್ವಾನರಂತೆ ಆ ಲೋಕಗಳನ್ನು ಪಡೆದು ಮರಳಿ ಬರುವುದಿಲ್ಲ.

12051017a ಅಮುಂ ಚ ಲೋಕಂ ತ್ವಯಿ ಭೀಷ್ಮ ಯಾತೇ
ಜ್ಞಾನಾನಿ ನಂಕ್ಷ್ಯಂತ್ಯಖಿಲೇನ ವೀರ|
12051017c ಅತಃ ಸ್ಮ ಸರ್ವೇ ತ್ವಯಿ ಸಂನಿಕರ್ಷಂ
ಸಮಾಗತಾ ಧರ್ಮವಿವೇಚನಾಯ‌||

ಭೀಷ್ಮ! ವೀರ! ಈ ಲೋಕದಿಂದ ನೀನು ಹೊರಟು ಹೋಗಲು
ನಿನ್ನಲ್ಲಿರುವ ಅಖಿಲ ಜ್ಞಾನಗಳು ನಷ್ಟವಾಗಿ ಹೋಗುತ್ತವೆ.
ಆದುದರಿಂದಲೇ ಇವರೆಲ್ಲರೂ ಧರ್ಮದ ಕುರುತಾದ ಚರ್ಚೆಗಾಗಿಯೇ
ನಿನ್ನ ಬಳಿ ಬಂದು ಸೇರಿದ್ದಾರೆ.

12051018a ತಜ್ಜ್ಞಾತಿಶೋಕೋಪಹತಶ್ರುತಾಯ
ಸತ್ಯಾಭಿಸಂಧಾಯ ಯುಧಿಷ್ಠಿರಾಯ|
12051018c ಪ್ರಬ್ರೂಹಿ ಧರ್ಮಾರ್ಥಸಮಾಧಿಯುಕ್ತಮ್
ಅರ್ಥ್ಯಂ ವಚೋಽಸ್ಯಾಪನುದಾಸ್ಯ ಶೋಕಮ್‌||

ಜ್ಞಾತಿವಧೆಯ ಶೋಕದಿಂದಾಗಿ ಶಾಸ್ತ್ರಜ್ಞಾನವನ್ನು ಸಂಪೂರ್ಣವಾಗಿ
ಕಳೆದುಕೊಂಡಿರುವ ಸತ್ಯಸಂಧ ಯುಧಿಷ್ಠಿರನಿಗೆ
ಧರ್ಮಾರ್ಥಸಮಾಧಿಯುಕ್ತವಾದ ಅರ್ಥಬದ್ಧವಾದ ಮಾತುಗಳನ್ನಾಡಿ

ಅವನ ಶೋಕವನ್ನು ಹೋಗಲಾಡಿಸು!””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಕೃಷ್ಣವಾಕ್ಯೇ ಏಕಪಂಚಶತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಕೃಷ್ಣವಾಕ್ಯ ಎನ್ನುವ ಐವತ್ತೊಂದನೇ ಅಧ್ಯಾಯವು.

೫೨

ಯುಧಿಷ್ಠಿರಾದ್ಯಾಗಮನ

ಭೀಷ್ಮನು ಉಪದೇಶಿಸಲು ತನ್ನ ಅಸಮರ್ಥತೆಯನ್ನು ಪ್ರಕಟಿಸಿದುದು; ಕೃಷ್ಣನು ಅವನಿಗೆ ವರವನ್ನಿತ್ತುದುದು; ಮರುದಿನ ಬರುತ್ತೇವೆಂದು ಹೇಳಿ ಋಷಿಗಳು ಮತ್ತು ಪಾಂಡವರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದುದು (1-34).

12052001 ವೈಶಂಪಾಯನ ಉವಾಚ|
12052001a ತತಃ ಕೃಷ್ಣಸ್ಯ ತದ್ವಾಕ್ಯಂ ಧರ್ಮಾರ್ಥಸಹಿತಂ ಹಿತಮ್|
12052001c ಶ್ರುತ್ವಾ ಶಾಂತನವೋ ಭೀಷ್ಮಃ ಪ್ರತ್ಯುವಾಚ ಕೃತಾಂಜಲಿಃ||

ವೈಶಂಪಾಯನನು ಹೇಳಿದನು: “ಅನಂತರ ಕೃಷ್ಣನ ಆ ಧರ್ಮಾರ್ಥಸಂಹಿತ ಹಿತಕರ ಮಾತನ್ನು ಕೇಳಿ ಶಾಂತನವ ಭೀಷ್ಮನು ಕೈಮುಗಿದು ಉತ್ತರಿಸಿದನು:

12052002a ಲೋಕನಾಥ ಮಹಾಬಾಹೋ ಶಿವ ನಾರಾಯಣಾಚ್ಯುತ|

12052002c ತವ ವಾಕ್ಯಮಭಿಶ್ರುತ್ಯ ಹರ್ಷೇಣಾಸ್ಮಿ ಪರಿಪ್ಲುತಃ||

“ಲೋಕನಾಥ! ಮಹಾಬಾಹೋ! ಶಿವ! ನಾರಾಯಣ! ಅಚ್ಯುತ! ನಿನ್ನ ಮಾತನ್ನು ಕೇಳಿ ನಾನು ಹರ್ಷದಲ್ಲಿ ಮುಳುಗಿಹೋಗಿದ್ದೇನೆ!

12052003a ಕಿಂ ಚಾಹಮಭಿಧಾಸ್ಯಾಮಿ ವಾಕ್ಪತೇ ತವ ಸಂನಿಧೌ|
12052003c ಯದಾ ವಾಚೋಗತಂ ಸರ್ವಂ ತವ ವಾಚಿ ಸಮಾಹಿತಮ್||

ನಿನ್ನ ಸನ್ನಿಧಿಯಲ್ಲಿ ನಾನು ಏನನ್ನು ತಾನೇ ಹೇಳಬಲ್ಲೆ? ಮಾತಿನಿಂದ ತಿಳಿಸಬಹುದಾದ ಎಲ್ಲವೂ ನಿನ್ನ ಮಾತಿನಲ್ಲಿಯೇ ಅಡಗಿವೆ!

12052004a ಯದ್ಧಿ ಕಿಂ ಚಿತ್ಕೃತಂ ಲೋಕೇ ಕರ್ತವ್ಯಂ ಕ್ರಿಯತೇ ಚ ಯತ್|
12052004c ತ್ವತ್ತಸ್ತನ್ನಿಃಸೃತಂ ದೇವ ಲೋಕಾ ಬುದ್ಧಿಮಯಾ ಹಿ ತೇ||

ದೇವ! ಈ ಲೋಕದಲ್ಲಿ ಯತ್ಕಿಂಚಿತ್ ಏನಾದರೂ ನಡೆದರೆ ಮತ್ತು ಯಾರಾದರೂ ಕರ್ತವ್ಯಗಳನ್ನು ಮಾಡಿದರೆ ಅದು ನಿನ್ನಿಂದಲೇ ಮಾಡಿಸಲ್ಪಟ್ಟಿರುತ್ತವೆ. ಏಕೆಂದರೆ ನೀನು ಬುದ್ಧಿಮಯನಾಗಿರುವೆ.

12052005a ಕಥಯೇದ್ದೇವಲೋಕಂ ಯೋ ದೇವರಾಜಸಮೀಪತಃ|
12052005c ಧರ್ಮಕಾಮಾರ್ಥಶಾಸ್ತ್ರಾಣಾಂ ಸೋಽರ್ಥಾನ್ಬ್ರೂಯಾತ್ತವಾಗ್ರತಃ||

ನಿನ್ನ ಎದಿರು ಧರ್ಮ-ಕಾಮ-ಅರ್ಥಶಾಸ್ತ್ರಗಳ ಅರ್ಥಗಳನ್ನು ತಿಳಿಸುವವನು ದೇವರಾಜನ ಬಳಿಹೋಗಿ ದೇವಲೋಕದ ವರ್ಣನೆಯನ್ನು ಮಾಡುವವನಂತೆ!

12052006a ಶರಾಭಿಘಾತಾದ್ವ್ಯಥಿತಂ ಮನೋ ಮೇ ಮಧುಸೂದನ|
12052006c ಗಾತ್ರಾಣಿ ಚಾವಸೀದಂತಿ ನ ಚ ಬುದ್ಧಿಃ ಪ್ರಸೀದತಿ||

ಮಧುಸೂದನ! ಶರಸಮೂಹಗಳ ಘಾತದಿಂದ ನನ್ನ ಮನಸ್ಸು

ವ್ಯಥಿತಗೊಂಡಿದೆ. ಅಂಗಾಂಗಗಳು ಶಿಥಿಲಗೊಂಡಿವೆ. ನನ್ನ ಬುದ್ಧಿಯೂ ಕುಸಿಯುತ್ತಿದೆ!

12052007a ನ ಚ ಮೇ ಪ್ರತಿಭಾ ಕಾ ಚಿದಸ್ತಿ ಕಿಂ ಚಿತ್ಪ್ರಭಾಷಿತುಮ್|
12052007c ಪೀಡ್ಯಮಾನಸ್ಯ ಗೋವಿಂದ ವಿಷಾನಲಸಮೈಃ ಶರೈಃ||

ಗೋವಿಂದ! ವಿಷ-ಅಗ್ನಿಗಳ ಸಮಾನ ಶರಗಳಿಂದ ಪೀಡಿತನಾದ ನನಗೆ ಏನನ್ನು ಮಾತನಾಡಲೂ ತೋಚುತ್ತಿಲ್ಲ!

12052008a ಬಲಂ ಮೇಧಾಃ ಪ್ರಜರತಿ ಪ್ರಾಣಾಃ ಸಂತ್ವರಯಂತಿ ಚ|
12052008c ಮರ್ಮಾಣಿ ಪರಿತಪ್ಯಂತೇ ಭ್ರಾಂತಂ ಚೇತಸ್ತಥೈವ ಚ||

ಬಲವು ಕುಂದುತ್ತಿದೆ. ಪ್ರಾಣಗಳು ಹೊರಟುಹೋಗಲು ತ್ವರೆಮಾಡುತ್ತಿವೆ. ಮರ್ಮಸ್ಥಳಗಳು ಪರಿತಪಿಸುತ್ತಿವೆ. ಚೇತನವು ಭ್ರಾಂತವಾಗಿದೆ!

12052009a ದೌರ್ಬಲ್ಯಾತ್ಸಜ್ಜತೇ ವಾಙ್ಮೇ ಸ ಕಥಂ ವಕ್ತುಮುತ್ಸಹೇ|
12052009c ಸಾಧು ಮೇ ತ್ವಂ ಪ್ರಸೀದಸ್ವ ದಾಶಾರ್ಹಕುಲನಂದನ||

ದಾಶಾರ್ಹಕುಲನಂದನ! ದೌರ್ಬಲ್ಯದಿಂದಾಗಿ ನನ್ನ ಮಾತು ತೊದಲುತ್ತಿದೆ. ಹೇಗೆ ತಾನೇ ನಾನು ಮಾತನಾಡಲಿ? ನನಗೆ ಒಳ್ಳೆಯದಾಗಲು ಅನುಗ್ರಹಿಸು!

12052010a ತತ್ಕ್ಷಮಸ್ವ ಮಹಾಬಾಹೋ ನ ಬ್ರೂಯಾಂ ಕಿಂ ಚಿದಚ್ಯುತ|
12052010c ತ್ವತ್ಸಂನಿಧೌ ಚ ಸೀದೇತ ವಾಚಸ್ಪತಿರಪಿ ಬ್ರುವನ್||

ಮಹಾಬಾಹೋ! ನನ್ನನ್ನು ಕ್ಷಮಿಸು! ಅಚ್ಯುತ! ನಿನ್ನ ಸನ್ನಿಧಿಯಲ್ಲಿ ಮಾತನಾಡಲು ಬೃಹಸ್ಪತಿಯೂ ಕೂಡ ಹಿಂಜರಿಯುತ್ತಾನೆ. ಇನ್ನು ನನ್ನ

ಗತಿಯೇನು?

12052011a ನ ದಿಶಃ ಸಂಪ್ರಜಾನಾಮಿ ನಾಕಾಶಂ ನ ಚ ಮೇದಿನೀಮ್|
12052011c ಕೇವಲಂ ತವ ವೀರ್ಯೇಣ ತಿಷ್ಠಾಮಿ ಮಧುಸೂದನ||

ಮಧುಸೂದನ! ದಿಕ್ಕುಗಳು ತೋಚುತ್ತಿಲ್ಲ. ಆಕಾಶ-ಮೇದಿನಿಗಳೂ ತೋಚುತ್ತಿಲ್ಲ. ಕೇವಲ ನಿನ್ನ ವೀರ್ಯವನ್ನು ಅವಲಂಬಿಸಿದ್ದೇನೆ ಅಷ್ಟೇ!

12052012a ಸ್ವಯಮೇವ ಪ್ರಭೋ ತಸ್ಮಾದ್ಧರ್ಮರಾಜಸ್ಯ ಯದ್ಧಿತಮ್|
12052012c ತದ್ಬ್ರವೀಹ್ಯಾಶು ಸರ್ವೇಷಾಮಾಗಮಾನಾಂ ತ್ವಮಾಗಮಃ||

ಪ್ರಭೋ! ಆದುದರಿಂದ ಧರ್ಮರಾಜನಿಗೆ ಹಿತವಾದುದನ್ನು ಸ್ವಯಂ ನೀನೇ ಹೇಳು! ನೀನು ಯಾವ ಸರ್ವ ಆಗಮಗಳ ಸ್ಥಾನವಾಗಿರುವೆಯೋ ಅದನ್ನೇ ಹೇಳು!

12052013a ಕಥಂ ತ್ವಯಿ ಸ್ಥಿತೇ ಲೋಕೇ ಶಾಶ್ವತೇ ಲೋಕಕರ್ತರಿ|
12052013c ಪ್ರಬ್ರೂಯಾನ್ಮದ್ವಿಧಃ ಕಶ್ಚಿದ್ಗುರೌ ಶಿಷ್ಯ ಇವ ಸ್ಥಿತೇ||

ಲೋಕದಲ್ಲಿ ಶಾಶ್ವತನಾಗಿರುವ, ಲೋಕಗಳನ್ನು ನಿರ್ಮಿಸಿರುವ ನೀನೇ ಇಲ್ಲಿರುವಾಗ ಗುರುವಿನ ಎದಿರು ಶಿಷ್ಯನಂತಿರುವ ನನ್ನಂಥವನು ಹೇಗೆ ತಾನೇ ಬೋಧಿಸಬಲ್ಲನು?"

12052014 ವಾಸುದೇವ ಉವಾಚ|
12052014a ಉಪಪನ್ನಮಿದಂ ವಾಕ್ಯಂ ಕೌರವಾಣಾಂ ಧುರಂಧರೇ|
12052014c ಮಹಾವೀರ್ಯೇ ಮಹಾಸತ್ತ್ವೇ ಸ್ಥಿತೇ ಸರ್ವಾರ್ಥದರ್ಶಿನಿ||

ವಾಸುದೇವನು ಹೇಳಿದನು: "ಕೌರವರ ಧುರಂಧರನೇ! ಮಹಾವೀರ್ಯದಲ್ಲಿ ಮತ್ತು ಮಹಾಸತ್ತ್ವದಲ್ಲಿ ನೆಲೆಸಿರುವ

ಸರ್ವಾರ್ಥದರ್ಶಿನಿಯಾದ ನೀನು ಹೇಳಿದುದು ಯೋಗ್ಯವಾಗಿಯೇ ಇದೆ.

12052015a ಯಚ್ಚ ಮಾಮಾತ್ಥ ಗಾಂಗೇಯ ಬಾಣಘಾತರುಜಂ ಪ್ರತಿ|
12052015c ಗೃಹಾಣಾತ್ರ ವರಂ ಭೀಷ್ಮ ಮತ್ಪ್ರಸಾದಕೃತಂ ವಿಭೋ||

ಗಾಂಗೇಯ! ಭೀಷ್ಮ! ವಿಭೋ! ಬಾಣಾಘಾತದಿಂದ ಯಾತನೆಯನ್ನು ಅನುಭವಿಸುತ್ತಿರುವೆಯೆಂದು ನನಗೆ ಹೇಳಿದೆಯಲ್ಲವೇ? ಅದರ ಉಪಶಮನಕ್ಕಾಗಿ ಪ್ರಸನ್ನಚಿತ್ತನಾಗಿ ನಾನು ನೀಡುವ ಈ ವರವನ್ನು ಸ್ವೀಕರಿಸು!

12052016a ನ ತೇ ಗ್ಲಾನಿರ್ನ ತೇ ಮೂರ್ಚಾ ನ ದಾಹೋ ನ ಚ ತೇ ರುಜಾ|
12052016c ಪ್ರಭವಿಷ್ಯಂತಿ ಗಾಂಗೇಯ ಕ್ಷುತ್ಪಿಪಾಸೇ ನ ಚಾಪ್ಯುತ||

ಗಾಂಗೇಯ! ನಿನಗೆ ದಣಿವಾಗಲೀ, ಮೂರ್ಛೆಯಾಗಲೀ, ಉರಿಯಾಗಲೀ, ರೋಗ-ರುಜಿನಗಳಾಗಲೀ, ಹಸಿವು ಬಾಯಾರಿಕೆಗಳಾಗಲೀ ಆಗುವುದಿಲ್ಲ!

12052017a ಜ್ಞಾನಾನಿ ಚ ಸಮಗ್ರಾಣಿ ಪ್ರತಿಭಾಸ್ಯಂತಿ ತೇಽನಘ|
12052017c ನ ಚ ತೇ ಕ್ವ ಚಿದಾಸಕ್ತಿರ್ಬುದ್ಧೇಃ ಪ್ರಾದುರ್ಭವಿಷ್ಯತಿ||

ಅನಘ! ಸಮಗ್ರ ಜ್ಞಾನಗಳೂ ನಿನ್ನಲ್ಲಿ ಪ್ರಕಾಶಗೊಳ್ಳುತ್ತವೆ. ನಿನ್ನ ಬುದ್ಧಿಯು ಯಾವುದರಲ್ಲಿಯೂ ಆಸಕ್ತಿಯನ್ನು ಇಟ್ಟುಕೊಳ್ಳುವುದಿಲ್ಲ.

12052018a ಸತ್ತ್ವಸ್ಥಂ ಚ ಮನೋ ನಿತ್ಯಂ ತವ ಭೀಷ್ಮ ಭವಿಷ್ಯತಿ|
12052018c ರಜಸ್ತಮೋಭ್ಯಾಂ ರಹಿತಂ ಘನ್ಯೈರ್ಮುಕ್ತ ಇವೋಡುರಾಟ್||

ಭೀಷ್ಮ! ನಿನ್ನ ಮನಸ್ಸು ನಿತ್ಯವೂ, ಮೋಡಗಳಿಂದ ಮುಕ್ತನಾದ

ಚಂದ್ರನಂತೆ, ರಜಸ್ಸು-ತಮೋ ಗುಣಗಳಿಂದ ರಹಿತವಾಗಿ,
ಸತ್ತ್ವದಲ್ಲಿಯೇ ನೆಲೆಸಿರುತ್ತದೆ.

12052019a ಯದ್ಯಚ್ಚ ಧರ್ಮಸಂಯುಕ್ತಮರ್ಥಯುಕ್ತಮಥಾಪಿ ವಾ|
12052019c ಚಿಂತಯಿಷ್ಯಸಿ ತತ್ತಾಗ್ರ್ಯಾ ಬುದ್ಧಿಸ್ತವ ಭವಿಷ್ಯತಿ||

ನೀನು ಯಾವ ಧರ್ಮಸಂಯುಕ್ತವಾದ ಅಥವಾ ಅರ್ಥಯುಕ್ತವಾದ
ವಿಷಯಗಳ ಕುರಿತು ಯೋಚಿಸುತ್ತೀಯೋ ಅವುಗಳು ನಿನ್ನ ಬುದ್ಧಿಯ
ಮುಂದೆ ಸ್ಫುರಿಸುತ್ತಿರುತ್ತವೆ.

12052020a ಇಮಂ ಚ ರಾಜಶಾರ್ದೂಲ ಭೂತಗ್ರಾಮಂ ಚತುರ್ವಿಧಮ್|
12052020c ಚಕ್ಷುರ್ದಿವ್ಯಂ ಸಮಾಶ್ರಿತ್ಯ ದ್ರಕ್ಷ್ಯಸ್ಯಮಿತವಿಕ್ರಮ||

ರಾಜಶಾರ್ದೂಲ! ಅಮಿತವಿಕ್ರಮಿ! ಈ ದಿವ್ಯದೃಷ್ಟಿಯನ್ನು ಪಡೆದು
ಅದರಿಂದ ನೀನು ನಾಲ್ಕೂ[142] ವಿಧದ ಪ್ರಾಣಿಗಳ
ನೈಜಸ್ವರೂಪಗಳನ್ನು ಕಾಣಲು ಶಕ್ತನಾಗುವೆ.

12052021a ಚತುರ್ವಿಧಂ ಪ್ರಜಾಜಾಲಂ ಸಂಯಕ್ತೋ ಜ್ಞಾನಚಕ್ಷುಷಾ|
12052021c ಭೀಷ್ಮ ದ್ರಕ್ಷ್ಯಸಿ ತತ್ತ್ವೇನ ಜಲೇ ಮೀನ ಇವಾಮಲೇ||

ಭೀಷ್ಮ! ಜ್ಞಾನದೃಷ್ಟಿಯಿಂದ ಸಂಪನ್ನನಾದ ನಿನಗೆ
ಸಂಸಾರಬಂಧನದಲ್ಲಿ ಸಿಕ್ಕಿಹಾಕಿಕೊಂಡಿರುವ ಸಂಪೂರ್ಣ
ಜೀವಸಮುದಾಯಗಳೂ ತಿಳಿನೀರಿನಲ್ಲಿರುವ ಮೀನುಗಳಂತೆ ಸ್ವಚ್ಛವಾಗಿ
ಕಾಣುತ್ತವೆ!""

12052022 ವೈಶಂಪಾಯನ ಉವಾಚ|

---

[142] ಸ್ವೇದಜ, ಅಂಡಜ, ಉದ್ಭಿಜ್ಜ ಮತ್ತು ಜರಾಯುಜ

12052022a ತತಸ್ತೇ ವ್ಯಾಸಸಹಿತಾಃ ಸರ್ವ ಏವ ಮಹರ್ಷಯಃ|
12052022c ಋಗ್ಯಜುಃಸಾಮಸಂಯುಕ್ತೈರ್ವಚೋಭಿಃ ಕೃಷ್ಣಮರ್ಚಯನ್||

ವೈಶಂಪಾಯನನು ಹೇಳಿದನು: "ಆಗ ವ್ಯಾಸಸಹಿತರಾದ ಸರ್ವ ಮಹರ್ಷಿಗಳೂ ಋಗ್ಯಜುಃಸಾಮಸಂಯುಕ್ತ ಸ್ತೋತ್ರಗಳಿಂದ ಕೃಷ್ಣನನ್ನು ಅರ್ಚಿಸಿದರು.

12052023a ತತಃ ಸರ್ವಾರ್ತವಂ ದಿವ್ಯಂ ಪುಷ್ಪವರ್ಷಂ ನಭಸ್ತಲಾತ್|
12052023c ಪಪಾತ ಯತ್ರ ವಾರ್ಷ್ಣೇಯಃ ಸಗಾಂಗೇಯಃ ಸಪಾಂಡವಃ||

ಆಗ ವಾರ್ಷ್ಣೇಯ, ಗಾಂಗೇಯ ಮತ್ತು ಪಾಂಡವರಿರುವ ಸ್ಥಳದಲ್ಲಿ ನಭಸ್ತಲದಿಂದ ಸರ್ವಋತುಗಳ ದಿವ್ಯ ಪುಷ್ಪವೃಷ್ಟಿಯಾಯಿತು.

12052024a ವಾದಿತ್ರಾಣಿ ಚ ದಿವ್ಯಾನಿ ಜಗುಶ್ಚಾಪ್ಸರಸಾಂ ಗಣಾಃ|
12052024c ನ ಚಾಹಿತಮನಿಷ್ಟಂ ವಾ ಕಿಂ ಚಿತ್ತತ್ರ ವ್ಯದೃಶ್ಯತ||

ದಿವ್ಯವಾದ್ಯಗಳು ಮೊಳಗಿದವು. ಅಪ್ಸರಗಣಗಳು ಹಾಡಿದರು. ಅಲ್ಲಿ ಯಾವುದೇ ರೀತಿಯ ಅನಿಷ್ಟ ದೃಶ್ಯಗಳೂ ಕಾಣಿಸಲಿಲ್ಲ.

12052025a ವವೌ ಶಿವಃ ಸುಖೋ ವಾಯುಃ ಸರ್ವಗಂಧವಹಃ ಶುಚಿಃ|
12052025c ಶಾಂತಾಯಾಂ ದಿಶಿ ಶಾಂತಾಶ್ಚ ಪ್ರಾವದನ್ಮೃಗಪಕ್ಷಿಣಃ||

ಶೀತಲವಾದ, ಮಂಗಳಕರ, ಸುಖಕರ, ಪವಿತ್ರ ಸುಗಂಧಯುಕ್ತ ಗಾಳಿಯು ಬೀಸತೊಡಗಿತು. ದಿಕ್ಕುಗಳು ಪ್ರಶಾಂತವಾದವು. ಉತ್ತರದಿಕ್ಕಿನಲ್ಲಿ ಶಂತ ಮೃಗಪಕ್ಷಿಗಳು ಧ್ವನಿಗೈಯುತ್ತಿದ್ದವು.

12052026a ತತೋ ಮುಹೂರ್ತಾದ್ಭಗವಾನ್ಸಹಸ್ರಾಂಶುರ್ದಿವಾಕರಃ|
12052026c ದಹನ್ವನಮಿವೈಕಾಂತೇ ಪ್ರತೀಚ್ಯಾಂ ಪ್ರತ್ಯದೃಶ್ಯತ||

ಸ್ವಲ್ಪವೇ ಸಮಯದಲ್ಲಿ ಪಶ್ಚಿಮದಲ್ಲಿ ಸಹಸ್ರಾಂಶು ಭಗವಾನ್ ದಿವಾಕರನು ಏಕಾಂತದಲ್ಲಿ ವನವನ್ನು ದಹಿಸುತ್ತಿರುವನೋ ಎನ್ನುವಂತೆ ತೋರಿದನು.

12052027a ತತೋ ಮಹರ್ಷಯಃ ಸರ್ವೇ ಸಮುತ್ಥಾಯ ಜನಾರ್ದನಮ್|
12052027c ಭೀಷ್ಮಮಾಮಂತ್ರಯಾಂ ಚಕ್ರೂ ರಾಜಾನಂ ಚ ಯುಧಿಷ್ಠಿರಮ್||

ಆಗ ಎಲ್ಲ ಮಹರ್ಷಿಗಳೂ ಎದ್ದು ಜನಾರ್ದನ, ಭೀಷ್ಮ ಮತ್ತು ರಾಜಾ ಯುಧಿಷ್ಠಿರನ ಅನುಮತಿಯನ್ನು ಕೇಳಿದರು.

12052028a ತತಃ ಪ್ರಣಾಮಮಕರೋತ್ಕೇಶವಃ ಪಾಂಡವಸ್ತಥಾ|
12052028c ಸಾತ್ಯಕಿಃ ಸಂಜಯಶ್ಚೈವ ಸ ಚ ಶಾರದ್ವತಃ ಕೃಪಃ||

ಅನಂತರ ಕೇಶವ, ಪಾಂಡವ, ಸಾತ್ಯಕಿ, ಸಂಜಯ ಮತ್ತು ಶಾರದ್ವತ ಕೃಪರು ಅವರಿಗೆ ಪ್ರಣಾಮಗೈದರು.

12052029a ತತಸ್ತೇ ಧರ್ಮನಿರತಾಃ ಸಮ್ಯಕ್ತೈರಭಿಪೂಜಿತಾಃ|
12052029c ಶ್ವಃ ಸಮೇಷ್ಯಾಮ ಇತ್ಯುಕ್ತ್ವಾ ಯಥೇಷ್ಟಂ ತ್ವರಿತಾ ಯಯುಃ||

ಆಗ ಅವರಿಂದ ಅಭಿಪೂಜಿತರಾದ ಆ ಧರ್ಮನಿರತರು "ನಾಳೆ ಸೇರೋಣ!" ಎಂದು ಹೇಳಿ ಇಷ್ಟವಾದಲ್ಲಿಗೆ ತೆರಳಿದರು.

12052030a ತಥೈವಾಮಂತ್ರ್ಯ ಗಾಂಗೇಯಂ ಕೇಶವಸ್ತೇ ಚ ಪಾಂಡವಾಃ|
12052030c ಪ್ರದಕ್ಷಿಣಮುಪಾವೃತ್ಯ ರಥಾನಾರುರುಹುಃ ಶುಭಾನ್||

ಹಾಗೆಯೇ ಕೇಶವ ಮತ್ತು ಪಾಂಡವರು ಗಾಂಗೇಯನಿಂದ ಬೀಳ್ಕೊಂಡು ಅವನಿಗೆ ಪ್ರದಕ್ಷಿಣೆ ಮಾಡಿ ಶುಭ ರಥಗಳನ್ನೇರಿದರು.

12052031a ತತೋ ರಥ್ಯೈಃ ಕಾಂಚನದಂತಕೂಬರ್ಯೈರ್

ಮಹೀಧರಾಭ್ಯೈಃ ಸಮದ್ಯೈಶ್ಚ ದಂತಿಭಿಃ|
12052031c ಹಯೈಃ ಸುಪರ್ಣೈರಿವ ಚಾಶುಗಾಮಿಭಿಃ
ಪದಾತಿಭಿಶ್ಚಾತ್ತಶರಾಸನಾದಿಭಿಃ||
12052032a ಯಯೌ ರಥಾನಾಂ ಪುರತೋ ಹಿ ಸಾ ಚಮೂಸ್
ತಥೈವ ಪಶ್ಚಾದತಿಮಾತ್ರಸಾರಿಣೀ|
12052032c ಪುರಶ್ಚ ಪಶ್ಚಾಚ್ಚ ಯಥಾ ಮಹಾನದೀ
ಪುರರ್ಕ್ಷವಂತಂ ಗಿರಿಮೇತ್ಯ ನರ್ಮದಾ||

ಪರ್ವತಗಳಂತಿದ್ದ ಮದಿಸಿದ ಆನೆಗಳಿಂದಲೂ, ಪಕ್ಷಿಗಳಂತೆ ಶೀಘ್ರಗಾಮಿಗಳಾಗಿದ್ದ ಕುದುರೆಗಳಿಂದಲೂ, ಧನುಸ್ಸು ಮೊದಲಾದ ಆಯುಧಗಳನ್ನು ಹಿಡಿದಿದ್ದ ಪದಾತಿಗಳಿಂದಲೂ ಕೂಡಿದ್ದ ಸೇನೆಯು ಕಾಂಚನ-ದಂತಗಳ ನೂಕಿಗಳಿದ್ದ ರಥಗಳ ಮುಂದೆ ಮತ್ತು ಹಿಂದೆ ಬಹಳ ದೂರದವರೆಗೆ – ಮಹಾನದೀ ನರ್ಮದೆಯು ಋಕ್ಷಪರ್ವತದ ಸಮೀಪಕ್ಕೆ ಹೋಗಿ ಪೂರ್ವ-ಪಶ್ಚಿಮದಿಕ್ಕುಗಳಲ್ಲಿ ಹರಿದು ಹೋಗುವಂತೆ – ಸಾಗುತ್ತಿದ್ದಿತು.

12052033a ತತಃ ಪುರಸ್ತಾದ್ಭಗವಾನ್ನಿಶಾಕರಃ
ಸಮುತ್ಥಿತಸ್ತಾಮಭಿಹರ್ಷಯಂಶ್ಚ ಮಾಮ್|
12052033c ದಿವಾಕರಾಪೀತರಸಾಸ್ತಥೌಷಧೀಃ
ಪುನಃ ಸ್ವಕೇನೈವ ಗುಣೇನ ಯೋಜಯನ್||

ಆಗ ಪೂರ್ವ ದಿಕ್ಕಿನಲ್ಲಿ ಭಗವಾನ್ ನಿಶಾಕರ ಚಂದ್ರನು ಉದಯಿಸಿ ಆ ಸೇನೆಯಗಳಿಗೆ ಹರ್ಷವನ್ನಿತ್ತನು. ದಿವಾಕರನಿಂದ ಬಾಡಿಹೋಗಿದ್ದ ಔಷಧೀ ಲತೆಗಳನ್ನು ಚಂದ್ರನು ಪುನಃ ತನ್ನ ಕಿರಣಗಳಿಂದ ಗುಣಯುಕ್ತವನ್ನಾಗಿ ಮಾಡುತ್ತಿದ್ದನು.

12052034a ತತಃ ಪುರಂ ಸುರಪುರಸಂನಿಭದ್ಯುತಿ
ಪ್ರವಿಶ್ಯ ತೇ ಯದುವೃಷಪಾಂಡವಾಸ್ತದಾ|
12052034c ಯಥೋಚಿತಾನ್ಭವನವರಾನ್ಸಮಾವಿಶಞ್
ಶ್ರಮಾನ್ವಿತಾ ಮೃಗಪತಯೋ ಗುಹಾ ಇವ||

ಆಗ ಯದುವೃಷಭ-ಪಾಂಡವರು ಸುರಪುರದಂತೆ ಬೆಳಗುತ್ತಿದ್ದ
ಪುರವನ್ನು ಪ್ರವೇಶಿಸಿ, ಬಳಲಿದ ಸಿಂಹಗಳು ಗುಹೆಯನ್ನು
ಪ್ರವೇಶಿಸುವಂತೆ, ಯಥೋಚಿತ ಶ್ರೇಷ್ಠ ಭವನಗಳನ್ನು ಪ್ರವೇಶಿಸಿದರು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಯುಧಿಷ್ಠಿರಾದ್ಯಾಗಮನೇ ದ್ವಿಪಂಚಶತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಯುಧಿಷ್ಠಿರಾದಿಗಳ ಗಮನ ಎನ್ನುವ ಐವತ್ತೆರಡನೇ ಅಧ್ಯಾಯವು.

೫೩

ಭೀಷ್ಮಾಭಿಗಮನ

ಕೃಷ್ಣನು ಪ್ರಾತಃಚರ್ಯಗಳನ್ನು ಮುಗಿಸಿ ಸಹೋದರರೊಂದಿಗೆ ಯುಧಿಷ್ಠಿರನನ್ನು ಕೂಡಿಕೊಂಡು ಭೀಷ್ಮನಿದ್ದಲ್ಲಿಗೆ ಪ್ರಯಾಣಿಸಿದುದು (1-27).

12053001 ವೈಶಂಪಾಯನ ಉವಾಚ|

12053001a ತತಃ ಪ್ರವಿಶ್ಯ ಭವನಂ[143] ಪ್ರಸುಪ್ತೋ ಮಧುಸೂದನಃ|
12053001c ಯಾಮಮಾತ್ರಾವಶೇಷಾಯಾಂ ಯಾಮಿನ್ಯಾಂ ಪ್ರತ್ಯಬುಧ್ಯತ||

ವೈಶಂಪಾಯನನು ಹೇಳಿದನು: "ಅನಂತರ ಮಧುಸೂದನನು ಭವನವನ್ನು ಪ್ರವೇಶಿಸಿ ಮಲಗಿದನು. ರಾತ್ರಿಯು ಕಳೆಯಲು ಇನ್ನೂ ಅರ್ಧ ಯಾಮವಿರುವಾಗಲೇ ಅವನು ಎದ್ದನು.

12053002a ಸ ಧ್ಯಾನಪಥಮಾಶ್ರಿತ್ಯ ಸರ್ವಜ್ಞಾನಾನಿ ಮಾಧವಃ|
12053002c ಅವಲೋಕ್ಯ ತತಃ ಪಶ್ಚಾದ್ದಧ್ಯೌ ಬ್ರಹ್ಮ ಸನಾತನಮ್||

ಮಾಧವನು ಧ್ಯಾನಮಾರ್ಗವನ್ನಾಶ್ರಯಿಸಿ ಸರ್ವಜ್ಞಾನಗಳನ್ನೂ ಕಂಡು ಅನಂತರ ಸನಾತನಬ್ರಹ್ಮನನ್ನು ಧ್ಯಾನಿಸಿದನು.

12053003a ತತಃ ಶ್ರುತಿಪುರಾಣಜ್ಞಾಃ ಶಿಕ್ಷಿತಾ ರಕ್ತಕಂಠಿನಃ|
12053003c ಅಸ್ತುವನ್ವಿಶ್ವಕರ್ಮಾಣಂ ವಾಸುದೇವಂ ಪ್ರಜಾಪತಿಮ್||

ಆಗ ಶ್ರುತಿಪುರಾಣಗಳನ್ನು ತಿಳಿದಿದ್ದ, ವಿದ್ಯಾವಂತ, ಸುಂದರ ಕಂಠವುಳ್ಳವರು ಆ ವಿಶ್ವಕರ್ಮಿ ಪ್ರಜಾಪತಿ ವಾಸುದೇವನನ್ನು ಸ್ತುತಿಸಿದರು.

12053004a ಪಠಂತಿ ಪಾಣಿಸ್ವನಿಕಾಸ್ತಥಾ ಗಾಯಂತಿ ಗಾಯನಾಃ|
12053004c ಶಂಖಾನಕಮೃದಂಗಾಂಶ್ಚ ಪ್ರವಾದ್ಯಂತ ಸಹಸ್ರಶಃ||

ಕೈಗಳಿಂದ ತಾಳಹಾಕುತ್ತಾ ಭಜನೆ ಮಾಡುತ್ತಿದ್ದರು. ಮಧುರ ಕಂಠದಲ್ಲಿ ಗಾಯನ ಹಾಡುತ್ತಿದ್ದರು. ಸಹಸ್ರಾರು ಶಂಖ-ಆನಕ-ಮೃದಂತಗಳನ್ನು

[143] ತತಃ ಶಯನಮಾವಿಶ್ಯ (ಗೀತಾ ಪ್ರೆಸ್).

ಮೊಳಗಿಸಿದರು.

12053005a ವೀಣಾಪಣವವೇಣೂನಾಂ ಸ್ವನಶ್ಚಾತಿಮನೋರಮಃ|
12053005c ಪ್ರಹಾಸ ಇವ ವಿಸ್ತೀರ್ಣಃ ಶುಶ್ರುವೇ ತಸ್ಯ ವೇಶ್ಮನಃ||

ಅತಿಮನೋರಮ ವೀಣೆ-ಪಣವ-ವೇಣುಗಳ ಧ್ವನಿಗಳು, ಅವನ ಭವನವೇ ಸಂತೋಷದಿಂದ ನಗುತ್ತಿದೆಯೋ ಎನ್ನುವಂತೆ ಬಹು ವಿಸ್ತೀರ್ಣದವರೆಗೆ ಕೇಳಿಬರುತ್ತಿತ್ತು.

12053006a ತಥಾ ಯುಧಿಷ್ಠಿರಸ್ಯಾಪಿ ರಾಜ್ಞೋ ಮಂಗಲಸಂಹಿತಾಃ|
12053006c ಉಚ್ಚೈರುರ್ಮಧುರಾ ವಾಚೋ ಗೀತವಾದಿತ್ರಸಂಹಿತಾಃ||

ಹಾಗೆಯೇ ರಾಜಾ ಯುಧಿಷ್ಠಿರನಲ್ಲಿಯೂ ಮಂಗಲಕರ ಮಧುರ ವಾಚನ-ಗೀತ-ವಾದ್ಯಗಳ ಮೇಳಗಳು ಕೇಳಿಬಂದವು.

12053007a ತತ ಉತ್ಥಾಯ ದಾಶಾರ್ಹಃ ಸ್ನಾತಃ ಪ್ರಾಂಜಲಿರಚ್ಯುತಃ|
12053007c ಜಪ್ತ್ವಾ ಗುಹ್ಯಂ ಮಹಾಬಾಹುರಗ್ನೀನಾಶ್ರಿತ್ಯ ತಿಷ್ಠಿವಾನ್||

ಬಳಿಕ ಮಹಾಬಾಹು ಅಚ್ಯುತ ದಾಶಾರ್ಹನು ಎದ್ದು, ಸ್ನಾನಮಾಡಿ, ಕೈಮುಗಿದು ರಹಸ್ಯವಾಗಿ ಜಪಿಸಿ, ಅಗ್ನಿಯನ್ನು ಪೂಜಿಸಿದನು.

12053008a ತತಃ ಸಹಸ್ರಂ ವಿಪ್ರಾಣಾಂ ಚತುರ್ವೇದವಿದಾಂ ತಥಾ|
12053008c ಗವಾಂ ಸಹಸ್ರೇಣೈಕೈಕಂ ವಾಚಯಾಮಾಸ ಮಾಧವಃ||

ಅನಂತರ ಮಾಧವನು ನಾಲ್ಕುವೇದಗಳ ವಿದ್ವಾಂಸರಾದ ಸಹಸ್ರ ವಿಪ್ರರಿಗೆ ಒಬ್ಬೊಬ್ಬರಿಗೂ ಒಂದೊಂದು ಸಾವಿರ ಗೋವುಗಳನ್ನು ದಾನಮಾಡಿ, ಸ್ವಸ್ತಿವಾಚನ ಮಾಡಿಸಿಕೊಂಡನು.

12053009a ಮಂಗಲಾಲಂಭನಂ ಕೃತ್ವಾ ಆತ್ಮಾನಮವಲೋಕ್ಯ ಚ|

12053009c ಆದರ್ಶೇ ವಿಮಲೇ ಕೃಷ್ಣಸ್ತತಃ ಸಾತ್ಯಕಿಮಬ್ರವೀತ್‌॥

ಅನಂತರ ಕೃಷ್ಣನು ಮಂಗಲದ್ರವ್ಯಗಳನ್ನು ಸ್ಪರ್ಶಿಸಿ, ಶುಭ್ರ ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡು, ಸಾತ್ಯಕಿಗೆ ಹೇಳಿದನು:

12053010a ಗಚ್ಚ ಶೈನೇಯ ಜಾನೀಹಿ ಗತ್ವಾ ರಾಜನಿವೇಶನಮ್‌|
12053010c ಅಪಿ ಸಜ್ಜೋ ಮಹಾತೇಜಾ ಭೀಷ್ಮಂ ದ್ರಷ್ಟುಂ ಯುಧಿಷ್ಠಿರಃ‌॥

“ಶೈನೇಯ! ಹೋಗು! ರಾಜನಿವೇಶನಕ್ಕೆ ಹೋಗಿ ಮಹಾತೇಜಸ್ವಿ ಭೀಷ್ಮನನ್ನು ಕಾಣಲು ಯುಧಿಷ್ಠಿರನು ಸಿದ್ಧನಾಗಿದ್ದನೆಯೋ ಎಂದು ತಿಳಿ!”

12053011a ತತಃ ಕೃಷ್ಣಸ್ಯ ವಚನಾತ್ಸಾತ್ಯಕಿಸ್ತ್ವರಿತೋ ಯಯೌ|
12053011c ಉಪಗಮ್ಯ ಚ ರಾಜಾನಂ ಯುಧಿಷ್ಠಿರಮುವಾಚ ಹ‌॥

ಕೃಷ್ಣನ ಆ ಮಾತಿನಂತೆ ಸಾತ್ಯಕಿಯು ಬೇಗನೇ ರಾಜ ಯುಧಿಷ್ಠಿರನಲ್ಲಿಗೆ ಹೋಗಿ ಹೇಳಿದನು:

12053012a ಯುಕ್ತೋ ರಥವರೋ ರಾಜನ್ವಾಸುದೇವಸ್ಯ ಧೀಮತಃ|
12053012c ಸಮೀಪಮಾಪಗೇಯಸ್ಯ ಪ್ರಯಾಸ್ಯತಿ ಜನಾರ್ದನಃ‌॥

“ರಾಜನ್! ಧೀಮತ ವಾಸುದೇವನ ಶ್ರೇಷ್ಠ ರಥವು ಸಿದ್ಧವಾಗಿದೆ. ಜನಾರ್ದನನು ಆಪಗೇಯನ ಸಮೀಪಕ್ಕೆ ಹೋಗುತ್ತಿದ್ದಾನೆ.

12053013a ಭವತ್ಪ್ರತೀಕ್ಷಃ ಕೃಷ್ಣೋಽಸೌ ಧರ್ಮರಾಜ ಮಹಾದ್ಯುತೇ|
12053013c ಯದತ್ರಾನಂತರಂ ಕೃತ್ಯಂ ತದ್ಭವಾನ್ಕರ್ತುಮರ್ಹತಿ‌॥

ಮಹಾದ್ಯುತೇ! ಧರ್ಮರಾಜ! ಕೃಷ್ಣನು ನಿನ್ನ ಪ್ರತೀಕ್ಷೆಯಲ್ಲಿಯೇ ಇದ್ದಾನೆ. ಇದರ ನಂತರ ಏನನ್ನು ಮಾಡಬೇಕಾಗಿದೆಯೋ ಅದನ್ನು

ನೀನು ಮಾಡಬೇಕು!”

12053014 ಯುಧಿಷ್ಠಿರ ಉವಾಚ|
12053014a ಯುಜ್ಯತಾಂ ಮೇ ರಥವರಃ ಫಲ್ಗುನಾಪ್ರತಿಮದ್ಯುತೇ|
12053014c ನ ಸೈನಿಕೈಶ್ಚ ಯಾತವ್ಯಂ ಯಾಸ್ಯಾಮೋ ವಯಮೇವ ಹಿ||

ಯುಧಿಷ್ಠಿರನು ಹೇಳಿದನು: “ಅಪ್ರತಿಮದ್ಯುತೇ! ಫಲ್ಗುನ! ನನ್ನ ಶ್ರೇಷ್ಠ ರಥವನ್ನು ಸಿದ್ಧಪಡಿಸು! ಸೈನಿಕರು ಯಾರೂ ಹೋಗುವುದಿಲ್ಲ. ನಾವು ಮಾತ್ರ ಅಲ್ಲಿಗೆ ಹೋಗೋಣ!

12053015a ನ ಚ ಪೀಡಯಿತವ್ಯೋ ಮೇ ಭೀಷ್ಮೋ ಧರ್ಮಭೃತಾಂ ವರಃ|
12053015c ಅತಃ ಪುರಃಸರಾಶ್ಚಾಪಿ ನಿವರ್ತಂತು ಧನಂಜಯ||

ಧರ್ಮಭೃತರಲ್ಲಿ ಶ್ರೇಷ್ಠ ಭೀಷ್ಮನನ್ನು ನಾವು ಪೀಡಿಸಬಾರದು. ಆದುದರಿಂದ ಧನಂಜಯ! ನಮ್ಮ ಹಿಂದೆ ಮತ್ತು ಮುಂದೆ ಸಾಗುವ ಸೇನೆಗಳು ಇಲ್ಲಿಯೇ ನಿಲ್ಲಲಿ!

12053016a ಅದ್ಯಪ್ರಭೃತಿ ಗಾಂಗೇಯಃ ಪರಂ ಗುಹ್ಯಂ ಪ್ರವಕ್ಷ್ಯತಿ|
12053016c ತತೋ ನೇಚ್ಚಾಮಿ ಕೌಂತೇಯ ಪೃಥಗ್ಜನಸಮಾಗಮಮ್||

ಇಂದಿನಿಂದ ಗಾಂಗೇಯನು ಪರಮ ಗುಹ್ಯ ಮಾತುಗಳನ್ನು ಹೇಳುತ್ತಾನೆ. ಕೌಂತೇಯ! ಆದುದರಿಂದ ಅಲ್ಲಿಗೆ ಸಾಮಾನ್ಯ ಜನರು ಬಂದು ಸೇರುವುದನ್ನು ನಾನು ಇಚ್ಛಿಸುವುದಿಲ್ಲ!””

12053017 ವೈಶಂಪಾಯನ ಉವಾಚ|
12053017a ತದ್ವಾಕ್ಯಮಾಕರ್ಣ್ಯ ತಥಾ ಕುಂತೀಸುತ್ರೋ ಧನಂಜಯಃ|
12053017c ಯುಕ್ತಂ ರಥವರಂ ತಸ್ಮಾ ಆಚಚಕ್ಷೇ ನರರ್ಷಭ||

ವೈಶಂಪಾಯನನು ಹೇಳಿದನು: "ನರರ್ಷಭ! ಅವನ ಆ ಮಾತನ್ನು ಕೇಳಿ ಕುಂತೀಪುತ್ರ ಧನಂಜಯನು ಶ್ರೇಷ್ಠರಥವು ಸಿದ್ಧವಾಗಿದೆಯೆಂದು ತಿಳಿಸಿದನು.

12053018a ತತೋ ಯುಧಿಷ್ಠಿರೋ ರಾಜಾ ಯಮೌ ಭೀಮಾರ್ಜುನಾವಪಿ|
12053018c ಭೂತಾನೀವ ಸಮಸ್ತಾನಿ ಯಯುಃ ಕೃಷ್ಣನಿವೇಶನಮ್||

ಅನಂತರ ರಾಜಾ ಯುಧಿಷ್ಠಿರ, ಯಮಳರೀರ್ವರು ಮತ್ತು ಭೀಮಾರ್ಜುನರು ಐವರು ಪಂಚಭೂತಗಳೋಪಾದಿಯಲ್ಲಿ, ಒಂದಾಗಿ ಕೃಷ್ಣನ ಭವನಕ್ಕೆ ಆಗಮಿಸಿದರು.

12053019a ಆಗಚ್ಚತ್ಸ್ವಥ ಕೃಷ್ಣೋಽಪಿ ಪಾಂಡವೇಷು ಮಹಾತ್ಮಸು|
12053019c ಶೈನೇಯಸಹಿತೋ ಧೀಮಾನ್ರಥಮೇವಾನ್ವಪದ್ಯತ||

ಮಹಾತ್ಮ ಪಾಂಡವರು ಬಂದಕೂಡಲೇ ಧೀಮಾನ್ ಕೃಷ್ಣನೂ ಕೂಡ ಶೈನೇಯನೊಡನೆ ರಥವನ್ನೇರಿದನು.

12053020a ರಥಸ್ಥಾಃ ಸಂವಿದಂ ಕೃತ್ವಾ ಸುಖಾಂ ಪೃಷ್ಟ್ವಾ ಚ ಶರ್ವರೀಮ್|
12053020c ಮೇಘಘೋಷೈ ರಥವರೈಃ ಪ್ರಯಯುಸ್ತೇ ಮಹಾರಥಾಃ||

ರಥದಲ್ಲಿ ಕುಳಿತು, ರಾತ್ರಿಯು ಸುಖಕರವಾಗಿತ್ತೇ ಎಂದು ಮುಂತಾದ ಸಂವಾದಗಳನ್ನು ಗೈಯುತ್ತಾ, ಗುಡುಗಿನಂತೆ ಮೊಳಗುತ್ತಿದ್ದ ಶ್ರೇಷ್ಠರಥಗಳಲ್ಲಿ ಆ ಮಹಾರಥರು ಪ್ರಯಾಣಿಸಿದರು.

12053021a ಮೇಘಪುಷ್ಪಂ ಬಲಾಹಂ ಚ ಸೈನ್ಯಂ ಸುಗ್ರೀವಮೇವ ಚ|
12053021c ದಾರುಕಶ್ಚೋದಯಾಮಾಸ ವಾಸುದೇವಸ್ಯ ವಾಜಿನಃ||

ಮೇಘಪುಷ್ಪ, ಬಲಾಹಕ, ಸೈನ್ಯ ಮತ್ತು ಸುಗ್ರೀವರೆಂಬ ವಾಸುದೇವನ

ಕುದುರೆಗಳನ್ನು ದಾರುಕನು ನಡೆಸಿದನು.

12053022a ತೇ ಹಯಾ ವಾಸುದೇವಸ್ಯ ದಾರುಕೇಣ ಪ್ರಚೋದಿತಾಃ|
12053022c ಗಾಂ ಖುರಾಗ್ರೈಸ್ತಥಾ ರಾಜಽಲ್ಲಿಖಂತಃ ಪ್ರಯಯುಸ್ತದಾ||

ರಾಜನ್! ದಾರುಕನಿಂದ ಪ್ರಚೋದಿತಗೊಂಡ ವಾಸುದೇವನ ಕುದುರೆಗಳು ಗೊರಸುಗಳ ಅಗ್ರಭಾಗದಿಂದ ಭೂಮಿಯನ್ನು ಗೀರುತ್ತಾ ಬಹಳ ಬೇಗ ಧಾವಿಸಿದವು.

12053023a ತೇ ಗ್ರಸಂತ ಇವಾಕಾಶಂ ವೇಗವಂತೋ ಮಹಾಬಲಾಃ|
12053023c ಕ್ಷೇತ್ರಂ ಧರ್ಮಸ್ಯ ಕೃತ್ಸ್ನಸ್ಯ ಕುರುಕ್ಷೇತ್ರಮವಾತರನ್||

ಆ ವೇಗವುಳ್ಳ ಮಹಾಬಲಶಾಲೀ ಕುದುರೆಗಳು ಆಕಾಶವನ್ನೇ ನುಂಗಿಹಾಕುವವೋ ಎನ್ನುವಂತೆ ಸಾಗಿ ಸಮಸ್ತ ಧರ್ಮಕ್ಕೂ ಕ್ಷೇತ್ರವಾದ ಕುರುಕ್ಷೇತ್ರಕ್ಕೆ ಬಂದು ತಲುಪಿದವು.

12053024a ತತೋ ಯಯುರ್ಯತ್ರ ಭೀಷ್ಮಃ ಶರತಲ್ಪಗತಃ ಪ್ರಭುಃ|
12053024c ಆಸ್ತೇ ಬ್ರಹ್ಮರ್ಷಿಭಿಃ ಸಾರ್ಧಂ ಬ್ರಹ್ಮಾ ದೇವಗಣೈರ್ಯಥಾ||

ಅನಂತರ ಅವರು ದೇವಗಣಗಳೊಂದಿಗೆ ಇದ್ದ ಬ್ರಹ್ಮನಂತೆ ಬ್ರಹ್ಮರ್ಷಿಗಳೊಂದಿಗೆ ಶರತಲ್ಪದಲ್ಲಿ ಮಲಗಿದ್ದ ಪ್ರಭು ಭೀಷ್ಮನಿದ್ದಲ್ಲಿಗೆ ಬಂದರು.

12053025a ತತೋಽವತೀರ್ಯ ಗೋವಿಂದೋ ರಥಾತ್ಸ ಚ ಯುಧಿಷ್ಠಿರಃ|
12053025c ಭೀಮೋ ಗಾಂಡೀವಧನ್ವಾ ಚ ಯಮೌ ಸಾತ್ಯಕಿರೇವ ಚ||
12053025e ಋಷೀನಭ್ಯರ್ಚಯಾಮಾಸುಃ ಕರಾನುದ್ಯಮ್ಯ ದಕ್ಷಿಣಾನ್||

ಆಗ ಗೋವಿಂದ, ಯುಧಿಷ್ಠಿರ, ಭೀಮ, ಗಾಂಡೀವಧನ್ವಿ, ಯಮಳರು

ಮತ್ತು ಸಾತ್ಯಕಿಯರು ರಥದಿಂದಿಳಿದು ಬಲಗೈಗಳನ್ನೆತ್ತಿ ಅಲ್ಲಿದ್ದ ಋಷಿಗಳನ್ನು ಗೌರವಿಸಿದರು.

12053026a ಸ ತೈಃ ಪರಿವೃತೋ ರಾಜಾ ನಕ್ಷತ್ರೈರಿವ ಚಂದ್ರಮಾಃ|
12053026c ಅಭ್ಯಾಜಗಾಮ ಗಾಂಗೇಯಂ ಬ್ರಹ್ಮಾಣಮಿವ ವಾಸವಃ||

ನಕ್ಷತ್ರಗಳಿಂದ ಪರಿವೃತನಾದ ಚಂದ್ರನಂತೆ ಅವರಿಂದ ಪರಿವೃತನಾದ ರಾಜ ಯುಧಿಷ್ಠಿರನು ವಾಸವನು ಬ್ರಹ್ಮನ ಬಳಿಸಾರುವಂತೆ ಗಾಂಗೇಯನ ಬಳಿಸಾರಿದನು.

12053027a ಶರತಲ್ಪೇ ಶಯಾನಂ ತಮಾದಿತ್ಯಂ ಪತಿತಂ ಯಥಾ|
12053027c ದದರ್ಶ ಸ ಮಹಾಬಾಹುರ್ಭಯಾದಾಗತಸಾಧ್ವಸಃ||

ಕೆಳಗೆ ಬಿದ್ದಿದ್ದ ಆದಿತ್ಯನಂತೆ ಶರತಲ್ಪದಲ್ಲಿ ಮಲಗಿದ್ದ ಅವನನ್ನು ನೋಡಿ ಮಹಾಬಾಹು ಯುಧಿಷ್ಠಿರನು ಭಯದಿಂದ ಕೂಡಲೇ ಅವನನ್ನು ಎದುರಿಸಲಿಲ್ಲ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಭೀಷ್ಮಾಭಿಗಮನೇ ತ್ರಿಪಂಚಶತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಭೀಷ್ಮಾಭಿಗಮನ ಎನ್ನುವ ಐವತ್ಮೂರನೇ ಅಧ್ಯಾಯವು.

ಶ್ಲೋಕ

ಕೃಷ್ಣವಾಕ್ಯ

ಭೀಷ್ಮ ಮತ್ತು ಕೃಷ್ಣರ ಮಾತುಕತೆ (1-39).

12054001 ಜನಮೇಜಯ ಉವಾಚ|
12054001a ಧರ್ಮಾತ್ಮನಿ ಮಹಾಸತ್ತ್ವೇ ಸತ್ಯಸಂಧೇ ಜಿತಾತ್ಮನಿ|
12054001c ದೇವವ್ರತೇ ಮಹಾಭಾಗೇ ಶರತಲ್ಪಗತೇಽಚ್ಯುತೇ||
12054002a ಶಯಾನೇ ವೀರಶಯನೇ ಭೀಷ್ಮೇ ಶಂತನುನಂದನೇ|
12054002c ಗಾಂಗೇಯೇ ಪುರುಷವ್ಯಾಘ್ರೇ ಪಾಂಡವೈಃ ಪರ್ಯುಪಸ್ಥಿತೇ||
12054003a ಕಾಃ ಕಥಾಃ ಸಮವರ್ತಂತ ತಸ್ಮಿನ್ವೀರಸಮಾಗಮೇ|
12054003c ಹತೇಷು ಸರ್ವಸೈನ್ಯೇಷು ತನ್ಮೇ ಶಂಸ ಮಹಾಮುನೇ||

ಜನಮೇಜಯನು ಹೇಳಿದನು: "ಮಹಾಮುನೇ! ವೀರಸಮಾಗಮದಲ್ಲಿ ಸರ್ವಸೇನೆಗಳು ಹತಗೊಂಡ ನಂತರ ಆ ಧರ್ಮಾತ್ಮ, ಮಹಾಸತ್ತ್ವಯುತ, ಸತ್ಯಸಂಧ, ಜಿತಾತ್ಮ, ಮಹಾಭಾಗ, ಅಚ್ಯುತ, ಶರತಲ್ಪಗತ, ಮತ್ತು ವೀರಶಯನನಾಗಿದ್ದ ಶಂತನುನಂದನ ಗಾಂಗೇಯ ದೇವವ್ರತ ಭೀಷ್ಮ ಹಾಗೂ ಪಾಂಡವರು ಒಟ್ಟಿಗೇ ಕುಳಿತುಕೊಂಡಿರಲು, ಯಾವ ಮಾತುಕಥೆಗಳು ನಡೆದವು? ಅದನ್ನು ನನಗೆ ಹೇಳಬೇಕು!"

12054004 ವೈಶಂಪಾಯನ ಉವಾಚ|
12054004a ಶರತಲ್ಪಗತೇ ಭೀಷ್ಮೇ ಕೌರವಾಣಾಂ ಧುರಂಧರೇ|
12054004c ಆಜಗ್ಮುರ್ಋಷಯಃ ಸಿದ್ಧಾ ನಾರದಪ್ರಮುಖಾ ನೃಪ||

ವೈಶಂಪಾಯನನು ಹೇಳಿದನು: "ನೃಪ! ಶರತಲ್ಪಗತನಾಗಿರುವ ಕೌರವರ ಧುರಂಧರ ಭೀಷ್ಮನ ಬಳಿ ನಾರದಪ್ರಮುಖ ಋಷಿಗಳು ಮತ್ತು ಸಿದ್ಧರು ಆಗಮಿಸಿದರು.

12054005a ಹತಶಿಷ್ಟಾಶ್ಚ ರಾಜಾನೋ ಯುಧಿಷ್ಠಿರಪುರೋಗಮಾಃ|

12054005c ಧೃತರಾಷ್ಟ್ರಶ್ಚ ಕೃಷ್ಣಶ್ಚ ಭೀಮಾರ್ಜುನಯಮಾಸ್ತಥಾ||
12054006a ತೇಽಭಿಗಮ್ಯ ಮಹಾತ್ಮಾನೋ ಭರತಾನಾಂ ಪಿತಾಮಹಮ್|
12054006c ಅನ್ವಶೋಚಂತ ಗಾಂಗೇಯಮಾದಿತ್ಯಂ ಪತಿತಂ ಯಥಾ||

ಮಹಾತ್ಮ ಯುಧಿಷ್ಠಿರನೇ ಮೊದಲಾದ ಅಳಿದುಳಿದ ರಾಜರು, ಧೃತರಾಷ್ಟ್ರ, ಕೃಷ್ಣ, ಭೀಮಾರ್ಜುನರು, ಯಮಳರು ಕೆಳಗೆ ಬಿದ್ದ ಸೂರ್ಯನಂತಿದ್ದ ಭಾರತರ ಪಿತಾಮಹ ಗಾಂಗೇಯನ ಬಳಿಸಾರಿ ಶೋಕಿಸಿದರು.

12054007a ಮುಹೂರ್ತಮಿವ ಚ ಧ್ಯಾತ್ವಾ ನಾರದೋ ದೇವದರ್ಶನಃ|
12054007c ಉವಾಚ ಪಾಂಡವಾನ್ಸರ್ವಾನ್ಹತಶಿಷ್ಟಾಂಶ್ಚ ಪಾರ್ಥಿವಾನ್||

ದೇವದರ್ಶನ ನಾರದನು ಮುಹೂರ್ತಕಾಲ ಧ್ಯಾನಿಸಿ ಪಾಂಡವರೆಲ್ಲರನ್ನೂ ಮತ್ತು ಅಳಿದುಳಿದ ಪಾರ್ಥಿವರನ್ನೂ ಉದ್ದೇಶಿಸಿ ಹೇಳಿದನು.

12054008a ಪ್ರಾಪ್ತಕಾಲಂ ಚ ಆಚಕ್ಷೇ ಭೀಷ್ಮೋಽಯಮನುಯುಜ್ಯತಾಮ್|
12054008c ಅಸ್ತಮೇತಿ ಹಿ ಗಾಂಗೇಯೋ ಭಾನುಮಾನಿವ ಭಾರತ||

“ಭಾರತ! ಅಸ್ತಮಿಸುವ ಸೂರ್ಯನಂತಿರುವ ಗಾಂಗೇಯನೊಡನೆ ಸಂಭಾಷಣೆಗೆ ತೊಡಗುವ ಸಮಯವು ಪ್ರಾಪ್ತವಾಗಿದೆ.

12054009a ಅಯಂ ಪ್ರಾಣಾನುತ್ಸಿಸೃಕ್ಷುಸ್ತಂ ಸರ್ವೇಽಭ್ಯೇತ್ಯ ಪೃಚ್ಛತ|
12054009c ಕೃತ್ಸ್ನಾನ್ಹಿ ವಿವಿಧಾನ್ಧರ್ಮಾಂಶ್ಚಾತುರ್ವರ್ಣ್ಯಸ್ಯ ವೇತ್ತ್ಯಯಮ್||

ಇವನು ಪ್ರಾಣಗಳನ್ನು ತೊರೆಯುವ ಮೊದಲು ಎಲ್ಲವನ್ನೂ ಕೇಳಬೇಕು. ಏಕೆಂದರೆ ಇವನು ಚಾತುರ್ವರ್ಣಗಳ ವಿವಿಧ ಧರ್ಮಗಳನ್ನೂ

ಸಂಪೂರ್ಣವಾಗಿ ತಿಳಿದಿರುತ್ತಾನೆ.

12054010a ಏಷ ವೃದ್ಧಃ ಪುರಾ ಲೋಕಾನ್ಸಂಪ್ರಾಪ್ನೋತಿ ತನುತ್ಯಜಾಮ್|
12054010c ತಂ ಶೀಘ್ರಮನುಯುಂಜಧ್ವಂ ಸಂಶಯಾನ್ಮನಸಿ ಸ್ಥಿತಾನ್||

ಈ ವೃದ್ಧನು ತನುವನ್ನು ತ್ಯಜಿಸಿ ಲೋಕಗಳಿಗೆ ತೆರಳುವ ಮೊದಲೇ ಶೀಘ್ರವಾಗಿ ಮನಸ್ಸಿನಲ್ಲಿರುವ ಸಂಶಯಗಳನ್ನು ಕೇಳಬೇಕು!"

12054011a ಏವಮುಕ್ತಾ ನಾರದೇನ ಭೀಷ್ಮಮೀಯುರ್ನರಾಧಿಪಾಃ|
12054011c ಪ್ರಷ್ಟುಂ ಚಾಶಕ್ನುವಂತಸ್ತೇ ವೀಕ್ಷಾಂ ಚಕ್ರುಃ ಪರಸ್ಪರಮ್||

ಭೀಷ್ಮನ ಕುರಿತು ನಾರದನು ಹೀಗೆ ಹೇಳಲು ಅಲ್ಲಿದ್ದ ನರಾಧಿಪರು ಏನನ್ನೂ ಕೇಳಲು ಶಕ್ತರಾಗದೇ ಪರಸ್ಪರರನ್ನು ನೋಡತೊಡಗಿದರು.

12054012a ಅಥೋವಾಚ ಹೃಷೀಕೇಶಂ ಪಾಂಡುಪುತ್ರೋ ಯುಧಿಷ್ಠಿರಃ|
12054012c ನಾನ್ಯಸ್ತ್ವದ್ದೇವಕೀಪುತ್ರ ಶಕ್ತಃ ಪ್ರಷ್ಟುಂ ಪಿತಾಮಹಮ್||

ಆಗ ಪಾಂಡುಪುತ್ರ ಯುಧಿಷ್ಠಿರನು ಹೃಷೀಕೇಶನಿಗೆ ಹೇಳಿದನು: "ದೇವಕೀಪುತ್ರ! ನಿನ್ನನ್ನು ಬಿಟ್ಟು ಬೇರೆ ಯಾರೂ ಪಿತಾಮಹನನ್ನು ಪ್ರಶ್ನಿಸಲು ಶಕ್ತರಿಲ್ಲ!

12054013a ಪ್ರವ್ಯಾಹಾರಯ ದುರ್ಧರ್ಷ ತ್ವಮಗ್ರೇ ಮಧುಸೂದನ|
12054013c ತ್ವಂ ಹಿ ನಸ್ತಾತ ಸರ್ವೇಷಾಂ ಸರ್ವಧರ್ಮವಿದುತ್ತಮಃ||

ಮಧುಸೂದನ! ದುರ್ಧರ್ಷ! ನೀನೇ ಮುಂದೆನಿಂತು ವ್ಯವಹರಿಸು! ಏಕೆಂದರೆ ಅಯ್ಯಾ! ನೀನೇ ಎಲ್ಲರ ಎಲ್ಲ ಧರ್ಮಗಳನ್ನೂ ತಿಳಿದಿರುವೆ!"

12054014a ಏವಮುಕ್ತಃ ಪಾಂಡವೇನ ಭಗವಾನ್ಕೇಶವಸ್ತದಾ|
12054014c ಅಭಿಗಮ್ಯ ದುರಾಧರ್ಷಂ ಪ್ರವ್ಯಾಹಾರಯದಚ್ಯುತಃ||

ಪಾಂಡವನು ಹೀಗೆ ಹೇಳಲು ಭಗವಾನ್ ಅಚ್ಯುತ ಕೇಶವನು ದುರಾಧರ್ಷ ಭೀಷ್ಮನ ಬಳಿಸಾರಿ ಮಾತನಾಡಿದನು:

12054015 ವಾಸುದೇವ ಉವಾಚ|
12054015a ಕಚ್ಚಿತ್ಸುಖೇನ ರಜನೀ ವ್ಯುಷ್ಟಾ ತೇ ರಾಜಸತ್ತಮ|
12054015c ವಿಸ್ಪಷ್ಟಲಕ್ಷಣಾ ಬುದ್ಧಿಃ ಕಚ್ಚಿಚ್ಚೋಪಸ್ಥಿತಾ ತವ||

ವಾಸುದೇವನು ಹೇಳಿದನು: "ರಾಜಸತ್ತಮ! ನೀನು ರಾತ್ರಿಯನ್ನು ಸುಖವಾಗಿ ಕಳೆದೆಯಲ್ಲವೇ? ನಿನ್ನ ಬುದ್ಧಿಯು ಸ್ಥಿರವಾಗಿ, ಸ್ಪಷ್ಟವಾಗಿ ಕಾಣುತ್ತಿದೆ ತಾನೇ?

12054016a ಕಚ್ಚಿಜ್ಞಾನಾನಿ ಸರ್ವಾಣಿ ಪ್ರತಿಭಾಂತಿ ಚ ತೇಽನಘ|
12054016c ನ ಗ್ಲಾಯತೇ ಚ ಹೃದಯಂ ನ ಚ ತೇ ವ್ಯಾಕುಲಂ ಮನಃ||

ಅನಘ! ಸರ್ವ ಜ್ಞಾನಗಳೂ ನಿನಗೆ ಹೊಳೆಯುತ್ತಿವೆ ತಾನೇ? ಹೃದಯದಲ್ಲಿ ದುಃಖವಿಲ್ಲ ತಾನೇ? ಮನಸ್ಸು ವ್ಯಾಕುಲಗೊಂಡಿಲ್ಲ ತಾನೇ?"

12054017 ಭೀಷ್ಮ ಉವಾಚ|
12054017a ದಾಹೋ ಮೋಹಃ ಶ್ರಮಶ್ಚೈವ ಕ್ಲಮೋ ಗ್ಲಾನಿಸ್ತಥಾ ರುಜಾ|
12054017c ತವ ಪ್ರಸಾದಾದ್ಗೋವಿಂದ ಸದ್ಯೋ ವ್ಯಪಗತಾನಘ||

ಭೀಷ್ಮನು ಹೇಳಿದನು: "ಗೋವಿಂದ! ಅನಘ! ನಿನ್ನ ಪ್ರಸಾದದಿಂದ ಬಾಯಾರಿಕೆ, ಮೋಹ, ಸುಸ್ತು, ನೋವು, ದುಃಖ ಮತ್ತು ರುಜಿನಗಳು ಸದ್ಯ ಹೊರಟುಹೋಗಿವೆ!

12054018a ಯಚ್ಚ ಭೂತಂ ಭವಿಷ್ಯಚ್ಚ ಭವಚ್ಚ ಪರಮದ್ಯುತೇ|

12054018c ತತ್ಸರ್ವಮನುಪಶ್ಯಾಮಿ ಪಾಣೌ ಫಲಮಿವಾಹಿತಮ್॥

ಪರಮದ್ಯುತೇ! ಕೈಯಲ್ಲಿರುವ ಫಲದಂತೆ ಭೂತ-ಭವ್ಯ-
ವರ್ತಮಾನಗಳನ್ನು ಸ್ವಚ್ಛವಾಗಿ ಕಾಣುತ್ತಿದ್ದೇನೆ.

12054019a ವೇದೋಕ್ತಾಶ್ಚೈವ ಯೇ ಧರ್ಮಾ ವೇದಾಂತನಿಹಿತಾಶ್ಚ ಯೇ|
12054019c ತಾನ್ಸರ್ವಾನ್ಸಂಪ್ರಪಶ್ಯಾಮಿ ವರದಾನಾತ್ತವಾಚ್ಯುತ॥

ಅಚ್ಯುತ! ನಿನ್ನ ವರದಾನದಿಂದ ವೇದಗಳು ಹೇಳಿರುವ ಧರ್ಮಗಳೂ,
ವೇದಾಂತಗಳ ನಿಶ್ಚಯಗಳೂ ಎಲ್ಲವನ್ನೂ ನಾನು ಕಾಣುತ್ತಿದ್ದೇನೆ.

12054020a ಶಿಷ್ಟೈಶ್ಚ ಧರ್ಮೋ ಯಃ ಪ್ರೋಕ್ತಃ ಸ ಚ ಮೇ ಹೃದಿ ವರ್ತತೇ|
12054020c ದೇಶಜಾತಿಕುಲಾನಾಂ ಚ ಧರ್ಮಜ್ಞೋಽಸ್ಮಿ ಜನಾರ್ದನ॥

ಶಿಷ್ಟರು ಯಾವುದನ್ನು ಧರ್ಮವೆಂದು ಕರೆಯುತ್ತಾರೆಯೋ ಅದೂ ಕೂಡ
ನನ್ನ ಹೃದಯದಲ್ಲಿ ಪ್ರತಿಷ್ಠಿತವಾಗಿದೆ. ಜನಾರ್ದನ! ದೇಶ-ಜಾತಿ-
ಕುಲಗಳ ಧರ್ಮಗಳನ್ನೂ ತಿಳಿದಿರುತ್ತೇನೆ.

12054021a ಚತುರ್ಣಾಶ್ರಮಧರ್ಮೇಷು ಯೋಽರ್ಥಃ ಸ ಚ ಹೃದಿ ಸ್ಥಿತಃ|
12054021c ರಾಜಧರ್ಮಾಂಶ್ಚ ಸಕಲಾನವಗಚ್ಛಾಮಿ ಕೇಶವ॥

ಕೇಶವ! ನಾಲ್ಕು ಆಶ್ರಮಧರ್ಮಗಳೂ ಅವುಗಳ ಅರ್ಥಗಳೂ ನನ್ನ
ಹೃದಯದಲ್ಲಿ ನೆಲೆಸಿವೆ. ಸಕಲ ರಾಜಧರ್ಮಗಳನ್ನೂ
ತಿಳಿದುಕೊಂಡಿದ್ದೇನೆ.

12054022a ಯತ್ರ ಯತ್ರ ಚ ವಕ್ತವ್ಯಂ ತದ್ವಕ್ಷ್ಯಾಮಿ ಜನಾರ್ದನ|
12054022c ತವ ಪ್ರಸಾದಾದ್ಧಿ ಶುಭಾ ಮನೋ ಮೇ ಬುದ್ಧಿರಾವಿಶತ್॥

ಜನಾರ್ದನ! ಯಾವ ಯಾವ ವಿಷಯದ ಕುರಿತು ಹೇಳಬೇಕೋ

ಅದನ್ನು ನಾನು ಹೇಳುತ್ತೇನೆ. ನಿನ್ನ ಪ್ರಸಾದದಿಂದ ನನ್ನ ನಿರ್ಮಲ ಮನಸ್ಸನ್ನು ಶುಭ ಬುದ್ಧಿಯು ಪ್ರವೇಶಿಸಿದೆ.

12054023a ಯುವೇವ ಚಾಸ್ಮಿ ಸಂವೃತ್ತಸ್ತ್ವದನುಧ್ಯಾನಬೃಂಹಿತಃ|
12054023c ವಕ್ತುಂ ಶ್ರೇಯಃ ಸಮರ್ಥೋಽಸ್ಮಿ ತ್ವತ್ಪ್ರಸಾದಾಜ್ಜನಾರ್ದನ||

ಜನಾರ್ದನ! ಸದಾ ನಿನ್ನನ್ನೇ ಧ್ಯಾನಿಸುತ್ತಿರುವ ನಾನು ವೃದ್ಧನಾದರೂ ಯುವಕನಂತಾಗಿಬಿಟ್ಟಿದ್ದೇನೆ. ನಿನ್ನ ಪ್ರಸಾದದಿಂದ ಶ್ರೇಯವಾದುದನ್ನು ಹೇಳಲು ಸಮರ್ಥನಾಗಿದ್ದೇನೆ.

12054024a ಸ್ವಯಂ ಕಿಮರ್ಥಂ ತು ಭವಾನ್ನೈಯೋ ನ ಪ್ರಾಹ ಪಾಂಡವಮ್|
12054024c ಕಿಂ ತೇ ವಿವಕ್ಷಿತಂ ಚಾತ್ರ ತದಾಶು ವದ ಮಾಧವ||

ಮಾಧವ! ಆದರೆ ಸ್ವಯಂ ನೀನೇ ಪಾಂಡವರಿಗೆ ಶ್ರೇಯವಾದುದನ್ನು ಏಕೆ ಹೇಳುತ್ತಿಲ್ಲ? ನಾನೇ ಅವುಗಳನ್ನು ಹೇಳಬೇಕೆನ್ನುವುದರಲ್ಲಿ ನಿನ್ನ ಉದ್ದೇಶವಾದರೂ ಏನು ಅದನ್ನು ಬೇಗನೇ ಹೇಳು!"

12054025 ವಾಸುದೇವ ಉವಾಚ|
12054025a ಯಶಸಃ ಶ್ರೇಯಸಶ್ಚೈವ ಮೂಲಂ ಮಾಂ ವಿದ್ಧಿ ಕೌರವ|
12054025c ಮತ್ತಃ ಸರ್ವೇಽಭಿನಿರ್ವೃತ್ತಾ ಭಾವಾಃ ಸದಸದಾತ್ಮಕಾಃ||

ವಾಸುದೇವನು ಹೇಳಿದನು: "ಕೌರವ! ಎಲ್ಲರ ಶ್ರೇಯಸ್ಸು ಮತ್ತು ಯಶಸ್ಸುಗಳಿಗೆ ನಾನೇ ಮೂಲನೆಂದು ತಿಳಿ. ಪ್ರಪಂಚದಲ್ಲಿರುವ ಸತ್ ಮತ್ತು ಅಸತ್ ಎಲ್ಲ ಭಾವಗಳೂ ನನ್ನಿಂದಲೇ ಪ್ರಾದುರ್ಭವಿಸಿವೆ.

12054026a ಶೀತಾಂಶುಶ್ಚಂದ್ರ ಇತ್ಯುಕ್ತೇ ಕೋ ಲೋಕೇ ವಿಸ್ಮಯಿಷ್ಯತಿ|
12054026c ತಥೈವ ಯಶಸಾ ಪೂರ್ಣೇ ಮಯಿ ಕೋ ವಿಸ್ಮಯಿಷ್ಯತಿ||

ಚಂದ್ರನು ಶೀತಲಕಿರಣಗಳನ್ನು ಹೊಂದಿದ್ದಾನೆ ಎಂದು ಹೇಳಿದರೆ ಲೋಕದಲ್ಲಿ ಯಾರುತಾನೇ ವಿಸ್ಮಯಗೊಳ್ಳುತ್ತಾರೆ? ಹಾಗೆಯೇ ಯಶಸ್ಸಿನಿಂದ ಪೂರ್ಣನಾಗಿರುವ ನಾನು ಉಪದೇಶನೀಡಿದರೆ ಯಾರುತಾನೇ ವಿಸ್ಮಯಗೊಳ್ಳುತ್ತಾರೆ?

12054027a ಆಧೇಯಂ ತು ಮಯಾ ಭೂಯೋ ಯಶಸ್ತವ ಮಹಾದ್ಯುತೇ|
12054027c ತತೋ ಮೇ ವಿಪುಲಾ ಬುದ್ಧಿಸ್ತ್ವಯಿ ಭೀಷ್ಮ ಸಮಾಹಿತಾ||

ಮಹಾದ್ಯುತೇ! ಭೀಷ್ಮ! ಈ ಜಗತ್ತಿನಲ್ಲಿ ನಿನ್ನ ಯಶಸ್ಸನ್ನು ಇನ್ನೂ ಹೆಚ್ಚಿಸಬೇಕೆಂಬುದೇ ನನ್ನ ಆಶಯವಾಗಿದೆ. ಆದುದರಿಂದ ನನ್ನ ವಿಪುಲ ಬುದ್ಧಿಯನ್ನು ನಿನ್ನಲ್ಲಿಯೇ ಒಂದುಗೂಡಿಸಿದ್ದೇನೆ.

12054028a ಯಾವದ್ಧಿ ಪೃಥಿವೀಪಾಲ ಪೃಥಿವೀ ಸ್ಥಾಸ್ಯತೇ ಧ್ರುವಾ|
12054028c ತಾವತ್ತವಾಕ್ಷಯಾ ಕೀರ್ತಿರ್ಲೋಕಾನನು ಚರಿಷ್ಯತಿ||

ಪೃಥಿವೀಪಾಲ! ಎಲ್ಲಿಯವರೆಗೆ ಈ ಪೃಥ್ವಿಯು ಸ್ಥಿರವಾಗಿ ನಿಂತಿರುವುದೋ ಅಲ್ಲಿಯವರೆಗೆ ನಿನ್ನ ಅಕ್ಷಯ ಕೀರ್ತಿಯು ಲೋಕಗಳಲ್ಲಿ ವ್ಯಾಪ್ತವಾಗಿರುತ್ತದೆ.

12054029a ಯಚ್ಚ ತ್ವಂ ವಕ್ಷ್ಯಸೇ ಭೀಷ್ಮ ಪಾಂಡವಾಯಾನುಪೃಚ್ಚತೇ|
12054029c ವೇದಪ್ರವಾದಾ ಇವ ತೇ ಸ್ಥಾಸ್ಯಂತಿ ವಸುಧಾತಲೇ||

ಭೀಷ್ಮ! ಪಾಂಡವನು ಕೇಳಿದುದಕ್ಕೆ ನೀನು ಏನನ್ನು ಹೇಳುತ್ತೀಯೋ ಅದು ವಸುಧಾತಲದಲ್ಲಿ ವೇದವಾಖ್ಯವಾಗಿ ನಿಲ್ಲುತ್ತದೆ.

12054030a ಯಶ್ಚೈತೇನ ಪ್ರಮಾಣೇನ ಯೋಕ್ಷ್ಯತ್ಯಾತ್ಮಾನಮಾತ್ಮನಾ|
12054030c ಸ ಫಲಂ ಸರ್ವಪುಣ್ಯಾನಾಂ ಪ್ರೇತ್ಯ ಚಾನುಭವಿಷ್ಯತಿ||

ನಿನ್ನ ಮಾತುಗಳನ್ನು ಪ್ರಮಾಣಭೂತವನ್ನಾಗಿಟ್ಟುಕೊಂಡು ಯಾರು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾನೆಯೋ ಅವನು ಆ ಸರ್ವಪುಣ್ಯಗಳ ಫಲಗಳನ್ನೂ ಮರಣಾನಂತರದಲ್ಲಿ ಪಡೆದುಕೊಳ್ಳುತ್ತಾನೆ.

12054031a ಏತಸ್ಮಾತ್ಕಾರಣಾದ್ಭೀಷ್ಮ ಮತಿರ್ದಿವ್ಯಾ ಮಯಾ ಹಿ ತೇ|
12054031c ದತ್ತಾ ಯಶೋ ವಿಪ್ರಥೇತ ಕಥಂ ಭೂಯಸ್ತವೇತಿ ಹ||

ಭೀಷ್ಮ! ಈ ಕಾರಣದಿಂದಲೇ ನಿನ್ನ ಯಶಸ್ಸನ್ನು ಹೇಗೆ ಹೆಚ್ಚಿಸಬೇಕು ಎಂದು ಆಲೋಚಿಸಿ, ನನ್ನ ದಿವ್ಯ ಮತಿಯನ್ನು ನಿನಗೆ ಇತ್ತಿದ್ದೇನೆ.

12054032a ಯಾವದ್ಧಿ ಪ್ರಥತೇ ಲೋಕೇ ಪುರುಷಸ್ಯ ಯಶೋ ಭುವಿ|
12054032c ತಾವತ್ತಸ್ಯಾಕ್ಷಯಂ ಸ್ಥಾನಂ ಭವತೀತಿ ವಿನಿಶ್ಚಿತಮ್||

ಎಲ್ಲಿಯವರೆಗೆ ಪುರುಷನ ಯಶಸ್ಸು ಭುವಿಯ ಜನರಲ್ಲಿ
ಹರಡಿರುತ್ತದೆಯೋ ಅಲ್ಲಿಯವರೆಗೆ ಅವನ ಸ್ಥಾನವು
ಅಕ್ಷಯವಾಗಿರುತ್ತದೆ ಎನ್ನುವುದು ನಿಶ್ಚಿತವಾಗಿದೆ.

12054033a ರಾಜಾನೋ ಹತಶಿಷ್ಟಾಸ್ತ್ವಾಂ ರಾಜನ್ನಭಿತ ಆಸತೇ|
12054033c ಧರ್ಮಾನನುಯುಯುಕ್ಷಂತಸ್ತೇಭ್ಯಃ ಪ್ರಬ್ರೂಹಿ ಭಾರತ||

ರಾಜನ್! ಭಾರತ! ಅಳಿದುಳಿದ ರಾಜರು ನಿನ್ನಿಂದ ಧರ್ಮವನ್ನು ತಿಳಿದುಕೊಳ್ಳಬೇಕೆಂಬ ಇಚ್ಛೆಯಿಂದ ನಿನ್ನ ಸುತ್ತಲೂ ಕುಳಿತಿದ್ದಾರೆ. ಅವರೆಲ್ಲರಿಗೂ ಉಪದೇಶಿಸು!

12054034a ಭವಾನ್ಹಿ ವಯಸಾ ವೃದ್ಧಃ ಶ್ರುತಾಚಾರಸಮನ್ವಿತಃ|
12054034c ಕುಶಲೋ ರಾಜಧರ್ಮಾಣಾಂ ಪೂರ್ವೇಷಾಮಪರಾಶ್ಚ ಯೇ||

ನೀನು ವಯಸ್ಸಿನಲ್ಲಿ ವೃದ್ಧನಾಗಿರುವೆ. ಶಾಸ್ತ್ರಜ್ಞಾನ ಮತ್ತು

ಸದಾಚಾರಗಳಿಂದ ಕೂಡಿರುವೆ. ಹಿಂದಿದ್ದ ಮತ್ತು ಮುಂದೆ ಬೇಕಾಗುವ ರಾಜಧರ್ಮಗಳಲ್ಲಿ ಕುಶಲನಾಗಿರುವೆ.

12054035a ಜನ್ಮಪ್ರಭೃತಿ ತೇ ಕಶ್ಚಿದ್ವ್ಯಜಿನಂ ನ ದದರ್ಶ ಹ|
12054035c ಜ್ಞಾತಾರಮನುಧರ್ಮಾಣಾಂ ತ್ವಾಂ ವಿದುಃ ಸರ್ವಪಾರ್ಥಿವಾಃ||

ಜನ್ಮಪ್ರಭೃತಿ ನಿನ್ನಲ್ಲಿ ಯಾವುದೇ ದೋಷವನ್ನೂ ಕಂಡಿಲ್ಲ. ನೀನು ಸರ್ವಧರ್ಮಗಳನ್ನು ತಿಳಿದಿರುವೆ ಎಂದು ಸರ್ವಪಾರ್ಥಿವರೂ ಅರಿತಿದ್ದಾರೆ.

12054036a ತೇಭ್ಯಃ ಪಿತೇವ ಪುತ್ರೇಭ್ಯೋ ರಾಜನ್ಬ್ರೂಹಿ ಪರಂ ನಯಮ್|
12054036c ಋಷಯಶ್ಚ ಹಿ ದೇವಾಶ್ಚ ತ್ವಯಾ ನಿತ್ಯಮುಪಾಸಿತಾಃ||

ರಾಜನ್! ತಂದೆಯು ಮಕ್ಕಳಿಗೆ ಉಪದೇಶಿಸುವಂತೆ ಇವರಿಗೆ ಪರಮ ನೀತಿಯನ್ನು ಉಪದೇಶಿಸು. ಋಷಿಗಳನ್ನೂ ದೇವತೆಗಳನ್ನೂ ನೀನು ನಿತ್ಯವೂ ಉಪಾಸಿಸಿರುವೆ.

12054037a ತಸ್ಮಾದ್ವಕ್ತವ್ಯಮೇವೇಹ ತ್ವಯಾ ಪಶ್ಯಾಮ್ಯಶೇಷತಃ|
12054037c ಧರ್ಮಾನ್ಮುಶ್ರೂಷಮಾಣೇಭ್ಯಃ ಪೃಷ್ಟೇನ ಚ ಸತಾ ಪುನಃ||
12054038a ವಕ್ತವ್ಯಂ ವಿದುಷಾ ಚೇತಿ ಧರ್ಮಮಾಹುರ್ಮನೀಷಿಣಃ|
12054038c ಅಪ್ರತಿಬ್ರುವತಃ ಕಷ್ಟೋ ದೋಷೋ ಹಿ ಭವತಿ ಪ್ರಭೋ||

ಆದುದರಿಂದ ಇವರಿಗೆ ನೀನು ಸಂಪೂರ್ಣವಾಗಿ ಉಪದೇಶಿಸಬೇಕೆಂದು ನನಗನ್ನಿಸುತ್ತದೆ. ಧರ್ಮವನ್ನು ತಿಳಿಯಲು ಇಚ್ಛೈಯುಳ್ಳವರು ವಿದುಷನನ್ನು ಕೇಳಿದರೆ ಆ ಧರ್ಮವನ್ನು ತಿಳಿಸಬೇಕೆಂದು ಮನೀಷಿಣರು ಹೇಳುತ್ತಾರೆ. ಪ್ರಭೋ! ಹಾಗೆ ಹೇಳದೇ ಇದ್ದವನಿಗೆ ಕಷ್ಟವೂ ದೋಷವೂ ಆಗುತ್ತದೆ.

12054039a ತಸ್ಮಾತ್ಪುತ್ರೈಶ್ಚ ಪೌತ್ರೈಶ್ಚ ಧರ್ಮಾನ್ಪೃಷ್ಟಃ ಸನಾತನಾನ್।
12054039c ವಿದ್ವಾಜ್ಜಿಜ್ಞಾಸಮಾನೈಸ್ತ್ವಂ ಪ್ರಬ್ರೂಹಿ ಭರತರ್ಷಭ॥

ಭರತರ್ಷಭ! ಆದುದರಿಂದ ಸನಾತನ ಧರ್ಮದ ಕುರಿತು ಕೇಳುತ್ತಿರುವ ನಿನ್ನ ಪುತ್ರ-ಪೌತ್ರರಿಗೆ ವಿದ್ವಾನನೂ ಜಿಜ್ಞಾಸೆಮಾಡಬಲ್ಲನೂ ಆದ ನೀನು ಉಪದೇಶಿಸು!""

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಕೃಷ್ಣವಾಕ್ಯೇ ಚತುಃಪಂಚಶತಮೋऽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಕೃಷ್ಣವಾಕ್ಯ ಎನ್ನುವ ಐವತ್ನಾಲ್ಕನೇ ಅಧ್ಯಾಯವು.

ಓಂ

ಯುಧಿಷ್ಠಿರಾಶಾಸನ

ಭೀಷ್ಮನು ಯುಧಿಷ್ಠಿರನಿಗೆ ಪ್ರಶ್ನೆಗಳನ್ನು ಕೇಳಲು ಆದೇಶವನ್ನು ನೀಡಿದುದು; ಯುಧಿಷ್ಠಿರನು ಲಜ್ಜಿತನೂ ಭಯಭೀತನೂ ಆಗಿದ್ದಾನೆಂದು ಕೃಷ್ಣನು ಹೇಳಲು ಭೀಷ್ಮನು ಆಶ್ವಾಸನೆಯನ್ನಿತ್ತ ನಂತರ ಯುಧಿಷ್ಠಿರನು ಅವನ ಸಮೀಪ ಹೋದುದು (1-20).

12055001 ವೈಶಂಪಾಯನ ಉವಾಚ।
12055001a ಅಥಾಬ್ರವೀನ್ಮಹಾತೇಜಾ ವಾಕ್ಯಂ ಕೌರವನಂದನಃ।
12055001c ಹಂತ ಧರ್ಮಾನ್ಪ್ರವಕ್ಷ್ಯಾಮಿ ದೃಢೇ ವಾಙ್ಮನಸೀ ಮಮ॥
12055001E ತವ ಪ್ರಸಾದಾದ್ಗೋವಿಂದ ಭೂತಾತ್ಮಾ ಹ್ಯಸಿ ಶಾಶ್ವತಃ॥

ವೈಶಂಪಾಯನನು ಹೇಳಿದನು: "ಆಗ ಮಹಾತೇಜಸ್ವಿ ಕೌರವನಂದನನು ಹೇಳಿದನು: "ಗೋವಿಂದ! ಈಗ ನಾನು ಧರ್ಮಗಳ ಪ್ರವಚನವನ್ನು ಮಾಡುತ್ತೇನೆ. ನೀನು ಸರ್ವಭೂತಗಳ ಶಾಶ್ವತ ಆತ್ಮನಾಗಿರುವೆ. ನಿನ್ನ ಪ್ರಸಾದದಿಂದ ನನ್ನ ಮನಸ್ಸು ಮಾತುಗಳೂ ದೃಢವಾಗಿವೆ.

12055002a ಯುಧಿಷ್ಠಿರಸ್ತು ಮಾಂ ರಾಜಾ ಧರ್ಮಾನ್ಸಮನುಪೃಚ್ಚತು|
12055002c ಏವಂ ಪ್ರೀತೋ ಭವಿಷ್ಯಾಮಿ ಧರ್ಮಾನ್ವಕ್ಷ್ಯಾಮಿ ಚಾನಘ||

ಅನಘ! ರಾಜಾ ಯುಧಿಷ್ಠಿರನು ನನ್ನಲ್ಲಿ ಧರ್ಮಗಳ ಕುರಿತು ಪ್ರಶ್ನಿಸಲಿ. ಅದರಿಂದ ನಾನು ಪ್ರೀತನಾಗುತ್ತೇನೆ. ಧರ್ಮಗಳನ್ನು ಹೇಳುತ್ತೇನೆ.

12055003a ಯಸ್ಮಿನ್ರಾಜರ್ಷಭೇ ಜಾತೇ ಧರ್ಮಾತ್ಮನಿ ಮಹಾತ್ಮನಿ|
12055003c ಅಹೃಷ್ಯನ್ನೃಷಯಃ ಸರ್ವೇ ಸ ಮಾಂ ಪೃಚ್ಚತು ಪಾಂಡವಃ||

ಯಾರು ಹುಟ್ಟಿದಾಗ ಸರ್ವ ಋಷಿಗಳೂ ಹರ್ಷಿತರಾದರೋ ಆ ಧರ್ಮಾತ್ಮ ಮಹಾತ್ಮ ಪಾಂಡವ ರಾಜರ್ಷಭನು ನನ್ನಲ್ಲಿ ಪ್ರಶ್ನಿಸಲಿ!

12055004a ಸರ್ವೇಷಾಂ ದೀಪ್ತಯಶಸಾಂ ಕುರೂಣಾಂ ಧರ್ಮಚಾರಿಣಾಮ್|
12055004c ಯಸ್ಯ ನಾಸ್ತಿ ಸಮಃ ಕಶ್ಚಿತ್ಸ ಮಾಂ ಪೃಚ್ಚತು ಪಾಂಡವಃ||

ಯಾರು ಎಲ್ಲ ಧರ್ಮಚಾರೀ ಕುರುಗಳ ಯಶಸ್ಸನ್ನು ಬೆಳಗಿಸಿದನೋ ಮತ್ತು ಯಾರಿಗೆ ಸಮನಾದವರು ಬೇರೆ ಯಾರೂ ಇಲ್ಲವೋ ಆ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ!

12055005a ಧೃತಿರ್ದಮೋ ಬ್ರಹ್ಮಚರ್ಯಂ ಕ್ಷಮಾ ಧರ್ಮಶ್ಚ ನಿತ್ಯದಾ|
12055005c ಯಸ್ಮಿನ್ನೋಜಶ್ಚ ತೇಜಶ್ಚ ಸ ಮಾಂ ಪೃಚ್ಚತು ಪಾಂಡವಃ||

ಯಾರಲ್ಲಿ ನಿತ್ಯವೂ ಧೃತಿ, ದಮ, ಬ್ರಹ್ಮಚರ್ಯ, ಕ್ಷಮೆ, ಧರ್ಮ, ಓಜಸ್ಸು ಮತ್ತು ತೇಜಸ್ಸುಗಳು ನೆಲಸಿವೆಯೋ ಆ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ!

12055006a ಸತ್ಯಂ ದಾನಂ ತಪಃ ಶೌಚಂ ಶಾಂತಿರ್ದಾಕ್ಷ್ಯಮಸಂಭ್ರಮಃ|
12055006c ಯಸ್ಮಿನ್ನೇತಾನಿ ಸರ್ವಾಣಿ ಸ ಮಾಂ ಪೃಚ್ಚತು ಪಾಂಡವಃ||

ಯಾರಲ್ಲಿ ಸತ್ಯ, ದಾನ, ತಪಸ್ಸು, ಶೌಚ, ಶಾಂತಿ, ದಕ್ಷತೆ ಮತ್ತು ಅಸಂಭ್ರಮ ಈ ಸರ್ವ ಗುಣಗಳೂ ಇವೆಯೋ ಆ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ!

12055007a ಯೋ ನ ಕಾಮಾನ್ನ ಸಂರಂಭಾನ್ನ ಭಯಾನ್ನಾರ್ಥಕಾರಣಾತ್|
12055007c ಕುರ್ಯಾದಧರ್ಮಂ ಧರ್ಮಾತ್ಮಾ ಸ ಮಾಂ ಪೃಚ್ಚತು ಪಾಂಡವಃ||

ಯಾರು ಕಾಮ, ಕ್ರೋಧ, ಭಯ ಮತ್ತು ಅರ್ಥಕ್ಕಾಗಿ ಅಧರ್ಮವನ್ನು ಎಸಗಲಿಲ್ಲವೋ ಆ ಧರ್ಮಾತ್ಮ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ!

12055008a ಸಂಬಂಧಿನೋಽತಿಥೀನ್ಭೃತ್ಯಾನ್ಸಂಶ್ರಿತೋಪಾಶ್ರಿತಾಂಶ್ಚ ಯಃ|
12055008c ಸಂಮಾನಯತಿ ಸತ್ಕೃತ್ಯ ಸ ಮಾಂ ಪೃಚ್ಚತು ಪಾಂಡವಃ||

ಸಂಬಂಧಿಗಳನ್ನೂ, ಅತಿಥಿಗಳನ್ನೂ, ಸೇವಕರನ್ನೂ, ಮತ್ತು ಆಶ್ರಿತರನ್ನು ಸತ್ಕರಿಸಿ ಸನ್ಮಾನಿಸುವ ಪಾಂಡವನು ನನ್ನಲ್ಲಿ ಪ್ರಶ್ನಿಸಲಿ!

12055009a ಸತ್ಯನಿತ್ಯಃ ಕ್ಷಮಾನಿತ್ಯೋ ಜ್ಞಾನನಿತ್ಯೋಽತಿಥಿಪ್ರಿಯಃ|
12055009c ಯೋ ದದಾತಿ ಸತಾಂ ನಿತ್ಯಂ ಸ ಮಾಂ ಪೃಚ್ಚತು ಪಾಂಡವಃ||

ಸತ್ಯನಿತ್ಯನೂ, ಕ್ಷಮಾನಿತ್ಯನೂ, ಜ್ಞಾನನಿತ್ಯನೂ, ಅತಿಥಿಪ್ರಿಯನೂ, ಸದಾ ಸತ್ಪುರುಷರಿಗೆ ದಾನನೀಡುವವನೂ ಆದ ಪಾಂಡವನು ನನ್ನಲ್ಲಿ

ಪ್ರಶ್ನಿಸಲಿ!

12055010a ಇಜ್ಯಾಧ್ಯಯನನಿತ್ಯಶ್ಚ ಧರ್ಮೇ ಚ ನಿರತಃ ಸದಾ|
12055010c ಶಾಂತಃ ಶ್ರುತರಹಸ್ಯಶ್ಚ ಸ ಮಾಂ ಪೃಚ್ಚತು ಪಾಂಡವಃ||

ನಿತ್ಯವೂ ಅಧ್ಯಯನ-ಯಾಗಗಳಲ್ಲಿ ಮತ್ತು ಸದಾ ಧರ್ಮದಲ್ಲಿ
ನಿರತನಾಗಿರುವ, ಶ್ರುತಿಗಳ ರಹಸ್ಯಗಳನ್ನು ತಿಳಿದಿರುವ ಶಾಂತ
ಪಾಂಡವನು ನನ್ನಲ್ಲಿ ಪ್ರಶ್ನಿಸಲಿ!"

12055011 ವಾಸುದೇವ ಉವಾಚ|
12055011a ಲಜ್ಜಯಾ ಪರಯೋಪೇತೋ ಧರ್ಮಾತ್ಮಾ ಸ ಯುಧಿಷ್ಠಿರಃ|
12055011c ಅಭಿಶಾಪಭಯಾದ್ಭೀತೋ ಭವಂತಂ ನೋಪಸರ್ಪತಿ||

ವಾಸುದೇವನು ಹೇಳಿದನು: "ಧರ್ಮಾತ್ಮ ಯುಧಿಷ್ಠಿರನು ಅತ್ಯಂತ
ಲಜ್ಜಿತನಾಗಿದ್ದಾನೆ. ಅಭಿಶಾಪದ ಭಯದಿಂದ ಭೀತನಾಗಿ ಅವನು ನಿನ್ನ
ಸಮೀಪಕ್ಕೆ ಬರುತ್ತಿಲ್ಲ.

12055012a ಲೋಕಸ್ಯ ಕದನಂ ಕೃತ್ವಾ ಲೋಕನಾಥೋ ವಿಶಾಂ ಪತೇ|
12055012c ಅಭಿಶಾಪಭಯಾದ್ಭೀತೋ ಭವಂತಂ ನೋಪಸರ್ಪತಿ||

ಜನಸಂಹಾರದ ಕದನವನ್ನು ಮಾಡಿದ ಲೋಕನಾಥ ವಿಶಾಂಪತಿಯು
ಅಭಿಶಾಪದ ಭಯದಿಂದ ಭೀತನಾಗಿ ನಿನ್ನ ಸಮೀಪಕ್ಕೆ ಬರುತ್ತಿಲ್ಲ.

12055013a ಪೂಜ್ಯಾನ್ಮಾನ್ಯಾಂಶ್ಚ ಭಕ್ತಾಂಶ್ಚ ಗುರೂನ್ಸಂಬಂಧಿಬಾಂಧವಾನ್|
12055013c ಅರ್ಘ್ಯಾರ್ಹಾನಿಷುಭಿರ್ಹತ್ವಾ ಭವಂತಂ ನೋಪಸರ್ಪತಿ||

ಅರ್ಘ್ಯಾದಿಗಳನ್ನಿತ್ತು ಸತ್ಕರಿಸಲು ಅರ್ಹರಾದ ಪೂಜ್ಯರನ್ನೂ,
ಮಾನ್ಯರನ್ನೂ, ಭಕ್ತರನ್ನೂ, ಗುರುಗಳನ್ನೂ, ಸಂಬಂಧಿ-ಬಾಂಧವರನ್ನೂ

ಬಾಣಗಳಿಂದ ಸಂಹರಿಸಿದ ಕಾರಣದಿಂದ ಅವನು ನಿನ್ನ ಸಮೀಪಕ್ಕೆ ಬರುತ್ತಿಲ್ಲ.”

12055014 ಭೀಷ್ಮ ಉವಾಚ|
12055014a ಬ್ರಾಹ್ಮಣಾನಾಂ ಯಥಾ ಧರ್ಮೋ ದಾನಮಧ್ಯಯನಂ ತಪಃ|
12055014c ಕ್ಷತ್ರಿಯಾಣಾಂ ತಥಾ ಕೃಷ್ಣ ಸಮರೇ ದೇಹಪಾತನಮ್||

ಭೀಷ್ಮನು ಹೇಳಿದನು: “ಕೃಷ್ಣ! ಬ್ರಾಹ್ಮಣರಿಗೆ ದಾನ-ಅಧ್ಯಯನ-ತಪಸ್ಸುಗಳು ಹೇಗೆ ಧರ್ಮವೋ ಹಾಗೆ ಸಮರದಲ್ಲಿ ಶಸ್ತ್ರಗಳ ಮೂಲಕ ಸಂಹರಿಸುವುದು ಕ್ಷತ್ರಿಯರ ಧರ್ಮ!

12055015a ಪಿತೄನ್ಪಿತಾಮಹಾನ್ಪುತ್ರಾನ್ಗುರೂನ್ಸಂಬಂಧಿಬಾಂಧವಾನ್|
12055015c ಮಿಥ್ಯಾಪ್ರವೃತ್ತಾನ್ಯಃ ಸಂಖ್ಯೇ ನಿಹನ್ಯಾದ್ಧರ್ಮ ಏವ ಸಃ||

ಮಿಥ್ಯರಾಗಿ ನಡೆದುಕೊಳ್ಳುವ ಪಿತೃಗಳನ್ನು, ಪಿತಾಮಹರನ್ನು, ಪುತ್ರರನ್ನು, ಗುರುಗಳನ್ನು ಮತ್ತು ಸಂಬಂಧಿ-ಬಾಂಧವರನ್ನು ಯುದ್ಧದಲ್ಲಿ ಸಂಹರಿಸುವುದು ಅವನಿಗೆ ಧರ್ಮವೇ ಆಗಿದೆ.

12055016a ಸಮಯತ್ಯಾಗಿನೋ ಲುಬ್ಧಾನ್ಗುರೂನಪಿ ಚ ಕೇಶವ|
12055016c ನಿಹಂತಿ ಸಮರೇ ಪಾಪಾನ್ಕ್ಷತ್ರಿಯೋ ಯಃ ಸ ಧರ್ಮವಿತ್||

ಕೇಶವ! ಲುಬ್ಧರಾಗಿ ಒಪ್ಪಂದಗಳನ್ನು ತ್ಯಜಿಸುವ ಪಾಪಿ ಗುರುಗಳನ್ನೂ ಕೂಡ ಸಮರದಲ್ಲಿ ಸಂಹರಿಸುವ ಕ್ಷತ್ರಿಯನು ಧರ್ಮವಿದುವೇ ಆಗಿರುತ್ತಾನೆ.

12055017a ಆಹೂತೇನ ರಣೇ ನಿತ್ಯಂ ಯೋದ್ಧವ್ಯಂ ಕ್ಷತ್ರಬಂಧುನಾ|
12055017c ಧರ್ಮ್ಯಂ ಸ್ವರ್ಗ್ಯಂ ಚ ಲೋಕ್ಯಂ ಚ ಯುದ್ಧಂ ಹಿ ಮನುರಬ್ರವೀತ್||



ಕ್ಷತ್ರಬಂಧುವು ರಣಕ್ಕೆ ಆಹ್ವಾನಿಸಿದಾಗ ನಿತ್ಯವೂ ಯುದ್ಧಮಾಡಬೇಕು. ಕ್ಷತ್ರಿಯನಿಗೆ ಯುದ್ಧವೇ ಧರ್ಮ, ಸ್ವರ್ಗ ಮತ್ತು ಯಶಸ್ಸನ್ನು ಉಂಟುಮಾಡುವವು ಎಂದು ಮನುವೇ ಹೇಳಿದ್ದಾನೆ.””

12055018 ವೈಶಂಪಾಯನ ಉವಾಚ|
12055018a ಏವಮುಕ್ತಸ್ತು ಭೀಷ್ಮೇಣ ಧರ್ಮರಾಜೋ ಯುಧಿಷ್ಠಿರಃ|
12055018c ವಿನೀತವದುಪಾಗಮ್ಯ ತಸ್ಥೌ ಸಂದರ್ಶನೇಽಗ್ರತಃ||

ವೈಶಂಪಾಯನನು ಹೇಳಿದನು: “ಭೀಷ್ಮನು ಹೀಗೆ ಹೇಳಲು ಧರ್ಮರಾಜ ಯುಧಿಷ್ಠಿರನು ವಿನೀತನಾಗಿ ಭೀಷ್ಮನ ಸಮೀಪಕ್ಕೆ ಹೋಗಿ ಅವನ ದೃಷ್ಟಿಗೆ ಅಭಿಮುಖನಾಗಿ ನಿಂತುಕೊಂಡನು.

12055019a ಅಥಾಸ್ಯ ಪಾದೌ ಜಗ್ರಾಹ ಭೀಷ್ಮಶ್ಚಾಭಿನನಂದ ತಮ್|

12055019c ಮೂರ್ಧ್ನಿ ಚೈನಮುಪಾಘ್ರಾಯ ನಿಷೀದೇತ್ಯಬ್ರವೀತ್ತದಾ||

ಅವನು ಭೀಷ್ಮನ ಎರಡು ಪಾದಗಳನ್ನೂ ಹಿಡಿದು ನಮಸ್ಕರಿಸಿದನು. ಭೀಷ್ಮನು ಯುಧಿಷ್ಠಿರನ ನೆತ್ತಿಯನ್ನು ಆಘ್ರಾಣಿಸಿ, ಆಶ್ವಾಸನೆಯನ್ನಿತ್ತು, ಕುಳಿತುಕೊಳ್ಳಲು ಹೇಳಿದನು.

12055020a ತಮುವಾಚಾಥ ಗಾಂಗೇಯ ಋಷಭಃ ಸರ್ವಧನ್ವಿನಾಮ್|
12055020c ಪೃಚ್ಚ ಮಾಂ ತಾತ ವಿಸ್ರಬ್ಧಂ ಮಾ ಭೈಸ್ತ್ವಂ ಕುರುಸತ್ತಮ||

ಕುರುಸತ್ತಮ! ಆಗ ಸರ್ವಧನ್ವಿಗಳ ಋಷಭ ಗಾಂಗೇಯನು "ಮಗೂ! ನಿರ್ಭಯನಾಗಿ ಶ್ರದ್ಧೆಯಿಂದ ನನ್ನನ್ನು ಪ್ರಶ್ನಿಸು! ಭಯಪಡಬೇಡ!" ಎಂದನು."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಯುಧಿಷ್ಠಿರಾಶಾಸನೇ ಪಂಚಪಂಚಶತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ಯುಧಿಷ್ಠಿರಾಶಾಸನ ಎನ್ನುವ ಐವತ್ತೈದನೇ ಅಧ್ಯಾಯವು.

೫೬

ಯುಧಿಷ್ಠಿರನು ಕೇಳಲು ಭೀಷ್ಮನು ರಾಜಧರ್ಮವನ್ನು ವರ್ಣಿಸಿದುದು; ರಾಜನಿಗೆ ಪುರುಷಾರ್ಥ ಮತ್ತು ಸತ್ಯದ ಅವಶ್ಯಕತೆ (1-60).

12056001 ವೈಶಂಪಾಯನ ಉವಾಚ|
12056001a ಪ್ರಣಿಪತ್ಯ ಹೃಷೀಕೇಶಮಭಿವಾದ್ಯ ಪಿತಾಮಹಮ್|
12056001c ಅನುಮಾನ್ಯ ಗುರೂನ್ಸರ್ವಾನ್ಪರ್ಯಪೃಚ್ಚದ್ಯುಧಿಷ್ಠಿರಃ||

ವೈಶಂಪಾಯನನು ಹೇಳಿದನು: "ಹೃಷೀಕೇಶನಿಗೆ ನಮಸ್ಕರಿಸಿ,
ಪಿತಾಮಹನಿಗೂ ಅಭಿವಾದನ ಮಾಡಿ, ಸರ್ವ ಗುರುಗಳ
ಅನುಮತಿಯನ್ನೂ ಪಡೆದು ಯುಧಿಷ್ಠಿರನು ಭೀಷ್ಮನನ್ನು ಪ್ರಶ್ನಿಸಿದನು:

12056002a ರಾಜ್ಯಂ ವೈ ಪರಮೋ ಧರ್ಮ ಇತಿ ಧರ್ಮವಿದೋ ವಿದುಃ|
12056002c ಮಹಾಂತಮೇತಂ ಭಾರಂ ಚ ಮನ್ಯೇ ತದ್ಬ್ರೂಹಿ ಪಾರ್ಥಿವ||

"ಪಾರ್ಥಿವ! ರಾಜನಿಗೆ ರಾಜ್ಯವೇ ಪರಮ ಧರ್ಮವೆಂದು ಧರ್ಮವನ್ನು
ತಿಳಿದವರು ಹೇಳುತ್ತಾರೆ. ಆದರೆ ಈ ರಾಜಧರ್ಮವು ಅತ್ಯಂತ ದೊಡ್ಡ
ಹೊಣೆಯೆಂದು ನನಗನ್ನಿಸುತ್ತದೆ. ಅದರ ಕುರಿತು ಹೇಳು!

12056003a ರಾಜಧರ್ಮಾನ್ವಿಶೇಷೇಣ ಕಥಯಸ್ವ ಪಿತಾಮಹ|
12056003c ಸರ್ವಸ್ಯ ಜೀವಲೋಕಸ್ಯ ರಾಜಧರ್ಮಾಃ ಪರಾಯಣಮ್||

ಪಿತಾಮಹ! ವಿಶೇಷವಾಗಿ ರಾಜಧರ್ಮಗಳ ಕುರಿತೇ ಹೇಳು! ಲೋಕದ
ಸರ್ವ ಜೀವಿಗಳಿಗೆ ರಾಜಧರ್ಮಗಳೇ ಆಶ್ರಯಸ್ಥಾನವಾಗಿವೆ.

12056004a ತ್ರಿವರ್ಗೋಽತ್ರ ಸಮಾಸಕ್ತೋ ರಾಜಧರ್ಮೇಷು ಕೌರವ|
12056004c ಮೋಕ್ಷಧರ್ಮಶ್ಚ ವಿಸ್ಪಷ್ಟಃ ಸಕಲೋಽತ್ರ ಸಮಾಹಿತಃ||

ಕೌರವ! ರಾಜಧರ್ಮಗಳಲ್ಲಿ ಧರ್ಮ-ಅರ್ಥ-ಕಾಮಗಳೆಂಬ
ತ್ರಿವರ್ಗಗಳೂ ಸೇರಿಕೊಂಡಿವೆ. ಸಕಲ ಮೋಕ್ಷಧರ್ಮವೂ ಇದರಲ್ಲಿಯೇ
ಸೇರಿಕೊಂಡಿದೆ.

12056005a ಯಥಾ ಹಿ ರಶ್ಮಯೋಽಶ್ವಸ್ಯ ದ್ವಿರದಸ್ಯಾಂಕುಶೋ ಯಥಾ|
12056005c ನರೇಂದ್ರಧರ್ಮೋ ಲೋಕಸ್ಯ ತಥಾ ಪ್ರಗ್ರಹಣಂ ಸ್ಮೃತಮ್||

ಕುದುರೆಗಳಿಗೆ ಕಡಿವಾಣಗಳು ಹೇಗೋ ಮತ್ತು ಆನೆಗೆ ಅಂಕುಶವು

ಹೇಗೋ ಹಾಗೆ ರಾಜಧರ್ಮವು ಲೋಕವನ್ನು
ಹತೋಟಿಯಲ್ಲಿಟ್ಟುಕೊಳ್ಳಲು ಅವಶ್ಯಕವೆಂದು ಹೇಳುತ್ತಾರೆ.

12056006a ಅತ್ರ ವೈ ಸಂಪ್ರಮೂಢೇ ತು ಧರ್ಮೇ ರಾಜರ್ಷಿಸೇವಿತೇ|
12056006c ಲೋಕಸ್ಯ ಸಂಸ್ಥಾ ನ ಭವೇತ್ಸರ್ವಂ ಚ ವ್ಯಾಕುಲಂ ಭವೇತ್||

ರಾಜರ್ಷಿಗಳು ನಡೆದುಕೊಂಡು ಬಂದಿರುವ ಈ ಧರ್ಮದ
ವಿಷಯದಲ್ಲಿ ವಿಮೋಹಗೊಂಡರೆ ಲೋಕದ ವ್ಯವಸ್ಥೆಯೇ
ಅಸ್ತವ್ಯಸ್ತವಾಗುತ್ತದೆ. ಎಲ್ಲವೂ ವ್ಯಾಕುಲಗೊಳ್ಳುತ್ತವೆ.

12056007a ಉದಯನ್ಹಿ ಯಥಾ ಸೂರ್ಯೋ ನಾಶಯತ್ಯಾಸುರಂ ತಮಃ|
12056007c ರಾಜಧರ್ಮಾಸ್ತಥಾಲೋಕ್ಯಾಮಾಕ್ಷಿಪಂತ್ಯಶುಭಾಂ ಗತಿಮ್||

ಸೂರ್ಯನು ಉದಯಿಸುತ್ತಿದ್ದಂತೆಯೇ ಅಮಂಗಳಕರ ಕತ್ತಲೆಯು
ನಾಶವಾಗುವಂತೆ ರಾಜಧರ್ಮದಿಂದ ಲೋಕದ ಅಮಂಗಳಕರ
ಅಪ್ರಕಾಶ ಮಾರ್ಗವು ದೂರವಾಗುತ್ತದೆ.

12056008a ತದಗ್ರೇ ರಾಜಧರ್ಮಾಣಾಮರ್ಥತತ್ತ್ವಂ ಪಿತಾಮಹ|
12056008c ಪ್ರಬ್ರೂಹಿ ಭರತಶ್ರೇಷ್ಠ ತ್ವಂ ಹಿ ಬುದ್ಧಿಮತಾಂ ವರಃ||

ಪಿತಾಮಹ! ಭರತಶ್ರೇಷ್ಠ! ನೀನು ಬುದ್ಧಿವಂತರಲ್ಲಿಯೇ
ಶ್ರೇಷ್ಠನಾಗಿರುವೆ! ಆದುದರಿಂದ ಮೊದಲು ನನಗೆ ರಾಜಧರ್ಮಗಳನ್ನು
ತತ್ತ್ವಾರ್ಥಗಳೊಂದಿಗೆ ಹೇಳಿ ತಿಳಿಸು!

12056009a ಆಗಮಶ್ಚ ಪರಸ್ತ್ವತ್ತಃ ಸರ್ವೇಷಾಂ ನಃ ಪರಂತಪ|
12056009c ಭವಂತಂ ಹಿ ಪರಂ ಬುದ್ಧ್ಹಿ ವಾಸುದೇವೋಽಭಿಮನ್ಯತೇ||

ಪರಂತಪ! ಅನಂತರ ಆಗಮಗಳ ತತ್ತ್ವಗಳೆಲ್ಲವನ್ನೂ ಹೇಳು. ನೀನು

ಪರಮ ಬುದ್ಧಿಯುಳ್ಳವನು ಎಂದು ವಾಸುದೇವನ
ಅಭಿಪ್ರಾಯವಾಗಿದೆ!”

12056010 ಭೀಷ್ಮ ಉವಾಚ|
12056010a ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ|
12056010c ಬ್ರಾಹ್ಮಣೇಭ್ಯೋ ನಮಸ್ಕೃತ್ಯ ಧರ್ಮಾನ್ವಕ್ಷ್ಯಾಮಿ ಶಾಶ್ವತಾನ್||

ಭೀಷ್ಮನು ಹೇಳಿದನು: “ಮಹತ್ತರ ಧರ್ಮಕ್ಕೆ ನಮಸ್ಕಾರ! ವಿಶ್ವದ
ಸೃಷ್ಟಿಗೆ ಕಾರಣನಾದ ಕೃಷ್ಣನಿಗೆ ನಮಸ್ಕಾರ! ಬ್ರಾಹ್ಮಣರಿಗೆ
ನಮಸ್ಕರಿಸಿ ಶಾಶ್ವತ ಧರ್ಮಗಳ ಕುರಿತು ಹೇಳುತ್ತೇನೆ.

12056011a ಶೃಣು ಕಾರ್ತ್ಸ್ನ್ಯೇನ ಮತ್ತಸ್ತ್ವಂ ರಾಜಧರ್ಮಾನ್ಯುಧಿಷ್ಠಿರ|
12056011c ನಿರುಚ್ಯಮಾನಾನ್ನಿಯತೋ ಯಚ್ಚಾನ್ಯದಭಿವಾಂಚಸಿ||

ಯುಧಿಷ್ಠಿರ! ನನ್ನಿಂದ ರಾಜಧರ್ಮಗಳ ಕುರಿತು ಸಂಪೂರ್ಣವಾಗಿ
ಕೇಳು. ನಾನು ಹೇಳುವಾಗ ಕೂಡ ಮಧ್ಯದಲ್ಲಿ ನೀನು ಬೇಕಾದ
ಪ್ರಶ್ನೆಗಳನ್ನು ಕೇಳಬಹುದು!

12056012a ಆದಾವೇವ ಕುರುಶ್ರೇಷ್ಠ ರಾಜ್ಞಾ ರಂಜನಕಾಮ್ಯಯಾ|
12056012c ದೇವತಾನಾಂ ದ್ವಿಜಾನಾಂ ಚ ವರ್ತಿತವ್ಯಂ ಯಥಾವಿಧಿ||

ಕುರುಶ್ರೇಷ್ಠ! ಮೊಟ್ಟಮೊದಲನೆಯದಾಗಿ ರಾಜನು ಯಥಾವಿಧಿಯಾಗಿ
ದೇವತೆಗಳನ್ನು ಮತ್ತು ದ್ವಿಜರನ್ನು ತೃಪ್ತಿಗೊಳಿಸುವಂತೆ
ನಡೆದುಕೊಳ್ಳಬೇಕು.

12056013a ದೈವತಾನ್ಯರ್ಚಯಿತ್ವಾ ಹಿ ಬ್ರಾಹ್ಮಣಾಂಶ್ಚ ಕುರೂದ್ವಹ|
12056013c ಆನೃಣ್ಯಂ ಯಾತಿ ಧರ್ಮಸ್ಯ ಲೋಕೇನ ಚ ಸ ಮಾನ್ಯತೇ||

ಕುರೂದ್ವಹ! ದೇವತೆಗಳನ್ನು ಮತ್ತು ಬ್ರಾಹ್ಮಣರನ್ನು ಅರ್ಚಿಸಿದ ರಾಜನು ಧರ್ಮದ ಋಣದಿಂದ ಮುಕ್ತನಾಗುತ್ತಾನೆ ಮತ್ತು ಲೋಕದಲ್ಲಿ ಮಾನ್ಯನಾಗುತ್ತಾನೆ.

12056014a ಉತ್ಥಾನೇ ಚ ಸದಾ ಪುತ್ರ ಪ್ರಯತೇಥಾ ಯುಧಿಷ್ಠಿರ|
12056014c ನ ಹ್ಯುತ್ಥಾನಮೃತೇ ದೈವಂ ರಾಜ್ಞಾಮರ್ಥಪ್ರಸಿದ್ಧಯೇ||

ಮಗೂ ಯುಧಿಷ್ಠಿರ! ಸದಾ ಪುರುಷಾರ್ಥಗಳ ಸಿದ್ಧಿಗಾಗಿ ಪ್ರಯತ್ನಶೀಲನಾಗಿರಬೇಕು! ಪುರುಷಪ್ರಯತ್ನವಿಲ್ಲದೇ ರಾಜರಿಗೆ ಕೇವಲ ದೈವವು ಮಾತ್ರ ಪುರುಷಾರ್ಥಗಳನ್ನು ಅನುಗ್ರಹಿಸುವುದಿಲ್ಲ.

12056015a ಸಾಧಾರಣಂ ದ್ವಯಂ ಹ್ಯೇತದ್ದೈವಮುತ್ಥಾನಮೇವ ಚ|
12056015c ಪೌರುಷಂ ಹಿ ಪರಂ ಮನ್ಯೇ ದೈವಂ ನಿಶ್ಚಿತ್ಯಮುಚ್ಯತೇ||

ಸಾಧಾರಣವಾಗಿ ಅದೃಷ್ಟ ಮತ್ತು ಪುರುಷಪ್ರಯತ್ನ ಇವೆರಡೂ ಕಾರ್ಯದ ಸಿದ್ಧಿಗೆ ಕಾರಣಗಳೆನಿಸಿಕೊಳ್ಳುತ್ತವೆ. ಆದರೆ ಇವೆರಡರಲ್ಲಿ ಪುರುಷಪ್ರಯತ್ನವೇ ಶ್ರೇಷ್ಠವೆಂದು ನನಗನ್ನಿಸುತ್ತದೆ. ಏಕೆಂದರೆ ಅದೃಷ್ಟವು ಮೊದಲೇ ನಿಶ್ಚಿತವಾಗಿಬಿಟ್ಟಿರುತ್ತದೆ.

12056016a ವಿಪನ್ನೇ ಚ ಸಮಾರಂಭೇ ಸಂತಾಪಂ ಮಾ ಸ್ಮ ವೈ ಕೃಥಾಃ|
12056016c ಘಟತೇ ವಿನಯಸ್ತಾತ ರಾಜ್ಞಾಮೇಷ ನಯಃ ಪರಃ||

ಮಗೂ! ಪ್ರಾರಂಭಿಸಿದ ಕಾರ್ಯವು ಸಿದ್ಧಿಯಾಗದಿದ್ದರೂ ಸಂತಾಪಪಡಬಾರದು. ಒಂದು ಉಪಾಯವು ಫಲಿಸದಿದ್ದರೆ ಇನ್ನೊಂದು ಉಪಾಯವನ್ನು ಬಳಸಬೇಕಾಗುತ್ತದೆ.

12056017a ನ ಹಿ ಸತ್ಯಾದೃತೇ ಕಿಂ ಚಿದ್ರಾಜ್ಞಾಂ ವೈ ಸಿದ್ಧಿಕಾರಣಮ್|

12056017c ಸತ್ಯೇ ಹಿ ರಾಜಾ ನಿರತಃ ಪ್ರೇತ್ಯ ಚೇಹ ಚ ನಂದತಿ||

ಸತ್ಯವನ್ನು ಬಿಟ್ಟು ಬೇರೆ ಯಾವುದೂ ರಾಜನ ಸಿದ್ಧಿಗೆ
ಕಾರಣವಾಗುವುದಿಲ್ಲ. ಸತ್ಯದಲ್ಲಿಯೇ ನಿರತನಾದ ರಾಜನು
ಇಹದಲ್ಲಿಯೂ ಪರದಲ್ಲಿಯೂ ಸುಖವನ್ನು ಅನುಭವಿಸುತ್ತಾನೆ.

12056018a ಋಷೀಣಾಮಪಿ ರಾಜೇಂದ್ರ ಸತ್ಯಮೇವ ಪರಂ ಧನಮ್|
12056018c ತಥಾ ರಾಜ್ಞಃ ಪರಂ ಸತ್ಯಾನ್ನಾನ್ಯದ್ವಿಶ್ವಾಸಕಾರಣಮ್||

ರಾಜೇಂದ್ರ! ಋಷಿಗಳಿಗೆ ಕೂಡ ಸತ್ಯವೇ ಪರಮ ಧನವು. ಹಾಗೆಯೇ
ರಾಜರಿಗೆ ಸತ್ಯವನ್ನು ಬಿಟ್ಟರೆ ಬೇರೆ ಯಾವುದೂ ಪ್ರಜೆಗಳ ವಿಶ್ವಾಸಕ್ಕೆ
ಕಾರಣವಾಗುವುದಿಲ್ಲ.

12056019a ಗುಣವಾನ್ಶೀಲವಾನ್ದಾಂತೋ ಮೃದುರ್ಧರ್ಮ್ಯೋ ಜಿತೇಂದ್ರಿಯಃ|
12056019c ಸುದರ್ಶಃ ಸ್ಥೂಲಲಕ್ಷ್ಯಶ್ಚ ನ ಭ್ರಶ್ಯೇತ ಸದಾ ಶ್ರಿಯಃ||

ಗುಣವಂತನೂ, ಶೀಲವಂತನೂ, ಇಂದ್ರಿಯಗಳನ್ನು
ಹತೋಟಿಯಲ್ಲಿಟ್ಟುಕೊಂಡಿರುವವನೂ, ವೃದುಸ್ವಭಾವದವನೂ,
ದಾನಮಾಡುವ ಉದಾರಬುದ್ಧಿಯುಳ್ಳವನೂ, ಸ್ಥೂಲಲಕ್ಷ್ಯನೂ ಆದ
ರಾಜನು ಯಾವಾಗಲೂ ಶ್ರೀಯಿಂದ ಭ್ರಷ್ಟನಾಗುವುದಿಲ್ಲ.

12056020a ಆರ್ಜವಂ ಸರ್ವಕಾರ್ಯೇಷು ಶ್ರಯೇಥಾಃ ಕುರುನಂದನ|
12056020c ಪುನರ್ನಯವಿಚಾರೇಣ ತ್ರಯೀಸಂವರಣೇನ ಚ||

ಕುರುನಂದನ! ಸರ್ವಕಾರ್ಯಗಳಲ್ಲಿ ಸರಳತೆಯನ್ನು ಬಳಸಬೇಕು.
ಆದರೆ ನೀತಿಶಾಸ್ತ್ರದ ಪರಾಮರ್ಶೆಯಂತೆ ಮೂರನ್ನು[144] ಮಾತ್ರ

[144] ತನ್ನಲ್ಲಿರುವ ನ್ಯೂನತೆಗಳು, ಸೇನಾಪತಿಗಳೊಡನೆ ಮಾಡುವ ಗುಪ್ತ

ಗುಟ್ಟಾಗಿಡಬೇಕು.

12056021a ಮೃದುರ್ಹಿ ರಾಜಾ ಸತತಂ ಲಂಘ್ಯೋ ಭವತಿ ಸರ್ವಶಃ|
12056021c ತೀಕ್ಷ್ಣಾಚ್ಚೋದ್ವಿಜತೇ ಲೋಕಸ್ತಸ್ಮಾದುಭಯಮಾಚರ||

ರಾಜನು ಮೃದುಸ್ವಭಾವದವನಾಗಿರಬೇಕು. ಆದರೆ ಎಲ್ಲ ಸಂದರ್ಭಗಳಲ್ಲಿಯೂ ಮೃದುವಾಗಿದ್ದರೆ ಎಲ್ಲರೂ ಅವನನ್ನು ಉಲ್ಲಂಘಿಸಬಹುದು. ಹೀಗೆಂದು ರಾಜನು ಸದಾ ಕ್ರೂರಿಯೂ ಆಗಿರಬಾರದು. ಸರ್ವದಾ ಕ್ರೂರಿಯಾಗಿದ್ದರೆ ಜನರು ಉದ್ವಿಗ್ನರಾಗುತ್ತಾರೆ.

12056022a ಅದಂಡ್ಯಾಶ್ಚೈವ ತೇ ನಿತ್ಯಂ ವಿಪ್ರಾಃ ಸ್ಯುರ್ದದತಾಂ ವರ|
12056022c ಭೂತಮೇತತ್ಪರಂ ಲೋಕೇ ಬ್ರಾಹ್ಮಣಾ ನಾಮ ಭಾರತ||

ಭಾರತ! ದಾನಿಗಳಲ್ಲಿ ಶ್ರೇಷ್ಠನೇ! ನೀನು ಎಂದೂ ಬ್ರಾಹ್ಮಣರನ್ನು ದಂಡಿಸಬಾರದು. ಏಕೆಂದರೆ ಬ್ರಾಹ್ಮಣನೆಂಬುವನೇ ಲೋಕದ ಜೀವಿಗಳಲ್ಲಿ ಶ್ರೇಷ್ಠನು.

12056023a ಮನುನಾ ಚಾಪಿ ರಾಜೇಂದ್ರ ಗೀತೌ ಶ್ಲೋಕೌ ಮಹಾತ್ಮನಾ|
12056023c ಧರ್ಮೇಷು ಸ್ವೇಷು ಕೌರವ್ಯ ಹೃದಿ ತೌ ಕರ್ತುಮರ್ಹಸಿ||

ರಾಜೇಂದ್ರ! ಕೌರವ್ಯ! ಈ ಧರ್ಮದ ಕುರಿತು ಮನುವು ಈ ಎರಡು ಶ್ಲೋಕಗಳನ್ನು ಹೇಳಿದ್ದಾನೆ. ಇವೆರಡನ್ನು ನೀನು ಹೃದ್ಗತಮಾಡಿಕೊಳ್ಳಬೇಕು.

ಸಮಾಲೋಚನೆಗಳು ಮತ್ತು ಶತ್ರುಪಕ್ಷದಲ್ಲಿರುವ ನ್ಯೂನತೆಗಳನ್ನು ಕಂಡುಹಿಡಿಯುವ ಉಪಾಯಗಳು – ಈ ಮೂರನ್ನು ಗೌಪ್ಯವಾಗಿಡಬೇಕು.

12056024a ಅದ್ಭ್ಯೋಽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್।
12056024c ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ॥

“ಅಗ್ನಿಯು ನೀರಿನಿಂದ, ಕ್ಷತ್ರಿಯನು ಬ್ರಾಹ್ಮಣನಿಂದ ಮತ್ತು ಲೋಹವು ಕಲ್ಲಿನಿಂದ ಹುಟ್ಟಿವೆ. ಸರ್ವತ್ರವೂ ತಮ್ಮ ತೇಜಸ್ಸನ್ನು ಬೀರುವ ಅಗ್ನಿ, ಕ್ಷತ್ರಿಯ ಮತ್ತು ಲೋಹಗಳು ಅವುಗಳ ಜನ್ಮಸ್ಥಾನಗಳಲ್ಲಿ ಪ್ರಭಾವ ಬೀರುವುದಿಲ್ಲ ಮಾತ್ರವಲ್ಲದೇ ಅವುಗಳಲ್ಲಿ ವಿನಾಶವನ್ನೇ ಹೊಂದುತ್ತವೆ.

12056025a ಅಯೋ ಹಂತಿ ಯದಾಶ್ಮಾನಮಗ್ನಿಶ್ಚಾಪೋಽಭಿಪದ್ಯತೇ।
12056025c ಬ್ರಹ್ಮ ಚ ಕ್ಷತ್ರಿಯೋ ದ್ವೇಷ್ಟಿ ತದಾ ಸೀದಂತಿ ತೇ ತ್ರಯಃ॥

ಕಲ್ಲನ್ನು ಒಡೆಯಲು ಹೋದ ಲೋಹವು ಮೊಂಡಾಗುತ್ತದೆ. ನೀರನ್ನು ಸುಡಲು ಹೋದರೆ ಅಗ್ನಿಯೇ ಆರಿಹೋಗುತ್ತದೆ. ಕ್ಷತ್ರಿಯನು ಬ್ರಾಹ್ಮಣನನ್ನು ದ್ವೇಷಿಸಿದರೆ ನಾಶವಾಗುತ್ತಾನೆ. ಹೀಗೆ ಈ ಮೂರೂ ನಾಶಹೊಂದುತ್ತವೆ.”

12056026a ಏತಜ್ಞಾತ್ವಾ ಮಹಾರಾಜ ನಮಸ್ಯಾ ಏವ ತೇ ದ್ವಿಜಾಃ।
12056026c ಭೌಮಂ ಬ್ರಹ್ಮ ದ್ವಿಜಶ್ರೇಷ್ಠಾ ಧಾರಯಂತಿ ಶಮಾನ್ವಿತಾಃ॥

ಮಹಾರಾಜ! ಇದನ್ನು ಅರಿತುಕೊಂಡು ನೀನು ದ್ವಿಜರ ಕುರಿತು ಪೂಜ್ಯಭಾವವನ್ನೇ ತಾಳಿಕೊಂಡಿರಬೇಕು. ಶಮಾನ್ವಿತರಾದ ಬ್ರಾಹ್ಮಣರು ಭೂಮಿಯಲ್ಲಿ ಬ್ರಹ್ಮವನ್ನೇ ಧರಿಸಿಕೊಂಡಿರುತ್ತಾರೆ.

12056027a ಏವಂ ಚೈವ ನರವ್ಯಾಘ್ರ ಲೋಕತಂತ್ರವಿಘಾತಕಾಃ।
12056027c ನಿಗ್ರಾಹ್ಯಾ ಏವ ಸತತಂ ಬಾಹುಭ್ಯಾಂ ಯೇ ಸ್ಯುರೀದೃಶಾಃ॥

ನರವ್ಯಾಘ್ರ! ಆದರೆ ಬ್ರಾಹ್ಮಣರು ಲೋಕತಂತ್ರವನ್ನು

ನಾಶಗೊಳಿಸುವವರಾಗಿದ್ದರೆ ಅವರನ್ನು ಸತತವಾಗಿ ಬಾಹುಬಲದಿಂದ ನಿಗ್ರಹಿಸಬೇಕು.

12056028a ಶ್ಲೋಕೌ ಚೋಶನಸಾ ಗೀತೌ ಪುರಾ ತಾತ ಮಹರ್ಷಿಣಾ|
12056028c ತೌ ನಿಬೋಧ ಮಹಾಪ್ರಾಜ್ಞ ತ್ವಮೇಕಾಗ್ರಮನಾ ನೃಪ||

ಮಗೂ! ನೃಪ! ಮಹಾಪ್ರಾಜ್ಞ! ಇದರ ಕುರಿತಾಗಿ ಹಿಂದೆ ಮಹರ್ಷಿ ಉಶನಸನು ಈ ಎರಡು ಶ್ಲೋಕ ಗೀತೆಗಳನ್ನು ರಚಿಸಿದ್ದಾನೆ. ಅವುಗಳನ್ನು ಏಕಾಗ್ರಚಿತ್ತನಾಗಿ ಕೇಳು!

12056029a ಉದ್ಯಮ್ಯ ಶಸ್ತ್ರಮಾಯಾಂತಮಪಿ ವೇದಾಂತಗಂ ರಣೇ|
12056029c ನಿಗೃಹ್ಣೀಯಾತ್ಸ್ವಧರ್ಮೇಣ ಧರ್ಮಾಪೇಕ್ಷೀ ನರೇಶ್ವರಃ||

“ಶಸ್ತ್ರಗಳನ್ನೆತ್ತಿ ವೇದಾಂತಗನು ರಣದಲ್ಲಿ ಬಂದರೆ ಧರ್ಮಾಪೇಕ್ಷೀ ನರೇಶ್ವರನು ಸ್ವಧರ್ಮವನ್ನನುಸರಿಸಿ ಅವನನ್ನು ಸಂಹರಿಸಬೇಕು.

12056030a ವಿನಶ್ಯಮಾನಂ ಧರ್ಮಂ ಹಿ ಯೋ ರಕ್ಷತಿ ಸ ಧರ್ಮವಿತ್|
12056030c ನ ತೇನ ಭ್ರೂಣಹಾ ಸ ಸ್ಯಾನ್ಮನ್ಯುಸ್ತಂ ಮನುಮೃಚ್ಛತಿ||

ವಿನಾಶವಾಗುತ್ತಿರುವ ಧರ್ಮವನ್ನು ರಕ್ಷಿಸುವವನೇ ಧರ್ಮವಿದುವು. ಆಗ ರಾಜನು ಆ ಬ್ರಾಹ್ಮಣನನ್ನು ಕೊಂದಂತಾಗುವುದಿಲ್ಲ. ಕೋಪವೇ ಬ್ರಾಹ್ಮಣನ ನಾಶಕ್ಕೆ ಕಾರಣವೆನಿಸುತ್ತದೆ.”

12056031a ಏವಂ ಚೈವ ನರಶ್ರೇಷ್ಠ ರಕ್ಷ್ಯಾ ಏವ ದ್ವಿಜಾತಯಃ|
12056031c ಸ್ವಪರಾದ್ಧಾನಪಿ ಹಿ ತಾನ್ವಿಷಯಾಂತೇ ಸಮುತ್ಸೃಜೇತ್||

ನರಶ್ರೇಷ್ಠ! ಹೀಗಿದ್ದರೂ ಬ್ರಾಹ್ಮಣರನ್ನು ರಕ್ಷಿಸಲೇ ಬೇಕು. ಅಪರಾಧವನ್ನೆಸಗಿದ ಬ್ರಾಹ್ಮಣನನ್ನು ರಾಜ್ಯದಿಂದ ಗಡಿಪಾರು

ಮಾಡಬೇಕು.

12056032a ಅಭಿಶಸ್ತಮಪಿ ಹ್ಯೇಷಾಂ ಕೃಪಾಯೀತ ವಿಶಾಂ ಪತೇ|
12056032c ಬ್ರಹ್ಮಘ್ನೇ ಗುರುತಲ್ಪೇ ಚ ಭ್ರೂಣಹತ್ಯೇ ತಥೈವ ಚ||
12056033a ರಾಜದ್ವಿಷ್ಟೇ ಚ ವಿಪ್ರಸ್ಯ ವಿಷಯಾಂತೇ ವಿಸರ್ಜನಮ್|
12056033c ವಿಧೀಯತೇ ನ ಶಾರೀರಂ ಭಯಮೇಷಾಂ ಕದಾ ಚನ||

ವಿಶಾಂಪತೇ! ಮಹಾಪಾಪಿಗಳಾದ ಬ್ರಾಹ್ಮಣರ ಮೇಲೂ ಕೃಪೆಯನ್ನೇ ತೋರಬೇಕು. ಬ್ರಹ್ಮಹತ್ಯೆ ಮಾಡಿದ, ಗುರುಪತ್ನೀಸಮಾಗಮ ಮಾಡಿದ, ಭ್ರೂಣಹತ್ಯೆ ಮಾಡಿದ ಮತ್ತು ರಾಜದ್ರೋಹವನ್ನೆಸಗಿದ ವಿಪ್ರನನ್ನು ರಾಜ್ಯದ ಹೊರಗೆ ಕಳುಹಿಸಬೇಕು. ಶಾರೀರಕ ಶಿಕ್ಷೆಯ ಭಯವನ್ನು ಮಾತ್ರ ಯಾವಾಗಲೂ ವಿಧಿಸಬಾರದು.

12056034a ದಯಿತಾಶ್ಚ ನರಾಸ್ತೇ ಸ್ಯುರ್ನಿತ್ಯಂ ಪುರುಷಸತ್ತಮ[145]|
12056034c ನ ಕೋಶಃ ಪರಮೋ ಹ್ಯನ್ಯೋ ರಾಜ್ಞಾಂ ಪುರುಷಸಂಚಯಾತ್||

ಪುರುಷಸತ್ತಮ! ಅಂಥವನು ನಿತ್ಯವೂ ಜನರ ಪ್ರಿಯನಾಗಿರುತ್ತಾನೆ. ರಾಜನಾದವನಿಗೆ ಪ್ರಜೆಗಳ ಪ್ರೀತಿಸಂಚಯವೇ ಉತ್ತಮ ಧನಸಂಗ್ರಹವೆಂದು ಭಾವಿಸಬೇಕು.

12056035a ದುರ್ಗೇಷು ಚ ಮಹಾರಾಜ ಷಟ್ಸು ಯೇ ಶಾಸ್ತ್ರನಿಶ್ಚಿತಾಃ|
12056035c ಸರ್ವೇಷು ತೇಷು ಮನ್ಯಂತೇ ನರದುರ್ಗಂ ಸುದುಸ್ತರಮ್||

---

[145] ದಯಿತಾಶ್ಚ ನರಾಸ್ತೇ ಸ್ಯುರ್ಭಕ್ತಿಮಂತೋ ದ್ವಿಜೇಷು ಯೇ| ಅರ್ಥಾತ್: ಬ್ರಾಹ್ಮಣರಲ್ಲಿ ಭಕ್ತಿಭಾವವುಳ್ಳ ರಾಜರು ಪ್ರಜೆಗಳಿಗೂ ಪ್ರೀತಿಪಾತ್ರರಾಗಿರುತ್ತಾರೆ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಮಹಾರಾಜ! ಆರು ದುರ್ಗ[146]ಗಳಲ್ಲಿ ಮನುಷ್ಯದುರ್ಗವೇ ಎಲ್ಲ ದುರ್ಗಗಳಿಗಿಂತ ದುಸ್ತರವಾದುದೆಂದು ಶಾಸ್ತ್ರನಿಶ್ಚಿತವಾಗಿದೆ.

12056036a ತಸ್ಮಾನ್ನಿತ್ಯಂ ದಯಾ ಕಾರ್ಯಾ ಚಾತುರ್ವರ್ಣ್ಯೇ ವಿಪಶ್ಚಿತಾ|
12056036c ಧರ್ಮಾತ್ಮಾ ಸತ್ಯವಾಕ್ಚೈವ ರಾಜಾ ರಂಜಯತಿ ಪ್ರಜಾಃ||

ಆದುದರಿಂದ ರಾಜನು ನಿತ್ಯವೂ ಚಾತುರ್ವರ್ಣ್ಯಗಳ ಮೇಲೆ ದಯಾಪರನಾಗಿರಬೇಕು. ಸತ್ಯವಾಕ್ಯ ಧರ್ಮಾತ್ಮ ರಾಜನು ಪ್ರಜೆಗಳನ್ನು ರಂಜಿಸುತ್ತಾನೆ.

12056037a ನ ಚ ಕ್ಷಾಂತೇನ ತೇ ಭಾವ್ಯಂ ನಿತ್ಯಂ ಪುರುಷಸತ್ತಮ|
12056037c ಅಧರ್ಮ್ಯೋ ಹಿ ಮೃದೂ ರಾಜಾ ಕ್ಷಮಾವಾನಿವ ಕುಂಜರಃ||

ಪುರುಷಸತ್ತಮ! ಆದರೆ ನೀನು ನಿತ್ಯವೂ ಕ್ಷಮಾವಂತನಾಗಿರಕೂಡದು. ಮೃದುವಾಗಿರುವುದು ಆನೆಗೆ ಹೇಗೋ ಹಾಗೆ ಸದಾ ಕ್ಷಮಾವಂತನಾಗಿರುವುದು ರಾಜನಿಗೂ ಅಧರ್ಮ.

12056038a ಬಾರ್ಹಸ್ಪತ್ಯೇ ಚ ಶಾಸ್ತ್ರೇ ವೈ ಶ್ಲೋಕಾ ವಿನಿಯತಾಃ ಪುರಾ|
12056038c ಅಸ್ಮಿನ್ನರ್ಥೇ ಮಹಾರಾಜ ತನ್ಮೇ ನಿಗದತಃ ಶೃಣು||

ಮಹಾರಾಜ! ಇದೇ ಅರ್ಥಕೊಡುವ ಶ್ಲೋಕಗಳನ್ನು ಹಿಂದೆ ಬೃಹಸ್ಪತಿಯು ತನ್ನ ಶಾಸ್ತ್ರದಲ್ಲಿ ಹೇಳಿದ್ದನು. ಅದನ್ನು ಪುನಃ ಕೇಳು.

12056039a ಕ್ಷಮಮಾಣಂ ನೃಪಂ ನಿತ್ಯಂ ನೀಚಃ ಪರಿಭವೇಜ್ಜನಃ|
12056039c ಹಸ್ತಿಯಂತಾ ಗಜಸ್ಯೇವ ಶಿರ ಏವಾರುರುಕ್ಷತಿ||

---

[146] ಮರುಭೂಮಿ, ನೀರು, ಪೃಥ್ವೀ, ಅರಣ್ಯ, ಪರ್ವತ ಮತ್ತು ಮನುಷ್ಯ – ಇವುಗಳೇ ಆರು ದುರ್ಗಗಳು.

“ಮಾವಟಿಗನು ಆನೆಯ ಶಿರವನ್ನೇ ಏರಿ ಕುಳಿತುಕೊಳ್ಳುವಂತೆ
ಕ್ಷಮಾವಂತನಾದ ನೃಪನನ್ನು ನೀಚ ಜನರು ನಿತ್ಯವೂ
ತಿರಸ್ಕರಿಸುತ್ತಿರುತ್ತಾರೆ.”

12056040a ತಸ್ಮಾನ್ನೈವ ಮೃದುರ್ನಿತ್ಯಂ ತೀಕ್ಷ್ಣೋ ವಾಪಿ ಭವೇನ್ನೃಪಃ|
12056040c ವಸಂತೇಽರ್ಕ ಇವ ಶ್ರೀಮಾನ್ನ ಶೀತೋ ನ ಚ ಘರ್ಮದಃ||

ವಸಂತ ಋತುವಿನಲ್ಲಿ ಶ್ರೀಮಾನ್ ಸೂರ್ಯನು ಅತ್ಯಂತ ಶೀತಲನೂ
ಪ್ರಖರನೂ ಆಗಿರುವುದಿಲ್ಲವೋ ಹಾಗೆ ನೃಪನೂ ಕೂಡ ನಿತ್ಯವೂ
ಅತ್ಯಂತ ಮೃದುವಾಗಿಯೂ ತೀಕ್ಷ್ಣನಾಗಿಯೂ ಇರಬಾರದು.

12056041a ಪ್ರತ್ಯಕ್ಷೇಣಾನುಮಾನೇನ ತಥೌಪಮ್ಯೋಪದೇಶತಃ|
12056041c ಪರೀಕ್ಷ್ಯಾಸ್ತೇ ಮಹಾರಾಜ ಸ್ವೇ ಪರೇ ಚೈವ ಸರ್ವದಾ||

ಮಹಾರಾಜ! ಪ್ರತ್ಯಕ್ಷ್ಯ[147], ಅನುಮಾನ[148], ಉಪಮಾನ[149] ಮತ್ತು
ಉಪದೇಶ[150]ಗಳಿಂದ ಸರ್ವದಾ ತನ್ನವರು ಯಾರು ಮತ್ತು ಶತ್ರುಗಳು
ಯಾರು ಎನ್ನುವುದನ್ನು ಪರೀಕ್ಷಿಸುತ್ತಿರಬೇಕು.

12056042a ವ್ಯಸನಾನಿ ಚ ಸರ್ವಾಣಿ ತ್ಯಜೇಥಾ ಭೂರಿದಕ್ಷಿಣ|
12056042c ನ ಚೈವ ನ ಪ್ರಯುಂಜೀತ ಸಂಗಂ ತು ಪರಿವರ್ಜಯೇತ್||

---

147 ಪ್ರತ್ಯಕ್ಷ ಪ್ರಮಾಣವೆಂದರೆ ಉಪಕಾರ-ಅಪಕಾರಾದಿಗಳು.

148 ಅನುಮಾನವೆಂದರೆ ನೇತ್ರವಕ್ತ್ರವಿಕಾರೇಣ ಜ್ಞಾಯತೇಽಂತರ್ಗತಂ ಮನಃ – ಕಣ್ಣು, ಮುಖಗಳ ವಿಕಾರದಿಂದಲೇ ಮನಸ್ಸಿನ ಇಂಗಿತವನ್ನು ತಿಳಿಯುವುದು.

149 ಉಪಮಾನ ಪ್ರಮಾಣವೆಂದರೆ ಹೋಲಿಕೆಯಿಂದ ವಿಷಯಗಳನ್ನು ತಿಳಿಯುವುದು.

150 ಉಪದೇಶವೆಂದರೆ ಆಪ್ತರು ಹೇಳುವ ಮಾತುಗಳಿಂದ ನಿರ್ಧರಿಸುವುದು.

ಭೂರಿದಕ್ಷಿಣ! ಎಲ್ಲ ವ್ಯಸನಗಳನ್ನೂ[151] ತ್ಯಜಿಸಿಬಿಡಬೇಕು. ಆದರೆ ಇವುಗಳಲ್ಲಿ ಕೆಲವನ್ನು ಕೆಲವು ಸಮಯಗಳಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಅವುಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡಿರಬಾರದು.

12056043a ನಿತ್ಯಂ ಹಿ ವ್ಯಸನೀ ಲೋಕೇ ಪರಿಭೂತೋ ಭವತ್ಯುತ|
12056043c ಉದ್ವೇಜಯತಿ ಲೋಕಂ ಚಾಪ್ಯತಿದ್ವೇಷೀ ಮಹೀಪತಿಃ||

ನಿತ್ಯವೂ ವ್ಯಸನಿಯಾಗಿದ್ದುಕೊಂಡು ಬೇರೆಯವರನ್ನು ಸದಾ ದ್ವೇಷಿಸುತ್ತಾ ಲೋಕವನ್ನೇ ಉದ್ವೇಗಗೊಳಿಸುವ ರಾಜನು ಜನರ ತಿರಸ್ಕಾರಕ್ಕೆ ಪಾತ್ರನಾಗುತ್ತಾನೆ.

---

[151] ವ್ಯಸನಗಳು ಹದಿನೆಂಟು. ಕಾಮಜ ವ್ಯಸನಗಳು ಹತ್ತು ಮತ್ತು ಕ್ರೋಧಜ ವ್ಯಸನಗಳು ಎಂಟು. ಬೇಟೆಯಾಡುವುದು, ಜೂಜಾಡುವುದು, ಹಗಲಿನಲ್ಲಿ ಮಲಗುವುದು, ಇತರರನ್ನು ಯಾವಾಗಲೂ ನಿಂದಿಸುತ್ತಿರುವುದು, ಸರ್ವದ ಸ್ತ್ರೀ-ಸಹವಾಸದಲ್ಲಿಯೇ ಇರುವುದು, ಮದದಿಂದ ಕೊಬ್ಬಿರುವವನಂತೆ ವ್ಯವಹರಿಸುವುದು, ವಾದ್ಯ-ಗೀತ-ನೃತ್ಯಗಳಲ್ಲಿಯೇ ಸರ್ವದಾ ಆಸಕ್ತನಾಗಿರುವುದು, ಮತ್ತು ಸುರಾಪಾನಮಾಡುವುದು – ಇವು ಹತ್ತು ಕಾಮಜ ವ್ಯಸನಗಳು. ಚಾಡಿಕೋರತನ, ಸಾಹಸ, ದ್ರೋಹ, ಈರ್ಷ್ಯೆ, ಇತರರಲ್ಲಿ ದೋಷವನ್ನೆಣಿಸುವುದು, ಪುರುಷಾರ್ಥಗಳನ್ನು ದೂಷಿಸುವುದು, ಕಠಿನವಾದ ಮಾತು, ಉಗ್ರವಾದ ಶಿಕ್ಷೆಯನ್ನು ವಿಧಿಸುವುದ್ – ಇವು ಎಂಟೂ ಕ್ರೋಧಜ ವ್ಯಸನಗಳು. ಮೃಗಯಾಕ್ಷಾ ದಿವಾಸ್ವಾಪಃ ಪರಿವಾರಸ್ತ್ರಿಯೋಮದಃ| ತೌರ್ಯತ್ರಿಕಂ ವೃಥಾ ಪಾನಂ ಕಾಮಜೋ ದಶಮೋ ಗುಣಃ|| ಪೈಶುನ್ಯಂ ಸಾಹಸಂ ಕ್ರೋಧಂ ಈರ್ಷ್ಯಾಸೂಯಾರ್ಥದೂಷಣಮ್| ವಾಗ್ದಂಡಜಂ ಚ ಪಾರುಷ್ಯಂ ಕ್ರೋಧಜೋsಷ್ಟಗುಣೋsಷ್ಟಕಃ||

12056044a ಭವಿತವ್ಯಂ ಸದಾ ರಾಜ್ಞಾ ಗರ್ಭಿಣೀಸಹಧರ್ಮಿಣಾ|
12056044c ಕಾರಣಂ ಚ ಮಹಾರಾಜ ಶೃಣು ಯೇನೇದಮಿಷ್ಯತೇ||

ಮಹಾರಾಜ! ರಾಜನಾದವನು ಸದಾ ಗರ್ಭಿಣೀ ಸ್ತ್ರೀಯಂತೆ
ವ್ಯವಹರಿಸಬೇಕು. ಇದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು.

12056045a ಯಥಾ ಹಿ ಗರ್ಭಿಣೀ ಹಿತ್ವಾ ಸ್ವಂ ಪ್ರಿಯಂ ಮನಸೋಽನುಗಮ್|
12056045c ಗರ್ಭಸ್ಯ ಹಿತಮಾಧತ್ತೇ ತಥಾ ರಾಜ್ಞಾಪ್ಯಸಂಶಯಮ್||
12056046a ವರ್ತಿತವ್ಯಂ ಕುರುಶ್ರೇಷ್ಠ ನಿತ್ಯಂ ಧರ್ಮಾನುವರ್ತಿನಾ|
12056046c ಸ್ವಂ ಪ್ರಿಯಂ ಸಮಭಿತ್ಯಜ್ಯ ಯದ್ಯಲ್ಲೋಕಹಿತಂ ಭವೇತ್||

ಕುರುಶ್ರೇಷ್ಠ! ಗರ್ಭಿಣೀ ಸ್ತ್ರೀಯು ಹೇಗೆ ತನ್ನ ಮನೋಕಾಮನೆಗಳನ್ನು
ದೂರೀಕರಿಸಿ ಗರ್ಭಸ್ಥವಾಗಿರುವ ಶಿಶುವಿನ ಹಿತದಲ್ಲಿಯೇ
ಆಸಕ್ತಳಾಗಿರುವಳೋ ಹಾಗೆ ರಾಜನೂ ಕೂಡ ನಿಸ್ಸಂಶಯವಾಗಿ ತನ್ನ
ಸಂತೋಷವನ್ನು ದೂರೀಕರಿಸಿ ಲೋಕಹಿತಕ್ಕಾಗಿ ನಿತ್ಯವೂ
ಧರ್ಮನಿರತನಾಗಿರಬೇಕು.

12056047a ನ ಸಂತ್ಯಾಜ್ಯಂ ಚ ತೇ ಧೈರ್ಯಂ ಕದಾ ಚಿದಪಿ ಪಾಂಡವ|
12056047c ಧೀರಸ್ಯ ಸ್ಪಷ್ಟದಂಡಸ್ಯ ನ ಹ್ಯಾಜ್ಞಾ ಪ್ರತಿಹನ್ಯತೇ||

ಪಾಂಡವ! ರಾಜನು ಎಂದೂ ತನ್ನ ಧೈರ್ಯವನ್ನು ತೊರೆಯಬಾರದು.
ಧೀರನಾದ ಮತ್ತು ಸ್ಪಷ್ಟವಾದ ಶಿಕ್ಷೆಯನ್ನು ನೀಡುವವನ ಆಜ್ಞೆಗಳನ್ನು
ಯಾರೂ ಉಲ್ಲಂಘಿಸುವುದಿಲ್ಲ.

12056048a ಪರಿಹಾಸಶ್ಚ ಭೃತ್ಯೈಸ್ತೇ ನ ನಿತ್ಯಂ ವದತಾಂ ವರ|
12056048c ಕರ್ತವ್ಯೋ ರಾಜಶಾರ್ದೂಲ ದೋಷಮತ್ರ ಹಿ ಮೇ ಶೃಣು||

ವಾಗ್ಮಿಗಳಲ್ಲಿ ಶ್ರೇಷ್ಠನೇ! ಸೇವಕರೊಡನೆ ನಿತ್ಯವೂ ಪರಿಹಾಸಗಳಲ್ಲಿ ತೊಡಗಬಾರದು. ಇದು ರಾಜನ ಕರ್ತ್ಯವ್ಯ. ರಾಜಶಾರ್ದೂಲ! ಇದರಲ್ಲಿ ದೋಷವೇನೆನ್ನುವುದನ್ನು ಕೇಳು.

12056049a ಅವಮನ್ಯಂತಿ ಭರ್ತಾರಂ ಸಂಹರ್ಷಾದುಪಜೀವಿನಃ|
12056049c ಸ್ವೇ ಸ್ಥಾನೇ ನ ಚ ತಿಷ್ಠಂತಿ ಲಂಘಯಂತಿ ಹಿ ತದ್ವಚಃ||

ರಾಜನ ಆಶ್ರಯದಿಂದಲೇ ಜೀವನವನ್ನು ನಡೆಸುವ ಸೇವಕರು ನಿಕಟ ಸಂಪರ್ಕದಿಂದಾಗಿ ತಮ್ಮ ಒಡೆಯನನ್ನೇ ಕೀಳುಭಾವನೆಯಿಂದ ಕಾಣುತ್ತಾರೆ. ಅವನಿಗೆ ಮರ್ಯಾದೆಯನ್ನು ಕೊಡದೇ, ಅವರು ತಮ್ಮ ಕೆಲಸಗಳನ್ನೂ ಶ್ರದ್ಧೆಯಿಂದ ಮಾಡುವುದಿಲ್ಲ. ಅವನ ಆಜ್ಞೆಯನ್ನೂ ಉಲ್ಲಂಘಿಸುತ್ತಾರೆ.

12056050a ಪ್ರೇಷ್ಯಮಾಣಾ ವಿಕಲ್ಪಂತೇ ಗುಹ್ಯಂ ಚಾಪ್ಯನುಯುಂಜತೇ|
12056050c ಅಯಾಚ್ಯಂ ಚೈವ ಯಾಚಂತೇಽಭೋಜ್ಯಾನ್ಯಾಹಾರಯಂತಿ ಚ||

ಒಂದು ಕೆಲಸಕ್ಕೆ ಕಳುಹಿಸಿದರೆ ಬೇರೆಯದನ್ನೇ ಮಾಡಿಬರುತ್ತಾರೆ. ಗುಟ್ಟುಗಳನ್ನು ಬಯಲುಮಾಡುತ್ತಾರೆ. ಕೇಳಬಾರದವುಗಳನ್ನು ಕೇಳುತ್ತಾರೆ. ರಾಜನ ಭೋಜನವನ್ನೂ ಊಟಮಾಡುತ್ತಾರೆ.

12056051a ಕ್ರುಧ್ಯಂತಿ ಪರಿದೀಪ್ಯಂತಿ ಭೂಮಿಮಧ್ಯಾಸತೇಽಸ್ಯ ಚ|
12056051c ಉತ್ಕೋಚೈರ್ವಂಚನಾಭಿಶ್ಚ ಕಾರ್ಯಾಣ್ಯನುವಿಹಂತಿ ಚ||

ರಾಜನು ಸಲಿಗೆಯಲ್ಲಿರುವ ಸೇವಕರು ಕುಪಿತರಾಗುತ್ತಾರೆ. ರಾಜನ ಆಸನದಲ್ಲಿಯೇ ಕುಳಿತುಕೊಳ್ಳಲು ನೋಡುತ್ತಾರೆ. ರಾಜನಿರುವನೆಂಬ ಪರಿವೆಯೇ ಇಲ್ಲದೇ ಜೋರಾಗಿ ಮಾತನಾಡುತ್ತಾರೆ. ಲಂಚ-ಮೋಸಗಳಿಂದ ರಾಜನ ಕಾರ್ಯಗಳನ್ನು ಹಾಳುಮಾಡುತ್ತಾರೆ.

12056052a ಜರ್ಜರಂ ಚಾಸ್ಯ ವಿಷಯಂ ಕುರ್ವಂತಿ ಪ್ರತಿರೂಪಕೈಃ|
12056052c ಸ್ತ್ರೀರಕ್ಷಿಭಿಶ್ಚ ಸಜ್ಜಂತೇ ತುಲ್ಯವೇಷಾ ಭವಂತಿ ಚ||

ರಾಜಾಜ್ಞೆಯ ನಕಲುಗಳನ್ನು ತಮಗೆ ಇಚ್ಛೆ ಬಂದಂತೆ ಹೊರಡಿಸಿ ದೇಶವನ್ನು ಶಿಥಿಲಗೊಳಿಸುತ್ತಾರೆ. ಪಹರೆಯವರ ಸ್ತ್ರೀವೇಷವನ್ನೇ ಧರಿಸಿ ಅಂತಃಪುರದ ಒಳಗೆ ಹೋಗುತ್ತಾರೆ.

12056053a ವಾತಂ ಚ ಷ್ಠೀವನಂ ಚೈವ ಕುರ್ವತೇ ಚಾಸ್ಯ ಸಂನಿಧೌ|
12056053c ನಿರ್ಲಜ್ಜಾ ನರಶಾರ್ದೂಲ ವ್ಯಾಹರಂತಿ ಚ ತದ್ವಚಃ||

ನರಶಾರ್ದೂಲ! ರಾಜನು ಸಲಿಗೆಯಿಂದಿದ್ದ ಸೇವಕರು ಅವನ ಸನ್ನಿಧಿಯಲ್ಲಿಯೇ ಆಕಳಿಸುತ್ತಾರೆ ಮತ್ತು ಉಗುಳುತ್ತಾರೆ. ನಾಚಿಕೆಗೆಟ್ಟವರಾಗಿ ರಾಜನ ಮಾತುಗಳನ್ನು ಹೊರಹಾಕುತ್ತಾರೆ.

12056054a ಹಯಂ ವಾ ದಂತಿನಂ ವಾಪಿ ರಥಂ ನೃಪತಿಸಂಮತಮ್|
12056054c ಅಧಿರೋಹಂತ್ಯನಾದೃತ್ಯ ಹರ್ಷುಲೇ ಪಾರ್ಥಿವೇ ಮೃದೌ||

ಹಾಸ್ಯಪ್ರವೃತ್ತಿಯವನೂ ಅತಿಮೃದುಸ್ವಭಾವದವನೂ ಆದ ರಾಜನ ಸೇವಕರು ರಾಜನಿಗೆಂದಿರುವ ಕುದುರೆ, ಆನೆ ಅಥವಾ ರಥವನ್ನು ಅವನನ್ನೇ ಅನಾದರಿಸಿ ತಮಗಾಗಿ ಬಳಸಿಕೊಳ್ಳುತ್ತಾರೆ ಕೂಡ.

12056055a ಇದಂ ತೇ ದುಷ್ಕರಂ ರಾಜನ್ನಿದಂ ತೇ ದುರ್ವಿಚೇಷ್ಟಿತಮ್|
12056055c ಇತ್ಯೇವಂ ಸುಹೃದೋ ನಾಮ ಬ್ರುವಂತಿ ಪರಿಷದ್ಗತಾಃ||

ಗಣ್ಯರಿರುವ ರಾಜಸಭೆಯಲ್ಲಿಯೂ ಅವರು ಸ್ನೇಹಿತರಂತೆ ಅತಿ ಸಲುಗೆಯಿಂದ "ರಾಜನ್! ಇದು ನಿನಗೆ ಕಷ್ಟವಾದುದು! ನೀನು ಮಾಡಿದ ಇದು ಸರಿಯಲ್ಲ!" ಎಂದು ಹೇಳುತ್ತಿರುತ್ತಾರೆ.

12056056a ಕ್ರುದ್ಧೇ ಚಾಸ್ಮಿನ್ಹಸಂತ್ಯೇವ ನ ಚ ಹೃಷ್ಯಂತಿ ಪೂಜಿತಾಃ|
12056056c ಸಂಘರ್ಷಶೀಲಾಶ್ಚ ಸದಾ ಭವಂತ್ಯನ್ಯೋನ್ಯಕಾರಣಾತ್||

ರಾಜನು ಕ್ರುದ್ಧನಾದರೆ ಇವರು ನಗುತ್ತಾರೆ. ರಾಜನು ಗೌರವಿಸಿದರೆ ಸಂತೋಷಪಡುವುದಿಲ್ಲ. ಸ್ವಾರ್ಥಕ್ಕಾಗಿ ಸದಾ ಸಂಘರ್ಷಶೀಲರಾಗಿಯೇ ಇರುತ್ತಾರೆ.

12056057a ವಿಸ್ರಂಸಯಂತಿ ಮಂತ್ರಂ ಚ ವಿವೃಣ್ವಂತಿ ಚ ದುಷ್ಕೃತಮ್|
12056057c ಲೀಲಯಾ ಚೈವ ಕುರ್ವಂತಿ ಸಾವಜ್ಞಾಸ್ತಸ್ಯ ಶಾಸನಮ್||

ಗುಪ್ತಸಮಾಲೋಚನೆಗಳನ್ನು ಬಹಿರಂಗಗೊಳಿಸುತ್ತಾರೆ. ಮಾಡಿದ ತಪ್ಪುಗಳನ್ನು ಹೊರಹಾಕುತ್ತಾರೆ. ರಾಜಶಾಸನವನ್ನು ಮತ್ತು ಆಜ್ಞೆಯನ್ನು ಕೂಡ ಆಟವೋ ಎನ್ನುವಂತೆ ಅಸಡ್ಡೆಯಿಂದ ಮಾಡುತ್ತಾರೆ.

12056057e ಅಲಂಕರಣಭೋಜ್ಯಂ ಚ ತಥಾ ಸ್ನಾನಾನುಲೇಪನಮ್|
12056058a ಹೇಲಮಾನಾ ನರವ್ಯಾಘ್ರ ಸ್ವಸ್ಥಾಸ್ತಸ್ಯೋಪಶೃಣ್ವತೇ||

ರಾಜನ ಅಲಂಕಾರ, ಭೋಜನ, ಸ್ನಾನ ಮತ್ತು ಗಂಧಾನುಲೇಪನಗಳ ವಿಷಯಗಳಲ್ಲಿಯೂ ಸೇವಕರು ಅವನಿಗೆ ಕೇಳಿಸುವಂತೆಯೇ ನಿರ್ಭಯರಾಗಿ ಕುತ್ಸಿತ ಮಾತುಗಳನ್ನಾಡುತ್ತಿರುತ್ತಾರೆ.

12056058c ನಿಂದಂತಿ ಸ್ವಾನಧೀಕಾರಾನ್ಸಂತ್ಯಜಂತಿ ಚ ಭಾರತ|
12056059a ನ ವೃತ್ತ್ಯಾ ಪರಿತುಷ್ಯಂತಿ ರಾಜದೇಯಂ ಹರಂತಿ ಚ||

ಭಾರತ! ವಹಿಸಿಕೊಟ್ಟಿರುವ ಕಾರ್ಯಗಳನ್ನು ದೂಷಿಸುತ್ತಾರೆ. ವಹಿಸಿದ ಕಾರ್ಯಗಳನ್ನು ಪೂರೈಸದೇ ಮಧ್ಯದಲ್ಲಿಯೇ ಬಿಟ್ಟುಬಿಡುತ್ತಾರೆ. ವೇತನದಲ್ಲಿ ತೃಪ್ತಿಯಿರುವುದಿಲ್ಲ. ರಾಜನು ಕೊಟ್ಟ ದಾನಗಳನ್ನೂ

ಕದಿಯುತ್ತಾರೆ.

12056059c ಕ್ರೀಡಿತುಂ ತೇನ ಚೇಚ್ಚಂತಿ ಸಸೂತ್ರೇಣೇವ ಪಕ್ಷಿಣಾ|
12056059E ಅಸ್ಮತ್ಪ್ರಣೇಯೋ ರಾಜೇತಿ ಲೋಕೇ ಚೈವ ವದಂತ್ಯುತ||

ದಾರಕ್ಕೆ ಕಟ್ಟಿದ ಪಕ್ಷಿಯಂತೆ ರಾಜನನ್ನು ಆಡಿಸಲು ಬಯಸುತ್ತಾರೆ. ರಾಜನು ನಾನು ಹೇಳಿದಂತೆ ಕೇಳುತ್ತಾನೆ ಎಂದು ಜನರೊಂದಿಗೆ ಆಡಿಕೊಳ್ಳುತ್ತಿರುತ್ತಾರೆ.

12056060a ಏತೇ ಚೈವಾಪರೇ ಚೈವ ದೋಷಾಃ ಪ್ರಾದುರ್ಭವಂತ್ಯುತ|
12056060c ನೃಪತೌ ಮಾರ್ದವೋಪೇತೇ ಹರ್ಷುಲೇ ಚ ಯುಧಿಷ್ಠಿರ||

ಯುಧಿಷ್ಠಿರ! ರಾಜನು ಅತಿಮೃದುವಾಗಿಯೂ ಹಾಸ್ಯಪ್ರವೃತ್ತಿಯುಳ್ಳವನಾಗಿಯೂ ಇದ್ದರೆ ಇದಕ್ಕೂ ಮೀರಿ ಇತರ ದೋಷಗಳೂ ಉಂಟಾಗುತ್ತವೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಷಟ್ ಪಂಚಶತಮೋऽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಐವತ್ತಾರನೇ ಅಧ್ಯಾಯವು.

೫೭

ರಾಜನ ಧರ್ಮಾನುಕೂಲ ಮತ್ತು ನೀತಿಪೂರ್ಣ ವ್ಯವಹಾರಗಳ ವರ್ಣನೆ (1-45).

12057001 ಭೀಷ್ಮ ಉವಾಚ|

12057001a ನಿತ್ಯೋದ್ಯುಕ್ತೇನ ವೈ ರಾಜ್ಞಾ ಭವಿತವ್ಯಂ ಯುಧಿಷ್ಠಿರ|
12057001c ಪ್ರಶಾಮ್ಯತೇ ಚ ರಾಜಾ ಹಿ ನಾರೀವೋದ್ಯಮವರ್ಜಿತಃ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ರಾಜನು ನಿತ್ಯವೂ
ಉದ್ಯೋಗಶೀಲನಾಗಿರಬೇಕು. ಗೃಹಕೃತ್ಯಗಳಲ್ಲಿ ಅನಾಸಕ್ತಳಾದ
ನಾರಿಯಂತೆ ನಿರುದ್ಯೋಗಿಯಾದ ರಾಜನು ಪ್ರಶಂಸೆಗೆ
ಪಾತ್ರನಾಗುವುದಿಲ್ಲ.

12057002a ಭಗವಾನುಶನಾ ಚಾಹ ಶ್ಲೋಕಮತ್ರ ವಿಶಾಂ ಪತೇ|
12057002c ತಮಿಹೈಕಮನಾ ರಾಜನ್ಗದತಸ್ತ್ವಂ ನಿಬೋಧ ಮೇ||

ವಿಶಾಂಪತೇ! ಇದಕ್ಕೆ ಸಂಬಂಧಿಸಿದಂತೆ ಭಗವಾನ್ ಉಶನನು ಒಂದು
ಶ್ಲೋಕವನ್ನು ಹೇಳಿದ್ದಾನೆ. ರಾಜನ್! ನಿನಗೆ ಅದನ್ನು ಹೇಳುತ್ತೇನೆ.
ಏಕಾಗ್ರಚಿತ್ತನಾಗಿ ಕೇಳು.

12057003a ದ್ವಾವೇತೌ ಗ್ರಸತೇ ಭೂಮಿಃ ಸರ್ಪೋ ಬಿಲಶಯಾನಿವ|
12057003c ರಾಜಾನಂ ಚಾವಿರೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್||

"ಬಿಲದಲ್ಲಿರುವ ಇಲಿ-ಕಪ್ಪೆಗಳನ್ನು ಸರ್ಪವು ನುಂಗಿಬಿಡುವಂತೆ
ಶತ್ರುಗಳೊಡನೆ ಯುದ್ಧಮಾಡದಿರುವ ರಾಜ ಮತ್ತು ದೇಶಸಂಚಾರ
ಮಾಡದಿರುವ ಬ್ರಾಹ್ಮಣ ಇಬ್ಬರನ್ನೂ ಭೂಮಿಯು ನುಂಗಿಹಾಕುತ್ತದೆ."

12057004a ತದೇತನ್ನರಶಾರ್ದೂಲ ಹೃದಿ ತ್ವಂ ಕರ್ತುಮರ್ಹಸಿ|
12057004c ಸಂಧೇಯಾನಪಿ ಸಂಧತ್ಸ್ವ ವಿರೋಧ್ಯಾಂಶ್ಚ ವಿರೋಧಯ||

ನರಶಾರ್ದೂಲ! ಆದುದರಿಂದ ಇದನ್ನು ನೀನು
ಹೃದ್ಗತಮಾಡಿಕೊಳ್ಳಬೇಕು. ಸಂಧಿಗೆ ಯೋಗ್ಯರಾದವರೊಡನೆ

ಸಂಧಿಮಾಡಿಕೋ ಮತ್ತು ವಿರೋಧಿಸಬೇಕಾದವರನ್ನು ವಿರೋಧಿಸು.

12057005a ಸಪ್ತಾಂಗೇ ಯಶ್ಚ ತೇ ರಾಜ್ಯೇ ವೈಪರೀತ್ಯಂ ಸಮಾಚರೇತ್|
12057005c ಗುರುರ್ವಾ ಯದಿ ವಾ ಮಿತ್ರಂ ಪ್ರತಿಹಂತವ್ಯ ಏವ ಸಃ||

ರಾಜ್ಯದ ಸಪ್ತಾಂಗ[152]ಗಳಿಗೆ ವಿರುದ್ಧವಾಗಿ ಯಾರು
ನಡೆದುಕೊಳ್ಳುತ್ತಾರೋ ಅವನನ್ನು, ಗುರುವಾಗಿರಲಿ ಅಥವಾ
ಮಿತ್ರನಾಗಿರಲಿ, ಸಂಹರಿಸಲೇ ಬೇಕು.

12057006a ಮರುತ್ತೇನ ಹಿ ರಾಜ್ಞಾಯಂ ಗೀತಃ ಶ್ಲೋಕಃ ಪುರಾತನಃ|
12057006c ರಾಜ್ಯಾಧಿಕಾರೇ ರಾಜೇಂದ್ರ ಬೃಹಸ್ಪತಿಮತಃ ಪುರಾ||

ರಾಜೇಂದ್ರ! ಬೃಹಸ್ಪತಿಯ ಅಭಿಪ್ರಾಯದಂತೆ ರಾಜಾಧಿಕಾರದ
ವಿಷಯದಲ್ಲಿ ಹಿಂದೆ ಮರುತ್ತನು ಹೇಳಿದ ಈ ಪುರಾತನ ಶ್ಲೋಕವನ್ನು
ಉದಾಹರಿಸುತ್ತೇನೆ.

12057007a ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ|
12057007c ಉತ್ಪಥಪ್ರತಿಪನ್ನಸ್ಯ ಪರಿತ್ಯಾಗೋ ವಿಧೀಯತೇ||

“ದುರಹಂಕಾರದಿಂದ ಯಾವುದನ್ನು ಮಾಡಬೇಕು ಮತ್ತು ಯಾವುದನ್ನು
ಮಾಡಬಾರದು ಎಂದು ತಿಳಿಯದೇ ತಪ್ಪು ಹಾದಿಯನ್ನು
ಹಿಡಿದಿರುವವನು ಆಚಾರ್ಯನೇ ಆಗಿದ್ದರೂ ಪರಿತ್ಯಜಿಸಬೇಕೆಂದು
ಹೇಳುತ್ತಾರೆ.”

12057008a ಬಾಹೋಃ ಪುತ್ರೇಣ ರಾಜ್ಞಾ ಚ ಸಗರೇಣೇಹ ಧೀಮತಾ|

---

[152] ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ, ದುರ್ಗ ಮತ್ತು ಬಲಗಳೇ ರಾಜ್ಯದ ಸಪ್ತಾಂಗಗಳು.

12057008c ಅಸಮಂಜಾಃ ಸುತೋ ಜ್ಯೇಷ್ಠಸ್ತ್ಯಕ್ತಃ ಪೌರಹಿತೈಷಿಣಾ||

ಬಾಹುವಿನ ಮಗ, ಧೀಮಂತ ರಾಜ ಸಗರನು ತನ್ನ ಜ್ಯೇಷ್ಠ ಪುತ್ರ ಅಸಮಂಜಸನನ್ನು ಪೌರರ ಹಿತವನ್ನು ಬಯಸಿ ತ್ಯಜಿಸಿದನು.

12057009a ಅಸಮಂಜಾಃ ಸರಯ್ವಾಂ ಪ್ರಾಕ್ಪೌರಾಣಾಂ ಬಾಲಕಾನ್ನೃಪ|
12057009c ನ್ಯಮಜ್ಜಯದತಃ ಪಿತ್ರಾ ನಿರ್ಭರ್ತ್ಸ್ಯ ಸ ವಿವಾಸಿತಃ||

ನೃಪ! ಅಸಮಂಜಸನು ಪೌರರ ಬಾಲಕರನ್ನು ಸರಯೂ ನದಿಯಲ್ಲಿ ಮುಳುಗಿಸಿಬಿಡುತ್ತಿದ್ದನು. ಆದುದರಿಂದ ಅವನ ತಂದೆಯು ಅವನನ್ನು ರಾಜ್ಯದಿಂದ ಹೊರಗಟ್ಟಿದನು.

12057010a ಋಷಿಣೋದ್ದಾಲಕೇನಾಪಿ ಶ್ವೇತಕೇತುರ್ಮಹಾತಪಾಃ|
12057010c ಮಿಥ್ಯಾ ವಿಪ್ರಾನುಪಚರನ್ಸಂತ್ಯಕ್ತೋ ದಯಿತಃ ಸುತಃ||

ಋಷಿ ಉದ್ದಾಲಕನೂ ಕೂಡ ತನ್ನ ಪ್ರಿಯ ಮಗ ಮಹಾತಪಸ್ವಿ ಶ್ವೇತಕೇತುವನ್ನು ವಿಪ್ರರೊಡನೆ ವಂಚನೆಯಿಂದ ವರ್ತಿಸಿದುದರಿಂದ ತ್ಯಜಿಸಿದನು.

12057011a ಲೋಕರಂಜನಮೇವಾತ್ರ ರಾಜ್ಞಾಂ ಧರ್ಮಃ ಸನಾತನಃ|
12057011c ಸತ್ಯಸ್ಯ ರಕ್ಷಣಂ ಚೈವ ವ್ಯವಹಾರಸ್ಯ ಚಾರ್ಜವಮ್||

ಪ್ರಜಾರಂಜನೆ, ಸತ್ಯದ ರಕ್ಷಣೆ ಮತ್ತು ವ್ಯವಹಾರಗಳಲ್ಲಿ ಸರಳತೆ ಇವೇ ರಾಜನ ಸನಾತನ ಧರ್ಮವಾಗಿದೆ.

12057012a ನ ಹಿಂಸ್ಯಾತ್ಪರವಿತ್ತಾನಿ ದೇಯಂ ಕಾಲೇ ಚ ದಾಪಯೇತ್|
12057012c ವಿಕ್ರಾಂತಃ ಸತ್ಯವಾಕ್ಕ್ಷಾಂತೋ ನೃಪೋ ನ ಚಲತೇ ಪಥಃ||

ಪರರ ಸ್ವತ್ತನ್ನು ನಾಶಗೊಳಿಸಬಾರದು. ಕೊಡಬೇಕಾದುದನ್ನು ಕಾಲಕ್ಕೆ

ಸರಿಯಾಗಿ ಕೊಟ್ಟುಬಿಡಬೇಕು. ಪರಾಕ್ರಮಿಯಾದ, ಸತ್ಯವಾಗ್ಮಿಯಾದ,
ಮತ್ತು ದಯಾಪರನಾದ ರಾಜನು ಧರ್ಮಮಾರ್ಗದಿಂದ
ವಿಚಲಿತನಾಗುವುದಿಲ್ಲ.

12057013a ಗುಪ್ತಮಂತ್ರೋ ಜಿತಕ್ರೋಧೋ ಶಾಸ್ತ್ರಾರ್ಥಗತನಿಶ್ಚಯಃ|
12057013c ಧರ್ಮೇ ಚಾರ್ಥೇ ಚ ಕಾಮೇ ಚ ಮೋಕ್ಷೇ ಚ ಸತತಂ ರತಃ||
12057014a ತ್ರಯ್ಯಾ ಸಂವೃತರಂಧ್ರಶ್ಚ ರಾಜಾ ಭವಿತುಮರ್ಹತಿ|
12057014c ವೃಜಿನಸ್ಯ ನರೇಂದ್ರಾಣಾಂ ನಾನ್ಯತ್ಸಂವರಣಾತ್ಪರಮ್||

ಗುಪ್ತವಾಗಿ ಮಂತ್ರಾಲೋಚನೆ ಮಾಡುವವನು, ಕ್ರೋಧವನ್ನು
ಜಯಿಸಿದವನು, ಶಾಸ್ತ್ರಗಳ ಅರ್ಥ-ನಿಶ್ಚಯಗಳನ್ನು ಅರಿತವನು,
ಸತತವೂ ಧರ್ಮ-ಅರ್ಥ-ಕಾಮ-ಮೋಕ್ಷಗಳಲ್ಲಿ ನಿರತನಾದವನು,
ಮೂರು ವೇದಗಳ ರಹಸ್ಯವನ್ನು ತಿಳಿದಿರುವವನು,
ಗುಪ್ತಾಲೋಚನೆಗಳನ್ನು ಗೌಪ್ಯವಾಗಿಯೇ ಇಟ್ಟಿರುವವನು ರಾಜನಾಗಲು
ಯೋಗ್ಯನಾಗುತ್ತಾನೆ. ನರೇಂದ್ರರಿಗೆ ಪ್ರಜಾಪಾಲನೆಯ ಹೊರತಾಗಿ ಬೇರೆ
ಪರಮ ಧರ್ಮವೇ ಇಲ್ಲ.

12057015a ಚಾತುರ್ವರ್ಣ್ಯಸ್ಯ ಧರ್ಮಾಶ್ಚ ರಕ್ಷಿತವ್ಯಾ ಮಹೀಕ್ಷಿತಾ|
12057015c ಧರ್ಮಸಂಕರರಕ್ಷಾ ಹಿ ರಾಜ್ಞಾಂ ಧರ್ಮಃ ಸನಾತನಃ||

ಭೂಮಿಯಲ್ಲಿ ಚಾತುರ್ವರ್ಣ್ಯಗಳ ಧರ್ಮಗಳನ್ನು ರಕ್ಷಿಸಬೇಕು.
ಧರ್ಮವನ್ನು ಸಂಕರದಿಂದ ರಕ್ಷಿಸುವುದೇ ರಾಜನ ಸನಾತನ ಧರ್ಮವು.

12057016a ನ ವಿಶ್ವಸೇಚ್ಚ ನೃಪತಿರ್ನ ಚಾತ್ಯರ್ಥಂ ನ ವಿಶ್ವಸೇತ್|
12057016c ಷಾಡ್ಗುಣ್ಯಗುಣದೋಷಾಂಶ್ಚ ನಿತ್ಯಂ ಬುದ್ಧ್ಯಾವಲೋಕಯೇತ್||

ನೃಪತಿಯು ಯಾರಲ್ಲಿಯೂ ವಿಶ್ವಾಸವನ್ನಿಡಬಾರದು. ವಿಶ್ವಾಸಕ್ಕೆ

ಪಾತ್ರರಾದವರೊಡನೆಯೂ ಅತಿಯಾದ ವಿಶ್ವಾಸವನ್ನಿಡಬಾರದು. ಆರು ವಿಷಯಗಳಲ್ಲಿ[153] ಗುಣ-ದೋಷಗಳಿವೆಯೇ ಎನ್ನುವುದದ್ದನ್ನು ತನ್ನ ಬುದ್ಧಿಯಿಂದ ನಿತ್ಯವೂ ಪರಿಶೀಲಿಸುತ್ತಿರಬೇಕು.

12057017a ದ್ವಿಷ್ಟಿದ್ರದರ್ಶೀ ನೃಪತಿರ್ನಿತ್ಯಮೇವ ಪ್ರಶಸ್ಯತೇ|
12057017c ತ್ರಿವರ್ಗವಿದಿತಾರ್ಥಶ್ಚ ಯುಕ್ತಚಾರೋಪಧಿಶ್ಚ ಯಃ||

ನಿತ್ಯವೂ ಶತ್ರುಗಳ ನ್ಯೂನತೆಗಳನ್ನು ತಿಳಿದುಕೊಳ್ಳುವ, ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗಗಳ ಅರ್ಥವನ್ನು ತಿಳಿದುಕೊಂಡಿರುವ, ಮತ್ತು ಚಾರರನ್ನು ಬಳಸುತ್ತಿರುವ ನೃಪತಿಯು ಪ್ರಶಂಸೆಗೆ ಪಾತ್ರನಾಗುತ್ತಾನೆ.

12057018a ಕೋಶಸ್ಯೋಪಾರ್ಜನರತಿರ್ಯಮವೈಶ್ರವಣೋಪಮಃ|
12057018c ವೇತ್ತಾ ಚ ದಶವರ್ಗಸ್ಯ ಸ್ಥಾನವೃದ್ಧಿಕ್ಷಯಾತ್ಮನಃ||

ನ್ಯಾಯದಲ್ಲಿ ಯಮನಂತೆಯೂ ಕೋಶವನ್ನು ತುಂಬುವುದರಲ್ಲಿ ವೈಶ್ರವಣನಂತೆಯೂ ಇರಬೇಕು. ಸ್ಥಾನ, ವೃದ್ಧಿ ಮತ್ತು ಕ್ಷಯಗಳಿಗೆ ಕಾರಣಗಳಾದ ದಶವರ್ಗಗಳನ್ನೂ[154] ತಿಳಿದುಕೊಂಡಿರಬೇಕು.

12057019a ಅಭೃತಾನಾಂ ಭವೇದ್ಭರ್ತಾ ಭೃತಾನಾಂ ಚಾನ್ವವೇಕ್ಷಕಃ|
12057019c ನೃಪತಿಃ ಸುಮುಖಶ್ಚ ಸ್ಯಾತ್ತ್ರಿಷ್ವೇತತ್ಪೂರ್ವಾಭಿಭಾಷಿತಾ||

---

153 ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಮತ್ತು ಸಮಾಶ್ರಯಗಳು – ಇವು ಆರು ವಿಷಯಗಳು.

154 ಮಂತ್ರಿ, ರಾಷ್ಟ್ರ, ದುರ್ಗ, ಕೋಶ ಮತ್ತು ದಂಡ – ಈ ಐದನ್ನು ಪ್ರಕೃತಿ ಎಂದು ಕರೆಯುತ್ತಾರೆ. ತನ್ನ ಕಡೆಯ ಈ ಐದು ಮತ್ತು ಶತ್ರುಗಳ ಕಡೆಯ ಈ ಐದು ಸೇರಿ ದಶವರ್ಗವಾಗುತ್ತದೆ.

ಭರಣ-ಪೋಷಣೆಗಳಿಲ್ಲದವರಿಗೆ ರಾಜನು ಭರಣ-
ಪೋಷಕನಾಗಿರಬೇಕು. ಸೇವಕರ ಮೇಲ್ವಿಚಾರಣೆ ಮಾಡುತ್ತಿರಬೇಕು.
ರಾಜನಾದವನು ಪ್ರಸನ್ನಮುಖನಾಗಿರಬೇಕು. ಮಾತನಾಡುವಾಗ
ಮಂದಸ್ಮಿತನಾಗಿರಬೇಕು.

12057020a ಉಪಾಸಿತಾ ಚ ವೃದ್ಧಾನಾಂ ಜಿತತಂದ್ರೀರಲೋಲುಪಃ|
12057020c ಸತಾಂ ವೃತ್ತೇ ಸ್ಥಿತಮತಿಃ ಸಂತೋ ಹ್ಯಾಚಾರದರ್ಶಿನಃ||

ವೃದ್ಧರ ಸೇವೆಯನ್ನು ಮಾಡಬೇಕು. ಆಲಸ್ಯವನ್ನು ಜಯಿಸಬೇಕು.
ವ್ಯಸನಲೋಲುಪನಾಗಿರಬಾರದು. ಸತ್ಪುರುಷರ ನಡತೆಗಳಲ್ಲಿಯೇ
ಸ್ಥಿರವಾಗಿ ಬುದ್ಧಿಯನ್ನಿರಿಸಿರಬೇಕು. ಏಕೆಂದರೆ ಸಂತರೇ ಆಚಾರಗಳನ್ನು
ತೋರಿಸಿಕೊಡುವವರು.

12057021a ನ ಚಾದದೀತ ವಿತ್ತಾನಿ ಸತಾಂ ಹಸ್ತಾತ್ಕದಾ ಚನ|
12057021c ಅಸದ್ಭ್ಯಸ್ತು ಸಮಾದದ್ಯಾತ್ಸದ್ಭ್ಯಃ ಸಂಪ್ರತಿಪಾದಯೇತ್||

ಸತ್ಪುರುಷರ ಕೈಯಿಂದ ಎಂದೂ ಧನವನ್ನು ತೆಗೆದುಕೊಳ್ಳಬಾರದು.
ಅಸಾಧುಪುರುಷರಿಂದ ಧನವನ್ನು ಸಂಗ್ರಹಿಸಿ, ಸತ್ಪುರುಷರಲ್ಲಿ
ದಾನಮಾಡಬೇಕು.

12057022a ಸ್ವಯಂ ಪ್ರಹರ್ತಾ ದಾತಾ ಚ ವಶ್ಯಾತ್ಮಾ ವಶ್ಯಸಾಧನಃ|
12057022c ಕಾಲೇ ದಾತಾ ಚ ಭೋಕ್ತಾ ಚ ಶುದ್ಧಾಚಾರಸ್ತಥೈವ ಚ||

ಸ್ವಯಂ ತಾನೇ ದಂಡಿಸಬೇಕು. ದಾನಶೀಲನಾಗಿರಬೇಕು. ಮನಸ್ಸನ್ನು
ತನ್ನ ಹತೋಟಿಯಲ್ಲಿಟ್ಟುಕೊಂಡಿರಬೇಕು. ಸಾಧನಗಳನ್ನು
ಹೊಂದಿರಬೇಕು. ಕಾಲಕಾಲಕ್ಕೆ ದಾನಗಳನ್ನು ನೀಡುತ್ತಿರಬೇಕು.
ಶುದ್ಧಾಚಾರಗಳಿಂದ ಭೋಗಿಸಲೂ ಬೇಕು.

12057023a ಶೂರಾನ್ಭಕ್ತಾನಸಂಹಾರ್ಯಾನ್ಕುಲೇ ಜಾತಾನರೋಗಿಣಃ|
12057023c ಶಿಷ್ಟಾನ್ಶಿಷ್ಟಾಭಿಸಂಬಂಧಾನ್ಮಾನಿನೋ ನಾವಮಾನಿನಃ||
12057024a ವಿದ್ಯಾವಿದೋ ಲೋಕವಿದಃ ಪರಲೋಕಾನ್ಪವೇಕ್ಷಕಾನ್|
12057024c ಧರ್ಮೇಷು ನಿರತಾನ್ಸಾಧೂನಚಲಾನಚಲಾನಿವ||
12057025a ಸಹಾಯಾನ್ಸತತಂ ಕುರ್ಯಾದ್ರಾಜಾ ಭೂತಿಪುರಸ್ಕೃತಃ|
12057025c ತೈಸ್ತುಲ್ಯಶ್ಚ ಭವೇದ್ಭೋಗೈಶ್ಚತ್ರಮಾತ್ರಾಜ್ಞಯಾಧಿಕಃ||

ಶೂರರನ್ನೂ, ಭಕ್ತರನ್ನೂ, ಲೋಭಕ್ಕೆ ಒಳಗಾಗದವರನ್ನೂ, ಸತ್ಕುಲದಲ್ಲಿ
ಜನಿಸಿದವರನ್ನೂ, ನಿರೋಗಿಗಳನ್ನೂ, ಶಿಷ್ಟರನ್ನೂ, ಶಿಷ್ಟರ
ಬಂಧುಗಳನ್ನೂ, ಮಾನನಿಷ್ಟರನ್ನೂ, ಬೇರೆಯವರನ್ನು
ಅಪಮಾನಿಸದವರನ್ನೂ, ವಿದ್ಯಾವಂತರನ್ನೂ, ಲೋಕವ್ಯವಹಾರಗಳನ್ನು
ತಿಳಿದುಕೊಂಡಿರುವವರನ್ನೂ, ಪುಣ್ಯಲೋಕಾಪೇಕ್ಷಿಗಳನ್ನೂ, ಧರ್ಮದಲ್ಲಿ
ನಿರತರಾದವರನ್ನೂ, ಸತ್ಪುರುಷರನ್ನೂ, ಪರ್ವತದಂತೆ
ಸ್ಥಿರವಾಗಿರುವವರನ್ನೂ ರಾಜನಾದವನು ತನ್ನ ಸಹಾಯಕರನಾಗಿ
ಇಟ್ಟುಕೊಂಡಿರಬೇಕು. ಅವರನ್ನು ಪುರಸ್ಕರಿಸುತ್ತಿರಬೇಕು.
ತನ್ನಲ್ಲಿರುವಂತಹ ಸುಖ-ಭೋಗಗಳನ್ನು ಅವರಿಗೂ
ಒದಗಿಸಿಕೊಡಬೇಕು. ಶ್ವೇತ ಛತ್ರ ಮತ್ತು ಆಜ್ಞೆ ಈ ಎರಡರಲ್ಲಿ ಮಾತ್ರ
ಅವರಿಗಿಂತ ರಾಜನು ಅಧಿಕನಾಗಿರಬೇಕು.

12057026a ಪ್ರತ್ಯಕ್ಷಾ ಚ ಪರೋಕ್ಷಾ ಚ ವೃತ್ತಿಶ್ಚಾಸ್ಯ ಭವೇತ್ಸದಾ|
12057026c ಏವಂ ಕೃತ್ವಾ ನರೇಂದ್ರೋ ಹಿ ನ ಖೇದಮಿಹ ವಿಂದತಿ||

ಪ್ರತ್ಯಕ್ಷ್ಯದಲ್ಲಾಗಲೀ ಪರೋಕ್ಷದಲ್ಲಾಗಲೀ ಇವರೊಂದಿಗೆ ರಾಜನ
ವರ್ತನೆಯು ಒಂದೇ ಸಮನಾಗಿರಬೇಕು. ಹೀಗೆ ಮಾಡಿದ ನರೇಂದ್ರನು
ಇಲ್ಲಿ ಖೇದವನ್ನೇ ಹೊಂದುವುದಿಲ್ಲ.

12057027a ಸರ್ವಾತಿಶಂಕೀ ನೃಪತಿರ್ಯಶ್ಚ ಸರ್ವಹರೋ ಭವೇತ್|
12057027c ಸ ಕ್ಷಿಪ್ರಮನೃಜುರ್ಲುಬ್ಧಃ ಸ್ವಜನೇನೈವ ಬಾಧ್ಯತೇ||

ಎಲ್ಲರನ್ನೂ ಅತಿಯಾಗಿ ಶಂಕಿಸುವ ರಾಜನು ಎಲ್ಲವನ್ನೂ
ಕಳೆದುಕೊಳ್ಳುತ್ತಾನೆ. ಕಪಟಿಯೂ ಲುಬ್ಧನೂ ಆದ ರಾಜನು ಬೇಗನೆ
ಸ್ವಜನರ ಬಾಧೆಗೊಳಗಾಗುತ್ತಾನೆ.

12057028a ಶುಚಿಸ್ತು ಪೃಥಿವೀಪಾಲೋ ಲೋಕಚಿತ್ತಗ್ರಹೇ ರತಃ|
12057028c ನ ಪತತ್ಯರಿಭಿರ್ಗ್ರಸ್ತಃ ಪತಿತಶ್ಚಾವತಿಷ್ಠತೇ||

ಶುಚಿಯಾಗಿರುವ ಮತ್ತು ಪ್ರಜೆಗಳ ಚಿತ್ತವನ್ನು ಆಕರ್ಶಿಸುವುದರಲ್ಲಿ
ನಿರತನಾಗಿರುವ ಪೃಥ್ವೀಪಾಲನು ಅರಿಗಳಿಂದ ಪತನಹೊಂದುವುದಿಲ್ಲ.
ಒಂದುವೇಳೆ ಶತ್ರುಗಳಿಂದ ಕೆಳಗುರುಳಿಸಲ್ಪಟ್ಟರೂ ಬೇಗನೆ ರಾಜ್ಯವನ್ನು
ಪಡೆದುಕೊಳ್ಳುತ್ತಾನೆ.

12057029a ಅಕ್ರೋಧನೋಽಥಾವ್ಯಸನೀ ಮೃದುದಂಡೋ ಜಿತೇಂದ್ರಿಯಃ|
12057029c ರಾಜಾ ಭವತಿ ಭೂತಾನಾಂ ವಿಶ್ವಾಸ್ಯೋ ಹಿಮವಾನಿವ||

ಕ್ರೋಧವಿಲ್ಲದ, ವ್ಯಸನಗಳಿಲ್ಲದ, ಮೃದುವಾಗಿ ಶಿಕ್ಷಿಸುವ,
ಜಿತೇಂದ್ರಿಯನಾದ ರಾಜನು ಹಿಮವತ್ಪರ್ವತದಂತೆ ಪ್ರಜೆಗಳ
ವಿಶ್ವಾಸವನ್ನು ಗಳಿಸುತ್ತಾನೆ.

12057030a ಪ್ರಾಜ್ಞೋ ನ್ಯಾಯಗುಣೋಪೇತಃ ಪರರಂಧ್ರೇಷು ತತ್ಪರಃ|
12057030c ಸುದರ್ಶಃ ಸರ್ವವರ್ಣಾನಾಂ ನಯಾಪನಯವಿತ್ತಥಾ||
12057031a ಕ್ಷಿಪ್ರಕಾರೀ ಜಿತಕ್ರೋಧಃ ಸುಪ್ರಸಾದೋ ಮಹಾಮನಾಃ|
12057031c ಅರೋಗಪ್ರಕೃತಿರ್ಯುಕ್ತಃ ಕ್ರಿಯಾವಾನವಿಕತ್ಥನಃ||
12057032a ಆರಬ್ಧಾನ್ಯೇವ ಕಾರ್ಯಾಣಿ ನ ಪರ್ಯವಸಿತಾನಿ ಚ|

12057032c ಯಸ್ಯ ರಾಜ್ಞಃ ಪ್ರದೃಶ್ಯಂತೇ ಸ ರಾಜಾ ರಾಜಸತ್ತಮಃ॥

ಪ್ರಾಜ್ಞನೂ, ನ್ಯಾಯಗುಣೋಪೇತನೂ, ಶತ್ರುಗಳ ನ್ಯೂನತೆಗಳನ್ನು ತಿಳಿದುಕೊಳ್ಳುವುದರಲ್ಲಿ ತತ್ಪರನಾದವನೂ, ಸರ್ವವರ್ಣದವರನ್ನೂ ಚೆನ್ನಾಗಿ ನೋಡಿಕೊಳ್ಳುವವನೂ, ಸುನೀತಿ-ದುರ್ನೀತಿಗಳನ್ನು ಅರಿತವನೂ, ಕಾರ್ಯಗಳನ್ನು ಕ್ಷಿಪ್ರವಾಗಿ ಪೂರೈಸುವವನೂ, ಕ್ರೋಧವನ್ನು ಗೆದ್ದವನೂ, ಪ್ರಸನ್ನನೂ, ವಿಶಾಲಹೃದಯಿಯೂ, ಅರೋಗಪ್ರಕೃತಿಯುಳ್ಳವನೂ, ಕ್ರಿಯಾಶೀಲನೂ, ಆತ್ಮಪ್ರಶಂಸೆ ಮಾಡಿಕೊಳ್ಳದವನೂ, ಆರಂಭಿಸಿದ ಕಾರ್ಯಗಳನ್ನು ಮುಗಿಸುವ ರಾಜನೆಂದು ತೋರಿಸಿಕೊಡುವವನೂ ಆದ ರಾಜನು ಸರ್ವಶ್ರೇಷ್ಠ ರಾಜನಾಗುತ್ತಾನೆ.

12057033a ಪುತ್ರಾ ಇವ ಪಿತುರ್ಗೇಹೇ ವಿಷಯೇ ಯಸ್ಯ ಮಾನವಾಃ|
12057033c ನಿರ್ಭಯಾ ವಿಚರಿಷ್ಯಂತಿ ಸ ರಾಜಾ ರಾಜಸತ್ತಮಃ॥

ತಂದೆಯ ಮನೆಯಲ್ಲಿ ಮಕ್ಕಳು ಹೇಗೋ ಹಾಗೆ ಯಾರ ರಾಜ್ಯದಲ್ಲಿ ಪ್ರಜೆಗಳು ನಿರ್ಭಯರಾಗಿ ಜೀವನವನ್ನು ನಡೆಸುತ್ತಿರುತ್ತಾರೋ ಆ ರಾಜನು ಸರ್ವಶ್ರೇಷ್ಠ ರಾಜನೆನಿಸಿಕೊಳ್ಳುತ್ತಾನೆ.

12057034a ಅಗೂಢವಿಭವಾ ಯಸ್ಯ ಪೌರಾ ರಾಷ್ಟ್ರನಿವಾಸಿನಃ|
12057034c ನಯಾಪನಯವೇತ್ತಾರಃ ಸ ರಾಜಾ ರಾಜಸತ್ತಮಃ॥

ಯಾರ ರಾಷ್ಟ್ರದಲ್ಲಿ ವಾಸಿಸಿರುವ ಪ್ರಜೆಗಳು ತಮ್ಮಲ್ಲಿರುವ ವೈಭವವನ್ನು ಬಹಿರಂಗವಾಗಿಯೇ ತೋರಿಸಿಕೊಳ್ಳುತ್ತಾರೆಯೋ ಮತ್ತು ನ್ಯಾಯ-ಅನ್ಯಾಯಗಳನ್ನು ತಿಳಿದಿರುತ್ತಾರೋ ಆ ರಾಜನೇ ರಾಜಸತ್ತಮನು.

12057035a ಸ್ವಕರ್ಮನಿರತಾ ಯಸ್ಯ ಜನಾ ವಿಷಯವಾಸಿನಃ|
12057035c ಅಸಂಘಾತರತಾ ದಾಂತಾಃ ಪಾಲ್ಯಮಾನಾ ಯಥಾವಿಧಿ||
12057036a ವಶ್ಯಾ ನೇಯಾ ವಿನೀತಾಶ್ಚ ನ ಚ ಸಂಘರ್ಷಶೀಲಿನಃ|
12057036c ವಿಷಯೇ ದಾನರುಚಯೋ ನರಾ ಯಸ್ಯ ಸ ಪಾರ್ಥಿವಃ||

ಯಾರ ರಾಜ್ಯದಲ್ಲಿ ವಾಸಿಸಿರುವ ಜನರು ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿ, ಪರಸ್ಪರರನ್ನು ದ್ವೇಷಿಸದೇ, ಜಿತೇಂದ್ರಿಯರಾಗಿ ಯಥಾವಿಧಿಯಾಗಿ ಪರಿಪಾಲಿಸಲ್ಪಟ್ಟಿರುವರೋ, ನ್ಯಾಯದ ವಶದಲ್ಲಿದ್ದುಕೊಂಡು ವಿನೀತರಾಗಿ, ಸಂಘರ್ಷಶೀಲರಾಗಿರದೇ ಇರುತ್ತಾರೋ, ಯಾರ ರಾಜ್ಯದಲ್ಲಿ ಜನರು ದಾನಮಾಡುವುದರಲ್ಲಿ ರುಚಿಯನ್ನಿಟ್ಟುಕೊಂಡಿರುತ್ತಾರೋ ಅವನೇ ಪಾರ್ಥಿವನೆನಿಸಿಕೊಳ್ಳುತ್ತಾನೆ.

12057037a ನ ಯಸ್ಯ ಕೂಟಕಪಟಂ ನ ಮಾಯಾ ನ ಚ ಮತ್ಸರಃ|
12057037c ವಿಷಯೇ ಭೂಮಿಪಾಲಸ್ಯ ತಸ್ಯ ಧರ್ಮಃ ಸನಾತನಃ||

ಯಾವ ಭೂಮಿಪಾಲನ ರಾಜ್ಯದಲ್ಲಿ ಕೂಟ (ಸುಳ್ಳು), ಕಪಟ, ಮಾಯೆ, ಮತ್ಸರಗಳಿಲ್ಲವೋ ಅವನ ಧರ್ಮವೇ ಸನಾತನ ಧರ್ಮವು.

12057038a ಯಃ ಸತ್ಕರೋತಿ ಜ್ಞಾನಾನಿ ನೇಯಃ ಪೌರಹಿತೇ ರತಃ|
12057038c ಸತಾಂ ಧರ್ಮಾನುಗಸ್ತ್ಯಾಗೀ ಸ ರಾಜಾ ರಾಜ್ಯಮರ್ಹತಿ||

ಯಾವ ರಾಜನು ಜ್ಞಾನ-ಜ್ಞಾನಿಗಳನ್ನು ಸತ್ಕರಿಸುತ್ತಾನೋ, ಪೌರರ ಹಿತದಲ್ಲಿ ನಿರತನಾಗಿರುತ್ತಾನೋ ಆ ರಾಜನು ರಾಜ್ಯಕ್ಕೆ ಅರ್ಹನಾಗುತ್ತಾನೆ.

12057039a ಯಸ್ಯ ಚಾರಶ್ಚ ಮಂತ್ರಶ್ಚ ನಿತ್ಯಂ ಚೈವ ಕೃತಾಕೃತೇ|
12057039c ನ ಜ್ಞಾಯತೇ ಹಿ ರಿಪುಭಿಃ ಸ ರಾಜಾ ರಾಜ್ಯಮರ್ಹತಿ||

ಯಾವ ರಾಜನು ನಿತ್ಯವೂ ಮಾಡುವ ಗೂಢಾಚರಿ ಮತ್ತು ಗುಪ್ತ ಸಮಾಲೋಚನೆಗಳು ಶತ್ರುಗಳಿಗೆ ತಿಳಿಯುವುದಿಲ್ಲವೋ ಅಂಥಹ ರಾಜನೇ ರಾಜ್ಯಭಾರಮಾಡಲು ಅರ್ಹನೆನಿಸಿಕೊಳ್ಳುತ್ತಾನೆ.

12057040a ಶ್ಲೋಕಶ್ಚಾಯಂ ಪುರಾ ಗೀತೋ ಭಾರ್ಗವೇಣ ಮಹಾತ್ಮನಾ|
12057040c ಆಖ್ಯಾತೇ ರಾಮಚರಿತೇ ನೃಪತಿಂ ಪ್ರತಿ ಭಾರತ||

ಭಾರತ! ಹಿಂದೆ ಮಹಾತ್ಮ ಭಾರ್ಗವ ರಾಮನು ನೃಪತಿಯ ಕುರಿತಾಗಿ ಹೇಳಿದ ಗೀತೆಯ ಈ ಶ್ಲೋಕವನ್ನು ಕೇಳು.

12057041a ರಾಜಾನಂ ಪ್ರಥಮಂ ವಿಂದೇತ್ತತೋ ಭಾರ್ಯಾಂ ತತೋ ಧನಮ್|
12057041c ರಾಜನ್ಯಸತಿ ಲೋಕಸ್ಯ ಕುತೋ ಭಾರ್ಯಾ ಕುತೋ ಧನಮ್||

“ಮೊದಲು ರಾಜನನ್ನು ಪಡೆದುಕೊಳ್ಳಬೇಕು. ಅನಂತರ ಪತ್ನಿ ಮತ್ತು ಧನಗಳನ್ನು ಪಡೆದುಕೊಳ್ಳಬೇಕು. ಲೋಕದಲ್ಲಿ ರಾಜನೇ ಇಲ್ಲದಿದ್ದರೆ ಪತ್ನಿಯು ಏಕೆ? ಧನವು ಏಕೆ?”

12057042a ತದ್ರಾಜನ್ರಾಜಸಿಂಹಾನಾಂ ನಾನ್ಯೋ ಧರ್ಮಃ ಸನಾತನಃ|
12057042c ಋತೇ ರಕ್ಷಾಂ ಸುವಿಸ್ಪಷ್ಟಾಂ ರಕ್ಷಾ ಲೋಕಸ್ಯ ಧಾರಣಮ್||

ರಾಜನ್! ಆದುದರಿಂದ ರಾಜಸಿಂಹರಿಗೆ ಸ್ಪಷ್ಟವಾಗಿ ಲೋಕದ ಧಾರಣೆಯನ್ನು ರಕ್ಷಿಸುವುದನ್ನು ಬಿಟ್ಟು ಬೇರೆ ಯಾವ ಸನಾತನ ಧರ್ಮವೂ ಇರುವುದಿಲ್ಲ.

12057043a ಪ್ರಾಚೇತಸೇನ ಮನುನಾ ಶ್ಲೋಕೌ ಚೇಮಾವುದಾಹೃತೌ|
12057043c ರಾಜಧರ್ಮೇಷು ರಾಜೇಂದ್ರ ತಾವಿಹೈಕಮನಾಃ ಶೃಣು||

ಪ್ರಚೇತಸನ ಮಗ ಮನುವು ರಾಜಧರ್ಮದ ಕುರಿತು ಈ ಎರಡು

ಶ್ಲೋಕಗಳನ್ನು ಹೇಳಿದ್ದಾನೆ. ರಾಜೇಂದ್ರ! ಅವೆರಡನ್ನೂ ಏಕಾಗ್ರಮನಸ್ಸಿನಿಂದ ಕೇಳು.

12057044a ಷಡೇತಾನ್ಪುರುಷೋ ಜಹ್ಯಾದ್ಭಿನ್ನಾಂ ನಾವಮಿವಾರ್ಣವೇ|
12057044c ಅಪ್ರವಕ್ತಾರಮಾಚಾರ್ಯಮನಧೀಯಾನಮೃತ್ವಿಜಮ್||
12057045a ಅರಕ್ಷಿತಾರಂ ರಾಜಾನಂ ಭಾರ್ಯಾಂ ಚಾಪ್ರಿಯವಾದಿನೀಮ್|
12057045c ಗ್ರಾಮಕಾಮಂ ಚ ಗೋಪಾಲಂ ವನಕಾಮಂ ಚ ನಾಪಿತಮ್||

“ಸಮುದ್ರದಲ್ಲಿ ಒಡೆದುಹೋದ ನಾವೆಯನ್ನು ತ್ಯಜಿಸುವಂತೆ ಈ ಆರು ಪುರುಷರನ್ನು ತ್ಯಜಿಸಬೇಕು: ಉಪದೇಶಿಸದ ಆಚಾರ್ಯ, ವೇದಾಧ್ಯಯನ ಮಾಡಿರದ ಋತ್ವಿಜ, ರಕ್ಷಿಸದೇ ಇರುವ ರಾಜ, ಅಪ್ರಿಯವಾಗಿ ಮಾತನಾಡುವ ಪತ್ನಿ, ಗ್ರಾಮದಲ್ಲಿಯೇ ಇರುವ ಗೋಪಾಲಕ ಮತ್ತು ಅರಣ್ಯದಲ್ಲಿಯೇ ವಾಸಿಸಲಿಚ್ಛಿಸುವ ನಾಪಿತ ಅಥವಾ ಕ್ಷೌರಕ.””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಸಪ್ತಪಂಚಶತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಐವತ್ತೇಳನೇ ಅಧ್ಯಾಯವು.

೫೮

ಯುಧಿಷ್ಠಿರಾದಿ ಸ್ವಸ್ಥಾನಗಮನ

ರಾಜ್ಯರಕ್ಷಣೆಯ ಸಾಧನೆಗಳ ವರ್ಣನೆ; ಸಾಯಂಕಾಲ

ಯುಧಿಷ್ಠಿರಾದಿಗಳು ಹಸ್ತಿನಾಪುರಕ್ಕೆ ಹಿಂದಿರುಗಿದುದು (1-30).

12058001 ಭೀಷ್ಮ ಉವಾಚ|

12058001a ಏತತ್ತೇ ರಾಜಧರ್ಮಾಣಾಂ ನವನೀತಂ ಯುಧಿಷ್ಠಿರ|
12058001c ಬೃಹಸ್ಪತಿರ್ಹಿ ಭಗವಾನ್ನಾನ್ಯಂ ಧರ್ಮಂ ಪ್ರಶಂಸತಿ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ನಾನು ಈಗ ಹೇಳಲಿರುವುದು ರಾಜಧರ್ಮಗಳನ್ನು ಕಡೆದು ತೆಗೆದ ಬೆಣ್ಣೆಯಂಥಹ ವಿಷಯಗಳು. ಏಕೆಂದರೆ ಬೃಹಸ್ಪತಿಯೂ ಅನ್ಯ ಧರ್ಮಗಳನ್ನು ಪ್ರಶಂಸಿಸುವುದಿಲ್ಲ.

12058002a ವಿಶಾಲಾಕ್ಷಶ್ಚ ಭಗವಾನ್ಕಾವ್ಯಶ್ಚೈವ ಮಹಾತಪಾಃ|
12058002c ಸಹಸ್ರಾಕ್ಷೋ ಮಹೇಂದ್ರಶ್ಚ ತಥಾ ಪ್ರಾಚೇತಸೋ ಮನುಃ||
12058003a ಭರದ್ವಾಜಶ್ಚ ಭಗವಾಂಸ್ತಥಾ ಗೌರಶಿರಾ ಮುನಿಃ|
12058003c ರಾಜಶಾಸ್ತ್ರಪ್ರಣೇತಾರೋ ಬ್ರಹ್ಮಣ್ಯಾ ಬ್ರಹ್ಮವಾದಿನಃ||
12058004a ರಕ್ಷಾಮೇವ ಪ್ರಶಂಸಂತಿ ಧರ್ಮಂ ಧರ್ಮಭೃತಾಂ ವರ|
12058004c ರಾಜ್ಞಾಂ ರಾಜೀವತಾಮ್ರಾಕ್ಷ ಸಾಧನಂ ಚಾತ್ರ ವೈ ಶೃಣು||

ಧರ್ಮಭೃತರಲ್ಲಿ ಶ್ರೇಷ್ಠನೇ! ಭಗವಾನ್ ವಿಶಾಲಾಕ್ಷ, ಮಹಾತಪಸ್ವಿ ಕಾವ್ಯ, ಸಹಸ್ರಾಕ್ಷ ಮಹೇಂದ್ರ, ಪ್ರಾಚೇತಸ ಮನು, ಭಗವಾನ್ ಭರದ್ವಾಜ, ಮುನಿ ಗೌರಶಿರ – ಈ ಎಲ್ಲ ರಾಜಶಾಸ್ತ್ರಪ್ರಣೇತಾರರೂ, ಬ್ರಹ್ಮಣ್ಯರೂ ಮತ್ತು ಬ್ರಹ್ಮವಾದಿಗಳೂ ರಕ್ಷಣೆಯೇ ರಾಜಧರ್ಮವೆಂದು ಪ್ರಶಂಸಿಸುತ್ತಾರೆ. ಕಮಲದಂತಹ ಕೆಂಪು ಕಣ್ಣುಗಳುಳ್ಳವನೇ! ರಾಜರು ಇದನ್ನು ಹೇಗೆ ಸಾಧಿಸಬೇಕೆನ್ನುವುದನ್ನು ಹೇಳುತ್ತೇನೆ ಕೇಳು.

12058005a ಚಾರಶ್ಚ ಪ್ರಣಿಧಿಶ್ಚೈವ ಕಾಲೇ ದಾನಮಮತ್ಸರಃ|

12058005c ಯುಕ್ತ್ಯಾದಾನಂ ನ ಚಾದಾನಮಯೋಗೇನ ಯುಧಿಷ್ಠಿರ||

ಯುಧಿಷ್ಠಿರ! ಗುಪ್ತಚಾರರನ್ನೂ ಪ್ರತ್ಯಕ್ಷ ಚಾರರನ್ನೂ ಇಟ್ಟುಕೊಂಡಿರಬೇಕು. ಮತ್ಸರವಿಲ್ಲದೇ ಅವರಿಗೆ ಕಾಲ ಕಾಲಕ್ಕೆ ವೇತನಗಳನ್ನು ಕೊಡಬೇಕು. ಯುಕ್ತಿಯಿಂದ ಮತ್ತು ಜನರಿಗೆ ತೊಂದರೆಯುಂಟಾಗದ ರೀತಿಯಲ್ಲಿ ತೆರಿಗೆಗಳನ್ನು ತೆಗೆದುಕೊಳ್ಳಬೇಕು.

12058006a ಸತಾಂ ಸಂಗ್ರಹಣಂ ಶೌರ್ಯಂ ದಾಕ್ಷ್ಯಂ ಸತ್ಯಂ ಪ್ರಜಾಹಿತಮ್|
12058006c ಅನಾರ್ಜವೈರಾರ್ಜವೈಶ್ಚ ಶತ್ರುಪಕ್ಷಸ್ಯ ಭೇದನಮ್||

ಸತ್ಪುರುಷರನ್ನು ಸಂಗ್ರಹಿಸಿಟ್ಟುಕೊಂಡಿರಬೇಕು. ಶೂರನಾಗಿರಬೇಕು. ಕಾರ್ಯದಕ್ಷನಾಗಿರಬೇಕು. ಸತ್ಯನಿಷ್ಠನೂ ಪ್ರಜೆಗಳ ಹಿತಕಾರಿಯೂ ಆಗಿರಬೇಕು. ಸರಳ ಅಥವಾ ಕಠಿನ ಮಾರ್ಗಗಳಿಂದ ಶತ್ರುಪಕ್ಷವನ್ನು ಭೇದಿಸಬೇಕು.

12058007a ಸಾಧೂನಾಮಪರಿತ್ಯಾಗಃ ಕುಲೀನಾನಾಂ ಚ ಧಾರಣಮ್|
12058007c ನಿಚಯಶ್ಚ ನಿಚೇಯಾನಾಂ ಸೇವಾ ಬುದ್ಧಿಮತಾಮಪಿ||

ಸತ್ಪುರುಷರರನ್ನು ಪರಿತ್ಯಜಿಸಬಾರದು. ಕುಲೀನರ ಭರಣೆ-ಪೋಷಣೆ ಮಾಡಬೇಕು. ಯೋಗ್ಯ ವಸ್ತುಗಳನ್ನು ಸಂಗ್ರಹಿಸಬೇಕು. ಬುದ್ಧಿವಂತರ ಸೇವೆ ಮಾಡುತ್ತಿರಬೇಕು.

12058008a ಬಲಾನಾಂ ಹರ್ಷಣಂ ನಿತ್ಯಂ ಪ್ರಜಾನಾಮನ್ವವೇಕ್ಷಣಮ್|
12058008c ಕಾರ್ಯೇಷ್ವಖೇದಃ ಕೋಶಸ್ಯ ತಥೈವ ಚ ವಿವರ್ಧನಮ್||

ಸೇನೆಗಳು ಯಾವಾಗಲೂ ಹರ್ಷಿತರಾಗಿರುವಂತೆ ನೋಡಿಕೊಳ್ಳಬೇಕು. ಪ್ರಜೆಗಳ ಕಷ್ಟ-ಸುಖಗಳನ್ನು ಪರಿಶೀಲಿಸುತ್ತಿರಬೇಕು. ಪ್ರಜೆಗಳ

ಕುರಿತಾಗಿ ಮಾಡುವ ಕಾರ್ಯಗಳನ್ನು ಮಾಡುವಾಗ ಖೇದಿಸಬಾರದು. ಕೋಶವನ್ನು ತುಂಬಿಸುತ್ತಲೇ ಇರಬೇಕು.

12058009a ಪುರಗುಪ್ತಿರವಿಶ್ವಾಸಃ ಪೌರಸಂಘಾತಭೇದನಮ್|
12058009c ಕೇತನಾನಾಂ ಚ ಜೀರ್ಣಾನಾಮವೇಕ್ಷಾ ಚೈವ ಸೀದತಾಮ್||

ಪುರದ ರಕ್ಷಣೆಯ ಕುರಿತು ಯಾರಮೇಲೂ ವಿಶ್ವಾಸವನ್ನಿಡಬಾರದು. ಪೌರರು ಶತ್ರುವಿನೊಡನೆ ಸಂಪರ್ಕವನ್ನಿಟ್ಟುಕೊಂಡಿದ್ದರೆ ಅದನ್ನು ಭೇದಿಸಬೇಕು. ಜೀರ್ಣಾವಸ್ಥೆಯಲ್ಲಿರುವ ಕಟ್ಟಡಗಳ ಜೀರ್ಣೋದ್ಧಾರ ಮಾಡುತ್ತಿರಬೇಕು.

12058010a ದ್ವಿವಿಧಸ್ಯ ಚ ದಂಡಸ್ಯ ಪ್ರಯೋಗಃ ಕಾಲಚೋದಿತಃ|
12058010c ಅರಿಮಧ್ಯಸ್ಥಮಿತ್ರಾಣಾಂ ಯಥಾವಚ್ಚಾನ್ವವೇಕ್ಷಣಮ್||

ಕಾಲಕ್ಕೆ ಸರಿಯಾಗಿ ಎರಡು ರೀತಿಯ ದಂಡವನ್ನು ಪ್ರಯೋಗಿಸಬೇಕು – ಶರೀರ ದಂಡ ಮತ್ತು ಆರ್ಥಿಕ ದಂಡ. ಮಿತ್ರರ್ಯಾರು, ಶತ್ರುಗಳ್ಯಾರು ಮತ್ತು ಮಧ್ಯಸ್ಥರ್ಯಾರು ಎಂದು ಯಾವಾಗಲೂ ಪರಿಶೀಲಿಸುತ್ತಿರಬೇಕು.

12058011a ಉಪಜಾಪಶ್ಚ ಭೃತ್ಯಾನಾಮಾತ್ಮನಃ ಪರದರ್ಶನಾತ್|
12058011c ಅವಿಶ್ವಾಸಃ ಸ್ವಯಂ ಚೈವ ಪರಸ್ಯಾಶ್ವಾಸನಂ ತಥಾ||

ಸೇವಕರು ತನ್ನ ಕುರಿತು ಶತ್ರುಗಳಿಗೆ ತಿಳಿಸದಿರುವಂತೆ ಜಾಗರೂಕನಾಗಿರಬೇಕು. ಯಾರಲ್ಲಿಯೂ ವಿಶ್ವಾಸವನ್ನಿಡಬಾರದು. ಶರಣಾಗತರಾದ ಶತ್ರುಗಳಿಗೆ ಆಶ್ವಾಸನೆಯನ್ನು ನೀಡಬೇಕು.

12058012a ನೀತಿಧರ್ಮಾನುಸರಣಂ ನಿತ್ಯಮುತ್ಥಾನಮೇವ ಚ|

12058012c ರಿಪೂಣಾಮನವಜ್ಞಾನಂ ನಿತ್ಯಂ ಚಾನಾರ್ಯವರ್ಜನಮ್॥

ನೀತಿ ಧರ್ಮವನ್ನು ಅನುಸರಿಸಬೇಕು. ನಿತ್ಯವೂ
ಉದ್ಯೋಗಶೀಲನಾಗಿರಬೇಕು. ಶತ್ರುಗಳ ಕುರಿತು
ಅಜ್ಞಾನಿಯಾಗಿರಬಾರದು. ನಿತ್ಯವೂ ಅನಾರ್ಯರನ್ನು ವರ್ಜಿಸಬೇಕು.

12058013a ಉತ್ಥಾನಂ ಹಿ ನರೇಂದ್ರಾಣಾಂ ಬೃಹಸ್ಪತಿರಭಾಷತ|
12058013c ರಾಜಧರ್ಮಸ್ಯ ಯನ್ಮೂಲಂ ಶ್ಲೋಕಾಂಶ್ಚಾತ್ರ ನಿಬೋಧ ಮೇ॥

ಉದ್ಯೋಗಶೀಲತೆಯೇ ನರೇಂದ್ರರ ರಾಜಧರ್ಮದ ಮೂಲ. ಇದರ
ಕುರಿತು ಬೃಹಸ್ಪತಿಯು ಹೇಳಿರುವ ಶ್ಲೋಕಗಳನ್ನು ಕೇಳು.

12058014a ಉತ್ಥಾನೇನಾಮೃತಂ ಲಬ್ಧಮುತ್ಥಾನೇನಾಸುರಾ ಹತಾಃ|
12058014c ಉತ್ಥಾನೇನ ಮಹೇಂದ್ರೇಣ ಶ್ರೈಷ್ಠ್ಯಂ ಪ್ರಾಪ್ತಂ ದಿವೀಹ ಚ॥

“ಉದ್ಯೋಗಶೀಲತೆಯಿಂದಲೇ ಅಮೃತವು ದೊರೆಯಿತು.
ಉದ್ಯೋಗಶೀಲತೆಯಿಂದಲೇ ಅಸುರರು ಹತರಾದರು.
ಉದ್ಯೋಗಶೀಲತೆಯಿಂದಲೇ ಮಹೇಂದ್ರನು ದೇವ ಮತ್ತು ಈ
ಲೋಕಗಳಲ್ಲಿ ಶ್ರೇಷ್ಠತೆಯನ್ನು ಪಡೆದುಕೊಂಡನು.

12058015a ಉತ್ಥಾನಧೀರಃ ಪುರುಷೋ ವಾಗ್ಧೀರಾನಧಿತಿಷ್ಠತಿ|
12058015c ಉತ್ಥಾನಧೀರಂ ವಾಗ್ಧೀರಾ ರಮಯಂತ ಉಪಾಸತೇ॥

ಉದ್ಯೋಗಧೀರನಾದ ಪುರುಷನು ವಾಗ್ಧೀರರಿಗಿಂತಲೂ ಹೆಚ್ಚಿನವನು.
ವಾಗ್ಧೀರರು ಉದ್ಯೋಗಧೀರರನ್ನೇ ರಮಿಸುತ್ತಿರುತ್ತಾರೆ ಮತ್ತು
ಪೂಜಿಸುತ್ತಿರುತ್ತಾರೆ.”

12058016a ಉತ್ಥಾನಹೀನೋ ರಾಜಾ ಹಿ ಬುದ್ಧಿಮಾನಪಿ ನಿತ್ಯಶಃ|

12058016c ಧರ್ಷಣೀಯೋ ರಿಪೂಣಾಂ ಸ್ಯಾದ್ಭುಜಂಗ ಇವ ನಿರ್ವಿಷಃ॥

ಉದ್ಯೋಗಶೀಲನಲ್ಲದ ರಾಜನು ಬುದ್ಧಿವಂತನೇ ಆಗಿದ್ದರೂ ವಿಷರಹಿತ ಸರ್ಪದಂತೆ ನಿತ್ಯವೂ ಶತ್ರುಗಳ ಆಕ್ರಮಣಕ್ಕೆ ಈಡಾಗುತ್ತಾನೆ.

12058017a ನ ಚ ಶತ್ರುರವಜ್ಞೇಯೋ ದುರ್ಬಲೋಽಪಿ ಬಲೀಯಸಾ|
12058017c ಅಲ್ಪೋಽಪಿ ಹಿ ದಹತ್ಯಗ್ನಿರ್ವಿಷಮಲ್ಪಂ ಹಿನಸ್ತಿ ಚ॥

ರಾಜನಾಗಿರುವವನು ಶತ್ರುಗಳ ಕುರಿತು ಅಜ್ಞಾನಿಯಾಗಿರಬಾರದು. ಅಲ್ಪವಾದರೂ ಅಗ್ನಿಯು ಸುಡುತ್ತದೆ ಮತ್ತು ವಿಷವು ಅಲ್ಪವಾಗಿದ್ದರೂ ಕೊಲ್ಲುತ್ತದೆ. ಹಾಗೆ ದುರ್ಬಲನಾಗಿ ಕಾಣುವ ಶತ್ರುವು ಮುಂದೆ ಪ್ರಬಲನಾಗಬಹುದು.

12058018a ಏಕಾಶ್ವೇನಾಪಿ ಸಂಭೂತಃ ಶತ್ರುರ್ದುರ್ಗಸಮಾಶ್ರಿತಃ|
12058018c ತಂ ತಂ ತಾಪಯತೇ ದೇಶಮಪಿ ರಾಜ್ಞಃ ಸಮೃದ್ಧಿನಃ॥

ಸಮೃದ್ಧ ರಾಜನ ದೇಶವನ್ನು ಒಂದೇ ಸೇನಾಂಗವನ್ನು ಇಟ್ಟುಕೊಂಡ ಶತ್ರುವೂ ದುರ್ಗವನ್ನು ಗೆದ್ದು ಪರಿತಾಪಕ್ಕೀಡುಮಾಡಬಹುದು.

12058019a ರಾಜ್ಞೋ ರಹಸ್ಯಂ ಯದ್ವಾಕ್ಯಂ ಜಯಾರ್ಥಂ ಲೋಕಸಂಗ್ರಹಃ|
12058019c ಹೃದಿ ಯಚ್ಚಾಸ್ಯ ಜಿಹ್ಮಂ ಸ್ಯಾತ್ಕಾರಣಾರ್ಥಂ ಚ ಯದ್ಭವೇತ್॥
12058020a ಯಚ್ಚಾಸ್ಯ ಕಾರ್ಯಂ ವೃಜಿನಮಾರ್ಜವೇನೈವ ಧಾರ್ಯತೇ|
12058020c ದಂಭನಾರ್ಥಾಯ ಲೋಕಸ್ಯ ಧರ್ಮಿಷ್ಠಾಮಾಚರೇತ್ಕ್ರಿಯಾಮ್॥

ರಾಜನ ರಹಸ್ಯ ಮಾತು, ವಿಜಯಕ್ಕಾಗಿ ಮಾಡಿದ ಲೋಕಸಂಗ್ರಹ, ಹೃದಯದಲ್ಲಿರುವ ದುರುದ್ದೇಶ, ವಿಜಯಕ್ಕಾಗಿ ನಡೆದು ಹೋದ ದುಷ್ಕಾರ್ಯ, ಮತ್ತು ಮಾಡಿದ ಸಮಯಕ್ಕೆ ತಕ್ಕುದಲ್ಲದ ಕಾರ್ಯ –

ಇವುಗಳನ್ನು ರಾಜನಾದವನು ಅತ್ಯಂತ ಸರಳತೆಯಿಂದಲೇ ಧಾರಣೆಮಾಡಬೇಕು. ಲೋಕದಲ್ಲಿ ಪ್ರತಿಷ್ಠೆಗಾಗಿ ಅವನು ಧರ್ಮಿಷ್ಠನಾಗಿಯೇ ನಡೆದಕೊಳ್ಳಬೇಕು.

12058021a ರಾಜ್ಯಂ ಹಿ ಸುಮಹತ್ತಂತ್ರಂ ದುರ್ಧಾರ್ಯಮಕೃತಾತ್ಮಭಿಃ|
12058021c ನ ಶಕ್ಯಂ ಮೃದುನಾ ವೋಢುಮಾಘಾತಸ್ಥಾನಮುತ್ತಮಮ್||[155]

ರಾಜ್ಯಭಾರವು ಒಂದು ಮಹಾ ತಂತ್ರ. ಅಕೃತಾತ್ಮರಿಗೆ ಇದು ಕಷ್ಟದ ಕೆಲಸ. ಮೃದುತ್ವದಿಂದ ಈ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು ಶಕ್ಯವಿಲ್ಲ. ಈ ಉತ್ತಮ ಸ್ಥಾನದಲ್ಲಿ ಆಘಾತಗಳಿರುತ್ತವೆ.

12058022a ರಾಜ್ಯಂ ಸರ್ವಾಮಿಷಂ ನಿತ್ಯಮಾರ್ಜವೇನೇಹ ಧಾರ್ಯತೇ|
12058022c ತಸ್ಮಾನ್ನಿಶ್ರೇಣ ಸತತಂ ವರ್ತಿತವ್ಯಂ ಯುಧಿಷ್ಠಿರ||

ರಾಜ್ಯವೆನ್ನುವುದು ಎಲ್ಲರಿಗೂ ಆಸೆಹುಟ್ಟಿಸುವಂಥಹುದು. ಆದರೆ ನಿತ್ಯವೂ ಸರಳಸ್ವಭಾವವಿರುವವನು ಮಾತ್ರ ಇದರ ಹೊಣೆಯನ್ನು ಹೊರಬಲ್ಲನು. ಯುಧಿಷ್ಠಿರ! ಆದುದರಿಂದ ರಾಜನಾದವನು ಸತತವೂ ಮಿಶ್ರರೀತಿಯಲ್ಲಿ - ಅಂದರೆ ಕ್ರೂರಿಗಳಿಗೆ ಕ್ರೂರಿಯಾಗಿಯೂ ಮೃದುಜನರಿಗೆ ಮೃದುವಾಗಿಯೂ – ವರ್ತಿಸಬೇಕಾಗುತ್ತದೆ.

12058023a ಯದ್ಯಪ್ಯಸ್ಯ ವಿಪತ್ತಿಃ ಸ್ಯಾದ್ರಕ್ಷಮಾಣಸ್ಯ ವೈ ಪ್ರಜಾಃ|
12058023c ಸೋಽಪ್ಯಸ್ಯ ವಿಪುಲೋ ಧರ್ಮ ಏವಂವೃತ್ತಾ ಹಿ ಭೂಮಿಪಾಃ||

---

[155] ನ ಶಕ್ಯಂ ವೃದುನಾ ವೋಢುಮಾಯಾಸಸ್ಥಾನಮುತ್ತಮಮ್| ಅರ್ಥಾತ್ ಮೃದುಸ್ವಭಾವದಿಂದ ರಾಜ್ಯವನ್ನು ಭರಿಸಲು ಶಕ್ಯವಿಲ್ಲ. ರಾಜ್ಯವನ್ನು ಆಳುವುದೆಂಬುದು ಅತ್ಯಂತ ಪರಿಶ್ರಮದಿಂದಲೇ ಸಾಧ್ಯವಾಗಬಲ್ಲ ಕಾರ್ಯವು ಎಂಬ ಪಾಠಾಂತರವಿದೆ.

ಧರ್ಮದಿಂದ ಪ್ರಜಾರಕ್ಷಣೆಯನ್ನು ಮಾಡುತ್ತಿರುವ ರಾಜನಿಗೆ ಒಂದುವೇಳೆ ವಿಪತ್ತಿಯು ಬಂದೊದಗಿದರೂ ಅದು ಅವನಿಗೆ ವಿಪುಲ ಧರ್ಮವನ್ನೇ ನೀಡುತ್ತದೆ. ಹೀಗೆಯೇ ಹಿಂದಿನ ಭೂಮಿಪರೆಲ್ಲರೂ ನಡೆದುಕೊಂಡು ಬಂದಿದ್ದಾರೆ.

12058024a ಏಷ ತೇ ರಾಜಧರ್ಮಾಣಾಂ ಲೇಶಃ ಸಮನುವರ್ಣಿತಃ|
12058024c ಭೂಯಸ್ತೇ ಯತ್ರ ಸಂದೇಹಸ್ತದ್ ಬ್ರೂಹಿ ವದತಾಂ ವರ||

ಮಾತನಾಡುವವರಲ್ಲಿ ಶ್ರೇಷ್ಠನೇ! ನಾನು ಈ ವರೆಗೆ ಲೇಶಮಾತ್ರವೇ ರಾಜಧರ್ಮಗಳನ್ನು ವರ್ಣಿಸಿದ್ದೇನೆ. ಇದರಲ್ಲಿ ಏನಾದರೂ ಸಂದೇಹವಿದ್ದರೆ ಕೇಳು. ಮತ್ತೆ ಹೇಳುತ್ತೇನೆ.””

12058025 ವೈಶಂಪಾಯನ ಉವಾಚ|
12058025a ತತೋ ವ್ಯಾಸಶ್ಚ ಭಗವಾನ್ದೇವಸ್ಥಾನೋಽಶ್ಮನಾ ಸಹ|
12058025c ವಾಸುದೇವಃ ಕೃಪಶ್ಚೈವ ಸಾತ್ಯಕಿಃ ಸಂಜಯಸ್ತಥಾ||
12058026a ಸಾಧು ಸಾಧ್ವಿತಿ ಸಂಹೃಷ್ಟಾಃ ಪುಷ್ಯಮಾಣೈರಿವಾನನೈಃ|
12058026c ಅಸ್ತುವಂಸ್ತೇ ನರವ್ಯಾಘ್ರಂ ಭೀಷ್ಮಂ ಧರ್ಮಭೃತಾಂ ವರಮ್||

ವೈಶಂಪಾಯನನು ಹೇಳಿದನು: “ಆಗ ಭಗವಾನ್ ವ್ಯಾಸ, ಅಶ್ಮನೊಂದಿಗೆ ದೇವಸ್ಥಾನ, ವಾಸುದೇವ, ಕೃಪ, ಸಾತ್ಯಕಿ ಮತ್ತು ಸಂಜಯರು ಸಂಹೃಷ್ಟರಾಗಿ ಅರಳಿದ ಕಮಲಗಳಂತಿದ್ದ ಮುಖಗಳಿಂದ “ಸಾಧು! ಸಾಧು!” ಎಂದು ಧರ್ಮಭೃತರಲ್ಲಿ ಶ್ರೇಷ್ಠ ನರವ್ಯಾಘ್ರ ಭೀಷ್ಮನನ್ನು ಕೊಂಡಾಡಿದರು.

12058027a ತತೋ ದೀನಮನಾ ಭೀಷ್ಮಮುವಾಚ ಕುರುಸತ್ತಮಃ|
12058027c ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ಪಾದೌ ತಸ್ಯ ಶನೈಃ ಸ್ಪೃಶನ್||

ಕುರುಸತ್ತಮ ಯುಧಿಷ್ಠಿರನು ದೀನಮನಸ್ಕನಾಗಿ ಕಂಬನಿದುಂಬಿದ ಕಣ್ಣುಗಳಿಂದ ಭೀಷ್ಮನ ಪಾದಗಳೆರಡನ್ನೂ ಮೃದುವಾಗಿ ಸ್ಪರ್ಶಿಸಿ ಹೇಳಿದನು:

12058028a ಶ್ವ ಇದಾನೀಂ ಸ್ವಸಂದೇಹಂ ಪ್ರಕ್ಷ್ಯಾಮಿ ತ್ವಂ ಪಿತಾಮಹ|
12058028c ಉಪೈತಿ ಸವಿತಾಪ್ಯಸ್ತಂ ರಸಮಾಪೀಯ ಪಾರ್ಥಿವಮ್||

"ಪಿತಾಮಹ! ಸವಿತು ಸೂರ್ಯನು ಭೂಮಿಯ ರಸಗಳನ್ನು ಕುಡಿದು ಹೋಗುತ್ತಿದ್ದಾನೆ. ನಾಳೆ ನನ್ನ ಸಂದೇಹಗಳನ್ನು ನಿನ್ನಲ್ಲಿ ಕೇಳಿ ತಿಳಿದುಕೊಳ್ಳುತ್ತೇನೆ!"

12058029a ತತೋ ದ್ವಿಜಾತೀನಭಿವಾದ್ಯ ಕೇಶವಃ
ಕೃಪಶ್ಚ ತೇ ಚೈವ ಯುಧಿಷ್ಠಿರಾದಯಃ|
12058029c ಪ್ರದಕ್ಷಿಣೀಕೃತ್ಯ ಮಹಾನದೀಸುತಂ
ತತೋ ರಥಾನಾರುರುಹುರ್ಮುದಾ ಯುತಾಃ||

ಅನಂತರ ಬ್ರಾಹ್ಮಣರಿಗೆ ಅಭಿವಂದಿಸಿ ಕೇಶವ, ಕೃಪ, ಯುಧಿಷ್ಠಿರಾದಿಗಳು ಮಹಾನದೀಸುತನಿಗೆ ಪ್ರದಕ್ಷಿಣೆಗೈದು ಸಂತೋಷದಿಂದ ರಥಗಳನ್ನೇರಿದರು.

12058030a ದೃಷದ್ವತೀಂ ಚಾಪ್ಯವಗಾಹ್ಯ ಸುವ್ರತಾಃ
ಕೃತೋದಕಾರ್ಯಾಃ ಕೃತಜಪ್ಯಮಂಗಲಾಃ|
12058030c ಉಪಾಸ್ಯ ಸಂಧ್ಯಾಂ ವಿಧಿವತ್ಪರಂತಪಾಸ್
ತತಃ ಪುರಂ ತೇ ವಿವಿಶುರ್ಗಜಾಹ್ವಯಮ್||

ಆ ಸುವ್ರತ ಪರಂತಪರು ದೃಷದ್ವತೀ ನದಿಯಲ್ಲಿ ಉದಕಕಾರ್ಯಗಳನ್ನು ಮಾಡಿ. ಮಂಗಲ ಜಪಗಳನ್ನು ಮಾಡಿ, ವಿಧಿವತ್ತಾಗಿ

ಸಂಧ್ಯಾವಂದನೆಗಳನ್ನು ಮಾಡಿ ನಂತರ ಗಜಾಹ್ವಯ ಪುರವನ್ನು ಪ್ರವೇಶಿಸಿದರು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಯುಧಿಷ್ಠಿರಾದಿಸ್ವಸ್ಥಾನಗಮನೇ ಅಷ್ಟಪಂಚಶತಮೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಯುಧಿಷ್ಠಿರಾದಿಗಳ ಸ್ವಸ್ಥಾನಗಮನ ಎನ್ನುವ ಐವತ್ತೆಂಟನೇ ಅಧ್ಯಾಯವು.

೫೯

ಸೂತ್ರಾಧ್ಯಾಯ

ಬ್ರಹ್ಮನ ನೀತಿಶಾಸ್ತ್ರದ ವರ್ಣನೆ (1-92) ಮತ್ತು ರಾಜಾ ಪೃಥುವಿನ ಚರಿತ್ರೆ (93-141).

12059001 ವೈಶಂಪಾಯನ ಉವಾಚ|
12059001a ತತಃ ಕಾಲ್ಯಂ ಸಮುತ್ಥಾಯ ಕೃತಪೌರ್ವಾಹ್ಣಿಕಕ್ರಿಯಾಃ|
12059001c ಯಯುಸ್ತೇ ನಗರಾಕಾರೈ ರಥೈಃ ಪಾಂಡವಯಾದವಾಃ॥

ವೈಶಂಪಾಯನನು ಹೇಳಿದನು: “ಅನಂತರ ಬೆಳಗಾಗುತ್ತಲೇ ಎದ್ದು ಪೂರ್ವಾಹ್ಣಿಕಕ್ರಿಯೆಗಳನ್ನು ಮಾಡಿ ಪಾಂಡವ-ಯಾದವರು ನಗರಾಕಾರದ ರಥಗಳಲ್ಲಿ ಕುಳಿತು ಹೊರಟರು.

12059002a ಪ್ರಪದ್ಯ ಚ ಕುರುಕ್ಷೇತ್ರಂ ಭೀಷ್ಮಮಾಸಾದ್ಯ ಚಾನಘಮ್|
12059002c ಸುಖಾಂ ಚ ರಜನೀಂ ಪೃಷ್ಟ್ವಾ ಗಾಂಗೇಯಂ ರಥಿನಾಂ ವರಮ್॥

ಕುರುಕ್ಷೇತ್ರವನ್ನು ತಲುಪಿ ಅನಘ ಭೀಷ್ಮನ ಬಳಿಸಾರಿ ರಥಿಗಳಲ್ಲಿ ಶ್ರೇಷ್ಠ
ಗಾಂಗೇಯನನ್ನು "ರಾತ್ರಿಯು ಸುಖವಾಗಿತ್ತೇ?" ಎಂದು ಪ್ರಶ್ನಿಸಿದರು.

12059003a ವ್ಯಾಸಾದೀನಭಿವಾದ್ಯರ್ಷೀನ್ಸರ್ವೈಸ್ತೈಶ್ಚಾಭಿನಂದಿತಾಃ|
12059003c ನಿಷೇದುರಭಿತೋ ಭೀಷ್ಮಂ ಪರಿವಾರ್ಯ ಸಮಂತತಃ||

ವ್ಯಾಸಾದಿ ಋಷಿಗಳಿಗೆ ನಮಸ್ಕರಿಸಿ, ಅವರೆಲ್ಲರಿಂದಲೂ
ಅಭಿನಂದಿತರಾಗಿ ಭೀಷ್ಮನ ಸುತ್ತಲೂ ಕುಳಿತುಕೊಂಡರು.

12059004a ತತೋ ರಾಜಾ ಮಹಾತೇಜಾ ಧರ್ಮರಾಜೋ ಯುಧಿಷ್ಠಿರಃ|
12059004c ಅಬ್ರವೀತ್ಪ್ರಾಂಜಲಿರ್ಭೀಷ್ಮಂ ಪ್ರತಿಪೂಜ್ಯಾಭಿವಾದ್ಯ ಚ||

ಆಗ ಮಹಾತೇಜಸ್ವೀ ರಾಜಾ ಧರ್ಮರಾಜ ಯುಧಿಷ್ಠಿರನು ಕೈಮುಗಿದು
ಭೀಷ್ಮನನ್ನು ಪ್ರಶ್ನಿಸಿದನುಃ

12059005a ಯ ಏಷ ರಾಜಾ-ರಾಜೇತಿ ಶಬ್ದಶ್ಚರತಿ ಭಾರತ|
12059005c ಕಥಮೇಷ ಸಮುತ್ಪನ್ನಸ್ತನ್ಮೇ ಬ್ರೂಹಿ ಪಿತಾಮಹ||

"ಭಾರತ! ಪಿತಾಮಹ! ಈ ರಾಜಾ-ರಾಜಾ ಎನ್ನುವ ಶಬ್ಧವು
ಬಳಕೆಯಲ್ಲಿದೆಯಲ್ಲಾ ಆ ಶಬ್ಧವು ಹೇಗೆ ಹುಟ್ಟಿಕೊಂಡಿತು ಎನ್ನುವುದನ್ನು
ನನಗೆ ಹೇಳು!

12059006a ತುಲ್ಯಪಾಣಿಶಿರೋಗ್ರೀವಸ್ತುಲ್ಯಬುದ್ಧೀಂದ್ರಿಯಾತ್ಮಕಃ|
12059006c ತುಲ್ಯದುಃಖಸುಖಾತ್ಮಾ ಚ ತುಲ್ಯಪೃಷ್ಠಭುಜೋದರಃ||
12059007a ತುಲ್ಯಶುಕ್ರಾಸ್ಥಿಮಜ್ಜಶ್ಚ ತುಲ್ಯಮಾಂಸಾಸೃಗೇವ ಚ|
12059007c ನಿಃಶ್ವಾಸೋಚ್ಚ್ವಾಸತುಲ್ಯಶ್ಚ ತುಲ್ಯಪ್ರಾಣಶರೀರವಾನ್||
12059008a ಸಮಾನಜನ್ಮಮರಣಃ ಸಮಃ ಸರ್ವಗುಣೈರ್ನರಾಣಾಮ್|

12059008c ವಿಶಿಷ್ಟಬುದ್ಧೀನ್ಯೂರಾಂಶ್ಚ ಕಥಮೇಕೋಽಧಿತಿಷ್ಠತಿ||

ಒಬ್ಬನೇ ಹೇಗೆ ಬುದ್ಧಿಯಲ್ಲಿ ವಿಶಿಷ್ಠರಾಗಿರುವ, ಶೂರರಾಗಿರುವ, ತನ್ನಂತೆಯೇ ಕೈಗಳು, ತಲೆ, ಕುತ್ತಿಗೆಗಳಿರುವ, ತನ್ನದಂಥಹ ಬುದ್ಧಿ-ಇಂದ್ರಿಯಗಳೂ ಇರುವ, ತನ್ನಂತೆಯೇ ದುಃಖ-ಸುಖಿಗಳನ್ನು ಅನುಭವಿಸುವ, ತನ್ನಂತೆಯೇ ಬೆನ್ನು-ಭುಜ-ಉದರಗಳನ್ನು ಹೊಂದಿರುವ; ತನ್ನಂತೆಯೇ ವೀರ್ಯ-ಮೂಳೆ-ಮಜ್ಜೆಗಳನ್ನು ಹೊಂದಿರುವ, ತನ್ನಂತೆಯೇ ಮಾಂಸ-ರಕ್ತಗಳಿರುವ, ತನ್ನಂತೆಯೇ ಉಚ್ಛ್ವಾಸ-ನಿಃಶ್ವಾಸಗಳಿರುವ, ತನ್ನಂತೆಯೇ ಪ್ರಾಣ-ಶರೀರಗಳನ್ನು ಪಡೆದಿರುವ, ಜನ್ಮ-ಮರಣಗಳಲ್ಲಿಯೂ ತನಗೆ ಸಮಾನರಾಗಿರುವ, ಸರ್ವಗುಣಗಳಲ್ಲಿಯೂ ತನ್ನಂತೆಯೇ ಇರುವ ಎಲ್ಲ ಮನುಷ್ಯರನ್ನೂ ಆಳುತ್ತಾನೆ?

12059009a ಕಥಮೇಕೋ ಮಹೀಂ ಕೃತ್ಸ್ನಾಂ ವೀರಶೂರಾರ್ಯಸಂಕುಲಾಮ್|
12059009c ರಕ್ಷತ್ಯಪಿ ಚ ಲೋಕೋಽಸ್ಯ ಪ್ರಸಾದಮಭಿವಾಂಚತಿ||

ಒಬ್ಬನೇ ವೀರ-ಶೂರ-ಆರ್ಯ ಸಂಕುಲಗಳಿಂದ ಕೂಡಿರುವ ಈ ಇಡೀ ಮಹಿಯನ್ನು ರಕ್ಷಿಸುವವನಾದರೂ ಈ ಲೋಕದ ಜನರ ಮೆಚ್ಚುಗೆಯನ್ನು ಏಕೆ ಬಯಸುತ್ತಿರುತ್ತಾನೆ?

12059010a ಏಕಸ್ಯ ಚ ಪ್ರಸಾದೇನ ಕೃತ್ಸ್ನೋ ಲೋಕಃ ಪ್ರಸೀದತಿ|
12059010c ವ್ಯಾಕುಲೇನಾಕುಲಃ ಸರ್ವೋ ಭವತೀತಿ ವಿನಿಶ್ಚಯಃ||

ಅವನೊಬ್ಬನು ಪ್ರಸನ್ನನಾಗಿದ್ದರೆ ಲೋಕವೆಲ್ಲವೂ ಪ್ರಸನ್ನವಾಗಿರುತ್ತದೆ. ಅವನೇನಾದರೂ ವ್ಯಾಕುಲಗೊಂಡರೆ ಸರ್ವವೂ ವ್ಯಾಕುಲಗೊಳ್ಳುತ್ತದೆ. ಇದು ಹೀಗೆಯೇ ನಿಶ್ಚಿತವಾಗಿದೆ.

12059011a ಏತದಿಚ್ಛಾಮ್ಯಹಂ ಸರ್ವಂ ತತ್ತ್ವೇನ ಭರತರ್ಷಭ|
12059011c ಶ್ರೋತುಂ ತನ್ಮೇ ಯಥಾತತ್ತ್ವಂ ಪ್ರಬ್ರೂಹಿ ವದತಾಂ ವರ||

ಭರತರ್ಷಭ! ಮಾತನಾಡುವವರಲ್ಲಿ ಶ್ರೇಷ್ಠ! ಈ ವಿಷಯವನ್ನು
ಯಥಾವತ್ತಾಗಿ ನಿನ್ನಿಂದ ಕೇಳ ಬಯಸುತ್ತೇನೆ. ಇದನ್ನು
ಸಂಪೂರ್ಣವಾಗಿ ಯಥಾತತ್ತ್ವವಾಗಿ ಹೇಳು.

12059012a ನೈತತ್ಕಾರಣಮಲ್ಪಂ ಹಿ ಭವಿಷ್ಯತಿ ವಿಶಾಂ ಪತೇ|
12059012c ಯದೇಕಸ್ಮಿನ್ನಗತ್ಸರ್ವಂ ದೇವವದ್ಯಾತಿ ಸಂನತಿಮ್||

ವಿಶಾಂಪತೇ! ಒಬ್ಬನನ್ನೇ ಈ ಸರ್ವ ಜಗತ್ತೂ ದೇವರಿಗೆ ಸಮಾನನಾಗಿ
ಕಂಡುಕೊಂಡು ತಲೆತಗ್ಗಿಸುತ್ತದೆಯೆಂದರೆ ಇದಕ್ಕೆ ಕಾರಣ
ಅಲ್ಪವಾಗಿರಲಾರದು!”

12059013 ಭೀಷ್ಮ ಉವಾಚ|
12059013a ನಿಯತಸ್ತ್ವಂ ನರಶ್ರೇಷ್ಠ ಶೃಣು ಸರ್ವಮಶೇಷತಃ|
12059013c ಯಥಾ ರಾಜ್ಯಂ ಸಮುತ್ಪನ್ನಮಾದೌ ಕೃತಯುಗೇಽಭವತ್||

ಭೀಷ್ಮನು ಹೇಳಿದನು: “ನರಶ್ರೇಷ್ಠ! ಕೃತಯುಗದಲ್ಲಿ
ಮೊಟ್ಟಮೊದಲನೆಯದಾಗಿ ರಾಜ ಮತ್ತು ರಾಜ್ಯವು ಹೇಗೆ
ಹುಟ್ಟಿಕೊಂಡವೆನ್ನುವುದನ್ನು ಎಲ್ಲವನ್ನೂ ಸಂಪೂರ್ಣವಾಗಿ,
ನಿಯತನಾಗಿ ಕೇಳು.

12059014a ನೈವ ರಾಜ್ಯಂ ನ ರಾಜಾಸೀನ್ನ ದಂಡೋ ನ ಚ ದಾಂಡಿಕಃ|
12059014c ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಚ ಪರಸ್ಪರಮ್||

ಆಗ ರಾಜ್ಯವೆಂಬುದೂ ಇರಲಿಲ್ಲ; ರಾಜನೆನ್ನುವವನೂ ಇರಲಿಲ್ಲ.

ದಂಡವೂ ಇರಲಿಲ್ಲ; ದಂಡಿಸುವವನೂ ಇರಲಿಲ್ಲ. ಎಲ್ಲ ಪ್ರಜೆಗಳೂ ಧರ್ಮದಿಂದ ಪರಸ್ಪರರನ್ನು ರಕ್ಷಿಸಿಕೊಂಡಿದ್ದರು.

12059015a ಪಾಲಯಾನಾಸ್ತಥಾನ್ಯೋನ್ಯಂ ನರಾ ಧರ್ಮೇಣ ಭಾರತ|
12059015c ಖೇದಂ ಪರಮಮಾಜಗ್ಮುಸ್ತತಸ್ತಾನ್ಮೋಹ ಆವಿಶತ್||

ಭಾರತ! ಹೀಗೆ ನರಧರ್ಮದ ಪ್ರಕಾರ ಅನ್ಯೋನ್ಯರನ್ನು ಪಾಲಿಸುತ್ತಿರಲು, ಅವರಲ್ಲಿ ಪರಮ ಖೇದವುಂಟಾಯಿತು ಮತ್ತು ಮೋಹವು ಆವರಿಸಿತು.

12059016a ತೇ ಮೋಹವಶಮಾಪನ್ನಾ ಮಾನವಾ ಮನುಜರ್ಷಭ|
12059016c ಪ್ರತಿಪತ್ತಿವಿಮೋಹಾಚ್ಚ ಧರ್ಮಸ್ತೇಷಾಮನೀನಶತ್||

ಮನುಜರ್ಷಭ! ಮೋಹವಶಕ್ಕೆ ಸಿಲುಕಿದ ಆ ಮಾನವರಲ್ಲಿ ಕರ್ತವ್ಯಪ್ರಜ್ಞೆಯೇ ದೂರವಾಯಿತು ಮತ್ತು ಧರ್ಮಾಚರಣೆಯು ಅಳಿದುಹೋಯಿತು.

12059017a ನಷ್ಟಾಯಾಂ ಪ್ರತಿಪತ್ತೌ ತು ಮೋಹವಶ್ಯಾ ನರಾಸ್ತದಾ|
12059017c ಲೋಭಸ್ಯ ವಶಮಾಪನ್ನಾಃ ಸರ್ವೇ ಭಾರತಸತ್ತಮ||

ಭಾರತಸತ್ತಮ! ಮೋಹವಶರಾಗಿ ಕರ್ತ್ಯವ್ಯವಿವೇಕವನ್ನೇ ಕಳೆದುಕೊಂಡಿದ್ದ ಮನುಷ್ಯರು ಎಲ್ಲರೂ ಲೋಭದ ವಶರಾದರು.

12059018a ಅಪ್ರಾಪ್ತಸ್ಯಾಭಿಮರ್ಶಂ ತು ಕುರ್ವಂತೋ ಮನುಜಾಸ್ತತಃ|
12059018c ಕಾಮೋ ನಾಮಾಪರಸ್ತತ್ರ ಸಮಪದ್ಯತ ವೈ ಪ್ರಭೋ||

ಪ್ರಭೋ! ದೊರಕದೇ ಇರುವ ವಸ್ತುಗಳನ್ನು ಪಡೆಯಲು ಪ್ರಯತ್ನಿಸುತ್ತಿರುವ ಆ ಮನುಷ್ಯರನ್ನು ಆಗ ಕಾಮ ಎಂಬ ಹೆಸರಿನ

ಇನ್ನೊಂದು ಶತ್ರುವು ಆಕ್ರಮಿಸಿತು.

12059019a ತಾಂಸ್ತು ಕಾಮವಶಂ ಪ್ರಾಪ್ತಾನ್ರಾಗೋ ನಾಮ ಸಮಸ್ಪೃಶತ್|
12059019c ರಕ್ತಾಶ್ಚ ನಾಭ್ಯಜಾನಂತ ಕಾರ್ಯಾಕಾರ್ಯಂ ಯುಧಿಷ್ಠಿರ||

ಕಾಮವಶರಾದ ಅವರನ್ನು ರಾಗ ಎನ್ನುವ ಇನ್ನೊಂದು ಭೂತವೂ
ಆವರಿಸಿಕೊಂಡಿತು. ಯುಧಿಷ್ಠಿರ! ರಾಗವಶರಾದ ಅವರು ಕಾರ್ಯ-
ಅಕಾರ್ಯಗಳನ್ನು ತಿಳಿಯುತ್ತಿರಲಿಲ್ಲ.

12059020a ಅಗಮ್ಯಾಗಮನಂ ಚೈವ ವಾಚ್ಯಾವಾಚ್ಯಂ ತಥೈವ ಚ|
12059020c ಭಕ್ಷ್ಯಾಭಕ್ಷ್ಯಂ ಚ ರಾಜೇಂದ್ರ ದೋಷಾದೋಷಂ ಚ ನಾತ್ಯಜನ್||

ರಾಜೇಂದ್ರ! ಯಾರೊಡನೆ ಸೇರಬಾರದೋ ಅವರೊಡನೆ
ಸೇರುತ್ತಿದ್ದರು; ಏನನ್ನು ಮಾತನಾಡಬಾರದೋ ಅದನ್ನೇ
ಮಾತನಾಡುತ್ತಿದ್ದರು, ಮತ್ತು ದೋಷ-ಅದೋಷಗಳು, ಭಕ್ಷ್ಯ-
ಅಭಕ್ಷ್ಯಗಳು ಯಾವುದನ್ನೂ ತಿರಸ್ಕರಿಸುತ್ತಿರಲಿಲ್ಲ.

12059021a ವಿಪ್ಲುತೇ ನರಲೋಕೇಽಸ್ಮಿಂಸ್ತತೋ ಬ್ರಹ್ಮ ನನಾಶ ಹ|
12059021c ನಾಶಾಚ್ಚ ಬ್ರಹ್ಮಣೋ ರಾಜನ್ಧರ್ಮೋ ನಾಶಮಥಾಗಮತ್||

ಹೀಗೆ ನರಲೋಕದಲ್ಲಿ ಕ್ಷೋಭೆಯುಂಟಾಗಲು, ಬ್ರಹ್ಮಜ್ಞಾನವು
ನಾಶವಾಯಿತು. ರಾಜನ್! ಬ್ರಹ್ಮಜ್ಞಾನವು ನಾಶವಾಗಲು
ಧರ್ಮನಾಶವೂ ಪ್ರಾರಂಭವಾಯಿತು.

12059022a ನಷ್ಟೇ ಬ್ರಹ್ಮಣಿ ಧರ್ಮೇ ಚ ದೇವಾಸ್ತ್ರಾಸಮಥಾಗಮನ್|
12059022c ತೇ ತ್ರಸ್ತಾ ನರಶಾರ್ದೂಲ ಬ್ರಹ್ಮಾಣಂ ಶರಣಂ ಯಯುಃ||

ಬ್ರಹ್ಮ ವಿದ್ಯೆ ಮತ್ತು ಧರ್ಮವು ನಶಿಸಲು, ದೇವತೆಗಳಲ್ಲಿ

ಭಯವುಂಟಾಯಿತು. ನರಶಾರ್ದೂಲ! ಭಯಭೀತರಾದ ಅವರು ಬ್ರಹ್ಮನ ಶರಣು ಹೋದರು.

12059023a ಪ್ರಪದ್ಯ ಭಗವಂತಂ ತೇ ದೇವಾ ಲೋಕಪಿತಾಮಹಮ್|
12059023c ಊಚುಃ ಪ್ರಾಂಜಲಯಃ ಸರ್ವೇ ದುಃಖಶೋಕಭಯಾರ್ದಿತಾಃ||

ದುಃಖ-ಶೋಕ-ಭಯಾರ್ದಿತರಾದ ಆ ಎಲ್ಲ ದೇವತೆಗಳೂ ಕೈಮುಗಿದು ಲೋಕಪಿತಾಮಹ ಭಗವಂತನನ್ನು ಪ್ರಾರ್ಥಿಸುತ್ತಾ ಕೇಳಿಕೊಂಡರುಃ

12059024a ಭಗವನ್ನರಲೋಕಸ್ಥಂ ನಷ್ಟಂ ಬ್ರಹ್ಮ ಸನಾತನಮ್|
12059024c ಲೋಭಮೋಹಾದಿಭಿರ್ಭಾವೈಸ್ತತೋ ನೋ ಭಯಮಾವಿಶತ್||


“ಭಗವನ್! ನರಲೋಕದಲ್ಲಿದ್ದ ಸನಾತನ ಬ್ರಹ್ಮವಿದ್ಯೆಯು ನಷ್ಟವಾಗಿ ಹೋಗಿದೆ. ಮನುಷ್ಯರು ಲೋಭ-ಮೋಹಾದಿ ಭಾವಗಳಿಗೆ ಸಿಲುಕಿದುದರಿಂದ ನಮ್ಮನ್ನು ಭಯವು ಆವರಿಸಿಬಿಟ್ಟಿದೆ.

12059025a ಬ್ರಹ್ಮಣಶ್ಚ ಪ್ರಣಾಶೇನ ಧರ್ಮೋಽಪ್ಯನಶದೀಶ್ವರ|
12059025c ತತಃ ಸ್ಮ ಸಮತಾಂ ಯಾತಾ ಮರ್ತ್ಯೈಸ್ತ್ರಿಭುವನೇಶ್ವರ||

ಈಶ್ವರ! ತ್ರಿಭುವನೇಶ್ವರ! ಬ್ರಹ್ಮಜ್ಞಾನದ ನಾಶದಿಂದಾಗಿ ಧರ್ಮವೂ ಕೂಡ ನಶಿಸಿ ಹೋಗುತ್ತಿದೆ. ಇದರಿಂದಾಗಿ ನಾವೂ ಕೂಡ ಮನುಷ್ಯರಿಗೆ ಸಮನಾಗಿಬಿಟ್ಟಿದ್ದೇವೆ!

12059026a ಅಧೋ ಹಿ ವರ್ಷಮಸ್ಮಾಕಂ ಮರ್ತ್ಯಾಸ್ತೂರ್ಧ್ವಪ್ರವರ್ಷಿಣಃ|
12059026c ಕ್ರಿಯಾವ್ಯಪರಮಾತ್ತೇಷಾಂ ತತೋಽಗಚ್ಚಾಮ ಸಂಶಯಮ್||

ಮಳೆ-ಬೆಳೆಗಳನ್ನು ಕೆಳಗೆ ಸುರಿಸುತ್ತಿರುವ ನಮಗೆ ಮರ್ತ್ಯರು ಯಜ್ಞಾದಿಗಳ ಮೂಲಕ ಹವಿಸ್ಸನ್ನು ಮೇಲ್ಮುಖವಾಗಿ ಸುರಿಸುತ್ತಿದ್ದರು.



ಈಗ ಅವರು ಯಜ್ಞಾದಿ ಕಾರ್ಯಗಳನ್ನೇ ನಿಲ್ಲಿಸಿದುದರಿಂದ ನಮಗೆ ಸಂಶಯವಾಗ ತೊಡಗಿದೆ!

12059027a ಅತ್ರ ನಿಃಶ್ರೇಯಸಂ ಯನ್ನಸ್ತದ್ಧ್ಯಾಯಸ್ವ ಪಿತಾಮಹ|
12059027c ತ್ವತ್ಪ್ರಭಾವಸಮುತ್ಥೋಽಸೌ ಪ್ರಭಾವೋ ನೋ ವಿನಶ್ಯತಿ||

ಪಿತಾಮಹ! ಈಗ ನಮಗೆ ಶ್ರೇಯಸ್ಸು ಯಾವುದರಿಂದಾಗುವುದೋ ಅದರ ಕುರಿತು ನೀನೇ ಚಿಂತಿಸು! ನಿನ್ನ ಪ್ರಭಾವದಿಂದಲೇ ಪ್ರಾಪ್ತವಾಗಿರುವ ನಮ್ಮ ಈ ದೈವಪ್ರಭಾವವು ಯಾವುದೇ ಕಾರಣದಿಂದಲೂ ವಿನಾಶಹೊಂದಬಾರದು!"

12059028a ತಾನುವಾಚ ಸುರಾನ್ಸರ್ವಾನ್ಸ್ವಯಂಭೂರ್ಭಗವಾಂಸ್ತತಃ|
12059028c ಶ್ರೇಯೋಽಹಂ ಚಿಂತಯಿಷ್ಯಾಮಿ ವ್ಯೇತು ವೋ ಭೀಃ ಸುರರ್ಷಭಾಃ||

ಆಗ ಭಗವಾನ್ ಸ್ವಯಂಭುವು ಆ ಸರ್ವ ಸುರರಿಗೆ ಉತ್ತರಿಸಿದನು: "ಸುರರ್ಷಭರೇ! ನಿಮ್ಮ ಶ್ರೇಯಸ್ಸಿಗಾಗಿ ನಾನು ಯೋಚಿಸುತ್ತೇನೆ. ನಿಮ್ಮ ಭಯವನ್ನು ದೂರಮಾಡಿಕೊಳ್ಳಿ!"

12059029a ತತೋಽಧ್ಯಾಯಸಹಸ್ರಾಣಾಂ ಶತಂ ಚಕ್ರೇ ಸ್ವಬುದ್ಧಿಜಮ್|
12059029c ಯತ್ರ ಧರ್ಮಸ್ತಥೈವಾರ್ಥಃ ಕಾಮಶ್ಚೈವಾನುವರ್ಣಿತಃ||

ಆಗ ಬ್ರಹ್ಮನು ತನ್ನ ಬುದ್ಧಿಗೆ ತೋಚಿದಂತೆ, ಧರ್ಮ-ಅರ್ಥ-ಕಾಮಗಳನ್ನು ವರ್ಣಿಸುವ ಒಂದು ಲಕ್ಷ ಅಧ್ಯಾಯಗಳನ್ನು ರಚಿಸಿದನು.

12059030a ತ್ರಿವರ್ಗ ಇತಿ ವಿಖ್ಯಾತೋ ಗಣ ಏಷ ಸ್ವಯಂಭುವಾ|
12059030c ಚತುರ್ಥೋ ಮೋಕ್ಷ ಇತ್ಯೇವ ಪೃಥಗರ್ಥಃ ಪೃಥಗ್ಗಣಃ||

ಸ್ವಯಂಭುವಿನ ಈ ಸಮೂಹಗ್ರಂಥವು ತ್ರಿವರ್ಗ ಎಂದು ವಿಖ್ಯಾತವಾಯಿತು. ಬೇರೆಯದೇ ಅರ್ಥವುಳ್ಳ ನಾಲ್ಕನೆಯ ಮೋಕ್ಷ ಎನ್ನುವ ಪ್ರಕರಣವು ಇನ್ನೊಂದು ಪ್ರತ್ಯೇಕ ಸಂಹಿತವು.

12059031a ಮೋಕ್ಷಸ್ಯಾಪಿ ತ್ರಿವರ್ಗೋಽನ್ಯಃ ಪ್ರೋಕ್ತಃ ಸತ್ತ್ವಂ ರಜಸ್ತಮಃ|
12059031c ಸ್ಥಾನಂ ವೃದ್ಧಿಃ ಕ್ಷಯಶ್ಚೈವ ತ್ರಿವರ್ಗಶ್ಚೈವ ದಂಡಜಃ||

ಮೋಕ್ಷದಲ್ಲಿಯೂ ಸತ್ತ್ವ-ರಜ-ತಮಗಳೆಂಬ ಮೂರು ವರ್ಗಗಳಿವೆಯೆಂದು ಹೇಳುತ್ತಾರೆ. ದಂಡದಿಂದ ಹುಟ್ಟಿದ ತ್ರಿವರ್ಗಗಳು ಸ್ಥಾನ, ವೃದ್ಧಿ ಮತ್ತು ಕ್ಷಯಗಳು[156].

---

156 ದಂಡಾತ್ ಸ್ಥಾನಂ-ಸಾಮ್ಯಂ ವಣಿಜಾಂ ಅರ್ಥಾತ್ ವರ್ತಕರು ಒಂದೇ ಸ್ಥಿತಿಯಲ್ಲಿರುವಂತೆ ಮಾಡುವುದು, ಹೆಚ್ಚಿನ ಲಾಭವನ್ನು ಪಡೆಯದಂತೆ ತೆರಿಗೆ ಮೊದಲಾದುವುಗಳನ್ನು ಹಾಕಿ ಸ್ತಿಮಿತದಲ್ಲಿಡುವುದು; ವೃದ್ಧಿ ತಪಸ್ವಿನಾಂ

12059032a ಆತ್ಮಾ ದೇಶಶ್ಚ ಕಾಲಶ್ಚಾಪ್ಯುಪಾಯಾಃ ಕೃತ್ಯಮೇವ ಚ|
12059032c ಸಹಾಯಾಃ ಕಾರಣಂ ಚೈವ ಷಡ್ವರ್ಗೋ ನೀತಿಜಃ ಸ್ಮೃತಃ||

ಇದರಲ್ಲಿರುವ ಆತ್ಮ, ದೇಶ, ಕಾಲ, ಉಪಾಯ, ಕರ್ತವ್ಯ ಮತ್ತು ಸಹಾಯ – ಈ ಷಡ್ವರ್ಗಗಳ ನೀತಿಯೇ ಸರ್ವೋನ್ನತಿಗೆ ಕಾರಣವಾಗುತ್ತದೆಯೆಂದು ಹೇಳುತ್ತಾರೆ.

12059033a ತ್ರಯೀ ಚಾನ್ವೀಕ್ಷಿಕೀ ಚೈವ ವಾರ್ತಾ ಚ ಭರತರ್ಷಭ|
12059033c ದಂಡನೀತಿಶ್ಚ ವಿಪುಲಾ ವಿದ್ಯಾಸ್ತತ್ರ ನಿದರ್ಶಿತಾಃ||

ಭರತರ್ಷಭ! ಇದರಲ್ಲಿ ತ್ರಯೀ[157], ಅನ್ವೀಕ್ಷಿಕೀ[158], ವಾರ್ತೆ[159] ಮತ್ತು ದಂಡನೀತಿ – ಈ ವಿಪುಲ ವಿದ್ಯೆಗಳ ನಿರೂಪಣೆಯಿದೆ.

12059034a ಅಮಾತ್ಯರಕ್ಷಾಪ್ರಣಿಧೀ ರಾಜಪುತ್ರಸ್ಯ ರಕ್ಷಣಮ್|
12059034c ಚಾರಶ್ಚ ವಿವಿಧೋಪಾಯಃ ಪ್ರಣಿಧಿಶ್ಚ ಪೃಥಗ್ವಿಧಃ||
12059035a ಸಾಮ ಚೋಪಪ್ರದಾನಂ ಚ ಭೇದೋ ದಂಡಶ್ಚ ಪಾಂಡವ|
12059035c ಉಪೇಕ್ಷಾ ಪಂಚಮೀ ಚಾತ್ರ ಕಾರ್ತ್ಸ್ನ್ಯೇನ ಸಮುದಾಹೃತಾ||

ಪಾಂಡವ! ಇದರಲ್ಲಿ ಮಂತ್ರಿಗಳ ರಕ್ಷಣೆ, ರಾಜದೂತರು ಮತ್ತು ರಾಜಪುತ್ರರ ರಕ್ಷಣೆ. ಚಾರರ ವಿವಿಧ ಉಪಾಯಗಳು, ಬೇರೆ ಬೇರೆ ವಿಧದ ಗುಪ್ತಚರರು, ಸಾಮ, ದಾನ, ಭೇದ, ದಂಡ ಮತ್ತು ಉಪೇಕ್ಷೆ ಈ

ಅರ್ಥಾತ್ ತಪಸ್ವಿಗಳ ವೃದ್ಧಿ ಮತ್ತು ಕ್ಷಯಶ್ಚೋರಾಣಾಂ ಅರ್ಥಾತ್ ಕಳ್ಳಕಾಕರ ವಿನಾಶ – ಇವು ದಂಡಜನ್ಯವಾದ ತ್ರಿವರ್ಗಗಳು.

157 ಕರ್ಮಕಾಂಡ

158 ಜ್ಞಾನಕಾಂಡ

159 ಕೃಷಿ, ಗೋರಕ್ಷಣೆ ಮತ್ತು ವಾಣಿಜ್ಯ

ಐದು ಉಪಾಯಗಳು ಇವೆಲ್ಲವೂ ವಿಸ್ತಾರವಾಗಿ ವರ್ಣಿತವಾಗಿವೆ.

12059036a ಮಂತ್ರಶ್ಚ ವರ್ಣಿತಃ ಕೃತ್ಸ್ನಸ್ತಥಾ ಭೇದಾರ್ಥ ಏವ ಚ|
12059036c ವಿಭ್ರಂಶಶ್ಚೈವ ಮಂತ್ರಸ್ಯ ಸಿದ್ಧ್ಯಸಿದ್ಧ್ಯೋಶ್ಚ ಯತ್ಫಲಮ್||

ಇದರಲ್ಲಿ ಮಂತ್ರಾಲೋಚನೆ ಮತ್ತು ಭೇದಗಳ ಅರ್ಥವನ್ನು ಸಂಪೂರ್ಣವಾಗಿ – ಮಂತ್ರಾಲೋಚನೆಯು ಬಹಿರಂಗವಾದರೆ ಮತ್ತು ಭೇದವು ಸಿದ್ಧಿಯಾದರೆ ದೊರೆಯುವ ಫಲಗಳೂ – ವರ್ಣಿತವಾಗಿವೆ.

12059037a ಸಂಧಿಶ್ಚ ವಿವಿಧಾಭಿಖ್ಯೋ ಹೀನೋ ಮಧ್ಯಸ್ತಥೋತ್ತಮಃ|
12059037c ಭಯಸತ್ಕಾರವಿತ್ತಾಖ್ಯಃ ಕಾರ್ತ್ಸ್ನ್ಯೇನ ಪರಿವರ್ಣಿತಃ||

ಇದರಲ್ಲಿ ಸಂಧಿಯ ವಿವಿಧ ಪ್ರಕಾರಗಳು – ಭಯದಿಂದ ಮಾಡಿಕೊಂಡ ಹೀನ ಸಂಧಿ, ಸತ್ಕಾರವನ್ನು ಪಡೆದು ಮಾಡಿಕೊಂಡ ಮಧ್ಯಮ ಸಂಧಿ, ಮತ್ತು ವಿತ್ತವನ್ನು ಪಡೆದು ಮಾಡಿಕೊಂಡ ಉತ್ತಮ ಸಂಧಿ – ಈ ಮೊದಲಾದ ಹೀನ, ಮಧ್ಯಮ ಮತ್ತು ಉತ್ತಮ ಸಂಧಿಗಳ ಕುರಿತು ಸಂಪೂರ್ಣ ವರ್ಣನೆಯಿದೆ.

12059038a ಯಾತ್ರಾಕಾಲಾಶ್ಚ ಚತ್ವಾರಸ್ತ್ರಿವರ್ಗಸ್ಯ ಚ ವಿಸ್ತರಃ|
12059038c ವಿಜಯೋ ಧರ್ಮಯುಕ್ತಶ್ಚ ತಥಾರ್ಥವಿಜಯಶ್ಚ ಹ||
12059039a ಆಸುರಶ್ಚೈವ ವಿಜಯಸ್ತಥಾ ಕಾರ್ತ್ಸ್ನ್ಯೇನ ವರ್ಣಿತಃ|
12059039c ಲಕ್ಷಣಂ ಪಂಚವರ್ಗಸ್ಯ ತ್ರಿವಿಧಂ ಚಾತ್ರ ವರ್ಣಿತಮ್||

ಇದರಲ್ಲಿ ದಂಡ ಯಾತ್ರೆಯ ನಾಲ್ಕು ಕಾಲಗಳೂ[160], ವಿಜಯದ ನಾಲ್ಕು

[160] ಶತ್ರುವಿನ ಮೇಲೆ ಯುದ್ಧಕ್ಕೆ ಹೊರಡಲು ಇರುವ ನಾಲ್ಕು ಕಾಲವಿಶೇಷಗಳು: (೧) ತನ್ನ ಮಿತ್ರನ ವೃದ್ಧಿ (೨) ತನ್ನ ರಾಜ್ಯದ

ವರ್ಗಗಳೂ – ಧರ್ಮ ವಿಜಯ, ಅರ್ಥ ವಿಜಯ ಮತ್ತು ಆಸುರ ವಿಜಯ – ವಿಸ್ತಾರವಾಗಿ ವರ್ಣಿತಗೊಂಡಿವೆ. ಮತ್ತು ಪಂಚವರ್ಗಗಳ[161] ಲಕ್ಷಣಗಳೂ, ಮೂರು ವಿಧಗಳೂ[162] ವರ್ಣಿತವಾಗಿವೆ.

12059040a ಪ್ರಕಾಶಶ್ಚಾಪ್ರಕಾಶಶ್ಚ ದಂಡೋಽಥ ಪರಿಶಬ್ದಿತಃ|
12059040c ಪ್ರಕಾಶೋಽಷ್ಟವಿಧಸ್ತತ್ರ ಗುಹ್ಯಸ್ತು ಬಹುವಿಸ್ತರಃ||

ಇದರಲ್ಲಿ ಪ್ರಕಾಶ ಮತ್ತು ಅಪ್ರಕಾಶ ಈ ಎರಡೂ ಸೇನಾದಂಡಗಳ ಕುರಿತು, ಎಂಟು ವಿಧದ ಪ್ರಕಾಶ ಸೇನಾದಂಡಗಳು ಮತ್ತು ಗುಪ್ತ ಸೇನಾದಂಡದ ಕುರಿತು ಬಹಳ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

12059041a ರಥಾ ನಾಗಾ ಹಯಾಶ್ಚೈವ ಪಾದಾತಾಶ್ಚೈವ ಪಾಂಡವ|
12059041c ವಿಷ್ಟಿರ್ನಾವಶ್ಚ ರಾಶ್ಚೈವ ದೇಶಿಕಾಃ ಪಥಿ ಚಾಷ್ಟಕಮ್||
12059042a ಅಂಗಾನ್ಯೇತಾನಿ ಕೌರವ್ಯ ಪ್ರಕಾಶಾನಿ ಬಲಸ್ಯ ತು|
12059042c ಜಂಗಮಾಜಂಗಮಾಶ್ಚೋಕ್ತಾಶ್ಚೂರ್ಣಯೋಗಾ ವಿಷಾದಯಃ||

ಪಾಂಡವ! ಕೌರವ್ಯ! ರಥಗಳು, ಆನೆಗಳು, ಕುದುರೆಗಳು, ಪದಾತಿಗಳು, ಭಾರವನ್ನು ಹೊರುವವರು, ನಾವಿಕರು, ಗೂಢಚಾರರು ಮತ್ತು ದೇಶಿಕಾಚಾರ್ಯರು – ಇವೇ ಪ್ರಕಾಶ ಸೇನಾದಂಡದ ಎಂಟು

ಧನಕೋಶವನ್ನು ತುಂಬಿಸುವುದು (ಖ) ಶತ್ರುವಿನ ಮಿತ್ರನ ನಾಶ (ಳ) ಶತ್ರುವಿನ ಧನಕೋಶದ ನಾಶ.

161 ಮಂತ್ರಿ, ರಾಷ್ಟ್ರ, ದುರ್ಗ, ಸೈನ್ಯ ಮತ್ತು ಕೋಶ - ಇವು ಪಂಚವರ್ಗಗಳು.

162 ಪಂಚವರ್ಗಗಳ ಪ್ರತಿಯೊಂದರಲ್ಲಿಯೂ ಇರುವ ಉತ್ತಮ, ಮಧ್ಯಮ ಮತ್ತು ಅಧಮಗಳೆಂಬ ವಿಧಗಳು.

ಅಂಗಗಳು. ಚಲಿಸುವ ಸರ್ಪಾದಿಗಳಿಂದ ತಯಾರಾದ ಮತ್ತು ಚಲಿಸದ ಮರ-ಗಿಡ-ಬಳ್ಳಿಗಳಿಂದ ತಯಾರಾದ ವಿಷ ಇವೇ ಮೊದಲಾದವುಗಳು ಗುಪ್ತ ಸೇನೆಯ ಅಂಗಗಳು.

12059043a ಸ್ಪರ್ಶೇ ಚಾಭ್ಯವಹಾರ್ಯೇ ಚಾಪ್ಯುಪಾಂಶುರ್ವಿವಿಧಃ ಸ್ಮೃತಃ|
12059043c ಅರಿರ್ಮಿತ್ರಮುದಾಸೀನ ಇತ್ಯೇತೇಽಪ್ಯನುವರ್ಣಿತಾಃ||

ವಿಷಾದಿ ಗುಪ್ತ ಸೇನಾಂಗವಿಷಯಗಳನ್ನು ಆಯುಧ ಅಥವಾ ವಸ್ತ್ರದ ಮೂಲಕ ಶತ್ರುವಿಗೆ ಸ್ಪರ್ಶವಾಗುವಂತೆ ಮಾಡಬೇಕು ಅಥವಾ ಶತ್ರುವಿನ ಭೋಜನಾದಿಗಳಲ್ಲಿ ಬೆರೆಸಬೇಕು ಎಂದು ಹೇಳಿದ್ದಾರೆ. ಅಲ್ಲದೇ ಈ ನೀತಿ ಶಾಸ್ತ್ರದಲ್ಲಿ ಅರಿ, ಮಿತ್ರ ಮತ್ತು ಉದಾಸೀನ ಇವರ ಬಗ್ಗೆಯ ವರ್ಣನೆಯೂ ಇದೆ.

12059044a ಕೃತ್ಸ್ನಾ ಮಾರ್ಗಗುಣಾಶ್ಚೈವ ತಥಾ ಭೂಮಿಗುಣಾಶ್ಚ ಹ|
12059044c ಆತ್ಮರಕ್ಷಣಮಾಶ್ವಾಸಃ ಸ್ಪಶಾನಾಂ ಚಾನ್ವವೇಕ್ಷಣಮ್||

ಇದರಲ್ಲಿ ಗ್ರಹ-ನಕ್ಷತ್ರಗಳ ಸಮಸ್ತ ಮಾರ್ಗಗುಣಗಳು[163] ಮತ್ತು ಭೂಮಿಯ ಗುಣಗಳು[164], ಆತ್ಮರಕ್ಷಣೆಯ ವಿಧಾನಗಳು, ಆಶ್ವಾಸನೆ, ರಥಾದಿಗಳ ನಿರ್ಮಾಣ ಮತ್ತು ಇವುಗಳ ನಿರೀಕ್ಷೆ ಇವುಗಳ ಕುರಿತು ವರ್ಣನೆಯಿದೆ.

12059045a ಕಲ್ಪನಾ ವಿವಿಧಾಶ್ಚಾಪಿ ನೃನಾಗರಥವಾಜಿನಾಮ್|
12059045c ವ್ಯೂಹಾಶ್ಚ ವಿವಿಧಾಭಿಖ್ಯಾ ವಿಚಿತ್ರಂ ಯುದ್ಧಕೌಶಲಮ್||

---

163 ಗ್ರಹಗಳು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೋಗುವುದರಿಂದ ಉಂಟಾಗುವ ಮಾರ್ಪಾಡುಗಳು

164 ಭೂಮಿಯ ಆಳ ಗುಣಗಳು ಅಥವಾ ಬಲಗಳು

12059046a ಉತ್ಪಾತಾಶ್ಚ ನಿಪಾತಾಶ್ಚ ಸುಯುದ್ಧಂ ಸುಪಲಾಯನಮ್।
12059046c ಶಸ್ತ್ರಾಣಾಂ ಪಾಯನಜ್ಞಾನಂ ತಥೈವ ಭರತರ್ಷಭ॥

ಭರತರ್ಷಭ! ಅದರಲ್ಲಿ ನರ-ನಾಗ-ರಥ-ವಾಜಿಗಳ ವಿವಿಧ ವ್ಯೂಹಗಳ ಕಲ್ಪನೆಗಳು ಮತ್ತು ವಿವಿಧ ವಿಚಿತ್ರ ಯುದ್ಧಕೌಶಲಗಳು ಹೇಳಲ್ಪಟ್ಟಿವೆ. ಹಾಗೆಯೇ ಮೇಲಕ್ಕೆ ಹಾರುವುದು, ಕೆಳಕ್ಕೆ ಬೀಳುವುದು, ಎದುರಿಸಿ ಯುದ್ಧಮಾಡುವುದು, ಉತ್ತಮವಾಗಿ ಪಲಾಯನ ಮಾಡುವುದು, ಶಸ್ತ್ರಗಳನ್ನು ಹರಿತಹೊಳಿಸುವ ವಿಧಾನ ಇವುಗಳ ವರ್ಣನೆಯೂ ಇದೆ.

12059047a ಬಲವ್ಯಸನಮುಕ್ತಂ ಚ ತಥೈವ ಬಲಹರ್ಷಣಮ್।
12059047c ಪೀಡನಾಸ್ಕಂದಕಾಲಶ್ಚ ಭಯಕಾಲಶ್ಚ ಪಾಂಡವ॥

ಪಾಂಡವ! ಸೇನೆಗೆ ಬಂದೊದಗುವ ವ್ಯಸನಗಳು, ಸೇನೆಯನ್ನು ಹರ್ಷಗೊಳಿಸುವುದು, ಪೀಡೆಗೊಳಗಾದಾಗ ಬೇರೆ ವಾಸಿಸುವ ಸಮಯ, ಭಯದ ಕಾಲ ಇವುಗಳ ವರ್ಣನೆಯೂ ಇದೆ.

12059048a ತಥಾ ಖಾತವಿಧಾನಂ ಚ ಯೋಗಸಂಚಾರ ಏವ ಚ।
12059048c ಚೌರಾಟವ್ಯಬಲೈಶ್ಚೈಗ್ರೈಃ ಪರರಾಷ್ಟ್ರಸ್ಯ ಪೀಡನಮ್॥
12059049a ಅಗ್ನಿದೈರ್ಗರದೈಶ್ಚೈವ ಪ್ರತಿರೂಪಕಚಾರಕೈಃ।
12059049c ಶ್ರೇಣಿಮುಖ್ಯೋಪಜಾಪೇನ ವೀರುಧಶ್ಚೇದನೇನ ಚ॥
12059050a ದೂಷಣೇನ ಚ ನಾಗಾನಾಮಾಶಂಕಾಜನನೇನ ಚ।
12059050c ಆರೋಧನೇನ ಭಕ್ತಸ್ಯ ಪಥಶ್ಚೋಪಾರ್ಜನೇನ ಚ॥

ಕಂದಕಗಳನ್ನು ತೋಡುವ ಕ್ರಮ, ಸಜ್ಜಾದ ಸೇನೆಯ ಪ್ರಯಾಣಕ್ರಮ, ಕಾಡುಜನರು ಮತ್ತು ಕಳ್ಳಕಾಕರ ಮೂಲಕ ಶತ್ರುರಾಜ್ಯಕ್ಕೆ ಪೀಡೆಯನ್ನುಂಟುಮಾಡುವುದು, ಬೆಂಕಿ-ವಿಷ-ಕೃತ್ರಿಮ ದೂತರಿಂದ

ಶತ್ರುಗಳಿಗೆ ಹಾನಿಯನ್ನುಂಟುಮಾಡುವುದು, ಮಂತ್ರಿಮುಖ್ಯರ ವೇಷಧಾರಿಗಳನ್ನು ಕಳುಹಿಸಿ ಶತ್ರುಗಳನ್ನು ಮೋಸಗೊಳಿಸುವುದು, ಶತ್ರುಸೇನೆಗಳ ಮುಖ್ಯರೊಳಗೆ
ಭಿನ್ನಾಭಿಪ್ರಾಯಗಳನ್ನುಂಟುಮಾಡುವುದು, ಬೆಳೆದುನಿಂತಿರುವ ಫಸಲನ್ನು ಕತ್ತರಿಸುವುದು, ಶತ್ರುಪಕ್ಷದ ಆನೆಗಳನ್ನು ರೇಗಿಸುವುದು, ಶತ್ರುರಾಜ್ಯದ ಪ್ರಜೆಗಳಿಗೆ ಆತಂಕವನ್ನುಂಟುಮಾಡುವುದು, ಶತ್ರುಪಕ್ಷದ ಮುಖ್ಯನನ್ನು ವಿಶೇಷವಾಗಿ ಪುರಸ್ಕರಿಸಿ ತನ್ನ ಕಡೆಗೆ ಒಲಿಸಿಕೊಳ್ಳುವುದು – ಈ ವಿಷಯಗಳೂ ಬ್ರಹ್ಮನ ನೀತಿಶಾಸ್ತ್ರದಲ್ಲಿ ವಿವರಿಸಲಾಗಿದೆ.

12059051a ಸಪ್ತಾಂಗಸ್ಯ ಚ ರಾಜ್ಯಸ್ಯ ಹ್ರಾಸವೃದ್ಧಿಸಮಂಜಸಮ್।
12059051c ದೂತಸಾಮರ್ಥ್ಯಯೋಗಶ್ಚ ರಾಷ್ಟ್ರಸ್ಯ ಚ ವಿವರ್ಧನಮ್॥
12059052a ಅರಿಮಧ್ಯಸ್ಥಮಿತ್ರಾಣಾಂ ಸಮ್ಯಕ್ಚೋಕ್ತಂ ಪ್ರಪಂಚನಮ್।
12059052c ಅವಮರ್ದಃ ಪ್ರತೀಘಾತಸ್ತಥೈವ ಚ ಬಲೀಯಸಾಮ್॥

ರಾಜ್ಯದ ಏಳು ಅಂಗಗಳ ಕ್ಷಯ, ವೃದ್ಧಿ ಮತ್ತು ಸಮತ್ವಗಳು; ದೂತನ ಸಾಮರ್ಥ್ಯ-ಸಹಯೋಗಗಳಿಂದ ರಾಷ್ಟ್ರದ ವೃದ್ಧಿ; ಶತ್ರು-ಮಧ್ಯಸ್ಥ-ಮಿತ್ರರ ವಿಸ್ತಾರ ವಿವೇಚನೆ; ಬಲಶಾಲಿ ಶತ್ರುಗಳ ಉಪಾಯಗಳನ್ನು ಭಂಗಗೊಳಿಸಿ ಸೋಲಿಸುವುದು ಇವೆಲ್ಲವುಗಳ ಕುರಿತು ಬ್ರಹ್ಮನ ನೀತಿಶಾಸ್ತ್ರದಲ್ಲಿ ವಿವರಿಸಲಾಗಿದೆ.

12059053a ವ್ಯವಹಾರಃ ಸುಸೂಕ್ಷ್ಮಶ್ಚ ತಥಾ ಕಂಟಕಶೋಧನಮ್।
12059053c ಶಮೋ ವ್ಯಾಯಾಮಯೋಗಶ್ಚ ಯೋಗೋ ದ್ರವ್ಯಸ್ಯ ಸಂಚಯಃ॥
12059054a ಅಭೃತಾನಾಂ ಚ ಭರಣಂ ಭೃತಾನಾಂ ಚಾನ್ವವೇಕ್ಷಣಮ್।
12059054c ಅರ್ಥಕಾಲೇ ಪ್ರದಾನಂ ಚ ವ್ಯಸನೇಷ್ವಪ್ರಸಂಗಿತಾ॥

ಶಾಸನ ಸಂಬಂಧದ ಅತಿಸೂಕ್ಷ್ಮ ವ್ಯವಹಾರ; ರಾಷ್ಟ್ರಕಂಟಕರನ್ನು ಶೋಧಿಸಿ ಶಾಂತಗೊಳಿಸುವುದು; ವ್ಯಾಯಮಯೋಗ, ದ್ರವ್ಯಗಳ ಸಂಗ್ರಹ ಯೋಗ; ನಿರ್ಗತಿಕರ ಭರಣ-ಪೋಷಣೆಗಳು; ಭರಣ-ಪೋಷಣಾಕಾರ್ಯಗಳ ಮೇಲ್ವಿಚಾರಣೆ; ಕಾಲಕಾಲಕ್ಕೆ ಸಂಪತ್ತಿನ ದಾನ; ಮತ್ತು ವ್ಯಸನಗಳ ಕುರಿತು ಬ್ರಹ್ಮನ ನೀತಿಶಾಸ್ತ್ರದಲ್ಲಿ ವಿವರಿಸಲಾಗಿದೆ.

12059055a ತಥಾ ರಾಜಗುಣಾಶ್ಚೈವ ಸೇನಾಪತಿಗುಣಾಶ್ಚ ಯೇ|
12059055c ಕಾರಣಸ್ಯ ಚ ಕರ್ತುಶ್ಚ ಗುಣದೋಷಾಸ್ತಥೈವ ಚ||

ಹಾಗೆಯೇ ರಾಜನ ಗುಣಗಳು, ಸೇನಾಪತಿಯ ಗುಣಗಳು, ಕರ್ತವ್ಯಗಳ ಕಾರಣ-ಗುಣ-ದೋಷಗಳನ್ನೂ ಬ್ರಹ್ಮನ ನೀತಿಶಾಸ್ತ್ರದಲ್ಲಿ ವಿವರಿಸಲಾಗಿದೆ.

12059056a ದುಷ್ಟೇಂಗಿತಂ ಚ ವಿವಿಧಂ ವೃತ್ತಿಶ್ಚೈವಾನುಜೀವಿನಾಮ್|
12059056c ಶಂಕಿತತ್ವಂ ಚ ಸರ್ವಸ್ಯ ಪ್ರಮಾದಸ್ಯ ಚ ವರ್ಜನಮ್||
12059057a ಅಲಬ್ಧಲಿಪ್ಸಾ ಲಬ್ಧಸ್ಯ ತಥೈವ ಚ ವಿವರ್ಧನಮ್|
12059057c ಪ್ರದಾನಂ ಚ ವಿವೃದ್ಧಸ್ಯ ಪಾತ್ರೇಭ್ಯೋ ವಿಧಿವತ್ತಥಾ||
12059058a ವಿಸರ್ಗೋಽರ್ಥಸ್ಯ ಧರ್ಮಾರ್ಥಮರ್ಥಾರ್ಥಂ ಕಾಮಹೇತುನಾ|
12059058c ಚತುರ್ಥೋ ವ್ಯಸನಾಘಾತೇ ತಥೈವಾತ್ರಾನುವರ್ಣಿತಃ||

ವಿವಿಧ ದುಷ್ಟ ಆಸೆಗಳು; ತನ್ನನ್ನೇ ಅವಲಂಬಿಸಿರುವವರಿಗೆ ವಹಿಸಿಕೊಡಬಹುದಾದ ಕಾರ್ಯಭಾರಗಳು; ಎಲ್ಲವನ್ನೂ ಶಂಕಿಸುವುದು; ಪ್ರಮಾದದ ವರ್ಜನೆ; ಲಭಿಸದೇ ಇರುವುದನ್ನು ಪಡೆದುಕೊಳ್ಳುವುದು ಮತ್ತು ಅದನ್ನು ವೃದ್ಧಿಗೊಳಿಸುವುದು;

ವೃದ್ಧಿಯಾದುದನ್ನು ಪಾತ್ರರಿಗೆ ವಿಧಿವತ್ತಾಗಿ ದಾನಮಾಡುವುದು;
ಧರ್ಮ-ಅರ್ಥ-ಕಾಮಗಳಿಗೆ ಮತ್ತು ನಾಲ್ಕನೆಯದಾಗಿ
ವ್ಯಸನವೊದಗಿದಾಗ ಅದನ್ನು ಪರಿಹರಿಸಲು ಸಂಪತ್ತನ್ನು
ವಿನಿಯೋಗಿಸುವುದು ಇವೆಲ್ಲವೂ ಬ್ರಹ್ಮನ ನೀತಿಶಾಸ್ತ್ರದಲ್ಲಿ
ವರ್ಣಿತವಾಗಿವೆ.

12059059a ಕ್ರೋಧಜಾನಿ ತಥೋಗ್ರಾಣಿ ಕಾಮಜಾನಿ ತಥೈವ ಚ|
12059059c ದಶೋಕ್ತಾನಿ ಕುರುಶ್ರೇಷ್ಠ ವ್ಯಸನಾನ್ಯತ್ರ ಚೈವ ಹ||

ಕುರುಶ್ರೇಷ್ಠ! ಕಾಮ-ಕ್ರೋಧಗಳಿಂದ ಹುಟ್ಟುವ ಹತ್ತು ಉಗ್ರ ವ್ಯಸನಗಳ
ಕುರಿತು ಇದರಲ್ಲಿ ವರ್ಣಿಸಲಾಗಿದೆ.

12059060a ಮೃಗಯಾಕ್ಷಾಸ್ತಥಾ ಪಾನಂ ಸ್ತ್ರಿಯಶ್ಚ ಭರತರ್ಷಭ|
12059060c ಕಾಮಜಾನ್ಯಾಹುರಾಚಾರ್ಯಾಃ ಪ್ರೋಕ್ತಾನೀಹ ಸ್ವಯಂಭುವಾ||

ಸ್ವಯಂಭುವು ಇದರಲ್ಲಿ ಆಚಾರ್ಯರು ಹೇಳುವ ಬೇಟೆ, ಜೂಜು,
ಮದ್ಯಪಾನ, ಸ್ತ್ರೀಸಂಗ ಈ ನಾಲ್ಕು ಕಾಮಜನ್ಯ ವ್ಯಸನಗಳನ್ನು
ವರ್ಣಿಸಿದ್ದಾನೆ.

12059061a ವಾಕ್ಪಾರುಷ್ಯಂ ತಥೋಗ್ರತ್ವಂ ದಂಡಪಾರುಷ್ಯಮೇವ ಚ|
12059061c ಆತ್ಮನೋ ನಿಗ್ರಹಸ್ತ್ಯಾಗೋಽರ್ಥಾರ್ಥದೂಷಣಮೇವ ಚ||

ಹಾಗೆಯೇ ಕ್ರೂರವಾದ ಮಾತು, ಉಗ್ರತೆ, ಕಠಿಣವಾಗಿ ದಂಡಿಸುವುದು,
ತನ್ನನ್ನೇ ದಂಡಿಸಿಕೊಳ್ಳುವುದು, ಬಂಧು-ಬಳಗದವರನ್ನು ತ್ಯಜಿಸುವುದು,
ಸಂಪತ್ತನ್ನು ದೂಷಿಸುವುದು – ಈ ಆರು ಕ್ರೋಧಜನ್ಯ ವ್ಯಸನಗಳ
ವರ್ಣನೆಯೂ ಬ್ರಹ್ಮನ ನೀತಿಶಾಸ್ತ್ರದಲ್ಲಿದೆ.

12059062a ಯಂತ್ರಾಣಿ ವಿವಿಧಾನ್ಯೇವ ಕ್ರಿಯಾಸ್ತೇಷಾಂ ಚ ವರ್ಣಿತಾಃ|
12059062c ಅವಮರ್ದಃ ಪ್ರತೀಘಾತಃ ಕೇತನಾನಾಂ ಚ ಭಂಜನಮ್||
12059063a ಚೈತ್ಯದ್ರುಮಾಣಾಮಾಮರ್ದೋ ರೋಧಃಕರ್ಮಾಂತನಾಶನಮ್|
12059063c ಅಪಸ್ಕರೋಽಥ ಗಮನಂ ತಥೋಪಾಸ್ಯಾ ಚ ವರ್ಣಿತಾ||

ವಿವಿಧ ಯಂತ್ರಗಳೂ ಮತ್ತು ಅವುಗಳ ಕ್ರಿಯೆಗಳೂ ಇಲ್ಲಿ ವರ್ಣಿತವಾಗಿವೆ. ಶತ್ರುರಾಷ್ಟ್ರವನ್ನು ಧ್ವಂಸಗೊಳಿಸುವುದು; ಶತ್ರುವಿಗೆ ಆಘಾತವನ್ನುಂಟುಮಾಡುವುದು; ಕಟ್ಟಡಗಳ ನಾಶ; ಚೈತ್ಯ-ವೃಕ್ಷಗಳನ್ನು ಧ್ವಂಸಗೊಳಿಸುವುದು; ರಾಜಭವನವನ್ನು ನಾಲ್ಕೂ ಕಡೆಗಳಿಂದ ಮುತ್ತಿಗೆ ಹಾಕುವುದು ಇವುಗಳ ಉಪಾಯ-ವಿಧಾನಗಳ ಕುರಿತಾದ ವರ್ಣನೆಗಳಿವೆ.

12059064a ಪಣವಾನಕಶಂಖಾನಾಂ ಭೇರೀಣಾಂ ಚ ಯುಧಾಂ ವರ|
12059064c ಉಪಾರ್ಜನಂ ಚ ದ್ರವ್ಯಾಣಾಂ ಪರಮರ್ಮ ಚ ತಾನಿ ಷಟ್||

ಯೋದ್ಧರಲ್ಲಿ ಶ್ರೇಷ್ಠ! ಇದರಲ್ಲಿ ಮದ್ದಳೆ, ನಗಾರಿ, ಶಂಖ, ಭೇರಿ ಇವುಗಳನ್ನು ಬಾರಿಸುವ ಕ್ರಮ; ಆರು ದ್ರವ್ಯಗಳನ್ನು[165] ಸಂಪಾದಿಸುವ ಮತ್ತು ಶತ್ರುವಿನ ಈ ಆರು ದ್ರವ್ಯಗಳನ್ನು ನಾಶಪಡಿಸುವ ವಿಧಾನಗಳ ವರ್ಣನೆಯೂ ಇದೆ.

12059065a ಲಬ್ಧಸ್ಯ ಚ ಪ್ರಶಮನಂ ಸತಾಂ ಚೈವ ಹಿ ಪೂಜನಮ್|
12059065c ವಿದ್ವದ್ಭಿರೇಕೀಭಾವಶ್ಚ ಪ್ರಾತಹೋ೯ಮವಿಧಿಜ್ಞತಾ||[166]

---

[165] ಮಣಿ, ಪಶು, ಭೂಮಿ, ವಸ್ತ್ರ, ದಾಸ-ದಾಸಿಯರು ಮತ್ತು ಸುವರ್ಣ ಇವುಗಳೇ ಷಟ್ ದ್ರವ್ಯಗಳು.

[166] ವಿದ್ವದ್ಭಿರೇಕೀಭಾವಶ್ಚ ದಾನಹೋಮವಿಧಿಜ್ಞತಾ| ಎಂಬ

12059066a ಮಂಗಲಾಲಂಭನಂ ಚೈವ ಶರೀರಸ್ಯ ಪ್ರತಿಕ್ರಿಯಾ|
12059066c ಆಹಾರಯೋಜನಂ ಚೈವ ನಿತ್ಯಮಾಸ್ತಿಕ್ಯಮೇವ ಚ||

ಪಡೆದುಕೊಂಡ ರಾಷ್ಟ್ರದಲ್ಲಿ ಶಾಂತಿಯ ಸ್ಥಾಪನೆ; ಸತ್ಪುರುಷರ ಪೂಜನ; ವಿದ್ವಾಂಸರೊಡನೆ ಏಕೀಭಾವದಿಂದಿರುವುದು; ಪ್ರಾತಃಕಾಲದಲ್ಲಿ ಮಾಡುವ ಹೋಮ, ಮಂಗಲ ವಸ್ತುಗಳನ್ನು ಮುಟ್ಟುವುದು; ಶರೀರದ ಸಿಂಗಾರ; ಆಹಾರಯೋಜನೆ ಮತ್ತು ನಿತ್ಯವೂ ಆಸ್ತಿಕ್ಯಭಾವದಿಂದಿರುವುದು ಇವುಗಳ ಕುರಿತ ಜ್ಞಾನವೂ ಬ್ರಹ್ಮನ ನೀತಿಶಾಸ್ತ್ರದಲ್ಲಿ ದೊರೆಯುತ್ತದೆ.

12059067a ಏಕೇನ ಚ ಯಥೋತ್ಥೇಯಂ ಸತ್ಯತ್ವಂ ಮಧುರಾ ಗಿರಃ|
12059067c ಉತ್ಸವಾನಾಂ ಸಮಾಜಾನಾಂ ಕ್ರಿಯಾಃ ಕೇತನಜಾಸ್ತಥಾ||

ಏಕಾಂಗಿಯಾಗಿದ್ದರೂ ಉನ್ನತನಾಗುವುದು; ಉತ್ಸವ ಮತ್ತು ಸಮಾಜದಲ್ಲಿ ಆಡಬೇಕಾದ ಸತ್ಯ-ಮಧುರ ಮಾತು-ಕ್ರಿಯೆ ಇವುಗಳ ಉಲ್ಲೇಖವೂ ಬ್ರಹ್ಮನ ನೀತಿಶಾಸ್ತ್ರದಲ್ಲಿದೆ.

12059068a ಪ್ರತ್ಯಕ್ಷಾ ಚ ಪರೋಕ್ಷಾ ಚ ಸರ್ವಾಧಿಕರಣೇಷು ಚ|
12059068c ವೃತ್ತಿರ್ಭರತಶಾರ್ದೂಲ ನಿತ್ಯಂ ಚೈವಾನ್ವವೇಕ್ಷಣಮ್||

ಭರತಶಾರ್ದೂಲ! ಎಲ್ಲ ಅಧಿಕಾರಿಗಳ ವೃತ್ತಿಗಳ ಕುರಿತು ಪ್ರತ್ಯಕ್ಷವಾಗಲೀ ಅಥವಾ ಪರೋಕ್ಷವಾಗಲೀ ನಿತ್ಯವೂ ತಿಳಿದುಕೊಂಡು ಮೇಲ್ವಿಚಾರಣೆ ಮಾಡುವುದರ ಕುರಿತೂ ಬ್ರಹ್ಮನ ನೀತಿಶಾಸ್ತ್ರದಲ್ಲಿ ವರ್ಣನೆಯಿದೆ.

ಪಾಠಾಂತರವಿದೆ.

12059069a ಅದಂಡ್ಯತ್ವಂ ಚ ವಿಪ್ರಾಣಾಂ ಯುಕ್ತ್ಯಾ ದಂಡನಿಪಾತನಮ್।
12059069c ಅನುಜೀವಿಸ್ವಜಾತಿಭ್ಯೋ ಗುಣೇಷು ಪರಿರಕ್ಷಣಮ್॥

ವಿಪ್ರರನ್ನು ದಂಡಿಸದೇ ಇರುವುದು; ಯುಕ್ತಿಪೂರ್ವಕವಾಗಿ ದಂಡನೆಯನ್ನು ನೀಡುವುದು; ಅನುಯಾಯಿಗಳು, ಸ್ವಜಾತಿಯವರು ಮತ್ತು ಗುಣವಂತರ ರಕ್ಷಣೆ ಇವುಗಳ ಕುರಿತೂ ಬ್ರಹ್ಮನ ನೀತಿಶಾಸ್ತ್ರದಲ್ಲಿ ವರ್ಣನೆಯಿದೆ.

12059070a ರಕ್ಷಣಂ ಚೈವ ಪೌರಾಣಾಂ ಸ್ವರಾಷ್ಟ್ರಸ್ಯ ವಿವರ್ಧನಮ್।
12059070c ಮಂಡಲಸ್ಥಾ ಚ ಯಾ ಚಿಂತಾ ರಾಜನ್ದ್ವಾದಶರಾಜಿಕಾ॥
12059071a ದ್ವಾಸಪ್ತತಿಮತಿಶ್ಚೈವ ಪ್ರೋಕ್ತಾ ಯಾ ಚ ಸ್ವಯಂಭುವಾ।
12059071c ದೇಶಜಾತಿಕುಲಾನಾಂ ಚ ಧರ್ಮಾಃ ಸಮನುವರ್ಣಿತಾಃ॥

ರಾಜನ್! ಪೌರರ ರಕ್ಷಣೆ; ಸ್ವರಾಷ್ಟ್ರದ ಅಭಿವೃದ್ಧಿ; ಮಂಡಲಸ್ಥರಾಗಿರುವ ದ್ವಾದಶರಾಜಿಕರ[167] ಕುರಿತಾದ ಚಿಂತೆ; ಶರೀರಕ್ಕಿರುವ ಎಪ್ಪತ್ತೆರಡು ಚಿಕಿತ್ಸೆಗಳು; ಮತ್ತು ದೇಶ-ಜಾತಿ-ಕುಲಗಳ ಧರ್ಮಗಳು ಇವೆಲ್ಲವುಗಳನ್ನೂ ಸ್ವಯಂಭುವು ವರ್ಣಿಸಿದ್ದಾನೆ.

12059072a ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚಾತ್ರಾನುವರ್ಣಿತಃ।
12059072c ಉಪಾಯಶ್ಚಾರ್ಥಲಿಪ್ಸಾ ಚ ವಿವಿಧಾ ಭೂರಿದಕ್ಷಿಣಾಃ॥

ಭೂರಿದಕ್ಷಿಣ! ಈ ಗ್ರಂಥದಲ್ಲಿ ಧರ್ಮ-ಅರ್ಥ-ಕಾಮ-ಮೋಕ್ಷಗಳನ್ನು

---

[167] ಹನ್ನೆರಡು ರಾಜರ ಸಮೂಹ. ನಾಲ್ಕು ದಿಕ್ಕುಗಳಲ್ಲಿಯೂ ಇರುವ ನಾಲ್ವರು ಶತ್ರುರಾಜರು, ನಾಲ್ವರು ಮಿತ್ರರಾಜರು ಮತ್ತು ನಾಲ್ವರು ಉದಾಸೀನರಾಜರು – ಒಟ್ಟು ಹನ್ನೆರಡು ರಾಜರು.

ಪಡೆಯುವ ವಿವಿಧ ಉಪಾಯಗಳೂ ವರ್ಣಿತವಾಗಿವೆ.

12059073a ಮೂಲಕರ್ಮಕ್ರಿಯಾ ಚಾತ್ರ ಮಾಯಾ ಯೋಗಶ್ಚ ವರ್ಣಿತಃ|
12059073c ದೂಷಣಂ ಸ್ರೋತಸಾಮತ್ರ ವರ್ಣಿತಂ ಚ ಸ್ಥಿರಾಂಭಸಾಮ್||

ಇದರಲ್ಲಿ ಮೂಲಕರ್ಮಕ್ರಿಯೆಗಳು, ಮಾಯೆಯನ್ನು ಬಳಸುವುದು, ಹರಿಯುವ ಮತ್ತು ನಿಂತನೀರಿನ ದೂಷಣೆ ಇವುಗಳ ಕುರಿತಾದ ವರ್ಣನೆಯೂ ಇದೆ.

12059074a ಯೈರ್ಯೈರುಪಾಯೈರ್ಲೋಕಶ್ಚ ನ ಚಲೇದಾರ್ಯವರ್ತ್ಮನಃ|
12059074c ತತ್ಸರ್ವಂ ರಾಜಶಾರ್ದೂಲ ನೀತಿಶಾಸ್ತ್ರೇಽನುವರ್ಣಿತಮ್||

ರಾಜಶಾರ್ದೂಲ! ಯಾವ ಯಾವ ಉಪಾಯಗಳಿಂದ ಈ ಲೋಕವು ಸನ್ಮಾರ್ಗದಿಂದ ವಿಚಲಿತವಾಗುವುದಿಲ್ಲವೋ ಆ ಎಲ್ಲವನ್ನೂ ಈ ನೀತಿಶಾಸ್ತ್ರದಲ್ಲಿ ವರ್ಣಿಸಲಾಗಿದೆ.

12059075a ಏತತ್ಕೃತ್ವಾ ಶುಭಂ ಶಾಸ್ತ್ರಂ ತತಃ ಸ ಭಗವಾನ್ಪ್ರಭುಃ|
12059075c ದೇವಾನುವಾಚ ಸಂಹೃಷ್ಟಃ ಸರ್ವಾನ್ಮಕ್ರಪುರೋಗಮಾನ್||

ಈ ಶುಭ ಶಾಸ್ತ್ರವನ್ನು ರಚಿಸಿ ಭಗವಾನ್ ಪ್ರಭುವು ಸಂಹೃಷ್ಟನಾಗಿ ಶಕ್ರನನ್ನೇ ಮುಂದಿಟ್ಟುಕೊಂಡಿದ್ದ ಸರ್ವ ದೇವತೆಗಳಿಗೂ ಹೇಳಿದನು:

12059076a ಉಪಕಾರಾಯ ಲೋಕಸ್ಯ ತ್ರಿವರ್ಗಸ್ಥಾಪನಾಯ ಚ|
12059076c ನವನೀತಂ ಸರಸ್ವತ್ಯಾ ಬುದ್ಧಿರೇಷಾ ಪ್ರಭಾವಿತಾ||

“ಲೋಕದ ಉಪಕಾರಕ್ಕಾಗಿ ಮತ್ತು ತ್ರಿವರ್ಗಗಳ ಸ್ಥಾಪನೆಗಾಗಿ ಸರಸ್ವತಿಯಿಂದ ನನ್ನ ಬುದ್ಧಿಯಲ್ಲಿ ಈ ನವನೀತವು ಪ್ರಕಾಶಗೊಂಡಿದೆ.

12059077a ದಂಡೇನ ಸಹಿತಾ ಹ್ಯೇಷಾ ಲೋಕರಕ್ಷಣಕಾರಿಕಾ|

12059077c ನಿಗ್ರಹಾನುಗ್ರಹರತಾ ಲೋಕಾನನು ಚರಿಷ್ಯತಿ||

ದಂಡಶಾಸ್ತ್ರವನ್ನು ಹೊಂದಿರುವ ಇದು ಲೋಕರಕ್ಷಣೆಗೆ
ಕಾರಣವಾಗುತ್ತದೆ. ನಿಗ್ರಹ-ಅನುಗ್ರಹಗಳನ್ನು ವರ್ಣಿಸುವ ಇದು
ಲೋಕಗಳಲ್ಲಿ ಪ್ರಚಲಿತವಾಗುತ್ತದೆ.

12059078a ದಂಡೇನ ನೀಯತೇ ಚೇಯಂ ದಂಡಂ ನಯತಿ ಚಾಪ್ಯುತ|
12059078c ದಂಡನೀತಿರಿತಿ ಪ್ರೋಕ್ತಾ ತ್ರೀಽಲ್ಲೋಕಾನನುವರ್ತತೇ||

ದಂಡದ ಮೂಲಕ ಲೋಕವನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯಬಹುದು.
ಮತ್ತು ದಂಡವೇ ಲೋಕವನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುತ್ತದೆ.
ದಂಡನೀತಿಯೆಂದು ಕರೆಯಲ್ಪಡುವ ಈ ನೀತಿಶಾಸ್ತ್ರವು ಮೂರು
ಲೋಕಗಳನ್ನೂ ವ್ಯಾಪಿಸಿದೆ.

12059079a ಷಾಡ್ಗುಣ್ಯಗುಣಸಾರೈಷಾ ಸ್ಥಾಸ್ಯತ್ಯಗ್ರೇ ಮಹಾತ್ಮಸು|
12059079c ಮಹತ್ತ್ವಾತ್ತಸ್ಯ ದಂಡಸ್ಯ ನೀತಿರ್ವಿಸ್ಪಷ್ಟಲಕ್ಷಣಾ||

ಆರುಗುಣಗಳ ಸಾರವು ಇದರಲ್ಲಿದೆ. ಮಹಾತ್ಮರ ಪ್ರಕಾರ ಇದರ
ಸ್ಥಾನವು ಅತ್ಯುನ್ನತವಾಗಿದೆ. ದಂಡನೀತಿಯ ಸ್ಪಷ್ಟಲಕ್ಷಣಗಳೇ ಇದರ
ಮಹತ್ತ್ವ."

12059080a ನಯಚಾರಶ್ಚ ವಿಪುಲೋ ಯೇನ ಸರ್ವಮಿದಂ ತತಮ್|
12059080c ಆಗಮಶ್ಚ ಪುರಾಣಾನಾಂ ಮಹರ್ಷೀಣಾಂ ಚ ಸಂಭವಃ||
12059081a ತೀರ್ಥವಂಶಶ್ಚ ವಂಶಶ್ಚ ನಕ್ಷತ್ರಾಣಾಂ ಯುಧಿಷ್ಠಿರ|
12059081c ಸಕಲಂ ಚಾತುರಾಶ್ರಮ್ಯಂ ಚಾತುರ್ಹೋತ್ರಂ ತಥೈವ ಚ||
12059082a ಚಾತುರ್ವರ್ಣ್ಯಂ ತಥೈವಾತ್ರ ಚಾತುರ್ವೇದ್ಯಂ ಚ ವರ್ಣಿತಮ್|
12059082c ಇತಿಹಾಸೋಪವೇದಾಶ್ಚ ನ್ಯಾಯಃ ಕೃತ್ಸ್ನಶ್ಚ ವರ್ಣಿತಃ||

ಯುಧಿಷ್ಠಿರ! ಸಂಪೂರ್ಣ ಶಿಷ್ಟಾಚಾರಗಳೆಲ್ಲವೂ; ಆಗಮ-ಪುರಾಣ ಮತ್ತು ಮಹರ್ಷಿಗಳ ಹುಟ್ಟು; ತೀರ್ಥಕ್ಷೇತ್ರಗಳ ವಂಶ, ನಕ್ಷತ್ರಗಳ ವಂಶ, ಚತುರಾಶ್ರಮಗಳ ಸಕಲವೂ; ನಾಲ್ಕು ಹೋತ್ರಗಳೂ, ಇತಿಹಾಸ-ಉಪವೇದಗಳು ಮತ್ತು ನ್ಯಾಯ ಇವೆಲ್ಲವೂ ಇದರಲ್ಲಿ ಸಂಪೂರ್ಣವಾಗಿ ವರ್ಣಿತಗೊಂಡಿವೆ.

12059083a ತಪೋ ಜ್ಞಾನಮಹಿಂಸಾ ಚ ಸತ್ಯಾಸತ್ಯೇ ನಯಃ ಪರಃ|
12059083c ವೃದ್ಧೋಪಸೇವಾ ದಾನಂ ಚ ಶೌಚಮುತ್ಥಾನಮೇವ ಚ||
12059084a ಸರ್ವಭೂತಾನುಕಂಪಾ ಚ ಸರ್ವಮತ್ರೋಪವರ್ಣಿತಮ್|
12059084c ಭುವಿ ವಾಙೋಗತಂ ಯಚ್ಚ ತಚ್ಚ ಸರ್ವಂ ಸಮರ್ಪಿತಮ್||

ತಪಸ್ಸು, ಜ್ಞಾನ, ಅಹಿಂಸೆ, ಸತ್ಯ, ಅಸತ್ಯ ಮತ್ತು ನ್ಯಾಯ, ವೃದ್ಧರ ಸೇವೆ, ದಾನ, ಶೌಚ, ಉತ್ಥಾನ, ಸರ್ವಭೂತಾನುಕಂಪ, ಇವೆಲ್ಲವೂ ಇದರಲ್ಲಿ ವರ್ಣಿತವಾಗಿವೆ. ಭುವಿಯಲ್ಲಿ ಮಾತನಾಡಲು ಏನೆಲ್ಲ ಇವೆಯೋ ಅವೆಲ್ಲವೂ ಇದರಲ್ಲಿವೆ.

12059085a ತಸ್ಮಿನ್ಪ್ರೋತಾಮಹೇ ಶಾಸ್ತ್ರೇ ಪಾಂಡವೈತದಸಂಶಯಮ್|
12059085c ಧರ್ಮಾರ್ಥಕಾಮಮೋಕ್ಷಾಶ್ಚ ಸಕಲಾ ಹ್ಯತ್ರ ಶಬ್ದಿತಾಃ||

ಪಾಂಡವ! ಪಿತಾಮಹನ ಈ ಶಾಸ್ತ್ರದಲ್ಲಿ ನಿಸ್ಸಂಶಯವಾಗಿಯು ಧರ್ಮ-ಅರ್ಥ-ಕಾಮ-ಮೋಕ್ಷಗಳ ಕುರಿತಾದ ಎಲ್ಲವೂ ವರ್ಣಿತವಾಗಿವೆ.

12059086a ತತಸ್ತಾಂ ಭಗವಾನ್ನೀತಿಂ ಪೂರ್ವಂ ಜಗ್ರಾಹ ಶಂಕರಃ|
12059086c ಬಹುರೂಪೋ ವಿಶಾಲಾಕ್ಷಃ ಶಿವಃ ಸ್ಥಾಣುರುಮಾಪತಿಃ||

ಮೊದಲು ಆ ನೀತಿಶಾಸ್ತ್ರವನ್ನು ಭಗವಾನ್ ಶಂಕರ ಬಹುರೂಪ

ವಿಶಾಲಾಕ್ಷ ಶಿವ ಸ್ಥಾಣು ಉಮಾಪತಿಯು ಪ್ರತಿಗ್ರಹಿಸಿದನು.

12059087a ಯುಗಾನಾಮಾಯುಷೋ ಹ್ರಾಸಂ ವಿಜ್ಞಾಯ ಭಗವಾನ್ಶಿವಃ|
12059087c ಸಂಚಿಕ್ಷೇಪ ತತಃ ಶಾಸ್ತ್ರಂ ಮಹಾರ್ಥಂ ಬ್ರಹ್ಮಣಾ ಕೃತಮ್||

ಯುಗಗಳ ಆಯಸ್ಸು ಕಡಿಮೆಯಾಗುತ್ತದೆಯೆಂದು ತಿಳಿದ ಭಗವಾನ್ ಶಿವನು ಮಹಾರ್ಥವುಳ್ಳ ಬ್ರಹ್ಮಕೃತ ಆ ಶಾಸ್ತ್ರವನ್ನು ಸಂಕ್ಷಿಪ್ತಗೊಳಿಸಿದನು.

12059088a ವೈಶಾಲಾಕ್ಷಮಿತಿ ಪ್ರೋಕ್ತಂ ತದಿಂದ್ರಃ ಪ್ರತ್ಯಪದ್ಯತ|
12059088c ದಶಾಧ್ಯಾಯಸಹಸ್ರಾಣಿ ಸುಬ್ರಹ್ಮಣ್ಯೋ ಮಹಾತಪಾಃ||

ವೈಶಾಲಾಕ್ಷವೆಂದು ಕರೆಯಲ್ಪಟ್ಟ ಹತ್ತು ಸಾವಿರ ಅಧ್ಯಾಯಗಳುಳ್ಳ ಅದನ್ನು ಮಹಾತಪಸ್ವಿ ಸುಬ್ರಹ್ಮಣ್ಯ ಇಂದ್ರನು ಪಡೆದುಕೊಂಡನು.

12059089a ಭಗವಾನಪಿ ತಚ್ಚಾಸ್ತ್ರಂ ಸಂಚಿಕ್ಷೇಪ ಪುರಂದರಃ|
12059089c ಸಹಸ್ರೈಃ ಪಂಚಭಿಸ್ತಾತ ಯದುಕ್ತಂ ಬಾಹುದಂತಕಮ್||

ಭಗವಾನ್ ಪುರಂದರನು ಅದನ್ನು ಇನ್ನೂ ಸಂಕ್ಷೇಪಗೊಳಿಸಿದನು. ಅಯ್ಯಾ! ಐದು ಸಾವಿರ ಅಧ್ಯಾಯಗಳಿದ್ದ ಅದು ಬಾಹುದಂತಕ ಎಂದಾಯಿತು.

12059090a ಅಧ್ಯಾಯಾನಾಂ ಸಹಸ್ರೈಸ್ತು ತ್ರಿಭಿರೇವ ಬೃಹಸ್ಪತಿಃ|
12059090c ಸಂಚಿಕ್ಷೇಪೇಶ್ವರೋ ಬುದ್ಧ್ಯಾ ಬಾರ್ಹಸ್ಪತ್ಯಂ ತದುಚ್ಯತೇ||

ಈಶ್ವರ ಬೃಹಸ್ಪತಿಯು ತನ್ನ ಬುದ್ಧಿಯಿಂದ ಅದನ್ನು ಮೂರು ಸಾವಿರ ಅಧ್ಯಾಯಗಳಿದ್ದುದನ್ನು ಮಾಡಿ ಇನ್ನೂ ಸಂಕ್ಷೇಪಿಸಿದನು. ಅದನ್ನು ಬಾರ್ಹಸ್ಪತ್ಯ ಎಂದು ಕರೆಯುತ್ತಾರೆ.

12059091a ಅಧ್ಯಾಯಾನಾಂ ಸಹಸ್ರೇಣ ಕಾವ್ಯಃ ಸಂಕ್ಷೇಪಮಬ್ರವೀತ್।
12059091c ತಚ್ಚಾಸ್ತ್ರಮಮಿತಪ್ರಜ್ಞೋ ಯೋಗಾಚಾರ್ಯೋ ಮಹಾತಪಾಃ॥

ಆ ಶಾಸ್ತ್ರವನ್ನು ಯೋಗಾಚಾರ್ಯ ಮಹಾತಪಸ್ವಿ ಅಮಿತಪ್ರಜ್ಞ ಕಾವ್ಯನು ಒಂದು ಸಾವಿರ ಅಧ್ಯಾಯಗಳಾಗಿ ಸಂಕ್ಷೇಪಿಸಿದನು.

12059092a ಏವಂ ಲೋಕಾನುರೋಧೇನ ಶಾಸ್ತ್ರಮೇತನ್ಮಹರ್ಷಿಭಿಃ।
12059092c ಸಂಕ್ಷಿಪ್ತಮಾಯುರ್ವಿಜ್ಞಾಯ ಮರ್ತ್ಯಾನಾಂ ಹ್ರಾಸಿ ಪಾಂಡವ॥

ಪಾಂಡವ! ಹೀಗೆ ಲೋಕದಲ್ಲಿ ಮನುಷ್ಯರ ಆಯುಃ ಪ್ರಮಾಣವು ಕಡಿಮೆಯಾಗುತ್ತಿರುವುದನ್ನು ಮನಗಂಡ ಮಹರ್ಷಿಗಳು ಬ್ರಹ್ಮರಚಿತ ನೀತಿಶಾಸ್ತ್ರವನ್ನು ಲೋಕಹಿತಕ್ಕಾಗಿ ಸಂಕ್ಷಿಪ್ತಗೊಳಿಸುತ್ತಾ ಬಂದಿದ್ದಾರೆ.

12059093a ಅಥ ದೇವಾಃ ಸಮಾಗಮ್ಯ ವಿಷ್ಣುಮೂಚುಃ ಪ್ರಜಾಪತಿಮ್।
12059093c ಏಕೋ ಯೋಽರ್ಹತಿ ಮರ್ತ್ಯೇಭ್ಯಃ ಶ್ರೈಷ್ಠ್ಯಂ ತಂ ವೈ ಸಮಾದಿಶ॥

ಒಮ್ಮೆ ದೇವತೆಗಳು ಪ್ರಜಾಪತಿ ವಿಷ್ಣುವಿನ ಬಳಿಸಾರಿ "ಮನುಷ್ಯರಲ್ಲಿ ಶ್ರೇಷ್ಠನೆನಿಸಿಕೊಳ್ಳಲು ಅರ್ಹನಾದವನು ಯಾರು ಎನ್ನುವುದನ್ನು ತಿಳಿಸಿಕೊಡು!" ಎಂದು ಕೇಳಿಕೊಂಡರು.

12059094a ತತಃ ಸಂಚಿಂತ್ಯ ಭಗವಾನ್ದೇವೋ ನಾರಾಯಣಃ ಪ್ರಭುಃ।
12059094c ತೈಜಸಂ ವೈ ವಿರಜಸಂ ಸೋಽಸೃಜನ್ಮಾನಸಂ ಸುತಮ್॥

ಆಗ ಭಗವಾನ್ ದೇವ ನಾರಾಯಣ ಪ್ರಭುವು ಸ್ವಲ್ಪ ಹೊತ್ತು ಯೋಚಿಸಿ ತನ್ನ ತೇಜಸ್ಸಿನಿಂದ ವಿರಜಸನೆಂಬ ಮಾನಸ ಪುತ್ರನನ್ನು ಸೃಷ್ಟಿಸಿದನು.

12059095a ವಿರಜಾಸ್ತು ಮಹಾಭಾಗ ವಿಭುತ್ವಂ ಭುವಿ ನೈಚ್ಛತ।
12059095c ನ್ಯಾಸಾಯೈವಾಭವದ್ಬುದ್ಧಿಃ ಪ್ರಣೀತಾ ತಸ್ಯ ಪಾಂಡವ॥

ಮಹಾಭಾಗ! ಪಾಂಡವ! ಆದರೆ ವಿರಜಸನು ಭುವಿಯ ವಿಭುತ್ವವನ್ನು
ಬಯಸಲಿಲ್ಲ. ಅವನ ಬುದ್ಧಿಯು ಸಂನ್ಯಾಸದಲ್ಲಿಯೇ ತೊಡಗಿಕೊಂಡಿತ್ತು.

12059096a ಕೀರ್ತಿಮಾಂಸ್ತಸ್ಯ ಪುತ್ರೋಽಭೂತ್ಸೋಽಪಿ ಪಂಚಾತಿಗೋಽಭವತ್|
12059096c ಕರ್ದಮಸ್ತಸ್ಯ ಚ ಸುತಃ ಸೋಽಪ್ಯತಪ್ಯನ್ಮಹತ್ತಪಃ||

ಅವನಿಗೆ ಕೀರ್ತಿಮಾನನೆಂಬ ಮಗನು ಹುಟ್ಟಿದನು. ಆದರೆ ಅವನೂ
ಪಂಚತತ್ತ್ವಗಳಿಗೂ ಅತೀತವಾದ ಅಧ್ಯಾತ್ಮವನ್ನೇ ಅನುಸರಿಸಿದನು.
ಅವನ ಮಗ ಕರ್ದಮನೂ ಕೂಡ ಮಹಾತಪಸ್ಸಿನಲ್ಲಿಯೇ
ನಿರತನಾದನು.

12059097a ಪ್ರಜಾಪತೇಃ ಕರ್ದಮಸ್ಯ ಅನಂಗೋ ನಾಮ ವೈ ಸುತಃ|
12059097c ಪ್ರಜಾನಾಂ ರಕ್ಷಿತಾ ಸಾಧುರ್ದಂಡನೀತಿವಿಶಾರದಃ||

ಪ್ರಜಾಪತಿ ಕರ್ದಮನ ಮಗನ ಹೆಸರು ಅನಂಗ. ಅವನು ಪ್ರಜೆಗಳ
ರಕ್ಷಕನೂ, ಸಾಧುವೂ, ದಂಡನೀತಿ ವಿಶಾರದನೂ ಆಗಿದ್ದನು.

12059098a ಅನಂಗಪುತ್ರೋಽತಿಬಲೋ ನೀತಿಮಾನಧಿಗಮ್ಯ ವೈ|
12059098c ಅಭಿಪೇದೇ ಮಹೀರಾಜ್ಯಮಥೇಂದ್ರಿಯವಶೋಽಭವತ್||

ಅನಂಗನ ಮಗನು ಅತಿಬಲನು. ಅವನು ನೀತಿಶಾಸ್ತ್ರದಲ್ಲಿ
ಪಾರಂಗತನಾಗಿದ್ದನು. ಅವನು ಮಹೀರಾಜ್ಯವನ್ನು ಆಳಿದನು. ಆದರೆ
ಅವನು ಇಂದ್ರಿಯಗಳಿಗೆ ವಶನಾಗಿಬಿಟ್ಟಿದ್ದನು.

12059099a ಮೃತ್ಯೋಸ್ತು ದುಹಿತಾ ರಾಜನ್ಸುನೀಥಾ ನಾಮ ಮಾನಸೀ|
12059099c ಪ್ರಖ್ಯಾತಾ ತ್ರಿಷು ಲೋಕೇಷು ಯಾ ಸಾ ವೇನಮಜೀಜನತ್||

ರಾಜನ್! ಮೃತ್ಯುವಿಗೆ ಸುನೀಥಾ ಎಂಬ ಹೆಸರಿನ ಮಾನಸ

ಪುತ್ರಿಯಿದ್ದಳು. ಮೂರು ಲೋಕಗಳಲ್ಲಿಯೂ ವಿಖ್ಯಾತಳಾಗಿದ್ದ ಅವಳು ಅತಿಬಲನ ಮಗ ವೇನನಿಗೆ ಜನ್ಮವಿತ್ತಳು.

12059100a ತಂ ಪ್ರಜಾಸು ವಿಧರ್ಮಾಣಂ ರಾಗದ್ವೇಷವಶಾನುಗಮ್|
12059100c ಮಂತ್ರಪೂತ್ಯೈಃ ಕುಶೈರ್ಜಘ್ನುರೃಷಯೋ ಬ್ರಹ್ಮವಾದಿನಃ||

ರಾಗ-ದ್ವೇಷಗಳ ವಶಕ್ಕೆ ಸಿಲುಕಿ, ಪ್ರಜೆಗಳಲ್ಲಿ ಅಧರ್ಮವನ್ನೆಸಗುತ್ತಿದ್ದ ಅವನನ್ನು ಬ್ರಹ್ಮವಾದಿ ಋಷಿಗಳು ಮಂತ್ರಪೂತ ದರ್ಭೆಗಳಿಂದ ಸಂಹರಿಸಿದರು.

12059101a ಮಮಂಥುರ್ದಕ್ಷಿಣಂ ಚೋರುಮೃಷಯಸ್ತಸ್ಯ ಮಂತ್ರತಃ|
12059101c ತತೋಽಸ್ಯ ವಿಕೃತೋ ಜಜ್ಞೇ ಹ್ರಸ್ವಾಂಗಃ ಪುರುಷೋ ಭುವಿ||

ಅನಂತರ ಋಷಿಗಳು ಮಂತ್ರಪೂರ್ವಕವಾಗಿ ಅವನ ಎಡತೊಡೆಯನ್ನು ಮಥಿಸಿದರು. ಅದರಿಂದ ಆಗ ಭುವಿಯಲ್ಲಿ ವಿಕೃತನಾಗಿದ್ದ ಕುಬ್ಜ ಪುರುಷನೊಬ್ಬನು ಜನಿಸಿದನು.

12059102a ದಗ್ಧಸ್ಥಾಣುಪ್ರತೀಕಾಶೋ ರಕ್ತಾಕ್ಷಃ ಕೃಷ್ಣಮೂರ್ಧಜಃ|
12059102c ನಿಷೀದೇತ್ಯೇವಮೂಚುಸ್ತಮೃಷಯೋ ಬ್ರಹ್ಮವಾದಿನಃ||

ಸುಟ್ಟ ಕಲ್ಲಿನಂತೆ ತೋರುತ್ತಿದ್ದ, ಕೆಂಪುಕಣ್ಣಿನ ಮತ್ತು ಕಪ್ಪು ತಲೆಗೂದಲಿನ ಅವನಿಗೆ ಬ್ರಹ್ಮವಾದಿ ಋಷಿಗಳು "ಕುಳಿತುಕೋ!" ಎಂದು ಹೇಳಿದರು.

12059103a ತಸ್ಮಾನ್ನಿಷಾದಾಃ ಸಂಭೂತಾಃ ಕ್ರೂರಾಃ ಶೈಲವನಾಶ್ರಯಾಃ|
12059103c ಯೇ ಚಾನ್ಯೇ ವಿಂಧ್ಯನಿಲಯಾ ಮ್ಲೇಚ್ಛಾಃ ಶತಸಹಸ್ರಶಃ||

ಅವನಿಂದಲೇ ಪರ್ವತ-ವನಗಳನ್ನು ಆಶ್ರಯಿಸಿದ ಕ್ರೂರ ನಿಷಾದರು

ಮತ್ತು ವಿಂಧ್ಯಾಚಲ ನಿವಾಸಿಗಳಾದ ಅನ್ಯ ನೂರಾರು ಸಹಸ್ರಾರು ಮ್ಲೇಚ್ಛರೂ ಹುಟ್ಟಿದರು.

12059104a ಭೂಯೋಽಸ್ಯ ದಕ್ಷಿಣಂ ಪಾಣಿಂ ಮಮಂಥುಸ್ತೇ ಮಹರ್ಷಯಃ|
12059104c ತತಃ ಪುರುಷ ಉತ್ಪನ್ನೋ ರೂಪೇಣೇಂದ್ರ ಇವಾಪರಃ||

ಮಹರ್ಷಿಗಳು ಪುನಃ ವೇನನ ಬಲಗೈಯನ್ನು ಕಡೆದರು. ಆಗ ಅದರಿಂದ ಇಂದ್ರನ ರೂಪವುಳ್ಳ ಇನ್ನೊಬ್ಬ ಪುರುಷನು ಉತ್ಪನ್ನನಾದನು.

12059105a ಕವಚೀ ಬದ್ಧನಿಸ್ತ್ರಿಂಶಃ ಸಶರಃ ಸಶರಾಸನಃ|
12059105c ವೇದವೇದಾಂಗವಿಚ್ಚೈವ ಧನುರ್ವೇದೇ ಚ ಪಾರಗಃ||

ಕವಚವನ್ನು ಧರಿಸಿ, ಖಡ್ಗವನ್ನು ಸೊಂಟಕ್ಕೆ ಕಟ್ಟಿಕೊಂಡು, ಧನುಸ್ಸು-ಬಾಣಗಳನ್ನು ಹಿಡಿದಿದ್ದ ಅವನು ವೇದವೇದಾಂಗವಿದುವೂ ಧನುರ್ವೇದ ಪಾರಂಗತನೂ ಆಗಿದ್ದನು.

12059106a ತಂ ದಂಡನೀತಿಃ ಸಕಲಾ ಶ್ರಿತಾ ರಾಜನ್ನರೋತ್ತಮಮ್|
12059106c ತತಃ ಸ ಪ್ರಾಂಜಲಿರ್ವೈನ್ಯೋ ಮಹರ್ಷೀಂಸ್ತಾನುವಾಚ ಹ||

ರಾಜನ್! ಆ ನರೋತ್ತಮನನ್ನು ಸಕಲ ದಂಡನೀತಿಗಳೂ ಆಶ್ರಯಿಸಿದವು. ಅನಂತರ ಆ ವೈನ್ಯನು ಮಹರ್ಷಿಗಳಿಗೆ ಕೈಮುಗಿದು ಹೇಳಿದನುಃ

12059107a ಸುಸೂಕ್ಷ್ಮಾ ಮೇ ಸಮುತ್ಪನ್ನಾ ಬುದ್ಧಿರ್ಧರ್ಮಾರ್ಥದರ್ಶಿನೀ|
12059107c ಅನಯಾ ಕಿಂ ಮಯಾ ಕಾರ್ಯಂ ತನ್ಮೇ ತತ್ತ್ವೇನ ಶಂಸತ||

“ಧರ್ಮಾರ್ಥಗಳನ್ನು ಕಾಣುವ ಸೂಕ್ಷ್ಮ ಬುದ್ಧಿಯು ನನ್ನಲ್ಲಿ

ಪ್ರಾದುರ್ಭವಿಸಿದೆ. ಇದರಿಂದ ನಾನು ಏನು ಕಾರ್ಯವನ್ನು ಮಾಡಬೇಕು ಎನ್ನುವುದನ್ನು ಯಥಾವತ್ತಾಗಿ ಹೇಳಿರಿ!

12059108a ಯನ್ಮಾಂ ಭವಂತೋ ವಕ್ಷ್ಯಂತಿ ಕಾರ್ಯಮರ್ಥಸಮನ್ವಿತಮ್|
12059108c ತದಹಂ ವೈ ಕರಿಷ್ಯಾಮಿ ನಾತ್ರ ಕಾರ್ಯಾ ವಿಚಾರಣಾ||

ನೀವು ನನಗೆ ಅರ್ಥಸಮನ್ವಿತವಾದ ಯಾವ ಕಾರ್ಯದ ಕುರಿತು ಹೇಳುತ್ತೀರೋ ಅದನ್ನೇ ನಾನು ಮಾಡುತ್ತೇನೆ. ಅದರ ಕುರಿತು ವಿಚಾರಿಸಬೇಕಾಗಿಲ್ಲ!"

12059109a ತಮೂಚುರಥ ದೇವಾಸ್ತೇ ತೇ ಚೈವ ಪರಮರ್ಷಯಃ|
12059109c ನಿಯತೋ ಯತ್ರ ಧರ್ಮೋ ವೈ ತಮಶಂಕಃ ಸಮಾಚರ||

ಆಗ ದೇವತೆಗಳೂ ಪರಮಋಷಿಗಳೂ ಅವನಿಗೆ ಹೇಳಿದರು: "ಯಾವುದರಲ್ಲಿ ಧರ್ಮವು ನಿಯತವಾಗಿದೆಯೋ ಶಂಕೆಯಿಲ್ಲದೇ ಅದರಂತೆ ನಡೆದುಕೋ!

12059110a ಪ್ರಿಯಾಪ್ರಿಯೇ ಪರಿತ್ಯಜ್ಯ ಸಮಃ ಸರ್ವೇಷು ಜಂತುಷು|
12059110c ಕಾಮಕ್ರೋಧೌ ಚ ಲೋಭಂ ಚ ಮಾನಂ ಚೋತ್ಸೃಜ್ಯ ದೂರತಃ||

ಪ್ರಿಯ-ಅಪ್ರಿಯವೆಂಬ ವಿಚಾರವನ್ನು ಪರಿತ್ಯಜಿಸಿ, ಕಾಮ-ಕ್ರೋಧ ಮತ್ತು ಲೋಭ-ಮಾನಗಳನ್ನು ದೂರ ಬಿಸುಟು ಸರ್ವ ಜಂತುಗಳ ಕುರಿತೂ ಸಮಭಾವದಿಂದಿರು!

12059111a ಯಶ್ಚ ಧರ್ಮಾತ್ಪ್ರವಿಚಲೇಲ್ಲೋಕೇ ಕಶ್ಚನ ಮಾನವಃ|
12059111c ನಿಗ್ರಾಹ್ಯಸ್ತೇ ಸ ಬಾಹುಭ್ಯಾಂ ಶಶ್ವದ್ಧರ್ಮಮವೇಕ್ಷತಃ||

ಯಾವಾಗಲೂ ಧರ್ಮವನ್ನೇ ಕಾಣುವ ನೀನು ಲೋಕದಲ್ಲಿ ಯಾವುದೇ

ಮಾನವನು ಈ ಧರ್ಮವನ್ನು ಉಲ್ಲಂಘಿಸಿ ನಡೆದುಕೊಂಡರೆ ಅವನನ್ನು



ನಿನ್ನ ಬಾಹುಗಳಿಂದ ನಿಗ್ರಹಿಸು.

12059112a ಪ್ರತಿಜ್ಞಾಂ ಚಾಧಿರೋಹಸ್ವ ಮನಸಾ ಕರ್ಮಣಾ ಗಿರಾ|
12059112c ಪಾಲಯಿಷ್ಯಾಮ್ಯಹಂ ಭೌಮಂ ಬ್ರಹ್ಮ ಇತ್ಯೇವ ಚಾಸಕೃತ್||

ಅಲ್ಲದೇ ಈ ಪ್ರತಿಜ್ಞೆಯನ್ನೂ ಕೈಗೊಳ್ಳು: "ಮನಸ್ಸು, ಮಾತು ಮತ್ತು
ಕರ್ಮಗಳಿಂದ ನಾನು ಈ ಭೂಮಿಯಲ್ಲಿ ಬ್ರಹ್ಮವಿದ್ಯೆಯನ್ನು
ಪಾಲಿಸುತ್ತೇನೆ!

12059113a ಯಶ್ಚಾತ್ರ ಧರ್ಮನೀತ್ಯುಕ್ತೋ ದಂಡನೀತಿವ್ಯಪಾಶ್ರಯಃ|
12059113c ತಮಶಂಕಃ ಕರಿಷ್ಯಾಮಿ ಸ್ವವಶೋ ನ ಕದಾ ಚನ||

ದಂಡನೀತಿಯಲ್ಲಿ ಧರ್ಮವೆಂದು ಏನು ಹೇಳಲ್ಪಟ್ಟಿದೆಯೋ ಅದನ್ನು
ಶಂಕಿಸದೇ ಪಾಲಿಸುತ್ತೇನೆ. ನಾನು ಎಂದೂ ಸ್ವ-ವಶನಾಗುವುದಿಲ್ಲ!"

12059114a ಅದಂಡ್ಯಾ ಮೇ ದ್ವಿಜಾಶ್ಚೇತಿ ಪ್ರತಿಜಾನೀಷ್ವ ಚಾಭಿಭೋ|
12059114c ಲೋಕಂ ಚ ಸಂಕರಾತ್ಕೃತ್ಸ್ನಾತ್ತ್ರಾತಾಸ್ಮೀತಿ ಪರಂತಪ||

ವಿಭೋ! ಪರಂತಪ! "ದ್ವಿಜರನ್ನು ದಂಡಿಸುವುದಿಲ್ಲ ಮತ್ತು ಲೋಕವನ್ನು
ಸಂಕರದಿಂದ ಕಾಪಾಡುತ್ತೇನೆ!" ಎಂದೂ ಪ್ರತಿಜ್ಞೆಮಾಡು!"

12059115a ವೈನ್ಯಸ್ತತಸ್ತಾನುವಾಚ ದೇವಾನೃಷಿಪುರೋಗಮಾನ್|
12059115c ಬ್ರಾಹ್ಮಣಾ ಮೇ ಸಹಾಯಾಶ್ಚೇದೇವಮಸ್ತು ಸುರರ್ಷಭಾಃ||

ಆಗ ವೈನ್ಯನು ಋಷಿಗಳನ್ನು ಮುಂದಿರಿಸಿಕೊಂಡು ಇದ್ದ ದೇವತೆಗಳಿಗೆ
"ಬ್ರಾಹ್ಮಣರು ಮತ್ತು ಸುರರ್ಷಭ ದೇವತೆಗಳು ನನ್ನ
ಸಹಾಯಕರಾಗಿರಬೇಕು!" ಎಂದು ಕೇಳಿಕೊಂಡನು.

12059116a ಏವಮಸ್ತ್ವಿತಿ ವೈನ್ಯಸ್ತು ತೈರುಕ್ತೋ ಬ್ರಹ್ಮವಾದಿಭಿಃ|

12059116c ಪುರೋಧಾಶ್ಚಾಭವತ್ತಸ್ಯ ಶುಕ್ರೋ ಬ್ರಹ್ಮಮಯೋ ನಿಧಿಃ||

ಆ ಬ್ರಹ್ಮವಾದಿಗಳು ವೈನ್ಯನಿಗೆ ಹಾಗೆಯೇ ಆಗಲೆಂದು ಹೇಳಲು, ಬ್ರಹ್ಮಮಯ ನಿಧಿ ಶುಕ್ರನು ಅವನ ಪುರೋಹಿತನಾದನು.

12059117a ಮಂತ್ರಿಣೋ ವಾಲಖಿಲ್ಯಾಸ್ತು ಸಾರಸ್ವತ್ಯೋ ಗಣೋ ಹ್ಯಭೂತ್|
12059117c ಮಹರ್ಷಿರ್ಭಗವಾನ್ಗರ್ಗಸ್ತಸ್ಯ ಸಾಂವತ್ಸರೋಽಭವತ್||

ವಾಲಖಿಲ್ಯರೂ ಸಾರಸ್ವತ ಗಣಗಳೂ ಮಂತ್ರಿಗಳಾದರು. ಮಹರ್ಷಿ ಭಗವಾನ್ ಗರ್ಗನು ಅವನು ಜ್ಯೋತಿಷಿಯಾದನು.

12059118a ಆತ್ಮನಾಷ್ಟಮ ಇತ್ಯೇವ ಶ್ರುತಿರೇಷಾ ಪರಾ ನೃಷು|
12059118c ಉತ್ಪನ್ನೌ ಬಂದಿನೌ ಚಾಸ್ಯ ತತ್ಪೂರ್ವೌ ಸೂತಮಾಗಧೌ||

ಇವನು ಆತ್ಮರಲ್ಲಿ ಅಷ್ಟಮನೆಂದು ನರರಲ್ಲಿ ಪ್ರಖ್ಯಾತನಾದನು. ಅವನ ಮೊದಲೇ ಸೂತ-ಮಾಗಧರೆಂಬ ಸ್ತುತಿಪಾಠಕರು ಹುಟ್ಟಿದ್ದರು.

12059119a ಸಮತಾಂ ವಸುಧಾಯಾಶ್ಚ ಸ ಸಮ್ಯಗುಪಪಾದಯತ್|
12059119c ವೈಷಮ್ಯಂ ಹಿ ಪರಂ ಭೂಮೇರಾಸೀದಿತಿ ಹ ನಃ ಶ್ರುತಮ್||

ವೈನ್ಯನು ಹಳ್ಳ-ತಿಟ್ಟುಗಳಿಂದ ಕೂಡಿದ್ದ ಭೂಮಿಯನ್ನು ಸಮತಟ್ಟಾಗಿ ಮಾಡಿದನೆಂದು ಕೇಳಿದ್ದೇವೆ.

12059120a ಸ ವಿಷ್ಣುನಾ ಚ ದೇವೇನ ಶಕ್ರೇಣ ವಿಬುಧೈಃ ಸಹ|
12059120c ಋಷಿಭಿಶ್ಚ ಪ್ರಜಾಪಾಲ್ಯೇ ಬ್ರಹ್ಮಣಾ ಚಾಭಿಷೇಚಿತಃ||

ವಿಷ್ಣು, ಋಷಿಗಳು, ಪ್ರಜಾಪತಿಗಳು, ಬ್ರಾಹ್ಮಣರು ಮತ್ತು ವಿಬುಧರೊಂದಿಗೆ ದೇವ ಶಕ್ರನು ಅವನನ್ನು ಅಭಿಷೇಕಿಸಿದನು.

12059121a ತಂ ಸಾಕ್ಷಾತ್ಪೃಥಿವೀ ಭೇಜೇ ರತ್ನಾನ್ಯಾದಾಯ ಪಾಂಡವ|
12059121c ಸಾಗರಃ ಸರಿತಾಂ ಭರ್ತಾ ಹಿಮವಾಂಶ್ಚಾಚಲೋತ್ತಮಃ||

ಪಾಂಡವ! ಸಾಕ್ಷಾತ್ ಪೃಥ್ವಿ, ಸರಿತಾಪತಿ ಸಾಗರ ಮತ್ತು
ಅಚಲೋತ್ತಮ ಹಿಮವಾನರು ಅವನಿಗೆ ರತ್ನಗಳನ್ನಿತ್ತು
ಸೇವೆಸಲ್ಲಿಸಿದರು.

12059122a ಶಕ್ರಶ್ಚ ಧನಮಕ್ಷಯ್ಯಂ ಪ್ರಾದಾತ್ತಸ್ಯ ಯುಧಿಷ್ಠಿರ|
12059122c ರುಕ್ಮಂ ಚಾಪಿ ಮಹಾಮೇರುಃ ಸ್ವಯಂ ಕನಕಪರ್ವತಃ||

ಯುಧಿಷ್ಠಿರ! ಶಕ್ರನು ಅಕ್ಷಯ ಧನವನ್ನೂ, ಕನಕ ಪರ್ವತ ಸ್ವಯಂ
ಮಹಾಮೇರುವು ಚಿನ್ನವನ್ನೂ ಅವನಿಗೆ ನೀಡಿದರು.

12059123a ಯಕ್ಷರಾಕ್ಷಸಭರ್ತಾ ಚ ಭಗವಾನ್ನರವಾಹನಃ|
12059123c ಧರ್ಮೇ ಚಾರ್ಥೇ ಚ ಕಾಮೇ ಚ ಸಮರ್ಥಂ ಪ್ರದದೌ ಧನಮ್||

ಯಕ್ಷ-ರಾಕ್ಷಸರ ಒಡೆಯ, ನರವಾಹನ ಕುಬೇರನೂ ಕೂಡ ಅವನ
ಧರ್ಮ-ಅರ್ಥ-ಕಾಮಗಳನ್ನು ಪೂರೈಸುವಷ್ಟು ಧನವನ್ನಿತ್ತನು.

12059124a ಹಯಾ ರಥಾಶ್ಚ ನಾಗಾಶ್ಚ ಕೋಟಿಶಃ ಪುರುಷಾಸ್ತಥಾ|
12059124c ಪ್ರಾದುರ್ಬಭೂವುರ್ವೈನ್ಯಸ್ಯ ಚಿಂತನಾದೇವ ಪಾಂಡವ||

ಪಾಂಡವ! ವೈನ್ಯನು ಯೋಚಿಸಿದಂತಷ್ಟು ಕುದುರೆಗಳು, ರಥಗಳು,
ಆನೆಗಳು, ಮತ್ತು ಕೋಟಿಗಟ್ಟಲೆ ಸೈನಿಕರು ಆವಿರ್ಭವಿಸಿದರು.

12059124E ನ ಜರಾ ನ ಚ ದುರ್ಭಿಕ್ಷಂ ನಾಧಯೋ ವ್ಯಾಧಯಸ್ತಥಾ
12059125a ಸರೀಸೃಪೇಭ್ಯಃ ಸ್ತೇನೇಭ್ಯೋ ನ ಚಾನ್ಯೋನ್ಯಾತ್ಕದಾ ಚನ|
12059125c ಭಯಮುತ್ಪದ್ಯತೇ ತತ್ರ ತಸ್ಯ ರಾಜ್ಞೋಽಭಿರಕ್ಷಣಾತ್||

ಅವನ ರಾಜ್ಯಭಾರದ ರಕ್ಷಣೆಯಲ್ಲಿ ಯಾರಿಗೂ ಮುಪ್ಪಿರಲಿಲ್ಲ.
ದುರ್ಭಿಕ್ಷವಿರಲಿಲ್ಲ. ಮಾನಸಿಕ ಮತ್ತು ಶಾರೀರಿಕ ವ್ಯಾಧಿಗಳಿರಲಿಲ್ಲ.
ಸರ್ಪಗಳಿಂದಾಗಲೀ ಕಳ್ಳಕಾಕರಿಂದಾಗಲೀ, ಮತ್ತು
ಅನ್ಯೋನ್ಯರಿಂದಾಗಲೀ ಯಾರಿಗೂ ಭಯವೆನ್ನುವುದೇ ಇರಲಿಲ್ಲ.

12059126a ತೇನೇಯಂ ಪೃಥಿವೀ ದುಗ್ಧಾ ಸಸ್ಯಾನಿ ದಶ ಸಪ್ತ ಚ|
12059126c ಯಕ್ಷರಾಕ್ಷಸನಾಗೈಶ್ಚಾಪೀಪ್ಸಿತಂ ಯಸ್ಯ ಯಸ್ಯ ಯತ್||

ಅವನು ಪೃಥ್ವಿಯಿಂದ ಹದಿನೇಳು ಸಸ್ಯಗಳನ್ನು ಕರೆದನು. ಯಕ್ಷ-ರಾಕ್ಷಸ-
ನಾಗರಿಗೆ, ಅವರವರು ಬಯಸಿದಂಥಹ ವಸ್ತುಗಳನ್ನು ಕೂಡ
ಭೂಮಿಯಿಂದ ಕರೆದನು.

12059127a ತೇನ ಧರ್ಮೋತ್ತರಶ್ಚಾಯಂ ಕೃತೋ ಲೋಕೋ ಮಹಾತ್ಮನಾ|
12059127c ರಂಜಿತಾಶ್ಚ ಪ್ರಜಾಃ ಸರ್ವಾಸ್ತೇನ ರಾಜೇತಿ ಶಬ್ದ್ಯತೇ||

ಆ ಮಹಾತ್ಮನು ಲೋಕದಲ್ಲಿ ಧರ್ಮದ ಪ್ರಾಧಾನ್ಯತೆಯನ್ನು
ಪ್ರತಿಷ್ಠಾಪಿಸಿದನು. ಯಾರು ಸರ್ವ ಪ್ರಜೆಗಳನ್ನೂ ರಂಜಿಸುತ್ತಾನೆಯೋ
ಅವನನ್ನೇ ರಾಜನೆಂದು ಕರೆಯುತ್ತಾರೆ.

12059128a ಬ್ರಾಹ್ಮಣಾನಾಂ ಕ್ಷತತ್ರಾಣಾತ್ತತಃ ಕ್ಷತ್ರಿಯ ಉಚ್ಯತೇ|
12059128c ಪ್ರಥಿತಾ ಧನತಶ್ಚೈಯಂ[168] ಪೃಥಿವೀ ಸಾಧುಭಿಃ ಸ್ಮೃತಾ||

ಬ್ರಾಹ್ಮಣರು ನಾಶಗೊಳ್ಳದಂತೆ ರಕ್ಷಿಸುವವನಿಗೆ ಕ್ಷತ್ರಿಯ ಎಂದು

---

[168] ಧರ್ಮತಶ್ಚೈಯಂ ಅರ್ಥಾತ್ ಧರ್ಮದ ಮೂಲಕವಾಗಿಯೇ ಈ
ಭೂಮಿಯನ್ನು ಖ್ಯಾತಿಗೊಳಿಸಿದುದರಿಂದ ಎಂಬ ಪಾಠಾಂತರವಿದೆ (ಭಾರತ
ದರ್ಶನ).

ಹೇಳುತ್ತಾರೆ. ಇವನಿಂದ ಧನವುಳ್ಳಂತಾದುದರಿಂದ ಸಾಧುಗಳು ಇದನ್ನು ಪೃಥ್ವಿ ಎಂದು ಕರೆಯತೊಡಗಿದರು.

12059129a ಸ್ಥಾಪನಂ ಚಾಕರೋದ್ವಿಷ್ಣುಃ ಸ್ವಯಮೇವ ಸನಾತನಃ|
12059129c ನಾತಿವರ್ತಿಷ್ಯತೇ ಕಶ್ಚಿದ್ರಾಜಂಸ್ತ್ವಾಮಿತಿ ಪಾರ್ಥಿವ||

“ಪಾರ್ಥಿವ! ನಿನ್ನನ್ನು ಅತಿಕ್ರಮಿಸಿ ಯಾರೂ ನಡೆದುಕೊಳ್ಳುವುದಿಲ್ಲ!” ಎಂದು ಸ್ವಯಂ ಸನಾತನ ವಿಷ್ಣುವೇ ಅವನನ್ನು ಸ್ಥಾಪಿಸಿದನು.

12059130a ತಪಸಾ ಭಗವಾನ್ವಿಷ್ಣುರಾವಿವೇಶ ಚ ಭೂಮಿಪಮ್|
12059130c ದೇವವನ್ನರದೇವಾನಾಂ ನಮತೇ ಯಜ್ಜಗನ್ನೃಪ||

ತಪಸ್ಸಿನಿಂದ ವಿಷ್ಣುವು ಆ ಭೂಮಿಪನನ್ನು ಪ್ರವೇಶಿಸಿದನು. ನೃಪ! ಆಗ ಇಡೀ ಜಗತ್ತು ದೇವತೆಯೋ ಎನ್ನುವಂತೆ ಆ ನರದೇವನನ್ನು ಸಮಸ್ಕರಿಸಿತು.

12059131a ದಂಡನೀತ್ಯಾ ಚ ಸತತಂ ರಕ್ಷಿತಂ ತಂ ನರೇಶ್ವರ|
12059131c ನಾಧರ್ಷಯತ್ತತಃ ಕಶ್ಚಿಚ್ಚಾರನಿತ್ಯಾಚ್ಚ ದರ್ಶನಾತ್||

ನರೇಶ್ವರ! ನಿತ್ಯವೂ ಚಾರರನ್ನು ಕಾಣುತ್ತಾ ದಂಡನೀತಿಯಿಂದ ಸತತವೂ ರಕ್ಷಿತವಾದ ಅವನ ಆ ರಾಜ್ಯವನ್ನು ಯಾರೂ ಉಲ್ಲಂಘಿಸಲಾಗುತ್ತಿರಲಿಲ್ಲ.

12059132a ಆತ್ಮನಾ ಕರಣೈಶ್ಚೈವ ಸಮಸ್ಯೇಹ ಮಹೀಕ್ಷಿತಃ|
12059132c ಕೋ ಹೇತುರ್ಯದ್ವಶೇ ತಿಷ್ಠೇಲ್ಲೋಕೋ ದ್ಯೈವಾದೃತೇ ಗುಣಾತ್||

ಮಹೀಕ್ಷಿತನು ಆತ್ಮ ಮತ್ತು ಕರ್ಮಗಳ ಮೂಲಕ ಸರ್ವಸಮಭಾವದಿಂದ ಇರಬೇಕು. ಲೋಕವು ಒಬ್ಬನ

ಅಧೀನದಲ್ಲಿರಬೇಕಾದರೆ ಅವನಲ್ಲಿರುವ ದೈವಗುಣಗಳಲ್ಲದೇ ಬೇರೆ ಯಾವ ಕಾರಣವಿರಲು ಸಾಧ್ಯ?

12059133a ವಿಷ್ಣೋರ್ಲಲಾಟಾತ್ಕಮಲಂ ಸೌವರ್ಣಮಭವತ್ತದಾ|
12059133c ಶ್ರೀಃ ಸಂಭೂತಾ ಯತೋ ದೇವೀ ಪತ್ನೀ ಧರ್ಮಸ್ಯ ಧೀಮತಃ||

ಆಗ ವಿಷ್ಣುವಿನ ಲಲಾಟದಿಂದ ಸುವರ್ಣಮಯ ಕಮಲವು ಉದ್ಭವಿಸಿತು. ಅದರಿಂದ ಧೀಮತ ಧರ್ಮನ ಪತ್ನಿ ಶ್ರೀಯು ಹುಟ್ಟಿದಳು.

12059134a ಶ್ರಿಯಃ ಸಕಾಶಾದರ್ಥಶ್ಚ ಜಾತೋ ಧರ್ಮೇಣ ಪಾಂಡವ|
12059134c ಅಥ ಧರ್ಮಸ್ತಥ್ಯೈವಾರ್ಥಃ ಶ್ರೀಶ್ಚ ರಾಜ್ಯೇ ಪ್ರತಿಷ್ಠಿತಾ||

ಪಾಂಡವ! ಧರ್ಮದಿಂದ ಶ್ರೀಯಲ್ಲಿ ಅರ್ಥವು ಹುಟ್ಟಿಕೊಂಡಿತು. ಹಾಗೆ ರಾಜ್ಯದಲ್ಲಿ ಧರ್ಮ, ಅರ್ಥ ಮತ್ತು ಶ್ರೀಗಳು ಪ್ರತಿಷ್ಠಿತಗೊಂಡವು.

12059135a ಸುಕೃತಸ್ಯ ಕ್ಷಯಾಚ್ಚೈವ ಸ್ವರ್ಲೋಕಾದೇತ್ಯ ಮೇದಿನೀಮ್|
12059135c ಪಾರ್ಥಿವೋ ಜಾಯತೇ ತಾತ ದಂಡನೀತಿವಶಾನುಗಃ||

ಮಗೂ! ಸ್ವರ್ಲೋಕದಲ್ಲಿದ್ದವನ ಸುಕೃತಗಳು ಕ್ಷಯಿಸಿದ ನಂತರ ಅವನು ಮೇದಿನಿಯ ಮೇಲೆ ದಂಡನೀತಿಯ ವಶಾನುಗನಾದ ಪಾರ್ಥಿವನಾಗಿ ಹುಟ್ಟುತ್ತಾನೆ.

12059136a ಮಹತ್ತ್ವೇನ ಚ ಸಂಯುಕ್ತೋ ವೈಷ್ಣವೇನ ನರೋ ಭುವಿ|
12059136c ಬುದ್ಧ್ಯಾ ಭವತಿ ಸಂಯುಕ್ತೋ ಮಾಹಾತ್ಮ್ಯಂ ಚಾಧಿಗಚ್ಚತಿ||

ಆ ನರನು ಭುವಿಯಲ್ಲಿ ವೈಷ್ಣವ ಮಹತ್ತ್ವದಿಂದ ಸಂಯುಕ್ತನಾಗಿ ಬುದ್ಧಿಸಂಪನ್ನನಾಗಿ ವಿಶೇಷ ಹಿರಿಮೆಯನ್ನೂ ಹೊಂದುತ್ತಾನೆ.

12059137a ಸ್ಥಾಪನಾಮಥ ದೇವಾನಾಂ ನ ಕಶ್ಚಿದತಿವರ್ತತೇ|
12059137c ತಿಷ್ಠತ್ಯೇಕಸ್ಯ ಚ ವಶೇ ತಂ ಚೇದನುವಿಧೀಯತೇ||

ದೇವತೆಗಳಿಂದ ಸ್ಥಾಪಿತನಾದ ರಾಜನನ್ನು ಯಾರೂ
ಅತಿಕ್ರಮಿಸುವುದಿಲ್ಲ. ಒಬ್ಬನೇ ವಶದಲ್ಲಿ ಎಲ್ಲರೂ ಇರುತ್ತಾರೆ. ಯಾರೂ
ಅವನಿಗೆ ಆಜ್ಞೆಮಾಡುವುದಿಲ್ಲ.

12059138a ಶುಭಂ ಹಿ ಕರ್ಮ ರಾಜೇಂದ್ರ ಶುಭತ್ವಾಯೋಪಕಲ್ಪತೇ|
12059138c ತುಲ್ಯಸ್ಯೈಕಸ್ಯ ಯಸ್ಯಾಯಂ ಲೋಕೋ ವಚಸಿ ತಿಷ್ಠತಿ||

ರಾಜೇಂದ್ರ! ಶುಭಕರ್ಮಗಳು ಶುಭಪಲಗಳಿಂದಲೇ ಕೂಡಿರುತ್ತವೆ.
ಎಲ್ಲರಂತೆ ಇವನ ಅವಯವಗಳಿದ್ದರೂ ಲೋಕವು ಅವನ ಮಾತಿನಂತೆ
ನಡೆಯುತ್ತದೆ.

12059139a ಯೋ ಹ್ಯಸ್ಯ ಮುಖಿಮದ್ರಾಕ್ಷೀತ್ಸೋಮ್ಯ ಸೋಽಸ್ಯ ವಶಾನುಗಃ|
12059139c ಸುಭಗಂ ಚಾರ್ಥವಂತಂ ಚ ರೂಪವಂತಂ ಚ ಪಶ್ಯತಿ||

ಅವನ ಸೌಮ್ಯ ಮುಖವನ್ನು ನೋಡಿ, ಅವನು ಸೌಭಾಗ್ಯಶಾಲಿಯೂ,
ಧನವಂತನಾಗಿಯೂ, ರೂಪವಂತನಾಗಿಯೂ ಇರುವುದರಿಂದ ಜನರು
ಅವನ ವಶವರ್ತಿಯಾಗಿರುತ್ತಾರೆ.

12059140a ತತೋ ಜಗತಿ ರಾಜೇಂದ್ರ ಸತತಂ ಶಬ್ದಿತಂ ಬುಧೈಃ|
12059140c ದೇವಾಶ್ಚ ನರದೇವಾಶ್ಚ ತುಲ್ಯಾ ಇತಿ ವಿಶಾಂ ಪತೇ||

ರಾಜೇಂದ್ರ! ವಿಶಾಂಪತೇ! ಅನಂತರ ಜಗತ್ತಿನಲ್ಲಿ ತಿಳಿದವರು
ದೇವತೆಗಳೂ ಮತ್ತು ರಾಜರೂ ಸಮಾನರು ಎಂದು
ಹೇಳತೊಡಗಿದರು.

12059141a ಏತತ್ತೇ ಸರ್ವಮಾಖ್ಯಾತಂ ಮಹತ್ತ್ವಂ ಪ್ರತಿ ರಾಜಸು|
12059141c ಕಾತ್ಸ್ನ್ಯೇನ ಭರತಶ್ರೇಷ್ಠ ಕಿಮನ್ಯದಿಹ ವರ್ತತಾಮ್||

ಭರತಶ್ರೇಷ್ಠ! ರಾಜರ ಮಹತ್ವದ ಕುರಿತು ನಿನಗೆ ಎಲ್ಲವನ್ನೂ ಅಮೂಲಾಗ್ರವಾಗಿ ಹೇಳಿದ್ದೇನೆ. ಇದರ ಕುರಿತು ಇನ್ನು ಏನನ್ನು ಹೇಳಬೇಕು?””

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಸೂತ್ರಾಧ್ಯಾಯೇ ಏಕೋನಷಷ್ಠಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಸೂತ್ರಾಧ್ಯಾಯ ಎನ್ನುವ ಐವತ್ತೊಂಭತ್ತನೇ ಅಧ್ಯಾಯವು.

೬೦

ವರ್ಣಾಶ್ರಮಧರ್ಮಕಥನ

ವರ್ಣಧರ್ಮಗಳ ವರ್ಣನೆ (1-52).

12060001 ವೈಶಂಪಾಯನ ಉವಾಚ|
12060001a ತತಃ ಪುನಃ ಸ ಗಾಂಗೇಯಮಭಿವಾದ್ಯ ಪಿತಾಮಹಮ್|
12060001c ಪ್ರಾಂಜಲಿರ್ನಿಯತೋ ಭೂತ್ವಾ ಪರ್ಯಪೃಚ್ಚದ್ಯುಧಿಷ್ಠಿರಃ||

ವೈಶಂಪಾಯನನು ಹೇಳಿದನು: “ಅನಂತರ ಯುಧಿಷ್ಠಿರನು ಪಿತಾಮಹ ಗಾಂಗೇಯನಿಗೆ ಕೈಮುಗಿದು ತಲೆಬಾಗಿ ನಮಸ್ಕರಿಸಿ ಪುನಃ ಪ್ರಶ್ನಿಸಿದನು:

12060002a ಕೇ ಧರ್ಮಾಃ ಸರ್ವವರ್ಣಾನಾಂ ಚಾತುರ್ವರ್ಣ್ಯಸ್ಯ ಕೇ ಪೃಥಕ್|
12060002c ಚತುರ್ಣಾಮಾಶ್ರಮಾಣಾಂ ಚ ರಾಜಧರ್ಮಾಶ್ಚ ಕೇ ಮತಾಃ||

“ಸರ್ವವರ್ಣದವರಿಗೂ ಇರುವ ಧರ್ಮವ್ಯಾವುದು?
ಚಾತುರ್ವರ್ಣ್ಯದ ಪ್ರತಿಯೊಂದು ವರ್ಣದವರಿಗೂ ಇರುವ
ಧರ್ಮವ್ಯಾವುದು? ಈ ನಾಲ್ಕೂ ವರ್ಣದವರಲ್ಲಿ ನಾಲ್ಕು ಆಶ್ರಮಗಳ
ಧರ್ಮಗಳ್ಯಾವುವು? ರಾಜಧರ್ಮಗಳು ಯಾವುವು?

12060003a ಕೇನ ಸ್ವಿದ್ವರ್ಧತೇ ರಾಷ್ಟ್ರಂ ರಾಜಾ ಕೇನ ವಿವರ್ಧತೇ|
12060003c ಕೇನ ಪೌರಾಶ್ಚ ಭೃತ್ಯಾಶ್ಚ ವರ್ಧಂತೇ ಭರತರ್ಷಭ||

ಭರತರ್ಷಭ! ಯಾವುದರಿಂದ ರಾಷ್ಟ್ರವು ವೃದ್ಧಿಯಾಗುತ್ತದೆ?
ಯಾವುದರಿಂದ ರಾಜನು ಅಭಿವೃದ್ಧಿಗೊಳ್ಳುತ್ತಾನೆ? ಯಾವುದರಿಂದ
ಪೌರರೂ ಸೇವಕರೂ ಅಭಿವೃದ್ಧಿಹೊಂದುತ್ತಾರೆ?

12060004a ಕೋಶಂ ದಂಡಂ ಚ ದುರ್ಗಂ ಚ ಸಹಾಯಾನ್ಮಂತ್ರಿಣಸ್ತಥಾ|
12060004c ಋತ್ವಿಕ್ಪುರೋಹಿತಾಚಾರ್ಯಾನ್ಕೀದೃಶಾನ್ವರ್ಜಯೇನ್ನೃಪಃ||

ರಾಜನಾದವನು ಯಾವ ರೀತಿಯ ಕೋಶಾಧಿಕಾರಿಗಳನ್ನೂ,
ದಂಡಾಧಿಕಾರಿಗಳನ್ನೂ, ರಕ್ಷಣಾಧಿಕಾರಿಗಳನ್ನೂ, ಸಹಾಯಕರನ್ನೂ,
ಮಂತ್ರಿಗಳನ್ನೂ, ಋತ್ವಿಕರನ್ನೂ, ಪುರೋಹಿತರನ್ನೂ, ಆಚಾರ್ಯರನ್ನೂ
ವರ್ಜಿಸಬೇಕು?

12060005a ಕೇಷು ವಿಶ್ವಸಿತವ್ಯಂ ಸ್ಯಾದ್ರಾಜ್ಞಾಂ ಕಸ್ಯಾಂ ಚಿದಾಪದಿ|
12060005c ಕುತೋ ವಾತ್ಮಾ ದೃಢೋ ರಕ್ಷ್ಯಸ್ತನ್ಮೇ ಬ್ರೂಹಿ ಪಿತಾಮಹ||

ಏನಾದರೂ ಆಪತ್ತು ಬಂದೊದಗಿದರೆ ರಾಜನಾದವನು ಯಾರ ಮೇಲೆ
ವಿಶ್ವಾಸವನ್ನಿಡಬೇಕು? ಯಾರಿಂದ ತನ್ನ ದೃಢ ರಕ್ಷಣೆಯನ್ನು
ಮಾಡಿಕೊಳ್ಳಬೇಕು? ಅದನ್ನು ನನಗೆ ಹೇಳು ಪಿತಾಮಹ!”

12060006 ಭೀಷ್ಮ ಉವಾಚ|

12060006a ನಮೋ ಧರ್ಮಾಯ ಮಹತೇ ನಮಃ ಕೃಷ್ಣಾಯ ವೇಧಸೇ|
12060006c ಬ್ರಾಹ್ಮಣೇಭ್ಯೋ ನಮಸ್ಕೃತ್ವಾ ಧರ್ಮಾನ್ವಕ್ಷ್ಯಾಮಿ ಶಾಶ್ವತಾನ್||

ಭೀಷ್ಮನು ಹೇಳಿದನು: "ಮಹಾತ್ಮ ಧರ್ಮನಿಗೆ ನಮಸ್ಕಾರ! ವಿಶ್ವದ
ಸೃಷ್ಟಿಗೆ ಕಾರಣನಾದ ಕೃಷ್ಣನಿಗೆ ನಮಸ್ಕಾರ! ಬ್ರಾಹ್ಮಣರಿಗೆ
ನಮಸ್ಕರಿಸಿ ಶಾಶ್ವತ ಧರ್ಮಗಳ ಕುರಿತು ಹೇಳುತ್ತೇನೆ.

12060007a ಅಕ್ರೋಧಃ ಸತ್ಯವಚನಂ ಸಂವಿಭಾಗಃ ಕ್ಷಮಾ ತಥಾ|
12060007c ಪ್ರಜನಃ ಸ್ವೇಷು ದಾರೇಷು ಶೌಚಮದ್ರೋಹ ಏವ ಚ||
12060008a ಆರ್ಜವಂ ಭೃತ್ಯಭರಣಂ ನವೈತೇ ಸಾರ್ವವರ್ಣಿಕಾಃ|
12060008c ಬ್ರಾಹ್ಮಣಸ್ಯ ತು ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಕೇವಲಮ್||

ಕ್ರೋಧಿತನಾಗದಿರುವುದು, ಸತ್ಯವಚನ, ಎಲ್ಲವನ್ನೂ
ಹಂಚಿಕೊಳ್ಳುವುದು, ಕ್ಷಮೆ, ತನ್ನದೇ ಪತ್ನಿಯಲ್ಲಿ ಮಕ್ಕಳನ್ನು
ಪಡೆಯುವುದು, ಶುಚಿಯಾಗಿರುವುದು, ದ್ರೋಹವೆಸಗದಿರುವುದು,
ಸರಳತೆ, ತನ್ನನ್ನೇ ಅವಲಂಬಿಸಿರುವವರ ಪಾಲನ-ಪೋಷಣೆ
ಮಾಡುವುದು – ಇವುಗಳೇ ಸರ್ವವರ್ಣದವರಿಗೂ ಇರುವ ಧರ್ಮ.
ಇನ್ನು ನಾನು ಕೇವಲ ಬ್ರಾಹ್ಮಣ ವರ್ಣಕ್ಕೆ ಸಂಬಂಧಿಸಿದ ಧರ್ಮದ
ಕುರಿತು ಹೇಳುತ್ತೇನೆ.

12060009a ದಮಮೇವ ಮಹಾರಾಜ ಧರ್ಮಮಾಹುಃ ಪುರಾತನಮ್|
12060009c ಸ್ವಾಧ್ಯಾಯೋಽಧ್ಯಾಪನಂ ಚೈವ ತತ್ರ ಕರ್ಮ ಸಮಾಪ್ಯತೇ||

ಮಹಾರಾಜ! ಇಂದ್ರಿಯ ನಿಗ್ರಹವೇ ಬ್ರಾಹ್ಮಣರ ಪುರಾತನ
ಧರ್ಮವೆಂದು ಹೇಳುತ್ತಾರೆ. ಸ್ವಯಂ ತಾನೇ ಅಧ್ಯಯನ ಮಾಡುವುದು

ಮತ್ತು ಇತರರಿಗೆ ಅಧ್ಯಾಪನ ಮಾಡುವುದು ಇವುಗಳಿಂದ ಅವನ ಕರ್ಮಗಳೆಲ್ಲ ಪೂರೈಸಿದಂತಾಗುತ್ತದೆ.

12060010a ತಂ ಚೇದ್ವಿತ್ತಮುಪಾಗಚ್ಚೇದ್ವರ್ತಮಾನಂ ಸ್ವಕರ್ಮಣಿ|
12060010c ಅಕುರ್ವಾಣಂ ವಿಕರ್ಮಾಣಿ ಶಾಂತಂ ಪ್ರಜ್ಞಾನತರ್ಪಿತಮ್||
12060011a ಕುರ್ವೀತಾಪತ್ಯಸಂತಾನಮಥೋ ದದ್ಯಾದ್ಯಜೇತ ಚ|
12060011c ಸಂವಿಭಜ್ಯ ಹಿ ಭೋಕ್ತವ್ಯಂ ಧನಂ ಸದ್ಭಿರಿತೀಷ್ಯತೇ||

ಸ್ವ-ವರ್ಣೋಕ್ತವಾದ ಸ್ವಾಧ್ಯಾಯ-ಅಧ್ಯಾಪನಗಳಲ್ಲಿಯೇ ನಿರತನಾಗಿರುವ, ಮಾಡದಿರುವಂಥಹ ಕರ್ಮಗಳನ್ನು ಮಾಡದೇ ಶಾಂತನಾಗಿ, ಪ್ರಜ್ಞಾನ ಮತ್ತು ತೃಪ್ತಿಯಿಂದಿದ್ದ ಬ್ರಾಹ್ಮಣನು ಒಂದು ವೇಳೆ ಸಂಪತ್ತನ್ನೇನಾದರೂ ಪಡೆದುಕೊಂಡರೆ ಅವನು ಮದುವೆಮಾಡಿಕೊಂಡು ಸಂತಾನವನ್ನು ಪಡೆಯಬೇಕು. ದಾನಮಾಡಬೇಕು. ಯಜ್ಞಮಾಡಬೇಕು. ತಾನಾಗಿಯೇ ಬಂದ ಸಂಪತ್ತನ್ನು ಬಂಧು-ಬಾಂಧವರಲ್ಲಿ ಹಂಚಿಕೊಂಡು ಭೋಗಿಸಬೇಕು. ಇದು ಬ್ರಾಹ್ಮಣರ ಧರ್ಮವೆಂದು ಸತ್ಪುರುಷರು ಹೇಳುತ್ತಾರೆ.

12060012a ಪರಿನಿಷ್ಠಿತಕಾರ್ಯಸ್ತು ಸ್ವಾಧ್ಯಾಯೇನೈವ ಬ್ರಾಹ್ಮಣಃ|
12060012c ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ||

ಅವನು ಬೇರೆ ಕರ್ಮಗಳನ್ನು ಮಾಡಲಿ ಅಥವಾ ಮಾಡದಿರಲಿ – ಬ್ರಾಹ್ಮಣನು ಸ್ವಾಧ್ಯಾಯದಿಂದಲೇ ಕೃತಕೃತ್ಯತೆಯನ್ನು ಹೊಂದುತ್ತಾನೆ. ಎಲ್ಲರೊಡನೆಯೂ ಮೈತ್ರಿಯಿಂದ ಇರುವುದರಿಂದ ಬ್ರಾಹ್ಮಣನನ್ನು "ಮೈತ್ರ" ಎಂದೂ ಕರೆಯುತ್ತಾರೆ.

12060013a ಕ್ಷತ್ರಿಯಸ್ಯಾಪಿ ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಭಾರತ|

12060013c ದದ್ಯಾದ್ರಾಜಾ ನ ಯಾಚೇತ ಯಜೇತ ನ ತು ಯಾಜಯೇತ್‌॥

ಭಾರತ! ಈಗ ನಿನಗೆ ಕ್ಷತ್ರಿಯನ ಧರ್ಮವನ್ನು ಹೇಳುತ್ತೇನೆ.
ರಾಜನಾದವನು ದಾನನೀಡಬೇಕೇ ಹೊರತು ದಾನವನ್ನು
ಕೇಳಬಾರದು. ಯಾಗಮಾಡಬೇಕೇ ಹೊರತು ಯಾಗಮಾಡಿಸಬಾರದು.

12060014a ನಾಧ್ಯಾಪಯೇದಧೀಯೀತ ಪ್ರಜಾಶ್ಚ ಪರಿಪಾಲಯೇತ್‌|
12060014c ನಿತ್ಯೋದ್ಯುಕ್ತೋ ದಸ್ಯುವಧೇ ರಣೇ ಕುರ್ಯಾತ್ಪರಾಕ್ರಮಮ್‌॥

ಅಧ್ಯಯನ ಮಾಡಬೇಕೇ ಹೊರತು ಇತರರಿಗೆ ಹೇಳಿಕೊಡಬಾರದು.
ಪ್ರಜೆಗಳನ್ನು ಪರಿಪಾಲಿಸಬೇಕು. ಪ್ರಜೆಗಳನ್ನು ಪೀಡಿಸುವವರ
ವಧೆಯಲ್ಲಿಯೇ ನಿತ್ಯವೂ ನಿರತನಾಗಿರಬೇಕು. ರಣದಲ್ಲಿ
ಪರಾಕ್ರಮದಿಂದ ಯುದ್ಧಮಾಡಬೇಕು.

12060015a ಯೇ ಚ ಕ್ರತುಭಿರೀಜಾನಾಃ ಶ್ರುತವಂತಶ್ಚ ಭೂಮಿಪಾಃ|
12060015c ಯ ಏವಾಹವಜೇತಾರಸ್ತ ಏಷಾಂ ಲೋಕಜಿತ್ತಮಾಃ‌॥

ಕ್ರತುಗಳನ್ನು ಮಾಡಿರುವ, ವೇದ-ಶಾಸ್ತ್ರಗಳನ್ನು ತಿಳಿದುಕೊಂಡಿರುವ
ಭೂಮಿಪರನ್ನು ಯುದ್ಧದಲ್ಲಿ ಸೋಲಿಸುವ ಕ್ಷತ್ರಿಯನೇ
ಪುಣ್ಯಲೋಕಗಳನ್ನು ಜಯಿಸುತ್ತಾನೆ.

12060016a ಅವಿಕ್ಷತೇನ ದೇಹೇನ ಸಮರಾದ್ಯೋ ನಿವರ್ತತೇ|
12060016c ಕ್ಷತ್ರಿಯೋ ನಾಸ್ಯ ತತ್ಕರ್ಮ ಪ್ರಶಂಸಂತಿ ಪುರಾವಿದಃ‌॥

ಶರೀರದಲ್ಲಿ ಯಾವ ಗಾಯವೂ ಆಗದೇ ಸಮರದಿಂದ ಹಿಂದಿರುಗಿದ
ಕ್ಷತ್ರಿಯನ ಆ ಕರ್ಮವನ್ನು ವಿಧ್ವಾಂಸರು ಪ್ರಶಂಸಿಸುವುದಿಲ್ಲ.

12060017a ವಧಂ ಹಿ ಕ್ಷತ್ರಬಂಧೂನಾಂ ಧರ್ಮಮಾಹುಃ ಪ್ರಧಾನತಃ|

12060017c ನಾಸ್ಯ ಕೃತ್ಯತಮಂ ಕಿಂ ಚಿದನ್ಯದ್ದಸ್ಯುನಿಬರ್ಹಣಾತ್‌॥

ವಧಿಸುವುದೇ ಕ್ಷತ್ರಬಂಧುಗಳ ಪ್ರಧಾನ ಧರ್ಮವೆಂದು ಹೇಳುತ್ತಾರೆ. ದಸ್ಯುಗಳನ್ನು ನಿಯಂತ್ರಿಸುವುದಕ್ಕಿಂತ ಹೆಚ್ಚಿನ ಕರ್ತವ್ಯವು ಅವರಿಗಿಲ್ಲ.

12060018a ದಾನಮಧ್ಯಯನಂ ಯಜ್ಞೋ ಯೋಗಃ ಕ್ಷೇಮೋ ವಿಧೀಯತೇ|
12060018c ತಸ್ಮಾದ್ರಾಜ್ಞಾ ವಿಶೇಷೇಣ ಯೋದ್ಧವ್ಯಂ ಧರ್ಮಮೀಪ್ಸತಾ‌॥

ದಾನ, ಅಧ್ಯಯನ, ಯಜ್ಞ, ಯೋಗ ಇವು ಕ್ಷತ್ರಿಯರಿಗೆ ಒಳ್ಳೆಯದೆಂದು ವಿಧಿತವಾಗಿವೆ. ಆದರೆ ಧರ್ಮದಿಂದಿರುವ ರಾಜನು ವಿಶೇಷವಾಗಿ ಯುದ್ಧಶೀಲನಾಗಿರಬೇಕು.

12060019a ಸ್ವೇಷು ಧರ್ಮೇಷ್ವವಸ್ಥಾಪ್ಯ ಪ್ರಜಾಃ ಸರ್ವಾ ಮಹೀಪತಿಃ|
12060019c ಧರ್ಮೇಣ ಸರ್ವಕೃತ್ಯಾನಿ ಸಮನಿಷ್ಠಾನಿ ಕಾರಯೇತ್‌॥

ಮಹೀಪತಿಯು ಪ್ರಜೆಗಳೆಲ್ಲರನ್ನೂ ಅವರವರ ಧರ್ಮದಲ್ಲಿ ನೆಲೆಸಿರುವಂತೆ ಮಾಡಿ ಶಾಂತಿಗಾಗಿ ಸರ್ವಕೃತ್ಯಗಳನ್ನೂ ಧರ್ಮಾನುಸಾರವಾಗಿಯೇ ಮಾಡುತ್ತಿರಬೇಕು.

12060020a ಪರಿನಿಷ್ಠಿತಕಾರ್ಯಃ ಸ್ಯಾನ್ನೃಪತಿಃ ಪರಿಪಾಲನಾತ್‌|
12060020c ಕುರ್ಯಾದನ್ಯನ್ನ ವಾ ಕುರ್ಯಾದ್ಯೆಂದ್ರೋ ರಾಜನ್ಯ ಉಚ್ಯತೇ‌॥

ಬೇರೆ ಏನನ್ನು ಮಾಡಲಿ ಅಥವಾ ಮಾಡದಿರಲಿ, ನೃಪತಿಯು ಪ್ರಜಾಪಾಲನೆಯಿಂದಲೇ ನೃಪತಿಯು ಕೃತಕೃತ್ಯನಾಗುತ್ತಾನೆ. ಇಂದ್ರನಂತೆ ಬಲವೇ ಪ್ರಧಾನವಾಗಿರುವುದರಿಂದ ರಾಜನನ್ನು “ಐಂದ್ರ” ಎಂದೂ ಕರೆಯುತ್ತಾರೆ.

12060021a ವೈಶ್ಯಸ್ಯಾಪೀಹ ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಭಾರತ|

12060021c ದಾನಮಧ್ಯಯನಂ ಯಜ್ಞಃ ಶೌಚೇನ ಧನಸಂಚಯಃ||

ಭಾರತ! ಈಗ ನಾನು ನಿನಗೆ ವೈಶ್ಯನ ಧರ್ಮವನ್ನು ಹೇಳುತ್ತೇನೆ. ದಾನ, ಅಧ್ಯಯನ, ಯಜ್ಞ, ಶೌಚ ಮತ್ತು ಧನಸಂಚಯ ಇವು ವೈಶ್ಯನ ಧರ್ಮಗಳು.

12060022a ಪಿತೃವತ್ಪಾಲಯೇದ್ವೈಶ್ಯೋ ಯುಕ್ತಃ ಸರ್ವಪಶೂನಿಹ|
12060022c ವಿಕರ್ಮ ತದ್ಭವೇದನ್ಯತ್ಕರ್ಮ ಯದ್ಯತ್ಸಮಾಚರೇತ್||
12060022e ರಕ್ಷಯಾ ಸ ಹಿ ತೇಷಾಂ ವೈ ಮಹತ್ಸುಖಮವಾಪ್ನುಯಾತ್|

ವೈಶ್ಯನು ತಂದೆಯಂತೆ ಸರ್ವಪಶುಗಳನ್ನೂ ಪಾಲಿಸಬೇಕು. ಪಶುಪಾಲನೆಯನ್ನು ಬಿಟ್ಟು ಬೇರೆ ಯಾವ ಕೆಲಸಗಳನ್ನು ಮಾಡಿದರೂ ವೈಶ್ಯನಿಗೆ ಅದು ವಿಕರ್ಮವೇ ಆಗುತ್ತದೆ.

12060023a ಪ್ರಜಾಪತಿರ್ಹಿ ವೈಶ್ಯಾಯ ಸೃಷ್ಟ್ವಾ ಪರಿದದೇ ಪಶೂನ್||
12060023c ಬ್ರಾಹ್ಮಣಾಯ ಚ ರಾಜ್ಞೇ ಚ ಸರ್ವಾಃ ಪರಿದದೇ ಪ್ರಜಾಃ|

ಪ್ರಜಾಪತಿಯು ವೈಶ್ಯನಿಗೆಂದೇ ಪಶುಗಳನ್ನು ಸೃಷ್ಟಿಸಿದನು. ಬ್ರಾಹ್ಮಣರಿಗೆ ಮತ್ತು ರಾಜರಿಗೆ ಎಲ್ಲ ಪ್ರಜೆಗಳ ಪಾಲನೆಯ ಜವಾಬ್ದಾರಿಯನ್ನೂ ಕೊಟ್ಟಿದ್ದಾನೆ.

12060024a ತಸ್ಯ ವೃತ್ತಿಂ ಪ್ರವಕ್ಷ್ಯಾಮಿ ಯಚ್ಚ ತಸ್ಯೋಪಜೀವನಮ್||
12060024c ಷಣ್ಣಾಮೇಕಾಂ ಪಿಬೇದ್ಧೇನುಂ ಶತಾಚ್ಚ ಮಿಥುನಂ ಹರೇತ್|

ವೈಶ್ಯನಾಗಿ ಉಪಜೀವನಮಾಡುವವನ ವೃತ್ತಿಯ ಕುರಿತು ಹೇಳುತ್ತೇನೆ. ಅವನು ಆರು ಹಸುಗಳನ್ನು ಸಾಕುತ್ತಿದ್ದರೆ ಅವುಗಳಲ್ಲಿ ಒಂದು ಹಸುವಿನ ಹಾಲನ್ನು ಮಾತ್ರ ತಾನು ಸೇವಿಸಬೇಕು. ನೂರು ಹಸುಗಳನ್ನು

ಸಾಕುತ್ತಿದ್ದರೆ, ಅವುಗಳಲ್ಲಿ ಒಂದು ಜೋಡಿಯ ಹಾಲನ್ನು ಮಾತ್ರ ಸೇವಿಸಬೇಕು.

12060025a ಲಯೇ ಚ ಸಪ್ತಮೋ ಭಾಗಸ್ತಥಾ ಶೃಂಗೇ ಕಲಾ ಖುರೇ॥
12060025c ಸಸ್ಯಸ್ಯ ಸರ್ವಬೀಜಾನಾಮೇಷಾ ಸಾಂವತ್ಸರೀ ಭೃತಿಃ।

ತೀರಿಕೊಂಡ ಹಸುಗಳ ಕೊಂಬುಗಳ ಮಾರಾಟದಿಂದ ಬರುವ ಮೌಲ್ಯದ ಏಳನೆಯ ಒಂದು ಭಾಗವನ್ನು ಮತ್ತು ಗೊರಸುಗಳ ಮಾರಾಟದಿಂದ ಬರುವ ಮೌಲ್ಯದ ಹದಿನಾರನೇ ಒಂದು ಭಾಗವನ್ನು ತನಗಾಗಿ ಇಟ್ಟುಕೊಳ್ಳಬಹುದು. ವೈಶ್ಯನು ಬೆಳೆದ ಆಹಾರಧಾನ್ಯಗಳಲ್ಲಿ ಹದಿನಾರನೇ ಒಂದು ಭಾಗವನ್ನು ಮಾತ್ರ ತನ್ನ ವಾರ್ಷಿಕ ಭತ್ಯವನ್ನಾಗಿ ಇಟ್ಟುಕೊಳ್ಳಬೇಕು.

12060026a ನ ಚ ವೈಶ್ಯಸ್ಯ ಕಾಮಃ ಸ್ಯಾನ್ನ ರಕ್ಷೇಯಂ ಪಶೂನಿತಿ॥
12060026c ವೈಶ್ಯೇ ಚೇಚ್ಚತಿ ನಾನ್ಯೇನ ರಕ್ಷಿತವ್ಯಾಃ ಕಥಂ ಚನ।

ಪಶುಗಳನ್ನು ನಾನು ರಕ್ಷಿಸುವುದಿಲ್ಲ ಎಂದು ವೈಶ್ಯನು ಎಂದೂ ಆಶಿಸಬಾರದು. ತಾನು ರಕ್ಷಿಸಲು ಸಾಧ್ಯವಾಗುವ ವರೆಗೆ ಇನ್ನೊಬ್ಬರಿಗೆ ಅವುಗಳ ರಕ್ಷಣೆಯ ಜವಾಬ್ದಾರಿಯನ್ನು ಕೊಡಬಾರದು.

12060027a ಶೂದ್ರಸ್ಯಾಪಿ ಹಿ ಯೋ ಧರ್ಮಸ್ತಂ ತೇ ವಕ್ಷ್ಯಾಮಿ ಭಾರತ॥
12060027c ಪ್ರಜಾಪತಿರ್ಹಿ ವರ್ಣಾನಾಂ ದಾಸಂ ಶೂದ್ರಮಕಲ್ಪಯತ್।

ಭಾರತ! ಈಗ ನಾನು ನಿನಗೆ ಶೂದ್ರನ ಧರ್ಮವನ್ನು ಹೇಳುತ್ತೇನೆ. ಪ್ರಜಾಪತಿಯು ಶೂದ್ರನನ್ನು ಇತರ ವರ್ಣಗಳ ದಾಸನನ್ನಾಗಿಯೇ ಸೃಷ್ಟಿಸಿದನು.

12060028a ತಸ್ಮಾಚ್ಚೂದ್ರಸ್ಯ ವರ್ಣಾನಾಂ ಪರಿಚರ್ಯಾ ವಿಧೀಯತೇ॥
12060028c ತೇಷಾಂ ಶುಶ್ರೂಷಣಾಚ್ಚೈವ ಮಹತ್ಸುಖಮವಾಪ್ನುಯಾತ್।

ಆದುದರಿಂದ ಶೂದ್ರನಿಗೆ ಇತರ ವರ್ಣದವರ ಪರಿಚರ್ಯೆಯನ್ನೇ ವಿಧಿಸಲಾಗಿದೆ. ಅವರ ಶುಶ್ರೂಷೆಯಿಂದಲೇ ಶೂದ್ರನು ಮಹಾ ಸುಖವನ್ನು ಹೊಂದುತ್ತಾನೆ.

12060029a ಶೂದ್ರ ಏತಾನ್ಪರಿಚರೇತ್ತ್ರೀನ್ವರ್ಣಾನನಸೂಯಕಃ॥
12060029c ಸಂಚಯಾಂಶ್ಚ ನ ಕುರ್ವೀತ ಜಾತು ಶೂದ್ರಃ ಕಥಂ ಚನ।

ಶೂದ್ರನು ಈ ಮೂರು ವರ್ಣದವರನ್ನು ಅಸೂಯೆ ಪಡೆಯದೇ ಪರಿಚರಿಸಬೇಕು. ಶೂದ್ರನು ಎಂದೂ ಧನಸಂಚಯವನ್ನು ಮಾಡಬಾರದು.

12060030a ಪಾಪೀಯಾನ್ಹಿ ಧನಂ ಲಬ್ಧ್ವಾ ವಶೇ ಕುರ್ಯಾದ್ಗರೀಯಸಃ॥
12060030c ರಾಜ್ಞಾ ವಾ ಸಮನುಜ್ಞಾತಃ ಕಾಮಂ ಕುರ್ವೀತ ಧಾರ್ಮಿಕಃ।

ಧನವನ್ನು ಪಡೆದು ಪಾಪಿಯಾಗಿ ಅವನು ತನಗಿಂಥಲೂ ಶ್ರೇಷ್ಠರಾದವರನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬಹುದು. ರಾಜನ ಅನುಜ್ಞೆಯನ್ನು ಪಡೆದು ಶೂದ್ರನು ಧನವನ್ನು ಸಂಗ್ರಹಿಸಿ ಧರ್ಮಕಾರ್ಯಗಳನ್ನು ಮಾಡಬಹುದು.

12060031a ತಸ್ಯ ವೃತ್ತಿಂ ಪ್ರವಕ್ಷ್ಯಾಮಿ ಯಚ್ಚ ತಸ್ಯೋಪಜೀವನಮ್॥
12060031c ಅವಶ್ಯಭರಣೀಯೋ ಹಿ ವರ್ಣಾನಾಂ ಶೂದ್ರ ಉಚ್ಯತೇ।

ಶೂದ್ರನ ವೃತ್ತಿ ಮತ್ತು ಉಪಜೀವನದ ಕುರಿತು ಹೇಳುತ್ತೇನೆ. ಉಳಿದ ಮೂರು ವರ್ಣದವರೂ ಶೂದ್ರನ ಭರಣ-ಪೋಷಣೆಯನ್ನು

ಅವಶ್ಯವಾಗಿ ಮಾಡಬೇಕೆಂದು ಹೇಳಲ್ಪಟ್ಟಿದೆ.

12060032a ಚತ್ರಂ ವೇಷ್ಟನಮೌಶೀರಮುಪಾನದ್ವ್ಯಜನಾನಿ ಚ||
12060032c ಯಾತಯಾಮಾನಿ ದೇಯಾನಿ ಶೂದ್ರಾಯ ಪರಿಚಾರಿಣೇ|

ಪರಿಚರ್ಯೆಯನ್ನು ಮಾಡುವ ಶೂದ್ರನಿಗೆ ಉಪಯೋಗಿಸಿದ ಛತ್ರಿಯನ್ನೂ, ವೇಷ್ಟಿಯನ್ನೂ, ಶಯನಾಸನಗಳನ್ನೂ, ಪಾದರಕ್ಷೆಗಳನ್ನೂ, ಮತ್ತು ಬೀಸಣಿಗೆಗಳನ್ನೂ ಕೊಡಬೇಕು.

12060033a ಅಧಾರ್ಯಾಣಿ ವಿಶೀರ್ಣಾನಿ ವಸನಾನಿ ದ್ವಿಜಾತಿಭಿಃ||
12060033c ಶೂದ್ರಾಯೈವ ವಿಧೇಯಾನಿ ತಸ್ಯ ಧರ್ಮಧನಂ ಹಿ ತತ್|

ದ್ವಿಜಾತಿಯರು ಧರಿಸದ ಹಳೆಯ ಬಟ್ಟೆಗಳನ್ನು ಶೂದ್ರನಿಗೇ ಕೊಡಬೇಕು. ಏಕೆಂದರೆ ಇವು ಅವನ ಧರ್ಮಧನವೇ ಆಗಿರುತ್ತವೆ.

12060034a ಯಶ್ಚ ಕಶ್ಚಿದ್ದ್ವಿಜಾತೀನಾಂ ಶೂದ್ರಃ ಶುಶ್ರೂಷುರಾವ್ರಜೇತ್||
12060034c ಕಲ್ಪ್ಯಾಂ ತಸ್ಯ ತು ತೇನಾಹುರ್ವೃತ್ತಿಂ ಧರ್ಮವಿದೋ ಜನಾಃ|

ಶುಶ್ರೂಷೆಗೆಂದು ಯಾವುದೇ ಶೂದ್ರನು ಬಂದರೂ ದ್ವಿಜಾತಿಯವರು ಅವನಿಗೆ ವೃತ್ತಿಯನ್ನು ಕಲ್ಪಿಸಿಕೊಟ್ಟು ಜೀವನ ವ್ಯವಸ್ಥೆಯನ್ನು ಮಾಡಲೇ ಬೇಕೆಂದು ಧರ್ಮವಿದರು ಹೇಳುತ್ತಾರೆ.

12060034e ದೇಯಃ ಪಿಂಡೋಽನಪೇತಾಯ ಭರ್ತವ್ಯೌ ವೃದ್ಧದುರ್ಬಲೌ||
12060035a ಶೂದ್ರೇಣ ಚ ನ ಹಾತವ್ಯೋ ಭರ್ತಾ ಕಸ್ಯಾಂ ಚಿದಾಪದಿ|

ಮಕ್ಕಳಿಲ್ಲದ ದ್ವಿಜಾತಿಯವನಿಗೆ ಶುಶ್ರೂಷೆಮಾಡುವ ಶೂದ್ರನೇ ಪಿಂಡಪ್ರದಾನ ಮಾಡಬೇಕು. ವೃದ್ಧರೂ ದುರ್ಬಲರೂ ಆದ ದ್ವಿಜಾತಿಯವರನ್ನು ಶೂದ್ರನೇ ಭರಣ-ಪೋಷಣೆಗಳನ್ನು ಮಾಡಬೇಕು.

ಆಪತ್ತುಗಳಲ್ಲಿ ದ್ವಿಜಾತಿಯವರನ್ನು ಶೂದ್ರನೇ ನೋಡಿಕೊಳ್ಳಬೇಕು.

12060035c ಅತಿರೇಕೇಣ ಭರ್ತವ್ಯೋ ಭರ್ತಾ ದ್ರವ್ಯಪರಿಕ್ಷಯೇ||
12060035e ನ ಹಿ ಸ್ವಮಸ್ತಿ ಶೂದ್ರಸ್ಯ ಭರ್ತ್ಯಹಾರ್ಯಧನೋ ಹ್ಯಸೌ|

ಒಂದುವೇಳೆ ಯಜಮಾನನ ಧನವು ನಷ್ಟವಾಗಿ ನಿರ್ಧನನಾದರೆ ಶೂದ್ರನು ದೂರೀಕರಿಸದೇ ಅವನ ಭರಣ-ಪೋಷಣೆಯನ್ನು ಮಾಡಬೇಕು.

12060036a ಉಕ್ತಸ್ತ್ರಯಾಣಾಂ ವರ್ಣಾನಾಂ ಯಜ್ಞಸ್ತ್ರಯ್ಯೈವ ಭಾರತ||
12060036c ಸ್ವಾಹಾಕಾರನಮಸ್ಕಾರೌ ಮಂತ್ರಃ ಶೂದ್ರೇ ವಿಧೀಯತೇ[169]|

ಭಾರತ! ಮೂರು ವರ್ಣದವರಿಗೆ ಹೇಳಿರುವ ಯಜ್ಞಗಳೂ ಶೂದ್ರನಿಗೆ ಹೇಳಲ್ಪಟ್ಟಿವೆ. ಆದರೆ ಶೂದ್ರರಿಗೆ ಸ್ವಾಹಾಕಾರ ಮತ್ತು ನಮಸ್ಕಾರಗಳೇ ಮಂತ್ರಗಳೆಂದು ವಿಹಿತವಾಗಿವೆ.

12060037a ತಾಭ್ಯಾಂ ಶೂದ್ರಃ ಪಾಕಯಜ್ಞೈರ್ಯಜೇತ ವ್ರತವಾನ್ಸ್ವಯಮ್||
12060037c ಪೂರ್ಣಪಾತ್ರಮಯೀಮಾಹುಃ ಪಾಕಯಜ್ಞಸ್ಯ ದಕ್ಷಿಣಾಮ್|

ಶೂದ್ರನು ಸ್ವಯಂ ವ್ರತನಿಷ್ಠನಾಗಿದ್ದುಕೊಂಡು ಸ್ವಾಹಾಕಾರ-ನಮಸ್ಕಾರಗಳಿಂದ ಪಾಕಯಜ್ಞದ ಮೂಲಕ ಯಾಜಿಸಬೇಕು.

---

[169] ಸ್ವಾಹಾಕಾರವಷಟ್ಕಾರೌ ಮಂತ್ರಃ ಶೂದ್ರೇ ನ ವಿದ್ಯತೇ| ಅರ್ಥಾತ್, ಶೂದ್ರನು ಮಾಡು ಯಜ್ಞದಲ್ಲಿ ಸ್ವಾಹಾಕರ-ವಷಟ್ಕಾರಗಳೂ ಮತ್ತು ವೈದಿಕ ಮಂತ್ರ ಪ್ರಯೋಗಗಳೂ ಇರುವುದಿಲ್ಲ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಪಾಕಯಜ್ಞದ ದಕ್ಷಿಣೆಗೆ "ಪೂರ್ಣಪಾತ್ರಮಯೀ[170]" ಎಂದು ಹೇಳುತ್ತಾರೆ.

12060038a ಶೂದ್ರಃ ಪೈಜವನೋ ನಾಮ ಸಹಸ್ರಾಣಾಂ ಶತಂ ದದೌ||
12060038c ಐಂದ್ರಾಗ್ನೇನ ವಿಧಾನೇನ ದಕ್ಷಿಣಾಮಿತಿ ನಃ ಶ್ರುತಮ್|

"ಪೈಜವನ" ಎಂಬ ಹೆಸರಿನ ಶೂದ್ರನು ಐಂದ್ರಾಗ್ನಿಯ ವಿಧಾನದಿಂದ ಯಾಜಿಸಿ, ಒಂದು ಲಕ್ಷ ಪೂರ್ಣಪಾತ್ರೆಗಳನ್ನು ದಕ್ಷಿಣೆಯನ್ನಾಗಿತ್ತನು ಎಂದು ನಾವು ಕೇಳಿದ್ದೇವೆ.

12060039a ಅತೋ ಹಿ ಸರ್ವವರ್ಣಾನಾಂ ಶ್ರದ್ಧಾಯಜ್ಞೋ ವಿಧೀಯತೇ||
12060039c ದೈವತಂ ಹಿ ಮಹಚ್ಚ್ರದ್ಧಾ ಪವಿತ್ರಂ ಯಜತಾಂ ಚ ಯತ್|

ಹೀಗಿದ್ದರೂ ಸರ್ವವರ್ಣದವರಿಗೂ ಶ್ರದ್ಧಾಯಜ್ಞವೇ ವಿಹಿತವಾಗಿವೆ. ದೇವತೆಗಳಿಗೂ ಮಹತ್ತರವಾದ ಶ್ರದ್ಧೆಯೇ ಯಾಜಕನನ್ನು

---

[170] ಗೋಭಿಲಸ್ಮೃತಿಯಲ್ಲಿ ಪೂರ್ಣಪಾತ್ರದಕ್ಷಿಣೆಯ ಪರಿಮಾಣವು ಈ ರೀತಿಯಲ್ಲಿದೆ: ಅಷ್ಟಮುಷ್ಟಿರ್ಭವೇತ್ಕುಂಚಃ ಕುಂಚಯೋಽಷ್ಟೌ ಚ ಪುಷ್ಕಲಂ| ಪುಷ್ಕಲಾನಿ ಚ ಚತ್ವಾರಿ ಪರಿಪೂರ್ಣಂ ವಿಧೀಯತೇ|| ಹೋಮಾಂತೇ ಪೂರ್ಣಪಾತ್ರಂ ಬ್ರಹ್ಮಣೇ ದದ್ಯಾತ್: ಅರ್ಥಾತ್, ೮ ಮುಷ್ಟಿಗಳು ಒಂದು ಕುಂಚಕ್ಕೆ ಸಮಾನ, ೮ ಕುಂಚಗಳು ಒಂದು ಪುಷ್ಕಲಕ್ಕೆ ಸಮಾನ, ಮತ್ತು ೪ ಪುಷ್ಕಲಗಳು ಒಂದು ಪೂರ್ಣಪಾತ್ರೆಗೆ ಸಮಾನ. ಅರ್ಥಾತ್, ೨೫೬ ಮುಷ್ಟಿಗಳಿಗೆ ಒಂದು ಪೂರ್ಣಪಾತ್ರವಾಗುತ್ತದೆ. ಹೋಮದ ಕೊನೆಯಲ್ಲಿ ಪೂರ್ಣಪಾತ್ರೆಯನ್ನು ಬ್ರಹ್ಮನಿಗೆ ಕೊಡಬೇಕು. ಆಪಸ್ತಂಬಗೃಹ್ಯಸೂತ್ರ ಪ್ರಕಾರ ಅಷ್ಟಮುಷ್ಟಿರ್ಭವೇತ್ಕಿಂಚಿತ್ಕಿಂಚಿಚ್ಚತ್ವಾರಿ ಪುಷ್ಕಲಂ| ಪುಷ್ಕಲಾನಿ ಚ ಚತ್ವಾರಿ ಪೂರ್ಣಪಾತ್ರಂ ಚ ಪ್ರಕ್ಷತೇ|| ಅಂದರೆ ೧೨೮ ಮುಷ್ಟಿಗಳಿಗೇ ಒಂದ ಪೂರ್ಣಪಾತ್ರೆಯಾಗುತ್ತದೆ.

ಪವಿತ್ರಗೊಳಿಸುತ್ತದೆ.

12060040a ದೈವತಂ ಪರಮಂ ವಿಪ್ರಾಃ ಸ್ವೇನ ಸ್ವೇನ ಪರಸ್ಪರಮ್‌॥
12060040c ಅಯಜನ್ನಿಹ ಸತ್ರೈಸ್ತೇ ತೈಸ್ತೈಃ ಕಾಮೈಃ ಸನಾತನೈಃ|

ವಿಪ್ರರು ಅನ್ಯೋನ್ಯವಾಗಿ ತಮ್ಮ ವರೊಂದಿಗೆ ಕೂಡಿಕೊಂಡು ಅವರವರ ಸನಾತನ ಕಾಮಗಳಿಂದ ಸತ್ರಗಳ ಮೂಲಕ ಪರಮ ದೈವತವನ್ನು ಯಜಿಸುತ್ತಾರೆ.

12060041a ಸಂಸೃಷ್ಟಾ ಬ್ರಾಹ್ಮಣೈರೇವ ತ್ರಿಷು ವರ್ಣೇಷು ಸೃಷ್ಟಯಃ‌॥
12060041c ದೇವಾನಾಮಪಿ ಯೇ ದೇವಾ ಯದ್ಭ್ಯುಯುಸ್ತೇ ಪರಂ ಹಿ ತತ್‌|
12060041e ತಸ್ಮಾದ್ವರ್ಣ್ಯಃ ಸರ್ವಯಜ್ಞಾಃ ಸಂಸೃಜ್ಯಂತೇ ನ ಕಾಮ್ಯಯಾ॥

ಬ್ರಾಹ್ಮಣರಿಂದಲೇ ಉಳಿದ ಮೂರು ವರ್ಣಗಳು ಸೃಷ್ಟಿಸಲ್ಪಟ್ಟಿವೆ. ದೇವತೆಗಳಿಗೂ ದೇವರಂತಿರುವ ಅವರು ಏನನ್ನು ಹೇಳುತ್ತಾರೆಯೋ ಅದು ಎಲ್ಲ ವರ್ಣದವರಿಗೂ ಪರಮ ಹಿತವಾದುದಾಗಿರುತ್ತದೆ. ಆದುದರಿಂದ ಉಳಿದ ವರ್ಣದವರು ಸರ್ವಯಜ್ಞಗಳನ್ನೂ ಬ್ರಾಹ್ಮಣರ ಆದೇಶದಂತೆಯೇ ಮಾಡಬೇಕೇ ಹೊರತು ಸ್ವ-ಇಚ್ಛೆಯಿಂದಲ್ಲ.

12060042a ಋಗ್ಯಜುಃಸಾಮವಿತ್ಪ್ರಾಜ್ಞೋ ನಿತ್ಯಂ ಸ್ಯಾದ್ದೇವವದ್ದ್ವಿಜಃ|
12060042c ಅನೃಗ್ಯಜುರಸಾಮಾ ತು ಪ್ರಾಜಾಪತ್ಯ ಉಪದ್ರವಃ‌॥

ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳನ್ನು ಅರ್ಥಮಾಡಿಕೊಂಡಿರುವ ದ್ವಿಜನು ದೇವತೆಗಳಂತೆ ನಿತ್ಯವೂ ಪೂಜನೀಯನು. ಋಗ್ವೇದ-ಯಜುರ್ವೇದ-ಸಾಮವೇದಗಳನ್ನು ಅರಿಯದ ಬ್ರಾಹ್ಮಣನು ಪ್ರಜಾಪತಿಯ ಉಪದ್ರವನು.

12060043a ಯಜ್ಞೋ ಮನೀಷಯಾ ತಾತ ಸರ್ವವರ್ಣೇಷು ಭಾರತ|
12060043c ನಾಸ್ಯ ಯಜ್ಞಹನೋ ದೇವಾ ಈಹಂತೇ ನೇತರೇ ಜನಾಃ||
12060043e ತಸ್ಮಾತ್ಸರ್ವೇಷು ವರ್ಣೇಷು ಶ್ರದ್ಧಾಯಜ್ಞೋ ವಿಧೀಯತೇ|

ಭಾರತ! ಮಗೂ! ಸರ್ವವರ್ಣದವರಲ್ಲಿ ಮನಸ್ಸು-ಶ್ರದ್ಧೆಗಳಿಂದ ಮಾಡುವ ಯಜ್ಞವನ್ನು ದೇವತೆಗಳು ಮತ್ತು ಇತರ ಜನರು ಅಪೇಕ್ಷಿಸುವುದಿಲ್ಲ. ಆದುದರಿಂದ ಸರ್ವ ವರ್ಣದವರಿಗೂ ಶದ್ಧಾಯಜ್ಞವನ್ನೂ ವಿಧಿಸಲಾಗಿದೆ.

12060044a ಸ್ವಂ ದ್ಯೈವತಂ ಬ್ರಾಹ್ಮಣಾಃ ಸ್ವೇನ ನಿತ್ಯಂ
ಪರಾನ್ವರ್ಣಾನ್ನಯಜನ್ನೇವಮಾಸೀತ್||
12060044c ಆರೋಚಿತಾ ನಃ ಸುಮಹಾನ್ಸ ಧರ್ಮಃ
ಸೃಷ್ಟೋ ಬ್ರಹ್ಮಣಾ ತ್ರಿಷು ವರ್ಣೇಷು ದೃಷ್ಟಃ|

ಬ್ರಾಹ್ಮಣನು ತನ್ನ ಕರ್ಮಗಳಿಂದ ಇತರ ಮೂರು ವರ್ಣದವರಿಗೂ ತನ್ನನ್ನು ನಿತ್ಯ ದೇವತೆಯಂತೆ ಮಾಡಿಕೊಂಡಿದ್ದಾನೆ. ಅವನು ಇತರ ವರ್ಣದವರಿಗಾಗಿ ಯಜ್ಞಮಾಡುವುದಿಲ್ಲ ಎನ್ನುವುದು ಇಲ್ಲ. ಇತರ ಮೂರು ವರ್ಣದವರಿಗಾಗಿಯೇ ಬ್ರಾಹ್ಮಣನು ಸೃಷ್ಟಿಸಲ್ಪಟ್ಟಿದ್ದಾನೆ ಎನ್ನುವುದನ್ನು ಕಾಣುತ್ತೇವೆ.

12060045a ತಸ್ಮಾದ್ವರ್ಣಾ ಋಜವೋ ಜಾತಿಧರ್ಮಾಃ
ಸಂಸೃಜ್ಯಂತೇ ತಸ್ಯ ವಿಪಾಕ ಏಷಃ||
12060045c ಏಕಂ ಸಾಮ ಯಜುರೇಕಮೃಗೇಕಾ
ವಿಪ್ರಶ್ಚೈಕೋಽನಿಶ್ಚಯಸ್ತೇಷು ದೃಷ್ಟಃ|

ಬ್ರಾಹ್ಮಣ ವರ್ಣದಿಂದಲೇ ಇತರ ಜಾತಿಧರ್ಮಗಳು

ಸೃಷ್ಟಿಯಾಗಿರುವುದರಿಂದ, ಉಳಿದ ಮೂರು ವರ್ಣಗಳೂ ಬ್ರಾಹ್ಮಣವರ್ಣಕ್ಕೆ ಸಮಾನವರ್ಣಗಳಾಗಿವೆ. ಋಗ್ವೇದ-ಯಜುರ್ವೇದ-ಸಾಮವೇದಗಳು ಹೇಗೆ ಒಂದೇ ಆಗಿರುವವೋ ಹಾಗೆ ವಿಪ್ರನೂ ಉಳಿದ ಮೂರು ವರ್ಣಗಳಿಂದ ಬೇರೆಯಲ್ಲ ಎಂದು ನಿಶ್ಚಯಿಸಲಾಗಿದೆ.

12060046a ಅತ್ರ ಗಾಥಾ ಯಜ್ಞಗೀತಾಃ ಕೀರ್ತಯಂತಿ ಪುರಾವಿದಃ॥
12060046c ವೈಖಾನಸಾನಾಂ ರಾಜೇಂದ್ರ ಮುನೀನಾಂ ಯಷ್ಟುಮಿಚ್ಚತಾಮ್।

ರಾಜೇಂದ್ರ! ಇದಕ್ಕೆ ಸಂಬಂಧಿಸಿದಂತೆ ಪುರಾಣಗಳನ್ನು ತಿಳಿದಿರುವವರು ಯಜ್ಞಮಾಡಲು ಇಚ್ಛಿಸಿದ ವೈಖಾನಸ ಮುನಿಗಳ ಈ ಯಜ್ಞಗೀತೆಗಳನ್ನು ಹಾಡುತ್ತಾರೆ.

12060047a ಉದಿತೇಽನುದಿತೇ[171] ವಾಪಿ ಶ್ರದ್ದಧಾನೋ ಜಿತೇಂದ್ರಿಯಃ॥
12060047c ವಹ್ನಿಂ ಜುಹೋತಿ ಧರ್ಮೇಣ ಶ್ರದ್ಧಾ ವೈ ಕಾರಣಂ ಮಹತ್।

“ಸೂರ್ಯೋದಯದ ಮೊದಲು ಅಥವಾ ನಂತರ ಶ್ರದ್ಧೆಯುಳ್ಳ ಜಿತೇಂದ್ರಿಯನು ಧರ್ಮಪೂರ್ವಕಗಾಗಿ ಅಗ್ನಿಯಲ್ಲಿ ಆಹುತಿಯನ್ನು ಕೊಡುತ್ತಾನೆ. ಅದಕ್ಕೆ ಶ್ರದ್ಧೆಯೇ ಮುಖ್ಯ ಕಾರಣವಾಗಿರುತ್ತದೆ.

---

171 ಎರಡು ಪ್ರಕಾರದ ಅಗ್ನಿಹೋತ್ರಗಳಿವೆ: ಸೂರ್ಯೋದಯಕ್ಕೆ ಮೊದಲು ಮಾಡುವ ಅಗ್ನಿಹೋತ್ರಕ್ಕೆ ಅನುದಿತ ಎಂದೂ ಸೂರ್ಯೋದಯಕ್ಕೆ ನಂತರ ಮಾಡುವ ಅಗ್ನಿಹೋತ್ರಕ್ಕೆ ಉದಿತ ಎಂದೂ ಹೆಸರು. ಅನುದಿತ ಅಗ್ನಿಹೋತ್ರಕ್ಕೆ ಅಗ್ನಿಯು ಪ್ರಧಾನ ದೇವತೆ. ಉದಿತ ಅಗ್ನಿಹೋತ್ರಕ್ಕೆ ಸೂರ್ಯನು ಪ್ರಧಾನ ದೇವತೆ. ಅಗ್ನಿಗೆ ಮೊದಲಿಗನೆಂದೂ ಸೂರ್ಯನಿಗೆ ಎರಡನೆಯನು ಅಥವಾ ಕಡೆಯವನು ಎಂದು ಹೇಳುತ್ತಾರೆ.

12060048a ಯತ್ಸ್ಕನ್ನಮಸ್ಯ ತತ್ಪೂರ್ವಂ ಯದಸ್ಕನ್ನಂ ತದುತ್ತರಮ್‌॥
12060048c ಬಹೂನಿ ಯಜ್ಞರೂಪಾಣಿ ನಾನಾಕರ್ಮಫಲಾನಿ ಚ|

ಇವುಗಳಲ್ಲಿ ಸ್ಕನ್ನವಾದವುಗಳು ಮೊದಲಿನವನಿಗೂ
ಅಸ್ಕನ್ನವಾದವುಗಳು ಎರಡನೆಯವನಿಗೂ ಸೇರುತ್ತವೆ[172].
ನಾನಾಕರ್ಮಫಲಗಳನ್ನು ಕೊಡುವ ಯಜ್ಞವಿಧಗಳು ಅನೇಕವಾಗಿವೆ.

12060049a ತಾನಿ ಯಃ ಸಂವಿಜಾನಾತಿ ಜ್ಞಾನನಿಶ್ಚಯನಿಶ್ಚಿತಃ‌॥
12060049c ದ್ವಿಜಾತಿಃ ಶ್ರದ್ಧಯೋಪೇತಃ ಸ ಯಷ್ಟುಂ ಪುರುಷೋಽರ್ಹತಿ|

ಯಾರು ಹಲವು ಯಜ್ಞರೂಪಗಳನ್ನು ಮತ್ತು ಅವುಗಳು ಕೊಡುವ
ಫಲಗಳನ್ನು ತಿಳಿದುಕೊಂಡಿರುವನೋ ಅವನೇ ಯಜ್ಞಗಳ ಕುರಿತಾದ
ನಿಶ್ಚಯಜ್ಞಾನಿಯಾಗಿರುತ್ತಾನೆ. ಶ್ರದ್ಧೆಯುಳ್ಳ ಅಂತಹ ದ್ವಿಜ ಪುರುಷನೇ
ಯಾಗಮಾಡಲು ಅರ್ಹನಾಗುತ್ತಾನೆ.

12060050a ಸ್ತೇನೋ ವಾ ಯದಿ ವಾ ಪಾಪೋ ಯದಿ ವಾ ಪಾಪಕೃತ್ತಮಃ‌॥
12060050c ಯಷ್ಟುಮಿಚ್ಛತಿ ಯಜ್ಞಂ ಯಃ ಸಾಧುಮೇವ ವದಂತಿ ತಮ್‌|

ಕಳ್ಳನೇ ಆಗಿರಲಿ, ಪಾಪಿಷ್ಟನೇ ಆಗಿರಲಿ ಅಥವಾ ಪಾಪಿಷ್ಟರಲ್ಲಿಯೇ
ಅತಿಪಾಪಿಷ್ಟನಾಗಿರಲಿ, ಅವನು ಯಜ್ಞಮಾಡಲು ಇಚ್ಛಿಸಿದರೆ
ಅಂಥವನನ್ನು ಸಾಧು, ಸತ್ಪುರುಷ ಎಂದೇ ಹೇಳುತ್ತಾರೆ.

12060051a ಋಷಯಸ್ತಂ ಪ್ರಶಂಸಂತಿ ಸಾಧು ಚೈತದಸಂಶಯಮ್‌॥

---

[172] ಸ್ಕನ್ನ ಎಂದರೆ ಕೆಳಗೆ ಚಿಲ್ಲಿರುವ ಹೋಮ ದ್ರವ್ಯ. ಅಸ್ಕನ್ನ ಎಂದರೆ ಕೆಳಗೆ ಚೆಲ್ಲದೇ ಇದ್ದ ಹೋಮದ್ರವ್ಯ. ಮೊದಲಿನವನು ಎಂದರೆ ಅಗ್ನಿಯೂ, ಎರಡನೆಯವನು ಎಂದರೆ ಸೂರ್ಯನೂ ಎಂದು ಅರ್ಥ.

12060051c ಸರ್ವಥಾ ಸರ್ವವರ್ಣ್ಯೈರ್ಹಿ ಯಷ್ಟವ್ಯಮಿತಿ ನಿಶ್ಚಯಃ|
12060051e ನ ಹಿ ಯಜ್ಞಸಮಂ ಕಿಂ ಚಿತ್ತ್ರಿಷು ಲೋಕೇಷು ವಿದ್ಯತೇ||

ಋಷಿಗಳೂ ಕೂಡ ಅವನನ್ನು ಸಾಧುವೆಂದು ಪ್ರಶಂಸಿಸುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ. ಸರ್ವಥಾ ಸರ್ವವರ್ಣದವರೂ ಯಜ್ಞಮಾಡಬೇಕು ಎನ್ನುವುದು ಇದರ ನಿಶ್ಚಯ.

12060052a ತಸ್ಮಾದ್ಯಷ್ಟವ್ಯಮಿತ್ಯಾಹುಃ ಪುರುಷೇಣಾನಸೂಯತಾ|
12060052c ಶ್ರದ್ಧಾಪವಿತ್ರಮಾಶ್ರಿತ್ಯ ಯಥಾಶಕ್ತಿ ಪ್ರಯಚ್ಚತಾ||

ಆದುದರಿಂದ ಪುರುಷನು ಅಸೂಯಾರಹಿತನಾಗಿ ಪವಿತ್ರ ಶ್ರದ್ಧೆಯನ್ನು ಆಶ್ರಯಿಸಿ ಯಥಾಶಕ್ತಿ ಯಜ್ಞಮಾಡಬೇಕೆಂದು ತಿಳಿದವರು ಹೇಳುತ್ತಾರೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವರ್ಣಾಶ್ರಮಧರ್ಮಕಥನೇ ಷಷ್ಟಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವರ್ಣಾಶ್ರಮಧರ್ಮಕಥನ ಎನ್ನುವ ಅರವತ್ತನೇ ಅಧ್ಯಾಯವು.

೬೧

ಆಶ್ರಮಧರ್ಮವರ್ಣನೆ (1-21).

12061001 ಭೀಷ್ಮ ಉವಾಚ|
12061001a ಆಶ್ರಮಾಣಾಂ ಮಹಾಬಾಹೋ ಶೃಣು ಸತ್ಯಪರಾಕ್ರಮ|
12061001c ಚತುರ್ಣಾಮಿಹ ವರ್ಣಾನಾಂ ಕರ್ಮಾಣಿ ಚ ಯುಧಿಷ್ಠಿರ||

ಭೀಷ್ಮನು ಹೇಳಿದನು: “ಸತ್ಯಪರಾಕ್ರಮಿ! ಮಹಾಬಾಹೋ!

ಯುಧಿಷ್ಠಿರ! ನಾಲ್ಕು ಆಶ್ರಮಗಳು ಮತ್ತು ಅವುಗಳಲ್ಲಿ ನಾಲ್ಕು ವರ್ಣದವರ ಕರ್ಮಗಳು ಏನು ಎನ್ನುವುದನ್ನು ಕೇಳು!

12061002a ವಾನಪ್ರಸ್ಥಂ ಭೈಕ್ಷಚರ್ಯಾಂ ಗಾರ್ಹಸ್ಥ್ಯಂ ಚ ಮಹಾಶ್ರಮಮ್|
12061002c ಬ್ರಹ್ಮಚರ್ಯಾಶ್ರಮಂ ಪ್ರಾಹುಶ್ಚತುರ್ಥಂ ಬ್ರಾಹ್ಮಣ್ಯೈರ್ವ್ಯತಮ್॥

ಬ್ರಹ್ಮಚರ್ಯ, ಮಹಾಶ್ರಮ ಗಾರ್ಹಸ್ಥ್ಯ, ವಾನಪ್ರಸ್ಥ, ಮತ್ತು ಭೈಕ್ಷಚರ್ಯಗಳೆಂಬ ನಾಲ್ಕು ಆಶ್ರಮಗಳಿವೆ. ನಾಲ್ಕನೆಯದನ್ನು ಕೇವಲ ಬ್ರಾಹ್ಮಣರು ನಡೆಸುವಂಥದ್ದಾಗಿದೆ.

12061003a ಜಟಾಕರಣಸಂಸ್ಕಾರಂ ದ್ವಿಜಾತಿತ್ವಮವಾಪ್ಯ ಚ|
12061003c ಆಧಾನಾದೀನಿ ಕರ್ಮಾಣಿ ಪ್ರಾಪ್ಯ ವೇದಮಧೀತ್ಯ ಚ॥
12061004a ಸದಾರೋ ವಾಪ್ಯದಾರೋ ವಾ ಆತ್ಮವಾನ್ಸಂಯತೇಂದ್ರಿಯಃ|
12061004c ವಾನಪ್ರಸ್ಥಾಶ್ರಮಂ ಗಚ್ಛೇತ್ಕೃತಕೃತ್ಯೋ ಗೃಹಾಶ್ರಮಾತ್॥

ಜಟಾಕರಣಸಂಸ್ಕಾರ ಮತ್ತು ದ್ವಿಜಾತಿತ್ವವನ್ನು ಪಡೆದು, ವೇದಗಳನ್ನು ತಿಳಿದುಕೊಂಡು, ಅಧಾನಾದಿಕರ್ಮಗಳನ್ನು[173] ಮುಗಿಸಿ, ಗೃಹಸ್ಥಾಶ್ರಮದಲ್ಲಿ ಕೃತಕೃತ್ಯನಾಗಿ, ಇಂದ್ರಿಯಗಳನ್ನು ನಿಯಂತ್ರಿಸಿಕೊಂಡು ಪತ್ನಿಯೊಡನೆ ಅಥವಾ ಪತ್ನಿಯಿಲ್ಲದೇ ತಾನೊಬ್ಬನೇ ವಾನಪ್ರಸ್ಥಾಶ್ರಮಕ್ಕೆ ತೆರಳಬೇಕು.

12061005a ತತ್ರಾರಣ್ಯಕಶಾಸ್ತ್ರಾಣಿ ಸಮಧೀತ್ಯ ಸ ಧರ್ಮವಿತ್|
12061005c ಊರ್ಧ್ವರೇತಾಃ ಪ್ರಜಾಯಿತ್ವಾ ಗಚ್ಚತ್ಯಕ್ಷರಸಾತ್ಮತಾಮ್॥

---

[173] ವಿವಾಹಿತನಾಗಿ ಔಪಸನಾಗ್ನಿಹೋಗ್ರವ್ಯೈಶ್ವದೇವಾದಿಗಳನ್ನು ಮಾಡುವುದು.

ಧರ್ಮವಿದನಾದ ಅವನು ಅಲ್ಲಿ ಅರಣ್ಯಕಶಾಸ್ತ್ರಗಳನ್ನು ಚೆನ್ನಾಗಿ
ತಿಳಿದುಕೊಂಡು ಊರ್ಧ್ವರೇತಸ್ಕನಾಗಿದ್ದುಕೊಂಡು ಆತ್ಮನಲ್ಲಿ
ಅವಿನಾಶೀ ಬ್ರಹ್ಮಸ್ವಭಾವವನ್ನು ಹೊಂದುವನು.

12061006a ಏತಾನ್ಯೇವ ನಿಮಿತ್ತಾನಿ ಮುನೀನಾಮೂರ್ಧ್ವರೇತಸಾಮ್|
12061006c ಕರ್ತವ್ಯಾನೀಹ ವಿಪ್ರೇಣ ರಾಜನ್ನಾದೌ ವಿಪಶ್ಚಿತಾ||

ರಾಜನ್! ಇವೇ ಊರ್ಧ್ವರೇತಸ ಮುನಿಗಳ ಲಕ್ಷಣಗಳು. ಇವುಗಳು
ವಿಪ್ರನು ತಪ್ಪದೇ ಮಾಡುವ ಕರ್ತವ್ಯಗಳು ಕೂಡ.

12061007a ಚರಿತಬ್ರಹ್ಮಚರ್ಯಸ್ಯ ಬ್ರಾಹ್ಮಣಸ್ಯ ವಿಶಾಂ ಪತೇ|
12061007c ಭೈಕ್ಷಚರ್ಯಾಸ್ವಧೀಕಾರಃ ಪ್ರಶಸ್ತ ಇಹ ಮೋಕ್ಷಿಣಃ||

ವಿಶಾಂಪತೇ! ಬ್ರಹ್ಮಚರ್ಯದಲ್ಲಿದ್ದ ಬ್ರಾಹ್ಮಣನು ಮೋಕ್ಷವನ್ನು
ಬಯಸಿದರೆ ಅವನಿಗೆ ಭೈಕ್ಷಚರ್ಯೆಯನ್ನು ಸ್ವೀಕರಿಸುವ ಅಧಿಕಾರವಿದೆ.

12061008a ಯತ್ರಾಸ್ತಮಿತಶಾಯೀ ಸ್ಯಾನ್ನಿರಗ್ನಿರನಿಕೇತನಃ|
12061008c ಯಥೋಪಲಬ್ಧಜೀವೀ ಸ್ಯಾನ್ಮುನಿರ್ದಾಂತೋ ಜಿತೇಂದ್ರಿಯಃ||

ಮುನಿಯು ಜಿತೇಂದ್ರಿಯನಾಗಿರಬೇಕು.
ಆಸೆಗಳನ್ನಿಟ್ಟುಕೊಂಡಿರಬಾರದು. ಮಠ-ಕುಟೀರಗಳ್ಯಾವುವೂ
ಇರಬಾರದು. ಯಾವಾಗಲೂ ಸಂಚಾರಮಾಡುತ್ತಲೇ ಇರಬೇಕು.
ಸಾಯಂಕಾಲವು ಎಲ್ಲಿ ಆಗುತ್ತದೆಯೋ ಅಲ್ಲಿ ತಂಗಬೇಕು.
ದೈವೇಚ್ಛೆಯಿಂದ ಯಾವ ಆಹಾರವು ಎಷ್ಟು ಲಭ್ಯವಾಗುವುದೋ
ಅಷ್ಟನ್ನೇ ತಿಂದು ಜೀವನಿರ್ವಹಿಸಬೇಕು.

12061009a ನಿರಾಶೀಃ ಸ್ಯಾತ್ಸರ್ವಸಮೋ ನಿರ್ಭೋಗೋ ನಿರ್ವಿಕಾರವಾನ್|

12061009c ವಿಪ್ರಃ ಕ್ಷೇಮಾಶ್ರಮಂ ಪ್ರಾಪ್ತೋ ಗಚ್ಚತ್ಯಕ್ಷರಸಾತ್ಮತಾಮ್‌॥

ಆಶಾರಹಿತನಾಗಿದ್ದುಕೊಂಡು, ಸರ್ವವನ್ನೂ ಸಮನಾಗಿ ಕಾಣುತ್ತಾ,
ನಿರ್ಭೋಗಿಯಾಗಿ, ನಿರ್ವಿಕಾರನಾಗಿ ವಿಪ್ರನು ಕ್ಷೇಮಾಶ್ರಮವನ್ನು
ಪಡೆದು ಅವಿನಾಶಿ ಬ್ರಹ್ಮನೊಡನೆ ಏಕತೆಯನ್ನು ಹೊಂದುತ್ತಾನೆ.

12061010a ಅಧೀತ್ಯ ವೇದಾನ್ಕೃತಸರ್ವಕೃತ್ಯಃ
ಸಂತಾನಮುತ್ಪಾದ್ಯ ಸುಖಾನಿ ಭುಕ್ತ್ವಾ|
12061010c ಸಮಾಹಿತಃ ಪ್ರಚರೇದ್ದುಶ್ಚರಂ ತಂ
ಗಾರ್ಹಸ್ಥ್ಯಧರ್ಮಂ ಮುನಿಧರ್ಮದೃಷ್ಟಮ್‌॥

ವೇದಗಳನ್ನು ಅಧ್ಯಯನ ಮಾಡಿ, ಸರ್ವ ಕರ್ತವ್ಯಗಳನ್ನೂ ಮಾಡಿ,
ಸಂತಾನವನ್ನು ಪಡೆದು, ಸುಖಿಗಳನ್ನು ಭೋಗಿಸಿ, ಸಮಾಹಿತನಾಗಿ
ಮುನಿಗಳು ಕಂಡ, ಪಾಲಿಸಲು ಕಷ್ಟಕರ ಧರ್ಮವಾದ
ಗಾರ್ಹಸ್ಥ್ಯಧರ್ಮವನ್ನು ಪಾಲಿಸಬೇಕು.

12061011a ಸ್ವದಾರತುಷ್ಟ ಋತುಕಾಲಗಾಮೀ
ನಿಯೋಗಸೇವೀ ನಶಠೋ ನಜಿಹ್ಮಃ|
12061011c ಮಿತಾಶನೋ ದೇವಪರಃ ಕೃತಜ್ಞಃ
ಸತ್ಯೋ ಮೃದುಶ್ಚಾನೃಶಂಸಃ ಕ್ಷಮಾವಾನ್‌॥

ಗೃಹಸ್ಥನು ತನ್ನ ಪತ್ನಿಯಲ್ಲಿಯೇ ತೃಪ್ತಿಯನ್ನು ಹೊಂದಬೇಕು.
ಋತುಸಮಯದಲ್ಲಿ ಮಾತ್ರ ಪತ್ನಿಯೊಡನೆ ಸಮಾಗಮಿಸಬೇಕು. ಶಠನೂ
ವಂಚಕನೂ ಆಗಿರದೇ ನಿತ್ಯವೂ ಯೋಗಿಯಾಗಿರಬೇಕು.
ಮಿತಾಹಾರಿಯಾಗಿದ್ದುಕೊಂಡು ದೇವತಾರಾಧನೆಯಲ್ಲಿ
ತತ್ಪರನಾಗಿರಬೇಕು. ಕೃತಜ್ಞನಾಗಿರಬೇಕು. ಸತ್ಯವಂತನೂ,

ಮೃದುಸ್ವಭಾವದವನೂ, ದಯಾಳುವೂ ಮತ್ತು ಕ್ಷಮಾಶೀಲನೂ ಆಗಿರಬೇಕು.

12061012a ದಾಂತೋ ವಿಧೇಯೋ ಹವ್ಯಕವ್ಯೇಽಪ್ರಮತ್ತೋ
ಅನ್ನಸ್ಯ ದಾತಾ ಸತತಂ ದ್ವಿಜೇಭ್ಯಃ|
12061012c ಅಮತ್ಸರೀ ಸರ್ವಲಿಂಗಿಪ್ರದಾತಾ
ವೈತಾನನಿತ್ಯಶ್ಚ ಗೃಹಾಶ್ರಮೀ ಸ್ಯಾತ್||

ಗೃಹಸ್ಥಾಶ್ರಮಿಯು ಇಂದ್ರಿಯಗಳನ್ನು ನಿಗ್ರಹಿಸಿಕೊಂಡು, ವಿಧೇಯನೂ ಜಾಗರೂಕನೂ ಆಗಿ ಹವ್ಯ-ಕವ್ಯಗಳನ್ನು ಮಾಡಬೇಕು. ಸತತವೂ ದ್ವಿಜರಿಗೆ ಅನ್ನದಾತನಾಗಿರಬೇಕು. ಮಾತ್ಸರ್ಯವಿಲ್ಲದೇ ಸರ್ವವರ್ಣದವರಿಗೂ ನೀಡುವವನಾಗಿರಬೇಕು. ನಿತ್ಯವೂ ಯಜ್ಞ-ಯಾಗಾದಿಗಳಲ್ಲಿ ನಿರತನಾಗಿರಬೇಕು.

12061013a ಅಥಾತ್ರ ನಾರಾಯಣಗೀತಮಾಹುರ್
ಮಹರ್ಷಯಸ್ತಾತ ಮಹಾನುಭಾವಾಃ|
12061013c ಮಹಾರ್ಥಮತ್ಯರ್ಥತಪಃಪ್ರಯುಕ್ತಂ
ತದುಚ್ಯಮಾನಂ ಹಿ ಮಯಾ ನಿಬೋಧ||

ಮಗೂ! ಇದಕ್ಕೆ ಸಂಬಂಧಿಸಿದಂತೆ ಮಹಾನುಭಾವ ಮಹರ್ಷಿಗಳು ನಾರಾಯಣ ಗೀತೆಯನ್ನು ಉದಾಹರಿಸುತ್ತಾರೆ. ಮಹಾ ಅರ್ಥವುಳ್ಳ, ಬಹಳ ತಪಶ್ಚರಣೆಯಿಂದ ಪ್ರೇರಿತವಾದ ಅದನ್ನು ನಾನು ಹೇಳುತ್ತೇನೆ. ಕೇಳು.

12061014a ಸತ್ಯಾರ್ಜವಂ ಚಾತಿಥಿಪೂಜನಂ ಚ
ಧರ್ಮಸ್ತಥಾರ್ಥಶ್ಚ ರತಿಶ್ಚ ದಾರೇ|

12061014c ನಿಷೇವಿತವ್ಯಾನಿ ಸುಖಾನಿ ಲೋಕೇ
ಹ್ಯಸ್ಮಿನ್ಪರೇ ಚೈವ ಮತಂ ಮಮೈತತ್‌॥

“ಸತ್ಯ, ಸರಳತೆ, ಅತಿಥಿಪೂಜನ, ಧರ್ಮ-ಅರ್ಥ ಮತ್ತು ಪತ್ನಿಯೊಂದಿಗೆ ರತಿಸುಖ – ಹೀಗೆ ಲೋಕಗಳಲ್ಲಿ ಸುಖಿಗಳನ್ನು ಅನುಭವಿಸುವವನು ಪರಲೋಕದಲ್ಲಿಯೂ ಸುಖವನ್ನು ಅನುಭವಿಸುವನೆಂದು ನನ್ನ ಅಭಿಪ್ರಾಯ!”

12061015a ಭರಣಂ ಪುತ್ರದಾರಾಣಾಂ ವೇದಾನಾಂ ಪಾರಣಂ ತಥಾ|
12061015c ಸತಾಂ ತಮಾಶ್ರಮಂ ಶ್ರೇಷ್ಠಂ ವದಂತಿ ಪರಮರ್ಷಯಃ‌॥

ಪತ್ನಿ-ಪುತ್ರರ ಭರಣ-ಪೋಷಣೆ, ವೇದಗಳ ಪಾರಾಯಣ ಇವು ಗೃಹಸ್ಥಾಶ್ರಮವನ್ನು ಆಶ್ರಯಿಸಿರುವ ಸಾಧುಗಳ ಶ್ರೇಷ್ಠ ಕರ್ತವ್ಯಗಳೆಂದು ಪರಮ ಋಷಿಗಳು ಹೇಳುತ್ತಾರೆ.

12061016a ಏವಂ ಹಿ ಯೋ ಬ್ರಾಹ್ಮಣೋ ಯಜ್ಞಶೀಲೋ
ಗಾರ್ಹಸ್ಥ್ಯಮಧ್ಯಾವಸತೇ ಯಥಾವತ್‌|
12061016c ಗೃಹಸ್ಥವೃತ್ತಿಂ ಪ್ರವಿಶೋಧ್ಯ ಸಮ್ಯಕ್
ಸ್ವರ್ಗೇ ವಿಶುದ್ಧಂ ಫಲಮಾಪ್ನುತೇ ಸಃ‌॥

ಹೀಗೆ ಯಾವ ಬ್ರಾಹ್ಮಣನು ಯಜ್ಞಶೀಲನಾಗಿ ಗಾರ್ಹಸ್ಥ್ಯ ಧರ್ಮದಲ್ಲಿದ್ದುಕೊಂಡು ಗೃಹಸ್ಥವೃತ್ತಿಯನ್ನು ಯಥಾವತ್ತಾಗಿ ಶುದ್ಧಿಗೊಳಿಸುವನೋ ಅವನು ಸ್ವರ್ಗಲೋಕದಲ್ಲಿಯೂ ವಿಶುದ್ಧ ಫಲವನ್ನು ಹೊಂದುತ್ತಾನೆ.

12061017a ತಸ್ಯ ದೇಹಪರಿತ್ಯಾಗಾದಿಷ್ಟಾಃ ಕಾಮಾಕ್ಷಯಾ ಮತಾಃ|
12061017c ಆನಂತ್ಯಾಯೋಪತಿಷ್ಠಂತಿ ಸರ್ವತೋಕ್ಷಿಶಿರೋಮುಖಾಃ‌॥

ಅವನು ದೇಹಪರಿತ್ಯಾಗ ಮಾಡಿದಾಗ ಅವನ ಇಷ್ಟಕಾಮಗಳೆಲ್ಲವೂ ಅಕ್ಷಯವಾಗುತ್ತವೆ. ಆ ಕಾಮನೆಗಳು ಕಣ್ಣು-ಶಿರ-ಮುಖಗಳನ್ನು ಪಡೆದು ಅನಂತಕಾಲದವರೆಗೆ ಎಲ್ಲ ರೀತಿಯ ಸೇವೆಗಳನ್ನು ಮಾಡುತ್ತವೆ.

12061018a ಖಾದನ್ನೇಕೋ ಜಪನ್ನೇಕಃ ಸರ್ಪನ್ನೇಕೋ ಯುಧಿಷ್ಠಿರ|
12061018c ಏಕಸ್ಮಿನ್ನೇವ ಆಚಾರ್ಯೇ ಶುಶ್ರೂಷುರ್ಮಲಪಂಕವಾನ್||

ಯುಧಿಷ್ಠಿರ! ಕೆಸರು-ಕೊಳೆಗಳಿಂದ ಯುಕ್ತನಾದ ಬ್ರಹ್ಮಚಾರಿಯು ಏಕಾಂಗಿಯಾಗಿ ಊಟಮಾಡಬೇಕು. ಏಕಾಂಗಿಯಾಗಿ ಜಪವನ್ನಾಚರಿಸಬೇಕು. ಏಕಾಂಗಿಯಾಗಿ ಮಲಗಿಕೊಳ್ಳಬೇಕು. ಒಬ್ಬನನ್ನೇ ಆಚಾರ್ಯನನ್ನಾಗಿ ಆರಿಸಿಕೊಂಡು ಅವನ ಸೇವೆಯಲ್ಲಿಯೇ ಸದಾ ನಿರತನಾಗಿರಬೇಕು.

12061019a ಬ್ರಹ್ಮಚಾರೀ ವ್ರತೀ ನಿತ್ಯಂ ನಿತ್ಯಂ ದೀಕ್ಷಾಪರೋ ವಶೀ|
12061019c ಅವಿಚಾರ್ಯ ತಥಾ ವೇದಂ ಕೃತ್ಯಂ ಕುರ್ವನ್ವಸೇತ್ ಸದಾ||

ಬ್ರಹ್ಮಚಾರಿಯು ನಿತ್ಯವೂ ವ್ರತಿಯಾಗಿದ್ದು, ನಿತ್ಯವೂ ದೀಕ್ಷಾಪರನಾಗಿ ವೇದಾಧ್ಯಯವನ್ನು ಮಾಡುತ್ತಾ ಕರ್ತವ್ಯಕರ್ಮಗಳನ್ನೆಸಗುತ್ತಾ ಗುರುವಿನ ಮನೆಯಲ್ಲಿಯೇ ಸದಾ ವಾಸವಾಗಿರಬೇಕು.

12061020a ಶುಶ್ರೂಷಾಂ ಸತತಂ ಕುರ್ವನ್ಗುರೋಃ ಸಂಪ್ರಣಮೇತ ಚ|
12061020c ಷಟ್ಕರ್ಮಸ್ವನಿವೃತ್ತಶ್ಚ ನಪ್ರವೃತ್ತಶ್ಚ ಸರ್ವಶಃ||

ಗುರುವನ್ನು ನಮಸ್ಕರಿಸುತ್ತಾ ಸತತವೂ ಅವನ ಶುಶ್ರೂಷೆಯನ್ನು ಮಾಡುತ್ತಿರಬೇಕು. ಷಟ್ಕರ್ಮಗಳನ್ನು[174] ಬಿಡದೇ ಮಾಡುತ್ತಿರಬೇಕು.

[174] ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹಗಳೇ

ಆದರೆ ಗುರುಶುಶ್ರೂಷೆಗೆ ವಿರೋಧವಾಗದಂತೆ ಯಾವಾಗಲೂ ಅವುಗಳಲ್ಲಿಯೇ ನಿರತನಾಗಿರಬಾರದು.

12061021a ನ ಚರತ್ಯಧಿಕಾರೇಣ ಸೇವಿತಂ ದ್ವಿಷತೋ ನ ಚ|
12061021c ಏಷೋಽಶ್ರಮಪದಸ್ತಾತ ಬ್ರಹ್ಮಚಾರಿಣ ಇಷ್ಯತೇ||

ಅಧಿಕಾರದಿಂದ ನಡೆದುಕೊಳ್ಳಬಾರದು. ದ್ವೇಷಿಗಳ ಸಹವಾಸ ಮಾಡಬಾರದು. ಮಗೂ! ಬ್ರಹ್ಮಚಾರಿ ಆಶ್ರಮಗಳಿಗೆ ಈ ಧರ್ಮವು ಹೇಳಲ್ಪಟ್ಟಿದೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಚತುರಾಶ್ರಮಧರ್ಮಕಥನೇ ಏಕಷಷ್ಟಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಚತುರಾಶ್ರಮಧರ್ಮಕಥನ ಎನ್ನುವ ಅರವತ್ತೊಂದನೇ ಅಧ್ಯಾಯವು.

೬೨

ವರ್ಣಾಶ್ರಮಧರ್ಮಪಾಲನೆಯ ಮಹತ್ವ (1-11).

12062001 ಯುಧಿಷ್ಠಿರ ಉವಾಚ|
12062001a ಶಿವಾನ್ಸುಖಾನ್ಮಹೋದರ್ಕಾನಹಿಂಸ್ರಾಽಲ್ಲೋಕಸಂಮತಾನ್|
12062001c ಬ್ರೂಹಿ ಧರ್ಮಾನ್ಸುಖೋಪಾಯಾನ್ಮದ್ವಿಧಾನಾಂ ಸುಖಾವಹಾನ್||

ಯುಧಿಷ್ಠಿರನು ಹೇಳಿದನು: “ಕಲ್ಯಾಣಕರವಾದ, ಸುಖಮಯವಾದ, ಅಭ್ಯುದಯವನ್ನುಂಟುಮಾಡುವ, ಅಹಿಂಸಾತ್ಮಕವಾದ,

---

ಷಟ್ಕರ್ಮಗಳು.

ಲೋಕಸಮ್ಮತವಾದ, ನಮ್ಮಂಥವರಿಗೆ ಸುಖಾವಹವಾದ ಧರ್ಮಗಳ ಕುರಿತು ಹೇಳು!”

12062002 ಭೀಷ್ಮ ಉವಾಚ|
12062002a ಬ್ರಾಹ್ಮಣಸ್ಯೇಹ ಚತ್ವಾರ ಆಶ್ರಮಾ ವಿಹಿತಾಃ ಪ್ರಭೋ|
12062002c ವರ್ಣಾಸ್ತಾನನುವರ್ತಂತೇ ತ್ರಯೋ ಭರತಸತ್ತಮ||

ಭೀಷ್ಮನು ಹೇಳಿದನು: “ಪ್ರಭೋ! ಭರತಸತ್ತಮ! ಬ್ರಾಹ್ಮಣನಿಗೆ ನಾಲ್ಕೂ ಆಶ್ರಮಗಳೂ ವಿಹಿತವಾಗಿವೆ. ಉಳಿದ ಮೂರು ವರ್ಣದವರು ಮೂರು ಆಶ್ರಮಗಳನ್ನು ಅನುಸರಿಸುತ್ತಾರೆ.

12062003a ಉಕ್ತಾನಿ ಕರ್ಮಾಣಿ ಬಹೂನಿ ರಾಜನ್
ಸ್ವರ್ಗ್ಯಾಣಿ ರಾಜನ್ಯಪರಾಯಣಾನಿ|
12062003c ನೇಮಾನಿ ದೃಷ್ಟಾಂತವಿಧೌ ಸ್ಮೃತಾನಿ
ಕ್ಷಾತ್ರೇ ಹಿ ಸರ್ವಂ ವಿಹಿತಂ ಯಥಾವತ್||

ರಾಜನ್! ಸ್ವರ್ಗದಾಯಕವಾದ ಅನೇಕ ಕರ್ಮಗಳು ಹೇಳಲ್ಪಟ್ಟಿವೆ. ಯುದ್ಧವೇ ಮೊದಲಾದ ಹಿಂಸಾಕರ್ಮಗಳು ಕ್ಷತ್ರಿಯರಿಗೆ ಮಾತ್ರ ವಿಹಿತಗೊಂಡಿವೆ.

12062004a ಕ್ಷಾತ್ರಾಣಿ ವೈಶ್ಯಾನಿ ಚ ಸೇವಮಾನಃ
ಶೌದ್ರಾಣಿ ಕರ್ಮಾಣಿ ಚ ಬ್ರಾಹ್ಮಣಃ ಸನ್|
12062004c ಅಸ್ಮಿಂಲ್ಲೋಕೇ ನಿಂದಿತೋ ಮಂದಚೇತಾಃ
ಪರೇ ಚ ಲೋಕೇ ನಿರಯಂ ಪ್ರಯಾತಿ||

ಬ್ರಾಹ್ಮಣನಾಗಿದ್ದರೂ ಕ್ಷತ್ರಿಯರ, ವೈಶ್ಯರ ಮತ್ತು ಶೂದ್ರರ ಸೇವಾಕರ್ಮಗಳನ್ನು ಮಾಡುವ ಮಂದಚೇತಸನು ಈ ಲೋಕದಲ್ಲಿ

ನಿಂದಿಸಲ್ಪಡುವುದಲ್ಲದೇ ಪರಲೋಕದಲ್ಲಿಯೂ ನರಕಕ್ಕೆ ಹೋಗುತ್ತಾನೆ.

12062005a ಯಾ ಸಂಜ್ಞಾ ವಿಹಿತಾ ಲೋಕೇ ದಾಸೇ ಶುನಿ ವೃಕೇ ಪಶೌ|
12062005c ವಿಕರ್ಮಣಿ ಸ್ಥಿತೇ ವಿಪ್ರೇ ತಾಂ ಸಂಜ್ಞಾಂ ಕುರು ಪಾಂಡವ||

ಪಾಂಡವ! ಲೋಕದಲ್ಲಿ ದಾಸ, ನಾಯಿ, ತೋಳ ಮತ್ತು ಪಶುಗಳಿಗೆ ಯಾವ ನಿಂದಾಸೂಚಕ ಸಂಜ್ಞೆಗಳಿವೆಯೋ ಅವುಗಳು ಕರ್ಮಭ್ರಷ್ಟನಾದ ಬ್ರಾಹ್ಮಣನಿಗೂ ಅನ್ವಯಿಸುತ್ತವೆ.

12062006a ಷಟ್ಕರ್ಮಸಂಪ್ರವೃತ್ತಸ್ಯ ಆಶ್ರಮೇಷು ಚತುರ್ಷ್ವಪಿ|
12062006c ಸರ್ವಧರ್ಮೋಪಪನ್ನಸ್ಯ ಸಂಭೂತಸ್ಯ ಕೃತಾತ್ಮನಃ||
12062007a ಬ್ರಾಹ್ಮಣಸ್ಯ ವಿಶುದ್ಧಸ್ಯ ತಪಸ್ಯಭಿರತಸ್ಯ ಚ|
12062007c ನಿರಾಶಿಷೋ ವದಾನ್ಯಸ್ಯ ಲೋಕಾ ಹ್ಯಕ್ಷರಸಂಜ್ಞಿತಾಃ||

ಷಟ್ಕರ್ಮಗಳಲ್ಲಿ ತೊಡಗಿಕೊಂಡು, ನಾಲ್ಕೂ ಆಶ್ರಮಗಳನ್ನೂ ನಡೆಸಿಕೊಂಡು ಸರ್ವಧರ್ಮೋಪಪನ್ನನಾಗಿರುವ, ಕೃತಾತ್ಮನೂ ಜಿತಚಿತ್ತನೂ, ವಿಶುದ್ಧನೂ, ತಪೋನಿರತನೂ, ಆಶಾರಹಿತನೂ, ಉದಾರನೂ ಆಗಿರುವ ಬ್ರಾಹ್ಮಣನಿಗೆ ಅಕ್ಷರ ಲೋಕಗಳೆಂದು ಹೇಳಲ್ಪಟ್ಟಿದೆ.

12062008a ಯೋ ಯಸ್ಮಿನ್ಕುರುತೇ ಕರ್ಮ ಯಾದೃಶಂ ಯೇನ ಯತ್ರ ಚ|
12062008c ತಾದೃಶಂ ತಾದೃಶೇನೈವ ಸ ಗುಣಂ ಪ್ರತಿಪದ್ಯತೇ||

ಯಾರು ಯಾವ ಆಶ್ರಮದಲ್ಲಿ ಯಾವ ಕರ್ಮವನ್ನು ಯಾವ ಕಾರಣದಿಂದ ಎಲ್ಲಿ ಮಾಡುತ್ತಾರೋ ಅವರು ಆ ಕರ್ಮಕ್ಕೆ ತಕ್ಕುದಾದ ಫಲವನ್ನು ಅದೇ ವಿಧಾನದಲ್ಲಿಯೇ ಪಡೆಯುತ್ತಾರೆ.

12062009a ವೃದ್ಧ್ಯಾ ಕೃಷಿವಣಿಕ್ಪ್ವೀನ ಜೀವಸಂಜೀವನೇನ ಚ|
12062009c ವೇತ್ತುಮರ್ಹಸಿ ರಾಜೇಂದ್ರ ಸ್ವಾಧ್ಯಾಯಗಣಿತಂ ಮಹತ್||

ವೈಶ್ಯರಿಗೆ ಹೇಗೆ ಕೃಷಿ, ವಾಣಿಜ್ಯಗಳು ಮತ್ತು ಕ್ಷತ್ರಿಯರಿಗೆ
ಪ್ರಜಾಪರಿಪಾಲನೆಯು ಮುಖ್ಯ ಕರ್ಮಗಳೋ ಹಾಗೆ ಬ್ರಾಹ್ಮಣನಿಗೆ
ಸ್ವಾಧ್ಯಾಯವು ಮಹತ್ತರ ಕರ್ಮವಾಗಿದೆ.

12062010a ಕಾಲಸಂಚೋದಿತಃ ಕಾಲಃ ಕಾಲಪರ್ಯಾಯನಿಶ್ಚಿತಃ|
12062010c ಉತ್ತಮಾಧಮಮಧ್ಯಾನಿ ಕರ್ಮಾಣಿ ಕುರುತೇಽವಶಃ||

ಕಾಲನಿಂದ ಪ್ರೇರಿತರಾಗಿ ಮತ್ತು ಹಿಂದಿನ ಕರ್ಮಫಲಗಳ
ವಾಸನೆಯಿಂದ ಪ್ರಭಾವಿತರಾಗಿ ಮನುಷ್ಯರು ಅವಶರಾಗಿ ಉತ್ತಮ-
ಅಧಮ-ಮಧ್ಯಮ ಕರ್ಮಗಳನ್ನು ಮಾಡುತ್ತಾರೆ.

12062011a ಅಂತವಂತಿ ಪ್ರದಾನಾನಿ ಪುರಾ ಶ್ರೇಯಸ್ಕರಾಣಿ ಚ|
12062011c ಸ್ವಕರ್ಮನಿರತೋ ಲೋಕೋ ಹ್ಯಕ್ಷರಃ ಸರ್ವತೋಮುಖಃ||

ದೇಹಪ್ರಾಪ್ತಿಯೆಂಬ ಶ್ರೇಯಸ್ಸಿಗೆ ಹಿಂದಿನ ಕಾರಣಗಳು
ದೇಹದೊಡನೆಯೇ ಅಂತ್ಯವಾಗುವವು. ಆದುದರಿಂದ
ಸ್ವಕರ್ಮನಿರತನಾದವನು ಸರ್ವತೋಮುಖನಾಗಿ ಅಕ್ಷರ ಲೋಕಗಳನ್ನು
ಸೇರುತ್ತಾನೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವರ್ಣಾಶ್ರಮಧರ್ಮಕಥನೇ ದ್ವಿಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವರ್ಣಾಶ್ರಮಧರ್ಮಕಥನ ಎನ್ನುವ ಅರವತ್ತೆರಡನೇ ಅಧ್ಯಾಯವು.

೬೩

ವರ್ಣಾಶ್ರಮಧರ್ಮಗಳಲ್ಲಿ ರಾಜಧರ್ಮದ ಶ್ರೇಷ್ಠತೆ (1-30).

12063001 ಭೀಷ್ಮ ಉವಾಚ|

12063001a ಜ್ಯಾಕರ್ಷಣಂ ಶತ್ರುನಿಬರ್ಹಣಂ ಚ
ಕೃಷಿರ್ವಣಿಜ್ಯಾ ಪಶುಪಾಲನಂ ಚ|

12063001c ಶುಶ್ರೂಷಣಂ ಚಾಪಿ ತಥಾರ್ಥಹೇತೋರ್
ಅಕಾರ್ಯಮೇತತ್ಪರಮಂ ದ್ವಿಜಸ್ಯ||

ಭೀಷ್ಮನು ಹೇಳಿದನು: "ಧನುಸ್ಸನ್ನು ಸೆಳೆಯುವುದು, ಶತ್ರುಗಳನ್ನು ಸಂಹರಿಸುವುದು, ಕೃಷಿ, ವಾಣಿಜ್ಯ, ಪಶುಪಾಲನೆ, ಸಂಪತ್ತಿಗಾಗಿ ಇತರರ ಶುಶ್ರೂಷೆಮಾಡುವುದು ಇವುಗಳು ದ್ವಿಜನಿಗೆ ಪರಮ ಅಕಾರ್ಯಗಳು.

12063002a ಸೇವ್ಯಂ ತು ಬ್ರಹ್ಮಷಟ್ಕರ್ಮ ಗೃಹಸ್ಥೇನ ಮನೀಷಿಣಾ|
12063002c ಕೃತಕೃತ್ಯಸ್ಯ ಚಾರಣ್ಯೇ ವಾಸೋ ವಿಪ್ರಸ್ಯ ಶಸ್ಯತೇ||

ಗೃಹಸ್ಥನಾಗಿರುವಾಗ ಬ್ರಾಹ್ಮಣನು ಆರು ಬ್ರಹ್ಮಕರ್ಮಗಳಲ್ಲಿ ತೊಡಗಿರಬೇಕು. ಗೃಹಸ್ಥಾಶ್ರಮದಲ್ಲಿ ಕೃತಕೃತ್ಯನಾದ ನಂತರ ಅರಣ್ಯದಲ್ಲಿ ವಾನಪ್ರಸ್ಥಾಶ್ರಮವನ್ನನುಸರಿಸಬೇಕು.

12063003a ರಾಜಪ್ರೈಷ್ಯಂ ಕೃಷಿಧನಂ ಜೀವನಂ ಚ ವಣಿಜ್ಯಯಾ|
12063003c ಕೌಟಿಲ್ಯಂ ಕೌಲಟೇಯಂ ಚ ಕುಸೀದಂ ಚ ವಿವರ್ಜಯೇತ್||

ಬ್ರಾಹ್ಮಣನು ರಾಜಸೇವೆ, ಕೃಷಿಯಿಂದ ಸಂಪಾದನೆ, ವಾಣಿಜ್ಯದಿಂದ ಜೀವನ, ಕುಟಿಲತೆ, ವ್ಯಭಿಚಾರಿಣಿಯೊಂದಿಗೆ ಸಹವಾಸ ಮತ್ತು ಬಡ್ಡೀ

ಹಣದಿಂದ ಜೀವಿಸುವುದು – ಇವುಗಳನ್ನು ವರ್ಜಿಸಬೇಕು.

12063004a ಶೂದ್ರೋ ರಾಜನ್ಭವತಿ ಬ್ರಹ್ಮಬಂಧು-
ರ್ದುಶ್ಚಾರಿತ್ರ್ಯೋ ಯಶ್ಚ ಧರ್ಮಾದಪೇತಃ|
12063004c ವೃಷಲೀಪತಿಃ ಪಿಶುನೋ ನರ್ತಕಶ್ಚ
ಗ್ರಾಮಪ್ರೈಷ್ಯೋ ಯಶ್ಚ ಭವೇದ್ವಿಕರ್ಮಾ||

ರಾಜನ್! ದುಶ್ಚರಿತನೂ, ಧರ್ಮಹೀನನೂ, ಚಾಡಿಕೋರನೂ, ಕೆಳಜಾತಿಯವಳನ್ನು ಮದುವೆಯಾಗಿರುವವನೂ, ನರ್ತಕನೂ, ರಾಜಸೇವಕನೂ ಮತ್ತು ಬ್ರಾಹ್ಮಣರಿಗೆ ವಿರೋಧವಾದ ಕರ್ಮಗಳನ್ನು ಮಾಡುವವನೂ ಅವನು ಬ್ರಾಹ್ಮಣನಾಗಿದ್ದರೂ ಶೂದ್ರನಂತೆಯೇ!

12063005a ಜಪನ್ವೇದಾನಜಪಂಶ್ಚಾಪಿ ರಾಜನ್
ಸಮಃ ಶೂದ್ರೈರ್ದಾಸವಚ್ಚಾಪಿ ಭೋಜ್ಯಃ|
12063005c ಏತೇ ಸರ್ವೇ ಶೂದ್ರಸಮಾ ಭವಂತಿ
ರಾಜನ್ನೇತಾನ್ವರ್ಜಯೇದ್ದೇವಕೃತ್ಯೇ||

ರಾಜನ್! ಇಂಥವರು ವೇದಗಳನ್ನು ಜಪಿಸಲಿ ಅಥವಾ ಜಪಿಸದಿರಲಿ; ಅವರು ಶೂದ್ರಸಮರಾಗುತ್ತಾರೆ. ಭೋಜನದಲ್ಲಿ ದಾಸರನ್ನು ಹೇಗೋ ಹಾಗೆ ರಾಜನ್! ಈ ಶೂದ್ರಸಮಾನರನ್ನು ದೇವಕಾರ್ಯಗಳಲ್ಲಿ ವರ್ಜಿಸಬೇಕು.

12063006a ನಿರ್ಮರ್ಯಾದೇ ಚಾಶನೇ ಕ್ರೂರವೃತ್ತೌ
ಹಿಂಸಾತ್ಮಕೇ ತ್ಯಕ್ತಧರ್ಮಸ್ವವೃತ್ತೇ|
12063006c ಹವ್ಯಂ ಕವ್ಯಂ ಯಾನಿ ಚಾನ್ಯಾನಿ ರಾಜನ್
ದೇಯಾನ್ಯದೇಯಾನಿ ಭವಂತಿ ತಸ್ಮಿನ್||

ರಾಜನ್! ತಿನ್ನುವುದರಲ್ಲಿ ಮರ್ಯಾದೆಯೇ ಇರದ,
ಕ್ರೂರವೃತ್ತಿಮಾಡುವ, ಹಿಂಸಾತ್ಮಕನಾದ, ಧರ್ಮವನ್ನು ತ್ಯಜಿಸಿ ತನ್ನದೇ
ವೃತ್ತಿಯಲ್ಲಿ ನಿರತನಾಗಿರುವ ಬ್ರಾಹ್ಮಣನನ್ನು ಹವ್ಯಕವ್ಯಗಳಲ್ಲಿ
ಆಹ್ವಾನಿಸಿದರೆ ಮತ್ತು ಅಂಥಹ ಬ್ರಾಹ್ಮಣನಿಗೆ ದಾನಗಳನ್ನು ನೀಡಿದರೆ
ಅವುಗಳನ್ನು ಮಾಡಿದರೂ ಮಾಡಿದಂತೆ ಆಗುವುದಿಲ್ಲ.

12063007a ತಸ್ಮಾದ್ಧರ್ಮೋ ವಿಹಿತೋ ಬ್ರಾಹ್ಮಣಸ್ಯ
ದಮಃ ಶೌಚಂ ಚಾರ್ಜವಂ ಚಾಪಿ ರಾಜನ್|
12063007c ತಥಾ ವಿಪ್ರಸ್ಯಾಶ್ರಮಾಃ ಸರ್ವ ಏವ
ಪುರಾ ರಾಜನ್ಬ್ರಹ್ಮಣಾ ವೈ ನಿಸೃಷ್ಟಾಃ||

ರಾಜನ್! ಆದುದರಿಂದ ಬ್ರಾಹ್ಮಣನಿಗೆ ಇಂದ್ರಿಯ ನಿಗ್ರಹ, ಶೌಚ,
ಸರಳತೆ, ಇವುಗಳೇ ಧರ್ಮಗಳೆಂದು ವಿಹಿತವಾಗಿವೆ. ಹಾಗೆಯೇ
ನಾಲ್ಕು ಆಶ್ರಮ ಧರ್ಮಗಳೂ ಬ್ರಾಹ್ಮಣನಿಗೆ ವಿಹಿತವಾಗಿರುತ್ತವೆ.
ಏಕೆಂದರೆ ಎಲ್ಲರಿಗಿಂತಲೂ ಮೊದಲು ಬ್ರಾಹ್ಮಣನ ಸೃಷ್ಟಿಯಾಗಿರುತ್ತದೆ.

12063008a ಯಃ ಸ್ಯಾದ್ದಾಂತಃ ಸೋಮಪ ಆರ್ಯಶೀಲಃ
ಸಾನುಕ್ರೋಶಃ ಸರ್ವಸಹೋ ನಿರಾಶೀಃ|
12063008c ಋಜುರ್ಮೃದುರನೃಶಂಸಃ ಕ್ಷಮಾವಾನ್
ಸ ವೈ ವಿಪ್ರೋ ನೇತರಃ ಪಾಪಕರ್ಮಾ||

ಇಂದ್ರಿಯಗಳನ್ನು ಸಂಯಮಗಳಲ್ಲಿಟ್ಟುಕೊಂಡಿರುವ, ಸೋಮವನ್ನು
ಕುಡಿದಿರುವ, ಆರ್ಯಶೀಲ, ಅನುಕಂಪವುಳ್ಳ, ಸರ್ವವನ್ನೂ
ಸಹಿಸಿಕೊಳ್ಳುವ, ಆಸೆಗಳನ್ನಿಟ್ಟುಕೊಂಡಿರದ, ನಿಷ್ಕಪಟಿ, ಮೃದು,
ಅಹಿಂಸಾತ್ಮ, ಕ್ಷಮಾವಂತನು ಮಾತ್ರ ವಿಪ್ರನು. ಇತರರು

ಪಾಪಕರ್ಮಿಗಳು.

12063009a ಶೂದ್ರಂ ವೈಶ್ಯಂ ರಾಜಪುತ್ರಂ ಚ ರಾಜ-
ಲ್ಲೋಕಾಃ ಸರ್ವೇ ಸಂಶ್ರಿತಾ ಧರ್ಮಕಾಮಾಃ|
12063009c ತಸ್ಮಾದ್ವರ್ಣಾನ್ನಾತಿಧರ್ಮೇಷು ಸಕ್ತಾ-
ನ್ಮತ್ವಾ ವಿಷ್ಣುರ್ನೇಚ್ಚತಿ ಪಾಂಡುಪುತ್ರ||

ಪಾಂಡುಪುತ್ರ! ರಾಜನ್! ಲೋಕದಲ್ಲಿ ಧರ್ಮ-ಅರ್ಥ-ಕಾಮಗಳನ್ನು ಅರಸುವ ಎಲ್ಲರೂ ಶೂದ್ರ, ವೈಶ್ಯ ಮತ್ತು ರಾಜನನ್ನು ಸಂಶ್ರಯಿಸುತ್ತಾರೆ. ಆದುದರಿಂದ ಯಾವ ವರ್ಣದವರು ಮೋಕ್ಷಧರ್ಮದಲ್ಲಿ ಆಸಕ್ತರಾಗಿರುವುದಿಲ್ಲವೋ ಅವರಿಗೆ ವಿಷ್ಣುವು ಉಪದೇಶಿಸಲು ಇಚ್ಛಿಸುವುದಿಲ್ಲ.

12063010a ಲೋಕೇ ಚೇದಂ ಸರ್ವಲೋಕಸ್ಯ ನ ಸ್ಯಾ-
ಚ್ಚಾತುರ್ವರ್ಣ್ಯಂ ವೇದವಾದಾಶ್ಚ ನ ಸ್ಯುಃ|
12063010c ಸರ್ವಾಶ್ಚೇಜ್ಯಾಃ ಸರ್ವಲೋಕಕ್ರಿಯಾಶ್ಚ
ಸದ್ಯಃ ಸರ್ವೇ ಚಾಶ್ರಮಸ್ಥಾ ನ ವೈ ಸ್ಯುಃ||

ಒಂದುವೇಳೆ ಇದು ಹೀಗಾಗದಿದ್ದರೆ ಈ ಲೋಕದಲ್ಲಿ ಮತ್ತು ಸರ್ವ ಲೋಕಗಳಲ್ಲಿ ಚಾತುರ್ವರ್ಣಗಳೂ, ವೇದವಾದಗಳೂ, ಎಲ್ಲ ಯಜ್ಞಗಳೂ, ಸರ್ವಲೋಕಕ್ರಿಯೆಗಳೂ ಇರುತ್ತಿರಲಿಲ್ಲ. ಯಾರೂ ಆಶ್ರಮಧರ್ಮಗಳಲ್ಲಿಯೂ ಇರುತ್ತಿರಲಿಲ್ಲ.

12063011a ಯಶ್ಚ ತ್ರಯಾಣಾಂ ವರ್ಣಾನಾಮಿಚ್ಚೇದಾಶ್ರಮಸೇವನಮ್|
12063011c ಕರ್ತುಮಾಶ್ರಮದೃಷ್ಟಾಂಶ್ಚ ಧರ್ಮಾಂಸ್ತಾನ್ಶೃಣು ಪಾಂಡವ||

ಪಾಂಡವ! ಬ್ರಾಹ್ಮಣ-ವೈಶ್ಯ-ಶೂದ್ರ ಈ ಮೂರು ವರ್ಣದವರು

ತಮ್ಮ ತಮ್ಮ ಆಶ್ರಮಧರ್ಮಗಳನ್ನು ಪಾಲಿಸಬೇಕೆಂದು
ಬಯಸುವುದಾದರೆ ಆಶ್ರಮಗಳಿಗೆ ಹೇಳಲ್ಪಟ್ಟಿರುವ ಧರ್ಮಗಳ ಕುರಿತು
ಕೇಳು.

12063012a ಶುಶ್ರೂಷಾಕೃತಕೃತ್ಯಸ್ಯ ಕೃತಸಂತಾನಕರ್ಮಣಃ|
12063012c ಅಭ್ಯನುಜ್ಞಾಪ್ಯ ರಾಜಾನಂ ಶೂದ್ರಸ್ಯ ಜಗತೀಪತೇ||
12063013a ಅಲ್ಪಾಂತರಗತಸ್ಯಾಪಿ ದಶಧರ್ಮಗತಸ್ಯ ವಾ|
12063013c ಆಶ್ರಮಾ ವಿಹಿತಾಃ ಸರ್ವೇ ವರ್ಜಯಿತ್ವಾ ನಿರಾಶಿಷಮ್||

ಜಗತೀಪತೇ! ಸೇವೆಗಳನ್ನು ಮಾಡಿ ಕೃತಕೃತ್ಯನಾದ,
ಸಂತಾನಕರ್ಮಗಳನ್ನು ಪೂರೈಸಿದ, ದಶಧರ್ಮಗಳಲ್ಲಿ ಇತರರೊಂದಿಗೆ
ಹೆಚ್ಚು ಅಂತರವನ್ನಿಟ್ಟುಕೊಂಡಿರದ ಶೂದ್ರನು ರಾಜನ
ಅನುಮತಿಯನ್ನು ಪಡೆದು ಸಂನ್ಯಾಸವನ್ನು ಬಿಟ್ಟು
ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬಹುದು.

12063014a ಭೈಕ್ಷಚರ್ಯಾಂ ನ ತು ಪ್ರಾಹುಸ್ತಸ್ಯ ತದ್ಧರ್ಮಚಾರಿಣಃ|
12063014c ತಥಾ ವೈಶ್ಯಸ್ಯ ರಾಜೇಂದ್ರ ರಾಜಪುತ್ರಸ್ಯ ಚೈವ ಹಿ||

ರಾಜೇಂದ್ರ! ಹಾಗೆಯೇ ವೈಶ್ಯನ ಮತ್ತು ರಾಜಪುತ್ರನ
ಧರ್ಮಚಾರಿಗಳಿಗೆ ಕೂಡ ಸಂನ್ಯಾಸಾಶ್ರಮವನ್ನು ಹೇಳಿಲ್ಲ.

12063015a ಕೃತಕೃತ್ಯೋ ವಯೋತೀತೋ ರಾಜ್ಞಃ ಕೃತಪರಿಶ್ರಮಃ|
12063015c ವೈಶ್ಯೋ ಗಚ್ಚೇದನುಜ್ಞಾತೋ ನೃಪೇಣಾಶ್ರಮಮಂಡಲಮ್||

ಪರಿಶ್ರಮಗಳಿಂದ ಕೃತಕೃತ್ಯನಾದ ಮತ್ತು ವಯೋವೃದ್ಧನಾದ ವೈಶ್ಯನು
ರಾಜನ ಅನುಮತಿಯನ್ನು ಪಡೆದು ರಾಜರ ವಾನಪ್ರಸ್ಥಾಶ್ರಮ
ಮಂಡಲವನ್ನು ಸೇರಬಹುದು.

12063016a ವೇದಾನಧೀತ್ಯ ಧರ್ಮೇಣ ರಾಜಶಾಸ್ತ್ರಾಣಿ ಚಾನಘ|
12063016c ಸಂತಾನಾದೀನಿ ಕರ್ಮಾಣಿ ಕೃತ್ವಾ ಸೋಮಂ ನಿಷೇವ್ಯ ಚ||
12063017a ಪಾಲಯಿತ್ವಾ ಪ್ರಜಾಃ ಸರ್ವಾ ಧರ್ಮೇಣ ವದತಾಂ ವರ|
12063017c ರಾಜಸೂಯಾಶ್ವಮೇಧಾದೀನ್ಮಖಾನನ್ಯಾಂಸ್ತಥೈವ ಚ||
12063018a ಸಮಾನೀಯ ಯಥಾಪಾಠಂ ವಿಪ್ರೇಭ್ಯೋ ದತ್ತದಕ್ಷಿಣಃ|
12063018c ಸಂಗ್ರಾಮೇ ವಿಜಯಂ ಪ್ರಾಪ್ಯ ತಥಾಲ್ಪಂ ಯದಿ ವಾ ಬಹು||
12063019a ಸ್ಥಾಪಯಿತ್ವಾ ಪ್ರಜಾಪಾಲಂ ಪುತ್ರಂ ರಾಜ್ಯೇ ಚ ಪಾಂಡವ|
12063019c ಅನ್ಯಗೋತ್ರಂ ಪ್ರಶಸ್ತಂ ವಾ ಕ್ಷತ್ರಿಯಂ ಕ್ಷತ್ರಿಯರ್ಷಭ||
12063020a ಅರ್ಚಯಿತ್ವಾ ಪಿತೄನ್ಸಮ್ಯಕ್ಪಿತೄಯಜ್ಞೈರ್ಯಥಾವಿಧಿ|
12063020c ದೇವಾನ್ಯಜ್ಞೈರೃಷೀನ್ವೇದೈರರ್ಚಿತ್ವಾ ಚೈವ ಯತ್ನತಃ||
12063021a ಅಂತಕಾಲೇ ಚ ಸಂಪ್ರಾಪ್ತೇ ಯ ಇಚ್ಚೇದಾಶ್ರಮಾಂತರಮ್|
12063021c ಆನುಪೂರ್ವ್ಯಾಶ್ರಮಾನ್ರಾಜನ್ಗತ್ವಾ ಸಿದ್ಧಿಮವಾಪ್ನುಯಾತ್||

ಅನಘ! ಮಾತನಾಡುವವರಲ್ಲಿ ಶ್ರೇಷ್ಠ! ಪಾಂಡವ! ಕ್ಷತ್ರಿಯರ್ಷಭ! ರಾಜನ್! ಧರ್ಮಪೂರ್ವಕವಾಗಿ ವೇದಗಳನ್ನೂ ರಾಜಶಾಸ್ತ್ರಗಳನ್ನೂ ಕಲಿತು, ಸಂತಾನಾದಿ ಕರ್ಮಗಳನ್ನು ಪೂರೈಸಿ, ಸೋಮವನ್ನು ಸೇವಿಸಿ, ಧರ್ಮದಿಂದ ಪ್ರಜೆಗಳೆಲ್ಲರನ್ನೂ ಪಾಲಿಸಿ, ವೇದಗಳಲ್ಲಿ ಹೇಳಿರುವಂತೆ ರಾಜಸೂಯ-ಅಶ್ವಮೇಧವೇ ಮೊದಲಾದ ಮುಖ್ಯ ಯಜ್ಞಗಳನ್ನು ದ್ವಿಜರಿಗೆ ದಕ್ಷಿಣೆಗಳನ್ನಿತ್ತು ಪೂರೈಸಿ, ಸ್ವಲ್ಪ ಅಥವಾ ಅಧಿಕ ಸಂಗ್ರಾಮಗಳಲ್ಲಿ ವಿಜಯಿಯಾಗಿ, ಪ್ರಜಾಪಾಲನೆಗಾಗಿ ರಾಜ್ಯದಲ್ಲಿ ಮಗನನ್ನು ಅಥವಾ ಅನ್ಯ ಗೋತ್ರದ ಪ್ರಶಸ್ತ ಕ್ಷತ್ರಿಯನನ್ನು ಸ್ಥಾಪಿಸಿ, ಪ್ರಯತ್ನಪಟ್ಟು ಯಥಾವಿಧಿ ಯಜ್ಞಗಳನ್ನು ರಚಿಸಿ ಪಿತೃಗಳನ್ನೂ, ದೇವತೆಗಳನ್ನೂ ಮತ್ತು ಋಷಿಗಳನ್ನೂ ಅರ್ಚಿಸಿ, ಅಂತ್ಯಕಾಲವು

ಸಂಪ್ರಾಪ್ತವಾದಾಗ ಆಶ್ರಮಾಂತರವಾದ ವಾನಪ್ರಸ್ಥವನ್ನು ಸ್ವೀಕರಿಸಿದರೆ ಅಂಥಹ ಕ್ಷತ್ರಿಯನು ಕ್ರಮಾನುಬದ್ಧವಾಗಿ ಆಶ್ರಮಧರ್ಮಗಳನ್ನು ಸ್ವೀಕರಿಸಿದವನಾಗಿ ಸಿದ್ಧಿಯನ್ನು ಪಡೆಯುತ್ತಾನೆ.

12063022a ರಾಜರ್ಷಿತ್ವೇನ ರಾಜೇಂದ್ರ ಭೈಕ್ಷಚರ್ಯಾಧ್ವಸೇವಯಾ|
12063022c ಅಪೇತಗೃಹಧರ್ಮೋಽಪಿ ಚರೇಜ್ಜೀವಿತಕಾಮ್ಯಯಾ||

ರಾಜೇಂದ್ರ! ಹೀಗೆ ರಾಜರ್ಷಿಯಾದವನು ಗೃಹಸ್ಥಧರ್ಮವನ್ನು ತ್ಯಾಗಮಾಡಿದರೂ ಜೀವನ ನಿರ್ವಹಣೆಗಾಗಿ ಭಿಕ್ಷೆಯನ್ನೇ ಮಾಡಬೇಕು. ಇತರರ ಸೇವೆಯನ್ನು ಮಾಡಬಾರದು.

12063023a ನ ಚೈತನ್ನೈಷ್ಠಿಕಂ ಕರ್ಮ ತ್ರಯಾಣಾಂ ಭರತರ್ಷಭ|
12063023c ಚತುರ್ಣಾಂ ರಾಜಶಾರ್ದೂಲ ಪ್ರಾಹುರಾಶ್ರಮವಾಸಿನಾಮ್||

ಭರತರ್ಷಭ! ರಾಜಶಾರ್ದೂಲ! ಈ ಐಷ್ಠಿಕ ಕರ್ಮವು ಮೂರು ವರ್ಣದವರಿಗೆ ಮಾತ್ರ ಸೀಮಿತವಾಗಿಲ್ಲ. ನಾಲ್ಕೂ ವರ್ಣದವರಿಗೂ ಈ ವಾನಪ್ರಸ್ಥಾಶ್ರಮವನ್ನು ಹೇಳಿದ್ದಾರೆ.

12063024a ಬಾಹ್ವಾಯತ್ತಂ ಕ್ಷತ್ರಿಯೈರ್ಮಾನವಾನಾಂ
ಲೋಕಶ್ರೇಷ್ಠಂ ಧರ್ಮಮಾಸೇವಮಾನೈಃ|
12063024c ಸರ್ವೇ ಧರ್ಮಾಃ ಸೋಪಧರ್ಮಾಸ್ತ್ರಯಾಣಾಂ
ರಾಜ್ಞೋ ಧರ್ಮಾದಿತಿ ವೇದಾಚ್ಚ್ರುಣೋಮಿ||

ಬಾಹುಬಲವನ್ನಾಶ್ರಯಿಸಿರುವ ಈ ಕ್ಷತ್ರಿಯ ಧರ್ಮವು ಸರ್ವಮಾನವರ ಸೇವೆಗ್ಯೈಯುವುದರಿಂದ ಲೋಕಶ್ರೇಷ್ಠವಾದುದು. ಬ್ರಾಹ್ಮಣ-ವೈಶ್ಯ-ಶೂದ್ರ ಈ ಮೂರು ವರ್ಣದವರ ಸರ್ವ ಧರ್ಮ-ಉಪಧರ್ಮಗಳೂ ರಾಜಧರ್ಮದಿಂದಲೇ ಸಂರಕ್ಷಿಸಲ್ಪಡುವುದು

ಎಂದು ವೇದಗಳಿಂದ ಕೇಳಿದ್ದೇನೆ.

12063025a ಯಥಾ ರಾಜನ್ಹಸ್ತಿಪದೇ ಪದಾನಿ
ಸಂಲೀಯಂತೇ ಸರ್ವಸತ್ತ್ವೋದ್ಭವಾನಿ|
12063025c ಏವಂ ಧರ್ಮಾನ್ರಾಜಧರ್ಮೇಷು ಸರ್ವಾನ್
ಸರ್ವಾವಸ್ಥಂ ಸಂಪ್ರಲೀನಾನ್ನಿಬೋಧ||

ರಾಜನ್! ಆನೆಯ ಪದಚಿಹ್ನೆಯಲ್ಲಿ ಇತರ ಎಲ್ಲ ಪ್ರಾಣಿಗಳ ಹೆಜ್ಜೆಗಳ ಗುರುತುಗಳೂ ಹೇಗೆ ಲೀನವಾಗಿಬಿಡುತ್ತವೆಯೋ ಹಾಗೆ ಎಲ್ಲ ಧರ್ಮಗಳೂ ಮತ್ತ ಅವುಗಳ ಎಲ್ಲ ಅವಸ್ಥೆ-ಭೇದಗಳೂ ರಾಜಧರ್ಮದಲ್ಲಿ ಲೀನವಾಗಿಬಿಡುತ್ತವೆ ಎಂದು ತಿಳಿ.

12063026a ಅಲ್ಪಾಶ್ರಯಾನಲ್ಪಫಲಾನ್ವದಂತಿ
ಧರ್ಮಾನನ್ಯಾನ್ಧರ್ಮವಿದೋ ಮನುಷ್ಯಾಃ|
12063026c ಮಹಾಶ್ರಯಂ ಬಹುಕಲ್ಯಾಣರೂಪಂ
ಕ್ಷಾತ್ರಂ ಧರ್ಮಂ ನೇತರಂ ಪ್ರಾಹುರಾರ್ಯಾಃ||

ಅನ್ಯ ಧರ್ಮಗಳ ಆಶ್ರಯವು ಅಲ್ಪಫಲಗಳನ್ನು ನೀಡುತ್ತವೆ ಎಂದು ಧರ್ಮವಿದ ಮನುಷ್ಯರು ಹೇಳುತ್ತಾರೆ. ಕ್ಷಾತ್ರಧರ್ಮಕ್ಕಿಂತಲೂ ಮಹಾಶ್ರಯ ನೀಡುವ ಮತ್ತು ಬಹುಕಲ್ಯಾಣರೂಪವಾದ ಇತರ ಧರ್ಮವಿಲ್ಲ ಎಂದು ಆರ್ಯರು ಹೇಳುತ್ತಾರೆ.

12063027a ಸರ್ವೇ ಧರ್ಮಾ ರಾಜಧರ್ಮಪ್ರಧಾನಾಃ
ಸರ್ವೇ ಧರ್ಮಾಃ ಪಾಲ್ಯಮಾನಾ ಭವಂತಿ|
12063027c ಸರ್ವತ್ಯಾಗೋ ರಾಜಧರ್ಮೇಷು ರಾಜಂಸ್
ತ್ಯಾಗೇ ಚಾಹುರ್ಧರ್ಮಮಗ್ರ್ಯಂ ಪುರಾಣಮ್||

ಸರ್ವಧರ್ಮಗಳಲ್ಲಿ ರಾಜಧರ್ಮವೇ ಪ್ರಧಾನವಾದುದು. ಎಲ್ಲ ಧರ್ಮಗಳ ಪಾಲನೆಯೂ ರಾಜಧರ್ಮದಿಂದ ನಡೆಯುತ್ತದೆ. ರಾಜನ್! ರಾಜಧರ್ಮದಲ್ಲಿ ಸರ್ವ ತ್ಯಾಗಗಳೂ ಒಳಗೊಂಡಿವೆ ಮತ್ತು ತ್ಯಾಗವೇ ಪುರಾಣ ಮತ್ತು ಅಗ್ರ ಧರ್ಮವೆಂದು ಹೇಳುತ್ತಾರೆ.

12063028a ಮಜ್ಜೇತ್ತ್ರಯೀ ದಂಡನೀತೌ ಹತಾಯಾಂ
ಸರ್ವೇ ಧರ್ಮಾ ನ ಭವೇಯುರ್ವಿರುದ್ಧಾಃ|
12063028c ಸರ್ವೇ ಧರ್ಮಾಶ್ಚಾಶ್ರಮಾಣಾಂ ಗತಾಃ ಸ್ಯುಃ
ಕ್ಷಾತ್ರೇ ತ್ಯಕ್ತೇ ರಾಜಧರ್ಮೇ ಪುರಾಣೇ||

ದಂಡನೀತಿಯು ನಾಶವಾಗಲು ಮೂರು ವೇದಗಳೂ ಪಾತಾಳದಲ್ಲಿ ಮುಳುಗಿಕೊಳ್ಳುತ್ತವೆ. ಸರ್ವ ಧರ್ಮಗಳೂ ನಾಶಗೊಳ್ಳುತ್ತವೆ. ಸನಾತನವಾದ ಕ್ಷತ್ರಿಯರ ರಾಜಧರ್ಮವು ಇಲ್ಲವಾದರೆ ಸರ್ವ ಆಶ್ರಮ ಧರ್ಮಗಳೂ ನಾಶಗೊಂಡಂತೆಯೇ.

12063029a ಸರ್ವೇ ತ್ಯಾಗಾ ರಾಜಧರ್ಮೇಷು ದೃಷ್ಟಾಃ
ಸರ್ವಾ ದೀಕ್ಷಾ ರಾಜಧರ್ಮೇಷು ಚೋಕ್ತಾಃ|
12063029c ಸರ್ವೇ ಯೋಗಾ ರಾಜಧರ್ಮೇಷು ಚೋಕ್ತಾಃ
ಸರ್ವೇ ಲೋಕಾ ರಾಜಧರ್ಮಾನ್ಪ್ರವಿಷ್ಟಾಃ||

ಸರ್ವ ತ್ಯಾಗಗಳೂ ರಾಜಧರ್ಮದಲ್ಲಿ ಕಾಣುತ್ತವೆ. ಸರ್ವ ದೀಕ್ಷೆಗಳು ರಾಜಧರ್ಮದಲ್ಲಿದೆ ಎಂದು ಹೇಳಿದೆ. ಸರ್ವ ಯೋಗಗಳೂ ರಾಜಧರ್ಮದಲ್ಲಿವೆಯೆಂದು ಹೇಳಿದೆ. ಸರ್ವ ಲೋಕಗಳೂ ರಾಜಧರ್ಮದಲ್ಲಿ ಸೇರಿಕೊಂಡಿವೆ.

12063030a ಯಥಾ ಜೀವಾಃ ಪ್ರಕೃತೌ ವಧ್ಯಮಾನಾ

ಧರ್ಮಾಶ್ರಿತಾನಾಮುಪಪೀಡನಾಯ|
12063030c ಏವಂ ಧರ್ಮಾ ರಾಜಧರ್ಮ್ಯೈರ್ವಿಯುಕ್ತಾಃ
ಸರ್ವಾವಸ್ಥಂ ನಾದ್ರಿಯಂತೇ ಸ್ವಧರ್ಮಮ್‌||

ಪ್ರಕೃತಿಯಲ್ಲಿ ಜೀವಿಗಳು ವಧಿಸಲ್ಪಡುವಾಗ ಧರ್ಮಾಶ್ರಿತರು ಹೇಗೆ ಪೀಡೆಗೊಳಗಾಗುತ್ತಾರೋ ಹಾಗೆ ರಾಜಧರ್ಮವಿಲ್ಲದ ಸರ್ವಾವಸ್ಥೆಯ ಸರ್ವ ಸ್ವಧರ್ಮಗಳೂ ಪೀಡೆಗೊಳಗಾಗುತ್ತವೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವರ್ಣಾಶ್ರಮಧರ್ಮಕಥನೇ ತ್ರಿಷಷ್ಟಿತಮೋಽಧ್ಯಾಯಃ‌||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವರ್ಣಾಶ್ರಮಧರ್ಮಕಥನ ಎನ್ನುವ ಅರವತ್ಮೂರನೇ ಅಧ್ಯಾಯವು.

೬೪

ಇಂದ್ರ-ಮಾಂಧಾತ ಸಂವಾದ

ರಾಜಧರ್ಮದ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಇಂದ್ರರೂಪೀ ವಿಷ್ಣು ಮತ್ತು ಮಾಂಧಾತರ ಸಂವಾದ (1-29).

12064001 ಭೀಷ್ಮ ಉವಾಚ|
12064001a ಚಾತುರಾಶ್ರಮ್ಯಧರ್ಮಾಶ್ಚ ಜಾತಿಧರ್ಮಾಶ್ಚ ಪಾಂಡವ|
12064001c ಲೋಕಪಾಲೋತ್ತರಾಶ್ಚೈವ ಕ್ಷಾತ್ರೇ ಧರ್ಮೇ ವ್ಯವಸ್ಥಿತಾಃ‌||

ಭೀಷ್ಮನು ಹೇಳಿದನು: “ಪಾಂಡವ! ನಾಲ್ಕು ಆಶ್ರಮಧರ್ಮಗಳೂ, ಜಾತಿಧರ್ಮಗಳೂ, ಲೋಕಪಾಲಧರ್ಮಗಳೂ ಕ್ಷಾತ್ರಧರ್ಮದಲ್ಲಿಯೇ

ಪ್ರತಿಷ್ಠಿತಗೊಂಡಿವೆ.

12064002a ಸರ್ವಾಣ್ಯೇತಾನಿ ಧರ್ಮಾಣಿ ಕ್ಷಾತ್ರೇ ಭರತಸತ್ತಮ|
12064002c ನಿರಾಶಿಷೋ ಜೀವಲೋಕೇ ಕ್ಷಾತ್ರೇ ಧರ್ಮೇ ವ್ಯವಸ್ಥಿತಾಃ[175]||

ಭರತಸತ್ತಮ! ಈ ಎಲ್ಲ ಧರ್ಮಗಳೂ ಕ್ಷಾತ್ರಧರ್ಮವನ್ನವಲಂಬಿಸಿವೆ. ಕ್ಷಾತ್ರಧರ್ಮವು ಅವ್ಯವಸ್ಥಿತವಾದರೆ ಜೀವಲೋಕಗಳು ನಿರಾಶೆಗೊಳ್ಳುತ್ತವೆ.

12064003a ಅಪ್ರತ್ಯಕ್ಷಂ ಬಹುದ್ವಾರಂ ಧರ್ಮಮಾಶ್ರಮವಾಸಿನಾಮ್|
12064003c ಪ್ರರೂಪಯಂತಿ ತದ್ಭಾವಮಾಗಮ್ಯೈರೇವ ಶಾಶ್ವತಮ್||

ಆಶ್ರಮವಾಸಿಗಳ ಧರ್ಮಗಳು ಅಪ್ರತ್ಯಕ್ಷವಾಗಿವೆ ಮತ್ತು ಅವುಗಳಿಗೆ ಬಹುದ್ವಾರಗಳಿವೆ. ಆಗಮಗಳೇ ಅವುಗಳ ಶಾಶ್ವತ ಭಾವಗಳನ್ನು ರೂಪಿಸುತ್ತವೆ.

12064004a ಅಪರೇ ವಚನೈಃ ಪುಣ್ಯೈರ್ವಾದಿನೋ ಲೋಕನಿಶ್ಚಯಮ್|
12064004c ಅನಿಶ್ಚಯಜ್ಞಾ ಧರ್ಮಾಣಾಮದೃಷ್ಟ್ವಾಂತೇ ಪರೇ ರತಾಃ||

ಕೆಲವರು ಲೋಕನಿಶ್ಚಯವನ್ನು ಪುಣ್ಯವೇದವಚನಗಳ ಮೂಲಕ ಹೇಳುತ್ತಾರ. ಇತರರು ನಿಶ್ಚಯಗಳನ್ನು ತೆಗೆದುಕೊಳ್ಳಲಾರದೇ ಧರ್ಮಗಳನ್ನು ಕಂಡುಕೊಳ್ಳುವುದಿಲ್ಲ.

12064005a ಪ್ರತ್ಯಕ್ಷಸುಖಿಭೂಯಿಷ್ಠಮಾತ್ಮಸಾಕ್ಷಿಕಮಚ್ಚಲಮ್|
12064005c ಸರ್ವಲೋಕಹಿತಂ ಧರ್ಮಂ ಕ್ಷತ್ರಿಯೇಷು ಪ್ರತಿಷ್ಠಿತಮ್||

---

[175] ನಿರಾಶಿಷೋ ಜೀವಲೋಕಾಃ ಕ್ಷತ್ರಧರ್ಮೇऽವ್ಯವಸ್ಥಿತೇ| ಎಂಬ ಪಾಠಾಂತರವಿದೆ (ಭಾರತ ದರ್ಶನ).

ಪ್ರತ್ಯಕ್ಷವೂ, ಅಧಿಕ ಸುಖಮಯವೂ, ಆತ್ಮಸಾಕ್ಷಿಕವೂ, ಕಪಟರಹಿತವೂ ಮತ್ತು ಸರ್ವಲೋಕಹಿತವೂ ಆಗಿರುವ ಧರ್ಮವು ಕ್ಷತ್ರಿಯರಲ್ಲಿ ಪ್ರತಿಷ್ಠಿತಗೊಂಡಿದೆ.

12064006a ಧರ್ಮಾಶ್ರಮವ್ಯವಸಿನಾಂ ಬ್ರಾಹ್ಮಣಾನಾಂ ಯುಧಿಷ್ಠಿರ|
12064006c ಯಥಾ ತ್ರಯಾಣಾಂ ವರ್ಣಾನಾಂ ಸಂಖ್ಯಾತೋಪಶ್ರುತಿಃ ಪುರಾ|
12064006e ರಾಜಧರ್ಮೇಷ್ವನುಪಮಾ ಲೋಕ್ಯಾ ಸುಚರಿತೈರಿಹ||

ಯುಧಿಷ್ಠಿರ! ಆಶ್ರಮಧರ್ಮಗಳನ್ನು ಆಚರಿಸುತ್ತಿರುವ ಬ್ರಾಹ್ಮಣರ ಪ್ರಕಾರ, ಹಿಂದೆ ಹೇಳಿದಂತೆ ಮೂರು ವರ್ಣಗಳು ಹೇಗೆ ರಾಜಧರ್ಮದಲ್ಲಿ ಲೀನವಾಗುತ್ತವೆಯೋ ಹಾಗೆ ಲೋಕದಲ್ಲಿರುವ ಸುಚರಿತ್ರಗಳೆಲ್ಲವೂ ರಾಜಧರ್ಮದಲ್ಲಿಯೇ ಇರುತ್ತವೆ.

12064007a ಉದಾಹೃತಂ ತೇ ರಾಜೇಂದ್ರ ಯಥಾ ವಿಷ್ಣುಂ ಮಹೌಜಸಮ್|
12064007c ಸರ್ವಭೂತೇಶ್ವರಂ ದೇವಂ ಪ್ರಭುಂ ನಾರಾಯಣಂ ಪುರಾ|
12064007e ಜಗ್ಮುಃ ಸುಬಹವಃ ಶೂರಾ ರಾಜಾನೋ ದಂಡನೀತಯೇ||

ರಾಜೇಂದ್ರ! ಇದರ ಕುರಿತು ಒಂದು ಉದಾಹರಣೆಯಿದೆ. ಹಿಂದೆ ದಂಡನೀತಿಗಾಗಿ ಅನೇಕ ಶೂರ ರಾಜರು ಸರ್ವಭೂತೇಶ್ವರ ದೇವ ಪ್ರಭು ನಾರಾಯಣನಲ್ಲಿಗೆ ಹೋದರು.

12064008a ಏಕೈಕಮಾತ್ಮನಃ ಕರ್ಮ ತುಲಯಿತ್ವಾಶ್ರಮೇ ಪುರಾ|
12064008c ರಾಜಾನಃ ಪರ್ಯುಪಾತಿಷ್ಠನ್ದೃಷ್ಟಾಂತವಚನೇ ಸ್ಥಿತಾಃ||

ಅದಕ್ಕೆ ಮೊದಲು ರಾಜರು ವರ್ಣಾಶ್ರಮ ಧರ್ಮಕ್ಕನುಗುಣವಾಗಿ ತಾವು ಮಾಡಿದ ಒಂದೊಂದು ಕರ್ಮವನ್ನೂ ದಂಡನೀತಿಯೊಡನೆ ತುಲನೆ ಮಾಡಿದ್ದರು. ಆದರೆ ಅವರ ಸಂಶಯವು

ಪರಿಹಾರವಾಗಿರಲಿಲ್ಲ.

12064009a ಸಾಧ್ಯಾ ದೇವಾ ವಸವಶ್ಚಾಶ್ವಿನೌ ಚ
ರುದ್ರಾಶ್ಚ ವಿಶ್ವೇ ಮರುತಾಂ ಗಣಾಶ್ಚ|
12064009c ಸೃಷ್ಟಾಃ ಪುರಾ ಆದಿದೇವೇನ ದೇವಾ
ಕ್ಷಾತ್ರೇ ಧರ್ಮೇ ವರ್ತಯಂತೇ ಚ ಸಿದ್ಧಾಃ||

ಹಿಂದೆ ಆದಿದೇವ ವಿಷ್ಣುವಿನಿಂದ ಸೃಷ್ಟಿಸಲ್ಪಟ್ಟ ಸಾಧ್ಯರು, ದೇವತೆಗಳು, ವಸುಗಳು, ಅಶ್ವಿನರು, ರುದ್ರರು, ವಿಶ್ವೇದೇವರು, ಸಿದ್ಧರು ಮತ್ತು ಮರುದ್ಗಣಗಳು ಕ್ಷಾತ್ರಧರ್ಮದಂತೆಯೇ ನಡೆದುಕೊಳ್ಳುತ್ತಾರೆ.

12064010a ಅತ್ರ ತೇ ವರ್ತಯಿಷ್ಯಾಮಿ ಧರ್ಮಮರ್ಥವಿನಿಶ್ಚಯಮ್|
12064010c ನಿರ್ಮರ್ಯಾದೇ ವರ್ತಮಾನೇ ದಾನವ್ಯೈಕಾಯನೇ ಕೃತೇ||
12064010e ಬಭೂವ ರಾಜಾ ರಾಜೇಂದ್ರ ಮಾಂಧಾತಾ ನಾಮ ವೀರ್ಯವಾನ್||

ರಾಜೇಂದ್ರ! ಅದರ ಕುರಿತಾದ ಧರ್ಮನಿಶ್ಚಯವನ್ನು ನಿನಗೆ ಹೇಳುತ್ತೇನೆ. ಕೃತಯುಗದಲ್ಲಿ ಈ ಅಖಂಡ ವಿಶ್ವವು ದಾನವರ ವಶವಾಗಿ ಮರ್ಯಾದೆಗಳಿಲ್ಲದೇ ನಡೆಯುತ್ತಿರಲು ಮಾಂಧಾತ ಎಂಬ ವೀರ್ಯವಾನ್ ರಾಜನಾದನು.

12064011a ಪುರಾ ವಸುಮತೀಪಾಲೋ ಯಜ್ಞಂ ಚಕ್ರೇ ದಿದೃಕ್ಷಯಾ|
12064011c ಅನಾದಿಮಧ್ಯನಿಧನಂ ದೇವಂ ನಾರಾಯಣಂ ಪ್ರತಿ||

ಹಿಂದೆ ಆ ವಸುಮತೀಪಾಲಕನು ಅನಾದಿಮಧ್ಯನಿಧನ ದೇವ ನಾರಾಯಣನನ್ನು ಕಾಣಲೋಸುಗ ಒಂದು ಯಜ್ಞವನ್ನು ನಡೆಸಿದನು.

12064012a ಸ ರಾಜಾ ರಾಜಶಾರ್ದೂಲ ಮಾಂಧಾತಾ ಪರಮೇಷ್ಠಿನಃ|



12064012c ಜಗ್ರಾಹ ಶಿರಸಾ ಪಾದೌ ಯಜ್ಞೇ ವಿಷ್ಣೋರ್ಮಹಾತ್ಮನಃ||

ರಾಜಶಾರ್ದೂಲ! ಆ ಯಜ್ಞದಲ್ಲಿ ರಾಜಾ ಮಾಂಧಾತನು ಪರಮೇಷ್ಠಿ ಮಹಾತ್ಮ ವಿಷ್ಣುವಿನ ಪಾದಗಳಲ್ಲಿ ತನ್ನ ಶಿರಸ್ಸನ್ನಿಟ್ಟನು.

12064013a ದರ್ಶಯಾಮಾಸ ತಂ ವಿಷ್ಣೂ ರೂಪಮಾಸ್ಥಾಯ ವಾಸವಮ್|
12064013c ಸ ಪಾರ್ಥಿವ್ಯೈರ್ವ್ಯತಃ ಸದ್ಭಿರರ್ಚಯಾಮಾಸ ತಂ ಪ್ರಭುಮ್||

ಆಗ ವಿಷ್ಣುವು ವಾಸವ ಇಂದ್ರನ ರೂಪವನ್ನು ಧರಿಸಿ ಆ ರಾಜನಿಗೆ ಕಾಣಿಸಿಕೊಂಡನು. ರಾಜನಾದರೋ ಪ್ರಭುವನ್ನು ಉತ್ತಮವಾಗಿ ಅರ್ಚಿಸಿದನು.

12064014a ತಸ್ಯ ಪಾರ್ಥಿವಸಂಘಸ್ಯ ತಸ್ಯ ಚೈವ ಮಹಾತ್ಮನಃ|
12064014c ಸಂವಾದೋಽಯಂ ಮಹಾನಾಸೀದ್ವಿಷ್ಣುಂ ಪ್ರತಿ ಮಹಾದ್ಯುತೇ||

ಮಹಾದ್ಯುತೇ! ಆಗ ಆ ಪಾರ್ಥಿವಶ್ರೇಷ್ಠ ಮಾಂಧಾತನಿಗೂ ಮಹಾತ್ಮ ಇಂದ್ರನಿಗೂ ವಿಷ್ಣುವಿನ ಕುರಿತಾದ ಈ ಸಂವಾದವು ನಡೆಯಿತು.

12064015 ಇಂದ್ರ ಉವಾಚ
12064015a ಕಿಮಿಷ್ಯತೇ ಧರ್ಮಭೃತಾಂ ವರಿಷ್ಠ
ಯದ್ದ್ರಷ್ಟುಕಾಮೋಽಸಿ ತಮಪ್ರಮೇಯಮ್|
12064015c ಅನಂತಮಾಯಾಮಿತಸತ್ತ್ವವೀರ್ಯಂ
ನಾರಾಯಣಂ ಹ್ಯಾದಿದೇವಂ ಪುರಾಣಮ್||

ಇಂದ್ರನು ಹೇಳಿದನು: "ಧರ್ಮಭೃತರಲ್ಲಿ ವರಿಷ್ಠ! ಆದಿದೇವನೂ, ಪುರಾಣನೂ, ಅಮಿತ ಸತ್ತ್ವವೀರ್ಯನೂ, ಅನಂತಮಾಯೆಗಳುಳ್ಳವನೂ, ಅಪ್ರಮೇಯನೂ ಆದ ನಾರಾಯಣನನ್ನು ಕಾಣಲು ಏಕೆ

ಬಯಸುತ್ತಿರುವೆ?

12064016a ನಾಸೌ ದೇವೋ ವಿಶ್ವರೂಪೋ ಮಯಾಪಿ
ಶಕ್ಯೋ ದ್ರಷ್ಟುಂ ಬ್ರಹ್ಮಣಾ ವಾಪಿ ಸಾಕ್ಷಾತ್|
12064016c ಯೇಽನ್ಯೇ ಕಾಮಾಸ್ತವ ರಾಜನ್ಹೃದಿಸ್ಥಾ
ದಾಸ್ಯಾಮಿ ತಾಂಸ್ತ್ವಂ ಹಿ ಮರ್ತ್ಯೇಷು ರಾಜಾ||

ಆ ದೇವ ವಿಶ್ವರೂಪನನ್ನು ನಾನಾಗಲೀ ಸಾಕ್ಷಾತ್ ಬ್ರಹ್ಮನೇ ಆಗಲಿ ನೋಡಲು ಶಕ್ಯರಿಲ್ಲ. ರಾಜನ್! ಮನುಷ್ಯರಲ್ಲಿ ರಾಜನಾಗಿರುವ ನಿನಗೆ ಅನ್ಯ ಕಾಮನೆಗಳು ಹೃದಯಸ್ಥವಾಗಿದ್ದರೆ ಅವುಗಳನ್ನು ನಾನೇ ದಯಪಾಲಿಸುತ್ತೇನೆ.

12064017a ಸತ್ಯೇ ಸ್ಥಿತೋ ಧರ್ಮಪರೋ ಜಿತೇಂದ್ರಿಯಃ
ಶೂರೋ ದೃಢಂ ಪ್ರೀತಿರತಃ ಸುರಾಣಾಮ್|
12064017c ಬುದ್ಧ್ಯಾ ಭಕ್ತ್ಯಾ ಚೋತ್ತಮಶ್ರದ್ಧಯಾ ಚ
ತತಸ್ತೇಽಹಂ ದದ್ಮಿ ವರಂ ಯಥೇಷ್ಟಮ್||

ಸತ್ಯನಿಷ್ಠನಾಗಿರುವ, ಧರ್ಮಪರನೂ ಜಿತೇಂದ್ರಿಯನೂ ಆಗಿರುವ, ಶೂರನೂ ದೃಢನೂ, ಸುರರ ಪ್ರೀತಿರತನೂ ಆಗಿರುವ, ಉತ್ತಮ ಬುದ್ಧಿ-ಭಕ್ತಿ-ಶ್ರದ್ಧೆಗಳಿರುವ ನಿನಗೆ ಇಷ್ಟವಾದ ವರವನ್ನು ನಾನೇ ನೀಡುತ್ತೇನೆ.”

12064018 ಮಾಂಧಾತೋವಾಚ

12064018a ಅಸಂಶಯಂ ಭಗವನ್ನಾದಿದೇವಂ
ದ್ರಕ್ಷ್ಯಾಮ್ಯಹಂ ಶಿರಸಾಹಂ ಪ್ರಸಾದ್ಯ|
12064018c ತ್ಯಕ್ತ್ವಾ ಭೋಗಾನ್ಧರ್ಮಕಾಮೋ ಹ್ಯರಣ್ಯಮ್
ಇಚ್ಛೇ ಗಂತುಂ ಸತ್ಪಥಂ ಲೋಕಜುಷ್ಟಮ್||

ಮಾಂಧಾತನು ಹೇಳಿದನು: “ಭಗವನ್! ನಿನ್ನ ಅಡಿದಾವರೆಗಳಲ್ಲಿಯೇ ಶಿರಸ್ಸನ್ನಿಟ್ಟು ಪ್ರಸನ್ನಗೊಳಿಸಿ ನಾನು ಆದಿದೇವನನ್ನು ಕಾಣುತ್ತೇನೆ. ಇದರಲ್ಲಿ ಸಂದೇಹವಿಲ್ಲ. ಭೋಗಗಳನ್ನು ತ್ಯಜಿಸಿ ಧರ್ಮಕಾಮನಾಗಿ ನಾನು ಲೋಕದ ಸತ್ಪುರುಷರ ಅಂತಿಮ ಮಾರ್ಗವಾದ ಅರಣ್ಯವನ್ನು ಸೇರಲು ಬಯಸುತ್ತೇನೆ.

12064019a ಕ್ಷಾತ್ರಾದ್ಧರ್ಮಾದ್ವಿಪುಲಾದಪ್ರಮೇಯಾಲ್
ಲೋಕಾಃ ಪ್ರಾಪ್ತಾಃ ಸ್ಥಾಪಿತಂ ಸ್ವಂ ಯಶಶ್ಚ|
12064019c ಧರ್ಮೋ ಯೋಽಸಾವಾದಿದೇವಾತ್ಪ್ರವೃತ್ತೋ
ಲೋಕಜ್ಯೇಷ್ಠಸ್ತಂ ನ ಜಾನಾಮಿ ಕರ್ತುಮ್||

ಕ್ಷಾತ್ರಧರ್ಮದಿಂದ ವಿಪುಲ ಅಪ್ರಮೇಯ ಲೋಕಗಳನ್ನು ಪಡೆದುಕೊಂಡಿದ್ದೇನೆ ಮತ್ತು ನನ್ನ ಯಶಸ್ಸನ್ನೂ ಲೋಕಗಳಲ್ಲಿ ಸ್ಥಾಪಿಸಿದ್ದೇನೆ. ಆದರೆ ಆ ಲೋಕಜ್ಯೇಷ್ಠ ಆದಿದೇವನಿಂದ ಪ್ರವೃತ್ತವಾದ ಮೋಕ್ಷಧರ್ಮವನ್ನು ನಡೆಸಲು ನನಗೆ ತಿಳಿದಿಲ್ಲ.”

12064020 ಇಂದ್ರ ಉವಾಚ
12064020a ಅಸ್ಯೈನಿಕೋಽಧರ್ಮಪರಶ್ಚರೇಥಾಃ
ಪರಾಂ ಗತಿಂ ಲಪ್ಸ್ಯಸೇ ಚಾಪ್ರಮತ್ತಃ|[176]
12064020c ಕ್ಷಾತ್ರೋ ಧರ್ಮೋ ಹ್ಯಾದಿದೇವಾತ್ಪ್ರವೃತ್ತಃ

[176] ಅಸ್ಯೈನಿಕಾ ಧರ್ಮಪರಾಶ್ಚ ಧರ್ಮೇ ಪರಾಂ ಗತಿಂ ನ ನಯಂತೇ ಹ್ಯಯುಕ್ತಮ್| ಅರ್ಥಾತ್ ಸೈನ್ಯಗಳಿಲ್ಲದ ವಾನಪ್ರಸ್ಥಾಶ್ರಮ ಧರ್ಮವನ್ನು ಅನುಸರಿಸುವ ಕ್ಷತ್ರಿಯನು ಪರಮ ಗತಿಯನ್ನು ಹೊಂದುವುದಿಲ್ಲ ಎನ್ನುವುದು ಯುಕ್ತವಲ್ಲ ಎಂಬ ಪಾಠಾಂತರವಿದೆ.

ಪಶ್ಚಾದನ್ಯೇ ಶೇಷಭೂತಾಶ್ಚ ಧರ್ಮಾಃ॥

ಇಂದ್ರನು ಹೇಳಿದನು: "ಕ್ಷಾತ್ರಧರ್ಮವು ಆದಿದೇವನಿಂದಲೇ ಪ್ರವೃತ್ತಗೊಂಡಿತು. ಅದರ ನಂತರವೇ ಉಳಿದ ಅನ್ಯ ಧರ್ಮಗಳು ಹುಟ್ಟಿಕೊಂಡವು.

12064021a ಶೇಷಾಃ ಸೃಷ್ಟಾ ಹ್ಯಂತವಂತೋ ಹ್ಯನಂತಾಃ
ಸುಪ್ರಸ್ಥಾನಾಃ ಕ್ಷತ್ರಧರ್ಮಾ ವಿಶಿಷ್ಟಾಃ|
12064021c ಅಸ್ಮಿನ್ಧರ್ಮೇ ಸರ್ವಧರ್ಮಾಃ ಪ್ರವಿಷ್ಟಾಸ್
ತಸ್ಮಾದ್ಧರ್ಮಂ ಶ್ರೇಷ್ಠಮಿಮಂ ವದಂತಿ॥

ಅನಂತರ ಹುಟ್ಟಿದ ಶೇಷಧರ್ಮಗಳು ಕಾಲಾನುಗುಣವಾಗಿ ಕ್ಷಯಿಸುತ್ತವೆ. ಉತ್ತಮ ಸಂಪ್ರದಾಯಗಳಿರುವ ಕ್ಷತ್ರಧರ್ಮವೇ ವಿಶಿಷ್ಠವಾದುದು. ಈ ಧರ್ಮದಲ್ಲಿ ಸರ್ವಧರ್ಮಗಳೂ ಸೇರಿಕೊಂಡಿವೆ. ಆದುದರಿಂದ ಇದನ್ನು ಶ್ರೇಷ್ಠಧರ್ಮವೆಂದು ಹೇಳುತ್ತಾರೆ.

12064022a ಕರ್ಮಣಾ ವೈ ಪುರಾ ದೇವಾ ಋಷಯಶ್ಚಾಮಿತೌಜಸಃ|
12064022c ತ್ರಾತಾಃ ಸರ್ವೇ ಪ್ರಮಥ್ಯಾರೀನ್ಕ್ಷತ್ರಧರ್ಮೇಣ ವಿಷ್ಣುನಾ॥

ಹಿಂದೆ ಅಮಿತೌಜಸ ವಿಷ್ಣುವು ಕ್ಷತ್ರಧರ್ಮವನ್ನನುಸರಿಸಿಯೇ ಅರಿಗಳನ್ನು ಸದೆಬಡಿದು ಸರ್ವ ದೇವತೆಗಳನ್ನೂ ಋಷಿಗಳನ್ನೂ ಸಂರಕ್ಷಿಸುವ ಕಾರ್ಯವನ್ನೆಸಗಿದನು.

12064023a ಯದಿ ಹ್ಯಸೌ ಭಗವಾನ್ನಾಹನಿಷ್ಯದ್
ರಿಪೂನ್ಸರ್ವಾನ್ಸುಮಾನಪ್ರಮೇಯಃ|
12064023c ನ ಬ್ರಾಹ್ಮಣಾ ನ ಚ ಲೋಕಾದಿಕರ್ತಾ
ನ ಸದ್ಧರ್ಮಾ ನಾದಿಧರ್ಮಾ ಭವೇಯುಃ॥

ಒಂದುವೇಳೆ ಆ ವಸುಮಾನ ಅಪ್ರಮೇಯ ಭಗವಂತನು
ರಿಪುಗಳೆಲ್ಲರನ್ನೂ ಸಂಹರಿಸದೇ ಇದ್ದಿದ್ದರೆ ಲೋಕದ ಆದಿಕರ್ತ
ಬ್ರಹ್ಮನಾಗಲೀ, ಬ್ರಾಹ್ಮಣರಾಗಲೀ, ಸದ್ಧರ್ಮವಾಗಲೀ
ಆದಿಧರ್ಮವಾಗಲೀ ಇರುತ್ತಿರಲಿಲ್ಲ.

12064024a ಇಮಾಮುರ್ವಿಂ ನ ಜಯೇದ್ವಿಕ್ರಮೇಣ
ದೇವಶ್ರೇಷ್ಠೋಽಸೌ ಪುರಾ ಚೇದಮೇಯಃ|
12064024c ಚಾತುರ್ವರ್ಣ್ಯಂ ಚಾತುರಾಶ್ರಮ್ಯಧರ್ಮಾಃ
ಸರ್ವೇ ನ ಸ್ಯುರ್ಬ್ರಹ್ಮಣೋ ವೈ ವಿನಾಶಾತ್‌||

ದೇವಶ್ರೇಷ್ಠನು ಹಿಂದೆ ತನ್ನ ವಿಕ್ರಮದಿಂದ ಈ ಉರ್ವಿಯನ್ನು ಗೆಲ್ಲದೇ
ಇದ್ದಿದ್ದರೆ ಬ್ರಾಹ್ಮಣರ ವಿನಾಶದಿಂದಾಗಿ ಚಾತುರ್ವರ್ಣ
ಧರ್ಮಗಳಾಗಲೀ ಚತುರಾಶ್ರಮ ಧರ್ಮಗಳಾಗಲೀ ಯಾವುದೂ
ಇರುತ್ತಿರಲಿಲ್ಲ.

12064025a ದೃಷ್ಟಾ ಧರ್ಮಾಃ ಶತಧಾ ಶಾಶ್ವತೇನ
ಕ್ಷಾತ್ರೇಣ ಧರ್ಮೇಣ ಪುನಃ ಪ್ರವೃತ್ತಾಃ|[177]
12064025c ಯುಗೇ ಯುಗೇ ಹ್ಯಾದಿಧರ್ಮಾಃ ಪ್ರವೃತ್ತಾ
ಲೋಕಜ್ಯೇಷ್ಠಂ ಕ್ಷತ್ರಧರ್ಮಂ ವದಂತಿ‌‌‌

ಕ್ಷಾತ್ರಧರ್ಮದಿಂದ ಪುನಃ ಪ್ರವೃತ್ತಗೊಂಡಿರುವುದನ್ನು ನೋಡಿದ್ದೇವೆ. ಯುಗಯುಗಗಳಲ್ಲಿಯೂ ಈ ಆದಿಧರ್ಮ ಕ್ಷತ್ರಿಯಧರ್ಮವು ಹುಟ್ಟುತ್ತದೆ. ಆದುದರಿಂದ ಲೋಕದಲ್ಲಿ ಕ್ಷತ್ರಧರ್ಮವೇ ಜ್ಯೇಷ್ಠವೆಂದು ಹೇಳುತ್ತಾರೆ.

12064026a ಆತ್ಮತ್ಯಾಗಃ ಸರ್ವಭೂತಾನುಕಂಪಾ
ಲೋಕಜ್ಞಾನಂ ಮೋಕ್ಷಣಂ ಪಾಲನಂ ಚ|
12064026c ವಿಷಣ್ಣಾನಾಂ ಮೋಕ್ಷಣಂ ಪೀಡಿತಾನಾಂ
ಕ್ಷಾತ್ರೇ ಧರ್ಮೇ ವಿದ್ಯತೇ ಪಾರ್ಥಿವಾನಾಮ್‌||

ಆತ್ಮತ್ಯಾಗ, ಸರ್ವಭೂತಗಳ ಮೇಲಿನ ಅನುಕಂಪ, ಲೋಕಜ್ಞಾನ, ಪೀಡಿತರನ್ನು ಪೀಡೆಯಿಂದ ಬಿಡುಗಡೆಗೊಳಿಸುವುದು, ಇವು ಪಾರ್ಥಿವರ ಕ್ಷಾತ್ರಧರ್ಮವೆಂದು ತಿಳಿಯಲ್ಪಟ್ಟಿವೆ.

12064027a ನಿರ್ಮರ್ಯಾದಾಃ ಕಾಮಮನ್ಯುಪ್ರವೃತ್ತಾ
ಭೀತಾ ರಾಜ್ಞೋ ನಾಧಿಗಚ್ಛಂತಿ ಪಾಪಮ್‌|
12064027c ಶಿಷ್ಟಾಶ್ಚಾನ್ಯೇ ಸರ್ವಧರ್ಮೋಪಪನ್ನಾಃ
ಸಾಧ್ವಾಚಾರಾಃ ಸಾಧು ಧರ್ಮಂ ಚರಂತಿ‌‌||

ಮರ್ಯಾದೆಯಿಲ್ಲದಿರುವವರು ಮತ್ತು ಕಾಮ-ಕೋಪ ಪ್ರವೃತ್ತರಾದವರು ರಾಜನ ಭೀತಿಯಿಂದ ಪಾಪವನ್ನೆಸಗುವುದಿಲ್ಲ. ಅನ್ಯ ಶಿಷ್ಟಾಚಾರಿಗಳು ಸರ್ವಧರ್ಮ ಸಂಪನ್ನರಾಗಿ ಉತ್ತಮ ಆಚಾರ, ಸಾಧುಧರ್ಮಗಳನ್ನು ನಡೆಸುತ್ತಾರೆ.

12064028a ಪುತ್ರವತ್ಪರಿಪಾಲ್ಯಾನಿ ಲಿಂಗಧರ್ಮೇಣ[178] ಪಾರ್ಥಿವೈಃ|
12064028c ಲೋಕೇ ಭೂತಾನಿ ಸರ್ವಾಣಿ ವಿಚರಂತಿ ನ ಸಂಶಯಃ||

ಪಾರ್ಥಿವರು ಅವರ ಲಿಂಗಧರ್ಮದಿಂದ ಪ್ರಜೆಗಳನ್ನು ಪುತ್ರರಂತೆ ಪಾಲಿಸುತ್ತಾರೆ. ಆದುದರಿಂದಲೇ ಲೋಕದಲ್ಲಿ ಪ್ರಾಣಿಗಳೆಲ್ಲವೂ ನಿರ್ಭಯದಿಂದ ಸಂಚರಿಸುತ್ತವೆ ಎನ್ನುವುದರಲ್ಲಿ ಸಂಶಯವೇ ಇಲ್ಲ.

12064029a ಸರ್ವಧರ್ಮಪರಂ ಕ್ಷತ್ರಂ ಲೋಕಜ್ಯೇಷ್ಠಂ ಸನಾತನಮ್|
12064029c ಶಶ್ವದಕ್ಷರಪರ್ಯಂತಮಕ್ಷರಂ ಸರ್ವತೋಮುಖಮ್||

ಸರ್ವಧರ್ಮಗಳಿಗೂ ಶ್ರೇಷ್ಠವಾದುದು ಕ್ಷತ್ರಿಯಧರ್ಮ. ಇದು ಲೋಕದಲ್ಲಿಯೇ ಹಿರಿಯದು. ಸನಾತನವು. ಇದು ನಿತ್ಯ, ಅವಿನಾಶಿ, ಮೋಕ್ಷದಾಯಕ ಮತ್ತು ಸರ್ವತೋಮುಖ ಧರ್ಮ."

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವರ್ಣಾಶ್ರಮಧರ್ಮಕಥನೇ ಚತುಃಷಷ್ಠಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವರ್ಣಾಶ್ರಮಧರ್ಮಕಥನ ಎನ್ನುವ ಅರವತ್ನಾಲ್ಕನೇ ಅಧ್ಯಾಯವು.

೬೫

ಇಂದ್ರರೂಪಧಾರೀ ವಿಷ್ಣು ಮತ್ತು ಮಾಂಧಾತರ ಸಂವಾದ (1-35).

12065001 ಇಂದ್ರ ಉವಾಚ|
12065001a ಏವಂವೀರ್ಯಃ ಸರ್ವಧರ್ಮೋಪಪನ್ನಃ

---

[178] ರಾಜಧರ್ಮೇಣ ಎಂಬ ಪಾಠಾಂತರವಿದೆ.

ಕ್ಷಾತ್ರಃ ಶ್ರೇಷ್ಠಃ ಸರ್ವಧರ್ಮೇಷು ಧರ್ಮಃ|
12065001c ಪಾಲ್ಯೋ ಯುಷ್ಮಾಭಿರ್ಲೋಕಸಿಂಹೈರುದಾರೈರ್
ವಿಪರ್ಯಯೇ ಸ್ಯಾದಭಾವಃ ಪ್ರಜಾನಾಮ್‌||

ಇಂದ್ರನು ಹೇಳಿದನು: "ಹೀಗೆ ಕ್ಷತ್ರಧರ್ಮವು ವೀರ್ಯಯುಕ್ತವೂ, ಸರ್ವಧರ್ಮಸಂಪನ್ನವೂ, ಶ್ರೇಷ್ಠವೂ ಆಗಿದೆ. ಸರ್ವಧರ್ಮಗಳ ಧರ್ಮವಾಗಿದೆ. ಆ ಧರ್ಮವನ್ನು ನಿನ್ನಂತಹ ಲೋಕಸಿಂಹ ಉದಾರಿಗಳು ಪಾಲಿಸಬೇಕು. ವಿಪರ್ಯಾಸವಾದರೆ ಪ್ರಜೆಗಳ ನಾಶವಾಗುತ್ತದೆ.

12065002a ಭುವಃ ಸಂಸ್ಕಾರಂ[179] ರಾಜಸಂಸ್ಕಾರಯೋಗಮ್
ಅಭೈಕ್ಷಚರ್ಯಾಂ ಪಾಲನಂ ಚ ಪ್ರಜಾನಾಮ್‌|
12065002c ವಿದ್ಯಾದ್ರಾಜಾ ಸರ್ವಭೂತಾನುಕಂಪಾಂ
ದೇಹತ್ಯಾಗಂ ಚಾಹವೇ ಧರ್ಮಮಗ್ರ್ಯಮ್‌||

ಭುವ ಸಂಸ್ಕಾರ, ರಾಜಸಂಸ್ಕಾರಯೋಗ, ಭಿಕ್ಷಾಟನೆ ಮಾಡದಿರುವುದು, ಪ್ರಜೆಗಳ ಪರಿಪಾಲನೆ, ವಿಧ್ಯೆ, ಸರ್ವಭೂತಗಳ ಮೇಲೆ ಅನುಕಂಪ, ದೇಹತ್ಯಾಗ ಇವೇ ರಾಜನ ಮೊದಲ ಧರ್ಮಗಳು.

12065003a ತ್ಯಾಗಂ ಶ್ರೇಷ್ಠಂ ಮುನಯೋ ವೈ ವದಂತಿ
ಸರ್ವಶ್ರೇಷ್ಠೋ ಯಃ ಶರೀರಂ ತ್ಯಜೇತ|
12065003c ನಿತ್ಯಂ ತ್ಯಕ್ತಂ ರಾಜಧರ್ಮೇಷು ಸರ್ವಂ
ಪ್ರತ್ಯಕ್ಷಂ ತೇ ಭೂಮಿಪಾಲಾಃ ಸದೈತೇ[180]‌||

---

179 ಭೂಸಂಸ್ಕಾರಂ ಎಂಬ ಪಾಠಾಂತರವಿದೆ.

180 ನಿತ್ಯಂ ಯುಕ್ತಾ ರಾಜಧರ್ಮೇಷು ಸರ್ವೇ ಪ್ರಯಕ್ಷಂ ತೇ ಭೂಮಿಪಾಲಾ

ತ್ಯಾಗವೇ ಶ್ರೇಷ್ಠವೆಂದು ಮುನಿಗಳು ಹೇಳುತ್ತಾರೆ. ಆದರೆ ಶರೀರವನ್ನು ತ್ಯಜಿಸವುದು ಎಲ್ಲಕ್ಕಿಂತಲೂ ಶ್ರೇಷ್ಠವಾದುದು. ರಾಜಧರ್ಮದಲ್ಲಿರುವ ಭೂಮಿಪಾಲರು ನಿತ್ಯವೂ ಸರ್ವವನ್ನೂ ತ್ಯಜಿಸುತ್ತಾರೆ ಎನ್ನುವುದನ್ನು ನೀನು ಪ್ರತ್ಯಕ್ಷವಾಗಿ ನೋಡಿದ್ದೀಯೆ.

12065004a ಬಹುಶ್ರುತ್ಯಾ ಗುರುಶುಶ್ರೂಷಯಾ ವಾ
ಪರಸ್ಯ ವಾ ಸಂಹನನಾದ್ವದಂತಿ[181]|
12065004c ನಿತ್ಯಂ ಧರ್ಮಂ ಕ್ಷತ್ರಿಯೋ ಬ್ರಹ್ಮಚಾರೀ
ಚರೇದೇಕೋ ಹ್ಯಾಶ್ರಮಂ ಧರ್ಮಕಾಮಃ||

ಗುರುಶುಶ್ರೂಷೆ ಅಥವಾ ಅಧಿಕ ಅಧ್ಯಯನದಿಂದ ಅಥವಾ ಶತ್ರುಗಳ ಸಂಹಾರಗಳ ಮೂಲಕ ಕ್ಷತ್ರಿಯನು ಧರ್ಮಕಾಮನಾಗಿ ಬ್ರಹ್ಮಚರ್ಯಾಶ್ರಮವನ್ನು ಒಬ್ಬಂಟಿಗನಾಗಿ ಪಾಲಿಸಬೇಕು.

12065005a ಸಾಮಾನ್ಯಾರ್ಥೇ ವ್ಯವಹಾರೇ ಪ್ರವೃತ್ತೇ
ಪ್ರಿಯಾಪ್ರಿಯೇ ವರ್ಜಯನ್ನೇವ ಯತ್ನಾತ್|
12065005c ಚಾತುರ್ವರ್ಣ್ಯಸ್ಥಾಪನಾತ್ಪಾಲನಾಚ್ಚ
ತೈಸ್ತೈರ್ಯೋಗೈರ್ನಿಯಮೈರೌರಸೈಶ್ಚ||

ಜನಸಾಮಾನ್ಯರ ವ್ಯವಹಾರದಲ್ಲಿ ತೊಡಗಿದಾಗ ರಾಜನು ಪ್ರಿಯ-ಅಪ್ರಿಯರು ಎನ್ನುವುದನ್ನು ವರ್ಜಿಸಬೇಕು. ಉತ್ತಮ ನಿಯಮ-ಯೋಗಗಳ ಮೂಲಕ ಚಾತುರ್ವರ್ಣ್ಯದ ಸ್ಥಾಪನೆ-ಪಾಲನೆಗಳನ್ನು

ಯಥೈವ| ಎಂಬ ಪಾಠಾಂತರವಿದೆ.

[181] ಬಹುಶ್ರುತ್ಯಾ ಗುರುಶುಶ್ರೂಷಯಾ ಚ ಪರಸ್ಪರಂ ಸಂಹನನಾದ್ವದಂತಿ| ಎಂಬ ಪಾಠಾಂತರವಿದೆ.

ಮಾಡುತ್ತಿರಬೇಕು.

12065006a ಸರ್ವೋದ್ಯೋಗೈರಾಶ್ರಮಂ ಧರ್ಮಮಾಹುಃ
ಕ್ಷಾತ್ರಂ ಜ್ಯೇಷ್ಠಂ ಸರ್ವಧರ್ಮೋಪಪನ್ನಮ್|
12065006c ಸ್ವಂ ಸ್ವಂ ಧರ್ಮಂ ಯೇ ನ ಚರಂತಿ ವರ್ಣಾಸ್
ತಾಂಸ್ತಾನ್ಧರ್ಮಾನಯಥಾವದ್ವದಂತಿ||

ಎಲ್ಲ ಆಶ್ರಮಗಳಿಗಿಂತ ಗೃಹಸ್ಥಾಶ್ರಮ ಧರ್ಮವು ಶ್ರೇಷ್ಠವೆಂದೂ, ಎಲ್ಲ ಧರ್ಮಗಳಿಗಿಂತ ಕ್ಷತ್ರಿಯ ಧರ್ಮವು ಶ್ರೇಷ್ಠವೆಂದೂ ಹೇಳುತ್ತಾರ. ವರ್ಣಗಳು ತಮ್ಮ ತಮ್ಮ ಧರ್ಮವನ್ನನುಸರಿಸಲು ಕ್ಷತ್ರಧರ್ಮವೇ ಪ್ರೇರೇಪಿಸುತ್ತದೆ ಎಂದು ಹೇಳುತ್ತಾರೆ.

12065007a ನಿರ್ಮರ್ಯಾದೇ ನಿತ್ಯಮರ್ಥೇ ವಿನಷ್ಟಾನ್
ಆಹುಸ್ತಾನ್ವೈ ಪಶುಭೂತಾನ್ಮನುಷ್ಯಾನ್|
12065007c ಯಥಾ ನೀತಿಂ ಗಮಯತ್ಯರ್ಥಲೋಭಾಚ್
ಚ್ರೇಯಾಂಸ್ತಸ್ಮಾದಾಶ್ರಮಃ ಕ್ಷತ್ರಧರ್ಮಃ||

ಮರ್ಯಾದೆಗಳಿಲ್ಲದೇ ನಿತ್ಯವೂ ಅರ್ಥಸಂಗ್ರಹದಲ್ಲಿಯೇ ತೊಡಗಿರುವ ಮನುಷ್ಯರನ್ನು ಪಶುಸದೃಶರು ಎಂದು ಹೇಳುತ್ತಾರೆ. ಆದರೆ ಲೋಭದಿಂದಲ್ಲದೇ ನೀತಿಯುಕ್ತವಾಗಿ ಸಂಪತ್ತನ್ನು ಪಡೆಯುವ ರೀತಿಯನ್ನು ಕ್ಷತ್ರದರ್ಮವು ಹೇಳಿಕೊಡುತ್ತದೆಯಾದುದರಿಂದ ಕ್ಷತ್ರಧರ್ಮವೇ ಎಲ್ಲ ಆಶ್ರಮಗಳಿಗಿಂತ ಶ್ರೇಷ್ಠವಾದುದು.

12065008a ತ್ರೈವಿದ್ಯಾನಾಂ ಯಾ ಗತಿರ್ಬ್ರಾಹ್ಮಣಾನಾಂ
ಯಶ್ಚೈವೋಕ್ತೋಽಥಾಶ್ರಮೋ ಬ್ರಾಹ್ಮಣಾನಾಮ್|
12065008c ಏತತ್ಕರ್ಮ ಬ್ರಾಹ್ಮಣಸ್ಯಾಹುರಗ್ರ್ಯಮ್

ಅನ್ಯತ್ಕುರ್ವನ್ಶೂದ್ರವಚ್ಚಸ್ತ್ರವಧ್ಯಃ||

ಮೂರುವೇದಗಳನ್ನು ಅಧ್ಯಯನ ಮಾಡುವ ಬ್ರಾಹ್ಮಣರಿಗೆ ಹೇಳಿರುವ ಕರ್ಮ ಮತ್ತು ಆಶ್ರಮಗಳು ಬ್ರಾಹ್ಮಣನಾದವನ ಸರ್ವಶ್ರೇಷ್ಠ ಧರ್ಮವೆಂದು ಹೇಳಲ್ಪಟ್ಟಿದೆ. ಅನ್ಯಥಾ ನಡೆದುಕೊಳ್ಳುವ ಬ್ರಾಹ್ಮಣನು ಶೂದ್ರನಂತೆ ಮತ್ತು ವಧಿಸಲು ಯೋಗ್ಯ.

12065009a ಚಾತುರಾಶ್ರಮ್ಯಧರ್ಮಾಶ್ಚ ವೇದಧರ್ಮಾಶ್ಚ ಪಾರ್ಥಿವ|
12065009c ಬ್ರಾಹ್ಮಣೇನಾನುಗಂತವ್ಯಾ ನಾನ್ಯೋ ವಿದ್ಯಾತ್ಕಥಂ ಚನ||

ಪಾರ್ಥಿವ! ನಾಲ್ಕು ಆಶ್ರಮಧರ್ಮಗಳೂ ವೇದಧರ್ಮಗಳೂ ಬ್ರಾಹ್ಮಣರಿಗೆ ಮಾತ್ರ ತಿಳಿದವುಗಳು. ಅನ್ಯರಿಗೆ ಇವು ಎಂದೂ ತಿಳಿಯುವುದಿಲ್ಲ.

12065010a ಅನ್ಯಥಾ ವರ್ತಮಾನಸ್ಯ ನ ಸಾ ವೃತ್ತಿಃ ಪ್ರಕಲ್ಪ್ಯತೇ|
12065010c ಕರ್ಮಣಾ ವ್ಯಜ್ಯತೇ ಧರ್ಮೋ ಯಥೈವ ಶ್ವಾ ತಥೈವ ಸಃ.[182]||

ಅನ್ಯಥಾ ನಡೆದುಕೊಂಡರೆ ಅದು ಬ್ರಾಹ್ಮಣ
ವೃತ್ತಿಯೆಂದೆನಿಸಿಕೊಳ್ಳುವುದಿಲ್ಲ.

12065011a ಯೋ ವಿಕರ್ಮಸ್ಥಿತೋ ವಿಪ್ರೋ ನ ಸ ಸನ್ಮಾನಮರ್ಹತಿ|
12065011c ಕರ್ಮಸ್ವನುಪಯುಂಜಾನಮವಿಶ್ವಾಸ್ಯಂ ಹಿ ತಂ ವಿದುಃ||

ತನ್ನ ಧರ್ಮದ ವಿರುದ್ಧ ಕರ್ಮಗಳಲ್ಲಿ ನಿರತನಾಗಿರುವ ವಿಪ್ರನು

---

182 ಕರ್ಮಣಾ ವರ್ಧತೇ ಧರ್ಮೋ ಯಥಾಧರ್ಮಸ್ತಥೈವ ಸಃ| ಎಂಬ ಪಾಠಾಂತರವಿದೆ.

ಸನ್ಮಾನಕ್ಕೆ ಅರ್ಹನಲ್ಲ. ಸ್ವಧರ್ಮ-ಕರ್ಮಗಳನ್ನು
ಅನುಸರಿಸದಿರುವವನು ವಿಶ್ವಾಸಾರ್ಹನಲ್ಲವೆಂದು ವಿದ್ವಾಂಸರು
ಭಾವಿಸುತ್ತಾರೆ.

12065012a ಏತೇ ಧರ್ಮಾಃ ಸರ್ವವರ್ಣಾಶ್ಚ ವೀರೈರ್
ಉತ್ಕೃಷ್ಟವ್ಯಾಃ ಕ್ಷತ್ರಿಯೈರೇಷ ಧರ್ಮಃ|
12065012c ತಸ್ಮಾಜ್ಜ್ಯೇಷ್ಠಾ ರಾಜಧರ್ಮಾ ನ ಚಾನ್ಯೇ
ವೀರ್ಯಜ್ಯೇಷ್ಠಾ ವೀರಧರ್ಮಾ ಮತಾ ಮೇ||

ಸರ್ವವರ್ಣಗಳ ಧರ್ಮಗಳನ್ನು ವೀರ ಕ್ಷತ್ರಿಯರೇ ಮೇಲೆತ್ತುತ್ತಾರೆ.
ಇದೇ ಕ್ಷತ್ರಿಯರ ಧರ್ಮ. ಆದುದರಿಂದ ರಾಜಧರ್ಮವು
ಜ್ಯೇಷ್ಠವಾದುದು. ಬೇರೆ ಧರ್ಮಗಳಿಗೆ ಈ ಹಿರಿಮೆಯಿಲ್ಲ. ವೀರ್ಯವೇ
ಹಿರಿದಾಗಿರುವ ಈ ಧರ್ಮವು ವೀರಧರ್ಮವೆಂದು ನನ್ನ ಮತ.”

12065013 ಮಾಂಧಾತೋವಾಚ|
12065013a ಯವನಾಃ ಕಿರಾತಾ ಗಾಂಧಾರಾಶ್ಚೀನಾಃ ಶಬರಬರ್ಬರಾಃ|
12065013c ಶಕಾಸ್ತುಷಾರಾಃ ಕಹ್ವಾಶ್ಚ ಪಹ್ಲವಾಶ್ಚಾಂಧ್ರಮದ್ರಕಾಃ||
12065014a ಓಡ್ರಾಃ ಪುಲಿಂದಾ ರಮಠಾಃ ಕಾಚಾ ಮ್ಲೇಚ್ಛಾಶ್ಚ ಸರ್ವಶಃ|
12065014c ಬ್ರಹ್ಮಕ್ಷತ್ರಪ್ರಸೂತಾಶ್ಚ ವೈಶ್ಯಾಃ ಶೂದ್ರಾಶ್ಚ ಮಾನವಾಃ||

ಮಾಂಧಾತನು ಹೇಳಿದನು: “ನನ್ನ ರಾಜ್ಯದಲ್ಲಿ ಎಲ್ಲಕಡೆ ಯವನರು,
ಕಿರಾತರು, ಗಾಂಧಾರರು, ಚೀನರು, ಶಬರರು, ಬರ್ಬರರು, ಶಕರು,
ತುಷಾರರು, ಕಹ್ವರು, ಪಹ್ಲವರು, ಆಂಧ್ರರು, ಮದ್ರಕರು, ಓಡ್ರರು,
ಪುಲಿಂದರು, ರಮಠರು, ಕಾಂಬೋಜರು ಮತ್ತು ಮ್ಲೇಚ್ಛರಿದ್ದಾರೆ.
ಅವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಲ್ಲಿ ಜನಿಸಿದ

ಮಾನವರು.

12065015a ಕಥಂ ಧರ್ಮಂ ಚರೇಯುಸ್ತೇ ಸರ್ವೇ ವಿಷಯವಾಸಿನಃ|
12065015c ಮದ್ವಿಧೈಶ್ಚ ಕಥಂ ಸ್ಥಾಪ್ಯಾಃ ಸರ್ವೇ ತೇ ದಸ್ಯುಜೀವಿನಃ||

ದಸ್ಯುಗಳ ಜೀವನವನ್ನು ನಡೆಸುತ್ತಿರುವ ಆ ಎಲ್ಲ ರಾಷ್ಟ್ರವಾಸಿಗಳನ್ನು ಹೇಗೆ ಧರ್ಮದಲ್ಲಿ ನಡೆಯುವಂತೆ ಮಾಡಬಹುದು? ನನ್ನಂಥವರು ಅವರೆಲ್ಲರನ್ನು ಹೇಗೆ ಧರ್ಮದಲ್ಲಿ ತೊಡಗಿಸಬಹುದು?

12065016a ಏತದಿಚ್ಚಾಮ್ಯಹಂ ಶ್ರೋತುಂ ಭಗವಂಸ್ತದ್ಬ್ರವೀಹಿ ಮೇ|
12065016c ತ್ವಂ ಬಂಧುಭೂತೋ ಹ್ಯಸ್ಮಾಕಂ ಕ್ಷತ್ರಿಯಾಣಾಂ ಸುರೇಶ್ವರ||

ಭಗವನ್! ಸುರೇಶ್ವರ! ಇದನ್ನು ಕೇಳಲು ಬಯಸುತ್ತೇನೆ. ನನಗೆ ಹೇಳು. ನೀನು ಕ್ಷತ್ರಿಯರಾದ ನಮ್ಮ ಬಂಧುವೇ ಆಗಿರುವೆ!"

12065017 ಇಂದ್ರ ಉವಾಚ|
12065017a ಮಾತಾಪಿತ್ರೋರ್ಹಿ ಕರ್ತವ್ಯಾ ಶುಶ್ರೂಷಾ ಸರ್ವದಸ್ಯುಭಿಃ|
12065017c ಆಚಾರ್ಯಗುರುಶುಶ್ರೂಷಾ ತಥೈವಾಶ್ರಮವಾಸಿನಾಮ್||

ಇಂದ್ರನು ಹೇಳಿದನು: "ಎಲ್ಲ ದಸ್ಯುಗಳಿಗೂ ಮಾತಾ-ಪಿತೃಗಳ ಶುಶ್ರೂಷೆ, ಆಚಾರ್ಯ-ಗುರುಗಳ ಶುಶ್ರೂಷೆ ಮತ್ತು ಆಶ್ರಮವಾಸಿಗಳ ಶುಶ್ರೂಷೆಗಳು ಕರ್ತವ್ಯವಾಗಿರುತ್ತದೆ.

12065018a ಭೂಮಿಪಾಲಾನಾಂ ಚ ಶುಶ್ರೂಷಾ ಕರ್ತವ್ಯಾ ಸರ್ವದಸ್ಯುಭಿಃ|
12065018c ವೇದಧರ್ಮಕ್ರಿಯಾಶ್ಚೈವ ತೇಷಾಂ ಧರ್ಮೋ ವಿಧೀಯತೇ||

ಎಲ್ಲ ದಸ್ಯುಗಳಿಗೆ ಭೂಮಿಪಾಲರ ಶುಶ್ರೂಷೆಯೂ ಒಂದು ಕರ್ತವ್ಯವೇ. ವೇದಧರ್ಮಕ್ರಿಯೆಗಳೂ ಅವರ ಧರ್ಮವೆಂದು ತಿಳಿಸಿದ್ದಾರೆ.

12065019a ಪಿತೃಯಜ್ಞಾಸ್ತಥಾ ಕೂಪಾಃ ಪ್ರಪಾಶ್ಚ ಶಯನಾನಿ ಚ|
12065019c ದಾನಾನಿ ಚ ಯಥಾಕಾಲಂ ದ್ವಿಜೇಷು ದದ್ಯುರೇವ ತೇ||

ಪಿತೃಯಜ್ಞ, ಬಾವಿ-ಅರವಟ್ಟಿಗೆ-ಧರ್ಮಶಾಲೆಗಳ ನಿರ್ಮಾಣ,
ಯಥಾಕಾಲದಲ್ಲಿ ದ್ವಿಜರಿಗೆ ದಾನ ಇವುಗಳೂ ದಸ್ಯುಗಳ
ಕರ್ತ್ಯವ್ಯಗಳಾಗಿವೆ.

12065020a ಅಹಿಂಸಾ ಸತ್ಯಮಕ್ರೋಧೋ ವೃತ್ತಿದಾಯಾನುಪಾಲನಮ್|
12065020c ಭರಣಂ ಪುತ್ರದಾರಾಣಾಂ ಶೌಚಮದ್ರೋಹ ಏವ ಚ||
12065021a ದಕ್ಷಿಣಾ ಸರ್ವಯಜ್ಞಾನಾಂ ದಾತವ್ಯಾ ಭೂತಿಮಿಚ್ಚತಾ|
12065021c ಪಾಕಯಜ್ಞಾ ಮಹಾಹಾರ್ಹಾಶ್ಚ ಕರ್ತವ್ಯಾಃ ಸರ್ವದಸ್ಯುಭಿಃ||

ಅಹಿಂಸೆ, ಸತ್ಯ, ಅಕ್ರೋಧ, ದಾಯಾದ ವೃತ್ತಿಯನ್ನು ಪಾಲಿಸುವುದು,
ಪತ್ನಿ-ಮಕ್ಕಳ ಪೋಷಣೆ, ಶೌಚ, ಅದ್ರೋಹ, ಶ್ರೇಯಸ್ಸನ್ನು
ಬಯಸುವವನು ಸರ್ವಯಜ್ಞಗಳಲ್ಲಿ ದಕ್ಷಿಣೆಗಳನ್ನು ನೀಡುವುದು,
ಭೂರಿದಕ್ಷಿಣಾಯುಕ್ತವಾದ ಪಾಕಯಜ್ಞ ಇವು ಸರ್ವದಸ್ಯುಗಳ
ಕರ್ತವ್ಯಗಳಾಗಿವೆ.

12065022a ಏತಾನ್ಯೇವಂಪ್ರಕಾರಾಣಿ ವಿಹಿತಾನಿ ಪುರಾನಘ|
12065022c ಸರ್ವಲೋಕಸ್ಯ ಕರ್ಮಾಣಿ ಕರ್ತವ್ಯಾನೀಹ ಪಾರ್ಥಿವ||

ಅನಘ! ಪಾರ್ಥಿವ! ಈ ಪ್ರಕಾರವಾಗಿ ಸರ್ವಲೋಕದ ಕರ್ಮ-
ಕರ್ತವ್ಯಗಳು ಮೊದಲೇ ವಿಹಿತಗೊಂಡಿವೆ.”

12065023 ಮಾಂಧಾತೋವಾಚ|
12065023a ದೃಶ್ಯಂತೇ ಮಾನವಾ ಲೋಕೇ ಸರ್ವವರ್ಣೇಷು ದಸ್ಯವಃ|
12065023c ಲಿಂಗಾಂತರೇ ವರ್ತಮಾನಾ ಆಶ್ರಮೇಷು ಚತುರ್ಷ್ವಪಿ||

ಮಾಂಧಾತನು ಹೇಳಿದನು: “ಮಾನವ ಲೋಕದಲ್ಲಿ
ಸರ್ವವರ್ಣಗಳಲ್ಲಿಯೂ ದಸ್ಯುಗಳು ಕಂಡುಬರುತ್ತಾರೆ. ನಾಲ್ಕೂ
ಆಶ್ರಮಗಳಲ್ಲಿಯೂ ಅವರು ಮರೆಮಾಚಿ ನಡೆದುಕೊಳ್ಳುತ್ತಾರೆ.”

12065024 ಇಂದ್ರ ಉವಾಚ|
12065024a ವಿನಷ್ಟಾಯಾಂ ದಂಡನೀತೌ ರಾಜಧರ್ಮೇ ನಿರಾಕೃತೇ|
12065024c ಸಂಪ್ರಮುಹ್ಯಂತಿ ಭೂತಾನಿ ರಾಜದೌರಾತ್ಮ್ಯತೋ ನೃಪ||

ಇಂದ್ರನು ಹೇಳಿದನು: “ರಾಜನ ದೌರಾತ್ಮ್ಯದಿಂದ ದಂಡನೀತಿಯು
ನಶಿಸುತ್ತದೆ. ರಾಜಧರ್ಮವು ನಡೆಯದೇ ಇದ್ದಾಗ ಜೀವಿಗಳು
ಭ್ರಾಂತಿಗೊಳಗಾಗುತ್ತವೆ.

12065025a ಅಸಂಖ್ಯಾತಾ ಭವಿಷ್ಯಂತಿ ಭಿಕ್ಷವೋ ಲಿಂಗಿನಸ್ತಥಾ|
12065025c ಆಶ್ರಮಾಣಾಂ ವಿಕಲ್ಪಾಶ್ಚ ನಿವೃತ್ತೇಽಸ್ಮಿನ್ ಕೃತೇ ಯುಗೇ||

ಈ ಕೃತಯುಗವು ಕಳೆದ ನಂತರ ನಾನಾವೇಷ ಧಾರೀ ಅಸಂಖ್ಯಾತ
ಸಂನ್ಯಾಸಿಗಳು ಹುಟ್ಟಿಕೊಳ್ಳುತ್ತಾರೆ. ಆಶ್ರಮಗಳೂ ವಿಕಲ್ಪಗೊಳ್ಳುತ್ತವೆ.

12065026a ಅಶ್ರಣ್ವಾನಾಃ ಪುರಾಣಾನಾಂ ಧರ್ಮಾಣಾಂ ಪ್ರವರಾ ಗತೀಃ|
12065026c ಉತ್ಪಥಂ ಪ್ರತಿಪತ್ಸ್ಯಂತೇ ಕಾಮಮನ್ಯುಸಮೀರಿತಾಃ||

ಶ್ರೇಯಸ್ಕರ ಮಾರ್ಗವಾದ ಪುರಾಣಧರ್ಮಗಳನ್ನು ಅವರು ಕೇಳದೇ
ಕಾಮ-ಕ್ರೋಧಗಳಿಂದ ಪ್ರೇರಿತರಾಗಿ ಬೇರೆಯೇ ದಾರಿಯನ್ನು
ಹಿಡಿಯುತ್ತಾರೆ.

12065027a ಯದಾ ನಿವರ್ತ್ಯತೇ ಪಾಪೋ ದಂಡನೀತ್ಯಾ ಮಹಾತ್ಮಭಿಃ|
12065027c ತದಾ ಧರ್ಮೋ ನ ಚಲತೇ ಸದ್ಭೃತಃ ಶಾಶ್ವತಃ ಪರಃ||

ಮಹಾತ್ಮರು ದಂಡನೀತಿಯಿಂದ ಪಾಪವನ್ನು ತಡೆಯುವವರೆಗೆ
ಶಾಶ್ವತವಾದ ಪರಮ ಧರ್ಮವು ಒಳ್ಳೆಯದಾಗಿ ನಡೆಯುತ್ತಿರುತ್ತಿದೆ.

12065028a ಪರಲೋಕಗುರುಂ ಚೈವ ರಾಜಾನಂ ಯೋಽವಮನ್ಯತೇ|
12065028c ನ ತಸ್ಯ ದತ್ತಂ ನ ಹುತಂ ನ ಶ್ರಾದ್ಧಂ ಫಲತಿ ಕ್ವ ಚಿತ್||

ಪರಲೋಕಗುರುವಾದ ರಾಜನನ್ನು ಅಪಮಾನಿಸುವವನ
ದಾನವಾಗಲೀ, ಯಜ್ಞವಾಗಲೀ ಮತ್ತು ಶ್ರಾದ್ಧವಾಗಲೀ
ಫಲಗಳನ್ನೀಡುವುದಿಲ್ಲ.

12065029a ಮಾನುಷಾಣಾಮಧಿಪತಿಂ ದೇವಭೂತಂ ಸನಾತನಮ್|
12065029c ದೇವಾಶ್ಚ ಬಹು ಮನ್ಯಂತೇ ಧರ್ಮಕಾಮಂ ನರೇಶ್ವರಮ್[183]||

ಮನುಷ್ಯರ ಅಧಿಪತಿ ಸನಾತನ ದೇವಸಂಭೂತ ಧರ್ಮಕಾಮ
ನರೇಶ್ವರನನ್ನು ದೇವತೆಗಳೂ ಕೂಡ ಬಹಳವಾಗಿ ಮನ್ನಿಸುತ್ತಾರೆ.

12065030a ಪ್ರಜಾಪತಿರ್ಹಿ ಭಗವಾನ್ಯಃ ಸರ್ವಮಸೃಜಜ್ಜಗತ್|
12065030c ಸ ಪ್ರವೃತ್ತಿನಿವೃತ್ತ್ಯರ್ಥಂ ಧರ್ಮಾಣಾಂ ಕ್ಷತ್ರಮಿಚ್ಚತಿ||

ಭಗವಾನ್ ಪ್ರಜಾಪತಿಯು ಈ ಸರ್ವ ಜಗತ್ತನ್ನೂ ಸೃಷ್ಟಿಸಿದನು.
ಅವನು ಧರ್ಮಗಳ ಪ್ರವೃತ್ತಿ-ನಿವೃತ್ತಿಗಳ ಸಲುವಾಗಿ ಕ್ಷತ್ರಧರ್ಮವನ್ನು
ಇಚ್ಛಿಸಿದನು.

12065031a ಪ್ರವೃತ್ತಸ್ಯ ಹಿ ಧರ್ಮಸ್ಯ ಬುದ್ಧ್ಯಾ ಯಃ ಸ್ಮರತೇ ಗತಿಮ್|
12065031c ಸ ಮೇ ಮಾನ್ಯಶ್ಚ ಪೂಜ್ಯಶ್ಚ ತತ್ರ ಕ್ಷತ್ರಂ ಪ್ರತಿಷ್ಠಿತಮ್||

---

183 ದೇವಾಪಿ ನಾವಮನ್ಯಂತೇ ಧರ್ಮಕಾಮಂ ನರೇಶ್ವರಮ್| (ಗೀತಾ ಪ್ರೆಸ್).

ಬುದ್ಧಿಪೂರ್ವಕವಾಗಿ ಧರ್ಮದ ಪ್ರವೃತ್ತಿಯನ್ನೇ ಸ್ಮರಿಸಿವವನು ನನಗೆ ಮಾನ್ಯನೂ ಪೂಜ್ಯನೂ ಆಗುತ್ತಾನೆ. ಅದರಲ್ಲಿಯೇ ಕ್ಷತ್ರಧರ್ಮವು ಪ್ರತಿಷ್ಠಿತಗೊಂಡಿದೆ.””

12065032 ಭೀಷ್ಮ ಉವಾಚ|
12065032a ಏವಮುಕ್ತ್ವಾ ಸ ಭಗವಾನ್ಮರುದ್ಗಣವೃತಃ ಪ್ರಭುಃ|
12065032c ಜಗಾಮ ಭವನಂ ವಿಷ್ಣುರಕ್ಷರಂ ಪರಮಂ ಪದಮ್||

ಭೀಷ್ಮನು ಹೇಳಿದನು: “ಹೀಗೆ ಹೇಳಿ ಆ ಭಗವಾನ್ ಪ್ರಭುವು ಮರುದ್ಗಣಗಳಿಂದ ಸುತ್ತುವರೆಯಲ್ಪಟ್ಟು ಪರಮ ಪದ ಅಕ್ಷರ ವಿಷ್ಣುವಿನ ಭವನಕ್ಕೆ ತೆರಳಿದನು.

12065033a ಏವಂ ಪ್ರವರ್ತಿತೇ ಧರ್ಮೇ ಪುರಾ ಸುಚರಿತೇಽನಘ|
12065033c ಕಃ ಕ್ಷತ್ರಮವಮನ್ಯೇತ ಚೇತನಾವಾನ್ಬಹುಶ್ರುತಃ||

ಅನಘ! ಹಿಂದೆ ಹೀಗೆ ಸುಚರಿತ ಧರ್ಮವು ನಡೆಯುತ್ತಿರಲು ಬಹುಶ್ರುತ ಚೇತನಾವಂತನಾದ ಯಾರುತಾನೇ ಕ್ಷತ್ರಧರ್ಮವನ್ನು ಅಪಮಾನಿಸುತ್ತಾರೆ?

12065034a ಅನ್ಯಾಯೇನ ಪ್ರವೃತ್ತಾನಿ ನಿವೃತ್ತಾನಿ ತಥೈವ ಚ|
12065034c ಅಂತರಾ ವಿಲಯಂ ಯಾಂತಿ ಯಥಾ ಪಥಿ ವಿಚಕ್ಷುಷಃ||

ಧರ್ಮಗಳ ಪ್ರವೃತ್ತಿ-ನಿವೃತ್ತಿಗಳ ಈ ಕ್ಷತ್ರಧರ್ಮವನ್ನು ಅನ್ಯಾಯವಾಗಿ ತೊರೆದವನು ಕುರುಡನಂತೆ ಮಧ್ಯದಲ್ಲಿಯೇ ವಿನಾಶವನ್ನು ಹೊಂದುತ್ತಾನೆ.

12065035a ಆದೌ ಪ್ರವರ್ತಿತೇ ಚಕ್ರೇ ತಥೈವಾದಿಪರಾಯಣೇ|

12065035c ವರ್ತಸ್ವ ಪುರುಷವ್ಯಾಘ್ರ ಸಂವಿಜಾನಾಮಿ ತೇಽನಘ||

ಪುರುಷವ್ಯಾಘ್ರ! ಅನಘ! ಹಿಂದೆಯೇ ಪ್ರಾರಂಭಿಸಲ್ಪಟ್ಟ ಮತ್ತು ಮೊದಲಿನಿಂದಲೂ ಆಶ್ರಯಭೂತವಾದ ರಾಜಧರ್ಮದ ಚಕ್ರದಂತೆ ನಡೆದುಕೋ! ನಿನ್ನನ್ನು ನಾನು ಅರಿತುಕೊಂಡಿದ್ದೇನೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಇಂದ್ರಮಾಂಧಾತೃಸಂವಾದೇ ಪಂಚಷಷ್ಟಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಇಂದ್ರಮಾಂಧಾತೃಸಂವಾದ ಎನ್ನುವ ಅರವತ್ತೈದನೇ ಅಧ್ಯಾಯವು.

೬೬

ರಾಜಧರ್ಮವನ್ನು ಪಾಲಿಸುವದರಿಂದ ನಾಲ್ಕೂ ಆಶ್ರಮಗಳ ಫಲಗಳು ದೊರಯುವ ಕಥನ (1-37).

12066001 ಯುಧಿಷ್ಠಿರ ಉವಾಚ|
12066001a ಶ್ರುತಾ ಮೇ ಕಥಿತಾಃ ಪೂರ್ವೈಶ್ಚತ್ವಾರೋ ಮಾನವಾಶ್ರಮಾಃ|
12066001c ವ್ಯಾಖ್ಯಾನಮೇಷಾಮಾಚಕ್ಷ್ವ ಪೃಚ್ಚತೋ ಮೇ ಪಿತಾಮಹ||

ಯುಧಿಷ್ಠಿರನು ಹೇಳಿದನು: “ಪಿತಾಮಹ! ಈ ಹಿಂದೆ ನೀನು ಹೇಳಿದ ನಾಲ್ಕು ಮಾನವಾಶ್ರಮಗಳ ಕುರಿತು ನಾನು ಕೇಳಿದೆ. ಈಗ ನನಗೆ ಅವುಗಳ ವ್ಯಾಖ್ಯಾನಗಳನ್ನು ಹೇಳು. ನಾನು ಕೇಳುತ್ತಿದ್ದೇನೆ.”

12066002 ಭೀಷ್ಮ ಉವಾಚ|
12066002a ವಿದಿತಾಃ ಸರ್ವ ಏವೇಹ ಧರ್ಮಾಸ್ತವ ಯುಧಿಷ್ಠಿರ|

12066002c ಯಥಾ ಮಮ ಮಹಾಬಾಹೋ ವಿದಿತಾಃ ಸಾಧುಸಂಮತಾಃ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ಮಹಾಬಾಹೋ!
ಸಾಧುಸಮ್ಮತವಾದ ಈ ಧರ್ಮಗಳು ನನಗೆ ಹೇಗೆ ತಿಳಿದಿವೆಯೋ
ಹಾಗೆ ನಿನಗೂ ಕೂಡ ತಿಳಿದಿವೆ.

12066003a ಯತ್ತು ಲಿಂಗಾಂತರಗತಂ ಪೃಚ್ಚಸೇ ಮಾಂ ಯುಧಿಷ್ಠಿರ|
12066003c ಧರ್ಮಂ ಧರ್ಮಭೃತಾಂ ಶ್ರೇಷ್ಠ ತನ್ನಿಬೋಧ ನರಾಧಿಪ||

ಯುಧಿಷ್ಠಿರ! ನರಾಧಿಪ! ಧರ್ಮಭೃತರಲ್ಲಿ ಶ್ರೇಷ್ಠ! ಬೇರೆಯೇ
ಚಿಹ್ನೆಗಳನ್ನು ಧರಿಸಿರುವ ಧರ್ಮಗಳ ಕುರಿತು ನನ್ನನ್ನು ಕೇಳುತ್ತಿದ್ದೀಯೆ.
ಅದನ್ನು ಕೇಳು.

12066004a ಸರ್ವಾಣ್ಯೇತಾನಿ ಕೌಂತೇಯ ವಿದ್ಯಂತೇ ಮನುಜರ್ಷಭ|
12066004c ಸಾಧ್ವಾಚಾರಪ್ರವೃತ್ತಾನಾಂ ಚಾತುರಾಶ್ರಮ್ಯಕರ್ಮಣಾಮ್||

ಕೌಂತೇಯ! ಮನುಜರ್ಷಭ! ಇವೆಲ್ಲವೂ ಉತ್ತಮ
ಆಚಾರಪ್ರವೃತ್ತರಾಗಿರುವ ಮತ್ತು ನಾಲ್ಕು ಆಶ್ರಮಕರ್ಮಿಗಳಾದ
ಸಾಧುಗಳಿಗೆ ತಿಳಿದಿರುತ್ತವೆ.

12066005a ಅಕಾಮದ್ವೇಷಯುಕ್ತಸ್ಯ ದಂಡನೀತ್ಯಾ ಯುಧಿಷ್ಠಿರ|
12066005c ಸಮೇಕ್ಷಿಣಶ್ಚ ಭೂತೇಷು ಭೈಕ್ಷಾಶ್ರಮಪದಂ ಭವೇತ್||

ಯುಧಿಷ್ಠಿರ! ಕಾಮ-ದ್ವೇಷರಹಿತನಾಗಿ ದಂಡನೀತಿಯನ್ನನುಸರಿಸಿ,
ಸರ್ವಭೂತಗಳನ್ನೂ ಸಮದೃಷ್ಟಿಯಿಂದ ಕಾಣುವ ರಾಜನಿಗೂ ಕೂಡ
ಭೈಕ್ಷಾಶ್ರಮದ (ಸಂನ್ಯಾಸಾಶ್ರಮದ) ಫಲವು ದೊರೆಯುತ್ತದೆ.

12066006a ವೇತ್ತ್ಯಾದಾನವಿಸರ್ಗಂ ಯೋ ನಿಗ್ರಹಾನುಗ್ರಹೌ ತಥಾ|

12066006c ಯಥೋಕ್ತವೃತ್ತೇರ್ವಿರಸ್ಯ ಕ್ಷೇಮಾಶ್ರಮಪದಂ ಭವೇತ್‌||

ದಾನ ಮತ್ತು ತ್ಯಾಗಗಳನ್ನು ತಿಳಿದುಕೊಂಡಿರುವ, ಇಂದ್ರಿಯನಿಗ್ರಹ ಮತ್ತು ಜೀವಿಗಳಿಗೆ ಅನುಗ್ರಹ ಇವುಗಳ ಕುರಿತು ತಿಳಿದುಕೊಂಡಿರುವ, ಮತ್ತು ಮೊದಲು ಹೇಳಿದಂತೆ ನಡೆದುಕೊಳ್ಳುವ ವೀರನಿಗೆ ಕ್ಷೇಮಾಶ್ರಮದ (ಗೃಹಸ್ಥಾಶ್ರಮದ) ಫಲವು ದೊರೆಯುತ್ತದೆ.

[184]12066007a ಜ್ಞಾತಿಸಂಬಂಧಿಮಿತ್ರಾಣಿ ವ್ಯಾಪನ್ನಾನಿ ಯುಧಿಷ್ಠಿರ|
12066007c ಸಮಭ್ಯುದ್ಧರಮಾಣಸ್ಯ ದೀಕ್ಷಾಶ್ರಮಪದಂ ಭವೇತ್‌||

ಯುಧಿಷ್ಠಿರ! ಸಂಕಟದಲ್ಲಿರುವ ದಾಯಾದಿಗಳನ್ನೂ, ಸಂಬಂಧಿಗಳನ್ನೂ ಮತ್ತು ಮಿತ್ರರನ್ನೂ ಉದ್ಧರಿಸುವ ಕ್ಷತ್ರಿಯನಿಗೆ ದೀಕ್ಷಾಶ್ರಮದ (ವಾನಪ್ರಸ್ಥಾನಾಶ್ರಮದ) ಫಲವು ಲಭಿಸುತ್ತದೆ.

[185]12066008a ಆಹ್ನಿಕಂ ಭೂತಯಜ್ಞಾಂಶ್ಚ ಪಿತೃಯಜ್ಞಾಂಶ್ಚ ಮಾನುಷಾನ್‌|

---

[184] ಇದಕ್ಕೆ ಮೊದಲು ಭಾರತದರ್ಶನದಲ್ಲಿ ಈ ಶ್ಲೋಕವಿದೆ: ಅರ್ಹಾನ್‌ ಪೂಜಯತೋ ನಿತ್ಯಂ ಸಂವಿಭಾಗೇನ ಪಾಂಡವ| ಸರ್ವತಸ್ತಸ್ಯ ಕೌಂತೇಯ ಭೈಕ್ಷಾಶ್ರಮಪದಂ ಭವೇತ್‌|| ಅರ್ಥಾತ್‌ ಪಾಂಡವ! ಕೌಂತೇಯ! ಪೂಜಾರ್ಹರನ್ನು ಅವರ ಅಭೀಷ್ಟ ವಸ್ತುಪ್ರದಾನಗಳಿಂದ ನಿತ್ಯವೂ ಸನ್ಮಾನಿಸುವ ಕ್ಷತ್ರಿಯನಿಗೆ ಬ್ರಹ್ಮಚರ್ಯಾಶ್ರಮಿಯ ಫಲವು ಲಭಿಸುತ್ತದೆ.

[185] ಭಾರತ ದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕವಿದೆ: ಲೋಕಮುಖ್ಯೇಷ ಸತ್ಕಾರಂ ಲಿಂಗಮುಖ್ಯೇಷು ಚಾಸಕೃತ್‌| ಕುರ್ವತಸ್ತಸ್ಯ ಕೌಂತೇಯ ವನ್ಯಾಶ್ರಮಪದಂ ಭವೇತ್‌|| ಅರ್ಥಾತ್‌ ಲೋಕದ ಶ್ರೇಷ್ಠರಿಗೂ, ವರ್ಣಾಶ್ರಮಧರ್ಮಿಗಳಿಗೂ ನಿರಂತರ ಸತ್ಕರಿಸುವ ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮದ ಫಲವು ಲಭಿಸುತ್ತದೆ.

12066008c ಕುರ್ವತಃ ಪಾರ್ಥ ವಿಪುಲಾನ್ವನ್ಯಾಶ್ರಮಪದಂ ಭವೇತ್॥

ಪಾರ್ಥ! ಆಹ್ನಿಕ, ಭೂತಯಜ್ಞ, ಪಿತೃಯಜ್ಞ ಮತ್ತು ಮನುಷ್ಯಯಜ್ಞಗಳನ್ನು ಮಾಡುವ ಕ್ಷತ್ರಿಯನಿಗೆ ವನ್ಯಾಶ್ರಮದ (ವಾನಪ್ರಸ್ಥಾಶ್ರಮದ) ಫಲವು ಲಭಿಸುತ್ತದೆ.

[186]12066009a ಪಾಲನಾತ್ಸರ್ವಭೂತಾನಾಂ ಸ್ವರಾಷ್ಟ್ರಪರಿಪಾಲನಾತ್।
12066009c ದೀಕ್ಷಾ ಬಹುವಿಧಾ ರಾಜ್ಞೋ ವನ್ಯಾಶ್ರಮಪದಂ ಭವೇತ್॥

ಸರ್ವಭೂತಗಳ ಪಾಲನೆಯಿಂದ, ಸ್ವರಾಷ್ಟ್ರದ ಪರಿಪಾಲನೆಯಿಂದ, ಮತ್ತು ಬಹುವಿಧದ ಯಜ್ಞದೀಕ್ಷೆಗಳನ್ನು ಕೈಗೊಳ್ಳುವುದರಿಂದ ರಾಜನಿಗೆ ವಾನಪ್ರಸ್ಥಾಶ್ರಮದ ಫಲವು ಲಭಿಸುತ್ತದೆ.

12066010a ವೇದಾಧ್ಯಯನನಿತ್ಯತ್ವಂ ಕ್ಷಮಾಥಾಚಾರ್ಯಪೂಜನಮ್।
12066010c ತಥೋಪಾಧ್ಯಾಯಶುಶ್ರೂಷಾ ಬ್ರಹ್ಮಾಶ್ರಮಪದಂ ಭವೇತ್॥

ನಿತ್ಯವೇದಾಧ್ಯಯನ, ಕ್ಷಮೆ, ಆಚಾರ್ಯಪೂಜನ, ಮತ್ತು

---

[186] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಎರಡು ಶ್ಲೋಕಗಳಿವೆ: (೧) ಸಂವಿಭಾಗೇನ ಭೂತಾನಾಮತಿಥೀನಾಂ ತಥಾರ್ಚನಾತ್। ದೇವಯಜ್ಞೈಶ್ಚ ರಾಜೇಂದ್ರ ವನ್ಯಾಶ್ರಮಪದಂ ಭವೇತ್॥ ಅರ್ಥಾತ್ ರಾಜೇಂದ್ರ! ಯಥಾಭಾಗವಾಗಿ ಪ್ರಾಣಿಗಳು ಮತ್ತು ಅತಿಥಿಗಳ ಅರ್ಚನೆಯಿಂದ ಮತ್ತು ದೇವಯಜ್ಞಗಳಿಂದ ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮದ ಫಲವು ಲಭಿಸುತ್ತದೆ. (೨) ಮರ್ದನಂ ಪರರಾಷ್ಟ್ರಾಣಾಂ ಶಿಷ್ಟಾರ್ಥಂ ಸತ್ಯವಿಕ್ರಮ। ಕುರ್ವತಃ ಪುರುಷವ್ಯಾಘ್ರ ವನ್ಯಾಶ್ರಮಪದಂ ಲಭೇತ್॥ ಅರ್ಥಾತ್ ಸತ್ಯವಿಕ್ರಮ! ಪುರುಷವ್ಯಾಘ್ರ! ಶಿಷ್ಟಾಚಾರಗಳನ್ನು ಸ್ಥಾಪಿಸಲೋಸುಗ ಪರರಾಷ್ಟ್ರಗಳನ್ನು ಸದೆಬಡಿಯುವುದರಿಂದ ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮದ ಫಲವು ಲಭಿಸುತ್ತದೆ.

ಉಪಾಧ್ಯಾಯಶುಶ್ರೂಷೆಯಿಂದ ಕ್ಷತ್ರಿಯನಿಗೆ ಬ್ರಹ್ಮಾಶ್ರಮಿಯ (ಸಂನ್ಯಾಸಿಯ) ಫಲವು ಲಭಿಸುತ್ತದೆ.

[187]12066011a ಅಜಿಹ್ಮಮಶಠಂ ಮಾರ್ಗಂ ಸೇವಮಾನಸ್ಯ ಭಾರತ|
12066011c ಸರ್ವದಾ ಸರ್ವಭೂತೇಷು ಬ್ರಹ್ಮಾಶ್ರಮಪದಂ ಭವೇತ್||

ಭಾರತ! ಸರ್ವಭೂತಗಳೊಂದಿಗೂ ಯಾವಾಗಲೂ ಋಜುತ್ವದಿಂದ ಮತ್ತು ನಿಷ್ಕಪಟತೆಯಿಂದ ವರ್ತಿಸುವ ಕ್ಷತ್ರಿಯನು ಸಂನ್ಯಾಸಾಶ್ರಮಿಯ ಫಲವನ್ನು ಪಡೆಯುತ್ತಾನೆ.

12066012a ವಾನಪ್ರಸ್ಥೇಷು ವಿಪ್ರೇಷು ತ್ರೈವಿದ್ಯೇಷು ಚ ಭಾರತ|
12066012c ಪ್ರಯಚ್ಚತೋಽರ್ಥಾನ್ವಿಪುಲಾನ್ವನ್ಯಾಶ್ರಮಪದಂ ಭವೇತ್||

ಭಾರತ! ವಾನಪ್ರಸ್ಥದಲ್ಲಿರುವ ಮತ್ತು ಮೂರುವೇದಗಳನ್ನು ತಿಳಿದಿರುವ ವಿಪ್ರರಿಗೆ ವಿಪುಲ ಧನವನ್ನು ದಾನಮಾಡುವ ಕ್ಷತ್ರಿಯನಿಗೆ ವಾನಪ್ರಸ್ಥಾಶ್ರಮದ ಫಲವು ದೊರೆಯುತ್ತದೆ.

---

[187] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಎರಡು ಶ್ಲೋಕಗಳಿವೆ: (೧) ಆಹ್ನಿಕಂ ಜಪಮಾನಸ್ಯ ದೇವಾನ್ ಪೂಜಯತೇ ಸದಾ| ಧರ್ಮೇಣ ಪುರುಷವ್ಯಾಘ್ರ ಧರ್ಮಾಶ್ರಮಪದಂ ಭವೇತ್|| ಅರ್ಥಾತ್ ಸದಾ ಅಹ್ನೀಕ-ಜಪಗಳನ್ನು ಮಾಡುವ ಮತ್ತು ಧರ್ಮಪೂರ್ವಕವಾಗಿ ದೇವತೆಗಳನ್ನು ಪೂಜಿಸುವ ಕ್ಷತ್ರಿಯನಿಗೆ ಗೃಹಸ್ಥಾಶ್ರಮಿಯ ಫಲವು ಲಭಿಸುತ್ತದೆ. (೨) ಮೃತ್ಯುರ್ವಾ ರಕ್ಷಣಂ ವೇತಿ ಯಸ್ಯ ರಾಜ್ಞೋ ವಿನಿಶ್ಚಯಃ| ಪ್ರಾಣದ್ಯೂತೇ ತತಸ್ತಸ್ಯ ಬ್ರಹ್ಮಾಶ್ರಮಪದಂ ಭವೇತ್|| ಅರ್ಥಾತ್ ಮೃತ್ಯು ಅಥವಾ ರಾಷ್ಟ್ರರಕ್ಷಣೆ ಎಂದು ನಿಶ್ಚಯಿಸಿ ಪ್ರಾಣವನ್ನೇ ಪಣವನ್ನಾಗಿಟ್ಟು ಯುದ್ಧಮಾಡುವ ಕ್ಷತ್ರಿಯನಿಗೆ ಸಂನ್ಯಾಸಾಶ್ರಮಿಯ ಫಲವು ಲಭಿಸುತ್ತದೆ.

12066013a ಸರ್ವಭೂತೇಷ್ವನುಕ್ರೋಶಂ ಕುರ್ವತಸ್ತಸ್ಯ ಭಾರತ|
12066013c ಆನೃಶಂಸ್ಯಪ್ರವೃತ್ತಸ್ಯ ಸರ್ವಾವಸ್ಥಂ ಪದಂ ಭವೇತ್||

ಭಾರತ! ಸರ್ವಭೂತಗಳ ಕುರಿತೂ ಅನುಕಂಪ ತೋರಿಸುವ ಮತ್ತು ಕ್ರೂರನಾಗಿ ವರ್ತಿಸದ ಅವನಿಗೆ ಎಲ್ಲ ಆಶ್ರಮಗಳ ಫಲವು ದೊರೆಯುತ್ತದೆ.

12066014a ಬಾಲವೃದ್ಧೇಷು ಕೌರವ್ಯ ಸರ್ವಾವಸ್ಥಂ ಯುಧಿಷ್ಠಿರ|
12066014c ಅನುಕ್ರೋಶಂ ವಿದಧತಃ ಸರ್ವಾವಸ್ಥಂ ಪದಂ ಭವೇತ್||

ಕೌರವ್ಯ! ಯುಧಿಷ್ಠಿರ! ಎಲ್ಲ ಸಮಯಗಳಲ್ಲಿಯೂ ಬಾಲಕ-ವೃದ್ಧರ ಕುರಿತು ಅನುಕಂಪ ತೋರಿಸುವ ಕ್ಷತ್ರಿಯನಿಗೆ ಎಲ್ಲ ಆಶ್ರಮಗಳ ವಿವಿಧ ಫಲಗಳೂ ದೊರೆಯುತ್ತವೆ.

12066015a ಬಲಾತ್ಕೃತೇಷು ಭೂತೇಷು ಪರಿತ್ರಾಣಂ ಕುರೂದ್ವಹ|
12066015c ಶರಣಾಗತೇಷು ಕೌರವ್ಯ ಕುರ್ವನ್ಗಾರ್ಹಸ್ಥ್ಯಮಾವಸೇತ್||

ಕರೂದ್ವಹ! ಕೌರವ್ಯ! ಬಲಾತ್ಕಾರಕ್ಕೊಳಗಾದ ಮತ್ತು ಶರಣಾಗತರ ಸಂರಕ್ಷಣೆ ಮಾಡುತ್ತಾ ಕ್ಷತ್ರಿಯನು ಗೃಹಸ್ಥಾಶ್ರಮದಲ್ಲಿರಬೇಕು.

12066016a ಚರಾಚರಾಣಾಂ ಭೂತಾನಾಂ ರಕ್ಷಾಮಪಿ ಚ ಸರ್ವಶಃ|
12066016c ಯಥಾರ್ಹಪೂಜಾಂ ಚ ಸದಾ ಕುರ್ವನ್ಗಾರ್ಹಸ್ಥ್ಯಮಾವಸೇತ್||

ಸದಾ ಎಲ್ಲಕಡೆ ಚರಾಚರ ಭೂತಗಳ ರಕ್ಷಣೆ ಮತ್ತು ಯಥಾರ್ಹವಾಗಿ ಪೂಜೆಗಳನ್ನು ಮಾಡುತ್ತಾ ಕ್ಷತ್ರಿಯನು ಗೃಹಸ್ಥಾಶ್ರಮದಲ್ಲಿರಬೇಕು.

12066017a ಜ್ಯೇಷ್ಠಾನುಜ್ಯೇಷ್ಠಪತ್ನೀನಾಂ ಭ್ರಾತೄಣಾಂ ಪುತ್ರನಪ್ತೄಣಾಮ್|
12066017c ನಿಗ್ರಹಾನುಗ್ರಹೌ ಪಾರ್ಥ ಗಾರ್ಹಸ್ಥ್ಯಮಿತಿ ತತ್ತಪಃ||

ಪಾರ್ಥ! ಹಿರಿಯ ಪತ್ನಿಯಾಗಲೀ, ಕಿರಿಯ ಪತ್ನಿಯಾಗಲೀ, ಸಹೋದರರಾಗಲೀ, ಮಕ್ಕಳು-ಮೊಮ್ಮಕ್ಕಳಾಗಲೀ ಅವರಿಗೆ ನಿಗ್ರಹ-ಅನುಗ್ರಹಗಳನ್ನು ಮಾಡುತ್ತಿರಬೇಕು. ಇದೇ ಗೃಹಸ್ಥಾಶ್ರಮದ ತಪಸ್ಸು.

12066018a ಸಾಧೂನಾಮರ್ಚನೀಯಾನಾಂ ಪ್ರಜಾಸು ವಿದಿತಾತ್ಮನಾಮ್|
12066018c ಪಾಲನಂ ಪುರುಷವ್ಯಾಘ್ರ ಗೃಹಾಶ್ರಮಪದಂ ಭವೇತ್||

ಪುರುಷವ್ಯಾಘ್ರ! ಸಾಧುಗಳ ಮತ್ತು ಆತ್ಮಜ್ಞಾನಿ ಪ್ರಜೆಗಳ ಅರ್ಚನೆ-ಪಾಲನೆಗಳನ್ನು ಮಾಡುವುದರಿಂದ ಗೃಹಸ್ಥಾಶ್ರಮದ ಫಲವು ದೊರೆಯುತ್ತದೆ.

12066019a ಆಶ್ರಮಸ್ಥಾನಿ ಸರ್ವಾಣಿ ಯಸ್ತು ವೇಶ್ಮನಿ ಭಾರತ|
12066019c ಆದದೀತೇಹ ಭೋಜ್ಯೇನ ತದ್ಗಾರ್ಹಸ್ಥ್ಯಂ ಯುಧಿಷ್ಠಿರ||

ಭಾರತ! ಯುಧಿಷ್ಠಿರ! ಆಶ್ರಮಸ್ಥರಾಗಿರುವ ಸರ್ವರನ್ನೂ ಮನೆಗೆ ಕರೆತಂದು ಭೋಜನಾದಿಗಳಿಂದ ತೃಪ್ತಿಗೊಳಿಸುವುದೇ ಗೃಹಸ್ಥಧರ್ಮ.

12066020a ಯಃ ಸ್ಥಿತಃ ಪುರುಷೋ ಧರ್ಮೇ ಧಾತ್ರಾ ಸೃಷ್ಟೇ ಯಥಾರ್ಥವತ್|
12066020c ಆಶ್ರಮಾಣಾಂ ಸ ಸರ್ವೇಷಾಂ ಫಲಂ ಪ್ರಾಪ್ನೋತ್ಯನುತ್ತಮಮ್||

ಧಾತೃವು ಸೃಷ್ಟಿಸಿದ ಧರ್ಮದಲ್ಲಿ ಯಥಾರ್ಥವಾಗಿ ನಡೆದುಕೊಳ್ಳುವ ಪುರುಷನು ಸರ್ವ ಆಶ್ರಮಗಳ ಅನುತ್ತಮ ಫಲಗಳನ್ನು ಪಡೆಯುತ್ತಾನೆ.

12066021a ಯಸ್ಮಿನ್ನ ನಶ್ಯಂತಿ ಗುಣಾಃ ಕೌಂತೇಯ ಪುರುಷೇ ಸದಾ|
12066021c ಆಶ್ರಮಸ್ಥಂ ತಮಪ್ಯಾಹುರ್ನರಶ್ರೇಷ್ಠಂ ಯುಧಿಷ್ಠಿರ||

ಕೌಂತೇಯ! ಯುಧಿಷ್ಠಿರ! ಯಾವ ಪುರುಷನ ಸದ್ಗುಣಗಳು ಸದಾ ನಶಿಸದೇ ಇರುವುದೋ ಆ ಆಶ್ರಮಸ್ಥ ಪುರುಷನನ್ನು ನರಶ್ರೇಷ್ಠನೆಂದು

ಕರೆಯುತ್ತಾರೆ.

12066022a ಸ್ಥಾನಮಾನಂ ವಯೋಮಾನಂ ಕುಲಮಾನಂ ತಥೈವ ಚ|
12066022c ಕುರ್ವನ್ವಸತಿ ಸರ್ವೇಷು ಹ್ಯಾಶ್ರಮೇಷು ಯುಧಿಷ್ಠಿರ||

ಯುಧಿಷ್ಠಿರ! ಸ್ಥಾನಕ್ಕೆ ತಕ್ಕುದಾದ ಸನ್ಮಾನ, ವಯಸ್ಸಿಗೆ ತಕ್ಕುದಾದ ಸನ್ಮಾನ ಮತ್ತು ಕುಲಕ್ಕೆ ತಕ್ಕುದಾದ ಸನ್ಮಾನ ಇವುಗಳನ್ನು ಮಾಡುವವನು ಸರ್ವ ಆಶ್ರಮಗಳ ಫಲಗಳನ್ನು ಪಡೆಯುತ್ತಾನೆ.

12066023a ದೇಶಧರ್ಮಾಂಶ್ಚ ಕೌಂತೇಯ ಕುಲಧರ್ಮಾಂಸ್ತಥೈವ ಚ|
12066023c ಪಾಲಯನ್ಪುರುಷವ್ಯಾಘ್ರ ರಾಜಾ ಸರ್ವಾಶ್ರಮೀ ಭವೇತ್||

ಕೌಂತೇಯ! ಪುರುಷವ್ಯಾಘ್ರ! ದೇಶಧರ್ಮಗಳು ಮತ್ತು ಕುಲಧರ್ಮಗಳನ್ನು ಪಾಲಿಸುವ ರಾಜನು ಸರ್ವ ಆಶ್ರಮಗಳನ್ನೂ ಪಾಲಿಸಿದಂತಾಗುತ್ತದೆ.

12066024a ಕಾಲೇ ವಿಭೂತಿಂ ಭೂತಾನಾಮುಪಹಾರಾಂಸ್ತಥೈವ ಚ|
12066024c ಅರ್ಹಯನ್ಪುರುಷವ್ಯಾಘ್ರ ಸಾಧೂನಾಮಾಶ್ರಮೇ ವಸೇತ್||

ಪುರುಷವ್ಯಾಘ್ರ! ಆಗಾಗ ಐಶ್ವರ್ಯ ಮತ್ತು ಉಪಹಾರಗಳನ್ನು ಅರ್ಹರಾದವರಿಗೆ ನೀಡುವವನಿಗೆ ಸಾಧುಗಳ ಆಶ್ರಮ (ಸಂನ್ಯಾಸಾಶ್ರಮದ) ಫಲವು ಲಭಿಸುತ್ತದೆ.

12066025a ದಶಧರ್ಮಗತಶ್ಚಾಪಿ ಯೋ ಧರ್ಮಂ ಪ್ರತ್ಯವೇಕ್ಷತೇ|
12066025c ಸರ್ವಲೋಕಸ್ಯ ಕೌಂತೇಯ ರಾಜಾ ಭವತಿ ಸೋಽಽಶ್ರಮೀ||

ಕೌಂತೇಯ! ದಶಧರ್ಮಗಳನ್ನು ಅನುಸರಿಸಿ ಧರ್ಮವನ್ನು ರಕ್ಷಿಸುವವನು ಸರ್ವಲೋಕಗಳ ರಾಜನಾಗುತ್ತಾನೆ ಮತ್ತು ಸರ್ವ

ಆಶ್ರಮಗಳ ಫಲಗಳನ್ನು ಪಡೆಯುತ್ತಾನೆ,

12066026a ಯೇ ಧರ್ಮಕುಶಲಾ ಲೋಕೇ ಧರ್ಮಂ ಕುರ್ವಂತಿ ಸಾಧವಃ|
12066026c ಪಾಲಿತಾ ಯಸ್ಯ ವಿಷಯೇ ಪಾದೋಽಂಶಸ್ತಸ್ಯ ಭೂಪತೇಃ||

ಯಾರ ರಾಜ್ಯದಲ್ಲಿ ಧರ್ಮಕುಶಲರಾದ ಸಾಧುಗಳ ಧರ್ಮವು
ರಕ್ಷಿಸಲ್ಪಡುತ್ತದೆಯೋ ಅವರ ಆರನೆಯ ಒಂದು ಭಾಗವು ಆ
ರಾಜನಿಗೂ ದೊರೆಯುತ್ತದೆ.

12066027a ಧರ್ಮಾರಾಮಾನ್ಧರ್ಮಪರಾನ್ಯೇ ನ ರಕ್ಷಂತಿ ಮಾನವಾನ್|
12066027c ಪಾರ್ಥಿವಾಃ ಪುರುಷವ್ಯಾಘ್ರ ತೇಷಾಂ ಪಾಪಂ ಹರಂತಿ ತೇ||

ಪುರುಷವ್ಯಾಘ್ರ! ಧರ್ಮದಲ್ಲಿಯೇ ರಮಿಸುವ ಧರ್ಮಪರಾಯಣರಾದ
ಮಾನವರನ್ನು ರಕ್ಷಿಸದ ಪಾರ್ಥಿವನು ಅವರ ಪಾಪಗಳೆಲ್ಲವನ್ನೂ
ಪಡೆದುಕೊಳ್ಳುತ್ತಾನೆ.

12066028a ಯೇ ಚ ರಕ್ಷಾಸಹಾಯಾಃ ಸ್ಯುಃ ಪಾರ್ಥಿವಾನಾಂ ಯುಧಿಷ್ಠಿರ|
12066028c ತೇ ಚೈವಾಂಶಹರಾಃ ಸರ್ವೇ ಧರ್ಮೇ ಪರಕೃತೇಽನಘ||

ಯುಧಿಷ್ಠಿರ! ಅನಘ! ಧರ್ಮರಕ್ಷಣೆಯಲ್ಲಿ ಪಾರ್ಥಿವರಿಗೆ
ಸಹಾಯಮಾಡುವವರಿಗೂ ಇತರರು ಮಾಡುವ ಸರ್ವ
ಧರ್ಮಕಾರ್ಯಗಳ ಫಲದ ಅಂಶವು ದೊರೆಯುತ್ತದೆ.

12066029a ಸರ್ವಾಶ್ರಮಪದೇ ಹ್ಯಾಹುರ್ಗಾರ್ಹಸ್ಥ್ಯಂ ದೀಪ್ತನಿರ್ಣಯಮ್|
12066029c ಪಾವನಂ ಪುರುಷವ್ಯಾಘ್ರ ಯಂ ವಯಂ ಪರ್ಯುಪಾಸ್ಮಹೇ||

ಪುರುಷವ್ಯಾಘ್ರ! ನಾವು ಯಾವ ಧರ್ಮವನ್ನು ಉಪಾಸಿಸುತ್ತಿರುವೆವೋ
ಆ ಗೃಹಸ್ಥಾಶ್ರಮ ಧರ್ಮವೇ ಸರ್ವ ಆಶ್ರಮಪದಗಳಲ್ಲಿ ಪಾವನವೂ

ಶ್ರೇಷ್ಠವೂ ಆಗಿರುವುದೆಂದು ನಿರ್ಣಯಿಸಿ ಹೇಳಿದ್ದಾರೆ.

12066030a ಆತ್ಮೋಪಮಸ್ತು ಭೂತೇಷು ಯೋ ವೈ ಭವತಿ ಮಾನವಃ|
12066030c ನ್ಯಸ್ತದಂಡೋ ಜಿತಕ್ರೋಧಃ ಸ ಪ್ರೇತ್ಯ ಲಭತೇ ಸುಖಮ್||

ಎಲ್ಲವನ್ನೂ ತನಗೆ ಸಮಾನವೆಂದು ಯಾರು ಭಾವಿಸುವವನೋ, ದಂಡವನ್ನು ಯಾರು ತ್ಯಜಿಸುವವನೋ ಮತ್ತು ಕ್ರೋಧವನ್ನು ಯಾರು ಗೆಲ್ಲುವವನೋ ಅವನಿಗೆ ಇಹದಲ್ಲಿಯೂ ಪರದಲ್ಲಿಯೂ ಸುಖವುಂಟಾಗುತ್ತದೆ.

12066031a ಧರ್ಮೋತ್ಥಿತಾ ಸತ್ತ್ವವೀರ್ಯಾ ಧರ್ಮಸೇತುವಟಾಕರಾ|
12066031c ತ್ಯಾಗವಾತಾಧ್ವಗಾ ಶೀಘ್ರಾ ನೌಸ್ತ್ವಾ ಸಂತಾರಯಿಷ್ಯತಿ||

ಧರ್ಮರೂಪದ ಸಮುದ್ರದಲ್ಲಿ ತೇಲುತ್ತಿರುವ ರಾಜಧರ್ಮವೆಂಬ ನೌಕೆಗೆ ಸತ್ತ್ವಗುಣವೇ ನಾವಿಕ, ಧರ್ಮಶಾಸ್ತ್ರವೇ ನೌಕೆಯನ್ನು ಬಂಧಿಸುವ ರಜ್ಜು. ತ್ಯಾಗರೂಪದಿಂದ ಬೀಸುವ ಗಾಳಿಯಿಂದ ಪ್ರೇರಿತವಾಗಿ ಅದು ಸಂಸಾರರೂಪವಾದ ಸಮುದ್ರವನ್ನು ಶೀಘ್ರವಾಗಿ ದಾಟಿಸುತ್ತದೆ.

12066032a ಯದಾ ನಿವೃತ್ತಃ ಸರ್ವಸ್ಮಾತ್ಕಾಮೋ ಯೋಽಸ್ಯ ಹೃದಿ ಸ್ಥಿತಃ|
12066032c ತದಾ ಭವತಿ ಸತ್ತ್ವಸ್ಥಸ್ತತೋ ಬ್ರಹ್ಮ ಸಮಶ್ನುತೇ||

ಸರ್ವಕಾಮನೆಗಳಿಂದ ನಿವೃತ್ತನಾಗಿ ಹೃದಯದಲ್ಲಿ ಸ್ಥಿತನಾಗಿರುವಾಗ ಸತ್ತ್ವಸ್ಥನೆನಿಸಿಕೊಂಡು ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

12066033a ಸುಪ್ರಸನ್ನಸ್ತು ಭಾವೇನ ಯೋಗೇನ ಚ ನರಾಧಿಪ|
12066033c ಧರ್ಮಂ ಪುರುಷಶಾರ್ದೂಲ ಪ್ರಾಪ್ಸ್ಯಸೇ ಪಾಲನೇ ರತಃ||

ನರಾಧಿಪ! ಪುರುಷಶಾರ್ದೂಲ! ಸುಪ್ರಸನ್ನ ಭಾವದ ಯೋಗದಿಂದ
ಪಾಲನೆಮಾಡುತ್ತಿರುವ ರಾಜನು ಧರ್ಮವನ್ನು ಪರಿಪಾಲಿಸಿದ
ಫಲವನ್ನು ಹೊಂದುತ್ತಾನೆ.

12066034a ವೇದಾಧ್ಯಯನಶೀಲಾನಾಂ ವಿಪ್ರಾಣಾಂ ಸಾಧುಕರ್ಮಣಾಮ್|
12066034c ಪಾಲನೇ ಯತ್ನಮಾತಿಷ್ಠ ಸರ್ವಲೋಕಸ್ಯ ಚಾನಘ||

ಅನಘ! ವೇದಾಧ್ಯಯನ ಶೀಲರಾದ ವಿಪ್ರರ, ಸಾಧುಕರ್ಮಿಗಳ ಮತ್ತು
ಸರ್ವಲೋಕದ ಪಾಲನೆಗೆ ಪ್ರಯತ್ನಿಸು!

12066035a ವನೇ ಚರತಿ ಯೋ ಧರ್ಮಮಾಶ್ರಮೇಷು ಚ ಭಾರತ|
12066035c ರಕ್ಷಯಾ ತಚ್ಚತಗುಣಂ ಧರ್ಮಂ ಪ್ರಾಪ್ನೋತಿ ಪಾರ್ಥಿವಃ||

ಭಾರತ! ವನದಲ್ಲಿ ಸಂಚರಿಸುವ ಆಶ್ರಮಧರ್ಮವನ್ನು
ಪಾಲಿಸುವುದಕ್ಕಿಂತ ಎಷ್ಟೋ ಗುಣ ಹೆಚ್ಚು ಫಲವನ್ನು
ಧರ್ಮರಕ್ಷಣೆಮಾಡುವ ಪಾರ್ಥಿವನು ಪಡೆಯುತ್ತಾನೆ.

12066036a ಏಷ ತೇ ವಿವಿಧೋ ಧರ್ಮಃ ಪಾಂಡವಶ್ರೇಷ್ಠ ಕೀರ್ತಿತಃ|
12066036c ಅನುತಿಷ್ಠ ತ್ವಮೇನಂ ವೈ ಪೂರ್ವೈರ್ದೃಷ್ಟಂ ಸನಾತನಮ್||

ಪಾಂಡವಶ್ರೇಷ್ಠ! ಇಗೋ ನಿನಗೆ ವಿವಿಧ ಧರ್ಮಗಳ ಕುರಿತು
ಹೇಳಿದ್ದೇನೆ. ನಮ್ಮ ಪೂರ್ವಜರು ಆಚರಿಸಿಕೊಂಡು ಬಂದಿರುವ ಈ
ಸನಾತನ ಧರ್ಮವನ್ನು ನೀನೂ ಅನುಷ್ಠಾನ ಮಾಡು.

12066037a ಚಾತುರಾಶ್ರಮ್ಯಮೇಕಾಗ್ರಃ ಚಾತುರ್ವರ್ಣ್ಯಂ ಚ ಪಾಂಡವ|
12066037c ಧರ್ಮಂ ಪುರುಷಶಾರ್ದೂಲ ಪ್ರಾಪ್ಸ್ಯಸೇ ಪಾಲನೇ ರತಃ||

ಪಾಂಡವ! ಪುರುಷಶಾರ್ದೂಲ! ನಾಲ್ಕು ಆಶ್ರಮದವರೂ ನಾಲ್ಕು

ವರ್ಣದವರೂ ಪಡೆದುಕೊಳ್ಳುವ ಪುಣ್ಯವನ್ನು ಧರ್ಮಪಾಲನೆಯಲ್ಲಿ ನಿರತನಾಗಿರುವ ರಾಜನು ಪಡೆದುಕೊಳ್ಳುತ್ತಾನೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಚಾತುರಾಶ್ರಮ್ಯವಿಧೌ ಷಟ್ ಷಷ್ಟಿತಮೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಚಾತುರಾಶ್ರಮ್ಯವಿಧ ಎನ್ನುವ ಅರವತ್ತಾರನೇ ಅಧ್ಯಾಯವು.

೬೭

ರಾಷ್ಟ್ರದ ರಕ್ಷೆ ಮತ್ತು ಉನ್ನತಿಗಾಗಿ ರಾಜನ ಅವಶ್ಯಕತೆಯ ಪ್ರತಿಪಾದನೆ; ಬ್ರಹ್ಮನ ಆದೇಶದಂತೆ ಮನುವು ರಾಜನಾದುದು (1-38).

12067001 ಯುಧಿಷ್ಠಿರ ಉವಾಚ|
12067001a ಚಾತುರಾಶ್ರಮ್ಯ ಉಕ್ತೋಽತ್ರ ಚಾತುರ್ವರ್ಣ್ಯಸ್ತಥೈವ ಚ|
12067001c ರಾಷ್ಟ್ರಸ್ಯ ಯತ್ಕೃತ್ಯತಮಂ ತನ್ಮೇ ಬ್ರೂಹಿ ಪಿತಾಮಹ॥

ಯುಧಿಷ್ಠಿರನು ಹೇಳಿದನು: “ಪಿತಾಮಹ! ನಾಲ್ಕು ಆಶ್ರಮಗಳ ಕುರಿತೂ ಮತ್ತು ನಾಲ್ಕು ವರ್ಣಗಳ ಕುರಿತೂ ನೀನು ಹೇಳಿದ್ದೀಯೆ. ಈಗ ರಾಷ್ಟ್ರದ ಮುಖ್ಯ ಕರ್ತವ್ಯವೇನೆಂದು ನನಗೆ ಹೇಳು.”

12067002 ಭೀಷ್ಮ ಉವಾಚ|
12067002a ರಾಷ್ಟ್ರಸ್ಯೈತತ್ಕೃತ್ಯತಮಂ ರಾಜ್ಞ ಏವಾಭಿಷೇಚನಮ್|
12067002c ಅನಿಂದ್ರಮಬಲಂ ರಾಷ್ಟ್ರಂ ದಸ್ಯವೋಽಭಿಭವಂತಿ ಚ॥

ಭೀಷ್ಮನು ಹೇಳಿದನು: “ರಾಜನನ್ನು ಅಭಿಷೇಕಿಸುವುದೇ ರಾಷ್ಟ್ರದ

ಮುಖ್ಯ ಕರ್ತವ್ಯ. ರಾಜನಿಲ್ಲದ ರಾಷ್ಟ್ರವು ಬಲಹೀನವಾಗುತ್ತದೆ. ದಸ್ಯುಗಳ ವಶವಾಗುತ್ತದೆ.

12067003a ಅರಾಜಕೇಷು ರಾಷ್ಟ್ರೇಷು ಧರ್ಮೋ ನ ವ್ಯವತಿಷ್ಠತೇ|
12067003c ಪರಸ್ಪರಂ ಚ ಖಾದಂತಿ ಸರ್ವಥಾ ಧಿಗರಾಜಕಮ್||

ರಾಜನಿಲ್ಲದ ರಾಷ್ಟ್ರದಲ್ಲಿ ಧರ್ಮವು ಉಳಿಯುವುದಿಲ್ಲ. ಪರಸ್ಪರರನ್ನು ನುಂಗಿಹಾಕುತ್ತಾರೆ. ಅರಾಜಕತೆಯನ್ನು ಸರ್ವಥಾ ಧಿಕ್ಕರಿಸಬೇಕು.

12067004a ಇಂದ್ರಮೇನಂ ಪ್ರವೃಣುತೇ ಯದ್ರಾಜಾನಮಿತಿ ಶ್ರುತಿಃ|
12067004c ಯಥೈವೇಂದ್ರಸ್ತಥಾ ರಾಜಾ ಸಂಪೂಜ್ಯೋ ಭೂತಿಮಿಚ್ಚತಾ||

ಪ್ರಜೆಗಳು ರಾಜನನ್ನು ವರಣಮಾಡಿದಾಗ ಇಂದ್ರನನ್ನೇ ಅವರು ವರಣಮಾಡಿದಂತೆ ಎಂಬ ಶ್ರುತಿವಾಕ್ಯವಿದೆ. ಆದುದರಿಂದ ಶ್ರೇಯಸ್ಸನ್ನು ಇಚ್ಛಿಸುವವರು ರಾಜನನ್ನು ಇಂದ್ರನೆಂದು ತಿಳಿದೇ ಪೂಜಿಸುತ್ತಾರೆ.

12067005a ನಾರಾಜಕೇಷು ರಾಷ್ಟ್ರೇಷು ವಸ್ತವ್ಯಮಿತಿ ವೈದಿಕಮ್|
12067005c ನಾರಾಜಕೇಷು ರಾಷ್ಟ್ರೇಷು ಹವ್ಯಮಗ್ನಿರ್ವಹತ್ಯಪಿ||

ರಾಜನಿಲ್ಲದ ರಾಷ್ಟ್ರದಲ್ಲಿ ವೈದಿಕ ಧರ್ಮವು ವಾಸಿಸುವುದಿಲ್ಲ. ರಾಜನಿಲ್ಲದ ರಾಷ್ಟ್ರದಲ್ಲಿ ಅಗ್ನಿಯು ಹವಿಸ್ಸುಗಳನ್ನು ಒಯ್ಯುವುದಿಲ್ಲ.

12067006a ಅಥ ಚೇದಭಿವರ್ತೇತ ರಾಜ್ಯಾರ್ಥೀ ಬಲವತ್ತರಃ|
12067006c ಅರಾಜಕಾನಿ ರಾಷ್ಟ್ರಾಣಿ ಹತರಾಜಾನಿ ವಾ ಪುನಃ||
12067007a ಪ್ರತ್ಯುದ್ಗಮ್ಯಾಭಿಪೂಜ್ಯಃ ಸ್ಯಾದೇತದತ್ರ ಸುಮಂತ್ರಿತಮ್|
12067007c ನ ಹಿ ಪಾಪಾತ್ಪಾಪತರಮಸ್ತಿ ಕಿಂ ಚಿದರಾಜಕಾತ್||

ರಾಜನಿಲ್ಲದಿರುವ ಅಥವಾ ರಾಜನು ಹತನಾಗಿರುವ ರಾಷ್ಟ್ರವನ್ನು

ಬಲವತ್ತರ ರಾಜ್ಯಾರ್ಥಿಯು ಆಕ್ರಮಣಿಸಿದರೆ ಅವನನ್ನು ಪೂಜಿಸಿ ಸ್ವಾಗತಿಸುವುದೇ ರಾಷ್ಟ್ರದ ಜನರಿಗೆ ಉತ್ತಮವಾದುದು ಎಂಬ ಸಲಹೆಯಿದೆ. ಅರಾಜಕತೆಯ ಪಾಪಕ್ಕಿಂತ ಹೆಚ್ಚಿನ ಪಾಪವು ಇಲ್ಲ.

12067008a ಸ ಚೇತ್ಸಮನುಪಶ್ಯೇತ ಸಮಗ್ರಂ ಕುಶಲಂ ಭವೇತ್|
12067008c ಬಲವಾನ್ಹಿ ಪ್ರಕುಪಿತಃ ಕುರ್ಯಾನ್ನಿಃಶೇಷತಾಮಪಿ||

ಅವನು ಅವರನ್ನು ಒಳ್ಳೆಯದಾಗಿಯೇ ನೋಡಿಕೊಳ್ಳಬಹುದು. ಸಮಗ್ರವೂ ಕುಶಲವಾಗಬಹುದು. ಕೋಪಿಷ್ಠನಾದ ಬಲವಾನನು ರಾಷ್ಟ್ರವನ್ನು ನಿಃಶೇಷವನ್ನಾಗಿಯೂ ಮಾಡಬಹುದು.

12067009a ಭೂಯಾಂಸಂ ಲಭತೇ ಕ್ಲೇಶಂ ಯಾ ಗೌರ್ಭವತಿ ದುರ್ದುಹಾ|
12067009c ಸುದುಹಾ ಯಾ ತು ಭವತಿ ನೈವ ತಾಂ ಕ್ಲೇಶಯಂತ್ಯುತ||

ಸುಲಭವಾಗಿ ಹಾಲುಕೊಡದ ಗೋವನ್ನು ಬಹಳವಾಗಿ ಕಾಡಿಸಿ ಹಾಲುಕರೆಯುತ್ತಾರೆ. ಹಾಗೆಯೇ ಸುಲಭವಾಗಿ ಹಾಲುಕೊಡುವ ಗೋವನ್ನು ಯಾವ ರೀತಿಯಲ್ಲಿಯೂ ಕಾಡಿಸುವುದಿಲ್ಲ[188].

12067010a ಯದತಪ್ತಂ ಪ್ರಣಮತಿ ನ ತತ್ಸಂತಾಪಯಂತ್ಯುತ|
12067010c ಯಚ್ಚ ಸ್ವಯಂ ನತಂ ದಾರು ನ ತತ್ಸಂನಾಮಯಂತ್ಯಪಿ||

ಯಾವುದು ಕಾಯಿಸದೆಯೇ ಬಗ್ಗುವುದೋ ಅದನ್ನು ಕಾಯಿಸುವುದಿಲ್ಲ. ಸ್ವಯಂ ಬಗ್ಗಿರುವ ಕೋಲನ್ನು ಯಾರೂ ಪುನಃ ಬಗ್ಗಿಸಲು ಪ್ರಯತ್ನಿಸುವುದಿಲ್ಲ.

12067011a ಏತಯೋಪಮಯಾ ಧೀರಃ ಸಂನಮೇತ ಬಲೀಯಸೇ|

---

188 ಪ್ರಜೆಗಳು ವಿನಮ್ರರಾಗಿದ್ದರೆ ಸುಖವಾಗಿರುತ್ತಾರೆ.

12067011c ಇಂದ್ರಾಯ ಸ ಪ್ರಣಮತೇ ನಮತೇ ಯೋ ಬಲೀಯಸೇ॥

ಈ ಉಪಮೆಗಳಂತೆ ಬುದ್ಧಿವಂತನು ಬಲಿಷ್ಟನಾದವನಿಗೆ ಬಗ್ಗಿ ನಡೆಯಬೇಕು. ಬಲಿಷ್ಠನಿಗೆ ವಿನಮ್ರನಾಗಿರುವವನು ಇಂದ್ರನಿಗೆ ಪ್ರಮಾಣಮಾಡಿದಂತೆಯೇ ಆಗುತ್ತದೆ.

12067012a ತಸ್ಮಾದ್ರಾಜ್ಯೈವ ಕರ್ತವ್ಯಃ ಸತತಂ ಭೂತಿಮಿಚ್ಚತಾ|
12067012c ನ ಧನಾರ್ಥೋ ನ ದಾರಾರ್ಥಸ್ತೇಷಾಂ ಯೇಷಾಮರಾಜಕಮ್॥

ಆದುದರಿಂದ ಸತತವೂ ಏಳ್ಗೆಯನ್ನು ಬಯಸುವವರಿಗೆ ರಾಜನನ್ನು ಪಡೆಯುವುದೇ ಕರ್ತವ್ಯ. ರಾಜನಿಲ್ಲದಿರುವ ರಾಷ್ಟ್ರದವರಿಗೆ ತಮ್ಮ ಧನದಿಂದಾಗಲೀ ಪತ್ನಿಯಿಂದಾಗಲೀ ಯಾವ ಪ್ರಯೋಜನವೂ ಇರುವುದಿಲ್ಲ.

12067013a ಪ್ರೀಯತೇ ಹಿ ಹರನ್ಪಾಪಃ ಪರವಿತ್ತಮರಾಜಕೇ|
12067013c ಯದಾಸ್ಯ ಉದ್ಧರಂತ್ಯನ್ಯೇ ತದಾ ರಾಜಾನಮಿಚ್ಚತಿ॥

ರಾಜನಿಲ್ಲದಿರುವ ದೇಶದಲ್ಲಿ ಪಾಪಿಗಳು ಪರವಿತ್ತವನ್ನು ಅಪಹರಿಸಿಯೇ ಸಂತೋಷದಿಂದಿರುತ್ತಾರೆ. ಆದರೆ ಅವನಿಗಿಂತಲೂ ಬಲಿಷ್ಠನು ಅದನ್ನು ಅವನಿಂದ ಕಸಿದುಕೊಳ್ಳಲು ಬಂದಾಗ ಅವನೂ ರಾಜನನ್ನೇ ಬಯಸುತ್ತಾನೆ.

12067014a ಪಾಪಾ ಅಪಿ ತದಾ ಕ್ಷೇಮಂ ನ ಲಭಂತೇ ಕದಾ ಚನ|
12067014c ಏಕಸ್ಯ ಹಿ ದ್ವೌ ಹರತೋ ದ್ವಯೋಶ್ಚ ಬಹವೋಽಪರೇ॥

ರಾಜನಿಲ್ಲದ ದೇಶದಲ್ಲಿ ಪಾಪಿಗಳಿಗೂ ಕ್ಷೇಮವೆನ್ನುವುದಿರುವುದಿಲ್ಲ. ಒಬ್ಬನದ್ದನ್ನು ಇಬ್ಬರು ಅಪಹರಿಸುತ್ತಾರೆ. ಇಬ್ಬರದ್ದನ್ನು ಇನ್ನು ಅನೇಕರು

ಸೇರಿ ಅಪಹರಿಸುತ್ತಾರೆ.

12067015a ಅದಾಸಃ ಕ್ರಿಯತೇ ದಾಸೋ ಹ್ರಿಯಂತೇ ಚ ಬಲಾತ್ಸ್ತ್ರಿಯಃ|
12067015c ಏತಸ್ಮಾತ್ಕಾರಣಾದ್ದೇವಾಃ ಪ್ರಜಾಪಾಲಾನ್ಪ್ರಚಕ್ರಿರೇ||

ದಾಸರಲ್ಲದವರನ್ನು ದಾಸರನ್ನಾಗಿ ಮಾಡಲಾಗುತ್ತದೆ. ಸ್ತ್ರೀಯರನ್ನು ಬಲಾತ್ಕಾರವಾಗಿ ಅಪಹರಿಸಲಾಗುತ್ತದೆ. ಈ ಕಾರಣಗಳಿಂದಲೇ ದೇವತೆಗಳು ಪ್ರಜಾಪಾಲಕರನ್ನು ಸೃಷ್ಟಿಸಿದರು.

12067016a ರಾಜಾ ಚೇನ್ನ ಭವೇಲ್ಲೋಕೇ ಪೃಥಿವ್ಯಾಂ ದಂಡಧಾರಕಃ|
12067016c ಶೂಲೇ ಮತ್ಸ್ಯಾನಿವಾಪಕ್ಷ್ಯನ್ದುರ್ಬಲಾನ್ಬಲವತ್ತರಾಃ||

ಈ ಲೋಕದಲ್ಲಿ ದಂಡಧಾರಕನಾದ ರಾಜನೆನ್ನುವನು ಇಲ್ಲದೇ ಹೋಗಿದ್ದರೆ ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ತಿಂದುಹಾಕುವಂತೆ ಈ ಭೂಮಿಯಲ್ಲಿ ದುರ್ಬಲರನ್ನು ಬಲವಂತರು ನಾಶಪಡಿಸುತ್ತಿದ್ದರು.

12067017a ಅರಾಜಕಾಃ ಪ್ರಜಾಃ ಪೂರ್ವಂ ವಿನೇಶುರಿತಿ ನಃ ಶ್ರುತಮ್|
12067017c ಪರಸ್ಪರಂ ಭಕ್ಷಯಂತೋ ಮತ್ಸ್ಯಾ ಇವ ಜಲೇ ಕೃಶಾನ್||

ಹಿಂದೆ ಅರಾಜಕತೆಯಿಂದಾಗಿ ಪ್ರಜೆಗಳು ನೀರಿನಲ್ಲಿರುವ ಮೀನುಗಳಂತೆ ಪರಸ್ಪರ ದುರ್ಬಲರನ್ನು ತಿಂದು ನಾಶಹೊಂದಿದರೆಂದು ಕೇಳಿದ್ದೇವೆ.

12067018a ತಾಃ ಸಮೇತ್ಯ ತತಶ್ಚಕ್ರುಃ ಸಮಯಾನಿತಿ ನಃ ಶ್ರುತಮ್|
12067018c ವಾಕ್ಯೂರೋ ದಂಡಪುರುಷೋ ಯಶ್ಚ ಸ್ಯಾತ್ಪಾರದಾರಿಕಃ|
12067018e ಯಶ್ಚ ನ ಸ್ವಮಥಾದದ್ಯಾತ್ತ್ಯಜ್ಯಾ ನಸ್ತಾದೃಶಾ ಇತಿ||

ಆಗ ಅಳಿದುಳಿದವರು ಒಂದಾಗಿ ತಮ್ಮ ಒಳಿತಿಗಾಗಿ ಈ

ನಿಯಮಗಳನ್ನು ಮಾಡಿಕೊಂಡರೆಂದು ಕೇಳಿದ್ದೇವೆ: "ನಮ್ಮಲ್ಲಿ ಯಾರು ಕ್ರೂರವಾಗಿ ಮಾತನಾಡುವವರೋ, ಅತ್ಯಂತ ಕಠೋರವಾಗಿ ಶಿಕ್ಷಿಸುವವರೋ, ಇತರರ ಸ್ತ್ರೀಯನ್ನು ಸೇರುವರೋ ಮತ್ತು ಪರರ ಸ್ವತ್ತನ್ನು ಅಪಹರಿಸುವರೋ ಅವರೆಲ್ಲರನ್ನೂ ಬಹಿಷ್ಕರಿಸೋಣ!"

12067019a ವಿಶ್ವಾಸನಾರ್ಥಂ ವರ್ಣಾನಾಂ ಸರ್ವೇಷಾಮವಿಶೇಷತಃ|
12067019c ತಾಸ್ತಥಾ ಸಮಯಂ ಕೃತ್ವಾ ಸಮಯೇ ನಾವತಸ್ಥಿರೇ||

ಹೀಗೆ ವಿಶ್ವಾಸಾರ್ಥವಾಗಿ ನಿಯಮಮಾಡಿಕೊಂಡು ಸರ್ವ ವರ್ಣದವರೂ ದುಷ್ಟರನ್ನು ದೂರಮಾಡಿ ಕೆಲವು ಸಮಯ ಸುಖದಿಂದಲೇ ಇದ್ದರು. ಆದರೆ ಆ ಒಪ್ಪಂದವು ಹೆಚ್ಚುಕಾಲ ನಿಲ್ಲಲಿಲ್ಲ.

12067020a ಸಹಿತಾಸ್ತಾಸ್ತದಾ ಜಗ್ಮುರಸುಖಾರ್ತಾಃ ಪಿತಾಮಹಮ್|
12067020c ಅನೀಶ್ವರಾ ವಿನಶ್ಯಾಮೋ ಭಗವನ್ನೀಶ್ವರಂ ದಿಶ||
12067021a ಯಂ ಪೂಜಯೇಮ ಸಂಭೂಯ ಯಶ್ಚ ನಃ ಪರಿಪಾಲಯೇತ್|
12067021c ತಾಭ್ಯೋ ಮನುಂ ವ್ಯಾದಿದೇಶ ಮನುರ್ನಾಭಿನನಂದ ತಾಃ||

ಆಗ ದುಃಖಪೀಡಿತರಾದ ಅವರು ಒಟ್ಟಿಗೇ ಪಿತಾಮಹನ ಬಳಿಹೋಗಿ ಹೇಳಿದರು: "ಭಗವನ್! ಒಡೆಯನಿಲ್ಲದೇ ನಾವು ವಿನಾಶಹೊಂದುತ್ತಿದ್ದೇವೆ. ಯಾರು ಶಾಸಮಾಡಲು ಸಮರ್ಥನೋ, ಯಾರನ್ನು ನಾವು ಪೂಜಿಸಬಲ್ಲೆವೋ ಯಾರು ನಮ್ಮನ್ನು ಪರಿಪಾಲಿಸುವವನೋ ಅಂಥಹ ರಾಜನನ್ನು ತೋರಿಸು!" ಆಗ ಭಗವಾನನು ಮನುವಿಗೆ ರಾಜನಾಗುವಂತೆ ನಿರ್ದೇಶಿಸಿದನು. ಆದರೆ ಮನುವು ಆ ಪ್ರಜೆಗಳನ್ನು ಸ್ವೀಕರಿಸಲಿಲ್ಲ.

12067022 ಮನುರುವಾಚ|

12067022a ಬಿಭೇಮಿ ಕರ್ಮಣಃ ಕ್ರೂರಾದ್ರಾಜ್ಯಂ ಹಿ ಭೃಶದುಷ್ಕರಮ್|
12067022c ವಿಶೇಷತೋ ಮನುಷ್ಯೇಷು ಮಿಥ್ಯಾವೃತ್ತಿಷು ನಿತ್ಯದಾ||

ಮನುವು ಹೇಳಿದನು: "ಜನರು ಮಾಡುವ ಪಾಪಕರ್ಮಗಳ
ವಿಷಯವಾಗಿ ನಾನು ಬಹಳ ಭಯಪಡುತ್ತೇನೆ.
ರಾಜ್ಯಭಾರಮಾಡುವುದು ಅತ್ಯಂತ ಕಷ್ಟಕರವಾದುದು. ಅದರಲ್ಲಿಯೂ
ನಿತ್ಯವೂ ಮಿಥ್ಯಾಚಾರದಲ್ಲಿ ತೊಡಗಿರುವ ಮನುಷ್ಯರ ಮೇಲೆ ಅಧಿಕಾರ
ನಡೆಸುವುದು ಅತ್ಯಂತ ಕಠಿನವಾದುದು.""

12067023 ಭೀಷ್ಮ ಉವಾಚ|
12067023a ತಮಬ್ರುವನ್ಪ್ರಜಾ ಮಾ ಭೈಃ ಕರ್ಮಣ್ಯೇನೋ ಗಮಿಷ್ಯತಿ|
12067023c ಪಶೂನಾಮಧಿಪಂಚಾಶದ್ಧಿರಣ್ಯಸ್ಯ ತಥೈವ ಚ||
12067023e ಧಾನ್ಯಸ್ಯ ದಶಮಂ ಭಾಗಂ ದಾಸ್ಯಾಮಃ ಕೋಶವರ್ಧನಮ್||

ಭೀಷ್ಮನು ಹೇಳಿದನು: "ಆಗ ಪ್ರಜೆಗಳು ಅವನಿಗೆ ಹೇಳಿದರು:
"ಹೆದರಬೇಡ! ಪಾಪಕರ್ಮಿಗಳ ಪಾಪವು ರಾಜನಿಗೆ ತಗಲುವುದಿಲ್ಲ.
ನಿನ್ನ ಭಂಡಾರವನ್ನು ವೃದ್ಧಿಗೊಳಿಸಲು ಐವತ್ತರಲ್ಲಿ ಒಂದು ಹಸುವನ್ನೂ,
ಐವತ್ತರಲ್ಲಿ ಒಂದು ಸುವರ್ಣ ನಾಣ್ಯವನ್ನೂ, ಧಾನ್ಯದ ಹತ್ತನೇ ಒಂದು
ಭಾಗವನ್ನೂ ಕೊಡುತ್ತೇವೆ.

[189]12067024a ಮುಖ್ಯೇನ ಶಸ್ತ್ರಪತ್ರೇಣ ಯೇ ಮನುಷ್ಯಾಃ ಪ್ರಧಾನತಃ|

---

189 ಭಾರತ ದರ್ಶನದಲ್ಲಿ ಈ ಶ್ಲೋಕದ ಮೊದಲು ಇನ್ನೊಂದು
ಶ್ಲೋಕಾರ್ಧವಿದೆ: ಕನ್ಯಾಂ ಶುಲ್ಕೇ ಚಾರುರೂಪಾಂ ವಿವಾಹೇಷೂದ್ಯತಾಸು ಚ|
ಅರ್ಥಾತ್: ವಿವಾಹಯೋಗ್ಯ ಕನ್ಯೆಯರಲ್ಲಿ ಅತಿಸುಂದರಿಯಾಗಿರುವವಳನ್ನು
ನಿನಗೆ ಶುಲ್ಕವಾಗಿ ಕೊಡುತ್ತೇವೆ.

12067024c ಭವಂತಂ ತೇಽನುಯಾಸ್ಯಂತಿ ಮಹೇಂದ್ರಮಿವ ದೇವತಾಃ||

ಮಹೇಂದ್ರನನ್ನು ದೇವತೆಗಳು ಹೇಗೋ ಹಾಗೆ ಪ್ರಧಾನ ಪುರುಷರು ಪ್ರಮುಖ ಶಸ್ತ್ರಗಳನ್ನು ಹಿಡಿದು ನಿನ್ನನ್ನು ಅನುಸರಿಸಿ ಬರುತ್ತಾರೆ.

12067025a ಸ ತ್ವಂ ಜಾತಬಲೋ ರಾಜನ್ದುಷ್ಪ್ರಧರ್ಷಃ ಪ್ರತಾಪವಾನ್|
12067025c ಸುಖೀ ಧಾಸ್ಯಸಿ ನಃ ಸರ್ವಾನ್ಕುಬೇರ ಇವ ನೈರೃತಾನ್||

ರಾಜನ್! ಹೀಗೆ ಬಲಶಾಲಿಯೂ, ಪ್ರತಾಪವಂತನೂ, ಅನ್ಯರಿಗೆ ಎದುರಿಸಲು ಅಸಾಧ್ಯನೂ ಆಗಿ ನೀನು ನೈರೃತರನ್ನು ಕುಬೇರನು ಹೇಗೋ ಹಾಗೆ ನಮ್ಮೆಲ್ಲರನ್ನೂ ಸುಖಿವಾಗಿ ರಕ್ಷಿಸುತ್ತೀಯೆ.

12067026a ಯಂ ಚ ಧರ್ಮಂ ಚರಿಷ್ಯಂತಿ ಪ್ರಜಾ ರಾಜ್ಞಾ ಸುರಕ್ಷಿತಾಃ|
12067026c ಚತುರ್ಥಂ ತಸ್ಯ ಧರ್ಮಸ್ಯ ತ್ವತ್ಸಂಸ್ಥಂ ನೋ ಭವಿಷ್ಯತಿ||

ರಾಜನಿಂದ ಸುರಕ್ಷಿತರಾದ ಪ್ರಜೆಗಳು ಎಷ್ಟು ಧರ್ಮದಲ್ಲಿ ನಡೆದುಕೊಳ್ಳುತ್ತಾರೋ ಆ ಧರ್ಮದ ನಾಲ್ಕನೆಯ ಒಂದು ಭಾಗವು ನಿನ್ನ ಪಾಲಾಗುತ್ತದೆ.

12067027a ತೇನ ಧರ್ಮೇಣ ಮಹತಾ ಸುಖಲಬ್ಧೇನ ಭಾವಿತಃ|
12067027c ಪಾಹ್ಯಸ್ಮಾನ್ಸರ್ವತೋ ರಾಜನ್ದೇವಾನಿವ ಶತಕ್ರತುಃ||

ರಾಜನ್! ಸುಖಿವಾಗಿ ಲಬ್ಧವಾಗುವ ಆ ಮಹಾ ಧರ್ಮದಿಂದ ಭಾವಿತನಾಗಿ ದೇವತೆಗಳನ್ನು ಶತುಕ್ರತುವು ಹೇಗೋ ಹಾಗೆ ನಮ್ಮನ್ನು ಸರ್ವತಃ ರಕ್ಷಿಸು.

12067028a ವಿಜಯಾಯಾಶು ನಿರ್ಯಾಹಿ ಪ್ರತಪನ್ರಶ್ಮಿಮಾನಿವ|
12067028c ಮಾನಂ ವಿಧಮ ಶತ್ರೂಣಾಂ ಧರ್ಮೋ ಜಯತು ನಃ ಸದಾ||

ಸೂರ್ಯನಂತೆ ಶತ್ರುಗಳನ್ನು ಸುಡುತ್ತಾ ವಿಜಯಯಾತ್ರೆಗೆ ಹೊರಡು. ಶತ್ರುಗಳ ಮಾನವನ್ನು ಒಡೆದುಹಾಕು. ಸದಾ ಧರ್ಮವು ಜಯಿಸಲಿ!”

12067029a ಸ ನಿರ್ಯಯೌ ಮಹಾತೇಜಾ ಬಲೇನ ಮಹತಾ ವೃತಃ|
12067029c ಮಹಾಭಿಜನಸಂಪನ್ನಸ್ತೇಜಸಾ ಪ್ರಜ್ವಲನ್ನಿವ||

ಆಗ ಅವನು ಮಹಾತೇಜಸ್ಸಿನಿಂದ ಮಹಾ ಸೇನೆಯಿಂದ ಸುತ್ತುವರೆಯಲ್ಪಟ್ಟು ಮಹಾಭಿಜನಸಂಪನ್ನನಾಗಿ ತೇಜಸ್ಸಿನಿಂದ ಪ್ರಜ್ವಲಿಸುತ್ತಾ ಹೊರಟನು.

12067030a ತಸ್ಯ ತಾಂ ಮಹಿಮಾಂ ದೃಷ್ಟ್ವಾ ಮಹೇಂದ್ರಸ್ಯೇವ ದೇವತಾಃ|
12067030c ಅಪತತ್ರಸಿರೇ ಸರ್ವೇ ಸ್ವಧರ್ಮೇ ಚ ದಧುರ್ಮನಃ||

ಮಹೇಂದ್ರನ ಮಹಿಮೆಯನ್ನು ನೋಡಿ ದೇವತೆಗಳು ಹೇಗೋ ಹಾಗೆ ಅವನ ಆ ಮಹಿಮೆಯನ್ನು ನೋಡಿ ಬೆದರಿ ಸರ್ವರೂ ಸ್ವಧರ್ಮದಲ್ಲಿ ನಿರತರಾಗಿರಲು ನಿಶ್ಚಯಿಸಿದರು.

12067031a ತತೋ ಮಹೀಂ ಪರಿಯಯೌ ಪರ್ಜನ್ಯ ಇವ ವೃಷ್ಟಿಮಾನ್|
12067031c ಶಮಯನ್ಸರ್ವತಃ ಪಾಪಾನ್ಸ್ವಕರ್ಮಸು ಚ ಯೋಜಯನ್||

ಬಳಿಕ ಮನುವು ಮಳೆಗರೆಯುವ ಮೇಘದಂತೆ ಪಾಪಿಗಳನ್ನು ಉಪಶಮನಗೊಳಿಸುತ್ತಾ ಎಲ್ಲಕಡೆ ಎಲ್ಲರನ್ನೂ ಸ್ವಕರ್ಮದಲ್ಲಿ ತೊಡಗಿಸುತ್ತಾ ಇಡೀ ಭೂಮಿಯಲ್ಲಿ ಸಂಚರಿಸಿದನು.

12067032a ಏವಂ ಯೇ ಭೂತಿಮಿಚ್ಛೇಯುಃ ಪೃಥಿವ್ಯಾಂ ಮಾನವಾಃ ಕ್ವ ಚಿತ್|
12067032c ಕುರ್ಯೂ ರಾಜಾನಮೇವಾಗ್ರೇ ಪ್ರಜಾನುಗ್ರಹಕಾರಣಾತ್||

ಹೀಗೆ ಭೂಮಿಯಲ್ಲಿ ಅಭಿವೃದ್ಧಿಯನ್ನು ಬಯಸುವ ಮಾನವರು

ಎಲ್ಲಕ್ಕಿಂತಲೂ ಮೊದಲು ಪ್ರಜಾನುಗ್ರಹದ ಕಾರಣಕ್ಕಾಗಿ ರಾಜನನ್ನು ನಿಯೋಜಿಸಿಕೊಳ್ಳಬೇಕು.

12067033a ನಮಸ್ಯೇಯುಶ್ಚ ತಂ ಭಕ್ತ್ಯಾ ಶಿಷ್ಯಾ ಇವ ಗುರುಂ ಸದಾ|
12067033c ದೇವಾ ಇವ ಸಹಸ್ರಾಕ್ಷಂ ಪ್ರಜಾ ರಾಜಾನಮಂತಿಕೇ||

ಶಿಷ್ಯರು ಸದಾ ಗುರುವನ್ನು ಹೇಗೋ ಹಾಗೆ ಮತ್ತು ದೇವತೆಗಳು ಸಹಸ್ರಾಕ್ಷನನ್ನು ಹೇಗೋ ಹಾಗೆ ಪ್ರಜೆಗಳು ರಾಜನ ಬಳಿಸಾರಿ ನಮಸ್ಕರಿಸುತ್ತಾರೆ.

12067034a ಸತ್ಕೃತಂ ಸ್ವಜನೇನೇಹ ಪರೋಽಪಿ ಬಹು ಮನ್ಯತೇ|
12067034c ಸ್ವಜನೇನ ತ್ವವಜ್ಞಾತಂ ಪರೇ ಪರಿಭವಂತ್ಯುತ||

ಸ್ವಜನರಿಂದ ಸತ್ಕೃತನಾದವನನ್ನು ಇತರರೂ ಕೂಡ ಗೌರವಿಸುತ್ತಾರೆ. ಸ್ವಜನರಿಂದಲೇ ತಿರಸ್ಕೃತನಾದವನನ್ನು ಇತರರೂ ಅನಾದರಿಸುತ್ತಾರೆ.

12067035a ರಾಜ್ಞಃ ಪರೈಃ ಪರಿಭವಃ ಸರ್ವೇಷಾಮಸುಖಾವಹಃ|
12067035c ತಸ್ಮಾಚ್ಚತ್ರಂ ಚ ಪತ್ರಂ ಚ ವಾಸಾಂಸ್ಯಾಭರಣಾನಿ ಚ||
12067036a ಭೋಜನಾನ್ಯಥ ಪಾನಾನಿ ರಾಜ್ಞೇ ದದ್ಯುರ್ಗೃಹಾಣಿ ಚ|
12067036c ಆಸನಾನಿ ಚ ಶಯ್ಯಾಶ್ಚ ಸರ್ವೋಪಕರಣಾನಿ ಚ||

ಶತ್ರುಗಳಿಂದ ಪರಾಜಿತನಾದ ರಾಜನು ಸರ್ವರಿಗೂ ಅಸುಖವನ್ನು ತರುತ್ತಾನೆ. ಆದುದರಿಂದ ರಾಜನಿಗೆ ಚತ್ರ, ವಾಹನ, ವಸ್ತ್ರಗಳು, ಆಭರಣಗಳು, ಭೋಜನ, ಅನ್ಯ ಪಾನೀಯಗಳು ಮತ್ತು ಗೃಹಗಳನ್ನು ನೀಡಬೇಕು.

12067037a ಗುಪ್ತಾತ್ಮಾ ಸ್ಯಾದ್ದುರಾಧರ್ಷಃ ಸ್ಮಿತಪೂರ್ವಾಭಿಭಾಷಿತಾ|

12067037c ಆಭಾಷಿತಶ್ಚ ಮಧುರಂ ಪ್ರತಿಭಾಷೇತ ಮಾನವಾನ್॥

ಹೀಗೆ ಪ್ರಜೆಗಳಿಂದ ರಕ್ಷಿತನಾದ ರಾಜನು ಇತರರಿಗೆ ದುರಾಧರ್ಷನಾಗುತ್ತಾನೆ. ನಗುಮುಖದಿಂದಲೇ ಪ್ರಜೆಗಳೊಂದಿಗೆ ಮಾತನಾಡುತ್ತಾನೆ. ರಾಜನಾದವನು ಪ್ರಜೆಗಳಿಗೆ ಮಧುರ ಮಾತುಗಳಿಂದಲೇ ಉತ್ತರಿಸಬೇಕು.

12067038a ಕೃತಜ್ಞೋ ದೃಢಭಕ್ತಿಃ ಸ್ಯಾತ್ಸಂವಿಭಾಗೀ ಜಿತೇಂದ್ರಿಯಃ|
12067038c ಈಕ್ಷಿತಃ ಪ್ರತಿವೀಕ್ಷೇತ ಮೃದು ಚರ್ಜು ಚ ವಲ್ಗು ಚ॥

ರಾಜನಾದವನು ಪ್ರಜೆಗಳಿಗೆ ಕೃತಜ್ಞನಾಗಿರಬೇಕು. ಪ್ರಜೆಗಳಲ್ಲಿ ದೃಢ ಭಕ್ತಿಯನ್ನಿಟ್ಟುಕೊಂಡಿರಬೇಕು. ಅವರೊಂದಿಗೆ ಹಂಚಿಕೊಳ್ಳಬೇಕು. ಜಿತೇಂದ್ರಿಯನಾಗಿರಬೇಕು. ತನ್ನ ಕಡೆ ನೋಡುವವರನ್ನು ತಾನೂ ನೋಡಬೇಕು. ಮೃದುವಾಗಿರಬೇಕು. ಮಾಧುರ್ಯದಿಂದ ಮತ್ತು ಸರಳತೆಯಿಂದ ಮಾತನಾಡಬೇಕು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ರಾಷ್ಟ್ರೇರಾಜಕರಣಾವಶ್ಯಕಸ್ಯಕಥನೇ ಸಪ್ತಷಷ್ಠಿತಮೋऽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ರಾಷ್ಟ್ರದಲ್ಲಿ ರಾಜನನ್ನು ಮಾಡಿಕೊಳ್ಳುವ ಅವಶ್ಯಕತೆಯ ಕಥನ ಎನ್ನುವ ಅರವತ್ತೇಳನೇ ಅಧ್ಯಾಯವು.

೬೮

ಬೃಹಸ್ಪತಿ-ಕೌಸಲ್ಯ ಸಂವಾದ

ವಸುಮನ ಮತ್ತು ಬೃಹಸ್ಪತಿಯರ ಸಂವಾದದಲ್ಲಿ ರಾಜನಿಲ್ಲದಿದ್ದರೆ ಪ್ರಜೆಗಳಿಗಾಗುವ ಹಾನಿ ಮತ್ತು ರಾಜನಿದ್ದರೆ ಆಗುವ ಲಾಭಗಳ ವರ್ಣನೆ (1-61).

12068001 ಯುಧಿಷ್ಠಿರ ಉವಾಚ|
12068001a ಕಿಮಾಹುರ್ದ್ಯೈವತಂ ವಿಪ್ರಾ ರಾಜಾನಂ ಭರತರ್ಷಭ|
12068001c ಮನುಷ್ಯಾಣಾಮಧಿಪತಿಂ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ಪಿತಾಮಹ! ಮನುಷ್ಯರಿಗೆ ಅಧಿಪತಿಯಾದ ರಾಜನನ್ನು ವಿಪ್ರರು ದೇವನೆಂದು ಏಕೆ ಹೇಳುತ್ತಾರೆ? ಅದನ್ನು ನನಗೆ ಹೇಳು."

12068002 ಭೀಷ್ಮ ಉವಾಚ|
12068002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12068002c ಬೃಹಸ್ಪತಿಂ ವಸುಮನಾ ಯಥಾ ಪಪ್ರಚ್ಚ ಭಾರತ||

ಭೀಷ್ಮನು ಹೇಳಿದನು: "ಭಾರತ! ನೀನು ಕೇಳಿದುದಕ್ಕೆ ಸಂಬಂಧಿಸಿದಂತೆ ಬೃಹಸ್ಪತಿ-ವಸುಮನರ ಈ ಪುರಾತನ ಐತಿಹಾಸಿಕ ಸಂವಾದವನ್ನು ಉದಾಹರಿಸುತ್ತಾರೆ.

12068003a ರಾಜಾ ವಸುಮನಾ ನಾಮ ಕೌಸಲ್ಯೋ ಧೀಮತಾಂ ವರಃ|
12068003c ಮಹರ್ಷಿಂ ಪರಿಪಪ್ರಚ್ಚ ಕೃತಪ್ರಜ್ಞೋ ಬೃಹಸ್ಪತಿಮ್||

ಧೀಮತರಲ್ಲಿ ಶ್ರೇಷ್ಠ ವಸುಮನಾ ಎಂಬ ಹೆಸರಿನ ಕೋಸಲದ ರಾಜನು ಕೃತಪ್ರಜ್ಞನಾದ ಮಹರ್ಷಿ ಬೃಹಸ್ಪತಿಯಲ್ಲಿ ಪ್ರಶ್ನಿಸಿದನು.

12068004a ಸರ್ವಂ ವೈನಯಿಕಂ ಕೃತ್ವಾ ವಿನಯಜ್ಞೋ ಬೃಹಸ್ಪತೇಃ|

12068004c ದಕ್ಷಿಣಾನಂತರೋ ಭೂತ್ವಾ ಪ್ರಣಮ್ಯ ವಿಧಿಪೂರ್ವಕಮ್‌॥
12068005a ವಿಧಿಂ ಪಪ್ರಚ್ಛ ರಾಜ್ಯಸ್ಯ ಸರ್ವಭೂತಹಿತೇ ರತಃ।
12068005c ಪ್ರಜಾನಾಂ ಹಿತಮನ್ವಿಚ್ಚನ್ಧರ್ಮಮೂಲಂ ವಿಶಾಂ ಪತೇ॥

ವಿಶಾಂಪತೇ! ಯಾರಲ್ಲಿ ಹೇಗೆ ವಿನಯದಿಂದ ನಡೆದುಕೊಳ್ಳಬೇಕೆಂದು ತಿಳಿದುಕೊಂಡಿದ್ದ ಮತ್ತು ಸರ್ವಭೂತಗಳ ಹಿತದಲ್ಲಿಯೇ ನಿರತನಾಗಿದ್ದ ಅವನು ಬೃಹಸ್ಪತಿಯನ್ನು ಸರ್ವ ವಿನಯದಿಂದ ಸ್ವಾಗತಿಸಿ, ಸತ್ಕರಿಸಿ, ವಿಧಿಪೂರ್ವಕವಾಗಿ ನಮಸ್ಕರಿಸಿ, ಪ್ರಜೆಗಳ ಹಿತವನ್ನು ಬಯಸಿ ಧರ್ಮಮೂಲದ ವಿಧಿಯನ್ನು ಕೇಳಿದನು.

12068006a ಕೇನ ಭೂತಾನಿ ವರ್ಧಂತೇ ಕ್ಷಯಂ ಗಚ್ಚಂತಿ ಕೇನ ಚ।
12068006c ಕಮರ್ಚಂತೋ ಮಹಾಪ್ರಾಜ್ಞ ಸುಖಮತ್ಯಂತಮಾಪ್ನುಯುಃ॥

“ಮಹಾಪ್ರಾಜ್ಞ! ಯಾವುದರಿಂದ ಪ್ರಜೆಗಳು ವರ್ಧಿಸುತ್ತಾರೆ? ಯಾವುದರಿಂದ ಪ್ರಜೆಗಳು ಕ್ಷಯವನ್ನು ಹೊಂದುತ್ತಾರೆ? ಯಾರನ್ನು ಅರ್ಚಿಸಿ ಅವರು ಅತ್ಯಂತ ಸುಖವನ್ನು ಪಡೆಯುತ್ತಾರೆ?”

12068007a ಇತಿ ಪೃಷ್ಟೋ ಮಹಾರಾಜ್ಞಾ ಕೌಸಲ್ಯೇನಾಮಿತೌಜಸಾ।
12068007c ರಾಜಸತ್ಕಾರಮವ್ಯಗ್ರಃ ಶಶಂಸಾಸ್ಯ ಬೃಹಸ್ಪತಿಃ॥

ಮಹಾರಾಜ ಅಮಿತೌಜಸ ಕೌಸಲ್ಯನು ಹೀಗೆ ಕೇಳಲು ಅವ್ಯಗ್ರ ಬೃಹಸ್ಪತಿಯು ರಾಜಸತ್ಕಾರವನ್ನು ಪ್ರಶಂಸಿಸುತ್ತಾ ಹೇಳಿದನು:

12068008a ರಾಜಮೂಲೋ ಮಹಾರಾಜ ಧರ್ಮೋ ಲೋಕಸ್ಯ ಲಕ್ಷ್ಯತೇ।
12068008c ಪ್ರಜಾ ರಾಜಭಯಾದೇವ ನ ಖಾದಂತಿ ಪರಸ್ಪರಮ್‌॥

“ಮಹಾರಾಜ! ಲೋಕದ ಧರ್ಮಕ್ಕೆ ರಾಜನೇ ಮೂಲವೆಂದು

ಕಂಡುಬರುತ್ತದೆ. ರಾಜನ ಭಯದಿಂದಲೇ ಪ್ರಜೆಗಳು ಪರಸ್ಪರರನ್ನು ತಿಂದುಹಾಕುವುದಿಲ್ಲ.

12068009a ರಾಜಾ ಹ್ಯೇವಾಖಿಲಂ ಲೋಕಂ ಸಮುದೀರ್ಣಂ ಸಮುತ್ಸುಕಮ್|
12068009c ಪ್ರಸಾದಯತಿ ಧರ್ಮೇಣ ಪ್ರಸಾದ್ಯ ಚ ವಿರಾಜತೇ||

ಮರ್ಯಾದೆಯನ್ನು ಮೀರಿ ನಡೆಯುವ ಮತ್ತು ಅನುಚಿತ ಭೋಗಗಳಲ್ಲಿಯೇ ಆಸಕ್ತರಾಗಿರುವ ಅಖಿಲ ಲೋಕವನ್ನು ರಾಜನು ಧರ್ಮದಿಂದ ಪ್ರಸನ್ನಗೊಳಿಸುತ್ತಾನೆ. ಅದರ ಪ್ರಸಾದವಾಗಿ ತಾನೂ ವಿರಾಜಿಸುತ್ತಾನೆ.

12068010a ಯಥಾ ಹ್ಯನುದಯೇ ರಾಜನ್ಭೂತಾನಿ ಶಶಿಸೂರ್ಯಯೋಃ|
12068010c ಅಂಧೇ ತಮಸಿ ಮಜ್ಜೀಯುರಪಶ್ಯಂತಃ ಪರಸ್ಪರಮ್||
12068011a ಯಥಾ ಹ್ಯನುದಕೇ ಮತ್ಸ್ಯಾ ನಿರಾಕ್ರಂದೇ ವಿಹಂಗಮಾಃ|
12068011c ವಿಹರೇಯುರ್ಯಥಾಕಾಮಮಭಿಸೃತ್ಯ ಪುನಃ ಪುನಃ||
12068012a ವಿಮಥ್ಯಾತಿಕ್ರಮೇರಂಶ್ಚ ವಿಷಹ್ಯಾಪಿ ಪರಸ್ಪರಮ್|
12068012c ಅಭಾವಮಚಿರೇಣೈವ ಗಚ್ಚೇಯುರ್ನಾತ್ರ ಸಂಶಯಃ||
12068013a ಏವಮೇವ ವಿನಾ ರಾಜ್ಞಾ ವಿನಶ್ಯೇಯುರಿಮಾಃ ಪ್ರಜಾಃ|
12068013c ಅಂಧೇ ತಮಸಿ ಮಜ್ಜೀಯುರಗೋಪಾಃ ಪಶವೋ ಯಥಾ||

ರಾಜನ್! ಶಶಿ-ಸೂರ್ಯರು ಉದಯಿಸದೇ ಗಾಢಾಂಧಕಾರದಲ್ಲಿ ಮುಳುಗಿದ ಭೂತಗಳು ಪರಸ್ಪರರನ್ನು ಹೇಗೆ ನೋಡಲಿಕ್ಕಾಗುವುದಿಲ್ಲವೋ ಹಾಗೆ, ನೀರಿಲ್ಲದ ಕೊಳದಲ್ಲಿ ಮೀನುಗಳು ಹೇಗೋ ಹಾಗೆ, ಹಿಂಸಮೃಗಗಳ ಗರ್ಜನೆಯಿಲ್ಲದ ವನದಲ್ಲಿ ಪಕ್ಷಿಗಳು ಯಥೇಚ್ಛರಾಗಿ ವಿಹರಿಸುತ್ತಾ ಪುನಃ ಪುನಃ ಹಿಂಸಿಸುತ್ತಾ ಪರಸ್ಪರರ

ಪ್ರದೇಶಗಳನ್ನು ಅತಿಕ್ರಮಿಸುತ್ತಾ ಕ್ಷಣಮಾತ್ರದಲ್ಲಿ ಹೇಗೆ ನಿಸ್ಸಂಶಯವಾಗಿ ನಾಶಹೊಂದುವವೋ ಹಾಗೆ, ರಾಜನಿಲ್ಲದೆಯೇ ಈ ಪ್ರಜೆಗಳು ರಕ್ಷಕರಿಲ್ಲದ ಪಶುಗಳಂತೆ ಗಾಢಾಂಧಕಾರದಲ್ಲಿ ಮುಳುಗಿ ವಿನಾಶಹೊಂದುತ್ತಾರೆ.

12068014a ಹರೇಯುರ್ಬಲವಂತೋ ಹಿ ದುರ್ಬಲಾನಾಂ ಪರಿಗ್ರಹಾನ್|
12068014c ಹನ್ಯುರ್ವ್ಯಾಯಚ್ಚಮಾನಾಂಶ್ಚ ಯದಿ ರಾಜಾ ನ ಪಾಲಯೇತ್||

ರಾಜನು ಒಂದುವೇಳೆ ಪಾಲಿಸದೇ ಇದ್ದರೆ ಬಲವಂತರು ದುರ್ಬಲರ ಸ್ವತ್ತುಗಳನ್ನು ಅಪಹರಿಸುವರು. ಬಯಸಿದರೆ ಸಂಹರಿಸಲೂ ಬಹುದು.

12068015a ಯಾನಂ ವಸ್ತ್ರಮಲಂಕಾರಾನ್ರತ್ನಾನಿ ವಿವಿಧಾನಿ ಚ|
12068015c ಹರೇಯುಃ ಸಹಸಾ ಪಾಪಾ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದರೆ ಪಾಪಿಗಳು ತಕ್ಷಣವೇ ವಾಹನ, ವಸ್ತ್ರ, ಅಲಂಕಾರಗಳು, ಮತ್ತು ವಿವಿಧ ರತ್ನಗಳನ್ನು ಅಪಹರಿಸುತ್ತಾರೆ.

12068016a ಮಮೇದಮಿತಿ ಲೋಕೇಽಸ್ಮಿನ್ನ ಭವೇತ್ಸಂಪರಿಗ್ರಹಃ|
[190]12068016c ವಿಶ್ವಲೋಪಃ ಪ್ರವರ್ತೇತ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಈ ಲೋಕದಲ್ಲಿ ನನ್ನದು ಎನ್ನುವುದರ ಸಂಗ್ರಹವೇ ಸಾಧ್ಯವಾಗುತ್ತಿರಲಿಲ್ಲ. ವಿಶ್ವದ ಎಲ್ಲವುಗಳ ಲೋಪವಾಗುತ್ತಿತ್ತು.

---

[190] ಭಾರತದರ್ಶನದಲ್ಲಿ ಇದರ ಮೊದಲು ಈ ಶ್ಲೋಕಾರ್ಧವಿದೆ: ನ ದಾರಾ ನ ಚ ಪುತ್ರಃ ಸ್ಯಾನ್ನ ಧನಂ ನ ಪರಿಗ್ರಹಃ|

12068017a ಮಾತರಂ ಪಿತರಂ ವೃದ್ಧಮಾಚಾರ್ಯಮತಿಥಿಂ ಗುರುಮ್|
12068017c ಕ್ಲಿಶ್ನೀಯುರಪಿ ಹಿಂಸ್ಯುರ್ವಾ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ವೃದ್ಧ ತಂದೆ-ತಾಯಿಗಳನ್ನು, ಆಚಾರ್ಯನನ್ನು, ಅತಿಥಿಯನ್ನು, ಮತ್ತು ಹಿರಿಯರನ್ನು ಹಿಂಸಿಸುತ್ತಿದ್ದರು ಅಥವಾ ಕಷ್ಟಕ್ಕೊಳಪಡಿಸುತ್ತಿದ್ದರು.

12068018a ಪತೇದ್ಬಹುವಿಧಂ ಶಸ್ತ್ರಂ ಬಹುಧಾ ಧರ್ಮಚಾರಿಷು|
12068018c ಅಧರ್ಮಃ ಪ್ರಗೃಹೀತಃ ಸ್ಯಾದ್ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಧರ್ಮಚಾರಿಗಳ ಮೇಲೆ ಬಹುವಿಧದ ಅನೇಕ ಶಸ್ತ್ರಗಳು ಬೀಳುತ್ತಿದ್ದವು. ಅಧರ್ಮವೇ ವಿಶ್ವವನ್ನು ಆವರಿಸಿಬಿಡುತ್ತಿತ್ತು.

12068019a ವಧಬಂಧಪರಿಕ್ಲೇಶೋ ನಿತ್ಯಮರ್ಥವತಾಂ ಭವೇತ್|
12068019c ಮಮತ್ವಂ ಚ ನ ವಿಂದೇಯುರ್ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಧನವಂತರ ವಧೆ, ಬಂಧನ ಮತ್ತು ಹಿಂಸೆಗಳು ನಿತ್ಯವೂ ನಡೆಯುತ್ತಿದ್ದವು. ಯಾರೇ ಆಗಲೀ ಯಾವುದನ್ನೂ ತನ್ನದು ಎಂದು ಹೇಳಿಕೊಳ್ಳಲಾಗುತ್ತಿರಲಿಲ್ಲ.

12068020a ಅಂತಶ್ಚಾಕಾಶಮೇವ ಸ್ಯಾಲ್ಲೋಕೋಽಯಂ ದಸ್ಯುಸಾದ್ಭವೇತ್|
12068020c ಪತೇಚ್ಚ ನರಕಂ ಘೋರಂ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಪ್ರಜೆಗಳು ಅಕಾಲದಲ್ಲಿಯೇ ಮೃತ್ಯುವಶರಾಗುತ್ತಿದ್ದರು. ಲೋಕವೆಲ್ಲವೂ ಕಳ್ಳಕಾಕರ ವಶವಾಗಿಬಿಡುತ್ತಿತ್ತು. ಎಲ್ಲರೂ ಘೋರ ನರಕದಲ್ಲಿ ಬೀಳುತ್ತಿದ್ದರು.

12068021a ನ ಯೋನಿಷೋಷೋ[191] ವರ್ತೇತ ನ ಕೃಷಿರ್ನ ವಣಿಕ್ಪಥಃ|
12068021c ಮಜ್ಜೇದ್ಧರ್ಮಸ್ತ್ರಯೀ ನ ಸ್ಯಾದ್ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ವಿವಾಹವೆನ್ನುವುದು ಇರುತ್ತಿರಲಿಲ್ಲ. ಕೃಷಿಯಾಗಲೀ ವ್ಯಾಪಾರಗಳಾಗಲೀ ಇರುತ್ತಿರಲಿಲ್ಲ. ಧರ್ಮವು ಮುಳುಗಿಹೋಗಿ ಮೂರು ವೇದಗಳೂ ಇರುತ್ತಿರಲಿಲ್ಲ.

12068022a ನ ಯಜ್ಞಾಃ ಸಂಪ್ರವರ್ತೇರನ್ವಿಧಿವತ್ಸ್ವಾಪ್ತದಕ್ಷಿಣಾಃ|
12068022c ನ ವಿವಾಹಾಃ ಸಮಾಜಾ ವಾ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಆಪ್ತದಕ್ಷಿಣಾಯುಕ್ತ ಯಜ್ಞಗಳು ವಿಧಿವತ್ತಾಗಿ ನಡೆಯುತ್ತಿರಲಿಲ್ಲ. ವಿವಾಹಗಳಾಗುತ್ತಿರಲಿಲ್ಲ. ಸಾಮಾಜಿಕ ಕಾರ್ಯಕ್ರಮಗಳೂ ನಡೆಯುತ್ತಿರಲಿಲ್ಲ.

12068023a ನ ವೃಷಾಃ ಸಂಪ್ರವರ್ತೇರನ್ನ ಮಥ್ಯೇರಂಶ್ಚ ಗರ್ಗರಾಃ|
12068023c ಘೋಷಾಃ ಪ್ರಣಾಶಂ ಗಚ್ಛೇಯುರ್ಯದಿ ರಾಜಾ ನ ಪಾಲಯೇತ್||

ಒಂದು ವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಹೋರಿಗಳು ಹಸುಗಳಲ್ಲಿ ಗರ್ಭದಾನ ಮಾಡುತ್ತಿರಲಿಲ್ಲ. ಮೊಸರು ತುಂಬಿದ ಪಾತ್ರೆಗಳನ್ನು ಕಡೆಯುತ್ತಿರಲಿಲ್ಲ. ಗೋಶಾಲೆಗಳೆಲ್ಲವೂ ನಾಶಹೊಂದುತ್ತಿದ್ದವು.

12068024a ತ್ರಸ್ತಮುದ್ವಿಗ್ನಹೃದಯಂ ಹಾಹಾಭೂತಮಚೇತನಮ್|
12068024c ಕ್ಷಣೇನ ವಿನಶೇತ್ಸರ್ವಂ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಜಗತ್ತು ಭಯಭೀತವಾಗುತ್ತಿತ್ತು. ಉದ್ವಿಗ್ನಮನಸ್ಸಿನಿಂದ ಕೂಡಿರುತ್ತಿತ್ತು.

---

[191] ನ ಯೋನಿದೋಷೋ ವರ್ತೇತ ಎಂಬ ಪಾಠಾಂತರವಿದೆ.

ಹಾಹಾಕಾರಗಳೇ ಕೇಳಿಬರುತ್ತಿದ್ದವು. ಕ್ಷಣಮಾತ್ರದಲ್ಲಿ
ಸರ್ವವಿನಾಶವಾಗುತ್ತಿತ್ತು.

12068025a ನ ಸಂವತ್ಸರಸತ್ರಾಣಿ ತಿಷ್ಠೇಯುರಕುತೋಭಯಾಃ|
12068025c ವಿಧಿವದ್ದಕ್ಷಿಣಾವಂತಿ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ಭಯದಿಂದಾಗಿ ವಿವಿಧ
ದಕ್ಷಿಣಾಯುಕ್ತ ಸಂವತ್ಸರ ಸತ್ರಗಳು ನಿಂತುಹೋಗುತ್ತಿದ್ದವು.

12068026a ಬ್ರಾಹ್ಮಣಾಶ್ಚತುರೋ ವೇದಾನ್ನಾಧೀಯೀರಂಸ್ತಪಸ್ವಿನಃ|
12068026c ವಿದ್ಯಾಸ್ನಾತಾಸ್ತಪಃಸ್ನಾತಾ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲಿಸದೇ ಇದ್ದಿದ್ದರೆ ವಿದ್ಯಾಭ್ಯಾಸಮಾಡಿ
ಸ್ನಾತಕರಾಗಿ ಬ್ರಹ್ಮಚರ್ಯವನ್ನು ಪಾಲಿಸುವ ತಪಸ್ವಿ ಬ್ರಾಹ್ಮಣರು
ನಾಲ್ಕು ವೇದಗಳ ಅಧ್ಯಯನ ಮಾಡುತ್ತಿರಲಿಲ್ಲ.

12068027a ಹಸ್ತೋ ಹಸ್ತಂ ಸ ಮುಷ್ಣೀಯಾದ್ಭಿದ್ಯೇರನ್ಸರ್ವಸೇತವಃ|
12068027c ಭಯಾರ್ತಂ ವಿದ್ರವೇತ್ಸರ್ವಂ ಯದಿ ರಾಜಾ ನ ಪಾಲಯೇತ್||

ಒಂದುವೇಳೆ ರಾಜನು ಪಾಲನೇ ಮಾಡದೇ ಇದ್ದಿದ್ದರೆ
ಕೈಯಲ್ಲಿರುವುದೇ ಕಳ್ಳತನವಾಗುತ್ತಿತ್ತು. ಸರ್ವಸೇತುವೆಗಳೂ
ತುಂಡಾಗುತ್ತಿದ್ದವು. ಎಲ್ಲರೂ ಭಯಾರ್ತರಾಗಿ ಓಡುತ್ತಿದ್ದರು.

12068028a ನ ಲಭೇದ್ಧರ್ಮಸಂಶ್ಲೇಷಂ ಹತವಿಪ್ರಹತೋ ಜನಃ|
12068028c ಕರ್ತಾ ಸ್ವೇಚ್ಚೇಂದ್ರಿಯೋ[192] ಗಚ್ಚೇದ್ಯದಿ ರಾಜಾ ನ ಪಾಲಯೇತ್||

---

[192] ಹರ್ತಾ ಸ್ವಸ್ಥೇಂದ್ರಿಯೋ ಅರ್ಥಾತ್ ಕಳ್ಳತನ ಮಾಡುವು ತಮ್ಮ ಶರೀರ-
ಮನಸ್ಸುಗಳಿಗೆ ಯಾವುದೇ ಆತಂಕವಿಲ್ಲದೇ ಕಳ್ಳತನ ಮಾಡುತ್ತಿದ್ದರು ಎಂಬ

ಒಂದು ವೇಳೆ ರಾಜನು ಪಾಲಿಸದೇ ಇದ್ದಿದ್ದರೆ ವಿಪ್ರರು ಹತರಾಗಿ ಮತ್ತು ಜನರು ಹತರಾಗಿ ಲೋಕವು ಧರ್ಮದ ಸಂಬಂಧವನ್ನೇ ಕಳೆದುಕೊಳ್ಳುತ್ತಿತ್ತು. ಜನರು ಸ್ವ-ಇಚ್ಛೆಯಿಂದ ಕೆಲಸ ಮಾಡುತ್ತಿದ್ದರು.

12068029a ಅನಯಾಃ ಸಂಪ್ರವರ್ತೇರನ್ಭವೇದ್ವೈ ವರ್ಣಸಂಕರಃ|
12068029c ದುರ್ಭಿಕ್ಷಮಾವಿಶೇದ್ರಾಷ್ಟ್ರಂ ಯದಿ ರಾಜಾ ನ ಪಾಲಯೇತ್||

ರಾಜನೇನಾದರೂ ಧರ್ಮದಿಂದ ರಾಜ್ಯವನ್ನು ಪರಿಪಾಲಿಸದಿದ್ದರೆ ಅನ್ಯಾಯ-ಅತ್ಯಾಚಾರಗಳು ಸರ್ವತ್ರ ವ್ಯಾಪ್ತವಾಗುತ್ತಿದ್ದವು. ವರ್ಣಸಂಕರವುಂಟಾಗಿ ಅದರಿಂದ ರಾಷ್ಟ್ರದಲ್ಲಿ ದುರ್ಭಿಕ್ಷವಾಗುತ್ತಿತ್ತು.

12068030a ವಿವೃತ್ಯ ಹಿ ಯಥಾಕಾಮಂ ಗೃಹದ್ವಾರಾಣಿ ಶೇರತೇ|
12068030c ಮನುಷ್ಯಾ ರಕ್ಷಿತಾ ರಾಜ್ಞಾ ಸಮಂತಾದಕುತೋಭಯಾಃ||

ರಾಜನಿಂದ ರಕ್ಷಿತರಾದ ಮನುಷ್ಯರು ಸುತ್ತಲೂ ಯಾವುದೇ ರೀತಿಯ ಭಯವೂ ಇಲ್ಲದೇ ಮನೆಯ ಬಾಗಿಲುಗಳನ್ನು ತೆರೆದುಕೊಂಡೇ ನಿರಾತಂಕರಾಗಿ ಮಲಗುತ್ತಾರೆ.

12068031a ನಾಕ್ರುಷ್ಟಂ ಸಹತೇ ಕಶ್ಚಿತ್ಕುತೋ ಹಸ್ತಸ್ಯ ಲಂಘನಮ್|
12068031c ಯದಿ ರಾಜಾ ಮನುಷ್ಯೇಷು ತ್ರಾತಾ ಭವತಿ ಧಾರ್ಮಿಕಃ||

ಒಂದು ವೇಳೆ ಧಾರ್ಮಿಕ ರಾಜನು ಮನುಷ್ಯರ ಪರಿಪಾಲನೆ ಮಾಡದೇ ಇದ್ದರೆ ಒಬ್ಬರು ನಿಂದಿಸುವುದನ್ನು ಮತ್ತೊಬ್ಬರು ಸಹಿಸಿಕೊಳ್ಳುತ್ತಿರಲಿಲ್ಲ. ಇನ್ನು ಪರಸ್ಪರರ ಪ್ರಹಾರಗಳನ್ನು ಹೇಗೆ ಸಹಿಸಿಕೊಳ್ಳುತ್ತಿದ್ದರು?

12068032a ಸ್ತ್ರಿಯಶ್ಚಾಪುರುಷಾ ಮಾರ್ಗಂ ಸರ್ವಾಲಂಕಾರಭೂಷಿತಾಃ|

ಪಾಠಾಂತರವಿದೆ.

12068032c ನಿರ್ಭಯಾಃ ಪ್ರತಿಪದ್ಯಂತೇ ಯದಾ ರಕ್ಷತಿ ಭೂಮಿಪಃ||

ರಾಜನ ರಕ್ಷಣೆಯಿದ್ದರೆ ಸ್ತ್ರೀಯರು ಸರ್ವಾಲಂಕರ ಭೂಷಿತೆಯರಾಗಿ, ಜೊತೆಗೆ ಪುರುಷರಿಲ್ಲದಿದ್ದರೂ, ನಿರ್ಭಯರಾಗಿ ರಸ್ತೆಗಳಲ್ಲಿ ನಡೆಯುತ್ತಾರೆ.

12068033a ಧರ್ಮಮೇವ ಪ್ರಪದ್ಯಂತೇ ನ ಹಿಂಸಂತಿ ಪರಸ್ಪರಮ್|
12068033c ಅನುಗೃಹ್ಣಂತಿ ಚಾನ್ಯೋನ್ಯಂ ಯದಾ ರಕ್ಷತಿ ಭೂಮಿಪಃ||

ರಾಜನ ರಕ್ಷಣೆಯಿದ್ದರೆ ಜನರು ಧರ್ಮವನ್ನೇ ಅನುಸರಿಸುತ್ತಾರೆ. ಪರಸ್ಪರರನ್ನು ಹಿಂಸಿಸುವುದಿಲ್ಲ. ಅನ್ಯೋನ್ಯರನ್ನು ಅನುಗ್ರಹಿಸುತ್ತಾರೆ.

12068034a ಯಜಂತೇ ಚ ತ್ರಯೋ ವರ್ಣಾ ಮಹಾಯಜ್ಞೈಃ ಪೃಥಗ್ವಿಧೈಃ|
12068034c ಯುಕ್ತಾಶ್ಚಾಧೀಯತೇ ಶಾಸ್ತ್ರಂ ಯದಾ ರಕ್ಷತಿ ಭೂಮಿಪಃ||

ರಾಜನ ರಕ್ಷಣೆಯಿದ್ದರೆ ಮೂರೂ ವರ್ಣದವರೂ ಪ್ರತ್ಯೇಕ ವಿಧಗಳ ಮಹಾಯಜ್ಞಗಳನ್ನು ಯಾಜಿಸುತ್ತಾರೆ. ಏಕಾಗ್ರರಾಗಿ ಶಾಸ್ತ್ರಗಳ ಅಧ್ಯಯನಗಳನ್ನೂ ಮಾಡುತ್ತಾರೆ.

12068035a ವಾರ್ತಾಮೂಲೋ ಹ್ಯಯಂ ಲೋಕಸ್ತಯ್ಯಾ ವೈ ಧಾರ್ಯತೇ ಸದಾ|
12068035c ತತ್ಸರ್ವಂ ವರ್ತತೇ ಸಮ್ಯಗ್ಯದಾ ರಕ್ಷತಿ ಭೂಮಿಪಃ||

ರಾಜನ ರಕ್ಷಣೆಯಿದ್ದರೆ ಈ ಮೂರೂ ಲೋಕಗಳ ಮೂಲಸ್ಥಂಭಗಳೆನಿಸಿರುವ ಕೃಷಿ-ವಾಣಿಜ್ಯ-ಗೋರಕ್ಷಣೆಗಳೇ ಮೊದಲಾದ ಉದ್ಯೋಗಗಳೂ, ವೇದ ಧರ್ಮಗಳೂ ಸರಿಯಾಗಿ ನಡೆಯುತ್ತವೆ.

12068036a ಯದಾ ರಾಜಾ ಧುರಂ ಶ್ರೇಷ್ಠಾಮಾದಾಯ ವಹತಿ ಪ್ರಜಾಃ|

12068036c ಮಹತಾ ಬಲಯೋಗೇನ ತದಾ ಲೋಕಃ ಪ್ರಸೀದತಿ||

ಯಾವಾಗ ರಾಜನು ಮಹಾಸೇನೆಯಿಂದ ಕೂಡಿದವನಾಗಿ ಪ್ರಜೆಗಳ ಶ್ರೇಷ್ಠ ಭಾರವನ್ನು ವಹಿಸಿಕೊಳ್ಳುತ್ತಾನೋ ಆಗ ಲೋಕವು ಪ್ರಸನ್ನವಾಗುತ್ತದೆ.

12068037a ಯಸ್ಯಾಭಾವೇ ಚ ಭೂತಾನಾಮಭಾವಃ ಸ್ಯಾತ್ಸಮಂತತಃ|
12068037c ಭಾವೇ ಚ ಭಾವೋ ನಿತ್ಯಃ ಸ್ಯಾತ್ಕಸ್ತಂ ನ ಪ್ರತಿಪೂಜಯೇತ್||

ಯಾರ ಇಲ್ಲದಿರುವಿಕೆಯಿಂದ ಎಲ್ಲೆಲ್ಲಿಯೂ ಭೂತಗಳ ವಿನಾಶವಾಗುತ್ತದೆಯೋ ಮತ್ತು ಯಾರ ಇರುವಿಕೆಯಿಂದ ಎಲ್ಲವೂ ಉಳಿದುಕೊಳ್ಳುತ್ತವೆಯೋ ಅಂಥಹ ರಾಜನನ್ನು ಯಾರುತಾನೇ ಪೂಜಿಸುವುದಿಲ್ಲ?

12068038a ತಸ್ಯ ಯೋ ವಹತೇ ಭಾರಂ ಸರ್ವಲೋಕಸುಖಾವಹಮ್|
12068038c ತಿಷ್ಠೇತ್ಪ್ರಿಯಹಿತೇ ರಾಜ್ಞ ಉಭೌ ಲೋಕೌ ಹಿ ಯೋ ಜಯೇತ್||

ಸರ್ವಲೋಕಗಳಿಗೂ ಹಿತವನ್ನುಂಟುಮಾಡುವ ಈ ಭಾರವನ್ನು ಯಾರು ಹೊರುತ್ತಾನೋ ಮತ್ತು ಪ್ರಜೆಗಳ ಪ್ರೀತಿ-ಹಿತಗಳಲ್ಲಿಯೇ ನಿರತನಾಗಿರುತ್ತಾನೋ ಅವನು ಇಹ-ಪರಗಳ ಎರಡೂ ಲೋಕಗಳನ್ನೂ ಜಯಿಸುತ್ತಾನೆ.

12068039a ಯಸ್ತಸ್ಯ ಪುರುಷಃ ಪಾಪಂ ಮನಸಾಪ್ಯನುಚಿಂತಯೇತ್|
12068039c ಅಸಂಶಯಮಿಹ ಕ್ಲಿಷ್ಟಃ ಪ್ರೇತ್ಯಾಪಿ ನರಕಂ ಪತೇತ್||

ಅಂಥಹ ಪುರುಷನ ಕುರಿತು ಮನಸ್ಸಿನಲ್ಲಿ ಕೆಟ್ಟದ್ದನ್ನು ಯೋಚಿಸಿದವನೂ ಕೂಡ ಈ ಲೋಕದಲ್ಲಿ ಕಷ್ಟವನ್ನು ಹೊಂದುತ್ತಾನೆ ಮತ್ತು ಪರದಲ್ಲಿ

ನರಕಕ್ಕೆ ಬೀಳುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ.

12068040a ನ ಹಿ ಜಾತ್ವವಮಂತವ್ಯೋ ಮನುಷ್ಯ ಇತಿ ಭೂಮಿಪಃ|
12068040c ಮಹತೀ ದೇವತಾ ಹ್ಯೇಷಾ ನರರೂಪೇಣ ತಿಷ್ಠತಿ||

ಅವನೂ ಮನುಷ್ಯನೇ ಎಂದು ತಿಳಿದು ರಾಜನನ್ನು ಅವಹೇಳನ ಮಾಡಬಾರದು. ಏಕೆಂದರೆ ಅವನು ನರರೂಪದ ಮಹದೇವತೆಯೇ ಆಗಿರುತ್ತಾನೆ.

12068041a ಕುರುತೇ ಪಂಚ ರೂಪಾಣಿ ಕಾಲಯುಕ್ತಾನಿ ಯಃ ಸದಾ|
12068041c ಭವತ್ಯಗ್ನಿಸ್ತಥಾದಿತ್ಯೋ ಮೃತ್ಯುರ್ವೈಶ್ರವಣೋ ಯಮಃ||

ರಾಜನು ಸದಾ ಕಾಲಕ್ಕೆ ತಕ್ಕಂತೆ ಐದು ರೂಪಗಳನ್ನು ಧರಿಸುತ್ತಾನೆ. ಅವನು ಅಗ್ನಿಯಾಗುತ್ತಾನೆ, ಆದಿತ್ಯನಾಗುತ್ತಾನೆ, ಮೃತ್ಯುವಾಗುತ್ತಾನೆ, ವೈಶ್ರವಣ ಕುಬೇರನಾಗುತ್ತಾನೆ ಮತ್ತು ಯಮಧರ್ಮನೂ ಆಗುತ್ತಾನೆ.

12068042a ಯದಾ ಹ್ಯಾಸೀದತಃ ಪಾಪಾನ್ದಹತ್ಯುಗ್ರೇಣ ತೇಜಸಾ|
12068042c ಮಿಥ್ಯೋಪಚರಿತೋ ರಾಜಾ ತದಾ ಭವತಿ ಪಾವಕಃ||

ಮಿಥ್ಯಾವ್ಯವಹಾರಗಳಿಂದ ವಂಚಿತನಾದ ರಾಜನು ತನ್ನ ಬಳಿಸಾರುವ ಪಾಪಿಗಳನ್ನು ಉಗ್ರ ತೇಜಸ್ಸಿನಿಂದ ದಹಿಸುತ್ತಾನೆ. ಆಗ ಅವನು ಅಗ್ನಿಯಾಗುತ್ತಾನೆ.

12068043a ಯದಾ ಪಶ್ಯತಿ ಚಾರೇಣ ಸರ್ವಭೂತಾನಿ ಭೂಮಿಪಃ|
12068043c ಕ್ಷೇಮಂ ಚ ಕೃತ್ವಾ ವ್ರಜತಿ ತದಾ ಭವತಿ ಭಾಸ್ಕರಃ||

ಚಾರರಿಂದ ಎಲ್ಲವುಗಳ ಕುರಿತು ತಿಳಿದುಕೊಂಡು ಅವುಗಳ ಕ್ಷೇಮವನ್ನು ನೋಡಿಕೊಳ್ಳುವಾಗ ರಾಜನು ಭಾಸ್ಕರನಾಗುತ್ತಾನೆ.

12068044a ಅಶುಚೀಂಶ್ಚ ಯದಾ ಕ್ರುದ್ಧಃ ಕ್ಷಿಣೋತಿ ಶತಶೋ ನರಾನ್|
12068044c ಸಪುತ್ರಪೌತ್ರಾನ್ ಸಾಮಾತ್ಯಾಂಸ್ತದಾ ಭವತಿ ಸೋಽಂತಕಃ||

ಪುತ್ರ-ಪೌತ್ರ-ಅಮಾತ್ಯರೊಂದಿಗೆ ಅವನು ನೂರಾರು ಕ್ಷುದ್ರ ಅಶುಚಿ ಜನರನ್ನು ನಾಶಗೊಳಿಸುವಾಗ ಅವನು ಅಂತಕನಾಗುತ್ತಾನೆ.

12068045a ಯದಾ ತ್ವಧಾರ್ಮಿಕಾನ್ಸರ್ವಾಂಸ್ತೀಕ್ಷ್ಣೈರ್ದಂಡೈರ್ನಿಯಚ್ಚತಿ|
12068045c ಧಾರ್ಮಿಕಾಂಶ್ಚಾನುಗೃಹ್ಣಾತಿ ಭವತ್ಯಥ ಯಮಸ್ತದಾ||

ಯಾವಾಗ ಅವನು ಅಧಾರ್ಮಿಕರೆಲ್ಲರನ್ನೂ ತೀಕ್ಷ್ಣ ಶಿಕ್ಷೆಗಳಿಂದ ನಿಯಂತ್ರಿಸುತ್ತಾನೋ ಮತ್ತು ಧಾರ್ಮಿಕರಿಗೆ ಅನುಗ್ರಹಿಸುತ್ತಾನೋ ಆಗ ರಾಜನು ಯಮನಾಗುತ್ತಾನೆ.

12068046a ಯದಾ ತು ಧನಧಾರಾಭಿಸ್ತರ್ಪಯತ್ಯುಪಕಾರಿಣಃ|
12068046c ಆಚ್ಚಿನತ್ತಿ ಚ ರತ್ನಾನಿ ವಿವಿಧಾನ್ಯಪಕಾರಿಣಾಮ್||
12068047a ಶ್ರಿಯಂ ದದಾತಿ ಕಸ್ಮೈ ಚಿತ್ಕಸ್ಮಾಚ್ಚಿದಪಕರ್ಷತಿ|
12068047c ತದಾ ವೈಶ್ರವಣೋ ರಾಜಽಲ್ಲೋಕೇ ಭವತಿ ಭೂಮಿಪಃ||

ಯಾವಾಗ ಅವನು ಉಪಕಾರಿಗಳಿಗೆ ಧನದ ಮಳೆಯನ್ನೇ ಸುರಿಸುವನೋ, ಅಪಕಾರಿಗಳ ರತ್ನಗಳನ್ನು ಯಾವಾಗ ಅವನು ಅಪಹರಿಸುವನೋ, ರಾಜ್ಯದ ಹಿತಚಿಂತಕರಿಗೆ ಅವನು ಯಾವಾಗ ಐಶ್ವರ್ಯವನ್ನು ಕೊಡುವನೋ ಆಗ ರಾಜನು ಲೋಕದಲ್ಲಿ ವೈಶ್ರವಣ ಕುಬೇರನಂತಾಗುತ್ತಾನೆ.

12068048a ನಾಸ್ಯಾಪವಾದೇ ಸ್ಥಾತವ್ಯಂ ದಕ್ಷೇಣಾಕ್ಲಿಷ್ಟಕರ್ಮಣಾ|
12068048c ಧರ್ಮ್ಯಮಾಕಾಂಕ್ಷತಾ ಲಾಭಮೀಶ್ವರಸ್ಯಾನಸೂಯತಾ||

ದಕ್ಷನೂ, ಶ್ರಮಿಯೂ, ಧರ್ಮ-ಲಾಭಗಳನ್ನು ಬಯಸುವವನೂ ಮತ್ತು ಅಸೂಯೆಯಿಲ್ಲದವನೂ ಆದವನೂ ರಾಜನ ನಿಂದನೆಯನ್ನು ಮಾಡಬಾರದು.

12068049a ನ ಹಿ ರಾಜ್ಞಃ ಪ್ರತೀಪಾನಿ ಕುರ್ವನ್ಸುಖಮವಾಪ್ನುಯಾತ್|
12068049c ಪುತ್ರೋ ಭ್ರಾತಾ ವಯಸ್ಯೋ ವಾ ಯದ್ಯಪ್ಯಾತ್ಮಸಮೋ ಭವೇತ್||

ರಾಜನಿಗೆ ವಿರುದ್ಧವಾಗಿ ನಡೆದುಕೊಳ್ಳುವವನು ಅವನ ಮಗನೇ ಆಗಿರಲಿ, ಸಹೋದರನಾಗಿರಲಿ ಅಥವಾ ಸಮವಯಸ್ಕನಾಗಿರಲಿ, ಅವನು ಸುಖವನ್ನು ಹೊಂದುವುದಿಲ್ಲ. ಅವರು ಪಾಪಾತ್ಮರ ಸಮನಾಗುತ್ತಾರೆ.

12068050a ಕುರ್ಯಾತ್ಕೃಷ್ಣಗತಿಃ ಶೇಷಂ ಜ್ವಲಿತೋಽನಿಲಸಾರಥಿಃ|
12068050c ನ ತು ರಾಜ್ಞಾಭಿಪನ್ನಸ್ಯ ಶೇಷಂ ಕ್ವ ಚನ ವಿದ್ಯತೇ||

ಗಾಳಿಯ ಸಹಾಯದಿಂದ ಜ್ವಲಿಸುವ ಧೂಮಕೇತು ಅಗ್ನಿಯು ಸ್ವಲ್ಪವಾದರೂ ಸ್ಥಳವನ್ನು ದಹಿಸದೇ ಬಿಡಬಹುದು. ಆದರೆ ರಾಜನಿಗೆ ಅಪರಾಧವನ್ನೆಸಗಿದವನ ಏನೂ ಉಳಿಯುವುದಿಲ್ಲ.

12068051a ತಸ್ಯ ಸರ್ವಾಣಿ ರಕ್ಷಾಂಸಿ ದೂರತಃ ಪರಿವರ್ಜಯೇತ್|
12068051c ಮೃತ್ಯೋರಿವ ಜುಗುಪ್ಸೇತ ರಾಜಸ್ವಹರಣಾನ್ನರಃ||

ರಾಜನ ರಕ್ಷಣೆಯಲ್ಲಿರುವ ಎಲ್ಲವುಗಳನ್ನೂ ದೂರದಿಂದಲೇ ವರ್ಜಿಸಬೇಕು. ಮೃತ್ಯುವಿನಂತೆಯೇ ರಾಜನ ಸ್ವತ್ತನ್ನು ಅಪಹರಿಸುವುದನ್ನು ಜುಗುಪ್ಸೆಯಿಂದ ಕಾಣಬೇಕು.

12068052a ನಶ್ಯೇದಭಿಮೃಶನ್ಸದ್ಯೋ ಮೃಗಃ ಕೂಟಮಿವ ಸ್ಪೃಶನ್|

12068052c ಆತ್ಮಸ್ವಮಿವ ಸಂರಕ್ಷೇದ್ರಾಜಸ್ವಮಿಹ ಬುದ್ಧಿಮಾನ್‌||

ಮೃಗವು ತನ್ನನ್ನು ಹಿಡಿಯಲು ಹಾಕಿದ ಸಂಚನ್ನು ಮುಟ್ಟಿದ ತಕ್ಷಣವೇ ನಾಶಹೊಂದುತ್ತದೆ. ಬುದ್ಧಿವಂತನಾದವನು ರಾಜನ ಸ್ವತ್ತನ್ನು ತನ್ನದೇ ಸ್ವತ್ತಿನಂತೆ ರಕ್ಷಿಸಬೇಕು.

12068053a ಮಹಾಂತಂ ನರಕಂ ಘೋರಮಪ್ರತಿಷ್ಠಮಚೇತಸಃ|
12068053c ಪತಂತಿ ಚಿರರಾತ್ರಾಯ ರಾಜವಿತ್ತಾಪಹಾರಿಣಃ||

ರಾಜವಿತ್ತವನ್ನು ಅಪಹರಿಸುವವರು ಇಹದಲ್ಲಿ ನಾಶಹೊಂದುವುದು ಮಾತ್ರವಲ್ಲದೇ ಚೇತನವನ್ನೇ ವಿಹೀನಗೊಳಿಸುವ, ಚಿರರಾತ್ರಿಯ ಘೋರ ಮಹಾ ನರಕದಲ್ಲಿ ಬೀಳುತ್ತಾರೆ.

12068054a ರಾಜಾ ಭೋಜೋ ವಿರಾಟ್ಸಮ್ರಾಟ್ಕ್ಷತ್ರಿಯೋ ಭೂಪತಿರ್ನೃಪಃ|
12068054c ಯ ಏವಂ ಸ್ತೂಯತೇ ಶಬ್ದೈಃ ಕಸ್ತಂ ನಾರ್ಚಿತುಮಿಚ್ಚತಿ||

ಭೋಜ, ವಿರಾಟ್, ಸಾಮ್ರಾಟ್, ಕ್ಷತ್ರಿಯ, ಭೂಪತಿ, ನೃಪ ಮೊದಲಾದ ಶಬ್ಧಗಳಿಂದ ಸ್ತುತಿಸಲ್ಪಡುವ ರಾಜನನ್ನು ಯಾರುತಾನೇ ಪೂಜಿಸಲು ಬಯಸುವುದಿಲ್ಲ?

12068055a ತಸ್ಮಾದ್ಬುಭೂಷುರ್ನಿಯತೋ ಜಿತಾತ್ಮಾ ಸಂಯತೇಂದ್ರಿಯಃ|
12068055c ಮೇಧಾವೀ ಸ್ಮೃತಿಮಾನ್ದಕ್ಷಃ ಸಂಶ್ರಯೇತ ಮಹೀಪತಿಮ್‌||

ಆದುದರಿಂದ ತನ್ನ ಉನ್ನತಿಯನ್ನು ಬಯಸುವ ಮೇಧಾವಿ
ಸ್ಮೃತಿವಂತನು ನಿಯತಾತ್ಮನಾಗಿ, ಜಿತಾತ್ಮನಾಗಿ,
ಇಂದ್ರಿಯಸಂಯಮನಾಗಿ ದಕ್ಷ ರಾಜನನ್ನು ಆಶ್ರಯಿಸಬೇಕು.

12068056a ಕೃತಜ್ಞಂ ಪ್ರಾಜ್ಞಮಕ್ಷುದ್ರಂ ದೃಢಭಕ್ತಿಂ ಜಿತೇಂದ್ರಿಯಮ್‌|

12068056c ಧರ್ಮನಿತ್ಯಂ ಸ್ಥಿತಂ ಸ್ಥಿತ್ಯಾಂ ಮಂತ್ರಿಣಂ ಪೂಜಯೇನ್ನೃಪಃ||

ರಾಜನು ಕೃತಜ್ಞನೂ, ಪ್ರಾಜ್ಞನೂ, ಕ್ಷುದ್ರನಲ್ಲದವನೂ,
ದೃಢಭಕ್ತಿಯುಳ್ಳವನೂ, ಜಿತೇಂದ್ರಿಯನೂ, ನಿತ್ಯಧರ್ಮನಿಷ್ಠನೂ,
ನೀತಿಜ್ಞನೂ ಆದ ಮಂತ್ರಿಯನ್ನು ಗೌರವಿಸಬೇಕು.

12068057a ದೃಢಭಕ್ತಿಂ ಕೃತಪ್ರಜ್ಞಂ ಧರ್ಮಜ್ಞಂ ಸಂಯತೇಂದ್ರಿಯಮ್|
12068057c ಶೂರಮಕ್ಷುದ್ರಕರ್ಮಾಣಂ ನಿಷಿದ್ಧಜನಮಾಶ್ರಯೇತ್||

ದೃಢಭಕ್ತಿಯುಳ್ಳವನೂ, ಕೃತಪ್ರಜ್ಞನೂ, ಧರ್ಮಜ್ಞನೂ,
ಇಂದ್ರಿಯಸಂಯಮನೂ, ಕ್ಷುದ್ರಕರ್ಮಗಳನ್ನು ಮಾಡದವನೂ,
ಬೇರೆಯಾರ ಸಹಾಯವೂ ಬೇಕಾಗಿಲ್ಲ ಎನ್ನುವ ಶೂರನನ್ನು
ಸೇನಾಪತಿಯನ್ನಾಗಿ ಮಾಡಿಕೊಳ್ಳಬೇಕು.

12068058a ರಾಜಾ ಪ್ರಗಲ್ಭಂ ಪುರುಷಂ ಕರೋತಿ
ರಾಜಾ ಕೃಶಂ ಬೃಂಹಯತೇ ಮನುಷ್ಯಮ್|
12068058c ರಾಜಾಭಿಪನ್ನಸ್ಯ ಕುತಃ ಸುಖಾನಿ
ರಾಜಾಭ್ಯುಪೇತಂ ಸುಖಿನಂ ಕರೋತಿ||

ರಾಜನು ಪುರುಷನನ್ನು ಬಲಿಷ್ಠನನ್ನಾಗಿ ಮಾಡುತ್ತಾನೆ. ರಾಜನು
ಮನುಷ್ಯನನ್ನು ಕೃಶನನ್ನಾಗಿಯೂ ದಷ್ಟಪುಷ್ಟನನ್ನಾಗಿಯೂ
ಮಾಡುತ್ತಾನೆ. ರಾಜನ ಎದುರಾಳಿಗಳಿಗೆ ಸುಖವೆಂಬುದೆಲ್ಲಿ?
ಶರಣುಬಂದವರನ್ನು ರಾಜನು ಸುಖಿಗಳನ್ನಾಗಿ ಮಾಡುತ್ತಾನೆ.

12068059a ರಾಜಾ ಪ್ರಜಾನಾಂ ಹೃದಯಂ ಗರೀಯೋ
ಗತಿಃ ಪ್ರತಿಷ್ಠಾ ಸುಖಮುತ್ತಮಂ ಚ|
12068059c ಯಮಾಶ್ರಿತಾ ಲೋಕಮಿಮಂ ಪರಂ ಚ

ಜಯಂತಿ ಸಮ್ಯಕ್ಪುರುಷಾ ನರೇಂದ್ರಮ್॥

ರಾಜನು ಪ್ರಜೆಗಳ ದೊಡ್ಡ ಹೃದಯವಿದ್ದಂತೆ. ಪ್ರಜೆಗಳ ಗತಿ, ಪ್ರತಿಷ್ಠೆ ಮತ್ತು ಉತ್ತಮ ಸುಖಗಳು ಅವನಿಂದಲೇ ದೊರೆಯುತ್ತವೆ. ರಾಜನನ್ನು ಆಶ್ರಯಿಸಿದ ಪ್ರಜೆಗಳು ಈ ಲೋಕವನ್ನೂ ಪರಲೋಕವನ್ನೂ ಸಂಪೂರ್ಣವಾಗಿ ಜಯಿಸುತ್ತಾರೆ.

12068060a ನರಾಧಿಪಶ್ಚಾಪ್ಯನುಶಿಷ್ಯ ಮೇದಿನೀಂ
ದಮೇನ ಸತ್ಯೇನ ಚ ಸೌಹೃದೇನ|
12068060c ಮಹದ್ಭಿರಿಷ್ಟ್ವಾ ಕ್ರತುಭಿರ್ಮಹಾಯಶಾಸ್
ತ್ರಿವಿಷ್ಟಪೇ ಸ್ಥಾನಮುಪೈತಿ ಸತ್ಕೃತಮ್॥

ನರಾಧಿಪನೂ ಕೂಡ ಇಂದ್ರಿಯನಿಗ್ರಹ, ಸತ್ಯ, ಸೌಹಾರ್ದತೆಗಳಿಂದ ಮೇದಿನಿಯಲ್ಲಿ ಶಾಸನಮಾಡಿ ಮಹಾ ಇಷ್ಟಿ-ಕ್ರತುಗಳನ್ನು ನೆರವೇರಿಸಿ ಮಹಾಯಶಸ್ಸನ್ನು ಪಡೆದು ತ್ರಿವಿಷ್ಟಪದಲ್ಲಿ ಸತ್ಕೃತರಿಗೆ ಇರುವ ಸ್ಥಾನವನ್ನು ಪಡೆದುಕೊಳ್ಳುತ್ತಾನೆ.”

12068061a ಸ ಏವಮುಕ್ತೋ ಗುರುಣಾ ಕೌಸಲ್ಯೋ ರಾಜಸತ್ತಮಃ|
12068061c ಪ್ರಯತ್ನಾತ್ಕೃತವಾನ್ವೀರಃ ಪ್ರಜಾನಾಂ ಪರಿಪಾಲನಮ್॥

ಗುರು ಬೃಹಸ್ಪತಿಯು ಹೀಗೆ ಹೇಳಲು ರಾಜಸತ್ತಮ ವೀರ ಕೌಸಲ್ಯನು ಪ್ರಯತ್ನಪೂರ್ವಕವಾಗಿ ಪ್ರಜೆಗಳ ಪರಿಪಾಲನೆಯನ್ನು ಮಾಡಿದನು.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ಆಂಗಿರಸವಾಕ್ಯೇ ಅಷ್ಟಾಷಷ್ಟಿತಮೋऽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ

೬೯

ರಾಜನ ಪ್ರಧಾನ ಕರ್ತವ್ಯಗಳು ಮತ್ತು ದಂಡನೀತಿಯ ಕಾರಣದಿಂದ ಯುಗಗಳ ನಿರ್ಮಾಣವಾದುದರ ವರ್ಣನೆ (1-71).

12069001 ಯುಧಿಷ್ಠಿರ ಉವಾಚ|
12069001a ಪಾರ್ಥಿವೇನ ವಿಶೇಷೇಣ ಕಿಂ ಕಾರ್ಯಮವಶಿಷ್ಯತೇ|
12069001c ಕಥಂ ರಕ್ಷ್ಯೋ ಜನಪದಃ ಕಥಂ ರಕ್ಷ್ಯಾಶ್ಚ ಶತ್ರವಃ||

ಯುಧಿಷ್ಠಿರನು ಹೇಳಿದನು: "ರಾಜನ ಇನ್ನು ಉಳಿದ ಕಾರ್ಯಗಳ್ಯಾವುವು? ವಿಶೇಷವಾಗಿ ಅವನು ಜನಪದವನ್ನು ಹೇಗೆ ರಕ್ಷಿಸಬೇಕು? ಶತ್ರುಗಳಿಂದ ಹೇಗೆ ರಕ್ಷಣೆಯನ್ನು ಪಡೆಯಬೇಕು?

12069002a ಕಥಂ ಚಾರಂ ಪ್ರಯುಂಜೀತ ವರ್ಣಾನ್ವಿಶ್ವಾಸಯೇತ್ಕಥಮ್|
12069002c ಕಥಂ ಭೃತ್ಯಾನ್ಕಥಂ ದಾರಾನ್ಕಥಂ ಪುತ್ರಾಂಶ್ಚ ಭಾರತ||

ಭಾರತ! ಚಾರರನ್ನು ಹೇಗೆ ನಿಯೋಜಿಸಬೇಕು? ಎಲ್ಲ ವರ್ಣದವರಲ್ಲಿಯೂ ರಾಜನ ಮೇಲಿನ ವಿಶ್ವಾಸವನ್ನು ಹೇಗೆ ಹುಟ್ಟಿಸಬೇಕು? ಸೇವಕರಲ್ಲಿ, ಪತ್ನಿಯರಲ್ಲಿ ಮತ್ತು ಪುತ್ರರಲ್ಲಿ ರಾಜನ ಮೇಲಿರುವ ವಿಶ್ವಾಸವನ್ನು ಹೇಗೆ ಉಳಿಸಿಕೊಳ್ಳಬೇಕು?"

12069003 ಭೀಷ್ಮ ಉವಾಚ
12069003a ರಾಜವೃತ್ತಂ ಮಹಾರಾಜ ಶೃಣುಷ್ವಾವಹಿತೋಽಖಿಲಮ್|
12069003c ಯತ್ಕಾರ್ಯಂ ಪಾರ್ಥಿವೇನಾದೌ ಪಾರ್ಥಿವಪ್ರಕೃತೇನ ವಾ||

ಭೀಷ್ಮನು ಹೇಳಿದನು: "ಮಹಾರಾಜ! ರಾಜನ ಆಚಾರ-ವ್ಯವಹಾರಗಳ

ಕುರಿತು, ಮತ್ತು ಪಾರ್ಥಿವನ ಅಥವಾ ಪಾರ್ಥಿವನ ಪರವಾಗಿ ಕಾರ್ಯನಿರ್ವಹಿಸುವವರ ಮೊದಲ ಕಾರ್ಯವೇನೆನ್ನುವುದನ್ನು ಸಾವಧಾನ ಚಿತ್ತನಾಗಿ ಕೇಳು!

12069004a ಆತ್ಮಾ ಜೇಯಃ ಸದಾ ರಾಜ್ಞಾ ತತೋ ಜೇಯಾಶ್ಚ ಶತ್ರವಃ|
12069004c ಅಜಿತಾತ್ಮಾ ನರಪತಿರ್ವಿಜಯೇತ ಕಥಂ ರಿಪೂನ್||

ರಾಜನು ಸದಾ ಆತ್ಮನನ್ನು ಗೆಲ್ಲಬೇಕು. ಅನಂತರ ಶತ್ರುಗಳನ್ನು ಗೆಲ್ಲಬೇಕು. ಅಜಿತಾತ್ಮಾ ನರಪತಿಯು ರಿಪುಗಳನ್ನು ಹೇಗೆ ತಾನೇ ಜಯಿಸಿಯಾನು?

12069005a ಏತಾವಾನಾತ್ಮವಿಜಯಃ ಪಂಚವರ್ಗವಿನಿಗ್ರಹಃ|
12069005c ಜಿತೇಂದ್ರಿಯೋ ನರಪತಿರ್ಬಾಧಿತುಂ ಶಕ್ನುಯಾದರೀನ್||

ಐದು ಇಂದ್ರಿಯಗಳನ್ನು ನಿಗ್ರಹಿಸುವುದೇ
ಆತ್ಮವಿಜಯವೆನಿಸಿಕೊಳ್ಳುತ್ತದೆ. ಜಿತೇಂದ್ರಿಯ ನರಪತಿಯು ಅರಿಗಳನ್ನು ಬಾಧಿಸಲು ಶಕ್ಯನಾಗುತ್ತಾನೆ.

12069006a ನ್ಯಸೇತ ಗುಲ್ಮಾನ್ದುರ್ಗೇಷು ಸಂಧೌ ಚ ಕುರುನಂದನ|
12069006c ನಗರೋಪವನೇ ಚೈವ ಪುರೋದ್ಯಾನೇಷು ಚೈವ ಹ||

ಕುರುನಂದನ! ಕೋಟೆ, ಸಂಧಿಗಳಲ್ಲಿ, ನಗರದ ಉಪವನಗಳಲ್ಲಿ ಮತ್ತು ಪುರಗಳ ಉದ್ಯಾನಗಳಲ್ಲಿ ಸೈನ್ಯದ ಗುಲ್ಮಗಳನ್ನು ಇರಿಸಬೇಕು.

12069007a ಸಂಸ್ಥಾನೇಷು ಚ ಸರ್ವೇಷು ಪುರೇಷು ನಗರಸ್ಯ ಚ|
12069007c ಮಧ್ಯೇ ಚ ನರಶಾರ್ದೂಲ ತಥಾ ರಾಜನಿವೇಶನೇ||

ನರಶಾರ್ದೂಲ! ಹಾಗೆಯೇ ಪುರ-ನಗರಗಳ ಎಲ್ಲ ಸಂಸ್ಥಾನಗಳ

ಮಧ್ಯೆಯೂ ಮತ್ತು ರಾಜನಿವೇಶನದಲ್ಲಿಯೂ ಸೇನೆಗಳನ್ನಿಟ್ಟಿರಬೇಕು.

12069008a ಪ್ರಣಿಧೀಂಶ್ಚ ತತಃ ಕುರ್ಯಾಜ್ಜಡಾಂಧಬಧಿರಾಕೃತೀನ್|
12069008c ಪುಂಸಃ ಪರೀಕ್ಷಿತಾನ್ಪ್ರಜ್ಞಾನ್ ಕ್ಷುತ್ಪಿಪಾಸಾತಪಕ್ಷಮಾನ್||

ಅನಂತರ ಜಡರು, ಅಂಧರು ಮತ್ತು ಕಿವುಡರಂತೆ ನಡೆದುಕೊಳ್ಳುವ ಪುರುಷರನ್ನು, ಅವರ ಪ್ರಜ್ಞೆಗಳನ್ನೂ, ಅವರು ಹಸಿವು-ಬಾಯಾರಿಕೆಗಳನ್ನು ಸಹಿಸಿಕೊಳ್ಳುವವರೋ ಎನ್ನುವುದನ್ನು ಪರೀಕ್ಷಿಸಿ, ಗೂಢಚರರನ್ನಾಗಿ ನಿಯೋಜಿಸಿಕೊಳ್ಳಬೇಕು.

12069009a ಅಮಾತ್ಯೇಷು ಚ ಸರ್ವೇಷು ಮಿತ್ರೇಷು ತ್ರಿವಿಧೇಷು ಚ|
12069009c ಪುತ್ರೇಷು ಚ ಮಹಾರಾಜ ಪ್ರಣಿದಧ್ಯಾತ್ಸಮಾಹಿತಃ||

ಮಹಾರಾಜ! ಸಮಾಹಿತ ರಾಜನು ಅಮಾತ್ಯರು, ಮಿತ್ರರು ಮತ್ತು ಪುತ್ರರು ಈ ಮೂರು ಕಡೆಗಳಲ್ಲಿಯೂ ಗೂಢಚಾರರನ್ನು ಇಟ್ಟಿರಬೇಕು.

12069010a ಪುರೇ ಜನಪದೇ ಚೈವ ತಥಾ ಸಾಮಂತರಾಜಸು|
12069010c ಯಥಾ ನ ವಿದ್ಯುರನ್ಯೋನ್ಯಂ ಪ್ರಣಿಧೇಯಾಸ್ತಥಾ ಹಿ ತೇ||

ಪುರ-ಗ್ರಾಮಗಳಲ್ಲಿ, ಮತ್ತು ಹಾಗೆಯೇ ಸಾಮಂತರಾಜರುಗಳಲ್ಲಿ, ಪರಸ್ಪರರಿಗೆ ತಿಳಿಯದಂತೆ ಗೂಢಚಾರರನ್ನು ಇಟ್ಟಿರಬೇಕು.

12069011a ಚಾರಾಂಶ್ಚ ವಿದ್ಯಾತ್ಪ್ರಹಿತಾನ್ಪರೇಣ ಭರತರ್ಷಭ|
12069011c ಆಪಣೇಷು ವಿಹಾರೇಷು ಸಮವಾಯೇಷು ಭಿಕ್ಷುಷು||
12069012a ಆರಾಮೇಷು ತಥೋದ್ಯಾನೇ ಪಂಡಿತಾನಾಂ ಸಮಾಗಮೇ|
12069012c ವೇಶೇಷು[193] ಚತ್ವರೇ ಚೈವ ಸಭಾಸ್ವಾವಸಥೇಷು ಚ||

[193] ದೇಶೇಷು ಎಂಬ ಪಾಠಾಂತರವಿದೆ (ಭಾರತದರ್ಶನ).

12069013a ಏವಂ ವಿಹನ್ಯಾಚ್ಚಾರೇಣ ಪರಚಾರಂ ವಿಚಕ್ಷಣಃ|
12069013c ಚಾರೇಣ ವಿಹತಂ ಸರ್ವಂ ಹತಂ ಭವತಿ ಪಾಂಡವ||

ಭರತರ್ಷಭ! ಶತ್ರುಗಳು ಕಳುಹಿಸಿದ ಗೂಢಚಾರರನ್ನು ರಾಜನು ತನ್ನ
ಗೂಢಚಾರರ ಮೂಲಕ ಅಂಗಡಿಗಳಲ್ಲಿ, ವಿಹಾರಸ್ಥಳಗಳಲ್ಲಿ,
ಸಮಾಜೋತ್ಸವಗಳಲ್ಲಿ, ಭಿಕ್ಷುಗಳಲ್ಲಿ, ತೋಟಗಳಲ್ಲಿ,
ಉದ್ಯಾನವನಗಳಲ್ಲಿ, ಪಂಡಿತರ ಸಮಾಗಮಗಳಲ್ಲಿ, ವಾಸಸ್ಥಳಗಳಲ್ಲಿ,
ಚೌಕಗಳಲ್ಲಿ, ಸಭೆಗಳಲ್ಲಿ, ಮತ್ತು ಧರ್ಮಶಾಲೆಗಳಲ್ಲಿ ಕಣ್ಣಿಟ್ಟು
ಹುಡುಕಿಸಬೇಕು. ಪಾಂಡವ! ರಾಜನು ಶತ್ರುಗಳ ಗೂಢಚಾರರ ಮೇಲೆ
ಕಣ್ಣಿಟ್ಟು ಅವರ ಕುರಿತು ಮೊದಲೇ ತಿಳಿದುಕೊಳ್ಳುವುದರಿಂದ ರಾಷ್ಟ್ರಕ್ಕೆ
ಮತ್ತು ರಾಜನಿಗೆ ಹಿತವುಂಟಾಗುತ್ತದೆ.

12069014a ಯದಾ ತು ಹೀನಂ ನೃಪತಿರ್ವಿದ್ಯಾದಾತ್ಮಾನಮಾತ್ಮನಾ|
12069014c ಅಮಾತ್ಯೈಃ ಸಹ ಸಂಮಂತ್ರ್ಯ ಕುರ್ಯಾತ್ಸಂಧಿಂ ಬಲೀಯಸಾ||

ತಾನು ಶತ್ರುವಿಗಿಂತ ದುರ್ಬಲನೆನ್ನುವುದನ್ನು ಸ್ವತಃ ತಿಳಿದುಕೊಂಡ
ಕೂಡಲೇ ನೃಪತಿಯು ತನ್ನ ಅಮಾತ್ಯರೊಂದಿಗೆ ಸಮಾಲೋಚನೆಗೈದು
ಬಲಶಾಲಿಯೊಂದಿಗೆ ಸಂಧಿಯನ್ನು ಮಾಡಿಕೊಳ್ಳಬೇಕು.

12069015a ಅಜ್ಞಾಯಮಾನೋ ಹೀನತ್ವೇ ಕುರ್ಯಾತ್ಸಂಧಿಂ ಪರೇಣ ವೈ|
12069015c ಲಿಪ್ಸುರ್ವಾ ಕಂ ಚಿದೇವಾರ್ಥಂ ತ್ವರಮಾಣೋ ವಿಚಕ್ಷಣಃ||

ತನ್ನ ದುರ್ಬಲತ್ವದಿಂದ ಇವನು ಸಂಧಿಯನ್ನು ಮಾಡಿಕೊಳ್ಳುತ್ತಿದ್ದಾನೆ
ಎಂದು ಶತ್ರುವಿಗೆ ತಿಳಿಯುವ ಮೊದಲೇ ಜಾಗರೂಕ ರಾಜನು
ತ್ವರೆಮಾಡಿ ಬೇರೆಯಾವುದಾದರೂ ಉದ್ದೇಶವನ್ನು ಹೇಳಿ
ಸಂಧಿಮಾಡಿಕೊಳ್ಳಬೇಕು.

12069016a ಗುಣವಂತೋ ಮಹೋತ್ಸಾಹಾ ಧರ್ಮಜ್ಞಾಃ ಸಾಧವಶ್ಚ ಯೇ।
12069016c ಸಂದಧೀತ ನೃಪಸ್ತೈಶ್ಚ ರಾಷ್ಟ್ರಂ ಧರ್ಮೇಣ ಪಾಲಯನ್॥

ರಾಷ್ಟ್ರವನ್ನು ಧರ್ಮದಿಂದ ಪಾಲಿಸುತ್ತ ನೃಪನು ಗುಣವಂತನೂ, ಮಹೋತ್ಸಾಹಿಯೂ, ಧರ್ಮಜ್ಞನೂ, ಸಾಧುವೂ ಆದ ರಾಜರೊಂದಿಗೆ ಸಂಧಿಯನ್ನು ಮಾಡಿಕೊಳ್ಳಬೇಕು.

12069017a ಉಚ್ಚಿದ್ಯಮಾನಮಾತ್ಮಾನಂ ಜ್ಞಾತ್ವಾ ರಾಜಾ ಮಹಾಮತಿಃ।
12069017c ಪೂರ್ವಾಪಕಾರಿಣೋ ಹನ್ಯಾಲ್ಲೋಕದ್ವಿಷ್ಟಾಂಶ್ಚ ಸರ್ವಶಃ॥

ಮಹಾಮತಿ ರಾಜನು ತನಗೆ ಪ್ರಾಣಾಪಾಯವಿರುವುದೆಂಬುದನ್ನು ತಿಳಿದುಕೊಂಡು ತನಗೆ ಹಿಂದೆ ಅಪಕಾರಮಾಡಿದವರನ್ನೂ ಮತ್ತು ಪ್ರಜಾದ್ವೇಷಿಗಳನ್ನೂ ಸಂಪೂರ್ಣವಾಗಿ ನಾಶಪಡಿಸಬೇಕು.

12069018a ಯೋ ನೋಪಕರ್ತುಂ ಶಕ್ನೋತಿ ನಾಪಕರ್ತುಂ ಮಹೀಪತಿಃ।
12069018c ಅಶಕ್ಯರೂಪಶ್ಚೋದ್ಧರ್ತುಮುಪೇಕ್ಷ್ಯಸ್ತಾದೃಶೋ ಭವೇತ್॥

ಯಾವ ಮಹೀಪತಿಯು ಮಿತ್ರರಿಗೆ ಉಪಕಾರಮಾಡಲೂ, ಶತ್ರುಗಳಿಗೆ ಅಪಕಾರಮಾಡಲೂ ಅಸಮರ್ಥನೋ ಮತ್ತು ಯಾವ ರಾಜನನ್ನು ಉದ್ಧಾರಮಾಡಲು ಯಾರಿಂದಲೂ ಸಾಧ್ಯವಿಲ್ಲವೋ ಅಂತಹ ರಾಜನು ಎಲ್ಲರಿಂದಲೂ ಉಪೇಕ್ಷಿತನಾಗುತ್ತಾನೆ.

12069019a ಯಾತ್ರಾಂ ಯಾಯಾದವಿಜ್ಞಾತಮನಾಕ್ರಂದಮನಂತರಮ್।
12069019c ವ್ಯಾಸಕ್ತಂ ಚ ಪ್ರಮತ್ತಂ ಚ ದುರ್ಬಲಂ ಚ ವಿಚಕ್ಷಣಃ॥
12069020a ಯಾತ್ರಾಮಾಜ್ಞಾಪಯೇದ್ವೀರಃ ಕಲ್ಯಪುಷ್ಟಬಲಃ ಸುಖೀ।
12069020c ಪೂರ್ವಂ ಕೃತ್ವಾ ವಿಧಾನಂ ಚ ಯಾತ್ರಾಯಾಂ ನಗರೇ ತಥಾ॥

ಶತ್ರುರಾಜನ ಮೇಲೆ ಯುದ್ಧಕ್ಕೆ ಹೋಗುವ ಮುನ್ನ ಈ ಅಂಶಗಳನ್ನು
ಗಮನೆಗೆ ತೆಗೆದುಕೊಳ್ಳಬೇಕು: ಶತ್ರುರಾಜನು ಮಿತ್ರಹೀನನೇ?
ಸಹಾಯಕರಿಂದಲೂ ಬಂಧುಗಳಿಂದಲೂ ವಿಹೀನನಾಗಿರುವನೇ?
ಮತ್ತೊಬ್ಬ ಶತ್ರುವಿನೊಡನೆ ಯುದ್ಧಕ್ಕೆ ತೊಡಗಿರುವನೇ?
ಪ್ರಮತ್ತನಾಗಿರುವನೇ? ದುರ್ಬಲನಾಗಿರುವನೇ? ಇವುಗಳನ್ನು
ತಿಳಿದುಕೊಂಡು ಪುಷ್ಟವಾದ ಚತುರಂಗಸೈನ್ಯವನ್ನು ಹೊಂದಿರುವ
ವಿಚಕ್ಷಣ, ವೀರ, ಸಮರ್ಥ ಮತ್ತು ಸುಖಸಾಧನಸಂಪನ್ನ ರಾಜನು
ಮೊದಲು ತನ್ನ ನಗರದ ರಕ್ಷಣೆಯ ವ್ಯವಸ್ಥೆಯನ್ನು ಮಾಡಿ ಬಳಿಕ
ಸೈನಿಕರಿಗೆ ಯುದ್ಧಕ್ಕೆ ಸಿದ್ಧರಾಗಲು ಆಜ್ಞಾಪಿಸಬೇಕು.

12069021a ನ ಚ ವಶ್ಯೋ ಭವೇದಸ್ಯ ನೃಪೋ ಯದ್ಯಪಿ ವೀರ್ಯವಾನ್|
12069021c ಹೀನಶ್ಚ ಬಲವೀರ್ಯಾಭ್ಯಾಂ ಕರ್ಶಯಂಸ್ತಂ ಪರಾವಸೇತ್||

ಬಲ ಮತ್ತು ವೀರ್ಯಗಳಲ್ಲಿ ತಾನು ಹೀನನಾಗಿದ್ದರೂ ಮತ್ತು ಶತ್ರುವು
ವೀರ್ಯವಂತನಾಗಿದ್ದರೂ ನೃಪನು ಶತ್ರುವಿನ ವಶದಲ್ಲಿ ಬರಬಾರದು.
ಶತ್ರುವನ್ನು ಕ್ಷೀಣಗೊಳಿಸಲು ಸದಾ ಪ್ರಯತ್ನಿಸುತ್ತಿರಬೇಕು.

12069022a ರಾಷ್ಟ್ರಂ ಚ ಪೀಡಯೇತ್ತಸ್ಯ ಶಸ್ತ್ರಾಗ್ನಿವಿಷಮೂರ್ಚನೈಃ|
12069022c ಅಮಾತ್ಯವಲ್ಲಭಾನಾಂ ಚ ವಿವಾದಾಂಸ್ತಸ್ಯ ಕಾರಯೇತ್||

ಆ ರಾಷ್ಟ್ರವನ್ನು ಶಸ್ತ್ರ, ಅಗ್ನಿ, ವಿಷ ಮತ್ತು ಮೂರ್ಚನಗಳಿಂದ
ಪೀಡಿಸಬೇಕು. ಅಮಾತ್ಯರು ಮತ್ತು ರಾಜರ ನಡುವೆ
ವಿವಾದವಾಗುವಂತೆ ಮಾಡಬೇಕು.

12069022e ವರ್ಜನೀಯಂ ಸದಾ ಯುದ್ಧಂ ರಾಜ್ಯಕಾಮೇನ ಧೀಮತಾ||
12069023a ಉಪಾಯೈಸ್ತ್ರಿಭಿರಾದಾನಮರ್ಥಸ್ಯಾಹ ಬೃಹಸ್ಪತಿಃ|

12069023c ಸಾಂತ್ವೇನಾನುಪ್ರದಾನೇನ ಭೇದೇನ ಚ ನರಾಧಿಪ|
12069023e ಯಮರ್ಥಂ ಶಕ್ನುಯಾತ್ಪ್ರಾಪ್ತುಂ ತೇನ ತುಷ್ಯೇದ್ಧಿ ಪಂಡಿತಃ||

ಧೀಮಂತನಾದವನು ರಾಜ್ಯವನ್ನು ವಿಸ್ತರಿಸುವ ಕಾರಣದಿಂದ ಯುದ್ಧವನ್ನು ಸದಾ ವರ್ಜಿಸಬೇಕು. ನರಾಧಿಪ! ಸಾಮ, ದಾನ ಮತ್ತು ಭೇದ ಈ ಮೂರು ಉಪಾಯಗಳಿಂದ ರಾಜ್ಯವನ್ನು ಪಡೆದುಕೊಳ್ಳಬಹುದು ಎಂದು ಬೃಹಸ್ಪತಿಯು ಹೇಳಿದ್ದಾನೆ. ಇವುಗಳಿಂದ ಎಷ್ಟನ್ನು ಪಡೆದುಕೊಳ್ಳಬಹುದೋ ಅದರಿಂದಲೇ ಪಂಡಿತನಾದವನು ತೃಪ್ತಿಹೊಂದಬೇಕು.

12069024a ಆದದೀತ ಬಲಿಂ ಚೈವ ಪ್ರಜಾಭ್ಯಃ ಕುರುನಂದನ|
12069024c ಷಡ್ಭಾಗಮಮಿತಪ್ರಜ್ಞಸ್ತಾಸಾಮೇವಾಭಿಗುಪ್ತಯೇ||

ಕುರುನಂದನ! ಪ್ರಾಜ್ಞ ರಾಜನು ಪ್ರಜೆಗಳ ರಕ್ಷಣೆಯ ಸಲುವಾಗಿ ಅವರ ಆದಾಯದ ಆರನೆಯ ಒಂದು ಭಾಗವನ್ನು ಪಡೆದುಕೊಳ್ಳಬೇಕು.

12069025a ದಶಧರ್ಮಗತೇಭ್ಯೋ ಯದ್ವಸು ಬಹ್ವಲ್ಪಮೇವ ಚ|
12069025c ತನ್ನಾದದೀತ ಸಹಸಾ ಪೌರಾಣಾಂ ರಕ್ಷಣಾಯ ವೈ||

ಆದರೆ ದಶಧರ್ಮ[194]ಗತರಾದವರಲ್ಲಿರುವ ಅಲ್ಪ ಅಥವಾ ಬಹು ಐಶ್ವರ್ಯವನ್ನು ಸಂಪೂರ್ಣವಾಗಿ ಪೌರರ ರಕ್ಷಣೆಗೆ ಕೂಡಲೇ ವಶಮಾಡಿಕೊಳ್ಳಬೇಕು.

---

194 ಮತ್ತ, ಉನ್ಮತ್ತ, ದಸ್ಯು, ತಸ್ಕರ, ವಂಚಕ, ಶಠ, ಲಂಪಟ, ಜೂಜುಕೋರ, ಸುಳ್ಳುಪತ್ರ ತಯಾರಿಸುವವನು ಮತ್ತು ಲಂಚಕೋರ- ಈ ಹತ್ತು ದಂಡನೀಯ ವ್ಯವಹಾರಗಳಲ್ಲಿರುವವರು.

12069026a ಯಥಾ ಪುತ್ರಾಸ್ತಥಾ ಪೌರಾ ದ್ರಷ್ಟವ್ಯಾಸ್ತೇ ನ ಸಂಶಯಃ|
12069026c ಭಕ್ತಿಶ್ಚೈಷಾಂ ಪ್ರಕರ್ತವ್ಯಾ ವ್ಯವಹಾರೇ ಪ್ರದರ್ಶಿತೇ||

ರಾಜನು ಪ್ರಜೆಗಳನ್ನು ಪುತ್ರರಂತೆ ಕಾಣಬೇಕು ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ ವ್ಯವಹಾರಗಳಲ್ಲಿ[195] ಸ್ನೇಹವಶ ಪಕ್ಷಪಾತವನ್ನು ತೋರಿಸಬಾರದು.

12069027a ಸುತಂ ಚ ಸ್ಥಾಪಯೇದ್ರಾಜಾ ಪ್ರಾಜ್ಞಂ ಸರ್ವಾರ್ಥದರ್ಶಿನಮ್[196]|
12069027c ವ್ಯವಹಾರೇಷು ಸತತಂ ತತ್ರ ರಾಜ್ಯಂ ವ್ಯವಸ್ಥಿತಮ್||

ರಾಜನು ವ್ಯವಹಾರಗಳಲ್ಲಿ ಪ್ರಾಜ್ಞನೂ ಸರ್ವಾರ್ಥದರ್ಶಿಯೂ ಆದ ಮಗನನ್ನು ಸ್ಥಾಪಿಸಬೇಕು. ಏಕೆಂದರೆ ಸತತ ವ್ಯವಹಾರಗಳ ಮೇಲೆಯೇ ರಾಜ್ಯವು ವ್ಯವಸ್ಥಿತವಾಗಿರುತ್ತದೆ.

12069028a ಆಕರೇ ಲವಣೇ ಶುಲ್ಕೇ ತರೇ ನಾಗವನೇ ತಥಾ|
12069028c ನ್ಯಸೇದಮಾತ್ಯಾನ್ನೃಪತಿಃ ಸ್ವಾಪ್ತಾನ್ವಾ ಪುರುಷಾನ್ ಹಿತಾನ್||

ಚಿನ್ನ-ಬೆಳ್ಳಿಗಳ ಭಂಡಾರ, ಉಪ್ಪು-ಧಾನ್ಯಗಳ ಖಣಿಜ, ದೋಣಿ-ಹಡಗುಗಳ ಘಾಟಿ ಮತ್ತು ಆನೆಗಳ ಸೇನೆ – ಇವುಗಳ ಸ್ಥಾನಗಳಲ್ಲಿ ನೃಪತಿಯು ತನ್ನ ಆಪ್ತ ಮತ್ತು ಹಿತೈಷಿ ಪುರುಷರನ್ನು ಇಡಬೇಕು.

12069029a ಸಮ್ಯಗ್ದಂಡಧರೋ ನಿತ್ಯಂ ರಾಜಾ ಧರ್ಮಮವಾಪ್ನುಯಾತ್|
12069029c ನೃಪಸ್ಯ ಸತತಂ ದಂಡಃ ಸಮ್ಯಗ್ಧರ್ಮೇ ಪ್ರಶಸ್ಯತೇ||

---

195 ನ್ಯಾಯ ನೀಡುವ ಅವಕಾಶವು ಬಂದೊದಗಿದಾಗ

196 ಶ್ರೋತುಂ ಚೈವ ನ್ಯಸೇದ್ರಾಜಾ ಪ್ರಾಜ್ಞಾನ್ ಸರ್ವಾರ್ಥದರ್ಶಿನಃ| ಎಂಬ ಪಾಠಾಂತರವಿದೆ.

ನಿತ್ಯವೂ ಸರಿಯಾಗಿ ದಂಡವನ್ನು ಧರಿಸಿರುವ ರಾಜನು ಧರ್ಮದ ಭಾಗಿಯಾಗುತ್ತಾನೆ. ನಿರಂತರ ಧಂಡಧಾರಣ ಮಾಡುವುದು ನೃಪನ ಉತ್ತಮ ಧರ್ಮವೆಂದು ಪ್ರಶಂಸಿಸುತ್ತಾರೆ.

12069030a ವೇದವೇದಾಂಗವಿತ್ಪ್ರಾಜ್ಞಃ ಸುತಪಸ್ವೀ ನೃಪೋ ಭವೇತ್|
12069030c ದಾನಶೀಲಶ್ಚ ಸತತಂ ಯಜ್ಞಶೀಲಶ್ಚ ಭಾರತ||

ಭಾರತ! ನೃಪನು ವೇದ-ವೇದಾಂಗಗಳ ವಿದ್ವಾಂಸನೂ, ಬುದ್ಧಿವಂತನೂ, ಉತ್ತಮ ತಪಸ್ವಿಯೂ, ಸದಾ ದಾನಶೀಲನೂ ಮತ್ತು ಯಜ್ಞಪರಾಯಣನೂ ಆಗಿರಬೇಕು.

12069031a ಏತೇ ಗುಣಾಃ ಸಮಸ್ತಾಃ ಸ್ಯುರ್ನೃಪಸ್ಯ ಸತತಂ ಸ್ಥಿರಾಃ|
12069031c ಕ್ರಿಯಾಲೋಪೇ ತು ನೃಪತೇಃ ಕುತಃ ಸ್ವರ್ಗಃ ಕುತೋ ಯಶಃ||

ಈ ಸಮಸ್ತ ಗುಣಗಳೂ ರಾಜನಲ್ಲಿ ಸತತವೂ ಸ್ಥಿರವಾಗಿರಬೇಕು. ಅವನ ನ್ಯಾಯೋಚಿತ ವ್ಯವಹಾರಗಳಲ್ಲಿಯೇ ಲೋಪವಾಗಿಬಿಟ್ಟರೆ ರಾಜನಿಗೆ ಎಲ್ಲಿಯ ಸ್ವರ್ಗ ಮತ್ತು ಎಲ್ಲಿಯ ಯಶಸ್ಸು?

12069032a ಯದಾ ತು ಪೀಡಿತೋ ರಾಜಾ ಭವೇದ್ರಾಜ್ಞಾ ಬಲೀಯಸಾ|
[197]12069032c ತ್ರಿಧಾ ತ್ವಾಕ್ರಂದ್ಯ ಮಿತ್ರಾಣಿ ವಿಧಾನಮುಪಕಲ್ಪಯೇತ್||

ರಾಜನಾದವನು ಇನ್ನೊಬ್ಬ ಬಲಶಾಲೀ ರಾಜನಿಂದ ಪೀಡಿತನಾದರೆ ಮೂರುವಿಧದ ಮಿತ್ರರನ್ನು ಕೂಗಿ ಕರೆದು ವಿಧಾನಗಳ ಕುರಿತು

---

[197] ಇದಕ್ಕೆ ಮೊದಲು ಗೋರಖಪುರ ಸಂಪುಟದಲ್ಲಿ ತದಾಭಿಸಂಶ್ರಯೇದ್ದುರ್ಗಂ ಬುದ್ಧಿಮಾನ್ ಪೃಥಿವೀಪತಿಃ| ಎಂಬ ಶ್ಲೋಕಾರ್ಧವಿದೆ.

ಯೋಜನೆಹಾಕಿಕೊಳ್ಳಬೇಕು.

12069033a ಘೋಷಾನ್ನ್ಯಸೇತ ಮಾರ್ಗೇಷು ಗ್ರಾಮಾನುತ್ಥಾಪಯೇದಪಿ|
12069033c ಪ್ರವೇಶಯೇಚ್ಚ ತಾನ್ಸರ್ವಾನ್ಯಾಖಾನಗರಕೇಷ್ವಪಿ||

ಘೋಷಣೆ ಮಾಡುವವರನ್ನು ರಾಜಮಾರ್ಗದಲ್ಲಿ ನಿಲ್ಲಿಸಬೇಕು. ತಳವಾರರಿಂದ ಘೋಷಣೆಯನ್ನು ಸಾರಿಸಿ ಗ್ರಾಮದಲ್ಲಿರುವ ಜನರನ್ನು ಎಚ್ಚರಿಸಬೇಕು. ಬಳಿಕ ಗ್ರಾಮದವರೆಲ್ಲರೂ ಉಪನಗರಗಳಿಗೆ ಪ್ರವೇಶಿಸುವಂತೆ ಮಾಡಬೇಕು.

12069034a ಯೇ ಗುಪ್ತಾಶ್ಚೈವ ದುರ್ಗಾಶ್ಚ ದೇಶಾಸ್ತೇಷು ಪ್ರವೇಶಯೇತ್|
12069034c ಧನಿನೋ ಬಲಮುಖ್ಯಾಂಶ್ಚ ಸಾಂತ್ವಯಿತ್ವಾ ಪುನಃ ಪುನಃ||

ಬಳಿಕ ಐಶ್ವರ್ಯವಂತರನ್ನೂ, ಸೇನಾಪತಿಗಳನ್ನೂ ಬಾರಿ-ಬಾರಿಗೂ ಸಂತೈಸುತ್ತಾ ಅವರೆಲ್ಲರನ್ನೂ ಗೂಢ ದುರ್ಗಮ ಪ್ರದೇಶಗಳಿಗೆ ಕಳುಹಿಸಬೇಕು.

12069035a ಸಸ್ಯಾಭಿಹಾರಂ ಕುರ್ಯಾಚ್ಚ ಸ್ವಯಮೇವ ನರಾಧಿಪಃ|
12069035c ಅಸಂಭವೇ ಪ್ರವೇಶಸ್ಯ ದಾಹಯೇದಗ್ನಿನಾ ಭೃಶಮ್||

ಸ್ವಯಂ ನರಾಧಿಪನು ಪೈರಿನ ಕಟಾವುಮಾಡಿಸಿ ಧಾನ್ಯವನ್ನು ವಿಂಗಡಿಸಿ ಕೋಟೆಯೊಳಗೆ ಇಡುವಂತೆ ನೋಡಿಕೊಳ್ಳಬೇಕು. ಅದು ಸಾಧ್ಯವಾಗದೇ ಇದ್ದರೆ ಶತ್ರುರಾಜನಿಗೆ ದೊರಕದಂತೆ ಪೈರು-ಪಚ್ಚೆಗಳು ತುಂಬಿದ್ದ ಹೊಲ-ಗದ್ದೆಗಳನ್ನೇ ಸುಟ್ಟುಹಾಕಬೇಕು.

12069036a ಕ್ಷೇತ್ರಸ್ಥೇಷು ಚ ಸಸ್ಯೇಷು ಶತ್ರೋರುಪಜಪೇನ್ನರಾನ್|
12069036c ವಿನಾಶಯೇದ್ವಾ ಸರ್ವಸ್ವಂ ಬಲೇನಾಥ ಸ್ವಕೇನ ವೈ||

ಹೊಲಗದ್ದೆಗಳಲ್ಲಿ ಪೈರು ಇರುವಾಗ ಶತ್ರುವಿನ ಕಡೆಯ ಜನರನ್ನೇ ಹತ್ತಿಕ್ಕ ದ್ವಂಸಮಾಡುವಂತೆ ಮಾಡಬೇಕು. ಅಥವಾ ತನ್ನ ಕಡೆಯ ಜನರನ್ನೇ ಕಳುಹಿಸಿ ನಾಶಪಡಿಸಬೇಕು. ಆಹಾರ-ಧಾನ್ಯಗಳು ಶತ್ರುವಿನ ಕೈಗಂತೂ ಸಿಕ್ಕಲೇಬಾರದು.

12069037a ನದೀಷು ಮಾರ್ಗೇಷು ಸದಾ ಸಂಕ್ರಮಾನವಸಾದಯೇತ್|
12069037c ಜಲಂ ನಿಸ್ರಾವಯೇತ್ಸರ್ವಮನಿಸ್ರಾವ್ಯಂ ಚ ದೂಷಯೇತ್||

ನದಿಗಳನ್ನು ದಾಟುವಲ್ಲಿರುವ ಸೇತುವೆಗಳನ್ನು ಧ್ವಂಸಮಾಡಬೇಕು. ನೀರಿನ ಒಡ್ಡುಗಳನ್ನೊಡೆದು ಶತ್ರುಗಳಿಗ ನೀರು ದೊರೆಯದಂತೆ ಮಾಡಬೇಕು. ಬಾವಿಯೇ ಮೊದಲಾದ ಜಲಾಶಯಗಳ ನೀರು ಕುಡಿಯಲಿಕ್ಕೆ ಬಾರದಂತೆ ದೂಷಿತಗೊಳಿಸಬೇಕು.

12069038a ತದಾತ್ವೇನಾಯತೀಭಿಶ್ಚ ವಿವದನ್ಭೂಮ್ಯನಂತರಮ್|
12069038c ಪ್ರತೀಘಾತಃ ಪರಸ್ಯಾಜೌ ಮಿತ್ರಕಾಲೇಽಪ್ಯುಪಸ್ಥಿತೇ||

ಮಿತ್ರನಿಗಾಗಿ ಮಾಡಬೇಕಾದ ಕಾಲವು ಸನ್ನಿಹಿತವಾಗಿದ್ದರೂ ಅದನ್ನು ಬದಿಗೊತ್ತಿ ತನ್ನ ಶತ್ರುವಿಗೆ ಶತ್ರುವಾದವನ ಆಶ್ರಯವನ್ನು ಪಡೆಯಬೇಕು.

12069039a ದುರ್ಗಾಣಾಂ ಚಾಭಿತೋ ರಾಜಾ ಮೂಲಚ್ಚೇದಂ ಪ್ರಕಾರಯೇತ್|
12069039c ಸರ್ವೇಷಾಂ ಕ್ಷುದ್ರವೃಕ್ಷಾಣಾಂ ಚೈತ್ಯವೃಕ್ಷಾನ್ವಿವರ್ಜಯೇತ್||

ರಾಜನಾದವನು ದುರ್ಗದ ಸುತ್ತಲೂ ಇರುವ ಮರಗಿಡಗಳನ್ನು ಬುಡಸಹಿತ ಕಡಿದುಹಾಕಬೇಕು. ಆದರೆ ಅಶ್ವತ್ಥಾದಿ ಪೂಜಾವೃಕ್ಷಗಳನ್ನು ನಾಶಗೊಳಿಸಬಾರದು.

12069040a ಪ್ರವೃದ್ಧಾನಾಂ ಚ ವೃಕ್ಷಾಣಾಂ ಶಾಖಾಃ ಪ್ರಚ್ಛೇದಯೇತ್ತಥಾ|
12069040c ಚೈತ್ಯಾನಾಂ ಸರ್ವಥಾ ವರ್ಜ್ಯಮಪಿ ಪತ್ರಸ್ಯ ಪಾತನಮ್‌||

ಅತಿ ದೊಡ್ಡದಾಗಿ ಬೆಳೆದ ಮರಗಳ ಶಾಖೆಗಳನ್ನು ಕಡಿಯಬೇಕು. ಆದರೆ ಅಶ್ವತ್ಥಾದಿ ವೃಕ್ಷಗಳ ಎಲೆಗಳನ್ನೂ ಕೀಳಬಾರದು.

12069041a ಪ್ರಕಂಠೀಃ[198] ಕಾರಯೇತ್ಸಮ್ಯಗಾಕಾಶಜನನೀಸ್ತಥಾ|
12069041c ಆಪೂರಯೇಚ್ಚ ಪರಿಖಾಃ ಸ್ಥಾಣುನಕ್ರಝಷಾಕುಲಾಃ||

ಕೋಟೆಯ ನಾಲ್ಕೂ ಕಡೆಗಳಲ್ಲಿ ಆಯಕಟ್ಟಿನ ಪ್ರದೇಶಗಳಲ್ಲಿ ಪ್ರಕಂಠಿ[199]ಗಳನ್ನು ನಿರ್ಮಿಸಬೇಕು. ಅಲ್ಲಿ ಆಕಾಶಜನನಿಗಳನ್ನೂ ಅಂದರೆ ಸಣ್ಣ ರಂಧ್ರಗಳನ್ನು ಮಾಡಿರಬೇಕು. ಕೋಟೆಯ ಸುತ್ತಲೂ ಕಂದಕವನ್ನು ತೋದಿಸಿ ಅವುಗಳನ್ನು ಮೇಲ್ಮುಖಿ ತ್ರಿಶೂಲಗಳು, ಮೀನು, ನಕ್ರ ಮತ್ತು ಮೊಸಳೆಗಳಿಂದ ತುಂಬಿಸಬೇಕು.

12069042a ಕಡಂಗದ್ವಾರಕಾಣಿ[200] ಸ್ಯುರುಚ್ಚಾಶ್ಚ ಸಾರ್ಥೇ ಪುರಸ್ಯ ಹ|
12069042c ತೇಷಾಂ ಚ ದ್ವಾರವದ್ಘಟ್ಟಿಃ ಕಾರ್ಯಾ ಸರ್ವಾತ್ಮನಾ ಭವೇತ್‌||

ಪುರದ ಒಳ ಮತ್ತು ಹೊರಹೋಗಲು ಸಣ್ಣ ದ್ವಾರಗಳನ್ನು

---

198 ಪ್ರಗಂಡೀಃ ಎಂಬ ಪಾಠಾಂತರವಿದೆ.

199 ಪ್ರಕಂಡಿಯ ಲಕ್ಷಣವನ್ನು ಹೀಗೆ ಹೇಳಿದ್ದಾರೆ: ಸಂಚಾರೋ ಯತ್ರಲೋಕಾನಾಂ ದೂರಾದೇವಾವಬುಧ್ಯತೇ| ಪ್ರಕಂಠೀ ಸಾ ಚ ವಿಜ್ಞೇಯಾ ಬಹಿಃಪ್ರಾಕಾರಸಂಜ್ಞಿತಾ‌|| ಜನರ ಸಂಚಾರವು ಬಹಳ ದೂರದಿಂದಲೇ ತಿಳಿಯಲ್ಪಡುವ ಸ್ಥಾನಕ್ಕೆ ಪ್ರಕಂಡೀ ಎಂದು ಹೆಸರು.ಅದಕ್ಕೆ ಬಹಿಃಪ್ರಾಕಾರವೆಂದೂ ಹೆಸರು.

200 ಸಂಕಟದ್ವಾರಕಾಣಿ ಎಂಬ ಪಾಠಾಂತರವಿದೆ.

ನಿರ್ಮಿಸಿರಬೇಕು. ಆ ದ್ವಾರಗಳನ್ನೂ , ಮುಖ್ಯದ್ವಾರದಂತೆ, ಎಲ್ಲ ಕಾರಣಗಳಲ್ಲಿಯೂ ರಕ್ಷಿಸಬೇಕು.

12069043a ದ್ವಾರೇಷು ಚ ಗುರೂಣ್ಯೇವ ಯಂತ್ರಾಣಿ ಸ್ಥಾಪಯೇತ್ಸದಾ|
12069043c ಆರೋಪಯೇಚ್ಚ ತಘ್ನೀಶ್ಚ ಸ್ವಾಧೀನಾನಿ ಚ ಕಾರಯೇತ್||

ದ್ವಾರಗಳಲ್ಲಿ ದೊಡ್ಡ ಯಂತ್ರಗಳನ್ನು ಸ್ಥಾಪಿಸಬೇಕು. ಆ ಯಂತ್ರಗಳ ಮೇಲೆ ಶತಘ್ನಿಗಳನ್ನು ಇಟ್ಟಿರಬೇಕು. ಇವೆಲ್ಲವೂ ರಾಜನ ಸ್ವಾಧೀನದಲ್ಲಿರಬೇಕು.

12069044a ಕಾಷ್ಠಾನಿ ಚಾಭಿಹಾರ್ಯಾಣಿ ತಥಾ ಕೂಪಾಂಶ್ಚ ಖಾನಯೇತ್|
12069044c ಸಂಶೋಧಯೇತ್ತಥಾ ಕೂಪಾನ್ಕೃತಾನ್ಪೂರ್ವಂ ಪಯೋರ್ಥಿಭಿಃ||

ಕೋಟೆಯ ಒಳಗೆ ಕಟ್ಟಿಗೆಯನ್ನು ಸಂಗ್ರಹಿಸಿಟ್ಟಿರಬೇಕು. ಬಾವಿಗಳನ್ನು ತೋಡಿಸಬೇಕು. ಹಳೆಯ ಬಾವಿಗಳನ್ನು ಕೆಸರು ತೆಗೆದು ಶೋಧಿಸಬೇಕು ಮತ್ತು ಕುಡಿಯುವ ನೀರು ಹೇರಳವಾಗಿರುವಂತೆ ನೋಡಿಕೊಳ್ಳಬೇಕು.

12069045a ತೃಣಚ್ಚನ್ನಾನಿ ವೇಶ್ಮಾನಿ ಪಂಕೇನಾಪಿ ಪ್ರಲೇಪಯೇತ್|
12069045c ನಿರ್ಹರೇಚ್ಚ ತೃಣಂ ಮಾಸೇ ಚೈತ್ರೇ ವಹ್ನಿಭಯಾತ್ಪುರಃ||

ಹುಲ್ಲುಹೊಚ್ಚಿದ ಗುಡಿಸಲುಗಳ ಸೂರುಗಳನ್ನು ಮಣ್ಣಿನಿಂದ ಬಳಿಯಬೇಕು. ಚೈತ್ರಮಾಸದಲ್ಲಿ ಪುರವು ಅಗ್ನಿಯ ಭಯದಿಂದ ದೂರವಾಗಿರುವಂತೆ ಒಣಹುಲ್ಲನ್ನು ಪುರದ ಹೊರಹಾಕಬೇಕು.

12069046a ನಕ್ತಮೇವ ಚ ಭಕ್ತಾನಿ ಪಾಚಯೇತ ನರಾಧಿಪಃ|
12069046c ನ ದಿವಾಗ್ನಿರ್ಜ್ವಲೇದ್ಗೇಹೇ ವರ್ಜಯಿತ್ವಾಗ್ನಿಹೋತ್ರಿಕಮ್||

ನರಾಧಿಪನು ರಾತ್ರಿಮಾತ್ರವೇ ಅಡುಗೆಮಾಡಬೇಕೆಂದು

ಆಜ್ಞಾಪಿಸಬೇಕು. ಅಗ್ನಿಹೋತ್ರವನ್ನು ಬಿಟ್ಟು ಬೇರೆ ಯಾವ ಕಾರಣಕ್ಕೂ ಹಗಲಿನಲ್ಲಿ ಬೆಂಕಿಯನ್ನು ಹೊತ್ತಿಸಬಾರದು.

12069047a ಕರ್ಮಾರಾರಿಷ್ಟಶಾಲಾಸು ಜ್ವಲೇದಗ್ನಿಃ ಸಮಾಹಿತಃ|
12069047c ಗೃಹಾಣಿ ಚ ಪ್ರವಿಶ್ಯಾಥ ವಿಧೇಯಃ ಸ್ಯಾದ್ಧುತಾಶನಃ||

ಕಮ್ಮಾರನ ಕುಲುಮೆ ಮತ್ತು ಸೂತಿಕಾಗೃಹಗಳಲ್ಲಿ ಬೆಂಕಿಯನ್ನು ಬಹಳ ಎಚ್ಚರಿಕೆಯಿಂದ ಉರಿಸಬೇಕು. ಮನೆಯ ಒಳಗೆ ತೆಗೆದುಕೊಂಡು ಹೋಗಿ ಅಗ್ನಿಯನ್ನು ಅಡಗಿಸಿಡಬೇಕು.

12069048a ಮಹಾದಂಡಶ್ಚ ತಸ್ಯ ಸ್ಯಾದ್ಯಸ್ಯಾಗ್ನಿರ್ವೈ ದಿವಾ ಭವೇತ್|
12069048c ಪ್ರಘೋಷಯೇದಥೈವಂ ಚ ರಕ್ಷಣಾರ್ಥಂ ಪುರಸ್ಯ ವೈ||

ಪುರದ ರಕ್ಷಣೆಗಾಗಿ ಹಗಲಿನಲ್ಲಿ ಬೆಂಕಿಉರಿಸಿರುವವರಿಗೆ ಮಹಾದಂಡ ಶಿಕ್ಷೆಯಾಗುತ್ತದೆ ಎಂದು ಘೋಷಣೆ ಹಾಕಿಸಬೇಕು.

12069049a ಭಿಕ್ಷುಕಾಂಶ್ಚಾಕ್ರಿಕಾಂಶ್ಚೈವ ಕ್ಷೀಬೋನ್ಮತ್ತಾನ್ಕುಶೀಲವಾನ್|
12069049c ಬಾಹ್ಯಾನ್ಕುರ್ಯಾನ್ನರಶ್ರೇಷ್ಠ ದೋಷಾಯ ಸ್ಯುರ್ಹಿ ತೇಽನ್ಯಥಾ||

ನರಶ್ರೇಷ್ಠ! ಯುದ್ಧದ ಸಮಯದಲ್ಲಿ ಭಿಕ್ಷುಕರು, ಹೊಗಳುಭಟರು, ನಪುಂಸಕರು, ಹುಚ್ಚರು, ನಟ-ನರ್ತಕರನ್ನು ನಗರದ ಹೊರಹಾಕಬೇಕು. ಇಲ್ಲದಿದ್ದರೆ ಅವರಿಂದಲೇ ಆಪತ್ತುಂಟಾಗಬಹುದು. ಶತ್ರುಗೂಢಚರರು ಆ ವೇಷಗಳಲ್ಲಿದ್ದು ರಾಷ್ಟ್ರಕ್ಕೇ ತೊಂದರೆಯನ್ನುಂಟುಮಾಡಬಹುದು.

12069050a ಚತ್ವರೇಷು ಚ ತೀರ್ಥೇಷು ಸಭಾಸ್ವಾವಸಥೇಷು ಚ|
12069050c ಯಥಾರ್ಹವರ್ಣಂ ಪ್ರಣಿಧಿಂ ಕುರ್ಯಾತ್ಸರ್ವತ್ರ ಪಾರ್ಥಿವಃ||

ನಗರದ ಎಲ್ಲ ಚೌಕಗಳಲ್ಲಿ, ತೀರ್ಥಗಳಲ್ಲಿ, ಸಭೆಗಳಲ್ಲಿ ಮತ್ತು

ಧರ್ಮಶಾಲೆಗಳಲ್ಲಿ ರಾಜನು ಅರ್ಹವರ್ಣ ದೂತರನ್ನು
ನೇಮಿಸಿರಬೇಕು.

12069051a ವಿಶಾಲಾನ್ರಾಜಮಾರ್ಗಾಂಶ್ಚ ಕಾರಯೇತ ನರಾಧಿಪಃ|
12069051c ಪ್ರಪಾಶ್ಚ ವಿಪಣೀಶ್ಚೈವ ಯಥೋದ್ದೇಶಂ ಸಮಾದಿಶೇತ್||

ನರಾಧಿಪನು ರಾಜಮಾರ್ಗಗಳನ್ನೂ ವಿಶಾಲಗೊಳಿಸಬೇಕು.
ಅವಶ್ಯಕತೆಗಳಿಗನುಗುಣವಾಗಿ ಅರವಟ್ಟಿಗೆ-ಅಂಗಡಿಗಳನ್ನು
ಇಡಿಸಿರಬೇಕು.

12069052a ಭಾಂಡಾಗಾರಾಯುಧಾಗಾರಾನ್ಧಾನ್ಯಾಗಾರಾಂಶ್ಚ ಸರ್ವಶಃ|
12069052c ಅಶ್ವಾಗಾರಾನ್ಗಜಾಗಾರಾನ್ಬಲಾಧಿಕರಣಾನಿ ಚ||
12069053a ಪರಿಖಾಶ್ಚೈವ ಕೌರವ್ಯ ಪ್ರತೋಲೀಃ ಸಂಕಟಾನಿ ಚ|
12069053c ನ ಜಾತು ಕಶ್ಚಿತ್ಪಶ್ಯೇತ್ತು ಗುಹ್ಯಮೇತದ್ಯುಧಿಷ್ಠಿರ||

ಕೌರವ್ಯ! ಯುಧಿಷ್ಠಿರ! ಧಾನ್ಯದ ಕಣಜಗಳು, ಆಯುಧಾಗಾರಗಳು,
ಮತ್ತು ಯೋಧರ ವಸತಿಗಳು, ಅಶ್ವಾಗಾರಗಳು, ಗಜಾಗಾರಗಳು,
ಸೇನೆಗಳು, ಕಂದಕಗಳು, ಮತ್ತು ರಾಜನ ಉದ್ಯಾನವನಗಳನ್ನು
ಶತ್ರುಗಳಿಗೆ ಕಾಣದಂತಿರಬೇಕು. ಇವಿಷ್ಟೂ ಶತ್ರುವಿನಿಂದ
ಗೌಪ್ಯವಾಗಿಡತಕ್ಕ ವಿಷಯಗಳು.

12069054a ಅಥ ಸಂನಿಚಯಂ ಕುರ್ಯಾದ್ರಾಜಾ ಪರಬಲಾರ್ದಿತಃ|
12069054c ತೈಲಂ ಮಧು ಘೃತಂ ಸಸ್ಯಮೌಷಧಾನಿ ಚ ಸರ್ವಶಃ||
12069055a ಅಂಗಾರಕುಶಮುಂಜಾನಾಂ ಪಲಾಶಶರಪರ್ಣಿನಾಮ್|

ಶತ್ರುಬಲಕ್ಕಿಂತ ಕಡಿಮೆ ಬಲ್ಲವುಳ್ಳವನು ಎಣ್ಣೆ, ಮಧು, ಘೃತ, ಔಷಧೀ
ಸಸ್ಯಗಳು-ಮೂಲಿಕೆಗಳು, ಇದ್ದಿಲು, ದರ್ಬೆ, ಮುಂಜಿಹುಲ್ಲು, ಮುತ್ತುಗ,

ಬಾಣ, ಮತ್ತು ಎಲೆಗಳನ್ನು ಕೂಡಿಸಿಕೊಂಡಿರಬೇಕು.

12069055c ಯವಸೇಂಧನದಿಗ್ಧಾನಾಂ ಕಾರಯೇತ ಚ ಸಂಚಯಾನ್‌॥
12069056a ಆಯುಧಾನಾಂ ಚ ಸರ್ವೇಷಾಂ ಶಕ್ತ್ಯೃಷ್ಟಿಪ್ರಾಸವರ್ಮಣಾಮ್‌।
12069056c ಸಂಚಯಾನೇವಮಾದೀನಾಂ ಕಾರಯೇತ ನರಾಧಿಪಃ॥

ಅಂಥಹ ನರಾಧಿಪನು ಕಟ್ಟಿಗೆ, ವಿಷಯುಕ್ತ ಬಾಣಗಳು ಮೊದಲಾದವುಗಳನ್ನು ಸಂಗ್ರಹಿಸಿಟ್ಟುಕೊಂಡಿರಬೇಕು. ಎಲ್ಲ ತರಹದ ಆಯುಧಗಳೂ, ಶಕ್ತಿಗಳೂ, ಋಷ್ಟಿಗಳೂ, ಪ್ರಾಸಗಳೂ, ಕವಚಗಳೂ ಮೊದಲಾದವುಗಳನ್ನು ಸಂಗ್ರಹಿಸಿಟ್ಟುಕೊಂಡಿರಬೇಕು.

12069057a ಔಷಧಾನಿ ಚ ಸರ್ವಾಣಿ ಮೂಲಾನಿ ಚ ಫಲಾನಿ ಚ।
12069057c ಚತುರ್ವಿಧಾಂಶ್ಚ ವೈದ್ಯಾನ್ವೈ ಸಂಗೃಹ್ಣೀಯಾದ್ವಿಶೇಷತಃ॥

ವಿಶೇಷವಾಗಿ ಎಲ್ಲ ಔಷಧಿಗಳು, ಗೆಡ್ಡೆಗಳು, ಫಲಗಳು, ನಾಲ್ಕು ಬಗೆಯ ವೈದ್ಯರನ್ನೂ [201] ಸಂಗ್ರಹಿಸಿಟ್ಟುಕೊಂಡಿರಬೇಕು.

12069058a ನಟಾಶ್ಚ ನರ್ತಕಾಶ್ಚೈವ ಮಲ್ಲಾ ಮಾಯಾವಿನಸ್ತಥಾ।
12069058c ಶೋಭಯೇಯುಃ ಪುರವರಂ ಮೋದಯೇಯುಶ್ಚ ಸರ್ವಶಃ॥

ಪುರಜನರ ಮನೋರಂಜನೆಗೆಂದು ಎಲ್ಲಕಡೆ ನಟರು, ನರ್ತಕರು, ಮಲ್ಲರು, ಪವಾಡಗಾರರು ಶೋಭಿಸುತ್ತಿರಬೇಕು.

12069059a ಯತಃ ಶಂಕಾ ಭವೇಚ್ಚಾಪಿ ಭೃತ್ಯತೋ ವಾಪಿ ಮಂತ್ರಿತಃ।

---

[201] ವಿಷವನ್ನು ಹೋಗಲಾಡಿಸುವವನು, ಗಾಯದ ಮೇಲೆ ಪಟ್ಟಿಯನ್ನು ಕಟ್ಟುವವನು, ರೋಗವನ್ನು ಹೋಗಲಾಡಿಸುವವನು ಮತ್ತು ಅಭಿಚಾರಿ ಕೃತ್ಯಗಳನ್ನು ನಿವಾರಿಸುವವನು.

12069059c ಪೌರೇಭ್ಯೋ ನೃಪತೇರ್ವಾಪಿ ಸ್ವಾಧೀನಾನ್ಕಾರಯೇತ ತಾನ್॥

ಸೇವಕರಲ್ಲಿಯಾಗಲೀ, ಮಂತ್ರಿಗಳಲ್ಲಿಯಾಗಲೀ, ಪೌರರಲ್ಲಿಯಾಗಲೀ ಯಾರೊಬ್ಬರ ಮೇಲೂ ನೃಪತಿಗೆ ಶಂಕೆಯುಂಟಾದರೆ ಅವರನ್ನು ರಾಜನು ಕೂಡಲೇ ಬಂಧಿಸಿ ತನ್ನ ಸ್ವಾಧೀನಕ್ಕೆ ತಂದುಕೊಳ್ಳಬೇಕು.

12069060a ಕೃತೇ ಕರ್ಮಣಿ ರಾಜೇಂದ್ರ ಪೂಜಯೇದ್ಧನಸಂಚಯೈಃ|
12069060c ಮಾನೇನ ಚ ಯಥಾರ್ಹೇಣ ಸಾಂತ್ವೇನ ವಿವಿಧೇನ ಚ॥

ರಾಜೇಂದ್ರ! ತನಗೆ ಅಭೀಷ್ಟ ಕಾರ್ಯವನ್ನು ಮಾಡಿಕೊಟ್ಟವನನ್ನು ಧನಸಂಚಯಗಳಿಂದಲೂ, ಪುರಸ್ಕಾರದಿಂದಲೂ, ಸುಮಧುರ ಮಾತುಗಳಿಂದಲೂ ಸತ್ಕರಿಸಬೇಕು.

12069061a ನಿರ್ವೇದಯಿತ್ವಾ ತು ಪರಂ ಹತ್ವಾ ವಾ ಕುರುನಂದನ|
12069061c ಗತಾನೃಣ್ಯೋ ಭವೇದ್ರಾಜಾ ಯಥಾ ಶಾಸ್ತ್ರೇಷು ದರ್ಶಿತಮ್॥

ಕುರುನಂದನ! ಶತ್ರುವನ್ನು ನೋಯಿಸಿ ಅಥವಾ ಕೊಂದು ಶಾಸ್ತ್ರದಲ್ಲಿ ತೋರಿಸಿದ ವಿಧಿ[202]ಗಳಿಂದ ರಾಜನು ಋಣಮುಕ್ತನಾಗಬೇಕು.

12069062a ರಾಜ್ಞಾ ಸಪ್ತೈವ ರಕ್ಷ್ಯಾಣಿ ತಾನಿ ಚಾಪಿ ನಿಬೋಧ ಮೇ|
12069062c ಆತ್ಮಾಮಾತ್ಯಶ್ಚ ಕೋಶಶ್ಚ ದಂಡೋ ಮಿತ್ರಾಣಿ ಚೈವ ಹಿ॥
12069063a ತಥಾ ಜನಪದಶ್ಚೈವ ಪುರಂ ಚ ಕುರುನಂದನ|
12069063c ಏತತ್ಸಪ್ತಾತ್ಮಕಂ ರಾಜ್ಯಂ ಪರಿಪಾಲ್ಯಂ ಪ್ರಯತ್ನತಃ॥

ರಾಜನಾದವನು ಈ ಏಳನ್ನು ರಕ್ಷಿಸಲೇ ಬೇಕು. ಅವು ಯಾವುದೆಂದು ನನ್ನನ್ನು ಕೇಳು: ತಾನು, ಅಮಾತ್ಯ, ಕೋಶ, ಸೇನೆ, ಮಿತ್ರರು, ರಾಷ್ಟ್ರ

---

202 ಶತ್ರುರಾಜನ ವಂಶೀಯರಿಗೇ ರಾಜ್ಯದಲ್ಲಿ ಪಟ್ಟಗಟ್ಟಿ.

ಮತ್ತು ರಾಜಧಾನಿ. ಈ ಏಳನ್ನು ಆತ್ಮರೂಪದಲ್ಲಿ ಪಡೆದ ರಾಜ್ಯವನ್ನು ಪ್ರಯತ್ನಪಟ್ಟು ಪರಿಪಾಲಿಸಬೇಕು.

12069064a ಷಾಡ್ಗುಣ್ಯಂ ಚ ತ್ರಿವರ್ಗಂ ಚ ತ್ರಿವರ್ಗಮಪರಂ ತಥಾ|
12069064c ಯೋ ವೇತ್ತಿ ಪುರುಷವ್ಯಾಘ್ರ ಸ ಭುನಕ್ತಿ ಮಹೀಮಿಮಾಮ್||

ಪುರುಷವ್ಯಾಘ್ರ! ಆರು ಗುಣಗಳನ್ನು, ಮೂರು ವರ್ಗಗಳನ್ನು ಮತ್ತು ನಂತರ ಮೂರು ಅಪರವರ್ಗಗಳನ್ನು ತಿಳಿದವನು ಈ ಮಹಿಯನ್ನು ಭೋಗಿಸುತ್ತಾನೆ.

12069065a ಷಾಡ್ಗುಣ್ಯಮಿತಿ ಯತ್ಪ್ರೋಕ್ತಂ ತನ್ನಿಬೋಧ ಯುಧಿಷ್ಠಿರ|
12069065c ಸಂಧಾಯಾಸನಮಿತ್ಯೇವ ಯಾತ್ರಾಸಂಧಾನಮೇವ ಚ||
12069066a ವಿಗೃಹ್ಯಾಸನಮಿತ್ಯೇವ ಯಾತ್ರಾಂ ಸಂಪರಿಗೃಹ್ಯ ಚ|
12069066c ದ್ವೈಧೀಭಾವಸ್ತಥಾನ್ಯೇಷಾಂ ಸಂಶ್ರಯೋಽಥ ಪರಸ್ಯ ಚ||

ಯುಧಿಷ್ಠಿರ! ಆರುಗುಣಗಳು ಯಾವುವೆನ್ನುವುದನ್ನು ಕೇಳು: <u>ಸಂಧಾನಾಸನ</u> – ಸಮಾನಬಲವುಳ್ಳ ರಾಜರು ಶಕ್ತಿಗುಂದಿ ಸಂಧಿಮಾಡಿಕೊಂಡು ಕುಳಿತುಕೊಳ್ಳುವುದು, <u>ಸಂಧಾಯಾಸನ</u> – ಪ್ರಬಲ ಶತ್ರುವಿನೊಡನೆ ಹೋರಾಡಿ ಪರಾಜಿತನಾಗಿ ಶತ್ರು ಅಥವಾ ಮಿತ್ರನೊಡನೆ ಸೇರಿಕೊಂಡು ಕುಳಿತುಕೊಳ್ಳುವುದು, <u>ವಿಗೃಹ್ಯಾಸನ</u> – ಶತ್ರುವು ಆಕ್ರಮಣಿಸಿದ ನಂತರ ಅಶಕ್ತ ರಾಜನು ಕೋಟೆಯನ್ನು ಪ್ರವೇಶಿಸಿ ಆತ್ಮರಕ್ಷಣೆಯನ್ನು ಮಾಡಿಕೊಂಡು ಕುಳಿತುಕೊಳ್ಳುವುದು, <u>ಯಾತ್ರಾಸಂಪರಿಗ್ರಹಾಸನ</u> ಅಥವಾ <u>ಪ್ರಸಂಗಾಸನ</u> – ಶತ್ರುವಿನೊಡನೆ ಯುದ್ಧವನ್ನು ಪ್ರಾರಂಭಿಸಿ ನಂತರ ಅಶಕ್ತನಾಗಿ ಮಿತ್ರನಿಗಾಗಿ ಕಾದು ಕುಳಿತುಕೊಳ್ಳುವುದು, <u>ದ್ವೈಧೀಭಾವ</u> – ಇಬ್ಬರು ಪ್ರಬಲ ಶತ್ರುಗಳು

ಇಬ್ಬರಿಗೂ ತಿಳಿಯದಂತೆ ಇಬ್ಬರಿಗೂ ಸಮನಾಗಿರುವರಂತೆ ನಟಿಸುತ್ತಾ
ಕಪಟದಿಂದ ವ್ಯವಹರಿಸುತ್ತಿರುವುದು ಅಥವಾ ಶತ್ರುವಿನ ಸೇನೆಯನ್ನು
ಬೇರ್ಪಡಿಸಿ ಮೂಲಬಲದೊಂದಿಗೆ ಸ್ನೇಹಮಾಡಿಕೊಂಡು
ಶತ್ರುವಿನೊಡನೆ ಯುದ್ಧಮಾಡುವುದು, ಪರಸಂಶ್ರಯ – ಪ್ರಬಲ
ಶತ್ರುವಿನೊಡನೆ ಸಂಧಿಮಾಡಿಕೊಂಡು ದುರ್ಬಲನೊಡನೆ
ಯುದ್ಧಮಾಡುವುದು.

12069067a ತ್ರಿವರ್ಗಶ್ಚಾಪಿ ಯಃ ಪ್ರೋಕ್ತಸ್ತಮಿಹೈಕಮನಾಃ ಶೃಣು|
12069067c ಕ್ಷಯಃ ಸ್ಥಾನಂ ಚ ವೃದ್ಧಿಶ್ಚ ತ್ರಿವರ್ಗಮಪರಂ ತಥಾ||
12069068a ಧರ್ಮಶ್ಚಾರ್ಥಶ್ಚ ಕಾಮಶ್ಚ ಸೇವಿತವ್ಯೋಽಥ ಕಾಲತಃ|
12069068c ಧರ್ಮೇಣ ಹಿ ಮಹೀಪಾಲಶ್ಚಿರಂ ಪಾಲಯತೇ ಮಹೀಮ್||

ಯಾವುದಕ್ಕೆ ತ್ರಿವರ್ಗಗಳೆಂದು ಹೇಳುತ್ತಾರೆ ಎನ್ನುವುದನ್ನೂ
ಏಕಾಗ್ರಚಿತ್ತನಾಗಿ ಕೇಳು. ಕ್ಷಯ, ಸ್ಥಾನ, ವೃದ್ಧಿ – ಇವು ತ್ರಿವರ್ಗಗಳು.
ಧರ್ಮ, ಅರ್ಥ ಮತ್ತು ಕಾಮಗಳು ಪರಮತ್ರಿವರ್ಗಗಳು.
ರಾಜನಾದವನು ಕಾಲಕ್ಕೆ ತಕ್ಕಂತೆ ನಡೆದುಕೊಳ್ಳಬೇಕು. ಏಕೆಂದರೆ
ಧರ್ಮದಿಂದ ಪಾಲಿಸಿದರೆ ಮಹೀಪಾಲನು ಹೆಚ್ಚುಕಾಲ ಮಹಿಯನ್ನು
ಪಾಲಿಸಿಕೊಂಡಿರಬಹುದು.

12069069a ಅಸ್ಮಿನ್ನರ್ಥೇ ಚ ಯೌ ಶ್ಲೋಕೌ ಗೀತಾವಂಗಿರಸಾ ಸ್ವಯಮ್|
12069069c ಯಾದವೀಪುತ್ರ ಭದ್ರಂ ತೇ ಶ್ರೋತುಮರ್ಹಸಿ ತಾವಪಿ||

ಇದೇ ಅರ್ಥಕೊಡುವ ಈ ಎರಡು ಶ್ಲೋಕಗಳನ್ನು ಸ್ವಯಂ
ಬೃಹಸ್ಪತಿಯೇ ಹಾಡಿದ್ದನು. ಯಾದವೀಪುತ್ರ! ನಿನಗೆ ಮಂಗಳವಾಗಲಿ.
ಅದನ್ನು ನೀನೂ ಕೇಳಬೇಕು.

12069070a ಕೃತ್ವಾ ಸರ್ವಾಣಿ ಕಾರ್ಯಾಣಿ ಸಮ್ಯಕ್ಸಂಪಾಲ್ಯ ಮೇದಿನೀಮ್|
12069070c ಪಾಲಯಿತ್ವಾ ತಥಾ ಪೌರಾನ್ಪರತ್ರ ಸುಖಮೇಧತೇ||

"ಎಲ್ಲ ಕಾರ್ಯಗಳನ್ನೂ ಸರಿಯಾಗಿ ಪೂರೈಸಿ, ಮೇದಿನಿಯನ್ನು ಸರಿಯಾಗಿ ಆಳಿಕೊಂಡು ಪ್ರಜೆಗಳನ್ನು ಮಕ್ಕಳಂತೆ ಪರಿಪಾಲಿಸಿದ ರಾಜನಿಗೆ ಮರಣಾನಂತರ ಸುಖವು ದೊರೆಯುತ್ತದೆ.

12069071a ಕಿಂ ತಸ್ಯ ತಪಸಾ ರಾಜ್ಞಃ ಕಿಂ ಚ ತಸ್ಯಾಧ್ವರೈರಪಿ|
12069071c ಅಪಾಲಿತಾಃ ಪ್ರಜಾ ಯಸ್ಯ ಸರ್ವಾ ಧರ್ಮವಿನಾಕೃತಾಃ||

ಎಲ್ಲ ಧರ್ಮವನ್ನು ಅಲ್ಲಗಳೆದು ಪ್ರಜೆಗಳನ್ನು ಯಾರು ಪರಿಪಾಲಿಸುವುದಿಲ್ಲವೋ ಆ ರಾಜನಿಗೆ ತಪಸ್ಸೆಂದರೇನು? ಅಥವಾ ಯಜ್ಞಗಳೆಂದರೇನು?""

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಏಕೋನಸಪ್ತತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಅರವತ್ತೊಂಭತ್ತನೇ ಅಧ್ಯಾಯವು.

೭೦

ದಂಡನೀತಿ (1-32).

[203]12070001 ಯುಧಿಷ್ಠಿರ ಉವಾಚ|

---

203 ಗೀತಾ ಪ್ರೆಸ್ ನಲ್ಲಿ ಈ ಅಧ್ಯಾಯವು ಇದರ ಹಿಂದಿನ ಅಧ್ಯಾಯದಲ್ಲಿಯೇ ಸೇರಿಸಿ ಕೊಟ್ಟಿದ್ದಾರೆ.

12070001a ದಂಡನೀತಿಶ್ಚ ರಾಜಾ ಚ ಸಮಸ್ತೌ ತಾವುಭಾವಪಿ|
12070001c ಕಸ್ಯ ಕಿಂ ಕುರ್ವತಃ ಸಿದ್ಧ್ಯೈ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ದಂಡನೀತಿ ಮತ್ತು ರಾಜ – ಇವೆರಡೂ ಸೇರಿದರೆ ರಾಜನೀತಿಯಾಗುತ್ತದೆ. ಯಾರಿಗೆ ಏನನ್ನು ಮಾಡಿದರೆ ರಾಜನೀತಿಯು ಸಿದ್ಧಿಸುವುದು ಎನ್ನುವುದನ್ನು ಹೇಳು."

12070002 ಭೀಷ್ಮ ಉವಾಚ|
12070002a ಮಹಾಭಾಗ್ಯಂ ದಂಡನೀತ್ಯಾಃ ಸಿದ್ಧ್ಯೈಃ ಶಬ್ದೈಃ ಸಹೇತುಕೈಃ|
12070002c ಶೃಣು ಮೇ ಶಂಸತೋ ರಾಜನ್ಯಥಾವದಿಹ ಭಾರತ||

ಭೀಷ್ಮನು ಹೇಳಿದನು: "ರಾಜನ್! ಭಾರತ! ದಂಡನೀತಿಯ ಮಹಾಭಾಗ್ಯದಕುರಿತು ಸಿದ್ಧ ಶಬ್ದಗಳಿಂದ ಕಾರಣಗಳೊಂದಿಗೆ ಹೇಳುವ ನನ್ನನ್ನು ಕೇಳು.

12070003a ದಂಡನೀತಿಃ ಸ್ವಧರ್ಮೇಭ್ಯಶ್ಚಾತುರ್ವರ್ಣ್ಯಂ ನಿಯಚ್ಚತಿ|
12070003c ಪ್ರಯುಕ್ತಾ ಸ್ವಾಮಿನಾ ಸಮ್ಯಗಧರ್ಮೇಭ್ಯಶ್ಚ ಯಚ್ಚತಿ||

ದಂಡನೀತಿಯು ನಾಲ್ಕು ವರ್ಣದವರೂ ಸ್ವಧರ್ಮಗಳಲ್ಲಿ ನಿರತರಾಗಿರುವುದನ್ನು ನಿಯಂತ್ರಿಸುತ್ತದೆ. ಒಡೆಯನಿಂದ ಚೆನ್ನಾಗಿ ಬಳಸಲ್ಪಟ್ಟ ಇದು ಎಲ್ಲ ರೀತಿಯ ಅಧರ್ಮಗಳನ್ನೂ ನಾಶಗೊಳಿಸುತ್ತದೆ.

12070004a ಚಾತುರ್ವರ್ಣ್ಯೇ ಸ್ವಧರ್ಮಸ್ಥೇ ಮರ್ಯಾದಾನಾಮಸಂಕರೇ|
12070004c ದಂಡನೀತಿಕೃತೇ ಕ್ಷೇಮೇ ಪ್ರಜಾನಾಮಕುತೋಭಯೇ||

ನಾಲ್ಕುವರ್ಣದವರನ್ನೂ ಸ್ವಧರ್ಮದಲ್ಲಿ ನಿರತರಾಗಿರುವಂತೆ ಮತ್ತು ಮರ್ಯಾದೆಗಳ ಸಂಕರವಾಗದಂತೆ ದಂಡನೀತಿಯನ್ನು ಬಳಸಿ ಪ್ರಜೆಗಳ

ಕ್ಷೇಮವನ್ನು ನೋಡಿಕೊಂಡಾಗ ಅವರಿಗೆ ಭಯವೆನ್ನುವುದೇ ಇರುವುದಿಲ್ಲ.

12070005a ಸೋಮೇ ಪ್ರಯತ್ನಂ ಕುರ್ವಂತಿ ತ್ರಯೋ ವರ್ಣಾ ಯಥಾವಿಧಿ|
12070005c ತಸ್ಮಾದ್ದೇವಮನುಷ್ಯಾಣಾಂ[204] ಸುಖಂ ವಿದ್ಧಿ ಸಮಾಹಿತಮ್||

ಮೂರು ವರ್ಣದವರೂ ಯಥಾವಿಧಿಯಾಗಿ ಯಜ್ಞಾದಿಗಳಿಗೆ ಪ್ರಯತ್ನಿಸುತ್ತಿರಲು ದೇವ-ಮನುಷ್ಯರ ಸುಖವು ಸಮಾಹಿತವಾಗಿದೆ ಎಂದು ತಿಳಿದುಕೋ.

12070006a ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್|
12070006c ಇತಿ ತೇ ಸಂಶಯೋ ಮಾ ಭೂದ್ರಾಜಾ ಕಾಲಸ್ಯ ಕಾರಣಮ್||

ರಾಜನಿಗೆ ಕಾಲವು ಕಾರಣವೋ ಅಥವಾ ರಾಜನು ಬಂದಿರುವ ಕಾಲಕ್ಕೆ ಕಾರಣವೋ? ಎನ್ನುವುದರಲ್ಲಿ ಸಂಶಯತಾಳಬೇಡ. ರಾಜನೇ ಬಂದಿರುವ ಕಾಲಕ್ಕೆ ಕಾರಣನು.

12070007a ದಂಡನೀತ್ಯಾ ಯದಾ ರಾಜಾ ಸಮ್ಯಕ್ಕಾತ್ಸ್ನ್ಯೇನ ವರ್ತತೇ|
12070007c ತದಾ ಕೃತಯುಗಂ ನಾಮ ಕಾಲಃ ಶ್ರೇಷ್ಠಃ ಪ್ರವರ್ತತೇ||

ದಂಡನೀತಿಯನ್ನು ಅಳವಡಿಸಿಕೊಂಡು ರಾಜನು ಯಾವಾಗ ಎಲ್ಲರೊಡನೆಯೂ ಸಮನಾಗಿ ವರ್ತಿಸುತ್ತಾನೋ ಆಗ ಶ್ರೇಷ್ಠವಾದ ಕೃತಯುಗ ಎಂಬ ಕಾಲವು ನಡೆಯುತ್ತದೆ.

12070008a ಭವೇತ್ಕೃತಯುಗೇ ಧರ್ಮೋ ನಾಧರ್ಮೋ ವಿದ್ಯತೇ ಕ್ವ ಚಿತ್|
12070008c ಸರ್ವೇಷಾಮೇವ ವರ್ಣಾನಾಂ ನಾಧರ್ಮೇ ರಮತೇ ಮನಃ||

---

[204] ತಸ್ಮಾದೇವಮನುಷ್ಯಾಣಾಂ ಎಂಬ ಪಾಠಾಂತರವಿದೆ.

ಕೃತಯುಗದಲ್ಲಿ ಧರ್ಮವೇ ನಡೆಯುತ್ತದೆ. ಅಧರ್ಮವೆನ್ನುವುದೇ ಯಾರಿಗೂ ತಿಳಿದಿರುವುದಿಲ್ಲ. ಎಲ್ಲ ವರ್ಣದವರ ಮನಸ್ಸೂ ಅಧರ್ಮದಲ್ಲಿ ರಮಿಸುವುದಿಲ್ಲ.

12070009a ಯೋಗಕ್ಷೇಮಾಃ ಪ್ರವರ್ತಂತೇ ಪ್ರಜಾನಾಂ ನಾತ್ರ ಸಂಶಯಃ|
12070009c ವೈದಿಕಾನಿ ಚ ಕರ್ಮಾಣಿ ಭವಂತ್ಯವಿಗುಣಾನ್ಯುತ||

ಪ್ರಜೆಗಳ ಯೋಗ-ಕ್ಷೇಮಗಳು ನಡೆಯುತ್ತಿರುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಉತ್ತಮ ಗುಣಯುಕ್ತ ವೈದಿಕ ಕರ್ಮಗಳು ನಡೆಯುತ್ತಿರುತ್ತವೆ.

12070010a ಋತವಶ್ಚ ಸುಖಾಃ ಸರ್ವೇ ಭವಂತ್ಯುತ ನಿರಾಮಯಾಃ|
12070010c ಪ್ರಸೀದಂತಿ ನರಾಣಾಂ ಚ ಸ್ವರವರ್ಣಮನಾಂಸಿ ಚ||

ಎಲ್ಲ ಋತುಗಳೂ ಎಲ್ಲರಿಗೂ ಸುಖವಾಗಿಯೇ ಇರುತ್ತವೆ. ಎಲ್ಲರೂ ನಿರಾಮಯರಾಗಿರುತ್ತಾರೆ. ಸ್ವರ-ವರ್ಣ-ಮನಸ್ಸುಗಳು ಮನುಷ್ಯರಿಗೆ ಪ್ರಸನ್ನವಾಗಿರುತ್ತವೆ.

12070011a ವ್ಯಾಧಯೋ ನ ಭವಂತ್ಯತ್ರ ನಾಲ್ಪಾಯುರ್ದೃಶ್ಯತೇ ನರಃ|
12070011c ವಿಧವಾ ನ ಭವಂತ್ಯತ್ರ ನೃಶಂಸೋ ನಾಭಿಜಾಯತೇ||

ವ್ಯಾಧಿಗಳು ಇರುವುದಿಲ್ಲ. ಅಲ್ಪಾಯು ನರನು ಅಲ್ಲಿ ಕಾಣಬರುವುದಿಲ್ಲ. ಅಲ್ಲಿ ವಿಧವೆಯರಿರುವುದಿಲ್ಲ. ಕ್ರೂರಿಯು ಹುಟ್ಟುವುದೇ ಇಲ್ಲ.

12070012a ಅಕೃಷ್ಟಪಚ್ಯಾ ಪೃಥಿವೀ ಭವಂತ್ಯೋಷಧಯಸ್ತಥಾ|
12070012c ತ್ವಕ್ಪತ್ರಫಲಮೂಲಾನಿ ವೀರ್ಯವಂತಿ ಭವಂತಿ ಚ||

ಕೃಷಿಮಾಡದೇ ಬೆಳೆಗಳು ಬೆಳೆಯುತ್ತವೆ. ಔಷಧಿಗಳು ತಾವಾಗಿಯೇ

ಬೆಳೆಯುತ್ತವೆ. ತೊಗಟೆಗಳೂ, ಎಲೆಗಳೂ, ಫಲಗಳೂ ಮತ್ತು
ಬೇರುಗಳೂ ವೀರ್ಯವತ್ತಾಗಿರುತ್ತವೆ.

12070013a ನಾಧರ್ಮೋ ವಿದ್ಯತೇ ತತ್ರ ಧರ್ಮ ಏವ ತು ಕೇವಲಃ|
12070013c ಇತಿ ಕಾರ್ತಯುಗಾನೇತಾನ್ಗುಣಾನ್ವಿದ್ಧಿ ಯುಧಿಷ್ಠಿರ||

ಯುಧಿಷ್ಠಿರ! ಆಗ ಅಧರ್ವವೆನ್ನುವುದೇ ಇರುವುದಿಲ್ಲ. ಕೇವಲ ಧರ್ಮ
ಮಾತ್ರ ಇರುತ್ತದೆ. ಇದು ಕೃತಯುಗದ ಗುಣಗಳೆಂದು ತಿಳಿ.

12070014a ದಂಡನೀತ್ಯಾ ಯದಾ ರಾಜಾ ತ್ರೀನಂಶಾನನುವರ್ತತೇ|
12070014c ಚತುರ್ಥಮಂಶಮುತ್ಸೃಜ್ಯ ತದಾ ತ್ರೇತಾ ಪ್ರವರ್ತತೇ||

ಯಾವಾಗ ರಾಜನು ದಂಡನೀತಿಯ ನಾಲ್ಕನೆಯ ಅಂಶವನ್ನು ಬಿಟ್ಟು
ಮೂರು ಅಂಶಗಳನ್ನು ಮಾತ್ರ ಅನುಸರಿಸುತ್ತಾನೆಯೋ ಆಗ
ತ್ರೇತಾಯುಗವು ಪ್ರಾರಂಭವಾಗುತ್ತದೆ.

12070015a ಅಶುಭಸ್ಯ ಚತುರ್ಥಾಂಶಸ್ತ್ರೀನಂಶನನುವರ್ತತೇ|
12070015c ಕೃಷ್ಟಪಚ್ಯೈವ ಪೃಥಿವೀ ಭವಂತ್ಯೋಷಧಯಸ್ತಥಾ||

ಸಂಪೂರ್ಣ ನಾಲ್ಕೂ ಅಂಶಗಳನ್ನು ಬಳಸದೇ ದಂಡನೀತಿಯ ಮೂರೇ
ಅಂಶಗಳನ್ನು ಬಳಸಿದ ಆ ಕಾಲದಲ್ಲಿ ಬೆಳೆ ಮತ್ತು ಔಷಧಿಗಳನ್ನು
ಬೆಳೆಯಲು ಕೃಷಿಮಾಡಬೇಕಾಗುತ್ತದೆ.

12070016a ಅರ್ಧಂ ತ್ಯಕ್ತ್ವಾ ಯದಾ ರಾಜಾ ನೀತ್ಯರ್ಧಮನುವರ್ತತೇ|
12070016c ತತಸ್ತು ದ್ವಾಪರಂ ನಾಮ ಸ ಕಾಲಃ ಸಂಪ್ರವರ್ತತೇ||

ಯಾವಾಗ ರಾಜನು ದಂಡನೀತಿಯ ಅರ್ಧವನ್ನು ತ್ಯಜಿಸಿ ಇನ್ನೊಂದು
ಅರ್ಧವನ್ನು ಮಾತ್ರ ಅನುಸರಿಸುತ್ತಾನೋ ಆಗ ದ್ವಾಪರ ಎಂಬ ಹೆಸರಿನ

ಕಾಲವಾಗಿ ಪರಿವರ್ತನೆಯಾಗುತ್ತದೆ.

12070017a ಅಶುಭಸ್ಯ ತದಾ ಅರ್ಧಂ ದ್ವಾವಂಶಾವನುವರ್ತತೇ|
12070017c ಕೃಷ್ಟಪಚ್ಯೈವ ಪೃಥಿವೀ ಭವತ್ಯಲ್ಪಫಲಾ ತಥಾ||

ಸಂಪೂರ್ಣ ದಂಡನೀತಿಯಲ್ಲದೇ ಅರ್ಧವನ್ನೇ ಅನುಸರಿಸುವ ಕಾಲದಲ್ಲಿ ಭೂಮಿಯಲ್ಲಿ ಕೃಷಿಮಾಡಬೇಕಲ್ಲದೇ ಅದು ಅಲ್ಪ ಫಲವನ್ನೇ ನೀಡುತ್ತದೆ.

12070018a ದಂಡನೀತಿಂ ಪರಿತ್ಯಜ್ಯ ಯದಾ ಕಾರ್ತ್ಸ್ನ್ಯೇನ ಭೂಮಿಪಃ|
12070018c ಪ್ರಜಾಃ ಕ್ಲಿಶ್ನಾತ್ಯಯೋಗೇನ ಪ್ರವಿಶ್ಯತಿ ತದಾ ಕಲಿಃ||

ಯಾವಾಗ ಭೂಮಿಪನು ದಂಡನೀತಿಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ ಅನ್ಯಾಯಮಾರ್ಗಗಳಿಂದ ಪ್ರಜೆಗಳಿಗೆ ಕಷ್ಟಗಳನ್ನು ಕೊಡುತ್ತಾನೋ ಆಗ ಕಲಿಯ ಪ್ರವೇಶವಾಗುತ್ತದೆ.

12070019a ಕಲಾವಧರ್ಮೋ ಭೂಯಿಷ್ಠಂ ಧರ್ಮೋ ಭವತಿ ತು ಕ್ವ ಚಿತ್|
12070019c ಸರ್ವೇಷಾಮೇವ ವರ್ಣಾನಾಂ ಸ್ವಧರ್ಮಾಚ್ಚ್ಯವತೇ ಮನಃ||

ಕಲಿಕಾಲದಲ್ಲಿ ಅಧರ್ಮವೇ ಹೆಚ್ಚಾಗಿರುತ್ತದೆ. ಧರ್ಮವೆನ್ನುವುದು ಎಲ್ಲಿಯೂ ಇರುವುದಿಲ್ಲ. ಸರ್ವ ವರ್ಣದವರಿಗೂ ತಮ್ಮ ಧರ್ಮದಲ್ಲಿ ಮನಸ್ಸಿರುವುದಿಲ್ಲ.

12070020a ಶೂದ್ರಾ ಭೈಕ್ಷೇಣ ಜೀವಂತಿ ಬ್ರಾಹ್ಮಣಾಃ ಪರಿಚರ್ಯಯಾ|
12070020c ಯೋಗಕ್ಷೇಮಸ್ಯ ನಾಶಶ್ಚ ವರ್ತತೇ ವರ್ಣಸಂಕರಃ||

ಶೂದ್ರರು ಭಿಕ್ಷೆಬೇಡಿ ಜೀವಿಸುತ್ತಾರೆ. ಬ್ರಾಹ್ಮಣರು ಸೇವಕರಾಗಿ ಜೀವಿಸುತ್ತಾರೆ. ಯೋಗಕ್ಷೇಮಗಳು ನಾಶವಾಗಿ ವರ್ಣಸಂಕರವಾಗುತ್ತದೆ.

12070021a ವೈದಿಕಾನಿ ಚ ಕರ್ಮಾಣಿ ಭವಂತಿ ವಿಗುಣಾನ್ಯುತ|
12070021c ಋತವೋ ನಸುಖಾಃ ಸರ್ವೇ ಭವಂತ್ಯಾಮಯಿನಸ್ತಥಾ||

ವೈದಿಕ ಕರ್ಮಗಳಲ್ಲಿ ಗುಣವಿರುವಿದಿಲ್ಲ. ಎಲ್ಲ ಋತುಗಳೂ ಎಲ್ಲರಿಗೂ ಸುಖವನ್ನು ನೀಡುವುದಿಲ್ಲ. ಮನುಷ್ಯರು ರೋಗಿಗಳೂ ಆಗುತ್ತಾರೆ.

12070022a ಹ್ರಸಂತಿ ಚ ಮನುಷ್ಯಾಣಾಂ ಸ್ವರವರ್ಣಮನಾಂಸ್ಯುತ|
12070022c ವ್ಯಾಧಯಶ್ಚ ಭವಂತ್ಯತ್ರ ಮ್ರಿಯಂತೇ ಚಾಗತಾಯುಷಃ||

ಮನುಷ್ಯರ ಸ್ವರ-ವರ್ಣ-ಮನಸ್ಸುಗಳು ಸಂಕುಚಿತಗೊಳ್ಳುತ್ತವೆ. ವ್ಯಾಧಿಗಳು ನಡೆಯುತ್ತವೆ. ಚಿಕ್ಕ ವಯಸ್ಸಿನಲ್ಲಿಯೇ ಸಾಯುತ್ತಾರೆ.

12070023a ವಿಧವಾಶ್ಚ ಭವಂತ್ಯತ್ರ ನೃಶಂಸಾ ಜಾಯತೇ ಪ್ರಜಾ|
12070023c ಕ್ವ ಚಿದ್ವರ್ಷತಿ ಪರ್ಜನ್ಯಃ ಕ್ವ ಚಿತ್ಸಸ್ಯಂ ಪ್ರರೋಹತಿ||

ವಿಧವೆಯರಾಗುತ್ತಾರೆ. ಪ್ರಜೆಗಳು ಕ್ರೂರಿಗಳಾಗಿ ಹುಟ್ಟುತ್ತಾರೆ. ಕೆಲವು ಕಡೆ ಮಾತ್ರ ಮಳೆಸುರಿಯುತ್ತದೆ ಮತ್ತು ಕೆಲ ಕಡೆಗಳಲ್ಲಿ ಮಾತ್ರ ಕೃಷಿಗಳನ್ನು ಮಾಡಬಹುದು.

12070024a ರಸಾಃ ಸರ್ವೇ ಕ್ಷಯಂ ಯಾಂತಿ ಯದಾ ನೇಚ್ಚತಿ ಭೂಮಿಪಃ|
12070024c ಪ್ರಜಾಃ ಸಂರಕ್ಷಿತುಂ ಸಮ್ಯಗ್ದಂಡನೀತಿಸಮಾಹಿತಃ||

ಉತ್ತಮ ದಂಡನೀತಿಯನ್ನು ಸಂಪೂರ್ಣವಾಗಿ ಬಳಸಿ ಪ್ರಜೆಗಳನ್ನು ರಕ್ಷಿಸಲು ರಾಜನು ಬಯಸದೇ ಇದ್ದಾಗ ರಸಗಳೆಲ್ಲವೂ ನಾಶಹೊಂದುತ್ತವೆ.

12070025a ರಾಜಾ ಕೃತಯುಗಸ್ರಷ್ಟಾ ತ್ರೇತಾಯಾ ದ್ವಾಪರಸ್ಯ ಚ|
12070025c ಯುಗಸ್ಯ ಚ ಚತುರ್ಥಸ್ಯ ರಾಜಾ ಭವತಿ ಕಾರಣಮ್||

ರಾಜನಾದವನು ಕೃತಯುಗ, ತ್ರೇತಾಯುಗ ಮತ್ತು ದ್ವಾಪರ ಯುಗಗಳನ್ನು ಸೃಷ್ಟಿಸುತ್ತಾನೆ. ಈ ನಾಲ್ಕು ಯುಗಗಳಿಗೆ ರಾಜನೇ ಕಾರಣನಾಗುತ್ತಾನೆ.

12070026a ಕೃತಸ್ಯ ಕರಣಾದ್ರಾಜಾ ಸ್ವರ್ಗಮತ್ಯಂತಮಶ್ನುತೇ|
12070026c ತ್ರೇತಾಯಾಃ ಕರಣಾದ್ರಾಜಾ ಸ್ವರ್ಗಂ ನಾತ್ಯಂತಮಶ್ನುತೇ||

ಕೃತಯುಗವನ್ನು ಮಾಡಿದ ರಾಜನು ಅಕ್ಷಯ ಸ್ವರ್ಗವನ್ನು ಪಡೆದುಕೊಳ್ಳುತ್ತಾನೆ. ತ್ರೇತಾಯುಗವನ್ನು ನಿರ್ಮಿಸಿದ ರಾಜನಿಗೆ ಅಕ್ಷಯ ಸ್ವರ್ಗವು ದೊರಕುವುದಿಲ್ಲ.

12070027a ಪ್ರವರ್ತನಾದ್ದ್ವಾಪರಸ್ಯ ಯಥಾಭಾಗಮುಪಾಶ್ನುತೇ|
12070027c ಕಲೇಃ ಪ್ರವರ್ತನಾದ್ರಾಜಾ ಪಾಪಮತ್ಯಂತಮಶ್ನುತೇ||

ಕಾಲವನ್ನು ದ್ವಾಪರಯುಗವನ್ನಾಗಿ ಪರಿವರ್ತಿಸಿದ ರಾಜನಿಗೆ ಸ್ವಲ್ಪವೇ ಪುಣ್ಯವು ದೊರೆಯುತ್ತದೆ. ಕಲಿಯುಗವನ್ನಾಗಿ ಪರಿವರ್ತಿಸಿದ ರಾಜನು ಅತ್ಯಂತ ಪಾಪವನ್ನು ಪಡೆದುಕೊಳ್ಳುತ್ತಾನೆ.

12070028a ತತೋ ವಸತಿ ದುಷ್ಕರ್ಮಾ ನರಕೇ ಶಾಶ್ವತೀಃ ಸಮಾಃ|
12070028c ಪ್ರಜಾನಾಂ ಕಲ್ಮಷೇ ಮಗ್ನೋಽಕೀರ್ತಿಂ ಪಾಪಂ ಚ ವಿಂದತಿ||

ಅಂತಹ ದುಷ್ಕರ್ಮಿಯು ಪ್ರಜೆಗಳ ಪಾಪಗಳಲ್ಲಿ ಮುಳುಗಿಹೋಗಿ ಅಕೀರ್ತಿಯನ್ನೂ ಪಾಪವನ್ನೂ ಪಡೆದುಕೊಂಡು ಶಾಶ್ವತಕಾಲ ನರಕದಲ್ಲಿ ವಾಸಿಸುತ್ತಾನೆ.

12070029a ದಂಡನೀತಿಂ ಪುರಸ್ಕೃತ್ಯ ವಿಜಾನನ್ ಕ್ಷತ್ರಿಯಃ ಸದಾ|
12070029c ಅನವಾಪ್ತಂ ಚ ಲಿಪ್ಸೇತ ಲಬ್ಧಂ ಚ ಪರಿಪಾಲಯೇತ್||

ಕ್ಷತ್ರಿಯನಾದವನು ಸದಾ ತಿಳಿದುಕೊಂಡು ದಂಡನೀತಿಯನ್ನು ಮುಂಡಿಟ್ಟುಕೊಂಡು ಇಲ್ಲದಿದ್ದುದನ್ನು ಪಡೆದುಕೊಳ್ಳಬೇಕು ಮತ್ತು ಇದ್ದುದನ್ನು ರಕ್ಷಿಸಿಕೊಳ್ಳಬೇಕು.

12070030a ಲೋಕಸ್ಯ ಸೀಮಂತಕರೀ ಮರ್ಯಾದಾ ಲೋಕಭಾವನೀ|
12070030c ಸಮ್ಯಙ್ನೀತಾ ದಂಡನೀತಿರ್ಯಥಾ ಮಾತಾ ಯಥಾ ಪಿತಾ||

ಲೋಕಳನ್ನು ಅವುಗಳ ಗಡಿಯೊಳಗೆ ಇರುವಂತೆ ಮಾಡುವ, ಧರ್ಮಮರ್ಯಾದೆಗಳನ್ನು ಮೀರದಂತೆ ನೋಡಿಕೊಳ್ಳುವ, ಮತ್ತು ಚೆನ್ನಾಗಿ ನಡೆಸಿದ ದಂಡನೀತಿಯೇ ತಂದೆ-ತಾಯಿಯರಂತೆ ಪ್ರಜೆಗಳನ್ನು ಪಾಲಿಸುತ್ತದೆ.

12070031a ಯಸ್ಯಾಂ ಭವಂತಿ ಭೂತಾನಿ ತದ್ವಿದ್ಧಿ ಭರತರ್ಷಭ|
12070031c ಏಷ ಏವ ಪರೋ ಧರ್ಮೋ ಯದ್ರಾಜಾ ದಂಡನೀತಿಮಾನ್||

ಭರತರ್ಷಭ! ದಂಡನೀತಿಯಿಂದಲೇ ಪ್ರಾಣಿಗಳು ಆಗುತ್ತವೆ ಎನ್ನುವುದನ್ನು ತಿಳಿದುಕೋ. ಇದೇ ರಾಜನಾದವನ ಪರಮ ಧರ್ಮ.

12070032a ತಸ್ಮಾತ್ತ್ವಂ ರವ್ಯ ಧರ್ಮೇಣ ಪ್ರಜಾಃ ಪಾಲಯ ನೀತಿಮಾನ್|
12070032c ಏವಂವೃತ್ತಃ ಪ್ರಜಾ ರಕ್ಷನ್ಸ್ವರ್ಗಂ ಜೇತಾಸಿ ದುರ್ಜಯಮ್||

ಕೌರವ್ಯ! ಆದುದರಿಂದ ಧರ್ಮದಿಂದ ನೀತಿಮಂತನಾಗಿದ್ದುಕೊಂಡು ಪ್ರಜೆಗಳನ್ನು ಪಾಲಿಸು. ಹೀಗೆ ನಡೆದುಕೊಂಡು ಪ್ರಜೆಗಳನ್ನು ರಕ್ಷಿಸಿ ದುರ್ಜಯ ಸ್ವರ್ಗವನ್ನೂ ಗೆಲ್ಲುತ್ತೀಯೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಸಪ್ತತಿತಮೋऽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಎಪ್ಪತ್ತನೇ ಅಧ್ಯಾಯವು.

೭೧

ರಾಜನಲ್ಲಿರಬೇಕಾದ 36 ಗುಣಗಳ ವರ್ಣನೆ (1-14).

12071001 ಯುಧಿಷ್ಠಿರ ಉವಾಚ|
12071001a ಕೇನ ವೃತ್ತೇನ ವೃತ್ತಜ್ಞ ವರ್ತಮಾನೋ ಮಹೀಪತಿಃ|
12071001c ಸುಖೀನಾರ್ಥಾನ್ಸುಖೋದರ್ಕಾನಿಹ ಚ ಪ್ರೇತ್ಯ ಚಾಪ್ನುಯಾತ್||

ಯುಧಿಷ್ಠಿರನು ಹೇಳಿದನು: "ವೃತ್ತಜ್ಞ! ಯಾವ ವರ್ತನೆಗಳಿಂದ ನಡೆದುಕೊಂಡು ಮಹೀಪತಿಯು ಇಹದಲ್ಲಿ ಮತ್ತು ಪರದಲ್ಲಿ ಸುಖನೀಡುವಂತಹ ವಸ್ತುಗಳನ್ನು ಅನಾಯಾಸವಾಗಿ ಪಡೆದುಕೊಳ್ಳಬಹುದು?"

12071002 ಭೀಷ್ಮ ಉವಾಚ|
12071002a ಇಯಂ ಗುಣಾನಾಂ ಷಟ್ತ್ರಿಂಶತ್ಷಟ್ತ್ರಿಂಶದ್ಗುಣಸಂಯುತಾ|
12071002c ಯಾನ್ಗುಣಾಂಸ್ತು ಗುಣೋಪೇತಃ ಕುರ್ವನ್ಗುಣಮವಾಪ್ನುಯಾತ್||

ಭೀಷ್ಮನು ಹೇಳಿದನು: "ಯಾವ ಗುಣಗಳನ್ನು ಹೊಂದಿರುವುದರಿಂದ ಮತ್ತು ಕಾರ್ಯಗಳನ್ನು ಮಾಡುವುದರಿಂದ ರಾಜನು ಉತ್ಕರ್ಷವನ್ನು ಹೊಂದುತ್ತಾನೋ ಅವುಗಳ ಸಂಖ್ಯೆಯು ಮೂವತ್ತಾರು.

12071003a ಚರೇದ್ಧರ್ಮಾನಕಟುಕೋ ಮುಂಚೇತ್ಸ್ನೇಹಂ ನ ನಾಸ್ತಿಕಃ|
12071003c ಅನೃಶಂಸಶ್ಚರೇದರ್ಥಂ ಚರೇತ್ಕಾಮಮನುದ್ಧತಃ||

(೧) ಯಾರೊಡನೆಯು ಕಟುಮಾತುಗಳನ್ನಾಡದೇ ಧರ್ಮವನ್ನು

ಆಚರಿಸುವುದು (೨) ನಾಸ್ತಿಕನಾಗಿರದೇ ಎಲ್ಲರೊಡನೆ ಸ್ನೇಹದಿಂದಿರುವುದು (೩) ದಯಾಪರನಾಗಿದ್ದುಕೊಂಡೇ ಅರ್ಥವನ್ನು ಸಂಪಾದಿಸವುದು (೪) ಲೋಕಮರ್ಯಾದೆಯನ್ನು ಅತಿಕ್ರಮಿಸದೇ ವಿಷಯಸುಖಗಳನ್ನು ಅನುಭವಿಸುವುದು

12071004a ಪ್ರಿಯಂ ಬ್ರೂಯಾದಕೃಪಣಃ ಶೂರಃ ಸ್ಯಾದವಿಕತ್ಥನಃ|
12071004c ದಾತಾ ನಾಪಾತ್ರವರ್ಷೀ ಸ್ಯಾತ್ಪ್ರಗಲ್ಭಃ ಸ್ಯಾದನಿಷ್ಠುರಃ||

(೫) ಕೃಪಣತೆಯಿಲ್ಲದೇ ಪ್ರಿಯಮಾತುಗಳನ್ನೇ ಆಡುವುದು (೬) ಶೂರನಾಗಿದ್ದರೂ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದೇ ಇರುವುದು (೭) ದಾನಶೀಲನಾಗಿದ್ದುಕೊಂಡು ಅಪಾತ್ರರಿಗೆ ದಾನಮಾಡದ ಇರುವುದು (೮) ಸಾಹಸಿಯಾಗಿರವುದು, ದಯಾಪರನಾಗಿರವುದು ಮತ್ತ ನಿಷ್ಠುರಮಾತುಗಳನ್ನಾಡದಿರುವುದು

12071005a ಸಂದಧೀತ ನ ಚಾನಾರ್ಯೈರ್ವಿಗೃಹ್ಣೀಯಾನ್ನ ಬಂಧುಭಿಃ|
12071005c ನಾನಾಪ್ತೈಃ ಕಾರಯೇಚ್ಚಾರಂ ಕುರ್ಯಾತ್ಕಾರ್ಯಮಪೀಡಯಾ||

(೯) ಅನಾರ್ಯರೊಡನೆ ಸಂಬಂಧವನ್ನಿಟ್ಟುಕೊಳ್ಳದೇ ಇರುವುದು (೧೦) ಬಂಧುಗಳೊಡನೆ ಜಗಳವಾಡದೇ ಇರುವುದು (೧೧) ರಾಜನಲ್ಲಿ ಭಕ್ತಿಯಿಲ್ಲದಿರುವವನನ್ನು ಗೂಢಚರನನ್ನಾಗಿಟ್ಟುಕೊಳ್ಳದೇ ಇರುವುದು (೧೨) ಯಾರಿಗೂ ಪೀಡೆಯಾಗದ ರೀತಿಯಲ್ಲಿ ರಾಜಕಾರ್ಯಗಳನ್ನು ಸಾಧಿಸಿಕೊಳ್ಳುವುದು

12071006a ಅರ್ಥಾನ್ಬ್ರೂಯಾನ್ನ ಚಾಸತ್ಸು ಗುಣಾನ್ಬ್ರೂಯಾನ್ನ ಚಾತ್ಮನಃ|
12071006c ಆದದ್ಯಾನ್ನ ಚ ಸಾಧುಭ್ಯೋ ನಾಸತ್ಪುರುಷಮಾಶ್ರಯೇತ್||

(೧೩) ದುಷ್ಟರಿಗೆ ಅಭೀಷ್ಟ ರಾಜಕಾರ್ಯಗಳನ್ನು ಹೇಳದಿರುವುದು

(೧೪) ತನ್ನ ಗುಣಗಳನ್ನು ತಾನೇ ಹೊಗಳಿಕೊಳ್ಳದಿರುವುದು (೧೫) ಸಾಧು-ಸತ್ಪುರುಷರಿಂದ ರಾಜಕಾಣಿಕೆಯನ್ನು ತೆಗೆದುಕೊಳ್ಳದೇ ಇರುವುದು (೧೬) ನೀಚರನ್ನು ಆಶ್ರಯಿಸದೇ ಇರುವುದು

12071007a ನಾಪರೀಕ್ಷ್ಯ ನಯೇದ್ದಂಡಂ ನ ಚ ಮಂತ್ರಂ ಪ್ರಕಾಶಯೇತ್|
12071007c ವಿಸೃಜೇನ್ನ ಚ ಲುಬ್ಧೇಭ್ಯೋ ವಿಶ್ವಸೇನ್ನಾಪಕಾರಿಷು||

(೧೭) ಪರಕ್ಷಿಸದೆಯೇ ದಂಡನೆಯನ್ನು ನೀಡದಿರುವುದು (೧೮) ಮಂತ್ರಾಲೋಚನೆಗಳನ್ನು ಬಹಿರಂಗ ಪಡಿಸದೇ ಇರುವುದು (೧೯) ಲೋಭಿಗಳಿಗೆ ಹಣವನ್ನು ಕೊಡದೇ ಇರುವುದು (೨೦) ಒಮ್ಮೆ ಅಪಕಾರ ಮಾಡಿದವರ ಮೇಲೆ ಪುನಃ ವಿಶ್ವಾಸವನ್ನಿಡದಿರುವುದು

12071008a ಅನೀರ್ಷುರ್ಗುಪ್ತದಾರಃ ಸ್ಯಾಚ್ಚೀಕ್ಷಃ ಸ್ಯಾದಘೃಣೀ ನೃಪಃ|
12071008c ಸ್ತ್ರಿಯಂ ಸೇವೇತ ನಾತ್ಯರ್ಥಂ ಮೃಷ್ಟಂ ಭುಂಜೀತ ನಾಹಿತಮ್||

(೨೧) ಪರಸ್ಪರರು ಅಸೂಯೆಪಡದಂತೆ ಪತ್ನಿಯರನ್ನು ನೋಡಿಕೊಳ್ಳುವುದು (೨೨) ದಕ್ಷತೆ (೨೩) ಸ್ತ್ರೀಯರಲ್ಲಿ ಹೆಚ್ಚು ಅನುರಕ್ತನಾಗದೇ ಇರುವುದು (೨೪) ಶುದ್ಧವಾದ ಮತ್ತು ರುಚಿಕರ ಭೋಜನವನ್ನೇ ಮಾಡುವುದು

12071009a ಅಸ್ತಬ್ಧಃ ಪೂಜಯೇನ್ಮಾನ್ಯಾನ್ಗುರೂನ್ಸೀವೇದಮಾಯಯಾ|
12071009c ಅರ್ಚೇದ್ದೇವಾನ್ನ ದಂಭೇನ ಶ್ರಿಯಮಿಚ್ಚೇದಕುತ್ಸಿತಾಮ್||

(೨೫) ಆಡಂಬರ ತೋರಿಸದೇ ವಿನಯ ಭಾವದಿಂದ ಮಹನೀಯರನ್ನು ಪೂಜಿಸುವುದು (೨೬) ಕಪಟವಿಲ್ಲದೇ ಗುರುಜನರ ಸೇವೆಮಾಡುವುದು (೨೭) ದಂಭಾಹಂಕಾರ ರಹಿತನಾಗಿ ದೇವತೆಗಳನ್ನು ಪೂಜಿಸುವುದು (೨೮) ದೋಷರಹಿತ ಸಂಪತ್ತಿನ ಸಂಗ್ರಹದಲ್ಲಿಯೇ ಆಸಕ್ತನಾಗಿರುವುದು

12071010a ಸೇವೇತ ಪ್ರಣಯಂ ಹಿತ್ವಾ ದಕ್ಷಃ ಸ್ಯಾನ್ನ ತ್ವಕಾಲವಿತ್|

12071010c ಸಾಂತ್ವಯೇನ್ನ ಚ ಭೋಗಾರ್ಥಮನುಗೃಹ್ಣನ್ನ ಚಾಕ್ಷಿಪೇತ್‌||

(೨೯) ಪಕ್ಷಪಾತವಿಲ್ಲದೇ ಪ್ರಜೆಗಳನ್ನು ಪಾಲಿಸುವುದು (೩೦) ದಕ್ಷನಾಗಿರುವುದು, ಕಾಲ-ದೇಶಗಳಿಗನುಗುಣವಾಗಿ ಕಾರ್ಯಗಳನ್ನು ಕೈಗೊಳ್ಳುವುದು (೩೧) ಆಸೆಯಿಟ್ಟುಕೊಂಡು ಬಂದಿರುವವನಿಗೆ ಏನನ್ನೂ ಕೊಡದೇ ಕೇವಲ ಸಾಂತ್ವನಮಾತುಗಳನ್ನಾಡಿ ಕಳುಹಿಸದೇ ಇರುವುದು (೩೨) ಕೃಪೆದೋರುವಾಗ ನಿಂದಿಸದೇ ಇರುವುದು

12071011a ಪ್ರಹರೇನ್ನ ತ್ವವಿಜ್ಞಾಯ ಹತ್ವಾ ಶತ್ರೂನ್ನ ಶೇಷಯೇತ್‌|
12071011c ಕ್ರೋಧಂ ಕುರ್ಯಾನ್ನ ಚಾಕಸ್ಮಾನ್ಮೃದುಃ ಸ್ಯಾನ್ನಾಪಕಾರಿಷು||

(೩೩) ತಿಳಿಯದೇ ಶತ್ರುವೆಂದು ಯಾರನ್ನೂ ಪ್ರಹರಿಸದೇ ಇರುವುದು (೩೪) ಸಂಬಂಧಿಯಾಗಿದ್ದರೂ ಶತ್ರುವನ್ನು ಸಂಹರಿಸಿದ ನಂತರ ಶೋಕಿಸದೇ ಇರುವುದು (೩೫) ಕಾರಣವಿಲ್ಲದೇ ಯಾರಮೇಲೂ ಕೋಪಿಸಿಕೊಳ್ಳದೇ ಇರುವುದು ಮತ್ತು (೩೬) ಪಾಪಿಗಳ ವಿಷಯದಲ್ಲ ಮೃದುವಾಗಿರದೇ ಇರುವುದು.

12071012a ಏವಂ ಚರಸ್ವ ರಾಜ್ಯಸ್ಥೋ ಯದಿ ಶ್ರೇಯ ಇಹೇಚ್ಛಸಿ|
12071012c ಅತೋಽನ್ಯಥಾ ನರಪತಿರ್ಭಯಮೃಚ್ಚತ್ಯನುತ್ತಮಮ್‌||

ಇಲ್ಲಿ ಶ್ರೇಯಸ್ಸನ್ನು ಬಯಸುವೆಯಾದರೆ ರಾಜ್ಯಸ್ಥನಾಗಿ ಹೀಗೆಯೇ ನಡೆದುಕೋ. ಅನ್ಯಥಾ ನರಪತಿಯು ಭಯವನ್ನು ತಂದುಕೊಳ್ಳತ್ತಾನೆ ಮತ್ತು ಸುದಾರುಣ ಆಪತ್ತಿಗೆ ಗುರಿಯಾಗುತ್ತಾನೆ.

12071013a ಇತಿ ಸರ್ವಾನ್ಗುಣಾನೇತಾನ್ಯಥೋಕ್ತಾನ್ಯೋಽನುವರ್ತತೇ|
12071013c ಅನುಭೂಯೇಹ ಭದ್ರಾಣಿ ಪ್ರೇತ್ಯ ಸ್ವರ್ಗೇ ಮಹೀಯತೇ||

ಈ ಎಲ್ಲ ಗುಣಗಳನ್ನೂ ಕಾರ್ಯರೂಪಕ್ಕೆ ತರುವ ರಾಜನು ಇಲ್ಲ ಸಕಲವಿಧದ ಕಲ್ಯಾಣಗಳಿಗೂ ಪಾತ್ರನಾಗಿ ಅವಸಾನಾನಂತರ ಸ್ವರ್ಗಲೋಕದಲ್ಲಿ ವಿರಾಜಿಸುತ್ತಾನೆ."

12071014 ವೈಶಂಪಾಯನ ಉವಾಚ

12071014a ಇದಂ ವಚಃ ಶಾಂತನವಸ್ಯ ಶುಶ್ರುವಾನ್
ಯುಧಿಷ್ಠಿರಃ ಪಾಂಡವಮುಖ್ಯಸಂವೃತಃ|
12071014c ತದಾ ವವಂದೇ ಚ ಪಿತಾಮಹಂ ನೃಪೋ
ಯಥೋಕ್ತಮೇತಚ್ಚ ಚಕಾರ ಬುದ್ಧಿಮಾನ್||

ವೈಶಂಪಾಯನನು ಹೇಳಿದನು: "ಪಾಂಡವಮುಖ್ಯರೊಂದಿಗೆ ಸುತ್ತುವರೆಯಲ್ಪಟ್ಟ ಯುಧಿಷ್ಠಿರನ ಶಾಂತನವನ ಈ ಮಾತುಗಳನ್ನು ಕೇಳಿದನು. ನೃಪನು ಪಿತಾಮಹನಿಗೆ ವಂದಿಸಿದನು ಮತ್ತು ಆ ಬುದ್ಧಿಮಾನನು ಅವನು ಹೇಳಿದಂತೆಯೇ ಮಾಡಿದನು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಏಕಸಪ್ತತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಎಪ್ಪತ್ತೊಂದನೇ ಅಧ್ಯಾಯವು.

೭೨

ಪ್ರಜಾಪರಿಪಾಲನೆಯ ಅರ್ಥ (1-33).

12072001 ಯುಧಿಷ್ಠಿರ ಉವಾಚ|

12072001a ಕಥಂ ರಾಜಾ ಪ್ರಜಾ ರಕ್ಷನ್ನಾಧಿಬಂಧೇನ ಯುಜ್ಯತೇ|

12072001c ಧರ್ಮೇ ಚ ನಾಪರಾಧ್ನೋತಿ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ರಾಜನು ಹೇಗೆ ಪ್ರಜೆಗಳನ್ನು ರಕ್ಷಿಸುತ್ತಿದ್ದರೆ ಚಿಂತೆಯಲ್ಲಿ ಮಗ್ನನಾಗುವುದಿಲ್ಲ ಮತ್ತು ಧರ್ಮದ ವಿಷಯದಲ್ಲಿ ಅಪರಾಧಿಯಾಗುವುದಿಲ್ಲ ಎನ್ನುವುದನ್ನು ಹೇಳು."

12072002 ಭೀಷ್ಮ ಉವಾಚ|
12072002a ಸಮಾಸೇನ್ಯೈವ ತೇ ತಾತ ಧರ್ಮಾನ್ವಕ್ಷ್ಯಾಮಿ ನಿಶ್ಚಿತಾನ್|
12072002c ವಿಸ್ತರೇಣ ಹಿ ಧರ್ಮಾಣಾಂ ನ ಜಾತ್ವಂತಮವಾಪ್ನುಯಾತ್||

ಭೀಷ್ಮನು ಹೇಳಿದನು: "ಅಯ್ಯಾ! ನಿಶ್ಚಿತ ಧರ್ಮಗಳನ್ನು ಸಂಕ್ಷಿಪ್ತವಾಗಿಯೇ ನಿನಗೆ ಹೇಳುತ್ತೇನೆ. ಈ ಎಲ್ಲ ಧರ್ಮಗಳನ್ನು ವಿಸ್ತಾರವಾಗಿ ಹೇಳಹೊರಟರೆ ಅದು ಮುಗಿಯುವಂಥಹುದ್ದಲ್ಲ.

12072003a ಧರ್ಮನಿಷ್ಠಾನ್ ಶ್ರುತವತೋ ವೇದವ್ರತಸಮಾಹಿತಾನ್|
12072003c ಅರ್ಚಿತಾನ್ವಾಸಯೇಥಾಸ್ತ್ವಂ ಗೃಹೇ ಗುಣವತೋ ದ್ವಿಜಾನ್||
12072004a ಪ್ರತ್ಯುತ್ಥಾಯೋಪಸಂಗೃಹ್ಯ ಚರಣಾವಭಿವಾದ್ಯ ಚ|
12072004c ಅಥ ಸರ್ವಾಣಿ ಕುರ್ವೀಥಾಃ ಕಾರ್ಯಾಣಿ ಸಪುರೋಹಿತಃ||

ಧರ್ಮನಿಷ್ಠ, ಶ್ರುತವತ, ವೇದವ್ರತಸಮಾಹಿತ ಗುಣವಂತ ದ್ವಿಜರನ್ನು ನಿನ್ನ ಮನೆಗೆ ಕರೆಯಿಸಿ ಮೇಲೆದ್ದು ಅರ್ಚಿಸಿ ಸ್ವಾಗತಿಸಬೇಕು. ಅವರ ಚರಣಗಳಿಗೆ ವಂದಿಸಿ ಪುರೋಹಿತನೊಂದಿಗೆ ಸರ್ವ ಕರ್ಮಗಳನ್ನೂ ಮಾಡಿಸಬೇಕು.

12072005a ಧರ್ಮಕಾರ್ಯಾಣಿ ನಿರ್ವರ್ತ್ಯ ಮಂಗಲಾನಿ ಪ್ರಯುಜ್ಯ ಚ|
12072005c ಬ್ರಾಹ್ಮಣಾನ್ವಾಚಯೇಥಾಸ್ತ್ವಮರ್ಥಸಿದ್ಧಿಜಯಾಶಿಷಃ||

ಹೀಗೆ ಧರ್ಮಕಾರ್ಯಗಳನ್ನು ಮುಗಿಸಿ ಮಂಗಲ ವಸ್ತುಗಳನ್ನು ಮುಟ್ಟಿ ಅರ್ಥಸಿದ್ಧಿಗಾಗಿ ಜಯಾಶೀರ್ವಚನಗಳನ್ನು ಬ್ರಾಹ್ಮಣರ ಮುಖೇನ ಹೇಳಿಸಿಕೊಳ್ಳಬೇಕು.

12072006a ಆರ್ಜವೇನ ಚ ಸಂಪನ್ನೋ ಧೃತ್ಯಾ ಬುದ್ಧ್ಯಾ ಚ ಭಾರತ|
12072006c ಅರ್ಥಾರ್ಥಂ ಪರಿಗೃಹ್ಣೀಯಾತ್ಕಾಮಕ್ರೋಧೌ ಚ ವರ್ಜಯೇತ್||

ಭಾರತ! ಸರಳನಾಗಿರಬೇಕು. ಧೈರ್ಯ-ಬುದ್ಧಿಗಳಿಂದ ಸಂಪನ್ನನಾಗಿರಬೇಕು. ಯಥಾರ್ಥವಾದುದನ್ನೇ ಪ್ರತಿಗ್ರಹಿಸಬೇಕು. ಕಾಮ-ಕ್ರೋಧಗಳನ್ನು ಪರಿತ್ಯಜಿಸಬೇಕು.

12072007a ಕಾಮಕ್ರೋಧೌ ಪುರಸ್ಕೃತ್ಯ ಯೋಽರ್ಥಂ ರಾಜಾನುತಿಷ್ಠತಿ|
12072007c ನ ಸ ಧರ್ಮಂ ನ ಚಾಪ್ಯರ್ಥಂ ಪರಿಗೃಹ್ಣಾತಿ ಬಾಲಿಶಃ||

ಕಾಮ-ಕ್ರೋಧಗಳನ್ನು ಮುಂದಿಟ್ಟುಕೊಂಡು ಅರ್ಥವನ್ನು ಗಳಿಸಲು ಪ್ರಯತ್ನಿಸುವ ಮೂರ್ಖ ರಾಜನು ಧರ್ಮವನ್ನಾಗಲೀ ಅರ್ಥವನ್ನಾಗಲೀ ಪ್ರಹಿಗ್ರಹಿಸಲಾರನು.

12072008a ಮಾ ಸ್ಮ ಲುಬ್ಧಾಂಶ್ಚ ಮೂರ್ಖಾಂಶ್ಚ ಕಾಮೇ ಚಾರ್ಥೇಷು ಯೂಯುಜಃ|
12072008c ಅಲುಬ್ಧಾನ್ಬುದ್ಧಿಸಂಪನ್ನಾನ್ಸರ್ವಕರ್ಮಸು ಯೋಜಯೇತ್||

ಲುಬ್ಧರನ್ನು ಮೂರ್ಖರನ್ನೂ ಕಾಮಾರ್ಥಗಳ ಸಾಧನೆಗೆ ನಿಯೋಜಿಸಬೇಡ. ಅಲುಬ್ಧರನ್ನೂ ಬುದ್ಧಿಸಂಪನ್ನರನ್ನೂ ಎಲ್ಲ ಕಾರ್ಯಗಳಿಗೆ ನಿಯೋಜಿಸಬೇಕು.

12072009a ಮೂರ್ಖೋ ಹ್ಯಧಿಕೃತೋಽರ್ಥೇಷು ಕಾರ್ಯಾಣಾಮವಿಶಾರದಃ|
12072009c ಪ್ರಜಾಃ ಕ್ಲಿಶ್ನಾತ್ಯಯೋಗೇನ ಕಾಮದ್ವೇಷಸಮನ್ವಿತಃ||

ಕಾರ್ಯಗಳಲ್ಲಿ ಕುಶಲನಲ್ಲದ ಮತ್ತು ಕಾಮ-ದ್ವೇಷ ಸಮನ್ವಿತನಾದ
ಮೂರ್ಖನನ್ನು ಅರ್ಥಸಂಗ್ರಹಕ್ಕೆ ಅಧಿಕಾರಿಯನ್ನಾಗಿ
ನಿಯೋಜಿಸಿಕೊಂಡರೆ ಅವನು ಕುತ್ಸಿತ ಉಪಾಯಗಳಿಂದ ಪ್ರಜೆಗಳನ್ನು
ಕಷ್ಟಕ್ಕೀಡುಮಾಡುತ್ತಾನೆ.

12072010a ಬಲಿಷಷ್ಠೇನ ಶುಲ್ಕೇನ ದಂಡೇನಾಥಾಪರಾಧಿನಾಮ್|
12072010c ಶಾಸ್ತ್ರನೀತೇನ ಲಿಪ್ಸೇಥಾ ವೇತನೇನ ಧನಾಗಮಮ್||

ಪ್ರಜೆಗಳ ಆದಾಯದ ಆರನೆಯ ಒಂದು ಭಾಗವನ್ನು
ರಾಜಾದಯವನ್ನಾಗಿ ಪಡೆಯಬೇಕು. ಅಪರಾಧಿಗಳಿಗೆ ದಂದವನ್ನು
ವಿಧಿಸಬೇಕು. ಶಾಸ್ತ್ರಾನುಸಾರವಾಗಿ ರಾಜಸೇವಕರಿಂದ ಸಂರಕ್ಷತ
ವ್ಯಾಪಾರಿಗಳಿಂದ ಧನವನ್ನು ಸಂಗ್ರಹಿಸಬೇಕು.

12072011a ದಾಪಯಿತ್ವಾ ಕರಂ ಧರ್ಮ್ಯಂ ರಾಷ್ಟ್ರಂ ನಿತ್ಯಂ ಯಥಾವಿಧಿ|
12072011c ಅಶೇಷಾನ್ಕಲ್ಪಯೇದ್ರಾಜಾ ಯೋಗಕ್ಷೇಮಾನತಂದ್ರಿತಃ||

ಧರ್ಮಾನುಕೂಲವಾಗಿ ಕರವನ್ನು ತೆಗೆದುಕೊಂಡು ಧರ್ಮದಿಂದ
ಯಥಾವಿಧಿಯಾಗಿ ನಿತ್ಯವೂ ಆಲಸಿಕೆಯಿಲ್ಲದೇ ರಾಷ್ಟ್ರದ
ಯೋಗಕ್ಷೇಮಗಳನ್ನು ನೋಡಿಕೊಳ್ಳಬೇಕು.

12072012a ಗೋಪಾಯಿತಾರಂ ದಾತಾರಂ ಧರ್ಮನಿತ್ಯಮತಂದ್ರಿತಮ್|
12072012c ಅಕಾಮದ್ವೇಷಸಂಯುಕ್ತಮನುರಜ್ಯಂತಿ ಮಾನವಾಃ||

ರಕ್ಷಿಸುವ, ದಾನಮಾಡುವ, ಧರ್ಮನಿತ್ಯನೂ, ಆಲಸಿಕೆಯಿಲ್ಲದವನೂ,
ಕಾಮದ್ವೇಷಗಳಿಲ್ಲದವನೂ ಆದ ರಾಜನನ್ನು ಪ್ರಜೆಗಳು ಪ್ರೀತಿಸುತ್ತಾರೆ.

12072013a ಮಾ ಸ್ಮಾ ಧರ್ಮೇಣ ಲಾಭೇನ ಲಿಪ್ಸೇಥಾಸ್ತ್ವಂ ಧನಾಗಮಮ್|

12072013c ಧರ್ಮಾರ್ಥಾವಧ್ರುವೌ ತಸ್ಯ ಯೋಽಪಶಾಸ್ತ್ರಪರೋ ಭವೇತ್‌॥

ನೀನು ಅಧರ್ಮಪೂರ್ವಕವಾಗಿ ಲಾಭದ ಆಸೆಯಿಂದ ಧನವನ್ನು ಸಂಗ್ರಹಿಸಬೇಡ. ನೀತಿಶಾಸ್ತ್ರಗಳನ್ನು ಉಲ್ಲಂಘಿಸಿರುವವನಲ್ಲಿ ಧರ್ಮ-ಅರ್ಥ ಇವೆರಡೂ ಸ್ಥಿರವಾಗಿ ನಿಲ್ಲುವುದಿಲ್ಲ.

12072014a ಅಪಶಾಸ್ತ್ರಪರೋ ರಾಜಾ ಸಂಚಯಾನ್ನಾಧಿಗಚ್ಚತಿ|
12072014c ಅಸ್ಥಾನೇ ಚಾಸ್ಯ ತದ್ವಿತ್ತಂ ಸರ್ವಮೇವ ವಿನಶ್ಯತಿ‌॥

ಶಾಸ್ತ್ರಕ್ಕೆ ವಿರುದ್ಧವಾಗಿ ವರ್ತಿಸುವ ರಾಜನು ಧರ್ಮಮೂಲವಾಗಿ ಅಧಿಕ ಧನವನ್ನು ಸಂಗ್ರಹಿಸುವುದಿಲ್ಲ. ಅಧರ್ಮಮೂಲಕವಾಗಿ ಪಡೆದ ಎಲ್ಲ ಧನವೂ ದುರ್ವ್ಯಯವಾಗಿ ನಾಶವಾಗುತ್ತದೆ.

12072015a ಅರ್ಥಮೂಲೋಽಪಹಿಂಸಾಂ ಚ ಕುರುತೇ ಸ್ವಯಮಾತ್ಮನಃ|
12072015c ಕರೈರಶಾಸ್ತ್ರದೃಷ್ಟೈರ್ಹಿ ಮೋಹಾತ್ಸಂಪೀಡಯನ್ಪ್ರಜಾಃ‌॥

ಅರ್ಥವನ್ನೇ ಪ್ರಧಾನವಾಗಿಟ್ಟುಕೊಂಡು ಲೋಭಿ ರಾಜನು ಶಾಸ್ತ್ರವಿರುದ್ಧವಾಗಿ ಪ್ರಜೆಗಳನ್ನು ಪೀಡಿಸಿ ಅಧಿಕ ತೆರಿಗೆಗಳ ಮೂಲಕ ಧನಸಂಪಾದಿಸಿದರೆ ಅದು ಅವನಿಗೇ ಪೀಡೆಯನ್ನು ತರುತ್ತದೆ.

12072016a ಊಧಶ್ಚಿಂದ್ಯಾದ್ಧಿ ಯೋ ಧೇನ್ವಾಃ ಕ್ಷೀರಾರ್ಥೀ ನ ಲಭೇತ್ಪಯಃ|
12072016c ಏವಂ ರಾಷ್ಟ್ರಮಯೋಗೇನ ಪೀಡಿತಂ ನ ವಿವರ್ಧತೇ‌॥

ಹಾಲನ್ನು ಅಪೇಕ್ಷಿಸುವವನು ಹಸುವು ಕೊಡುವಷ್ಟು ಹಾಲನ್ನು ಕೆಚ್ಚಲಿನಿಂದ ಕರೆದುಕೊಂಡು ತೃಪ್ತನಾಗಬೇಕೇ ಹೊರತು ಕೆಚ್ಚಲನ್ನೇ ಕತ್ತರಿಸಬಿಡಬಾರದು. ಹಾಗೆ ಮಾಡುವುದರಿಂದ ಅವನಿಗೆ ಹಾಲಿನ ಒಂದು ಹನಿಯ ದೊರಕುವುದಿಲ್ಲ. ಹಾಗೆಯೇ ಕುತ್ಸಿತ ಉಪಾಯಗಳಿಂದ

ಪ್ರಜೆಗಳನ್ನು ಪೀಡಿಸಿದರೆ ರಾಷ್ಟ್ರವು ಅಭಿವೃದ್ಧಿಹೊಂದುವುದಿಲ್ಲ.

12072017a ಯೋ ಹಿ ದೋಗ್ಧ್ರೀಮುಪಾಸ್ತೇ ತು ಸ ನಿತ್ಯಂ ಲಭತೇ ಪಯಃ|
12072017c ಏವಂ ರಾಷ್ಟ್ರಮುಪಾಯೇನ ಭುಂಜಾನೋ ಲಭತೇ ಫಲಮ್|

ಹಸುವನ್ನು ಸಾಕುವವನಿಗೆ ಹಾಲು ನಿತ್ಯವೂ ದೊರೆಯುತ್ತದೆ. ಹಾಗೆಯೇ ಉಪಾಯದಿಂದ ರಾಷ್ಟ್ರವನ್ನು ಭೋಗಿಸುವವನಿಗೆ ಫಲವು ದೊರೆಯುತ್ತದೆ.

12072018a ಅಥ ರಾಷ್ಟ್ರಮುಪಾಯೇನ ಭುಜ್ಯಮಾನಂ ಸುರಕ್ಷಿತಮ್|
12072018c ಜನಯತ್ಯತುಲಾಂ ನಿತ್ಯಂ ಕೋಶವೃದ್ಧಿಂ ಯುಧಿಷ್ಠಿರ||

ಯುಧಿಷ್ಠಿರ! ಸುರಕ್ಷಿತವಾಗಿಟ್ಟುಕೊಂಡು ಉಪಾಯದಿಂದ ಭೋಗಿಸುವವನ ರಾಷ್ಟ್ರದಲ್ಲಿ ನಿತ್ಯವೂ ಅತುಲ ಕೋಶವೃದ್ಧಿಯಾಗುತ್ತದೆ.

12072019a ದೋಗ್ಧಿ ಧಾನ್ಯಂ ಹಿರಣ್ಯಂ ಚ ಪ್ರಜಾ ರಾಜ್ಞಿ ಸುರಕ್ಷಿತಾ|
12072019c ನಿತ್ಯಂ ಸ್ವೇಭ್ಯಃ ಪರೇಭ್ಯಶ್ಚ ತೃಪ್ತಾ ಮಾತಾ ಯಥಾ ಪಯಃ||

ರಾಜನಿಂದ ಸುರಕ್ಷಿತವಾದ ಈ ಭೂಮಿಯು ತನ್ನ ಕರುವಿಗಲ್ಲದೇ ಇತರರಿಗೂ ಸಾಕಾಗುವಷ್ಟು ಹಾಲನ್ನು ಕೊಡುವ ತಾಯಿಹಸುವಿನಂತೆ ಹಸುಗಳು, ಧಾನ್ಯ, ಹಿರಣ್ಯ ಮತ್ತು ಸಂತಾನಗಳನ್ನು ನೀಡುತ್ತಿರುತ್ತದೆ.

12072020a ಮಾಲಾಕಾರೋಪಮೋ ರಾಜನ್ಭವ ಮಾಂಗಾರಿಕೋಪಮಃ|
12072020c ತಥಾ ಯುಕ್ತಶ್ಚಿರಂ ರಾಷ್ಟ್ರಂ ಭೋಕ್ತುಂ ಶಕ್ಯಸಿ ಪಾಲಯನ್||

ರಾಜನ್! ನೀನು ಹೂವಿನ ಮಾಲೆಕಟ್ಟುವವನಂತಾಗು. ಇದ್ದಿಲು ಮಾಡುವವನಂತಾಗಬೇಡ. ಹಾಗಿದ್ದರೆ ನೀನು ಬಹುಕಾಲ ರಾಷ್ಟ್ರವನ್ನು

ಪಾಲಿಸಿಕೊಂಡು ಭೋಗಿಸಬಲ್ಲೆ.

12072021a ಪರಚಕ್ರಾಭಿಯಾನೇನ ಯದಿ ತೇ ಸ್ಯಾದ್ಧನಕ್ಷಯಃ|
12072021c ಅಥ ಸಾಮ್ನೈವ ಲಿಪ್ಸೇಥಾ ಧನಮಬ್ರಾಹ್ಮಣೇಷು ಯತ್||

ಶತ್ರುಗಳ ಆಕ್ರಮಣದಿಂದಾಗಿ ಒಂದುವೇಳೆ ನಿನ್ನ ಧನವು
ಕಡಿಮೆಯಾದರೆ ಸಾಮದಿಂದ ಧನಿಕ ಕ್ಷತ್ರಿಯ, ವೈಶ್ಯ ಶೂದ್ರರಿಂದ
ಧನವನ್ನು ಪಡೆದುಕೊಳ್ಳಬೇಕು.

12072022a ಮಾ ಸ್ಮ ತೇ ಬ್ರಾಹ್ಮಣಂ ದೃಷ್ಟ್ವಾ ಧನಸ್ಥಂ ಪ್ರಚಲೇನ್ಮನಃ|
12072022c ಅಂತ್ಯಾಯಾಮಪ್ಯವಸ್ಥಾಯಾಂ ಕಿಮು ಸ್ಫೀತಸ್ಯ ಭಾರತ||

ಭಾರತ! ನೀನು ಎಂತಹುದೇ ದುರವಸ್ಥೆಯಲ್ಲಿದ್ದರೂ,
ಅಂತ್ಯಾವಸ್ಥೆಯಲ್ಲಿದ್ದರೂ, ಧನದ ಅಭಾವದಿಂದ ಪ್ರಾಣಹೋಗುವ
ಸಮಯ ಬಂದರೂ ಐಶ್ವರ್ಯವಂತ ಬ್ರಾಹ್ಮಣರನ್ನು ನೋಡಿ
ಅವರಿಂದ ಧನವನ್ನು ಸಂಗ್ರಹಿಸಬೇಕೆಂಬ ಚಾಂಚಲ್ಯವು ನಿನ್ನ
ಮನಸ್ಸಿನಲ್ಲಿ ಮೂಡದಿರಲಿ. ಹೀಗಿರುವಾಗ ನೀನು
ಐಶ್ವರ್ಯವಂತನಾಗಿರುವಾಗ ಬ್ರಾಹ್ಮಣನ ಸ್ವತ್ತಿನ ವಿಷಯದಲ್ಲಿ ಇನ್ನು
ಹೇಳಬೇಕಾಗಿಲ್ಲ.

12072023a ಧನಾನಿ ತೇಭ್ಯೋ ದದ್ಯಾಸ್ತ್ವಂ ಯಥಾಶಕ್ತಿ ಯಥಾರ್ಹತಃ|
12072023c ಸಾಂತ್ವಯನ್ಪರಿರಕ್ಷಂಶ್ಚ ಸ್ವರ್ಗಮಾಪ್ಸ್ಯಸಿ ದುರ್ಜಯಮ್||

ಯಥಾಶಕ್ತಿ ಯಥಾರ್ಹವಾಗಿ ಬ್ರಾಹ್ಮಣರಿಗೆ ನೀನು ಧನವನ್ನು
ನೀಡುತ್ತಲೇ ಇರಬೇಕು. ಅವರನ್ನು ಸಾಂತ್ವನಪೂರ್ವಕವಾಗಿ
ಪರಿರಕ್ಷಿಸುವುದರಿಂದ ನೀನು ಜಯಿಸಲಸಾಧ್ಯ ಸ್ವರ್ಗವನ್ನು
ಪಡೆದುಕೊಳ್ಳುತ್ತೀಯೆ.

12072024a ಏವಂ ಧರ್ಮೇಣ ವೃತ್ತೇನ ಪ್ರಜಾಸ್ತ್ವಂ ಪರಿಪಾಲಯನ್|
12072024c ಸ್ವಂತಂ ಪುಣ್ಯಂ ಯಶೋವಂತಂ ಪ್ರಾಪ್ಸ್ಯಸೇ ಕುರುನಂದನ||

ಕುರುನಂದನ! ಈ ರೀತಿಯಲ್ಲಿ ಧರ್ಮದಿಂದ ವ್ಯವಹರಿಸಿ ಪ್ರಜೆಗಳನ್ನು ನೀನು ಪರಿಪಾಲಿಸಿ ಸ್ವಂತ ಪುಣ್ಯವನ್ನೂ ಗಳಿಸುತ್ತೀಯೆ ಮತ್ತು ಯಶೋವಂತನೂ ಆಗುತ್ತೀಯೆ.

12072025a ಧರ್ಮೇಣ ವ್ಯವಹಾರೇಣ ಪ್ರಜಾಃ ಪಾಲಯ ಪಾಂಡವ|
12072025c ಯುಧಿಷ್ಠಿರ ತಥಾ ಯುಕ್ತೋ ನಾಧಿಬಂಧೇನ ಯೋಕ್ಷ್ಯಸೇ||

ಪಾಂಡವ! ಧರ್ಮವ್ಯವಹಾರಗಳಿಂದ ಪ್ರಜೆಗಳನ್ನು ಪಾಲಿಸು. ಯುಧಿಷ್ಠಿರ! ಆಗ ನೀನು ಮಾನಸಿಕ ವ್ಯಥೆಯ ಬಂಧನಕ್ಕೆ ಒಳಗಾಗುವುದಿಲ್ಲ.

12072026a ಏಷ ಏವ ಪರೋ ಧರ್ಮೋ ಯದ್ರಾಜಾ ರಕ್ಷತೇ ಪ್ರಜಾಃ|
12072026c ಭೂತಾನಾಂ ಹಿ ಯಥಾ ಧರ್ಮೇ ರಕ್ಷಣಂ ಚ ಪರಾ ದಯಾ||

ರಾಜನು ಪ್ರಜೆಗಳನ್ನು ರಕ್ಷಿಸುತ್ತಿದ್ದಾನೆ ಎನ್ನುವುದೇ ರಾಜನಾದವನಿಗೆ ಪರಮ ಧರ್ಮವು. ಸರ್ವವನ್ನೂ ರಕ್ಷಿಸುವುದು ಮತ್ತು ಇತರರನ್ನು ಪರಮ ದಯೆಯಿಂದ ಕಾಣುವುದು ಇವೇ ರಾಜನ ಧರ್ಮಗಳು.

12072027a ತಸ್ಮಾದೇವಂ ಪರಂ ಧರ್ಮಂ ಮನ್ಯಂತೇ ಧರ್ಮಕೋವಿದಾಃ|
12072027c ಯದ್ರಾಜಾ ರಕ್ಷಣೇ ಯುಕ್ತೋ ಭೂತೇಷು ಕುರುತೇ ದಯಾಮ್||

ಆದುದರಿಂದಲೇ ಜೀವಿಗಳಿಗೆ ದಯೆಯನ್ನು ತೋರಿಸುತ್ತಾ ರಾಜನು ರಕ್ಷಿಸುತ್ತಿದ್ದಾನಂದರೆ ಅದೇ ಪರಮ ಧರ್ಮವೆಂದು ಧರ್ಮಕೋವಿದರು ಮನ್ನಿಸುತ್ತಾರೆ.

12072028a ಯದಹ್ನಾ ಕುರುತೇ ಪಾಪಮರಕ್ಷನ್ಭಯತಃ ಪ್ರಜಾಃ|
12072028c ರಾಜಾ ವರ್ಷಸಹಸ್ರೇಣ ತಸ್ಯಾಂತಮಧಿಗಚ್ಚತಿ||

ಪ್ರಜೆಗಳನ್ನು ಭಯದಿಂದ ಒಂದು ಹಗಲು ರಕ್ಷಿಸದೇ ಇದ್ದರೂ
ರಾಜನಾದವನು ಒಂದು ಸಾವಿರ ವರ್ಷಗಳು ನರಕದಲ್ಲಿ
ಕಳೆದನಂತರವೇ ಆ ಪಾಪವು ಕೊನೆಯಾಗುತ್ತದೆ.

12072029a ಯದಹ್ನಾ ಕುರುತೇ ಪುಣ್ಯಂ ಪ್ರಜಾ ಧರ್ಮೇಣ ಪಾಲಯನ್|
12072029c ದಶ ವರ್ಷಸಹಸ್ರಾಣಿ ತಸ್ಯ ಭುಂಕ್ತೇ ಫಲಂ ದಿವಿ||

ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸಿದ ಪುಣ್ಯವನ್ನು ಒಂದು ಹಗಲೇ
ಮಾಡಿದರೂ ಅದರ ಫಲವನ್ನು ರಾಜನು ಹತ್ತು ಸಾವಿರ ವರ್ಷಗಳು
ಸ್ವರ್ಗದಲ್ಲಿ ಭೋಗಿಸುತ್ತಾನೆ.

12072030a ಸ್ವಿಷ್ಟಿಃ ಸ್ವಧೀತಿಃ ಸುತಪಾ ಲೋಕಾನ್ಜಯತಿ ಯಾವತಃ|
12072030c ಕ್ಷಣೇನ ತಾನವಾಪ್ನೋತಿ ಪ್ರಜಾ ಧರ್ಮೇಣ ಪಾಲಯನ್||

ಆಶ್ರಮಧರ್ಮಗಳನ್ನು ಪಾಲಿಸುವವರು ಯಾಗಗಳು, ಸ್ವಾಧ್ಯಾಯ ಮತ್ತು
ಮಹಾ ತಪಸ್ಸುಗಳಿಂದ ಯಾವ ಲೋಕವನ್ನು ಗೆಲ್ಲುತ್ತಾರೋ ಆ
ಲೋಕಗಳನ್ನು ಪ್ರಜೆಗಳನ್ನು ಧರ್ಮದಿಂದ ಪಾಲಿಸುವ ರಾಜನು
ಕ್ಷಣದಲ್ಲಿಯೇ ಪಡೆದುಕೊಳ್ಳುತ್ತಾನೆ.

12072031a ಏವಂ ಧರ್ಮಂ ಪ್ರಯತ್ನೇನ ಕೌಂತೇಯ ಪರಿಪಾಲಯನ್|
12072031c ಇಹ ಪುಣ್ಯಫಲಂ ಲಬ್ಧ್ವಾ ನಾಧಿಬಂಧೇನ ಯೋಕ್ಷ್ಯಸೇ||

ಕೌಂತೇಯ! ಹೀಗೆ ಪ್ರಯತ್ನಪಟ್ಟು ಧರ್ಮವನ್ನು ಪರಿಪಾಲಿಸು.
ಇದರಿಂದ ಪುಣ್ಯಫಲವನ್ನು ಪಡೆದು ಮನೋವ್ಯಥೆಯ ಬಂಧನಕ್ಕೆ

ಸಿಲುಕುವುದಿಲ್ಲ.

12072032a ಸ್ವರ್ಗಲೋಕೇ ಚ ಮಹತೀಂ ಶ್ರಿಯಂ ಪ್ರಾಪ್ಸ್ಯಸಿ ಪಾಂಡವ|
12072032c ಅಸಂಭವಶ್ಚ ಧರ್ಮಾಣಾಮೀದೃಶಾನಾಮರಾಜಸು|
12072032e ತಸ್ಮಾದ್ರಾಜ್ಯೇವ ನಾನ್ಯೋಽಸ್ತಿ ಯೋ ಮಹತ್ಫಲಮಾಪ್ನುಯಾತ್||

ಪಾಂಡವ! ರಾಜರಲ್ಲದವರಿಗೆ ಈ ರೀತಿಯ ಧರ್ಮವು ಅಸಂಭವವು. ಸ್ವರ್ಗಲೋಕದಲ್ಲಿ ನೀನು ಮಹಾ ಶ್ರೀಯನ್ನು ಪಡೆದುಕೊಳ್ಳುತ್ತೀಯೆ. ಆದುದರಿಂದ ರಾಜ್ಯದಿಂದಲೇ ಈ ಮಹಾ ಫಲವು ಪ್ರಾಪ್ತವಾಗುತ್ತದೆ. ಅನ್ಯಥಾ ಅಲ್ಲ.

12072033a ಸ ರಾಜ್ಯಮೃದ್ಧಿಮತ್ಪ್ರಾಪ್ಯ ಧರ್ಮೇಣ ಪರಿಪಾಲಯನ್|
12072033c ಇಂದ್ರಂ ತರ್ಪಯ ಸೋಮೇನ ಕಾಮೈಶ್ಚ ಸುಹೃದೋ ಜನಾನ್||

ಧೈರ್ಯದಿಂದ ಪಡೆದುಕೊಂಡ ಈ ರಾಜ್ಯವನ್ನು ಧರ್ಮದಿಂದ ಪರಿಪಾಲಿಸಿ ಸೋಮದಿಂದ ಇಂದ್ರನನ್ನು ತೃಪ್ತಿಪಡಿಸಿ ಕಾಮಗಳಿಂದ ಸುಹೃದ ಜನರನ್ನು ತೃಪ್ತಿಗೊಳಿಸು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ದ್ವಿಸಪ್ತತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಎಪ್ಪತ್ತೆರಡನೇ ಅಧ್ಯಾಯವು.

೭೩

ಪುರೂರವಪವನಸಂವಾದ

ಪುರೂರವ-ಪವನ ಸಂವಾದದ ಮೂಲಕ ಭೀಷ್ಮನು ಯುಧಿಷ್ಠಿರನಿಗೆ ರಾಜಪುರೋಹಿತನ ಮಹತ್ವವನ್ನು ವಿವರಿಸಿದುದು (1-26).

12073001 ಭೀಷ್ಮ ಉವಾಚ|
12073001a ಯ ಏವ ತು ಸತೋ ರಕ್ಷೇದಸತಶ್ಚ ನಿಬರ್ಹಯೇತ್|
12073001c ಸ ಏವ ರಾಜ್ಞಾ ಕರ್ತವ್ಯೋ ರಾಜನ್ರಾಜಪುರೋಹಿತಃ||

ಭೀಷ್ಮನು ಹೇಳಿದನು: "ರಾಜನ್! ರಾಜನ ಸತ್ಕರ್ಮಗಳನ್ನು ರಕ್ಷಿಸುವುದು ಮತ್ತು ಅವನ ದುಷ್ಕರ್ಮಗಳನ್ನು ಕ್ಷೀಣಿಸುವುದೇ ರಾಜಪುರೋಹಿತನ ಕರ್ತವ್ಯ.

12073002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12073002c ಪುರೂರವಸ ಐಲಸ್ಯ ಸಂವಾದಂ ಮಾತರಿಶ್ವನಃ||

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾಗಿರುವ ಇಲನ ಮಗ ಪುರೂರವ ಮತ್ತು ವಾಯುವಿನ ನಡುವೆ ನಡೆದ ಸಂವಾದವನ್ನು ಉದಾಹರಿಸುತ್ತಾರೆ.

12073003 ಐಲ ಉವಾಚ|
12073003a ಕುತಃ ಸ್ವಿದ್ಬ್ರಾಹ್ಮಣೋ ಜಾತೋ ವರ್ಣಾಶ್ಚಾಪಿ ಕುತಸ್ತ್ರಯಃ|
12073003c ಕಸ್ಮಾಚ್ಚ ಭವತಿ ಶ್ರೇಯಾನೇತದ್ವಾಯೋ ವಿಚಕ್ಷ್ವ ಮೇ||

ಐಲನು ಹೇಳಿದನು: "ಬ್ರಾಹ್ಮಣರು ಎಲ್ಲಿಂದ ಹುಟ್ಟಿದರು? ಉಳಿದ ಮೂರು ವರ್ಣದವರೂ ಎಲ್ಲಿಂದ ಹುಟ್ಟಿದವು? ಯಾವ ಕಾರಣದಿಂದ ಬ್ರಾಹ್ಮಣನು ಉಳಿದ ಮೂರು ವರ್ಣದವರಿಗಿಂತಲೂ ಶ್ರೇಷ್ಠನೆನಿಸಿಕೊಂಡಿದ್ದಾನೆ? ಅದನ್ನು ನನಗೆ ಸ್ಪಷ್ಟೀಕರಿಸು."

12073004 ವಾಯುರುವಾಚ

12073004a ಬ್ರಹ್ಮಣೋ ಮುಖತಃ ಸೃಷ್ಟೋ ಬ್ರಾಹ್ಮಣೋ ರಾಜಸತ್ತಮ|
12073004c ಬಾಹುಭ್ಯಾಂ ಕ್ಷತ್ರಿಯಃ ಸೃಷ್ಟ ಊರುಭ್ಯಾಂ ವೈಶ್ಯ ಉಚ್ಯತೇ||

ವಾಯುವು ಹೇಳಿದನು: "ರಾಜಸತ್ತಮ! ಬ್ರಾಹ್ಮಣನು ಬ್ರಹ್ಮನ ಮುಖದಿಂದ ಹುಟ್ಟಿದನು. ಅವನ ಎರಡು ಬಾಹುಗಳಿಂದ ಕ್ಷತ್ರಿಯನು ಹುಟ್ಟಿದನು ಮತ್ತು ತೊಡೆಗಳಿಂದ ವೈಶ್ಯನು ಹುಟ್ಟಿದನು ಎಂದು ಹೇಳುತ್ತಾರೆ.

12073005a ವರ್ಣಾನಾಂ ಪರಿಚರ್ಯಾರ್ಥಂ ತ್ರಯಾಣಾಂ ಪುರುಷರ್ಷಭ|
12073005c ವರ್ಣಶ್ಚತುರ್ಥಃ ಪಶ್ಚಾತ್ತು ಪದ್ಭ್ಯಾಂ ಶೂದ್ರೋ ವಿನಿರ್ಮಿತಃ||

ಪುರುಷರ್ಷಭ! ಈ ಮೂರುವರ್ಣಗಳದವರ ಪರಿಚರ್ಯೆಗಾಗಿ ನಾಲ್ಕನೆಯದಾದ ಶೂದ್ರವರ್ಣವು ಬ್ರಹ್ಮನ ಪಾದಗಳಿಂದ ನಿರ್ಮಿತವಾಯಿತು.

12073006a ಬ್ರಾಹ್ಮಣೋ ಜಾತಮಾತ್ರಸ್ತು ಪೃಥಿವೀಮನ್ವಜಾಯತ|
12073006c ಈಶ್ವರಃ ಸರ್ವಭೂತಾನಾಂ ಧರ್ಮಕೋಶಸ್ಯ ಗುಪ್ತಯೇ||

ಹುಟ್ಟಿದ ಕೂಡಲೇ ಬ್ರಾಹ್ಮಣನು ಧರ್ಮಕೋಶವನ್ನು ರಕ್ಷಿಸಲೋಸುಗ ಸರ್ವಭೂತಗಳ ಈಶ್ವರನಾಗಿ ಪೃಥ್ವಿಯನ್ನು ಆಳತೊಡಗಿದನು.

12073007a ತತಃ ಪೃಥಿವ್ಯಾ ಗೋಪ್ತಾರಂ ಕ್ಷತ್ರಿಯಂ ದಂಡಧಾರಿಣಮ್|
12073007c ದ್ವಿತೀಯಂ ವರ್ಣಮಕರೋತ್ಪ್ರಜಾನಾಮನುಗುಪ್ತಯೇ||

ಪೃಥ್ವಿಯನ್ನು ರಕ್ಷಿಸಲು ಮತ್ತು ಪ್ರಜೆಗಳನ್ನು ರಕ್ಷಿಸಲು ಎರಡನೆಯ ವರ್ಣವಾದ ದಂಡಧಾರೀ ಕ್ಷತ್ರಿಯನ ಉತ್ಪನ್ನವಾಯಿತು.

12073008a ವೈಶ್ಯಸ್ತು ಧನಧಾನ್ಯೇನ ತ್ರೀನ್ವರ್ಣಾನ್ಬಿಭೃಯಾದಿಮಾನ್|
12073008c ಶೂದ್ರೋ ಹ್ಯೇನಾನ್ಪರಿಚರೇದಿತಿ ಬ್ರಹ್ಮಾನುಶಾಸನಮ್||

ವೈಶ್ಯನು ಧನ-ಧಾನ್ಯಗಳಿಂದ ಉಳಿದ ಮೂರೂ ವರ್ಣದವರ
ಪೋಷಣೆಯನ್ನು ಮಾಡಬೇಕೆಂದೂ ಶೂದ್ರನು ಇವರ ಸೇವೆಯಲ್ಲಿ
ತೊಡಗಿರಬೇಕೆಂದೂ ಬ್ರಹ್ಮನ ಅನುಶಾಸನವಿದೆ.”

12073009 ಐಲ ಉವಾಚ

12073009a ದ್ವಿಜಸ್ಯ ಕ್ಷತ್ರಬಂಧೋರ್ವಾ ಕಸ್ಯೇಯಂ ಪೃಥಿವೀ ಭವೇತ್|
12073009c ಧರ್ಮತಃ ಸಹ ವಿತ್ತೇನ ಸಮ್ಯಗ್ವಾಯೋ ಪ್ರಚಕ್ಷ್ವ ಮೇ||

ಐಲನು ಹೇಳಿದನು: “ವಾಯೋ! ವಿತ್ತದಿಂದ ಕೂಡಿರುವ ಈ ಪೃಥ್ವಿಯು
ಧರ್ಮದ ಪ್ರಕಾರ ಯಾರದ್ದಾಗುತ್ತದೆ? ಬ್ರಾಹ್ಮಣನದ್ದೋ ಅಥವಾ
ಕ್ಷತ್ರಬಂದುವಿನದೋ? ಅದನ್ನು ನನಗೆ ಬಿಡಿಸಿ ಹೇಳು.”

12073010 ವಾಯುರುವಾಚ

12073010a ವಿಪ್ರಸ್ಯ ಸರ್ವಮೇವೈತದ್ಯತ್ಕಿಂ ಚಿಜ್ಜಗತೀಗತಮ್|
12073010c ಜ್ಯೇಷ್ಠೇನಾಭಿಜನೇನೇಹ ತದ್ಧರ್ಮಕುಶಲಾ ವಿದುಃ||

ವಾಯುವು ಹೇಳಿದನು: “ಜ್ಯೇಷ್ಠನಾಗಿ ಬ್ರಹ್ಮನ ಮುಖದಿಂದ
ಹುಟ್ಟಿದುದರಿಂದ ಏನೆಲ್ಲ ಈ ಜಗತ್ತಿದೆಯೋ ಅವೆಲ್ಲವೂ
ಬ್ರಾಹ್ಮಣನದ್ದು ಎಂದು ಧರ್ಮಕುಶಲರು ತಿಳಿದಿರುತ್ತಾರೆ.

12073011a ಸ್ವಮೇವ ಬ್ರಾಹ್ಮಣೋ ಭುಂಕ್ತೇ ಸ್ವಂ ವಸ್ತೇ ಸ್ವಂ ದದಾತಿ ಚ|
12073011c ಗುರುರ್ಹಿ ಸರ್ವವರ್ಣಾನಾಂ ಜ್ಯೇಷ್ಠಃ ಶ್ರೇಷ್ಠಶ್ಚ ವೈ ದ್ವಿಜಃ||

ಬ್ರಾಹ್ಮಣನು ಊಟಮಾಡುವುದು ಅವನದ್ದೇ. ಯಾವುದನ್ನು

ಹೊದೆದುಕೊಳ್ಳುತ್ತಾನೋ ಅದು ಅವನದ್ದೇ. ಯಾವುದನ್ನು ಅವನು ಕೊಡುತ್ತಾನೋ ಅದೂ ಅವನದೇ ಆಗಿರುತ್ತದೆ. ಸರ್ವವರ್ಣದವರಿಗೆ ಬ್ರಾಹ್ಮಣನೇ ಗುರು, ಜ್ಯೇಷ್ಠ ಮತ್ತು ಶ್ರೇಷ್ಠ.

12073012a ಪತ್ಯಭಾವೇ ಯಥಾ ಸ್ತ್ರೀ ಹಿ ದೇವರಂ ಕುರುತೇ ಪತಿಮ್|
12073012c ಆನಂತರ್ಯಾತ್ತಥಾ ಕ್ಷತ್ರಂ ಪೃಥಿವೀ ಕುರುತೇ ಪತಿಮ್||

ಪತಿಯು ಇಲ್ಲದಿರುವಾಗ ಸ್ತ್ರೀಯು ಹೇಗೆ ಮೈದುನನನ್ನು ಪತಿಯನ್ನಾಗಿ ಮಾಡಿಕೊಳ್ಳುತ್ತಾಳೋ ಹಾಗೆ ಬ್ರಾಹ್ಮಣರು ಬಿಟ್ಟನಂತರ ಭೂಮಿಯು ಕ್ಷತ್ರಿಯನನ್ನೇ ಪತಿಯನ್ನಾಗಿಸಿಕೊಂಡಳು.

12073013a ಏಷ ತೇ ಪ್ರಥಮಃ ಕಲ್ಪ ಆಪದ್ಯನ್ಯೋ ಭವೇದತಃ|
12073013c ಯದಿ ಸ್ವರ್ಗೇ ಪರಂ ಸ್ಥಾನಂ ಧರ್ಮತಃ ಪರಿಮಾರ್ಗಸಿ||
12073014a ಯಃ ಕಶ್ಚಿದ್ವಿಜಯೇದ್ಭೂಮಿಂ ಬ್ರಾಹ್ಮಣಾಯ ನಿವೇದಯೇತ್|
12073014c ಶ್ರುತವೃತ್ತೋಪಪನ್ನಾಯ ಧರ್ಮಜ್ಞಾಯ ತಪಸ್ವಿನೇ||
12073015a ಸ್ವಧರ್ಮಪರಿತೃಪ್ತಾಯ ಯೋ ನ ವಿತ್ತಪರೋ ಭವೇತ್|

ಇದು ಪ್ರಥಮ ಕಲ್ಪ. ಆಪತ್ಕಾಲಗಳಲ್ಲಿ ಬೇರೆಯದೇ ಆಗಬಹುದು. ಒಂದು ವೇಳೆ ನೀನು ಧರ್ಮತಃ ಸ್ವರ್ಗದ ಪರಮಸ್ಥಾನವನ್ನು ಬಯಸುವೆಯಾದರೆ ನೀನು ಜಯಿಸಿರುವ ಎಷ್ಟು ಭೂಮಿಯಿದೆಯೋ ಅಷ್ಟನ್ನೂ ಓರ್ವ ವಿದ್ವಾಂಸ, ಸ್ವವೃತ್ತಿಯಲ್ಲಿರುವ, ಸ್ವಧರ್ಮದಲ್ಲಿ ಪರಿತೃಪ್ತನಾಗಿರುವ, ವಿತ್ತವನ್ನು ಬಯಸಿರದ ಧರ್ಮಜ್ಞ, ತಪಸ್ವೀ ಬ್ರಾಹ್ಮಣನಿಗೆ ನಿವೇದಿಸು.

12073015c ಯೋ ರಾಜಾನಂ ನಯೇದ್ಬುದ್ಧ್ಯಾ ಸರ್ವತಃ ಪರಿಪೂರ್ಣಯಾ||
12073016a ಬ್ರಾಹ್ಮಣೋ ಹಿ ಕುಲೇ ಜಾತಃ ಕೃತಪ್ರಜ್ಞೋ ವಿನೀತವಾಕ್|

12073016c ಶ್ರೇಯೋ ನಯತಿ ರಾಜಾನಂ ಬ್ರುವಂಶ್ಚಿತ್ತ್ರಾಂ ಸರಸ್ವತೀಮ್‌॥
12073017a ರಾಜಾ ಚರತಿ ಯಂ ಧರ್ಮಂ ಬ್ರಾಹ್ಮಣೇನ ನಿದರ್ಶಿತಮ್‌|

ಸತ್ಕುಲಪ್ರಸೂತ, ಕೃತಪ್ರಜ್ಞ, ವಿನೀತವಾದೀ ಬ್ರಾಹ್ಮಣನು ತನ್ನ ಸರ್ವ ಪರಿಪೂರ್ಣ ಬುದ್ಧಿಯಿಂದ ರಾಜನನ್ನು ಸನ್ಮಾರ್ಗಪ್ರವೃತ್ತನನ್ನಾಗಿ ಮಾಡುತ್ತಾನೆ. ಚಿತ್ರತರ ಮಾತುಗಳ ಮೂಲಕ ರಾಜನಿಗೆ ಬುದ್ಧಿಹೇಳುತ್ತಾ ಅವನು ರಾಜನಿಗೆ ಶ್ರೇಯಸ್ಸನ್ನು ತರುತ್ತಾನೆ. ಬ್ರಾಹ್ಮಣನು ನಿದರ್ಶಿಸಿದ ಧರ್ಮದಲ್ಲಿ ರಾಜನು ನಡೆಯುತ್ತಾನೆ.

12073017c ಶುಶ್ರೂಷುರನಹಂವಾದೀ ಕ್ಷತ್ರಧರ್ಮವ್ರತೇ ಸ್ಥಿತಃ॥
12073018a ತಾವತಾ ಸ ಕೃತಪ್ರಜ್ಞಶ್ಚಿರಂ ಯಶಸಿ ತಿಷ್ಠತಿ|
12073018c ತಸ್ಯ ಧರ್ಮಸ್ಯ ಸರ್ವಸ್ಯ ಭಾಗೀ ರಾಜಪುರೋಹಿತಃ॥

ಹೇಳಿದ್ದನ್ನು ಕೇಳುವ, ಅಹಂಕಾರವಾದಿಯಲ್ಲದ ಮತ್ತು ಕ್ಷತ್ರಧರ್ಮದಲ್ಲಿ ಸ್ಥಿತನಾಗಿರುವವನು ಅವರಿಂದ ಕೃತಪ್ರಜ್ಞನಾಗಿ ಬಹುಕಾಲ ಯಶೋವಂತನಾಗಿರುತ್ತಾನೆ. ಅವನ ಸರ್ವ ಧರ್ಮದಳಲ್ಲಿ ರಾಜಪುರೋಹಿತನು ಭಾಗಿಯಾಗುತ್ತಾನೆ.

12073019a ಏವಮೇವ ಪ್ರಜಾಃ ಸರ್ವಾ ರಾಜಾನಮಭಿಸಂಶ್ರಿತಾಃ|
12073019c ಸಮ್ಯಗ್ವೃತ್ತಾಃ ಸ್ವಧರ್ಮಸ್ಥಾ ನ ಕುತಶ್ಚಿದ್ಭಯಾನ್ವಿತಾಃ॥

ಹೀಗೆಯ ರಾಜನನ್ನು ಅವಲಂಬಿಸಿರುವ ಸರ್ವ ಪ್ರಜೆಗಳೂ ಸನ್ಮಾರ್ಗದಲ್ಲಿ ನಡೆದುಕೊಂಡು, ಸ್ವಧರ್ಮಗಳಲ್ಲಿಯೇ ಇದ್ದುಕೊಂಡು ಯಾವುದೇ ಭಯವಿಲ್ಲದೇ ಇರುತ್ತಾರೆ.

12073020a ರಾಷ್ಟ್ರೇ ಚರಂತಿ ಯಂ ಧರ್ಮಂ ರಾಜ್ಞಾ ಸಾಧ್ವಭಿರಕ್ಷಿತಾಃ|
12073020c ಚತುರ್ಥಂ ತಸ್ಯ ಧರ್ಮಸ್ಯ ರಾಜಾ ಭಾಗಂ ಸ ವಿಂದತಿ॥

ರಾಜನಿಂದ ರಕ್ಷಿತರಾದ ಸಾಧುಜನರು ಯಾವ ಧರ್ಮವನ್ನು ಆಚರಿಸುತ್ತಾರೋ ಆ ಧರ್ಮದ ನಾಲ್ಕನೇ ಒಂದು ಭಾಗವು ರಾಜನಿಗೆ ಸೇರುತ್ತದೆ.

12073021a ದೇವಾ ಮನುಷ್ಯಾಃ ಪಿತರೋ ಗಂಧರ್ವೋರಗರಾಕ್ಷಸಾಃ|
12073021c ಯಜ್ಞಮೇವೋಪಜೀವಂತಿ ನಾಸ್ತಿ ಚೇಷ್ಟಮರಾಜಕೇ||

ದೇವತೆಗಳು, ಮನುಷ್ಯರು, ಪಿತೃಗಳು ಮತ್ತು ಗಂಧರ್ವ-ಉರಗ-ರಾಕ್ಷಸರು ಯಜ್ಞವನ್ನೇ ಅವಲಂಬಿಸಿ ಜೀವಿಸುವವು. ರಾಜನಿಲ್ಲದ ರಾಷ್ಟ್ರದಲ್ಲಿ ಇವುಗಳು ನಡೆಯುವುದೆಂತು?

12073022a ಇತೋ ದತ್ತೇನ ಜೀವಂತಿ ದೇವತಾಃ ಪಿತರಸ್ತಥಾ|
12073022c ರಾಜನ್ಯೇವಾಸ್ಯ ಧರ್ಮಸ್ಯ ಯೋಗಕ್ಷೇಮಃ ಪ್ರತಿಷ್ಠಿತಃ||

ಇಲ್ಲಿ ಮಾಡುವ ದಾನಗಳನ್ನು ಅವಲಂಬಿಸಿಯೇ ದೇವತೆಗಳು ಮತ್ತು ಪಿತೃಗಳು ಜೀವಿಸುತ್ತಾರೆ. ಈ ಯೋಗ-ಕ್ಷೇಮಗಳು ಧರ್ಮಿಷ್ಠ ರಾಜನಲ್ಲಿಯೇ ಪ್ರತಿಷ್ಠಿತವಾಗಿವೆ.

12073023a ಚಾಯಾಯಾಮಪ್ಸು ವಾಯೌ ಚ ಸುಖಮುಷ್ಣೇऽಧಿಗಚ್ಚತಿ|
12073023c ಅಗ್ನೌ ವಾಸಸಿ ಸೂರ್ಯೇ ಚ ಸುಖಂ ಶೀತೇऽಧಿಗಚ್ಚತಿ||

ಬೇಸಗೆಯ ಬಿಸಿಯನ್ನು ನೆರಳಿನಲ್ಲಿ ಹೋಗಿಯೋ, ನೀರಿನಲ್ಲಿ ಮುಳುಗಿಯೋ ಮತ್ತು ಗಾಳಿಬೀಸಿಕೊಳ್ಳುವುದರಿಂದಲೋ ಸುಖವಾಗಿ ತಡೆದುಕೊಳ್ಳಬಹುದು. ಬೆಂಕಿ ಕಾಯಿಸುವುದರಿಂದ ಮತ್ತು ಬಿಸಿಲಿನಲ್ಲಿ ನಿಲ್ಲುವುದರಿಂದ ಛಳಿಯನ್ನು ಸುಖವಾಗಿ ತಡೆದುಕೊಳ್ಳಬಹುದು.

12073024a ಶಬ್ದೇ ಸ್ಪರ್ಶೇ ರಸೇ ರೂಪೇ ಗಂಧೇ ಚ ರಮತೇ ಮನಃ|

12073024c ತೇಷು ಭೋಗೇಷು ಸರ್ವೇಷು ನಭೀತೋ ಲಭತೇ ಸುಖಮ್‌||

ಶಬ್ದ-ಸ್ಪರ್ಶ-ರಸ-ರೂಪ-ಗಂಧಗಳಲ್ಲಿ ಮನಸ್ಸು ರಮಿಸುತ್ತದೆ. ಆದರೆ ಭಯದಲ್ಲಿರುವವನಿಗೆ ಈ ಎಲ್ಲ ಭೋಗಗಳಿಂದಲೂ ಸುಖವು ದೊರೆಯುವುದಿಲ್ಲ.

12073025a ಅಭಯಸ್ಯೈವ ಯೋ ದಾತಾ ತಸ್ಯೈವ ಸುಮಹತ್ಫಲಮ್‌|
12073025c ನ ಹಿ ಪ್ರಾಣಸಮಂ ದಾನಂ ತ್ರಿಷು ಲೋಕೇಷು ವಿದ್ಯತೇ||

ಅಂಥವನಿಗೆ ಅಭಯವನ್ನು ನೀಡುವವನಿಗೆ ಮಹಾ ಫಲವು ಲಭಿಸುತ್ತದೆ. ಪ್ರಾಣಸಮವಾದ ದಾನವು ಮೂರು ಲೋಕಗಳಲ್ಲಿಯೂ ಬೇರೆ ಇಲ್ಲ.

12073026a ಇಂದ್ರೋ ರಾಜಾ ಯಮೋ ರಾಜಾ ಧರ್ಮೋ ರಾಜಾ ತಥೈವ ಚ|
12073026c ರಾಜಾ ಬಿಭರ್ತಿ ರೂಪಾಣಿ ರಾಜ್ಞಾ ಸರ್ವಮಿದಂ ಧೃತಮ್‌||

ರಾಜನಾದವನು ಇಂದ್ರ. ರಾಜನಾದವನು ಯಮ. ರಾಜನಾದವನು ಧರ್ಮ ಕೂಡ. ರಾಜನಾದವನು ನಾನಾ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಈ ಎಲ್ಲವೂ ರಾಜನ ಮೇಲೆಯೇ ನಿಂತಿವೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಪುರೂರವಪವನಸಂವಾದೇ ತ್ರಿಸಪ್ತತಿತಮೋऽಧ್ಯಾಯಃ‌||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಪುರೂರವಪವನಸಂವಾದ ಎನ್ನುವ ಎಪ್ಪತ್ಮೂರನೇ ಅಧ್ಯಾಯವು.

೭೪

ಐಲಕಶ್ಯಪಸಂವಾದ

ಬ್ರಾಹ್ಮಣ-ಕ್ಷತ್ರಿಯರ ಸಂಬಂಧದ ಕುರಿತು ಐಲ-ಕಶ್ಯಪ ಸಂವಾದ (1-32).

12074001 ಭೀಷ್ಮ ಉವಾಚ|
12074001a ರಾಜ್ಞಾ ಪುರೋಹಿತಃ ಕಾರ್ಯೋ ಭವೇದ್ವಿದ್ವಾನ್ಬಹುಶ್ರುತಃ|
12074001c ಉಭೌ ಸಮೀಕ್ಷ್ಯ ಧರ್ಮಾರ್ಥಾವಪ್ರಮೇಯಾವನಂತರಮ್||

ಭೀಷ್ಮನು ಹೇಳಿದನು: "ಧರ್ಮ-ಅರ್ಥ ಇವೆರಡರ ಗತಿಯೂ ಅತ್ಯಂತ ಗಹನವಾದುದೆಂದು ತಿಳಿದು ರಾಜನಾದವನು ಬಹುಶ್ರುತ ವಿದ್ವಾಂಸನನ್ನು ರಾಜಪುರೋಹಿತನನ್ನಾಗಿ ಮಾಡಿಕೊಳ್ಳಬೇಕು.

12074002a ಧರ್ಮಾತ್ಮಾ ಧರ್ಮವಿದ್ಯೇಷಾಂ ರಾಜ್ಞಾಂ ರಾಜನ್ಪುರೋಹಿತಃ|
12074002c ರಾಜಾ ಚೈವಂ ಗುಣೋ ಯೇಷಾಂ ಕುಶಲಂ ತೇಷು ಸರ್ವಶಃ||

ರಾಜನ್! ರಾಜಪುರೋಹಿತನು ಧರ್ಮಾತ್ಮನೂ, ಧರ್ಮವಿದನೂ ಆಗಿರುವ ಮತ್ತು ರಾಜನೂ ಅದೇ ಗುಣಗಳನ್ನು ಹೊಂದಿರುವ ರಾಷ್ಟ್ರದಲ್ಲಿ ಎಲ್ಲರೂ ಕುಶಲವಾಗಿಯೇ ಇರುತ್ತಾರೆ.

12074003a ಉಭೌ ಪ್ರಜಾ ವರ್ಧಯತೋ ದೇವಾನ್ಪೂರ್ವಾನ್ಪರಾನ್ಪಿತೄನ್|
12074003c ಯೌ ಸಮೇಯಾಸ್ಥಿತೌ ಧರ್ಮೇ ಶ್ರದ್ಧೇಯೌ ಸುತಪಸ್ವಿನೌ||
12074004a ಪರಸ್ಪರಸ್ಯ ಸುಹೃದೌ ಸಂಮತೌ ಸಮಚೇತಸೌ|
12074004c ಬ್ರಹ್ಮಕ್ಷತ್ರಸ್ಯ ಸಂಮಾನಾತ್ಪ್ರಜಾಃ ಸುಖಮವಾಪ್ನುಯುಃ||

ರಾಜ ಮತ್ತು ಪುರೋಹಿತ ಇಬ್ಬರೂ ಧರ್ಮನಿಷ್ಠರಾಗಿದ್ದುಕೊಂಡು ಯೋಗ-ಕ್ಷೇಮಗಳಲ್ಲಿ ಶ್ರದ್ಧಾವಂತರಾಗಿದ್ದರೆ ಮತ್ತು ಸಮಾನ

ಮನಸ್ಕರಾಗಿದ್ದರೆ ಇಬ್ಬರೂ ಸೇರಿ ರಾಷ್ಟ್ರವನ್ನೂ ಪ್ರಜೆಗಳನ್ನೂ ಅಭಿವೃದ್ಧಿಗೊಳಿಸುತ್ತಾರೆ. ದೇವತೆಗಳನ್ನೂ ಪಿತೃಗಳನ್ನೂ ತೃಪ್ತಿಗೊಳಿಸುತ್ತಾರೆ. ಅಂತಹ ಬ್ರಾಹ್ಮಣ ಮತ್ತ ಕ್ಷತ್ರಯರನ್ನು ಸಮ್ಮಾನಿಸಿದ ಪ್ರಜೆಗಳು ಸುಖವನ್ನು ಹೊಂದುತ್ತಾರೆ.

12074005a ವಿಮಾನನಾತ್ತಯೋರೇವ ಪ್ರಜಾ ನಶ್ಯೇಯುರೇವ ಹ|
12074005c ಬ್ರಹ್ಮಕ್ಷತ್ರಂ ಹಿ ಸರ್ವೇಷಾಂ ಧರ್ಮಾಣಾಂ ಮೂಲಮುಚ್ಯತೇ||

ಅವರಿಬ್ಬರನ್ನೂ ಸಮ್ಮಾನಿಸದೇ ಇದ್ದರೆ ಪ್ರಜೆಗಳು ನಾಶವಾಗುತ್ತಾರೆ. ಬ್ರಾಹ್ಮಣ-ಕ್ಷತ್ರಿಯರೇ ಸರ್ವಧರ್ಮಗಳ ಮೂಲವೆಂದು ಹೇಳುತ್ತಾರೆ.

12074006a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12074006c ಐಲಕಶ್ಯಪಸಂವಾದಂ ತಂ ನಿಬೋಧ ಯುಧಿಷ್ಠಿರ||

ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾಗಿರುವ ಐಲ ಮತ್ತು ಕಶ್ಯಪರ ಸಂವಾದವನ್ನು ಉದಾಹರಿಸುತ್ತಾರೆ. ಅದನ್ನು ಕೇಳು.

12074007 ಐಲ ಉವಾಚ|
12074007a ಯದಾ ಹಿ ಬ್ರಹ್ಮ ಪ್ರಜಹಾತಿ ಕ್ಷತ್ರಂ
ಕ್ಷತ್ರಂ ಯದಾ ವಾ ಪ್ರಜಹಾತಿ ಬ್ರಹ್ಮ|
12074007c ಅನ್ವಗ್ಬಲಂ ಕತಮೇಽಸ್ಮಿನ್ಭಜಂತೇ
ತಥಾಬಲ್ಯಂ ಕತಮೇಽಸ್ಮಿನ್ವಿಯಂತಿ||

ಐಲನು ಹೇಳಿದನು: "ಒಂದುವೇಳೆ ಬ್ರಾಹ್ಮಣರು ಕ್ಷತ್ರಿಯರನ್ನು ಪರಿತ್ಯಜಿಸಿದರೆ ಅಥವಾ ಒಂದು ವೇಳೆ ಕ್ಷತ್ರಿಯರು ಬ್ರಾಹ್ಮಣರನ್ನು ಪರಿತ್ಯಜಿಸಿದರೆ ಉಳಿದ ವರ್ಣದವರು ಯಾರ ಆಶ್ರಯವನ್ನು

ಪಡೆದುಕೊಳ್ಳಬೇಕು? ಬ್ರಾಹ್ಮಣ-ಕ್ಷತ್ರಿಯ ಈ ಇಬ್ಬರಲ್ಲಿ ಎಲ್ಲರಿಗೂ ಅಶ್ರಯವನ್ನು ಕೊಡುವವರು ಯಾರು?”

12074008 ಕಶ್ಯಪ ಉವಾಚ|

12074008a ವ್ಯೃದ್ಧಂ ರಾಷ್ಟ್ರಂ ಭವತಿ ಕ್ಷತ್ರಿಯಸ್ಯ
ಬ್ರಹ್ಮ ಕ್ಷತ್ರಂ ಯತ್ರ ವಿರುಧ್ಯತೇ ಹ|
12074008c ಅನ್ವಗ್ಬಲಂ ದಸ್ಯವಸ್ತದ್ಭಜಂತೇ
ಽಬಲ್ಯಂ ತಥಾ ತತ್ರ ವಿಯಂತಿ ಸಂತಃ||

ಕಶ್ಯಪನು ಹೇಳಿದನುಃ “ಬ್ರಾಹ್ಮಣ-ಕ್ಷತ್ರಿಯರ ಮಧ್ಯೆ ವಿರೋಧವುಂಟಾದ ರಾಷ್ಟ್ರವು ಒಡೆದುಹೋಗುತ್ತದೆ. ದಸ್ಯುಗಳ ಸೇನೆಗಳು ಬಂದು ಎಲ್ಲವನ್ನೂ ಎಲ್ಲ ವರ್ಣದವರನ್ನೂ ಸ್ವಾಧೀನಪಡೆದುಕೊಳ್ಳುತ್ತವೆ ಎಂದು ಸಂತರು ಹೇಳುತ್ತಾರೆ.

12074009a ನೈಷಾಮುಕ್ಷಾ ವರ್ಧತೇ ನೋತ ಉಸ್ರಾ
ನ ಗರ್ಗರೋ ಮಥ್ಯತೇ ನೋ ಯಜಂತೇ|
12074009c ನೈಷಾಂ ಪುತ್ರಾ ವೇದಮಧೀಯತೇ ಚ
ಯದಾ ಬ್ರಹ್ಮ ಕ್ಷತ್ರಿಯಾಃ ಸಂತ್ಯಜಂತಿ||

ಕ್ಷತ್ರಿಯರು ಬ್ರಾಹ್ಮಣರನ್ನು ತ್ಯಜಿಸಿದರೆ ಅವರ ಪುತ್ರರು ವೇದಗಳನ್ನು ಕಲಿತುಕೊಳ್ಳಲಾರರು. ಮೊಸರಿನ ಪಾತ್ರೆಯಲ್ಲಿ ಕಡೆಗೋಲು ಕಡೆಯುವುದಿಲ್ಲ ಮತ್ತು ಯಜ್ಞಗಳು ನಡೆಯುವುದಿಲ್ಲ.

12074010a ನೈಷಾಮುಕ್ಷಾ ವರ್ಧತೇ ಜಾತು ಗೇಹೇ
ನಾಧೀಯತೇ ಸಪ್ರಜಾ ನೋ ಯಜಂತೇ|
12074010c ಅಪಧ್ವಸ್ತಾ ದಸ್ಯುಭೂತಾ ಭವಂತಿ

ಯೇ ಬ್ರಾಹ್ಮಣಾಃ ಕ್ಷತ್ರಿಯಾನ್ಸಂತ್ಯಜಂತಿ|[205]|

ಬ್ರಾಹ್ಮಣರು ಕ್ಷತ್ರಿಯರನ್ನು ತ್ಯಜಿಸಿದರೆ ಅವರ ಮಕ್ಕಳು ವೇದಾಧ್ಯಯನ ಮಾಡುವುದಿಲ್ಲ. ಅವರು ದಸ್ಯುಗಳಂತೆಯೇ ಆಗಿಹೋಗುತ್ತಾರೆ. ಅವರ ಮನೆಯಲ್ಲಿ ಧನದ ವೃದ್ಧಿಯಾಗುವುದಿಲ್ಲ.

12074011a ಏತೌ ಹಿ ನಿತ್ಯಸಂಯುಕ್ತಾವಿತರೇತರಧಾರಣೇ|
12074011c ಕ್ಷತ್ರಂ ಹಿ ಬ್ರಹ್ಮಣೋ ಯೋನಿರ್ಯೋನಿಃ ಕ್ಷತ್ರಸ್ಯ ಚ ದ್ವಿಜಾಃ||

ಹೀಗೆ ನಿತ್ಯವೂ ಬ್ರಾಹ್ಮಣ-ಕ್ಷತ್ರಿಯರು ಸಮ್ಮಿಳಿತರಾಗಿಯೇ ಇರಬೇಕು. ಹಾಗಿದ್ದಾಗಲೇ ಅವರು ಪರಸ್ಪರರನ್ನು ರಕ್ಷಿಸಲು ಸಾಧ್ಯವಾಗುತ್ತದೆ. ಕ್ಷತ್ರಿಯನ ಅಭಿವೃದ್ಧಿಗೆ ಬ್ರಾಹ್ಮಣನು ಕಾರಣನು ಮತ್ತು ಬ್ರಾಹ್ಮಣನ ಅಭಿವೃದ್ಧಿಗೆ ಕ್ಷತ್ರಿಯನು ಕಾರಣನು.

12074012a ಉಭಾವೇತೌ ನಿತ್ಯಮಭಿಪ್ರಪನ್ನೌ
ಸಂಪ್ರಾಪತುರ್ಮಹತೀಂ ಶ್ರೀಪ್ರತಿಷ್ಠಾಮ್|
12074012c ತಯೋಃ ಸಂಧಿರ್ಭಿದ್ಯತೇ ಚೇತ್ಪುರಾಣಸ್
ತತಃ ಸರ್ವಂ ಭವತಿ ಹಿ ಸಂಪ್ರಮೂಢಮ್||

ಈ ಎರಡು ವರ್ಣದವರೂ ಯಾವಾಗಲೂ ಒಬ್ಬರು ಮತ್ತೊಬ್ಬರು ಆಶ್ರಯಭೂತರಾಗಿದ್ದರೆ ಆಗ ಬ್ರಹ್ಮ-ಕ್ಷತ್ರರಿಬ್ಬರೂ ಸುಪ್ರತಿಷ್ಠರಾಗಿರುತ್ತಾರೆ. ಪ್ರಾಚೀನಕಾಲದಿಂದ ಬಂದಿರುವ ಬ್ರಹ್ಮ-ಕ್ಷತ್ರರ ಮೈತ್ರಿಯು ಒಡೆದುಹೋದರೆ ಇಬ್ಬರೂ ವಿನಾಶಹೊಂದುವುದು ಮಾತ್ರವಲ್ಲ ಪ್ರಪಂಚವೇ ಮೋಹವಶವಾಗುತ್ತದೆ.

---

205 ಯೋ ಬ್ರಾಹ್ಮಣಾನ್ ಕ್ಷತ್ರಿಯಾಃ ಸಂತ್ಯಜತಿ|| ಎಂಬ ಪಾಠಾಂತರವಿದೆ.

12074013a ನಾತ್ರ ಪ್ಲವಂ ಲಭತೇ ಪಾರಗಾಮೀ
ಮಹಾಗಾಧೇ ನೌರಿವ ಸಂಪ್ರಣುನ್ನಾ|
12074013c ಚಾತುರ್ವರ್ಣ್ಯಂ ಭವತಿ ಚ ಸಂಪ್ರಮೂಢಂ
ತತಃ ಪ್ರಜಾಃ ಕ್ಷಯಸಂಸ್ಥಾ ಭವಂತಿ||

ಮಹಾಸಾಗರದ ಮಧ್ಯೆ ಹಡಗು ಮುರಿದುಹೋದಾಗ
ಪಾರಾಗುವವನಿಗೆ ಬೇರೆ ದೋಣಿಯು ದೊರೆಯದಂತೆ ನಾಲ್ಕು
ವರ್ಣದವರೂ ಸಮ್ಮೂಢರಾಗಿ ಪ್ರಜೆಗಳ ನಾಶವಾಗುತ್ತದೆ.

12074014a ಬ್ರಹ್ಮವೃಕ್ಷೋ ರಕ್ಷ್ಯಮಾಣೋ ಮಧು ಹೇಮ ಚ ವರ್ಷತಿ|
12074014c ಅರಕ್ಷ್ಯಮಾಣಃ ಸತತಮಶ್ರು ಪಾಪಂ ಚ ವರ್ಷತಿ||

ಬ್ರಹ್ಮವೃಕ್ಷವನ್ನು ರಕ್ಷಿಸಿದರೆ ಜೇನು ಮತ್ತು ಚಿನ್ನಗಳ ಮಳೆಯಾಗುತ್ತದೆ.
ಅದನ್ನು ರಕ್ಷಿಸದೇ ಇದ್ದರೆ ಸತತವೂ ಕಣ್ಣೀರು ಮತ್ತು ಪಾಪಗಳ
ಮಳೆಯಾಗುತ್ತದೆ.

12074015a ಅಬ್ರಹ್ಮಚಾರೀ ಚರಣಾದಪೇತೋ
ಯದಾ ಬ್ರಹ್ಮಾ ಬ್ರಹ್ಮಣಿ ತ್ರಾಣಮಿಚ್ಛೇತ್|
12074015c ಆಶ್ಚರ್ಯಶೋ ವರ್ಷತಿ ತತ್ರ ದೇವಸ್
ತತ್ರಾಭೀಕ್ಷ್ಣಂ ದುಃಸಹಾಶ್ಚಾವಿಶಂತಿ||

ಬ್ರಾಹ್ಮಣ ಬ್ರಹ್ಮಚಾರಿಯು ದಸ್ಯುಗಳಿಂದ ತಡೆಯಲ್ಪಟ್ಟು ಬ್ರಾಹ್ಮಣರು
ಬ್ರಹ್ಮನನ್ನು ಮೊರೆಹೊಗಬೇಕಾದ ಸನ್ನಿವೇಶವು ಬಂದಾಗ ಅಲ್ಲಿ
ದೇವನು ಮಳೆಸುರಿಸುತ್ತಾನಾದರೆ ಅದು ಆಶ್ಚರ್ಯವೇ ಸರಿ. ಅಲ್ಲಿ
ಸಹಿಸಲಸಾಧ್ಯ ದುರ್ಭಿಕ್ಷವಾಗುತ್ತದೆ.

12074016a ಸ್ತ್ರಿಯಂ ಹತ್ವಾ ಬ್ರಾಹ್ಮಣಂ ವಾಪಿ ಪಾಪಃ

ಸಭಾಯಾಂ ಯತ್ರ ಲಭತೇಽನುವಾದಮ್|
12074016c ರಾಜ್ಞಃ ಸಕಾಶೇ ನ ಬಿಭೇತಿ ಚಾಪಿ
ತತೋ ಭಯಂ ಜಾಯತೇ ಕ್ಷತ್ರಿಯಸ್ಯ||

ಸ್ತ್ರೀಯನ್ನು ಮತ್ತು ಬ್ರಾಹ್ಮಣನನ್ನು ಕೊಂದ ಪಾಪಿಯು ಸಭೆಗಳಲ್ಲಿ ಪ್ರಶಂಸಿಸಲ್ಪಡುವ ಮತ್ತು ರಾಜನ ಬಳಿಯಲ್ಲಿಯೇ ಇದ್ದರೂ ಅಂಥವನಿಗೆ ಭಯವಿಲ್ಲದರುವ ಕಾಲವು ಬಂದಾಗ ಕ್ಷತ್ರಿಯನಿಗೆ ಮಹಾ ಆಪತ್ತು ಕಾದಿರುವುದೆಂದು ಹೇಳಬಹುದು.

12074017a ಪಾಪೈಃ ಪಾಪೇ ಕ್ರಿಯಮಾಣೇಽತಿವೇಲಂ
ತತೋ ರುದ್ರೋ ಜಾಯತೇ ದೇವ ಏಷಃ|
12074017c ಪಾಪೈಃ ಪಾಪಾಃ ಸಂಜನಯಂತಿ ರುದ್ರಂ
ತತಃ ಸರ್ವಾನ್ಸಾಧ್ವಸಾಧೂನ್ ಹಿನಸ್ತಿ||

ಪಾಪಿಗಳಿಂದ ಪಾಪಕಾರ್ಯಗಳು ಅವ್ಯಾಹತವಾಗಿ ನಡೆಯುತ್ತಿರುವಾಗ ಅವರಿಂದಲೇ ರುದ್ರದೇವನು ಹುಟ್ಟುತ್ತಾನೆ. ಪಾಪಿಗಳು ತಮ್ಮ ಪಾಪಗಳಿಂದಲೇ ರುದ್ರನನ್ನು ಹುಟ್ಟಿಸುತ್ತಾರೆ. ಆಗ ಸಾಧು-ಅಸಾಧು ಎಲ್ಲವೂ ನಾಶವಾಗುತ್ತವೆ.”

12074018 ಐಲ ಉವಾಚ|
12074018a ಕುತೋ ರುದ್ರಃ ಕೀದೃಶೋ ವಾಪಿ ರುದ್ರಃ
ಸತ್ತ್ವೈಃ ಸತ್ತ್ವಂ ದೃಶ್ಯತೇ ವಧ್ಯಮಾನಮ್|
12074018c ಏತದ್ವಿದ್ವನ್ಕಶ್ಯಪ ಮೇ ಪ್ರಚಕ್ಷ್ವ
ಯತೋ ರುದ್ರೋ ಜಾಯತೇ ದೇವ ಏಷಃ||

ಐಲನು ಹೇಳಿದನು: “ಕಶ್ಯಪ! ರುದ್ರನು ಎಲ್ಲಿಂದ ಬರುತ್ತಾನೆ? ಅವನು

ಎಂಥವನು? ಅಲ್ಲಿ ಸತ್ತ್ವಗಳನ್ನು ಸತ್ತ್ವಗಳೇ ವಧಿಸುವುದು ಕಂಡುಬರುತ್ತದೆ. ಈ ರುದ್ರದೇವನು ಎಲ್ಲಿಂದ ಹುಟ್ಟಿದನು? ಈ ನನ್ನ ಪ್ರಶ್ನೆಗಳಿಗೆ ಉತ್ತರಿಸು.”

12074019 ಕಶ್ಯಪ ಉವಾಚ|

12074019a ಆತ್ಮಾ ರುದ್ರೋ ಹೃದಯೇ ಮಾನವಾನಾಂ
ಸ್ವಂ ಸ್ವಂ ದೇಹಂ ಪರದೇಹಂ ಚ ಹಂತಿ|
12074019c ವಾತೋತ್ಪಾತ್ಯೈಃ ಸದೃಶಂ ರುದ್ರಮಾಹುರ್
ದಾವ್ಯೈರ್ಜೀಮೂತ್ಯೈಃ ಸದೃಶಂ ರೂಪಮಸ್ಯ||

ಕಶ್ಯಪನು ಹೇಳಿದನು: “ಮಾನವರ ಹೃದಯದಲ್ಲಿರುವ ಆತ್ಮನೇ ರುದ್ರನು. ತನ್ನ ದೇಹವನ್ನು ತಾನೇ ಮತ್ತು ಪರದೇಹಗಳನ್ನೂ ತಾನೇ ಕೊಲ್ಲುತ್ತಾನೆ. ರುದ್ರನು ಚಂಡಮಾರುತ ಮತ್ತು ಉತ್ಪಾತಗಳಿಗೆ ಸಮನೆಂದು ಹೇಳುತ್ತಾರೆ. ಅವನಿಗೆ ಮೇಘಗಳ ರೂಪವಿದೆಯೆಂದೂ ಹೇಳುತ್ತಾರೆ.”

12074020 ಐಲ ಉವಾಚ|

12074020a ನ ವೈ ವಾತಂ ಪರಿವೃನೋತಿ ಕಶ್ಚಿನ್
ನ ಜೀಮೂತೋ ವರ್ಷತಿ ನೈವ ದಾವಃ|
12074020c ತಥಾಯುಕ್ತೋ ದೃಶ್ಯತೇ ಮಾನವೇಷು
ಕಾಮದ್ವೇಷಾದ್ಬಧ್ಯತೇ ಮುಚ್ಯತೇ ಚ||

ಐಲನು ಹೇಳಿದನು: “ಗಾಳಿಯು ಯಾರನ್ನೂ ಸುತ್ತಗಟ್ಟುವುದಿಲ್ಲ. ಮೇಘದೇವತೆಗಳು ಮಳೆಸುರಿಸುವುದಿಲ್ಲ. ಹಾಗೆಯೇ ಕಾಮ-ದ್ವೇಷಗಳು ಮಾನವನನ್ನು ಬಂಧಿಸುತ್ತವೆ ಮತ್ತು ಬಿಡುಗಡೆಮಾಡಿಸುತ್ತವೆ ಕೂಡ

ಎಂದಾಯಿತು.”

12074021 ಕಶ್ಯಪ ಉವಾಚ|

12074021a ಯಥೈಕಗೇಹೇ ಜಾತವೇದಾಃ ಪ್ರದೀಪ್ತಃ
ಕೃತ್ಸ್ನಂ ಗ್ರಾಮಂ ಪ್ರದಹೇತ್ಸ ತ್ವರಾವಾನ್|
12074021c ವಿಮೋಹನಂ ಕುರುತೇ ದೇವ ಏಷ
ತತಃ ಸರ್ವಂ ಸ್ಪೃಶ್ಯತೇ ಪುಣ್ಯಪಾಪೈಃ||

ಕಶ್ಯಪನು ಹೇಳಿದನು: “ಒಂದೇ ಮನೆಯಲ್ಲಿ ಹುಟ್ಟಿದ ಅಗ್ನಿಯು ಉರಿದು ಬೇಗನೇ ಇಡೀ ಗ್ರಾಮವನ್ನೇ ಹೇಗೆ ಸುಟ್ಟುಬಿಡಬಲ್ಲದೋ ಹಾಗೆ ಈ ದೇವನು ವಿಮೋಹಗೊಳಿಸಿ ಎಲ್ಲವನ್ನೂ ಪಾಪ-ಪುಣ್ಯಗಳಿಂದ ಸ್ಪರ್ಶಿಸುತ್ತಾನೆ.”

12074022 ಐಲ ಉವಾಚ|

12074022a ಯದಿ ದಂಡಃ ಸ್ಪೃಶತೇ ಪುಣ್ಯಭಾಜಂ
ಪಾಪೈಃ ಪಾಪೇ ಕ್ರಿಯಮಾಣೇऽವಿಶೇಷಾತ್|
12074022c ಕಸ್ಯ ಹೇತೋಃ ಸುಕೃತಂ ನಾಮ ಕುರ್ಯಾದ್
ದುಷ್ಕೃತಂ ವಾ ಕಸ್ಯ ಹೇತೋರ್ನ ಕುರ್ಯಾತ್||

ಐಲನು ಹೇಳಿದನು: “ಪಾಪಿಗಳೇ ವಿಶೇಷವಾಗಿ ಪಾಪಗಳನ್ನೇ ಮಾಡಿದ್ದರೂ ಪುಣ್ಯಮಾಡಿದವನನ್ನೂ ದಂಡವು ಸ್ಪರ್ಶಿಸುತ್ತದೆ ಎಂದಾಯಿತು. ಹಾಗಿದ್ದರೆ ಯಾವ ಕಾರಣಕ್ಕಾಗಿ ಸುಕೃತ ಎನ್ನುವುದನ್ನು ಮಾಡಬೇಕು ಅಥವಾ ಯಾವ ಕಾರಣಕ್ಕಾಗಿ ದುಷ್ಕೃತ ಎನ್ನುವುದನ್ನು ಮಾಡಬಾರದು?”

12074023 ಕಶ್ಯಪ ಉವಾಚ|

12074023a ಅಸಂತ್ಯಾಗಾತ್ಪಾಪಕೃತಾಮಪಾಪಾಂಸ್
ತುಲ್ಯೋ ದಂಡಃ ಸ್ಪೃಶತೇ ಮಿಶ್ರಭಾವಾತ್|
12074023c ಶುಷ್ಕೇಣಾರ್ದ್ರಂ ದಹ್ಯತೇ ಮಿಶ್ರಭಾವಾನ್
ನ ಮಿಶ್ರಃ ಸ್ಯಾತ್ಪಾಪಕೃದ್ಭಿಃ ಕಥಂ ಚಿತ್‌‌||

ಕಶ್ಯಪನು ಹೇಳಿದನು: "ಕಟ್ಟಿಗೆಯು ಹಸಿಯಾಗಿದ್ದರೂ ಅದಕ್ಕೆ ಒಣಗಿದ ಕಟ್ಟಿಗೆಯ ಮಿಶ್ರಭಾವವಿರುವುದರಿಂದ ಸುಟ್ಟು ಹೋಗುತ್ತದೆ. ಹಾಗೆಯೇ ದಂಡವು ಪಾಪಿಗಳ ಸಂಸರ್ಗವನ್ನು ಬಿಡದೇ ಇರುವುದರಿಂದ ಪಾಪರಹಿತ ಧರ್ಮಾತ್ಮರನ್ನೂ ಅವರ ಮಿಶ್ರಭಾವದಿಂದಾಗಿ ಸ್ಪರ್ಶಿಸುತ್ತದೆ. ಆದುದರಿಂದ ಸಂತರು ಪಾಪಿಗಳೊಡನೆ ಸೇರಿಕೊಳ್ಳಬಾರದು."

12074024 ಐಲ ಉವಾಚ|

12074024a ಸಾಧ್ವಸಾಧೂನ್ಧಾರಯತೀಹ ಭೂಮಿಃ
ಸಾಧ್ವಸಾಧೂಂಸ್ತಾಪಯತೀಹ ಸೂರ್ಯಃ|
12074024c ಸಾಧ್ವಸಾಧೂನ್ವಾತಯತೀಹ ವಾಯುರ್
ಆಪಸ್ತಥಾ ಸಾಧ್ವಸಾಧೂನ್ವಹಂತಿ‌‌||

ಐಲನು ಹೇಳಿದನು: "ಈ ಭೂಮಿಯು ಸಾಧು-ಅಸಾಧು ಇಬ್ಬರನ್ನೂ ಹೊತ್ತೊಕೊಂಡಿದೆ. ಸೂರ್ಯನು ಸಾಧು-ಅಸಾಧು ಇಬ್ಬರನ್ನೂ ಒಂದೇ ತೆರನಾಗಿ ಸುಡುತ್ತಾನೆ. ವಾಯುವು ಸಾಧು-ಅಸಾಧು ಇಬ್ಬರಿಗೂ ಒಂದೇ ತೆರನಾಗಿ ಬೀಸುತ್ತಾನೆ. ಹಾಗೆಯೇ ನೀರೂ ಕೂಡ ಸಾಧು-ಅಸಾಧು ಇಬ್ಬರನ್ನೂ ತೋಯಿಸುತ್ತದೆ."

12074025 ಕಶ್ಯಪ ಉವಾಚ|

12074025a ಏವಮಸ್ಮಿನ್ವರ್ತತೇ ಲೋಕ ಏವ
ನಾಮುತ್ರೈವಂ ವರ್ತತೇ ರಾಜಪುತ್ರ|
12074025c ಪ್ರೇತ್ಯೈತಯೋರಂತರವಾನ್ವಿಶೇಷೋ
ಯೋ ವೈ ಪುಣ್ಯಂ ಚರತೇ ಯಶ್ಚ ಪಾಪಮ್||

ಕಶ್ಯಪನು ಹೇಳಿದನು: "ರಾಜಪುತ್ರ! ಹೀಗೆ ನಡೆಯುವುದು ಈ ಲೋಕದಲ್ಲಿ ಮಾತ್ರ. ಪರಲೋಕದಲ್ಲಿ ಹೀಗೆ ನಡೆಯುವುದಿಲ್ಲ. ಪುಣ್ಯ ಮತ್ತು ಪಾಪಗಳನ್ನು ಮಾಡಿದವರು ಈ ಲೋಕದಲ್ಲಿ ಸಮಾನ ಫಲಗಳನ್ನು ಅನುಭವಿಸಿದರೂ ಅವರಿಬ್ಬರೂ ಮೃತ್ಯುವಿನ ನಂತರ ಪರಲೋಕಕ್ಕ ಹೋದನಂತರ ಅಲ್ಲಿ ಅವರ ನಡುವೆ ಅಪಾರ ಅಂತರವಿರುತ್ತದೆ. ಪರಲೋಕದಲ್ಲಿ ಅವರ ಫಲಗಳು ಒಂದೇ ತೆರನಾಗಿ ಇರುವುದಿಲ್ಲ.

12074026a ಪುಣ್ಯಸ್ಯ ಲೋಕೋ ಮಧುಮಾನ್ ಘೃತಾರ್ಚಿರ್
ಹಿರಣ್ಯಜ್ಯೋತಿರಮೃತಸ್ಯ ನಾಭಿಃ|
12074026c ತತ್ರ ಪ್ರೇತ್ಯ ಮೋದತೇ ಬ್ರಹ್ಮಚಾರೀ
ನ ತತ್ರ ಮೃತ್ಯುರ್ನ ಜರಾ ನೋತ ದುಃಖಮ್||

ಪುಣ್ಯಮಾಡಿದವನ ಲೋಕವು ಮಧುರತಮ ಸುಖಗಳಿಂದ ತುಂಬಿರುತ್ತದೆ. ಅಲ್ಲಿ ಬ್ರಹ್ಮಾನಂದರೂಪದ ತುಪ್ಪದ ದೀಪವು ಬೆಳಗುತ್ತಿರುತ್ತದೆ. ಸುವರ್ಣಪ್ರಭೆಗೆ ಸಮಾನ ಬ್ರಹ್ಮಜ್ಞಾನದ ಪ್ರಭೆಯು ಆ ದೀಪದಿಂದ ಹೊರಸೂಸುತ್ತಿರುತ್ತದೆ. ಆ ಲೋಕವು ಅಮೃತಕ್ಕೆ ಕೇಂದ್ರವಾಗಿರುತ್ತದೆ. ಬ್ರಹ್ಮನಿಷ್ಠ ಬ್ರಹ್ಮಚಾರಿಯು ಆ ಲೋಕದಲ್ಲಿ ಆನಂದಿಸುತ್ತಾನೆ. ಅಲ್ಲಿ ಮೃತ್ಯುವಾಗಲೀ, ಮುಪ್ಪಾಗಲೀ, ದುಃಖವಾಗಲೀ ಇರುವುದಿಲ್ಲ.

12074027a ಪಾಪಸ್ಯ ಲೋಕೋ ನಿರಯೋಽಪ್ರಕಾಶೋ
ನಿತ್ಯಂ ದುಃಖಃ ಶೋಕಭೂಯಿಷ್ಠ ಏವ|
12074027c ತತ್ರಾತ್ಮಾನಂ ಶೋಚತೇ ಪಾಪಕರ್ಮಾ
ಬಹ್ವೀಃ ಸಮಾಃ ಪ್ರಪತನ್ನಪ್ರತಿಷ್ಠಃ||

ಪಾಪಿಯ ಲೋಕವು ನರಕ. ಯಾವಾಗಲೂ ಅಂಧಕಾರವು
ಕವಿದಿರುತ್ತದೆ. ನಿತ್ಯ ದುಃಖವಿರುತ್ತದೆ. ಶೋಕದಿಂದಲೇ
ತುಂಬಿಹೋಗಿರುತ್ತದೆ. ಅಲ್ಲಿ ಪಾಪಕರ್ಮಿಯು ಅನೇಕ ವರ್ಷಗಳ
ಪರ್ಯಂತ ಆ ನರಕದಲ್ಲಿ ಬಿದ್ದು ನಿಂತಲ್ಲಿ ನಿಲ್ಲದೇ ತನ್ನ ಆತ್ಮನನ್ನು
ದುಃಖಿಕ್ಕೀಡುಮಾಡಿಕೊಳ್ಳುತ್ತಾನೆ.

12074028a ಮಿಥೋ ಭೇದಾದ್ಬ್ರಾಹ್ಮಣಕ್ಷತ್ರಿಯಾಣಾಂ
ಪ್ರಜಾ ದುಃಖಂ ದುಃಸಹಂ ಚಾವಿಶಂತಿ|
12074028c ಏವಂ ಜ್ಞಾತ್ವಾ ಕಾರ್ಯ ಏವೇಹ ವಿದ್ವಾನ್
ಪುರೋಹಿತೋ ನೈಕವಿದ್ಯೋ ನೃಪೇಣ||

ಬ್ರಾಹ್ಮಣ-ಕ್ಷತ್ರಿಯರಲ್ಲಿ ಪರಸ್ಪರ ಭೇದವುಂಟಾಗುವುದರಿಂದ ಪ್ರಜೆಗಳು
ದುಃಸ್ಸಹ ದುಃಖಕ್ಕೆ ಈಡಾಗುತ್ತಾರೆ. ಇವೆಲ್ಲವನ್ನೂ
ಅರ್ಥಮಾಡಿಕೊಂಡು ರಾಜನಾದವನು ಸರ್ವಕಾಲಕ್ಕೂ ಬಹುಶ್ರುತ
ಬ್ರಾಹ್ಮಣನನ್ನು ಪುರೋಹಿತನನ್ನಾಗಿ ಮಾಡಿಕೊಳ್ಳಬೇಕು.

12074029a ತಂ ಚೈವಾನ್ವಭಿಷಿಚ್ಯೇತ ತಥಾ ಧರ್ಮೋ ವಿಧೀಯತೇ|
12074029c ಅಗ್ರ್ಯೋ ಹಿ ಬ್ರಾಹ್ಮಣಃ ಪ್ರೋಕ್ತಃ ಸರ್ವಸ್ಯೈವೇಹ ಧರ್ಮತಃ||

ರಾಜನು ಮೊದಲು ಪುರೋಹಿತನನ್ನು ಮಾಡಿಕೊಳ್ಳಬೇಕು. ಬಳಿಕ
ಅವನಿಂದ ತಾನು ಪಟ್ಟಾಭಿಷಿಕ್ತನಾಗಬೇಕು. ಧರ್ಮದ ವಿಧಿಯೇ

ಹೀಗಿದೆ. ಧರ್ಮಾನುಸಾರವಾಗಿ ಬ್ರಾಹ್ಮಣನೇ ಎಲ್ಲರಿಗಿಂತ ಹಿರಿಯವನು.

12074030a ಪೂರ್ವಂ ಹಿ ಬ್ರಾಹ್ಮಣಾಃ ಸೃಷ್ಟಾ ಇತಿ ಧರ್ಮವಿದೋ ವಿದುಃ|
12074030c ಜ್ಯೇಷ್ಠೇನಾಭಿಜನೇನಾಸ್ಯ ಪ್ರಾಪ್ತಂ ಸರ್ವಂ ಯದುತ್ತರಮ್||

ಬ್ರಾಹ್ಮಣರ ಸೃಷ್ಟಿಯು ಮೊದಲಾಯಿತೆಂದು ಧರ್ಮವಿದುಗಳು ತಿಳಿದುಕೊಂಡಿದ್ದಾರೆ. ಜ್ಯೇಷ್ಠನಾದುದರಿಂದ ಮತ್ತು ಬ್ರಹ್ಮನ ಮುಖದಿಂದ ಹುಟ್ಟಿದುದರಿಂದ ಬ್ರಾಹ್ಮಣನಿಗೆ ಎಲ್ಲವುಗಳ ಮೇಲೂ ಮೊದಲ ಅಧಿಕಾರವಿದೆ.

12074031a ತಸ್ಮಾನ್ಮಾನ್ಯಶ್ಚ ಪೂಜ್ಯಶ್ಚ ಬ್ರಾಹ್ಮಣಃ ಪ್ರಸೃತಾಗ್ರಭುಕ್|
12074031c ಸರ್ವಂ ಶ್ರೇಷ್ಠಂ ವರಿಷ್ಠಂ ಚ ನಿವೇದ್ಯಂ ತಸ್ಯ ಧರ್ಮತಃ||

ಆದುದರಿಂದ ಬ್ರಾಹ್ಮಣರು ಎಲ್ಲರಿಗಿಂತ ಮೊದಲು ಊಟಮಾಡಬಹುದೆಂದೂ ಪೂಜ್ಯರೆಂದೂ ಸನ್ಮಾನ್ಯರೆಂದೂ ತಿಳಿಯುತ್ತಾರೆ. ಧರ್ಮತಃ ಎಲ್ಲ ಶ್ರೇಷ್ಠ ವರಿಷ್ಠ ವಸ್ತುಗಳನ್ನು ಬ್ರಾಹ್ಮಣನಿಗೇ ಒಪ್ಪಿಸಬೇಕು.

12074032a ಅವಶ್ಯಮೇತತ್ಕರ್ತವ್ಯಂ ರಾಜ್ಞಾ ಬಲವತಾಪಿ ಹಿ|
12074032c ಬ್ರಹ್ಮ ವರ್ಧಯತಿ ಕ್ಷತ್ರಂ ಕ್ಷತ್ರತೋ ಬ್ರಹ್ಮ ವರ್ಧತೇ||

ರಾಜನು ಬಲಶಾಲಿಯಾಗಿದ್ದರೂ ಇದನ್ನು ಮಾತ್ರ ಅವಶ್ಯ ಮಾಡಲೇ ಬೇಕು. ಬ್ರಹ್ಮವು ಕ್ಷತ್ರವನ್ನು ವರ್ಧಿಸುತ್ತದೆ. ಕ್ಷಾತ್ರತ್ವದಿಂದ ಬ್ರಹ್ಮವು ವೃದ್ಧಿಯಾಗುತ್ತದೆ.””

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ

ಐಲಕಶ್ಯಪಸಂವಾದೇ ಚತುಃಸಪ್ತತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಐಲಕಶ್ಯಪಸಂವಾದ ಎನ್ನುವ ಎಪ್ಪತ್ನಾಲ್ಕನೇ ಅಧ್ಯಾಯವು.

೭೫

ಮುಚುಕುಂದೋಪಾಖ್ಯಾನ

ಬ್ರಹ್ಮ-ಕ್ಷತ್ರರ ಸಂಬಂಧದ ಕುರಿತಾದ ಮುಚುಕುಂದೋಽಪಾಖ್ಯಾನ (1-22).

12075001 ಭೀಷ್ಮ ಉವಾಚ|
12075001a ಯೋಗಕ್ಷೇಮೋ ಹಿ ರಾಷ್ಟ್ರಸ್ಯ ರಾಜನ್ಯಾಯತ್ತ ಉಚ್ಯತೇ|
12075001c ಯೋಗಕ್ಷೇಮಶ್ಚ ರಾಜ್ಞೋಽಪಿ ಸಮಾಯತ್ತಃ ಪುರೋಹಿತೇ||

ಭೀಷ್ಮನು ಹೇಳಿದನು: "ರಾಷ್ಟ್ರದ ಯೋಗ-ಕ್ಷೇಮಗಳು ರಾಜನನ್ನು ಅವಲಂಬಿಸಿದೆ ಎಂದು ಹೇಳುತ್ತಾರೆ. ರಾಜನ ಯೋಗ-ಕ್ಷೇಮಗಳು ಪುರೋಹಿತನ ಮೇಲೆ ಅವಲಂಬಿಸಿದೆ.

12075002a ಯತಾದೃಷ್ಟಂ ಭಯಂ ಬ್ರಹ್ಮ ಪ್ರಜಾನಾಂ ಶಮಯತ್ಯುತ|
12075002c ದೃಷ್ಟಂ ಚ ರಾಜಾ ಬಾಹುಭ್ಯಾಂ ತದ್ರಾಷ್ಟ್ರಂ ಸುಖಮೇಧತೇ||

ಪ್ರಜೆಗಳ ಕಾಣದ ಭಯವನ್ನು ಬ್ರಾಹ್ಮಣನು ಶಾಂತಗೊಳಿಸಿದರೆ ಮತ್ತು ಕಾಣುವ ಭಯವನ್ನು ತನ್ನ ಬಾಹುಗಳಿಂದ ಶಾಂತಗೊಳಿಸಿದರೆ ಆ ರಾಷ್ಟ್ರವು ಸುಖವನ್ನು ಪಡೆಯುತ್ತದೆ.

12075003a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|

12075003c ಮುಚುಕುಂದಸ್ಯ ಸಂವಾದಂ ರಾಜ್ಞೋ ವೈಶ್ರವಣಸ್ಯ ಚ||

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ರಾಜಾ
ಮುಚುಕುಂದ ಮತ್ತು ವೈಶ್ರವಣರ ಸಂವಾದವನ್ನು ಉದಾಹರಿಸುತ್ತಾರೆ.

12075004a ಮುಚುಕುಂದೋ ವಿಜಿತ್ಯೇಮಾಂ ಪೃಥಿವೀಂ ಪೃಥಿವೀಪತಿಃ|
12075004c ಜಿಜ್ಞಾಸಮಾನಃ ಸ್ವಬಲಮಭ್ಯಯಾದಲಕಾಧಿಪಮ್||

ಪೃಥಿವೀಪತಿ ಮುಚುಕುಂದನು ಈ ಪೃಥ್ವಿಯನ್ನು ಗೆದ್ದು ತನ್ನ
ಸೇನಾಬಲದ ಕುರಿತು ಜಿಜ್ಞಾಸೆ ಮಾಡುತ್ತಾ ಅಲಕಾಧಿಪ ಕುಬೇರನ ಬಳಿ
ಹೋದನು.

12075005a ತತೋ ವೈಶ್ರವಣೋ ರಾಜಾ ರಕ್ಷಾಂಸಿ ಸಮವಾಸೃಜತ್|
12075005c ತೇ ಬಲಾನ್ಯವಮೃದ್ನಂತಃ ಪ್ರಾಚರಂಸ್ತಸ್ಯ ನೈರೃತಾಃ||

ಆಗ ರಾಜಾ ವೈಶ್ರವಣನು ರಾಕ್ಷಸರನ್ನು ಸೃಷ್ಟಿಸಿದನು. ಆ ನೈರೃತರು
ಮುಚುಕುಂದನ ಸೇನೆಯನ್ನು ಕ್ಷಣಮಾತ್ರದಲ್ಲಿ ಸದೆಬಡಿದರು.

12075006a ಸ ಹನ್ಯಮಾನೇ ಸೈನ್ಯೇ ಸ್ವೇ ಮುಚುಕುಂದೋ ನರಾಧಿಪಃ|
12075006c ಗರ್ಹಯಾಮಾಸ ವಿದ್ವಾಂಸಂ ಪುರೋಹಿತಮರಿಂದಮಃ||

ತನ್ನ ಸೇನೆಯು ನಾಶವಾಗುತ್ತಿರಲು ನರಾಧಿಪ ಅರಿಂದಮ
ಮುಚುಕುಂದನು ತನ್ನ ಪುರೋಹಿತ ವಿದ್ವಾಂಸನನ್ನು
ನಿಂದಿಸತೊಡಗಿದನು.

12075007a ತತ ಉಗ್ರಂ ತಪಸ್ತಪ್ತ್ವಾ ವಸಿಷ್ಠೋ ಬ್ರಹ್ಮವಿತ್ತಮಃ|
12075007c ರಕ್ಷಾಂಸ್ಯಪಾವಧೀತ್ತತ್ರ ಪಂಥಾನಂ ಚಾಪ್ಯವಿಂದತ||

ಆಗ ಬ್ರಹ್ಮವಿತ್ತಮ ವಸಿಷ್ಠನು ಉಗ್ರ ತಪಸ್ಸನ್ನು ತಪಿಸಿ

ರಾಕ್ಷಸಸೇನೆಯನ್ನು ಧ್ವಂಸಮಾಡಿ ಮುಚುಕುಂದನ ವಿಜಯಕ್ಕೆ
ಅವಕಾಶಮಾಡಿಕೊಟ್ಟರು.

12075008a ತತೋ ವೈಶ್ರವಣೋ ರಾಜಾ ಮುಚುಕುಂದಮದರ್ಶಯತ್|
12075008c ವಧ್ಯಮಾನೇಷು ಸೈನ್ಯೇಷು ವಚನಂ ಚೇದಮಬ್ರವೀತ್||

ಆಗ ರಾಜಾ ವೈಶ್ರವಣನು ಮುಚುಕುಂದನನ್ನು ಕಂಡನು. ತನ್ನ
ಸೇನೆಗಳು ವಧಿಸಲ್ಪಡುತ್ತಿರಲು ಈ ಮಾತನ್ನಾಡಿದನುಃ

12075009a ತ್ವತ್ತೋ ಹಿ ಬಲಿನಃ ಪೂರ್ವೇ ರಾಜಾನಃ ಸಪುರೋಹಿತಾಃ|
12075009c ನ ಚೈವಂ ಸಮವರ್ತಂಸ್ತೇ ಯಥಾ ತ್ವಮಿಹ ವರ್ತಸೇ||

“ಈ ಹಿಂದೆಯೂ ಅನೇಕ ಬಲಶಾಲೀ ರಾಜರು ತಮ್ಮ
ಪುರೋಹಿತರೊಂದಿಗೆ ಇಲ್ಲಿಗೆ ಬಂದಿದ್ದರು. ಆದರೆ ನೀನು ಈಗ
ವರ್ತಿಸಿದ ರೀತಿಯಲ್ಲಿ ವರ್ತಿಸಲಿಲ್ಲ.

12075010a ತೇ ಖಿಲ್ವಪಿ ಕೃತಾಸ್ತ್ರಾಶ್ಚ ಬಲವಂತಶ್ಚ ಭೂಮಿಪಾಃ|
12075010c ಆಗಮ್ಯ ಪರ್ಯುಪಾಸಂತೇ ಮಾಮೀಶಂ ಸುಖದುಃಖಯೋಃ||

ಆ ಭೂಮಿಪರು ಕೃತಾಸ್ತ್ರರೂ ಬಲವಂತರಾಗಿದ್ದರೂ ಇಲ್ಲಿಗೆ ಬಂದು
ನನ್ನನ್ನು ಸುಖದುಃಖಗಳ ಈಶನೆಂದು ಆರಾಧಿಸುತ್ತಿದ್ದರು.

12075011a ಯದ್ಯಸ್ತಿ ಬಾಹುವೀರ್ಯಂ ತೇ ತದ್ದರ್ಶಯಿತುಮರ್ಹಸಿ|
12075011c ಕಿಂ ಬ್ರಾಹ್ಮಣಬಲೇನ ತ್ವಮತಿಮಾತ್ರಂ ಪ್ರವರ್ತಸೇ||

ಒಂದು ವೇಳೆ ನೀನು ನಿನ್ನ ಬಾಹುಬಲವನ್ನು ನನಗೆ ಪ್ರದರ್ಶಿಸಲು
ಬಯಸುವೆಯಾದರೆ ಬ್ರಾಹ್ಮಣಬಲದಲ್ಲಿ ನೀನು ನನಗಿಂತ
ಹೆಚ್ಚಿನವನೆಂದು ಎಂದು ಏಕೆ ನಡೆದುಕೊಳ್ಳುತ್ತಿರುವೆ?”

12075012a ಮುಚುಕುಂದಸ್ತತಃ ಕ್ರುದ್ಧಃ ಪ್ರತ್ಯುವಾಚ ಧನೇಶ್ವರಮ್|
12075012c ನ್ಯಾಯಪೂರ್ವಮಸಂರಬ್ಧಮಸಂಭ್ರಾಂತಮಿದಂ ವಚಃ||

ಆಗ ಕ್ರುದ್ಧ ಮುಚುಕುಂದನು ಧನೇಶ್ವರನಿಗೆ ನ್ಯಾಯಪೂರ್ವಕವೂ,
ಕ್ರೋಧರಹಿತವೂ, ಮತ್ತು ಗಾಭರಿಗೊಳ್ಳದೇ ಈ ಮಾತನ್ನಾಡಿದನು:

12075013a ಬ್ರಹ್ಮಕ್ಷತ್ರಮಿದಂ ಸೃಷ್ಟಮೇಕಯೋನಿ ಸ್ವಯಂಭುವಾ|
12075013c ಪೃಥಗ್ಬಲವಿಧಾನಂ ಚ[206] ತಲ್ಲೋಕಂ ಪರಿರಕ್ಷತಿ||

“ಬ್ರಾಹ್ಮಣ-ಕ್ಷತ್ರಿಯರ ಜನ್ಮಸ್ಥಾನವು ಸ್ವಯಂಭು ಬ್ರಹ್ಮನೊಬ್ಬನೇ. ಈ
ಎರಡೂ ಬಲಗಳು ಬೇರೆಬೇರೆಯಾದರೆ ಲೋಕಗಳನ್ನು ರಕ್ಷಿಸಲಾರವು.

12075014a ತಪೋಮಂತ್ರಬಲಂ ನಿತ್ಯಂ ಬ್ರಾಹ್ಮಣೇಷು ಪ್ರತಿಷ್ಠಿತಮ್|
12075014c ಅಸ್ತ್ರಬಾಹುಬಲಂ ನಿತ್ಯಂ ಕ್ಷತ್ರಿಯೇಷು ಪ್ರತಿಷ್ಠಿತಮ್||

ತಪೋಮಂತ್ರಬಲವು ನಿತ್ಯವೂ ಬ್ರಾಹ್ಮಣರಲ್ಲಿ ಇರುತ್ತದೆ.
ಅಸ್ತ್ರಬಾಹುಬಲವು ನಿತ್ಯವೂ ಕ್ಷತ್ರಿಯರಲ್ಲಿ ಇರುತ್ತದೆ.

12075015a ತಾಭ್ಯಾಂ ಸಂಭೂಯ ಕರ್ತವ್ಯಂ ಪ್ರಜಾನಾಂ ಪರಿಪಾಲನಮ್|
12075015c ತಥಾ ಚ ಮಾಂ ಪ್ರವರ್ತಂತಂ ಗರ್ಹಯಸ್ಯಲಕಾಧಿಪ||

ಅಲಕಾಧಿಪ! ಅವರಿಬ್ಬರೂ ಕೂಡಿಕೊಂಡೇ ಪ್ರಜೆಗಳ
ಪರಿಪಾಲನೆಯನ್ನು ಮಾಡಬೇಕು. ಅದರಂತೆಯೇ ನಡೆದುಕೊಳ್ಳುತ್ತಿರುವ
ನನ್ನನ್ನು ಏಕೆ ನಿಂದಿಸುತ್ತಿದ್ದೀಯೆ?”

12075016a ತತೋಽಬ್ರವೀದ್ವೈಶ್ರವಣೋ ರಾಜಾನಂ ಸಪುರೋಹಿತಮ್|

---

[206] ಪೃಥಗ್ಬಲವಿಧಾನಂ ತನ್ನ| ಎಂಬ ಪಾಠಾಂತರವಿದೆ.

12075016c ನಾಹಂ ರಾಜ್ಯಮನಿರ್ದಿಷ್ಟಂ ಕಸ್ಯೈ ಚಿದ್ವಿದಧಾಮ್ಯುತ||

ಬಳಿಕ ವೈಶ್ರವಣನು ಪುರೋಹಿತನೊಂದಿಗಿದ್ದ ರಾಜನಿಗೆ ಹೇಳಿದನು: "ನಾನು ಈ ರಾಜ್ಯವನ್ನು ಅನಿರ್ದಿಷ್ಟ ಯಾರಿಗಾದರೂ ಎಂದೂ ಕೊಡುವುದಿಲ್ಲ.

12075017a ನಾಚ್ಚಿಂದೇ ಚಾಪಿ ನಿರ್ದಿಷ್ಟಮಿತಿ ಜಾನೀಹಿ ಪಾರ್ಥಿವ|
12075017c ಪ್ರಶಾಧಿ ಪೃಥಿವೀಂ ವೀರ ಮದ್ದತ್ತಾಮಖಿಲಾಮಿಮಾಮ್||

ಪಾರ್ಥಿವ! ಆದರೂ ನಿನಗೆ ನಿರ್ದಿಷ್ಟವಾದ ಈ ಅಖಿಲ ಭೂಮಿಯನ್ನು ನಿನಗೆ ನೀಡುತ್ತಿದ್ದೇನೆ. ವೀರ! ಈ ಭೂಮಿಯನ್ನು ಆಳು."

12075018 ಮುಚುಕುಂದ ಉವಾಚ|
12075018a ನಾಹಂ ರಾಜ್ಯಂ ಭವದ್ದತ್ತಂ ಭೋಕ್ತುಮಿಚ್ಛಾಮಿ ಪಾರ್ಥಿವ|
12075018c ಬಾಹುವೀರ್ಯಾರ್ಜಿತಂ ರಾಜ್ಯಮಶ್ನೀಯಾಮಿತಿ ಕಾಮಯೇ||

ಮುಚುಕುಂದನು ಹೇಳಿದನು: "ಪಾರ್ಥಿವ! ನೀನು ದಾನ ಮಾಡಿದ ಭೂಮಿಯನ್ನು ಭೋಗಿಸಲು ಬಯಸುವುದಿಲ್ಲ. ಬಾಹುವೀರ್ಯದಿಂದಲೇ ಜಯಿಸಲ್ಪಟ್ಟ ರಾಜ್ಯವನ್ನು ಭೋಗಿಸಲು ಬಯಸುತ್ತೇನೆ.""

12075019 ಭೀಷ್ಮ ಉವಾಚ|
12075019a ತತೋ ವೈಶ್ರವಣೋ ರಾಜಾ ವಿಸ್ಮಯಂ ಪರಮಂ ಯಯೌ|
12075019c ಕ್ಷತ್ರಧರ್ಮೇ ಸ್ಥಿತಂ ದೃಷ್ಟ್ವಾ ಮುಚುಕುಂದಮಸಂಭ್ರಮಮ್||

ಭೀಷ್ಮನು ಹೇಳಿದನು: "ಆಗ ರಾಜಾ ವೈಶ್ರವಣನು ವ್ಯಾಕುಲವಿಲ್ಲದೇ ಕ್ಷತ್ರಧರ್ಮದಲ್ಲಿ ಸ್ಥಿತನಾಗಿದ್ದ ಮುಚುಕುಂದನನ್ನು ನೋಡಿ ಪರಮ ವಿಸ್ಮಿತನಾದನು.

12075020a ತತೋ ರಾಜಾ ಮುಚುಕುಂದಃ ಸೋಽನ್ವಶಾಸದ್ವಸುಂಧರಾಮ್।
12075020c ಬಾಹುವೀರ್ಯಾರ್ಜಿತಾಂ ಸಮ್ಯಕ್ಕ್ಷತ್ರಧರ್ಮಮನುವ್ರತಃ॥

ಬಳಿಕ ಉತ್ತಮ ಕ್ಷತ್ರಧರ್ಮದಲ್ಲಿ ನಿರತನಾಗಿದ್ದ ರಾಜಾ ಮುಚುಕುಂದನು ತನ್ನ ಬಾಹುವೀರ್ಯಗಳಿಂದ ಗೆದ್ದ ವಸುಂಧರೆಯನ್ನು ಆಳಿದನು.

12075021a ಏವಂ ಯೋ ಬ್ರಹ್ಮವಿದ್ರಾಜಾ ಬ್ರಹ್ಮಪೂರ್ವಂ ಪ್ರವರ್ತತೇ।
12075021c ಜಯತ್ಯವಿಜಿತಾಮುರ್ವೀಂ ಯಶಶ್ಚ ಮಹದಶ್ನುತೇ॥

ಹೀಗೆ ಮೊದಲು ಬ್ರಾಹ್ಮಣನ ಆಶ್ರಯವನ್ನು ಪಡೆದು ಅವನ ಸಹಾಯದಿಂದ ರಾಜಕಾರ್ಯದಲ್ಲಿ ಪ್ರವೃತ್ತನಾಗುವ ರಾಜನು ಹಿಂದೆ ಜಯಿಸಲಸಾಧ್ಯವಾಗಿದ್ದ ರಾಜ್ಯವನ್ನೂ ಜಯಿಸುತ್ತಾನೆ ಮತ್ತು ಮಹಾ ಯಶಸ್ಸನ್ನು ಪಡೆಯುತ್ತಾನೆ.

12075022a ನಿತ್ಯೋದಕೋ ಬ್ರಾಹ್ಮಣಃ ಸ್ಯಾನ್ನಿತ್ಯಶಸ್ತ್ರಶ್ಚ ಕ್ಷತ್ರಿಯಃ।
12075022c ತಯೋರ್ಹಿ ಸರ್ವಮಾಯತ್ತಂ ಯತ್ಕಿಂ ಚಿಜ್ಜಗತೀಗತಮ್॥

ಬ್ರಾಹ್ಮಣನು ನಿತ್ಯವೂ ಉದಕಪಾತ್ರೆಯನ್ನು ಧರಿಸಿರಬೇಕು. ಕ್ಷತ್ರಿಯನು ನಿತ್ಯವೂ ಶಸ್ತ್ರಧಾರಿಯಾಗಿರಬೇಕು. ಈ ಜಗತ್ತಿನಲ್ಲಿ ಏನೆಲ್ಲ ಇವೆಯೋ ಅವೆಲ್ಲವೂ ಅವರಿಬ್ಬರ ಅಧೀನದಲ್ಲಿಯೇ ಇರುತ್ತದೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ಮುಚುಕುಂದೋಪಾಖ್ಯಾನೇ ಪಂಚಸಪ್ತತಿತಮೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ಮುಚುಕುಂದೋಪಾಖ್ಯಾನ ಎನ್ನುವ ಎಪ್ಪತ್ತೈದನೇ ಅಧ್ಯಾಯವು.

೭೬

ರಾಜನ ಕರ್ತವ್ಯಗಳ ವರ್ಣನೆ; ಯುಧಿಷ್ಠಿರನು ರಾಜ್ಯದಿಂದ ಪುನಃ ವಿರಕ್ತನಾದುದು ಮತ್ತು ಭೀಷ್ಮನು ಅವನಿಗೆ ಪುನಃ ರಾಜದ ಮಹಿಮೆಯನ್ನು ಹೇಳಿದುದು (1-37).

12076001 ಯುಧಿಷ್ಠಿರ ಉವಾಚ|
12076001a ಯಯಾ ವೃತ್ತ್ಯಾ ಮಹೀಪಾಲೋ ವಿವರ್ಧಯತಿ ಮಾನವಾನ್|
12076001c ಪುಣ್ಯಾಂಶ್ಚ ಲೋಕಾಂಜಯತಿ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಮಹೀಪಾಲನು ಹೇಗೆ ನಡೆದುಕೊಂಡರೆ ಪ್ರಜೆಗಳ ವೃದ್ಧಿಯಾಗುತ್ತದೆ? ಮತ್ತು ಪುಣ್ಯ ಲೋಕಗಳನ್ನು ಜಯಿಸಬಲ್ಲ? ಇದನ್ನು ನನಗೆ ಹೇಳು."

12076002 ಭೀಷ್ಮ ಉವಾಚ|
12076002a ದಾನಶೀಲೋ ಭವೇದ್ರಾಜಾ ಯಜ್ಞಶೀಲಶ್ಚ ಭಾರತ|
12076002c ಉಪವಾಸತಪಃಶೀಲಃ ಪ್ರಜಾನಾಂ ಪಾಲನೇ ರತಃ||

ಭೀಷ್ಮನು ಹೇಳಿದನು: "ಭಾರತ! ರಾಜನಾದವನು ದಾನಶೀಲನೂ ಯಜ್ಞಶೀಲನೂ ಆಗಿರಬೇಕು. ಉಪವಾಸ ಮತ್ತು ತಪಃಶೀಲನಾಗಿ ಪ್ರಜೆಗಳ ಪಾಲನೆಯಲ್ಲಿಯೇ ನಿರತನಾಗಿರಬೇಕು.

12076003a ಸರ್ವಾಶ್ಚೈವ ಪ್ರಜಾ ನಿತ್ಯಂ ರಾಜಾ ಧರ್ಮೇಣ ಪಾಲಯೇತ್|
12076003c ಉತ್ಥಾನೇನಾಪ್ರಮಾದೇನ ಪೂಜಯೇಚ್ಚೈವ ಧಾರ್ಮಿಕಾನ್||

ಸರ್ವ ಪ್ರಜೆಗಳನ್ನು ರಾಜನು ನಿತ್ಯವೂ ಧರ್ಮದಿಂದ ಪಾಲಿಸಬೇಕು. ಧಾರ್ಮಿಕರನ್ನು ಅಪ್ರಮಾದದಿಂದ ಮೇಲೆದ್ದು ಪೂಜಿಸಬೇಕು.

12076004a ರಾಜ್ಞಾ ಹಿ ಪೂಜಿತೋ ಧರ್ಮಸ್ತತಃ ಸರ್ವತ್ರ ಪೂಜ್ಯತೇ।
12076004c ಯದ್ಯದಾಚರತೇ ರಾಜಾ ತತ್ಪ್ರಜಾನಾಂ ಹಿ ರೋಚತೇ॥

ರಾಜನಿಂದ ಪೂಜಿಸಲ್ಪಟ್ಟ ಧರ್ಮವು ಸರ್ವತ್ರ ಪೂಜಿಸಲ್ಪಡುತ್ತದೆ. ಆಗ ರಾಜನು ಆಚರಿಸಿದುದೆಲ್ಲವೂ ಪ್ರಜೆಗಳಿಗೆ ಹಿತವೆನಿಸುತ್ತವೆ.

12076005a ನಿತ್ಯಮುದ್ಯತದಂಡಶ್ಚ ಭವೇನ್ಮೃತ್ಯುರಿವಾರಿಷು।
12076005c ನಿಹನ್ಯಾತ್ಸರ್ವತೋ ದಸ್ಯೂನ್ನ ಕಾಮಾತ್ಕಸ್ಯ ಚಿತ್ ಕ್ಷಮೇತ್॥

ನಿತ್ಯವೂ ದಂಡವನ್ನು ಎತ್ತಿ ಹಿಡಿದು ಶತ್ರುಗಳಿಗೆ ಮೃತ್ಯುವಿನಂತಿರಬೇಕು. ಎಲ್ಲಕಡೆ ಎಲ್ಲ ದಸ್ಯುಗಳನ್ನೂ ಸಂಹರಿಸಬೇಕು. ಯಾರಿಗೂ ಕ್ಷಮೆಯನ್ನು ನೀಡಬಾರದು.

12076006a ಯಂ ಹಿ ಧರ್ಮಂ ಚರಂತೀಹ ಪ್ರಜಾ ರಾಜ್ಞಾ ಸುರಕ್ಷಿತಾಃ।
12076006c ಚತುರ್ಥಂ ತಸ್ಯ ಧರ್ಮಸ್ಯ ರಾಜಾ ಭಾರತ ವಿಂದತಿ॥

ಭಾರತ! ರಾಜನಿಂದ ಸುರಕ್ಷಿತರಾದ ಪ್ರಜೆಗಳು ಇಲ್ಲಿ ಯಾವ ಧರ್ಮಕರ್ಮಗಳನ್ನು ಮಾಡುತ್ತಾರೋ ಅದರ ನಾಲ್ಕನೆಯ ಒಂದು ಭಾಗವು ರಾಜನಿಗೆ ಸೇರುತ್ತದೆ.

12076007a ಯದಧೀತೇ ಯದ್ಯಜತೇ ಯದ್ದದಾತಿ ಯದರ್ಚತಿ।
12076007c ರಾಜಾ ಚತುರ್ಥಭಾಕ್ತಸ್ಯ ಪ್ರಜಾ ಧರ್ಮೇಣ ಪಾಲಯನ್॥

ಪ್ರಜೆಗಳನ್ನು ಧರ್ಮದಿಂದ ಪಾಲಿಸಿದ ರಾಜನಿಗೆ ಅವರು ಅಧ್ಯಯನ ಮಾಡುವುದರ, ಯಜ್ಞಗಳ, ದಾನಗಳ ಮತ್ತು ಪೂಜೆಗಳ ನಾಲ್ಕನೆಯ ಒಂದು ಭಾಗವು ದೊರೆಯುತ್ತದೆ.

12076008a ಯದ್ರಾಷ್ಟ್ರೇಽಕುಶಲಂ ಕಿಂ ಚಿದ್ರಾಜ್ಞೋಽರಕ್ಷಯತಃ ಪ್ರಜಾಃ।

12076008c ಚತುರ್ಥಂ ತಸ್ಯ ಪಾಪಸ್ಯ ರಾಜಾ ಭಾರತ ವಿಂದತಿ||

ಭಾರತ! ಯಾವ ರಾಷ್ಟ್ರದಲ್ಲಿ ರಾಜನು ಪ್ರಜೆಗಳನ್ನು ರಕ್ಷಿಸುವುದಿಲ್ಲವೋ ಮತ್ತು ಪ್ರಜೆಗಳು ಅಕುಶಲರಾಗಿರುವರೋ ಆ ರಾಷ್ಟ್ರದಲ್ಲಿ ಪ್ರಜೆಗಳು ಮಾಡುವ ಪಾಪಕರ್ಮಗಳ ಫಲಗಳ ನಾಲ್ಕನೆಯ ಒಂದು ಭಾಗವು ರಾಜನಿಗೂ ದೊರೆಯುತ್ತದೆ.

12076009a ಅಪ್ಯಾಹುಃ ಸರ್ವಮೇವೇತಿ ಭೂಯೋಽರ್ಧಮಿತಿ ನಿಶ್ಚಯಃ|
12076009c ಕರ್ಮಣಃ ಪೃಥಿವೀಪಾಲ ನೃಶಂಸೋಽನೃತವಾಗಪಿ|
12076009e ತಾದೃಶಾತ್ಕಿಲ್ಬಿಷಾದ್ರಾಜಾ ಶೃಣು ಯೇನ ಪ್ರಮುಚ್ಯತೇ||

ಕೆಲವರು ಪಾಪಗಳೆಲ್ಲವೂ ರಾಜನಿಗೇ ಸೇರುತ್ತವೆ ಎನ್ನುತ್ತಾರೆ. ಇನ್ನು ಕೆಲವರು ಅರ್ಧ ಪಾಪವೇ ರಾಜನಿಗೆ ಸೇರುತ್ತದೆ ಎನ್ನುತ್ತಾರೆ. ಪೃಥಿವೀಪಾಲನು ತನ್ನ ಕರ್ಮದಿಂದ ಕ್ರೂರಿಯೆಂದೂ ಮಿಥ್ಯಾವಾದಿಯೆಂದು ಕರೆಯಲ್ಪಡುತ್ತಾನೆ. ಅಂಥಹ ಪಾಪಗಳಿಂದ ರಾಜನು ಹೇಗೆ ಮುಕ್ತನಾಗಬಲ್ಲ ಎನ್ನುವುದನ್ನು ಕೇಳು.

12076010a ಪ್ರತ್ಯಾಹರ್ತುಮಶಕ್ಯಂ ಸ್ಯಾದ್ಧನಂ ಚೋರೈರ್ಹೃತಂ ಯದಿ|
12076010c ಸ್ವಕೋಶಾತ್ತತ್ಪ್ರದೇಯಂ ಸ್ಯಾದಶಕ್ತೇನೋಪಜೀವತಾ||

ಒಂದು ವೇಳೆ ಕಳ್ಳರು ಕದಿದುಕೊಂಡು ಹೋದ ಧನವನ್ನು ತಿರುಗಿ ಪಡೆಯಲು ಸಾಧ್ಯವಾಗದೇ ಇದ್ದರೆ ರಾಜನಾದವನು ಧನವನ್ನು ಕಳೆದುಕೊಂಡವನ ಉಪಜೀವನವನ್ನು ನಡೆಸಲು ತನ್ನ ಕೋಶದಿಂದಲೇ ಅಷ್ಟು ಧನವನ್ನು ಕೊಡಬೇಕು.

12076011a ಸರ್ವವರ್ಣ್ಯೈಃ ಸದಾ ರಕ್ಷ್ಯಂ ಬ್ರಹ್ಮಸ್ವಂ ಬ್ರಾಹ್ಮಣಾಸ್ತಥಾ|
12076011c ನ ಸ್ಥೇಯಂ ವಿಷಯೇ ತೇಷು ಯೋಽಪಕುರ್ಯಾದ್ದ್ವಿಜಾತಿಷು||

ಬ್ರಾಹ್ಮಣರನ್ನು ಮತ್ತು ಬ್ರಾಹ್ಮಣರ ಸ್ವತ್ತನ್ನು ಇತರ ವರ್ಣದವರು ಸದಾ ರಕ್ಷಿಸಬೇಕು. ಬ್ರಾಹ್ಮಣರಿಗೆ ಅಪಕಾರವನ್ನು ಮಾಡುವವರನ್ನು ರಾಜನು ತನ್ನ ದೇಶದಲ್ಲಿ ಇಟ್ಟುಕೊಳ್ಳಬಾರದು.

12076012a ಬ್ರಹ್ಮಸ್ವೇ ರಕ್ಷ್ಯಮಾಣೇ ಹಿ ಸರ್ವಂ ಭವತಿ ರಕ್ಷಿತಮ್|
12076012c ತೇಷಾಂ ಪ್ರಸಾದೇ ನಿರ್ವೃತ್ತೇ ಕೃತಕೃತ್ಯೋ ಭವೇನ್ನೃಪಃ||

ಬ್ರಾಹ್ಮಣರು ರಕ್ಷಿತರಾದರೆ ಸರ್ವವೂ ರಕ್ಷಿತವಾಗಿರುತ್ತದೆ. ಅವರ ಪ್ರಸಾದದಿಂದಲೇ ನೃಪನು ಕೃತಕೃತ್ಯನಾಗುತ್ತಾನೆ.

12076013a ಪರ್ಜನ್ಯಮಿವ ಭೂತಾನಿ ಮಹಾದ್ರುಮಮಿವ ದ್ವಿಜಾಃ|
12076013c ನರಾಸ್ತಮುಪಜೀವಂತಿ ನೃಪಂ ಸರ್ವಾರ್ಥಸಾಧಕಮ್||

ಜೀವಿಗಳು ಮಳೆಗರೆಯುವ ಮೋಡಗಳನ್ನು ಮತ್ತು ಪಕ್ಷಿಗಳು ಮಹಾವೃಕ್ಷವನ್ನು ಹೇಗೋ ಹಾಗೆ ಸರ್ವಾರ್ಥಸಾಧಕ ನೃಪನನ್ನು ಮನುಷ್ಯರು ಅವಲಂಬಿಸಿ ಜೀವಿಸುತ್ತಾರೆ.

12076014a ನ ಹಿ ಕಾಮಾತ್ಮನಾ ರಾಜ್ಞಾ ಸತತಂ ಶಠಬುದ್ಧಿನಾ|
12076014c ನೃಶಂಸೇನಾತಿಲುಬ್ಧೇನ ಶಕ್ಯಾಃ ಪಾಲಯಿತುಂ ಪ್ರಜಾಃ||

ಕಾಮಾತ್ಮನಾಗಿ ಸತತವೂ ಕಾಮವಸ್ತುಗಳ ಕುರಿತು ಯೋಜಿಸುವ, ಕ್ರೂರಿ ಮತ್ತು ಅತಿ ಲುಬ್ಧ ರಾಜನು ಪ್ರಜೆಗಳನ್ನು ಪಾಲಿಸಲು ಶಕ್ಯನಾಗುವುದಿಲ್ಲ.”

12076015 ಯುಧಿಷ್ಠಿರ ಉವಾಚ|
12076015a ನಾಹಂ ರಾಜ್ಯಸುಖಾನ್ವೇಷೀ ರಾಜ್ಯಮಿಚ್ಛಾಮ್ಯಪಿ ಕ್ಷಣಮ್|
12076015c ಧರ್ಮಾರ್ಥಂ ರೋಚಯೇ ರಾಜ್ಯಂ ಧರ್ಮಶ್ಚಾತ್ರ ನ ವಿದ್ಯತೇ||

ಯುಧಿಷ್ಠಿರನು ಹೇಳಿದನು: "ನಾನು ರಾಜ್ಯಸುಖವನ್ನು ಅರಸುತ್ತಿಲ್ಲ. ಒಂದು ಕ್ಷಣಕ್ಕಾದರೂ ರಾಜ್ಯವನ್ನು ಇಚ್ಛಿಸುವುದಿಲ್ಲ. ಧರ್ಮಸಿದ್ಧಿಗಾಗಿ ನಾನು ರಾಜ್ಯವನ್ನು ಇಷ್ಟಪಡುತ್ತೇನೆ. ಆದರೆ ಅದರಿಂದಲೂ ಧರ್ಮದ ಸಿದ್ಧಿಯಾಗುವುದಿಲ್ಲ.

12076016a ತದಲಂ ಮಮ ರಾಜ್ಯೇನ ಯತ್ರ ಧರ್ಮೋ ನ ವಿದ್ಯತೇ|
12076016c ವನಮೇವ ಗಮಿಷ್ಯಾಮಿ ತಸ್ಮಾದ್ಧರ್ಮಚಿಕೀರ್ಷಯಾ||

ಯಾವುದರಿಂದ ಧರ್ಮಸಿದ್ಧಿಯಾಗುವುದಿಲ್ಲವೋ ಆ ರಾಜ್ಯವು ನನಗೆ ಬೇಡ. ಆದುದರಿಂದ ಧರ್ಮವನ್ನು ಬಯಸಿ ನಾನು ವನಕ್ಕೇ ಹೋಗುತ್ತೇನೆ.

12076017a ತತ್ರ ಮೇಧ್ಯೇಷ್ವರಣ್ಯೇಷು ನ್ಯಸ್ತದಂಡೋ ಜಿತೇಂದ್ರಿಯಃ|
12076017c ಧರ್ಮಮಾರಾಧಯಿಷ್ಯಾಮಿ ಮುನಿರ್ಮೂಲಫಲಾಶನಃ||

ಪವಿತ್ರ ಆ ಅರಣ್ಯಗಳಲ್ಲಿ ದಂಡವನ್ನು ಕೆಳಗಿರಿಸಿ ಜಿತೇಂದ್ರಿಯನಾಗಿ ಫಲ-ಮೂಲಗಳನ್ನು ತಿಂದುಕೊಂಡು ಮುನಿಯಂತೆ ಧರ್ಮವನ್ನು ಆರಾಧಿಸುತ್ತೇನೆ."

12076018 ಭೀಷ್ಮ ಉವಾಚ|
12076018a ವೇದಾಹಂ ತವ ಯಾ ಬುದ್ಧಿರಾನೃಶಂಸ್ಯಗುಣೈರ್ವ ಸಾ|
12076018c ನ ಚ ಶುದ್ಧಾನೃಶಂಸ್ಯೇನ ಶಕ್ಯಂ ಮಹದುಪಾಸಿತುಮ್||

ಭೀಷ್ಮನು ಹೇಳಿದನು: "ನಿನ್ನ ಬುದ್ಧಿಯು ದಯಾಪೂರ್ಣಗುಣಗಳಿಂದ ಕೂಡಿದೆಯೆನ್ನುವುದನ್ನು ನಾನು ಅರಿತಿದ್ದೇನೆ. ಸಂಪೂರ್ಣ ದಯಾಪೂರ್ಣನಾಗಿರುವವನಿಗೆ ರಾಜ್ಯಭಾರವನ್ನು ಮಾಡಲು ಸಾಧ್ಯವಾಗುವುದಿಲ್ಲ. ಆದರೆ ನಿನಗೆ ರಾಜ್ಯಭಾರದಿಂದ

ತಪ್ಪಿಸಿಕೊಳ್ಳಲೂ ಸಾಧ್ಯವಿಲ್ಲ.

12076019a ಅಪಿ ತು ತ್ವಾ ಮೃದುಂ ದಾಂತಮತ್ಯಾರ್ಯಮತಿಧಾರ್ಮಿಕಮ್।
12076019c ಕ್ಲೀಬಂ ಧರ್ಮಘೃಣಾಯುಕ್ತಂ ನ ಲೋಕೋ ಬಹು ಮನ್ಯತೇ॥

ನೀನು ಅತ್ಯಂತ ಮೃದುವಾಗಿದ್ದರೂ, ಮಹಾ ಸತ್ಪುರುಷನಾಗಿದ್ದರೂ,
ಅತ್ಯಂತ ಧರ್ಮಾತ್ಮನಾಗಿದ್ದರೂ, ರಾಜಧರ್ಮಕ್ಕೆ
ವಿರುದ್ಧವಾಗಿರುವುದರಿಂದ ನಿನ್ನನ್ನು ಲೋಕದ ಬಹುಜನರು
ನಪುಂಸಕನೆಂದೇ ಭಾವಿಸುತ್ತಾರೆ. ನಿನ್ನನ್ನು ಪ್ರಜೆಗಳು ಗೌರವಿಸುವುದಿಲ್ಲ.

12076020a ರಾಜಧರ್ಮಾನವೇಕ್ಷಸ್ವ ಪಿತೃಪೈತಾಮಹೋಚಿತಾನ್।
12076020c ನೈತದ್ರಾಜ್ಞಾಮಥೋ ವೃತ್ತಂ ಯಥಾ ತ್ವಂ ಸ್ಥಾತುಮಿಚ್ಚಸಿ॥

ನಿನ್ನ ಪಿತೃ-ಪಿತಾಮಹರ ರಾಜಧರ್ಮಗಳನ್ನು ನೋಡಿಕೊಂಡು ನಿನಗೆ
ಉಚಿತವಾದುದನ್ನು ಮಾಡು. ನೀನು ಏನು ಮಾಡಲು
ಬಯಸುತ್ತಿರುವೆಯೋ ಅದು ರಾಜರ ವರ್ತನೆಯಲ್ಲ.

12076021a ನ ಹಿ ವೈಕ್ಲವ್ಯಸಂಸೃಷ್ಟಮಾನೃಶಂಸ್ಯಮಿಹಾಸ್ಥಿತಃ।
12076021c ಪ್ರಜಾಪಾಲನಸಂಭೂತಂ ಪ್ರಾಪ್ತಾ ಧರ್ಮಫಲಂ ಹ್ಯಸಿ॥

ಆದರೆ ವ್ಯಾಕುಲತೆಯಿಂದ ಹುಟ್ಟಿರುವ ನಿನ್ನ ಈ ದಯಾಪೂರ್ಣತೆಯು
ಪ್ರಜಾಪಾಲನೆಯಿಂದ ದೊರೆಯುವ ಧರ್ಮಫಲವನ್ನು ನೀನು
ಪಡೆಯಲಾರೆ.

12076022a ನ ಹ್ಯೇತಾಮಾಶಿಷಂ ಪಾಂಡುರ್ನ ಚ ಕುಂತ್ಯನ್ವಯಾಚತ।
12076022c ನ ಚೈತಾಂ ಪ್ರಾಜ್ಞತಾಂ ತಾತ ಯಯಾ ಚರಸಿ ಮೇಧಯಾ॥

ಮಗೂ! ನಿನ್ನ ಪ್ರಜ್ಞೆ ಮತ್ತು ಬುದ್ಧಿಯಿಂದ ವಿವೇಚಿಸಿ ನೀನು ಏನನ್ನು

ಮಾಡಲು ಹೊರಟಿರುವೆಯೋ ಅದನ್ನು ನಿನ್ನಿಂದ ಪಾಂಡುವಾಗಲೀ ಕುಂತಿಯಾಗಲೀ ಆಶಿಸಿರಲಿಲ್ಲ.

12076023a ಶೌರ್ಯಂ ಬಲಂ ಚ ಸತ್ತ್ವಂ ಚ ಪಿತಾ ತವ ಸದಾಬ್ರವೀತ್|
12076023c ಮಾಹಾತ್ಮ್ಯಂ ಬಲಮೌದಾರ್ಯಂ ತವ ಕುಂತ್ಯನ್ವಯಾಚತ||

ನಿನ್ನ ತಂದೆಯು "ನನ್ನ ಈ ಮಗನು ಶೂರನೂ, ಬಲಶಾಲಿಯೂ ಮತ್ತು ಸತ್ಯನಿಷ್ಠನಾಗಿರಬೇಕು" ಎಂದು ಸದಾ ಹೇಳುತ್ತಿದ್ದನು. ಕುಂತಿಯು ನಿನ್ನಿಂದ ಮಹಾತ್ಮೆ, ಬಲ ಮತ್ತು ಔದಾರ್ಯಗಳನ್ನು ಬಯಸಿದ್ದಳು.

12076024a ನಿತ್ಯಂ ಸ್ವಾಹಾ ಸ್ವಧಾ ನಿತ್ಯಮುಭೇ ಮಾನುಷದೈವತೇ|
12076024c ಪುತ್ರೇಷ್ವಾಶಾಸತೇ ನಿತ್ಯಂ ಪಿತರೋ ದೈವತಾನಿ ಚ||

ಪಿತೃಗಳು ಪುತ್ರರಿಂದ ನಿತ್ಯವೂ ಮನುಷ್ಯ-ದೇವತೆಗಳಿಬ್ಬರಿಗೂ ಸ್ವಾಹಾ-ಸ್ವಧಾಗಳನ್ನು ಬಯಸುತ್ತಾರೆ.

12076025a ದಾನಮಧ್ಯಯನಂ ಯಜ್ಞಃ ಪ್ರಜಾನಾಂ ಪರಿಪಾಲನಮ್|
12076025c ಧರ್ಮಮೇತಮಧರ್ಮಂ ವಾ ಜನ್ಮನ್ಯೈವಾಭ್ಯಜಾಯಿಥಾಃ||

ದಾನ, ಅಧ್ಯಯನ, ಯಜ್ಞ, ಪ್ರಜೆಗಳ ಪರಿಪಾಲನೆ – ಇವು ಜನ್ಮದಿಂದಲೇ ನಿನ್ನೊಡನೆ ಹುಟ್ಟಿಕೊಂಡ ಕರ್ಮಗಳು. ಇದು ಅಧರ್ಮವೆಂದು ಬಿಟ್ಟುಬಿಡುವುದು ಅಧರ್ಮವೇ ಆಗುತ್ತದೆ.

12076026a ಕಾಲೇ ಧುರಿ ನಿಯುಕ್ತಾನಾಂ ವಹತಾಂ ಭಾರ ಆಹಿತೇ|
12076026c ಸೀದತಾಮಪಿ ಕೌಂತೇಯ ನ ಕೀರ್ತಿರವಸೀದತಿ||

ಕೌಂತೇಯ! ನೊಗಕ್ಕೆ ಕಟ್ಟಿದ ಎತ್ತು ಮಹಾ ಭಾರವನ್ನು ಹೊರದೇ ಮುಗ್ಗರಿಸಿ ಬೀಳಬಹುದು. ಆದರೂ ಅದರ ಕೀರ್ತಿಯು

ಕಡಿಮೆಯಾಗುವುದಿಲ್ಲ. ಹಾಗೆಯೇ ನೀನೂ ಕೂಡ ರಾಜ್ಯಭಾರದ ಜವಾಬ್ದಾರಿಯಿಂದ ಕುಸಿಯಬಹುದು. ಆದರೆ ನಿನ್ನ ಕೀರ್ತಿಯು ಕಡಿಮೆಯಾಗುವುದಿಲ್ಲ.

12076027a ಸಮಂತತೋ ವಿನಿಯತೋ ವಹತ್ಯಸ್ಖಲಿತೋ ಹಿ ಯಃ|
12076027c ನಿರ್ದೋಷಕರ್ಮವಚನಾತ್ಸಿದ್ಧಿಃ ಕರ್ಮಣ ಏವ ಸಾ||

ಎಲ್ಲ ಕಡೆಗಳಿಂದಲೂ ಮನಸ್ಸು-ಇಂದ್ರಿಯಗಳನ್ನು ಸ್ವಾಧೀನಪಡಿಸಿಕೊಂಡು ಅಸ್ಖಲಿತವಾಗಿ ತನ್ನ ಮೇಲಿರುವ ಜವಾಬ್ದಾರಿಯನ್ನು ಹೊರುವವನು ನಿರ್ದೋಷಿಯಾಗುತ್ತಾನೆ. ಏಕೆಂದರೆ ಕರ್ಮಗಳಿಂದಲೇ ಸಿದ್ಧಿಯು ದೊರೆಯುತ್ತದೆ.

12076028a ನೈಕಾಂತವಿನಿಪಾತೇನ ವಿಚಚಾರೇಹ ಕಶ್ಚನ|
12076028c ಧರ್ಮೀ ಗೃಹೀ ವಾ ರಾಜಾ ವಾ ಬ್ರಹ್ಮಚಾರ್ಯಥ ವಾ ಪುನಃ||

ಧಾರ್ಮಿಕನಾಗಿರಲಿ, ಗೃಹಸ್ಥನಾಗಿರಲಿ, ರಾಜನಾಗಿರಲಿ ಅಥವಾ ಬ್ರಹ್ಮಚಾರಿಯಾಗಿರಲಿ ತಾನು ಮಾಡಬೇಕಾದ ಕರ್ಮಗಳನ್ನು ಸಂಪೂರ್ಣವಾಗಿ ಮಾಡಲು ಸಾಧ್ಯವಿಲ್ಲ. ಧರ್ಮಕಾರ್ಯಗಳಲ್ಲಿ ಯಾವುದಾದರೂ ನ್ಯೂನತೆಯು ಇದ್ದೇ ಇರುತ್ತದೆ.

12076029a ಅಲ್ಪಂ ತು ಸಾಧುಭೂಯಿಷ್ಠಂ ಯತ್ಕರ್ಮೋದಾರಮೇವ ತತ್|
12076029c ಕೃತಮೇವಾಕೃತಾಚ್ಚ್ರೇಯೋ ನ ಪಾಪೀಯೋಽಸ್ತ್ಯಕರ್ಮಣಃ||

ಕಾರ್ಯವು ಅಲ್ಪವಾಗಿದ್ದರೂ ಸಾರಭೂಯಿಷ್ಠವಾಗಿದ್ದರೆ ಅದು ಮಹಾ ಕಾರ್ಯವೆಂದೇ ಹೇಳಿಸಿಕೊಳ್ಳುತ್ತದೆ. ಕರ್ಮವನ್ನು ಮಾಡದೇ ಇರುವುದಕ್ಕಿಂತ ಕರ್ಮವನ್ನು ಮಾಡುವುದೇ ಶ್ರೇಯಸ್ಕರ. ಏಕೆಂದರೆ ಕರ್ಮಗಳನ್ನೇ ಮಾಡದಿರುವವನಷ್ಟು ಪಾಪಿಷ್ಠನು ಬೇರೊಬ್ಬನಿಲ್ಲ.

12076030a ಯದಾ ಕುಲೀನೋ ಧರ್ಮಜ್ಞಃ ಪ್ರಾಪ್ನೋತ್ಯೈಶ್ವರ್ಯಮುತ್ತಮಮ್।
12076030c ಯೋಗಕ್ಷೇಮಸ್ತದಾ ರಾಜನ್ಕುಶಲಾಯೈವ ಕಲ್ಪತೇ॥

ಕುಲೀನ, ಧರ್ಮಜ್ಞ, ಮತ್ತು ಉತ್ತಮ ಐಶ್ವರ್ಯವನ್ನು ಹೊಂದಿದವನು ರಾಜ್ಯಾಧಿಕಾರವನ್ನು ವಹಿಸಿಕೊಂಡರೆ ರಾಜನ ಯೋಗ-ಕ್ಷೇಮಗಳು ರಾಜ್ಯದ ಒಳ್ಳೆಯದಕ್ಕೇ ಆಗುತ್ತದೆ.

12076031a ದಾನೇನಾನ್ಯಂ ಬಲೇನಾನ್ಯಮನ್ಯಂ ಸೂನೃತಯಾ ಗಿರಾ।
12076031c ಸರ್ವತಃ ಪರಿಗೃಹ್ಣೀಯಾದ್ರಾಜ್ಯಂ ಪ್ರಾಪ್ಯೇಹ ಧಾರ್ಮಿಕಃ॥

ಧಾರ್ಮಿಕ ರಾಜನು ರಾಜ್ಯವನ್ನು ಪಡೆದುಕೊಂಡು ಕೆಲವರನ್ನು ದಾನಗಳಿಂದ, ಇತರರನ್ನು ಬಲದಿಂದ ಮತ್ತು ಕೆಲವರನ್ನು ಸುಮಧುರ ಮಾತುಗಲ ಮೂಲಕ ಎಲ್ಲಕಡೆಗಳಿಂದಲೂ ತನ್ನ ಅಧೀನರನ್ನಾಗಿ ಮಾಡಿಕೊಳ್ಳಬೇಕು.

12076032a ಯಂ ಹಿ ವೈದ್ಯಾಃ ಕುಲೇ ಜಾತಾ ಅವೃತ್ತಿಭಯಪೀಡಿತಾಃ।
12076032c ಪ್ರಾಪ್ಯ ತೃಪ್ತಾಃ ಪ್ರತಿಷ್ಠಂತಿ ಧರ್ಮಃ ಕೋಽಭ್ಯಧಿಕಸ್ತತಃ॥

ವೃತ್ತಿಯಿಲ್ಲದೇ ಭಯಪೀಡಿತರಾದ ಉತ್ತಮ ಕುಲದಲ್ಲಿ ಹುಟ್ಟಿದ ವಿದ್ವಾಂಸರು ಯಾರನ್ನು ಸೇರಿ ತೃಪ್ತರಾಗುತ್ತಾರೋ ಅಂಥಹ ರಾಜನ ಧರ್ಮಕ್ಕಿಂತಲೂ ಅಧಿಕ ಧರ್ಮವು ಯಾವುದಿದೆ?”

12076033 ಯುಧಿಷ್ಠಿರ ಉವಾಚ।
12076033a ಕಿಂ ನ್ವತಃ ಪರಮಂ ಸ್ವರ್ಗ್ಯಂ ಕಾ ನ್ವತಃ ಪ್ರೀತಿರುತ್ತಮಾ।
12076033c ಕಿಂ ನ್ವತಃ ಪರಮೈಶ್ವರ್ಯಂ ಬ್ರೂಹಿ ಮೇ ಯದಿ ಮನ್ಯಸೇ॥

ಯುಧಿಷ್ಠಿರನು ಹೇಳಿದನು: “ಸ್ವರ್ಗಪ್ರಾಪ್ತಿಗೆ ಶ್ರೇಷ್ಠ ಸಾಧನವು

ಯಾವುದು? ಅದರಿಂದ ಎಂತಹ ಪ್ರಸನ್ನತೆಯುಂಟಾಗುತ್ತದೆ? ಅದಕ್ಕಿಂತಲೂ ಅತಿಶಯ ಪರಮೈಶ್ವರ್ಯವು ಯಾವುದು? ನಿನಗೆ ಅನಿಸಿದರೆ ಇದರ ಕುರಿತು ನನಗೆ ಹೇಳು.”

12076034 ಭೀಷ್ಮ ಉವಾಚ|
12076034a ಯಸ್ಮಿನ್ಪ್ರತಿಷ್ಠಿತಾಃ ಸಮ್ಯಕ್ಕ್ಷೇಮಂ ವಿಂದಂತಿ ತತ್ಕ್ಷಣಮ್|
12076034c ಸ ಸ್ವರ್ಗಜಿತ್ತಮೋಽಸ್ಮಾಕಂ ಸತ್ಯಮೇತದ್ಬ್ರವೀಮಿ ತೇ||

ಭೀಷ್ಮನು ಹೇಳಿದನು: “ನೆಲೆಯಿಲ್ಲದವನಿಗೆ ಒಂದು ಕ್ಷಣಕ್ಕಾಗಿಯಾದರೂ ಸಮಾಧಾನ ಹೊಂದಿ ಕ್ಷೇಮದಿಂದಿದ್ದರೆ ಆ ರಾಜನು ಸ್ವರ್ಗವನ್ನು ಜಯಿಸುವವರಲ್ಲಿ ಶ್ರೇಷ್ಠನಾಗುತ್ತಾನೆ. ಈ ವಿಷಯದಲ್ಲಿ ನಾನು ಸತ್ಯವನ್ನೇ ಹೇಳುತ್ತಿದ್ದೇನೆ.

12076035a ತ್ವಮೇವ ಪ್ರೀತಿಮಾಂಸ್ತಸ್ಮಾತ್ಕುರೂಣಾಂ ಕುರುಸತ್ತಮ|
12076035c ಭವ ರಾಜಾ ಜಯ ಸ್ವರ್ಗಂ ಸತೋ ರಕ್ಷಾಸತೋ ಜಹಿ||

ಕುರುಸತ್ತಮ! ಕುರುಗಳಿಗೆ ನೀನೇ ಪ್ರೀತಿಮಾನನು. ರಾಜನಾಗು. ಸ್ವರ್ಗವನ್ನು ಜಯಿಸು. ಸತ್ಪುರುಷರನ್ನು ರಕ್ಷಿಸು. ದುಷ್ಟರನ್ನು ಸಂಹರಿಸು.

12076036a ಅನು ತ್ವಾ ತಾತ ಜೀವಂತು ಸುಹೃದಃ ಸಾಧುಭಿಃ ಸಹ|
12076036c ಪರ್ಜನ್ಯಮಿವ ಭೂತಾನಿ ಸ್ವಾದುದ್ರುಮಮಿವಾಂಡಜಾಃ||

ಮಗೂ! ಜೀವಿಗಳು ಮೋಡಗಳ ಮೇಲೆ ಮತ್ತು ಪಕ್ಷಿಗಳು ಫಲಗಳಿರುವ ಮರವನ್ನು ಹೇಗೆ ಆಶ್ರಯಿಸಿರುತ್ತವೆಯೋ ನಿನ್ನ ಸುಹೃದಯರು ಮತ್ತು ಸಾಧುಗಳೊಂದಿಗೆ ನೀನು ಜೀವಿಸು.

12076037a ಧೃಷ್ಟಂ ಶೂರಂ ಪ್ರಹರ್ತಾರಮನೃಶಂಸಂ ಜಿತೇಂದ್ರಿಯಮ್|

12076037c ವತ್ಸಲಂ ಸಂವಿಭಕ್ತಾರಮನು ಜೀವಂತು ತ್ವಾಂ ಜನಾಃ||

ಭಯರಹಿತನಾದ ಶೂರ, ಪ್ರಹಾರಕುಶಲ, ದಯಾಳುವಾದ, ಜಿತೇಂದ್ರಿಯನಾದ, ಪ್ರಜಾವತ್ಸಲನಾದ ಮತ್ತು ದಾನಶೀಲ ರಾಜನ ಆಶ್ರಯವನ್ನು ಪಡೆದ ಪ್ರಜೆಗಳು ತಮ್ಮ ಜೀವನಿರ್ವಹಣೆಯನ್ನು ಮಾಡುತ್ತಾರೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಷಟ್ಸಪ್ತತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಎಪ್ಪತ್ತಾರನೇ ಅಧ್ಯಾಯವು.

೭೭

ಉತ್ತಮ ಮತ್ತು ಅಧಮ ಬ್ರಾಹ್ಮಣರೊಡನೆ ರಾಜನ ವ್ಯವಹಾರ ನಿರ್ವಹಣೆ (1-14).

12077001 ಯುಧಿಷ್ಠಿರ ಉವಾಚ|
12077001a ಸ್ವಕರ್ಮಣ್ಯಪರೇ ಯುಕ್ತಾಸ್ತಥೈವಾನ್ಯೇ ವಿಕರ್ಮಣಿ|
12077001c ತೇಷಾಂ ವಿಶೇಷಮಾಚಕ್ಷ್ವ ಬ್ರಾಹ್ಮಣಾನಾಂ ಪಿತಾಮಹ||

ಯುಧಿಷ್ಠಿರನು ಹೇಳಿದನು: “ಪಿತಾಮಹ! ಬ್ರಾಹ್ಮಣರಲ್ಲಿ ಕೆಲವರು ಸ್ವಕರ್ಮಗಳಲ್ಲಿ ನಿರತರಾಗಿದ್ದರೆ ಇನ್ನು ಕೆಲವರು ತಮ್ಮದಲ್ಲದ ಕರ್ಮಗಳಲ್ಲಿ ನಿರತರಾಗಿದ್ದಾರೆ. ಅವರಲ್ಲಿರುವ ವ್ಯತ್ಯಾಸವನ್ನು ಹೇಳು.”

12077002 ಭೀಷ್ಮ ಉವಾಚ|
12077002a ವಿದ್ಯಾಲಕ್ಷಣಸಂಪನ್ನಾಃ ಸರ್ವತ್ರಾಮ್ನಾಯದರ್ಶಿನಃ|

12077002c ಏತೇ ಬ್ರಹ್ಮಸಮಾ ರಾಜನ್ಬ್ರಾಹ್ಮಣಾಃ ಪರಿಕೀರ್ತಿತಾಃ||

ಭೀಷ್ಮನು ಹೇಳಿದನು: "ವಿದ್ಯಾಲಕ್ಷಣ ಸಂಪನ್ನರು ಮತ್ತು ಸರ್ವವನ್ನೂ ಸಮಾನ ದೃಷ್ಟಿಯಿಂದ ಕಾಣುವ ಬ್ರಾಹ್ಮಣರು ಬ್ರಹ್ಮನ ಸಮಾನರು ಎಂದು ಹೇಳಿದ್ದಾರೆ.

12077003a ಋತ್ವಿಗಾಚಾರ್ಯಸಂಪನ್ನಾಃ[207] ಸ್ವೇಷು ಕರ್ಮಸ್ವವಸ್ಥಿತಾಃ|
12077003c ಏತೇ ದೇವಸಮಾ ರಾಜನ್ಬ್ರಾಹ್ಮಣಾನಾಂ ಭವಂತ್ಯುತ||

ರಾಜನ್! ಋತ್ವಿಜರು, ಆಚಾರ್ಯಸಂಪನ್ನರು ಮತ್ತು ತಮ್ಮ ಕರ್ಮಗಳಲ್ಲಿ ನಿರತರಾಗಿರುವ ಬ್ರಾಹ್ಮಣರು ದೇವತೆಗಳಿಗೆ ಸಮನಾಗುತ್ತಾರೆ.

12077004a ಋತ್ವಿಕ್ಪುರೋಹಿತೋ ಮಂತ್ರೀ ದೂತೋಽಥಾರ್ಥಾನುಶಾಸಕಃ|
12077004c ಏತೇ ಕ್ಷತ್ರಸಮಾ ರಾಜನ್ಬ್ರಾಹ್ಮಣಾನಾಂ ಭವಂತ್ಯುತ||

ರಾಜರಿಗೆ ಯಾಗ ಮಾಡಿಸುವ ಪುರೋಹಿತರು, ಮಂತ್ರಿಗಳು, ರಾಜದುತರು ಮತ್ತು ಸಂದೇಶವಾಹಕ ಬ್ರಾಹ್ಮಣರು ಕ್ಷತ್ರಿಯರಿಗೆ ಸಮಾನರೆಂದು ಹೇಳುತ್ತಾರೆ.

12077005a ಅಶ್ವಾರೋಹಾ ಗಜಾರೋಹಾ ರಥಿನೋಽಥ ಪದಾತಯಃ|
12077005c ಏತೇ ವೈಶ್ಯಸಮಾ ರಾಜನ್ಬ್ರಾಹ್ಮಣಾನಾಂ ಭವಂತ್ಯುತ||

ರಾಜನ್! ಅಶ್ವಾರೋಹೀ, ಗಜಾರೋಹೀ, ರಥಿಗಳು, ಪದಾತಿಗಳು ಆಗಿರುವ ಬ್ರಾಹ್ಮಣರು ವೈಶ್ಯರಿಗೆ ಸಮನಾದವರೆಂದು

---

207 ಋಗ್ಯಜುಃಸಾಮಸಂಪನ್ನಾಃ ಎಂಬ ಪಾಠಾಂತರವಿದೆ.

ಪರಿಗಣಿಸಲ್ಪಟ್ಟಿದ್ದಾರೆ.

12077006a ಜನ್ಮಕರ್ಮವಿಹೀನಾ ಯೇ ಕದರ್ಯಾ ಬ್ರಹ್ಮಬಂಧವಃ|
12077006c ಏತೇ ಶೂದ್ರಸಮಾ ರಾಜನ್ಬ್ರಾಹ್ಮಣಾನಾಂ ಭವಂತ್ಯುತ||

ರಾಜನ್! ತಮ್ಮ ಜನ್ಮಕರ್ಮಗಳಿಂದ ವಿಹೀನರಾಗಿ, ಕುತ್ಸಿತ ಕರ್ಮಗಳನ್ನು ಮಾಡಿಕೊಂಡು ಹೆಸರಿಗೆ ಮಾತ್ರ ಬ್ರಹ್ಮಬಂಧುವೆಂದು ಎನಿಸಿಕೊಂಡಿರುವ ಬ್ರಾಹ್ಮಣನು ಶೂದ್ರನ ಸಮವೆಂದು ಹೇಳುತ್ತಾರೆ.

12077007a ಅಶ್ರೋತ್ರಿಯಾಃ ಸರ್ವ ಏವ ಸರ್ವೇ ಚಾನಾಹಿತಾಗ್ನಯಃ|
12077007c ತಾನ್ಸರ್ವಾನ್ಧಾರ್ಮಿಕೋ ರಾಜಾ ಬಲಿಂ ವಿಷ್ಟಿಂ[208] ಚ ಕಾರಯೇತ್||

ವೇದ-ಶಾಸ್ತ್ರಗಳನ್ನು ಕಲಿತಿರದ ಮತ್ತು ಅಗ್ನಿಹೋತ್ರಗಳನ್ನು ಮಾಡದೇ ಇರುವ ಬ್ರಾಹ್ಮಣರೆಲ್ಲರೂ ಶೂದ್ರಸಮಾನರೇ. ಧಾರ್ಮಿಕ ರಾಜನು ಅಂಥವರಿಂದ ತೆರಿಗೆಯನ್ನು ತೆಗೆದುಕೊಳ್ಳುವುದಲ್ಲದೇ ವೇತನವನ್ನು ಕೊಡದೇ ಅವರಿಂದ ಸೇವೆ ಮಾಡಿಸಿಕೊಳ್ಳಬೇಕು.

12077008a ಆಹ್ವಾಯಕಾ ದೇವಲಕಾ ನಕ್ಷತ್ರಗ್ರಾಮಯಾಜಕಾಃ|
12077008c ಏತೇ ಬ್ರಾಹ್ಮಣಚಂಡಾಲಾ ಮಹಾಪಥಿಕಪಂಚಮಾಃ||

ಹೆಸರು ಕೂಗಿ ಕರೆಯುವವರು, ವೇತನವನ್ನು ತೆಗೆದುಕೊಂಡು ದೇವಾಲಯಗಳಲ್ಲಿ ಅರ್ಚಕರಾಗಿರುವವರು, ನಕ್ಷತ್ರವಿದ್ಯೆಯಿಂದ ಜ್ಯೋತಿಷ್ಯವನ್ನು ಹೇಳಿ ಜೀವನ ನಡೆಸುವವರು, ಗ್ರಾಮದ ಪೌರೋಹಿತ್ಯವನ್ನು ನಡೆಸುವವರು ಮತ್ತು ಸಮುದ್ರಯಾನ

---

[208] ವಿಷ್ಟಿಂ ಎನ್ನುವುದಕ್ಕೆ ವ್ಯಾಖ್ಯಾನಕಾರರು ವಿನಾ ವೇತನಂ ರಾಜಸೇವಾಂ ಎಂದು ಅರ್ಥೈಸಿದ್ದಾರೆ.

ಮಾಡುವವರು – ಈ ಐವರೂ ಬ್ರಾಹ್ಮಣರಲ್ಲಿ
ಚಾಂಡಾಲರೆನಿಸಿಕೊಳ್ಳುತ್ತಾರೆ.

12077009a ಏತೇಭ್ಯೋ ಬಲಿಮಾದದ್ಯಾದ್ಧೀನಕೋಶೋ ಮಹೀಪತಿಃ|
12077009c ಋತೇ ಬ್ರಹ್ಮಸಮೇಭ್ಯಶ್ಚ ದೇವಕಲ್ಪೇಭ್ಯ ಏವ ಚ||

ಬೊಕ್ಕಸದಲ್ಲಿ ಹಣದ ಕೊರತೆಯುಂಟಾದಾಗ ಬ್ರಹ್ಮಸದೃಶ[209] ಮತ್ತು
ದೇವಸದೃಶಬ್ರಾಹ್ಮಣರನ್ನು[210] ಬಿಟ್ಟು ಉಳಿದ ಬ್ರಾಹ್ಮಣರಿಂದ
ತೆರಿಗೆಯನ್ನು ಪಡೆದುಕೊಳ್ಳಬಹುದು.

12077010a ಅಬ್ರಾಹ್ಮಣಾನಾಂ ವಿತ್ತಸ್ಯ ಸ್ವಾಮೀ ರಾಜೇತಿ ವೈದಿಕಮ್|
12077010c ಬ್ರಾಹ್ಮಣಾನಾಂ ಚ ಯೇ ಕೇ ಚಿದ್ವಿಕರ್ಮಸ್ಥಾ ಭವಂತ್ಯುತ||

ಬ್ರಾಹ್ಮಣರನ್ನು ಬಿಟ್ಟು ಉಳಿದ ವರ್ಣದವರ ವಿತ್ತಕ್ಕೆ ರಾಜನು
ಸ್ವಾಮಿಯೆಂದು ವೈದಿಕಸಿದ್ಧಾಂತವಾಗಿದೆ. ಬ್ರಾಹ್ಮಣರಲ್ಲಿ ಯಾರು
ತಮ್ಮ ವರ್ಣಾಶ್ರಮಧರ್ಮಗಳಿಗೆ ವಿಪರೀತ ಕರ್ಮಗಳನ್ನು
ಮಾಡುವರೋ ಅಂಥವರ ಧನವೂ ರಾಜನಿಗೆ ಸೇರುತ್ತದೆ.

12077011a ವಿಕರ್ಮಸ್ಥಾಸ್ತು ನೋಪೇಕ್ಷ್ಯಾ ಜಾತು ರಾಜ್ಞಾ ಕಥಂ ಚನ|
12077011c ನಿಯಮ್ಯಾಃ ಸಂವಿಭಜ್ಯಾಶ್ಚ ಧರ್ಮಾನುಗ್ರಹಕಾಮ್ಯಯಾ||

ರಾಜನು ಯಾವುದೇ ಕಾರಣದಿಂದಲೂ ಧರ್ಮಭ್ರಷ್ಟ ಬ್ರಾಹ್ಮಣರ

---

209 ವಿದ್ಯಾಲಕ್ಷಣ ಸಂಪನ್ನರು ಮತ್ತು ಸರ್ವವನ್ನೂ ಸಮಾನ ದೃಷ್ಟಿಯಿಂದ ಕಾಣುವ ಬ್ರಾಹ್ಮಣರು

210 ಋತ್ವಿಜರು, ಆಚಾರ್ಯಸಂಪನ್ನರು ಮತ್ತು ತಮ್ಮ ಕರ್ಮಗಳಲ್ಲಿ ನಿರತರಾಗಿರುವ ಬ್ರಾಹ್ಮಣರು

ವಿಷಯದಲ್ಲಿ ಉಪೇಕ್ಷೆಮಾಡಬಾರದು. ಧರ್ಮಕ್ಕೆ ಅನುಗ್ರಹವಾಗಲೆಂಬ ಕಾರಣದಿಂದ ಅವರನ್ನು ದಂಡಿಸಬೇಕು ಮತ್ತು ಅವರನ್ನು ಬ್ರಹ್ಮ-ದೇವ ಕಲ್ಪ ಬ್ರಾಹ್ಮಣರ ಸಮೂಹದಿಂದ ಪ್ರತ್ಯೇಕಿಸಬೇಕು.

12077012a ಯಸ್ಯ ಸ್ಮ ವಿಷಯೇ ರಾಜ್ಞಃ ಸ್ತೇನೋ ಭವತಿ ವೈ ದ್ವಿಜಃ|
12077012c ರಾಜ್ಞ ಏವಾಪರಾಧಂ ತಂ ಮನ್ಯಂತೇ ತದ್ವಿದೋ ಜನಾಃ||

ಯಾವ ರಾಜನ ರಾಜ್ಯದಲ್ಲಿ ಬ್ರಾಹ್ಮಣನು ಕಳ್ಳನಾಗುವನೋ ಆ ರಾಜ್ಯದ ಪರಿಸ್ಥಿತಿಯನ್ನು ತಿಳಿದಿರುವವರು, ರಾಜನ ಅಪರಾಧವೇ ಬ್ರಾಹ್ಮಣನು ಕಳ್ಳನಾಗಿದ್ದುದಕ್ಕೆ ಕಾರಣವೆಂದು ಭಾವಿಸುತ್ತಾರೆ.

12077013a ಅವೃತ್ತ್ಯಾ ಯೋ ಭವೇತ್ಸ್ತೇನೋ ವೇದವಿತ್ಸ್ನಾತಕಸ್ತಥಾ|
12077013c ರಾಜನ್ಸ ರಾಜ್ಞಾ ಭರ್ತವ್ಯ ಇತಿ ಧರ್ಮವಿದೋ ವಿದುಃ||

ಒಂದು ವೇಳೆ ವೇದಾಧ್ಯಯನ ಮಾಡಿ ಸ್ನಾತಕನಾದ ಬ್ರಾಹ್ಮಣನು ಜೀವಿಕೆಗೆ ಅವಕಾಶವಿಲ್ಲದೇ ಕಳ್ಳನಾದರೆ ಅಂಥವನ ಭರಣ-ಪೋಷಣೆಗಳ ವ್ಯವಸ್ಥೆಯನ್ನು ರಾಜನೇ ಮಾಡಬೇಕೆಮ್ಮು ಹೇಳುತ್ತಾರೆ.

12077014a ಸ ಚೇನ್ನೋ ಪರಿವರ್ತೇತ ಕೃತವೃತ್ತಿಃ ಪರಂತಪ|
12077014c ತತೋ ನಿರ್ವಾಸನೀಯಃ ಸ್ಯಾತ್ತಸ್ಮಾದ್ದೇಶಾತ್ಸಬಾಂಧವಃ||

ಭರಣ-ಪೋಷಣದ ವ್ಯವಸ್ಥೆಯನ್ನು ಮಾಡಿಕೊಟ್ಟರೂ ಅವನು ಪರಿವರ್ತನೆಯನ್ನು ಹೊಂದದೇ ಹಿಂದಿನಂತೆಯೇ ಚೌರ್ಯವೃತ್ತಿಯನ್ನು ಅವಲಂಬಿಸಿದರೆ, ಅವನನ್ನು ಬಂಧುಗಳ ಸಮೇತ ದೇಶದಿಂದಲೇ ಹೊರಗಟ್ಟಬೇಕು!”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ

ಸಪ್ತಸಪ್ತತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಎಪ್ಪತ್ತೇಳನೇ ಅಧ್ಯಾಯವು.

೭೮

ಕೈಕೇಯೋಪಾಖ್ಯಾನ

ಕೇಕಯರಾಜ-ರಾಕ್ಷಸ ಸಂವಾದ (1-34).

12078001 ಯುಧಿಷ್ಠಿರ ಉವಾಚ|
12078001a ಕೇಷಾಂ ರಾಜಾ ಪ್ರಭವತಿ ವಿತ್ತಸ್ಯ ಭರತರ್ಷಭ|
12078001c ಕಯಾ ಚ ವೃತ್ತ್ಯಾ ವರ್ತೇತ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ಪಿತಾಮಹ! ಯಾರ ವಿತ್ತದ ಮೇಲೆ ರಾಜನ ಅಧಿಕಾರವಿರುತ್ತದೆ? ರಾಜನು ಯಾವ ವೃತ್ತಿಯನ್ನು ಅವಲಂಬಿಸಿರಬೇಕು? ಅದನ್ನು ನನಗೆ ಹೇಳು."

12078002 ಭೀಷ್ಮ ಉವಾಚ|
12078002a ಅಬ್ರಾಹ್ಮಣಾನಾಂ ವಿತ್ತಸ್ಯ ಸ್ವಾಮೀ ರಾಜೇತಿ ವೈದಿಕಮ್|
12078002c ಬ್ರಾಹ್ಮಣಾನಾಂ ಚ ಯೇ ಕೇ ಚಿದ್ವಿಕರ್ಮಸ್ಥಾ ಭವಂತ್ಯುತ||

ಭೀಷ್ಮನು ಹೇಳಿದನು: "ಬ್ರಾಹ್ಮಣನಲ್ಲದವರೆಲ್ಲರ ವಿತ್ತದ ಸ್ವಾಮಿಯು ರಾಜನೆಂದು ವೇದಸಿದ್ಧಾಂತ. ತಮ್ಮ ಕರ್ಮಗಳಲ್ಲಿ ತೊಡಗಿರದೇ ಇದ್ದ ಬ್ರಾಹ್ಮಣರ ಸ್ವತ್ತೂ ರಾಜನದ್ದೇ ಎಂದು ಹೇಳುತ್ತಾರೆ.

12078003a ವಿಕರ್ಮಸ್ಥಾಶ್ಚ ನೋಪೇಕ್ಷ್ಯಾ ವಿಪ್ರಾ ರಾಜ್ಞಾ ಕಥಂ ಚನ|

12078003c ಇತಿ ರಾಜ್ಞಾಂ ಪುರಾವೃತ್ತಮಭಿಜಲ್ಪಂತಿ ಸಾಧವಃ||

ತಮ್ಮ ಕರ್ಮಗಳಲ್ಲಿ ತೊಡಗಿರದೇ ಇರುವ ಬ್ರಾಹ್ಮಣರನ್ನು ಎಂದೂ ರಾಜನು ಉಪೇಕ್ಷಿಸಬಾರದು. ಇದು ಹಿಂದಿನ ರಾಜರುಗಳ ನಡತೆ ಎಂದು ಸಾಧುಗಳು ಹೇಳುತ್ತಿರುತ್ತಾರೆ.

12078004a ಯಸ್ಯ ಸ್ಮ ವಿಷಯೇ ರಾಜ್ಞಃ ಸ್ತೇನೋ ಭವತಿ ವೈ ದ್ವಿಜಃ|
12078004c ರಾಜ್ಞ ಏವಾಪರಾಧಂ ತಂ ಮನ್ಯಂತೇ ಕಿಲ್ಬಿಷಂ ನೃಪ||

ರಾಜ್ಯದಲ್ಲಿ ಬ್ರಾಹ್ಮಣನು ಕಳ್ಳನಾಗುವುದಕ್ಕೆ ರಾಜನೇ ಅಪರಾಧಿ ಎಂದೂ ಅವನಿಗೇ ಆ ಪಾಪವು ತಗಲುತ್ತದೆಯೆಂದೂ ಅಭಿಪ್ರಾಯವಿದೆ.

12078005a ಅಭಿಶಸ್ತಮಿವಾತ್ಮಾನಂ ಮನ್ಯಂತೇ ತೇನ ಕರ್ಮಣಾ|
12078005c ತಸ್ಮಾದ್ರಾಜರ್ಷಯಃ ಸರ್ವೇ ಬ್ರಾಹ್ಮಣಾನನ್ವಪಾಲಯನ್||

ಆಗಿನ ಕಾಲದ ರಾಜರೂ ಕೂಡ ಬ್ರಾಹ್ಮಣರು ಧರ್ಮಭ್ರಷ್ಟರಾಗಲು ತಾವೇ ಕಾರಣರೆಂದು ತಿಳಿದುಕೊಳ್ಳುತ್ತಿದ್ದರು. ಆದುದರಿಂದ ರಾಜರ್ಷಿಗಳು ಎಲ್ಲ ಬ್ರಾಹ್ಮಣರನ್ನೂ, ಧರ್ಮಭ್ರಷ್ಟರಾಗದ ರೀತಿಯಲ್ಲಿ ಪರಿಪಾಲಿಸುತ್ತಿದ್ದರು.

12078006a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12078006c ಗೀತಂ ಕೇಕಯರಾಜೇನ ಹ್ರಿಯಮಾಣೇನ ರಕ್ಷಸಾ||

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾಗಿರುವ ರಾಕ್ಷಸನಿಂದ ಅಪಹರಿಸಲ್ಪಟ್ಟ ಕೇಕಯರಾಜನ ಗೀತೆಯನ್ನು ಉದಾಹರಿಸುತ್ತಾರೆ.

12078007a ಕೇಕಯಾನಾಮಧಿಪತಿಂ ರಕ್ಷೋ ಜಗ್ರಾಹ ದಾರುಣಮ್|
12078007c ಸ್ವಾಧ್ಯಾಯೇನಾನ್ವಿತಂ ರಾಜನ್ನರಣ್ಯೇ ಸಂಶಿತವ್ರತಮ್||

ರಾಜನ್! ಅರಣ್ಯದಲ್ಲಿ ಸಂಶಿತವ್ರತನಾಗಿ ಸ್ವಾಧ್ಯಾಯ ನಿರತನಾಗಿದ್ದ ಕೇಕಯರ ಅಧಿಪತಿಯನ್ನು ಓರ್ವ ದಾರುಣ ರಾಕ್ಷಸನು ಹಿಡಿದುಕೊಂಡನು.

12078008 ರಾಜೋವಾಚ|
12078008a ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಮದ್ಯಪಃ|
12078008c ನಾನಾಹಿತಾಗ್ನಿರ್ನಾಯಜ್ವಾ ಮಾಮಕಾಂತರಮಾವಿಶಃ||

ರಾಜನು ಹೇಳಿದನು: "ನನ್ನ ಜನಪದದಲ್ಲಿ ಕಳ್ಳನಿಲ್ಲ, ನೀಚನಿಲ್ಲ. ಮದ್ಯಪಾನ ಮಾಡುವವನೂ ಇಲ್ಲ. ಅಗ್ನಿಹೋತ್ರವನ್ನು ಮಾಡದವನು, ಯಜ್ಞವನ್ನು ಮಾಡದವನು ಯಾರೂ ಇಲ್ಲ. ಹೀಗಿದ್ದರೂ ನೀನು ನನ್ನ ದೇಹವನ್ನು ಪ್ರವೇಶಿಸಿರುವೆ!

12078009a ನ ಚ ಮೇ ಬ್ರಾಹ್ಮಣೋಽವಿದ್ವಾನ್ನಾವ್ರತೀ ನಾಪ್ಯಸೋಮಪಃ|
12078009c ನಾನಾಹಿತಾಗ್ನಿರ್ವಿಷಯೇ ಮಾಮಕಾಂತರಮಾವಿಶಃ||

ನನ್ನ ರಾಜ್ಯದಲ್ಲಿ ವಿದ್ವಾಂಸನಲ್ಲದ ಬ್ರಾಹ್ಮಣನಿಲ್ಲ. ಉತ್ತಮ ವ್ರತಾನುಷ್ಠಾನಗಳನ್ನು ಮಾಡದವನು ಇಲ್ಲ. ಯಜ್ಞದಲ್ಲಿ ಸೋಮಪಾನವನ್ನು ಮಾಡದವನಿಲ್ಲ. ಅಗ್ನಿಯಿಲ್ಲದೇ ಇರುವವನಿಲ್ಲ. ಯಜ್ಞಮಾಡದವನಿಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಪ್ರವೇಶಿಸಿರುವೆ!

12078010a ನಾನಾಪ್ತದಕ್ಷಿಣೈರ್ಯಜ್ಞೈರ್ಯಜಂತೇ ವಿಷಯೇ ಮಮ|
12078010c ಅಧೀತೇ ನಾವ್ರತೀ ಕಶ್ಚಿನ್ಮಾಮಕಾಂತರಮಾವಿಶಃ||

ನನ್ನ ರಾಜ್ಯದಲ್ಲಿ ನಾನಾ ಆಪ್ತದಕ್ಷಿಣೆಗಳಿಂದ ಯಜ್ಞಗಳನ್ನು ಯಜಿಸುತ್ತಾರೆ. ಬ್ರಹ್ಮಚರ್ಯವ್ರತಧಾರಿಯಾಗದೇ ಯಾರೂ

ವೇದಗಳನ್ನು ಕಲಿಯುವುದಿಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078011a ಅಧೀಯತೇಽಧ್ಯಾಪಯಂತಿ ಯಜಂತೇ ಯಾಜಯಂತಿ ಚ|
12078011c ದದತಿ ಪ್ರತಿಗೃಹ್ಣಂತಿ ಷಟ್ಸು ಕರ್ಮಸ್ವವಸ್ಥಿತಾಃ||
12078012a ಪೂಜಿತಾಃ ಸಂವಿಭಕ್ತಾಶ್ಚ ಮೃದವಃ ಸತ್ಯವಾದಿನಃ|
12078012c ಬ್ರಾಹ್ಮಣಾ ಮೇ ಸ್ವಕರ್ಮಸ್ಥಾ ಮಾಮಕಾಂತರಮಾವಿಶಃ||

ನನ್ನ ಬ್ರಾಹ್ಮಣರು ಸ್ವಕರ್ಮಸ್ಥರಾಗಿ ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ ಮತ್ತು ಪ್ರತಿಗ್ರಹಣ ಈ ಆರು ಕರ್ಮಗಳಲ್ಲಿ ನಿರತರಾಗಿದ್ದಾರೆ. ಅವರು ಸತ್ಕರಿಸಲ್ಪಟ್ಟಿದ್ದಾರೆ. ಅವರು ಮೃದುಸ್ವಭಾವದವರು ಮತ್ತು ಸತ್ಯವಾದಿಗಳು. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078013a ನ ಯಾಚಂತೇ ಪ್ರಯಚ್ಚಂತಿ ಸತ್ಯಧರ್ಮವಿಶಾರದಾಃ|
12078013c ನಾಧ್ಯಾಪಯಂತ್ಯಧೀಯಂತೇ ಯಜಂತೇ ನ ಚ ಯಾಜಕಾಃ||
12078014a ಬ್ರಾಹ್ಮಣಾನ್ಪರಿರಕ್ಷಂತಿ ಸಂಗ್ರಾಮೇಷ್ವಪಲಾಯಿನಃ|
12078014c ಕ್ಷತ್ರಿಯಾ ಮೇ ಸ್ವಕರ್ಮಸ್ಥಾ ಮಾಮಕಾಂತರಮಾವಿಶಃ||

ನನ್ನ ರಾಜ್ಯದ ಸತ್ಯಧರ್ಮವಿಶಾರದ ಕ್ಷತ್ರಿಯರು ಸ್ವಕರ್ಮದಲ್ಲಿ ನಿರತರಾಗಿದ್ದು ದಾನವನ್ನು ಕೇಳುವುದಿಲ್ಲ, ದಾನವನ್ನು ಕೊಡುತ್ತಾರೆ. ಅಧ್ಯಯನ ಮಾಡುತ್ತಾರೆ, ಅಧ್ಯಾಪನ ಮಾಡಿಸುವುದಿಲ್ಲ. ಯಜಿಸುತ್ತಾರೆ. ಯಾಜಕರಲ್ಲ. ಬ್ರಾಹ್ಮಣರನ್ನು ಪರಿರಕ್ಷಿಸುತ್ತಾರೆ ಮತ್ತು ಸಂಗ್ರಾಮದಿಂದ ಹಿಮ್ಮೆಟ್ಟುವುದಿಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078015a ಕೃಷಿಗೋರಕ್ಷವಾಣಿಜ್ಯಮುಪಜೀವಂತ್ಯಮಾಯಯಾ|
12078015c ಅಪ್ರಮತ್ತಾಃ ಕ್ರಿಯಾವಂತಃ ಸುವ್ರತಾಃ ಸತ್ಯವಾದಿನಃ||
12078016a ಸಂವಿಭಾಗಂ ದಮಂ ಶೌಚಂ ಸೌಹೃದಂ ಚ ವ್ಯಪಾಶ್ರಿತಾಃ|
12078016c ಮಮ ವೈಶ್ಯಾಃ ಸ್ವಕರ್ಮಸ್ಥಾ ಮಾಮಕಾಂತರಮಾವಿಶಃ||

ನನ್ನ ದೇಶದ ವೈಶ್ಯರು ಸ್ವಕರ್ಮಗಳಲ್ಲಿ ನಿರತರಾಗಿದ್ದು
ಮೋಸಮಾಡದೇ ಕೃಷಿ-ಗೋರಕ್ಷಣೆ-ವಾಣಿಜ್ಯಗಳಿಂದ
ಉಪಜೀವನವನ್ನು ನಡೆಸುತ್ತಾರೆ. ಅವರು ಅಪ್ರಮತ್ತರೂ,
ಕ್ರಿಯಾವಂತರೂ, ಸುವ್ರತರೂ ಸತ್ಯವಾದಿಗಳೂ ಆಗಿದ್ದಾರೆ.
ಹಂಚಿಕೊಳ್ಳುವುದನ್ನೂ, ದಮ-ಶೌಚಗಳನ್ನೂ, ಸೌಹಾರ್ದತೆಯನ್ನೂ
ಆಶ್ರಯಿಸಿದ್ದಾರೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ
ಪ್ರವೇಶಿಸಿರುವೆ?

12078017a ತ್ರೀನ್ವರ್ಣಾನನುತಿಷ್ಠಂತಿ ಯಥಾವದನಸೂಯಕಾಃ|
12078017c ಮಮ ಶೂದ್ರಾಃ ಸ್ವಕರ್ಮಸ್ಥಾ ಮಾಮಕಾಂತರಮಾವಿಶಃ||

ನನ್ನ ರಾಜ್ಯದ ಶೂದ್ರರು ಸ್ವಕರ್ಮಗಳಲ್ಲಿ ನಿರತರಾಗಿ ಅಸೂಯೆಯಿಲ್ಲದೇ
ಮೂರು ವರ್ಣದವರನ್ನೂ ಸೇವೆಗೈಯುತ್ತಾರೆ. ಹೀಗಿದ್ದರೂ ನೀನು ನನ್ನ
ಶರೀರವನ್ನು ಏಕೆ ಪ್ರವೇಶಿಸಿರುವೆ?

12078018a ಕೃಪಣಾನಾಥವೃದ್ಧಾನಾಂ ದುರ್ಬಲಾತುರಯೋಷಿತಾಮ್|
12078018c ಸಂವಿಭಕ್ತಾಸ್ಮಿ ಸರ್ವೇಷಾಂ ಮಾಮಕಾಂತರಮಾವಿಶಃ||

ನಾನು ಕೃಪಣರು, ಅನಾಥರು, ವೃದ್ಧರು, ದುರ್ಬಲರು, ರೋಗಿಗಳು
ಮತ್ತು ಸ್ತ್ರೀಯರಿಗೆ ಅನ್ನ-ವಸ್ತ್ರಾದಿಗಳನ್ನಿತ್ತು ರಕ್ಷಿಸುತ್ತೇನೆ. ಹೀಗಿದ್ದರೂ
ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078019a ಕುಲದೇಶಾದಿಧರ್ಮಾಣಾಂ ಪ್ರಥಿತಾನಾಂ ಯಥಾವಿಧಿ|
12078019c ಅವ್ಯುಚ್ಚೀತ್ತಾಸ್ಮಿ ಸರ್ವೇಷಾಂ ಮಾಮಕಾಂತರಮಾವಿಶಃ||

ಕುಲ, ದೇಶ ಮತ್ತು ಜಾತಿ ಧರ್ಮಗಳನ್ನು ಯಥಾವಿಧಿಯಾಗಿ ಪಾಲಿಸಿಕೊಂಡು ಮತ್ತು ಯಾರೂ ಅದರಿಂದ ಚ್ಯುತಿಯಾಗದಂತೆ ನೋಡಿಕೊಳ್ಳುತ್ತಾ ಬಂದಿದ್ದೇನೆ. ಹೀಗಿದ್ದರೂ ನನ್ನ ಶರೀರವನ್ನು ನೀನು ಪ್ರವೇಶಿಸಿರುವೆ.

12078020a ತಪಸ್ವಿನೋ ಮೇ ವಿಷಯೇ ಪೂಜಿತಾಃ ಪರಿಪಾಲಿತಾಃ|
12078020c ಸಂವಿಭಕ್ತಾಶ್ಚ ಸತ್ಕೃತ್ಯ ಮಾಮಕಾಂತರಮಾವಿಶಃ||

ನನ್ನ ದೇಶದಲ್ಲಿರುವ ತಪಸ್ವಿಗಳನ್ನು ನಾನು ಪೂಜಿಸುತ್ತೇನೆ ಮತ್ತು ಪರಿಪಾಲಿಸುತ್ತೇನೆ. ಎಲ್ಲರಿಗೂ ಬೇಕಾದುದನ್ನು ಕೊಟ್ಟು ಸತ್ಕರಿಸಿದ್ದೇನೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078021a ನಾಸಂವಿಭಜ್ಯ ಭೋಕ್ತಾಸ್ಮಿ ನ ವಿಶಾಮಿ ಪರಸ್ತ್ರಿಯಮ್|
12078021c ಸ್ವತಂತ್ರೋ ಜಾತು ನ ಕ್ರೀಡೇ ಮಾಮಕಾಂತರಮಾವಿಶಃ||

ದೇವತೆ-ಪಿತೃ-ಅತಿಥಿಗಳಿಗೆ ನೀಡದೇ ನಾನು ಊಟಮಾಡುವುದಿಲ್ಲ. ಪರಸ್ತ್ರೀಯರನ್ನು ಸೇರುವುದಿಲ್ಲ. ಸ್ವಚ್ಛಂದನಾಗಿ ಕ್ರೀಡಿಸುವುದಿಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078022a ನಾಬ್ರಹ್ಮಚಾರೀ ಭಿಕ್ಷಾವಾನ್ಭಿಕ್ಷುರ್ವಾಬ್ರಹ್ಮಚಾರಿಕಃ|
12078022c ಅನೃತ್ವಿಜಂ ಹುತಂ ನಾಸ್ತಿ ಮಾಮಕಾಂತರಮಾವಿಶಃ||

ಬ್ರಹ್ಮಚಾರಿಯಾಗಿರದವನು ಭಿಕ್ಷೆ ಬೇಡುವುದಿಲ್ಲ. ಭಿಕ್ಷುವು ಬ್ರಹ್ಮಚರ್ಯವನ್ನು ಪಾಲಿಸದೇ ಇರುವುದಿಲ್ಲ. ಋತ್ವಿಜನಲ್ಲದವನು

ಹೋಮಕಾರ್ಯಗಳನ್ನು ನಡೆಸುವುದಿಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078023a ನಾವಜಾನಾಮ್ಯಹಂ ವೃದ್ಧಾನ್ನ ವೈದ್ಯಾನ್ನ ತಪಸ್ವಿನಃ|
12078023c ರಾಷ್ಟ್ರೇ ಸ್ವಪತಿ ಜಾಗರ್ಮಿ ಮಾಮಕಾಂತರಮಾವಿಶಃ||

ವೃದ್ಧರು, ವಿದ್ವಾಂಸರು ಮತ್ತು ತಪಸ್ವಿಗಳನ್ನು ನಾನು ಅವಹೇಳನ ಮಾಡುವುದಿಲ್ಲ. ರಾಷ್ಟ್ರವು ನಿದ್ದೆಮಾಡುತ್ತಿರುವಾಗ ನಾನು ಜಾಗೃತನಾಗಿರುತ್ತೇನೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078024a ವೇದಾಧ್ಯಯನಸಂಪನ್ನಸ್ತಪಸ್ವೀ ಸರ್ವಧರ್ಮವಿತ್|
12078024c ಸ್ವಾಮೀ ಸರ್ವಸ್ಯ ರಾಜ್ಯಸ್ಯ ಶ್ರೀಮಾನ್ಮಮ ಪುರೋಹಿತಃ||

ನನ್ನ ಪುರೋಹಿತನು ವೇದಾಧ್ಯಯಸಂಪನ್ನನು. ತಪಸ್ವಿಯು. ಸರ್ವಧರ್ಮವಿದುವು. ರಾಜ್ಯದ ಎಲ್ಲವುಗಳ ಸ್ವಾಮಿ ಶ್ರೀಮಾನನು.

12078025a ದಾನೇನ ದಿವ್ಯಾನಭಿವಾಂಚಾಮಿ ಲೋಕಾನ್
ಸತ್ಯೇನಾಥೋ ಬ್ರಾಹ್ಮಣಾನಾಂ ಚ ಗುಪ್ತ್ಯಾ|
12078025c ಶುಶ್ರೂಷಯಾ ಚಾಪಿ ಗುರೂನುಪೈಮಿ
ನ ಮೇ ಭಯಂ ವಿದ್ಯತೇ ರಾಕ್ಷಸೇಭ್ಯಃ||

ದಾನದಿಂದ ದಿವ್ಯ ಲೋಕಗಳನ್ನು ಬಯಸುತ್ತೇನೆ. ಅನಾಥ ಬ್ರಾಹ್ಮಣರನ್ನು ರಕ್ಷಿಸಿ ಸತ್ಯನಾಗಿದ್ದೇನೆ. ಶುಶ್ರೂಷೆಗಳಿಂದ ಗುರುಗಳನ್ನು ಪ್ರೀತಗೊಳಿಸಿದ್ದೇನೆ. ರಾಕ್ಷಸರಿಂದ ನನಗೆ ಭಯವೆನ್ನುವುದು ಇಲ್ಲ.

12078026a ನ ಮೇ ರಾಷ್ಟ್ರೇ ವಿಧವಾ ಬ್ರಹ್ಮಬಂಧುರ್

ನ ಬ್ರಾಹ್ಮಣಃ ಕೃಪಣೋ ನೋತ ಚೋರಃ|
12078026c ನ ಪಾರಜಾಯೀ ನ ಚ ಪಾಪಕರ್ಮಾ
ನ ಮೇ ಭಯಂ ವಿದ್ಯತೇ ರಾಕ್ಷಸೇಭ್ಯಃ||

ನನ್ನ ರಾಷ್ಟ್ರದಲ್ಲಿ ವಿಧವೆಯಿಲ್ಲ. ಅಧಮ ಬ್ರಾಹ್ಮಣನಿಲ್ಲ. ಬ್ರಾಹ್ಮಣರಲ್ಲಿ ಯಾರೂ ಕೃಪಣರೂ, ಕಳ್ಳರೂ, ಜೂಜುಗಾರನಾಗಲೀ, ಅನಧಿಕಾರಿಗಳಿಗೆ ಯಜ್ಞಮಾಡಿಸುವುದನ್ನಾಗಲೀ, ಪಾಪಕರ್ಮಗಳನ್ನು ಮಾಡುವವನಾಗಲೀ ಇಲ್ಲ. ಆದುದರಿಂದ ರಾಕ್ಷಸರಿಂದ ನನಗೆ ಭಯವೆನ್ನುವುದೇ ಇಲ್ಲ.

12078027a ನ ಮೇ ಶಸ್ತ್ರೈರನಿರ್ಭಿನ್ನಮಂಗೇ ದ್ವ್ಯಂಗುಲಮಂತರಮ್|
12078027c ಧರ್ಮಾರ್ಥಂ ಯುಧ್ಯಮಾನಸ್ಯ ಮಾಮಕಾಂತರಮಾವಿಶಃ||

ಧರ್ಮಕ್ಕಾಗಿ ಯುದ್ಧಮಾಡುತ್ತಿರುವಾಗ ನನ್ನ ಶರೀರದಿಂದ ಶಸ್ತ್ರಗಳಿಂದ ಗಾಯಗೊಳ್ಳದಿರುವ ಎರಡು ಅಂಗುಲ ಪ್ರದೇಶವೂ ಇಲ್ಲ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?

12078028a ಗೋಬ್ರಾಹ್ಮಣೇ ಚ ಯಜ್ಞೇ ಚ ನಿತ್ಯಂ ಸ್ವಸ್ತ್ಯಯನಂ ಮಮ|
12078028c ಆಶಾಸತೇ ಜನಾ ರಾಷ್ಟ್ರೇ ಮಾಮಕಾಂತರಮಾವಿಶಃ||

ನನ್ನ ರಾಷ್ಟ್ರದಲ್ಲಿ ಎಲ್ಲರೂ ಗೋಬ್ರಾಹ್ಮಣರಿಗೆ ಮತ್ತು ಯಜ್ಞಗಳಿಗೆ ನಿತ್ಯವೂ ಮಂಗಳಾಶಾಸನೆಗಳನ್ನು ಹೇಳುತ್ತಾರೆ. ಹೀಗಿದ್ದರೂ ನೀನು ನನ್ನ ಶರೀರವನ್ನು ಏಕೆ ಪ್ರವೇಶಿಸಿರುವೆ?”

12078029 ರಾಕ್ಷಸ ಉವಾಚ|
12078029a ಯಸ್ಮಾತ್ಸರ್ವಾಸ್ವವಸ್ಥಾಸು ಧರ್ಮಮೇವಾನ್ವವೇಕ್ಷಸೇ|
12078029c ತಸ್ಮಾತ್ಪ್ರಾಪ್ತುಹಿ ಕೈಕೇಯ ಗೃಹಾನ್ಸ್ವಸ್ತಿ ವ್ರಜಾಮ್ಯಹಮ್||

ರಾಕ್ಷಸನು ಹೇಳಿದನು: "ಕೈಕೇಯ! ಸರ್ವ ಅವಸ್ಥೆಗಳಲ್ಲಿ ನೀನು ಧರ್ಮವನ್ನೇ ಕಾಣುತ್ತಿರುವೆ. ಆದುದರಿಂದ ನೀನು ಕುಶಲನಾಗಿ ನಿನ್ನ ಮನೆಗೆ ಹೋಗಬಹುದು. ನಾನು ಹೋಗುತ್ತೇನೆ.

12078030a ಯೇಷಾಂ ಗೋಬ್ರಾಹ್ಮಣಾ ರಕ್ಷ್ಯಾಃ ಪ್ರಜಾ ರಕ್ಷ್ಯಾಶ್ಚ ಕೇಕಯ|
12078030c ನ ರಕ್ಷೋಭ್ಯೋ ಭಯಂ ತೇಷಾಂ ಕುತ ಏವ ತು ಮಾನುಷಾತ್[211]||

ಕೇಕಯ! ಯಾವ ರಾಜನು ಗೋಬ್ರಾಹ್ಮಣರನ್ನು ರಕ್ಷಿಸಿ ಪ್ರಜೆಗಳನ್ನೂ ರಕ್ಷಿಸುತ್ತಾನೋ ಅಂಥವನಿಗೆ ರಾಕ್ಷಸರಿಂದ ಭಯವಿಲ್ಲದಿರುವಾಗ ಮನುಷ್ಯರಿಂದ ಭಯವು ಹೇಗೆತಾನೇ ಉಂಟಾದೀತು?

12078031a ಯೇಷಾಂ ಪುರೋಗಮಾ ವಿಪ್ರಾ ಯೇಷಾಂ ಬ್ರಹ್ಮಬಲಂ ಬಲಮ್|
12078031c ಪ್ರಿಯಾತಿಥ್ಯಾಸ್ತಥಾ ದಾರಾಸ್ತೇ ವೈ ಸ್ವರ್ಗಜಿತೋ ನರಾಃ||

ಯಾರ ಮುಂದೆ ಬ್ರಾಹ್ಮಣರಿದ್ದಾರೋ, ಯಾರಿಗೆ ಎಲ್ಲಕ್ಕಿಂತ ಹೆಚ್ಚಿನ ಬಲವು ಬ್ರಾಹ್ಮಣನೇ ಆಗಿರುವನೋ, ಯಾರ ರಾಜ್ಯದಲ್ಲಿ ನಾಗರೀಕರು ಅತಿಥಿಪ್ರಿಯರಾಗಿರುವರೋ ಅಂತಹ ರಾಜನು ನಿಶ್ಚಯವಾಗಿಯೂ ಸ್ವರ್ಗವನ್ನು ಜಯಿಸುತ್ತಾನೆ.""

12078032 ಭೀಷ್ಮ ಉವಾಚ|
12078032a ತಸ್ಮಾದ್ದ್ವಿಜಾತೀನ್ರಕ್ಷೇತ ತೇ ಹಿ ರಕ್ಷಂತಿ ರಕ್ಷಿತಾಃ|
12078032c ಆಶೀರೇಷಾಂ ಭವೇದ್ರಾಜ್ಞಾಂ ರಾಷ್ಟ್ರಂ ಸಮ್ಯಕ್ಪ್ರವರ್ಧತೇ||

ಭೀಷ್ಮನು ಹೇಳಿದನು: "ಆದುದರಿಂದ ಬ್ರಾಹ್ಮಣರನ್ನು ರಕ್ಷಿಸಬೇಕೆಂದು ತಿಳಿದುಕೋ. ಬ್ರಾಹ್ಮಣರನ್ನು ರಕ್ಷಿಸಿದವರನ್ನು ಅವರು ರಕ್ಷಿಸುತ್ತಾರೆ.

---

211 ಪಾವಕಾತ್ ಎಂಬ ಪಾಠಾಂತರವಿದೆ.

ರಾಜನಿಗೆ ಅವರ ಆಶೀರ್ವಾದಗಳು ದೊರೆಯುತ್ತವೆ ಮತ್ತು ರಾಷ್ಟ್ರವು ಚೆನ್ನಾಗಿ ಅಭಿವೃದ್ಧಿಗೊಳ್ಳುತ್ತದೆ.

12078033a ತಸ್ಮಾದ್ರಾಜ್ಞಾ ವಿಶೇಷೇಣ ವಿಕರ್ಮಸ್ಥಾ ದ್ವಿಜಾತಯಃ|
12078033c ನಿಯಮ್ಯಾಃ ಸಂವಿಭಜ್ಯಾಶ್ಚ ಪ್ರಜಾನುಗ್ರಹಕಾರಣಾತ್||

ಆದುದರಿಂದ ರಾಜನಾದವನು ಪ್ರಜಾನುಗ್ರಹ ಕಾರಣದಿಂದ ವಿಶೇಷವಾಗಿ ಸ್ವಕರ್ಮದಲ್ಲಿ ತೊಡಗಿರದ ಬ್ರಾಹ್ಮಣರನ್ನು ನಿಯಂತ್ರಿಸಿ ಅವರನ್ನು ಬೇರ್ಪಡಿಸಬೇಕು.

12078034a ಯ ಏವಂ ವರ್ತತೇ ರಾಜಾ ಪೌರಜಾನಪದೇಷ್ವಿಹ|
12078034c ಅನುಭೂಯೇಹ ಭದ್ರಾಣಿ ಪ್ರಾಪ್ನೋತೀಂದ್ರಸಲೋಕತಾಮ್||

ಪೌರಜನಪದರೊಂದಿಗೆ ಹೀಗೆ ವರ್ತಿಸುವ ರಾಜನು ಇಲ್ಲಿ ಮಂಗಳರೂಪ ಸುಖವನ್ನೂ ಅವಸಾನಾನಂತರದಲ್ಲಿ ಇಂದ್ರಲೋಕವನ್ನೂ ಪಡೆಯುತ್ತಾನೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಕೈಕೇಯೋಪಾಖ್ಯಾನೇ ಅಷ್ಟಸಪ್ತತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಕೈಕೇಯೋಪಾಖ್ಯಾನ ಎನ್ನುವ ಎಪ್ಪತ್ತೆಂಟನೇ ಅಧ್ಯಾಯವು.

೭೯

ವರ್ಣಸಂಕರದ ಸಮಯದಲ್ಲಿ ಸರ್ವ ವರ್ಣದವರ ಪಾತ್ರ (1-43).

12079001 ಯುಧಿಷ್ಠಿರ ಉವಾಚ|

12079001a ವ್ಯಾಖ್ಯಾತಾ ಕ್ಷತ್ರಧರ್ಮೇಣ ವೃತ್ತಿರಾಪತ್ಸು ಭಾರತ|
12079001c ಕಥಂ ಚಿದ್ವೈಶ್ಯಧರ್ಮೇಣ ಜೀವೇದ್ವಾ ಬ್ರಾಹ್ಮಣೋ ನ ವಾ||

ಯುಧಿಷ್ಠಿರನು ಹೇಳಿದನು: "ಭಾರತ! ಬ್ರಾಹ್ಮಣನು ಆಪತ್ಕಾಲದಲ್ಲಿ ಕ್ಷತ್ರಿಯ ಧರ್ಮದ ವೃತ್ತಿಯನ್ನು ಮಾಡಬಹುದು ಎಂದು ನೀನು ಹೇಳಿದೆ. ಬ್ರಾಹ್ಮಣನಾದವನು ವೈಶ್ಯಧರ್ಮದ ವೃತ್ತಿಯನ್ನನುಸರಿಸಿ ಜೀವಿಸಬಹುದೇ?"

12079002 ಭೀಷ್ಮ ಉವಾಚ|
12079002a ಅಶಕ್ತಃ ಕ್ಷತ್ರಧರ್ಮೇಣ ವೈಶ್ಯಧರ್ಮೇಣ ವರ್ತಯೇತ್|
12079002c ಕೃಷಿಗೋರಕ್ಷಮಾಸ್ಥಾಯ ವ್ಯಸನೇ ವೃತ್ತಿಸಂಕ್ಷಯೇ||

ಭೀಷ್ಮನು ಹೇಳಿದನು: "ತನ್ನ ವೃತ್ತಿಯು ನಾಶವಾದ ವ್ಯಸನ ಪರಿಸ್ಥಿತಿಯಲ್ಲಿ ಬ್ರಾಹ್ಮಣನು ಕ್ಷತ್ರಧರ್ಮದ ವೃತ್ತಿಯನ್ನು ಅವಲಂಬಿಸಲು ಅಶಕ್ತನಾದರೆ ಕೃಷಿ-ಗೋರಕ್ಷೆಗಳನ್ನು ಅವಲಂಬಿಸಿ ವೈಶ್ಯಧರ್ಮದಂತೆ ನಡೆದುಕೊಳ್ಳಬಹುದು."

12079003 ಯುಧಿಷ್ಠಿರ ಉವಾಚ|
12079003a ಕಾನಿ ಪಣ್ಯಾನಿ ವಿಕ್ರೀಣನ್ಸ್ವರ್ಗಲೋಕಾನ್ನ ಹೀಯತೇ|
12079003c ಬ್ರಾಹ್ಮಣೋ ವೈಶ್ಯಧರ್ಮೇಣ ವರ್ತಯನ್ಭರತರ್ಷಭ||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ಬ್ರಾಹ್ಮಣನು ವೈಶ್ಯಧರ್ಮದಲ್ಲಿ ನಡೆದುಕೊಂಡಿರುವಾಗ ಯಾವ ವಸ್ತುಗಳನ್ನು ಮಾರುವುದರಿಂದ ಅವನಿಗೆ ಸ್ವರ್ಗಲೋಕದ ಚ್ಯುತಿಯಾಗುವುದಿಲ್ಲ?"

12079004 ಭೀಷ್ಮ ಉವಾಚ|
12079004a ಸುರಾ ಲವಣಮಿತ್ಯೇವ ತಿಲಾನ್ಕೇಸರಿಣಃ ಪಶೂನ್|

12079004c ಋಷಭಾನ್ಮಧು ಮಾಂಸಂ ಚ ಕೃತಾನ್ನಂ ಚ ಯುಧಿಷ್ಠಿರ||
12079005a ಸರ್ವಾಸ್ವವಸ್ಥಾಸ್ವೇತಾನಿ ಬ್ರಾಹ್ಮಣಃ ಪರಿವರ್ಜಯೇತ್|
12079005c ಏತೇಷಾಂ ವಿಕ್ರಯಾತ್ತಾತ ಬ್ರಾಹ್ಮಣೋ ನರಕಂ ವ್ರಜೇತ್||

ಭೀಷ್ಮನು ಹೇಳಿದನು: "ಮದ್ಯ, ಉಪ್ಪು, ಸಿದ್ಧಪಡಿಸಿದ ದ್ರವಪದಾರ್ಥಗಳು, ಎಳ್ಳು, ಕುದುರೆ, ಕುರಿ, ಆಡು, ಹಸು, ಎತ್ತು ಮೊದಲಾದ ಪಶುಗಳು, ಜೇನುತುಪ್ಪ, ಮಾಂಸ, ಸಿದ್ಧಪಡಿಸಿದ ಅನ್ನ – ಇವುಗಳ ಮಾರಾಟವನ್ನು ಬ್ರಾಹ್ಮಣನು ಯಾವ ಅವಸ್ಥೆಗಳಲ್ಲಿಯೂ ಪರಿತ್ಯಜಿಸಬೇಕು. ಮಗೂ! ಇವುಗಳನ್ನು ಮಾರುವ ಬ್ರಾಹ್ಮಣನು ನರಕಕ್ಕೆ ಹೋಗುತ್ತಾನೆ.

12079006a ಅಜೋಽಗ್ನಿರ್ವರುಣೋ ಮೇಷಃ ಸೂರ್ಯೋಽಶ್ವಃ ಪೃಥಿವೀ ವಿರಾಟ್|
12079006c ಧೇನುರ್ಯಜ್ಞಶ್ಚ ಸೋಮಶ್ಚ ನ ವಿಕ್ರೇಯಾಃ ಕಥಂ ಚನ||

ಅಗ್ನಿಯ ರೂಪದ ಆಡು, ವರುಣನ ರೂಪದ ಟಗರು, ಸೂರ್ಯನ ರೂಪದ ಕುದುರೆ, ವಿರಾಟ್ ರೂಪದ ಭೂಮಿ, ಯಜ್ಞ-ಸೋಮಗಳ ರೂಪವಾದ ಹಸು – ಇವುಗಳನ್ನು ಬ್ರಾಹ್ಮಣನಾದವನು ಎಂದೂ ಮಾರಾಟಮಾಡಬಾರದು.

12079007a ಪಕ್ವೇನಾಮಸ್ಯ ನಿಮಯಂ ನ ಪ್ರಶಂಸಂತಿ ಸಾಧವಃ|
12079007c ನಿಮಯೇತ್ಪಕ್ವಮಾಮೇನ ಭೋಜನಾರ್ಥಾಯ ಭಾರತ||

ಭಾರತ! ಪಕ್ವ ಪದಾರ್ಥಗಳಿಂದ ಅಪಕ್ವ ಪದಾರ್ಥಗಳ ವಿನಿಮಯವನ್ನು ಸಾಧುಗಳು ಪ್ರಶಂಸಿಸುವುದಿಲ್ಲ. ಭೋಜನಾರ್ಥವಾಗಿ ಪಕ್ವಪದಾರ್ಥಕ್ಕೆ ಅಪಕ್ವ ಪದಾರ್ಥಗಳನ್ನು ವಿನಿಮಯ ಮಾಡಬಹುದು.

12079008a ವಯಂ ಸಿದ್ಧಮಶಿಷ್ಯಾಮೋ ಭವಾನ್ಸಾಧಯತಾಮಿದಮ್|

12079008c ಏವಂ ಸಮೀಕ್ಷ್ಯ ನಿಮಯನ್ನಾಧರ್ಮೋಽಸ್ತಿ ಕದಾ ಚನ॥

"ನಾವು ಸಿದ್ಧವಾದ ಅನ್ನವನ್ನು ಬಯಸುತ್ತೇವೆ. ನೀವು ಈ ಅಕ್ಕಿಯಿಂದ ಅನ್ನವನ್ನು ತಯಾರಿಸಿ ಕೊಡಿ." ಹೀಗೆ ಹೇಳಿ ಅಕ್ಕಿ ಮತ್ತು ಅನ್ನಗಳ ವಿನಿಮಯ ಮಾಡಿಕೊಂಡರೆ ಅದರಲ್ಲಿ ಯಾವ ಅಧರ್ಮವೂ ಇಲ್ಲ.

12079009a ಅತ್ರ ತೇ ವರ್ತಯಿಷ್ಯಾಮಿ ಯಥಾ ಧರ್ಮಃ ಪುರಾತನಃ|
12079009c ವ್ಯವಹಾರಪ್ರವೃತ್ತಾನಾಂ ತನ್ನಿಬೋಧ ಯುಧಿಷ್ಠಿರ॥

ಯುಧಿಷ್ಠಿರ! ಈ ವಿಷಯದಲ್ಲಿ ವ್ಯವಹಾರ ಮಾಡುತ್ತಿದ್ದವರಲ್ಲಿ ಪುರಾತನ ಧರ್ಮವು ಹೇಗೆ ನಡೆಯುತ್ತಿತ್ತು ಎನ್ನುವುದನ್ನು ಹೇಳುತ್ತೇನೆ. ಅದನ್ನು ಕೇಳು.

12079010a ಭವತೇಽಹಂ ದದಾನೀದಂ ಭವಾನೇತತ್ಪ್ರಯಚ್ಚತು|
12079010c ರುಚಿತೇ ವರ್ತತೇ ಧರ್ಮೋ ನ ಬಲಾತ್ಸಂಪ್ರವರ್ತತೇ॥

"ನಿನಗೆ ನಾನು ಇದನ್ನು ಕೊಡುತ್ತೇನೆ. ನೀನು ನನಗೆ ಅದನ್ನು ಕೊಡು." ಎಂದು ಪರಸ್ಪರ ಸಮ್ಮತಿಯಿಂದ ಮತ್ತು ಸಂತೋಷದಿಂದ ಪದಾರ್ಥಗಳನ್ನು ವಿನಿಮಯ ಮಾಡಿಕೊಳ್ಳುವುದು ಧರ್ಮವಾಗಿತ್ತು. ಬಲವನ್ನು ಉಪಯೋಗಿಸುವುದು ಅಧರ್ಮವಾಗಿತ್ತು.

12079011a ಇತ್ಯೇವಂ ಸಂಪ್ರವರ್ತಂತ ವ್ಯವಹಾರಾಃ ಪುರಾತನಾಃ|
12079011c ಋಷೀಣಾಮಿತರೇಷಾಂ ಚ ಸಾಧು ಚೇದಮಸಂಶಯಮ್॥

ಋಷಿಗಳಲ್ಲಿ ಮತ್ತು ಇತರ ಸಾಧು ಪುರುಷರಲ್ಲಿ ಪುರಾತನ ವ್ಯವಹಾರಗಳು ಹೀಗೆಯೇ ನಡೆಯುತ್ತಿದ್ದವು. ಅದರಲ್ಲಿ ಸಂಶಯವಿಲ್ಲ."

12079012 ಯುಧಿಷ್ಠಿರ ಉವಾಚ|

12079012a ಅಥ ತಾತ ಯದಾ ಸರ್ವಾಃ ಶಸ್ತ್ರಮಾದದತೇ ಪ್ರಜಾಃ|
12079012c ವ್ಯತ್ಕ್ರಮಂತಿ ಸ್ವಧರ್ಮೇಭ್ಯಃ ಕ್ಷತ್ರಸ್ಯ ಕ್ಷೀಯತೇ ಬಲಮ್||

ಯುಧಿಷ್ಠಿರನು ಹೇಳಿದನು: "ಅಯ್ಯಾ! ಒಂದು ವೇಳೆ ಪ್ರಜೆಗಳೆಲ್ಲರೂ ಶಸ್ತ್ರಧಾರಿಗಳಾಗಬೇಕಾಗಿ ಬಂದರೆ ಎಲ್ಲರೂ ಸ್ವಧರ್ಮಗಳನ್ನು ಅತಿಕ್ರಮಿಸಿದಂತಾಗಿ ರಾಜನ ಬಲವು ಕ್ಷೀಣಿಸುವುದಿಲ್ಲವೇ?

12079013a ರಾಜಾ ತ್ರಾತಾ ನ ಲೋಕೇ ಸ್ಯಾತ್ಕಿಂ ತದಾ ಸ್ಯಾತ್ಪರಾಯಣಮ್|
12079013c ಏತನ್ಮೇ ಸಂಶಯಂ ಬ್ರೂಹಿ ವಿಸ್ತರೇಣ ಪಿತಾಮಹ||

ಪಿತಾಮಹ! ಆಗ ರಾಜನು ಲೋಕಗಳ ತ್ರಾತಾರನೆಂದು ಹೇಗಾಗುತ್ತಾನೆ? ನನ್ನಲ್ಲಿರುವ ಈ ಸಂಶಯವನ್ನು ವಿಸ್ತಾರವಾಗಿ ಹೇಳಿ ಹೋಗಲಾಡಿಸು."

12079014 ಭೀಷ್ಮ ಉವಾಚ|
12079014a ದಾನೇನ ತಪಸಾ ಯಜ್ಞೈರದ್ರೋಹೇಣ ದಮೇನ ಚ|
12079014c ಬ್ರಾಹ್ಮಣಪ್ರಮುಖಾ ವರ್ಣಾಃ ಕ್ಷೇಮಮಿಚ್ಛೇಯುರಾತ್ಮನಃ||

ಭೀಷ್ಮನು ಹೇಳಿದನು: "ಬ್ರಾಹ್ಮಣ ಪ್ರಮುಖರಾದ ಎಲ್ಲ ವರ್ಣದವರೂ ದಾನ, ತಪಸ್ಸು, ಯಜ್ಞ, ಅದ್ರೋಹ ಮತ್ತು ದಮಗಳಿಂದ ತಮ್ಮ ಕ್ಷೇಮವನ್ನು ಬಯಸುತ್ತಿರಬೇಕು.

12079015a ತೇಷಾಂ ಯೇ ವೇದಬಲಿನಸ್ತ ಉತ್ಥಾಯ ಸಮಂತತಃ|
12079015c ರಾಜ್ಞೋ ಬಲಂ ವರ್ಧಯೇಯುರ್ಮಹೇಂದ್ರಸ್ಯೇವ ದೇವತಾಃ||

ಅವರಲ್ಲಿ ಯಾರಲ್ಲಿ ವೇದಬಲವಿರುತ್ತದೆಯೋ ಅವರು, ದೇವತೆಗಳು ಇಂದ್ರನನ್ನು ಹೇಗೋ ಹಾಗೆ, ಎಲ್ಲಕಡೆಗಳಿಂದಲೂ ಮೇಲೆದ್ದು ರಾಜನ

ಬಲವನ್ನು ವರ್ಧಿಸುತ್ತಾರೆ.

12079016a ರಾಜ್ಞೋ ಹಿ ಕ್ಷೀಯಮಾಣಸ್ಯ ಬ್ರಹ್ಮೈವಾಹುಃ ಪರಾಯಣಮ್|
12079016c ತಸ್ಮಾದ್ಬ್ರಹ್ಮಬಲೇನೈವ ಸಮುತ್ಥೇಯಂ ವಿಜಾನತಾ||

ಕ್ಷೀಣಿಸುತ್ತಿರುವ ರಾಜನಿಗೆ ಬ್ರಾಹ್ಮಣರೇ ಪರಾಯಣರು ಎಂದು ಹೇಳುತ್ತಾರೆ. ಆದುದರಿಂದ ಅಂತಹ ರಾಜನು ಬ್ರಹ್ಮಬಲದಿಂದಲೇ ಅಭ್ಯುದಯವನ್ನು ಹೊಂದಬೇಕು.

12079017a ಯದಾ ತು ವಿಜಯೀ ರಾಜಾ ಕ್ಷೇಮಂ ರಾಷ್ಟ್ರೇऽಭಿಸಂದಧೇತ್|
12079017c ತದಾ ವರ್ಣಾ ಯಥಾಧರ್ಮಮಾವಿಶೇಯುಃ ಸ್ವಕರ್ಮಸು||

ವಿಜಯಿಯಾದ ರಾಜನು ಪುನಃ ರಾಷ್ಟ್ರವನ್ನು ಕ್ಷೇಮಗೊಳಿಸಿದ ನಂತರ ಎಲ್ಲ ವರ್ಣದವರೂ ತಮ್ಮ ತಮ್ಮ ಕರ್ಮಗಳಲ್ಲಿ ಪುನಃ ತೊಡಗಿಸಿಕೊಳ್ಳಬೇಕು.

12079018a ಉನ್ಮರ್ಯಾದೇ ಪ್ರವೃತ್ತೇ ತು ದಸ್ಯುಭಿಃ ಸಂಕರೇ ಕೃತೇ|
12079018c ಸರ್ವೇ ವರ್ಣಾ ನ ದುಷ್ಯೇಯುಃ ಶಸ್ತ್ರವಂತೋ ಯುಧಿಷ್ಠಿರ||

ಯುಧಿಷ್ಠಿರ! ದಸ್ಯುಗಳು ವರ್ಣಸಂಕರವೆನ್ನುವ ಉನ್ಮಾದವನ್ನು ಮಾಡತೊಡಗಿದರೆ ಸರ್ವವರ್ಣದವರೂ ಶಸ್ತ್ರಧಾರಿಗಳಾಗಿ ಅವರನ್ನು ನಾಶಗೊಳಿಸಬೇಕು. ಅದರಲ್ಲಿ ಪಾಪವೆನ್ನುವುದಿಲ್ಲ.”

12079019 ಯುಧಿಷ್ಠಿರ ಉವಾಚ|
12079019a ಅಥ ಚೇತ್ಸರ್ವತಃ ಕ್ಷತ್ರಂ ಪ್ರದುಷ್ಯೇದ್ಬ್ರಾಹ್ಮಣಾನ್ಪ್ರತಿ|
12079019c ಕಸ್ತಸ್ಯ ಬ್ರಾಹ್ಮಣಸ್ತ್ರಾತಾ ಕೋ ಧರ್ಮಃ ಕಿಂ ಪರಾಯಣಮ್||

ಯುಧಿಷ್ಠಿರನು ಹೇಳಿದನು: “ಕ್ಷತ್ರಿಯರೇ ಬ್ರಾಹ್ಮಣರ ವಿರುದ್ಧವಾಗಿ

ನಡೆದುಕೊಂಡರೆ ಬ್ರಾಹ್ಮಣರನ್ನು ಪೊರೆಯುವವರು ಯಾರು?
ಧರ್ಮದ ಪರಾಯಣರು ಆಗ ಯಾರಾಗುತ್ತಾರೆ?”

12079020 ಭೀಷ್ಮ ಉವಾಚ|
12079020a ತಪಸಾ ಬ್ರಹ್ಮಚರ್ಯೇಣ ಶಸ್ತ್ರೇಣ ಚ ಬಲೇನ ಚ|
12079020c ಅಮಾಯಯಾ ಮಾಯಯಾ ಚ ನಿಯಂತವ್ಯಂ ತದಾ ಭವೇತ್||

ಭೀಷ್ಮನು ಹೇಳಿದನು: “ಆಗ ಬ್ರಾಹ್ಮಣರು ತಪಸ್ಸು, ಬ್ರಹ್ಮಚರ್ಯ,
ಶಸ್ತ್ರ ಮತ್ತು ಬಲಗಳಿಂದ, ನಿಷ್ಕಪಟ ವ್ಯವಹಾರಗಳಿಂದ ಅಥವಾ
ಭೇದನೀತಿಯಿಂದ ಕ್ಷತ್ರಿಯರನ್ನು ಹತೋಟಿಗೆ ತರಬೇಕು.

12079021a ಕ್ಷತ್ರಸ್ಯಾಭಿಪ್ರವೃದ್ಧಸ್ಯ ಬ್ರಾಹ್ಮಣೇಷು ವಿಶೇಷತಃ|
12079021c ಬ್ರಹ್ಮೈವ ಸಂನಿಯಂತೃ ಸ್ಯಾತ್ ಕ್ಷತ್ರಂ ಹಿ ಬ್ರಹ್ಮಸಂಭವಮ್||

ರಾಜನಾದವನು ಪ್ರಜೆಗಳ ಮೇಲೆ ಮತ್ತು ಅದರಲ್ಲೂ ವಿಶೇಷವಾಗಿ
ಬ್ರಾಹ್ಮಣರ ಮೇಲೆ ಅತ್ಯಾಚಾರವನ್ನೆಸಗತೊಡಗಿದರೆ ಅವನನ್ನು
ಬ್ರಾಹ್ಮಣರೇ ನಿಯಂತ್ರಿಸಬೇಕು. ಏಕೆಂದರೆ ಕ್ಷತ್ರಿಯನು
ಬ್ರಾಹ್ಮಣನಿಂದಲೇ ಹುಟ್ಟಿದವನು.

12079022a ಅದ್ಭ್ಯೋಽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್|
12079022c ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ||

ನೀರಿನಲ್ಲಿ ಹುಟ್ಟಿದ ಅಗ್ನಿ, ಬ್ರಹ್ಮನಲ್ಲಿ ಹುಟ್ಟಿದ ಕ್ಷತ್ರ, ಕಲ್ಲಿನಿಂದ ಹುಟ್ಟಿದ
ಲೋಹ ಈ ಎಲ್ಲ ಸರ್ವತ್ರವ್ಯಾಪಿಗಳೂ ತಮ್ಮ ತಮ್ಮ
ಯೋನಿಗಳಲ್ಲಿಯೇ ಶಾಂತವಾಗುತ್ತವೆ.

12079023a ಯದಾ ಚಿನತ್ತ್ಯಯೋಽಶ್ಮಾನಮಗ್ನಿಶ್ಚಾಪೋಽಭಿಪದ್ಯತೇ|

12079023c ಕ್ಷತ್ರಂ ಚ ಬ್ರಾಹ್ಮಣಂ ದ್ವೇಷ್ಟಿ ತದಾ ಶಾಮ್ಯಂತಿ ತೇ ತ್ರಯಃ||

ಲೋಹವು ಕಲ್ಲನ್ನು ಭೇದಿಸಲು ಪ್ರಯತ್ನಿಸಿದರೆ, ಅಗ್ನಿಯು ನೀರನ್ನು ಹೊಕ್ಕರೆ ಮತ್ತು ಕ್ಷತ್ರಿಯನು ಬ್ರಾಹ್ಮಣನನ್ನು ದ್ವೇಷಿಸಿದರೆ ಈ ಮೂವರೂ ನಾಶಹೊಂದುತ್ತಾರೆ.

12079024a ತಸ್ಮಾದ್ಬ್ರಹ್ಮಣಿ ಶಾಮ್ಯಂತಿ ಕ್ಷತ್ರಿಯಾಣಾಂ ಯುಧಿಷ್ಠಿರ|
12079024c ಸಮುದೀರ್ಣಾನ್ಯಜೇಯಾನಿ ತೇಜಾಂಸಿ ಚ ಬಲಾನಿ ಚ||

ಯುಧಿಷ್ಠಿರ! ಆದುದರಿಂದ ಕ್ಷತ್ರಿಯರ ಪ್ರಚಂಡ ಮತ್ತು ಅಜೇಯ ತೇಜಸ್ಸು-ಬಲಗಳು ಬ್ರಾಹ್ಮಣರಲ್ಲಿ ಶಾಂತವಾಗುತ್ತವೆ.

12079025a ಬ್ರಹ್ಮವೀರ್ಯೇ ಮೃದೂಭೂತೇ ಕ್ಷತ್ರವೀರ್ಯೇ ಚ ದುರ್ಬಲೇ|
12079025c ದುಷ್ಟೇಷು ಸರ್ವವರ್ಣೇಷು ಬ್ರಾಹ್ಮಣಾನ್ಪ್ರತಿ ಸರ್ವಶಃ||
12079026a ಯೇ ತತ್ರ ಯುದ್ಧಂ ಕುರ್ವಂತಿ ತ್ಯಕ್ತ್ವಾ ಜೀವಿತಮಾತ್ಮನಃ|
12079026c ಬ್ರಾಹ್ಮಣಾನ್ಪರಿರಕ್ಷಂತೋ ಧರ್ಮಮಾತ್ಮಾನಮೇವ ಚ||
12079027a ಮನಸ್ವಿನೋ ಮನ್ಯುಮಂತಃ ಪುಣ್ಯಲೋಕಾ ಭವಂತಿ ತೇ|
12079027c ಬ್ರಾಹ್ಮಣಾರ್ಥಂ ಹಿ ಸರ್ವೇಷಾಂ ಶಸ್ತ್ರಗ್ರಹಣಮಿಷ್ಯತೇ||

ಬ್ರಹ್ಮವೀರ್ಯವು ಮೃದುವಾದಾಗ, ಕ್ಷತ್ರವೀರ್ಯವು ದುರ್ಬಲವಾದಾಗ, ಸರ್ವವರ್ಣದವರೂ ಬ್ರಾಹ್ಮಣರ ಕುರಿತು ಎಲ್ಲರೀತಿಯಲ್ಲಿ ದುಷ್ಟರಾಗಿ ವರ್ತಿಸಿದಾಗ ತಮ್ಮ ಜೀವವನ್ನೇ ತೊರೆದು ಯುದ್ಧಮಾಡಿ ಬ್ರಾಹ್ಮಣರನ್ನು ರಕ್ಷಿಸುವವರು ಧರ್ಮಾತ್ಮರೇ ಸರಿ. ಅಂಥಹ ಮನಸ್ವೀ ಮನ್ಯುಮಂತರು ಪುಣ್ಯಲೋಕಗಳಿಗೆ ಹೋಗುತ್ತಾರೆ. ಬ್ರಾಹ್ಮಣರಿಗೋಸ್ಕರ ಎಲ್ಲರೂ ಶಸ್ತ್ರಗ್ರಹಣ ಮಾಡಬಹುದು.

12079028a ಅತಿ ಸ್ವಿಷ್ಟಸ್ವಧೀತಾನಾಂ ಲೋಕಾನತಿ ತಪಸ್ವಿನಾಮ್|

12079028c ಅನಾಶಕಾಗ್ಮ್ಯೇರ್ವಿಶತಾಂ ಶೂರಾ ಯಾಂತಿ ಪರಾಂ ಗತಿಮ್‌॥

ಯಜ್ಞಮಾಡಿದವರಿಗೆ, ವೇದಾಧ್ಯಯನ ಮಾಡಿದವರಿಗೆ, ತಪಸ್ಸು ಮತ್ತು ಉಪವಾಸ ವ್ರತಗಳನ್ನು ಮಾಡಿದವರಿಗೆ ದೊರಕುವ ಪರಮ ಲೋಕಗಳು ಮತ್ತು ಗತಿಯು ಬ್ರಾಹ್ಮಣರನ್ನು ರಕ್ಷಿಸುವ ಶೂರನಿಗೆ ದೊರೆಯುತ್ತದೆ.

12079028E ಏವಮೇವಾತ್ಮನಸ್ತ್ಯಾಗಾನ್ನಾನ್ಯಂ ಧರ್ಮಂ ವಿದುರ್ಜನಾಃ|
12079029a ತೇಭ್ಯೋ ನಮಶ್ಚ ಭದ್ರಂ ಚ ಯೇ ಶರೀರಾಣಿ ಜುಹ್ವತಿ‌॥

ಹೀಗೆ ಧರ್ಮಯುದ್ಧದಲ್ಲಿ ದೇಹತ್ಯಾಗಕ್ಕಿಂತಲೂ ಹೆಚ್ಚಿನ ಧರ್ಮವೆಲ್ಲವೆಂದು ವಿದ್ವಾಂಸರು ತಿಳಿದಿದ್ದಾರೆ. ಹೀಗೆ ತಮ್ಮ ಶರೀರಗಳನ್ನು ಆಹುತಿಯನ್ನಾಗಿ ಕೊಡುವ ಅವರಿಗೆ ನಮಸ್ಕರ. ಅವರಿಗೆ ಮಂಗಳವಾಗಲಿ.

12079029c ಬ್ರಹ್ಮದ್ವಿಷೋ ನಿಯಚ್ಚಂತಸ್ತೇಷಾಂ ನೋऽಸ್ತು ಸಲೋಕತಾ|
12079029e ಬ್ರಹ್ಮಲೋಕಜಿತಃ ಸ್ವರ್ಗ್ಯಾನ್ವೀರಾಂಸ್ತಾನ್ಮನುರಬ್ರವೀತ್‌॥

ಬ್ರಹ್ಮದ್ವೇಷಿಗಳನ್ನು ಸಂಹರಿಸಿದವರಿಗೆ ದೊರಕುವ ಲೋಕಗಳು ನಮಗೂ ದೊರಕಲಿ. ಬ್ರಹ್ಮಲೋಕವನ್ನು ಗೆದ್ದ ಸ್ವರ್ಗೀಯರಾದ ಅವರು ವೀರರು ಎಂದೇ ಮನುವು ಹೇಳಿದ್ದಾನೆ.

12079030a ಯಥಾಶ್ವಮೇಧಾವಭೃಥೇ ಸ್ನಾತಾಃ ಪೂತಾ ಭವಂತ್ಯುತ|
12079030c ದುಷ್ಕೃತಃ ಸುಕೃತಶ್ಚೈವ ತಥಾ ಶಸ್ತ್ರಹತಾ ರಣೇ‌॥

ಅಶ್ವಮೇಧದ ನಂತರ ಅವಭೃತಸ್ನಾನದಲ್ಲಿ ಪವಿತ್ರರಾಗುವಂತೆ ಶಸ್ತ್ರದಿಂದ ರಣದಲ್ಲಿ ಹತರಾದವರ ದುಷ್ಕೃತ-ಸುಕೃತಗಳೂ

ಪಾವನವಾಗುತ್ತವೆ.

12079031a ಭವತ್ಯಧರ್ಮೋ ಧರ್ಮೋ ಹಿ ಧರ್ಮಾಧರ್ಮಾವುಭಾವಪಿ|
12079031c ಕಾರಣಾದ್ದೇಶಕಾಲಸ್ಯ ದೇಶಕಾಲಃ ಸ ತಾದೃಶಃ||

ದೇಶ-ಕಾಲಗಳ ಕಾರಣಗಳಿಂದ ಅಧರ್ಮವು ಧರ್ಮವಾಗುತ್ತದೆ.
ಮತ್ತು ಧರ್ಮವು ಅಧರ್ಮವೆನಿಸಿಕೊಳ್ಳುತ್ತದೆ.

12079032a ಮೈತ್ರಾಃ ಕ್ರೂರಾಣಿ ಕುರ್ವಂತೋ ಜಯಂತಿ ಸ್ವರ್ಗಮುತ್ತಮಮ್|
12079032c ಧರ್ಮ್ಯಾಃ ಪಾಪಾನಿ ಕುರ್ವಂತೋ ಗಚ್ಚಂತಿ ಪರಮಾಂ ಗತಿಮ್||

ಎಲ್ಲರಲ್ಲಿಯೂ ಮಿತ್ರಭಾವವನ್ನು ಹೊಂದಿರುವವರು
ಕ್ರೂರಕರ್ಮಗಳನ್ನೆಸಗಿ ಉತ್ತಮ ಸ್ವರ್ಗವನ್ನು ಜಯಿಸುತ್ತಾರೆ.
ಧಾರ್ಮಿಕರೂ ಪಾಪಕರ್ಮಗಳನ್ನೆಸಗಿ ಪರಮ ಗತಿಯನ್ನು
ಹೊಂದುತ್ತಾರೆ.

12079033a ಬ್ರಾಹ್ಮಣಸ್ತ್ರಿಷು ಕಾಲೇಷು ಶಸ್ತ್ರಂ ಗೃಹ್ಣನ್ನ ದುಷ್ಯತಿ|
12079033c ಆತ್ಮತ್ರಾಣೇ ವರ್ಣದೋಷೇ ದುರ್ಗಸ್ಯ ನಿಯಮೇಷು ಚ||

ಆತ್ಮರಕ್ಷಣೆಗೆ, ವರ್ಣದೋಷವುಂಟಾದಾಗ ಮತ್ತು ದುರ್ಗದ
ನಿಯಮವಿದ್ದಾಗ – ಈ ಮೂರು ಕಾಲಗಳಲ್ಲಿ ಬ್ರಾಹ್ಮಣರು ಶಸ್ತ್ರವನ್ನು
ಧರಿಸಿದರೆ ಅದು ದುಷ್ಕರ್ಮವೆನಿಸುವುದಿಲ್ಲ.”

12079034 ಯುಧಿಷ್ಠಿರ ಉವಾಚ|
12079034a ಅಭ್ಯುತ್ಥಿತೇ ದಸ್ಯುಬಲೇ ಕ್ಷತ್ರಾರ್ಥೇ ವರ್ಣಸಂಕರೇ|
12079034c ಸಂಪ್ರಮೂಢೇಷು ವರ್ಣೇಷು ಯದ್ಯನ್ಯೋಽಭಿಭವೇದ್ಬಲೀ||
12079035a ಬ್ರಾಹ್ಮಣೋ ಯದಿ ವಾ ವೈಶ್ಯಃ ಶೂದ್ರೋ ವಾ ರಾಜಸತ್ತಮ|
12079035c ದಸ್ಯುಭ್ಯೋಽಥ ಪ್ರಜಾ ರಕ್ಷೇದ್ದಂಡಂ ಧರ್ಮೇಣ ಧಾರಯನ್||

12079036a ಕಾರ್ಯಂ ಕುರ್ಯಾನ್ನ ವಾ ಕುರ್ಯಾತ್ಸಂವಾರ್ಯೋ ವಾ ಭವೇನ್ನ ವಾ|
12079036c ನ ಸ್ಮ ಶಸ್ತ್ರಂ ಗ್ರಹೀತವ್ಯಮನ್ಯತ್ರ ಕ್ಷತ್ರಬಂಧುತಃ||

ಯುಧಿಷ್ಠಿರನು ಹೇಳಿದನು: "ರಾಜಸತ್ತಮ! ದಸ್ಯುಗಳ ಬಲವು ಹೆಚ್ಚಾದಾಗ, ವರ್ಣಸಂಕರವಾಗುತ್ತಿರುವಾಗ, ವರ್ಣಗಳಲ್ಲಿ ಗೊಂದಲವುಂಟಾದಾಗ, ಬ್ರಾಹ್ಮಣರಲ್ಲಿ, ವೈಶ್ಯರಲ್ಲಿ ಅಥವಾ ಶೂದ್ರರಲ್ಲಿ ಯಾರೊಬ್ಬನು ಬಲಶಾಲಿಯೂ ದಸ್ಯುಗಳ ಮೇಲೆ ದಂಡವನ್ನು ಎತ್ತಿ ಪ್ರಜೆಗಳನ್ನು ರಕ್ಷಿಸಿ ಧರ್ಮವನ್ನು ಸ್ಥಾಪಿಸುತ್ತಾನೆ. ಅಂಥಹ ಕಾರ್ಯವನ್ನು ಅವನು ಮಾಡಬಹುದೇ? ಅಥವಾ ಮಾಡಬಾರದೇ? ಅಂಥಹ ಸಮಯದಲ್ಲಿ ಕ್ಷತ್ರಿಯನಲ್ಲದಿದ್ದರೂ ಶಸ್ತ್ರಗಳನ್ನು ಹಿಡಿಯಬಹುದು."

12079037 ಭೀಷ್ಮ ಉವಾಚ|
12079037a ಅಪಾರೇ ಯೋ ಭವೇತ್ಪಾರಮಪ್ಲವೇ ಯಃ ಪ್ಲವೋ ಭವೇತ್|
12079037c ಶೂದ್ರೋ ವಾ ಯದಿ ವಾಪ್ಯನ್ಯಃ ಸರ್ವಥಾ ಮಾನಮರ್ಹತಿ||

ಸಮುದ್ರದಲ್ಲಿ ಕಷ್ಟಕ್ಕೊಳಗಾಗಿ ತಲ್ಲಣಿಸುತ್ತಿರುವ ದೋಣಿಗೆ ಯಾರು ದೋಣಿಯಾಗಿ ಪಾರುಮಾಡುತ್ತನೋ ಅವನು ಶೂದ್ರನೇ ಆಗಿರಲಿ ಅಥವಾ ಅನ್ಯ ವರ್ಣದವನೇ ಆಗಿರಲಿ, ಅವನು ಮಾನಾರ್ಹ.

12079038a ಯಮಾಶ್ರಿತ್ಯ ನರಾ ರಾಜನ್ವರ್ತಯೇಯುರ್ಯಥಾಸುಖಮ್|
12079038c ಅನಾಥಾಃ ಪಾಲ್ಯಮಾನಾ ವೈ ದಸ್ಯುಭಿಃ ಪರಿಪೀಡಿತಾಃ||
12079039a ತಮೇವ ಪೂಜಯೇರಂಸ್ತೇ ಪ್ರೀತ್ಯಾ ಸ್ವಮಿವ ಬಾಂಧವಮ್|
12079039c ಮಹದ್ಧ್ಯ ಭೀಕ್ಷ್ಣಂ ಕೌರವ್ಯ ಕರ್ತಾ ಸನ್ಮಾನಮರ್ಹತಿ||

ರಾಜನ್! ಯಾರನ್ನು ಆಶ್ರಯಿಸಿ ಪ್ರಜೆಗಳು ಯಥಾಸುಖವನ್ನು

ಪಡೆಯುತ್ತಾರೋ, ದಸ್ಯುಗಳಿಂದ ಪರಿಪೀಡಿತರಾಗಿ
ಅನಾಥರಾದವರನ್ನು ಯಾರು ಪಾಲಿಸುತ್ತಾರೋ ಅವನನ್ನು ಸ್ವಂತ
ಬಾಂಧವರಂತೆ ಪ್ರೀತಿಯಿಂದ ಗೌರವಿಸಬೇಕು. ಕೌರವ್ಯ! ಅಂಥವನು
ರಾಜೋಚಿತ ಸನ್ಮಾನಕ್ಕೆ ಅರ್ಹನಾಗುತ್ತಾನೆ.

12079040a ಕಿಮುಕ್ಷ್ಣಾವಹತಾ ಕೃತ್ಯಂ ಕಿಂ ಧೇನ್ವಾ ಚಾಪ್ಯದುಗ್ಧಯಾ|
12079040c ವಂಧ್ಯಯಾ ಭಾರ್ಯಯಾ ಕೋಽರ್ಥಃ ಕೋಽರ್ಥೋ ರಾಜ್ಞಾಪ್ಯರಕ್ಷತಾ||

ಭಾರವನ್ನು ಹೊರಲಾರದ ಎತ್ತುಗಳು ಎಷ್ಟಿದ್ದರೂ ಪ್ರಯೋಜನವೇನು?
ಹಾಲಿಲ್ಲದ ಹಸುವಿದ್ದೂ ಪ್ರಯೋಜನವೇನು? ಬಂಜೆ ಹೆಂಡತಿಯಿಂದ
ಯಾವ ಪ್ರಯೋಜನವಿದೆ? ಪ್ರಜೆಗಳನ್ನು ರಕ್ಷಿಸಲು ಅಸಮರ್ಥನಾದ
ರಾಜನಿಂದ ಏನು ಪ್ರಯೋಜನ?

12079041a ಯಥಾ ದಾರುಮಯೋ ಹಸ್ತೀ ಯಥಾ ಚರ್ಮಮಯೋ ಮೃಗಃ|
12079041c ಯಥಾ ಹ್ಯನೇತ್ರಃ ಶಕಟಃ ಪಥಿ ಕ್ಷೇತ್ರಂ ಯಥೋಷರಮ್||
12079042a ಏವಂ ಬ್ರಹ್ಮಾನಧೀಯಾನಂ ರಾಜಾ ಯಶ್ಚ ನ ರಕ್ಷಿತಾ|
12079042c ನ ವರ್ಷತಿ ಚ ಯೋ ಮೇಘಃ ಸರ್ವ ಏತೇ ನಿರರ್ಥಕಾಃ||

ಮರದ ಆನೆಯಂತೆ, ಚರ್ಮದಿಂದ ಮಾಡಿದ ಜಿಂಕೆಯಂತೆ,
ಅಪ್ರಯೋಜಕ ಬಂಡಿಯಂತೆ, ಬೆಳೆಯು ಬೆಳೆಯದೇ ಇರುವ
ಹೊಲದಂತೆ, ಮಳೆಸುರಿಸಿದ ಮೋಡಗಳು, ಪ್ರಜೆಗಳನ್ನು ರಕ್ಷಿಸದ
ರಾಜನು ಮತ್ತು ವೇದಾಧ್ಯಯನ ಮಾಡದ ಬ್ರಾಹ್ಮಣ – ಇವರೆಲ್ಲರೂ
ನಿರರ್ಥಕರೇ ಸರಿ.

12079043a ನಿತ್ಯಂ ಯಸ್ತು ಸತೋ ರಕ್ಷೇದಸತಶ್ಚ ನಿಬರ್ಹಯೇತ್|
12079043c ಸ ಏವ ರಾಜಾ ಕರ್ತವ್ಯಸ್ತೇನ ಸರ್ವಮಿದಂ ಧೃತಮ್||

ನಿತ್ಯವೂ ಯಾರು ಸತ್ಪುರುಷರನ್ನು ರಕ್ಷಿಸುವನೋ, ದುಷ್ಪುರುಷರನ್ನು ದಂಡಿಸುವನೋ ಅಂಥವನನ್ನೇ ರಾಜನನ್ನಾಗಿ ಮಾಡಿಕೊಳ್ಳಬೇಕು. ಅದರಿಂದಲೇ ಎಲ್ಲವೂ ನಿಂತಿವೆ."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಏಕೋನಾಶೀತಿತಮೋऽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಎಪ್ಪತ್ತೊಂಭತ್ತನೇ ಅಧ್ಯಾಯವು.

೮೦

ಋತ್ವಿಜರ ಲಕ್ಷಣ; ಯಜ್ಞ-ದಕ್ಷಿಣೆಗಳ ಮಹತ್ವ; ತಪಸ್ಸಿನ ಶ್ರೇಷ್ಠತೆ (1-20).

12080001 ಯುಧಿಷ್ಠಿರ ಉವಾಚ|
12080001a ಕ್ವಸಮುತ್ಥಾಃ ಕಥಂಶೀಲಾ ಋತ್ವಿಜಃ ಸ್ಯುಃ ಪಿತಾಮಹ|
12080001c ಕಥಂವಿಧಾಶ್ಚ ರಾಜೇಂದ್ರ ತದ್ಬ್ರೂಹಿ ವದತಾಂ ವರ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಮಾತನಾಡುವವರಲ್ಲಿ ಶ್ರೇಷ್ಠ! ರಾಜೇಂದ್ರ! ಋತ್ವಿಜರ ಉತ್ಪತ್ತಿಯು ಯಾವ ಕಾರಣದಿಂದಾಯಿತು? ಅವರ ಗುಣ-ಸ್ವಭಾವಗಳು ಹೇಗಿರಬೇಕು? ಅವರು ಯಾವ ರೀತಿಯಲ್ಲಿರುತ್ತಾರೆ? ಇದನ್ನು ಹೇಳು."

12080002 ಭೀಷ್ಮ ಉವಾಚ|
12080002a ಪ್ರತಿಕರ್ಮ ಪುರಾಚಾರ ಋತ್ವಿಜಾಂ ಸ್ಮ ವಿಧೀಯತೇ|

12080002c ಆದೌ ಚಂದಾಂಸಿ ವಿಜ್ಞಾಯ ದ್ವಿಜಾನಾಂ ಶ್ರುತಮೇವ ಚ||

ಭೀಷ್ಮನು ಹೇಳಿದನು: "ದ್ವಿಜರ ಛಂದಸ್ಸುಗಳ ಮತ್ತು ಶ್ರುತಿಗಳ ಜ್ಞಾನಗಳನ್ನು ತಿಳಿದು ಪ್ರತಿ ಕರ್ಮಗಳಿಗೆ ಉತ್ತಮ ಆಚಾರವುಳ್ಳ ಋತ್ವಿಜರನ್ನು ನಿಯುಕ್ತಗೊಳಿಸಿಕೊಳ್ಳಬೇಕು.

12080003a ಯೇ ತ್ವೇಕರತಯೋ ನಿತ್ಯಂ ಧೀರಾ ನಾಪ್ರಿಯವಾದಿನಃ|
12080003c ಪರಸ್ಪರಸ್ಯ ಸುಹೃದಃ ಸಂಮತಾಃ ಸಮದರ್ಶಿನಃ||
12080004a ಯೇಷ್ವಾನೃಶಂಸ್ಯಂ ಸತ್ಯಂ ಚಾಪ್ಯಹಿಂಸಾ ತಪ ಆರ್ಜವಮ್|
12080004c ಅದ್ರೋಹೋ ನಾಭಿಮಾನಶ್ಚ ಹ್ರೀಸ್ತಿತಿಕ್ಷಾ ದಮಃ ಶಮಃ||
12080005a ಹ್ರೀಮಾನ್ಸತ್ಯಧೃತಿರ್ದಾಂತೋ ಭೂತಾನಾಮವಿಹಿಂಸಕಃ|
12080005c ಅಕಾಮದ್ವೇಷಸಂಯುಕ್ತೈರ್ಭಿಃ ಶುಕ್ಲೈಃ ಸಮನ್ವಿತಃ||
12080006a ಅಹಿಂಸಕೋ ಜ್ಞಾನತೃಪ್ತಃ ಸ ಬ್ರಹ್ಮಾಸನಮರ್ಹತಿ|
12080006c ಏತೇ ಮಹರ್ತ್ವಿಜಸ್ತಾತ ಸರ್ವೇ ಮಾನ್ಯಾ ಯಥಾತಥಮ್||

ನಿತ್ಯವೂ ಯಜಮಾನನ ಏಕಮಾತ್ರ ಹಿತದಲ್ಲಿಯೇ ನಿರತರಾಗಿರುವ ಧೀರ ಪ್ರಿಯವಾದಿ ಪರಸ್ಪರ ಸೌಹಾರ್ದತೆಯಿಂದಿರುವ ಸಮ್ಮತ ಸಮದರ್ಶಿಗಳು, ಅಕ್ರೂರಿಗಳು, ಸತ್ಯವಂತರು, ಅಹಿಂಸಕರು, ತಪಸ್ವಿಗಳು, ಸರಳಸ್ವಭಾವದವರು, ದ್ರೋಹವನ್ನಿಟ್ಟುಕೊಂಡಿಲ್ಲದವರು, ಅಭಿಮಾನವಿಲ್ಲದವರು, ಮುಜುಗುರ ಸ್ವಾಭಾವವುಳ್ಳವರು, ಸಹನಶೀಲರು, ಜೀವಿಗಳಿಗೆ ಹಿಂಸೆಯನ್ನುಂಟುಮಾಡದವರ್, ಕಾಮ-ದ್ವೇಷಗಳಿಲ್ಲದವರು, ಶಾಸ್ತ್ರಜ್ಞಾನ-ಸದಾಚಾರ-ಸತ್ಕುಲಪ್ರಸೂತಿ ಈ ಮೂರನ್ನೂ ಹೊಂದಿರುವ, ಅಹಿಂಸಕ, ಜ್ಞಾನತೃಪ್ತನು ಬ್ರಹ್ಮತ್ವಕ್ಕೆ ಯೋಗ್ಯನಾಗಿರುತ್ತಾನೆ."

12080007 ಯುಧಿಷ್ಠಿರ ಉವಾಚ|
12080007a ಯದಿದಂ ವೇದವಚನಂ ದಕ್ಷಿಣಾಸು ವಿಧೀಯತೇ|
12080007c ಇದಂ ದೇಯಮಿದಂ ದೇಯಂ ನ ಕ್ವ ಚಿದ್ವ್ಯವತಿಷ್ಠತೇ||

ಯುಧಿಷ್ಠಿರನು ಹೇಳಿದನು: "ದಕ್ಷಿಣೆಗಳ ಕುರಿತು "ಇದನ್ನು ಕೊಡಬೇಕು. ಇದನ್ನು ಕೊಡಬೇಕು" ಎಂಬ ವೇದ ವಚನವು ಮುಗಿಯುವುದೇ ಇಲ್ಲ.

12080008a ನೇದಂ ಪ್ರತಿ ಧನಂ ಶಾಸ್ತ್ರಮಾಪದ್ಧರ್ಮಮಶಾಸ್ತ್ರತಃ|
12080008c ಆಜ್ಞಾ ಶಾಸ್ತ್ರಸ್ಯ ಘೋರೇಯಂ ನ ಶಕ್ತಿಂ ಸಮವೇಕ್ಷತೇ||

ಧನವನ್ನು ದಾನಮಾಡಬೇಕು ಎನ್ನುವ ಈ ವೇದವಚನವು ಆಪದ್ಧರ್ಮಶಾಸ್ತ್ರವನ್ನು ಅನುಸರಿಸುವುದಿಲ್ಲ. ಅಪಾರ ದಕ್ಷಿಣೆಯನ್ನು ಕೊಡುವ ಸಾಮರ್ಥ್ಯವಿದೆಯೋ ಇಲ್ಲವೋ ಎಂದು ಪರಗಣಿಸದೇ ಇರುವ ಈ ಶಾಸ್ತ್ರದ ಆಜ್ಞೆಯು ಘೋರವಾಗಿದೆ.

12080009a ಶ್ರದ್ಧಾಮಾರಭ್ಯ ಯಷ್ಟವ್ಯಮಿತ್ಯೇಷಾ ವೈದಿಕೀ ಶ್ರುತಿಃ|
12080009c ಮಿಥ್ಯೋಪೇತಸ್ಯ ಯಜ್ಞಸ್ಯ ಕಿಮು ಶ್ರದ್ಧಾ ಕರಿಷ್ಯತಿ||

"ಶ್ರದ್ಧಾವಂತನು ಯಾಗಮಾಡಬೇಕು" ಎನ್ನುವ ವೇದ ಶ್ರುತಿವಾಕ್ಯವೂ ಇದೆ. ಯಥೋಕ್ತ ದಕ್ಷಿಣೆಯನ್ನು ಕೊಡಲು ಆಗದೇ ಇದ್ದರೆ ಯಜ್ಞವು ನಿಷ್ಫಲವಾಗಬಹುದು. ಆಗ ಕೇವಲ ಶ್ರದ್ಧೆಯೇನು ಮಾಡುತ್ತದೆ?"

12080010 ಭೀಷ್ಮ ಉವಾಚ|
12080010a ನ ವೇದಾನಾಂ ಪರಿಭವಾನ್ನ ಶಾಠ್ಯೇನ ನ ಮಾಯಯಾ|
12080010c ಕಶ್ಚಿನ್ಮಹದವಾಪ್ನೋತಿ ಮಾ ತೇ ಭೂದ್ಬುದ್ಧಿರೀದೃಶೀ||

ಭೀಷ್ಮನು ಹೇಳಿದನು: "ಉದ್ಧಟತನದಿಂದ ಅಥವಾ ವಂಚನೆಯಿಂದ

ವೇದಗಳನ್ನು ನಿಂದಿಸುವುದರಿಂದ ಯಾರೂ ಅಧಿಕನಾಗುವುದಿಲ್ಲ. ಆದುದರಿಂದ ನೀನು ಈ ರೀತಿ ಯೋಚಿಸದಿರು.

12080011a ಯಜ್ಞಾಂಗಂ ದಕ್ಷಿಣಾಸ್ತಾತ ವೇದಾನಾಂ ಪರಿಬೃಂಹಣಮ್|
12080011c ನ ಮಂತ್ರಾ ದಕ್ಷಿಣಾಹೀನಾಸ್ತಾರಯಂತಿ ಕಥಂ ಚನ||

ಮಗೂ! ಯಜ್ಞಾಂಗವಾದ ದಕ್ಷಿಣೆಗಳು ವದಗಳ ವಿಸ್ತಾರವೇ ಆಗಿದ್ದು ಯಜ್ಞದಲ್ಲಿ ಉಂಟಾಗಬಹುದಾದ ನ್ಯೂನತೆಗಳ ಪರಿಹಾರಕ್ಕೆಂದಿವೆ. ಮಂತ್ರ ಮತ್ತು ದಕ್ಷಿಣೆಗಳಿಂದ ಹೀನವಾದ ಯಜ್ಞವು ಯಜಮಾನನನ್ನು ಉದ್ಧರಿಸುವುದಿಲ್ಲ.

12080012a ಶಕ್ತಿಸ್ತು ಪೂರ್ಣಪಾತ್ರೇಣ ಸಂಮಿತಾನವಮಾ ಭವೇತ್|
12080012c ಅವಶ್ಯಂ ತಾತ ಯಷ್ಟವ್ಯಂ ತ್ರಿಭಿರ್ವರ್ಣೈರ್ಯಥಾವಿಧಿ||

ಪೂರ್ಣಪಾತ್ರೆ [212]ಯಿಂದ ಅಸಮ ಸಾಮರ್ಥ್ಯಗಳು ಸಮವಾಗುತ್ತವೆ. ಮಗೂ! ಆದುದರಿಂದ ಮೂರು ವರ್ಣದವರೂ ಯಥಾವಿಧಿಯಾಗಿ ಯಜ್ಞಮಾಡಬೇಕು.

12080013a ಸೋಮೋ ರಾಜಾ ಬ್ರಾಹ್ಮಣಾನಾಮಿತ್ಯೇಷಾ ವೈದಿಕೀ ಶ್ರುತಿಃ|
12080013c ತಂ ಚ ವಿಕ್ರೇತುಮಿಚ್ಛಂತಿ ನ ವೃಥಾ ವೃತ್ತಿರಿಷ್ಯತೇ|
12080013e ತೇನ ಕ್ರೀತೇನ ಧರ್ಮೇಣ ತತೋ ಯಜ್ಞಃ ಪ್ರತಾಯತೇ||

ಸೋಮನು ಬ್ರಾಹ್ಮಣರ ರಾಜನೆನ್ನುವ ವೇದವಾಕ್ಯವಿದೆ. ಅದನ್ನು ವಿಕ್ರಯಿಸಲು ಬಯಸಿದರೆ ಅದು ವ್ಯರ್ಥ ವೃತ್ತಿಯೇನೂ ಅಲ್ಲ. ಹಾಗೆ ವಿಕ್ರಯಿಸಿದ ಸೋಮದಿಂದ ಯಜ್ಞವು ವೃದ್ಧಿಯಾಗುತ್ತದೆ.

---

212 ೨೫೬ ಹಿಡಿಧಾನ್ಯ.

12080014a ಇತ್ಯೇವಂ ಧರ್ಮತಃ ಖ್ಯಾತಮೃಷಿಭಿರ್ಧರ್ಮವಾದಿಭಃ|
12080014c ಪುಮಾನ್ಯಜ್ಞಶ್ಚ ಸೋಮಶ್ಚ ನ್ಯಾಯವೃತ್ತೋ ಯಥಾ ಭವೇತ್|
12080014e ಅನ್ಯಾಯವೃತ್ತಃ ಪುರುಷೋ ನ ಪರಸ್ಯ ನ ಚಾತ್ಮನಃ||

ಹೀಗೆ ಧರ್ಮವಾದೀ ಖ್ಯಾತ ಋಷಿಗಳು ಧರ್ಮದ ಕುರಿತು ಹೇಳಿದ್ದಾರೆ. ಯಜ್ಞದ ಯಜಮಾನ, ಸೋಮ ಮತ್ತು ಯಜ್ಞ ಇವು ನ್ಯಾಯಸಂಪನ್ನವಾಗಿದ್ದರೆ ಯಜ್ಞವೂ ಯಥಾರ್ಥರೂಪದಲ್ಲಿ ಪರ್ಯವಸಾನವಾಗುತ್ತದೆ. ಅನ್ಯಾಯವೃತ್ತಿಯ ಪುರುಷನು ತನಗೂ ಮತ್ತ ಇತರರಿಗೂ ಒಳ್ಳೆಯದನ್ನುಂಟುಮಾಡುವುದಿಲ್ಲ.

12080015a ಶರೀರಂ ಯಜ್ಞಪಾತ್ರಾಣಿ[213] ಇತ್ಯೇಷಾ ಶ್ರೂಯತೇ ಶ್ರುತಿಃ|
12080015c ತಾನಿ ಸಮ್ಯಕ್ಪ್ರಣೀತಾನಿ[214] ಬ್ರಾಹ್ಮಣಾನಾಂ ಮಹಾತ್ಮನಾಮ್||

ಶರೀರವೇ ಯಜ್ಞಪಾತ್ರೆಗಳೆಂದು ಶ್ರುತಿಯ ಹೇಳುತ್ತದೆ. ಮಹಾತ್ಮ ಬ್ರಾಹ್ಮಣರಿಗೆ ಅದೇ ಪ್ರಣೀತಾಗ್ನಿಯಾಗುತ್ತದೆ.

12080016a ತಪೋ ಯಜ್ಞಾದಪಿ ಶ್ರೇಷ್ಠಮಿತ್ಯೇಷಾ ಪರಮಾ ಶ್ರುತಿಃ|
12080016c ತತ್ತೇ ತಪಃ ಪ್ರವಕ್ಷ್ಯಾಮಿ ವಿದ್ವಂಸ್ತದಪಿ ಮೇ ಶೃಣು||

ತಪಸ್ಸು ಯಜ್ಞಕ್ಕಿಂತಲೂ ಶ್ರೇಷ್ಠವಾದುದು ಎಂಬ ಪರಮ ಶ್ರುತಿವಚನವಿದೆ. ವಿದ್ವನ್! ಆ ತಪಸ್ಸು ಎಂಥಹುದು ಎನ್ನುವುದನ್ನು ಹೇಳುತ್ತೇನೆ. ಕೇಳು.

12080017a ಅಹಿಂಸಾ ಸತ್ಯವಚನಮಾನೃಶಂಸ್ಯಂ ದಮೋ ಘೃಣಾ|

---

213 ಶರೀರವೃತ್ತಮಾಸ್ಥಾಯ ಎಂಬ ಪಾಠಾಂತರವಿದೆ.

214 ನಾತಿಸಮ್ಯಕ್ಪ್ರಣೀತಾನಿ ಎಂಬ ಪಾಠಾಂತರವಿದೆ.

12080017c ಏತತ್ತಪೋ ವಿದುರ್ಧೀರಾ ನ ಶರೀರಸ್ಯ ಶೋಷಣಮ್‌॥

ಕೇವಲ ಶರೀರ ಶೋಷಣೆಯೇ ತಪಸ್ಸಲ್ಲ. ಅಹಿಂಸೆ, ಸತ್ಯವಚನ, ಅಕ್ರೌರ್ಯ, ಜಿತೇಂದ್ರಿಯತೆ ಮತ್ತು ದಯಾಪರತೆ ಇವುಗಳನ್ನು ತಪಸ್ಸೆಂದು ಧೀರರು ಹೇಳುತ್ತಾರೆ.

12080018a ಅಪ್ರಾಮಾಣ್ಯಂ ಚ ವೇದಾನಾಂ ಶಾಸ್ತ್ರಾಣಾಂ ಚಾತಿಲಂಘನಮ್‌|
12080018c ಅವ್ಯವಸ್ಥಾ ಚ ಸರ್ವತ್ರ ತದ್ವೈ ನಾಶನಮಾತ್ಮನಃ‌॥

ವೇದಕ್ಕೆ ಪ್ರಮಾಣವಿಲ್ಲವೆಂದು ಹೇಳುವುದು, ಶಾಸ್ತ್ರಗಳನ್ನು ಉಲ್ಲಂಘಿಸಿ ನಡೆಯುವುದು ಮತ್ತು ಎಲ್ಲೆಡೆಗಳಲ್ಲಿಯೂ ಅವ್ಯವಸ್ಥೆಯಿಂದ ನಡೆದುಕೊಳ್ಳುವುದು – ಇವು ಆತ್ಮನಾಶಕವಾದವುಗಳು.

12080019a ನಿಬೋಧ ದಶಹೋತೃಣಾಂ ವಿಧಾನಂ ಪಾರ್ಥ ಯಾದೃಶಮ್‌|
12080019c ಚಿತ್ತಿಃ ಸ್ರುಕ್ಚಿತ್ತಮಾಜ್ಯಂ ಚ ಪವಿತ್ರಂ ಜ್ಞಾನಮುತ್ತಮಮ್‌‌॥

ಪಾರ್ಥ! ಹೋತೃಗಳ ಹತ್ತು ವಿಧಾನಗಳ ಕುರಿತು ಕೇಳು[215]. ಬುದ್ಧಿಯೇ ಸ್ರುಕ್. ಮನಸ್ಸೇ ಆಜ್ಯ. ಉತ್ತಮ ಜ್ಞಾನವೇ ಯಜ್ಞಸಮಯದಲ್ಲಿ ಧರಿಸುವ ಪವಿತ್ರ.

12080020a ಸರ್ವಂ ಜಿಹ್ಮಂ ಮೃತ್ಯುಪದಮಾರ್ಜವಂ ಬ್ರಹ್ಮಣಃ ಪದಮ್‌|
12080020c ಏತಾವಾಂಜ್ಞಾನವಿಷಯಃ ಕಿಂ ಪ್ರಲಾಪಃ ಕರಿಷ್ಯತಿ‌॥

---

[215] ಹೋತೃಗಳಿಗೆ ಸಂಬಂಧಿಸಿದ ದಶದ್ರವ್ಯಗಳ ಕುರಿತಾದ ಶ್ರುತಿಪಾಠವು ಹೀಗಿದೆ: ಚಿತ್ತಿಃಸ್ರುಕ್‌| ಚಿತ್ತಮಾಜ್ಯಂ| ವಾಗ್ವೇದಿಃ| ಅಧೀತಂ ಬರ್ಹಿಃ| ಕೇತೋ ಅಗ್ನಿಃ| ವಿಜ್ಞಾತಮಗ್ನಿಃ| ವಾಕ್ಪತಿರ್ಹೋತಾ| ಮನ ಉಪವಕ್ತಾ| ಪ್ರಾಣೋ ಹವಿಃ| ಸಾಮಾಧ್ವರ್ಯುಃ [ತೈತ್ತರೀಯ ಯಜುರಾರಣ್ಯಕ].

ಎಲ್ಲ ತರಹದ ಕುಟಿಲತೆಗಳೂ ಮೃತ್ಯುಸ್ಥಾನಗಳು. ಸರಳತೆಯು ಬ್ರಹ್ಮಪದವು. ಜ್ಞಾನದ ವಿಷಯವು ಇಷ್ಟುಮಾತ್ರವಾಗಿದೆ. ಉಳಿದುದೆಲ್ಲವೂ ವ್ಯರ್ಥಪ್ರಲಾಪಗಳು. ಅವುಗಳೇನು ಮಾಡುತ್ತವೆ?”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಅಶೀತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಎಂಭತ್ತನೇ ಅಧ್ಯಾಯವು.

೮೧

ರಾಜನು ಮಿತ್ರ-ಶತ್ರುಗಳನ್ನು ಗುರುತಿಸುವ ರೀತಿ; ಮಂತ್ರಿಗಳ ಲಕ್ಷಣ (1-40).

12081001 ಯುಧಿಷ್ಠಿರ ಉವಾಚ|
12081001a ಯದಪ್ಯಲ್ಪತರಂ ಕರ್ಮ ತದಪ್ಯೇಕೇನ ದುಷ್ಕರಮ್|
12081001c ಪುರುಷೇಣಾಸಹಾಯೇನ ಕಿಮು ರಾಜ್ಯಂ ಪಿತಾಮಹ||

ಯುಧಿಷ್ಠಿರನು ಹೇಳಿದನು: “ಕಾರ್ಯವು ಎಷ್ಟೇ ಸಣ್ಣದಾಗಿದ್ದರೂ ಇತರರ ಸಹಾಯವಿಲ್ಲದೇ ಒಬ್ಬನೇ ಮಾಡಿ ಮುಗಿಸುವುದು ಕಷ್ಟ. ಪಿತಾಮಹ! ಇನ್ನು ರಾಜನ ವಿಷಯದಲ್ಲಿ ಹೇಳುವುದೇನಿದೆ?

12081002a ಕಿಂಶೀಲಃ ಕಿಂಸಮಾಚಾರೋ ರಾಜ್ಞೋऽರ್ಥಸಚಿವೋ ಭವೇತ್|
12081002c ಕೀದೃಶೇ ವಿಶ್ವಸೇದ್ರಾಜಾ ಕೀದೃಶೇ ನಾಪಿ ವಿಶ್ವಸೇತ್||

ರಾಜನಿಗೆ ಸಚಿವನಾಗಿರುವವನ ಶೀಲವು ಹೇಗಿರಬೇಕು? ಆಚಾರ-

ವ್ಯವಹಾರಗಳು ಹೇಗಿರಬೇಕು? ಎಂಥವರಲ್ಲಿ ರಾಜನು
ವಿಶ್ವಾಸವನ್ನಿಡಬೇಕು? ಮತ್ತು ಎಂಥವರಲ್ಲಿ ಅವನು
ವಿಶ್ವಾಸವನ್ನಿಡಬಾರದು?”

12081003 ಭೀಷ್ಮ ಉವಾಚ|
12081003a ಚತುರ್ವಿಧಾನಿ ಮಿತ್ರಾಣಿ ರಾಜ್ಞಾಂ ರಾಜನ್ಭವಂತ್ಯುತ|
12081003c ಸಹಾರ್ಥೋ ಭಜಮಾನಶ್ಚ ಸಹಜಃ ಕೃತ್ರಿಮಸ್ತಥಾ||

ಭೀಷ್ಮನು ಹೇಳಿದನು: “ರಾಜನ್! ರಾಜನಿಗೆ ನಾಲ್ಕುವಿಧದ ಮಿತ್ರರು ಇರುತ್ತಾರೆ ಎಂದು ಹೇಳುತ್ತಾರೆ: ಸಹಾರ್ಥ[216], ಭಜಮಾನ[217], ಸಹಜ[218] ಮತ್ತು ಕೃತ್ರಿಮ[219].

12081004a ಧರ್ಮಾತ್ಮಾ ಪಂಚಮಂ ಮಿತ್ರಂ ಸ ತು ನೈಕಸ್ಯ ನ ದ್ವಯೋಃ|
12081004c ಯತೋ ಧರ್ಮಸ್ತತೋ ವಾ ಸ್ಯಾನ್ಮಧ್ಯಸ್ಥೋ ವಾ ತತೋ ಭವೇತ್||
12081005a ಯಸ್ತಸ್ಯಾರ್ಥೋ ನ ರೋಚೇತ ನ ತಂ ತಸ್ಯ ಪ್ರಕಾಶಯೇತ್|
12081005c ಧರ್ಮಾಧರ್ಮೇಣ ರಾಜಾನಶ್ಚರಂತಿ ವಿಜಿಗೀಷವಃ||

ಐದನೆಯ ಧರ್ಮಾತ್ಮ ಎನ್ನುವ ಮಿತ್ರನೂ ಇರುತ್ತಾನೆ. ಧರ್ಮಾತ್ಮ

---

216 ನಿಬಂಧನೆಗಳೊಂದಿಗೆ ಪರಸ್ಪರರ ಪ್ರಯೋಜನವನ್ನು ಉದ್ದೇಶಿಸಿ ಮಾಡಿಕೊಂಡ ಮೈತ್ರಿ.

217 ವಂಶಸಂಬಂಧದ ಪರಂಪರೆಯಾಗಿ ಬಂದ ಮೈತ್ರಿ

218 ಹುಟ್ಟಿದಾಗಿನಿಂದ ಜೊತೆಯಿರುವುದು, ಒಟ್ಟಿಗೇ ಕೆಲಸ ಮಾಡುವುದು, ಈ ಕಾರಣಗಳಿಂದ ಸ್ವಭಾವೈಕ್ಯದಿಂದ ಉಂಟಾಗುವ ಮೈತ್ರಿ

219 ಮನಃಪೂರ್ವಕ ಮೈತ್ರಿಯಿಲ್ಲದಿದ್ದರೂ ಸಂದರ್ಭಾನುಸಾರವಾಗಿ ಮಿತ್ರನಂತೆ ವರ್ತಿಸುವುದು

ಮಿತ್ರನು ಒಬ್ಬನ ಅಥವಾ ಇಬ್ಬರ ಮಿತ್ರನು ಮಾತ್ರ ಅಲ್ಲ. ಎಲ್ಲಿ ಧರ್ಮವಿರುತ್ತದೆಯೋ ಅಲ್ಲಿ ಅವನ ಬೆಂಬಲವಿರುತ್ತದೆ. ಅಥವಾ ಯಾವ ರಾಜನಲ್ಲಿ ಧರ್ಮವಿದೆಯೋ ಅವನ ಆಶ್ರಯವನ್ನು ಪಡೆಯುತ್ತಾನೆ. ಧರ್ಮವಲ್ಲದವುಗಳು ಅವನಿಗೆ ಇಷ್ಟವಾಗುವುದಿಲ್ಲವಾದುದರಿಂದ ಅಂಥಹ ಕಾರ್ಯಗಳನ್ನು ಅವನಿಗೆ ತೋರಿಸಬಾರದು. ಆದರೆ ಜಯವನ್ನು ಬಯಸುವ ರಾಜರು ಧರ್ಮ-ಅಧರ್ಮ ಯುಕ್ತ ಕಾರ್ಯಗಳಿರಡನ್ನೂ ಮಾಡಬೇಕಾಗುತ್ತದೆ.

12081006a ಚತುರ್ಣಾಂ ಮಧ್ಯಮೌ ಶ್ರೇಷ್ಠೌ ನಿತ್ಯಂ ಶಂಕ್ಯೌ ತಥಾಪರೌ|
12081006c ಸರ್ವೇ ನಿತ್ಯಂ ಶಂಕಿತವ್ಯಾಃ ಪ್ರತ್ಯಕ್ಷಂ ಕಾರ್ಯಮಾತ್ಮನಃ||

ನಾಲ್ಕು ವಿಧದ ಮಿತ್ರರಲ್ಲಿ ಮಧ್ಯದ ಇಬ್ಬರು – ಭಜಮಾನ ಮತ್ತು ಸಹಜ ಮಿತ್ರರು – ಶ್ರೇಷ್ಠರು. ಉಳಿದ ಇಬ್ಬರು – ಸಹಾರ್ಥ ಮತ್ತು ಕೃತ್ರಿಮ ಮಿತ್ರರು – ಸಂದೇಹನೀಯರು. ಆದರೆ ರಾಜನಾದವನು ನಿತ್ಯವೂ ತನ್ನ ಪ್ರತ್ಯಕ್ಷ ಕಾರ್ಯಸಿದ್ಧಿಗಾಗಿ ಎಲ್ಲ ಮಿತ್ರರ ವಿಷಯದಲ್ಲಿಯೂ ಸಂದೇಹಗ್ರಸ್ಥರಾಗಿಯೇ ಇರಬೇಕು.

12081007a ನ ಹಿ ರಾಜ್ಞಾ ಪ್ರಮಾದೋ ವೈ ಕರ್ತವ್ಯೋ ಮಿತ್ರರಕ್ಷಣೇ|
12081007c ಪ್ರಮಾದಿನಂ ಹಿ ರಾಜಾನಂ ಲೋಕಾಃ ಪರಿಭವಂತ್ಯುತ||

ತನ್ನ ಮಿತ್ರರನ್ನು ರಕ್ಷಿಸುವ ವಿಷಯದಲ್ಲಿ ರಾಜನು ಸದಾ ಅಪ್ರಮತ್ತನಾಗಿರಬೇಕು. ಜಾಗರೂಕತೆಯಿಂದಿರಬೇಕು. ಮಿತ್ರರ ರಕ್ಷಣೆಯ ವಿಷಯದಲ್ಲಿ ಜಾಗರೂಕನಲ್ಲದ ರಾಜನನ್ನು ಪ್ರಜೆಗಳು ತಿರಸ್ಕರಿಸುತ್ತಾರೆ.

12081008a ಅಸಾಧುಃ ಸಾಧುತಾಮೇತಿ ಸಾಧುರ್ಭವತಿ ದಾರುಣಃ|

12081008c ಅರಿಶ್ಚ ಮಿತ್ರಂ ಭವತಿ ಮಿತ್ರಂ ಚಾಪಿ ಪ್ರದುಷ್ಯತಿ||

ದುಷ್ಟನಾದವನು ಒಳ್ಳೆಯವನಾಗುತ್ತಾನೆ. ಸಾಧುವಾಗಿದ್ದವನು ದಾರುಣನಾಗುತ್ತಾನೆ. ಶತ್ರುವಾಗಿದ್ದವನು ಮಿತ್ರನಾಗುತ್ತಾನೆ. ಮಿತ್ರನಾಗಿದ್ದವನು ದ್ರೋಹಿಯಾಗುತ್ತಾನೆ.

12081009a ಅನಿತ್ಯಚಿತ್ತಃ ಪುರುಷಸ್ತಸ್ಮಿನ್ಕೋ ಜಾತು ವಿಶ್ವಸೇತ್|
12081009c ತಸ್ಮಾತ್ಪ್ರಧಾನಂ ಯತ್ಕಾರ್ಯಂ ಪ್ರತ್ಯಕ್ಷಂ ತತ್ಸಮಾಚರೇತ್||

ಮನುಷ್ಯನು ಸ್ಥಿರಚಿತ್ತನಾಗಿರುವುದಿಲ್ಲ. ಹೀಗಿರುವಾಗ ಯಾರಲ್ಲಿಯಾದರೂ ಹೇಗೆ ವಿಶ್ವಾಸವನ್ನಿಡಬಹುದು? ಆದುದರಿಂದ ಪ್ರಧಾನ ಕಾರ್ಯಗಳನ್ನು ರಾಜನಾದವನು ಪ್ರತ್ಯಕ್ಷವಾಗಿಯೇ ನಡೆಸಬೇಕು. ಮಿತ್ರರಿಗೆ ವಹಿಸಿಕೊಟ್ಟು ಸುಮ್ಮನಿರಬಾರದು.

12081010a ಏಕಾಂತೇನ ಹಿ ವಿಶ್ವಾಸಃ ಕೃತ್ಸ್ನೋ ಧರ್ಮಾರ್ಥನಾಶಕಃ|
12081010c ಅವಿಶ್ವಾಸಶ್ಚ ಸರ್ವತ್ರ ಮೃತ್ಯುನಾ ನ ವಿಶಿಷ್ಯತೇ||

ಒಬ್ಬನ ಮೇಲೆಯೇ ಸಂಪೂರ್ಣ ವಿಶ್ವಾಸವನ್ನಿಡುವುದು ಧರ್ಮಾರ್ಥನಾಶಕವು. ಯಾರ ಮೇಲೂ ವಿಶ್ವಾಸವನ್ನಿಡದೇ ಇರುವುದೂ ಕೂಡ ಮೃತ್ಯುವಿಗಿಂತಲೂ ಹೆಚ್ಚಾಗುತ್ತದೆ. ಆದುದರಿಂದ ಇವೆರಡರಿಂದಲೂ ಅಪಾಯವಿದೆ.

12081011a ಅಕಾಲಮೃತ್ಯುರ್ವಿಶ್ವಾಸೋ ವಿಶ್ವಸನ್ ಹಿ ವಿಪದ್ಯತೇ|
12081011c ಯಸ್ಮಿನ್ಕರೋತಿ ವಿಶ್ವಾಸಮಿಚ್ಚತಸ್ತಸ್ಯ ಜೀವತಿ||

ಒಬ್ಬನ ಮೇಲೆಯೇ ಸಂಪೂರ್ಣ ವಿಶ್ವಾಸವನ್ನಿಡುವುದು ಅಕಾಲಮೃತ್ಯುವಿನ ಸಮನಾಗಿರುತ್ತದೆ. ಏಕೆಂದರೆ ಒಬ್ಬನ ಮೇಲೆಯೇ

ಸಂಪೂರ್ಣ ವಿಶ್ವಾಸವನ್ನಿಟ್ಟು ಜೀವನ ನಡೆಸುವವನು ಯಾರಲ್ಲಿ ವಿಶ್ವಾಸವನ್ನಿಟ್ಟಿರುವೆವೋ ಅವನ ಇಚ್ಛಾನುಸಾರವಾಗಿಯೇ ಬದುಕುತ್ತೇವೆ. ಅವನು ವಿಶ್ವಾಸದ್ರೋಹಮಾಡಿದರೆ ಅವನನ್ನು ನಂಬಿದವನು ಸಂಪೂರ್ಣ ನಾಶವಾಗುತ್ತಾನೆ.

12081012a ತಸ್ಮಾದ್ವಿಶ್ವಸಿತವ್ಯಂ ಚ ಶಂಕಿತವ್ಯಂ ಚ ಕೇಷು ಚಿತ್|
12081012c ಏಷಾ ನೀತಿಗತಿಸ್ತಾತ ಲಕ್ಷ್ಮೀಶ್ಚೈವ[220] ಸನಾತನೀ||

ಆದುದರಿಂದ ಕೆಲವರಲ್ಲಿ ವಿಶ್ವಾಸವನ್ನಿಡಬೇಕು. ಕೆಲವರನ್ನು ಶಂಕಿಸುತ್ತಿರಬೇಕು. ಮಗೂ! ಇದೇ ಸಂಪತ್ತನ್ನು ಪಡೆಯುವ ಸನಾತನ ನೀತಿ.

12081013a ಯಂ ಮನ್ಯೇತ ಮಮಾಭಾವಾದಿಮಮರ್ಥಾಗಮಃ ಸ್ಪೃಶೇತ್|
12081013c ನಿತ್ಯಂ ತಸ್ಮಾಚ್ಚಂಕಿತವ್ಯಮಮಿತ್ರಂ ತಂ ವಿದುರ್ಬುಧಾಃ||

“ನನ್ನ ಮರಣಾನಂತರ ಇವನು ನನ್ನ ಸಂಪತ್ತನ್ನು ಮುಟ್ಟುತ್ತಾನೆ” ಎಂದು ಯಾರ ಮೇಲೆ ರಾಜನ ಅಭಿಪ್ರಾಯವಿದೆಯೋ ಅಂಥವನ ವಿಷಯದಲ್ಲಿ ಅವನು ಸದಾ ಸಂದೇಹಗ್ರಸ್ತನಾಗಿಯೇ ಇರಬೇಕು. ಏಕೆಂದರೆ ಅಂಥವರು ಅಮಿತ್ರರೇ ಎಂದು ಬುದ್ಧಿವಂತರು ತಿಳಿಯುತ್ತಾರೆ.

12081014a ಯಸ್ಯ ಕ್ಷೇತ್ರಾದಪ್ಯುದಕಂ ಕ್ಷೇತ್ರಮನ್ಯಸ್ಯ ಗಚ್ಚತಿ|
12081014c ನ ತತ್ರಾನಿಚ್ಚತಸ್ತಸ್ಯ ಭಿದ್ಯೇರನ್ಸರ್ವಸೇತವಃ||

ಯಾರ ಗದ್ದೆಯಿಂದ ಹೆಚ್ಚಾದ ನೀರು ಇನ್ನೊಬ್ಬನ ಗದ್ದೆಗೆ

---

[220] ಲಕ್ಷ್ಯಾಚ್ಚೈವ ಸನಾತನೀ| ಎಂಬ ಪಾಠಾಂತರವಿದೆ.

ಹೋಗುತ್ತದೆಯೋ ಆಗ ಕೆಳಗೆ ಗದ್ದೆಯಿರುವವನ ಅನುಮತಿಯಿಲ್ಲದೇ
ಮೇಲಿನ ಗದ್ದೆಯವನು ತನ್ನ ಒಡ್ಡನ್ನು ಒಡೆಯಬಾರದು.

12081015a ತಥೈವಾತ್ಯುದಕಾದ್ಭೀತಸ್ತಸ್ಯ ಭೇದನಮಿಚ್ಛತಿ|
12081015c ಯಮೇವಂಲಕ್ಷಣಂ ವಿದ್ಯಾತ್ತಮಮಿತ್ರಂ ವಿನಿರ್ದಿಶೇತ್||

ಆದರೆ ಮೇಲಿನ ಗದ್ದೆಯಿದ್ದವನು ತನ್ನ ಗದ್ದೆಯು
ಮುಳುಗಿಹೋಗಬಾರದೆಂದು ಒಡ್ಡನ್ನು ಒಡೆಯಲು ಬಯಸುತ್ತಾನೆ. ಈ
ಉಪಮಾನದ ಲಕ್ಷಣವೇನೆಂದು ತಿಳಿದು ಇದರಲ್ಲಿ ಶತ್ರುವು
ಯಾರೆಂಬುದನ್ನು ನಿರ್ಧರಿಸಬೇಕು.

12081016a ಯಃ ಸಮೃದ್ಧ್ಯಾ ನ ತುಷ್ಯೇತ[221] ಕ್ಷಯೇ ದೀನತರೋ ಭವೇತ್|
12081016c ಏತದುತ್ತಮಮಿತ್ರಸ್ಯ ನಿಮಿತ್ತಮಭಿಚಕ್ಷತೇ||

ರಾಜನ ಸಮೃದ್ಧಿಯಿಂದ ಇನ್ನೂ ಬೇಕೆಂದು
ತೃಪ್ತನಾಗುವುದಿಲ್ಲದಿರುವುದು ಮತ್ತು ರಾಜನ ಕ್ಷಯದಿಂದ
ದೀನನಾಗುವುದು ಇವು ಉತ್ತಮ ಮಿತ್ರನ ಲಕ್ಷಣಗಳೆಂದು
ಪರಿಗಣಿಸಬೇಕು.

12081017a ಯಂ ಮನ್ಯೇತ ಮಮಾಭಾವಾದಸ್ಯಾಭಾವೋ ಭವೇದಿತಿ|
12081017c ತಸ್ಮಿನ್ಮುರ್ವೀತ ವಿಶ್ವಾಸಂ ಯಥಾ ಪಿತರಿ ವೈ ತಥಾ||
12081018a ತಂ ಶಕ್ತ್ಯಾ ವರ್ಧಮಾನಶ್ಚ ಸರ್ವತಃ ಪರಿಬೃಂಹಯೇತ್|

"ನಾನಿಲ್ಲದಿದ್ದರೆ ಇವನೂ ಇರುವುದಿಲ್ಲ" ಎಂಬ
ಭಾವನೆಯಾರಲ್ಲಿದೆಯೋ ಅವನಲ್ಲಿ ತಂದೆಯ ಮೇಲೆ ಇಡುವ

---

[221] ಯಸ್ತು ವೃದ್ಧ್ಯಾ ನ ತೃಪ್ಯೇತ| ಎಂಬ ಪಾಠಾಂತರವಿದೆ.

ವಿಶ್ವಾಸವನ್ನು ಇಡಬೇಕು. ಅಂಥವನನ್ನು ಶಕ್ತಿಯಿದ್ದಷ್ಟೂ ಎಲ್ಲ ರೀತಿಯಿಂದ ಸಂಮೃದ್ಧನನ್ನಾಗಿ ಮಾಡಲು ಪ್ರಯತ್ನಿಸಬೇಕು.

12081018c ನಿತ್ಯಂ ಕ್ಷತಾದ್ವಾರಯತಿ ಯೋ ಧರ್ಮೇಷ್ವಪಿ ಕರ್ಮಸು॥
12081019a ಕ್ಷತಾದ್ಭೀತಂ ವಿಜಾನೀಯಾದುತ್ತಮಂ ಮಿತ್ರಲಕ್ಷಣಮ್।
12081019c ಯೇ ತಸ್ಯ ಕ್ಷತಮಿಚ್ಚಂತಿ ತೇ ತಸ್ಯ ರಿಪವಃ ಸ್ಮೃತಾಃ॥

ರಾಜನ ಧರ್ಮಕರ್ಮಗಳಲ್ಲಿನ ನ್ಯೂನತೆಗಳನ್ನು ಹೋಗಲಾಡಿಸುವುದು ಮತ್ತು ರಾಜನಿಗೆ ಹಾನಿಯನ್ನುಂಟು ಮಾಡಿಯೇನು ಎಂಬ ಭಯದಿಂದಿರುವುದು ಇವೂ ಕೂಡ ಉತ್ತಮ ಮಿತ್ರನ ಲಕ್ಷಣಗಳೇ ಆಗಿವೆ. ರಾಜನ ಕ್ಷತಿಯನ್ನು ಬಯಸುವವನು ಶತ್ರುವೆಂದು ಹೇಳುತ್ತಾರೆ.

12081020a ವ್ಯಸನಾನ್ನಿತ್ಯಭೀತೋಽಸೌ ಸಮೃದ್ಧ್ಯಾಮೇವ ತೃಪ್ಯತೇ।
12081020c ಯತ್ಸ್ಯಾದೇವಂವಿಧಂ ಮಿತ್ರಂ ತದಾತ್ಮಸಮಮುಚ್ಯತೇ॥

ರಾಜನಿಗೆ ಕಷ್ಟವೊದಗಿಬಿಡಬಹುದೆಂದು ಯಾವಾಗಲೂ ಭಯಭೀತನಾಗಿರುವವನು ಮತ್ತು ರಾಜನ ಸಮೃದ್ಧಿಯಿಂದಲೇ ತೃಪ್ತಿಹೊಂದುವವನು ಇಂಥಹ ಮಿತ್ರನು ರಾಜನ ಆತ್ಮಸಮನೆಂದೇ ಭಾವಿಸಬೇಕು.

12081021a ರೂಪವರ್ಣಸ್ವರೋಪೇತಸ್ತಿತಿಕ್ಷುರನಸೂಯಕಃ।
12081021c ಕುಲೀನಃ ಶೀಲಸಂಪನ್ನಃ ಸ ತೇ ಸ್ಯಾತ್ಪ್ರತ್ಯನಂತರಃ॥

ರೂಪದಲ್ಲಿ ಸುಂದರನೂ, ವರ್ಣದಲ್ಲಿ ಮನೋಹರನೂ, ಸ್ವರದಲ್ಲಿ ಮೃದುವೂ ಆಗಿರುವ ಕ್ಷಮಾಶೀಲ, ಅಸೂಯಾರಹಿತ, ಕುಲೀನ, ಮತ್ತು ಶೀಲಸಂಪನ್ನನು ನಿನ್ನ ನಿನ್ನ ಪ್ರಧಾನ ಸಚಿವನಾಗಲಿ.

12081022a ಮೇಧಾವೀ ಸ್ಮೃತಿಮಾನ್ದಕ್ಷಃ ಪ್ರಕೃತ್ಯಾ ಚಾನೃಶಂಸವಾನ್|
12081022c ಯೋ ಮಾನಿತೋಽಮಾನಿತೋ ವಾ ನ ಸಂದೂಷ್ಯೇತ್ಕದಾ ಚನ||
12081023a ಋತ್ವಿಗ್ವಾ ಯದಿ ವಾಚಾರ್ಯಃ ಸಖಾ ವಾತ್ಯಂತಸಂಸ್ತುತಃ|
12081023c ಗೃಹೇ ವಸೇದಮಾತ್ಯಸ್ತೇ ಯಃ ಸ್ಯಾತ್ಪರಮಪೂಜಿತಃ||

ಮೇಧಾವೀ, ಜ್ಞಾಪಕಶಕ್ತಿಯು ಚೆನ್ನಾಗಿರುವ, ದಕ್ಷ, ಸ್ವಭಾವತಃ
ಮೃದುವಾಗಿರುವ, ಮಾನ-ಅಪಮಾನಗಳೆರಡರಲ್ಲಿಯೂ ನಿನ್ನನ್ನು
ಎಂದೂ ದೂಷಿಸದವನು – ಅವನು ನಿನ್ನ ಋತ್ವಿಜನೇ ಆಗಿರಬಹುದು,
ಆಚಾರ್ಯನಾಗಿರಬಹುದು, ಅಥವಾ ನಿನ್ನ ಪ್ರಶಂಸೆಗೆ ಪಾತ್ರನಾದ
ಸಖನಾಗಿರಬಹುದು – ಅವನನ್ನು ಮಂತ್ರಿಯನ್ನಾಗಿ ನಿಯೋಜಿಸಿ
ಅವನು ಯಾವಾಗಲೂ ನಿನ್ನ ಮನೆಯಲ್ಲಿಯೇ
ಮಾಸಿಮಾಡಿಕೊಂಡಿರುವಂತೆ ಏರ್ಪಡಿಸು. ಅವನನ್ನು ಪರಮ
ಗೌರವದಿಂದ ನೋಡಿಕೊಳ್ಳಬೇಕು.

12081024a ಸ ತೇ ವಿದ್ಯಾತ್ಪರಂ ಮಂತ್ರಂ ಪ್ರಕೃತಿಂ ಚಾರ್ಥಧರ್ಮಯೋಃ|
12081024c ವಿಶ್ವಾಸಸ್ಥೇ ಭವೇತ್ತತ್ರ ಯಥಾ ಪಿತರಿ ವೈ ತಥಾ||

ಅವನು ನಿನ್ನ ಪರಮ ಗುಹ್ಯವಿಷಯಗಳ ಕುರಿತು ಮತ್ತು ಅರ್ಥ-
ಧರ್ಮಗಳ ಪ್ರಕೃತಿ[222]ಯನ್ನು ತಿಳಿದವರಾಗಿರಬೇಕು. ನಿನ್ನ ತಂದೆಯ

---

222 ಪ್ರಕೃತಿಗಳು ಮೂರು ವಿಧಃ ಅರ್ಥಪ್ರಕೃತಿ, ಧರ್ಮಪ್ರಕೃತಿ ಮತ್ತು ಧರ್ಮ-ಅರ್ಥಪ್ರಕೃತಿ. ಕೃಷಿರ್ವಣಿಕ್ಪಥೋ ದುರ್ಗಂ ಸೇತುಃ ಕುಂಜರಬಂಧನಂ| ಖನ್ಯಾಕರರಾದಾನಂ ಶೂನ್ಯಾನಾಂ ಚ ನಿವೇಶನಮ್| ಅಷ್ಟೌ ಸಂಧಾನಕರ್ಮಾಣಿ ಪ್ರತ್ಯುಕ್ತಾನಿ ಮನೀಷಿಭಿಃ|| ಕೃಷಿ, ವಾಣಿಜ್ಯ, ದುರ್ಗ, ಆಣೆಕಟ್ಟು, ಕಾಡಿನಲ್ಲಿ ಆನೆಗಳನ್ನು ಹಿಡಿಯುವ ಜಾಗ, ಲೋಹಗಳ ಗಣಿಗಳು, ತೆರಿಗೆ, ಶೂನ್ಯಸ್ಥಾನಗಳು – ಇವು ಅರ್ಥಪ್ರಾಪ್ತಿ ಸಾಧಕ ಸ್ಥಾನಗಳು.

ಮೇಲೆ ಇಡುವಷ್ಟು ವಿಶ್ವಾಸವನ್ನು ನಿನ್ನ ಆ ಆಮಾತ್ಯನ ಮೇಲೆ ಇಟ್ಟಿರಬೇಕು.

12081025a ನೈವ ದ್ವೌ ನ ತ್ರಯಃ ಕಾರ್ಯಾ ನ ಮೃಷ್ಯೇರನ್ಪರಸ್ಪರಮ್|
12081025c ಏಕಾರ್ಥಾದೇವ ಭೂತಾನಾಂ ಭೇದೋ ಭವತಿ ಸರ್ವದಾ||

ಪರಸ್ಪರರಲ್ಲಿ ಭಿನ್ನಾಭಿಪ್ರಾಯವುಂಟಾಗಬಾರದೆಂದು ಕಾರ್ಯವನ್ನು ಒಬ್ಬನಿಗೇ ವಹಿಸಬೇಕು. ಎರಡು ಮೂರು ಜನರಿಗೆ ವಹಿಸಬಾರದು. ಒಂದೇ ವಿಷಯದಲ್ಲಿ ಅನೇಕ ಅಭಿಪ್ರಾಯಗಳಿರುವುದು ಮನುಷ್ಯರಲ್ಲಿ ಯಾವಾಗಲೂ ಒಂದೇ ವಿಷಯದಲ್ಲಿ ಅನೇಕ ಅಭಿಪ್ರಾಯಗಳಿರುತ್ತವೆ.

12081026a ಕೀರ್ತಿಪ್ರಧಾನೋ ಯಶ್ಚ ಸ್ಯಾದ್ಯಶ್ಚ ಸ್ಯಾತ್ಸಮಯೇ ಸ್ಥಿತಃ|
12081026c ಸಮರ್ಥಾನ್ಯಶ್ಚ ನ ದ್ವೇಷ್ಟಿ ಸಮರ್ಥಾನ್ಕುರುತೇ ಚ ಯಃ||
12081027a ಯೋ ನ ಕಾಮಾದ್ಭಯಾಲ್ಲೋಭಾತ್ಕ್ರೋಧಾದ್ವಾ ಧರ್ಮಮುತ್ಸಜೇತ್|
12081027c ದಕ್ಷಃ ಪರ್ಯಾಪ್ತವಚನಃ ಸ ತೇ ಸ್ಯಾತ್ಪ್ರತ್ಯನಂತರಃ||

ಯಾರಿಗೆ ಕೀರ್ತಿಯೇ ಪ್ರಧಾನವಾಗಿರುವ ಮತ್ತು ನೀತಿ-ಮರ್ಯಾದೆಗಳ ಚೌಕಟ್ಟಿನಲ್ಲಿಯೇ ನಡೆದುಕೊಳ್ಳುವ, ಸಮರ್ಥ, ಅನ್ಯರನ್ನು ದ್ವೇಷಿಸದ, ಕಾಮದಿಂದಾಗಲೀ, ಲೋಭದಿಂದಾಗಲೀ, ಭಯದಿಂದಾಗಲೀ ಧರ್ಮವನ್ನು ಕೈಬಿಡದ ದಕ್ಷ ಮಿತಭಾಷಿಯು ನಿನ್ನ ಪ್ರಧಾನ

ದುರ್ಗಾಧ್ಯಕ್ಷೋ ಬಲಾಧ್ಯಕ್ಷೋ ಧರ್ಮಾಧ್ಯಕ್ಷಶ್ಚ ಮೂಪತಿಃ|
ಪುರೋಧಾವೈದ್ಯದೈವಜ್ಞಾ ಸಪ್ತ ಪ್ರಕೃತಯಸ್ತ್ವಿಮಾಃ|| ದುರ್ಗಾಧ್ಯಕ್ಷ, ಬಲಾಧ್ಯಕ್ಷ, ಧರ್ಮಾಧ್ಯಕ್ಷ, ಸೇನಾಪತಿ, ಪುರೋಹಿತ, ವೈದ್ಯ, ಜ್ಯೋತಿಷಿ – ಈ ಏಳು ಪ್ರಕೃತಿಗಳಲ್ಲಿ ಧರ್ಮಾಧ್ಯಕ್ಷನು ಧರ್ಮಪ್ರಕೃತಿ. ಉಳಿದವರು ಅರ್ಥ-ಧರ್ಮಪ್ರಕೃತಿಗಳು. ಇವರೆಲ್ಲರ ಮೇಲ್ವಿಚಾರಕನು ಮಂತ್ರಿ.

ಮಂತ್ರಿಯಾಗಲಿ.

12081028a ಶೂರಶ್ಚಾರ್ಯಶ್ಚ ವಿದ್ವಾಂಶ್ಚ ಪ್ರತಿಪತ್ತಿವಿಶಾರದಃ|
12081028c ಕುಲೀನಃ ಶೀಲಸಂಪನ್ನಸ್ತಿತಿಕ್ಷುರನಸೂಯಕಃ||

ಅವನು ಶೂರನೂ, ಆರ್ಯನೂ, ವಿದ್ವಾಂಸನೂ, ಯಾವಾಗ ಏನು ಮಾಡಬೇಕೆಂದು ತಿಳಿದವನಾಗಿರಬೇಕು. ಕುಲೀನನೂ, ಶೀಲಸಂಪನ್ನನೂ, ಕ್ಷಮಾವಂತನೂ, ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದವನೂ ಆಗಿರಬೇಕು.

12081029a ಏತೇ ಹ್ಯಮಾತ್ಯಾಃ ಕರ್ತವ್ಯಾಃ ಸರ್ವಕರ್ಮಸ್ವವಸ್ಥಿತಾಃ|
12081029c ಪೂಜಿತಾಃ ಸಂವಿಭಕ್ತಾಶ್ಚ ಸುಸಹಾಯಾಃ ಸ್ವನುಷ್ಠಿತಾಃ||

ಹೀಗೆ ತಮ್ಮ ತಮ್ಮ ಕರ್ಮಗಳಲ್ಲಿ ತೊಡಗಿಕೊಂಡು ಗೌರವಿಸಲ್ಪಟ್ಟು ಒಗ್ಗಟ್ಟಿನಲ್ಲಿರುವ ಅಮಾತ್ಯರು ನಿನಗೆ ಒಳ್ಳೆಯ ಸಹಾಯಕ್ಕೆ ಬರುತ್ತಾರೆ.

12081030a ಕೃತ್ಸ್ನಮೇತೇ ವಿನಿಕ್ಷಿಪ್ತಾಃ ಪ್ರತಿರೂಪೇಷು ಕರ್ಮಸು|
12081030c ಯುಕ್ತಾ ಮಹತ್ಸು ಕಾರ್ಯೇಷು ಶ್ರೇಯಾಂಸ್ಯುತ್ಪಾದಯಂತಿ ಚ||

ಅವರಿಗೆ ಅನುರೂಪ ಕರ್ಮಗಳಲ್ಲಿ ಅವರನ್ನು ತೊಡಗಿಸಿಕೊಂಡರೆ ಅವರು ಆ ಕಾರ್ಯವನ್ನು ಮಾಡಿಮುಗಿಸುವುದಲ್ಲದೇ ಮುಂದೆ ಅದಕ್ಕಿಂತಲೂ ಹೆಚ್ಚಿನ ಕಾರ್ಯಗಳಲ್ಲಿ ತೊಡಗಿ ರಾಜನ ಶ್ರೇಯಸ್ಸನ್ನು ವೃದ್ಧಿಗೊಳಿಸುವುದರಲ್ಲಿ ತೊಡಗುತ್ತಾರೆ.

12081031a ಏತೇ ಕರ್ಮಾಣಿ ಕುರ್ವಂತಿ ಸ್ಪರ್ಧಮಾನಾ ಮಿಥಃ ಸದಾ|
12081031c ಅನುತಿಷ್ಠಂತಿ ಚೈವಾರ್ಥಾನಾಚಕ್ಷಾಣಾಃ ಪರಸ್ಪರಮ್||

ಇವರು ಸದಾ ಸ್ಪರ್ಧಿಸುತ್ತಾ ಕಾರ್ಯಗಳನ್ನು ಮಾಡುತ್ತಿರುತ್ತಾರೆ.

ಪರಸ್ಪರರಿಂದ ಕೇಳಿಕೊಂಡು ರಾಜನ ಅರ್ಥಸಿದ್ಧಿಗಾಗಿ
ಪ್ರಯತ್ನಿಸುತ್ತಿರುತ್ತಾರೆ.

12081032a ಜ್ಞಾತಿಭ್ಯಶ್ಚೈವ ಬಿಭ್ಯೇಥಾ ಮೃತ್ಯೋರಿವ ಯತಃ ಸದಾ|
12081032c ಉಪರಾಜೇವ ರಾಜರ್ಧಿಂ ಜ್ಞಾತಿರ್ನ ಸಹತೇ ಸದಾ||

ಕುಲದವರ[223] ವಿಷಯದಲ್ಲಿ ಮೃತ್ಯುವಿನ ಕುರಿತು ಹೇಗೋ ಹಾಗೆ
ಭಯದಿಂದಿರಬೇಕು. ಉಪರಾಜರಾಗಿರುವವನು ತನ್ನದೇ ಕುಲದ
ರಾಜನ ಅಭಿವೃದ್ಧಿಯನ್ನು ಯಾವಾಗಲೂ ಸಹಿಸಿಕೊಳ್ಳುವುದಿಲ್ಲ.

12081033a ಋಜೋರ್ಮೃದೋರ್ವದಾನ್ಯಸ್ಯ ಹ್ರೀಮತಃ ಸತ್ಯವಾದಿನಃ|
12081033c ನಾನ್ಯೋ ಜ್ಞಾತೇರ್ಮಹಾಬಾಹೋ ವಿನಾಶಮಭಿನಂದತಿ||

ಸರಳನೂ, ಕೋಮಲಸ್ವಭಾವದವನೂ, ಉದಾರಿಯೂ,
ಲಜ್ಜಾಶೀಲನೂ ಮತ್ತು ಸತ್ಯವಾದಿಯೂ ಆದ ರಾಜನ ವಿನಾಶವನ್ನು
ಅವನ ಕುಲದವರಲ್ಲದೇ ಬೇರೆ ಯಾರು ತಾನೇ ಅಭಿನಂದಿಸುತ್ತಾರೆ?

12081034a ಅಜ್ಞಾತಿತಾ ನಾತಿಸುಖಾ ನಾವಜ್ಞೇಯಾಸ್ತ್ವತಃ ಪರಮ್|
12081034c ಅಜ್ಞಾತಿಮಂತಂ ಪುರುಷಂ ಪರೇ ಪರಿಭವಂತ್ಯುತ||

ಆದರೆ ದಾಯಾದಿಗಳಲ್ಲಿ ಈ ದೋಷವಿದ್ದರೂ ದಾಯಾದಿಗಳಿಂದ
ಸಂಪೂರ್ಣ ವಿಹೀನನಾಗಿದ್ದರೂ ರಾಜನು ಸುಖಿಯಾಗಿರುವುದಿಲ್ಲ.
ಆದುದರಿಂದ ದಾಯಾದಿಗಳನ್ನು ಯಾವಕಾರಣಕ್ಕೂ
ಅನಾದರಿಸಬಾರದು. ದಾಯಾದಿಗಳೇ ಇಲ್ಲದ ರಾಜನನ್ನು ಕುಲದ
ಹೊರಗಿನವರು ಅಥವಾ ಶತ್ರುಗಳು ಬಹಳವಾಗಿ ಪೀಡಿಸುತ್ತಿರುತ್ತಾರೆ.

---

[223] ದಾಯಾದಿಗಳ ವಿಷಯದಲ್ಲಿ?

12081035a ನಿಕೃತಸ್ಯ ನರೈರನ್ಯೈರ್ಜ್ಞಾತಿರೇವ ಪರಾಯಣಮ್|
12081035c ನಾನ್ಯೈರ್ನಿಕಾರಂ ಸಹತೇ ಜ್ಞಾತೇರ್ಜ್ಞಾತಿಃ ಕದಾ ಚನ||
12081036a ಆತ್ಮಾನಮೇವ ಜಾನಾತಿ ನಿಕೃತಂ ಬಾಂಧವೈರಪಿ|
12081036c ತೇಷು ಸಂತಿ ಗುಣಾಶ್ಚೈವ ನೈರ್ಗುಣ್ಯಂ ತೇಷು ಲಕ್ಷ್ಯತೇ||

ಇನ್ನೊಬ್ಬನಿಂದ ವಂಚಿತನಾದವನೆ ತನ್ನ ಕುಲದವರೇ
ಆಶ್ರಯರಾಗುತ್ತಾರೆ. ಒಂದೇ ಕುಲದವರಲ್ಲಿ ಯಾರಿಗೂ ಕುಲದ
ಹೊರಗಿನವರಿಂದ ಯಾವುದೇ ತೊಂದರೆಯಾದರೂ ಅದನ್ನು
ಸಹಿಸುವುದಿಲ್ಲ. ಅವರೆಲ್ಲರೂ ಒಂದಾಗಿ ಹೊರಗಿನವನನ್ನು
ಸದೆಬಡಿಯುತ್ತಾರೆ. ಹೀಗೆ ಕುಲದವರಲ್ಲಿ/ದಾಯಾದರಲ್ಲಿ ಗುಣಗಳೂ
ಇರುತ್ತವೆ. ಆದುದರಿಂದ ಜ್ಞಾತಿ/ಕುಲ/ದಾಯಾದಿಗಳ ವಿಚಾರದಲ್ಲಿ
ಎಚ್ಚರಿಕೆಯಿಂದ ಇರಬೇಕು. ಅವರೊಡನೇ ದ್ವೇಷವನ್ನೇ
ಕಟ್ಟಿಕೊಳ್ಳಬಾರದು.

12081037a ನಾಜ್ಞಾತಿರನುಗೃಹ್ಣಾತಿ ನಾಜ್ಞಾತಿರ್ದಿಗ್ಧಮಸ್ಯತಿ|
12081037c ಉಭಯಂ ಜ್ಞಾತಿಲೋಕೇಷು ದೃಶ್ಯತೇ ಸಾಧ್ವಸಾಧು ಚ||

ಜ್ಞಾತಿಗಳಿಲ್ಲದವನು ಅನುಗ್ರಹಿಸುವುದಿಲ್ಲ ಮತ್ತು ನಮಸ್ಕರಿಸುವುದಿಲ್ಲ.
ಜ್ಞಾತಿಗಳಿದ್ದವನು ಇವೆರಡನ್ನೂ ಮಾಡುತ್ತಾನೆ. ಅಂತೆಯೇ
ತೊಂದರೆಯನ್ನೂ ಮಾಡುತ್ತಾನೆ. ಆದುದರಿಂದ ಜ್ಞಾತಿಗಳ ವಿಷಯದಲ್ಲಿ
ಒಳ್ಳೆಯದೂ ಇದೆ. ಕೆಟ್ಟದ್ದೂ ಇದೆ.

12081038a ತಾನ್ಮಾನಯೇತ್ಪೂಜಯೇಚ್ಚ ನಿತ್ಯಂ ವಾಚಾ ಚ ಕರ್ಮಣಾ|
12081038c ಕುರ್ಯಾಚ್ಚ ಪ್ರಿಯಮೇತೇಭ್ಯೋ ನಾಪ್ರಿಯಂ ಕಿಂ ಚಿದಾಚರೇತ್||

ರಾಜನಾದವನು ನಿತ್ಯವೂ ಜ್ಞಾತಿಗಳನ್ನು ಮಾತು ಮತ್ತು ಕರ್ಮಗಳಿಂದ

ಪೂಜಿಸಬೇಕು. ಇವರಿಗೆ ಪ್ರಿಯವಾದವುಗಳನ್ನೇ
ಮಾಡಬೇಕಾದುದಲ್ಲದೆ ಎಂದೂ ಅಪ್ರಿಯವಾದುದನ್ನು
ಮಾಡಬಾರದು.

12081039a ವಿಶ್ವಸ್ತವದವಿಶ್ವಸ್ತಸ್ತೇಷು ವರ್ತೇತ ಸರ್ವದಾ|
12081039c ನ ಹಿ ದೋಷೋ ಗುಣೋ ವೇತಿ ನಿಷ್ಪ್ರಕ್ತಸ್ತೇಷು ದೃಶ್ಯತೇ||

ಜ್ಞಾತಿಯವರಲ್ಲಿ ಸ್ವಲ್ಪವೂ ವಿಶ್ವಾಸವೇ ಇಲ್ಲದಿದ್ದರೂ ಅವರ ಎದಿರು
ಅತ್ಯಂತ ವಿಶ್ವಾಸಿಯಾಗಿರುವಂತೆಯೇ ವರ್ತಿಸಬೇಕು. ಜ್ಞಾತಿಗಳಲ್ಲಿ
ಗುಣವಿರುವುದೇ ಅಥವಾ ದೋಷವಿದೆಯೇ ಎನ್ನುವುದನ್ನು
ನಿರ್ಣಯಿಸುವ ಅವಶ್ಯಕತೆಯೂ ಇರುವುದಿಲ್ಲ.

12081040a ತಸ್ಯೈವಂ ವರ್ತಮಾನಸ್ಯ ಪುರುಷಸ್ಯಾಪ್ರಮಾದಿನಃ|
12081040c ಅಮಿತ್ರಾಃ ಸಂಪ್ರಸೀದಂತಿ ತಥಾ ಮಿತ್ರೀಭವಂತ್ಯಪಿ||

ಹೀಗೆ ಜಾಗರೂಕನಾಗಿ ನಡೆದುಕೊಳ್ಳುವ ಪುರುಷನ ಶತ್ರುಗಳೂ
ಪ್ರಸನ್ನರಾಗಿರುತ್ತಾರೆ ಮತ್ತು ಶತ್ರುಗಳೂ ಮಿತ್ರರೇ ಆಗುತ್ತಾರೆ.

12081041a ಯ ಏವಂ ವರ್ತತೇ ನಿತ್ಯಂ ಜ್ಞಾತಿಸಂಬಂಧಿಮಂಡಲೇ|
12081041c ಮಿತ್ರೇಷ್ವಮಿತ್ರೇಷ್ವೈಶ್ವರ್ಯೇ ಚಿರಂ ಯಶಸಿ ತಿಷ್ಠತಿ||

ಜ್ಞಾತಿ-ಸಂಬಂಧಿ ಮಂಡಲದಲ್ಲಿ ನಿತ್ಯವೂ ಹೀಗೆಯೇ
ನಡೆದುಕೊಳ್ಳಬೇಕು. ಮಿತ್ರ-ಅಮಿತ್ರರ ವಿಷಯದಲ್ಲಿ ಈ ರೀತಿ
ನಡೆದುಕೊಳ್ಳುವವರು ಬಹುಕಾಲದ ವರೆಗೆ ಐಶ್ವರ್ಯ ಮತ್ತು
ಯಶಸ್ಸುಗಳಲ್ಲಿ ಸ್ಥಿರರಾಗಿರುತ್ತಾರೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ

ಏಕಾಶೀತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಎಂಭತ್ತೊಂದನೇ ಅಧ್ಯಾಯವು.

೮೨

ವಾಸುದೇವ-ನಾರದ ಸಂವಾದ

ಜ್ಞಾತಿ-ಬಾಂಧವರೊಡನೆ ಹೇಗೆ ವ್ಯವಹರಿಸಬೇಕು ಎನ್ನುವುದರ ಕುರಿತು ವಾಸುದೇವ-ನಾರದ ಸಂವಾದ (1-30).

12082001 ಯುಧಿಷ್ಠಿರ ಉವಾಚ|
12082001a ಏವಮಗ್ರಾಹ್ಯಕೇ ತಸ್ಮಿನ್ ಜ್ಞಾತಿಸಂಬಂಧಿಮಂಡಲೇ|
12082001c ಮಿತ್ರೇಷ್ವಮಿತ್ರೇಷ್ವಪಿ ಚ ಕಥಂ ಭಾವೋ ವಿಭಾವ್ಯತೇ||

ಯುಧಿಷ್ಠಿರನು ಹೇಳಿದನು: "ಪರಸ್ಪರ ಸ್ಪರ್ಧೆಯ ಕಾರಣದಿಂದ ಜ್ಞಾತಿಸಂಬಂಧಿಮಂಡಲದವರನ್ನು ಹತೋಟಿಯಲ್ಲಿಟ್ಟುಕೊಂಡಿರಲು ಸಾಧ್ಯವಾಗುವುದಿಲ್ಲ. ಒಂದು ಪಕ್ಷದವರನ್ನು ಆದರಿಸಿದರೆ ಇನ್ನೊಂದು ಪಕ್ಷದವರು ಕೋಪಗೊಳ್ಳುತ್ತಾರೆ. ಮಿತ್ರರು ಶತ್ರುಗಳೂ ಆಗಬಲ್ಲರು. ಇಂಥಹ ಸಂದರ್ಭದಲ್ಲಿ ಎಲ್ಲರ ಮನಸ್ಸನ್ನೂ ಹೇಗೆ ವಶೀಕರಿಸಿಕೊಳ್ಳಬಹುದು?"

12082002 ಭೀಷ್ಮ ಉವಾಚ|
12082002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12082002c ವಾಸುದೇವಸ್ಯ ಸಂವಾದಂ ಸುರರ್ಷೇರ್ನಾರದಸ್ಯ ಚ||

ಭೀಷ್ಮನು ಹೇಳಿದನು: "ಇದಕ್ಕೆ ಸಂಬಂಧಿಸಿದಂತೆ ಪುರಾತನ
ಇತಿಹಾಸವಾಗಿರುವ ವಾಸುದೇವ ಮತ್ತು ಸುರರ್ಷಿ ನಾರದರ
ಸಂವಾದವನ್ನು ಉದಾಹರಿಸುತ್ತಾರೆ.

12082003 ವಾಸುದೇವ ಉವಾಚ|
12082003a ನಾಸುಹೃತ್ಪರಮಂ ಮಂತ್ರಂ ನಾರದಾರ್ಹತಿ ವೇದಿತುಮ್|
12082003c ಅಪಂಡಿತೋ ವಾಪಿ ಸುಹೃತ್ಪಂಡಿತೋ ವಾಪಿ ನಾತ್ಮವಾನ್||

ವಾಸುದೇವನು ಹೇಳಿದನು: "ನಾರದ! ಗುಹ್ಯ ವಿಷಯಗಳನ್ನು
ಸುಹೃದನಲ್ಲದವನು ತಿಳಿಯಲು ಯೋಗ್ಯನಲ್ಲ. ಒಂದು ವೇಳೆ
ಸುಹೃದನು ಅಪಂಡಿತನಾಗಿದ್ದರೆ ಅವನೂ ಗುಹ್ಯ ವಿಷಯಗಳನ್ನು
ತಿಳಿಯಲು ಯೋಗ್ಯನಲ್ಲ. ವಿದ್ಯಾವಂತನೂ ಸುಹೃದನೂ ಆಗಿದ್ದರೂ
ಜಿತೇಂದ್ರಿಯನಲ್ಲದವನು ಗೋಪನೀಯ ವಿಷಯಗಳನ್ನು
ತಿಳಿದುಕೊಳ್ಳಲು ಯೋಗ್ಯನಲ್ಲ.

12082004a ಸ ತೇ ಸೌಹೃದಮಾಸ್ಥಾಯ ಕಿಂ ಚಿದ್ವಕ್ಷ್ಯಾಮಿ ನಾರದ|
12082004c ಕೃತ್ಸ್ನಾಂ ಚ ಬುದ್ಧಿಂ ಸಂಪ್ರೇಕ್ಷ್ಯ ಸಂಪೃಚ್ಚೇ ತ್ರಿದಿವಂಗಮ||

ಮೂರು ಲೋಕಗಳನ್ನೂ ಸಂಚರಿಸುವ ನಾರದ! ನಮ್ಮ
ಸೌಹಾರ್ದತೆಯಿಂದ ನಾನು ನಿನ್ನಲ್ಲಿ ಕೆಲವು ಮಾತುಗಳನ್ನಾಡುತ್ತೇನೆ.
ಮತ್ತೊಬ್ಬನ ಬುದ್ಧಿಬಲವನ್ನು ಸಂಪೂರ್ಣವಾಗಿ ತಿಳಿದೇ ಅವನನ್ನು
ಪ್ರಶ್ನಿಸಬೇಕು.

12082005a ದಾಸ್ಯಮೈಶ್ವರ್ಯವಾದೇನ ಜ್ಞಾತೀನಾಂ ವೈ ಕರೋಮ್ಯಹಮ್|
12082005c ಅರ್ಧಭೋಕ್ತಾಸ್ಮಿ ಭೋಗಾನಾಂ ವಾಗ್ದುರುಕ್ತಾನಿ ಚ ಕ್ಷಮೇ||

ನಾನು ನನ್ನ ಪ್ರಭುತ್ವವನ್ನು ಪ್ರದರ್ಶಿಸಿ ಜ್ಞಾತಿ-ಬಾಂಧವರನ್ನು

ದಾಸರನ್ನಾಗಿಸಲು ಬಯಸುವುದಿಲ್ಲ. ಅರ್ಧ ಭೋಗಗಳನ್ನೇ ನಾನು
ಭೋಗಿಸುತ್ತೇನೆ. ಆದರೂ ಅವರು ನನ್ನ ವಿಷಯದಲ್ಲಿ
ಕೆಟ್ಟಮಾತನ್ನಾಡಿದರೆ ಅದನ್ನೂ ಕ್ಷಮಿಸುತ್ತೇನೆ.

12082006a ಅರಣೀಮಗ್ನಿಕಾಮೋ ವಾ ಮಥ್ನಾತಿ ಹೃದಯಂ ಮಮ|
12082006c ವಾಚಾ ದುರುಕ್ತಂ ದೇವರ್ಷೇ ತನ್ಮೇ ದಹತಿ ನಿತ್ಯದಾ||

ದೇವರ್ಷೇ! ಅಗ್ನಿಯನ್ನು ಹುಟ್ಟಿಸಲು ಯಾವ ರೀತಿಯಲ್ಲಿ
ಮಥಿಸಲಾಗುತ್ತದೆಯೋ ಹಾಗೆಯೇ ನನ್ನ ಹೃದಯವನ್ನೂ ಕೂಡ
ನಿತ್ಯವೂ ಈ ಕೆಟ್ಟ ಮಾತುಗಳು ಸುಡುತ್ತಿವೆ.

12082007a ಬಲಂ ಸಂಕರ್ಷಣೇ ನಿತ್ಯಂ ಸೌಕುಮಾರ್ಯಂ ಪುನರ್ಗದೇ|
12082007c ರೂಪೇಣ ಮತ್ತಃ ಪ್ರದ್ಯುಮ್ನಃ ಸೋಽಸಹಾಯೋಽಸ್ಮಿ ನಾರದ||

ನಾರದ! ಸಂಕರ್ಷಣನಲ್ಲಿ ನಿತ್ಯವೂ ಬಲವಿದೆ. ಪುನಃ ಗದನಲ್ಲಿ
ಸೌಕುಮಾರ್ಯತ್ವವಿದೆ. ಪ್ರದ್ಯುಮ್ನನು ತನ್ನ ರೂಪದಿಂದ
ಮತ್ತನಾಗಿದ್ದಾನೆ. ಆದುದರಿಂದ ನಾನು ಅಸಹಾಯಕನಾಗಿದ್ದೇನೆ.

12082008a ಅನ್ಯೇ ಹಿ ಸುಮಹಾಭಾಗಾ ಬಲವಂತೋ ದುರಾಸದಾಃ|
12082008c ನಿತ್ಯೋತ್ಥಾನೇನ ಸಂಪನ್ನಾ ನಾರದಾಂಧಕವೃಷ್ಣಯಃ||

ನಾರದ! ಅನ್ಯ ಅಂಧಕ-ವೃಷ್ಣಿಗಳೂ ಕೂಡ ಮಹಾಭಾಗರು.
ಬಲವಂತರು. ದುರಾಸದರು. ನಿತ್ಯವೂ ಉದ್ಯೋಗಶೀಲ ಸಂಪನ್ನರು.

12082009a ಯಸ್ಯ ನ ಸ್ಯುರ್ನ ವೈ ಸ ಸ್ಯಾದ್ಯಸ್ಯ ಸ್ಯುಃ ಕೃಚ್ಛ್ರಮೇವ ತತ್|
12082009c ದ್ವಾಭ್ಯಾಂ ನಿವಾರಿತೋ ನಿತ್ಯಂ ವೃಣೋಮ್ಯೇಕತರಂ ನ ಚ||

ಅವರು ಯಾರ ಕಡೆ ಸೇರುವುದಿಲ್ಲವೋ ಅವರು ನಾಶವಾದಂತಯೇ

ಸರಿ. ಅವರು ಯಾರ ಕಡೆ ಇದ್ದಾರೋ ಅವರು ಎಷ್ಟೇ ಕಷ್ಟದಲ್ಲಿರಲಿ ವಿಜಯಿಗಳಾಗುತ್ತಾರೆ. ಆದರೆ ಆಹುಕ-ಅಕ್ರೂರರು ಪರಸ್ಪರ ಬದ್ಧವೈರಿಗಳಾಗಿದ್ದಾರೆ. ಇನ್ನೊಬ್ಬರ ಕಡೆ ಹೋಗಬಾರದೆಂದು ಇಬ್ಬರಿಂದಲೂ ನಿತ್ಯವೂ ತಡೆಯಲ್ಪಟ್ಟ ನಾನು ಯಾವ ಪಕ್ಷವನ್ನೂ ಸೇರದೇ ಸುಮ್ಮನಿದ್ದುಬಿಟ್ಟಿದ್ದೇನೆ.

12082010a ಸ್ಯಾತಾಂ ಯಸ್ಯಾಹುಕಾಕ್ರೂರೌ ಕಿಂ ನು ದುಃಖಿತರಂ ತತಃ|
12082010c ಯಸ್ಯ ವಾಪಿ ನ ತೌ ಸ್ಯಾತಾಂ ಕಿಂ ನು ದುಃಖಿತರಂ ತತಃ||

ಇಂಥಹ ಆಹುಕ-ಅಕ್ರೂರರ ಬಂಧುಗಳಿಗೆ ಇದಕ್ಕಿಂತಲೂ ದುಃಖಿತರವಾದುದು ಬೇರೆ ಯಾವುದಿದೆ? ಅವರ ಸುಹೃದರಿಗೂ ಅದಕ್ಕಿಂತಲೂ ಹೆಚ್ಚಿನ ದುಃಖವು ಬೇರೆ ಯಾವುದಿದೆ?

12082011a ಸೋಽಹಂ ಕಿತವಮಾತೇವ ದ್ವಯೋರಪಿ ಮಹಾಮುನೇ|
12082011c ಏಕಸ್ಯ ಜಯಮಾಶಂಸೇ ದ್ವಿತೀಯಸ್ಯಾಪರಾಜಯಮ್||

ಮಹಾಮುನೇ! ನಾನಾದರೋ ಇಬ್ಬರು ಜೂಜುಗಾರ ಮಕ್ಕಳಲ್ಲಿ ಒಬ್ಬನಿಗೆ ಜಯವಾಗಲೆಂದು ಆಶೀರ್ವಾದವನ್ನಿತ್ತು ಇನ್ನೊಬ್ಬನಿಗೆ ಪರಾಜಯವಾಗದಿರಲೆಂದು ಆಶೀರ್ವಾದವನ್ನಿಡುವ ತಾಯಿಯಂತೆ ಇದ್ದುಬಿಡುತ್ತೇನೆ.

12082012a ಮಮ್ಯೈವಂ ಕ್ಲಿಶ್ಯಮಾನಸ್ಯ ನಾರದೋಭಯತಃ ಸದಾ|
12082012c ವಕ್ತುಮರ್ಹಸಿ ಯಚ್ಛ್ರೇಯೋ ಜ್ಞಾತೀನಾಮಾತ್ಮನಸ್ತಥಾ||

ನಾರದ! ಹೀಗೆ ಎರಡೂ ಕಡೆಗಳಿಂದ ಕಷ್ಟಕ್ಕೀಡಾಗಿರುವ ನಾನು ನನ್ನ ಜ್ಞಾತಿಬಾಂಧವರಿಗೆ ಶ್ರೇಯಸ್ಸುಂಟಾಗುವ ಹಾಗೆ ಏನನ್ನು ಮಾಡಬಹುದೆಂದು ಹೇಳಬೇಕು."

12082013 ನಾರದ ಉವಾಚ|

12082013a ಆಪದೋ ದ್ವಿವಿಧಾಃ ಕೃಷ್ಣ ಬಾಹ್ಯಾಶ್ಚಾಭ್ಯಂತರಾಶ್ಚ ಹ|
12082013c ಪ್ರಾದುರ್ಭವಂತಿ ವಾರ್ಷ್ಣೇಯ ಸ್ವಕೃತಾ ಯದಿ ವಾನ್ಯತಃ||

ನಾರದನು ಹೇಳಿದನು: "ವಾರ್ಷ್ಣೇಯ! ಕೃಷ್ಣ! ಆಪತ್ತುಗಳಲ್ಲಿ ಎರಡು ವಿಧ: ಬಾಹ್ಯ (ಹೊರಗಿನದ್ದು) ಮತ್ತು ಅಭ್ಯಂತರ (ಒಳಗಿದ್ದುದು). ಇವು ಸ್ವಕೃತವಾಗಿರಬಹುದು ಅಥವಾ ಅನ್ಯರು ಮಾಡಿದ್ದಿರದಾಗಿರಬಹುದು.

12082014a ಸೇಯಮಾಭ್ಯಂತರಾ ತುಭ್ಯಮಾಪತ್ಕೃಚ್ಚ್ರಾ ಸ್ವಕರ್ಮಜಾ|
12082014c ಅಕ್ರೂರಭೋಜಪ್ರಭವಾಃ ಸರ್ವೇ ಹ್ಯೇತೇ ತದನ್ವಯಾಃ||

ಅಕ್ರೂರ ಮತ್ತು ಭೋಜರಿಂದ ನಿನಗೆ ಉಂಟಾಗಿರುವ ಈ ಕಷ್ಟವು ಅಭಂತರವಾಗಿದೆ ಮತ್ತು ಸ್ವಕೃತವಾಗಿದ್ದಾಗಿದೆ. ಏಕೆಂದರೆ ಇವರಿಬ್ಬರೂ ನಿನ್ನ ವಂಶದವರೇ ಆಗಿದ್ದಾರೆ.

12082015a ಅರ್ಥಹೇತೋರ್ಹಿ ಕಾಮಾದ್ವಾದ್ವಾರಾ ಬೀಭತ್ಸಯಾಪಿ ವಾ|
12082015c ಆತ್ಮನಾ ಪ್ರಾಪ್ತಮೈಶ್ವರ್ಯಮನ್ಯತ್ರ ಪ್ರತಿಪಾದಿತಮ್||

ಇದು ಸಂಪತ್ತಿನ ಕಾರಣದಿಂದಲೇ ಸಂಭವಿಸಿದೆ. ನಿನ್ನದೇ ಇಚ್ಛೆಯಿಂದಲೋ ಅಥವಾ ಬೇರೆಯವರು ನಿಂದಿಸಬಹುದೆಂಬ ಭಯದಿಂದಲೋ ನೀನು ನಿನಗೆ ಪ್ರಾಪ್ತವಾಗಿದ್ದ ಐಶ್ವರ್ಯವನ್ನು ಬೇರೆಯವರಿಗೆ ಕೊಟ್ಟುಬಿಟ್ಟಿರುವೆ!

12082016a ಕೃತಮೂಲಮಿದಾನೀಂ ತಜ್ಜಾತಶಬ್ದಂ ಸಹಾಯವತ್|
12082016c ನ ಶಕ್ಯಂ ಪುನರಾದಾತುಂ ವಾಂತಮನ್ನಮಿವ ತ್ವಯಾ||

ಸಹಾಯವೆಂದು ಹೇಳಿ ನೀನು ಕೊಟ್ಟಿದ ಸಂಪತ್ತು ಅವರಲ್ಲಿ ದೃಢವಾಗಿ

ಬೇರುಬಿಟ್ಟಿದೆ. ವಾಂತಿಮಾಡಿದ ಅನ್ನವನ್ನು ಪುನಃ ಸೇವಿಸಲು
ಸಾಧ್ಯವಾಗದಂತೆ ಅವರಲ್ಲಿರುವ ಸಂಪತ್ತನ್ನು ಪುನಃ ತೆಗೆದುಕೊಳ್ಳಲು
ನಿನಗೆ ಸಾಧ್ಯವಾಗುವುದಿಲ್ಲ.

12082017a ಬಭ್ರೂಗ್ರಸೇನಯೋ ರಾಜ್ಯಂ ನಾಪ್ತುಂ ಶಕ್ಯಂ ಕಥಂ ಚನ|
12082017c ಜ್ಞಾತಿಭೇದಭಯಾತ್ಕೃಷ್ಣ ತ್ವಯಾ ಚಾಪಿ ವಿಶೇಷತಃ||

ಕೃಷ್ಣ! ಜ್ಞಾತಿಗಳಲ್ಲಿ ಭೇದವುಂಟಾಗಬಹುದೆಂಬ ಭಯದಿಂದ ಬಭ್ರು
ಮತ್ತು ಉಗ್ರಸೇನರ ರಾಜ್ಯವನ್ನು ಎಂದೂ ಹಿಂತೆಗೆದುಕೊಳ್ಳಲು,
ಅದರಲ್ಲೂ ವಿಶೇಷವಾಗಿ ನಿನ್ನಿಂದ, ಸಾಧ್ಯವಿಲ್ಲ.

12082018a ತಚ್ಚೇತ್ಸಿದ್ಧ್ಯೇತ್ಪ್ರಯತ್ನೇನ ಕೃತ್ವಾ ಕರ್ಮ ಸುದುಷ್ಕರಮ್|
12082018c ಮಹಾಕ್ಷಯವ್ಯಯಂ ವಾ ಸ್ಯಾದ್ವಿನಾಶೋ ವಾ ಪುನರ್ಭವೇತ್||

ಒಂದು ವೇಳೆ ಬಹಳ ಪ್ರಯತ್ನದಿಂದ ಅತ್ಯಂತ ದುಷ್ಕರ
ಬಹುಜನಸಂಹಾರಕ ಯುದ್ಧವನ್ನು ಮಾಡಿ ರಾಜ್ಯವನ್ನು
ಪಡೆದುಕೊಳ್ಳಬಹುದು. ಆದರೆ ಅದರಿಂದ ಅಪಾರ
ಧನವ್ಯಯವಾಗುತ್ತದೆ. ಸರ್ವವಿನಾಶವಾಗುತ್ತದೆ.

12082019a ಅನಾಯಸೇನ ಶಸ್ತ್ರೇಣ ಮೃದುನಾ ಹೃದಯಚ್ಛಿದಾ|
12082019c ಜಿಹ್ವಾಮುದ್ಧರ ಸರ್ವೇಷಾಂ ಪರಿಮೃಜ್ಯಾನುಮೃಜ್ಯ ಚ||

ಆದುದರಿಂದ ಹೃದಯವನ್ನು ಭೇದಿಸುವ ಮೃದುವಾದ
ಲೋಹದ್ದಲ್ಲದ ಶಸ್ತ್ರದಿಂದ ನಿನ್ನ ಜ್ಞಾತಿಯವರ ನಾಲಿಗೆಯನ್ನು ಕ್ಷಮೆ,
ಸರಳತೆ ಮುಂತಾದ ಗುಣಗಳಿಂದ ಪರಿಮಾರ್ಜನಗೊಳಿಸಿ ಸೇವಾ-
ಸತ್ಕಾರಗಳಿಂದ ಅನುಮಾರ್ಜನಗೊಳಿಸಿ ತೆಗೆದುಹಾಕು."

12082020 ವಾಸುದೇವ ಉವಾಚ|

12082020a ಅನಾಯಸಂ ಮುನೇ ಶಸ್ತ್ರಂ ಮೃದು ವಿದ್ಯಾಮಹಂ ಕಥಮ್|
12082020c ಯೇನೈಷಾಮುದ್ಧರೇ ಜಿಹ್ವಾಂ ಪರಿಮೃಜ್ಯಾನುಮೃಜ್ಯ ಚ||

ವಾಸುದೇವನು ಹೇಳಿದನು: "ಮುನೇ! ಲೋಹದ್ದಲ್ಲದ ಮೃದು ಶಸ್ತ್ರವು ಯಾವುದೆಂದು ಹೇಗೆ ತಿಳಿಯಬಲ್ಲೆನು? ಅಂತಹ ಅಲೋಹ ಶಸ್ತ್ರದಿಂದ ನಾನು ಹೇಗೆ ನನ್ನ ಜ್ಞಾತಿಗಳವರ ಮಾತನ್ನು ನಿಲ್ಲಿಸಬಲ್ಲೆನು?"

12082021 ನಾರದ ಉವಾಚ|

12082021a ಶಕ್ತ್ಯನ್ನದಾನಂ ಸತತಂ ತಿತಿಕ್ಷಾ ದಮ ಆರ್ಜವಮ್|
12082021c ಯಥಾರ್ಹಪ್ರತಿಪೂಜಾ ಚ ಶಸ್ತ್ರಮೇತದನಾಯಸಮ್||

ನಾರದನು ಹೇಳಿದನು: "ಯಥಾಶಕ್ತಿ ಸತತ ಅನ್ನದಾನ, ಕ್ಷಮೆ, ಸರಳತೆ, ಕೋಮಲತೆ, ಯಥಾಯೋಗ್ಯ ಪೂಜಾ-ಸತ್ಕಾರಗಳು ಇವು ಅಲೋಹಶಸ್ತ್ರಗಳು.

12082022a ಜ್ಞಾತೀನಾಂ ವಕ್ತುಕಾಮಾನಾಂ ಕಟೂನಿ ಚ ಲಘೂನಿ ಚ|
12082022c ಗಿರಾ ತ್ವಂ ಹೃದಯಂ ವಾಚಂ ಶಮಯಸ್ವ ಮನಾಂಸಿ ಚ||

ಜ್ಞಾತಿಗಳೇನಾದರೂ ನಿನ್ನ ವಿಷಯದಲ್ಲಿ ಕಟುವಾದ ಮತ್ತು ತುಚ್ಛವಾಗಿ ಮಾತನಾಡ ಬಯಸಿದರೆ ಆ ಸಮಯದಲ್ಲಿ ನೀನು ಸುಮಧುರ ಮಾತುಗಳಿಂದ ಅವರ ಕಠೋರ ಹೃದಯವನ್ನೂ, ಕಟು ವಾಕ್ಯಗಳನ್ನೂ ಉದ್ರಿಕ್ತ ಮನಸ್ಸನ್ನೂ ಶಮನಗೊಳಿಸು.

12082023a ನಾಮಹಾಪುರುಷಃ ಕಶ್ಚಿನ್ನಾನಾತ್ಮಾ ನಾಸಹಾಯವಾನ್|
12082023c ಮಹತೀಂ ಧುರಮಾದತ್ತೇ ತಾಮುದ್ಯಮ್ಯೋರಸಾ ವಹ||

ಮಹಾಪುರುಷನಾಗಿರದವನು, ಮನಸ್ಸನ್ನು
ಹತೋಟಿಯಲ್ಲಿಟ್ಟುಕೊಳ್ಳದವನು ಮತ್ತು ಅಸಹಾಯಕನಾದವನು
ಮಹಾಭಾರವನ್ನು ಹೊರಲಾರನು. ನೀನು ಅವೆಲ್ಲವೂ
ಆಗಿರುವುದರಿಂದ ಈ ಮಹಾಭಾರವನ್ನು ಹೊರು.

12082024a ಸರ್ವ ಏವ ಗುರುಂ ಭಾರಮನಡ್ವಾನ್ವಹತೇ ಸಮೇ|
12082024c ದುರ್ಗೇ ಪ್ರತೀಕಃ ಸುಗವೋ ಭಾರಂ ವಹತಿ ದುರ್ವಹಮ್||

ಎಲ್ಲ ಎತ್ತುಗಳೂ ಸಮಪ್ರದೇಶದಲ್ಲಿ ಭಾರವನ್ನು ಹೊರುತ್ತವೆ. ಆದರೆ
ದುರ್ಗಮ ಪ್ರದೇಶಗಳಲ್ಲಿ ಹೊರಲು ಕಷ್ಟವಾದ ಭಾರವನ್ನು
ಮಹಾಬಲಿಷ್ಟ ಎತ್ತೇ ಹೊರಬಲ್ಲದು.

12082025a ಭೇದಾದ್ವಿನಾಶಃ ಸಂಘಾನಾಂ ಸಂಘಮುಖ್ಯೋಽಸಿ ಕೇಶವ|
12082025c ಯಥಾ ತ್ವಾಂ ಪ್ರಾಪ್ಯ ನೋತ್ಸೀದೇದಯಂ ಸಂಘಸ್ತಥಾ ಕುರು||

ಕೇಶವ! ನೀನು ಯಾವ ಸಂಘದ ಮುಖ್ಯನಾಗಿರುವೆಯೋ ಆ
ಸಂಘಗಳಲ್ಲಿದ್ದವರ ಭೇದದಿಂದ ವಿನಾಶವಾಗುತ್ತದೆ.
ಸಂಖಮುಖ್ಯನನ್ನಾಗಿ ನಿನ್ನನ್ನು ಪಡೆದ ಸಂಘವು ಒಡೆಯದಂತೆ ನೀನು
ಮಾಡು.

12082026a ನಾನ್ಯತ್ರ ಬುದ್ಧಿಕ್ಷಾಂತಿಭ್ಯಾಂ ನಾನ್ಯತ್ರೇಂದ್ರಿಯನಿಗ್ರಹಾತ್|
12082026c ನಾನ್ಯತ್ರ ಧನಸಂತ್ಯಾಗಾದ್ಗಣಃ ಪ್ರಾಜ್ಞೇಽವತಿಷ್ಠತೇ||

ಬುದ್ಧಿ, ಕ್ಷಮೆ ಮತ್ತು ಇಂದ್ರಿಯನಿಗ್ರಹಗಳಲ್ಲದೇ ಮತ್ತು
ಧನಸಂತ್ಯಾಗವಲ್ಲದೇ ಬೇರೆ ಯಾವುದರಿಂದಲೂ ಗಣವು ಪ್ರಾಜ್ಞನ
ಆಜ್ಞೆಯನ್ನು ಸ್ವೀಕರಿಸುವಂತೆ ಮಾಡಲು ಸಾಧ್ಯವಿಲ್ಲ.

12082027a ಧನ್ಯಂ ಯಶಸ್ಯಮಾಯುಷ್ಯಂ ಸ್ವಪಕ್ಷೋದ್ಭಾವನಂ ಶುಭಮ್|
12082027c ಜ್ಞಾತೀನಾಮವಿನಾಶಃ ಸ್ಯಾದ್ಯಥಾ ಕೃಷ್ಣ ತಥಾ ಕುರು||

ಕೃಷ್ಣ! ಸ್ವಪಕ್ಷದವರಿಗೆ ಅಭಿವೃದ್ಧಿಯನ್ನು ತರುವುದು ಧನ್ಯವೂ,
ಯಶಸ್ಕರವೂ, ಆಯುಷ್ಕರವೂ ಆಗಿದೆ. ನಿನ್ನ ಜ್ಞಾತಿಗಳ
ವಿನಾಶವಾಗದಂತೆ ಮಾಡು.

12082028a ಆಯತ್ಯಾಂ ಚ ತದಾತ್ವೇ ಚ ನ ತೇऽಸ್ತ್ಯವಿದಿತಂ ಪ್ರಭೋ|
12082028c ಷಾಡ್ಗುಣ್ಯಸ್ಯ ವಿಧಾನೇನ ಯಾತ್ರಾಯಾನವಿಧೌ ತಥಾ||

ಪ್ರಭೋ! ಈಗ ಮತ್ತು ಮುಂದೆ ಮಾಡಬೇಕಾದ ಕಾರ್ಯಗಳು ನಿನಗೆ
ತಿಳಿದೇ ಇವೆ. ಷಡ್ಗುಣ[224]ಗಳ ವಿಧಾನಗಳ ಪ್ರಯೋಗವನ್ನೂ,
ಯಾತ್ರಾಯಾನ ವಿಧಿಗಳ ಪ್ರಯೋಗವನ್ನೂ ನೀನು ತಿಳಿದಿರುವೆ.

12082029a ಮಾಧವಾಃ ಕುಕುರಾ ಭೋಜಾಃ ಸರ್ವೇ ಚಾಂಧಕವೃಷ್ಣಯಃ|
12082029c ತ್ವಯ್ಯಾಸಕ್ತಾ ಮಹಾಬಾಹೋ ಲೋಕಾ ಲೋಕೇಶ್ವರಾಶ್ಚ ಯೇ||
12082030a ಉಪಾಸತೇ ಹಿ ತ್ವದ್ಬುದ್ಧಿಮೃಷಯಶ್ಚಾಪಿ ಮಾಧವ|

ಮಹಾಬಾಹೋ! ಮಾಧವ! ಮಾಧವರು, ಕುಕರರು, ಭೋಜರು,
ಸರ್ವ ಅಂಧಕ-ವೃಷ್ಣಿಗಳೂ ನಿನ್ನಲ್ಲಿಯೇ ಆಸಕ್ತರಾಗಿದ್ದಾರೆ.
ಲೋಕೇಶ್ವರರೂ, ಋಷಿಗಳೂ ನಿನ್ನ ಬುದ್ಧಿಯನ್ನೂ ಉಪಾಸಿಸುತ್ತಾರೆ.

12082030c ತ್ವಂ ಗುರುಃ ಸರ್ವಭೂತಾನಾಂ ಜಾನೀಷೇ ತ್ವಂ ಗತಾಗತಮ್|
12082030e ತ್ವಾಮಾಸಾದ್ಯ ಯದುಶ್ರೇಷ್ಠಮೇಧಂತೇ ಜ್ಞಾತಿನಃ ಸುಖಮ್||

---

[224] ಸಂಧಿ, ವಿಗ್ರಹ, ಯಾನ, ಆಸನ, ದ್ವಿಧೀಭಾವ, ಮತ್ತು ಸಮಾಶ್ರಯ ಇವು ಷಡ್ಗುಣಗಳು.

ನೀನು ಸರ್ವಭೂತಗಳ ಗುರುವಾಗಿರುವೆ. ಆಗಿಹೋಗಿರುವವು ಮತ್ತು ಮುಂದೆ ಆಗುವವು ನಿನಗೆ ತಿಳಿದಿವೆ. ಯದುಶ್ರೇಷ್ಠ! ನಿನ್ನನ್ನು ಆಶ್ರಯಿಸಿ ನಿನ್ನ ಜ್ಞಾತಿಗಳು ಸುಖವನ್ನು ಹೊಂದುತ್ತಾರೆ.””

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ವಾಸುದೇವನಾರದಸಂವಾದೇ ದ್ವ್ಯಶೀತಿತಮೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ವಾಸುದೇವನಾರದಸಂವಾದ ಎನ್ನುವ ಎಂಭತ್ತೆರಡನೇ ಅಧ್ಯಾಯವು.

೮೩

ಅಮಾತ್ಯಪರೀಕ್ಷಾ – ಕಾಲಕವೃಕ್ಷೀಯೋಪಾಖ್ಯಾನ

ಮಂತ್ರಿಗಳ ಪರೀಕ್ಷಾವಿಷಯದಲ್ಲಿ ಕಾಲಕವೃಕ್ಷೀಯೋಽಪಾಖ್ಯಾನ (1-67).

12083001 ಭೀಷ್ಮ ಉವಾಚ|
12083001a ಏಷಾ ಪ್ರಥಮತೋ ವೃತ್ತಿರ್ದ್ವಿತೀಯಾಂ ಶೃಣು ಭಾರತ|
12083001c ಯಃ ಕಶ್ಚಿಜ್ಜನಯೇದರ್ಥಂ ರಾಜ್ಞಾ ರಕ್ಷ್ಯಃ ಸ ಮಾನವಃ॥

ಭೀಷ್ಮನು ಹೇಳಿದನು: “ಭಾರತ! ಇದು ರಾಜನ ಪ್ರಥಮ ವೃತ್ತಿ. ಅವನ ಎರಡನೆಯ ವೃತ್ತಿಯನ್ನು ಕೇಳು. ರಾಜನ ಸಂಪತ್ತನ್ನು ವೃದ್ಧಿಗೊಳಿಸುವವನನ್ನು ರಾಜನು ಸದಾ ರಕ್ಷಿಸಬೇಕು.

12083002a ಹ್ರಿಯಮಾಣಮಮಾತ್ಯೇನ ಭೃತೋ ವಾ ಯದಿ ವಾಭೃತಃ|
12083002c ಯೋ ರಾಜಕೋಶಂ ನಶ್ಯಂತಮಾಚಕ್ಷೀತ ಯುಧಿಷ್ಠಿರ||
12083003a ಶ್ರೋತವ್ಯಂ ತಸ್ಯ ಚ ರಹೋ ರಕ್ಷ್ಯಶ್ಚಾಮಾತ್ಯತೋ ಭವೇತ್|
12083003c ಅಮಾತ್ಯಾ ಹ್ಯುಪಹಂತಾರಂ ಭೂಯಿಷ್ಠಂ ಘ್ನಂತಿ ಭಾರತ||

ಯುಧಿಷ್ಠಿರ! ಭಾರತ! ಅಮಾತ್ಯನೇ ರಾಜಭಂಡಾರವನ್ನು
ಕೊಳ್ಳೆಹೊಡೆಯುವ ಸಂದರ್ಭದಲ್ಲಿ ಅದನ್ನು ಗಮನಿಸಿದ
ರಾಜಸೇವಕನೋ ಅಥವಾ ಸೇವಕನಲ್ಲದವನೋ ರಾಜಕೋಶವು
ನಷ್ಟವಾಗುತ್ತಿರುವುದನ್ನು ರಾಜನಿಗೆ ಹೇಳಿದರೆ ಅವನು ಅದನ್ನು
ರಹಸ್ಯದಲ್ಲಿ ಕೇಳಿ ವಿಷಯ ತಿಳಿಸಿದವನನ್ನು ಅಮಾತ್ಯನಿಂದ ರಕ್ಷಿಸಬೇಕು.
ಈ ವಿಷಯವನ್ನು ತಿಳಿಸಿದವನನ್ನು ಅಮಾತ್ಯನು ಪ್ರಾಯಶಃ ಕೊಂದೇ
ಬಿಡುತ್ತಾರೆ.

12083004a ರಾಜಕೋಶಸ್ಯ ಗೋಪ್ತಾರಂ ರಾಜಕೋಶವಿಲೋಪಕಾಃ|
12083004c ಸಮೇತ್ಯ ಸರ್ವೇ ಬಾಧಂತೇ ಸ ವಿನಶ್ಯತ್ಯರಕ್ಷಿತಃ||

ರಾಜಕೋಶವನ್ನು ಕೊಳ್ಳೆಹೊಡೆಯುವವರು ಎಲ್ಲರೂ ಒಟ್ಟಾಗಿ
ರಾಜಕೋಶದ ರಕ್ಷಕನನ್ನು ಬಾಧಿಸುತ್ತಿರುತ್ತಾರೆ. ರಾಜಕೋಶದ
ರಕ್ಷಕನನ್ನು ರಕ್ಷಿಸದೇ ಇದ್ದರೆ ಅವನು ವಿನಾಶವನ್ನೇ ಹೊಂದುತ್ತಾನೆ.

12083005a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12083005c ಮುನಿಃ ಕಾಲಕವೃಕ್ಷೀಯಃ ಕೌಸಲ್ಯಂ ಯದುವಾಚ ಹ||

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಮುನಿ
ಕಾಲವೃಕ್ಷೀಯ ಮತ್ತು ಕೌಸಲ್ಯರ ಸಂವಾದವನ್ನು ಉದಾಹರಿಸುತ್ತಾರೆ.

12083006a ಕೋಸಲಾನಾಮಾಧಿಪತ್ಯಂ ಸಂಪ್ರಾಪ್ತೇ ಕ್ಷೇಮದರ್ಶಿನಿ|

12083006c ಮುನಿಃ ಕಾಲಕವೃಕ್ಷೀಯ ಆಜಗಾಮೇತಿ ನಃ ಶ್ರುತಮ್‌||

ಕ್ಷೇಮದರ್ಶಿನಿಯು ಕೋಸಲದ ಅಧಿಪತ್ಯವನ್ನು ಪಡೆದುಕೊಂಡಾಗ
ಮುನಿ ಕಾಲಕವೃಕ್ಷೀಯನು ಅಲ್ಲಿಗೆ ಬಂದನೆಂದು ಕೇಳಿದ್ದೇವೆ.

12083007a ಸ ಕಾಕಂ ಪಂಜರೇ ಬದ್ಧ್ವಾ ವಿಷಯಂ ಕ್ಷೇಮದರ್ಶಿನಃ|
12083007c ಪೂರ್ವಂ ಪರ್ಯಚರದ್ಯುಕ್ತಃ ಪ್ರವೃತ್ತ್ಯರ್ಥೀ ಪುನಃ ಪುನಃ||

ಆ ಮುನಿಯು ಒಂದು ಕಾಗೆಯನ್ನು ಪಂಜರದಲ್ಲಿ ಬಂಧಿಸಿ
ಕ್ಷೇಮದರ್ಶಿನಿಯ ದೇಶದ ಪರಿಸ್ಥಿತಿಯನ್ನು ತಿಳಿಯಲೋಸುಗ
ರಾಜ್ಯಾದಂತ ಅನೇಕ ಬಾರಿ ಸಂಚರಿಸಿದನು.

12083008a ಅಧೀಯೇ ವಾಯಸೀಂ ವಿದ್ಯಾಂ ಶಂಸಂತಿ ಮಮ ವಾಯಸಾಃ|
12083008c ಅನಾಗತಮತೀತಂ ಚ ಯಚ್ಚ ಸಂಪ್ರತಿ ವರ್ತತೇ||

“ವಾಯಸೀವಿದ್ಯೆಯನ್ನು ಕಲಿಯಿರಿ. ನನ್ನ ಕಾಗೆಗಳು ಹಿಂದಿನ,
ಮುಂದಾಗುವ ಮತ್ತು ಈಗ ಆಗುತ್ತಿರುವ ವಿಷಯ ಎಲ್ಲವನ್ನೂ ನನಗೆ
ಯಥಾವತ್ತಾಗಿ ಹೇಳುತ್ತವೆ.”

12083009a ಇತಿ ರಾಷ್ಟ್ರೇ ಪರಿಪತನ್ಬಹುಶಃ ಪುರುಷೈಃ ಸಹ|
12083009c ಸರ್ವೇಷಾಂ ರಾಜಯುಕ್ತಾನಾಂ ದುಷ್ಕೃತಂ ಪರಿಪೃಷ್ಟವಾನ್‌||

ಹೀಗೆ ಹೇಳುತ್ತಾ ಅವನು ತಿರುಗಾಡಿ ಅನೇಕ ಪುರುಷರ
ಅಭಿಪ್ರಾಯಗಳನ್ನು ಸಂಗ್ರಹಿಸಿದನು. ಹಾಗೆಯೇ ಅವನು
ರಾಜಕಾರ್ಯದಲ್ಲಿ ನಿಯುಕ್ತರಾಗಿದ್ದ ಸಮಸ್ತ ಕರ್ಮಚಾರಿಗಳ
ದುಷ್ಕರ್ಮಗಳನ್ನೂ ಪ್ರತ್ಯಕ್ಷ ನೋಡಿದನು.

12083010a ಸ ಬುದ್ಧ್ವಾ ತಸ್ಯ ರಾಷ್ಟ್ರಸ್ಯ ವ್ಯವಸಾಯಂ ಹಿ ಸರ್ವಶಃ|

12083010c ರಾಜಯುಕ್ತಾಪಚಾರಾಂಶ್ಚ ಸರ್ವಾನ್ಬುದ್ಧ್ವಾ ತತಸ್ತತಃ||
12083011a ತಮೇವ ಕಾಕಮಾದಾಯ ರಾಜಾನಂ ದ್ರಷ್ಟುಮಾಗಮತ್|
12083011c ಸರ್ವಜ್ಞೋಽಸ್ಮೀತಿ ವಚನಂ ಬ್ರುವಾಣಃ ಸಂಶಿತವ್ರತಃ||

ಆ ಸಂಶಿತವ್ರತನು ಆ ರಾಷ್ಟ್ರದ ಎಲ್ಲ ಆಗುಹೋಗುಗಳನ್ನೂ
ತಿಳಿದುಕೊಂಡು ಮತ್ತು ಅಲ್ಲಲ್ಲಿ ರಾಜಕಾರ್ಯಯುಕ್ತರ
ಅಪಚಾರಗಳಿಲ್ಲವನ್ನೂ ತಿಳಿದುಕೊಂಡು ಅವನು ಆ ಕಾಗೆಯನ್ನು
ಹಿಡಿದುಕೊಂಡು ರಾಜನನ್ನು ನೋಡಲು ನಾನು ಸರ್ವಜ್ಞ ಎಂದು
ಹೇಳಿಕೊಳ್ಳುತ್ತಾ ಆಗಮಿಸಿದನು.

12083012a ಸ ಸ್ಮ ಕೌಸಲ್ಯಮಾಗಮ್ಯ ರಾಜಾಮಾತ್ಯಮಲಂಕೃತಮ್|
12083012c ಪ್ರಾಹ ಕಾಕಸ್ಯ ವಚನಾದಮುತ್ರೇದಂ ತ್ವಯಾ ಕೃತಮ್||
12083013a ಅಸೌ ಚಾಸೌ ಚ ಜಾನೀತೇ ರಾಜಕೋಶಸ್ತ್ವಯಾ ಹೃತಃ|
12083013c ಏವಮಾಖ್ಯಾತಿ ಕಾಕೋಽಯಂ ತಚ್ಚೀಘ್ರಮನುಗಮ್ಯತಾಮ್||

ಅವನು ರಾಜಾ ಕೌಸಲ್ಯನ ಬಳಿಬಂದು ಸಮಲಂಕೃತನಾಗಿದ್ದ
ಅಮಾತ್ಯನಿಗೆ ಕಾಗೆಯ ಮಾತೋ ಎನ್ನುವಂತೆ ಈ
ಮಾತುಗಳನ್ನಾಡಿದನು: "ಇಂತಹ ಸ್ಥಳದಲ್ಲಿ ನೀನು ರಾಜಧನವನ್ನು
ಅಪಹರಿಸಿರುವೆ. ನೀನು ಅಪಹರಿಸಿರುವುದನ್ನು ಇಂತಿಂತಹ
ಅಧಿಕಾರಿಗಳು ತಿಳಿದಿರುತ್ತಾರೆ. ನೀನೀಗ ರಾಜಕೋಶದ ಕಳ್ಳನಾಗಿದ್ದೀಯೆ
ಎಂದು ನನ್ನ ಈ ಕಾಗೆಯು ಹೇಳುತ್ತಿದೆ. ನೀನು ಈಗಲೇ ಈ
ಅಪರಾದವನ್ನು ಒಪ್ಪಿಕೋ."

12083014a ತಥಾನ್ಯಾನಪಿ ಸ ಪ್ರಾಹ ರಾಜಕೋಶಹರಾನ್ಸದಾ|
12083014c ನ ಚಾಸ್ಯ ವಚನಂ ಕಿಂ ಚಿದಕೃತಂ ಶ್ರೂಯತೇ ಕ್ವ ಚಿತ್||

ಅವನು ಅನ್ಯ ರಾಜಕೋಶಾಪಹಾರಕರ ಹೆಸರುಗಳನ್ನೂ ಹೇಳಿದನು. ಅವನ ಮಾತು ಯಾವುದೂ ಸುಳ್ಳಾಗಿದ್ದುದು ಎಲ್ಲಿಂದಲೂ ಕೇಳಿಬಂದಿರಲಿಲ್ಲ.

12083015a ತೇನ ವಿಪ್ರಕೃತಾಃ ಸರ್ವೇ ರಾಜಯುಕ್ತಾಃ ಕುರೂದ್ವಹ|
12083015c ತಮತಿಕ್ರಮ್ಯ ಸುಪ್ತಸ್ಯ ನಿಶಿ ಕಾಕಮಪೋಥಯನ್||

ಕುರೂದ್ವಹ! ಅವನಿಂದ ಅಪಮಾನಿತರಾದ ಎಲ್ಲ ರಾಜಕರ್ಮಚಾರಿಗಳೂ ರಾತ್ರಿಯಲ್ಲಿ ಅವನು ಮಲಗಿದ್ದಾಗ ಕಾಲಕವೃಕ್ಷೀಯನ ಆ ಕಾಗೆಯನ್ನು ಕೊಂದುಹಾಕಿದರು.

12083016a ವಾಯಸಂ ತು ವಿನಿರ್ಭಿನ್ನಂ ದೃಷ್ಟ್ವಾ ಬಾಣೇನ ಪಂಜರೇ|
12083016c ಪೂರ್ವಾಹ್ಣೇ ಬ್ರಾಹ್ಮಣೋ ವಾಕ್ಯಂ ಕ್ಷೇಮದರ್ಶಿನಮಬ್ರವೀತ್||


ಬೆಳಿಗ್ಗೆ ಪಂಜರದಲ್ಲಿ ಬಾಣದಿಂದ ಹೊಡೆಯಲ್ಪಟ್ಟ ಕಾಗೆಯನ್ನು ನೋಡಿ ಬ್ರಾಹ್ಮಣನು ಕ್ಷೇಮದರ್ಶಿಗೆ ಈ ಮಾತನ್ನಾಡಿದನು:

12083017a ರಾಜಂಸ್ತ್ವಾಮಭಯಂ ಯಾಚೇ ಪ್ರಭುಂ ಪ್ರಾಣಧನೇಶ್ವರಮ್|
12083017c ಅನುಜ್ಞಾತಸ್ತ್ವಯಾ ಬ್ರೂಯಾಂ ವಚನಂ ತ್ವತ್ಪರೋ ಹಿತಮ್||

“ರಾಜನ್! ಪ್ರಭು ಪ್ರಾಣಧನೇಶ್ವರನಾದ ನಿನ್ನಲ್ಲಿ ಅಭಯವನ್ನು ಯಾಚಿಸುತ್ತಿದ್ದೇನೆ. ನೀನು ಅನುಜ್ಞೆಯನ್ನು ನೀಡಿದರೆ ನಿನಗೆ ಹಿತಕರವಾದ ಮಾತನ್ನು ಹೇಳುತ್ತೇನೆ.

12083018a ಮಿತ್ಯಾರ್ಥಮಭಿಸಂತಪ್ತೋ ಭಕ್ತ್ಯಾ ಸರ್ವಾತ್ಮನಾ ಗತಃ|
12083018c ಅಯಂ ತವಾರ್ಥಂ ಹರತೇ ಯೋ ಬ್ರೂಯಾದಕ್ಷಮಾನ್ವಿತಃ||

ಮಿತ್ಯಾರ್ಥ ಸರ್ವಭಾವದಿಂದ ಬಂದಿರುವ ನಾನು



ರಾಜಕರ್ಮಚಾರಿಗಳಿಂದ ಸಂತಪ್ತನಾಗಿದ್ದೇನೆ. ಇವರು ನಿನ್ನ ಧನವನ್ನು ಅಪಹರಿಸುತ್ತಾರೆ ಎಂದು ಎಚ್ಚರಿಸಲು ಬಂದಿದ್ದೇನೆ.

12083019a ಸಂಬುಬೋಧಯಿಷುರ್ಮಿತ್ರಂ ಸದಶ್ವಮಿವ ಸಾರಥಿಃ|
12083019c ಅತಿಮನ್ಯುಪ್ರಸಕ್ತೋ ಹಿ ಪ್ರಸಜ್ಯ ಹಿತಕಾರಣಮ್||

ಸಾರಥಿಯಾದವನು ಉತ್ತಮ ಕುದುರೆಯನ್ನು ಹುರಿದುಂಬಿಸುವಂತೆ ಪ್ರಜೆಗಳ ಹಿತಕ್ಕಾಗಿ ಮತ್ತು ಮಿತ್ರನಿಗಾಗುತ್ತಿದ್ದ ಹಾನಿಯನ್ನು ಸಹಿಸಲಾರದೇ ಎಚ್ಚರಿಸಲು ಬಂದಿದ್ದೇನೆ.

12083020a ತಥಾವಿಧಸ್ಯ ಸುಹೃದಃ ಕ್ಷಂತವ್ಯಂ ಸಂವಿಜಾನತಾ|
12083020c ಐಶ್ವರ್ಯಮಿಚ್ಚತಾ ನಿತ್ಯಂ ಪುರುಷೇಣ ಬುಭೂಷತಾ||

ಐಶ್ವರ್ಯವನ್ನು ಬಯಸುವವನು ನಿತ್ಯವೂ ತನ್ನ ಒಳಿತನ್ನೇ ಬಯಸುವ ಪುರುಷನ ಮತ್ತು ಸುಹೃದಯನ ವಿಷಯದಲ್ಲಿ ಕ್ಷಮೆಯನ್ನು ತಾಳಬೇಕು.”

12083021a ತಂ ರಾಜಾ ಪ್ರತ್ಯುವಾಚೇದಂ ಯನ್ಮಾ ಕಿಂ ಚಿದ್ಬಾವ್ವದೇತ್|
12083021c ಕಸ್ಮಾದಹಂ ನ ಕ್ಷಮೇಯಮಾಕಾಂಕ್ಷನ್ನಾತ್ಮನೋ ಹಿತಮ್||
12083022a ಬ್ರಾಹ್ಮಣ ಪ್ರತಿಜಾನೀಹಿ ಪ್ರಬ್ರೂಹಿ ಯದಿ ಚೇಚ್ಛಸಿ|
12083022c ಕರಿಷ್ಯಾಮಿ ಹಿ ತೇ ವಾಕ್ಯಂ ಯದ್ಯನ್ಮಾಂ ವಿಪ್ರ ವಕ್ಷ್ಯಸಿ||

ರಾಜನು ಅವನಿಗೆ ಉತ್ತರಿಸಿದನು: “ಇದೇನು ನೀನು ನನ್ನಲ್ಲಿ ಹೇಳುತ್ತಿರುವುದು? ನನ್ನ ಹಿತದಲ್ಲಿ ನಿರತನಾದವನನ್ನು ನಾನು ಹೇಗೆ ತಾನೇ ಕ್ಷಮಿಸದಿರಲಿ? ಬ್ರಾಹ್ಮಣ! ಹೇಳಬೇಕೆಂದಿರುವುದನ್ನು ಭಯವಿಲ್ಲದೇ ಹೇಳು. ವಿಪ್ರ! ನೀನು ನನಗೆ ಏನನ್ನು ಹೇಳುತ್ತೀಯೋ ಅದನ್ನು ಮಾಡುತ್ತೇನೆ.”

12083023 ಮುನಿರುವಾಚ|

12083023a ಜ್ಞಾತ್ವಾ ನಯಾನಪಾಯಾಂಶ್ಚ ಭೃತ್ಯತಸ್ತೇ ಭಯಾನಿ ಚ|
12083023c ಭಕ್ತ್ಯಾ ವೃತ್ತಿಂ ಸಮಾಖ್ಯಾತುಂ ಭವತೋಽಂತಿಕಮಾಗಮಮ್||

ಮುನಿಯು ಹೇಳಿದನು: "ನಿನ್ನ ಸೇವಕರು ನಿನಗೆ ಮಾಡುತ್ತಿರುವ ಅನ್ಯಾಯಗಳನ್ನು ಮತ್ತು ಅವರ ಕಡೆಯಿಂದ ನಿನಗಿರುವ ಭಯವನ್ನು ತಿಳಿದುಕೊಂಡು ಭಕ್ತಿಯಿಂದ ಅದರ ಕುರಿತು ಹೇಳಲು ನಿನ್ನ ಬಳಿ ಬಂದೆ.

12083024a ಪ್ರಾಗೇವೋಕ್ತಶ್ಚ ದೋಷೋಽಯಮಾಚಾರ್ಯೈರ್ನೃಪಸೇವಿನಾಮ್|
12083024c ಅಗತೀಕಗತಿರ್ಹ್ಯೇಷಾ ಯಾ ರಾಜ್ಞಾ ಸಹ ಜೀವಿಕಾ||

ರಾಜಸೇವಕರ ಕಾರ್ಯವು ದೋಷಯುಕ್ತವಾದುದೆಂದು ಮೊದಲೇ ಆಚಾರ್ಯರು ಹೇಳಿರುತ್ತಾರೆ. ರಾಜನೊಂದಿಗೆ ಜೀವಿಸುವುದು ಗತಿಯಿಲ್ಲದವರು ಗತಿಬೇಕೆಂದು ಮಾಡುವ ಕೆಲಸವು.

12083025a ಆಶೀವಿಷೈಶ್ಚ ತಸ್ಯಾಹುಃ ಸಂಗತಂ ಯಸ್ಯ ರಾಜಭಿಃ|
12083025c ಬಹುಮಿತ್ರಾಶ್ಚ ರಾಜಾನೋ ಬಹ್ವಮಿತ್ರಾಸ್ತಥೈವ ಚ||

ರಾಜನ ಸಂಗವು ಸರ್ಪಗಳೊಡನೆ ಸರಸವಾಡುವಂತೆ ಮತ್ತು ರಾಜನಿಗೆ ಅನೇಕ ಮಿತ್ರರೂ ಶತ್ರುಗಳೂ ಇರುತ್ತಾರೆಂದೂ ಹೇಳುತ್ತಾರೆ.

12083026a ತೇಭ್ಯಃ ಸರ್ವೇಭ್ಯ ಏವಾಹುರ್ಭಯಂ ರಾಜೋಪಸೇವಿನಾಮ್|
12083026c ಅಥೈಷಾಮೇಕತೋ ರಾಜನ್ಮಹೂರ್ತಾದೇವ ಭೀರ್ಭವೇತ್||

ರಾಜೋಪಜೀವಿಗಳಿಗೆ ಅವರೆಲ್ಲರ ಭಯವೂ ಇರುತ್ತದೆ ಎಂದು ಹೇಳುತ್ತಾರೆ. ಅಲ್ಲದೇ ರಾಜನಿಂದಲೂ ಕ್ಷಣ-ಕ್ಷಣಕ್ಕೂ ಭಯವಿದ್ದೇ ಇರುತ್ತದೆ.

12083027a ನೈಕಾಂತೇನಾಪ್ರಮಾದೋ ಹಿ ಕರ್ತುಂ ಶಕ್ಯೋ ಮಹೀಪತೌ|
12083027c ನ ತು ಪ್ರಮಾದಃ ಕರ್ತವ್ಯಃ ಕಥಂ ಚಿದ್ಭೂತಿಮಿಚ್ಚತಾ||

ಮಹೀಪತಿಯ ಸಮೀಪದಲ್ಲಿರುವವನು ಯಾವಾಗಲೂ ಯಾವುದೇ ಪ್ರಮಾದವನ್ನು ಮಾಡಬಾರದು. ತನಗೆ ಒಳ್ಳೆಯದನ್ನು ಬಯಸುವವರು ಪ್ರಮಾದವಾದುದನ್ನು ಎಂದೂ ಮಾಡಬಾರದು.

12083028a ಪ್ರಮಾದಾದ್ಧಿ ಸ್ಖಲೇದ್ರಾಜಾ ಸ್ಖಲಿತೇ ನಾಸ್ತಿ ಜೀವಿತಮ್|
12083028c ಅಗ್ನಿಂ ದೀಪ್ತಮಿವಾಸೀದೇದ್ರಾಜಾನಮುಪಶಿಕ್ಷಿತಃ||

ಎಚ್ಚರತಪ್ಪಿ ನಡೆದುಕೊಂಡರೆ ರಾಜನು ಸ್ಖಲಿತನಾಗಬಹುದು. ಅವನು ಸ್ಖಲಿತನಾದರೆ ಜೀವಿತವೇ ಇಲ್ಲವಾಗಬಹುದು. ರಾಜನ ಬಳಿಯಿರುವವನು ಧಗ-ಧಗಿಸುವ ಬೆಂಕಿಯ ಸಮೀಪದಲ್ಲಿ ಹೇಗೋ ಹಾಗೆ ಎಚ್ಚರದಿಂದಿರಬೇಕು.

12083029a ಆಶೀವಿಷಮಿವ ಕ್ರುದ್ಧಂ ಪ್ರಭುಂ ಪ್ರಾಣಧನೇಶ್ವರಮ್|
12083029c ಯತ್ನೇನೋಪಚರೇನ್ನಿತ್ಯಂ ನಾಹಮಸ್ಮೀತಿ ಮಾನವಃ||

ಪ್ರಾಣ-ಧನೇಶ್ವರ ಪ್ರಭು ರಾಜನನ್ನು ಕ್ರುದ್ಧ ಸರ್ಪದಂತೆಯೇ ನಿತ್ಯವೂ ಪ್ರಯತ್ನಪಟ್ಟು, ಇಲ್ಲದಿದ್ದರೆ ನಾನೇ ಇಲ್ಲವಾಗುತ್ತೇನೆಂಬ ಭಯದಿಂದ, ಉಪಚಾರ ಮಾಡಬೇಕು.

12083030a ದುರ್ವ್ಯಾಹೃತಾಚ್ಚಂಕಮಾನೋ ದುಷ್ಕೃತಾದ್ದುರಧಿಷ್ಠಿತಾತ್|
12083030c ದುರಾಸಿತಾದ್ದುರ್ವ್ರಜಿತಾದಿಂಗಿತಾದಂಗಚೇಷ್ಟಿತಾತ್||

ಬಾಯಿಂದ ಕೆಟ್ಟ ಮಾತು ಬರಬಾರದು. ಕೆಟ್ಟ ಕೆಲಸವನ್ನು ಮಾಡಬಾರದು. ಯಾವುದನ್ನು ಮಾಡಿದರೆ ಏನಾಗುವುದೋ ಎಂದು

ಶಂಕೆಯಿಂದಲೇ ಇರಬೇಕು. ರಾಜನ ಎದಿರು ಬೇಕಾದ ಹಾಗೆ ನಿಂತುಕೊಳ್ಳಬಾರದು. ಬೇಕಾದ ಹಾಗೆ ಕುಳಿತುಕೊಳ್ಳಬಾರದು. ಹೇಗಾದರೂ ಓಡಾಡಿಕೊಂಡಿರಬಾರದು. ರಾಜನ ಎದಿರು ಅಂಗಚೇಷ್ಟೆಗಳನ್ನೂ ಸಂಕೇತಗಳನ್ನೂ ಮಾಡಬಾರದು.

12083031a ದೇವತೇವ ಹಿ ಸರ್ವಾರ್ಥಾನ್ಕುರ್ಯಾದ್ರಾಜಾ ಪ್ರಸಾದಿತಃ|
12083031c ವೈಶ್ವಾನರ ಇವ ಕ್ರುದ್ಧಃ ಸಮೂಲಮಪಿ ನಿರ್ದಹೇತ್|

ಪ್ರಸಾದಿತ ರಾಜನು ದೇವತೆಯಂತೆಯೇ ಎಲ್ಲವನ್ನೂ ಮಾಡುತ್ತಾನೆ. ಇಲ್ಲವಾದರೆ ವೈಶ್ವಾನರನಂತೆ ಕ್ರುದ್ಧನಾಗಿ ಕುಲಸಮೇತ ಸುಟ್ಟುಬಿಡಬಹುದು.

12083031e ಇತಿ ರಾಜನ್ಮಯಃ ಪ್ರಾಹ ವರ್ತತೇ ಚ ತಥೈವ ತತ್||
12083032a ಅಥ ಭೂಯಾಂಸಮೇವಾರ್ಥಂ ಕರಿಷ್ಯಾಮಿ ಪುನಃ ಪುನಃ|

ರಾಜನ್! ಹೀಗೆ ಮಯನು ಹೇಳಿದನು. ಅವನು ಹೇಳಿದುದು ಯಥಾರ್ಥವಾಗಿರುವುದರಿಂದ ನಾನೂ ನಿನಗೆ ಇದನ್ನೆ ಪುನಃ ಪುನಃ ಹೇಳುತ್ತಿದ್ದೇನೆ.

12083032c ದದಾತ್ಯಸ್ಮದ್ವಿಧೋಽಮಾತ್ಯೋ ಬುದ್ಧಿಸಾಹಾಯ್ಯಮಾಪದಿ||
12083033a ವಾಯಸಶ್ಚೈವ ಮೇ ರಾಜನ್ನಂತಕಾಯಾಭಿಸಂಹಿತಃ|

ರಾಜನ್! ನನ್ನಂತಹ ಅಮಾತ್ಯನು ಆಪತ್ಕಾಲದಲ್ಲಿ ರಾಜನಿಗೆ ಬುದ್ಧಿಸಹಾಯ ಮಾಡುತ್ತಾರೆ. ನನ್ನ ಕಾಗೆಯೂ ಹಾಗೆಯೇ ಇತ್ತು. ಆದರೆ ಈಗ ಅದು ಸತ್ತುಹೋಗಿದೆ.

12083033c ನ ಚ ಮೇಽತ್ರ ಭವಾನ್ಗರ್ಹ್ಯೋ ನ ಚ ಯೇಷಾಂ ಭವಾನ್ಪ್ರಿಯಃ|

12083033e ಹಿತಾಹಿತಾಂಸ್ತು ಬುಧ್ಯೇಥಾ ಮಾ ಪರೋಕ್ಷಮತಿರ್ಭವ||

ಈ ಕಾಗೆಯು ಸತ್ತಿದುದಕ್ಕೆ ನಾನು ನಿನ್ನನ್ನು ನಿಂದಿಸಲಾರೆ. ನಿನಗೆ ಪ್ರಿಯರಾದವರನ್ನೂ ನಾನು ನಿಂದಿಸುವುದಿಲ್ಲ. ನಿನಗೆ ಹಿತರು ಮತ್ತು ಅಹಿತರು ಯಾರು ಎನ್ನುವುದನ್ನು ನೀನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಬೇಕು. ಪರೋಕ್ಷಮತಿಯಾಗಬೇಡ.

12083034a ಯೇ ತ್ವಾದಾನಪರಾ ಏವ ವಸಂತಿ ಭವತೋ ಗೃಹೇ|
12083034c ಅಭೂತಿಕಾಮಾ ಭೂತಾನಾಂ ತಾದೃಶ್ಯಮೇ೯ಽಭಿಸಂಹಿತಮ್||

ನಿನ್ನ ಧನವನ್ನು ಕದಿಯುವವರು ನಿನ್ನ ಭವನದಲ್ಲಿಯೇ ವಾಸವಾಗಿದ್ದಾರೆ. ಅವರು ಪ್ರಜೆಗಳ ಅಭಿವೃದ್ಧಿಯನ್ನು ಬಯಸುತ್ತಿಲ್ಲ. ಅಂಥವರೊಂದಿಗೆ ನನ್ನ ವೈರವುಂಟಾಗಿದೆ.

12083035a ಯೇ ವಾ ಭವದ್ವಿನಾಶೇನ ರಾಜ್ಯಮಿಚ್ಛಂತ್ಯನಂತರಮ್|
12083035c ಅಂತರೈರಭಿಸಂಧಾಯ ರಾಜನ್ಸಿಧ್ಯಂತಿ ನಾನ್ಯಥಾ||

ರಾಜನ್! ನಿನ್ನ ವಿನಾಶದ ನಂತರ ರಾಜ್ಯವನ್ನು ಬಯಸುವವರು ಒಳಗಿನವರ ಸಹಾಯದಿಂದಲೇ ಕಾರ್ಯಸಿದ್ಧಿಯನ್ನು ಪಡೆಯುತ್ತಾರೆ. ಅನ್ಯಥಾ ಅಲ್ಲ.

12083036a ತೇಷಾಮಹಂ ಭಯಾದ್ರಾಜನ್ಗಮಿಷ್ಯಾಮ್ಯನ್ಯಮಾಶ್ರಮಮ್|
12083036c ತೈರ್ಹಿ ಮೇ ಸಂಧಿತೋ ಬಾಣಃ ಕಾಕೇ ನಿಪತಿತಃ ಪ್ರಭೋ||

ರಾಜನ್! ಪ್ರಭೋ! ಅಂಥಹ ಒಳಗಿನವರ ಭಯದಿಂದಲೇ ನಾನು ಅನ್ಯ ಆಶ್ರಮಕ್ಕೆ ಹೋಗುತ್ತೇನೆ. ನನ್ನ ಮೇಲೆ ಅವರು ಬಿಟ್ಟ ಬಾಣವು ಈ ಕಾಗೆಯ ಮೇಲೆ ಬಿದ್ದುಬಿಟ್ಟಿತು.

12083037a ಚದ್ಮನಾ ಮಮ ಕಾಕಶ್ಚ ಗಮಿತೋ ಯಮಸಾದನಮ್।
12083037c ದೃಷ್ಟಂ ಹ್ಯೇತನ್ಮಯಾ ರಾಜಂಸ್ತಪೋದೀರ್ಘೇಣ ಚಕ್ಷುಷಾ॥

ರಾಜನ್! ಮೋಸಗಾರರು ನನ್ನ ಕಾಗೆಯನ್ನು ಯಮಸಾದನಕ್ಕೆ ಕಳುಹಿಸಿದರು. ನನ್ನ ತಪೋದೀರ್ಘ ದೃಷ್ಟಿಯಿಂದ ನಾನು ಇದನ್ನು ಕಂಡೆ.

12083038a ಬಹುನಕ್ರಝಷಗ್ರಾಹಾಂ ತಿಮಿಂಗಿಲಗಣಾಯುತಾಮ್।
12083038c ಕಾಕೇನ ಬಡಿಶೇನೇಮಾಮತಾರ್ಷಂ ತ್ವಾಮಹಂ ನದೀಮ್॥

ಬಡಪಾಯಿ ಕಾಗೆಯ ಸಹಾಯದಿಂದ ನಾನು ಮೀನು, ಮೊಸಳೆ, ತಿಮಿ, ಮತ್ತು ತಿಮಿಂಗಿಲಗಣಗಳಿಂದ ತುಂಬಿರುವ ಈ ನದಿಯನ್ನು ದಾಟಿದ್ದೇನೆ.

12083039a ಸ್ಥಾಣ್ವಶ್ಮಕಂಟಕವತೀಂ ವ್ಯಾಘ್ರಸಿಂಹಗಜಾಕುಲಾಮ್।
12083039c ದುರಾಸದಾಂ ದುಷ್ಪ್ರವೇಶಾಂ ಗುಹಾಂ ಹ್ಯೈಮವತೀಮಿವ॥

ಮೋಟುಮರಗಳಿಂದಲೂ, ಕಲ್ಲು-ಮುಳ್ಳುಗಳಿಂದಲೂ, ವ್ಯಾಘ್ರ-ಸಿಂಹ-ಆನೆಗಳ ಗುಂಪುಗಳಿಂದಲೂ ಹಿಮವತ್ಪರ್ವತದ ಗುಹೆಯಂತಿ ಈ ನಿನ್ನ ರಾಜ್ಯವು ದುರಾಸದವೂ ಪ್ರವೇಶಿಸಲು ಕಷ್ಟಸಾಧ್ಯವೂ ಆಗಿಬಿಟ್ಟಿದೆ.

12083040a ಅಗ್ನಿನಾ ತಾಮಸಂ ದುರ್ಗಂ ನೌಭಿರಾಪ್ಯಂ ಚ ಗಮ್ಯತೇ।
12083040c ರಾಜದುರ್ಗಾವತರಣೇ ನೋಪಾಯಂ ಪಂಡಿತಾ ವಿದುಃ॥

ಪಂಜಿನ ಬೆಳಕಿನಿಂದ ಅಂಧಕಾರಮಯ ದುರ್ಗವನ್ನು ಪ್ರವೇಶಿಸಬಹುದು. ದೋಣಿಯಿಂದ ನೀರನ್ನು ದಾಟಬಹುದು. ಆದರೆ ರಾಜದುರ್ಗವನ್ನು ಪ್ರವೇಶಿಸುವ ಉಪಾಯವನ್ನು ಪಂಡಿತರು ತಿಳಿದಿಲ್ಲ.

12083041a ಗಹನಂ ಭವತೋ ರಾಜ್ಯಮಂಧಕಾರತಮೋವೃತಮ್|
12083041c ನೇಹ ವಿಶ್ವಸಿತುಂ ಶಕ್ಯಂ ಭವತಾಪಿ ಕುತೋ ಮಯಾ||

ನಿನ್ನ ಈ ರಾಜ್ಯವು ಅತಿಗಹನವಾಗಿದೆ. ಅಂಧಕಾರದ ಕತ್ತಲೆಯಿಂದ
ಆವೃತವಾಗಿದೆ. ನೀನೇ ವಿಶ್ವಾಸವನ್ನಿಡಲು ಶಕ್ಯನಾಗದಿರಲು ನನ್ನ
ವಿಷಯದಲ್ಲಿ ಹೇಳುವುದೇನಿದೆ?

12083042a ಅತೋ ನಾಯಂ ಶುಭೋ ವಾಸಸ್ತುಲ್ಯೇ ಸದಸತೀ ಇಹ|
12083042c ವಧೋ ಹ್ಯೇವಾತ್ರ ಸುಕೃತೇ ದುಷ್ಕೃತೇ ನ ಚ ಸಂಶಯಃ||

ಆದುದರಿಂದ ಈ ದೇಶದಲ್ಲಿ ವಾಸಮಾಡುವುದರಿಂದ ಯಾರಿಗೂ
ಕಲ್ಯಾಣವುಂಟಾಗುವುದಿಲ್ಲ. ಏಕೆಂದರೆ ಇಲ್ಲಿ ಸುಕೃತರಿಗೂ
ದುಷ್ಕೃತರಿಗೂ ವಧೆಯೇ ದೊರೆಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

12083043a ನ್ಯಾಯತೋ ದುಷ್ಕೃತೇ ಘಾತಃ ಸುಕೃತೇ ಸ್ಯಾತ್ಕಥಂ ವಧಃ|
12083043c ನೇಹ ಯುಕ್ತಂ ಚಿರಂ ಸ್ಥಾತುಂ ಜವೇನಾತೋ ವ್ರಜೇದ್ಬುಧಃ||

ನ್ಯಾಯವಾಗಿ ನೋಡಿದರೆ ದುಷ್ಕೃತನಿಗೆ ಶಿಕ್ಷೆಯಾಗಬೇಕು. ಯಾವುದೇ
ಕಾರಣದಿಂದಲೂ ಸುಕೃತನಿಗೆ ವಧೆಯಾಗಬಾರದು. ಆದುದರಿಂದ ನಿನ್ನ
ದೇಶದಲ್ಲಿ ಬಹಳ ಕಾಲ ಇರುವುದು ಯುಕ್ತವಲ್ಲ. ತಿಳಿದವರು ಬೇಗನೇ
ನಿನ್ನ ರಾಜ್ಯವನ್ನು ಬಿಟ್ಟು ಹೋಗಬೇಕು.

12083044a ಸೀತಾ ನಾಮ ನದೀ ರಾಜನ್ ಪ್ಲವೋ ಯಸ್ಯಾಂ ನಿಮಜ್ಜತಿ|
12083044c ತಥೋಪಮಾಮಿಮಾಂ ಮನ್ಯೇ ವಾಗುರಾಂ ಸರ್ವಘಾತಿನೀಮ್||

ರಾಜನ್! ಸೀತಾ ಎಂಬ ಹೆಸರಿನ ನದಿಯಲ್ಲಿ ದೋಣಿಗಳೇ
ಮುಳುಗಿಹೋಗುತ್ತವೆ. ಹಾಗೆಯೇ ಇಲ್ಲಿಯೂ ಕೂಡ ರಾಜನನ್ನು

ಆಪತ್ತಿನಿಂದ ಪಾರುಮಾಡಬೇಕೆಂದು ಬಯಸುವವರು
ನಾಶಹೊಂದುತ್ತಾರೆ. ನಿನ್ನ ಈ ರಾಜ್ಯವು ಎಲ್ಲರನ್ನೂ ಘಾತಿಗೊಳಿಸುವ
ಒಂದು ದೊಡ್ಡ ಬಲೆಯಂತಿದೆ.

12083045a ಮಧುಪ್ರಪಾತೋ ಹಿ ಭವಾನ್ಭೋಜನಂ ವಿಷಸಂಯುತಮ್|
12083045c ಅಸತಾಮಿವ ತೇ ಭಾವೋ ವರ್ತತೇ ನ ಸತಾಮಿವ|
12083045e ಆಶೀವಿಷೈಃ ಪರಿವೃತಃ ಕೂಪಸ್ತ್ವಮಿವ ಪಾರ್ಥಿವ||

ನೀನು ಪ್ರಪಾತದಲ್ಲಿ ಕಟ್ಟಿರುವ ಜೇನುಗೂಡಿನಂತಿರುವೆ. ವಿಷಸಂಯುತ
ಭೋಜನದಂತಿರುವೆ. ನಿನ್ನ ಭಾವವು ದುರ್ಜನರದ್ದಂತಿದೆ.
ಸತ್ಪುರುಷರಂತೆ ನೀನು ವರ್ತಿಸುತ್ತಿಲ್ಲ. ಪಾರ್ಥಿವ! ಹಾವುಗಳಿಂದ
ಪರಿವೃತವಾದ ಬಾವಿಯಂತಿರುವೆ!

12083046a ದುರ್ಗತೀರ್ಥಾ ಬೃಹತ್ಕೂಲಾ ಕರೀರೀವೇತ್ರಸಂಯುತಾ|
12083046c ನದೀ ಮಧುರಪಾನೀಯಾ ಯಥಾ ರಾಜಂಸ್ತಥಾ ಭವಾನ್|
12083046e ಶ್ವಗೃಧ್ರಗೋಮಾಯುಯುತೋ ರಾಜಹಂಸಸಮೋ ಹ್ಯಸಿ||

ರಾಜನ್! ಎತ್ತರ ತೀರವುಳ್ಳ ಜಲ್ಲೆ-ಬೆತ್ತಗಳಿಂದ ಮುಚ್ಚಲ್ಪಟ್ಟ, ನೀರನ್ನು
ಕುಡಿಯಲು ಕಷ್ಟಸಾಧ್ಯವಾದ ಮಧುರ ಪಾನೀಯ ನದಿಯಂತೆ
ನೀನಿದ್ದೀಯೆ. ನಾಯಿ, ಹದ್ದು ಮತ್ತು ಗುಳ್ಳೇನರಿಗಳಿಂದ
ಆವೃತವಾಗಿರುವ ರಾಜಹಂಸದಂತಿರುವೆ.

12083047a ಯಥಾಶ್ರಿತ್ಯ ಮಹಾವೃಕ್ಷಂ ಕಕ್ಷಃ ಸಂವರ್ಧತೇ ಮಹಾನ್|
12083047c ತತಸ್ತಂ ಸಂವೃಣೋತ್ಯೇವ ತಮತೀತ್ಯ ಚ ವರ್ಧತೇ||

ಮಹಾವೃಕ್ಷದ ಬಳಿಯಲ್ಲಿ ಹುಟ್ಟಿದ ಗಿಡವೊಂದು ಅದನ್ನೇ ಅವಲಂಬಿಸಿ
ಬೆಳೆದು ಆ ಮರವನ್ನೇ ಸಂಪೂರ್ಣವಾಗಿ ಆವರಿಸಿ ಬಿಡುತ್ತದೆ.

12083048a ತೇನೈವೋಪೇಂಧನೋ ನೂನಂ ದಾವೋ ದಹತಿ ದಾರುಣಃ|
12083048c ತಥೋಪಮಾ ಹ್ಯಮಾತ್ಯಾಸ್ತೇ ರಾಜಂಸ್ತಾನ್ಪರಿಶೋಧಯ||

ಅಗ್ನಿಯು ಒಣಗಿದ ಆ ಗಿಡಕ್ಕೆ ಹತ್ತಿಕೊಂಡು ಕ್ಷಣಮಾತ್ರದಲ್ಲಿ ಅದಕ್ಕೆ ಆಶ್ರಯವನ್ನಿತ್ತಿದ್ದ ಮಹಾವೃಕ್ಷವನ್ನೇ ಸುಟ್ಟುಹಾಕುತ್ತದೆ. ಈ ಉಪಮೆಯು ನಿನಗ ಅನ್ವಯಿಸುತ್ತದೆ. ಆದುದರಿಂದ ಪರಿಶೋಧಿಸು।

12083049a ಭವತ್ಯೈವ ಕೃತಾ ರಾಜನ್ಭವತಾ ಪರಿಪಾಲಿತಾಃ|
12083049c ಭವಂತಂ ಪರ್ಯವಜ್ಞಾಯ ಜಿಘಾಂಸಂತಿ ಭವತ್ಪ್ರಿಯಮ್||

ರಾಜನ್! ನಿನ್ನಿಂದಲೇ ಅಧಿಕಾರಿಗಳಾಗಿ ಮಾಡಲ್ಪಟ್ಟ ಮತ್ತು ನಿನ್ನಿಂದಲೇ ಪರಿಪಾಲಿತರಾದ ಅವರು ಕಪಟತನದಿಂದ ನಿನಗೆ ಪ್ರಿಯವಾದವುಗಳನ್ನು ನಾಶಮಾಡುತ್ತಿದ್ದಾರೆ.

12083050a ಉಷಿತಂ ಶಂಕಮಾನೇನ ಪ್ರಮಾದಂ ಪರಿರಕ್ಷತಾ|
12083050c ಅಂತಃಸರ್ಪ ಇವಾಗಾರೇ ವೀರಪತ್ನ್ಯಾ ಇವಾಲಯೇ|
12083050e ಶೀಲಂ ಜಿಜ್ಞಾಸಮಾನೇನ ರಾಜ್ಞಶ್ಚ ಸಹಜೀವಿನಾ||

ರಾಜನ ಸಹಜೀವಿಗಳ ಶೀಲವನ್ನು ಪರೀಕ್ಷಿಸಲು ನಾನು ಯಾರಿಗೂ ಶಂಕೆಯುಂಟಾಗದಂತೆ ಅಪ್ರಮತ್ತನಾಗಿದ್ದುಕೊಂಡು – ಸರ್ಪವಿರುವ ಮನೆಯಲ್ಲಿ ಅಥವಾ ವೀರಪತ್ನಿಯ ಮನೆಯಲ್ಲಿ ಇರುವಂತೆ – ನಿನ್ನ ಅರಮನೆಯಲ್ಲಿ ಉಳಿದುಕೊಂಡೆನು.

12083051a ಕಚ್ಚಿಜ್ಜಿತೇಂದ್ರಿಯೋ ರಾಜಾ ಕಚ್ಚಿದಭ್ಯಂತರಾ ಜಿತಾಃ|
12083051c ಕಚ್ಚಿದೇಷಾಂ ಪ್ರಿಯೋ ರಾಜಾ ಕಚ್ಚಿದ್ರಾಜ್ಞಃ ಪ್ರಿಯಾಃ ಪ್ರಜಾಃ||
12083052a ಜಿಜ್ಞಾಸುರಿಹ ಸಂಪ್ರಾಪ್ತಸ್ತವಾಹಂ ರಾಜಸತ್ತಮ|

ರಾಜಸತ್ತಮ! ರಾಜನು ಜಿತೇಂದ್ರಿಯನೇ? ಸೇವಕರು ಇವನ
ಅಧೀನರಾಗಿರುವರೇ? ಪ್ರಜೆಗಳಿಗೆ ರಾಜನ ಮೇಲೆ ಪ್ರೀತಿಯಿದೆಯೇ?
ರಾಜನಾದರೋ ಪ್ರಜೆಗಳನ್ನು ಪ್ರೀತಿಸುತ್ತಿದ್ದಾನೆಯೇ? ಇದನ್ನು
ತಿಳಿದುಕೊಳ್ಳಲೇ ನಾನು ನಿನ್ನ ಬಳಿ ಬಂದೆನು.

12083052c ತಸ್ಯ ಮೇ ರೋಚತೇ ರಾಜನ್ ಕ್ಷುಧಿತಸ್ಯೇವ ಭೋಜನಮ್‌॥
12083053a ಅಮಾತ್ಯಾ ಮೇ ನ ರೋಚಂತೇ ವಿತೃಷ್ಣಸ್ಯ ಯಥೋದಕಮ್‌॥

ಹಸಿವೆಯಾದವನಿಗೆ ಭೋಜನವು ಹೇಗೋ ಹಾಗೆ ನೀನು ನನಗೆ
ಅತ್ಯಂತ ಪ್ರಿಯನಾಗಿರುವೆ. ಆದರೆ ನಿನ್ನ ಅಮಾತ್ಯರು ನನಗೆ –
ಬಾಯಾರಿಕೆಯಿಲ್ಲದವನಿಗೆ ನೀರು ಹೇಗೋ ಹಾಗೆ – ರುಚಿಸುತ್ತಿಲ್ಲ.

12083053c ಭವತೋಽರ್ಥಕೃದಿತ್ಯೇವ ಮಯಿ ದೋಷೋ ಹಿ ತೈಃ ಕೃತಃ|
12083053e ವಿದ್ಯತೇ ಕಾರಣಂ ನಾನ್ಯದಿತಿ ಮೇ ನಾತ್ರ ಸಂಶಯಃ‌॥

ನಾನು ನಿನ್ನ ಹಿತಚಿಂತಕನಾಗಿರುವೆನೆಂಬ ಕಾರಣದಿಂದಲೇ ನಿನ್ನ
ಅಧಿಕಾರಿಗಳು ನನ್ನಲ್ಲಿ ದೋಷವೆಣಿಸಿದ್ದಾರೆ. ಇದಲ್ಲದೇ ಬೇರೆ ಯಾವ
ಕಾರಣವೂ ಇಲ್ಲವೆನ್ನುವುದರಲ್ಲಿ ಸಂಶಯವಿಲ್ಲ.

12083054a ನ ಹಿ ತೇಷಾಮಹಂ ದ್ರುಗ್ಧಸ್ತತ್ತೇಷಾಂ ದೋಷವದ್ಗತಮ್‌|
12083054c ಅರೇರ್ಹಿ ದುರ್ಹಿತಾದ್ಭೀಯಂ ಭಗ್ನಪೃಷ್ಠಾದಿವೋರಗಾತ್‌‌॥

ಅವರಿಗೆ ದ್ರೋಹವೆನ್ನಸಗದಿದ್ದರೂ ಅವರಿಗೆ ನನ್ನ ಮೇಲೆ
ದೋಷದೃಷ್ಟಿಯೇ ಇದೆ. ಬಾಲವನ್ನು ಕಳೆದುಕೊಂಡು ಕುಪಿತವಾಗಿರುವ
ಸರ್ಪಕ್ಕೆ ಭಯಪಡುವಂತೆ ಕೆಟ್ಟ ಶತ್ರುವಿನ ಕುರಿತು ಭಯಪಡಬೇಕು.”

12083055 ರಾಜೋವಾಚ|

12083055a ಭೂಯಸಾ ಪರಿಬರ್ಹೇಣ ಸತ್ಕಾರೇಣ ಚ ಭೂಯಸಾ|
12083055c ಪೂಜಿತೋ ಬ್ರಾಹ್ಮಣಶ್ರೇಷ್ಠ ಭೂಯೋ ವಸ ಗೃಹೇ ಮಮ||

ರಾಜನು ಹೇಳಿದನು: "ಬ್ರಾಹ್ಮಣಶ್ರೇಷ್ಠ! ನಿನಗೆ ವಿಶೇಷ ರಕ್ಷಣೆಯನ್ನು ಕೊಡುತ್ತೇನೆ. ವಿಶೇಷವಾಗಿ ಸತ್ಕರಿಸುತ್ತೇನೆ. ನನ್ನಿಂದ ಪೂಜಿತನಾಗಿ ನನ್ನ ಅರಮನೆಯಲ್ಲಿ ಇನ್ನೂ ಹೆಚ್ಚು ಸಮಯ ವಾಸಿಸಿರು.

12083056a ಯೇ ತ್ವಾಂ ಬ್ರಾಹ್ಮಣ ನೇಚ್ಛಂತಿ ನ ತೇ ವತ್ಸ್ಯಂತಿ ಮೇ ಗೃಹೇ|
12083056c ಭವತ್ಯೈವ ಹಿ ತಜ್ಜ್ಞೇಯಂ ಯದಿದಾನೀಮನಂತರಮ್||

ಬ್ರಾಹ್ಮಣ! ನೀನು ನನ್ನ ಮನೆಯಲ್ಲಿರುವುದನ್ನು ಯಾರು ಇಚ್ಛಿಸುವುದಿಲ್ಲವೋ ಅವರು ಇನ್ನು ಮುಂದೆ ನನ್ನ ಮನೆಯಲ್ಲಿಯೇ ಇರಲಾರರು. ಅವರನ್ನು ದಮನಮಾಡಲು ಏನು ಮಾಡಬೇಕೆಂದು ನೀನೇ ಯೋಚಿಸಿ ಹೇಳಬೇಕು.

12083057a ಯಥಾ ಸ್ಯಾದ್ದುಷ್ಕೃತೋ ದಂಡೋ ಯಥಾ ಚ ಸುಕೃತಂ ಕೃತಮ್|
12083057c ತಥಾ ಸಮೀಕ್ಷ್ಯ ಭಗವನ್ ಶ್ರೇಯಸೇ ವಿನಿಯುಂಕ್ಷ್ವ ಮಾಮ್||

ಭಗವನ್! ದುಷ್ಕೃತರಿಗೆ ಹೇಗೆ ದಂಡಿಸಬೇಕು ಮತ್ತು ಸುಕೃತವನ್ನು ಹೇಗೆ ಮಾಡಬೇಕು ಎನ್ನುವುದನ್ನು ನೀನೇ ಯೋಚಿಸಿ ನನ್ನನ್ನು ತೊಡಗಿಸು."

12083058 ಮುನಿರುವಾಚ|
12083058a ಅದರ್ಶಯನ್ನಿಮಂ ದೋಷಮೇಕೈಕಂ ದುರ್ಬಲಂ ಕುರು|
12083058c ತತಃ ಕಾರಣಮಾಜ್ಞಾಯ ಪುರುಷಂ ಪುರುಷಂ ಜಹಿ||

ಮುನಿಯು ಹೇಳಿದನು: "ಈ ದೋಷವನ್ನು ಬಹಿರಂಗ ಪಡಿಸಬೇಡ.

ಒಬ್ಬೊಬ್ಬರನ್ನೂ ದುರ್ಬಲರನ್ನಾಗಿ ಮಾಡು. ಅನಂತರ ಕಾರಣವನ್ನು ತಿಳಿದು ಪ್ರತಿಯೊಬ್ಬ ಪುರುಷನನ್ನೂ ಶಿಕ್ಷಿಸು.

12083059a ಏಕದೋಷಾ ಹಿ ಬಹವೋ ಮೃದ್ನೀಯುರಪಿ ಕಂಟಕಾನ್|
12083059c ಮಂತ್ರಭೇದಭಯಾದ್ರಾಜಂಸ್ತಸ್ಮಾದೇತದ್ಬ್ರವೀಮಿ ತೇ||

ಒಂದೇ ದೋಷದಿಂದ ಕೂಡಿದ ಅನೇಕರು ಒಂದಾಗಿ ಮುಳ್ಳುಗಳ ರಾಶಿಯನ್ನೇ ಪುಡಿಮಾಡಬಲ್ಲರು. ರಾಜನ್! ನಮ್ಮ ಈ ಮಂತ್ರಾಲೋಚನೆಯು ಬಹಿರಂಗವಾಗಿಬಿಡಬಹುದೆಂಬ ಭಯದಿಂದಲೇ ನಾನು ನಿನಗೆ ಈ ಮಾತನ್ನು ಹೇಳುತ್ತಿದ್ದೇನೆ.

12083060a ವಯಂ ತು ಬ್ರಾಹ್ಮಣಾ ನಾಮ ಮೃದುದಂಡಾಃ ಕೃಪಾಲವಃ|
12083060c ಸ್ವಸ್ತಿ ಚೇಚ್ಚಾಮಿ ಭವತಃ ಪರೇಷಾಂ ಚ ಯಥಾತ್ಮನಃ||

ನಾವಾದರೋ ಬ್ರಾಹ್ಮಣರು. ಮೃದುದಂಡರು. ಕೃಪಾಲುಗಳು. ನಮಗೆ ಹೇಗೋ ಹಾಗೆ ನಿನಗೂ ಮತ್ತು ಇತರರಿಗೂ ಶುಭವನ್ನೇ ಬಯಸುತ್ತೇವೆ.

12083061a ರಾಜನ್ನಾತ್ಮಾನಮಾಚಕ್ಷೇ ಸಂಬಂಧೀ ಭವತೋ ಹ್ಯಹಮ್|
12083061c ಮುನಿಃ ಕಾಲಕವೃಕ್ಷೀಯ ಇತ್ಯೇವಮಭಿಸಂಜ್ಞಿತಃ||

ರಾಜನ್! ನಾನ್ಯಾರೆಂದು ಹೇಳುತ್ತೇನೆ. ನಾನು ನಿನ್ನ ಸಂಬಂಧಿಯು. ಮುನಿ ಕಾಲಕವೃಕ್ಷೀಯನೆಂದು ನನ್ನ ಹೆಸರು.

12083062a ಪಿತುಃ ಸಖಾ ಚ ಭವತಃ ಸಂಮತಃ ಸತ್ಯಸಂಗರಃ|
12083062c ವ್ಯಾಪನ್ನೇ ಭವತೋ ರಾಜ್ಯೇ ರಾಜನ್ಪಿತರಿ ಸಂಸ್ಥಿತೇ||

ನಿನ್ನ ತಂದೆಯ ಸಮ್ಮತ ಸತ್ಯಸಂಗರ ಸಖನಾಗಿದ್ದೆನು. ರಾಜನ್! ನಿನ್ನ ತಂದೆಯು ಸ್ವರ್ಗಗತನಾದ ನಂತರ ನಿನ್ನ ರಾಜ್ಯಕ್ಕೆ ದೊಡ್ಡ ಆಪತ್ತು

ಒದಗಿ ಬಂದಿತು.

12083063a ಸರ್ವಕಾಮಾನ್ಪರಿತ್ಯಜ್ಯ ತಪಸ್ತಪ್ತಂ ತದಾ ಮಯಾ|
12083063c ಸ್ನೇಹಾತ್ತ್ವಾಂ ಪ್ರಬ್ರವೀಮ್ಯೇತನ್ಮಾ ಭೂಯೋ ವಿಭ್ರಮೇದಿತಿ||

ಆಗ ಸರ್ವಕಾಮನೆಗಳನ್ನೂ ಪರಿತ್ಯಜಿಸಿ ತಪಸ್ಸನ್ನು ತಪಿಸಿದೆನು. ನಿನ್ನ ಮೇಲಿನ ಸ್ನೇಹದಿಂದ ಪುನಃ ನಿನ್ನ ಬಳಿ ಬಂದಿದ್ದೇನೆ. ಪುನಃ ನೀನು ವಿಪತ್ತಿನಲ್ಲಿ ಸಿಲುಕಬಾರದೆಂದು ನಿನಗೆ ಇದನ್ನು ಹೇಳುತ್ತಿದ್ದೇನೆ.

12083064a ಉಭೇ ದೃಷ್ಟ್ವಾ ದುಃಖಸುಖೇ ರಾಜ್ಯಂ ಪ್ರಾಪ್ಯ ಯದೃಚ್ಛಯಾ|
12083064c ರಾಜ್ಯೇನಾಮಾತ್ಯಸಂಸ್ಥೇನ ಕಥಂ ರಾಜನ್ ಪ್ರಮಾದ್ಯಸಿ||

ದುಃಖ-ಸುಖಗಳೆರಡನ್ನೂ ನೀನು ಕಂಡಿರುವೆ. ದೈವಯೋಗದಿಂದ ರಾಜ್ಯವನ್ನೂ ಪಡೆದುಕೊಂಡಿರುವೆ. ರಾಜನ್! ರಾಜ್ಯಭಾರವನ್ನು ಅಮಾತ್ಯರಿಗೆ ವಹಿಸಿ ನೀನು ಇಂತಹ ಪ್ರಮಾದವನ್ನೇಕೆ ಮಾಡುತ್ತಿರುವೆ?””

12083065 ಭೀಷ್ಮ ಉವಾಚ|
12083065a ತತೋ ರಾಜಕುಲೇ ನಾಂದೀ ಸಂಜಜ್ಞೇ ಭೂಯಸೀ ಪುನಃ|
12083065c ಪುರೋಹಿತಕುಲೇ ಚೈವ ಸಂಪ್ರಾಪ್ತೇ ಬ್ರಾಹ್ಮಣರ್ಷಭೇ||

ಭೀಷ್ಮನು ಹೇಳಿದನು: “ಆ ಬ್ರಾಹ್ಮಣರ್ಷಭನನ್ನು ಪುರೋಹಿತನನ್ನಾಗಿ ಮಾಡಿಕೊಂಡ ನಂತರ ಆ ರಾಜಕುಲದಲ್ಲಿ ಪುನಃ ಅಭಿವೃದ್ಧಿಯ ನಾಂದಿಯಾಯಿತು.

12083066a ಏಕಚ್ಛತ್ರಾಂ ಮಹೀಂ ಕೃತ್ವಾ ಕೌಸಲ್ಯಾಯ ಯಶಸ್ವಿನೇ|
12083066c ಮುನಿಃ ಕಾಲಕವೃಕ್ಷೀಯ ಈಜೇ ಕ್ರತುಭಿರುತ್ತಮೈಃ||

ಮುನಿ ಕಾಲಕವೃಕ್ಷೀಯನು ಯಶಸ್ವೀ ಕೌಸಲ್ಯನನ್ನು ಭೂಮಿಯ ಏಕಚ್ಛತ್ರ ಸಾಮ್ರಾಟನನ್ನಾಗಿ ಮಾಡಿ ಅವನಿಂದ ಉತ್ತಮ ಕ್ರತುಗಳನ್ನು ಮಾಡಿಸಿದನು.

12083067a ಹಿತಂ ತದ್ವಚನಂ ಶ್ರುತ್ವಾ ಕೌಸಲ್ಯೋಽನ್ವಶಿಷನ್ಮ್ಹೀಮ್|
12083067c ತಥಾ ಚ ಕೃತವಾನ್ರಾಜಾಯಥೋಕ್ತಂ ತೇನ ಭಾರತ||

ಭಾರತ! ಅವನ ಹಿತವಚನವನ್ನು ಕೇಳಿ ಕೌಸಲ್ಯನು ಭೂಮಿಯನ್ನೇ ಜಯಿಸಿದನು. ಅವನು ಹೇಳಿದಂತೆಯೇ ರಾಜನು ನಡೆದುಕೊಂಡನು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಅಮಾತ್ಯಪರೀಕ್ಷಾಯಾಂ ಕಾಲಕವೃಕ್ಷೀಯೋಪಾಖ್ಯಾನೇ ತ್ರ್ಯಶೀತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಅಮಾತ್ಯಪರೀಕ್ಷಾಯಾಂ ಕಾಲಕವೃಕ್ಷೀಯೋಪಾಖ್ಯಾನ ಎನ್ನುವ ಎಂಭತ್ಮೂರನೇ ಅಧ್ಯಾಯವು.

೮೪

ಸಭ್ಯಾದಿಲಕ್ಷಣಕಥನ

ಸಭಾಸದರೇ ಮೊದಲಾದವರ ಲಕ್ಷಣ; ಗುಪ್ತಸಮಾಲೋಚನೆಗೆ ಅರ್ಹ ಮತ್ತು ಅನರ್ಹ ಅಧಿಕಾರಿಗಳ ವರ್ಣನೆ; ಗುಪ್ತಸಮಾಲೋಚನೆಯ ವಿಧಿ ಮತ್ತು ಸ್ಥಾನ (1-57).

[225]12084001 ಭೀಷ್ಮ ಉವಾಚ|
12084001a ಹ್ರೀನಿಷೇಧಾಃ ಸದಾ ಸಂತಃ ಸತ್ಯಾರ್ಜವಸಮನ್ವಿತಾಃ|
12084001c ಶಕ್ತಾಃ ಕಥಯಿತುಂ ಸಮ್ಯಕ್ತೇ ತವ ಸ್ಯುಃ ಸಭಾಸದಃ||

ಭೀಷ್ಮನು ಹೇಳಿದನು: "ಲಜ್ಜಾಶೀಲರೂ, ಜಿತೇಂದ್ರಿಯರೂ, ಸತ್ಯನಿಷ್ಠರೂ, ಸರಳ ಸ್ವಭಾವದವರೂ, ವಿಷಯಗಳನ್ನು ಚೆನ್ನಾಗಿ ಪ್ರತಿಪಾದಿಸಿ ಹೇಳಲು ಸಮರ್ಥರೂ ಆದವರೇ ನಿನ್ನ ಸಭಾಸದರಾಗಿರಬೇಕು.

12084002a ಅತ್ಯಾಢ್ಯಾಂಶ್ಚಾತಿಶೂರಾಂಶ್ಚ ಬ್ರಾಹ್ಮಣಾಂಶ್ಚ ಬಹುಶ್ರುತಾನ್|
12084002c ಸುಸಂತುಷ್ಟಾಂಶ್ಚ ಕೌಂತೇಯ ಮಹೋತ್ಸಾಹಾಂಶ್ಚ ಕರ್ಮಸು||
12084003a ಏತಾನ್ಸಹಾಯಾಽಲ್ಲಿಪ್ಸೇಥಾಃ ಸರ್ವಾಸ್ವಾಪತ್ಸು ಭಾರತ|

ಕೌಂತೇಯ! ಭಾರತ! ಅಮಾತ್ಯರು, ಮಹಾಶೂರರು, ಬಹುಶ್ರುತ ಬ್ರಾಹ್ಮಣರು, ನಿತ್ಯಸಂತುಷ್ಟರು, ಮತ್ತು ಕಾರ್ಯಗಳಲ್ಲಿ ಮಹೋತ್ಸಾಹವಿರುವವರು – ಇವರನ್ನು ಎಲ್ಲ ಆಪತ್ತುಗಳಲ್ಲಿ ಸಹಾಯಕರನ್ನಾಗಿ ಅಪೇಕ್ಷಿಸಬೇಕು.

12084003c ಕುಲೀನಃ ಪೂಜಿತೋ ನಿತ್ಯಂ ನ ಹಿ ಶಕ್ತಿಂ ನಿಗೂಹತಿ||

---

[225] ಇದಕ್ಕೆ ಮೊದಲು ಭಾರತದರ್ಶನದಲ್ಲಿ ಈ ಅಧಿಕ ಶ್ಲೋಕವಿದೆ: ಯುಧಿಷ್ಠಿರ ಉವಾಚ| ಸಭಾಸದಃ ಸಹಾಯಾಶ್ಚ ಸುಹೃದಶ್ಚ ವಿಶಾಂಪತೇ| ಪರಿಚ್ಛದಾಸ್ತಥಾಮಾತ್ಯಾಃ ಕೀದೃಶಾಃ ಸ್ಯುಃ ಪಿತಾಮಹ|| ಅರ್ಥಾತ್ ಯುಧಿಷ್ಠಿರನು ಹೇಳಿದನು: "ವಿಶಾಂಪತೇ! ಪಿತಾಮಹ! ರಾಜನ ಸಭಾಸದರೂ, ಸಹಾಯಕರೂ, ಸುಹೃದರೂ, ಪರಿಚ್ಛದರೂ, ಅಮಾತ್ಯರೂ ಎಂಥವರಾಗಿರಬೇಕು?"

12084004a ಪ್ರಸನ್ನಂ ಹ್ಯಪ್ರಸನ್ನಂ ವಾ ಪೀಡಿತಂ ಹೃತಮೇವ ವಾ|
12084004c ಆವರ್ತಯತಿ ಭೂಯಿಷ್ಠಂ ತದೇಕೋ ಹ್ಯನುಪಾಲಿತಃ||

ನಿತ್ಯವೂ ಪೂಜಿತನಾದ ಕುಲೀನನು ತನ್ನ ಶಕ್ತಿಯನ್ನು
ಮರೆಮಾಚುವುದಿಲ್ಲ. ರಾಜನು ಪ್ರಸನ್ನನಾಗಿರಲಿ, ಅಪ್ರಸನ್ನನಾಗಿರಲಿ,
ಪೀಡಿತನಾಗಿರಲಿ ಅಥವಾ ಆಹತನೇ ಆಗಿರಲಿ – ಅವನು ರಾಜನ
ಅನುಸರಣೆಯನ್ನೇ ಮಾಡುತ್ತಿರುತ್ತಾನೆ. ಅಂಥವನೇ ಸುಹೃದನಾಗಲು
ಯೋಗ್ಯನು.

12084005a ಕುಲೀನಾ ದೇಶಜಾಃ ಪ್ರಾಜ್ಞಾ ರೂಪವಂತೋ ಬಹುಶ್ರುತಾಃ|
12084005c ಪ್ರಗಲ್ಭಾಶ್ಚಾನುರಕ್ತಾಶ್ಚ ತೇ ತವ ಸ್ಯುಃ ಪರಿಚ್ಚದಾಃ||

ನಿನ್ನ ಪರಿಚ್ಚದರು (ಸೇನಾಪತಿಯ ಮೊದಲಾದವರು) ಸತ್ಕುಲ
ಪ್ರಸೂತರಾಗಿರಬೇಕು. ನಿನ್ನ ದೇಶದಲ್ಲಿಯೇ ಹುಟ್ಟಿದವರಾಗಿರಬೇಕು.
ಪ್ರಾಜ್ಞರೂ, ರೂಪವಂತರೂ, ಬಹುಶ್ರುತರೂ ಆಗಿರಬೇಕು.
ಪ್ರತಿಭಾನ್ವಿತರಾಗಿರಬೇಕು ಮತ್ತು ನಿನ್ನಲ್ಲಿ ಅನುರಕ್ತರಾಗಿರಬೇಕು.

12084006a ದೌಷ್ಕುಲೇಯಾಶ್ಚ ಲುಬ್ಧಾಶ್ಚ ನೃಶಂಸಾ ನಿರಪತ್ರಪಾಃ|
12084006c ತೇ ತ್ವಾಂ ತಾತ ನಿಷೇವೇಯುರ್ಯಾವದಾರ್ದ್ರಕಪಾಣಯಃ||

ಮಗೂ! ದುಷ್ಟ ಕುಲದಲ್ಲಿ ಹುಟ್ಟಿದವರು, ಲುಬ್ಧರು, ಕ್ರೂರರು ಮತ್ತು
ನಾಚಿಕೆಯಿಲ್ಲದವರು ಊಟಮಾಡಿ ಕೈತೊಳೆದನಂತರ ಕೈ
ಒದ್ದೆಯಾಗಿರುವವರೆಗೆ ಮಾತ್ರ ನಿನ್ನ ಸೇವೆಮಾಡುತ್ತಾರೆ.

12084007a ಅರ್ಥಮಾನಾರ್ಘ್ಯಸತ್ಕಾರೈರ್ಭೋಗ್ಯೈರುಚ್ಚಾವಚೈಃ ಪ್ರಿಯಾನ್|
12084007c ಯಾನರ್ಥಭಾಜೋ ಮನ್ಯೇಥಾಸ್ತೇ ತೇ ಸ್ಯುಃ ಸುಖಭಾಗಿನಃ||

ನಿನ್ನ ಪ್ರಿಯರೆಂದು ಯಾರನ್ನು ನೀನು ತಿಳಿದುಕೊಂಡಿರುವೆಯೋ ಅವರನ್ನು ಸನ್ಮಾನ-ಅರ್ಘ್ಯ-ಸತ್ಕಾರಗಳಿಂದಲೂ ನಾನಾವಿಧದ ಭೋಗಗಳಿಂದಲೂ ಸಂತುಷ್ಟಿಗೊಳಿಸಬೇಕು. ನಿನ್ನ ಪ್ರಿಯ ಜನರು ಧನ-ಸುಖಗಳಲ್ಲಿ ನಿನ್ನ ಸಹಭಾಗಿಗಳಾಗಿರಬೇಕು.

12084008a ಅಭಿನ್ನವೃತ್ತಾ ವಿದ್ವಾಂಸಃ ಸದ್ವೃತ್ತಾಶ್ಚರಿತವ್ರತಾಃ|
12084008c ನ ತ್ವಾಂ ನಿತ್ಯಾರ್ಥಿನೋ ಜಹ್ಯುರಕ್ಷುದ್ರಾಃ ಸತ್ಯವಾದಿನಃ||

ಒಂದೇ ತರನೆ ನಡೆದುಕೊಳ್ಳುವ, ವಿದ್ವಾಂಸ, ಉತ್ತಮ ನಡೆತೆಯುಳ್ಳ, ವ್ರತಾನುಷ್ಠಾನಗಳನ್ನು ಮಾಡುವ ಸತ್ಯವಾದೀ ಅಕ್ಷುದ್ರರು ನಿತ್ಯವೂ ನಿನ್ನನ್ನು ಯಾವ ಕಾರಣಕ್ಕೂ ಬಿಟ್ಟುಹೋಗುವುದಿಲ್ಲ.

12084009a ಅನಾರ್ಯಾ ಯೇ ನ ಜಾನಂತಿ ಸಮಯಂ ಮಂದಚೇತಸಃ|
12084009c ತೇಭ್ಯಃ ಪ್ರತಿಜುಗುಪ್ಸೇಥಾ ಜಾನೀಯಾಃ ಸಮಯಚ್ಯುತಾನ್||

ಅನಾರ್ಯರೂ, ಪ್ರತಿಜ್ಞಾಪಾಲನೆಯನ್ನು ತಿಳಿಯದ ಮಂದಚೇತಸರು, ಪ್ರತಿಜ್ಞಾಪಾಲನೆಯನ್ನು ಉಲ್ಲಂಘಿಸುವವರು - ಇವರಿಂದ ನೀನು ನಿನ್ನನ್ನು ರಕ್ಷಿಸಿಕೊಳ್ಳಬೇಕು.

12084010a ನೈಕಮಿಚ್ಚೇದ್ಗಣಂ ಹಿತ್ವಾ ಸ್ಯಾಚ್ಚೇದನ್ಯತರಗ್ರಹಃ|
12084010c ಯಸ್ತ್ವೇಕೋ ಬಹುಭಿಃ ಶ್ರೇಯಾನ್ಸ್ಯಾಮಂ ತೇನ ಗಣಂ ತ್ಯಜೇತ್||

ಒಬ್ಬನೇ ಇರುವ ಪಕ್ಷವನ್ನು ಬಿಟ್ಟು ಬಹುಜನರಿರುವ ಪಕ್ಷವನ್ನು ಆರಿಸಿಕೊಳ್ಳಬೇಕು. ಆದರೆ ಅವನೊಬ್ಬನೇ ಅನೇಕರಿಗಿಂತ ಉತ್ತಮನಾಗಿದ್ದರೆ ಅವನ ಪಕ್ಷವನ್ನು ಆರಿಸಿ ಬಹುಜನರ ಪಕ್ಷವನ್ನು ತ್ಯಜಿಸಬೇಕು.

12084011a ಶ್ರೇಯಸೋ ಲಕ್ಷಣಂ ಹ್ಯೇತದ್ವಿಕ್ರಮೋ ಯಸ್ಯ ದೃಶ್ಯತೇ|
12084011c ಕೀರ್ತಿಪ್ರಧಾನೋ ಯಶ್ಚ ಸ್ಯಾತ್ಸಮಯೇ ಯಶ್ಚ ತಿಷ್ಠತಿ||
12084012a ಸಮರ್ಥಾನ್ಪೂಜಯೇದ್ಯಶ್ಚ ನಾಸ್ಪರ್ಧ್ಯೇಃ ಸ್ಪರ್ಧತೇ ಚ ಯಃ|
12084012c ನ ಚ ಕಾಮಾದ್ಭಯಾತ್ಕ್ರೋಧಾಲ್ಲೋಭಾದ್ವಾ ಧರ್ಮಮುತ್ಸೃಜೇತ್||
12084013a ಅಮಾನೀ ಸತ್ಯವಾಕ್ ಶಕ್ತೋ ಜಿತಾತ್ಮಾ ಮಾನ್ಯಮಾನಿತಾ|
12084013c ಸ ತೇ ಮಂತ್ರಸಹಾಯಃ ಸ್ಯಾತ್ಸರ್ವಾವಸ್ಥಂ ಪರೀಕ್ಷಿತಃ||

ಯಾರ ಪರಾಕ್ರಮವು ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಗಿದೆಯೋ, ಯಾರಿಗೆ ಕೀರ್ತಿಯೇ ಪ್ರಧಾನವಾಗಿರುವುದೋ, ಯಾರು ಪ್ರತಿಜ್ಞೆಯನ್ನು ಪರಿಪಾಲಿಸುವನೋ, ಯಾರು ಸಮರ್ಥರನ್ನು ಗೌರವಿಸುವನೋ, ತನಗೆ ಸಮಾನರಲ್ಲದವರೊಡನೆ ಯಾರು ಸ್ಪರ್ಧಿಸುವುದಿಲ್ಲವೋ, ಕಾಮ-ಭಯ-ಕ್ರೋಧ-ಲೋಭಗಳಿಂದ ಯಾರು ಧರ್ಮವನ್ನು ತ್ಯಜಿಸುವುದಿಲ್ಲವೋ, ಯಾರಲ್ಲಿ ದುರಭಿಮಾನವಿಲ್ಲವೋ ಅಂಥಹ ಸತ್ಯನಿಷ್ಠ, ಕ್ಷಮಾವಂತ, ಜಿತೇಂದ್ರಿಯ ಮತ್ತು ಮಾನಿಷ್ಠನು ಸರ್ವಾವಸ್ಥೆಗಳಲ್ಲಿ ಪರೀಕ್ಷೆಗೊಳಗಾದ ನಂತರ ರಾಜನೊಂದಿಗೆ ಮಂತ್ರಾಲೋಚನೆಗೆ ಅರ್ಹನಾಗುತ್ತಾನೆ.

12084014a ಕುಲೀನಃ ಸತ್ಯಸಂಪನ್ನಸ್ತಿತಿಕ್ಷುರ್ದಕ್ಷ ಆತ್ಮವಾನ್|
12084014c ಶೂರಃ ಕೃತಜ್ಞಃ ಸತ್ಯಶ್ಚ ಶ್ರೇಯಸಃ ಪಾರ್ಥ ಲಕ್ಷಣಮ್||

ಪಾರ್ಥ! ಕುಲೀನ, ಸತ್ಯಸಂಪನ್ನ, ಸಹನಶೀಲ, ದಕ್ಷ, ಜಿತೇಂದ್ರಿಯ, ಶೂರ, ಕೃತಜ್ಞ, ಸತ್ಯವಂತ ಇವು ಶ್ರೇಷ್ಠ ಪುರುಷನ ಲಕ್ಷಣವು.

12084015a ತಸ್ಯೈವಂ ವರ್ತಮಾನಸ್ಯ ಪುರುಷಸ್ಯ ವಿಜಾನತಃ|
12084015c ಅಮಿತ್ರಾಃ ಸಂಪ್ರಸೀದಂತಿ ತತೋ ಮಿತ್ರೀಭವಂತ್ಯಪಿ||

ಇಂತಹ ಸದ್ಗುಣಸಂಪನ್ನ ವಿದ್ವಾಂಸ ಪುರುಷನೊಂದಿಗೆ ಶತ್ರುಗಳೂ ಪ್ರಸನ್ನಾರಾಗಿ ಅವನೊಡನೆ ಮೈತ್ರಿಯನ್ನು ಬೆಳೆಸುತ್ತಾರೆ.

12084016a ಅತ ಊರ್ಧ್ವಮಮಾತ್ಯಾನಾಂ ಪರೀಕ್ಷೇತ ಗುಣಾಗುಣಾನ್।
12084016c ಸಂಯತಾತ್ಮಾ ಕೃತಪ್ರಜ್ಞೋ ಭೂತಿಕಾಮಶ್ಚ ಭೂಮಿಪಃ॥

ಇದರ ನಂತರ ಸಂಯತಾತ್ಮ ಕೃತಪ್ರಜ್ಞ ಐಶ್ವರ್ಯಕಾಮೀ ಭೂಮಿಪನು ಅಮಾತ್ಯರ ಗುಣಾಗುಣಗಳನ್ನು ಪರೀಕ್ಷಿಸಬೇಕು.

12084017a ಸಂಬದ್ಧಾಃ ಪುರುಷೈರಾಪ್ತೈರಭಿಜಾತೈಃ ಸ್ವದೇಶಜೈಃ।
12084017c ಅಹಾರ್ಯೈರವ್ಯಭೀಚಾರ್ಯೈಃ ಸರ್ವತಃ ಸುಪರೀಕ್ಷಿತೈಃ॥

ಸಂಬಂಧಿಗಳೂ, ಆಪ್ತರೂ, ಸತ್ಕುಲಪ್ರಸೂತರೂ, ಸ್ವದೇಶದಲ್ಲಿ ಹುಟ್ಟಿದವರೂ ಮತ್ತು ಲಂಚತೆಗೆದುಕೊಳ್ಳುವವರೂ ವ್ಯಭಿಚಾರವಿಲ್ಲದವರೂ ಆದವರ ಮೂಲಕ ಮಂತ್ರಿಯಾಗುವವನನ್ನು ಸರ್ವತಃ ಚೆನ್ನಾಗಿ ಪರೀಕ್ಷಿಸಬೇಕು.

12084018a ಯೋಧಾಃ ಸ್ರೋವಾಸ್ತಥಾ ಮೌಲಾಸ್ತಥೈವಾನ್ಯೇಽಪ್ಯವಸ್ಕೃತಾಃ।
12084018c ಕರ್ತವ್ಯಾ ಭೂತಿಕಾಮೇನ ಪುರುಷೇಣ ಬುಭೂಷತಾ॥

ಯೋಧರೂ, ವೇದಗಳನ್ನು ಪಾಲಿಸುವವರೂ, ಉತ್ತಮ ಪರಂಪರೆಯುಳ್ಳವರೂ, ಅಹಂಕಾರ ರಹಿತರೂ ಆಗಿರುವವರನ್ನು ಐಶ್ವರ್ಯಕಾಮೀ ರಾಜನು ಮಂತ್ರಿಗಳನ್ನಾಗಿ ಮಾಡಿಕೊಳ್ಳಬೇಕು.

12084019a ಯೇಷಾಂ ವೈನಯಿಕೀ ಬುದ್ಧಿಃ ಪ್ರಕೃತಾ ಚೈವ ಶೋಭನಾ।
12084019c ತೇಜೋ ಧೈರ್ಯಂ ಕ್ಷಮಾ ಶೌಚಮನುರಾಗ ಸ್ಥಿತಿರ್ಧೃತಿಃ॥
12084020a ಪರೀಕ್ಷಿತಗುಣಾನ್ನಿತ್ಯಂ ಪ್ರೌಢಭಾವಾನ್ಧುರಂಧರಾನ್।

12084020c ಪಂಚೋಪಧಾವ್ಯತೀತಾಂಶ್ಚ ಕುರ್ಯಾದ್ರಾಜಾರ್ಥಕಾರಿಣಃ||

ನಿತ್ಯ ಪರೀಕ್ಷೆಗಳಿಂದ ಸ್ಥಿರಪಡಿಸಿಕೊಂಡು ರಾಜನ
ಕಾರ್ಯನಿರ್ವಹಣೆಯಲ್ಲಿ ಪ್ರೌಢರಾಗಿರುವ, ರಾಜ್ಯಭಾರವನ್ನು ಹೊರಲು
ಸಮರ್ಥರಾಗಿರುವ, ಮತ್ತು ನಿಷ್ಕಪಟಿಗಳಾದ, ವಿನಯಬುದ್ಧಿಯಿರುವ,
ಸರಳಸ್ವಭಾವವಿರುವ, ತೇಜಸ್ಸು-ಧೈರ್ಯ-ಕ್ಷಮೆ-ಪವಿತ್ರತೆ-ಪ್ರೇಮ-
ಸ್ಥಿರಬುದ್ಧಿಗಳಿರುವವನನ್ನು ರಾಜನು ಅರ್ಥಸಚಿವನನ್ನಾಗಿ
ನಿಯಮಿಸಿಕೊಳ್ಳಬೇಕು.

12084021a ಪರ್ಯಾಪ್ತವಚನಾನ್ವೀರಾನ್ವ್ಯತಿಪತ್ತಿವಿಶಾರದಾನ್|
12084021c ಕುಲೀನಾನ್ಸತ್ಯಸಂಪನ್ನಾನಿಂಗಿತಜ್ಞಾನನಿಷ್ಠುರಾನ್||
12084022a ದೇಶಕಾಲವಿಧಾನಜ್ಞಾನ್ಕೃತ್ಯಕಾರ್ಯಹಿತೈಷಿಣಃ|
12084022c ನಿತ್ಯಮರ್ಥೇಷು ಸರ್ವೇಷು ರಾಜಾ ಕುರ್ವೀತ ಮಂತ್ರಿಣಃ||

ಮಾತಿನಲ್ಲಿ ಕುಶಲರಾಗಿರುವ, ವೀರ,
ಕಾರ್ಯನಿರ್ವಹಣಾವಿಶಾರದರಾಗಿರುವ, ಕುಲೀನ, ಸತ್ಯಸಂಪನ್ನ,
ಇಂಗಿತಜ್ಞ, ದಯಾಳು, ದೇಶ-ಕಾಲವಿಧಾನಗಳನ್ನು ತಿಳಿದಿರುವ,
ಒಡೆಯನ ಹಿತೈಷಿಗಳೂ ಕಾರ್ಯಕರ್ತರೂ ಆಗಿರುವವರನ್ನು
ಸರ್ವಾರ್ಥಸಿದ್ಧಿಗಾಗಿ ಮಂತ್ರಿಗಳನ್ನಾಗಿ ನಿಯೋಜಿಸಿಕೊಳ್ಳಬೇಕು.

12084023a ಹೀನತೇಜಾ ಹ್ಯಸಂಹೃಷ್ಟೋ ನೈವ ಜಾತು ವ್ಯವಸ್ಯತಿ|
12084023c ಅವಶ್ಯಂ ಜನಯತ್ಯೇವ ಸರ್ವಕರ್ಮಸು ಸಂಶಯಾನ್||

ತೇಜೋಹೀನ ಮಂತ್ರಿಯ ಸಹವಾಸದಿಂದ ರಾಜನು
ಸಂತೋಷದಿಂದಿರುವುದಿಲ್ಲ. ಅಂಥಹ ಮಂತ್ರಿಯು ಅವಶ್ಯವಾಗಿಯೂ
ಸರ್ವಕರ್ಮಗಳಲ್ಲಿ ಸಂಶಯವನ್ನೇ ಉಂಟುಮಾಡುತ್ತಾನೆ.

12084024a ಏವಮಲ್ಪಶ್ರುತೋ ಮಂತ್ರೀ ಕಲ್ಯಾಣಾಭಿಜನೋಽಪ್ಯುತ|
12084024c ಧರ್ಮಾರ್ಥಕಾಮಯುಕ್ತೋಽಪಿ ನಾಲಂ ಮಂತ್ರಂ ಪರೀಕ್ಷಿತುಮ್||

ಹೀಗೆ ಅಲ್ಪಶ್ರುತ ಮಂತ್ರಿಯು ಸತ್ಕುಲಪ್ರಸೂತನಾಗಿದ್ದರೂ, ಧರ್ಮಾರ್ಥಕಾಮಗಳನ್ನು ತಿಳಿದವನಾಗಿದ್ದರೂ ರಹಸ್ಯವಿಷಯಗಳನ್ನು ಪರಿಶೀಲಿಸಲು ಸಮರ್ಥನಾಗುವುದಿಲ್ಲ.

12084025a ತಥೈವಾನಭಿಜಾತೋಽಪಿ ಕಾಮಮಸ್ತು ಬಹುಶ್ರುತಃ|
12084025c ಅನಾಯಕ ಇವಾಚಕ್ಷುರ್ಮುಹ್ಯತ್ಯೂಹ್ಯೇಷು ಕರ್ಮಸು||

ಹಾಗೆಯೇ ಸತ್ಕುಲಪ್ರಸೂತನಾಗಿರದಿದ್ದರೂ ಬಹುಶ್ರುತನು ಮಂತ್ರಿಯಾಗಬಲ್ಲನೇ? ಇಲ್ಲ. ಏಕೆಂದರೆ ಕೈಹಿಡಿದು ನಡೆಸುವವರಿಲ್ಲದೆ ಕುರುಡುನಂತೆ ಅವನು ಸಣ್ಣಪುಟ್ಟ ಕಾರ್ಯಗಳಲ್ಲಿಯೂ ಮೋಹಗೊಂಡು ಭ್ರಾಂತನಾಗುತ್ತಾನೆ.

12084026a ಯೋ ವಾ ಹ್ಯಸ್ಥಿರಸಂಕಲ್ಪೋ ಬುದ್ಧಿಮಾನಾಗತಾಗಮಃ|
12084026c ಉಪಾಯಜ್ಞೋಽಪಿ ನಾಲಂ ಸ ಕರ್ಮ ಯಾಪಯಿತುಂ ಚಿರಮ್||

ಸ್ಥಿರಸಂಕಲ್ಪವಿಲ್ಲದಿರುವುದೂ ಮಂತ್ರಿಯಾದವನಿಗೆ ಮಹಾದೋಷವೇ ಸರಿ. ಅಸ್ಥಿರಸಂಕಲ್ಪನು ಉಪಾಯಜ್ಞನೂ ಬುದ್ಧಿವಂತನೂ ಶಾಸ್ತ್ರಜ್ಞನೇ ಆಗಿರಲಿ ಅವನು ಯಾವುದೇ ಕೆಲಸವನ್ನು ಮಾಡಿಮುಗಿಸಲು ಬಹಳ ಸಮಯವನ್ನು ತೆಗೆದುಕೊಳ್ಳುತ್ತಾನೆ.

12084027a ಕೇವಲಾತ್ಪುನರಾಚಾರಾತ್ಕರ್ಮಣೋ ನೋಪಪದ್ಯತೇ|
12084027c ಪರಿಮರ್ಶೋ ವಿಶೇಷಾಣಾಮಶ್ರುತಸ್ಯೇಹ ದುರ್ಮತೇಃ||

ದುರ್ಮತಿಯೂ ಅಶ್ರುತನೂ ಆಗಿರುವವನು ವಿಶೇಷಕಾರ್ಯಗಳ

ನಿರ್ವಹಣೆಯಲ್ಲಿ ಮಾಡುವ ಪರಾಮರ್ಶೆಯು
ಯುಕ್ತಿಸಂಗತವಾಗಿರುವುದಿಲ್ಲ.

12084028a ಮಂತ್ರಿಣ್ಯನನುರಕ್ತೇ ತು ವಿಶ್ವಾಸೋ ನ ಹಿ ವಿದ್ಯತೇ|
12084028c ತಸ್ಮಾದನನುರಕ್ತಾಯ ನ್ಯೈವ ಮಂತ್ರಂ ಪ್ರಕಾಶಯೇತ್||

ರಾಜನಲ್ಲಿ ಅನುರಕ್ತನಾಗಿರದ ಮಂತ್ರಿಯು ವಿಶ್ವಸನೀಯನಾಗಿರುವುದಿಲ್ಲ.
ಆದುದರಿಂದ ಅನುರಕ್ತನಾಗಿಲ್ಲದಿರುವವನಲ್ಲಿ ರಹಸ್ಯಗಳನ್ನು
ಹೊರಗೆಡಹಬಾರದು.

12084029a ವ್ಯಥಯೇದ್ಧಿ ಸ ರಾಜಾನಂ ಮಂತ್ರಿಭಿಃ ಸಹಿತೋಽನೃಜುಃ|
12084029c ಮಾರುತೋಪಹತಚ್ಛಿದ್ರೈಃ ಪ್ರವಿಶ್ಯಾಗ್ನಿರಿವ ದ್ರುಮಮ್||

ಕಪಟ ಮಂತ್ರಿಯು ರಾಜರಹಸ್ಯವನ್ನು ತಿಳಿದುಕೊಂಡರೆ ಇತರ
ಮಂತ್ರಿಗಳೊಡನೆ ಕೂಡಿಕೊಂಡು ಮರದ ಪೊಟರೆಯಲ್ಲಿದ್ದ ಅಗ್ನಿಯು
ಗಾಳಿಯ ಸಹಾಯದಿಂದ ಆ ಮರವನ್ನೇ ಸುಟ್ಟುಬಿಡುವಂತೆ ರಾಜನನ್ನು
ಬಹಳವಾಗಿ ಪೀಡಿಸುತ್ತಾನೆ.

12084030a ಸಂಕ್ರುಧ್ಯತ್ಯೇಕದಾ ಸ್ವಾಮೀ ಸ್ಥಾನಾಚ್ಚೈವಾಪಕರ್ಷತಿ|
12084030c ವಾಚಾ ಕ್ಷಿಪತಿ ಸಂರಬ್ಧಸ್ತತಃ ಪಶ್ಚಾತ್ಪ್ರಸೀದತಿ||

ಒಮ್ಮೆ ರಾಜನು ಕ್ರುದ್ಧನಾಗಿ ಮಂತ್ರಿಯನ್ನು ಅವನ ಸ್ಥಾನದಿಂದ
ತೆಗೆದುಹಾಕಬಹುದು. ರೋಷಪೂರಿತನಾಗಿ ನಿಂದಿಸಬಹುದು.
ಕಡೆಯಲ್ಲಿ ಪ್ರಸನ್ನನೂ ಆಗಬಹುದು.

12084031a ತಾನಿ ತಾನ್ಯನುರಕ್ತೇನ ಶಕ್ಯಾನ್ಯನುತಿತಿಕ್ಷಿತುಮ್|
12084031c ಮಂತ್ರಿಣಾಂ ಚ ಭವೇತ್ಕ್ರೋಧೋ ವಿಸ್ಫೂರ್ಜಿತಮಿವಾಶನೇಃ||

ರಾಜನ ಅಂತಹ ಸ್ವಭಾವವನ್ನು ಅವನಲ್ಲಿ ಅನುರಕ್ತನಾಗಿರುವ ಮಂತ್ರಿಯೇ ಸಹಿಸಿಕೊಳ್ಳಬಲ್ಲನು. ಅನುರಾಗವಿಲ್ಲದ ಮಂತ್ರಿಯ ಕೋಪವು ಅಂಥಹ ಸಂದರ್ಭಗಳಲ್ಲಿ ಸಿಡಿಲಿಗೆ ಸಮಾನವಾಗಿ ಭಯಂಕರವಾಗಿರುತ್ತದೆ.

12084032a ಯಸ್ತು ಸಂಹರತೇ[226] ತಾನಿ ಭರ್ತುಃ ಪ್ರಿಯಚಿಕೀರ್ಷಯಾ|
12084032c ಸಮಾನಸುಖದುಃಖಂ ತಂ ಪೃಚ್ಚೇದರ್ಥೇಷು ಮಾನವಮ್||

ಒಡೆಯನಿಗೆ ಪ್ರಿಯವಾದುದನ್ನು ಮಾಡಲು ಬಯಸಿ ರಾಜನ ಕ್ಷಣರುಷ್ಟ-ಕ್ಷಣತುಷ್ಟ ಸ್ವಭಾವವನ್ನು ಸಹಿಸಿಕೊಳ್ಳುವವನು ರಾಜನಲ್ಲಿ ಅನುರಕ್ತನಾಗಿರುವವನೆಂದು ತಿಳಿದುಕೊಳ್ಳಬೇಕು. ರಾಜನ ಸುಖ-ದುಃಕಗಳನ್ನು ತನ್ನ ಸುಖ-ದುಃಖಗಳಿಗೆ ಸಮಾನವೆಂದು ಭಾವಿಸುವ ಮನುಷ್ಯನೊಡನೆ ಎಲ್ಲ ವಿಷಯಗಳಲ್ಲಿಯೂ ಸಮಾಲೋಚನೆ ಮಾಡಬೇಕು.

12084033a ಅನೃಜುಸ್ತ್ವನುರಕ್ತೋಽಪಿ ಸಂಪನ್ನಶ್ಚೇತರೈರ್ಗುಣೈಃ|
12084033c ರಾಜ್ಞಃ ಪ್ರಜ್ಞಾನಯುಕ್ತೋಽಪಿ ನ ಮಂತ್ರಂ ಶ್ರೋತುಮರ್ಹತಿ||

ರಾಜನಲ್ಲಿ ಅನುರಕ್ತನಾಗಿದ್ದರೂ, ಇತರ ಗುಣಗಳಿಂದ ಸಂಪನ್ನನಾಗಿದ್ದರೂ, ಪ್ರಜ್ಞಾನಯುಕ್ತನಾಗಿದ್ದರೂ ಮಂತ್ರಿಯು ಕಪಟಿಯಾಗಿದ್ದರೆ ಅವನು ರಾಜರಹಸ್ಯಗಳನ್ನು ಕೇಳಲು ಅನರ್ಹನಾಗುತ್ತಾನೆ.

12084034a ಯೋಽಮಿತ್ರೈಃ ಸಹ ಸಂಬದ್ಧೋ ನ ಪೌರಾನ್ಬಹು ಮನ್ಯತೇ|

---

[226] ಸಂಸಹತೇ ಎಂಬ ಪಾಠಾಂತರವಿದೆ.

12084034c ಸ ಸುಹೃತ್ತಾದೃಶೋ ರಾಜ್ಞೋ ನ ಮಂತ್ರಂ ಶ್ರೋತುಮರ್ಹತಿ॥

ಯಾರಿಗೆ ಶತ್ರುಗಳೊಡನೆ ಸಂಬಂಧವಿರುವುದೋ, ಪ್ರಜೆಗಳ ಯೋಗ-
ಕ್ಷೇಮಗಳು ಮುಖ್ಯವೆಂದು ಭಾವಿಸುವುದಿಲ್ಲವೊ ಅಂಥವರು
ರಾಜರಹಸ್ಯಗಳನ್ನು ಕೇಳಲು ಅನರ್ಹರಾಗುತ್ತಾರೆ.

12084035a ಅವಿದ್ವಾನಶುಚಿಃ ಸ್ತಬ್ಧಃ ಶತ್ರುಸೇವೀ ವಿಕತ್ಥನಃ|
12084035c ಸ ಸುಹೃತ್ಕ್ರೋಧನೋ ಲುಬ್ಧೋ ನ ಮಂತ್ರಂ ಶ್ರೋತುಮರ್ಹತಿ॥

ವಿದ್ವಾಂಸನಲ್ಲದ, ಅಶುಚಿ, ಸ್ತಬ್ಧ, ಶತ್ರುಸೇವೀ, ಆತ್ಮಶ್ಲಾಘೀ, ಕ್ರೋಧನ
ಮತ್ತು ಲುಬ್ಧನು ರಾಜರಹಸ್ಯಗಳನ್ನು ಕೇಳಲು ಅನರ್ಹರಾಗುತ್ತಾರೆ.

12084036a ಆಗಂತುಶ್ಚಾನುರಕ್ತೋಽಪಿ ಕಾಮಮಸ್ತು ಬಹುಶ್ರುತಃ|
12084036c ಸತ್ಕೃತಃ ಸಂವಿಭಕ್ತೋ ವಾ ನ ಮಂತ್ರಂ ಶ್ರೋತುಮರ್ಹತಿ॥

ರಾಜನಲ್ಲಿ ಅನುರಕ್ತನಾಗಿದ್ದರೂ, ಬಹುಶ್ರುತನಾಗಿದ್ದರೂ, ಸತ್ಕೃತನೂ
ಸಂವಿಭಕ್ತನೂ ಆಗಿದ್ದರೂ ಹೊರದೇಶದಿಂದ ಬಂದವನಾಗಿದ್ದರೆ
ಅವನು ರಾಜರಹಸ್ಯಗಳನ್ನು ಕೇಳಲು ಅನರ್ಹನಾಗುತ್ತಾನೆ.

[227]12084037a ಯಸ್ತ್ವಲ್ಪೇನಾಪಿ ಕಾರ್ಯೇಣ ಸಕೃದಾಕ್ಷಾರಿತೋ ಭವೇತ್|
12084037c ಪುನರನ್ಯೈರ್ಗುಣೈರ್ಯುಕ್ತೋ ನ ಮಂತ್ರಂ ಶ್ರೋತುಮರ್ಹತಿ॥

ಅತ್ಯಲ್ಪ ಅನುಚಿತ ಕಾರ್ಯಕ್ಕಾಗಿಯಾದರೂ ದಂಡನೆಗೀಡಾಗಿ
ನಿರ್ಧನನಾದವನು ಮಿತ್ರನೇ ಆಗಿದ್ದರೂ ಮತ್ತು ಸಕಲಗುಣಸಂಪನ್ನನೇ

---

227 ಇದಕ್ಕೆ ಮೊದಲು ಭಾರತ ದರ್ಶನದಲ್ಲಿ ಈ ಶ್ಲೋಕವಿದೆ: ವಿಧರ್ಮತೋ ವಿಪ್ರಕೃತಃ ಪಿತಾ ಯಸ್ಯಾಭವತ್ಪುರಾ| ಸತ್ಕೃತಃ ಸ್ಥಾಪಿತಃ ಸೋಽಪಿ ನ ಮಂತ್ರಃ ಶ್ರೋತುಮರ್ಹತಿ॥

ಆಗಿದ್ದರೂ ರಾಜರಹಸ್ಯಗಳನ್ನು ಕೇಳಲು ಅನರ್ಹನಾಗುತ್ತಾನೆ.

12084038a ಕೃತಪ್ರಜ್ಞಶ್ಚ ಮೇಧಾವೀ ಬುಧೋ ಜಾನಪದಃ ಶುಚಿಃ|
12084038c ಸರ್ವಕರ್ಮಸು ಯಃ ಶುದ್ಧಃ ಸ ಮಂತ್ರಂ ಶ್ರೋತುಮರ್ಹತಿ||

ಕೃತಪ್ರಜ್ಞನೂ, ಮೇಧಾವಿಯೂ, ಬುದ್ಧಿವಂತನೋ, ಸ್ವದೇಶದವನೋ, ಶುಚಿಯೋ, ಸರ್ವಕರ್ಮಗಳಲ್ಲಿ ಶುದ್ಧನೋ ಅವನು ರಾಜರಹಸ್ಯಗಳನ್ನು ಕೇಳಲು ಅರ್ಹನಾಗುತ್ತಾನೆ.

12084039a ಜ್ಞಾನವಿಜ್ಞಾನಸಂಪನ್ನಃ ಪ್ರಕೃತಿಜ್ಞಃ ಪರಾತ್ಮನೋಃ|
12084039c ಸುಹೃದಾತ್ಮಸಮೋ ರಾಜ್ಞಃ ಸ ಮಂತ್ರಂ ಶ್ರೋತುಮರ್ಹತಿ||

ಜ್ಞಾನವಿಜ್ಞಾನಸಂಪನ್ನ, ತನ್ನ ಕಡೆಯ ಮತ್ತು ಶತ್ರುಗಳ ಕಡೆಯವರ ಸ್ವಭಾವವನ್ನು ತಿಳಿದಿರುವ, ರಾಜನ ಆತ್ಮಸಮ ಸುಹೃದನು ರಾಜರಹಸ್ಯಗಳನ್ನು ಕೇಳಲು ಅರ್ಹನಾಗುತ್ತಾನೆ.

12084040a ಸತ್ಯವಾಕ್ ಶೀಲಸಂಪನ್ನೋ ಗಂಭೀರಃ ಸತ್ರಪೋ ಮೃದುಃ|
12084040c ಪಿತೃಪೈತಾಮಹೋ ಯಃ ಸ್ಯಾತ್ಸ ಮಂತ್ರಂ ಶ್ರೋತುಮರ್ಹತಿ||

ಸತ್ಯವಾಗ್ಮಿ, ಶೀಲಸಂಪನ್ನ, ಗಂಭಿರ, ಲಜ್ಜಾಶೀಲ, ಮೃದು, ಮತ್ತು ಯಾರ ತಂದೆ-ತಾತಂದಿರೂ ರಾಜಸೇವೆಯಲ್ಲಿ ನಿರತರಾಗಿದ್ದರೋ ಅವನು ರಾಜರಹಸ್ಯಗಳನ್ನು ಕೇಳಲು ಅರ್ಹನಾಗುತ್ತಾನೆ.

12084041a ಸಂತುಷ್ಟಃ ಸಂಮತಃ ಸತ್ಯಃ ಶೌಟೀರೋ ದ್ವೇಷ್ಯಪಾಪಕಃ|
12084041c ಮಂತ್ರವಿತ್ಕಾಲವಿಚ್ಚೂರಃ ಸ ಮಂತ್ರಂ ಶ್ರೋತುಮರ್ಹತಿ||

ಸಂತುಷ್ಟನೂ, ಸಮ್ಮತನೂ, ಸತ್ಯನೂ, ಶೂರನೂ, ಪಾಪವನ್ನು ದ್ವೇಷಿಸುವವನೂ, ಮಂತ್ರಾಲೋಚನೆಮಾಡಲು ತಿಳಿದಿರುವ,

ಕಾಲವನ್ನು ತಿಳಿದಿರುವ, ಶೂರನು ರಾಜರಹಸ್ಯಗಳನ್ನು ಕೇಳಲು ಅರ್ಹನಾಗುತ್ತಾನೆ.

12084042a ಸರ್ವಲೋಕಂ ಸಮಂ ಶಕ್ತಃ ಸಾಂತ್ವೇನ ಕುರುತೇ ವಶೇ|
12084042c ತಸ್ಮೈ ಮಂತ್ರಃ ಪ್ರಯೋಕ್ತವ್ಯೋ ದಂಡಮಾಧಿತ್ಸತಾ ನೃಪ||

ದಂಡಧಾರಿಯಾಗಿ ಪ್ರಜಾಪಾಲನೆಯಲ್ಲಿ ನಿರತನಾದ ನೃಪನು ಸರ್ವಲೋಕಗಳನ್ನೂ ಸಾಂತ್ವನದಿಂದಲೇ ವಶೀಕರಿಸಬಲ್ಲವನಲ್ಲಿ ಮಂತ್ರಾಲೋಚನೆ ಮಾಡಬೇಕು.

12084043a ಪೌರಜಾನಪದಾ ಯಸ್ಮಿನ್ವಿಶ್ವಾಸಂ ಧರ್ಮತೋ ಗತಾಃ|
12084043c ಯೋದ್ಧಾ ನಯವಿಪಶ್ಚಿಚ್ಚ ಸ ಮಂತ್ರಂ ಶ್ರೋತುಮರ್ಹತಿ||

ಪುರ-ಗ್ರಾಮೀಣಜನರು ಯಾರಲ್ಲಿ ಧರ್ಮತಃ ವಿಶ್ವಾಸವನ್ನಿಟ್ಟಿರುವರೋ, ಯಾರು ಯುದ್ಧದಲ್ಲಿ ಕುಶಲನಾಗಿರುವನೋ ಮತ್ತು ನೀತಿ ಶಾಸ್ತ್ರವನ್ನು ತಿಳಿದಿರುವನೋ ಅವನು ರಾಜರಹಸ್ಯವನ್ನು ಕೇಳಲು ಅರ್ಹನಾಗುತ್ತಾನೆ.

12084044a ತಸ್ಮಾತ್ಸರ್ವೈರ್ಗುಣೈರ್ಯುತೈರುಪಪನ್ನಾಃ ಸುಪೂಜಿತಾಃ|
12084044c ಮಂತ್ರಿಣಃ ಪ್ರಕೃತಿಜ್ಞಾಃ ಸ್ಯುಸ್ತ್ರ್ಯವರಾ ಮಹದೀಪ್ಸವಃ||

ಆದುದರಿಂದ ಈ ಸರ್ವಗುಣಸಂಪನ್ನರಾದ ಸುಪೂಜಿತರಾದ, ಪ್ರಜೆಗಳ ಸ್ವಭಾವ-ಗುಣಗಳನ್ನು ತಿಳಿದುಕೊಂಡಿರುವ, ಮಹಾತ್ವಾಕಾಂಕ್ಷಿಗಳಾದ ಕನಿಷ್ಠ ಮೂರಾದರೂ ಮಂತ್ರಿಗಳನ್ನಾಗಿ ಮಾಡಿಕೊಂಡಿರಬೇಕು.

12084045a ಸ್ವಾಸು ಪ್ರಕೃತಿಷು ಚಿದ್ರಂ ಲಕ್ಷಯೇರನ್ಪರಸ್ಯ ಚ|

12084045c ಮಂತ್ರಿಣೋ ಮಂತ್ರಮೂಲಂ ಹಿ ರಾಜ್ಞೋ ರಾಷ್ಟ್ರಂ ವಿವರ್ಧತೇ॥

ತಮ್ಮ ಮತ್ತು ಶತ್ರುಗಳ ಪ್ರಕೃತಿಗಳಲ್ಲಿ ದೋಷಗಳನ್ನು ಹುಡುಕುತ್ತಿರಬೇಕು. ಅಂಥಹ ಮಂತ್ರಿಗಳ ಸಲಹೆಗಳೇ ರಾಜನ ರಾಷ್ಟ್ರವನ್ನು ವರ್ಧಿಸುತ್ತದೆ.

12084046a ನಾಸ್ಯ ಚಿದ್ರಂ ಪರಃ ಪಶ್ಯೇಚ್ಚಿದ್ರೇಷು ಪರಮನ್ವಿಯಾತ್।
12084046c ಗೂಹೇತ್ಕೂರ್ಮ ಇವಾಂಗಾನಿ ರಕ್ಷೇದ್ವಿವರಮಾತ್ಮನಃ॥

ತಮ್ಮಲ್ಲಿರುವ ದೋಷಗಳನ್ನು ಶತ್ರುಗಳಿಗೆ ಕಾಣದಂತೆ ಆಮೆಯು ತನ್ನ ಅವಯವಗಳನ್ನು ಒಳಕ್ಕೆ ಸೆಳೆದುಕೊಂಡು ಮುಚ್ಚಿಕೊಳ್ಳುವಂತೆ ಮುಚ್ಚಿಕೊಂಡಿರಬೇಕು.

12084047a ಮಂತ್ರಗ್ರಾಹಾ[228] ಹಿ ರಾಜ್ಯಸ್ಯ ಮಂತ್ರಿಣೋ ಯೇ ಮನೀಷಿಣಃ।
12084047c ಮಂತ್ರಸಂಹನನೋ ರಾಜಾ ಮಂತ್ರಾಂಗಾನೀತರೋ ಜನಃ॥

ಬುದ್ಧಿವಂತ ಮಂತ್ರಿಗಳೇ ರಾಜನ ರಹಸ್ಯಗಳನ್ನು ಹಿಡಿದಿಟ್ಟುಕೊಂಡಿರುತ್ತಾರೆ. ಮಂತ್ರಾಲೋಚನೆಯೇ ರಾಜನ ದೇಹ. ಇತರ ಜನರು ಅದರ ಅಂಗಗಳು.

12084048a ರಾಜ್ಯಂ ಪ್ರಣಿಧಿಮೂಲಂ ಹಿ ಮಂತ್ರಸಾರಂ ಪ್ರಚಕ್ಷತೇ।
12084048c ಸ್ವಾಮಿನಂ ತ್ವನುವರ್ತಂತಿ ವೃತ್ತ್ಯರ್ಥಮಿಹ ಮಂತ್ರಿಣಃ॥

ಗುಪ್ತಚಾರರೇ ರಾಜ್ಯದ ಅಭಿವೃದ್ಧಿಗೆ ಮೂಲಕಾರಣರೆಂದು ಹೇಳುತ್ತಾರೆ. ಮಂತ್ರಿಗಳಾದರೋ ತಮ್ಮ ಜೀವಿಕೆಗಾಗಿ ರಾಜನನ್ನೇ

[228] ಮಂತ್ರಗೂಢಾ ಹಿ ಎಂಬ ಪಾಠಾಂತರವಿದೆ.

ಅವಲಂಬಿಸಿರುತ್ತಾರೆ.

12084049a ಸ ವಿನೀಯ ಮದಕ್ರೋಧೌ ಮಾನಮೀರ್ಷ್ಯಾಂ ಚ ನಿರ್ವೃತಃ|
12084049c ನಿತ್ಯಂ ಪಂಚೋಪಧಾತೀತ್ಯೈರ್ಮಂತ್ರಯೇತ್ಸಹ ಮಂತ್ರಿಭಿಃ||

ಮದ-ಕ್ರೋಧಗಳನ್ನು ತೊರೆದು, ಮಾನ-ಈರ್ಷ್ಯೆಗಳಿಂದ ನಿರ್ವೃತ್ತನಾಗಿ ನಿತ್ಯವೂ ಐದು ವಿಷಯಗಳನ್ನು[229] ಪರೀಕ್ಷಿಸಿ ಮಂತ್ರಿಗಳೊಂದಿಗೆ ಸಮಾಲೋಚನೆ ಮಾಡಬೇಕು.

12084050a ತೇಷಾಂ ತ್ರಯಾಣಾಂ ವಿವಿಧಂ ವಿಮರ್ಶಂ
ಬುಧ್ಯೇತ ಚಿತ್ತಂ ವಿನಿವೇಶ್ಯ ತತ್ರ|
12084050c ಸ್ವನಿಶ್ಚಯಂ ತಂ ಪರನಿಶ್ಚಯಂ ಚ
ನಿವೇದಯೇದುತ್ತರಮಂತ್ರಕಾಲೇ||

ಮಂತ್ರಾಲೋಚನೆಯಲ್ಲಿರುವ ಮೂರು ಮಂತ್ರಿಗಳ ಪ್ರತ್ಯೇಕ ಸಲಹೆಗಳನ್ನು ಕೇಳಿ, ತಾನೂ ಸಹ ಆ ವಿಷಯವನ್ನು ಚೆನ್ನಾಗಿ ಮಥಿಸಿ, ತನ್ನ ಮತ್ತು ಮಂತ್ರಿಗಳಿತ್ತಿರುವ ಸಲಹೆಗಳನ್ನು ಕ್ರೋಢೀಕರಿಸಿ, ಆಚಾರ್ಯ ಅಥವಾ ಪುರೋಹಿತನೊಂದಿಗೆ ಸಮಾಲೋಚನೆ ಮಾಡುವಾಗ ಅವರ ಮುಂದಿಡಬೇಕು.

12084051a ಧರ್ಮಾರ್ಥಕಾಮಜ್ಞಮುಪೇತ್ಯ ಪೃಚ್ಛೇದ್
ಯುಕ್ತೋ ಗುರುಂ ಬ್ರಾಹ್ಮಣಮುತ್ತಮಾರ್ಥಮ್|
12084051c ನಿಷ್ಠಾ ಕೃತಾ ತೇನ ಯದಾ ಸಹ ಸ್ಯಾತ್

---

[229] ಕಾಯಕ, ವಾಚಕ, ಮಾನಸಿಕ, ಕರ್ಮಕೃತ ಮತ್ತು ಸಂಕೇತಜನಿತ – ಇವು ಆ ಐದು ವಿಷಯಗಳು.

ತಂ ತತ್ರ ಮಾರ್ಗಂ ಪ್ರಣಯೇದಸಕ್ತಮ್‌॥

ಸಾವಧಾನಚಿತ್ತನಾಗಿ ಧರ್ಮಾರ್ಥಕಾಮಗಳಲ್ಲಿ ನಿಷ್ಣಾತ
ಬ್ರಾಹ್ಮಣಗುರುವಿನ ಬಳಿಹೋಗಿ ಉತ್ತರಾರ್ಥವಾಗಿ ಪ್ರಶ್ನಿಸಬೇಕು.
ಗುರುವಿನ ಅಂತ್ಯನಿರ್ಧಾರವು ನಾಲ್ವರ ಅಭಿಪ್ರಾಯಗಳಿಗೂ
ಹೊಂದಿಕೊಂಡಿದ್ದರೆ ಕೂಡಲೇ ಆ ಮಂತ್ರಾಲೋಚನೆಯ
ನಿರ್ಧಾರವನ್ನು ಕಾರ್ಯರೂಪಕ್ಕೆ ತರಬೇಕು.

12084052a ಏವಂ ಸದಾ ಮಂತ್ರಯಿತವ್ಯಮಾಹುರ್‌
ಯೇ ಮಂತ್ರತತ್ತ್ವಾರ್ಥವಿನಿಶ್ಚಯಜ್ಞಾಃ|
12084052c ತಸ್ಮಾತ್ತ್ವಮೇವಂ ಪ್ರಣಯೇಃ ಸದೈವ
ಮಂತ್ರಂ ಪ್ರಜಾಸಂಗ್ರಹಣೇ ಸಮರ್ಥಮ್‌॥

ಸದಾ ಹೀಗೆಯೇ ಮಂತ್ರಾಲೋಚನೆ ಮಾಡಬೇಕೆಂದು
ಮಂತ್ರತತ್ತ್ವಾರ್ಥವಿನಿಶ್ಚಯ ತಜ್ಞರು ಹೇಳುತ್ತಾರೆ. ಪ್ರಜಾಸಂಗ್ರಹಣೆಗೆ
ಸಮರ್ಥವಾದ ವಿಷಯಗಳನ್ನೇ ಸದಾ ಮಂತ್ರಾಲೋಚನೆಯ
ವಿಷಯವನ್ನಾಗಿ ಆರಿಸಿಕೊಳ್ಳಬೇಕು.

12084053a ನ ವಾಮನಾಃ ಕುಬ್ಜಕೃಶಾ ನ ಖಿಂಜಾ
ನಾಂಧಾ ಜಡಾಃ ಸ್ತ್ರೀ ನ ನಪುಂಸಕಂ ಚ|
12084053c ನ ಚಾತ್ರ ತಿರ್ಯಘ್ನ ಪುರೋ ನ ಪಶ್ಚಾನ್‌
ನೋರ್ಧ್ವಂ ನ ಚಾಧಃ ಪ್ರಚರೇತ ಕಶ್ಚಿತ್‌॥

ರಹಸ್ಯ ಮಂತ್ರಾಲೋಚನೆ ನಡೆಯುವಾಗ ಅದರ ಹಿಂದೆ-ಮುಂದೆ,
ಎಡ-ಬಲಭಾಗಗಳಲ್ಲಿ, ಮೇಲೆ-ಕೆಳಗೆ – ವಾಮನರೂ, ಕುಬ್ಜರೂ,
ಕೃಶರೂ, ಕುಂಟರೂ, ಕುರುಡರೂ, ಜಡರೂ, ಸ್ತ್ರೀಯರೂ, ನಪುಂಸಕರೂ

ಸುಳಿದಾಡಬಾರದು.

12084054a ಆರುಹ್ಯ ವಾತಾಯನಮೇವ ಶೂನ್ಯಂ
ಸ್ಥಲಂ ಪ್ರಕಾಶಂ ಕುಶಕಾಶಹೀನಮ್|
12084054c ವಾಗಂಗದೋಷಾನ್ಪರಿಹೃತ್ಯ ಮಂತ್ರಂ
ಸಂಮಂತ್ರಯೇತ್ಕಾರ್ಯಮಹೀನಕಾಲಮ್||

ಅರಮನೆಯ ಉಪ್ಪರಿಗೆಯ ಮೇಲೆ, ಅಥವಾ ನಿರ್ಜನ
ವಿಶಾಲಬೆಳಕಿರುವ, ಜಂಡುಹುಲ್ಲು-ದರ್ಭೆ-ಗರಿಕೆಗಳಿಲ್ಲದಿರುವ ಬಯಲು
ಪ್ರದೇಶದಲ್ಲಿಯಾದರೂ ಕುಳಿತು ಕೆಲಸಕ್ಕೆ ಬಾರದ ಅಂಗಚೇಷ್ಟೆಗಳನ್ನು
ಬಿಟ್ಟು ಮುಂದಿನ ಕಾರ್ಯಗಳ ವಿಷಯವಾಗಿ ರಾಜನು
ಮಂತ್ರಿಗಳೊಡನೆ ಸಮಾಲೋಚಿಸಬೇಕು.

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಸಭ್ಯಾದಿಲಕ್ಷಣಕಥನೇ ಚತುರಶೀತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಸಭ್ಯಾದಿಲಕ್ಷಣಕಥನ ಎನ್ನುವ ಎಂಭತ್ನಾಲ್ಕನೇ ಅಧ್ಯಾಯವು.

೮೫

ಇಂದ್ರ-ಬೃಹಸ್ಪತಿ ಸಂವಾದ

ಸಾಂತ್ವನದ ಮಹತ್ವವನ್ನು ಪ್ರತಿಪಾದಿಸುವ ಶಕ್ರ-ಬೃಹಸ್ಪತಿ ಸಂವಾದ (1-11).

12085001 ಭೀಷ್ಮ ಉವಾಚ|

12085001a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
12085001c ಬೃಹಸ್ಪತೇಶ್ಚ ಸಂವಾದಂ ಶಕ್ರಸ್ಯ ಚ ಯುಧಿಷ್ಠಿರ॥

ಭೀಷ್ಮನು ಹೇಳಿದನು: "ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಬೃಹಸ್ಪತಿಯೊಡನೆ ಶಕ್ರನ ಸಂವಾದವನ್ನು ಉದಾಹರಿಸುತ್ತಾರೆ.

12085002 ಶಕ್ರ ಉವಾಚ।
12085002a ಕಿಂ ಸ್ವಿದೇಕಪದಂ ಬ್ರಹ್ಮನ್ಪುರುಷಃ ಸಮ್ಯಗಾಚರನ್।
12085002c ಪ್ರಮಾಣಂ ಸರ್ವಭೂತಾನಾಂ ಯಶಶ್ಚೈವಾಪ್ನುಯಾನ್ಮಹತ್॥

ಶಕ್ರನು ಹೇಳಿದನು: "ಬ್ರಹ್ಮನ್! ಪುರುಷನು ಯಾವುದನ್ನು ಚೆನ್ನಾಗಿ ಆಚರಿಸಿ ಸರ್ವಪ್ರಾಣಿಗಳಿಗೂ ಪ್ರಿಯನಾಗುವನೋ ಮತ್ತು ಶಾಶ್ವತ ಮಹಾ ಯಶಸ್ಸನ್ನು ಗಳಿಸುವನೋ ಅಂಥಹ ಒಂದು ಪದವು ಯಾವುದಿರಬಹುದು?"

12085003 ಬೃಹಸ್ಪತಿರುವಾಚ।
12085003a ಸಾಂತ್ವಮೇಕಪದಂ ಶಕ್ರ ಪುರುಷಃ ಸಮ್ಯಗಾಚರನ್।
12085003c ಪ್ರಮಾಣಂ ಸರ್ವಭೂತಾನಾಂ ಯಶಶ್ಚೈವಾಪ್ನುಯಾನ್ಮಹತ್॥

ಬೃಹಸ್ಪತಿಯು ಹೇಳಿದನು: "ಶಕ್ರ! 'ಸಾಂತ್ವನ' ಎನ್ನುವುದೇ ಆ ಒಂದು ಪದವು ಯಾವುದರನ್ನು ಚೆನ್ನಾಗಿ ಆಚರಿಸುವುದರಿಂದ ಪುರುಷನು ಸರ್ವಪ್ರಾಣಿಗಳ ಪ್ರಿಯನಾಗುತ್ತಾನೆ ಮತ್ತು ಶಾಶ್ವತ ಮಹಾಯಶಸ್ಸನ್ನು ಗಳಿಸುತ್ತಾನೆ.

12085004a ಏತದೇಕಪದಂ ಶಕ್ರ ಸರ್ವಲೋಕಸುಖಾವಹಮ್।
12085004c ಆಚರನ್ಸರ್ವಭೂತೇಷು ಪ್ರಿಯೋ ಭವತಿ ಸರ್ವದಾ॥

ಶಕ್ರ! ಈ ಒಂದು ಪದವೇ ಸರ್ವಲೋಕಗಳಿಗೂ ಸುಖದಾಯಕವಾಗಿದೆ. ಎಲ್ಲಪ್ರಾಣಿಗಳೊಡನೆಯೂ ಅದೊಂದನ್ನು ಆಚರಿಸಿದ್ದೇ ಆದರೆ ಅಂಥವನು ಸರ್ವದಾ ಪ್ರಿಯನಾಗುತ್ತಾನೆ.

12085005a ಯೋ ಹಿ ನಾಭಾಷತೇ ಕಿಂ ಚಿತ್ಸತತಂ ಭ್ರುಕುಟೀಮುಖಃ|
12085005c ದ್ವೇಷ್ಯೋ ಭವತಿ ಭೂತಾನಾಂ ಸ ಸಾಂತ್ವಮಿಹ ನಾಚರನ್||

ಸತತವೂ ಮುಖಗಂಟಿಕ್ಕಿಕೊಂಡು ಏನನ್ನೂ ಮಾತನಾಡದವನು ಸಾಂತ್ವನವನ್ನು ಆಚರಿಸದೇ ಇರುವುದರಿಂದ ಸರ್ವಜೀವಿಗಳಿಗಳ ದ್ವೇಷಿಯಾಗುತ್ತಾನೆ.

12085006a ಯಸ್ತು ಪೂರ್ವಮಭಿಪ್ರೇಕ್ಷ್ಯ ಪೂರ್ವಮೇವಾಭಿಭಾಷತೇ|
12085006c ಸ್ಮಿತಪೂರ್ವಾಭಿಭಾಷೀ ಚ ತಸ್ಯ ಲೋಕಃ ಪ್ರಸೀದತಿ||

ಮೊದಲು ನೋಡಿ ಮೊದಲು ಮಾತನಾಡಿಸುವ ಮತ್ತು ನಸುನಗುತ್ತಾ ಮಾತನಾಡುವವನನ ಕುರಿತು ಲೋಕವು ಪ್ರಸನ್ನವಾಗಿರುತ್ತದೆ.

12085007a ದಾನಮೇವ ಹಿ ಸರ್ವತ್ರ ಸಾಂತ್ವೇನಾನಭಿಜಲ್ಪಿತಮ್|
12085007c ನ ಪ್ರೀಣಯತಿ ಭೂತಾನಿ ನಿರ್ವ್ಯಂಜನಮಿವಾಶನಮ್||

ಉಪ್ಪಿನಕಾಯಿ, ಪಲ್ಯ ಮೊದಲಾದ ವ್ಯಂಜನಗಳಿಲ್ಲದೇ ಊಟವು ಹೇಗೆ ಖುಚಿಸುವುದಿಲ್ಲವೋ ಹಾಗೆ ಸಾಂತ್ವನದ ಮಾತುಗಳಿಲ್ಲದ ದಾನವು ಯಾರಿಗೂ ಸಂತೋಷವನ್ನುಂಟುಮಾಡುವುದಿಲ್ಲ.

12085008a ಅದಾತಾ ಹ್ಯಪಿ ಭೂತಾನಾಂ[230] ಮಧುರಾಮೀರಯನ್ಗಿರಮ್|
12085008c ಸರ್ವಲೋಕಮಿಮಂ ಶಕ್ರ ಸಾಂತ್ವೇನ ಕುರುತೇ ವಶೇ||

[230] ಅದಾನಾದಪಿ ಭೂತಾನಾಂ ಎಂಬ ಪಾಠಾಂತರವಿದೆ.

ಶಕ್ರ! ದಾನಮಾಡದಿದ್ದರೂ ಜೀವಿಗಳೊಡನೆ ಮಧುರ ಸ್ವರದಲ್ಲಿ ಮಾತನಾಡುವವನು ಈ ಸರ್ವ ಲೋಕಗಳನ್ನೂ ಸಾಂತ್ವನದಿಂದ ಗೆಲ್ಲುತ್ತಾನೆ.

12085009a ತಸ್ಮಾತ್ಸಾಂತ್ವಂ ಪ್ರಕರ್ತವ್ಯಂ ದಂಡಮಾಧಿತ್ಸತಾಮಿಹ|
12085009c ಫಲಂ ಚ ಜನಯತ್ಯೇವಂ ನ ಚಾಸ್ಯೋದ್ವಿಜತೇ ಜನಃ||

ಆದುದರಿಂದ ಶಿಕ್ಷೆಯನ್ನು ವಿಧಿಸಲು ಬಯಸಿದರೂ ತಪ್ಪಿತಸ್ಥನಿಗೆ ರಾಜನು ಸಾಂತ್ವನವನ್ನು ನೀಡಬೇಕು. ಇದರಿಂದ ಫಲವಿದೆ. ಅಂಥವನಿಂದ ಜನರು ಉದ್ವಿಗ್ನರಾಗುವುದಿಲ್ಲ.

12085010a ಸುಕೃತಸ್ಯ ಹಿ ಸಾಂತ್ವಸ್ಯ ಶ್ಲಕ್ಷ್ಣಸ್ಯ ಮಧುರಸ್ಯ ಚ|
12085010c ಸಮ್ಯಗಾಸೇವ್ಯಮಾನಸ್ಯ ತುಲ್ಯಂ ಜಾತು ನ ವಿದ್ಯತೇ||

ಸಾಂತ್ವನ ಮತ್ತು ಸ್ನೇಹಪೂರ್ವಕ ಮಧುರ ಮಾತು ಇವೆರಡು ಸುಕೃತಗಳು. ಬೇರೆಯಾವುದರಿಂದಲೂ ಜನರನ್ನು ಸಂಗ್ರಹಿಸಲು ಸಾಧ್ಯವಿಲ್ಲ.””

12085011 ಭೀಷ್ಮ ಉವಾಚ|
12085011a ಇತ್ಯುಕ್ತಃ ಕೃತವಾನ್ಸರ್ವಂ ತಥಾ ಶಕ್ರಃ ಪುರೋಧಸಾ|
12085011c ತಥಾ ತ್ವಮಪಿ ಕೌಂತೇಯ ಸಮ್ಯಗೇತತ್ಸಮಾಚರ||

ಭೀಷ್ಮನು ಹೇಳಿದನು: “ಇದನ್ನು ಕೇಳಿ ಶಕ್ರನು ಪುರೋಹಿತನು ಹೇಳಿದುದೆಲ್ಲವನ್ನೂ ಮಾಡಿದನು. ಕೌಂತೇಯ! ನೀನೂ ಕೂಡ ಹಾಗೆಯೇ ಇದನ್ನು ಚೆನ್ನಾಗಿ ಆಚರಿಸು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ

ಇಂದ್ರಬೃಹಸ್ಪತಿಸಂವಾದೇ ಪಂಚಾಶೀತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಇಂದ್ರಬೃಹಸ್ಪತಿಸಂವಾದ ಎನ್ನುವ ಎಂಭತ್ತೈದನೇ ಅಧ್ಯಾಯವು.

೮೬

ಅಮಾತ್ಯವಿಭಾಗ

ರಾಜನ ವ್ಯವಹಾರ; ಮಂತ್ರಿಮಂಡಲದ ರಚನೆ; ಮಂತ್ರಿ, ಸೇನಾಪತಿ, ಮತ್ತು ದೂತರ ಗುಣ-ಲಕ್ಷಣಗಳು (1-33).

12086001 ಯುಧಿಷ್ಠಿರ ಉವಾಚ|
12086001a ಕಥಂ ಸ್ವಿದಿಹ ರಾಜೇಂದ್ರ ಪಾಲಯನ್ಪಾರ್ಥಿವಃ ಪ್ರಜಾಃ|
12086001c ಪ್ರತಿ ಧರ್ಮಂ ವಿಶೇಷೇಣ ಕೀರ್ತಿಮಾಪ್ನೋತಿ ಶಾಶ್ವತೀಮ್||

ಯುಧಿಷ್ಠಿರನು ಹೇಳಿದನು: "ರಾಜೇಂದ್ರ! ಇಲ್ಲಿ ಪ್ರಜೆಗಳನ್ನು ಯಾವ ಧರ್ಮವಿಶೇಷದಿಂದ ಪಾಲಿಸಿದರೆ ರಾಜನು ಪ್ರಜೆಗಳ ಪ್ರೀತಿಯನ್ನೂ ಶಾಶ್ವತ ಕೀರ್ತಿಯನ್ನೂ ಪಡೆಯುತ್ತಾನೆ?"

12086002 ಭೀಷ್ಮ ಉವಾಚ|
12086002a ವ್ಯವಹಾರೇಣ ಶುದ್ಧೇನ ಪ್ರಜಾಪಾಲನತತ್ಪರಃ|
12086002c ಪ್ರಾಪ್ಯ ಧರ್ಮಂ ಚ ಕೀರ್ತಿಂ ಚ ಲೋಕಾವಾಪ್ನೋತ್ಯುಭೌ ಶುಚಿಃ||

ಭೀಷ್ಮನು ಹೇಳಿದನು: "ಶುಚಿಯಾಗಿ ಶುದ್ಧ ವ್ಯವಹಾರಗಳಿಂದ ಪ್ರಜಾಪಾಲನೆಯಲ್ಲಿ ತತ್ಪರನಾಗಿರುವ ರಾಜನು ಇಹ-ಪರ ಲೋಕಗಳಲ್ಲಿ ಧರ್ಮ ಮತ್ತು ಕೀರ್ತಿಗಳನ್ನು ಪಡೆಯುತ್ತಾನೆ."

12086003 ಯುಧಿಷ್ಠಿರ ಉವಾಚ|
12086003a ಕೀದೃಶಂ ವ್ಯವಹಾರಂ ತು ಕೈಶ್ಚ ವ್ಯವಹರೇನ್ನೃಪಃ|
12086003c ಏತತ್ಪೃಷ್ಟೋ ಮಹಾಪ್ರಾಜ್ಞ ಯಥಾವದ್ವಕ್ತುಮರ್ಹಸಿ||

ಯುಧಿಷ್ಠಿರನು ಹೇಳಿದನು: "ಮಹಾಪ್ರಾಜ್ಞ! ರಾಜನು ಯಾವ ವ್ಯವಹಾರಗಳನ್ನು ಕೈಗೊಳ್ಳಬೇಕು ಮತ್ತು ಯಾರೊಂದಿಗೆ ವ್ಯವಹರಿಸಬೇಕು? ನನ್ನ ಈ ಪ್ರಶ್ನೆಗೆ ಯಥಾವತ್ತಾಗಿ ಉತ್ತರಿಸಬೇಕು.

12086004a ಯೇ ಚೈತೇ ಪೂರ್ವಕಥಿತಾ ಗುಣಾಸ್ತೇ ಪುರುಷಂ ಪ್ರತಿ|
12086004c ನೈಕಸ್ಮಿನ್ಪುರುಷೇ ಹ್ಯೇತೇ ವಿದ್ಯಂತ ಇತಿ ಮೇ ಮತಿಃ||

ನೀನು ಈ ಹಿಂದೆ ಹೇಳಿದ ಪುರುಷನಲ್ಲಿರಬೇಕಾದ ಗುಣಗಳೆಲ್ಲವೂ ಒಬ್ಬ ಪುರುಷನಲ್ಲಿಯೇ ಇರುವುದಿಲ್ಲ ಎಂದು ನನ್ನ ಅಭಿಪ್ರಾಯ."

12086005 ಭೀಷ್ಮ ಉವಾಚ|
12086005a ಏವಮೇತನ್ಮಹಾಪ್ರಾಜ್ಞ ಯಥಾ ವದಸಿ ಬುದ್ಧಿಮಾನ್|
12086005c ದುರ್ಲಭಃ ಪುರುಷಃ ಕಶ್ಚಿದೇಭಿರ್ಗುಣಗುಣೈರ್ಯುತಃ||

ಭೀಷ್ಮನು ಹೇಳಿದನು: "ಮಹಾಪ್ರಾಜ್ಞ! ಬುದ್ಧಿವಂತ! ನೀನು ಹೇಳಿದುದು ಸರಿ. ಈ ಗುಣಗಳೆಲ್ಲವೂ ಯಾವುದೇ ಓರ್ವ ಪುರುಷನಲ್ಲಿರುವುದು ದುರ್ಲಭ.

12086006a ಕಿಂ ತು ಸಂಕ್ಷೇಪತಃ ಶೀಲಂ ಪ್ರಯತ್ನೇ ನೇಹ ದುರ್ಲಭಮ್|
12086006c ವಕ್ಷ್ಯಾಮಿ ತು ಯಥಾಮಾತ್ಯಾನ್ಯಾದೃಶಾಂಶ್ಚ ಕರಿಷ್ಯಸಿ||

ದುರ್ಲಭವಾಗಿರುವ ಈ ಶೀಲವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಯಾವ ರೀತಿಯ ಅಮಾತ್ಯರನ್ನು ನೀನು ಮಾಡಿಕೊಳ್ಳಬೇಕು

ಎನ್ನುವುದನ್ನೂ ಹೇಳುತ್ತೇನೆ.

12086007a ಚತುರೋ ಬ್ರಾಹ್ಮಣಾನ್ವೈದ್ಯಾನ್ಪ್ರಗಲ್ಭಾನ್ಸಾತ್ತ್ವಿಕಾನ್ ಶುಚೀನ್|
12086007c ತ್ರೀಂಶ್ಚ ಶೂದ್ರಾನ್ವಿನೀತಾಂಶ್ಚ ಶುಚೀನ್ಕರ್ಮಣಿ ಪೂರ್ವಕೇ||
12086008a ಅಷ್ಟಾಭಿಶ್ಚ ಗುಣೈರ್ಯುಕ್ತಂ ಸೂತಂ ಪೌರಾಣಿಕಂ ಚರೇತ್|

ಪ್ರತಿಭಾನ್ವಿತ, ಅಂತಃಕರಣ ಶುದ್ಧಿಯ, ಸ್ನಾತಕ ವಿದ್ವಾಂಸರಾದ ನಾಲ್ವರು ಬ್ರಾಹ್ಮಣರನ್ನೂ, ಬಲಿಷ್ಠ ಶಸ್ತ್ರಪಾಣಿಗಳಾದ ಎಂಟು ಕ್ಷತ್ರಿಯರನ್ನೂ, ಐಶ್ವರ್ಯಸಂಪನ್ನ ಇಪ್ಪತ್ತೊಂದು ವೈಶ್ಯರನ್ನೂ, ಪವಿತ್ರ ಆಚಾರ-ವಿಚಾರಗಳಿರುವ ವಿನಯಶೀಲ ಮೂವರು ಶೂದ್ರರನ್ನೂ, ಎಂಟು ಗುಣಗಳಿರುವ[231] ಪುರಾಣಜ್ಞ ಸೂತನನ್ನೂ ಸೇರಿಕೊಂಡು ಈ ಮೂವತ್ತೇಳು ಜನರಿರುವ ಮಹಾ ಮಂತ್ರಿಮಂಡಲವನ್ನು ರಾಜನು ರಚಿಸಬೇಕು.

12086008c ಪಂಚಾಶದ್ವರ್ಷವಯಸಂ ಪ್ರಗಲ್ಭಮನಸೂಯಕಮ್||
12086009a ಮತಿಸ್ಮೃತಿಸಮಾಯುಕ್ತಂ ವಿನೀತಂ ಸಮದರ್ಶನಮ್|
12086009c ಕಾರ್ಯೇ ವಿವದಮಾನಾನಾಂ ಶಕ್ತಮರ್ಥೇಷ್ವಲೋಲುಪಮ್||

---

[231] ಸೂತನಲ್ಲಿರಬೇಕಾದ ಎಂಟು ಗುಣಗಳು ಈ ರೀತಿಯಿವೆ: ಶುಶ್ರೂಷಾ (ಶುಶ್ರೂಷೆ ಮಾಡುವುದು), ಶ್ರವಣ (ಹೇಳಿದುದನ್ನು ಕೇಳುವುದು), ಗ್ರಹಣ (ಕೇಳಿದುದನ್ನು ಗ್ರಹಣ ಮಾಡುವುದು), ಧಾರಣ (ಗ್ರಹಣಮಾಡಿದುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು), ಊಹನ (ಕಾರ್ಯಗಳ ಪರಿಣಾಮವೇನಾಗಬಹುದೆಂದು ಊಹಿಸುವುದು), ಆಪೋಹನ (ಕಾರ್ಯವು ಸಿದ್ಧಿಯಾಗದಿದ್ದರೆ ಮುಂದೇನುಮಾಡಬೇಕೆಂದು ಯೋಚಿಸುವುದು), ವಿಜ್ಞಾನ (ವಿಜ್ಞಾನವನ್ನು ತಿಳಿದಿರುವುದು), ಮತ್ತು ತತ್ತ್ವಜ್ಞಾನ (ತತ್ತ್ವಜ್ಞಾನವನ್ನು ತಿಳಿದಿರುವುದು).

ಸೂತನ ವಯಸ್ಸು ಐವತ್ತಕ್ಕೆ ಕಡಿಮೆಯಿರಬಾರದು. ಅವನು ಪ್ರತಿಭಾವಂತನೂ, ಇನ್ನೊಬ್ಬರಲ್ಲಿ ದೋಷವನ್ನೆಣಿಸದವನೂ, ಶ್ರುತಿ-ಸ್ಮೃತಿಗಳನ್ನು ತಿಳಿದುಕೊಂಡಿರುವವನೂ, ವಿನೀತನೂ, ಸುಂದರನೂ ಆಗಿರಬೇಕು. ಕಾರ್ಯಸಂಬಂಧ ವಿವಾದವುಂಟಾದಾಗ ಎಲ್ಲ ಪಕ್ಷದವರನ್ನೂ ಸಮಾಧಾನಗೊಳಿಸಲು ಸಮರ್ಥನಾಗಿರಬೇಕು. ಲೋಭರಹಿತನಾಗಿರಬೇಕು.

12086010a ವಿವರ್ಜಿತಾನಾಂ ವ್ಯಸನೈಃ ಸುಘೋರೈಃ ಸಪ್ತಭಿರ್ಭೃಶಮ್|
12086010c ಅಷ್ಟಾನಾಂ ಮಂತ್ರಿಣಾಂ ಮಧ್ಯೇ ಮಂತ್ರಂ ರಾಜೋಪಧಾರಯೇತ್||

ಏಳು[232] ಅತ್ಯಂತ ಘೋರ ವ್ಯಸನಗಳಿಂದ ವಿವರ್ಜಿತರಾದ ಎಂಟು ಮಂತ್ರಿಗಳ ಮಧ್ಯೆ ರಾಜನು ಮಂತ್ರಾಲೋಚನೆ ಮಾಡಬೇಕು.

12086011a ತತಃ ಸಂಪ್ರೇಷಯೇದ್ರಾಷ್ಟ್ರೇ ರಾಷ್ಟ್ರಾಯಾಥ ಚ ದರ್ಶಯೇತ್|
12086011c ಅನೇನ ವ್ಯವಹಾರೇಣ ದ್ರಷ್ಟವ್ಯಾಸ್ತೇ ಪ್ರಜಾಃ ಸದಾ||

ಅನಂತರ ಈ ನಿರ್ಣಯವನ್ನು ರಾಷ್ಟ್ರದಲ್ಲಿ ಪ್ರಚರಿಸಬೇಕು. ಇದರ ಪ್ರಯೋಜನಗಳನ್ನು ರಾಷ್ಟ್ರದವರಿಗೆ ತೋರಿಸಬೇಕು. ಇಂತಹ ವ್ಯವಹಾರಗಳಿಂದ ಸದಾ ಪ್ರಜೆಗಳನ್ನು ನೋಡಿಕೊಳ್ಳುತ್ತಿರಬೇಕು.

---

[232] ಏಳು ವ್ಯಸನಗಳು ಈ ರೀತಿಯಿವೆ: ಮೃಗಾಯಾಕ್ಷಾಃ ಸ್ತ್ರೀಯಃ ಪಾನಂ| ಬೇಟೆಯಾಡುವುದು, ಜೂಜಾಡುವುದು, ಸದಾ ಸ್ತ್ರೀಯರ ಸಹವಾಸದಲ್ಲಿರುವುದು, ಸದಾ ಮದ್ಯಪಾನಪ್ರಿಯನಾಗಿರುವುದು, ಈ ನಾಲ್ಕು ಕಾಮಜನ್ಯ ವ್ಯಸನಗಳು. ದಂಡಪಾತನಂ ವಾಕ್ಪಾರುಷ್ಯಂ ಅರ್ಥದೂಷಣಂ| ಕಠೋರವಾಗಿ ಶಿಕ್ಷಿಸುವುದು, ಕಠೋರವಾಗಿ ಮಾತನಾಡುವುದು, ಅರ್ಥವನ್ನು ದೂಷಿಸುವುದು – ಈ ಮೂರು ಕ್ರೋಧಜನ್ಯ ವ್ಯಸನಗಳು.

12086012a ನ ಚಾಪಿ ಗೂಢಂ ಕಾರ್ಯಂ[233] ತೇ ಗ್ರಾಹ್ಯಂ ಕಾರ್ಯೋಪಘಾತಕಮ್|
12086012c ಕಾರ್ಯೇ ಖಲು ವಿಪನ್ನೇ ತ್ವಾಂ ಸೋಽಧರ್ಮಸ್ತಾಂಶ್ಚ ಪೀಡಯೇತ್||

ನೀನು ಯಾವುದೇ ರೀತಿಯ ಗೂಢ ಕಾರ್ಯಗಳನ್ನು ನಡೆಸಬಾರದು. ಅದು ಕಾರ್ಯಗಳನ್ನು ಘಾತಿಗೊಳಿಸುತ್ತದೆ. ಈ ಅಧರ್ಮದಿಂದ ಆ ಕಾರ್ಯವನ್ನು ಮಾಡಿದರವರಿಗೂ ಆಪತ್ತಾಗಬಹುದು.

12086013a ವಿದ್ರವೇಚ್ಚೈವ ರಾಷ್ಟ್ರಂ ತೇ ಶ್ಯೇನಾತ್ಪಕ್ಷಿಗಣಾ ಇವ|
12086013c ಪರಿಸ್ರವೇಚ್ಚ ಸತತಂ ನೌರ್ವಿಶೀರ್ಣೇವ ಸಾಗರೇ||

ಹೀಗೆ ಮಾಡಿದರೆ ಗಿಡುಗವನ್ನು ಕಂಡು ಹೆದರಿ ದೂರಹೋಗುವ ಹಕ್ಕಿಗಳಂತೆ ಜನರು ನಿನ್ನ ದೂರ ಹೋಗುತ್ತಾರೆ. ಸಾಗರದಲ್ಲಿ ಒಡೆದ ಹಡಗು ನೀರು ತುಂಬಿ ಸುತ್ತುತ್ತಿರುವಂತೆ ದಿಕ್ಕುತೋಚದೇ ಜನರು ಸುತ್ತಾಡುತ್ತಾರೆ.

12086014a ಪ್ರಜಾಃ ಪಾಲಯತೋಽಸಮ್ಯಗಧರ್ಮೇಣೇಹ ಭೂಪತೇಃ|
12086014c ಹಾರ್ದಂ ಭಯಂ ಸಂಭವತಿ ಸ್ವರ್ಗಶ್ಚಾಸ್ಯ ವಿರುಧ್ಯತೇ||

ಅತ್ಯಂತ ಅಧರ್ಮದಿಂದ ಪ್ರಜೆಗಳನ್ನು ಪಾಲಿಸುವ ಭೂಪತಿಯ ಹೃದಯವನ್ನು ಭಯವು ಆವರಿಸುತ್ತದೆ ಮತ್ತು ಅವನಿಗೆ ಪರಲೋಕವೂ ವಿಪರೀತವಾಗಿ ಪರಿಣಮಿಸುತ್ತದೆ.

12086015a ಅಥ ಯೋಽಧರ್ಮತಃ ಪಾತಿ ರಾಜಾಮಾತ್ಯೋಽಥ ವಾತ್ಮಜಃ|
12086015c ಧರ್ಮಾಸನೇ ನಿಯುಕ್ತಃ ಸನ್ಧರ್ಮಮೂಲಂ ನರರ್ಷಭ||
12086016a ಕಾರ್ಯೇಷ್ವಧಿಕೃತಾಃ ಸಮ್ಯಗಕುರ್ವಂತೋ ನೃಪಾನುಗಾಃ|

---

[233] ನ ಚಾಪಿ ಗೂಢಂ ದ್ರವ್ಯಂ ಎಂಬ ಪಾಠಾಂತರವಿದೆ.

12086016c ಆತ್ಮಾನಂ ಪುರತಃ ಕೃತ್ವಾ ಯಾಂತ್ಯಧಃ ಸಹಪಾರ್ಥಿವಾಃ॥

ನರರ್ಷಭ! ರಾಜನಾಗಲೀ, ಅಮಾತ್ಯನಾಗಲೀ, ರಾಜಪುತ್ರನಾಗಲೀ ಅಧರ್ಮದಿಂದ ರಾಜ್ಯಪಾಲನೆ ಮಾಡಿದರೆ ರಾಜಕಾರ್ಯದಲ್ಲಿ ನಿಯುಕ್ತ ರಾಜನ ಅನುಯಾಯಿಗಳು ತಮ್ಮ ಕಾರ್ಯಗಳನ್ನು ಸರಿಯಾಗಿ ಮಾಡದೇ ಇರುವುದರಿಂದ ತಮ್ಮನ್ನೇ ಮುಂದೆ ಮಾಡಿಕೊಂಡು ತಮ್ಮನ್ನು ನಿಯಮಿಸಿದ ರಾಜನೊಂದಿಗೆ ನರಕದಲ್ಲಿ ಬೀಳುತ್ತಾರೆ.

12086017a ಬಲಾತ್ಕೃತಾನಾಂ ಬಲಿಭಿಃ ಕೃಪಣಂ ಬಹು ಜಲ್ಪತಾಮ್।
12086017c ನಾಥೋ ವೈ ಭೂಮಿಪೋ ನಿತ್ಯಮನಾಥಾನಾಂ ನೃಣಾಂ ಭವೇತ್॥

ಬಲಿಷ್ಠರ ಬಲಾತ್ಕಾರಕ್ಕೊಳಗಾಗಿ ದೈನ್ಯಭಾವದಿಂದ ಕೂಗಿಕೊಳ್ಳುವ ಅನಾಥ ಜನರಿಗೆ ರಾಜನು ರಕ್ಷಣೆಯನ್ನು ನೀಡುವ ನಾಥನಾಗಬೇಕು.

12086018a ತತಃ ಸಾಕ್ಷಿಬಲಂ ಸಾಧು ದ್ವೈಧೇ ವಾದಕೃತಂ ಭವೇತ್।
12086018c ಅಸಾಕ್ಷಿಕಮನಾಥಂ ವಾ ಪರೀಕ್ಷ್ಯಂ ತದ್ವಿಶೇಷತಃ॥

ಎರಡು ಪಕ್ಷದವರು ವಾದಮಾಡುತ್ತಿರುವ ಸಂದರ್ಭದಲ್ಲಿ ಸಾಕ್ಷಿಬಲವೇ ಉತ್ತಮವಾದುದು. ಆದರೆ ಸಾಕ್ಷಿಗಳೇ ಇಲ್ಲದ ಅನಾಥರನ್ನು ವಿಶೇಷವಾಗಿ ಪರೀಕ್ಷಿಸಿ ನ್ಯಾಯವನ್ನು ದೊರಕಿಸಬೇಕು.

12086019a ಅಪರಾಧಾನುರೂಪಂ ಚ ದಂಡಂ ಪಾಪೇಷು ಪಾತಯೇತ್।
12086019c ಉದ್ವೇಜಯೇದ್ಧನೈರ್ಧನದಾದ್ಧನ್ದರಿದ್ರಾನ್ವಧಬಂಧನೈಃ॥

ಪಾಪಿಗಳಿಗೆ ಅಪರಾಧಕ್ಕೆ ಅನುಗುಣವದ ದಂಡವನ್ನು ನೀಡಬೇಕು. ಧನಿಕರನ್ನು ಧನದಂಡದ ಮೂಲಕ ಮತ್ತು ದರಿದ್ರರನ್ನು ವಧ-ಬಂಧನಗಳ ಮೂಲಕ ಶಿಕ್ಷಿಸಬೇಕು.

12086020a ವಿನಯ್ಯೈರಪಿ ದುರ್ವೃತ್ತಾನ್ಪ್ರಹಾರ್ಯೈರಪಿ ಪಾರ್ಥಿವಃ|
12086020c ಸಾಂತ್ವೇನೋಪಪ್ರದಾನೇನ ಶಿಷ್ಟಾಂಶ್ಚ ಪರಿಪಾಲಯೇತ್||

ದುರ್ವೃತ್ತರನ್ನು ಪ್ರಹಾರಗಳಿಂದಲಾದರೂ ಸನ್ಮಾರ್ಗಕ್ಕೆ ತರಬೇಕು. ಶಿಷ್ಟರನ್ನು ಸಾಂತ್ವವಚನಗಳಿಂದಲೂ ವಸ್ತುಗಳ ಪ್ರದಾನದಿಂದಲೂ ಪರಿಪಾಲಿಸಬೇಕು.

12086021a ರಾಜ್ಞೋ ವಧಂ ಚಿಕೀರ್ಷೇದ್ಯಸ್ತಸ್ಯ ಚಿತ್ರೋ ವಧೋ ಭವೇತ್|
12086021c ಅಜೀವಕಸ್ಯ ಸ್ತೇನಸ್ಯ ವರ್ಣಸಂಕರಕಸ್ಯ ಚ||

ರಾಜನನ್ನು ವಧಿಸಲು ಬಯಸಿದವನಿಗೆ, ಕೊಂದವನಿಗೆ, ಕಳ್ಳನಿಗೆ ಮತ್ತು ವರ್ಣಸಂಕರವನ್ನುಂಟುಮಾಡುವವನಿಗೆ ಚಿತ್ರಹಿಂಸೆಯನ್ನು ಕೊಟ್ಟು ವಧಿಸಬೇಕು.

12086022a ಸಮ್ಯಕ್ಪ್ರಣಯತೋ ದಂಡಂ ಭೂಮಿಪಸ್ಯ ವಿಶಾಂ ಪತೇ|
12086022c ಯುಕ್ತಸ್ಯ ವಾ ನಾಸ್ತ್ಯಧರ್ಮೋ ಧರ್ಮ ಏವೇಹ ಶಾಶ್ವತಃ||

ವಿಶಾಂಪತೇ! ಚೆನ್ನಾಗಿ ಪರಿಶೀಲಿಸಿ ದಂಡವನ್ನು ವಿಧಿಸುವ ಭೂಮಿಪನಿಗೆ ಮತ್ತು ಯುಕ್ತ ದಂಡವನ್ನು ವಿಧಿಸುವುದರಿಂದ ಅಧರ್ಮವು ಉಂಟಾಗುವುದಿಲ್ಲ. ಇದೇ ಸನಾತನ ಧರ್ಮ.

12086023a ಕಾಮಕಾರೇಣ ದಂಡಂ ತು ಯಃ ಕುರ್ಯಾದವಿಚಕ್ಷಣಃ|
12086023c ಸ ಇಹಾಕೀರ್ತಿಸಂಯುಕ್ತೋ ಮೃತೋ ನರಕಮಾಪ್ನುಯಾತ್||

ವಿಚಾರಿಸದೇ ಮನಬಂದಂತೆ ದಂದವನ್ನು ವಿಧಿಸುವವನು ಇಲ್ಲಿ ಅಕೀರ್ತಿಯನ್ನು ಪಡೆಯುವುದಲ್ಲದೇ ಮರಣಾನಂತರ ನರಕವನ್ನು ಪಡೆಯುತ್ತಾನೆ.

12086024a ನ ಪರಸ್ಯ ಶ್ರವಾದೇವ ಪರೇಷಾಂ ದಂಡಮರ್ಪಯೇತ್|
12086024c ಆಗಮಾನುಗಮಂ ಕೃತ್ವಾ ಬದ್ಧೀಯಾನ್ಮೋಕ್ಷಯೇತ ವಾ||

ಬೇರೆಯವರು ಆಡುವ ಮಾತನ್ನು ಕೇಳಿ ಒಬ್ಬನಿಗೆ ಶಿಕ್ಷೆಯನ್ನು ವಿಧಿಸಬಾರದು. ಸಾಕ್ಷಿ-ಪ್ರಮಾಣಾದಿಗಳಿಂದ ವಿಚಾರಮಾಡಿ ನಿಶ್ಚಯಿಸಿದನಂತರವೇ ಅಪರಾಧಿಯನ್ನು ಬಂಧಿಸಬೇಕು. ಇಲ್ಲವಾದರೆ ಅವನನ್ನು ಬಿಟ್ಟುಬಿಡಬೇಕು.

12086025a ನ ತು ಹನ್ಯಾನ್ನೃಪೋ ಜಾತು ದೂತಂ ಕಸ್ಯಾಂ ಚಿದಾಪದಿ|
12086025c ದೂತಸ್ಯ ಹಂತಾ ನಿರಯಮಾವಿಶೇತ್ಸಚಿವೈಃ ಸಹ||

ಯಾವುದೇ ಆಪತ್ತಿನ ಸಮಯದಲ್ಲಿಯೂ ನೃಪನು ದೂತನನ್ನು ಕೊಲ್ಲಬಾರದು. ದೂತನನ್ನು ಕೊಂದ ರಾಜನು ಸಚಿವರೊಂದಿಗೆ ನರಕಕ್ಕೆ ಹೋಗುತ್ತಾನೆ.

12086026a ಯಥೋಕ್ತವಾದಿನಂ ದೂತಂ ಕ್ಷತ್ರಧರ್ಮರತೋ ನೃಪಃ|
12086026c ಯೋ ಹನ್ಯಾತ್ಪಿತರಸ್ತಸ್ಯ ಭ್ರೂಣಹತ್ಯಾಮವಾಪ್ನುಯುಃ||

ಕ್ಷತ್ರಧರ್ಮರತ ನೃಪನು ಹೇಳಿಕಳುಹಿಸಿದುದನ್ನು ಹೇಳುವ ದೂತನನ್ನು ಕೊಂದರೆ ಅವನ ಪಿತೃಗಳು ಭ್ರೂಣಹತ್ಯಾಪಾಪವನ್ನು ಹೊಂದುತ್ತಾರೆ.

12086027a ಕುಲೀನಃ ಶೀಲಸಂಪನ್ನೋ ವಾಗ್ಮೀ ದಕ್ಷಃ ಪ್ರಿಯಂವದಃ|
12086027c ಯಥೋಕ್ತವಾದೀ ಸ್ಮೃತಿಮಾನ್ದೂತಃ ಸ್ಯಾತ್ಸಪ್ತಭಿರ್ಗುಣೈಃ||

ದೂತನಾದವನು ಈ ಏಳು ಗುಣಗಳನ್ನು ಹೊಂದಿರಬೇಕು: ಕುಲೀನನಾಗಿರಬೇಕು. ಶೀಲಸಂಪನ್ನನಾಗಿರಬೇಕು. ವಾಗ್ಮೀ, ದಕ್ಷ, ಪ್ರಿಯಂವದ ಮತ್ತು ಹೇಳಿಕಳುಹಿಸಿದ ಮಾತುಗಳನ್ನೇ

ಹೇಳುವವನಾಗಿರಬೇಕು.

12086028a ಏತೈರೇವ ಗುಣೈರ್ಯುಕ್ತಃ ಪ್ರತೀಹಾರೋಽಸ್ಯ ರಕ್ಷಿತಾ|
12086028c ಶಿರೋರಕ್ಷಶ್ಚ ಭವತಿ ಗುಣ್ಯೈರೇತೈಃ ಸಮನ್ವಿತಃ||

ರಾಜದ್ವಾರವನ್ನು ರಕ್ಷಿಸುವ ಪ್ರತೀಹಾರಿ-ದ್ವಾರಪಾಲಕನೂ ಮತ್ತು
ರಾಜನ ಶಿರೋರಕ್ಷಕ-ಅಂಗರಕ್ಷಕನೂ ಈ ಗುಣಗಳಿಂದ
ಕೂಡಿದವನಾಗಿರಬೇಕು.

12086029a ಧರ್ಮಾರ್ಥಶಾಸ್ತ್ರತತ್ತ್ವಜ್ಞಃ ಸಂಧಿವಿಗ್ರಹಕೋ ಭವೇತ್|
12086029c ಮತಿಮಾನ್ಧೃತಿಮಾನ್ಧೀಮಾನ್ರಹಸ್ಯವಿನಿಗೂಹಿತಾ||

ಧರ್ಮಾರ್ಥಶಾಸ್ತ್ರತತ್ತ್ವಜ್ಞ, ಬುದ್ಧಿವಂತ, ಧೀರ, ಲಜ್ಜಾಶೀಲ, ಮತ್ತು
ರಹಸ್ಯವನ್ನು ಗೋಪ್ಯವಾಗಿಡುವವನು ಸಂಧಿವಿಗ್ರಹಕನಾಗಬೇಕು.

12086030a ಕುಲೀನಃ ಸತ್ಯಸಂಪನ್ನಃ ಶಕ್ತೋಽಮಾತ್ಯಃ ಪ್ರಶಂಸಿತಃ|
12086030c ಏತೈರೇವ ಗುಣೈರ್ಯುಕ್ತಸ್ತಥಾ ಸೇನಾಪತಿರ್ಭವೇತ್||

ಕುಲೀನ, ಸತ್ಯಸಂಪನ್ನ, ಶಕ್ತನು ಶ್ರೇಷ್ಠಮಂತ್ರಿಯೆಂದು
ಪರಿಗಣಿಸಲ್ಪಡುತ್ತಾನೆ. ಇವೇ ಗುಣಗಳಿಂದ ಯುಕ್ತನಾದವನು
ಸೇನಾಪತಿಯಾಗಬೇಕು.

12086031a ವ್ಯೂಹಯಂತ್ರಾಯುಧೀಯಾನಾಂ ತತ್ತ್ವಜ್ಞೋ ವಿಕ್ರಮಾನ್ವಿತಃ|
12086031c ವರ್ಷಶೀತೋಷ್ಣವಾತಾನಾಂ ಸಹಿಷ್ಣುಃ ಪರರಂಧ್ರವಿತ್||

ಸೇನಾಪತಿಯಾದವನು ವ್ಯೂಹ-ಯಂತ್ರ-ಆಯುಧಗಳ
ತತ್ತ್ವಜ್ಞನಾಗಿರಬೇಕು. ವಿಕ್ರಮಾನ್ವಿತನಾಗಿರಬೇಕು. ಮಳೆ-ಗಾಳಿ-ಛಳಿ-
ಬಿಸಿಲುಗಳನ್ನು ಸಹಿಸಿಕೊಳ್ಳುವವನಾಗಿರಬೇಕು. ಶತ್ರುಗಳ

ನ್ಯೂನತೆಗಳನ್ನು ತಿಳಿದುಕೊಂಡಿರುವವನಾಗಿರಬೇಕು.

12086032a ವಿಶ್ವಾಸಯೇತ್ಪರಾಂಶ್ಚೈವ ವಿಶ್ವಸೇನ್ನ ತು ಕಸ್ಯ ಚಿತ್|
12086032c ಪುತ್ರೇಷ್ವಪಿ ಹಿ ರಾಜೇಂದ್ರ ವಿಶ್ವಾಸೋ ನ ಪ್ರಶಸ್ಯತೇ||

ಶತ್ರುಗಳೂ ನಂಬುವ ರೀತಿಯಲ್ಲಿ ರಾಜನು
ವ್ಯವಹಾರಗಳನ್ನಿಟ್ಟುಕೊಂಡಿರಬೇಕು. ಆದರೆ ತಾನು ಮಾತ್ರ
ಯಾರಲ್ಲಿಯೂ ವಿಶ್ವಾಸವನ್ನಿಟ್ಟುಕೊಂಡಿರಬಾರದು. ರಾಜೇಂದ್ರ!
ಪುತ್ರರಲ್ಲಿಯೂ ವಿಶ್ವಾಸವನ್ನಿಟ್ಟುಕೊಂಡಿರುವುದನ್ನು ಪ್ರಶಂಸಿಸುವುದಿಲ್ಲ.

12086033a ಏತಚ್ಚಾಸ್ತ್ರಾರ್ಥತತ್ತ್ವಂ ತು ತವಾಖ್ಯಾತಂ ಮಯಾನಘ|
12086033c ಅವಿಶ್ವಾಸೋ ನರೇಂದ್ರಾಣಾಂ ಗುಹ್ಯಂ ಪರಮಮುಚ್ಯತೇ||

ಅನಘ! ಈ ಶಾಸ್ತ್ರಾರ್ಥತತ್ತ್ವವನ್ನು ನಿನಗೆ ಹೇಳಿದ್ದೇನೆ. ಯಾರಮೇಲೂ
ವಿಶ್ವಾಸವನ್ನಿಡದಿರುವುದೇ ನರೇಂದ್ರರ ಪರಮ ಗುಟ್ಟೆಂದು
ಹೇಳುತ್ತಾರೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಅಮಾತ್ಯವಿಭಾಗೇ ಷಡಶೀತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಅಮಾತ್ಯವಿಭಾಗ ಎನ್ನುವ ಎಂಭತ್ತಾರನೇ ಅಧ್ಯಾಯವು.

೮೭

ದುರ್ಗಪರೀಕ್ಷಾ

ರಾಜನಿಗೆ ನಿವಾಸಯೋಗ್ಯ ನಗರ-ದುರ್ಗಗಳ ವರ್ಣನೆ (1-33).

12087001 ಯುಧಿಷ್ಠಿರ ಉವಾಚ|
12087001a ಕಥಂವಿಧಂ ಪುರಂ ರಾಜಾ ಸ್ವಯಮಾವಸ್ತುಮರ್ಹತಿ|
12087001c ಕೃತಂ ವಾ ಕಾರಯಿತ್ವಾ ವಾ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಸ್ವಯಂ ರಾಜನು ಯಾವ ವಿಧದ ಪುರದಲ್ಲಿ ವಾಸಿಸಬೇಕು? ಹಿಂದೆ ನಿರ್ಮಿತವಾಗಿದ್ದ ಪುರದಲ್ಲಿ ವಾಸಿಸಬೇಕೇ ಅಥವಾ ಹೊಸತಾಗಿ ನಿರ್ಮಿಸಿದ ಪುರದಲ್ಲಿ ವಾಸಿಸಬೇಕೇ? ಅದನ್ನು ನನಗೆ ಹೇಳು."

12087002 ಭೀಷ್ಮ ಉವಾಚ|
12087002a ಯತ್ರ ಕೌಂತೇಯ ವಸ್ತವ್ಯಂ ಸಪುತ್ರಭ್ರಾತೃಬಂಧುನಾ|
12087002c ನ್ಯಾಯ್ಯಂ ತತ್ರ ಪರಿಪ್ರಷ್ಟುಂ ಗುಪ್ತಿಂ ವೃತ್ತಿಂ ಚ ಭಾರತ||

ಭೀಷ್ಮನು ಹೇಳಿದನು: "ಕೌಂತೇಯ! ಭಾರತ! ಪುತ್ರ-ಭ್ರಾತೃ-ಬಂಧುಗಳೊಡನೆ ರಾಜನು ಎಲ್ಲಿ ವಾಸಿಸಬೇಕು ಎಂದು, ಮತ್ತು ಅದರ ರಕ್ಷಣೆ-ವ್ಯವಸ್ಥೆಗಳ ಕುರಿತು ನೀನು ಕೇಳುವ ಪ್ರಶ್ನೆಯು ನ್ಯಾಯಯುಕ್ತವಾಗಿಯೇ ಇದೆ.

12087003a ತಸ್ಮಾತ್ತೇ ವರ್ತಯಿಷ್ಯಾಮಿ ದುರ್ಗಕರ್ಮ ವಿಶೇಷತಃ|
12087003c ಶ್ರುತ್ವಾ ತಥಾ ವಿಧಾತವ್ಯಮನುಷ್ಠೇಯಂ ಚ ಯತ್ನತಃ||

ಆದುದರಿಂದ ನಿನಗೆ ವಿಶೇಷವಾಗಿ ದುರ್ಗನಿರ್ಮಾಣದ ವಿಷಯವನ್ನು ಹೇಳುತ್ತೇನೆ. ಅದನ್ನು ಕೇಳಿ ಪ್ರಯತ್ನಪೂರ್ವಕವಾಗಿ ಹಾಗೆಯೇ ಮಾಡಬೇಕು.

12087004a ಷಡ್ವಿಧಂ ದುರ್ಗಮಾಸ್ಥಾಯ ಪುರಾಣ್ಯಥ ನಿವೇಶಯೇತ್|
12087004c ಸರ್ವಸಂಪತ್ಪ್ರಧಾನಂ ಯದ್ಬಾಹುಲ್ಯಂ ವಾಪಿ ಸಂಭವೇತ್||

ಎಲ್ಲಿ ಸರ್ವಸಂಪತ್ತುಗಳೂ ದೊರಕುವವೋ ಮತ್ತು ಯಾವುದು ವಿಸ್ತಾರವಾಗಿರುವುದೋ ಅಲ್ಲಿ ಆರುವಿಧದ ದುರ್ಗಗಳನ್ನು ಆಶ್ರಯಿಸಿ ಪುರವನ್ನು ನಿರ್ಮಿಸಬೇಕು.

12087005a ಧನ್ವದುರ್ಗಂ ಮಹೀದುರ್ಗಂ ಗಿರಿದುರ್ಗಂ ತಥೈವ ಚ|
12087005c ಮನುಷ್ಯದುರ್ಗಮಬ್ದುರ್ಗಂ ವನದುರ್ಗಂ ಚ ತಾನಿ ಷಟ್||

ಧನ್ವದುರ್ಗ[234], ಮಹೀದುರ್ಗ[235], ಗಿರುದುರ್ಗ[236], ಮನುಷ್ಯದುರ್ಗ[237], ಜಲದುರ್ಗ[238] ಮತ್ತು ವನದುರ್ಗ[239] ಇವೇ ಆ ಆರು ದುರ್ಗಗಳು.

12087006a ಯತ್ಪುರಂ ದುರ್ಗಸಂಪನ್ನಂ ಧಾನ್ಯಾಯುಧಸಮನ್ವಿತಮ್|
12087006c ದೃಢಪ್ರಾಕಾರಪರಿಖಂ ಹಸ್ತ್ಯಶ್ವರಥಸಂಕುಲಮ್||
12087007a ವಿದ್ವಾಂಸಃ ಶಿಲ್ಪಿನೋ ಯತ್ರ ನಿಚಯಾಶ್ಚ ಸುಸಂಚಿತಾಃ|
12087007c ಧಾರ್ಮಿಕಶ್ಚ ಜನೋ ಯತ್ರ ದಾಕ್ಷ್ಯಮುತ್ತಮಮಾಸ್ಥಿತಃ||
12087008a ಊರ್ಜಸ್ವಿನರನಾಗಾಶ್ವಂ ಚತ್ವರಾಪಣಶೋಭಿತಮ್|
12087008c ಪ್ರಸಿದ್ಧವ್ಯವಹಾರಂ ಚ ಪ್ರಶಾಂತಮಕುತೋಭಯಮ್||
12087009a ಸುಪ್ರಭಂ ಸಾನುನಾದಂ ಚ ಸುಪ್ರಶಸ್ತನಿವೇಶನಮ್|
12087009c ಶೂರಾಢ್ಯಜನಸಂಪನ್ನಂ ಬ್ರಹ್ಮಘೋಷಾನುನಾದಿತಮ್||

---

234 ನಾಲ್ಕು ದಿಕ್ಕುಗಳಲ್ಲಿಯೂ ಐದು ಯೋಜನಗಳ ದೂರ ಮರುಭೂಮಿಯಿಂದ ಆವೃತವಾಗಿರುವ ಪ್ರದೇಶ.

235 ಸುತ್ತಲೂ ಮನುಷ್ಯನಿರ್ಮಿತ ಕೋಟೆಗಳಿಂದ ಆವೃತವಾಗಿರುವ ಪ್ರದೇಶ.

236 ಪರ್ವತಗಳಿಂದ ಸುತ್ತುವರೆಯಲ್ಪಟ್ಟಿರುವ ಪ್ರದೇಶ.

237 ಸುತ್ತಲೂ ಸೈನಿಕರಿಂದ ರಕ್ಷಿಸಲ್ಪಟ್ಟಿರುವ ಪ್ರದೇಶ.

238 ಸುತ್ತಲೂ ನೀರಿನಿಂದ ಆವೃತವಾಗಿರುವ ಪ್ರದೇಶ.

239 ಸುತ್ತಲೂ ಅರಣ್ಯದಿಂದ ಆವೃತವಾಗಿರುವ ಪ್ರದೇಶ.

12087010a ಸಮಾಜೋತ್ಸವಸಂಪನ್ನಂ ಸದಾಪೂಜಿತದೈವತಮ್|
12087010c ವಶ್ಯಾಮಾತ್ಯಬಲೋ ರಾಜಾ ತತ್ಪುರಂ ಸ್ವಯಮಾವಸೇತ್||

ಇಂತಹ ದುರ್ಗಗಳಿರುವ, ಧಾನ್ಯ-ಆಯುಧಗಳಿಂದ ಸಮೃದ್ಧವಾಗಿರುವ, ದೃಢ ಪ್ರಾಕಾರ-ಕಂದಕಗಳಿರುವ, ಆನೆ-ಕುದುರೆ-ರಥಗಳಿಂದ ಕೂಡಿರುವ, ವಿದ್ವಾಂಸರೂ ಶಿಲ್ಪಿಗಳೂ ವಾಸಿಸುವ, ಆವಶ್ಯಕ ವಸ್ತುಗಳಿಂದ ತುಂಬಿರುವ, ಬೊಕ್ಕಸವು ತುಂಬಿರುವ, ಸಾಮರ್ಥ್ಯ ಧಾರ್ಮಿಕ ಜನರಿರುವ, ಚೌಕಗಳು ಅಂಗಡಿಗಳಿಂದ ಶೋಭಿಸುವ, ಧರ್ಮಮೂಲ ಪ್ರಸಿದ್ಧ ನ್ಯಾಯಾಲಯವಿರುವ, ಪ್ರಶಾಂತ ನಿರ್ಭಯ ವಾತಾವರಣವಿರುವ, ಬೆಳಕು ಚೆನ್ನಾಗಿರುವ, ಸಂಗೀತವಾದ್ಯಗಳ ದಧವನಿಯಿರುವ, ಪ್ರತಿಯೊಂದು ಮನೆಯೂ ಪ್ರಶಸ್ತವಾಗಿಯೂ ಸುಂದರವಾಗಿಯೂ ಇರುವ, ಶೂರರೂ ಧನಿಕರೂ ವಾಸಿಸುತ್ತಿರುವ, ಸರ್ವಕಾಲಗಳಲ್ಲಿಯೂ ವೇದಮಂತ್ರಗಳಿಂದ ನಿನಾದಿತವಾಗಿರುವ, ಸತತ ಸಮಾಜೋತ್ಸವ-ದೇವತಾಪೂಜೆಗಳು ನಡೆಯುವ, ಸುಂದರ ನಗರವನ್ನು ತನ್ನ ವಶವರ್ತಿ ಮಂತ್ರಿ-ಬಲ ಸಮೇತನಾಗಿ ರಾಜನು ಪ್ರವೇಶಿಸಬೇಕು.

12087011a ತತ್ರ ಕೋಶಂ ಬಲಂ ಮಿತ್ರಂ ವ್ಯವಹಾರಂ ಚ ವರ್ಧಯೇತ್|
12087011c ಪುರೇ ಜನಪದೇ ಚೈವ ಸರ್ವದೋಷಾನ್ನಿವರ್ತಯೇತ್||

ಅಲ್ಲಿ ಕೋಶ, ಬಲ, ಮಿತ್ರ, ಮತ್ತು ವ್ಯವಹಾರಗಳನ್ನು ವೃದ್ಧಿಗೊಳಿಸಬೇಕು. ನಗರ ಮತ್ತು ಗ್ರಾಮೀಣಪ್ರದೇಶಗಳಲ್ಲಿನ ಸರ್ವ ದೋಷಗಳನ್ನೂ ನಿವಾರಿಸಬೇಕು.

12087012a ಭಾಂಡಾಗಾರಾಯುಧಾಗಾರಂ ಪ್ರಯತ್ನೇನಾಭಿವರ್ಧಯೇತ್|

12087012c ನಿಚಯಾನ್ವರ್ಧಯೇತ್ಸರ್ವಾಂಸ್ತಥಾ ಯಂತ್ರಗದಾಗದಾನ್॥

ಭಾಂಡಾಗಾರಗಳನ್ನೂ ಆಯುಧಾಗಾರಗಳನ್ನೂ
ಪ್ರಯತ್ನಪೂರ್ವಕವಾಗಿ ಹೆಚ್ಚಿಸಬೇಕು. ಎಲ್ಲವುಗಳ ಸಂಗ್ರಹವನ್ನೂ
ಹೆಚ್ಚಿಸಬೇಕು. ಆಯುಧಗಳನ್ನು ತಯಾರಿಸುವ ಯಂತ್ರಗಳ
ಕಾರ್ಯಾಗಾರಗಳನ್ನೂ ಹೆಚ್ಚಿಸಬೇಕು.

12087013a ಕಾಷ್ಠಲೋಹತುಷಾಂಗಾರದಾರುಶೃಂಗಾಸ್ಥಿವ್ಯೈಣವಾನ್|
12087013c ಮಜ್ಜಾಸ್ನೇಹವಸಾಕ್ಷೌದ್ರಮೌಷಧಗ್ರಾಮಮೇವ ಚ॥
12087014a ಶಣಂ ಸರ್ಜರಸಂ ಧಾನ್ಯಮಾಯುಧಾನಿ ಶರಾಂಸ್ತಥಾ|
12087014c ಚರ್ಮ ಸ್ನಾಯು ತಥಾ ವೇತ್ರಂ ಮುಂಜಬಲ್ಬಜಧನ್ವನಾನ್॥

ರಾಜನು ಸಂಗ್ರಹಿಸಿಟ್ಟುಕೊಳ್ಳಬೇಕಾದ ವಸ್ತುಗಳು – ಕಟ್ಟಿಗೆ, ಚಿನ್ನ-ಬೆಳ್ಳಿ
ಮೊದಲಾದ ವಿವಿಧ ಲೋಹಗಳು, ಧಾನ್ಯದ ಹೊಟ್ಟು, ಇದ್ದಿಲು,
ಮರದ ದಿಮ್ಮಿಗಳು, ಪ್ರಾಣಿಗಳ ಕೊಂಬುಗಳು, ಮೂಳೆಗಳು,
ಬಿದಿರುಗಳು, ಮೇಧಸ್ಸು, ಎಣ್ಣೆ, ಕೊಬ್ಬು, ಜೇನುತುಪ್ಪ, ಔಷಧಗಳ
ದಾಸ್ತಾನು, ಸೆಣಬು, ರಾಳ, ಧಾನ್ಯಗಳು, ಅಸ್ತ್ರ-ಶಸ್ತ್ರಗಳು, ಬಾಣಗಳು,
ಪ್ರಾಣಿಗಳ ಚರ್ಮಗಳು, ನರಗಳು, ಬೆತ್ತಗಳು, ಹಗ್ಗಕ್ಕಾಗಿ
ಉಪಯೋಗಿಸುವ ಮುಂಜೀಹುಲ್ಲು ಮತ್ತು ಕರಡಿ ಹುಲ್ಲು.

12087015a ಆಶಯಾಶ್ಚೋದಪಾನಾಶ್ಚ ಪ್ರಭೂತಸಲಿಲಾ ವರಾಃ|
12087015c ನಿರೋದ್ಧವ್ಯಾಃ ಸದಾ ರಾಜ್ಞಾ ಕ್ಷೀರಿಣಶ್ಚ ಮಹೀರುಹಾಃ॥

ಇವುಗಳು ನಾಶವಾಗದಂತೆ ಸದಾ ರಾಜನು ನೋಡಿಕೊಳ್ಳಬೇಕು –
ಸರೋವರಗಳು, ಬಾವಿಗಳು, ದೊಡ್ಡ ಜಲಾಶಯಗಳು, ಹಾಲಿನಂತೆ
ವಿವಿಧ ರಸಗಳನ್ನು ನೀಡುವ ವೃಕ್ಷಗಳು.

12087016a ಸತ್ಕೃತಾಶ್ಚ ಪ್ರಯತ್ನೇನ ಆಚಾರ್ಯರ್ತ್ವಿಕ್ಪುರೋಹಿತಾಃ|
12087016c ಮಹೇಷ್ವಾಸಾಃ ಸ್ಥಪತಯಃ ಸಾಂವತ್ಸರಚಿಕಿತ್ಸಕಾಃ||

ಇವರನ್ನು ರಾಜನು ಪ್ರಯತ್ನಪೂರ್ವಕವಾಗಿ ಸತ್ಕರಿಸಬೇಕು: ಆಚಾರ್ಯರು, ಋತ್ವಿಜರು, ಪುರೋಹಿತರು, ಮಹಾಧನುರ್ಧಾರಿಗಳು, ಮನೆಗಳನ್ನು ಕಟ್ಟುವ ಶಿಲ್ಪಿಗಳು, ವರ್ಷಹದ್ದ ಫಲಗಳನ್ನು ಸಿದ್ಧಗೊಳಿಸುವ ಜೋತಿಷ್ಯರು ಮತ್ತು ವೈದ್ಯರು.

12087017a ಪ್ರಾಜ್ಞಾ ಮೇಧಾವಿನೋ ದಾಂತಾ ದಕ್ಷಾಃ ಶೂರಾ ಬಹುಶ್ರುತಾಃ|
12087017c ಕುಲೀನಾಃ ಸತ್ತ್ವಸಂಪನ್ನಾ ಯುಕ್ತಾಃ ಸರ್ವೇಷು ಕರ್ಮಸು||

ಇವರನ್ನು ರಾಜನು ತನ್ನ ಸಕಲ ಕಾರ್ಯಗಳಲ್ಲಿ ನಿಯೋಜಿಸಿಕೊಳ್ಳಬೇಕು: ಪ್ರಾಜ್ಞರು, ಮೇಧಾವಿಗಳು, ಜಿತೇಂದ್ರಿಯರು, ಕಾರ್ಯದಕ್ಷರು, ಶೂರರು, ಬಹುಶ್ರುತರು, ಸತ್ಕುಲಪ್ರಸೂತರು, ಸತ್ಪುರುಷರು, ಮತ್ತು ಬಲಸಂಪನ್ನರು.

12087018a ಪೂಜಯೇದ್ಧಾರ್ಮಿಕಾನ್ರಾಜಾ ನಿಗೃಹ್ಣೀಯಾದಧಾರ್ಮಿಕಾನ್|
12087018c ನಿಯುಂಜ್ಯಾಚ್ಚ ಪ್ರಯತ್ನೇನ ಸರ್ವವರ್ಣಾನ್ಸ್ವಕರ್ಮಸು||

ರಾಜನು ಧಾರ್ಮಿಕರನ್ನು ಸತ್ಕರಿಸಬೇಕು, ಅಧಾರ್ಮಿಕರನ್ನು ನಿಗ್ರಹಿಸಬೇಕು. ಪ್ರಯತ್ನಪೂರ್ವಕವಾಗಿ ಎಲ್ಲ ವರ್ಣದವರನ್ನೂ ಅವರವರ ಕರ್ಮಗಳಲ್ಲಿ ನಿಯೋಜಿಸಬೇಕು.

12087019a ಬಾಹ್ಯಮಾಭ್ಯಂತರಂ ಚೈವ ಪೌರಜಾನಪದಂ ಜನಮ್|
12087019c ಚಾರೈಃ ಸುವಿದಿತಂ ಕೃತ್ವಾ ತತಃ ಕರ್ಮ ಪ್ರಯೋಜಯೇತ್||

ಗುಪ್ತಚರರ ಮೂಲಕ ನಗರ-ಗ್ರಾಮಗಳ ಒಳಗೆ ಮತ್ತು ಹೊರಗೆ

ನಡುಯುವ ವಿದ್ಯಮಾನಗಳನ್ನು ಚೆನ್ನಾಗಿ ತಿಳಿದುಕೊಂಡು ಪುರ-
ಗ್ರಾಮೀಣ ಜನರಿಗೆ ಪ್ರಯೋಜನವಾಗುವ ಕಾರ್ಯಗಳನ್ನು
ಕೈಗೊಳ್ಳಬೇಕು.

12087020a ಚಾರಾನ್ಮಂತ್ರಂ ಚ ಕೋಶಂ ಚ ಮಂತ್ರಂ[240] ಚೈವ
ವಿಶೇಷತಃ|
12087020c ಅನುತಿಷ್ಠೇತ್ಸ್ವಯಂ ರಾಜಾ ಸರ್ವಂ ಹ್ಯತ್ರ ಪ್ರತಿಷ್ಠಿತಮ್‌||

ಗುಪ್ತಚರರ ಭೇಟಿ, ಮಂತ್ರಾಲೋಚನೆ, ಮತ್ತು ಕೋಶದ ವಿಷಯ
ಇವುಗಳನ್ನು ವಿಶೇಷವಾಗಿ ಸ್ವಯಂ ರಾಜನೇ ಮಾಡಬೇಕು. ಏಕೆಂದರೆ
ಎಲ್ಲವೂ ಇವುಗಳನ್ನು ಆಧರಿಸಿವೆ.

12087021a ಉದಾಸೀನಾರಿಮಿತ್ರಾಣಾಂ ಸರ್ವಮೇವ ಚಿಕೀರ್ಷಿತಮ್‌|
12087021c ಪುರೇ ಜನಪದೇ ಚೈವ ಜ್ಞಾತವ್ಯಂ ಚಾರಚಕ್ಷುಷಾ‌||

ನಗರ ಮತ್ತು ಗ್ರಾಮಗಳಲ್ಲಿ ತಟಸ್ಥರು, ಮಿತ್ರರು ಮತ್ತು ಶತ್ರುಗಳು
ಮಾಡುವ ಎಲ್ಲವನ್ನೂ ಚಾರರ ಮೂಲಕ ರಾಜನು ತಿಳಿದುಕೊಳ್ಳಬೇಕು.

12087022a ತತಸ್ತಥಾ ವಿಧಾತವ್ಯಂ ಸರ್ವಮೇವಾಪ್ರಮಾದತಃ|
12087022c ಭಕ್ತಾನ್ಪ್ರಜಯತಾ ನಿತ್ಯಂ ದ್ವಿಷತಶ್ಚ ನಿಗೃಹ್ಣತಾ‌||

ಅನಂತರ ಎಲ್ಲವನ್ನೂ ಜಾಗರೂಕತೆಯಿಂದ ನಡೆಸಬೇಕು. ನಿತ್ಯವೂ
ಭಕ್ತರನ್ನು ಸತ್ಕರಿಸಬೇಕು ಮತ್ತು ಶತ್ರುಗಳನ್ನು ನಿಗ್ರಹಿಸಬೇಕು.

12087023a ಯಷ್ಟವ್ಯಂ ಕ್ರತುಭಿರ್ನಿತ್ಯಂ ದಾತವ್ಯಂ ಚಾಪ್ಯಪೀಡಯಾ|
12087023c ಪ್ರಜಾನಾಂ ರಕ್ಷಣಂ ಕಾರ್ಯಂ ನ ಕಾರ್ಯಂ ಕರ್ಮ

---

[240] ದಂಡಂ ಎಂಬ ಪಾಠಾಂತರವಿದೆ.

ಗರ್ಹಿತಮ್[241]॥

ನಿತ್ಯವೂ ಕ್ರತುಗಳನ್ನು ನಡೆಸಬೇಕು. ಇತರರಿಗೆ
ಪೀಡೆಯನ್ನುಂಟುಮಾಡದೇ ದಾನಮಾಡಬೇಕು. ಪ್ರಜೆಗಳ ರಕ್ಷಣೆಯನ್ನು
ಮಾಡಬೇಕು. ನಿಂದನೀಯ ಕಾರ್ಯಗಳನ್ನು ಮಾಡಬಾರದು.

12087024a ಕೃಪಣಾನಾಥವೃದ್ಧಾನಾಂ ವಿಧವಾನಾಂ ಚ ಯೋಷಿತಾಮ್|
12087024c ಯೋಗಕ್ಷೇಮಂ ಚ ವೃತ್ತಿಂ ಚ ನಿತ್ಯಮೇವ ಪ್ರಕಲ್ಪಯೇತ್॥

ನಿತ್ಯವೂ ದೀನರ, ಅನಾಥರ, ವೃದ್ಧರ ಮತ್ತು ವಿಧವೆಯರ
ಯೋಗಕ್ಷೇಮಗಳನ್ನು ನೋಡಿಕೊಳ್ಳುತ್ತಾ ಅವರಿಗೆ ವೃತ್ತಿಗಳನ್ನು
ಕಲ್ಪಿಸಿಕೊಡಬೇಕು.

12087025a ಆಶ್ರಮೇಷು ಯಥಾಕಾಲಂ ಚೇಲಭಾಜನಭೋಜನಮ್|
12087025c ಸದ್ಯೈವೋಪಹರೇದ್ರಾಜಾ ಸತ್ಕೃತ್ಯಾನವಮನ್ಯ ಚ॥

ಆಶ್ರಮಗಳಿಗೆ ಯಥಾಕಾಲಕ್ಕೆ ತಕ್ಕುದಾಗಿ ವಸ್ತ್ರಗಳನ್ನೂ, ಪಾತ್ರೆಗಳನ್ನೂ,
ಭೋಜನಕ್ಕೆ ಬೇಕಾದ ಆಹಾರಪದಾರ್ಥಗಳನ್ನೂ
ಕಳುಹಿಸಿಕೊಡುತ್ತಿರಬೇಕು. ರಾಜನು ಸದ್ಯೆವ ಅವರನ್ನು ಸತ್ಕರಿಸಿ
ಆದರಿಸಬೇಕು.

12087026a ಆತ್ಮಾನಂ ಸರ್ವಕಾರ್ಯಾಣಿ ತಾಪಸೇ ರಾಜ್ಯಮೇವ ಚ|
12087026c ನಿವೇದಯೇತ್ಪ್ರಯತ್ನೇನ ತಿಷ್ಠೇತ್ಪ್ರಹ್ವಶ್ಚ ಸರ್ವದಾ॥

ಪ್ರಯತ್ನಪಟ್ಟು ತಪಸ್ವಿಗಳಿಗೆ ತನ್ನ ಮತ್ತು ರಾಜ್ಯದ ಸರ್ವ ಕಾರ್ಯಗಳ
ಕುರಿತು ನಿವೇದಿಸಬೇಕು. ಸರ್ವದಾ ಅವರೊಂದಿಗೆ ವಿನಮ್ರನಾಗಿ

---

[241] ನ ಕಾರ್ಯಂ ಧರ್ಮಬಾಧಕಮ್| ಎಂಬ ಪಾಠಾಂತರವಿದೆ.

ನಡೆದುಕೊಳ್ಳಬೇಕು.

12087027a ಸರ್ವಾರ್ಥತ್ಯಾಗಿನಂ ರಾಜಾ ಕುಲೇ ಜಾತಂ ಬಹುಶ್ರುತಮ್|
12087027c ಪೂಜಯೇತ್ತಾದೃಶಂ ದೃಷ್ಟ್ವಾ ಶಯನಾಸನಭೋಜನೈಃ||

ಸರ್ವಾರ್ಥತ್ಯಾಗಿಗಳನ್ನೂ, ಸತ್ಕುಲಪ್ರಸೂತರನ್ನೂ, ಬಹುಶ್ರುತರನ್ನೂ ರಾಜನು ಕಂಡೊಡನೆಯೇ ಕರೆತಂದು ಶಯನ, ಆಸನ, ಭೋಜನಾದಿಗಳಿಂದ ಸತ್ಕರಿಸಬೇಕು.

12087028a ತಸ್ಮಿನ್ಕರ್ವೀತ ವಿಶ್ವಾಸಂ ರಾಜಾ ಕಸ್ಯಾಂ ಚಿದಾಪದಿ|
12087028c ತಾಪಸೇಷು ಹಿ ವಿಶ್ವಾಸಮಪಿ ಕುರ್ವಂತಿ ದಸ್ಯವಃ||

ಯಾವುದಾದರೂ ಆಪತ್ತು ಬಂದಾಗ ರಾಜನು ತಪಸ್ವಿಗಳಲ್ಲಿ ವಿಶ್ವಾಸವನ್ನಿಡಬೇಕು. ಏಕೆಂದರೆ ದಸ್ಯುಗಳೂ ಅವರಲ್ಲಿ ವಿಶ್ವಾಸವನ್ನಿಡುತ್ತಾರೆ.

12087029a ತಸ್ಮಿನ್ನಿಧೀನಾದಧೀತ ಪ್ರಜ್ಞಾಂ ಪರ್ಯಾದದೀತ ಚ|
12087029c ನ ಚಾಪ್ಯಭೀಕ್ಷ್ಣಂ ಸೇವೇತ ಭೃಶಂ ವಾ ಪ್ರತಿಪೂಜಯೇತ್||

ಆಪತ್ಕಾಲದಲ್ಲಿ ತನ್ನ ಐಶ್ವರ್ಯವನ್ನು ತಪಸ್ವಿಯ ಬಳಿ ಇಡಬಹುದು. ಅವನ ಸಲಹೆಗಳನ್ನು ಪಡೆದುಕೊಳ್ಳಬಹುದು. ಆದರೆ ಪದೇ ಪದೇ ಅವನ ಬಳಿ ಹೋಗಬಾರದು. ಅವನನ್ನು ಹೆಚ್ಚಾಗಿ ಸತ್ಕರಿಸಲೂ ಬಾರದು.

12087030a ಅನ್ಯಃ ಕಾರ್ಯಃ ಸ್ವರಾಷ್ಟ್ರೇಷು ಪರರಾಷ್ಟ್ರೇಷು ಚಾಪರಃ|
12087030c ಅಟವೀಷ್ವಪರಃ ಕಾರ್ಯಃ ಸಾಮಂತನಗರೇಷು ಚ||

ಸ್ವರಾಷ್ಟ್ರದಲ್ಲಿರುವ ಮತ್ತು ಪರರಾಷ್ಟ್ರಗಳಲ್ಲಿರುವ, ಅಡವಿಗಳಲ್ಲಿರುವ,

ಮತ್ತು ಸಾಮಂತ ನಗರಗಳಲ್ಲಿರುವ ತಪಸ್ವಿಗಳನ್ನು ಗುಟ್ಟಾಗಿ ಸಂಧಿಸಿ ಅವರೊಡನೆ ರಾಜನು ಸೌಹಾರ್ದವನ್ನು ಬೆಳೆಸಿಕೊಳ್ಳಬೇಕು.

12087031a ತೇಷು ಸತ್ಕಾರಸಂಸ್ಕಾರಾನ್ಸಂವಿಭಾಗಾಂಶ್ಚ ಕಾರಯೇತ್|
12087031c ಪರರಾಷ್ಟ್ರಾಟವೀಸ್ಥೇಷು ಯಥಾ ಸ್ವವಿಷಯೇ ತಥಾ||

ಅವರನ್ನು ಸತ್ಕರಿಸುವುದರ ಜೊತೆಗೆ ಅವರಿಗೆ ಬೇಕಾದ ಅವಶ್ಯ ವಸ್ತುಗಳನ್ನು ಕೊಡಬೇಕು. ತನ್ನ ರಾಜ್ಯದಲ್ಲಿರುವ ತಪಸ್ವಿಗಳನ್ನು ಹೇಗೋ ಹಾಗೆ ಪರರಾಷ್ಟ್ರದಲ್ಲಿರುವ ತಪಸ್ವಿಗಳನ್ನೂ ಆದರಿಸಿ ಸತ್ಕರಿಸಬೇಕು.

12087032a ತೇ ಕಸ್ಯಾಂ ಚಿದವಸ್ಥಾಯಾಂ ಶರಣಂ ಶರಣಾರ್ಥಿನೇ|
12087032c ರಾಜ್ಞೇ ದದ್ಯುರ್ಯಥಾಕಾಮಂ ತಾಪಸಾಃ ಸಂಶಿತವ್ರತಾಃ||

ಸಂಶಿತವ್ರತ ತಾಪಸರು ಯಾವುದಾದರೂ ಆಪತ್ಕಾಲದಲ್ಲಿ ಶರಣಾರ್ಥಿಯಾದ ರಾಜನಿಗೆ ಸ್ವೇಚ್ಛೆಯಿಂದಲೇ ಆಶ್ರಯವನ್ನು ನೀಡುತ್ತಾರೆ.

12087033a ಏಷ ತೇ ಲಕ್ಷಣೋದ್ದೇಶಃ ಸಂಕ್ಷೇಪೇಣ ಪ್ರಕೀರ್ತಿತಃ|
12087033c ಯಾದೃಶಂ ನಗರಂ ರಾಜಾ ಸ್ವಯಮಾವಸ್ತುಮರ್ಹತಿ||

ಹೀಗೆ ರಾಜನು ಯಾವ ತರಹದ ನಗರದಲ್ಲಿ ವಾಸಮಾಡಬೇಕೆನ್ನುವುದನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಸ್ವಯಂ ನೀನು ಅಂಥಹ ನಗರದಲ್ಲಿಯೇ ವಾಸಿಸಬೇಕು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ದುರ್ಗಪರೀಕ್ಷಾಯಾಂ ಸಪ್ತಾಶೀತಿತಮೋऽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ದುರ್ಗಪರೀಕ್ಷಾ ಎನ್ನುವ ಎಂಭತ್ತೇಳನೇ ಅಧ್ಯಾಯವು.

೮೮

ರಾಷ್ಟ್ರಗುಪ್ತ್ಯಾದಿಕಥನ

ರಾಷ್ಟ್ರದ ರಕ್ಷಣೆ ಮತ್ತು ರಾಷ್ಟ್ರದ ಕೋಶಸಂಗ್ರಹ (1-37).

12088001 ಯುಧಿಷ್ಠಿರ ಉವಾಚ|
12088001a ರಾಷ್ಟ್ರಗುಪ್ತಿಂ ಚ ಮೇ ರಾಜನ್ರಾಷ್ಟ್ರಸ್ಯೈವ ಚ ಸಂಗ್ರಹಮ್|
12088001c ಸಮ್ಯಗ್ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ನಾನು ರಾಷ್ಟ್ರದ ರಕ್ಷಣೆ ಮತ್ತು ರಾಷ್ಟ್ರದ ಸಂಗ್ರಹಗಳ ಕುರಿತು ಚೆನ್ನಾಗಿ ತಿಳಿದುಕೊಳ್ಳ ಬಯಸುತ್ತೇನೆ. ಅದನ್ನು ನನಗೆ ಹೇಳು."

12088002 ಭೀಷ್ಮ ಉವಾಚ|
12088002a ರಾಷ್ಟ್ರಗುಪ್ತಿಂ ಚ ತೇ ಸಮ್ಯಗ್ರಾಷ್ಟ್ರಸ್ಯೈವ ಚ ಸಂಗ್ರಹಮ್|
12088002c ಹಂತ ಸರ್ವಂ ಪ್ರವಕ್ಷ್ಯಾಮಿ ತತ್ತ್ವಮೇಕಮನಾಃ ಶೃಣು||

ಭೀಷ್ಮನು ಹೇಳಿದನು: "ರಾಷ್ಟ್ರರಕ್ಷಣೆ ಮತ್ತು ರಾಷ್ಟ್ರದ ಸಂಗ್ರಹದ ಕುರಿತು ಎಲ್ಲವನ್ನೂ ಚೆನ್ನಾಗಿ ಹೇಳುತ್ತೇನೆ. ಏಕಮನಸ್ಕನಾಗಿ ಕೇಳು.

12088003a ಗ್ರಾಮಸ್ಯಾಧಿಪತಿಃ ಕಾರ್ಯೋ ದಶಗ್ರಾಮ್ಯಸ್ತಥಾಪರಃ|
12088003c ದ್ವಿಗುಣಾಯಾಃ ಶತಸ್ಯೈವಂ ಸಹಸ್ರಸ್ಯ ಚ ಕಾರಯೇತ್||

ಒಂದು ಗ್ರಾಮಕ್ಕೆ ಒಬ್ಬ ಅಧಿಪತಿಯಿರಬೇಕು. ಹತ್ತು ಗ್ರಾಮಗಳಿಗೆ

ಇನ್ನೊಬ್ಬ ಅಧಿಪತಿಯಿರಬೇಕು. ಇಪ್ಪತ್ತು ಗ್ರಾಮಗಳಿಗೆ ಮತ್ತೊಬ್ಬ ಅಧಿಪತಿಯಿರಬೇಕು. ನೂರು ಗ್ರಾಮಗಳಿಗೆ ಬೇರೊಬ್ಬ ಅಧಿಪತಿಯಿರಬೇಕು. ಸಾವಿರ ಗ್ರಾಮಗಳಿಗೆ ಬೇರೆಯೇ ಒಬ್ಬ ಅಧಿಪತಿಯಿರಬೇಕು.

12088004a ಗ್ರಾಮೇ ಯಾನ್ಯಾಮದೋಷಾಂಶ್ಚ ಗ್ರಾಮಿಕಃ ಪರಿಪಾಲಯೇತ್[242]|
12088004c ತಾನ್ಯೂಯಾದ್ದಶಪಾಯಾಸೌ ಸ ತು ವಿಂಶತಿಪಾಯ ವೈ||

ಗ್ರಾಮದ ಅಧಿಪತಿಯು ಗ್ರಾಮದ ದೋಷಗಳನ್ನು ಪರಿಪಾಲಿಸಬೇಕು. ಅವನು ಹತ್ತು ಗ್ರಾಮಗಳ ಅಧಿಪತಿಗೆ ಮತ್ತು ಹತ್ತು ಗ್ರಾಮಗಳ ಅಧಿಪತಿಯು ಇಪ್ಪತ್ತು ಗ್ರಾಮಗಳ ಅಧಿಪತಿಗೆ ವಿಷಯಗಳನ್ನು ಕ್ರೋಢೀಕರಿಸಿ ತಿಳಿಸುತ್ತಿರಬೇಕು.

12088005a ಸೋಽಪಿ ವಿಂಶತ್ಯಧಿಪತಿರ್ವೃತ್ತಂ ಜಾನಪದೇ ಜನೇ|
12088005c ಗ್ರಾಮಾಣಾಂ ಶತಪಾಲಾಯ ಸರ್ವಮೇವ ನಿವೇದಯೇತ್||

ಇಪ್ಪತ್ತು ಗ್ರಾಮಗಳ ಅಧಿಪತಿಯು ತನ್ನ ಗ್ರಾಮಗಳ ಜನರಲ್ಲಿ ನಡೆಯುವ ವಿಷಯಗಳನ್ನು ಕ್ರೋಢೀಕರಿಸಿ ಎಲ್ಲವನ್ನೂ ನೂರು ಗ್ರಾಮಗಳ ಪಾಲಕನಿಗೆ ನಿವೇದಿಸಬೇಕು.

12088006a ಯಾನಿ ಗ್ರಾಮೀಣಭೋಜ್ಯಾನಿ ಗ್ರಾಮಿಕಸ್ತಾನ್ಯುಪಾಶ್ನುಯಾತ್|
12088006c ದಶಪಸ್ತೇನ ಭರ್ತವ್ಯಸ್ತೇನಾಪಿ ದ್ವಿಗುಣಾಧಿಪಃ||

ಕಂದಾಯ ರೂಪದಲ್ಲಿ ಬರುವ ಗ್ರಾಮದ ಉತ್ಪತ್ತಿ-ಆಹಾರಪದಾರ್ಥಗಳನ್ನು ಆ ಗ್ರಾಮದ ಅಧಿಪತಿಯು ತನಗಾಗಿ

---

[242] ಪ್ರತಿಭಾವಯೇತ್| ಎಂಬ ಪಾಠಾಂತರವಿದೆ.

ಬಳಸಿಕೊಂಡು ಒಂದು ಅಂಶವನ್ನು ಹತ್ತು ಗ್ರಾಮಗಳ ಅಧಿಪತಿಗೆ ಕಳುಹಿಸಬೇಕು. ಹತ್ತು ಗ್ರಾಮಗಳ ಅಧಿಪತಿಯು ಹೀಗೆ ಪಡೆದುಕೊಂಡಿದುದರಲ್ಲಿ ಒಂದು ಅಂಶವನ್ನು ಇಪ್ಪತ್ತು ಗ್ರಾಮಗಳ ಅಧಿಪತಿಗೆ ನೀಡಬೇಕು. ಹೀಗೆಯೇ ನೂರುಗ್ರಾಮಗಳ ಮತ್ತು ಸಾವಿರಗ್ರಾಮಗಳ ಅಧಿಪತಿಗಳಿಗೂ ಕಂದಾಯವು ಸಲ್ಲಬೇಕು.

12088007a ಗ್ರಾಮಂ ಗ್ರಾಮಶತಾಧ್ಯಕ್ಷೋ ಭೋಕ್ತುಮರ್ಹತಿ ಸತ್ಕೃತಃ|
12088007c ಮಹಾಂತಂ ಭರತಶ್ರೇಷ್ಠ ಸುಸ್ಫೀತಜನಸಂಕುಲಮ್|
12088007e ತತ್ರ ಹ್ಯನೇಕಮಾಯತ್ತಂ ರಾಜ್ಞೋ ಭವತಿ ಭಾರತ||

ಭರತಶ್ರೇಷ್ಠ! ನೂರು ಗ್ರಾಮಗಳ ಅಧ್ಯಕ್ಷನು ಒಂದು ಸಂಪದ್ಭರಿತ ಮತ್ತು ಜನಸಂಕುಲವಿರುವ ವಿಶಾಲ ಗ್ರಾಮದ ಆದಾಯವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲು ಅರ್ಹನಾಗುತ್ತಾನೆ. ಭಾರತ! ಹೀಗೆ ರಾಜನ ರಾಜ್ಯವು ಅನೇಕರ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

12088008a ಶಾಖಾನಗರಮರ್ಹಸ್ತು ಸಹಸ್ರಪತಿರುತ್ತಮಮ್|
12088008c ಧಾನ್ಯಹ್ಯೈರಣ್ಯಭೋಗೇನ ಭೋಕ್ತುಂ ರಾಷ್ಟ್ರಿಯ ಉದ್ಯತಃ||

ಉತ್ತಮ ಸಹಸ್ರಗ್ರಾಮದ ಅಧಿಪತಿಯು ಒಂದು ಉಪನಗರದ ಆದಾಯವನ್ನು ಭೋಗಿಸಲು ಅರ್ಹನಾಗುತ್ತಾನೆ. ಆದರೆ ಅವನು ರಾಷ್ಟ್ರಿಯನ ಗಮನಕ್ಕೆ ತಂದು ಧಾನ್ಯ-ಹಿರಣ್ಯಗಳನ್ನು ಭೋಗಿಸಬೇಕು.

12088009a ತಥಾ ಯದ್ಗ್ರಾಮಕೃತ್ಯಂ ಸ್ಯಾದ್ಗ್ರಾಮಿಕೃತ್ಯಂ ಚ ತೇ ಸ್ವಯಮ್|
12088009c ಧರ್ಮಜ್ಞಃ ಸಚಿವಃ ಕಶ್ಚಿತ್ತತ್ಪ್ರಪಶ್ಯೇದತಂದ್ರಿತಃ||

ಆ ಗ್ರಾಮಾಧಿಪತಿಗಳು ಗ್ರಾಮಗಳಲ್ಲಿ ಮಾಡಬೇಕಾದ ಕಾರ್ಯಗಳನ್ನು ಧರ್ಮಜ್ಞನೂ ಆಲಸ್ಯರಹಿತನೂ ಆದ ಸಚಿವನು ನೋಡಿಕೊಳ್ಳಬೇಕು.

12088010a ನಗರೇ ನಗರೇ ಚ ಸ್ಯಾದೇಕಃ ಸರ್ವಾರ್ಥಚಿಂತಕಃ|
12088010c ಉಚ್ಚೈಃಸ್ಥಾನೇ ಘೋರರೂಪೋ ನಕ್ಷತ್ರಾಣಾಮಿವ ಗ್ರಹಃ|
12088010e ಭವೇತ್ಸ ತಾನ್ಪರಿಕ್ರಾಮೇತ್ಸರ್ವಾನೇವ ಸದಾ ಸ್ವಯಮ್||

ನಗರ ನಗರದಲ್ಲಿಯೂ ನಕ್ಷತ್ರಗಳಿಗಿಂತಲೂ ಉಚ್ಚ ಸ್ಥಾನದಲ್ಲಿರುವ ಘೋರರೂಪದ ಗ್ರಹದಂತೆ ಓರ್ವ ಸರ್ವಾರ್ಥಚಿಂತಕನು ಇರಬೇಕು. ಎಲ್ಲರಿಗೂ ನಿಕಟವರ್ತಿಯಾಗಿದ್ದು ಎಲ್ಲ ಕಾರ್ಯಗಳನ್ನೂ ಸ್ವಯಂ ಪರಿಶೀಲಿಸುತ್ತಿರಬೇಕು.

[243]12088011a ವಿಕ್ರಯಂ ಕ್ರಯಮಧ್ವಾನಂ ಭಕ್ತಂ ಚ ಸಪರಿವ್ಯಯಮ್|
12088011c ಯೋಗಕ್ಷೇಮಂ ಚ ಸಂಪ್ರೇಕ್ಷ್ಯ ವಣಿಜಃ ಕಾರಯೇತ್ಕರಾನ್||

ಮಾರುವ ಬೆಲೆ, ಪ್ರಯಾಣದ ಖರ್ಚು, ನೌಕರರ ವೇತನ ಮತ್ತು ವ್ಯಾಪಾರಿಗಳ ಯೋಗಕ್ಷೇಮಗಳನ್ನು ಪರಿಶೀಲಿಸಿ ವಾಣಿಜ್ಯ ತೆರಿಗೆಯನ್ನು ಹಾಕಬೇಕು.

12088012a ಉತ್ಪತ್ತಿಂ ದಾನವೃತ್ತಿಂ ಚ ಶಿಲ್ಪಂ ಸಂಪ್ರೇಕ್ಷ್ಯ ಚಾಸಕೃತ್|
12088012c ಶಿಲ್ಪಪ್ರತಿಕರಾನೇವ ಶಿಲ್ಪಿನಃ ಪ್ರತಿ ಕಾರಯೇತ್||

ಪದಾರ್ಥಗಳ ಉತ್ಪತ್ತಿಗೆ ಬೀಳುವ ಖರ್ಚು, ಅವುಗಳ ಮಾರಾಟದ ನಂತರ ದೊರೆಯುವ ಲಾಭ, ಪದಾರ್ಥದ ಗುಣಮಟ್ಟ ಇವನ್ನು ಪರಿಶೀಲಿಸಿ ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಬೇಕು.

---

[243] ಇದಕ್ಕೆ ಮೊದಲು ಭಾರತದರ್ಶನದಲ್ಲಿ ಈ ಶ್ಲೋಕಗಳಿವೆ: ತೇಷಾಂ ವೃತ್ತಿಂ ಪರಿಣಯೇತ್ಕಶ್ಚಿದ್ರಾಷ್ಟ್ರೇಷು ತಚ್ಚರಃ| ಜಿಘಾಂಸವಃ ಪಾಪಕಾಮಾಃ ಪರಸ್ವಾದಯಿನಃ ಶಠಾಃ| ರಕ್ಷಾಭ್ಯಧಿಕೃತಾ ನಾಮ ತೇಭ್ಯೋ ರಕ್ಷೇದಿಮಾಃ ಪ್ರಜಾಃ||

ಪದಾರ್ಥಗಳನ್ನು ತಯಾರಿಸುವವರಿಗೂ ಆದಾಯ ತೆರಿಗೆಯನ್ನು ಹಾಕಬೇಕು.

12088013a ಉಚ್ಚಾವಚಕರಾ ನ್ಯಾಯ್ಯಾಃ ಪೂರ್ವರಾಜ್ಞಾಂ ಯುಧಿಷ್ಠಿರ|
12088013c ಯಥಾ ಯಥಾ ನ ಹೀಯೇರಂಸ್ತಥಾ ಕುರ್ಯಾನ್ಮಹೀಪತಿಃ||
12088014a ಫಲಂ ಕರ್ಮ ಚ ಸಂಪ್ರೇಕ್ಷ್ಯ ತತಃ ಸರ್ವಂ ಪ್ರಕಲ್ಪಯೇತ್|

ಯುಧಿಷ್ಠಿರ! ರಾಜನು ಪದಾರ್ಥಗಳ ಉತ್ಪತ್ತಿ, ಅದಕ್ಕೆ ತಗಲುವ ವೆಚ್ಚ, ಅವುಗಳಿಂದ ಬರುವ ಆದಾಯ, ಕ್ರಯ-ವಿಕ್ರಯಗಳಿಂದ ಬರುವ ಆದಾಯ – ಇವುಗಳೆಲ್ಲವನ್ನೂ ಚೆನ್ನಾಗಿ ಪರಿಶೀಲಿಸಿ ನಿವ್ವಳ ಲಾಭಕ್ಕೆ ಅನುಗುಣವಾಗಿ ತೆರಿಗೆಯನ್ನು ಹಾಕಬೇಕು. ಎಲ್ಲ ಪದಾರ್ಥಗಳ್ಗೂ ಒಂದೇ ವಿಧದ ತೆರಿಗೆಯನ್ನು ಹೇರಬಾರದು. ಕಡಿಮೆ ಆದಾಯವಿರುವವನಿಗೆ ಕಡಿಮೆ ತೆರಿಗೆಯನ್ನು, ಹೆಚ್ಚು ಆದಾಯವಿರುವವನಿಗೆ ಹೆಚ್ಚು ತೆರಿಗೆಯನ್ನು ಮತ್ತು ಹೆಚ್ಚು ಲಾಭ ಬರುವ ಪದಾರ್ಥಗಳಿಗೆ ಹೆಚ್ಚು ತೆರಿಗೆಯನ್ನು ಹಾಕಬೇಕು. ಕರಭಾರದಿಂದ ಪ್ರಜೆಗಳ ನಾಶವಾಗದಂತೆ ರಾಜನು ನೋಡಿಕೊಳ್ಳಬೇಕು.

12088014c ಫಲಂ ಕರ್ಮ ಚ ನಿರ್ಹೇತು ನ ಕಶ್ಚಿತ್ಸಂಪ್ರವರ್ತಯೇತ್||
12088015a ಯಥಾ ರಾಜಾ ಚ ಕರ್ತಾ ಚ ಸ್ಯಾತಾಂ ಕರ್ಮಣಿ ಭಾಗಿನೌ|
12088015c ಸಮವೇಕ್ಷ್ಯ ತಥಾ ರಾಜ್ಞಾ ಪ್ರಣೇಯಾಃ ಸತತಂ ಕರಾಃ||

ಕರ್ಮಗಳ ಫಲವು ದೊರಕದಿದ್ದರೆ ಯಾರೂ ಕರ್ಮಗಳಲ್ಲಿ ತೊಡಗುವುದಿಲ್ಲ. ಕರ್ತನಾಗಿ ತನ್ನ ಕರ್ಮಫಲಗಳಿಗೆ ಭಾಗಿಯಾಗುವ ರೀತಿಯಲ್ಲಿ ಕೃಷಿ-ವಾಣಿಜ್ಯಗಳಲ್ಲಿ ತೊಡಗಿರುವ ಕರ್ತರಿಗೆ ತಮ್ಮ

ಕರ್ಮ ಫಲಗಳು ದೊರೆಯುವ ರೀತಿಯಲ್ಲಿ ರಾಜನು ಕರಗಳನ್ನು ಹಾಕಬೇಕು.

12088016a ನೋಚ್ಚಿಂದ್ಯಾದಾತ್ಮನೋ ಮೂಲಂ ಪರೇಷಾಂ ವಾಪಿ ತೃಷ್ಣಯಾ|
12088016c ಈಹಾದ್ವಾರಾಣಿ ಸಂರುಧ್ಯ ರಾಜಾ ಸಂಪ್ರೀತಿದರ್ಶನಃ||
12088017a ಪ್ರದ್ವಿಷಂತಿ ಪರಿಖ್ಯಾತಂ ರಾಜಾನಮತಿಖಾದಿನಮ್|

ಕರವನ್ನೇ ತೆಗೆದುಕೊಳ್ಳದೇ ತನ್ನನ್ನು ತಾನು ಹಾಳುಮಾಡಿಕೊಳ್ಳಲೂ ಬಾರದು. ಧನವನ್ನು ಬಯಸಿ ಕೃಷಿ-ವಾಣಿಜ್ಯಾದಿಗಳಲ್ಲಿ ತೊಡಗಿರುವವರ ಮೂಲವನ್ನೂ ನಾಶಗೊಳಿಸಬಾರದು. ಅತಿ ಆಸೆಯ ದ್ವಾರವನ್ನು ಮುಚ್ಚಿ ಯಥೋಚಿತ ತೆರಿಗೆಗಳನ್ನು ಮಾತ್ರವೇ ಜನರ ಮೇಲೆ ಹಾಕುವುದರಿಂದ ರಾಜನು ಜನರಿಗೆ ಪ್ರಿಯದರ್ಶನನಾಗುತ್ತಾನೆ. ಪ್ರಜೆಗಳ ಅದಾಯವನ್ನು ಅತಿಯಾಗಿ ಕಬಳಿಸುವವನೆಂದು ಪ್ರಖ್ಯಾತನಾದ ರಾಜನನ್ನು ಪ್ರಜೆಗಳು ದ್ವೇಷಿಸುತ್ತಾರೆ.

12088017c ಪ್ರದ್ವಿಷ್ಟಸ್ಯ ಕುತಃ ಶ್ರೇಯಃ ಸಂಪ್ರಿಯೋ[244] ಲಭತೇ ಪ್ರಿಯಮ್||
12088018a ವತ್ಸೋಪಮ್ಯೇನ ದೋಗ್ಧವ್ಯಂ ರಾಷ್ಟ್ರಮಕ್ಷೀಣಬುದ್ಧಿನಾ|

ಪ್ರಜೆಗಳು ದ್ವೇಷಿಸುವರ ರಾಜನಿಗೆ ಎಲ್ಲಿಯ ಶ್ರೇಯಸ್ಸು? ಪ್ರಜೆಗಳ ಪ್ರೀತಿಗೆ ಪಾತ್ರನಾದವನು ಸುಖಿಯಾಗುತ್ತಾನೆ. ಕರುವಿಗೂ ಹಾಲನ್ನು ಬಿಟ್ಟು ಹಸುವಿನಿಂದ ಹಾಲನ್ನು ಕರೆದುಕೊಳ್ಳುವಂತೆ ಬುದ್ಧಿವಂತ ರಾಜನು ರಾಷ್ಟ್ರವನ್ನು ಕರೆದುಕೊಳ್ಳಬೇಕು.

12088018c ಭೃತೋ ವತ್ಸೋ ಜಾತಬಲಃ ಪೀಡಾಂ ಸಹತಿ ಭಾರತ||

---

[244] ನಾಪ್ರಿಯೋ ಎಂಬ ಪಾಠಾಂತರವಿದೆ.

12088019a ನ ಕರ್ಮ ಕುರುತೇ ವತ್ಸೋ ಭೃಶಂ ದುಗ್ಧೋ ಯುಧಿಷ್ಠಿರ|

ಭಾರತ! ಯುಧಿಷ್ಠಿರ! ಕರುವಿಗೆ ಬೇಕಾಗುವಷ್ಟು ಹಾಲನ್ನು ಬಿಟ್ಟು ಕರೆಯುವುದರಿಂದ ಆ ಬಲಿಷ್ಠ ಕರುವು ಪೀಡೆಗಳನ್ನು ಸಹಿಸಿಕೊಳ್ಳಬಹುದು. ಯುಧಿಷ್ಠಿರ! ಕರುವು ದೊಡ್ಡದಾಗಿ ಕಾರ್ಯಗಳನ್ನು ಮಾಡಲು ತೊಡಗಿದ ನಂತರವೇ ಚೆನ್ನಾಗಿ ಹಾಲನ್ನು ಕರೆಯಬಹುದು.

12088019c ರಾಷ್ಟ್ರಮಪ್ಯತಿದುಗ್ಧಂ ಹಿ ನ ಕರ್ಮ ಕುರುತೇ ಮಹತ್||
12088020a ಯೋ ರಾಷ್ಟ್ರಮನುಗೃಹ್ಣಾತಿ ಪರಿಗೃಹ್ಯ ಸ್ವಯಂ ನೃಪಃ|
12088020c ಸಂಜಾತಮುಪಜೀವನ್ಸ ಲಭತೇ ಸುಮಹತ್ಫಲಮ್||

ರಾಷ್ಟ್ರವನ್ನು ಅತಿಯಾಗಿ ಕರೆದರೆ ಅದು ಯಾವ ಮಹತ್ಕಾರ್ಯಗಳನ್ನೂ ಸಾಧಿಸಲಾರದು. ಲಭಿಸಿದಷ್ಟು ಆದಾಯದಲ್ಲಿಯೇ ಜೀವನ ನಿರ್ವಹಣೆ ಮಾಡುವ ರಾಜನು ರಾಷ್ಟ್ರವನ್ನು ಅನುಗ್ರಹಿಸಿದಂತಾಗುತ್ತದೆ. ಇದರಿಂದ ಅವನು ಮಹಾಫಲವನ್ನು ಪಡೆದುಕೊಳ್ಳುತ್ತಾನೆ.

12088021a ಆಪದರ್ಥಂ ಹಿ ನಿಚಯಾನ್ರಾಜಾನ ಇಹ ಚಿನ್ವತೇ[245]|
12088021c ರಾಷ್ಟ್ರಂ ಚ ಕೋಶಭೂತಂ ಸ್ಯಾತ್ಕೋಶೋ ವೇಶ್ಮಗತಸ್ತಥಾ||

ಆಪತ್ಕಾಲಕ್ಕೆಂದು ಪ್ರಜೆಗಳು ಇಟ್ಟುಕೊಂಡಿರುವ ಧನವನ್ನು ರಾಜನು ಕಸಿದುಕೊಳ್ಳಬಾರದು. ರಾಷ್ಟ್ರವು ಕೋಶವನ್ನು ಅವಲಂಬಿಸಿರುತ್ತದೆ. ಈ ಕೋಶವು ಮನೆಮನೆಯಲ್ಲಿಯೂ ಇರುತ್ತದೆ.

---

[245] ಆಪದರ್ಥಂ ಚ ನಿರ್ಯಾತಂ ಧನಂ ತ್ವಿಹ ವಿವರ್ಧಯೇತ್| ಎಂಬ ಪಾಠಾಂತರವಿದೆ.

12088022a ಪೌರಜಾನಪದಾನ್ಸರ್ವಾನ್ಸಂಶ್ರಿತೋಪಾಶ್ರಿತಾಂಸ್ತಥಾ|
12088022c ಯಥಾಶಕ್ತ್ಯನುಕಂಪೇತ ಸರ್ವಾನಭ್ಯಂತರಾನಪಿ||

ನಗರ ಮತ್ತು ಗ್ರಾಮೀಣ ಜನರು ನೇರವಾಗಿ ಅಥವಾ ಮಧ್ಯಸ್ಥರ ಮೂಲಕ ರಾಜನ ಆಶ್ರಯವನ್ನು ಪಡೆಯನು ಬಂದರೆ ಅವರೆಲ್ಲರನ್ನೂ ಯಥಾಶಕ್ತಿಯಾಗಿ ಅನುಕಂಪದಿಂದ ನೋಡಿಕೊಳ್ಳಬೇಕು.

12088023a ಬಾಹ್ಯಂ ಜನಂ ಭೇದಯಿತ್ವಾ ಭೋಕ್ತವ್ಯೋ ಮಧ್ಯಮಃ ಸುಖಮ್|
12088023c ಏವಂ ನ ಸಂಪ್ರಕುಪ್ಯಂತೇ ಜನಾಃ ಸುಖಿತದುಃಖಿತಾಃ||

ಬಾಹ್ಯ ಜನರನ್ನು ಭೇದಿಸಿ ಮಧ್ಯಮ ರೀತಿಯಲ್ಲಿ ಅವರಿಂದ ತೆರಿಗೆಯನ್ನು ಭೋಗಿಸಬೇಕು. ಹೀಗೆ ಮಾಡುವುದರಿಂದ ಸುಖಿತ ದುಃಖಿತರಾದ ಜನರು ಕುಪಿತರಾಗುವುದಿಲ್ಲ.

12088024a ಪ್ರಾಗೇವ ತು ಕರಾದಾನಮನುಭಾಷ್ಯ ಪುನಃ ಪುನಃ|
12088024c ಸಂನಿಪತ್ಯ ಸ್ವವಿಷಯೇ ಭಯಂ ರಾಷ್ಟ್ರೇ ಪ್ರದರ್ಶಯೇತ್||

ಪ್ರಜೆಗಳಿಂದ ಧನವನ್ನು ಸಂಗ್ರಹಿಸುವ ಮೊದಲೇ ರಾಜನು ಅದರ ಅವಶ್ಯಕತೆಯ ಕುರಿತು ಜನರಿಗೆ ತಿಳಿಸಬೇಕು. ತನ್ನ ರಾಷ್ಟ್ರದಲ್ಲಿ ಸಂಚರಿಸಿ ರಾಷ್ಟ್ರಕ್ಕಿರುವ ಭಯವನ್ನು ತೋರಿಸಬೇಕು.

12088025a ಇಯಮಾಪತ್ಸಮುತ್ಪನ್ನಾ ಪರಚಕ್ರಭಯಂ ಮಹತ್|
12088025c ಅಪಿ ನಾಂತಾಯ ಕಲ್ಪೇತ ವೇಣೋರಿವ ಫಲಾಗಮಃ||
12088026a ಅರಯೋ ಮೇ ಸಮುತ್ಥಾಯ ಬಹುಭಿರ್ದಸ್ಯುಭಿಃ ಸಹ|
12088026c ಇದಮಾತ್ಮವಧಾಯೈವ ರಾಷ್ಟ್ರಮಿಚ್ಛಂತಿ ಬಾಧಿತುಮ್||

“ಈ ಆಪತ್ತು ಉತ್ಪನ್ನವಾಗಿದೆ. ಪರರ ಆಕ್ರಮಣದ ಭಯವುಂಟಾಗಿದೆ.

ಬಿದಿರಿನಲ್ಲಿ ಬಿಟ್ಟ ಫಲವು ಬಿದಿರನ್ನೇ ನಾಶಗೊಳಿಸುವಂತೆ ಶತ್ರುಗಳು ದಸ್ಯುಗಳೊಂದಿಗೆ ಸೇರಿ ನಮ್ಮ ಮೇಲೆ ಧಾಳಿಯಿಡುತ್ತಿದ್ದಾರೆ. ನಮ್ಮ ರಾಷ್ಟ್ರವನ್ನು ಧ್ವಂಸಮಾಡಲು ಬಯಸಿದ್ದಾರೆ.

12088027a ಅಸ್ಯಾಮಾಪದಿ ಘೋರಾಯಾಂ ಸಂಪ್ರಾಪ್ತೇ ದಾರುಣೇ ಭಯೇ|
12088027c ಪರಿತ್ರಾಣಾಯ ಭವತಾಂ ಪ್ರಾರ್ಥಯಿಷ್ಯೇ ಧನಾನಿ ವಃ||

ಈ ಘೋರ ದಾರುಣ ಭಯವು ಪ್ರಾಪ್ತವಾಗಿರುವುದರಿಂದ ನಿಮ್ಮನ್ನು ರಕ್ಷಿಸಲೋಸುಗ ನಿಮ್ಮಿಂದ ಧನವನ್ನು ಪ್ರಾರ್ಥಿಸುತ್ತಿದ್ದೇನೆ.

12088028a ಪ್ರತಿದಾಸ್ಯೇ ಚ ಭವತಾಂ ಸರ್ವಂ ಚಾಹಂ ಭಯಕ್ಷಯೇ|
12088028c ನಾರಯಃ ಪ್ರತಿದಾಸ್ಯಂತಿ ಯದ್ಧರೇಯುರ್ಬಲಾದಿತಃ||

ಭಯವು ಕಳೆದುಹೋದ ನಂತರ ಅವೆಲ್ಲವನ್ನೂ ನಿಮಗೆ ಹಿಂದಿರುಗಿಸುತ್ತೇನೆ. ಶತ್ರುಗಳಾದರೋ ನಮ್ಮನ್ನು ಸೋಲಿಸಿದರೆ ನಿಮ್ಮಿಂದ ಧನವನ್ನು ತೆಗೆದುಕೊಂಡು ಅದನ್ನು ನಿಮಗೆ ಹಿಂದಿರುಗಿಸುವುದಿಲ್ಲ.

12088029a ಕಲತ್ರಮಾದಿತಃ ಕೃತ್ವಾ ನಶ್ಯೇತ್ಸ್ವಂ ಸ್ವಯಮೇವ ಹಿ|
12088029c ಅಪಿ ಚೇತ್ಪುತ್ರದಾರಾರ್ಥಮರ್ಥಸಂಚಯ ಇಷ್ಯತೇ||

ಸ್ತ್ರೀಯರೂ ಮೊದಲ್ಗೊಂಡು ಅವರು ನಮ್ಮೆಲ್ಲರನ್ನೂ ನಾಶಪಡಿಸುತ್ತಾರೆ. ಪುತ್ರ-ಕಳತ್ರ-ಮಿತ್ರರ ರಕ್ಷಣೆಗಾಗಿ ನೀವು ಸಂಗ್ರಹಿಸಿಟ್ಟ ಧನವನ್ನು ಈಗ ನನಗೆ ಕೊಡಿರೆಂದು ಪ್ರಾರ್ಥಿಸುತ್ತೇನೆ.

12088030a ನಂದಾಮಿ ವಃ ಪ್ರಭಾವೇನ ಪುತ್ರಾಣಾಮಿವ ಚೋದಯೇ|
12088030c ಯಥಾಶಕ್ತ್ಯನುಗೃಹ್ಣಾಮಿ ರಾಷ್ಟ್ರಸ್ಯಾಪೀಡಯಾ ಚ ವಃ||

ಮಗನ ಅಭಿವೃದ್ಧಿಯಿಂದ ಸಂತೋಷಪಡುವಂತೆ ನಾನು ನಿಮ್ಮ ಪ್ರಭಾವವನ್ನು ನೋಡಿ ಸಂತೋಷಪಡುತ್ತಿದ್ದೇನೆ. ರಾಷ್ಟ್ರಕ್ಕೆ ಪೀಡೆಯುಂಟಾಗದ ರೀತಿಯಲ್ಲಿ ನಿಮ್ಮಿಂದ ಯಥಾಶಕ್ತಿ ಪಡೆದುಕೊಂಡು ಅನುಗ್ರಹಿಸುತ್ತೇನೆ.

12088031a ಆಪತ್ಸ್ವೇವ ಚ ವೋಢವ್ಯಂ ಭವದ್ಭಿಃ ಸದ್ಗವ್ಯೈರಿವ|
12088031c ನ ವಃ ಪ್ರಿಯತರಂ ಕಾರ್ಯಂ ಧನಂ ಕಸ್ಯಾಂ ಚಿದಾಪದಿ||

ಬಲಿಷ್ಠ ಎತ್ತು ದುರ್ಗಮ ಸ್ಥಳದಲ್ಲಿಯೂ ಭಾರವನ್ನು ಹೊರುವಂತೆ ನೀವೆಲ್ಲರೂ ದೇಶಕ್ಕೊದಗಿದ ಆಪತ್ತಿನಲ್ಲಿ ಭಾರವನ್ನು ಹೊರಬೇಕು. ಆಪತ್ತಿನಲ್ಲಿ ಧನದ ಮೇಲಿನ ವ್ಯಾಮೋಹದಿಂದ ಕಾರ್ಯವನ್ನು ಕೈಗೊಳ್ಳಬೇಡಿ.”

12088032a ಇತಿ ವಾಚಾ ಮಧುರಯಾ ಶ್ಲಕ್ಷ್ಣಯಾ ಸೋಪಚಾರಯಾ|
12088032c ಸ್ವರಶ್ಮೀನಭ್ಯವಸೃಜೇದ್ಯುಗಮಾದಾಯ ಕಾಲವಿತ್||

ಸಮಯಜ್ಞಾನವಿರುವವನು ಇದರಂತೆ ಸ್ನೇಹಯುಕ್ತ ಅನುನಯಪೂರ್ಣ ಸುಮಧುರ ಮಾತುಗಳಿಂದ ಪ್ರಜೆಗಳನ್ನು ಒಪ್ಪಿಸಿ ತನ್ನ ಸೈನಿಕರನ್ನು ಧನಸಂಗ್ರಹಕ್ಕಾಗಿ ಪ್ರಜೆಗಳ ಮನೆಗಳಿಗೆ ಕಳುಹಿಸಬೇಕು.

12088033a ಪ್ರಚಾರಂ ಭೃತ್ಯಭರಣಂ ವ್ಯಯಂ ಗೋಗ್ರಾಮತೋ ಭಯಮ್|
12088033c ಯೋಗಕ್ಷೇಮಂ ಚ ಸಂಪ್ರೇಕ್ಷ್ಯ ಗೋಮಿನಃ ಕಾರಯೇತ್ಕರಾನ್||

ಪ್ರಚಾರ, ಭೃತ್ಯಭರಣ, ಗೋ-ಗ್ರಾಮಗಳಿಗೆ ಇರುವ ಭಯವನ್ನು ಹೋಗಲಾಡಿಸಿ ಯೋಗಕ್ಷೇಮವನ್ನುಂಟುಮಾಡುವುದು – ಈ ಕಾರಣಗಳನ್ನು ಹೇಳಿ ಧನಿಕ ವೈಶ್ಯರಿಂದ ತೆರಿಗೆಯನ್ನು ತೆಗೆದುಕೊಳ್ಳಬೇಕು.

12088034a ಉಪೇಕ್ಷಿತಾ ಹಿ ನಶ್ಯೇಯುರ್ಗೋಮಿನೋಽರಣ್ಯವಾಸಿನಃ|
12088034c ತಸ್ಮಾತ್ತೇಷು ವಿಶೇಷೇಣ ಮೃದುಪೂರ್ವಂ ಸಮಾಚರೇತ್||

ಉಪೇಕ್ಷಿಸಿದರೆ ಗೋಧನಿಕ ವೈಶ್ಯರು ಅರಣ್ಯಕ್ಕೆ ಹೋಗಿ ನಾಶವಾಗಿಬಿಡುತ್ತಾರೆ. ಆದುದರಿಂದ ಅವರೊಂದಿಗೆ ವಿಶೇಷವಾಗಿ ಮೃದುಪೂರ್ವಕವಾಗಿ ವ್ಯವಹರಿಸಬೇಕು.

12088035a ಸಾಂತ್ವನಂ ರಕ್ಷಣಂ ದಾನಮವಸ್ಥಾ ಚಾಪ್ಯಭೀಕ್ಷ್ಣಶಃ|
12088035c ಗೋಮಿನಾಂ ಪಾರ್ಥ ಕರ್ತವ್ಯಂ ಸಂವಿಭಾಗಾಃ ಪ್ರಿಯಾಣಿ ಚ||

ಪಾರ್ಥ! ಸಾಂತ್ವನ, ರಕ್ಷಣೆ, ದಾನ, ವ್ಯವಹಾರಗಳಿಗೆ ಸರಿಯಾದ ವ್ಯವಸ್ಥೆ ಮತ್ತು ಬಹುಮಾನಗಳಿಂದ ವೈಶ್ಯರೊಂದಿಗೆ ವಿಶ್ವಾಸದಿಂದಿರಬೇಕು.

12088036a ಅಜಸ್ರಮುಪಯೋಕ್ತವ್ಯಂ ಫಲಂ ಗೋಮಿಷು ಸರ್ವತಃ|
12088036c ಪ್ರಭಾವಯತಿ ರಾಷ್ಟ್ರಂ ಚ ವ್ಯವಹಾರಂ ಕೃಷಿಂ ತಥಾ||

ವೈಶ್ಯರಿಗೆ ಅವರ ಶ್ರಮಕ್ಕೆ ತಕ್ಕುದಾದ ಫಲವನ್ನು ಕೊಡುತ್ತಲೇ ಇರಬೇಕು. ಏಕೆಂದರೆ ಅವರು ವ್ಯವಹಾರ ಕೃಷಿಗಳಿಂದ ರಾಷ್ಟ್ರವನ್ನು ವೃದ್ಧಿಗೊಳಿಸುತ್ತಾರೆ.

12088037a ತಸ್ಮಾದ್ಗೋಮಿಷು ಯತ್ನೇನ ಪ್ರೀತಿಂ ಕುರ್ಯಾದ್ವಿಚಕ್ಷಣಃ|
12088037c ದಯಾವಾನಪ್ರಮತ್ತಶ್ಚ ಕರಾನ್ಸಂಪ್ರಣಯನ್ಮೃದೂನ್||

ಆದುದರಿಂದ ಬುದ್ಧಿವಂತ ರಾಜನು ಪ್ರಯತ್ನಪಟ್ಟು ವೈಶ್ಯರೊಂದಿಗೆ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು. ದಯವಂತನೂ ಅಪ್ರಮತ್ತನೂ ಆಗಿದ್ದುಕೊಂಡು ಮೃದುವಾದ ತೆರಿಗೆಗಳನ್ನು ಅವರಿಂದ

ತೆಗೆದುಕೊಳ್ಳಬೇಕು.

12088038a ಸರ್ವತ್ರ ಕ್ಷೇಮಚರಣಂ ಸುಲಭಂ ತಾತ ಗೋಮಿಭಿಃ|
12088038c ನ ಹ್ಯತಃ ಸದೃಶಂ ಕಿಂ ಚಿದ್ಧನಮಸ್ತಿ ಯುಧಿಷ್ಠಿರ||

ಯುಧಿಷ್ಠಿರ! ಅಯ್ಯಾ! ವೈಶ್ಯರು ಎಲ್ಲಕಡೆಯೂ ಕ್ಷೇಮದಿಂದ ಸುಲಭವಾಗಿ ಸಂಚರಿಸುವಂತಿರಬೇಕು. ರಾಜನಾದವನಿಗೆ ಇದಕ್ಕೆ ಸಮನಾದ ಮತ್ತು ಇದಕ್ಕಿಂತಲೂ ಹೆಚ್ಚಿನ ಹಿತಕರ ಕಾರ್ಯವು ಬೇರೆ ಯಾವುದೂ ಇಲ್ಲ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ರಾಷ್ಟ್ರಗುಪ್ತ್ಯಾದಿಕಥನೇ ಅಷ್ಟಾಶೀತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ರಾಷ್ಟ್ರಗುಪ್ತ್ಯಾದಿಕಥನ ಎನ್ನುವ ಎಂಭತ್ತೆಂಟನೇ ಅಧ್ಯಾಯವು.

೮೯

ಕೋಶಸಂಚಯಪ್ರಕಾರಕಥನ

ಪ್ರಜೆಗಳಿಂದ ತೆರಿಗೆಯನ್ನು ಪಡೆದುಕೊಳ್ಳುವ ವಿಧಾನಗಳು (1-29).

12089001 ಯುಧಿಷ್ಠಿರ ಉವಾಚ|
12089001a ಯದಾ ರಾಜಾ ಸಮರ್ಥೋऽಪಿ ಕೋಶಾರ್ಥೀ ಸ್ಯಾನ್ಮಹಾಮತೇ|
12089001c ಕಥಂ ಪ್ರವರ್ತೇತ ತದಾ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: “ಪಿತಾಮಹ! ಮಹಾಮತೇ! ಸಮರ್ಥನಾಗಿದ್ದರೂ ಕೋಶಾರ್ಥಿಯಾದ ರಾಜನು ಹೇಗೆ ತನ್ನ ಕೋಶವನ್ನು ವೃದ್ಧಿಗೊಳಿಸಿಕೊಳ್ಳಬಲ್ಲನು ಎನ್ನುವುದನ್ನು ನನಗೆ ಹೇಳು.”

12089002 ಭೀಷ್ಮ ಉವಾಚ|
12089002a ಯಥಾದೇಶಂ ಯಥಾಕಾಲಮಪಿ ಚೈವ ಯಥಾಬಲಮ್|
12089002c ಅನುಶಿಷ್ಯಾತ್ಪ್ರಜಾ ರಾಜಾ ಧರ್ಮಾರ್ಥೀ ತದ್ಧಿತೇ ರತಃ||

ಭೀಷ್ಮನು ಹೇಳಿದನು: “ಧರ್ಮಾರ್ಥಿಯಾದ ರಾಜನು ದೇಶ-ಕಾಲಗಳಿಗನುಗುಣವಾಗಿ ಯಥಾಶಕ್ತಿಯಾಗಿ ಅವರ ಹಿತದಲ್ಲಿಯೇ ನಿರತನಾಗಿ ಪ್ರಜೆಗಳ ಅನುಶಾಸನವನ್ನು ಮಾಡಬೇಕು.

12089003a ಯಥಾ ತಾಸಾಂ ಚ ಮನ್ಯೇತ ಶ್ರೇಯ ಆತ್ಮನ ಏವ ಚ|
12089003c ತಥಾ ಧರ್ಮ್ಯಾಣಿ ಸರ್ವಾಣಿ ರಾಜಾ ರಾಷ್ಟ್ರೇ ಪ್ರವರ್ತಯೇತ್||

ಪ್ರಜೆಗಳ ಶ್ರೇಯಸ್ಸೇ ತನ್ನ ಶ್ರೇಯಸ್ಸೆಂದು ತಿಳಿದು ರಾಜನು ರಾಷ್ಟ್ರದ ಎಲ್ಲ ವಿಷಯಗಳಲ್ಲಿ ಧರ್ಮದಿಂದಲೇ ನಡೆದುಕೊಳ್ಳಬೇಕು.

12089004a ಮಧುದೋಹಂ ದುಹೇದ್ರಾಷ್ಟ್ರಂ ಭ್ರಮರಾನ್ನ ವಿಪಾತಯೇತ್|
12089004c ವತ್ಸಾಪೇಕ್ಷೀ ದುಹೇಚ್ಚೈವ ಸ್ತನಾಂಶ್ಚ ನ ವಿಕುಟ್ಟಯೇತ್||

ಹೂವಿಗೆ ಹಾನಿಯನ್ನುಂಟುಮಾಡದೇ ದುಂಬಿಗಳು ಮಧುವನ್ನು ಹೇಗೆ ಹೀರಿಕೊಳ್ಳುತ್ತವೆಯೋ ಹಾಗೆ ರಾಷ್ಟ್ರದವರಿಗೆ ಸ್ವಲ್ಪವೂ ತೊಂದರೆಯಾಗದಂತೆ ಕರವನ್ನು ತೆಗೆದುಕೊಳ್ಳಬೇಕು. ಕರುವಿಗೆ ಹಾಲನ್ನು ಬಿಟ್ಟು ಮತ್ತು ಕೆಚ್ಚಲಿಗೆ ಘಾಸಿಯಾಗದಂತೆ ಹಾಲನ್ನು ಕರೆಯುವಂತೆ ರಾಜನು ತೆರಿಗೆಯನ್ನು ಪಡೆದುಕೊಳ್ಳಬೇಕು.

12089005a ಜಲೌಕಾವತ್ಪಿಬೇದ್ರಾಷ್ಟ್ರಂ ಮೃದುನೈವ ನರಾಧಿಪ|
12089005c ವ್ಯಾಘ್ರೀವ ಚ ಹರೇತ್ಪುತ್ರಮದಷ್ಟ್ವಾ ಮಾ ಪತೇದಿತಿ||

ನೀರಿನಲ್ಲಿರುವ ಜಿಗಣೆಯು ಮನುಷ್ಯನಿಗೆ ತಿಳಿಯದಂತೆಯೇ ಅವನ ರಕ್ತವನ್ನು ಹೀರಿಕೊಳ್ಳುವಂತೆ ನರಾಧಿಪನು ಮೃದುವಾಗಿಯೇ ರಾಷ್ಟ್ರದ ಐಶ್ವರ್ಯವನ್ನು ಸಂಗ್ರಹಿಸಬೇಕು. ಹೇಗೆ ತಾಯಿ ಹುಲಿಯು ತನ್ನ ಮರಿಯನ್ನು ಅದಕ್ಕೆ ಗಾಯವಾಗದ ರೀತಿಯಲ್ಲಿ ತನ್ನ ಹಲ್ಲಿನಿಂದಲೇ ಕಚ್ಚಿಕೊಂಡು ಹೋಗುತ್ತದೆಯೋ ಹಾಗೆ ರಾಜನು ಪ್ರಜೆಗಳಿಗೆ ಪೀಡೆಯಾಗದ ರೀತಿಯಲ್ಲಿ ಕರವನ್ನು ಪಡೆದುಕೊಳ್ಳಬೇಕು.

12089006a ಅಲ್ಪೇನಾಲ್ಪೇನ ದೇಯೇನ ವರ್ಧಮಾನಂ ಪ್ರದಾಪಯೇತ್|
12089006c ತತೋ ಭೂಯಸ್ತತೋ ಭೂಯಃ ಕಾಮಂ ವೃದ್ಧಿಂ ಸಮಾಚರೇತ್||

ಮೊದಲು ಅಲ್ಪ ತೆರಿಗೆಯನ್ನು ಹಾಕಿ ನಂತರ ಸ್ವಲ್ಪ ಸ್ವಲ್ಪವೇ ಅದನ್ನು ಹೆಚ್ಚಿಸಿ ಪಡೆದುಕೊಳ್ಳಬೇಕು. ಹೀಗೆ ಆಗೊಮ್ಮೆ-ಈಗೊಮ್ಮೆ ತೆರಿಗೆಯನ್ನು ಹೆಚ್ಚಿಸಿ ಕ್ರಮೇಣವಾಗಿ ಕೋಶವನ್ನು ಹೆಚ್ಚಿಸಬೇಕು. ಆದರೆ ಕರವು ಹೆಚ್ಚಾಯಿತೆಂದು ಪ್ರಜೆಗಳು ಭಾವಿಸದಂತೆ ನೋಡಿಕೊಳ್ಳಬೇಕು.

12089007a ದಮಯನ್ನಿವ ದಮ್ಯಾನಾಂ ಶಶ್ವದ್ಭಾರಂ ಪ್ರವರ್ಧಯೇತ್|
12089007c ಮೃದುಪೂರ್ವಂ ಪ್ರಯತ್ನೇನ ಪಾಶಾನಭ್ಯವಹಾರಯೇತ್||

ಸ್ವಲ್ಪ ಸ್ವಲ್ಪವಾಗಿಯೇ ಹೊರೆಯನ್ನು ಹೆಚ್ಚಿಸಿ ಹೋರಿಗೆ ಭಾರಹೊರುವುದನ್ನು ಅಭ್ಯಾಸಮಾಡಿಸುವಂತೆ ತೆರಿಗೆಯ ಪಾಶವನ್ನು ಪ್ರಜೆಗಳ ಕೊರಳಿಗೆ ಹಾಕಿ ಅನಂತರ ಕಣಿಕೆಯನ್ನು ಸ್ವಲ್ಪ-ಸ್ವಲ್ಪವಾಗಿ ಬಿಗಿಯುತ್ತಾ ಹೋಗಬೇಕು. ಆದರೆ ಸಂಪೂರ್ಣವಾಗಿ ಬಿಗಿದು ಜೀವಕ್ಕೇ ಘಾತಿಯನ್ನುಂಟುಮಾಡಬಾರದು. ಅತಿಯಾಗಿ ಬಿಗಿಯಬಾರದು.

12089008a ಸಕೃತ್ಪಾಶಾವಕೀರ್ಣಾಸ್ತೇ ನ ಭವಿಷ್ಯಂತಿ ದುರ್ದಮಾಃ|
12089008c ಉಚಿತೇನೈವ ಭೋಕ್ತವ್ಯಾಸ್ತೇ ಭವಿಷ್ಯಂತಿ ಯತ್ನತಃ||

ಒಂದೇ ಬಾರಿ ಅಧಿಕ ತೆರಿಗೆಯ ಪಾಶವನ್ನು ಕುತ್ತಿಗೆಗೆ ಬಿಗಿದು ಬಿಟ್ಟರೆ ಪ್ರಜೆಗಳು ಉಳಿಯುವುದೇ ಇಲ್ಲ. ಅವರನ್ನು ಒಂದೇ ಬಾರಿ ಬಗ್ಗಿಸಲೂ ಆಗುವುದಿಲ್ಲ. ಆದುದರಿಂದ ಉಚಿತ ರೀತಿಯಲ್ಲಿ ಸ್ವಲ್ಪ-ಸ್ವಲ್ಪವಾಗಿ ತೆರಿಗೆಯನ್ನು ಹಾಕಿ ಪ್ರಯತ್ನಪೂರ್ವಕವಾಗಿ ಪ್ರಜೆಗಳನ್ನು ಉಪಭುಂಜಿಸಬೇಕು.

12089009a ತಸ್ಮಾತ್ಸರ್ವಸಮಾರಂಭೋ ದುರ್ಲಭಃ ಪುರುಷವ್ರಜಃ|
12089009c ಯಥಾಮುಖ್ಯಾನ್ಸಾಂತ್ವಯಿತ್ವಾ ಭೋಕ್ತವ್ಯ ಇತರೋ ಜನಃ||

ರಾಜನು ಪ್ರತಿಪುರುಷನನ್ನೂ ಒಂದೇ ಬಾರಿಗೆ ತೆರಿಗೆಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಪ್ರಜೆಗಳಲ್ಲಿ ಮುಖ್ಯ-ಮುಖ್ಯರಾದವರನ್ನು ಕರೆಯಿಸಿ ಸಾಂತ್ವನವಚನಗಳಿಂದ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳಬೇಕು. ಅವರಿಂದ ಸ್ವಲ್ಪ-ಸ್ವಲ್ಪವೇ ಕರವನ್ನು ತೆಗೆದುಕೊಳ್ಳಲು ಪ್ರಾರಂಭಿಸಬೇಕು. ಮುಖ್ಯಸ್ಥರು ಕರಕೊಡಲು ಪ್ರಾರಂಭಿಸಿದರೆ ಇತರ ಜನರೂ ಕರಕೊಡಲು ಪ್ರಾರಂಭಿಸುತ್ತಾರೆ. ಹೀಗೆ ರಾಜನು ಇತರ ಜನರನ್ನೂ ಭುಂಜಿಸಬೇಕು.

12089010a ತತಸ್ತಾನ್ಭೇದಯಿತ್ವಾಥ ಪರಸ್ಪರವಿವಕ್ಷಿತಾನ್|
12089010c ಭುಂಜೀತ ಸಾಂತ್ವಯಿತ್ವೈವ ಯಥಾಸುಖಮಯತ್ನತಃ||

ಪರಸ್ಪರ ವಿಚಾರಮಾಡುವವರಲ್ಲಿ ಭೇದವನ್ನುಂಟುಮಾಡಿ ಇಬ್ಬರೂ ತನ್ನನ್ನೇ ಅವಲಂಬಿಸಿರುವವಂತೆ ಮಾಡಿಕೊಂಡು ಇಬ್ಬರನ್ನೂ ಸಮಾಧಾನಗೊಳಿಸುತ್ತಾ ಯಾವ ಪ್ರಯತ್ನವೂ ಇಲ್ಲದೇ ಸುಲಭದಿಂದ

ಉಪಭೋಗಿಸಬೇಕು.

12089011a ನ ಚಾಸ್ಥಾನೇ ನ ಚಾಕಾಲೇ ಕರಾನೇಭ್ಯೋಽನುಪಾತಯೇತ್|
12089011c ಆನುಪೂರ್ವ್ಯೇಣ ಸಾಂತ್ವೇನ ಯಥಾಕಾಲಂ ಯಥಾವಿಧಿ||

ಕಾರಣವಿಲ್ಲದೇ ಅಕಾಲದಲ್ಲಿ ತೆರಿಗೆಯನ್ನು ಹೇರಬಾರದು. ತೆರಿಗೆಯ ಕಾರಣವನ್ನು ಮೊದಲೇ ತಿಳಿಸಿ ಯಥಾಕಾಲದಲ್ಲಿ ಯಥಾವಿಧಿಯಲ್ಲಿ ಕರವನ್ನು ಪಡೆದುಕೊಳ್ಳಬೇಕು.

12089012a ಉಪಾಯಾನ್ಪ್ರಬ್ರವೀಮ್ಯೇತಾನ್ನ ಮೇ ಮಾಯಾ ವಿವಕ್ಷಿತಾ|
12089012c ಅನುಪಾಯೇನ ದಮಯನ್ಪ್ರಕೋಪಯತಿ ವಾಜಿನಃ||

ಈ ಉತ್ತಮ ಉಪಾಯಗಳನ್ನು ನಾನು ನಿನಗೆ ಹೇಳುತ್ತಿದ್ದೇನೆ. ಏಕೆಂದರೆ ಉಪಾಯವಿಲ್ಲದೇ ಕುದುರೆಯನ್ನು ಹತ್ತಲು ಹೋದರೆ ಅದು ಕೋಪಗೊಳ್ಳುತ್ತದೆ. ಆದುದರಿಂದ ಉಪಾಯದಿಂದ ಕುದುರೆಯನ್ನು ಹೇಗೋ ಹಾಗೆ ಪ್ರಜೆಗಳನ್ನೂ ಪಳಗಿಸಿ ನಂತರ ಕರವನ್ನು ಹೇರಬೇಕು.

12089013a ಪಾನಾಗಾರಾಣಿ ವೇಶಾಶ್ಚ ವೇಶಪ್ರಾಪಣಿಕಾಸ್ತಥಾ|
12089013c ಕುಶೀಲವಾಃ ಸಕಿತವಾ ಯೇ ಚಾನ್ಯೇ ಕೇ ಚಿದೀದೃಶಾಃ||
12089014a ನಿಯಮ್ಯಾಃ ಸರ್ವ ಏವೈತೇ ಯೇ ರಾಷ್ಟ್ರಸ್ಯೋಪಘಾತಕಾಃ|
12089014c ಏತೇ ರಾಷ್ಟ್ರೇ ಹಿ ತಿಷ್ಠಂತೋ ಬಾಧಂತೇ ಭದ್ರಿಕಾಃ ಪ್ರಜಾಃ||

ಮದ್ಯದ ಅಂಗಡಿಗಳನ್ನಿಟ್ಟಿರುವವರು, ವೇಶ್ಯೆಯರು, ವೇಶ್ಯೆಯರ ವ್ಯಾಪಾರದಲ್ಲಿ ತೊಡಗಿರುವವರು, ವಿಟರು, ಗಾಯಕರು, ಜೂಜುಕೋರರು – ಇವೇ ಮೊದಲಾದ ಅನೇಕರು ರಾಷ್ಟ್ರಕ್ಕೆ ಹಾನಿಯನ್ನುಮಾಡುವರು. ಅವರೆಲ್ಲರನ್ನೂ ನಿಗ್ರಹಿಸಬೇಕು. ಅವರು ರಾಷ್ಟ್ರದಲ್ಲಿ ಸನ್ಮಾರ್ಗದಲ್ಲಿರುವ ಪ್ರಜೆಗಳನ್ನು ಬಾಧಿಸುತ್ತಿರುತ್ತಾರೆ.

12089015a ನ ಕೇನ ಚಿದ್ಯಾಚಿತವ್ಯಃ ಕಶ್ಚಿತ್ಕಿಂ ಚಿದನಾಪದಿ|
12089015c ಇತಿ ವ್ಯವಸ್ಥಾ ಭೂತಾನಾಂ ಪುರಸ್ತಾನ್ಮನುನಾ ಕೃತಾ||

ಆಪತ್ಕಾಲವೊಂದನ್ನು ಬಿಟ್ಟು ಬೇರೆ ಸಂದರ್ಭಗಳಲ್ಲಿ ಯಾರು ಯಾರಿಂದಲೂ ಏನನ್ನೂ ಯಾಚಿಸಬಾರದೆಂದು ಹಿಂದೆಯೇ ಮನುವು ಪ್ರಾಣಿಗಳಿಗೆ ವ್ಯವಸ್ಥೆಮಾಡಿದ್ದಾನೆ.

12089016a ಸರ್ವೇ ತಥಾ ನ ಜೀವೇಯುರ್ನ ಕುರ್ಯುಃ ಕರ್ಮ ಚೇದಿಹ|
12089016c ಸರ್ವ ಏವ ತ್ರಯೋ ಲೋಕಾ ನ ಭವೇಯುರಸಂಶಯಮ್||

ಇಲ್ಲವಾದರೆ ಎಲ್ಲ ಜನರೂ ಭಿಕ್ಷೆಯಿಂದಲೇ ಜೀವನವನ್ನು ನಡೆಸುತ್ತಿದ್ದರು. ಯಾರೂ ಕರ್ಮಗಳನ್ನು ಮಾಡುತ್ತಿರಲಿಲ್ಲ. ಈ ಮೂರುಲೋಕಗಳೆಲ್ಲವೂ ನಿಸ್ಸಂಶಯವಾಗಿ ವಿನಾಶಹೊಂದುತ್ತಿದ್ದವು.

12089017a ಪ್ರಭುರ್ನಿಯಮನೇ ರಾಜಾ ಯ ಏತಾನ್ನ ನಿಯಚ್ಚತಿ|
12089017c ಭುಂಕ್ತೇ ಸ ತಸ್ಯ ಪಾಪಸ್ಯ ಚತುರ್ಭಾಗಮಿತಿ ಶ್ರುತಿಃ|
[246]12089017e ತಥಾ ಕೃತಸ್ಯ ಧರ್ಮಸ್ಯ ಚತುರ್ಭಾಗಮುಪಾಶ್ನುತೇ||

ಮದ್ಯದಂಗಡಿ ಇಟ್ಟವರು ಮೊದಲಾದವರನ್ನು ನಿಯಂತ್ರಿಸಲು ಸಮರ್ಥನಾಗಿದ್ದರೂ ನಿಯಂತಿಸದೇ ಇರುವ ರಾಜನು ಅವರು ಮಾಡುವ ಪಾಪದ ನಾಲ್ಕನೆಯ ಒಂದು ಭಾಗವನ್ನು ಪಡೆದುಕೊಳ್ಳುತ್ತಾನೆಂದು ಶ್ರುತಿಗಳು ಹೇಳುತ್ತವೆ. ಅವರನ್ನು

---

[246] ಭಾರತ ದರ್ಶನದಲ್ಲಿ ಇದರ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಭೋಕ್ತಾ ತಸ್ಯ ತು ಪಾಪಸ್ಯ ಸುಕೃತಸ್ಯ ಯಥಾ ತಥಾ| ನಿಯಂತವ್ಯಾಃ ಸದಾ ರಾಜ್ಞಾ ಪಾಪಾ ಯೇ ಸ್ಯುರ್ನರಾಧಿಪ| ಕೃತಪಾಪಸ್ತ್ವಸೌ ರಾಜಾ ಯ ಏತಾನ್ನ ನಿಯಚ್ಛತಿ||

ನಿಯಂತ್ರಣದಲ್ಲಿಟ್ಟುಕೊಳ್ಳುವ ರಾಜನು ಅವರ ಧರ್ಮದ ನಾಲ್ಕನೆಯ ಒಂದು ಭಾಗವನ್ನು ಪಡೆದುಕೊಳ್ಳುತ್ತಾನೆ.

12089018a ಸ್ಥಾನಾನ್ಯೇತಾನಿ ಸಂಗಮ್ಯ ಪ್ರಸಂಗೇ ಭೂತಿನಾಶನಃ|
12089018c ಕಾಮಪ್ರಸಕ್ತಃ ಪುರುಷಃ ಕಿಮಕಾರ್ಯಂ ವಿವರ್ಜಯೇತ್||

ಮದ್ಯದಂಗಡಿ, ವೇಶ್ಯಾವಾಟಿಗಳು, ಜೂಜುಕಟ್ಟೆಗಳು – ಇವು ದಿನ-ದಿನಕ್ಕೂ ಹೆಚ್ಚಿದಂತೆ ಮತ್ತು ಕಡಿಮೆಯಾಗುವಂತೆ ರಾಜನು ನೋಡಿಕೊಳ್ಳಬೇಕು. ಸ್ತ್ರೀಪ್ರಸಂಗಗಳು, ಜೂಜು ಇವೆಲ್ಲಾ ಐಶ್ವರ್ಯ-ಕೀರ್ತಿಗಳನ್ನು ನಾಶಮಾಡುತ್ತವೆ. ಕಾಮಪ್ರಸಕ್ತನಾದ ಪುರುಷನು ಹೇಗೆತಾನೇ ಮಾಡಬಾರದವುಗಳನ್ನು ತ್ಯಜಿಸಿಯಾನು?

[247]12089019a ಆಪದ್ಯೇವ ತು ಯಾಚೇರನ್ಯೇಷಾಂ ನಾಸ್ತಿ ಪರಿಗ್ರಹಃ|
12089019c ದಾತವ್ಯಂ ಧರ್ಮತಸ್ತೇಭ್ಯಸ್ತ್ವನುಕ್ರೋಶಾದ್ದಯಾರ್ಥಿನಾ||

ಪರಿಗ್ರಹಿಸಲು ಅಧಿಕಾರವಿಲ್ಲದಿರುವವರು ಆಪತ್ತಿನಲ್ಲಿ ಯಾಚಿಸುತ್ತಾರೆ. ದಯಾರ್ಥಿಗಳಾದ ಅಂಥವರಿಗೆ ಅನುಕ್ರೋಶದಿಂದ ಧರ್ಮತಃ ನೀಡಬೇಕು.

12089020a ಮಾ ತೇ ರಾಷ್ಟ್ರೇ ಯಾಚನಕಾ ಮಾ ತೇ ಭೂಯುಶ್ಚ ದಸ್ಯವಃ|
12089020c ಇಷ್ಟಾದಾತಾರ ಏವೈತೇ ನೈತೇ ಭೂತಸ್ಯ ಭಾವಕಾಃ||

ನಿನ್ನ ರಾಷ್ಟ್ರದಲ್ಲಿ ಯಾಚಕರಿಲ್ಲದಿರಲಿ. ಕಳ್ಳರೂ ಇಲ್ಲದಿರಲಿ. ಇವರು

---

[247] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಮದ್ಯಮಾಂಸಪರಸ್ವಾನಿ ತಥಾ ದಾರಾ ಧನಾನಿ ಚ| ಆಹರೇದ್ರಾಗವಶಗಸ್ತಥಾ ಶಾಸ್ತ್ರಂ ಪ್ರದರ್ಶಯೇತ್||

ಪ್ರಜೆಗಳ ಧನವನ್ನು ಅಪಹರಿಸುವರೇ ಹೊರತು ಪ್ರಜೆಗಳ ಐಶ್ವರ್ಯವನ್ನು ವೃದ್ಧಿಸುವುದಿಲ್ಲ.

12089021a ಯೇ ಭೂತಾನ್ಯನುಗೃಹ್ಣಂತಿ ವರ್ಧಯಂತಿ ಚ ಯೇ ಪ್ರಜಾಃ|
12089021c ತೇ ತೇ ರಾಷ್ಟ್ರೇ ಪ್ರವರ್ತಂತಾಂ ಮಾ ಭೂತಾನಾಮಭಾವಕಾಃ||

ಇರುವವುಗಳಿಗೆ ಅನುಗ್ರಹಿಸುವ ಮತ್ತು ಪ್ರಜೆಗಳ ಅಭಿವೃದ್ಧಿಯನ್ನು ಮಾಡುವವರು ನಿನ್ನ ರಾಷ್ಟ್ರದಲ್ಲಿರಲಿ. ಇರುವವುಗಳು ನಾಶಗೊಳಿಸುವವರು ನಿನ್ನ ರಾಷ್ಟ್ರದಲ್ಲಿ ಇಲ್ಲದಿರಲಿ.

12089022a ದಂಡ್ಯಾಸ್ತೇ ಚ ಮಹಾರಾಜ ಧನಾದಾನಪ್ರಯೋಜನಾಃ|
12089022c ಪ್ರಯೋಗಂ ಕಾರಯೇಯುಸ್ತಾನ್ಯಥಾ ಬಲಿಕರಾಂಸ್ತಥಾ||

ಮಹಾರಾಜ! ಉಚಿತವಾದುದಕ್ಕಿಂತಲೂ ಅಧಿಕ ತೆರಿಗೆಯನ್ನು ತೆಗೆದುಕೊಳ್ಳುವ ಅಧಿಕಾರಿಗಳನ್ನು ನೀನು ಶಿಕ್ಷಿಸಬೇಕು. ಹಾಗೆ ಮಾಡದಿದ್ದರೆ ಇತರ ಅಧಿಕಾರಿಗಳೂ ಅಧಿಕ ತೆರಿಗೆಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಬಹುದು.

12089023a ಕೃಷಿಗೋರಕ್ಷ್ಯವಾಣಿಜ್ಯಂ ಯಚ್ಚಾನ್ಯತ್ಕಿಂ ಚಿದೀದೃಶಮ್|
12089023c ಪುರುಷೈಃ ಕಾರಯೇತ್ಕರ್ಮ ಬಹುಭಿಃ ಸಹ ಕರ್ಮಿಭಿಃ||

ಕೃಷಿ, ಗೋರಕ್ಷಣೆ, ವಾಣಿಜ್ಯ ಇವೇ ಮೊದಲಾದವುಗಳನ್ನು ಅನೇಕ ಕುಶಲ ಪುರುಷರಿಂದ ಮಾಡಿಸಿಕೊಳ್ಳಬೇಕು.

12089024a ನರಶ್ಚೇತ್ಕೃಷಿಗೋರಕ್ಷ್ಯಂ ವಾಣಿಜ್ಯಂ ಚಾಪ್ಯನುಷ್ಠಿತಃ|
12089024c ಸಂಶಯಂ ಲಭತೇ ಕಿಂ ಚಿತ್ತೇನ ರಾಜಾ ವಿಗರ್ಹ್ಯತೇ||

ಕೃಷಿ, ಗೋಪಾಲನೆ ಮತ್ತು ವಾಣಿಜ್ಯಗಳಲ್ಲಿ ತೊಡಗಿರುವವರು

ಕಳ್ಳಕಾಕರ ಪೀಡೆಗೆ ಒಳಗಾದಾಗ ಅವರಿಗೆ ಸರಿಯಾದ ರಕ್ಷಣೆಯನ್ನು ನೀಡದ ರಾಜನೇ ನಿಂದನೆಗೊಳಗಾಗುತ್ತಾನೆ.

12089025a ಧನಿನಃ ಪೂಜಯೇನ್ನಿತ್ಯಂ ಯಾನಾಚ್ಚಾದನಭೋಜನೈಃ|
12089025c ವಕ್ತವ್ಯಾಶ್ಚಾನುಗೃಹ್ಣೀಧ್ವಂ ಪೂಜಾಃ ಸಹ ಮಯೇತಿ ಹ||

ಧನಿಕರನ್ನು ನಿತ್ಯವೂ ವಾಹನ, ತೊಡುಗೆ, ಮತ್ತು ಭೋಜನಗಳೊಂದಿಗೆ ಸತ್ಕರಿಸಬೇಕು. ನನ್ನೊಡನೆ ನನ್ನ ಪ್ರಜೆಗಳನ್ನು ಕೃಪಾದೃಷ್ಟಿಯಿಂದ ಕಾಣಿರಿ ಎಂದು ಅವರಿಗೆ ಹೇಳಬೇಕು.

12089026a ಅಂಗಮೇತನ್ಮಹದ್ರಾಜ್ಞಾಂ ಧನಿನೋ ನಾಮ ಭಾರತ|
12089026c ಕಕುದಂ ಸರ್ವಭೂತಾನಾಂ ಧನಸ್ಥೋ ನಾತ್ರ ಸಂಶಯಃ||

ಭಾರತ! ಧನಿಕರು ರಾಜ್ಯದ ಒಂದು ಮಹಾ ಅಂಗವಾಗಿರುತ್ತಾರೆ. ಧನಿಕನು ಸರ್ವಭೂತಗಳಿಗೂ ಶಿಖರಪ್ರಾಯ ಎನ್ನುವುದರಲ್ಲಿ ಸಂಶಯವಿಲ್ಲ.

12089027a ಪ್ರಾಜ್ಞಃ ಶೂರೋ ಧನಸ್ಥಶ್ಚ ಸ್ವಾಮೀ ಧಾರ್ಮಿಕ ಏವ ಚ|
12089027c ತಪಸ್ವೀ ಸತ್ಯವಾದೀ ಚ ಬುದ್ಧಿಮಾಂಶ್ಚಾಭಿರಕ್ಷತಿ||

ಪ್ರಾಜ್ಞ, ಶೂರ, ಧನಿಕ, ರಾಜ, ಧಾರ್ಮಿಕ, ತಪಸ್ವೀ, ಸತ್ಯವಾದೀ ಮತ್ತು ಬುದ್ಧಿವಂತ – ಇವರೆಲ್ಲರೂ ಸೇರಿ ಪ್ರಜೆಗಳನ್ನು ರಕ್ಷಿಸುತ್ತಾರೆ.

12089028a ತಸ್ಮಾದೇತೇಷು ಸರ್ವೇಷು ಪ್ರೀತಿಮಾನ್ಭವ ಪಾರ್ಥಿವ|
12089028c ಸತ್ಯಮಾರ್ಜವಮಕ್ರೋಧಮಾನೃಶಂಸ್ಯಂ ಚ ಪಾಲಯ||

ಪಾರ್ಥಿವ! ಆದುದರಿಂದ ಇವರೆಲ್ಲರ ಮೇಲೆ ಪ್ರೀತಿವಂತನಾಗಿರು. ಸತ್ಯ, ಸರಳತೆ, ಅಕ್ರೋಧ, ಅಹಿಂಸೆ ಇವುಗಳನ್ನು ಪಾಲಿಸು.

12089029a ಏವಂ ದಂಡಂ ಚ ಕೋಶಂ ಚ ಮಿತ್ರಂ ಭೂಮಿಂ ಚ ಲಪ್ಸ್ಯಸೇ|
12089029c ಸತ್ಯಾರ್ಜವಪರೋ ರಾಜನ್ಮಿತ್ರಕೋಶಸಮನ್ವಿತಃ||

ಹೀಗೆ ನೀನು ದಂಡಾಧಿಕಾರ, ಕೋಶ, ಮಿತ್ರರು, ಮತ್ತು ಭೂಮಿಯನ್ನು ಪಡೆದುಕೊಳ್ಳುತ್ತೀಯೆ. ರಾಜನ್! ಸತ್ಯಪರ ಮತ್ತು ಸರಳನಾಗಿದ್ದರೆ ಮಿತ್ರ-ಕೋಶಗಳಿಂದ ಸಂಪನ್ನನಾಗುವೆ."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಕೋಶಸಂಚಯಪ್ರಕಾರಕಥನೇ ಏಕೋನನವತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ಕೋಶಸಂಚಯಪ್ರಕಾರಕಥನ ಎನ್ನುವ ಎಂಭತ್ತೊಂಭತ್ತನೇ ಅಧ್ಯಾಯವು.

೯೦

ರಾಷ್ಟ್ರಗುಪ್ತ

ರಾಜನ ಕರ್ತವ್ಯಗಳು (1-26).

12090001 ಭೀಷ್ಮ ಉವಾಚ|
12090001a ವನಸ್ಪತೀನ್ ಭಕ್ಷ್ಯಫಲಾನ್ನ ಚಿಂದ್ಯುರ್ವಿಷಯೇ ತವ|
12090001c ಬ್ರಾಹ್ಮಣಾನಾಂ ಮೂಲಫಲಂ ಧರ್ಮ್ಯಮಾಹುರ್ಮನೀಷಿಣಃ||

ಭೀಷ್ಮನು ಹೇಳಿದನು: "ನಿನ್ನ ರಾಜ್ಯದಲ್ಲಿ ತಿನ್ನುವ ಹಣ್ಣುಗಳನ್ನು ನೀಡುವ ವನಸ್ಪತಿಗಳನ್ನು ಕಡಿಯದಿರಲಿ. ಫಲ-ಮೂಲಗಳು ಬ್ರಾಹ್ಮಣರಿಗೆ ಸೇರಿದ್ದವು

ಎಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

12090002a ಬ್ರಾಹ್ಮಣೇಭ್ಯೋಽತಿರಿಕ್ತಂ ಚ ಭುಂಜೀರನ್ನಿತರೇ ಜನಾಃ|
12090002c ನ ಬ್ರಾಹ್ಮಣೋಪರೋಧೇನ ಹರೇದನ್ಯಃ ಕಥಂ ಚನ||

ಬ್ರಾಹ್ಮಣರು ಸೇವಿಸಿ ಅಧಿಕವಾಗಿರುವ ಮೂಲ-ಫಲಗಳನ್ನು ಇತರ ಜನರು ಭುಂಜಿಸಬೇಕು. ಬ್ರಾಹ್ಮಣರಿಂದ ಇದನ್ನು ಕಸಿದುಕೊಳ್ಳುವ ಅಪರಾಧವನ್ನು ಎಂದೂ ಮಾಡಬಾರದು.

12090003a ವಿಪ್ರಶ್ಚೇತ್ತ್ಯಾಗಮಾತಿಷ್ಠೇದಾಖ್ಯಾಯಾವೃತ್ತಿಕರ್ಶಿತಃ|
12090003c ಪರಿಕಲ್ಪ್ಯಸ್ಯ ವೃತ್ತಿಃ ಸ್ಯಾತ್ಸದಾರಸ್ಯ ನರಾಧಿಪ||

ನರಾಧಿಪ! ಸ್ವವೃತ್ತಿಯಿಂದ ಜೀವನವನ್ನು ನಡೆಸಲು ಅಶಕ್ಯನಾಗಿ ದೇಶವನ್ನು ತ್ಯಜಿಸಿ ಅನ್ಯ ದೇಶಕ್ಕೆ ಹೊರಟರೆ ಪರಿವಾರ ಸಹಿತ ಅವನನ್ನು ತಡೆದು ವೃತ್ತಿಯನ್ನು ಕಲ್ಪಿಸಿಕೊಡುವುದು ರಾಜನ ಕರ್ತವ್ಯವಾಗಿರುತ್ತದೆ.

12090004a ಸ ಚೇನ್ನೋಪನಿವರ್ತೇತ ವಾಚ್ಯೋ ಬ್ರಾಹ್ಮಣಸಂಸದಿ|
12090004c ಕಸ್ಮಿನ್ನಿದಾನೀಂ ಮರ್ಯಾದಾಮಯಂ ಲೋಕಃ ಕರಿಷ್ಯತಿ||

ಆದರೂ ಅವನು ಹಿಂದಿರುಗದಿದ್ದರೆ ಬ್ರಾಹ್ಮಣಸಂಸದಿಯಲ್ಲಿ ಅವನನ್ನು ಉದ್ದೇಶಿಸಿ "ನೀನು ಹೀಗೆ ಮಾಡಿದರೆ ನನ್ನ ಪ್ರಜೆಗಳು ಯಾರನ್ನಾಶ್ರಯಿಸಿ ಧರ್ಮದ ಮರ್ಯಾದೆಯನ್ನು ಪರಿಪಾಲಿಸುವರು?" ಎಂದು ಕೇಳಿಕೊಳ್ಳಬೇಕು.

12090005a ಅಸಂಶಯಂ ನಿವರ್ತೇತ ನ ಚೇದ್ವೃಕ್ಷ್ಯತ್ಯತಃ ಪರಮ್|
12090005c ಪೂರ್ವಂ ಪರೋಕ್ಷಂ ಕರ್ತವ್ಯಮೇತತ್ಕೌಂತೇಯ ಶಾಸನಮ್||

ಕೌಂತೇಯ! ಆಗ ಅವನು ನಿಃಸಂಶಯವಾಗಿಯೂ ಹಿಂದಿರುಗುತ್ತಾನೆ. ಆಗಲೂ ಹಿಂದಿರುಗದೇ ಇದ್ದರೆ ಅವನಿಗೆ ಇನ್ನೊಮ್ಮೆ "ಹಿಂದೆ ನಾನೇನಾದರೂ ಪರೋಕ್ಷವಾಗಿ ಅಪರಾಧಗೈದಿದ್ದರೆ ಅದನ್ನು ಕ್ಷಮಿಸಬೇಕು" ಎಂದು ಕೇಳಿಕೊಳ್ಳಬೇಕು. ಇದು ರಾಜ ಶಾಸನದ ಕರ್ತವ್ಯವಾಗಿರುತ್ತದೆ.

12090006a ಆಹುರೇತಜ್ಜನಾ ಬ್ರಹ್ಮನ್ನ ಚೈತಚ್ಚ್ರದ್ದಧಾಮ್ಯಹಮ್|
12090006c ನಿಮಂತ್ರ್ಯಶ್ಚ ಭವೇದ್ಭೋಗ್ಯೈರವೃತ್ತ್ಯಾ ಚೇತ್ತದಾಚರೇತ್||

ಬ್ರಾಹ್ಮಣರಿಗೆ ಭೋಗವಸ್ತುಗಳನ್ನು ನೀಡಬೇಕು ಮತ್ತು ವೃತ್ತಿಯನ್ನು ಮಾಡಿಕೊಡಬೇಕು ಎಂದು ಜನರು ಹೇಳುತ್ತಾರೆ. ಆದರೆ ಅದರಲ್ಲಿ ನನಗೆ ಶ್ರದ್ಧೆಯಿಲ್ಲ[248].

12090007a ಕೃಷಿಗೋರಕ್ಷ್ಯವಾಣಿಜ್ಯಂ ಲೋಕಾನಾಮಿಹ ಜೀವನಮ್|
12090007c ಊರ್ಧ್ವಂ ಚೈವ ತ್ರಯೀ ವಿದ್ಯಾ ಸಾ ಭೂತಾನ್ ಭಾವಯತ್ಯುತ||

ಕೃಷಿ, ಗೋರಕ್ಷೆ ಮತ್ತು ವಾಣಿಜ್ಯಗಳು ಈ ಲೋಕದಲ್ಲಿ ಜೀವನಕ್ಕೆ ಆಧಾರಭೂತಗಳಾಗಿವೆ. ಮೂರು ವೇದಗಳು ಊರ್ಧ್ವಲೋಕದಲ್ಲಿ ಮನುಷ್ಯನ ರಕ್ಷಣೆಗೆ ಸಾಧಕಗಳಾಗಿವೆ. ಆ ಮೂರು ವೇದಗಳೂ ಯಜ್ಞಗಳ ಮೂಲಕ ಪ್ರಾಣಿಗಳ ಉತ್ಪತ್ತಿ-ವೃದ್ಧಿಗಳಿಗೆ ಕಾರಣಗಳಾಗಿವೆ.

12090008a ತಸ್ಯಾಂ ಪ್ರಯತಮಾನಾಯಾಂ ಯೇ ಸ್ಯುಸ್ತತ್ಪರಿಪಂಥಿನಃ|
12090008c ದಸ್ಯವಸ್ತದ್ವಧಾಯೇಹ ಬ್ರಹ್ಮಾ ಕ್ಷತ್ರಮಥಾಸೃಜತ್||

---

[248] ಏಕೆಂದರೆ ಬ್ರಾಹ್ಮಣರು ಭೋಗಾಸಕ್ತರಲ್ಲ. ಜೀವನದ ವಿಷಯವಾಗಿಯೂ ಅವರು ಹೆಚ್ಚು ಯೋಚಿಸುವವರಲ್ಲ.

ಅಧ್ಯಯನ-ಅಧ್ಯಾಪನಗಳಿಗೆ ಮತ್ತು ವೇದೋಕ್ತ ಯಜ್ಞ-ಯಾಗಾದಿಗಳಿಗೆ ಬಾಧೆಯನ್ನುಂಟುಮಾಡುವವರೇ ದಸ್ಯುಗಳು. ದಸ್ಯುಗಳ ವಧೆಗಾಗಿಯೇ ಬ್ರಹ್ಮನು ಕ್ಷತ್ರಿಯರನ್ನು ಸೃಷ್ಟಿಸಿದ್ದಾನೆ.

12090009a ಶತ್ರೂನ್ ಜಹಿ ಪ್ರಜಾ ರಕ್ಷ ಯಜಸ್ವ ಕ್ರತುಭಿರ್ನೃಪ|
12090009c ಯುಧ್ಯಸ್ವ ಸಮರೇ ವೀರೋ ಭೂತ್ವಾ ಕೌರವನಂದನ||

ನೃಪ! ಕೌರವನಂದನ! ಶತ್ರುಗಳನ್ನು ಸಂಹರಿಸು. ಪ್ರಜೆಗಳನ್ನು ರಕ್ಷಿಸು. ಕ್ರತುಗಳನ್ನು ಯಾಜಿಸು. ವೀರನಾಗಿ ಸಮರದಲ್ಲಿ ಯುದ್ಧಮಾಡು.

12090010a ಸಂರಕ್ಷ್ಯಾನ್ ಪಾಲಯೇದ್ರಾಜಾ ಯಃ ಸ ರಾಜಾರ್ಯಕೃತ್ತಮಃ|
12090010c ಯೇ ಕೇ ಚಿತ್ತಾನ್ನ ರಕ್ಷಂತಿ ತೈರಥೋ೯ ನಾಸ್ತಿ ಕಶ್ಚನ||

ಸಂರಕ್ಷಿಸಬೇಕಾದವರನ್ನು ಪಾಲಿಸುವ ರಾಜನು ರಾಜರಲ್ಲಿಯೇ ಆರ್ಯನೆನಿಸಿಕೊಳ್ಳುತ್ತಾನೆ. ರಕ್ಷಿಸಬೇಕಾದವರನ್ನು ರಕ್ಷಿಸದೇ ಇರುವ ರಾಜನಿಂದ ಜಗತ್ತಿಗೆ ಯಾವ ವಿಧವಾದ ಪ್ರಯೋಜನವೂ ಇಲ್ಲ.

12090011a ಸದ್ಯೈವ ರಾಜ್ಞಾ ಬೋದ್ಧವ್ಯಂ[249] ಸರ್ವಲೋಕಾದ್ಯುಧಿಷ್ಠಿರ|
12090011c ತಸ್ಮಾದ್ಧೇತೋರ್ಹಿ ಭುಂಜೀತ ಮನುಷ್ಯಾನೇವ ಮಾನವಃ||

ಯುಧಿಷ್ಠಿರ! ರಾಜನಾದವನು ಸದ್ಯೈವ ಸರ್ವಪ್ರಜೆಗಳನೂ ತಿಳಿದುಕೊಂಡಿರಬೇಕು. ಆ ಕಾರಣಕ್ಕಾಗಿಯೇ ಆ ಮಾನವಶ್ರೇಷ್ಠನು ಎಲ್ಲ ಕಡೆ ಗುಪ್ತಚಾರರನ್ನು ನಿಯಮಿಸಿಕೊಂಡಿರುತ್ತಾನೆ.

12090012a ಅಂತರೇಭ್ಯಃ ಪರಾನ್ರಕ್ಷನ್ ಪರೇಭ್ಯಃ ಪುನರಂತರಾನ್|
12090012c ಪರಾನ್ಪರೇಭ್ಯಃ ಸ್ವಾನ್ ಸ್ವೇಭ್ಯಃ ಸರ್ವಾನ್ಪಾಲಯ ನಿತ್ಯದಾ||

---

[249] ಯೋದ್ಧವ್ಯಂ ಎಂಬ ಪಾಠಾಂತರವಿದೆ (ಭಾರತ ದರ್ಶನ).

ನಿನ್ನ ಅಂತರಂಗದ ಮನುಷ್ಯರಿಂದ ಬಹಿರಂಗದ ಮನುಷ್ಯರನ್ನು ರಕ್ಷಿಸು. ಹೊರಗಡೆಯವರಿಂದ ಒಳಗಿನ ಜನರನ್ನು ರಕ್ಷಿಸು. ಬಹಿರಂಗದ ಪ್ರಜೆಗಳನ್ನು ಶತ್ರುಗಳಿಂದ ರಕ್ಷಿಸು. ಅಂತರಂಗದ ಜನರಲ್ಲಿಯೇ ಬೇಧ-ಭಾವವುಂಟಾಗಬಹುದು. ಹೀಗೆ ನಿನಗೆ ಸಂಬಂಧಿಸಿದ ಎಲ್ಲರನ್ನೂ ಮತ್ತು ಪ್ರಜೆಗಳನ್ನೂ ರಕ್ಷಿಸು.

12090013a ಆತ್ಮಾನಂ ಸರ್ವತೋ ರಕ್ಷನ್ರಾಜಾ ರಕ್ಷೇತ ಮೇದಿನೀಮ್|
12090013c ಆತ್ಮಮೂಲಮಿದಂ ಸರ್ವಮಾಹುರ್ಹಿ ವಿದುಷೋ ಜನಾಃ||

ರಾಜನಾದವನು ಮೊದಲು ಸರ್ವಪ್ರಕಾರಗಳಿಂದಲೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು. ನಂತರ ರಾಜ್ಯವನ್ನು ರಕ್ಷಿಸಬೇಕು. ಇವೆಲ್ಲವೂ ಆತ್ಮಮೂಲವಾಗಿವೆ ಎಂದು ವಿದ್ವಾಂಸರು ಹೇಳುತ್ತಾರೆ.

12090014a ಕಿಂ ಚಿದ್ರಂ ಕೋಽನುಷಂಗೋ ಮೇ ಕಿಂ ವಾಸ್ತ್ಯವಿನಿಪಾತಿತಮ್|
12090014c ಕುತೋ ಮಾಮಾಸ್ರವೇದ್ದೋಷ ಇತಿ ನಿತ್ಯಂ ವಿಚಿಂತಯೇತ್||

ನನ್ನಲ್ಲಿ ಯಾವ ದೌರ್ಬಲ್ಯಗಳಿವೆ? ನನ್ನಲ್ಲಿ ಯಾವರೀತಿಯ ದುರ್ವ್ಯಸನಗಳಿವೆ? ನನಗೆ ನಿಜವಾಗಿಯೂ ಪ್ರಜೆಗಳನ್ನು ರಕ್ಷಿಸುವುದರಲ್ಲಿ ಆಸಕ್ತಿಯಿದೆಯೇ? ಅದಕ್ಕೆ ಕಾರ್ಯವಿಧಾನವಿದೆಯೇ? ಇನ್ನೂ ದೂರವಾಗದೇ ಇರುವ ಯಾವ ವ್ಯಸನಗಳು ನನ್ನಲ್ಲಿವೆ? ಇವುಗಳ ಕುರಿತು ರಾಜನಾದವನು ನಿತ್ಯವೂ ಚಿಂತಿಸುತ್ತಿರಬೇಕು.

12090015a ಗುಪ್ತೈಶ್ಚಾರ್ಯೈರನುಮತ್ಯೈಃ ಪೃಥಿವೀಮನುಚಾರಯೇತ್|
12090015c ಸುನೀತಂ ಯದಿ ಮೇ ವೃತ್ತಂ ಪ್ರಶಂಸಂತಿ ನ ವಾ ಪುನಃ|
12090015e ಕಚ್ಚಿದ್ಯೋಚೇಜ್ಜನಪದೇ ಕಚ್ಚಿದ್ರಾಷ್ಟ್ರೇ ಚ ಮೇ ಯಶಃ||

“ನಾನು ನಡೆಸಿರುವ ವ್ಯವಹಾರಗಳನ್ನು ಜನರು ಪುನಃ ಪುನಃ ಪ್ರಶಂಸಿಸುತ್ತಿರುವರೇ? ಕೆಲವು ಜನಪದಗಳಲ್ಲಿ ಮಾತ್ರ ಜನರು ನನ್ನನ್ನು ಪ್ರಶಂಸಿಸುತ್ತಾರೆಯೇ? ಅಥವಾ ರಾಷ್ಟ್ರಾದ್ಯಂತ ಜನರು ನನ್ನನ್ನು ಬಯಸುತ್ತಾರೆಯೇ?” ಎನ್ನುವುದನ್ನು ತಿಳಿದುಕೊಳ್ಳಲು ರಾಜನಾದವನು ವಿಶ್ವಾಸಪಾತ್ರ ಗುಪ್ತಚಾರರನ್ನು ಭೂಮಂಡಲದ ಎಲ್ಲಕಡೆ ಕಳುಹಿಸಬೇಕು.

12090016a ಧರ್ಮಜ್ಞಾನಾಂ ಧೃತಿಮತಾಂ ಸಂಗ್ರಾಮೇಷ್ವಪಲಾಯಿನಾಮ್|
12090016c ರಾಷ್ಟ್ರಂ ಚ ಯೇಽನುಜೀವಂತಿ ಯೇ ಚ ರಾಜ್ಞೋಽನುಜೀವಿನಃ||
12090017a ಅಮಾತ್ಯಾನಾಂ ಚ ಸರ್ವೇಷಾಂ ಮಧ್ಯಸ್ಥಾನಾಂ ಚ ಸರ್ವಶಃ|
12090017c ಯೇ ಚ ತ್ವಾಭಿಪ್ರಶಂಸೇಯುರ್ನಿಂದೇಯುರಥ ವಾ ಪುನಃ|
12090017e ಸರ್ವಾನ್ಸುಪರಿಣೀತಾಂಸ್ತಾನ್ಕಾರಯೇತ ಯುಧಿಷ್ಠಿರ||

ಯುಧಿಷ್ಠಿರ! ನಿನ್ನ ಪ್ರಶಂಸೆಮಾಡುವ ಮತ್ತು ನಿಂದನೆಯನ್ನು ಮಾಡುವ ಎಲ್ಲ ಧರ್ಮಜ್ಞರನ್ನೂ, ಧೈರ್ಯಶಾಲಿಗಳನ್ನೂ, ಸಂಗ್ರಾಮದಲ್ಲಿ ಪಲಾಯನಮಾಡದಿರುವವರನ್ನೂ, ನಿನ್ನ ರಾಷ್ಟ್ರದಲ್ಲಿಯೇ ಉಪಜೀವನವನ್ನು ನಡೆಸುತ್ತಿರುವವರನ್ನೂ, ರಾಜನನ್ನೇ ಆಶ್ರಯಿಸಿ ಜೀವಿಸಿರುವವರನ್ನೂ, ಅಮಾತ್ಯರನ್ನೂ, ಮಧ್ಯಸ್ಥರನ್ನೂ – ಎಲ್ಲರನ್ನೂ ನೀನು ಯಥಾಯೋಗ್ಯವಾಗಿ ಸತ್ಕರಿಸಬೇಕು.

12090018a ಏಕಾಂತೇನ ಹಿ ಸರ್ವೇಷಾಂ ನ ಶಕ್ಯಂ ತಾತ ರೋಚಿತುಮ್|
12090018c ಮಿತ್ರಾಮಿತ್ರಮಥೋ ಮಧ್ಯಂ ಸರ್ವಭೂತೇಷು ಭಾರತ||

ಅಯ್ಯಾ! ಭಾರತ! ಒಬ್ಬನೇ ಎಲ್ಲರಿಗೂ ಇಷ್ಟವಾಗಲು ಶಕ್ಯವಿಲ್ಲ. ಎಲ್ಲ ಜೀವಿಗಳಿಗೂ ಮಿತ್ರ, ಅಮಿತ್ರ ಮತ್ತು ಮಧ್ಯಸ್ಥ ಎನ್ನುವವರು ಇದ್ದೇ ಇರುತ್ತಾರೆ.

12090019a ತುಲ್ಯಬಾಹುಬಲಾನಾಂ ಚ ಗುಣೈರಪಿ ನಿಷೇವಿನಾಮ್|
12090019c ಕಥಂ ಸ್ಯಾದಧಿಕಃ ಕಶ್ಚಿತ್ಸ ತು ಭುಂಜೀತ ಮಾನವಾನ್||

ಬಾಹುಬಲದಲ್ಲಿ ಸಮಾನನಾಗಿದ್ದರೂ ಮತ್ತು ಗುಣಗಳು ಒಂದೇ ಆಗಿದ್ದರೂ ಒಬ್ಬರು ಮಾತ್ರ ಹೇಗೆ ಎಲ್ಲರನ್ನೂ ಶಾಸನ ಮಾಡುತ್ತಾನೆ?

12090020a ಯೇ ಚರಾ ಹ್ಯಚರಾನದ್ಯುರದಂಷ್ಟ್ರಾನ್ದಂಷ್ಟ್ರಿಣಸ್ತಥಾ|
12090020c ಆಶೀವಿಷಾ ಇವ ಕ್ರುದ್ಧಾ ಭುಜಗಾ ಭುಜಗಾನಿವ||

ಯಾವರೀತಿಯಲ್ಲಿ ಕೋಪಗೊಂಡ ವಿಷಸರ್ಪಗಳು ಇತರ ಚಿಕ್ಕ ಹಾವುಗಳನ್ನು ನುಂಗಿಹಾಕುತ್ತವೆಯೋ, ಚಲಿಸುವ ಪ್ರಾಣಿಗಳು ಚಲಿಸದಿರುವ ವಸ್ತುಗಳನ್ನು ನುಂಗಿಹಾಕುತ್ತವೆಯೋ, ಕೋರೆದಾಡೆಗಳಿರುವ ಪ್ರಾಣಿಗಳು ಕೋರೆದಾಡೆಗಳಿಲ್ಲದ ಪ್ರಾಣಿಗಳನ್ನು ತಿನ್ನುತ್ತವೆಯೋ ಹಾಗೆ ಪ್ರಬಲರಾದವರು ದುರ್ಬಲರಾದವರ ಮೇಲೆ ಅಧಿಕಾರವನ್ನು ನಡೆಸುತ್ತಾರೆ.

12090021a ಏತೇಭ್ಯಶ್ಚಾಪ್ರಮತ್ತಃ ಸ್ಯಾತ್ಸದಾ ಯತ್ತೋ ಯುಧಿಷ್ಠಿರ|
12090021c ಭಾರುಂಡಸದೃಶಾ ಹ್ಯೇತೇ ನಿಪತಂತಿ ಪ್ರಮಾದ್ಯತಃ||

ಯುಧಿಷ್ಠಿರ! ಪ್ರಯತ್ನಶೀಲ ರಾಜನು ಇವೆಲ್ಲವುಗಳಿಂದ ಸದಾ ಅಪ್ರಮತ್ತನಾಗಿರಬೇಕು. ರಾಜನು ಪ್ರಮಾದಕ್ಕೊಳಗಾದರೆ ಗಂಡಭೇರುಂಡ ಸಮಾನ ಶತ್ರುಗಳು ರಾಜನ ಮೇಲೆ ಆಕ್ರಮಣ ಮಾಡುತ್ತಾರೆ.

12090022a ಕಚ್ಚಿತ್ತೇ ವಣಿಜೋ ರಾಷ್ಟ್ರೇ ನೋದ್ವಿಜಂತೇ ಕರಾರ್ದಿತಾಃ|
12090022c ಕ್ರೀಣಂತೋ ಬಹು ವಾಲ್ಪೇನ ಕಾಂತಾರಕೃತನಿಶ್ರಮಾಃ||

ಕಾಡುಮೇಡುಗಳಲ್ಲಿ ಅಲೆದು ಶ್ರಮಪಟ್ಟು ದೊಡ್ಡ ಅಥವಾ ಅಲ್ಪ ಪ್ರಮಾಣದಲ್ಲಿ ಮಾರಾಟಮಾಡುವ ವಣಿಜರು ನಿನ್ನ ರಾಷ್ಟ್ರದಲ್ಲಿ ತೆರಿಗೆಯ ಭಾರದಿಂದ ಉದ್ವಿಗ್ನರಾಗುತ್ತಿಲ್ಲ ತಾನೇ?

12090023a ಕಚ್ಚಿತ್ಕೃಷಿಕರಾ ರಾಷ್ಟ್ರಂ ನ ಜಹತ್ಯತಿಪೀಡಿತಾಃ|
12090023c ಯೇ ವಹಂತಿ ಧುರಂ ರಾಜ್ಞಾಂ ಸಂಭರಂತೀತರಾನಪಿ||

ಕೃಷಿಕರು ಅತಿಯಾಗಿ ಪೀಡಿತರಾಗಿ ನಿನ್ನ ರಾಷ್ಟ್ರವನ್ನು ಬಿಟ್ಟು ಹೋಗುತ್ತಿಲ್ಲ ತಾನೇ? ಏಕೆಂದರೆ ಅವರು ರಾಜನ ಭಾರವನ್ನು ಹೊರುತ್ತಾರೆ. ಪ್ರಜೆಗಳನ್ನೂ ಪಾಲಿಸುತ್ತಾರೆ.

12090024a ಇತೋ ದತ್ತೇನ ಜೀವಂತಿ ದೇವಾಃ ಪಿತೃಗಣಾಸ್ತಥಾ|
12090024c ಮನುಷ್ಯೋರಗರಕ್ಷಾಂಸಿ ವಯಾಂಸಿ ಪಶವಸ್ತಥಾ||

ಇವರು ನೀಡುವ ಧಾನ್ಯಾದಿಗಳಿಂದಲೇ ದೇವತೆಗಳು, ಪಿತೃಗಳು, ಮನುಷ್ಯರು, ಉರಗ-ರಾಕ್ಷಸರು, ಪಶು-ಪಕ್ಷಿಗಳು ಎಲ್ಲವೂ ಜೀವನವನ್ನು ನಡೆಸುತ್ತವೆ.

12090025a ಏಷಾ ತೇ ರಾಷ್ಟ್ರವೃತ್ತಿಶ್ಚ ರಾಷ್ಟ್ರಗುಪ್ತಿಶ್ಚ ಭಾರತ|
12090025c ಏತಮೇವಾರ್ಥಮಾಶ್ರಿತ್ಯ ಭೂಯೋ ವಕ್ಷ್ಯಾಮಿ ಪಾಂಡವ||

ಭಾರತ! ಪಾಂಡವ! ಇವು ರಾಷ್ಟ್ರದಲ್ಲಿ ನಡೆದುಕೊಳ್ಳುವ ಮತ್ತು ರಾಷ್ಟ್ರವನ್ನು ರಕ್ಷಿಸುವ ವಿಧಾನಗಳು. ಇದಕ್ಕೆ ಸಂಬಂಧಿಸಿದಂತೆ ಮುಂದೆಯೂ ಹೇಳುತ್ತೇನೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ ರಾಷ್ಟ್ರಗುಪ್ತೌ ನವತಿತಮೋಽಧ್ಯಾಯಃ||

ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ ರಾಷ್ಟ್ರಗುಪ್ತ ಎನ್ನುವ ತೊಂಭತ್ತನೇ ಅಧ್ಯಾಯವು.

೯೧

ಉತಥ್ಯಗೀತಾ

ರಾಜನ ಕರ್ತವ್ಯಗಳ ಕುರಿತು ಉತಥ್ಯನು ಮಾಂಧಾತನಿಗೆ ಉಪದೇಶಿಸಿದುದು (1-38).

12091001 ಭೀಷ್ಮ ಉವಾಚ|
12091001a ಯಾನಂಗಿರಾಃ ಕ್ಷತ್ರಧರ್ಮಾನುತಥ್ಯೋ ಬ್ರಹ್ಮವಿತ್ತಮಃ|
12091001c ಮಾಂಧಾತ್ರೇ ಯೌವನಾಶ್ವಾಯ ಪ್ರೀತಿಮಾನಭ್ಯಭಾಷತ||

ಭೀಷ್ಮನು ಹೇಳಿದನು: "ಬ್ರಹ್ಮವಿತ್ತಮ ಅಂಗಿರಸನ ಮಗ ಉತಥ್ಯನು ಯುವನಾಶ್ವನ ಮಗ ಮಾಂಧಾತನಿಗೆ ಪ್ರೀತಿಪೂರ್ವಕವಾಗಿ ಹೇಳಿದನು.

12091002a ಸ ಯಥಾನುಶಶಾಸ್ಯೈನಮುತಥ್ಯೋ ಬ್ರಹ್ಮವಿತ್ತಮಃ|
12091002c ತತ್ತೇ ಸರ್ವಂ ಪ್ರವಕ್ಷ್ಯಾಮಿ ನಿಖಿಲೇನ ಯುಧಿಷ್ಠಿರ||

ಯುಧಿಷ್ಠಿರ! ಬ್ರಹ್ಮವಿತ್ತಮ ಉತಥ್ಯನು ಹೇಗೆ ಅವನಿಗೆ ಉಪದೇಶಿಸಿದನೋ ಅವೆಲ್ಲವನ್ನೂ ಸಂಪೂರ್ಣವಾಗಿ ನಿನಗೆ ಹೇಳುತ್ತೇನೆ.

12091003 ಉತಥ್ಯ ಉವಾಚ|
12091003a ಧರ್ಮಾಯ ರಾಜಾ ಭವತಿ ನ ಕಾಮಕರಣಾಯ ತು|
12091003c ಮಾಂಧಾತರೇವಂ ಜಾನೀಹಿ ರಾಜಾ ಲೋಕಸ್ಯ ರಕ್ಷಿತಾ||

ಉತಥ್ಯನು ಹೇಳಿದನು: "ಮಾಂಧಾತ! ಧರ್ಮಕ್ಕಾಗಿ ರಾಜನಾಗುತ್ತಾನೆ. ಬಯಸಿದಂತೆ ಮಾಡುವುದಕ್ಕಲ್ಲ. ರಾಜನು ಲೋಕದ ರಕ್ಷಕ ಎನ್ನುವುದನ್ನು ತಿಳಿದುಕೋ.

12091004a ರಾಜಾ ಚರತಿ ವೈ ಧರ್ಮಂ ದೇವತ್ವಾಯ್ಯೈವ ಗಚ್ಚತಿ|
12091004c ನ ಚೇದ್ಧರ್ಮಂ ಸ ಚರತಿ ನರಕಾಯ್ಯೈವ ಗಚ್ಚತಿ||

ಧರ್ಮದಲ್ಲಿ ನಡೆದುಕೊಳ್ಳುವ ರಾಜನು ದೇವತ್ವವನ್ನೇ ಪಡೆದುಕೊಳ್ಳುತ್ತಾನೆ. ಧರ್ಮದಂತೆ ನಡೆದುಕೊಳ್ಳದಿದ್ದರೆ ಅವನು ನರಕಕ್ಕೇ ಹೋಗುತ್ತಾನೆ.

12091005a ಧರ್ಮೇ ತಿಷ್ಠಂತಿ ಭೂತಾನಿ ಧರ್ಮೋ ರಾಜನಿ ತಿಷ್ಠತಿ|
12091005c ತಂ ರಾಜಾ ಸಾಧು ಯಃ ಶಾಸ್ತಿ ಸ ರಾಜಾ ಪೃಥಿವೀಪತಿಃ||

ಇರುವ ಎಲ್ಲವೂ ಧರ್ಮದ ಮೇಲೆ ನಿಂತಿವೆ. ಧರ್ಮವು ರಾಜನಲ್ಲಿ ನೆಲೆಸಿರುತ್ತದೆ. ಉತ್ತಮವಾಗಿ ಶಾಸನಮಾಡುವ ರಾಜನು ಪೃಥ್ವೀಪತಿಯಾಗುತ್ತಾನೆ.

12091006a ರಾಜಾ ಪರಮಧರ್ಮಾತ್ಮಾ ಲಕ್ಷ್ಮೀವಾನ್ಪಾಪ[250] ಉಚ್ಯತೇ|
12091006c ದೇವಾಶ್ಚ ಗರ್ಹಾಂ ಗಚ್ಚಂತಿ ಧರ್ಮೋ ನಾಸ್ತೀತಿ ಚೋಚ್ಯತೇ||

ಪರಮಧರ್ಮಾತ್ಮ ರಾಜನು ಲಕ್ಷ್ಮೀವಾನನೆಂದು ಹೇಳುತ್ತಾರೆ. ಅವನು ಪಾಪಿಯಾಗಿದ್ದರೆ ಜನರು ದೇವತೆಗಳನ್ನೂ ನಿಂದಿಸುತ್ತಾರೆ ಮತ್ತು ಧರ್ಮವೇ ಇಲ್ಲವೆಂದು ಹೇಳುತ್ತಾರೆ.

[250] ಲಕ್ಷ್ಮೀವಾನ್ಧರ್ಮ ಉಚ್ಯತೇ (ಭಾರತ ದರ್ಶನ).

12091007a ಅಧರ್ಮೇ[251] ವರ್ತಮಾನಾನಾಮರ್ಥಸಿದ್ಧಿಃ ಪ್ರದೃಶ್ಯತೇ|
12091007c ತದೇವ ಮಂಗಲಂ ಸರ್ವಂ ಲೋಕಃ ಸಮನುವರ್ತತೇ||

ಅಧರ್ಮದಲ್ಲಿ ನಡೆದುಕೊಳ್ಳುವವರಿಗೆ ಅರ್ಥಸಿದ್ಧಿಯಾದಂತೆ ಕಾಣುತ್ತದೆ. ಆದುದರಿಂದ ಲೋಕವೆಲ್ಲವೂ ಮಂಗಲ ಧರ್ಮವನ್ನೇ ಅನುಸರಿಸುತ್ತದೆ.

12091008a ಉಚ್ಚಿದ್ಯತೇ ಧರ್ಮವೃತ್ತಮಧರ್ಮೋ ವರ್ತತೇ ಮಹಾನ್|
12091008c ಭಯಮಾಹುರ್ದಿವಾರಾತ್ರಂ ಯದಾ ಪಾಪೋ ನ ವಾರ್ಯತೇ||

ಧರ್ಮವೃತ್ತಿಯನ್ನು ಕಡೆಗಣಿಸಿದರೆ ಮಹಾ ಅಧರ್ಮವೇ ನಡೆಯುತ್ತದೆ. ಪಾಪವನ್ನು ತಡೆಯದಿದ್ದರೆ ಹಗಲು-ರಾತ್ರಿ ಭಯವುಂಟಾಗುತ್ತದೆ ಎನ್ನುತ್ತಾರೆ.

[252]12091009a ನ ವೇದಾನನುವರ್ತಂತಿ ವ್ರತವಂತೋ ದ್ವಿಜಾತಯಃ|
12091009c ನ ಯಜ್ಞಾಂಸ್ತನ್ವತೇ ವಿಪ್ರಾ ಯದಾ ಪಾಪೋ ನ ವಾರ್ಯತೇ||

ಪಾಪವನ್ನು ತಡೆಯದೇ ಇದ್ದರೆ ವ್ರತವಂತ ದ್ವಿಜಾತಿಯವರು

---

251 ಸ್ವಧರ್ಮೇ (ಭಾರತ ದರ್ಶನ).

252 ಇದಕ್ಕೆ ಮೊದಲು ಈ ಮೂರು ಶ್ಲೋಕಗಳಿವೆ: ಮಮೇದಮಿತಿ ನೈವೈತತ್ಸಾಧೂನಾಂ ತಾತ ಧರ್ಮತಃ| ನ ವೈ ವ್ಯವಸ್ಥಾ ಭವತಿ ಯದಾ ಪಾಪೋ ನ ವಾರ್ಯತೇ|| ನೈವ ಭಾರ್ಯಾ ನ ಪಶವೋ ನ ಕ್ಷೇತ್ರಂ ನ ನಿವೇಶನಮ್| ಸಂದೃಶ್ಯೇತ ಮನುಷ್ಯಾಣಾಂ ಯದಾ ಪಾಪಬಲಂ ಭವೇತ್|| ದೇವಾಃ ಪೂಜಾಂ ನ ಜಾನಂತಿ ನ ಸ್ವಧಾಂ ಪಿತರಸ್ತದಾ| ನ ಪೂಜ್ಯಂತೆ ಹ್ಯತಿಥಯೋ ಯದಾ ಪಾಪೋ ನ ವಾರ್ಯತೇ|| (ಭಾರತ ದರ್ಶನ/ಗೀತಾ ಪ್ರೆಸ್).

ವೇದಗಳನ್ನು ಅನುಸರಿಸುವುದಿಲ್ಲ. ವಿಪ್ರರು ಯಜ್ಞಗಳನ್ನು
ನಡೆಸುವುದಿಲ್ಲ.

12091010a ವಧ್ಯಾನಾಮಿವ ಸರ್ವೇಷಾಂ[253] ಮನೋ ಭವತಿ ವಿಹ್ವಲಮ್|
12091010c ಮನುಷ್ಯಾಣಾಂ ಮಹಾರಾಜ ಯದಾ ಪಾಪೋ ನ ವಾರ್ಯತೇ||

ಮಹಾರಾಜ! ಪಾಪವನ್ನು ನಿಲ್ಲಿಸದಿದ್ದರೆ ವಧಿಸಲ್ಪಡುವ ಎಲ್ಲ
ಮನುಷ್ಯರ ಮನಸ್ಸಿನಲ್ಲಿಯೂ ವಿಹ್ವಲವುಂಟಾಗುತ್ತದೆ.

12091011a ಉಭೌ ಲೋಕಾವಭಿಪ್ರೇಕ್ಷ್ಯ ರಾಜಾನಮೃಷಯಃ ಸ್ವಯಮ್|
12091011c ಅಸೃಜನ್ಸುಮಹದ್ಭೂತಮಯಂ ಧರ್ಮೋ ಭವಿಷ್ಯತಿ||

ಇಹ ಮತ್ತು ಪರ ಲೋಕಗಳೆರಡನ್ನೂ ನೋಡಿಯೇ ಸ್ವಯಂ ಋಷಿಗಳು
ರಾಜನೆಂಬ ಮಹಾಭೂತವನ್ನು "ಇವನು ಧರ್ಮನಾಗುತ್ತಾನೆ" ಎಂದು
ಸೃಷ್ಟಿಸಿದರು.

12091012a ಯಸ್ಮಿನ್ಧರ್ಮೋ ವಿರಾಜೇತ ತಂ ರಾಜಾನಂ ಪ್ರಚಕ್ಷತೇ|
12091012c ಯಸ್ಮಿನ್ವಿಲೀಯತೇ ಧರ್ಮಸ್ತಂ ದೇವಾ ವೃಷಲಂ ವಿದುಃ||

ಯಾರಲ್ಲಿ ಧರ್ಮವು ವಿರಾಜಿಸುತ್ತದೆಯೋ ಅವನನ್ನು ರಾಜನೆಂದು
ಕರೆಯುತ್ತಾರೆ. ಯಾರಲ್ಲಿ ಧರ್ಮವು ವಿಲೀನವಾಗಿದೆಯೋ ಅವನನ್ನು
ದೇವತೆಗಳು "ವೃಷಲ" ಎಂದು ತಿಳಿಯುತ್ತಾರೆ.

12091013a ವೃಷೋ ಹಿ ಭಗವಾನ್ಧರ್ಮೋ ಯಸ್ತಸ್ಯ ಕುರುತೇ ಹ್ಯಲಮ್|
12091013c ವೃಷಲಂ ತಂ ವಿದುರ್ದೇವಾಸ್ತಸ್ಮಾದ್ಧರ್ಮಂ ನ ಲೋಪಯೇತ್||

[253] ವೃದ್ಧಾನಾಮಿವ ಸತ್ತ್ವಾನಾಂ (ಭಾರತ ದರ್ಶನ).

ವೃಷನೇ ಭಗವಾನ್ ಧರ್ಮ. ಇದಕ್ಕೆ ವಿಘ್ನವನ್ನುಂಟುಮಾಡುವವನು ವೃಷಲ. ಆದುದರಿಂದ ದೇವತೆಗಳು ಅಧರ್ಮಿಯನ್ನು ವೃಷಲ ಎಂದು ಕರೆಯುತ್ತಾರೆ. ಧರ್ಮವನ್ನು ಲೋಪಗೊಳಿಸಬಾರದು.

12091014a ಧರ್ಮೇ ವರ್ಧತಿ ವರ್ಧಂತಿ ಸರ್ವಭೂತಾನಿ ಸರ್ವದಾ|
12091014c ತಸ್ಮಿನ್ ಹ್ರಸತಿ ಹೀಯಂತೇ ತಸ್ಮಾದ್ಧರ್ಮಂ ಪ್ರವರ್ಧಯೇತ್||

ಧರ್ಮವು ವರ್ಧಿಸಿದರೆ ಸರ್ವದಾ ಸರ್ವಭೂತಗಲೂ ವೃದ್ಧಿಹೊಂದುತ್ತವೆ. ಧರ್ಮವು ಕಡಿಮೆಯಾದಾಗ ಎಲ್ಲ ಪ್ರಾಣಿಗಳೂ ನಾಶವಾಗುತ್ತವೆ. ಆದುದರಿಂದ ಧರ್ಮವನ್ನು ವೃದ್ಧಿಸಬೇಕು.

12091015a ಧನಾತ್ ಸ್ರವತಿ ಧರ್ಮೋ ಹಿ ಧಾರಣಾದ್ವೇತಿ ನಿಶ್ಚಯಃ|
12091015c ಅಕಾರ್ಯಾಣಾಂ ಮನುಷ್ಯೇಂದ್ರ ಸ ಸೀಮಾಂತಕರಃ ಸ್ಮೃತಃ||

ಧನದಿಂದ ಧರ್ಮವು ಉತ್ಪತ್ತಿಯಾಗುತ್ತದೆ. ಏಲ್ಲವನ್ನೂ ಧಾರಣೆ ಮಾಡುವುದರಿಂದಲೇ ಅದಕ್ಕೆ ಧರ್ಮವೆಂದು ಕರೆಯುತ್ತಾರೆನ್ನುವುದು ನಿಶ್ಚಯ. ಮನುಷ್ಯೇಂದ್ರ! ಮಾಡಬಾರದವುಗಳಿಗೆ ಧರ್ಮವು ಒಂದು ಎಲ್ಲೆಯನ್ನು ಕಲ್ಪಿಸುತ್ತದೆಯೆಂದು ಹೇಳುತ್ತಾರೆ.

12091016a ಪ್ರಭವಾರ್ಥಂ ಹಿ ಭೂತಾನಾಂ ಧರ್ಮಃ ಸೃಷ್ಟಃ ಸ್ವಯಂಭುವಾ|
12091016c ತಸ್ಮಾತ್ಪ್ರವರ್ಧಯೇದ್ಧರ್ಮಂ ಪ್ರಜಾನುಗ್ರಹಕಾರಣಾತ್||

ಪ್ರಜೆಗಳ ಕಲ್ಯಾಣಕ್ಕಾಗಿಯೇ ಸ್ವಯಂಭುವು ಧರ್ಮವನ್ನು ಸೃಷ್ಟಿಸಿದನು. ಆದುದರಿಂದ ಪ್ರಜೆಗಳಿಗೆ ಅನುಗ್ರಹ ಮಾಡುವುದಕ್ಕಾಗಿ ಧರ್ಮವನ್ನು ವೃದ್ಧಿಗೊಳಿಸಬೇಕು.

12091017a ತಸ್ಮಾದ್ಧಿ ರಾಜಶಾರ್ದೂಲ ಧರ್ಮಃ ಶ್ರೇಷ್ಠ ಇತಿ ಸ್ಮೃತಃ|

12091017c ಸ ರಾಜಾ ಯಃ ಪ್ರಜಾಃ ಶಾಸ್ತಿ ಸಾಧುಕೃತ್ಪುರುಷರ್ಷಭಃ||

ರಾಜಶಾರ್ದೂಲ! ಆದುದರಿಂದ ಧರ್ಮವೇ ಶ್ರೇಷ್ಠವೆಂದು ತಿಳಿ. ಇದೇ ಸ್ಮೃತಿ. ಸದ್ಧರ್ಮದಿಂದ ಪ್ರಜೆಗಳ ಶಾಸನಮಾಡುವವನೇ ರಾಜ. ಅವನೇ ಪುರುಷರ್ಷಭ.

12091018a ಕಾಮಕ್ರೋಧಾವನಾದೃತ್ಯ ಧರ್ಮಮೇವಾನುಪಾಲಯೇತ್|
12091018c ಧರ್ಮಃ ಶ್ರೇಯಸ್ಕರತಮೋ ರಾಜ್ಞಾಂ ಭರತಸತ್ತಮ||

ಭರತಸತ್ತಮ! ಕಾಮಕ್ರೋಧಗಳನ್ನು ಅನಾದರಿಸಿ ಧರ್ಮವನ್ನೇ ಪಾಲಿಸಬೇಕು. ರಾಜನಿಗೆ ಧರ್ಮವೇ ಅತ್ಯಂತ ಶ್ರೇಯಸ್ಕರವಾದುದು.

12091019a ಧರ್ಮಸ್ಯ ಬ್ರಾಹ್ಮಣಾ ಯೋನಿಸ್ತಸ್ಮಾತ್ತಾನ್ಪೂಜಯೇತ್ಸದಾ|
12091019c ಬ್ರಾಹ್ಮಣಾನಾಂ ಚ ಮಾಂಧಾತಃ ಕಾಮಾನ್ಕುರ್ಯಾದಮತ್ಸರೀ||

ಮಾಂಧಾತಾ! ಬ್ರಾಹ್ಮಣನೇ ಧರ್ಮದ ಯೋನಿ. ಆದುದರಿಂದ ಅವರನ್ನು ಸದಾ ಪೂಜಿಸಬೇಕು. ಬ್ರಾಹ್ಮಣರ ಕಾಮನೆಗಳನ್ನು ಮತ್ಸರವಿಲ್ಲದೇ ಪೂರೈಸಬೇಕು.

12091020a ತೇಷಾಂ ಹ್ಯಕಾಮಕರಣಾದ್ರಾಜ್ಞಃ ಸಂಜಾಯತೇ ಭಯಮ್|
12091020c ಮಿತ್ರಾಣಿ ಚ ನ ವರ್ಧಂತೇ ತಥಾಮಿತ್ರೀಭವಂತ್ಯಪಿ||

ರಾಜನು ಅವರು ಬಯಸಿದಂತೆ ಮಾಡದಿದ್ದರೆ ಭಯವುಂಟಾಗುತ್ತದೆ. ಮಿತ್ರರ ವೃದ್ಧಿಯಾಗುವುದಿಲ್ಲ. ಮಿತ್ರರೇ ಶತ್ರುಗಳಾಗುತ್ತಾರೆ.

12091021a ಬ್ರಾಹ್ಮಣಾನ್ವೈ ತದಾಸೂಯಾದ್ಯದಾ ವೈರೋಚನೋ ಬಲಿಃ|
12091021c ಅಥಾಸ್ಮಾಚ್ಚ್ರೀರಪಾಕ್ರಾಮದ್ಯಾಸ್ಮಿನ್ನಾಸೀತ್ಪ್ರತಾಪಿನೀ||

ವಿರೋಚನನ ಮಗ ಬಲಿಯು ಬ್ರಾಹ್ಮಣರ ವಿಷಯದಲ್ಲಿ

ಅಸೂಯಾಪರನಾಗಿದ್ದುದರಿಂದಲೇ ಆ ಶತ್ರುತಾಪಿನಿಯನ್ನು
ರಾಜ್ಯಲಕ್ಷ್ಮಿಯು ಬಿಟ್ಟು ಹೋದಳು.

12091022a ತತಸ್ತಸ್ಮಾದಪಕ್ರಮ್ಯ ಸಾಗಚ್ಚತ್ಪಾಕಶಾಸನಮ್|
12091022c ಅಥ ಸೋಽನ್ವತಪತ್ಪಶ್ಚಾಚ್ಛ್ರಿಯಂ ದೃಷ್ಟ್ವಾ ಪುರಂದರೇ||

ಆಗ ಅವಳು ಅವನನ್ನು ಬಿಟ್ಟು ಪಾಕಶಾಸನನ ಬಳಿ ಹೋದಳು. ಶ್ರೀಯು
ಪುರಂದರನ ಬಳಿ ಹೋದುದನ್ನು ನೋಡಿ ಬಲಿಗೆ ಅತ್ಯಂತ
ಪಶ್ಚಾತ್ತಾಪವಾಯಿತು.

12091023a ಏತತ್ಫಲಮಸೂಯಾಯಾ ಅಭಿಮಾನಸ್ಯ ಚಾಭಿಭೋ|
12091023c ತಸ್ಮಾದ್ಬುಧ್ಯಸ್ವ ಮಾಂಧಾತರ್ಮಾ ತ್ವಾ ಜಹ್ಯಾತ್ಪ್ರತಾಪಿನೀ||

ವಿಭೋ! ಅಸೂಯಾಭಿಮಾನಿಗಳಿಗೆ ಇದೇ ಫಲ. ಮಾಂಧಾತ!
ಎಚ್ಚರಗೊಳ್ಳು. ಬ್ರಾಹ್ಮಣರ ಮೇಲೆ ಅಸೂಯೆಪಡದಿರು. ಪ್ರತಾಪಿನೀ
ಶ್ರೀಯು ನಿನ್ನನ್ನು ಬಿಟ್ಟುಹೋಗದಿರಲಿ.

12091024a ದರ್ಪೋ ನಾಮ ಶ್ರಿಯಃ ಪುತ್ರೋ ಜಜ್ಞೇಽಧರ್ಮಾದಿತಿ ಶ್ರುತಿಃ|
12091024c ತೇನ ದೇವಾಸುರಾ ರಾಜನ್ನೀತಾಃ ಸುಬಹುಶೋ ವಶಮ್||
12091025a ರಾಜರ್ಷಯಶ್ಚ ಬಹವಸ್ತಸ್ಮಾದ್ಬುಧ್ಯಸ್ವ ಪಾರ್ಥಿವ|
12091025c ರಾಜಾ ಭವತಿ ತಂ ಜಿತ್ವಾ ದಾಸಸ್ತೇನ ಪರಾಜಿತಃ||

ದರ್ಪ ಎನ್ನುವವನು ಶ್ರೀಗೆ ಅಧರ್ಮನಿಂದ ಹುಟ್ಟಿದವನೆಂದು
ಶ್ರುತಿವಾಕ್ಯವಿದೆ. ರಾಜನ್! ಅವನು ಅನೇಕ ದೇವತೆಗಳನ್ನೂ,
ಅಸುರರನ್ನೂ, ರಾಜರ್ಷಿಗಳನ್ನೂ ತನ್ನ ವಶಮಾಡಿಕೊಂಡು
ವಿನಾಶಗೊಳಿಸಿದನು. ಮಾಂಧಾತ! ಇದನ್ನು ನೀನೂ
ಮನದಟ್ಟುಮಾಡಿಕೊಳ್ಳಬೇಕು. ಪಾರ್ಥಿವ! ದುಷ್ಟನಾದ ದರ್ಪನನ್ನು

ಗೆದ್ದವನು ರಾಜನಾಗುತ್ತಾನೆ. ಅವನಿಗೆ ಸೋತವನು ದಾಸನಾಗುತ್ತಾನೆ.

12091026a ಸ ಯಥಾ ದರ್ಪಸಹಿತಮಧರ್ಮಂ ನಾನುಸೇವಸೇ|
12091026c ತಥಾ ವರ್ತಸ್ವ ಮಾಂಧಾತಶ್ಚಿರಂ ಚೇತ್ ಸ್ಥಾತುಮಿಚ್ಚಸಿ||

ಮಾಂಧಾತಾ! ಚಿರಕಾಲ ರಾಜ್ಯವಾಳಬೇಕೆಂದು ಬಯಸುವೆಯಾದರೆ ದರ್ಪಸಹಿತವಾದ ಅಧರ್ಮವನ್ನು ಸೇವಿಸದಂತೆ ವರ್ತಿಸು.

12091027a ಮತ್ತಾತ್ಪ್ರಮತ್ತಾತ್ಪೋಗಂಡಾ[254]ದುನ್ಮತ್ತಾಚ್ಚ ವಿಶೇಷತಃ|
12091027c ತದಭ್ಯಾಸಾದುಪಾವರ್ತಾದಹಿತಾನಾಂ ಚ ಸೇವನಾತ್||

ಮದಿಸಿದವರು, ಅಪ್ರಮತ್ತರು, ಐದರಿಂದ ಹತ್ತು ವರ್ಷದ ಬಾಲಕರು ಮತ್ತು ಹುಚ್ಚರಿಂದಲೂ ವಿಶೇಷವಾಗಿ ದೂರವಿರು. ಈ ನಾಲ್ವರೂ ಅಹಿತರು ನಿನ್ನ ಸೇವೆಗೈಯಲು ಬಂದರೂ ಅವರನ್ನು ದೂರವಿರಿಸು.

12091028a ನಿಗೃಹೀತಾದಮಾತ್ಯಾಚ್ಚ ಸ್ತ್ರೀಭ್ಯಶ್ಚೈವ ವಿಶೇಷತಃ|
12091028c ಪರ್ವತಾದ್ವಿಷಮಾದ್ದುರ್ಗಾದ್ಧಸ್ತಿನೋಽಶ್ವಾತ್ಸರೀಸೃಪಾತ್||
12091029a ಏತೇಭ್ಯೋ ನಿತ್ಯಯತ್ತಃ ಸ್ಯಾನ್ನಕ್ತಂಚರ್ಯಾಂ ಚ ವರ್ಜಯೇತ್|
12091029c ಅತ್ಯಾಯಂ ಚಾತಿಮಾನಂ ಚ[255] ದಂಭಂ ಕ್ರೋಧಂ ಚ ವರ್ಜಯೇತ್||

ಒಮ್ಮೆ ಬಂಧನಕ್ಕೊಳಗಾದ ಮಂತ್ರಿಯಿಂದ, ವಿಶೇಷವಾಗಿ ಪರಸ್ತ್ರೀಯರಿಂದ, ಎತ್ತರ ಪರ್ವತ ಪ್ರದೇಶಗಳಿಂದ, ಬಹಳ

---

254 ಪೌಗಂಡಾತ್ ಎಂಬ ಪಾಠಾಂತರವಿದೆ. ಪೌಗಂಡಃ ಎಂದರೆ ಐದರಿಂದ ಹತ್ತು ವರ್ಷ ವಯಸ್ಸಿನೊಳಗಿರುವ ಬಾಲಕ. ಕೌಮಾರಂ ಪಂಚಮಾಬ್ದಂ ತು ಪೌಗಂಡಂ ದಶಮಾವಧಿ| ಕೈಶೋರಮಾಪಂಚದಶಾದ್ಯೌವನಂಚ ತತಃ ಪರಂ||

255 ಅತ್ಯಾಗಂ ಚಾಭಿಮಾನಂ ಚ (ಭಾರತ ದರ್ಶನ).

ತಗ್ಗಾಗಿರುವ ಪ್ರದೇಶಗಳಿಂದ, ಹೋಗಲು ಅಸಾಧ್ಯ ದುರ್ಗಮ ಪ್ರದೇಶಗಳಿಂದ, ಪಳಗಿರದ ಆನೆಯಿಂದ, ಕುದುರೆಯಿಂದ ಮತ್ತು ಸರ್ಪಗಳಿಂದ ದೂರವಿರು. ಇವುಗಳ ವಿಷಯದಲ್ಲಿ ನಿತ್ಯವೂ ಎಚ್ಚರದಿಂದಿರಬೇಕು. ರಾತ್ರಿಯಲ್ಲಿ ತಿರುಗಾಡುವುದನ್ನೂ ವರ್ಜಿಸಬೇಕು. ಅತಿಯಾದ ಕೃಪಣತೆ, ಅತಿಯಾದ ಅಭಿಮಾನ, ದಂಭ ಮತ್ತು ಕ್ರೋಧಗಳನ್ನೂ ವರ್ಜಿಸಬೇಕು.

12091030a ಅವಿಜ್ಞಾತಾಸು ಚ ಸ್ತ್ರೀಷು ಕ್ಲೀಬಾಸು ಸ್ವೈರಿಣೀಷು ಚ|
12091030c ಪರಭಾರ್ಯಾಸು ಕನ್ಯಾಸು ನಾಚರೇನ್ಮೈಥುನಂ ನೃಪಃ||

ಅಪರಿಚಿತ ಸ್ತ್ರೀಯರೊಡನೆ, ನಪುಂಸಕರೊಡಾನೆ, ವೈಶ್ಯೆಯರೊದನೆ, ಪರರ ಪತ್ನಿಯರೊದನೆ, ಮತ್ತು ಕನ್ಯೆಯರೊಂದಿಗೆ ರಾಜನಾದವನು ಸಂಭೋಗ ಮಾಡಬಾರದು.

12091031a ಕುಲೇಷು ಪಾಪರಕ್ಷಾಂಸಿ ಜಾಯಂತೇ ವರ್ಣಸಂಕರಾತ್|
12091031c ಅಪುಮಾಂಸೋಽಂಗಹೀನಾಶ್ಚ ಸ್ಥೂಲಜಿಹ್ವಾ ವಿಚೇತಸಃ||
12091032a ಏತೇ ಚಾನ್ಯೇ ಚ ಜಾಯಂತೇ ಯದಾ ರಾಜಾ ಪ್ರಮಾದ್ಯತಿ|
12091032c ತಸ್ಮಾದ್ರಾಜ್ಞಾ ವಿಶೇಷೇಣ ವರ್ತಿತವ್ಯಂ ಪ್ರಜಾಹಿತೇ||

ಒಂದು ವೆಳೆ ರಾಜನು ಪ್ರಮತ್ತನಾದರೆ ವರ್ಣಸಂಕರದಿಂದ ಕುಲಗಳಲ್ಲಿ ಪಾಪಿಷ್ಟರೂ ರಾಕ್ಷಸರೂ ಹುಟ್ಟಿಕೊಳ್ಳುತ್ತಾರೆ. ನಪುಂಸಕರು, ಅಂಗಹೀನರು, ತೊದಲರು, ಬುದ್ಧಿ ಹೀನರು ಮೊದಲಾದ ಅನೇಕ ಅನ್ಯರು ಹುಟ್ಟುತ್ತಾರೆ. ಆದುದರಿಂದ ರಾಜನು ವಿಶೇಷವಾಗಿ ಪ್ರಜಾಹಿತದಲ್ಲಿಯೇ ನಡೆದುಕೊಳ್ಳಬೇಕು.

12091033a ಕ್ಷತ್ರಿಯಸ್ಯ ಪ್ರಮತ್ತಸ್ಯ ದೋಷಃ ಸಂಜಾಯತೇ ಮಹಾನ್|

12091033c ಅಧರ್ಮಾಃ ಸಂಪ್ರವರ್ತಂತೇ ಪ್ರಜಾಸಂಕರಕಾರಕಾಃ||

ಕ್ಷತ್ರಿಯನ ಪ್ರಮತ್ತತೆಯಿಂದ ಮಹಾ ದೋಷವುಂಟಾಗುತ್ತದೆ. ಪ್ರಜಾಸಂಕರವನ್ನು ಮಾಡುವ ಅಧರ್ಮಗಳು ಹುಟ್ಟಿಕೊಳ್ಳುತ್ತವೆ.

12091034a ಅಶೀತೇ ವಿದ್ಯತೇ ಶೀತಂ ಶೀತೇ ಶೀತಂ ನ ವಿದ್ಯತೇ|
12091034c ಅವೃಷ್ಟಿರತಿವೃಷ್ಟಿಶ್ಚ ವ್ಯಾಧಿಶ್ಚಾವಿಶತಿ ಪ್ರಜಾಃ||

ಬೇಸಿಗೆಯಲ್ಲಿ ಚಳಿಯಾಗುತ್ತದೆ. ಛಳಿಗಾಲದಲ್ಲಿ ಛಳಿಯಾಗುವುದೆ ಇಲ್ಲ. ಅತಿ ವೃಷ್ಟಿ ಅನಾವೃಷ್ಟಿಗಳಾಗುತ್ತವೆ ಮತ್ತು ಪ್ರಜೆಗಳನ್ನು ವ್ಯಾಧಿಗಳು ಆವರಿಸುತ್ತವೆ.

12091035a ನಕ್ಷತ್ರಾಣ್ಯುಪತಿಷ್ಠಂತಿ ಗ್ರಹಾ ಘೋರಾಸ್ತಥಾಪರೇ|
12091035c ಉತ್ಪಾತಾಶ್ಚಾತ್ರ ದೃಶ್ಯಂತೇ ಬಹವೋ ರಾಜನಾಶನಾಃ||

ಹಾಗೆಯೇ ಘೋರ ಗ್ರಹಗಳು ನಕ್ಷತ್ರಗಳ ಬಳಿಸಾರುತ್ತವೆ. ರಾಜನ ವಿನಾಶದ ಸೂಚಕವಾಗಿ ಅನೇಕ ಉತ್ಪಾತಗಳು ಕಾಣಿಸಿಕೊಳ್ಳುತ್ತವೆ.

12091036a ಅರಕ್ಷಿತಾತ್ಮಾ ಯೋ ರಾಜಾ ಪ್ರಜಾಶ್ಚಾಪಿ ನ ರಕ್ಷತಿ|
12091036c ಪ್ರಜಾಶ್ಚ ತಸ್ಯ ಕ್ಷೀಯಂತೇ ತಾಶ್ಚ ಸೋಽನು ವಿನಶ್ಯತಿ||

ಆತ್ಮರಕ್ಷಣೆಯನ್ನು ಮಾಡಿಕೊಳ್ಳಲಾರದ ರಾಜನು ಪ್ರಜೆಗಳನ್ನೂ ರಕ್ಷಿಸುವುದಿಲ್ಲ. ಅವನ ಪ್ರಜೆಗಳು ಕ್ಷೀಣಿಸುತ್ತಾರೆ. ನಂತರ ಅವನೂ ವಿನಾಶನಾಗುತ್ತಾನೆ.

12091037a ದ್ವಾವಾದದಾತೇ ಹ್ಯೇಕಸ್ಯ ದ್ವಯೋಶ್ಚ ಬಹವೋಽಪರೇ|
12091037c ಕುಮಾರ್ಯಃ ಸಂಪ್ರಲುಪ್ಯಂತೇ ತದಾಹುರ್ನ್ಯಪದೂಷಣಮ್||

ಒಬ್ಬನ ಐಶ್ವರ್ಯವನ್ನು ಇಬ್ಬರು ಸೇರಿ ಅಪಹರಿಸುವುದು,

ಇಬ್ಬರಲ್ಲಿರುವ ಐಶ್ವರ್ಯವನ್ನು ಬಹುಜನರು ಸೇರಿ
ಕೊಳ್ಳೆಹೊಡೆಯುವುದು, ಕುಮಾರಿಯರ ಮೇಲೆ
ಬಲಾತ್ಕಾರವಾಗುವುದು ಇವೆಲ್ಲವೂ ನೃಪನ ದೋಷದಿಂದಾಗಿ ಎಂದು
ಹೇಳುತ್ತಾರೆ.

12091038a ಮಮೈತದಿತಿ ನೈಕಸ್ಯ ಮನುಷ್ಯೇಷ್ವವತಿಷ್ಠತೇ|
12091038c ತ್ಯಕ್ತ್ವಾ ಧರ್ಮಂ ಯದಾ ರಾಜಾ ಪ್ರಮಾದಮನುತಿಷ್ಠತಿ||

ಧರ್ಮವನ್ನು ತ್ಯಜಿಸಿ ರಾಜನು ಪ್ರಮಾದಕ್ಕೊಳಗಾದರೆ ಮನುಷ್ಯನಲ್ಲಿ
ಇದು ನನ್ನದು ಎನ್ನುವುದು ಯಾವುದೂ ಉಳಿಯುವುದಿಲ್ಲ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಉತಥ್ಯಗೀತಾಸು ಏಕನವತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಉತಥ್ಯಗೀತ ಎನ್ನುವ ತೊಂಭತ್ತೊಂದನೇ ಅಧ್ಯಾಯವು.

೯೨

ರಾಜನ ಕರ್ತ್ಯವ್ಯಗಳ ಕುರಿತು ಉತಥ್ಯನು ಮಾಂಧಾತನಿಗೆ ಉಪದೇಶಿಸಿದುದು (1-56).

12092001 ಉತಥ್ಯ ಉವಾಚ|
12092001a ಕಾಲವರ್ಷೀ ಚ ಪರ್ಜನ್ಯೋ ಧರ್ಮಚಾರೀ ಚ ಪಾರ್ಥಿವಃ|
12092001c ಸಂಪದ್ಯದ್ವೈಷಾ ಭವತಿ ಸಾ ಬಿಭರ್ತಿ ಸುಖಿಂ ಪ್ರಜಾಃ||

ಉತಥ್ಯನು ಹೇಳಿದನು: “ಪರ್ಜನ್ಯನು ಕಾಲಕ್ಕೆ ತಕ್ಕಂತೆ

ಮಳೆಗರೆಯಬೇಕು. ಪಾರ್ಥಿವನು ಧರ್ಮಚಾರಿಯಾಗಿರಬೇಕು. ಧರ್ಮ
ಸಂಪತ್ತು ಹೀಗಿರುವಾಗ ಪ್ರಜೆಗಳು ಸುಖದಿಂದ
ಪರಿಪಾಲಿತರಾಗಿರುತ್ತಾರೆ.

12092002a ಯೋ ನ ಜಾನಾತಿ ನಿರ್ಹಂತುಂ ವಸ್ತ್ರಾಣಾಂ ರಜಕೋ ಮಲಮ್|
12092002c ರಕ್ತಾನಿ ವಾ ಶೋಧಯಿತುಂ ಯಥಾ ನಾಸ್ತಿ ತಥೈವ ಸಃ||

ಬಟ್ಟೆಯ ಕೊಳೆಯನ್ನು ತೆಗೆದುಹಾಕುವುದನ್ನು ತಿಳಿಯದಿರುವ ಮತ್ತು
ಕೆಂಪು ಬಣ್ಣದ ಬಟ್ಟೆಯನ್ನು ಹೊಳೆಯುವಂತೆ ಮಾಡಲು
ಅರಿಯದಿರುವ ಅಗಸನು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ.

12092003a ಏವಮೇವ ದ್ವಿಜೇಂದ್ರಾಣಾಂ ಕ್ಷತ್ರಿಯಾಣಾಂ ವಿಶಾಮಪಿ|
12092003c ಶೂದ್ರಾಶ್ಚ ತುರ್ಣಾಂ ವರ್ಣಾನಾಂ ನಾನಾಕರ್ಮಸ್ವವಸ್ಥಿತಾಃ||

ಹಾಗೆಯೇ ಬ್ರಾಹ್ಮಣರಾಗಲೀ, ಕ್ಷತ್ರಿಯರಾಗಲೀ, ವೈಶ್ಯರಾಗಲೀ ಮತ್ತು
ಶೂದ್ರರಾಗಲೀ ಅವರವರ ವರ್ಣದ ಕರ್ಮಗಳನ್ನು
ತಿಳಿದವರಾಗಿರಬೇಕು. ಇಲ್ಲದಿದ್ದರೆ ಇವರೆಲ್ಲರೂ
ನಿಷ್ಪ್ರಯೋಜಕರಾಗುತ್ತಾರೆ.

12092004a ಕರ್ಮ ಶೂದ್ರೇ ಕೃಷಿರ್ವೈಶ್ಯೇ ದಂಡನೀತಿಶ್ಚ ರಾಜನಿ|
12092004c ಬ್ರಹ್ಮಚರ್ಯಂ ತಪೋ ಮಂತ್ರಾಃ ಸತ್ಯಂ ಚಾಪಿ ದ್ವಿಜಾತಿಷು||

ಶೂದ್ರನಲ್ಲಿ ಸೇವೆ, ವೈಶ್ಯನಲ್ಲಿ ಕೃಷಿ, ರಾಜನಲ್ಲಿ ದಂಡನೀತಿ,
ಬ್ರಾಹ್ಮಣನಲ್ಲಿ ಬ್ರಹ್ಮಚರ್ಯ, ತಪಸ್ಸು, ಸತ್ಯನಿಷ್ಠೆ ಮತ್ತು
ವೇದಾಧ್ಯಯನಗಳು ಪ್ರಧಾನ ಕರ್ತವ್ಯಗಳಾಗಿವೆ.

12092005a ತೇಷಾಂ ಯಃ ಕ್ಷತ್ರಿಯೋ ವೇದ ವಸ್ತ್ರಾಣಾಮಿವ ಶೋಧನಮ್|

12092005c ಶೀಲದೋಷಾನ್ವಿನಿರ್ಹಂತುಂ ಸ ಪಿತಾ ಸ ಪ್ರಜಾಪತಿಃ||

ಯಾವ ಕ್ಷತ್ರಿಯನು – ಅಗಸನು ವಸ್ತ್ರಗಳ ಕೊಳೆಯನ್ನು ತೆಗೆದು ಶುದ್ಧಗೊಳಿಸುವಂತೆ – ಇತರರ ಶೀಲದಲ್ಲಿರುವ ದೋಷಗಳನ್ನು ಹೋಗಲಾಡಿಸಿ ಶುದ್ಧಚಾರಿತ್ರ್ಯವನ್ನು ಮೈಗೂಡಿಸಿಕೊಳ್ಳುವಂತೆ ಮಾಡಲು ಸಮರ್ಥನಾಗುತ್ತಾನೋ ಅವನೇ ಪ್ರಜೆಗಳಿಗೆ ಪಿತೃಸಮಾನನಾಗುತ್ತಾನೆ. ಅಧಿಪತಿಯೂ ಅವನೇ ಆಗುತ್ತಾನೆ.

12092006a ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚ ಭರತರ್ಷಭ|
12092006c ರಾಜವೃತ್ತಾನಿ ಸರ್ವಾಣಿ ರಾಜ್ಯೇವ ಯುಗಮುಚ್ಯತೇ||

ಭರತರ್ಷಭ! ಕೃತ, ತ್ರೇತ, ದ್ವಾಪರ ಮತ್ತು ಕಲಿ ಯುಗಗಳು ಎಲ್ಲವೂ ರಾಜನ ಆಚರಣೆಯನ್ನೇ ಅನುಸರಿಸಿ ಪರಿವರ್ತನೆ ಹೊಂದುತ್ತವೆ. ರಾಜನೇ ಯುಗಸ್ವರೂಪನೆಂದು ಹೇಳುತ್ತಾರೆ.

12092007a ಚಾತುರ್ವರ್ಣ್ಯಂ ತಥಾ ವೇದಾಶ್ಚಾತುರಾಶ್ರಮ್ಯಮೇವ ಚ|
12092007c ಸರ್ವಂ ಪ್ರಮುಹ್ಯತೇ ಹ್ಯೇತದ್ಯದಾ ರಾಜಾ ಪ್ರಮಾದ್ಯತಿ||

ರಾಜನು ಪ್ರಮತ್ತನಾದರೆ ಚಾತುರ್ವರ್ಣಗಳೂ, ವೇದಗಳೂ, ನಾಲ್ಕು ಆಶ್ರಮಗಳು ಎಲ್ಲವೂ ಪ್ರಮೋಹಕ್ಕೊಳಗಾಗುತ್ತವೆ.

12092008a ರಾಜ್ಯೇವ ಕರ್ತಾ ಭೂತಾನಾಂ ರಾಜ್ಯೇವ ಚ ವಿನಾಶಕಃ|
12092008c ಧರ್ಮಾತ್ಮಾ ಯಃ ಸ ಕರ್ತಾ ಸ್ಯಾದಧರ್ಮಾತ್ಮಾ ವಿನಾಶಕಃ||

ರಾಜನೇ ಭೂತಗಳ ಕರ್ತೃ. ರಾಜನೇ ಭೂತಗಳ ವಿನಾಶಕ. ಅವನು ಧರ್ಮಾತ್ಮನಾಗಿದ್ದರೆ ಕರ್ತೃವಾಗುತ್ತಾನೆ. ಅಧರ್ಮಾತ್ಮನಾಗಿದ್ದರೆ ವಿನಾಶಕನಾಗುತ್ತಾನೆ.

12092009a ರಾಜ್ಞೋ ಭಾರ್ಯಾಶ್ಚ ಪುತ್ರಾಶ್ಚ ಬಾಂಧವಾಃ ಸುಹೃದಸ್ತಥಾ|
12092009c ಸಮೇತ್ಯ ಸರ್ವೇ ಶೋಚಂತಿ ಯದಾ ರಾಜಾ ಪ್ರಮಾದ್ಯತಿ||

ರಾಜನು ಪ್ರಮತ್ತನಾದರೆ ರಾಜನ ಭಾರ್ಯೆಯರೂ, ಪುತ್ರರೂ,
ಬಾಂಧವರೂ, ಸುಹೃದಯರೂ ಎಲ್ಲರೂ ಒಟ್ಟಿಗೇ
ಶೋಕಕ್ಕೊಳಗಾಗುತ್ತಾರೆ.

12092010a ಹಸ್ತಿನೋಽಶ್ವಾಶ್ಚ ಗಾವಶ್ಚಾಪ್ಯುಷ್ಟ್ರಾಶ್ವತರಗರ್ದಭಾಃ|
12092010c ಅಧರ್ಮವೃತ್ತೇ ನೃಪತೌ ಸರ್ವೇ ಸೀದಂತಿ ಪಾರ್ಥಿವ||

ಪಾರ್ಥಿವ! ನೃಪತಿಯು ಅಧರ್ಮದಲ್ಲಿ ನಡೆದುಕೊಂಡರೆ ಆನೆಗಳು,
ಕುದುರೆಗಳು, ಗೋವುಗಳು, ಒಂಟೆಗಳು, ಹೇಸರಗತ್ತೆಗಳು ಎಲ್ಲವೂ
ನಾಶಹೊಂದುತ್ತವೆ.

12092011a ದುರ್ಬಲಾರ್ಥಂ ಬಲಂ ಸೃಷ್ಟಂ ಧಾತ್ರಾ ಮಾಂಧಾತರುಚ್ಯತೇ|
12092011c ಅಬಲಂ ತನ್ಮಹದ್ಭೂತಂ ಯಸ್ಮಿನ್ಸರ್ವಂ ಪ್ರತಿಷ್ಠಿತಮ್||

ಮಾಂಧಾತಾ! ದುರ್ಬಲರಿಗಾಗಿಯೇ ಧಾತ್ರುವು ಬಲವನ್ನು
ಸೃಷ್ಟಿಸಿದನೆಂದು ಹೇಳುತ್ತಾರೆ. ಯಾವುದರ ಮೇಲೆ ಎಲ್ಲವೂ
ಪ್ರತಿಷ್ಠಿತವಾಗಿವೆಯೋ ಆ ಮಹಾಭೂತಗಣಗಳು ಅಬಲವಾದವುಗಳು.

12092012a ಯಚ್ಚ ಭೂತಂ ಸ ಭಜತೇ ಭೂತಾ ಯೇ ಚ ತದನ್ವಯಾಃ|
12092012c ಅಧರ್ಮಸ್ಥೇ ಹಿ ನೃಪತೌ ಸರ್ವೇ ಸೀದಂತಿ ಪಾರ್ಥಿವ||

ಪಾರ್ಥಿವ! ನೃಪತಿಯು ಅಧರ್ಮಿಯಾದರೆ ಅವನನ್ನು ಸೇವಿಸುವ
ಮತ್ತು ಅವನನ್ನೇ ಆಶ್ರಯಿಸಿರುವ ಭೂತಗಳೆಲ್ಲವೂ ದುಃಖಿಪಡುತ್ತವೆ.

12092013a ದುರ್ಬಲಸ್ಯ ಹಿ ಯಚ್ಚಕ್ಷುರ್ಮನೋರಾಶೀವಿಷಸ್ಯ ಚ|

12092013c ಅವಿಷಹ್ಯತಮಂ ಮನ್ಯೇ ಮಾ ಸ್ಮ ದುರ್ಬಲಮಾಸದಃ॥

ದುರ್ಬಲನ, ಮುನಿಯ ಮತ್ತು ಸರ್ಪದ ದೃಷ್ಟಿಗಳನ್ನು
ತಡೆದುಕೊಳ್ಳುವುದು ಅಸಾಧ್ಯವೆಂದು ನಾನು ಭಾವಿಸುತ್ತೇನೆ.
ಆದುದರಿಂದ ದುರ್ಬಲರನ್ನು ಎಂದೂ ಪೀಡಿಸಬಾರದು.

12092014a ದುರ್ಬಲಾಂಸ್ತಾತ ಬುಧ್ಯೇಥಾ ನಿತ್ಯಮೇವಾವಿಮಾನಿತಾನ್|
12092014c ಮಾ ತ್ವಾಂ ದುರ್ಬಲಚಕ್ಷೂಂಷಿ ಪ್ರದಹೇಯುಃ ಸಬಾಂಧವಮ್॥

ಅಯ್ಯಾ! ದುರ್ಬಲರು ಅಪಮಾನಿತರಾಗದಂತೆ ಸರ್ವದಾ
ನೋಡಿಕೊಂಡಿರಬೇಕು. ಅಪಮಾನಿತ ದುರ್ಬಲರ ಕ್ರೂರ ದೃಷ್ಟಿಗಳು
ಬಂಧುಗಳ ಸಮೇತ ನಿನ್ನನ್ನು ಸುಟ್ಟುಹಾಕದಿರಲಿ!

12092015a ನ ಹಿ ದುರ್ಬಲದಗ್ಧಸ್ಯ ಕುಲೇ ಕಿಂ ಚಿತ್ಪ್ರರೋಹತಿ|
12092015c ಆಮೂಲಂ ನಿರ್ದಹತ್ಯೇವ ಮಾ ಸ್ಮ ದುರ್ಬಲಮಾಸದಃ॥

ದುರ್ಬಲರ ಕ್ರೂರದೃಷ್ಟಿಯಿಂದ ಸುಟ್ಟುಹೋದವನ ಕುಲದಲ್ಲಿ
ಅಂಕುರವೇ ಇಲ್ಲವಾಗುತ್ತದೆ. ಅದು ಆಮೂಲವಾಗಿ ಕುಲವನ್ನು
ಸುಟ್ಟುಬಿಡುತ್ತದೆ. ಆದುದರಿಂದ ದುರ್ಬಲನನ್ನೆಂದಿಗೂ
ಸಂಕಟಪಡಿಸಬೇಡ.

12092016a ಅಬಲಂ ವೈ ಬಲಾಚ್ಛ್ರೇಯೋ ಯಚ್ಚಾತಿಬಲವದ್ಬಲಮ್|
12092016c ಬಲಸ್ಯಾಬಲದಗ್ಧಸ್ಯ ನ ಕಿಂ ಚಿದವಶಿಷ್ಯತೇ॥

ಬಲಿಷ್ಠನಿಗಿಂತಲೂ ಅಬಲನೇ ಶ್ರೇಷ್ಠನು. ಅಬಲನ ಬಲವು ಬಲಿಷ್ಠನ
ಬಲಕ್ಕಿಂತಲೂ ಅತಿಯಾದುದು. ಅಬಲನು ಬಲಶಾಲಿಯ ಕುಲವನ್ನೇ
ನಿಃಶೇಷವಾಗಿ ಸುಟ್ಟುಹಾಕಿಬಿಡಬಲ್ಲನು.

12092017a ವಿಮಾನಿತೋ ಹತೋತ್ಕೃಷ್ಟಸ್ತಾತಾರಂ ಚೇನ್ನ ವಿಂದತಿ|
12092017c ಅಮಾನುಷಕೃತಸ್ತತ್ರ ದಂಡೋ ಹಂತಿ ನರಾಧಿಪಮ್||

ಅಪಮಾನಿತ, ಹಿಂಸಿತ ಮತ್ತು ರಕ್ಷಣೆಗಾಗಿ ಕೂಗಿಕೊಳ್ಳುವ ದುರ್ಬಲನು ರಾಜನನ್ನು ರಕ್ಷಕನನ್ನಾಗಿ ಪಡೆಯದೇ ಇದ್ದರೆ ಅಮಾನುಷ ದಂಡವೇ ನರಾಧಿಪನನ್ನು ಸಂಹರಿಸುತ್ತದೆ.

12092018a ಮಾ ಸ್ಮ ತಾತ ಬಲೇ ಸ್ಥೇಯಾ ಬಾಧಿಷ್ಠಾ ಮಾಪಿ ದುರ್ಬಲಮ್[256]|
12092018c ಮಾ ತ್ವಾ ದುರ್ಬಲಚಕ್ಷೂಂಷಿ ಧಕ್ಷ್ಯಂತ್ಯಗ್ನಿರಿವಾಶ್ರಯಮ್||

ಅಯ್ಯಾ! ಬಲಶಾಲಿಯೆಂದು ದುರ್ಬಲನನ್ನು ಬಾಧಿಸಬೇಡ. ಅಗ್ನಿಯು ಆಶ್ರಯಭೂತವಾದ ಮರವನ್ನೇ ಸುಟ್ಟುಭಸ್ಮಮಾಡುವಂತೆ ದುರ್ಬಲರ ಕ್ರೂರದೃಷ್ಟಿಗಳು ನಿನ್ನನ್ನು ಸುಟ್ಟು ಭಸ್ಮಮಾಡದಿರಲಿ.

12092019a ಯಾನಿ ಮಿಥ್ಯಾಭಿಶಸ್ತಾನಾಂ ಪತಂತ್ಯಶ್ರೂಣಿ ರೋದತಾಮ್|
12092019c ತಾನಿ ಪುತ್ರಾನ್ಪಶೂನ್ ಘ್ನಂತಿ ತೇಷಾಂ ಮಿಥ್ಯಾಭಿಶಾಸತಾಮ್||

ಮಿಥ್ಯಾಪವಾದವನ್ನು ಅನುಭವಿಸುವವರ ರೋದನದಿಂದ ಬೀಳುವ ಕಣ್ಣೀರು ಮಿಥ್ಯಾಪವಾದವನ್ನು ಹೊರಿಸಿದವರ ಮಕ್ಕಳನ್ನೂ ಪುತ್ರರನ್ನೂ ನಾಶಮಾಡುತ್ತವೆ.

12092020a ಯದಿ ನಾತ್ಮನಿ ಪುತ್ರೇಷು ನ ಚೇತ್ಪೌತ್ರೇಷು ನಪ್ತೃಷು|
12092020c ನ ಹಿ ಪಾಪಂ ಕೃತಂ ಕರ್ಮ ಸದ್ಯಃ ಫಲತಿ ಗೌರಿವ||

ಭೂಮಿಯಲ್ಲಿ ಬಿತ್ತಿದ ಬೀಜವು ಹೇಗೋ ಹಾಗೆ ಮಾಡಿದ

---

256 ಮಾ ಸ್ಮ ತಾತ ರಣೇ ಸ್ಥಿತ್ವಾ ಭುಂಜೀಥಾ ದುರ್ಬಲಂ ಜನಮ್| (ಭಾರತ ದರ್ಶನ).

ಪಾಪಕರ್ಮವು ಕೂಡಲೇ ಫಲಕೊಡದಿರಬಹುದು.
ಪಾಪಮಾಡಿದವನಿಗಲ್ಲದಿದ್ದರೆ ಅವನ ಪುತ್ರ ಅಥವಾ ಪೌತ್ರರಿಗೆ
ಫಲವನ್ನು ನೀಡುತ್ತದೆ.

12092021a ಯತ್ರಾಬಲೋ ವಧ್ಯಮಾನಸ್ತ್ರಾತಾರಂ ನಾಧಿಗಚ್ಚತಿ|
12092021c ಮಹಾನ್ದೈವಕೃತಸ್ತತ್ರ ದಂಡಃ ಪತತಿ ದಾರುಣಃ||

ಅಬಲನು ವಧಿಸಲ್ಪಡುತ್ತಿರುವಾಗ ತ್ರಾತಾರನನ್ನು ಹೊಂದದೇ ಇದ್ದರೆ
ದೈವಕೃತ ಮಹಾ ದಾರುಣ ದಂಡವು ರಕ್ಷಣೆಯನ್ನು
ಕೊಡಬೇಕಾಗಿದ್ದವನ ಮೇಲೆಯೇ ಬೀಳುತ್ತದೆ.

12092022a ಯುಕ್ತಾ ಯದಾ ಜಾನಪದಾ ಭಿಕ್ಷಂತೇ ಬ್ರಾಹ್ಮಣಾ ಇವ|
12092022c ಅಭೀಕ್ಷ್ಣಂ ಭಿಕ್ಷುದೋಷೇಣ ರಾಜಾನಂ ಘ್ನಂತಿ ತಾದೃಶಾಃ||

ಜನಪದದ ಎಲ್ಲರೂ ಬ್ರಾಹ್ಮಣರಂತೆ ಭಿಕ್ಷುರೂಪದಿಂದ ಭಿಕ್ಷೆಬೀಡಲು
ತೊಡಗಿದರೆ ಅಂಥಹ ಸ್ಥಿತಿಗೆ ಕಾರಣನಾದ ರಾಜನು
ವಿನಾಶಹೊಂದುತ್ತಾನೆ.

12092023a ರಾಷ್ಟ್ರೋ ಯದಾ ಜನಪದೇ ಬಹವೋ ರಾಜಪೂರುಷಾಃ|
12092023c ಅನಯೇನೋಪವರ್ತಂತೇ ತದ್ರಾಷ್ಟ್ರಃ ಕಿಲ್ಬಿಷಂ ಮಹತ್||

ರಾಜನ ಅನೇಕ ಅಧಿಕಾರಿಗಳೇ ಜನಪದದಲ್ಲಿ ಅನ್ಯಾಯವಾಗಿ
ನಡೆದುಕೊಂಡರೆ ಆಗ ಮಹಾರಾಜಕಿಲ್ಬಿಷವು ಪರಿಣಮಿಸುತ್ತದೆ.

12092024a ಯದಾ ಯುಕ್ತಾ ನಯಂತ್ಯರ್ಥಾನ್ಕಾಮಾದರ್ಥವಶೇನ ವಾ|
12092024c ಕೃಪಣಂ ಯಾಚಮಾನಾನಾಂ ತದ್ರಾಷ್ಟ್ರೋ ವೈಶಸಂ ಮಹತ್||

ಕೃಪಣರಾಗಿ ಯಾಚಿಸುತ್ತಿದ್ದವರ ಧನವನ್ನು ಯುಕ್ತಿಯಿಂದಲೋ

ಸ್ವೇಚ್ಛೆಯಿಂದಲೋ ಅಥವಾ ಲೋಭದಿಂದಲೋ ಕಸಿದುಕೊಂಡಿದ್ದೇ ಆದರೆ ಅದು ರಾಜನ ಮಹಾವಿನಾಶವನ್ನು ಸೂಚಿಸುತ್ತದೆ.

12092025a ಮಹಾವೃಕ್ಷೋ ಜಾಯತೇ ವರ್ಧತೇ ಚ
ತಂ ಚೈವ ಭೂತಾನಿ ಸಮಾಶ್ರಯಂತಿ|
12092025c ಯದಾ ವೃಕ್ಷಶ್ಚಿದ್ಯತೇ ದಹ್ಯತೇ ವಾ
ತದಾಶ್ರಯಾ ಅನಿಕೇತಾ ಭವಂತಿ||

ಹುಟ್ಟಿ ಬೆಳೆದ ಮಹಾವೃಕ್ಷವೊಂದು ಅನೇಕ ಭೂತಗಳಿಗೆ ಆಶ್ರಯವನ್ನು ನೀಡುತ್ತಿರುತ್ತದೆ. ಯಾವಾಗ ಆ ವೃಕ್ಷವು ಕಡಿಯಲ್ಪಡುತ್ತದೆಯೋ ಅಥವಾ ಸುಟ್ಟುಹೋಗುತ್ತದೆಯೋ ಆಗ ಅದರ ಆಶ್ರಯದಲ್ಲಿದ್ದ ಎಲ್ಲವೂ ಆಶ್ರಯರಹಿತವಾಗುತ್ತವೆ.

12092026a ಯದಾ ರಾಷ್ಟ್ರೇ ಧರ್ಮಮಗ್ರ್ಯಂ ಚರಂತಿ
ಸಂಸ್ಕಾರಂ ವಾ ರಾಜಗುಣಂ ಬ್ರುವಾಣಾಃ|
12092026c ತೈರೇವಾಧರ್ಮಶ್ಚರಿತೋ ಧರ್ಮಮೋಹಾತ್
ತೂರ್ಣಂ ಜಹ್ಯಾತ್ಸುಕೃತಂ ದುಷ್ಕೃತಂ ಚ||

ರಾಷ್ಟ್ರದಲ್ಲಿ ಧರ್ಮವೇ ಪ್ರಧಾನವಾಗಿ ನಡೆಯುತ್ತಿರುವಾಗ ಸಂಸ್ಕಾರವಂತರು ರಾಜನ ಗುಣಗಾನ ಮಾಡುತ್ತಾರೆ. ಅದೇ ರಾಷ್ಟ್ರದಲ್ಲಿ ಧರ್ಮದ ಗೊಂದಲದಿಂದ ಅಧರ್ಮವು ನಡೆಯುತ್ತಿದ್ದಾಗ ಆ ದುಷ್ಕೃತವು ಬೇಗನೇ ರಾಜನ ಸುಕೃತವನ್ನೂ ನಾಶಪಡಿಸುತ್ತದೆ.

12092027a ಯತ್ರ ಪಾಪಾ ಜ್ಞಾಯಮಾನಾಶ್ಚರಂತಿ
ಸತಾಂ ಕಲಿರ್ವಿಂದತಿ ತತ್ರ ರಾಜ್ಞಃ|
12092027c ಯದಾ ರಾಜಾ ಶಾಸ್ತಿ ನರಾನ್ನಶಿಷ್ಯಾನ್

ನ ತದ್ರಾಜ್ಯಂ ವರ್ಧತೇ ಭೂಮಿಪಾಲ||

ಭೂಮಿಪಾಲ! ಎಲ್ಲಿ ಪಾಪಿಗಳು ಬಹಿರಂಗವಾಗಿ ಓಡಾಡುತ್ತಾ ಸತ್ಪುರುಷರನ್ನು ಪೀಡಿಸುತ್ತಾರೋ ಅಲ್ಲಿಯ ರಾಜನು ಕಲಿ ಎಂದು ತಿಳಿಯುತ್ತಾರೆ. ಯಾವಾಗ ರಾಜನು ಪಾಪಿಷ್ಟರನ್ನು ಶಿಕ್ಷಿಸುವುದಿಲ್ಲವೋ ಆಗ ರಾಜ್ಯವು ಅಭಿವೃದ್ಧಿಯನ್ನು ಹೊಂದುವುದಿಲ್ಲ.

12092028a ಯಶ್ಚಾಮಾತ್ಯಂ ಮಾನಯಿತ್ವಾ ಯಥಾರ್ಹಂ
ಮಂತ್ರೇ ಚ ಯುದ್ಧೇ ಚ ನೃಪೋ ನಿಯುಂಜ್ಯಾತ್|
12092028c ಪ್ರವರ್ಧತೇ ತಸ್ಯ ರಾಷ್ಟ್ರಂ ನೃಪಸ್ಯ
ಭುಂಕ್ತೇ ಮಹೀಂ ಚಾಪ್ಯಖಿಲಾಂ ಚಿರಾಯ||

ಯಾವ ನೃಪನು ಅಮಾತ್ಯರನ್ನು ಗೌರವಿಸಿ ಯಥಾರ್ಹವಾಗಿ ಅವರನ್ನು ಮಂತ್ರಾಲೋಚನೆ ಮತ್ತು ಯುದ್ಧಗಳಲ್ಲಿ ನಿಯೋಜಿಸಿಕೊಳ್ಳುತ್ತಾನೋ ಅಂಥಹ ನೃಪನ ರಾಷ್ಟ್ರವು ವೃದ್ಧಿಯಾಗುತ್ತದೆ. ಮತ್ತು ಅವನು ಅಖಿಲ ಮಹಿಯನ್ನೂ ಬಹುಕಾಲ ಭೋಗಿಸುತ್ತಾನೆ.

12092029a ಅತ್ರಾಪಿ ಸುಕೃತಂ ಕರ್ಮ ವಾಚಂ ಚೈವ ಸುಭಾಷಿತಾಮ್|
12092029c ಸಮೀಕ್ಷ್ಯ ಪೂಜಯನ್ರಾಜಾ ಧರ್ಮಂ ಪ್ರಾಪ್ನೋತ್ಯನುತ್ತಮಮ್||

ಅವರ ಸುಕೃತ ಕರ್ಮ ಮತ್ತು ಸುಭಾಷಿತ ಮಾತುಗಳನ್ನು ಸಮೀಕ್ಷಿಸಿ ಪೂಜಿಸುವ ರಾಜನು ಅನುತ್ತಮ ಧರ್ಮವನ್ನು ಪಡೆದುಕೊಳ್ಳುತ್ತಾನೆ.

12092030a ಸಂವಿಭಜ್ಯ ಯದಾ ಭುಂಕ್ತೇ ನ ಚಾನ್ಯಾನವಮನ್ಯತೇ|
12092030c ನಿಹಂತಿ ಬಲಿನಂ ದೃಪ್ತಂ ಸ ರಾಜ್ಞೋ ಧರ್ಮ ಉಚ್ಯತೇ||

ಸಂಪತ್ತನ್ನು ಸರಿಯಾಗಿ ವಿಭಜಿಸಿ ಉಪಭೋಗಿಸುವುದು, ಅನ್ಯರನ್ನು

ಅಪಮಾನಿಸದಿರುವುದು, ಮದಾಂಧ ಬಲಿಷ್ಠರನ್ನು ಸಂಹರಿಸುವುದು – ಇದು ರಾಜಧರ್ಮವೆಂದೆನಿಸಿಕೊಳ್ಳುತ್ತದೆ.

12092031a ತ್ರಾಯತೇ ಹಿ ಯದಾ ಸರ್ವಂ ವಾಚಾ ಕಾಯೇನ ಕರ್ಮಣಾ|
12092031c ಪುತ್ರಸ್ಯಾಪಿ ನ ಮೃಷ್ಯೇಚ್ಚ ಸ ರಾಜ್ಞೋ ಧರ್ಮ ಉಚ್ಯತೇ||

ಮಾತು, ಶರೀರ ಮತ್ತು ಕಾರ್ಯಗಳಿಂದ ಎಲ್ಲವನ್ನೂ ರಕ್ಷಿಸುವುದು ಮತ್ತು ಮಗನ ಅಪರಾಧವನ್ನೂ ಕ್ಷಮಿಸದಿರುವುದು – ಇದು ರಾಜಧರ್ಮವೆಂದೆನಿಸಿಕೊಳ್ಳುತ್ತದೆ.

[257]12092032a ಯದಾ ಶಾರಣಿಕಾನ್ರಾಜಾ ಪುತ್ರವತ್ಪರಿರಕ್ಷತಿ|
12092032c ಭಿನತ್ತಿ ನ ಚ ಮರ್ಯಾದಾಂ ಸ ರಾಜ್ಞೋ ಧರ್ಮ ಉಚ್ಯತೇ||

ಶರಣುಬಂದವರನ್ನು ರಾಜನು ಪುತ್ರರಂತೆ ಪರಿರಕ್ಷಿಸುತ್ತಾನೆ. ಮತ್ತು ಅವನು ಮರ್ಯಾದೆಗಳನ್ನು ಮೀರಿ ನಡೆದುಕೊಳ್ಳುವುದಿಲ್ಲ. ಇದು ರಾಜಧರ್ಮವೆನಿಸಿಕೊಳ್ಳುತ್ತದೆ.

12092033a ಯದಾಪ್ತದಕ್ಷಿಣ್ಯೈರ್ಯಜ್ಞೈರ್ಯಜತೇ ಶ್ರದ್ಧಯಾನ್ವಿತಃ|
12092033c ಕಾಮದ್ವೇಷಾವನಾದೃತ್ಯ ಸ ರಾಜ್ಞೋ ಧರ್ಮ ಉಚ್ಯತೇ||

---

[257] ಇದಕ್ಕೆ ಮೊದಲು ಈ ಮೂರು ಶ್ಲೋಕಗಳಿವೆ: ಸಂವಿಭಜ್ಯ ಯದಾ ಭುಂಕ್ತೇ ನೃಪತಿರ್ದುರ್ಬಲಾನ್ನರಾನ್| ತದಾ ಭವಂತಿ ಬಲಿನಃ ಸ ರಾಜ್ಞೋ ಧರ್ಮ ಉಚ್ಯತೇ|| ಯದಾ ರಕ್ಷತಿ ರಾಷ್ಟ್ರಾಣಿ ಯದಾ ದಸ್ಯೂನಪೋಹತಿ| ಯದಾ ಜಯತಿ ಸಂಗ್ರಾಮೇ ಸ ರಾಜ್ಞೋ ಧರ್ಮ ಉಚ್ಯತೇ|| ಪಾಪಮಾಚರತೋ ಯತ್ರ ಕರ್ಮಣಾ ವ್ಯಾಹೃತೇನ ವಾ| ಪ್ರಿಯಸ್ಯಾಪಿ ನ ಮೃಷ್ಯೇತ ಸ ರಾಜ್ಞೋ ಧರ್ಮ ಉಚ್ಯತೇ|| (ಭಾರತದರ್ಶನ/ಗೀತಾ ಪ್ರೆಸ್).

ಕಾಮದ್ವೇಷಗಳನ್ನು ಅನಾದರಿಸಿ ಶದ್ಧಾನ್ವಿತನಾಗಿ ಆಪ್ತದಕ್ಷಿಣೆಗಳಿಂದ
ಯಜ್ಞಗಳನ್ನು ಯಜಿಸುವುದು ರಾಜಧರ್ಮವೆನಿಸಿಕೊಳ್ಳುತ್ತದೆ.

12092034a ಕೃಪಣಾನಾಥವೃದ್ಧಾನಾಂ ಯದಾಶ್ರು ವ್ಯಪಮಾರ್ಷ್ಟಿ ವೈ|
12092034c ಹರ್ಷಂ ಸಂಜನಯನ್ನೃಣಾಂ ಸ ರಾಜ್ಞೋ ಧರ್ಮ ಉಚ್ಯತೇ||

ದೀನರು, ಅನಾಥರು ಮತ್ತು ವೃದ್ಧರ ಕಣ್ಣೀರನ್ನು ಒರೆಸಿ ಅವರಿಗೆ
ಹರ್ಷವನ್ನುಂಟುಮಾಡುವುದು ರಾಜಧರ್ಮವೆನಿಸಿಕೊಳ್ಳುತ್ತದೆ.

12092035a ವಿವರ್ಧಯತಿ ಮಿತ್ರಾಣಿ ತಥಾರೀಂಶ್ಚಾಪಕರ್ಷತಿ|
12092035c ಸಂಪೂಜಯತಿ ಸಾಧೂಂಶ್ಚ ಸ ರಾಜ್ಞೋ ಧರ್ಮ ಉಚ್ಯತೇ||

ಮಿತ್ರರನ್ನು ಹೆಚ್ಚಿಸಿಕೊಳ್ಳುವುದು, ಶತ್ರುಗಳನ್ನು
ಕಡಿಮೆಮಾಡಿಕೊಳ್ಳುವುದು ಮತ್ತು ಸಾಧುಗಳನ್ನು ಪೂಜಿಸುವುದು -
ಇವು ರಾಜಧರ್ಮವೆಂದೆನಿಸಿಕೊಳ್ಳುತ್ತವೆ.

12092036a ಸತ್ಯಂ ಪಾಲಯತಿ ಪ್ರಾಪ್ತಾ ನಿತ್ಯಂ ಭೂಮಿಂ ಪ್ರಯಚ್ಚತಿ|
12092036c ಪೂಜಯತ್ಯತಿಥೀನ್ ಭೃತ್ಯಾನ್ಸ ರಾಜ್ಞೋ ಧರ್ಮ ಉಚ್ಯತೇ||

ಸತ್ಯವನ್ನು ಪಾಲಿಸುವುದು, ನಿತ್ಯವೂ ಭೂದಾನಮಾಡುವುದು,
ಅತಿಥಿಗಳನ್ನು ಮತ್ತು ಭರಣ-ಪೋಷಣೆ ಮಾಡಬೇಕಾದವರನ್ನು
ಗೌರವಿಸುವುದು ಇವು ರಾಜಧರ್ಮಗಳೆಂದೆನಿಸಿಕೊಳ್ಳುತ್ತವೆ.

12092037a ನಿಗ್ರಹಾನುಗ್ರಹೌ ಚೋಭೌ ಯತ್ರ ಸ್ಯಾತಾಂ ಪ್ರತಿಷ್ಠಿತೌ|
12092037c ಅಸ್ಮಿಽಲ್ಲೋಕೇ ಪರೇ ಚೈವ ರಾಜಾ ತತ್ಫಾಪ್ನುತೇ ಫಲಮ್||

ನಿಗ್ರಹ ಮತ್ತು ಅನುಗ್ರಹ ಇವೆರಡೂ ಯಾರಲ್ಲಿ ಪ್ರತಿಷ್ಠಿತವಾಗಿವೆಯೋ
ಆ ರಾಜನು ಇಹ-ಪರಗಳೆರಡರಲ್ಲೂ ಉತ್ತಮ ಫಲವನ್ನು

ಪಡೆದುಕೊಳ್ಳುತ್ತಾನೆ.

12092038a ಯಮೋ ರಾಜಾ ಧಾರ್ಮಿಕಾಣಾಂ ಮಾಂಧಾತಃ ಪರಮೇಶ್ವರಃ|
12092038c ಸಂಯಚ್ಚನ್ಭವತಿ ಪ್ರಾಣಾನ್ನಸಂಯಚ್ಚಂಸ್ತು ಪಾಪಕಃ||

ಮಾಂಧಾತಾ! ರಾಜನು ದುಷ್ಟರಿಗೆ ಯಮನಂತಿರುತ್ತಾನೆ ಮತ್ತು
ಧಾರ್ಮಿಕರಿಗೆ ಪರಮೇಶ್ವರನಂತಿರುತ್ತಾನೆ. ಇಂದ್ರಿಯಗಳನ್ನು
ನಿಗ್ರಹಿಸಿಕೊಂಡಿರುವವರೆಗೆ ಅವನು ಶಾಸನಮಾಡಲು
ಸಮರ್ಥನಾಗಿರುತ್ತಾನೆ. ಇಂದ್ರಿಯಗಳಿಗೆ ದಾಸನಾದಾಗ
ಪತಿತನಾಗುತ್ತಾನೆ.

12092039a ಋತ್ವಿಕ್ಪುರೋಹಿತಾಚಾರ್ಯಾನ್ಸತ್ಕೃತ್ಯಾನವಮನ್ಯ ಚ|
12092039c ಯದಾ ಸಮ್ಯಕ್ ಪ್ರಗೃಹ್ಣಾತಿ ಸ ರಾಜ್ಞೋ ಧರ್ಮ ಉಚ್ಯತೇ||

ಋತ್ವಿಜರನ್ನೂ ಪುರೋಹಿತರನ್ನೂ ಆಚಾರ್ಯರನ್ನೂ ಸತ್ಕರಿಸಿ
ಅಪಮಾನಿಸದೇ ಬರಮಾಡಿಕೊಳ್ಳುವುದು
ರಾಜಧರ್ಮವೆಂದೆನಿಸಿಕೊಳ್ಳುವುದು.

12092040a ಯಮೋ ಯಚ್ಚತಿ ಭೂತಾನಿ ಸರ್ವಾಣ್ಯೇವಾವಿಶೇಷತಃ|
12092040c ತಸ್ಯ ರಾಜ್ಞಾನುಕರ್ತವ್ಯಂ ಯಂತವ್ಯಾ ವಿಧಿವತ್ಪ್ರಜಾಃ||

ಯಮನು ಹೇಗೆ ಸರ್ವ ಭೂತಗಳಲ್ಲಿಯೂ ವ್ಯತ್ಯಾಸಮಾಡದೇ
ನಿಯಂತ್ರಿಸುತ್ತಾನೋ ಹಾಗೆ ವಿಧಿವತ್ತಾಗಿ ಪ್ರಜೆಗಳನ್ನು
ನಿಯಂತ್ರಿಸುವುದು ರಾಜನ ಕರ್ತವ್ಯವು.

12092041a ಸಹಸ್ರಾಕ್ಷೇಣ ರಾಜಾ ಹಿ ಸರ್ವ ಏವೋಪಮೀಯತೇ|
12092041c ಸ ಪಶ್ಯತಿ ಹಿ ಯಂ ಧರ್ಮಂ ಸ ಧರ್ಮಃ ಪುರುಷರ್ಷಭ||

ಪುರುಷರ್ಷಭ! ಆದುದರಿಂದಲೇ ರಾಜನನ್ನು ಸಹಸ್ರಾಕ್ಷ ಇಂದ್ರನಿಗೆ ಹೋಲಿಸುತ್ತಾರೆ. ಅವನು ಯಾವುದನ್ನು ಧರ್ಮವೆಂದು ತಿಳಿಯುತ್ತಾನೋ ಅದೇ ಧರ್ಮವೆನಿಸಿಕೊಳ್ಳುತ್ತದೆ.

12092042a ಅಪ್ರಮಾದೇನ ಶಿಕ್ಷೇಥಾಃ ಕ್ಷಮಾಂ ಬುದ್ಧಿಂ ಧೃತಿಂ ಮತಿಮ್|
12092042c ಭೂತಾನಾಂ ಸತ್ತ್ವಜಿಜ್ಞಾಸಾಂ ಸಾಧ್ವಸಾಧು ಚ ಸರ್ವದಾ||

ನೀನು ಅಪ್ರಮತ್ತನಾಗಿದ್ದುಕೊಂಡು ಕ್ಷಮೆ, ಬುದ್ಧಿ, ಧೃತಿ ಮತ್ತು ಮತಿಯನ್ನು ಯಾವಾಗ ಹೇಗೆ ಉಪಯೋಗಿಸಬೇಕೆನ್ನುವುದನ್ನು ಕಲಿಯಬೇಕು. ಭೂತಗಳಿಗೆ ಯಾವುದು ಒಳ್ಳೆಯದು ಮತ್ತು ಒಳ್ಳೆಯಲ್ಲ ಎನ್ನುವುದನ್ನು ಸರ್ವದಾ ತಿಳಿದುಕೊಳ್ಳುತ್ತಿರಬೇಕು.

12092043a ಸಂಗ್ರಹಃ ಸರ್ವಭೂತಾನಾಂ ದಾನಂ ಚ ಮಧುರಾ ಚ ವಾಕ್|
12092043c ಪೌರಜಾನಪದಾಶ್ಚೈವ ಗೋಪ್ತವ್ಯಾಃ ಸ್ವಾ ಯಥಾ ಪ್ರಜಾಃ||

ಸರ್ವಭೂತಗಳಿಂದ ವಿಶ್ವಾಸ ಸಂಪಾದನೆ, ದಾನ ಮತ್ತು ಮಧುರವಾದ ಮಾತು ಹಾಗು ಪೌರಜಾನಪದರನ್ನು ತನ್ನ ಮಕ್ಕಳಂತೆಯೇ ರಕ್ಷಿಸುವುದು ಇವುಗಳನ್ನು ಮಾಡುತ್ತಿರಬೇಕು.

12092044a ನ ಜಾತ್ವದಕ್ಷೋ ನೃಪತಿಃ ಪ್ರಜಾಃ ಶಕ್ನೋತಿ ರಕ್ಷಿತುಮ್|
12092044c ಭಾರೋ ಹಿ ಸುಮಹಾಂಸ್ತಾತ ರಾಜ್ಯಂ ನಾಮ ಸುದುಷ್ಕರಮ್||

ಅಯ್ಯಾ! ಅದಕ್ಷನಾದ ನೃಪತಿಯು ಪ್ರಜೆಗಳನ್ನು ರಕ್ಷಿಸಲು ಶಕ್ಯನಾಗುವುದಿಲ್ಲ. ಆದುದರಿಂದ ರಾಜ್ಯದ ಇನ್ನೊಂದು ಹೆಸರು ಮಹತ್ತರ ಜವಾಬ್ದಾರಿ ಮತ್ತು ನಿರ್ವಹಿಸಲು ಕಷ್ಟಕರವಾದುದು ಎಂದಿದೆ.

12092045a ತದ್ದಂಡವಿನ್ನೃಪಃ ಪ್ರಾಜ್ಞಃ ಶೂರಃ ಶಕ್ನೋತಿ ರಕ್ಷಿತುಮ್|
12092045c ನ ಹಿ ಶಕ್ಯಮದಂಡೇನ ಕ್ಲೀಬೇನಾಬುದ್ಧಿನಾಪಿ ವಾ||

ದಂಡನೀತಿಯನ್ನು ತಿಳಿದಿರುವ ಪ್ರಾಜ್ಞ ಶೂರನೇ ಪ್ರಜೆಗಳನ್ನು ರಕ್ಷಿಸಲು ಶಕ್ಯನಾಗಿರುತ್ತಾನೆ. ದಂಡನೆ ನೀಡದ ಅಬುದ್ಧಿ ಹೇಡಿಗೆ ಪ್ರಜೆಗಳನ್ನು ರಕ್ಷಿಸಲು ಶಕ್ಯವಾಗುವುದಿಲ್ಲ.

12092046a ಅಭಿರೂಪೈಃ ಕುಲೇ ಜಾತೈರ್ದಕ್ಷೈರ್ಭಕ್ತೈರ್ಬಹುಶ್ರುತೈಃ|
12092046c ಸರ್ವಾ ಬುದ್ಧೀಃ ಪರೀಕ್ಷೇಥಾಸ್ತಾಪಸಾಶ್ರಮಿಣಾಮಪಿ||

ರೂಪವಂತರು, ಸತ್ಕುಲಪ್ರಸೂತರು, ದಕ್ಷರು, ಭಕ್ತರು ಮತ್ತು ಬಹುಶ್ರುತರಿಂದ ಆಶ್ರಮವಾಸಿಗಳನ್ನೂ ಸೇರಿ ಎಲ್ಲರ ಬುದ್ಧಿಗಳನ್ನು ಪರೀಕ್ಷಿಸಬೇಕು.

12092047a ತತಸ್ತ್ವಂ ಸರ್ವಭೂತಾನಾಂ ಧರ್ಮಂ ವೇತ್ಸ್ಯಸಿ ವೈ ಪರಮ್|
12092047c ಸ್ವದೇಶೇ ಪರದೇಶೇ ವಾ ನ ತೇ ಧರ್ಮೋ ವಿನಶ್ಯತಿ||

ಹಾಗೆ ಮಾಡುವುದರಿಂದ ನೀನು ಸರ್ವಭೂತಗಳ ಪರಮ ಧರ್ಮವನ್ನು ತಿಳಿದುಕೊಳ್ಳುತ್ತೀಯೆ. ಸ್ವದೇಶವಾಗಲೀ ಪರದೇಶವಾಗಲೀ ನಿನ್ನ ಧರ್ಮವು ನಾಶವಾಗುವುದಿಲ್ಲ.

12092048a ಧರ್ಮಶ್ಚಾರ್ಥಶ್ಚ ಕಾಮಶ್ಚ ಧರ್ಮ ಏವೋತ್ತರೋ ಭವೇತ್|
12092048c ಅಸ್ಮಿಂಽಲ್ಲೋಕೇ ಪರೇ ಚೈವ ಧರ್ಮ ವಿತ್ಸುಖಮೇಧತೇ||

ಧರ್ಮ-ಅರ್ಥ-ಕಾಮಗಳಲ್ಲಿ ಧರ್ಮವೇ ಉತ್ತಮವಾದುದು. ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಕೂಡ ಧರ್ಮವೇ ಸುಖವನ್ನು ನೀಡುತ್ತದೆ.

12092049a ತ್ಯಜಂತಿ ದಾರಾನ್ಪ್ರಾಣಾಂಶ್ಚ ಮನುಷ್ಯಾಃ ಪ್ರತಿಪೂಜಿತಾಃ|
12092049c ಸಂಗ್ರಹಶ್ಚೈವ ಭೂತಾನಾಂ ದಾನಂ ಚ ಮಧುರಾ ಚ ವಾಕ್||
12092050a ಅಪ್ರಮಾದಶ್ಚ ಶೌಚಂ ಚ ತಾತ ಭೂತಿಕರಂ ಮಹತ್|
12092050c ಏತೇಭ್ಯಶ್ಚೈವ ಮಾಂಧಾತಃ ಸತತಂ ಮಾ ಪ್ರಮಾದಿಥಾಃ||

ಅಯ್ಯಾ! ಮಾಂಧಾತಾ! ನೀನು ಸಮ್ಮಾನಿಸಿದ ಮನುಷ್ಯರು ನಿನಗಾಗಿ ಪತ್ನಿಯರು ಮತ್ತು ಪ್ರಾಣಗಳನ್ನೂ ತೊರೆಯುತ್ತಾರೆ. ಪ್ರಜಾಸಂಗ್ರಹ, ದಾನ, ಮಧುರ ಮಾತು, ಅಪ್ರಮತ್ತತೆ ಮತ್ತು ಶೌಚ ಇವು ಮಹತ್ತರ ಐಶ್ವರ್ಯವನ್ನುಂಟುಮಾಡುತ್ತವೆ. ಇವುಗಳಿಂದ ನೀನು ಎಂದೂ ಚ್ಯುತನಾಗಬಾರದು.

12092051a ಅಪ್ರಮತ್ತೋ ಭವೇದ್ರಾಜಾ ಚಿದ್ರದರ್ಶೀ ಪರಾತ್ಮನೋಃ|
12092051c ನಾಸ್ಯ ಚಿದ್ರಂ ಪರಃ ಪಶ್ಯೇಚ್ಚಿದ್ರೇಷು ಪರಮನ್ವಿಯಾತ್||

ರಾಜನು ಅಪ್ರಮತ್ತನಾಗಿರಬೇಕು. ತನ್ನಲ್ಲಿ ಮತ್ತು ಇತರರಲ್ಲಿರುವ ದುರ್ಬಲತೆಗಳನ್ನು ಕಂಡುಕೊಂಡಿರಬೇಕು. ಆದರೆ ತನ್ನಲ್ಲಿರುವ ದೌರ್ಬಲ್ಯವು ಪರರಿಗೆ ಕಾಣದಂತಿರಬೇಕು. ಶತ್ರುಗಳ ದೌರ್ಬಲ್ಯದ ಮೇಲೆ ಗಮವವಿಟ್ಟಿರಬೇಕು.

12092052a ಏತದ್ವೃತ್ತಂ ವಾಸವಸ್ಯ ಯಮಸ್ಯ ವರುಣಸ್ಯ ಚ|
12092052c ರಾಜರ್ಷೀಣಾಂ ಚ ಸರ್ವೇಷಾಂ ತತ್ತ್ವಮಪ್ಯನುಪಾಲಯ||

ಇಂತರ ವರ್ತನೆಯು ವಾಸವ, ಯಮ, ವರುಣ ಮತ್ತು ರಾಜರ್ಷಿಗಳಲ್ಲಿವೆ. ಎಲ್ಲರೂ ಪರಿಪಾಲಿಸುತ್ತಿದ್ದ ಈ ರಾಜಧರ್ಮವನ್ನು ನೀನೂ ಪರಿಪಾಲಿಸು.

12092053a ತತ್ಕುರುಷ್ವ ಮಹಾರಾಜ ವೃತ್ತಂ ರಾಜರ್ಷಿಸೇವಿತಮ್|

12092053c ಆತಿಷ್ಠ ದಿವ್ಯಂ ಪಂಥಾನಮಹ್ನಾಯ ಭರತರ್ಷಭ||

ಮಹಾರಾಜಾ! ಭರತರ್ಷಭ! ರಾಜರ್ಷಿಸೇವಿತವಾದ ಈ
ವರ್ತನೆಯಂತೆಯೇ ನಡೆದುಕೋ. ದಿವ್ಯ ಮಾರ್ಗವನ್ನು ಆಶ್ರಯಿಸು.

12092054a ಧರ್ಮವೃತ್ತಂ ಹಿ ರಾಜಾನಂ ಪ್ರೇತ್ಯ ಚೇಹ ಚ ಭಾರತ|
12092054c ದೇವರ್ಷಿಪಿತೃಗಂಧರ್ವಾಃ ಕೀರ್ತಯಂತ್ಯಮಿತೌಜಸಃ||

ಭಾರತ! ಧರ್ಮವ್ರತ ರಾಜನ ಕೀರ್ತಿಯನ್ನು ಅವನ ಮರಣಾನಂತರ
ದೇವರ್ಷಿ-ಪಿತೃ-ಗಂಧರ್ವರು ಗಾನಮಾಡುತ್ತಿರುತ್ತಾರೆ.””

12092055 ಭೀಷ್ಮ ಉವಾಚ|
12092055a ಸ ಏವಮುಕ್ತೋ ಮಾಂಧಾತಾ ತೇನೋತಥ್ಯೇನ ಭಾರತ|
12092055c ಕೃತವಾನವಿಶಂಕಸ್ತದೇಕಃ ಪ್ರಾಪ ಚ ಮೇದಿನೀಮ್||

ಭೀಷ್ಮನು ಹೇಳಿದನು: “ಭಾರತ! ಉತಥ್ಯನು ಹೀಗೆ ಹೇಳಲು
ಮಾಂಧಾತನು ಸಂದೇಹರಹಿತನಾಗಿ ಅವನು ಹೇಳಿದಂತೆಯೇ ಮಾಡಿ
ಈ ಭೂಮಂಡಲಕ್ಕೆ ಏಕಚಕ್ರಾಧಿಪತಿಯಾದನು.

12092056a ಭವಾನಪಿ ತಥಾ ಸಮ್ಯಙ್ಮಾಂಧಾತೇವ ಮಹೀಪತಿಃ|
12092056c ಧರ್ಮಂ ಕೃತ್ವಾ ಮಹೀಂ ರಕ್ಷನ್ಸ್ವರ್ಗೇ ಸ್ಥಾನಮವಾಪ್ಸ್ಯಸಿ||

ನೀನೂ ಕೂಡ ಮಹೀಪತಿ ಮಾಂಧಾತನಂತೆ ಉತ್ತಮನಾಗಿ
ಧರ್ಮವನ್ನಾಚರಿಸಿ ಮಹಿಯನ್ನು ರಕ್ಷಿಸಿ ಸ್ವರ್ಗದಲ್ಲಿ ಸ್ಥಾನವನ್ನು
ಪಡೆದುಕೊಳ್ಳುತ್ತೀಯೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ

ಉತಥ್ಯಗೀತಾಸು ದ್ವಿನವತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ಉತಥ್ಯಗೀತ ಎನ್ನುವ ತೊಂಭತ್ತೆರಡನೇ ಅಧ್ಯಾಯವು.

೯೩

ವಾಮದೇವಗೀತಾ

ರಾಜಧರ್ಮದ ಕುರಿತು ವಸುಮನಸನಿಗೆ ವಾಮದೇವನ ಉಪದೇಶ (1-19).

12093001 ಯುಧಿಷ್ಠಿರ ಉವಾಚ|
12093001a ಕಥಂ ಧರ್ಮೇ ಸ್ಥಾತುಮಿಚ್ಚನ್ರಾಜಾ ವರ್ತೇತ ಧಾರ್ಮಿಕಃ|
12093001c ಪೃಚ್ಚಾಮಿ ತ್ವಾ ಕುರುಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಧಾರ್ಮಿಕನಾದ ರಾಜನು ಹೇಗೆ ತಾನೇ ಧರ್ಮದಲ್ಲಿಯೇ ನೆಲೆಸಿ ನಡೆದುಕೊಳ್ಳಬಹುದು? ಕುರುಶ್ರೇಷ್ಠ! ಪಿತಾಮಹ! ನಿನ್ನನ್ನು ಕೇಳುತ್ತಿರುವ ನನಗೆ ಹೇಳು."

12093002 ಭೀಷ್ಮ ಉವಾಚ|
12093002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12093002c ಗೀತಂ ದೃಷ್ಟಾರ್ಥತತ್ತ್ವೇನ ವಾಮದೇವೇನ ಧೀಮತಾ||

ಭೀಷ್ಮನು ಹೇಳಿದನು: "ಇದರ ಕುರಿತು ಪುರಾತನ ಇತಿಹಾಸವಾದ ಧೀಮತ ವಾಮದೇವನು ಅರ್ಥತತ್ತ್ವಗಳನ್ನು ತೋರಿಸಿದ ಗೀತೆಯನ್ನು ಉದಾಹರಿಸುತ್ತಾರೆ.

12093003a ರಾಜಾ ವಸುಮನಾ ನಾಮ ಕೌಸಲ್ಯೋ ಬಲವಾನ್ ಶುಚಿಃ|
12093003c ಮಹರ್ಷಿಂ ಪರಿಪಪ್ರಚ್ಚ ವಾಮದೇವಂ ಯಶಸ್ವಿನಮ್||

ಬಲವಂತನೂ ಶುಚಿಯೂ ಆಗಿದ್ದ ವಸುಮನಾ ಎಂಬ ಹೆಸರಿನ
ಕೋಸಲದ ರಾಜನು ಯಶಸ್ವಿ ಮಹರ್ಷಿ ವಾಮದೇವನನ್ನು
ಪ್ರಶ್ನಿಸಿದನುಃ

12093004a ಧರ್ಮಾರ್ಥಸಹಿತಂ ವಾಕ್ಯಂ ಭಗವನ್ನನುಶಾಧಿ ಮಾಮ್|
12093004c ಯೇನ ವೃತ್ತೇನ ವೈ ತಿಷ್ಠನ್ನ ಚ್ಯವೇಯಂ ಸ್ವಧರ್ಮತಃ||

“ಭಗವನ್! ಧಾರ್ಮಾರ್ಥ ಸಹಿತ ಮಾತುಗಳಿಂದ ನನಗೆ ಆದೇಶವನ್ನು
ನೀಡಿ. ಯಾವ ವರ್ತನೆಯಿಂದ ನಡೆದುಕೊಂಡರೆ ನಾನು
ಸ್ವಧರ್ಮದಿಂದ ಚ್ಯುತನಾಗದೇ ಸ್ಥಿರನಾಗಿರಬಹುದು?”

12093005a ತಮಬ್ರವೀದ್ವಾಮದೇವಸ್ತಪಸ್ವೀ ಜಪತಾಂ ವರಃ|
12093005c ಹೇಮವರ್ಣಮುಪಾಸೀನಂ ಯಯಾತಿಮಿವ ನಾಹುಷಮ್||

ಆಗ ಜಪಿಗಳಲ್ಲಿ ಶ್ರೇಷ್ಠ ತಪಸ್ವೀ ವಾಮದೇವನು ನಾಹುಷ
ಯಯಾತಿಯಂತೆ ಕುಳಿತಿದ್ದ ಹೇಮವರ್ಣದ ವಸುಮನನಿಗೆ ಹೇಳಿದನುಃ

12093006a ಧರ್ಮಮೇವಾನುವರ್ತಸ್ವ ನ ಧರ್ಮಾದ್ವಿದ್ಯತೇ ಪರಮ್|
12093006c ಧರ್ಮೇ ಸ್ಥಿತಾ ಹಿ ರಾಜಾನೋ ಜಯಂತಿ ಪೃಥಿವೀಮಿಮಾಮ್||

“ಧರ್ಮವನ್ನೇ ಅನುಸರಿಸು. ಧರ್ಮಕ್ಕಿಂತಲೂ ಶ್ರೇಷ್ಠವಾದುದು ಇಲ್ಲ.
ಧರ್ಮದಲ್ಲಿ ಸ್ಥಿತನಾದ ರಾಜನು ಈ ಪೃಥ್ವಿಯನ್ನು ಜಯಿಸುತ್ತಾನೆ.

12093007a ಅರ್ಥಸಿದ್ಧೇಃ ಪರಂ ಧರ್ಮಂ ಮನ್ಯತೇ ಯೋ ಮಹೀಪತಿಃ|
12093007c ಋತಾಂ ಚ ಕುರುತೇ ಬುದ್ಧಿಂ ಸ ಧರ್ಮೇಣ ವಿರೋಚತೇ||

ಅರ್ಥಸಿದ್ಧಿಗಿಂತಲೂ ಧರ್ಮಸಿದ್ಧಿಯೇ ಹಿರಿದಾದುದೆಂದು ಭಾವಿಸುವ ಮತ್ತು ಋತನಾಗಿರುವ ಮನಸ್ಸುಮಾಡಿರುವವನು ಧರ್ಮದಿಂದ ಪ್ರಕಾಶಿಸುತ್ತಾನೆ.

12093008a ಅಧರ್ಮದರ್ಶೀ ಯೋ ರಾಜಾ ಬಲಾದೇವ ಪ್ರವರ್ತತೇ|
12093008c ಕ್ಷಿಪ್ರಮೇವಾಪಯಾತೋಽಸ್ಮಾದುಭೌ ಪ್ರಥಮಮಧ್ಯಮೌ||

ಧರ್ಮವನ್ನು ಗಮನಿಸದೇ ಯಾವ ರಾಜನು ಕೇವಲ ಬಲವನ್ನುಪಯೋಗಿಸಿ ನಡೆದುಕೊಳ್ಳುತ್ತಾನೋ ಅವನನ್ನು ಮೊದಲನೆಯ ಧರ್ಮ ಮತ್ತು ಮಧ್ಯಮ ಅರ್ಥ ಇವೆರಡೂ ತೊರೆಯುತ್ತವೆ.

12093009a ಅಸತ್ಪಾಪಿಷ್ಠಸಚಿವೋ ವಧ್ಯೋ ಲೋಕಸ್ಯ ಧರ್ಮಹಾ|
12093009c ಸಹ್ಯೈವ ಪರಿವಾರೇಣ ಕ್ಷಿಪ್ರಮೇವಾವಸೀದತಿ||

ಅಸತ್ಪುರುಷರೂ ಪಾಪಿಷ್ಠರೂ ಆದ ಸಚಿವರ ಸಹಾಯದಿಂದ ಧರ್ಮವನ್ನು ನಾಶಗೊಳಿಸುವ ರಾಜನು ಲೋಕದಲ್ಲಿ ವಧೆಗೆ ಅರ್ಹನಾಗುತ್ತಾನೆ. ಪರಿವಾರಸಮೇತನಾಗಿ ಬಹಳ ಬೇಗ ವಿನಾಶವನ್ನು ಹೊಂದುತ್ತಾನೆ.

12093010a ಅರ್ಥಾನಾಮನನುಷ್ಠಾತಾ ಕಾಮಚಾರೀ ವಿಕತ್ಥನಃ|
12093010c ಅಪಿ ಸರ್ವಾಂ ಮಹೀಂ ಲಬ್ಧ್ವಾ ಕ್ಷಿಪ್ರಮೇವ ವಿನಶ್ಯತಿ||

ಅರ್ಥಸಿದ್ಧಿಗೆ ಪ್ರಯತ್ನಿಸದ, ಸ್ವೇಚ್ಛಾಚಾರಿಯಾದ ಮತ್ತು ಆತ್ಮಪ್ರಶಂಸೆಯನ್ನೇ ಮಾಡಿಕೊಳ್ಳುವ ರಾಜನು ಮಹಿಯಲ್ಲವನ್ನು ಪಡೆದಿದ್ದರೂ ಬೇಗನೇ ನಾಶಹೊಂದುತ್ತಾನೆ.

12093011a ಅಥಾದದಾನಃ ಕಲ್ಯಾಣಮನಸೂಯುರ್ಜಿತೇಂದ್ರಿಯಃ|

12093011c ವರ್ಧತೇ ಮತಿಮಾನ್ರಾಜಾ ಸ್ರೋತೋಭಿರಿವ ಸಾಗರಃ||

ಕಲ್ಯಾಣವಾದುದ್ದನ್ನು ಗ್ರಹಿಸುವ ಮತ್ತು ಮಾಡುವ, ಅನಸೂಯನೂ ಜಿತೇಂದ್ರಿಯನೂ ಆದ ಮತಿಮಂತ ರಾಜನು ನದಿಗಳಿಂದ ಸಾಗರವು ಹೇಗೋ ಹಾಗೆ ಅಭಿವೃದ್ಧಿ ಹೊಂದುತ್ತಾನೆ.

12093012a ನ ಪೂರ್ಣೋಽಸ್ಮೀತಿ ಮನ್ಯೇತ ಧರ್ಮತಃ ಕಾಮತೋಽರ್ಥತಃ|
12093012c ಬುದ್ಧಿತೋ ಮಿತ್ರತಶ್ಚಾಪಿ ಸತತಂ ವಸುಧಾಧಿಪಃ||

ವಸುಧಾಧಿಪನು ಯಾವಾಗಲೂ ಧರ್ಮದ ವಿಷಯದಲ್ಲಿ, ಕಾಮದ ವಿಷಯದಲ್ಲಿ, ಅರ್ಥದ ವಿಷಯದಲ್ಲಿ, ಬುದ್ಧಿಯ ವಿಷಯದಲ್ಲಿ ಮತ್ತು ಮಿತ್ರರ ವಿಷಯದಲ್ಲಿ ಸಂಪನ್ನನಾಗಿದ್ದರೂ ಪೂರ್ಣನಾಗಿರುವೆನೆಂದು ಭಾವಿಸಬಾರದು.

12093013a ಏತೇಷ್ವೇವ ಹಿ ಸರ್ವೇಷು ಲೋಕಯಾತ್ರಾ ಪ್ರತಿಷ್ಠಿತಾ|
12093013c ಏತಾನಿ ಶೃಣ್ವಽಲ್ಲಭತೇ ಯಶಃ ಕೀರ್ತಿಂ ಶ್ರಿಯಃ ಪ್ರಜಾಃ||

ರಾಜನ ಲೋಕಯಾತ್ರೆಯು ಇವೆಲ್ಲವುಗಳನ್ನೇ ಅವಂಬಿಸಿದೆ. ಇವುಗಳನ್ನು ಕೇಳಿದವನಿಗೆ ಯಶಸ್ಸು, ಕೀರ್ತಿ, ಸಂಪತ್ತು ಮತ್ತು ಪ್ರಜೆಗಳು ದೊರಕುತ್ತಾರೆ.

12093014a ಏವಂ ಯೋ ಧರ್ಮಸಂರಂಭೀ ಧರ್ಮಾರ್ಥಪರಿಚಿಂತಕಃ|
12093014c ಅರ್ಥಾನ್ಸಮೀಕ್ಷ್ಯಾರಭತೇ ಸ ಧ್ರುವಂ ಮಹದಶ್ನುತೇ||

ಹೀಗೆ ಧರ್ಮದಲ್ಲಿ ಆಸಕ್ತಿಯುಳ್ಳವನಾಗಿ ಧರ್ಮಾರ್ಥ ಪರಿಚಿಂತಕನಾಗಿ ಅರ್ಥಗಳನ್ನು ಸಮೀಕ್ಷಿಸಿ ಸೇವಿಸುವ ರಾಜನು ನಿಶ್ಚಯವಾಗಿಯೂ ಮಹಾಫಲವನ್ನು ಪಡೆದುಕೊಳ್ಳುತ್ತಾನೆ.

12093015a ಅದಾತಾ ಹ್ಯನತಿಸ್ನೇಹೋ ದಂಡೇನಾವರ್ತಯನ್ ಪ್ರಜಾಃ|
12093015c ಸಾಹಸಪ್ರಕೃತೀ ರಾಜಾ ಕ್ಷಿಪ್ರಮೇವ ವಿನಶ್ಯತಿ||

ದುಃಸಾಹಸಿಯಾದ, ದಾನಶೀಲನಲ್ಲದ, ಸ್ನೇಹಶೂನ್ಯನಾದ ಮತ್ತು ಪ್ರಜೆಗಳನ್ನು ದಂಡಿಸುವ ರಾಜನು ಕ್ಷಿಪ್ರವಾಗಿ ನಾಶಹೊಂದುತ್ತಾನೆ.

12093016a ಅಥ ಪಾಪಂ ಕೃತಂ ಬುದ್ಧ್ಯಾ ನ ಚ ಪಶ್ಯತ್ಯಬುದ್ಧಿಮಾನ್|
12093016c ಅಕೀರ್ತ್ಯಾಪಿ ಸಮಾಯುಕ್ತೋ ಮೃತೋ ನರಕಮಶ್ನುತೇ||

ತಾನು ಪಾಪ ಮಾಡಿದ್ದೇನೆಂದು ತಿಳಿದೂ ಪಶ್ಚಾತ್ತಾಪ ಪಡದಿರುವ ಮೂಢನು ಈ ಲೋಕದಲ್ಲಿ ಅಕೀರ್ತಿಯನ್ನು ಪಡೆಯುವುದಲ್ಲದೇ ಮೃತನಾದ ನಂತರ ನರಕಕ್ಕೆ ಹೋಗುತ್ತಾನೆ.

12093017a ಅಥ ಮಾನಯಿತುರ್ದಾತುಃ ಶುಕ್ಲಸ್ಯ ರಸವೇದಿನಃ[258]|
12093017c ವ್ಯಸನಂ ಸ್ವಮಿವೋತ್ಪನ್ನಂ ವಿಜಿಘಾಂಸಂತಿ ಮಾನವಾಃ||

ಎಲ್ಲರನ್ನು ಗೌರವಿಸುವ, ದಾನಶೀಲನಾದ ಮತ್ತು ಸತ್ತ್ವಗುಣಾನ್ವಿತ ರಾಜನಿಗೆ ವ್ಯಸನವು ಬಂದೊದಗಿದಾಗ ಅವನ ಪ್ರಜೆಗಳು ತಮಗೇ ಆ ವ್ಯಸನವು ಬಂದೊದಗಿದೆಯೋ ಎಂಬಂತೆ ಒಟ್ಟಾಗಿ ನಿವಾರಿಸುತ್ತಾರೆ.

12093018a ಯಸ್ಯ ನಾಸ್ತಿ ಗುರುರ್ಧರ್ಮೇ ನ ಚಾನ್ಯಾನನುಪೃಚ್ಚತಿ|
12093018c ಸುಖಿತಂತ್ರೋಽರ್ಥಲಾಭೇಷು ನ ಚಿರಂ ಮಹದಶ್ನುತೇ||

ಯಾರಿಗೆ ಧರ್ಮವನ್ನು ತಿಳಿಸುವ ಗುರುವಿಲ್ಲವೋ, ಯಾರು ಧರ್ಮದ ವಿಷಯದಲ್ಲಿ ಇತರರನ್ನು ಕೇಳಿ ತಿಳಿದುಕೊಳ್ಳುವುದಿಲ್ಲವೋ ಮತ್ತು ಯಾರು ಅರ್ಥಲಾಭವಾದಾಗ ಸುಖಪಡುವುದರಲ್ಲಿಯೇ

---

258 ಅಥ ಮಾನಯಿತುರ್ದಾಮ್ನಃ ಶ್ಲಕ್ಷ್ಣಸ್ಯ ವಶವರ್ತಿನಃ| (ಭಾರತ ದರ್ಶನ).

ತೊಡಗಿರುವನೋ ಅವನು ಬಹುಕಾಲ ಸುಖಿಯಾಗಿರಲಾರನು.

12093019a ಗುರುಪ್ರಧಾನೋ ಧರ್ಮೇಷು ಸ್ವಯಮರ್ಥಾನ್ವವೇಕ್ಷಿತಾ|
12093019c ಧರ್ಮಪ್ರಧಾನೋ ಲೋಕೇಷು ಸುಚಿರಂ ಮಹದಶ್ನುತೇ||

ಧರ್ಮದ ವಿಷಯದಲ್ಲಿ ಗುರುವನ್ನೇ ಪ್ರಧಾನನನ್ನಾಗಿರಿಸಿಕೊಂಡಿರುವ, ಅರ್ಥದ ವಿಷಯದಲ್ಲಿ ತಾನೇ ಧರ್ಮವನ್ನು ಪ್ರಧಾನವಾಗಿರಿಸಿಕೊಳ್ಳುವ ರಾಜನು ಲೋಕದಲ್ಲಿ ಬಹುಕಾಲ ಸುಖದಿಂದಿರುತ್ತಾನೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ವಾಮದೇವಗೀತಾಸು ತ್ರಿನವತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ವಾಮದೇವಗೀತ ಎನ್ನುವ ತೊಂಭತ್ಮೂರನೇ ಅಧ್ಯಾಯವು.

೯೪

ವಾಮದೇವನು ವಸುಮನಸನಿಗೆ ರಾಜೋಚಿತ ವ್ಯವಹಾರಗಳನ್ನು ವರ್ಣಿಸಿದುದು (1-38).

12094001 ವಾಮದೇವ ಉವಾಚ|
12094001a ಯತ್ರಾಧರ್ಮಂ ಪ್ರಣಯತೇ ದುರ್ಬಲೇ ಬಲವತ್ತರಃ|
12094001c ತಾಂ ವೃತ್ತಿಮುಪಜೀವಂತಿ ಯೇ ಭವಂತಿ ತದನ್ವಯಾಃ||

ವಾಮದೇವನು ಹೇಳಿದನು: “ಯಾವ ರಾಜ್ಯದಲ್ಲಿ ಬಲಶಾಲೀ ರಾಜನು ದುರ್ಬಲರ ಮೇಲೆ ಬಲಾತ್ಕಾರವಾಗಿ ಅಧರ್ಮದಿಂದ ವರ್ತಿಸುವನೋ ಅವನ ವೃತ್ತಿಯನ್ನು ಅವನ ಅನುಯಾಯಿಗಳೂ

ಕುಟುಂಬದವರೂ ಅನುಸರಿಸುತ್ತಾರೆ.

12094002a ರಾಜಾನಮನುವರ್ತಂತೇ ತಂ ಪಾಪಾಭಿಪ್ರವರ್ತಕಮ್|
12094002c ಅವಿನೀತಮನುಷ್ಯಂ ತತ್ ಕ್ಷಿಪ್ರಂ ರಾಷ್ಟ್ರಂ ವಿನಶ್ಯತಿ||

ಅನುಯಾಯಿಗಳು ಪಾಪಪ್ರವರ್ತಕನಾದ ರಾಜನನ್ನೇ ಅನುಸರಿಸುತ್ತಾರೆ. ಈ ರೀತಿಯ ಉದ್ದಂಡ ಮನುಷ್ಯರಿಂದಲೇ ರಾಷ್ಟ್ರವು ಕ್ಷಿಪ್ರವಾಗಿ ವಿನಾಶ ಹೊಂದುತ್ತದೆ.

12094003a ಯದ್ವೃತ್ತಿಮುಪಜೀವಂತಿ ಪ್ರಕೃತಿಸ್ಥಸ್ಯ ಮಾನವಾಃ|
12094003c ತದೇವ ವಿಷಮಸ್ಥಸ್ಯ ಸ್ವಜನೋಽಪಿ ನ ಮೃಷ್ಯತೇ||

ರಾಜನು ಸುಖದಿಂದಿರುವಾಗ ಅವನ ಅಧರ್ಮಕಾರ್ಯಗಳನ್ನು ಪ್ರೋತ್ಸಾಹಿಸಿ ಜೀವಿಸುತ್ತಿದ್ದ ಮಾನವರು ಅದೇ ರಾಜನು ವಿಷಮಸ್ಥಿತಿಯನ್ನು ಪಡೆದಾಗ, ಕುಟುಂಬದವರೇ ಆಗಿದ್ದರೂ, ಅವನನ್ನು ಸಹಿಸಿಕೊಳ್ಳುವುದಿಲ್ಲ.

12094004a ಸಾಹಸಪ್ರಕೃತಿರ್ಯತ್ರ ಕುರುತೇ ಕಿಂ ಚಿದುಲ್ಬಣಮ್|
12094004c ಅಶಾಸ್ತ್ರಲಕ್ಷಣೋ ರಾಜಾ ಕ್ಷಿಪ್ರಮೇವ ವಿನಶ್ಯತಿ||

ಸಾಹಸ ಪ್ರಕೃತಿಯುಳ್ಳ ಮತು ಶಾಸ್ತ್ರಗಳಂತೆ ನಡೆದುಕೊಳ್ಳದೇ ಇರುವ ರಾಜನು ಸ್ವಲ್ಪವೇ ಸಾಹಸವನ್ನು ತೋರಿಸಿದರೂ ಕ್ಷಿಪ್ರವಾಗಿ ನಾಶಹೊಂದುತ್ತಾನೆ.

12094005a ಯೋಽತ್ಯಂತಾಚರಿತಾಂ ವೃತ್ತಿಂ ಕ್ಷತ್ರಿಯೋ ನಾನುವರ್ತತೇ|
12094005c ಜಿತಾನಾಮಜಿತಾನಾಂ ಚ ಕ್ಷತ್ರಧರ್ಮಾದಪೈತಿ ಸಃ||

ಗೆದ್ದ ಮತ್ತು ಗೆಲ್ಲದೇ ಇದ್ದವರೊಡನೆ ಅತ್ಯಂತವಾಗಿ ಆಚರಿಸಬೇಕಾದ

ಕ್ಷತ್ರಿಯ ವೃತ್ತಿಯನ್ನು ಯಾರು ಅನುಸರಿಸುವುದಿಲ್ಲವೋ ಅವನು ಕ್ಷತ್ರಿಯಧರ್ಮದಿಂದ ಚ್ಯುತನಾಗುತ್ತಾನೆ.

12094006a ದ್ವಿಷಂತಂ ಕೃತಕರ್ಮಾಣಂ ಗೃಹೀತ್ವಾ ನೃಪತೀ ರಣೇ|
12094006c ಯೋ ನ ಮಾನಯತೇ ದ್ವೇಷಾತ್ ಕ್ಷತ್ರಧರ್ಮಾದಪೈತಿ ಸಃ||

ಹಿಂದೆ ಉಪಕಾರ ಮಾಡಿದವನು ಈಗ ಶತ್ರುವಾಗಿ ರಣದಲ್ಲಿ ಸೆರೆಹಿಡಿಯಲ್ಪಟ್ಟರೆ ಯಾವ ನೃಪತಿಯು ಅವನನ್ನು ದ್ವೇಷದ ಕಾರಣದಿಂದ ಗೌರವಿಸುವುದಿಲವೋ ಅವನು ಕ್ಷತ್ರಿಯಧರ್ಮದಿಂದ ಚ್ಯುತನಾದಂತೆ.

12094007a ಶಕ್ತಃ ಸ್ಯಾತ್ಸುಮುಖೋ ರಾಜಾ ಕುರ್ಯಾತ್ಕಾರುಣ್ಯಮಾಪದಿ[259]|
12094007c ಪ್ರಿಯೋ ಭವತಿ ಭೂತಾನಾಂ ನ ಚ ವಿಭ್ರಶ್ಯತೇ ಶ್ರಿಯಃ||

ರಾಜನಾದವನು ಶಕ್ತನಾಗಿರಬೇಕು. ಸುಮುಖನಾಗಿರಬೇಕು. ಆಪತ್ತು ಒದಗಿದವರಿಗೆ ಕರುಣೆಯನ್ನು ತೋರಿಸಬೇಕು. ಇರುವ ಜೀವಿಗಳಿಗೆ ಪ್ರಿಯನಾಗಿರಬೇಕು. ಅಂಥವನು ರಾಜ್ಯಶ್ರೀಯಿಂದ ಭ್ರಷ್ಟನಾಗುವುದಿಲ್ಲ.

12094008a ಅಪ್ರಿಯಂ ಯಸ್ಯ ಕುರ್ವೀತ ಭೂಯಸ್ತಸ್ಯ ಪ್ರಿಯಂ ಚರೇತ್|
12094008c ನಚಿರೇಣ ಪ್ರಿಯಃ ಸ ಸ್ಯಾದ್ಯೋಽಪ್ರಿಯಃ ಪ್ರಿಯಮಾಚರೇತ್||

ಹಿಂದೆ ಯಾರಿಗೆ ಅಪ್ರಿಯವಾದುದನ್ನು ಮಾಡಿದ್ದನೋ ಅವನಿಗೆ ಪುನಃ ಪ್ರಿಯವಾದುದನ್ನು ಮಾಡಬೇಕು. ಹಾಗೆ ಮಾಡುವುದರಿಂದ ಸ್ವಲ್ಪವೇ ಸಮಯದಲ್ಲಿ ಅಪ್ರಿಯನಾದವನೂ ಪ್ರಿಯನಾಗುತ್ತಾನೆ.

---

[259] ಶಕ್ತಃ ಸ್ಯಾತ್ಸುಸುಖೋ ರಾಜಾ ಕುರ್ಯಾತ್ಕರಣಮಾಪದಿ| (ಭಾರತ ದರ್ಶನ).

12094009a ಮೃಷಾವಾದಂ ಪರಿಹರೇತ್ಕುರ್ಯಾತ್ ಪ್ರಿಯಮಯಾಚಿತಃ|
12094009c ನ ಚ ಕಾಮಾನ್ನ ಸಂರಂಭಾನ್ನ ದ್ವೇಷಾದ್ಧರ್ಮಮುತ್ಸೃಜೇತ್||

ಸುಳ್ಳುಹೇಳುವುದನ್ನು ಸಂಪೂರ್ಣವಾಗಿ ಬಿಡಬೇಕು. ಯಾಚನೆ ಮಾಡದಿದ್ದರೂ ಪ್ರಿಯವಾದುದನ್ನೇ ಮಾಡಬೇಕು. ಕಾಮದಿಂದಾಗಲೀ ಕ್ರೋಧದಿಂದಾಗಲೀ ಅಥವಾ ದ್ವೇಷದಿಂದಾಗಲೀ ಧರ್ಮವನ್ನು ಬಿಡಬಾರದು.

[260]12094010a ನಾಪತ್ರಪೇತ ಪ್ರಶ್ನೇಷು ನಾಭಿಭವ್ಯಾಂ ಗಿರಂ ಸೃಜೇತ್|
12094010c ನ ತ್ವರೇತ ನ ಚಾಸೂಯೇತ್ತಥಾ ಸಂಗೃಹ್ಯತೇ ಪರಃ||

ಪ್ರಶ್ನಿಸಿದಾಗ ಉತ್ತರಿಸಲು ಸಂಕೋಚಪಡಬಾರದು. ಅಸಂಭವವಾದ ಮಾತುಗಳನ್ನು ಆಡಬಾರದು. ಅವಸರ ಮಾಡಬಾರದು. ಅಸೂಯೆಪಡಬಾರದು. ಆಗ ಶತ್ರುವನ್ನೂ ವಶಪಡಿಸಿಕೊಳ್ಳಬಹುದು.

12094011a ಪ್ರಿಯೇ ನಾತಿಭೃಶಂ ಹೃಷ್ಯೇದಪ್ರಿಯೇ ನ ಚ ಸಂಜ್ವರೇತ್|
12094011c ನ ಮುಹ್ಯೇದರ್ಥಕೃಚ್ಛ್ರೇಷು ಪ್ರಜಾಹಿತಮನುಸ್ಮರನ್||

ಪ್ರಿಯವಾದುದು ನಡೆದಾಗ ಅತಿಯಾಗಿ ಹರ್ಷಿಸಬಾರದು. ಅಪ್ರಿಯವಾದುದು ನಡೆದಾಗ ಹೆಚ್ಚಾಗಿ ಚಿಂತಿಸಬಾರದು ಕೂಡ. ಹಣದ ಮುಗ್ಗಟ್ಟು ಒದಗಿ ಬಂದಾಗಿ ಪ್ರಜಾಹಿತವನ್ನು ಸ್ಮರಿಸಿಕೊಂಡು ಮೋಹಿತನಾಗಬಾರದು.

---

[260] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಅಮಾಯಯೈವ ವರ್ತೇತ ನ ಚ ಸತ್ಯಂ ತ್ಯಜೇದ್ಬುಧಃ| ದಮಂ ಧರ್ಮಂ ಚ ಶೀಲಂಚ ಕ್ಷತ್ರಧರ್ಮ ಪ್ರಜಾಹಿತಮ್|| (ಗೀತಾ ಪ್ರೆಸ್).

12094012a ಯಃ ಪ್ರಿಯಂ ಕುರುತೇ ನಿತ್ಯಂ ಗುಣತೋ ವಸುಧಾಧಿಪಃ।
12094012c ತಸ್ಯ ಕರ್ಮಾಣಿ ಸಿಧ್ಯಂತಿ ನ ಚ ಸಂತ್ಯಜ್ಯತೇ ಶ್ರಿಯಾ॥

ಗುಣವಂತನಾದ ಯಾವ ವಸುಧಾಧಿಪನು ನಿತ್ಯವೂ ಪ್ರಿಯವಾದುದನ್ನೇ ಮಾಡುತ್ತಾನೋ ಅವನ ಕರ್ಮಗಳು ಸಿದ್ಧಿಸುತ್ತವೆ. ಮತ್ತು ಶ್ರೀಯು ಅವನನ್ನು ತ್ಯಜಿಸುವುದಿಲ್ಲ.

12094013a ನಿವೃತ್ತಂ ಪ್ರತಿಕೂಲೇಭ್ಯೋ ವರ್ತಮಾನಮನುಪ್ರಿಯೇ।
12094013c ಭಕ್ತಂ ಭಜೇತ ನೃಪತಿಸ್ತದ್ವೈ ವೃತ್ತಂ ಸತಾಮಿಹ॥

ತನಗೆ ಪ್ರತಿಕೂಲವಾದನ್ನೇ ಮಾಡುವ ಮತ್ತು ನಿತ್ಯವೂ ಪ್ರಿಯವನ್ನೇ ಮಾಡುವ ಸೇವಕನ ಕುರಿತು ನೃಪತಿಯಾದವನು ಗಮನವಿಟ್ಟು ಅನುರಕ್ತನಾಗಿರಬೇಕು.

12094014a ಅಪ್ರಕೀರ್ಣೇಂದ್ರಿಯಂ ಪ್ರಾಜ್ಞಮತ್ಯಂತಾನುಗತಂ ಶುಚಿಮ್।
12094014c ಶಕ್ತಂ ಚೈವಾನುರಕ್ತಂ ಚ ಯುಂಜ್ಯಾನ್ಮಹತಿ ಕರ್ಮಣಿ॥

ರಾಜನಾದವನು ತನ್ನನ್ನು ಅತಿಯಾಗಿ ಅನುಸರಿಸಿ ನಡೆಯುತ್ತಿರುವ ಮತ್ತು ತನ್ನಲ್ಲಿಯೇ ಅನುರಕ್ತನಾಗಿರುವ ಜಿತೇಂದ್ರಿಯನೂ ಪ್ರಾಜ್ಞನೂ ಮತ್ತು ಶುಚಿಯೂ ಆದವನನ್ನು ದೊಡ್ಡ ದೊಡ್ಡ ಕೆಲಸಗಳಿಗೆ ನಿಯೋಜಿಸಬೇಕು,

12094015a ಏವಮೇವ ಗುಣೈರ್ಯುಕ್ತೋ ಯೋ ನ ರಜ್ಯತಿ ಭೂಮಿಪಮ್।
12094015c ಭರ್ತುರರ್ಥೇಷ್ವಸೂಯಂತಂ ನ ತಂ ಯುಂಜೀತ ಕರ್ಮಣಿ॥

ಈ ಗುಣಗಳಿಂದ ಕೂಡಿರುವ, ಭೂಮಿಪನನ್ನು ರಂಜಿಸಲು ಸಮರ್ಥನಾಗಿರುವ, ಒಡೆಯನ ಆರ್ಥಿಕ ವಿಷಯದಲ್ಲಿ

ಅಪ್ರಮತ್ತನಾಗಿರದವನನ್ನು ಧನದ ವ್ಯವಸ್ಥೆಗೆ ನಿಯೋಜಿಸಬೇಕು.

12094016a ಮೂಢಮ್ಮೈಂದ್ರಿಯಕಂ ಲುಬ್ಧಮನಾರ್ಯಚರಿತಂ ಶಠಮ್|
12094016c ಅನತೀತೋಪಧಂ ಹಿಂಸ್ರಂ ದುರ್ಬುದ್ಧಿಮಬಹುಶ್ರುತಮ್||
12094017a ತ್ಯಕ್ತೋಪಾತ್ತಂ ಮದ್ಯರತಂ ದ್ಯೂತಸ್ತ್ರೀಮೃಗಯಾಪರಮ್|
12094017c ಕಾರ್ಯೇ ಮಹತಿ ಯೋ ಯುಂಜ್ಯಾದ್ಧೀಯತೇ ಸ ನೃಪಃ ಶ್ರಿಯಃ||

ಮೂಢ, ಇಂದ್ರಿಯಲೋಲುಪ, ಲೋಭಿ, ದುರಾಚಾರಿ, ಶಠ, ಕಪಟಿ, ಹಿಂಸಕ, ದುರ್ಬುದ್ಧಿ, ಶಾಸ್ತ್ರಜ್ಞಾನಶೂನ್ಯ, ಸ್ವಭಾವತಃ ಉದಾತ್ತನಾಗಿಲ್ಲದವನು, ಮದ್ಯಪಾನಾಸಕ್ತ, ಜೂಜಾಡುವ ಸ್ತ್ರೀಲಂಪಟ ಮತ್ತು ಬೇಟೆಯಾಡುವುದರಲ್ಲಿಯೇ ಆಸಕ್ತಿಯಿರುವವನನ್ನು ಮಹತ್ವದ ಕಾರ್ಯಗಳಲ್ಲಿ ನಿಯಮಿಸುವ ರಾಜನು ಬಹಳ ಬೇಗ ಲಕ್ಷ್ಮಿಯಿಂದ ವಿಹೀನನನಾಗುತ್ತಾನೆ.

12094018a ರಕ್ಷಿತಾತ್ಮಾ ತು ಯೋ ರಾಜಾ ರಕ್ಷ್ಯಾನ್ಯಶ್ಚಾನುರಕ್ಷತಿ|
12094018c ಪ್ರಜಾಶ್ಚ ತಸ್ಯ ವರ್ಧಂತೇ ಧ್ರುವಂ ಚ ಮಹದಶ್ನುತೇ||

ಯಾವ ರಾಜನು ತನ್ನನ್ನು ರಕ್ಷಿಸಿಕೊಳ್ಳುತ್ತಾ ಪ್ರಜೆಗಳನ್ನು ರಕ್ಷಿಸುವನೋ ಅವನ ಪ್ರಜೆಗಳು ಅಭಿವೃದ್ಧಿ ಹೊಂದುತ್ತಾರೆ. ರಾಜನು ಮಹತ್ತಾದ ಫಲವನ್ನು ಪಡೆದುಕೊಳ್ಳುತ್ತಾನೆ.

12094019a ಯೇ ಕೇ ಚಿದ್ಭೂಮಿಪತಯಸ್ತಾನ್ಸರ್ವಾನನ್ವವೇಕ್ಷಯೇತ್|
12094019c ಸುಹೃದ್ಭಿರನಭಿಖ್ಯಾತೈಸ್ತೇನ ರಾಜಾ ನ ರಿಷ್ಯತೇ||

ಯಾವ ರಾಜನು ತನ್ನ ಅಜ್ಞಾತರಾಗಿರುವ ಸುಹೃದರ ಮೂಲಕ ಸಮಸ್ತ ಭೂಪತಿಗಳ ವಿಷಯಗಳನ್ನೂ ತಿಳಿದುಕೊಳ್ಳುವನೋ ಅವನು ಎಲ್ಲ ರಾಜರನ್ನೂ ಅತಿಶಯಿಸುತ್ತಾನೆ.

12094020a ಅಪಕೃತ್ಯ ಬಲಸ್ಥಸ್ಯ ದೂರಸ್ಥೋಽಸ್ಮೀತಿ ನಾಶ್ವಸೇತ್|
12094020c ಶ್ಯೇನಾನುಚರಿತೈರ್ಹ್ಯೇತೇ ನಿಪತಂತಿ ಪ್ರಮಾದ್ಯತಃ||

ಬಲಿಷ್ಠ ಶತ್ರುವಿಗೆ ತೊಂದರೆ ಕೊಟ್ಟು ಅವನು ನನಗೇನೂ ಮಾಡಲಾರ ಎಂದು ನಂಬಿ ರಾಜನು ನಿಶ್ಚಿಂತನಾಗಿರಬಾರದು. ಅವರು ಗಿಡುಗದಂತೆ ಅವನು ಅಜಾಗರೂಕನಾಗಿರುವಾಗಲೇ ಎರಗಿ ಬೀಳುತ್ತಾರೆ.

12094021a ದೃಢಮೂಲಸ್ತ್ವದುಷ್ಪ್ರಾತ್ಮಾ ವಿದಿತ್ವಾ ಬಲಮಾತ್ಮನಃ|
12094021c ಅಬಲಾನ್ ಅಭಿಯುಂಜೀತ ನ ತು ಯೇ ಬಲವತ್ತರಾಃ||

ಅದುಷ್ಪ್ರಾತ್ಮ ರಾಜನು ರಾಷ್ಟ್ರದಲ್ಲಿ ತನ್ನ ಅಧಿಕಾರವನ್ನು ಭದ್ರಪಡಿಸಿಕೊಂಡು ತನ್ನ ಬಲವೇನು ಎಂದು ಚೆನ್ನಾಗಿ ಅರಿತುಕೊಂಡು ತನಗಿಂತಲೂ ದುರ್ಬಲರಾದವನ್ನು ಮಾತ್ರ ಆಕ್ರಮಿಸಬೇಕು. ತನಗಿಂತಲೂ ಬಲಿಷ್ಠನಾದವನ ಮೇಲೆ ಯುದ್ಧಕ್ಕೆ ಹೋಗಲೇ ಬಾರದು.

12094022a ವಿಕ್ರಮೇಣ ಮಹೀಂ ಲಬ್ಧ್ವಾ ಪ್ರಜಾ ಧರ್ಮೇಣ ಪಾಲಯನ್|
12094022c ಆಹವೇ ನಿಧನಂ ಕುರ್ಯಾದ್ರಾಜಾ ಧರ್ಮಪರಾಯಣಃ||

ವಿಕ್ರಮದಿಂದ ಮಹಿಯನ್ನು ಪಡೆದುಕೊಂಡು, ಧರ್ಮದಿಂದ ಪ್ರಜೆಗಳನ್ನು ಪಾಲಿಸಿ, ಯುದ್ಧದಲ್ಲಿ ನಿಧನಹೊಂದುವ ರಾಜನು ಧರ್ಮಪರಾಯಣನು.

12094023a ಮರಣಾಂತಮಿದಂ ಸರ್ವಂ ನೇಹ ಕಿಂ ಚಿದನಾಮಯಮ್|
12094023c ತಸ್ಮಾದ್ಧರ್ಮೇ ಸ್ಥಿತೋ ರಾಜಾ ಪ್ರಜಾ ಧರ್ಮೇಣ ಪಾಲಯೇತ್||

ಈ ಪ್ರಪಂಚದಲ್ಲಿ ಎಲ್ಲರೂ ಮರಣದಲ್ಲಿಯೇ ಅಂತ್ಯರಾಗುತ್ತಾರೆ. ಯಾರೂ ರೋಗರಹಿತರಾಗಿರುವುದಿಲ್ಲ ಅಥವಾ

ಅವಿನಾಶಿಯಾಗಿರುವುದಿಲ್ಲ. ಆದುದರಿಂದ ರಾಜನಾದವನು
ಧರ್ಮಮಾರ್ಗದಲ್ಲಿದ್ದುಕೊಂಡೇ ಪ್ರಜೆಗಳನ್ನು ಧರ್ಮದಿಂದ
ಪರಿಪಾಲನೆ ಮಾಡಬೇಕು.

12094024a ರಕ್ಷಾಧಿಕರಣಂ ಯುದ್ಧಂ ತಥಾ ಧರ್ಮಾನುಶಾಸನಮ್|
12094024c ಮಂತ್ರಚಿಂತ್ಯಂ ಸುಖಂ ಕಾಲೇ ಪಂಚಭಿರ್ವರ್ಧತೇ ಮಹೀ||

ರಕ್ಷಣೆಗೆ ಬೇಕಾದುದನ್ನು ಮಾಡುವುದು, ಯುದ್ಧ, ಧರ್ಮಾನುಶಾಸನ,
ಮಂತ್ರಾಲೋಚನೆ, ಯಥಾಕಾಲದಲ್ಲಿ ಎಲ್ಲರಿಗೂ ಸುಖವನ್ನು
ನೀಡುವುದು – ಈ ಐದು ಕಾರ್ಯಗಳಿಂದ ರಾಜ್ಯವು
ಅಭಿವೃದ್ಧಿಹೊಂದುತ್ತದೆ.

12094025a ಏತಾನಿ ಯಸ್ಯ ಗುಪ್ತಾನಿ ಸ ರಾಜಾ ರಾಜಸತ್ತಮ|
12094025c ಸತತಂ ವರ್ತಮಾನೋಽತ್ರ ರಾಜಾ ಭುಂಕ್ತೇ[261] ಮಹೀಮಿಮಾಮ್||

ಇವುಗಳನ್ನು ಗುಪ್ತವಾಗಿ ಯಾರು ಮಾಡುತ್ತಾನೋ ಆ ರಾಜನೇ
ಸಾಜಸತ್ತಮನಾಗುತ್ತಾನೆ. ಈ ಐದು ಕಾರ್ಯಗಳನ್ನೂ ಮಾಡುವ
ರಾಜನು ಈ ಮಹಿಯನ್ನು ಭೋಗಿಸುತ್ತಾನೆ.

12094026a ನೈತಾನ್ಯೇಕೇನ ಶಕ್ಯಾನಿ ಸಾತತ್ಯೇನಾನ್ವವೇಕ್ಷಿತುಮ್|
12094026c ಏತೇಷ್ವಾಪ್ತಾನ್ಪ್ರತಿಷ್ಠಾಪ್ಯ ರಾಜಾ ಭುಂಕ್ತೇ ಮಹೀಂ ಚಿರಮ್||

ರಾಜನೊಬ್ಬನೇ ಇವೆಲ್ಲವನ್ನೂ ಮಾಡಲು ಶಲ್ಯನಿಲ್ಲ. ಆದುದರಿಂದ
ಅವನು ಎಲ್ಲ ಅಧಿಕಾರಗಳನ್ನೂ ಯೋಗ್ಯ ಅಧಿಕಾರಿಗಳಲ್ಲಿ
ಪ್ರತಿಷ್ಠಾಪಿಸಿದ ರಾಜನು ಚಿರಕಾಲದ ವರೆಗೆ ರಾಜ್ಯವನ್ನು

---

[261] ಧತ್ತಂ (ಭಾರತ ದರ್ಶನ).

ಭೋಗಿಸುತ್ತಾನೆ.

12094027a ದಾತಾರಂ ಸಂವಿಭಕ್ತಾರಂ ಮಾರ್ದವೋಪಗತಂ ಶುಚಿಮ್|
12094027c ಅಸಂತ್ಯಕ್ತಮನುಷ್ಯಂ ಚ ತಂ ಜನಾಃ ಕುರ್ವತೇ ಪ್ರಿಯಮ್||

ದಾನಶೀಲನಾದ, ಸರಿಯಾಗಿ ವಿಭಜಿಸಿ ಭೋಗಿಸುವ,
ಮೃದುಸ್ವಭಾವದ, ಶುಚಿಯಾದ ಮತ್ತು ಯಾವುದೇ ಕಾರಣಗಳಿಮ್ದಲೂ
ಪ್ರಜೆಗಳನ್ನು ತ್ಯಾಗಮಾಡದ ರಾಜನನ್ನು ಜನರು ಪ್ರೀತಿಸುತ್ತಾರೆ.

12094028a ಯಸ್ತು ನಿಃಶ್ರೇಯಸಂ ಜ್ಞಾತ್ವಾ ಜ್ಞಾನಂ ತತ್ ಪ್ರತಿಪದ್ಯತೇ|
12094028c ಆತ್ಮನೋ ಮತಮುತ್ಸೃಜ್ಯ ತಂ ಲೋಕೋಽನುವಿಧೀಯತೇ||

ಕಲ್ಯಾಣಮಯ ಉಪದೇಶವನ್ನು ಕೇಳಿದನಂತರವೂ ತನ್ನ
ಅಭಿಪ್ರಾಯವೇ ಸರಿ ಎಂಬ ದುರಾಗ್ರಹವನ್ನು ತೊರೆದು ನಿಜವಾದ
ಜ್ಞಾನವನ್ನು ಪಡೆದುಕೊಳ್ಳುವ ರಾಜನನ್ನು ಲೋಕವೇ ಅನುಸರಿಸುತ್ತದೆ.

12094029a ಯೋಽರ್ಥಕಾಮಸ್ಯ ವಚನಂ ಪ್ರಾತಿಕೂಲ್ಯಾನ್ನ ಮೃಷ್ಯತೇ|
12094029c ಶೃಣೋತಿ ಪ್ರತಿಕೂಲಾನಿ ವಿಮನಾ ನಚಿರಾದಿವ||
12094030a ಅಗ್ರಾಮ್ಯಚರಿತಾಂ ಬುದ್ಧಿಮತ್ಯಂತಂ ಯೋ ನ ಬುಧ್ಯತೇ|
12094030c ಜಿತಾನಾಮಜಿತಾನಾಂ ಚ ಕ್ಷತ್ರಧರ್ಮಾದಪೈತಿ ಸಃ||

ತನ್ನ ಅಭಿಪ್ರಾಯಕ್ಕೆ ವಿರೋಧವಾಗಿದೆ ಎಂಬ ಕಾರಣದಿಂದ ತನ್ನ
ಅರ್ಥಸಿದ್ಧಿಯನ್ನು ಅಪೇಕ್ಷಿಸುವ ಸುಹೃದನ ಮಾತನ್ನು ಯಾವ ರಾಜನು
ಸಹಿಸುವುದಿಲ್ಲವೋ, ತನ್ನ ಅರ್ಥಸಿದ್ಧಿಗೆ ಪ್ರತಿಕೂಲ ಮಾತುಗಳನ್ನೇ
ಕೇಳುವನೋ, ಸರ್ವಕಾಲದಲ್ಲಿಯೂ ವಿಮನಸ್ಕನಾಗಿರುವನೋ,
ವಿದ್ವಾಂಸರಿಂದಲೂ-ಶಿಷ್ಟರಿಂದಲೂ ಆಚರಿಸಲ್ಪಟ್ಟ ಸದ್ವೃತ್ತಿಯನ್ನು
ಯಾರು ನಿತ್ಯವೂ ಸೇವಿಸುವುದಿಲ್ಲವೋ, ಮತ್ತು ತಾನು ಗೆದ್ದ ಮತ್ತು

ತಾನು ಸೋತ ರಾಜರುಗಳೊಡನೆ ಪರಂಪರಾಗತವಾದ
ಸಂಪ್ರದಾಯಗಳನ್ನು ಅನುಷ್ಠಾನಕ್ಕೆ ತರುವುದಿಲ್ಲವೋ ಆ ರಾಜನು
ಕ್ಷತ್ರಿಯಧರ್ಮದಿಂದ ಚ್ಯುತನಾದಂತೆ.

12094031a ಮುಖ್ಯಾನಮಾತ್ಯಾನ್ಯೋ ಹಿತ್ವಾ ನಿಹೀನಾನ್ಸೇವತೇ ಪ್ರಿಯಾನ್|
12094031c ಸ ವೈ ವ್ಯಸನಮಾಸಾದ್ಯ ಗಾಧಮಾರ್ತೋ ನ ವಿಂದತಿ||

ಮುಖ್ಯ ಅಮಾತ್ಯರನ್ನು ತ್ಯಜಿಸಿ ಹೀನರೊಂದಿಗೆ ಸ್ನೇಹಬೆಳೆಸುವ
ರಾಜನು ಸಂಕಟವೆಂಬ ಸಮುದ್ರದಲ್ಲಿ ಬಿದ್ದು ಯಾರ ಆಶ್ರಯವೂ
ಇಲ್ಲದೇ ಪೀಡಿತರಾಗುತ್ತಾನೆ.

12094032a ಯಃ ಕಲ್ಯಾಣಗುಣಾಂಜ್ಞಾತೀನ್ ದ್ವೇಷಾನ್ನೈವಾಭಿಮನ್ಯತೇ|
12094032c ಅದೃಢಾತ್ಮಾ ದೃಢಕ್ರೋಧೋ ನಾಸ್ಯಾರ್ಥೋ ರಮತೇಽಂತಿಕೇ||

ಕಲ್ಯಾಣಗುಣಸಂಪನ್ನರಾದ ಜ್ಞಾತಿಬಾಂಧವರನ್ನು ದ್ವೇಷಿಸಿ
ಸಮ್ಮಾನಿಸದಿರುವ, ಚಂಚಲ ಚಿತ್ತನೂ ದೃಢವಾದ ರೋಷವುಳ್ಳವನೂ
ಆಗಿರುವ ರಾಜನು ಮೃತ್ಯುವಿನ ಸಮೀಪದಲ್ಲಿಯೇ ಇರುತ್ತಾನೆ.

12094033a ಅಥ ಯೋ ಗುಣಸಂಪನ್ನಾನ್ ಹೃದಯಸ್ಯಾಪ್ರಿಯಾನಪಿ|
12094033c ಪ್ರಿಯೇಣ ಕುರುತೇ ವಶ್ಯಾಂಶ್ಚಿರಂ ಯಶಸಿ ತಿಷ್ಠತಿ||

ತನ್ನ ಹೃದಯಕ್ಕೆ ಅಪ್ರಿಯರೆಂದು ಕಂಡರೂ ಗುಣಸಂಪನ್ನರಾದವರನ್ನು
ಪ್ರೀತಿಪೂರ್ವಕವಾಗಿ ತನ್ನವರನ್ನಾಗಿರಿಸಿಕೊಂಡ ರಾಜನು ಬಹುಕಾಲದ
ವರೆಗೆ ಯಶಸ್ವಿಯಾಗಿರುತ್ತಾನೆ.

12094034a ನಾಕಾಲೇ ಪ್ರಣಯೇದರ್ಥಾನ್ನಾಪ್ರಿಯೇ ಜಾತು ಸಂಜ್ವರೇತ್|
12094034c ಪ್ರಿಯೇ ನಾತಿಭೃಶಂ ಹೃಷ್ಯೇದ್ಯುಜ್ಯೇತಾರೋಗ್ಯಕರ್ಮಣಿ||

ರಾಜನಾದವನು ಅಕಾಲದಲ್ಲಿ ಧನಸಂಗ್ರಹಕ್ಕೆ ಪ್ರಯತ್ನಿಸಬಾರದು. ಅಪ್ರಿಯವಾದದ್ದು ನಡೆದುಹೋದರೂ ಅದರ ಕುರಿತು ಚಿಂತಾಮಗ್ನನಾಗಿರಬಾರದು. ಪ್ರಿಯವಾದುದು ನಡೆದರೆ ಅತಿಯಾಗಿ ಹಿಗ್ಗಲೂ ಬಾರದು. ನಿರೋಗಿಯಾಗಿ ಸುದೃಢನಾಗಿರಲು ಪ್ರಯತ್ನಿಸಬೇಕು.

12094035a ಕೇ ಮಾನುರಕ್ತಾ ರಾಜಾನಃ ಕೇ ಭಯಾತ್ಸಮುಪಾಶ್ರಿತಾಃ|
12094035c ಮಧ್ಯಸ್ಥದೋಷಾಃ ಕೇ ಚೈಷಾಮಿತಿ ನಿತ್ಯಂ ವಿಚಿಂತಯೇತ್||

ಯಾವ ರಾಜರು ತನ್ನಲ್ಲಿ ಅನುರಕ್ತರಾಗಿದ್ದಾರೆ, ಯಾರು ಭಯದಿಂದ ತನ್ನನ್ನು ಆಶ್ರಯಿಸಿದ್ದಾರೆ, ಯಾರು ಮಧ್ಯಸ್ಥರು, ಯಾರು ಶತ್ರುಗಳು – ಈ ವಿಷಯಗಳನ್ನು ರಾಜನು ಸದಾ ಚಿಂತಿಸುತ್ತಿರಬೇಕು.

12094036a ನ ಜಾತು ಬಲವಾನ್ ಭೂತ್ವಾ ದುರ್ಬಲೇ ವಿಶ್ವಸೇತ್ಕ್ವ ಚಿತ್|
12094036c ಭಾರುಂಡಸದೃಶಾ ಹ್ಯೇತೇ ನಿಪತಂತಿ ಪ್ರಮಾದ್ಯತಃ||

ತಾನು ಬಲಿಷ್ಠನಾಗಿದ್ದರೂ ದುರ್ಬಲ ರಾಜರ ಮೇಲೆ ವಿಶ್ವಾಸವನ್ನಿಡಬಾರದು. ಗಂಡಭೇರುಂಡ ಪಕ್ಷಿಯಂತಿರುವ ಅವರು ಅಪ್ರಮತ್ತನಾಗಿರುವಾಗಲೇ ಮೇಲೆ ಬೀಳುತ್ತಾರೆ.

12094037a ಅಪಿ ಸರ್ವೈರ್ಗುಣೈರ್ಯುಕ್ತಂ ಭರ್ತಾರಂ ಪ್ರಿಯವಾದಿನಮ್|
12094037c ಅಭಿದ್ರುಹ್ಯತಿ ಪಾಪಾತ್ಮಾ ತಸ್ಮಾದ್ಧಿ ವಿಭಿಷೇಜ್ಜನಾತ್||

ಸರ್ವಗುಣ ಸಂಪನ್ನನ್ನಾದ ಪ್ರಿಯವಾದಿನಿಯಾದ ಒಡೆಯನಿಗೆ ವಿನಾಕಾರಣ ದ್ರೋಹವನ್ನೆಸಗುವ ಪಾಪಾತ್ಮನು ಸರ್ವಗುಣಗಳಿಂದ ಯುಕ್ತನಾಗಿದ್ದರೂ ಅವನ ಮೇಲೆ ವಿಶ್ವಾಸವಿಡಬಾರದು.

12094038a ಏತಾಂ ರಾಜೋಪನಿಷದಂ ಯಯಾತಿಃ ಸ್ಮಾಹ ನಾಹುಷಃ|
12094038c ಮನುಷ್ಯವಿಜಯೇ ಯುಕ್ತೋ ಹಂತಿ ಶತ್ರೂನನುತ್ತಮಾನ್||

ಈ ರಾಜೋಪನಿಷತ್ತನ್ನು ನಹುಷನ ಮಗ ಯಯಾತಿಯು ಹೇಳಿದ್ದನು. ಇದನ್ನು ಕೇಳಿದವನು ಮನುಷ್ಯವಿಜಯದಲ್ಲಿ ಯುಕ್ತನಾಗಿ ಶತ್ರುಗಳನ್ನು ನಾಶಪಡಿಸುತ್ತಾನೆ.”

ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ರಾಜಧರ್ಮಪರ್ವಣಿ
ವಾಮದೇವಗೀತಾಸು ಚತುರ್ನವತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿಪರ್ವದ ರಾಜಧರ್ಮಪರ್ವದಲ್ಲಿ
ವಾಮದೇವಗೀತ ಎನ್ನುವ ತೊಂಭತ್ನಾಲ್ಕನೇ ಅಧ್ಯಾಯವು.

೯೫

ವಾಮದೇವನು ರಾಜ ಮತ್ತು ರಾಜ್ಯದ ಹಿತದ ಕುರಿತು ಮಾತನಾಡಿದುದು (1-13).

12095001 ವಾಮದೇವ ಉವಾಚ|
12095001a ಅಯುದ್ಧೇನೈವ ವಿಜಯಂ ವರ್ಧಯೇದ್ವಸುಧಾಧಿಪಃ|
12095001c ಜಘನ್ಯಮಾಹುರ್ವಿಜಯಂ ಯೋ ಯುದ್ಧೇನ ನರಾಧಿಪ||

ವಾಮದೇವನು ಹೇಳಿದನು: “ವಸುಧಾಧಿಪನು ಯುದ್ಧ ಮಾಡದೆಯೇ ವಿಜಯವನ್ನು ಗಳಿಸಬೇಕು. ನರಾಧಿಪ! ಯುದ್ಧಮಾಡಿ ವಿಜಯವನ್ನು ಗಳಿಸುವುದು ಕೀಳುಮಟ್ಟದ ರಾಜನೀತಿಯೆಂದು ಹೇಳುತ್ತಾರೆ.

12095002a ನ ಚಾಪ್ಯಲಬ್ಧಂ ಲಿಪ್ಸೇತ ಮೂಲೇ ನಾತಿದೃಢೇ ಸತಿ|
12095002c ನ ಹಿ ದುರ್ಬಲಮೂಲಸ್ಯ ರಾಜ್ಞೋ ಲಾಭೋ ವಿಧೀಯತೇ||

ರಾಜ್ಯದ ಮೂಲವು ದೃಢವಾಗಿಲ್ಲದೇ ಇದ್ದರೆ ಅಲಬ್ಧವಾದುದನ್ನು ಪಡೆದುಕೊಳ್ಳಲು ಬಯಸಬಾರದು. ಮೂಲವೇ ದುರ್ಬಲವಾಗಿದ್ದ ರಾಜನಿಗೆ ರಾಜ್ಯಲಾಭವಾಗುವುದಿಲ್ಲ.

12095003a ಯಸ್ಯ ಸ್ಫೀತೋ ಜನಪದಃ ಸಂಪನ್ನಃ ಪ್ರಿಯರಾಜಕಃ|
12095003c ಸಂತುಷ್ಟಪುಷ್ಟಸಚಿವೋ ದೃಢಮೂಲಃ ಸ ಪಾರ್ಥಿವಃ||

ಯಾರ ಜನಪದವು ಸಂಪದ್ಭರಿತವಾಗಿದೆಯೋ, ಧನಧಾನ್ಯಗಳಿಂದ ಸಂಪನ್ನವಾಗಿದೆಯೋ ಮತ್ತು ಪ್ರಜೆಗಳು ರಾಜನನ್ನು ಪ್ರೀತಿಸುತ್ತಾರೋ ಹಾಗೂ ಯಾರಿಗೆ ಸಂತುಷ್ಟರೂ ಪುಷ್ಟರೂ ಆದ ಸಚಿವರು ಇರುವರೋ ಆ ಪಾರ್ಥಿವನ ಮೂಲವು ದೃಢವಾಗಿರುತ್ತದೆ.

12095004a ಯಸ್ಯ ಯೋಧಾಃ ಸುಸಂತುಷ್ಟಾಃ ಸಾಂತ್ವಿತಾಃ ಸೂಪಧಾಸ್ಥಿತಾಃ|
12095004c ಅಲ್ಪೇನಾಪಿ ಸ ದಂಡೇನ ಮಹೀಂ ಜಯತಿ ಭೂಮಿಪಃ||

ಯಾರ ಯೋಧರು ಸಂತುಷ್ಟರಾಗಿರುವರೋ, ರಾಜನಿಂದ ಸಾಂತ್ವನವನ್ನು ಪಡೆಯುವರೋ, ಮತ್ತು ಶತ್ರುಗಳನ್ನು ವಂಚಿಸುವುದರಲ್ಲಿ ಚತುರರೋ ಅಂತಹ ರಾಜನು ಅಲ್ಪಸೈನ್ಯದಿಂದಲೇ ಭೂಮಂಡಲವನ್ನು ಜಯಿಸಲು ಸಮರ್ಥನಾಗುತ್ತಾನೆ.

12095005a ಪೌರಜಾನಪದಾ ಯಸ್ಯ ಸ್ವನುರಕ್ತಾಃ ಸುಪೂಜಿತಾಃ|
12095005c ಸಧನಾ ಧಾನ್ಯವಂತಶ್ಚ ದೃಢಮೂಲಃ ಸ ಪಾರ್ಥಿವಃ||

ಯಾರ ನಗರ-ಗ್ರಾಮಗಳಲ್ಲಿ ವಾಸಿಸುವ ಜನರು ಸಮಸ್ತ ಜೀವಿಗಳ ಮೇಲೆ ದಯಾಪರರಾಗಿರುವರೋ ಧನವಂತರೂ ಧಾನವಂತರೂ ಆಗಿರುವರೋ ಆ ರಾಜನು ದೃಢಮೂಲನೆಂದು ಎನಿಸಿಕೊಳ್ಳುತ್ತಾನೆ.

12095006a ಪ್ರಭಾವಕಾಲಾವಧಿಕೌ[262] ಯದಾ ಮನ್ಯೇತ ಚಾತ್ಮನಃ|
12095006c ತದಾ ಲಿಪ್ಸೇತ ಮೇಧಾವೀ ಪರಭೂಮಿಂ ಧನಾನ್ಯುತ||

ತನ್ನ ಮೇಲ್ಮೈಯನ್ನು ತೋರಿಸಲು ಸರಿಯಾದ ಕಾಲವು ಬಂದಿದೆ ಎಂದು
ತಿಳಿದೇ ಮೇಧಾವೀ ರಾಜನು ಶತ್ರುವಿನ ಭೂಮಿ-ಧನವನ್ನು
ಪಡೆದುಕೊಳ್ಳಲು ಪ್ರಯತ್ನಿಸಬೇಕು.

12095007a ಭೋಗೇಷ್ವದಯಮಾನಸ್ಯ ಭೂತೇಷು ಚ ದಯಾವತಃ|
12095007c ವರ್ಧತೇ ತ್ವರಮಾಣಸ್ಯ ವಿಷಯೋ ರಕ್ಷಿತಾತ್ಮನಃ||

ಯಾರ ಭೋಗ-ವೈಭವಗಳು ದಿನದಿನಕ್ಕೂ ಅಭಿವೃದ್ಧಿಯನ್ನು
ಹೊಂದುತ್ತಿವೆಯೋ, ಯಾರು ಸಕಲಜೀವಿಗಳಲ್ಲಿಯೂ
ದಯಾವಂತನಾಗಿರುವನೋ ಮತ್ತು ಯಾರು ತನ್ನನ್ನು ತಾನು
ರಕ್ಷಿಸಿಕೊಂಡಿರುವನೋ ಆ ರಾಜನ ರಾಜ್ಯವು ಬೇಗನೇ
ವೃದ್ಧಿಯಾಗುತ್ತದೆ.

12095008a ತಕ್ಷತ್ಯಾತ್ಮಾನಮೇವೈಷ ವನಂ ಪರಶುನಾ ಯಥಾ|
12095008c ಯಃ ಸಮ್ಯಗ್ವರ್ತಮಾನೇಷು ಸ್ವೇಷು ಮಿಥ್ಯಾ ಪ್ರವರ್ತತೇ||

ಸದಾಚಾರಿಗಳಾದ ತನ್ನವರೊಡನೆಯೇ ಸುಳ್ಳಾಗಿ ನಡೆದುಕೊಳ್ಳುವ
ರಾಜನು ಮರದ ಕಾಂಡವಿರುವ ಕೊಡಲಿಯೇ ಅರಣ್ಯದ ಮರಗಳನ್ನು
ಕತ್ತರಿಸುವಂತೆ ತನ್ನನ್ನೇ ತಾನು ವಿನಾಶಮಾಡಿಕೊಳ್ಳುತ್ತಾನೆ.

12095009a ನ ವೈ ದ್ವಿಷಂತಃ ಕ್ಷೀಯಂತೇ ರಾಜ್ಞೋ ನಿತ್ಯಮಪಿ ಘ್ನತಃ[263]|

---

[262] ಪ್ರತಾಪಕಾಲಮಧಿಕಂ (ಭಾರತ ದರ್ಶನ).

[263] ನೈವ ದ್ವಿಷಂತೋ ಹೀಯಂತೇ ರಾಜ್ಞೋ ನಿತ್ಯಮನಿಘ್ನತಃ| (ಭಾರತ

12095009c ಕ್ರೋಧಂ ನಿಯಂತುಂ ಯೋ ವೇದ ತಸ್ಯ ದ್ವೇಷ್ಟಾ ನ ವಿದ್ಯತೇ॥

ದ್ವೇಷಿಗಳನ್ನು ನಿತ್ಯವೂ ನಾಶಪಡಿಸುತ್ತಿದ್ದರೂ ರಾಜನ ದ್ವೇಷಿಗಳು ಕಡಿಮೆಯಾಗುವುದಿಲ್ಲ. ಯಾರು ಕ್ರೋಧವನ್ನು ನಿಯಂತ್ರಿಸಿಕೊಳ್ಳುವುದನ್ನು ತಿಳಿದುಕೊಂಡಿರುವನೋ ಅವನಿಗೆ ದ್ವೇಷವೆಂಬುದೇ ಇರುವುದಿಲ್ಲ.

12095010a ಯದಾರ್ಯಜನವಿದ್ವಿಷ್ಟಂ ಕರ್ಮ ತನ್ನಾಚರೇದ್ಬುಧಃ|
12095010c ಯತ್ಕಲ್ಯಾಣಮಭಿಧ್ಯಾಯೇತ್ತತ್ರಾತ್ಮಾನಂ ನಿಯೋಜಯೇತ್॥

ಆರ್ಯಜನರು ಯಾವುದನ್ನು ಮಾಡಬಾರದೆಂದು ಹೇಳುತ್ತಾರೋ ಅದನ್ನು ತಿಳಿದವನು ಮಾಡಲೇ ಬಾರದು. ಯಾವುದು ಎಲ್ಲರಿಗೂ ಕಲ್ಯಾಣಕಾರಿಯೋ ಅದನ್ನೇ ಮಾಡಲು ರಾಜನು ಪ್ರಯತ್ನಿಸಬೇಕು.

12095011a ನೈನಮನ್ಯೇऽವಜಾನಂತಿ ನಾತ್ಮನಾ ಪರಿತಪ್ಯತೇ|
12095011c ಕೃತ್ಯಶೇಷೇಣ ಯೋ ರಾಜಾ ಸುಖಾನ್ಯನುಬುಭೂಷತಿ॥

ಯಾವ ರಾಜನು ತನ್ನ ಕರ್ತವ್ಯಗಳನ್ನು ಸಂಪೂರ್ಣವಾಗಿ ಮಾಡ? ನಂತರ ಸುಖವನ್ನನುಭವಿಸಲು ಇಚ್ಛಿಸುವನೋ ಅವನನ್ನು ಯಾರೂ ಅನಾದರಿಸುವುದಿಲ್ಲ. ರಾಜನೂ ಪರಿತಪಿಸಬೇಕಾಗಿರುವುದಿಲ್ಲ.

12095012a ಇದಂವೃತ್ತಂ ಮನುಷ್ಯೇಷು ವರ್ತತೇ ಯೋ ಮಹೀಪತಿಃ|
12095012c ಉಭೌ ಲೋಕೌ ವಿನಿರ್ಜಿತ್ಯ ವಿಜಯೇ ಸಂಪ್ರತಿಷ್ಠತೇ॥

ಯಾವ ಮಹೀಪತಿಯು ಮನುಷ್ಯರೊಡನೆ ಈ ರೀತಿ ವರ್ತಿಸುತ್ತಾನೋ ಅವನು ಎರಡೂ ಲೋಕಗಳನ್ನು ಜಯಿಸಿ ವಿಜಯದಲ್ಲಿ

ದರ್ಶನ).

ನೆಲೆಸಿರುತ್ತಾನೆ.””

12095013 ಭೀಷ್ಮ ಉವಾಚ|
12095013a ಇತ್ಯುಕ್ತೋ ವಾಮದೇವೇನ ಸರ್ವಂ ತತ್ ಕೃತವಾನ್ನೃಪಃ|
12095013c ತಥಾ ಕುರ್ವಂಸ್ತ್ವಮಪ್ಯೇತೌ ಲೋಕೌ ಜೇತಾ ನ ಸಂಶಯಃ||

ಭೀಷ್ಮನು ಹೇಳಿದನು: “ವಾಮದೇವನು ಹೀಗೆ ಹೇಳಲು ಅವೆಲ್ಲವನ್ನೂ ನೃಪನು ಮಾಡಿದನು. ನೀನೂ ಕೂಡ ಹಾಗೆಯೇ ನಡೆದುಕೊಂಡರೆ ಎರಡೂ ಲೋಕಗಳನ್ನು ಜಯಿಸುತ್ತೀಯೆ ಎನ್ನುವುದರಲ್ಲಿ ಸಂಶಯವಿಲ್ಲ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ವಾಮದೇವಗೀತಾಸು ಪಂಚನವತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ವಾಮದೇವಗೀತ ಎನ್ನುವ ತೊಂಭತ್ತೈದನೇ ಅಧ್ಯಾಯವು.

೯೬

ವಿಜಿಗೀಷಮಾಣವೃತ್ತ

ವಿಜಯಾಭಿಲಾಷೀ ರಾಜನ ಧಾರ್ಮಿಕ ವ್ಯವಹಾರಗಳು ಮತ್ತು ಯುದ್ಧನೀತಿ (1-21).

12096001 ಯುಧಿಷ್ಠಿರ ಉವಾಚ|
12096001a ಅಥ ಯೋ ವಿಜಿಗೀಷೇತ ಕ್ಷತ್ರಿಯಃ ಕ್ಷತ್ರಿಯಂ ಯುಧಿ|
12096001c ಕಸ್ತಸ್ಯ ಧರ್ಮ್ಯೋ ವಿಜಯ ಏತತ್ ಪೃಷ್ಟೋ ಬ್ರವೀಹಿ ಮೇ||

ಯುಧಿಷ್ಠಿರನು ಹೇಳಿದನು: "ಓರ್ವ ಕ್ಷತ್ರಿಯನು ಇನ್ನೊಬ್ಬ
ಕ್ಷತ್ರಿಯನೊಡನೆ ಯುದ್ಧದದಲ್ಲಿ ವಿಜಯಗಳಿಸಲು ಬಯಸಿದರೆ
ವಿಜಯಕ್ಕೆ ಅವನು ನಡೆದುಕೊಳ್ಳಬೇಕಾದ ಧರ್ಮವು ಯಾವುದು?
ಕೇಳುತ್ತಿರುವ ನನಗೆ ಹೇಳು."

12096002 ಭೀಷ್ಮ ಉವಾಚ|
12096002a ಸಸಹಾಯೋಽಸಹಾಯೋ ವಾ ರಾಷ್ಟ್ರಮಾಗಮ್ಯ ಭೂಮಿಪಃ|
12096002c ಬ್ರೂಯಾದಹಂ ವೋ ರಾಜೇತಿ ರಕ್ಷಿಷ್ಯಾಮಿ ಚ ವಃ ಸದಾ||
12096003a ಮಮ ಧರ್ಮ್ಯಂ ಬಲಿಂ ದತ್ತ ಕಿಂ ವಾ ಮಾಂ ಪ್ರತಿಪತ್ಸ್ಯಥ|
12096003c ತೇ ಚೇತ್ತಮಾಗತಂ ತತ್ರ ವೃಣುಯುಃ ಕುಶಲಂ ಭವೇತ್||

ಭೀಷ್ಮನು ಹೇಳಿದನು: "ವಿಜಯವನ್ನು ಬಯಸಿದ ರಾಜನು
ಸಹಾಯಕರೊಂದಿಗೆ ಅಥವಾ ಸಹಾಯಕರಿಲ್ಲದೇ ಆ ರಾಷ್ಟ್ರಕ್ಕೆ ಹೋಗಿ
"ನಾನು ನಿಮ್ಮ ರಾಜ. ನಿಮ್ಮನ್ನು ಸದಾ ರಕ್ಷಿಸುತ್ತೇನೆ.
ಧರ್ಮಾನುಸಾರವಾಗಿ ನನಗೆ ತೆರಿಗೆಯನ್ನು ಕೊಡಿ ಅಥವಾ ನನ್ನೊಡನೆ
ಯುದ್ಧಮಾಡಿ" ಎಂದು ಹೇಳಬೇಕು. ಆಗಮಿಸಿದ ರಾಜನನ್ನು ಅವರು
ಸ್ವೀಕರಿಸಿದರೆ ಎಲ್ಲವೂ ಉಳ್ಳೆಯದೇ ಆಗುತ್ತದೆ.

12096004a ತೇ ಚೇದಕ್ಷತ್ರಿಯಾಃ ಸಂತೋ ವಿರುಧ್ಯೇಯುಃ ಕಥಂ ಚನ|
12096004c ಸರ್ವೋಪಾಯೈರ್ನಿಯಂತವ್ಯಾ ವಿಕರ್ಮಸ್ಥಾ ನರಾಧಿಪ||

ಒಂದು ವೇಳೆ ಅವರು ಕ್ಷತ್ರಿಯರಾಗಿರದೇ ವಿರೋಧಿಸಿದರೆ
ಸರ್ವೋಪಾಯಗಳಿಂದ ನರಾಧಿಪನು ಆ ವಿಕರ್ಮಸ್ಥರನ್ನು
ನಿಯಂತ್ರಿಸಬೇಕು.

12096005a ಅಶಕ್ತಂ ಕ್ಷತ್ರಿಯಂ ಮತ್ವಾ ಶಸ್ತ್ರಂ ಗೃಹ್ಣಾತ್ಯಥಾಪರಃ|

12096005c ತ್ರಾಣಾಯಾಪ್ಯಸಮರ್ಥಂ ತಂ ಮನ್ಯಮಾನಮತೀವ ಚ||

ಕ್ಷತ್ರಿಯನು ಅಶಕ್ತನೆಂದೂ ತಮ್ಮನ್ನು ರಕ್ಷಿಸಲು ಅಸಮರ್ಥನೆಂದೂ ತಿಳಿದು ಇತರರು ಶಸ್ತ್ರವನ್ನು ಹಿಡಿಯುತ್ತಾರೆ."

12096006 ಯುಧಿಷ್ಠಿರ ಉವಾಚ|
12096006a ಅಥ ಯಃ ಕ್ಷತ್ರಿಯೋ ರಾಜಾ ಕ್ಷತ್ರಿಯಂ ಪ್ರತ್ಯುಪಾವ್ರಜೇತ್|
12096006c ಕಥಂ ಸ ಪ್ರತಿಯೋದ್ಧವ್ಯಸ್ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಕ್ಷತ್ರಿಯ ರಾಜನು ಇನ್ನೊಬ್ಬ ಕ್ಷತ್ರಿಯನೊಡನೆ ಯುದ್ಧಮಾಡಬೇಕಾಗಿ ಬಂದಾಗ ಅವನು ಯುದ್ಧವನ್ನು ಹೇಗೆ ಮಾಡಬೇಕು? ಇದರ ಕುರಿತು ನನಗೆ ಹೇಳು."

12096007 ಭೀಷ್ಮ ಉವಾಚ|
12096007a ನಾಸಂನದ್ಧೋ ನಾಕವಚೋ ಯೋದ್ಧವ್ಯಃ ಕ್ಷತ್ರಿಯೋ ರಣೇ|
12096007c ಏಕ ಏಕೇನ ವಾಚ್ಯಶ್ಚ ವಿಸೃಜಸ್ವ ಕ್ಷಿಪಾಮಿ ಚ||

ಭೀಷ್ಮನು ಹೇಳಿದನು: "ಕವಚವನ್ನು ಧರಿಸಿ ಯುದ್ಧಸನ್ನದ್ಧನಾಗಿರದೇ ಇದ್ದ ಕ್ಷತ್ರಿಯನೊಡನೆ ರಣದಲ್ಲಿ ಯುದ್ಧಮಾಡಬಾರದು. ಪ್ರಯೋಗಿಸುತ್ತೇನೆ ಎಂದು ಪರಸ್ಪರರಲ್ಲಿ ಹೇಳಿಕೊಂಡೇ ಆಯುಧಗಳನ್ನು ಪ್ರಯೋಗಿಸಬೇಕು.

12096008a ಸ ಚೇತ್ಸಂನದ್ಧ ಆಗಚ್ಚೇತ್ಸಂನದ್ಧವ್ಯಂ ತತೋ ಭವೇತ್|
12096008c ಸ ಚೇತ್ಸಸ್ಯೈನ್ಯ ಆಗಚ್ಚೇತ್ಸಸ್ಯೈನ್ಯಸ್ತಮಥಾಹ್ವಯೇತ್||

ಅವನೇನಾದರೋ ಸನ್ನದ್ಧನಾಗಿ ಬಂದರೆ ತಾನು ಸನ್ನದ್ಧನಾಗಬೇಕು. ಅವನೇನಾದರೋ ಸೇನೆಯೊಡನೆ ಯುದ್ಧಕ್ಕೆ ಬಂದರೆ ತಾನೂ

ಸೇನಾಸಮೇತ ಯುದ್ಧಮಾಡಬೇಕು.

12096009a ಸ ಚೇನ್ನಿಕೃತ್ಯಾ ಯುಧ್ಯೇತ ನಿಕೃತ್ಯಾ ತಂ ಪ್ರಯೋಧಯೇತ್|
12096009c ಅಥ ಚೇದ್ಧರ್ಮತೋ ಯುಧ್ಯೇದ್ಧರ್ಮೇಣೈವ ನಿವಾರಯೇತ್||

ಅವನೇನಾದರೋ ಮೋಸದಿಂದ ಯುದ್ಧಮಾಡತೊಡಗಿದರೆ ತಾನೂ ಮೋಸದಿಂದಲೇ ಯುದ್ಧಮಾಡಬೇಕು. ಅವನು ಧರ್ಮದ ಯುದ್ಧವನ್ನು ಮಾಡುತ್ತಿದ್ದರೆ ತಾನೂ ಧರ್ಮಯುದ್ಧವನ್ನೇ ಮಾಡಿ ಅವನನ್ನು ಎದುರಿಸಬೇಕು.

12096010a ನಾಶ್ವೇನ ರಥಿನಂ ಯಾಯಾದುದಿಯಾದ್ರಥಿನಂ ರಥೀ|
12096010c ವ್ಯಸನೇ ನ ಪ್ರಹರ್ತವ್ಯಂ ನ ಭೀತಾಯ ಜಿತಾಯ ಚ||

ಕುದುರೆಯ ಮೇಲೆ ಕುಳಿತು ರಥದಲ್ಲಿರುವನನ್ನು ಆಕ್ರಮಣಿಸಬಾರದು. ರಥದಲ್ಲಿರುವವನನ್ನು ರಥದಲ್ಲಿರುವವನೇ ಎದುರಿಸಿ ಯುದ್ಧಮಾಡಬೇಕು. ಶತ್ರುವು ಸಂಕಟದಲ್ಲಿರುವಾಗ, ಭಯಪಟ್ಟಿರುವಾಗ ಮತ್ತು ಪರಾಜಿತನಾಗಿರುವಾಗ ಅವನ ಮೇಲೆ ಆಯುಧವನ್ನು ಪ್ರಹರಿಸಬಾರದು.

12096011a ನೇಷುರ್ಲಿಪ್ತೋ ನ ಕರ್ಣೀ ಸ್ಯಾದಸತಾಮೇತದಾಯುಧಮ್|
12096011c ಜಯಾರ್ಥಮೇವ ಯೋದ್ಧವ್ಯಂ ನ ಕ್ರುಧ್ಯೇದಜಿಘಾಂಸತಃ||

ವಿಷಲಿಪ್ತವಾದ ಬಾಣಗಳನ್ನು ಮತ್ತು ಕರ್ಣಿಗಳನ್ನು ಉಪಯೋಗಿಸಬಾರದು. ಇವು ಅಸತ್ಪುರುಷರ ಆಯುಧಗಳು. ಜಯಕ್ಕಾಗಿಯೇ ಯುದ್ಧಮಾಡಬೇಕು. ತನ್ನನ್ನು ಕೊಲ್ಲಲು ಬಂದವನೊಡನೆ ಕ್ರೋಧದಿಂದ ಯುದ್ಧಮಾಡಬಾರದು.

12096012a ಸಾಧೂನಾಂ ತು ಮಿಥೋಭೇದಾತ್ಸಾಧುಶ್ಚೇದ್ವ್ಯಸನೀ ಭವೇತ್|
12096012c ಸವ್ರಣೋ ನಾಭಿಹಂತವ್ಯೋ ನಾನಪತ್ಯಃ ಕಥಂ ಚನ||

ಇಬ್ಬರು ಸತ್ಪುರುಷರು ಯುದ್ಧಮಾಡುತ್ತಿದ್ದಾಗ ಒಬ್ಬನು ಸಂಕಟಕ್ಕೊಳಗಾದರೆ ಇನ್ನೊಬ್ಬನು ಅವನನ್ನು ಸಂಹರಿಸಬಾರದು. ಬಲಹೀನನನ್ನೂ ಮಕ್ಕಳಿಲ್ಲದವನನ್ನೂ ಯಾವುದೇ ಕಾರಣದಿಂದಲೂ ಸಂಹರಿಸಬಾರದು.

12096013a ಭಗ್ನಶಸ್ತ್ರೋ ವಿಪನ್ನಾಶ್ವಶ್ಚಿನ್ನಜ್ಯೋ ಹತವಾಹನಃ|
12096013c ಚಿಕಿತ್ಸ್ಯಃ ಸ್ಯಾತ್ಸ್ವವಿಷಯೇ ಪ್ರಾಪ್ಯೋ ವಾ ಸ್ವಗೃಹಾನ್ಭವೇತ್|
12096013e ನಿರ್ವ್ರಣೋಽಪಿ ಚ ಮೋಕ್ತವ್ಯ ಏಷ ಧರ್ಮಃ ಸನಾತನಃ||

ಶಸ್ತ್ರವು ಭಗ್ನವಾಗಿರುವ, ಆಪತ್ತಿನಲ್ಲಿರುವ, ಧನುಸ್ಸಿನ ಶಿಂಜಿನಿಯು ತುಂಡಾಗಿರುವ ಮತ್ತು ವಾಹನಗಳು ಹತವಾಗಿರುವವನ ಮೇಲೆ ಶಸ್ತ್ರಪ್ರಯೋಗ ಮಾಡಬಾರದು. ಗಾಯಗೊಂಡವನಿಗೆ ತನ್ನ ರಾಜ್ಯದಲ್ಲಿಯೇ ಚಿಕಿತ್ಸೆಯನ್ನು ಕೊಡಿಸಬೇಕು ಅಥವಾ ಅವನನ್ನು ಅವನ ಮನೆಗೆ ಕಳುಹಿಸಬೇಕು. ಗಾಯಗಳು ಮಾಸಿದ ನಂತರ ಅವನನ್ನು ಬಿಟ್ಟುಬಿಡಬೇಕು. ಇದೇ ಸನಾತನ ಧರ್ಮವು.

12096014a ತಸ್ಮಾದ್ಧರ್ಮೇಣ ಯೋದ್ಧವ್ಯಂ ಮನುಃ ಸ್ವಾಯಂಭುವೋಽಬ್ರವೀತ್|
12096014c ಸತ್ಸು ನಿತ್ಯಂ ಸತಾಂ ಧರ್ಮಸ್ತಮಾಸ್ಥಾಯ ನ ನಾಶಯೇತ್||

ಆದುದರಿಂದ ಧರ್ಮದಿಂದಲೇ ಯುದ್ಧಮಾಡಬೇಕೆಂದು ಸ್ವಾಯಂಭುವ ಮನುವು ಹೇಳಿದ್ದಾನೆ. ಸತ್ಪುರುಷರಲ್ಲಿ ಸದ್ಧರ್ಮವೂ ಸದಾ ನೆಲೆಸಿರುತ್ತದೆ. ಧರ್ಮವನ್ನು ಆಶ್ರಯಿಸಬೇಕು. ವಿನಾಶಗೊಳಿಸಬಾರದು.

12096015a ಯೋ ವೈ ಜಯತ್ಯಧರ್ಮೇಣ ಕ್ಷತ್ರಿಯೋ ವರ್ಧಮಾನಕಃ[264]|
12096015c ಆತ್ಮಾನಮಾತ್ಮನಾ ಹಂತಿ ಪಾಪೋ ನಿಕೃತಿಜೀವನಃ||

ಅಭಿವೃದ್ಧಿಯನ್ನು ಬಯಸುವ ಯಾವ ಕ್ಷತ್ರಿಯನು ಅಧರ್ಮದಿಂದ
ಜಯಿಸುತ್ತಾನೋ ಆ ಪಾಪಿ ಮೋಸಗಾರನು ತನ್ನನ್ನು ತಾನೇ
ಕೊಂದುಕೊಳ್ಳುತ್ತಾನೆ.

12096016a ಕರ್ಮ ಚ್ಯೈತದಸಾಧೂನಾಮಸಾಧುಂ ಸಾಧುನಾ ಜಯೇತ್|
12096016c ಧರ್ಮೇಣ ನಿಧನಂ ಶ್ರೇಯೋ ನ ಜಯಃ ಪಾಪಕರ್ಮಣಾ||

ಧರ್ಮಯುದ್ಧವನ್ನು ಆರಂಭಿಸಿ ಅಧರ್ಮಪೂರ್ವಕವಾಗಿ
ವಿಜಯಗಳಿಸುವುದು ಪಾಪಾತ್ಮರ ಕರ್ಮವು. ಶ್ರೇಷ್ಠ ಪುರುಷರು
ದುಷ್ಟರನ್ನೂ ಧರ್ಮಮಾರ್ಗದಿಂದಲೇ ಜಯಿಸಬೇಕು.
ಪಾಪಕರ್ಮದಿಂದ ಗಳಿಸಿದ ಜಯಕ್ಕಿಂತಲೂ ಧರ್ಮದಿಂದ ಹೋರಾಡಿ
ನಿಧನಹೊಂದುವುದೇ ಶ್ರೇಯಸ್ಕರವು.

12096017a ನಾಧರ್ಮಶ್ಚರಿತೋ ರಾಜನ್ಸದ್ಯಃ ಫಲತಿ ಗೌರಿವ|
12096017c ಮೂಲಾನ್ಯಸ್ಯ ಪ್ರಶಾಖಾಶ್ಚ ದಹನ್ಸಮನುಗಚ್ಚತಿ||

ರಾಜನ್! ಬಿತ್ತಿದಾಕ್ಷಣ ಕೂಡಲೇ ಭೂಮಿಯು ಹೇಗೆ ಫಲವನ್ನು
ಕೊಡುವುದಿಲ್ಲವುದಿಲ್ಲವೋ ಹಾಗೆ ಮಾಡಿದ ಅಧರ್ಮವು ಕೂಡಲೇ
ಫಲವನ್ನು ಕೊಡುವುದಿಲ್ಲ. ಆದರೆ ಫಲಕೊಡಲು
ಪ್ರಾರಂಭವಾಯಿತೆಂದರೆ ಬೇರುಗಳನ್ನೂ, ಶಾಖೋಪಶಾಖೆಗಳನ್ನೂ
ದಹಿಸಿ ಭಸ್ಮಮಾಡಿಬಿಡುತ್ತದೆ.

---

264 ಧರ್ಮಸಂಗರಃ (ಭಾರತ ದರ್ಶನ).

12096018a ಪಾಪೇನ ಕರ್ಮಣಾ ವಿತ್ತಂ ಲಬ್ಧ್ವಾ ಪಾಪಃ ಪ್ರಹೃಷ್ಯತಿ|
12096018c ಸ ವರ್ಧಮಾನಃ ಸ್ತೇಯೇನ ಪಾಪಃ ಪಾಪೇ ಪ್ರಸಜ್ಜತಿ||

ಪಾಪಕರ್ಮಗಳಿಂದ ಧನವನ್ನು ಪಡೆದ ಪಾಪಿಯು
ಸಂತೋಷಪಡುತ್ತಾನೆ. ಕಳ್ಳತನದಿಂದ ವೃದ್ಧಿಯನ್ನು ಹೊಂದುವ
ಅವನು ಪಾಪಕರ್ಮಗಳಲ್ಲಿಯೇ ಮುಳುಗಿ ಹೋಗುತ್ತಾನೆ.

12096019a ನ ಧರ್ಮೋಽಸ್ತೀತಿ ಮನ್ವಾನಃ ಶುಚೀನವಹಸನ್ನಿವ|
12096019c ಅಶ್ರದ್ದಧಾನಭಾವಾಚ್ಚ ವಿನಾಶಮುಪಗಚ್ಚತಿ||

ಧರ್ಮವೆನ್ನುವುದೇ ಇಲ್ಲ ಎಂದು ತಿಳಿದು ಶುಚಿಯಾಗಿರುವವರ
ಅಪಹಾಸ್ಯಮಾಡುತ್ತಾನೆ. ಧರ್ಮದ ಮೇಲೆ ಶ್ರದ್ಧಾಭಾವವಿಲ್ಲದೇ
ವಿನಾಶವನ್ನು ಹೊಂದುತ್ತಾನೆ.

12096020a ಸ ಬದ್ಧೋ ವಾರುಣೈಃ ಪಾಶೈರಮರ್ತ್ಯ ಇವ ಮನ್ಯತೇ|
12096020c ಮಹಾದೃತಿರಿವಾಧ್ಮಾತಃ ಸ್ವಕೃತೇನ ವಿವರ್ಧತೇ||

ವರುಣನ ಪಾಶಗಳಿಂದ ಬದ್ಧನಾಗಿದ್ದರೂ ತಾನು ಅಮರನೆಂದೇ
ತಿಳಿದುಕೊಳ್ಳುತ್ತಾನೆ. ಗಾಳಿತುಂಬಿದ ಚರ್ಮದ ಚೀಲವು
ಉಬ್ಬಿಕೊಳ್ಳುವಂತೆ ತನ್ನದೇ ಕರ್ಮಗಳಿಂದ ಉಬ್ಬಿಕೊಳ್ಳುತ್ತಾನೆ.

12096021a ತತಃ ಸಮೂಲೋ ಹ್ರಿಯತೇ ನದೀಕೂಲಾದಿವ ದ್ರುಮಃ|
12096021c ಅಥೈನಮಭಿನಿಂದಂತಿ ಭಿನ್ನಂ ಕುಂಭಮಿವಾಶ್ಮನಿ|
12096021e ತಸ್ಮಾದ್ಧರ್ಮೇಣ ವಿಜಯಂ ಕಾಮಂ ಲಿಪ್ಸೇತ ಭೂಮಿಪಃ||

ಅನಂತರ ಅವನು ನದೀತೀರದಲ್ಲಿರುವ ವೃಕ್ಷವು ಪ್ರವಾಹದ ರಭಸಕ್ಕೆ
ಸಿಲುಕಿ ಬುಡಸಹಿತ ಉರುಳಿ ತೇಲಿಹೋಗುವಂತೆ ಪಾಪಿಷ್ಠನು

ಸಮೂಲವಾಗಿ ನಾಶಹೊಂದುತ್ತಾನೆ. ಕಲ್ಲಿನ ಮೇಲೆ ಕುಕ್ಕಿದ
ಗಡಿಗೆಯಂತೆ ಒಡೆದು ಹೋಗುತ್ತಾನೆ. ಆದುದರಿಂದ ಭೂಮಿಪನು
ವಿಜಯವನ್ನೂ ಐಶ್ವರ್ಯವನ್ನೂ ಧರ್ಮದಿಂದಲೇ
ಜಯಿಸಿಕೊಳ್ಳಬೇಕು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ವಿಜಿಗೀಷಮಾಣವೃತ್ತೇ ಷಣ್ಣವತಿತಮೋऽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ವಿಜಿಗೀಷಮಾಣವೃತ್ತ ಎನ್ನುವ ತೊಂಭತ್ತಾರನೇ ಅಧ್ಯಾಯವು.

೯೭

ರಾಜನ ಕಪಟರಹಿತ ಧರ್ಮಯುಕ್ತ ವ್ಯವಹಾರದ ಪ್ರಶಂಸೆ (1-23).

12097001 ಭೀಷ್ಮ ಉವಾಚ|
12097001a ನಾಧರ್ಮೇಣ ಮಹೀಂ ಜೇತುಂ ಲಿಪ್ಸೇತ ಜಗತೀಪತಿಃ|
12097001c ಅಧರ್ಮವಿಜಯಂ ಲಬ್ಧ್ವಾ ಕೋऽನುಮನ್ಯೇತ ಭೂಮಿಪಃ||

ಭೀಷ್ಮನು ಹೇಳಿದನು: ಜಗತೀಪತಿಯು ಅಧರ್ಮದಿಂದ ಮಹಿಯನ್ನು
ಗೆಲ್ಲಲು ಬಯಸಬಾರದು. ಅಧರ್ಮದಿಂದ ವಿಜಯವನ್ನು ಗಳಿಸಿ
ಯಾರುತಾನೇ ತಾನು ಭೂಮಿಪನೆಂದೆನಿಸಿಕೊಳ್ಳುತ್ತಾನೆ?

12097002a ಅಧರ್ಮಯುಕ್ತೋ ವಿಜಯೋ ಹ್ಯಧ್ರುವೋऽಸ್ವರ್ಗ್ಯ ಏವ ಚ|
12097002c ಸಾದಯತ್ಯೇಷ ರಾಜಾನಂ ಮಹೀಂ ಚ ಭರತರ್ಷಭ||

ಅಧರ್ಮಯುಕ್ತ ವಿಜಯವು ಶಾಶ್ವತವಾದುದಲ್ಲ. ಸ್ವರ್ಗವನ್ನು
ನೀಡುವಂಥಹುದೂ ಅಲ್ಲ. ಭರತರ್ಷಭ! ಅಂತಹ ಅಧರ್ಮ

ವಿಜಯವು ರಾಜನನ್ನೂ ರಾಜ್ಯವನ್ನೂ ನಾಶಗೊಳಿಸುತ್ತದೆ.

12097003a ವಿಶೀರ್ಣಕವಚಂ ಚೈವ ತವಾಸ್ಮೀತಿ ಚ ವಾದಿನಮ್|
12097003c ಕೃತಾಂಜಲಿಂ ನ್ಯಸ್ತಶಸ್ತ್ರಂ ಗೃಹೀತ್ವಾ ನ ವಿಹಿಂಸಯೇತ್||

ಕವಚವು ತುಂಡಾಗಿರುವನನ್ನು, ನಾನು ನಿನ್ನವನಾಗಿದ್ದೇನೆ ಎಂದು ಹೇಳುವವನ್ನೂ, ಕೈಮುಗಿದು ಶಸ್ತ್ರವನ್ನು ಕೆಳಗಿಟ್ಟವನನ್ನೂ ಬಂಧಿಸಿ ಹಿಂಸಿಸಬಾರದು.

12097004a ಬಲೇನಾವಜಿತೋ ಯಶ್ಚ ನ ತಂ ಯುಧ್ಯೇತ ಭೂಮಿಪಃ|
12097004c ಸಂವತ್ಸರಂ ವಿಪ್ರಣಯೇತ್ತಸ್ಮಾಜ್ಜ್ಞಾತಃ ಪುನರ್ಭವೇತ್||

ಬಲದಿಂದ ಸೋಲಿಸಿದವನೊಡನೆ ಭೂಮಿಪನು ಯುದ್ಧ ಮಾಡಬಾರದು. ಒಂದು ವರ್ಷದ ವರೆಗೆ ಅವನನ್ನು ಗೌರವದಿಂದ ಬಂಧನದಲ್ಲಿರಿಸಿಕೊಂಡಿರಬೇಕು. ಸೋತ ರಾಜನು ಗೆದ್ದವನಿಗೆ ಮಗನಂತೆಯೇ ಆಗುತ್ತಾನೆ.

12097005a ನಾರ್ವಾಕ್ಸಂವತ್ಸರಾತ್ಕನ್ಯಾ ಸ್ಪೃಷ್ಟವ್ಯಾ ವಿಕ್ರಮಾಹೃತಾ|
12097005c ಏವಮೇವ ಧನಂ ಸರ್ವಂ ಯಚ್ಚಾನ್ಯತ್ಸಹಸಾಹೃತಮ್||

ವಿಕ್ರಮದಿಂದ ಅಪಹರಿಸಿದ ಕನ್ಯೆಯನ್ನು ಒಂದು ವರ್ಷದ ವರೆಗೆ ಅರಮನೆಯಲ್ಲಿ ಪ್ರತ್ಯೇಕವಾಗಿಟ್ಟಿರಬೇಕು ಮತ್ತು ಅವಳನ್ನು ಪ್ರಶ್ನಿಸಬಾರದು. ಇದೇ ಧರ್ಮವನ್ನು ಅಪಹರಿಸಿ ತಂದ ಇತರ ಧನಗಳ ಕುರಿತೂ ಪಾಲಿಸಬೇಕು.

12097006a ನ ತು ವಂಧ್ಯಂ ಧನಂ[265] ತಿಷ್ಠೇತ್ಪಿಬೇಯುರ್ಬ್ರಾಹ್ಮಣಾಃ ಪಯಃ|

[265] ನ ತು ವಧ್ಯಧನಂ (ಭಾರತ ದರ್ಶನ).

12097006c ಯುಂಜೀರನ್ವಾಪ್ಯನಡುಹಃ ಕ್ಷಂತವ್ಯಂ ವಾ ತದಾ ಭವೇತ್‌॥

ಅಪರಾಧಿಯಿಂದ ವಸೂಲಿಮಾಡಿಕೊಂಡ ಧನವನ್ನು ರಾಜನು ಭೋಗಿಸಬಾರದು. ಅಪರಾಧಿಯಿಂದ ಮುಟ್ಟುಗೋಲು ಹಾಕಿದ ಹಸುವಿನ ಹಾಲನ್ನು ಬ್ರಾಹ್ಮಣರಿಗೆ ಕುಡಿಯಲು ಕೊಡಬೇಕು. ಅಪರಾಧಿಯ ಎತ್ತನ್ನು ಬ್ರಾಹ್ಮಣರು ಕುಳಿತ ಗಾಡಿಗಳನ್ನು ಎಳೆಯಲು ಉಪಯೋಗಿಸಬೇಕು. ರಾಜನು ಅಪರಾಧಿಯನ್ನು ಕ್ಷಮಿಸಿ ಅವನ ವಸ್ತುಗಳೆಲ್ಲವನ್ನೂ ಹಿಂದೆಕೊಡಲೂ ಬಹುದು.

12097007a ರಾಜ್ಞಾ ರಾಜ್ಯೈವ ಯೋದ್ಧವ್ಯಸ್ತಥಾ ಧರ್ಮೋ ವಿಧೀಯತೇ|
12097007c ನಾನ್ಯೋ ರಾಜಾನಮಭ್ಯಸೇದರಾಜನ್ಯಃ ಕಥಂ ಚನ‌॥

ರಾಜನು ರಾಜನೊಂದಿಗೇ ಯುದ್ಧಮಾಡಬೇಕೆಂದು ಧರ್ಮವು ವಿಧಿಸಿದೆ. ರಾಜ ಅಥವಾ ರಾಜಕುಮಾರನಲ್ಲದವನು ರಾಜನ ಮೇಲೆ ಯಾವುದೇ ಕಾರಣದಿಂದಲೂ ಶಸ್ತ್ರಪ್ರಯೋಗ ಮಾಡಬಾರದು.

12097008a ಅನೀಕಯೋಃ ಸಂಹತಯೋರ್ಯದೀಯಾದ್ಬ್ರಾಹ್ಮಣೋಽಂತರಾ|
12097008c ಶಾಂತಿಮಿಚ್ಚನ್ನುಭಯತೋ ನ ಯೋದ್ಧವ್ಯಂ ತದಾ ಭವೇತ್‌॥

ಸೇನೆಗಳು ಯುದ್ಧದಲ್ಲಿ ತೊಡಗಿರುವಾಗ ಬ್ರಾಹ್ಮಣನು ಶಾಂತಿಯನ್ನು ಬಯಸಿ ಮಧ್ಯದಲ್ಲಿ ಬಂದರೆ ಎರಡೂ ಕಡೆಯವರೂ ಯುದ್ಧವನ್ನು ಕೂಡಲೇ ನಿಲ್ಲಿಸಬೇಕು.

12097008e ಮರ್ಯಾದಾಂ ಶಾಶ್ವತೀಂ ಭಿಂದ್ಯಾದ್ಬ್ರಾಹ್ಮಣಂ ಯೋಽಭಿಲಂಘಯೇತ್‌|
12097009a ಅಥ ಚೇಲ್ಲಂಘಯೇದೇನಾಂ ಮರ್ಯಾದಾಂ ಕ್ಷತ್ರಿಯಬ್ರುವಃ‌॥
12097009c ಅಪ್ರಶಸ್ಯಸ್ತದೂರ್ಧ್ವಂ ಸ್ಯಾದನಾದೇಯಶ್ಚ ಸಂಸದಿ|

ಹಾಗೆ ಬಂದ ಬ್ರಾಹ್ಮಣನನ್ನು ಯಾರೇ ಉಲ್ಲಂಘಿಸಿದರೂ ಅದು

ಶಾಶ್ವತ ಮರ್ಯಾದೆಯನ್ನು ಉಲ್ಲಂಘಿಸಿದಂತೆ. ಈ ಮರ್ಯಾದೆಯನ್ನು ಉಲ್ಲಂಘಿಸದವನು ಕ್ಷತ್ರಿಯನೆಂದು ಕರೆಯಲ್ಪಡಲು ಯೋಗ್ಯನಾಗುವುದಿಲ್ಲ. ಅದರ ನಂತರ ಅವನನ್ನು ಕ್ಷತ್ರಿಯರ ಸಂಸದಿಗಳಲ್ಲಿ ಮರ್ಯಾದೆಯನ್ನು ಕೊಡಲಾಗುವುದಿಲ್ಲ.

12097010a ಯಾ ತು ಧರ್ಮವಿಲೋಪೇನ ಮರ್ಯಾದಾಭೇದನೇನ ಚ||
12097010c ತಾಂ ವೃತ್ತಿಂ ನಾನುವರ್ತೇತ ವಿಜಿಗೀಷುರ್ಮಹೀಪತಿಃ|
12097010E ಧರ್ಮಲಬ್ಧಾದ್ಧಿ ವಿಜಯಾತ್ಕೋ ಲಾಭೋಽಭ್ಯಧಿಕೋ ಭವೇತ್||

ಧರ್ಮಲೋಪವನ್ನು ಮಾಡಿ ಯುದ್ಧಮರ್ಯಾದೆಯನ್ನು ಉಲ್ಲಂಘಿಸಿ ವಿಜಯವನ್ನು ಪಡೆಯುವ ವೃತ್ತಿಯನ್ನು ಜಯವನ್ನು ಅಪೇಕ್ಷಿಸುವ ಮಹೀಪತಿಯು ಅನುಸರಿಸಬಾರದು. ಧರ್ಮದಿಂದ ಪಡೆದ ವಿಜಯಕ್ಕಿಂತಲೂ ಅಧಿಕ ಲಾಭವು ಬೇರೆ ಯಾವುದಿದೆ?

12097011a ಸಹಸಾ ನಾಮ್ಯ ಭೂತಾನಿ[266] ಕ್ಷಿಪ್ರಮೇವ ಪ್ರಸಾದಯೇತ್|
12097011c ಸಾಂತ್ವೇನ ಭೋಗದಾನೇನ ಸ ರಾಜ್ಞಾಂ ಪರಮೋ ನಯಃ||

ವಿಜಯಿಯಾದ ರಾಜನು ಬೇಗನೇ ಸಾಂತ್ವನ ಮಾತುಗಳಿಂದ ಮತ್ತು ಭೋಗವಸ್ತುಗಳನ್ನಿತ್ತು ಅವರನ್ನು ಪ್ರಸನ್ನಗೊಳಿಸಬೇಕು. ಇದೇ ವಿಜಯೀ ರಾಜನ ಪರಮ ನೀತಿ.

12097012a ಭುಜ್ಯಮಾನಾ ಹ್ಯಯೋಗೇನ ಸ್ವರಾಷ್ಟ್ರಾದಭಿತಾಪಿತಾಃ|
12097012c ಅಮಿತ್ರಾನ್ ಪರ್ಯುಪಾಸೀರನ್ ವ್ಯಸನೌಘಪ್ರತೀಕ್ಷಿಣಃ||

ಅನುಚಿತ ರೀತಿಯಲ್ಲಿ ಅವರನ್ನು ತನ್ನ ರಾಷ್ಟ್ರದಿಂದ ಹೊರಹಾಕಿದ್ದೇ

---

[266] ಸಹಸಾನಾರ್ಯಭೂತಾನಿ (ಭಾರತ ದರ್ಶನ).

ಆದರೆ ಅವರೇ ಶತ್ರುಗಳಾಗಿ ವಿಜಯಿಯು ವ್ಯಸನಕ್ಕೀಡಾಗುವುದನ್ನೇ ಕಾಯುತ್ತಿರುತ್ತಾರೆ.

12097013a ಅಮಿತ್ರೋಪಗ್ರಹಂ ಚಾಸ್ಯ ತೇ ಕುರ್ಯುಃ ಕ್ಷಿಪ್ರಮಾಪದಿ|
12097013c ಸಂದುಷ್ಟಾಃ ಸರ್ವತೋ ರಾಜನ್ ರಾಜವ್ಯಸನಕಾಂಕ್ಷಿಣಃ||

ರಾಜನ್! ರಾಜನು ವ್ಯಸನಕ್ಕೊಳಗಾಗುವುದನ್ನೇ ಕಾಯುತ್ತಿರುವ ಆ ಸುದುಷ್ಟರು ಆಪತ್ತಿನ ಸಮಯದಲ್ಲಿ ಶತ್ರುವಿನ ಪಕ್ಷವನ್ನು ಸೇರಿಕೊಳ್ಳುತ್ತಾರೆ.

12097014a ನಾಮಿತ್ರೋ ವಿನಿಕರ್ತವ್ಯೋ ನಾತಿಚ್ಚೇದ್ಯಃ ಕಥಂ ಚನ|
12097014c ಜೀವಿತಂ ಹ್ಯಪ್ಯತಿಚ್ಚಿನ್ನಃ ಸಂತ್ಯಜತ್ಯೇಕದಾ ನರಃ||

ಶತ್ರುವನ್ನು ವಂಚಿಸಬಾರದು. ಅವನನ್ನು ಯಾವುದೇ ಕಾರಣಕ್ಕೂ ಅತಿಯಾಗಿ ಹಿಂಸಿಸಬಾರದು. ಅವನು ಅತಿಯಾಗಿ ಗಾಯಗೊಂಡರೆ ಜೀವವನ್ನೇ ಬಿಟ್ಟುಬಿಡಬಹುದು.

12097015a ಅಲ್ಪೇನಾಪಿ ಹಿ ಸಂಯುಕ್ತಸ್ತುಷ್ಯತ್ಯೇವಾಪರಾಧಿಕಃ|
12097015c ಶುದ್ಧಂ ಜೀವಿತಮೇವಾಪಿ ತಾದೃಶೋ ಬಹು ಮನ್ಯತೇ||

ಅಂಥಹ ರಾಜನು ಅಲ್ಪಲಾಭದಿಂದಲೇ ಸಂತುಷ್ಟನಾಗುತ್ತಾನೆ. ಅಂಥವನು ಪರಿಶುದ್ಧ ಜೀವನವೇ ಅತ್ಯಂತ ಮಹತ್ತ್ವದ್ದೆಂದು ಭಾವಿಸುತ್ತಾನೆ.

12097016a ಯಸ್ಯ ಸ್ಫೀತೋ ಜನಪದಃ ಸಂಪನ್ನಃ ಪ್ರಿಯರಾಜಕಃ|
12097016c ಸಂತುಷ್ಟಭೃತ್ಯಸಚಿವೋ ದೃಢಮೂಲಃ ಸ ಪಾರ್ಥಿವಃ||

ಯಾರ ಜನಪದವು ಧನ-ಧಾನ್ಯಗಳಿಂದ ಸಮೃದ್ಧವಾಗಿದೆಯೋ,

ರಾಜನನ್ನು ಪ್ರೀತಿಸುವ ಪ್ರಜೆಗಳಿಂದ ತುಂಬಿದೆಯೋ, ಯಾರ ಭೃತ್ಯ-
ಸಚಿವರು ಸಂತುಷ್ಟರಾಗಿರುವರೋ ಆ ರಾಜನ ಮೂಲವು
ದೃಢವಾಗಿರುತ್ತದೆ.

12097017a ಋತ್ವಿಕ್ಪುರೋಹಿತಾಚಾರ್ಯಾ ಯೇ ಚಾನ್ಯೇ ಶ್ರುತಸಂಮತಾಃ|
12097017c ಪೂಜಾರ್ಹಾಃ ಪೂಜಿತಾ ಯಸ್ಯ ಸ ವೈ ಲೋಕಜಿದುಚ್ಯತೇ[267]||

ಯಾವ ರಾಜನು ಋತ್ವಿಜರನ್ನೂ, ಪುರೋಹಿತರನ್ನೂ, ಆಚಾರ್ಯರನ್ನೂ
ಮತ್ತು ಅನ್ಯ ಶ್ರುತಸಂಮತ ಪೂಜಾರ್ಹರನ್ನು ಪೂಜಿಸುತ್ತಾನೋ ಅವನು
ಲೋಕವಿಜಯಿಯು ಎಂದು ಕರೆಯಲ್ಪಡುತ್ತಾನೆ.

12097018a ಏತೇನೈವ ಚ ವೃತ್ತೇನ ಮಹೀಂ ಪ್ರಾಪ ಸುರೋತ್ತಮಃ|
12097018c ಅನ್ವೇವ ಚೈಂದ್ರಂ ವಿಜಯಂ ವ್ಯಜಿಗೀಷಂತ ಪಾರ್ಥಿವಾಃ||

ಇದೇ ವರ್ತನೆಯಿಂದ ಸುರೋತ್ತಮನು ಮಹಿಯನ್ನು
ಪಡೆದುಕೊಂಡನು. ಇದನ್ನು ಅನುಸರಿಸಿಯೇ ಪಾರ್ಥಿವರು ಇಂದ್ರನ
ವಿಜಯವನ್ನು ಪಡೆದುಕೊಳ್ಳಲು ಬಯಸುತ್ತಾರೆ.

12097019a ಭೂಮಿವರ್ಜಂ ಪುರಂ ರಾಜಾ ಜಿತ್ವಾ ರಾಜಾನಮಾಹವೇ|
12097019c ಅಮೃತಾಶ್ಚೌಷಧೀಃ ಶಶ್ವದಾಜಹಾರ ಪ್ರತರ್ದನಃ||

ಹಿಂದೆ ರಾಜಾ ಪ್ರತರ್ದನನು ರಾಜನನ್ನು ಯುದ್ಧದಲ್ಲಿ ಗೆದ್ದು ಅವನಿಗೆ
ಭೂಮಿಯೊಂದನ್ನು ಬಿಟ್ಟು ಉಳಿದೆಲ್ಲ ಧನ-ಧಾನ್ಯಗಳನ್ನು ತನ್ನ
ರಾಜಧಾನಿಗೆ ತೆಗೆದುಕೊಂಡು ಬಂದನು.

12097020a ಅಗ್ನಿಹೋತ್ರಾಣ್ಯಗ್ನಿಶೇಷಂ ಹವಿರ್ಭಾಜನಮೇವ ಚ|

---

267 ಲೋಕವಿದುಚ್ಯತೇ (ಭಾರತ ದರ್ಶನ).

12097020c ಆಜಹಾರ ದಿವೋದಾಸಸ್ತತೋ ವಿಪ್ರಕೃತೋಽಭವತ್‌॥

ದಿವೋದಾಸನೆಂಬ ರಾಜನು ತಾನು ಗೆದ್ದ ರಾಜ್ಯದಲ್ಲಿ ಅಗ್ನಿಹೋತ್ರಾಗ್ನಿಯೊಂದನ್ನುಳಿಸಿ ಹವಿಸ್ಸನ್ನೂ ಭೋಜನ ಸಾಮಗ್ರಿಗಳನ್ನೂ ತನ್ನ ದೇಶಕ್ಕೆ ತಂದನು. ಅದರಿಂದಾಗಿ ಅವನು ತಿರಸ್ಕೃತನಾದನು.

12097021a ಸರಾಜಕಾನಿ ರಾಷ್ಟ್ರಾಣಿ ನಾಭಾಗೋ ದಕ್ಷಿಣಾಂ ದದೌ|
12097021c ಅನ್ಯತ್ರ ಶ್ರೋತ್ರಿಯಸ್ವಾಚ್ಚ ತಾಪಸಸ್ವಾಚ್ಚ ಭಾರತ‌॥

ಭಾರತ! ನಾಭಾಗನೆಂಬ ರಾಜನು ತಾನು ಗೆದ್ದ ರಾಜ್ಯದಲ್ಲಿದ್ದ ಶ್ರೋತ್ರಿಯರ ಮತ್ತು ತಪಸ್ವಿಗಳ ಸಂಪತ್ತನ್ನು ಬಿಟ್ಟು ರಾಜರೊಂದಿಗೆ ರಾಷ್ಟ್ರಗಳನ್ನು ಬ್ರಾಹ್ಮಣರಿಗೆ ದಕ್ಷಿಣೆಯನ್ನಾಗಿತ್ತನು.

12097022a ಉಚ್ಚಾವಚಾನಿ ವೃತ್ತಾನಿ ಧರ್ಮಜ್ಞಾನಾಂ ಯುಧಿಷ್ಠಿರ|
12097022c ಆಸನ್ರಾಜ್ಞಾಂ ಪುರಾಣಾನಾಂ ಸರ್ವಂ ತನ್ಮಮ ರೋಚತೇ‌॥

ಯುಧಿಷ್ಠಿರ! ಹಿಂದಿನ ಧರ್ಮಜ್ಞ ರಾಜರ ಬಳಿಯಲ್ಲಿದ್ದ ವಿವಿಧ ಐಶ್ವರ್ಯಗಳೆಲ್ಲವನ್ನೂ ಯುದ್ಧದ ಮೂಲಕ ಸ್ವಾಧೀನಪಡಿಸಿಕೊಳ್ಳುವ ಅಭಿಲಾಷೆಯು ನನ್ನಲ್ಲಿಯೂ ಇದ್ದಿತ್ತು.

12097023a ಸರ್ವವಿದ್ಯಾತಿರೇಕಾದ್ವಾ ಜಯಮಿಚ್ಚೇನ್ಮಹೀಪತಿಃ|
12097023c ನ ಮಾಯಯಾ ನ ದಂಭೇನ ಯ ಇಚ್ಚೇದ್ ಭೂತಿಮಾತ್ಮನಃ‌॥

ಮಹೀಪತಿಯು ಸರ್ವವಿದ್ಯೆಗಳ ಅತಿರೇಕದ ಮೂಲಕ ಜಯವನ್ನು ಗಳಿಸಲು ಇಚ್ಛಿಸಬೇಕು. ಮೋಸ ಮತ್ತು ದಂಭದಿಂದ ತನ್ನ ಅಭಿವೃದ್ಧಿಯನ್ನು ಇಚ್ಛಿಸಬಾರದು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ವಿಜಿಗೀಷಮಾಣವೃತ್ತೇ ಸಪ್ತನವತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ
ವಿಜಿಗೀಷಮಾಣವೃತ್ತ ಎನ್ನುವ ತೊಂಭತ್ತೇಳನೇ ಅಧ್ಯಾಯವು.

೯೮

ಮಹಾಜನರನ್ನು ಸಂಹರಿಸಿದರೂ ರಾಜನಾದವನು ಹೇಗೆ ಪುಣ್ಯಲೋಕವನ್ನು ಜಯಿಸಬಲ್ಲನು ಎನ್ನುವುದನ್ನು ಭೀಷ್ಮನು ಯುಧಿಷ್ಠಿರನಿಗೆ ಉಪದೇಶಿಸುವುದು (1-31).

12098001 ಯುಧಿಷ್ಠಿರ ಉವಾಚ|
12098001a ಕ್ಷತ್ರಧರ್ಮಾನ್ನ ಪಾಪೀಯಾನ್ ಧರ್ಮೋ ಽಸ್ತಿ ಭರತರ್ಷಭ|
12098001c ಅಭಿಯಾನೇ ಚ ಯುದ್ಧೇ ಚ ರಾಜಾ ಹಂತಿ ಮಹಾಜನಮ್||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ಕ್ಷತ್ರಿಯ ಧರ್ಮಕ್ಕಿಂತಲೂ ಪಾಪೀಯ ಧರ್ಮವು ಇನ್ನೊಂದಿಲ್ಲ. ಅಭಿಯಾನದಿಂದ ಅಥವಾ ಯುದ್ಧದಿಂದ ರಾಜನು ಮಹಾಜನರನ್ನು ಸಂಹರಿಸುತ್ತಾನೆ.

12098002a ಅಥ ಸ್ಮ ಕರ್ಮಣಾ ಯೇನ ಲೋಕಾನ್ ಜಯತಿ ಪಾರ್ಥಿವಃ|
12098002c ವಿದ್ವಂಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ||

ಭರತರ್ಷಭ! ಹೀಗಿರುವಾಗ ಯಾವ ಪುಣ್ಯ ಕರ್ಮಗಳನ್ನು ಮಾಡಿ ಪಾರ್ಥಿವನು ಪುಣ್ಯ ಲೋಕಗಳನ್ನು ಜಯಿಸುತ್ತಾನೆ? ವಿದ್ವನ್! ಇದರ ಕುರಿತು ಸಂದೇಹವುಳ್ಳ ನನಗೆ ಹೇಳು."

12098003 ಭೀಷ್ಮ ಉವಾಚ|

12098003a ನಿಗ್ರಹೇಣ ಚ ಪಾಪಾನಾಂ ಸಾಧೂನಾಂ ಪ್ರಗ್ರಹೇಣ ಚ|
12098003c ಯಜ್ಞೈರ್ದಾನೈಶ್ಚ ರಾಜಾನೋ ಭವಂತಿ ಶುಚಯೋಽಮಲಾಃ||

ಭೀಷ್ಮನು ಹೇಳಿದನು: "ಪಾಪಿಗಳ ನಿಗ್ರಹ, ಸಾಧುಪುರುಷರ ರಕ್ಷಣೆ, ಮತ್ತು ಯಜ್ಞ-ದಾನಗಳಿಂದ ರಾಜರು ಶುಚರೂ ಅಮಲರೂ ಆಗುತಾರೆ.

12098004a ಉಪರುಂಧಂತಿ ರಾಜಾನೋ ಭೂತಾನಿ ವಿಜಯಾರ್ಥಿನಃ|
12098004c ತ ಏವ ವಿಜಯಂ ಪ್ರಾಪ್ಯ ವರ್ಧಯಂತಿ ಪುನಃ ಪ್ರಜಾಃ||

ವಿಜಯಾರ್ಥಿಗಳಾದ ರಾಜರು ಯುದ್ಧದ ಸಮಯದಲ್ಲಿ ಅನೇಕ ಜೀವಿಗಳಿಗೆ ತೊಂದರೆಯನ್ನುಂಟುಮಾಡುತ್ತಾರೆ. ಅವರೇ ವಿಜಯವನ್ನು ಗಳಿಸಿದ ನಂತರ ಪುನಃ ಪ್ರಜೆಗಳಿಗೆ ಅಭಿವೃದ್ಧಿಯನ್ನು ತರುತ್ತಾರೆ.

12098005a ಅಪವಿಧ್ಯಂತಿ ಪಾಪಾನಿ ದಾನಯಜ್ಞತಪೋಬಲೈಃ|
12098005c ಅನುಗ್ರಹೇಣ ಭೂತಾನಾಂ ಪುಣ್ಯಮೇಷಾಂ ಪ್ರವರ್ಧತೇ||

ಅವರು ತಮ್ಮ ಪಾಪಗಳನ್ನು ದಾನ-ಯಜ್ಞ ಮತ್ತು ತಪೋಬಲಗಳಿಂದ ತೊಳೆದುಕೊಳ್ಳುತ್ತಾರೆ. ಪ್ರಾಣಿಗಳ ಅನುಗ್ರಹದಿಂದಲೂ ಅವರ ಪುಣ್ಯವು ವೃದ್ಧಿಸುತ್ತದೆ.

12098006a ಯಥೈವ ಕ್ಷೇತ್ರನಿರ್ದಾತಾ ನಿರ್ದನ್ವೈ ಕ್ಷೇತ್ರಮೇಕದಾ|
12098006c ಹಿನಸ್ತಿ ಕಕ್ಷಂ ಧಾನ್ಯಂ ಚ ನ ಚ ಧಾನ್ಯಂ ವಿನಶ್ಯತಿ||
12098007a ಏವಂ ಶಸ್ತ್ರಾಣಿ ಮುಂಚಂತೋ ಘ್ನಂತಿ ವಧ್ಯಾನಥೈಕದಾ|
12098007c ತಸ್ಯೈಷಾ ನಿಷ್ಕೃತಿಃ ಕೃತ್ಸ್ನಾ ಭೂತಾನಾಂ ಭಾವನಂ ಪುನಃ||

ಗದ್ದೆಯನ್ನು ಕಳೆಯನ್ನು ಕೀಳುವಾಗ ಕಳೆಗಳ ಜೊತೆಯಲ್ಲಿಯೇ ಒಂದೆರಡು ಧಾನ್ಯಗಳ ಸಸಿಗಳೂ ಕೈತಪ್ಪಿ ಕಿತ್ತುಹೋಗಬಹುದು.

ಆದರೆ ಪೈರಿನ ಸಸಿಗಳನ್ನು ಸಂಪೂರ್ಣವಾಗಿ ನಾಶಮಾಡುವುದಿಲ್ಲ. ಕಳೆಯನ್ನು ಕೀಳುವುದು ಬೆಳೆಯು ಚೆನ್ನಾಗಿ ಬೆಳೆಯಲೆಂದೇ. ಅದೇ ರೀತಿ ರಾಜನೂ ಕೂಡ ಯುದ್ಧಮಾಡುವಾಗ ಆಯುಧಗಳನ್ನು ಪ್ರಯೋಗಿಸಿ ವಧಾರ್ಹರಾದ ಅನೇಕರನ್ನು ನಾಶಪಡಿಸುತ್ತಾನೆ. ಜೊತೆಯಲ್ಲಿ ವಧಾರ್ಹರಲ್ಲದವರೂ ವಿನಾಶಹೊಂದಬಹುದು. ಆದರೆ ಅವನ ಆ ಪಾಪವು ಯುದ್ಧಾನಂತರ ಪ್ರಜೆಗಳನ್ನು ಪುನಃ ಪರಿಪಾಲಿಸುವುದರಿಂದ ಪರಿಹಾರವಾಗುತ್ತದೆ.

12098008a ಯೋ ಭೂತಾನಿ ಧನಜ್ಯಾನಾದ್ವಧಾತ್ ಕ್ಲೇಶಾಚ್ಚ ರಕ್ಷತಿ.[268]|
12098008c ದಸ್ಯುಭ್ಯಃ ಪ್ರಾಣದಾನಾತ್ಸ ಧನದಃ ಸುಖದೋ ವಿರಾಟ್||

ಯಾರು ಸಮಸ್ತ ಪ್ರಜೆಗಳನ್ನೂ ಧನಕ್ಷಯ, ಪ್ರಾಣಕ್ಷಯ ಮತ್ತು ಕ್ಲೇಶಗಳಿಂದ ರಕ್ಷಿಸುವನೋ ಮತ್ತು ದಸ್ಯುಗಳಿಂದ ರಕ್ಷಿಸಿ ಪ್ರಾಣದಾನವನ್ನು ಮಾಡುವನೋ ಆ ರಾಜನು ಪ್ರಜೆಗಳಿಗೆ ಧನವನ್ನೂ ಸುಖವನ್ನೂ ನೀಡುವ ಪರಮೇಶ್ವರನೇ ಸರಿ.

12098009a ಸ ಸರ್ವಯಜ್ಞೈರೀಜಾನೋ ರಾಜಾಥಾಭಯದಕ್ಷಿಣೈಃ|
12098009c ಅನುಭೂಯೇಹ ಭದ್ರಾಣಿ ಪ್ರಾಪ್ನೋತೀಂದ್ರಸಲೋಕತಾಮ್||

ಅಭಯ ದಕ್ಷಿಣೆಗಳಿಂದ ಕೂಡೀದ ಸರ್ವ ಯಜ್ಞಗಳಿಂದ ದೇವತೆಗಳನ್ನು ತೃಪ್ತಿಪಡಿಸಿ ಪ್ರಜೆಗಳಿಗೆ ಅಭಯದಾಕನಾಗಿರುವ ರಾಜನು ಈ ಲೋಕದಲ್ಲಿ ಸಕಲ ಸುಖೋಪಭೋಗಗಳನ್ನು ಅನುಭವಿಸಿ

---

[268] ಯೋ ಭೂತಾನಿ ಧನಾಕ್ರಾಂತ್ಯಾ ವಧಾತ್ಕ್ಲೇಶಾಚ್ಚ ರಕ್ಷತಿ| (ಭಾರತ ದರ್ಶನ).

ಪರಲೋಕದಲ್ಲಿ ಇಂದ್ರನಂತೆ ಸ್ವರ್ಗಕ್ಕೆ ಅಧಿಕಾರಿಯಾಗುತ್ತಾನೆ.

12098010a ಬ್ರಾಹ್ಮಣಾರ್ಥೇ ಸಮುತ್ಪನ್ನೇ ಯೋಽಭಿನಿಃಸೃತ್ಯ ಯುಧ್ಯತೇ|
12098010c ಆತ್ಮಾನಂ ಯೂಪಮುಚ್ಛ್ರಿತ್ಯ ಸ ಯಜ್ಞೋಽನಂತದಕ್ಷಿಣಃ||

ಬ್ರಾಹ್ಮಣರಿಗೋಸ್ಕರವಾಗಿ ನಡೆದ ಯುದ್ಧದಲ್ಲಿ ಯಾವ ರಾಜನು ಮುನ್ನುಗ್ಗಿ ಹೋರಾಡಿ ಯೂಪಸದೃಶವಾದ ತನ್ನನ್ನೇ ಅಲ್ಲಿ ಆಹುತಿಯನ್ನಾಗಿ ಕೊಡುತ್ತಾನೋ ಅದು ಅನಂತ ದಕ್ಷಿಣೆಗಳುಳ್ಳ ಯಜ್ಞದಂತಾಗುತ್ತದೆ.

12098011a ಅಭೀತೋ ವಿಕಿರನ್ ಶತ್ರೂನ್ ಪ್ರತಿಗೃಹ್ಣನ್ ಶರಾಂಸ್ತಥಾ|
12098011c ನ ತಸ್ಮಾತ್ತ್ರಿದಶಾಃ ಶ್ರೇಯೋ ಭುವಿ ಪಶ್ಯಂತಿ ಕಿಂ ಚನ||

ಅಭೀತನಾಗಿ ಶತ್ರುಗಳ ಮೇಲೆ ಶರಗಳನ್ನು ಹರಡುತ್ತಾ ಅವರ ಶರಗಳ ಆಘಾತವನ್ನೂ ಸಹಿಸಿಕೊಳ್ಳುತ್ತಾನೋ ಅಂತಹ ರಾಜನ ಶ್ರೇಯಸ್ಕರ ಕರ್ಮಕ್ಕಿಂತ ಅತಿಶಯವಾದುದು ಭುವಿಯಲ್ಲಿಯೇ ಇಲ್ಲವೆಂದು ತ್ರಿದಶರ ಕಾಣುತ್ತಾರೆ.

12098012a ತಸ್ಯ ಯಾವಂತಿ ಶಸ್ತ್ರಾಣಿ[269] ತ್ವಚಂ ಭಿಂದಂತಿ ಸಂಯುಗೇ|
12098012c ತಾವತಃ ಸೋಽಶ್ನುತೇ ಲೋಕಾನ್ಸರ್ವಕಾಮದುಹೋಽಕ್ಷಯಾನ್||

ಯುದ್ಧದಲ್ಲಿ ಅವನ ಚರ್ಮಕ್ಕೆ ಎಷ್ಟು ಕಡೆ ಶಸ್ತ್ರಗಳು ನಾಟುತ್ತವೆಯೋ ಅಷ್ಟು ಸಂಖ್ಯೆಯಲ್ಲಿ ಸರ್ವಕಾಮನಗಳನ್ನೂ ಪೂರೈಸುವ ಅಕ್ಷಯ ಲೋಕಗಳನ್ನು ಅವನು ಪಡೆದುಕೊಳ್ಳುತ್ತಾನೆ.

12098013a ನ ತಸ್ಯ ರುಧಿರಂ ಗಾತ್ರಾದಾವೇಧೇಭ್ಯಃ ಪ್ರವರ್ತತೇ|

---

269 ತಸ್ಯ ಶಸ್ತ್ರಾಣಿ ಯಾವಂತಿ (ಭಾರತ ದರ್ಶನ).

12098013c ಸ ಹ ತೇನೈವ ರಕ್ತೇನ ಸರ್ವಪಾಪ್ಮೈಃ ಪ್ರಮುಚ್ಯತೇ||

ಯುದ್ಧಭೂಮಿಯಲ್ಲಿ ಅವನ ಶರೀರದಿಂದ ಎಷ್ಟು ರಕ್ತವು ಹರಿದು ಹೋಗುತ್ತದೆಯೋ ಆ ರಕ್ತದೊಡನೆ ಅವನು ಸರ್ವಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

12098014a ಯಾನಿ ದುಃಖಾನಿ ಸಹತೇ ವ್ರಣಾನಾಮಭಿತಾಪನೇ|
12098014c ನ ತತೋಽಸ್ತಿ ತಪೋ ಭೂಯ ಇತಿ ಧರ್ಮವಿದೋ ವಿದುಃ||

ಯುದ್ಧದಲ್ಲಿ ಗಾಯಗೊಂಡು ಗಾಯಗಳಿಂದುಂಟಾದ ದುಃಖವನ್ನು ಎಷ್ಟು ಅವನು ಸಹಿಸಿಕೊಳ್ಳುತ್ತಾನೋ ಅಷ್ಟೇ ಪ್ರಮಾಣದ ತಪಸ್ಸನ್ನು ಅವನು ಮಾಡಿದಂತಾಗುತ್ತದೆ ಎಂದು ಧರ್ಮವಿದುಗಳು ತಿಳಿದಿದ್ದಾರೆ.

12098015a ಪೃಷ್ಠತೋ ಭೀರವಃ ಸಂಖ್ಯೇ ವರ್ತಂತೇಽಧಮಪೂರುಷಾಃ|
12098015c ಶೂರಾಚ್ಚರಣಮಿಚ್ಚಂತಃ ಪರ್ಜನ್ಯಾದಿವ ಜೀವನಮ್||

ಪರ್ಜನ್ಯದಿಂದ ಜೀವನವನ್ನು ಹೇಗೋ ಹಾಗೆ ರಣಹೇಡಿಗಳಾದ ಅಧಮಪುರುಷರು ಯುದ್ಧದಲ್ಲಿ ಶೂರರ ರಕ್ಷಣೆಯನ್ನು ಬಯಸಿ ಅವರ ಹಿಂದೆಯೇ ಇರುತ್ತಾರೆ.

12098016a ಯದಿ ಶೂರಸ್ತಥಾ ಕ್ಷೇಮೇ ಪ್ರತಿರಕ್ಷೇತ್ತಥಾ ಭಯೇ|
12098016c ಪ್ರತಿರೂಪಂ ಜನಾಃ ಕುರ್ಯುರ್ನ ಚ ತದ್ವರ್ತತೇ ತಥಾ||

ಅಂಥಹ ಭಯದ ಸನ್ನಿವೇಶದಲ್ಲಿಯೂ ಶೂರನಾದವನು ಹಿಂಬಾಲಿಗರ ಕ್ಷೇಮವನ್ನು ಬಯಸಿ ಅವರನ್ನು ಯುದ್ಧಾಭಿಮುಖರನ್ನಾಗಿ ಮಾಡಬಾರದು. ಹಾಗೆ ಮಾಡುವುದರಿಂದ ಅವನಿಗೆ ಆಶ್ರಿತ ಜನರನ್ನು ರಕ್ಷಣೆಮಾಡಿದ ಪುಣ್ಯವು ಲಭಿಸುತ್ತದೆ.

12098017a ಯದಿ ತೇ ಕೃತಮಾಜ್ಞಾಯ ನಮಸ್ಕುರ್ಯುಃ ಸದ್ಯೈವ ತಮ್।
12098017c ಯುಕ್ತಂ ನ್ಯಾಯ್ಯಂ ಚ ಕುರ್ಯುಸ್ತೇ ನ ಚ ತದ್ವರ್ತತೇ ತಥಾ॥

ಅವನೇನಾದರೂ ಹಾಗೆ ಮಾಡಿದರೆ ಅವನ ಕೃತ್ಯವನ್ನು ಅರ್ಥಮಾಡಿಕೊಂಡು ಅವರು ಸದ್ಯೆವ ಅವನನ್ನು ನಮಸ್ಕರಿಸುತ್ತಾರೆ. ಆ ಸನ್ನಿವೇಶದಲ್ಲಿ ಅವರು ಹಾಗೆ ಮಾಡುವುದು ಯುಕ್ತವೂ ನ್ಯಾಯವೂ ಆಗಿರುತ್ತದೆ. ಇಲ್ಲದಿದ್ದರೆ ಅವರು ತಮ್ಮ ಕರ್ತವ್ಯವನ್ನು ಮಾಡಿದಂತೆ ಆಗುವುದಿಲ್ಲ.

12098018a ಪುರುಷಾಣಾಂ ಸಮಾನಾನಾಂ ದೃಶ್ಯತೇ ಮಹದಂತರಮ್।
12098018c ಸಂಗ್ರಾಮೇಽನೀಕವೇಲಾಯಾಮುತ್ಕ್ರಷ್ಟೇಽಭಿಪತತ್ಸು ಚ॥

ಎಲ್ಲ ವೀರಪುರುಷರೂ ನೋಡಲು ಒಂದೇ ಸಮನಾಗಿ ತೋರುತ್ತಾರೆ. ಆದರೆ ಸಂಗ್ರಾಮದಲ್ಲಿ ಸೇನೆಗಳ ಅಲೆಗಳು ಮೇಲಿಂದ ಮೇಲೆ ಬೀಳುತ್ತಿರುವಾಗ ಮತ್ತು ಎಲ್ಲ ಕಡೆಗಳಿಂದ ವೀರ ಗರ್ಜನೆಗಳು ಕೇಳಿ ಬರುತ್ತಿರುವಾಗ ಅವರಲ್ಲಿರುವ ವಿಶೇಷ ವ್ಯತ್ಯಾಸಗಳು ಕಂಡುಬರುತ್ತವೆ.

12098019a ಪತತ್ಯಭಿಮುಖಃ ಶೂರಃ ಪರಾನ್ ಭೀರುಃ ಪಲಾಯತೇ।
12098019c ಆಸ್ಥಾಯಾಸ್ವರ್ಗ್ಯಮಧ್ವಾನಂ ಸಹಾಯಾನ್ವಿಷಮೇ ತ್ಯಜನ್॥

ಶೂರನಾದವನು ಶತ್ರುಗಳನ್ನು ಎದುರಿಸಿ ಮುನ್ನುಗ್ಗುತ್ತಾನೆ. ಹೇಡಿಯು ಪಲಾಯನ ಮಾಡುತ್ತಾನೆ. ಅವನು ಸ್ವರ್ಗಮಾರ್ಗದಲ್ಲಿದ್ದರೂ ವಿಷಮ ಪರಿಸ್ಥಿತಿಯಲ್ಲಿರುವ ಸಹಾಯಕರನ್ನೂ ತೊರೆದು ಓಡಿ ಹೋಗುತ್ತಾನೆ.

12098020a ಮಾ ಸ್ಮ ತಾಂಸ್ತಾದೃಶಾಂಸ್ತಾತ ಜನಿಷ್ಠಾಃ ಪುರುಷಾಧಮಾನ್।
12098020c ಯೇ ಸಹಾಯಾನ್ರಣೇ ಹಿತ್ವಾ ಸ್ವಸ್ತಿಮಂತೋ ಗೃಹಾನ್ಯಯುಃ॥

ಅಯ್ಯಾ! ಹೀಗೆ ಸಹಾಯಕರನ್ನು ರಣದಲ್ಲಿಯೇ ಬಿಟ್ಟು ತಾನು
ಕುಶಲಿಯಾಗಿ ಮನೆಗೆ ಹಿಂದಿರುವಂತಹ ಪುರುಷಾಧಮ ಜನರನ್ನು
ನೀನು ಪಡೆದುಕೊಳ್ಳಬೇಡ.

12098021a ಅಸ್ವಸ್ತಿ ತೇಭ್ಯಃ ಕುರ್ವಂತಿ ದೇವಾ ಇಂದ್ರಪುರೋಗಮಾಃ|
12098021c ತ್ಯಾಗೇನ ಯಃ ಸಹಾಯಾನಾಂ ಸ್ವಾನ್ ಪ್ರಾಣಾಂಸ್ತ್ರಾತುಮಿಚ್ಚತಿ||
12098022a ತಂ ಹನ್ಯುಃ ಕಾಷ್ಠಲೋಷ್ಟ್ರೈರ್ವಾ ದಹೇಯುರ್ವಾ ಕಟಾಗ್ನಿನಾ|
12098022c ಪಶುವನ್ಮಾರಯೇಯುರ್ವಾ ಕ್ಷತ್ರಿಯಾ ಯೇ ಸ್ಯುರೀದೃಶಾಃ||

ಅವರಿಗೆ ಇಂದ್ರನೇ ಮೊದಲಾದ ದೇವತೆಗಳು
ಅಮಂಗಳವನ್ನುಂಟುಮಾಡುತ್ತಾರೆ. ಸಹಾಯಕರನ್ನು ತ್ಯಾಗಮಾಡಿ ತನ್ನ
ಪ್ರಾಣವನ್ನು ರಕ್ಷಿಸಿಕೊಳ್ಳಲು ಬಯಸುವವನನ್ನು ವೀರ ಕ್ಷತ್ರಿಯರು
ದೊಣ್ಣೆಗಳಿಂದ ಬಡಿದು ಅಥವಾ ಮಣ್ಣುಹೆಂಟೆಗಳಿಂದ ಹೊಡೆದು,
ಅಥವಾ ಹುಲ್ಲುಮೆದೆಯೊಂದಿಗೆ ಸುತ್ತಿ ಸುಟ್ಟು ಅಥವಾ ಪಶುವಿನಂತೆ
ಹೊಡೆದು ಕೊಲ್ಲುತ್ತಾರೆ.

12098023a ಅಧರ್ಮಃ ಕ್ಷತ್ರಿಯಸ್ಯೈಷ ಯಚ್ಚಯ್ಯಾಮರಣಂ ಭವೇತ್|
12098023c ವಿಸೃಜನ್ ಶ್ಲೇಷ್ಮಪಿತ್ತಾನಿ ಕೃಪಣಂ ಪರಿದೇವಯನ್||
12098024a ಅವಿಕ್ಷತೇನ ದೇಹೇನ ಪ್ರಲಯಂ ಯೋಽಧಿಗಚ್ಚತಿ|
12098024c ಕ್ಷತ್ರಿಯೋ ನಾಸ್ಯ ತತ್ಕರ್ಮ ಪ್ರಶಂಸಂತಿ ಪುರಾವಿದಃ||

ಹಾಸಿಗೆಯ ಮೇಲೆ ಮಲಗಿರುವಾಗ ಮರಣವಾದರೆ ಅದು ಕ್ಷತ್ರಿಯನಿಗೆ
ಅಧರ್ಮವೆನಿಸುತ್ತದೆ. ಕಫ-ಮಲ-ಮೂತ್ರ ವಿಸರ್ಜನೆ ಮಾಡುತ್ತಾ
ದೀನನಾಗಿ ನರಳುತ್ತಾ ಗಾಯವಾಗದೇ ಇರುವ ದೇಹದಿಂದ
ಕೂಡಿದವನಾಗಿ ಮೃತ್ಯುವಶನಾಗುವ ಕ್ಷತ್ರಿಯನ ಕರ್ಮವನ್ನು

ಪುರಾಣವನ್ನು ತಿಳಿದವರು ಪ್ರಶಂಸಿಸುವುದಿಲ್ಲ.

12098025a ನ ಗೃಹೇ ಮರಣಂ ತಾತ ಕ್ಷತ್ರಿಯಾಣಾಂ ಪ್ರಶಸ್ಯತೇ|
12098025c ಶೌಟೀರಾಣಾಮಶೌಟೀರಮಧರ್ಮ್ಯಂ ಕೃಪಣಂ ಚ ತತ್||

ಅಯ್ಯಾ! ಮನೆಯಲ್ಲಿ ಮರಣಹೊಂದುವುದು ಕ್ಷತ್ರಿಯರಿಗೆ ಪ್ರಶಂಸನೀಯವಲ್ಲ. ವೀರ ಪುರುಷನಿಗೆ ಇಂತರ ಹೇಡಿತನ ಮತ್ತು ದೈನ್ಯಭಾವವು ಅಧರ್ಮವೇ ಆಗುತ್ತದೆ.

12098026a ಇದಂ ದುಃಖಿಮಹೋ ಕಷ್ಟಂ ಪಾಪೀಯ ಇತಿ ನಿಷ್ಟನನ್|
12098026c ಪ್ರತಿಧ್ವಸ್ತಮುಖಿಃ ಪೂತಿರಮಾತ್ಯಾನ್ ಬಹು ಶೋಚಯನ್||
12098027a ಅರೋಗಾಣಾಂ ಸ್ಪೃಹಯತೇ ಮುಹುರ್ಮೃತ್ಯುಮಪೀಚ್ಚತಿ|
12098027c ವೀರೋ ದೃಷ್ಟೋಽಭಿಮಾನೀ ಚ ನೇದೃಶಂ ಮೃತ್ಯುಮರ್ಹತಿ||

“ಅಯ್ಯೋ! ದುಃಖಿವೇ! ಕಷ್ಟವೇ! ಪಾಪದ ಫಲವೇ!” ಹೀಗೆ ಮುಖವನ್ನು ವಿಕಾರಮಾಡಿಕೊಂಡು ಆರ್ತನಾದಮಾಡುವುದು, ದುರ್ಗಂಧಿತ ಶರೀರದಿಂದ ಅಮಾತ್ಯರೊಂದಿಗೆ ಶೋಕಪಡುವುದು, ಆರೋಗ್ಯವಂತರನ್ನು ನೋಡಿ ಹಲುಬುವುದು, ಮೃತ್ಯುವು ಬರಲಿ ಎಂದು ಕೂಗಿಕೊಳ್ಳುವುದು – ಹೀಗೆ ದಾರುಣ ಮರಣವನ್ನು ಪಡೆಯುವುದು ವೀರನಾದ ಆತ್ಮಾಭಿಮಾನಿ ಕ್ಷತ್ರಿಯನಿಗೆ ಯೋಗ್ಯವಲ್ಲ.

12098028a ರಣೇಷು ಕದನಂ ಕೃತ್ವಾ ಜ್ಞಾತಿಭಿಃ ಪರಿವಾರಿತಃ|
12098028c ತೀಕ್ಷ್ಣೈಃ ಶಸ್ತ್ರೈಃ ಸುವಿಕ್ಲಿಷ್ಟಃ ಕ್ಷತ್ರಿಯೋ ಮೃತ್ಯುಮರ್ಹತಿ||

ರಣದಲ್ಲಿ ಕದನವನ್ನಾಡಿ ಜ್ಞಾತಿಬಾಂಧವರಿಂದ ಸುತ್ತುವರೆಯಲ್ಪಟ್ಟು ತೀಕ್ಷ್ಣ ಶಸ್ತ್ರಗಳಿಂದ ಅತ್ಯಂತ ಪೀಡಿತನಾಗಿ ಮೃತ್ಯುವನ್ನಪ್ಪುವುದು ಕ್ಷತ್ರಿಯನಿಗೆ ಅರ್ಹವಾದುದು.

12098029a ಶೂರೋ ಹಿ ಸತ್ಯಮನ್ಯು[270]ಭ್ಯಾಮಾವಿಷ್ಟೋ ಯುಧ್ಯತೇ ಭೃಶಮ್|
12098029c ಕೃತ್ಯಮಾನಾನಿ ಗಾತ್ರಾಣಿ ಪರ್ಯೈರ್ಯವಾವಬುಧ್ಯತೇ||

ಶೂರನಾದವನು ಸತ್ಯ ಮತ್ತು ರೋಷಗಳಿಂದ ಆವಿಷ್ಟನಾಗಿ ಜೋರಾಗಿ ಯುದ್ಧಮಾಡುತ್ತಾನೆ. ಅವನ ಶರೀರವು ಗಾಯಗೊಂಡಿದ್ದರೂ ಅದರ ಅರಿವೇ ಇಲ್ಲದಂತೆ ಶತ್ರುವಿನೊಂದಿಗೆ ಹೋರಾಡುತ್ತಾನೆ.

12098030a ಸ ಸಂಖ್ಯೇ ನಿಧನಂ ಪ್ರಾಪ್ಯ ಪ್ರಶಸ್ತಂ ಲೋಕಪೂಜಿತಮ್|
12098030c ಸ್ವಧರ್ಮಂ ವಿಪುಲಂ ಪ್ರಾಪ್ಯ ಶಕ್ರಸ್ಯೈತಿ ಸಲೋಕತಾಮ್||

ರಣದಲ್ಲಿ ಅವನು ಪ್ರಶಸ್ತವಾದ ಮತ್ತು ಲೋಕಪೂಜಿತವಾದ ನಿಧನವನ್ನು ಹೊಂದಿ, ವಿಪುಲ ಸ್ವಧರ್ಮವನ್ನು ಪಡೆದುಕೊಂಡು ಸಕ್ರನೊಡಲೇ ಸಾಲೋಕ್ಯವನ್ನು ಪಡೆಯುತ್ತಾನೆ.

12098031a ಸರ್ವೋ ಯೋಧಃ ಪರಂ ತ್ಯಕ್ತುಮಾವಿಷ್ಟಸ್ತ್ಯಕ್ತಜೀವಿತಃ[271]|
12098031c ಪ್ರಾಪ್ನೋತೀಂದ್ರಸ್ಯ ಸಾಲೋಕ್ಯಂ ಶೂರಃ ಪೃಷ್ಠಮದರ್ಶಯನ್[272]||

ತನ್ನ ಪ್ರಾಣದ ಮೇಲಿನ ಹಂಗನ್ನೇ ತೊರೆದು ಶತ್ರುವಿಗೆ ತನ್ನ ಬೆನ್ನು ತೋರಿಸದೇ ಯುದ್ಧಮಾಡಿ ಮಡಿದವನು ಇಂದ್ರನ ಲೋಕವನ್ನೇ ಪಡೆಯುತ್ತಾನೆ.”

---

270 ಕಾಮಮನ್ಯು ಎಂಬ ಪಾಠಾಂತರವಿದೆ (ಭಾರತ ದರ್ಶನ).

271 ಸರ್ವೋಪಾಯೈ ರಣಮುಖಮಾತಿಷ್ಠಂಸ್ತ್ಯಕ್ತಜೀವಿತಃ| (ಭಾರತ ದರ್ಶನ/ಗೀತಾ ಪ್ರೆಸ್).

272 ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ: ಯತ್ರ ಯತ್ರ ಹತಃ ಶೂರಃ ಶತ್ರುಭಿಃ ಪರಿವಾರಿತಃ| ಅಕ್ಷಯಾನ್ಲಭತೇ ಲೋಕಾನ್ಯದಿ ದೈನ್ಯಂ ನ ಸೇವತೇ|| (ಭಾರತ ದರ್ಶನ/ಗೀತಾ ಪ್ರೆಸ್).

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಅಷ್ಟನವತಿತಮೋಽಧ್ಯಾಯಃ॥
ಇದು ಶ್ರೀ ಮಹಾಭಾರತ ಶಾಂತಿ ಪರ್ವದ ರಾಜಧರ್ಮ ಪರ್ವದಲ್ಲಿ ತೊಂಭತ್ತೆಂಟನೇ ಅಧ್ಯಾಯವು.

೯೯

ಇಂದ್ರಾಂಬರೀಷ ಸಂವಾದ

ಸಮರದಲ್ಲಿ ನಿಧನಹೊಂದುವ ಶೂರರಿಗೆ ದೊರೆಯುವ ಲೋಕಗಳ ವರ್ಣನೆ (1-50).

12099001 ಯುಧಿಷ್ಠಿರ ಉವಾಚ|
12099001a ಕೇ ಲೋಕಾ ಯುಧ್ಯಮಾನಾನಾಂ ಶೂರಾಣಾಮನಿವರ್ತಿನಾಮ್|
12099001c ಭವಂತಿ ನಿಧನಂ ಪ್ರಾಪ್ಯ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಯುದ್ಧಮಾಡಿ ರಣದಿಂದ ಪಲಾಯನ ಮಾಡದೇ ನಿಧನವನ್ನು ಹೊಂದುವ ಶೂರರಿಗೆ ಯಾವ ಲೋಕಗಳು ದೊರೆಯುತ್ತವೆ ಎನ್ನುವುದನ್ನು ಹೇಳು."

12099002 ಭೀಷ್ಮ ಉವಾಚ|
12099002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12099002c ಅಂಬರೀಷಸ್ಯ ಸಂವಾದಮಿಂದ್ರಸ್ಯ ಚ ಯುಧಿಷ್ಠಿರ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಅಂಬರೀಷ-ಇಂದ್ರರ ಸಂವಾದವನ್ನು ಉದಾಹರಿಸುತ್ತಾರೆ.

12099003a ಅಂಬರೀಷೋ ಹಿ ನಾಭಾಗಃ ಸ್ವರ್ಗಂ ಗತ್ವಾ ಸುದುರ್ಲಭಮ್|
12099003c ದದರ್ಶ ಸುರಲೋಕಸ್ಥಂ ಶಕ್ರೇಣ ಸಚಿವಂ ಸಹ||

ನಾಭಾಗ ಅಂಬರೀಷನು ಸುದುರ್ಲಭವಾದ ಸ್ವರ್ಗಕ್ಕೆ ಹೋಗಿ ಅಲ್ಲಿ ಶಕ್ರನೊಂದಿಗೆ ಸುರಲೋಕಸ್ಥನಾಗಿದ್ದ ತನ್ನ ಸಚಿವನನ್ನು ಕಂಡನು.

12099004a ಸರ್ವತೇಜೋಮಯಂ ದಿವ್ಯಂ ವಿಮಾನವರಮಾಸ್ಥಿತಮ್|
12099004c ಉಪರ್ಯುಪರಿ ಗಚ್ಚಂತಂ ಸ್ವಂ ವೈ ಸೇನಾಪತಿಂ ಪ್ರಭುಮ್||
12099005a ಸ ದೃಷ್ಟ್ವೋಪರಿ ಗಚ್ಚಂತಂ ಸೇನಾಪತಿಮುದಾರಧೀಃ|
12099005c ಋದ್ಧಿಂ ದೃಷ್ಟ್ವಾ ಸುದೇವಸ್ಯ ವಿಸ್ಮಿತಃ ಪ್ರಾಹ ವಾಸವಮ್||

ಸರ್ವತೇಜೋಮಯವಾದ ದಿವ್ಯ ವಿಮಾನದಲ್ಲಿ ಕುಳಿತಿದ್ದ ಮತ್ತು ಮೇಲೆ ಮೇಲೆ ಹೋಗುತ್ತಿದ್ದ, ತನಗಿಂತಲೂ ಮೇಲೆ ಹೋಗುತ್ತಿದ್ದ ತನ್ನ ಪ್ರಭು ಸೇನಾಪತಿ ಸುದೇವನ ವೃದ್ಧಿಯನ್ನು ನೋಡಿ ವಿಸ್ಮಿತನಾದ ಉದಾರಧೀ ಅಂಬರೀಷನು ಇಂದ್ರನಿಗೆ ಹೇಳಿದನು.

12099006a ಸಾಗರಾಂತಾಂ ಮಹೀಂ ಕೃತ್ಸ್ನಾಮನುಶಿಷ್ಯ ಯಥಾವಿಧಿ|
12099006c ಚಾತುರ್ವರ್ಣ್ಯೇ ಯಥಾಶಾಸ್ತ್ರಂ ಪ್ರವೃತ್ತೋ ಧರ್ಮಕಾಮ್ಯಯಾ||

“ವಾಸವ! ನಾನು ಸಾಗರಾಂತೆ ಮಹಿಯನ್ನು ಸಂಪೂರ್ಣವಾಗಿ ಯಥಾವಿಧಿಯಾಗಿ ಆಳಿ ಯಥಾಶಾಸ್ತ್ರವಾಗಿ ಧರ್ಮದ ಕಾಮನೆಯಿಂದ ನಾಲ್ಕು ವರ್ಣದವರನ್ನೂ ಪರಿಪಾಲಿಸುವುದರಲ್ಲಿ ತತ್ಪರನಾಗಿದ್ದೆನು.

12099007a ಬ್ರಹ್ಮಚರ್ಯೇಣ ಘೋರೇಣ ಆಚಾರ್ಯಕುಲಸೇವಯಾ|
12099007c ವೇದಾನಧೀತ್ಯ ಧರ್ಮೇಣ ರಾಜಶಾಸ್ತ್ರಂ ಚ ಕೇವಲಮ್||

ಘೋರ ಬ್ರಹ್ಮಚರ್ಯದಿಂದ ಆಚಾರ್ಯಕುಲದ ಸೇವೆಗೈದು

ಧರ್ಮಪೂರ್ವಕವಾಗಿಯೇ ವೇದಗಳು ಮತ್ತು ವಿಶೇಷವಾಗಿ
ರಾಜಶಾಸ್ತ್ರವನ್ನು ಪಡೆದುಕೊಂಡಿದ್ದೇನೆ.

12099008a ಅತಿಥೀನನ್ನಪಾನೇನ ಪಿತೄಂಶ್ಚ ಸ್ವಧಯಾ ತಥಾ|
12099008c ಋಷೀನ್ ಸ್ವಾಧ್ಯಾಯದೀಕ್ಷಾಭಿರ್ದೇವಾನ್ಯಜ್ಞೈರನುತ್ತಮೈಃ||

ಅತಿಥಿಗಳನ್ನು ಅನ್ನಪಾನಗಳಿಂದಲೂ, ಪಿತೃಗಳನ್ನು ಸ್ವಧೆಯ
ಮೂಲಕವೂ, ಸ್ವಾಧ್ಯಾಯದೀಕ್ಷೆಗಳಿಂದ ಋಷಿಗಳನ್ನೂ, ಮತ್ತು
ಅನುತ್ತಮ ಯಜ್ಞಗಳಿಂದ ದೇವತೆಗಳನ್ನು ತೃಪ್ತಿಪಡಿಸಿದ್ದೇನೆ.

12099009a ಕ್ಷತ್ರಧರ್ಮೇ ಸ್ಥಿತೋ ಭೂತ್ವಾ ಯಥಾಶಾಸ್ತ್ರಂ ಯಥಾವಿಧಿ|
12099009c ಉದೀಕ್ಷಮಾಣಃ ಪೃತನಾಂ ಜಯಾಮಿ ಯುಧಿ ವಾಸವ||

ವಾಸವ! ಯಥಾಶಾಸ್ತ್ರವಾಗಿ ಮತ್ತು ಯಥಾವಿಧಿಯಾಗಿ
ಕ್ಷತ್ರಧರ್ಮದಲ್ಲಿಯೇ ಸ್ಥಿತನಾಗಿದ್ದುಕೊಂಡು ಚತುರಂಗ ಸೇನೆಗಳನ್ನೂ
ನಿಲ್ಲಿಸಿ ಯುದ್ಧದಲ್ಲಿ ಶತ್ರುಗಳನ್ನು ಜಯಿಸಿದ್ದೇನೆ.

12099010a ದೇವರಾಜ ಸುದೇವೋಽಯಂ ಮಮ ಸೇನಾಪತಿಃ ಪುರಾ|
12099010c ಆಸೀದ್ಯೋಧಃ ಪ್ರಶಾಂತಾತ್ಮಾ ಸೋಽಯಂ ಕಸ್ಮಾದತೀವ ಮಾಮ್||

ದೇವರಾಜ! ಈ ಸುದೇವನು ಹಿಂದೆ ನನ್ನ ಸೇನಾಪತಿಯಾಗಿದ್ದನು.
ಯೋಧನೂ ಪ್ರಶಾಂತಾತ್ಮನೂ ಆಗಿದ್ದನು. ಅವನು ಹೇಗೆ ನನ್ನನ್ನು
ಮೀರಿಸಿದ್ದಾನೆ?

12099011a ನಾನೇನ ಕ್ರತುಭಿರ್ಮುಖ್ಯೈರಿಷ್ಟಂ ನ್ಯೈವ ದ್ವಿಜಾತಯಃ|
12099011c ತರ್ಪಿತಾ ವಿಧಿವಚ್ಚಕ್ರ ಸೋಽಯಂ ಕಸ್ಮಾದತೀವ ಮಾಮ್||

ಅವನಾದರೋ ಮುಖ್ಯ ಯಜ್ಞಗಳಿಂದ ದೇವತೆಗಳನ್ನು

ಆರಾಧಿಸಿರುವುದಿಲ್ಲ. ಬಹುದಕ್ಷಿಣೆಗಳಿಂದ ಬ್ರಾಹ್ಮಣರನ್ನೂ ವಿಧಿವತ್ತಾಗಿ ತೃಪ್ತಿಪಡಿಸಿರುವುದಿಲ್ಲ. ಅಂಥವನು ನನಗಿಂತಲೂ ಮುಂದೆ ಮುಂದೆ ಪುಣ್ಯಲೋಕಗಳಿಗೆ ಹೋಗುತ್ತಿದ್ದಾನೆ. ಇದಕ್ಕೆ ಕಾರಣವೇನು?"

[273]12099012 ಇಂದ್ರ ಉವಾಚ|

---

[273] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ 23 ಅಧಿಕ ಶ್ಲೋಕಗಳಿವೆ: ಐಶ್ವರ್ಯಮೀದೃಶಂ ಪ್ರಾಪ್ತಃ ಸರ್ವದೇವ್ಯೈಃ ಸುದರ್ಲಭಮ್| ಶಕ್ರ ಉವಾಚ| ಯದನೇನ ಕೃತಂ ಕರ್ಮ ಪ್ರತ್ಯಕ್ಷಂ ತೇ ಮಹೀಪತೇ| ಪುರಾ ಪಾಲಯತಃ ಸಮ್ಯಕ್ ಪೃಥಿವೀಂ ಧರ್ಮತೋ ನೃಪ|| ಶತ್ರವೋ ನಿರ್ಜಿತಾಃ ಸರ್ವೇ ಯೇ ತವಾಹಿತಕಾರಿಣಃ| ಸಂಯಮೋ ವಿಯಮಶ್ಚೈವ ಸುಯಮಶ್ಚ ಮಹಾಬಲಃ|| ರಾಕ್ಷಸಾ ದುರ್ಜಯಾ ಲೋಕೇ ತ್ರಯಸ್ತೇ ಯುದ್ಧದುರ್ಮದಾಃ| ಪುತ್ರಾಸ್ತೇ ಶತಶೃಂಗಸ್ಯ ರಾಕ್ಷಸಸ್ಯ ಮಹೀಪತೇ|| ಅಥ ತಸ್ಮಿನ್ ಶುಭೇ ಕಾಲೇ ತವ ಯಜ್ಞಂ ವಿತನ್ವತಃ| ಅಶ್ವಮೇಧಂ ಮಹಾಯಾಗಂ ದೇವಾನಾಂ ಹಿತಕಾಮ್ಯಯಾ|| ತಸ್ಯ ತೇ ಖಲು ವಿಘ್ನಾರ್ಥಂ ಆಗತಾ ರಾಕ್ಷಸಾಸ್ತ್ರಯಃ| ಕೋಟೀಶತಪರೀವಾರಾಂ ರಾಕ್ಷಸಾನಾಂ ಮಹಾಚಮೂಮ್|| ಪರಿಗೃಹ್ಯ ತತಃ ಸರ್ವಾಃ ಪ್ರಜಾ ಬಂದೀಕೃತಾಸ್ತವ| ವಿಹ್ವಲಾಶ್ಚ ಪ್ರಜಾಃ ಸರ್ವಾಃ ಚ ತವ ಸೈನಿಕಾಃ| ನಿರಾಕೃತಸ್ತ್ವಯಾ ಚಾಸೀತ್ಸುದೇವಃ ಸೈನ್ಯನಾಯಕಃ| ತತ್ರಾಮಾತ್ಯವಚಃ ಶ್ರುತ್ವಾ ನಿರಸ್ತಃ ಸರ್ವಕರ್ಮಸು|| ಶ್ರುತ್ವಾ ತೇಷಾಂ ವಚೋ ಭೂಯಃ ಸೋಪಧಂ ವಸುಧಾಧಿಪ| ಸರ್ವಸೈನ್ಯಸಮಾಯುಕ್ತಃ ಸುದೇವಃ ಪ್ರೇರಿತಸ್ತ್ವಯಾ|| ರಾಕ್ಷಸಾನಾಂ ವಧಾರ್ಥಾಯ ದುರ್ಜಯಾನಾಂ ನರಾಧಿಪ| ನಾಜಿತ್ವಾ ರಾಕ್ಷಸೀಂ ಸೇನಾಂ ಪುನರಾಗಮನಂ ತವ|| ಬಂದೀಮೋಕ್ಷಮಕೃತ್ವಾ ಚ ನ ಚಾಗಮನಮಿಷ್ಯತೇ| ಸುದೇವಸ್ತದ್ವಚಃ ಶ್ರುತ್ವಾ ಪ್ರಸ್ಥಾನಮಕರೋನ್ನೃಪ|| ಸಂಪ್ರಾಪ್ತಶ್ಚ ಸ ತಂ ದೇಶಂ ಯತ್ರ ಬಂದೀಕೃತಾಃ ಪ್ರಜಾಃ| ಪಶ್ಯತಿ ಸ್ಮ ಮಹಾಘೋರಂ ರಾಕ್ಷಸಾನಾಂ ಮಹಾಚಮೂಮ್|| ದೃಷ್ಟ್ವಾ

ಸಂಚಿಂತಯಾಮಾಸ ಸುದೇವೋ ವಾಹಿನೀಪತಿಃ| ನೇಯಂ ಶಕ್ಯಾ
ಚಮೂರ್ಜೇತುಮಪಿ ಸೇಂದ್ರೈಃ ಸುರಾಸುರೈಃ|| ನಾಂಬರೀಷಃ
ಕಲಾಮೇಕಾಮೇಷಾಂ ಕ್ಷಪಯಿತುಂ ಕ್ಷಮಃ| ದಿವ್ಯಾಸ್ತ್ರಬಲಭೂಯಿಷ್ಠಃ ಕಿಮಹಂ
ಪುನರೀದೃಶಃ|| ತತಃ ಸೇನಾಂ ಪುನಃ ಸರ್ವಾಂ ಪ್ರೇಷಯಾಮಾಸ ಪಾರ್ಥಿವ|
ಯತ್ರ ತ್ವಂ ಸಹಿತಃ ಸರ್ವೈರ್ಮಂತ್ರಿಭಿಃ ಸೋಪಧೈರ್ನೃಪ|| ತತೋ ರುದ್ರಂ
ಮಹಾದೇವಂ ಪ್ರಪನ್ನೋ ಜಗತಃ ಪತಿಮ್| ಶ್ಮಶಾನನಿಲಯಂ ದೇವಂ
ತುಷ್ಟಾವ ವೃಷಭಧ್ವಜಮ್|| ಸ್ತುತ್ವಾ ಶಸ್ತ್ರಂ ಸಮಾದಾಯ
ಸ್ವಶಿರಶ್ಛೇತ್ತುಮುದ್ಯತಃ| ಕಾರುಣ್ಯಾದ್ದೇವದೇವೇನ ಗೃಹೀತಸ್ತಸ್ಯ ದಕ್ಷಿಣಃ||
ಸಪಾಣಿಃ ಸಹ ಶಸ್ತ್ರೇಣ ದೃಷ್ಟ್ವಾ ಚೇದಮುವಾಚ ಹ| ರುದ್ರ ಉವಾಚ|
ಕಿಮಿದಂ ಸಾಹಸಂ ಪುತ್ರ ಕರ್ತುಕಾಮೋ ವದಸ್ವ ಮೇ| ಇಂದ್ರ ಉವಾಚ| ಸ
ಉವಾಚ ಮಹಾದೇವಂ ಶಿರಸಾ ತ್ವವನೀಂ ಗತಃ|| ಭಗವನ್ಮಾಹಿನೀಮೇನಾಂ
ರಾಕ್ಷಸಾನಾಂ ಸುರೇಶ್ವರ| ಅಶಕ್ತೋಽಹಂ ರಣೇ ಜೇತುಂ ತಸ್ಮಾತ್ ತ್ಯಕ್ಷ್ಯಾಮಿ
ಜೀವಿತಮ್|| ಗತಿರ್ಭವ ಮಹಾದೇವ ಮಮಾರ್ತಸ್ಯ ಜಗತ್ಪತೇ|
ನಾಗಂತವ್ಯಮಜಿತ್ವಾ ಚ ಮಾಮಾಹ ಜಗತೀಪತಿಃ|| ಅಂಬರೀಷೋ
ಮಹಾದೇವ ಕ್ಷರಿತಃ ಸಚಿವೈಃ ಸಹ| ತಮುವಾಚ ಮಹಾದೇವಃ ಸುದೇವಂ
ಪತಿತಂ ಕ್ಷಿತೌ| ಅಧೋಮುಖಂ ಮಹಾತ್ಮಾನಂ ಸತ್ತ್ವಾನಾಂ ಹಿತಕಾಮ್ಯಯಾ||
ಧನುರ್ವೇದಂ ಸಮಾಹೂಯ ಸಗುಣಂ ಸಹವಿಗ್ರಹಮ್| ರಥನಾಗಾಶ್ವಕಲಿಲಂ
ದಿವ್ಯಾಸ್ತ್ರಸಮಲಂಕೃತಮ್|| ರಥಂ ಚ ಸುಮಹಾಭಾಗಂ ಯೇತ ತತ್ತ್ರಿಪುರಂ
ಹತಮ್| ಧನುಃ ಪಿನಾಕಂ ಖಡ್ಗಂ ಚ ರೌದ್ರಮಸ್ತ್ರಂ ಚ ಶಂಕರಃ||
ನಿಜಘಾನಾಸುರಾನ್ಸರ್ವಾನ್ಯೇನ ದೇವಸ್ತ್ರಯಂಬಕಃ| ಉವಾಚ ಚ
ಮಹಾದೇವಃ ಸುದೇವಂ ವಾಹಿನೀಪತಿಮ್|| ರುದ್ರ ಉವಾಚ|
ರಥಾದಸ್ಮಾತ್ಸುದೇವ ತ್ವಂ ದುರ್ಜಯಸ್ತು ಸುರಾಸುರೈಃ| ಮಾಯಯಾ
ಮಹಿತೋ ಭೂಮೌ ನ ಪದಂ ಕರ್ತುಮರ್ಹಸಿ|| ಅತ್ರಸ್ಥಸ್ತ್ರಿದಶಾನ್ಸರ್ವಾನ್
ಜೈಷ್ಯಸೇ ಸರ್ವದಾನವಾನ್| ರಾಕ್ಷಸಾಶ್ಚ ಪಿಶಾಚಾಶ್ಚ ನ

12099012a ಏತಸ್ಯ ವಿತತಸ್ಯಾತ ಸುದೇವಸ್ಯ ಬಭೂವ ಹ|
12099012c ಸಂಗ್ರಾಮಯಜ್ಞಃ ಸುಮಹಾನ್ಯಶ್ಚಾನ್ಯೋ ಯುಧ್ಯತೇ ನರಃ||

ಇಂದ್ರನು ಹೇಳಿದನು: "ಅಯ್ಯಾ! ಈ ಸುದೇವನು ಅತ್ಯಂತ ವಿಸ್ತಾರವಾದ ರಣಯಜ್ಞವನ್ನು ಮಾಡಿ ಮುಗಿಸಿದ್ದಾನೆ. ಬೇರೆ ಯಾವ ಮನುಷ್ಯನು ಯುದ್ಧಮಾಡಿದರೂ ಅದು ಮಹಾಸಂಗ್ರಾಮಯುದ್ಧವೇ ಆಗುತ್ತದೆ[274].

12099013a ಸಂನದ್ಧೋ ದೀಕ್ಷಿತಃ ಸರ್ವೋ ಯೋಧಃ ಪ್ರಾಪ್ಯ ಚಮೂಮುಖಮ್|
12099013c ಯುದ್ಧಯಜ್ಞಾಧಿಕಾರಸ್ಥೋ ಭವತೀತಿ ವಿನಿಶ್ಚಯಃ||

ಕವಚವನ್ನು ಧರಿಸಿ ಯಜ್ಞದ ದೀಕ್ಷೆಯನ್ನು ಕೈಗೊಂಡು ಶತ್ರುಸೇನೆಯ ಅಗ್ರಭಾಗದಲ್ಲಿ ನಿಲ್ಲುವ ಯೋಧನೂ ಸಂಗ್ರಾಮಯಜ್ಞಕ್ಕೆ ಅಧಿಕಾರಿಯಾಗುವನೆಂಬುದು ನನ್ನ ಅಭಿಪ್ರಾಯವಾಗಿದೆ."

ಶಕ್ತಾದ್ರಷ್ಟುಮೀದೃಶಮ್|| ರಥಂ ಸೂರ್ಯಸಹಸ್ರಾಭಂ ಕಿಮು ಯೋದ್ಧುಂ ತ್ವಯಾ ಸಹ| ಇಂದ್ರ ಉವಾಚ| ಸ ಜಿತ್ವಾ ರಾಕ್ಷಸಾನ್ಸರ್ವಾನ್ ಕೃತ್ವಾಬಂದೀವಿಮೋಕ್ಷಣಮ್| ಘಾತಯಿತ್ವಾ ಚ ತಾನ್ಸರ್ವಾನ್ ಬಾಹುಯುದ್ಧೇತ್ವಯಂ ಹತಃ| ವಿಯಮಂ ಪ್ರಾಪ್ಯ ಭೂಪಾಲ ವಿಯಮಶ್ಚ ನಿಪಾತಿತಃ|| (ಗೀತಾ ಪ್ರೆಸ್).

274 ರಾಜನಿಗೆ ಮಾತ್ರವೇ ಸಂಗ್ರಾಮಯಜ್ಞ ಮಾಡಲು ಅಧಿಕಾವಿದೆ ಎಂಬುದೇನೂ ಇಲ್ಲ. ರಾಜನ ಸೈನ್ಯದಲ್ಲಿರುವ ಒಬ್ಬ ಪದಾತಿಯೂ ಸಂಗ್ರಾಮಯಜ್ಞವನ್ನು ಮಾಡಬಹುದು. ಧರ್ಮಾನುಸಾರವಾಗಿ ಯುದ್ಧಮಾಡುತ್ತಾ ಶತ್ರುವಿಗೆ ಬೆನ್ನುತೋರಿಸದೇ ಕಡೆಯವರೆಗೂ ಯುದ್ಧಮಾಡುತ್ತಿದ್ದು ಅಸುನೀಗುವುದೇ ಸಂಗ್ರಾಮಯಜ್ಞ. ಇದನ್ನು ವೀರರಾದವರೆಲ್ಲರೂ ಆಚರಿಸಬಹುದು (ಭಾರತ ದರ್ಶನ).

12099014 ಅಂಬರೀಷ ಉವಾಚ|

12099014a ಕಾನಿ ಯಜ್ಞೇ ಹವೀಂಷ್ಯತ್ರ ಕಿಮಾಜ್ಯಂ ಕಾ ಚ ದಕ್ಷಿಣಾ|
12099014c ಋತ್ವಿಜಶ್ಚಾತ್ರ ಕೇ ಪ್ರೋಕ್ತಾಸ್ತನ್ಮೇ ಬ್ರೂಹಿ ಶತಕ್ರತೋ||

ಅಂಬರೀಷನು ಹೇಳಿದನು: "ಶತಕ್ರತೋ! ಈ ಯಜ್ಞದ ಹವಿಸ್ಸುಗಳ್ಯಾವುವು? ಆಜ್ಯವು ಯಾವುದು? ದಕ್ಷಿಣೆಯು ಯಾವುದು? ಇದರ ಋತ್ವಿಜರು ಯಾರು? ಅದನ್ನು ನನಗೆ ಹೇಳು."

12099015 ಇಂದ್ರ ಉವಾಚ|

12099015a ಋತ್ವಿಜಃ ಕುಂಜರಾಸ್ತತ್ರ ವಾಜಿನೋಽಧ್ವರ್ಯವಸ್ತಥಾ|
12099015c ಹವೀಂಷಿ ಪರಮಾಂಸಾನಿ ರುಧಿರಂ ತ್ವಾಜ್ಯಮೇವ ಚ||

ಇಂದ್ರನು ಹೇಳಿದನು: "ಸಂಗ್ರಾಮ ಯಜ್ಞದಲ್ಲಿ ಆನೆಗಳೇ ಋತ್ವಿಜರು. ಕುದುರೆಗಳು ಅಧ್ವರ್ಯುಗಳು. ಶತ್ರುಗಳ ಮಾಂಸವೇ ಹವಿಸ್ಸು. ರುಧಿರವೇ ಇದರ ಆಜ್ಯ.

12099016a ಸೃಗಾಲ[275]ಗೃಧ್ರಕಾಕೋಲಾಃ ಸದಸ್ಯಾಸ್ತತ್ರ ಸತ್ರಿಣಃ|
12099016c ಆಜ್ಯಶೇಷಂ ಪಿಬಂತ್ಯೇತೇ ಹವಿಃ ಪ್ರಾಶ್ನಂತಿ ಚಾಧ್ವರೇ||

ಗುಳ್ಳೇನರಿ, ರಣಹದ್ದು, ಕಾಗೆ ಮತ್ತು ಇತರ ಮಾಂಸಾಶೀ ಪಕ್ಷಿಗಳೇ ಈ ಅಧ್ವರದಲ್ಲಿ ಸದಸ್ಯರು. ರಕ್ತರೂಪವಾದ ಆಜ್ಯಶೇಷವನ್ನು ಇವು ಕುಡಿಯುತ್ತವೆ. ಮಾಂಸರೂಪೀ ಹವಿಸ್ಸನ್ನು ತಿನ್ನುತ್ತವೆ.

12099017a ಪ್ರಾಸತೋಮರಸಂಘಾತಾಃ ಖಡ್ಗಶಕ್ತಿಪರಶ್ವಧಾಃ|
12099017c ಜ್ವಲಂತೋ ನಿಶಿತಾಃ ಪೀತಾಃ ಸ್ರುಚಸ್ತಸ್ಯಾಥ ಸತ್ರಿಣಃ||

---

275 ಶೃಗಾಲ (ಭಾರತ ದರ್ಶನ).

ಮೇಲಿಂದ ಮೇಲೆ ಬೀಳುವ ಪ್ರಜ್ವಲಿಸುವಷ್ಟು ಹರಿತವಾದ ಪೀತವರ್ಣದ ಪ್ರಾಸ-ತೋಮರಗಳು, ಖಡ್ಗ-ಶಕ್ತಿ-ಪರಶು ಆಯುಧಗಳು ಯಜ್ಞದೀಕ್ಷಿತನ ಸ್ರಕ್ಕುಗಳು.

12099018a ಚಾಪವೇಗಾಯತಸ್ತೀಕ್ಷ್ಣಃ ಪರಕಾಯಾವದಾರಣಃ|
12099018c ಋಜುಃ ಸುನಿಶಿತಃ ಪೀತಃ ಸಾಯಕೋಽಸ್ಯ ಸ್ರುವೋ ಮಹಾನ್||

ಚಾಪದಿಂದ ಸರಿಯಾಗಿ ಗುರಿಯಿಟ್ಟು ವೇಗವಾಗಿ ಪ್ರಯೋಗಿಸಲ್ಪಟ್ಟ ಪರಕಾಯವನ್ನು ಛೇದಿಸುವ ತೀಕ್ಷ್ಣ ನಿಶಿತ ಪೀತವರ್ಣದ ಸಾಯಕಗಳೇ ಇದರ ಮಹಾನ್ ಸ್ರುವಗಳು.

12099019a ದ್ವೀಪಿಚರ್ಮಾವನದ್ಧಶ್ಚ ನಾಗದಂತಕೃತತ್ಸರುಃ|
12099019c ಹಸ್ತಿಹಸ್ತಗತಃ ಖಡ್ಗಃ ಸ್ಫ್ಯೋ ಭವೇತ್ತಸ್ಯ ಸಂಯುಗೇ||

ವ್ಯಾಘ್ರಚರ್ಮದ ಕೋಶದಿಂದ ಬಂಧಿಸಿದ, ಆನೆಯ ದಂತದ ಹಿಡಿಯ, ಆನೆಯ ಸೊಂಡಿಲನ್ನೂ ಕತ್ತರಿಸಬಲ್ಲ ಖಡ್ಗವೇ ಸಂಯುಗ ಯಜ್ಞದಲ್ಲಿ ಸ್ಫ್ಯ[276].

12099020a ಜ್ವಲಿತೈರ್ನಿಶಿತೈಃ ಪೀತೈಃ ಪ್ರಾಸಶಕ್ತಿಪರಶ್ವಧೈಃ|
12099020c ಶೈಕ್ಷ್ಯಾಯಸಮಯೈಸ್ತೀಕ್ಷ್ಣೈರಭಿಘಾತೋ ಭವೇದ್ಧ್ರುವಃ||

ಒಂದೇ ಸಮನೆ ಬೀಳುವ ಪ್ರಜ್ವಲಿತ ನಿಶಿತ ಪೀತ ತೀಕ್ಷ್ಣ ಪ್ರಾಸ ಶಕ್ತಿ ಪರಶಾಯುಧಗಳೇ ದ್ರವ್ಯಗಳು.

12099021a ಆವೇಗಾದ್ಯತ್ತು ರುಧಿರಂ ಸಂಗ್ರಾಮೇ ಸ್ಯಂದತೇ ಭುವಿ|

---

[276] ಯಜ್ಞದಲ್ಲಿ ಉಪಯೋಗಿಸುವ ಕತ್ತಿಯ ರೂಪದ ಆಯುಧ (ಭಾರತ ದರ್ಶನ).

12099021c ಸಾಸ್ಯ ಪೂರ್ಣಾಹುತಿರ್ಹೋತ್ರೇ ಸಮೃದ್ಧಾ ಸರ್ವಕಾಮಧುಕ್||

ಸಂಗ್ರಾಮ ಭೂಮಿಯ ಮೇಲೆ ಆವೇಗದಿಂದ ಬೀಳುವ ರಕ್ತವೇ ಹೋತೃವಿನ ಸರ್ವಕಾಮಗಳನ್ನೂ ನೀಡಬಲ್ಲ ಈ ಯಜ್ಞದ ಸಮೃದ್ಧ ಪೂರ್ಣಾಹುತಿಯು.

12099022a ಚಿಂಧಿ ಭಿಂಧೀತಿ ಯಸ್ಯೈತಚ್ಛ್ರುಯತೇ ವಾಹಿನೀಮುಖೇ|
12099022c ಸಾಮಾನಿ ಸಾಮಗಾಸ್ತಸ್ಯ ಗಾಯಂತಿ ಯಮಸಾದನೇ||

ವಾಹಿನೀಮುಖದಲ್ಲಿ ಕೇಳಿಬರುವ ಕತ್ತರಿಸು! ಒಡೆದುಹಾಕು! ಎಂಬ ಕೂಗುಗಳೇ ಯಮಸಾದನದಲ್ಲಿ ಸಾಮಗರು ಹಾಡುವ ಸಾಮಗಳು.

12099023a ಹವಿರ್ಧಾನಂ ತು ತಸ್ಯಾಹುಃ ಪರೇಷಾಂ ವಾಹಿನೀಮುಖಮ್|
12099023c ಕುಂಜರಾಣಾಂ ಹಯಾನಾಂ ಚ ವರ್ಮಿಣಾಂ ಚ ಸಮುಚ್ಚಯಃ|
12099023e ಅಗ್ನಿಃ ಶ್ಯೇನಚಿತೋ ನಾಮ ತಸ್ಯ ಯಜ್ಞೇ ವಿಧೀಯತೇ||

ಶತ್ರುಸೇನೆಯ ಮುಂಭಾಗವೇ ಹವಿಸ್ಸನ್ನು ನೀಡುವ ಸ್ಥಳ ಹವಿರ್ಧಾನ ಎಂದು ಹೇಳುತ್ತಾರೆ. ಆನೆಗಳು, ಕುದುರೆಗಳು ಮತ್ತು ಕವಚಧಾರಿಗಳ ಸಮುದಾಯವೇ ಆ ಯಜ್ಞದಲ್ಲಿ ಶ್ಯೇನಚಿತ ಎಂಬ ಹೆಸರಿನ ಅಗ್ನಿ ಎಂದು ತಿಳಿಯಬೇಕು.

12099024a ಉತ್ತಿಷ್ಠತಿ ಕಬಂಧೋಽತ್ರ ಸಹಸ್ರೇ ನಿಹತೇ ತು ಯಃ|
12099024c ಸ ಯೂಪಸ್ತಸ್ಯ ಶೂರಸ್ಯ ಖಾದಿರೋಽಷ್ಟಾಶ್ರಿರುಚ್ಯತೇ||

ಸಹಸ್ರಾರು ಮಂದಿ ಹತರಾಗುತ್ತಿರಲು ಎದ್ದು ನಿಲುವ ಕಬಂಧವೇ ಆ ಶೂರನ ಎಂಟು ಕೋಣಗಳುಳ್ಳ ಕಗ್ಗಲೀ ಮರದ ಯೂಪಗಳು.

12099025a ಇಡೋಪಹೂತಂ ಕ್ರೋಶಂತಿ ಕುಂಜರಾ ಅಂಕುಶೇರಿತಾಃ|

12099025c ವ್ಯಾಘುಷ್ಟತಲನಾದೇನ ವಷಟ್ಕಾರೇಣ ಪಾರ್ಥಿವ|
12099025e ಉದ್ಗಾತಾ ತತ್ರ ಸಂಗ್ರಾಮೇ ತ್ರಿಸಾಮಾ ದುಂದುಭಿಃ ಸ್ಮೃತಃ||

ಅಂಕುಶಗಳಿಂದ ಚುಚ್ಚಲ್ಪಟ್ಟ ಆನೆಗಳ ಆಕ್ರೋಶವೇ ಇಡೋಹ್ವಾನ. ಚಪ್ಪಾಳೆಗಳ ಶಬ್ದವೇ ವಷಟ್ಕಾರ. ಪಾರ್ಥಿವ! ಸಂಗ್ರಾಮದಲ್ಲಿ ಮೊಳಗುವ ದುಂದುಭಿಯೇ ತ್ರಿಸಾಮಗಳ ಉದ್ಗಾತವು.

12099026a ಬ್ರಹ್ಮಸ್ವೇ ಹ್ರಿಯಮಾಣೇ ಯಃ ಪ್ರಿಯಾಂ ಯುದ್ಧೇ ತನುಂ ತ್ಯಜೇತ್|
12099026c ಆತ್ಮಾನಂ ಯೂಪಮುಚ್ಛ್ರಿತ್ಯ ಸ ಯಜ್ಞೋಽನಂತದಕ್ಷಿಣಃ||

ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಯುದ್ಧದಲ್ಲಿ ಪ್ರಿಯ ತನುವನ್ನು ತ್ಯಜಿಸಿದವನು ದೇಹಸ್ವರೂಪವಾದ ಯೂಪವನ್ನು ಉತ್ಸರ್ಜನೆ ಮಾಡುವ ಯಜ್ಞದ ಅನಂತ ದಕ್ಷಿಣೆಯನ್ನು ಇತ್ತವನು.

12099027a ಭರ್ತುರರ್ಥೇ ತು ಯಃ ಶೂರೋ ವಿಕ್ರಮೇದ್ವಾಹಿನೀಮುಖೇ|
12099027c ಭಯಾನ್ನ ಚ ನಿವರ್ತೇತ ತಸ್ಯ ಲೋಕಾ ಯಥಾ ಮಮ||

ಸ್ವಾಮಿಯ ಸಲುವಾಗಿ ವಾಹಿನೀಮುಖದಲ್ಲಿ ವಿಕ್ರಮದಿಂದ ಹೋರಾಡುವ ಮತ್ತು ಭಯದಿಂದ ಪಲಾಯನ ಮಾಡದಿದ್ದ ಶೂರನಿಗೆ ನನಗೆ ದೊರೆತ ಲೋಕಗಳೇ ದೊರೆಯುತ್ತವೆ.

12099028a ನೀಲಚಂದ್ರಾಕೃತೈಃ[277] ಖಡ್ಗೈರ್ಬಾಹುಭಿಃ ಪರಿಘೋಪಮೈಃ|
12099028c ಯಸ್ಯ ವೇದಿರುಪಸ್ತೀರ್ಣಾ ತಸ್ಯ ಲೋಕಾ ಯಥಾ ಮಮ||

ನೀಲಚಂದ್ರಾಕಾರದ ಖಡ್ಗಗಳು ಮತ್ತು ಪರಿಘೋಪಮ ಬಾಹುಗಳಿಂದ

277 ನೀಲಚರ್ಮಾವೃತೈಃ (ಭಾರತ ದರ್ಶನ).

ಯಾರ ಯುದ್ಧವೇದಿಯು ತುಂಬಿಕೊಂಡಿರುವುದೋ ಅವನಿಗೆ ನನಗೆ ದೊರೆತ ಲೋಕಗಳೇ ದೊರೆಯುತ್ತವೆ.

12099029a ಯಸ್ತು ನಾವೇಕ್ಷತೇ ಕಂ ಚಿತ್ಸಹಾಯಂ ವಿಜಯೇ ಸ್ಥಿತಃ|
12099029c ವಿಗಾಹ್ಯ ವಾಹಿನೀಮಧ್ಯಂ ತಸ್ಯ ಲೋಕಾ ಯಥಾ ಮಮ||

ಯಾರ ಸಹಾಯವನ್ನೂ ಅಪೇಕ್ಷಿಸದೇ ಶತ್ರುಸೇನೆಯ ಮಧ್ಯೆ ಹೊಕ್ಕು ವಿಜಯಕ್ಕಾಗಿ ಹೋರಾಡುವವನಿಗೆ ನನಗೆ ದೊರೆತ ಲೋಕಗಳೇ ದೊರೆಯುತ್ತವೆ.

12099030a ಯಸ್ಯ ತೋಮರಸಂಘಾಟಾ[278] ಭೇರೀಮಂಡೂಕಕಚ್ಚಪಾ|
12099030c ವೀರಾಸ್ಥಿಶರ್ಕರಾ ದುರ್ಗಾ ಮಾಂಸಶೋಣಿತಕರ್ದಮಾ||
12099031a ಅಸಿಚರ್ಮಪ್ಲವಾ ಸಿಂಧುಃ ಕೇಶಶೈವಲಶಾದ್ವಲಾ|
12099031c ಅಶ್ವನಾಗರಥೈಶ್ಚೈವ ಸಂಭಿನ್ನೈಃ ಕೃತಸಂಕ್ರಮಾ||
12099032a ಪತಾಕಾಧ್ವಜವಾನೀರಾ ಹತವಾಹನವಾಹಿನೀ|
12099032c ಶೋಣಿತೋದಾ ಸುಸಂಪೂರ್ಣಾ ದುಸ್ತರಾ ಪಾರಗೈರ್ನರೈಃ||
12099033a ಹತನಾಗಮಹಾನಕ್ರಾ ಪರಲೋಕವಹಾಶಿವಾ|
12099033c ಋಷ್ಟಿಖಡ್ಗಧ್ವಜಾನೂಕಾ ಗೃಧ್ರಕಙ್ಕವಡಪ್ಲವಾ||
12099034a ಪುರುಷಾದಾನುಚರಿತಾ ಭೀರೂಣಾಂ ಕಶ್ಮಲಾವಹಾ|
12099034c ನದೀ ಯೋಧಮಹಾಯಜ್ಞೇ ತದಸ್ಯಾವಭೃಥಂ ಸ್ಮೃತಮ್||

ಯೋಧನ ಯುದ್ಧರೂಪದ ಯಜ್ಞದಲ್ಲಿ ಪ್ರವಹಿಸುವ ರಕ್ತದ ನದಿಯೇ ಅವಭೃತಸ್ನಾನಕ್ಕೆ ಸಮಾನವಾಗಿದ್ದು ಪುಣ್ಯದಾಯಕವಾಗುತ್ತದೆ. ತೋಮರಗಳೇ ಅದರ ದಡಗಳು. ಭೇರಿಗಳೇ ಕಪ್ಪೆಗಳು ಮತ್ತು

[278] ಶೋಣಿತಸಂಘಾತಾ (ಭಾರತ ದರ್ಶನ).

ಆಮೆಗಳು. ವೀರರ ಅಸ್ಥಿಪಂಜರಗಳೇ ಆ ನದಿಯ ಬಂಡೆಗಳು. ಮಾಂಸ-
ರಕ್ತಗಳ ಕೆಸರಿನಿಂದ ಆ ನದಿಯು ಅತ್ಯಂತ ದುರ್ಗಮವಾಗಿರುತ್ತದೆ. ಕತ್ತಿ
-ಗುರಾಣಿಗಳು ಆ ಘೋರ ರಕ್ತನದಿಯ ನೌಕೆಗಳು. ವೀರರ ಕೇಶಗಳೇ
ಹಸಿರು ಪಾಚಿಗಳು. ಕತ್ತರಿಸಲ್ಪಟ್ಟ ಸರ್ವತ್ರ ವ್ಯಾಪ್ತವಾದ ಆನೆ-ಕುದುರೆ-
ರಥಗಳು ಆ ಘೋರ ನದಿಯನ್ನು ದಾಟುವ ಸೇತುವೆಗಳು. ಪತಾಕಾ-
ಧ್ವಜಗಳು ನದಿಯಲ್ಲಿ ಬೆಳೆಯುವ ಜೊಂಡುಗಿಡಗಳು. ಆ ನದಿಯಲ್ಲಿ
ಸತ್ತುಹೋದ ಆನೆಗಳು ತೇಲುತ್ತವೆ. ರಕ್ತವೇ ನೀರಾಗಿ ತುಂಬಿ
ಹರಿಯುತ್ತಿರುವ ಆ ನದಿಯನ್ನು ದಾಟಿಹೋಗಲು ಇಚ್ಛಿಸುವ ಹೇಡಿ
ಮನುಷ್ಯರಿಗೆ ಅದು ದುಸ್ತರವಾಗಿರುತ್ತದೆ. ಪರಲೋಕಕ್ಕೆ
ಕೊಂಡೊಯ್ಯುವ ಆ ಮಂಗಳ ನದಿಯಲ್ಲಿ ಮೃತ ಮಹಾ ಆನೆಗಳೇ
ಮೊಸಳೆಗಳು. ಋಷ್ಟಿ-ಖಡ್ಗಗಳೇ ಮಹಾ ನೌಕೆಗಳು. ಹದ್ದು-ಕಾಗೆಗಳು
ದೋಣಿಗಳು. ನರಭಕ್ಷಕ ರಾಕ್ಷಸರು ಆ ನದಿಯ ಬಳಿ
ಸುತ್ತಾಡುತ್ತಿರುತ್ತಾರೆ. ಹೇಡಿಗಳ ಬುದ್ಧಿಭ್ರಮೆಯನ್ನು ಹೋಗಲಾಡಿಸುವ
ಸಂಗ್ರಾಮದಲ್ಲಿ ಹರಿಯುವ ಆ ನದಿಯೇ ರಣಯಜ್ಞದ ಅವಭೃತ ಸ್ನಾನ
ಎಂದು ಹೇಳುತ್ತಾರೆ.

12099035a ವೇದೀ ಯಸ್ಯ ತ್ವಮಿತ್ರಾಣಾಂ ಶಿರೋಭಿರವಕೀರ್ಯತೇ|
12099035c ಅಶ್ವಸ್ಕಂಧೈರ್ಗಜಸ್ಕಂಧೈಸ್ತಸ್ಯ ಲೋಕಾ ಯಥಾ ಮಮ||

ಯಾರ ವೇದಿಯಲ್ಲಿ ಶತ್ರುಗಳ ತಲೆಗಳು, ಕುದುರೆಗಳ ಸ್ಕಂಧಗಳು ಮತ್ತು
ಆನೆಗಳ ಕುಂಭಸ್ಥಳಗಳು ಹರಡಿರುವವೋ ಅವನಿಗೆ ನನಗೆ ದೊರಕಿದ
ಲೋಕಗಳಂಥಹವೇ ದೊರಕುವುದು.

12099036a ಪತ್ನೀಶಾಲಾ ಕೃತಾ ಯಸ್ಯ ಪರೇಷಾಂ ವಾಹಿನೀಮುಖೇ|
12099036c ಹವಿರ್ಧಾನಂ ಸ್ವವಾಹಿನ್ಯಸ್ತದಸ್ಯಾಹುರ್ಮನೀಷಿಣಃ||

ಶತ್ರುಗಳ ಸೇನಾಮುಖವನ್ನೇ ಪತ್ನೀಶಾಲೆಯನ್ನಾಗಿ ಮಾಡಿಕೊಳ್ಳುವವನ
ಮತ್ತು ತನ್ನ ಸೈನ್ಯದ ಮುಖ್ಯಭಾಗವನ್ನು ಹವಿರ್ಧಾನವನ್ನಾಗಿ
ಮಾಡಿಕೊಳ್ಳುವವನಿಗೆ ನನ್ನದೇ ಲೋಕಗಳು ಪ್ರಾಪ್ತವಾಗುವವೆಂದು
ವಿದ್ವಾಂಸರು ಹೇಳುತ್ತಾರೆ.

12099037a ಸದಶ್ಚಾಂತರಯೋಧಾ[279]ಗ್ನಿರಾಗ್ನೀಧ್ರಶ್ಚೋತ್ತರಾಂ ದಿಶಮ್|
12099037c ಶತ್ರುಸೇನಾಕಲತ್ರಸ್ಯ ಸರ್ವಲೋಕಾನದೂರತಃ||

ದಕ್ಷಿಣ ದಿಕ್ಕಿನಲ್ಲಿರುವ ಯೋಧರು ಯಾರ ರಣಯಜ್ಞದಲ್ಲಿ
ಸದಸ್ಯರಾಗಿರುವರೋ ಮತ್ತು ಉತ್ತರ ದಿಕ್ಕಿನವರು
ಋತ್ವಿಜರಾಗಿರುವರೋ ಮತ್ತು ಶತ್ರುಸೇನೆಯೇ ಯಾರ
ಪತ್ನಿಸ್ಥಾನದಲ್ಲಿರುವುದೋ ಅವನಿಗೆ ಸಮಸ್ತಲೋಕಗಳೂ
ಹತ್ತಿರದಲ್ಲಿಯೇ ಇರುತ್ತವೆ.

12099038a ಯದಾ ತೂಭಯತೋ ವ್ಯೂಹೋ ಭವತ್ಯಾಕಾಶಮಗ್ರತಃ|
12099038c ಸಾಸ್ಯ ವೇದೀ ತಥಾ ಯಜ್ಞೇ ನಿತ್ಯಂ ವೇದಾಸ್ತ್ರಯೋಽಗ್ನಯಃ||

ಎರಡು ಸೇನಾವ್ಯೂಹಗಳ ಮಧ್ಯೆ ಇರುವ ಆಕಾಶವೇ ಆ ಯಜ್ಞದ
ವೇದಿಯಾಗುತ್ತದೆ ಮತ್ತು ಅಲ್ಲಿ ನಿತ್ಯವೂ ವೇದಗಳೂ ಮೂರು
ಅಗ್ನಿಗಳೂ ಇರುತ್ತವೆ.

12099039a ಯಸ್ತು ಯೋಧಃ ಪರಾವೃತ್ತಃ ಸಂತ್ರಸ್ತೋ ಹನ್ಯತೇ ಪರೈಃ|
12099039c ಅಪ್ರತಿಷ್ಠಂ ಸ ನರಕಂ ಯಾತಿ ನಾಸ್ತ್ಯತ್ರ ಸಂಶಯಃ||

ಭಯಭೀತನಾಗಿ ಶತ್ರುಗಳಿಗೆ ಬೆನ್ನುತೋರಿಸಿ ಪಲಾಯನ ಮಾಡುವ

---

[279] ಸದಸ್ಯಾ ದಕ್ಷಿಣಾ ಯೋಧಾ (ಭಾರತ ದರ್ಶನ).

ಮತ್ತು ಅದೇ ಸಮಯದಲ್ಲಿ ಶತ್ರುಗಳಿಂದ ಕೊಲ್ಲಲ್ಪಡುವವನು ಮತ್ತೆಲ್ಲಿಯೂ ನಿಲ್ಲದೇ ನೇರವಾಗಿ ನರಕದಲ್ಲಿಯೇ ಬೀಳುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

12099040a ಯಸ್ಯ ಶೋಣಿತವೇಗೇನ ನದೀ ಸ್ಯಾತ್ಸಮಭಿಪ್ಲುತಾ|
12099040c ಕೇಶಮಾಂಸಾಸ್ಥಿಸಂಕೀರ್ಣಾ ಸ ಗಚ್ಚೇತ್ಪರಮಾಂ ಗತಿಮ್||

ಯಾರ ರಕ್ತನದಿಯ ವೇಗದಿಂದ ವೇದಿಯು ಮುಳುಗುವುದೋ ಮತ್ತು ಯಾರ ಕೇಶ-ಮಾಂಸ-ಅಸ್ಥಿಗಳಿಂದ ವೇದಿಯು ತುಂಬಿಹೋಗುವುದೋ ಅವನು ಪರಮ ಗತಿಯನ್ನು ಹೊಂದುತ್ತಾನೆ.

12099041a ಯಸ್ತು ಸೇನಾಪತಿಂ ಹತ್ವಾ ತದ್ಯಾನಮಧಿರೋಹತಿ|
12099041c ಸ ವಿಷ್ಣುವಿಕ್ರಮಕ್ರಾಮೀ ಬೃಹಸ್ಪತಿಸಮಃ ಕ್ರತುಃ[280]||

ಶತ್ರುಸೇನಾಪತಿಯನ್ನು ಸಂಹರಿಸಿ ಅವನ ರಥವನ್ನೇರುವವನ ನಡುಗೆಯನ್ನು ವಿಷ್ಣುವಿಕ್ರಮಿಯೆಂದೂ, ಕ್ರತುವನ್ನು ಬೃಹಸ್ಪತಿಯ ಸಮಾನವೆಂದೂ ಹೇಳುತ್ತಾರೆ.

12099042a ನಾಯಕಂ ವಾ ಪ್ರಮಾಣಂ ವಾ ಯೋ ವಾ ಸ್ಯಾತ್ತತ್ರ ಪೂಜಿತಃ[281]|
12099042c ಜೀವಗ್ರಾಹಂ ನಿಗೃಹ್ಣಾತಿ ತಸ್ಯ ಲೋಕಾ ಯಥಾ ಮಮ||

ಶತ್ರುಪಕ್ಷದ ನಾಯಕನನ್ನಾಗಲೀ, ಅಥವಾ ಅವನ ಮಗನನ್ನೋ ಅಥವಾ ಅವರಲ್ಲಿಯೇ ಸಮ್ಮಾನಿತನಾದೊಬ್ಬನನ್ನು ಜೀವಂತ ಬಂಧಿಸುವವನಿಗೆ

---

280 ಪ್ರಭುಃ (ಭಾರತ ದರ್ಶನ).

281 ನಾಯಕಂ ತತ್ಕುಮಾರಂ ವಾ ಯೋ ವಾ ಸ್ಯಾದ್ಯತ್ರ ಪೂಜಿತಃ| (ಭಾರತ ದರ್ಶನ).

ನನ್ನ ಲೋಕಗಳಿಗೆ ಸಮಾನ ಲೋಕಗಳು ದೊರೆಯುತ್ತವೆ.

12099043a ಆಹವೇ ನಿಹತಂ ಶೂರಂ ನ ಶೋಚೇತ ಕದಾ ಚನ|
12099043c ಅಶೋಚ್ಯೋ ಹಿ ಹತಃ ಶೂರಃ ಸ್ವರ್ಗಲೋಕೇ ಮಹೀಯತೇ||

ಯುದ್ಧದಲ್ಲಿ ಹತನಾದ ಶೂರನ ಕುರಿತು ಎಂದೂ ಶೋಕಿಸಬಾರದು. ಅಶೋಚ್ಯನಾದ ಆ ಹತಶೂರನು ಸರ್ಗಲೋಕದಲ್ಲಿ ಮೆರೆಯುತ್ತಾನೆ.

12099044a ನ ಹ್ಯನ್ನಂ ನೋದಕಂ ತಸ್ಯ ನ ಸ್ನಾನಂ ನಾಪ್ಯಶೌಚಕಮ್|
12099044c ಹತಸ್ಯ ಕರ್ತುಮಿಚ್ಚಂತಿ ತಸ್ಯ ಲೋಕಾನ್ ಶೃಣುಷ್ವ ಮೇ||

ಯುದ್ಧದಲ್ಲಿ ಮಡಿದರವರಿಗೆ ಶ್ರಾದ್ಧತರ್ಪಣಗಳನ್ನು ಮಾಡಬೇಕಾಗಿಲ್ಲ. ಅವರ ಬಂಧುಗಳಿಗೆ ಸ್ನಾನಾದಿಗಳನ್ನು ಮಾಡಬೇಕಾಗುವುದಿಲ್ಲ ಏಕೆಂದರೆ ಅವರು ಅಶೌಚಿಗಳಾಗುವುದಿಲ್ಲ. ಯುದ್ಧದಲ್ಲಿ ಹತನಾದವನಿಗೆ ಎಂತಹ ಲೋಕಗಳು ಲಭಿಸುತ್ತವೆ ಎನ್ನುವುದನ್ನು ಹೇಳುತ್ತೇನೆ. ಕೇಳು.

12099045a ವರಾಪ್ಸರಃಸಹಸ್ರಾಣಿ ಶೂರಮಾಯೋಧನೇ ಹತಮ್|
12099045c ತ್ವರಮಾಣಾ ಹಿ ಧಾವಂತಿ ಮಮ ಭರ್ತಾ ಭವೇದಿತಿ||

ಯುದ್ಧದಲ್ಲಿ ಹತನಾದ ಶೂರನನ್ನು ಸಹಸ್ರಾರು ಸುಂದರ ಅಪ್ಸರೆಯರು ಇವನು ನನ್ನ ಪತಿಯಾಗಲಿ ಎಂದು ತ್ವರೆಮಾಡಿ ಓಡಿಬಂದು ಸುತ್ತುವರೆಯುತ್ತಾರೆ.

12099046a ಏತತ್ತಪಶ್ಚ ಪುಣ್ಯಂ ಚ ಧರ್ಮಶ್ಚೈವ ಸನಾತನಃ|
12099046c ಚತ್ವಾರಶ್ಚಾಶ್ರಮಾಸ್ತಸ್ಯ ಯೋ ಯುದ್ಧೇ ನ ಪಲಾಯತೇ[282]||

[282] ಯೋ ಯುದ್ಧಮನುಪಾಲಯೇತ್| (ಭಾರತ ದರ್ಶನ).

ಯುದ್ಧದಲ್ಲಿ ಪ್ರಾಣಬಿಡುವುದೇ ಒಂದು ತಪಸ್ಸು. ಪುಣ್ಯಕಾರ್ಯ. ಇದು ಸನಾತನ ಧರ್ಮವೂ ಕೂಡ. ಯುದ್ಧದಿಂದ ಪಲಾಯನ ಮಾಡದಿರುವವನಿಗೆ ನಾಲ್ಕೂ ಆಶ್ರಮಗಳನ್ನು ಪಾಲಿಸಿದ ಪುಣ್ಯವು ಲಭ್ಯವಾಗುತ್ತದೆ.

12099047a ವೃದ್ಧಂ ಬಲಂ ನ ಹಂತವ್ಯಂ ನೈವ ಸ್ತ್ರೀ ನ ಚ ವೈ ದ್ವಿಜಃ[283]|
12099047c ತೃಣಪೂರ್ಣಮುಖಶ್ಚೈವ ತವಾಸ್ಮೀತಿ ಚ ಯೋ ವದೇತ್||

ವೃದ್ಧರನ್ನೂ, ಬಾಲಕರನ್ನೂ ಮತ್ತು ಹಾಗೆಯೇ ಸ್ತ್ರೀಯರನ್ನೂ ದ್ವಿಜರನ್ನೂ ಕೊಲ್ಲಬಾರದು. ಬಾಯಿಯಲ್ಲಿ ಹುಲ್ಲುಕಡ್ಡಿಯನ್ನು ಕಚ್ಚಿಕೊಂಡು ನಾನು ನಿನ್ನವನು ಎಂದು ಹೇಳುವವನನ್ನೂ ಕೊಲ್ಲಬಾರದು.

12099048a ಅಹಂ[284] ವೃತ್ರಂ ಬಲಂ ಪಾಕಂ ಶತಮಾಯಂ ವಿರೋಚನಮ್|
12099048c ದುರಾವಾರ್ಯಂ ಚ ನಮುಚಿಂ ನೈಕಮಾಯಂ ಚ ಶಂಬರಮ್||
12099049a ವಿಪ್ರಚಿತ್ತಿಂ ಚ ದೈತೇಯಂ ದನೋಃ ಪುತ್ರಾಂಶ್ಚ ಸರ್ವಶಃ|
12099049c ಪ್ರಹ್ರಾದಂ ಚ ನಿಹತ್ಯಾಜೌ ತತೋ ದೇವಾಧಿಪೋಽಭವಮ್||

ವೃತ್ರ, ಬಲ, ಪಾಕ, ನೂರಾರು ಮಾಯೆಗಳಿದ್ದ ವಿರೋಚನ, ತಡೆಯಲಸಾಧ್ಯನಾದ ನಮುಚಿ, ಮಾಯಾವಿಶಾರದ ಶಂಬರ, ದೈತ್ಯ ವಿಪ್ರಚಿತ್ತಿ, ದನುವಿನ ಪುತ್ರರಾದ ಎಲ್ಲ ದಾನವರನ್ನೂ, ಪ್ರಹ್ರಾದನನ್ನೂ ಯುದ್ಧದಲ್ಲಿ ಸಂಹರಿಸಿಯೇ ನಾನು ದೇವಾಧಿಪನಾಗಿದ್ದೇನೆ.””

---

283 ವೃದ್ಧಬಾಲೌ ನ ಹಂತವ್ಯೌ ನ ಚ ಸ್ತ್ರೀ ನೈವ ಪೃಷ್ಠತಃ| (ಭಾರತ ದರ್ಶನ).

284 ಜಂಭಂ (ಭಾರತ ದರ್ಶನ).

12099050 ಭೀಷ್ಮ ಉವಾಚ|
12099050a ಇತ್ಯೇತಚ್ಚಕ್ರವಚನಂ ನಿಶಮ್ಯ ಪ್ರತಿಗೃಹ್ಯ ಚ|
12099050c ಯೋಧಾನಾಮಾತ್ಮನಃ ಸಿದ್ಧಿಮಂಬರೀಷೋಽಭಿಪನ್ನವಾನ್||

ಭೀಷ್ಮನು ಹೇಳಿದನು: "ಅಂಬರೀಷನು ಹೀಗೆ ಹೇಳಿದ ಶಕ್ರನ ಮಾತನ್ನು ಕೇಳಿ ಸ್ವೀಕರಿಸಿ ವೀರಯೋಧರಿಗೆ ಸ್ವತಃಸಿದ್ಧಿಯು ಪ್ರಾಪ್ತವಾಗುವುದೆನ್ನುವುದನ್ನು ಮನಗಂಡನು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಇಂದ್ರಾಂಬರೀಷಸಂವಾದೇ ನವನವತಿತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಇಂದ್ರಾಂಬರೀಷಸಂವಾದ ಎನ್ನುವ ತೊಂಭತ್ತೊಂಭತ್ತನೇ ಅಧ್ಯಾಯವು.

೧೦೦

ಶೂರರಿಗೆ ಸ್ವರ್ಗವೂ ಹೇಡಿಗಳಿಗೆ ನರಕವೂ ದೊರೆಯುವುದೆಂದು ಜನಕನು ತನ್ನ ಸೇನೆಗಳಿಗೆ ತೋರಿಸಿದುದು (1-18).

12100001 ಭೀಷ್ಮ ಉವಾಚ|
12100001a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12100001c ಪ್ರತರ್ದನೋ ಮೈಥಿಲಶ್ಚ ಸಂಗ್ರಾಮಂ ಯತ್ರ ಚಕ್ರತುಃ||

ಭೀಷ್ಮನು ಹೇಳಿದನು: "ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಪ್ರತರ್ದನ ಮತ್ತು ಮಿಥಿಲೇಶ್ವರನ ನಡುವೆ ನಡೆದ ಯುದ್ಧವನ್ನು ಉದಾಹರಿಸುತ್ತಾರೆ.

12100002a ಯಜ್ಞೋಪವೀತೀ ಸಂಗ್ರಾಮೇ ಜನಕೋ ಮೈಥಿಲೋ ಯಥಾ|
12100002c ಯೋಧಾನುದ್ಧರ್ಷಯಾಮಾಸ ತನ್ನಿಬೋಧ ಯುಧಿಷ್ಠಿರ||

ಯುಧಿಷ್ಠಿರ! ಯಜ್ಞೋಪವೀತೀ ಮಿಥಿಲರಾಜ ಜನಕನು ತನ್ನ
ಯೋಧರನ್ನು ಹೇಗೆ ಹುರಿದುಂಬಿಸಿದನೆನ್ನುವುದನ್ನು ಹೇಳುತ್ತೇನೆ ಕೇಳು.

12100003a ಜನಕೋ ಮೈಥಿಲೋ ರಾಜಾ ಮಹಾತ್ಮಾ ಸರ್ವತತ್ತ್ವವಿತ್|
12100003c ಯೋಧಾನ್ಸ್ವರ್ಗನರಕೌ ದರ್ಶಯಾಮಾಸ ಸ್ವರ್ಗಂ ನರಕಮೇವ ಚ||

ಸರ್ವತತ್ತ್ವಗಳನ್ನೂ ತಿಳಿದಿದ್ದ ಮಹಾತ್ಮಾ ಮೈಥಿಲ ರಾಜಾ ಜನಕನು
ಯೋಧರಿಗೆ ಸ್ವರ್ಗ-ನರಕಗಳೆರಡನ್ನೂ ತೋರಿಸಿ ಹೇಳಿದನು:

12100004a ಅಭೀತಾನಾಮಿಮೇ ಲೋಕಾ ಭಾಸ್ವಂತೋ ಹಂತ ಪಶ್ಯತ|
12100004c ಪೂರ್ಣಾ ಗಂಧರ್ವಕನ್ಯಾಭಿಃ ಸರ್ವಕಾಮದುಹೋಽಕ್ಷಯಾಃ||

“ಅದೋ ಅಲ್ಲಿ ನೋಡಿರಿ! ನಿರ್ಭಯರಾಗಿ ಯುದ್ಧಮಾಡುವ
ಯೋಧರಿಗೆ ಗಂಧರ್ವ ಕನ್ಯೆಯರಿಂದ ತುಂಬಿದ ಸರ್ವಕಾಮಗಳನ್ನೂ
ಪೂರೈಸುವ ಈ ಅಕ್ಷಯ ಲೋಕಗಳು ದೊರೆಯುತ್ತವೆ.

12100005a ಇಮೇ ಪಲಾಯಮಾನಾನಾಂ ನರಕಾಃ ಪ್ರತ್ಯುಪಸ್ಥಿತಾಃ|
12100005c ಅಕೀರ್ತಿಃ ಶಾಶ್ವತೀ ಚೈವ ಪತಿತವ್ಯಮನಂತರಮ್||

ಪಲಾಯನಮಾಡುವವರಿಗೆ ಈ ಲೋಕದಲ್ಲಿ ಶಾಶ್ವತವಾದ
ಅಪಕೀರ್ತಿಯಲ್ಲದೇ ಮರಣಾನಂತರ ಈ ನರಕಗಳೂ ಲಭ್ಯವಾಗುತ್ತವೆ.

12100006a ತಾನ್ದೃಷ್ಟ್ವಾರೀನ್ವಿಜಯತೋ ಭೂತ್ವಾ ಸಂತ್ಯಾಗಬುದ್ಧಯಃ|
12100006c ನರಕಸ್ಯಾಪ್ರತಿಷ್ಠಸ್ಯ ಮಾ ಭೂತ ವಶವರ್ತಿನಃ||

ಇವೆರಡನ್ನೂ ನೋಡಿಕೊಂಡು ತ್ಯಾಗಬುದ್ಧಿಯುಳ್ಳವರಾಗಿ ವಿಜಯವನ್ನು



ಸಂಪಾದಿಸಿರಿ. ಅಪ್ರತಿಷ್ಠವಾದ ನರಕದ ವಶವರ್ತಿಗಳಾಗಬೇಡಿರಿ.

12100007a ತ್ಯಾಗಮೂಲಂ ಹಿ ಶೂರಾಣಾಂ ಸ್ವರ್ಗದ್ವಾರಮನುತ್ತಮಮ್|
12100007c ಇತ್ಯುಕ್ತಾಸ್ತೇ ನೃಪತಿನಾ ಯೋಧಾಃ ಪರಪುರಂಜಯ||
12100008a ವ್ಯಜಯಂತ ರಣೇ ಶತ್ರೂನ್ ಹರ್ಷಯಂತೋ ಜನೇಶ್ವರಮ್|

ಶೂರರಿಗೆ ಸ್ವರ್ಗದ ಉತ್ತಮ ದ್ವಾರವು ಪ್ರಾಪ್ತವಾಗಲು ಅವರ ತ್ಯಾಗವೇ ಮೂಲಕಾರಣವಾಗಿದೆ." ಪರಪುರಂಜಯ! ನೃಪತಿಯು ಹೀಗೆ ಹೇಳಲು ಅವನ ಯೋಧರು ರಣದಲ್ಲಿ ವಿಜಯವನ್ನು ಸಾಧಿಸಿ ಜನೇಶ್ವರನನ್ನು ಹರ್ಷಗೊಳಿಸಿದರು.

12100008c ತಸ್ಮಾದಾತ್ಮವತಾ ನಿತ್ಯಂ ಸ್ಥಾತವ್ಯಂ ರಣಮೂರ್ಧನಿ||
12100009a ಗಜಾನಾಂ ರಥಿನೋ ಮಧ್ಯೇ ರಥಾನಾಮನು ಸಾದಿನಃ|
12100009c ಸಾದಿನಾಮಂತರಾ ಸ್ಥಾಪ್ಯಂ ಪಾದಾತಮಿಹ ದಂಶಿತಮ್||

ಆದುದರಿಂದ ರಣಮೂರ್ಧನಿಯಲ್ಲಿ ನಿತ್ಯವೂ ಮನೋನಿಗ್ರಹವುಳ್ಳ ವ್ಯಕ್ತಿಯೇ ನಿಂತಿರಬೇಕು. ಗಜಾರೋಹಿಗಳ ಮಧ್ಯದಲ್ಲಿ ರಥಸೈನ್ಯವನ್ನು ಸ್ಥಾಪಿಸಬೇಕು. ರಥಸೈನ್ಯದ ಬಳಿ ಕುದುರೆಸವಾರರಿರಬೇಕು. ಕುದುರೆ ಸವಾರರ ಮಧ್ಯೆ ಕವಚಧಾರೀ ಅಸ್ತ್ರ-ಶಸ್ತ್ರಧಾರೀ ಪದಾತಿಗಳಿರಬೇಕು.

12100010a ಯ ಏವಂ ವ್ಯೂಹತೇ ರಾಜಾ ಸ ನಿತ್ಯಂ ಜಯತೇ ದ್ವಿಷಃ|
12100010c ತಸ್ಮಾದೇವಂ ವಿಧಾತವ್ಯಂ ನಿತ್ಯಮೇವ ಯುಧಿಷ್ಠಿರ||

ಯುಧಿಷ್ಠಿರ! ಈ ರೀತಿ ವ್ಯೂಹರಚಿಸಿದ ರಾಜನು ನಿತ್ಯವೂ ವಿಜಯಿಯಾಗುತ್ತಾನೆ. ಆದುದರಿಂದ ನಿತ್ಯವೂ ನೀನೂ ಕೂಡ ಹೀಗೆಯೇ ವ್ಯೂಹವನ್ನು ರಚಿಸಬೇಕು.

12100011a ಸರ್ವೇ ಸುಕೃತಮಿಚ್ಚಂತಃ[285] ಸುಯುದ್ಧೇನಾತಿಮನ್ಯವಃ|
12100011c ಕ್ಷೋಭಯೇಯುರನೀಕಾನಿ ಸಾಗರಂ ಮಕರಾ ಇವ||

ಸರ್ವ ಕ್ಷತ್ರಿಯರೂ ಉತ್ತಮ ಯುದ್ಧದ ಮೂಲಕ ಪುಣ್ಯವನ್ನು ಪಡೆದುಕೊಳ್ಳಲು ಬಯಸುತ್ತಾರೆ ಮತ್ತು ಮೊಸಳೆಗಳು ಸಾಗರವನ್ನು ಹೇಗೋ ಹಾಗೆ ಸೇನೆಗಳನ್ನು ಕ್ಷೋಭೆಗೊಳಿಸುತ್ತಾರೆ.

12100012a ಹರ್ಷಯೇಯುರ್ವಿಷಣ್ಣಾಂಶ್ಚ ವ್ಯವಸ್ಥಾಪ್ಯ ಪರಸ್ಪರಮ್|
12100012c ಜಿತಾಂ ಚ ಭೂಮಿಂ ರಕ್ಷೇತ ಭಗ್ನಾನ್ನಾತ್ಯನುಸಾರಯೇತ್||

ಸೈನಿಕರು ವಿಷಣ್ಣರಾಗಿರುವಾಗ ಪರಸ್ಪರರನ್ನು ವ್ಯವಸ್ಥಿತವಾಗಿರಿಸಿ ಹರ್ಷವನ್ನುಂಟುಮಾಡಬೇಕು. ಗೆದ್ದ ಭೂಮಿಯನ್ನು ರಕ್ಷಿಸಬೇಕು. ಪಲಾಯನಮಾಡುತ್ತಿರುವವರನ್ನು ಬಹಳ ದೂರದ ವರೆಗೆ ಬೆನ್ನಟ್ಟಿ ಹೋಗಬಾರದು.

12100013a ಪುನರಾವರ್ತಮಾನಾನಾಂ ನಿರಾಶಾನಾಂ ಚ ಜೀವಿತೇ|
12100013c ನ ವೇಗಃ ಸುಸಹೋ ರಾಜಂಸ್ತಸ್ಮಾನ್ನಾತ್ಯನುಸಾರಯೇತ್||

ರಾಜನ್! ಜೀವಿತದಲ್ಲಿಯೇ ನಿರಾಶರಾದ ಅವರು ಅತಿ ವೇಗದಲ್ಲಿ ಹಿಂದಿರುಗಿಬಿಡಬಲ್ಲರು. ಆದುದರಿಂದ ಅವರನ್ನು ಅತಿಯಾಗಿ ಬೆನ್ನಟ್ಟಿಹೋಗಬಾರದು.

12100014a ನ ಹಿ ಪ್ರಹರ್ತುಮಿಚ್ಚಂತಿ ಶೂರಾಃ ಪ್ರಾದ್ರವತಾಂ ಭಯಾತ್|
12100014c ತಸ್ಮಾತ್ಪಲಾಯಮಾನಾನಾಂ ಕುರ್ಯಾನ್ನಾತ್ಯನುಸಾರಣಮ್||

ಭಯದಿಂದ ಓಡಿಹೋಗುತ್ತಿರುವವರ ಮೇಲೆ ಶೂರರು ಪ್ರಹರಿಸಲು

[285] ಸ್ವರ್ಗತಿಮಿಚ್ಛಂತಿ (ಭಾರತ ದರ್ಶನ).

ಇಚ್ಛಿಸುವುದಿಲ್ಲ. ಆದುದರಿಂದ ಪಲಾಯನಮಾಡುವವರನ್ನು ಅತಿ ದೂರದವರೆಗೆ ಅನುಸರಿಸಬಾರದು.

12100015a ಚರಾಣಾಮಚರಾ ಹ್ಯನ್ನಮದಂಷ್ಟ್ರಾ ದಂಷ್ಟ್ರಿಣಾಮಪಿ|
12100015c ಅಪಾಣಯಃ ಪಾಣಿಮತಾಮನ್ನಂ[286] ಶೂರಸ್ಯ ಕಾತರಾಃ||

ಚರಪ್ರಾಣಿಗಳಿಗೆ ಅಚರ ಹುಲ್ಲು ಮೊದಲಾದವುಗಳು ಹೇಗೆ ಅನ್ನವೋ, ಕೋರೆದಾಡೆಗಳಿರುವ ಪ್ರಾಣಿಗಳಿಗೆ ಕೋರೆದಾಡೆಗಳಿಲ್ಲದಿರುವ ಪ್ರಾಣಿಗಳು ಹೇಗೆ ಅನ್ನವೋ, ಕೈಗಳಿಲ್ಲದವಕ್ಕೆ ಕೈಗಳಿದ್ದವು ಹೇಗೆ ಅನ್ನವೋ ಹಾಗೆ ಶೂರನಿಗೆ ಹೇಡಿಗಳೇ ಅನ್ನಪ್ರಾಯರು.

12100016a ಸಮಾನಪೃಷ್ಠೋದರಪಾಣಿಪಾದಾಃ
ಪಶ್ಚಾಚ್ಚೂರಂ ಭೀರವೋಽನುವ್ರಜಂತಿ[287]|
12100016c ಅತೋ ಭಯಾರ್ತಾಃ ಪ್ರಣಿಪತ್ಯ ಭೂಯಃ
ಕೃತ್ವಾಂಜಲೀನುಪತಿಷ್ಠಂತಿ ಶೂರಾನ್||

ಶೂರರು ಮತ್ತು ಹೇಡಿಗಳ ಹೊಟ್ಟೆ, ಪೃಷ್ಠ, ಕೈಗಳು ಮತ್ತು ಕಾಲುಗಳು ಒಂದೇ ಸಮನಾಗಿರುತ್ತವೆ. ಆದರೆ ಹೇಡಿಗಳು ಶೂರರನ್ನು ಹಿಂಬಾಲಿಸುತ್ತಾರೆ. ಭಯಾರ್ತರು ಪುನಃ ಪುನಃ ಕೈಮುಗಿದು ನಮಸ್ಕರಿಸುತ್ತಾ ಶೂರರನ್ನು ಬೇಡಿಕೊಳ್ಳುತ್ತಾರೆ.

12100017a ಶೂರಬಾಹುಷು ಲೋಕೋಽಯಂ ಲಂಬತೇ ಪುತ್ರವತ್ಸದಾ|
12100017c ತಸ್ಮಾತ್ಸರ್ವಾಸ್ವವಸ್ಥಾಸು ಶೂರಃ ಸಂಮಾನಮರ್ಹತಿ||

---

[286] ಆಪಃ ಪಿಪಾಸತಾಮನ್ನಂ (ಭಾರತ ದರ್ಶನ).

[287] ಪರಾಭವಂ ಭೀರವೋ ವೈ ವ್ರಜಂತಿ| (ಭಾರತ ದರ್ಶನ).

ಪುತ್ರರು ತಂದೆಯನ್ನು ಹೇಗೋ ಹಾಗೆ ಈ ಲೋಕವು ಶೂರರ ಬಾಹುಗಳನ್ನು ಅವಲಂಬಿಸಿದೆ. ಆದುದರಿಂದ ಸರ್ವಾವಸ್ಥೆಗಳಲ್ಲಿ ಶೂರನನ್ನು ಸಮ್ಮಾನಿಸಬೇಕು.

12100018a ನ ಹಿ ಶೌರ್ಯಾತ್ಪರಂ ಕಿಂ ಚಿತ್ತ್ರಿಷು ಲೋಕೇಷು ವಿದ್ಯತೇ|
12100018c ಶೂರಃ ಸರ್ವಂ ಪಾಲಯತಿ ಸರ್ವಂ ಶೂರೇ ಪ್ರತಿಷ್ಠಿತಮ್||

ಶೌರ್ಯಕ್ಕಿಂತಲೂ ಶ್ರೇಷ್ಠವಾದುದು ಮೂರು ಲೋಕಗಳಲ್ಲಿಯೂ ಇಲ್ಲ. ಶೂರನು ಸರ್ವವನ್ನು ಪಾಲಿಸುತ್ತಾನೆ ಮತ್ತು ಎಲ್ಲವೂ ಶೂರನಲ್ಲಿಯೇ ಪ್ರತಿಷ್ಠಿತವಾಗಿವೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ವಿಜಿಗೀಷಮಾಣವೃತ್ತೇ ಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ವಿಜಿಗೀಷಮಾಣವೃತ್ತ ಎನ್ನುವ ನೂರನೇ ಅಧ್ಯಾಯವು.

೧೦೧

ಸೇನಾನೀತಿಕಥನ

ಸೇನಾನೀತಿವರ್ಣನೆ (1-47).

12101001 ಯುಧಿಷ್ಠಿರ ಉವಾಚ|
12101001a ಯಥಾ ಜಯಾರ್ಥಿನಃ ಸೇನಾಂ ನಯಂತಿ ಭರತರ್ಷಭ|
12101001c ಈಷದ್ಧರ್ಮಂ ಪ್ರಪೀಡ್ಯಾಪಿ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ಪಿತಾಮಹ! ಜಯಾರ್ಥಿಗಳು ಹೇಗೆ ಯುದ್ಧದರ್ಮವನ್ನು ಸ್ವಲ್ಪಮಾತ್ರವೇ ಉಲ್ಲಂಘಿಸಿ ತಮ್ಮ ಸೇನೆಯನ್ನು ಮುಂದೊಯ್ಯುತ್ತಾರೆ ಎನ್ನುವುದನ್ನು ಹೇಳು."

12101002 ಭೀಷ್ಮ ಉವಾಚ|
12101002a ಸತ್ಯೇನ ಹಿ ಸ್ಥಿತಾ ಧರ್ಮಾ ಉಪಪತ್ತ್ಯಾ ತಥಾಪರೇ|
12101002c ಸಾಧ್ವಾಚಾರತಯಾ ಕೇ ಚಿತ್ತಥ್ಯೈವೌಪಯಿಕಾ ಅಪಿ|
12101002e ಉಪಾಯಧರ್ಮಾನ್ವಕ್ಷ್ಯಾಮಿ ಸಿದ್ಧಾರ್ಥಾನರ್ಥಧರ್ಮಯೋಃ||

ಭೀಷ್ಮನು ಹೇಳಿದನು: "ಕ್ಷತ್ರಿಯ ಧರ್ಮವು ಸತ್ಯದ ಮೇಲೆಯೇ ಪ್ರತಿಷ್ಠಿತವಾಗಿರುವುದೆಂದು ಕೆಲವರು ಹೇಳಿದರೆ ಯುಕ್ತಿಯ ಮೇಲೆ ಅದು ಪ್ರತಿಷ್ಠಿತವಾಗಿರುವುದೆಂದು ಇನ್ನು ಕೆಲವರು ಹೇಳುತ್ತಾರೆ. ಕೆಲವರು ಸಾಧು ಆಚಾರಗಳಿಂದ ಧರ್ಮದ ಪರಿಪಾಲನೆಯಾಗುತ್ತದೆ ಎಂದರೆ ಇನ್ನು ಕೆಲವರು ಸಾಮ-ದಾನಾದಿ ಉಪಾಯಗಳಿಂದ ಧರ್ಮದ ಪರಿಪಾಲನೆಯಾಗುತ್ತದೆ ಎನ್ನುತ್ತಾರೆ. ಈಗ ನಾನು ಅರ್ಥ-ಧರ್ಮಗಳ ಸಿದ್ಧಿಗೆ ಸಾಧಕವಾದ ಉಪಾಯ ಧರ್ಮದ ಕುರಿತು ಹೇಳುತ್ತೇನೆ.

12101003a ನಿರ್ಮರ್ಯಾದಾ ದಸ್ಯವಸ್ತು ಭವಂತಿ ಪರಿಪಂಥಿನಃ|
12101003c ತೇಷಾಂ ಪ್ರತಿವಿಘಾತಾರ್ಥಂ ಪ್ರವಕ್ಷ್ಯಾಮ್ಯಥ ನೈಗಮಮ್|
12101003e ಕಾರ್ಯಾಣಾಂ ಸಂಪ್ರಸಿದ್ಧ್ಯರ್ಥಂ ತಾನುಪಾಯಾನ್ನಿಬೋಧ ಮೇ||

ಮರ್ಯಾದೆಗಳನ್ನು ಮೀರಿದ ದಸ್ಯುಗಳು ಶತ್ರುಗಳಾದಾಗ ಅವರ ಪ್ರತಿಘಾತಾರ್ಥವಾಗಿ ಇರುವ ಶಾಸ್ತ್ರೋಕ್ತ ಉಪಾಯಗಳನ್ನು ಹೇಳುತ್ತೇನೆ. ಕಾರ್ಯಗಳ ಸಂಪ್ರಸಿದ್ಧಿಗಾಗಿ ಇರುವ ಆ ಉಪಾಯಗಳ

ಕುರಿತು ಕೇಳು.

12101004a ಉಭೇ ಪ್ರಜ್ಞೇ ವೇದಿತವ್ಯೇ ಋಜ್ವೀ ವಕ್ರಾ ಚ ಭಾರತ|
12101004c ಜಾನನ್ವಕ್ರಾಂ ನ ಸೇವೇತ ಪ್ರತಿಬಾಧೇತ ಚಾಗತಾಮ್‌||

ಭಾರತ! ರಾಜನಾದವನು ಎರಡು ಪ್ರಕಾರದ ಬುದ್ಧಿಗಳನ್ನು – ಸರಳ ಮತ್ತು ವಕ್ರ –ತಿಳಿದಿರಬೇಕು. ತಾನಾಗಿಯೇ ವಕ್ರಬುದ್ಧಿಯನ್ನು ಬಳಸಬಾರದು. ಆದರೆ ಇತರರು ವಕ್ರಬುದ್ಧಿಯನ್ನು ಬಳಸಿದಾಗ ತಾನೂ ಅದನ್ನೇ ಬಳಸಬೇಕು.

12101005a ಅಮಿತ್ರಾ ಏವ ರಾಜಾನಂ ಭೇದೇನೋಪಚರಂತ್ಯುತ|
12101005c ತಾಂ ರಾಜಾ ನಿಕೃತಿಂ ಜಾನನ್ಯಥಾಮಿತ್ರಾನ್‌ ಪ್ರಬಾಧತೇ‌||

ಸಾಧಾರಣವಾಗಿ ಮಿತ್ರರಲ್ಲದವರೇ ಭೇದೋಪಾಯಗಳಿಂದ ರಾಜನನ್ನು ವಂಚಿಸುತ್ತಿರುತ್ತಾರೆ. ಅವರ ವಂಚನೆಯನ್ನು ತಿಳಿದುಕೊಂಡು ರಾಜನು ಅಮಿತ್ರರನ್ನು ನಾಶಗೊಳಿಸಬೇಕು.

12101006a ಗಜಾನಾಂ ಪಾರ್ಶ್ವಚರ್ಮಾಣಿ ಗೋವೃಷಾಜಗರಾಣಿ ಚ|
12101006c ಶಲ್ಯಕಂಕಟಲೋಹಾನಿ ತನುತ್ರಾಣಿ ಮತಾನಿ ಚ‌||
12101007a ಶಿತಪೀತಾನಿ ಶಸ್ತ್ರಾಣಿ ಸಂನಾಹಾಃ ಪೀತಲೋಹಿತಾಃ|
12101007c ನಾನಾರಂಜನರಕ್ತಾಃ ಸ್ಯುಃ ಪತಾಕಾಃ ಕೇತವಶ್ಚ ತೇ‌||
12101008a ಋಷ್ಟಯಸ್ತೋಮರಾಃ ಖಡ್ಗಾ ನಿಶಿತಾಶ್ಚ ಪರಶ್ವಧಾಃ|
12101008c ಫಲಕಾನ್ಯಥ ಚರ್ಮಾಣಿ ಪ್ರತಿಕಲ್ಪ್ಯಾನ್ಯನೇಕಶಃ|

ಆನೆಗಳನ್ನು ರಕ್ಷಿಸಲು ಎತ್ತು ಮತ್ತು ಹೆಬ್ಬಾವುಗಳ ಚರ್ಮಗಳ ಕವಚಗಳನ್ನು ಅವಕ್ಕೆ ಹೊದಿಸಬೇಕು. ಶಲ್ಯ, ಕಂಟಕ, ಲೋಹ, ಕವಚ, ಚಾಮರ, ಬಿಳಿಯಾದ ಮತ್ತು ಹೊಂಬಣ್ಣದ ಶಸ್ತ್ರಗಳು, ಕೆಂಪುಬಣ್ಣದ

ಮತ್ತು ಹಳದೀ ಬಣ್ಣದ ಕವಚಗಳು, ನಾನಾ ವರ್ಣದ ಪತಾಕೆಗಳು ಮತ್ತು ಧ್ವಜಗಳು, ಋಷ್ಟಿಗಳು, ತೋಮರಗಳು, ನಿಶಿತ ಖಡ್ಗಗಳು, ಗಂಡುಗೊಡಲಿಗಳು, ಫಲಕಗಳು ಮತ್ತು ಗುರಾಣಿಗಳು ಇವೆಲ್ಲವನ್ನೂ ರಾಜನು ಅಪಾರ ಸಂಖ್ಯೆಗಳಲ್ಲಿ ಸಂಗ್ರಹಿಸಬೇಕು.

12101008e ಅಭಿನೀತಾನಿ ಶಸ್ತ್ರಾಣಿ ಯೋಧಾಶ್ಚ ಕೃತನಿಶ್ರಮಾಃ||
12101009a ಚೈತ್ರ್ಯಾಂ ವಾ ಮಾರ್ಗಶೀರ್ಷ್ಯಾಂ ವಾ ಸೇನಾಯೋಗಃ ಪ್ರಶಸ್ಯತೇ|

ಶಸ್ತ್ರಗಳು ಸಿದ್ಧವಾಗಿದ್ದರೆ, ಯೋಧರೆಲ್ಲರೂ ಶತ್ರುಗಳ ಮೇಲೆ ಬೀಳುವ ದೃಢನಿಶ್ಚಯ ಮಾಡಿದ್ದರೆ, ಚೈತ್ರ ಅಥವಾ ಮಾರ್ಗಶೀರ್ಷ ಮಾಸಗಳಲ್ಲಿ ಸೇನಾಪ್ರಸ್ಥಾನವು ಪ್ರಶಸ್ತವಾಗುತ್ತದೆ.

12101009c ಪಕ್ವಸಸ್ಯಾ ಹಿ ಪೃಥಿವೀ ಭವತ್ಯಂಬುಮತೀ ತಥಾ||
12101010a ನೈವಾತಿಶೀತೋ ನಾತ್ಯುಷ್ಣಃ ಕಾಲೋ ಭವತಿ ಭಾರತ|

ಪೃಥಿವಿಯು ಬೆಳೆದ ಸಸಿಗಳಿಂದ ತುಂಬಿರುವ, ಬೆಳೆಯು ಕಟಾವಿಗೆ ಬಂದಿರುವ, ಜಲಸಮೃದ್ಧಿಯಿರುವ, ಮತ್ತು ಅತಿಯಾದ ಶೀತ-ಉಷ್ಣಗಳಿಲ್ಲದಿರುವ ಆ ಕಾಲವು ಯುದ್ಧಕ್ಕೆ ಪ್ರಶಸ್ತವಾಗಿದೆ.

12101010c ತಸ್ಮಾತ್ತದಾ ಯೋಜಯೇತ ಪರೇಷಾಂ ವ್ಯಸನೇಷು ವಾ|
12101010e ಏತೇಷು ಯೋಗಾಃ ಸೇನಾಯಾಃ ಪ್ರಶಸ್ತಾಃ ಪರಬಾಧನೇ||

ಆದುದರಿಂದ ಆ ತಿಂಗಳುಗಳಲ್ಲಿ ಶತ್ರುವಿನೊಡನೆ ಯುದ್ಧವನ್ನು ಪ್ರಾರಂಭಿಸಬೇಕು. ಅಥವಾ ಶತ್ರುವು ತೊಂದರೆಯಲ್ಲಿದ್ದಾಗಲೂ ಯುದ್ಧವನ್ನು ಪ್ರಾರಂಭಿಸಬಹುದು. ಶತ್ರುಗಳೊಡನೆ ಹೋರಾಡಲು ಸೇನೆಗಳು ಹೊರಡುವುದಕ್ಕೆ ಇವೇ ಪ್ರಶಸ್ತ ಯೋಗಗಳೆಂದು ಹೇಳುತ್ತಾರೆ.

12101011a ಜಲವಾಂಸ್ಸೃಣವಾನ್ಮಾರ್ಗಃ ಸಮೋ ಗಮ್ಯಃ ಪ್ರಶಸ್ಯತೇ|
12101011c ಚಾರೈರ್ಹಿ ವಿಹಿತಾಭ್ಯಾಸಃ ಕುಶಲೈರ್ವನಗೋಚರೈಃ||

ಯುದ್ಧಕ್ಕೆ ಹೊರಡುವ ಮಾರ್ಗವು ನೀರು-ಹುಲ್ಲುಗಳಿಂದ ಕೂಡಿದ್ದು ಸಮತಲವಾಗಿರಬೇಕು. ಕುಶಲ ವನಗೋಚರರು ಮತ್ತು ಚಾರರು ಆ ಮಾರ್ಗದ ಕುಂದು ಕೊರತೆಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.

12101012a ನವ್ಯಾರಣ್ಯೈರ್ನ ಶಕ್ಯೇತ ಗಂತುಂ ಮೃಗಗಣೈರಿವ|
12101012c ತಸ್ಮಾತ್ಸರ್ವಾಸು ಸೇನಾಸು ಯೋಜಯಂತಿ ಜಯಾರ್ಥಿನಃ||

ಮೃಗಗಣಗಳಂತೆ ಅರಣ್ಯಗಳಲ್ಲಿ ಆ ಸೇನೆಗಳು ಹೋಗಲು ಸಾಧ್ಯವಾಗುವುದಿಲ್ಲ. ಆದುದರಿಂದ ಜಯಾರ್ಥಿಯಾದವನು ಸೇನೆಗಳಲ್ಲಿ ಗುಪ್ತಚಾರರನ್ನು ನಿಯಮಿಸಿಕೊಂಡಿರಬೇಕು.

[288]12101013a ಆವಾಸಸ್ತೋಯವಾನ್ದುರ್ಗಃ ಪರ್ಯಾಕಾಶಃ ಪ್ರಶಸ್ಯತೇ|
12101013c ಪರೇಷಾಮುಪಸರ್ಪಾಣಾಂ ಪ್ರತಿಷೇಧಸ್ತಥಾ ಭವೇತ್||

ಮಾರ್ಗದಲ್ಲಿ ಸೇನೆಗಳು ತಂಗಲು ಎತ್ತರ ಪ್ರದೇಶದ ದುರ್ಗವನ್ನು ಆರಿಸಿಕೊಳ್ಳಬೇಕು. ಸುತ್ತಲೂ ಬಯಲು ಪ್ರದೇಶವಿರಬೇಕು. ನೀರಿನ ಸೌಲಭ್ಯವಿರಬೇಕು. ಮೇಲೆ ಹರಿದು ಬರುತ್ತಿರುವ ಶತ್ರುಗಳನ್ನು ಎದುರಿಸುವಂತಿರಬೇಕು.

12101014a ಆಕಾಶಂ ತು ವನಾಭ್ಯಾಶೇ ಮನ್ಯಂತೇ ಗುಣವತ್ತರಮ್|

---

288 ಭಾರತ ದರ್ಶನದಲ್ಲಿ ಇದಕ್ಕೆ ಮೊದಲು ಈ ಒಂದು ಶ್ಲೋಕಾರ್ಧವಿದೆ: ಅಗ್ರತಃ ಪುರುಷಾನೀಕಂ ಶಕ್ತಂ ಚಾಪಿ ಕುಲೋದ್ಭವಮ್|

12101014c ಬಹುಭಿರ್ಗುಣಜಾತ್ಯೈಸ್ತು ಯೇ ಯುದ್ಧಕುಶಲಾ ಜನಾಃ[289]॥

ಆಕಾಶವೇ ಚಾವಣಿಯಾಗಿರುವ ಮೈದಾನಕ್ಕಿಂತಲೂ ಅರಣ್ಯದ ಸಮೀಪದಲ್ಲಿ ತಂಗುವುದು ಉತ್ತಮವೆಂದು ಅನೇಕ ಗುಣಯುಕ್ತರಾದ ಯುದ್ಧಕುಶಲ ಜನರು ಹೇಳುತ್ತಾರೆ.

12101015a ಉಪನ್ಯಾಸೋಽಪಸರ್ಪಾಣಾಂ[290] ಪದಾತೀನಾಂ ಚ ಗೂಹನಮ್।
12101015c ಅಥ ಶತ್ರುಪ್ರತೀಘಾತಮಾಪದರ್ಥಂ ಪರಾಯಣಮ್॥

ಅರಣ್ಯದ ಸಮೀಪದಲ್ಲಿ ಬಿಡಾರಮಾಡುವುದು, ಪದಾತಿಗಳನ್ನು ಅಡಗಿಸಿಟ್ಟಿರುವುದು, ನಿಗೂಢವಾಗಿದ್ದುಕೊಂಡೇ ಶತ್ರುಗಳ ಮೇಲೆ ಹಲ್ಲೆಮಾಡುವುದು ಇವು ಆಪತ್ಕಾಲದಲ್ಲಿ ಆಶ್ರಯಿಸಬೇಕಾದ ವಿಧಾನಗಳು.

12101016a ಸಪ್ತರ್ಷೀನ್ ಪೃಷ್ಠತಃ ಕೃತ್ವಾ ಯುಧ್ಯೇರನ್ನಚಲಾ ಇವ।
12101016c ಅನೇನ ವಿಧಿನಾ ರಾಜನ್ ಜಿಗೀಷೇತಾಪಿ ದುರ್ಜಯಾನ್॥

ಸಪ್ತರ್ಷಿಮಂಡಲವನ್ನು ಹಿಂದಕ್ಕೆ ಬಿಟ್ಟುಕೊಂಡು ಪರ್ವತಗಳಂತೆ ಅಚಲವಾಗಿ ನಿಂತು ಯುದ್ಧಮಾಡಬೇಕು. ರಾಜನ್! ಈ ವಿಧಾನದಿಂದ ದುರ್ಜಯರನ್ನೂ ಜಯಿಸಬಹುದು.

12101017a ಯತೋ ವಾಯುರ್ಯತಃ ಸೂರ್ಯೋ ಯತಃ ಶುಕ್ರಸ್ತತೋ ಜಯಃ।
12101017c ಪೂರ್ವಂ ಪೂರ್ವಂ ಜ್ಯಾಯ ಏಷಾಂ ಸಂನಿಪಾತೇ ಯುಧಿಷ್ಠಿರ॥

---

289 ಭಾರತ ದರ್ಶನದಲ್ಲಿ ಇದರ ನಂತರ ಈ ಒಂದು ಶ್ಲೋಕಾರ್ಧವಿದೆ: ಉಪನ್ಯಾಸೋ ಭವೇತ್ತತ್ರ ಬಲಾನಾಂ ನಾತಿದೂರತಃ॥

290 ಉಪನ್ಯಾಸಾವತರಣಂ (ಭಾರತ ದರ್ಶನ).

ಯುಧಿಷ್ಠಿರ! ಯಾವ ಸೈನ್ಯದ ಹಿಂದಿನಿಂದ ವಾಯುವು ಬೀಸುತ್ತಿರುತ್ತದೆಯೋ, ಮತ್ತು ಯಾವ ಸೇನೆಯ ಹಿಂದೆ ಸೂರ್ಯ-ಶಕ್ರರು ಪ್ರಕಾಶವಾಗಿರುವರೋ ಆ ಪಕ್ಷಕ್ಕೇ ವಿಜಯವುಂಟಾಗುತ್ತದೆ.

12101018a ಅಕರ್ದಮಾಮನುದಕಾಮಮರ್ಯಾದಾಮಲೋಷ್ಟಕಾಮ್|
12101018c ಅಶ್ವಭೂಮಿಂ ಪ್ರಶಂಸಂತಿ ಯೇ ಯುದ್ಧಕುಶಲಾ ಜನಾಃ||

ಕೆಸರಿಲ್ಲದಿರುವ, ಹಳ್ಳಗಳಿಲ್ಲದಿರುವ, ಮಣ್ಣು ಹೆಂಟೆಗಳಿಲ್ಲದಿರುವ ಸಮಪ್ರದೇಶವು ಕುದುರೆಗಳನ್ನು ತಂಗಿಸಲು ಪ್ರಶಸ್ತವಾದುದು ಎಂದು ಯುದ್ಧಕುಶಲ ಜನರು ಪ್ರಶಂಸಿಸುತ್ತಾರೆ.

12101019a ಸಮಾ ನಿರುದಕಾಕಾಶಾ ರಥಭೂಮಿಃ ಪ್ರಶಸ್ಯತೇ[291]|
12101019c ನೀಚದ್ರುಮಾ ಮಹಾಕಕ್ಷಾ ಸೋದಕಾ ಹಸ್ತಿಯೋಧಿನಾಮ್||

ಸಮನಾದ ಬಯಲು ಪ್ರದೇಶವು ರಥಗಳನ್ನು ನಿಲ್ಲಿಸಲು ಪ್ರಶಸ್ತವಾದುದು. ಕುರುಚಲು ಗಿಡಗಳಿರುವ, ವಿಶೇಷವಾಗಿ ಹುಲ್ಲು ಬೆಳೆದಿರುವ ಮತ್ತು ನೀರಿನಿಂದ ಕೂಡಿರುವ ಸ್ಥಳವು ಗಜಯೋಧಿಗಳು ಇಳಿದುಕೊಳ್ಳಲು ಅನುಕೂಲ ಸ್ಥಳವಾಗಿದೆ.

12101020a ಬಹುದುರ್ಗಾ ಮಹಾವೃಕ್ಷಾ[292] ವೇತ್ರವೇಣುಭಿರಾಸ್ತೃತಾ|
12101020c ಪದಾತೀನಾಂ ಕ್ಷಮಾ ಭೂಮಿಃ ಪರ್ವತೋಪವನಾನಿ ಚ||

ಮಹಾ ವೃಕ್ಷಗಳಿರುವ ಬಿದಿರು-ಬೆತ್ತಗಳ ಮೆಳೆಗಳಿಂದ ಕೂಡಿರುವ ಅತಿ ದುರ್ಗಮ ಪರ್ವತ-ಉಪವನಗಳು ಪದಾತಿಗಳು ತಂಗಲು ಉತ್ತಮ

---

[291] ಅಪಂಕಾ ಗರ್ತರಹಿತಾ ರಥಭೂಮಿಃ ಪ್ರಶಸ್ಯತೇ| (ಭಾರತ ದರ್ಶನ).

[292] ಮಹಾಕಕ್ಷಾ (ಭಾರತ ದರ್ಶನ).

ಸ್ಥಳಗಳು.

12101021a ಪದಾತಿಬಹುಲಾ ಸೇನಾ ದೃಢಾ ಭವತಿ ಭಾರತ|
12101021c ರಥಾಶ್ವಬಹುಲಾ ಸೇನಾ ಸುದಿನೇಷು ಪ್ರಶಸ್ಯತೇ||

ಭಾರತ! ಪದಾತಿಗಳು ಹೆಚ್ಚಾಗಿರುವ ಸೇನೆಯು ದೃಢವಾಗಿರುತ್ತದೆ. ರಥ-ಕುದುರೆಗಳು ಹೆಚ್ಚಾಗಿರುವ ಸೇನೆಯು ಉತ್ತಮ ದಿನಗಳಲ್ಲಿ ಪ್ರಶಸ್ತವಾಗಿರುತ್ತದೆ.

12101022a ಪದಾತಿನಾಗಬಹುಲಾ ಪ್ರಾವೃಟ್ಕಾಲೇ ಪ್ರಶಸ್ಯತೇ|
12101022c ಗುಣಾನೇತಾನ್ಪ್ರಸಂಖ್ಯಾಯ ದೇಶಕಾಲೌ ಪ್ರಯೋಜಯೇತ್||

ವರ್ಷಾಕಾಲದಲ್ಲಿ ಪದಾತಿ-ಆನೆಗಳ ಅಧಿಕ್ಯವು ಪ್ರಶಸ್ತವು. ಈ ಗುಣಗಳನ್ನು ದೇಶ-ಕಾಲಗಳ ದೃಷ್ಟಿಯಿಂದ ವಿಚಾರಿಸಿ ಬಳಸಬೇಕು.

12101023a ಏವಂ ಸಂಚಿಂತ್ಯ ಯೋ ಯಾತಿ ತಿಥಿನಕ್ಷತ್ರಪೂಜಿತಃ|
12101023c ವಿಜಯಂ ಲಭತೇ ನಿತ್ಯಂ ಸೇನಾಂ ಸಮ್ಯಕ್ ಪ್ರಯೋಜಯನ್||

ಇದನ್ನು ಆಲೋಚಿಸಿ ಶ್ರೇಷ್ಠ ತಿಥಿ-ನಕ್ಷತ್ರಗಳಲ್ಲಿ ಯುದ್ಧಕ್ಕೆ ಹೊರಡುವ ಮತ್ತು ಸೇನೆಯನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳುವ ರಾಜನು ನಿತ್ಯವೂ ವಿಜಯವನ್ನು ಹೊಂದುತ್ತಾನೆ.

12101024a ಪ್ರಸುಪ್ತಾಂಸ್ತ್ವಷಿತಾನ್ ಶ್ರಾಂತಾನ್ಪ್ರಕೀರ್ಣಾನ್ನಾಭಿಘಾತಯೇತ್|
12101024c ಮೋಕ್ಷೇ ಪ್ರಯಾಣೇ ಚಲನೇ ಪಾನಭೋಜನಕಾಲಯೋಃ||
12101025a ಅತಿಕ್ಷಿಪ್ತಾನ್ ವ್ಯತಿಕ್ಷಿಪ್ತಾನ್ವಿಹತಾನ್ ಪ್ರತನೂಕೃತಾನ್|
12101025c ಸುವಿಸ್ರಂಭಾನ್ ಕೃತಾರಂಭಾನುಪನ್ಯಾಸಪ್ರತಾಪಿತಾನ್|
12101025e ಬಹಿಶ್ಚರಾನುಪನ್ಯಾಸಾನ್ ಕೃತ್ವಾ ವೇಶ್ಮಾನುಸಾರಿಣಃ||

ಮಲಗಿರುವವರನ್ನೂ, ಬಾಯಾರಿಕೆಯಿಂದ
ಸಂಕಟಪಡುತ್ತಿರುವವರನ್ನೂ, ಬಳಲಿರುವವರನ್ನೂ,
ಚದುರಿಹೋಗಿರುವವರನ್ನೂ ಸಂಹರಿಸಬಾರದು. ಶಸ್ತ್ರ-ಕವಚಗಳನ್ನು
ಬಿಚ್ಚಿ ಪ್ರಯಾಣಿಸುತ್ತಿರುವಾಗ, ಆತ್ತಿತ್ತ ತಿರುಗಾಡುತ್ತಿರುವಾಗ,
ಜಲಪಾನ-ಭೋಜನಗಳನ್ನು ಮಾಡುತ್ತಿರುವಾಗ ಯಾರನ್ನೂ
ಕೊಲ್ಲಬಾರದು. ಹೀಗೆಯೇ ಬಹಳವಾಗಿ ಗಾಬರಿಗೊಂಡಿರುವವರನ್ನೂ,
ಹುಚ್ಚರಾಗಿರುವವರನ್ನೂ, ಮತ್ತ್ಯಾವುದೋ ಕೆಲಸದಲ್ಲಿ
ತೊಡಗಿರುವವರನ್ನು, ಗಾಯಗಳಿಂದ ಸಂತಪ್ತರಾದವರನ್ನೂ, ಶಿಬಿರದ
ಹೊರಗೆ ತಿರುಗಾಡುತ್ತಿರುವವರನ್ನೂ, ಶಿಬಿರದ ಕಡೆಗೆ
ಓಡುತ್ತಿರುವವರನ್ನೂ ಸಂಹರಿಸಬಾರದು.

12101026a ಪಾರಂಪರ್ಯಾಗತೇ ದ್ವಾರೇ ಯೇ ಕೇ ಚಿದನುವರ್ತಿನಃ|
12101026c ಪರಿಚರ್ಯಾವರೋದ್ಧಾರೋ ಯೇ ಚ ಕೇ ಚನ ವಲ್ಗಿನಃ||

ಪಾರಂಪರಾಗತರಾಗಿ ಇರುವ ದ್ವಾರಪಾಲಕರನ್ನೂ ಸೇವಕರನ್ನೂ,
ಸಮುದಾಯಾಧಿಪತಿಗಳನ್ನೂ ಸಂಹರಿಸಬಾರದು.

12101027a ಅನೀಕಂ ಯೇ ಪ್ರಭಿಂದಂತಿ ಭಿನ್ನಂ ಯೇ ಸ್ಥಗಯಂತಿ ಚ|
12101027c ಸಮಾನಾಶನಪಾನಾಸ್ತೇ ಕಾರ್ಯಾ ದ್ವಿಗುಣವೇತನಾಃ||

ಶತ್ರುಸೇನೆಯನ್ನು ಒಡೆಯುವ ಮತ್ತು ಒಡೆದುಹೋದ ಸ್ವ-ಸೇನೆಯನ್ನು
ಒಂದುಗೂಡಿಸುವರು ರಾಜೋಪಭೋಗ್ಯವಾದ ಪಾನ-
ಭೋಜನಾದಿಗಳಿಗೆ ಯೋಗ್ಯರಾಗುತ್ತಾರೆ. ಅವರಿಗೆ ದ್ವಿಗುಣಿತ
ವೇತನವನ್ನು ಕೊಡಬೇಕು.

12101028a ದಶಾಧಿಪತಯಃ ಕಾರ್ಯಾಃ ಶತಾಧಿಪತಯಸ್ತಥಾ|

12101028c ತೇಷಾಂ ಸಹಸ್ರಾಧಿಪತಿಂ ಕುರ್ಯಾಚ್ಚೂರಮತಂದ್ರಿತಮ್‌॥

ಹತ್ತು ಸೈನಿಕರಿಗೆ ನಾಯಕರನ್ನೂ ಮತ್ತು ನೂರು ಸೈನಿಕರಿಗೆ ಅಧಿಪತಿಗಳನ್ನೂ ನಿಯೋಜಿಸಬೇಕು. ಅವರಲ್ಲೇ ಶೂರನೂ ಆಲಸನಲ್ಲದವನೂ ಆದವನನ್ನು ಸಹಸ್ರಾಧಿಪತಿಯನ್ನಾಗಿ ಮಾಡಿಕೊಳ್ಳಬೇಕು.

12101029a ಯಥಾಮುಖ್ಯಂ ಸಂನಿಪಾತ್ಯ ವಕ್ತವ್ಯಾಃ ಸ್ಮ ಶಪಾಮಹೇ|
12101029c ಯಥಾ ಜಯಾರ್ಥಂ ಸಂಗ್ರಾಮೇ ನ ಜಹ್ಯಾಮ ಪರಸ್ಪರಮ್‌॥

ಅನಂತರ ಸೇನಾಪ್ರಮುಖರನ್ನು ಸೇರಿಸಿ ಅವರಿಂದ ಈ ಶಪಥವನ್ನು ಮಾಡಿಸಿಕೊಳ್ಳಬೇಕು: "ವಿಜಯಕ್ಕಾಗಿ ಸಂಗ್ರಾಮದಲ್ಲಿ ಪರಸ್ಪರರನ್ನು ಸಂಹರಿಸುವುದಿಲ್ಲ.

12101030a ಇಹೈವ ತೇ ನಿವರ್ತಂತಾಂ ಯೇ ನಃ ಕೇ ಚನ ಭೀರವಃ|
12101030c ನ ಘಾತಯೇಯುಃ ಪ್ರದರಂ[293] ಕುರ್ವಾಣಾಸ್ತುಮುಲೇ ಸತಿ‌॥

ಹೇಡಿಗಳಾಗಿರುವವರು ಇಲ್ಲಿಂದಲೇ ಹಿಂದಿರುಗಬೇಕು. ಯುದ್ಧದಲ್ಲಿ ಶತ್ರುಪಕ್ಷದ ಪ್ರಮುಖರನ್ನು ಕೊಲ್ಲಲು ಯಾರು ಸಮರ್ಥರೋ ಅವರು ಮಾತ್ರ ಇಲ್ಲಿ ನಿಲ್ಲಲಿ."

[294]12101031a ಆತ್ಮಾನಂ ಚ ಸ್ವಪಕ್ಷಂ ಚ ಪಲಾಯನ್[295] ಹಂತಿ

---

[293] ಪ್ರವರಂ (ಭಾರತ ದರ್ಶನ).

[294] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕಾರ್ಧವಿದೆ: ನ ಸಂನಿಪಾತೇ ಪ್ರದರಂ ವಧಂ ವಾ ಕುರ್ಯುರೀದೃಶಾಃ|

[295] ಪಾಲಯನ್ (ಭಾರತ ದರ್ಶನ).

ಸಂಯುಗೇ|
12101031c ದ್ರವ್ಯನಾಶೋ ವಧೋಽಕೀರ್ತಿರಯಶಶ್ಚ ಪಲಾಯನೇ||

ವೀರರು ತಮ್ಮನ್ನೂ ತಮ್ಮ ಪಕ್ಷದವರನ್ನೂ ರಕ್ಷಿಸಿ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುತ್ತಾರೆ. ಪಲಾಯನದಲ್ಲಿ ದ್ರವ್ಯನಾಶ, ವಧೆ, ಅಕೀರ್ತಿ ಮತ್ತು ಅಯಶಸ್ಸು ಸೇರಿವೆ.

12101032a ಅಮನೋಜ್ಞಾಸುಖಾ ವಾಚಃ ಪುರುಷಸ್ಯ ಪಲಾಯತಃ|
12101032c ಪ್ರತಿಸ್ಪಂದೌಷ್ಠದಂತಸ್ಯ ನ್ಯಸ್ತಸರ್ವಾಯುಧಸ್ಯ ಚ||
12101033a ಹಿತ್ವಾ ಪಲಾಯಮಾನಸ್ಯ ಸಹಾಯಾನ್ ಪ್ರಾಣಸಂಶಯೇ[296]|
12101033c ಅಮಿತ್ರೈರನುಬದ್ಧಸ್ಯ ದ್ವಿಷತಾಮಸ್ತು ನಸ್ತಥಾ||

ಪುರುಷನು ಪಲಾಯನ ಮಾಡಿದರೆ ಮನಸ್ಸಿಗೆ ಸುಖವೆಂಬುದೇ ಇರುವುದಿಲ್ಲ. ಜನರು ಮಾತನಾಡಿಕೊಳ್ಳುತ್ತಾರೆ. ಹಲ್ಲುಗಳನ್ನು ಮುರಿಸಿಕೊಂಡು ಆಯುಧಗಳನ್ನು ಕೆಳಗಿಟ್ಟು ರಣವನ್ನು ಬಿಟ್ಟು ಪಲಾಯನಮಾಡುವರು ಯಾವಾಗಲೂ ನಮ್ಮ ಶತ್ರುಗಳ ಪಕ್ಷದಲ್ಲಿರಲಿ.

12101034a ಮನುಷ್ಯಾಪಸದಾ ಹ್ಯೇತೇ ಯೇ ಭವಂತಿ ಪರಾಙ್ಮುಖಾಃ|
12101034c ರಾಶಿವರ್ಧನಮಾತ್ರಾಸ್ತೇ ನೈವ ತೇ ಪ್ರೇತ್ಯ ನೋ ಇಹ||

ಪರಾಙ್ಮುಖರಾಗುವವರು ಮನುಷ್ಯಾಧಮರೇ ಸರಿ. ಅವರು ಸೈನ್ಯ ಸಂಖ್ಯೆಯನ್ನು ಹೆಚ್ಚಿಸಲು ಮಾತ್ರವೇ ಇರುತ್ತಾರೆಯೇ ವಿನಃ ಅವರಿಗೆ ಇಹವೂ ಇಲ್ಲ ಪರವೂ ಇಲ್ಲ.

12101035a ಅಮಿತ್ರಾ ಹೃಷ್ಟಮನಸಃ ಪ್ರತ್ಯುದ್ಯಾಂತಿ ಪಲಾಯಿನಮ್|

---

296 ಈ ಶ್ಲೋಕಾರ್ಧವು ಭಾರತ ದರ್ಶನದಲ್ಲಿಲ್ಲ.

12101035c ಜಯಿನಂ ಸುಹೃದಸ್ತಾತ ವಂದನ್ಯೈರ್ಮಂಗಲೈನ ಚ.[297]||

ಪಲಾಯನ ಮಾಡುತ್ತಿರುವವರನ್ನು ಸಂತೋಷದಿಂದ ಶತ್ರುಗಳು ಹಿಂಬಾಲಿಸುತ್ತಾರೆ. ಅಯ್ಯಾ! ವಿಜಯಿಯಾದವರನ್ನು ಸುಹೃದರು ವಂದನ-ಮಂಗಲಗಳಿಂದ ಪೂಜಿಸುತ್ತಾರೆ.

12101036a ಯಸ್ಯ ಸ್ಮ ವ್ಯಸನೇ ರಾಜನ್ನನುಮೋದಂತಿ ಶತ್ರವಃ.[298]|
12101036c ತದಸಹ್ಯತರಂ ದುಃಖಮಹಂ ಮನ್ಯೇ ವಧಾದಪಿ||

ರಾಜನ್! ವ್ಯಸನದಲ್ಲಿರುವವನ ರಾಜನನ್ನು ಶತ್ರುಗಳು ಅಪಮಾನಿಸುವುದು ಅವನಿಗೆ ಮಧೆಗಿಂತಲೂ ಹೆಚ್ಚಿನ ಅಸಹನೀಯ ದುಃಖವೆಂದು ನನಗನ್ನಿಸುತ್ತದೆ.

12101037a ಶ್ರಿಯಂ.[299] ಜಾನೀತ ಧರ್ಮಸ್ಯ ಮೂಲಂ ಸರ್ವಸುಖಸ್ಯ ಚ|
12101037c ಸಾ.[300] ಭೀರೂಣಾಂ ಪರಾನ್ಯಾತಿ.[301] ಶೂರಸ್ತಾಮಧಿಗಚ್ಚತಿ||

ಸಂಪತ್ತು ಧರ್ಮದ ಮತ್ತು ಸರ್ವಸುಖದ ಮೂಲವೆಂದು ತಿಳಿಯಬೇಕು. ಶ್ರೀಯು ಹೇಡಿಗಳನ್ನು ತೊರೆಯುತ್ತಾಳೆ ಮತ್ತು ಶೂರರ ಬಳಿಸಾರುತ್ತಾಳೆ.

12101038a ತೇ ವಯಂ ಸ್ವರ್ಗಮಿಚ್ಚಂತಃ ಸಂಗ್ರಾಮೇ ತ್ಯಕ್ತಜೀವಿತಾಃ|

---

297 ಜಯಿನಸ್ತು ನರಾಸ್ತಾತ ಚಂದನ್ಯೈರ್ಮಂಡನೇನ ಚ| (ಭಾರತ ದರ್ಶನ).

298 ಯಸ್ಯ ಸ್ಮ ಸಂಗ್ರಾಮಗತಾ ಯಶೋ ವೈ ಘ್ನಂತಿ ಶತ್ರವಃ| (ಭಾರತ ದರ್ಶನ).

299 ಜಯಂ (ಭಾರತ ದರ್ಶನ).

300 ಯಾ (ಭಾರತ ದರ್ಶನ).

301 ಪರಾ ಗ್ಲಾನಿಃ (ಭಾರತ ದರ್ಶನ).

12101038c ಜಯಂತೋ ವಧ್ಯಮಾನಾ ವಾ ಪ್ರಾಪ್ತುಮರ್ಹಾಮ[302] ಸದ್ಗತಿಮ್‌॥

ನಾವು ಕ್ಷತ್ರಿಯರು ಸ್ವರ್ಗವನ್ನು ಬಯಸಿ ಜೀವಿತದ ಆಶೆಯನ್ನೂ ಬಿಟ್ಟು ಹೋರಾಡುತ್ತೇವೆ. ಜಯವಾಗಲಿ ಅಥವಾ ಹತರಾಗಲಿ ಮಹಾ ಸದ್ಗತಿಯನ್ನು ಪಡೆದುಕೊಳ್ಳುತ್ತೇವೆ.

12101039a ಏವಂ ಸಂಶಪ್ತಶಪಥಾಃ ಸಮಭಿತ್ಯಕ್ತಜೀವಿತಾಃ|
12101039c ಅಮಿತ್ರವಾಹಿನೀಂ ವೀರಾಃ ಸಂಪ್ರಗಾಹಂತ್ಯಭೀರವಃ‌॥

ಈ ರೀತಿಯ ಶಪಥವನ್ನು ಮಾಡಿ ಜೀವದ ಹಂಗನ್ನೂ ತೊರೆದು ಧೈರ್ಯಶಾಲೀ ವೀರರು ಶತ್ರುಸೈನ್ಯದ ಮಧ್ಯೆ ನುಗ್ಗಿಹೋಗುತ್ತಾರೆ.

12101040a ಅಗ್ರತಃ ಪುರುಷಾನೀಕಮಸಿಚರ್ಮವತಾಂ ಭವೇತ್‌|
12101040c ಪೃಷ್ಠತಃ ಶಕಟಾನೀಕಂ ಕಲತ್ರಂ ಮಧ್ಯತಸ್ತಥಾ‌॥

ಸೇನೆಗಳು ಹೋಗುವಾಗ ಎದಿರು ಕವಚ-ಖಡ್ಗಗಳನ್ನು ಧರಿಸಿದ ಪದಾತಿಗಳಿರಬೇಕು. ಹಿಂದಿನಿಂದ ರಥಸೇನೆಯಿರಬೇಕು. ರಾಜಸ್ತ್ರೀಯರು ಮಧ್ಯದಲ್ಲಿರಬೇಕು.

12101041a ಪರೇಷಾಂ ಪ್ರತಿಘಾತಾರ್ಥಂ ಪದಾತೀನಾಂ ಚ ಗೂಹನಮ್‌[303]|
12101041c ಅಪಿ ಹ್ಯಸ್ಮಿನ್ಪರೇ ಗೃದ್ಧಾ[304] ಭವೇಯುರ್ಯೇ ಪುರೋಗಮಾಃ‌॥
12101042a ಯೇ ಪುರಸ್ತಾದಭಿಮತಾಃ ಸತ್ತ್ವವಂತೋ ಮನಸ್ವಿನಃ|

---

302 ಪ್ರಾಪ್ನುಯಾಮ ಚ (ಭಾರತ ದರ್ಶನ).

303 ಬೃಂಹಣಮ್‌ (ಭಾರತ ದರ್ಶನ).

304 ತಸ್ಮಿನ್ಪರೇ ವೃದ್ಧಾ (ಭಾರತ ದರ್ಶನ).

12101042c ತೇ ಪೂರ್ವಮಭಿವರ್ತೇರಂಸ್ತಾನನ್ವಗಿತರೇ[305] ಜನಾಃ||

ಹಿಂದೆಯೇ ಸತ್ತ್ವವಂತರೆಂದೂ ಜಿತೇಂದ್ರಿಯರೆಂದೂ
ಪ್ರಸಿದ್ಧರಾಗಿದ್ದವರೇ ಸೈನ್ಯದ ಮುಂಭಾಗದಲ್ಲಿರಬೇಕು. ಉಳಿದವರು
ಅವರನ್ನು ಅನುಸರಿಸಿ ಹೋಗಬೇಕು.

12101043a ಅಪಿ ಚೋದ್ಧರ್ಷಣಂ ಕಾರ್ಯಂ ಭೀರೂಣಾಮಪಿ ಯತ್ನತಃ|
12101043c ಸ್ಕಂಧದರ್ಶನಮಾತ್ರಂ ತು ತಿಷ್ಠೇಯುರ್ವಾ ಸಮೀಪತಃ||

ಹೇಡಿಗಳನ್ನೂ ಕೂಡ ಪ್ರಯತ್ನಪೂರ್ವಕವಾಗಿ ಯುದ್ಧಮಾಡಲು
ಪ್ರೋತ್ಸಾಹಿಸಬೇಕು ಅಥವಾ ಸೈನ್ಯದ ಬಾಹುಬಲವನ್ನು
ತೋರಿಸುವುದಕ್ಕಾಗಿ ಅವರು ಸಮೀಪದಲ್ಲಾದರೂ ಇರಬೇಕು.

12101044a ಸಂಹತಾನ್ಯೋಧಯೇದಲ್ಪಾನ್ಕಾಮಂ ವಿಸ್ತಾರಯೇದ್ಬಹೂನ್|
12101044c ಸೂಚೀಮುಖಮನೀಕಂ ಸ್ಯಾದಲ್ಪಾನಾಂ ಬಹುಭಿಃ ಸಹ||

ಅಲ್ಪಸಂಖ್ಯೆಯಲ್ಲಿದ್ದರೆ ಒಟ್ಟಾಗಿ ಯುದ್ಧಮಾಡಲು ಪ್ರಯತ್ನಿಸಬೇಕು.
ಬಹುಸಂಖ್ಯಾತರಾಗಿದ್ದರೆ ವಿಸ್ತಾರ ಸ್ಥಳದಲ್ಲಿ ಇಚ್ಛಾನುಸಾರ
ಯುದ್ಧಮಾಡಲು ಬಿಡಬೇಕು. ಅಲ್ಪಸಂಖ್ಯಾತರು
ಬಹುಸಂಖ್ಯಾತರೊಂದಿಗೆ ಯುದ್ಧಮಾಡುವಾಗ ಸೂಚೀಮುಖ
ವ್ಯೂಹವನ್ನು ರಚಿಸಿಕೊಳ್ಳಬೇಕು.

12101045a ಸಂಪ್ರಯುದ್ಧೇ ಪ್ರಹೃಷ್ಟೇ ವಾ ಸತ್ಯಂ ವಾ ಯದಿ ವಾನೃತಮ್|
12101045c ಪ್ರಗೃಹ್ಯ ಬಾಹೂನ್ ಕ್ರೋಶೇತ ಭಗ್ನಾ ಭಗ್ನಾಃ ಪರಾ ಇತಿ||
12101046a ಆಗತಂ ನೋ ಮಿತ್ರಬಲಂ ಪ್ರಹರಧ್ವಮಭೀತವತ್|

---

[305] ಪೂರ್ವಮಭಿವರೇರಂಶ್ಚೈತಾನೇವೇತರೇ (ಭಾರತ ದರ್ಶನ).

ಯುದ್ಧಮಾಡುತ್ತಿರುವಾಗ ತನ್ನ ಸೈನ್ಯದಲ್ಲಿ ಉತ್ಸಾಹವಿರಲಿ ಅಥವಾ ಇಲ್ಲದಿರಲಿ, ಸತ್ಯವಾಗಿರಲಿ ಅಥವಾ ಸುಳ್ಳಾಗಿರಲಿ, ಬಾಹುಗಳನ್ನು ಮೇಲಕ್ಕೆತ್ತಿ "ಶತ್ರುಗಳು ಭಗ್ನರಾಗಿ ಹೋದರು! ಮಿತ್ರಬಲವು ನಮ್ಮ ಸಹಾಯಕ್ಕೆ ಬಂದಿದೆ. ಭಯವಿಲ್ಲದೇ ಪ್ರಹರಿಸಿ!" ಎಂದು ಕೂಗುತ್ತಿರಬೇಕು.

12101046c ಶಬ್ದವಂತೋಽನುಧಾವೇಯುಃ ಕುರ್ವಂತೋ ಭೈರವಂ ರವಮ್‌॥
12101047a ಕ್ಷ್ವೇಡಾಃ ಕಿಲಕಿಲಾಃ ಶಂಖಾಃ ಕ್ರಕಚಾ ಗೋವಿಷಾಣಿಕಾನ್‌|
12101047c ಭೇರೀಮೃದಂಗಪಣವಾನ್ನಾದಯೇಯುಶ್ಚ ಕುಂಜರಾನ್‌॥

ಈ ಶಬ್ದವನ್ನು ಕೇಳಿದೊಡನೆಯೇ ಅವರು ಭೈರವ ಕೂಗನ್ನು ಕೂಗುತ್ತಾ ಶತ್ರುಗಳ ಮೇಲೆ ಬೀಳುತ್ತಾರೆ. ಸೈನ್ಯದ ಮುಂಭಾಗದಲ್ಲಿರುವವರು ಗರ್ಜನ-ತರ್ಜನಗಳನ್ನು ಮಾಡುತ್ತಲೇ ಇರಬೇಕು. ವೀರಗರ್ಜನೆಗಳೊಂದಿಗೆ ಕ್ರಕಚ, ಕೊಂಬು, ಭೇರೀ, ಮೃದಂಗ, ನಗಾರಿ – ಮೊದಲಾದ ವಾದ್ಯಗಳನ್ನು ಬಾರಿಸುವ ವ್ಯವಸ್ಥೆಯಿರಬೇಕು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಸೇನಾನೀತಿಕಥನೇ ಏಕಾಧಿಕಶತತಮೋಽಧ್ಯಾಯಃ‌॥
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಸೇನಾನೀತಿಕಥನ ಎನ್ನುವ ನೂರಾಒಂದನೇ ಅಧ್ಯಾಯವು.

೧೦೨

ವಿಭಿನ್ನ ದೇಶಗಳ ಯೋಧರ ಸ್ವಭಾವ-ರೂಪ-ಬಲ-ಆಚರಣೆ ಮತ್ತು ಲಕ್ಷಣಗಳ ವರ್ಣನೆ (1-20).

12102001 ಯುಧಿಷ್ಠಿರ ಉವಾಚ|
12102001a ಕಿಂಶೀಲಾಃ ಕಿಂಸಮುತ್ಥಾನಾಃ[306] ಕಥಂರೂಪಾಶ್ಚ ಭಾರತ|
12102001c ಕಿಂಸಂನಾಹಾಃ ಕಥಂಶಸ್ತ್ರಾ ಜನಾಃ ಸ್ಯುಃ ಸಂಯುಗೇ ನೃಪ||

ಯುಧಿಷ್ಠಿರನು ಹೇಳಿದನು: "ಭಾರತ! ನೃಪ! ಯಾವ ನಡತೆಯುಳ್ಳವರು, ಯಾವ ಸ್ವಭಾವದವರು, ಯಾವ ರೂಪವುಳ್ಳವರು, ಎಂತಹ ಕವಚವನ್ನು ತೊಟ್ಟವರು ಮತ್ತು ಎಂಥಹ ಶಸ್ತ್ರಗಳನ್ನು ಹಿಡಿದಿರುವವರು ಯುದ್ಧ ಸಮರ್ಥರಾಗಿರುತ್ತಾರೆ?"

12102002 ಭೀಷ್ಮ ಉವಾಚ|
12102002a ಯಥಾಚರಿತಮೇವಾತ್ರ ಶಸ್ತ್ರಪತ್ರಂ[307] ವಿಧೀಯತೇ|
12102002c ಆಚಾರಾದೇವ[308] ಪುರುಷಸ್ತಥಾ ಕರ್ಮಸು ವರ್ತತೇ||

ಭೀಷ್ಮನು ಹೇಳಿದನು: "ಅಲ್ಲಿ ಯಾವುದು ಆಚರಣೆಯಲ್ಲಿದೆಯೋ ಅದರಂತೆಯೇ ಶಸ್ತ್ರ ಮತ್ತು ವಾಹನಗಳನ್ನು ವಿಧಿಸಲಾಗಿದೆ[309]. ಪರಂಪರಾಗತವಾದ ಆಚಾರಗಳನ್ನು ಅನುಸರಿಸಿಯೇ ವೀರ ಪುರುಷರು ಕಾರ್ಯಗಳಲ್ಲಿ ತೊಡಗುತ್ತಾರೆ.

12102003a ಗಾಂಧಾರಾಃ ಸಿಂಧುಸೌವೀರಾ ನಖಿರಪ್ರಾಸಯೋಧಿನಃ|
12102003c ಆಭೀರವಃ ಸುಬಲಿನಸ್ತದ್ಬಲಂ ಸರ್ವಪಾರಗಮ್||

---

306 ಕಿಂಸಮಾಚಾರಾಃ (ಭಾರತ ದರ್ಶನ).

307 ಶಸ್ತ್ರಂ ಪತ್ರಂ (ಭಾರತ ದರ್ಶನ).

308 ಆಚಾರಾದ್ವೀರ (ಭಾರತ ದರ್ಶನ).

309 ಯುದ್ಧಕ್ಕೆ ಸಂಬಂಧಿಸಿದ ಆಚಾರ-ವಿಚಾರಗಳು ದೇಶ-ಕಾಲಗಳನ್ನು ಅನುಸರಿಸಿರುತ್ತವೆ.

ಗಾಂಧಾರರು ಮತ್ತು ಸಿಂಧು-ಸೌವೀರರು ನಖರ-ಪ್ರಾಸಾಯುಧಗಳಿಂದ ಯುದ್ಧಮಾಡುತ್ತಾರೆ. ಅವರು ಶೂರರೂ, ಬಲಶಾಲಿಗಳೂ ಆಗಿದ್ದು ಅವರ ಸೇನೆಗಳು ಸರ್ವ ಆಯುಧಗಳಲ್ಲಿ ಪರಿಣಿತವಾದವು.

12102004a ಸರ್ವಶಸ್ತ್ರೇಷು ಕುಶಲಾಃ ಸತ್ತ್ವವಂತೋ[310] ಹ್ಯುಶೀನರಾಃ|
12102004c ಪ್ರಾಚ್ಯಾ ಮಾತಂಗಯುದ್ಧೇಷು ಕುಶಲಾಃ ಶಠಯೋಧಿನಃ[311]||

ಉಶೀನರರು ಸರ್ವಶಸ್ತ್ರಗಳಲ್ಲಿ ಕುಶಲಿಗಳು ಮತ್ತು ಸತ್ತ್ವವಂತರು. ಪೂರ್ವದೇಶದವರು ಆನೆಗಳ ಮೇಲೆ ಯುದ್ಧಮಾಡುವುದರಲ್ಲಿ ಕುಶಲಿಗಳು ಮತ್ತು ಶಠಯೋಧಿಗಳು.

12102005a ತಥಾ ಯವನಕಾಂಬೋಜಾ ಮಥುರಾಮಭಿತಶ್ಚ ಯೇ|
12102005c ಏತೇ ನಿಯುದ್ಧಕುಶಲಾ ದಾಕ್ಷಿಣಾತ್ಯಾಸಿಚರ್ಮಿಣಃ|[312]|

ಯವನರೂ, ಕಾಂಬೋಜರೂ ಮತ್ತು ಮಥುರೆಯ ಅಕ್ಕಪಕ್ಕದವರು ಮಲ್ಲಯುದ್ಧದಲ್ಲಿ ನಿಪುಣರು. ದಕ್ಷಿಣ ದೇಶದವರು ಖಡ್ಗ-ಗುರಾಣಿಗಳಲ್ಲಿ ಕುಶಲರು.

12102006a ಸರ್ವತ್ರ ಶೂರಾ ಜಾಯಂತೇ ಮಹಾಸತ್ತ್ವಾ ಮಹಾಬಲಾಃ|
12102006c ಪ್ರಾಯ ಏಷ ಸಮುದ್ದಿಷ್ಟೋ ಲಕ್ಷಣಾನಿ ತು ಮೇ ಶೃಣು||

ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿಯೂ ಮಹಾಸತ್ತ್ವಯುತ ಮಹಾಬಲಶಾಲಿಗಳು ಹುಟ್ಟುತ್ತಿರುತ್ತಾರೆ. ಆ ವೀರರ ಕುರಿತು ಈ

---

310 ತತ್ತ್ವವಂತೋ (ಭಾರತ ದರ್ಶನ).

311 ಕೂಟಯೋಧಿನಃ (ಭಾರತ ದರ್ಶನ).

312 ದಕ್ಷಿಣಾತ್ಯಾಸಿಪಾಣಯಃ (ಭಾರತ ದರ್ಶನ).

ಮೊದಲೇ ಹೇಳಿಯಾಗಿದೆ[313]. ಅವರ ಲಕ್ಷಣಗಳನ್ನು ಹೇಳುತ್ತೇನೆ. ಕೇಳು.

12102007a ಸಿಂಹಶಾರ್ದೂಲವಾಙ್ನೇತ್ರಾಃ ಸಿಂಹಶಾರ್ದೂಲಗಾಮಿನಃ|
12102007c ಪಾರಾವತಕುಲಿಂಗಾಕ್ಷಾಃ ಸರ್ವೇ ಶೂರಾಃ ಪ್ರಮಾಥಿನಃ||

ಸಿಂಹ-ಶಾರ್ದೂಲಗಳಂತೆ ಧ್ವನಿ ಮತ್ತು ಕಣ್ಣುಗಳಿರುವ, ಸಿಂಹ-ಶಾರ್ದೂಲಗಳ ನಡುಗೆಯುಳ್ಳ, ಪಾರಾವತ ಪಕ್ಷಿಯ ಕಣ್ಣುಗಳುಳ್ಳ ಎಲ್ಲರೂ ಶತ್ರುಸೇನೆಯನ್ನು ಮಥಿಸುವ ಶೂರರಾಗಿರುತ್ತಾರೆ.

12102008a ಮೃಗಸ್ವರಾ ದ್ವೀಪಿನೇತ್ರಾ ಋಷಭಾಕ್ಷಾಸ್ತಥಾಪರೇ[314]|
12102008c ಪ್ರವಾದಿನಃ ಸುಚಂಡಾಶ್ಚ ಕ್ರೋಧಿನಃ ಕಿಂನರೀಸ್ವನಾಃ[315]||

ಮೃಗಸ್ವರ, ಆನೆಯ ಅಥವಾ ಗೂಳಿಯ ಕಣ್ಣುಗಳುಳ್ಳವರು, ಪ್ರವಾದಿಗಳು, ಸುಚಂಡರು ಮತ್ತು ಕಿನ್ನರೀ ಧ್ವನಿಯುಳ್ಳವರು ಕ್ರೋಧಾವಿಷ್ಟರು.

12102009a ಮೇಘಸ್ವನಾಃ ಕ್ರುದ್ಧಮುಖಾಃ ಕೇ ಚಿತ್ಕರಭನಿಸ್ವನಾಃ|
12102009c ಜಿಹ್ಮನಾಸಾನುಜಂಘಾಶ್ಚ ದೂರಗಾ ದೂರಪಾತಿನಃ||

ಮೇಘಗರ್ಜನೆಯುಳ್ಳ, ಕ್ರುದ್ಧಮುಖವುಳ್ಳವರು, ಒಂಟೆಯಂತೆ ನೀಳ ಕತ್ತಿರುವವರು, ವಕ್ರವಾದ ಮೂಗು-ನಾಲಿಗೆಗಳಿರುವವರು ದೂರ ಹೆಜ್ಜೆಯಿಡಬಲ್ಲರು ಮತ್ತು ಬಾಣವನ್ನು ಬಹಳ ದೂರದವರೆಗೂ

---

313 ಈ ಮೊದಲು ಯಾವ ಸಂದರ್ಭದಲ್ಲಿ ಇದನ್ನು ಹೇಳಿಯಾಗಿದೆ ಎನ್ನುವುದು ಅರ್ಥವಾಗುತ್ತಿಲ್ಲ...?

314 ಋಷಭಾಕ್ಷಾಸ್ತರಸ್ವಿನಃ| (ಭಾರತ ದರ್ಶನ).

315 ಕಿಂಕಿಣೀಸ್ವನಾಃ|| (ಭಾರತ ದರ್ಶನ).

ಪ್ರಹರಿಸಬಲ್ಲರು.

12102010a ಬಿಡಾಲಕುಬ್ಜಾಸ್ತನವಸ್ತನುಕೇಶಾಸ್ತನುತ್ವಚಃ|
12102010c ಶೂರಾಶ್ಚಪಲಚಿತ್ತಾಶ್ಚ[316] ತೇ ಭವಂತಿ ದುರಾಸದಾಃ||

ಬೆಕ್ಕಿನಂತೆ ಗಿಡ್ಡ ಶರೀರವುಳ್ಳವರು ಮತ್ತು ತೆಳುವಾದ ಕೇಶ-ಚರ್ಮಗಳನ್ನು ಹೊಂದಿರುವವರು ಶೂರರೂ, ಚಪಲಚಿತ್ತವುಳ್ಳವರೂ ಆಗಿದ್ದು ದುರ್ಜಯರೂ ಆಗಿರುತ್ತಾರೆ.

12102011a ಗೋಧಾನಿಮೀಲಿತಾಃ ಕೇ ಚಿನ್ಮೃದುಪ್ರಕೃತಯೋಽಪಿ ಚ|
12102011c ತುರಂಗಗತಿನಿರ್ಘೋಷಾಸ್ತೇ ನರಾಃ ಪಾರಯಿಷ್ಣವಃ||

ಯಾರ ಮುಚ್ಚಿದ ಕಣ್ಣುಗಳು ನೀರುಡದ ಮುಚ್ಚಿದ ಕಣ್ಣುಗಳಿಂತಿರುವವೋ, ಮತ್ತು ಯಾರ ಗತಿ-ಗರ್ಜನೆಗಳು ಕುದುರೆಗಳ ಗತಿ-ಗರ್ಜನೆಗಳಂತಿರುವವೋ ಆ ಮೃದುಸ್ವಭಾವದ ನರರು ಯುದ್ಧಸಾಗರವನ್ನು ದಾಟಬಲ್ಲರು.

12102012a ಸುಸಂಹತಾಃ ಪ್ರತನವೋ[317] ವ್ಯೂಢೋರಸ್ಕಾಃ ಸುಸಂಸ್ಥಿತಾಃ|
12102012c ಪ್ರವಾದಿತೇನ ನೃತ್ಯಂತಿ ಹೃಷ್ಯಂತಿ ಕಲಹೇಷು ಚ||

ಗಟ್ಟಿಮುಟ್ಟಾದ ಶರೀರವುಳ್ಳ, ಸುಂದರ ಶರೀರವುಳ್ಳ, ವಿಶಾಲ ಎದೆಯಿರುವ, ಸೌಷ್ಠವ ಅಂಗಾಂಗಗಳನ್ನುಳ್ಳವರು ಯುದ್ಧದ ಮಾತನ್ನು ಕೇಳಿದೊಡನೆಯೇ ಕುಣಿಯುತ್ತಾರೆ. ಹರ್ಷದಿಂದ ಕಾದಾಡುತ್ತಾರೆ.

12102013a ಗಂಭೀರಾಕ್ಷಾ ನಿಃಸೃತಾಕ್ಷಾಃ ಪಿಂಗಲಾ ಭ್ರುಕುಟೀಮುಖಾಃ|

---

316 ಶೀಘ್ರಾಶ್ಚಪಲವೃತ್ತಾಶ್ಚ (ಭಾರತ ದರ್ಶನ).

317 ಸುತನವೋ (ಭಾರತ ದರ್ಶನ).

12102013c ನಕುಲಾಕ್ಷಾಸ್ತಥಾ ಚೈವ ಸರ್ವೇ ಶೂರಾಸ್ತನುತ್ಯಜಃ||

ಗಂಭೀರ ಕಣ್ಣುಗಳುಳ್ಳ, ಕಣ್ಣುಗುಡ್ಡೆಗಳು ಮೇಲೆದ್ದು ಕಾಣುವ, ಪಿಂಗಲ ವರ್ಣದ ಕಣ್ಣುಗಳುಳ್ಳ, ಹುಬ್ಬು-ಗಟ್ಟಿಕ್ಕಿದ ಮುಖವಿರುವ, ಮುಂಗಿಸಿಯಂಥಹ ಕಣ್ಣುಗಳುಳ್ಳ ಎಲ್ಲರೂ ಶೂರರೂ, ಪ್ರಾಣಗಳನ್ನೇ ಒತ್ತೆಯಾಗಿಟ್ಟು ಹೋರಾಡುವವರೂ ಆಗಿರುತ್ತಾರೆ.

12102014a ಜಿಹ್ಮಾಕ್ಷಾಃ ಪ್ರಲಲಾಟಾಶ್ಚ ನಿರ್ಮಾಂಸಹನವೋಽಪಿ ಚ|
12102014c ವಕ್ರಬಾಹ್ವಂಗುಲೀಸಕ್ತಾಃ ಕೃಶಾ ಧಮನಿಸಂತತಾಃ||
12102015a ಪ್ರವಿಶಂತ್ಯತಿವೇಗೇನ ಸಂಪರಾಯೇಽಭ್ಯುಪಸ್ಥಿತೇ|
12102015c ವಾರಣಾ ಇವ ಸಂಮತ್ತಾಸ್ತೇ ಭವಂತಿ ದುರಾಸದಾಃ||

ವಕ್ರ ಕಣ್ಣುಗಳುಳ್ಳ, ಹಣೆಯು ಉಬ್ಬಿರುವ, ಗಲ್ಲವು ಚಪ್ಪಟೆಯಾಗಿರುವ, ಭುಜಗಳ ಮೇಲೆ ವಜ್ರದ ಚಿಹ್ನೆಯುಳ್ಳ, ಬೆರಳುಗಳಲ್ಲಿ ಚಕ್ರದ ಚಿಹ್ನೆಯುಳ್ಳ, ಕೃಶರಾಗಿರುವ, ಮತ್ತು ನರನಾಡಿಗಳು ಎದ್ದು ಕಾಣುವವರು ಯುದ್ಧವು ಪ್ರಾರಂಭವಾದೊಡನೆ ಅತಿ ವೇಗದಿಂದ ರಣವನ್ನು ಪ್ರವೇಶಿಸುತ್ತಾರೆ. ಮದಗಜಗಳಂತೆ ಹೋರಾಡುವಂಥ ವರು ದುರಾಸದರೂ ಆಗಿರುತ್ತಾರೆ.

12102016a ದೀಪ್ತಸ್ಫುಟಿತಕೇಶಾಂತಾಃ ಸ್ಥೂಲಪಾರ್ಶ್ವಹನೂಮುಖಾಃ|
12102016c ಉನ್ನತಾಂಸಾಃ ಪೃಥುಗ್ರೀವಾ ವಿಕಟಾಃ ಸ್ಥೂಲಪಿಂಡಿಕಾಃ||
12102017a ಉದ್ವ್ರತ್ತಾಶ್ಚೈವ[318] ಸುಗ್ರೀವಾ ವಿನತಾ ವಿಹಗಾ ಇವ|
12102017c ಪಿಂಡಶೀರ್ಷಾಹಿವಕ್ತ್ರಾಶ್ಚ ವೃಷದಂಶಮುಖಾ ಇವ||
12102018a ಉಗ್ರಸ್ವನಾ ಮನ್ಯುಮಂತೋ ಯುದ್ಧೇಷ್ವಾರಾವಸಾರಿಣಃ|

[318] ಉದ್ಧತಾ ಇವ (ಭಾರತ ದರ್ಶನ).

12102018c ಅಧರ್ಮಜ್ಞಾವಲಿಪ್ತಾಶ್ಚ ಘೋರಾ ರೌದ್ರಪ್ರದರ್ಶಿನಃ||

ಹೊಳೆಯುತ್ತಿರುವ ಮತ್ತು ಹರಡಿಕೊಂಡಿರುವ ಕೂದಲುಗಳುಳ್ಳ, ವಿಶಾಲ ಪಕ್ಕೆಗಳೂ, ಉದ್ದ ದವಡೆಗಳೂ ಇರುವ, ಉನ್ನತ ಭುಜಗಳಿರುವ, ದೊಡ್ಡ ಕತ್ತಿರುವ, ವಿಕಟರಾಗಿರುವ, ಮೊಣಕಾಲಿನ ಹಿಂಭಾಗವು ಸ್ಥೂಲವಾಗಿರುವ, ಗರುಡನಂತೆ ವೇಗಶಾಲಿಯೂ ಪರಾಕ್ರಮಿಯೂ ಆಗಿರುವ, ತಲೆ ದುಂಡು ಮತ್ತು ಮುಖವು ವಿಶಾಲವಾಗಿರುವ, ಬೆಕ್ಕಿನಂತೆ ಅಗಲ ಮುಖವುಳ್ಳ, ಕಠೋರ ಧ್ವನಿಯುಳ್ಳ, ಮತ್ತು ಕೋಪಿಷ್ಟರಾಗಿರುವವರು ಯುದ್ಧದಲ್ಲಿ ಗರ್ಜಿಸುತ್ತಾ ಸಂಚರಿಸುತ್ತಾರೆ. ಅವರಿಗೆ ಧರ್ಮವೇನೆಂದೇ ತಿಳಿದಿರುವುದಿಲ್ಲ, ಅಹಂಕಾರದಿಂದ ಕೊಬ್ಬಿರುತ್ತಾರೆ. ನೋಡರು ಘೋರರೂ ರೌದ್ರರೂ ಆಗಿರುತ್ತಾರೆ.

12102019a ತ್ಯಕ್ತಾತ್ಮಾನಃ ಸರ್ವ ಏತೇ ಅಂತ್ಯಜಾ ಹ್ಯನಿವರ್ತಿನಃ|
12102019c ಪುರಸ್ಕಾರ್ಯಾಃ ಸದಾ ಸೈನ್ಯೇ ಹನ್ಯಂತೇ ಘ್ನಂತಿ ಚಾಪಿ ತೇ||

ಇವರೆಲ್ಲರೂ ಅಂತ್ಯಜರು[319]. ಪ್ರಾಣವನ್ನೇ ಪಣವನಾಗಿಟ್ಟು ಯುದ್ಧಮಾಡುವವರು. ಇವರಲ್ಲಿ ಯಾರೂ ಯುದ್ಧಭೂಮಿಯಿಂದ ಹಿಂದಿರುಗುವವರಲ್ಲ. ಇಂಥವರನ್ನು ಸದಾ ಪುರಸ್ಕರಿಸಬೇಕು. ಇವರು ಶತ್ರುಗಳಿಂದ ಹತರಾಗುತ್ತಾರೆ. ಆದರೆ ಅವರನ್ನೂ ಇವರು ಸಂಹರಿಸುತ್ತಾರೆ.

12102020a ಅಧಾರ್ಮಿಕಾ ಭಿನ್ನವೃತ್ತಾಃ ಸಾಧ್ವೇವೈಷಾಂ[320] ಪರಾಭವಃ|

---

[319] ಗಡಿಯ ಪ್ರಾಂತ್ಯದಲ್ಲಿ ಹುಟ್ಟಿದವರು. ಕೈವರ್ತ-ದಾರ-ಧೀವರಾದಿಗಳು (ಭಾರತ ದರ್ಶನ).

[320] ಸಾಂತ್ವೇನ್ಯೈಷಾಂ (ಭಾರತ ದರ್ಶನ).

12102020c ಏವಮೇವ ಪ್ರಕುಪ್ಯಂತಿ ರಾಜ್ಞೋಽಪ್ಯೇತೇ ಹ್ಯಭೀಕ್ಷ್ಣಶಃ||

ಇವರು ಎಲ್ಲರೂ ಅಧಾರ್ಮಿಕರು. ಭಿನ್ನ ನಡತೆಯುಳ್ಳವರು. ಸಾಧುತ್ವದಿಂದಲೇ ಅವರನ್ನು ಗೆಲ್ಲಬಹುದು. ಅವರ ರಾಜನ ಮೇಲೆಯೂ ಇವರು ಪದೇ ಪದೇ ಕೋಪಿಸಿಕೊಳ್ಳುತ್ತಿರುತ್ತಾರೆ. ಇವರು ಒಳ್ಳೆಯಮಾತಿಗೆ ಬಗ್ಗುವವರೇ ಹೊರತು ಗಡುಸಿನ ಆಜ್ಞೆಗೆ ಎಂದೂ ಮಣಿಯುವವರಲ್ಲ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ವಿಜಿಗೀಷಮಾಣವೃತ್ತೇ ದ್ವ್ಯಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ವಿಜಿಗೀಷಮಾಣವೃತ್ತ ಎನ್ನುವ ನೂರಾಎರಡನೇ ಅಧ್ಯಾಯವು.

೧೦೩

ವಿಜಯಾಪಜಯಸೂಚಕಗಳಾದ ಶುಭಾಶುಭಲಕ್ಷಣಗಳ ವರ್ಣನೆ; ಉತ್ಸಾಹಿ ಮತ್ತು ಬಲಿಷ್ಠ ಸೈನಿಕರ ವರ್ಣನೆ; ರಾಜನ ಯುದ್ಧಸಂಬಂಧ ನೀತಿಯ ನಿರ್ದೇಶನ (1-40).

12103001 ಯುಧಿಷ್ಠಿರ ಉವಾಚ|
12103001a ಜೈತ್ರ್ಯಾ ವಾ ಕಾನಿ ರೂಪಾಣಿ ಭವಂತಿ ಪುರುಷರ್ಷಭ|
12103001c ಪೃತನಾಯಾಃ ಪ್ರಶಸ್ತಾನಿ ತಾನೀಹೇಚ್ಚಾಮಿ ವೇದಿತುಮ್||

ಯುಧಿಷ್ಠಿರನು ಹೇಳಿದನು: “ಪುರುಷರ್ಷಭ! ಜಯಿಸುವವರು ಹೇಗಿರುತ್ತಾರೆ? ಸೇನೆಗಳ ಪ್ರಶಸ್ತ ಗುಣಗಳ ಕುರಿತು ತಿಳಿಯಲು

ಇಚ್ಛಿಸುತ್ತೇನೆ.”

12103002 ಭೀಷ್ಮ ಉವಾಚ|
12103002a ಜೈತ್ರ್ಯಾ ವಾ ಯಾನಿ ರೂಪಾಣಿ ಭವಂತಿ ಪುರುಷರ್ಷಭ|
12103002c ಪೃತನಾಯಾಃ ಪ್ರಶಸ್ತಾನಿ ತಾನಿ ವಕ್ಷ್ಯಾಮಿ ಸರ್ವಶಃ||

ಭೀಷ್ಮನು ಹೇಳಿದನು: “ಪುರುಷರ್ಷಭ! ಜಯಿಸುವವರು ಹೇಗಿರುತ್ತಾರೆ ಮತ್ತು ಸೇನೆಗಳ ಪ್ರಶಸ್ತಗುಣಗಳ ಕುರಿತು ಎಲ್ಲವನ್ನೂ ಹೇಳುತ್ತೇನೆ.

12103003a ದೈವಂ ಪೂರ್ವಂ ವಿಕುರುತೇ ಮಾನುಷೇ ಕಾಲಚೋದಿತೇ|
12103003c ತದ್ವಿದ್ವಾಂಸೋಽನುಪಶ್ಯಂತಿ ಜ್ಞಾನದೀರ್ಘೇಣ ಚಕ್ಷುಷಾ||

ಕಾಲವು ಮನುಷ್ಯನನ್ನು ಪ್ರಚೋದಿಸುತ್ತದೆ. ಆದುದರಿಂದ ವಿದ್ವಾಂಸರು ತಮ್ಮ ಜ್ಞಾನದ ದೀರ್ಘ ದೃಷ್ಟಿಯಿಂದ ದೈವವು ಅನುಕೂಲವಾಗಿದೆಯೇ ಅಥವಾ ಇಲ್ಲವೇ ಎನ್ನುವುದನ್ನು ಮೊದಲು ನಿರ್ಧರಿಸುತ್ತಾರೆ.

12103004a ಪ್ರಾಯಶ್ಚಿತ್ತವಿಧಿಂ ಚಾತ್ರ ಜಪಹೋಮಾಂಶ್ಚ ತದ್ವಿದಃ|
12103004c ಮಂಗಲಾನಿ ಚ ಕುರ್ವಂತಃ ಶಮಯಂತ್ಯಹಿತಾನ್ಯಪಿ||

ದೈವವು ಅಹಿತವಾಗಿದ್ದರೂ ಆ ವಿದುಗಳು ಜಪ-ಹೋಮಾದಿ ಮಂಗಲ ಕರ್ಮಗಳನ್ನೂ ಪ್ರಾಯಶ್ಚಿತ್ತ ವಿಧಿಗಳನ್ನೂ ನಡೆಸಿ ಆ ಅಹಿತಗಳನ್ನು ಪ್ರಶಮನಗೊಳಿಸುತ್ತಾರೆ.

12103005a ಉದೀರ್ಣಮನಸೋ ಯೋಧಾ ವಾಹನಾನಿ ಚ ಭಾರತ|
12103005c ಯಸ್ಯಾಂ ಭವಂತಿ ಸೇನಾಯಾಂ ಧ್ರುವಂ ತಸ್ಯಾಂ ಜಯಂ ವದೇತ್||

ಭಾರತ! ಯಾವ ಸೇನೆಯ ಯೋಧರೂ ವಾಹನಗಳೂ

ಉತ್ಸಾಹಿತರಾಗಿರುವರೋ ಆ ಸೇನೆಗೆ ಜಯವು ನಿಶ್ಚಿತ ಎಂದು ಹೇಳುತ್ತಾರೆ.

12103006a ಅನ್ವೇನಾಂ ವಾಯವೋ ವಾಂತಿ ತಥೈವೇಂದ್ರಧನೂಂಷಿ ಚ|
12103006c ಅನುಪ್ಲವಂತೇ ಮೇಘಾಶ್ಚ ತಥಾದಿತ್ಯಸ್ಯ ರಶ್ಮಯಃ||
12103007a ಗೋಮಾಯವಶ್ಚಾನುಲೋಮಾ ವಡಾ ಗೃಧ್ರಾಶ್ಚ ಸರ್ವಶಃ|
12103007c ಆಚರೇಯುರ್ಯದಾ ಸೇನಾಂ ತದಾ ಸಿದ್ಧಿರನುತ್ತಮಾ||

ಸೇನೆಯ ಹಿಂಬಾಗದಿಂದ ಗಾಳಿಯು ಬೀಸುತ್ತಿದ್ದರೆ, ಸೇನೆಯ ಹಿಂದೆ ಕಾಮನ ಬಿಲ್ಲು ಕಂಡುಬಂಡರೆ, ಮೋಡಗಳು ನೆತ್ತಿಯ ಮೇಲೆ ಹಾಯ್ದು ಹೋಗುತ್ತಿದ್ದರೆ, ಸೂರ್ಯನ ಕಿರಣಗಳು ಬೀಳುತ್ತಿದ್ದರೆ, ಗುಳ್ಳೇನರಿ-ರಣಹದ್ದು-ಕಾಗೆಗಳು ಸೇನೆಯ ಸುತ್ತಲೂ ಇದ್ದರೆ ಆ ಸೇನೆಗೆ ಉತ್ತಮ ಸಿದ್ಧಿಯಾಗುತ್ತದೆ.

12103008a ಪ್ರಸನ್ನಭಾಃ ಪಾವಕ ಊರ್ಧ್ವರಶ್ಮಿಃ
ಪ್ರದಕ್ಷಿಣಾವರ್ತಶಿಖೋ ವಿಧೂಮಃ|
12103008c ಪುಣ್ಯಾ ಗಂಧಾಶ್ಚಾಹುತೀನಾಂ ಪ್ರವಾಂತಿ
ಜಯಸ್ಯೈತದ್ ಭಾವಿನೋ ರೂಪಮಾಹುಃ||

ಅಗ್ನ್ಯಾಗಾರದಲ್ಲಿ ಯಜ್ಞೇಶ್ವರನು ಪ್ರಸನ್ನ ಕಾಂತಿಯಿಂದ ಕೂಡಿದ್ದರೆ, ಜ್ವಾಲೆಗಳು ಊರ್ಧ್ವಮುಖವಾಗಿದ್ದರೆ, ಜ್ವಾಲೆಗಳು ಪ್ರದಕ್ಷಿಣಾಕಾರವಾಗಿ ಚಲಿಸುತ್ತಿದ್ದರೆ, ಹೊಗೆಯಿಲ್ಲದೇ ಉರಿಯುತ್ತಿದ್ದರೆ, ಪುಣ್ಯ ಗಂಧವನ್ನು ಹೊರಸೂಸುತ್ತಿದ್ದರೆ, ಅದು ಮುಂದಾಗುವ ವಿಜಯವನ್ನು ಸೂಚಿಸುತ್ತದೆ.

12103009a ಗಂಭೀರಶಬ್ದಾಶ್ಚ ಮಹಾಸ್ವನಾಶ್ಚ

ಶಂಖಾಶ್ಚ ಭೇರ್ಯಶ್ಚ ನದಂತಿ ಯತ್ರ|
12103009c ಯುಯುತ್ಸವಶ್ಚಾಪ್ರತೀಪಾ ಭವಂತಿ
ಜಯಸ್ಯೈತದ್ ಭಾವಿನೋ ರೂಪಮಾಹುಃ||

ಎಲ್ಲಿ ಗಂಭೀರ ಶಬ್ದಗಳು ಮತ್ತು ಮಹಾ ಧ್ವನಿಗಳು ಕೇಳಿಬರುತ್ತವೆಯೋ, ಎಲ್ಲಿ ಶಂಖ-ಭೇರಿಗಳು ಮೊಳಗುತ್ತವೆಯೋ, ಮತ್ತು ಎಲ್ಲಿ ಸೈನಿಕರು ಯುದ್ಧೋತ್ಸುಕರಾಗಿರುವರೋ ಅಲ್ಲಿ ವಿಜಯವು ಕಂಡುಬರುತ್ತದೆ ಎಂದು ಹೇಳುತ್ತಾರೆ.

12103010a ಇಷ್ಟಾ ಮೃಗಾಃ ಪೃಷ್ಠತೋ ವಾಮತಶ್ಚ
ಸಂಪ್ರಸ್ಥಿತಾನಾಂ ಚ ಗಮಿಷ್ಯತಾಂ ಚ|
12103010c ಜಿಘಾಂಸತಾಂ ದಕ್ಷಿಣಾಃ ಸಿದ್ಧಿಮಾಹುರ್
ಯೇ ತ್ವಗ್ರತಸ್ತೇ ಪ್ರತಿಷೇಧಯಂತಿ||

ಸೇನೆಯು ಹೊರಡುವಾಗ ಅಥವಾ ಪ್ರಯಾಣಿಸುತ್ತಿರುವಾಗ ಇಷ್ಟ ಮೃಗಗಳು ಹಿಂದಿನಿಂದ ಅಥವಾ ಎಡಭಾಗದಿಂದ ಹೋದರೆ ಇಚ್ಛಿಸಿದ ಕಾರ್ಯವು ಸಿದ್ಧಿಯಾಗುತ್ತದೆ ಎಂದು ಹೇಳುತ್ತಾರೆ. ಯುದ್ಧದ ಸಮಯದಲ್ಲಿ ಇವು ಬಲಭಾಗದಲ್ಲಿದ್ದರೆ ಅದು ವಿಜಯವನ್ನು ಸೂಚಿಸುತ್ತದೆ. ಆದರೆ ಆ ಮೃಗಗಳು ಸೇನೆಯು ಹೊರಡುವಾಗ ಎದುರಿನಿಂದ ಬಂದರೆ ಯುದ್ಧಕ್ಕೆ ಹೋಗುವುದನ್ನು ನಿಷೇಧಿಸುತ್ತಿವೆಯೆಂದು ತಿಳಿಯಬೇಕು.

12103011a ಮಂಗಲ್ಯಶಬ್ದಾಃ ಶಕುನಾ ವದಂತಿ
ಹಂಸಾಃ ಕ್ರೌಂಚಾಃ ಶತಪತ್ರಾಶ್ಚ ಚಾಷಾಃ|
12103011c ಹೃಷ್ಟಾ ಯೋಧಾಃ ಸತ್ತ್ವವಂತೋ ಭವಂತಿ

ಜಯಸ್ಯೈತದ್ ಭಾವಿನೋ ರೂಪಮಾಹುಃ||

ಹಂಸ, ಕ್ರೌಂಚ, ಶತಪತ್ರ, ನವಿಲು ಮತ್ತು ಕಾಡಿನ ಕಾಗೆ ಮೊದಲಾದ ಪಕ್ಷಿಗಳು ಮಂಗಲವಾಗಿ ಕೂಗಿಕೊಳ್ಳುತ್ತಿದ್ದರೆ, ಯೋಧರು ಹೃಷ್ಟರೂ ಸತ್ತ್ವವಂತರೂ ಆಗಿದ್ದರೆ ಅವು ಮುಂದೆ ಆಗುವ ವಿಜಯವನ್ನು ಸೂಚಿಸುತ್ತವೆ ಎಂದು ಹೇಳುತ್ತಾರೆ.

12103012a ಶಸ್ತ್ರೈಃ ಪತ್ರೈಃ ಕವಚೈಃ ಕೇತುಭಿಶ್ಚ
ಸುಭಾನುಭಿರ್ಮುಖವರ್ಣೈಶ್ಚ ಯೂನಾಮ್|
12103012c ಭ್ರಾಜಿಷ್ಮತೀ ದುಷ್ಪ್ರತಿಪ್ರೇಕ್ಷಣೀಯಾ
ಯೇಷಾಂ ಚಮೂಸ್ತೇऽಭಿಭವಂತಿ ಶತ್ರೂನ್||

ಯಾರ ಸೈನ್ಯವು ಪ್ರಕಾಶಿಸುವ ನಾನಾ ವಿಧದ ಶಸ್ತ್ರ-ಕವಚ-ಯಂತ್ರ-ಧ್ವಜಗಳಿಂದ ಸುಶೋಭಿತವಾಗಿದೆಯೋ, ನವಯುವಕ ಸೈನಿಕರು ಕಾಂತಿಯುಕ್ತ ಮುಖವರ್ಣದಿಂದ ಪ್ರಕಾಶಿಸುತ್ತಿರುವರೋ, ದೇದೀಪ್ಯಮಾನವಾದ ಯಾರ ಸೈನ್ಯವನ್ನು ಶತ್ರುಗಳು ನೋಡಲೂ ಸಾಧ್ಯವಾಗುವುದಿಲ್ಲವೋ ಅಂತಹ ಸೈನ್ಯವು ಶತ್ರುಗಳನ್ನು ಪರಾಜಯಗೊಳಿಸುತ್ತದೆ.

12103013a ಶುಶ್ರೂಷವಶ್ಚಾನಭಿಮಾನಿನಶ್ಚ
ಪರಸ್ಪರಂ ಸೌಹೃದಮಾಸ್ಥಿತಾಶ್ಚ|
12103013c ಯೇಷಾಂ ಯೋಧಾಃ ಶೌಚಮನುಷ್ಠಿತಾಶ್ಚ
ಜಯಸ್ಯೈತದ್ ಭಾವಿನೋ ರೂಪಮಾಹುಃ||

ಯಾರ ಯೋಧರು ಸೇವಾಪರರೂ ಅಭಿಮಾನಿಗಳೂ ಆಗಿದ್ದು ಪರಸ್ಪರರಲ್ಲಿ ಸೌಹಾರ್ದತೆಯಿಂದ ಇರುವರೋ ಮತ್ತು

ಶೌಚಾಚಾರಗಳನ್ನಿಟ್ಟುಕೊಂಡಿರುವರೋ ಅವರು ಮುಂದೆ ಬರುವ ವಿಜಯವನ್ನು ಸೂಚಿಸುತ್ತಾರೆ.

12103014a ಶಬ್ದಾಃ ಸ್ಪರ್ಶಾಸ್ತಥಾ ಗಂಧಾ ವಿಚರಂತಿ ಮನಃಪ್ರಿಯಾಃ|
12103014c ಧೈರ್ಯಂ ಚಾವಿಶತೇ ಯೋಧಾನ್ವಿಜಯಸ್ಯ ಮುಖಂ ತು ತತ್‌||

ಮನಃಪ್ರಿಯವಾದ ಶಬ್ಧ-ಸ್ಪರ್ಶ-ಗಂಧಗಳೊಡನೆ ಧೈರ್ಯವೂ ಯೋಧರ ಮನಸ್ಸನ್ನು ಆವರಿಸಿದರೆ ಅದು ವಿಜಯಕ್ಕೆ ಮುಖ್ಯ ದ್ವಾರವಾಗುತ್ತದೆ.

12103015a ಇಷ್ಟೋ ವಾಮಃ ಪ್ರವಿಷ್ಟಸ್ಯ ದಕ್ಷಿಣಃ ಪ್ರವಿವಿಕ್ಷತಃ|
12103015c ಪಶ್ಚಾತ್ ಸಂಸಾಧಯತ್ಯರ್ಥಂ ಪುರಸ್ತಾತ್ ಪ್ರತಿಷೇಧತಿ[321]‌||

ರಣರಂಗವನ್ನು ಪ್ರವೇಶಿಸುವವನ ಎಡಗಡೆಯಲ್ಲಿ ಮತ್ತು ಎದುರಾಳಿಯ ಬಲಗಡೆಯಲ್ಲಿ ಕಾಗೆಯು[322] ಬಂದರೆ ವಿಜಯವನ್ನು ಸೂಚಿಸುತ್ತದೆ. ಎದುರಿನಿಂದ ಬಂದರೆ ವಿಜಯವನ್ನು ತಡೆಯುತ್ತದೆ.

12103016a ಸಂಭೃತ್ಯ ಮಹತೀಂ ಸೇನಾಂ ಚತುರಂಗಾಂ ಯುಧಿಷ್ಠಿರ|
12103016c ಸಾಮ್ನೈವಾವರ್ತನೇ ಪೂರ್ವಂ ಪ್ರಯತೇತಾಸ್ತಥೋ ಯುಧಿ‌||

ಯುಧಿಷ್ಠಿರ! ಮಹಾ ಚತುರಂಗ ಸೇನೆಯನ್ನು ಸಿದ್ಧಗೊಳಿಸಿದ ನಂತರವೂ ಯುದ್ಧದ ಮೊದಲು ಸಾಮನೀತಿಯಿಂದಲೇ ವರ್ತಿಸಬೇಕು. ಸಂಧಿಯ

---

321 ಪುರಸ್ತಾಶ್ಚ ನಿಷೇಧತಿ| (ಭಾರತ ದರ್ಶನ).

322 ಈ ಶ್ಲೋಕದಲ್ಲಿ ಕಾಗೆಯ ಕುರಿತಾದ ಶಬ್ಧದ ಬಳಕೆಯಿಲ್ಲದಿದ್ದರೂ ಇದು ಕಾಗೆಯ ಕುರಿತಾಗಿದೆ ಎಂದು ವ್ಯಾಖ್ಯಾನಕಾರರು ಸೂಚಿಸಿದ್ದಾರೆ (ಭಾರತ ದರ್ಶನ).

ಪ್ರಯತ್ನಗಳು ನಿಷ್ಪ್ರಯೋಜಕವಾದ ನಂತರವೇ ಯುದ್ಧವನ್ನು
ಪ್ರಾರಂಭಿಸಬೇಕು.

12103017a ಜಘನ್ಯ ಏಷ ವಿಜಯೋ ಯದ್ಯುದ್ಧಂ ನಾಮ ಭಾರತ|
12103017c ಯಾದೃಚ್ಚಿಕೋ ಯುಧಿ ಜಯೋ ದೈವೋ ವೇತಿ ವಿಚಾರಣಮ್||

ಭಾರತ! ಯುದ್ಧದಲ್ಲಿ ವಿಜಯ ಯಾರಿಗುಂಟಾಗುತ್ತದೆ ಎನ್ನುವುದನ್ನು
ತಿಳಿಯುವುದು ಕಷ್ಟಸಾಧ್ಯ. ವಿಜಯವು ಆಕಸ್ಮಿಕವೋ ದೈವೇಚ್ಛೆಯೋ
ಎನ್ನುವುದು ವಿಚಾರಣೀಯ. ವಿಜಯವು ಇಂಥವರಿಗೇ
ಲಭಿಸುವುದೆಂದು ಮೊದಲೇ ನಿಶ್ಚಯಮಾಡಿ ಹೇಳಲು ಸಾಧ್ಯವಿಲ್ಲ.

12103018a ಅಪಾಮಿವ ಮಹಾವೇಗಸ್ತ್ರಸ್ತಾ ಮೃಗಗಣಾ ಇವ|
12103018c ದುರ್ನಿವಾರ್ಯತಮಾ ಚೈವ ಪ್ರಭಗ್ನಾ ಮಹತೀ ಚಮೂಃ||

ಮಹಾವೇಗದಿಂದ ಹರಿಯುವ ನೀರನ್ನು ಮತ್ತು ಭಯಗೊಂಡ
ಮೃಗಗಣಗಳನ್ನು ತಡೆಯಲು ಸಾಧ್ಯವಾಗದಂತೆ ಭಗ್ನವಾದ
ಸೇನೆಯನ್ನು ತಡೆಯಲು ಸಾಧ್ಯವಿಲ್ಲ. ಆದುದರಿಂದ ದೊಡ್ಡ ಸೈನ್ಯವಿದ್ದ
ಮಾತ್ರಕ್ಕೆ ಜಯವು ದೊರೆಯುತ್ತದೆಯೆಂದು ಹೇಳಲಿಕ್ಕಾಗುವುದಿಲ್ಲ.

12103019a ಭಗ್ನಾ ಇತ್ಯೇವ ಭಜ್ಯಂತೇ ವಿದ್ವಾಂಸೋಽಪಿ ನಕಾರಣಮ್|
12103019c ಉದಾರಸಾರಾ ಮಹತೀ ರುರುಸಂಘೋಪಮಾ ಚಮೂಃ||

ಜಿಂಕೆಗಳ ಹಿಂಡಿನಂತಿರುವ ಸೇನೆಯು[323] ಎಷ್ಟೇ ಬಲವತ್ತವಾಗಿದ್ದರೂ

[323] ವಿಶಾಲ ಸೇನೆಯು ಜಿಂಕೆಗಳ ಹಿಂಡಿನಂತೆಯೇ ಇರುತ್ತದೆ. ಮುಂದಿರುವ
ಒಂದು ಮೃಗವು ಓಡಲು ಪ್ರಾರಂಭಿಸಿದರೆ ಇತರ ಮೃಗಗಳೂ ಯುಕ್ತಾಯುಕ್ತ
ವಿವೇಚನೆಯಿಲ್ಲದೇ ನಾಗಾಲೋಟದಿಂದ ಓಡಿ ಹೋಗುವಂತೆ ಸೈನ್ಯವು ಎಷ್ಟೇ

ಮತ್ತು ದೊಡ್ಡದಾಗಿದ್ದರೂ ಅವು ಓಡಲು ಪ್ರಾರಂಭಿಸಿದರೆ
ವಿದ್ವಾಂಸರೂ ಅವರನ್ನು ತಡೆಯಲು ಶಕ್ಯರಾಗುವುದಿಲ್ಲ.

12103020a ಪರಸ್ಪರಜ್ಞಾಃ ಸಂಹೃಷ್ಟಾಸ್ತ್ಯಕ್ತಪ್ರಾಣಾಃ ಸುನಿಶ್ಚಿತಾಃ|
12103020c ಅಪಿ ಪಂಚಾಶತಿಃ ಶೂರಾ ಮೃದ್ನಂತಿ ಪರವಾಹಿನೀಮ್||

ಪರಸ್ಪರರನ್ನು ಚೆನ್ನಾಗಿ ತಿಳಿದುಕೊಂಡಿರುವ, ಸಂಹೃಷ್ಟರಾದ,
ಪ್ರಾಣವನ್ನೂ ತೊರೆಯಲು ಸಿದ್ಧರಾಗಿರುವ, ಸುನಿಶ್ಚಿತರಾದ ಐವತ್ತು
ಶೂರರು ಇದ್ದರೂ ಅವರು ಶತ್ರುಸೇನೆಯನ್ನು ಸದೆಬಡಿಯಬಲ್ಲರು.

12103021a ಅಥ ವಾ ಪಂಚ ಷಟ್ಸಪ್ತ ಸಹಿತಾಃ ಕೃತನಿಶ್ಚಯಾಃ|
12103021c ಕುಲೀನಾಃ ಪೂಜಿತಾಃ ಸಮ್ಯಗ್ವಿಜಯಂತೀಹ ಶಾತ್ರವಾನ್||

ಸತ್ಕುಲ ಪ್ರಸೂತರಾದ ಗೌರವಾನ್ವಿತರಾದ ಐದು, ಆರು ಅಥವಾ ಏಳು
ಮಂದಿಯೇ ಒಟ್ಟಾಗಿ ನಿಶ್ಚಯಿಸಿ ಯುದ್ಧಮಾಡಿದರೆ ಅವರೂ ಕೂಡ
ಶತ್ರುಗಳನ್ನು ಗೆದ್ದು ವಿಜಯವನ್ನು ಗಳಿಸಬಹುದು.

12103022a ಸಂನಿಪಾತೋ ನ ಗಂತವ್ಯಃ ಶಕ್ಯೇ ಸತಿ ಕಥಂ ಚನ|
12103022c ಸಾಂತ್ವಭೇದಪ್ರದಾನಾನಾಂ ಯುದ್ಧಮುತ್ತರಮುಚ್ಯತೇ||

ಬಲವತ್ತರವಾಗಿದ್ದರೂ ಚಮೂ ಮಧ್ಯದಲ್ಲಿರುವ ಒಬ್ಬ ಪದಾತಿಯು
ಯಾವುದೋ ಕಾರಣದಿಂದ ಓಡಿ ಹೋಗಲು ಪ್ರಾರಂಭಿಸಿದರೆ ಅವನು ಓಡಿ
ಹೋಗುವುದಕ್ಕೆ ಕಾರಣವನ್ನು ತಿಳಿಯುವ ಗೋಜಿಗೆ ಹೋಗದೇ ಉಳಿದವರೂ
ಅವನನ್ನೇ ಹಿಂಬಾಲಿಸಿ ಓಡುತ್ತಾರೆ. "ಸೇನೆಯು ಭಗ್ನವಾಯಿತು" ಎಂಬ
ಒಂದು ಕಿಂವದಂತಿಯಿಂದಲೇ ಸೈನ್ಯವು ಭಗ್ನವಾಗಿ ಹೋಗಬಲ್ಲದು (ಭಾರತ
ದರ್ಶನ).

ಬೇರೆ ಯಾವುದೇ ಉಪಾಯದಿಂದಲೂ ಸಾಧ್ಯವಾದರೆ ಯುದ್ಧಕ್ಕೆ ಹೋಗಬಾರದು. ಸಾಮ-ಭೇದ-ದಾನೋಪಾಯಗಳು ಸಿದ್ಧಿಯಾಗದಿದ್ದರೆ ಮಾತ್ರ ಕಟ್ಟಕಡೆಯದಾಗಿ ಯುದ್ಧವನ್ನು ಆಶ್ರಯಿಸಬೇಕೆಂದು ಹೇಳುತ್ತಾರೆ.

12103023a ಸಂಸರ್ಪಣಾದ್ಧಿ[324] ಸೇನಾಯಾ ಭಯಂ ಭೀರೂನ್ ಪ್ರಬಾಧತೇ|
12103023c ವಜ್ರಾದಿವ ಪ್ರಜ್ವಲಿತಾದಿಯಂ ಕ್ವ ನು ಪತಿಷ್ಯತಿ||

ಸೇನೆಯು ಹತ್ತಿರ ಹರಿದು ಬಂದಂತೆಯೇ "ಪ್ರಜ್ವಲಿಸುವ ವಜ್ರದಂತಿರುವ ಈ ಸೇನೆಯು ಯಾರ ಮೇಲೆ ಬೀಳುತ್ತದೆ?" ಎಂಬ ಭಯವು ಹೇಡಿಗಳನ್ನು ಬಾಧಿಸುತ್ತದೆ.

12103024a ಅಭಿಪ್ರಯಾತಾಂ ಸಮಿತಿಂ ಜ್ಞಾತ್ವಾ ಯೇ ಪ್ರತಿಯಾಂತ್ಯಥ|
12103024c ತೇಷಾಂ ಸ್ಪಂದಂತಿ ಗಾತ್ರಾಣಿ ಯೋಧಾನಾಂ ವಿಷಯಸ್ಯ[325] ಚ||

ಸೇನೆಯು ಆಕ್ರಮಣಿಸಲು ಸಿದ್ಧವಾಗಿದೆಯೆಂದು ತಿಳಿದು ಯುದ್ಧಮಾಡುವ ಉತ್ಸಾಹದಿಂದ ಅದನ್ನು ಎದುರಿಸಲು ಹೋಗುವ ಯೋಧರ ಶರೀರಗಳೂ, ಅವರು ನಿಂತಿರುವ ಪ್ರದೇಶವೂ ಸ್ಪಂದಿಸುತ್ತವೆ.

12103025a ವಿಷಯೋ ವ್ಯಥತೇ ರಾಜನ್ ಸರ್ವಃ ಸಸ್ಥಾಣುಜಂಗಮಃ|
12103025c ಶಸ್ತ್ರಪ್ರತಾಪತಪ್ತಾನಾಂ ಮಜ್ಜಾ ಸೀದತಿ ದೇಹಿನಾಮ್||

ರಾಜನ್! ಯುದ್ಧವು ಉಪಸ್ಥಿತವಾಯಿತೆಂದರೆ ದೇಶದಲ್ಲಿರುವ

---

[324] ಸಂದರ್ಶನ್ಯೈವ ಎಂಬ ಪಾಠಾಂತರವಿದೆ (ಭಾರತ ದರ್ಶನ).

[325] ವಿಜಯಸ್ಯ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಸ್ಥಾವರ-ಜಂಗಮಗಳ ಸಮೇತವಾಗಿ ಎಲ್ಲವೂ ದುಃಖಿಪಡುತ್ತವೆ. ಆ ರಾಜನ ಪ್ರತಾಪದಿಂದ ಸಂತಪ್ತರಾದವರ ಮಜ್ಜೆಯೂ ಕರಗಿ ಹೋಗುತ್ತದೆ.

12103026a ತೇಷಾಂ ಸಾಂತ್ವಂ ಕ್ರೂರಮಿಶ್ರಂ ಪ್ರಣೇತವ್ಯಂ ಪುನಃ ಪುನಃ|
12103026c ಸಂಪೀಡ್ಯಮಾನಾ ಹಿ ಪರೇ ಯೋಗಮಾಯಾಂತಿ ಸರ್ವಶಃ||

ಅವರೊಂದಿಗೆ ಕ್ರೂರಮಿಶ್ರವಾದ ಸಾಂತ್ವನ ಮಾತುಗಳನ್ನು ಪುನಃ ಪುನಃ ಹೇಳುತ್ತಿರಬೇಕು. ಇಲ್ಲವಾದರೆ ಪೀಡಿತರಾದ ಅವರು ಎಲ್ಲರೂ ಶತ್ರುಗಳ ಪಕ್ಷವನ್ನು ಸೇರಿಕೊಳ್ಳುತ್ತಾರೆ.

12103027a ಅಂತರಾಣಾಂ ಚ ಭೇದಾರ್ಥಂ ಚಾರಾನಭ್ಯವಚಾರಯೇತ್|
12103027c ಯಶ್ಚ ತಸ್ಮಾತ್ಪರೋ ರಾಜಾ ತೇನ ಸಂಧಿಃ ಪ್ರಶಸ್ಯತೇ||

ಶತ್ರುಗಳಿಗೂ ಮತ್ತು ಅವರ ಮಿತ್ರರಿಗೂ ಭೇದವನ್ನುಂಟುಮಾಡಲು ಚಾರರನ್ನು ಬಳಸಬೇಕು. ಶತ್ರುವು ತನಗಿಂತಲೂ ಬಲಿಷ್ಠ ರಾಜನಾಗಿದ್ದರೆ ಅವನೊಡನೆ ಸಂಧಿ ಮಾಡಿಕೊಳ್ಳುವುದೇ ಪ್ರಶಸ್ತವಾಗುತ್ತದೆ.

12103028a ನ ಹಿ ತಸ್ಯಾನ್ಯಥಾ ಪೀಡಾ ಶಕ್ಯಾ ಕರ್ತುಂ ತಥಾವಿಧಾ|
12103028c ಯಥಾ ಸಾರ್ಧಮಮಿತ್ರೇಣ ಸರ್ವತಃ ಪ್ರತಿಬಾಧನಮ್||

ಶತ್ರುವಿಗಿಂತಲೂ ಬಲಿಷ್ಠನಾದ ಶತ್ರುವಿನ ಶತ್ರುವಿನೊಡನೆ ಸಂಧಿಮಾಡಿಕೊಂಡರೆ ಶತ್ರುವಿಗೆ ಹೆಚ್ಚು ಪೀಡೆಯುಂಟಾಗುತ್ತದೆ. ಅವನಿಗೆ ಅದಕ್ಕಿಂತಲೂ ಹೆಚ್ಚಿನ ಪೀಡೆಯು ಬೇರೊಂದಿರುವುದಿಲ್ಲ. ಶತ್ರುಪಕ್ಷವು ಎಲ್ಲ ಕಡೆಗಳಿಂದಲೂ ಸಂಕಟದಲ್ಲಿರುವಂತೆ ಮಾಡಿ ನಂತರ ಯುದ್ಧಮಾಡಬೇಕು.

12103029a ಕ್ಷಮಾ ವೈ ಸಾಧುಮಾಯಾ ಹಿ ನ ಹಿ ಸಾಧ್ವಕ್ಷಮಾ ಸದಾ[326]|
12103029c ಕ್ಷಮಾಯಾಶ್ಚಾಕ್ಷಮಾಯಾಶ್ಚ ವಿದ್ಧಿ ಪಾರ್ಥ ಪ್ರಯೋಜನಮ್||

ಕ್ಷಮೆಯು ಸಾಧುಜನರ ಗುಣವು. ಸಾಧುಜನರು ಎಂದೂ ಅಕ್ಷಮರಾಗಿರುವುದಿಲ್ಲ. ಪಾರ್ಥ! ಕ್ಷಮೆ ಮತ್ತು ಅಕ್ಷಮೆ ಇವುಗಳ ಪ್ರಯೋಜನವನ್ನು ತಿಳಿದುಕೋ.

12103030a ವಿಜಿತ್ಯ ಕ್ಷಮಮಾಣಸ್ಯ ಯಶೋ ರಾಜ್ಞೋಽಭಿವರ್ಧತೇ|
12103030c ಮಹಾಪರಾಧಾ ಹ್ಯಪ್ಯಸ್ಮಿನ್ ವಿಶ್ವಸಂತಿ ಹಿ ಶತ್ರವಃ||

ಗೆದ್ದು ಕ್ಷಮಿಸುವ ರಾಜನ ಯಶಸ್ಸು ಹೆಚ್ಚಾಗುತ್ತದೆ. ಅವನು ಮಹಾ ಅಪರಾಧವನ್ನು ಮಾಡಿದ್ದರೂ ಶತ್ರುಗಳು ಅವನ ಮೇಲೆ ವಿಶ್ವಾಸವನ್ನಿಡುತ್ತಾರೆ.

12103031a ಮನ್ಯತೇ ಕರ್ಶಯಿತ್ವಾ ತು ಕ್ಷಮಾ ಸಾಧ್ವಿತಿ ಶಂಬರಃ|
12103031c ಅಸಂತಪ್ತಂ ತು ಯದ್ದಾರು ಪ್ರತ್ಯೇತಿ ಪ್ರಕೃತಿಂ ಪುನಃ||

ಶಂಬರನ ಅಭಿಪ್ರಾಯವು ಹೀಗಿದೆ: ಮೊದಲು ಶತ್ರುವನ್ನು ಪೀಡಿಸಿ ನಂತರ ಕ್ಷಮಿಸುವುದು ಒಳ್ಳೆಯದು. ಆಗಲೇ ಶತ್ರುವು ವಿನೀತನಾಗುತ್ತಾನೆ. ಬೆತ್ತವನ್ನು ಕಾಯಿಸದೇ ಬಗ್ಗಿಸಿದರೆ ಅದು ಪುನಃ ಹಿಂದಿನಂತೆಯೇ ಋಜುವಾಗಿ ನಿಲ್ಲುತ್ತದೆ.

12103032a ನೈತತ್ ಪ್ರಶಂಸಂತ್ಯಾಚಾರ್ಯಾ ನ ಚ ಸಾಧು ನಿದರ್ಶನಮ್|

---

[326] ಕ್ಷಮಾ ವೈ ಸಾಧುಮಾಯಾತಿ ನ ಹ್ಯಸಾಧೂನ್ ಕ್ಷಮಾ ಸದಾ| ಎಂಬ ಪಾಠಾಂತರವಿದೆ (ಭಾರತ ದರ್ಶನ).

12103032c ಅಕ್ಲೇಶೇನಾವಿನಾಶೇನ[327] ನಿಯಂತವ್ಯಾಃ ಸ್ವಪುತ್ರವತ್‌॥

ಆದರೆ ಇದು ಸಾಧುಪುರುಷರ ನಿದರ್ಶನವಲ್ಲವೆಂದು ಆಚಾರ್ಯರು ಇದನ್ನು ಪ್ರಶಂಸಿಸುವುದಿಲ್ಲ. ಸೋತವನನ್ನು ಪೀಡಿಸದೆಯೇ ಮತ್ತು ವಿನಾಶಗೊಳಿಸದೆಯೇ ತನ್ನ ಪುತ್ರನಂತೆಯೇ ನಿಯಂತ್ರಿಸಬೇಕು.

12103033a ದ್ವೇಷ್ಯೋ ಭವತಿ ಭೂತಾನಾಮುಗ್ರೋ ರಾಜಾ ಯುಧಿಷ್ಠಿರ|
12103033c ಮೃದುಮಪ್ಯವಮನ್ಯಂತೇ ತಸ್ಮಾದುಭಯಭಾಗ್‌ ಭವೇತ್‌॥

ಯುಧಿಷ್ಠಿರ! ರಾಜನು ಉಗ್ರನಾಗಿದ್ದರೆ ಅವನು ಎಲ್ಲ ಪ್ರಾಣಿಗಳ ದ್ವೇಷಕ್ಕೀಡಾಗುತ್ತಾನೆ. ಅತ್ಯಂತ ಮೃದುವಾಗಿದ್ದರೂ ಅವನನ್ನು ಅನಾದರಣೆ ಮಾಡುತ್ತಾರೆ. ಆದುದರಿಂದ ರಾಜನೂ ಎರಡೂ ಆಗಿರಬೇಕು.

12103034a ಪ್ರಹರಿಷ್ಯನ್‌ ಪ್ರಿಯಂ ಬ್ರೂಯಾತ್‌ ಪ್ರಹರನ್ನಪಿ ಭಾರತ|
12103034c ಪ್ರಹೃತ್ಯ ಚ ಕೃಪಾಯೇತ ಶೋಚನ್ನಿವ ರುದನ್ನಿವ॥

ಭಾರತ! ಪ್ರಹರಿಸುವ ಮೊದಲು ಮತ್ತು ಪ್ರಹರಿಸುವಾಗ ಶತ್ರುವಿನೊಂದಿಗೆ ಪ್ರಿಯವಾಗಿಯೇ ಮಾತನಾಡಬೇಕು. ಪ್ರಹರಿಸಿದ ನಂತರ ಕೃಪೆತೋರಿಸಿ ಶೋಕವನ್ನೂ ರೋದನವನ್ನೂ ಪ್ರಕಟಿಸಬೇಕು.

12103035a ನ ಮೇ ಪ್ರಿಯಂ ಯತ್ಸ ಹತಃ ಸಂಪ್ರಾಹೈವಂ ಪುರೋ ವಚಃ[328]|

---

[327] ಅಕ್ರೋಧೇನಾವಿನಾಶೇನ ಎಂಬ ಪಾಠಾಂತರವಿದೆ (ಭಾರತ ದರ್ಶನ).

[328] ನ ಮೇ ಪ್ರಿಯಂ ಯನ್ನಿಹತಾಃ ಸಂಗ್ರಾಮೇ ಮಾಮಕೈರ್ನರೈಃ| (ಭಾರತ ದರ್ಶನ).

12103035c ನ ಚಕರ್ಥ ಚ[329] ಮೇ ವಾಕ್ಯಮುಚ್ಯಮಾನಃ ಪುನಃ ಪುನಃ||

“ಅವರನ್ನು ಕೊಲ್ಲಬೇಡಿ ಎಂದು ನಾನು ಪುನಃ ಪುನಃ ಹೇಳುತ್ತಿದ್ದರೂ ಯುದ್ಧದಲ್ಲಿ ನೀವು ಹತರಾದುದು ನನಗೆ ಪ್ರಿಯವಾದುದಲ್ಲ.

12103036a ಅಹೋ ಜೀವಿತಮಾಕಾಂಕ್ಷೇ ನೇದೃಶೋ ವಧಮರ್ಹತಿ|
12103036c ಸುದುರ್ಲಭಾಃ ಸುಪುರುಷಾಃ ಸಂಗ್ರಾಮೇಷ್ವಪಲಾಯಿನಃ||

ಅಯ್ಯೋ! ಜೀವಿತದಲ್ಲಿ ಆಕಾಂಕ್ಷೆಯನ್ನಿಟ್ಟಿದ್ದ ಅವರನ್ನು ವಧಿಸಬಾರದಾಗಿತ್ತು. ಯುದ್ಧದಲ್ಲಿ ಪಲಾಯನ ಮಾಡದಿರುವ ಸತ್ಪುರುಷರು ದುರ್ಲಭರು.

12103037a ಕೃತಂ ಮಮಾಪ್ರಿಯಂ ತೇನ ಯೇನಾಯಂ ನಿಹತೋ ಮೃಧೇ|
12103037c ಇತಿ ವಾಚಾ ವದನ್ ಹಂತೃನ್ ಪೂಜಯೇತ ರಹೋಗತಃ||

ಯುದ್ಧದಲ್ಲಿ ಅವರನ್ನು ಸಂಹರಿಸಿ ನಮ್ಮ ಯೋಧರು ನನಗೆ ಅಪ್ರಿಯವಾದುದನ್ನೇ ಮಾಡಿದ್ದಾರೆ.” ಶತ್ರುಗಳಿಗೆ ಕೇಳುವಂತೆ ಈ ರೀತಿಯ ಮಾತುಗಳನ್ನಾಡುತ್ತಾ ರಹಸ್ಯದಲ್ಲಿ ಶತ್ರುಗಳನ್ನು ಸಂಹರಿಸಿದವರನ್ನು ಪ್ರಶಂಸಿಸಬೇಕು.

12103038a ಹಂತೃಣಾಂ ಚಾಹತಾನಾಂ ಚ ಯತ್ಕುರ್ಯುರಪರಾಧಿನಃ|
12103038c ಕ್ರೋಶೇದ್ಬಾಹುಂ ಪ್ರಗೃಹ್ಯಾಪಿ ಚಿಕೀರ್ಷಂಜನಸಂಗ್ರಹಮ್||

ಹಾಗೆಯೇ ತನ್ನ ಪಕ್ಷದಲ್ಲಿ ಅಳಿದುಳಿದಿರುವ ಯೋಧರ ಮುಂದೆ ಅಳಿದು ಹೋಗಿರುವವರ ವಿಷಯವಾಗಿ ಅಪರಾಧಿಯು ಹೇಗೆ ಪಶ್ಚಾತ್ತಾಪವನ್ನು ಪ್ರಕಟಿಸುವನೋ ಹಾಗೆ ಪ್ರಶ್ಚಾತ್ತಾಪವನ್ನು ಪ್ರಕಟಿಸಬೇಕು. ಜನರ

[329] ನ ಚ ಕುರ್ವಂತಿ (ಭಾರತ ದರ್ಶನ).

ಒಲುಮೆಯನ್ನು ಸಂಪಾದಿಸಲು ಬಾಹುಗಳನ್ನು ಮೇಲೆತ್ತಿ ಯುದ್ದದಲ್ಲಿ ಸತ್ತವರ ಸಲುವಾಗಿ ರೋದಿಸಬೇಕು.

12103039a ಏವಂ ಸರ್ವಾಸ್ವವಸ್ಥಾಸು ಸಾಂತ್ವಪೂರ್ವಂ ಸಮಾಚರನ್|
12103039c ಪ್ರಿಯೋ ಭವತಿ ಭೂತಾನಾಂ ಧರ್ಮಜ್ಞೋ ವೀತಭೀರ್ನೃಪಃ||

ಹೀಗೆ ರಾಜನು ಸರ್ವಾವಸ್ಥೆಗಳಲ್ಲಿ ಸಾಂತ್ವಪೂರ್ವಕವಾಗಿಯೇ ವರ್ತಿಸಬೇಕು. ಧರ್ಮಜ್ಞ ನಿರ್ಭಯನಾದ ರಾಜನು ಹೀಗೆ ಮಾಡುವುದರಿಂದ ಎಲ್ಲರ ಪ್ರೀತಿಪಾತ್ರನಾಗುತ್ತಾನೆ.

12103040a ವಿಶ್ವಾಸಂ ಚಾತ್ರ ಗಚ್ಚಂತಿ ಸರ್ವಭೂತಾನಿ ಭಾರತ|
12103040c ವಿಶ್ವಸ್ತಃ ಶಕ್ಯತೇ ಭೋಕ್ತುಂ ಯಥಾಕಾಮಮುಪಸ್ಥಿತಃ||

ಭಾರತ! ಎಲ್ಲರೂ ಅಂತಹ ರಾಜನಲ್ಲಿ ವಿಶ್ವಾಸವನ್ನಿಡುತ್ತಾರೆ. ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾದ ರಾಜನು ತನಗಿಷ್ಟಬಂದಂತೆ ಭೋಗಿಸಲು ಶಕ್ಯನಾಗುತ್ತಾನೆ.

12103041a ತಸ್ಮಾದ್ವಿಶ್ವಾಸಯೇದ್ರಾಜಾ ಸರ್ವಭೂತಾನ್ಯಮಾಯಯಾ|
12103041c ಸರ್ವತಃ ಪರಿರಕ್ಷೇಚ್ಚ ಯೋ ಮಹೀಂ ಭೋಕ್ತುಮಿಚ್ಚತಿ||

ಆದುದರಿಂದ ರಾಜನು ಮೋಸ-ಕಪಟಗಳಿಲ್ಲದೇ ಎಲ್ಲರ ವಿಶ್ವಾಸವನ್ನೂ ಗಳಿಸಬೇಕು. ಮಹಿಯನ್ನು ಭೋಗಿಸಲು ಬಯಸುವವನು ಎಲ್ಲರನ್ನೂ ರಕ್ಷಿಸುತ್ತಿರಬೇಕು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಸೇನಾನೀತಿಕಥನೇ ತ್ರ್ಯಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ

೧೦೪

ಇಂದ್ರ-ಬೃಹಸ್ಪತಿ ಸಂವಾದ

ಶತ್ರುಗಳನ್ನು ವಶಪಡಿಸಿಕೊಳ್ಳುವ ನೀತಿ ಮತ್ತು ದುಷ್ಟರನ್ನು ಗುರುತಿಸುವಿಕೆಯ ಕುರಿತು ಇಂದ್ರ-ಬೃಹಸ್ಪತಿಯರ ಸಂವಾದ (1-52).

12104001 ಯುಧಿಷ್ಠಿರ ಉವಾಚ|
12104001a ಕಥಂ ಮೃದೌ ಕಥಂ ತೀಕ್ಷ್ಣೇ ಮಹಾಪಕ್ಷೇ ಚ ಪಾರ್ಥಿವ|
12104001c ಅರೌ ವರ್ತೇತ ನೃಪತಿಸ್ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಾರ್ಥಿವ! ಪಿತಾಮಹ! ರಾಜನಾದವನು ದೊಡ್ಡ ಪಕ್ಷದೊಡನೆ, ಮೃದು ಪಕ್ಷದೊಡನೆ ಮತ್ತು ತೀಕ್ಷ್ಣ ಪಕ್ಷದೊಡನೆ ಮೊದಲು ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ನನಗೆ ಹೇಳು."

12104002 ಭೀಷ್ಮ ಉವಾಚ|
12104002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12104002c ಬೃಹಸ್ಪತೇಶ್ಚ ಸಂವಾದಮಿಂದ್ರಸ್ಯ ಚ ಯುಧಿಷ್ಠಿರ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಬೃಹಸ್ಪತಿ ಮತ್ತು ಇಂದ್ರರ ಸಂವಾದವನ್ನು ಉದಾಹರಿಸುತ್ತಾರೆ.

12104003a ಬೃಹಸ್ಪತಿಂ ದೇವಪತಿರಭಿವಾದ್ಯ ಕೃತಾಂಜಲಿಃ|
12104003c ಉಪಸಂಗಮ್ಯ ಪಪ್ರಚ್ಛ ವಾಸವಃ ಪರವೀರಹಾ||

ದೇವಪತಿ ಪರವೀರಹ ವಾಸವನು ಬೃಹಸ್ಪತಿಯ ಬಳಿಸಾರಿ
ಅಂಜಲೀಬದ್ಧನಾಗಿ ನಮಸ್ಕರಿಸಿ ಕೇಳಿದನು:

12104004a ಅಹಿತೇಷು ಕಥಂ ಬ್ರಹ್ಮನ್ವರ್ತಯೇಯಮತಂದ್ರಿತಃ|
12104004c ಅಸಮುಚ್ಚಿದ್ಯ ಚೈವೇನಾನ್ನಿಯಚ್ಚೇಯಮುಪಾಯತಃ||

“ಬ್ರಹ್ಮನ್! ಆಲಸ್ಯರಹಿತನಾಗಿ ನನಗೆ ಅಹಿತರಾಗಿರುವವರೊಡನೆ
ನಾನು ಹೇಗೆ ನಡೆದುಕೊಳ್ಳಬೇಕು? ಯಾವ ಉಪಾಯದಿಂದ ಅವರನ್ನು
ಸಂಪೂರ್ಣವಾಗಿ ನಿರ್ಮೂಲನ ಮಾಡದೇ ವಶಪಡಿಸಿಕೊಳ್ಳಬಹುದು?

12104005a ಸೇನಯೋರ್ವ್ಯತಿಷಂಗೇಣ ಜಯಃ ಸಾಧಾರಣೋ ಭವೇತ್|
12104005c ಕಿಂ ಕುರ್ವಾಣಂ ನ ಮಾಂ ಜಹ್ಯಾಜ್ಜ್ವಲಿತಾ ಶ್ರೀಃ ಪ್ರತಾಪಿನೀ||

ಸೈನ್ಯಗಳ ಪರಸ್ಪರ ಸಂಘರ್ಷಣೆಯಿಂದ ದೊರೆಯುವ ವಿಜಯವು
ಸಾಧಾರಣವಾದುದು. ಶತ್ರುಗಳಿಗೆ ಸಂತಾಪವನ್ನುಂಟುಮಾಡುತ್ತಿರುವ
ನನ್ನ ರಾಜ್ಯಲಕ್ಷ್ಮಿಯು ನನ್ನನ್ನು ಬಿಟ್ಟುಹೋಗದ ಹಾಗೆ ಏನು
ಮಾಡಬೇಕು?”

12104006a ತತೋ ಧರ್ಮಾರ್ಥಕಾಮಾನಾಂ ಕುಶಲಃ ಪ್ರತಿಭಾನವಾನ್|
12104006c ರಾಜಧರ್ಮವಿಧಾನಜ್ಞಃ ಪ್ರತ್ಯುವಾಚ ಪುರಂದರಮ್||

ಆಗ ಧರ್ಮಾರ್ಥಕಾಮಗಳ ವಿಷಯದಲ್ಲಿ ಕುಶಲನಾಗಿದ್ದ ಮತ್ತು
ರಾಜಧರ್ಮವಿಧಾನಗಳನ್ನು ತಿಳಿದಿದ್ದ ಪ್ರತಿಭಾನವಾನ್ ಬೃಹಸ್ಪತಿಯು
ಪುರಂದರಿನಿಗೆ ಉತ್ತರಿಸಿದನು:

12104007a ನ ಜಾತು ಕಲಹೇನೇಚ್ಚೇನ್ನಿಯಂತುಮಪಕಾರಿಣಃ|
12104007c ಬಾಲಸಂಸೇವಿತಂ ಹ್ಯೇತದ್ಯದಮರ್ಷೋ ಯದಕ್ಷಮಾ|

12104007e ನ ಶತ್ರುರ್ವಿವೃತಃ ಕಾರ್ಯೋ ವಧಮಸ್ಯಾಭಿಕಾಂಕ್ಷತಾ॥

“ಯಾವಾಗಲೂ ಯುದ್ಧದ ಮೂಲಕವಾಗಿಯೇ ಅಪಕಾರಿಗಳನ್ನು ನಿಯಂತ್ರಿಸಲು ಇಚ್ಛಿಸಬಾರದು. ಕೋಪ ಮತ್ತು ಅಕ್ಷಮೆ – ಇವೆರಡನ್ನೂ ಮೂರ್ಖರಾದವರು ಮಾತ್ರ ಬಳಸುತ್ತಾರೆ. ಶತ್ರುವಿನ ವಧೆಯನ್ನು ಇಚ್ಛಿಸುವ ರಾಜನು ಶತ್ರುವಿಗೆ ಅದರ ಸುಳಿವೂ ತಿಳಿಯದಂತೆ ವರ್ತಿಸಬೇಕು.

12104008a ಕ್ರೋಧಂ ಬಲಮಮರ್ಷಂ ಚ ನಿಯಮ್ಯಾತ್ಮಜಮಾತ್ಮನಿ|
12104008c ಅಮಿತ್ರಮುಪಸೇವೇತ ವಿಶ್ವಸ್ತವದವಿಶ್ವಸನ್॥

ಕ್ರೋಧ-ಭಯ-ಹರ್ಷಗಳನ್ನು ಮನಸ್ಸಿನಲ್ಲಿಯೇ ಅಡಗಿಸಿಕೊಂಡು ಕಾರ್ಯಮಾಡಬೇಕು. ವಿಶ್ವಾಸವಿಲ್ಲದಿದ್ದರೂ ಶತ್ರುವಿನೊಡನೆ ವಿಶ್ವಾಸವಿರುವವನಂತೆಯೇ ನಡೆದುಕೊಳ್ಳಬೇಕು.

12104009a ಪ್ರಿಯಮೇವ ವದೇನ್ನಿತ್ಯಂ ನಾಪ್ರಿಯಂ ಕಿಂ ಚಿದಾಚರೇತ್|
12104009c ವಿರಮೇಚ್ಚುಷ್ಕವೈರೇಭ್ಯಃ ಕಂಠಾಯಾಸಂ ಚ ವರ್ಜಯೇತ್॥

ಯಾವಾಗಲೂ ಅವನೊಡನೆ ಪ್ರಿಯವಾದ ಮಾತನ್ನೇ ಆಡುತ್ತಿರಬೇಕು. ಅಪ್ರಿಯವಾದುದನ್ನು ಸ್ವಲ್ಪವೂ ಮಾಡಬಾರದು. ಶುಷ್ಕವಾದ ಮತ್ತು ಅಪ್ರಯೋಜಕವಾದ ವೈರದಿಂದ ದೂರವಿರಬೇಕು[330]. ಇತರರೊಡನೆ ಜಗಳವಾಡುತ್ತಾ ಕಂಠಕ್ಕೆ ಆಯಾಸವನ್ನು ಮಾಡಿಕೊಳ್ಳಬಾರದು.

12104010a ಯಥಾ ವೈತಂಸಿಕೋ ಯುಕ್ತೋ ದ್ವಿಜಾನಾಂ ಸದೃಶಸ್ವನಃ|

---

330 ಬಹಿರಂಗವಾಗಿ ಯಾರೊಡನೆಯೂ ವೈರವನ್ನು ಕಟ್ಟಿಕೊಳ್ಳಬಾರದು (ಭಾರತ ದರ್ಶನ).

12104010c ತಾನ್ವಿಜಾನ್ ಕುರುತೇ ವಶ್ಯಾಂಸ್ತಥಾ ಯುಕ್ತೋ ಮಹೀಪತಿಃ|
12104010e ವಶಂ ಚೋಪನಯೇಚ್ಚತ್ರೂನ್ನಿಹನ್ಯಾಚ್ಚ ಪುರಂದರ||

ಪುರಂದರ! ವ್ಯಾಧನು ತನ್ನ ಕಾರ್ಯದಲ್ಲಿಯೇ ನಿರತನಾಗಿರುತ್ತಾ ಪಕ್ಷಿಗಳಂತೆಯೇ ಕೂಗುತ್ತಾ ಪಕ್ಷಿಗಳನ್ನು ಉಪಾಯದಿಂದ ತನ್ನ ಬಲೆಗೆ ಬೀಳಿಸಿಕೊಳ್ಳುವ ಹಾಗೆ ರಾಜನೂ ಕೂಡ ಉಪಾಯಾಂತರಗಳಿಂದ ಶತ್ರುವನ್ನು ವಶಪಡಿಸಿಕೊಂಡು ಸಂಹರಿಸಬೇಕು.

12104011a ನ ನಿತ್ಯಂ ಪರಿಭೂಯಾರೀನ್ಸುಖಂ ಸ್ವಪಿತಿ ವಾಸವ|
12104011c ಜಾಗರ್ತ್ಯೇವ ಚ ದುಷ್ಟಾತ್ಮಾ ಸಂಕರೇಽಗ್ನಿರಿವೋತ್ಥಿತಃ||

ವಾಸವ! ಶತ್ರುಗಳನ್ನು ತಿರಸ್ಕರಿಸುವವನು ಯಾವಾಗಲೂ ಸುಖವಾಗಿ ನಿದ್ರಿಸಲಾರನು. ಬಿದಿರು ಅಥವಾ ಹುಲ್ಲಿನ ಸಂಪರ್ಕದಲ್ಲಿ ಬಂದ ಅಗ್ನಿಯಂತೆ ಆ ದುಷ್ಟಾತ್ಮನು ಸದಾ ಜಾಗೃತನಾಗಿಯೇ ಇರುತ್ತಾನೆ.

12104012a ನ ಸಂನಿಪಾತಃ ಕರ್ತವ್ಯಃ ಸಾಮಾನ್ಯೇ ವಿಜಯೇ ಸತಿ|
12104012c ವಿಶ್ವಾಸ್ಯೈವೋಪಸಂನ್ಯಾಸ್ಯೋ ವಶೇ ಕೃತ್ವಾ ರಿಪುಃ ಪ್ರಭೋ||

ಪ್ರಭೋ! ವಿಜಯವೂ ಇಬ್ಬರಿಗೂ ದೊರಕುವಂತಿದ್ದರೆ ಯುದ್ಧಮಾಡುವ ಅವಶ್ಯಕತೆಯಿಲ್ಲ. ಶತ್ರುವಿನಲ್ಲಿ ವಿಶ್ವಾಸವನ್ನು ಹುಟ್ಟಿಸಿ ವಶಪಡಿಸಿಕೊಂಡು ಹತ್ತಿರಕ್ಕೆ ಕರೆಯಿಸಿಕೊಂಡುದ್ದಕ್ಕೆ ತಕ್ಕ ಪ್ರಯೋಜನವನ್ನು ಪಡೆದುಕೊಳ್ಳಬೇಕು.

12104013a ಸಂಪ್ರಧಾರ್ಯ ಸಹಾಮಾತ್ಯೈರ್ಮಂತ್ರವಿದ್ಭಿರ್ಮಹಾತ್ಮಭಿಃ|
12104013c ಉಪೇಕ್ಷಮಾಣೋಽವಜ್ಞಾತೇ ಹೃದಯೇನಾಪರಾಜಿತಃ||
12104014a ಅಥಾಸ್ಯ ಪ್ರಹರೇತ್ಕಾಲೇ ಕಿಂ ಚಿದ್ವಿಚಲಿತೇ ಪದೇ|
12104014c ದಂಡಂ ಚ ದೂಷಯೇದಸ್ಯ ಪುರುಷೈರಾಪ್ತಕಾರಿಭಿಃ||

ಶತ್ರುವು ಉಪೇಕ್ಷಿಸಿದರೂ, ಅನಾದರಿಸಿದರೂ, ಬುದ್ಧಿವಂತ ರಾಜನು ಮನಸಾರೆ ಪರಾಜಯವನ್ನು ಹೊಂದಬಾರದು. ಮಹಾತ್ಮ, ಮಂತ್ರಜ್ಞ ಅಮಾತ್ಯರೊಡನೆ ಮಾಡಬೇಕಾದ ಕರ್ತವ್ಯವನ್ನು ನಿಶ್ಚಯಿಸಿ ಶತ್ರುವು ತನ್ನ ಸ್ಥಾನದಿಂದ ಸ್ವಲ್ಪವೇ ವಿಚಲಿತನಾದಾಗ ಸಮಯ ನೋಡಿ ಪ್ರಹರಿಸಬೇಕು. ಆಪ್ತ ಪುರುಷರನ್ನು ಕಳುಹಿಸಿ ಅವನ ಸೈನ್ಯವನ್ನು ಭೇದಿಸಬೇಕು.

12104015a ಆದಿಮಧ್ಯಾವಸಾನಜ್ಞಃ ಪ್ರಚ್ಛನ್ನಂ ಚ ವಿಚಾರಯೇತ್|
12104015c ಬಲಾನಿ ದೂಷಯೇದಸ್ಯ ಜಾನಂಶ್ಚೈವ ಪ್ರಮಾಣತಃ||

ಮೊದಲು, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಏನು ಮಾಡಬೇಕು ಎನ್ನುವುದನ್ನು ತಿಳಿದು ರಹಸ್ಯದಲ್ಲಿ ವಿಚಾರಿಸಬೇಕು. ಶತ್ರುವಿನ ಸೇನಾಸಂಖ್ಯೆಯನ್ನು ತಿಳಿದುಕೊಂಡು ಭೇದಿಸಬೇಕು.

12104016a ಭೇದೇನೋಪಪ್ರದಾನೇನ ಸಂಸೃಜನ್ನೌಷಧೈಸ್ತಥಾ|
12104016c ನ ತ್ವೇವ ಚೀಲಸಂಸರ್ಗಂ ರಚಯೇದರಿಭಿಃ ಸಹ||

ಶತ್ರುಸೇನೆಯ ಅಧಿಕಾರಿಗಳಿಗೆ ಲಂಚವನ್ನಿತ್ತು ಭೇದವನ್ನುಂಟುಮಾಡಬೇಕು. ಅಥವಾ ಔಷಧಿಗಳ ಮೂಲಕ ಅವರ ಮನಸ್ಸನ್ನು ಕೆಡಿಸಬೇಕು. ಆದರೆ ತಾನು ಮಾತ್ರ ಶತ್ರುಗಳೊಡನೆ ಬಹಿರಂಗವಾಗಿ ಸಂಬಂಧವನ್ನು ಇಟ್ಟುಕೊಳ್ಳಬಾರದು.

12104017a ದೀರ್ಘಕಾಲಮಪಿ ಕ್ಷಾಂತ್ವಾ ವಿಹನ್ಯಾದೇವ ಶಾತ್ರವಾನ್|
12104017c ಕಾಲಾಕಾಂಕ್ಷೀ ಯಾಮಯೇಚ್ಚ ಯಥಾ ವಿಸ್ರಂಭಮಾಪ್ನುಯುಃ||

ಶತ್ರುವಿನ ವಧೆಗೆ ಅನುಕೂಲ ಸಮಯವನ್ನು ಸಹನೆಯಿಂದ ಕಾಯಬೇಕು. ಅದು ದೀರ್ಘಕಾಲವೇ ಆಗಬಹುದು. ಕಾಲಾಕಾಂಕ್ಷಿಯು

ಶತ್ರುವಿನಲ್ಲಿ ವಿಶ್ವಾಸವನ್ನುಂಟುಮಾಡಬಹುದು. ಆದರೆ ಕಾಲವು ಸಿದ್ಧವಾದೊಡನೆ ಹಿಂದೆ ಮುಂದೆ ನೋಡದೇ ಶತ್ರುವನ್ನು ಸಂಹರಿಸಬೇಕು.

12104018a ನ ಸದ್ಯೋಽರೀನ್ವಿನಿರ್ಹನ್ಯಾದ್ದ್ರಷ್ಟವ್ಯಸ್ಯ ವಿಜಯೋಽಜ್ವರಃ[331]|
12104018c ನ ಯಃ ಶಲ್ಯಂ ಘಟ್ಟಯತಿ ನವಂ ಚ ಕುರುತೇ ವ್ರಣಮ್||

ವಿಜಯವು ತನ್ನದಾಗುತ್ತದೆ ಎಂದು ದೃಢಪಡಿಸಿಕೊಳ್ಳದೇ ಶತ್ರುವಿನ ಮೇಲೆ ಆಕ್ರಮಣ ಮಾಡಬಾರದು. ಅಲ್ಲಿಯವರೆಗೆ ಶತ್ರುಗಳ ಮೇಲೆ ಶಸ್ತ್ರ-ವಿಷಾದಿಗಳನ್ನು ಪ್ರಯೋಗಿಸಬಾರದು ಮತ್ತು ಕಠೋರ ಮಾತುಗಳಿಂದ ಘಾಸಿಯನ್ನುಂಟುಮಾಡಬಾರದು.

12104019a ಪ್ರಾಪ್ತೇ ಚ ಪ್ರಹರೇತ್ಕಾಲೇ ನ ಸ ಸಂವರ್ತತೇ ಪುನಃ|
12104019c ಹಂತುಕಾಮಸ್ಯ ದೇವೇಂದ್ರ ಪುರುಷಸ್ಯ ರಿಪುಂ ಪ್ರತಿ||

ದೇವೇಂದ್ರ! ಕಾಲವು ಪ್ರಾಪ್ತವಾದೊಡನೆಯೇ ಶತ್ರುವನ್ನು ಸಂಹರಿಸಿಬಿಡಬೇಕು. ಶತ್ರುಗಳನ್ನು ಕೊಲ್ಲಲಿಚ್ಛಿಸುವ ಪುರುಷನಿಗೆ ಅಂತಹ ಕಾಲವು ಪುನಃ ಪುನಃ ಪ್ರಾಪ್ತವಾಗುವುದಿಲ್ಲ.

12104020a ಯಃ ಕಾಲೋ ಹಿ ವ್ಯತಿಕ್ರಾಮೇತ್ಪುರುಷಂ ಕಾಲಕಾಂಕ್ಷಿಣಮ್|
12104020c ದುರ್ಲಭಃ ಸ ಪುನಃ ಕಾಲಃ ಕಾಲಧರ್ಮಚಿಕೀರ್ಷುಣಾ[332]||

ಕಾಲವನ್ನು ಪ್ರತೀಕ್ಷಿಸುತ್ತಿರುವ ಪುರುಷನಿಗೆ ಸರಿಯಾದ ಕಾಲವು

---

331 ನ ಸದ್ಯೋಽರೀನ್ವಿಹನ್ಯಾಚ್ಚ ದ್ರಷ್ಟವ್ಯೋ ವಿಜಯೋ ಧ್ರುವಃ| (ಭಾರತ ದರ್ಶನ).

332 ಕಾಲಃ ಕರ್ಮಚಿಕೀರ್ಷುಣಾ| (ಭಾರತ ದರ್ಶನ).

ವ್ಯತಿಕ್ರಮಿಸಿ ಹೋದುದೇ ಆದರೆ ಕಾಲಧರ್ಮದಂತೆ ನಡೆದುಕೊಳ್ಳಲು ಬಯಸಿದವನಿಗೆ ಪುನಃ ಆ ಕಾಲವು ದೊರೆಯುವುದಿಲ್ಲ.

12104021a ಶ್ರೈರ್ಜಸ್ಥ್ಯಂ ವಿಜಯೇದೇವಂ ಸಂಗೃಹ್ಣನ್ಸಾಧುಸಂಮತಾನ್[333]|
12104021c ಕಾಲೇನ ಸಾಧಯೇನ್ನಿತ್ಯಂ ನಾಪ್ರಾಪ್ತೇಽಭಿನಿಪೀಡಯೇತ್[334]||

ಹೀಗೆ ಶ್ರೇಷ್ಠ ಪುರುಷರ ಸಮ್ಮತಿಯನ್ನು ಪಡೆದು ಓಜಸ್ಸಿನ ವಿಜಯವನ್ನು ಪಡೆದುಕೊಳ್ಳಬೇಕು. ನಿತ್ಯವೂ ಕಾಲದಿಂದಲೇ ವಿಜಯವನ್ನು ಸಾಧಿಸಬೇಕು. ಕಾಲ ಪ್ರಾಪ್ತವಾಗದೇ ಶತ್ರುಗಳನ್ನು ಪೀಡಿಸಬಾರದು.

12104022a ವಿಹಾಯ ಕಾಮಂ ಕ್ರೋಧಂ ಚ ತಥಾಹಂಕಾರಮೇವ ಚ|
12104022c ಯುಕ್ತೋ ವಿವರಮನ್ವಿಚ್ಛೇದಹಿತಾನಾಂ ಪುರಂದರ||

ಪುರಂದರ! ಕಾಮ-ಕ್ರೋಧ ಮತ್ತು ಅಹಂಕಾರಗಳನ್ನು ತ್ಯಜಿಸಿ, ಜಾಗರೂಕನಾಗಿದ್ದುಕೊಂಡು ಶತ್ರುವಿನಲ್ಲಿ ಉಂಟಾಗುವ ಛಿದ್ರಗಳನ್ನು ನಿರೀಕ್ಷಿಸುತ್ತಿರಬೇಕು.

12104023a ಮಾರ್ದವಂ ದಂಡ ಆಲಸ್ಯಂ ಪ್ರಮಾದಶ್ಚ ಸುರೋತ್ತಮ|
12104023c ಮಾಯಾಶ್ಚ ವಿವಿಧಾಃ[335] ಶಕ್ರ ಸಾಧಯಂತ್ಯವಿಚಕ್ಷಣಮ್||

ಸುರೋತ್ತಮ! ಶಕ್ರ! ಮೃದುತ್ವ, ದಂಡ, ಆಲಸ್ಯ, ಪ್ರಮಾದ, ಮತ್ತು

---

[333] ಓಜಶ್ಚ ಜನಯೇದೇವ ಸಂಗೃಹ್ಣನ್ಸಾಧುಸಮ್ಮತಮ್| (ಭಾರತ ದರ್ಶನ).

[334] ಅಕಾಲೇ ಸಾಧಯೇನ್ಮಿತ್ರಂ ನ ಚ ಪ್ರಾಪ್ತೇ ಪ್ರಪೀಡಯೇತ್| (ಭಾರತ ದರ್ಶನ).

[335] ಮಾಯಾಃ ಸುವಿಹಿತಾಃ (ಭಾರತ ದರ್ಶನ).

ವಿವಿದ ಮೋಸಗಳು – ಇವುಗಳನ್ನು ಅರಿಯವನು ನಾಶಗೊಳ್ಳುತ್ತಾನೆ.

12104024a ನಿಹತ್ಯೈತಾನಿ ಚತ್ವಾರಿ ಮಾಯಾಂ ಪ್ರತಿವಿಧಾಯ ಚ|
12104024c ತತಃ ಶಕ್ನೋತಿ ಶತ್ರೂಣಾಂ ಪ್ರಹರ್ತುಮವಿಚಾರಯನ್||

ಮಾರ್ದವ, ಗರ್ವ, ಆಲಸ್ಯ ಮತ್ತು ಪ್ರಮಾದ – ಈ ನಾಲ್ಕನ್ನು ನಾಶಗೊಳಿಸಿ ಶತ್ರುವಿನ ಮೋಸಗಳಿಗೆ ಪ್ರತಿಮೋಸಗಳನ್ನು ಮಾಡಬೇಕು. ಆಗ ಅವನು ವಿಚಾರಿಸದೆಯೇ ಶತ್ರುಗಳನ್ನು ಪ್ರಹರಿಸಲು ಶಕ್ಯನಾಗುತ್ತಾನೆ.

12104025a ಯದ್ಯೈವೈಕೇನ ಶಕ್ಯೇತ ಗುಹ್ಯಂ ಕರ್ತುಂ ತದಾಚರೇತ್|
12104025c ಯಚ್ಚಂತಿ ಸಚಿವಾ ಗುಹ್ಯಂ ಮಿಥೋ ವಿದ್ರಾವಯಂತ್ಯಪಿ||

ಒಬ್ಬನಿಂದಲೇ ಮಾಡಬಹುದಾದ ರಹಸ್ಯ ಕಾರ್ಯವನ್ನು ತಾನೊಬ್ಬನೇ ಮಾಡಿ ಮುಗಿಸಬೇಕು. ಮಂತ್ರಿಗಳೂ ಕೂಡ ಕೆಲವೊಮ್ಮೆ ರಹಸ್ಯಗಳನ್ನು ಬಹಿರಂಗಗೊಳಿಸುತ್ತಾರೆ ಅಥವಾ ತಮ್ಮಲ್ಲಿಯೇ ಅದರ ಕುರಿತು ಮಾತನಾಡಿಕೊಳ್ಳುತ್ತಾರೆ.

12104026a ಅಶಕ್ಯಮಿತಿ ಕೃತ್ವಾ ವಾ ತತೋಽನ್ಯೈಃ ಸಂವಿದಂ ಚರೇತ್|
12104026c ಬ್ರಹ್ಮದಂಡಮದೃಷ್ಟೇಷು ದೃಷ್ಟೇಷು ಚತುರಂಗಿಣೀಮ್||

ಒಬ್ಬನೇ ಮಾಡಲು ಸಾಧ್ಯವಿಲ್ಲದ ವಿಷಯವನ್ನು ಅನ್ಯರೊಡನೆ ಸಮಾಲೋಚಿಸಿ ನಡೆಸಬೇಕು. ಪ್ರತ್ಯಕ್ಷ ಕಾಣದ ಶತ್ರುಗಳ ಮೇಲೆ ಬ್ರಹ್ಮದಂಡ[336]ವನ್ನು ಮತ್ತು ಕಾಣುವ ಶತ್ರುಗಳ ಮೇಲೆ ಚತುರಂಗ

[336] ಪುರೋಹಿತರಿಂದ ಅಭಿಚಾರಕ್ರಿಯಗಳನ್ನು ಮಾಡಿಸಬೇಕು (ಭಾರತ ದರ್ಶನ).

ಬಲವನ್ನು ಪ್ರಯೋಗಿಸಬೇಕು.

12104027a ಭೇದಂ ಚ ಪ್ರಥಮಂ ಯುಂಜ್ಯಾತ್ತೂಷ್ಣೀಂದಂಡಂ ತಥೈವ ಚ|
12104027c ಕಾಲೇ ಪ್ರಯೋಜಯೇದ್ರಾಜಾ ತಸ್ಮಿಂಸ್ತಸ್ಮಿಂಸ್ತದಾ ತದಾ||

ಮೊಟ್ಟಮೊದಲನೆಯದಾಗಿ ಭೇದೋಪಾಯವನ್ನು ಬಳಸಬೇಕು.
ಕಾಲವು ಬಂದಹಾಗೆ ಬೇರೆ ಬೇರೆ ಸಮಯಗಳಲ್ಲಿ ಮೌನವಾಗಿ
ದಂಡನೀತಿಯನ್ನು ಬಳಸಬೇಕು.

12104028a ಪ್ರಣಿಪಾತಂ ಚ ಗಚ್ಛೇತ ಕಾಲೇ ಶತ್ರೋರ್ಬಲೀಯಸಃ|
12104028c ಯುಕ್ತೋಽಸ್ಯ ವಧಮನ್ವಿಚ್ಛೇದಪ್ರಮತ್ತಃ ಪ್ರಮಾದ್ಯತಃ||

ಶತ್ರುವು ಬಲಶಾಲಿಯಾಗಿದ್ದು ಕಾಲವು ಅವನಿಗೇ
ಅನುಕೂಲಕರವಾಗಿದ್ದರೆ ಶತ್ರುವಿಗೆ ಶರಣಾಗತನೂ ಆಗಬೇಕಾಗುತ್ತದೆ.
ಜಾಗರೂಕನಾಗಿದ್ದುಕೊಂಡು ಶತ್ರುವು ಪ್ರಮಾದದಲ್ಲಿದ್ದಾಗ
ಉದ್ಯೋಗಶೀಲನಾಗಿ ಅವನ ವಧೋಪಾಯವನ್ನು ಹುಡುಕಬೇಕು.

12104029a ಪ್ರಣಿಪಾತೇನ ದಾನೇನ ವಾಚಾ ಮಧುರಯಾ ಬ್ರುವನ್|
12104029c ಅಮಿತ್ರಮುಪಸೇವೇತ ನ ತು ಜಾತು ವಿಶಂಕಯೇತ್[337]||

ಶತ್ರುವಿಗೆ ಶಂಕೆಬಾರದ ಹಾಗೆ ನಮಸ್ಕರಿಸಿ, ಧನವನ್ನು ಕೊಟ್ಟು,
ಮಧುರ ಮಾತುಗಳನ್ನು ಆಡುತ್ತಾ ಶತ್ರುವಿನ ಸೇವೆಯನ್ನು
ಮಾಡುತ್ತಿರಬೇಕು.

12104030a ಸ್ಥಾನಾನಿ ಶಂಕಿತಾನಾಂ ಚ ನಿತ್ಯಮೇವ ವಿವರ್ಜಯೇತ್|
12104030c ನ ಚ ತೇಷ್ವಾಶ್ವಸೇದ್ಭುಗ್ಧ್ವಾ ಜಾಗ್ರತೀಹ ನಿರಾಕೃತಾಃ||

---

337 ಅಮಿತ್ರಮಪಿ ಸೇವೇತ ನ ಚ ಜಾತು ವಿಶಂಕಯೇತ್| (ಭಾರತ ದರ್ಶನ).

ಶಂಕಿಸುವವರು ಇರುವ ಜಾಗವನ್ನೇ ನಿತ್ಯವೂ ವರ್ಜಿಸಬೇಕು. ಅವರಲ್ಲಿ ವಿಶ್ವಾಸವನ್ನಿಡಬಾರದು. ತಿರಸ್ಕೃತ ಶತ್ರುಗಳು ಪ್ರತೀಕಾರಮಾಡಲು ಜಾಗರೂಕರಾಗಿರುತ್ತಾರೆ.

12104031a ನ ಹ್ಯತೋ ದುಷ್ಕರಂ ಕರ್ಮ ಕಿಂ ಚಿದಸ್ತಿ ಸುರೋತ್ತಮ|
12104031c ಯಥಾ ವಿವಿಧವೃತ್ತಾನಾಮೈಶ್ವರ್ಯಮಮರಾಧಿಪ||

ಸುರೋತ್ತಮ! ಅಮರಾಧಿಪ! ವಿವಿಧ ವ್ಯವಹಾರ ಚತುರ ಜನರ ಮೇಲೆ ಹತೋಟಿಯನ್ನಿಟ್ಟುಕೊಳ್ಳುವುದಕ್ಕಿಂತಲೂ ದುಷ್ಕರ ಕಾರ್ಯವು ಬೇರೊಂದಿಲ್ಲ.

12104032a ತಥಾ ವಿವಿಧಶೀಲಾನಾಮಪಿ ಸಂಭವ ಉಚ್ಯತೇ|
12104032c ಯತೇತ ಯೋಗಮಾಸ್ಥಾಯ ಮಿತ್ರಾಮಿತ್ರಾನವಾರಯನ್||

ಅಂಥಹ ವಿವಿಧ ಶೀಲಗಳ ಜನರನ್ನು ಹತೋಟಿಯಲ್ಲಿಟ್ಟುಕೊಳ್ಳುವಾಗ ಅವರಲ್ಲಿ ಮಿತ್ರರು ಯಾರು ಮತ್ತು ಅಮಿತ್ರರು ಯಾರು ಎನ್ನುವುದನ್ನು ಬುದ್ಧಿಯಿಂದ ತಿಳಿದುಕೊಳ್ಳಲು ಪ್ರಯತ್ನಿಸಬೇಕು.

12104033a ಮೃದುಮಪ್ಯವಮನ್ಯಂತೇ ತೀಕ್ಷ್ಣಾದುದ್ವಿಜತೇ ಜನಃ|
12104033c ಮಾತೀಕ್ಷ್ಣೋ ಮಾಮೃದುರ್ಭೂಸ್ತ್ವಂ ತೀಕ್ಷ್ಣೋ ಭವ ಮೃದುರ್ಭವ||

ಮೃದುಸ್ವಭಾವದನಾಗಿದ್ದರೆ ಅನಾದರಣೆ ಮಾಡುತ್ತಾರೆ. ತೀಕ್ಷ್ಣನಾಗಿದ್ದರೆ ಜನರು ಉದ್ವಿಗ್ನರಾಗುತ್ತಾರೆ. ಆದುದರಿಂದ ನೀನು ಅತಿ ತೀಕ್ಷ್ಣನೂ ಆಗಿರಬೇಡ. ಅತಿ ಮೃದುವೂ ಆಗಿರಬೇಡ. ತೀಕ್ಷ್ಣನಾಗಿಯೂ ಇರು ಮತ್ತು ಮೃದುವಾಗಿಯೂ ಇರು.

12104034a ಯಥಾ ವಪ್ರೇ ವೇಗವತಿ ಸರ್ವತಃಸಂಪ್ಲುತೋದಕೇ|

12104034c ನಿತ್ಯಂ ವಿವರಣಾದ್ಬಾಧಸ್ತಥಾ ರಾಜ್ಯಂ ಪ್ರಮಾದ್ಯತಃ||

ಸರ್ವತ್ರ ವ್ಯಾಪ್ತವಾದ ನೀರಿನ ಪ್ರವಾಹದಿಂದ ಕೂಡಿರುವ ವೇಗ ನದಿಯ ದಡಗಳು ಹೇಗೆ ನಿತ್ಯವೂ ಕೊರೆಯಲ್ಪಡುತ್ತವೆಯೋ ಹಾಗೆ ಪ್ರಮಾದವಶನಾದ ರಾಜನ ರಾಜ್ಯವನ್ನೂ ಪ್ರಭಾವಶಾಲೀ ಶತ್ರುಗಳು ಬಾಧಿಸುತ್ತಿರುತ್ತಾರೆ.

12104035a ನ ಬನೂನಭಿಯುಂಜೀತ[338] ಯೌಗಪದ್ಯೇನ ಶಾತ್ರವಾನ್|
12104035c ಸಾಮ್ನಾ ದಾನೇನ ಭೇದೇನ ದಂಡೇನ ಚ ಪುರಂದರ||
12104036a ಏಕೈಕಮೇಷಾಂ ನಿಷ್ಪಿಂಷನ್ ಶಿಷ್ಟೇಷು ನಿಪುಣಂ ಚರೇತ್|
12104036c ನ ಚ ಶಕ್ತೋಽಪಿ ಮೇಧಾವೀ ಸರ್ವಾನೇವಾರಭೇನ್ನೃಪಃ||

ಪುರಂದರ! ಅನೇಕರ ಮೇಲೆ ಒಬ್ಬನೇ ಒಂದೇ ಕಾಲದಲ್ಲಿ ಆಕ್ರಮಿಸಬಾರದು. ಒಬ್ಬೊಬ್ಬರನ್ನೂ ಸಾಮ-ದಾನ-ಭೇದ-ದಂಡಗಳಿಂದ ಸ್ವಾಧೀನಪಡಿಸಿಕೊಂಡು, ಉಳಿದವರೊಡನೆ ನೈಪುಣ್ಯತೆಯಿಂದ ವರ್ತಿಸಬೇಕು. ಶಕ್ತನೇ ಆಗಿದ್ದರೂ ಮೇಧಾವಿಯಾದವನು ಎಲ್ಲರೊಡನೆಯೂ ಒಂದೇ ಕಾಲದಲ್ಲಿ ಯುದ್ಧಕ್ಕೆ ಹೋಗಬಾರದು.

12104037a ಯದಾ ಸ್ಯಾನ್ಮಹತೀ ಸೇನಾ ಹಯನಾಗರಥಾಕುಲಾ|
12104037c ಪದಾತಿಯಂತ್ರಬಹುಲಾ ಸ್ವನುರಕ್ತಾ ಷಡಂಗಿನೀ||
12104038a ಯದಾ ಬಹುವಿಧಾಂ ವೃದ್ಧಿಂ ಮನ್ಯತೇ ಪ್ರತಿಲೋಮತಃ|
12104038c ತದಾ ವಿವೃತ್ಯ ಪ್ರಹರೇದ್ದಸ್ಯೂನಾಮವಿಚಾರಯನ್||

338 ಬಹೂನಭಿಯುಂಜೀತ (ಭಾರತ ದರ್ಶನ).

ಕುದುರೆ-ಆನೆ-ರಥಸಂಕುಲಗಳ ಮಹಾ ಸೇನೆಯಿರುವಾಗ, ಅನೇಕ ಪದಾತಿಗಳೂ ಯಂತ್ರಗಳೂ ಇರುವಾಗ, ಮತ್ತು ರಾಜನಲ್ಲಿಯೇ ಅನುರಕ್ತರಾದ ಷಡಂಗ[339] ಸೇನೆಯು ಇರುವಾಗ, ಮತ್ತು ಯಾವಾಗ ಶತ್ರುವನ್ನು ಸೋಲಿಸಿ ಬಹುವಿಧದ ವೃದ್ಧಿಯನ್ನು ಪಡೆಯಬಹುದೆಂದು ತಿಳಿದಿರುತ್ತಾನೋ ಆಗ ರಾಜನು ವಿಚಾರಮಾಡದೇ ದಸ್ಯುಗಳನ್ನು ಪ್ರಹರಿಸಿ ಧ್ವಂಸಗೊಳಿಸಬೇಕು.

12104039a ನ ಸಾಮ ದಂಡೋಪನಿಷತ್ ಪ್ರಶಸ್ಯತೇ
ನ ಮಾರ್ದವಂ ಶತ್ರುಷು ಯಾತ್ರಿಕಂ ಸದಾ|
12104039c ನ ಸಸ್ಯಘಾತೋ ನ ಚ ಸಂಕರಕ್ರಿಯಾ
ನ ಚಾಪಿ ಭೂಯಃ ಪ್ರಕೃತೇರ್ವಿಚಾರಣಾ||

ಶತ್ರುವಿನೊಡನೆ ಸಾಮೋಪಾಯವು ಪ್ರಶಸ್ತವಲ್ಲ. ದಂಡೋಪಾಯವೇ ಪ್ರಶಸ್ತವಾದುದು. ಶತ್ರುಗಳೊಂದಿಗೆ ಮೃದುತ್ವವು ಪ್ರಯೋಜನಕ್ಕೆ ಬರುವುದಿಲ್ಲ. ನೇರ ಆಕ್ರಮಣವೂ ಪ್ರಯೋಜನಕರವಾಗುವುದಿಲ್ಲ. ಶತ್ರುರಾಜ್ಯದ ಪೈರು-ಪಚ್ಚೆಗಳನ್ನು ಹಾಳುಮಾಡುವುದೂ ಉಚಿತವಲ್ಲ. ಅವನ ಬಾವಿ-ಸರೋವರಗಳಲ್ಲಿ ವಿಷಬೆರೆಸುವುದೂ ಸರಿಯಲ್ಲ. ಅದರ ಕುರಿತಾಗಿ ಮತ್ತೆ ಮತ್ತೆ ವಿಚಾರಿಸುವುದೂ ಸರಿಯಲ್ಲ.

12104040a ಮಾಯಾವಿಭೇದಾನುಪಸರ್ಜನಾನಿ
ಪಾಪಂ ತಥ್ಯೈವ ಸ್ಪಶಸಂಪ್ರಯೋಗಾತ್[340]|

---

[339] ಆನೆ, ಕುದುರೆ, ರಥ, ಪದಾತಿ, ಬೊಕ್ಕಸ ಮತ್ತು ಧನಿಕ ವೈಶ್ಯರು ಸೇನೆಯ ಷಡಂಗಗಳು (ಭಾರತ ದರ್ಶನ).

[340] ತಥ್ಯೈವ ಪಾಪಂ ನ ಯಶಂಪ್ರಯೋಗಾತ್| (ಭಾರತ ದರ್ಶನ).

12104040c ಆಪ್ತೈರ್ಮನುಷ್ಯೈರುಪಚಾರಯೇತ
ಪುರೇಷು ರಾಷ್ಟ್ರೇಷು ಚ ಸಂಪ್ರಯುಕ್ತಃ[341]॥

ಆಪ್ತ ಜನರ ಮೂಲಕ ಶತ್ರುವಿನ ಪುರ ರಾಷ್ಟ್ರಗಳಲ್ಲಿ ರಾಜನಿಗೂ-ಪ್ರಜೆಗಳಿಗೂ ಮತ್ತು ರಾಜ ಮತ್ತು ಅವನ ಮಂತ್ರಿ-ಸೇನಾಪತಿಗಳ ನಡುವೆ ಪರಸ್ಪರ ವಿರೋಧವುಂಟಾಗುವಂತೆ ಕೃತ್ರಿಮಗಳನ್ನು ನಡೆಸಬೇಕು. ಹಾಗೆಯೇ ಗುಟ್ಟಿನಲ್ಲಿ ರಾಜನ ಪ್ರಾಣವನ್ನು ತೆಗೆದುಕೊಳ್ಳುವ ಪಾಪಕಾರ್ಯವನ್ನೂ ಮಾಡಬೇಕಾಗುತ್ತದೆ. ಆದರೆ ತನ್ನ ಯಶಸ್ಸನ್ನು ಕಳೆದುಕೊಳ್ಳದೇ ಈ ಕಾರ್ಯಗಳನ್ನು ಮಾಡಬೇಕು.

12104041a ಪುರಾಣಿ ಚೈಷಾಮನುಸೃತ್ಯ ಭೂಮಿಪಾಃ
ಪುರೇಷು ಭೋಗಾನ್ನಿಖಿಲಾನಿಹಾಜಯನ್।
12104041c ಪುರೇಷು ನೀತಿಂ ವಿಹಿತಾಂ ಯಥಾವಿಧಿ
ಪ್ರಯೋಜಯಂತೋ ಬಲವೃತ್ರಸೂದನ॥

ಬಲವೃತ್ರಸೂದನ! ಬುದ್ಧಿವಂತ ಭೂಮಿಪರು ಶತ್ರುವಿನ ಪುರಗಳಲ್ಲಿ ತಮ್ಮ ಗುಪ್ತಚಾರರನ್ನು ಇರಿಸಿ ಅಲ್ಲಿ ಯಥಾವಿಧಿಯಾಗಿ ರಾಜನೀತಿಯನ್ನು ಪ್ರಯೋಗಿಸುತ್ತಾ ಅಲ್ಲಿರುವ ಭೋಗಸಾಮಾಗ್ರಿಗಳನ್ನು ವಶಪಡಿಸಿಕೊಳ್ಳುತ್ತಾರೆ.

12104042a ಪ್ರದಾಯ ಗೂಢಾನಿ ವಸೂನಿ ನಾಮ
ಪ್ರಚ್ಛಿದ್ಯ ಭೋಗಾನವಧಾಯ ಚ ಸ್ವಾನ್।
12104042c ದುಷ್ಟಾಃ ಸ್ವದೋಷೈರಿತಿ ಕೀರ್ತಯಿತ್ವಾ
ಪುರೇಷು ರಾಷ್ಟ್ರೇಷು ಚ ಯೋಜಯಂತಿ॥

---

341 ಸಂಪ್ರಯುಕ್ತಾನ್ (ಭಾರತ ದರ್ಶನ).

ಬುದ್ಧಿವಂತ ರಾಜನು ಆಪ್ತರಿಗೆ ಗುಪ್ತವಾಗಿ ಸಂಪತ್ತುಗಳನ್ನಿತ್ತು ಬಹಿರಂಗವಾಗಿ ಅವರು ದುಷ್ಟರೆಂದು ಹೇಳಿ, ಅವರಲ್ಲಿದ್ದ ಭೋಗವಸ್ತುಗಳನ್ನೆಲ್ಲಾ ಕಸಿದುಕೊಂಡು ಪರರಾಷ್ಟ್ರಕ್ಕೆ ಅಟ್ಟಿ, ಅಲ್ಲಿ ಅವರನ್ನು ಉಪಯೋಗಿಸಿಕೊಳ್ಳುತ್ತಾನೆ.

12104043a ತಥೈವ ಚಾನ್ಯೈ ರತಿಶಾಸ್ತ್ರವೇದಿಭಿಃ[342]
12104043b ಸ್ವಲಂಕೃತೈಃ ಶಾಸ್ತ್ರವಿಧಾನದೃಷ್ಟಿಭಿಃ|
12104043c ಸುಶಿಕ್ಷಿತೈರ್ಭಾವ್ಯಕಥಾವಿಶಾರದೈಃ
12104043d ಪರೇಷು ಕೃತ್ಯಾನುಪಧಾರಯಸ್ವ||

ಹಾಗೆಯೇ ರತಿಶಾಸ್ತ್ರವನ್ನು ತಿಳಿದಿರುವ, ಸ್ವಲಂಕೃತ, ಶಾಸ್ತ್ರವಿಧಾನದೃಷ್ಟಿಯಿರುವ, ಸುಶಿಕ್ಷಿತ, ಭಾವ್ಯಕಥಾವಿಶಾರದರನ್ನು ಶತ್ರುಗಳ ವಿಷಯದಲ್ಲಿ ಬಳಸಿಕೊಳ್ಳಬೇಕು."

12104044 ಇಂದ್ರ ಉವಾಚ|
12104044a ಕಾನಿ ಲಿಂಗಾನಿ ದುಷ್ಟಸ್ಯ ಭವಂತಿ ದ್ವಿಜಸತ್ತಮ|
12104044c ಕಥಂ ದುಷ್ಟಂ ವಿಜಾನೀಯಾದೇತತ್ಪೃಷ್ಟೋ ಬ್ರವೀಹಿ ಮೇ||

ಇಂದ್ರನು ಹೇಳಿದನು: "ದ್ವಿಜಸತ್ತಮ! ದುಷ್ಟನಿಗೆ ಯಾವ ಲಕ್ಷಣಗಳಿರುತ್ತವೆ? ದುಷ್ಟನೆಂದು ಹೇಗೆ ತಿಳಿದುಕೊಳ್ಳಬಹುದು? ಕೇಳುತ್ತಿರುವ ನನಗೆ ಅದನ್ನು ಹೇಳು."

12104045 ಬೃಹಸ್ಪತಿರುವಾಚ|
12104045a ಪರೋಕ್ಷಮಗುಣಾನಾಹ ಸದ್ಗುಣಾನಭ್ಯಸೂಯತಿ|

---

[342] ತಥೈವ ಚಾನ್ಯೈರಪಿ ಶಾಸ್ತ್ರವೇದಿಭಿಃ (ಭಾರತ ದರ್ಶನ).

12104045c ಪರ್ಯೈರ್ವಾ ಕೀರ್ತ್ಯಮಾನೇಷು ತೂಷ್ಣೀಮಾಸ್ತೇ ಪರಾಙ್ಮುಖಃ||

ಬೃಹಸ್ಪತಿಯು ಹೇಳಿದನು: "ಪರೋಕ್ಷದಲ್ಲಿ ದುರ್ಗುಣಗಳನ್ನೇ ಎತ್ತಿ
ಹೇಳುವ ಮತ್ತು ಸದ್ಗುಣಗಳ ಕುರಿತು ಅಸೂಯೆಪಡುವವನು
ದುಷ್ಟಾತ್ಮನು. ತನ್ನ ಎದುರಿಗೇ ಇತರರು ತನ್ನನ್ನು ಹೊಗಳುವಾಗ
ಮುಖವನ್ನು ತಿರುಗಿಸಿ ಬಾಯಿಮುಚ್ಚಿಕೊಂಡು ಸುಮ್ಮನೇ
ಕುಳಿತುಕೊಳ್ಳುವವನು ದುಷ್ಟಾತ್ಮನು.

12104046a ತೂಷ್ಣೀಂಭಾವೇಽಪಿ ಹಿ ಜ್ಞಾನಂ ನ ಚೇದ್ಭವತಿ ಕಾರಣಮ್|
12104046c ವಿಶ್ವಾಸಮೋಷ್ಮಸಂದಂಶಂ ಶಿರಸಶ್ಚ ಪ್ರಕಂಪನಮ್||

ಇನ್ನೊಬ್ಬರು ಸತ್ಪುರುಷರ ಗುಣಗಾನಮಾಡುತ್ತಿರುವಾಗ ಸುಮ್ಮನೇ
ಕುಳಿತಿದ್ದರೂ ನಿಟ್ಟುಸಿರು ಬಿಡುವುದು, ತುಟಿ ಕಚ್ಚುವುದೂ ಮತ್ತು
ತಲೆಯನ್ನು ಅಲ್ಲಾಡಿಸುವುದೂ ದುಷ್ಟರ ಲಕ್ಷಣವಾಗಿದೆ.

12104047a ಕರೋತ್ಯಭೀಕ್ಷ್ಣಂ ಸಂಸೃಷ್ಟಮಸಂಸೃಷ್ಟಶ್ಚ ಭಾಷತೇ|
12104047c ಅದೃಷ್ಟಿತೋ ವಿಕುರುತೇ ದೃಷ್ಟ್ವಾ ವಾ ನಾಭಿಭಾಷತೇ||

ಕರೆಯದಿದ್ದರೂ ಪದೇ ಪದೇ ಬಂದು ಹೋಗುತ್ತಾ ನಿಕಟ
ಸಂಪರ್ಕವನ್ನು ಇಟ್ಟುಕೊಳ್ಳುವವನು, ದೂರಹೋದೊಡನೆಯೇ
ಬೇರೆಯವರೊಂದಿಗೆ ನಿಂದಿಸುವವನು, ಕಣ್ಣೆದುರಿಗೆ ಮಾತ್ರ
ಕಾರ್ಯಮಾಡಿ ವ್ಯಕ್ತಿಯು ಅಗೋಚರನಾದೊಡನೆಯೇ ಆ ಕಾರ್ಯವನ್ನು
ನಿಲ್ಲಿಸಿಬಿಡುವವನು, ನೋಡಿದರೂ ಮಾತನಾಡದಿರುವವನು –
ದುಷ್ಟಾತ್ಮನೆಂದು ಹೇಳಬಹುದು.

12104048a ಪೃಥಗೇತ್ಯ ಸಮಶ್ನಾತಿ ನೇದಮದ್ಯ ಯಥಾವಿಧಿ|
12104048c ಆಸನೇ ಶಯನೇ ಯಾನೇ ಭಾವಾ ಲಕ್ಷ್ಯಾ ವಿಶೇಷತಃ||

ಎಲ್ಲಿಂದಲೋ ಬಂದು ಯಾರ ಜೊತೆಯಲ್ಲಿಯೂ ಊಟಕ್ಕೆ ಕುಳಿತು ಕೊಳ್ಳದೇ ತಾನೊಬ್ಬನೇ ಊಟಕ್ಕೆ ಕುಳಿತುಕೊಳ್ಳುವ, "ಇಂದಿನ ಭೋಜನವು ಹಿಂದೆ ಇದ್ದಂತೆ ಪರಿಷ್ಕೃತವಾಗಿಲ್ಲ" ಎಂದು ಅನ್ನವನ್ನು ದೂಷಿಸುವವನು ದುಷ್ಟನೆಂದೇ ಭಾವಿಸಬೇಕು. ಹೀಗೆ ಕುಳಿತುಕೊಳ್ಳುವುದರಲ್ಲಿ, ಮಲಗುವುದರಲ್ಲಿ, ಪ್ರಯಾಣಮಾಡುವುದರಲ್ಲಿ ಎಲ್ಲದರಲ್ಲಿಯೂ ದುಷ್ಟಜನರ ದುಷ್ಟಭಾವವು ಎದ್ದು ಕಾಣುತ್ತದೆ.

12104049a ಆರ್ತಿರಾರ್ತೇ ಪ್ರಿಯೇ ಪ್ರೀತಿರೇತಾವನ್ಮಿತ್ರಲಕ್ಷಣಮ್|
12104049c ವಿಪರೀತಂ ತು ಬೋದ್ಧವ್ಯಮರಿಲಕ್ಷಣಮೇವ ತತ್||

ಮಿತ್ರನು ಕಷ್ಟದಲ್ಲಿದ್ದರೆ ತಾನೂ ಕಷ್ಟದಲ್ಲಿದ್ದಂತೆ ಭಾವಿಸುವುದು ಮತ್ತು ಮಿತ್ರನು ಸಂತೋಷಭರಿತನಾಗಿದ್ದರೆ ತಾನೂ ಸಂತೋಷಪಡುವುದು – ಇವು ಸನ್ಮಿತ್ರನ ಲಕ್ಷಣಗಳು. ಇದಕ್ಕೆ ವಿಪರೀತವಾಗಿರುವುದು ಶತ್ರುವಿನ ಲಕ್ಷಣವೇ ಸರಿ.

12104050a ಏತಾನ್ಯೇವಂ ಯಥೋಕ್ತಾನಿ ಬುಧ್ಯೇಥಾಸ್ತ್ರಿದಶಾಧಿಪ|
12104050c ಪುರುಷಾಣಾಂ ಪ್ರದುಷ್ಟಾನಾಂ ಸ್ವಭಾವೋ ಬಲವತ್ತರಃ||

ತ್ರಿದಶಾಧಿಪ! ನಾನು ಹೇಳಿದ ರೀತಿಯಲ್ಲಿ ದುಷ್ಟರು-ಮಿತ್ರರನ್ನು ತಿಳಿದುಕೊಳ್ಳಬೇಕು. ದುಷ್ಟ ಪುರುಷರ ಸ್ವಭಾವವು ಬಲವತ್ತರವಾಗಿರುತ್ತದೆ.

12104051a ಇತಿ ದುಷ್ಟಸ್ಯ ವಿಜ್ಞಾನಮುಕ್ತಂ ತೇ ಸುರಸತ್ತಮ|
12104051c ನಿಶಾಮ್ಯ ಶಾಸ್ತ್ರತತ್ತ್ವಾರ್ಥಂ ಯಥಾವದಮರೇಶ್ವರ||

ಸುರಸತ್ತಮ! ಅಮರೇಶ್ವರ! ಶಾಸ್ತ್ರತತ್ತ್ವಾರ್ಥಗಳನ್ನು ಯಥಾವತ್ತಾಗಿ ವಿಚಾರಮಾಡಿ ನಾನು ನಿನಗೆ ದುಷ್ಟರನ್ನು ಹೇಗೆ ಗುರುತಿಸಬಹುದು

ಎನ್ನುವುದನ್ನು ಹೇಳಿದ್ದೇನೆ.””

12104052 ಭೀಷ್ಮ ಉವಾಚ|

12104052a ಸ ತದ್ವಚಃ ಶತ್ರುನಿಬರ್ಹಣೇ ರತಸ್
ತಥಾ ಚಕಾರಾವಿತಥಂ ಬೃಹಸ್ಪತೇಃ|

12104052c ಚಚಾರ ಕಾಲೇ ವಿಜಯಾಯ ಚಾರಿಹಾ
ವಶಂ ಚ ಶತ್ರೂನನಯತ್ಪುರಂದರಃ||

ಭೀಷ್ಮನು ಹೇಳಿದನು: “ಶತ್ರುಸಂಹಾರದಲ್ಲಿ ನಿರತನಾಗಿದ್ದ ಅರಿಹಾ ಪುರಂದರನು ಬೃಹಸ್ಪತಿಯ ಮಾತಿನಂತೆಯೇ ನಡೆದುಕೊಂಡನು. ಯಥೋಚಿತ ಕಾಲದಲ್ಲಿ ವಿಜಯವನ್ನು ಸಾಧಿಸಲು ಪ್ರಸ್ಥಾನಮಾಡಿ ಶತ್ರುಗಳನ್ನು ಸೋಲಿಸಿ ತನ್ನ ಅಧೀನರನ್ನಾಗಿ ಮಾಡಿಕೊಂಡನು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಇಂದ್ರಬೃಹಸ್ಪತಿಸಂವಾದೇ ಚತುರಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಇಂದ್ರಬೃಹಸ್ಪತಿಸಂವಾದ ಎನ್ನುವ ನೂರಾನಾಲ್ಕನೇ ಅಧ್ಯಾಯವು.

೧೦೫

ಕಾಲಕವೃಕ್ಷೀಯ

ರಾಜ್ಯದಿಂದಲೂ, ಸೈನಿಕರಿಂದಲೂ, ಸ್ವಜನರಿಂದಲೂ ವಂಚಿತನಾದ ಕ್ಷೇಮದರ್ಶಿಗೆ ಕಾಲಕವೃಕ್ಷೀಯನ ವೈರಾಗ್ಯೋಪದೇಶ (1-53).

12105001 ಯುಧಿಷ್ಠಿರ ಉವಾಚ|
12105001a ಧಾರ್ಮಿಕೋಽರ್ಥಾನಸಂಪ್ರಾಪ್ಯ ರಾಜಾಮಾತ್ಯೈಃ ಪ್ರಬಾಧಿತಃ|
12105001c ಚ್ಯುತಃ ಕೋಶಾಚ್ಚ ದಂಡಾಚ್ಚ ಸುಖಮಿಚ್ಚನ್ಕಥಂ ಚರೇತ್||

ಯುಧಿಷ್ಠಿರನು ಹೇಳಿದನು: "ಧಾರ್ಮಿಕನಾಗಿದ್ದರೂ ಸಂಪತ್ತನ್ನು ಕಳೆದುಕೊಂಡ, ಆಮಾತ್ಯರಿಂದ ಬಾಧಿತನಾದ, ಕೋಶ-ಸೈನ್ಯಗಳನ್ನು ಕಳೆದುಕೊಂಡ ರಾಜನು ಸುಖವನ್ನು ಬಯಸಿ ಏನು ಮಾಡಬೇಕು?"

12105002 ಭೀಷ್ಮ ಉವಾಚ|
12105002a ಅತ್ರಾಯಂ ಕ್ಷೇಮದರ್ಶೀಯಮಿತಿಹಾಸೋಽನುಗೀಯತೇ|
12105002c ತತ್ತೇಽಹಂ ಸಂಪ್ರವಕ್ಷ್ಯಾಮಿ ತನ್ನಿಬೋಧ ಯುಧಿಷ್ಠಿರ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಕ್ಷೇಮದರ್ಶೀಯ ಎಂಬ ಇತಿಹಾಸವನ್ನು ಹೇಳುತ್ತಾರೆ. ಅದನ್ನೇ ನಾನು ಹೇಳುತ್ತೇನೆ. ಕೇಳು.

12105003a ಕ್ಷೇಮದರ್ಶಂ ನೃಪಸುತಂ ಯತ್ರ ಕ್ಷೀಣಬಲಂ ಪುರಾ|
12105003c ಮುನಿಃ ಕಾಲಕವೃಕ್ಷೀಯ ಆಜಗಾಮೇತಿ ನಃ ಶ್ರುತಮ್|
12105003e ತಂ ಪಪ್ರಚ್ಛೋಪಸಂಗೃಹ್ಯ ಕೃಚ್ಛ್ರಾಮಾಪದಮಾಸ್ಥಿತಃ||

ಹಿಂದೆ ನೃಪಸುತ ಕ್ಷೇಮದರ್ಶೀ ಎನ್ನುವವನು ಕ್ಷೀಣಬಲನಾಗಿದ್ದನು. ಮಹಾ ಆಪತ್ತಿನಲ್ಲಿ ಸಿಲುಕಿದ್ದ ಅವನು ಮುನಿ ಕಾಲಕವೃಕ್ಷೀಯನ ಬಳಿ ಹೋಗಿ ಸಾಷ್ಟಾಂಗ ಪ್ರಣಾಮ ಮಾಡಿ ಅವನನ್ನು ಹೀಗೆ ಪ್ರಶ್ನಿಸಿದನು ಎಂದು ಕೇಳಿದ್ದೇವೆ.

12105004a ಅರ್ಥೇಷು ಭಾಗೀ ಪುರುಷ ಈಹಮಾನಃ ಪುನಃ ಪುನಃ|
12105004c ಅಲಬ್ಧ್ವಾ ಮದ್ವಿಧೋ ರಾಜ್ಯಂ ಬ್ರಹ್ಮನ್ಕಿಂ ಕರ್ತುಮರ್ಹತಿ||

“ಬ್ರಹ್ಮನ್! ಪುರುಷನು ಅರ್ಥಕ್ಕೆ ಭಾಗಿಯಾಗಿದ್ದಾನೆ. ಆದರೆ ಪುನಃ
ಪುನಃ ಅರ್ಥವನ್ನು ಅಪೇಕ್ಷಿಸುತ್ತಿದ್ದರೂ ಅರ್ಥವನ್ನಾಗಲೀ
ರಾಜ್ಯವನ್ನಾಗಲೀ ಪಡೆದುಕೊಳ್ಳಲು ಸಾಧ್ಯವಾಗದೇ ಇದ್ದ
ನನ್ನಂಥವನು ಏನು ಮಾಡಬೇಕು?

12105005a ಅನ್ಯತ್ರ ಮರಣಾತ್ ಸ್ತೇಯಾದನ್ಯತ್ರ[343] ಪರಸಂಶ್ರಯಾತ್|
12105005c ಕ್ಷುದ್ರಾದನ್ಯತ್ರ ಚಾಚಾರಾತ್ತನ್ಮಾಚಕ್ಷ್ವ ಸತ್ತಮ||

ಸತ್ತಮ! ಆತ್ಮಹತ್ಯೆ, ಕಳ್ಳತನ, ಪರಾಶ್ರಯ ಮತ್ತು ಕ್ಷುದ್ರ
ವ್ಯವಹಾರಗಳನ್ನು ಬಿಟ್ಟು ರಾಜ್ಯ-ಧನ ಸಂಪಾದನೆಗಳಿಗೆ ಬೇರೆ
ಯಾವುದಾದರೂ ಉಪಾಯವಿದ್ದರೆ ಅದನ್ನು ನನಗೆ ತಿಳಿಸು.

12105006a ವ್ಯಾಧಿನಾ ಚಾಭಿಪನ್ನಸ್ಯ ಮಾನಸೇನೇತರೇಣ ವಾ|
12105006c ಬಹುಶ್ರುತಃ ಕೃತಪ್ರಜ್ಞಸ್ತ್ವದ್ವಿಧಃ ಶರಣಂ ಭವೇತ್||

ಮಾನಸಿಕ ಮತ್ತು ಇತರ ವ್ಯಾಧಿಗಳಿಂದ ಪೀಡಿತನಾಗಿರುವ ನನಗೆ
ಬಹುಶ್ರುತನೂ ಕೃತಪ್ರಜ್ಞನೂ ಆಗಿರುವ ನಿನ್ನಂಥವರೇ
ಶರಣ್ಯನಾಗಬೇಕು.

12105007a ನಿರ್ವಿದ್ಯ ಹಿ ನರಃ ಕಾಮಾನ್ನಿಯಮ್ಯ[344] ಸುಖಮೇಧತೇ|
12105007c ತ್ಯಕ್ತ್ವಾ ಪ್ರೀತಿಂ ಚ ಶೋಕಂ ಚ ಲಬ್ಧ್ವಾ ಪ್ರೀತಿಮಯಂ ವಸು||

ಕಾಮಭೋಗಗಳಿಂದ ವೈರಾಗ್ಯವನ್ನು ಹೊಂದಿ ವಿರಕ್ತನಾದ ಮನುಷ್ಯನು
ಪ್ರೀತಿ-ಶೋಕಗಳೆರಡನ್ನೂ ತ್ಯಜಿಸಿ ಜ್ಞಾನಮಯ ಐಶ್ವರ್ಯವನ್ನು

---

[343] ಮರಣಾದ್ವ್ಯನ್ಯಾದನ್ಯತ್ರ ಎಂಬ ಪಾಠಾಂತರವಿದೆ (ಭಾರತ ದರ್ಶನ).

[344] ಕಾಮಾನ್ನಿರ್ವಿದ್ಯ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಪಡೆದುಕೊಂಡು ಸುಖಿಯಾಗುತ್ತಾನೆ.

12105008a ಸುಖಮರ್ಥಾಶ್ರಯಂ ಯೇಷಾಮನುಶೋಚಾಮಿ ತಾನಹಮ್|
12105008c ಮಮ ಹ್ಯರ್ಥಾಃ ಸುಬಹವೋ ನಷ್ಟಾಃ ಸ್ವಪ್ನ ಇವಾಗತಾಃ||

ಸುಖವು ಧನವನ್ನೇ ಆಶ್ರಯಿಸಿದೆಯೆಂದು ಭಾವಿಸಿರುವವವರ ವಿಷಯದಲ್ಲಿ ನನಗೆ ಅನುತಾಪವಿದೆ. ನನ್ನಲ್ಲಿದ್ದ ಅಪಾರ್ಯ ಐಶ್ವರ್ಯ-ಸಂಪತ್ತು ಸ್ವಪ್ನದಲ್ಲಿ ಕಂಡ ಸಂಪತ್ತಿನಂತೆ ನಷ್ಟವಾಗಿ ಹೋದವು.

12105009a ದುಷ್ಕರಂ ಬತ ಕುರ್ವಂತಿ ಮಹತೋಽರ್ಥಾಂಸ್ತ್ಯಜಂತಿ ಯೇ|
12105009c ವಯಂ ತ್ವೇನಾನ್ಪರಿತ್ಯಕ್ತುಮಸತೋಽಪಿ ನ ಶಕ್ನುಮಃ||

ತಮ್ಮಲ್ಲಿರುವ ಮಹಾಸಂಪತ್ತನ್ನು ತ್ಯಜಿಸುವವರು ನಿಶ್ಚಯವಾಗಿಯೂ ಅತ್ಯಂತ ದುಷ್ಕರಕಾರ್ಯವನ್ನೇ ಮಾಡುವವರು. ನನ್ನಲ್ಲಿ ಈಗ ಧನದ ಲೇಶವೂ ಉಳಿದಿಲ್ಲ. ಆದರೂ ಧನದ ಮೇಲಿನ ಮೋಹವು ಮಾತ್ರ ನನ್ನನ್ನು ಬಿಟ್ಟು ಹೋಗಿಲ್ಲ. ಧನವನ್ನು ತ್ಯಾಗಮಾಡಲೂ ನಾನು ಶಕ್ಯನಾಗಿಲ್ಲ.

12105010a ಇಮಾಮವಸ್ಥಾಂ ಸಂಪ್ರಾಪ್ತಂ ದೀನಮಾರ್ತಂ ಶ್ರಿಯಶ್ಚ್ಯುತಮ್|
12105010c ಯದನ್ಯತ್ಸುಖಮಸ್ತೀಹ ತದ್ಬ್ರೂಹ್ಯನುಶಾಧಿ ಮಾಮ್||

ಬ್ರಹ್ಮನ್! ಸಂಪತ್ತಿನಿಂದ ಚ್ಯುತನಾಗಿ ಈ ಅವಸ್ಥೆಯನ್ನು ಪಡೆದು ನಾನು ದೀನನೂ ಆರ್ತನೂ ಆಗಿದ್ದೇನೆ. ಅನ್ಯ ರೀತಿಯಲ್ಲಿ ಸುಖವು ದೊರಕುವುದಿದ್ದರೆ ಅದನ್ನು ನನಗೆ ಉಪದೇಶಿಸು!"

12105011a ಕೌಸಲ್ಯೇನೈವಮುಕ್ತಸ್ತು ರಾಜಪುತ್ರೇಣ ಧೀಮತಾ|
12105011c ಮುನಿಃ ಕಾಲಕವೃಕ್ಷೀಯಃ ಪ್ರತ್ಯುವಾಚ ಮಹಾದ್ಯುತಿಃ||

ಧೀಮತ ಕೌಸಲ್ಯ ರಾಜಪುತ್ರನು ಹೀಗೆ ಹೇಳಲು ಮಹಾದ್ಯುತಿ ಮುನಿ ಕಾಲಕವೃಕ್ಷೀಯನು ಉತ್ತರಿಸಿದನು:

12105012a ಪುರಸ್ತಾದೇವ ತೇ ಬುದ್ಧಿರಿಯಂ ಕಾರ್ಯಾ ವಿಜಾನತಃ|
12105012c ಅನಿತ್ಯಂ ಸರ್ವಮೇವೇದಮಹಂ ಚ ಮಮ ಚಾಸ್ತಿ ಯತ್||

“ನಿನ್ನ ಈ ಬುದ್ಧಿಯು ಮೊದಲೇ “ಇವೆಲ್ಲವೂ ಅನಿತ್ಯವಾದವು ಮತ್ತು ಇವುಗಳಲ್ಲಿ ನನ್ನದು ಎನ್ನುವುದು ಯಾವುದೂ ಇಲ್ಲ” ಎನ್ನುವ ವಿಷಯವನ್ನು ತಿಳಿದುಕೊಳ್ಳಬೇಕಾಗಿತ್ತು.

12105013a ಯತ್ಕಿಂಚಿನ್ಮನ್ಯಸೇಽಸ್ತೀತಿ ಸರ್ವಂ ನಾಸ್ತೀತಿ ವಿದ್ಧಿ ತತ್|
12105013c ಏವಂ ನ ವ್ಯಥತೇ ಪ್ರಾಜ್ಞಃ ಕೃಚ್ಚ್ರಾಮಪ್ಯಾಪದಂ ಗತಃ||

ಯಾವುದನ್ನು ನೀನು ಇದೆ ಎಂದು ತಿಳಿದುಕೊಂಡಿರುವೆಯೋ ಅವು ಎಲ್ಲವೂ ಇಲ್ಲ ಎಂದು ತಿಳಿದುಕೋ. ಹೀಗೆ ತಿಳಿದುಕೊಂಡಿರುವವನು ಕಷ್ಟತಮ ಆಪತ್ತಿನಲ್ಲಿ ಸಿಕ್ಕಿಕೊಂಡರೂ ವ್ಯಥಿತನಾಗುವುದಿಲ್ಲ.

12105014a ಯದ್ಧಿ ಭೂತಂ ಭವಿಷ್ಯಚ್ಚ ಧ್ರುವಂ ತನ್ನ ಭವಿಷ್ಯತಿ|
12105014c ಏವಂ ವಿದಿತವೇದ್ಯಸ್ತ್ವಮಧರ್ಮೇಭ್ಯಃ ಪ್ರಮೋಕ್ಷ್ಯಸೇ||

ಹಿಂದೆ ಇದ್ದುದು ಈಗ ಇಲ್ಲ; ಮುಂದೆ ಆಗುವುದೂ ಯಾವುದೂ ಇರುವುದಿಲ್ಲ ಎಂದು ತಿಳಿದುಕೊಂಡಿರಬೇಕಾದುದನ್ನು ತಿಳಿದುಕೊಂಡರೆ ನೀನು ಎಲ್ಲ ವಿಧದ ಅಧರ್ಮಗಳಿಂದಲೂ ಮುಕ್ತನಾಗುವೆ.

12105015a ಯಚ್ಚ ಪೂರ್ವೇ ಸಮಾಹಾರೇ ಯಚ್ಚ ಪೂರ್ವತರೇ ಪರೇ|
12105015c ಸರ್ವಂ ತನ್ನಾಸ್ತಿ ತಚ್ಚೈವ ತಜ್ಞಾತ್ವಾ ಕೋಽನುಸಂಜ್ವರೇತ್||

ಹಿಂದೆ ನಡೆದುಹೋದುದು, ಪರಂಪರಾಗತವಾಗಿ ಬಂದುದು ಎಲ್ಲವೂ

ಈಗ ಇಲ್ಲ ಎಂದು ತಿಳಿದುಕೊಂಡವ ಯಾರು ತಾನೇ ಇಂದು ಇಲ್ಲದಿರುವುದಕ್ಕೆ ಚಿಂತಿಸುತ್ತಾನೆ?

12105016a ಭೂತ್ವಾ ಚ ನ ಭವತ್ಯೇತದಭೂತ್ವಾ ಚ ಭವತ್ಯಪಿ|
12105016c ಶೋಕೇ ನ ಹ್ಯಸ್ತಿ ಸಾಮರ್ಥ್ಯಂ ಶೋಕಂ ಕುರ್ಯಾತ್ಕಥಂ ನರಃ||

ಹಿಂದೆ ಇದ್ದುದು ಈಗ ಇಲ್ಲ. ಯಾರಲ್ಲಿ ಇಲ್ಲವೋ ಅವರಿಗೆ ದೊರಕುತ್ತದೆ. ಕಳೆದುಹೋದುದನ್ನು ಹಿಂದೆ ತಂದು ಕೊಡಲು ಶೋಕಕ್ಕೆ ಸಾಮರ್ಥ್ಯವಿಲ್ಲ. ಆದುದರಿಂದ ನರನು ಹೇಗೆ ಶೋಕಪಡುತ್ತಾನೆ?

12105017a ಕ್ವ ನು ತೇऽದ್ಯ ಪಿತಾ ರಾಜನ್ಕ್ವ ನು ತೇऽದ್ಯ ಪಿತಾಮಹಃ|
12105017c ನ ತ್ವಂ ಪಶ್ಯಸಿ ತಾನದ್ಯ ನ ತ್ವಾ ಪಶ್ಯಂತಿ ತೇऽಪಿ ಚ||

ರಾಜನ್! ಇಂದು ನಿನ್ನ ತಂದೆಯಿಲ್ಲಿದ್ದಾನೆ? ಪಿತಾಮಹನೆಲ್ಲಿದ್ದಾನೆ? ನೀನು ಅವರನ್ನು ಈಗ ನೋಡುತ್ತಿಲ್ಲ. ಅವರೂ ನಿನ್ನನ್ನು ನೋಡುತ್ತಿಲ್ಲ ಅಲ್ಲವೇ?

12105018a ಆತ್ಮನೋऽಧ್ರುವತಾಂ ಪಶ್ಯಂಸ್ತ್ವಂ ಕಿಮನುಶೋಚಸಿ|
12105018c ಬುದ್ಧ್ಯಾ ಚೈವಾನುಬುಧ್ಯಸ್ವ ಧ್ರುವಂ ಹಿ ನ ಭವಿಷ್ಯಸಿ||

ನೀನೇ ಅನಿತ್ಯನು ಎಂದು ನೋಡಿಯೂ ನೀನು ಏಕೆ ಶೋಕಿಸುತ್ತಿರುವೆ? ನಿಶ್ಚಯವಾಗಿಯೂ ನೀನು ಭವಿಷ್ಯದಲ್ಲಿ ಇರುವುದಿಲ್ಲ. ಬುದ್ಧಿಯಿಂದ ಇದನ್ನು ಯೋಚಿಸಿ ತಿಳಿದುಕೋ.

12105019a ಅಹಂ ಚ ತ್ವಂ ಚ ನೃಪತೇ ಶತ್ರವಃ ಸುಹೃದಶ್ಚ ತೇ|
12105019c ಅವಶ್ಯಂ ನ ಭವಿಷ್ಯಾಮಃ ಸರ್ವಂ ಚ ನ ಭವಿಷ್ಯತಿ||

ನೃಪತೇ! ನಾನು, ನೀನು, ಶತ್ರುಗಳು ಮತ್ತು ಸ್ನೇಹಿತರು ಎಲ್ಲರೂ

ಅವಶ್ಯವಾಗಿ ಭವಿಷ್ಯದಲ್ಲಿ ಇಲ್ಲವಾಗುತ್ತೇವೆ.

12105020a ಯೇ ತು ವಿಂಶತಿವರ್ಷಾ ವೈ ತ್ರಿಂಶದ್ವರ್ಷಾಶ್ಚ ಮಾನವಾಃ|
12105020c ಅರ್ವಾಗೇವ ಹಿ ತೇ ಸರ್ವೇ ಮರಿಷ್ಯಂತಿ ಶರಚ್ಚತಾತ್||

ಈಗ ಇಪ್ಪತ್ತು ಮತ್ತು ಮೂವತ್ತು ವರ್ಷದ ಮನುಷ್ಯರು ಎಲ್ಲರೂ ಮುಂದಿನ ನೂರು ವರ್ಷಗಳೊಳಗೆಯೇ ಮೃತರಾಗುತ್ತಾರೆ.

12105021a ಅಪಿ ಚೇನ್ಮಹತೋ ವಿತ್ತಾದ್ವಿಪ್ರಮುಚ್ಯೇತ ಪೂರುಷಃ|
12105021c ನೈತನ್ಮಮೇತಿ ತನ್ಮತ್ವಾ ಕುರ್ವೀತ ಪ್ರಿಯಮಾತ್ಮನಃ||

ಹೀಗಿರುವಾಗ ಅಪಾರ ಐಶ್ವರ್ಯವನ್ನು ಪಡೆದುಕೊಂಡರೂ ಇದು ನನ್ನದಲ್ಲ ಎಂದು ತಿಳಿದುಕೊಂಡು ಆತ್ಮಕಲ್ಯಾಣವನ್ನು ಮಾಡಿಕೊಳ್ಳಬೇಕು.

12105022a ಅನಾಗತಂ ಯನ್ನ ಮಮೇತಿ ವಿದ್ಯಾದ್
ಅತಿಕ್ರಾಂತಂ ಯನ್ನ ಮಮೇತಿ ವಿದ್ಯಾತ್|
12105022c ದಿಷ್ಟಂ ಬಲೀಯ ಇತಿ ಮನ್ಯಮಾನಾಸ್
ತೇ ಪಂಡಿತಾಸ್ತತ್ಸತಾಂ ಸ್ಥಾನಮಾಹುಃ||

ಮುಂದೆ ದೊರೆಯುವುದನ್ನೂ ಅದು ನನ್ನದಲ್ಲ ಎಂದು ತಿಳಿಯಬೇಕು. ಕಳೆದುಹೋದುದೂ ನನ್ನದಲ್ಲ ಎಂದು ಭಾವಿಸಬೇಕು. ಅದೃಷ್ಟವೇ ಬಲಿಷ್ಠವಾದುದು ಎಂದು ತಿಳಿದವರು ವಿದ್ವಾಂಸರೇ ಸರಿ. ಅದೇ ಸತ್ಪುರುಷರ ಸ್ಥಾನ ಎಂದು ಹೇಳುತ್ತಾರೆ.

12105023a ಅನಾಢ್ಯಾಶ್ಚಾಪಿ ಜೀವಂತಿ ರಾಜ್ಯಂ ಚಾಪ್ಯನುಶಾಸತೇ|
12105023c ಬುದ್ಧಿಪೌರುಷಸಂಪನ್ನಾಸ್ತ್ವಯಾ ತುಲ್ಯಾಧಿಕಾ ಜನಾಃ||

ಧನಾಢ್ಯರಲ್ಲದವರೂ ಜೀವಿಸುತ್ತಾರೆ. ರಾಜ್ಯವನ್ನೂ ಆಳುತ್ತಾರೆ. ಬುದ್ಧಿ ಪೌರುಷಗಳಲ್ಲಿ ನಿನ್ನ ಸಮನಾದವರೂ ಇದ್ದಾರೆ. ನಿನಗೆ ಮಿಗಿಲಾದವರೂ ಇದ್ದಾರೆ.

12105024a ನ ಚ ತ್ವಮಿವ ಶೋಚಂತಿ ತಸ್ಮಾತ್ತ್ವಮಪಿ ಮಾ ಶುಚಃ|
12105024c ಕಿಂ ನು ತ್ವಂ ತೈರ್ನ ವೈ ಶ್ರೇಯಾಂಸ್ತುಲ್ಯೋ ವಾ ಬುದ್ಧಿಪೌರುಷೈಃ||

ಆದರೆ ಅವರು ನಿನ್ನಂತೆ ಶೋಕಿಸುವುದಿಲ್ಲ. ಆದುದರಿಂದ ನೀನೂ ಶೋಕಿಸಬೇಡ. ಬುದ್ಧಿ-ಪೌರುಷಗಳಲ್ಲಿ ನೀನು ಅವರಿಗಿಂತಲೂ ಅಧಿಕ ಅಥವಾ ಸಮಾನನಾಗಿಲ್ಲವೇ?"

12105025 ರಾಜಪುತ್ರ ಉವಾಚ|
12105025a ಯಾದೃಚ್ಚಿಕಂ ಮಮಾಸೀತ್ತದ್ರಾಜ್ಯಮಿತ್ಯೇವ ಚಿಂತಯೇ|
12105025c ಹ್ರಿಯತೇ ಸರ್ವಮೇವೇದಂ ಕಾಲೇನ ಮಹತಾ ದ್ವಿಜ||

ರಾಜಪುತ್ರನು ಹೇಳಿದನು: "ದ್ವಿಜ! ಅನಾಯಾಸವಾಗಿ ನನ್ನ ವಶವಾಗಿದ್ದ ಅಖಂಡ ಸಾಮ್ರಾಜ್ಯ ಸರ್ವವನ್ನೂ ಮಹಾ ಕಾಲನು ಅಪಹರಿಸಿದನೆಂದು ಭಾವಿಸುತ್ತೇನೆ.

12105026a ತಸ್ಯೈವಂ ಹ್ರಿಯಮಾಣಸ್ಯ ಸ್ರೋತಸೇವ ತಪೋಧನ|
12105026c ಫಲಮೇತತ್ ಪ್ರಪಶ್ಯಾಮಿ ಯಥಾಲಬ್ಧೇನ ವರ್ತಯೇ||

ತಪೋಧನ! ಪ್ರವಾಹವು ಎಲ್ಲವನ್ನೂ ಕೊಚ್ಚಿಕೊಂಡು ಹೋಗುವಂತೆ ನನ್ನ ಎಲ್ಲವೂ ಹೊರಟು ಹೋಗಿವೆ. ಯಾವುದು ಯಾವಾಗ ದೊರಕುವುದೋ ಅದರಿಂದಲೇ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದೇನೆ."

12105027 ಮುನಿರುವಾಚ|

12105027a ಅನಾಗತಮತೀತಂ ಚ ಯಥಾ ತಥ್ಯಮಿನಿಶ್ಚಯಾತ್|
12105027c ನಾನುಶೋಚಸಿ ಕೌಸಲ್ಯ ಸರ್ವಾರ್ಥೇಷು ತಥಾ ಭವ||

ಮುನಿಯು ಹೇಳಿದನು: "ಕೌಸಲ್ಯ! ಯಥಾತಥ್ಯವನ್ನು
ನಿಶ್ಚಯಿಸಿಯಾದಮೇಲೆ ಮುಂದಾಗುವುದಕ್ಕೆ ಮತ್ತು ಆಗಿಹೋದುದಕ್ಕೆ
ಶೋಕಿಸಬಾರದು. ಎಲ್ಲ ವಿಷಯಗಳಲ್ಲಿಯೂ ನೀನು ಹಾಗಾಗಬೇಕು.

12105028a ಅವಾಪ್ಯಾನ್ಯಾಮಯಸ್ವಾರ್ಥಾನ್ನಾನವಾಪ್ಯನ್ಯದಾ ಚನ|
12105028c ಪ್ರತ್ಯುತ್ಪನ್ನಾನನುಭವನ್ಮಾ ಶುಚಸ್ತ್ವಮನಾಗತಾನ್||

ಪಡೆಯಬಹುದಾದುದನ್ನು ಬಯಸು. ಪಡೆಯಲಸಾಧ್ಯವಾದುದನ್ನು
ಎಂದೂ ಬಯಸಬೇಡ. ನೀನು ಪಡೆದಿರುವುದನ್ನು ಉಪಭೋಗಿಸು
ಮತ್ತು ಅಲಭ್ಯವಾದವುಗಳಿಗೆ ಶೋಕಿಸಬೇಡ.

12105029a ಯಥಾ ಲಬ್ಧೋಪಪನ್ನಾರ್ಥಸ್ತಥಾ ಕೌಸಲ್ಯ ರಂಸ್ಯಸೇ|
12105029c ಕಚ್ಚಿಚ್ಚುದ್ಧಸ್ವಭಾವೇನ ಶ್ರಿಯಾ ಹೀನೋ ನ ಶೋಚಸಿ||

ಕೌಸಲ್ಯ! ಆಗ ನೀನು ಹೇಗೆ ಉಪಲಬ್ಧವಾದವುಗಳಿಂದ
ಸಂತುಷ್ಟನಾಗಿದ್ದೆಯೋ ಹಾಗೆ ಈಗಲೂ ಲಭ್ಯವಾದವುಗಳಿಂದ
ಸಂತುಷ್ಟನಾಗು. ಶುದ್ಧಸ್ವಭಾವದವನಾದ ನೀನು ರಾಜ್ಯನಾಶಕ್ಕಾಗಿ
ಶೋಕಿಸುತ್ತಿಲ್ಲ ತಾನೇ?

12105030a ಪುರಸ್ತಾದ್ಭೂತಪೂರ್ವತ್ವಾದ್ಧೀನಭಾಗ್ಯೋ ಹಿ ದುರ್ಮತಿಃ|
12105030c ಧಾತಾರಂ ಗರ್ಹತೇ ನಿತ್ಯಂ ಲಬ್ಧಾರ್ಥಾಂಶ್ಚ ನ ಮೃಷ್ಯತೇ||

ದುರ್ಮತಿಯಾದವನು ಹಿಂದೆ ಪಡೆದಿದ್ದ ಸಂಪತ್ತು ನಷ್ಟವಾಗಿ

ಹೋದರೆ ತಾನು ಭಾಗ್ಯಹೀನನೆಂದು ಭಾವಿಸಿ ನಿತ್ಯವೂ ಧಾತಾರನನ್ನು ನಿಂದಿಸುತ್ತಿರುತ್ತಾನೆ. ಆದರೆ ಐಶ್ವರ್ಯವು ಬಂದರೆ ಅದು ದೈವಲಬ್ಧವೆಂದು ಭಾವಿಸುದಿಲ್ಲ. ಅದು ಸ್ವಪ್ರಯತ್ನದಿಂದಲೇ ಬಂದಿತೆಂದು ಭಾವಿಸುತ್ತಾನೆ.

12105031a ಅನರ್ಹಾನಪಿ ಚೈವಾನ್ಯಾನ್ಮನ್ಯತೇ ಶ್ರೀಮತೋ ಜನಾನ್|
12105031c ಏತಸ್ಮಾತ್ಕಾರಣಾದೇತದ್ದುಃಖಂ ಭೂಯೋಽನುವರ್ತತೇ||

ಶ್ರೀಮಂತ ಜನರನ್ನು ನೋಡಿ ಅವರು ಐಶ್ವರ್ಯಕ್ಕೆ ಅನರ್ಹರೆಂದು ಭಾವಿಸುತ್ತಾನೆ. ಈರ್ಷ್ಯೆಯಿಂದ ಹುಟ್ಟಿದ ಆ ದುಃಖವು ಸದಾ ಅವನನ್ನು ಹಿಂಬಾಲಿಸುತ್ತದೆ.

12105032a ಈರ್ಷ್ಯಾತಿಚ್ಚೇದಸಂಪನ್ನಾ ರಾಜನ್ ಪುರುಷಮಾನಿನಃ|
12105032c ಕಚ್ಚಿತ್ತ್ವಂ ನ ತಥಾ ಪ್ರಾಜ್ಞ ಮತ್ಸರೀ ಕೋಸಲಾಧಿಪ||

ರಾಜನ್! ಕೋಸಲಾಧಿಪ! ಪೌರುಷಮಾನಿನಿಗಳಾದವರು ಈ ಈರ್ಷ್ಯೆಯಿಂದ ಕೂಡಿರುತ್ತಾರೆ. ಪ್ರಾಜ್ಞ! ನೀನು ಹಾಗೆ ಮತ್ಸರಿಯಾಗಿಲ್ಲ ತಾನೇ?

12105033a ಸಹಸ್ವ ಶ್ರಿಯಮನ್ಯೇಷಾಂ ಯದ್ಯಪಿ ತ್ವಯಿ ನಾಸ್ತಿ ಸಾ|
12105033c ಅನ್ಯತ್ರಾಪಿ ಸತೀಂ ಲಕ್ಷ್ಮೀಂ ಕುಶಲಾ ಭುಂಜತೇ ಜನಾಃ[345]|
12105033e ಅಭಿವಿಷ್ಯಂದತೇ ಶ್ರೀರ್ಹಿ ಸತ್ಯಪಿ ದ್ವಿಷತೋ ಜನಾತ್||

ನಿನ್ನಲ್ಲಿ ಸಂಪತ್ತಿಲ್ಲದಿದ್ದರೂ ಅದು ಬೇರೆಯವರ ಬಳಿಯಲ್ಲಿರುವುದನ್ನು ಸಹನೆಯಿಂದ ಕಾಣು. ಕುಶಲ ಜನರು ಬೇರೆಯವರಲ್ಲಿರುವ ಸಂಪತ್ತನ್ನೂ

[345] ಸದಾ (ಭಾರತ ದರ್ಶನ).

ಭೋಗಿಸುತ್ತಾರೆ. ಅಸೂಯೆಯಿಂದ ಇತರನ್ನು ದ್ವೇಷಿಸುವವರು ಶ್ರೀಮಂತರಾಗಿದ್ದರೂ ಬಹು ಬೇಗ ನಾಶಹೊಂದುತ್ತಾರೆ.

12105034a ಶ್ರಿಯಂ ಚ ಪುತ್ರಪೌತ್ರಂ ಚ ಮನುಷ್ಯಾ ಧರ್ಮಚಾರಿಣಃ|
12105034c ತ್ಯಾಗಧರ್ಮವಿದೋ[346] ವೀರಾಃ ಸ್ವಯಮೇವ ತ್ಯಜಂತ್ಯುತ||

ತ್ಯಾಗಧರ್ಮವನ್ನು ತಿಳಿದಿರುವ ವೀರರು ಮತ್ತು ಧರ್ಮಚಾರೀ ಮನುಷ್ಯರು ಸಂಪತ್ತು ಮತ್ತು ಪುತ್ರ-ಪೌತ್ರರನ್ನು ತಾವಾಗಿಯೇ ತ್ಯಜಿಸುತ್ತಾರೆ.

[347]12105035a ಬಹು ಸಂಕಸುಕಂ ದೃಷ್ಟ್ವಾ ವಿವಿತ್ಸಾಸಾಧನೇನ[348] ಚ|
12105035c ತಥಾನ್ಯೇ ಸಂತ್ಯಜಂತ್ಯೇನಂ ಮತ್ವಾ ಪರಮದುರ್ಲಭಮ್||

ನಿರಂತರ ಪ್ರಯತ್ನದಿಂದ ಸಂಪಾದಿಸಿದ ಧನವೂ ಅಸ್ಥಿರವಾಗಿರುತ್ತದೆ ಎನ್ನುವುದನ್ನು ತಿಳಿದು ಧನವು ಪರಮ ದುರ್ಲಭವಾದುದೆಂದು ಭಾವಿಸಿ ಅನ್ಯ ಜನರು ಧನವನ್ನೇ ತ್ಯಜಿಸುತ್ತಾರೆ.

12105036a ತ್ವಂ ಪುನಃ ಪ್ರಾಜ್ಞರೂಪಃ ಸನ್ ಕೃಪಣಂ ಪರಿತಪ್ಯಸೇ|

---

346 ಯೋಗಧರ್ಮವಿದೋ (ಭಾರತ ದರ್ಶನ).

347 ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಎರಡು ಅಧಿಕ ಶ್ಲೋಕಗಳಿವೆ:
ತ್ಯಕ್ತಂ ಸ್ವಾಯಂಭುವೇ ವಂಶೇ ಶುಭೇನ ಭರತೇನ ಚ|
ನಾನಾರತ್ನಸಮಾಕೀರ್ಣಂ ರಾಜ್ಯಂ ಸ್ಫೀತಮಿತ ಶ್ರುತಮ್||
ತಥಾನ್ಯೈರ್ಭೂಮಿಪಾಲೈಶ್ಚ ತ್ಯಕ್ತಂ ರಾಜ್ಯಂ ಮಹೋದಯಮ್| ತ್ಯಕ್ತ್ವಾ ರಾಜ್ಯಾನಿ ಸರ್ವೇ ಚ ವನೇ ವನ್ಯಫಲಾಶನಾಃ| ಗತಾಶ್ಚ ತಪಸಃ ಪಾರಂ ದುಃಖಸ್ಯಾಂತಂ ಚ ಭೂಮಿಪಾಃ|| (ಗೀತಾ ಪ್ರೆಸ್).

348 ವಿಧಿತ್ಸಾಸಾಧನೇನ (ಭಾರತ ದರ್ಶನ).

12105036c ಅಕಾಮ್ಯಾನ್ಯಾಮಯಾನೋಽರ್ಥಾನ್ಪರಾಚೀನಾನುಪದ್ರುತಾನ್॥

ನೀನಾದರೋ ಪ್ರಾಜ್ಞನಂತೆ ಕಾಣುವೆ. ಸುಖೋಪಭೋಗಗಳು
ದೈವಾಧೀನವೆಂಬುದು ನಿನಗೆ ತಿಳಿದಿದೆ. ಐಶ್ವರ್ಯವು ಅಸ್ಥಿರ
ಎನ್ನುವುದೂ ನಿನಗೆ ತಿಳಿದಿದೆ. ಆದರೂ ಅಪೇಕ್ಷಿಸಲು
ಅಯೋಗ್ಯವಾದವುಗಳನ್ನು ನೀನು ಅಪೇಕ್ಷಿಸುತ್ತಿರುವೆ. ಕೃಪಣನಾಗಿ
ಪರಿತಪಿಸುತ್ತಿದ್ದೀಯೆ.

12105037a ತಾಂ ಬುದ್ಧಿಮುಪಜಿಜ್ಞಾಸುಸ್ತ್ವಮೇವೈನಾನ್ ಪರಿತ್ಯಜ|
12105037c ಅನರ್ಥಾಂಶ್ಚಾರ್ಥರೂಪೇಣ ಅರ್ಥಾಂಶ್ಚಾನರ್ಥರೂಪತಃ॥

ಈ ಬುದ್ಧಿವಾದವನ್ನು ಗ್ರಹಿಸಿ ಮನನಮಾಡಿಕೊಳ್ಳಲು ಪ್ರಯತ್ನಿಸು.
ಭೋಗೇಚ್ಛೆಯನ್ನು ಬಿಟ್ಟುಬಿಡು. ನಿನಗೆ ಅರ್ಥರೂಪದಲ್ಲಿ
ಕಾಣುತ್ತಿರುವುದೆಲ್ಲವೂ ಅನರ್ಥಗಳೇ ಆಗಿವೆ. ಏಕೆಂದರೆ ಸಮಸ್ತ
ಭೋಗಗಲೂ ಅನರ್ಥರೂಪಗಳೇ ಆಗಿವೆ.

12105038a ಅರ್ಥಾಯೈವ ಹಿ ಕೇಷಾಂ ಚಿದ್ಧನನಾಶೋ ಭವತ್ಯುತ|
12105038c ಅನಂತ್ಯಂ ತಂ ಸುಖಂ ಮತ್ವಾ ಶ್ರಿಯಮನ್ಯಃ ಪರೀಕ್ಷತೇ॥

ಅರ್ಥಸಂಪಾದನೆಯ ಸಲುವಾಗಿಯೇ ಕೆಲವರ ಧನವು
ನಾಶವಾಗುತ್ತದೆ. ಇನ್ನು ಕೆಲವರು ಸಂಪತ್ತಿನಿಂದಲೇ ಅಕ್ಷಯ ಸುಖವು
ದೊರೆಯುವುದೆಂದು ತಿಳಿದು ಐಶ್ವರ್ಯದ ಹಿಂದೆ ಓಡುತ್ತಿರುತ್ತಾರೆ.

12105039a ರಮಮಾಣಃ ಶ್ರಿಯಾ ಕಶ್ಚಿನ್ನಾನ್ಯಚ್ಚ್ರೇಯೋಽಭಿಮನ್ಯತೇ|
12105039c ತಥಾ ತಸ್ಯೇಹಮಾನಸ್ಯ ಸಮಾರಂಭೋ ವಿನಶ್ಯತಿ॥

ಸಂಪತ್ತಿನಿಂದ ಆನಂದಿಸುತ್ತಿರುವವನು ಸಂಪತ್ತಿಗಿಂತಲೂ ಬೇರೆ

ಸುಖಸಾಧನವ್ಯಾವುದೂ ಇಲ್ಲವೆಂದೇ ಭಾವಿಸುತ್ತಾನೆ. ಹಾಗೆಯೇ ಧನವನ್ನು ಬಯಸುವವರ ಪ್ರಯತ್ನಗಳು ಪ್ರಾರಂಭದಲ್ಲಿಯೇ ನಾಶವಾಗಬಲ್ಲವು.

12105040a ಕೃಚ್ಛ್ರಾಲ್ಲಬ್ಧಮಭಿಪ್ರೇತಂ ಯದಾ ಕೌಸಲ್ಯ ನಶ್ಯತಿ|
12105040c ತದಾ ನಿರ್ವಿದ್ಯತೇ ಸೋಽರ್ಥಾತ್ ಪರಿಭಗ್ನಕ್ರಮೋ ನರಃ[349]||

ಕೌಸಲ್ಯ! ಅತ್ಯಂತ ಕಷ್ಟದಿಂದ ಸಂಗ್ರಹಿಸಿದ್ದ ಧನವು ವಿನಾಶಹೊಂದಿದರೆ ಪ್ರಯತ್ನಗಳು ಭಗ್ನಗೊಂಡ ಮನುಷ್ಯನು ಧನದಿಂದ ವಿರಕ್ತನಾಗುತ್ತಾನೆ.

12105041a ಧರ್ಮಮೇಕೇಽಭಿಪದ್ಯಂತೇ ಕಲ್ಯಾಣಾಭಿಜನಾ ನರಾಃ|
12105041c ಪರತ್ರ ಸುಖಮಿಚ್ಛಂತೋ ನಿರ್ವಿದ್ಯೇಯುಶ್ಚ ಲೌಕಿಕಾತ್||

ಮರಣಾನಂತರದ ಸುಖವನ್ನು ಬಯಸುವ ಕಲ್ಯಾಣ ಕುಲದ ಜನರು ಧರ್ಮವನ್ನು ಮಾತ್ರ ಅವಲಂಬಿಸುತ್ತಾರೆ ಮತ್ತು ಲೌಕಿಕ ವ್ಯವಹಾರಗಳಿಂದ ವಿರಕ್ತರಾಗುತ್ತಾರೆ.

12105042a ಜೀವಿತಂ ಸಂತ್ಯಜಂತ್ಯೇಕೇ ಧನಲೋಭಪರಾ ನರಾಃ|
12105042c ನ ಜೀವಿತಾರ್ಥಂ ಮನ್ಯಂತೇ ಪುರುಷಾ ಹಿ ಧನಾದೃತೇ||

ಧನಲೋಭಪರರಾದವರು ಧನಕ್ಕಾಗಿ ಜೀವಿತವನ್ನೂ ತ್ಯಜಿಸಲು ಸಿದ್ಧರಾಗಿರುತ್ತಾರೆ. ಅಂಥವರು ಧನವಿಲ್ಲದೇ ಜೀವಿತದಲ್ಲಿ ಅರ್ಥವಿಲ್ಲ ಎಂದು ಭಾವಿಸುತ್ತಾರೆ.

---

[349] ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಅನಿತ್ಯಾಂ ತಾಂ ಶ್ರಿಯಂ ಮತ್ವಾ ಶ್ರಿಯಂ ವಾ ಕಃ ಪರೀಪ್ಸತಿ| (ಗೀತಾ ಪ್ರೆಸ್).

12105043a ಪಶ್ಯ ತೇಷಾಂ ಕೃಪಣತಾಂ ಪಶ್ಯ ತೇಷಾಮಬುದ್ಧಿತಾಮ್|
12105043c ಅಧ್ರುವೇ ಜೀವಿತೇ ಮೋಹಾದರ್ಥತೃಷ್ಣಾಮುಪಾಶ್ರಿತಾಃ||

ಅವರ ಕೃಪಣತೆಯನ್ನು ನೋಡು. ಅವರ ಮೂಢತನವನ್ನು ನೋಡು. ನಿಶ್ಚಿತವಾಗಿರದ ಜೀವಿತಕ್ಕಾಗಿ ಮೋಹದಿಂದ ಅರ್ಥತೃಷ್ಣೆಯನ್ನು ಅವರು ಆಶ್ರಯಿಸುತ್ತಾರೆ.

12105044a ಸಂಚಯೇ ಚ ವಿನಾಶಾಂತೇ ಮರಣಾಂತೇ ಚ ಜೀವಿತೇ|
12105044c ಸಂಯೋಗೇ ವಿಪ್ರಯೋಗಾಂತೇ ಕೋ ನು ವಿಪ್ರಣಯೇನ್ಮನಃ||

ಸಂಗ್ರಹವು ವಿನಾಶದಲ್ಲಿ ಅಂತ್ಯವಾಗುತ್ತದೆ. ಜೀವಿತವು ಮರಣದಲ್ಲಿ ಕೊನೆಗೊಳ್ಳುತ್ತದೆ. ಸೇರುವಿಕೆಯು ವಿಯೋಗದಲ್ಲಿ ಕೊನೆಗೊಳ್ಳುತ್ತದೆ. ಹೀಗಿರುವಾಗ ಯಾರುತಾನೇ ಅವುಗಳ ಕುರಿತು ಮನಸ್ಸನ್ನು ಕೆಡಿಸಿಕೊಳ್ಳುತ್ತಾರೆ?

12105045a ಧನಂ ವಾ ಪುರುಷಂ ರಾಜನ್ಪುರುಷೋ ವಾ ಪುನರ್ಧನಮ್|
12105045c ಅವಶ್ಯಂ ಪ್ರಜಹಾತ್ಯೇತತ್ತದ್ವಿದ್ವಾನ್ ಕೋಽನುಸಂಜ್ವರೇತ್||

ರಾಜನ್! ಮನುಷ್ಯನು ಧನವನ್ನು ಬಿಡಬಹುದು ಅಥವಾ ಧನವೂ ಮನುಷ್ಯನನ್ನು ಬಿಡಬಹುದು. ಹೀಗಿರುವಾಗ ಅದರ ಕುರಿತು ಯಾವ ವಿದ್ವಾಂಸನು ತಾನೇ ಚಿಂತಿಸುತ್ತಾನೆ?

[350]12105046a ಅನ್ಯೇಷಾಮಪಿ ನಶ್ಯಂತಿ ಸುಹೃದಶ್ಚ ಧನಾನಿ ಚ|

---

350 ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಅನ್ಯತ್ರೋಪನತಾ ಹ್ಯಾಪತ್ಪುರುಷಂ ತೋಷಯತ್ಯುತ| ತೇನ ಶಾಂತಿ ನ ಲಭತೇ ನಾಹಮೇವೇತಿ ಕಾರಣಾತ್|| (ಗೀತಾ ಪ್ರೆಸ್).

12105046c ಪಶ್ಯ ಬುದ್ಧ್ಯಾ ಮನುಷ್ಯಾಣಾಂ ರಾಜನ್ನಾಪದಮಾತ್ಮನಃ|
12105046e ನಿಯಚ್ಚ ಯಚ್ಚ ಸಂಯಚ್ಚ ಇಂದ್ರಿಯಾಣಿ ಮನೋ ಗಿರಮ್||

ನಿನ್ನದು ಮಾತ್ರವೇ ಅಲ್ಲ. ಬೇರೆಯವರ ಸುಹೃದರೂ ಧನಗಳೂ ನಾಶವಾಗುತ್ತವೆ. ರಾಜನ್! ಎಲ್ಲ ಮನುಷ್ಯರಿಗೂ ಒದಗಿಬರುವಂಥಹ ಆಪತ್ತೇ ನಿನಗೂ ಒದಗಿ ಬಂದಿದೆ ಎನ್ನುವುದನ್ನು ಬುದ್ಧಿಪೂರ್ವಕವಾಗಿ ವಿಚಾರಿಸಿ ನೋಡು. ಇಂದ್ರಿಯಗಳನ್ನು ಸಂಯಮದಲ್ಲಿಡು. ಮನಸ್ಸನ್ನು ವಶದಲ್ಲಿಟ್ಟುಕೋ. ಮಾತನ್ನು ಕಡಿಮೆಮಾಡಿ ಮೌನಿಯಾಗು.

12105047a ಪ್ರತಿಷಿದ್ಧಾನವಾಪ್ಯೇಷು[351] ದುರ್ಲಭೇಷ್ವಹಿತೇಷು ಚ|
12105047c ಪ್ರತಿಕೃಷ್ಟೇಷು ಭಾವೇಷು ವ್ಯತಿಕೃಷ್ಟೇಷ್ವಸಂಭವೇ|
12105047e ಪ್ರಜ್ಞಾನತೃಷ್ಣೋ ವಿಕ್ರಾಂತಸ್ತ್ವದ್ವಿಧೋ ನಾನುಶೋಚತಿ||

ದುರ್ಬಲರು ಇಂದ್ರಿಯಗಳು, ಮನಸ್ಸು ಮತ್ತು ಮಾತುಗಳು ಅಹಿತವಾಗಿದ್ದರೂ ಅವುಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದಿಲ್ಲ. ನಿಕಟ ಸಂಪರ್ಕದಿಂದ ಎಲ್ಲ ವಸ್ತುಗಳೂ ದೃಷ್ಟಿಗೋಚರವಾಗುತ್ತವೆ. ದೂರವಾದನಂತರ ದೃಷ್ಟಿಗೆ ಸಿಲುಕುವುದಿಲ್ಲ. ನಾಶವಾದನಂತರ ವಸ್ತುವನ್ನು ನೋಡಲಿಕ್ಕಾಗುವುದಿಲ್ಲ. ಪ್ರಜ್ಞಾನತೃಪ್ತ ವಿಕ್ರಮಿಯು ದೃಷ್ಟಿಗೆ ಗೋಚರವಾಗದೇ ಇರುವ ಅರ್ಥಕ್ಕಾಗಿ ಶೋಕಿಸವುದಿಲ್ಲ.

12105048a ಅಲ್ಪಮಿಚ್ಚನ್ನಚಪಲೋ ಮೃದುರ್ದಾಂತಃ ಸುಸಂಶಿತಃ|
12105048c ಬ್ರಹ್ಮಚರ್ಯೋಪಪನ್ನಶ್ಚ ತ್ವದ್ವಿಧೋ ನೈವ ಮುಹ್ಯತಿ||

---

[351] ಪ್ರತಿಷೇದ್ಧಾ ನ ಚಾಪ್ಯೇಷು (ಭಾರತ ದರ್ಶನ).

ನಿನ್ನಂತೆ ಅಲ್ಪತೃಪ್ತ[352], ಅಚಪಲ, ಮೃದು, ದಾಂತ, ಸುಸಂಶಿತ, ಬ್ರಹ್ಮಚಾರಿಯು ಶೋಕಪಡುವುದಿಲ್ಲ.

12105049a ನ ತ್ವೇವ ಜಾಲ್ಮೀಂ ಕಾಪಾಲೀಂ ವೃತ್ತಿಮೇಷಿತುಮರ್ಹಸಿ|
12105049c ನೃಶಂಸವೃತ್ತಿಂ ಪಾಪಿಷ್ಠಾಂ ದುಃಖಾಂ ಕಾಪುರುಷೋಚಿತಾಮ್||

ಅಂತಹ ಸರ್ವಗುಣಸಂಪನ್ನನಾದ ನಿನಗೆ ತುಚ್ಛವೂ ಕ್ರೂರವೂ ಪಾಪಿಷ್ಠವೂ, ದುಷ್ಟವೂ, ಕಾಪುರುಷರಿಗೆ ಉಚಿತವೂ ಆದ ಕಾಪಾಲೀ[353] ವೃತ್ತಿಯೂ ಯೋಗ್ಯವಲ್ಲ.

12105050a ಅಪಿ ಮೂಲಫಲಾಜೀವೋ ರಮಸ್ವೈಕೋ ಮಹಾವನೇ|
12105050c ವಾಗ್ಯತಃ ಸಂಗೃಹೀತಾತ್ಮಾ ಸರ್ವಭೂತದಯಾನ್ವಿತಃ||

ನೀನು ಕಂದಮೂಲಫಲಗಳನ್ನೇ ತಿಂದು ಜೀವಿಸುತ್ತಾ ವಿಶಾಲ ಅರಣ್ಯದಲ್ಲಿ ಏಕಾಕಿಯಾಗಿ ಸಂಚರಿಸು. ಮಾತು, ಮನಸ್ಸು, ಇಂದ್ರಿಯಗಳನ್ನು ಸಂಯಮದಲ್ಲಿಟ್ಟುಕೊಂಡು ಸರ್ವಪ್ರಾಣಿಗಳ ವಿಷಯದಿಂದಲೂ ದಯಾಭಾವದಿಂದಿರು.

12105051a ಸದೃಶಂ ಪಂಡಿತಸ್ಯೈತದೀಷಾದಂತೇನ ದಂತಿನಾ|
12105051c ಯದೇಕೋ ರಮತೇಽರಣ್ಯೇ ಯಚ್ಚಾಪ್ಯಲ್ಪೇನ ತುಷ್ಯತಿ||

ಪಂಡಿತನಂತೆ ನೀನೂ ಕೂಡ ಗಾಡಿಯ ಮೂಕಿಯ ಮರದ ದಂಡಕ್ಕೆ ಸಮಾನ ದಂತವನ್ನು ಹೊಂದಿರುವ ಮಹಾಗಜದಂತೆ ಏಕಾಕಿಯಾಗಿ ಸಂಚರಿಸುತ್ತಾ ಅರಣ್ಯದಲ್ಲಿ ಸಿಗುವ ಕಂದಮೂಲಫಲಗಳಿಂದಲೇ

---

[352] ಸ್ವಲ್ಪದರಲ್ಲಿಯೇ ತೃಪ್ತನಾಗುವವನು.

[353] ಭಿಕ್ಷೆಬೇಡುವುದು.

ತೃಪ್ತನಾಗಿರು.

12105052a ಮಹಾಹ್ರದಃ ಸಂಕ್ಷುಭಿತ ಆತ್ಮನ್ಯೇವ ಪ್ರಸೀದತಿ|
[354]12105052c ಏತದೇವಂಗತಸ್ಯಾಹಂ ಸುಖಂ ಪಶ್ಯಾಮಿ ಕೇವಲಮ್||

ಕೆಲವೊಮ್ಮೆ ಕ್ಷೋಭೆಗೊಂಡ ಸರೋವರವು ತಾನಾಗಿಯೇ ಶಾಂತವಾಗುವಂತೆ ಕಡಡಿದ ಮನಸ್ಸೂ ಕೂಡ ತಾನಾಗಿಯೇ ಶಾಂತವಾಗುತ್ತದೆ. ಈ ತರಹದ ಜೀವನವೇ ಸುಖಮಯವೆಂದು ನಾನು ಭಾವಿಸುತ್ತೇನೆ.

12105053a ಅಸಂಭವೇ ಶ್ರಿಯೋ ರಾಜನ್ ಹೀನಸ್ಯ ಸಚಿವಾದಿಭಿಃ|
12105053c ದೈವೇ ಪ್ರತಿನಿವಿಷ್ಟೇ ಚ ಕಿಂ ಶ್ರೇಯೋ ಮನ್ಯತೇ ಭವಾನ್||

ರಾಜನ್! ಈಗ ನಿನ್ನ ಸಂಪತ್ತು ಇಲ್ಲವಾಗಿದೆ. ಸಚಿವಾದಿಗಳಿಂದಲೂ ನೀನು ಹೀನನಾಗಿರುವೆ. ಇದರ ಜೊತೆಗೆ ದೈವವೂ ನಿನಗೆ ಪ್ರತಿಕೂಲವಾಗಿದೆ. ಇಂತಹ ಅವಸ್ಥೆಯಲ್ಲಿರುವ ನೀನು ನಾನು ಹೇಳಿದುದಕ್ಕಿಂತಲೂ ಬೇರೆ ಯಾವುದನ್ನು ಶ್ರೇಯಸ್ಕರವೆಂದು ಭಾವಿಸುತ್ತೀಯೆ?”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಕಾಲಕವೃಕ್ಷೀಯೇ ಪಂಚಾಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ

---

354 ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕಾರ್ಧವಿದೆ: ಇತ್ಥಂ ನರೋಽಪ್ಯಾತ್ಮನ್ಯೇವ ಕೃತಪ್ರಜ್ಞಃ ಪ್ರಸೀದತಿ| (ಗೀತಾ ಪ್ರೆಸ್).

೧೦೬

ಕಾಲಕವೃಕ್ಷೀಯನು ಕಳೆದುಹೋದ ರಾಜ್ಯಪ್ರಾಪ್ತಿಗೆ ವಿವಿಧ ಉಪಾಯಗಳನ್ನು ವರ್ಣಿಸಿದುದು (1-24).

12106001 ಮುನಿರುವಾಚ|
12106001a ಅಥ ಚೇತ್ಪೌರುಷಂ ಕಿಂ ಚಿತ್ ಕ್ಷತ್ರಿಯಾತ್ಮನಿ ಪಶ್ಯಸಿ|
12106001c ಬ್ರವೀಮಿ ಹಂತ ತೇ ನೀತಿಂ ರಾಜ್ಯಸ್ಯ ಪ್ರತಿಪತ್ತಯೇ||

ಮುನಿಯು ಹೇಳಿದನು: "ನಿನ್ನಲ್ಲಿ ಕ್ಷತ್ರಿಯ ಪೌರುಷವು ಸ್ವಲ್ಪವಾದರೂ ಇರುವುದಾದರೆ ರಾಜ್ಯಪ್ರಾಪ್ತಿಗಾಗಿ ನಿನಗೆ ರಾಜನೀತಿಯನ್ನು ಹೇಳುತ್ತೇನೆ. ನಿಲ್ಲು.

12106002a ತಾಂ ಚೇಚ್ಚಕ್ಷ್ಯಸ್ಯನುಷ್ಠಾತುಂ ಕರ್ಮ ಚೈವ ಕರಿಷ್ಯಸಿ|
12106002c ಶೃಣು ಸರ್ವಮಶೇಷೇಣ ಯತ್ತ್ವಾಂ ವಕ್ಷ್ಯಾಮಿ ತತ್ತ್ವತಃ||

ನಾನು ಹೇಳಿದಂತೆ ನೀನು ಮಾಡಿ ಕಾರ್ಯರೂಪಕ್ಕೆ ತರುವುದಾದರೆ ನಿನಗೆ ಎಲ್ಲವನ್ನೂ ಬಿಡದಂತೆ ತತ್ತ್ವತಃ ಹೇಳುತ್ತೇನೆ. ಕೇಳು.

12106003a ಆಚರಿಷ್ಯಸಿ ಚೇತ್ಕರ್ಮ ಮಹತೋಽರ್ಥಾನವಾಪ್ಸ್ಯಸಿ|
12106003c ರಾಜ್ಯಂ ರಾಜ್ಯಸ್ಯ ಮಂತ್ರಂ ವಾ ಮಹತೀಂ ವಾ ಪುನಃ ಶ್ರಿಯಮ್|
12106003e ಯದ್ಯೇತದ್ರೋಚತೇ ರಾಜನ್ ಪುನರ್ಬ್ರೂಹಿ ಬ್ರವೀಮಿ ತೇ||

ನಾನು ಹೇಳಿದಂತೆ ಆಚರಿಸಿದರೆ ಮಹಾ ಸಂಪತ್ತನ್ನು ಪಡೆದುಕೊಳ್ಳುವೆ. ರಾಜ್ಯ, ರಾಜನ ಮಂತ್ರಿಮಂಡಲ, ಅಥವಾ ಪುನಃ ಮಹಾ ಐಶ್ವರ್ಯ ಎಲ್ಲವನ್ನೂ ಪಡೆದುಕೊಳ್ಳುವೆ. ರಾಜನ್! ಇದು ನಿನಗೆ ಇಷ್ಟವಾದರೆ

ಹೇಳು. ಅದನ್ನು ಹೇಳುತ್ತೇನೆ.”

12106004 ರಾಜಪುತ್ರ ಉವಾಚ|
12106004a ಬ್ರವೀತು ಭಗವಾನ್ನೀತಿಮುಪಪನ್ನೋಽಸ್ಮ್ಯಹಂ ಪ್ರಭೋ|
12106004c ಅಮೋಘಮಿದಮದ್ಯಾಸ್ತು ತ್ವಯಾ ಸಹ ಸಮಾಗತಮ್||

ರಾಜಪುತ್ರನು ಹೇಳಿದನು: “ಭಗವನ್! ಪ್ರಭೋ! ನಿನ್ನೊಡನೆ ಆದ ಈ ಸಮಾಗಮವು ಅಮೋಘವಾದುದು. ಇಂದು ನಾನು ನಿನ್ನ ಶರಣು ಬಂದಿದ್ದೇನೆ. ಅವಶ್ಯವಾಗಿ ರಾಜನೀತಿಯನ್ನು ಹೇಳು.”

12106005 ಮುನಿರುವಾಚ|
12106005a ಹಿತ್ವಾ ಸ್ತಂಭಂ[355] ಚ ಮಾನಂ[356] ಚ ಕ್ರೋಧಹರ್ಷೌ ಭಯಂ ತಥಾ|
12106005c ಪ್ರತ್ಯಮಿತ್ರಂ ನಿಷೇವಸ್ವ[357] ಪ್ರಣಿಪತ್ಯ ಕೃತಾಂಜಲಿಃ||

ಮುನಿಯು ಹೇಳಿದನು: “ದಂಭ, ಮಾನ , ಕ್ರೋಧ, ಹರ್ಷ, ಮತ್ತು ಭಯವನ್ನು ತೊರೆದು ಕೈಮುಗಿದು ನಮಸ್ಕರಿಸುತ್ತಾ ಶತ್ರುವಿನ ಸೇವೆಮಾಡು.

12106006a ತಮುತ್ತಮೇನ ಶೌಚೇನ ಕರ್ಮಣಾ ಚಾಭಿರಾಧಯ|
12106006c ದಾತುಮರ್ಹತಿ ತೇ ವೃತ್ತಿಂ[358] ವೈದೇಹಃ ಸತ್ಯಸಂಗರಃ||

ಉತ್ತಮ ಶೌಚ ಕರ್ಮಗಳಿಂದ ಸತ್ಯಸಂಗರ ವಿದೇಹರಾಜನನ್ನು

---

355 ದಂಭಂ (ಭಾರತ ದರ್ಶನ).

356 ಕಾಮಂ (ಭಾರತ ದರ್ಶನ).

357 ಅಪ್ಯಮಿತ್ರಾಣಿ ಸೇವಸ್ಯ (ಭಾರತ ದರ್ಶನ).

358 ವಿತ್ತಂ (ಭಾರತ ದರ್ಶನ).

ಆರಾಧಿಸು. ಅವನು ನಿನಗೆ ವೃತ್ತಿಯನ್ನು ನೀಡಬಹುದು.

12106007a ಪ್ರಮಾಣಂ ಸರ್ವಭೂತೇಷು ಪ್ರಗ್ರಹಂ ಚ ಗಮಿಷ್ಯಸಿ|
12106007c ತತಃ ಸಹಾಯಾನ್ಪ್ರೋತ್ಸಾಹಾಽಲ್ಲಪ್ಸ್ಯಸೇಽವ್ಯಸನಾನ್ಯುಚೀನ್||

ಆಗ ನೀನು ಸರ್ವಭೂತಗಳಿಗೂ ಪ್ರಮಾಣಭೂತನಾಗುವೆ. ಎಲ್ಲರಿಗೂ ಆಶ್ರಯನಾಗುವೆ. ಆಗ ನಿನಗೆ ಶುದ್ಧಹೃದಯರಾದ, ದುರ್ವ್ಯಸನಗಳಿಂದ ರಹಿತರಾದ ಉತ್ಸಾಹಶಾಲೀ ಸಹಾಯಕರು ಲಭಿಸುತ್ತಾರೆ.

12106008a ವರ್ತಮಾನಃ ಸ್ವಶಾಸ್ತ್ರೇ ವೈ ಸಂಯತಾತ್ಮಾ ಜಿತೇಂದ್ರಿಯಃ|
12106008c ಅಭ್ಯುದ್ಧರತಿ ಚಾತ್ಮಾನಂ ಪ್ರಸಾದಯತಿ ಚ ಪ್ರಜಾಃ||

ಶಾಸ್ತ್ರಗಳಂತೆ ನಡೆದುಕೊಂಡು ಸಂಯತಾತ್ಮನೂ ಜಿತೇಂದ್ರಿಯನೂ ಆಗಿರುವವನು ತನ್ನನ್ನು ತಾನೇ ಅಭಿವೃದ್ಧಿಗೊಳಿಸಿಕೊಳ್ಳುತ್ತಾನೆ ಮತ್ತು ಪ್ರಜೆಗಳನ್ನೂ ಸಂತೋಷಗೊಳಿಸುತ್ತಾನೆ.

12106009a ತೇನೈವ ತ್ವಂ ಧೃತಿಮತಾ ಶ್ರೀಮತಾ ಚಾಭಿಸತ್ಕೃತಃ|
12106009c ಪ್ರಮಾಣಂ ಸರ್ವಭೂತೇಷು ಗತ್ವಾ ಪ್ರಗ್ರಹಣಂ ಮಹತ್||

ಆ ಧೃತಿಮತ ಶ್ರೀಮಂತ ಜನಕನಿಂದ ಸತ್ಕೃತನಾದ ನೀನು ಸರ್ವಭೂತಗಳ ವಿಶ್ವಾಸಕ್ಕೆ ಪಾತ್ರನಾಗುವೆ ಮತ್ತು ಎಲ್ಲರೂ ನಿನ್ನನ್ನು ಅತ್ಯಂತ ಗೌರವದಿಂದ ಸ್ವೀಕರಿಸುತ್ತಾರೆ.

12106010a ತತಃ ಸುಹೃದ್ಬಲಂ ಲಬ್ಧ್ವಾ ಮಂತ್ರಯಿತ್ವಾ ಸುಮಂತ್ರಿತಮ್|
12106010c ಅಂತರೈರ್ಭೇದಯಿತ್ವಾರೀನ್ಬಿಲ್ವೇನ ಶಾತಯ|
12106010e ಪರೈರ್ವಾ ಸಂವಿದಂ ಕೃತ್ವಾ ಬಲಮಪ್ಯಸ್ಯ ಘಾತಯ||

ಅನಂತರ ಸುಹೃದಯರ ಬಲವನ್ನು ಪಡೆದು, ಉತ್ತಮ

ಸಲಹೆಗಾರರಿಂದ ಸಲಹೆಗಳನ್ನು ಪಡೆದುಕೊಂಡು ಅಂತರಂಗದ
ವ್ಯಕ್ತಿಗಳ ಮೂಲಕವೇ ಶತ್ರುಗಳನ್ನು ಭೇದಿಸಬೇಕು. ಬಿಲ್ವದ ಕಾಯನ್ನು
ಬಿಲ್ವದ ಕಾಯಿಯಿಂದಲೇ ಒಡೆಯುವಂತೆ ಶತ್ರುಗಳ
ಸಹಯೋಗದಿಂದಲೇ ಶತ್ರುಗಳನ್ನು ನಾಶಮಾಡು. ಶತ್ರುವಿನ
ಶತ್ರುವಿನೊಡನೆ ಒಪ್ಪಂದಮಾಡಿಕೊಂಡಾದರೂ ನಿನ್ನ ಶತ್ರುವಿನ
ಬಲವನ್ನು ಧ್ವಂಸಮಾಡು.

12106011a ಅಲಭ್ಯಾ ಯೇ ಶುಭಾ ಭಾವಾಃ ಸ್ತ್ರಿಯಶ್ಚಾಚ್ಚಾದನಾನಿ ಚ|
12106011c ಶಯ್ಯಾಸನಾನಿ ಯಾನಾನಿ ಮಹಾರ್ಹಾಣಿ ಗೃಹಾಣಿ ಚ||
12106012a ಪಕ್ಷಿಣೋ ಮೃಗಜಾತಾನಿ ರಸಾ ಗಂಧಾಃ ಫಲಾನಿ ಚ|
12106012c ತೇಷ್ವೇವ ಸಜ್ಜಯೇಥಾಸ್ತ್ವಂ ಯಥಾ ನಶ್ಯೇತ್ ಸ್ವಯಂ ಪರಃ||

ಅಥವಾ ಅಲಭ್ಯವಾದ ಸುಂದರ ಸ್ತ್ರೀಯರು, ಚಾದರಗಳು,
ಶಯ್ಯಾಸನಗಳು, ಮಹಾಬೆಲೆಬಾಳುವ ಸೌಧಗಳು, ಪಕ್ಷಿ-ಮೃಗಗಳಿಂದ
ಹುಟ್ಟಿದ ರಸ-ಗಂಧ-ಫಲಗಳು ಇವೇ ಮೊದಲಾದವುಗಳಿಂದ ಶತ್ರುವಿನ
ಮನಸ್ಸನ್ನು ಆಕರ್ಷಿಸಿ ಆಸಕ್ತನಾದ ಶತ್ರುವನ್ನು ತಾನೇ ಸಂಹರಿಸಬೇಕು.

12106013a ಯದ್ಯೇವ ಪ್ರತಿಷೇದ್ಧವ್ಯೋ ಯದ್ಯುಪೇಕ್ಷಣಮರ್ಹತಿ|
12106013c ನ ಜಾತು ವಿವೃತಃ ಕಾರ್ಯಃ ಶತ್ರುರ್ವಿನಯಮಿಚ್ಚತಾ||

ಮಿತ್ರನ ಸೋಗನ್ನು ಹಾಕಿಕೊಂಡು ವ್ಯಸನಕ್ಕೆ
ಸಿಕ್ಕಿಹಾಕಿಕೊಳ್ಳಬಾರದೆಂದು ಅವನನ್ನು ತಡೆಯಲೂ ಪ್ರಯತ್ನಿಸಬೇಕು.
ಸಂದರ್ಭಾನುಸಾರವಾಗಿ ಅವನಿಗೆ ಯಾವರೀತಿಯ ಸಂಶಯವೂ ಬರದ
ರೀತಿಯಲ್ಲಿ ಇದನ್ನು ಮಾಡಬೇಕು. ಕೆಲವೊಮ್ಮೆ ಉದಾಸೀನನಾಗಿಯೂ
ಇದ್ದುಬಿಡಬಬೇಕು. ಉಪೇಕ್ಷೆ ಮಾಡಬೇಕು. ಶತ್ರುವಿಗೆ ವಿನಯನಾಗಿಯೇ

ನಡೆದುಕೊಳ್ಳಬೇಕು.

12106014a ವಸಸ್ವ[359] ಪರಮಾಮಿತ್ರವಿಷಯೇ ಪ್ರಾಜ್ಞಸಂಮತೇ|
12106014c ಭಜಸ್ವ ಶ್ವೇತಕಾಕೀಯೈರ್ಮಿತ್ರಾಧಮಮನರ್ಥಕೈಃ||

ನೀನು ಬುದ್ಧಿವಂತರ ವಿಶ್ವಾಸಕ್ಕೆ ಪಾತ್ರನಾಗಿ ಪರಮಶತ್ರುವಿನ ರಾಜ್ಯದಲ್ಲಿ ಕಾಗೆಯು ಬೆಳ್ಳಗಿದೆ[360] ಎಂದು ಹೇಳುವಂತೆ ಒಳ್ಳೆಯದನ್ನು ಕೆಟ್ಟದ್ದೆಂದೂ ಕೆಟ್ಟದ್ದನ್ನು ಒಳ್ಳೆಯದೆಂದೂ ಹೇಳುತ್ತಾ ಅನರ್ಥಕಾರೀ ಕಾರ್ಯಗಳನ್ನು ಪ್ರಯೋಜನಕಾರಿಗಳೆಂದು ಹೇಳುತ್ತಾ ಮಿತ್ರನಂತೆಯೇ ವಾಸಿಸು.

12106015a ಆರಂಭಾಂಶ್ಚಾಸ್ಯ ಮಹತೋ ದುಷ್ಕರಾಂಸ್ತ್ವಂ ಪ್ರಯೋಜಯ|
12106015c ನದೀಬಂಧವಿರೋಧಾಂಶ್ಚ ಬಲವದ್ಭಿರ್ವಿರುಧ್ಯತಾಮ್||

ದುಷ್ಕರವಾದ ಮಹಾಕಾರ್ಯವನ್ನು ಪ್ರಾರಂಭಿಸುವಂತೆ

---

[359] ರಮಸ್ವ (ಭಾರತ ದರ್ಶನ).

[360] ವ್ಯಾಖ್ಯಾನಕಾರರು ಶ್ವಾಚ ಏತಶ್ಚ ಕಾಕಶ್ಚ ತೇಷಾಮಿಮೀ ಧರ್ಮಾಃ ಶ್ವೇತಕಾಕೀಯಾಃ| ಎಂದು ನಿರ್ವಚನ ಮಾಡಿ ಹೀಗೆ ಅರ್ಥೈಸಿರುತ್ತಾರೆ: ನಾಯಿಯು ಪರಕೀಯರ ವಿಷಯದಲ್ಲಿ ಜಾಗರೂಕವಾಗಿರುವಂತೆ ಶತ್ರುಗಳ ವಿಷಯದಲ್ಲಿ ಜಾಗರೂಕನಾಗಿರುತ್ತಾ, ಜಿಂಕೆಯು ಸ್ವಲ್ಪವೇ ಶಬ್ದವಾದರೂ ಭಯಗೊಳ್ಳುವಂತೆ ಶತ್ರುವಿನ ವಿಷಯದಲ್ಲಿ ಭಯದಿಂದಿರುತ್ತಾ ಕಾಗೆಯು ಒಂದೆಡೆ ಕುಳಿತು ಎಲ್ಲವನ್ನೂ ವೀಕ್ಷಿಸುವಂತೆ ರಾಜ್ಯದ ಪರಿಸ್ಥಿತಿಯನ್ನು ಸೂಕ್ಷ್ಮದೃಷ್ಟಿಯಿಂದ ಅಡಿಗಡಿಗೂ ಅವಲೋಕಿಸುತ್ತಾ, ಅರ್ಥಶೂನ್ಯ ಮಾತುಗಳಿಂದ ರಾಜನೊಡನೆ ಮಿತ್ರಧರ್ಮವನ್ನು ಪಾಲಿಸುತ್ತಾ ಕಾಲಕಳೆಯುತ್ತಿರು (ಭಾರತ ದರ್ಶನ).

ಒತ್ತಾಯಿಸಬೇಕು. ಬಲವಂತ ಶತ್ರುಗಳನ್ನು ನದೀಬಂಧದಂತೆ ವಿರೋಧಿಸಲು ಸಲಹೆ ನೀಡಬೇಕು.

12106016a ಉದ್ಯಾನಾನಿ ಮಹಾರ್ಹಾಣಿ ಶಯನಾನ್ಯಾಸನಾನಿ ಚ|
12106016c ಪ್ರತಿಭೋಗಸುಖೇನ್ಯೈವ ಕೋಶಮಸ್ಯ ವಿರೇಚಯ||

ರಾಜಕೋಶವನ್ನು ಉದ್ಯಾನಗಳು, ಮಹಾವೆಚ್ಚದ ಶಯನ-ಆಸನಗಳು ಮೊದಲಾದ ಭೋಗಸುಖಗಳಿಗೇ ವ್ಯಯವಾಗುವಂತೆ ಮಾಡಬೇಕು.

12106017a ಯಜ್ಞದಾನಪ್ರಶಂಸಾಸ್ಯೈ ಬ್ರಾಹ್ಮಣೇಷ್ವನುವರ್ಣ್ಯತಾಮ್|
12106017c ತೇ ತ್ವತ್ಪ್ರಿಯಂ ಕರಿಷ್ಯಂತಿ ತಂ ಚೇಷ್ಯಂತಿ ವೃಕಾ ಇವ||

ಬ್ರಾಹ್ಮಣರನ್ನು ಪ್ರಶಂಸಿಸಿ ಅವರ ಮೂಲಕ ಅವನು ದೊಡ್ಡ-ದೊಡ್ಡ ಯಜ್ಞ-ದಾನಗಳಲ್ಲಿ ತೊಡಗುವಂತೆ ಮಾಡಬೇಕು. ಅವರಿಗೆ ಪ್ರಿಯವಾದುದನ್ನು ಮಾಡಿದರೆ ಆ ಬ್ರಾಹ್ಮಣರು ತೋಳಗಳಂತೆ ಅವನ ಐಶ್ವರ್ಯವನ್ನು ಕಬಳಿಸುತ್ತಾರೆ.

12106018a ಅಸಂಶಯಂ ಪುಣ್ಯಶೀಲಃ ಪ್ರಾಪ್ನೋತಿ ಪರಮಾಂ ಗತಿಮ್|
12106018c ತ್ರಿವಿಷ್ಟಪೇ ಪುಣ್ಯತಮಂ ಸ್ಥಾನಂ ಪ್ರಾಪ್ನೋತಿ ಪಾರ್ಥಿವಃ|
12106018e ಕೋಶಕ್ಷಯೇ ತ್ವಮಿತ್ರಾಣಾಂ ವಶಂ ಕೌಸಲ್ಯ ಗಚ್ಚತಿ||

ಪುಣ್ಯಶೀಲನು ಪರಮ ಗತಿಯನ್ನು ಪಡೆಯುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಕೌಸಲ್ಯ! ರಾಜಕೋಶವು ಬರಿದಾಗಲು ಅವನು ಶತ್ರುಗಳ ವಶನಾಗುತ್ತಾನೆ.

12106019a ಉಭಯತ್ರ ಪ್ರಸಕ್ತಸ್ಯ ಧರ್ಮೇ ಚಾಧರ್ಮ ಏವ ಚ|
12106019c ಬಲಾರ್ಥಮೂಲಂ ವ್ಯುಚ್ಚಿದ್ಯೇತ್ತೇನ ನಂದಂತಿ ಶತ್ರವಃ||

ರಾಜಕೋಶವನ್ನು ಧರ್ಮ-ಅಧರ್ಮ ಕಾರ್ಯಗಳೆರಡಕ್ಕೂ ಬಳಸಿ ಬರಿದುಮಾಡಿದರೆ ಬಲವು ಬೊಕ್ಕಸವನ್ನು ಅವಲಂಬಿಸಿರುವುದರಿಂದ ಶತ್ರುಗಳು ಹರ್ಷಿತರಾಗುತ್ತಾರೆ.

12106020a ನಿಂದ್ಯಾಸ್ಯ ಮಾನುಷಂ ಕರ್ಮ ದೈವಮಸ್ಯೋಪವರ್ಣಯ|
12106020c ಅಸಂಶಯಂ ದೈವಪರಃ ಕ್ಷಿಪ್ರಮೇವ ವಿನಶ್ಯತಿ||

ಸೇನೆಗಳನ್ನು ಒಟ್ಟುಗೂಡಿಸುವಂತಹ ಮಾನುಷ ಕರ್ಮಗಳನ್ನು ನಿಂದಿಸುತ್ತಾ ಯಜ್ಞ-ಯಾಗಾದಿ ದೇವಕಾರ್ಯಗಳಿಗೇ ರಾಜಕೋಶವನ್ನು ಬಳಸುವಂತೆ ಸಲಹೆನೀಡಬೇಕು. ದೇವಕಾರ್ಯಗಳಿಗೆ ವೆಚ್ಚಮಾಡಿ ಅವನು ಬೇಗನೇ ವಿನಾಶಹೊಂದುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ.

12106021a ಯಾಜಯ್ಯೈನಂ ವಿಶ್ವಜಿತಾ ಸರ್ವಸ್ವೇನ ವಿಯುಜ್ಯತಾಮ್|
12106021c ತತೋ ಗಚ್ಚತ್ವಸಿದ್ಧಾರ್ಥಃ ಪೀಡ್ಯಮಾನೋ ಮಹಾಜನಮ್||
12106022a ತ್ಯಾಗಧರ್ಮವಿದಂ ಮುಂಡಂ ಕಂ ಚಿದಸ್ಯೋಪವರ್ಣಯ|
12106022c ಅಪಿ ತ್ಯಾಗಂ ಬುಭೂಷೇತ ಕಚ್ಚಿದ್ಗಚ್ಚೇದನಾಮಯಮ್||

ಅವನು ಸರ್ವವನ್ನೂ ಬಳಸಿ ವಿಶ್ವಜಿತು ಯಜ್ಞವನ್ನು ಮಾಡುವಂತೆ ಪ್ರೇರೇಪಿಸಬೇಕು. ಅನಂತರ ನೀನು ಅರ್ಥಸಿದ್ಧಿಯನ್ನು ಪಡೆದುಕೊಳ್ಳುತ್ತೀಯೆ. ಆಗ ನೀನು ಕಷ್ಟದಲ್ಲಿರುವ ಮಹಾತ್ಮ, ತ್ಯಾಗಧರ್ಮವಿದು, ಸಂನ್ಯಾಸಿಯ ಕುರಿತು ವರ್ಣಿಸಬೇಕು. ಅವನ ಉಪದೇಶದಂತೆ ರಾಜನು ರಾಜ್ಯವನ್ನು ತ್ಯಜಿಸಿ ಅನಾಮಯನಾಗಬಹುದು.

12106023a ಸಿದ್ಧೇನೌಷಧಯೋಗೇನ ಸರ್ವಶತ್ರುವಿನಾಶಿನಾ|
12106023c ನಾಗಾನಶ್ವಾನ್ಮನುಷ್ಯಾಂಶ್ಚ ಕೃತಕೈರುಪಘಾತಯ||

ಅದೂ ಸಾಧ್ಯವಾಗದಿದ್ದಲ್ಲಿ ಸರ್ವಶತ್ರುವಿನಾಶಕವೆಂಬ ಸಿದ್ಧೌಷದಿಯನ್ನು ಪ್ರಯೋಗಿಸಿ ಅವನಲ್ಲಿರುವ ಆನೆ-ಕುದುರೆ-ಪಾದತಿಗಳೆಲ್ಲವನ್ನೂ ವಂಚಿಸಿ ಕೊಲ್ಲಬೇಕು.

12106024a ಏತೇ ಚಾನ್ಯೇ ಚ ಬಹವೋ ದಂಭಯೋಗಾಃ ಸುನಿಶ್ಚಿತಾಃ|
12106024c ಶಕ್ಯಾ ವಿಷಹತಾ ಕರ್ತುಂ ನಕ್ಲೀಬೇನ ನೃಪಾತ್ಮಜ||

ನೃಪಾತ್ಮಜ! ಅಧರ್ಮವನ್ನೆಸಗಲು ಹಿಂಜರಿಯದ ಮನುಷ್ಯನಿಗಾಗಿ ಇವೇ ಮೊದಲಾದ ಅನೇಕ ವಂಚನಾಯುಕ್ತ ಉಪಾಯಗಳನ್ನು ಹೇಳಿದ್ದಾರೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಕಾಲಕವೃಕ್ಷೀಯೇ ಷಡಧಿಕಶತತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಕಾಲಕವೃಕ್ಷೀಯ ಎನ್ನುವ ನೂರಾಆರನೇ ಅಧ್ಯಾಯವು.

೧೦೭

ಕಾಲಕವೃಕ್ಷೀಯನು ಕೋಸಲರಾಜನಿಗೆ ವಿದೇಹರಾಜನನ್ನು ಭೇಟಿ ಮಾಡಿಸಿದುದು; ವಿದೇಹರಾಜನು ಕೋಸಲರಾಜನನ್ನು ತನ್ನ ಅಳಿಯನನ್ನಾಗಿ ಮಾಡಿಕೊಂಡಿದುದು (1-27).

12107001 ರಾಜಪುತ್ರ ಉವಾಚ|
12107001a ನ ನಿಕೃತ್ಯಾ ನ ದಂಭೇನ ಬ್ರಹ್ಮನ್ನಿಚ್ಚಾಮಿ ಜೀವಿತುಮ್|
12107001c ನಾಧರ್ಮಯುಕ್ತಾನಿಚ್ಚೇಯಮರ್ಥಾನ್ಸಮಹತೋऽಪ್ಯಹಮ್||

ರಾಜಪುತ್ರನು ಹೇಳಿದನು: “ಬ್ರಹ್ಮನ್! ನಾನು ಮೋಸದಿಂದ ಮತ್ತು

ದಂಭದಿಂದ ಜೀವಿಸಲು ಇಚ್ಛಿಸುವುದಿಲ್ಲ. ಅಧರ್ಮವನ್ನು ಬಳಸಿ ನನಗೆ ಮಹಾ ಸಂಪತ್ತೇ ದೊರೆಯುವ ಹಾಗಿದ್ದರೂ ಅದನ್ನು ನಾನು ಬಯಸುವುದಿಲ್ಲ.

12107002a ಪುರಸ್ತಾದೇವ ಭಗವನ್ಮಯ್ಯೇತದಪವರ್ಜಿತಮ್|
12107002c ಯೇನ ಮಾಂ ನಾಭಿಶಂಕೇತ ಯದ್ವಾ ಕೃತ್ಸ್ನಂ ಹಿತಂ ಭವೇತ್||

ಭಗವನ್! ಈ ಎಲ್ಲ ದುರ್ಗುಣಗಳನ್ನೂ ಮೊದಲೇ ನಾನು ಪರಿತ್ಯಜಿಸಿದ್ದೇನೆ. ಯಾರೂ ನನ್ನ ಮೇಲೆ ಶಂಕಿಸದ ಹಾಗೆ ಇರುವಂತಹ ಮತ್ತು ಯಾವುದರಿಂದ ಎಲ್ಲವಕ್ಕೂ ಹಿತವಾಗುವುದೋ ಅದರ ಕುರಿತು ಹೇಳಬೇಕು.

12107003a ಆನೃಶಂಸ್ಯೇನ ಧರ್ಮೇಣ ಲೋಕೇ ಹ್ಯಸ್ಮಿಂಜಿಜೀವಿಷುಃ|
12107003c ನಾಹಮೇತದಲಂ ಕರ್ತುಂ ನೈತನ್ಮಯ್ಯುಪಪದ್ಯತೇ||

ಅಹಿಂಸಾ ಧರ್ಮವನ್ನೇ ಆಶ್ರಯಿಸಿ ಲೋಕದಲ್ಲಿ ಜೀವಿಸಿರಲು ಬಯಸುತ್ತಿರುವ ನಾನು ನೀವು ಹೇಳಿದಂತೆ ಮಾಡಲಾರೆ. ಇಂತಹ ಅಧರ್ಮಮಾರ್ಗಗಳನ್ನು ಉಪದೇಶಿಸುವುದೂ ನಿನ್ನಂಥವರಿಗೆ ತಕ್ಕುದಲ್ಲ.”

12107004 ಮುನಿರುವಾಚ|
12107004a ಉಪಪನ್ನಸ್ತ್ವಮೇತೇನ ಯಥಾ ಕ್ಷತ್ರಿಯ ಭಾಷಸೇ|
12107004c ಪ್ರಕೃತ್ಯಾ ಹ್ಯುಪಪನ್ನೋಽಸಿ ಬುದ್ಧ್ಯಾ ಚಾದ್ಭುತದರ್ಶನ||

ಮುನಿಯು ಹೇಳಿದನು: “ಕ್ಷತ್ರಿಯನಾಡುವಂತೆ ನಿನ್ನ ಗುಣಸಂಪನ್ನತೆಗೆ ಅನುರೂಪವಾಗಿಯೇ ಮಾತನಾಡಿರುವೆ. ಸ್ವಭಾವತಃ ನೀನು ಗುಣಸಂಪನ್ನನಾಗಿದ್ದೀಯೆ. ಬುದ್ಧಿಯಿಂದ ನೀನು ಅದ್ಭುತವನ್ನು



ಕಂಡಿರುವೆ.

12107005a ಉಭಯೋರೇವ ವಾಮರ್ಥೇ ಯತಿಷ್ಯೇ ತವ ತಸ್ಯ ಚ|
12107005c ಸಂಶ್ಲೇಷಂ ವಾ ಕರಿಷ್ಯಾಮಿ ಶಾಶ್ವತಂ ಹ್ಯನಪಾಯಿನಮ್||

ನೀನು ಮತ್ತು ವಿದೇಹರಾಜ ಇಬ್ಬರ ಹಿತಾರ್ಥವಾಗಿ ನಾನೀಗಲೇ
ಪ್ರಯತ್ನಿಸುತ್ತೇನೆ. ನಿಮ್ಮಿಬ್ಬರ ನಡುವೆ ಶಾಶ್ವತವಾದ ಮತ್ತು
ಬಿಟ್ಟುಹೋಗದ ಸಂಬಂಧವನ್ನು ಕಲ್ಪಿಸುತ್ತೇನೆ.

12107006a ತ್ವಾದೃಶಂ ಹಿ ಕುಲೇ ಜಾತಮನೃಶಂಸಂ ಬಹುಶ್ರುತಮ್|
12107006c ಅಮಾತ್ಯಂ ಕೋ ನ ಕುರ್ಯೀತ ರಾಜ್ಯಪ್ರಣಯಕೋವಿದಮ್||

ನಿನ್ನಂಥಹ ಉತ್ತಮ ಕುಲಪ್ರಸೂತ, ದಯಾಳು, ವಿದ್ವಾಂಸ,
ರಾಜ್ಯವ್ಯವಹಾರಗಳಲ್ಲಿ ಕೋವಿದನನ್ನು ಯಾರು ತಾನೇ
ಅಮಾತ್ಯನನ್ನಾಗಿ ಮಾಡಿಕೊಳ್ಳುವುದಿಲ್ಲ?

12107007a ಯಸ್ತ್ವಂ ಪ್ರವ್ರಜಿತೋ ರಾಜ್ಯಾದ್ವ್ಯಸನಂ ಚೋತ್ತಮಂ ಗತಃ|
12107007c ಆನೃಶಂಸ್ಯೇನ ವೃತ್ತೇನ ಕ್ಷತ್ರಿಯೇಚ್ಚಸಿ ಜೀವಿತುಮ್||

ರಾಜ್ಯವನ್ನು ಕಳೆದುಕೊಂಡು ಮಹಾ ವ್ಯಸನದಲ್ಲಿ ಸಿಲುಕಿರುವ ನೀನು
ದಯಾಪೂರ್ಣವಾದ ಕ್ಷತ್ರಿಯ ವೃತ್ತಿಯಿಂದ ಜೀವಿಸಲು
ಬಯಸುತ್ತಿರುವೆ.

12107008a ಆಗಂತಾ ಮದ್ಗೃಹಂ ತಾತ ವೈದೇಹಃ ಸತ್ಯಸಂಗರಃ|
12107008c ಯಥಾಹಂ ತಂ ನಿಯೋಕ್ಷ್ಯಾಮಿ ತತ್ಕರಿಷ್ಯತ್ಯಸಂಶಯಮ್||

ಅಯ್ಯಾ! ಸತ್ಯಸಂಗರ ವೈದೇಹನು ನನ್ನ ಆಶ್ರಮಕ್ಕೆ ಬರುವವನಿದ್ದಾನೆ.
ನಾನು ಹೇಳಿದಂತೆಯೇ ಅವನು ಮಾಡುತ್ತಾನೆ ಎನ್ನುವುದರಲ್ಲಿ

ಸಂಶಯವಿಲ್ಲ.””

12107009 ಭೀಷ್ಮ ಉವಾಚ|
12107009a ತತ ಆಹೂಯ ವೈದೇಹಂ ಮುನಿರ್ವಚನಮಬ್ರವೀತ್|
12107009c ಅಯಂ ರಾಜಕುಲೇ ಜಾತೋ ವಿದಿತಾಭ್ಯಂತರೋ ಮಮ||

ಭೀಷ್ಮನು ಹೇಳಿದನು: “ಅನಂತರ ಮುನಿಯು ವೈದೇಹನನ್ನು ಕರೆದು ಹೇಳಿದನು: “ಇವನು ರಾಜಕುಲದಲ್ಲಿ ಹುಟ್ಟಿದವನು. ಇವನ ಆಂತರಿಕ ವ್ಯವಹಾರಗಳೆಲ್ಲವೂ ನನಗೆ ತಿಳಿದಿವೆ.

12107010a ಆದರ್ಶ ಇವ ಶುದ್ಧಾತ್ಮಾ ಶಾರದಶ್ಚಂದ್ರಮಾ ಇವ|
12107010c ನಾಸ್ಮಿನ್ ಪಶ್ಯಾಮಿ ವೃಜಿನಂ ಸರ್ವತೋ ಮೇ ಪರೀಕ್ಷಿತಃ||

ಕನ್ನಡಿಯಂತೆ ಇವನು ಶುದ್ಧಾತ್ಮನು. ಶರದೃತುವಿನ ಚಂದ್ರನಂತೆ ಇದ್ದಾನೆ. ನನ್ನಿಂದ ಸರ್ವಪ್ರಕಾರದಲ್ಲಿಯೂ ಪರೀಕ್ಷಿಸಲ್ಪಟ್ಟ ಇವನಲ್ಲಿ ಸ್ವಲ್ಪವೂ ದೋಷವನ್ನು ನಾನು ಕಾಣುತ್ತಿಲ್ಲ.

12107011a ತೇನ ತೇ ಸಂಧಿರೇವಾಸ್ತು ವಿಶ್ವಸಾಸ್ಮಿನ್ಯಥಾ ಮಯಿ|
12107011c ನ ರಾಜ್ಯಮನಮಾತ್ಯೇನ ಶಕ್ಯಂ ಶಾಸ್ತುಮಮಿತ್ರಹನ್||

ಅವನೊಂದಿಗೆ ನಿನ್ನ ಸಂಧಿಯಾಗಬೇಕು. ನನ್ನಲ್ಲಿ ಇಟ್ಟಿರುವ ವಿಶ್ವಾಸವನ್ನೇ ಅವನಲ್ಲಿಯೂ ನೀನು ಇಡಬೇಕು. ಅಮಿತ್ರಹನ್! ಅಮಾತ್ಯನಿಲ್ಲದೇ ರಾಜ್ಯಶಾಸನವನ್ನು ಮಾಡಲು ಶಕ್ಯವಿಲ್ಲ.

12107012a ಅಮಾತ್ಯಃ ಶೂರ ಏವ ಸ್ಯಾದ್ಬುದ್ಧಿಸಂಪನ್ನ ಏವ ಚ|
12107012c ತಾಭ್ಯಾಂ ಚೈವ ಭಯಂ ರಾಜ್ಞಃ ಪಶ್ಯ ರಾಜ್ಯಸ್ಯ ಯೋಜನಮ್|
12107012e ಧರ್ಮಾತ್ಮನಾಂ ಕ್ವ ಚಿಲ್ಲೋಕೇ ನಾನ್ಯಾಸ್ತಿ ಗತಿರೀದೃಶೀ||

ಅಮಾತ್ಯನು ಶೂರನೂ ಬುದ್ಧಿಸಂಪನ್ನನ್ನೂ ಆಗಿರಬೇಕು. ಅಂಥವರಿಂದಲೇ ರಾಜನು ಭಯಪಡಬೇಕು ಮತ್ತು ಅಂಥವನನ್ನು ನೋಡಿ ರಾಜ್ಯದಲ್ಲಿ ಬಳಸಬೇಕು. ಲೋಕದಲ್ಲಿ ಧರ್ಮಾತ್ಮರಿಗೆ ಇವರಲ್ಲದೇ ಬೇರೆ ಯಾರು ಗತಿ?

12107013a ಕೃತಾತ್ಮಾ ರಾಜಪುತ್ರೋಽಯಂ ಸತಾಂ ಮಾರ್ಗಮನುಷ್ಠಿತಃ|
12107013c ಸುಸಂಗೃಹೀತಸ್ತ್ವೇವೈಷ ತ್ವಯಾ ಧರ್ಮಪುರೋಗಮಃ|
12107013e ಸಂಸೇವ್ಯಮಾನಃ ಶತ್ರೂಂಸ್ತೇ ಗೃಹ್ಣೀಯಾನ್ಮಹತೋ ಗಣಾನ್||

ಈ ರಾಜಪುತ್ರನು ಕೃತಾತ್ಮನು. ಸಂತರ ಮಾರ್ಗದಲ್ಲಿ ನಡೆಯುವವನು. ಧರ್ಮವನ್ನೇ ಪ್ರಧಾನವನ್ನಾಗಿಟ್ಟುಕೊಂಡು ಇವನನ್ನು ಸನ್ಮಾನಪೂರ್ವಕವಾಗಿ ನಿಯಮಿಸಿಕೊಂಡರೆ ಇವನು ನಿನ್ನ ಸೇವೆಮಾಡಿ ನಿನ್ನ ಶತ್ರುಗಳ ಮಹಾಸೇನೆಯನ್ನು ಸ್ವಾಧೀಪಡಿಸಿಕೊಳ್ಳುತ್ತಾನೆ.

12107014a ಯದ್ಯಯಂ ಪ್ರತಿಯುಧ್ಯೇತ್ತ್ವಾಂ ಸ್ವಕರ್ಮ ಕ್ಷತ್ರಿಯಸ್ಯ ತತ್|
12107014c ಜಿಗೀಷಮಾಣಸ್ತ್ವಾಂ ಯುದ್ಧೇ ಪಿತೃಪೈತಾಮಹೇ ಪದೇ||

ಒಂದು ವೇಳೆ ಇವನು ತನ್ನ ಪಿತೃ-ಪಿತಾಮಹರ ರಾಜ್ಯದ ಸಲುವಾಗಿ ಯುದ್ಧದಲ್ಲಿ ನಿನ್ನನ್ನು ಗೆಲ್ಲುವ ಇಚ್ಛೆಯಿಂದ ನಿನ್ನೊಡನೆ ಯುದ್ಧವನ್ನು ಮಾಡಿದರೂ ಅದು ಕ್ಷತ್ರಿಯನಾದ ಇವನ ಸ್ವಕರ್ಮವಾಗುತ್ತದೆ.

12107015a ತ್ವಂ ಚಾಪಿ ಪ್ರತಿಯುಧ್ಯೇಥಾ ವಿಜಿಗೀಷುವ್ರತೇ ಸ್ಥಿತಃ|
12107015c ಅಯುದ್ಧ್ಯಮಾನಮೇವ ನಿಯೋಗಾನ್ಮೇ ವಶೇ ವೈದೇಹ ತೇ ಸ್ಥಿತಃ||

ವೈದೇಹ! ಗೆಲ್ಲುವ ವ್ರತವನ್ನೇ ಕೈಗೊಂಡಿರುವ ನೀನೂ ಕೂಡ ಇವನೊಡನೆ ಯುದ್ಧಮಾಡಬಹುದು. ಆದರೆ ನನ್ನ ನಿಯೋಗದಂತೆ ಯುದ್ಧಮಾಡದೇ ಇವನನ್ನು ನಿನ್ನ ವಶದಲ್ಲಿ ತೆಗೆದುಕೋ.

12107016a ಸ ತ್ವಂ ಧರ್ಮಮವೇಕ್ಷಸ್ವ ತ್ಯಕ್ತ್ವಾಧರ್ಮಮಸಾಂಪ್ರತಮ್|
12107016c ನ ಹಿ ಕಾಮಾನ್ನ ಚ ದ್ರೋಹಾತ್ತ್ವಧರ್ಮಂ ಹಾತುಮರ್ಹಸಿ||

ಅಸಾಂಪ್ರತ ಧರ್ಮವನ್ನು ತ್ಯಜಿಸಿ ಧರ್ಮದ ಮೇಲೆ ದೃಷ್ಟಿಯನ್ನಿಡು. ಕಾಮದಿಂದಾಗಲೀ ದ್ರೋಹದಿಂದಾಗಲೀ ಸ್ವಧರ್ಮವನ್ನು ತ್ಯಜಿಸಬಾರದು.

12107017a ನೈವ ನಿತ್ಯಂ ಜಯಸ್ತಾತ ನೈವ ನಿತ್ಯಂ ಪರಾಜಯಃ|
12107017c ತಸ್ಮಾದ್ಭೋಜಯಿತವ್ಯಶ್ಚ ಭೋಕ್ತವ್ಯಶ್ಚ ಪರೋ ಜನಃ||

ಅಯ್ಯಾ! ನಿರಂತರ ಜಯವೂ ಇರುವುದಿಲ್ಲ. ನಿರಂತರ ಪರಾಜಯವೂ ಇರುವುದಿಲ್ಲ. ಇತರರನ್ನು ಜಯಿಸಿ ಅವರ ಸಂಪತ್ತನ್ನು ಉಪಭೋಗಿಸುವಂತೆ ರಾಜನಾದವನು ಇತರರಿಗೂ ತನ್ನ ಸಂಪತ್ತನ್ನು ಹಂಚಿಕೊಡಬೇಕು.

12107018a ಆತ್ಮನ್ಯೇವ ಹಿ ಸಂದೃಶ್ಯಾವುಭೌ ಜಯಪರಾಜಯೌ|
12107018c ನಿಃಶೇಷಕಾರಿಣಾಂ ತಾತ ನಿಃಶೇಷಕರಣಾದ್ಭಯಮ್||

ಜಯ-ಅಪಜಯ ಎರಡನ್ನೂ ತನ್ನಲ್ಲಿಯೇ ಕಂಡುಕೊಳ್ಳಬೇಕು. ಮಗೂ! ಸರ್ವವನ್ನೂ ಅಪಹರಿಸಿದವನಿಗೆ ಸರ್ವವೂ ಅಪಹೃತವಾಗುವ ಭಯವಿರುತ್ತದೆ.”

12107019a ಇತ್ಯುಕ್ತಃ ಪ್ರತ್ಯುವಾಚೇದಂ ವಚನಂ ಬ್ರಾಹ್ಮಣರ್ಷಭಮ್|
12107019c ಅಭಿಪೂಜ್ಯಾಭಿಸತ್ಕೃತ್ಯ ಪೂಜಾರ್ಹಮನುಮಾನ್ಯ ಚ||

ಹೀಗೆ ಹೇಳಿದ ಪೂಜಾರ್ಹನೂ ಮಾನ್ಯನೂ ಆದ ಆ ಬ್ರಾಹ್ಮಣರ್ಷಭನನ್ನು ಪೂಜಿಸಿ ಸತ್ಕರಿಸಿ ವಿದೇಹರಾಜನು

ಉತ್ತರಿಸಿದನು:

12107020a ಯಥಾ ಬ್ರೂಯಾನ್ಮಹಾಪ್ರಾಜ್ಞೋ ಯಥಾ ಬ್ರೂಯಾದ್ಬಹುಶ್ರುತಃ|
12107020c ಶ್ರೇಯಸ್ಕಾಮೋ ಯಥಾ ಬ್ರೂಯಾದುಭಯೋರ್ಯತ್ಕ್ಷಮಂ ಭವೇತ್||

ಮಹಾಪ್ರಾಜ್ಞನು ಆಡುವ, ಬಹುಶ್ರುತನು ಆಡುವ ಮತ್ತು ಶ್ರೇಯಸ್ಸನ್ನು ಬಯಸುವವರು ಹೇಳುವ ಮಾತುಗಳನ್ನೇ ನೀನೂ ಆಡಿದ್ದೀಯೆ. ನೀನು ಹೇಳಿದಂತೆ ನಾವಿಬ್ಬರೂ ಮಾಡುವುದು ಸರಿಯಾಗಿಯೇ ಇದೆ.

12107021a ತಥಾ ವಚನಮುಕ್ತೋಽಸ್ಮಿ ಕರಿಷ್ಯಾಮಿ ಚ ತತ್ತಥಾ|
12107021c ಏತದ್ಧಿ ಪರಮಂ ಶ್ರೇಯೋ ನ ಮೇಽತ್ರಾಸ್ತಿ ವಿಚಾರಣಾ||

ನೀನು ಹೇಳಿದಂತೆಯೇ ಮಾಡುತ್ತೇನೆ. ಇದೇ ನನಗೆ ಪರಮ ಶ್ರೇಯಸ್ಕರವಾದುದು. ಇದರಲ್ಲಿ ವಿಚಾರಮಾಡುವುದೇನೂ ಇಲ್ಲ.”

12107022a ತತಃ ಕೌಶಲ್ಯಮಾಹೂಯ ವೈದೇಹೋ ವಾಕ್ಯಮಬ್ರವೀತ್|
12107022c ಧರ್ಮತೋ ನೀತಿತಶ್ಚೈವ ಬಲೇನ ಚ[361] ಜಿತೋ ಮಯಾ||

ಅನಂತರ ವೈದೇಹನು ಕೌಶಲ್ಯನನ್ನು ಕರೆದು ಈ ಮಾತನ್ನಾಡಿದನು: “ಧರ್ಮ, ನೀತಿ ಮತ್ತು ಬಲಗಳಿಂದ ನಾನು ಗೆದ್ದಿದ್ದೇನೆ.

12107023a ಸೋಽಹಂ ತ್ವಯಾ ತ್ವಾತ್ಮಗುಣೈರ್ಜಿತಃ ಪಾರ್ಥಿವಸತ್ತಮ|
12107023c ಆತ್ಮಾನಮನವಜ್ಞಾಯ ಜಿತವದ್ವರ್ತತಾಂ ಭವಾನ್||

ಪಾರ್ಥಿವಸತ್ತಮ! ಆದರೆ ಈಗ ನೀನು ನಿನ್ನ ಆತ್ಮಗುಣಗಳಿಂದಲೇ ನನ್ನನ್ನು ಗೆದ್ದಿರುವೆ. ಆದುದರಿಂದ ನೀನು ಸೋತವನೆಂದು ತಿಳಿಯದೇ

[361] ಲೋಕಶ್ಚ (ಭಾರತ ದರ್ಶನ).

ಗೆದ್ದವನಂತೆಯೇ ನಡೆದುಕೋ.

12107024a ನಾವಮನ್ಯೇ ಚ ತೇ ಬುದ್ಧಿಂ ನಾವಮನ್ಯೇ ಚ ಪೌರುಷಮ್|
12107024c ನಾವಮನ್ಯೇ ಜಯಾಮೀತಿ ಜಿತವದ್ವರ್ತತಾಂ ಭವಾನ್||

ನಿನ್ನ ಬುದ್ಧಿಯನ್ನು ಅಪಮಾನಿಸುವುದಿಲ್ಲ. ನಿನ್ನ ಪೌರುಷವನ್ನೂ
ಅಪಮಾನಿಸುವುದಿಲ್ಲ. ನಾನೇ ಗೆದ್ದವನೆಂದು ನಿನ್ನನ್ನು
ಅಪಮಾನಿಸುವುದಿಲ್ಲ. ನೀನು ಗೆದ್ದವನಂತೆಯೇ ವ್ಯವಹರಿಸು.

12107025a ಯಥಾವತ್ಪೂಜಿತೋ ರಾಜನ್ಗೃಹಂ ಗಂತಾಸಿ ಮೇ ಗೃಹಾತ್|
12107025c ತತಃ ಸಂಪೂಜ್ಯ ತೌ ವಿಪ್ರಂ ವಿಶ್ವಸ್ತೌ ಜಗ್ಮತುರ್ಗೃಹಾನ್||

ರಾಜನ್! ಯಥಾವತ್ತಾಗಿ ಪೂಜಿತನಾಗಿ ನೀನು ನನ್ನ ಮನೆಗೆ
ಆಗಮಿಸು." ಅನಂತರ ಅವರಿಬ್ಬರೂ ವಿಪ್ರನನ್ನು ಸಂಪೂಜಿಸಿ
ಪರಸ್ಪರರರಲ್ಲಿ ವಿಶ್ವಾಸವನ್ನಿಟ್ಟು ಅರಮನೆಗೆ ತೆರಳಿದರು.

12107026a ವೈದೇಹಸ್ತ್ವಥ ಕೌಸಲ್ಯಂ ಪ್ರವೇಶ್ಯ ಗೃಹಮಂಜಸಾ|
12107026c ಪಾದ್ಯಾರ್ಘ್ಯಮಧುಪರ್ಕೈಸ್ತಂ ಪೂಜಾರ್ಹಂ ಪ್ರತ್ಯಪೂಜಯತ್||

ಆಗ ವೈದೇಹನು ಕೌಸಲ್ಯನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ
ಪಾದ್ಯ-ಅರ್ಘ್ಯ-ಮಧುಪರ್ಕಗಳಿಂದ ಆ ಪೂಜಾರ್ಹನನ್ನು
ಪೂಜಿಸಿದನು.

12107027a ದದೌ ದುಹಿತರಂ ಚಾಸ್ಮೈ ರತ್ನಾನಿ ವಿವಿಧಾನಿ ಚ|
12107027c ಏಷ ರಾಜ್ಞಾಂ ಪರೋ ಧರ್ಮಃ ಸಹ್ಯೌ ಜಯಪರಾಜಯೌ||

ಮತ್ತು ಅವನಿಗೆ ತನ್ನ ಮಗಳನ್ನೂ ವಿವಿಧ ರತ್ನಗಳನ್ನೂ ನೀಡಿದನು.
ಜಯಾಪಜಯಗಳಲ್ಲಿ ಇದೇ ರಾಜರ ಪರಮ ಧರ್ಮವು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮಪರ್ವಣಿ
ಕಾಲಕವೃಕ್ಷೀಯೇ ಸಪ್ತಾಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ
ರಾಜಧರ್ಮಪರ್ವದಲ್ಲಿ ಕಾಲಕವೃಕ್ಷೀಯ ಎನ್ನುವ ನೂರಾಏಳನೇ
ಅಧ್ಯಾಯವು.

೧೦೮

ಗಣವೃತ್ತ

ಗಣತಂತ್ರದ ವರ್ಣನೆ ಮತ್ತು ಅದರ ರೀತಿ-ನೀತಿಗಳು (1-31).

12108001 ಯುಧಿಷ್ಠಿರ ಉವಾಚ|
12108001a ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ|
12108001c ಧರ್ಮೋ ವೃತ್ತಂ ಚ ವೃತ್ತಿಶ್ಚ ವೃತ್ತ್ಯುಪಾಯಫಲಾನಿ ಚ||
12108002a ರಾಜ್ಞಾಂ ವೃತ್ತಂ ಚ ಕೋಶಶ್ಚ ಕೋಶಸಂಜನನಂ ಮಹತ್|
12108002c ಅಮಾತ್ಯಗುಣವೃದ್ಧಿಶ್ಚ ಪ್ರಕೃತೀನಾಂ ಚ ವರ್ಧನಮ್||
12108003a ಷಾಡ್ಗುಣ್ಯಗುಣಕಲ್ಪಶ್ಚ ಸೇನಾನೀತಿಸ್ತಥೈವ ಚ|
12108003c ದುಷ್ಪಸ್ಯ ಚ ಪರಿಜ್ಞಾನಮದುಷ್ಪಸ್ಯ ಚ ಲಕ್ಷಣಮ್||
12108004a ಸಮಹೀನಾಧಿಕಾನಾಂ ಚ ಯಥಾವಲ್ಲಕ್ಷಣೋಚ್ಚಯಃ|
12108004c ಮಧ್ಯಮಸ್ಯ ಚ ತುಷ್ಪ್ಯರ್ಥಂ ಯಥಾ ಸ್ಥೇಯಂ ವಿವರ್ಧತಾ||
12108005a ಕ್ಷೀಣಸಂಗ್ರಹವೃತ್ತಿಶ್ಚ ಯಥಾವತ್ಸಂಪ್ರಕೀರ್ತಿತಾ|
12108005c ಲಘುನಾದೇಶರೂಪೇಣ ಗ್ರಂಥಯೋಗೇನ ಭಾರತ||

ಯುಧಿಷ್ಠಿರನು ಹೇಳಿದನು: “ಪರಂತಪ! ಭಾರತ! ಇದೂವರೆಗೆ ನೀನು

ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರ ಧರ್ಮ, ಆಚರಣೆ, ವೃತ್ತಿ, ಅವರ ವೃತ್ತಿ ಉಪಾಯ-ಫಲಗಳ ಕುರಿತು, ರಾಜರ ಆಚರಣೆ, ಕೋಶ, ಕೋಶವನ್ನು ಹೆಚ್ಚಿಸುವುದರ ಕುರಿತು, ಅಮಾತ್ಯಗುಣಗಳ ವೃದ್ಧಿ, ಪ್ರಕೃತಿಗಳ ವೃದ್ಧಿ, ಷಡ್ಗುಣಗಳ ಅರ್ಥ, ಸೇನಾನೀತಿ, ದುಷ್ಟರ ಪರಿಜ್ಞಾನ, ದುಷ್ಟರ ಲಕ್ಷಣ, ಸಮಾನರು-ಹೀನರು-ಅಧಿಕರ ಲಕ್ಷಣಗಳು, ಮಧ್ಯಮರನ್ನು ತೃಪ್ತಿಗೊಳಿಸುವ ಬಗೆ, ದುರ್ಬಲರನ್ನು ರಕ್ಷಿಸುವ ಬಗೆ, ಇವುಗಳ ಕುರಿತು ಲಘುವಾಗಿ ದೇಶ-ಗ್ರಂಥಗಳ ಅನುಸಾರವಾಗಿ ಹೇಳಿರುವೆ.

12108006a ವಿಜಿಗೀಷೋಸ್ತಥಾವೃತ್ತಮುಕ್ತಂ ಚ್ಯೈವ ತಥ್ಯೈವ ತೇ|
12108006c ಗಣಾನಾಂ ವೃತ್ತಿಮಿಚ್ಛಾಮಿ ಶ್ರೋತುಂ ಮತಿಮತಾಂ ವರ||

ಬುದ್ಧಿವಂತರಲ್ಲಿ ಶ್ರೇಷ್ಠ! ವಿಜಯಾಭಿಲಾಷಿಗಳ ವ್ಯವಹಾರಗಳ ಕುರಿತೂ ನೀನು ಹೇಳಿದ್ದೀಯೆ. ಈಗ ನಾನು ಗಣಗಳ ಆಚರಣೆಯ ಕುರಿತು ಕೇಳಲು ಬಯಸುತ್ತೇನೆ.

12108007a ಯಥಾ ಗಣಾಃ ಪ್ರವರ್ಧಂತೇ ನ ಭಿದ್ಯಂತೇ ಚ ಭಾರತ|
12108007c ಅರೀನ್ ಹಿ ವಿಜಿಗೀಷಂತೇ ಸುಹೃದಃ ಪ್ರಾಪ್ನುವಂತಿ ಚ||

ಭಾರತ! ಗಣಗಳು ಹೇಗೆ ವೃದ್ಧಿಸುತ್ತವೆ? ಹೇಗೆ ಒಡೆಯುವುದಿಲ್ಲ? ಶತ್ರುಗಳನ್ನು ಅವು ಹೇಗೆ ಜಯಿಸುತ್ತವೆ? ಮತ್ತು ಸುಹೃದರನ್ನು ಹೇಗೆ ಪಡೆದುಕೊಳ್ಳುತ್ತವೆ?

12108008a ಭೇದಮೂಲೋ ವಿನಾಶೋ ಹಿ ಗಣಾನಾಮುಪಲಭ್ಯತೇ|
12108008c ಮಂತ್ರಸಂವರಣಂ ದುಃಖಂ ಬಹೂನಾಮಿತಿ ಮೇ ಮತಿಃ||

ಗಣಗಳ ವಿನಾಶಕ್ಕೆ ಭೇದವೇ ಮೂಲವೆಂದು ಕಂಡುಬರುತ್ತದೆ.

ಅನೇಕರಿರುವಾಗ ಮಂತ್ರಾಲೋಚನೆಗಳನ್ನು ಗುಪ್ತವಾಗಿಡುವುದು ಕಷ್ಟವೆಂದು ನನ್ನ ಅಭಿಪ್ರಾಯವಾಗಿದೆ.

12108009a ಏತದಿಚ್ಛಾಮ್ಯಹಂ ಶ್ರೋತುಂ ನಿಖಿಲೇನ ಪರಂತಪ|
12108009c ಯಥಾ ಚ ತೇ ನ ಭಿದ್ಯೇರಂಸ್ತಚ್ಚ ಮೇ ಬ್ರೂಹಿ ಪಾರ್ಥಿವ||

ಪರಂತಪ! ಪಾರ್ಥಿವ! ಇದನ್ನು ಸಂಪೂರ್ಣವಾಗಿ ಕೇಳಲು ಬಯಸುತ್ತೇನೆ. ಗಣಗಳು ಒಡೆದುಹೋಗದಂತೆ ಏನು ಮಾಡಬೇಕೆನ್ನುವುದನ್ನು ನನಗೆ ಹೇಳು.”

12108010 ಭೀಷ್ಮ ಉವಾಚ|
12108010a ಗಣಾನಾಂ ಚ ಕುಲಾನಾಂ ಚ ರಾಜ್ಞಾಂ ಚ ಭರತರ್ಷಭ|
12108010c ವೈರಸಂದೀಪನಾವೇತೌ ಲೋಭಾಮರ್ಷೌ ಜನಾಧಿಪ||

ಭೀಷ್ಮನು ಹೇಳಿದನು: “ಭರತರ್ಷಭ! ಜನಾಧಿಪ! ಲೋಭ ಮತ್ತು ಅಸಹನೆ ಇವೆರಡೂ ಗಣಗಳ, ಕುಲಗಳ ಮತ್ತು ರಾಜರ ನಡುವೆ ವೈರಾಗ್ನಿಯನ್ನು ಪ್ರಜ್ವಲಿಸುತ್ತವೆ.

12108011a ಲೋಭಮೇಕೋ ಹಿ ವೃಣುತೇ ತತೋಽಮರ್ಷಮನಂತರಮ್|
12108011c ತೌ ಕ್ಷಯವ್ಯಯಸಂಯುಕ್ತಾವನ್ಯೋನ್ಯಜನಿತಾಶ್ರಯೌ||

ಒಬ್ಬನಲ್ಲಿ ಲೋಭವುಂಟಾಗಲು ಇನ್ನೊಬ್ಬನಲ್ಲಿ ಅಸಹನೆಯು ಹುಟ್ಟುತ್ತದೆ. ಅನ್ಯೋನ್ಯರಲ್ಲಿ ಹುಟ್ಟಿದ ಇವೆರಡೂ ಸೇರಿ ಇಬ್ಬರಲ್ಲಿಯೂ ಕ್ಷಯ-ವ್ಯಯಗಳನ್ನುಂಟುಮಾಡುತ್ತದೆ[362].

---

[362] ಈ ಶ್ಲೋಕಕ್ಕೆ ಈ ರೀತಿಯ ವ್ಯಾಖ್ಯಾನವಿದೆ: “ಏಕೋ ರಾಜಾ ಲೋಭಂ ವೃಣತೇ| ಗಣಸ್ತದಾ ಅಸ್ಮಭ್ಯಂ ನ ದದಾತೀತಿ ಆಮರ್ಷಂ ವೃಣುತೇ||”

12108012a ಚಾರಮಂತ್ರಬಲಾದಾನ್ಯೈಃ ಸಾಮದಾನವಿಭೇದನ್ಯೈಃ|
12108012c ಕ್ಷಯವ್ಯಯಭಯೋಪಾಯ್ಯೈಃ ಕರ್ಶಯಂತೀತರೇತರಮ್||

ಅವರು ಪರಸ್ಪರರನ್ನು ಚಾರರು, ಗುಟ್ಟು, ಸೈನ್ಯ, ಸಾಮ-ದಾನ-ವಿಭೇದನ ಮತ್ತು ಕ್ಷಯ-ವ್ಯಯಗಳ ಉಪಾಯಗಳಿಂದ ಪೀಡಿಸುತ್ತಾರೆ.

12108013a ತತ್ರ ದಾನೇನ[363] ಭಿದ್ಯಂತೇ ಗಣಾಃ ಸಂಘಾತವೃತ್ತಯಃ|
12108013c ಭಿನ್ನಾ ವಿಮನಸಃ ಸರ್ವೇ ಗಚ್ಚಂತ್ಯರಿವಶಂ ಭಯಾತ್||

ಸಾಂಘಿಕ ಜೀವನವನ್ನು ನಡೆಸುವ ಗಣಗಳು ದಾನದಿಂದ ಒಡೆಯುತ್ತವೆ. ಒಡೆದು ವಿಮನಸ್ಕರಾಗಿ ಭಯದಿಂದ ಎಲ್ಲರೂ ಶತ್ರುಗಳ ವಶರಾಗುತ್ತಾರೆ.

12108014a ಭೇದಾದ್ಗಣಾ ವಿನಶ್ಯಂತಿ ಭಿನ್ನಾಃ ಸೂಪಜಪಾಃ ಪರೈಃ[364]|
12108014c ತಸ್ಮಾತ್ಸಂಘಾತಯೋಗೇಷು ಪ್ರಯತೇರನ್ಗಣಾಃ ಸದಾ||

ಭೇದದಿಂದಲೇ ಗಣಗಳು ವಿನಾಶವಾಗುತ್ತವೆ. ಒಡೆದುಹೋದ ಗಣಗಳನ್ನು ಶತ್ರುಗಳು ಬಹುಬೇಗ ಆಕ್ರಮಣಿಸುತ್ತಾರೆ. ಆದುದರಿಂದ

ಅರ್ಥಾತ್: ರಾಜನು ಲೋಭಿಯಾಗಿ ಪ್ರಜೆಗಳಿಗೆ ತನ್ನ ಐಶ್ವರ್ಯವನ್ನು ಕೊಡುವುದಿಲ್ಲ. ಜನಸಮೂಹವು ಅದನ್ನು ಸಹಿಸುವುದಿಲ್ಲ. ಪರಸ್ಪರ ಘರ್ಷಣೆಯಾಗುತ್ತದೆ. ಜನ-ಧನಗಳೆರಡೂ ವಿನಾಶಹೊಂದುತ್ತವೆ. ಕಡೆಗೆ ರಾಜನೂ ವಿನಾಶಹೊಂದುತ್ತಾನೆ. ಪ್ರಜೆಗಳೂ ವಿನಾಶಹೊಂದುತ್ತಾರೆ. (ಭಾರತ ದರ್ಶನ).

363 ತತ್ರಾದಾನೇನ (ಭಾರತ ದರ್ಶನ).

364 ಭೇದೇ ಗಣಾ ವಿನೇಶುರ್ಹಿ ಭಿನ್ನಾಸ್ತು ಸುಜಯಾಃ ಪರೈಃ| (ಭಾರತ ದರ್ಶನ).

ಗಣಗಳು ಸದಾ ಸಂಘಟಿತರಾಗಿರಲು ಪ್ರಯತ್ನಿಸಬೇಕು.

12108015a ಅರ್ಥಾ ಹ್ಯೇವಾಧಿಗಮ್ಯಂತೇ ಸಂಘಾತಬಲಪೌರುಷಾತ್|
12108015c ಬಾಹ್ಯಾಶ್ಚ ಮೈತ್ರೀಂ ಕುರ್ವಂತಿ ತೇಷು ಸಂಘಾತವೃತ್ತಿಷು||

ಸಂಘದ ಬಲ-ಪೌರುಷಗಳಿರುವವರು ಅನಾಯಾಸವಾಗಿ
ಉದ್ದೇಶಗಳನ್ನು ಸಾಧಿಸುತ್ತಾರೆ. ಒಗ್ಗಟ್ಟಾಗಿ ಇರುವವರೊಡನೆ
ಹೊರಗಿನವರೂ ಮೈತ್ರಿಯನ್ನು ಮಾಡಿಕೊಳ್ಳುತ್ತಾರೆ.

12108016a ಜ್ಞಾನವೃದ್ಧಾನ್ ಪ್ರಶಂಸಂತಃ ಶುಶ್ರೂಷಂತಃ ಪರಸ್ಪರಮ್|
12108016c ವಿನಿವೃತ್ತಾಭಿಸಂಧಾನಾಃ ಸುಖಮೇಧಂತಿ ಸರ್ವಶಃ||

ಪರಸ್ಪರ ಶುಶ್ರೂಷೆಮಾಡುವ ಸಂಘಜೀವನವನ್ನು ಜ್ಞಾನವೃದ್ಧರು
ಪ್ರಶಂಸಿಸುತ್ತಾರೆ. ಅವರು ಪರಸ್ಪರರೊಡನೆ ವಿನೀತರಾಗಿದ್ದುಕೊಂಡು
ಸರ್ವಶಃ ಸುಖದಿಂದ ಇರುತ್ತಾರೆ.

12108017a ಧರ್ಮಿಷ್ಠಾನ್ ವ್ಯವಹಾರಾಂಶ್ಚ ಸ್ಥಾಪಯಂತಶ್ಚ ಶಾಸ್ತ್ರತಃ|
12108017c ಯಥಾವತ್ಸಂಪ್ರವರ್ತಂತೋ[365] ವಿವರ್ಧಂತೇ ಗಣೋತ್ತಮಾಃ||

ಉತ್ತಮ ಗಣಗಳು ಶಾಸ್ತ್ರತಃ ಧರ್ಮಿಷ್ಠ ವ್ಯವಹಾರಗಳನ್ನು
ಸ್ಥಾಪಿಸಿಕೊಳ್ಳುತ್ತವೆ. ಯಥೋಚಿತವಾಗಿ ನಡೆದುಕೊಂಡು ಅಭಿವೃದ್ಧಿ
ಹೊಂದುತ್ತಾರೆ.

12108018a ಪುತ್ರಾನ್ ಭ್ರಾತೄನ್ನಿಗೃಹ್ಣಂತೋ ವಿನಯೇ ಚ ಸದಾ ರತಾಃ|
12108018c ವಿನೀತಾಂಶ್ಚ ಪ್ರಗೃಹ್ಣಂತೋ ವಿವರ್ಧಂತೇ ಗಣೋತ್ತಮಾಃ||

---

[365] ಯಥಾವತ್ ಪ್ರತಿಪಶ್ಯಂತೋ (ಭಾರತ ದರ್ಶನ).

ಉತ್ತಮ ಗಣಗಳು ಪುತ್ರರನ್ನೂ-ತಮ್ಮಂದಿರನ್ನೂ ಸದಾ
ವಿನಯದಿಂದಿರುವಂತೆ ನಿಯಂತ್ರಿಸಿ ತಿದ್ದುತ್ತಿರುತ್ತಾರೆ.
ವಿನೀತರಾದವರನ್ನು ಸ್ವೀಕರಿಸುತ್ತಾರೆ ಮತ್ತು ಅಭಿವೃದ್ಧಿಹೊಂದುತ್ತಾರೆ.

12108019a ಚಾರಮಂತ್ರವಿಧಾನೇಷು ಕೋಶಸಂನಿಚಯೇಷು ಚ|
12108019c ನಿತ್ಯಯುಕ್ತಾ ಮಹಾಬಾಹೋ ವರ್ಧಂತೇ ಸರ್ವತೋ ಗಣಾಃ||

ಮಹಾಬಾಹೋ! ಗಣಗಳು ಚಾರಮಂತ್ರವಿಧಾನಗಳಲ್ಲಿ ಮತ್ತು ಕೋಶ
ಸಂಗ್ರಹದಲ್ಲಿ ನಿತ್ಯವೂ ಯುಕ್ತವಾಗಿದ್ದುಕೊಂಡು ಸರ್ವತೋಮುಖವಾಗಿ
ವರ್ಧಿಸುತ್ತವೆ.

12108020a ಪ್ರಾಜ್ಞಾನ್ ಶೂರಾನ್ಮಹೇಷ್ವಾಸಾನ್ಕರ್ಮಸು ಸ್ಥಿರಪೌರುಷಾನ್|
12108020c ಮಾನಯಂತಃ ಸದಾ ಯುಕ್ತಾ ವಿವರ್ಧಂತೇ ಗಣಾ ನೃಪ||

ನೃಪ! ಪ್ರಾಜ್ಞರನ್ನೂ, ಶೂರರನ್ನೂ, ಮಹೇಷ್ವಾಸರನ್ನೂ, ಕರ್ಮಗಳಲ್ಲಿ
ನಿರತರಾದವರನ್ನೂ, ಸ್ಥಿರಪೌರುಷರನ್ನೂ ಸದಾ ಗೌರವಿಸುತ್ತಾ ಗಣಗಳು
ಅಭಿವೃದ್ಧಿಹೊಂದುತ್ತವೆ.

12108021a ದ್ರವ್ಯವಂತಶ್ಚ ಶೂರಾಶ್ಚ ಶಸ್ತ್ರಜ್ಞಾಃ ಶಾಸ್ತ್ರಪಾರಗಾಃ|
12108021c ಕೃಚ್ಛ್ರಾಸ್ವಾಪತ್ಸು ಸಂಮೂಢಾನ್ಗಣಾನುತ್ತಾರಯಂತಿ ತೇ||

ದ್ರವ್ಯವಂತರೂ, ಶೂರರೂ, ಶಸ್ತ್ರಜ್ಞರೂ, ಶಾಸ್ತ್ರಪಾರಗರೂ ಆದ ಗಣದ
ಸದಸ್ಯರು ಕಷ್ಟಕರ ಆಪತ್ತನ್ನು ಹೊಂದಿ ಸಮ್ಮೂಢರಾಗುವವರನ್ನು
ಉದ್ಧರಿಸುತ್ತಾರೆ.

12108022a ಕ್ರೋಧೋ ಭೇದೋ ಭಯೋ ದಂಡಃ ಕರ್ಶನಂ ನಿಗ್ರಹೋ ವಧಃ|
12108022c ನಯಂತ್ಯರಿವಶಂ ಸದ್ಯೋ ಗಣಾನ್ ಭರತಸತ್ತಮ||

ಭರತಸತ್ತಮ! ಗಣದಲ್ಲಿ ಕ್ರೋಧ, ಭೇದ, ಭಯ, ದಂಡ, ಕರ್ಶನ,
ನಿಗ್ರಹ ಮತ್ತು ವಧೆಗಳಾದರೆ ಅವು ಸದ್ಯದಲ್ಲಿಯೇ ಗಣವನ್ನು
ವೈರಿವಶವನ್ನಾಗಿ ಮಾಡುತ್ತದೆ.

12108023a ತಸ್ಮಾನ್ಮಾನಯಿತವ್ಯಾಸ್ತೇ ಗಣಮುಖ್ಯಾಃ ಪ್ರಧಾನತಃ|
12108023c ಲೋಕಯಾತ್ರಾ ಸಮಾಯತ್ತಾ ಭೂಯಸೀ ತೇಷು ಪಾರ್ಥಿವ||

ಪಾರ್ಥಿವ! ಆದುದರಿಂದ ಗಣದಲ್ಲಿ ಮುಖ್ಯರಾದವರನ್ನು
ಪ್ರಧಾನಕೊಟ್ಟು ಸಮ್ಮಾನಿಸುತ್ತಿರಬೇಕು. ಏಕೆಂದರೆ
ಲೋಕವ್ಯವಹಾರಗಳು ಒಟ್ಟಿಗೇ ಅವರ ಮೇಲೆ ನಿಂತಿವೆ.

12108024a ಮಂತ್ರಗುಪ್ತಿಃ ಪ್ರಧಾನೇಷು ಚಾರಶ್ಚಾಮಿತ್ರಕರ್ಶನ|
12108024c ನ ಗಣಾಃ ಕೃತ್ಸ್ನಶೋ ಮಂತ್ರಂ ಶ್ರೋತುಮರ್ಹಂತಿ ಭಾರತ||

ಭಾರತ! ಅಮಿತ್ರಕರ್ಶನ! ಮಂತ್ರಾಲೋಚನೆ ಮತ್ತು ಚಾರರ
ವಿಷಯಗಳು ಪ್ರಧಾನರಲ್ಲಿ ಮಾತ್ರ ಇರುತ್ತವೆ. ಗಣದ ಎಲ್ಲರೂ
ಮಂತ್ರಾಲೋಚನೆಗಳನ್ನು ಕೇಳಲು ಅರ್ಹರಿರುವುದಿಲ್ಲ.

12108025a ಗಣಮುಖ್ಯೈಸ್ತು ಸಂಭೂಯ ಕಾರ್ಯಂ ಗಣಹಿತಂ ಮಿಥಃ|
12108025c ಪೃಥಗ್ಗಣಸ್ಯ ಭಿನ್ನಸ್ಯ ವಿಮತಸ್ಯ ತತೋಽನ್ಯಥಾ|
12108025e ಅರ್ಥಾಃ ಪ್ರತ್ಯವಸೀದಂತಿ ತಥಾನರ್ಥಾ ಭವಂತಿ ಚ||

ಗಣದ ಹಿತಕ್ಕಾಗಿ ಗಣಮುಖ್ಯರು ಕಲೆತು ಕಾರ್ಯಗಳನ್ನು ಮಾಡಬೇಕು.
ಹಾಗೆ ಮಾಡದೇ ಪ್ರತ್ಯೇಕ ಪ್ರತ್ಯೇಕವಾಗಿ ಕಾರ್ಯಮಾಡುತ್ತಿದ್ದರೆ ಮತ್ತು
ಭಿನ್ನ ಮತಗಳಿದ್ದರೆ ಕಾರ್ಯಗಳು ಕೆಟ್ಟುಹೋಗುತ್ತವೆ ಮತ್ತು
ಅನರ್ಥಗಳಾಗುತ್ತವೆ.

12108026a ತೇಷಾಮನ್ಯೋನ್ಯಭಿನ್ನಾನಾಂ ಸ್ವಶಕ್ತಿಮನುತಿಷ್ಠತಾಮ್|
12108026c ನಿಗ್ರಹಃ ಪಂಡಿತೈಃ ಕಾರ್ಯಃ ಕ್ಷಿಪ್ರಮೇವ ಪ್ರಧಾನತಃ||

ಅನ್ಯೋನ್ಯ ಭಿನ್ನಾಭಿಪ್ರಾಯಗಳಿದ್ದು ಗಣದಿಂದ ಹೊರಬಂದು
ಸ್ವಶಕ್ತಿಯಿಂದ ನಿಲ್ಲುವವವರನ್ನು ಪಂಡಿತರು ಬೇಗನೇ ನಿಗ್ರಹಿಸಬೇಕು.
ಇದು ಪ್ರಧಾನ ಕಾರ್ಯವಾಗಿರುತ್ತದೆ.

12108027a ಕುಲೇಷು ಕಲಹಾ ಜಾತಾಃ ಕುಲವೃದ್ಧೈರುಪೇಕ್ಷಿತಾಃ|
12108027c ಗೋತ್ರಸ್ಯ ರಾಜನ್ಕುರ್ವಂತಿ[366] ಗಣಸಂಭೇದಕಾರಿಕಾಮ್||

ರಾಜನ್! ಕುಲದಲ್ಲಿ ಹುಟ್ಟಿದ ಕಲಹಗಳನ್ನು ಕುಲವೃದ್ಧರು
ಉಪೇಕ್ಷಿಸಿದರೆ ಅದು ಗೋತ್ರದ ಮತ್ತು ಗಣದ ಭೇದಕ್ಕೆ
ಕಾರಣವಾಗುತ್ತದೆ.

12108028a ಆಭ್ಯಂತರಂ ಭಯಂ ರಕ್ಷ್ಯಂ ಸುರಕ್ಷ್ಯಂ ಬಾಹ್ಯತೋ ಭಯಮ್|
12108028c ಅಭ್ಯಂತರಾದ್ಭಯಂ ಜಾತಂ[367] ಸದ್ಯೋ ಮೂಲಂ ನಿಕೃಂತತಿ||

ಗಣವನ್ನು ಆಂತರಿಕ ಭಯದಿಂದ ರಕ್ಷಿಸಿದರೆ ಅದು ಬಾಹ್ಯ ಭಯದಿಂದ
ಸುರಕ್ಷಿತವಾಗಿರುತ್ತದೆ. ಆಂತರಿಕ ಭಯವು ಗಣದ ಮೂಲವನ್ನೇ
ಕತ್ತರಿಸಿಹಾಕುತ್ತದೆ.

12108029a ಅಕಸ್ಮಾತ್ಕ್ರೋಧಲೋಭಾದ್ವಾ ಮೋಹಾದ್ವಾಪಿ ಸ್ವಭಾವಜಾತ್|
12108029c ಅನ್ಯೋನ್ಯಂ ನಾಭಿಭಾಷಂತೇ ತತ್ಪರಾಭವಲಕ್ಷಣಮ್||

ಅಕಾಸ್ಮಾತ್ತಾದ ಕ್ರೋಧ-ಲೋಭಗಳಿಂದ ಮತ್ತು ಸ್ವಭಾವಜ ಮೋಹದ

---

366 ನಾಶಂ ಕುರ್ವಂತಿ (ಭಾರತ ದರ್ಶನ).

367 ರಾಜನ್ (ಭಾರತ ದರ್ಶನ).

ಕಾರಣಗಳಿಂದ ಅನ್ಯೋನ್ಯರು ಮಾತನಾಡದೇ ಇದ್ದರೆ ಅದು ಗಣದ ಪರಾಭವವನ್ನು ಸೂಚಿಸುತ್ತದೆ.

12108030a ಜಾತ್ಯಾ ಚ ಸದೃಶಾಃ ಸರ್ವೇ ಕುಲೇನ ಸದೃಶಾಸ್ತಥಾ|
12108030c ನ ತು ಶೌರ್ಯೇಣ ಬುದ್ಧ್ಯಾ ವಾ ರೂಪದ್ರವ್ಯೇಣ ವಾ ಪುನಃ||
12108031a ಭೇದಾಚ್ಚೈವ ಪ್ರಮಾದಾಚ್ಚ[368] ನಾಮ್ಯಂತೇ ರಿಪುಭಿರ್ಗಣಾಃ|
12108031c ತಸ್ಮಾತ್ಸಂಘಾತಮೇವಾಹುರ್ಗಣಾನಾಂ ಶರಣಂ ಮಹತ್||

ಸಮಾನಜಾತಿಯವರೆಲ್ಲರೂ ಮತ್ತು ಒಂದೇ ಕುಲದವರೆಲ್ಲರೂ ಸಂಘಟಿತರಾಗಿರಲು ಸಾಧ್ಯವಿದೆ. ಆದರೆ ಶೌರ್ಯ, ಬುದ್ಧಿ, ರೂಪ ಮತ್ತು ಸಂಪತ್ತಿನಲ್ಲಿ ಸಮಾನರಾಗಿರುವುದು ಸಾಧ್ಯವಿಲ್ಲ. ಈ ಭೇದಗಳ ಕಾರಣದಿಂದಲೇ ಶತ್ರುಗಳು ಪ್ರಮಾದಗೊಳಿಸಿ ಸಂಘಟನೆಯನ್ನು ಮುರಿಯಲು ಪ್ರಯತ್ನಿಸುತ್ತಾರೆ. ಆದುದರಿಂದ ಗಣಗಳು ಮಹಾ ಸಂಘಜೀವನವನ್ನೇ ಆಶ್ರಯಿಸಬೇಕು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಗಣವೃತ್ತೇ ಅಷ್ಟಾಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಗಣವೃತ್ತ ಎನ್ನುವ ನೂರಾಎಂಟನೇ ಅಧ್ಯಾಯವು.

೧೦೯

ಮಾತೃಪಿತೃಗುರುಮಹಾತ್ಮ್ಯ

[368] ಪ್ರದಾನಾಚ್ಚ (ಭಾರತ ದರ್ಶನ).

ತಂದೆ-ತಾಯಿ ಮತ್ತು ಗುರುಗಳ ಸೇವೆಯ ಮಹತ್ವ (1-28).

12109001 ಯುಧಿಷ್ಠಿರ ಉವಾಚ|
12109001a ಮಹಾನಯಂ ಧರ್ಮಪಥೋ ಬಹುಶಾಖಶ್ಚ ಭಾರತ|
12109001c ಕಿಂ ಸ್ವಿದೇವೇಹ ಧರ್ಮಾಣಾಮನುಷ್ಠೇಯತಮಂ ಮತಮ್||

ಯುಧಿಷ್ಠಿರನು ಹೇಳಿದನು: "ಭಾರತ! ಈ ಧರ್ಮಮಾರ್ಗವು ಅತಿ ದೊಡ್ಡದು ಮತ್ತು ಅದಕ್ಕೆ ಅನೇಕ ಕವಲುದಾರಿಗಳಿವೆ. ಇವುಗಳಲ್ಲಿ ಅನುಷ್ಠಾನಮಾಡಲೇ ಬೇಕಾದ ಧರ್ಮವು ಯಾವುದು?

12109002a ಕಿಂ ಕಾರ್ಯಂ ಸರ್ವಧರ್ಮಾಣಾಂ ಗರೀಯೋ ಭವತೋ ಮತಮ್|
12109002c ಯಥಾಯಂ ಪುರುಷೋ ಧರ್ಮಮಿಹ ಚ ಪ್ರೇತ್ಯ ಚಾಪ್ನುಯಾತ್||

ಪುರುಷನಿಗೆ ಇಹ ಮತ್ತು ಪರಗಳಲ್ಲಿ ಧರ್ಮವನ್ನು ಹೊಂದಿಸುವ ಸರ್ವಧರ್ಮಗಳಲ್ಲಿಯೂ ಅತಿ ಶ್ರೇಷ್ಠವಾದ ಕಾರ್ಯವು ಯಾವುದು?"

12109003 ಭೀಷ್ಮ ಉವಾಚ|
12109003a ಮಾತಾಪಿತ್ರೋರ್ಗುರೂಣಾಂ ಚ ಪೂಜಾ ಬಹುಮತಾ ಮಮ|
12109003c ಅತ್ರ ಯುಕ್ತೋ ನರೋ ಲೋಕಾನ್ಯಶಶ್ಚ ಮಹದಶ್ನುತೇ||

ಭೀಷ್ಮನು ಹೇಳಿದನು: "ಮಾತಾಪಿತೃಗಳ ಮತ್ತು ಗುರುಗಳ ಪೂಜೆಯೇ ಅತಿ ಮಹತ್ತರ ಕಾರ್ಯವೆಂದು ನನ್ನ ಮತವಾಗಿದೆ. ಅದನ್ನು ಅನುಷ್ಠಾನಮಾಡಿದ ನರನು ಮರಣಾನಂತರ ಮಹಾ ಲೋಕಗಳನ್ನು ಪಡೆದುಕೊಳ್ಳುತ್ತಾನೆ.

12109004a ಯದೇತೇ ಹ್ಯಭಿಜಾನೀಯುಃ ಕರ್ಮ ತಾತ ಸುಪೂಜಿತಾಃ|
12109004c ಧರ್ಮ್ಯಂ ಧರ್ಮವಿರುದ್ಧಂ ವಾ ತತ್ಕರ್ತವ್ಯಂ ಯುಧಿಷ್ಠಿರ||

ಅಯ್ಯಾ! ಯುಧಿಷ್ಠಿರ! ಸುಪೂಜಿತರಾದ ಅವರು ಯಾವುದೇ
ಕೆಲಸವನ್ನು ಮಾಡಹೇಳಿದರೂ, ಅದು ಧರ್ಮಕಾರ್ಯವಾಗಿರಲಿ
ಅಥವಾ ಧರ್ಮದ ವಿರುದ್ಧಕಾರ್ಯವಾಗಿರಲಿ, ಮಾಡಬೇಕು.

12109005a ನ ತೈರನಭ್ಯನುಜ್ಞಾತೋ ಧರ್ಮಮನ್ಯಂ ಪ್ರಕಲ್ಪಯೇತ್|
12109005c ಯಮೇತೇಽಭ್ಯನುಜಾನೀಯುಃ ಸ ಧರ್ಮ ಇತಿ ನಿಶ್ಚಯಃ||

ಅವರ ಆಜ್ಞೆಗಳನ್ನು ಪಾಲಿಸುವವನು ಅನ್ಯ ಧರ್ಮಗಳನ್ನು
ಪಾಲಿಸಬೇಕಾಗಿಲ್ಲ. ಅವರು ಯಾವುದನ್ನು ಮಾಡಲು
ಆಜ್ಞಾಪಿಸುವರೋ ಅದೇ ಧರ್ಮವೆಂದು ನಿಶ್ಚಯಿಸಲ್ಪಡುತ್ತದೆ.

12109006a ಏತ ಏವ ತ್ರಯೋ ಲೋಕಾ ಏತ ಏವಾಶ್ರಮಾಸ್ತ್ರಯಃ|
12109006c ಏತ ಏವ ತ್ರಯೋ ವೇದಾ ಏತ ಏವ ತ್ರಯೋಽಗ್ನಯಃ||

ಮಾತಾ-ಪಿತೃ-ಗುರುಗಳೇ ಮೂರು ಲೋಕಗಳು. ಇವರೇ ಮೂರು
ಆಶ್ರಮಗಳು. ಇವರೇ ಮೂರು ವೇದಗಳು ಮತ್ತು ಇವರೇ ಮೂರು
ಅಗ್ನಿಗಳು.

12109007a ಪಿತಾ ಹ್ಯಗ್ನಿರ್ಗಾರ್ಹಪತ್ಯೋ ಮಾತಾಗ್ನಿರ್ದಕ್ಷಿಣಃ ಸ್ಮೃತಃ|
12109007c ಗುರುರಾಹವನೀಯಸ್ತು ಸಾಗ್ನಿತ್ರೇತಾ ಗರೀಯಸೀ||

ತಂದೆಯು ಗಾರ್ಹಪತ್ಯ ಅಗ್ನಿ. ಮಾತೆಯು ದಕ್ಷಿಣಾಗ್ನಿ. ಗುರುವು
ಆಹವನೀಯಾಗ್ನಿ. ಈ ಮೂರು ಅಗ್ನಿಗಳೂ ಶ್ರೇಷ್ಠವಾದವುಗಳೆಂದು
ಸ್ಮೃತಿವಾಕ್ಯವಿದೆ.

12109008a ತ್ರಿಷ್ವಪ್ರಮಾದ್ಯನ್ನೇತೇಷು ತ್ರೀಽಲ್ಲೋಕಾನವಜೇಷ್ಯಸಿ|
12109008c ಪಿತೃವೃತ್ತ್ಯಾ ತ್ವಿಮಂ ಲೋಕಂ ಮಾತೃವೃತ್ತ್ಯಾ ತಥಾಪರಮ್|

12109008e ಬ್ರಹ್ಮಲೋಕಂ ಗುರೋರ್ವೃತ್ತ್ಯಾ ನಿತ್ಯಮೇವ ಚರಿಷ್ಯಸಿ॥

ಅಪ್ರಮತ್ತನಾಗಿ ಈ ಮೂವರ ಸೇವೆಯನ್ನು ಮಾಡಿದರೆ ಮೂರು ಲೋಕಗಳನ್ನೂ ಜಯಿಸುತ್ತೀಯೆ. ಪಿತೃಶುಶ್ರೂಷೆಯಿಂದ ಈ ಲೋಕವನ್ನೂ, ಮಾತೃಶುಶ್ರೂಷೆಯಿಂದ ಪರಲೋಕವನ್ನೂ, ಮತ್ತು ಗುರುಶುಶ್ರೂಷೆಯಿಂದ ಬ್ರಹ್ಮಲೋಕವನ್ನೂ ಜಯಿಸುತ್ತೀಯೆ.

12109009a ಸಮ್ಯಗೇತೇಷು ವರ್ತಸ್ವ ತ್ರಿಷು ಲೋಕೇಷು ಭಾರತ|
12109009c ಯಶಃ ಪ್ರಾಪ್ಸ್ಯಸಿ ಭದ್ರಂ ತೇ ಧರ್ಮಂ ಚ ಸುಮಹಾಫಲಮ್॥

ಭಾರತ! ನಿನಗೆ ಮಂಗಳವಾಗಲಿ! ತಂದೆ-ತಾಯಿ-ಗುರುಗಳಲ್ಲಿ ಸದ್ವ್ಯವಹಾರದಿಂದ ವರ್ತಿಸುತ್ತಿರು. ಅದರಿಂದ ಮೂರುಲೋಕಗಳಲ್ಲಿಯೂ ಯಶಸ್ಸನ್ನು ಪಡೆದುಕೊಳ್ಳುತ್ತೀಯೆ. ಮಹಾಫಲದಾಯಕವಾದ ಧರ್ಮವನ್ನೂ ಸಾಧಿಸುವೆ.

12109010a ನೈತಾನತಿಶಯೇಜ್ಜಾತು ನಾತ್ಯಶ್ನೀಯಾನ್ನ ದೂಷಯೇತ್|
12109010c ನಿತ್ಯಂ ಪರಿಚರೇಚ್ಚೈವ ತದ್ವೈ ಸುಕೃತಮುತ್ತಮಮ್|
12109010e ಕೀರ್ತಿಂ ಪುಣ್ಯಂ ಯಶೋ ಲೋಕಾನ್ ಪ್ರಾಪ್ಸ್ಯಸೇ ಚ ಜನಾಧಿಪ[369]॥

ಜನಾಧಿಪ! ಇವರನ್ನು ಮೀರಿ ನಡೆಯಬಾರದು. ಅವರ ಆಹಾರಕ್ಕಿಂತಲೂ ಉತ್ತಮ ಆಹಾರವನ್ನು ಸೇವಿಸಬಾರದು. ಅವರನ್ನು ದೂಷಿಸಬಾರದು. ನಿತ್ಯವೂ ಅವರ ಪರಿಚರಿಯನ್ನು ಮಾಡಬೇಕು. ಅದೇ ಉತ್ತಮ ಸುಕೃತವು. ಅದರಿಂದ ಕೀರ್ತಿ, ಪುಣ್ಯ, ಯಶಸ್ಸು ಮತ್ತು

[369] ರಾಜಸತ್ತಮ (ಭಾರತ ದರ್ಶನ).

ಪುಣ್ಯ ಲೋಕಗಳನ್ನು ಪಡೆದುಕೊಳ್ಳುತ್ತೀಯೆ.

12109011a ಸರ್ವೇ ತಸ್ಯಾದೃತಾ ಲೋಕಾ ಯಸ್ಯೈತೇ ತ್ರಯ ಆದೃತಾಃ|
12109011c ಅನಾದೃತಾಸ್ತು ಯಸ್ಯೈತೇ ಸರ್ವಾಸ್ತಸ್ಯಾಫಲಾಃ ಕ್ರಿಯಾಃ||

ಈ ಮೂವರನ್ನೂ ಆದರಿಸಿದರೆ ಮೂರು ಲೋಕಗಳನ್ನೂ
ಆದರಿಸಿದಂತಾಗುತ್ತದೆ. ಇವರನ್ನು ಅನಾದರಿಸಿದವರು ಮಾಡುವ
ಕ್ರಿಯೆಗಳೆಲ್ಲವೂ ಅಸಫಲವಾಗುತ್ತವೆ.

12109012a ನೈವಾಯಂ ನ ಪರೋ ಲೋಕಸ್ತಸ್ಯ ಚೈವ ಪರಂತಪ|
12109012c ಅಮಾನಿತಾ ನಿತ್ಯಮೇವ ಯಸ್ಯೈತೇ ಗುರವಸ್ತ್ರಯಃ||

ಪರಂತಪ! ನಿತ್ಯವೂ ಈ ಮೂವರು ಗುರುಗಳನ್ನು
ಅಪಮಾನಿಸುವವನಿಗೆ ಈ ಲೋಕದಲ್ಲಿಯೂ ಸುಖವಿರುವುದಿಲ್ಲ ಮತ್ತು
ಉತ್ತಮ ಲೋಕಗಳೂ ದೊರಕುವುದಿಲ್ಲ.

12109013a ನ ಚಾಸ್ಮಿನ್ನ ಪರೇ ಲೋಕೇ ಯಶಸ್ತಸ್ಯ ಪ್ರಕಾಶತೇ|
12109013c ನ ಚಾನ್ಯದಪಿ ಕಲ್ಯಾಣಂ ಪಾರತ್ರಂ ಸಮುದಾಹೃತಮ್||

ಅಂಥವನ ಯಶಸ್ಸು ಇಹದಲ್ಲಾದಲೀ ಪರದಲ್ಲಾಗಲೀ
ಪ್ರಕಾಶಿಸುವುದಿಲ್ಲ. ಇತರ ಕರ್ಮಗಳಿಂದ ಪರಲೋಕದಲ್ಲಿ ದೊರೆಯುವ
ಸುಖವೂ ಅಂಥವನಿಗೆ ದುರ್ಲಭವೇ ಸರಿ.

12109014a ತೇಭ್ಯ ಏವ ತು ತತ್ಸರ್ವಂ ಕೃತ್ಯಯಾ ವಿಸೃಜಾಮ್ಯಹಮ್|
12109014c ತದಾಸೀನ್ಮೇ ಶತಗುಣಂ ಸಹಸ್ರಗುಣಮೇವ ಚ|
12109014e ತಸ್ಮಾನ್ಮೇ ಸಂಪ್ರಕಾಶಂತೇ ತ್ರಯೋ ಲೋಕಾ ಯುಧಿಷ್ಠಿರ||

ನಾನಾದರೋ ಎಲ್ಲ ಪುಣ್ಯ ಕರ್ಮಗಳನ್ನೂ ಮಾಡಿ ಅವುಗಳನ್ನು

ಗುರುತ್ರಯರಿಗೇ ಸಮರ್ಪಿಸುತ್ತಿದ್ದೆನು. ಆದುದರಿಂದ ಆ ಪುಣ್ಯಕರ್ಮಗಳ ಫಲವು ನನಗೆ ನೂರು ಪಟ್ಟು ಮತ್ತು ಸಾವಿರಪಟ್ಟು ದೊರಕಿದವು. ಯುಧಿಷ್ಠಿರ! ಇದರಿಂದಲೇ ಮೂರೂ ಲೋಕಗಳು ನನ್ನ ಕಣ್ಮುಂದೆ ಪ್ರಕಾಶಿಸುತ್ತವೆ.

12109015a ದಶೈವ ತು ಸದಾಚಾರ್ಯಃ ಶ್ರೋತ್ರಿಯಾನತಿರಿಚ್ಯತೇ|
12109015c ದಶಾಚಾರ್ಯಾನುಪಾಧ್ಯಾಯ ಉಪಾಧ್ಯಾಯಾನ್ಪಿತಾ ದಶ||

ಆಚಾರ್ಯನು ಸದಾ ಶ್ರೋತ್ರಿಗಳಿಗಿಂತಲೂ ಹತ್ತುಪಟ್ಟು ಅಧಿಕನಾದವನು. ಉಪಾಧ್ಯಾಯನು ಹತ್ತು ಆಚಾರ್ಯರಿಗಿಂತಲೂ ಮತ್ತು ತಂದೆಯು ಹತ್ತು ಉಪಾಧ್ಯಾಯರಿಗಿಂತಲೂ ಅಧಿಕನಾದವನು.

12109016a ಪಿತೃನ್ದಶ ತು ಮಾತ್ಯೈಕಾ ಸರ್ವಾಂ ವಾ ಪೃಥಿವೀಮಪಿ|
12109016c ಗುರುತ್ವೇನಾಭಿಭವತಿ ನಾಸ್ತಿ ಮಾತೃಸಮೋ ಗುರುಃ|
12109016e ಗುರುರ್ಗರೀಯಾನ್ಪಿತೃತೋ ಮಾತೃತಶ್ಚೇತಿ ಮೇ ಮತಿಃ||

ತಾಯಿಯು ಹತ್ತು ಪಿತೃಗಳಿಗಿಂತಲೂ ಅಧಿಕವಾದವಳು. ಅವಳೊಬ್ಬಳೇ ಇಡೀ ಪೃಥ್ವಿಗಿಂತಲೂ ಅಧಿಕಳು. ಗುರುತ್ವದಲ್ಲಿಯೂ ತಾಯಿಯು ಭೂಮಿಯನ್ನು ಮೀರಿಸುತ್ತಾಳೆ. ಮಾತೃಸಮ ಗುರುವಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಮಾತಾ-ಪಿತೃಗಳಿಗಿಂತಲೂ ಗುರುವೇ ಅಧಿಕನಾದವನು.

12109017a ಉಭೌ ಹಿ ಮಾತಾಪಿತರೌ ಜನ್ಮನಿ ವ್ಯುಪಯುಜ್ಯತಃ|
12109017c ಶರೀರಮೇತೌ ಸೃಜತಃ ಪಿತಾ ಮಾತಾ ಚ ಭಾರತ|
12109017e ಆಚಾರ್ಯಶಿಷ್ಟಾ ಯಾ ಜಾತಿಃ ಸಾ ದಿವ್ಯಾ ಸಾಜರಾಮರಾ||

ಏಕೆಂದರೆ ಮಾತಾಪಿತೃಗಳು ಜನ್ಮಪಡೆಯುವುದರಲ್ಲಿ ಉಪಯೋಗಕ್ಕೆ

ಬರುತ್ತಾರೆ. ಭಾರತ! ಮಾತಾ-ಪಿತೃಗಳೇ ಈ ಶರೀರವನ್ನು ಸೃಷ್ಟಿಸುತ್ತಾರೆ. ಆದರೆ ಆಚಾರ್ಯನ ಉಪದೇಶದಿಂದ ಯಾವ ಜನ್ಮವು ಪ್ರಾಪ್ತವಾಗುವುದೋ ಅದು ದಿವ್ಯವಾದುದು. ಅದಕ್ಕೆ ಮುಪ್ಪಿಲ್ಲ. ಅಮರವಾದುದು.

12109018a ಅವಧ್ಯಾ ಹಿ ಸದಾ ಮಾತಾ ಪಿತಾ ಚಾಪ್ಯಪಕಾರಿಣೌ|
12109018c ನ ಸಂದುಷ್ಯತಿ ತತ್ಕೃತ್ವಾ ನ ಚ ತೇ ದೂಷಯಂತಿ ತಮ್|
12109018e ಧರ್ಮಾಯ ಯತಮಾನಾನಾಂ ವಿದುರ್ದೇವಾಃ ಸಹರ್ಷಿಭಿಃ||

ಮಾತಾಪಿತೃಗಳು ಅಪಕಾರವನ್ನೆಸಗಿದರೂ ಸದಾ ಅವಧ್ಯರು. ಏಕೆಂದರೆ ಅಪಕಾರ ಮಾಡಿದ ಮಗನನ್ನಾಗಲೀ ಶಿಷ್ಯನನ್ನಾಗಲೀ ಮಾತಾ-ಪಿತೃ-ಗುರುಗಳು ಅಪರಾಧಿಯೆಂದು ಪರಿಗಣಿಸುವುದಿಲ್ಲ. ತಂದೆ-ತಾಯಿಯರು ದುಷ್ಟರಾಗಿದ್ದರೂ ಧರ್ಮದ ಕಾರಣದಿಂದ ಅವರ ಶುಶ್ರೂಷೆಯನ್ನು ಪ್ರಯತ್ನಪಟ್ಟು ಮಾಡುವವರನ್ನು ದೇವತೆಗಳೂ ಮಹರ್ಷಿಗಳೂ ಅನುಗ್ರಾಹ್ಯವೆಂದೇ ಭಾವಿಸುತ್ತಾರೆ.

12109019a ಯ ಆವೃಣೋತ್ಯವಿತಥೇನ ಕರ್ಣಾ-
ವೃತಂ[370] ಬ್ರುವನ್ನಮೃತಂ ಸಂಪ್ರಯಚ್ಚನ್|
12109019c ತಂ ವೈ ಮನ್ಯೇ ಪಿತರಂ ಮಾತರಂ ಚ
ತಸ್ಮೈ ನ ದ್ರುಹ್ಯೇತ್ ಕೃತಮಸ್ಯ ಜಾನನ್||

ಸತ್ಯ-ಧರ್ಮದ ಮೂಲಕ ಶಿಷ್ಯನನ್ನು ಅನುಗ್ರಹಿಸುವ, ಮತ್ತು ಸತ್ಯಸ್ವರೂಪ ವೇದೋಪದೇಶವನ್ನು ಮಾಡಿ ಅಸತ್ಯವನ್ನು ತಡೆಯುವ ಪರಮ ಗುರುವೇ ತಂದೆ-ತಾಯಿಯೆಂದು ತಿಳಿಯಬೇಕು. ಗುರುವು

[370] ಕರ್ಮಣಾ ಋತಂ (ಭಾರತ ದರ್ಶನ).

ಮಾಡಿದ ಉಪಕಾರವನ್ನು ಸ್ಮರಿಸುತ್ತಾ ಅವನ ವಿಷಯದಲ್ಲಿ ಎಂದೂ ದ್ರೋಹವನ್ನೆಸಗಬಾರದು.

12109020a ವಿದ್ಯಾಂ ಶ್ರುತ್ವಾ ಯೇ ಗುರುಂ ನಾದ್ರಿಯಂತೇ
ಪ್ರತ್ಯಾಸನ್ನಂ ಮನಸಾ ಕರ್ಮಣಾ ವಾ|
[371]12109020c ಯಥೈವ ತೇ ಗುರುಭಿರ್ಭಾವನೀಯಾಸ್
ತಥಾ ತೇಷಾಂ ಗುರವೋಽಪ್ಯರ್ಚನೀಯಾಃ||

ಗುರುವಿಗೆ ಶಿಷ್ಯನ ಮೇಲೆ ಯಾವ ಭಾವವಿರುತ್ತದೆಯೋ ಹಾಗೆ ಶಿಷ್ಯನೂ ಗುರುವನ್ನು ಅರ್ಚಿಸಬೇಕು. ವಿದ್ಯೆಯನ್ನು ಕೇಳಿ ಗುರುವನ್ನು ಆದರಿಸದೇ ಇರಬಾರದು. ಹತ್ತಿರವಿದ್ದು ಮನಸಾ ಮತ್ತು ಕರ್ಮಪೂರ್ವಕವಾಗಿ ಅವನ ಶುಶ್ರೂಷೆಯನ್ನು ಮಾಡಬೇಕು.

12109021a ತಸ್ಮಾತ್ಪೂಜಯಿತವ್ಯಾಶ್ಚ ಸಂವಿಭಜ್ಯಾಶ್ಚ ಯತ್ನತಃ|
12109021c ಗುರವೋಽರ್ಚಯಿತವ್ಯಾಶ್ಚ ಪುರಾಣಂ ಧರ್ಮಮಿಚ್ಚತಾ||

ಆದುದರಿಂದ ಪುರಾಣಧರ್ಮವನ್ನು ಇಚ್ಛಿಸುವವರು ಗುರುತ್ರಯರನ್ನು ಅರ್ಚಿಸಬೇಕು. ಪೂಜಿಸಬೇಕು. ಪ್ರಯತ್ನಪೂರ್ವಕವಾಗಿ ಅವರಿಗೆ ಬೇಕಾದುದನ್ನು ಒದಗಿಸಿಕೊಡಬೇಕು.

12109022a ಯೇನ ಪ್ರೀತಾಶ್ಚ ಪಿತರಸ್ತೇನ ಪ್ರೀತಃ ಪಿತಾಮಹಃ|[372]
12109022c ಪ್ರೀಣಾತಿ ಮಾತರಂ ಯೇನ ಪೃಥಿವೀ ತೇನ ಪೂಜಿತಾ||

---

[371] ಭಾರತ ದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕಾರ್ಧವಿದೆ: ತೇಷಾಂ ಪಾಪಂ ಭ್ರೂಣಹತ್ಯಾವಿಶಿಷ್ಟಂ ನಾನ್ಯಸ್ತೇಭ್ಯಃ ಪಾಪಕೃದಸ್ತಿ ಲೋಕೇ| ಈ ಶ್ಲೋಕಾರ್ಧವಿಲ್ಲದೇ ಇದರ ಅರ್ಥದಲ್ಲಿ ವ್ಯತ್ಯಾಸ ಬರುತ್ತದೆ.

[372] ಯೇನ ಪ್ರೀಣಾತಿ ಪಿತರಂ ತೇನ ಪ್ರೀತಃ ಪ್ರಜಾಪತಿ| (ಭಾರತ ದರ್ಶನ).

ತಂದೆಯನ್ನು ಸಂತೋಷಗೊಳಿಸುವವನ ಮೇಲೆ ಪಿತಾಮಹ ಬ್ರಹ್ಮನೂ ಪ್ರೀತನಾಗುತ್ತಾನೆ. ತಾಯಿಯನ್ನು ಸಂತೋಷಗೊಳಿಸುವವನ ಮೇಲೆ ಪೃಥ್ವಿಯು ಸುಪ್ರೀತಳಾಗುತ್ತಾಳೆ.

12109023a ಯೇನ ಪ್ರೀಣಾತ್ಯುಪಾಧ್ಯಾಯಂ ತೇನ ಸ್ಯಾದ್ಬ್ರಹ್ಮ ಪೂಜಿತಮ್|
12109023c ಮಾತೃತಃ ಪಿತೃತಶ್ಚೈವ ತಸ್ಮಾತ್ಪೂಜ್ಯತಮೋ ಗುರುಃ|
12109023e ಋಷಯಶ್ಚ ಹಿ ದೇವಾಶ್ಚ ಪ್ರೀಯಂತೇ ಪಿತೃಭಿಃ ಸಹ[373]||

ಉಪಾಧ್ಯಾಯನನ್ನು ಪೂಜಿಸುವವನು ಬ್ರಹ್ಮವಸ್ತುವನ್ನೇ ಪೂಜಿಸಿದಂತೆ. ಆದುದರಿಂದ ತಂದೆ-ತಾಯಿಯರಿಗಿಂತಲೂ ಗುರುವೇ ಅಧಿಕ ಪೂಜಾರ್ಹನು. ಗುರುವನ್ನು ಪೂಜಿಸಿದರೆ ಪಿತೃಗಳೊಂದಿಗೆ ಋಷಿಗಳೂ ದೇವತೆಗಳೂ ಪ್ರೀತರಾಗುತ್ತಾರೆ.

12109024a ನ ಕೇನ ಚನ[374] ವೃತ್ತೇನ ಹ್ಯವಜ್ಞೇಯೋ ಗುರುರ್ಭವೇತ್|
12109024c ನ ಚ ಮಾತಾ ನ ಚ ಪಿತಾ ತಾದೃಶೋ ಯಾದೃಶೋ ಗುರುಃ||

ಯಾವುದೋ ವ್ಯವಹಾರದಲ್ಲಿ ತೊಡಗಿ ಗುರುವನ್ನು ಮರೆಯಬಾರದು. ಗುರುವು ಹೇಗೋ ಹಾಗೆ ತಂದೆ-ತಾಯಂದಿರೂ ಕೂಡ.

12109025a ನ ತೇಽವಮಾನಮರ್ಹಂತಿ ನ ಚ ತೇ ದೂಷಯಂತಿ ತಮ್|
12109025c ಗುರೂಣಾಮೇವ ಸತ್ಕಾರಂ ವಿದುರ್ದೇವಾಃ ಸಹರ್ಷಿಭಿಃ||

ಅವರು ಅಪಮಾನಕ್ಕೆ ಅರ್ಹರಲ್ಲ. ಅವರನ್ನು ದೂಷಿಸಬಾರದು.

---

373 ಇದರ ನಂತರ ಈ ಒಂದು ಅಧಿಕ ಶ್ಲೋಕಾರ್ಧವಿದೆ: ಪೂಜ್ಯಮಾನೇಷು ಗುರುಷು ತಸ್ಮಾತ್ ಪೂಜ್ಯತಮೋ ಗುರುಃ|| (ಗೀತಾ ಪ್ರೆಸ್).

374 ಕೇನಚಿನ್ನ ಚ (ಭಾರತ ದರ್ಶನ).

ಗುರುತ್ರಯರಿಗೆ ಮಾಡಿದ ಸತ್ಕಾರವು ತಮಗೇ ಮಾಡಿದ
ಸತ್ಕಾರವೆಂದು ದೇವತೆಗಳು ಋಷಿಗಳು ತಿಳಿಯುತ್ತಾರೆ.

12109026a ಉಪಾಧ್ಯಾಯಂ ಪಿತರಂ ಮಾತರಂ ಚ
ಯೇಽಭಿದ್ರುಹ್ಯಂತಿ ಮನಸಾ ಕರ್ಮಣಾ ವಾ|
12109026c ತೇಷಾಂ ಪಾಪಂ ಭ್ರೂಣಹತ್ಯಾವಿಶಿಷ್ಟಂ
ತಸ್ಮಾನ್ನಾನ್ಯಃ ಪಾಪಕೃದಸ್ತಿ ಲೋಕೇ||

ಉಪಾಧ್ಯಾಯ, ತಂದೆ ಮತ್ತು ತಾಯಿಗೆ ಮನಸಾ ಅಥವಾ ಕರ್ಮದಿಂದ
ಯಾರು ದ್ರೋಹವನ್ನೆಸಗುತ್ತಾರೋ ಅವರಿಗೆ ಭ್ರೂಣಹತ್ಯೆಗಿಂತಲೂ
ಹೆಚ್ಚಿನ ಪಾಪವು ತಗಲುತ್ತದೆ. ಅವರಿಗಿಂತ ಹೆಚ್ಚಿನ ಪಾಪಿಯು ಈ
ಲೋಕದಲ್ಲಿ ಬೇರೆ ಯಾರೂ ಇಲ್ಲ.

[375]12109027a ಮಿತ್ರದ್ರುಹಃ ಕೃತಘ್ನಸ್ಯ ಸ್ತ್ರೀಘ್ನಸ್ಯ ಪಿಶುನಸ್ಯ ಚ[376]|
12109027c ಚತುರ್ಣಾಂ ವಯಮೇತೇಷಾಂ ನಿಷ್ಕೃತಿಂ ನಾನುಶುಶ್ರುಮಃ||

ಮಿತ್ರದ್ರೋಹೀ, ಕೃತಘ್ನ, ಸ್ತ್ರೀಹಂತಕ ಮತ್ತು ಚಾಡಿಕೋರ ಈ
ನಾಲ್ವರಿಗೆ ಪ್ರಾಯಶ್ಚಿತ್ತವೇ ಇಲ್ಲವೆಂದು ನಾವು ಕೇಳಿದ್ದೇವೆ.

12109028a ಏತತ್ಸರ್ವಮತಿದೇಶೇನ ಸೃಷ್ಟಂ[377]
ಯತ್ಕರ್ತವ್ಯಂ ಪುರುಷೇಣೇಹ ಲೋಕೇ|

---

375 ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಭೃತೋ ವೃದ್ಧೋ ಯೋ ನ ಬಿಭರ್ತಿ ಪುತ್ರಃ ಸ್ವಯೋನಿಜಃ ಪಿತರಂ ಮಾತರಂ ಚ| ತದ್ವೈ ಪಾಪಂ ಭ್ರೂಣಹತ್ಯಾವಿಶಿಷ್ಟಂ ತಸ್ಮಾನ್ನಾನ್ಯಃ ಪಾಪಕೃದಸ್ತಿ ಲೋಕೇ|| (ಗೀತಾ ಪ್ರೆಸ್).

376 ಗುರುಘಾತಿನಃ (ಭಾರತ ದರ್ಶನ).

377 ಏತತ್ಸರ್ವಮನಿರ್ದೇಶೇನ್ಯೈವಮುಕ್ತಂ| (ಭಾರತ ದರ್ಶನ).

12109028c ಏತಚ್ಚ್ರೇಯೋ ನಾನ್ಯದಸ್ಮಾದ್ವಿಶಿಷ್ಟಂ
ಸರ್ವಾನ್ ಧರ್ಮಾನನುಸೃತ್ಯೈತದುಕ್ತಮ್‌॥

ಈ ಲೋಕದಲ್ಲಿ ಪುರುಷನಿಗೆ ಯಾವುದು ಕರ್ತವ್ಯವೆನಿಸಿದೆಯೋ ಅವೆಲ್ಲವನ್ನೂ ಹೇಳಲಾಗಿದೆ. ಗುರುತ್ರಯರ ಶುಶ್ರೂಷೆಯು ಎಲ್ಲಕರ್ತವ್ಯಗಳಿಗಿಂತಲೂ ಶ್ರೇಷ್ಠವಾದುದು. ಇದಕ್ಕಿಂತಲೂ ಮಿಗಿಲಾದುದು ಬೇರೆ ಯಾವುದೂ ಇಲ್ಲ. ಎಲ್ಲ ಧರ್ಮಗಳನ್ನೂ ಅನುಸರಿಸಿಯೇ ಇದನ್ನು ಹೇಳಲಾಗಿದೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಮಾತೃಪಿತೃಗುರುಮಹಾತ್ಮ್ಯೇ ನವಾಧಿಕಶತತಮೋऽಧ್ಯಾಯಃ‌॥
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಮಾತೃಪಿತೃಗುರುಮಹಾತ್ಮ್ಯ ಎನ್ನುವ ನೂರಾಒಂಭತ್ತನೇ ಅಧ್ಯಾಯವು.

೧೧೦

ಸತ್ಯಾನೃತ ವಿಭಾಗ

ಸತ್ಯಾಸತ್ಯಗಳ ವಿವೇಚನೆ, ಧರ್ಮದ ಲಕ್ಷಣ ಮತ್ತು ವ್ಯವಹಾರನೀತಿಗಳು (1-26).

12110001 ಯುಧಿಷ್ಠಿರ ಉವಾಚ|
12110001a ಕಥಂ ಧರ್ಮೇ ಸ್ಥಾತುಮಿಚ್ಚನ್ನರೋ ವರ್ತೇತ ಭಾರತ|
12110001c ವಿದ್ವನ್ ಜಿಜ್ಞಾಸಮಾನಾಯ ಪ್ರಬ್ರೂಹಿ ಭರತರ್ಷಭ‌॥

ಯುಧಿಷ್ಠಿರನು ಹೇಳಿದನು: "ಭಾರತ! ಭರತರ್ಷಭ! ಧರ್ಮದಲ್ಲಿಯೇ ನೆಲಸಿರಲು ಇಚ್ಛಿಸುವ ನರನು ಹೇಗೆ ವರ್ತಿಸಬೇಕು? ವಿದ್ವನ್! ಇದರ ಕುರಿತು ತಿಳಿದುಕೊಳ್ಳಬೇಕೆಂದಿರುವ ನನಗೆ ಹೇಳು.

12110002a ಸತ್ಯಂ ಚೈವಾನೃತಂ ಚೋಭೇ ಲೋಕಾನಾವೃತ್ಯ ತಿಷ್ಠತಃ|
12110002c ತಯೋಃ ಕಿಮಾಚರೇದ್ರಾಜನ್ ಪುರುಷೋ ಧರ್ಮನಿಶ್ಚಿತಃ||

ಸತ್ಯ ಮತ್ತು ಅಸತ್ಯ ಇವೆರಡೂ ಲೋಕಗಳನ್ನೇ ಆವರಿಸಿ ನಿಂತಿವೆ. ರಾಜನ್! ಧರ್ಮನಿಶ್ಚಿತನಾದ ಪುರುಷನು ಇವೆರಡರಲ್ಲಿ ಯಾವುದನ್ನು ಆಚರಿಸಬೇಕು?

12110003a ಕಿಂ ಸ್ವಿತ್ಸತ್ಯಂ ಕಿಮನೃತಂ ಕಿಂ ಸ್ವಿದ್ಧರ್ಮ್ಯಂ ಸನಾತನಮ್|
12110003c ಕಸ್ಮಿನ್ಕಾಲೇ ವದೇತ್ಸತ್ಯಂ ಕಸ್ಮಿನ್ಕಾಲೇಽನೃತಂ ವದೇತ್||

ಸತ್ಯವು ಯಾವುದು? ಅನೃತವು ಯಾವುದು? ಯಾವುದು ಸನಾತನ ಧರ್ಮ? ಯಾವ ಕಾಲದಲ್ಲಿ ಸತ್ಯವನ್ನು ಹೇಳಬೇಕು ಮತ್ತು ಯಾವ ಕಾಲದಲ್ಲಿ ಸುಳ್ಳನ್ನು ನುಡಿಯಬೇಕು?"

12110004 ಭೀಷ್ಮ ಉವಾಚ|
12110004a ಸತ್ಯಸ್ಯ ವಚನಂ ಸಾಧು ನ ಸತ್ಯಾದ್ವಿದ್ಯತೇ ಪರಮ್|
12110004c ಯದ್ಭೂಲೋಕೇ ಸುದುರ್ಜ್ಞಾತಂ ತತ್ತೇ ವಕ್ಷ್ಯಾಮಿ ಭಾರತ||

ಭೀಷ್ಮನು ಹೇಳಿದನು: "ಭಾರತ! ಸತ್ಯವನ್ನು ನುಡಿಯುವುದೇ ಸಾಧುವಾದುದು. ಸತ್ಯಕ್ಕಿಂತಲೂ ಶ್ರೇಷ್ಠವಾದುದು ಇನ್ನೊಂದಿಲ್ಲ. ಆದರೆ ಲೋಕದಲ್ಲಿ ಸತ್ಯವು ಏನೆಂದು ತಿಳಿದುಕೊಳ್ಳುವುದೇ ಕಷ್ಟ. ಅದನ್ನೇ ನಿನಗೆ ಹೇಳುತ್ತೇನೆ.

12110005a ಭವೇತ್ಸತ್ಯಂ ನ ವಕ್ತವ್ಯಂ ವಕ್ತವ್ಯಮನೃತಂ ಭವೇತ್।
12110005c ಯತ್ರಾನೃತಂ ಭವೇತ್ಸತ್ಯಂ ಸತ್ಯಂ ವಾಪ್ಯನೃತಂ ಭವೇತ್॥

ಎಲ್ಲಿ ಅನೃತವು ಸತ್ಯದ ಕಾರ್ಯವನ್ನು ಮಾಡುವುದೋ ಅಲ್ಲಿ ಸುಳ್ಳನ್ನೇ ಹೇಳಬೇಕಾಗುತ್ತದೆ. ಎಲ್ಲಿ ಸತ್ಯವು ಅನೃತದ ಕಾರ್ಯವನ್ನು ಮಾಡುತ್ತದೆಯೋ ಅಲ್ಲಿ ಸತ್ಯವನ್ನು ಹೇಳಬಾರದು.

12110006a ತಾದೃಶೇ ಮುಹ್ಯತೇ ಬಾಲೋ ಯತ್ರ ಸತ್ಯಮನಿಷ್ಠಿತಮ್।
12110006c ಸತ್ಯಾನೃತೇ ವಿನಿಶ್ಚಿತ್ಯ ತತೋ ಭವತಿ ಧರ್ಮವಿತ್॥

ಈ ರೀತಿ ಅನಿಷ್ಠಿತವಾದ ಸತ್ಯವನ್ನು ತಿಳಿಯದಿರುವವನು ಮೋಹಕ್ಕೊಳಗಾಗುತ್ತಾನೆ. ಸತ್ಯ-ಅನೃತಗಳನ್ನು ನಿಶ್ಚಯಿಸಿಕೊಂಡವನು ಧರ್ಮವಿದುವಾಗುತ್ತಾನೆ.

12110007a ಅಪ್ಯನಾರ್ಯೋ ಽಕೃತಪ್ರಜ್ಞಃ ಪುರುಷೋಽಪಿ ಸುದಾರುಣಃ।
12110007c ಸುಮಹತ್ಪ್ರಾಪ್ನುಯಾತ್ಪುಣ್ಯಂ ಬಲಾಕೋಽಂಧವಧಾದಿವ॥

ಅನಾರ್ಯನೂ ಬುದ್ಧಿಶೂನ್ಯನೂ ಮತ್ತು ಮಹಾಕ್ರೂರಿ ಪುರುಷನಾಗಿದ್ದರೂ ಅಂಧ ಪ್ರಾಣಿಯನ್ನು ಕೊಂದ ವ್ಯಾಧ ಬಲಾಕನಂತೆ[378] ಮಹಾಪುಣ್ಯವನ್ನು ಪಡೆದುಕೊಳ್ಳಬಹುದು.

12110008a ಕಿಮಾಶ್ಚರ್ಯಂ ಚ ಯನ್ಮೂಢೋ ಧರ್ಮಕಾಮೋಽಪ್ಯಧರ್ಮವಿತ್।
12110008c ಸುಮಹತ್ ಪ್ರಾಪ್ನುಯಾತ್ಪಾಪಂ ಗಂಗಾಯಾಮಿವ ಕೌಶಿಕಃ॥

ಎಂಥಹ ಆಶ್ಚರ್ಯವಿದು! ಧರ್ಮಮಾರ್ಗದಲ್ಲಿಯೇ ಇರಬೇಕೆಂಬ

---

[378] ಕೃಷ್ಣನು ಅರ್ಜುನ-ಯುಧಿಷ್ಠಿರನಿಗೆ ಹೇಳಿದ ವ್ಯಾಧ ಬಲಾಕನ ಕಥೆಯು ಕರ್ಣಪರ್ವದ 49ನೇ ಅಧ್ಯಾಯದಲ್ಲಿ ಬಂದಿದೆ.

ಇಚ್ಛೆಯಿದ್ದ ಗಂಗಾತೀರದಲ್ಲಿ ವಾಸಿಸುತ್ತಿದ್ದ ಕೌಶಿಕನೆಂಬ ಮೂರ್ಖ ತಪಸ್ವಿಯು ನಿಜವನ್ನು ಹೇಳಿಯೂ ಅಧರ್ಮದ ಫಲವನ್ನು ಪಡೆಯಬೇಕಾಯಿತು[379].

12110009a ತಾದೃಶೋಽಯಮನುಪ್ರಶ್ನೋ ಯತ್ರ ಧರ್ಮಃ ಸುದುರ್ವಚಃ[380]।
12110009c ದುಷ್ಕರಃ ಪ್ರತಿಸಂಖ್ಯಾತುಂ ತರ್ಕೇಣಾತ್ರ[381] ವ್ಯವಸ್ಯತಿ॥

ನೀನು ಕೇಳಿದ ಪ್ರಶ್ನೆಯೂ ಹೀಗೆಯೇ ಇದೆ. ಧರ್ಮವನ್ನು ತಿಳಿಸಿಹೇಳುವುದು ಕಷ್ಟ. ಇದನ್ನು ಪ್ರತಿಪಾದಿಸುವುದೂ ದುಷ್ಕರವೇ ಆಗಿದೆ. ಅದು ತರ್ಕಕ್ಕೆ ಮಾತ್ರ ಸಿಲುಕುತ್ತದೆ.

12110010a ಪ್ರಭಾವಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಮ್।
12110010c ಯತ್ ಸ್ಯಾದಹಿಂಸಾಸಂಯುಕ್ತಂ[382] ಸ ಧರ್ಮ ಇತಿ ನಿಶ್ಚಯಃ॥

ಜೀವಿಗಳ ಅಭಿವೃದ್ಧಿಗಾಗಿ ಧರ್ಮಪ್ರವಚನವು ಮಾಡಲ್ಪಟ್ಟಿದೆ. ಯಾವುದು ಅಹಿಂಸಾಸಂಯುಕ್ತವಾಗಿದೆಯೋ ಅದೇ ಧರ್ಮ ಎಂದು ನಿಶ್ಚಯಿಸಲ್ಪಟ್ಟಿದೆ.

12110011a ಧಾರಣಾದ್ಧರ್ಮ ಇತ್ಯಾಹುರ್ಧರ್ಮೇಣ ವಿಧೃತಾಃ ಪ್ರಜಾಃ।
12110011c ಯತ್ ಸ್ಯಾದ್ಧಾರಣಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ॥

---

379 ಕೌಶಿಕನ ಕಥೆಯೂ ಕೃಷ್ಣನು ಅರ್ಜುನ-ಯುಧಿಷ್ಠಿರರಿಗೆ ಹೇಳಿರುವಂತೆ ಕರ್ಣಪರ್ವದ 49ನೇ ಅಧ್ಯಾಯದಲ್ಲಿ ಬಂದಿದೆ.

380 ಸುದುರ್ಲಭಃ (ಭಾರತ ದರ್ಶನ).

381 ತತ್ಕೇನಾತ್ರ (ಭಾರತ ದರ್ಶನ).

382 ಯಃ ಸ್ಯಾತ್ಪ್ರಭವಸಂಯುಕ್ತಃ (ಭಾರತ ದರ್ಶನ).

ಧಾರಣೆಯಿಂದಾಗಿ ಧರ್ಮ ಎಂದು ಹೇಳುತ್ತಾರೆ. ಧರ್ಮದಿಂದ ಪ್ರಜೆಗಳು ಮೇಲಕ್ಕೆತ್ತಲ್ಪಡುತ್ತಾರೆ. ಯಾವುದು ಧಾರಣಾ-ಪೋಷಣಾಯುಕ್ತವಾದುದೋ ಅದೇ ಧರ್ಮ ಎಂದು ನಿಶ್ಚಯಿಸಲ್ಪಟ್ಟಿದೆ.

[383]12110012a ಶ್ರುತಿಧರ್ಮ ಇತಿ ಹ್ಯೇಕೇ ನೇತ್ಯಾಹುರಪರೇ ಜನಾಃ|
12110012c ನ ತು ತತ್ ಪ್ರತ್ಯಸೂಯಾಮೋ ನ ಹಿ ಸರ್ವಂ ವಿಧೀಯತೇ||

ವೇದದಲ್ಲಿ ಹೇಳಿರುವುದೇ ಧರ್ಮವೆಂದು ಕೆಲವರ ಅಭಿಪ್ರಾಯ. ಆದರೆ ಇನ್ನು ಕೆಲವರು ಇದನ್ನು ಒಪ್ಪುವುದಿಲ್ಲ. ನಾವು ಇವೆರಡು ಅಭಿಪ್ರಾಯಗಳನ್ನೂ ದೂಷಿಸುವುದಿಲ್ಲ. ವೇದವು ಎಲ್ಲವನ್ನೂ ಹೇಳಿರುವುದಿಲ್ಲ.

12110013a ಯೇಽನ್ಯಾಯೇನ ಜಿಹೀರ್ಷಂತೋ ಧನಮಿಚ್ಚಂತಿ ಕರ್ಹಿ ಚಿತ್|
12110013c ತೇಭ್ಯಸ್ತನ್ನ ತದಾಖ್ಯೇಯಂ ಸ ಧರ್ಮ ಇತಿ ನಿಶ್ಚಯಃ||

---

[383] ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಅಹಿಂಸಾರ್ಥಾಯ ಭೂತಾನಾಂ ಧರ್ಮಪ್ರವಚನಂ ಕೃತಂ| ಯಃ ಸ್ಯಾದಹಿಂಸಾಸಂಪೃಕ್ತಃ ಸ ಧರ್ಮ ಇತಿ ನಿಶ್ಚಿತಃ|| (ಭಾರತ ದರ್ಶನ/ಗೀತಾ ಪ್ರೆಸ್). ಇದೂ ಅಲ್ಲದೇ ದಕ್ಷಿಣಾತ್ಯ ಪಾಠದಲ್ಲಿ ಇನ್ನೂ ಎರಡು ಅಧಿಕ ಶ್ಲೋಕಗಳಿವೆ: ಅಹಿಂಸಾ ಸತ್ಯಮಕ್ರೋಧಸ್ತಪೋ ದಾನಂ ದಮೋ ಮತಿಃ|
ಅನಸೂಯಾಪ್ಯಮಾತ್ಸರ್ಯಮನಿಷ್ಯಾಂ ಶೀಲಮೇವ ಚ|| ಏಷ ಧರ್ಮಃ ಕುರುಶ್ರೇಷ್ಠ ಕಥಿತಃ ಪರಮೇಷ್ಠಿನಾ| ಬ್ರಹ್ಮಣಾ ದೇವದೇವೇನ ಅಯಂ ಚೈವ ಸನಾತನಃ| ಅಸ್ಮಿನ್ ಧರ್ಮೇ ಸ್ಥಿತೋ ರಾಜನ್ ನರೋಭದ್ರಾಣಿ ಪಶ್ಯತಿ|| (ಗೀತಾ ಪ್ರೆಸ್).

ಅನ್ಯಾಯದಿಂದ ಯಾರೋ ಒಬ್ಬನ ಧನವನ್ನು ಕಿತ್ತುಕೊಳ್ಳಲು
ಬಯಸಿದವರಿಗೆ ಅದು ಎಲ್ಲಿದೆ ಎಂದು ಹೇಳದೇ ಇರುವುದು
ಧರ್ಮವೆಂದು ನಿಶ್ಚಿತವಾಗಿದೆ.

12110014a ಅಕೂಜನೇನ ಚೇನ್ಮೋಕ್ಷೋ ನಾತ್ರ ಕೂಜೇತ್ಕಥಂ ಚನ|
12110014c ಅವಶ್ಯಂ ಕೂಜಿತವ್ಯಂ ವಾ ಶಂಕೇರನ್ವಾಪ್ಯಕೂಜನಾತ್||
12110015a ಶ್ರೇಯಸ್ತತ್ರಾನೃತಂ ವಕ್ತುಂ ಸತ್ಯಾದಿತಿ ವಿಚಾರಿತಮ್|

ಮಾತನಾಡದೇ ಇದ್ದರೆ ಕಳ್ಳರಿಂದ ಬಿಡುಗಡೆಯಾಗುವುದಾದರೆ
ಯಾವುದೇ ಮಾತನ್ನೂ ಆಡಬಾರದು. ಮಾತನಾಡಲೇ ಬೇಕಾಗಿ
ಬಂದರೆ ಮತ್ತು ಕಳ್ಳರು ಶಂಕಿತರಾಗುವುದಾದರೆ ಆಗ ಸತ್ಯಕ್ಕಿಂತಲೂ
ಸುಳ್ಳನ್ನು ಹೇಳುವುದೇ ಶ್ರೇಯಸ್ಕರ ಎಂಬ ವಿಚಾರವಿದೆ.

12110015c ಯಃ ಪಾಪೈಃ ಸಹ ಸಂಬಂಧಾನ್ಮುಚ್ಯತೇ ಶಪಥಾದಿತಿ||
12110016a ನ ಚ ತೇಭ್ಯೋ ಧನಂ ದೇಯಂ ಶಕ್ಯೇ ಸತಿ ಕಥಂ ಚನ|
12110016c ಪಾಪೇಭ್ಯೋ ಹಿ ಧನಂ ದತ್ತಂ ದಾತಾರಮಪಿ ಪೀಡಯೇತ್||

ಅಸತ್ಯ ಶಪಥಗಳಿಂದಲಾದರೂ ಪಾಪಿಗಳಿಂದ ಬಿಡಿಸಿಕೊಳ್ಳಬೇಕು.
ಸಾಧ್ಯವಾದಷ್ಟು ಮಟ್ಟಿಗೆ ಅವರಿಗೆ ಧನವು ದೊರಕದಂತೆ ಮಾಡಬೇಕು.
ಪಾಪಿಷ್ಠರಿಗೆ ಕೊಡುವ ಧನವು ಕೊಡುವವನನ್ನೇ ಪೀಡಿಸುತ್ತದೆ.

12110017a ಸ್ವಶರೀರೋಪರೋಧೇನ ವರಮಾದಾತುಮಿಚ್ಚತಃ|
12110017c ಸತ್ಯಸಂಪ್ರತಿಪತ್ತ್ಯರ್ಥಂ ಯೇ ಬ್ರೂಯುಃ ಸಾಕ್ಷಿಣಃ ಕ್ವ ಚಿತ್|
12110017e ಅನುಕ್ತ್ವಾ ತತ್ರ ತದ್ವಾಚ್ಯಂ ಸರ್ವೇ ತೇಽನೃತವಾದಿನಃ||

ಜೀತದಿಂದ ಸಾಲವನ್ನು ತೀರಿಸಲು ಪ್ರಯತ್ನಿಸುತ್ತಿರುವವನಿಗೆ ಸಾಲವು
ತೀರಿತೇ ಇಲ್ಲವೇ ಎಂದು ತೀರ್ಮಾನಿಸಲು ಸಾಕ್ಷಿಗಳನ್ನು ಕರೆಸಿದಾಗ

ಅಲ್ಲಿ ಅವರು ಸತ್ಯವನ್ನು ಹೇಳದೇ ಇದ್ದರೆ ಅವರೆಲ್ಲರೂ
ಸುಳ್ಳುಹೇಳುವವರೇ ಆಗುತ್ತಾರೆ.

12110018a ಪ್ರಾಣಾತ್ಯಯೇ ವಿವಾಹೇ ಚ ವಕ್ತವ್ಯಮನೃತಂ ಭವೇತ್|
12110018c ಅರ್ಥಸ್ಯ ರಕ್ಷಣಾರ್ಥಾಯ ಪರೇಷಾಂ ಧರ್ಮಕಾರಣಾತ್|

ಪ್ರಾಣಾಪಾಯದ ಸಮಯದಲ್ಲಿ, ವಿವಾಹದ ಸಮಯದಲ್ಲಿ, ಇತರರ
ಧನವನ್ನು ರಕ್ಷಿಸುವ ಸಲುವಾಗಿ ಮತ್ತು ಧರ್ಮದ ಕಾರಣದಿಂದ
ಸುಳ್ಳನ್ನು ಹೇಳಬಹುದು. ಅದಕ್ಕೆ ದೋಷವಿಲ್ಲ.

12110018e ಪರೇಷಾಂ ಧರ್ಮ[384]ಮಾಕಾಂಕ್ಷನ್ನೀಚಃ ಸ್ಯಾದ್ಧರ್ಮಭಿಕ್ಷುಕಃ||
12110019a ಪ್ರತಿಶ್ರುತ್ಯ ತು ದಾತವ್ಯಂ ಶ್ವಃಕಾರ್ಯಸ್ತು ಬಲಾತ್ಕೃತಃ|

ಬೇರೊಬ್ಬನಿಗೆ ಧರ್ಮವನ್ನೆಸಗಲು ಬಯಸಿ ನೀಚನೋರ್ವನು
ಭಿಕ್ಷೆಯನ್ನು ಬೇಡಿದರೆ ಕೊಡುತ್ತೇನೆ ಎಂದು ಹೇಳಿದ ನಂತರ ಭಿಕ್ಷೆಯನ್ನು
ಕೊಡಲೇ ಬೇಕು. ಹಾಗೆ ಭಿಕ್ಷೆಯನ್ನು ಪಡೆದವನು ಸ್ವಾರ್ಥಕ್ಕಾಗಿ ಅದನ್ನು
ಉಪಯೋಗಿಸಿಕೊಂಡರೆ ಅವನು ದಂಡ್ಯನೇ ಆಗುತ್ತಾನೆ.

12110019c ಯಃ ಕಶ್ಚಿದ್ಧರ್ಮಸಮಯಾತ್ ಪ್ರಚ್ಯುತೋಽಧರ್ಮಮಾಸ್ಥಿತಃ||
[385]12110020a ಶಠಃ ಸ್ವಧರ್ಮಮುತ್ಸೃಜ್ಯ ತಮಿಚ್ಛೇದುಪಜೀವಿತುಮ್|
12110020c ಸರ್ವೋಪಾಯೈರ್ನಿಹಂತವ್ಯಃ ಪಾಪೋ ನಿಕೃತಿಜೀವನಃ||
12110021a ಧನಮಿತ್ಯೇವ ಪಾಪಾನಾಂ ಸರ್ವೇಷಾಮಿಹ ನಿಶ್ಚಯಃ|

---

384 ಸಿದ್ಧಿ (ಭಾರತ ದರ್ಶನ).

385 ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ದಂಡೇನ್ಯೈವ ಸ
ಹಂತವ್ಯಸ್ತಂ ಪಂಥಾನಂ ಸಮಾಶ್ರಿತಃ| ಚ್ಯುತಃ ಸದ್ಯೈವ
ಧರ್ಮೇಭ್ಯೋಽಮಾನವಂ ಧರ್ಮಮಾಸ್ಥಿತಃ|| (ಭಾರತ ದರ್ಶನ).

ಧರ್ಮಸಾಧನದಿಂದ ಚ್ಯುತನಾಗಿ ಅಧರ್ಮವನ್ನು ಆಶ್ರಯಿಸಿದ ಮತ್ತು ಸ್ವಧರ್ಮವನ್ನು ಪರಿತ್ಯಜಿಸಿ ಪಾಪಕಾರ್ಯದಿಂದ ಜೀವನವನ್ನು ನಡೆಸುವವನನ್ನು ಸರ್ವೋಪಾಯಗಳಿಂದ ಸಂಹರಿಸಬೇಕು. ಮೋಸದಿಂದ ಜೀವಿಸುವುದು ಪಾಪವೆಂದು ತಿಳಿದರೆ ಧನವೇ ಎಲ್ಲಕ್ಕಿಂತಲೂ ಶ್ರೇಷ್ಠವೆನ್ನುವುದು ಪಾಪಿಷ್ಠರ ನಿಶ್ಚಯವಾಗಿರುತ್ತದೆ.

12110021c ಯೇಽವಿಷಹ್ಯಾ ಹ್ಯಸಂಭೋಜ್ಯಾ ನಿಕೃತ್ಯಾ ಪತನಂ ಗತಾಃ||
12110022a ಚ್ಯುತಾ ದೇವಮನುಷ್ಯೇಭ್ಯೋ ಯಥಾ ಪ್ರೇತಾಸ್ತಥೈವ ತೇ|

ಇಂತಹ ನೀಚಪುರುಷರನ್ನು ಸತ್ಪುರುಷರು ಸಹಿಸಲಾರರು. ಅಂಥವರು ಭೋಜನಮಾಡಿಸಲೂ ಯೋಗ್ಯರಲ್ಲದವರಾಗುತ್ತಾರೆ. ವಂಚನೆಯಿಂದ ಅವರು ಪತಿತರಾಗುತ್ತಾರೆ. ಯಜ್ಞ-ತಪಸ್ಸುಗಳಿಂದ ಹೀನರಾದ ಅವರು ದೇವ-ಮನುಷ್ಯಲೋಕಗಳೆರಡರಿಂದಲೂ ಚ್ಯುತರಾಗಿ ಪ್ರೇತಗಳಂತೆ ಇರುತ್ತಾರೆ.

[386]12110022c ಧನಾದಾನಾದ್ದುಃಖತರಂ[387] ಜೀವಿತಾದ್ವಿಪ್ರಯೋಜನಮ್||
12110023a ಅಯಂ ವೋ ರೋಚತಾಂ ಧರ್ಮ ಇತಿ ವಾಚ್ಯಃ ಪ್ರಯತ್ನತಃ|

ಧನನಾಶಕ್ಕಿಂತಲೂ ದುಃಖತರವಾದುದು ಜೀವನದ ವಿನಾಶ. ಆದುದರಿಂದ ಧನದ ಮೇಲಿನ ಹಂಬಲವನ್ನು ತೊರೆಯಿರಿ. ಈ ಧರ್ಮವು ನಿಮಗೆ ಇಷ್ಟವಾಗಲಿ.” ಹೀಗೆ ಪ್ರಯತ್ನಪಟ್ಟು ಹೇಳಬೇಕು.

---

[386] ನಿರ್ಯಜ್ಞಾಸ್ತಪಸಾ ಹೀನಾ ಮಾ ಸ್ಮ ತೈಃ ಸಹ ಸಂಗಮಃ| ಎಂಬ ಶ್ಲೋಕಾರ್ಧವು ಭಾರತ ದರ್ಶನದಲ್ಲಿದೆ.

[387] ಧನನಾಶಾದ್ದುಃಖತರಂ (ಭಾರತ ದರ್ಶನ). ಧನದಾನಾದ್ದುಃಖತರಂ ಎನ್ನುವುದು ಇಲ್ಲಿ ಸರಿಯಾಗಿ ಕಾಣುತ್ತಿಲ್ಲ.

12110023c ನ ಕಶ್ಚಿದಸ್ತಿ ಪಾಪಾನಾಂ ಧರ್ಮ ಇತ್ಯೇಷ ನಿಶ್ಚಯಃ||
12110024a ತಥಾಗತಂ ಚ ಯೋ ಹನ್ಯಾನ್ನಾಸೌ ಪಾಪೇನ ಲಿಪ್ಯತೇ|

ಧರ್ಮವೆನ್ನುವುದೇ ಇಲ್ಲ ಎನ್ನುವುದು ಪಾಪಿಷ್ಠರ ನಿಶ್ಚಯ.
ಅಂಥವರನ್ನು ಕೊಲ್ಲುವವನಿಗೆ ಪಾಪವು ಅಂಟಿಕೊಳ್ಳುವುದಿಲ್ಲ.

12110024c ಸ್ವಕರ್ಮಣಾ ಹತಂ ಹಂತಿ ಹತ ಏವ ಸ ಹನ್ಯತೇ|
12110024e ತೇಷು ಯಃ ಸಮಯಂ ಕಶ್ಚಿತ್ಕುರ್ವೀತ ಹತಬುದ್ಧಿಷು||

ಪಾಪಿಗಳು ತಮ್ಮದೇ ಕರ್ಮಗಳಿಂದ ಹತರಾಗುತ್ತಾರೆ. ಅಂಥವರನ್ನು
ಕೊಂದರೂ ಪಾಪವು ಅಂಟುವುದಿಲ್ಲ. ಹತಬುದ್ಧಿಯ ಪಾಪಿಷ್ಠರನ್ನು
ಕೊಲ್ಲುವ ಪ್ರತಿಜ್ಞೆಮಾಡುವವನೇ ಧರ್ಮಾತ್ಮನು.

12110025a ಯಥಾ ಕಾಕಶ್ಚ ಗೃಧ್ರಶ್ಚ ತಥೈವೋಪಧಿಜೀವಿನಃ|
12110025c ಊರ್ಧ್ವಂ ದೇಹವಿಮೋಕ್ಷಾಂತೇ ಭವಂತ್ಯೇತಾಸು ಯೋನಿಷು||

ಕಾಗೆ ಹದ್ದುಗಳಂತೆ ವಂಚನೆಯಿಂದ ಜೀವಿಸುವವರು ಮರಣಾನಂತರ
ಆ ಯೋನಿಗಳಲ್ಲಿಯೇ ಜನ್ಮತಾಳುತ್ತಾರೆ.

12110026a ಯಸ್ಮಿನ್ಯಥಾ ವರ್ತತೇ ಯೋ ಮನುಷ್ಯಸ್
ತಸ್ಮಿಂಸ್ತಥಾ ವರ್ತಿತವ್ಯಂ ಸ ಧರ್ಮಃ|
12110026c ಮಾಯಾಚಾರೋ ಮಾಯಯಾ ವರ್ತಿತವ್ಯಃ
ಸಾಧ್ವಾಚಾರಃ ಸಾಧುನಾ ಪ್ರತ್ಯುದೇಯಃ||

ಯಾರು, ಯಾರಲ್ಲಿ ಹೇಗೆ ವ್ಯವಹರಿಸುವನೋ ಅದಕ್ಕೆ
ಅನುಸಾರವಾಗಿಯೇ ಆ ಮನುಷ್ಯನೊಂದಿಗೆ ಹಾಗೆಯೇ
ವ್ಯವಹರಿಸಬೇಕು. ಅದೇ ಧರ್ಮ. ಕಪಟಿಯನ್ನು ಕಪಟದಿಂದಲೇ

ಬಾಧಿಸಬೇಕು. ಸದಾಚಾರಿಯನ್ನು ಸದ್ವ್ಯವಹಾರಗಳಿಂದಲೇ ಪರಿಗ್ರಹಿಸಬೇಕು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಸತ್ಯಾನೃತಕವಿಭಾಗೇ ದಶಾಧಿಕಶತತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಸತ್ಯಾನೃತಕವಿಭಾಗ ಎನ್ನುವ ನೂರಾಹತ್ತನೇ ಅಧ್ಯಾಯವು.

೧೧೧

ದುರ್ಗಾತಿತರಣ

ಸದಾಚಾರ ಮತ್ತು ಈಶ್ವರಭಕ್ತಿಯ ಮೂಲಕ ಮನುಷ್ಯನು ದುಃಖದಿಂದ ಪಾರಾಗುವ ವಿಧಾನಗಳು (1-29).

12111001 ಯುಧಿಷ್ಠಿರ ಉವಾಚ|
12111001a ಕ್ಲಿಶ್ಯಮಾನೇಷು ಭೂತೇಷು ತೈಸ್ತೈರ್ಭಾವೈಸ್ತತಸ್ತತಃ|
12111001c ದುರ್ಗಾಣ್ಯತಿತರೇದ್ಯೇನ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: “ಪಿತಾಮಹ! ಜೀವಿಗಳು ಅವರವರದೇ ಭಾವಗಳಲ್ಲಿ ಅಲ್ಲಲ್ಲಿ ಕಷ್ಟಪಡುತ್ತಿರುತ್ತವೆ. ಯಾವ ಉಪಾಯದಿಂದ ಕಷ್ಟಗಳನ್ನು ದಾಟಬಹುದು ಎನ್ನುವುದನ್ನು ನನಗೆ ಹೇಳು.”

12111002 ಭೀಷ್ಮ ಉವಾಚ|
12111002a ಆಶ್ರಮೇಷು ಯಥೋಕ್ತೇಷು ಯಥೋಕ್ತಂ ಯೇ ದ್ವಿಜಾತಯಃ|
12111002c ವರ್ತಂತೇ ಸಂಯತಾತ್ಮಾನೋ ದುರ್ಗಾಣ್ಯತಿತರಂತಿ ತೇ||

ಭೀಷ್ಮನು ಹೇಳಿದನು: “ಯಥೋಕ್ತವಾದ ಆಶ್ರಮಗಳಲ್ಲಿ
ಯಥೋಕ್ತವಾಗಿ ಸಂಯತಾತ್ಮರಾಗಿ ವರ್ತಿಸುವ ದ್ವಿಜಾತಿಯವರು
ಕಷ್ಟಗಳಿಂದ ಪಾರಾಗುತ್ತಾರೆ.

12111003a ಯೇ ದಂಭಾನ್ನ ಜಪಂತಿ[388] ಸ್ಮ ಯೇಷಾಂ ವೃತ್ತಿಶ್ಚ ಸಂವೃತಾ[389]|
12111003c ವಿಷಯಾಂಶ್ಚ ನಿಗೃಹ್ಣಂತಿ ದುರ್ಗಾಣ್ಯತಿತರಂತಿ ತೇ||

ದಂಬಾಚಾರದಲ್ಲಿ ತೊಡಗದೇ ನಿಯಮಬದ್ಧ ವೃತ್ತಿಯಲ್ಲಿ
ತೊಡಗಿರುವವರು ಮತ್ತು ವಿಷಯಾಸಕ್ತಿಯನ್ನು ನಿಗ್ರಹಿಸುವವರು
ಕಷ್ಟಗಳಿಂದ ಪಾರಾಗುತ್ತಾರೆ.

[390]12111004a ವಾಸಯಂತ್ಯತಿಥೀನ್ನಿತ್ಯಂ ನಿತ್ಯಂ ಯೇ ಚಾನಸೂಯಕಾಃ|
12111004c ನಿತ್ಯಂ ಸ್ವಾಧ್ಯಾಯಶೀಲಾಶ್ಚ ದುರ್ಗಾಣ್ಯತಿತರಂತಿ ತೇ||

ನಿತ್ಯವೂ ಅತಿಥಿಗಳಿಗೆ ಉಳಿಯಲು ಅನುಕೂಲಮಾಡಿಕೊಡುವ,
ನಿತ್ಯವೂ ಅಸೂಯಾರಹಿತರಾಗಿರುವ ಮತ್ತು ನಿತ್ಯವೂ
ಸ್ವಾಧ್ಯಾಯಶೀಲರಾಗಿರುವವರು ಕಷ್ಟಗಳಿಂದ ಪಾರಾಗುತ್ತಾರೆ.

12111005a ಮಾತಾಪಿತ್ರೋಶ್ಚ ಯೇ ವೃತ್ತಿಂ ವರ್ತಂತೇ ಧರ್ಮಕೋವಿದಾಃ|
12111005c ವರ್ಜಯಂತಿ ದಿವಾಸ್ವಪ್ನಂ ದುರ್ಗಾಣ್ಯತಿತರಂತಿ ತೇ||

---

388 ದಂಭಾನ್ನಾಚರಂತಿ (ಭಾರತ ದರ್ಶನ).

389 ಸಂಯತಾ (ಭಾರತ ದರ್ಶನ).

390 ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ:
ಪ್ರತ್ಯಾಹುರ್ನೋಚ್ಯಮಾನಾ ಯೇ ನ ಹಿಂಸಂತಿ ಚ ಹಿಂಸಿತಾಃ| ಪ್ರಯಚ್ಛಂತಿ ನ ಯಾಚಂತೇ ದುರ್ಗಾಣ್ಯತಿತರಂತಿ ತೇ|| (ಭಾರತ ದರ್ಶನ).

ಮಾತಾಪಿತೃಗಳ ಸೇವೆಯಲ್ಲಿ ನಿರತರಾದ ಮತ್ತು ಹಗಲು ನಿದ್ದೆಯನ್ನು ಬಿಟ್ಟಿರುವ ಧರ್ಮಕೋವಿದರು ಕಷ್ಟಗಳಿಂದ ಪಾರಾಗುತ್ತಾರೆ.

12111006a ಸ್ವೇಷು ದಾರೇಷು ವರ್ತಂತೇ ನ್ಯಾಯವೃತ್ತೇಷ್ವೃತಾವೃತೌ|
12111006c ಅಗ್ನಿಹೋತ್ರಪರಾಃ ಸಂತೋ ದುರ್ಗಾಣ್ಯತಿತರಂತಿ ತೇ||

ತಮ್ಮ ಪತ್ನಿಯರಲ್ಲಿ ಮಾತ್ರ ದೇಹಸಂಬಂಧವನ್ನಿಟ್ಟುಕೊಂಡಿರುವ, ನ್ಯಾಯವೃತ್ತಿಯಲ್ಲಿಯೇ ತೊಡಗಿರುವ ಮತ್ತು ಅಗ್ನಿಹೋತ್ರಪರರಾದ ಸಂತರು ಕಷ್ಟಗಳಿಂದ ಪಾರಾಗುತ್ತಾರೆ.

12111007a ಯೇ ನ ಲೋಭಾನ್ನಯಂತ್ಯರ್ಥಾನ್ರಾಜಾನೋ ರಜಸಾವೃತಾಃ|
12111007c ವಿಷಯಾನ್ ಪರಿರಕ್ಷಂತೋ ದುರ್ಗಾಣ್ಯತಿತರಂತಿ ತೇ||

ರಜೋಗುಣ ಸಂಪನ್ನರಾದ, ಲೋಭದಿಂದ ಪ್ರಜೆಗಳ ಧನವನ್ನು ಅಪಹರಿಸದ ಮತ್ತು ರಾಜ್ಯವನ್ನು ಎಲ್ಲ ಕಡೆಗಳಿಂದ ಸಂರಕ್ಷಿಸುವ ರಾಜರು ಕಷ್ಟಗಳಿಂದ ಪಾರಾಗುತ್ತಾರೆ.

12111008a ಆಹವೇಷು ಚ ಯೇ ಶೂರಾಸ್ತ್ಯಕ್ತ್ವಾ ಮರಣಜಂ ಭಯಮ್|
12111008c ಧರ್ಮೇಣ ಜಯಮಿಚ್ಚಂತೋ ದುರ್ಗಾಣ್ಯತಿತರಂತಿ ತೇ||

ಯುದ್ಧದಲ್ಲಾಗುವ ಮರಣಸಂಬಂಧೀ ಭಯವನ್ನು ತೊರೆದು ಧರ್ಮದಿಂದ ಜಯವನ್ನು ಬಯಸುವ ಶೂರರು ಕಷ್ಟಗಳಿಂದ ಪಾರಾಗುತ್ತಾರೆ.

12111009a ಯೇ ಪಾಪಾನಿ ನ ಕುರ್ವಂತಿ ಕರ್ಮಣಾ ಮನಸಾ ಗಿರಾ|
12111009c ನಿಕ್ಷಿಪ್ತದಂಡಾ ಭೂತೇಷು ದುರ್ಗಾಣ್ಯತಿತರಂತಿ ತೇ||

ಕರ್ಮಗಳಿಂದಾಗಲೀ ಮನಸ್ಸಿನಲ್ಲಿಯಾಗಲೀ ಅಥವಾ

ಮಾತಿನಲ್ಲಿಯಾಗಲೀ ಪಾಪಗಳನ್ನಿಸಗದ ಮತ್ತು ಯಾವ ಜೀವಿಗಳನ್ನೂ ದಂಡಿಸದವರು ಕಷ್ಟಗಳಿಂದ ಪಾರಾಗುತ್ತಾರೆ.

12111010a ಯೇ ವದಂತೀಹ ಸತ್ಯಾನಿ ಪ್ರಾಣತ್ಯಾಗೇಽಪ್ಯುಪಸ್ಥಿತೇ|
12111010c ಪ್ರಮಾಣಭೂತಾ ಭೂತಾನಾಂ ದುರ್ಗಾಣ್ಯತಿತರಂತಿ ತೇ||

ಪ್ರಾಣತ್ಯಾಗದ ಸಮಯದಲ್ಲಿಯೂ ಸತ್ಯವನ್ನೇ ಹೇಳುವ ಮತ್ತು ಎಲ್ಲ ಭೂತಗಳಿಗೂ ಪ್ರಮಾಣಭೂತರಾಗಿರುವವರು ಕಷ್ಟಗಳಿಂದ ಪಾರಾಗುತ್ತಾರೆ.

12111011a ಅನಧ್ಯಾಯೇಷು ಯೇ ವಿಪ್ರಾಃ ಸ್ವಾಧ್ಯಾಯಂ ನೈವ ಕುರ್ವತೇ|
12111011c ತಪೋನಿತ್ಯಾಃ ಸುತಪಸೋ ದುರ್ಗಾಣ್ಯತಿತರಂತಿ ತೇ||

ಅನಧ್ಯಾಯದ ದಿನಗಳಲ್ಲಿ ಸ್ವಾಧ್ಯಾಯವನ್ನು ಮಾಡದಿರುವ ತಪೋನಿತ್ಯ ಉತ್ತಮ ತಪಸ್ವೀ ವಿಪ್ರರು ಕಷ್ಟಗಳಿಂದ ಪಾರಾಗುತ್ತಾರೆ.

12111012a ಕರ್ಮಾಣ್ಯಕುಹಕಾರ್ಥಾನಿ ಯೇಷಾಂ ವಾಚಶ್ಚ ಸೂನೃತಾಃ|
12111012c ಯೇಷಾಮರ್ಥಾಶ್ಚ ಸಾಧ್ವರ್ಥಾ ದುರ್ಗಾಣ್ಯತಿತರಂತಿ ತೇ||

ತೋರಿಸಿಕೊಳ್ಳಲು ಮಾತ್ರ ಕರ್ಮಗಳನ್ನು ಮಾಡದಿರುವ, ಸುಮಧುರವಾಗಿ ಮಾತನಾಡುವ, ಐಶ್ವರ್ಯವನ್ನು ಸತ್ಕಾರ್ಯಗಳಿಗಾಗಿಯೇ ಮೀಸಲಾಗಿರುವವರು ಕಷ್ಟಗಳಿಂದ ಪಾರಾಗುತ್ತಾರೆ.

12111013a ಯೇ ತಪಶ್ಚ ತಪಸ್ಯಂತಿ ಕೌಮಾರಬ್ರಹ್ಮಚಾರಿಣಃ|
12111013c ವಿದ್ಯಾವೇದವ್ರತಸ್ನಾತಾ ದುರ್ಗಾಣ್ಯತಿತರಂತಿ ತೇ||

ತಪಸ್ಸನ್ನು ತಪಿಸುವ, ಕೌಮಾರ್ಯದಲ್ಲಿ ಬ್ರಹ್ಮಚಾರಿಗಳಾಗಿರುವ,

ವಿದ್ಯಾವೇದಗಳನ್ನು ಪೂರೈಸಿ ಸ್ನಾತಕರಾಗುವವರು ಕಷ್ಟಗಳಿಂದ ಪಾರಾಗುತ್ತಾರೆ.

12111014a ಯೇ ಚ ಸಂಶಾಂತರಜಸಃ ಸಂಶಾಂತತಮಸಶ್ಚ ಯೇ|
12111014c ಸತ್ಯೇ ಸ್ಥಿತಾ ಮಹಾತ್ಮಾನೋ ದುರ್ಗಾಣ್ಯತಿತರಂತಿ ತೇ||

ರಜೋ-ತಮೋಗುಣಗಳು ಶಾಂತವಾಗಿರುವ ಮತ್ತು ಸತ್ಯದಲ್ಲಿ ಸ್ಥಿತರಾಗಿರುವ ಮಹಾತ್ಮರು ಕಷ್ಟಗಳಿಂದ ಪಾರಾಗುತ್ತಾರೆ.

12111015a ಯೇಷಾಂ ನ ಕಶ್ಚಿತ್ತ್ರಸತಿ ತ್ರಸಂತಿ ನ ಚ ಕಸ್ಯ ಚಿತ್|
12111015c ಯೇಷಾಮಾತ್ಮಸಮೋ ಲೋಕೋ ದುರ್ಗಾಣ್ಯತಿತರಂತಿ ತೇ||

ಯಾರಿಂದ ಯಾರಿಗೂ ಯಾವ ವಿಧದ ಭಯವೂ ಆಗುವುದಿಲ್ಲವೋ, ಯಾರು ಯಾರಿಗೂ ಭಯಪಡುವುದಿಲ್ಲವೋ, ಯಾರ ದೃಷ್ಟಿಯಲ್ಲಿ ಈ ಸಕಲಜಗತ್ತು ತನ್ನ ಆತ್ಮಕ್ಕೇ ಸಮಾನವಾಗಿರುವುದೋ, ಜಗತ್ತಿನ ಸಮಸ್ತಪ್ರಾಣಿಗಳ ಸುಖ-ದುಃಖಗಳನ್ನೂ ತಮ್ಮವೆಂದೇ ಭಾವಿಸುವರೋ ಅಂಥವರು ಕಷ್ಟಗಳಿಂದ ಪಾರಾಗುತ್ತಾರೆ.

12111016a ಪರಶ್ರಿಯಾ ನ ತಪ್ಯಂತೇ ಯೇ ಸಂತಃ ಪುರುಷರ್ಷಭಾಃ|
12111016c ಗ್ರಾಮ್ಯಾದನ್ನಾನ್ನಿವೃತ್ತಾಶ್ಚ ದುರ್ಗಾಣ್ಯತಿತರಂತಿ ತೇ||

ಇತರರ ಸಂಪತ್ತನ್ನು ನೋಡಿ ಪರಿತಪಿಸದಿರುವ, ಮತ್ತು ಗ್ರಾಮ್ಯ ವಿಷಯ ಭೋಗಗಳಿಂದ ನಿವೃತ್ತರಾಗಿರುವ ಸಂತ ಪುರುಷರ್ಷಭರು ಕಷ್ಟಗಳಿಂದ ಪಾರಾಗುತ್ತಾರೆ.

12111017a ಸರ್ವಾನ್ದೇವಾನ್ನಮಸ್ಯಂತಿ ಸರ್ವಾನ್ ಧರ್ಮಾಂಶ್ಚ ಶೃಣ್ವತೇ|

12111017c ಯೇ ಶ್ರದ್ದಧಾನಾ ದಾಂತಾಶ್ಚ[391] ದುರ್ಗಾಣ್ಯತಿತರಂತಿ ತೇ॥

ಸಕಲ ದೇವತೆಗಳನ್ನೂ ನಮಸ್ಕರಿಸುವ, ಸರ್ವಧರ್ಮಗಳನ್ನೂ ಕೇಳುವ, ಶ್ರದ್ಧಾಸಂಪನ್ನ ಇಂದ್ರಿಯನಿಗ್ರಹಿಗಳು ಕಷ್ಟಗಳಿಂದ ಪಾರಾಗುತ್ತಾರೆ.

12111018a ಯೇ ನ ಮಾನಿತಮಿಚ್ಚಂತಿ ಮಾನಯಂತಿ ಚ ಯೇ ಪರಮ್|
12111018c ಮಾನ್ಯಮಾನಾ ನ ಮನ್ಯಂತೇ ದುರ್ಗಾಣ್ಯತಿತರಂತಿ ತೇ॥

ಇತರರಿಂದ ಸಮ್ಮಾನವನ್ನು ಇಚ್ಛಿಸದ, ಇತರರನ್ನು ಪರಮ ಗೌರವದಿಂದ ಕಾಣುವ, ಮತ್ತು ಗೌರವಾನ್ವಿತರನ್ನು ಗೌರವಿಸುವವರು ಕಷ್ಟಗಳಿಂದ ಪಾರಾಗುತ್ತಾರೆ.

12111019a ಯೇ ಶ್ರಾದ್ಧಾನಿ ಚ ಕುರ್ವಂತಿ ತಿಥ್ಯಾಂ ತಿಥ್ಯಾಂ ಪ್ರಜಾರ್ಥಿನಃ|
12111019c ಸುವಿಶುದ್ಧೇನ ಮನಸಾ ದುರ್ಗಾಣ್ಯತಿತರಂತಿ ತೇ॥

ವಿಶುದ್ಧ ಮನಸ್ಸಿನಿಂದ ತಿಥಿ-ತಿಥಿಗಳಲ್ಲಿ ಶ್ರಾದ್ಧಗಳನ್ನು ಮಾಡುವ ಪ್ರಜಾರ್ಥಿಗಳು ಕಷ್ಟಗಳಿಂದ ಪಾರಾಗುತ್ತಾರೆ.

12111020a ಯೇ ಕ್ರೋಧಂ ನೈವ ಕುರ್ವಂತಿ ಕ್ರುದ್ಧಾನ್ಸಂಶಮಯಂತಿ ಚ|
12111020c ನ ಚ ಕುಪ್ಯಂತಿ ಭೃತ್ಯೇಭ್ಯೋ[392] ದುರ್ಗಾಣ್ಯತಿತರಂತಿ ತೇ॥

ತಮ್ಮ ಕ್ರೋಧವನ್ನು ನಿಯಂತ್ರಿಸಿಕೊಳ್ಳುವ, ಕೋಪಿಷ್ಟರಾದವನ್ನು ಸಮಾಧಾನಗೊಳಿಸುವ, ಸೇವಕರ ಮೇಲೆ ಕೋಪಗೊಳ್ಳದವರು ಕಷ್ಟಗಳಿಂದ ಪಾರಾಗುತ್ತಾರೆ.

---

391 ಶಾಂತಾಶ್ಚ (ಭಾರತ ದರ್ಶನ).

392 ಭೂತೇಭ್ಯೋ (ಭಾರತ ದರ್ಶನ).

12111021a ಮಧು ಮಾಂಸಂ ಚ ಯೇ ನಿತ್ಯಂ ವರ್ಜಯಂತೀಹ ಮಾನವಾಃ|
12111021c ಜನ್ಮಪ್ರಭೃತಿ ಮದ್ಯಂ ಚ ದುರ್ಗಾಣ್ಯತಿತರಂತಿ ತೇ||

ಜನ್ಮಪ್ರಭೃತಿ ಮಧು-ಮಾಂಸ-ಮದ್ಯಗಳನ್ನು ವರ್ಜಿಸುವ ಮಾನವರು ಕಷ್ಟಗಳಿಂದ ಪಾರಾಗುತ್ತಾರೆ.

12111022a ಯಾತ್ರಾರ್ಥಂ ಭೋಜನಂ ಯೇಷಾಂ ಸಂತಾನಾರ್ಥಂ ಚ ಮೈಥುನಮ್|
12111022c ವಾಕ್ಸತ್ಯವಚನಾರ್ಥಾಯ ದುರ್ಗಾಣ್ಯತಿತರಂತಿ ತೇ||

ಜೀವನಯಾತ್ರೆಗೋಸ್ಕರ ಮಾತ್ರ ಭೋಜನವನ್ನು ಮಾಡುವ, ಸಂತಾನಾರ್ಥಕ್ಕಾಗಿಯೇ ಸ್ತ್ರೀಸಮಾಗಮವನ್ನು ಮಾಡುವ, ಸತ್ಯವಚನಾರ್ಥಕ್ಕಾಗಿಯೇ ಮಾತನಾಡುವವರು ಕಷ್ಟಗಳಿಂದ ಪಾರಾಗುತ್ತಾರೆ.

12111023a ಈಶ್ವರಂ ಸರ್ವಭೂತಾನಾಂ ಜಗತಃ ಪ್ರಭವಾಪ್ಯಯಮ್|
12111023c ಭಕ್ತಾ ನಾರಾಯಣಂ ಯೇ ಚ ದುರ್ಗಾಣ್ಯತಿತರಂತಿ ತೇ||

ಸರ್ವಭೂತಗಳಿಗೂ ಈಶ್ವರನಾದ ಜಗತ್ತಿನ ಸೃಷ್ಟಿ-ಪಲಯಗಳಿಗೆ ಕಾರಣನಾದ ನಾರಾಯಣನ ಭಕ್ತರು ಕಷ್ಟಗಳಿಂದ ಪಾರಾಗುತ್ತಾರೆ.

12111024a ಯ ಏಷ ರಕ್ತಪದ್ಮಾಕ್ಷಃ ಪೀತವಾಸಾ ಮಹಾಭುಜಃ|
12111024c ಸುಹೃದ್ ಭ್ರಾತಾ ಚ ಮಿತ್ರಂ ಚ ಸಂಬಂಧೀ ಚ ತವಾಚ್ಯುತಃ||

ಅವನೇ ನಿನ್ನ ಸುಹೃದ್ಭ್ರಾತನೂ ಮಿತ್ರನೂ ಸಂಬಂಧಿಯೂ ಆದ ಈ ರಕ್ತಪದ್ಮಾಕ್ಷ ಪೀತವಾಸಸ ಮಹಾಭುಜ ಅಚ್ಯುತ.

12111025a ಯ ಇಮಾನ್ಸಕಲಾಽಲ್ಲೋಕಾಂಶ್ಚರ್ಮವತ್ ಪರಿವೇಷ್ಟಯೇತ್|
12111025c ಇಚ್ಚನ್ ಪ್ರಭುರಚಿಂತ್ಯಾತ್ಮಾ ಗೋವಿಂದಃ ಪುರುಷೋತ್ತಮಃ||

ಈ ಪ್ರಭು ಅಚಿಂತ್ಯಾತ್ಮಾ ಪುರುಷೋತ್ತಮ ಗೋವಿಂದನು ಇಚ್ಛಿಸಿದರೆ ಸಕಲ ಲೋಕಗಳನ್ನೂ ಚರ್ಮದಂತೆ ಹೊದೆದುಕೊಳ್ಳಬಲ್ಲನು.

12111026a ಸ್ಥಿತಃ ಪ್ರಿಯಹಿತೇ ಜಿಷ್ಣೋಃ ಸ ಏಷ ಪುರುಷರ್ಷಭ|
12111026c ರಾಜಂಸ್ತವ ಚ ದುರ್ಧರ್ಷೋ ವೈಕುಂಠಃ ಪುರುಷೋತ್ತಮಃ||

ರಾಜನ್! ಈ ಪುರುಷೋತ್ತಮನು ನಿನ್ನ ಮತ್ತು ಜಿಷ್ಣುವಿನ ಪ್ರಿಯಹಿತದಲ್ಲಿಯೇ ನಿರತನಾಗಿರುವನು. ಇವನು ದುರ್ಧರ್ಷ, ವೈಕುಂಠ ಮತ್ತು ಪುರುಷೋತ್ತಮ.

12111027a ಯ ಏನಂ ಸಂಶ್ರಯಂತೀಹ ಭಕ್ತ್ಯಾ ನಾರಾಯಣಂ ಹರಿಮ್|
12111027c ತೇ ತರಂತೀಹ ದುರ್ಗಾಣಿ ನ ಮೇಽತ್ರಾಸ್ತಿ ವಿಚಾರಣಾ||

ಭಕ್ತಿಯಿಂದ ಹರಿ ನಾರಾಯಣನನ್ನು ಆಶ್ರಯಿಸುವವರು ಕಷ್ಟಗಳಿಂದ ಪಾರಾಗುತ್ತಾರೆ. ಅದರಲ್ಲಿ ವಿಚಾರಿಸಬೇಕಾಗಿಲ್ಲ.

[393]12111028a ದುರ್ಗಾತಿತರಣಂ ಯೇ ಚ ಪಠಂತಿ ಶ್ರಾವಯಂತಿ ಚ|
12111028c ಪಾಠಯಂತಿ ಚ ವಿಪ್ರೇಭ್ಯೋ ದುರ್ಗಾಣ್ಯತಿತರಂತಿ ತೇ||

---

393 ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಮೂರು ಅಧಿಕ ಶ್ಲೋಕಗಳಿವೆ: ಅಸ್ಮಿನ್ನರ್ಪಿತಕರ್ಮಾಣಃ ಸರ್ವಭಾವೇನ ಭಾರತ| ಕೃಷ್ಣೇ ಕಮಲಪತ್ರಾಕ್ಷೇ ದುರ್ಗಾಣ್ಯತಿತರಂತಿ ತೇ|| ಬ್ರಹ್ಮಾಣಂ ಲೋಕಕರ್ತಾರಂ ಯೇ ನಮಸ್ಯಂತಿ ಸತ್ಪತಿಮ್| ಯಷ್ಟವ್ಯಂ ಕ್ರತುಭಿರ್ದೇವಂ ದುರ್ಗಾಣ್ಯತಿತರಂತಿ ತೇ|| ಯಂ ವಿಷ್ಣುರಿಂದ್ರಃ ಶಂಭುಶ್ಚ ಬ್ರಹ್ಮಾ ಲೋಕಪಿತಾಮಹಃ| ಸ್ತುವಂತಿ ವಿವಿಧೈಃ ಸ್ತೋತ್ರೈರ್ದೇವದೇವಂ ಮಹೇಶ್ವರಮ್| ತಮರ್ಚಯಂತಿ ಯೇ ಶಶ್ವದ್ದುರ್ಗಾಣ್ಯತಿತರಂತಿ ತೇ|| (ಗೀತಾ ಪ್ರೆಸ್).

ಈ ದುರ್ಗಾತಿತರಣವನ್ನು ಯಾವ ವಿಪ್ರರು ಓದುತ್ತಾರೋ, ಕೇಳುತ್ತಾರೋ ಮತ್ತು ಓದಿಸುತ್ತಾರೋ ಅವರು ಕಷ್ಟಗಳಿಂದ ಪಾರಾಗುತ್ತಾರೆ.

12111029a ಇತಿ ಕೃತ್ಯಸಮುದ್ದೇಶಃ ಕೀರ್ತಿತಸ್ತೇ ಮಯಾನಘ|
12111029c ಸಂತರೇದ್ಯೇನ ದುರ್ಗಾಣಿ ಪರತ್ರೇಹ ಚ ಮಾನವಃ||

ಅನಘ! ಹೀಗೆ ನಾನು ಕಷ್ಟಗಳಿಂದ ಪಾರಾಗಲು ಮಾಡಬೇಕಾದ ಕರ್ತವ್ಯಗಳ ಕುರಿತು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಇದರಿಂದ ಮಾನವರು ಇಹ-ಪರಗಳೆರಡರಲ್ಲಿಯೂ ಕಷ್ಟಗಳಿಂದ ಪಾರಾಗುತ್ತಾರೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ದುರ್ಗಾತಿತರಣೇ ಏಕಾದಶಾಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ದುರ್ಗಾತಿತರಣ ಎನ್ನುವ ನೂರಾಹನ್ನೊಂದನೇ ಅಧ್ಯಾಯವು.

೧೧೨

ವ್ಯಾಘ್ರ-ಗೋಮಾಯುಸಂವಾದ

ಮನುಷ್ಯರ ಸ್ವಭಾವವನ್ನು ತಿಳಿಯುವ ಬಗೆಗಿನ ವ್ಯಾಘ್ರ-ಗುಳ್ಳೇನರಿಯ ಸಂವಾದಕಥನ (1-86).

12112001 ಯುಧಿಷ್ಠಿರ ಉವಾಚ|
12112001a ಅಸೌಮ್ಯಾಃ ಸೌಮ್ಯರೂಪೇಣ ಸೌಮ್ಯಾಶ್ಚಾಸೌಮ್ಯದರ್ಶಿನಃ|

12112001c ಈದೃಶಾನ್ಪುರುಷಾಂಸ್ತಾತ ಕಥಂ ವಿದ್ಯಾಮಹೇ ವಯಮ್‌||

ಯುಧಿಷ್ಠಿರನು ಹೇಳಿದನು: "ಅಸೌಮ್ಯ ಪುರುಷರು ಸೌಮ್ಯರಾಗಿಯೂ ಸೌಮ್ಯ ಪುರುಷರು ಅಸೌಮ್ಯರಾಗಿಯೂ ಕಾಣಸಿಗುತ್ತಾರೆ. ಹೀಗಿರುವಾಗ ಇವರು ಇಂಥವರೇ ಎಂದು ನಾವು ಹೇಗೆ ತಿಳಿದುಕೊಳ್ಳಬಹುದು?"

12112002 ಭೀಷ್ಮ ಉವಾಚ|
12112002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್‌|
12112002c ವ್ಯಾಘ್ರಗೋಮಾಯುಸಂವಾದಂ ತಂ ನಿಬೋಧ ಯುಧಿಷ್ಠಿರ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ವ್ಯಾಘ್ರ-ಗೋಮಾಯುಗಳ ಸಂವಾದವನ್ನು ಉದಾಹರಿಸುತ್ತಾರೆ. ಅದನ್ನು ಕೇಳು.

12112003a ಪುರಿಕಾಯಾಂ ಪುರಿ ಪುರಾ ಶ್ರೀಮತ್ಯಾಂ ಪೌರಿಕೋ ನೃಪಃ|
12112003c ಪರಹಿಂಸಾರುಚಿಃ ಕ್ರೂರೋ ಬಭೂವ ಪುರುಷಾಧಮಃ||

ಹಿಂದೆ ಪುರಿಕಾ ಎಂಬ ಶ್ರೀಮಂತ ನಗರದಲ್ಲಿ ಪೌರಿಕ ಎಂಬ ನೃಪನಿದ್ದನು. ಪರರನ್ನು ಹಿಂಸಿಸುವುದರಲ್ಲಿಯೇ ಅಭಿರುಚಿಯನ್ನಿಟ್ಟುಕೊಂಡಿದ್ದ ಆ ಪುರುಷಾಧಮನು ಕ್ರೂರನಾಗಿದ್ದನು.

12112004a ಸ ತ್ವಾಯುಷಿ ಪರಿಕ್ಷೀಣೇ ಜಗಾಮಾನೀಪ್ಸಿತಾಂ ಗತಿಮ್‌|
12112004c ಗೋಮಾಯುತ್ವಂ ಚ ಸಂಪ್ರಾಪ್ತೋ ದೂಷಿತಃ ಪೂರ್ವಕರ್ಮಣಾ||

ಅವನ ಆಯಸ್ಸು ಮುಗಿಯಲು ಅವನು ಯಾರೂ ಬಯಸದ ಗತಿಯನ್ನು ಹೊಂದಿದನು. ತನ್ನ ಪೂರ್ವಕರ್ಮಗಳಿಂದ ದೂಷಿತನಾದ ಅವನು ಗುಳ್ಳೇನರಿಯ ಜನ್ಮವನ್ನು ಪಡೆದುಕೊಂಡನು.

12112005a ಸಂಸ್ಮೃತ್ಯ ಪೂರ್ವಜಾತಿಂ ಸ ನಿರ್ವೇದಂ ಪರಮಂ ಗತಃ|
12112005c ನ ಭಕ್ಷಯತಿ ಮಾಂಸಾನಿ ಪರೈರುಪಹೃತಾನ್ಯಪಿ||

ತನ್ನ ಪೂರ್ವಜನ್ಮದ ಕೃತ್ಯಗಳನ್ನು ನೆನಪಿಸಿಕೊಂಡು ಅದು ಪರಮ ಪಶ್ಚಾತ್ತಾಪವನ್ನು ಹೊಂದಿತು. "ಇನ್ನೊಬ್ಬರು ತಂದುಕೊಟ್ಟರೂ ಮಾಂಸವನ್ನು ನಾನು ತಿನ್ನುವುದಿಲ್ಲ" ಎಂದು ಆ ನರಿಯು ಘೋರ ಪ್ರತಿಜ್ಞೆಯನ್ನು ಮಾಡಿತು.

12112006a ಅಹಿಂಸ್ರಃ ಸರ್ವಭೂತೇಷು ಸತ್ಯವಾಕ್ಸುದೃಢವ್ರತಃ|
12112006c ಚಕಾರ ಚ ಯಥಾಕಾಮಮಾಹಾರಂ ಪತಿತೈಃ ಫಲೈಃ||

ಸರ್ವಭೂತಗಳಲ್ಲಿ ಅಹಿಂಸೆಯಿಂದ ವರ್ತಿಸತೊಡಗಿತು. ಸತ್ಯವನ್ನೇ ನುಡಿಯುತ್ತಾ ದೃಢವ್ರತವಾಗಿದ್ದ ಆ ಗುಳ್ಳೇನರಿಯು ತಾವಾಗಿಯೇ ಕೆಳಕ್ಕೆ ಬಿದ್ದ ಫಲಗಳನ್ನು ಮಾತ್ರವೇ ತಿಂದು ಜೀವಿಸತೊಡಗಿತು.

12112007a ಶ್ಮಶಾನೇ ತಸ್ಯ ಚಾವಾಸೋ ಗೋಮಾಯೋಃ ಸಂಮತೋಽಭವತ್|
12112007c ಜನ್ಮಭೂಮ್ಯನುರೋಧಾಚ್ಚ ನಾನ್ಯದ್ವಾಸಮರೋಚಯತ್||

ಶ್ಮಶಾನದಲ್ಲಿ ಹುಟ್ಟಿದ್ದ ಆ ಗುಳ್ಳೇನರಿಗೆ ಅದೇ ವಾಸಸ್ಥಾನವೂ ಆಗಿದ್ದಿತು. ತನ್ನ ಜನ್ಮಭೂಮಿಯನ್ನು ಬಿಟ್ಟು ಬೇರೆ ಎಲ್ಲಿಯೂ ಹೋಗಿ ವಾಸಿಸಲು ಅದಕ್ಕೆ ಇಷ್ಟವಾಗಿರಲಿಲ್ಲ.

12112008a ತಸ್ಯ ಶೌಚಮಮೃಷ್ಯಂತಃ ಸರ್ವೇ ತೇ ಸಹಜಾತಯಃ|
12112008c ಚಾಲಯಂತಿ ಸ್ಮ ತಾಂ ಬುದ್ಧಿಂ ವಚನೈಃ ಪ್ರಶ್ರಯೋತ್ತರೈಃ||

ಆದರೆ ಅದರ ಶೌಚತ್ವವನ್ನು ಸಜಾತೀಯ ನರಿಗಳು ಸಹಿಸಿಕೊಳ್ಳಲಿಲ್ಲ. ಅವು ಪ್ರೇಮಪೂರ್ವಕ ಮಾತುಗಳಿಂದ ಅದರ ಬುದ್ಧಿಯನ್ನು

ಬದಲಾಯಿಸಲು ಪ್ರಯತ್ನಿಸಿದವು.

12112009a ವಸನ್ ಪಿತೃವನೇ ರೌದ್ರೇ ಶೌಚಂ ಲಪ್ಸ್ತುಮಿಚ್ಚಸಿ|
12112009c ಇಯಂ ವಿಪ್ರತಿಪತ್ತಿಸ್ತೇ ಯದಾ ತ್ವಂ ಪಿಶಿತಾಶನಃ||

“ಈ ರೌದ್ರ ಶ್ಮಶಾನದಲ್ಲಿ ವಾಸಿಸುತ್ತಿರುವ ಮತ್ತು ಮಾಂಸಾಹಾರಿಯಾದ ನೀನು ಈ ಮಡಿವಂತಿಕೆಯನ್ನು ನಡೆಸಲು ಬಯಸುತ್ತಿರುವೆ. ಇದು ನಿನ್ನ ಗುಣಕ್ಕೂ ಧರ್ಮಕ್ಕೂ ವಿರುದ್ಧವಾಗಿದೆ.

12112010a ತತ್ಸಮೋ ವಾ ಭವಾಸ್ಮಾಭಿರ್ಭಕ್ಷ್ಯಾನ್ದಾಸ್ಯಾಮಹೇ ವಯಮ್|
12112010c ಭುಂಕ್ಷ್ವ ಶೌಚಂ ಪರಿತ್ಯಜ್ಯ ಯದ್ಧಿ ಭುಕ್ತಂ ತದಸ್ತಿ ತೇ[394]||

ನೀನೂ ನಮ್ಮಂತೆಯೇ ಇರು. ನಾವು ನಿನಗೆ ತಿನ್ನುವುದಕ್ಕೆ ತಂದು ಕೊಡುತ್ತೇವೆ. ಈ ಮಡಿವಂತಿಕೆಯನ್ನು ತ್ಯಜಿಸಿ ನಾವು ತಂದಿದ್ದುದನ್ನು ತಿನ್ನು. ನಮಗೆ ಆಹಾರವಾಗಿದ್ದುದೇ ನಿನಗೂ ಆಗಲಿ.”

12112011a ಇತಿ ತೇಷಾಂ ವಚಃ ಶ್ರುತ್ವಾ ಪ್ರತ್ಯುವಾಚ ಸಮಾಹಿತಃ|
12112011c ಮಧುರೈಃ ಪ್ರಶ್ರಿತೈರ್ವಾಕ್ಯೈರ್ಹೇತುಮದ್ಭಿರನಿಷ್ಠುರೈಃ||

ಅವರ ಈ ಮಾತನ್ನು ಕೇಳಿ ಸಮಾಹಿತವಾಗಿದ್ದ ಆ ನರಿಯು ವಿನಯಭರಿತ ಯುಕ್ತಿಯುಕ್ತ ಮತ್ತು ನಿಷ್ಠುರವಲ್ಲದ ಈ ಮಧುರ ಮಾತುಗಳನ್ನಾಡಿತು:

12112012a ಅಪ್ರಮಾಣಂ ಪ್ರಸೂತಿರ್ಮೇ ಶೀಲತಃ ಕ್ರಿಯತೇ ಕುಲಮ್|
12112012c ಪ್ರಾರ್ಥಯಿಷ್ಯೇ ತು ತತ್ಕರ್ಮ ಯೇನ ವಿಸ್ತೀರ್ಯತೇ ಯಶಃ||

---

394 ತದಾಸ್ತು ತೇ| ಎಂಬ ಪಾಠಾಂತರವಿದೆ (ಭಾರತ ದರ್ಶನ).

“ನಾನು ನರಿಯಾಗಿ ಹುಟ್ಟಿದ ಮಾತ್ರಕ್ಕೆ ಕೆಟ್ಟ ಕರ್ಮಗಳನ್ನು ಮಾಡಬೇಕು ಎನ್ನುವುದಕ್ಕೆ ಪ್ರಮಾಣವೇನೂ ಇಲ್ಲ. ಉತ್ತಮ ಶೀಲದಿಂದ ಕುಲದ ಪ್ರತಿಷ್ಠೆಯು ಹೆಚ್ಚುತ್ತದೆ. ನಾನೂ ಕೂಡ ವಂಶದ ಯಶಸ್ಸನ್ನು ಹೆಚ್ಚಿಸುವ ಕರ್ಮವನ್ನು ಮಾಡಬಯಸುತ್ತೇನೆ.

12112013a ಶ್ಮಶಾನೇ ಯದಿ ವಾಸೋ ಮೇ ಸಮಾಧಿರ್ಮೇ ನಿಶಾಮ್ಯತಾಮ್|
12112013c ಆತ್ಮಾ ಫಲತಿ ಕರ್ಮಾಣಿ ನಾಶ್ರಮೋ ಧರ್ಮಲಕ್ಷಣಮ್||

ಶ್ಮಶಾನದಲ್ಲಿದ್ದುಕೊಂಡು ನಾನು ಈ ಮಡಿವಂತಿಕೆಯನ್ನು ಏಕೆ ಆಚರಿಸುತ್ತಿದ್ದೇನೆ ಎನ್ನುವುದಕ್ಕೆ ಈ ಸಮಾಧಾನವನ್ನು ಕೇಳಿ. ಆತ್ಮವೇ ಶುಭಕರ್ಮಗಳನ್ನು ಮಾಡಲು ಪ್ರೇರೇಪಿಸುತ್ತದೆ. ಕೇವಲ ಆಶ್ರಮವಾಸವೇ ಧರ್ಮಕ್ಕೆ ಕಾರಣವಾಗುವುದಿಲ್ಲ[395].

12112014a ಆಶ್ರಮೇ ಯೋ ದ್ವಿಜಂ ಹನ್ಯಾದ್ಗಾಂ ವಾ ದದ್ಯಾದನಾಶ್ರಮೇ|
12112014c ಕಿಂ ನು ತತ್ಪಾತಕಂ ನ ಸ್ಯಾತ್ತದ್ವಾ ದತ್ತಂ ವೃಥಾ ಭವೇತ್||

ಆಶ್ರಮದಲ್ಲಿ ದ್ವಿಜನನ್ನು ಕೊಂದರೆ ಅದು ಪಾತಕವಾಗುವುದಿಲ್ಲವೇ? ಮತ್ತು ಆಶ್ರಮದ ಹೊರಗೆ ಗೋವನ್ನು ದಾನಮಾಡಿದರೆ ಅದು ವ್ಯರ್ಥವಾಗುತ್ತದೆಯೇ?

12112015a ಭವಂತಃ ಸರ್ವಲೋಭೇನ[396] ಕೇವಲಂ ಭಕ್ಷಣೇ ರತಾಃ|

---

[395] ಶುಭಕರ್ಮಗಳನ್ನು ಮಾಡಲು ಸ್ಥಳವು ಮುಖ್ಯವಲ್ಲ, ಎಲ್ಲಿ ಬೇಕಾದರೂ ಶುಭಕರ್ಮಗಳನ್ನು ಮಾಡಬಹುದು. ಶುಭಕರ್ಮಗಳಿಗೆ ಪ್ರೇರಕವು ಆತ್ಮವೇ ಹೊರತು ವಾಸಭೂಮಿಯಲ್ಲ (ಭಾರತ ದರ್ಶನ).

[396] ಸ್ವಾರ್ಥಲೋಭೇನ ಎಂಬ ಪಾಠಾಂತರವಿದೆ (ಭಾರತ ದರ್ಶನ).

12112015c ಅನುಬಂಧೇ ತು ಯೇ[397] ದೋಷಾಸ್ತಾನ್ನ ಪಶ್ಯಂತಿ ಮೋಹಿತಾಃ||

ನೀವೆಲ್ಲರೂ ಕೇವಲ ಲೋಭದಿಂದ ತಿನ್ನುವುದರಲ್ಲಿಯೇ ನಿರತರಾಗಿದ್ದೀರಿ. ಮೋಹಿತರಾದ ನೀವು ಇದರಿಂದಾಗಿ ಉಂಟಾಗುವ ದೋಷಗಳನ್ನು ಕಾಣುತ್ತಿಲ್ಲ.

12112016a ಅಪ್ರತ್ಯಯಕೃತಾಂ ಗರ್ಹ್ಯಾಮರ್ಥಾಪನಯದೂಷಿತಾಮ್|
12112016c ಇಹ ಚಾಮುತ್ರ ಚಾನಿಷ್ಟಾಂ ತಸ್ಮಾದ್ವೃತ್ತಿಂ ನ ರೋಚಯೇ||

ನಿಮ್ಮ ಜೀವನವು ದುಃಖಮಯವಾಗಿದೆ. ಅಜ್ಞಾನಕೃತವಾಗಿದೆ. ನಿಂದನೀಯವೂ ಆಗಿದೆ. ಧರ್ಮಹಾನಿಗೆ ಕಾರಣವಾಗಿದೆ ಮತ್ತು ದೂಷಿತವಾಗಿದೆ. ಇಹಲೋಕ-ಪರಲೋಕಗಳೆರಡರಲ್ಲೂ ಅನಿಷ್ಟವನ್ನೇ ನೀಡುವಂಥಹದಾಗಿದೆ. ಆದುದರಿಂದ ನಿಮ್ಮ ವೃತ್ತಿಯು ನನಗೆ ರುಚಿಸುವುದಿಲ್ಲ.”

12112017a ತಂ ಶುಚಿಂ ಪಂಡಿತಂ ಮತ್ವಾ ಶಾರ್ದೂಲಃ ಖ್ಯಾತವಿಕ್ರಮಃ|
12112017c ಕೃತ್ವಾತ್ಮಸದೃಶಾಂ ಪೂಜಾಂ ಸಾಚಿವ್ಯೇಽವರ್ಧಯತ್ಸ್ವಯಮ್||

ಆ ನರಿಯು ಮಡಿ ಪಂಡಿತನೆಂದು ಭಾವಿಸಿ ಖ್ಯಾತವಿಕ್ರಮ ಶಾರ್ದೂಲವೊಂದು ತನಗೆ ತಕ್ಕುದಾದ ಪೂಜೆಯನ್ನು ಸಲ್ಲಿಸಿ ಆ ನರಿಯನ್ನು ತನ್ನ ಸಚಿವನನ್ನಾಗಿ ನಿಯಮಿಸಿಕೊಂಡು ಹೇಳಿತುಃ

12112018a ಸೌಮ್ಯ ವಿಜ್ಞಾತರೂಪಸ್ತ್ವಂ ಗಚ್ಚ ಯಾತ್ರಾಂ ಮಯಾ ಸಹ|
12112018c ವ್ರಿಯಂತಾಮೀಪ್ಸಿತಾ ಭೋಗಾಃ ಪರಿಹಾರ್ಯಾಶ್ಚ ಪುಷ್ಕಲಾಃ||

“ಸೌಮ್ಯ! ನಿನ್ನ ರೂಪವನ್ನು ತಿಳಿದುಕೊಂಡಿದ್ದೇನೆ. ನನ್ನೊಡನೆ ಬಾ.

---

397 ತ್ರಯೋ ಎಂಬ ಪಾಠಾಂತರವಿದೆ (ಭಾರತ ದರ್ಶನ).

ನಿನಗೆ ಇಷ್ಟವಾದಂತೆ ಯಥೇಚ್ಛ ಭೋಗಗಳನ್ನು ಅನುಭವಿಸು. ನಿನಗೆ ಇಷ್ಟವಾಗಿರದೇ ಇದ್ದುದನ್ನು ಬಿಟ್ಟು ಬಿಡು.

12112019a ತೀಕ್ಷ್ಣಾ ವಯಮಿತಿ ಖ್ಯಾತಾ ಭವತೋ ಜ್ಞಾಪಯಾಮಹೇ|
12112019c ಮೃದುಪೂರ್ವಂ ಘಾತಿನಸ್ತೇ[398] ಶ್ರೇಯಶ್ಚಾಧಿಗಮಿಷ್ಯತಿ||

ನಾನು ಮಹಾಕ್ರೂರಿ ಎಂದು ಖ್ಯಾತನಾಗಿದ್ದೇನೆ. ಇದನ್ನು ನಿನ್ನ ಜ್ಞಾಪಕಕ್ಕೆ ತರುತ್ತಿದ್ದೇನೆ. ಘಾತಿಯನ್ನುಂಟುಮಾಡದೇ ಮೃದುಪೂರ್ವಕವಾಗಿದ್ದರೆ ನೀನು ಶ್ರೇಯಸ್ಸನ್ನು ಪಡೆಯುತ್ತೀಯೆ.”

12112020a ಅಥ ಸಂಪೂಜ್ಯ ತದ್ವಾಕ್ಯಂ ಮೃಗೇಂದ್ರಸ್ಯ ಮಹಾತ್ಮನಃ|
12112020c ಗೋಮಾಯುಃ ಪ್ರಶ್ರಿತಂ ವಾಕ್ಯಂ ಬಭಾಷೇ ಕಿಂ ಚಿದಾನತಃ||

ಮಹಾತ್ಮ ಮೃಗೇಂದ್ರನ ಆ ಮಾತನ್ನು ಗೌರವಿಸಿ ಗುಳ್ಳೇನರಿಯು ತಲೆಯನ್ನು ತಗ್ಗಿಸಿಕೊಂಡು ವಿನಯಯುಕ್ತವಾದ ಈ ಮಾತನ್ನಾಡಿತು:

12112021a ಸದೃಶಂ ಮೃಗರಾಜ್ಯೈತತ್ತವ ವಾಕ್ಯಂ ಮದಂತರೇ|
12112021c ಯತ್ಸಹಾಯಾನ್ಮೃಗಯಸೇ ಧರ್ಮಾರ್ಥಕುಶಲಾನ್ಶುಚೀನ್||

“ಮೃಗರಾಜ! ನನ್ನ ಕುರಿತು ನೀನಾಡಿದ ಮಾತು ನಿನಗೆ ತಕ್ಕುದಾಗಿಯೇ ಇದೆ. ಧರ್ಮಾರ್ಥಕುಶಲರಾದ ಮತ್ತು ಶುಚಿರಾದ ಮಂತ್ರಿಗಳನ್ನು ಹುಡುಕುವುದು ಉಚಿತವಾಗಿಯೇ ಇದೆ.

12112022a ನ ಶಕ್ಯಮನಮಾತ್ಯೇನ ಮಹತ್ತ್ವಮನುಶಾಸಿತುಮ್|
12112022c ದುಷ್ಟಾಮಾತ್ಯೇನ ವಾ ವೀರ ಶರೀರಪರಿಪಂಥಿನಾ||

---

[398] ಹಿತಂ ಚೈವ ಎಂಬ ಪಾಠಾಂತರವಿದೆ (ಭಾರತ ದರ್ಶನ).

ವೀರ! ಮಹತ್ತರವಾದ ಈ ಕಾಡನ್ನು ಮಂತ್ರಿಯಿಲ್ಲದೇ
ಶಾಸನಮಾಡಲು ಶಕ್ಯವಿಲ್ಲ. ರಾಜನಿಗೇ ಶತ್ರುವಿನಂತಿರುವ ದುಷ್ಟ
ಅಮಾತ್ಯನಿಂದಲೂ ಇದು ಸಾಧ್ಯವಾಗುವುದಿಲ್ಲ.

12112023a ಸಹಾಯಾನನುರಕ್ತಾಂಸ್ತು ಯತೇತಾನುಪಸಂಹಿತಾನ್[399]|
12112023c ಪರಸ್ಪರಮಸಂಘುಷ್ಟಾನ್ವಿಜಿಗೀಷೂನಲೋಲುಪಾನ್||
12112024a ತಾನತೀತೋಪಧಾನ್ ಪ್ರಾಜ್ಞಾನ್ ಹಿತೇ ಯುಕ್ತಾನ್ಮನಸ್ವಿನಃ|
12112024c ಪೂಜಯೇಥಾ ಮಹಾಭಾಗಾನ್ಯಥಾಚಾರ್ಯಾನ್ಯಥಾ ಪಿತೄನ್||

ಮಹಾಭಾಗ! ನಿನ್ನಲ್ಲಿ ಅನುರಕ್ತರಾಗಿರುವ, ಪ್ರಯತ್ನಶೀಲರಾದ,
ಏಕಾಗ್ರಚಿತ್ತರಾದ, ಪಕ್ಷ-ಪ್ರತಿಪಕ್ಷಗಳ ಪರಸ್ಪರ ಸಂಪರ್ಕವಿಲ್ಲದಿರುವ,
ನಿನ್ನ ವಿಜಯಾಭಿಲಾಷಿಗಳಾಗಿರುವ, ಲೋಲುಪರಲ್ಲದ,
ವಂಚನಾರಹಿತರಾಗಿರುವ, ನಿನ್ನ ಹಿತದಲ್ಲಿಯೇ ನಿರತರಾಗಿರುವ ಪ್ರಾಜ್ಞ,
ಮನಸ್ವೀ ಸಚಿವರನ್ನು ನೀನು ಆಚಾರ್ಯರನ್ನು ಅಥವಾ ಪಿತೃಗಳನ್ನು
ಪೂಜಿಸುವಂತೆ ಪೂಜಿಸಬೇಕು.

12112025a ನ ತ್ವೇವಂ ಮಮ ಸಂತೋಷಾದ್ಯೋಚತೇಽನ್ಯನ್ಮೃಗಾಧಿಪ|
12112025c ನ ಕಾಮಯೇ ಸುಖಾನ್ ಭೋಗಾನ್ಕೈಶ್ವರ್ಯಂ ವಾ ತ್ವದಾಶ್ರಯಮ್||

ಮೃಗಾಧಿಪ! ಸಂತೋಷವನ್ನಲ್ಲದೇ ಬೇರೆ ಯಾವುದನ್ನೂ ನನ್ನ
ಮನಸ್ಸು ಬಯಸುವುದಿಲ್ಲ. ಸುಖಗಳನ್ನಾಗಲೀ, ಅವುಗಳ
ಆಶ್ರಯಗಳಾದ ಭೋಗ-ಐಶ್ವರ್ಯಗಳನ್ನಾಗಲೀ ಆಶಿಸುವುದಿಲ್ಲ.

12112026a ನ ಯೋಕ್ಷ್ಯತಿ ಹಿ ಮೇ ಶೀಲಂ ತವ ಭೃತ್ಯೈಃ ಪುರಾತನೈಃ|

---

399 ನಯಜ್ಞಾನುಪಸಂಹಿತಾನ್| ಎಂಬ ಪಾಠಾಂತರವಿದೆ (ಭಾರತ ದರ್ಶನ).

12112026c ತೇ ತ್ವಾಂ ವಿಭೇದಯಿಷ್ಯಂತಿ ದುಃಖಶೀಲಾ[400] ಮದಂತರೇ||

ನಿನ್ನ ಹಿಂದಿನ ಸೇವಕರೊಡನೆ ನನ್ನ ಶೀಲವು ಹೊಂದಿಕೊಳ್ಳುವುದಿಲ್ಲ. ದುಃಖಶೀಲರಾದ ಅವರು ನನ್ನ ಮತ್ತು ನಿನ್ನ ವಿಷಯದಲ್ಲಿ ಭೇದವನ್ನುಂಟುಮಾಡುತ್ತಾರೆ.

12112027a ಸಂಶ್ರಯಃ ಶ್ಲಾಘನೀಯಸ್ತ್ವಮನ್ಯೇಷಾಮಪಿ ಭಾಸ್ವತಾಮ್|
12112027c ಕೃತಾತ್ಮಾ ಸುಮಹಾಭಾಗಃ ಪಾಪಕೇಷ್ವಪ್ಯದಾರುಣಃ||

ಕೃತಾತ್ಮನೂ, ಮಹಾಭಾಗನೂ, ಪಾಪಿಗಳಿಗೂ ದಯಾಪರನೂ ಆಗಿರುವ ನೀನು ನಿನ್ನನ್ನು ಶ್ಲಾಘಿಸುವ ಬಲಿಷ್ಠ ಪ್ರಾಣಿಗಳಿಗೂ ಆಶ್ರಯದಾತನಾಗಿರುವೆ.

12112028a ದೀರ್ಘದರ್ಶೀ ಮಹೋತ್ಸಾಹಃ ಸ್ಥೂಲಲಕ್ಷ್ಯೋ ಮಹಾಬಲಃ|
12112028c ಕೃತೀ ಚಾಮೋಘಕರ್ತಾಸಿ ಭಾವ್ಯಶ್ಚ[401] ಸಮಲಂಕೃತಃ||

ನೀನು ದೀರ್ಘದರ್ಶೀ. ಮಹಾ ಉತ್ಸಾಹವುಳ್ಳವನು. ಸ್ಪಷ್ಟ ಉದ್ದೇಶವನ್ನಿಟ್ಟುಕೊಂಡಿರುವೆ. ಮಹಾಬಲಶಾಲಿಯಾಗಿರುವೆ. ಅಮೋಘ ಕಾರ್ಯಗಳನ್ನು ಮಾಡುವವನು. ಉತ್ತಮ ಭಾವಗಳಿಂದ ಸಮಲಂಕೃತನಾಗಿರುವೆ.

12112029a ಕಿಂ ತು ಸ್ವೇನಾಸ್ಮಿ ಸಂತುಷ್ಟೋ ದುಃಖಾ ವೃತ್ತಿರನುಷ್ಠಿತಾ|
12112029c ಸೇವಾಯಾಶ್ಚಾಪಿ ನಾಭಿಜ್ಞಃ ಸ್ವಚ್ಛಂದೇನ ವನೇಚರಃ||

ನಾನಾದರೋ ಸಂತುಷ್ಟನಾಗಿರುವೆನು. ದುಃಖಕರ ವೃತ್ತಿಯನ್ನು

---

400 ದುಃಶೀಲಾಶ್ಚ ಎಂಬ ಪಾಠಾಂತರವಿದೆ (ಭಾರತ ದರ್ಶನ).

401 ಭಾಗ್ಯಶ್ಚ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಕೈಗೊಂಡಿದ್ದೇನೆ. ಸೇವೆಮಾಡುವುದನ್ನೂ ನಾನು ತಿಳಿದಿಲ್ಲ. ಸ್ವಚ್ಛಂದ ವನಚರನು ನಾನು.

12112030a ರಾಜೋಪಕ್ರೋಶದೋಷಾಶ್ಚ ಸರ್ವೇ ಸಂಶ್ರಯವಾಸಿನಾಮ್|
12112030c ವನಚರ್ಯಾ[402] ಚ ನಿಃಸಂಗಾ ನಿರ್ಭಯಾ ನಿರವಗ್ರಹಾ||

ರಾಜಾಶ್ರಯದಲ್ಲಿರುವವರಿಗೆ ರಾಜನ ಕೋಪಕ್ಕೆ ಒಳಗಾಗುವ ಸರ್ವ ದೋಷಗಳೂ ಇರುತ್ತವೆ. ನಾನಾದರೋ ನಿಃಸಂಗ, ನಿರ್ಭಯ ಮತ್ತು ನಿರವಗ್ರಹ ವನಚರನು.

12112031a ನೃಪೇಣಾಹೂಯಮಾನಸ್ಯ ಯತ್ತಿಷ್ಠತಿ ಭಯಂ ಹೃದಿ|
12112031c ನ ತತ್ತಿಷ್ಠತಿ ತುಷ್ಟಾನಾಂ ವನೇ ಮೂಲಫಲಾಶಿನಾಮ್||

ನೃಪನು ಕರೆದಾಗ ಹೃದಯದಲ್ಲಿ ಯಾವ ಭಯವಿರುವುದೋ ಆ ಭಯವು ವನದಲ್ಲಿಯ ಫಲ-ಮೂಲಗಳನ್ನು ತಿಂದು ತೃಪ್ತರಾಗಿರುವವರಿಗೆ ಇರುವುದಿಲ್ಲ.

12112032a ಪಾನೀಯಂ ವಾ ನಿರಾಯಾಸಂ ಸ್ವಾದ್ವನ್ನಂ ವಾ ಭಯೋತ್ತರಮ್|
12112032c ವಿಚಾರ್ಯ ಖಲು ಪಶ್ಯಾಮಿ ತತ್ಸುಖಂ ಯತ್ರ ನಿರ್ವೃತಿಃ||

ನಿರಾಯಾಸವಾಗಿ ದೊರೆಯುವ ನೀರು ಅಥವಾ ಭಯವನ್ನುಂಟುಮಡುವ ಸ್ವಾದಿಷ್ಟ ಭೋಜನ ಇವೆರಡರ ಕುರಿತು ವಿಚಾರಿಸಿದರೆ ಯಾವುದೇ ವಿಧವಾದ ಭಯವಿಲ್ಲದಿರುವುದರಲ್ಲಿ ಯೋಗ್ಯ ಸುಖವೆಂದು ನಾನು ತಿಳಿದಿರುತ್ತೇನೆ.

12112033a ಅಪರಾಧ್ಯೈರ್ನ ತಾವಂತೋ ಭೃತ್ಯಾಃ ಶಿಷ್ಟಾ ನರಾಧಿಪೈಃ|

---

[402] ವ್ರತಚರ್ಯಾ ಎಂಬ ಪಾಠಾಂತರವಿದೆ (ಭಾರತ ದರ್ಶನ).

12112033c ಉಪಘಾತ್ಯೈರ್ಯಥಾ ಭೃತ್ಯಾ ದೂಷಿತಾ ನಿಧನಂ ಗತಾಃ||

ನರಾಧಿಪರು ಅಪರಾಧದ ಕಾರಣದಿಂದ ತಮ್ಮ ಸೇವಕರನ್ನು ದಂಡಿಸುವುದಿಲ್ಲ. ಕಾರ್ಯದಲ್ಲಿ ಅಸಮರ್ಥರಾಗಿರುವುದರಿಂದ ಸೇವಕರು ನಿಧನಹೊಂದುತ್ತಾರೆ.

12112034a ಯದಿ ತ್ವೇತನ್ಮಯಾ ಕಾರ್ಯಂ ಮೃಗೇಂದ್ರೋ ಯದಿ ಮನ್ಯತೇ|
12112034c ಸಮಯಂ ಕೃತಮಿಚ್ಚಾಮಿ ವರ್ತಿತವ್ಯಂ ಯಥಾ ಮಯಿ||

ಮೃಗೇಂದ್ರ! ನಾನು ನಿನ್ನ ಈ ಕಾರ್ಯವನ್ನು ಮಾಡಬೇಕೆಂದು ನೀನು ಇಚ್ಛಿಸುವೆಯಾದರೆ ನಿನ್ನೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳಲು ಬಯಸುತ್ತೇನೆ. ಅದರಂತೆ ನೀನು ನನ್ನೊಡನೆ ವ್ಯವಹರಿಸಬೇಕು.

12112035a ಮದೀಯಾ ಮಾನನೀಯಾಸ್ತೇ ಶ್ರೋತವ್ಯಂ ಚ ಹಿತಂ ವಚಃ|
12112035c ಕಲ್ಪಿತಾ ಯಾ ಚ ತೇ ವೃತ್ತಿಃ ಸಾ ಭವೇತ್ ತವ ಸುಸ್ಥಿರಾ||

ನೀನು ನನ್ನವರನ್ನು ಗೌರವಿಸಬೇಕು. ಹಿತವಚನಗಳನ್ನು ಕೇಳಬೇಕು. ನೀನು ನನಗೆ ಯಾವ ವೃತ್ತಿಯನ್ನು ಕಲ್ಪಿಸುತ್ತಿರುವೆಯೋ ಅದು ನಿನ್ನಲ್ಲಿ ಸುಸ್ಥಿರವಾಗಿರಬೇಕು.

12112036a ನ ಮಂತ್ರಯೇಯಮನ್ಯೈಸ್ತೇ ಸಚಿವೈಃ ಸಹ ಕರ್ಹಿ ಚಿತ್|
12112036c ನೀತಿಮಂತಃ ಪರೀಪ್ಸಂತೋ ವೃಥಾ ಬ್ರೂಯುಃ ಪರೇ ಮಯಿ||

ನಿನ್ನ ಇತರ ಮಂತ್ರಿಗಳೊಂದಿಗೆ ನಾನು ಯಾವುದೇ ವಿಷಯದಲ್ಲಿಯೂ ಎಂದೂ ಪರಾಮರ್ಶಿಸುವುದಿಲ್ಲ. ನೀತಿಮಂತರಾದ ಅವರು ಅಸೂಯೆಯಿಂದ ನನ್ನ ಮೇಲೆ ವ್ಯರ್ಥ ಆಪಾದನೆಗಳನ್ನು

ಹೊರಿಸುತ್ತಾರೆ.

12112037a ಏಕ ಏಕೇನ ಸಂಗಮ್ಯ ರಹೋ ಬ್ರೂಯಾಂ ಹಿತಂ ತವ|
12112037c ನ ಚ ತೇ ಜ್ಞಾತಿಕಾರ್ಯೇಷು ಪ್ರಷ್ಟವ್ಯೋಽಹಂ ಹಿತಾಹಿತೇ||

ನಾನು ಏಕಾಕಿಯಾಗಿ ನೀನು ಒಬ್ಬನೇ ಇರುವಾಗ ರಹಸ್ಯದಲ್ಲಿ ನಿನ್ನ ಬಳಿಬಂದು ನಿನಗೆ ಹಿತಮಾತುಗಳನ್ನು ಹೇಳುತ್ತೇನೆ. ನೀನೂ ಕೂಡ ನಿನ್ನ ಜ್ಞಾತಿಬಾಂಧವರ ಹಿತಾಹಿತಗಳ ಕುರಿತು ನನ್ನನ್ನು ಕೇಳಬಾರದು.

12112038a ಮಯಾ ಸಂಮಂತ್ರ್ಯ ಪಶ್ಚಾಚ್ಚ ನ ಹಿಂಸ್ಯಾಃ ಸಚಿವಾಸ್ತ್ವಯಾ|
12112038c ಮದೀಯಾನಾಂ ಚ ಕುಪಿತೋ ಮಾ ತ್ವಂ ದಂಡಂ ನಿಪಾತಯೇಃ||

ನನ್ನಿಂದ ಸಲಹೆಗಳನ್ನು ಪಡೆದನಂತರ ನಿನ್ನ ಇತರ ಮಂತ್ರಿಗಳು ಅಪರಾಧಿಗಳೆಂದು ಕಂಡುಬಂದರೂ ಅವರನ್ನು ಹಿಂಸಿಸಬಾರದು. ಹಾಗೆಯೇ ಕುಪಿತನಾಗಿ ನನ್ನವರನ್ನೂ ದಂಡಿಸಬಾರದು.”

12112039a ಏವಮಸ್ತ್ವಿತಿ ತೇನಾಸೌ ಮೃಗೇಂದ್ರೇಣಾಭಿಪೂಜಿತಃ|
12112039c ಪ್ರಾಪ್ತವಾನ್ಮತಿಸಾಚಿವ್ಯಂ ಗೋಮಾಯುರ್ವ್ಯಾಘ್ರಯೋನಿತಃ||

ಹಾಗೆಯೇ ಆಗಲೆಂದು ಮೃಗೇಂದ್ರನು ನರಿಯನ್ನು ಗೌರವಿಸಿದನು. ಹುಲಿಯು ಆ ನರಿಯನ್ನು ಬುದ್ಧಿಸಚಿವನಾಗಿ ಪಡೆದುಕೊಂಡನು.

12112040a ತಂ ತಥಾ ಸತ್ಕೃತಂ ದೃಷ್ಟ್ವಾ ಯುಜ್ಯಮಾನಂ ಚ ಕರ್ಮಣಿ|
12112040c ಪ್ರಾದ್ವಿಷನ್ ಕೃತಸಂಘಾತಾಃ ಪೂರ್ವಭೃತ್ಯಾ ಮುಹುರ್ಮುಹುಃ||

ಅವನು ಹಾಗೆ ಸತ್ಕೃತನಾಗಿ ಮಂತ್ರಿಯಾಗಿ ನಿಯುಕ್ತನಾದುದನ್ನು ನೋಡಿ ರಾಜನ ಮೊದಲಿದ್ದ ಸೇವಕರು ಒಟ್ಟಾಗಿ ನರಿಯನ್ನು ದ್ವೇಷಿಸತೊಡಗಿದವು.

12112041a ಮಿತ್ರಬುದ್ಧ್ಯಾ ಚ ಗೋಮಾಯುಂ ಸಾಂತ್ವಯಿತ್ವಾ ಪ್ರವೇಶ್ಯ ಚ|
12112041c ದೋಷೇಷು ಸಮತಾಂ ನೇತುಮೈಚ್ಚನ್ನಶುಭಬುದ್ಧಯಃ||

ಆ ಅಶುಭಬುದ್ಧಿಗಳು ನರಿಯೊಂದಿಗೆ ಮಿತ್ರತ್ವವನ್ನು ತೋರಿಸುತ್ತಾ ಸಂತವಿಸಿ ಪ್ರಸನ್ನಗೊಳಿಸಿ ಅದನ್ನೂ ದೋಷಗಳಲ್ಲಿ ತಮ್ಮ ಸಮನಾಗಿ ಮಾಡುವಂತೆ ಪ್ರಯತ್ನಿಸುತ್ತಿದ್ದವು.

12112042a ಅನ್ಯಥಾ ಹ್ಯುಚಿತಾಃ ಪೂರ್ವಂ ಪರದ್ರವ್ಯಾಪಹಾರಿಣಃ|
12112042c ಅಶಕ್ತಾಃ ಕಿಂ ಚಿದಾದಾತುಂ ದ್ರವ್ಯಂ ಗೋಮಾಯುಯಂತ್ರಿತಾಃ||

ಹಿಂದೆ ಇತರರ ದ್ರವ್ಯಗಳನ್ನು ಅಪಹರಿಸಿ ಬದುಕುತ್ತಿದ್ದ ಅವು ನರಿಯು ಬುದ್ಧಿಮಂತ್ರಿಯಾದ ನಂತರ ಅದರ ನಿಯಂತ್ರಣಕ್ಕೊಳಗಾಗಿ ಏನನ್ನೂ ಅಪಹರಿಸಲು ಶಕ್ತರಾಗಲಿಲ್ಲ.

12112043a ವ್ಯುತ್ಥಾನಂ ಚಾತ್ರ ಕಾಂಕ್ಷದ್ಭಿಃ ಕಥಾಭಿಃ ಪ್ರವಿಲೋಭ್ಯತೇ|
12112043c ಧನೇನ ಮಹತಾ ಚೈವ ಬುದ್ಧಿರಸ್ಯ ವಿಲೋಭ್ಯತೇ||

ಹೇಗಾದರೂ ಮಾಡಿ ಆ ನರಿಯನ್ನು ಪ್ರಲೋಭಗೊಳಿಸಬೇಕೆಂದೇ ಅವು ಬಯಸುತ್ತಿದ್ದವು. ಅಪಾರ ಧನದ ಆಸೆಯನ್ನು ತೋರಿಸಿ ಅದರ ಬುದ್ಧಿಯನ್ನು ಪ್ರಲೋಭನಗೊಳಿಸಲು ಪ್ರಯತ್ನಿಸುತ್ತಿದ್ದವು.

12112044a ನ ಚಾಪಿ ಸ ಮಹಾಪ್ರಾಜ್ಞಸ್ತಸ್ಮಾದ್ಧೈರ್ಯಾಚ್ಚ ಚಾಲ ಹ|
12112044c ಅಥಾಸ್ಯ ಸಮಯಂ ಕೃತ್ವಾ ವಿನಾಶಾಯ ಸ್ಥಿತಾಃ ಪರೇ||

ಆದರೆ ಮಹಾಪ್ರಾಜ್ಞ ನರಿಯು ಪ್ರಲೋಭನೆಗೊಳಗಾಗದೇ ಧೈರ್ಯದಿಂದ ಮನಸ್ಸನ್ನು ಸ್ಥಿರಗೊಳಿಸಿತು. ಆಗ ಆ ಪೂರ್ವಮಂತ್ರಿಗಳು ನರಿಯನ್ನು ವಿನಾಶಗೊಳಿಸುವ ಶಪಥವನ್ನು

ಮಾಡಿದವು.

12112045a ಈಪ್ಸಿತಂ ಚ ಮೃಗೇಂದ್ರಸ್ಯ ಮಾಂಸಂ ಯತ್ತತ್ರ ಸಂಸ್ಕೃತಮ್|
12112045c ಅಪನೀಯ ಸ್ವಯಂ ತದ್ಧಿ ತೈರ್ನ್ಯಸ್ತಂ ತಸ್ಯ ವೇಶ್ಮನಿ||

ಒಮ್ಮೆ ಅವರು ಮೃಗೇಂದ್ರನ ಇಷ್ಟವಾದ ಸಂಸ್ಕೃತ ಮಾಂಸವನ್ನು
ಅದರ ಮನೆಯಿಂದ ಅಪಹರಿಸಿಕೊಂಡು ಹೋಗಿ ನರಿಯ
ಮನೆಯಲ್ಲಿಟ್ಟವು.

12112046a ಯದರ್ಥಂ ಚಾಪ್ಯಪಹೃತಂ ಯೇನ ಯಚ್ಚೈವ ಮಂತ್ರಿತಮ್|
12112046c ತಸ್ಯ ತದ್ವಿದಿತಂ ಸರ್ವಂ ಕಾರಣಾರ್ಥಂ ಚ ಮರ್ಷಿತಮ್||

ಯಾರ ಸಲಹೆಯಂತೆ ಯಾವ ಕಾರಣಕ್ಕಾಗಿ ಅದನ್ನು
ಅಪಹರಿಸಲಾಯಿತು ಎನ್ನುವುದೆಲ್ಲವೂ ಅವುಗಳಿಗೆ ತಿಳಿದಿದ್ದವು.
ಅದರೂ ಅವು ಸುಮ್ಮನಿದ್ದುಬಿಟ್ಟವು.

12112047a ಸಮಯೋಽಯಂ ಕೃತಸ್ತೇನ ಸಾಚಿವ್ಯಮುಪಗಚ್ಚತಾ|
12112047c ನೋಪಘಾತಸ್ತ್ವಯಾ ಗ್ರಾಹ್ಯೋ ರಾಜನ್ಮೈತ್ರೀಮಿಹೇಚ್ಚತಾ||

ಮಂತ್ರಿತ್ವವನ್ನು ಸ್ವೀಕರಿಸುವಾಗ ನರಿಯು ಹುಲಿಯೊಂದಿಗೆ “ರಾಜನ್!
ನನ್ನ ಮೈತ್ರಿಯನ್ನು ಇಚ್ಛಿಸುವೆಯಾದರೆ ಬೇರೆಯವರ ಮಾತನ್ನು ಕೇಳಿ
ನನ್ನನ್ನು ಹಿಂಸಸಬಾರದು” ಎಂಬ ಒಪ್ಪಂದವನ್ನು ಮಾಡಿಕೊಂಡಿತ್ತು.

12112048a ಭೋಜನೇ ಚೋಪಹರ್ತವ್ಯೇ ತನ್ಮಾಂಸಂ ನ ಸ್ಮ ದೃಶ್ಯತೇ|
12112048c ಮೃಗರಾಜೇನ ಚಾಜ್ಞಪ್ತಂ ಮೃಗ್ಯತಾಂ ಚೋರ ಇತ್ಯುತ||

ತನ್ನ ಭೋಜನವು ಅಪಹರಿಸಲ್ಪಟ್ಟು ಮಾಂಸವು ಕಾಣದಿರಲು
ಮೃಗರಾಜನು ಸೇವಕರಿಗೆ ಕಳ್ಳನನ್ನು ಹುಡುಕುವಂತೆ ಆಜ್ಞಾಪಿಸಿದನು.

12112049a ಕೃತಕೈಶ್ಚಾಪಿ ತನ್ಮಾಂಸಂ ಮೃಗೇಂದ್ರಾಯೋಪವರ್ಣಿತಮ್|
12112049c ಸಚಿವೇನೋಪನೀತಂ ತೇ ವಿದುಷಾ ಪ್ರಾಜ್ಞಮಾನಿನಾ||

ಮೋಸದಿಂದ ಆ ಮಾಂಸವನ್ನು ಕದ್ದಿದ್ದ ಪ್ರಾಣಿಗಳು ಮೃಗೇಂದ್ರನಿಗೆ "ತಾನೇ ಮಹಾಪ್ರಾಜ್ಞನೆಂದು ತಿಳಿದುಕೊಂಡಿರುವ ನಿನ್ನ ವಿದುಷ ಸಚಿವನು ಮಾಂಸವನ್ನು ತೆಗೆದುಕೊಂಡು ಹೋಗಿದ್ದಾನೆ" ಎಂದು ಹೇಳಿದವು.

12112050a ಸರೋಷಸ್ತ್ವಥ ಶಾರ್ದೂಲಃ ಶ್ರುತ್ವಾ ಗೋಮಾಯುಚಾಪಲಮ್|
12112050c ಬಭೂವಾಮರ್ಷಿತೋ ರಾಜಾ ವಧಂ ಚಾಸ್ಯಾಭ್ಯರೋಚಯತ್||

ನರಿಯ ಚಪಲತೆಯ ಕುರಿತು ಕೇಳಿ ಹುಲಿಯು ಅತ್ಯಂತ ರೋಷಗೊಂಡಿತು. ಕುಪಿತನಾದ ರಾಜನು ನರಿಯ ವಧೆಯನ್ನು ಬಯಸಿದನು.

12112051a ಚಿದ್ರಂ ತು ತಸ್ಯ ತದ್ದೃಷ್ಟ್ವಾ ಪ್ರೋಚುಸ್ತೇ ಪೂರ್ವಮಂತ್ರಿಣಃ|
12112051c ಸರ್ವೇಷಾಮೇವ ಸೋಽಸ್ಮಾಕಂ ವೃತ್ತಿಭಂಗೇಷು ವರ್ತತೇ||

ಅವನಲ್ಲಿದ್ದ ಆ ಕೋಪದ ಅವಕಾಶವನ್ನು ಕಂಡ ಪೂರ್ವಮಂತ್ರಿಗಳು ಈ ಅವಕಾಶವನ್ನು ಬಿಟ್ಟರೆ ತಮ್ಮ ಮಂತ್ರಿಪದವಿಯೇ ಹೋಗಿಬಿಡಬಹುದೆಂದು ಪುನಃ ಹೇಳಿದವು:

12112052a ಇದಂ ಚಾಸ್ಯೇದೃಶಂ ಕರ್ಮ ವಾಲ್ಲಭ್ಯೇನ ತು ರಕ್ಷ್ಯತೇ|
12112052c ಶ್ರುತಶ್ಚ ಸ್ವಾಮಿನಾ ಪೂರ್ವಂ ಯಾದೃಶೋ ನೈಷ ತಾದೃಶಃ||

"ಇಂತಹ ಕರ್ಮವನ್ನೆಸಗಿರುವವನನ್ನು ನೀನು ಯಾವ ಕಾರಣದಿಂದ ರಕ್ಷಿಸುತ್ತಿರುವೆ? ಸ್ವಾಮಿಯು ಕೇಳಿದಂಥಹ ಯಾವ ಸದ್ಗುಣಗಳೂ ಆ

ನರಿಯಲ್ಲಿಲ್ಲ.

12112053a ವಾಙ್ಮೌತ್ರೇಣ್ಯೈವ ಧರ್ಮಿಷ್ಠಃ ಸ್ವಭಾವೇನ ತು ದಾರುಣಃ|
12112053c ಧರ್ಮಚ್ಚದ್ಮಾ ಹ್ಯಯಂ ಪಾಪೋ ವೃಥಾಚಾರಪರಿಗ್ರಹಃ|
12112053e ಕಾರ್ಯಾರ್ಥಂ ಭೋಜನಾರ್ಥೇಷು ವ್ರತೇಷು ಕೃತವಾನ್ ಶ್ರಮಮ್||

ಅವನು ಕೇವಲ ಮಾತಿನಲ್ಲಿ ಧರ್ಮಿಷ್ಠನಾಗಿದ್ದಾನೆಯೇ ಹೊರತು ಸ್ವಭಾವತಃ ಅತ್ಯಂತ ದಾರುಣನಾಗಿದ್ದಾನೆ. ಈ ಪಾಪಿಯು ಧರ್ಮದ ಸೋಗನ್ನು ಹಾಕಿಕೊಂಡಿದೆ. ಆದರೆ ವೃಥಾಚಾರಗಳನ್ನು ನಡೆಸುತ್ತಿದ್ದೆ. ತನ್ನ ಕೆಲಸವನ್ನು ಮಾಡಿಕೊಳ್ಳುವ ಸಲುವಾಗಿ ಮತ್ತು ಹೊಟ್ಟೆಯನ್ನು ತುಂಬಿಸಿಕೊಳ್ಳುವ ಸಲುವಾಗಿ ಆ ನರಿಯು ವ್ರತಾದಿಗಳಲ್ಲಿ ತೊಡಗಿದೆ.”

12112054a ಮಾಂಸಾಪನಯನಂ ಜ್ಞಾತ್ವಾ ವ್ಯಾಘ್ರಸ್ತೇಷಾಂ ತು ತದ್ವಚಃ|
12112054c ಆಜ್ಞಾಪಯಾಮಾಸ ತದಾ ಗೋಮಾಯುರ್ವಧ್ಯತಾಮಿತಿ||

ಅವರ ಮಾತಿನಿಂದ ಮಾಂಸವು ಅಪಹೃತವಾಗಿದೆಯೆಂದು ತಿಳಿದು ಹುಲಿಯು ಗುಳ್ಳೇನರಿಯನ್ನು ಕೊಲ್ಲಿ ಎಂದು ಆಜ್ಞಾಪಿಸಿದನು.

12112055a ಶಾರ್ದೂಲವಚನಂ ಶ್ರುತ್ವಾ ಶಾರ್ದೂಲಜನನೀ ತತಃ|
12112055c ಮೃಗರಾಜಂ ಹಿತೈರ್ವಾಕ್ಯೈಃ ಸಂಬೋಧಯಿತುಮಾಗಮತ್||

ಹುಲಿಯ ಆ ಮಾತನ್ನು ಕೇಳಿ ತಾಯಿಹುಲಿಯು ಮೃಗರಾಜನಿಗೆ ಹಿತವಾಕ್ಯಗಳನ್ನು ಉಪದೇಶಿಸಲು ಅಲ್ಲಿಗೆ ಬಂದಿತು.

12112056a ಪುತ್ರ ನೈತತ್ತ್ವಯಾ ಗ್ರಾಹ್ಯಂ ಕಪಟಾರಂಭಸಂವೃತಮ್|
12112056c ಕರ್ಮಸಂಘರ್ಷಜೈರ್ದೋಷೈರ್ದುಷ್ಯತ್ಯಶುಚಿಭಿಃ ಶುಚಿಃ||

“ಮಗನೇ! ಅವರ ಕಪಟಯುಕ್ತ ಮಾತುಗಳನ್ನು ಅಂಗೀಕರಿಸುವುದು

ಯುಕ್ತವಲ್ಲ. ಕರ್ಮಸಂಘರ್ಷದ ದೋಷದಿಂದ ಅಶುಚಿಗಳು ಶುಚಿಗಳನ್ನು ದೂಷಿಸುವುದು ಸ್ವಾಭಾವಿಕ.

12112057a ನೋಚ್ಚ್ರಿತಂ ಸಹತೇ ಕಶ್ಚಿತ್ ಪ್ರಕ್ರಿಯಾ ವೈರಕಾರಿಕಾ|
12112057c ಶುಚೇರಪಿ ಹಿ ಯುಕ್ತಸ್ಯ ದೋಷ ಏವ ನಿಪಾತ್ಯತೇ||

ಇನ್ನೊಬ್ಬರ ಶ್ರೇಯಸ್ಸನ್ನು ಯಾರೂ ಸಹಿಸಿಕೊಳ್ಳುವುದಿಲ್ಲ. ಇದು ವೈರತ್ವದಿಂದ ಮಾಡಿದ ಪ್ರಕ್ರಿಯೆಯಾಗಿದೆ. ಯಾರು ಎಷ್ಟೇ ಶುಚಿಯಾಗಿರಲಿ ಅಥವಾ ಉದ್ಯೋಗಶೀಲನಾಗಿರಲಿ ಅವನ ಮೇಲೆ ದೋಷಾರೋಪಣೆಯು ನಡೆಯುತ್ತದೆ.

[403]12112058a ಲುಬ್ಧಾನಾಂ ಶುಚಯೋ ದ್ವೇಷ್ಯಾಃ ಕಾತರಾಣಾಂ ತರಸ್ವಿನಃ|
12112058c ಮೂರ್ಖಾಣಾಂ ಪಂಡಿತಾ ದ್ವೇಷ್ಯಾ ದರಿದ್ರಾಣಾಂ ಮಹಾಧನಾಃ|
12112058e ಅಧಾರ್ಮಿಕಾಣಾಂ ಧರ್ಮಿಷ್ಠಾ ವಿರೂಪಾಣಾಂ ಸುರೂಪಕಾಃ||

ಲುಬ್ಧರಿಗೆ ಶುಚರು ದ್ವೇಷಿಗಳು. ಹೇಡಿಗಳಿಗೆ ವೀರರು ದ್ವೇಷಿಗಳು. ಮೂರ್ಖರಿಗೆ ಪಂಡಿತರು ದ್ವೇಷಿಗಳು. ದರಿದ್ರರಿಗೆ ಶ್ರೀಮಂತರು ದ್ವೇಷಿಗಳು. ಅಧಾರ್ಮಿಕರಿಗೆ ಧರ್ಮಿಷ್ಠರೂ ವಿರೂಪರಿಗೆ ಸುರೂಪಕರೂ ದ್ವೇಷ್ಯರು.

12112059a ಬಹವಃ ಪಂಡಿತಾ ಲುಬ್ಧಾಃ ಸರ್ವೇ[404] ಮಾಯೋಪಜೀವಿನಃ|
12112059c ಕುರ್ಯುರ್ದೋಷಮದೋಷಸ್ಯ ಬೃಹಸ್ಪತಿಮತೇರಪಿ||

---

[403] ಭಾರತ ದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕವಿದೆ: ಮುನೇರಪಿ ವನಸ್ಥಸ್ಯ ಸ್ವಾನಿ ಕರ್ಮಾಣಿ ಕುರ್ವತಃ| ಉತ್ಪಾದ್ಯಂತೇ ತ್ರಯಃ ಪಕ್ಷಾ ಮಿತ್ರೋದಾಸೀನಶತ್ರವಃ||

[404] ಮೂರ್ಖಾ ಲುಬ್ಧಾ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಅನೇಕ ಪಂಡಿತರು ಲುಬ್ಧರೂ ಮೋಸ ಜೀವಿಗಳೂ ಆಗಿರುತ್ತಾರೆ. ಬೃಹಸ್ಪತಿಯಂತಹ ಮತಿಯುಳ್ಳ ದೋಷರಹಿತರನ್ನೂ ದೋಷಿಗಳನ್ನಾಗಿ ಮಾಡುತ್ತಾರೆ.

12112060a ಶೂನ್ಯಾತ್ತಚ್ಚ ಗೃಹಾನ್ಮಾಂಸಂ ಯದದ್ಯಾಪಹೃತಂ ತವ|
12112060c ನೇಚ್ಚತೇ ದೀಯಮಾನಂ ಚ ಸಾಧು ತಾವದ್ವಿಮೃಶ್ಯತಾಮ್||

ಒಂದು ಕಡೆ ನಿನ್ನ ಶೂನ್ಯ ಗ್ರಹದಿಂದ ಮಾಂಸದ ಅಪಹರಣವಾಗಿದೆ. ಇನ್ನೊಂದೆಡೆ ಇರುವ ಸಾಧುವ ನೀನು ಮಾಂಸವನ್ನು ಕೊಟ್ಟರೂ ತೆಗೆದುಕೊಳ್ಳಲು ಇಚ್ಛಿಸದವನಿದ್ದಾನೆ. ಇವೆರಡನ್ನೂ ಚೆನ್ನಾಗಿ ಪರಿಶೀಲಿಸಿ ನೋಡು.

12112061a ಅಸತ್ಯಾಃ ಸತ್ಯಸಂಕಾಶಾಃ ಸತ್ಯಾಶ್ಚಾಸತ್ಯದರ್ಶಿನಃ[405]|
12112061c ದೃಶ್ಯಂತೇ ವಿವಿಧಾ ಭಾವಾಸ್ತೇಷು ಯುಕ್ತಂ ಪರೀಕ್ಷಣಮ್||

ಅಸತ್ಯರು ಸತ್ಯಸಂಕಾಶರಾಗಿಯೂ ಸತ್ಯವಂತರು ಅಸತ್ಯದರ್ಶಿಗಳಂತೆಯೂ ಕಾಣುತ್ತಾರೆ. ಅವರ ವಿವಿಧ ಭಾವಗಳನ್ನು ಪರೀಕ್ಷಿಸುವುದು ಯುಕ್ತವಾಗಿದೆ.

12112062a ತಲವದ್ದೃಶ್ಯತೇ ವ್ಯೋಮ ಖದ್ಯೋತೋ ಹವ್ಯವಾಡಿವ|
12112062c ನ ಚೈವಾಸ್ತಿ ತಲಂ ವ್ಯೋಮ್ನಿ ನ ಖದ್ಯೋತೇ ಹುತಾಶನಃ||

ಆಕಾಶವು ಮೊಗಚಿ ಹಾಕಿದ ಕಡಾಯಿಯ ತಳಭಾಗದಂತೆ ತೋರುತ್ತದೆ. ಮಿಂಚುಹುಳುವು ಬೆಂಕಿಯ ಕಿಡಿಯಂತೆ ಕಾಣುತ್ತದೆ. ಆದರೆ ಆಕಾಶದಲ್ಲಿ

---

405 ಅಸಭ್ಯಾಃ ಸಭ್ಯಸಂಕಾಶಾಃ ಸಭ್ಯಾಶ್ಚಾಸಭ್ಯದರ್ಶನಾಃ| ಎಂಬ ಪಾಠಾಂತರವಿದೆ (ಭಾರತ ದರ್ಶನ).

ಕಡಾಯಿಯ ತಳಭಾಗವೂ ಇಲ್ಲ. ಮಿಂಚಿನ ಹುಳುವಿನಲ್ಲಿ ಬೆಂಕಿಯ ಕಿಡಿಯೂ ಇಲ್ಲ.

12112063a ತಸ್ಮಾತ್ ಪ್ರತ್ಯಕ್ಷದೃಷ್ಟೋಽಪಿ ಯುಕ್ತಮರ್ಥಃ ಪರೀಕ್ಷಿತುಮ್|
12112063c ಪರೀಕ್ಷ್ಯ ಜ್ಞಾಪಯನ್ ಹ್ಯರ್ಥಾನ್ನ ಪಶ್ಚಾತ್ಪರಿತಪ್ಯತೇ||

ಆದುದರಿಂದ ಪ್ರತ್ಯಕ್ಷವಾಗಿ ಕಂಡರೂ ಪರೀಕ್ಷಿಸಿ ನೋಡಬೇಕು. ಚೆನ್ನಾಗಿ ಪರೀಕ್ಷಿಸಿ ತಿಳಿದುಕೊಂಡು ಕಾರ್ಯಮಾಡುವವನು ಪಶ್ಚಾತ್ತಾಪಪಡುವುದಿಲ್ಲ.

12112064a ನ ದುಷ್ಕರಮಿದಂ ಪುತ್ರ ಯತ್ ಪ್ರಭುರ್ಘಾತಯೇತ್ಪರಮ್|
12112064c ಶ್ಲಾಘನೀಯಾ ಚ ವರ್ಯಾ[406] ಚ ಲೋಕೇ ಪ್ರಭವತಾಂ ಕ್ಷಮಾ||

ಪುತ್ರ! ರಾಜನಿಗೆ ಇತರರನ್ನು ಸಂಹರಿಸುವುದು ಅಷ್ಟೊಂದು ದುಷ್ಕರವಾದುದೇನೂ ಅಲ್ಲ. ಪ್ರಭಾವಶಾಲಿಗಳ ಕ್ಷಮೆಯು ಲೋಕದಲ್ಲಿ ಶ್ಲಾಘನೀಯವೂ ವರಿಷ್ಠವೂ ಎನ್ನಿಸಿಕೊಳ್ಳುತ್ತದೆ.

12112065a ಸ್ಥಾಪಿತೋಽಯಂ ಪುತ್ರ ತ್ವಯಾ ಸಾಮಂತೇಷ್ವಧಿ ವಿಶ್ರುತಃ|
12112065c ದುಃಖೇನಾಸಾದ್ಯತೇ ಪಾತ್ರಂ ಧಾರ್ಯತಾಮೇಷ ತೇ ಸುಹೃತ್||

ಪುತ್ರ! ನೀನು ಈ ನರಿಯನ್ನು ಮಂತ್ರಿಯನ್ನಾಗಿ ಸ್ಥಾಪಿಸಿರುವೆ. ಅವನು ನಿನ್ನ ಸಾಮಂತರಲ್ಲಿಯೂ ವಿಶ್ರುತನಾಗಿದ್ದಾನೆ. ಸತ್ಪಾತ್ರರು ದೊರೆಯುವುದು ಕಷ್ಟ. ನಿನ್ನ ಸುಹೃದನಾಗಿರುವ ಈ ನರಿಯನ್ನು ರಕ್ಷಿಸು.

12112066a ದೂಷಿತಂ ಪರದೋಷೈರ್ಹಿ ಗೃಹ್ಣೀತೇ ಯೋಽನ್ಯಥಾ ಶುಚಿಮ್|
12112066c ಸ್ವಯಂ ಸಂದೂಷಿತಾಮಾತ್ಯಃ ಕ್ಷಿಪ್ರಮೇವ ವಿನಶ್ಯತಿ||

---

[406] ಯಶಸ್ಯಾ ಚ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಇತರರ ದೋಷದಿಂದ ಆಪಾದಿತನಾಗಿರುವ ಶುದ್ಧಚರಿತನನ್ನು
ದಂಡಿಸಿದರೆ ದುಷ್ಟಮಂತ್ರಿಗಳೊಂದಿಗೆ ರಾಜನು ಬಹಳ ಬೇಗ
ವಿನಾಶವನ್ನು ಹೊಂದುತ್ತಾನೆ.”

12112067a ತಸ್ಮಾದಥಾರಿಸಂಘಾತಾದ್ಗೋಮಾಯೋಃ ಕಶ್ಚಿದಾಗತಃ|
12112067c ಧರ್ಮಾತ್ಮಾ ತೇನ ಚಾಖ್ಯಾತಂ ಯಥೈತತ್ಕಪಟಂ ಕೃತಮ್||

ಆ ಸಮಯಕ್ಕೆ ಸರಿಯಾಗಿ ನರಿಯ ಶತ್ರುಗಳ ಗುಂಪಿನಿಂದ
ಧರ್ಮಾತ್ಮನೋರ್ವ ಪ್ರಾಣಿಯೊಂದು ಮುಂದೆಬಂದು ಕಪಟವು ಹೇಗೆ
ನಡೆಯಿತೆನ್ನುವುದನ್ನು ಹೇಳಿತು.

12112068a ತತೋ ವಿಜ್ಞಾತಚಾರಿತ್ರಃ ಸತ್ಕೃತ್ಯ ಸ ವಿಮೋಕ್ಷಿತಃ|
12112068c ಪರಿಷ್ವಕ್ತಶ್ಚ ಸಸ್ನೇಹಂ ಮೃಗೇಂದ್ರೇಣ ಪುನಃ ಪುನಃ||

ಅನಂತರ ನರಿಯ ಚಾರಿತ್ರ್ಯವನ್ನು ತಿಳಿದ ಮೃಗೇಂದ್ರನು ಅದನ್ನು
ಅಪವಾದದಿಂದ ಮುಕ್ತಗೊಳಿಸಿ ಸತ್ಕರಿಸಿ ಸ್ನೇಹದಿಂದ ಪುನಃ ಪುನಃ
ಆಲಂಗಿಸಿದನು.

12112069a ಅನುಜ್ಞಾಪ್ಯ ಮೃಗೇಂದ್ರಂ ತು ಗೋಮಾಯುರ್ನೀತಿಶಾಸ್ತ್ರವಿತ್|
12112069c ತೇನಾಮರ್ಷೇಣ ಸಂತಪ್ತಃ ಪ್ರಾಯಮಾಸಿತುಮೈಚ್ಛತ||

ನೀತಿಶಾಸ್ತ್ರವನ್ನು ಅರಿತಿದ್ದ ನರಿಯಾದರೋ ಮೃಗೇಂದ್ರನ
ಅನುಮತಿಯನ್ನು ಪಡೆದು ಅವನು ಕುಪಿತನಾಗಿದ್ದುದಕ್ಕೆ ಸಂತಪ್ತನಾಗಿ
ಪ್ರಾಯೋಪವೇಶವನ್ನು ಮಾಡಲು ಇಚ್ಛಿಸಿತು.

12112070a ಶಾರ್ದೂಲಸ್ತತ್ರ ಗೋಮಾಯುಂ ಸ್ನೇಹಾತ್ಪ್ರಸ್ರುತಲೋಚನಃ|
12112070c ಅವಾರಯತ್ಸ ಧರ್ಮಿಷ್ಠಂ ಪೂಜಯಾ ಪ್ರತಿಪೂಜಯನ್||

ಆಗ ಸ್ನೇಹದಿಂದ ಪ್ರಫುಲ್ಲವಾಗಿದ್ದ ಕಣ್ಣುಗಳಿಂದ ಹುಲಿಯು ಧರ್ಮಿಷ್ಠ ನರಿಯನ್ನು ಪ್ರಾಯೋಪವೇಶದಿಂದ ತಡೆಯಿತು ಮತ್ತು ಸತ್ಕಾರಗಳಿಂದ ಪೂಜಿಸಿತು.

12112071a ತಂ ಸ ಗೋಮಾಯುರಾಲೋಕ್ಯ ಸ್ನೇಹಾದಾಗತಸಂಭ್ರಮಮ್|
12112071c ಬಭಾಷೇ ಪ್ರಣತೋ ವಾಕ್ಯಂ ಬಾಷ್ಪಗದ್ಗದಯಾ ಗಿರಾ||

ಹುಲಿಯನ್ನು ನೋಡಿ ನರಿಯು ಸ್ನೇಹದಿಂದ ಸಂಭ್ರಮಗೊಂಡು ಕಣ್ಣೀರಿನಿಂದ ಕಟ್ಟಿದ ದನಿಯಲ್ಲಿ ಈ ಪ್ರೀತಿಯ ಮಾತುಗಳನ್ನಾಡಿತು:

12112072a ಪೂಜಿತೋಽಹಂ ತ್ವಯಾ ಪೂರ್ವಂ ಪಶ್ಚಾಚ್ಚೈವ ವಿಮಾನಿತಃ|
12112072c ಪರೇಷಾಮಾಸ್ಪದಂ ನೀತೋ ವಸ್ತುಂ ನಾರ್ಹಾಮ್ಯಹಂ ತ್ವಯಿ||

“ಮೊದಲು ನನ್ನನ್ನು ನೀನು ಪೂಜಿಸಿದೆ. ಅನಂತರ ಅವಮಾನಿಸಿದೆ. ಬೇರೆಯವರ ಮೋಸಕ್ಕೆ ಗುರಿಯಾಗುವ ಅವಕಾಶವನ್ನು ಕಲ್ಪಿಸಿದೆ. ಇನ್ನು ಮುಂದೆ ನಾನು ನಿನ್ನೊಡನೆ ಇರಲು ಯೋಗ್ಯನಿಲ್ಲ.

12112073a ಸ್ವಸಂತುಷ್ಟಾಶ್ಚ್ಯುತಾಃ ಸ್ಥಾನಾನ್ಮಾನಾತ್ ಪ್ರತ್ಯವರೋಪಿತಾಃ|
12112073c ಸ್ವಯಂ ಚೋಪಹೃತಾ ಭೃತ್ಯಾ ಯೇ ಚಾಪ್ಯುಪಹೃತಾಃ ಪರೈಃ||
12112074a ಪರಿಕ್ಷೀಣಾಶ್ಚ ಲುಬ್ಧಾಶ್ಚ ಕ್ರೂರಾಃ ಕಾರಾಭಿತಾಪಿತಾಃ|
12112074c ಹೃತಸ್ವಾ ಮಾನಿನೋ ಯೇ ಚ ತ್ಯಕ್ತೋಪಾತ್ತಾ ಮಹೇಪ್ಸವಃ||
12112075a ಸಂತಾಪಿತಾಶ್ಚ ಯೇ ಕೇ ಚಿದ್ವ್ಯಸನೌಘಪ್ರತೀಕ್ಷಿಣಃ|
12112075c ಅಂತರ್ಹಿತಾಃ ಸೋಪಹಿತಾಃ ಸರ್ವೇ ತೇ ಪರಸಾಧನಾಃ||

ತಮ್ಮ ಸ್ಥಾನದಿಂದ ಚ್ಯುತರಾದವರು, ಅಸಂತುಷ್ಟರಾಗಿರುವರು, ಅಪಮಾನಿತರಾಗಿರುವವರು, ಮೊದಲು ಪುರಸ್ಕೃತರಾಗಿದ್ದು ನಂತರ ಬೇರೆಯವರ ಕಾರಣದಿಂದ ವಂಚಿತರಾದವರು, ತಮ್ಮ ಸ್ಥಾನವನ್ನು

ಕಳೆದುಕೊಂಡು ಕ್ಷೀಣರಾದವರು, ಲೋಭಿಗಳು, ಕ್ರೋಧಾಭಿಭೂತರು,
ಭಯಭೀತರು, ವಂಚಿಸಲ್ಪಟ್ಟವರು, ಸರ್ವಸ್ವವನ್ನೂ
ಕಳೆದುಕೊಂಡಿರುವವರು, ಮಾನಿಷ್ಠರು, ಆದಾಯವು
ಕಡಿಮೆಯಾದವರು, ಮಹತ್ತರ ಸ್ಥಾನವನ್ನು ಬಯಸುವವರು,
ಸಂತಾಪಗೊಂಡವರು, ರಾಜನಿಗೆ ಕಷ್ಟಗಳು ಬರುವುದನ್ನೇ
ಪ್ರತೀಕ್ಷಿಸುವವರು, ನಿಗೂಢರಾಗಿರುವವರು, ಮತ್ತು
ಕಪಟಭಾವದಿಂದಿರುವ ಸೇವಕರೆಲ್ಲರೂ ಶತ್ರುವಿನ ಕಾರ್ಯವನ್ನು
ಮಾಡುವವರೇ ಆಗುತ್ತಾರೆ.

12112076a ಅವಮಾನೇನ ಯುಕ್ತಸ್ಯ ಸ್ಥಾಪಿತಸ್ಯ ಚ ಮೇ ಪುನಃ[407]|
12112076c ಕಥಂ ಯಾಸ್ಯಸಿ ವಿಶ್ವಾಸಮಹಮೇಷ್ಯಾಮಿ ವಾ ಪುನಃ[408]||

ಅವಮಾನಿತನಾಗಿ ಮತ್ತು ಪುನಃ ಸ್ಥಾಪಿಸನಾದ ನನ್ನಮೇಲೆ ನಿನಗೆ
ಅಥವಾ ನಿನ್ನ ಮೇಲೆ ನನಗೆ ಪುನಃ ವಿಶ್ವಾಸವು ಹೇಗೆ ಉಂಟಾಗುತ್ತದೆ?

12112077a ಸಮರ್ಥ ಇತಿ ಸಂಗೃಹ್ಯ ಸ್ಥಾಪಯಿತ್ವಾ ಪರೀಕ್ಷ್ಯ ಚ|
12112077c ಕೃತಂ ಚ ಸಮಯಂ ಭಿತ್ತ್ವಾ ತ್ವಯಾಹಮವಮಾನಿತಃ||

ಸಮರ್ಥನಿದ್ದೇನೆಂದು ನನ್ನನ್ನು ಕರೆದುಕೊಂಡು ಮಂತ್ರಿಸ್ಥಾನವನ್ನು
ಕೊಟ್ಟೆ ಮತ್ತು ಪರೀಕ್ಷಿಸಿದೆ ಕೂಡ. ಮಾಡಿದ ಒಪ್ಪಂದವನ್ನು ಮುರಿದು
ನನ್ನನ್ನು ಅಪಮಾನಿಸಿದೆ.

12112078a ಪ್ರಥಮಂ ಯಃ ಸಮಾಖ್ಯಾತಃ ಶೀಲವಾನಿತಿ ಸಂಸದಿ|

---

407 ಸ್ಥಾನಭ್ರಷ್ಟಸ್ಯ ವಾ ಪುನಃ| ಎಂಬ ಪಾಠಾಂತರವಿದೆ (ಭಾರತ ದರ್ಶನ).

408 ತಿಷ್ಠಾಮಿ ವಾ ಕಥಮ್| ಎಂಬ ಪಾಠಾಂತರವಿದೆ (ಭಾರತ ದರ್ಶನ).

12112078c ನ ವಾಚ್ಯಂ ತಸ್ಯ ವೈಗುಣ್ಯಂ ಪ್ರತಿಜ್ಞಾಂ ಪರಿರಕ್ಷತಾ||

ಮೊದಲು ಸಂಸದಿಯಲ್ಲಿ ಇವನು ಶೀಲವಂತನು ಎಂದು ಹೊಗಳಿ ಈಗ ಪ್ರತಿಜ್ಞಾರಕ್ಷಕನಾದ ನೀನು ಹೀಗೆ ದೋಷಾರೋಪಣೆಯನ್ನು ಮಾಡಬಾರದಾಗಿತ್ತು.

12112079a ಏವಂ ಚಾವಮತಸ್ಯೇಹ ವಿಶ್ವಾಸಂ ಕಿಂ ಪ್ರಯಾಸ್ಯಸಿ[409]|
12112079c ತ್ವಯಿ ಚೈವ ಹ್ಯವಿಶ್ವಾಸೇ ಮಮೋದ್ವೇಗೋ ಭವಿಷ್ಯತಿ||

ಹೀಗೆ ಇಲ್ಲಿ ಅಪಮಾನಿತನಾದ ನನಗೆ ನಿನ್ನ ಮೇಲಿನ ವಿಶ್ವಾಸವು ಏಕೆ ಹಿಂದಿರುಗುತ್ತದೆ? ನಿನಗೆ ಕೂಡ ನನ್ನ ಮೇಲೆ ವಿಶ್ವಾಸವು ಬರುವುದಿಲ್ಲ. ಹೀಗಿರುವಾಗ ನನಗೆ ಉದ್ವೇಗವುಂಟಾಗುತ್ತದೆ.

12112080a ಶಂಕಿತಸ್ತ್ವಮಹಂ ಭೀತಃ ಪರೇ ಚಿದ್ರಾನುದರ್ಶಿನಃ|
12112080c ಅಸ್ನಿಗ್ಧಾಶ್ಚೈವ ದುಸ್ತೋಷಾಃ ಕರ್ಮ ಚೈತದ್ಬಹುಚ್ಛಲಮ್||

ನೀನು ಶಂಕಿತನಾಗಿದ್ದೀಯೆ. ನಾನು ಭೀತನಾಗಿದ್ದೇನೆ. ಇತರರು ನಮ್ಮ ಸಂಬಂಧದಲ್ಲಿ ರಂಧ್ರಗಳನ್ನೇ ಹುಡುಕುತ್ತಿರುತ್ತಾರೆ. ಅವರಿಗೆ ನನ್ನಲ್ಲಿ ಸ್ನೇಹವಿಲ್ಲ. ಅವರನ್ನು ಸಂತುಷ್ಟಿಗೊಳಿಸುವುದು ನನಗೂ ಕಷ್ಟವೇ ಆಗಿದೆ. ಮಂತ್ರಿಯ ಕಾರ್ಯವೇ ಇಂತಹ ಕಪಟಗಳಿಂದ ತುಂಬಿದೆ.

12112081a ದುಃಖೇನ ಶ್ಲೇಷ್ಯತೇ ಭಿನ್ನಂ ಶ್ಲಿಷ್ಟಂ ದುಃಖೇನ ಭಿದ್ಯತೇ|
12112081c ಭಿನ್ನಶ್ಲಿಷ್ಟಾ ತು ಯಾ ಪ್ರೀತಿರ್ನ ಸಾ ಸ್ನೇಹೇನ ವರ್ತತೇ||

ಒಡೆದುಹೋದುದನ್ನು ಪುನಃ ಒಂದಾಗಿಸುವುದು ಕಷ್ಟ. ಸ್ನೇಹಬಂಧನವೂ ಬಹಳ ಕಷ್ಟದಿಂದ ಒಡೆಯುತ್ತದೆ. ಪರಸ್ಪರರ

[409] ವಿಶ್ವಾಸಂ ಮೇ ನ ಯಾಸ್ಯಸಿ| ಎಂಬ ಪಾಠಾಂತರವಿದೆ (ಭಾರತ ದರ್ಶನ).

ಪ್ರೀತಿಯು ಪದೇ ಪದೇ ಒಡೆಯುತ್ತಿದ್ದರೆ ಮತ್ತು ಸೇರುತ್ತಿದ್ದರೆ ಅಲ್ಲಿ ಸ್ನೇಹಬಂಧನವಿರುವುದಿಲ್ಲ.

12112082a ಕಶ್ಚಿದೇವ ಹಿ ಭೀತಸ್ತು[410] ದೃಶ್ಯತೇ ನ ಪರಾತ್ಮನೋಃ|
12112082c ಕಾರ್ಯಾಪೇಕ್ಷಾ ಹಿ ವರ್ತಂತೇ ಭಾವಾಃ ಸ್ನಿಗ್ಧಾಸ್ತು ದುರ್ಲಭಾಃ[411]||

ಭೀತನಾಗಿರುವವನು ಇನ್ನೊಬ್ಬನ ಸೇವೆಗೈಯುವುದು ಬಹಳ ವಿರಳ. ಅಂಥವರು ತಮ್ಮ ಕಾರ್ಯಸಿದ್ಧಿಗಾಗಿಯೇ ನಡೆದುಕೊಳ್ಳುತ್ತಾರೆ. ಭಾವದಲ್ಲಿ ಸ್ನೇಹದಿಂದಿರುವ ಸೇವಕರು ದುರ್ಲಭರು.

12112083a ಸುದುಃಖಿಂ ಪುರುಷಜ್ಞಾನಂ ಚಿತ್ತಂ ಹ್ಯೇಷಾಂ ಚಲಾಚಲಮ್|
12112083c ಸಮರ್ಥೋ ವಾಪ್ಯಶಕ್ತೋ[412] ವಾ
ಶತೇಷ್ವೇಕೋಽಧಿಗಮ್ಯತೇ||

ಯೋಗ್ಯ ಪುರುಷನನ್ನು ಹುಡುಕುವುದು ಕಷ್ಟ. ಏಕೆಂದರೆ ಮನುಷ್ಯರ ಚಿತ್ತವು ಚಂಚಲವೂ ನಿಶ್ಚಲವೂ ಆಗಿರುತ್ತದೆ. ಸಮರ್ಥನೂ ಸಶಕ್ತನೂ ಆಗಿರುವವನು ನೂರರಲ್ಲಿ ಒಬ್ಬನಿರುತ್ತಾನೆ.

12112084a ಅಕಸ್ಮಾತ್ ಪ್ರಕ್ರಿಯಾ ನೃಣಾಮಕಸ್ಮಾಚ್ಚಾಪಕರ್ಷಣಮ್|
12112084c ಶುಭಾಶುಭೇ ಮಹತ್ತ್ವಂ ಚ ಪ್ರಕರ್ತುಂ ಬುದ್ಧಿಲಾಘವಾತ್||

ಪ್ರಾಣಿಗಳಿಗೆ ಉನ್ನತಿ-ಅವನತಿಗಳು ಅಕಸ್ಮಾತ್ತಾಗಿ ಸಂಭವಿಸುತ್ತವೆ.

---

[410] ಕಶ್ಚಿದೇವ ಹಿತೇ ಭರ್ತುಃ ಎಂಬ ಪಾಠಾಂತರವಿದೆ (ಭಾರತ ದರ್ಶನ).

[411] ಭಾವಸ್ನಿಗ್ಧಾಃ ಸುದುರ್ಲಭಾಃ| ಎಂಬ ಪಾಠಾಂತರವಿದೆ (ಭಾರತ ದರ್ಶನ).

[412] ವಾಪ್ಯಶಂಕೋ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಅಲ್ಪಬುದ್ಧಿಯ ಕಾರಣದಿಂದ ಇತರರಿಗೆ ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಮಾಡುತ್ತೇನೆ ಎಂದು ಭಾವಿಸುತ್ತೇವೆ ಅಥವಾ ಉತ್ತಮ ಸ್ಥಾನವನ್ನು ನೀಡುತ್ತೇವೆ ಅಥವಾ ಕೆಳಕ್ಕೆ ಇಳಿಸುತ್ತೇವೆ ಎಂದು ಭಾವಿಸುತ್ತೇವೆ."

12112085a ಏವಂ ಬಹುವಿಧಂ ಸಾಂತ್ವಮುಕ್ತ್ವಾ ಧರ್ಮಾರ್ಥಹೇತುಮತ್|
12112085c ಪ್ರಸಾದಯಿತ್ವಾ ರಾಜಾನಂ ಗೋಮಾಯುರ್ವನಮಭ್ಯಗಾತ್||

ಹೀಗೆ ಬಹುವಿಧಾವಾಗಿ ಧರ್ಮಾರ್ಥಕಾರಕ ಸಾಂತ್ವನದ ಮಾತುಗಳನ್ನಾಡಿ ರಾಜನನ್ನು ಸಂತವಿಸಿ ನರಿಯು ವನಕ್ಕೆ ತೆರಳಿತು.

12112086a ಅಗೃಹ್ಯಾನುನಯಂ ತಸ್ಯ ಮೃಗೇಂದ್ರಸ್ಯ ಸ ಬುದ್ಧಿಮಾನ್|
12112086c ಗೋಮಾಯುಃ ಪ್ರಾಯಮಾಸೀನಸ್ತ್ಯಕ್ತ್ವಾ ದೇಹಂ ದಿವಂ ಯಯೌ||

ಆ ಬುದ್ಧಿವಂತ ನರಿಯು ಮೃಗೇಂದ್ರನ ಅನುನಯ ಮಾತುಗಳನ್ನು ಸ್ವೀಕರಿಸದೇ ಪ್ರಾಯೋಪವೇಶವನ್ನು ಮಾಡಿ ದೇಹವನ್ನು ತ್ಯಜಿಸಿ ದಿವಕ್ಕೆ ಹೋಯಿತು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ವ್ಯಾಘ್ರಗೋಮಾಯುಸಂವಾದೇ ದ್ವಾದಶಾಧಿಕಶತತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ವ್ಯಾಘ್ರಗೋಮಯಸಂವಾದ ಎನ್ನುವ ನೂರಾಹನ್ನೆರಡನೇ ಅಧ್ಯಾಯವು.

೧೧೩

ಉಷ್ಟ್ರಶಿರೋಗ್ರೀವ ಕಥನ

ಆಲಸ್ಯ ಒಂಟಿಯ ಕಥೆ ಮತ್ತು ರಾಜನ ಕರ್ತವ್ಯಗಳು (1-21).

12113001 ಯುಧಿಷ್ಠಿರ ಉವಾಚ|
12113001a ಕಿಂ ಪಾರ್ಥಿವೇನ ಕರ್ತವ್ಯಂ ಕಿಂ ಚ ಕೃತ್ವಾ ಸುಖೀ ಭವೇತ್|
12113001c ತನ್ಮಮಾಚಕ್ಷ್ವ ತತ್ತ್ವೇನ ಸರ್ವಂ ಧರ್ಮಭೃತಾಂ ವರ||

ಯುಧಿಷ್ಠಿರನು ಹೇಳಿದನು: "ಧರ್ಮಭೃತರಲ್ಲಿ ಶ್ರೇಷ್ಠ! ಪಾರ್ಥಿವನ ಕರ್ತವ್ಯವೇನು? ಏನನ್ನು ಮಾಡುವುದರಿಂದ ಅವನು ಸುಖಿಯಾಗಿರಬಲ್ಲನು? ಸರ್ವವನ್ನೂ ತತ್ತ್ವಪೂರ್ಣವಾಗಿ ನನಗೆ ಹೇಳು."

12113002 ಭೀಷ್ಮ ಉವಾಚ|
12113002a ಹಂತ ತೇಽಹಂ ಪ್ರವಕ್ಷ್ಯಾಮಿ ಶೃಣು ಕಾರ್ಯೈಕನಿಶ್ಚಯಮ್|
12113002c ಯಥಾ ರಾಜ್ಞೇಹ ಕರ್ತವ್ಯಂ ಯಚ್ಚ ಕೃತ್ವಾ ಸುಖೀ ಭವೇತ್||

ಭೀಷ್ಮನು ಹೇಳಿದನು: "ನಿಲ್ಲು! ರಾಜನ ಕರ್ತವ್ಯವೇನು ಮತ್ತು ಏನನ್ನು ಮಾಡುವುದರಿಂದ ಅವನು ಸುಖಿಯಾಗಿರಬಲ್ಲನು ಎನ್ನುವುದನ್ನು ನಿಶ್ಚಯಮಾಡಿ ನಿನಗೆ ಹೇಳುತ್ತೇನೆ. ಕೇಳು.

12113003a ನ ತ್ವೇವಂ ವರ್ತಿತವ್ಯಂ ಸ್ಮ ಯಥೇದಮನುಶುಶ್ರುಮಃ|
12113003c ಉಷ್ಟ್ರಸ್ಯ ಸುಮಹದ್ವೃತ್ತಂ ತನ್ನಿಬೋಧ ಯುಧಿಷ್ಠಿರ||

ಯುಧಿಷ್ಠಿರ! ಒಂದು ಮಹಾ ಒಂಟಿಯ ವ್ಯವಹಾರವನ್ನು ನಾನು ಕೇಳಿದ್ದೇನೆ. ಅದನ್ನು ಕೇಳು. ಅದರಂತೆ ರಾಜನು ವರ್ತಿಸಬಾರದು.

12113004a ಜಾತಿಸ್ಮರೋ ಮಹಾನುಷ್ಟ್ರಃ ಪ್ರಾಜಾಪತ್ಯಯುಗೋದ್ಭವಃ|
12113004c ತಪಃ ಸುಮಹದಾತಿಷ್ಠದರಣ್ಯೇ ಸಂಶಿತವ್ರತಃ||

ಪ್ರಾಜಾಪತ್ಯ ಯುಗ[413]ದಲ್ಲಿ ಒಂದು ದೊಡ್ಡ ಒಂಟೆಯಿದ್ದಿತು. ಅದಕ್ಕೆ ಪೂರ್ವಜನ್ಮದ ಸ್ಮರಣೆಯಿದ್ದಿತ್ತು. ಆ ಸಂಶಿತವ್ರತವು ಅರಣ್ಯದಲ್ಲಿ ಒಂದು ಮಹಾತಪಸ್ಸನ್ನು ಆರಂಭಿಸಿತು.

12113005a ತಪಸಸ್ತಸ್ಯ ಚಾಂತೇ ವೈ ಪ್ರೀತಿಮಾನಭವತ್ ಪ್ರಭುಃ|
12113005c ವರೇಣ ಚಂದಯಾಮಾಸ ತತಶ್ಚೈನಂ ಪಿತಾಮಹಃ||

ಅದರ ತಪಸ್ಸಿನ ಅಂತ್ಯದಲ್ಲಿ ಪ್ರಭು ಪಿತಾಮಹ ಬ್ರಹ್ಮನು ಪ್ರೀತಿಮಾನನಾದನು. ಆಗ ಒಂಟೆಗೆ ವರನ್ನು ಕೇಳಲು ಹೇಳಿದನು.

12113006 ಉಷ್ಟ್ರ ಉವಾಚ|
12113006a ಭಗವಂಸ್ತ್ವತ್ಪ್ರಸಾದಾನ್ಮೇ ದೀರ್ಘಾ ಗ್ರೀವಾ ಭವೇದಿಯಮ್|
12113006c ಯೋಜನಾನಾಂ ಶತಂ ಸಾಗ್ರಂ ಯಾ ಗಚ್ಚೇಚ್ಚರಿತುಂ ವಿಭೋ||

ಒಂಟೆಯು ಹೇಳಿತು: "ವಿಭೋ! ಭಗವನ್! ನಿನ್ನ ಪ್ರಸಾದದಿಂದ ನನ್ನ ಈ ಕುತ್ತಿಗೆಯು ಉದ್ದವಾಗಲಿ. ನೂರಾರು ಯೋಜನೆಗಳ ವರೆಗೂ ನನ್ನ ಈ ಕುತ್ತಿಗೆಯು ಸಂಚರಿಸುವಂತಾಗಬೇಕು.""

12113007 ಭೀಷ್ಮ ಉವಾಚ|
12113007a ಏವಮಸ್ತ್ವಿತಿ ಚೋಕ್ತಃ ಸ ವರದೇನ ಮಹಾತ್ಮನಾ|
12113007c ಪ್ರತಿಲಭ್ಯ ವರಂ ಶ್ರೇಷ್ಠಂ ಯಯಾವುಷ್ಟ್ರಃ ಸ್ವಕಂ ವನಮ್||

ಭೀಷ್ಮನು ಹೇಳಿದನು: "ಮಹಾತ್ಮ ವರದನು ಹಾಗೆಯೇ ಆಗಲೆಂದು

---

413 ಕೃತಯುಗ

ಹೇಳಿದನು. ಶ್ರೇಷ್ಠ ವರವನ್ನು ಪಡೆದು ಒಂಟೆಯು ತನ್ನ ವನಕ್ಕೆ ಬಂದಿತು.

12113008a ಸ ಚಕಾರ ತದಾಲಸ್ಯಂ ವರದಾನಾತ್ಸ ದುರ್ಮತಿಃ|
12113008c ನ ಚೈಚ್ಚಚ್ಚರಿತುಂ ಗಂತುಂ ದುರಾತ್ಮಾ ಕಾಲಮೋಹಿತಃ||

ವರದಿಂದಾಗಿ ಆ ದುರ್ಮತಿಯು ಆಲಸ್ಯನಾದನು. ಕಾಲಮೋಹಿತನಾಗಿ ಆ ದುರಾತ್ಮನು ಎಲ್ಲಿಯೂ ಹೋಗಲು ಬಯಸಲಿಲ್ಲ.

12113009a ಸ ಕದಾ ಚಿತ್ಪ್ರಾಸಾರ್ಯೈವಂ ತಾಂ ಗ್ರೀವಾಂ ಶತಯೋಜನಾಮ್|
12113009c ಚಚಾರಾಶ್ರಾಂತಹೃದಯೋ ವಾತಶ್ಚಾಗಾತ್ತತೋ ಮಹಾನ್||

ಒಮ್ಮೆ ಅದು ತನ್ನ ನೂರು ಯೋಜನ ಉದ್ದದ ಕುತ್ತಿಗೆಯನ್ನು ಚಾಚಿ ಸ್ವಲ್ಪವೂ ಆಯಾಸವಿಲ್ಲದೇ ಸಂಚರಿಸುತ್ತಿರುವಾಗ ದೊಡ್ಡ ಭಿರುಗಾಳಿಯು ಬೀಸತೊಡಗಿತು.

12113010a ಸ ಗುಹಾಯಾಂ ಶಿರೋಗ್ರೀವಂ ನಿಧಾಯ ಪಶುರಾತ್ಮನಃ|
12113010c ಆಸ್ತಾಥ ವರ್ಷಮಭ್ಯಾಗಾತ್ಸುಮಹತ್ ಪ್ಲಾವಯಜ್ಜಗತ್||

ಆಗ ಆ ಪಶುವು ತನ್ನ ಕುತ್ತಿಗೆ-ಶಿರಗಳನ್ನು ಒಂದು ಗುಹೆಯಲ್ಲಿರಿಸಿಕೊಂಡಿತು. ಆಗ ಜಗತ್ತನ್ನೇ ಮುಳುಗಿಸುವಂಥಹ ಅತಿದೊಡ್ಡ ಮಳೆಯೂ ಸುರಿಯತೊಡಗಿತು.

12113011a ಅಥ ಶೀತಪರೀತಾಂಗೋ ಜಂಬುಕಃ ಕ್ಷುಚ್ಚ್ರಮಾನ್ವಿತಃ|
12113011c ಸದಾರಸ್ತಾಂ ಗುಹಾಮಾಶು ಪ್ರವಿವೇಶ ಜಲಾರ್ದಿತಃ||

ಮಳೆಯಿಂದ ನೆನೆದು ಛಳಿಯಿಂದ ನಡುಗುತ್ತಿದ್ದ ಮತ್ತು ಹಸಿವು-ಬಾಯಾರಿಕೆಗಳಿಂದ ಬಳಲಿದ್ದ ಒಂದು ಗಂಡು ನರಿಯು ತನ್ನ

ಪತ್ನಿಯೊಂದಿಗೆ ಆ ಗುಹೆಯನ್ನು ಪ್ರವೇಶಿಸಿತು.

12113012a ಸ ದೃಷ್ಟ್ವಾ ಮಾಂಸಜೀವೀ ತು ಸುಭೃಶಂ ಕ್ಷುಚ್ಚ್ರಮಾನ್ವಿತಃ|
12113012c ಅಭಕ್ಷಯತ್ತತೋ ಗ್ರೀವಾಮುಷ್ಟ್ರಸ್ಯ ಭರತರ್ಷಭ||

ಭರತರ್ಷಭ! ಒಂಟೆಯ ಕತ್ತನ್ನು ನೋಡಿ ಅತಿಯಾಗಿ ಹಸಿದಿದ್ದ ಆ ಮಾಂಸಜೀವಿ ನರಿಯು ಅದನ್ನು ತಿನ್ನತೊಡಗಿತು.

12113013a ಯದಾ ತ್ವಬುಧ್ಯತಾತ್ಮಾನಂ ಭಕ್ಷ್ಯಮಾಣಂ ಸ ವೈ ಪಶುಃ|
12113013c ತದಾ ಸಂಕೋಚನೇ ಯತ್ನಮಕರೋದ್ ಭೃಶದುಃಖಿತಃ||

ತನ್ನನ್ನು ಯಾರೋ ತಿನ್ನುತ್ತಿದ್ದಾರೆಂದು ತಿಳಿದೊಡನೆಯೇ ಅತ್ಯಂತ ದುಃಖಿತವಾದ ಆ ಪಶುವು ತನ್ನ ಕುತ್ತಿಗೆಯನ್ನು ಸಂಕುಚಿತಗೊಳಿಸಲು ಪ್ರಯತ್ನಿಸಿತು.

12113014a ಯಾವದೂರ್ಧ್ವಮಧಶ್ಚೈವ ಗ್ರೀವಾಂ ಸಂಕ್ಷಿಪತೇ ಪಶುಃ|
12113014c ತಾವತ್ತೇನ ಸದಾರೇಣ ಜಂಬುಕೇನ ಸ ಭಕ್ಷಿತಃ||

ಆ ಪಶುವು ಮೇಲಕ್ಕೆ ಕೆಳಕ್ಕೆ ಮಾಡಿ ತನ್ನ ಕುತ್ತಿಗೆಯನ್ನು ಸಂಕ್ಷಿಪ್ತಗೊಳಿಸಲು ಪ್ರಯತ್ನಿಸುತ್ತಿರುವಾಗಲೇ ತನ್ನ ಪತ್ನಿಯೊಡನಿದ್ದ ನರಿಯು ಕುತ್ತಿಗೆಯನ್ನು ತಿಂದು ಹಾಕಿತು.

12113015a ಸ ಹತ್ವಾ ಭಕ್ಷಯಿತ್ವಾ ಚ ಜಂಬುಕೋಷ್ಟ್ರಂ ತತಸ್ತದಾ|
12113015c ವಿಗತೇ ವಾತವರ್ಷೇ ಚ ನಿಶ್ಚಕ್ರಾಮ ಗುಹಾಮುಖಾತ್||

ಒಂಟೆಯನ್ನು ಕೊಂದು ಭಕ್ಷಿಸಿದ ನಂತರ, ಮಳೆ-ಗಾಳಿಗಳು ನಿಂತನಂತರ, ಆ ನರಿಯು ಗುಹೆಯಿಂದ ಹೊರಬಂದಿತು.

12113016a ಏವಂ ದುರ್ಬುದ್ಧಿನಾ ಪ್ರಾಪ್ತಮುಷ್ಟ್ರೇಣ ನಿಧನಂ ತದಾ|

12113016c ಆಲಸ್ಯಸ್ಯ ಕ್ರಮಾತ್ಪಶ್ಯ ಮಹದ್ದೋಷಮುಪಾಗತಮ್‌॥

ಹೀಗೆ ದುರ್ಬುದ್ಧಿ ಒಂಟಿಯು ನಿಧನವನ್ನು ಹೊಂದಿತು. ನೋಡು. ಆಲಸ್ಯದಿಂದಾಗಿ ಅದು ಮಹಾದೋಷವನ್ನು ತಂದುಕೊಂಡಿತು.

12113017a ತ್ವಮಪ್ಯೇತಂ ವಿಧಿಂ ತ್ಯಕ್ತ್ವಾ ಯೋಗೇನ ನಿಯತೇಂದ್ರಿಯಃ|
12113017c ವರ್ತಸ್ವ ಬುದ್ಧಿಮೂಲಂ ಹಿ ವಿಜಯಂ ಮನುರಬ್ರವೀತ್‌॥

ನೀನೂ ಕೂಡ ಈ ವಿಧಿಯನ್ನು ತೊರೆದು ಯೋಗದಿಂದ ನಿಯತೇಂದ್ರಿಯನಾಗಿರು. ವಿಜಯಕ್ಕೆ ಬುದ್ಧಿಯೇ ಮೂಲವೆಂದು ಮನುವು ಹೇಳಿದ್ದಾನೆ.

12113018a ಬುದ್ಧಿಶ್ರೇಷ್ಠಾನಿ ಕರ್ಮಾಣಿ ಬಾಹುಮಧ್ಯಾನಿ ಭಾರತ|
12113018c ತಾನಿ ಜಂಘಾಜಘನ್ಯಾನಿ ಭಾರಪ್ರತ್ಯವರಾಣಿ ಚ‌॥

ಭಾರತ! ಬುದ್ಧಿಯಿಂದ ಮಾಡುವ ಕರ್ಮಗಳು ಶ್ರೇಷ್ಠವಾದವು. ಬಾಹುಬಲದಿಂದ ಮಾಡುವ ಕರ್ಮಗಳು ಮಧ್ಯಮವಾದವುಗಳು. ಜಂಘಾಬಲದಿಂದ ಮಾಡುವ ಕರ್ಮಗಳು ಅಧಮಶ್ರೇಣಿಯವು. ಭಾರವನ್ನು ಹೊರುವ ಕಾರ್ಯವು ಅಧಮಾಧಮಶ್ರೇಣಿಯದು.

12113019a ರಾಜ್ಯಂ ತಿಷ್ಠತಿ ದಕ್ಷಸ್ಯ ಸಂಗೃಹೀತೇಂದ್ರಿಯಸ್ಯ ಚ|
[414]12113019c ಗುಪ್ತಮಂತ್ರಶ್ರುತವತಃ ಸುಸಹಾಯಸ್ಯ ಚಾನಘ‌॥

ಅನಘ! ಇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವ ದಕ್ಷನಲ್ಲಿ, ಗುಪ್ತವಾಗಿ ಸಮಾಲೋಚನೆಗಳನ್ನು ಮಾಡಿ ಸಲಹೆಗಳನ್ನು

---

[414] ಭಾರತದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕಾರ್ಧವಿದೆ: ಆರ್ತಸ್ಯ ಬುದ್ಧಿಮೂಲಂ ಹಿ ವಿಜಯಂ ಮನುರಬ್ರವೀತ್‌|

ಕೇಳುವವನಲ್ಲಿ ಮತ್ತು ಉತ್ತಮಸಹಾಯಕರನ್ನು ಹೊಂದಿದವನಲ್ಲಿ ರಾಜ್ಯವು ನಿಂತುಕೊಳ್ಳುತ್ತದೆ.

12113020a ಪರೀಕ್ಷ್ಯ ಕಾರಿಣೋಽರ್ಥಾಶ್ಚ ತಿಷ್ಠಂತೀಹ ಯುಧಿಷ್ಠಿರ|
12113020c ಸಹಾಯಯುಕ್ತೇನ ಮಹೀ ಕೃತ್ಸ್ನಾ ಶಕ್ಯಾ ಪ್ರಶಾಸಿತುಮ್‌||

ಯುಧಿಷ್ಠಿರ! ಚೆನ್ನಾಗಿ ಪರೀಕ್ಷಿಸಿ ಕಾರ್ಯಗಳನ್ನು ಮಾಡುವವನಲ್ಲಿ ಅರ್ಥಗಳು ಸ್ಥಿರವಾಗಿ ಉಳಿಯುತ್ತವೆ. ಸಹಾಯಕರಿಂದ ಸಂಪನ್ನನಾದ ರಾಜನು ಅಖಿಂಡ ಭೂಮಂಡಲವನ್ನೂ ಶಾಸನಮಾಡಲು ಸಮರ್ಥನಾಗುತ್ತಾನೆ.

12113021a ಇದಂ ಹಿ ಸದ್ಭಿಃ ಕಥಿತಂ ವಿಧಿಜ್ಞೈಃ
ಪುರಾ ಮಹೇಂದ್ರಪ್ರತಿಮಪ್ರಭಾವ|
12113021c ಮಯಾಪಿ ಚೋಕ್ತಂ ತವ ಶಾಸ್ತ್ರದೃಷ್ಟ್ಯಾ
ತ್ವಮತ್ರ ಯುಕ್ತಃ ಪ್ರಚರಸ್ವ ರಾಜನ್‌||

ರಾಜನ್! ಮಹೇಂದ್ರಪ್ರತಿಮಪ್ರಭಾವ! ಹಿಂದೆ ವಿಧಿಗಳನ್ನು ತಿಳಿದ ಸತ್ಪುರುಷರು ಇದನ್ನು ಹೇಳಿದ್ದರು. ನಾನೂ ಕೂಡ ಶಾಸ್ತ್ರಗಳಲ್ಲಿ ಕಂಡುಕೊಂಡಂತೆ ನಿನಗೆ ಈ ವಿಷಯಗಳನ್ನು ಹೇಳಿದ್ದೇನೆ. ನೀನು ಇವುಗಳನ್ನು ಅಳವಡಿಸಿಕೊಂಡು ವ್ಯವಹರಿಸು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಉಷ್ಟ್ರಗ್ರೀವೋಪಾಖ್ಯಾನೇ ತ್ರಯೋದಶಾಧಿಕಶತತಮೋಽಧ್ಯಾಯಃ‌||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಉಷ್ಟ್ರಗ್ರೀವೋಪಾಖ್ಯಾನ ಎನ್ನುವ ನೂರಾಹದಿಮೂರನೇ ಅಧ್ಯಾಯವು.

೧೧೪

ಸರಿತ್ಸಾಗರ ಸಂವಾದ

ಪ್ರಬಲ ಶತ್ರುವಿನ ಮುಂದೆ ವಿನೀತನಾಗಿರಬೇಕೆಂದು ಸೂಚಿಸುವ ಗಂಗೆ ಮತ್ತು ಸಮುದ್ರಗಳ ಸಂವಾದ (1-14).

12114001 ಯುಧಿಷ್ಠಿರ ಉವಾಚ|
12114001a ರಾಜಾ ರಾಜ್ಯಮನುಪ್ರಾಪ್ಯ ದುರ್ಬಲೋ ಭರತರ್ಷಭ|
12114001c ಅಮಿತ್ರಸ್ಯಾತಿವೃದ್ಧಸ್ಯ ಕಥಂ ತಿಷ್ಠೇದಸಾಧನಃ||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ರಾಜ್ಯವನ್ನು ಪಡೆದುಕೊಂಡಿದ್ದರೂ ದುರ್ಬಲನೂ ಮಿತ್ರರಹಿತನೂ ಅತಿವೃದ್ಧನೂ ಮತ್ತು ಸಾಧನರಹಿತನೂ ಆಗಿದ್ದರೆ ಅವನು ಬಲಶಾಲೀ ಶತ್ರುವಿನ ಮುಂದೆ ಹೇಗೆ ನಿಲ್ಲಬೇಕು?"

12114002 ಭೀಷ್ಮ ಉವಾಚ|
12114002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12114002c ಸರಿತಾಂ ಚೈವ ಸಂವಾದಂ ಸಾಗರಸ್ಯ ಚ ಭಾರತ||

ಭೀಷ್ಮನು ಹೇಳಿದನು: "ಭಾರತ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಸಮುದ್ರ-ನದಿಗಳ ಸಂವಾದವನ್ನು ಉದಾಹರಿಸುತ್ತಾರೆ.

12114003a ಸುರಾರಿನಿಲಯಃ ಶಶ್ವತ್ಸಾಗರಃ ಸರಿತಾಂ ಪತಿಃ|
12114003c ಪಪ್ರಚ್ಚ ಸರಿತಃ ಸರ್ವಾಃ ಸಂಶಯಂ ಜಾತಮಾತ್ಮನಃ||

ಸುರಾರಿಗಳಿಗೆ ಆಶ್ರಯಸ್ಥಾನನಾದ ನದಿಗಳ ಒಡೆಯ ಸಮುದ್ರನು ತನ್ನಲ್ಲಿ ಹುಟ್ಟಿದ ಸಂಶಯವನ್ನು ಹೋಗಲಾಡಿಸಲೋಸುಗ ಸರ್ವ ಸರಿತ್ತುಗಳನ್ನೂ ಪ್ರಶ್ನಿಸಿದನು:

12114004a ಸಮೂಲಶಾಖಾನ್ಪಶ್ಯಾಮಿ ನಿಹತಾಂಶ್ಚಾಯಿನೋ ದ್ರುಮಾನ್|
12114004c ಯುಷ್ಮಾಭಿರಿಹ ಪೂರ್ಣಾಭಿರನ್ಯಾಂಸ್ತತ್ರ ನ ವೇತಸಮ್||

"ನೀವು ತುಂಬಿ ಹರಿಯುವಾಗ ದೊಡ್ಡ ದೊಡ್ಡ ವೃಕ್ಷಗಳನ್ನೇ ಬೇರು-ರೆಂಬೆಗಳ ಸಮೇತ ಕಿತ್ತು ಕೊಚ್ಚಿಸಿಕೊಂಡು ಬರುವುದನ್ನು ನಾನು ನೋಡಿದ್ದೇನೆ. ಆದರೆ ಅಲ್ಲಿರುವ ಬೆತ್ತದ ಗಿಡಗಳನ್ನು ನೀವು ಕೊಚ್ಚಿಕೊಂಡು ಬರುವುದಿಲ್ಲ.

12114005a ಅಕಾಯಶ್ಚಾಲ್ಪಸಾರಶ್ಚ ವೇತಸಃ ಕೂಲಜಶ್ಚ ವಃ|
12114005c ಅವಜ್ಞಾಯ ನಶಕ್ಯೋ ವಾ[415] ಕಿಂ ಚಿದ್ವಾ ತೇನ ವಃ ಕೃತಮ್||

ಗಾತ್ರವಿಲ್ಲದ, ಅಲ್ಪಶಕ್ತಿಯುಳ್ಳ, ಮತ್ತು ದಡದ ಬುಡದಲ್ಲಿಯೇ ಹುಟ್ಟಿ ಬೆಳೆದ ಬೆತ್ತದ ಗಿಡಗಳನ್ನು ನೀವು ಏಕೆ ಕೊಚ್ಚಿಕೊಂಡು ಬರುತ್ತಿಲ್ಲ? ಅವುಗಳ ಮೇಲಿನ ತಿರಸ್ಕಾರದಿಂದಲೋ ಅಥವಾ ನಿಮಗೆ ಅದು ಶಕ್ಯವಿಲ್ಲವೆಂದೋ?

12114006a ತದಹಂ ಶ್ರೋತುಮಿಚ್ಛಾಮಿ ಸರ್ವಾಸಾಮೇವ ವೋ ಮತಮ್|
12114006c ಯಥಾ ಕೂಲಾನಿ ಚೇಮಾನಿ ಭಿತ್ತ್ವಾ ನಾನೀಯತೇ ವಶಮ್||

ಆ ಬೆತ್ತದ ಗಿಡಗಳನ್ನು ಕಿತ್ತು ನೀವು ಏಕೆ ಹೊತ್ತುಕೊಂಡು ಬರುತ್ತಿಲ್ಲ? ನಿಮ್ಮೆಲ್ಲರಿಂದಲೂ ನಾನು ಈ ವಿಷಯವನ್ನು ಕೇಳಬಯಸುತ್ತೇನೆ."

---

[415] ಅವಜ್ಞಯಾ ವಾ ನಾನೀತಃ ಎಂಬ ಪಾಠಾಂತರವಿದೆ (ಭಾರತ ದರ್ಶನ).

12114007a ತತಃ ಪ್ರಾಹ ನದೀ ಗಂಗಾ ವಾಕ್ಯಮುತ್ತರಮರ್ಥವತ್।



12114007c ಹೇತುಮದ್ ಗ್ರಾಹಕಂ ಚೈವ ಸಾಗರಂ ಸರಿತಾಂ ಪತಿಮ್||

ಆಗ ಗಂಗಾನದಿಯು ತನ್ನ ಗ್ರಾಹಕ ಸರಿತ್ತುಗಳ ಒಡೆಯ ಸಾಗರನಿಗೆ ಈ ಅರ್ಥವತ್ತಾದ ಉತ್ತರವನ್ನು ನೀಡಿ ಹೇಳಿದಳು:

12114008a ತಿಷ್ಠಂತ್ಯೇತೇ ಯಥಾಸ್ಥಾನಂ ನಗಾ ಹ್ಯೇಕನಿಕೇತನಾಃ|
12114008c ತತಸ್ತ್ಯಜಂತಿ ತತ್ ಸ್ಥಾನಂ ಪ್ರಾತಿಲೋಮ್ಯಾದಚೇತಸಃ|[416]|

“ವೃಕ್ಷಗಳು ತಮ್ಮ ತಮ್ಮ ಸ್ಥಾನಗಳಲ್ಲಿಯೇ ಬಲವಾಗಿ ನಿಂತಿರುತ್ತವೆ. ನಮ್ಮ ಪ್ರವಾಹಕ್ಕೆ ಅವು ತಲೆತಗ್ಗಿಸುವುದಿಲ್ಲ. ಪ್ರವಾಹದ ಸಮಯದಲ್ಲಿ ನಮ್ಮ ಪ್ರತಿಕೂಲವಾಗಿ ವ್ಯವಹರಿಸುವುದರಿಂದ ಆ ಮೂಢಚೇತನಗಳು ತಮ್ಮಸ್ಥಾನವನ್ನು ತ್ಯಜಿಸಬೇಕಾಗುತ್ತದೆ.

12114009a ವೇತಸೋ ವೇಗಮಾಯಾಂತಂ ದೃಷ್ಟ್ವಾ ನಮತಿ ನೇತರಃ|
12114009c ಸ ಚ ವೇಗೇಽಭ್ಯತಿಕ್ರಾಂತೇ ಸ್ಥಾನಮಾಸಾದ್ಯ ತಿಷ್ಠತಿ||

ಬೆತ್ತದ ಗಿಡಗಳಾದರೋ ಬರುತ್ತಿರುವ ಪ್ರವಾಹದ ವೇಗವನ್ನು ಕಂಡೊಡನೆಯೇ ಬಾಗಿಕೊಂಡುಬಿಡುತ್ತವೆ. ನಮ್ಮ ಪ್ರವಾಹಕ್ಕೆ ಎದುರಾಗಿ ನಿಲ್ಲುವ ಸಾಹಸವನ್ನು ಮಾಡುವುದಿಲ್ಲ. ಪ್ರವಾಹವು ಕಡಿಮೆಯಾದೊಡನೆಯೇ ತಮ್ಮ ಸ್ಥಾನದಲ್ಲಿಯೇ ನಿಂತಿರುತ್ತವೆ.

12114010a ಕಾಲಜ್ಞಃ ಸಮಯಜ್ಞಶ್ಚ ಸದಾ ವಶ್ಯಶ್ಚ ನೋದ್ಯಮಃ.[417]|
12114010c ಅನುಲೋಮಸ್ತಥಾಸ್ತಬ್ಧಸ್ತೇನ ನಾಭ್ಯೇತಿ ವೇತಸಃ||

ಬೆತ್ತದ ಗಿಡಗಳು ಸದಾ ಕಾಲ-ಸಮಯಗಳನ್ನು ತಿಳಿದುಕೊಂಡಿರುತ್ತವೆ.

---

416 ಪ್ರಾತಿಲೋಮ್ಯಾನ್ನ ವೇತಸಃ| ಎಂಬ ಪಾಠಾಂತರವಿದೆ (ಭಾರತ ದರ್ಶನ).

417 ನೋದ್ಧತಃ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಮರಗಳು ಹಾಗಲ್ಲ. ನಾವು ಪ್ರವಹಿಸುವ ಕಡೆಯೇ ಅದು ಬಗ್ಗಿಕೊಂಡಿರುತ್ತದೆ. ಪ್ರವಾಹಕ್ಕೆ ಎದುರಾಗಿ ನಿಲ್ಲುವುದಿಲ್ಲ. ಆದುದರಿಂದ ಅಹಂಕಾರವಿಲ್ಲದ ಬೆತ್ತದ ಗಿಡಗಳು ನಮ್ಮೊಡನೆ ಬರುವುದಿಲ್ಲ.

12114011a ಮಾರುತೋದಕವೇಗೇನ ಯೇ ನಮಂತ್ಯುನ್ನಮಂತಿ ಚ|
12114011c ಓಷಧ್ಯಃ ಪಾದಪಾ ಗುಲ್ಮಾ ನ ತೇ ಯಾಂತಿ ಪರಾಭವಮ್||

ಗಾಳಿಯ ಮತ್ತು ನೀರಿನ ವೇಗಕ್ಕೆ ಬಾಗುವ ಮತ್ತು ವೇಗವು ಕಡಿಮೆಯಾದೊಡನೆ ಎದ್ದು ನಿಲ್ಲುವ ಔಷಧದ ಗಿಡಗಳು, ಗುಲ್ಮಗಳು ಎಂದೂ ಪರಾಭವವನ್ನು ಹೊಂದುವುದಿಲ್ಲ."

12114012a ಯೋ ಹಿ ಶತ್ರೋರ್ವಿವೃದ್ಧಸ್ಯ ಪ್ರಭೋರ್ವಧವಿನಾಶನೇ[418]|
12114012c ಪೂರ್ವಂ ನ ಸಹತೇ ವೇಗಂ ಕ್ಷಿಪ್ರಮೇವ ಸ ನಶ್ಯತಿ||

ಹೀಗೆ ಬಲದಲ್ಲಿ ಅಧಿಕನಾದ, ಮತ್ತು ವಧ-ವಿನಾಶಗಳಲ್ಲಿ ಪ್ರಭುವೆನಿಸಿದ ಶತ್ರುವಿನ ವೇಗವನ್ನು ಮೊದಲೇ ನತಶಿರನಾಗಿ ಸಹಿಸಿಕೊಳ್ಳದವನು ಬೇಗನೇ ನಾಶಹೊಂದುತ್ತಾನೆ.

12114013a ಸಾರಾಸಾರಂ ಬಲಂ ವೀರ್ಯಮಾತ್ಮನೋ ದ್ವಿಷತಶ್ಚ ಯಃ|
12114013c ಜಾನನ್ವಿಚರತಿ ಪ್ರಾಜ್ಞೋ ನ ಸ ಯಾತಿ ಪರಾಭವಮ್||

ತನ್ನ ಮತ್ತು ಶತ್ರುವಿನ ಸಾರಾಸಾರಗಳನ್ನೂ ಬಲವನ್ನೂ ವೀರ್ಯವನ್ನೂ ತಿಳಿದು ವಿಚಾರಿಸಿ ನಡೆದುಕೊಳ್ಳುವ ಪ್ರಾಜ್ಞನು ಪರಾಭವವನ್ನು ಹೊಂದುವುದಿಲ್ಲ.

---

418 ಪ್ರಭೋರ್ಬಂಧವಿನಾಶನೇ (ಭಾರತ ದರ್ಶನ).

12114014a ಏವಮೇವ ಯದಾ ವಿದ್ವಾನ್ಮನ್ಯೇತಾತಿಬಲಂ ರಿಪುಮ್|
12114014c ಸಂಶ್ರಯೇದ್ವೈತಸೀಂ ವೃತ್ತಿಮೇವಂ ಪ್ರಜ್ಞಾನಲಕ್ಷಣಮ್||

ಹೀಗೆಯೇ ವಿದ್ವಾಂಸ ರಾಜನು ಶತ್ರುವು ತನಗಿಂತಲೂ ಅಧಿಕ ಬಲಶಾಲಿಯೆಂದು ತಿಳಿದಾಗ ತಲೆತಗ್ಗಿಸುವ ವೈತಸೀವೃತ್ತಿಯನ್ನು ಆಶ್ರಯಿಸಬೇಕು. ಇದೇ ಬುದ್ಧಿಶಾಲಿಯ ಲಕ್ಷಣವು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಸರಿತ್ಸಾಗರಸಂವಾದೇ ಚತುರ್ದಶಾಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಸರಿತ್ಸಾಗರಸಂವಾದ ಎನ್ನುವ ನೂರಾಹದಿನಾಲ್ಕನೇ ಅಧ್ಯಾಯವು.

೧೧೫

ಟಿಟ್ಟಿಭಕ

ದುಷ್ಟರ ನಿಂದನೆಯನ್ನು ಸಹಿಸಿಕೊಳ್ಳುವುದರಿಂದಾಗುವ ಲಾಭವು (1-20).

12115001 ಯುಧಿಷ್ಠಿರ ಉವಾಚ|
12115001a ವಿದ್ವಾನ್ಮೂರ್ಖಪ್ರಗಲ್ಭೇನ ಮೃದುಸ್ತೀಕ್ಷ್ಣೇನ ಭಾರತ|
12115001c ಆಕ್ರುಶ್ಯಮಾನಃ ಸದಸಿ ಕಥಂ ಕುರ್ಯಾದರಿಂದಮ||

ಯುಧಿಷ್ಠಿರನು ಹೇಳಿದನು: “ಅರಿಂದಮ! ಭಾರತ! ಉದ್ಧಟ ಮೂರ್ಖನು ತುಂಬಿದ ಸಭೆಯಲ್ಲಿ ವಿದ್ವಾಂಸನನ್ನು ಮೃದುವಾಗಿಯೋ

ತೀಕ್ಷ್ಣವಾಗಿಯೋ ನಿಂದಿಸತೊಡಗಿದರೆ ವಿದ್ವಾಂಸನು ಏನು ಮಾಡಬೇಕು?”

12115002 ಭೀಷ್ಮ ಉವಾಚ|
12115002a ಶ್ರೂಯತಾಂ ಪೃಥಿವೀಪಾಲ ಯಥ್ಯೈಷೋऽರ್ಥೋऽನುಗೀಯತೇ|
12115002c ಸದಾ ಸುಚೇತಾಃ ಸಹತೇ ನರಸ್ಯೇಹಾಲ್ಪಚೇತಸಃ||

ಭೀಷ್ಮನು ಹೇಳಿದನು: “ಪೃಥಿವೀಪಾಲ! ಇದರ ಕುರಿತು ಹಿರಿಯರು ಹೇಳಿರುವ ಮಾತನ್ನು ಕೇಳು. ಉತ್ತಮ ಚೇತನರು ಸದಾ ಅಲ್ಪಚೇತಸ ನರರನ್ನು ಸಹಿಸಿಕೊಳ್ಳುತ್ತಾರೆ.

12115003a ಅರುಷ್ಯನ್ ಕ್ರುಶ್ಯಮಾನಸ್ಯ ಸುಕೃತಂ ನಾಮ ವಿಂದತಿ|
12115003c ದುಷ್ಕೃತಂ ಚಾತ್ಮನೋ ಮರ್ಷೀ ರುಷ್ಯತ್ಯೇವಾಪಮಾರ್ಷ್ಟಿ ವೈ||

ನಿಂದಿಸುವವನ ಮೇಲೆ ಕೋಪಗೊಳ್ಳದೇ ಅವನು ಸುಕೃತನೆಂಬ ಹೆಸರನ್ನು ಪಡೆದುಕೊಳ್ಳುತ್ತಾನೆ. ಮೂರ್ಖನು ಮಾಡಿದ ನಿಂದನೆಗಳನ್ನು ಸಹಿಸಿಕೊಳ್ಳುವವನು ತನ್ನ ದುಷ್ಕೃತ-ಪಾಪಗಳನ್ನು ಕುಪಿತನಾಗಿ ನಿಂದಿಸುವ ಮೂರ್ಖನ ಮೇಲೆ ಹಾಕುತ್ತಾನೆ.

12115004a ಟಿಟ್ಟಿಭಂ ತಮುಪೇಕ್ಷೇತ ವಾಶಮಾನಮಿವಾತುರಮ್|
12115004c ಲೋಕವಿದ್ವೇಷಮಾಪನ್ನೋ ನಿಷ್ಫಲಂ ಪ್ರತಿಪದ್ಯತೇ||

ಆತುರದಿಂದ ಕಿರುಚಾಡಿಕೊಳ್ಳುವ ಟಿಟ್ಟಿಭ ಪಕ್ಷಿಯಂತೆ ಅವನನ್ನು ಉಪೇಕ್ಷಿಸಬೇಕು. ಆಗ ಆ ಮೂರ್ಖನು ಲೋಕದ ದ್ವೇಷವನ್ನು ಪಡೆದುಕೊಂಡು ನಿಷ್ಫಲನಾಗುತ್ತಾನೆ.

12115005a ಇತಿ ಸ ಶ್ಲಾಘತೇ[419] ನಿತ್ಯಂ ತೇನ ಪಾಪೇನ ಕರ್ಮಣಾ|
12115005c ಇದಮುಕ್ತೋ ಮಯಾ ಕಶ್ಚಿತ್ಸಂಮತೋ ಜನಸಂಸದಿ|
12115005e ಸ ತತ್ರ ವ್ರೀಡಿತಃ ಶುಷ್ಕೋ ಮೃತಕಲ್ಪೋಽವತಿಷ್ಠತಿ||

ಮೂರ್ಖನಾದರೋ ತನ್ನ ಪಾಪಕರ್ಮವನ್ನು ನಿತ್ಯವೂ ಹೀಗೆ ಪ್ರಶಂಸಿಸಿಕೊಳ್ಳುತ್ತಿರುತ್ತಾನೆ: "ತುಂಬಿದ ಜನಸಂಸದಿಯಲ್ಲಿ ನಾನು ಇವನ ಕುರಿತು ಹೀಗೆ ಹೇಳಿದೆ. ಆಗ ಅಲ್ಲಿ ಅವನು ನಾಚಿದನು. ಅವನ ಮುಖವು ಒಣಗಿಹೋಯಿತು. ಮೃತನಾದವನಂತೆ ಕುಳಿತಿದ್ದನು".

12115006a ಶ್ಲಾಘನ್ನಶ್ಲಾಘನೀಯೇನ ಕರ್ಮಣಾ ನಿರಪತ್ರಪಃ|
12115006c ಉಪೇಕ್ಷಿತವ್ಯೋ ದಾಂತೇನ[420] ತಾದೃಶಃ ಪುರುಷಾಧಮಃ||

ಹೀಗೆ ಅವನು ಅಶ್ಲಾಘನೀಯವಾಗಿದ್ದ ತನ್ನ ಕರ್ಮಗಳನ್ನೇ ಪ್ರಶಂಸಿಸಿಕೊಳ್ಳುತ್ತಾ ತಾನುಮಾಡಿದ್ದುದಕ್ಕೆ ನಾಚಿಕೊಳ್ಳುವುದಿಲ್ಲ. ಅಂತಹ ಪುರುಷಾಧಮನನ್ನು ದಾಂತನು ಉಪೇಕ್ಷಿಸಬೇಕು.

12115007a ಯದ್ಯದ್ ಬ್ರೂಯಾದಲ್ಪಮತಿಸ್ತತ್ತದಸ್ಯ ಸಹೇತ್ಸದಾ|
12115007c ಪ್ರಾಕೃತೋ ಹಿ ಪ್ರಶಂಸನ್ವಾ ನಿಂದನ್ವಾ ಕಿಂ ಕರಿಷ್ಯತಿ|
12115007e ವನೇ ಕಾಕ ಇವಾಬುದ್ಧಿರ್ವಾಶಮಾನೋ ನಿರರ್ಥಕಮ್||

ಅಲ್ಪಮತಿಯು ಏನೇನು ಹೇಳುತ್ತಾನೋ ಎಲ್ಲವನ್ನೂ ಸದಾ ಸಹಿಸಿಕೊಳ್ಳಬೇಕು. ಪ್ರಾಕೃತನು ಮಾಡುವ ಪ್ರಶಂಸೆ ಅಥವಾ ನಿಂದನೆಯಿಂದ ಏನು ಮಾಡಬೇಕಾಗಿದೆ? ವನದಲ್ಲಿ ಕಾಗೆಯು ಕಾ ಕಾ

---

419 ಇತಿ ಸಂಶ್ಲಾಘತೇ (ಭಾರತ ದರ್ಶನ).

420 ಯತ್ನೇನ (ಭಾರತ ದರ್ಶನ).

ಎಂದು ಕೂಗಿಕೊಳ್ಳುವಂತೆ ಅಬುದ್ಧಿಯು ದೊಡ್ಡದಾಗಿ ಹೇಳುವುದು ನಿರರ್ಥಕವು.

12115008a ಯದಿ ವಾಗ್ಭಿಃ ಪ್ರಯೋಗಃ ಸ್ಯಾತ್ಪ್ರಯೋಗೇ ಪಾಪಕರ್ಮಣಃ|
12115008c ವಾಗೇವಾರ್ಥೋ ಭವೇತ್ತಸ್ಯ ನ ಹ್ಯೇವಾರ್ಥೋ ಜಿಘಾಂಸತಃ||

ಪಾಪ ಕರ್ಮಿಯ ಮಾತುಗಳ ಪ್ರಯೋಗಕ್ಕೆ ಪ್ರತಿಯಾಗಿ ಪ್ರಯೋಗಿಸದೇ ಇದ್ದರೆ ಹಿಂಸಿಸಲು ಬಯಸಿ ಮಾತನಾಡುತ್ತಿದ್ದ ಅವನಿಗೆ ಕೇವಲ ಕಂಠಶೋಷಣೆಯ ಪ್ರಯೋಜನವು ದೊರೆಯುತ್ತದೆ.

12115009a ನಿಷೇಕಂ ವಿಪರೀತಂ ಸ ಆಚಷ್ಟೇ ವೃತ್ತಚೇಷ್ಟಯಾ|
12115009c ಮಯೂರ ಇವ ಕೌಪೀನಂ ನೃತ್ಯನ್ಸಂದರ್ಶಯನ್ನಿವ||

ತಾನು ಚೆನ್ನಾಗಿ ಕಾಣುತ್ತಿದ್ದೇನೆಂದು ನವಿಲು ತನ್ನ ಕೌಪೀನವನ್ನೂ ತೋರಿಸಿಕೊಳ್ಳುತ್ತಾ ಕುಣಿಯುವಂತೆ ತನ್ನ ಹೇಯವರ್ತನಗಳನ್ನು ಪ್ರಕಟಿಸಿಕೊಳ್ಳುವ ಮಾತನಾಡುತ್ತಾನೆ ಮತ್ತು ದುರುಕ್ತಿಗಳನ್ನಾಡಿದ ತನ್ನ ಆತ್ಮಪ್ರಶಂಸೆಯನ್ನೂ ಮಾಡಿಕೊಳ್ಳುತ್ತಾನೆ.

12115010a ಯಸ್ಯಾವಾಚ್ಯಂ ನ ಲೋಕೇಽಸ್ತಿ ನಾಕಾರ್ಯಂ ವಾಪಿ ಕಿಂ ಚನ|
12115010c ವಾಚಂ ತೇನ ನ ಸಂದಧ್ಯಾಚ್ಛುಚಿಃ ಸಂಕ್ಲಿಷ್ಟಕರ್ಮಣಾ||

ಅವನ ಶಬ್ದ -ಲೋಕದಲ್ಲಿ ಆಡಬಾರದ ಶಬ್ದಗಳೇ ಇಲ್ಲ. ಅಂಥವನಿಗೆ ಮಾಡಬಾರದು ಎನ್ನುವುದು ಯಾವುದೂ ಇರುವುದಿಲ್ಲ. ಶುಚಿಯಾದವನು ಅತ್ಯಂತ ಸಂದಿಗ್ಧ ಕರ್ಮವಾದರೂ ಅವನ ಮಾತನ್ನು ಸಹಿಸಿಕೊಳ್ಳಬೇಕು.

12115011a ಪ್ರತ್ಯಕ್ಷಂ ಗುಣವಾದೀ ಯಃ ಪರೋಕ್ಷಂ ತು ವಿನಿಂದಕಃ|

12115011c ಸ ಮಾನವಃ ಶ್ವವಲ್ಲೋಕೇ ನಷ್ಟಲೋಕಪರಾಯಣಃ[421]॥

ಪ್ರತ್ಯಕ್ಷದಲ್ಲಿ ಗುಣಗಾನಮಾಡುವವನು ಮತ್ತು ಪರೋಕ್ಷದಲ್ಲಿ ನಿಂದಿಸುವ ಮಾನವನು ಲೋಕದಲ್ಲಿ ನಾಯಿಗಳಂತೆ ಇಹ-ಪರಗಳನ್ನು ಕಳೆದುಕೊಳ್ಳುತ್ತಾನೆ.

12115012a ತಾದೃಗ್ಜನಶತಸ್ಯಾಪಿ ಯದ್ದದಾತಿ ಜುಹೋತಿ ಚ|
12115012c ಪರೋಕ್ಷೇಣಾಪವಾದೇನ ತನ್ನಾಶಯತಿ ಸ ಕ್ಷಣಾತ್॥

ಪರೋಕ್ಷದಲ್ಲಿ ಅಪವಾದ-ನಿಂದನೆಗಳನ್ನು ಹೇಳುವವನು ಎಷ್ಟೇ ಯಾಗಗಳನ್ನು ಮಾಡಿದ್ದರೂ ದಾನಗಳನ್ನು ನೀಡಿದ್ದರೂ ಅವು ಕ್ಷಣದಲ್ಲಿಯೇ ನಾಶವಾಗುತ್ತವೆ.

12115013a ತಸ್ಮಾತ್ ಪ್ರಾಜ್ಞೋ ನರಃ ಸದ್ಯಸ್ತಾದೃಶಂ ಪಾಪಚೇತಸಮ್|
12115013c ವರ್ಜಯೇತ್ಸಾಧುಭಿರ್ವರ್ಜ್ಯಂ ಸಾರಮೇಯಾಮಿಷಂ ಯಥಾ॥

ಆದುದರಿಂದ ಪ್ರಾಜ್ಞ ನರನು ಅಂತಹ ಪಾಪಚೇತಸನನ್ನು – ಸಾಧುಜನರು ನಾಯಿಯ ಮಾಂಸವನ್ನು ವರ್ಜಿಸುವಂತೆ - ಒಡನೆಯೇ ವರ್ಜಿಸಬೇಕು.

12115014a ಪರಿವಾದಂ ಬ್ರುವಾಣೋ ಹಿ ದುರಾತ್ಮಾ ವೈ ಮಹಾತ್ಮನೇ|
12115014c ಪ್ರಕಾಶಯತಿ ದೋಷಾನ್ ಸ್ವಾನ್ಸರ್ಪಃ ಫಣಮಿವೋಚ್ಛ್ರಿತಮ್॥

ಮಹಾತ್ಮನ ನಿಂದೆಯನ್ನು ಮಾಡುವ ದುರಾತ್ಮನು ತನ್ನ ಹೆಡೆಯನ್ನೇ ಎತ್ತಿ ತೋರಿಸುವ ಸರ್ಪದಂತೆ ತನ್ನದೇ ದೋಷಗಳನ್ನು ಎತ್ತಿ

---

421 ನಷ್ಟಲೋಕಪರಾವರಃ| (ಭಾರತ ದರ್ಶನ).

ತೋರಿಸುತ್ತಾನೆ.

12115015a ತಂ ಸ್ವಕರ್ಮಾಣಿ ಕುರ್ವಾಣಂ ಪ್ರತಿಕರ್ತುಂ ಯ ಇಚ್ಚತಿ|
12115015c ಭಸ್ಮಕೂಟ ಇವಾಬುದ್ಧಿಃ ಖಿರೋ ರಜಸಿ ಮಜ್ಜತಿ||

ತನ್ನದೇ ಕರ್ಮದಲ್ಲಿ ತೊಡಗಿರುವ ಆ ಮೂರ್ಖನಿಗೆ ಪ್ರತೀಕಾರವನ್ನು ಮಾಡಬಯಸುವವನು ಬೂದಿಯ ಗುಡ್ಡೆಯಮೇಲೆ ಹೊರಳಾಡುವ ಮೂರ್ಖ ಕತ್ತೆಯಂತೆ ಧೂಳಿನಲ್ಲಿ ಮುಳುಗಿಹೋಗುತ್ತಾನೆ.

12115016a ಮನುಷ್ಯಶಾಲಾವೃಕಮಪ್ರಶಾಂತಂ
ಜನಾಪವಾದೇ ಸತತಂ ನಿವಿಷ್ಟಮ್|
12115016c ಮಾತಂಗಮುನ್ಮತ್ತಮಿವೋನ್ನದಂತಂ
ತ್ಯಜೇತ ತಂ ಶ್ವಾನಮಿವಾತಿರೌದ್ರಮ್||

ಸತತವೂ ಜನಾಪವಾದದಲ್ಲಿ ತೊಡಗಿರುವವನು ಮನುಷ್ಯಶರೀರದಲ್ಲಿ ವಾಸಿಸುವ ತೋಳದಂತೆ ಸದಾ ಅಶಾಂತಿಯಿಂದಿರುತ್ತಾನೆ. ಮದಿಸಿದ ಆನೆಯಂತೆ ಯಾವಾಗಲೂ ಕಿರುಚಿತ್ತಿರುತ್ತಾನೆ. ರೌದ್ರ ನಾಯಿಯಂತೆ ಯಾವಾಗಲೂ ಯಾರನ್ನಾದರೂ ಕಚ್ಚಲು ಓಡುತ್ತಲೇ ಇರುತ್ತಾನೆ. ಅಂಥವನನ್ನು ಸರ್ವದಾ ತ್ಯಜಿಸಬೇಕು.

12115017a ಅಧೀರಜುಷ್ಟೇ ಪಥಿ ವರ್ತಮಾನಂ
ದಮಾದಪೇತಂ ವಿನಯಾಚ್ಚ ಪಾಪಮ್|
12115017c ಅರಿವ್ರತಂ ನಿತ್ಯಮಭೂತಿಕಾಮಂ
ಧಿಗಸ್ತು ತಂ ಪಾಪಮತಿಂ ಮನುಷ್ಯಮ್||

ಹೇಡಿಗಳ ಪಥದಲ್ಲಿ ನಡೆಯುವ, ಜಿತೇಂದ್ರಿಯನಲ್ಲದ, ಅವಿನತನೂ ಪಾಪಿಷ್ಟನೂ ಆದ ನಿತ್ಯವೂ ಇತರರ ಅವನತಿಯನ್ನೇ ಬಯಸುವ

ಅರಿವ್ರತ ಪಾಪಮತಿ ಮನುಷ್ಯನಿಗೆ ಧಿಕ್ಕಾರವಿರಲಿ!

12115018a ಪ್ರತ್ಯುಚ್ಯಮಾನಸ್ತು ಹಿ ಭೂಯ ಏಭಿರ್
ನಿಶಾಮ್ಯ ಮಾ ಭೂಸ್ತ್ವಮಥಾರ್ತರೂಪಃ|
12115018c ಉಚ್ಚಸ್ಯ ನೀಚೇನ ಹಿ ಸಂಪ್ರಯೋಗಂ
ವಿಗರ್ಹಯಂತಿ ಸ್ಥಿರಬುದ್ಧಯೋ ಯೇ||

ಇಂತಹ ದುಷ್ಟನಿಗೆ ಪ್ರತಿಯಾಗಿ ಮಾತನಾಡಲು ಹೊರಟವನನ್ನು ನೋಡಿ ಹೇಳಬೇಕು: "ಸ್ಥಿರಬುದ್ಧಿಯು ನೀಚಪುರುಷನೊಡನೆ ವಾಗ್ವಿವಾದದಲ್ಲಿ ತೊಡಗುವುದನ್ನು ನಿಂದಿಸುತ್ತಾರೆ."

12115019a ಕ್ರುದ್ಧೋ ದಶಾರ್ಧೇನ ಹಿ ತಾಡಯೇದ್ವಾ
ಸ ಪಾಂಸುಭಿರ್ವಾಪಕಿರೇತ್ತುಷೈರ್ವಾ|
12115019c ವಿವೃತ್ಯ ದಂತಾಂಶ್ಚ ವಿಭೀಷಯೇದ್ವಾ
ಸಿದ್ಧಂ ಹಿ ಮೂರ್ಖೇ ಕುಪಿತೇ ನೃಶಂಸೇ||

ಮೂರ್ಖನು ಕ್ರುದ್ಧನಾದರೆ ಮುಷ್ಟಿಯಿಂದ ಪ್ರಹರಿಸಬಹುದು. ಧೂಳನ್ನು ಎರಚಬಹುದು. ಬಾಯನ್ನಗಲಿಸಿ ಹಲ್ಲುಬಿಗಿದು ಹೆದರಿಸಬಹುದು. ಆದುದರಿಂದ ಸತ್ಪುರುಷರು ಅಂತವನೊಂದಿಗೆ ವಾಗ್ಯುದ್ಧಕ್ಕೆ ತೊಡಗಬಾರದು.

12115020a ವಿಗರ್ಹಣಾಂ ಪರಮದುರಾತ್ಮನಾ ಕೃತಾಂ
ಸಹೇತ ಯಃ ಸಂಸದಿ ದುರ್ಜನಾನ್ನರಃ|
12115020c ಪಠೇದಿದಂ ಚಾಪಿ ನಿದರ್ಶನಂ ಸದಾ
ನ ವಾಜ್ಮಯಂ ಸ ಲಭತಿ ಕಿಂ ಚಿದಪ್ರಿಯಮ್||

ತುಂಬಿದ ಸಭೆಯಲ್ಲಿ ದುರಾತ್ಮನು ಮಾಡಿದ ನಿಂದನೆಯನ್ನು

ಸಹಿಸಿಕೊಂಡು ಆ ದೃಷ್ಟಾಂತವನ್ನು ಸದಾ ಹೇಳಿಕೊಳ್ಳುವ
ಸತ್ಪುರುಷನು ದುಷ್ಟರ ನಿಂದನೆಯಿಂದ ದುಃಖಿತರಾಗುವುದಿಲ್ಲ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಟಿಟ್ಟಿಭಕಂ ನಾಮ ಪಂಚದಶಾಧಿಕಶತತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ
ಪರ್ವದಲ್ಲಿ ಟಿಟ್ಟಿಭಕಂ ಎನ್ನುವ ನೂರಾಹದಿನೈದನೇ ಅಧ್ಯಾಯವು.

೧೧೬

ರಾಜನಲ್ಲಿಯೂ ರಾಜಸೇವಕರಲ್ಲಿಯೂ ಇರಬೇಕಾದ ಅವಶ್ಯ ಗುಣಗಳು (1-22).

12116001 ಯುಧಿಷ್ಠಿರ ಉವಾಚ|
12116001a ಪಿತಾಮಹ ಮಹಾಪ್ರಾಜ್ಞ ಸಂಶಯೋ ಮೇ ಮಹಾನಯಮ್|
12116001c ಸ ಚ್ಚೇತ್ತವ್ಯಸ್ತ್ವಯಾ ರಾಜನ್ ಭವಾನ್ ಕುಲಕರೋ ಹಿ ನಃ||

ಯುಧಿಷ್ಠಿರನು ಹೇಳಿದನು: “ಪಿತಾಮಹ! ಮಹಾಪ್ರಾಜ್ಞ! ರಾಜನ್!
ನನ್ನಲ್ಲಿ ಈ ಒಂದು ಮಹಾ ಸಂಶಯವಿದೆ. ಅದನ್ನು ನೀನು
ನಿವಾರಿಸಬಲ್ಲೆ. ಏಕೆಂದರೆ ನೀನು ನಮ್ಮ ಕುಲಕರನೇ ಅಲ್ಲವೇ?

12116002a ಪುರುಷಾಣಾಮಯಂ ತಾತ ದುರ್ವೃತ್ತಾನಾಂ ದುರಾತ್ಮನಾಮ್|
12116002c ಕಥಿತೋ ವಾಕ್ಯಸಂಚಾರಸ್ತತೋ ವಿಜ್ಞಾಪಯಾಮಿ ತೇ||

ಅಯ್ಯಾ! ನೀನು ಈಗ ದುರಾತ್ಮ ಪುರುಷರ ದುರ್ವೃತ್ತಿಯ ಕುರಿತು
ಹೇಳಿದೆಯಲ್ಲಿಯಲ್ಲವೇ? ಅದಕ್ಕೆ ಸಂಬಂಧಿಸಿದಂತೆ ಇದನ್ನು
ವಿಜ್ಞಾಪಿಸುತ್ತೇನೆ.

12116003a ಯದ್ಧಿತಂ ರಾಜ್ಯತಂತ್ರಸ್ಯ ಕುಲಸ್ಯ ಚ ಸುಖೋದಯಮ್|
12116003c ಆಯತ್ಯಾಂ ಚ ತದಾತ್ವೇ ಚ ಕ್ಷೇಮವೃದ್ಧಿಕರಂ ಚ ಯತ್||

ರಾಜತಂತ್ರಕ್ಕೆ ಹಿತವಾದ, ಕುಲಕ್ಕೆ ಸುಖೋದಯವಾದ, ಈಗ ಮತ್ತು ಮುಂದೆ ಕ್ಷೇಮಾಭಿವೃದ್ಧಿಯನ್ನು ನೀಡುವಂಥವುದು ಯಾವುದು?

12116004a ಪುತ್ರಪೌತ್ರಾಭಿರಾಮಂ ಚ ರಾಷ್ಟ್ರವೃದ್ಧಿಕರಂ ಚ ಯತ್|
12116004c ಅನ್ನಪಾನೇ ಶರೀರೇ ಚ ಹಿತಂ ಯತ್ತದ್ ಬ್ರೂಹಿ ಮೇ||

ಪುತ್ರಪೌತ್ರರಿಗೂ ಸುಖಕರವಾಗಿರುವ, ರಾಷ್ಟ್ರವೃದ್ಧಿಯನ್ನೂ ಮಾಡುವ, ಶರೀರದ ಅನ್ನಪಾನಗಳಲ್ಲಿ ಹಿತಕರವಾದುದು ಏನು? ಅದನ್ನು ನನಗೆ ಹೇಳು.

12116005a ಅಭಿಷಿಕ್ತೋ ಹಿ ಯೋ ರಾಜಾ ರಾಜ್ಯಸ್ಥೋ ಮಿತ್ರಸಂವೃತಃ|
12116005c ಅಸುಹೃತ್ಸಮುಪೇತೋ[422] ವಾ ಸ ಕಥಂ ರಂಜಯೇತ್ ಪ್ರಜಾಃ||

ರಾಜ್ಯಸ್ಥನಾಗಿ ಅಭಿಷಿಕ್ತನಾದ ರಾಜನು ಮಿತ್ರರಿಂದ ಅಥವಾ ಅಮಿತ್ರರಿಂದ ಸಂವೃತನಾಗಿರುತ್ತಾನೆ. ಅವನು ಹೇಗೆ ಪ್ರಜೆಗಳನ್ನು ರಂಜಿಸಬಹುದು?

12116006a ಯೋ ಹ್ಯಸತ್ಪ್ರಗ್ರಹರತಿಃ ಸ್ನೇಹರಾಗಬಲಾತ್ಕೃತಃ|
12116006c ಇಂದ್ರಿಯಾಣಾಮನೀಶತ್ವಾದಸಜ್ಜನಬುಭೂಷಕಃ||
12116007a ತಸ್ಯ ಭೃತ್ಯಾ ವಿಗುಣತಾಂ ಯಾಂತಿ ಸರ್ವೇ ಕುಲೋದ್ಗತಾಃ|
12116007c ನ ಚ ಭೃತ್ಯಫಲೈರರ್ಥೈಃ ಸ ರಾಜಾ ಸಂಪ್ರಯುಜ್ಯತೇ||

ಅಸದ್ವಸ್ತುಗಳ ಸಂಗ್ರಹದಲ್ಲಿಯೇ ಆಸಕ್ತನಾಗಿರುವ, ಸ್ನೇಹ-ರಾಗಗಳಿಗೆ

[422] ಸಸುಹೃತ್ಸಮುಪೇತೋ (ಭಾರತ ದರ್ಶನ).

ಅಧೀನನಾದ, ಇಂದ್ರಿಯಗಳನ್ನು ವಶಪಡಿಸಿಕೊಳ್ಳದೇ ಅಸಜ್ಜನರನ್ನೇ
ಸಂಗ್ರಹಿಸಿರುವ ರಾಜನ ಸೇವಕರೆಲ್ಲರೂ ಕುಲಪ್ರಸೂತರಾಗಿದ್ದರೂ
ಸದ್ಗುಣವಿಲ್ಲದವರೇ ಆಗಿರುತ್ತಾರೆ. ಆಗ ರಾಜನು ಸೇವಕರಿಂದ
ಪಡೆಯಬಹುದಾದ ಫಲಗಳಿಂದ ವಂಚಿತನಾಗುತ್ತಾನೆ.

12116008a ಏತಾನ್ಮೇ ಸಂಶಯಸ್ಥಸ್ಯ ರಾಜಧರ್ಮಾನ್ಸುದುರ್ಲಭಾನ್|
12116008c ಬೃಹಸ್ಪತಿಸಮೋ ಬುದ್ಧ್ಯಾ ಭವಾನ್ ಶಂಸಿತುಮರ್ಹತಿ||

ಹೀಗೆ ಸುದುರ್ಲಭವಾದ ರಾಜಧರ್ಮದ ಕುರಿತು ನನಗೆ ಈ
ಸಂಶಯಗಳಿವೆ. ಬುದ್ಧಿಯಲ್ಲಿ ಬೃಹಸ್ಪತಿಸಮನಾಗಿರುವ ನೀನು
ಹೇಳಬೇಕು.

12116009a ಶಂಸಿತಾ ಪುರುಷವ್ಯಾಘ್ರ ತ್ವಂ ನಃ ಕುಲಹಿತೇ ರತಃ|
12116009c ಕ್ಷತ್ತಾ ಚೈವ ಪಟುಪ್ರಜ್ಞೋ ಯೋ ನಃ ಶಂಸತಿ ಸರ್ವದಾ||

ಪುರುಷವ್ಯಾಘ್ರ! ನಮ್ಮ ಕುಲದ ಹಿತದಲ್ಲಿಯೇ ನಿರತನಾಗಿರುವ ನೀನು
ನಮಗೆ ಉಪದೇಶಮಾಡಬಹುದು. ಪಟುಪ್ರಜ್ಞ ಕ್ಷತ್ತನೂ ಕೂಡ ನಮಗೆ
ಸರ್ವದಾ ಉಪದೇಶ ನೀಡುತ್ತಿರುತ್ತಾನೆ.

12116010a ತ್ವತ್ತಃ ಕುಲಹಿತಂ ವಾಕ್ಯಂ ಶ್ರುತ್ವಾ ರಾಜ್ಯಹಿತೋದಯಮ್|
12116010c ಅಮೃತಸ್ಯಾವ್ಯಯಸ್ಯೇವ ತೃಪ್ತಃ ಸ್ವಪ್ಸ್ಯಾಮ್ಯಹಂ ಸುಖಮ್||

ಕುಲಹಿತವಾಗಿರುವ ಮತ್ತು ರಾಜ್ಯದ ಹಿತವನ್ನು ಹೆಚ್ಚಿಸುವ ನಿನ್ನ
ಮಾತನ್ನು ಕೇಳಿ ಅಮೃತವನ್ನು ಸೇವಿಸಿದವನಷ್ಟೇ ತೃಪ್ತನಾಗಿ ನಾನು
ಸುಖವಾಗಿ ನಿದ್ರಿಸುತ್ತೇನೆ.

12116011a ಕೀದೃಷಾಃ ಸಂನಿಕರ್ಷಸ್ಥಾ ಭೃತ್ಯಾಃ ಸ್ಯುರ್ವಾ ಗುಣಾನ್ವಿತಾಃ|

12116011c ಕೀದೃಶೈಃ ಕಿಂಕುಲೀನೈರ್ವಾ ಸಹ ಯಾತ್ರಾ ವಿಧೀಯತೇ||

ಗುಣಾನ್ವಿತರಾದ ಎಂಥಹ ಸೇವಕರು ರಾಜನ ಸಮೀಪದಲ್ಲಿರಲು ಇಚ್ಛಿಸುತ್ತಾರೆ? ಯಾವ ಕುಲದಲ್ಲಿ ಹುಟ್ಟಿದ ಎಂಥವರೊಂದಿಗೆ ರಾಜನು ಯಾತ್ರೆಯನ್ನು ಕೈಗೊಳ್ಳಬಹುದು?

12116012a ನ ಹ್ಯೇಕೋ ಭೃತ್ಯರಹಿತೋ ರಾಜಾ ಭವತಿ ರಕ್ಷಿತಾ|
12116012c ರಾಜ್ಯಂ ಚೇದಂ ಜನಃ ಸರ್ವಸ್ತತ್ಕುಲೀನೋಽಭಿಶಂಸತಿ||

ಭೃತ್ಯರಹಿತನಾದ ರಾಜನು ಒಬ್ಬನೇ ರಾಜ್ಯವನ್ನು ರಕ್ಷಿಸಲಾರನು. ಕುಲೀನರಾದ ಸರ್ವರೂ ರಾಜ್ಯವನ್ನು ಬಯಸುತ್ತಾರೆ.

[423]12116013a ನ ಹಿ ಪ್ರಶಾಸ್ತುಂ ರಾಜ್ಯಂ ಹಿ ಶಕ್ಯಮೇಕೇನ ಭಾರತ|
12116013c ಅಸಹಾಯವತಾ ತಾತ ನೈವಾರ್ಥಾಃ ಕೇ ಚಿದಪ್ಯುತ|
12116013e ಲಬ್ಧ್ವಂ ಲಬ್ಧ್ವಾ ಚಾಪಿ ಸದಾ ರಕ್ಷಿತುಂ ಭರತರ್ಷಭ||

ಭಾರತ! ಭರತರ್ಷಭ! ರಾಜನು ಒಬ್ಬನೇ ರಾಜ್ಯವನ್ನಾಳಲು ಶಕ್ಯವಿಲ್ಲ. ಅಯ್ಯಾ! ಸಹಾಯವಿಲ್ಲದೇ ಬೇರೆ ಯಾವ ಅರ್ಥಸಿದ್ಧಿಯೂ ಸಾಧ್ಯವಾಗುವುದಿಲ್ಲ. ರಾಜ್ಯವನ್ನು ಪಡೆದುಕೊಂಡರೂ ಸಹಾಯಕರಿಲ್ಲದೇ ಅದನ್ನು ರಕ್ಷಿಸಿಕೊಳ್ಳಲೂ ಸಾಧ್ಯವಾಗುವುದಿಲ್ಲ.”

12116014 ಭೀಷ್ಮ ಉವಾಚ|
12116014a ಯಸ್ಯ ಭೃತ್ಯಜನಃ ಸರ್ವೋ ಜ್ಞಾನವಿಜ್ಞಾನಕೋವಿದಃ|
12116014c ಹಿತೈಷೀ ಕುಲಜಃ ಸ್ನಿಗ್ಧಃ ಸ ರಾಜ್ಯಫಲಮಶ್ನುತೇ||

ಭೀಷ್ಮನು ಹೇಳಿದನು: “ಯಾರ ಭೃತ್ಯಜನರೆಲ್ಲರೂ

---

423 ಈ ಶ್ಲೋಕದ ಮೊದಲು ಭೀಷ್ಮ ಉವಾಚ| (ಭಾರತ ದರ್ಶನ).

ಜ್ಞಾನವಿಜ್ಞಾನಕೋವಿದರೂ, ಹಿತೈಷಿಗಳೂ, ಉತ್ತಮ ಕುಲೀನರೂ ಮತ್ತು ಸ್ನೇಹಪರರೂ ಆಗಿರುವರೋ ಆ ರಾಜನು ರಾಜ್ಯಫಲವನ್ನು ಭೋಗಿಸುತ್ತಾನೆ.

12116015a ಮಂತ್ರಿಣೋ ಯಸ್ಯ ಕುಲಜಾ ಅಸಂಹಾರ್ಯಾಃ ಸಹೋಷಿತಾಃ|
12116015c ನೃಪತೇರ್ಮತಿದಾಃ ಸಂತಿ ಸಂಬಂಧಜ್ಞಾನಕೋವಿದಾಃ||
12116016a ಅನಾಗತವಿಧಾತಾರಃ ಕಾಲಜ್ಞಾನವಿಶಾರದಾಃ|
12116016c ಅತಿಕ್ರಾಂತಮಶೋಚಂತಃ ಸ ರಾಜ್ಯಫಲಮಶ್ನುತೇ||

ಯಾರ ಮಂತ್ರಿಗಳು ಉತ್ತಮ ಕುಲೀನರೂ, ಅಸಂಹಾರ್ಯರೂ[424], ಜೊತೆಗೇ ವಾಸಮಾಡುವವರೂ, ನೃಪತಿಗೆ ಬುದ್ಧಿಹೇಳುವವರೂ, ಸಂಬಂಧಜ್ಞಾನಕೋವಿದರೂ, ಮುಂದಾಗುವುದನ್ನು ತಿಳಿದು ಕಾರ್ಯಮಾಡುವವರೂ, ಕಾಲಜ್ಞಾನ ವಿಶಾರದರೂ, ಕಳೆದುಹೋದುದಕ್ಕೆ ಶೋಕಪಡದಿರುವವರೂ ಆಗಿರುತ್ತಾರೋ ಆ ರಾಜನು ರಾಜ್ಯಫಲವನ್ನು ಭೋಗಿಸುತ್ತಾನೆ.

12116017a ಸಮದುಃಖಸುಖಾ ಯಸ್ಯ ಸಹಾಯಾಃ ಸತ್ಯಕಾರಿಣಃ[425]|
12116017c ಅರ್ಥಚಿಂತಾಪರಾ ಯಸ್ಯ ಸ ರಾಜ್ಯಫಲಮಶ್ನುತೇ||

ಯಾರ ಸಹಾಯಕರು ಸಮದುಃಖಿಗಳೂ ಸಮಸುಖಿಗಳೂ ಆಗಿರುವರೋ, ಸತ್ಯವಾದುದನ್ನೇ ಮಾಡುವವರೋ, ರಾಜನ ಉದ್ದೇಶಗಳ ಕುರಿತೇ ಚಿಂತಿಸುವವರೋ ಆ ರಾಜನು ರಾಜ್ಯಫಲವನ್ನು

---

424 ಧನಲೋಭಕ್ಕೆ ಒಳಗಾಗಿ ರಾಜನಿಂದ ಪ್ರತ್ಯೇಕವಾಗದಿರುವವರು (ಭಾರತ ದರ್ಶನ).

425 ಪ್ರಿಯಕಾರಿಣಃ (ಭಾರತ ದರ್ಶನ).

ಭೋಗಿಸುತ್ತಾನೆ.

12116018a ಯಸ್ಯ ನಾತೋರ್ ಜನಪದಃ ಸಂನಿಕರ್ಷಗತಃ ಸದಾ|
12116018c ಅಕ್ಷುದ್ರಃ ಸತ್ಪಥಾಲಂಬೀ ಸ ರಾಜ್ಯಫಲಭಾಗ್ಭವೇತ್||

ಯಾರ ಜನಪದವು ಆರ್ತವಾಗಿಲ್ಲವೋ, ಸದಾ ಒಗ್ಗಟ್ಟಿನಲ್ಲಿಯೇ ಇರುವುದೋ, ಅಕ್ಷುದ್ರವಾಗಿದೆಯೋ ಮತ್ತು ಸತ್ಪಥವನ್ನು ಅವಲಂಬಿಸಿರುವುದೋ ಆ ರಾಜನು ರಾಜ್ಯಫಲವನ್ನು ಭೋಗಿಸುತ್ತಾನೆ.

12116019a ಕೋಶಾಕ್ಷಪಟಲಂ[426] ಯಸ್ಯ ಕೋಶವೃದ್ಧಿಕರೈರ್ಜನೈಃ|
12116019c ಆಪ್ತೈಸ್ತುಷ್ಟೈಶ್ಚ ಸತತಂ ಧಾರ್ಯತೇ[427] ಸ ನೃಪೋತ್ತಮಃ||

ಯಾರ ಕೋಶವೃದ್ಧಿಕಾರಕ ಜನರು ಆಪ್ತರೂ ತುಷ್ಟರೂ ಮತ್ತು ಕೋಶವನ್ನು ವೃದ್ಧಿಸುವುದರಲ್ಲಿಯೇ ಸದಾ ನಿರತರೂ ಆಗಿರುತ್ತಾರೋ ಆ ನೃಪೋತ್ತಮನು ಸತತವೂ ರಾಜ್ಯವನ್ನಿಟ್ಟುಕೊಂಡಿರುತ್ತಾನೆ.

12116020a ಕೋಷ್ಠಾಗಾರಮಸಂಹಾರ್ಯೈರಾಪ್ತೈಃ ಸಂಚಯತತ್ಪರೈಃ|
12116020c ಪಾತ್ರಭೂತೈರಲುಬ್ಧೈಶ್ಚ ಪಾಲ್ಯಮಾನಂ ಗುಣೀಭವೇತ್||

ಧನಲೋಭದಿಂದ ಆಕರ್ಷಿತರಾಗದ, ವಿಶ್ವಾಸಪಾತ್ರ, ಕೋಶಸಂಹಶೀಲ, ಸತ್ಪಾತ್ರ, ಲೋಭರಹಿತ ಜನರು ಧಾನ್ಯಾದಿಗಳಿಂದ ಕೂಡಿರುವ ಉಗ್ರಾಣಗಳನ್ನೂ ಬೊಕ್ಕಸವನ್ನೂ ರಕ್ಷಿಸುತ್ತಿದ್ದರೆ ಕೋಷ್ಠಾಗಾರಗಳು ಇಮ್ಮಡಿಯಾಗುತ್ತವೆ.

12116021a ವ್ಯವಹಾರಶ್ಚ ನಗರೇ ಯಸ್ಯ ಕರ್ಮಫಲೋದಯಃ|

---

[426] ಕೋಟಾಖ್ಯಪಟಲಂ (ಭಾರತ ದರ್ಶನ).

[427] ಚೀಯತೇ (ಭಾರತ ದರ್ಶನ).

12116021c ದೃಶ್ಯತೇ ಶಂಖಲಿಖಿತಃ ಸ ಧರ್ಮಫಲಭಾಗ್ಭವೇತ್‌||

ಯಾರ ನಗರದಲ್ಲಿ ಕರ್ಮಫಲದಿಂದುಂಟಾದ ಶಂಖ-ಲಿಖಿತ ಮುನಿಗಳು[428] ತೋರಿಸಿಕೊಟ್ಟಿರುವ ನ್ಯಾಯವನ್ನು ಪಾಲಿಸಲಾಗುತ್ತದೆಯೋ ಅಂತಹ ರಾಜನು ಧರ್ಮಫಲವನ್ನು ಭೋಗಿಸುತ್ತಾನೆ.

12116022a ಸಂಗೃಹೀತಮನುಷ್ಯಶ್ಚ ಯೋ ರಾಜಾ ರಾಜಧರ್ಮವಿತ್‌|
12116022c ಷಡ್ವರ್ಗಂ ಪ್ರತಿಗೃಹ್ಣನ್ಸ ಧರ್ಮಾತ್‌ ಫಲಮುಪಾಶ್ನುತೇ‌||

ರಾಜಧರ್ಮವನ್ನು ತಿಳಿದ ಯಾವ ರಾಜನು ಸತ್ಪುರುಷರನ್ನು ಸಂಗ್ರಹಿಸುವನೋ ಮತ್ತು ಸಮಯಾನುಸಾರವಾಗಿ ಸಂಧಿ-ವಿಗ್ರಹಗಳೇ ಮೊದಲಾದ ಆರು ಗುಣಗಳನ್ನು ಪ್ರಯೋಗಿಸುವನೋ ಅವನು ರಾಜಧರ್ಮವನ್ನು ಪಾಲಿಸಿದ ಫಲವನ್ನು ಭೋಗಿಸುತ್ತಾನೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಷೋಡಶಾಧಿಕಶತತಮೋऽಧ್ಯಾಯಃ‌||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ನೂರಾಹದಿನಾರನೇ ಅಧ್ಯಾಯವು.

೧೧೭

[428] ಇದೇ ಶಾಂತಿಪರ್ವದ ಅಧ್ಯಾಯ 24ರಲ್ಲಿ ವ್ಯಾಸನು ಯುಧಿಷ್ಠಿರನಿಗೆ ಶಂಖ-ಲಿಖಿತರ ಆಖ್ಯಾನವನ್ನು ಹೇಳಿದ್ದನು.

ಋಷಿರ್ಸಂವಾದ[429]

ಋಷಿ ಮತ್ತು ನಾಯಿಯ ಕಥೆ (1-44).

[430]12117001 ಭೀಷ್ಮ ಉವಾಚ|
12117001a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12117001c ನಿದರ್ಶನಕರಂ ಲೋಕೇ ಸಜ್ಜನಾಚರಿತಂ ಸದಾ||

ಭೀಷ್ಮನು ಹೇಳಿದನು: "ಲೋಕದಲ್ಲಿ ಸಜ್ಜನರ ಆಚರಣೆಗಳ ಕುರಿತು
ನಿದರ್ಶನಕರವಾದ ಈ ಪುರಾತನ ಇತಿಹಾಸವನ್ನು
ಉದಾಹರಿಸುತ್ತಾರೆ.

12117002a ಅಸ್ಯೈವಾರ್ಥಸ್ಯ ಸದೃಶಂ ಯಚ್ಚ್ರುತಂ ಮೇ ತಪೋವನೇ|
12117002c ಜಾಮದಗ್ನ್ಯಸ್ಯ ರಾಮಸ್ಯ ಯದುಕ್ತಮೃಷಿಸತ್ತಮೈಃ||

ಇದೇ ಅರ್ಥವನ್ನು ನೀಡುವ ವಿಷಯವನ್ನು ತಪೋವನದಲ್ಲಿ
ಋಷಿಸತ್ತಮರು ಜಾಮದಗ್ನಿ ರಾಮನಿಗೆ ಹೇಳಿದುದನ್ನು ನಾನು ಕೇಳಿದ್ದೆ.

12117003a ವನೇ ಮಹತಿ ಕಸ್ಮಿಂಶ್ಚಿದಮನುಷ್ಯನಿಷೇವಿತೇ|
12117003c ಋಷಿರ್ಮೂಲಫಲಾಹಾರೋ ನಿಯತೋ ನಿಯತೇಂದ್ರಿಯಃ||

---

429 ಈ ಅಧ್ಯಾಯವನ್ನು ಎರಡು ಅಧ್ಯಾಯಗಳಲ್ಲಿಯೂ ಕೊಟ್ಟಿದ್ದಾರೆ (ಗೀತಾ ಪ್ರೆಸ್).

430 ದಕ್ಷಿಣಾತ್ಯ ಪಾಠದಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಯುಧಿಷ್ಠಿರ ಉವಾಚ| ನ ಸಂತಿ ಕುಲಜಾ ಯತ್ರ ಸಹಾಯಾಃ ಪಾರ್ಥಿವಸ್ಯ ತು| ಅಕುಲೀನಶ್ಚ ಕರ್ತವ್ಯಾ ನ ವಾ ಭರತಸತ್ತಮ|| (ಗೀತಾ ಪ್ರೆಸ್).

ಒಂದು ಮಹಾ ನಿರ್ಜನ ವನದಲ್ಲಿ ಮೂಲಫಲಗಳನ್ನೇ ಸೇವಿಸುತ್ತಿದ್ದ ನಿಯತಾತ್ಮ ನಿಯತೇಂದ್ರಿಯ ಋಷಿಯೋರ್ವನಿದ್ದನು.

12117004a ದೀಕ್ಷಾದಮಪರಃ ಶಾಂತಃ ಸ್ವಾಧ್ಯಾಯಪರಮಃ ಶುಚಿಃ|
12117004c ಉಪವಾಸವಿಶುದ್ಧಾತ್ಮಾ ಸತತಂ ಸತ್ಪಥೇ ಸ್ಥಿತಃ||

ಉತ್ತಮ ದೀಕ್ಷೆಯನ್ನು ಕೈಗೊಂಡಿದ್ದ ಆ ಶಾಂತ, ಸ್ವಾಧ್ಯಾಯಪರ, ಪರಮ ಶುಚಿ, ವಿಶುದ್ಧಾತ್ಮಾ, ಉಪವಾಸವ್ರತವನ್ನು ಕೈಗೊಂಡಿದ್ದ ಅವನು ಸತತವೂ ಸತ್ಪಥದಲ್ಲಿಯೇ ಸ್ಥಿತನಾಗಿದ್ದನು.

12117005a ತಸ್ಯ ಸಂದೃಶ್ಯ ಸದ್ಭಾವಮುಪವಿಷ್ಟಸ್ಯ ಧೀಮತಃ|
12117005c ಸರ್ವಸತ್ತ್ವಾಃ ಸಮೀಪಸ್ಥಾ ಭವಂತಿ ವನಚಾರಿಣಃ||

ಸದ್ಭಾವದಿಂದ ಅಲ್ಲಿ ಕುಳಿತಿದ್ದ ಧೀಮತನನ್ನು ಕಂಡು ವನಚಾರಿಣೀ ಸರ್ವ ಸತ್ತ್ವಗಳೂ ಅವನ ಸಮೀಪಕ್ಕೆ ಬರತೊಡಗಿದವು.

12117006a ಸಿಂಹವ್ಯಾಘ್ರಾಃ ಸಶರಭಾ ಮತ್ತಾಶ್ಚೈವ ಮಹಾಗಜಾಃ|
12117006c ದ್ವೀಪಿನಃ ಖಡ್ಗಭಲ್ಲೂಕಾ ಯೇ ಚಾನ್ಯೇ ಭೀಮದರ್ಶನಾಃ||
12117007a ತೇ ಸುಖಪ್ರಶ್ನದಾಃ ಸರ್ವೇ ಭವಂತಿ ಕ್ಷತಜಾಶನಾಃ|
12117007c ತಸ್ಯರ್ಷೇಃ ಶಿಷ್ಯವಚ್ಚೈವ ನ್ಯಗ್ಭೂತಾಃ ಪ್ರಿಯಕಾರಿಣಃ||

ಸಿಂಹ-ವ್ಯಾಘ್ರಗಳೂ, ಶರಭಗಳೂ, ಮದಿಸಿದ ಮಹಾಗಜಗಳೂ, ಚಿರತೆಗಳು, ಖಡ್ಗಮೃಗಗಳು, ಭಲ್ಲೂಕಗಳು ಮತ್ತು ಅನ್ಯ ಭೀಮದರ್ಶನ ಮೃಗಗಳು ಎಲ್ಲವೂ ಮಾಂಸಾಹಾರಿಗಳಾಗಿದ್ದರೂ ಆ ಋಷಿಯ ಬಳಿಬಂದು ಶಿಷ್ಯರಂತೆ ತಲೆತಗ್ಗಿಸಿ ಅವನು ಸುಖವಾಗಿದ್ದೀರಾ ಎಂದು ಕೇಳಿದುದಕ್ಕೆ ಸುಖದಿಂದಿದ್ದೇವೆ ಎಂದು ಹೇಳಿದವು.

12117008a ದತ್ತ್ವಾ ಚ ತೇ ಸುಖಪ್ರಶ್ನಂ ಸರ್ವೇ ಯಾಂತಿ ಯಥಾಗತಮ್|
12117008c ಗ್ರಾಮ್ಯಸ್ತ್ವೇಕಃ ಪಶುಸ್ತತ್ರ ನಾಜಹಾಚ್ಚ್ವ ಮಹಾಮುನಿಮ್||

ಅವನ ಕುಶಲ ಪ್ರಶ್ನೆಗೆ ಉತ್ತರವನ್ನಿತ್ತು ಅವೆಲ್ಲವೂ ಎಲ್ಲಿಂದ ಬಂದಿದ್ದವೋ ಅಲ್ಲಿಗೆ ಹೋದವು. ಒಂದು ಗ್ರಾಮ್ಯ ಪ್ರಾಣಿಯು ಮಾತ್ರ ಆ ಮಹಾಮುನಿಯನ್ನು ಬಿಟ್ಟು ಹೋಗಲಿಲ್ಲ.

12117009a ಭಕ್ತೋಽನುರಕ್ತಃ ಸತತಮುಪವಾಸಕೃಶೋಽಬಲಃ|
12117009c ಫಲಮೂಲೋತ್ಕರಾಹಾರಃ ಶಾಂತಃ ಶಿಷ್ಯಾಕೃತಿರ್ಯಥಾ||

ಅದು ಆ ಮುನಿಯ ಭಕ್ತನೂ ಅನುರಕ್ತನೂ ಆಗಿದ್ದುಕೊಂಡು, ಸತತವೂ ಫಲಮೂಲಗಳನ್ನು ಮಾತ್ರ ತಿಂದು ಉಪವಾಸಮಾಡುತ್ತಿತ್ತು. ಉಪವಾಸದಿಂದ ಕೃಶನೂ ಅಬಲನೂ ಆಗಿದ್ದ ಆ ಶಾಂತ ಪ್ರಾಣಿಯು ಶಿಷ್ಯನಂತೆಯೇ ನಡೆದುಕೊಳ್ಳುತ್ತಾ ಅಲ್ಲಿಯೇ ಉಳಿದುಕೊಂಡುಬಿಟ್ಟಿತು.

12117010a ತಸ್ಯರ್ಷೇರುಪವಿಷ್ಟಸ್ಯ ಪಾದಮೂಲೇ ಮಹಾಮುನೇಃ|
12117010c ಮನುಷ್ಯವದ್ಗತೋ ಭಾವಃ ಸ್ನೇಹಬದ್ಧೋಽಭವದ್ಭೃಶಮ್||

ಆ ಮಹಾಮುನಿ ಋಷಿಯ ಪಾದಮೂಲದಲ್ಲಿ ಕುಳಿತುಕೊಂಡಿದ್ದ ಅದಕ್ಕೆ ತಾನೂ ಮನುಷ್ಯನೇ ಎಂಬ ಭಾವನೆಯು ಮೂಡಿತ್ತು ಮತ್ತು ಅದು ಅವನನ್ನು ಸ್ನೇಹಪಾಶದಿಂದ ಬಂಧಿಸಿಬಿಟ್ಟಿತು.

12117011a ತತೋಽಭ್ಯಯಾನ್ಮಹಾವೀರ್ಯೋ ದ್ವೀಪೀ ಕ್ಷತಜಭೋಜನಃ|
12117011c ಶ್ವಾರ್ಥಮತ್ಯಂತಸಂದುಷ್ಟಃ ಕ್ರೂರಃ ಕಾಲ ಇವಾಂತಕಃ||
12117012a ಲೇಲಿಹ್ಯಮಾನಸ್ತೃಷಿತಃ ಪುಚ್ಛಾಸ್ಫೋಟನತತ್ಪರಃ|
12117012c ವ್ಯಾದಿತಾಸ್ಯಃ ಕ್ಷುಧಾಭಗ್ನಃ ಪ್ರಾರ್ಥಯಾನಸ್ತದಾಮಿಷಮ್||

ಆಗ ಮಹಾವೀರ್ಯ ರಕ್ತಭೋಜೀ, ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವುದರಲ್ಲಿಯೇ ಗುರಿಯಿಟ್ಟಿದ್ದ ಚಿರತೆಯೊಂದು ಕ್ರೂರ ಕಾಲ ಅಂತಕನಂತೆ ಬಾಯಾರಿ ಬಾಯಿಕಳೆದು ನಾಲಿಗೆಚಾಚಿ, ಬಾಲವನ್ನು ಹೊಡೆಯುತ್ತಾ, ತನ್ನ ಬಾಯಾರಿಕೆಯನ್ನು ತಣಿಸುವ ಆಮಿಷವನ್ನು ಬಯಸಿ ಆಕ್ರಮಣಮಾಡಿತು.

12117013a ತಂ ದೃಷ್ಟ್ವಾ ಕ್ರೂರಮಾಯಾಂತಂ ಜೀವಿತಾರ್ಥೀ ನರಾಧಿಪ|
12117013c ಪ್ರೋವಾಚ ಶ್ವಾ ಮುನಿಂ ತತ್ರ ಯತ್ತಚ್ಚ್ರೂಣು ಮಹಾಮತೇ||

ನರಾಧಿಪ! ಮೇಲೇರಲು ಬರುತ್ತಿದ್ದ ಆ ಕ್ರೂರ ಪ್ರಾಣಿಯನ್ನು ನೋಡಿ ಜೀವಿತಾರ್ಥೀ ನಾಯಿಯು ಮುನಿಗೆ ಇದನ್ನು ಹೇಳಿತು. ಮಹಾಮತೇ! ಅದನ್ನು ಕೇಳು.

12117014a ಶ್ವಶತ್ರುರ್ಭಗವನ್ನತ್ರ ದ್ವೀಪೀ ಮಾಂ ಹಂತುಮಿಚ್ಚತಿ|
12117014c ತ್ವತ್ಪ್ರಸಾದಾದ್ಭಯಂ ನ ಸ್ಯಾತ್ತಸ್ಮಾನ್ಮಮ ಮಹಾಮುನೇ||

“ಮಹಾಮುನೇ! ನಾಯಿಗಳಿಗೆ ಶತ್ರುವಾದ ಆ ಚಿರತೆಯು ನನ್ನನ್ನು ಕೊಲ್ಲಲು ಬಯಸುತ್ತಿದೆ. ನಿನ್ನ ದಯೆಯಿಂದ ನನಗೆ ಭಯವಾಗದಂತೆ ಮಾಡು.”

12117015 ಮುನಿರುವಾಚ|
12117015a ನ ಭಯಂ ದ್ವೀಪಿನಃ ಕಾರ್ಯಂ ಮೃತ್ಯುತಸ್ತೇ ಕಥಂ ಚನ|
12117015c ಏಷ ಶ್ವರೂಪರಹಿತೋ ದ್ವೀಪೀ ಭವಸಿ ಪುತ್ರಕ||

ಮುನಿಯು ಹೇಳಿದನು: “ಈ ಚಿರತೆಯ ಮೇಲೆ ಭಯಪಡಬೇಡ! ಅದು ಎಂದೂ ನಿನ್ನ ಮೃತ್ಯುವಾಗಲಾರದು. ಪುತ್ರಕ! ನೀನೀಗಲೇ ಈ ನಾಯಿಯ ರೂಪವನ್ನು ಬಿಟ್ಟು ಚಿರತೆಯೇ ಆಗುವೆ!””

12117016 ಭೀಷ್ಮ ಉವಾಚ|

12117016a ತತಃ ಶ್ವಾ ದ್ವೀಪಿತಾಂ ನೀತೋ ಜಾಂಬೂನದನಿಭಾಕೃತಿಃ|
12117016c ಚಿತ್ರಾಂಗೋ ವಿಸ್ಫುರನ್ ಹೃಷ್ಟೋ ವನೇ ವಸತಿ ನಿರ್ಭಯಃ||

ಭೀಷ್ಮನು ಹೇಳಿದನು: "ಆಗ ನಾಯಿಯು ಚಿರತೆಯಾಗಿ ಪರಿವರ್ತಿತಗೊಂಡಿತು. ಚಿನ್ನದಂತೆ ಥಳಥಳಿಸುವ ಆಕೃತಿಯಿದ್ದ ಆ ಚಿತ್ರಾಂಗ ಚಿರತೆಯು ಸಂತೋಷದಿಂದ ನಿರ್ಭಯವಾಗಿ ವನದಲ್ಲಿ ವಾಸಿಸತೊಡಗಿತು.

12117017a ತತೋಽಭ್ಯಯಾನ್ಮಹಾರೌದ್ರೋ ವ್ಯಾದಿತಾಸ್ಯಃ ಕ್ಷುಧಾನ್ವಿತಃ|
12117017c ದ್ವೀಪಿನಂ ಲೇಲಿಹದ್ವಕ್ತ್ರೋ ವ್ಯಾಘ್ರೋ ರುಧಿರಲಾಲಸಃ||

ಆಗ ಬಾಯಾರಿಕೆಯಿಂದ ಬಳಲಿದ್ದ ಮಹಾರೌದ್ರ ವ್ಯಾಘ್ರವು ಆ ಚಿರತೆಯ ರಕ್ತವನ್ನು ಕುಡಿಯಲು ಬಯಸಿ ಬಾಯಿಕಳೆದು ಕಟವಾಯಿಗಳನ್ನು ನೆಕ್ಕುತ್ತಾ ಬಂದಿತು.

12117018a ವ್ಯಾಘ್ರಂ ದೃಷ್ಟ್ವಾ ಕ್ಷುಧಾಭಗ್ನಂ ದಂಷ್ಟ್ರಿಣಂ ವನಗೋಚರಮ್|
12117018c ದ್ವೀಪೀ ಜೀವಿತರಕ್ಷಾರ್ಥಮೃಷಿಂ ಶರಣಮೇಯಿವಾನ್||

ಬಾಯಾರಿಕೆಯಿಂದ ಬಳಲಿದ್ದ ಕೋರೆದಾಡೆಗಳಿದ್ದ ಆ ವನಗೋಚರ ವ್ಯಾಘ್ರವನ್ನು ನೋಡಿ ಜೀವದ ರಕ್ಷಣಾರ್ಥವಾಗಿ ಆ ಚಿರತೆಯು ಋಷಿಯನ್ನು ಶರಣುಹೊಕ್ಕಿತು.

12117019a ತತಃ ಸಂವಾಸಜಂ ಸ್ನೇಹಮೃಷಿಣಾ ಕುರ್ವತಾ ಸದಾ|
12117019c ಸ ದ್ವೀಪೀ ವ್ಯಾಘ್ರತಾಂ ನೀತೋ ರಿಪುಭಿರ್ಬಲವತ್ತರಃ|
12117019e ತತೋ ದೃಷ್ಟ್ವಾ ಸ ಶಾರ್ದೂಲೋ ನಾಭ್ಯಹಂಸ್ತಂ ವಿಶಾಂ ಪತೇ||

ಸಹವಾಸಜನಿತವಾದ ಉತ್ತಮ ಸ್ನೇಹವನ್ನು ಉಳಿಸಿಕೊಳ್ಳಲು ಆ ಋಷಿಯು ಚಿರತೆಯನ್ನು ಅದರ ಶತ್ರುವಿಗಿಂತಲೂ ಬಲಿಷ್ಠವಾದ ವ್ಯಾಘ್ರವನ್ನಾಗಿ ಪರಿವರ್ತಿಸಿದನು. ವಿಶಾಂಪತೇ! ಅದನ್ನು ನೋಡಿದ ಹುಲಿಯು ಹುಲಿಯಾದ ಚಿರತೆಯನ್ನು ಕೊಲ್ಲಲಿಲ್ಲ.

12117020a ಸ ತು ಶ್ವಾ ವ್ಯಾಘ್ರತಾಂ ಪ್ರಾಪ್ಯ ಬಲವಾನ್ ಪಿಶಿತಾಶನಃ|
12117020c ನ ಮೂಲಫಲಭೋಗೇಷು ಸ್ಪೃಹಾಮಪ್ಯಕರೋತ್ತದಾ||

ವ್ಯಾಘ್ರತ್ವವನ್ನು ಪಡೆದ ಆ ನಾಯಿಯು ಬಲಶಾಲೀ ಮಾಂಸಾಹಾರಿಯಾಯಿತು. ಫಲಮೂಲಗಳನ್ನು ತಿನ್ನುವುದರಲ್ಲಿ ಅದರ ಆಸಕ್ತಿಯು ಕಡಿಮೆಯಾಯಿತು.

12117021a ಯಥಾ ಮೃಗಪತಿರ್ನಿತ್ಯಂ ಪ್ರಕಾಂಕ್ಷತಿ ವನೌಕಸಃ|
12117021c ತಥೈವ ಸ ಮಹಾರಾಜ ವ್ಯಾಘ್ರಃ ಸಮಭವತ್ತದಾ||

ಮಹಾರಾಜ! ಮೃಗಪತಿ ಸಿಂಹವು ನಿತ್ಯವೂ ವನಚರ ಪ್ರಾಣಿಗಳ ಮಾಂಸವನ್ನು ತಿನ್ನಲು ಬಯಸುವಂತೆ ಹುಲಿಯಾದ ನಾಯಿಯೂ ಮಾಂಸಕ್ಕೆ ಹಾತೊರೆಯತೊಡಗಿತು.

12117022a ವ್ಯಾಘ್ರಸ್ಯೂಟಜಮೂಲಸ್ಥಸ್ಯಪ್ತಃ ಸುಪ್ತೋ ಹತೈರ್ಮೃಗೈಃ|
12117022c ನಾಗಶ್ಚಾಗಾತ್ತಮುದ್ದೇಶಂ ಮತ್ತೋ ಮೇಘ ಇವೋತ್ಥಿತಃ||

ಆ ವ್ಯಾಘ್ರವು ತಾನು ಕೊಂದ ಮೃಗಗಳನ್ನು ತಿಂದು ತೃಪ್ತನಾಗಿ ಆಶ್ರಮದ ಸಮೀಪದಲ್ಲಿ ಮಲಗಿದ್ದಾಗ ಅಲ್ಲಿಗೆ ಮೇಲೆದ್ದು ಬಂದ ಮೇಘದೋಪಾದಿಯಲ್ಲಿ ಮದಿಸಿದ ಆನೆಯೊಂದು ಆಗಮಿಸಿತು.

12117023a ಪ್ರಭಿನ್ನಕರಟಃ ಪ್ರಾಂಶುಃ ಪದ್ಮೀ ವಿತತಮಸ್ತಕಃ|

12117023c ಸುವಿಷಾಣೋ ಮಹಾಕಾಯೋ ಮೇಘಗಂಭೀರನಿಸ್ವನಃ||

ಅದರ ಗಂಡಸ್ಥಳದಿಂದ ಮದೋದಕವು ಸುರಿಯುತ್ತಿತ್ತು. ಅದರ ವಿಶಾಲ ಕುಂಭಸ್ಥಲದ ಮೇಲೆ ಕಮಲದ ಚಿಹ್ನೆಯಿತ್ತು. ಸುಂದರ ದಂತಗಳಿದ್ದ ಆ ಮಹಾಕಾಯವು ಮೇಘದಂತೆ ಗಂಭೀರವಾಗಿ ಘೀಂಗಕರಿಸುತ್ತಿತ್ತು.

12117024a ತಂ ದೃಷ್ಟ್ವಾ ಕುಂಜರಂ ಮತ್ತಮಾಯಾಂತಂ ಮದಗರ್ವಿತಮ್|
12117024c ವ್ಯಾಘ್ರೋ ಹಸ್ತಿಭಯಾತ್ತ್ರಸ್ತಸ್ತಮೃಷಿಂ ಶರಣಂ ಯಯೌ||

ಮದಗರ್ವಿತನಾಗಿ ಮುಂದೆ ಬರುತ್ತಿದ್ದ ಆ ಮದಿಸಿದ ಆನೆಯನ್ನು ನೋಡಿ ವ್ಯಾಘ್ರವು ಆನೆಯ ಭಯದಿಂದ ನಡುಗುತ್ತಾ ಋಷಿಯ ಶರಣುಹೊಕ್ಕಿತು.

12117025a ತತೋಽನಯತ್ಕುಂಜರತಾಂ ತಂ ವ್ಯಾಘ್ರಮೃಷಿಸತ್ತಮಃ|
12117025c ಮಹಾಮೇಘೋಪಮಂ ದೃಷ್ಟ್ವಾ ತಂ ಸ ಭೀತೋಽಭವದ್ಗಜಃ||

ಆಗ ಋಷಿಸತ್ತಮನು ಆ ವ್ಯಾಘ್ರಕ್ಕೆ ಕುಂಜರತೆಯನ್ನು ನೀಡಿದನು. ಮಹಾಮೇಘದಂತಿದ್ದ ಆ ಆನೆಯನ್ನು ನೋಡಿ, ಬಂದಿದ್ದ ಆನೆಯು ಭಯಗೊಂಡಿತು.

12117026a ತತಃ ಕಮಲಷಂಡಾನಿ ಶಲ್ಲಕೀಗಹನಾನಿ ಚ|
12117026c ವ್ಯಚರತ್ಸ ಮುದಾ ಯುಕ್ತಃ ಪದ್ಮರೇಣುವಿಭೂಷಿತಃ||

ಅನಂತರ ಆನೆಯ ರೂಪದಲ್ಲಿದ್ದ ಆ ನಾಯಿಯು ಕಮಲಗಳ ಸಮೂಹಗಳಲ್ಲಿಯೂ ಗಹನ ಸಲ್ಲಕೀಲತೆಗಳ ಮಧ್ಯವೂ ನುಗ್ಗುತ್ತಾ ಕಮಲ ಪರಾಗದಿಂದ ವಿಭೂಷಿತವಾಗಿ ಮುದದಿಂದ ಸಂಚರಿಸುತ್ತಿತ್ತು.

12117027a ಕದಾ ಚಿದ್ರಮಮಾಣಸ್ಯ ಹಸ್ತಿನಃ ಸುಮುಖಿಂ ತದಾ|

12117027c ಋಷೇಸ್ತಸ್ಯೋಟಜಸ್ಥಸ್ಯ ಕಾಲೋಽಗಚ್ಚನ್ನಿಶಾನಿಶಮ್‌||

ಒಮ್ಮೊಮ್ಮೆ ಆ ಸುಂದರ ಮುಖದ ಆನೆಯು ತಿರುಗಾಡುತ್ತಾ ಋಷಿಯ ಆಶ್ರಮದ ಬಳಿಯೂ ಬರುತ್ತಿತ್ತು. ಹೀಗೆ ಅನೇಕ ದಿನಗಳು ಕಳೆದುಹೋದವು.

12117028a ಅಥಾಜಗಾಮ ತಂ ದೇಶಂ ಕೇಸರೀ ಕೇಸರಾರುಣಃ|
12117028c ಗಿರಿಕಂದರಜೋ ಭೀಮಃ ಸಿಂಹೋ ನಾಗಕುಲಾಂತಕಃ||

ಒಮ್ಮೆ ಆ ಪ್ರದೇಶಕ್ಕೆ ಎಣೆಗೆಂಪಿನ ಬಣ್ಣದ ಕೂದಲಿನ ಸಿಂಹವೊಂದು ಆಗಮಿಸಿತು. ಗಿರಿಕಂದರಗಳಲ್ಲಿ ಹುಟ್ಟಿದ್ದ ಆ ಭಯಂಕರ ಸಿಂಹವು ಆನೆಗಳ ಕುಲಗಳನ್ನೇ ನಾಶಪಡಿಸುವಂಥದ್ದಾಗಿತ್ತು.

12117029a ತಂ ದೃಷ್ಟ್ವಾ ಸಿಂಹಮಾಯಾಂತಂ ನಾಗಃ ಸಿಂಹಭಯಾಕುಲಃ|
12117029c ಋಷಿಂ ಶರಣಮಾಪೇದೇ ವೇಪಮಾನೋ ಭಯಾತುರಃ||

ಮುಂದೆ ಬರುತ್ತಿದ್ದ ಆ ಸಿಂಹವನ್ನು ನೋಡಿ ಸಿಂಹಕ್ಕೆ ಹೆದರಿದ ಆನೆಯು ಭಯಾತುರನಾಗಿ ನಡುಗುತ್ತಾ ಋಷಿಯನ್ನು ಶರಣುಹೊಕ್ಕಿತು.

12117030a ತತಃ ಸ ಸಿಂಹತಾಂ ನೀತೋ ನಾಗೇಂದ್ರೋ ಮುನಿನಾ ತದಾ|
12117030c ವನ್ಯಂ ನಾಗಣಯತ್ಸಿಂಹಂ ತುಲ್ಯಜಾತಿಸಮನ್ವಯಾತ್‌||

ಆಗ ಮುನಿಯು ಆನೆಗೆ ಸಿಂಹತ್ವವನ್ನು ನೀಡಿದನು. ತನ್ನ ಜಾತಿಯ ಸಿಂಹದಂತೆಯೇ ಆದ ಆ ಆನೆಯನ್ನು, ಬಂದಿದ್ದ ಸಿಂಹವು ಗಣನೆಗೇ ತೆಗೆದುಕೊಳ್ಳಲಿಲ್ಲ.

12117031a ದೃಷ್ಟ್ವಾ ಚ ಸೋಽನಶತ್ಸಿಂಹೋ ವನ್ಯೋ ಭೀಸನ್ನವಾಗ್ಬಲಃ|
12117031c ಸ ಚಾಶ್ರಮೇಽವಸತ್ಸಿಂಹಸ್ತಸ್ಮಿನ್ನೇವ ವನೇ ಸುಖೀ||

ಅರಣ್ಯದ ಸಿಂಹವು ತನ್ನ ಎದುರಿಗಿದ್ದ ಸಿಂಹವನ್ನು ನೋಡಿ ಭಯಗೊಂಡು ಓಡಿ ಹೋಯಿತು. ಸಿಂಹದ ರೂಪದಲ್ಲಿದ್ದ ಆ ನಾಯಿಯು ಆಶ್ರಮದಲ್ಲಿಯೇ ವಾಸಮಾಡತೊಡಗಿತು.

12117032a ನ ತ್ವನ್ಯೇ ಕ್ಷುದ್ರಪಶವಸ್ತಪೋವನನಿವಾಸಿನಃ|
12117032c ವ್ಯದೃಶ್ಯಂತ ಭಯತ್ರಸ್ತಾ ಜೀವಿತಾಕಾಂಕ್ಷಿಣಃ ಸದಾ||

ಜೀವವನ್ನು ಉಳಿಸಿಕೊಳ್ಳುವ ಇಚ್ಛೆಯಿದ್ದ ಮತ್ತು ಭಯಭೀತ ಕ್ಷುದ್ರ ಪಶುಗಳು ಆ ಸಿಂಹದ ಭಯದಿಂದ ಆಶ್ರಮದ ಸಮೀಪದಲ್ಲಿಯೂ ಸುಳಿದಾಡುತ್ತಿರಲಿಲ್ಲ.

12117033a ಕದಾ ಚಿತ್ಕಾಲಯೋಗೇನ ಸರ್ವಪ್ರಾಣಿವಿಹಿಂಸಕಃ|
12117033c ಬಲವಾನ್ ಕ್ಷತಜಾಹಾರೋ ನಾನಾಸತ್ತ್ವಭಯಂಕರಃ||
12117034a ಅಷ್ಟಪಾದೂರ್ಧ್ವಚರಣಃ ಶರಭೋ ವನಗೋಚರಃ|
12117034c ತಂ ಸಿಂಹಂ ಹಂತುಮಾಗಚ್ಚನ್ಮುನೇಸ್ತಸ್ಯ ನಿವೇಶನಮ್||

ಒಮ್ಮೆ ಕಾಲಯೋಗದಿಂದ ಸರ್ವಪ್ರಾಣಿಗಳನ್ನೂ ಹಿಂಸಿಸುವ, ಬಲಶಾಲೀ, ರಕ್ತವನ್ನು ಕುಡಿಯುವ, ನಾನಾಸತ್ತ್ವಭಯಂಕರ, ಎಂಟು ಕಾಲುಗಳಿದ್ದ, ಕಣ್ಣುಗಳು ಮೇಲ್ಮುಖವಾಗಿದ್ದ ವನಗೋಚರ ಶರಭವೊಂದು ಆ ಸಿಂಹವನ್ನು ಸಂಹರಿಸಲು ಮುನಿಯ ಆಶ್ರಮಕ್ಕೆ ಬಂದಿತು.

12117035a ತಂ ಮುನಿಃ ಶರಭಂ ಚಕ್ರೇ ಬಲೋತ್ಕಟಮರಿಂದಮ|
12117035c ತತಃ ಸ ಶರಭೋ ವನ್ಯೋ ಮುನೇಃ ಶರಭಮಗ್ರತಃ|
12117035e ದೃಷ್ಟ್ವಾ ಬಲಿನಮತ್ಯುಗ್ರಂ ದ್ರುತಂ ಸಂಪ್ರಾದ್ರವದ್ಭಯಾತ್||

ಅರಿಂದಮ! ಆಗ ಮುನಿಯು ಆ ಸಿಂಹವನ್ನು ಬಲೋತ್ಕಟ

ಶರಭವನ್ನಾಗಿ ಮಾಡಿದನು. ವನ್ಯ ಶರಭವು ಮುನಿಯ ಮುಂದಿದ್ದ ಬಲಶಾಲೀ ಅತ್ಯುಗ್ರ ಶರಭವನ್ನು ನೋಡಿ ಭಯದಿಂದ ಓಡಿಹೋಯಿತು.

12117036a ಸ ಏವಂ ಶರಭಸ್ಥಾನೇ ನ್ಯಸ್ತೋ ವೈ ಮುನಿನಾ ತದಾ|
12117036c ಮುನೇಃ ಪಾರ್ಶ್ವಗತೋ ನಿತ್ಯಂ ಶಾರಭ್ಯಂ ಸುಖಮಾಪ್ತವಾನ್||

ಹಾಗೆ ಮುನಿಯಿಂದ ಶರಭಸ್ಥಾನದಲ್ಲಿರಿಸಲ್ಪಟ್ಟಿದ್ದ ಆ ನಾಯಿಯು ಶಾರಭ್ಯತ್ವವನ್ನು ಪಡೆದು ಮುನಿಯ ಬಳಿಯಲ್ಲಿಯೇ ವಾಸವಾಗಿದ್ದುಕೊಂಡಿತು.

12117037a ತತಃ ಶರಭಸಂತ್ರಸ್ತಾಃ ಸರ್ವೇ ಮೃಗಗಣಾ ವನಾತ್|
12117037c ದಿಶಃ ಸಂಪ್ರಾದ್ರವನ್ರಾಜನ್ ಭಯಾಜ್ಜೀವಿತಕಾಂಕ್ಷಿಣಃ||

ರಾಜನ್! ಅಗ ಆ ಶರಭಕ್ಕೆ ಹೆದರಿದ ಸರ್ವ ಮೃಗಗಣಗಳೂ ಭಯದಿಂದ ಜೀವವನ್ನು ಉಳಿಸಿಕೊಳ್ಳಲು ಬಯಸಿ ದಿಕ್ಕುದಿಕ್ಕುಗಳಲ್ಲಿ ಓಡಿ ಹೋದವು.

12117038a ಶರಭೋಽಪ್ಯತಿಸಂದುಷ್ಟೋ ನಿತ್ಯಂ ಪ್ರಾಣಿವಧೇ ರತಃ|
12117038c ಫಲಮೂಲಾಶನಂ ಶಾಂತಂ ನೈಚ್ಛತ್ಸ ಪಿಶಿತಾಶನಃ||

ನಿತ್ಯವೂ ಪ್ರಾಣಿವಧೆಯಲ್ಲಿಯೇ ನಿರತನಾಗಿ ಮಾಂಸಾಶಿಯಾಗಿದ್ದ ಆ ದುಷ್ಟ ಶರಭವು ಫಲಮೂಲಗಳನ್ನು ತಿನ್ನಲು ಇಚ್ಛಿಸುತ್ತಿರಲಿಲ್ಲ.

12117039a ತತೋ ರುಧಿರತರ್ಷೇಣ ಬಲಿನಾ ಶರಭೋಽನ್ವಿತಃ|
12117039c ಇಯೇಷ ತಂ ಮುನಿಂ ಹಂತುಮಕೃತಜ್ಞಃ ಶ್ವಯೋನಿಜಃ||

ಆಗ ನಾಯಿಯಾಗಿ ಹುಟ್ಟಿದ್ದ ಆ ಬಲಶಾಲೀ ಶರಭವು ರಕ್ತದಾಹದಿಂದ

ಪೀಡಿತನಾಗಿ ಕೃತಜ್ಞತೆಯಿಲ್ಲದೇ ಅದೇ ಮುನಿಯನ್ನು ಕೊಲ್ಲಲು ಬಯಸಿತು.

12117040a ತತಸ್ತೇನ ತಪಃಶಕ್ತ್ಯಾ ವಿದಿತೋ ಜ್ಞಾನಚಕ್ಷುಷಾ|
12117040c ವಿಜ್ಞಾಯ ಚ ಮಹಾಪ್ರಾಜ್ಞೋ ಮುನಿಃ ಶ್ವಾನಂ ತಮುಕ್ತವಾನ್||

ಆಗ ತನ್ನ ತಪಃಶಕ್ತಿಯ ಜ್ಞಾನದೃಷ್ಟಿಯಿಂದ ಅದರ ಇಂಗಿತವನ್ನು ತಿಳಿದುಕೊಂಡ ಮಹಾಪ್ರಾಜ್ಞ ಮುನಿಯು ನಾಯಿಗೆ ಹೇಳಿದನುಃ

12117041a ಶ್ವಾ ತ್ವಂ ದ್ವೀಪಿತ್ವಮಾಪನ್ನೋ ದ್ವೀಪೀ ವ್ಯಾಘ್ರತ್ವಮಾಗತಃ|
12117041c ವ್ಯಾಘ್ರೋ ನಾಗೋ ಮದಪಟುರ್ನಾಗಃ ಸಿಂಹತ್ವಮಾಪ್ತವಾನ್||

“ನಾಯಿಯಾಗಿದ್ದ ನೀನು ಚಿರತೆಯಾದೆ. ಚಿರತೆಯಾಗಿದ್ದವನು ಹುಲಿಯಾದೆ. ವ್ಯಾಘ್ರದಿಂದ ಆನೆಯಾದೆ ಮತ್ತು ಮದಿಸಿದ ಆನೆಯಾಗಿದ್ದವನು ಸಿಂಹತ್ವವನ್ನು ಪಡೆದುಕೊಂಡೆ.

12117042a ಸಿಂಹೋಽತಿಬಲಸಂಯುಕ್ತೋ ಭೂಯಃ ಶರಭತಾಂ ಗತಃ|
12117042c ಮಯಾ ಸ್ನೇಹಪರೀತೇನ ನ ವಿಮೃಷ್ಟಃ ಕುಲಾನ್ವಯಃ||

ಅತಿಬಲಸಂಯುಕ್ತನಾದ ಸಿಂಹದಿಂದ ಪುನಃ ಶರಭನಾದೆ. ನೀಚ ಕುಲದಲ್ಲಿ ಹುಟ್ಟಿದ್ದರೂ ಸ್ನೇಹಬೆಳೆದುದರಿಂದ ನಿನ್ನನ್ನು ನಾನು ಪರಿತ್ಯಜಿಸಲಿಲ್ಲ.

12117043a ಯಸ್ಮಾದೇವಮಪಾಪಂ ಮಾಂ ಪಾಪ ಹಿಂಸಿತುಮಿಚ್ಚಸಿ|
12117043c ತಸ್ಮಾತ್ ಸ್ವಯೋನಿಮಾಪನ್ನಃ ಶ್ವೈವ ತ್ವಂ ಹಿ ಭವಿಷ್ಯಸಿ||

ಯಾವುದೇ ರೀತಿಯ ಪಾಪಭಾವವೂ ಇಲ್ಲದ ನನ್ನನ್ನೇ ಪಾಪಿಯಾದ ನೀನು ಹಿಂಸಿಸಲು ಇಚ್ಛಿಸುತ್ತಿರುವೆ. ಆದುದರಿಂದ ನಿನ್ನದೇ

ಯೋನಿಯನ್ನು ಪಡೆದುಕೊಂಡು ನೀನು ನಾಯಿಯೇ ಆಗುತ್ತೀಯೆ.”

12117044a ತತೋ ಮುನಿಜನದ್ವೇಷಾದ್ದುಷ್ಟಾತ್ಮಾ ಶ್ವಾಕೃತೋಽಬುಧಃ|
12117044c ಋಷಿಣಾ ಶರಭಃ ಶಪ್ತಃ ಸ್ವಂ ರೂಪಂ ಪುನರಾಪ್ತವಾನ್||

ಋಷಿಯಿಂದ ಶಪ್ತವಾದ ಆ ದುಷ್ಟಾತ್ಮ ಶರಭವು ಮುನಿಜನರ ದ್ವೇಷದಿಂದಾಗಿ ಪುನಃ ತನ್ನ ನಾಯಿಯ ರೂಪವನ್ನು ಪಡೆದುಕೊಂಡಿತು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಋಷಿರ್ಸಂವಾದೇ ಸಪ್ತದಶಾಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಋಷಿರ್ಸಂವಾದ ಎನ್ನುವ ನೂರಾಹದಿನೇಳನೇ ಅಧ್ಯಾಯವು.

೧೧೮

ರಾಜನ ಸೇವಕ-ಸಚಿವ-ಯೋಧರ ವರ್ಣನೆ (1-28).

12118001 ಭೀಷ್ಮ ಉವಾಚ|
12118001a ಸ ಶ್ವಾ ಪ್ರಕೃತಿಮಾಪನ್ನಃ ಪರಂ ದೈನ್ಯಮುಪಾಗಮತ್|
12118001c ಋಷಿಣಾ ಹುಂಕೃತಃ ಪಾಪಸ್ತಪೋವನಬಹಿಷ್ಕೃತಃ||

ಭೀಷ್ಮನು ಹೇಳಿದನು: “ಆ ನಾಯಿಯು ತನ್ನ ಮೂಲಪ್ರಕೃತಿಯನ್ನು ಪಡೆದುಕೊಂಡು ಪರಮ ದೀನಗೊಂಡಿತು. ಋಷಿಯು ಹುಂಕರಿಸಿ ಆ ಪಾಪಿಯನ್ನು ತಪೋವನದಿಂದ ಬಹಿಷ್ಕರಿಸಿದನು.

12118002a ಏವಂ ರಾಜ್ಞಾ ಮತಿಮತಾ ವಿದಿತ್ವಾ ಶೀಲಶೌಚತಾಮ್|
12118002c ಆರ್ಜವಂ ಪ್ರಕೃತಿಂ ಸತ್ತ್ವಂ ಕುಲಂ ವೃತ್ತಂ ಶ್ರುತಂ ದಮಮ್||
12118003a ಅನುಕ್ರೋಶಂ ಬಲಂ ವೀರ್ಯಂ ಭಾವಂ ಸಂಪ್ರಶಮಂ[431] ಕ್ಷಮಾಮ್|
12118003c ಭೃತ್ಯಾ ಯೇ ಯತ್ರ ಯೋಗ್ಯಾಃ ಸ್ಯುಸ್ತತ್ರ ಸ್ಥಾಪ್ಯಾಃ ಸುಶಿಕ್ಷಿತಾಃ||

ಹೀಗೆ ಮತಿವಂತ ರಾಜನು ಅವರ ಶೀಲ, ಶೌಚ, ಸರಳತಿ, ಪ್ರಕೃತಿ, ಸತ್ತ್ವ, ಕುಲ, ನಡತೆ, ವಿದ್ಯೆ, ಜಿತೇಂದ್ರಿಯತೆ, ಅನುಕ್ರೋಶ, ಬಲ, ವೀರ್ಯ, ಭಾವ, ವಿನಯತೆ, ಮತ್ತು ಕ್ಷಮೆ ಇವುಗಳನ್ನು ಪರೀಕ್ಷಿಸಿ ಸೇವರಕರನ್ನು ಯೋಗ್ಯ ಸ್ಥಾನಗಳಲ್ಲಿ ಇರಿಸಿಕೊಂಡು ನಿಯಂತ್ರಿಸುತ್ತಿರಬೇಕು.

12118004a ನಾಪರೀಕ್ಷ್ಯ ಮಹೀಪಾಲಃ ಪ್ರಕರ್ತುಂ ಭೃತ್ಯಮರ್ಹತಿ|
12118004c ಅಕುಲೀನನರಾಕೀರ್ಣೋ ನ ರಾಜಾ ಸುಖಮೇಧತೇ||

ಮಹೀಪಾಲನಾದವನು ಪರೀಕ್ಷೆಮಾಡದೇ ಯಾರನ್ನೂ ಸೇವಕನನ್ನಾಗಿ ಆರಿಸಿಕೊಳ್ಳಬಾರದು. ಕುಲೀನರಲ್ಲದವರಿಂದ ಸಮಾಕೀರ್ಣ ರಾಜನು ಸುಖವನ್ನು ಹೊಂದುವುದಿಲ್ಲ.

12118005a ಕುಲಜಃ ಪ್ರಕೃತೋ[432] ರಾಜ್ಞಾ ತತ್ಕುಲೀನತಯಾ ಸದಾ|
12118005c ನ ಪಾಪೇ ಕುರುತೇ ಬುದ್ಧಿಂ ನಿಂದ್ಯಮಾನೋಽಪ್ಯನಾಗಸಿ||

ಉತ್ತಮ ಕುಲದಲ್ಲಿ ಹುಟ್ಟಿದವನು ಅಕಸ್ಮಾತ್ತಾಗಿ ರಾಜನ ನಿಂದೆಗೊಳಗಾದರೂ ತನ್ನ ಕುಲೀನತೆಯ ಕಾರಣದಿಂದ

---

[431] ಪ್ರಶ್ರಯಂ (ಭಾರತ ದರ್ಶನ).

[432] ಪ್ರಾಕೃತೋ (ಭಾರತ ದರ್ಶನ).

ಪಾಪವನ್ನೆಸಗುವ ಬುದ್ಧಿಯನ್ನು ಮಾಡುವುದಿಲ್ಲ.

12118006a ಅಕುಲೀನಸ್ತು ಪುರುಷಃ ಪ್ರಕೃತಃ ಸಾಧುಸಂಕ್ಷಯಾತ್|
12118006c ದುರ್ಲಭೈಶ್ವರ್ಯತಾಂ ಪ್ರಾಪ್ತೋ ನಿಂದಿತಃ ಶತ್ರುತಾಂ ವ್ರಜೇತ್||

ಆದರೆ ಕುಲೀನನಲ್ಲದ ಪುರುಷನು ಸಾಮಾನ್ಯವಾಗಿ ಸಾಧುಸ್ವಭಾವದ ರಾಜನನ್ನು ಆಶ್ರಯಿಸಿ ದುರ್ಲಭ ಐಶ್ವರ್ಯವನ್ನು ಪಡೆದು, ರಾಜನೇನಾದರೂ ನಿಂದಿಸಿದರೆ, ಅವನೊಡನೆ ಶತ್ರುತ್ವವನ್ನು ಸಾಧಿಸುತ್ತಾನೆ.

12118007a ಕುಲೀನಂ ಶಿಕ್ಷಿತಂ ಪ್ರಾಜ್ಞಂ ಜ್ಞಾನವಿಜ್ಞಾನಕೋವಿದಮ್|
12118007c ಸರ್ವಶಾಸ್ತ್ರಾರ್ಥತತ್ತ್ವಜ್ಞಂ ಸಹಿಷ್ಣುಂ ದೇಶಜಂ ತಥಾ||

ರಾಜನ ಸೇವಕನು ಕುಲೀನನಾಗಿರಬೇಕು. ಶಿಕ್ಷಿತನಾಗಿರಬೇಕು. ಪ್ರಾಜ್ಞನೂ, ಜ್ಞಾನಕೋವಿದನೂ, ಸರ್ವಶಾಸ್ತ್ರಾರ್ಥತತ್ತ್ವಜ್ಞನೂ, ಸಹಿಷ್ಣುವೂ, ತನ್ನ ದೇಶದಲ್ಲಿಯೇ ಹುಟ್ಟಿದವನೂ ಆಗಿರಬೇಕು.

12118008a ಕೃತಜ್ಞಂ ಬಲವಂತಂ ಚ ಕ್ಷಾಂತಂ ದಾಂತಂ ಜಿತೇಂದ್ರಿಯಮ್|
12118008c ಅಲುಬ್ಧಂ ಲಬ್ಧಸಂತುಷ್ಟಂ ಸ್ವಾಮಿಮಿತ್ರಬುಭೂಷಕಮ್||

ಅವನು ಕೃತಜ್ಞನೂ, ಬಲವಂತನೂ, ಕ್ಷಮಾಶೀಲನೂ, ದಾಂತನೂ, ಜಿತೇಂದ್ರಿಯನೂ, ಅಲುಬ್ಧನೂ, ಸಿಕ್ಕಿದುದರಲ್ಲಿ ಸಂತುಷ್ಟನಾದವನೂ, ಸ್ವಾಮಿಮಿತ್ರನೂ ಮತ್ತು ಶ್ರೇಷ್ಠವಾದುದನ್ನೇ ಬಯಸುವವನೂ ಆಗಿರಬೇಕು.

12118009a ಸಚಿವಂ ದೇಶಕಾಲಜ್ಞಂ ಸರ್ವಸಂಗ್ರಹಣೇ ರತಮ್|
12118009c ಸತ್ಕೃತಂ ಯುಕ್ತಮನಸಂ ಹಿತೈಷಿಣಮತಂದ್ರಿತಮ್||

ಅವನು ಸಚಿವನೂ, ದೇಶಕಾಲಜ್ಞನೂ, ಸರ್ವಸಂಗ್ರಹದಲ್ಲಿ ನಿರತನೂ, ಸತ್ಕೃತನೂ, ಯುಕ್ತಮನಸನೂ, ಹಿತೈಷಿಣಿಯೂ, ಆಲಸ್ಯರಹಿತನೂ ಆಗಿರಬೇಕು.

12118010a ಯುಕ್ತಾಚಾರಂ ಸ್ವವಿಷಯೇ ಸಂಧಿವಿಗ್ರಹಕೋವಿದಮ್|
12118010c ರಾಜ್ಞಸ್ತ್ರಿವರ್ಗವೇತ್ತಾರಂ ಪೌರಜಾನಪದಪ್ರಿಯಮ್||

ತನ್ನ ರಾಜ್ಯದ ಯುಕ್ತಾಚಾರಗಳನ್ನು ತಿಳಿದಿರುವವನೂ, ಸಂಧಿ-ವಿಗ್ರಹ ಕೋವಿದನೂ, ರಾಜನ ತ್ರಿವರ್ಗಗಳ ವೇತ್ತಾರನೂ, ಪೌರಜಾನಪದಪ್ರಿಯನೂ ಆಗಿರಬೇಕು.

12118011a ಖಾತಕವ್ಯೂಹತತ್ತ್ವಜ್ಞಂ ಬಲಹರ್ಷಣಕೋವಿದಮ್|
12118011c ಇಂಗಿತಾಕಾರತತ್ತ್ವಜ್ಞಂ ಯಾತ್ರಾಯಾನವಿಶಾರದಮ್||

ಕಂದಕ-ವ್ಯೂಹಗಳ ತತ್ತ್ವಜ್ಞನೂ, ಸೇನೆಯನ್ನು ಸಂತೋಷದಲ್ಲಿಡುವುದನ್ನು ಬಲ್ಲವನೂ, ಇಂಗಿತಾಕಾರ ತತ್ತ್ವಜ್ಞನೂ, ಯಾತ್ರಾಯಾನ ವಿಶಾರದನೂ ಆಗಿರಬೇಕು.

12118012a ಹಸ್ತಿಶಿಕ್ಷಾಸು ತತ್ತ್ವಜ್ಞಮಹಂಕಾರವಿವರ್ಜಿತಮ್|
12118012c ಪ್ರಗಲ್ಭಂ ದಕ್ಷಿಣಂ ದಾಂತಂ ಬಲಿನಂ ಯುಕ್ತಕಾರಿಣಮ್||

ಅವನು ಆನೆಯನ್ನು ಪಳಗಿಸುವುದರ ತತ್ತ್ವಜ್ಞನೂ, ಅಹಂಕಾರವನ್ನು ಬಿಟ್ಟವನೂ, ಭಯರಹಿತನೂ, ಉದಾರಿಯೂ, ದಾಂತನೂ, ಬಲಶಾಲಿಯೂ ಯುಕ್ತಕಾರಣಿಯೂ ಆಗಿರಬೇಕು.

12118013a ಚೋಕ್ಷಂ ಚೋಕ್ಷಜನಾಕೀರ್ಣಂ ಸುವೇಷಂ ಸುಖಿದರ್ಶನಮ್|

12118013c ನಾಯಕಂ ನೀತಿಕುಶಲಂ ಗುಣಷಷ್ಟ್ಯಾ[433] ಸಮನ್ವಿತಮ್॥

ಅವನು ಪರಿಶುದ್ಧನೂ, ಪರಿಶುದ್ಧ ಜನರಿಂದ ಆವೃತನಾದವನೂ, ಸುಂದರ ಉಡುಪುಗಳನ್ನು ಧರಿಸುವವನೂ, ನೋಡಲು ಆನಂದದಾಯಕನೂ, ನಾಯಕನೂ, ನೀತಿ ಕುಶಲನೂ, ಆರು ಗುಣಗಳಿಂದ ಸಮನ್ವಿತನೂ ಆಗಿರಬೇಕು.

12118014a ಅಸ್ತಬ್ಧಂ ಪ್ರಶ್ರಿತಂ ಶಕ್ತಂ ಮೃದುವಾದಿನಮೇವ ಚ।
12118014c ಧೀರಂ ಶ್ಲಕ್ಷ್ಣಂ ಮಹರ್ದ್ಧಿಂ ಚ ದೇಶಕಾಲೋಪಪಾದಕಮ್॥

ಅವನು ದಕ್ಷನೂ, ಉದ್ಧತನವಿಲ್ಲದವನೂ, ಶಕ್ತನೂ, ಮೃದುಭಾಷಿಣಿಯೂ, ಧೀರನೂ, ಪ್ರೀತಿಯುಕ್ತನೂ, ಶ್ರೀಮಂತನೂ, ದೇಶಕಾಲಗಳನ್ನು ಅರಿತು ಕಾರ್ಯನಿರ್ವಹಿಸುವವನೂ ಆಗಿರಬೇಕು.

12118015a ಸಚಿವಂ ಯಃ ಪ್ರಕುರುತೇ ನ ಚೈನಮವಮನ್ಯತೇ।
12118015c ತಸ್ಯ ವಿಸ್ತೀರ್ಯತೇ ರಾಜ್ಯಂ ಜ್ಯೋತ್ಸ್ನಾ ಗ್ರಹಪತೇರಿವ॥

ಅಂಥವನನ್ನು ಸಚಿವನನ್ನಾಗಿ ಮಾಡಿಕೊಳ್ಳುವ ಮತ್ತು ಅಂಥವನನ್ನು ಅಪಮಾನಿಸದ ರಾಜನ ರಾಜ್ಯವು ಚಂದ್ರನ ಬೆಳದಿಂಗಳಿನಂತೆ ವಿಸ್ತೃತವಾಗುತ್ತದೆ.

12118016a ಏತೈರೇವ ಗುಣೈರ್ಯುಕ್ತೋ ರಾಜಾ ಶಾಸ್ತ್ರವಿಶಾರದಃ।
12118016c ಏಷ್ಟವ್ಯೋ ಧರ್ಮಪರಮಃ ಪ್ರಜಾಪಾಲನತತ್ಪರಃ॥

ರಾಜನೂ ಕೂಡ ಇದೇ ಗುಣಗಳಿಂದ ಕೂಡಿರಬೇಕು. ಶಾಸ್ತ್ರವಿಶಾರದನಾಗಿರಬೇಕು. ಪ್ರಜಾಪಾಲನ ತತ್ಪರನಾಗಿರಬೇಕು.

---

[433] ಗುಣಚೇಷ್ಟಾ (ಭಾರತ ದರ್ಶನ).

ಪರಮ ಧಾರ್ಮಿಕನಾಗಿರಬೇಕು.

12118017a ಧೀರೋ ಮಷೀ ಶುಚಿಃ ಶೀಘ್ರಃ ಕಾಲೇ ಪುರುಷಕಾರವಿತ್|
12118017c ಶುಶ್ರೂಷುಃ ಶ್ರುತವಾನ್ ಶ್ರೋತಾ ಊಹಾಪೋಹವಿಶಾರದಃ||

ರಾಜನು ಧೀರನಾಗಿರಬೇಕು. ಕ್ಷಮಾಶೀಲನಾಗಿರಬೇಕು. ಶುಚಿಯೂ,
ಶೀಘ್ರನೂ ಮತ್ತು ಕಾಲಬಂದಾಗ ಪುರುಷಪ್ರಯತ್ನವನ್ನು
ಮಾಡುವವನೂ ಆಗಿರಬೇಕು. ಹಿರಿಯರ ಶುಶ್ರೂಷೆಯನ್ನು
ಮಾಡಿದವನಾಗಿರಬೇಕು. ಶ್ರುತವಾನನೂ, ವಿದ್ಯಾವಂತನೂ,
ಊಹಾಪೋಹ ವಿಶಾರದನೂ ಆಗಿರಬೇಕು.

12118018a ಮೇಧಾವೀ ಧಾರಣಾಯುಕ್ತೋ ಯಥಾನ್ಯಾಯೋಪಪಾದಕಃ|
12118018c ದಾಂತಃ ಸದಾ ಪ್ರಿಯಾಭಾಷೀ ಕ್ಷಮಾವಾಂಶ್ಚ ವಿಪರ್ಯಯೇ||

ಮೇಧಾವಿಯೂ, ಧಾರಣಾಶಕ್ತಿಯುಳ್ಳವನೂ, ನ್ಯಾಯಾನುಸಾರವಾಗಿ
ಕಾರ್ಯಗಳನ್ನು ಮಾಡುವವನೂ, ದಾಂತನೂ, ಸದಾ ಪ್ರಿಯಭಾಷಿಯೂ,
ಮತ್ತು ಶತ್ರುಗಳ ವಿಷಯದಲ್ಲಿಯೂ ಕ್ಷಮಾವಂತನಾಗಿರಬೇಕು.

12118019a ದಾನಾಚ್ಚೈದೇ ಸ್ವಯಂಕಾರೀ ಸುದ್ವಾರಃ[434] ಸುಖಿದರ್ಶನಃ|
12118019c ಆರ್ತಹಸ್ತಪ್ರದೋ ನಿತ್ಯಮಾಪ್ತಂಮನ್ಯೋ[435] ನಯೇ ರತಃ||

ದಾನಕೊಡುವುದರಲ್ಲಿ ಅಡ್ಡಿಯುಂಟಾದರೆ ತಾನೇ ದಾನವನ್ನು
ಕೊಡಿಸುವವನಾಗಿರಬೇಕು. ಸುದ್ವಾರನಾಗಿರಬೇಕು.
ದರ್ಶನಮಾತ್ರದಿಂದಲೇ ಸುಖವನ್ನುಂಟುಮಾಡುವವನಾಗಿರಬೇಕು.

---

[434] ಶ್ರದ್ಧಾಲುಃ (ಭಾರತ ದರ್ಶನ).

[435] ನಿತ್ಯಮಾಪ್ತಮಾತ್ಮೋ (ಭಾರತ ದರ್ಶನ).

ನಿತ್ಯವೂ ಆರ್ತರಿಗೆ ಹಸ್ತಾವಲಂಬನವನ್ನು ನೀಡುವವನಾಗಿರಬೇಕು. ಆಪ್ತರಿಂದ ಕೂಡಿರಬೇಕು. ಕೋಪವಿಲ್ಲದವನಾಗಿರಬೇಕು. ಮತ್ತು ನೀತಿ ಪರಾಯಣನಾಗಿರಬೇಕು.

12118020a ನಾಹಂವಾದೀ ನ ನಿರ್ದ್ವಂದ್ವೋ ನ ಯತ್ಕಿಂಚನಕಾರಕಃ|
12118020c ಕೃತೇ ಕರ್ಮಣ್ಯಮೋಘಾನಾಂ[436] ಕರ್ತಾ ಭೃತ್ಯಜನಪ್ರಿಯಃ||

ಅಹಂಕಾರರಹಿತನಾಗಿರಬೇಕು. ನಿರ್ದ್ವಂದ್ವನಾಗಿರಬೇಕು. ಅಮೋಘ ಕರ್ಮಗಳನ್ನು ಮಾಡುವವನಾಗಿರಬೇಕು. ಸೇವಕರಿಗೆ ಪ್ರಿಯನಾಗಿರಬೇಕು.

12118021a ಸಂಗೃಹೀತಜನೋಽಸ್ತಬ್ಧಃ ಪ್ರಸನ್ನವದನಃ ಸದಾ|
12118021c ದಾತಾ ಭೃತ್ಯಜನಾವೇಕ್ಷೀ[437] ನ ಕ್ರೋಧೀ ಸುಮಹಾಮನಾಃ||

ಸತ್ಪುರುಷರ ಸಂಗ್ರಹಶೀಲನಾಗಿರಬೇಕು. ಜಡಸ್ವಭಾವವನ್ನು ತ್ಯಜಿಸಿದವನಾಗಿರಬೇಕು. ಸರ್ವಕಾಲದಲ್ಲಿಯೂ ಪ್ರಸನ್ನವದನನಾಗಿರಬೇಕು. ಸೇವಕರಿಗೆ ಕೊಡುವವನಾಗಿರಬೇಕು. ಕ್ರೋಧರಹಿತನಾಗಿರಬೇಕು ಮತ್ತು ವಿಶಾಲಹೃದಯಿಯಾಗಿರಬೇಕು.

12118022a ಯುಕ್ತದಂಡೋ ನ ನಿರ್ದಂಡೋ ಧರ್ಮಕಾರ್ಯಾನುಶಾಸಕಃ[438]|
12118022c ಚಾರನೇತ್ರಃ ಪರಾವೇಕ್ಷೀ[439] ಧರ್ಮಾರ್ಥಕುಶಲಃ ಸದಾ||

---

436 ಕರ್ಮಣ್ಯಮಾತ್ಯಾನಾಂ (ಭಾರತ ದರ್ಶನ).

437 ಸದಾ ಭೃತ್ಯಜನಾಪೇಕ್ಷೀ (ಭಾರತ ದರ್ಶನ).

438 ಧರ್ಮಕಾರ್ಯಾನುಶಾಸನಃ (ಭಾರತ ದರ್ಶನ).

439 ಪ್ರಜಾಪೇಕ್ಷೀ (ಭಾರತ ದರ್ಶನ).

ದಂಡನೀತಿಯನ್ನು ಸರಿಯಾಗಿ ಉಪಯೋಗಿಸುವವನಾಗಿರಬೇಕು. ದಂಡನೀತಿಯನ್ನು ಬಿಟ್ಟಿರಬಾರದು. ಧರ್ಮಕಾರ್ಯಗಳ ಅನುಶಾಸಕನಾಗಿರಬೇಕು. ಚಾರರನ್ನೇ ಕಣ್ಣಾಗಿ ಹೊಂದಿ, ಶತ್ರುಗಳನ್ನು ಗುರುತಿಸುತ್ತಿರಬೇಕು. ಸದಾ ಧರ್ಮಾರ್ಥಕುಶಲನಾಗಿರಬೇಕು.

12118023a ರಾಜಾ ಗುಣಶತಾಕೀರ್ಣ ಏಷ್ಟವ್ಯಸ್ತಾದೃಶೋ ಭವೇತ್|
12118023c ಯೋಧಾಶ್ಚೈವ ಮನುಷ್ಯೇಂದ್ರ ಸರ್ವೈರ್ಗುಣಗುಣೈರ್ವೃತಾಃ||

ಹೀಗೆ ನೂರಾರು ಸದ್ಗುಣಗಳಿಂದ ಸಂಪನ್ನನಾದ ರಾಜನು ಪ್ರಜೆಗಳಿಗೆ ಬೇಕಾದವನಾಗುತ್ತಾನೆ. ಮನುಷ್ಯೇಂದ್ರ! ಯೋಧರೂ ಕೂಡ ಹೀಗೆಯೇ ಸರ್ವಗುಣಸಂಪನ್ನರಾಗಿರಬೇಕು.

12118024a ಅನ್ವೇಷ್ಟವ್ಯಾಃ ಸುಪುರುಷಾಃ ಸಹಾಯಾ ರಾಜ್ಯಧಾರಣಾಃ|
12118024c ನ ವಿಮಾನಯಿತವ್ಯಾಶ್ಚ ರಾಜ್ಞಾ ವೃದ್ಧಿಮಭೀಪ್ಸತಾ||

ರಾಜ್ಯದ ಪರಿಪಾಲನೆಗಾಗಿ ಒಳ್ಳೆಯ ಪುರುಷರನ್ನೇ ಹುಡುಕಿ ನಿಯಮಿಸಿಕೊಳ್ಳಬೇಕು. ಅಭಿವೃದ್ಧಿಯನ್ನು ಅಪೇಕ್ಷಿಸುವ ರಾಜನು ಯೋಧರನ್ನು ಎಂದೂ ಅವಮಾನಗೊಳಿಸಬಾರದು.

12118025a ಯೋಧಾಃ ಸಮರಶೌಟೀರಾಃ ಕೃತಜ್ಞಾಃ ಶಸ್ತ್ರಕೋವಿದಾಃ|
12118025c ಧರ್ಮಶಾಸ್ತ್ರಸಮಾಯುಕ್ತಾಃ ಪದಾತಿಜನಸಂಯುತಾಃ||

ಯೋಧರು ಯುದ್ಧದಲ್ಲಿ ಶೌರ್ಯವನ್ನು ತೋರಿಸುವವರಾಗಿರಬೇಕು. ಕೃತಜ್ಞರೂ, ಶಸ್ತ್ರಕೋವಿದರು, ಧರ್ಮಶಾಸ್ತ್ರ ಸಮಾಯುಕ್ತರೂ ಆಗಿರಬೇಕು ಮತ್ತು ಪದಾತಿ ಸೈನಿಕರಿಂದ ಪರಿವೃತರಾಗಿರಬೇಕು.

12118026a ಅರ್ಥಮಾನವಿವೃದ್ಧಾಶ್ಚ[440] ರಥಚರ್ಯಾವಿಶಾರದಾಃ|
12118026c ಇಷ್ವಸ್ತ್ರಕುಶಲಾ ಯಸ್ಯ ತಸ್ಯೇಯಂ ನೃಪತೇರ್ಮಹೀ||

ಅರ್ಥಮಾನವಿವೃದ್ಧರಾಗಿರಬೇಕು. ರಥಸಂಚಾಲನೆಯಲ್ಲಿ ನಿಪುಣರಾಗಿರಬೇಕು. ಅಸ್ತ್ರಗಳನ್ನು ಅಭಿಮಂತ್ರಿಸಿ ಬಾಣಗಳನ್ನು ಬಿಡುವುದರಲ್ಲಿ ಕುಶಲರಾಗಿರಬೇಕು. ಇಂಥವರಿರುವ ರಾಜನ ಅಧೀನದಲ್ಲಿ ಇಡೀ ಭೂಮಂಡಲವೇ ಇರುತ್ತದೆ.

12118027a ಸರ್ವಸಂಗ್ರಹಣೇ ಯುಕ್ತೋ ನೃಪೋ ಭವತಿ ಯಃ ಸದಾ|
12118027c ಉತ್ಥಾನಶೀಲೋ ಮಿತ್ರಾಢ್ಯಃ ಸ ರಾಜಾ ರಾಜಸತ್ತಮಃ||

ಯಾವ ರಾಜನು ಸದಾ ಪ್ರಜಾಸಂಗ್ರಹಣೆಯಲ್ಲಿಯೇ ನಿರತನಾಗಿರುತ್ತಾನೋ, ಉದ್ಯೋಗಶೀಲನಾಗಿರುತ್ತಾನೋ, ಮಿತ್ರಸಂಪತ್ತನ್ನು ಹೊಂದಿರುತ್ತಾನೋ ಅಂತಹ ರಾಜನು ರಾಜರಲ್ಲಿಯೇ ಶ್ರೇಷ್ಠನು.

12118028a ಶಕ್ಯಾ ಅಶ್ವಸಹಸ್ರೇಣ ವೀರಾರೋಹೇಣ ಭಾರತ|
12118028c ಸಂಗೃಹೀತಮನುಷ್ಯೇಣ ಕೃತ್ಸ್ನಾ ಜೇತುಂ ವಸುಂಧರಾ||

ಭಾರತ! ಅಂಥಹ ಯೋಧರನ್ನು ಸಂಗ್ರಹಿಸಿಟ್ಟುಕೊಂಡಿರುವ ವೀರ ರಾಜನು ಒಂದೇ ಒಂದು ಸಾವಿರ ಅಶ್ವಸೈನಿಕರ ಬೆಂಬಲದಿಂದ ಅಖಂಡ ಭೂಮಂಡಲವನ್ನೂ ಜಯಿಸಬಲ್ಲನು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಋಷಿರ್ಸಂವಾದೇ ಅಷ್ಟಾದಶಾಧಿಕಶತತಮೋऽಧ್ಯಾಯಃ||

[440] ಅಭಯಾ ಗಜಪೃಷ್ಠಸ್ಥಾ (ಭಾರತ ದರ್ಶನ).

ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಋಷಿರ್ಸಂವಾದ ಎನ್ನುವ ನೂರಾಹದಿನೆಂಟನೇ ಅಧ್ಯಾಯವು.

೧೧೯

ರಾಜನಾದವನು ಯಾರನ್ನು ತನ್ನ ಸೇವಕರನ್ನಾಗಿ ಆರಿಸಿಕೊಳ್ಳಬೇಕು ಎನ್ನುವುದನ್ನು ಯುಧಿಷ್ಠಿರನಿಗೆ ಭೀಷ್ಮನು ಉಪದೇಶಿಸಿದುದು (1-20).

12119001 ಭೀಷ್ಮ ಉವಾಚ|
12119001a ಏವಂ ಶುನಾಸಮಾನ್ ಭೃತ್ಯಾನ್ ಸ್ವಸ್ಥಾನೇ ಯೋ ನರಾಧಿಪಃ[441]|
12119001c ನಿಯೋಜಯತಿ ಕೃತ್ಯೇಷು ಸ ರಾಜ್ಯಫಲಮಶ್ನುತೇ||

ಭೀಷ್ಮನು ಹೇಳಿದನು: "ಹೀಗೆ ಗುಣಸಂಪನ್ನ ಸೇವಕರನ್ನು ಯೋಗ್ಯ ಸ್ಥಾನಗಳಲ್ಲಿ ನಿಯಮಿಸಿ ಅವರವರ ಕಾರ್ಯಗಳಲ್ಲಿ ನಿಯೋಜಿಸುವ ನರಾಧಿಪನು ರಾಜ್ಯದ ಫಲವನ್ನು ಪಡೆದುಕೊಳ್ಳುತ್ತಾನೆ.

12119002a ನ ಶ್ವಾ ಸ್ವಸ್ಥಾನಮುತ್ಕ್ರಮ್ಯ ಪ್ರಮಾಣಮಭಿ ಸತ್ಕೃತಃ|
12119002c ಆರೋಪ್ಯಃ ಶ್ವಾ ಸ್ವಕಾತ್ಸ್ಥಾನಾದುತ್ಕ್ರಮ್ಯಾನ್ಯತ್ ಪ್ರಪದ್ಯತೇ||

ನಾಯಿಯನ್ನು ಅಧಿಕವಾಗಿ ಸತ್ಕರಿಸಿ ಅದಕ್ಕೆ ಅದರ ಯೋಗ್ಯತೆಯನ್ನು ಮೀರಿಸ ಉತ್ತಮ ಸ್ಥಾನಕ್ಕೆ ಏರಿಸಬಾರದು. ಹಾಗೆ ಮೇಲಕ್ಕೇರಿಸಿದರೆ ಅದು ಪ್ರಮಾದವನ್ನೇ ಉಂಟುಮಾಡುತ್ತದೆ.

---

441 ಏವಂ ಗುಣಯುತಾನ್ ಭೃತ್ಯಾನ್ ಸ್ವೇ ಸ್ವೇ ಸ್ಥಾನೇ ನರಾಧಿಪಃ| (ಗೀತಾ ಪ್ರೆಸ್).

12119003a ಸ್ವಜಾತಿಕುಲಸಂಪನ್ನಾಃ ಸ್ವೇಷು ಕರ್ಮಸ್ವವಸ್ಥಿತಾಃ|
12119003c ಪ್ರಕರ್ತವ್ಯಾ ಬುಧಾ ಭೃತ್ಯಾ[442] ನಾಸ್ಥಾನೇ ಪ್ರಕ್ರಿಯಾ ಕ್ಷಮಾ||

ಸ್ವಜಾತಿಯ ಕುಲಸಂಪನ್ನ ವರ್ಣೋಚಿತ ಕರ್ಮಗಳಲ್ಲಿ
ನಿಷ್ಠರಾದವರನ್ನು ಸೇವಕರನ್ನಾಗಿ ನಿಯಮಿಸಿಕೊಳ್ಳಬೇಕು. ಯಾರನ್ನೂ
ಅವರ ಯೋಗ್ಯತೆಗೆ ತಕ್ಕುದಲ್ಲದ ಕಾರ್ಯಗಳಲ್ಲಿ ನಿಯೋಜಿಸಬಾರದು.

12119004a ಅನುರೂಪಾಣಿ ಕರ್ಮಾಣಿ ಭೃತ್ಯೇಭ್ಯೋ ಯಃ ಪ್ರಯಚ್ಚತಿ|
12119004c ಸ ಭೃತ್ಯಗುಣಸಂಪನ್ನಂ ರಾಜಾ ಫಲಮುಪಾಶ್ನುತೇ||

ಸೇವಕರಿಗೆ ಅವರಿಗೆ ಅನುರೂಪದ ಕರ್ಮಗಳನ್ನು ಕೊಡುವ
ಭೃತ್ಯಗುಣಸಂಪನ್ನ ರಾಜನು ಫಲವನ್ನು ಪಡೆದುಕೊಳ್ಳುತ್ತಾನೆ.

12119005a ಶರಭಃ ಶರಭಸ್ಥಾನೇ ಸಿಂಹಃ ಸಿಂಹ ಇವೋರ್ಜಿತಃ|
12119005c ವ್ಯಾಘ್ರೋ ವ್ಯಾಘ್ರ ಇವ ಸ್ಥಾಪ್ಯೋ ದ್ವೀಪೀ ದ್ವೀಪೀ ಯಥಾ ತಥಾ||

ಶರಭವು ಶರಭದ ಸ್ಥಾನದಲ್ಲಿ, ಬಲಿಷ್ಠ ಸಿಂಹವು ಸಿಂಹದ ಸ್ಥಾನದಲ್ಲಿ,
ಹುಲಿಯು ಹುಲಿಯ ಸ್ಥಾನದಲ್ಲಿ ಮತ್ತು ಚಿರತೆಯು ಚಿರತೆಯ ಸ್ಥಾನದಲ್ಲಿ
ಹೀಗೆ ಅವರವರು ಅವರವರ ಸ್ಥಾನಗಳಲ್ಲಿ ಇರಬೇಕು.

12119006a ಕರ್ಮಸ್ವಿಹಾನುರೂಪೇಷು ನ್ಯಸ್ಯಾ ಭೃತ್ಯಾ ಯಥಾವಿಧಿ|
12119006c ಪ್ರತಿಲೋಮಂ ನ ಭೃತ್ಯಾಸ್ತೇ ಸ್ಥಾಪ್ಯಾಃ ಕರ್ಮಫಲೈಷಿಣಾ||

ಸೇವಕರನ್ನು ಅವರವರ ಯೋಗ್ಯತೆಗೆ ತಕ್ಕಂತೆ ಕಾರ್ಯಗಳಲ್ಲಿ
ಯಥಾವಿಧಿಯಾಗಿ ನಿಯಮಿಸಬೇಕು. ಕರ್ಮಫಲಗಳನ್ನು
ಬಯಸುವವರು ಯೋಗ್ಯತೆಗೆ ವಿರುದ್ಧವಾದ ರೀತಿಯಲ್ಲಿ ಸೇವಕರನ್ನು

---

[442] ಹ್ಯಮಾತ್ಯಾಸ್ತು (ಭಾರತ ದರ್ಶನ).

ನಿಯಮಿಸಿಕೊಳ್ಳಬಾರದು.

12119007a ಯಃ ಪ್ರಮಾಣಮತಿಕ್ರಮ್ಯ ಪ್ರತಿಲೋಮಂ ನರಾಧಿಪಃ|
12119007c ಭೃತ್ಯಾನ್ ಸ್ಥಾಪಯತೇಽಬುದ್ಧಿರ್ನ ಸ ರಂಜಯತೇ ಪ್ರಜಾಃ||

ಮರ್ಯಾದೆಯನ್ನು ಉಲ್ಲಂಘಿಸಿ ಭೃತ್ಯರನ್ನು ನೀತಿಗೆ ವಿರುದ್ಧ ರೀತಿಯಲ್ಲಿ ನಿಯಮಿಸಿಕೊಳ್ಳುವ ಅಬುದ್ಧಿ ರಾಜನಿಗೆ ಪ್ರಜೆಗಳನ್ನು ರಂಜಿಸಲು ಸಾಧ್ಯವಾಗುವುದಿಲ್ಲ.

12119008a ನ ಬಾಲಿಶಾ ನ ಚ ಕ್ಷುದ್ರಾ ನ ಚಾಪ್ರತಿಮಿತೇಂದ್ರಿಯಾಃ[443]|
12119008c ನಾಕುಲೀನಾ ನರಾಃ ಪಾರ್ಶ್ವೇ ಸ್ಥಾಪ್ಯಾ ರಾಜ್ಞಾ ಹಿತೈಷಿಣಾ[444]||

ರಾಜನ ಹಿತೈಷಿಗಳಾಗಿ ಬಾಲಿಶರನ್ನೂ, ಕ್ಷುದ್ರರನ್ನೂ, ಇಂದ್ರಿಯಗಳನ್ನು ನಿಗ್ರಹಿಸದಿರುವವರನ್ನೂ, ಕುಲೀನರಲ್ಲದ ನರರನ್ನೂ ಹತ್ತಿರ ಇರಿಸಿಕೊಳ್ಳಬಾರದು.

12119009a ಸಾಧವಃ ಕುಶಲಾಃ[445] ಶೂರಾ ಜ್ಞಾನವಂತೋಽನಸೂಯಕಾಃ|
12119009c ಅಕ್ಷುದ್ರಾಃ ಶುಚಯೋ ದಕ್ಷಾ ನರಾಃ ಸ್ಯುಃ ಪಾರಿಪಾರ್ಶ್ವಕಾಃ||

ಸಾಧುಗಳೂ, ಕುಶಲರೂ, ಶೂರರೂ, ಜ್ಞಾನವಂತರೂ, ಅನಸೂಯಕರೂ, ಅಕ್ಷುದ್ರರೂ, ಶುಚಿಗಳೂ ಮತ್ತು ದಕ್ಷರಾದ ನರರೇ ರಾಜನ ಪಾರ್ಶ್ವವರ್ತೀ ಸೇವಕರಾಗಿ ನೇಮಕಗೊಂಡಿರಬೇಕು.

---

[443] ನಾಪ್ರಾಜ್ಞಾನಾಜಿತೇಂದ್ರಿಯಾಃ| (ಭಾರತ ದರ್ಶನ).

[444] ನಾಕುಲೀನಾ ನರಾಃ ಸರ್ವೇ ಸ್ಥಾಪ್ಯಾ ಗುಣಗಣೈಷಿಣಾ|| (ಭಾರತ ದರ್ಶನ).

[445] ಕುಲಜಾಃ (ಭಾರತ ದರ್ಶನ).

12119010a ನ್ಯಗ್ಭೂತಾಸ್ತತ್ಪರಾಃ ಕ್ಷಾಂತಾಶ್ಚೋಕ್ಷಾಃ ಪ್ರಕೃತಿಜಾಃ[446] ಶುಭಾಃ|
12119010c ಸ್ವೇ ಸ್ವೇ ಸ್ಥಾನೇಽಪರಿಕ್ರುಷ್ಟಾಸ್ತೇ ಸ್ಯೂ ರಾಜ್ಞೋ ಬಹಿಶ್ಚರಾಃ[447]||

ವಿನೀತರೂ, ಕಾರ್ಯತತ್ಪರರೂ, ಶಾಂತಸ್ವಭಾವವದವರೂ, ಚತುರರೂ, ಸ್ವಾಭಾವಿಕವಾಗಿಯೇ ಶುಭವಾಗಿರುವವರು ತಮ್ಮ ತಮ್ಮ ಸ್ಥಾನಗಳಲ್ಲಿ ಅನಿಂದಿತರಾಗಿ ರಾಜನ ಬಾಹ್ಯ ಸೇವಕರಾಗಿರಲು ಯೋಗ್ಯರಾಗಿರುತ್ತಾರೆ.

12119011a ಸಿಂಹಸ್ಯ ಸತತಂ ಪಾರ್ಶ್ವೇ ಸಿಂಹ ಏವ ಜನೋ[448] ಭವೇತ್|
12119011c ಅಸಿಂಹಃ ಸಿಂಹಸಹಿತಃ ಸಿಂಹವಲ್ಲಭತೇ ಫಲಮ್||

ಸಿಂಹದ ಪಕ್ಕದಲ್ಲಿ ಸತತವೂ ಸಿಂಹವೇ ಇರಬೇಕು. ಸಿಂಹದ ಸಹಿತ ಸಿಂಹವಲ್ಲದ ಪ್ರಾಣಿಯಿದ್ದರೆ ಅದಕ್ಕೂ ಸಿಂಹಕ್ಕೆ ಸಿಗುವ ಗೌರವವೇ ದೊರಕುತ್ತದೆ.

12119012a ಯಸ್ತು ಸಿಂಹಃ ಶ್ವಭಿಃ ಕೀರ್ಣಃ ಸಿಂಹಕರ್ಮಫಲೇ ರತಃ|
12119012c ನ ಸ ಸಿಂಹಫಲಂ ಭೋಕ್ತುಂ ಶಕ್ತಃ ಶ್ವಭಿರುಪಾಸಿತಃ||

ನಾಯಿಗಳಿಂದ ಪರಿವೃತವಾಗಿದ್ದ ಸಿಂಹವು ಸಿಂಹೋಚಿತವಾದ ಕರ್ಮಫಲಗಳಲ್ಲಿ ಅನುರಕ್ತನಾಗಿದ್ದರೂ ನಾಯಿಗಳಿಂದ ಸಂಸೇವಿಸಲ್ಪಡುವುದರಿಂದ ಸಿಂಹಕ್ಕೆ ದೊರಕಬೇಕಾದ

---

[446] ಪ್ರಕೃತಿಜ್ಞೈಃ (ಭಾರತ ದರ್ಶನ).

[447] ಸ್ವಸ್ಥಾನಾದಪಕ್ರುಷ್ಟಾ ಯೇ ತೇ ಸ್ಯೂ ರಾಜ್ಞಾಂ ಬಹಿಶ್ಚರಾಃ|| (ಭಾರತ ದರ್ಶನ).

[448] ಏವಾನುಗೋ (ಭಾರತ ದರ್ಶನ).

ಕರ್ಮಫಲವನ್ನು ಭೋಗಿಸಲು ಶಕ್ತನಾಗುವುದಿಲ್ಲ[449].

12119013a ಏವಮೇತೈರ್ಮನುಷ್ಯೇಂದ್ರ ಶೂರೈಃ ಪ್ರಾಜ್ಞೈರ್ಬಹುಶ್ರುತೈಃ|
12119013c ಕುಲೀನೈಃ ಸಹ ಶಕ್ಯೇತ ಕೃತ್ಸ್ನಾಂ ಜೇತುಂ ವಸುಂಧರಾಮ್‌||

ಮನುಷ್ಯೇಂದ್ರ! ಶೂರರಿಂದ, ಪ್ರಾಜ್ಞರಿಂದ, ಬಹುಶ್ರುತರಿಂದ, ಸತ್ಕುಲಪ್ರಸೂತರಿಂದ ಸಂವೃತನಾದ ರಾಜನು ಅಖಂಡ ಭೂಮಂಡಲವನ್ನೂ ಜಯಿಸಲು ಸಮರ್ಥನಾಗುತ್ತಾನೆ.

12119014a ನಾವೈದ್ಯೋ[450] ನಾನೃಜುಃ ಪಾರ್ಶ್ವೇ ನಾವಿದ್ಯೋ[451] ನಾಮಹಾಧನಃ|
12119014c ಸಂಗ್ರಾಹ್ಯೋ ವಸುಧಾಪಾಲೈರ್ಭೃತ್ಯೋ ಭೃತ್ಯವತಾಂ ವರ‌‌||

ಭೃತ್ಯವಂತರಲ್ಲಿ ಶ್ರೇಷ್ಠನೇ! ವಿದ್ಯಾವಂತನಲ್ಲದವನನ್ನೂ, ಸರಳತೆಯಿಲ್ಲದವನನ್ನೂ, ಮೂರ್ಖರನ್ನೂ, ದರಿದ್ರರನ್ನೂ ರಾಜನು ಸಮೀಪದಲ್ಲಿ ಇಟ್ಟುಕೊಳ್ಳಬಾರದು. ಅಂಥವರನ್ನು ಭೃತ್ಯರನ್ನಾಗಿ ಸಂಗ್ರಹಿಸಿಕೊಳ್ಳಬಾರದು.

12119015a ಬಾಣವದ್ವಿಸೃತಾ ಯಾಂತಿ ಸ್ವಾಮಿಕಾರ್ಯಪರಾ ಜನಾಃ|
12119015c ಯೇ ಭೃತ್ಯಾಃ ಪಾರ್ಥಿವಹಿತಾಸ್ತೇಷಾಂ ಸಾಂತ್ವಂ ಪ್ರಯೋಜಯೇತ್‌‌||

ಸ್ವಾಮಿಕಾರ್ಯದಲ್ಲಿ ತತ್ಪರರಾಗಿರುವ ಜನರು ಪ್ರಯೋಗಿಸ ಬಾಣದಂತೆ ನೇರವಾಗಿ ಕಾರ್ಯಸಾಧನೆಯನ್ನು ಮಾಡುತ್ತಾರೆ. ಪಾರ್ಥಿವನ

---

[449] ಹೀಗೆ ನೀಚಪುರುಷರಿಂದ ಪರಿವೃತನಾದ ರಾಜನು ತಾನು ಶ್ರೇಷ್ಠನಾಗಿದ್ದರೂ ಶ್ರೇಷ್ಠತೆಯ ಫಲವನ್ನು ಪಡೆಯುವುದಿಲ್ಲ (ಭಾರತ ದರ್ಶನ).

[450] ನಾವಿದ್ಯೋ (ಭಾರತ ದರ್ಶನ).

[451] ನಾಪ್ರಾಜ್ಞೋ (ಭಾರತ ದರ್ಶನ).

ಹಿತಸಾಧನೆಯಲ್ಲಿಯೇ ನಿರತರಾಗಿರುವ ಸೇವಕರಲ್ಲಿ ರಾಜನು
ಸಮಾಧಾನಕರ ಮಾತುಗಳನ್ನಾಡುತ್ತಾ ಅವರನ್ನು
ಪ್ರೋತ್ಸಾಹಿಸುತ್ತಿರಬೇಕು.

12119016a ಕೋಶಶ್ಚ ಸತತಂ ರಕ್ಷ್ಯೋ ಯತ್ನಮಾಸ್ಥಾಯ ರಾಜಭಿಃ|
12119016c ಕೋಶಮೂಲಾ ಹಿ ರಾಜಾನಃ ಕೋಶಮೂಲಕರೋ ಭವ[452]||

ರಾಜರು ಸತತವೂ ಪ್ರಯತ್ನಪಟ್ಟು ಕೋಶವನ್ನು ರಕ್ಷಿಸಬೇಕು. ರಾಜರಿಗೆ
ಕೋಶವೇ ಮೂಲವು. ಕೋಶದ ಮೂಲಕರನಾಗು.

12119017a ಕೋಷ್ಠಾಗಾರಂ ಚ ತೇ ನಿತ್ಯಂ ಸ್ಫೀತಂ ಧಾನ್ಯೈಃ ಸುಸಂಚಿತಮ್|
12119017c ಸದಾಸ್ತು ಸತ್ಸು ಸಂನ್ಯಸ್ತಂ ಧನಧಾನ್ಯಪರೋ ಭವ||

ನಿನ್ನ ಉಗ್ರಾಣಗಳು ನಿತ್ಯವೂ ಒಳ್ಳೆಯ ರೀತಿಯಿಂದ ಸಂಗ್ರಹಿಸಿದ
ಧಾನ್ಯಗಳಿಂದ ತುಂಬಿರಲಿ. ಸದಾ ಅದು ಸತ್ಪುರುಷರ ರಕ್ಷಣೆಯಲ್ಲಿರಲಿ.
ಧನಧಾನ್ಯಪರನಾಗು.

12119018a ನಿತ್ಯಯುಕ್ತಾಶ್ಚ ತೇ ಭೃತ್ಯಾ ಭವಂತು ರಣಕೋವಿದಾಃ|
12119018c ವಾಜಿನಾಂ ಚ ಪ್ರಯೋಗೇಷು ವೈಶಾರದ್ಯಮಿಹೇಷ್ಯತೇ||

ನಿನ್ನ ಸೇವಕರು ಯಾವಾಗಲೂ ಉದ್ಯೋಗಶೀಲರಾಗಿರಲಿ.
ರಣಕೋವಿದರಾಗಿರಲಿ. ಕುದುರೆಗಳ ಸವಾರಿಯಲ್ಲಿಯೂ ಕುದುರೆಗಳನ್ನು
ಪಳಗಿಸುವುದರಲ್ಲಿಯೂ ವಿಶೇಷರೂಪದಲ್ಲಿ ಚತುರರಾಗಿರಲಿ.

12119019a ಜ್ಞಾತಿಬಂಧುಜನಾವೇಕ್ಷೀ ಮಿತ್ರಸಂಬಂಧಿಸಂವೃತಃ|
12119019c ಪೌರಕಾರ್ಯಹಿತಾನ್ವೇಷೀ ಭವ ಕೌರವನಂದನ||

---

[452] ಕೋಶೋ ವೃದ್ಧಿಕರೋ ಭವೇತ್| (ಭಾರತ ದರ್ಶನ).

ಕೌರವನಂದನ! ಜ್ಞಾತಿಬಂಧುಗಳ ಯೋಗ-ಕ್ಷೇಮಗಳ ಕಡೆಗೆ ಗಮನವನ್ನು ಕೊಡು. ಮಿತ್ರರಿಂದಲೂ ಸಂಬಂಧಿಕರಿಂದಲೂ ಕೂಡಿಕೊಂಡಿರು. ಪೌರಕಾರ್ಯಹಿತಾನ್ವೇಷಿಯಾಗಿರು.

12119020a ಏಷಾ ತೇ ನೈಷ್ಠಿಕೀ ಬುದ್ಧಿಃ ಪ್ರಜ್ಞಾ ಚಾಭಿಹಿತಾ ಮಯಾ|
12119020c ಶ್ವಾ ತೇ ನಿದರ್ಶನಂ ತಾತ ಕಿಂ ಭೂಯಃ ಶ್ರೋತುಮಿಚ್ಚಸಿ||

ಮಗೂ! ಪ್ರಜಾಪಾಲನೆಯಲ್ಲಿ ನಿನ್ನ ಬುದ್ಧಿಯು ಇಷ್ಟು ನಿಷ್ಠೆಯಿಂದರಬೇಕು. ನಾಯಿಯ ನಿದರ್ಶನವನ್ನು ಕೊಟ್ಟು ನಾನು ಈ ವಿಷಯವನ್ನು ನಿನಗೆ ಹೇಳಿರುತ್ತೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?"

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಋಷಿರ್ಸಂವಾದೇ ಏಕೋನವಿಂಶತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಋಷಿರ್ಸಂವಾದ ಎನ್ನುವ ನೂರಾಹತ್ತೊಂಭತ್ತನೇ ಅಧ್ಯಾಯವು.

೧೨೦

ರಾಜಧರ್ಮಕಥನ

ರಾಜಧರ್ಮದ ಸಂಕ್ಷಿಪ್ತ ವರ್ಣನೆ (1-54).

12120001 ಯುಧಿಷ್ಠಿರ ಉವಾಚ|
12120001a ರಾಜವೃತ್ತಾನ್ಯನೇಕಾನಿ ತ್ವಯಾ ಪ್ರೋಕ್ತಾನಿ ಭಾರತ|

12120001c ಪೂರ್ವೈಃ ಪೂರ್ವನಿಯುಕ್ತಾನಿ ರಾಜಧರ್ಮಾರ್ಥವೇದಿಭಿಃ||

ಯುಧಿಷ್ಠಿರನು ಹೇಳಿದನು: "ಭಾರತ! ಹಿಂದೆ ಪೂರ್ವನಿಯುಕ್ತ ಅನೇಕ ರಾಜಧರ್ಮಾರ್ಥಗಳನ್ನು ತಿಳಿದಿದ್ದ ರಾಜರು ಅನುಷ್ಠಾನಮಾಡುತ್ತಿದ್ದ ಅನೇಕ ರಾಜವ್ಯವಹಾರಗಳ ಕುರಿತು ಹೇಳಿದ್ದೀಯೆ.

12120002a ತದೇವ ವಿಸ್ತರೇಣೋಕ್ತಂ ಪೂರ್ವೈರ್ದೃಷ್ಟಂ ಸತಾಂ ಮತಮ್|
12120002c ಪ್ರಣಯಂ ರಾಜಧರ್ಮಾಣಾಂ ಪ್ರಬ್ರೂಹಿ ಭರತರ್ಷಭ||

ಭರತರ್ಷಭ! ಹಿಂದೆ ಕಂಡುಕೊಂಡಿದ್ದ ಮತ್ತು ಸಜ್ಜನ ಸಮ್ಮತವಾದ ರಾಜಧರ್ಮಗಳನ್ನು ವಿಸ್ತಾರವಾಗಿಯೇ ನೀನು ಹೇಳಿದ್ದೀಯೆ. ಅದನ್ನೇ ಸಂಕ್ಷೇಪಿಸಿ ಹೇಳು."

12120003 ಭೀಷ್ಮ ಉವಾಚ|
12120003a ರಕ್ಷಣಂ ಸರ್ವಭೂತಾನಾಮಿತಿ ಕ್ಷತ್ರೇ ಪರಂ ಮತಮ್|
12120003c ತದ್ಯಥಾ ರಕ್ಷಣಂ ಕುರ್ಯಾತ್ತಥಾ ಶೃಣು ಮಹೀಪತೇ||

ಭೀಷ್ಮನು ಹೇಳಿದನು: "ಮಹೀಪತೇ! ಸರ್ವಭೂತಗಳ ರಕ್ಷಣೆಯೇ ಕ್ಷತ್ರಧರ್ಮದ ಪರಮ ಮತವು. ಅಂತಹಾ ರಕ್ಷಣೆಯನ್ನು ಹೇಗೆ ನೀಡಬೇಕು ಎನ್ನುವುದನ್ನು ಕೇಳು.

12120004a ಯಥಾ ಬರ್ಹಾಣಿ ಚಿತ್ರಾಣಿ ಬಿಭರ್ತಿ ಭುಜಗಾಶನಃ|
12120004c ತಥಾ ಬಹುವಿಧಂ ರಾಜಾ ರೂಪಂ ಕುರ್ವೀತ ಧರ್ಮವಿತ್||

ಭುಜಗಾಶನ ನವಿಲು ಹೇಗೆ ವಿಚಿತ್ರ ಬಣ್ಣಗಳ ರೆಕ್ಕೆಗಳನ್ನು ಪ್ರದರ್ಶಿಸುತ್ತದೆಯೋ ಹಾಗೆ ಧರ್ವವಿದು ರಾಜನು ಬಹುವಿಧದ ರೂಪಗಳನ್ನು ಪ್ರದರ್ಶಿಸಬೇಕು.

12120005a ತೈಕ್ಷ್ಣ್ಯಂ ಜಿಹ್ಮತ್ವಮಾದಾಂತ್ಯಂ ಸತ್ಯಮಾರ್ಜವಮೇವ ಚ|
12120005c ಮಧ್ಯಸ್ಥಃ ಸತ್ತ್ವಮಾತಿಷ್ಠಂಸ್ತಥಾ ವೈ ಸುಖಮೃಚ್ಚತಿ||

ರಾಜನು ಮಧ್ಯಸ್ವಭಾವದಲ್ಲಿದ್ದುಕೊಂಡು ಸಂದರ್ಭಕ್ಕೆ ತಕ್ಕಂತೆ ತೀಕ್ಷ್ಣತೆ, ಕುಟಿಲನೀತಿ, ಅಭಯಪ್ರದಾನ, ಸತ್ಯನಿಷ್ಠೆ, ಸರಳತೆ ಮತ್ತು ಉತ್ತಮ ಸ್ವಭಾವಗಳನ್ನು ಪ್ರದರ್ಶಿಸಬೇಕು. ಇದರಿಂದ ರಾಜನು ಸುಖವನ್ನು ಹೊಂದುತ್ತಾನೆ.

12120006a ಯಸ್ಮಿನ್ನರ್ಥೇ ಹಿತಂ ಯತ್ಸ್ಯಾತ್ತದ್ವರ್ಣಂ ರೂಪಮಾವಿಶೇತ್|
12120006c ಬಹುರೂಪಸ್ಯ ರಾಜ್ಞೋ ಹಿ ಸೂಕ್ಷ್ಮೋಽಪ್ಯರ್ಥೋ ನ ಸೀದತಿ||

ಯಾವ ಕಾರ್ಯದಲ್ಲಿ ಯಾವುದು ಹಿತವೋ ಅಂತಹ ರೂಪವನ್ನೇ ಧರಿಸಬೇಕು. ಹೀಗೆ ರಾಜವ್ಯವಹಾರಗಳಲ್ಲಿ ಬಹುರೂಪಗಳನ್ನು ಧರಿಸಬಲ್ಲ ರಾಜನ ಸಣ್ಣ ಸಣ್ಣ ಕೆಲಸಗಳೂ ಹಾಳಾಗುವುದಿಲ್ಲ.

12120007a ನಿತ್ಯಂ ರಕ್ಷಿತಮಂತ್ರಃ ಸ್ಯಾದ್ಯಥಾ ಮೂಕಃ ಶರಚ್ಚಿ ಖೀ|
12120007c ಶ್ಲಕ್ಷ್ಣಾಕ್ಷರತನುಃ ಶ್ರೀಮಾನ್ ಭವೇಚ್ಚಾಸ್ತ್ರವಿಶಾರದಃ||

ಶರದೃತುವಿನಲ್ಲಿ ನವಿಲು ಮೌನವಾಗಿರುವಂತೆ ರಾಜನೂ ಮೌನಿಯಾಗಿದ್ದುಕೊಂಡು ಗುಪ್ತವಿಷಯಗಳನ್ನು ಬಹಿರಂಗವಾಗದಂತೆ ರಕ್ಷಿಸಬೇಕು. ಸುಮಧುರ ಮಾತುಗಳನ್ನಾಡುತ್ತಿರಬೇಕು. ಸೌಮ್ಯ ಮುಖಭಾವವನ್ನು ಹೊಂದಿರಬೇಕು. ಶೋಭಾಸಂಪನ್ನನಾಗಿರಬೇಕು. ಮತ್ತು ಶಾಸ್ತ್ರವಿಶಾರದನಾಗಿರಬೇಕು.

12120008a ಆಪದ್ವಾ ರೇಷು ಯತ್ತಃ ಸ್ಯಾಜ್ಜಲಪ್ರಸ್ರವಣೇಷ್ವಿವ|
12120008c ಶೈಲವಷ್ಠೋದಕಾನೀವ ದ್ವಿಜಾನ್ಸಿದ್ಧಾನ್ಸಮಾಶ್ರಯೇತ್||
12120009a ಅರ್ಥಕಾಮಃ ಶಿಖಾಂ ರಾಜಾ ಕುರ್ಯಾದ್ಧರ್ಮಧ್ವಜೋಪಮಾಮ್|

ಪ್ರವಾಹದ ಸಮಯದಲ್ಲಿ ಗ್ರಾಮಕ್ಕೆ ಮುಳುಗಡೆಯ ಸಂಕಟವು ಬಂದೊದಗಿದಾಗ ಗ್ರಾಮಸ್ಥರು ಕಟ್ಟೆಯನ್ನು ಕಟ್ಟಿ ಸಂಕಟದಿಂದ ಪಾರಾಗುವಂತೆ ರಾಜನು ಆಪತ್ತು ಒದಗಬಹುದಾದ ದ್ವಾರಗಳಲ್ಲಿ ಸರ್ವದಾ ಜಾಗರೂಕನಾಗಿದ್ದು ಆಪತ್ತು ಒದಗಿಬರುವುದೆಂದು ತಿಳಿದೊಡನೆಯೇ ಅದಕ್ಕೆ ಸಂಬಂಧಿಸಿದ ಬಾಗಿಲನ್ನು ಮುಚ್ಚಬೇಕು.

12120009c ನಿತ್ಯಮುದ್ಯತದಂಡಃ ಸ್ಯಾದಾಚರೇಚ್ಚಾಪ್ರಮಾದತಃ|
12120009e ಲೋಕೇ ಚಾಯವ್ಯಯೌ ದೃಷ್ಟ್ವಾ ವೃಕ್ಷಾದ್ವೃಕ್ಷಮಿವಾಪ್ಲವನ್[453]||

ಅಪರಾಧಿಗಳನ್ನು ದಂಡಿಸಅಲು ನಿತ್ಯವೂ ಉದ್ಯತನಾಗಿರಬೇಕು. ಯಾವುದೇ ಕಾರ್ಯವನ್ನೂ ಅಪ್ರಮತ್ತನಾಗಿ ಮಾಡಬೇಕು. ಪ್ರಜೆಗಳ ಆಯ-ವ್ಯಯಗಳನ್ನು ನೋಡಿ ಮರದಿಂದ ರಸವನ್ನು ತೆಗೆಯುವಂತೆ ಜನರ ಧನವನ್ನು ತೆಗೆದುಕೊಳ್ಳುತ್ತಿರಬೇಕು.

12120010a ಮೃಜಾವಾನ್ಸ್ಯಾತ್ಸ್ವಯೂಥ್ಯೇಷು ಭಾವಾನಿ[454] ಚರಣೈಃ ಕ್ಷಿಪೇತ್|
12120010c ಜಾತಪಕ್ಷಃ ಪರಿಸ್ಪಂದೇದ್ರಕ್ಷೇದ್ವೈಕಲ್ಯಮಾತ್ಮನಃ||

ತನ್ನ ಸೇನೆಯೊಂದಿಗೆ ವಿಶುದ್ಧ ವ್ಯವಹಾರವನ್ನಿಟ್ಟುಕೊಂಡಿರಬೇಕು. ಶತ್ರುಸೇನೆಗಳನ್ನು ಕಾಲಿನಿಂದ ತುಳಿಯಬೇಕು. ತನ್ನ ಪಕ್ಷವು ಬಲಿಷ್ಠವಾಗಿದೆಯೆಂದು ನಿರ್ದಿಷ್ಟಮಾಡಿಕೊಂಡ ನಂತರವೇ ಶತ್ರುವಿನೊಡನೆ ಯುದ್ಧಕ್ಕೆ ಹೋಗಬೇಕು. ತನ್ನ ದೌರ್ಬಲ್ಯವನ್ನು ಚೆನ್ನಾಗಿ ತಿಳಿದುಕೊಂಡಿರಬೇಕು ಮತ್ತು ನ್ಯೂನತೆಗಳನ್ನು

---

453 ಬೃಹದ್ವೃಕ್ಷಮಿವಾಸ್ರವತ್ (ಭಾರತ ದರ್ಶನ).

454 ಭೌಮಾನಿ (ಭಾರತ ದರ್ಶನ).

ಹೋಗಲಾಡಿಸಿಕೊಳ್ಳಲು ಪ್ರಯತ್ನಿಸುತ್ತಿರಬೇಕು.

12120011a ದೋಷಾನ್ವಿವೃಣುಯಾಚ್ಚತ್ರೋಃ ಪರಪಕ್ಷಾನ್ವಿಧೂನಯೇತ್|
12120011c ಕಾನನೇಷ್ವಿವ ಪುಷ್ಪಾಣಿ ಬಹಿರ್ವಾರ್ಥಾನ್[455] ಸಮಾಚರೇತ್||

ಶತ್ರುವಿನ ದೋಷಗಳನ್ನು ಪ್ರಕಾಶಗೊಳಿಸಬೇಕು. ಪರಪಕ್ಷದವರನ್ನು ತನ್ನ ಕಡೆ ಸೆಳೆದುಕೊಳ್ಳಬೇಕು. ಕಾನನಪುಷ್ಪಗಳನ್ನು ಸಂಗ್ರಹಿಸುವಂತೆ ರಾಜನು ಹೊರಗಿನ ಧನವನ್ನು ಸಂಗ್ರಹಿಸುತ್ತಾ ರಾಜ್ಯಭಾರ ಮಾಡಬೇಕು.

12120012a ಉಚ್ಚ್ರಿತಾನಾಶ್ರಯೇತ್[456]
ಸ್ಫೀತಾನ್ನರೇಂದ್ರಾನಚಲೋಪಮಾನ್|
12120012c ಶ್ರಯೇಚ್ಚಾಯಾಮವಿಜ್ಞಾತಾಂ ಗುಪ್ತಂ ಶರಣಮಾಶ್ರಯೇತ್[457]||

ಪರ್ವತೋಪಮವಾಗಿ ನಿಂತಿರುವ ಸಂಪದ್ಭರಿತ ರಾಜರನ್ನು ಆಶ್ರಯಿಸಬೇಕು. ಮರಕ್ಕೆ ತಿಳಿಯದಂತೆ ಅದರ ನೆರಳಿನಲ್ಲಿ ಆಶ್ರಯ ಪಡೆದುಕೊಳ್ಳುವಂತೆ ಅವರಿಗೆ ತಿಳಿಯದಂತೆ ಅವರ ಆಶ್ರಯದಲ್ಲಿರಬೇಕು.

12120013a ಪ್ರಾವೃಷೀವಾಸಿತಗ್ರೀವೋ ಮಜ್ಜೇತ ನಿಶಿ ನಿರ್ಜನೇ|
12120013c ಮಾಯೂರೇಣ ಗುಣೇನೈವ ಸ್ತ್ರೀಭಿಶ್ಚಾಲಕ್ಷಿತಶ್ಚರೇತ್|

ಮಳೆಸುರಿಯುವಾಗ ರಾತ್ರಿ ನಿರ್ಜನಪ್ರದೇಶದಲ್ಲಿ ಅಡಗಿಕೊಳ್ಳುವ

---

455 ಬಹಿರರ್ಥಾನ್ (ಭಾರತ ದರ್ಶನ).

456 ಉಚ್ಛ್ರಿತಾನ್ನಾಶಯೇತ್ (ಭಾರತ ದರ್ಶನ).

457 ರಣಮುಪಾಶ್ರಯೇತ್ (ಭಾರತ ದರ್ಶನ).

ನವಿಲಿನಂತೆ ಆ ಸಮಯದಲ್ಲಿ ರಾಜನು ಅದೃಶ್ಯನಾಗಿಯೇ ಇರಬೇಕು. ಗಂಡುನವಿಲಿನ ಗುಣದಂತೆ ಆ ಸಮಯದಲ್ಲಿ ಸ್ತ್ರೀಯರ ಕಡೆಗೂ ದೃಷ್ಟಿಹಾಯಿಸಬಾರದು.

12120013e ನ ಜಹ್ಯಾಚ್ಚ ತನುತ್ರಾಣಂ ರಕ್ಷೇದಾತ್ಮಾನಮಾತ್ಮನಾ||
12120014a ಚಾರಭೂಮಿಷ್ವಭಿಗಮಾನ್ ಪಾಶಾಂಶ್ಚ ಪರಿವರ್ಜಯೇತ್|

ಆ ಸಮಯದಲ್ಲಿ ತನ್ನ ಕವಚಗಳನ್ನು ತೆಗೆದಿಡಬಾರದು. ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕು. ಶತ್ರುಗಳು ಪಸರಿಸಿದ ಚಾರಜಾಲಗಳನ್ನು ಪರಿತ್ಯಜಿಸಬೇಕು.

12120014c ಪೀಡಯೇಚ್ಚಾಪಿ[458] ತಾಂ ಭೂಮಿಂ ಪ್ರಣಶ್ಯೇದ್ಗಹನೇ ಪುನಃ||
12120015a ಹನ್ಯಾತ್ ಕ್ರುದ್ಧಾನತಿವಿಷಾನ್ಯೇ ಜಿಹ್ಮಗತಯೋऽಹಿತಾನ್|

ಶತ್ರುಗಳ ಚಾರರಿರುವ ಪ್ರದೇಶಗಳನ್ನು ಪೀಡಿಸಿ ಅಥವಾ ಮೈತ್ರಿಯಿಂದ ಪುನಃ ತನ್ನ ವಶದಲ್ಲಿ ತೆಗೆದುಕೊಳ್ಳಬೇಕು. ನಂತರ ಕ್ರುದ್ಧ ಅತಿವಿಷದ ಸರ್ಪಗಳಂತಿರುವ ಅಹಿತರಾದ ಅವರನ್ನು ನಾಶಗೊಳಿಸಬೇಕು.

12120015c ನಾಶ್ರಯೇದ್ಬಾಲಬರ್ಹಾಣಿ ಸನ್ನಿವಾಸಾನಿ ವಾಸಯೇತ್[459]||
12120016a ಸದಾ ಬರ್ಹಿನಿಭಃ ಕಾಮಂ ಪ್ರಸಕ್ತಿಕೃತಮಾಚರೇತ್[460]|
12120016c ಸರ್ವತಶ್ಚಾದದೇತ್ ಪ್ರಜ್ಞಾಂ ಪತಂಗಾನ್[461] ಗಹನೇಷ್ವಿವ|

---

[458] ಪ್ರಣಯೇದ್ವಾಪಿ (ಭಾರತ ದರ್ಶನ).

[459] ನಾಶಯೇದ್ಬಲಬರ್ಹಾಣಿ ಸನ್ನಿವಾಸಾನ್ನಿವಾಸಯೇತ್| (ಭಾರತ ದರ್ಶನ).

[460] ಪ್ರಶಸ್ತಂ ಕೃತಮಾಚರೇತ್| (ಭಾರತ ದರ್ಶನ).

[461] ಪತಂಗಂ (ಭಾರತ ದರ್ಶನ).

ದುರ್ಬಲರಾದವರನ್ನು ಆಶ್ರಯಿಸಬಾರದು. ಯೋಗ್ಯರನ್ನು ಹತ್ತಿರದಲ್ಲಿಟ್ಟುಕೊಂಡಿರಬೇಕು. ನವಿಲಿನಂತೆ ಸದಾ ಸ್ವೇಚ್ಛೆಯಿಂದ ಪ್ರಶಸ್ತ ಕಾರ್ಯಗಳನ್ನು ಮಾಡುತ್ತಿರಬೇಕು. ನವಿಲು ತನ್ನ ರೆಕ್ಕೆಗಳನ್ನು ಹರಡಿಕೊಂಡು ಪ್ರದರ್ಶಿಸುವಂತೆ ರಾಜನು ತನ್ನ ಸೈನಿಕರ ಮತ್ತು ಸಹಾಯಕರ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು. ಎಲ್ಲರಿಂದಲೂ ಜ್ಞಾನವನ್ನು ಪಡೆದುಕೊಳ್ಳಬೇಕು. ಶತ್ರುಗಳೊಡನೆ ಕಾಡಿನಲ್ಲಿರುವ ಪತಂಗಗಳಂತೆ ನಡೆದುಕೊಳ್ಳಬೇಕು.

12120016e ಏವಂ ಮಯೂರವದ್ರಾಜಾ ಸ್ವರಾಷ್ಟ್ರಂ ಪರಿಪಾಲಯೇತ್‌॥
12120017a ಆತ್ಮವೃದ್ಧಿಕರೀಂ ನೀತಿಂ ವಿದಧೀತ ವಿಚಕ್ಷಣಃ|

ಮಯೂರದಂತೆ ಈ ರೀತಿಯಲ್ಲಿ ರಾಜನು ಸ್ವರಾಷ್ಟ್ರವನ್ನು ಪರಿಪಾಲಿಸಬೇಕು. ವಿಚಕ್ಷಣನಾಗಿ ಆತ್ಮವೃದ್ಧಿಕಾರಕ ನೀತಿಯನ್ನು ಆಶ್ರಯಿಸಬೇಕು.

12120017c ಆತ್ಮಸಂಯಮನಂ ಬುದ್ಧ್ಯಾ ಪರಬುದ್ಧ್ಯಾವತಾರಣಮ್‌|
12120017e ಬುದ್ಧ್ಯಾ ಚಾತ್ಮಗುಣಪ್ರಾಪ್ತಿರೇತಚ್ಚಾಸ್ತ್ರನಿದರ್ಶನಮ್‌॥

ತನ್ನದೇ ಬುದ್ಧಿಯಿಂದ ಆತ್ಮಸಂಯಮನವನ್ನು ಮಾಡಿಕೊಳ್ಳಬೇಕು. ಇತರರ ಬುದ್ಧಿಯಿಂದ ಮಾಡಬೇಕಾದ ಕರ್ತವ್ಯಗಳನ್ನು ತಿಳಿದುಕೊಳ್ಳಬೇಕು. ಶಾಸ್ತ್ರೀಯ ಬುದ್ಧಿಯಿಂದ ಸದ್ಗುಣಗಳನ್ನು ಪಡೆದುಕೊಳ್ಳಬೇಕು. ಇದೇ ಶಾಸ್ತ್ರದ ನಿದರ್ಶನವು.

12120018a ಪರಂ ಚಾಶ್ವಾಸಯೇತ್ಸಾಮ್ನಾ ಸ್ವಶಕ್ತಿಂ ಚೋಪಲಕ್ಷಯೇತ್‌|
12120018c ಆತ್ಮನಃ ಪರಿಮರ್ಶೇನ ಬುದ್ಧಿಂ ಬುದ್ಧ್ಯಾ ವಿಚಾರಯೇತ್‌|

ಸುಮಧುರ ಮಾತುಗಳಿಂದ ಇತರರನ್ನು ಸಮಾಧಾನಗೊಳಿಸಬೇಕು.

ತನ್ನ ವಿಷಯದಲ್ಲಿ ಇತರರಿಗೆ ವಿಶ್ವಾಸವುಂಟಾಗುವಂತೆ ಮಾಡಬೇಕು. ತನ್ನ ಶಕ್ತಿಯು ಎಷ್ಟು ಎನ್ನುವುದನ್ನು ಇತರರಿಗೆ ತೋರಿಸಬೇಕು. ತನ್ನ ಪರಾಮರ್ಶೆಯಿಂದ ಮತ್ತು ಬುದ್ಧಿಯಿಂದ ಮಾಡಬೇಕಾದ ಕರ್ತವ್ಯಗಳನ್ನು ನಿಶ್ಚಯಿಸಬೇಕು.

12120018e ಸಾಂತ್ವಯೋಗಮತಿಃ ಪ್ರಾಜ್ಞಃ ಕಾರ್ಯಾಕಾರ್ಯವಿಚಾರಕಃ||
12120019a ನಿಗೂಢಬುದ್ಧಿರ್ಧೀರಃ ಸ್ಯಾದ್ವಕ್ತವ್ಯೇ ವಕ್ಷ್ಯತೇ ತಥಾ|

ಸಾಂತ್ವನ ಬುದ್ಧಿಯಿರುವ, ಪ್ರಾಜ್ಞ, ಕಾರ್ಯಾಕಾರ್ಯಗಳನ್ನು ವಿಚಾರಿಸುವ, ನಿಗೂಢ ಬುದ್ಧಿಯಿರುವ ಧೀರ ರಾಜನಿಗೆ ಹೇಳಬೇಕಾದ ವಿಷಯಗಳನ್ನು ಮಾತ್ರವೇ ಹೇಳಬೇಕು.

12120019c ಸಂನಿಕೃಷ್ಟಾಂ ಕಥಾಂ ಪ್ರಾಜ್ಞೋ ಯದಿ ಬುದ್ಧ್ಯಾ ಬೃಹಸ್ಪತಿಃ|
12120019e ಸ್ವಭಾವಮೇಷ್ಯತೇ ತಪ್ತಂ ಕೃಷ್ಣಾಯಸಮಿವೋದಕೇ||

ಕಾಯಿಸಿದ ಕಬ್ಬಿಣವನ್ನು ನೀರಿನಲ್ಲಿ ಹಾಕಿದೊಡನೆಯೇ ಅದು ತನ್ನ ಪೂರ್ವಸ್ವಭಾವವಾದ ಕಠಿಣತೆಯನ್ನೇ ಪಡೆದುಕೊಳ್ಳುವಂತೆ ಪ್ರಾಜ್ಞನಾದವನು ಬುದ್ಧಿಯಲ್ಲಿ ಬೃಹಸ್ಪತಿಯೇ ಆಗಿದ್ದರೂ ಕೆಳಮಟ್ಟದ ಮಾತುಗಳನ್ನಾಡಿದರೆ ಅದು ಅವನ ಸ್ವಭಾವವೆಂದೇ ಭಾವಿಸಬೇಕು.

12120020a ಅನುಯುಂಜೀತ ಕೃತ್ಯಾನಿ ಸರ್ವಾಣ್ಯೇವ ಮಹೀಪತಿಃ|
12120020c ಆಗಮ್ಯೈರುಪದಿಷ್ಟಾನಿ ಸ್ವಸ್ಯ ಚೈವ ಪರಸ್ಯ ಚ||

ಶಾಸ್ತ್ರಗಳಲ್ಲಿ ಹೇಳಿರುವ ಸಮಸ್ತ ಕರ್ಮಗಳನ್ನೂ ಮಹೀಪತಿಯು ತಾನೂ ಮಾಡಬೇಕು ಮತ್ತು ಇತರರಿಂದಲೂ ಮಾಡಿಸಬೇಕು.

12120021a ಕ್ಷುದ್ರಂ ಕ್ರೂರಂ[462] ತಥಾ ಪ್ರಾಜ್ಞಂ ಶೂರಂ ಚಾರ್ಥವಿಶಾರದಮ್|
12120021c ಸ್ವಕರ್ಮಣಿ ನಿಯುಂಜೀತ ಯೇ ಚಾನ್ಯೇ ವಚನಾಧಿಕಾಃ[463]||

ಅರ್ಥವಿಶಾರದ ರಾಜನು ತನ್ನ ಕೆಲಸಗಳಿಗೆ ಕ್ಷುದ್ರ, ಕ್ರೂರ, ಪ್ರಾಜ್ಞ, ಶೂರ ಮತ್ತು ಅನ್ಯ ವಚನಾಧಿಕರನ್ನು ನಿಯೋಜಿಸಿಕೊಳ್ಳಬೇಕು.

12120022a ಅಪ್ಯದೃಷ್ಟ್ವಾ ನಿಯುಕ್ತಾನಿ ಅನುರೂಪೇಷು ಕರ್ಮಸು[464]|
12120022c ಸರ್ವಾಂಸ್ತಾನನುವರ್ತೇತ ಸ್ವರಾಂಸ್ತಂತ್ರೀರಿವಾಯತಾ||

ಸೇವಕರನ್ನು ಅವರವರ ಯೋಗ್ಯತೆಗೆ ತಕ್ಕುದಾದ ಕರ್ಮಗಳಲ್ಲಿ ನಿಯೋಜಿಸಿ ವೀಣೆಯ ತಂತಿಗಳು ಸಪ್ತಸ್ವರಗಳನ್ನೂ ಶ್ರುತಿಬದ್ಧವಾಗಿ ನುದಿಸುವಂತೇ ಎಲ್ಲರೂ ಆ ಅಧಿಕಾರಿಗಳನ್ನೇ ಅನುಸರಿಸಿ ನಡೆಯುವಂತೆ ಮಾಡಬೇಕು.

12120023a ಧರ್ಮಾಣಾಮವಿರೋಧೇನ ಸರ್ವೇಷಾಂ ಪ್ರಿಯಮಾಚರೇತ್|
12120023c ಮಮಾಯಮಿತಿ ರಾಜಾ ಯಃ ಸ ಪರ್ವತ ಇವಾಚಲಃ||

ರಾಜನಾದವನು ಧರ್ಮಕ್ಕೆ ವಿರುದ್ಧವಾಗದ ರೀತಿಯಲ್ಲಿ ಎಲ್ಲ ಪ್ರಿಯಕರ್ಮಗಳನ್ನೂ ಆಚರಿಸಬೇಕು. “ಇವರು ನನ್ನವರು” ಎಂದು ಪ್ರಜೆಗಳ ಕುರಿತು ಭಾವಿಸುವ ರಾಜನು ಪರ್ವತದಂತೆ ಅವಿಚಲನಾಗಿರುತ್ತಾನೆ.

---

462 ಮೃದುಶೀಲಂ (ಭಾರತ ದರ್ಶನ).

463 ಚ ಬಲಾಧಿಕಾಃ (ಭಾರತ ದರ್ಶನ).

464 ಅಥ ದೃಷ್ಟ್ವಾ ನಿಯುಕ್ತಾನಿ ಸ್ವಾನುರೂಪೇಷು ಕರ್ಮಸು| (ಭಾರತ ದರ್ಶನ).

12120024a ವ್ಯವಸಾಯಂ ಸಮಾಧಾಯ ಸೂರ್ಯೋ ರಶ್ಮಿಮಿವಾಯತಾಮ್।
12120024c ಧರ್ಮಮೇವಾಭಿರಕ್ಷೇತ ಕೃತ್ವಾ ತುಲ್ಯೇ ಪ್ರಿಯಾಪ್ರಿಯೇ॥

ಸೂರ್ಯನು ತನ್ನ ವಿಸ್ತೃತ ಕಿರಣಗಳಿಂದ ಸಕಲವನ್ನೂ ರಕ್ಷಿಸುವಂತೆ ರಾಜನಾದವನು ಪ್ರಿಯರನ್ನೂ ಅಪ್ರಿಯರನ್ನೂ ಸಮನಾಗಿ ಕಾಣುತ್ತಾ ಸುದೃಢ ಪ್ರಯತ್ನಗಳಿಂದ ಧರ್ಮದ ರಕ್ಷಣೆಯನ್ನು ಮಾಡಬೇಕು.

12120025a ಕುಲಪ್ರಕೃತಿದೇಶಾನಾಂ ಧರ್ಮಜ್ಞಾನ್ಮೃದುಭಾಷಿಣಃ।
12120025c ಮಧ್ಯೇ ವಯಸಿ ನಿರ್ದೋಷಾನ್ದಿತೇ ಯುಕ್ತಾನ್ಜಿತೇಂದ್ರಿಯಾನ್॥
12120026a ಅಲುಬ್ಧಾನ್ ಶಿಕ್ಷಿತಾನ್ದಾಂತಾನ್ ಧರ್ಮೇಷು ಪರಿನಿಷ್ಠಿತಾನ್।
12120026c ಸ್ಥಾಪಯೇತ್ಸರ್ವಕಾರ್ಯೇಷು ರಾಜಾ ಧರ್ಮಾರ್ಥರಕ್ಷಿಣಃ॥

ಧರ್ಮಾರ್ಥಗಳನ್ನು ರಕ್ಷಿಸುವ ರಾಜನು ಸರ್ವಕಾರ್ಯಗಳಲ್ಲಿ ಕುಲ-ಸ್ವಭಾವ ಮತ್ತು ದೇಶಗಳ ಧರ್ಮಗಳನ್ನು ತಿಳಿದುಕೊಂಡಿರುವ, ಮೃದುಭಾಷೀ, ಮಧ್ಯವಯಸ್ಕ, ರಾಜನ ಹಿತದಲ್ಲಿಯೇ ಯುಕ್ತರಾಗಿರುವ, ನಿರ್ದೋಷೀ, ಜಿತೇಂದ್ರಿಯ, ಆಸೆಬುರುಕರಲ್ಲದ, ಶಿಕ್ಷಣವನ್ನು ಪಡೆದ, ದಾಂತ ಧರ್ಮಗಳಲ್ಲಿ ನಿಷ್ಠರಾಗಿರುವವರನ್ನು ನಿಯೋಜಿಸಿಕೊಳ್ಳಬೇಕು.

12120027a ಏತೇನೈವ[465] ಪ್ರಕಾರೇಣ ಕೃತ್ಯಾನಾಮಾಗತಿಂ ಗತಿಮ್।
12120027c ಯುಕ್ತಃ ಸಮನುತಿಷ್ಠೇತ ತುಷ್ಟಶ್ಚಾರೈರುಪಸ್ಕೃತಃ॥

ಈ ರೀತಿಯಲ್ಲಿ ರಾಜನು ಜಾಗರೂಕನಾಗಿದ್ದುಕೊಂಡು ರಾಜ್ಯಕಾರ್ಯಗಳನ್ನು ಆರಂಭಿಸಿ ಸಮಾಪ್ತಿಗೊಳಿಸಬೇಕು. ಚಾರರ

[465] ಏತೇನ ಚ (ಭಾರತ ದರ್ಶನ).

ಮೂಲಕ ರಾಜ್ಯದ ವಿಷಯಗಳನ್ನು ತಿಳಿದುಕೊಂಡು
ಸಂತುಷ್ಟನಾಗಿರಬೇಕು.

12120028a ಅಮೋಘಕ್ರೋಧಹರ್ಷಸ್ಯ ಸ್ವಯಂ ಕೃತ್ಯಾನ್ವವೇಕ್ಷಿಣಃ[466]|
12120028c ಆತ್ಮಪ್ರತ್ಯಯಕೋಶಸ್ಯ ವಸುಧೈವ[467] ವಸುಂಧರಾ||

ಯಾರ ಕ್ರೋಧ-ಹರ್ಷಗಳು ವಿಫಲವಾಗುವುದಿಲ್ಲವೋ, ಯಾರು ಸ್ವಯಂ
ತಾನೇ ಕೃತ್ಯಗಳನ್ನು ನೋಡಿಕೊಳ್ಳುವನೋ, ಯಾರಿಗೆ ಆತ್ಮವಿಶ್ವಾಸವೇ
ಕೋಶರೂಪವಾಗಿರುವುದೋ ಅಂಥಹ ರಾಜನಿಗೆ ವಸುಂಧರೆಯೇ
ಐಶ್ವರ್ಯವನ್ನು ಕೊಡುವಂತಾಗುತ್ತದೆ.

12120029a ವ್ಯಕ್ತಶ್ಚಾನುಗ್ರಹೋ ಯಸ್ಯ ಯಥಾರ್ಥಶ್ಚಾಪಿ ನಿಗ್ರಹಃ|
12120029c ಗುಪ್ತಾತ್ಮಾ ಗುಪ್ತರಾಷ್ಟ್ರಶ್ಚ ಸ ರಾಜಾ ರಾಜಧರ್ಮವಿತ್||

ಯಾರ ಅನುಗ್ರಹಕಾರ್ಯಗಳು ಎಲ್ಲರ ಗಮನಕ್ಕೆ ಬರುತ್ತದೆಯೋ,
ಯಾರ ಶಿಕ್ಷೆಗಳು ಯಥಾರ್ಹ ಕಾರಣಗಳಿಂದ ಕೂಡಿರುವವೋ, ಯಾರು
ತನ್ನನ್ನೂ ತನ್ನ ರಾಷ್ಟ್ರವನ್ನೂ ರಕ್ಷಿಸಿಕೊಳ್ಳುವನೋ ಆ ರಾಜನೇ
ರಾಜಧರ್ಮವನ್ನು ತಿಳಿದವನು.

12120030a ನಿತ್ಯಂ ರಾಷ್ಟ್ರಮವೇಕ್ಷೇತ ಗೋಭಿಃ ಸೂರ್ಯ ಇವೋತ್ಪತನ್|
12120030c ಚಾರಾಂಶ್ಚ ನಚರಾನ್ವಿದ್ಯಾತ್ತಥಾ ಬುದ್ಧ್ಯಾ ನ ಸಂಜ್ವರೇತ್[468]||

ಉದಯಿಸಿದ ಸೂರ್ಯನು ಹೇಗೆ ತನ್ನ ಕಿರಣಗಳ ಮುಖಾಂತರ

---

[466] ಕೃತ್ಯಾನ್ವವೇಕ್ಷಿತುಃ (ಭಾರತ ದರ್ಶನ).

[467] ವಸುದ್ಯೈವ (ಭಾರತ ದರ್ಶನ).

[468] ಸ್ವಯಂ ಚರೇತ್| (ಭಾರತ ದರ್ಶನ).

ಎಲ್ಲವನ್ನೂ ನೋಡುವನೋ ಹಾಗೆ ರಾಜನೂ ಕೂಡ ಗುಪ್ತಚಾರರ ಊಲಕ ಎಲ್ಲವನ್ನೂ ವೀಕ್ಷಿಸುತ್ತಿರಬೇಕು. ಚಾರರ ಮೂಲಕ ದೂರದಲ್ಲಿ ನಡೆಯುತ್ತಿರುವುದನ್ನೂ ತಿಳಿದುಕೊಳ್ಳುತ್ತಿರಬೇಕು.
ಬುದ್ಧಿಯನ್ನುಪಯೋಗಿಸಿ ನಿಶ್ಚಯಿಸಬೇಕು.

12120031a ಕಾಲಪ್ರಾಪ್ತಮುಪಾದದ್ಯಾನ್ನಾರ್ಥಂ ರಾಜಾ ಪ್ರಸೂಚಯೇತ್|
12120031c ಅಹನ್ಯಹನಿ ಸಂದುಹ್ಯಾನ್ಮಹೀಂ ಗಾಮಿವ ಬುದ್ಧಿಮಾನ್||

ಬುದ್ಧಿಮಾನ ರಾಜನು ಕಾಲವು ಪ್ರಾಪ್ತವಾದಾಗ ಮಾತ್ರ ಪ್ರಜೆಗಳಿಂದ ಧನವನ್ನು ಸಂಗ್ರಹಿಸಬೇಕು. ತನ್ನ ಅರ್ಥಸಂಗ್ರಹದ ನೀತಿಯನ್ನು ಯಾರಲ್ಲಿಯೂ ಪ್ರಕಟಪಡಿಸಬಾರದು. ಬುದ್ಧಿವಂತನು ಗೋರಕ್ಷಣೆಯನ್ನು ಮಾಡುತ್ತಾ ಹಸುವಿನ ಹಾಲನ್ನು ಕರೆದುಕೊಳ್ಳುವಂತೆ ಬುದ್ಧಿವಂತ ರಾಜನು ಪ್ರಜೆಗಳ ರಕ್ಷಣೆಯನ್ನು ಮಾಡುತ್ತಾ ಅವರಿಂದ ಧನವನ್ನು ಸಂಗ್ರಹಿಸಬೇಕು.

12120032a ಯಥಾ ಕ್ರಮೇಣ ಪುಷ್ಪೇಭ್ಯಶ್ಚಿನೋತಿ ಮಧು ಷಟ್ಪದಃ|
12120032c ತಥಾ ದ್ರವ್ಯಮುಪಾದಾಯ ರಾಜಾ ಕುರ್ವೀತ ಸಂಚಯಮ್||

ಜೇನುಹುಳುವು ಹೇಗೆ ಅನುಕ್ರಮವಾಗಿ ಅನೇಕ ಪುಷ್ಪಗಳಿಂದ ರಸವನ್ನು ಸಂಗ್ರಹಿಸಿ ಜೇನುತುಪ್ಪವನ್ನು ಸಿದ್ಧಗೊಳಿಸುವುದೋ ಅದೇ ರೀತಿಯಲ್ಲಿ ರಾಜನೂ ಕೂಡ ಸಮಸ್ತ ಪ್ರಜೆಗಳಿಂದಲೂ ಸ್ವಲ್ಪ ಸ್ವಲ್ಪವಾಗಿಯೇ ಧನವನ್ನು ಸಂಗ್ರಹಿಸಿಕೊಳ್ಳಬೇಕು.

12120033a ಯದ್ಧಿ[469] ಗುಪ್ತಾವಶಿಷ್ಟಂ ಸ್ಯಾತ್ತದ್ಧಿತಂ[470]
ಧರ್ಮಕಾಮಯೋಃ|
12120033c ಸಂಚಯಾನುವಿಸರ್ಗೇ ಸ್ಯಾದ್ರಾಜಾ ಶಾಸ್ತ್ರವಿದಾತ್ಮವಾನ್‌||

ಸಂಗ್ರಹಿಸಿದ ಧನವನ್ನು ಮೊದಲು ಪ್ರಜೆಗಳ ಹಿತಕ್ಕಾಗಿ ಬಳಸಬೇಕು. ಉಳಿದುದನ್ನು ಧರ್ಮಕಾರ್ಯಗಳಿಗೆ ನಿಯೋಜಿಸಬೇಕು. ಉಳಿದುದನ್ನು ಸುಖೋಪಭೋಗಗಳಿಗೆ ಉಪಯೋಗಿಸಬೇಕು. ಜಿತೇಂದ್ರಿಯನೂ ಶಾಸ್ತ್ರವಿದಾತ್ಮವಂತನೂ ಆದ ರಾಜನು ಬೇರೆ ಯಾವುದಕ್ಕೂ ಪ್ರಜೆಗಳಿಂದ ಪಡೆದ ಧನವನ್ನು ಉಪಯೋಗಿಸಬಾರದು.

12120034a ನಾಲ್ಪಮರ್ಥಂ[471] ಪರಿಭವೇನ್ನಾವಮನ್ಯೇತ ಶಾತ್ರವಾನ್‌|
12120034c ಬುದ್ಧ್ಯಾವಬುಧ್ಯೇದಾತ್ಮಾನಂ ನ ಚಾಬುದ್ಧಿಷು ವಿಶ್ವಸೇತ್‌||

ಬಂದ ಧನವು ಸ್ವಲ್ಪವೇ ಆದರೂ ಅದನ್ನು ತಿರಸ್ಕರಿಸಬಾರದು. ಶತ್ರುವು ಶಕ್ತಿವಿಹೀನನಾಗಿದ್ದರೂ ಅವನನ್ನು ಹೀಯಾಳಿಸಬಾರದು. ಬುದ್ಧಿಯ ಮೂಲಕ ತನ್ನ ಸ್ವರೂಪವನ್ನು ತಿಳಿದುಕೊಳ್ಳಬೇಕು. ಬುದ್ಧಿವಿಹೀನರಲ್ಲಿ ವಿಶ್ವಾಸವನ್ನಿಡಬಾರದು.

12120035a ಧೃತಿರ್ದಾಕ್ಷ್ಯಂ ಸಂಯಮೋ ಬುದ್ಧಿರಗ್ರ್ಯಾ[472]
ಧೈರ್ಯಂ ಶೌರ್ಯಂ ದೇಶಕಾಲೋಽಪ್ರಮಾದಃ|

---

469 ಯದಿ (ಭಾರತ ದರ್ಶನ).

470 ಸ್ಯಾತ್ತದ್ವಿತ್ತಂ (ಭಾರತ ದರ್ಶನ).

471 ನಾರ್ಥಮಲ್ಪಂ (ಭಾರತ ದರ್ಶನ).

472 ಬುದ್ಧಿರಾತ್ಮಾ (ಭಾರತ ದರ್ಶನ).

12120035c ಸ್ವಲ್ಪಸ್ಯ ವಾ ಮಹತೋ ವಾಪಿ ವೃದ್ಧೌ[473]
ಧನಸ್ಯೈತಾನ್ಯಷ್ಟ ಸಮಿಂಧನಾನಿ||

ಧಾರಣಾಶಕ್ತಿ, ಚತುರತೆ, ಸಂಯಮ, ಬುದ್ಧಿ, ಧೈರ್ಯ, ಶೌರ್ಯ, ಕೇಶ-ಕಾಲಗಳಲ್ಲಿ ಅಪ್ರಮತ್ತತೆಯಿಂದಿರುವುದು ಈ ಗುಣಗಳು ಅಲ್ಪ ಅಥವಾ ಹೆಚ್ಚಿನ ಧನದ ವೃದ್ಧಿಗೆ ಮುಖ್ಯಸಾಧನಗಳು. ಧನವೆಂಬ ಅಗ್ನಿಯನ್ನು ಉರಿಸಲು ಇವು ಸಮಿತ್ತುಗಳ ರೂಪದಂತಿವೆ.

12120036a ಅಗ್ನಿಸ್ತೋಕೋ ವರ್ಧತೇ ಹ್ಯಾಜ್ಯಸಿಕ್ತೋ
ಬೀಜಂ ಚೈಕಂ ಬಹುಸಾಹಸ್ರಮೇತಿ|
12120036c ಕ್ಷಯೋದಯೌ ವಿಪುಲೌ ಸಂನಿಶಾಮ್ಯ
ತಸ್ಮಾದಲ್ಪಂ ನಾವಮನ್ಯೇತ ವಿದ್ವಾನ್||

ಬೆಂಕಿಯು ಸ್ವಲ್ಪವೇ ಇದ್ದರೂ ತುಪ್ಪದಿಂದ ಸಿಕ್ತವಾದೊಡನೆಯೇ ವರ್ಧಿಸುತ್ತದೆ. ಒಂದು ಸಣ್ಣ ಬೀಜವನ್ನು ಬಿತ್ತಿದರೂ ಅದರಿಂದ ಸಾವಿರಾರು ಬೀಜಗಳು ಹುಟ್ಟಿಕೊಳ್ಳುತ್ತವೆ. ಆದುದರಿಂದ ಬೃಹತ್ತಾದ ಆಯ-ವ್ಯಯಗಳನ್ನು ವಿಚಾರಮಾಡುತ್ತಾ ಲಭಿಸಿದ ವಿತ್ತವು ಅಲ್ಪವಾದರೂ ಅದನ್ನು ಅನಾದರಿಸಬಾರದು.

12120037a ಬಾಲೋಽಬಾಲಃ ಸ್ಥವಿರೋ ವಾ ರಿಪುರ್ಯಃ
ಸದಾ ಪ್ರಮತ್ತಂ ಪುರುಷಂ ನಿಹನ್ಯಾತ್|
12120037c ಕಾಲೇನಾನ್ಯಸ್ತಸ್ಯ ಮೂಲಂ ಹರೇತ
ಕಾಲಜ್ಞಾತಾ ಪಾರ್ಥಿವಾನಾಂ ವರಿಷ್ಠಃ||

---

[473] ಅಲ್ಪಸ್ಯ ವಾ ಬಹುನೋ ವಾ ವಿವೃದ್ಧೌ (ಭಾರತ ದರ್ಶನ).

ಸದಾ ಪ್ರಮತ್ತನಾಗಿರುವ ಪುರುಷನನ್ನು ಶತ್ರುವು ಬಾಲಕನಾಗಿರಲಿ,
ಪ್ರೌಢನಾಗಿರಲಿ, ವೃದ್ಧನೇ ಆಗಿರಲಿ ನಾಶಮಾಡಿಬಿಡಬಹುದು.
ಕಾಲವನ್ನು ನೋಡಿ ಶತ್ರುವು ಅವನ ಮೂಲವನ್ನೇ
ನಿರ್ನಾಮಮಾಡಬಹುದು. ಆದುದರಿಂದ ಕಾಲವನ್ನು
ತಿಳಿದುಕೊಂಡಿರುವವನು ಪಾರ್ಥಿವರಲ್ಲಿಯೇ ವರಿಷ್ಠನೆನಿಸಿಕೊಳ್ಳುತ್ತಾನೆ.

12120038a ಹರೇತ್ಕೀರ್ತಿಂ ಧರ್ಮಮಸ್ಯೋಪರುಂಧ್ಯಾದ್
ಅರ್ಥೇ ದೀರ್ಘಂ ವೀರ್ಯಮಸ್ಯೋಪಹನ್ಯಾತ್|
12120038c ರಿಪುರ್ದ್ವೇಷ್ಟಾ ದುರ್ಬಲೋ ವಾ ಬಲೀ ವಾ
ತಸ್ಮಾಚ್ಚತ್ರೌ ನೈವ ಹೇಡೇದ್ಯತಾತ್ಮಾ||

ದ್ವೇಷವನ್ನು ಸಾಧಿಸುವ ಶತ್ರುವು, ಬಲಿಷ್ಠನಾಗಿರಲಿ ಅಥವಾ
ದುರ್ಬಲನಾಗಿರಲಿ, ರಾಜನ ಕೀರ್ತಿಯನ್ನು ನಷ್ಟಗೊಳಿಸುತ್ತಾನೆ.
ಧರ್ಮಕಾರ್ಯಗಳಲ್ಲಿ ಬಾಧೆಯೊಡ್ಡುತ್ತಾನೆ. ಅರ್ಥೋಪಾರ್ಜನೆಯಲ್ಲಿ
ಅವನ ಶಕ್ತಿಯನ್ನು ಕುಂಠಿತಗೊಳಿಸುತ್ತಾನೆ. ಆದುದರಿಂದ ಪ್ರಯತ್ನಶೀಲ
ರಾಜನು ಶತ್ರುವಿನ ವಿಷಯದಲ್ಲಿ ಎಂದೂ ನಿಶ್ಚಿಂತನಾಗಿರಬಾರದು.

12120039a ಕ್ಷಯಂ ಶತ್ರೋಃ ಸಂಚಯಂ ಪಾಲನಂ ಚಾಪ್ಯ್
ಉಭೌ ಚಾರ್ಥೌ ಸಹಿತೌ ಧರ್ಮಕಾಮೌ[474]|
12120039c ಅತಶ್ಚಾನ್ಯನ್ಮತಿಮಾನ್ಸಂದಧೀತ
ತಸ್ಮಾದ್ರಾಜಾ ಬುದ್ಧಿಮಂತಂ ಶ್ರಯೇತ||

ಶತ್ರುವಿನ ಹಾನಿ, ಧನಸಂಗ್ರಹ, ರಕ್ಷಣೆ, ಧರ್ಮಕಾಮಗಳ ಜೊತೆ

---

[474] ಕ್ಷಯಂ ವೃದ್ಧಿಂ ಪಾಲನಂ ಸಂಚಯಂ ವಾ ಬುದ್ಧ್ವಾಪ್ಯುಭೌ ಸಂಹತೌ ಸರ್ವಕಾಮೌ| (ಭಾರತ ದರ್ಶನ).

ಅರ್ಥವನ್ನೂ ಪರಿಶೀಲಿಸಿ, ಮತಿಮಂತರಾಜನು ಸಂಧಿಯನ್ನು ಮಾಡಿಕೊಳ್ಳಬೇಕು. ಆದುದರಿಂದ ರಾಜನು ಬುದ್ಧಿವಂತಿಕೆಯನ್ನು ಆಶ್ರಯಿಸಬೇಕು.

12120040a ಬುದ್ಧಿರ್ದೀಪ್ತಾ ಬಲವಂತಂ ಹಿನಸ್ತಿ
ಬಲಂ ಬುದ್ಧ್ಯಾ ವರ್ಧತೇ ಪಾಲ್ಯಮಾನಮ್|
12120040c ಶತ್ರುರ್ಬುದ್ಧ್ಯಾ ಸೀದತೇ ವರ್ಧಮಾನೋ
ಬುದ್ಧೇಃ ಪಶ್ಚಾತ್ಕರ್ಮ ಯತ್ತತ್ ಪ್ರಶಸ್ತಮ್||

ಪ್ರತಿಭಾಯುಕ್ತ ಬುದ್ಧಿಯು ಬಲಿಷ್ಠನನ್ನೂ ವಿನಾಶಗೊಳಿಸುತ್ತದೆ. ನಷ್ಟವಾಗುತ್ತಿರುವ ಬಲದ ರಕ್ಷಣೆಯೂ ಬುದ್ಧಿಯ ಮೂಲಕವಾಗಿಯೇ ಆಗುತ್ತದೆ. ಪ್ರವೃದ್ಧನಾಗುತ್ತಿರುವ ಶತ್ರುವನ್ನೂ ಬುದ್ಧಿಯ ಮೂಲಕವೇ ವಿನಾಶಗೊಳಿಸಬಹುದು. ಆದುದರಿಂದ ಬುದ್ಧಿಯಿಂದ ಆಲೋಚಿಸಿ ನಂತರ ಕಾರ್ಯವನ್ನೆಸಗುವುದು ಪ್ರಶಸ್ತವಾದುದು.

12120041a ಸರ್ವಾನ್ಕಾಮಾನ್ಕಾಮಯಾನೋ ಹಿ ಧೀರಃ
ಸತ್ತ್ವೇನಾಲ್ಪೇನಾಪ್ನುತೇ ಹೀನದೇಹಃ[475]|
12120041c ಯಥಾತ್ಮಾನಂ ಪ್ರಾರ್ಥಯತೇಽರ್ಥಮಾನೈಃ
ಶ್ರೇಯಃಪಾತ್ರಂ ಪೂರಯತೇ ಹ್ಯನಲ್ಪಮ್||

ಧೀರನಾದವನು ಶರೀರದಲ್ಲಿ ದುರ್ಬಲನಾಗಿದ್ದರೂ ಸರ್ವ ಕಾಮನೆಗಳನ್ನೂ ಸ್ವಲ್ಪವೇ ಬಲವನ್ನುಪಯೋಗಿಸಿ ಪೂರೈಸಿಕೊಳ್ಳಬಹುದು. ಅವಶ್ಯಕ ವಸ್ತುಗಳಿಂದ ಸಂಪನ್ನನಾಗಿದ್ದರೂ ಇನ್ನೂ ಆಸೆಪಡುವ ಮತ್ತು ಇತರರು ತನ್ನ ಆಸೆಯನ್ನು

[475] ಸತ್ತ್ವೇನಾಲ್ಪೇನಾಪ್ನುತೇ ಹೀನದೋಷಃ| (ಭಾರತ ದರ್ಶನ).

ಪೂರೈಸಿಕೊಡಬೇಕೆಂದು ಅಪೇಕ್ಷಿಸುವ ರಾಜನು ಶ್ರೇಯಸ್ಸಿನ ತನ್ನ ಸಣ್ಣ ಪಾತ್ರೆಯನ್ನೂ ತುಂಬಿಸಿಕೊಳ್ಳುವುದಿಲ್ಲ. ಅಂಥವನಿಗೆ ಶ್ರೇಯಸ್ಸು ಸರ್ವಥಾ ಲಭಿಸುವುದಿಲ್ಲ.

12120042a ತಸ್ಮಾದ್ರಾಜಾ ಪ್ರಗೃಹೀತಃ ಪರೇಷು
ಮೂಲಂ ಲಕ್ಷ್ಮ್ಯಾಃ ಸರ್ವತೋಽಭ್ಯಾದದೀತ|
12120042c ದೀರ್ಘಂ ಕಾಲಮಪಿ ಸಂಪೀಡ್ಯಮಾನೋ
ವಿದ್ಯುತ್ಸಂಪಾತಮಿವ ಮಾನೋರ್ಜಿತಃ ಸ್ಯಾತ್||

ಆದುದರಿಂದ ರಾಜನು ಎಲ್ಲ ಪ್ರಜೆಗಳನ್ನೂ ಅನುಗ್ರಹಬುದ್ಧಿಯಿಂದ ಕಾಣುತ್ತಾ ಸಂಪತ್ತಿಗೆ ಮೂಲಭೂತವಾದ ಕರವನ್ನು ಪ್ರಜೆಗಳಿಂದ ತೆಗೆದುಕೊಳ್ಳಬೇಕು. ದೀರ್ಘಕಾಲದವರೆಗೆ ಪ್ರಜೆಗಳನ್ನು ಪೀಡಿಸುತ್ತಾ ಮಿಂಚಿನಂತೆ ತನ್ನ ಪ್ರಭಾವವನ್ನು ಬೀರಲು ಹೋಗಬಾರದು.

12120043a ವಿದ್ಯಾ ತಪೋ ವಾ ವಿಪುಲಂ ಧನಂ ವಾ
ಸರ್ವಮೇತದ್ವ್ಯವಸಾಯೇನ[476] ಶಕ್ಯಮ್|
12120043c ಬ್ರಹ್ಮ[477] ಯತ್ತಂ ನಿವಸತಿ ದೇಹವತ್ಸು[478]
ತಸ್ಮಾದ್ವಿದ್ಯಾದ್ವ್ಯವಸಾಯಂ ಪ್ರಭೂತಮ್||

ವಿದ್ಯೆಯಾಗಲೀ, ತಪಸ್ಸಾಗಲೀ, ವಿಪುಲ ಧನವಾಗಲೀ ಎಲ್ಲವೂ ವ್ಯವಸಾಯದಿಂದ ಶಕ್ಯವಾಗುತ್ತವೆ. ದೇಹಗಳಲ್ಲಿ ವಾಸಿಸುವ

---

476 ಸರ್ವಂ ಹ್ಯೇತದ್ವ್ಯವಸಾಯೇನ (ಭಾರತ ದರ್ಶನ).

477 ಬುದ್ಧ್ಯಾ (ಭಾರತ ದರ್ಶನ).

478 ತನ್ನಿವಸೇದ್ದೇಹವತ್ಸು (ಭಾರತ ದರ್ಶನ).

ಬ್ರಹ್ಮನಿಂದಲೇ ವ್ಯವಸಾಯವು ಹುಟ್ಟಿಕೊಂಡಿದೆ.

12120044a ಯತ್ರಾಸತೇ ಮತಿಮಂತೋ ಮನಸ್ವಿನಃ
ಶಕ್ರೋ ವಿಷ್ಣುರ್ಯತ್ರ ಸರಸ್ವತೀ ಚ|
12120044c ವಸಂತಿ ಭೂತಾನಿ ಚ ಯತ್ರ ನಿತ್ಯಂ
ತಸ್ಮಾದ್ವಿದ್ವಾನ್ನಾವಮನ್ಯೇತ ದೇಹಮ್||

ಮನಸ್ವಿಗಳು ವಾಸಿಸಿರುವ, ಶಕ್ರ-ವಿಷ್ಣು-ಸರಸ್ವತಿಯರು ವಾಸಿಸುತಿರುವ,
ಮತ್ತು ನಿತ್ಯವೂ ಸರ್ವ ಭೂತಗಳೂ ವಾಸಿಸಿರುವ ದೇಹವನ್ನು
ಮತಿಮಂತರು ಅಪಮಾನಿಸುವುದಿಲ್ಲ.

12120045a ಲುಬ್ಧಂ ಹನ್ಯಾತ್ಸಂಪ್ರದಾನೇನ ನಿತ್ಯಂ
ಲುಬ್ಧಸ್ತೃಪ್ತಿಂ ಪರವಿತ್ತಸ್ಯ ನೈತಿ|
12120045c ಸರ್ವೋ ಲುಬ್ಧಃ ಕರ್ಮಗುಣೋಪಭೋಗೇ
ಯೋಽರ್ಥ್ಯೆಹೀನೋ ಧರ್ಮಕಾಮೌ ಜಹಾತಿ||

ಲೋಭಿಯಾದವನನ್ನು ನಿತ್ಯಕೊಡುಗೆಯಿಂದಲೇ ಗೆಲ್ಲಬೇಕು.
ಲೋಭಿಯಾದವನಿಗೆ ಇತರರ ಐಶ್ವರ್ಯವು ಎಷ್ಟೇ ಲಭಿಸಿದರೂ
ತೃಪ್ತಿಯೆಂಬುದೇ ಇರುವುದಿಲ್ಲ. ಸತ್ಕರ್ಮಗಳ ಫಲರೂಪದ ಸುಖವನ್ನು
ಪಡೆದುಕೊಳ್ಳಲು ಎಲ್ಲರೂ ಲುಬ್ಧರೇ ಆಗುತ್ತಾರೆ.
ಧನನಹೀನನಾದವನು ಧರ್ಮ-ಕಾಮಗಳೆರಡನ್ನೂ ಪರಿತ್ಯಜಿಸುತ್ತಾನೆ.

12120046a ಧನಂ ಭೋಜ್ಯಂ[479] ಪುತ್ರದಾರಂ ಸಮೃದ್ಧಿಂ
ಸರ್ವೋ ಲುಬ್ಧಃ ಪ್ರಾರ್ಥಯತೇ ಪರೇಷಾಮ್|

[479] ಭೋಗಂ (ಭಾರತ ದರ್ಶನ).

12120046c ಲುಬ್ಧೇ ದೋಷಾಃ ಸಂಭವಂತೀಹ ಸರ್ವೇ
ತಸ್ಮಾದ್ರಾಜಾ ನ ಪ್ರಗೃಹ್ಣೀತ ಲುಬ್ಧಾನ್‌॥

ಲೋಭಿಯು ಇತರರಲ್ಲಿರುವ ಧನ, ಭೋಗಸಾಮಾಗ್ರಿಗಳು, ಸ್ತ್ರೀ-ಪುತ್ರರು ಮತ್ತು ಸಮೃದ್ಧಿ ಎಲ್ಲವನ್ನೂ ಪಡೆದುಕೊಳ್ಳಲು ಇಚ್ಛಿಸುತ್ತಾನೆ. ಲೋಭಿಗೆ ಬೇಡವಾದುದು ಯಾವುದೂ ಇರುವುದಿಲ್ಲ. ಲುಬ್ಧನಲ್ಲಿ ಸರ್ವ ದೋಷಗಳೂ ಇರುತ್ತವೆ. ಆದುದರಿಂದ ರಾಜನು ಲೋಭಿಯನ್ನು ಸ್ವೀಕರಿಸಬಾರದು.

12120047a ಸಂದರ್ಶನೇ ಸತ್ಪುರುಷಂ ಜಘನ್ಯಮಪಿ ಚೋದಯೇತ್‌|
12120047c ಆರಂಭಾನ್ವಿಷತಾಂ ಪ್ರಾಜ್ಞಃ ಸರ್ವಾನರ್ಥಾಂಸ್ತು ಸೂದಯೇತ್‌[480]‌॥

ಶತ್ರುಪಕ್ಷದ ಪರಿಸ್ಥಿತಿಯನ್ನು ನೋಡಿಬರಲು ಸತ್ಪುರುಷನನ್ನೂ ನೀಚಪುರುಷನನ್ನೂ ಕಳುಹಿಸಬೇಕು. ಪ್ರಾಜ್ಞ ರಾಜನು ಶತ್ರುಗಳು ಆರಂಭಿಸಿದ ಸರ್ವಾರ್ಥಯುಕ್ತ ಕಾರ್ಯಗಳನ್ನೂ ನಾಶಪಡಿಸಬೇಕು.

12120048a ಧರ್ಮಾನ್ವಿತೇಷು ವಿಜ್ಞಾತೋ ಮಂತ್ರೀ ಗುಪ್ತಶ್ಚ ಪಾಂಡವ|
12120048c ಆಪ್ತೋ ರಾಜನ್ಯಲೀನಶ್ಚ ಪರ್ಯಾಪ್ತೋ ರಾಜ್ಯಸಂಗ್ರಹೇ‌॥

ಪಾಂಡವ! ರಾಜ್ಯಕ್ಕೆ ಸಂಬಂಧಿಸಿದ ಸಂಪೂರ್ಣ ವಿಷಯಗಳನ್ನೂ ವಿಶೇಷರೀತಿಯಲ್ಲಿ ತಿಳಿದುಕೊಂಡಿರುವ ಧರ್ಮಾತ್ಮನನ್ನು ಮಂತ್ರಿಯನ್ನಾಗಿ ಮಾಡಿಕೊಳ್ಳಬೇಕು. ಪ್ರಜೆಗಳ ವಿಶ್ವಾಸಕ್ಕೆ ಪಾತ್ರನಾದ ಮತ್ತು ಸತ್ಕುಲಪ್ರಸೂತ ರಾಜನು ಇತರ ಎಲ್ಲ ರಾಜರನ್ನೂ ತನ್ನ ಅಧೀನದಲ್ಲಿಟ್ಟುಕೊಳ್ಳಲು ಸಮರ್ಥನಾಗುತ್ತಾನೆ.

---

[480] ಸರ್ವಾಥಾಂಶ್ಚ ಪ್ರಸೂದಯೇತ್‌| (ಭಾರತ ದರ್ಶನ).

12120049a ವಿಧಿಪ್ರವೃತ್ತಾನ್ನರದೇವಧರ್ಮಾನ್
ಉಕ್ತಾನ್ಸಮಾಸೇನ ನಿಬೋಧ ಬುದ್ಧ್ಯಾ|
12120049c ಇಮಾನ್ವಿದಧ್ಯಾದ್ವ್ಯನುಸೃತ್ಯ ಯೋ ವೈ
ರಾಜಾ ಮಹೀಂ ಪಾಲಯಿತುಂ ಸ ಶಕ್ತಃ||

ವಿಧಿಪ್ರಯುಕ್ತವಾದ ರಾಜಧರ್ಮಗಳನ್ನು ಸಂಕ್ಷಿಪ್ತವಾಗಿ ಹೇಳಿದ್ದೇನೆ. ಬುದ್ಧಿಪೂರ್ವಕವಾಗಿ ಅರ್ಥಮಾಡಿಕೋ. ಗುರುವಿನಿಂದ ಈ ರಾಜಧರ್ಮಗಳ ಉಪದೇಶಗಳನ್ನು ಪಡೆದು ಅದರಂತೆ ನಡೆದುಕೊಳ್ಳುವ ರಾಜನು ಭೂಮಂಡಲವನ್ನೇ ಆಳಲು ಶಕ್ತನಾಗುತ್ತಾನೆ.

12120050a ಅನೀತಿಜಂ ಯದ್ಯವಿಧಾನಜಂ[481] ಸುಖಂ
ಹಠಪ್ರಣೀತಂ ವಿವಿಧಂ ಪ್ರದೃಶ್ಯತೇ|
12120050c ನ ವಿದ್ಯತೇ ತಸ್ಯ ಗತಿರ್ಮಹೀಪತೇರ್
ನ ವಿದ್ಯತೇ ರಾಷ್ಟ್ರಜಮುತ್ತಮಂ ಸುಖಮ್[482]||

ಅನ್ಯಾಯಂದಿದ ಆರ್ಜಿಸಿರುವ, ಅಕಸ್ಮಾತ್ತಾಗಿ ಪ್ರಾಪ್ತವಾಗಿರುವ ಮತ್ತು ದೈವವಿಧಾನದಿಂದ ಪ್ರಾಪ್ತವಾಗಿರುವ ಎಲ್ಲವೂ ವಿಧಿಯ ಅನುಸಾರವಾಗಿಯೇ ಪ್ರಾಪ್ತವಾದವುಗಳಂತೆ ತೋರುತ್ತವೆ. ಆದರೆ ರಾಜಧರ್ಮಗಳನ್ನು ಚೆನ್ನಾಗಿ ತಿಳಿಯದಿರುವವನಿಗೆ ರಾಜ್ಯವು ಹೇಗೆಯೇ ದೊರಕಿದರೂ ಅದರ ಉತ್ತಮ ಸುಖವನ್ನು ಪಡೆದುಕೊಳ್ಳಲು ತಿಳಿದಿರುವುದಿಲ್ಲ.

12120051a ಧನ್ಯೈರ್ವಿಶಿಷ್ಟಾನ್ಮತಿಶೀಲಪೂಜಿತಾನ್

---

481 ಯಸ್ಯ ವಿಧಾನಜಂ (ಭಾರತ ದರ್ಶನ).

482 ರಾಜ್ಯಸುಖಂ ಹ್ಯನುತ್ತಮಮ್| (ಭಾರತ ದರ್ಶನ).

ಗುಣೋಪಪನ್ನಾನ್ಯುಧಿ ದೃಷ್ಟವಿಕ್ರಮಾನ್|
12120051c ಗುಣೇಷು ದೃಷ್ಟಾನಚಿರಾದಿಹಾತ್ಮವಾನ್
ಸತೋಽಭಿಸಂಧಾಯ ನಿಹಂತಿ ಶಾತ್ರವಾನ್||

ಇಲ್ಲಿ ಹೇಳಿರುವ ರಾಜದರ್ಮಗಳನ್ನು ಅನುಸರಿಸಿ ಸಂಧಿ-ವಿಗ್ರಹಾದಿ ಗುಣಗಳ ಪ್ರಯೋಗದಲ್ಲಿ ಜಾಗರೂಕನಾಗಿದ್ದು ಜಿತೇಂದ್ರಿಯನಾಗಿರುವ ರಾಜನು ಧನಸಂಪನ್ನನಾಗಿರುವ, ಬುದ್ಧಿ-ಸದ್ವೃತ್ತಿಗಳಿಂದ ಸಮ್ಮಾನಿತರಾಗಿರುವ, ಗುಣವಂತರಾದ ಮತ್ತು ಯುದ್ಧದಲ್ಲಿ ಮಹಾಪರಾಕ್ರಮವನ್ನೇ ತೋರಿಸುವ ಮಹಾಶತ್ರುಗಳನ್ನೂ ಧ್ವಂಸಮಾಡುತ್ತಾನೆ.

12120052a ಪಶ್ಯೇದುಪಾಯಾನ್ವಿಧಿವೈಃ ಕ್ರಿಯಾಪಥೈರ್
ನ ಚಾನುಪಾಯೇನ ಮತಿಂ ನಿವೇಶಯೇತ್|
12120052c ಶ್ರಿಯಂ ವಿಶಿಷ್ಟಾಂ ವಿಪುಲಂ ಯಶೋ ಧನಂ
ನ ದೋಷದರ್ಶೀ ಪುರುಷಃ ಸಮಶ್ನುತೇ||

ರಾಜನಾದವನು ನಾಪ್ರಕಾರದ ಕಾರ್ಯಗಳ ಮೂಲಕ ಶತ್ರುವನ್ನು ಜಯಿಸಲು ಯೋಗ್ಯ ಉಪಾಯಗಳನ್ನು ಹುಡುಕಬೇಕು. ಉಪಾಯವಿಲ್ಲದೇ ಶತ್ರುವಿನ ರಾಜ್ಯವನ್ನು ಅಪಹರಿಸಲು ಇಚ್ಛಿಸಬಾರದು. ನಿರ್ದೋಷಿಗಳಲ್ಲಿಯೂ ದೋಷಗಳನ್ನು ಕಾಣುವವನು ವಿಶಿಷ್ಟ ಸಂಪತ್ತು, ಮಹಾಯಶಸ್ಸು ಮತ್ತು ಮಹಾಧನ ಇವುಗಳನ್ನು ಹೊಂದಲಾರನು.

12120053a ಪ್ರೀತಿಪ್ರವೃತ್ತೌ ವಿನಿವರ್ತನೇ ತಥಾ
ಸುಹೃತ್ಸು ವಿಜ್ಞಾಯ ನಿವೃತ್ಯ ಚೋಭಯೋಃ|

12120053c ಯದೇವ ಮಿತ್ರಂ ಗುರುಭಾರಮಾವಹೇತ್
ತದೇವ ಸುಸ್ನಿಗ್ಧಮುದಾಹರೇದ್ಬುಧಃ||

ಪ್ರೀತಿಪ್ರವೃತ್ತರಾದ ಇಬ್ಬರು ಸ್ನೇಹಿತರು ಕಾರ್ಯವನ್ನು ಮುಗಿಸಿ ಹಿಂದಿರುಗುವಾಗ ಆ ಇಬ್ಬರಲ್ಲಿ ಯಾರು ಕಾರ್ಯವನ್ನು ಚೆನ್ನಾಗಿ ತಿಳಿದುಕೊಂಡು ಕಾರ್ಯಸಿದ್ಧಿಗಾಗಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಂಡನೋ ಅವನೇ ಪರಮ ಸ್ನೇಹಿತನೆಂದು ತಿಳಿದವರು ಉದಾಹರಿಸುತ್ತಾರೆ.

12120054a ಏತಾನ್ಮಯೋಕ್ತಾಂಸ್ತವ ರಾಜಧರ್ಮಾನ್
ನೃಣಾಂ ಚ ಗುಪ್ತೌ ಮತಿಮಾದಧತ್ಸ್ವ|
12120054c ಅವಾಪ್ಸ್ಯಸೇ ಪುಣ್ಯಫಲಂ ಸುಖೇನ
ಸರ್ವೋ ಹಿ ಲೋಕೋತ್ತಮಧರ್ಮಮೂಲಃ||

ನಾನು ಹೇಳಿರುವ ಈ ರಾಜಧರ್ಮಗಳನ್ನು ಆಚರಿಸು. ಪ್ರಜೆಗಳ ರಕ್ಷಣೆಯಲ್ಲಿ ಬುದ್ಧಿಯನ್ನಿಡು. ಇದರಿಂದ ಪುಣ್ಯಫಲವನ್ನು ಪಡೆದುಕೊಳ್ಳುತ್ತೀಯೆ. ಏಕೆಂದರೆ ಸಂಪೂರ್ಣ ಜಗತ್ತಿಗೂ ರಾಜಧರ್ಮವೇ ಮೂಲವು.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ರಾಜಧರ್ಮಕಥನೇ ವಿಂಶತ್ಯಧಿಕಶತತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ರಾಜಧರ್ಮಕಥನ ಎನ್ನುವ ನೂರಾಇಪ್ಪತ್ತನೇ ಅಧ್ಯಾಯವು.

೧೨೧

ದಂಡಸ್ವರೂಪಾದಿಕಥನ

ರಾಜದಂಡದ ಸ್ವರೂಪ, ನಾಮ, ಲಕ್ಷಣ, ಸ್ವಭಾವ ಮತ್ತು ಪ್ರಯೋಗಗಳ ವಿವರಣೆ (1-57).

12121001 ಯುಧಿಷ್ಠಿರ ಉವಾಚ|
12121001a ಅಯಂ ಪಿತಾಮಹೇನೋಕ್ತೋ ರಾಜಧರ್ಮಃ ಸನಾತನಃ|
12121001c ಈಶ್ವರಶ್ಚ ಮಹಾದಂಡೋ ದಂಡೇ ಸರ್ವಂ ಪ್ರತಿಷ್ಠಿತಮ್||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಈ ಸನಾತನ ರಾಜಧರ್ಮವನ್ನು ನೀನು ಹೇಳಿದ್ದೀಯೆ. ಮಹಾದಂಡವೇ ಈಶ್ವರ ಸ್ವರೂಪವಾಗಿದೆ. ದಂಡದಲ್ಲಿಯೇ ಎಲ್ಲವೂ ಪ್ರತಿಷ್ಠಿತವಾಗಿವೆ.

12121002a ದೇವತಾನಾಮೃಷೀಣಾಂ ಚ ಪಿತೄಣಾಂ ಚ ಮಹಾತ್ಮನಾಮ್|
12121002c ಯಕ್ಷರಕ್ಷಃಪಿಶಾಚಾನಾಂ ಮರ್ತ್ಯಾನಾಂ ಚ ವಿಶೇಷತಃ||
12121003a ಸರ್ವೇಷಾಂ ಪ್ರಾಣಿನಾಂ ಲೋಕೇ ತಿರ್ಯಕ್ಷ್ವಪಿ ನಿವಾಸಿನಾಮ್|
12121003c ಸರ್ವವ್ಯಾಪೀ ಮಹಾತೇಜಾ ದಂಡಃ ಶ್ರೇಯಾನಿತಿ ಪ್ರಭೋ||

ಪ್ರಭೋ! ದೇವತೆಗಳಿಗೂ, ಋಷಿಗಳಿಗೂ, ಪಿತೃಗಳಿಗೂ, ಮನುಷ್ಯರಿಗೂ, ಯಕ್ಷ-ರಾಕ್ಷಸರಿಗೂ, ಪಿಶಾಚರಿಗೂ, ಸಾಧ್ಯರಿಗೂ, ತಿರ್ಯಗ್ಯೋನಿಗಳಲ್ಲಿ ಹುಟ್ಟಿರುವ ಸಮಸ್ತ ಪಶು-ಪಕ್ಷಿಗಳಿಗೂ ಸರ್ವವ್ಯಾಪಿಯಾದ ಮತ್ತು ಮಹಾ ತೇಜಸ್ಸಿನಿಂದ ಕೂಡಿರುವ ದಂಡವೇ ಶ್ರೇಯಸ್ಸಿಗೆ ಸಾಧನಾಭೂತವಾಗಿರುವುದೆಂದು ನೀನು

ಹೇಳಿದ್ದೀಯೆ.

12121004a ಇತ್ಯೇತದುಕ್ತಂ ಭವತಾ ಸರ್ವಂ ದಂಡ್ಯಂ ಚರಾಚರಮ್|
12121004c ದೃಶ್ಯತೇ ಲೋಕಮಾಸಕ್ತಂ ಸಸುರಾಸುರಮಾನುಷಮ್||

ಸುರಾಸುರಮನುಷ್ಯರಿಂದ ಕೂಡಿರುವ ಈ ಲೋಕದಲ್ಲಿರುವ ಚರಾಚರಗಳೆಲ್ಲವೂ ದಂಡದ ಮೇಲೆ ಪ್ರತಿಷ್ಠಿತವಾಗಿದೆ ಎಂದು ನೀನು ಹೇಳಿದೆ.

12121005a ಏತದಿಚ್ಛಾಮ್ಯಹಂ ಜ್ಞಾತುಂ ತತ್ತ್ವೇನ ಭರತರ್ಷಭ|
12121005c ಕೋ ದಂಡಃ ಕೀದೃಶೋ ದಂಡಃ ಕಿಂರೂಪಃ ಕಿಂಪರಾಯಣಃ||

ಭರತರ್ಷಭ! ದಂಡ ಎಂದರೆ ಏನು? ಅದು ಹೇಗಿರುತ್ತದೆ? ಅದು ಹೇಗೆ ಕಾಣುತ್ತದೆ ಮತ್ತು ಅದು ಯಾರನ್ನು ಆಶ್ರಯಿಸಿದೆ? ಇದನ್ನು ತತ್ತ್ವತಃ ತಿಳಿದುಕೊಳ್ಳಲು ಬಯಸುತ್ತೇನೆ.

12121006a ಕಿಮಾತ್ಮಕಃ ಕಥಂಭೂತಃ ಕತಿಮೂರ್ತಿಃ ಕಥಂಪ್ರಭುಃ[483]|
12121006c ಜಾಗರ್ತಿ ಸ ಕಥಂ ದಂಡಃ ಪ್ರಜಾಸ್ವವಹಿತಾತ್ಮಕಃ||

ಅದರ ಮೂಲವು ಯಾವುದು? ಅದು ಹೇಗೆ ಹುಟ್ಟಿಕೊಂಡಿತು? ಅದರ ಆಕಾರವು ಹೇಗಿರುತ್ತದೆ? ಪ್ರಜೆಗಳ ಹಿತಾತ್ಮಕವಾದ ಆ ದಂಡವು ಹೇಗೆ ಸದಾ ಜಾಗರೂಕವಾಗಿರುತ್ತದೆ?

12121007a ಕಶ್ಚ ಪೂರ್ವಾಪರಮಿದಂ ಜಾಗರ್ತಿ ಪರಿಪಾಲಯನ್|
12121007c ಕಶ್ಚ ವಿಜ್ಞಾಯತೇ ಪೂರ್ವಂ ಕೋಽಪರೋ

[483] ಕಥಂ ಮೂರ್ತಿಃ ಕಥಂ ಪ್ರಭೋ| (ಭಾರತ ದರ್ಶನ).

ದಂಡಸಂಜ್ಞಿತಃ[484]|
12121007e ಕಿಂಸಂಸ್ಥಶ್ಚ ಭವೇದ್ದಂಡಃ ಕಾ ಚಾಸ್ಯ ಗತಿರಿಷ್ಯತೇ||

ಎಚ್ಚರದಿಂದಿದ್ದು ಪೂರ್ವಾಪರ ಜಗತ್ತನ್ನೂ ಅದು ಹೇಗೆ ಪರಿಪಾಲಿಸುತ್ತದೆ? ಹಿಂದೆ ಇದು ಯಾವ ಹೆಸರಿನಿಂದ ತಿಳಿಯಲ್ಪಟ್ಟಿತ್ತು? ಬೇರೆ ಯಾವುದನ್ನು ದಂಡ ಎಂದು ಕರೆಯುತ್ತಾರೆ? ದಂಡದ ಆಧಾರವು ಯಾವುದು? ಇದರ ಗತಿಯೇನೆಂದು ಹೇಳುತ್ತಾರೆ?"

12121008 ಭೀಷ್ಮ ಉವಾಚ|
12121008a ಶೃಣು ಕೌರವ್ಯ ಯೋ ದಂಡೋ ವ್ಯವಹಾರ್ಯೋ ಯಥಾ ಚ ಸಃ|
12121008c ಯಸ್ಮಿನ್ ಹಿ ಸರ್ವಮಾಯತ್ತಂ ಸ ದಂಡ ಇಹ ಕೇವಲಃ||

ಭೀಷ್ಮನು ಹೇಳಿದನು: "ಕೌರವ್ಯ! ದಂಡವೆಂದರೆ ಏನು ಮತ್ತು ದಂಡವು ಹೇಗೆ ವ್ಯವಹರಿಸುತ್ತದೆ ಎನ್ನುವುದನ್ನು ಕೇಳು. ಸರ್ವವೂ ಯಾವುದನ್ನು ಆಶ್ರಯಿಸಿರುವವೋ ಅದನ್ನೇ ಶ್ರೇಷ್ಠ ದಂಡ ಎಂದು ಹೇಳುತ್ತಾರೆ.

12121009a ಧರ್ಮಸ್ಯಾಖ್ಯಾ ಮಹಾರಾಜ ವ್ಯವಹಾರ ಇತೀಷ್ಯತೇ|
12121009c ತಸ್ಯ ಲೋಪಃ ಕಥಂ ನ ಸ್ಯಾಲ್ಲೋಕೇಷ್ವವಹಿತಾತ್ಮನಃ|
12121009e ಇತ್ಯರ್ಥಂ ವ್ಯವಹಾರಸ್ಯ ವ್ಯವಹಾರತ್ವಮಿಷ್ಯತೇ||

ಮಹಾರಾಜ! ವ್ಯವಹಾರ ಎನ್ನುವುದು ಧರ್ಮದ ಇನ್ನೊಂದು ಹೆಸರು. ಜಾಗರೂಕನಾಗಿರುವ ಮನುಷ್ಯನ ಧರ್ಮಕ್ಕೆ ಸ್ವಲ್ಪವೂ ಲೋಪವುಂಟಾಗದೇ ಇರಲು ದಂಡದ ಅವಶ್ಯಕತೆಯಿದೆ. ಆದುದರಿಂದ ದಂಡವು ಧರ್ಮ ವ್ಯವಹಾರದ ವ್ಯವಹಾರತ್ವವಾಗಿದೆ.

---

[484] ಕೋ ವರೋ ದಂಡ ಸಂಜ್ಞಿತಃ| (ಭಾರತ ದರ್ಶನ).

12121010a ಅಪಿ ಚೈತತ್ಪುರಾ ರಾಜನ್ಮನುನಾ ಪ್ರೋಕ್ತಮಾದಿತಃ|
12121010c ಸುಪ್ರಣೀತೇನ ದಂಡೇನ ಪ್ರಿಯಾಪ್ರಿಯಸಮಾತ್ಮನಾ|
12121010e ಪ್ರಜಾ ರಕ್ಷತಿ ಯಃ ಸಮ್ಯಗ್ಧರ್ಮ ಏವ ಸ ಕೇವಲಃ||

ರಾಜನ್! ಹಿಂದೆ ಮನುವು ಇದನ್ನೇ ಸಂಪೂರ್ಣವಾಗಿ ಹೇಳಿದ್ದನು. "ಪ್ರಿಯರನ್ನೂ ಅಪ್ರಿಯರನ್ನೂ ಸಮನಾಗಿ ಕಾಣುತ್ತಾ ಪಕ್ಷಪಾತವಿಲ್ಲದೇ ದಂಡನೀತಿಯನ್ನು ಚೆನ್ನಾಗಿ ಪ್ರಯೋಗಿಸುತ್ತಾ ಪ್ರಜೆಗಳ ರಕ್ಷಣೆಯನ್ನು ಮಾಡುವುದೇ ಶ್ರೇಷ್ಠವಾದ ರಾಜಧರ್ಮ".

12121011a ಅಥೋಕ್ತಮೇತದ್ವಚನಂ ಪ್ರಾಗೇವ ಮನುನಾ ಪುರಾ|
12121011c ಜನ್ಮ ಚೋಕ್ತಂ ವಸಿಷ್ಠೇನ ಬ್ರಹ್ಮಣೋ ವಚನಂ ಮಹತ್||

ಈ ಮಾತನ್ನು ಈಗಾಗಲೇ ಹಿಂದೆ ಮನುವು ಹೇಳಿದ್ದನು. ಈ ಮಾತನ್ನು ಬ್ರಹ್ಮನು ವಸಿಷ್ಠನು ಹುಟ್ಟಿದಾಗಲೂ ಹೇಳಿದ್ದನು.

12121012a ಪ್ರಾಗಿದಂ ವಚನಂ ಪ್ರೋಕ್ತಮತಃ ಪ್ರಾಗ್ವಚನಂ ವಿದುಃ|
12121012c ವ್ಯವಹಾರಸ್ಯ ಚಾಖ್ಯಾನಾದ್ವ್ಯವಹಾರ ಇಹೋಚ್ಯತೇ||

ಹಿಂದಿನ ಮಾತುಗಳನ್ನು ತಿಳಿದವರು ಇದನ್ನು ಪ್ರಾಗ್ವಚನ ಎಂದು ಹೇಳುತ್ತಾರೆ. ಧರ್ಮದ ಪ್ರತಿಪಾದನೆಯಾಗಿರುವುದರಿಂದ ಇದನ್ನು ವ್ಯವಹಾರ ಎಂದೇ ಕರೆಯುತ್ತಾರೆ.

12121013a ದಂಡಾತ್ತ್ರಿವರ್ಗಃ ಸತತಂ ಸುಪ್ರಣೀತಾತ್ ಪ್ರವರ್ತತೇ|
12121013c ದೈವಂ ಹಿ ಪರಮೋ ದಂಡೋ ರೂಪತೋಽಗ್ನಿರಿವೋಚ್ಚಿಖಃ||

ಚೆನ್ನಾಗಿ ಪ್ರಯೋಗಿಸಿದ್ದೇ ಆದರೆ ದಂಡದಿಂದ ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗಗಳೂ ಸತತವಾಗಿ ಸಿದ್ಧಿಸುತ್ತವೆ. ಏಕೆಂದರೆ

ದಂಡವು ಒಂದು ಪರಮ ದೇವತೆ. ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜೋರೂಪದಿಂದ ದಂಡವು ಪ್ರಕಟವಾಗುತ್ತದೆ.

12121014a ನೀಲೋತ್ಪಲದಲಶ್ಯಾಮಶ್ಚತುರ್ದಂಷ್ಟ್ರಶ್ಚತುರ್ಭುಜಃ|
12121014c ಅಷ್ಟಪಾನ್ನೈಕನಯನಃ ಶಂಕುಕರ್ಣೋರ್ಧ್ವರೋಮವಾನ್||

ದಂಡಪುರುಷನು ನೀಲಕಮಲದಂತೆ ಶ್ಯಾಮಲವರ್ಣದವನು. ಅವನಿಗೆ ನಾಲ್ಕು ಕೋರೆದಾಡೆಗಳೂ ನಾಲ್ಕು ಭುಜಗಳೂ ಇವೆ. ಎಂಟು ಕಾಲುಗಳೂ ಅನೇಕ ಕಣ್ಣುಗಳೂ ಇವೆ. ತೀಕ್ಷ್ಣವಾದ ಕಿವಿಗಳಿವೆ. ಶರೀರದ ರೋಮಗಳು ಊರ್ಧ್ವಮುಖವಾಗಿವೆ.

12121015a ಜಟೀ ದ್ವಿಜಿಹ್ವಸ್ತಾಮ್ರಾಸ್ಯೋ ಮೃಗರಾಜತನುಚ್ಚದಃ|
12121015c ಏತದ್ರೂಪಂ ಬಿಭರ್ತ್ಯುಗ್ರಂ ದಂಡೋ ನಿತ್ಯಂ ದುರಾವರಃ||

ಜಟೆಯನ್ನು ಧರಿಸಿರುವ ಅವನಿಗೆ ಎರಡು ನಾಲಿಗೆಗಳಿವೆ. ಮುಖವು ಕೆಂಪಾಗಿದೆ. ಮೃಗರಾಜ ಸಿಂಹದ ಚರ್ಮವನ್ನು ಹೊದೆದುಕೊಂಡಿದ್ದಾನೆ. ದುರ್ದರ್ಷ ದಂಡನು ಹೀಗೆ ನಿತ್ಯವೂ ಭಯಂಕರ ಉಗ್ರರೂಪವನ್ನೇ ಧರಿಸಿರುತ್ತಾನೆ.

12121016a ಅಸಿರ್ಗದಾ ಧನುಃ ಶಕ್ತಿಸ್ತ್ರಿಶೂಲಂ ಮುದ್ಗರಃ ಶರಃ|
12121016c ಮುಸಲಂ ಪರಶುಶ್ಚಕ್ರಂ ಪ್ರಾಸೋ ದಂಡಷ್ಟಿತೋಮರಾಃ||
12121017a ಸರ್ವಪ್ರಹರಣೀಯಾನಿ ಸಂತಿ ಯಾನೀಹ ಕಾನಿ ಚಿತ್|
12121017c ದಂಡ ಏವ ಹಿ ಸರ್ವಾತ್ಮಾ ಲೋಕೇ ಚರತಿ ಮೂರ್ತಿಮಾನ್||

ಖಡ್ಗ, ಧನುಸ್ಸು, ಗದೆ, ಶಕ್ತಿ, ತ್ರಿಶೂಲ, ಮುದ್ಗರ, ಶರ, ಮುಸಲ, ಪರಶು, ಚಕ್ರ, ಪ್ರಾಸ, ದಂಡ, ಋಷ್ಟಿ, ತೋಮರ - ಈ ಎಲ್ಲ ಪ್ರಹಾರಯುಕ್ತ ಅಸ್ತ್ರ-ಶಸ್ತ್ರಗಳಲ್ಲಿ ಮೂರ್ತಿಮತ್ತಾಗಿ ಸರ್ವಾತ್ಮ ದಂಡನು ಲೋಕದಲ್ಲಿ

ಸಂಚರಿಸುತ್ತಿರುತ್ತಾನೆ.

12121018a ಭಿಂದಂಶ್ಚಿಂದನ್ರುಜನ್ ಕೃಂತನ್ದಾರಯನ್ಪಾಟಯಂಸ್ತಥಾ|
12121018c ಘಾತಯನ್ನಭಿಧಾವಂಶ್ಚ ದಂಡ ಏವ ಚರತ್ಯುತ||

ಅಪರಾಧಿಗಳನ್ನು ಭೇದಿಸುತ್ತಾ, ತುಂಡರಿಸುತ್ತಾ, ಪೀಡಿಸುತ್ತಾ, ಕತ್ತರಿಸುತ್ತಾ, ಸೀಳುತ್ತಾ, ಅಪ್ಪಳಿಸುತ್ತಾ, ಸಂಹರಿಸುತ್ತಾ, ಮತ್ತು ಓಡಿಸುತ್ತಾ ದಂಡವು ಸರ್ವತ್ರ ಸಂಚರಿಸುತ್ತಿರುತ್ತದೆ.

12121019a ಅಸಿರ್ವಿಶಸನೋ ಧರ್ಮಸ್ತೀಕ್ಷ್ಣವರ್ತ್ಮಾ ದುರಾಸದಃ[485]|
12121019c ಶ್ರೀಗರ್ಭೋ ವಿಜಯಃ ಶಾಸ್ತಾ ವ್ಯವಹಾರಃ ಪ್ರಜಾಗರಃ||
12121020a ಶಾಸ್ತ್ರಂ ಬ್ರಾಹ್ಮಣಮಂತ್ರಶ್ಚ ಶಾಸ್ತಾ ಪ್ರಾಗ್ವಚನಂ ಗತಃ[486]|
12121020c ಧರ್ಮಪಾಲೋಽಕ್ಷರೋ ದೇವಃ ಸತ್ಯಗೋ ನಿತ್ಯಗೋ ಗ್ರಹಃ||
12121021a ಅಸಂಗೋ ರುದ್ರತನಯೋ ಮನುಜ್ಯೇಷ್ಠಃ ಶಿವಂಕರಃ|
12121021c ನಾಮಾನ್ಯೇತಾನಿ ದಂಡಸ್ಯ ಕೀರ್ತಿತಾನಿ ಯುಧಿಷ್ಠಿರ||

ಯುಧಿಷ್ಠಿರ! ಅಸಿ, ವಿಶಸನ, ಧರ್ಮ, ತೀಕ್ಷ್ಣವರ್ತ್ಮಾ, ದುರಾಸದ, ಶ್ರೀಗರ್ಭ, ವಿಜಯ, ಶಾಸ್ತಾ, ವ್ಯವಹಾರ, ಪ್ರಜಾಗರ, ಶಾಸ್ತ್ರ, ಬ್ರಾಹ್ಮಣ, ಮಂತ್ರ, ಶಾಸ್ತಾ, ಪ್ರಾಗ್ವಚನ, ಧರ್ಮಪಾಲ, ಅಕ್ಷರ, ದೇವ, ಸತ್ಯಗ, ನಿತ್ಯಗ, ಗ್ರಹ, ಅಸಂಗ, ರುದ್ರತನಯ, ಮನುಜ್ಯೇಷ್ಠ, ಶಿವಂಕರ – ಈ ನಾಮಗಳಿಂದ ದಂಡನು ಕೀರ್ತಿತನಾಗಿದ್ದಾನೆ.

---

485 ತೀಕ್ಷ್ಣವರ್ಮಾ ದುರಾಧರಃ| (ಭಾರತ ದರ್ಶನ).

486 ಪ್ರಾಗ್ವದತಾಂ ವರಃ| (ಭಾರತ ದರ್ಶನ).

12121022a ದಂಡೋ ಹಿ ಭಗವಾನ್ವಿಷ್ಣುರ್ಯಜ್ಞೋ[487] ನಾರಾಯಣಃ ಪ್ರಭುಃ|
12121022c ಶಶ್ವದ್ರೂಪಂ ಮಹದ್ಬಿಭ್ರನ್ಮಹಾಪುರುಷ ಉಚ್ಯತೇ||

ದಂಡವು ಭಗವಾನ್ ವಿಷ್ಣು, ಯಜ್ಞ ಮತ್ತು ಪ್ರಭು ನಾರಾಯಣ. ಅವನನ್ನು ಶಾಶ್ವತರೂಪ, ಮಹಾತೇಜಸ್ವೀ, ಮಹಾಪುರುಷ ಎಂದೂ ಕರೆಯುತ್ತಾರೆ.

12121023a ಯಥೋಕ್ತಾ ಬ್ರಹ್ಮಕನ್ಯೇತಿ ಲಕ್ಷ್ಮೀರ್ನೀತಿಃ ಸರಸ್ವತೀ|
12121023c ದಂಡನೀತಿರ್ಜಗದ್ಧಾತ್ರೀ ದಂಡೋ ಹಿ ಬಹುವಿಗ್ರಹಃ||

ಹಾಗೆಯೇ ದಂಡನೀತಿಯು ಬ್ರಹ್ಮಕನ್ಯೆಯೆಂದೂ, ಲಕ್ಷ್ಮೀ, ನೀತಿ, ಸರಸ್ವತಿ, ಜಗದ್ಧಾತ್ರಿಯೆಂದೂ ಕರೆಯುತ್ತಾರೆ. ಹೀಗೆ ದಂಡಕ್ಕೆ ಅನೇಕ ರೂಪಗಳಿವೆ.

12121024a ಅರ್ಥಾನರ್ಥೌ ಸುಖಂ ದುಃಖಂ ಧರ್ಮಾಧರ್ಮೌ ಬಲಾಬಲೇ|
12121024c ದೌರ್ಭಾಗ್ಯಂ ಭಾಗಧೇಯಂ ಚ ಪುಣ್ಯಾಪುಣ್ಯೇ ಗುಣಾಗುಣೌ||
12121025a ಕಾಮಾಕಾಮಾವೃತುರ್ಮಾಸಃ ಶರ್ವರೀ ದಿವಸಃ ಕ್ಷಣಃ|
12121025c ಅಪ್ರಸಾದಃ ಪ್ರಸಾದಶ್ಚ ಹರ್ಷಃ ಕ್ರೋಧಃ ಶಮೋ ದಮಃ||
12121026a ದೈವಂ ಪುರುಷಕಾರಶ್ಚ ಮೋಕ್ಷಾಮೋಕ್ಷೌ ಭಯಾಭಯೇ|
12121026c ಹಿಂಸಾಹಿಂಸೇ ತಪೋ ಯಜ್ಞಃ ಸಂಯಮೋಽಥ ವಿಷಾವಿಷಮ್||
12121027a ಅಂತಶ್ಚಾದಿಶ್ಚ ಮಧ್ಯಂ ಚ ಕೃತ್ಯಾನಾಂ ಚ ಪ್ರಪಂಚನಮ್|
12121027c ಮದಃ ಪ್ರಮಾದೋ ದರ್ಪಶ್ಚ ದಂಭೋ ಧೈರ್ಯಂ ನಯಾನಯೌ||
12121028a ಅಶಕ್ತಿಃ ಶಕ್ತಿರಿತ್ಯೇವ ಮಾನಸ್ತಂಭೌ ವ್ಯಯಾವ್ಯಯೌ|
12121028c ವಿನಯಶ್ಚ ವಿಸರ್ಗಶ್ಚ ಕಾಲಾಕಾಲೌ ಚ ಭಾರತ||

---

[487] ಭಗವಾನ್ವಿಷ್ಣುರ್ದಂಡೋ ನಾರಾಯಣಃ ಪ್ರಭುಃ| (ಭಾರತ ದರ್ಶನ).

12121029a ಅನೃತಂ ಜ್ಞಾಜ್ಞತಾ ಸತ್ಯಂ ಶ್ರದ್ಧಾಶ್ರದ್ಧೇ ತಥೈವ ಚ|
12121029c ಕ್ಲೀಬತಾ ವ್ಯವಸಾಯಶ್ಚ ಲಾಭಾಲಾಭೌ ಜಯಾಜಯೌ||
12121030a ತೀಕ್ಷ್ಣತಾ ಮೃದುತಾ ಮೃತ್ಯುರಾಗಮಾನಾಗಮೌ ತಥಾ|
12121030c ವಿರಾದ್ಧಿಶ್ಚೈವ ರಾದ್ಧಿಶ್ಚ ಕಾರ್ಯಾಕಾರ್ಯೇ ಬಲಾಬಲೇ||
12121031a ಅಸೂಯಾ ಚಾನಸೂಯಾ ಚ ಧರ್ಮಾಧರ್ಮೌ ತಥೈವ ಚ|
12121031c ಅಪತ್ರಪಾನಪತ್ರಪೇ ಹ್ರೀಶ್ಚ ಸಂಪದ್ವಿಪಚ್ಚ ಹ||
12121032a ತೇಜಃ ಕರ್ಮಣಿ ಪಾಂಡಿತ್ಯಂ ವಾಕ್ಯಕ್ತಿಸ್ತತ್ತ್ವ ಬುದ್ಧಿತಾ|
12121032c ಏವಂ ದಂಡಸ್ಯ ಕೌರವ್ಯ ಲೋಕೇಽಸ್ಮಿನ್ಬಹುರೂಪತಾ||

ಕೌರವ್ಯ! ಅರ್ಥ-ಅನರ್ಥ, ಸುಖ-ದುಃಖ, ಧರ್ಮ-ಅಧರ್ಮ, ಬಲ-ಅಬಲ, ದೌರ್ಭಾಗ್ಯ-ಸೌಭಾಗ್ಯ, ಪುಣ್ಯ-ಪಾಪ, ಗುಣ-ಅವಗುಣ, ಕಾಮ-ಅಕಾಮ, ಋತು-ಮಾಸ, ದಿನ-ರಾತ್ರಿ, ಕ್ಷಣ, ಪ್ರಮಾದ-ಅಪ್ರಮಾದ, ಹರ್ಷ-ಕ್ರೋಧ, ಶಮ-ದಮ, ದೈವ-ಪುರುಷಕಾರ, ಬಂಧ-ಮೋಕ್ಷ, ಭಯ-ಅಭಯ, ಹಿಂಸೆ-ಅಹಿಂಸೆ, ತಪಸ್ಸು-ಯಜ್ಞ, ಸಂಯಮ, ವಿಷ-ಅವಿಷ, ಆದಿ-ಅಂತ-ಮಧ್ಯ, ಕಾರ್ಯವಿಸ್ತಾರ, ಮದ, ಅಸಾವಧಾನತೆ, ದರ್ಪ, ದಂಭ, ಧೈರ್ಯ, ನೀತಿ-ಅನೀತಿ, ಶಕ್ತಿ-ಅಶಕ್ತಿ, ಮಾನ, ಸ್ತಬ್ಧತೆ, ವ್ಯಯ-ಅವ್ಯಯ, ವಿನಯ, ದಾನ, ಕಾಲ-ಅಕಾಲ, ಸತ್ಯ-ಅಸತ್ಯ, ಜ್ಞಾನ, ಶ್ರದ್ಧೆ-ಅಶ್ರದ್ಧೆ, ಅಕರ್ಮಣ್ಯತೆ-ಉದ್ಯೋಗ, ಲಾಭ-ಹಾನಿ, ಜಯ-ಪರಾಜಯ, ತೀಕ್ಷ್ಣತೆ-ಮೃದುತ್ವ, ಮೃತ್ಯು, ಆಗಮ-ಅನಾಗಮ, ವಿರೋಧ-ಅವಿರೋಧ, ಕರ್ತವ್ಯ-ಅಕರ್ತವ್ಯ, ಸಬಲತೆ-ನಿರ್ಬಲತೆ, ಅಸೂಯೆ-ಅನಸೂಯತೆ, ಧರ್ಮ-ಅಧರ್ಮ, ಲಜ್ಜೆ-ನಿರ್ಲಜ್ಜೆ, ಸಂಪತ್ತಿ-ವಿಪತ್ತಿ, ಸ್ಥಾನ, ತೇಜಸ್ಸು, ಕರ್ಮ, ಪಾಂಡಿತ್ಯ, ವಾಕ್ಯಕ್ತಿ ಮತ್ತುತ ತ್ತ್ವಬೋಧೆ- ಈ ಎಲ್ಲವೂ ದಂಡದ ಅನೇಕ

ನಾಮಧೇಯಗಳೂ ರೂಪಗಳೂ ಆಗಿವೆ. ಹೀಗೆ ದಂಡಕ್ಕೆ ವಿಶ್ವದಲ್ಲಿ ಬಹುರೂಪಗಳಿವೆ.

12121033a ನ ಸ್ಯಾದ್ಯದೀಹ ದಂಡೋ ವೈ ಪ್ರಮಥೇಯುಃ ಪರಸ್ಪರಮ್|
12121033c ಭಯಾದ್ದಂಡಸ್ಯ ಚಾನ್ಯೋನ್ಯಂ ಘ್ನಂತಿ ನೈವ[488] ಯುಧಿಷ್ಠಿರ||

ಯುಧಿಷ್ಠಿರ! ಈ ದಂಡವಿಲ್ಲದಿದ್ದಿದ್ದರೆ ಪರಸ್ಪರ ಧ್ವಂಸಮಾಡುತ್ತಿದ್ದರು. ದಂಡದ ಭಯದ ಕಾರಣದಿಂದ ಮಾತ್ರ ಅನ್ಯೋನ್ಯರನ್ನು ಸಂಹರಿಸುತ್ತಿಲ್ಲ.

12121034a ದಂಡೇನ ರಕ್ಷ್ಯಮಾಣಾ ಹಿ ರಾಜನ್ನಹರಹಃ ಪ್ರಜಾಃ|
12121034c ರಾಜಾನಂ ವರ್ಧಯಂತೀಹ ತಸ್ಮಾದ್ದಂಡಃ ಪರಾಯಣಮ್||

ರಾಜನ್! ದಂಡದಿಂದ ರಕ್ಷಿಸಲ್ಪಟ್ಟ ಪ್ರಜೆಗಳು ನಿತ್ಯವೂ ರಾಜನನ್ನು ವರ್ಧಿಸುತ್ತಾರೆ. ಆದುದರಿಂದ ದಂಡವೇ ಎಲ್ಲರಿಗೂ ಆಶ್ರಯಭೂತವಾಗಿದೆ.

12121035a ವ್ಯವಸ್ಥಾಪಯತಿ ಕ್ಷಿಪ್ರಮಿಮಂ ಲೋಕಂ ನರೇಶ್ವರ|
12121035c ಸತ್ಯೇ ವ್ಯವಸ್ಥಿತೋ ಧರ್ಮೋ ಬ್ರಾಹ್ಮಣೇಷ್ವವತಿಷ್ಠತೇ||

ನರೇಶ್ವರ! ದಂಡವೇ ಈ ಲೋಕವನ್ನು ಕ್ಷಿಪ್ರವಾಗಿ ಸತ್ಯದಲ್ಲಿ[489]

---

[488] ಚ್ಯೈವ (ಭಾರತ ದರ್ಶನ).

[489] ಸತ್ಯಯುಗದಲ್ಲಿ ಎಂದೂ ಆಗಬಹುದು. ಏಕೆಂದರೆ ಸತ್ಯಯುಗದಲ್ಲಿಯೇ ಧರ್ಮವು ಸುವ್ಯವಸ್ಥಿತವಾಗಿ ಅಂದರೆ ತನ್ನ ನಾಲ್ಕೂ ಕಾಲುಗಳ ಮೇಲೆ ನಿಲ್ಲುತ್ತಾನೆ. ಬಹುಷಃ ಸತ್ಯಯುಗವೆಂದರೆ ಎಲ್ಲ ಲೋಕಗಳಲ್ಲಿಯೂ (ಭೂಃ, ಭುವಃ, ಸುವಃ, ಮೊದಲಾದ ೧೪ ಲೋಕಗಳಲ್ಲಿಯೂ) ದಂಡ ಅಂದರೆ ಶಿಕ್ಷೆ

ಪ್ರತಿಷ್ಠಾಪಿಸುತ್ತದೆ. ಸತ್ಯದಲ್ಲಿ ಧರ್ಮವು ಸುವ್ಯವಸ್ಥಿತವಾಗಿದೆ. ಅಂಥಹ ಧರ್ಮವು ಬ್ರಾಹ್ಮಣರಲ್ಲಿ ಪ್ರತಿಷ್ಠಿತವಾಗಿದೆ.

12121036a ಧರ್ಮಯುಕ್ತಾ ದ್ವಿಜಾಃ ಶ್ರೇಷ್ಠಾ ವೇದಯುಕ್ತಾ ಭವಂತಿ ಚ|
12121036c ಬಭೂವ ಯಜ್ಞೋ ವೇದೇಭ್ಯೋ ಯಜ್ಞಃ ಪ್ರೀಣಾತಿ ದೇವತಾಃ||
12121037a ಪ್ರೀತಾಶ್ಚ ದೇವತಾ ನಿತ್ಯಮಿಂದ್ರೇ ಪರಿದದತ್ಯುತ|
12121037c ಅನ್ನಂ ದದಾತಿ ಶಕ್ರಶ್ಚಾಪ್ಯನುಗೃಹ್ಣನ್ನಿಮಾಃ ಪ್ರಜಾಃ||
12121038a ಪ್ರಾಣಾಶ್ಚ ಸರ್ವಭೂತಾನಾಂ ನಿತ್ಯಮನ್ನೇ ಪ್ರತಿಷ್ಠಿತಾಃ|
12121038c ತಸ್ಮಾತ್ ಪ್ರಜಾಃ ಪ್ರತಿಷ್ಠಂತೇ ದಂಡೋ ಜಾಗರ್ತಿ ತಾಸು ಚ||

ದಂಡದ ಪ್ರಭಾವದಿಂದಲೇ ದ್ವಿಜರು ಧರ್ಮಯುಕ್ತರೂ ಶ್ರೇಷ್ಠ ವೇದಯುಕ್ತರೂ ಆಗುತ್ತಾರೆ. ವೇದಗಳಿಂದ ಯಜ್ಞಗಳಾಗುವವು ಮತ್ತು ಯಜ್ಞವು ದೇವತೆಗಳನ್ನು ಪ್ರೀತಗೊಳಿಸುತ್ತವೆ. ಪ್ರೀತರಾದ ದೇವತೆಗಳು ನಿತ್ಯವೂ ಇಂದ್ರನನ್ನು ಮಳೆಸುರಿಸು ಎಂದು ಹೇಳುತ್ತಿರುತ್ತಾರೆ. ಶಕ್ರನು ಈ ಪ್ರಜೆಗಳಿಗೆ ಅನ್ನವನ್ನಿತ್ತು ಅನುಗ್ರಹಿಸುತ್ತಾನೆ. ಸರ್ವಭೂತಗಳ ಪ್ರಾಣಗಳೂ ನಿತ್ಯವೂ ಅನ್ನವನ್ನೇ ಅವಲಂಬಿಸಿವೆ. ಆದುದರಿಂದ ಪ್ರಜೆಗಳ ರಕ್ಷಣೆಗಾಗಿ ಸದಾ ದಂಡವು ಎಚ್ಚೆತ್ತಿರುತ್ತದೆ.

12121039a ಏವಂಪ್ರಯೋಜನಶ್ಚೈವ ದಂಡಃ ಕ್ಷತ್ರಿಯತಾಂ ಗತಃ|
12121039c ರಕ್ಷನ್ ಪ್ರಜಾಃ ಪ್ರಜಾಗರ್ತಿ ನಿತ್ಯಂ ಸುವಿಹಿತೋಽಕ್ಷರಃ||

ಹೀಗೆ ಪ್ರಯೋಜನಕಾರಿಯಾದ ದಂಡವು ಕ್ಷತ್ರಿಯತ್ವವನ್ನು ಪಡೆದುಕೊಂಡಿತು. ಅವಿನಾಶಿಯಾಗಿರುವ ಕಾರಣದಿಂದ ಅದು

(punishment) ಅಂದರೆ ನ್ಯಾಯ (Justice or Rule of Law) ಸಂಪೂರ್ಣವಾಗಿ ಇರುತ್ತದೆ.

ಸರ್ವಕಾಲದಲ್ಲಿಯೂ ಸಾವಧಾನದಿಂದಿರುತ್ತದೆ. ಎಚ್ಚರದಿಂದಿದ್ದು ಪ್ರಜೆಗಳನ್ನು ರಕ್ಷಿಸುತ್ತಿರುತ್ತದೆ.

12121040a ಈಶ್ವರಃ ಪುರುಷಃ ಪ್ರಾಣಃ ಸತ್ತ್ವಂ ವಿತ್ತಂ[490] ಪ್ರಜಾಪತಿಃ|
12121040c ಭೂತಾತ್ಮಾ ಜೀವ ಇತ್ಯೇವ ನಾಮಭಿಃ ಪ್ರೋಚ್ಯತೇಽಷ್ಟಭಿಃ||

ದಂಡವು ಈಶ್ವರ, ಪುರುಷ, ಪ್ರಾಣ, ಸತ್ತ್ವ, ವಿತ್ತ, ಪ್ರಜಾಪತಿ, ಭೂತಾತ್ಮಾ, ಮತ್ತು ಜೀವ ಎಂಬ ಈ ಎಂಟು ಹೆಸರುಗಳಿಂದಲೂ ಕರೆಯಲ್ಪಡುತ್ತದೆ.

12121041a ಅದದದ್ದಂಡ ಏವಾಸ್ಮೈ ಧ್ರುವಮ್ಐಶ್ವರ್ಯಮೇವ ಚ|
12121041c ಬಲೇ ನಯಶ್ಚ ಸಂಯುಕ್ತಃ ಸದಾ ಪಂಚವಿಧಾತ್ಮಕಃ||

ಸದಾ ಬಲ, ಪಂಚವಿಧಾತ್ಮಕ[491] ನ್ಯಾಯ ಮತ್ತು ಐಶ್ವರ್ಯವು ನಿಶ್ಚಿತವಾಗಿರುವವೋ ಅವನಿಗೇ[492] ದಂಡವನ್ನು ಕೊಡಲಾಯಿತು.

12121042a ಕುಲಬಾಹುಧನಾಮಾತ್ಯಾಃ[493] ಪ್ರಜ್ಞಾ ಚೋಕ್ತಾ ಬಲಾನಿ ಚ|
12121042c ಆಹಾರ್ಯಂ ಚಾಷ್ಟಕೈರ್ದ್ರವ್ಯೈರ್ಬಲಮನ್ಯದ್ಯುಧಿಷ್ಠಿರ||

ಯುಧಿಷ್ಠಿರ! ಉತ್ತಮ ಕುಲ, ಬಾಹುಬಲ, ಧನ, ಅಮಾತ್ಯರು ಮತ್ತು ಪ್ರಜ್ಞೆ ಇವುಗಳನ್ನೇ ಬಲಗಳೆಂದು[494] ಹೇಳುತ್ತಾರೆ. ಆಹಾರ್ಯ ಬಲವು

---

490 ಚಿತ್ತಂ (ಭಾರತ ದರ್ಶನ).

491 ಧರ್ಮ, ವ್ಯವಹಾರ, ದಂಡ, ಈಶ್ವರ ಮತ್ತು ಜೀವ (ಭಾರತ ದರ್ಶನ).

492 ರಾಜನಿಗೇ

493 ಕುಲಂ ಬಹುಧನಾಮಾತ್ಯಾಃ (ಭಾರತ ದರ್ಶನ).

494 ಬಲಗಳಲ್ಲಿ ಎರಡು ವಿಧ – ಪ್ರಾಕೃತ ಮತ್ತು ಆಹಾರ್ಯ. ಕುಲ, ಬಲ,

ಎಂಟು ದ್ರವ್ಯಗಳಿಂದ ಕೂಡಿರುತ್ತದೆ.

12121043a ಹಸ್ತಿನೋಽಶ್ವಾ ರಥಾಃ ಪತ್ತಿರ್ನಾವೋ ವಿಷ್ಟಿಸ್ತಥೈವ ಚ|
12121043c ದೈಶಿಕಾಶ್ಚಾರಕಾಶ್ಚೈವ ತದಷ್ಟಾಂಗಂ ಬಲಂ ಸ್ಮೃತಮ್||

ಆನೆಗಳು, ಕುದುರೆಗಳು, ರಥಗಳು, ಕಾಲಾಳು, ನೌಕೆ, ಸಶ್ರಮ ಶಿಕ್ಷೆಗೆ ಗುರಿಯಾಗಿ ಕೆಲಸಮಾಡುವವರು, ದೇಶದ ಪ್ರಜೆಗಳು, ಕುರಿಯೇ ಮೊದಲಾದ ಪ್ರಾಣಿಗಳು – ಇವು ಅಷ್ಟಾಂಗ ಬಲಗಳು[495].

12121044a ಅಷ್ಟಾಂಗಸ್ಯ ತು ಯುಕ್ತಸ್ಯ ಹಸ್ತಿನೋ ಹಸ್ತಿಯಾಯಿನಃ|
12121044c ಅಶ್ವಾರೋಹಾಃ ಪದಾತಾಶ್ಚ ಮಂತ್ರಿಣೋ ರಸದಾಶ್ಚ ಯೇ||
12121045a ಭಿಕ್ಷುಕಾಃ ಪ್ರಾಡ್ವಿವಾಕಾಶ್ಚ ಮೌಹೂರ್ತಾ ದೈವಚಿಂತಕಾಃ|
12121045c ಕೋಶೋ ಮಿತ್ರಾಣಿ ಧಾನ್ಯಂ ಚ ಸರ್ವೋಪಕರಣಾನಿ ಚ||
12121046a ಸಪ್ತಪ್ರಕೃತಿ ಚಾಷ್ಟಾಂಗಂ ಶರೀರಮಿಹ ಯದ್ವಿದುಃ|
12121046c ರಾಜ್ಯಸ್ಯ ದಂಡ ಏವಾಂಗಂ ದಂಡಃ ಪ್ರಭವ ಏವ ಚ||

ರಥಿಕರು, ಗಜಾರೋಹಿಗಳು, ಅಶ್ವಾರೋಹಿಗಳು, ಪದಾತಿಗಳಿಂದೊಡಗೂಡಿದ ಸುಸಜ್ಜಿತ ಸೈನ್ಯ, ಮಂತ್ರಿಗಳು, ವೈದ್ಯರು, ಭಿಕ್ಷುಕರು, ನ್ಯಾಯವಾದಿಗಳು ಜ್ಯೋತಿಷಿಗಳು, ದೈವಜ್ಞರು, ಕೋಷ, ಮಿತ್ರರು, ಧಾನ್ಯ, ಸಕಲವಿಧದ ಉಪಕರಣಗಳು, ಸ್ವಾಮೀ-ಅಮಾತ್ಯ-ಸುಹೃತ್-ಕೋಶ-ರಾಷ್ಟ್ರ-ದುರ್ಗ-ಸೈನ್ಯ ಈ ಸಪ್ತ ಪ್ರಕೃತಿಗಳು, ಮೇಲೆ ಹೇಳೀದ ಅಷ್ಟಾಂಗಯುಕ್ತವಾದ ಸೇನೆ ಇವೆಲ್ಲವುಗಳನ್ನೂ ಸೇರಿಸಿ ರಾಜ್ಯದ ಶರೀರ ಎನ್ನುತ್ತಾರೆ. ಇವೆಲ್ಲವಕ್ಕೂ ಪ್ರಧಾನ ಅಂಗವೇ ದಂಡ.

ಧನ, ಅಮಾತ್ಯರು ಮತ್ತು ಪ್ರಜ್ಞೆ ಇವು ಪ್ರಾಕೃತ ಬಲಗಳು (ಭಾರತ ದರ್ಶನ).

[495] ಆಹಾರ್ಯ ಬಲಗಳು.

ಏಕೆಂದರೆ ಇವೆಲ್ಲವುಗಳ ಕಾರಣವೂ ದಂಡವೇ ಆಗಿರುವುದು.

12121047a ಈಶ್ವರೇಣ ಪ್ರಯತ್ನೇನ ಧಾರಣೇ ಕ್ಷತ್ರಿಯಸ್ಯ ಹಿ|
12121047c ದಂಡೋ ದತ್ತಃ ಸಮಾನಾತ್ಮಾ ದಂಡೋ ಹೀದಂ ಸನಾತನಮ್‌||

ಈಶ್ವರನು ಪ್ರಯತ್ನಪೂರ್ವಕವಾಗಿ ಧರ್ಮರಕ್ಷಣಾರ್ಥವಗಿ ಕ್ಷತ್ರಿಯನ ಕೈಯಲ್ಲಿ ಅವನದೇ ಜಾತಿಯ ದಂಡವನ್ನು ಕೊಟ್ಟಿದ್ದಾನೆ. ಆದುದರಿಂದ ದಂಡವು ಸನಾತನವಾದುದು.

12121047e ರಾಜ್ಞಾಂ ಪೂಜ್ಯತಮೋ ನಾನ್ಯೋ ಯಥಾಧರ್ಮಪ್ರದರ್ಶನಃ|
12121048a ಬ್ರಹ್ಮಣಾ ಲೋಕರಕ್ಷಾರ್ಥಂ ಸ್ವಧರ್ಮಸ್ಥಾಪನಾಯ ಚ‌||

ಲೋಕರಕ್ಷಣೆಗಾಗಿ ಮತ್ತು ಧರ್ಮಸ್ಥಾಪನೆಗಾಗಿ ಬ್ರಹ್ಮನು ತೋರಿಸಿಕೊಟ್ಟ ಧರ್ಮವೇ ದಂಡ. ರಾಜನಾದವನಿಗೆ ಇದಕ್ಕಿಂತಲೂ ಪೂಜ್ಯವಾದುದು ಬೇರೊಂದಿಲ್ಲ.

12121048c ಭರ್ತೃಪ್ರತ್ಯಯ ಉತ್ಪನ್ನೋ ವ್ಯವಹಾರಸ್ತಥಾಪರಃ|
12121048e ತಸ್ಮಾದ್ಯಃ ಸಹಿತೋ ದೃಷ್ಟೋ ಭರ್ತೃಪ್ರತ್ಯಯಲಕ್ಷಣಃ‌‌||

ಸ್ವಾಮಿಯ ಮೇಲಿನ ವಿಶ್ವಾಸದಿಂದ ಉತ್ಪನ್ನವಾಗುವ ಧರ್ಮವು ವಾದಿ-ಪ್ರತಿವಾದಿಗಳ ವ್ಯವಹಾರಕ್ಕಿಂತಲೂ ಭಿನ್ನವಾದುದು. ಭರ್ತೃಪ್ರತ್ಯಯಲಕ್ಷಣವೆಂಬ ಈ ವ್ಯವಹಾರವು ಸಂಪೂರ್ಣ ಜಗತ್ತಿಗೂ ಹಿತಕರವಾದುದು[496].

---

[496] ವಾದಿ-ಪ್ರತಿವಾದಿಗಳ ನಡುವೆ ಇರುವ ವ್ಯವಹಾರವು ಭರ್ತೃಪ್ರತ್ಯಯವ್ಯವಹಾರವು. ಇದು ಒಬ್ಬನಲ್ಲಿರುವ ನಂಬಿಕೆಯಿಂದ ನಿರ್ಣಿತವಾಗುವ ವ್ಯವಹಾರ. ಇದು ಹಿತಕರವಾದುದು (ಭಾರತ ದರ್ಶನ).

12121049a ವ್ಯವಹಾರಸ್ತು ವೇದಾತ್ಮಾ ವೇದಪ್ರತ್ಯಯ ಉಚ್ಯತೇ|
12121049c ಮೌಲಶ್ಚ ನರಶಾರ್ದೂಲ ಶಾಸ್ತ್ರೋಕ್ತಶ್ಚ ತಥಾಪರಃ||

ನರಶರ್ದೂಲ! ವೇದವೇ ಆತ್ಮವಾಗುಳ್ಳ ವ್ಯವಹಾರವು ಪ್ರತ್ಯಯವ್ಯವಹಾರವೆಂದು ಹೇಳಲ್ಪಟ್ಟಿದೆ. "ಮೌಲ[497]" ಎಂಬ ಶಾಸ್ತ್ರೋಕ್ತವಾದ ಇನ್ನೊಂದು ವ್ಯವಹಾರವೂ ಇರುವುದು.

12121050a ಉಕ್ತೋ ಯಶ್ಚಾಪಿ ದಂಡೋಽಸೌ ಭರ್ತೃಪ್ರತ್ಯಯಲಕ್ಷಣಃ|
12121050c ಜ್ಞೇಯೋ ನ ಸ ನರೇಂದ್ರಸ್ಥೋ ದಂಡಪ್ರತ್ಯಯ ಏವ ಚ||

ಹಿಂದೆ ಹೇಳಿದ ಭರ್ತೃಪ್ರತ್ಯಯಲಕ್ಷಣವೆಂಬ ದಂಡವು ನಮ್ಮಂತರ ನರೇಂದ್ರರಲ್ಲಿಯೇ ಇರುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ದಂಡ ಮತ್ತು ವಿಶ್ವಾಸ ಇವೆರಡೂ ರಾಜನನ್ನೇ ಅವಲಂಬಿಸಿವೆ.

12121051a ದಂಡಪ್ರತ್ಯಯದೃಷ್ಟೋಽಪಿ ವ್ಯವಹಾರಾತ್ಮಕಃ ಸ್ಮೃತಃ|
12121051c ವ್ಯವಹಾರಃ ಸ್ಮೃತೋ ಯಶ್ಚ ಸ ವೇದವಿಷಯಾತ್ಮಕಃ||

ದಂಡಪ್ರತ್ಯಯವನ್ನು ವ್ಯವಹಾರಾತ್ಮಕವೆಂದು ಹೇಳಲಾಗಿದೆ. ವೇದವಿಷಯಾತ್ಮಕವಾಗಿರುವುದರಿಂದ ಅದು ವ್ಯವಹಾರವೆಂದು ಹೇಳಲ್ಪಟ್ಟಿದೆ.

12121052a ಯಶ್ಚ ವೇದಪ್ರಸೂತಾತ್ಮಾ ಸ ಧರ್ಮೋ ಗುಣದರ್ಶಕಃ|
12121052c ಧರ್ಮಪ್ರತ್ಯಯ ಉತ್ಪನ್ನೋ[498] ಯಥಾಧರ್ಮಃ ಕೃತಾತ್ಮಭಿಃ||

---

[497] ಕುಲಾಚಾರಕ್ಕೆ ಸಂಬಂಧಿಸಿದುದು (ಭಾರತ ದರ್ಶನ).

[498] ಉದ್ದಿಷ್ಟೋ (ಭಾರತ ದರ್ಶನ).

ವೇದದ ಆತ್ಮದಿಂದ ಹುಟ್ಟಿರುವುದೇ ಗುಣದರ್ಶಕ ಧರ್ಮವು.
ಕೃತಾತ್ಮರ ಧರ್ಮದಿಂದಲೇ ಧರ್ಮಪ್ರತ್ಯಯವು ಉತ್ಪನ್ನವಾಯಿತು.

12121053a ವ್ಯವಹಾರಃ ಪ್ರಜಾಗೋಪ್ತಾ ಬ್ರಹ್ಮದಿಷ್ಟೋ ಯುಧಿಷ್ಠಿರ|
12121053c ತ್ರೀನ್ಧಾರಯತಿ ಲೋಕಾನ್ವೈ ಸತ್ಯಾತ್ಮಾ ಭೂತಿವರ್ಧನಃ||

ಯುಧಿಷ್ಠಿರ! ಬ್ರಹ್ಮನು ಉಪದೇಶಿಸಿದ ಪ್ರಜಾರಕ್ಷಣೆಯ ವ್ಯವಹಾರವು ಮೂರು ಲೋಕಗಳನ್ನೂ ಧರಿಸಿದೆ. ಏಕೆಂದರು ಅದೇ ಸತ್ಯಾತ್ಮಾ ಮತ್ತು ಲೋಕಗಳನ್ನು ಅದು ವರ್ಧಿಸುತ್ತಲೇ ಇರುತ್ತದೆ.

12121054a ಯಶ್ಚ ದಂಡಃ ಸ ದೃಷ್ಟೋ ನೋ ವ್ಯವಹಾರಃ ಸನಾತನಃ|
12121054c ವ್ಯವಹಾರಶ್ಚ ಯೋ ದೃಷ್ಟಃ ಸ ಧರ್ಮ ಇತಿ ನಃ ಶ್ರುತಃ[499]||

ನನ್ನ ಪ್ರಕಾರ ದಂಡವೆನ್ನುವುದು ಒಂದು ಸನಾತನ ವ್ಯವಹಾರವಾಗಿದೆ. ವ್ಯವಹಾರದಂತೆ ಕಾಣುವುದು ಧರ್ಮವೇ ಎಂದು ನಾನು ಕೇಳಿದ್ದೇನೆ.

12121054e ಯಶ್ಚ ವೇದಃ ಸ ವೈ ಧರ್ಮೋ ಯಶ್ಚ ಧರ್ಮಃ ಸ ಸತ್ಪಥಃ|
12121055a ಬ್ರಹ್ಮಾ ಪ್ರಜಾಪತಿಃ ಪೂರ್ವಂ ಬಭೂವಾಥ ಪಿತಾಮಹಃ||

ವೇದವೇ ಧರ್ಮ. ಧರ್ಮವೇ ಸತ್ಪಥ, ಹಿಂದೆ ಪಿತಾಮಹ ಪ್ರಜಾಪತಿ ಬ್ರಹ್ಮನೋರ್ವನೇ ಇದ್ದನು.

12121055c ಲೋಕಾನಾಂ ಸ ಹಿ ಸರ್ವೇಷಾಂ ಸಸುರಾಸುರರಕ್ಷಸಾಮ್|
12121055e ಸಮನುಷ್ಯೋರಗವತಾಂ ಕರ್ತಾ ಚೈವ ಸ ಭೂತಕೃತ್||

---

[499] ವ್ಯವಹಾರಶ್ಚ ದೃಷ್ಟೋ ಯಃ ಸ ವೇದ ಇತಿ ನಿಶ್ಚಿತಮ್| (ಭಾರತ ದರ್ಶನ).

ಅವನೇ ಸುರಾಸುರರಾಕ್ಷರೂ ಮನುಷ್ಯ-ಉರುಗರೂ ಇರುವ ಈ ಎಲ್ಲ ಲೋಕಗಳನ್ನೂ ಮಾಡಿದನು. ಅವನೇ ಸರ್ವಭೂತಗಳ ಸೃಷ್ಟಿಕರ್ತ.

12121056a ತತೋ ನೋ ವ್ಯವಹಾರೋಽಯಂ ಭರ್ತ್ಯಪ್ರತ್ಯಯಲಕ್ಷಣಃ|
12121056c ತಸ್ಮಾದಿದಮವೋಚಾಮ ವ್ಯವಹಾರನಿದರ್ಶನಮ್‌||

ಅನಂತರ ಬರ್ತ್ಯಪ್ರತ್ಯಯಲಕ್ಷಣವೆಂಬ ನಮ್ಮ ಈ ವ್ಯವಹಾರವನ್ನು ಸೃಷ್ಟಿಸಿ ಆ ವ್ಯವಹಾರದ ನಿದರ್ಶನಾರ್ಥವಾಗಿ ಇದನ್ನು ಹೇಳಿದನು:

12121057a ಮಾತಾ ಪಿತಾ ಚ ಭ್ರಾತಾ ಚ ಭಾರ್ಯಾ ಚಾಥ ಪುರೋಹಿತಃ|
12121057c ನಾದಂಡ್ಯೋ ವಿದ್ಯತೇ ರಾಜ್ಞಾಂ ಯಃ ಸ್ವಧರ್ಮೇ ನ ತಿಷ್ಠತಿ‌||

“ರಾಜನಾದವನು ತನ್ನ ತಂದೆ, ತಾಯಿ, ಸೋದರ, ಭಾರ್ಯೆ, ಪುರೋಹಿತ – ಇವರಲ್ಲಿ ಯಾರೇ ಆದರೂ ಸ್ವಧರ್ಮನಿರತರಾಗಿ ಇರದಿದ್ದರೆ ಅವರನ್ನೂ ಕೂಡ ದಂಡಿಸಬೇಕು. ರಾಜನಿಗೆ ಅದಂಡ್ಯರು ಎನ್ನುವವರು ಯಾರೂ ಇಲ್ಲ.””

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ದಂಡಸ್ವರೂಪಾದಿಕಥನೇ ಏಕವಿಂಶತ್ಯಧಿಕಶತತಮೋಽಧ್ಯಾಯಃ‌||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ದಂಡಸ್ವರೂಪಾದಿಕಥನ ಎನ್ನುವ ನೂರಾಇಪ್ಪತ್ತೊಂದನೇ ಅಧ್ಯಾಯವು.

೧೨೨

ವಸುಹೋಮ-ಮಾಂಧಾತೃ ಸಂವಾದ

(ದಂಡೋತ್ಪತ್ತ್ಯುಪಾಖ್ಯಾನ)

ದಂಡದ ಉತ್ಪತ್ತಿ ಮತ್ತು ಅದು ಕ್ಷತ್ರಿಯರ ಕೈಯಲ್ಲಿ ಬಂದ ಪರಂಪರೆಯನ್ನು ವರ್ಣಿಸುವ ವಸುಹೋಮ ಮತ್ತು ಮಾಂಧಾತರ ಸಂವಾದ (1-55).

12122001 ಭೀಷ್ಮ ಉವಾಚ|
12122001a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12122001c ಅಂಗೇಷು ರಾಜಾ ದ್ಯುತಿಮಾನ್ವಸುಹೋಮ ಇತಿ ಶ್ರುತಃ||

ಭೀಷ್ಮನು ಹೇಳಿದನು: "ಈ ವಿಷಯದಲ್ಲಿ ಪುರಾತನ ಇತಿಹಾಸವೊಂದನ್ನು ಉದಾಹರಿಸುತ್ತಾರೆ. ಅಂಗದೇಶದ ರಾಜರಲ್ಲಿ ದ್ಯುತಿಮಾನ್ ವಸುಹೋಮ ಎನ್ನುವವನು ಖ್ಯಾತನಾಗಿದ್ದನು.

12122002a ಸ ರಾಜಾ ಧರ್ಮನಿತ್ಯಃ ಸನ್ಸಹ ಪತ್ನ್ಯಾ ಮಹಾತಪಾಃ|
12122002c ಮುಂಜಪೃಷ್ಠಂ ಜಗಾಮಾಥ ದೇವರ್ಷಿಗಣಪೂಜಿತಮ್||

ಮಹಾತಪಸ್ವಿಯೂ ಧರ್ಮನಿತ್ಯನೂ ಆಗಿದ್ದ ಆ ರಾಜನು ಪತ್ನಿಯೊಡನೆ ದೇವರ್ಷಿಗಣಪೂಜಿತವಾದ ಮುಂಜಪೃಷ್ಠಕ್ಕೆ ಹೋದನು.

12122003a ತತ್ರ ಶೃಂಗೇ ಹಿಮವತೋ ಮೇರೌ ಕನಕಪರ್ವತೇ|
12122003c ಯತ್ರ ಮುಂಜವಟೇ ರಾಮೋ ಜಟಾಹರಣಮಾದಿಶತ್||

ಕನಕಪರ್ವತ ಮೇರುವಿನ ಸಮೀಪದ ಹಿಮಾಯಲಯ ಶಿಖರದ ಮೇಲಿದ್ದ ಆ ಮುಂಚವಟಿಯಲ್ಲಿಯೇ ರಾಮನು[500] ತನ್ನ ಜಟೆಯನ್ನು

---

[500] ಪರಶುರಾಮ.

ತೆಗೆಯಲು ಆದೇಶವನ್ನಿತ್ತಿದ್ದನು.

12122004a ತದಾಪ್ರಭೃತಿ ರಾಜೇಂದ್ರ ಋಷಿಭಿಃ ಸಂಶಿತವ್ರತೈಃ|
12122004c ಮುಂಜಪೃಷ್ಠ ಇತಿ ಪ್ರೋಕ್ತಃ ಸ ದೇಶೋ ರುದ್ರಸೇವಿತಃ||

ರಾಜೇಂದ್ರ! ಅಂದಿನಿಂದ ಕಠೋರವ್ರತನಿಷ್ಠ ಋಷಿಗಳು
ರುದ್ರಸೇವಿತವಾದ ಆ ಪ್ರದೇಶವನ್ನು ಮುಂಜಪೃಷ್ಠ ಎಂದೇ ಕರೆದರು.

12122005a ಸ ತತ್ರ ಬಹುಭಿರ್ಯುಕ್ತಃ ಸದಾ ಶ್ರುತಿಮಯೈರ್ಗುಣೈಃ|
12122005c ಬ್ರಾಹ್ಮಣಾನಾಮನುಮತೋ ದೇವರ್ಷಿಸದೃಶೋಽಭವತ್||

ಅವನು ಅಲ್ಲಿ ಸದಾ ಅನೇಕ ಶ್ರುತಿಮಯಗುಣಗಳಿಂದ ಯುಕ್ತನಾಗಿದ್ದ
ಅವನನ್ನು ಬ್ರಾಹ್ಮಣರೂ ಗೌರವಿಸತೊಡಗಲು ಅವನು
ದೇವರ್ಷಿಸದೃಶನಾದನು.

12122006a ತಂ ಕದಾ ಚಿದದೀನಾತ್ಮಾ ಸಖಾ ಶಕ್ರಸ್ಯ ಮಾನಿತಃ|
12122006c ಅಭ್ಯಾಗಚ್ಚನ್ಮಹೀಪಾಲೋ ಮಾಂಧಾತಾ ಶತ್ರುಕರ್ಶನಃ||

ಒಮ್ಮೆ ಅದೀನಾತ್ಮಾ ಶಕ್ರನ ಸಖಿ ಮತ್ತು ಸನ್ಮಾನಿತ ಮಹೀಪಾಲ
ಶತ್ರುಕರ್ಶನ ಮಾಂಧಾತನು ಅಲ್ಲಿಗೆ ಆಗಮಿಸಿದನು.

12122007a ಸೋಽಭಿಸೃತ್ಯ ತು ಮಾಂಧಾತಾ ವಸುಹೋಮಂ ನರಾಧಿಪಮ್|
12122007c ದೃಷ್ಟ್ವಾ ಪ್ರಕೃಷ್ಟಂ ತಪಸಾ ವಿನಯೇನಾಭ್ಯತಿಷ್ಠತ||

ಮಾಂಧಾತನಾದರೋ ನರಾಧಿಪ ವಸುಹೋಮನ ಬಳಿಸಾರಿ ಅವನ
ಕಷ್ಟಕರ ತಪಸ್ಸನ್ನು ನೋಡಿ ವಿನೀತನಾಗಿ ನಿಂತುಕೊಂಡನು.

12122008a ವಸುಹೋಮೋಽಪಿ ರಾಜ್ಞೋ ವೈ ಗಾಮರ್ಘ್ಯಂ ಚ ನ್ಯವೇದಯತ್|
12122008c ಅಷ್ಟಾಂಗಸ್ಯ ಚ ರಾಜ್ಯಸ್ಯ ಪಪ್ರಚ್ಚ ಕುಶಲಂ ತದಾ||

ವಸುಹೋಮನೂ ಕೂಡ ಗೋವು-ಅರ್ಘ್ಯಗಳನ್ನು ರಾಜನಿಗೆ ನಿವೇದಿಸಿ
ರಾಜ್ಯದ ಅಷ್ಟಾಂಗಗಳ ಕುಶಲತೆಯ ಕುರಿತು ಪ್ರಶ್ನಿಸಿದನು.

12122009a ಸದ್ಭಿರಾಚರಿತಂ ಪೂರ್ವಂ ಯಥಾವದನುಯಾಯಿನಮ್|
12122009c ಅಪೃಚ್ಚದ್ವಸುಹೋಮಸ್ತಂ ರಾಜನ್ ಕಿಂ ಕರವಾಣಿ ತೇ||

ಹಿಂದೆ ಸಾಧು-ಸತ್ಪುರುಷರು ಯಾವ ಧರ್ಮಮಾರ್ಗವನ್ನು ಅನುಸರಿಸಿ
ನಡೆಯುತ್ತಿದ್ದರೋ ಅದೇ ಮಾರ್ಗದಲ್ಲಿ ಯಥಾವತ್ತಾಗಿ
ನಡೆದುಕೊಳ್ಳುತ್ತಿದ್ದ ಮಾಂಧಾತನನ್ನು ವಸುಹೋಮನು ಪ್ರಶ್ನಿಸಿದನು:
"ರಾಜನ್! ನಿನಗೆ ನಾನು ಯಾವ ಕಾರ್ಯವನ್ನು ಮಾಡಿಕೊಡಲಿ?"

12122010a ಸೋಽಬ್ರವೀತ್ಪರಮಪ್ರೀತೋ ಮಾಂಧಾತಾ ರಾಜಸತ್ತಮಮ್|
12122010c ವಸುಹೋಮಂ ಮಹಾಪ್ರಾಜ್ಞಮಾಸೀನಂ ಕುರುನಂದನ||

ಕುರುನಂದನ! ಪರಮಪ್ರೀತನಾದ ಮಾಂಧಾತನು ಕುಳಿತಿದ್ದ
ಮಹಾಪ್ರಾಜ್ಞ ರಾಜಸತ್ತಮ ಮಸುಹೋಮನಿಗೆ ಹೇಳಿದನು:

12122011a ಬೃಹಸ್ಪತೇರ್ಮತಂ ರಾಜನ್ನಧೀತಂ ಸಕಲಂ ತ್ವಯಾ|
12122011c ತಥೈವೌಶನಸಂ ಶಾಸ್ತ್ರಂ ವಿಜ್ಞಾತಂ ತೇ ನರಾಧಿಪ||

"ರಾಜನ್! ನೀನು ಬೃಹಸ್ಪತಿಯ ಮತ ಸಕಲವನ್ನೂ
ಅಧ್ಯಯನಮಾಡಿರುವೆ. ಹಾಗೆಯೇ ಔಶನಸ ಶುಕ್ರಾಚಾರ್ಯನ ಶಾಸ್ತ್ರವೂ
ನಿನಗೆ ತಿಳಿದಿದೆ.

12122012a ತದಹಂ ಶ್ರೋತುಮಿಚ್ಛಾಮಿ ದಂಡ ಉತ್ಪದ್ಯತೇ ಕಥಮ್|
12122012c ಕಿಂ ವಾಪಿ ಪೂರ್ವಂ ಜಾಗರ್ತಿ ಕಿಂ ವಾ ಪರಮಮುಚ್ಯತೇ||

ಆದುದರಿಂದ ನಾನು ದಂಡದ ಉತ್ಪತ್ತಿಯು ಹೇಗಾಯಿತೆಂದು

ಕೇಳಬಯಸುತ್ತೇನೆ. ಅದರ ಮೊದಲು ಯಾವುದು ಪ್ರಪಂಚದ ರಕ್ಷಣೆಗೆ ಜಾಗೃತವಾಗಿತ್ತು? ಅದನ್ನು ಪರಮ ಶ್ರೇಷ್ಠವೆಂದು ಏಕೆ ಹೇಳುತ್ತಾರೆ?

12122013a ಕಥಂ ಕ್ಷತ್ರಿಯಸಂಸ್ಥಶ್ಚ ದಂಡಃ ಸಂಪ್ರತ್ಯವಸ್ಥಿತಃ|
12122013c ಬ್ರೂಹಿ ಮೇ ಸುಮಹಾಪ್ರಾಜ್ಞ ದದಾಮ್ಯಾಚಾರ್ಯವೇತನಮ್||

ಆ ದಂಡವು ಕ್ಷತ್ರಿಯನ ಕೈಗೆ ಬಂದುದು ಹೇಗೆ? ಮಹಾಪ್ರಾಜ್ಞ! ನನಗೆ ಇದನ್ನು ಹೇಳು. ನಾನು ನಿನಗೆ ಆಚಾರ್ಯವೇತನವನ್ನು ನೀಡುತ್ತೇನೆ.”

12122014 ವಸುಹೋಮ ಉವಾಚ|
12122014a ಶೃಣು ರಾಜನ್ಯಥಾ ದಂಡಃ ಸಂಭೂತೋ ಲೋಕಸಂಗ್ರಹಃ|
12122014c ಪ್ರಜಾವಿನಯರಕ್ಷಾರ್ಥಂ ಧರ್ಮಸ್ಯಾತ್ಮಾ ಸನಾತನಃ||

ವಸುಹೋಮನು ಹೇಳಿದನು: “ರಾಜನ್! ಪ್ರಜಾವಿನಯರಕ್ಷಣೆಗಾಗಿ ಲೋಕಸಂಗ್ರಹಕಾರಕ ಸನಾತನ ಧರ್ಮದ ಆತ್ಮವಾಗಿರುವ ಈ ದಂಡವು ಹೇಗೆ ಹುಟ್ಟಿತೆನ್ನುವುದನ್ನು ಕೇಳು.

12122015a ಬ್ರಹ್ಮಾ ಯಿಯಕ್ಷುರ್ಭಗವಾನ್ಸರ್ವಲೋಕಪಿತಾಮಹಃ|
12122015c ಋತ್ವಿಜಂ ನಾತ್ಮನಾ ತುಲ್ಯಂ ದದರ್ಶೇತಿ ಹಿ ನಃ ಶ್ರುತಮ್||

ಸರ್ವಲೋಕಪಿತಾಮಹ ಭಗವಾನ್ ಬ್ರಹ್ಮನು ಯಜ್ಞಮಾಡಲು ಬಯಸಿದಾಗ ತನ್ನ ಸಮನಾನಾದ ಋತ್ವಿಜನು ಅವನಿಗೆ ಕಾಣಸಿಗಲಿಲ್ಲ ಎಂದು ನಾವು ಕೇಳಿದ್ದೇವೆ.

12122016a ಸ ಗರ್ಭಂ ಶಿರಸಾ ದೇವೋ ವರ್ಷಪೂಗಾನಧಾರಯತ್|
12122016c ಪೂರ್ಣೇ ವರ್ಷಸಹಸ್ರೇ ತು ಸ ಗರ್ಭಃ ಕ್ಷುವತೋಽಪತತ್||

ಆಗ ಆ ದೇವನು ತನ್ನ ಶಿರಸ್ಸಿನಲ್ಲಿಯೇ ಅನೇಕ ವರ್ಷಗಳ ಪರ್ಯಂತ

ಗರ್ಭವನ್ನು ಧರಿಸಿದನು. ಸಹಸ್ರವರ್ಷಗಳು ತುಂಬಿದಾಗ ಬ್ರಹ್ಮನು ಶೀನಲು ಆ ಗರ್ಭವು ಕೆಳಕ್ಕೆ ಬಿದ್ದಿತು.

12122017a ಸ ಕ್ಷುಪೋ ನಾಮ ಸಂಭೂತಃ ಪ್ರಜಾಪತಿರರಿಂದಮ|
12122017c ಋತ್ವಿಗಾಸೀತ್ತದಾ ರಾಜನ್ಯಜ್ಞೇ ತಸ್ಯ ಮಹಾತ್ಮನಃ||

ರಾಜನ್! ಅರಿಂದಮ! ಅದರಿಂದ ಕ್ಷುಪ ಎಂಬ ಹೆಸರಿನ ಪ್ರಜಾಪತಿಯು ಹುಟ್ಟಿದನು. ಆ ಮಹಾತ್ಮನ ಯಜ್ಞಕ್ಕೆ ಅವನೇ ಋತ್ವಿಜನಾದನು.

12122018a ತಸ್ಮಿನ್ ಪ್ರವೃತ್ತೇ ಸತ್ರೇ ತು ಬ್ರಹ್ಮಣಃ ಪಾರ್ಥಿವರ್ಷಭ|
12122018c ಹೃಷ್ಟರೂಪಪ್ರಚಾರತ್ವಾದ್ದಂಡಃ ಸೋಽಂತರ್ಹಿತೋಽಭವತ್||

ಪಾರ್ಥಿವರ್ಷಭ! ಬ್ರಹ್ಮನ ಆ ಸತ್ರವು ನಡೆಯುತ್ತಿರಲು ಹೃಷ್ಟರೂಪಪ್ರಚಾರತ್ವ[501]ದಿಂದಾಗಿ ದಂಡವು ಅಂತರ್ಹಿತವಾಯಿತು.

12122019a ತಸ್ಮಿನ್ನಂತರ್ಹಿತೇ ಚಾಥ ಪ್ರಜಾನಾಂ ಸಂಕರೋಽಭವತ್|
12122019c ನೈವ ಕಾರ್ಯಂ ನ ಚಾಕಾರ್ಯಂ ಭೋಜ್ಯಾಭೋಜ್ಯಂ ನ ವಿದ್ಯತೇ||

ಅದು ಅಂತರ್ಹಿತವಾಗಲು ಪ್ರಜೆಗಳಲ್ಲಿ ಸಂಕರವುಂಟಾಯಿತು. ಕಾರ್ಯ-ಅಕಾರ್ಯ ಮತ್ತು ಭೋಜ್ಯ-ಅಭೋಜ್ಯಗಳ್ಯಾವುವೂ

---

501 ಹೃಷ್ಟರೂಪಪ್ರಚಾರತ್ವ ಎಂದರೆ ಏನು? ಯಜ್ಞವು ಪ್ರತ್ಯಕ್ಷದರ್ಶನ ಪ್ರಧಾನವಾಗಿದ್ದುದರಿಂದ ದಂಡವು ಅಂತರ್ಹಿತವಾಯಿತು. ಬ್ರಹ್ಮನು ದೃಷ್ಟರೂಪವಾದ ಯಜ್ಞದೀಕ್ಷೆಯನ್ನು ವಹಿಸಿರುವುದರಿಂದ ಯಜ್ಞವೇ ಬ್ರಹ್ಮನಿಗೆ ಪ್ರಧಾನಕಾರ್ಯವಾಗಿದ್ದುದರಿಂದ, ಪ್ರಜಾನಿಯಮರೂಪವಾದ ಅವನಲ್ಲಿದ್ದ ದಂಡಧರ್ಮವು ಲುಪ್ತವಾಯಿತು (ಭಾರತ ದರ್ಶನ).

ತಿಳಿಯದಂತಾಯಿತು.

12122020a ಪೇಯಾಪೇಯಂ ಕುತಃ ಸಿದ್ಧಿರ್ಹಿಂಸಂತಿ ಚ ಪರಸ್ಪರಮ್|
12122020c ಗಮ್ಯಾಗಮ್ಯಂ ತದಾ ನಾಸೀತ್ಪರಸ್ವಂ ಸ್ವಂ ಚ ವೈ ಸಮಮ್||

ಪೇಯಾಪೇಯಾಗಳ ಕುರಿತು ಇನ್ನೇನು? ಪರಸ್ಪರರನ್ನು ಹಿಂಸಿಸತೊಡಗಿದರು. ಗಮ್ಯಾಗಮ್ಯಗಳ ವಿಚಾರವೂ ಜನರಲ್ಲಿರಲಿಲ್ಲ. ಪರರ ಐಶ್ವರ್ಯವನ್ನೂ ತಮ್ಮದೆಂದೇ ಭಾವಿಸತೊಡಗಿದರು.

12122021a ಪರಸ್ಪರಂ ವಿಲುಂಪಂತೇ ಸಾರಮೇಯಾ ಇವಾಮಿಷಮ್|
12122021c ಅಬಲಂ ಬಲಿನೋ ಜಘ್ನುರ್ನಿರ್ಮರ್ಯಾದಮವರ್ತತ||

ಮಾಂಸದ ತುಂಡಿಗೆ ಕಚ್ಚಾಡುವ ನಾಯಿಗಳಂತೆ ಪರಸ್ಪರರ ಸ್ವತ್ತನ್ನು ಅಪಹರಿಸತೊಡಗಿದರು. ಬಲಶಾಲಿಗಳು ಅಬಲರನ್ನು ಕೊಂದರು. ಮರ್ಯಾದೆಯೇ ಇಲ್ಲದ ಸ್ವೇಚ್ಛಾಚಾರವರು ಸರ್ವತ್ರ ವ್ಯಾಪಿಸಿತು.

12122022a ತತಃ ಪಿತಾಮಹೋ ವಿಷ್ಣುಂ ಭಗವಂತಂ ಸನಾತನಮ್|
12122022c ಸಂಪೂಜ್ಯ ವರದಂ ದೇವಂ ಮಹಾದೇವಮಥಾಬ್ರವೀತ್||

ಆಗ ಪಿತಾಮಹನು ಸನಾತನ ಭಗವಂತ ವಿಷ್ಣುವನ್ನು ಪೂಜಿಸಿ, ವರದ ದೇವ ಮಹಾದೇವನಿಗೆ ಇಂತೆಂದನುಃ

12122023a ಅತ್ರ ಸಾಧ್ವನುಕಂಪಾ ವೈ ಕರ್ತುಮರ್ಹಸಿ ಕೇವಲಮ್[502]|
12122023c ಸಂಕರೋ ನ ಭವೇದತ್ರ ಯಥಾ ವೈ ತದ್ವಿಧೀಯತಾಮ್||

“ಇಲ್ಲಿ ನೀನು ಅನುಕಂಪವನ್ನು ತೋರಿಸುವ ಕೃಪೆಮಾಡಬೇಕು. ಕೇವಲ

[502] ಶಂಕರ (ಭಾರತ ದರ್ಶನ).

ಸಂಕರವು ನಡೆಯದಂತೆ ಉಪಾಯವನ್ನು ತೋರಿಸಿಕೊಡಬೇಕು.”

12122024a ತತಃ ಸ ಭಗವಾನ್ ಧ್ಯಾತ್ವಾ ಚಿರಂ ಶೂಲಜಟಾಧರಃ|
12122024c ಆತ್ಮಾನಮಾತ್ಮನಾ ದಂಡಮಸೃಜದ್ದೇವಸತ್ತಮಃ||

ಆಗ ಸ್ವಲ್ಪ ಕಾಲ ಧ್ಯಾನಿಸಿ, ಭಗವಾನ್ ಶೂಲಜಟಾಧರ
ದೇವಸತ್ತಮನು ತನ್ನಿಂದಲೇ ತನ್ನನ್ನು ದಂಡರೂಪದಲ್ಲಿ
ಸೃಷ್ಟಿಸಿಕೊಂಡನು.

12122025a ತಸ್ಮಾಚ್ಚ ಧರ್ಮಚರಣಾಂ ನೀತಿಂ ದೇವೀಂ ಸರಸ್ವತೀಮ್|
12122025c ಅಸೃಜದ್ದಂಡನೀತಿಃ ಸಾ ತ್ರಿಷು ಲೋಕೇಷು ವಿಶ್ರುತಾ||

ಆ ಧರ್ಮಚರಣಗಳ ನೀತಿಯನ್ನು ದೇವೀ ಸರಸ್ವತಿಯು ರಚಿಸಿದಳು. ಆ
ದಂಡನೀತಿಯು ಮೂರು ಲೋಕಗಳಲ್ಲಿಯೂ ವಿಶ್ರುತವಾಯಿತು.

12122026a ಭೂಯಃ ಸ ಭಗವಾನ್ ಧ್ಯಾತ್ವಾ ಚಿರಂ ಶೂಲವರಾಯುಧಃ|
12122026c ತಸ್ಯ ತಸ್ಯ ನಿಕಾಯಸ್ಯ ಚಕಾರೈಕೈಕಮೀಶರಮ್||

ಆ ಶೂಲವರಾಯುಧ ಭಗವಂತನು ಪುನಃ ಸ್ವಲ್ಪ ಹೊತ್ತು ಧ್ಯಾನಿಸಿ
ಒಂದೊಂದು ಸಮೂಹಕ್ಕೂ ಒಬ್ಬೊಬ್ಬರನ್ನು ಈಶ್ವರರನ್ನಾಗಿ
ಮಾಡಿದನು.

12122027a ದೇವಾನಾಮೀಶ್ವರಂ ಚಕ್ರೇ ದೇವಂ ದಶಶತೇಕ್ಷಣಮ್|
12122027c ಯಮಂ ವೈವಸ್ವತಂ ಚಾಪಿ ಪಿತೄಣಾಮಕರೋತ್ಪತಿಮ್||

ಸಾವಿರ ಕಣ್ಣಿನತೆ ದೇವನನ್ನು ದೇವತೆಗಳ ಈಶ್ವರನನ್ನಾಗಿ ಮಾಡಿದನು.
ವೈವಸ್ವತ ಯಮನನ್ನು ಪಿತೃಗಳ ಪತಿಯನ್ನಾಗಿ ಮಾಡಿದನು.

12122028a ಧನಾನಾಂ ರಕ್ಷಸಾಂ ಚಾಪಿ ಕುಬೇರಮಪಿ ಚೇಶ್ವರಮ್|

12122028c ಪರ್ವತಾನಾಂ ಪತಿಂ ಮೇರುಂ ಸರಿತಾಂ ಚ ಮಹೋದಧಿಮ್॥

ಧನಗಳ ಮತ್ತು ರಾಕ್ಷಸರ ಈಶ್ವರನನ್ನಾಗಿ ಕುಬೇರನನ್ನು, ಪರ್ವತಗಳ ಪತಿಯನ್ನಾಗಿ ಮೇರುವನ್ನು ಮತ್ತು ನದಿಗಳ ಪತಿಯನ್ನಾಗಿ ಮಹೋದಧಿಯನ್ನು ಮಾಡಿದನು.

12122029a ಅಪಾಂ ರಾಜ್ಯೇಽಸುರಾಣಾಂ ಚ ವಿದಧೇ ವರುಣಂ ಪ್ರಭುಮ್।
12122029c ಮೃತ್ಯುಂ ಪ್ರಾಣೇಶ್ವರಮಥೋ ತೇಜಸಾಂ ಚ ಹುತಾಶನಮ್॥

ವರುಣನನ್ನು ನೀರು ಮತ್ತು ಅಸುರರ ರಾಜ್ಯಕ್ಕೆ ಪ್ರಭುವನ್ನಾಗಿ ಮಾಡಿದನು. ಮೃತ್ಯುವನ್ನು ಪ್ರಾಣಗಳಿಗೂ ತೇಜಸ್ಸುಗಳಿಗೆ ಯಜ್ಞೇಶ್ವರನನ್ನೂ ಅಧಿಪತಿಗಳನ್ನಾಗಿ ಮಾಡಿದನು.

12122030a ರುದ್ರಾಣಾಮಪಿ ಚೇಶಾನಂ ಗೋಪ್ತಾರಂ ವಿದಧೇ ಪ್ರಭುಃ।
12122030c ಮಹಾತ್ಮಾನಂ ಮಹಾದೇವಂ ವಿಶಾಲಾಕ್ಷಂ ಸನಾತನಮ್॥

ಪ್ರಭುವು ಮಹಾತ್ಮ ಮಹಾದೇವ ವಿಶಾಲಾಕ್ಷ ಸನಾತನ ಈಶಾನನನ್ನು ರುದ್ರರ ರಕ್ಷಕನನ್ನಾಗಿ ಮಾಡಿದನು.

12122031a ವಸಿಷ್ಠಮೀಶಂ ವಿಪ್ರಾಣಾಂ ವಸೂನಾಂ ಜಾತವೇದಸಮ್।
12122031c ತೇಜಸಾಂ ಭಾಸ್ಕರಂ ಚಕ್ರೇ ನಕ್ಷತ್ರಾಣಾಂ ನಿಶಾಕರಮ್॥

ವಸಿಷ್ಠನನ್ನು ವಿಪ್ರರ, ಜಾತವೇದಸನನ್ನು ವಸುಗಳ, ಭಾಸ್ಕರನನ್ನು ತೇಜಸ್ಸುಗಳು ಮತ್ತು ನಿಶಾಕರನನ್ನು ನಕ್ಷತ್ರಗಳ ಅಧಿಪತಿಗಳನ್ನಾಗಿ ಮಾಡಿದನು.

12122032a ವೀರುಧಾಮಂಶುಮಂತಂ ಚ ಭೂತಾನಾಂ ಚ ಪ್ರಭುಂ ವರಮ್।
12122032c ಕುಮಾರಂ ದ್ವಾದಶಭುಜಂ ಸ್ಕಂದಂ ರಾಜಾನಮಾದಿಶತ್॥

ಅಂಶುಮಂತ ಚಂದ್ರನನ್ನು ಓಷಧಿಲತೆಗಳಿಗೆ ಅಧಿಪತಿಯನ್ನಾಗಿ ಮಾಡಿದನು. ಹನ್ನೆರಡು ಭುಜಗಳ ಶ್ರೇಷ್ಠ ಪ್ರಭು ಸ್ಕಂದ ಕುಮಾರನನ್ನು ಭೂತಗಳ ರಾಜನನ್ನಾಗಿ ಮಾಡಿದನು.

12122033a ಕಾಲಂ ಸರ್ವೇಶಮಕರೋತ್ಸಂಹಾರವಿನಯಾತ್ಮಕಮ್।
12122033c ಮೃತ್ಯೋಶ್ಚತುರ್ವಿಭಾಗಸ್ಯ ದುಃಖಸ್ಯ ಚ ಸುಖಸ್ಯ ಚ॥

ಸಂಹಾರವಿನಯಾತ್ಮಕನಾದ ಸರ್ವೇಶ ಕಾಲನನ್ನು ನಾಲ್ಕುವಿಧದ ಮೃತ್ಯುಗಳಿಗೂ. ಸುಖ-ದುಃಖಗಳಿಗೂ ಅಧಿಪತಿಯನ್ನಾಗಿ ಮಾಡಿದನು.

12122034a ಈಶ್ವರಃ ಸರ್ವದೇಹಸ್ತು[503] ರಾಜರಾಜೋ ಧನಾಧಿಪಃ[504]।
12122034c ಸರ್ವೇಷಾಮೇವ ರುದ್ರಾಣಾಂ ಶೂಲಪಾಣಿರಿತಿ ಶ್ರುತಿಃ॥

ಶೂಲಪಾಣಿಯು ಸರ್ವದೇಹಗಳ ಈಶ್ವರನೆಂದೂ, ರಾಜರಾಜನೆಂದೂ, ಧನಾಧಿಪನೆಂದೂ ಮತ್ತು ಸರ್ವ ರುದ್ರರ ಅಧಿಪತಿಯೆಂದೂ ಕೇಳಿದ್ದೇವೆ.

12122035a ತಮೇಕಂ[505] ಬ್ರಹ್ಮಣಃ ಪುತ್ರಮನುಜಾತಂ ಕ್ಷುಪಂ ದದೌ।
12122035c ಪ್ರಜಾನಾಮಧಿಪಂ ಶ್ರೇಷ್ಠಂ ಸರ್ವಧರ್ಮಭೃತಾಮಪಿ॥

ಅವನು ಬ್ರಹ್ಮನ ಕಿರಿಯ ಪುತ್ರ ಕ್ಷುಪನನ್ನು ಎಲ್ಲ ಪ್ರಜೆಗಳಿಗೂ ಮತ್ತು ಎಲ್ಲ ಧರ್ಮಾತ್ಮರಿಗೂ ಅಧಿಪತಿಯನ್ನಾಗಿ ಮಾಡಿದನು.

12122036a ಮಹಾದೇವಸ್ತತಸ್ತಸ್ಮಿನ್ವ್ಯವತ್ತೇ ಯಜ್ಞೇ ಯಥಾವಿಧಿ।
12122036c ದಂಡಂ ಧರ್ಮಸ್ಯ ಗೋಪ್ತಾರಂ ವಿಷ್ಣವೇ ಸತ್ಕೃತಂ ದದೌ॥

---

503 ಸರ್ವದೇವಸ್ತು (ಭಾರತ ದರ್ಶನ).

504 ಧನಾಧಿಪಃ (ಭಾರತ ದರ್ಶನ).

505 ತಮೇನಂ (ಭಾರತ ದರ್ಶನ).

ಬ್ರಹ್ಮನ ಯಜ್ಞವು ಯಥಾವಿಧಿಯಾಗಿ ಸಂಪೂರ್ಣವಾಗಲು ಮಹಾದೇವನು ಧರ್ಮರಕ್ಷಕ ಮಹಾವಿಷ್ಣುವಿಗೆ ಸತ್ಕೃತವಾದ ದಂಡವನ್ನು ಕೊಟ್ಟನು.

12122037a ವಿಷ್ಣುರಂಗಿರಸೇ ಪ್ರಾದಾದಂಗಿರಾ ಮುನಿಸತ್ತಮಃ|
12122037c ಪ್ರಾದಾದಿಂದ್ರಮರೀಚಿಭ್ಯಾಂ ಮರೀಚಿರ್ಭೃಗವೇ ದದೌ||

ವಿಷ್ಣುವು ಅದನ್ನು ಅಂಗಿರಸನಿಗೆ ಕೊಟ್ಟನು. ಆ ಮುನಿಸತ್ತಮನು ಅದನ್ನು ಇಂದ್ರ ಮತ್ತು ಮರೀಚರಿಗೆ ಕೊಟ್ಟನು. ಮರೀಚಿಯು ಅದನ್ನು ಭೃಗುವಿಗೆ ಕೊಟ್ಟನು.

12122038a ಭೃಗುರ್ದದಾವೃಷಿಭ್ಯಸ್ತು ತಂ ದಂಡಂ ಧರ್ಮಸಂಹಿತಮ್|
12122038c ಋಷಯೋ ಲೋಕಪಾಲೇಭ್ಯೋ ಲೋಕಪಾಲಾಃ ಕ್ಷುಪಾಯ ಚ||

ಧರ್ಮಸಂಹಿತವಾದ ಆ ದಂಡವನ್ನು ಭೃಗುವು ಋಷಿಗಳಿಗೂ, ಋಷಿಗಳು ಲೋಕಪಾಲರಿಗೂ ಮತ್ತು ಲೋಕಪಾಲರು ಕ್ಷುಪನಿಗೂ ಕೊಟ್ಟರು.

12122039a ಕ್ಷುಪಸ್ತು ಮನವೇ ಪ್ರಾದಾದಾದಿತ್ಯತನಯಾಯ ಚ|
12122039c ಪುತ್ರೇಭ್ಯಃ ಶ್ರಾದ್ಧದೇವಸ್ತು ಸೂಕ್ಷ್ಮಧರ್ಮಾರ್ಥಕಾರಣಾತ್|
12122039e ತಂ ದದೌ ಸೂರ್ಯಪುತ್ರಸ್ತು ಮನುರ್ವೈ ರಕ್ಷಣಾತ್ಮಕಮ್||

ಕ್ಷುಪನಾದರೋ ಅದನ್ನು ಆದಿತ್ಯ ತನಯ ಮನು ಶ್ರಾದ್ಧದೇವನಿಗೂ ಶ್ರಾದ್ಧದೇವನು ಸೂಕ್ಷ್ಮಧರ್ಮಾರ್ಥಕಾರಣಗಳಿಂದ ತನ್ನ ಪುತ್ರರಿಗೂ ನೀಡಿದನು. ಸೂರ್ಯಪುತ್ರನು ರಕ್ಷಣಾತ್ಮಕವಾದ ಅದನ್ನು ಮನುವಿಗೆ ನೀಡಿದನು.

12122040a ವಿಭಜ್ಯ ದಂಡಃ ಕರ್ತವ್ಯೋ ಧರ್ಮೇಣ ನ ಯದೃಚ್ಛಯಾ|
12122040c ದುರ್ವಾಚಾ ನಿಗ್ರಹೋ ಬಂಧೋ[506] ಹಿರಣ್ಯಂ ಬಾಹ್ಯತಃಕ್ರಿಯಾ||

ಧರ್ಮಾನುಸಾರವಾಗಿ ನ್ಯಾಯಾನ್ಯಾಯಗಳನ್ನು ವಿಚಾರಿಸಿಯೇ ದಂಡವನ್ನು ಉಪಯೋಗಿಸಬೇಕು. ಮನಬಂದಂತೆ ದಂಡವನ್ನು ಉಪಯೋಗಿಸಬಾರದು. ದುಷ್ಟರನ್ನು ನಿಗ್ರಹಿಸುವುದೇ ದಂಡದ ಮುಖ್ಯ ಉದ್ದೇಶ. ಹಿರಣ್ಯದಿಂದ ಬೊಕ್ಕಸವನ್ನು ತೊಂಬುವುದಕ್ಕಾಗಿ ಅಲ್ಲ. ಅದೊಂದು ಬಾಹ್ಯಕ್ರಿಯೆಯು ಮಾತ್ರ.

12122041a ವ್ಯಂಗತ್ವಂ ಚ ಶರೀರಸ್ಯ ವಧೋ ವಾ ನಾಲ್ಪಕಾರಣಾತ್|
12122041c ಶರೀರಪೀಡಾಸ್ತಾಸ್ತಾಸ್ತು ದೇಹತ್ಯಾಗೋ ವಿವಾಸನಮ್||

ಅಲ್ಪಕಾರಣಕ್ಕಾಗಿ ಪ್ರಜೆಗಳನ್ನು ಅಂಗವಿಕಲರನ್ನಾಗಿ ಮಾಡಬಾರದು, ಮರಣ ದಂಡನೆಯನ್ನು ನೀಡಬಾರದು, ಶರೀರ ಪೀಡೆಗಳನ್ನು ಕೊಡಬಾರದು, ದೇಹತ್ಯಾಗಮಾಡುವಂತೆ ಮಾಡಬಾರದು, ಮತ್ತು ದೇಶದಿಂದ ಹೊರಹಾಕಲೂ ಬಾರದು.

12122042a ಆನುಪೂರ್ವ್ಯಾ ಚ ದಂಡೋಽಸೌ ಪ್ರಜಾ ಜಾಗರ್ತಿ ಪಾಲಯನ್|
12122042c ಇಂದ್ರೋ ಜಾಗರ್ತಿ ಭಗವಾನಿಂದ್ರಾದಗ್ನಿರ್ವಿಭಾವಸುಃ||

ಈ ದಂಡವು ಅನುಕ್ರಮವಾಗಿ ಪ್ರಜೆಗಳನ್ನು ರಕ್ಷಿಸುತ್ತಾ ಜಾಗೃತವಾಗಿರುತ್ತದೆ. ಇಂದ್ರನು ಜಾಗೃತನಾಗಿರುತ್ತಾನೆ. ಭಗವಾನ್ ಇಂದ್ರನಿಂದ ವಿಭಾವಸು ಅಗ್ನಿಯು ಜಾಗೃತನಾಗಿರುತ್ತಾನೆ.

12122043a ಅಗ್ನೇರ್ಜಾಗರ್ತಿ ವರುಣೋ ವರುಣಾಚ್ಚ ಪ್ರಜಾಪತಿಃ|

---

[506] ದಂಡೋ (ಭಾರತ ದರ್ಶನ).

12122043c ಪ್ರಜಾಪತೇಸ್ತತೋ ಧರ್ಮೋ ಜಾಗರ್ತಿ ವಿನಯಾತ್ಮಕಃ||

ಅಗ್ನಿಯಿಂದ ವರುಣನೂ, ವರುಣನಿಂದ ಪ್ರಜಾಪತಿಯೂ,
ಪ್ರಜಾಪತಿಯಿಂದ ವಿನಯಾತ್ಮಕ ಧರ್ಮನೂ ಜಾಗೃತರಾಗಿರುತ್ತಾರೆ.

12122044a ಧರ್ಮಾಚ್ಚ ಬ್ರಹ್ಮಣಃ ಪುತ್ರೋ ವ್ಯವಸಾಯಃ ಸನಾತನಃ|
12122044c ವ್ಯವಸಾಯಾತ್ತತಸ್ತೇಜೋ ಜಾಗರ್ತಿ ಪರಿಪಾಲಯನ್||

ಧರ್ಮನಿಂದ ಅದು ಬ್ರಹ್ಮನ ಪುತ್ರ ಸನಾತನ ವ್ಯವಸಾಯನಿಗೆ
ಹೋಯಿತು. ವ್ಯವಸಾಯನಿಂದ ತೇಜಸ್ಸು ಅದನ್ನು ಪಡೆದುಕೊಂಡು
ಜಾಗೃತವಾಗಿ ಪ್ರಜೆಗಳನ್ನು ಪರಿಪಾಲಿಸುತ್ತದೆ.

12122045a ಓಷಧ್ಯಸ್ತೇಜಸಸ್ತಸ್ಮಾದೋಷಧಿಭ್ಯಶ್ಚ ಪರ್ವತಾಃ|
12122045c ಪರ್ವತೇಭ್ಯಶ್ಚ ಜಾಗರ್ತಿ ರಸೋ ರಸಗುಣಾತ್ತಥಾ||
12122046a ಜಾಗರ್ತಿ ನಿರೃತಿರ್ದೇವೀ ಜ್ಯೋತೀಂಷಿ ನಿರೃತೇರಪಿ|
12122046c ವೇದಾಃ ಪ್ರತಿಷ್ಠಾ ಜ್ಯೋತಿರ್ಭ್ಯಸ್ತತೋ ಹಯಶಿರಾಃ ಪ್ರಭುಃ||

ತೇಜಸ್ಸಿನಿಂದ ಓಷಧಿಗಳೂ, ಓಷಧಿಗಳಿಂದ ಪರ್ವತಗಳೂ,
ಪರ್ವತಗಳಿಂದ ರಸಗಳೂ, ಪರ್ವತಗಳಿಂದ ರಸಗಳೂ
ಜಾಗೃತಗೊಂಡವು. ರಸಗುಣಗಳಿಂದ ನಿರೃತಿದೇವಿಯೂ,
ನಿರೃತಿಯಿಂದ ಜ್ಯೋತಿಸ್ಸುಗಳೂ ದಂಡವನ್ನು ಪಡೆದು
ಜಾಗೃತವಾದವು. ಜ್ಯೋತಿಸ್ಸುಗಳಿಂದ ದಂಡವನ್ನು ಪಡೆದುಕೊಂಡು
ವೇದಗಳು ಪ್ರತಿಷ್ಠಿತವಾದವು. ವೇದಗಳಿಂದ ಪ್ರಭು ಹಯಶಿರನು
ಅದನ್ನು ಪಡೆದುಕೊಂಡನು.

12122047a ಬ್ರಹ್ಮಾ ಪಿತಾಮಹಸ್ತಸ್ಮಾಜ್ಜಾಗರ್ತಿ ಪ್ರಭುರವ್ಯಯಃ|
12122047c ಪಿತಾಮಹಾನ್ಮಹಾದೇವೋ ಜಾಗರ್ತಿ ಭಗವಾನ್ ಶಿವಃ||

ಹಯಶಿರನಿಂದ ಪ್ರಭು ಅವ್ಯಯ ಪಿತಾಮಹ ಬ್ರಹ್ಮನು ಜಾಗೃತಗೊಂಡನು. ಪಿತಾಮಹನಿಂದ ಮಹಾದೇವ ಭಗವಾನ್ ಶಿವನು ಜಾಗೃತಗೊಂಡನು.

12122048a ವಿಶ್ವೇದೇವಾಃ ಶಿವಾಚ್ಚಾಪಿ ವಿಶ್ವೇಭ್ಯಶ್ಚ ತಥರ್ಷಯಃ|
12122048c ಋಷಿಭ್ಯೋ ಭಗವಾನ್ಸೋಮಃ ಸೋಮಾದ್ದೇವಾಃ ಸನಾತನಾಃ||
12122049a ದೇವೇಭ್ಯೋ ಬ್ರಾಹ್ಮಣಾ ಲೋಕೇ ಜಾಗ್ರತೀತ್ಯುಪಧಾರಯ|

ಶಿವನಿಂದ ವಿಶ್ವೇದೇವತೆಗಳೂ, ವಿಶ್ವೇದೇವತೆಗಳಿಂದ ಋಷಿಗಳೂ, ಋಷಿಗಳಿಂದ ಭಗವಾನ್ ಸೋಮನೂ, ಸೋಮನಿಂದ ಸನಾತನ ದೇವತೆಗಳೂ, ದೇವತೆಗಳಿಂದ ಬ್ರಾಹ್ಮಣರೂ ಆ ದಂಡವನ್ನು ಅನುಕ್ರಮವಾಗಿ ಪಡೆದುಕೊಂಡು ಲೋಕದ ರಕ್ಷಣೆಯಲ್ಲಿ ಜಾಗರೂಕರಾಗಿರುತ್ತಾರೆ.

12122049c ಬ್ರಾಹ್ಮಣೇಭ್ಯಶ್ಚ ರಾಜನ್ಯಾ ಲೋಕಾನ್ರಕ್ಷಂತಿ ಧರ್ಮತಃ|
12122049e ಸ್ಥಾವರಂ ಜಂಗಮಂ ಚೈವ ಕ್ಷತ್ರಿಯೇಭ್ಯಃ ಸನಾತನಮ್||

ರಾಜರು ಬ್ರಾಹ್ಮಣರಿಂದ ದಂಡವನ್ನು ಪಡೆದುಕೊಂಡು ಕ್ಷತ್ರಿಯ ಧರ್ಮಾನುಸಾರವಾಗಿ ಲೋಕವನ್ನು ರಕ್ಷಿಸುತ್ತಿದ್ದಾರೆ. ಕ್ಷತ್ರಿಯರಿಂದಲೇ ಸನಾತನ ಸ್ಥಾವರ-ಜಂಗಮಗಳೂ ರಕ್ಷಿಸಲ್ಪಟ್ಟಿವೆ.

12122050a ಪ್ರಜಾ ಜಾಗ್ರತಿ ಲೋಕೇಽಸ್ಮಿನ್ದಂಡೋ ಜಾಗರ್ತಿ ತಾಸು ಚ|
12122050c ಸರ್ವಸಂಕ್ಷೇಪಕೋ ದಂಡಃ ಪಿತಾಮಹಸಮಃ ಪ್ರಭುಃ[507]||

ಈ ಲೋಕದಲ್ಲಿ ಪ್ರಜೆಗಳು ಜಾಗೃತವಾಗಿರುತ್ತಾರೆ. ಅವರಲ್ಲಿ ದಂಡವು

[507] ಸರ್ವಂ ಸಂಕ್ಷಿಪತೇ ದಂಡಃ ಪಿತಾಮಹಸಮಪ್ರಭಃ| (ಭಾರತ ದರ್ಶನ).

ಜಾಗೃತವಾಗಿರುತ್ತದೆ. ಪಿತಮಾಹಸಮ ಪ್ರಭು ದಂಡವು ಸರ್ವವನ್ನೂ ಮರ್ಯಾದೆಯೊಳಗೆ ಇಡುತ್ತದೆ.

12122051a ಜಾಗರ್ತಿ ಕಾಲಃ ಪೂರ್ವಂ ಚ ಮಧ್ಯೇ ಚಾಂತೇ ಚ ಭಾರತ|
12122051c ಈಶ್ವರಃ ಸರ್ವಲೋಕಸ್ಯ ಮಹಾದೇವಃ ಪ್ರಜಾಪತಿಃ||

ಭಾರತ! ಸರ್ವಲೋಕದ ಈಶ್ವರ ಮಹಾದೇವ ಪ್ರಜಾಪತಿ ಕಾಲನ ಸಮನಾದ ದಂಡವು ಮೊದಲೂ, ಮಧ್ಯದಲ್ಲಿಯೂ ಮತ್ತು ಅಂತ್ಯದಲ್ಲಿಯೂ ಜಾಗೃತವಾಗಿಯೇ ಇರುತ್ತದೆ.

12122052a ದೇವದೇವಃ ಶಿವಃ ಶರ್ವೋ ಜಾಗರ್ತಿ ಸತತಂ ಪ್ರಭುಃ|
12122052c ಕಪರ್ದೀ ಶಂಕರೋ ರುದ್ರೋ ಭವಃ ಸ್ಥಾಣುರುಮಾಪತಿಃ||

ದೇವದೇವ ಶಿವ ಶರ್ವ ಪ್ರಭು ಕಪರ್ದೀ ಶಂಕರ ರುದ್ರ ಭವ ಸ್ಥಾಣು ಉಮಾಪತಿಯು ಸತತವೂ ದಂಡರೂಪದಲ್ಲಿ ಜಾಗೃತನಾಗಿರುತ್ತಾನೆ.

12122053a ಇತ್ಯೇಷ ದಂಡೋ ವಿಖ್ಯಾತ ಆದೌ ಮಧ್ಯೇ ತಥಾವರೇ|
12122053c ಭೂಮಿಪಾಲೋ ಯಥಾನ್ಯಾಯಂ ವರ್ತೇತಾನೇನ ಧರ್ಮವಿತ್||

ಹೀಗೆ ದಂದವು ಆದಿಮಧ್ಯಾಂತ್ಯಗಳಲ್ಲಿಯೂ ವಿಖ್ಯಾತವಾಗಿದೆ. ಧರ್ಮವಿದು ಭೂಮಿಪಾಲನು ದಂಡವನ್ನು ಬಳಸಿ ಯಥಾನ್ಯಾಯವಾಗಿ ವ್ಯವಹರಿಸಬೇಕು.””

12122054 ಭೀಷ್ಮ ಉವಾಚ|
12122054a ಇತೀದಂ ವಸುಹೋಮಸ್ಯ ಶೃಣುಯಾದ್ಯೋ ಮತಂ ನರಃ|
12122054c ಶ್ರುತ್ವಾ ಚ ಸಮ್ಯಗ್ವರ್ತೇತ ಸ ಕಾಮಾನಾಪ್ನುಯಾನ್ನೃಪಃ||

ಭೀಷ್ಮನು ಹೇಳಿದನು: “ಯಾವ ನೃಪನು ವಸುಹೋಮನ ಈ

ಅಭಿಪ್ರಾಯವನ್ನು ಕೇಳುವನೋ ಮತ್ತು ಆಚರಣೆಗೆ ತರುವನೋ ಅವನು ಸಕಲವಿಧದ ಕಾಮನೆಗಳನ್ನು ಪಡೆದುಕೊಳ್ಳುತ್ತಾನೆ.

12122055a ಇತಿ ತೇ ಸರ್ವಮಾಖ್ಯಾತಂ ಯೋ ದಂಡೋ ಮನುಜರ್ಷಭ|
12122055c ನಿಯಂತಾ ಸರ್ವಲೋಕಸ್ಯ ಧರ್ಮಾಕ್ರಾಂತಸ್ಯ ಭಾರತ||

ಮನುಜರ್ಷಭ! ಭಾರತ! ಧರ್ಮಾಕ್ರಾಂತವಾಗಿರುವ ಸರ್ವಲೋಕಗಳನ್ನು ನಿಯಂತ್ರಿಸುವ ದಂಡದ ಕುರಿತು ಎಲ್ಲವನ್ನೂ ನಿನಗೆ ಹೇಳಿದ್ದೇನೆ.”

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ದಂಡೋತ್ಪತ್ತ್ಯುಪಾಖ್ಯಾನೇ ದ್ವಾವಿಂಶತ್ಯಧಿಕಶತತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ದಂಡೋತ್ಪತ್ತ್ಯುಪಾಖ್ಯಾನ ಎನ್ನುವ ನೂರಾಇಪ್ಪತ್ತೆರಡನೇ ಅಧ್ಯಾಯವು.

೧೨೩

ಕಾಮಂದಾಂಗಾರಿಷ್ಟ ಸಂವಾದ

ತ್ರಿವರ್ಗದ ವಿಚಾರ ಮತ್ತು ಪಾಪದ ಕಾರಣದಿಂದಾಗಿ ಪದಚ್ಯುತನಾದ ರಾಜನ ಪುನರುತ್ಥಾನದ ವಿಷಯದಲ್ಲಿ ಅಂಗಾರಿಷ್ಟ ಮತ್ತು ಕಾಮಂದರ ಸಂವಾದ (1-24).

12123001 ಯುಧಿಷ್ಠಿರ ಉವಾಚ|
12123001a ತಾತ ಧರ್ಮಾರ್ಥಕಾಮಾನಾಂ ಶ್ರೋತುಮಿಚ್ಛಾಮಿ ನಿಶ್ಚಯಮ್|

12123001c ಲೋಕಯಾತ್ರಾ ಹಿ ಕಾರ್ತ್ಸ್ನ್ಯೇನ ತ್ರಿಷ್ವೇತೇಷು ಪ್ರತಿಷ್ಠಿತಾ||

ಯುಧಿಷ್ಠಿರನು ಹೇಳಿದನು: "ತಾತ! ಧರ್ಮಾರ್ಥಕಾಮಗಳ ಕುರಿತು ನಿಶ್ಚಯವನ್ನು ಕೇಳಬಯಸುತ್ತೇನೆ. ಏಕೆಂದರೆ ಲೋಕಯಾತ್ರೆಯು ಸಂಪೂರ್ಣವಾಗಿ ಈ ಮೂರರಲ್ಲಿ ಪ್ರತಿಷ್ಠಿತವಾಗಿದೆ.

12123002a ಧರ್ಮಾರ್ಥಕಾಮಾಃ ಕಿಂಮೂಲಾಸ್ತ್ರಯಾಣಾಂ ಪ್ರಭವಶ್ಚ ಕಃ|
12123002c ಅನ್ಯೋನ್ಯಂ ಚಾನುಷಜ್ಜಂತೇ ವರ್ತಂತೇ ಚ ಪೃಥಕ್ಪೃಥಕ್||

ಧರ್ಮಾರ್ಥಕಾಮಗಳ ಮೂಲವು ಯಾವುದು? ಅವುಗಳ ಉತ್ಪತ್ತಿಗೆ ಕಾರಣರ್ಯಾರು? ಅವು ಏಕೆ ಕೆಲವೊಮ್ಮೆ ಒಂದಾಗಿಯೇ ಇರುತ್ತವೆ ಮತ್ತು ಇನ್ನೊಮ್ಮೆ ಬೇರೆ ಬೇರೆಯಾಗಿರುತ್ತವೆ?"

12123003 ಭೀಷ್ಮ ಉವಾಚ|
12123003a ಯದಾ ತೇ ಸ್ಯುಃ ಸುಮನಸೋ ಲೋಕಸಂಸ್ಥಾರ್ಥನಿಶ್ಚಯೇ[508]|
12123003c ಕಾಲಪ್ರಭವಸಂಸ್ಥಾಸು ಸಜ್ಜಂತೇ ಚ ತ್ರಯಸ್ತದಾ||

ಭೀಷ್ಮನು ಹೇಳಿದನು: "ಯಾವಾಗ ಜನರು ಸುಮನಸರಾಗಿದ್ದು ಅರ್ಥನಿಶ್ಚಯವನ್ನು ಮಾಡಿ ಕಾಲ-ಕಾರಣ-ಅನುಷ್ಠಾನಗಳು ಒದಗಿರುವಾಗ ಆ ಮೂರೂ ಒಂದಾಗಿರುತ್ತವೆ.

12123004a ಧರ್ಮಮೂಲಸ್ತು ದೇಹೋಽರ್ಥಃ[509] ಕಾಮೋಽರ್ಥಫಲಮುಚ್ಯತೇ|
12123004c ಸಂಕಲ್ಪಮೂಲಾಸ್ತೇ ಸರ್ವೇ ಸಂಕಲ್ಪೋ ವಿಷಯಾತ್ಮಕಃ||

ಅರ್ಥಕ್ಕೆ ಧರ್ಮವೇ ಮೂಲ. ಕಾಮವು ಅರ್ಥದ ಫಲವೆಂದು

---

508 ಲೋಕೇ ಧರ್ಮಾರ್ಥನಿಶ್ಚಯೇ| (ಭಾರತ ದರ್ಶನ).

509 ಧರ್ಮಮೂಲಃ ಸದೈವಾರ್ಥಃ (ಭಾರತ ದರ್ಶನ).

ಹೇಳಲ್ಪಟ್ಟಿದೆ. ಆದರೆ ಇವಕ್ಕೆ ಸಂಕಲ್ಪವೇ ಮೂಲಕಾರಣವು. ಮತ್ತು ಸಂಕಲ್ಪವು ವಿಷಯಾತ್ಮವು.

12123005a ವಿಷಯಾಶ್ಚೈವ ಕಾರ್ತ್ಸ್ನ್ಯೇನ ಸರ್ವ ಆಹಾರಸಿದ್ಧಯೇ|
12123005c ಮೂಲಮೇತತ್ತ್ರಿವರ್ಗಸ್ಯ ನಿವೃತ್ತಿರ್ಮೋಕ್ಷ ಉಚ್ಯತೇ||

ಎಲ್ಲ ವಿಷಯಗಳೂ ಸಂಪೂರ್ಣವಾಗಿ ಇಂದ್ರಿಯಗಳ ಉಪಭೋಗಕ್ಕಾಗಿಯೇ ಇವೆ. ಇವೇ ತ್ರಿವರ್ಗದ ಮೂಲವಾಗಿವೆ. ಇವುಗಳಿಂದ ನಿವೃತ್ತಿಯೇ ಮೋಕ್ಷವೆನಿಸಿಕೊಳ್ಳುತ್ತದೆ.

12123006a ಧರ್ಮಃ ಶರೀರಸಂಗುಪ್ತಿರ್ಧರ್ಮಾರ್ಥಂ ಚಾರ್ಥ ಇಷ್ಯತೇ|
12123006c ಕಾಮೋ ರತಿಫಲಶ್ಚಾತ್ರ ಸರ್ವೇ ಚೈತೇ ರಜಸ್ವಲಾಃ||

ಧರ್ಮದಿಂದ ಶರೀರದ ರಕ್ಷಣೆಯಾಗುತ್ತದೆ. ಧರ್ಮದ ಉಪಾರ್ಜನೆಗಾಗಿಯೇ ಅರ್ಥವನ್ನು ಬಯಸುತ್ತೇವೆ. ರತಿಫಲವನ್ನು ಕೊಡುವುದು ಕಾಮ. ಇವೆಲ್ಲವೂ ರಜೋಗುಣಸ್ವರೂಪವಾಗಿರುತ್ತವೆ.

12123007a ಸಂನಿಕೃಷ್ಟಾಂಶ್ಚ ರೇದೇನಾನ್ನ ಚೈನಾನ್ಮನಸಾ ತ್ಯಜೇತ್|
12123007c ವಿಮುಕ್ತಸ್ತಮಸಾ ಸರ್ವಾನ್ ಧರ್ಮಾದೀನ್ಕಾಮನೈಷ್ಠಿಕಾನ್||

ಸನ್ನಿಹಿತವಾಗಿರುವ ಧರ್ಮಾರ್ಥಕಾಮಗಳನ್ನು ತನಗೆ ಹಿತವಾಗುವ ರೀತಿಯಲ್ಲಿ ಸೇವಿಸಬೇಕು. ಮನಸ್ಸಿನಿಂದ ಧರ್ಮಾರ್ಥಕಾಮಗಳನ್ನು ತ್ಯಜಿಸಬಾರದು. ತಪಸ್ಸಿನಿಂದಲೂ ವಿಚಾರಪರತೆಯಿಂದಲೂ ಇವುಗಳಿಂದ ಮುಕ್ತರಾಗಬೇಕು[510].

---

[510] ಧರ್ಮಾರ್ಥಕಾಮಗಳನ್ನು ಆಸಕ್ತಿರಹಿತನಾಗಿ ಫಲತ್ಯಾಗದ ಮೂಲಕ ಸೇವಿಸಬೇಕು (ಭಾರತ ದರ್ಶನ).

12123008a ಶ್ರೇಷ್ಠಬುದ್ಧಿಸ್ತ್ರಿವರ್ಗಸ್ಯ ಯದಯಂ ಪ್ರಾಪ್ನುಯಾತ್ ಕ್ಷಣಾತ್|
12123008c ಬುದ್ಧ್ಯಾ ಬುಧ್ಯೇದಿಹಾರ್ಥೇ ನ ತದಹ್ನಾ ತು ನಿಕೃಷ್ಟಯಾ[511]||

ಧರ್ಮಾರ್ಥಕಾಮಗಳಲ್ಲಿರುವ ಶ್ರೇಷ್ಠಬುದ್ಧಿಯು ಮೋಕ್ಷದಲ್ಲಿಯೇ ಇದ್ದಿದ್ದರೆ ಅದನ್ನು ಕ್ಷಣದಲ್ಲಿಯೇ ಪಡೆದುಕೊಳ್ಳಬಹುದಾಗಿತ್ತು. ಆದರೆ ನಿಕೃಷ್ಟಬುದ್ಧಿಯಿರುವವನು ತನ್ನ ಬುದ್ಧಿಯಿಂದ ಇದನ್ನು ತಿಳಿದುಕೊಂಡಿರುವುದಿಲ್ಲ.

12123009a ಅಪಧ್ಯಾನಮಲೋ ಧರ್ಮೋ ಮಲೋಽರ್ಥಸ್ಯ ನಿಗೂಹನಮ್|
[512]12123009c ಸಂಪ್ರಮೋದಮಲಃ ಕಾಮೋ ಭೂಯಃ ಸ್ವಗುಣವರ್ತಿತಃ||

ಫಲಾಪೇಕ್ಷೆಯೇ ಧರ್ಮದ ಮಲ. ಕೂಡಿಡುವುದೇ ಅರ್ಥದ ಮಲ. ಸಂಪ್ರಮೋದವೇ ಕಾಮದ ಮಲ. ಆದರೆ ಇವುಗಳ ಸ್ವಗುಣಗಳೇ ಫಲಾಪೇಕ್ಷೆ, ಕೂಡಿದುವುದು ಮತ್ತು ಸಂಪ್ರಮತ್ತನಾಗಿರುವುದು.

12123010a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12123010c ಕಾಮಂದಸ್ಯ ಚ ಸಂವಾದಮಂಗಾರಿಷ್ಠಸ್ಯ ಚೋಭಯೋಃ||

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಕಾಮಂದ ಮತ್ತು ಅಂಗಾರಿಷ್ಠರ ನಡುವಿನ ಸಂವದವನ್ನು ಉದಾಹರಿಸುತ್ತಾರೆ.

12123011a ಕಾಮಂದಮೃಷಿಮಾಸೀನಮಭಿವಾದ್ಯ ನರಾಧಿಪಃ|

---

[511] ಬುದ್ಧ್ಯಾ ಬುದ್ಧಿರಿಹಾರ್ಥೇನ ತದಜ್ಞಾನನಿಕೃಷ್ಟಯಾ| (ಭಾರತ ದರ್ಶನ).

[512] ಇದಕ್ಕೆ ಮೊದಲು ಈ ಒಂದು ಶ್ಲೋಕವಿದೆ: ಅರ್ಥಾರ್ಥಮನ್ಯದ್ಭವತಿ ವಿಪರೀತಮಥಾಪರಮ್|
ಅನರ್ಥಾರ್ಥಮವಪ್ಯಾರ್ಥಮನ್ಯತ್ರಾದ್ಯೋಪಕಾರಕಮ್|| (ಭಾರತ ದರ್ಶನ).

12123011c ಅಂಗಾರಿಷ್ಠೋಽಥ ಪಪ್ರಚ್ಛ ಕೃತ್ವಾ ಸಮಯಪರ್ಯಯಮ್‌||

ನರಾಧಿಪ ಅಂಗಾರಿಷ್ಠನು ಕುಳಿತಿದ್ದ ಕಾಮಂದಋಷಿಯನ್ನು ನಮಸ್ಕರಿಸಿ ಸಮಯವು ಬಂದೊದಗಿದೆಯೆಂದು ಭಾವಿಸಿ, ಕೇಳಿದನು.

12123012a ಯಃ ಪಾಪಂ ಕುರುತೇ ರಾಜಾ ಕಾಮಮೋಹಬಲಾತ್ಕೃತಃ|
12123012c ಪ್ರತ್ಯಾಸನ್ನಸ್ಯ ತಸ್ಯರ್ಷೇ ಕಿಂ ಸ್ಯಾತ್ಪಾಪಪ್ರಣಾಶನಮ್‌||

“ಋಷೇ! ಕಾಮಮೋಹಗಳ ಬಲದಿಂದ ಸೆಳೆಯಲ್ಪಟ್ಟು ರಾಜನು ಪಾಪಗಳನ್ನು ಮಾಡುತ್ತಾನೆ. ಅವನು ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ತನ್ನ ಪಾಪವನ್ನು ಹೋಗಲಾಡಿಸಿಕೊಳ್ಳಬಹುದು?

12123013a ಅಧರ್ಮೋ ಧರ್ಮ ಇತಿ ಹ ಯೋಽಜ್ಞಾನಾದಾಚರೇದಿಹ|
12123013c ತಂ ಚಾಪಿ ಪ್ರಥಿತಂ ಲೋಕೇ ಕಥಂ ರಾಜಾ ನಿವರ್ತಯೇತ್‌||

ಅಜ್ಞಾನದಿಂದ ಅಧರ್ಮವನ್ನು ಧರ್ಮವೆಂದೇ ತಿಳಿದು ಆಚರಿಸುತ್ತಿರುವ ಲೋಕ ವಿಖ್ಯಾತನಾದವನನ್ನು ರಾಜನು ಹೇಗೆ ಅಧರ್ಮದಿಂದ ತಡೆಯಬೇಕು?”

12123014 ಕಾಮಂದ ಉವಾಚ|
12123014a ಯೋ ಧರ್ಮಾರ್ಥೌ ಸಮುತ್ಸೃಜ್ಯ ಕಾಮಮೇವಾನುವರ್ತತೇ|
12123014c ಸ ಧರ್ಮಾರ್ಥಪರಿತ್ಯಾಗಾತ್‌ ಪ್ರಜ್ಞಾನಾಶಮಿಹಾರ್ಚತಿ‌||

ಕಾಮಂದನು ಹೇಳಿದನು: “ಧರ್ಮಾರ್ಥಗಳನ್ನು ಬಿಟ್ಟು ಕಾಮವನ್ನೇ ಅನುಸರಿಸುವವನು ಧರ್ಮಾರ್ಥಪರಿತ್ಯಾಗದಿಂದಾಗಿ ಪ್ರಜ್ಞೆಯನ್ನೇ ಕಳೆದುಕೊಳ್ಳುತ್ತಾನೆ.

12123015a ಪ್ರಜ್ಞಾಪ್ರಣಾಶಕೋ ಮೋಹಸ್ತಥಾ ಧರ್ಮಾರ್ಥನಾಶಕಃ|

12123015c ತಸ್ಮಾನ್ನಾಸ್ತಿಕತಾ ಚೈವ ದುರಾಚಾರಶ್ಚ ಜಾಯತೇ॥

ಪ್ರಜ್ಞಾನಾಶವೇ ಮೋಹ. ಅದು ಧರ್ಮಾರ್ಥಗಳೆರಡನ್ನೂ
ನಾಶಮಾಡುತ್ತದೆ. ಅದರಿಂದ ನಾಸ್ತಿಕತೆಯೂ ದುರಾಚಾರಗಳೂ
ಹುಟ್ಟುತ್ತವೆ.

12123016a ದುರಾಚಾರಾನ್ಯದಾ ರಾಜಾ ಪ್ರದುಷ್ಟಾನ್ನ ನಿಯಚ್ಛತಿ|
12123016c ತಸ್ಮಾದುದ್ವಿಜತೇ ಲೋಕಃ ಸರ್ಪಾದ್ವೇಶ್ಮಗತಾದಿವ॥

ದುರಾಚಾರಿಗಳನ್ನು ಮತ್ತು ದುಷ್ಟರನ್ನು ರಾಜನು ನಿಯಂತ್ರಿಸದೇ ಇದ್ದರೆ
ಮನೆಯೊಳಗೆ ಹಾವು ಹೊಕ್ಕಿಕೊಂಡರೆ ಹೇಗೋ ಹಾಗೆ ಜನರು
ಉದ್ವಿಗ್ನರಾಗುತ್ತಾರೆ.

12123017a ತಂ ಪ್ರಜಾ ನಾನುವರ್ತಂತೇ ಬ್ರಾಹ್ಮಣಾ ನ ಚ ಸಾಧವಃ|
12123017c ತತಃ ಸಂಕ್ಷಯಮಾಪ್ನೋತಿ[513] ತಥಾ ವಧ್ಯತ್ವಮೇತಿ ಚ॥

ಅಂಥಹ ರಾಜನನ್ನು ಬ್ರಾಹ್ಮಣರೂ ಸಾಧುಗಳೂ ಅನುಸರಿಸುವುದಿಲ್ಲ.
ಅವನು ವಧ್ಯನೆಂದು ನಿರ್ಣಯಿಸಿ ಅವರೇ ಅವನನ್ನು
ನಾಶಗೊಳಿಸುತ್ತಾರೆ.

12123018a ಅಪಧ್ವಸ್ತಸ್ತ್ವವಮತೋ ದುಃಖಿಂ ಜೀವತಿ ಜೀವಿತಮ್|
12123018c ಜೀವೇಚ್ಚ ಯದಪಧ್ವಸ್ತಸ್ತಚ್ಚುದ್ಧಂ ಮರಣಂ ಭವೇತ್॥

ಒಂದು ವೇಳೆ ವಧಿಸಲ್ಪಡದಿದ್ದರೂ ಅವನು ರಾಜಪದವಿಯಿಂದ
ಭ್ರಷ್ಟನಾಗಿ ದುಃಖದ ಜೀವನವನ್ನು ಜೀವಿಸುತ್ತಾನೆ.
ಭ್ರಷ್ಟನಾದನಂತರವೂ ಅವನು ಜೀವಿಸಿದ್ದರೆ ಆ ಜೀವನವು ಅವನಿಗೆ

---

[513] ಸಂಶಯಮಾಪ್ನೋತಿ (ಭಾರತ ದರ್ಶನ).

ಸ್ಪಷ್ಟ ಮರಣವಾಗಿಯೇ ಪರಿಣಮಿಸುತ್ತದೆ.

12123019a ಅತ್ರೈತದಾಹುರಾಚಾರ್ಯಾಃ ಪಾಪಸ್ಯ ಚ ನಿಬರ್ಹಣಮ್|
12123019c ಸೇವಿತವ್ಯಾ ತ್ರಯೀ ವಿದ್ಯಾ ಸತ್ಕಾರೋ ಬ್ರಾಹ್ಮಣೇಷು ಚ||

ಅಂತಹ ಸಂದರ್ಭದಲ್ಲಿ ರಾಜನು ಪಾಪಕ್ಕೆ ಪಶ್ಚಾತ್ತಾಪ ಪಡಬೇಕು. ವೇದಗಳ ಅಧ್ಯಯನ ಮಾಡಬೇಕು ಮತ್ತು ಬ್ರಾಹ್ಮಣರನ್ನು ಸತ್ಕರಿಸಬೇಕು ಎಂದು ಆಚಾರ್ಯರು ಹೇಳುತ್ತಾರೆ.

12123020a ಮಹಾಮನಾ ಭವೇದ್ಧರ್ಮೇ ವಿವಹೇಚ್ಚ ಮಹಾಕುಲೇ|
12123020c ಬ್ರಾಹ್ಮಣಾಂಶ್ಚಾಪಿ ಸೇವೇತ ಕ್ಷಮಾಯುಕ್ತಾನ್ಮನಸ್ವಿನಃ||

ಧರ್ಮದಲ್ಲಿಯೇ ಮಹಾಮನಸ್ಸನ್ನಿಡಬೇಕು. ಮಹಾಕುಲದ ಕನ್ಯೆಯೊಂದಿಗೆ ವಿವಾಹವಾಗಬೇಕು. ಮನಸ್ವಿಗಳೂ ಕ್ಷಯಾಯುಕ್ತರೂ ಆದ ಬ್ರಾಹ್ಮಣರನ್ನು ಸೇವಿಸಬೇಕು.

12123021a ಜಪೇದುದಕಶೀಲಃ ಸ್ಯಾತ್ಸುಮುಖೋ ನಾನ್ಯದಾಸ್ಥಿತಃ|
12123021c ಧರ್ಮಾನ್ವಿತಾನ್ಸಂಪ್ರವಿಶೇದ್ಬಹಿಃ ಕೃತ್ವೈವ ದುಷ್ಕೃತೀನ್||

ನೀರಿನಲ್ಲಿ ನಿಂತು ಜಪಿಸಬೇಕು. ಪ್ರಸನ್ನವದನನಾಗಿರಬೇಕು. ಧರ್ಮಾರ್ವಿತರ ಸಹವಾಸವನ್ನು ಮಾಡಬೇಕು. ಪಾಪಿಷ್ಠರನ್ನು ದೇಶದ ಹೊರಹಾಕಬೇಕು.

12123022a ಪ್ರಸಾದಯೇನ್ಮಧುರಯ ವಾಚಾಪ್ಯಥ ಚ ಕರ್ಮಣಾ|
12123022c ಇತ್ಯಸ್ಮೀತಿ ವದೇನ್ನಿತ್ಯಂ ಪರೇಷಾಂ ಕೀರ್ತಯನ್ಗುಣಾನ್||

ಸುಮಧುರ ಮಾತುಗಳಿಂದ ಮತ್ತು ಉತ್ತಮ ಕರ್ಮಗಳಿಂದ ಎಲ್ಲರನ್ನೂ ಪ್ರಸನ್ನಗೊಳಿಸಬೇಕು. ಇತರರ ಗುಣಗಳನ್ನು ಕೊಂಡಾಡುತ್ತಾ

ಎಲ್ಲರೊಡನೆಯೂ ನಾನು ನಿಮ್ಮವನಾಗಿದ್ದೇನೆ ಎಂದು ಹೇಳಿಕೊಳ್ಳಬೇಕು.

12123023a ಅಪಾಪೋ ಹ್ಯೇವಮಾಚಾರಃ ಕ್ಷಿಪ್ರಂ ಬಹುಮತೋ ಭವೇತ್|
12123023c ಪಾಪಾನ್ಯಪಿ ಚ ಕೃಚ್ಛ್ರಾಣಿ ಶಮಯೇನ್ನಾತ್ರ ಸಂಶಯಃ||

ಹೀಗೆ ಆಚರಿಸುವವನು ಕ್ಷಿಪ್ರವಾಗಿ ಅಪಾಪಿಯಾಗುತ್ತಾನೆ ಮತ್ತು ಬಹುಜನರ ಸನ್ಮಾನಕ್ಕೆ ಪಾತ್ರನಾಗುತ್ತಾನೆ. ಇದರಿಂದ ಕಠೋರ ಪಾಪಗಳನ್ನು ಮಾಡಿದ್ದರೂ ಅದನ್ನು ಉಪಶಮನಗೊಳಿಸಬಹುದು. ಅದರಲ್ಲಿ ಸಂಶಯವಿಲ್ಲ.

12123024a ಗುರವೋಽಪಿ ಪರಂ ಧರ್ಮಂ ಯದ್ಬ್ರೂಯುಸ್ತತ್ತಥಾ ಕುರು|
12123024c ಗುರೂಣಾಂ ಹಿ ಪ್ರಸಾದಾದ್ಧಿ ಶ್ರೇಯಃ ಪರಮವಾಪ್ಸ್ಯಸಿ||

ಗುರುವೇ ಪರಮ ಧರ್ಮವು. ಅವನು ಹೇಳಿದ ಹಾಗೆ ಮಾಡು. ಗುರುಜನರ ಕೃಪೆಯಿಂದಲೇ ನೀನು ಪರಮ ಶ್ರೇಯಸ್ಸನ್ನು ಪಡೆದುಕೊಳ್ಳುತ್ತೀಯೆ.””

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಕಾಮಾಂದಕಾಂಗರಿಷ್ಟಸಂವಾದೇ
ತ್ರಯೋವಿಂಶತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಕಾಮಾಂದಕಾಂಗರಿಷ್ಟಸಂವಾದ ಎನ್ನುವ ನೂರಾಇಪ್ಪತ್ಮೂರನೇ ಅಧ್ಯಾಯವು.

೧೨೪

ಶೀಲವರ್ಣನ

ಶೀಲದ ಪ್ರಭಾವ, ಶೀಲದ ಅಭಾವದಿಂದ ಧರ್ಮ, ಸತ್ಯ, ಸದಾಚಾರ, ಬಲ ಮತ್ತು ಲಕ್ಷ್ಮಿ – ಇವು ಇಲ್ಲವಾಗುವುದರ ವರ್ಣನೆಯನ್ನು ತಿಳಿಸುವ ಇಂದ್ರ ಮತ್ತು ಪ್ರಹ್ರಾದರ ಸಂವಾದ (1-69).

12124001 ಯುಧಿಷ್ಠಿರ ಉವಾಚ|
12124001a ಇಮೇ ಜನಾ ನರಶ್ರೇಷ್ಠ ಪ್ರಶಂಸಂತಿ ಸದಾ ಭುವಿ|
12124001c ಧರ್ಮಸ್ಯ ಶೀಲಮೇವಾದೌ ತತೋ ಮೇ ಸಂಶಯೋ ಮಹಾನ್||

ಯುಧಿಷ್ಠಿರನು ಹೇಳಿದನು: "ನರಶ್ರೇಷ್ಠ! ಭುವಿಯಲ್ಲಿ ಜನರು ಸದಾ ಮೊದಲು ಧರ್ಮದ ಶೀಲವನ್ನೇ ಪ್ರಶಂಸಿಸುತ್ತಾರೆ. ಇದರ ಕುರಿತು ನನ್ನಲ್ಲಿ ಮಹಾ ಸಂಶಯವಿದೆ.

12124002a ಯದಿ ತಚ್ಚಕ್ಯಮಸ್ಮಾಭಿರ್ಜ್ಞಾತುಂ ಧರ್ಮಭೃತಾಂ ವರ|
12124002c ಶ್ರೋತುಮಿಚ್ಛಾಮಿ ತತ್ಸರ್ವಂ ಯಥೈತದುಪಲಭ್ಯತೇ||

ಧರ್ಮಭೃತರಲ್ಲಿ ಶ್ರೇಷ್ಠ! ನನಗೆ ತಿಳಿದುಕೊಳ್ಳಲು ಶಕ್ಯವಿದ್ದರೆ ಈ ಶೀಲವು ಹೇಗೆ ಉಪಲಬ್ಧವಾಗುತ್ತದೆ ಎನ್ನುವುದನ್ನು ಸಂಪೂರ್ಣವಾಗಿ ಕೇಳಲು ಬಯಸುತ್ತೇನೆ.

12124003a ಕಥಂ ನು ಪ್ರಾಪ್ಯತೇ ಶೀಲಂ ಶ್ರೋತುಮಿಚ್ಛಾಮಿ ಭಾರತ|
12124003c ಕಿಂಲಕ್ಷಣಂ ಚ ತತ್ಪ್ರೋಕ್ತಂ ಬ್ರೂಹಿ ಮೇ ವದತಾಂ ವರ||

ಭಾರತ! ಮಾತನಾಡುವವರಲ್ಲಿ ಶ್ರೇಷ್ಠ! ನಾವು ಹೇಗೆ ಶೀಲವನ್ನು ಪಡೆದುಕೊಳ್ಳಬಹುದು? ಇದನ್ನು ಕೇಳಲು ಇಚ್ಛಿಸುತ್ತೇನೆ. ಆ ಶೀಲದ

ಲಕ್ಷಣವು ಏನು? ನನಗೆ ಹೇಳು.”

12124004 ಭೀಷ್ಮ ಉವಾಚ|
12124004a ಪುರಾ ದುರ್ಯೋಧನೇನೇಹ ಧೃತರಾಷ್ಟ್ರಾಯ ಮಾನದ|
12124004c ಆಖ್ಯಾತಂ ತಪ್ಯಮಾನೇನ ಶ್ರಿಯಂ ದೃಷ್ಟ್ವಾ ತಥಾಗತಾಮ್||
12124005a ಇಂದ್ರಪ್ರಸ್ಥೇ ಮಹಾರಾಜ ತವ ಸಭ್ರಾತೃಕಸ್ಯ ಹ|
12124005c ಸಭಾಯಾಂ ಚಾವಹಸನಂ ತತ್ಸರ್ವಂ ಶೃಣು ಭಾರತ||

ಭೀಷ್ಮನು ಹೇಳಿದನು: “ಮಾನದ! ಮಹಾರಾಜ! ಭಾರತ! ಹಿಂದೆ
ಇಂದ್ರಪ್ರಸ್ಥದಲ್ಲಿ ಸಹೋದರರಿಂದ ಕೂಡಿದ್ದ ನಿನ್ನ ಸಂಪತ್ತನ್ನು ಮತ್ತು
ಸಭೆಯಲ್ಲಿ ನಡೆದ ಅಪಮಾನವನ್ನು ನೋಡಿ ಸಂತಪ್ತನಾದ
ದುರ್ಯೋಧನನು ಕೌರವ ಸಭೆಯಲ್ಲಿ ತನ್ನ ಮನಸ್ಸಿನ ಆತಂಕವನ್ನು
ವ್ಯಕ್ತಪಡಿಸಿದುದನ್ನು ಎಲ್ಲವನ್ನೂ ಕೇಳು.

12124006a ಭವತಸ್ತಾಂ ಸಭಾಂ ದೃಷ್ಟ್ವಾ ಸಮೃದ್ಧಿಂ ಚಾಪ್ಯನುತ್ತಮಾಮ್|
12124006c ದುರ್ಯೋಧನಸ್ತದಾಸೀನಃ ಸರ್ವಂ ಪಿತ್ರೇ ನ್ಯವೇದಯತ್||

ನಿನ್ನ ಸಭೆಯನ್ನೂ ಅನುತ್ತಮ ಸಮೃದ್ಧಿಯನ್ನೂ ನೋಡಿ
ದುರ್ಯೋಧನನು ಎಲ್ಲರೊಡನೆ ಆಸೀನನಾಗಿದ್ದ ತಂದೆಗೆ
ನಿವೇದಿಸಿದನು:

12124007a ಶ್ರುತ್ವಾ ಚ ಧೃತರಾಷ್ಟ್ರೋಽಪಿ ದುರ್ಯೋಧನವಚಸ್ತದಾ|
12124007c ಅಬ್ರವೀತ್ಕರ್ಣಸಹಿತಂ ದುರ್ಯೋಧನಮಿದಂ ವಚಃ||

ಧೃತರಾಷ್ಟ್ರನಾದರೋ ದುರ್ಯೋಧನನ ವಚನವನ್ನು ಕೇಳಿ
ಕರ್ಣಸಹಿತನಾಗಿದ್ದ ದುರ್ಯೋಧನನಿಗೆ ಈ ಮಾತನ್ನಾಡಿದನು:

12124008a ಕಿಮರ್ಥಂ ತಪ್ಯಸೇ ಪುತ್ರ ಶ್ರೋತುಮಿಚ್ಛಾಮಿ ತತ್ತ್ವತಃ|
12124008c ಶ್ರುತ್ವಾ ತ್ವಾಮನುನೇಷ್ಯಾಮಿ ಯದಿ ಸಮ್ಯಗ್ಭವಿಷ್ಯಸಿ||

“ಪುತ್ರ! ನೀನು ಯಾವ ಕಾರಣಕ್ಕಾಗಿ ಪರಿತಪಿಸುತ್ತಿರುವೆ? ಅದನ್ನು ತತ್ತ್ವತಃ ಕೇಳಲು ಇಚ್ಛಿಸುತ್ತೇನೆ. ಅದನ್ನು ಕೇಳಿ ಉಚಿತವೆನಿಸಿದರೆ ನಿನ್ನನ್ನು ಸಮಾಧಾನಗೊಳಿಸಲು ಪ್ರಯತ್ನಿಸುತ್ತೇನೆ.

12124009a ಯಥಾ ತ್ವಂ ಮಹದೈಶ್ವರ್ಯಂ ಪ್ರಾಪ್ತಃ ಪರಪುರಂಜಯ|
12124009c ಕಿಂಕರಾ ಭ್ರಾತರಃ ಸರ್ವೇ ಮಿತ್ರಾಃ ಸಂಬಂಧಿನಸ್ತಥಾ||

ಪರಪುರಂಜಯ! ಅವರಲ್ಲಿರುವಂತೆ ನಿನ್ನಲ್ಲಿಯೂ ಮಹದೈಶ್ವರ್ಯವಿದೆ. ನಿನ್ನ ಎಲ್ಲ ಸಹೋದರರೂ ಮಿತ್ರರೂ ಮತ್ತು ಸಂಬಂಧಿಗಳೂ ನಿನಗೆ ಕಿಂಕರರಾಗಿದ್ದಾರೆ.

12124010a ಆಚ್ಛಾದಯಸಿ ಪ್ರಾವಾರಾನಾಶ್ನಾಸಿ ಪಿಶಿತೋದನಮ್|
12124010c ಆಜಾನೇಯಾ ವಹಂತಿ ತ್ವಾಂ ಕಸ್ಮಾಚ್ಚೋಚಸಿ ಪುತ್ರಕ||

ಉತ್ತಮ ವಸ್ತ್ರಗಳನ್ನೇ ತೊಡುತ್ತಿರುವೆ. ಮಾಂಸದ ಭೋಜನವನ್ನೇ ಉಣ್ಣುತ್ತಿರುವೆ. ಶ್ರೇಷ್ಟ ತಳಿಯ ಆಜಾನೇಯ ಅಶ್ವಗಳೇ ನಿನ್ನ ರಥವನ್ನು ಎಳೆಯುತ್ತವೆ. ನೀನು ಯಾವುದಕ್ಕಾಗಿ ಶೋಕಿಸುತ್ತಿರುವೆ ಪುತ್ರ?”

12124011 ದುರ್ಯೋಧನ ಉವಾಚ|
12124011a ದಶ ತಾನಿ ಸಹಸ್ರಾಣಿ ಸ್ನಾತಕಾನಾಂ ಮಹಾತ್ಮನಾಮ್|
12124011c ಭುಂಜತೇ ರುಕ್ಮಪಾತ್ರೀಷು ಯುಧಿಷ್ಠಿರನಿವೇಶನೇ||

ದುರ್ಯೋಧನನು ಹೇಳಿದನು: “ಯುಧಿಷ್ಠಿರನ ಮನೆಯಲ್ಲಿ ಹತ್ತು ಸಾವಿರ ಮಹಾತ್ಮಾ ಸ್ನಾತಕರು ಚಿನ್ನದ ಪಾತ್ರೆಗಳಲ್ಲಿ ಭೋಜನಮಾಡುತ್ತಾರೆ.

12124012a ದೃಷ್ಟ್ವಾ ಚ ತಾಂ ಸಭಾಂ ದಿವ್ಯಾಂ ದಿವ್ಯಪುಷ್ಪಫಲಾನ್ವಿತಾಮ್।
12124012c ಅಶ್ವಾಂಸ್ತಿತ್ತಿರಕಲ್ಮಾಷಾನ್ರತ್ನಾನಿ ವಿವಿಧಾನಿ ಚ॥
12124013a ದೃಷ್ಟ್ವಾ ತಾಂ ಪಾಂಡವೇಯಾನಾಮೃದ್ಧಿಮಿಂದ್ರೋಪಮಾಂ ಶುಭಾಮ್।
12124013c ಅಮಿತ್ರಾಣಾಂ ಸುಮಹತೀಮನುಶೋಚಾಮಿ ಮಾನದ॥

ಮಾನದ! ದಿವ್ಯಪುಷ್ಪಫಲಗಳಿಂದ ಕೂಡಿದ ಆ ದಿವ್ಯ ಸಭೆಯನ್ನು ನೋಡಿ, ತಿತ್ತಿರಪಕ್ಷಿಗಳಂತೆ ಚಿತ್ರವರ್ಣದ ಕಲ್ಮಾಷಜಾತಿಯ ಕುದುರೆಗಳನ್ನೂ, ವಿವಿಧ ರತ್ನಗಳನ್ನೂ, ಅಮಿತ್ರ ಪಾಂಡವೇಯನ ಇಂದ್ರೋಪಮ ಶುಭ ಮಹಾ ಸಂವೃದ್ಧಿಯನ್ನು ನೋಡಿ ಶೋಕಿಸುತ್ತಿದ್ದೇನೆ.”

12124014 ಧೃತರಾಷ್ಟ್ರ ಉವಾಚ।
12124014a ಯದೀಚ್ಚಸಿ ಶ್ರಿಯಂ ತಾತ ಯಾದೃಶೀಂ ತಾಂ ಯುಧಿಷ್ಠಿರೇ।
12124014c ವಿಶಿಷ್ಟಾಂ ವಾ ನರವ್ಯಾಘ್ರ ಶೀಲವಾನ್ಭವ ಪುತ್ರಕ॥

ಧೃತರಾಷ್ಟ್ರನು ಹೇಳಿದನು: “ಮಗೂ! ನರವ್ಯಾಘ್ರ! ಪುತ್ರಕ! ಯುಧಿಷ್ಠಿರನಂತಹ ಅಥವಾ ಅದಕ್ಕಿಂತಲೂ ಹೆಚ್ಚಿನ ಸಂಪತ್ತನ್ನು ಇಚ್ಛಿಸುವೆಯಾದರೆ ಶೀಲವಂತನಾಗು.

12124015a ಶೀಲೇನ ಹಿ ತ್ರಯೋ ಲೋಕಾಃ ಶಕ್ಯಾ ಜೇತುಂ ನ ಸಂಶಯಃ।
12124015c ನ ಹಿ ಕಿಂ ಚಿದಸಾಧ್ಯಂ ವೈ ಲೋಕೇ ಶೀಲವತಾಂ ಭವೇತ್॥

ಶೀಲದಿಂದಲೇ ಮೂರೂ ಲೋಕಗಳನ್ನೂ ಗೆಲ್ಲಲು ಶಕ್ಯ ಎನ್ನುವುದರಲ್ಲಿ ಸಂಶಯವಿಲ್ಲ. ಶೀಲವಂತರಿಗೆ ಲೋಕದಲ್ಲಿ ಯಾವುದನ್ನೂ ಗೆಲ್ಲಲು ಅಸಾಧ್ಯವೆನಿಸುವುದಿಲ್ಲ.

12124016a ಏಕರಾತ್ರೇಣ ಮಾಂಧಾತಾ ತ್ರ್ಯಹೇಣ ಜನಮೇಜಯಃ।

12124016c ಸಪ್ತರಾತ್ರೇಣ ನಾಭಾಗಃ ಪೃಥಿವೀಂ ಪ್ರತಿಪೇದಿವಾನ್‌||

ಮಾಂಧಾತನು ಒಂದು ರಾತ್ರಿಯಲ್ಲಿಯೂ, ಜನಮೇಜಯನು ಮೂರು ದಿನಗಳಲ್ಲಿಯೂ, ನಾಭಾಗನು ಏಳು ರಾತ್ರಿಗಳಲ್ಲಿಯೂ ಈ ಪೃಥ್ವಿಯನ್ನು ಪಡೆದುಕೊಂಡರು.

12124017a ಏತೇ ಹಿ ಪಾರ್ಥಿವಾಃ ಸರ್ವೇ ಶೀಲವಂತೋ ದಮಾನ್ವಿತಾಃ|[514]
12124017c ಅತಸ್ತೇಷಾಂ ಗುಣಕ್ರೀತಾ ವಸುಧಾ ಸ್ವಯಮಾಗಮತ್‌||

ಈ ಪಾರ್ಥಿವರೆಲ್ಲರೂ ಶೀಲವಂತರೂ ದಮಾನ್ವಿತರೂ ಆಗಿದ್ದರು. ಅವರ ಗುಣಮೌಲ್ಯಗಳಿಂದಲೇ ಕ್ರಯಿಸಲ್ಪಟ್ಟ ವಸುಧೆಯು ತಾನಾಗಿಯೇ ಅವರಿಗೆ ಒಲಿದು ಬಂದಳು.

[515]12124018a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್‌|
12124018c ನಾರದೇನ ಪುರಾ ಪ್ರೋಕ್ತಂ ಶೀಲಮಾಶ್ರಿತ್ಯ ಭಾರತ||

ಭಾರತ! ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ನಾರದನು ಹಿಂದೆ ಶೀಲದ ಕುರಿತು ಹೇಳಿದುದನ್ನು ಉದಾಹರಿಸುತ್ತಾರೆ.

12124019a ಪ್ರಹ್ರಾದೇನ ಹೃತಂ ರಾಜ್ಯಂ ಮಹೇಂದ್ರಸ್ಯ ಮಹಾತ್ಮನಃ|
12124019c ಶೀಲಮಾಶ್ರಿತ್ಯ ದೈತ್ಯೇನ ತ್ರೈಲೋಕ್ಯಂ ಚ ವಶೀಕೃತಮ್‌||

ಪ್ರಹ್ರಾದನು ಮಹಾತ್ಮ ಮಹೇಂದ್ರನ ರಾಜ್ಯವನ್ನು ಅಪಹರಿಸಿದನು.

---

514 ದಯಾನ್ವಿತಾಃ (ಭಾರತ ದರ್ಶನ).

515 ಇದಕ್ಕೆ ಮೊದಲು ಈ ಒಂದು ಶ್ಲೋಕವಿದೆ: ದುರ್ಯೋಧನ ಉವಾಚಃ ಕಥಂ ತತ್ಪ್ರಾಪ್ಯತೇ ಶೀಲಂ ಶ್ರೋತುಮಿಚ್ಛಾಮಿ ಭಾರತ| ಯೇನ ಶೀಲೇನ ತೈಃ ಪ್ರಾಪ್ತಾ ಕ್ಷಿಪ್ರಮೇವ ವಸುಂಧರಾ|| ಧೃತರಾಷ್ಟ್ರ ಉವಾಚಃ (ಭಾರತ ದರ್ಶನ).

ಶೀಲವನ್ನು ಆಶ್ರಯಿಸಿ ಆ ದೈತ್ಯನು ತ್ರೈಲೋಕ್ಯವನ್ನೂ
ವಶೀಕರಿಸಿಕೊಂಡನು.

12124020a ತತೋ ಬೃಹಸ್ಪತಿಂ ಶಕ್ರಃ ಪ್ರಾಂಜಲಿಃ ಸಮುಪಸ್ಥಿತಃ|
12124020c ಉವಾಚ ಚ ಮಹಾಪ್ರಾಜ್ಞಃ ಶ್ರೇಯ ಇಚ್ಛಾಮಿ ವೇದಿತುಮ್||

ಆಗ ಶಕ್ರನು ಕೈಮುಗಿದು ಬೃಹಸ್ಪತಿಯ ಬಳಿಸಾರಿ "ಮಹಾಪ್ರಾಜ್ಞ!
ಶ್ರೇಯದ ಸಾಧನೆಯನ್ನು ತಿಳಿಯಬಯಸುತ್ತೇನೆ" ಎಂದನು.

12124021a ತತೋ ಬೃಹಸ್ಪತಿಸ್ತಸ್ಮೈ ಜ್ಞಾನಂ ನೈಃಶ್ರೇಯಸಂ ಪರಮ್|
12124021c ಕಥಯಾಮಾಸ ಭಗವಾನ್ ದೇವೇಂದ್ರಾಯ ಕುರೂದ್ವಹ||

ಕುರೂದ್ವಹ! ಆಗ ಬೃಹಸ್ಪತಿಯು ಅವನಿಗೆ ಪರಮ ಶ್ರೇಯಸ್ಸಿನ
ಸಾಧನದ ಕುರಿತು ಭಗವಾನ್ ದೇವೇಂದ್ರನಿಗೆ ಹೇಳಿದನು.

12124022a ಏತಾವಚ್ಚ್ರೇಯ ಇತ್ಯೇವ ಬೃಹಸ್ಪತಿರಭಾಷತ|
12124022c ಇಂದ್ರಸ್ತು ಭೂಯಃ ಪಪ್ರಚ್ಚ ಕ್ವ ವಿಶೇಷೋ ಭವೇದಿತಿ||

"ಇದೇ ಶ್ರೇಯಸ್ಸಿನ ಉಪಾಯವು" ಎಂದು ಬೃಹಸ್ಪತಿಯು ಹೇಳಿದನು.
ಇಂದ್ರನಾದರೋ ಪುನಃ "ಇದಕ್ಕಿಂತಲೂ ಹೆಚ್ಚಿನ ಶ್ರೇಯಸ್ಸು
ಯಾವುದರಿಂದ ಉಂಟಾಗುತ್ತದೆ?" ಎಂದು ಪ್ರಶ್ನಿಸಿದನು.

12124023 ಬೃಹಸ್ಪತಿರುವಾಚ
12124023a ವಿಶೇಷೋಽಸ್ತಿ ಮಹಾಂಸ್ತಾತ ಭಾರ್ಗವಸ್ಯ ಮಹಾತ್ಮನಃ|
12124023c ತತ್ಪಾಗಮಯ ಭದ್ರಂ ತೇ ಭೂಯ ಏವ ಪುರಂದರ||

ಬೃಹಸ್ಪತಿಯು ಹೇಳಿದನು: "ಅಯ್ಯಾ! ಪುರಂದರ! ಇದಕ್ಕಿಂತಲೂ
ವಿಶೇಷ ಜ್ಞಾನವು ಮಹಾತ್ಮ ಭಾರ್ಗವನಲ್ಲಿದೆ. ಅವನಲ್ಲಿಗೆ ಹೋಗು.

ನಿನಗೆ ಮಂಗಳವಾಗಲಿ””

12124024 ಧೃತರಾಷ್ಟ್ರ ಉವಾಚ|
12124024a ಆತ್ಮನಸ್ತು ತತಃ ಶ್ರೇಯೋ ಭಾರ್ಗವಾತ್ಸುಮಹಾಯಶಾಃ|
12124024c ಜ್ಞಾನಮಾಗಮಯತ್ಪ್ರೀತ್ಯಾ ಪುನಃ ಸ ಪರಮದ್ಯುತಿಃ||

ಧೃತರಾಷ್ಟ್ರನು ಹೇಳಿದನು: “ಅನಂತರ ತನಗೆ ಶ್ರೇಯವಾಗುವುದರ ಕುರಿತ ಜ್ಞಾನವನ್ನು ಪಡೆಯಲು ಪರಮದ್ಯುತಿ ಇಂದ್ರನು ಪುನಃ ಭಾರ್ಗವನ ಬಳಿ ಹೋದನು.

12124025a ತೇನಾಪಿ ಸಮನುಜ್ಞಾತೋ ಭಾರ್ಗವೇಣ ಮಹಾತ್ಮನಾ|
12124025c ಶ್ರೇಯೋಽಸ್ತೀತಿ ಪುನರ್ಭೂಯಃ ಶುಕ್ರಮಾಹ ಶತಕ್ರತುಃ||

ಮಹಾತ್ಮ ಭಾರ್ಗವನಿಂದ ಉಪದೇಶವನ್ನು ಪಡೆದ ಶತಕ್ರತುವು ಇನ್ನೂ ಶ್ರೇಯಸ್ಕರವಾದುದನ್ನು ಪುನಃ ಕೇಳಲು ಶುಕ್ರನು ಹೇಳಿದನು.

12124026a ಭಾರ್ಗವಸ್ತ್ವಾಹ ಧರ್ಮಜ್ಞಃ ಪ್ರಹ್ರಾದಸ್ಯ ಮಹಾತ್ಮನಃ|
12124026c ಜ್ಞಾನಮಸ್ತಿ ವಿಶೇಷೇಣ ತತೋ ಹೃಷ್ಟಶ್ಚ ಸೋಽಭವತ್||

ಧರ್ಮಜ್ಞ ಭಾರ್ಗವನಾದರೋ ಹೇಳಿದನು: “ಮಹಾತ್ಮಾ ಪ್ರಹ್ರಾದನಿಗೆ ಶ್ರೇಯಸ್ಸಾಧನ ವಿಷಯದಲ್ಲಿ ನಾನು ಹೇಳಿರುವುದಕ್ಕಿಂತಲೂ ವಿಶೇಷ ಜ್ಞಾನವಿದೆ” ಎಂದನು. ಅದನ್ನು ಕೇಳಿ ಇಂದ್ರನು ಹೃಷ್ಟನಾದನು.

12124027a ಸ ತತೋ ಬ್ರಾಹ್ಮಣೋ ಭೂತ್ವಾ ಪ್ರಹ್ರಾದಂ ಪಾಕಶಾಸನಃ|
12124027c ಸೃತ್ವಾ ಪ್ರೋವಾಚ ಮೇಧಾವೀ ಶ್ರೇಯ ಇಚ್ಛಾಮಿ ವೇದಿತುಮ್||

ಆಗ ಪಾಕಶಾಸನನು ಬ್ರಾಹ್ಮಣನಾಗಿ ಪ್ರಹ್ರಾದನಲ್ಲಿಗೆ ಹೋಗಿ “ಮೇಧಾವೀ! ಶೇಯವಾದುದನ್ನು ತಿಳಿಯಲು ಇಚ್ಛಿಸುತ್ತೇನೆ” ಎಂದನು.

12124028a ಪ್ರಹ್ರಾದಸ್ತ್ವಬ್ರವೀದ್ವಿಪ್ರಂ ಕ್ಷಣೋ ನಾಸ್ತಿ ದ್ವಿಜರ್ಷಭ|
12124028c ತ್ರೈಲೋಕ್ಯರಾಜ್ಯೇ ಸಕ್ತಸ್ಯ ತತೋ ನೋಪದಿಶಾಮಿ ತೇ||

ಪ್ರಹ್ರಾದನಾದರೋ ವಿಪ್ರನಿಗೆ "ದ್ವಿಜರ್ಷಭ! ತ್ರೈಲೋಕ್ಯದ ರಾಜ್ಯಭಾರದಲ್ಲಿ ಸಕ್ತನಾಗಿರುವ ನನಗೆ ನಿನಗೆ ಉಪದೇಶಿಸಿಸಲು ಒಂದು ಕ್ಷಣವೂ ದೊರೆಯುತ್ತಿಲ್ಲ" ಎಂದು ಹೇಳಿದನು.

12124029a ಬ್ರಾಹ್ಮಣಸ್ತ್ವಬ್ರವೀದ್ವಾಕ್ಯಂ ಕಸ್ಮಿನ್ಕಾಲೇ ಕ್ಷಣೋ ಭವೇತ್|
12124029c ತತೋಪದಿಷ್ಟಮಿಚ್ಛಾಮಿ ಯದ್ಯತ್ಕಾರ್ಯಾಂತರಂ ಭವೇತ್||

ಆಗ ಬ್ರಾಹ್ಮಣನು ಈ ಮಾತನ್ನಾಡಿದನು: "ಯಾವಾಗ ನಿನಗೆ ಉಪದೇಶಿಸಲು ಸಮಯವು ಸಿಗುವುದೋ ಆವಾಗಲೇ ನಿನ್ನಿಂದ ಉಪದೇಶವನ್ನು ಪಡೆಯಲು ಇಚ್ಛಿಸುತ್ತೇನೆ."

12124030a ತತಃ ಪ್ರೀತೋಽಭವದ್ರಾಜಾ ಪ್ರಹ್ರಾದೋ ಬ್ರಹ್ಮವಾದಿನೇ|
12124030c ತಥೇತ್ಯುಕ್ತ್ವಾ ಶುಭೇ ಕಾಲೇ ಜ್ಞಾನತತ್ತ್ವಂ ದದೌ ತದಾ||

ಬ್ರಾಹ್ಮಣನಾಡಿದುದಕ್ಕೆ ಪ್ರೀತನಾದ ರಾಜಾ ಪ್ರಹ್ರಾದನು ಹಾಗೆಯೇ ಆಗಲೆಂದು ಶುಭ ಕಾಲದಲ್ಲಿ ಅವನಿಗೆ ಜ್ಞಾನತತ್ತ್ವವನ್ನು ನೀಡಿದನು.

12124031a ಬ್ರಾಹ್ಮಣೋಽಪಿ ಯಥಾನ್ಯಾಯಂ ಗುರುವೃತ್ತಿಮನುತ್ತಮಾಮ್|
12124031c ಚಕಾರ ಸರ್ವಭಾವೇನ ಯದ್ವತ್ಸ ಮನಸೇಚ್ಛತಿ||

ಬ್ರಾಹ್ಮಣನಾದರೋ ಪ್ರಹ್ರಾದನ ವಿಷಯದಲ್ಲಿ ಯಥಾನ್ಯಾಯವಾದ ಅನುತ್ತಮ ಗುರುವೃತ್ತಿಯನ್ನೇ ಇಟ್ಟುಕೊಂಡು ಅವನ ಮನಸ್ಸು ಇಚ್ಛಿಸಿದಂತೆ ಸರ್ವಭಾವದಿಂದ ಅವನ ಸೇವೆಯನ್ನು ಮಾಡುತ್ತಿದ್ದನು.

12124032a ಪೃಷ್ಟಶ್ಚ ತೇನ ಬಹುಶಃ ಪ್ರಾಪ್ತಂ ಕಥಮರಿಂದಮ|

12124032c ತ್ರೈಲೋಕ್ಯರಾಜ್ಯಂ ಧರ್ಮಜ್ಞ ಕಾರಣಂ ತದ್ಬ್ರವೀಹಿ ಮೇ||

ಅನೇಕ ಬಾರಿ ಅವನಲ್ಲಿ "ಅರಿಂದಮ! ಧರ್ಮಜ್ಞ! ನಿನಗೆ ತ್ರೈಲೋಕ್ಯರಾಜ್ಯವು ದೊರಕಿದುದರ ಕಾರಣವನ್ನು ನನಗೆ ತಿಳಿಸು" ಎಂದು ಕೇಳುತ್ತಿದ್ದನು.

12124033 ಪ್ರಹ್ರಾದ ಉವಾಚ|
12124033a ನಾಸೂಯಾಮಿ ದ್ವಿಜಶ್ರೇಷ್ಠ[516] ರಾಜಾಸ್ಮೀತಿ ಕದಾ ಚನ|
12124033c ಕವ್ಯಾನಿ[517] ವದತಾಂ ತಾತ ಸಂಯಚ್ಚಾಮಿ ವಹಾಮಿ ಚ||

ಪ್ರಹ್ರಾದನು ಹೇಳಿದನು: "ದ್ವಿಜಶ್ರೇಷ್ಠ! ರಾಜನಾಗಿದ್ದೇನೆಂದು ನಾನು ಎಂದೂ ಅಭಿಮಾನಪಡುವುದಿಲ್ಲ. ಅಯ್ಯಾ! ದ್ವಿಜರು ಹೇಳಿದುದನ್ನು ಸಂಯಮದಿಂದ ಕೇಳುತ್ತೇನೆ ಮತ್ತು ಅದರಂತೆ ಮಾಡುತ್ತೇನೆ.

12124034a ತೇ ವಿಸ್ರಬ್ಧಾಃ ಪ್ರಭಾಷಂತೇ ಸಂಯಚ್ಚಂತಿ ಚ ಮಾಂ ಸದಾ|
12124034c ತೇ ಮಾ ಕವ್ಯಪದೇ ಸಕ್ತಂ ಶುಶ್ರೂಷುಮನಸೂಯಕಮ್||
12124035a ಧರ್ಮಾತ್ಮಾನಂ ಜಿತಕ್ರೋಧಂ ಸಂಯತಂ ಸಂಯತೇಂದ್ರಿಯಮ್|
12124035c ಸಮಾಚಿನ್ವಂತಿ ಶಾಸ್ತಾರಃ ಕ್ಷೌದ್ರಂ ಮಧ್ವಿವ ಮಕ್ಷಿಕಾಃ||

ಬ್ರಾಹ್ಮಣರು ನನ್ನಲ್ಲಿ ವಿಶ್ವಾಸವನ್ನಿಟ್ಟು ಮಾತನಾಡುತ್ತಾರೆ. ನನ್ನನ್ನು ಸದಾ ನಿಯಂತ್ರಿಸುತ್ತಾರೆ. ಶುಕ್ರರು ಹೇಳಿರುವ ನೀತಿಶಾಸ್ತ್ರಾನುಸಾರವಾಗಿ ನಡೆಯುತ್ತಿರುವ, ಬ್ರಾಹ್ಮಣರ ಶುಶ್ರೂಷೆಯಲ್ಲಿಯೇ ನಿರತರಾಗಿರುವ, ಅವರ ಅನುಗ್ರಹದಿಂದಲೇ ದೋಷದೃಷ್ಟಿಯಿಲ್ಲದ, ಧರ್ಮಾತ್ಮನಾದ,

---

[516] ದ್ವಿಜಾನ್ವಿಪ್ರ (ಭಾರತ ದರ್ಶನ).

[517] ಕಾವ್ಯಾನಿ (ಭಾರತ ದರ್ಶನ).

ಕ್ರೋಧವನ್ನು ಜಯಿಸಿರುವ, ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ವಶಪಡಿಸಿಕೊಂಡಿರುವ ನನ್ನನ್ನು ನಿಯಂತೃಗಳಾದ ಬ್ರಾಹ್ಮಣರು – ಜೇನು ಹುಳುಗಳು ಪುಷ್ಪರಸವನ್ನು ತಂದು ಜೇನುಗೂಡಿನಲ್ಲಿ ಸಿಂಪಡಿಸುವಂತೆ – ಶಾಸ್ತ್ರದಿಂದ ಉದ್ಧೃತವಾದ ವಾಕ್ಯಗಳಿಂದ ಸಿಂಪಡಿಸುತ್ತಾರೆ.

12124036a ಸೋಽಹಂ ವಾಗಗ್ರಪಿಷ್ಟಾನಾಂ ರಸಾನಾಮವಲೇಹಿತಾ|
12124036c ಸ್ವಜಾತ್ಯಾನಧಿತಿಷ್ಠಾಮಿ ನಕ್ಷತ್ರಾಣೀವ ಚಂದ್ರಮಾಃ||

ಅವರು ಹೇಳುವ ಶ್ರೇಷ್ಠವಾದ ನೀತಿವಿದ್ಯೆಗಳ ರಸವನ್ನು ನಾನು ಯಾವಾಗಲೂ ಆಸ್ವಾದಿಸುತ್ತಿರುತ್ತೇನೆ. ಅದರ ಫಲವಾಗಿಯೇ ನನಗೆ ಚಂದ್ರನು ನಕ್ಷತ್ರಗಳನ್ನು ಅನುಶಾಸನಮಾಡುವಂತೆ ಸ್ವಜಾತಿಯವರನ್ನು ಅನುಶಾಸನ ಮಾಡುತ್ತೇನೆ.

12124037a ಏತತ್ಪೃಥಿವ್ಯಾಮಮೃತಮೇತಚ್ಚಕ್ಷುರನುತ್ತಮಮ್|
12124037c ಯದ್ಬ್ರಾಹ್ಮಣಮುಖೇ ಕವ್ಯಮೇತಚ್ಛ್ರುತ್ವಾ ಪ್ರವರ್ತತೇ||

ಬ್ರಾಹ್ಮಣರ ಮುಖದಿಂದ ಹೊರಡುವ ಶುಕ್ರನೀತಿವಾಕ್ಯಗಳೇ ಈ ಭೂಮಂದಲದಲ್ಲಿ ಅಮೃತವಾಗಿವೆ. ಸರ್ವೋತ್ತಮ ನೇತ್ರಗಳಾಗಿವೆ. ಶುಕ್ರನೀತಿಯನ್ನು ಕೇಳಿ ಅದಕ್ಕನುಸಾರವಾಗಿ ವರ್ತಿಸಬೇಕು.””

12124038 ಧೃತರಾಷ್ಟ್ರ ಉವಾಚ|
12124038a ಏತಾವಚ್ಛ್ರೇಯ ಇತ್ಯಾಹ ಪ್ರಹ್ರಾದೋ ಬ್ರಹ್ಮವಾದಿನಮ್|
12124038c ಶುಶ್ರೂಷಿತಸ್ತೇನ ತದಾ ದೈತ್ಯೇಂದ್ರೋ ವಾಕ್ಯಮಬ್ರವೀತ್||

ಧೃತರಾಷ್ಟ್ರನು ಹೇಳಿದನು: “”ಇದೇ ಶ್ರೇಯಸ್ಸಿನ ಮಾರ್ಗ” ಎಂದು ಪ್ರಹ್ರಾದನು ಬ್ರಹ್ಮವಾದಿನಿಗೆ ಹೇಳಿದನು. ಅನಂತರ ತನ್ನ

ಶುಶ್ರೂಷೆಯನ್ನು ಮಾಡುತ್ತಿದ್ದವನಿಗೆ ದೈತ್ಯೇಂದ್ರನು ಪುನಃ ಹೇಳಿದನು.

12124039a ಯಥಾವದ್ಗುರುವೃತ್ತ್ಯಾ ತೇ ಪ್ರೀತೋಽಸ್ಮಿ ದ್ವಿಜಸತ್ತಮ|
12124039c ವರಂ ವೃಣೀಷ್ವ ಭದ್ರಂ ತೇ ಪ್ರದಾತಾಸ್ಮಿ ನ ಸಂಶಯಃ||

“ದ್ವಿಜಸತ್ತಮ! ನಿನ್ನ ಗುರುಶುಶ್ರೂಷಾವೃತ್ತಿಯಿಂದ ನಾನು ಪ್ರೀತನಾಗಿದ್ದೇನೆ. ನಿನಗೆ ಮಂಗಳವಾಗಲಿ. ವರವನ್ನು ಕೇಳು. ಕೊಡುತ್ತೇನೆ. ಅದರಲ್ಲಿ ಸಂಶಯವಿಲ್ಲದಿರಲಿ.”

12124040a ಕೃತಮಿತ್ಯೇವ ದೈತ್ಯೇಂದ್ರಮುವಾಚ ಸ ಚ ವೈ ದ್ವಿಜಃ|
12124040c ಪ್ರಹ್ರಾದಸ್ತ್ವಬ್ರವೀತ್ಪ್ರೀತೋ ಗೃಹ್ಯತಾಂ ವರ ಇತ್ಯುತ||

ಆ ದ್ವಿಜನು “ಕೊಟ್ಟಾಯಿತು” ಎಂದು ಮಾತ್ರ ಹೇಳಿದನು. ಪ್ರಹ್ರಾದನಾದರೋ ಪ್ರೀತನಾಗಿ “ವರವನ್ನು ಸ್ವೀಕರಿಸು” ಎಂದು ಹೇಳಿದನು.

12124041 ಬ್ರಾಹ್ಮಣ ಉವಾಚ|
12124041a ಯದಿ ರಾಜನ್ ಪ್ರಸನ್ನಸ್ತ್ವಂ ಮಮ ಚೇಚ್ಚಸಿ ಚೇದ್ಧಿತಮ್|
12124041c ಭವತಃ ಶೀಲಮಿಚ್ಛಾಮಿ ಪ್ರಾಪ್ತುಮೇಷ ವರೋ ಮಮ||

ಬ್ರಾಹ್ಮಣನು ಹೇಳಿದನು: “ರಾಜನ್! ಒಂದು ವೇಳೆ ನೀನು ನನ್ನಮೇಲೆ ಪ್ರಸನ್ನನಾಗಿದ್ದರೆ ಮತ್ತು ನನ್ನ ಹಿತವನ್ನು ಬಯಸುವೆಯಾದರೆ ನಾನು ನಿನ್ನ ಶೀಲವನ್ನು ಪಡೆಯಲು ಇಚ್ಛಿಸುತ್ತೇನೆ. ಅದೇ ನನ್ನ ವರವು.””

12124042 ಧೃತರಾಷ್ಟ್ರ ಉವಾಚ|
12124042a ತತಃ ಪ್ರೀತಶ್ಚ ದೈತ್ಯೇಂದ್ರೋ ಭಯಂ ಚಾಸ್ಯಾಭವನ್ಮಹತ್|
12124042c ವರೇ ಪ್ರದಿಷ್ಟೇ ವಿಪ್ರೇಣ ನಾಲ್ಪತೇಜಾಯಮಿತ್ಯುತ||

ಧೃತರಾಷ್ಟ್ರನು ಹೇಳಿದನು: "ಆಗ ಪ್ರೀತನಾದ ದೈತ್ಯೇಂದ್ರನಿಗೆ ಮಹಾ ಭಯವೂ ಉಂಟಾಯಿತು. ವರವನ್ನು ಕೇಳುತ್ತಿರುವ ವಿಪ್ರನು ಅಲ್ಪತೇಜಸ್ವಿಯಲ್ಲ ಎಂದು ತಿಳಿದು ಹೇಳಿದನು:

12124043a ಏವಮಸ್ತ್ವಿತಿ ತಂ ಪ್ರಾಹ ಪ್ರಹ್ರಾದೋ ವಿಸ್ಮಿತಸ್ತದಾ|
12124043c ಉಪಾಕೃತ್ಯ ತು ವಿಪ್ರಾಯ ವರಂ ದುಃಖಾನ್ವಿತೋಽಭವತ್||

ವಿಸ್ಮಿತನಾದ ಪ್ರಹ್ರಾದನು ಹಾಗೆಯೇ ಆಗಲಿ ಎಂದು ವಿಪ್ರನಿಗೆ ವರವನ್ನಿತ್ತು ದುಃಖಾನ್ವಿತನಾದನು.

12124044a ದತ್ತೇ ವರೇ ಗತೇ ವಿಪ್ರೇ ಚಿಂತಾಸೀನ್ಮಹತೀ ತತಃ|
12124044c ಪ್ರಹ್ರಾದಸ್ಯ ಮಹಾರಾಜ ನಿಶ್ಚಯಂ ನ ಚ ಜಗ್ಮಿವಾನ್||

ವರವನ್ನು ಕೊಟ್ಟನಂತರ ವಿಪ್ರನು ಹೊರಟುಹೋದನು. ಆಗ ಪ್ರಹ್ರಾದನಿಗೆ ಮಹಾ ಚಿಂತೆಯುಂಟಾಯಿತು. ಯೋಚಿಸತೊಡಗಿದನು. ಆದರೆ ಆ ಮಹಾರಾಜನು ಯಾವುದೇ ನಿಶ್ಚಯಕ್ಕೂ ಬರಲು ಸಾಧ್ಯವಾಗಲಿಲ್ಲ.

12124045a ತಸ್ಯ ಚಿಂತಯತಸ್ತಾತ ಚ್ಛಾಯಾಭೂತಂ ಮಹಾದ್ಯುತೇ|
12124045c ತೇಜೋ ವಿಗ್ರಹವತ್ತಾತ ಶರೀರಮಜಹಾತ್ತದಾ||

ಅಯ್ಯಾ! ಮಹಾದ್ಯುತೇ! ಹಾಗೆ ಚಿಂತಿಸುತ್ತಿರುವಾಗ ಅವನ ಶರೀರದಿಂದ ಛಾಯಾರೂಪದಲ್ಲಿದ್ದ ತೇಜಸ್ಸು ಮೂರ್ತಿಮತ್ತಾಗಿ ರೂಪಗೊಂಡು ಹೊರಬಂದಿತು.

12124046a ತಮಪೃಚ್ಚನ್ಮಹಾಕಾಯಂ ಪ್ರಹ್ರಾದಃ ಕೋ ಭವಾನಿತಿ|
12124046c ಪ್ರತ್ಯಾಹ ನನು ಶೀಲೋಽಸ್ಮಿ ತ್ಯಕ್ತೋ ಗಚ್ಛಾಮ್ಯಹಂ ತ್ವಯಾ||

ಆ ಮಹಾಕಾಯನನ್ನು ಪ್ರಹ್ರಾದನು "ನೀನು ಯಾರು?" ಎಂದು ಪ್ರಶ್ನಿಸಿದನು. ಅದು ಉತ್ತರಿಸಿತು: "ನಾನು ಶೀಲ. ನಿನ್ನನ್ನು ತ್ಯಜಿಸಿ ಹೋಗುತ್ತಿದ್ದೇನೆ.

12124047a ತಸ್ಮಿನ್ ದ್ವಿಜವರೇ ರಾಜನ್ವತ್ಸ್ಯಮ್ಯಹಮನಿಂದಿತಮ್|
12124047c ಯೋಽಸೌ ಶಿಷ್ಯತ್ವಮಾಗಮ್ಯ ತ್ವಯಿ ನಿತ್ಯಂ ಸಮಾಹಿತಃ|
12124047e ಇತ್ಯುಕ್ತ್ವಾಂತರ್ಹಿತಂ ತದ್ವೈ ಶಕ್ರಂ ಚಾನ್ವವಿಶತ್ಪ್ರಭೋ||

ನಿನ್ನಲ್ಲಿ ಶಿಷ್ಯವೃತ್ತಿಯನ್ನು ಅವಲಂಬಿಸಿ ಏಕಾಗ್ರಚಿತ್ತನಾಗಿ ಅನುದಿನವೂ ನಿನ್ನ ಸೇವೆಗೈಯುತ್ತಿದ್ದ ನಿಷ್ಕಳಂಕ ದ್ವಿಜಶ್ರೇಷ್ಠನ ಶರೀರದಲ್ಲಿ ವಾಸಿಸುತ್ತೇನೆ." ಹೀಗೆ ಹೇಳಿ ಅವನು ಅಂತರ್ಹಿತನಾಗಿ ಶಕ್ರನನ್ನು ಪ್ರವೇಶಿಸಿದನು.

12124048a ತಸ್ಮಿಂಸ್ತೇಜಸಿ ಯಾತೇ ತು ತಾದೃಗ್ರೂಪಸ್ತತೋಽಪರಃ|
12124048c ಶರೀರಾನ್ನಿಃಸೃತಸ್ತಸ್ಯ ಕೋ ಭವಾನಿತಿ ಚಾಬ್ರವೀತ್||

ಆ ತೇಜಸ್ಸು ಹೊರಟು ಹೋಗಲು ಅಂತಹುದೇ ರೂಪದ ಇನ್ನೊಂದು ತೇಜಸ್ಸು ಅವನ ಶರೀರದಿಂದ ಹೊರಹೊರಟಿತು. "ನೀನು ಯಾರು" ಎಂದು ಅದಕ್ಕೂ ಅವನು ಕೇಳಿದನು.

12124049a ಧರ್ಮಂ ಪ್ರಹ್ರಾದ ಮಾಂ ವಿದ್ಧಿ ಯತ್ರಾಸೌ ದ್ವಿಜಸತ್ತಮಃ|
12124049c ತತ್ರ ಯಾಸ್ಯಾಮಿ ದೈತ್ಯೇಂದ್ರ ಯತಃ ಶೀಲಂ ತತೋ ಹ್ಯಹಮ್||

"ಪ್ರಹ್ರಾದ! ನನ್ನನ್ನು ಧರ್ಮವೆಂದು ತಿಳಿ. ಆ ದ್ವಿಜಸತ್ತಮನು ಎಲ್ಲಿರುವನೋ ಅಲ್ಲಿಗೆ ಹೋಗುತ್ತಿದ್ದೇನೆ. ದೈತ್ಯೇಂದ್ರ! ಎಲ್ಲಿ ಶೀಲವಿರುವುದೋ ಅಲ್ಲಿ ನಾನೂ ಇರುತ್ತೇನೆ."

12124050a ತತೋಽಪರೋ ಮಹಾರಾಜ ಪ್ರಜ್ವಲನ್ನಿವ ತೇಜಸಾ|
12124050c ಶರೀರಾನ್ನಿಃಸೃತಸ್ತಸ್ಯ ಪ್ರಹ್ರಾದಸ್ಯ ಮಹಾತ್ಮನಃ||

ಮಹಾರಾಜ! ಆಗ ಇನ್ನೊಂದು ಪ್ರಜ್ವಲಿಸುತ್ತಿರುವ ತೇಜಸ್ಸು ಮಹಾತ್ಮ ಪ್ರಹ್ರಾದ ಶರೀರದಿಂದ ಹೊರಹೊರಟಿತು.

12124051a ಕೋ ಭವಾನಿತಿ ಪೃಷ್ಟಶ್ಚ ತಮಾಹ ಸ ಮಹಾದ್ಯುತಿಃ|
12124051c ಸತ್ಯಮಸ್ಮ್ಯಸುರೇಂದ್ರಾಗ್ರ್ಯ ಯಾಸ್ಯೇಽಹಂ ಧರ್ಮಮನ್ವಿಹ||

ನೀನು ಯಾರೆಂದು ಕೇಳಲು, ಆ ಮಹಾದ್ಯುತಿಯು ಹೇಳಿದನು: “ಅಸುರೇಂದ್ರ! ನಾನು ಸತ್ಯ. ಧರ್ಮ ವಿರುವಲ್ಲಿಗೆ ಹೋಗುತ್ತಿದ್ದೇನೆ.”

12124052a ತಸ್ಮಿನ್ನನುಗತೇ ಧರ್ಮಂ ಪುರುಷೇ ಪುರುಷೋಽಪರಃ|
12124052c ನಿಶ್ಚಕ್ರಾಮ ತತಸ್ತಸ್ಮಾತ್ ಪೃಷ್ಟಶ್ಚಾಹ ಮಹಾತ್ಮನಾ|
12124052e ವೃತ್ತಂ ಪ್ರಹ್ರಾದ ಮಾಂ ವಿದ್ಧಿ ಯತಃ ಸತ್ಯಂ ತತೋ ಹ್ಯಹಮ್||

ಅವನು ಧರ್ಮ ಪುರುಷನನ್ನು ಅನುಸರಿಸಿ ಹೋದ ನಂತರ ಇನ್ನೊಬ್ಬ ಪುರುಷನು ಪ್ರಹ್ರಾದನಿಂದ ಹೊರಬಂದನು. ಆ ಮಹಾತ್ಮನನ್ನೂ ಕೇಳಲು ಅವನು “ಪ್ರಹ್ರಾದ! ನನ್ನನ್ನು ಸದಾಚಾರನೆಂದು ತಿಳಿ. ಎಲ್ಲಿ ಸತ್ಯವಿರುತ್ತದೆಯೋ ಅಲ್ಲಿ ನಾನಿರುತ್ತೇನೆ.”

12124053a ತಸ್ಮಿನ್ಗತೇ ಮಹಾಶ್ವೇತಃ ಶರೀರಾತ್ತಸ್ಯ ನಿರ್ಯಯೌ|
12124053c ಪೃಷ್ಟಶ್ಚಾಹ ಬಲಂ ವಿದ್ಧಿ ಯತೋ ವೃತ್ತಮಹಂ ತತಃ|
12124053e ಇತ್ಯುಕ್ತ್ವಾ ಚ ಯಯೌ ತತ್ರ ಯತೋ ವೃತ್ತಂ ನರಾಧಿಪ||

ನರಾಧಿಪ! ಅವನು ಹೊರಟುಹೋದ ನಂತರ ಪ್ರಹ್ರಾದನ ಶರೀರದಿಂದ ಮಹಾಶ್ವೇತನೊಬ್ಬನು ಹೊರಬಂದನು. ಅವನನ್ನು ಕೇಳಲು ಅವನು

“ನನ್ನನ್ನು ಬಲವೆಂದು ತಿಳಿ. ಸದಾಚಾರವಿರುವಲ್ಲಿ ಹೋಗುತ್ತಿದ್ದೇನೆ” ಎಂದು ಹೇಳಿ ಅವನು ಸದಾಚಾರವಿರುವಲ್ಲಿಗೆ ಹೊರಟು ಹೋದನು.

12124054a ತತಃ ಪ್ರಭಾಮಯೀ ದೇವೀ ಶರೀರಾತ್ತಸ್ಯ ನಿರ್ಯಯೌ|
12124054c ತಾಮಪೃಚ್ಚತ್ಸ ದೈತ್ಯೇಂದ್ರಃ ಸಾ ಶ್ರೀರಿತ್ಯೇವಮಬ್ರವೀತ್||

ಅನಂತರ ಪ್ರಭಾಮಯಿಯಾದ ದೇವಿಯು ಅವನ ಶರೀರದಿಂದ ಹೊರಹೊರಟಳು. ದೈತ್ಯೇಂದ್ರನು ಅವಳನ್ನು ಕೇಳಲು ಅವಳು ಶ್ರೀಯೆಂದು ಹೇಳಿದಳು.

12124055a ಉಷಿತಾಸ್ಮಿ ಸುಖಂ ವೀರ ತ್ವಯಿ ಸತ್ಯಪರಾಕ್ರಮೇ|
12124055c ತ್ವಯಾ ತ್ಯಕ್ತಾ ಗಮಿಷ್ಯಾಮಿ ಬಲಂ ಯತ್ರ ತತೋ ಹ್ಯಹಮ್||

“ವೀರ! ನಿನ್ನ ಸತ್ಯಪರಾಕ್ರಮಗಳಲ್ಲಿ ನಾನು ವಾಸಿಸಿಕೊಂಡಿದ್ದೆ. ಈಗ ನಾನು ನಿನ್ನನ್ನು ತ್ಯಜಿಸಿ ಹೋಗುತ್ತಿದ್ದೇನೆ. ಬಲವು ಇರುವಲ್ಲಿ ನಾನೂ ಇರುತ್ತೇನೆ.”

12124056a ತತೋ ಭಯಂ ಪ್ರಾದುರಾಸೀತ್ಪ್ರಹ್ರಾದಸ್ಯ ಮಹಾತ್ಮನಃ|
12124056c ಅಪೃಚ್ಚತ ಚ ತಾಂ ಭೂಯಃ ಕ್ವ ಯಾಸಿ ಕಮಲಾಲಯೇ||
12124057a ತ್ವಂ ಹಿ ಸತ್ಯವ್ರತಾ ದೇವೀ ಲೋಕಸ್ಯ ಪರಮೇಶ್ವರೀ|
12124057c ಕಶ್ಚಾಸೌ ಬ್ರಾಹ್ಮಣಶ್ರೇಷ್ಠಸ್ತತ್ತ್ವಮಿಚ್ಚಾಮಿ ವೇದಿತುಮ್||

ಆಗ ಮಹಾತ್ಮ ಪ್ರಹ್ರಾದನಿಗೆ ಭಯವುಂಟಾಯಿತು. ಅವಳನ್ನು ಪುನಃ ಕೇಳಿದನು: “ಕಮಲಾಲಯೇ! ನೀನು ನನ್ನನ್ನು ಬಿಟ್ಟು ಎಲ್ಲಿಗೆ ಹೋಗುತ್ತಿರುವೆ? ನೀನು ಸತ್ಯವ್ರತೆ. ದೇವೀ! ನೀನು ಲೋಕದ ಪರಮೇಶ್ವರಿಯು. ಆ ಬ್ರಾಹ್ಮಣಶ್ರೇಷ್ಠನು ಯಾರು ಎನ್ನುವುದನ್ನು ತತ್ತ್ವವಾಗಿ ಕೇಳಬಯಸುತ್ತೇನೆ.”

12124058 ಶ್ರೀರುವಾಚ|
12124058a ಸ ಶಕ್ರೋ ಬ್ರಹ್ಮಚಾರೀ ಚ ಯಸ್ತ್ವಯಾ ಚೋಪಶಿಕ್ಷಿತಃ|
12124058c ತ್ರೈಲೋಕ್ಯೇ ತೇ ಯದೈಶ್ವರ್ಯಂ ತತ್ತೇನಾಪಹೃತಂ ಪ್ರಭೋ||

ಶ್ರೀಯು ಹೇಳಿದಳು: "ಪ್ರಭೋ! ನೀನು ಉಪದೇಶವನ್ನಿತ್ತ ಆ ಬ್ರಹ್ಮಚಾರಿಯು ಶಕ್ರನು. ತ್ರೈಲೋಕ್ಯಗಳಲ್ಲಿರುವ ಐಶ್ವರ್ಯವನ್ನು ನಿನ್ನಿಂದ ಅಪಹರಿಸಿಕೊಂಡನು.

12124059a ಶೀಲೇನ ಹಿ ತ್ವಯಾ ಲೋಕಾಃ ಸರ್ವೇ ಧರ್ಮಜ್ಞ ನಿರ್ಜಿತಾಃ|
12124059c ತದ್ವಿಜ್ಞಾಯ ಮಹೇಂದ್ರೇಣ ತವ ಶೀಲಂ ಹೃತಂ ಪ್ರಭೋ||

ಧರ್ಮಜ್ಞ! ಶೀಲದಿಂದಲೇ ನೀನು ಲೋಕಗಳೆಲ್ಲವನ್ನೂ ಗೆದ್ದಿದ್ದೆ. ಪ್ರಭೋ! ಅದನ್ನು ತಿಳಿದ ಮಹೇಂದ್ರನು ನಿನ್ನ ಶೀಲವನ್ನು ಅಪಹರಿಸಿದನು.

12124060a ಧರ್ಮಃ ಸತ್ಯಂ ತಥಾ ವೃತ್ತಂ ಬಲಂ ಚೈವ ತಥಾ ಹ್ಯಹಮ್|
12124060c ಶೀಲಮೂಲಾ ಮಹಾಪ್ರಾಜ್ಞ ಸದಾ ನಾಸ್ತ್ಯತ್ರ ಸಂಶಯಃ||

ಮಹಾಪ್ರಾಜ್ಞ! ಧರ್ಮ, ಸತ್ಯ, ಸದಾಚಾರ, ಬಲ ಮತ್ತು ನನಗೆ ಕೂಡ ಶೀಲವೇ ಮೂಲವು. ಅದರಲ್ಲಿ ಸಂಶಯವಿಲ್ಲ."""

12124061 ಭೀಷ್ಮ ಉವಾಚ|
12124061a ಏವಮುಕ್ತ್ವಾ ಗತಾ ತು ಶ್ರೀಸ್ತೇ ಚ ಸರ್ವೇ ಯುಧಿಷ್ಠಿರ|
12124061c ದುರ್ಯೋಧನಸ್ತು ಪಿತರಂ ಭೂಯ ಏವಾಬ್ರವೀದಿದಮ್||

ಭೀಷ್ಮನು ಹೇಳಿದನು: "ಯುಧಿಷ್ಠಿರ! ಶ್ರೀಯೊಂದಿಗೆ ಎಲ್ಲರೂ ಪ್ರಹ್ರಾದನನ್ನು ಬಿಟ್ಟು ಹೊರಟು ಹೋದರು ಎಂದು ಹೇಳಿದ ತಂದೆಗೆ

ದುರ್ಯೋಧನನು ಪುನಃ ಹೇಳಿದನು:

12124062a ಶೀಲಸ್ಯ ತತ್ತ್ವಮಿಚ್ಚಾಮಿ ವೇತ್ತುಂ ಕೌರವನಂದನ|
12124062c ಪ್ರಾಪ್ಯತೇ ಚ ಯಥಾ ಶೀಲಂ ತಮುಪಾಯಂ ವದಸ್ವ ಮೇ||

"ಕೌರವನಂದನ! ಶೀಲದ ತತ್ತ್ವವನ್ನು ತಿಳಿಯಲು ಬಯಸುತ್ತೇನೆ. ಶೀಲವನ್ನು ಪಡೆದುಕೊಳ್ಳುವ ಉಪಾಯವನ್ನು ಹೇಳು."

12124063 ಧೃತರಾಷ್ಟ್ರ ಉವಾಚ|
12124063a ಸೋಪಾಯಂ ಪೂರ್ವಮುದ್ದಿಷ್ಟಂ ಪ್ರಹ್ರಾದೇನ ಮಹಾತ್ಮನಾ|
12124063c ಸಂಕ್ಷೇಪತಸ್ತು ಶೀಲಸ್ಯ ಶೃಣು ಪ್ರಾಪ್ತಿಂ ನರಾಧಿಪ||

ಧೃತರಾಷ್ಟ್ರನು ಹೇಳಿದನು: "ನರಾಧಿಪ! ಇದರ ಉಪಾಯವನ್ನು ಹಿಂದೆಯೇ ಮಹಾತ್ಮ ಪ್ರಹ್ರಾದನು ಹೇಳಿದ್ದನು. ಶೀಲವನ್ನು ಪಡೆದುಕೊಳ್ಳುವ ಉಪಾಯವನ್ನು ಸಂಕ್ಷಿಪ್ತವಾಗಿ ಕೇಳು.

12124064a ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ|
12124064c ಅನುಗ್ರಹಶ್ಚ ದಾನಂ ಚ ಶೀಲಮೇತತ್ ಪ್ರಶಸ್ಯತೇ||

ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ, ಕರ್ಮಗಳಿಂದಾಗಲೀ ಸರ್ವ ಭೂತಗಳಲ್ಲಿ ದ್ರೋಹವನ್ನೆಸಗದೇ ಇರುವುದು, ಸರ್ವಭೂತಗಳಲ್ಲಿಯೂ ದಯಾಪರನಾಗಿರುವುದು, ಮತ್ತು ದಾನ ಇವನ್ನು ಶೀಲವೆಂದು ಪ್ರಶಂಸಿಸುತ್ತಾರೆ.

12124065a ಯದನ್ಯೇಷಾಂ ಹಿತಂ ನ ಸ್ಯಾದಾತ್ಮನಃ ಕರ್ಮ ಪೌರುಷಮ್|
12124065c ಅಪತ್ರಪೇತ ವಾ ಯೇನ ನ ತತ್ಕುರ್ಯಾತ್ಕಥಂ ಚನ||

ಯಾವ ಕರ್ಮ-ಪೌರುಷಗಳು ಇತರರಿಗೆ

ಹಿತವನ್ನುಂಟುಮಾಡುವುದಿಲ್ಲವೋ ಮತ್ತು ಯಾವುದನ್ನು ಮಾಡುವುದರಿಂದ ನಾಚಿಕೆಪಟ್ಟುಕೊಳ್ಳಬೇಕಾಗುವುದೋ ಅವುಗಳನ್ನು ಎಂದೂ ಮಾಡಬಾರದು.

12124066a ತತ್ತು ಕರ್ಮ ತಥಾ ಕುರ್ಯಾದ್ಯೇನ ಶ್ಲಾಘೇತ ಸಂಸದಿ|
12124066c ಏತಚ್ಚೀಲಂ ಸಮಾಸೇನ ಕಥಿತಂ ಕುರುಸತ್ತಮ||

ಕುರುಸತ್ತಮ! ಯಾವುದನ್ನು ಮಾಡಿದರೆ ಅದನ್ನು ಸಂಸದಿಯಲ್ಲಿ ಶ್ಲಾಘನೀಯವಾಗುತ್ತದೆಯೋ ಆ ಕರ್ಮವೇ ಶೀಲ. ಇದನ್ನು ಸಂಕ್ಷಿಪ್ತವಾಗಿ ಹೇಳಿದ್ದೇನೆ.

12124067a ಯದ್ಯಪ್ಯಶೀಲಾ ನೃಪತೇ ಪ್ರಾಪ್ನುವಂತಿ ಕ್ವ ಚಿಚ್ಛ್ರಿಯಮ್|
12124067c ನ ಭುಂಜತೇ ಚಿರಂ ತಾತ ಸಮೂಲಾಶ್ಚ ಪತಂತಿ ತೇ||

ದುಃಶೀಲರಾದವರೂ ಕೆಲವೊಮ್ಮೆ ರಾಜ್ಯಶ್ರೀಯನ್ನು ಪಡೆದುಕೊಳ್ಳಬಹುದು. ಆದರೆ ಅವರು ಆ ಸಂಪತ್ತನ್ನು ಹೆಚ್ಚುಕಾಲ ಉಪಭೋಗಿಸುವುದಿಲ್ಲ. ಸಮೂಲವಾಗಿ ನಾಶಹೊಂದುತ್ತಾರೆ.

12124068a ಏತದ್ವಿದಿತ್ವಾ ತತ್ತ್ವೇನ ಶೀಲವಾನ್ ಭವ ಪುತ್ರಕ|
12124068c ಯದೀಚ್ಛಸಿ ಶ್ರಿಯಂ ತಾತ ಸುವಿಶಿಷ್ಟಾಂ ಯುಧಿಷ್ಠಿರಾತ್||

ಪುತ್ರಕ! ಇದನ್ನು ತತ್ತ್ವತಃ ತಿಳಿದುಕೊಂಡು ಶೀಲವಂತನಾಗು. ಆಗ ಮಗೂ ನೀನು ಬಯಸುವ ಯುಧಿಷ್ಠಿರನಕ್ಕಿಂತಲೂ ಹೆಚ್ಚಿನ ಸಂಪತ್ತನ್ನು ಪಡೆದುಕೊಳ್ಳುತ್ತೀಯೆ.””

12124069 ಭೀಷ್ಮ ಉವಾಚ|
12124069a ಏತತ್ಕಥಿತವಾನ್ಪುತ್ರೇ ಧೃತರಾಷ್ಟ್ರೋ ನರಾಧಿಪ|

12124069c ಏತತ್ಕುರುಷ್ವ ಕೌಂತೇಯ ತತಃ ಪ್ರಾಪ್ಸ್ಯಸಿ ತತ್ಫಲಮ್‌||

ಭೀಷ್ಮನು ಹೇಳಿದನು: "ನರಾಧಿಪ! ಕೌಂತೇಯ! ಹೀಗೆ ಧೃತರಾಷ್ಟ್ರನು ಪುತ್ರನಿಗೆ ಹೇಳಿದನು. ಇದನ್ನು ಮಾಡು. ಅದರ ಫಲವನ್ನು ಪಡೆದುಕೊಳ್ಳುತ್ತೀಯೆ."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಶೀಲವರ್ಣನಂ ನಾಮ ಚತುರ್ವಿಂಶತ್ಯಧಿಕಶತತಮೋऽಧ್ಯಾಯಃ‌‌|| ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಶೀಲವರ್ಣನ ಎನ್ನುವ ನೂರಾಇಪ್ಪತ್ನಾಲ್ಕನೇ ಅಧ್ಯಾಯವು.

೧೨೫

ಋಷಭ-ಸುಮಿತ್ರ ಸಂವಾದ (ಋಷಭ ಗೀತಾ)

ಯುಧಿಷ್ಠಿರನು ಆಶೆಯ ಕುರಿತಾಗಿ ಪ್ರಶ್ನಿಸಿದುದು (1-7). ಅದಕ್ಕೆ ಉತ್ತರವಾಗಿ ಭೀಷ್ಮನು ರಾಜಾ ಸುಮಿತ್ರ ಮತ್ತು ಋಷಭನೆಂಬ ಋಷಿಯ ಸಂವಾದವನ್ನು ಉದಾಹರಿಸಲು ಪ್ರಾರಂಭಿಸಿದುದು; ರಾಜಾ ಸುಮಿತ್ರನು ಒಂದು ಜಿಂಕೆಯನ್ನು ಹಿಂಬಾಲಿಸಿ ಓಡಿದುದು (8-34).

12125001 ಯುಧಿಷ್ಠಿರ ಉವಾಚ|

12125001a ಶೀಲಂ ಪ್ರಧಾನಂ ಪುರುಷೇ ಕಥಿತಂ ತೇ ಪಿತಾಮಹ|

12125001c ಕಥಮಾಶಾ ಸಮುತ್ಪನ್ನಾ ಯಾ ಚ ಸಾ ತದ್ವದಸ್ವ ಮೇ॥

ಯುಧಿಷ್ಠಿರನು ಹೇಳಿದನು: "ಪಿತಾಮಹ! ಪುರುಷನಿಗೆ ಶೀಲವೇ ಪ್ರಧಾನವೆಂದು ನೀನು ಹೇಳಿದ್ದಿಯೆ. ಆಶೆಯು ಹೇಗೆ ಉತ್ಪನ್ನವಾಯಿತು ಎನ್ನುವುದನ್ನು ನನಗೆ ಹೇಳು.

12125002a ಸಂಶಯೋ ಮೇ ಮಹಾನೇಷ ಸಮುತ್ಪನ್ನಃ ಪಿತಾಮಹ|
12125002c ಚೇತ್ತಾ ಚ ತಸ್ಯ ನಾನ್ಯೋಽಸ್ತಿ ತ್ವತ್ತಃ ಪರಪುರಂಜಯ॥

ಪಿತಾಮಹ! ಪರಪುರಂಜಯ! ಆಶೆಯ ಉತ್ಪನ್ನದ ಕುರಿತು ನನಗೆ ಈ ಮಹಾ ಸಂಶಯವಿದೆ. ಇದನ್ನು ಪರಿಹರಿಸುವವನು ನೀನಲ್ಲದೇ ಅನ್ಯರು ಯಾರೂ ಇಲ್ಲ.

12125003a ಪಿತಾಮಹಾಶಾ ಮಹತೀ ಮಮಾಸೀದ್ಧಿ ಸುಯೋಧನೇ|
12125003c ಪ್ರಾಪ್ತೇ ಯುದ್ಧೇ ತು ಯದ್ಯುಕ್ತಂ ತತ್ಕರ್ತಾಯಮಿತಿ ಪ್ರಭೋ॥

ಪಿತಾಮಹ! ಸುಯೋಧನನ ವಿಷಯದಲ್ಲಿ ನನಗೆ ಮಹತ್ತಾದ ಆಶೆ ಇದ್ದಿತ್ತು. ಪ್ರಭೋ! ಯುದ್ಧವು ಪ್ರಾರಂಭವಾದಾಗಲಾದರೂ ಅವನು ಯುಕ್ತವಾದ ಕಾರ್ಯವನ್ನು ಮಾಡುತ್ತಾನೆಂದು ಆಶಿಸಿದ್ದೆ.

12125004a ಸರ್ವಸ್ಯಾಶಾ ಸುಮಹತೀ ಪುರುಷಸ್ಯೋಪಜಾಯತೇ|
12125004c ತಸ್ಯಾಂ ವಿಹನ್ಯಮಾನಾಯಾಂ ದುಃಖೋ ಮೃತ್ಯುರಸಂಶಯಮ್॥

ಪ್ರಾಯಶಃ ಎಲ್ಲ ಮನುಷ್ಯರ ಹೃದಯಗಳಲ್ಲಿಯೂ ಯಾವುದಾದರೊಂದು ದೊಡ್ಡ ಆಶೆಯು ಇದ್ದೇ ಇರುತ್ತದೆ. ಆಶೆಯು ಭಂಗವಾಯಿತೆಂದರೆ ಮಹಾದುಃಖವುಂಟಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮರಣವೂ ಸಂಭವಿಸಬಹುದು. ಇದರಲಿ

ಸಂಶಯವಿಲ್ಲ.

12125005a ಸೋಽಹಂ ಹತಾಶೋ ದುರ್ಬುದ್ಧಿಃ ಕೃತಸ್ತೇನ ದುರಾತ್ಮನಾ|
12125005c ಧಾರ್ತರಾಷ್ಟ್ರೇಣ ರಾಜೇಂದ್ರ ಪಶ್ಯ ಮಂದಾತ್ಮತಾಂ ಮಮ||

ರಾಜೇಂದ್ರ! ದುರ್ಬುದ್ಧಿ ದುರಾತ್ಮಾ ಧಾರ್ತರಾಷ್ಟ್ರನು
ಮಂದಾತ್ಮನಾದ ನನ್ನನ್ನು ಹತಾಶನಾಗಿ ಮಾಡಿಬಿಟ್ಟನು ನೋಡು!

12125006a ಆಶಾಂ ಮಹತ್ತರಾಂ ಮನ್ಯೇ ಪರ್ವತಾದಪಿ ಸದ್ರುಮಾತ್|
12125006c ಆಕಾಶಾದಪಿ ವಾ ರಾಜನ್ನಪ್ರಮೇಯ್ಯೈವ ವಾ ಪುನಃ||

ಆಶೆಯೆನ್ನುವುದು ವೃಕ್ಷಗಳಿರುವ ಮಹಾ ಪರ್ವತದಂತೆ. ರಾಜನ್!
ಆಕಾಶಕ್ಕಿಂತಲೂ ಎತ್ತರವಾದುದು. ಪುನಃ ಅದು
ಅಪ್ರಮೇಯವಾದುದು.

12125007a ಏಷಾ ಚೈವ ಕುರುಶ್ರೇಷ್ಠ ದುರ್ವಿಚಿಂತ್ಯಾ ಸುದುರ್ಲಭಾ|
12125007c ದುರ್ಲಭತ್ವಾಚ್ಚ ಪಶ್ಯಾಮಿ ಕಿಮನ್ಯದ್ದುರ್ಲಭಂ ತತಃ||

ಕುರುಶ್ರೇಷ್ಠ! ಆಶೆಯು ಅಚಿಂತ್ಯವಾದುದು. ಪರಮ
ದುರ್ಲಭವಾದುದು. ಅದನ್ನು ಜಯಿಸುವುದು ಬಹಳ ಕಷ್ಟ.
ಆದುದರಿಂದಲೇ ಅದು ಬಹಳ ದೊಡ್ಡದಾಗಿ ಕಾಣುತ್ತದೆ.
ಆಶೆಗಿಂತಲೂ ದುರ್ಲಭವೂ ಮಹತ್ತರವೂ ಆದುದು ಬೇರೆ
ಯಾವುದಿದೆ?”

12125008 ಭೀಷ್ಮ ಉವಾಚ|
12125008a ಅತ್ರ ತೇ ವರ್ತಯಿಷ್ಯಾಮಿ ಯುಧಿಷ್ಠಿರ ನಿಬೋಧ ತತ್|
12125008c ಇತಿಹಾಸಂ ಸುಮಿತ್ರಸ್ಯ ನಿರ್ವೃತ್ತಮೃಷಭಸ್ಯ ಚ||

ಭೀಷ್ಮನು ಹೇಳಿದನು: "ಯುಧಿಷ್ಠಿರ! ಈ ವಿಷಯದಲ್ಲಿ ನಾನು ನಿನಗೆ ಸುಮಿತ್ರ ಮತ್ತು ಋಷಭರ ನಡುವೆ ನಡೆದ ಇತಿಹಾಸವನ್ನು ಹೇಳುತ್ತೇನೆ. ಅದನ್ನು ಕೇಳು.

12125009a ಸುಮಿತ್ರೋ ನಾಮ ರಾಜರ್ಷಿರ್ಹೈಹಯೋ ಮೃಗಯಾಂ ಗತಃ|
12125009c ಸಸಾರ ಸ ಮೃಗಂ ವಿದ್ಧ್ವಾ ಬಾಣೇನ ನತಪರ್ವಣಾ||

ಸುಮಿತ್ರ ಎಂಬ ಹೆಸರಿನ ಹೈಹಯ ರಾಜರ್ಷಿಯು ಬೇಟೆಗೆಂದು ಹೋಗಿ ನತಪರ್ವಣ ಬಾಣದಿಂದ ಒಂದು ಜಿಂಕೆಯನ್ನು ಹೊಡೆದು ಅದನ್ನು ಹಿಂಬಾಲಿಸಿ ಹೋದನು.

12125010a ಸ ಮೃಗೋ ಬಾಣಮಾದಾಯ ಯಯಾವಮಿತವಿಕ್ರಮಃ|
12125010c ಸ ಚ ರಾಜಾ ಬಲೀ ತೂರ್ಣಂ ಸಸಾರ ಮೃಗಮಂತಿಕಾತ್||

ಅಮಿತವಿಕ್ರಮಿ ಆ ಮೃಗವು ಬಾಣದೊಡನೆಯೇ ಮಹಾವೇಗದಿಂದ ಓಡಿ ಹೋಯಿತು. ಬಲಶಾಲೀ ರಾಜನೂ ಕೂಡ ಅದನ್ನು ಬಹಳ ಬೇಗ ಹಿಂಬಾಲಿಸಿ ಹೋದನು.

12125011a ತತೋ ನಿಮ್ನಂ ಸ್ಥಲಂ ಚೈವ ಸ ಮೃಗೋಽದ್ರವದಾಶುಗಃ|
12125011c ಮುಹೂರ್ತಮೇವ ರಾಜೇಂದ್ರ ಸಮೇನ ಸ ಪಥಾಗಮತ್||

ರಾಜೇಂದ್ರ! ಅತ್ಯಂತ ವೇಗವಾಗಿ ಓಡುತ್ತಿದ್ದ ಆ ಮೃಗವು ಕಣಿವೆಯಲ್ಲಿ ಓಡಿಹೋಯಿತು ಮತ್ತು ಪುನಃ ಅದು ಸ್ವಲ್ಪ ಹೊತ್ತಿನಲ್ಲಿಯೇ ಸಮವಾಗಿದ್ದ ಮಾರ್ಗವನ್ನು ಹಿಡಿದು ಓಡತೊಡಗಿತು.

12125012a ತತಃ ಸ ರಾಜಾ ತಾರುಣ್ಯಾದೌರಸೇನ ಬಲೇನ ಚ|
12125012c ಸಸಾರ ಬಾಣಾಸನಭೃತ್ಸಖಡ್ಗೋ ಹಂಸವತ್ತದಾ||

ತಾರುಣ್ಯ, ಎದೆಕಿಚ್ಚು ಮತ್ತು ಬಲದಿಂದ ಯುಕ್ತನಾದ ರಾಜನು ಕೂಡ ಕವಚವನ್ನು ಧರಿಸಿ ಧನುರ್ಬಾಣಗಳನ್ನೂ ಖಡ್ಗವನ್ನೂ ಹಿಡಿದು ಆ ಮೃಗವನ್ನು ಹಿಂಬಾಲಿಸಿ ಹೋದನು.

12125013a ತೀರ್ತ್ವಾ ನದಾನ್ನದೀಶ್ಚೈವ ಪಲ್ವಲಾನಿ ವನಾನಿ ಚ|
12125013c ಅತಿಕ್ರಮ್ಯಾಭ್ಯತಿಕ್ರಮ್ಯ ಸಸಾರೈವ ವನೇ ಚರನ್||

ವನದಲ್ಲಿ ಚರಿಸುತ್ತಾ ಅದು ನದನದಿಗಳನ್ನೂ, ಹೊಂಡಗಳನ್ನೂ, ವನಗಳನ್ನೂ ದಾಟಿ ಮುಂದೆ ಮುಂದೆ ಓಡುತ್ತಿತ್ತು.

12125014a ಸ ತು ಕಾಮಾನ್ಮೃಗೋ ರಾಜನ್ನಾಸಾದ್ಯಾಸಾದ್ಯ ತಂ ನೃಪಮ್|
12125014c ಪುನರಭ್ಯೇತಿ ಜವನೋ ಜವೇನ ಮಹತಾ ತತಃ||

ರಾಜನ್! ಆ ಜಿಂಕೆಯು ಬೇಕೆಂದೇ ರಾಜನು ತನ್ನ ಹತ್ತಿರಕ್ಕೆ ಬರುವವರೆಗೆ ನಿಂತಿದ್ದು ಅವನು ಬರುತ್ತಾನೋ ಎನ್ನುವುದರೊಳಗೆ ವೇಗವಾಗಿ ಓಡಿ ಹೋಗುತ್ತಿತ್ತು.

12125015a ಸ ತಸ್ಯ ಬಾಣೈರ್ಬಹುಭಿಃ ಸಮಭ್ಯಸ್ತೋ ವನೇಚರಃ|
12125015c ಪ್ರಕ್ರೀಡನ್ನಿವ ರಾಜೇಂದ್ರ ಪುನರಭ್ಯೇತಿ ಚಾಂತಿಕಮ್||

ರಾಜೇಂದ್ರ! ಅವನ ಬಾಣಗಳಿಂದ ಬಹಳವಾಗಿ ಗಾಯಗೊಂಡಿದ್ದ ಆ ವನಚರವು ಆಡುತ್ತಿರುವುದೋ ಎನ್ನುವಂತೆ ಪುನಃ ಅವನ ಸಮೀಪವಾಗುತ್ತಿತ್ತು.

12125016a ಪುನಶ್ಚ ಜವಮಾಸ್ಥಾಯ ಜವನೋ ಮೃಗಯೂಥಪಃ|
12125016c ಅತೀತ್ಯಾತೀತ್ಯ ರಾಜೇಂದ್ರ ಪುನರಭ್ಯೇತಿ ಚಾಂತಿಕಮ್||

ರಾಜೇಂದ್ರ! ಆ ಮೃಗಯೂಥಪ[518]ವು ವೇಗದಿಂದ ನದನದಿಗಳನ್ನು ದಾಟಿ ಬಹಳ ದೂರ ಹೋಗುತ್ತಿತ್ತು.

12125017a ತಸ್ಯ ಮರ್ಮಚ್ಚಿದಂ ಘೋರಂ ಸುಮಿತ್ರೋಽಮಿತ್ರಕರ್ಶನಃ|
12125017c ಸಮಾದಾಯ ಶರಶ್ರೇಷ್ಠಂ ಕಾರ್ಮುಕಾನ್ನಿರವಾಸೃಜತ್||

ಮೃಗವು ಹತ್ತಿರದಲ್ಲಿದೆಯೆಂದು ಗಮನಿಸಿದ ಅಮಿತ್ರಕರ್ಶನ ಸುಮಿತ್ರನು ಮರ್ಮವನ್ನು ಭೇದಿಸುವ ಘೋರವಾದ ಶ್ರೇಷ್ಠವನ್ನು ಭತ್ತಳಿಕೆಯಿಂದ ತೆಗೆದು ಹೂಡಿದನು.

12125018a ತತೋ ಗವ್ಯೂತಿಮಾತ್ರೇಣ ಮೃಗಯೂಥಪಯೂಥಪಃ|
12125018c ತಸ್ಯ ಬಾಣಪಥಂ ತ್ಯಕ್ತ್ವಾ ತಸ್ಥಿವಾನ್ ಪ್ರಹಸನ್ನಿವ||

ಆಗ ಆ ಮೃಗಯೂಥಪಯೂಥಪನು ಬಾಣಪಥವನ್ನು ಬಿಟ್ಟು ಒಂದು ಗಾವುದ ದೂರ ನಗುತ್ತಿರುವುದೋ ಎನ್ನುವಂತೆ ನಿಂತುಕೊಂಡಿತು.

12125019a ತಸ್ಮಿನ್ನಿಪತಿತೇ ಬಾಣೇ ಭೂಮೌ ಪ್ರಜ್ವಲಿತೇ ತತಃ|
12125019c ಪ್ರವಿವೇಶ ಮಹಾರಣ್ಯಂ ಮೃಗೋ ರಾಜಾಪ್ಯಥಾದ್ರವತ್||

ಆ ಪ್ರಜ್ವಲಿತ ಬಾಣವು ಭೂಮಿಯ ಮೇಲೆ ಬೀಳಲು ಮೃಗವು ಮಹಾರಣ್ಯವನ್ನು ಪ್ರವೇಶಿಸಿತು. ರಾಜನೂ ಅದನ್ನು ಹಿಂಬಾಲಿಸಿ ಹೋದನು.

12125020a ಪ್ರವಿಶ್ಯ ತು ಮಹಾರಣ್ಯಂ ತಾಪಸಾನಾಮಥಾಶ್ರಮಮ್|
12125020c ಆಸಸಾದ ತತೋ ರಾಜಾ ಶ್ರಾಂತಶ್ಚೋಪಾವಿಶತ್ಪುನಃ||

---

518 ಹಿಂಡಿನ ನಾಯಕ.

ತಾಪಸರ ಆಶ್ರಮವಾಗಿದ್ದ ಆ ಮಹಾರಣ್ಯವನ್ನು ಪ್ರವೇಶಿಸಿ ಬಳಲಿದ್ದ ರಾಜನು ವಿಶ್ರಾಂತಿಗಾಗಿ ಅಲ್ಲಿಯೇ ಕುಳಿತುಕೊಂಡನು.

12125021a ತಂ ಕಾರ್ಮುಕಧರಂ ದೃಷ್ಟ್ವಾ ಶ್ರಮಾರ್ತಂ ಕ್ಷುಧಿತಂ ತದಾ|
12125021c ಸಮೇತ್ಯ ಋಷಯಸ್ತಸ್ಮಿನ್ ಪೂಜಾಂ ಚಕ್ರುರ್ಯಥಾವಿಧಿ||

ಬಳಲಿದ್ದ ಮತ್ತು ಹಸಿದಿದ್ದ ಆ ಕಾರ್ಮುಕಧರನನ್ನು ನೋಡಿ ಋಷಿಗಳು ಒಂದಾಗಿ ಯಥಾವಿಧಿಯಾಗಿ ಅವನ ಪೂಜೆಗೈದರು.

12125022a ಋಷಯೋ ರಾಜಶಾರ್ದೂಲಮಪೃಚ್ಚನ್ ಸ್ವಂ ಪ್ರಯೋಜನಮ್|
12125022c ಕೇನ ಭದ್ರಮುಖಾರ್ಥೇನ ಸಂಪ್ರಾಪ್ತೋಽಸಿ ತಪೋವನಮ್||
12125023a ಪದಾತಿರ್ಬದ್ಧನಿಸ್ತ್ರಿಂಶೋ ಧನ್ವೀ ಬಾಣೀ ನರೇಶ್ವರ|

ಋಷಿಗಳು ಆ ರಾಜಶಾರ್ದೂಲನನ್ನು ಬಂದ ಕಾರಣವನ್ನು ಕೇಳಿದರು: "ಭದ್ರ! ನರೇಶ್ವರ! ಯಾವ ಕಾರಣಕ್ಕಾಗಿ ಧನುರ್ಬಾಣಗಳನ್ನು ಹಿಡಿದು ಖಡ್ಗವನ್ನು ಸೊಂಟಕ್ಕೆ ಧರಿಸಿ ಈ ತಪೋವನವನ್ನು ತಲುಪಿರುವೆ?

12125023c ಏತದಿಚ್ಛಾಮ ವಿಜ್ಞಾತುಂ ಕುತಃ ಪ್ರಾಪ್ತೋಽಸಿ ಮಾನದ|
12125023e ಕಸ್ಮಿನ್ಕುಲೇ ಹಿ ಜಾತಸ್ತ್ವಂ ಕಿಂನಾಮಾಸಿ ಬ್ರವೀಹಿ ನಃ||

ಮಾನದ! ನೀನು ಎಲ್ಲಿಂದ ಬಂದಿದ್ದೀಯೆ ಎಂದು ತಿಳಿಯ ಬಯಸುತ್ತೇವೆ. ನೀನು ಯಾವ ಕುಲದಲ್ಲಿ ಜನಿಸಿದ್ದೀಯೆ ಮತ್ತು ನಿನ್ನ ಹೆಸರೇನು ಎನ್ನುವುದನ್ನು ಹೇಳು."

12125024a ತತಃ ಸ ರಾಜಾ ಸರ್ವೇಭ್ಯೋ ದ್ವಿಜೇಭ್ಯಃ ಪುರುಷರ್ಷಭ|
12125024c ಆಚಖ್ಯೌ ತದ್ಯಥಾನ್ಯಾಯಂ ಪರಿಚರ್ಯಾಂ ಚ ಭಾರತ||

ಪುರುಷರ್ಷಭ! ಭಾರತ! ಆಗ ಆ ರಾಜನು ಸರ್ವ ದಿಜರಿಗೂ

ಯಥಾನ್ಯಾಯವಾಗಿ ತನ್ನ ಪರಿಚಯವನ್ನು ಹೇಳಿಕೊಂಡನು.

12125025a ಹೈಹಯಾನಾಂ ಕುಲೇ ಜಾತಃ ಸುಮಿತ್ರೋ ಮಿತ್ರನಂದನಃ|
12125025c ಚರಾಮಿ ಮೃಗಯೂಥಾನಿ ನಿಘ್ನನ್ಬಾಣೈಃ ಸಹಸ್ರಶಃ|
12125025e ಬಲೇನ ಮಹತಾ ಗುಪ್ತಃ ಸಾಮಾತ್ಯಃ ಸಾವರೋಧನಃ||

“ಹೈಹಯರ ಕುಲದಲ್ಲಿ ಹುಟ್ಟಿದ್ದೇನೆ. ಮಿತ್ರನಂದನನಾದ ಸುಮಿತ್ರನು ನಾನು. ಸಹಸ್ರಾರು ಬಾಣಗಳಿಂದ ಮೃಗಗಳ ಹಿಂಡುಗಳನ್ನು ಸಂಹರಿಸುತ್ತಾ ಮಹಾ ಸೇನೆಯಿಂದ ರಕ್ಷಿತನಾಗಿ ಅಮಾತ್ಯರು ಮತ್ತು ಅಂತಃಪುರದ ಸ್ತ್ರೀಯರೊಡನೆ ಬೇಟೆಗೆಂದು ಬಂದಿದ್ದೇನೆ.

12125026a ಮೃಗಸ್ತು ವಿದ್ಧೋ ಬಾಣೇನ ಮಯಾ ಸರತಿ ಶಲ್ಯವಾನ್|
12125026c ತಂ ದ್ರವಂತಮನು ಪ್ರಾಪ್ತೋ ವನಮೇತದ್ಯದೃಚ್ಛಯಾ|
12125026e ಭವತ್ಸಕಾಶೇ ನಷ್ಟಶ್ರೀರ್ಹತಾಶಃ ಶ್ರಮಕರ್ಶಿತಃ||

ಒಂದು ಮೃಗವು ನನ್ನ ಬಾಣದಿಂದ ಗಾಯಗೊಂಡು ಬಾಣದೊಂದಿಗೆ ಓಡಿ ಹೋಯಿತು. ಓಡುತ್ತಿದ್ದ ಅದನ್ನು ಹಿಂಬಾಲಿಸಿ ಬಂದು, ರಾಜ್ಯಶ್ರೀಯನ್ನು ಕಳೆದುಕೊಂಡು ಹತಾಶನಾಗಿ ಬಳಲಿ ನಿಮ್ಮ ಈ ವನವನ್ನು ತಲುಪಿದ್ದೇನೆ.

12125027a ಕಿಂ ನು ದುಃಖಮತೋಽನ್ಯದ್ವೈ ಯದಹಂ ಶ್ರಮಕರ್ಶಿತಃ|
12125027c ಭವತಾಮಾಶ್ರಮಂ ಪ್ರಾಪ್ತೋ ಹತಾಶೋ ನಷ್ಟಲಕ್ಷಣಃ||

ನಿಮ್ಮ ಈ ಆಶ್ರಮಕ್ಕೆ ಇಂದು ಶ್ರಮಕರ್ಶಿತನಾಗಿ ಹತಾಶನೂ ರಾಜನ ಲಕ್ಷಣಗಳನ್ನು ಕಳೆದುಕೊಂಡೂ ಬಂದಿರುವೆನೆಂದರೆ ಇದಕ್ಕಿಂತಲೂ ದುಃಖಮಯವಾದುದು ನನಗೆ ಬೇರೇನಿದೆ?

12125028a ನ ರಾಜಲಕ್ಷಣತ್ಯಾಗೋ ನ ಪುರಸ್ಯ ತಪೋಧನಾಃ|
12125028c ದುಃಖಂ ಕರೋತಿ ತತ್ತೀವ್ರಂ ಯಥಾಶಾ ವಿಹತಾ ಮಮ||

ತಪೋಧನರೇ! ರಾಜಲಕ್ಷಣದ ತ್ಯಾಗವಾಗಲೀ, ಪಟ್ಟಣದ
ತ್ಯಾಗವಾಗಲೀ ನನಗೀಗ ಅಷ್ಟೊಂದು ದುಃಖವನ್ನಿಟ್ಟುಮಾಡುತ್ತಿಲ್ಲ.
ಆದರೆ ನನ್ನ ಭಗ್ನವಾದ ಆಶೆಯು ನನಗೆ ಅತಿ ತೀವ್ರವಾದ
ದುಃಖವನ್ನುಂಟುಮಾಡಿದೆ.

12125029a ಹಿಮವಾನ್ವಾ ಮಹಾಶೈಲಃ ಸಮುದ್ರೋ ವಾ ಮಹೋದಧಿಃ|
12125029c ಮಹತ್ತ್ವಾನ್ನಾನ್ವಪದ್ಯೇತಾಂ ರೋದಸ್ಯೋರಂತರಂ ಯಥಾ|
12125029e ಆಶಾಯಾಸ್ತಪಸಿ ಶ್ರೇಷ್ಠಾಸ್ತಥಾ ನಾಂತಮಹಂ ಗತಃ||
12125030a ಭವತಾಂ ವಿದಿತಂ ಸರ್ವಂ ಸರ್ವಜ್ಞಾ ಹಿ ತಪೋಧನಾಃ|

ಮಹಾಶೈಲ ಹಿಮಾಲಯವೂ, ಮಹೋದಧಿ ಸಮುದ್ರವೂ, ಎತ್ತರ
ಮತ್ತು ಮಹತ್ತರದ ದೃಷ್ಟಿಗಳಲ್ಲಿ ಸರ್ವಥಾ ಆಸೆಗೆ ಸಮನಾದವುಗಳಲ್ಲ.
ಅವುಗಳಿಗಿಂತಲೂ ಆಸೆಯೇ ಹೆಚ್ಚು ದೊಡ್ಡದು. ಹಾಗೆಯೇ
ಆಕಾಶಪ್ರದೇಶವೂ ಆಶೆಗಿಂತ ದೊಡ್ಡದಲ್ಲ. ತಪಃಶ್ರೇಷ್ಠರೇ!
ಆದುದರಿಂದ ಆಶೆಯ ಕೊನೆಯನ್ನು ನಾನು ಮುಟ್ಟಿಲ್ಲ. ತಪೋಧನರು
ಸರ್ವಜ್ಞರೇ ಆಗಿರುತ್ತಾರೆ. ನಿಮಗೆ ಎಲ್ಲವೂ ತಿಳಿದಿದೆ.

12125030c ಭವಂತಃ ಸುಮಹಾಭಾಗಾಸ್ತಸ್ಮಾತ್ ಪ್ರಕ್ಷ್ಯಾಮಿ ಸಂಶಯಮ್||
12125031a ಆಶಾವಾನ್ಪುರುಷೋ ಯಃ ಸ್ಯಾದಂತರಿಕ್ಷಮಥಾಪಿ ವಾ|
12125031c ಕಿಂ ನು ಜ್ಯಾಯಸ್ತರಂ ಲೋಕೇ ಮಹತ್ತ್ವಾತ್ ಪ್ರತಿಭಾತಿ ವಃ|
12125031e ಏತದಿಚ್ಛಾಮಿ ತತ್ತ್ವೇನ ಶ್ರೋತುಂ ಕಿಮಿಹ ದುರ್ಲಭಮ್||

ನೀವು ಸುಮಹಾಭಾಗರೆಂದು ನಿಮ್ಮಲ್ಲಿ ನನ್ನ ಈ ಸಂಶಯವನ್ನು

ಕೇಳುತ್ತಿದ್ದೇನೆ. ಪುರುಷನ ಆಶೆ ಮತ್ತು ಅಂತರಿಕ್ಷ ಇವುಗಳಲ್ಲಿ ಯಾವುದು ಲೋಕದಲ್ಲಿ ಮಹತ್ತರವಾದುದು ಎಂದು ನಿಮಗೆ ಹೊಳೆಯುತ್ತದೆ? ಇದನ್ನು ತತ್ತ್ವತಃ ಕೇಳಲು ಬಯಸುತ್ತೇನೆ. ಇಲ್ಲಿ ದುರ್ಲಭವಾದುದು ಯಾವುದಿದೆ?

12125032a ಯದಿ ಗುಹ್ಯಂ ತಪೋನಿತ್ಯಾ ನ ವೋ ಬ್ರೂತೇಹ ಮಾಚಿರಮ್|
12125032c ನ ಹಿ ಗುಹ್ಯಮತಃ ಶ್ರೋತುಮಿಚ್ಛಾಮಿ ದ್ವಿಜಪುಂಗವಾಃ||

ತಪೋನಿತ್ಯರೇ! ಒಂದುವೇಳೆ ಈ ವಿಷಯವು ಗುಹ್ಯವಲ್ಲದಿದ್ದರೆ ಬೇಗನೇ ಅದನ್ನು ನನಗೆ ಹೇಳಿ. ದ್ವಿಜಪುಂಗವರೇ! ಗುಹ್ಯವಾದ ವಿಷಯಗಳನ್ನು ನಿಮ್ಮಿಂದ ಕೇಳಲು ಇಚ್ಛಿಸುವುದಿಲ್ಲ.

12125033a ಭವತ್ತಪೋವಿಘಾತೋ ವಾ ಯೇನ ಸ್ಯಾದ್ವಿರಮೇ ತತಃ|
12125033c ಯದಿ ವಾಸ್ತಿ ಕಥಾಯೋಗೋ ಯೋಽಯಂ ಪ್ರಶ್ನೋ ಮಯೇರಿತಃ||

ನಿಮ್ಮ ತಪಸ್ಸಿಗೆ ನನ್ನಿಂದ ತೊಡಕುಂಟಾಗುತ್ತದೆಯಾದರೆ ನಾನು ವಿರಮಿಸುತ್ತೇನೆ. ನಿಮ್ಮೊಡನೆ ಮಾತನಾಡಲು ಅವಕಾಶವಿದ್ದರೆ ನಾನು ಕೇಳಿದ ಪ್ರಶ್ನೆಗೆ ಉತ್ತರಿಸಿ.

12125034a ಏತತ್ಕಾರಣಸಾಮಗ್ರ್ಯಂ ಶ್ರೋತುಮಿಚ್ಛಾಮಿ ತತ್ತ್ವತಃ|
12125034c ಭವಂತೋ ಹಿ ತಪೋನಿತ್ಯಾ ಬ್ರೂಯುರೇತತ್ಸಮಾಹಿತಾಃ||

ಆಶೆಯ ಕಾರಣ ಮತ್ತು ಸಾಮಾಗ್ರಿಗಳನ್ನು ತತ್ತ್ವತಃ ಕೇಳಲು ಬಯಸುತ್ತೇನೆ. ನೀವೆಲ್ಲರೂ ತಪೋನಿತ್ಯರಾಗಿದ್ದೀರಿ. ನೀವೆಲ್ಲರೂ ಸೇರಿ ನನಗೆ ಹೇಳಿರಿ.””

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ

ಋಷಭಗೀತಾಸು ಪಂಚವಿಂಶತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಋಷಭಗೀತಾ ಎನ್ನುವ ನೂರಾಇಪ್ಪತ್ತೈದನೇ ಅಧ್ಯಾಯವು.

೧೨೬ [519]

ಋಷಭನು ರಾಜಾ ಸುಮಿತ್ರನಿಗೆ ವೀರದ್ಯುಮ್ನ ಮತ್ತು ತನು ಮುನಿಯ ವೃತ್ತಾಂತವನ್ನು ಹೇಳಿದುದು (1-26). ತನು ಮುನಿಯು ವೀರದ್ಯುಮ್ನನಿಗೆ ಆಶೆಯ ಸ್ವರೂಪವನ್ನು ಪರಿಚಯಿಸಿದುದು ಮತ್ತು ಋಷಭನ ಉಪದೇಶದಿಂದ ಸುಮಿತ್ರನು ಆಶೆಯನ್ನು ತ್ಯಜಿಸಿದುದು (27-52).

12126001 ಭೀಷ್ಮ ಉವಾಚ|
12126001a ತತಸ್ತೇಷಾಂ ಸಮಸ್ತಾನಾಮೃಷೀಣಾಮೃಷಿಸತ್ತಮಃ|
12126001c ಋಷಭೋ ನಾಮ ವಿಪ್ರರ್ಷಿಃ ಸ್ಮಯನ್ನಿವ ತತೋಽಬ್ರವೀತ್||

ಭೀಷ್ಮನು ಹೇಳಿದನು: "ಆಗ ಆ ಸಮಸ್ತ ಋಷಿಗಳಲ್ಲಿದ್ದ ಋಷಿಸತ್ತಮ ಋಷಭ ಎಂಬ ಹೆಸರಿನ ವಿಪ್ರರ್ಷಿಯು ನಸುಗುತ್ತಾ ಹೇಳಿದನು:

12126002a ಪುರಾಹಂ ರಾಜಶಾರ್ದೂಲ ತೀರ್ಥಾನ್ಯನುಚರನ್ ಪ್ರಭೋ|
12126002c ಸಮಾಸಾದಿತವಾನ್ದಿವ್ಯಂ ನರನಾರಾಯಣಾಶ್ರಮಮ್||

"ಪ್ರಭೋ! ರಾಜಶಾರ್ದೂಲ! ಹಿಂದೆ ನಾನು ತೀರ್ಥಗಳಲ್ಲಿ ಸಂಚರಿಸುತ್ತಾ ದಿವ್ಯ ನರನಾರಾಯಣಾಶ್ರಮಕ್ಕೆ ಹೋದೆನು.

---

519 ಈ ಅಧ್ಯಾಯವು ಎರಡು ಅಧ್ಯಾಯಗಳಲ್ಲಿಯೂ ಇದೆ (ಗೀತಾ ಪ್ರೆಸ್).

12126003a ಯತ್ರ ಸಾ ಬದರೀ ರಮ್ಯಾ ಹ್ರದೋ ವೈಹಾಯಸಸ್ತಥಾ|
12126003c ಯತ್ರ ಚಾಶ್ವಶಿರಾ ರಾಜನ್ವೇದಾನ್ಪಠತಿ ಶಾಶ್ವತಾನ್||

ರಾಜನ್! ಅಲ್ಲಿ ಬದರೀ ವೃಕ್ಷವಿದೆ. ರಮ್ಯ ವೈಹಾಯ ಸರೋವರವೂ ಇದೆ. ಅಲ್ಲಿ ಅಶ್ವಶಿರನು ಶಾಶ್ವತವಾಗಿ ವೇದಗಳನ್ನು ಪಠಿಸುತ್ತಿರುತ್ತಾನೆ.

12126004a ತಸ್ಮಿನ್ಸರಸಿ ಕೃತ್ವಾಹಂ ವಿಧಿವತ್ತರ್ಪಣಂ ಪುರಾ|
12126004c ಪಿತೄಣಾಂ ದೇವತಾನಾಂ ಚ ತತೋಽಶ್ರಮಮಿಯಾಂ ತದಾ||

ಆ ಸರಸ್ಸಿನಲ್ಲಿ ನಾನು ಮೊದಲು ವಿಧಿವತ್ತಾಗಿ ಪಿತೃಗಳಿಗೆ ಮತ್ತು ದೇವತೆಗಳಿಗೆ ತರ್ಪಣಗಳನ್ನಿತ್ತು ಆ ಆಶ್ರಮವನ್ನು ಪ್ರವೇಶಿಸಿದೆನು.

12126005a ರೇಮಾತೇ ಯತ್ರ ತೌ ನಿತ್ಯಂ ನರನಾರಾಯಣಾವೃಷೀ|
12126005c ಅದೂರಾದಾಶ್ರಮಂ ಕಂ ಚಿದ್ವಾಸಾರ್ಥಮಗಮಂ ತತಃ||

ಅಲ್ಲಿ ನರನಾರಾಯಣಋಷಿಗಳನ್ನು ಸಂದರ್ಶಿಸಿ ನಂತರ ಹತ್ತಿರದಲ್ಲಿಯೇ ಇದ್ದ ಇನ್ನೊಂದು ಅಶ್ರಮಕ್ಕೆ ಉಳಿದುಕೊಳ್ಳಲು ಹೋದೆನು.

12126006a ತತಶ್ಚೀರಾಜಿನಧರಂ ಕೃಶಮುಚ್ಚಮತೀವ ಚ|
12126006c ಅದ್ರಾಕ್ಷಮೃಷಿಮಾಯಾಂತಂ ತನುಂ ನಾಮ ತಪೋನಿಧಿಮ್||

ಅದೇ ಆಶ್ರಮಕ್ಕೆ ನಾರುಮಡಿಯನ್ನುಟ್ಟಿದ್ದ ಕೃಷ್ಣಾಜಿನವನ್ನು ಧರಿಸಿದ್ದ ಕೃಶನಾಗಿಯೂ ಅತ್ಯಂತ ಎತ್ತರನಾಗಿಯೂ ಇದ್ದ ತನು ಎಂಬ ಹೆಸರಿನ ತಪೋನಿಧಿಯನ್ನು ಕಂಡೆನು.

12126007a ಅನ್ಯೈರ್ನರೈರ್ಮಹಾಬಾಹೋ ವಪುಷಾಪ್ಯಗುಣಾನ್ವಿತಮ್|
12126007c ಕೃಶತಾ ಚಾಪಿ ರಾಜರ್ಷೇ ನ ದೃಷ್ಟಾ ತಾದೃಶೀ ಕ್ವ ಚಿತ್||

ಮಹಾಬಾಹೋ! ಅವನ ಶರೀರವು ಅನ್ಯರ ಶರೀರಕ್ಕಿಂತ ಎಂಟು

ಪಟ್ಟು ಎತ್ತರವಾಗಿತ್ತು. ರಾಜರ್ಷೇ! ಅವನಷ್ಟು ತೆಳುವಾದ ಶರೀರವನ್ನು ನಾನು ನೋಡಿಯೇ ಇರಲಿಲ್ಲ.

12126008a ಶರೀರಮಪಿ ರಾಜೇಂದ್ರ ತಸ್ಯ ಕಾನಿಷ್ಠಿಕಾಸಮಮ್|
12126008c ಗ್ರೀವಾ ಬಾಹೂ ತಥಾ ಪಾದೌ ಕೇಶಾಶ್ಚಾದ್ಭುತದರ್ಶನಾಃ||

ರಾಜೇಂದ್ರ! ಅವನ ಶರೀರವು ಕಿರುಬೆರಳಿನಷ್ಟು ತೆಳ್ಳಗಾಗಿತ್ತು. ಅವನ ಕುತ್ತಿಗೆ, ಬಾಹುಗಳು, ಪಾದಗಳು ಮತ್ತು ಕೂದಲು ಅದ್ಭುತವಾಗಿ ತೋರುತ್ತಿದ್ದವು.

12126009a ಶಿರಃ ಕಾಯಾನುರೂಪಂ ಚ ಕರ್ಣೌ ನೇತ್ರೇ ತಥೈವ ಚ|
12126009c ತಸ್ಯ ವಾಕ್ಚೈವ ಚೇಷ್ಟಾ ಚ ಸಾಮಾನ್ಯೇ ರಾಜಸತ್ತಮ||

ರಾಜಸತ್ತಮ! ಅವನ ತಲೆ, ಕಿವಿಗಳು ಮತ್ತು ಕಣ್ಣುಗಳು ಕಾಯಕ್ಕೆ ಅನುರೂಪವಾಗಿದ್ದವು. ಅವನ ಮಾತು ಮತ್ತು ಚೇಷ್ಟೆಗಳು ಸಾಮಾನ್ಯವಾಗಿದ್ದವು.

12126010a ದೃಷ್ಟ್ವಾಹಂ ತಂ ಕೃಶಂ ವಿಪ್ರಂ ಭೀತಃ ಪರಮದುರ್ಮನಾಃ|
12126010c ಪಾದೌ ತಸ್ಯಾಭಿವಾದ್ಯಾಥ ಸ್ಥಿತಃ ಪ್ರಾಂಜಲಿರಗ್ರತಃ||

ಆ ಕೃಶ ವಿಪ್ರನನ್ನು ಕಂಡು ಭೀತನೂ ಪರಮ ದುರ್ಮನನೂ ಆಗಿ ಅವ ಪಾದಗಳಿಗೆರಗಿ ಕೈಮುಗಿದು ಅವನ ಎದಿರು ನಿಂತುಕೊಂಡೆನು.

12126011a ನಿವೇದ್ಯ ನಾಮ ಗೋತ್ರಂ ಚ ಪಿತರಂ ಚ ನರರ್ಷಭ|
12126011c ಪ್ರದಿಷ್ಟೇ ಚಾಸನೇ ತೇನ ಶನ್ಯೈರಹಮುಪಾವಿಶಮ್||

ನರರ್ಷಭ! ನನ್ನ ನಾಮಗೋತ್ರಗಳನ್ನೂ ತಂದೆಯ ಹೆಸರನ್ನೂ ನಿವೇದಿಸಿಕೊಂಡು ಅವನು ತೋರಿಸಿದ ಆಸನದಲ್ಲಿ ಮೆಲ್ಲನೇ

ಕುಳಿತುಕೊಂಡೆನು.

12126012a ತತಃ ಸ ಕಥಯಾಮಾಸ ಕಥಾ ಧರ್ಮಾರ್ಥಸಂಹಿತಾಃ|
12126012c ಋಷಿಮಧ್ಯೇ ಮಹಾರಾಜ ತತ್ರ ಧರ್ಮಭೃತಾಂ ವರಃ||

ಮಹಾರಾಜ! ಆಗ ಅಲ್ಲಿ ಋಷಿಗಳ ಮಧ್ಯದಲ್ಲಿ ಆ ಧರ್ಮಭೃತರಲ್ಲಿ ಶ್ರೇಷ್ಠನು ಧರ್ಮಾರ್ಥಸಂಹಿತ ಕಥೆಗಳನ್ನು ಹೇಳತೊಡಗಿದನು.

12126013a ತಸ್ಮಿಂಸ್ತು ಕಥಯತ್ಯೇವ ರಾಜಾ ರಾಜೀವಲೋಚನಃ|
12126013c ಉಪಾಯಾಜ್ಜವನೈರಶ್ವೈಃ ಸಬಲಃ ಸಾವರೋಧನಃ||

ಅವನು ಕಥೆಗಳನ್ನು ಹೇಳುತ್ತಿರುವಾಗಲೇ ಓರ್ವ ರಾಜೀವಲೋಚನ ರಾಜನು ಸೈನ್ಯ ಸಮೇತನಾಗಿ ತನ್ನ ಅಂತಃಪುರದ ಸ್ತ್ರೀಯರೊಡನೆ ವೇಗವಾದ ಕುದುರೆಗಳನ್ನೇರಿ ಅಲ್ಲಿಗೆ ಬಂದನು.

12126014a ಸ್ಮರನ್ ಪುತ್ರಮರಣ್ಯೇ ವೈ ನಷ್ಟಂ ಪರಮದುರ್ಮನಾಃ|
12126014c ಭೂರಿದ್ಯುಮ್ನಪಿತಾ ಧೀಮಾನ್ರಘುಶ್ರೇಷ್ಠೋ ಮಹಾಯಶಾಃ||

ಅರಣ್ಯದಲ್ಲಿ ಕಳೆದುಹೋಗಿದ್ದ ಪುತ್ರನನ್ನು ಸ್ಮರಿಸಿಕೊಳ್ಳುತ್ತಾ ಪರಮ ದುಃಖಿತನಾಗಿದ ಅವನು ಭೂರಿದ್ಯುಮ್ನನ ಪಿತ ಧೀಮಾನ್ ಮಹಾಯಶಸ್ವೀ ರಘುಶ್ರೇಷ್ಠನಾಗಿದ್ದನು.

12126015a ಇಹ ದ್ರಕ್ಷ್ಯಾಮಿ ತಂ ಪುತ್ರಂ ದ್ರಕ್ಷ್ಯಾಮೀಹೇತಿ ಪಾರ್ಥಿವಃ|
12126015c ಏವಮಾಶಾಕೃತೋ ರಾಜಂಶ್ಚರನ್ವನಮಿದಂ ಪುರಾ||

ರಾಜನ್! "ಪುತ್ರನನ್ನು ಇಲ್ಲಿ ಕಾಣುತ್ತೇನೆ! ಇಲ್ಲಿ ನೋಡುತ್ತೇನೆ!" ಎಂಬ ಆಶೆಯನ್ನಿತ್ತುಕೊಂಡು ಆ ಪಾರ್ಥಿವನು ಈ ವನದಲ್ಲೆಲ್ಲಾ ಅಲೆಯುತ್ತಿದ್ದನು.

12126016a ದುರ್ಲಭಃ ಸ ಮಯಾ ದ್ರಷ್ಟುಂ ನೂನಂ ಪರಮಧಾರ್ಮಿಕಃ|
12126016c ಏಕಃ ಪುತ್ರೋ ಮಹಾರಣ್ಯೇ ನಷ್ಟ ಇತ್ಯಸಕೃತ್ತದಾ||

“ಪರಮಧಾರ್ಮಿಕನಾಗಿದ್ದ ಅವನು ನನಗೆ ಕಾಣಲೂ
ದುರ್ಲಭವಾಗಿಬಿಟ್ಟನಲ್ಲ! ನನ್ನ ಓರ್ವನೇ ಪುತ್ರನು ಮಹಾರಣ್ಯದಲ್ಲಿ
ಕಳೆದುಹೋದನಲ್ಲಾ!” ಎಂದು ವಿಲಪಿಸುತ್ತಿದ್ದನು.

12126017a ದುರ್ಲಭಃ ಸ ಮಯಾ ದ್ರಷ್ಟುಮಾಶಾ ಚ ಮಹತೀ ಮಮ|
12126017c ತಯಾ ಪರೀತಗಾತ್ರೋಽಹಂ ಮುಮೂರ್ಷುರ್ನಾತ್ರ ಸಂಶಯಃ||

“ದುರ್ಲಭವಾಗಿದ್ದರೂ ಅವನನ್ನು ನೋಡಲೇ ಬೇಕೆಂದು ನನಗೆ ಮಹಾ
ಆಶೆಯುಂಟಾಗಿದೆ. ಆ ಆಶೆಯು ನನ್ನ ಶರೀರವನ್ನು ಸಂಪೂರ್ಣವಾಗಿ
ವ್ಯಾಪಿಸಿದೆ. ಅವನನ್ನು ಕಾಣದಿದ್ದರೆ ಮೃತ್ಯುವನ್ನೇ ಅಪ್ಪುತ್ತೇನೆ
ಎನ್ನುವುದರಲ್ಲಿ ಸಂಶಯವಿಲ್ಲ.”

12126018a ಏತಚ್ಚ್ರುತ್ವಾ ಸ ಭಗವಾಂಸ್ತನುರ್ಮುನಿವರೋತ್ತಮಃ|
12126018c ಅವಾಕ್ಶಿರಾ ಧ್ಯಾನಪರೋ ಮುಹೂರ್ತಮಿವ ತಸ್ಥಿವಾನ್||

ಇದನ್ನು ಕೇಳಿ ಭಗವಾನ್ ತನು ಮುನಿವರೋತ್ತಮನು ತಲೆತಗ್ಗಿಸಿ
ಧ್ಯಾನಪರನಾಗಿ ಮುಹೂರ್ತಕಾಲ ಕುಳಿತನು.

12126019a ತಮನುಧ್ಯಾಂತಮಾಲಕ್ಷ್ಯ ರಾಜಾ ಪರಮದುರ್ಮನಾಃ|
12126019c ಉವಾಚ ವಾಕ್ಯಂ ದೀನಾತ್ಮಾ ಮಂದಂ ಮಂದಮಿವಾಸಕೃತ್||

ಅವನು ಧ್ಯಾನಾಸಕ್ತನಾದುದನ್ನು ನೋಡಿ ಪರಮ ದುಃಖಿತನಾದ
ದೀನಾತ್ಮ ರಾಜನು ಮೆಲ್ಲ ಮೆಲ್ಲನೇ ಈ ಮಾತನ್ನಾಡಿದನುಃ

12126020a ದುರ್ಲಭಂ ಕಿಂ ನು ವಿಪ್ರರ್ಷೇ ಆಶಾಯಾಶ್ಚೈವ ಕಿಂ ಭವೇತ್|

12126020c ಬ್ರವೀತು ಭಗವಾನೇತದ್ಯದಿ ಗುಹ್ಯಂ ನ ತನ್ಮಯಿ॥

“ವಿಪ್ರರ್ಷೇ! ಯಾವುದು ದುರ್ಲಭವಾದುದು? ಆಶೆಗಿಂತಲೂ ದೊಡ್ಡದು ಯಾವುದು? ಭಗವಾನ್! ಗುಹ್ಯವಾಗಿಲ್ಲದಿದ್ದರೆ ಇದನ್ನು ನನಗೆ ಹೇಳಬೇಕು.”

12126021a ಮಹರ್ಷಿರ್ಭಗವಾಂಸ್ತೇನ ಪೂರ್ವಮಾಸೀದ್ವಿಮಾನಿತಃ|
12126021c ಬಾಲಿಶಾಂ ಬುದ್ಧಿಮಾಸ್ಥಾಯ ಮಂದಭಾಗ್ಯತಯಾತ್ಮನಃ॥

ತನುವು ಹೇಳಿದನು: “ನಿನ್ನ ಈ ಮಗನು ಹಿಂದೆ ಮೂರ್ಖಬುದ್ಧಿಯನ್ನಾಶ್ರಯಿಸಿ ತನ್ನ ದೌರ್ಭಾಗ್ಯದ ಕಾರಣದಿಂದ ಪೂಜನೀಯ ಮಹರ್ಷಿಯೋರ್ವನನ್ನು ಅಪಮಾನಿಸಿದ್ದನು.

12126022a ಅರ್ಘ್ಯಮನ್ಯಕಲಶಂ ರಾಜನ್ಕಾಂಚನಂ ವಲ್ಕಲಾನಿ ಚ|
12126022c ನಿರ್ವಿಣ್ಣಃ ಸ ತು ವಿಪ್ರರ್ಷಿರ್ನಿರಾಶಃ ಸಮಪದ್ಯತ॥

ರಾಜನ್! ಕಾಂಚನ ಕಲಶವನ್ನೂ ವಲ್ಕಲಗಳನ್ನೂ ಕೇಳಿ ಬಂದಿದ್ದ ವಿಪ್ರರ್ಷಿಯನ್ನು ಅವನು ನಿರ್ವಿಣ್ಣನನ್ನಾಗಿಯೂ ನಿರಾಶನನ್ನಾಗಿಯೂ ಮಾಡಿದ್ದನು.”

12126023a ಏವಮುಕ್ತ್ವಾಭಿವಾದ್ಯಾಥ ತಮೃಷಿಂ ಲೋಕಪೂಜಿತಮ್|
12126023c ಶ್ರಾಂತೋ ನ್ಯಷೀದದ್ಧರ್ಮಾತ್ಮಾ ಯಥಾ ತ್ವಂ ನರಸತ್ತಮ॥

ನರಸತ್ತಮ! ಹೀಗೆ ಹೇಳಲು ಆ ಧರ್ಮಾತ್ಮನು ಲೋಕಪೂಜಿತನಾದ ಆ ಋಷಿಯನ್ನು ಅಭಿವಂದಿಸಿ ನಿನ್ನಹಾಗೆಯೇ ಬಳಲಿ ಕುಳಿತಿಕೊಂಡನು.

12126024a ಅರ್ಘ್ಯಂ ತತಃ ಸಮಾನೀಯ ಪಾದ್ಯಂ ಚೈವ ಮಹಾನೃಷಿಃ|
12126024c ಆರಣ್ಯಕೇನ ವಿಧಿನಾ ರಾಜ್ಞೇ ಸರ್ವಂ ನ್ಯವೇದಯತ್॥

ಆಗ ಆ ಮಹಾನೃಷಿಯು ಅರ್ಘ್ಯ-ಪಾದ್ಯಗಳನ್ನು ತರಿಸಿ ಆರಣ್ಯಕ ವಿಧಿಯಂತೆ ಎಲ್ಲವನ್ನೂ ರಾಜನಿಗೆ ನಿವೇದಿಸಿದನು.

12126025a ತತಸ್ತೇ ಮುನಯಃ ಸರ್ವೇ ಪರಿವಾರ್ಯ ನರರ್ಷಭಮ್|
12126025c ಉಪಾವಿಶನ್ಪರಸ್ಕೃತ್ಯ ಸಪ್ತರ್ಷಯ ಇವ ಧ್ರುವಮ್||

ಆಗ ಮುನಿಗಳೆಲ್ಲರೂ ಆ ನರರ್ಷಭನನ್ನು ಸಪ್ತರ್ಷಿಗಳು ಧ್ರುವನನ್ನು ಹೇಗೋ ಹಾಗೆ ಸುತ್ತುವರೆದು ಕುಳಿತುಕೊಂಡರು.

12126026a ಅಪೃಚ್ಚಂಶ್ಚೈವ ತೇ ತತ್ರ ರಾಜಾನಮಪರಾಜಿತಮ್|
12126026c ಪ್ರಯೋಜನಮಿದಂ ಸರ್ವಮಾಶ್ರಮಸ್ಯ ಪ್ರವೇಶನಮ್||

ಆ ರಾಜ ಅಪರಜಿತನನ್ನು ಅವರಿ ಕೇಳಿದರು: "ಈ ಆಶ್ರಮಕ್ಕೆ ಪ್ರವೇಶಿಸಿದುದರ ಕಾರಣವೇನು?"

12126027 ರಾಜೋವಾಚ|
12126027a ವೀರದ್ಯುಮ್ನ ಇತಿ ಖ್ಯಾತೋ ರಾಜಾಹಂ ದಿಕ್ಷು ವಿಶ್ರುತಃ|
12126027c ಭೂರಿದ್ಯುಮ್ನಂ ಸುತಂ ನಷ್ಟಮನ್ವೇಷ್ಟುಂ ವನಮಾಗತಃ||

ರಾಜನು ಹೇಳಿದನು: "ದಿಕ್ಕುಗಳಲ್ಲಿ ವಿಶ್ರುತನಾದ ವೀರದ್ಯುಮ್ನ ಎಂಬ ಖ್ಯಾತ ರಾಜನು ನಾನು. ಕಳೆದುಹೋದ ನನ್ನ ಸುತ ಭೂರಿದ್ಯುಮ್ನನನ್ನು ಹುಡುಕಿಕೊಂಡು ವನಕ್ಕೆ ಬಂದಿದ್ದೇನೆ.

12126028a ಏಕಪುತ್ರಃ ಸ ವಿಪ್ರಾಗ್ರ್ಯ ಬಾಲ ಏವ ಚ ಸೋಽನಘ|
12126028c ನ ದೃಶ್ಯತೇ ವನೇ ಚಾಸ್ಮಿಂಸ್ತಮನ್ವೇಷ್ಟುಂ ಚರಾಮ್ಯಹಮ್||

ವಿಪ್ರಾಗ್ರರೇ! ಅವನು ನನ್ನ ಓರ್ವನೇ ಪುತ್ರನು. ಅನಘನೂ ಕೂಡ. ಈ ವನದಲ್ಲಿ ಅವನು ನನಗೆ ಕಾಣಲಿಲ್ಲ. ಆವನನ್ನು ಹುಡುಕುತ್ತಲೇ ನಾನು

ಸಂಚರಿಸುತ್ತಿದ್ದೇನೆ.””

12126029 ಋಷಭ ಉವಾಚ|
12126029a ಏವಮುಕ್ತೇ ತು ವಚನೇ ರಾಜ್ಞಾ ಮುನಿರಧೋಮುಖಿಃ|
12126029c ತೂಷ್ಣೀಮೇವಾಭವತ್ತತ್ರ ನ ಚ ಪ್ರತ್ಯುಕ್ತವಾನ್ನೃಪಮ್||

ಋಷಭನು ಹೇಳಿದನು: “ರಾಜನು ಹೀಗೆ ಹೇಳಲು ಮುನಿಯು ಅಧೋಮುಖನಾಗಿ ಕುಳಿತನು. ಬಹಳ ಹೊತ್ತು ಸುಮ್ಮನೇ ಇದ್ದನು. ರಾಜನಿಗೆ ಏನನ್ನೂ ಹೇಳಲಿಲ್ಲ.

12126030a ಸ ಹಿ ತೇನ ಪುರಾ ವಿಪ್ರೋ ರಾಜ್ಞಾ ನಾತ್ಯರ್ಥಮಾನಿತಃ|
12126030c ಆಶಾಕೃಶಂ ಚ ರಾಜೇಂದ್ರ ತಪೋ ದೀರ್ಘಂ ಸಮಾಸ್ಥಿತಃ||

ಹಿಂದ ಅದೇ ರಾಜನೇ ಆ ವಿಪ್ರನಿಗೆ ವಿಶೇಷ ಮರ್ಯಾದೆಯನ್ನು ತೋರಿಸಿರಲಿಲ್ಲ. ರಾಜೇಂದ್ರ! ಅವನಿಂದ ಆಶಾಕೃಶನಾಗಿದ್ದ ಅವನು ದೀರ್ಘ ತಪಸ್ಸಿನಲ್ಲಿ ತೊಡಗಿದ್ದನು.

12126031a ಪ್ರತಿಗ್ರಹಮಹಂ ರಾಜ್ಞಾಂ ನ ಕರಿಷ್ಯೇ ಕಥಂ ಚನ|
12126031c ಅನ್ಯೇಷಾಂ ಚೈವ ವರ್ಣಾನಾಮಿತಿ ಕೃತ್ವಾ ಧಿಯಂ ತದಾ||

ಆಗ ಅವನು ಯಾವ ರಾಜರಿಂದಲೂ ಅನ್ಯ ವರ್ಣದವರಿಂದಲೂ ಯಾವ ದಾನವನ್ನೂ ಸ್ವೀಕರಿಸುವುದಿಲ್ಲ ಎಂದು ನಿಶ್ಚಯಿಸಿದ್ದನು.

12126032a ಆಶಾ ಹಿ ಪುರುಷಂ ಬಾಲಂ ಲಾಲಾಪಯತಿ ತಸ್ಥುಷೀ|
12126032c ತಾಮಹಂ ವ್ಯಪನೇಷ್ಯಾಮಿ ಇತಿ ಕೃತ್ವಾ ವ್ಯವಸ್ಥಿತಃ||

ಬಹಳಕಾಲದವರೆಗೆ ಇರುವ ಆಶೆಯೇ ಪುರುಷನು ಮೂಢನಂತೆ ಲಾಪಾಪಿಸುವಂತೆ ಮಾಡುತ್ತದೆ. ನಾನು ಅದನ್ನು ಕಿತ್ತುಹಾಕುತ್ತೇನೆ

ಎಂದು ಅವನು ತಪೋನಿಷ್ಠನಾಗಿದ್ದನು.

12126033 ರಾಜೋವಾಚ|
12126033a ಆಶಾಯಾಃ ಕಿಂ ಕೃಶತ್ವಂ ಚ ಕಿಂ ಚೇಹ ಭುವಿ ದುರ್ಲಭಮ್|
12126033c ಬ್ರೂತೀತು ಭಗವಾನೇತತ್ತ್ವಂ ಹಿ ಧರ್ಮಾರ್ಥದರ್ಶಿವಾನ್||

ರಾಜನು ಹೇಳಿದನು: "ಭಗವನ್! ನೀನು
ಧರ್ಮಾರ್ಥದರ್ಶಿಯಾಗಿರುವೆ. ಆಶೆಗಿಂತಲೂ ಬಲವಾದ
ದುರ್ಬಲತೆಯೂ ಯಾವುದಿದೆ? ಈ ಭುವಿಯಲ್ಲಿ ದುರ್ಲಭವಾದುದು
ಯಾವುದು? ಇದರ ಕುರಿತು ತತ್ತ್ವತಃ ನನಗೆ ಹೇಳಬೇಕು.""

12126034 ಋಷಭ ಉವಾಚ|
12126034a ತತಃ ಸಂಸ್ಮೃತ್ಯ ತತ್ಸರ್ವಂ ಸ್ಮಾರಯಿಷ್ಯನ್ನಿವಾಬ್ರವೀತ್|
12126034c ರಾಜಾನಂ ಭಗವಾನ್ವಿಪ್ರಸ್ತತಃ ಕೃಶತನುಸ್ತನುಃ||

ಋಷಭನು ಹೇಳಿದನು: "ಆಗ ಕೃಶಶರೀರೀ ಭಗವಾನ್ ತನುವು ಹಿಂದೆ
ನಡೆದುದೆಲ್ಲವನ್ನು ಸ್ಮರಿಸಿಕೊಳ್ಳುತ್ತಾ ಮತ್ತು ರಾಜನಿಗೂ ಸ್ಮರಣೆಗೆ
ತಂದುಕೊಡುತ್ತಾ ಹೇಳಿದನು:

12126035a ಕೃಶತ್ವೇ ನ ಸಮಂ ರಾಜನ್ನಾಶಾಯಾ ವಿದ್ಯತೇ ನೃಪ|
12126035c ತಸ್ಯಾ ವ್ಯೈ ದುರ್ಲಭತ್ವಾತ್ತು ಪ್ರಾರ್ಥಿತಾಃ ಪಾರ್ಥಿವಾ ಮಯಾ||

"ರಾಜನ್! ನೃಪ! ಆಶೆಗೆ ಸಮಾನ ದುರ್ಬಲತೆಯು ಬೇರೆ ಯಾವುದೂ
ಇಲ್ಲ. ಪಾರ್ಥಿವ! ನನ್ನ ಆಶೆಯು ದುರ್ಲಭವಾಗಿದ್ದುದರಿಂದಲೇ ನಾನು
ನಿನ್ನನ್ನು ಪ್ರಾರ್ಥಿಸಿದ್ದೆನು."

12126036 ರಾಜೋವಾಚ|

12126036a ಕೃಶಾಕೃಶೇ ಮಯಾ ಬ್ರಹ್ಮನ್ ಗೃಹೀತೇ ವಚನಾತ್ತವ|
12126036c ದುರ್ಲಭತ್ವಂ ಚ ತಸ್ಯೈವ ವೇದವಾಕ್ಯಮಿವ ದ್ವಿಜ||

ರಾಜನು ಹೇಳಿದನು: "ಬ್ರಹ್ಮನ್! ದ್ವಿಜ! ನಿನ್ನ ಮಾತಿನಿಂದ ಆಶೆಯಿಂದ ಬಂಧಿಸಲ್ಪಟ್ಟಿರುವವರು ದುರ್ಬಲರು ಎಂದು ತಿಳಿದುಕೊಂಡಿದ್ದೇನೆ. ಯಾವುದರ ಕುರಿತು ಆಶೆಯಿರುವುದೋ ಅದೇ ದುರ್ಲಭವು. ಇದನ್ನೇ ವೇದವಾಕ್ಯವೆಂದು ತಿಳಿಯುತ್ತೇನೆ.

12126037a ಸಂಶಯಸ್ತು ಮಹಾಪ್ರಾಜ್ಞ ಸಂಜಾತೋ ಹೃದಯೇ ಮಮ|
12126037c ತನ್ಮೇ ಸತ್ತಮ ತತ್ತ್ವೇನ ವಕ್ತುಮರ್ಹಸಿ ಪೃಚ್ಚತಃ||

ಮಹಪ್ರಾಜ್ಞ! ನನ್ನ ಹೃದಯದಲ್ಲಿ ಸಂಶಯವೊಂದು ಹುಟ್ಟಿಕೊಂಡಿದೆ. ಸತ್ತಮ! ಕೇಳುತ್ತರುವ ನನಗೆ ತತ್ತ್ವತಃ ಅದನ್ನು ಹೇಳಬೇಕು.

12126038a ತ್ವತ್ತಃ ಕೃಶತರಂ ಕಿಂ ನು ಬ್ರವೀತು ಭಗವಾನಿದಮ್|
12126038c ಯದಿ ಗುಹ್ಯಂ ನ ತೇ ವಿಪ್ರ ಲೋಕೇಽಸ್ಮಿನ್ಕಿಂ ನು ದುರ್ಲಭಮ್||

ಬಗವನ್! ನಿನಗಿಂತಲೂ ಕೃಶವಾಗಿರುವುದು ಏನಿದೆ? ವಿಪ್ರ! ಇದು ರಹಸ್ಯವಾಗಿಲ್ಲದಿದ್ದರೆ – ಈ ಲೋಕದಲ್ಲಿ ದುರ್ಲಭವಾದುದು ಏನಿದೆ?"

12126039 ಕೃಶತನುರುವಾಚ|
12126039a ದುರ್ಲಭೋಽಪ್ಯಥ ವಾ ನಾಸ್ತಿ ಯೋಽರ್ಥೀ ಧೃತಿಮಿವಾಪ್ನುಯಾತ್|
12126039c ಸುದುರ್ಲಭತರಸ್ತಾತ ಯೋಽರ್ಥಿನಂ ನಾವಮನ್ಯತೇ||

ಕೃಶತನುವು ಹೇಳಿದನು: "ಅಯ್ಯಾ! ತಾನು ಅತಿಯಾಗಿ ಅಪೇಕ್ಷಿಸಿದುದನ್ನು ಯಾಚಿಸದೇ ಇರುವ ಧೈರ್ಯವಂತನು ದುರ್ಲಭ ಅಥವಾ ಅಂತವನು ಇಲ್ಲವೇ ಇಲ್ಲ ಎಂದು ಹೇಳಬಹುದು.

12126040a ಸಂಶ್ರುತ್ಯ ನೋಪಕ್ರಿಯತೇ ಪರಂ ಶಕ್ತ್ಯಾ ಯಥಾರ್ಹತಃ|
12126040c ಸಕ್ತಾ ಯಾ ಸರ್ವಭೂತೇಷು ಸಾಶಾ ಕೃಶತರೀ ಮಯಾ||

ಯಾಚಕನನ್ನು ಕೇಳಿ ಅವನಲ್ಲಿ ಆಶೆಯನ್ನು ಹುಟ್ಟಿಸಿ ಪರಮ ಶಕ್ತಿಯನ್ನುಪಯೋಗಿಸಿ ಯಥಾರ್ಹವಾಗಿ ಯಾಚಿಸಿದುದನ್ನು ಕೊಡದೇ ಇದ್ದಾಗ ಸರ್ವಭೂತಗಳಲ್ಲಿ ಯಾವ ಆಶೆಯರುವುದೋ ಅದು ನನಗಿಂತಲೂ ಕೃಶವಾಗಿರುತ್ತದೆ.

[520]12126041a ಏಕಪುತ್ರಃ ಪಿತಾ ಪುತ್ರೇ ನಷ್ಟೇ ವಾ ಪ್ರೋಷಿತೇ ತಥಾ|
12126041c ಪ್ರವೃತ್ತಿಂ ಯೋ ನ ಜಾನಾತಿ ಸಾಶಾ ಕೃಶತರೀ ಮಯಾ||

ಒಬ್ಬನೇ ಪುತ್ರನಿರುವ ಪಿತನು ತನ್ನ ಪುತ್ರನು ನಷ್ಟವಾದರೆ ಅಥವಾ ದೂರಹೋದವನ ಕುರಿತಾದ ಯಾವ ಸಮಾಚಾರವೂ ದೊರೆಯದೇ ಇದ್ದಾಗ ಅವನನ್ನು ಕಾಣಬೇಕೆಂಬ ಯಾವ ಆಶೆಯು ತಂದೆಯಲ್ಲಿ ಉಂಟಾಗುತ್ತದೆಯೋ ಅದು ನನಗಿಂತಲೂ ಕೃಶವಾಗಿರುತ್ತದೆ.

12126042a ಪ್ರಸವೇ ಚೈವ ನಾರೀಣಾಂ ವೃದ್ಧಾನಾಂ ಪುತ್ರಕಾರಿತಾ|
12126042c ತಥಾ ನರೇಂದ್ರ ಧನಿನಾಮಾಶಾ ಕೃಶತರೀ ಮಯಾ.[521]||

ಮಕ್ಕಳಿಲ್ಲದ ಸ್ತ್ರೀಯರಿಗೆ ವೃದ್ಧಾಪ್ಯದಲ್ಲಾದರೂ ಮಕ್ಕಳನ್ನು

---

[520] ಭಾರತ ದರ್ಶನದಲ್ಲಿ ಇದಕ್ಕೆ ಮೊದಲು ಈ ಒಂದು ಶ್ಲೋಕವಿದೆ:
ಕೃತಘ್ನೇಷು ಚ ಯಾ ಸಕ್ತಾ ನೃಶಂಸೇಷ್ವಲಸೇಷು ಚ| ಅಪಕಾರಿಷು ಚಾಸಕ್ತಾ ಸಾಶಾ ಕೃತಸ್ತರೀ ಮಯಾ||

[521] ಭಾರತ ದರ್ಶನದಲ್ಲಿ ಇದರ ನಂತರ ಈ ಒಂದು ಶ್ಲೋಕವಿದೆ:
ಪ್ರದಾನಾಕಾಂಕ್ಷಿಣೀನಾಂ ಚ ಕನ್ಯಾಯಾಂ ವಯಸಿ ಸ್ಥಿತೇ| ಶ್ರುತ್ವಾ ಕಥಾಸ್ತಥಾಯುಕ್ತಾಃ ಸಾಶಾ ಕೃಶತರೀ ಮಯಾ||

ಹಡೆಯಬೇಕೆಂಬ ಯಾವ ಆಶೆಯಿರುವುದೋ, ಧನಿಕರಿಗೆ ಇನ್ನೂ ಹೆಚ್ಚು ಧನವನ್ನು ಕೂಡಿದಬೇಕೆಂಬ ಯಾವ ಆಶೆಯಿರುವುದೋ ಅದು ನನಗಿಂತಲೂ ಕೃಶವಾಗಿರುತ್ತದೆ.””

12126043 ಋಷಭ ಉವಾಚ|

12126043a ಏತಚ್ಛ್ರುತ್ವಾ ತತೋ ರಾಜನ್ಸ ರಾಜಾ ಸಾವರೋಧನಃ|
12126043c ಸಂಸ್ಪೃಶ್ಯ ಪಾದೌ ಶಿರಸಾ ನಿಪಪಾತ ದ್ವಿಜರ್ಷಭೇ||

ಋಷಭನು ಹೇಳಿದನು: “ರಾಜನ್! ಇದನ್ನು ಕೇಳಿ ರಾಜನು ತನ ರಾಣಿಯೊಡನೆ ದ್ವಿಜರ್ಷಭನ ಪಾದಗಳನ್ನು ಮುಟ್ಟಿ ಶಿರಸಾ ಅಡ್ಡಬಿದ್ದನು.”

12126044 ರಾಜೋವಾಚ|

12126044a ಪ್ರಸಾದಯೇ ತ್ವಾ ಭಗವನ್ ಪುತ್ರೇಣೇಚ್ಛಾಮಿ ಸಂಗತಿಮ್[522]|
[523]12126044c ವೃಣೀಷ್ವ ಚ ವರಂ ವಿಪ್ರ ಯಮಿಚ್ಛಸಿ ಯಥಾವಿಧಿ||

ರಾಜನು ಹೇಳಿದನು: “ಭಗವನ್! ನೀನು ಪ್ರಸನ್ನನಾಗಬೇಕು. ಪುತ್ರನೊಂದಿಗೆ ಸಮಾಗಮವನ್ನು ಬಯಸುತ್ತೇನೆ. ವಿಪ್ರ! ಬಯಸಿದ ವರವನ್ನು ಯಥಾವಿಧಿಯಾಗಿ ಕೇಳಿಕೋ!””

12126045 ಋಷಭ ಉವಾಚ|

12126045a ಅಬ್ರವೀಚ್ಚ ಹಿ ತಂ ವಾಕ್ಯಂ ರಾಜಾ ರಾಜೀವಲೋಚನಃ|

---

[522] ಸಂಗತಿಮ್| ಎಂಬ ಪಾಠಾಂತರವಿದೆ (ಭಾರತ ದರ್ಶನ).

[523] ಭಾರತ ದರ್ಶನದಲ್ಲಿ ಈ ಶ್ಲೋಕಕ್ಕೆ ಬದಲಾಗಿ ಇನ್ನೊಂದು ಶ್ಲೋಕವಿದೆ: ಯದೇತದುಕ್ತಂ ಭವತಾ ಸಂಪ್ರತಿ ದ್ವಿಜಸತ್ತಮ| ಸತ್ಯಮೇತನ್ನ ಸಂದೇಹೋ ಯದೇತದ್ವ್ಯಾಹೃತಂ ಮಯಾ||

12126045c ಸತ್ಯಮೇತದ್ಯಥಾ ವಿಪ್ರ ತ್ವಯೋಕ್ತಂ ನಾಸ್ತ್ಯತೋ ಮೃಷಾ||

ಋಷಭನು ಹೇಳಿದನು: "ಅದನ್ನು ಹೇಳಿ ರಾಜೀವಲೋಚನ ರಾಜನು ಈ ಮಾತನ್ನೂ ಹೇಳಿದನು: "ವಿಪ್ರ! ನೀನು ಹೇಳಿದುದೆಲ್ಲವೂ ಸತ್ಯವದುದು. ಅದರಲ್ಲಿ ಸುಳ್ಳಿಂಬುದು ಯಾವುದೂ ಇಲ್ಲ."

12126046a ತತಃ ಪ್ರಹಸ್ಯ ಭಗವಾಂಸ್ತನುರ್ಧರ್ಮಭೃತಾಂ ವರಃ|
12126046c ಪುತ್ರಮಸ್ಯಾನಯತ್ ಕ್ಷಿಪ್ರಂ ತಪಸಾ ಚ ಶ್ರುತೇನ ಚ||

ಆಗ ಆ ಧರ್ಮಭೃತರಲ್ಲಿ ಶ್ರೇಷ್ಠ ಭಗವಾನನು ತನ್ನ ತಪಸ್ಸು ಮತ್ತು ವಿದ್ಯೆಯ ಮೂಲಕ ಕ್ಷಿಪ್ರವಾಗಿ ಅವನ ಪುತ್ರನಲ್ಲು ಅಲ್ಲಿಗೇ ಬರುವಂತೆ ಮಾಡಿದನು.

12126047a ತಂ ಸಮಾನಾಯ್ಯ ಪುತ್ರಂ ತು ತದೋಪಾಲಭ್ಯ ಪಾರ್ಥಿವಮ್|
12126047c ಆತ್ಮಾನಂ ದರ್ಶಯಾಮಾಸ ಧರ್ಮಂ ಧರ್ಮಭೃತಾಂ ವರಃ||

ಆ ಪುತ್ರನನ್ನು ಅಲ್ಲಿಗೇ ಕರೆಯಿಸಿಕೊಂಡು ಅವನು ರಾಜನಿಗೆ ದೊರಕುವಂತೆ ಮಾಡಿ ಆ ಧರ್ಮಭೃತರಲ್ಲಿ ಶ್ರೇಷ್ಠನು ತನ್ನ ಧರ್ಮಸ್ವರೂಪವನ್ನು ತೋರಿಸಿಕೊಟ್ಟನು.

12126048a ಸಂದರ್ಶಯಿತ್ವಾ ಚಾತ್ಮಾನಂ ದಿವ್ಯಮದ್ಭುತದರ್ಶನಮ್|
12126048c ವಿಪಾಪ್ಮಾ ವಿಗತಕ್ರೋಧಶ್ಚ ಚಾರ ವನಮಂತಿಕಾತ್||

ತನ್ನ ದಿವ್ಯ ಅದ್ಭುತದರ್ಶನವನ್ನು ತೋರಿಸಿ ಆ ಪಾಪರಹಿತ ವಿಗತಕ್ರೋಧನು ವನದೆಡೆಗೆ ಹೊರಟು ಹೋದನು.

12126049a ಏತದ್ದೃಷ್ಟಂ ಮಯಾ ರಾಜಂಸ್ತತಶ್ಚ ವಚನಂ ಶ್ರುತಮ್|
12126049c ಆಶಾಮಪನಯಸ್ವಾಶು ತತಃ ಕೃಶತರೀಮಿಮಾಮ್||

ರಾಜನ್! ಇದನ್ನು ನಾನು ನೋಡಿದೆ. ಅವನ ಮಾತುಗಳನ್ನೂ ನಾನು ಕೇಳಿದೆ. ನೀನೂ ಕೂಡ ಶರೀರವನ್ನು ಕೃಶಗೊಳಿಸುವ ಆಶೆಯನ್ನು ತೊರೆ.""

12126050 ಭೀಷ್ಮ ಉವಾಚ|
12126050a ಸ ತತ್ರೋಕ್ತೋ ಮಹಾರಾಜ ಋಷಭೇಣ ಮಹಾತ್ಮನಾ|
12126050c ಸುಮಿತ್ರೋಽಪನಯತ್ ಕ್ಷಿಪ್ರಮಾಶಾಂ ಕೃಶತರೀಂ ತದಾ||

ಭೀಷ್ಮನು ಹೇಳಿದನು: "ಮಹಾರಾಜ! ಮಹಾತ್ಮ ಋಷಭನು ಹೀಹೆ ಹೇಳಲು ಸುಮಿತ್ರನು ಬೇಗನೇ ಅತ್ಯಂತ ದುರ್ಬಲವಾದ ಆಶೆಯನ್ನು ತೊರೆದನು.

12126051a ಏವಂ ತ್ವಮಪಿ ಕೌಂತೇಯ ಶ್ರುತ್ವಾ ವಾಣೀಮಿಮಾಂ ಮಮ|
12126051c ಸ್ಥಿರೋ ಭವ ಯಥಾ ರಾಜನ್ ಹಿಮವಾನಚಲೋತ್ತಮಃ||

ಕೌಂತೇಯ! ಈ ರೀತಿ ನೀನೂ ಕೂಡ ನನ್ನ ಈ ಮಾತನ್ನು ಕೇಳಿ ಅಚಲೋತ್ತಮ ಹಿಮವಾನನಂತೆ ಸ್ಥಿರನಾಗು.

12126052a ತ್ವಂ ಹಿ ದ್ರಷ್ಟಾ ಚ ಶ್ರೋತಾ ಚ ಕೃಚ್ಛ್ರೇಷ್ವರ್ಥಕೃತೇಷ್ವಿಹ|
12126052c ಶ್ರುತ್ವಾ ಮಮ ಮಹಾರಾಜ ನ ಸಂತಪ್ತುಮಿಹಾರ್ಹಸಿ||

ಮಹಾರಾಜ! ಇಂಥಹ ಕಷ್ಟಪರಿಸ್ಥಿಯಿಯಲ್ಲಿಯೂ ನೀನು ಸರಿಯಾದ ಪ್ರಶ್ನೆಗಳನ್ನೇ ಕೇಳುತ್ತಿರುವೆ. ನನ್ನನ್ನು ಕೇಳಿಯೂ ಕೂಡ ನೀನು ಸಂಪಪಿಸಬಾರದು."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ ಋಷಭಗೀತಾಸು ಷಡ್ವಿಂಶತ್ಯಧಿಕಶತತಮೋಽಧ್ಯಾಯಃ||

೧೨೭

ಯಮ-ಗೌತಮ ಸಂವಾದ

ಧರ್ಮದ ವಿಷಯವಾಗಿ ಯಮ ಮತ್ತು ಗೌತಮರ ಸಂವಾದ (1-10).

12127001 ಯುಧಿಷ್ಠಿರ ಉವಾಚ|
12127001a ನಾಮೃತಸ್ಯೇವ ಪರ್ಯಾಪ್ತಿರ್ಮಮಾಸ್ತಿ ಬ್ರುವತಿ ತ್ವಯಿ|
12127001c ತಸ್ಮಾತ್ಕಥಯ ಭೂಯಸ್ತ್ವಂ ಧರ್ಮಮೇವ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಭಾರತ! ಅಮೃತದಂತೆ ನೀನು ಹೇಳುತ್ತಿರುವುದನ್ನು ಕೇಳುವುದರಲ್ಲಿ ನನಗೆ ಇನ್ನೂ ತೃಪ್ತಿಯೇ ಆದಂತಿಲ್ಲ. ಆದುದರಿಂದ ಪಿತಾಮಹ! ಧರ್ಮದ ಕುರಿತು ಇನ್ನೂ ಹೇಳು!"

12127002 ಭೀಷ್ಮ ಉವಾಚ|
12127002a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12127002c ಗೌತಮಸ್ಯ ಚ ಸಂವಾದಂ ಯಮಸ್ಯ ಚ ಮಹಾತ್ಮನಃ||

ಭೀಷ್ಮನು ಹೇಳಿದನು: "ಇದರ ಕುರಿತಾಗಿ ಗೌತಮ ಮತ್ತು ಮಹಾತ್ಮ ಯಮನ ಸಂವಾದ ರೂಪದ ಈ ಪುರಾತನ ಇತಿಹಾಸವನ್ನು ಉದಾಹರಿಸುತ್ತಾರೆ.

12127003a ಪಾರಿಯಾತ್ರಗಿರಿಂ ಪ್ರಾಪ್ಯ ಗೌತಮಸ್ಯಾಶ್ರಮೋ ಮಹಾನ್|

12127003c ಉವಾಸ ಗೌತಮೋ ಯತ್ರ ಕಾಲಂ ತದಪಿ ಮೇ ಶೃಣು॥

ಪಾರಿಯಾತ್ರಗಿರಿಯಲ್ಲಿ ಗೌತಮನು ಮಹಾನ್ ಆಶ್ರಮವನ್ನು ಪಡೆದು ಅಲ್ಲಿ ಎಷ್ಟು ಕಾಲ ಗೌತಮನು ವಾಸಿಸಿದನು ಎನ್ನುವುದನ್ನು ಕೇಳು!

12127004a ಷಷ್ಟಿಂ ವರ್ಷಸಹಸ್ರಾಣಿ ಸೋಽತಪ್ಯದ್ಗೌತಮಸ್ತಪಃ|
12127004c ತಮುಗ್ರತಪಸಂ ಯುಕ್ತಂ ತಪಸಾ ಭಾವಿತಂ ಮುನಿಮ್॥
12127005a ಉಪಯಾತೋ ನರವ್ಯಾಘ್ರ ಲೋಕಪಾಲೋ ಯಮಸ್ತದಾ|
12127005c ತಮಪಶ್ಯತ್ಸುತಪಸಮೃಷಿಂ ವೈ ಗೌತಮಂ ಮುನಿಮ್॥

ನರವ್ಯಾಘ್ರ! ಗೌತಮನು ಅಲ್ಲಿ ಅರವತ್ತು ಸಾವಿರ ವರ್ಷಗಳು ತಪಸ್ಸನ್ನು ಆಚರಿಸಿದನು. ಹಾಗೆ ಅವನು ಉಗ್ರ ತಪಸ್ಸಿನಲ್ಲಿ ನಿರತನಾಗಿರಲು ಆ ತಾಪಸಿ ಭಾವಿತ ಮುನಿಯನ್ನು ಲೋಕಪಾಲ ಯಮನು ನೋಡಿದನು. ಅವನು ಮಹಾತಪಸ್ವಿ ಋಷಿ ಮುನಿ ಗೌತಮನಿಗೆ ಕಾಣಿಸಿಕೊಂಡನು.

12127006a ಸ ತಂ ವಿದಿತ್ವಾ ಬ್ರಹ್ಮರ್ಷಿರ್ಯಮಮಾಗತಮೋಜಸಾ|
12127006c ಪ್ರಾಂಜಲಿಃ ಪ್ರಯತೋ ಭೂತ್ವಾ ಉಪಸೃಪ್ತಸ್ತಮೋಧನಃ॥

ತನ್ನ ತೇಜಸ್ಸಿನಿಂದಲೇ ಯಮನು ಬಂದಿದ್ದಾನೆ ಎಂದು ತಿಳಿದ ಆ ತಪೋಧನ ಬ್ರಹ್ಮರ್ಷಿಯು ಕೈಮುಗಿದು ತಲೆಬಾಗಿ ಅವನ ಬಳಿಸಾರಿದನು.

12127007a ತಂ ಧರ್ಮರಾಜೋ ದೃಷ್ಟ್ವೈವ ನಮಸ್ಕೃತ್ಯ ನರರ್ಷಭಮ್|
12127007c ನ್ಯಮಂತ್ರಯತ ಧರ್ಮೇಣ ಕ್ರಿಯತಾಂ ಕಿಮಿತಿ ಬ್ರುವನ್॥

ನರರ್ಷಭನನ್ನು ಕಂಡಕೂಡಲೇ ಧರ್ಮರಾಜನು ನಮಸ್ಕರಿಸಿ "ನಾನು ಏನು ಮಾಡಲಿ?" ಎಂದು ಪ್ರಶ್ನಿಸಿ, ಧರ್ಮದ ಕುರಿತಾದ ಪ್ರಶ್ನೆಗಳನ್ನು

ಕೇಳಲು ಸಮ್ಮತಿಸಿದನು.

12127008 ಗೌತಮ ಉವಾಚ|
12127008a ಮಾತಾಪಿತೃಭ್ಯಾಮಾನೃಣ್ಯಂ ಕಿಂ ಕೃತ್ವಾ ಸಮವಾಪ್ನುಯಾತ್|
12127008c ಕಥಂ ಚ ಲೋಕಾನಶ್ನಾತಿ ಪುರುಷೋ ದುರ್ಲಭಾನ್ ಶುಭಾನ್||

ಗೌತಮನು ಹೇಳಿದನು: "ಏನನ್ನು ಮಾಡುವುದರಿಂದ ಮಾತಾ-
ಪಿತೃಗಳ ಋಣವನ್ನು ತೀರಿಸಬಹುದು? ಪುರುಷನು ಹೇಗೆ
ದುರ್ಲಭವಾದ ಶುಭ ಲೋಕಗಳನ್ನು ಪಡೆಯಬಹುದು?"

12127009 ಯಮ ಉವಾಚ|
12127009a ತಪಃಶೌಚವತಾ ನಿತ್ಯಂ ಸತ್ಯಧರ್ಮರತೇನ ಚ|
12127009c ಮಾತಾಪಿತ್ರೋರಹರಹಃ ಪೂಜನಂ ಕಾರ್ಯಮಂಜಸಾ||

ಯಮನು ಹೇಳಿದನು: "ನಿತ್ಯವೂ ತಪಸ್ಸು, ಶೌಚ, ಸತ್ಯ-
ಧರ್ಮರತನಾಗಿರಬೇಕು. ಇವುಗಳ ಜೊತೆಗೆ ನಿತ್ಯವೂ ಮಾತಾ-
ಪಿತೃಗಳ ಶುಶ್ರೂಷೆಯನ್ನು ಮಾಡುತ್ತಿರಬೇಕು.

12127010a ಅಶ್ವಮೇಧೈಶ್ಚ ಯಷ್ಟವ್ಯಂ ಬಹುಭಿಃ ಸ್ವಾಪ್ತದಕ್ಷಿಣೈಃ|
12127010c ತೇನ ಲೋಕಾನುಪಾಶ್ನಾತಿ ಪುರುಷೋಽದ್ಭುತದರ್ಶನಾನ್||

ಪರ್ಯಾಪ್ತ ದಕ್ಷಿಣೆಗಳಿಂದ ಕೂಡಿದ ಅನೇಕ ಅಶ್ವಮೇಧಗಳಿಂದ
ದೇವತೆಗಳನ್ನು ಸಂತುಷ್ಟಗೊಳಿಸುವುದರಿಂದ ಪುರುಷನು
ಅದ್ಭುತವಾಗಿ ಕಾಣುವ ಲೋಕಗಳನ್ನು ಪಡೆಯುತ್ತಾನೆ.""

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಯಮಗೌತಮಸಂವಾದೇ ಸಪ್ತವಿಂಶತ್ಯಧಿಕಶತತಮೋಽಧ್ಯಾಯಃ||

ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವದಲ್ಲಿ ಯಮಗೌತಮಸಂವಾದ ಎನ್ನುವ ನೂರಾಇಪ್ಪತ್ತೇಳನೇ ಅಧ್ಯಾಯವು.

೧೨೭

ಆಪತ್ತಿನ ಸಮಯದಲ್ಲಿ ರಾಜನ ಧರ್ಮ (1-49).

12128001 ಯುಧಿಷ್ಠಿರ ಉವಾಚ|
12128001a ಮಿತ್ರೈಃ ಪ್ರಹೀಯಮಾಣಸ್ಯ ಬಹ್ವಮಿತ್ರಸ್ಯ ಕಾ ಗತಿಃ|
12128001c ರಾಜ್ಞಃ ಸಂಕ್ಷೀಣಕೋಶಸ್ಯ ಬಲಹೀನಸ್ಯ ಭಾರತ||

ಯುಧಿಷ್ಠಿರನು ಹೇಳಿದನು: "ಭಾರತ! ಮಿತ್ರರು ಬಿಟ್ಟುಹೋದವನ, ಅನೇಕ ಶತ್ರುಗಳಿರುವವನ, ಬೊಕ್ಕಸವು ಬರಿದಾಗುತ್ತಾ ಬಂದಿರುವವನ ಮತ್ತು ಬಲಹೀನನಾದ ರಾಜನ ಗತಿಯೇನು?

12128002a ದುಷ್ಟಾಮಾತ್ಯಸಹಾಯಸ್ಯ ಸ್ಮೃತಮಂತ್ರಸ್ಯ[524] ಸರ್ವತಃ|
12128002c ರಾಜ್ಯಾತ್ ಪ್ರಚ್ಯವಮಾನಸ್ಯ ಗತಿಮನ್ಯಾಮಪಶ್ಯತಃ||
12128003a ಪರಚಕ್ರಾಭಿಯಾತಸ್ಯ ದುರ್ಬಲಸ್ಯ ಬಲೀಯಸಾ|
12128003c ಅಸಂವಿಹಿತರಾಷ್ಟ್ರಸ್ಯ ದೇಶಕಾಲಾವಜಾನತಃ||
12128004a ಅಪ್ರಾಪ್ಯಂ ಚ ಭವೇತ್ಸಾಂತ್ವಂ ಭೇದೋ ವಾಪ್ಯತಿಪೀಡನಾತ್|
12128004c ಜೀವಿತಂ ಚಾರ್ಥಹೇತೋರ್ವಾ ತತ್ರ ಕಿಂ ಸುಕೃತಂ ಭವೇತ್||

ದುಷ್ಟ ಅಮಾತ್ಯರು ಸಹಾಯಕರಾಗಿರುವ, ಗುಟ್ಟು ಎಲ್ಲಕಡೆ ಬಯಲಾದ, ರಾಜ್ಯದಿಂದ ಭ್ರಷ್ಟನಾದ, ಯಾವ ಗತಿಯನ್ನೂ ಕಾಣದ,

[524] ಚ್ಯುತಮಂತ್ರಸ್ಯ (ಭಾರತ ದರ್ಶನ).

ದುರ್ಬಲ ಶತ್ರುವಿನೊಡನೆ ಯುದ್ಧಮಾಡುತ್ತಿರುವಾಗ ಇನ್ನೊಬ್ಬ ಬಲಶಾಲೀ ರಾಜನು ತನ್ನೊಡನೆ ಯುದ್ಧಮಾಡಲು ಬಂದಾಗ, ರಾಷ್ಟ್ರದ ರಕ್ಷಣೆಯನ್ನು ಮಾಡಲಾಗದ, ದೇಶ-ಕಾಲಗಳನ್ನು ತಿಳಿದುಕೊಂಡಿರದ ರಾಜನಿಗೆ ಸಾಮೋಪಾಯವು ಸಿದ್ಧಿಸಲಾರದು. ತನಗೇ ಪೀಡೆಯನ್ನು ತರುವ ಭೇದೋಪಾಯವೂ ಪ್ರಯೋಜನವಾಗಲಾರದು. ಆಗ ರಾಜನು ಏನು ಮಾಡಬೇಕು? ಜೀವರಕ್ಷಣೆಗೆ ಪ್ರಯತ್ನಿಸಬೇಕೇ? ಅಥವಾ ಅರ್ಥಸಾಧನೆಗೆ ಪ್ರಯತ್ನಿಸಬೇಕೇ? ಏನನ್ನು ಮಾಡಿದರೆ ಅವನಿಗೆ ಒಳ್ಳೆಯದಾಗುತ್ತದೆ?"

12128005 ಭೀಷ್ಮ ಉವಾಚ|
12128005a ಗುಹ್ಯಂ ಮಾ ಧರ್ಮಮಪ್ರಾಕ್ಷೀರತೀವ ಭರತರ್ಷಭ|
12128005c ಅಪೃಷ್ಟೋ ನೋತ್ಸಹೇ ವಕ್ತುಂ ಧರ್ಮಮೇನಂ ಯುಧಿಷ್ಠಿರ||

ಭೀಷ್ಮನು ಹೇಳಿದನು: "ಭರತರ್ಷಭ! ಯುಧಿಷ್ಠಿರ! ನೀನು ಅತ್ಯಂತ ರಹಸ್ಯವಾದ ವಿಷಯವನ್ನೇ ಕೇಳಿರುವೆ. ಇದನ್ನು ನೀನು ಕೇಳಿರದಿದ್ದರೆ ಈ ಧರ್ಮದ ಕುರಿತು ನಾನು ಹೇಳುತ್ತಿರಲಿಲ್ಲ.

12128006a ಧರ್ಮೋ ಹ್ಯಣೀಯಾನ್ವಚನಾದ್ಬುದ್ಧೇಶ್ಚ ಭರತರ್ಷಭ|
12128006c ಶ್ರುತ್ವೋಪಾಸ್ಯ ಸದಾಚಾರೈಃ ಸಾಧುರ್ಭವತಿ ಸ ಕ್ವ ಚಿತ್||

ಭರತರ್ಷಭ! ಧರ್ಮವು ಅತಿ ಸೂಕ್ಷ್ಮವಾದುದು. ಶಾಸ್ತ್ರವಚನಗಳನ್ನು ಮನನ ಮಾಡುವುದರಿಂದಲೂ ಮತ್ತು ಬುದ್ಧಿಯಿಂದಲೂ ಇದರ ರಹಸ್ಯವನ್ನು ತಿಳಿದುಕೊಳ್ಳಬಹುದು. ಶಾಸ್ತ್ರಗಳನ್ನು ಕೇಳಿ ಉಪಾಸಿಸಿ ಸದಾಚಾರಗಳಿಂದ ಮನುಷ್ಯನು ಸಾಧುವಾಗುತ್ತಾನೆ. ಆದರೆ ಅಂಥವರು ಅತಿ ವಿರಳ.

12128007a ಕರ್ಮಣಾ ಬುದ್ಧಿಪೂರ್ವೇಣ ಭವತ್ಯಾಢ್ಯೋ ನ ವಾ ಪುನಃ|
12128007c ತಾದೃಶೋಽಯಮನುಪ್ರಶ್ನಃ ಸ ವ್ಯವಸ್ಯಸ್ವ್ಯಾ[525] ಧಿಯಾ||

ಬುದ್ಧಿಪೂರ್ವಕ ಕರ್ಮಗಳಿಂದ ಮನುಷ್ಯನು ಧನಾಢ್ಯನಾಗಬಹುದು ಅಥವಾ ಅಗದಿಯೂ ಇರಬಹುದು. ನೀನು ಕೇಳಿದ ಪ್ರಶ್ನೆಯು ಅಂಥಹುದೇ ಆಗಿದೆ. ಇದರ ಕುರಿತು ನೀನೇ ನಿನ್ನ ಬುದ್ಧಿಯಿಂದ ವಿಚಾರಿಸಿ ನಿಶ್ಚಯಕ್ಕೆ ಬರಬಹುದು.

12128008a ಉಪಾಯಂ ಧರ್ಮಬಹುಲಂ ಯಾತ್ರಾರ್ಥಂ ಶೃಣು ಭಾರತ|
12128008c ನಾಹಮೇತಾದೃಶಂ ಧರ್ಮಂ ಬುಭೂಷೇ ಧರ್ಮಕಾರಣಾತ್||

ಭಾರತ! ಆಪತ್ಕಾಲದಲ್ಲಿ ಜೀವ ರಕ್ಷಣೆಯ ಸಲುವಾಗಿ ಮಾಡಬೇಕಾದ ಬಹಳಷ್ಟು ಧಾರ್ಮಿಕ ಉಪಾಯಗಳಿವೆ. ಆದರೆ ಧರ್ಮದ ಕಾರಣದಿಂದ ನಾನು ಅಂತಹ ಧರ್ಮವನ್ನು ಆಚರಿಸಲು ಇಚ್ಛಿಸುವುದಿಲ್ಲ.

12128008e ದುಃಖಾದಾನ ಇಹಾಢ್ಯೇಷು ಸ್ಯಾತ್ತು ಪಶ್ಚಾತ್ ಕ್ಷಮೋ ಮತಃ[526]|
12128009a ಅನುಗಮ್ಯ ಗತೀನಾಂ ಚ ಸರ್ವಾಸಾಮೇವ ನಿಶ್ಚಯಮ್||

ಆಪತ್ತಿನ ಸಮಯದಲ್ಲಿಯೂ ಪ್ರಜೆಗಳಿಗೆ ಕಷ್ಟವಾಗುವ ರೀತಿಯಲ್ಲಿ ತೆರಿಗೆಗಳನ್ನು ತೆಗೆದುಕೊಳ್ಳುವುದು ರಾಜನ ವಿನಾಶಕ್ಕೇ ಕಾರಣವಾಗುತ್ತದೆ. ಅನುಸರಿಸಲು ಯೋಗ್ಯ ಗತಿಯುಳ್ಳ ಸರ್ವರ

---

525 ಸಂವ್ಯವಸ್ಯಃ ಸ್ವಯಾ (ಭಾರತ ದರ್ಶನ).

526 ದುಃಖಾದಾನ ಇಹ ಹ್ಯೇಷ ಸ್ಯಾತ್ತು ಪಶ್ಚಾತ್ ಕ್ಷಯೋಪಮಃ| (ಭಾರತ ದರ್ಶನ).

ನಿಶ್ಚಯವೂ ಇದೇ ಆಗಿರುತ್ತದೆ.

12128009c ಯಥಾ ಯಥಾ ಹಿ ಪುರುಷೋ ನಿತ್ಯಂ ಶಾಸ್ತ್ರಮವೇಕ್ಷತೇ|
12128009e ತಥಾ ತಥಾ ವಿಜಾನಾತಿ ವಿಜ್ಞಾನಂ ಚಾಸ್ಯ ರೋಚತೇ||

ಮನುಷ್ಯನು ದಿನನಿತ್ಯವೂ ಯಾವ ಯಾವ ರೀತಿಯಲ್ಲಿ ಶಾಸ್ತ್ರಗಳನ್ನು ಅಧ್ಯಯನ ಮಾಡುವನೋ ಆಯಾಯಾ ರೀತಿಗಳಲ್ಲಿ ಅವನ ಜ್ಞಾನವು ವೃದ್ಧಿಯಾಗುತ್ತದೆ. ಇನ್ನೂ ವಿಶೇಷ ಜ್ಞಾನವನ್ನು ಪಡೆದುಕೊಳ್ಳಬೇಕೆಂಬ ಅಭಿರುಚಿಯೂ ಉಂಟಾಗುತ್ತದೆ.

12128010a ಅವಿಜ್ಞಾನಾದಯೋಗಶ್ಚ ಪುರುಷಸ್ಯೋಪಜಾಯತೇ|
12128010c ಅವಿಜ್ಞಾನಾದಯೋಗೋ ಹಿ[527] ಯೋಗೋ ಭೂತಿಕರಃ ಪುನಃ||

ಶಾಸ್ತ್ರಜ್ಞಾನವಿಲ್ಲದ ಪುರುಷನಿಗೆ ಆಪತ್ಕಾಲದಲ್ಲಿ ಪಾರಾಗುವ ಉಪಾಯವೇ ಹೊಳೆಯುವುದಿಲ್ಲ. ಅಜ್ಞಾನದಿಂದ ಅಯೋಗವುಂಟಾಗುತ್ತದೆ. ಯೋಗವೇ ವೃದ್ಧಿಗೆ ಸಾಧಕವಾಗಿದೆ.

12128011a ಅಶಂಕಮಾನೋ ವಚನಮನಸೂಯುರಿದಂ ಶೃಣು|
12128011c ರಾಜ್ಞಃ ಕೋಶಕ್ಷಯಾದೇವ ಜಾಯತೇ ಬಲಸಂಕ್ಷಯಃ||

ನನ್ನ ಮಾತನ್ನು ಶಂಕಿಸದೇ ಅಸೂಯಾರಹಿತನಾಗಿ ಕೇಳು. ರಾಜನ ಕೋಶವು ಕ್ಷಯಿಸುವುದರಿಂದ ಅವನ ಬಲವೂ ಕ್ಷಯಿಸುತ್ತದೆ.

12128012a ಕೋಶಂ ಸಂಜನಯೇದ್ರಾಜಾ ನಿರ್ಜಲೇಭ್ಯೋ ಯಥಾ ಜಲಮ್|
12128012c ಕಾಲಂ ಪ್ರಾಪ್ಯಾನುಗೃಹ್ಣೀಯಾದೇಷ ಧರ್ಮೋ ऽತ್ರ

---

[527] ವಿಜ್ಞಾನಾದಪಿ ಯೋಗಶ್ಚ (ಭಾರತ ದರ್ಶನ).

ಸಾಂಪ್ರತಮ್[528]॥

12128013a ಉಪಾಯಧರ್ಮಂ ಪ್ರಾಪ್ಯೈನಂ ಪೂರ್ವೈರಾಚರಿತಂ ಜನೈಃ|

ಜಲವಿಲ್ಲದ ಪ್ರದೇಶದಲ್ಲಿ ಬಾವಿಯನ್ನಾದರೂ ತೋಡಿ ನೀರನ್ನು ಹೊರತೆಗೆಯುವಂತೆ ಆಪತ್ಕಾಲದಲ್ಲಿ ರಾಜನು ಹೆಚ್ಚು ಧನವಂತರಲ್ಲದ ಪ್ರಜೆಗಳಿಂದ ಸಾಧ್ಯವಾದಷ್ಟು ಧನವನ್ನು ಸಂಗ್ರಹಿಸಿ ಬೊಕ್ಕಸವನ್ನು ತುಂಬಿಸಬೇಕು. ಒಳ್ಳೆಯ ಕಾಲವು ಬಂದಾಗ ಅದೇ ಧನದಿಂದಲೇ ಪ್ರಜೆಗಳಿಗೆ ಬೇಕಾದುದನ್ನು ಮಾಡಿಕೊಟ್ಟು ಅನುಗ್ರಹಿಸಬೇಕು. ಇದೇ ಸನಾತನ ಧರ್ಮವಾಗಿದೆ. ಹಿಂದಿನ ರಾಜರೂ ಆಪತ್ಕಾಲದಲ್ಲಿ ಈ ಉಪಾಯಧರ್ಮವನ್ನೇ ಆಶ್ರಯಿಸಿ ರಾಜ್ಯಭಾರಮಾಡುತ್ತಿದ್ದರು.

12128013c ಅನ್ಯೋ ಧರ್ಮಃ ಸಮರ್ಥಾನಾಮಾಪತ್ಸ್ವನ್ಯಶ್ಚ ಭಾರತ॥
12128014a ಪ್ರಾಕ್ಕೋಶಃ ಪ್ರೋಚ್ಯತೇ ಧರ್ಮೋ ಬುದ್ಧಿರ್ಧರ್ಮಾದ್ಗರೀಯಸೀ|

ಭಾರತ! ಸಮರ್ಥಶಾಲಿಗಳಿಗೇ ಒಂದು ಧರ್ಮವಿದೆ. ಆಪತ್ತಿನಲ್ಲಿರುವವರಿಗೇ ಮತ್ತೊಂದು ಧರ್ಮವಿದೆ. ಕೋಶದ ನಂತರ ಧರ್ಮಾಚರಣೆಯ ವಿಷಯವು ಬರುತ್ತದೆ. ಅರ್ಥವೇ ಇಲ್ಲದಿದ್ದರೆ ಧರ್ಮವು ಹೇಗೆ ಸಾಧ್ಯವಾಗುತ್ತದೆ? ಜೀವನ ನಿರ್ವಹಣೆಗೆ ವ್ಯವಸ್ಥೆಮಾಡಿಕೊಳ್ಳುವುದೇ ಧರ್ಮಾಚರಣೆಗಿಂತಲೂ ಶ್ರೇಷ್ಠವಾದುದು.

12128014c ಧರ್ಮಂ ಪ್ರಾಪ್ಯ ನ್ಯಾಯವೃತ್ತಿಮಬಲೀಯಾನ್ನ ವಿಂದತಿ॥
12128015a ಯಸ್ಮಾದ್ಧನಸ್ಯೋಪಪತ್ತಿರೇಕಾಂತೇನ ನ ವಿದ್ಯತೇ|
12128015c ತಸ್ಮಾದಾಪದ್ಯಧರ್ಮೋ ಽಪಿ ಶ್ರೂಯತೇ ಧರ್ಮಲಕ್ಷಣಃ॥
12128016a ಅಧರ್ಮೋ ಜಾಯತೇ ಯಸ್ಮಿನ್ನಿತಿ ವೈ ಕವಯೋ ವಿದುಃ|

---

528 ಏಷ ಧರ್ಮಃ ಸನಾತನಃ| (ಭಾರತ ದರ್ಶನ).

ಧರ್ಮವನ್ನು ಅನುಸರಿಸಿದರೂ ದುರ್ಬಲನಿಗೆ ನ್ಯಾಯೋಚಿತ ಜೀವನವನ್ನು ನಡೆಸಲು ಸಾಧ್ಯವಾಗುವುದಿಲ್ಲ. ಧರ್ಮಾಚರಣೆಯಿಂದ ಬಲವು ವೃದ್ಧಿಸುತ್ತದೆಯೆಂದು ಹೇಳಲಿಕ್ಕಾಗುವುದಿಲ್ಲ. ಆದುದರಿಂದ ಆಪತ್ಕಾಲದಲ್ಲಿ ಮಾಡುವ ಅಧರ್ಮವೂ ಧರ್ಮದ ಲಕ್ಷಣಗಳಿಂದ ಕೂಡಿರುತ್ತದೆ. ಸಾಮಾನ್ಯ ಸಮಯಗಳಲ್ಲಿ ಧರ್ಮವಾಗಿರುವುದು ಆಪತ್ಕಾಲದಲ್ಲಿ ಅಧರ್ಮವಾಗಬಹುದೆಂದು ವಿದ್ವಾಂಸರು ಹೇಳುತ್ತಾರೆ.

12128016c ಅನಂತರಃ ಕ್ಷತ್ರಿಯಸ್ಯ ಇತಿ ವೈ ವಿಚಿಕಿತ್ಸಸೇ॥
12128017a ಯಥಾಸ್ಯ ಧರ್ಮೋ ನ ಗ್ಲಾಯೇನ್ನೇಯಾಚ್ಚತ್ರುವಶಂ ಯಥಾ।
12128017c ತತ್ಕರ್ತವ್ಯಮಿಹೇತ್ಯಾಹುರ್ನಾತ್ಮಾನಮವಸಾದಯೇತ್॥

ಆಪತ್ಕಾಲವು ಕಳೆದುಹೋದನಂತರ ಕ್ಷತ್ರಿಯನು ಏನು ಮಾಡಬೇಕೆಂಬ ಸಂಶಯವುಂಟಾಗುತ್ತದೆ. ಇದಕ್ಕೆ ಸಮಾಧಾನವು ಹೀಗಿದೆ. ಆಪತ್ಕಾಲವು ಕಳೆದುಹೋದ ನಂತರ ರಾಜನು ಧರ್ಮಕ್ಕೆ ಹಾನಿಯಾಗದಂತೆ ವರ್ತಿಸಬೇಕು. ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಳ್ಳಬೇಕು. ಯಜ್ಞಯಾಗಾದಿಗಳನ್ನು ಮಾಡಬೇಕು. ಶತ್ರುವಿಗೆ ಅಧೀನನಾಗಿರಬಾರದು.

12128018a ಸನ್ನಾತ್ಮಾ ನ್ಯೈವ ಧರ್ಮಸ್ಯ ನ ಪರಸ್ಯ ನ ಚಾತ್ಮನಃ।
12128018c ಸರ್ವೋಪಾಯೈರುಜ್ಜಿಹೀರ್ಷೇದಾತ್ಮಾನಮಿತಿ ನಿಶ್ಚಯಃ॥

ಆಪತ್ಕಾಲದಲ್ಲಿರುವವನು ತನ್ನ ಅಥವಾ ಇತರರ ಧರ್ಮಾಚರಣೆಯ ಕಡೆ ಲಕ್ಷ್ಯ ಕೊಡಬಾರದು. ಸರ್ವೋಪಾಯಗಳಿಂದಲೂ ತನ್ನನ್ನು ತಾನೇ ಆಪತ್ತಿನಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಬೇಕು. ಇದು ವಿದ್ವಾಂಸರ ಮತವೂ ನಿಶ್ಚಯವೂ ಆಗಿದೆ.

12128019a ತತ್ರ ಧರ್ಮವಿದಾಂ ತಾತ ನಿಶ್ಚಯೋ ಧರ್ಮನೈಪುಣೇ|
12128019c ಉದ್ಯಮೋ ಜೀವನಂ ಕ್ಷತ್ರೇ ಬಾಹುವೀರ್ಯಾದಿತಿ ಶ್ರುತಿಃ||

ಅಯ್ಯಾ! ಧರ್ಮವಿದರ ನಿಶ್ಚಯವು ಹೇಗೆ ಅವರ ಧರ್ಮವಿಷಯಕ ನೈಪುಣ್ಯತೆಯನ್ನು ಸೂಚಿಸುತ್ತದೆಯೋ ಹಾಗೆ ಬಾಹುಬಲದಿಂದ ತನ್ನ ಔನ್ನತ್ಯಕ್ಕೆ ಕಾರ್ಯಮಾಡುವುದು ಕ್ಷತ್ರಿಯನ ನಿಪುಣತೆಯನ್ನು ಸೂಚಿಸುತ್ತದೆ.

12128020a ಕ್ಷತ್ರಿಯೋ ವೃತ್ತಿಸಂರೋಧೇ ಕಸ್ಯ ನಾದಾತುಮರ್ಹತಿ|
12128020c ಅನ್ಯತ್ರ ತಾಪಸಸ್ವಾಚ್ಚ ಬ್ರಾಹ್ಮಣಸ್ವಾಚ್ಚ ಭಾರತ||

ಭಾರತ! ಕ್ಷತ್ರಿಯನ ಜೀವಿಕೆಗೇ ತೊಂದರೆಯುಂಟಾದರೆ ಅವನು ಬ್ರಾಹ್ಮಣರ ಮತ್ತು ತಪಸ್ವಿಗಳ ಸ್ವತ್ತನ್ನು ಬಿಟ್ಟು ಬೇರೆ ಯಾರಿಂದ ತಾನೇ ತೆಗೆದುಕೊಳ್ಳಲು ಯೋಗ್ಯನಾಗುವುದಿಲ್ಲ? ಅವರನ್ನು ಬಿಟ್ಟು ಉಳಿದ ಎಲ್ಲವರಿಂದಲೂ ರಾಜ್ಯನಿರ್ವಹಣೆಗೆ ಧನವನ್ನು ಸಂಗ್ರಹಿಸಲು ರಾಜನು ಅರ್ಹನಾಗಿದ್ದಾನೆ.

12128021a ಯಥಾ ವೈ ಬ್ರಾಹ್ಮಣಃ ಸೀದನ್ನಯಾಜ್ಯಮಪಿ ಯಾಜಯೇತ್|
12128021c ಅಭೋಜ್ಯಾನ್ನಾನಿ ಚಾಶ್ನೀಯಾತ್ತಥೇದಂ ನಾತ್ರ ಸಂಶಯಃ||

ಆಪತ್ತಿನಲ್ಲಿರುವ ಬ್ರಾಹ್ಮಣನು ಹೇಗೆ ಯಜ್ಞಕ್ಕೆ ಅಧಿಕಾರವಿಲ್ಲದಿರುವವರಿಂದಲೂ ಯಜ್ಞಮಾಡಿಸಬಹುದೋ, ಪ್ರಾಣಗಳನ್ನುಳಿಸಿಕೊಳ್ಳಲು ಅಭೋಜ್ಯವಾದ ಅನ್ನವನ್ನಾದರೂ ತಿನ್ನಬಹುದೋ ಹಾಗೆ ರಾಜನು ಆಪತ್ಕಾಲದಲ್ಲಿ ಬ್ರಾಹ್ಮಣರ ಮತ್ತು ತಾಪಸರ ಧನವನ್ನು ಬಿಟ್ಟು ಯಾರಿಂದ ಬೇಕಾದರೂ ಧನವನ್ನು ಸಂಗ್ರಹಿಸಬಹುದು. ಇದರಲ್ಲಿ ಸಂಶಯವಿಲ್ಲ.

12128022a ಪೀಡಿತಸ್ಯ ಕಿಮದ್ವಾರಮುತ್ಪಥೋ ನಿಧೃತಸ್ಯ ವಾ|
12128022c ಅದ್ವಾರತಃ ಪ್ರದ್ರವತಿ ಯದಾ ಭವತಿ ಪೀಡಿತಃ||

ಪೀಡಿತನಾಗಿರುವವನಿಗೆ ಯಾವ ಮಾರ್ಗವು ತಾನೇ ಹೋಗಬಾದದ್ದು ಎಂದೆನಿಸಿಕೊಳ್ಳುತ್ತದೆ? ಯಾವಕಡೆಯಿಂದ ಓಡಿಹೋಗಲು ಸಾಧ್ಯವಾಗುವುದೋ ಅದೇ ಅವನಿಗೆ ದ್ವಾರವಾಗುತ್ತದೆ. ಬಂಧಿಸಲ್ಪಟ್ಟಿರುವವನಿಗೆ ನ್ಯಾಯವಲ್ಲದ ಮಾರ್ಗವೇ ಮಾರ್ಗವಾಗುತ್ತದೆ.

12128023a ತಸ್ಯ ಕೋಶಬಲಜ್ಯಾನ್ಯಾ ಸರ್ವಲೋಕಪರಾಭವಃ|
12128023c ಭೈಕ್ಷಚರ್ಯಾ ನ ವಿಹಿತಾ ನ ಚ ವಿಟ್ ಶೂದ್ರಜೀವಿಕಾ||

ಕೋಶ-ಸೈನ್ಯಗಳಿಗೆ ಗ್ಲಾನಿಯುಂಟಾಗಿ ಪ್ರಜೆಗಳೆಲ್ಲರೂ ಪರಾಭವರಾದಾಗ ಕ್ಷತ್ರಿಯನು ಮೇಲೆ ಹೇಳಿದ ಆಪದ್ಧರ್ಮವನ್ನೇ ಆಶ್ರಯಿಸಬೇಕು. ಕ್ಷತ್ರಿಯನಿಗೆ ಭಿಕ್ಷೆ ಬೇಡುವುದು ಉಚಿತವಲ್ಲ. ವೈಶ್ಯ-ಶೂದ್ರರ ಜೀವನವನ್ನು ನಡೆಸುವುದೂ ವಿಹಿತವಲ್ಲ.

12128024a ಸ್ವಧರ್ಮಾನಂತರಾ ವೃತ್ತಿರ್ಯಾನ್ಯಾನನುಪಜೀವತಃ|
12128024c ವಹತಃ ಪ್ರಥಮಂ ಕಲ್ಪಮನುಕಲ್ಪೇನ ಜೀವನಮ್||

ಸ್ವಧರ್ಮಾಸಾರವಾಗಿ ಜೀವನನಿರ್ವಹಣೆಯನ್ನು ಮಾಡಲು ಸಾಧ್ಯವಾಗದಿದ್ದರೆ ಸ್ವಧರ್ಮವಲ್ಲದ ವೃತ್ತಿಯಿಂದಾದರೂ ಜೀವನವನ್ನು ನಡೆಸಬೇಕೆಂದು ಹೇಳಿದೆ. ಆಪತ್ಕಾಲದಲ್ಲಿ ಸ್ವಧರ್ಮವಾದ ಮೊದಲನೆಯ ಕಲ್ಪವನ್ನು ಬಳಸಲಿಕ್ಕಾಗದಿದ್ದಲ್ಲಿ ತನಗಿಂತಲೂ ಕೆಳಗಿನ ವರ್ಣದವರ ವೃತ್ತಿಯನ್ನೂ ಅವಲಂಬಿಸಿ ಜೀವನವನ್ನೂ ನಡೆಸಬಹುದು.

12128025a ಆಪದ್ಗತೇನ ಧರ್ಮಾಣಾಮನ್ಯಾಯೇನೋಪಜೀವನಮ್|
12128025c ಅಪಿ ಹ್ಯೇತದ್ ಬ್ರಾಹ್ಮಣೇಷು ದೃಷ್ಟಂ ವೃತ್ತಿಪರಿಕ್ಷಯೇ||

ಆಪತ್ತಿನಲ್ಲಿರುವವನು ಧರ್ಮಕ್ಕೆ ವಿಪರೀತವಾಗಿ ಉಪಜೀವನ ಮಾಡಬೇಕಾಗುತ್ತದೆ. ಆಪತ್ಕಾಲದಲ್ಲಿ ತಮ್ಮ ವೃತ್ತಿಯನ್ನು ತೊರೆದು ಕೆಳಗಿನ ವರ್ಣದವರ ವೃತ್ತಿಯನ್ನು ಮಾಡುವುದು ಬ್ರಾಹ್ಮಣರಲ್ಲಿಯೂ ಕಂಡುಬರುತ್ತದೆ.

12128026a ಕ್ಷತ್ರಿಯೇ ಸಂಶಯಃ ಕಃ ಸ್ಯಾದಿತ್ಯೇತನ್ನಿಶ್ಚಿತಂ ಸದಾ|
12128026c ಆದದೀತ ವಿಶಿಷ್ಟೇಭ್ಯೋ ನಾವಸೀದೇತ್ಕಥಂ ಚನ||

ಹಾಗಿರುವಾಗ ಕ್ಷತ್ರಿಯರ ಕುರಿತು ಸಂಶಯವೇಕೆ? ಸದಾ ಹೀಗೆಯೇ ನಡೆದುಕೊಳ್ಳಬೇಕೆಂದು ನಿಶ್ಚಯವಾಗಿದೆ. ಧನವಂತರಿಂದ ಬಲಾತ್ಕಾರದಿಂದಾದರೂ ಧನವನ್ನು ಸಂಗ್ರಹಿಸಬೇಕು. ಧನದ ಅಭಾವದಿಂದ ನಾಶಹೊಂದಬಾರದು.

12128027a ಹಂತಾರಂ ರಕ್ಷಿತಾರಂ ಚ ಪ್ರಜಾನಾಂ ಕ್ಷತ್ರಿಯಂ ವಿದುಃ|
12128027c ತಸ್ಮಾತ್ಸಂರಕ್ಷತಾ ಕಾರ್ಯಮಾದಾನಂ ಕ್ಷತ್ರಬಂಧುನಾ||

ಕ್ಷತ್ರಿಯನು ಪ್ರಜೆಗಳ ಹಂತಾರನೂ ಮತ್ತು ರಕ್ಷಿತನೂ ಎಂದು ತಿಳಿಯುತ್ತಾರೆ. ಆದುದರಿಂದ ಕ್ಷತ್ರಬಂಧುವು ಪ್ರಜೆಗಳನ್ನು ಸಂರಕ್ಷಿಸುತ್ತಿರುವಾಗಲೇ ಅವರಿಂದ ಧನವನ್ನು ಸಂಗ್ರಹಿಸಬೇಕು.

12128028a ಅನ್ಯತ್ರ ರಾಜನ್ ಹಿಂಸಾಯಾ ವೃತ್ತಿರ್ನೇಹಾಸ್ತಿ ಕಸ್ಯ ಚಿತ್|
12128028c ಅಪ್ಯರಣ್ಯಸಮುತ್ಥಸ್ಯ ಏಕಸ್ಯ ಚರತೋ ಮುನೇಃ||

ರಾಜನ್! ಈ ಲೋಕದಲ್ಲಿ ಯಾರೊಬ್ಬರ ಜೀವನವೃತ್ತಿಯೂ

ಹಿಂಸೆಯಿಂದ ರಹಿತವಾಗಿಲ್ಲ. ಅರಣ್ಯದಲ್ಲಿ ಏಕಾಂಗಿಯಾಗಿ
ಸಂಚರಿಸುವ ಮುನಿಯ ವೃತ್ತಿಯೂ ಹಿಂಸೆಯಿಂದ
ರಹಿತವಾಗಿಲ್ಲವೆಂದಮೇಲೆ ಬೇರೆಯವರ ವಿಷಯದಲ್ಲಿ
ಹೇಳುವುದೇನಿದೆ?

12128029a ನ ಶಂಖಲಿಖಿತಾಂ ವೃತ್ತಿಂ ಶಕ್ಯಮಾಸ್ಥಾಯ ಜೀವಿತುಮ್|
12128029c ವಿಶೇಷತಃ ಕುರುಶ್ರೇಷ್ಠ ಪ್ರಜಾಪಾಲನಮೀಪ್ಸತಾ||

ಕುರುಶ್ರೇಷ್ಠ! ಹಣೆಯಲ್ಲಿ ಬರೆದುದ್ದುದು ಆಗುತ್ತದೆ ಎಂಬ
ಭಾವನೆಯನ್ನಿಟ್ಟುಕೊಂಡು ಜೀವನವನ್ನು ನಿರ್ವಹಿಸಲು ಯಾರಿಂದಲೂ
ಸಾಧ್ಯವಾಗುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ಪ್ರಜೆಗಳನ್ನು
ಪಾಲಿಸುವ ಇಚ್ಛೆಯುಳ್ಳ ರಾಜನು ಅದೃಷ್ಟವನ್ನೇ ನಿರೀಕ್ಷಿಸುತ್ತಾ
ಜೀವನವನ್ನು ನಿರ್ವಹಿಸಲು ಖಂಡಿತಾ ಸಾಧ್ಯವಿಲ್ಲ.

12128030a ಪರಸ್ಪರಾಭಿಸಂರಕ್ಷಾ ರಾಜ್ಞಾ ರಾಷ್ಟ್ರೇಣ ಚಾಪದಿ|
12128030c ನಿತ್ಯಮೇವೇಹ ಕರ್ತವ್ಯಾ ಏಷ ಧರ್ಮಃ ಸನಾತನಃ||

ಆಪತ್ಕಾಲದಲ್ಲಿ ರಾಜ ಮತ್ತು ಪ್ರಜೆಗಳು ಪರಸ್ಪರರನ್ನು
ಸಂರಕ್ಷಿಸುತ್ತಿರಬೇಕು. ನಿತ್ಯವೂ ಇದು ಮಾಡಬೇಕಾದ ಕರ್ತವ್ಯವು.
ಇದೇ ಸನಾತನ ಧರ್ಮವು.

12128031a ರಾಜಾ ರಾಷ್ಟ್ರಂ ಯಥಾಪತ್ಸು ದ್ರವ್ಯೌಘೈಃ ಪರಿರಕ್ಷತಿ|
12128031c ರಾಷ್ಟ್ರೇಣ ರಾಜಾ ವ್ಯಸನೇ ಪರಿರಕ್ಷ್ಯಸ್ತಥಾ ಭವೇತ್||

ಪ್ರಜೆಗಳು ಸಂಕಟದಲ್ಲಿದ್ದಾಗ ರಾಜನು ಹೇಗೆ ಧನದ ರಾಶಿಗಳನ್ನೇ
ವ್ಯಯಮಾಡಿ ಅವರನ್ನು ರಕ್ಷಿಸುವನೋ ಹಾಗೆ ಪ್ರಜೆಗಳೂ ಕೂಡ
ರಾಜನು ಆಪತ್ತಿನಲ್ಲಿರುವಾಗ ಅವನನ್ನು ರಕ್ಷಿಸಬೇಕು.

12128032a ಕೋಶಂ ದಂಡಂ ಬಲಂ ಮಿತ್ರಂ ಯದನ್ಯದಪಿ ಸಂಚಿತಮ್|
12128032c ನ ಕುರ್ಯಿತಾಂತರಂ ರಾಷ್ಟ್ರೇ ರಾಜಾ ಪರಿಗತೇ ಕ್ಷುಧಾ||

ರಾಜನು ಹಸಿವಿನಿಂದ ಪೀಡಿತನಾಗಿ ಜೀವನ ನಿರ್ವಹಣೆಗೆ
ಕಷ್ಟಪಡುತ್ತಿದ್ದರೂ ಕೋಶ, ರಾಜದಂದ, ಸೈನ್ಯ, ಮಿತ್ರರು ಮತ್ತು
ಸಂಗ್ರಹಿಸ ವಸ್ತುಗಳನ್ನು ಯಾವುದೇ ಕಾರಣಕ್ಕೂ ದೂರಮಾಡಬಾರದು.

12128033a ಬೀಜಂ ಭಕ್ತೇನ ಸಂಪಾದ್ಯಮಿತಿ ಧರ್ಮವಿದೋ ವಿದುಃ|
12128033c ಅತ್ರೈತಚ್ಚಂಬರಸ್ಯಾಹುರ್ಮಹಾಮಾಯಸ್ಯ ದರ್ಶನಮ್||

ತಾನು ತಿನ್ನುವ ಧಾನ್ಯದಿಂದಲಾದರೂ ಬೀಜವನ್ನು ಉಳಿಸಿಕೊಳ್ಳಬೇಕು
ಎನ್ನುವುದು ಧರ್ಮವನ್ನು ತಿಳಿದವರ ಅಭಿಪ್ರಾಯವಾಗಿದೆ. ಈ
ವಿಷಯದಲ್ಲಿ ಮಹಾಮಾಯಾವಿ ಶಂಬರಾಸುರನ ಅಭಿಪ್ರಾಯವನ್ನು
ಉದಾಹರಿಸುತ್ತಾರೆ.

12128034a ಧಿಕ್ತಸ್ಯ ಜೀವಿತಂ ರಾಜ್ಞೋ ರಾಷ್ಟ್ರೇ ಯಸ್ಯಾವಸೀದತಿ|
12128034c ಅವೃತ್ತ್ಯಾಂತ್ಯಮನುಷ್ಯೋಽಪಿ ಯೋ ವೈ ವೇದ ಶಿಬೇರ್ವಚಃ||

“ಯಾವ ರಾಜನ ರಾಜ್ಯದ ಪ್ರಜೆಗಳೂ ಮತ್ತು ಅಲ್ಲಿಗೆ ಆಗಮಿಸಿದ
ವಿದೇಶೀಯರೂ ಜೀವನಿರ್ವಹಣೆಗೆ ಮಾರ್ಗವೇ ಇಲ್ಲದೇ
ಕಷ್ಟಪಡುವರೋ ಅಂತಹ ರಾಜನ ಜೀವನಕ್ಕೆ ಧಿಕ್ಕಾರವಿರಲಿ!”

12128035a ರಾಜ್ಞಃ ಕೋಶಬಲಂ ಮೂಲಂ ಕೋಶಮೂಲಂ ಪುನರ್ಬಲಮ್|
12128035c ತನ್ಮೂಲಂ ಸರ್ವಧರ್ಮಾಣಾಂ ಧರ್ಮಮೂಲಾಃ ಪುನಃ ಪ್ರಜಾಃ||

ರಾಜನಿಗೆ ಕೋಶಬಲವೇ ಮೂಲವು. ಪುನಃ ಕೋಶವು ಸೈನ್ಯದ
ಮೂಲವು. ಸರ್ವಧರ್ಮಗಳಿಗೆ ಸೇನೆಯು ಮೂಲ. ಧರ್ಮವು ಪುನಃ
ಪ್ರಜೆಗಳಿಗೆ ಮೂಲವಾಗಿದೆ.

12128036a ನಾನ್ಯಾನಪೀಡಯಿತ್ವೇಹ ಕೋಶಃ ಶಕ್ಯಃ ಕುತೋ ಬಲಮ್|
12128036c ತದರ್ಥಂ ಪೀಡಯಿತ್ವಾ ಚ ದೋಷಂ ನ ಪ್ರಾಪ್ತುಮರ್ಹತಿ||

ಇತರರನ್ನು ಪೀಡಿಸದೆಯೇ ಧನಸಂಗ್ರಹವು ಸಾಧ್ಯವಾಗುವುದಿಲ್ಲ. ಧನಸಂಗ್ರಹವಿಲ್ಲದಿದ್ದರೆ ಸೈನ್ಯಸಂಗ್ರಹವು ಹೇಗೆ ತಾನೇ ಸಾಧ್ಯವಾಗುತ್ತದೆ? ಆದುದರಿಂದ ಆಪತ್ಕಾಲದಲ್ಲಿ ರಾಜನು ಪ್ರಜೆಗಳನ್ನು ಪೀಡಿಸಿದರೂ ಪ್ರಜಾಪೀಡನ ದೋಷಕ್ಕೆ ಭಾಗಿಯಾಗುವುದಿಲ್ಲ.

12128037a ಅಕಾರ್ಯಮಪಿ ಯಜ್ಞಾರ್ಥಂ ಕ್ರಿಯತೇ ಯಜ್ಞಕರ್ಮಸು|
12128037c ಏತಸ್ಮಾತ್ಕಾರಣಾದ್ರಾಜಾ ನ ದೋಷಂ ಪ್ರಾಪ್ತುಮರ್ಹತಿ||

ಯಜ್ಞಕರ್ಮಗಳಲ್ಲಿ ಸಿದ್ಧಿಗಾಗಿ ಯೋಗ್ಯವಲ್ಲದ ಕಾರ್ಯಗಳನ್ನೂ ಮಾಡಬೇಕಾಗುತ್ತದೆ. ಆದರೆ ಅದನ್ನು ದೋಷವೆಂದು ಯಾರೂ ಪರಿಗಣಿಸುವುದಿಲ್ಲ. ಹೀಗೆಯೇ ಆಪತ್ಕಾಲದಲ್ಲಿ ರಾಜನು ದೋಷಗಳಿಗೆ ಭಾಗಿಯಾಗುವುದಿಲ್ಲ.

12128038a ಅರ್ಥಾರ್ಥಮನ್ಯದ್ಭವತಿ ವಿಪರೀತಮಥಾಪರಮ್|
12128038c ಅನರ್ಥಾರ್ಥಮಥಾಪ್ಯನ್ಯತ್ತತ್ಸರ್ವಂ ಹ್ಯರ್ಥಲಕ್ಷಣಮ್|
12128038e ಏವಂ ಬುದ್ಧ್ಯಾ ಸಂಪ್ರಪಶ್ಯೇನ್ಮೇಧಾವೀ ಕಾರ್ಯನಿಶ್ಚಯಮ್||

ಆಪತ್ಕಾಲದಲ್ಲಿ ಪ್ರಜಾಪೀಡನವು ಅರ್ಥಸಂಗ್ರಹಕ್ಕಾಗಿರುವುದರಿಂದ ಅರ್ಥಕಾರಿಯಾಗುತ್ತದೆ. ಪರ್ಥಸಂಗ್ರಹಣ ಮಾಡದಿರುವುದೇ ರಾಜನಿಗೆ ಅನರ್ಥಕವಾಗುತ್ತದೆ. ಹೀಗೆಯೇ ಅನರ್ಥಕಾರಿಗಳೆಂದೆನಿಸುವ ಸೈನ್ಯ ಸಂಗ್ರಹಾದಿಗಳು ಯುದ್ಧವು ಸನ್ನಿಹಿತವಾದಾಗ ಅರ್ಥಕಾರಿಗಳಾಗುತ್ತವೆ. ಬುದ್ಧಿವಂತನು ಹೀಗೆ ಬುದ್ಧಿಯಿಂದ ವಿಚಾರಿಸಿ ಕರ್ತವ್ಯವನ್ನು

ನಿಶ್ಚಯಿಸಬೇಕು.

12128039a ಯಜ್ಞಾರ್ಥಮನ್ಯದ್ಭವತಿ ಯಜ್ಞೇ ನಾರ್ಥಸ್ತಥಾಪರಃ|
12128039c ಯಜ್ಞಸ್ಯಾರ್ಥಾರ್ಥಮೇವಾನ್ಯತ್ತತ್ಸರ್ವಂ ಯಜ್ಞಸಾಧನಮ್||

ಯಜ್ಞಾರ್ಥಕ್ಕಾಗಿ ಮಾಡಿದ ಎಲ್ಲವೂ ಯಜ್ಞವೇ ಆಗುತ್ತದೆ. ಅಲ್ಲಿ ಅನರ್ಥಕಾರಿಯಾದುದು ಯಾವುದೂ ಇಲ್ಲ.

12128040a ಉಪಮಾಮತ್ರ ವಕ್ಷ್ಯಾಮಿ ಧರ್ಮತತ್ತ್ವಪ್ರಕಾಶಿನೀಮ್|
12128040c ಯೂಪಂ ಚಿಂದಂತಿ ಯಜ್ಞಾರ್ಥಂ ತತ್ರ ಯೇ ಪರಿಪಂಥಿನಃ||
12128041a ದ್ರುಮಾಃ ಕೇ ಚನ ಸಾಮಂತಾ ಧ್ರುವಂ ಚಿಂದಂತಿ ತಾನಪಿ|
12128041c ತೇ ಚಾಪಿ ನಿಪತಂತೋಽನ್ಯಾನ್ನಿಘ್ನಂತಿ ಚ ವನಸ್ಪತೀನ್||

ಧರ್ಮತತ್ತ್ವಪ್ರಕಾಶಕವಾದ ಉಪಮೆಯೊಂದನ್ನು ಹೇಳುತ್ತೇನೆ. ಯಜ್ಞದ ಯೂಪಕ್ಕಾಗಿ ವೃಕ್ಷವನ್ನು ಕಡಿಯುತ್ತಾರೆ. ಹಾಗೆ ಕಡಿಯುವಾಗ ಅದರ ಹತ್ತಿರದಲ್ಲಿರುವ ವನಸ್ಪತಿಗಳೂ ನಾಶವಾಗುತ್ತವೆ.

12128042a ಏವಂ ಕೋಶಸ್ಯ ಮಹತೋ ಯೇ ನರಾಃ ಪರಿಪಂಥಿನಃ|
12128042c ತಾನಹತ್ವಾ ನ ಪಶ್ಯಾಮಿ ಸಿದ್ಧಿಮತ್ರ ಪರಂತಪ||

ಪರಂತಪ! ಹೀಗೆ ಕೋಶಸಂಗ್ರಹದಲ್ಲಿ
ಅಡ್ಡಿಯನ್ನುಂಟುಮಾಡುವವರನ್ನು ಸಂಹರಿಸದೇ
ಕೋಶಸಂಗ್ರಹಕಾರ್ಯವು ಸಫಲವಾಗಿರುವುದನ್ನು ನಾನು ಎಲ್ಲಿಯೂ ಕಂಡಿಲ್ಲ.

12128043a ಧನೇನ ಜಯತೇ ಲೋಕಾವುಭೌ ಪರಮಿಮಂ ತಥಾ|
12128043c ಸತ್ಯಂ ಚ ಧರ್ಮವಚನಂ ಯಥಾ ನಾಸ್ತ್ಯಧನಸ್ತಥಾ||

ಧನದಿಂದ ಮನುಷ್ಯನು ಇಹಲೋಕ-ಪರಲೋಕಗಳೆರಡನ್ನೂ ಜಯಿಸುತ್ತಾನೆ. ಸತ್ಯಧರ್ಮಗಳನ್ನು ಸಾಧಿಸುತ್ತಾನೆ. ಆದರೆ ನಿರ್ಧನನಿಗೆ ಅವು ಸಾಧ್ಯವಾಗುವುದಿಲ್ಲ.

12128044a ಸರ್ವೋಪಾಯೈರಾದದೀತ ಧನಂ ಯಜ್ಞಪ್ರಯೋಜನಮ್|
12128044c ನ ತುಲ್ಯದೋಷಃ ಸ್ಯಾದೇವಂ ಕಾರ್ಯಾಕಾರ್ಯೇಷು ಭಾರತ||

ಯಜ್ಞ ಪ್ರಯೋಜಕ ವಸ್ತುಗಳನ್ನು ಸರ್ವೋಪಾಯಗಳಿಂದ ಸಂಗ್ರಹಿಸಬೇಕು. ಭಾರತ! ಕಾರ್ಯ ಮತ್ತು ಅಕಾರ್ಯಗಳಲ್ಲಿ ದೋಷವು ಒಂದೇ ಸಮನಾಗಿರುವುದಿಲ್ಲ.

12128045a ನೈತೌ ಸಂಭವತೋ ರಾಜನ್ಕಥಂ ಚಿದಪಿ ಭಾರತ|
12128045c ನ ಹ್ಯರಣ್ಯೇಷು ಪಶ್ಯಾಮಿ ಧನವೃದ್ಧಾನಹಂ ಕ್ವ ಚಿತ್||

ರಾಜನ್! ಭಾರತ! ಧನಸಂಗ್ರಹ ಮತು ಧನದ ತ್ಯಾಗ ಇವೆರಡೂ ಒಂದೇ ವ್ಯಕ್ತಿಯಲ್ಲಿ ಒಟ್ಟಿಗೇ ಇರಲು ಸಾಧ್ಯವಿಲ್ಲ. ಅರಣ್ಯದಲ್ಲಿರುವವರಲ್ಲಿಯೂ ಧನವೃದ್ಧರಾದವಎಅನ್ನು ನಾನು ಇದೂವರೆಗೂ ಕಂಡಿಲ್ಲ.

12128046a ಯದಿದಂ ದೃಶ್ಯತೇ ವಿತ್ತಂ ಪೃಥಿವ್ಯಾಮಿಹ ಕಿಂ ಚನ|
12128046c ಮಮೇದಂ ಸ್ಯಾನ್ಮಮೇದಂ ಸ್ಯಾದಿತ್ಯಯಂ ಕಾಂಕ್ಷತೇ ಜನಃ||

ಈ ಪೃಥ್ವಿಯಲ್ಲಿರುವ ಐಶ್ವರ್ಯವನ್ನು ಜನರು ಇದು ನನ್ನದಾಗಲಿ ಎಂದೇ ಆಶೆಪಡುತ್ತಿರುತ್ತಾರೆ.

12128047a ನ ಚ ರಾಜ್ಯಸಮೋ ಧರ್ಮಃ ಕಶ್ಚಿದಸ್ತಿ ಪರಂತಪ|
12128047c ಧರ್ಮಂ ಶಂಸಂತಿ ತೇ ರಾಜ್ಞಾಮಾಪದರ್ಥಮಿತೋಽನ್ಯಥಾ||

ಪರಂತಪ! ರಾಜನಿಗೆ ರಾಜ್ಯರಕ್ಷಣೆಗೆ ಸಮನಾದ ಬೇರೆ ಯಾವ ಧರ್ಮವೂ ಇಲ್ಲ. ಈಗ ಹೇಳಿರುವ ಈ ಧರ್ಮವು ರಾಜನು ಆಪತ್ತಿನಲ್ಲಿರುವಾಗ ಪಾಲಿಸಬೇಕಾದ ಧರ್ಮ. ಸಾಮಾನ್ಯಕಾಲಗಳಲ್ಲಿ ಅನುಸರಿಸಬೇಕಾದ ಧರ್ಮವಿದಲ್ಲ.

12128048a ದಾನೇನ ಕರ್ಮಣಾ ಚಾನ್ಯೇ ತಪಸಾನ್ಯೇ ತಪಸ್ವಿನಃ|
12128048c ಬುದ್ಧ್ಯಾ ದಾಕ್ಷ್ಯೇಣ ಚಾಪ್ಯನ್ಯೇ ಚಿನ್ವಂತಿ[529] ಧನಸಂಚಯಾನ್||

ದಾನದಿಂದ, ಕರ್ಮಗಳಿಂದ, ಅನ್ಯ ತಪಸ್ವಿಗಳು ತಪಸ್ಸಿನಿಂದ, ಬುದ್ಧಿಯಿಂದ, ಮತ್ತು ಅನ್ಯರು ದಕ್ಷತೆಯಿಂದ ಧನವನ್ನು ಸಂಗ್ರಹಿಸುತ್ತಾರೆ.

12128049a ಅಧನಂ ದುರ್ಬಲಂ ಪ್ರಾಹುರ್ಧನೇನ ಬಲವಾನ್ ಭವೇತ್|
12128049c ಸರ್ವಂ ಧನವತಃ ಪ್ರಾಪ್ಯಂ ಸರ್ವಂ ತರತಿ ಕೋಶವಾನ್|
12128049e ಕೋಶಾದ್ಧರ್ಮಶ್ಚ ಕಾಮಶ್ಚ ಪರೋ ಲೋಕಸ್ತಥಾಪ್ಯಯಮ್||

ನಿರ್ಧನನನ್ನು ದುರ್ಬಲನೆಂದು ಹೇಳುತ್ತಾರೆ. ಧನದಿಂದ ಬಲವಾನನಾಗುತ್ತಾನೆ. ಧನವಂತನಿಗೆ ಎಲ್ಲವೂ ಪ್ರಾಪ್ತವಾಗುತ್ತದೆ. ಕೋಶವಂತನು ಎಲ್ಲ ಕಷ್ಟಗಳನ್ನೂ ಪಾರುಮಾಡುತಾನೆ. ಕೋಶದಿಂದ ಧರ್ಮ-ಕಾಮಗಳೂ ಇಹ-ಪರಗಳೂ ದೊರೆಯುತ್ತವೆ."

ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಣಿ
ಅಷ್ಟವಿಂಶತ್ಯಧಿಕಶತತಮೋऽಧ್ಯಾಯಃ||
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ

[529] ವಿಂದಂತಿ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಪರ್ವದಲ್ಲಿ ನೂರಾಇಪ್ಪತ್ತೆಂಟನೇ ಅಧ್ಯಾಯವು.
ಇತಿ ಶ್ರೀ ಮಹಾಭಾರತೇ ಶಾಂತಿ ಪರ್ವಣಿ ರಾಜಧರ್ಮ ಪರ್ವಃ|
ಇದು ಶ್ರೀ ಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ರಾಜಧರ್ಮ ಪರ್ವವು|
ಇದೂವರೆಗಿನ ಒಟ್ಟು ಮಹಾಪರ್ವಗಳು – ೧೧/೧೮,
ಉಪಪರ್ವಗಳು-೮೪/೧೦೦, ಅಧ್ಯಾಯಗಳು-೧೪೫೬/೧೯೯೫,
ಶ್ಲೋಕಗಳು-೫೪೫೨೦/೭೩೭೮೪

ಆಪದ್ಧರ್ಮ ಪರ್ವ

೧೨೯

ಆಪತ್ತಿನಲ್ಲಿರುವ ರಾಜನ ಕಾರ್ಯಗಳ ಕುರಿತಾದ ಯುಧಿಷ್ಠಿರನ ಪ್ರಶ್ನೆಗಳಿಗೆ ಭೀಷ್ಮನು ಉತ್ತರಿಸಿದುದು (1-14).

12129001 ಯುಧಿಷ್ಠಿರ ಉವಾಚ|
12129001a ಕ್ಷೀಣಸ್ಯ ದೀರ್ಘಸೂತ್ರಸ್ಯ ಸಾನುಕ್ರೋಶಸ್ಯ ಬಂಧುಷು|
12129001c ವಿರಕ್ತಪೌರರಾಷ್ಟ್ರಸ್ಯ ನಿರ್ವ್ಯವನಿಚಯಸ್ಯ ಚ||
12129002a ಪರಿಶಂಕಿತಮುಖ್ಯಸ್ಯ ಸ್ರುತಮಂತ್ರಸ್ಯ ಭಾರತ|
12129002c ಅಸಂಭಾವಿತಮಿತ್ರಸ್ಯ ಭಿನ್ನಾಮಾತ್ಯಸ್ಯ ಸರ್ವಶಃ||
12129003a ಪರಚಕ್ರಾಭಿಯಾತಸ್ಯ ದುರ್ಬಲಸ್ಯ ಬಲೀಯಸಾ|

12129003c ಆಪನ್ನಚೇತಸೋ ಬ್ರೂಹಿ ಕಿಂ ಕಾರ್ಯಮವಶಿಷ್ಯತೇ॥

ಯುಧಿಷ್ಠಿರನು ಹೇಳಿದನು: "ಸೇನೆ-ಧನ-ಸಂಪತ್ತುಗಳು ಕ್ಷೀಣವಾಗಿರುವ, ಆಲಸ್ಯನಾಗಿರುವ, ಬಂಧು-ಬಾಂಧವರ ಮೇಲಿನ ಅಧಿಕ ದಯದಿಂದ ಅವರ ನಾಶದ ಶಂಕೆಯಿಂದ ಅವರನ್ನು ಕೂಡಿಕೊಂಡು ಶತ್ರುಗಳೊಡನೆ ಯುದ್ಧಮಾಡದಿರುವ, ಮಂತ್ರಿಮೊದಲಾದವರ ಮೇಲೆ ಶಂಕಿಸುವ ಅಥವಾ ಅವರ ಚರಿತ್ರವೇ ಸಂಶಯಾಸ್ಪದವಾಗಿರುವ, ಮಂತ್ರಾಲೋಚನೆಯು ಗುಪ್ತವಾಗಿರದ, ಮಂತ್ರಾಲೋಚನೆಯನ್ನು ಇತರರು ಕೇಳಿಬಿಟ್ಟಿರುವ, ರಾಷ್ಟ್ರವನ್ನು ಒಡೆದು ಶತ್ರುಗಳು ತಮ್ಮದಾಗಿಸಿಕೊ, ಯಾರ ಬೊಕ್ಕಸವು ಬರಿದಾಗಿದೆಯೋ, ಯಾರಿಗೆ ಸಂಭಾವಿತ ಮಿತ್ರರ್ಯಾರೂ ಇಲ್ಲವೋ, ಯಾರ ಅಮಾತ್ಯರನ್ನು ಶತೃಗಳು ಭೇದೋಪಾಯದಿಂದ ವಶಪಡಿಸಿಕೊಂಡಿರುವರೋ, ಯಾರು ಶತ್ರುಗಳಿಂದ ಆಕ್ರಮಿಸಲ್ಪಟ್ಟಿರುವನೋ, ಯಾವ ದುರ್ಬಲನು ಬಲಿಷ್ಠನಿಂದ ಆಪತ್ತಿಗೊಳಗಾಗಿದ್ದಾನೋ ಅಂತವನಿಗೆ ಇನ್ನೂ ಮಾಡಬೇಕಾದ ಕಾರ್ಯಗಳು ಯಾವುದಿರುತ್ತವೆ?"

12129004 ಭೀಷ್ಮ ಉವಾಚ|
12129004a ಬಾಹ್ಯಶ್ಚೇದ್ವಿಜಿಗೀಷುಃ ಸ್ಯಾದ್ಧರ್ಮಾರ್ಥಕುಶಲಃ ಶುಚಿಃ|
12129004c ಜವೇನ ಸಂಧಿಂ ಕುರ್ವೀತ ಪೂರ್ವಾನ್ಪೂರ್ವಾನ್ವಿಮೋಕ್ಷಯನ್॥

ಭೀಷ್ಮನು ಹೇಳಿದನು: "ವಿಜಯವನ್ನು ಬಯಸಿ ಆಕ್ರಮಣಮಾಡಿರುವ ರಾಜನು ಹೊರಗಿನವನಾಗಿದ್ದು ಧರ್ಮಾರ್ಥಕುಶಲನೂ ಆಚಾರ-ವಿಚಾರಗಳಲ್ಲಿ ಪರಿಶುದ್ಧನೂ ಆಗಿದ್ದರೆ ತ್ವರೆಮಾಡಿ ಅವನೊಡನೆ ಸಂಧಿಯನ್ನು ಮಾಡಿಕೊಂಡು ಪೂರ್ವಜರ ಸ್ವಾಧೀನವನ್ನು ಬಿಡಿಸಿಕೊಳ್ಳಬೇಕು.

12129005a ಅಧರ್ಮವಿಜಿಗೀಷುಶ್ಚೇದ್ಬಲವಾನ್ಪಾಪನಿಶ್ಚಯಃ|
12129005c ಆತ್ಮನಃ ಸಂನಿರೋಧೇನ ಸಂಧಿಂ ತೇನಾಭಿಯೋಜಯೇತ್||

ವಿಜಯವನ್ನು ಬಯಸಿ ಆಕ್ರಮಣ ಮಾಡಿರುವ ಶತ್ರುರಾಜನು ಅಧರ್ಮಿಷ್ಠನಾಗಿದ್ದರೆ, ಬಲಿಷ್ಠನಾಗಿದ್ದರೂ ಪಾಪಸಂಕಲ್ಪನಾಗಿದ್ದರೆ ತನ್ನದನ್ನು ಸ್ವಲ್ಪ ಕೊಟ್ಟು ಸಂಧಿಯನ್ನು ಪ್ರಯತ್ನಿಸಬೇಕು.

12129006a ಅಪಾಸ್ಯ ರಾಜಧಾನೀಂ ವಾ ತರೇದನ್ಯೇನ ವಾಪದಮ್|
12129006c ತದ್ಭಾವಭಾವೇ ದ್ರವ್ಯಾಣಿ ಜೀವನ್ಪುನರುಪಾರ್ಜಯೇತ್||

ರಾಜಧಾನಿಯನ್ನು ಬಿಟ್ಟು ಪಲಾಯನ ಮಾಡಬೇಕು. ಅಥವಾ ಇನ್ಯಾವುದೇ ಉಪಾಯವನ್ನು ಬಳಸಿ, ದ್ರವ್ಯಗಳನ್ನು ಕೊಟ್ಟಾದರೂ, ಆಪತ್ತಿನಿಂದ ಪಾರಾಗಬೇಕು. ಬದುಕಿದ್ದರೆ ಪುನಃ ಧನವನ್ನು ಗಳಿಸಬಹುದು.

12129007a ಯಾಸ್ತು ಸ್ಯುಃ ಕೇವಲತ್ಯಾಗಾಚ್ಚಕ್ಯಾಸ್ತರಿತುಮಾಪದಃ|
12129007c ಕಸ್ತತ್ರಾಧಿಕಮಾತ್ಮಾನಂ ಸಂತ್ಯಜೇದರ್ಥಧರ್ಮವಿತ್||

ಕೋಶ-ಸೈನ್ಯಗಳನ್ನು ತ್ಯಜಿಸಿಯಾದರೂ ಆಪತ್ತುಗಳನ್ನು ದಾಟುವ ಸಾಧ್ಯವಿದ್ದಾಗ ಅವುಗಳಿಗಿಂದಲೂ ಅಧಿಕವಾದ ತನ್ನ ಶರೀರವನ್ನೇ ಯಾವ ಧರ್ಮವಿದುವು ತ್ಯಜಿಸಿಯಾನು?

12129008a ಅವರೋಧಾಜ್ಜುಗುಪ್ಸೇತ ಕಾ ಸಪತ್ನಧನೇ ದಯಾ|
12129008c ನ ತ್ವೇವಾತ್ಮಾ ಪ್ರದಾತವ್ಯಃ ಶಕ್ಯೇ ಸತಿ ಕಥಂ ಚನ||

ಶತ್ರುವು ಆಕ್ರಮಿಸಿದೊಡನೆಯೇ ಮೊದಲು ಮುಖ್ಯವಾಗಿ ತನ್ನ ಅಂತಃಪುರದ ಸ್ತ್ರೀಯರನ್ನು ರಕ್ಷಿಸಬೇಕು. ಒಂದುವೇಳೆ ಅದರಲ್ಲಿ

ಅಸಮರ್ಥನಾದರೆ ಪರಿವಾರದವರ ಮತ್ತು ಧನದ ಮೇಲಿನ ಆಸೆಯನ್ನು ದೂರಮಾಡಬೇಕು. ಸಾಧ್ಯವಾದರೆ ಎಂದೂ ತನ್ನನ್ನು ಶತ್ರುವಶನಾಗುವಂತೆ ಮಾಡಿಕೊಳ್ಳಬಾರದು.”

12129009 ಯುಧಿಷ್ಠಿರ ಉವಾಚ|
12129009a ಆಭ್ಯಂತರೇ ಪ್ರಕುಪಿತೇ ಬಾಹ್ಯೇ ಚೋಪನಿಪೀಡಿತೇ|
12129009c ಕ್ಷೀಣೇ ಕೋಶೇ ಸ್ರುತೇ ಮಂತ್ರೇ ಕಿಂ ಕಾರ್ಯಮವಶಿಷ್ಯತೇ||

ಯುಧಿಷ್ಠಿರನು ಹೇಳಿದನು: “ಒಳಗಿರುವ ಅಮಾತ್ಯರೇ ಕುಪಿತರಾದಾಗ, ಶತ್ರುಗಳು ಪೀಡಿಸುತ್ತಿರುವಾಗ, ಕೋಶವು ಬರಿದಾದಾಗ, ಮತ್ತು ರಹಸ್ಯಗಳು ಬಯಲಾದಾಗ ರಾಜನಿಗೆ ಮಾಡುವ ಕಾರ್ಯಗಳು ಯಾವುದು ಉಳಿದಿರುತ್ತವೆ?”

12129010 ಭೀಷ್ಮ ಉವಾಚ|
12129010a ಕ್ಷಿಪ್ರಂ ವಾ ಸಂಧಿಕಾಮಃ ಸ್ಯಾತ್ ಕ್ಷಿಪ್ರಂ ವಾ ತೀಕ್ಷ್ಣವಿಕ್ರಮಃ|
12129010c ಪದಾಪನಯನಂ ಕ್ಷಿಪ್ರಮೇತಾವತ್ಸಾಂಪರಾಯಿಕಮ್||

ಭೀಷ್ಮನು ಹೇಳಿದನು: “ಬೇಗನೆ ಸಂಧಿಮಾಡಿಕೊಳ್ಳಬೇಕು. ಅಥವಾ ಕ್ಷಿಪ್ರವಾಗಿ ಪಲಾಯನ ಮಾಡಿಕೊಳ್ಳಬೇಕು. ಅಥವಾ ಕ್ಷಿಪ್ರವಾಗಿ ತೀಕ್ಷ್ಣವಿಕ್ರಮದಿಂದ ಹೋರಾಡಬೇಕು. ಯುದ್ಧದಲ್ಲಿ ಮರಣವುಂಟಾದರೆ ಪುಣ್ಯಲೋಕವು ದೊರೆಯುತ್ತದೆ.

12129011a ಅನುರಕ್ತೇನ ಪುಷ್ಟೇನ ಹೃಷ್ಟೇನ ಜಗತೀಪತೇ|
12129011c ಅಲ್ಪೇನಾಪಿ ಹಿ ಸೈನ್ಯೇನ ಮಹೀಂ ಜಯತಿ ಪಾರ್ಥಿವಃ||

ಜಗತೀಪತೇ! ಅನುರಕ್ತರಾದ, ಪುಷ್ಟ-ಹೃಷ್ಟ ಅಲ್ಪಸೇನೆಯೀಮ್ದಲೂ ಕೂಡ ಪಾರ್ಥಿವನು ಮಹಿಯನ್ನು ಜಯಿಸಬಲ್ಲನು.

12129012a ಹತೋ ವಾ ದಿವಮಾರೋಹೇದ್ವಿಜಯೀ ಕ್ಷಿತಿಮಾವಸೇತ್|
12129012c ಯುದ್ಧೇ ತು ಸಂತ್ಯಜನ್ಪ್ರಾಣಾನ್ಕ್ರಸ್ಯೈತಿ ಸಲೋಕತಾಮ್||

ಹತನಾದರೆ ದಿವವನ್ನು ಏರುತ್ತಾನೆ. ವಿಜಯಿಯಾದರೆ ಭೂಮಿಯಲ್ಲಿ ವಾಸಿಸುತ್ತಾನೆ. ಯುದ್ಧದಲ್ಲಿ ಪ್ರಾಣಗಳನ್ನು ತೊರೆದವರು ಇಂದ್ರನ ಲೋಕಕ್ಕೆ ಹೋಗುತ್ತಾರೆ.

12129013a ಸರ್ವಲೋಕಾಗಮಂ ಕೃತ್ವಾ ಮೃದುತ್ವಂ ಗಂತುಮೇವ ಚ|
12129013c ವಿಶ್ವಾಸಾದ್ವಿನಯಂ ಕುರ್ಯಾದ್ವ್ಯವಸ್ಯೇದ್ವಾಪ್ಯುಪಾನಹೌ||

ತಾನು ದುರ್ಬಲನಾಗಿದ್ದರೆ ಶತ್ರುಗಳ ಸರ್ವ ಜನರ ಪ್ರೀತಿಯನ್ನೂ ಸಂಪಾದಿಸಿ ಮೃದುತ್ವವನ್ನು ತಾಳಬೇಕು. ವಿನಯವನ್ನು ವಿಶ್ವಾಸವನ್ನೂ ತೋರಿಸಬೇಕು. ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸಬೇಕು.

12129014a ಅಪಕ್ರಮಿತುಮಿಚ್ಚೇದ್ವಾ ಯಥಾಕಾಮಂ ತು ಸಾಂತ್ವಯೇತ್|
12129014c ವಿಲಿಂಗಮಿತ್ವಾ ಮಿತ್ರೇಣ ತತಃ ಸ್ವಯಮುಪಕ್ರಮೇತ್||

ಅಥವಾ ಯಥಾಕಾಮವಾಗಿ ಸಾಂತ್ವನಗೈದು ಪಲಾಯನಮಾಡಲು ನೋಡಬೇಕು. ಮಿತ್ರರೊಡನೆ ವಿಚಾರಿಸಿ ಕಳೆದುಕೊಂಡಿದ್ದುದನ್ನು ಪುನಃ ಪಡೆಯಲು ಪ್ರಯತ್ನಿಸಬೇಕು."

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಏಕೋನತ್ರಿಂಶಾತ್ಯಧಿಕಶತತಮೋऽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ನೂರಾಇಪ್ಪತ್ತೊಂಭತ್ತನೇ ಅಧ್ಯಾಯವು.

೧೩೦

ರಾಜರ್ಷಿಗಳ ಸದಾಚಾರ ವರ್ಣನೆ (1-21).

12130001 ಯುಧಿಷ್ಠಿರ ಉವಾಚ|
12130001a ಹೀನೇ ಪರಮಕೇ ಧರ್ಮೇ ಸರ್ವಲೋಕಾತಿಲಂಘಿನಿ[530]|
12130001c ಸರ್ವಸ್ಮಿನ್ದಸ್ಯುಸಾದ್ಭೂತೇ ಪೃಥಿವ್ಯಾಮುಪಜೀವನೇ||
12130002a ಕೇನಾಸ್ಮಿನ್ಬ್ರಾಹ್ಮಣೋ ಜೀವೇಜ್ಜಘನ್ಯೇ ಕಾಲ ಆಗತೇ|
12130002c ಅಸಂತ್ಯಜನ್ಪುತ್ರಪೌತ್ರಾನನುಕ್ರೋಶಾತ್ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಸರ್ವಲೋಕಗಳಿಗೂ ಹಿತಕರವಾದ ಪರಮ ರಾಜಧರ್ಮವು ಹೀನವಗಿ ಭೂಮಿಯ ಮೇಲಿನ ಉಪಜೀವನ ಸಾಧನಗಳೆಲ್ಲವೂ ದಸ್ಯುಗಳ ಅಧಿಕಾರಕ್ಕೆ ಬಂದು ಅತ್ಯಂತ ಸಂಕಟವಾದ ಜೀವಕ್ಕೇ ತೊಂದರೆಯಾಗುವಂತಹ ಕಾಲವು ಬಂದಾಗ ಮಕ್ಕಳು ಮೊಮ್ಮಕ್ಕಳನ್ನು ತೊರೆಯದೇ ದಯಾಪರನಾಗಿರುವ ಬ್ರಾಹ್ಮಣನು ಯಾವ ವೃತ್ತಿಯಿಂದ ಜೀವನವನ್ನು ನಡೆಸಬೇಕು?"

12130003 ಭೀಷ್ಮ ಉವಾಚ|
12130003a ವಿಜ್ಞಾನಬಲಮಾಸ್ಥಾಯ ಜೀವಿತವ್ಯಂ ತಥಾಗತೇ|
12130003c ಸರ್ವಂ ಸಾಧ್ವರ್ಥಮೇವೇದಮಸಾಧ್ವರ್ಥಂ ನ ಕಿಂ ಚನ||

ಭೀಷ್ಮನು ಹೇಳಿದನು: "ಅಂಥಹ ಕಾಲವು ಬಂದಾಗ ಬ್ರಾಹ್ಮಣನು ತನ್ನ ವಿಜ್ಞಾನಬಲವನ್ನು ಆಶ್ರಯಿಸಿ ಜೀವಿಸಬೇಕು. ಈ ಲೋಕದಲ್ಲಿ ಎಲ್ಲವೂ ಸಾಧುಗಳ ಸಲುವಾಗಿ ಇರುವವೇ ಹೊರತು ಯಾವುದೂ

---

[530] ಸರ್ವಲೋಕಾಭಿಸಂಹಿತೇ| (ಭಾರತ ದರ್ಶನ).

ಅಸಾಧುಗಳಿಗೆ ಇರುವುದಿಲ್ಲ.

12130004a ಅಸಾಧುಭ್ಯೋ ನಿರಾದಾಯ ಸಾಧುಭ್ಯೋ ಯಃ ಪ್ರಯಚ್ಚತಿ|
12130004c ಆತ್ಮಾನಂ ಸಂಕ್ರಮಂ ಕೃತ್ವಾ ಕೃತ್ಸ್ನಧರ್ಮವಿದೇವ[531] ಸಃ||

ತನ್ನನ್ನೇ ಸೇತುವೆಯನ್ನಾಗಿ ಮಾಡಿಕೊಂಡು ಅಸಾಧುಗಳಿಂದ ಧನವನ್ನು ತೆಗೆದುಕೊಂಡು ಸಾಧುಗಳಿಗೆ ಕೊಂಡುವವನೇ ಧರ್ಮವನ್ನು ಸಂಪೂರ್ಣವಾಗಿ ತಿಳಿದುಕೊಂಡವನು.

12130005a ಸುರೋಷೇಣಾತ್ಮನೋ[532] ರಾಜನ್ರಾಜ್ಯೇ ಸ್ಥಿತಿಮಕೋಪಯನ್|
12130005c ಅದತ್ತಮಪ್ಯಾದದೀತ ದಾತುರ್ವಿತ್ತಂ ಮಮೇತಿ ವಾ||

ರಾಜನ್! ರಾಜ್ಯಭ್ರಷ್ಟನಾದ ರಾಜನು ತನ್ನ ರಾಜ್ಯವನ್ನು ಪುನಃ ಪಡೆದುಕೊಳ್ಳಲು ರಾಜ್ಯದ ಪರಿಸ್ಥಿತಿಯನ್ನು ಹದಗೆಡಿಸದೇ ಧನಿಕರಲ್ಲಿರುವ ಧನವು ತನ್ನದೇ ಎಂದು ಭಾವಿಸಿ ಅವರಿಂದ ಬಲಾತ್ಕಾರವಾಗಿ ಧನವನ್ನು ತೆಗೆದುಕೊಳ್ಳಬೇಕು.

12130006a ವಿಜ್ಞಾನಬಲಪೂತೋ ಯೋ ವರ್ತತೇ ನಿಂದಿತೇಷ್ವಪಿ|
12130006c ವೃತ್ತವಿಜ್ಞಾನವಾನ್ಧೀರಃ ಕಸ್ತಂ ಕಿಂ ವಕ್ತುಮರ್ಹತಿ||

ವಿಜ್ಞಾನಬಲದಿಂದ ಪವಿತ್ರನಾದ, ಯಾವುದರಿಂದ ಯಾವುದು ನಿರ್ವಹಿಸುವುದೆಂದು ತಿಳಿದ ಧೀರನು ಆಪತ್ಕಾಲದಲ್ಲಿ ನಿಂದಿತವಾಗಿ ನಡೆದುಕೊಂಡರೂ ಅವನ ಕುರಿತು ಯಾರು ಏನು ಹೇಳಿಯಾರು?

---

[531] ಕೃಚ್ಛ್ರಧರ್ಮವಿದೇವ (ಭಾರತ ದರ್ಶನ).

[532] ಆಕಾಂಕ್ಷನ್ನಾತ್ಮನೋ (ಭಾರತ ದರ್ಶನ).

12130007a ಯೇಷಾಂ ಬಲಕೃತಾ ವೃತ್ತಿರ್ನ್ಯೆಷಾಮನ್ಯಾಭಿರೋಚತೇ[533]|
12130007c ತೇಜಸಾಭಿಪ್ರವರ್ಧಂತೇ[534] ಬಲವಂತೋ ಯುಧಿಷ್ಠಿರ||

ಯುಧಿಷ್ಠಿರ! ಬಲಕೃತ ವೃತ್ತಿಗಳಲ್ಲಿರುವವರಿಗೆ ಅನ್ಯ ವೃತ್ತಿಗಳು
ಹಿಡಿಸುವುದಿಲ್ಲ. ಬಲವಂತರು ತೇಜಸ್ಸಿನಿಂದ ಇನ್ನೂ ವರ್ಧಿಸುತ್ತಾರೆ.

12130008a ಯದೇವ ಪ್ರಕೃತಂ ಶಾಸ್ತ್ರಮವಿಶೇಷೇಣ ವಿಂದತಿ[535]|
12130008c ತದೇವ ಮಧ್ಯಾಃ ಸೇವಂತೇ ಮೇಧಾವೀ ಚಾಪ್ಯಥೋತ್ತರಮ್[536]||

ಮಧ್ಯಮ ವರ್ಗದ ರಾಜರು ಸಂದರ್ಭಕ್ಕೆ ಯಾವುದು
ಹೊಳೆಯುತ್ತದೆಯೋ ಅದರಂತೆ ಮಾಡುತ್ತಾರೆ.
ವಿಶೇಷವಾದವುಗಳನ್ನೇನೂ ಮಾಡುವುದಿಲ್ಲ. ಆದರೆ ಮೇಧಾವೀ
ರಾಜರು ಅದಕ್ಕಿಂತಲೂ ಉತ್ತಮ ಮಾರ್ಗವನ್ನು ಬಳಸುತ್ತಾರೆ.

12130009a ಋತ್ವಿಕ್ಪುರೋಹಿತಾಚಾರ್ಯಾನ್ಸತ್ಕೃತ್ಯೈರಭಿಪೂಜಿತಾನ್|
12130009c ನ ಬ್ರಾಹ್ಮಣಾನ್ಯಾತಯೇತ ದೋಷಾನ್ಪ್ರಾಪ್ನೋತಿ ಯಾತಯನ್||

ಎಂತಹ ಆಪತ್ಕಾಲದಲ್ಲಿಯೇ ಆದರೂ ಸತ್ಕೃತರಾದ ಋತ್ವಿಜರನ್ನೂ,
ಪೂಜನೀಯ ಆಚಾರ್ಯರನ್ನೂ, ಪುರೋಹಿತರನ್ನೂ ಮತ್ತು
ಬ್ರಾಹ್ಮಣರನ್ನೂ, ನೋಯಿಸಬಾರದು. ಅವರನ್ನು ನೋಯಿಸಿದರೆ

---

533 ತೇಷಾಮನ್ಯಾ ನ ರೋಚತೇ (ಭಾರತ ದರ್ಶನ).

534 ಪ್ರವರ್ತಂತೇ (ಭಾರತ ದರ್ಶನ).

535 ಯದ್ಯೈವ ಪ್ರಾಕೃತಂ ಶಾಸ್ತ್ರಮವಿಶೇಷೇಣ ವರ್ತತೇ| (ಭಾರತ ದರ್ಶನ).

536 ತದ್ಯೈವಮಭ್ಯಸೇದೇವಂ ಮೇಧಾವೀ ವಾಪ್ಯತೋತ್ತರಮ್| (ಭಾರತ ದರ್ಶನ).

ಅವನಿಗೆ ದೋಷಗಳುಂಟಾಗುತ್ತವೆ.

12130010a ಏತತ್ಪ್ರಮಾಣಂ ಲೋಕಸ್ಯ ಚಕ್ಷುರೇತತ್ಸನಾತನಮ್|
12130010c ತತ್ಪ್ರಮಾಣೋऽವಗಾಹೇತ ತೇನ ತತ್ಸಾಧ್ವಸಾಧು ವಾ||

ಈ ಆಪದ್ಧರ್ಮವು ಲೋಕಕ್ಕೇ ಪ್ರಮಾಣಭೂತವಾಗಿದೆ. ಇದು ಸನಾತನ ದೃಷ್ಟಿಕೋಣ. ರಾಜನು ಇದನ್ನೇ ಪ್ರಮಾಣವಾಗಿಟ್ಟುಕೊಂಡು ಸಾಧು-ಅಸಾಧು ಕಾರ್ಯಗಳನ್ನು ನಿರ್ಣಯಿಸಬೇಕು.

12130011a ಬಹೂನಿ ಗ್ರಾಮವಾಸ್ತವ್ಯಾ ರೋಷಾದ್ಬ್ರೂಯುಃ ಪರಸ್ಪರಮ್|
12130011c ನ ತೇಷಾಂ ವಚನಾದ್ರಾಜಾ ಸತ್ಕುರ್ಯಾದ್ಯಾತಯೇತ ವಾ||

ಅನೇಕ ಗ್ರಾಮವಾಸಿಗಳು ರೋಷದಿಂದ ಪರಸ್ಪರರರ ಕುರಿತು ಹೇಳಿಕೊಳ್ಳುತ್ತಿರುತ್ತಾರೆ. ರಾಜನು ಅವರ ಮಾತಿನ ಆಧಾರದ ಮೇಲೆ ಯಾರನ್ನೂ ಸತ್ಕರಿಸಲೂ ಬಾರದು, ಶಿಕ್ಷಿಸಲೂ ಬಾರದು.

12130012a ನ ವಾಚ್ಯಃ ಪರಿವಾದೋ ವೈ ನ ಶ್ರೋತವ್ಯಃ ಕಥಂ ಚನ|
12130012c ಕರ್ಣಾವೇವ ಪಿಧಾತವ್ಯೌ ಪ್ರಸ್ಥೇಯಂ ವಾ ತತೋऽನ್ಯತಃ||

ಪರನಿಂದೆಯನ್ನು ಮಾಡಲೂ ಬಾರದು; ಪರನಿಂದೆಯನ್ನು ಯಾವುದೇ ಕಾರಣಕ್ಕೂ ಕೇಳಲೂ ಬಾರದು. ಪರನಿಂದೆಯು ನಡೆಯುತ್ತಿರುವಾಗ ಕಿವಿಗಳನ್ನಾದರೂ ಮುಚ್ಚಿಕೊಳ್ಳಬೇಕು ಅಥವಾ ಬೇರೆ ಕಡೆ ಹೊರಟುಹೋಗಬೇಕು.

12130013a ನ ವೈ ಸತಾಂ ವೃತ್ತಮೇತತ್ಪರಿವಾದೋ ನ ಪೈಶುನಮ್|
12130013c ಗುಣಾನಾಮೇವ ವಕ್ತಾರಃ ಸಂತಃ ಸತ್ಸು ಯುಧಿಷ್ಠಿರ||

ಯುಧಿಷ್ಠಿರ! ಪರನಿಂದನೆ ಮತ್ತು ಚಾಡಿಹೇಳುವುದು ಸತ್ಪುರುಷರ

ನಡತೆಗಳಲ್ಲ. ಸತ್ಪುರುಷರಾದರೋ ಸತ್ಪುರುಷರ ಸಭೆಗಳಲ್ಲಿ ಇತರರ ಗುಣಗಳ ಕುರಿತೇ ಮಾತನಾಡುತ್ತಾರೆ.

12130014a ಯಥಾ ಸಮಧುರೌ ದಮ್ಯೌ ಸುದಾಂತೌ[537] ಸಾಧುವಾಹಿನೌ|
12130014c ಧುರಮುದ್ಯಮ್ಯ ವಹತಸ್ತಥಾ ವರ್ತೇತ ವೈ ನೃಪಃ|

ಸುಮಧುರ, ಸುಶಿಕ್ಷಿತ, ನಿಯಂತ್ರಣದಲ್ಲಿರುವ, ಭಾರವನ್ನು ಹೊರಬಲ್ಲ ಎರಡು ಎತ್ತುಗಳಂತೆ ನೃಪನು ರಾಜ್ಯಭಾರವನ್ನು ಚೆನ್ನಾಗಿ ನಿರ್ವಹಿಸಬೇಕು.

12130014e ಯಥಾ ಯಥಾಸ್ಯ ವಹತಃ ಸಹಾಯಾಃ ಸ್ಯುಸ್ತಥಾಪರೇ||
12130015a ಆಚಾರಮೇವ ಮನ್ಯಂತೇ ಗರೀಯೋ ಧರ್ಮಲಕ್ಷಣಮ್|

ಅನೇಕ ಸಹಾಯಕರನ್ನು ಪಡೆದುಕೊಳ್ಳಲು ಶಕ್ಯವಾದ ಆಚಾರಗಳನ್ನಿಟ್ಟುಕೊಂಡಿರಬೇಕು. ಸದಾಚಾರವೇ ಅತಿ ದೊಡ್ಡ ಧರ್ಮಲಕ್ಷಣವೆಂದು ಮನ್ನಿಸುತ್ತಾರೆ.

12130015c ಅಪರೇ ನೈವಮಿಚ್ಛಂತಿ ಯೇ ಶಂಖಲಿಖಿತಪ್ರಿಯಾಃ|
12130015e ಮಾರ್ದವಾದಥ ಲೋಭಾದ್ವಾ ತೇ ಬ್ರೂಯುರ್ವಾಕ್ಯಮೀದೃಶಮ್[538]||

ಆದರೆ ಶಂಖಲಿಖಿತ ಪ್ರಿಯರು ಇದನ್ನು ಒಪ್ಪಿಕೊಳ್ಳುವುದಿಲ್ಲ. ಮಾರ್ದವದಿಂದ ಮತ್ತು ಲೋಭದಿಂದ ಅವರು ಹೀಗೆ ಹೇಳುತ್ತಾರೆ.

---

537 ಸುದಂತೌ (ಭಾರತ ದರ್ಶನ).

538 ಮಾತ್ಸರ್ಯಾದಥವಾ ಲೋಭಾನ್ನ ಬ್ರೂಯುರ್ವಾಕ್ಯಮೀದೃಶಂ| (ಭಾರತ ದರ್ಶನ)

12130016a ಆರ್ಷಮಪ್ಯತ್ರ ಪಶ್ಯಂತಿ ವಿಕರ್ಮಸ್ಥಸ್ಯ ಯಾಪನಮ್[539]|
12130016c ನ ಚಾರ್ಷಾತ್ಸದೃಶಂ ಕಿಂ ಚಿತ್ಪ್ರಮಾಣಂ ವಿದ್ಯತೇ[540] ಕ್ವ ಚಿತ್||

ವಿಕರ್ಮಿಯು ಗುರುವೇ ಆಗಿದ್ದರೂ ಶಿಕ್ಷಾರ್ಹನೆಂದು ಹೇಳುತ್ತಾರೆ. ಋಷಿಗಳ ಸದೃಶವಾದ ಪ್ರಮಾಣವು ಬೇರೆ ಯಾವುದೂ ಇಲ್ಲ.

12130017a ದೇವಾ ಅಪಿ ವಿಕರ್ಮಸ್ಥಂ ಯಾತಯಂತಿ ನರಾಧಮಮ್|
12130017c ವ್ಯಾಜೇನ ವಿಂದನ್ವಿತ್ತಂ ಹಿ ಧರ್ಮಾತ್ತು ಪರಿಹೀಯತೇ||

ದೇವತೆಗಳೂ ಕೂಡ ವಿಕರ್ಮಿ ನರಾಧಮನನ್ನು ಪೀನರಕಕ್ಕೆ ಕೊಂಡೊಯ್ಯುತ್ತಾರೆ. ವ್ಯಾಜ್ಯದಿಂದ ವಿತ್ತವನ್ನು ಪಡೆದುಕೊಳ್ಳುವವನು ಧರ್ಮಭ್ರಷ್ಟನಾಗುತ್ತಾನೆ.

12130018a ಸರ್ವತಃ ಸತ್ಕೃತಃ ಸದ್ಭಿರ್ಭೂತಿಪ್ರಭವಕಾರಣೈಃ|
12130018c ಹೃದಯೇನಾಭ್ಯನುಜ್ಞಾತೋ ಯೋ ಧರ್ಮಸ್ತಂ ವ್ಯವಸ್ಯತಿ||

ಅಭಿವೃದ್ಧಿಗೆ ಕಾರಣರಾದ ಸಾಧುಪುರುಷರಿಂದ ಸರ್ವತಃ ಸತ್ಕೃತವಾದ ಮತ್ತು ತನ್ನ ಹೃದಯದಿಂದಲೂ ಅನುಜ್ಞಾತ ಧರ್ಮವನ್ನೇ ರಾಜನೂ ಅನುಸರಿಸಬೇಕು.

12130019a ಯಶ್ಚತುರ್ಗುಣಸಂಪನ್ನಂ ಧರ್ಮಂ ವೇದ ಸ ಧರ್ಮವಿತ್|
12130019c ಅಹೇರಿವ ಹಿ ಧರ್ಮಸ್ಯ ಪದಂ ದುಃಖಂ ಗವೇಷಿತುಮ್||

ಚತುರ್ಗುಣ[541]ಸಂಪನ್ನವಾದುದನ್ನೇ ಧರ್ಮವೆಂದು ಧರ್ಮವಿದರು

---

539 ಪಾತನಮ್| (ಭಾರತ ದರ್ಶನ).

540 ದೃಶ್ಯತೇ (ಭಾರತ ದರ್ಶನ).

541 ವೇದವಿಹಿತವಾದ, ಸ್ಮೃತಿಗಳಿಂದ ಅನುಮೋದಿತವಾದ, ಸಜ್ಜನ ಸೇವಿತ

ತಿಳಿದಿರುತ್ತಾರೆ. ಸರ್ಪದ ಪದಚಿಹ್ನೆಗಳನ್ನು ತಿಳಿಯುವುದು ಎಷ್ಟು ಕಷ್ಟವೋ ಅಷ್ಟೇ ಕಷ್ಟಕರವಾದುದು ಧರ್ಮವನ್ನು ತಿಳಿದುಕೊಳ್ಳುವುದು.

12130020a ಯಥಾ ಮೃಗಸ್ಯ ವಿದ್ಧಸ್ಯ ಮೃಗವ್ಯಾಧಃ ಪದಂ ನಯೇತ್|
12130020c ಕಕ್ಷೇ ರುಧಿರಪಾತೇನ ತಥಾ ಧರ್ಮಪದಂ ನಯೇತ್||

ಬಾಣವು ಚುಚ್ಚಿ ಸೋರುತ್ತಿರುವ ರಕ್ತವು ಹೇಗೆ ವ್ಯಾಧನಿಗೆ ಮೃಗವು ಹೋದ ಮಾರ್ಗವನ್ನು ಸೂಚಿಸುತ್ತದೆಯೋ ಹಾಗೆ ಚತುರ್ಗುಣಸಂಪನ್ನ ಆಚರಣೆಗಳು ಧರ್ಮದ ಮಾರ್ಗವನ್ನು ಸೂಚಿಸುತ್ತವೆ.

12130021a ಏವಂ ಸದ್ಭಿರ್ವಿನೀತೇನ ಪಥಾ ಗಂತವ್ಯಮಚ್ಯುತ|
12130021c ರಾಜರ್ಷೀಣಾಂ ವೃತ್ತಮೇತದವಗಚ್ಚ ಯುಧಿಷ್ಠಿರ||

ಯುಧಿಷ್ಠಿರ! ಹೀಗೆ ಸತ್ಪುರುಷರು ಹೋದ ಮಾರ್ಗವನ್ನು ಅನುಸರಿಸುವುದು ಯುಕ್ತವು. ರಾಜರ್ಷಿಗಳ ಸದಾಚಾರಗಳನ್ನು ನೀನೂ ಮನನಮಾಡು.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ರಾಜರ್ಷಿವೃತ್ತಂ ನಾಮ ತ್ರಿಂಶಾತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ ಆಪದ್ಧರ್ಮಪರ್ವದಲ್ಲಿ ರಾಜರ್ಷಿವೃತ್ತ ಎನ್ನುವ ನೂರಾಮೂವತ್ತನೇ ಅಧ್ಯಾಯವು.

ಮತ್ತು ತನಕೂ ಪ್ರಿಯವಾಗಿರುವವೇ ಚತುರ್ಗುಣಸಂಪನ್ನವಾದವುಗಳು (ಭಾರತ ದರ್ಶನ).

೧೩೧

ರಾಜನು ಕೋಶವನ್ನು ಸಂಗ್ರಹಿಸುವುದರ ಅವಶ್ಯಕತೆ, ದಸ್ಯು ವೃತ್ತಿಯ ನಿಂದನೆ (1-18).

12131001 ಭೀಷ್ಮ ಉವಾಚ|
12131001a ಸ್ವರಾಷ್ಟ್ರಾತ್ಪರರಾಷ್ಟ್ರಾಚ್ಚ ಕೋಶಂ ಸಂಜನಯೇನ್ನೃಪಃ|
12131001c ಕೋಶಾದ್ಧಿ ಧರ್ಮಃ ಕೌಂತೇಯ ರಾಜ್ಯಮೂಲಃ ಪ್ರವರ್ತತೇ||

ಭೀಷ್ಮನು ಹೇಳಿದನು: "ಕೌಂತೇಯ! ನೃಪನು ಸ್ವರಾಷ್ಟ್ರದಿಂದಲೂ ಪರರಾಷ್ಟ್ರದಿಂದಲೂ ಕೋಶವನ್ನು ತುಂಬಿಸಬೇಕು. ಕೋಶದಿಂದಲೇ ಧರ್ಮ ಮತ್ತು ರಾಜ್ಯಮೂಲವು ವೃದ್ಧಿಯಾಗುತ್ತದೆ.

12131002a ತಸ್ಮಾತ್ಸಂಜನಯೇತ್ಕೋಶಂ ಸಂಹೃತ್ಯ ಪರಿಪಾಲಯೇತ್|
12131002c ಪರಿಪಾಲ್ಯಾನುಗೃಹ್ಣೀಯಾದೇಷ ಧರ್ಮಃ ಸನಾತನಃ||

ಅದುದರಿಂದ ಕೋಶವನ್ನು ಸಂಗ್ರಹಿಸಬೇಕು. ಸಂಗ್ರಹಿಸಿ ಅದನ್ನು ರಕ್ಷಿಸಬೇಕು. ಕೋಶವನ್ನು ಪರಿಪಾಲಿಸುವುದಲ್ಲದೇ ಅದನ್ನು ವೃದ್ಧಿಗೊಳಿಸುತ್ತಲೂ ಇರಬೇಕು. ಇದೇ ಸನಾತನ ರಾಜಧರ್ಮ.

12131003a ನ ಕೋಶಃ ಶುದ್ಧಶೌಚೇನ ನ ನೃಶಂಸೇನ ಜಾಯತೇ|
12131003c ಪದಂ ಮಧ್ಯಮಮಾಸ್ಥಾಯ ಕೋಶಸಂಗ್ರಹಣಂ ಚರೇತ್||

ಶುದ್ಧ-ಶೌಚನಿಗೆ ಕೋಶವನ್ನು ಕೂಡಿಡಲು ಸಾಧ್ಯವಾಗುವುದಿಲ್ಲ. ಹಾಗೆಯೇ ಕ್ರೂರಿಯಿಂದಲೂ ಅದು ಸಾಧ್ಯವಿಲ್ಲ. ಮಧ್ಯಮ ಪದವನ್ನು ಆಶ್ರಯಿಸಿ ಕೋಶಸಂಗ್ರಹಣೆಯನ್ನು ಮಾಡಬೇಕು.

12131004a ಅಬಲಸ್ಯ ಕುತಃ ಕೋಶೋ ಹ್ಯಕೋಶಸ್ಯ ಕುತೋ ಬಲಮ್|
12131004c ಅಬಲಸ್ಯ ಕುತೋ ರಾಜ್ಯಮರಾಜ್ಞಃ ಶ್ರೀಃ ಕುತೋ ಭವೇತ್||

ಅಬಲನಿಗೆ ಎಲ್ಲಿಯ ಕೋಶ? ಕೋಶವಿಲ್ಲದವನಿಗೆ ಎಲ್ಲಿಯ ಬಲ? ಅಬಲನಿಗೆ ಎಲ್ಲಿಯ ರಾಜ್ಯ? ಮತ್ತು ರಾಜ್ಯವಿಲ್ಲದವನಿಗೆ ಶ್ರೀಯು ಹೇಗೆ ಒಲಿದಾಳು?

12131005a ಉಚ್ಚ್ಯುರ್ವ್ಯತ್ತೇಃ ಶ್ರಿಯೋ ಹಾನಿರ್ಯಥೈವ ಮರಣಂ ತಥಾ|
12131005c ತಸ್ಮಾತ್ಕೋಶಂ ಬಲಂ ಮಿತ್ರಾಣ್ಯಥ ರಾಜಾ ವಿವರ್ಧಯೇತ್||

ಉನ್ನತ ಸ್ಥಾನದಲ್ಲಿರುವವನ ಶ್ರೀಯು ಹಾನಿಯಾಯಿತೆಂದರೆ ಅದು ಅವನಿಗೆ ಮರಣಕ್ಕೆ ಸಮನಾಗುತ್ತದೆ. ಆದುದರಿಂದ ರಾಜನು ಕೋಶ, ಬಲ ಮತ್ತು ಮಿತ್ರರನ್ನು ವರ್ಧಿಸುತ್ತಿರಬೇಕು.

12131006a ಹೀನಕೋಶಂ ಹಿ ರಾಜಾನಮವಜಾನಂತಿ ಮಾನವಾಃ|
12131006c ನ ಚಾಸ್ಯಾಲ್ಪೇನ ತುಷ್ಯಂತಿ ಕಾರ್ಯಮಭ್ಯುತ್ಸಹಂತಿ ಚ||

ಕೋಶಹೀನನಾದ ರಾಜನನ್ನು ಜನರು ಕೀಳಾಗಿ ಕಾಣುತ್ತಾರೆ. ಅಲ್ಪದಿಂದ ಅವರು ತುಷ್ಟರಾಗುವುದಿಲ್ಲ ಮತ್ತು ರಾಜನ ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ಉತ್ಸಾಹಿತರಾಗಿರುವುದಿಲ್ಲ.

12131007a ಶ್ರಿಯೋ ಹಿ ಕಾರಣಾದ್ರಾಜಾ ಸತ್ಕ್ರಿಯಾಂ ಲಭತೇ ಪರಾಮ್|
12131007c ಸಾಸ್ಯ ಗೂಹತಿ ಪಾಪಾನಿ ವಾಸೋ ಗುಹ್ಯಮಿವ ಸ್ತ್ರಿಯಾಃ||

ಶ್ರೀಯ ಕಾರಣದಿಂದಲೇ ರಾಜನು ಪರಮ ಸತ್ಕಾರಗಳನ್ನು ಪಡೆಯುತ್ತಾನೆ. ಬಟ್ಟೆಯು ಸ್ತ್ರೀಯ ಗುಪ್ತಸ್ಥಾನಗಳನ್ನು ಹೇಗೆ ಮುಚ್ಚುವುದೋ ಅದೇ ರೀತಿ ಐಶ್ವರ್ಯವು ರಾಜನ ಪಾಪಗಳನ್ನು

ಅಡಗಿಸುತ್ತದೆ.

12131008a ಋದ್ಧಿಮಸ್ಯಾನುವರ್ತಂತೇ[542] ಪುರಾ ವಿಪ್ರಕೃತಾ ಜನಾಃ|
12131008c ಶಾಲಾವೃಕಾ ಇವಾಜಸ್ರಂ ಜಿಘಾಂಸೂನಿವ ವಿಂದತಿ|
12131008e ಈದೃಶಸ್ಯ ಕುತೋ ರಾಜ್ಞಃ ಸುಖಂ ಭರತಸತ್ತಮ[543]||

ಭರತಸತ್ತಮ! ಹಿಂದೆ ತಿರಸ್ಕೃತರಾದ ಜನರು, ನಾಯಿಗಳು ತಮ್ಮನ್ನು ಕೊಲ್ಲುವ ಚಾಂಡಾಲನನ್ನೇ ಹಿಂಬಾಲಿಸಿ ಹೋಗುವಂತೆ, ವೃದ್ಧಿಹೊಂದುತ್ತಿರುವವನನ್ನು ಹಿಂಬಾಲಿಸುತ್ತಾರೆ. ಈ ರೀತಿಯಿರುವಾಗ ರಾಜನಿಗೆ ಎಲ್ಲಿಯ ಸುಖ?

12131009a ಉದ್ಯಚ್ಚೇದೇವ ನ ಗ್ಲಾಯೇದುದ್ಯಮೋ ಹ್ಯೇವ ಪೌರುಷಮ್|
12131009c ಅಪ್ಯಪರ್ವಣಿ ಭಜ್ಯೇತ ನ ನಮೇತೇಹ ಕಸ್ಯ ಚಿತ್||

ಒಣಗಿದ ಕಟ್ಟಿಗೆಯು ಮುರಿದುಹೋಗಬಹುದು ಆದರೆ ಎಂದೂ ಬಗ್ಗುವುದಿಲ್ಲ. ಹಾಗೆ ರಾಜನಾದವನು ಯಾವಾಗಲೂ ಸೆಟೆದೇ ನಿಂತಿರಬೇಕು. ತಲೆಬಾಗಿಸಬಾರದು. ಉದ್ಯಮಿಯಾಗಿರುವುದೇ ಪುರುಷ ಲಕ್ಷಣವು.

12131010a ಅಪ್ಯರಣ್ಯಂ ಸಮಾಶ್ರಿತ್ಯ ಚರೇದ್ದಸ್ಯುಗಣೈಃ[544] ಸಹ|
12131010c ನ ತ್ವೇವೋದ್ಧೃತಮರ್ಯಾದೈರ್ದಸ್ಯುಭಿಃ ಸಹಿತಶ್ಚರೇತ್|

ಅರಣ್ಯವನ್ನಾಶ್ರಯಿಸಿ ಮೃಗಗಣಗಳೊಡನೆಯಾದರೂ

---

542 ಋದ್ಧಿಮಸ್ಯಾನುತಪ್ಯಂತೇ ಎಂಬ ಪಾಠಾಂತರವಿದೆ (ಭಾರತ ದರ್ಶನ).

543 ಸುಖಂ ಭವತಿ ಭಾರತ| ಎಂಬ ಪಾಠಾಂತವಿದೆ (ಭಾರತ ದರ್ಶನ).

544 ಮೃಗಗಣೈಃ ಸಹ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಸಂಚರಿಸುತ್ತಿರಬಹುದು. ಆದರೆ ಲೋಕಮರ್ಯಾದೆಯನ್ನು ಮೀರಿ ನಡೆಯುತ್ತಿರುವ ದಸ್ಯುಗಳೊಡನೆ ಎಂದೂ ಸೇರಬಾರದು.

12131010e ದಸ್ಯೂನಾಂ ಸುಲಭಾ ಸೇನಾ ರೌದ್ರಕರ್ಮಸು ಭಾರತ||
12131011a ಏಕಾಂತೇನ ಹ್ಯಮರ್ಯಾದಾತ್ಸರ್ವೋಽಪ್ಯುದ್ವಿಜತೇ ಜನಃ|
12131011c ದಸ್ಯವೋಽಪ್ಯುಪಶಂಕಂತೇ ನಿರನುಕ್ರೋಶಕಾರಿಣಃ||

ಭಾರತ! ರೌದ್ರಕರ್ಮಗಳನ್ನು ಮಾಡಲು ದಸ್ಯುಗಳಿಗೆ ಸುಲಭವಾಗಿ ಸೈನ್ಯವು ಸಿಗುತ್ತದೆ. ಮರ್ಯಾದಾಶೂನ್ಯರಾದ ದಸ್ಯುಗಳ ವಿಷಯದಲ್ಲಿ ಎಲ್ಲ ಜನರೂ ಉದ್ವಿಗ್ನರಾಗಿರುತ್ತಾರೆ. ಕ್ರೂರಕರ್ಮಗಳನ್ನೆಸಗುವ ದಸ್ಯುಗಳು ಎಲ್ಲರನೂ ಸಂಶಯಗಸ್ತರಾಗಿಯೇ ನೋಡುತ್ತಾರೆ.

12131012a ಸ್ಥಾಪಯೇದೇವ ಮರ್ಯಾದಾಂ ಜನಚಿತ್ತಪ್ರಸಾದಿನೀಮ್|
12131012c ಅಲ್ಪಾಪ್ಯಥೇಹ ಮರ್ಯಾದಾ ಲೋಕೇ ಭವತಿ ಪೂಜಿತಾ||

ಜನರ ಚಿತ್ತವನ್ನು ಪ್ರಸನ್ನಗೊಳಿಸುವ ಮರ್ಯಾದೆಯನ್ನು ರಾಜನು ಸ್ಥಾಪಿಸಬೇಕು. ಅಲ್ಪಪ್ರಯೋಜನದಲ್ಲಿಯೂ ಕಟ್ಟುಪಾಡುಗಳಿರುವುದು ಲೋಕದಲ್ಲಿ ಮಾನ್ಯವಾಗುತ್ತದೆ.

12131013a ನಾಯಂ ಲೋಕೋಽಸ್ತಿ ನ ಪರ ಇತಿ ವ್ಯವಸಿತೋ ಜನಃ|
12131013c ನಾಲಂ ಗಂತುಂ ಚ ವಿಶ್ವಾಸಂ ನಾಸ್ತಿಕೇ ಭಯಶಂಕಿನಿ||

“ಇಹವೂ ಇಲ್ಲ ಪರವೂ ಇಲ್ಲ” ಎಂದು ಅಭಿಪ್ರಾಯಪಡುವ ಜನರೂ ಇದ್ದಾರೆ. ಈ ರೀತಿಯ ನಾಸ್ತಿಕ್ಯವು ಭಯ-ಶಂಕೆಗಳಿಗೆ ಕಾರಣವಾಗುತ್ತದೆ. ಆದುದರಿಂದ ಅಂಥವರಲ್ಲಿ ವಿಶ್ವಾಸವನ್ನಿಡಬಾರದು.

12131014a ಯಥಾ ಸದ್ಭಿಃ ಪರಾದಾನಮಹಿಂಸಾ ದಸ್ಯುಭಿಸ್ತಥಾ|

12131014c ಅನುರಜ್ಯಂತಿ ಭೂತಾನಿ ಸಮರ್ಯಾದೇಷು ದಸ್ಯುಷು||

ದಸ್ಯುಗಳಲ್ಲಿಯೂ ಕೂಡ ಮರ್ಯಾದೆಯಿಂದ
ನಡೆದುಕೊಳ್ಳುವರರಿದ್ದಾರೆ. ಸಾಧು ದಸ್ಯುಗಳು ಅಹಿಂಸೆಯಿಂದ
ಇನ್ನೊಬ್ಬರ ಧನವನ್ನು ಅಪಹಿಸಿಕೊಳ್ಳುವರು. ಮರ್ಯಾದೆಯಿಂದಿರುವ
ದಸ್ಯುಗಳ ವಿಷಯದಲ್ಲಿ ಜನರು ಅನುಕಂಪತೋರಿಸುತ್ತಾರೆ.

12131015a ಅಯುಧ್ಯಮಾನಸ್ಯ ವಧೋ ದಾರಾಮರ್ಷಃ ಕೃತಘ್ನತಾ|
12131015c ಬ್ರಹ್ಮವಿತ್ತಸ್ಯ ಚಾದಾನಂ ನಿಃಶೇಷಕರಣಂ ತಥಾ|
12131015e ಸ್ತ್ರಿಯಾ ಮೋಷಃ ಪರಿಸ್ಥಾನಂ ದಸ್ಯುಷ್ವೇತದ್ವಿಗರ್ಹಿತಮ್||
12131016a ಸ ಏಷ ಏವ ಭವತಿ ದಸ್ಯುರೇತಾನಿ ವರ್ಜಯನ್|

ಯುದ್ಧಮಾಡದೇ ಇರುವವನ್ನು ಕೊಲ್ಲುವುದು, ಸ್ತ್ರೀಯನ್ನು
ಬಲಾತ್ಕರಿಸುವುದು, ಕೃತಘ್ನತೆ, ಬ್ರಾಹ್ಮಣರ ಸ್ವತ್ತನ್ನು
ಅಪಹರಿಸುವುದು, ಕನ್ಯೆಯನ್ನು ಅಪಹರಿಸುವುದು, ಗ್ರಾಮವನ್ನು
ಕೊಳ್ಳೆಹೊಡೆದು ತಾನೇ ಅದರ ಅಧಿಪತಿಯಾಗುವುದು – ಇವುಗಳನ್ನು
ದಸ್ಯುಗಳೂ ನಿಂದಿಸುತ್ತಾರೆ. ಇವುಗಳನ್ನು ದಸ್ಯುಗಳೂ ವರ್ಜಿಸಬೇಕು.

12131016c ಅಭಿಸಂದಧತೇ ಯೇ ನ ವಿನಾಶಾಯಾಸ್ಯ ಭಾರತ|
12131016e ನಶೇಷಮೇವೋಪಾಲಭ್ಯ ನ ಕುರ್ವಂತೀತಿ ನಿಶ್ಚಯಃ||

ಭಾರತ! ಯಾರ ಸಕಲ ಸರ್ವಸ್ವವನ್ನೂ ದೋಚಿಕೊಂಡು
ಹೋಗಿರುವರೋ ಅವರು ಸಮಯ ಬಂದಾಗ ಆ ದಸ್ಯುಗಳ
ಸರ್ವಸ್ವವನ್ನೂ ಅಪಹರಿಸುತ್ತಾರೆ. ಇದು ನಿಜ.

12131017a ತಸ್ಮಾತ್ಸಶೇಷಂ ಕರ್ತವ್ಯಂ ಸ್ವಾಧೀನಮಪಿ ದಸ್ಯುಭಿಃ|
12131017c ನ ಬಲಸ್ಥೋಽಹಮಸ್ಮೀತಿ ನೃಶಂಸಾನಿ ಸಮಾಚರೇತ್||

ಆದುದರಿಂದ ದಸ್ಯುಗಳು ಇತರರ ಸಂಪೂರ್ಣವನ್ನೂ ಕಸಿದುಕೊಳ್ಳದೇ ಅವರ ಸ್ವಾಧೀನದಲ್ಲಿ ಸ್ವಲ್ಪವನ್ನಾದರೂ ಇರಿಸಬೇಕು. ತಾನೇ ಬಲಿಷ್ಠನೆಂದು ಕ್ರೂರಕೃತ್ಯಗಳನ್ನು ಮಾಡಬಾರದು.

12131018a ಸಶೇಷಕಾರಿಣಸ್ತಾತ ಶೇಷಂ ಪಶ್ಯಂತಿ ಸರ್ವತಃ|
12131018c ನಿಃಶೇಷಕಾರಿಣೋ ನಿತ್ಯಮಶೇಷಕರಣಾದ್ಭಯಮ್||

ಅಯ್ಯಾ! ಇತರರಿಗೆ ಉಳಿಸಿದ ದರೋಡೆಕೋರರು ತಮ್ಮಲ್ಲಿಯೂ ಸಲ್ಪ ಉಳಿಯುವನ್ನು ಕಾಣುತ್ತಾರೆ. ಇತರರ ಸ್ವತ್ತನ್ನು ನಿಃಶೇಷವಾಗಿ ಕಸಿದುಕೊಂಡವರಿಗೆ ತಮ್ಮ ಸ್ವತ್ತೂ ನಿಃಶೇಷವಾಗಿ ಕಳೆದುಹೋಗುತ್ತದೆ ಎಂಬ ನಿತ್ಯ ಭಯವಿರುತ್ತದೆ.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಏಕತ್ರಿಂಶಾತ್ಯಧಿಕಶತತಮೋऽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ನೂರಾಮೂವತ್ತೊಂದನೇ ಅಧ್ಯಾಯವು.

೧೩೨

ಬಲದ ಮಹತ್ವ ಮತ್ತು ಪಾಪದ ಪ್ರಾಯಶ್ಚಿತ್ತ (1-15).

12132001 ಭೀಷ್ಮ ಉವಾಚ|
12132001a ಅತ್ರ ಕರ್ಮಾಂತವಚನಂ ಕೀರ್ತಯಂತಿ ಪುರಾವಿದಃ|
12132001c ಪ್ರತ್ಯಕ್ಷಾವೇವ ಧರ್ಮಾರ್ಥೌ ಕ್ಷತ್ರಿಯಸ್ಯ ವಿಜಾನತಃ|

ಭೀಷ್ಮನು ಹೇಳಿದನು: “ಈ ವಿಷಯದಲ್ಲಿ ಹಿಂದಿನದನ್ನು ತಿಳಿದವರು

ಈ ಕರ್ಮಾಂತವಚನವನ್ನು ಹೇಳುತ್ತಾರೆ: "ತಿಳುವಳಿಕೆಯಿದ್ದ ಕ್ಷತ್ರಿಯನಿಗೆ ಧರ್ಮಾರ್ಥಗಳು ಪ್ರತ್ಯಕ್ಷವಾದವುಗಳು."

12132001e ತತ್ರ ನ ವ್ಯವಧಾತವ್ಯಂ ಪರೋಕ್ಷಾ ಧರ್ಮಯಾಪನಾ||
12132002a ಅಧರ್ಮೋ ಧರ್ಮ ಇತ್ಯೇತದ್ಯಥಾ ವ್ಯಕಪದಂ ತಥಾ|

ಇದು ಧರ್ಮವೇ? ಇದನ್ನು ಮಾಡಬಹುದೇ? ಎಂಬ ಗೊಂದಲದಿಂದ ಮಾಡಬೇಕಾದ ಕರ್ತವ್ಯದಲ್ಲಿ ವಿಳಂಬಮಾಡಬಾರದು. ಧರ್ಮದ ಪರಿಣಾಮವು ಪರೋಕ್ಷವಾದುದು. ತೋಳದ ಹೆಜ್ಜೆಯ ಗುರುತನ್ನು ಅದು ಚಿರತೆಯದ್ದೋ, ನಾಯಿಯದ್ದೋ ಅಥವಾ ತೋಳದ್ದೋ ಎಂದು ಗುರುತಿಸಲು ಸಾಧ್ಯವಾಗದಂತೆ ಆಪತ್ಕಾಲದಲ್ಲಿ ಅಧರ್ಮ ಮತ್ತು ಧರ್ಮವು ಯಾವುದೆಂದು ನಿರ್ಣಯಿಸಲು ಸಾಧ್ಯವಾಗುವುದಿಲ್ಲ.

12132002c ಧರ್ಮಾಧರ್ಮಫಲೇ ಜಾತು ನ ದದರ್ಶೇಹ ಕಶ್ಚನ||
12132003a ಬುಭೂಷೇದ್ಬಲವಾನೇವ ಸರ್ವಂ ಬಲವತೋ ವಶೇ|

ಧರ್ಮ-ಅಧರ್ಮಗಳ ಫಲವನ್ನು ಯಾರೂ ಎಂದೂ ಪ್ರತ್ಯಕ್ಷವಾಗಿ ಕಂಡಿಲ್ಲ. ಆದುದರಿಂದ ರಾಜನು ಬಲಿಷ್ಠನಾಗಿರಲು ಪ್ರಯತ್ನಿಸಬೇಕು. ಏಕೆಂದರೆ ಎಲ್ಲವೂ ಬಲಿಷ್ಠನ ವಶದಲ್ಲಿರುತ್ತದೆ.

12132003c ಶ್ರಿಯಂ ಬಲಮಮಾತ್ಯಾಂಶ್ಚ ಬಲವಾನಿಹ ವಿಂದತಿ||
12132004a ಯೋ ಹ್ಯನಾಢ್ಯಃ ಸ ಪತಿತಸ್ತದುಚ್ಚಿಷ್ಟಂ ಯದಲ್ಪಕಮ್|

ಬಲವಾನನು ಸಂಪತ್ತು, ಸೇನೆ ಮತ್ತು ಅಮಾತ್ಯರನ್ನು ಹೊಂದುತ್ತಾನೆ. ಅನಾಢ್ಯನು ಪತಿತನು ಮತ್ತು ಅವನಲ್ಲಿರುವ ಅಲ್ಪಧನವು ಉಚ್ಚಿಷ್ಟವಾದುದು ಎಂದು ಹೇಳುತ್ತಾರೆ.

12132004c ಬಹ್ವಪಥ್ಯಂ ಬಲವತಿ ನ ಕಿಂ ಚಿತ್ತ್ರಾಯತೇ ಭಯಾತ್‌॥
12132005a ಉಭೌ ಸತ್ಯಾಧಿಕಾರೌ ತೌ ತ್ರಾಯೇತೇ ಮಹತೋ ಭಯಾತ್‌|

ಬಲವಾನನಲ್ಲಿ ಅನೇಕ ದೋಷಗಳಿರಬಹುದು. ಆದರೆ ಅವುಗಳನ್ನು ಅವನು ಜೀರ್ಣಿಸಿಕೊಳ್ಳಬಲ್ಲನು. ಅವನ ಭಯದಿಂದ ಬೇರೆ ಯಾರೂ ಏನೂ ಹೇಳುವುದಿಲ್ಲ. ಸತ್ಯ ಮತ್ತು ಅಧಿಕಾರಗಳು ಒಬ್ಬನಲ್ಲಿಯೇ ಇದ್ದರೆ ಅದು ಮಹಾಭಯದಿಂದ ಪಾರುಮಾಡುತ್ತದೆ.

12132005c ಅತಿ ಧರ್ಮಾದ್ಬಲಂ ಮನ್ಯೇ ಬಲಾದ್ಧರ್ಮಃ ಪ್ರವರ್ತತೇ॥
12132006a ಬಲೇ ಪ್ರತಿಷ್ಠಿತೋ ಧರ್ಮೋ ಧರಣ್ಯಾಮಿವ ಜಂಗಮಃ|

ಧರ್ಮಕ್ಕಿಂತಲೂ ಬಲವೇ ಹೆಚ್ಚಿನದು ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಬಲದಿಂದಲೇ ಧರ್ಮವು ನಡೆಯುತ್ತದೆ. ಧರಣಿಯಲ್ಲಿ ಜಂಗಮಗಳು ಹೇಗೋ ಹಾಗೆ ಬಲದಲ್ಲಿ ಧರ್ಮವು ಪ್ರತಿಷ್ಠಿತವಾಗಿದೆ.

12132006c ಧೂಮೋ ವಾಯೋರಿವ ವಶಂ ಬಲಂ ಧರ್ಮೋ‌ಽನುವರ್ತತೇ॥
12132007a ಅನೀಶ್ವರೇ ಬಲಂ ಧರ್ಮೋ ದ್ರುಮಂ ವಲ್ಲೀವ ಸಂಶ್ರಿತಾ|

ಹೊಗೆಯು ಹೇಗೆ ಗಾಳಿಗೆ ಅಧೀನವಾಗಿ ಅದನ್ನೇ ಅನುಸರಿಸಿ ಹೋಗುವಂತೆ ಧರ್ಮವೂ ಬಲವನ್ನೇ ಅನುಸರಿಸಿ ಹೋಗುತ್ತದೆ. ಬಳ್ಳಿಯು ಮರವನ್ನೇ ಆಶ್ರಯಿಸಿ ವೃದ್ಧಿಹೊಂದುವಂತೆ ನಿರಾಶ್ರಯ ಧರ್ಮವು ಬಲವನ್ನೇ ಆಶ್ರಯಿಸಿ ವೃದ್ಧಿಹೊಂದುತ್ತದೆ.

12132007c ವಶ್ಯೋ ಬಲವತಾಂ ಧರ್ಮಃ ಸುಖಂ ಭೋಗವತಾಮಿವ|
12132007e ನಾಸ್ತ್ಯಸಾಧ್ಯಂ ಬಲವತಾಂ ಸರ್ವಂ ಬಲವತಾಂ ಶುಚಿ॥

ಭೋಗ್ಯವಸ್ತುಗಳಿಂದ ಸಂಪನ್ನನಾಗಿರುವವನಿಗೆ ಸುಖವು ಹೇಗೋ

ಹಾಗೆ ಬಲವಂತನಿಗೆ ಧರ್ಮವು ವಶವಾಗುತ್ತದೆ. ಬಲಶಾಲಿಗಳಿಗೆ ಅಸಾಧ್ಯವೆನ್ನುವುದು ಯಾವುದೂ ಇರುವುದಿಲ್ಲ. ಬಲವಂತನ ಎಲ್ಲವೂ ಶುಚಿಯಾದುದು ಎಂದೇ ಪರಿಗಣಿಸಲ್ಪಡುತ್ತದೆ.

12132008a ದುರಾಚಾರಃ ಕ್ಷೀಣಬಲಃ ಪರಿಮಾಣಂ ನಿಯಚ್ಚತಿ|
12132008c ಅಥ ತಸ್ಮಾದುದ್ವಿಜತೇ ಸರ್ವೋ ಲೋಕೋ ವೃಕಾದಿವ||

ದುರಾಚಾರಿಯೂ ಕ್ಷೀಣಬಲನೂ ಭಯವೊದಗಿದಾಗ ನಾಶಹೊಂದುತ್ತಾನೆ. ಆದುದರಿಂದ ಪ್ರಜೆಗಳು, ತೋಳದಿಂದ ಹೇಗೋ ಹಾಗೆ, ದುರ್ಬಲ ರಾಜನಿಂದ ಉದ್ವಿಗ್ನರಾಗುತ್ತಾರೆ.

12132009a ಅಪಧ್ವಸ್ತೋ ಹ್ಯವಮತೋ ದುಃಖಂ ಜೀವತಿ ಜೀವಿತಮ್|
12132009c ಜೀವಿತಂ ಯದವಕ್ಷಿಪ್ತಂ ಯಥ್ಯೈವ ಮರಣಂ ತಥಾ||

ದುರ್ಬಲನು ತನ್ನ ಐಶ್ವರ್ಯದಿಂದಲೇ ವಂಚಿತನಾಗುತ್ತಾನೆ. ಎಲ್ಲರ ಅನಾದರಣೆಗೂ ಪಾತ್ರನಾಗುತ್ತಾನೆ. ದುಃಖದ ಬದುಕನ್ನು ಬಾಳುತ್ತಾನೆ. ಕ್ಷೀಣವಾದ ಜೀವಿತವು ಮರಣಕ್ಕೆ ಸಮನಾಗಿರುತ್ತದೆ.

12132010a ಯದೇನಮಾಹುಃ ಪಾಪೇನ ಚಾರಿತ್ರೇಣ ವಿನಿಕ್ಷತಮ್|
12132010c ಸ ಭೃಶಂ ತಪ್ಯತೇಽನೇನ ವಾಕ್ಕಲ್ಯೇನ ಪರಿಕ್ಷತಃ||
12132011a ಅತ್ರೈತದಾಹುರಾಚಾರ್ಯಾಃ ಪಾಪಸ್ಯ ಪರಿಮೋಕ್ಷಣೇ|

ಜನರು ಅವನಿಗೆ "ತನ್ನ ಪಾಪಚರಣೆಯಿಂದಲೇ ಇವನು ನಾಶಹೊಂದಿದ್ದಾನೆ" ಎಂದು ಹೇಳುತ್ತಾರೆ. ಈ ಮಾತಿನ ಮುಳ್ಳಿನಿಂದ ಚುಚ್ಚಲ್ಪಟ್ಟ ಅವನು ತುಂಬಾ ತಪಿಸುತ್ತಾನೆ. ಪಾಪದ ಪರಿಹಾರಕ್ಕೆ ಆಚಾರ್ಯರು ಈ ಉಪಾಯವನ್ನು ಹೇಳಿರುತ್ತಾರೆ.

12132011c ತ್ರಯೀಂ ವಿದ್ಯಾಂ ನಿಷೇವೇತ ತಥೋಪಾಸೀತ ಸ ದ್ವಿಜಾನ್‌॥
12132012a ಪ್ರಸಾದಯೇನ್ಮಧುರಯಾ ವಾಚಾಪ್ಯಥ ಚ ಕರ್ಮಣಾ।
12132012c ಮಹಾಮನಾಶ್ಚೈವ ಭವೇದ್ವಿವಹೇಚ್ಚ ಮಹಾಕುಲೇ॥
12132013a ಇತ್ಯಸ್ಮಿತಿ ವದೇದೇವಂ ಪರೇಷಾಂ ಕೀರ್ತಯನ್ಗುಣಾನ್‌।
12132013c ಜಪೇದುದಕಶೀಲಃ ಸ್ಯಾತ್ಪೇಶಲೋ ನಾತಿಜಲ್ಪನಃ॥
12132014a ಬ್ರಹ್ಮಕ್ಷತ್ರಂ ಸಂಪ್ರವಿಶೇದ್ಬಹು ಕೃತ್ವಾ ಸುದುಷ್ಕರಮ್‌।
12132014c ಉಚ್ಯಮಾನೋಽಪಿ ಲೋಕೇನ ಬಹು ತತ್ತದಚಿಂತಯನ್‌॥

ಪಾಪಲಿಪ್ತ ರಾಜನು ಮೂರು ವೇದಗಳ ಅಧ್ಯಯನ ಮಾಡಬೇಕು. ಬ್ರಾಹ್ಮಣರ ಸೇವೆಯನ್ನು ಮಾಡಬೇಕು. ಸುಮಧುರ ಮಾತುಗಳಿಂದ ಮತ್ತು ಸತ್ಕರ್ಮಗಳಿಂದ ಅವರನ್ನು ಪ್ರಸನ್ನಗೊಳಿಸಬೇಕು. ಉದಾರಹೃದಯಿಯಾಗಿರಬೇಕು. ಉಚ್ಚ ಕುಲದ ಕನ್ಯೆಯನ್ನು ವಿವಾಹವಾಗಬೇಕು. ತನ್ನ ಪರಿಚಯ ಮಾಡಿಕೊಳ್ಳಬೇಕು ಮತ್ತು ಪರರ ಗುಣಗಳನ್ನು ಪ್ರಶಂಸಿಸಬೇಕು. ಸ್ನಾನಮಾಡಿ ಜಪಿಸಬೇಕು. ಮೃದುಸ್ವಭಾವದವನಾಗಿರಬೇಕು. ಹೆಚ್ಚು ಮಾತನಾಡಬಾರದು. ಜನರು ಪಾಪಕರ್ಮಿ ಎಂದು ಹೇಳುತ್ತಿದ್ದರೂ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬಾರದು. ಸುದುಷ್ಕರವಾದ ಅನೇಕ ಪುಣ್ಯಕರ್ಮಗಳನ್ನು ಮಾಡಿ ಬ್ರಾಹ್ಮಣ-ಕ್ಷತ್ರಿಯರ ಸಮಾಜದಲ್ಲಿ ಪ್ರವೇಶಿಸಬೇಕು.

12132015a ಅಪಾಪೋ ಹ್ಯೇವಮಾಚಾರಃ ಕ್ಷಿಪ್ರಂ ಬಹುಮತೋ ಭವೇತ್‌।
12132015c ಸುಖಂ ವಿತ್ತಂ ಚ ಭುಂಜೀತ ವೃತ್ತೇನ್ಯೈತೇನ ಗೋಪಯೇತ್‌।
12132015e ಲೋಕೇ ಚ ಲಭತೇ ಪೂಜಾಂ ಪರತ್ರ ಚ ಮಹತ್ಫಲಮ್‌॥

ಇವುಗಳನ್ನು ಆಚರಿಸಿ ರಾಜನು ಅಪಾಪಿಯಾಗಬಹುದು ಮತ್ತು ಕ್ಷಿಪ್ರದಲ್ಲಿಯೇ ಬಹುಮತನಾಗಬಹುದು. ಈ ಆಚರಣೆಗಳಿಂದ ಸುಖ-

ವಿತ್ತಗಳನ್ನು ಭುಂಜಿಸಬಹುದು ಮತ್ತು ಅವುಗಳನ್ನು
ರಕ್ಷಿಸಿಕೊಳ್ಳಬಹುದು. ಈ ಲೋಕದಲ್ಲಿ ಗೌರವಪಾತ್ರನಾಗುತ್ತಾನೆ ಮತ್ತು
ಪರಲೋಕದಲ್ಲಿ ಮಹಾಫಲವನ್ನು ಪಡೆದುಕೊಳ್ಳುತ್ತಾನೆ.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ
ದ್ವಾತ್ರಿಂಶಾತ್ಯಧಿಕಶತತಮೋऽಧ್ಯಾಯಃ॥
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ
ಪರ್ವದಲ್ಲಿ ನೂರಾಮೂವತ್ತೆರಡನೇ ಅಧ್ಯಾಯವು.

೧೩೩

ಕಾಪವ್ಯಾನುಶಾಸನ

ಮರ್ಯಾದೆಯಿಂದಿದ್ದ ದಸ್ಯುವು ದುರ್ಗತಿಯನ್ನು ಹೊಂದುವುದಿಲ್ಲ ಎನ್ನುವುದರ ಕುರಿತಾದ ಕಾಪವ್ಯನ ಕಥೆ (1-26).

12133001 ಭೀಷ್ಮ ಉವಾಚ|
12133001a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12133001c ಯಥಾ ದಸ್ಯುಃ ಸಮರ್ಯಾದಃ ಪ್ರೇತ್ಯಭಾವೇ ನ ನಶ್ಯತಿ||

ಭೀಷ್ಮನು ಹೇಳಿದನು: “ಮರ್ಯಾದೆಯಿಂದಿದ್ದ ದಸ್ಯುವು
ದುರ್ಗತಿಯನ್ನು ಹೊಂದುವುದಿಲ್ಲ ಎನ್ನುವುದರ ಕುರಿತು ಈ ಪುರಾತನ
ಇತಿಹಾಸವನ್ನು ಉದಾಹರಿಸುತ್ತಾರೆ.

12133002a ಪ್ರಹರ್ತಾ ಮತಿಮಾನ್ ಶೂರಃ ಶ್ರುತವಾನನೃಶಂಸವಾನ್|
12133002c ರಕ್ಷನ್ನಕ್ಷಯಿಣಂ ಧರ್ಮಂ ಬ್ರಹ್ಮಣ್ಯೋ ಗುರುಪೂಜಕಃ||

12133003a ನಿಷಾದ್ಯಾಂ ಕ್ಷತ್ರಿಯಾಜ್ಜಾತಃ ಕ್ಷತ್ರಧರ್ಮಾನುಪಾಲಕಃ|
12133003c ಕಾಪವ್ಯೋ ನಾಮ ನೈಷಾದಿರ್ದಸ್ಯುತ್ವಾತ್ಸಿದ್ಧಿಮಾಪ್ತವಾನ್||

ಕಾಪವ್ಯ[545] ಎಂಬ ಹೆಸರಿನ ನೈಷಾದಿಯು ದಸ್ಯುವಾಗಿದ್ದರೂ ಸಿದ್ಧಿಯನ್ನು ಹೊಂದಿದನು. ಅವನು ಪ್ರಹಾರಕುಶಲನೂ, ಬುದ್ಧಿವಂತನೂ, ಶೂರನೂ, ಶಾಸ್ತ್ರಜ್ಞನೂ, ಅಕ್ರೂರಿಯೂ ಆಗಿದ್ದನು. ಆಶ್ರಮವಾಸಿಗಳ ಧರ್ಮವನ್ನು ರಕ್ಷಿಸುತ್ತಿದ್ದನು. ಬ್ರಹ್ಮಣ್ಯನೂ ಗುರುಪೂಜಕನೂ ಆಗಿದ್ದನು. ಅವನು ಕ್ಷತ್ರಾಣಿಯಲ್ಲಿ ನಿಷಾದನಿಂದ ಹುಟ್ಟಿದ್ದನು. ಕ್ಷತ್ರಧರ್ಮವನ್ನು ಪಾಲಿಸುತ್ತಿದ್ದನು.

12133004a ಅರಣ್ಯೇ ಸಾಯಪೂರ್ವಾಹ್ಣೇ ಮೃಗಯೂಥಪ್ರಕೋಪಿತಾ|
12133004c ವಿಧಿಜ್ಞೋ ಮೃಗಜಾತೀನಾಂ ನಿಷಾನಾನಾಂ ಚ ಕೋವಿದಃ||

ಅವನು ಸಾಯಂಕಾಲ ಮತ್ತು ಬೆಳಿಗ್ಗೆ ಅರಣ್ಯದಲ್ಲಿ ಮೃಗಸಮೂಹಗಳನ್ನು ಕುಪಿತಗೊಳಿಸುತ್ತಿದ್ದನು. ಅವನು ಮೃಗಜಾತಿಗಳ ವಿಧಿಗಳನ್ನು ತಿಳಿದುಕೊಂಡಿದ್ದನು. ನಿಷಾದರಲ್ಲಿಯೇ ಕೋವಿದನಾಗಿದ್ದನು.

12133005a ಸರ್ವಕಾನನದೇಶಜ್ಞಃ ಪಾರಿಯಾತ್ರಚರಃ ಸದಾ|
12133005c ಧರ್ಮಜ್ಞಃ ಸರ್ವಭೂತಾನಾಮಮೋಘೇಷುರ್ದೃಢಾಯುಧಃ||

ಸರ್ವಕಾನನ ಪ್ರದೇಶಗಳನ್ನೂ ತಿಳಿದುಕೊಂಡಿದ್ದನು. ಸದಾ ಪಾರಿಯಾತ್ರ ಪರ್ವತದ ಮೇಲೆ ಸಂಚರಿಸುತ್ತಿದ್ದ ಅವನು ಸರ್ವಭೂತಗಳ ಧರ್ಮವನ್ನು ತಿಳಿದುಕೊಂಡಿದ್ದನು. ದೃಢಾಯುಧನಾಗಿದ್ದ ಅವನ

---

[545] ಕಾಯವ್ಯ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಪ್ರಹಾರವು ಎಂದೂ ವ್ಯರ್ಥವಾಗುತ್ತಿರಲಿಲ್ಲ.

12133006a ಅಪ್ಯನೇಕಶತಾಃ ಸೇನಾ ಏಕ ಏವ ಜಿಗಾಯ ಸಃ|
12133006c ಸ ವೃದ್ಧಾವಂಧಪಿತರೌ ಮಹಾರಣ್ಯೇಽಭ್ಯಪೂಜಯತ್||

ಅನೇಕ ನೂರು ಮಂದಿಗಳ ಸೇನೆಯನ್ನೂ ಒಬ್ಬನೇ ಗೆಲ್ಲುತ್ತಿದ್ದನು. ಅವನು ಆ ಮಹಾರಣ್ಯದಲ್ಲಿದ್ದ ಅಂಧ ವೃದ್ಧ ತಂದೆ-ತಾಯಿಯರ ಸೇವೆಗೈಯುತ್ತಿದ್ದನು.

12133007a ಮಧುಮಾಂಸೈರ್ಮೂಲಫಲೈರನ್ಯೈರುಚ್ಚಾವಚೈರಪಿ|
12133007c ಸತ್ಕೃತ್ಯ ಭೋಜಯಾಮಾಸ ಸಮ್ಯಕ್ಪರಿಚಚಾರ ಚ||

ಮಧು, ಮಾಂಸ, ಮೂಲ, ಫಲಗಳು ಮತ್ತು ಅನ್ಯ ಆಹಾರಪದಾರ್ಥಗಳಿಂದ ಅವರನ್ನು ಸತ್ಕರಿಸಿ ಭೋಜನ ಮಾಡಿಸಿ ಉತ್ತಮವಾದ ಸೇವೆಯನ್ನು ಸಲ್ಲಿಸುತ್ತಿದ್ದನು.

12133008a ಆರಣ್ಯಕಾನ್ ಪ್ರವ್ರಜಿತಾನ್ ಬ್ರಾಹ್ಮಣಾನ್ ಪರಿಪಾಲಯನ್|
12133008c ಅಪಿ ತೇಭ್ಯೋ ಮೃಗಾನ್ ಹತ್ವಾ ನಿನಾಯ ಚ ಮಹಾವನೇ||

ವಾನಪ್ರಸ್ಥಾಶ್ರಮದಲ್ಲಿದ್ದವರನ್ನೂ ಸಂನ್ಯಾಸಿ ಬ್ರಾಹ್ಮಣರನ್ನೂ ಪರಿಪಾಲಿಸುತ್ತಿದ್ದನು. ಮೃಗಗಳನ್ನು ಬೇಟೆಯಾಡಿ ಆ ಮಹಾವನದಲ್ಲಿದ್ದ ಅವರಿಗೆ ಕೊಂಡೊಯ್ಯುತ್ತಿದ್ದನು.

12133009a ಯೇ ಸ್ಮ ನ ಪ್ರತಿಗೃಹ್ಣಂತಿ ದಸ್ಯುಭೋಜನಶಂಕಯಾ|
12133009c ತೇಷಾಮಾಸಜ್ಯ ಗೇಹೇಷು ಕಾಲ್ಯ ಏವ ಸ ಗಚ್ಚತಿ||

ದಸ್ಯುವಿತ್ತ ಭೋಜನವನ್ನು ತಿನ್ನಬಾರದೆಂದು ಶಂಕಿಸಿ ಅವನಿತ್ತ ಭೋಜನವನ್ನು ಸ್ವೀಕರಿಸದೇ ಇದ್ದವರಿಗೆ ಅವನು ಫಲ-ಮೂಲಾದಿ

ಆಹಾರಗಳನ್ನು ಬೆಳಿಗ್ಗೆಯೇ ಹೋಗಿ ಇಟ್ಟು ಬರುತ್ತಿದ್ದನು.

12133010a ತಂ ಬಹೂನಿ ಸಹಸ್ರಾಣಿ ಗ್ರಾಮಣೀತ್ವೇಽಭಿವವ್ರಿರೇ|
12133010c ನಿರ್ಮರ್ಯಾದಾನಿ ದಸ್ಯೂನಾಂ ನಿರನುಕ್ರೋಶಕಾರಿಣಾಮ್‌||

ಹೀಗೆ ನಡೆಯುತ್ತಿರಲು ಒಮ್ಮೆ ಅನೇಕ ಸಾವಿರ ದರೋಡೆಕೋರರು ಕಾಪವ್ಯನನ್ನು ತಮ್ಮ ಅಧಿಪತಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆಶಯದಿಂದ ಅವನನ್ನು ಸುತ್ತುವರೆದು ಪ್ರಾರ್ಥಿಸಿದರು:

12133011 ದಸ್ಯವ ಊಚುಃ|
12133011a ಮುಹೂರ್ತದೇಶಕಾಲಜ್ಞ ಪ್ರಾಜ್ಞ ಶೀಲದೃಢಾಯುಧ[546]|
12133011c ಗ್ರಾಮಣೀರ್ಭವ ನೋ ಮುಖ್ಯಃ ಸರ್ವೇಷಾಮೇವ ಸಂಮತಃ‌||

ದಸ್ಯುಗಳು ಹೇಳಿದರು: "ನೀನು ದೇಶ, ಕಾಲ ಮತ್ತು ಮುಹೂರ್ತಗಳನ್ನು ತಿಳಿದಿರುವೆ. ಪ್ರಾಜ್ಞನಾಗಿರುವೆ. ಶೂರನೂ ದೃಢಾಯುಧನೂ ಆಗಿರುವೆ. ನಮ್ಮೆಲ್ಲರಿಗೂ ನೀನು ಸಮ್ಮತನಾಗಿರುವೆ. ಆದುದರಿಂದ ನೀನು ನಮಗೆ ಮುಖ್ಯನಾಗು.

12133012a ಯಥಾ ಯಥಾ ವಕ್ಷ್ಯಸಿ ನಃ ಕರಿಷ್ಯಾಮಸ್ತಥಾ ತಥಾ|
12133012c ಪಾಲಯಾಸ್ಮಾನ್ಯಥಾನ್ಯಾಯಂ ಯಥಾ ಮಾತಾ ಯಥಾ ಪಿತಾ‌||

ನೀನು ಯಾವ ಯಾವ ರೀತಿಯಲ್ಲಿ ಹೇಳುವೆಯೋ ನಾವು ಹಾಗೆಯೇ ಮಾಡುತ್ತೇವೆ. ತಂದೆ-ತಾಯಿಗಳು ಮಕ್ಕಳನ್ನು ಪಾಲಿಸುವಂತೆ ಯಥಾನ್ಯಾಯವಾಗಿ ನಮ್ಮನ್ನು ಪಾಲಿಸು."

12133013 ಕಾಪವ್ಯ ಉವಾಚ|

---

[546] ದೃಢವ್ರತಃ ಎಂಬ ಪಾಠಾಂತರವಿದೆ (ಭಾರತ ದರ್ಶನ).

12133013a ಮಾ ವಧೀಸ್ತ್ವಂ ಸ್ತ್ರಿಯಂ ಭೀರುಂ ಮಾ ಶಿಶುಂ ಮಾ ತಪಸ್ವಿನಮ್|
12133013c ನಾಯುಧ್ಯಮಾನೋ ಹಂತವ್ಯೋ ನ ಚ ಗ್ರಾಹ್ಯಾ ಬಲಾತ್ಸ್ತ್ರಿಯಃ||

ಕಾಪವ್ಯನು ಹೇಳಿದನು: "ನೀವು ಸ್ತ್ರೀಯರವನ್ನಾಗಲೀ, ಭಯಗೊಂಡಿರುವವರನ್ನಾಗಲೀ, ಶಿಶುಗಳನ್ನಾಗಲೀ, ತಪಸ್ವಿಯನ್ನಾಗಲೀ ಕೊಲ್ಲಬಾರದು. ನಿಮ್ಮೊಡನೇ ಯುದ್ಧಮಾಡದೇ ಇರುವವರನ್ನೂ ಕೊಲ್ಲಬಾರದು. ಸ್ತ್ರೀಯರನ್ನು ಬಲಾತ್ಕಾರವಾಗಿ ಅಪಹರಿಸಬಾರದು.

12133014a ಸರ್ವಥಾ ಸ್ತ್ರೀ ನ ಹಂತವ್ಯಾ ಸರ್ವಸತ್ತ್ವೇಷು ಯುಧ್ಯತಾ|
12133014c ನಿತ್ಯಂ ಗೋಬ್ರಾಹ್ಮಣೇ ಸ್ವಸ್ತಿ ಯೋದ್ಧವ್ಯಂ ಚ ತದರ್ಥತಃ||

ಸರ್ವಜೀವಿಗಳಲ್ಲಿ ಸರ್ವಥಾ ಸ್ತ್ರೀಯರನ್ನು ಕೊಲ್ಲಬಾರದು. ನಿತ್ಯವೂ ಬ್ರಾಹ್ಮಣರ ಹಿತಕ್ಕಾಗಿ ಯುದ್ಧಮಾಡಬೇಕು. ಅವಶ್ಯವಿದ್ದರೆ ಬ್ರಾಹ್ಮಣನ ಸಲುವಾಗಿಯೂ ಯುದ್ಧಮಾಡಬೇಕು.

12133015a ಸಸ್ಯಂ ಚ ನಾಪಹಂತವ್ಯಂ ಸೀರವಿಘ್ನಂ ಚ ಮಾ ಕೃಥಾಃ|
12133015c ಪೂಜ್ಯಂತೇ ಯತ್ರ ದೇವಾಶ್ಚ ಪಿತರೋಽತಿಥಯಸ್ತಥಾ||

ಹೊಲದಲ್ಲಿದ್ದ ಬೆಳೆಗಳನ್ನು ಅಪಹರಿಸಬಾರದು. ವಿವಾಹಾದಿ ಸಮಾರಂಭಗಳಿಗೆ ವಿಘ್ನವನ್ನುಂಟುಮಾಡಬಾರದು. ದೇವತೆಗಳು, ಪಿತೃಗಳು ಮತ್ತು ಅತಿಥಿಗಳ ಪೂಜೆಯಾಗುತ್ತಿರುವಲ್ಲಿ ಹಲ್ಲೆಗಳನ್ನು ನಡೆಸಬಾರದು.

12133016a ಸರ್ವಭೂತೇಷ್ವಪಿ ಚ ವೈ ಬ್ರಾಹ್ಮಣೋ ಮೋಕ್ಷಮರ್ಹತಿ|
12133016c ಕಾರ್ಯಾ ಚಾಪಚಿತಿಸ್ತೇಷಾಂ ಸರ್ವಸ್ವೇನಾಪಿ ಯಾ ಭವೇತ್||

ಸರ್ವಭೂತಗಳಲ್ಲಿಯೂ ಬ್ರಾಹ್ಮಣನು ನಮ್ಮಿಂದ ಮುಕ್ತನಾಗಲು

ಅರ್ಹನಾಗಿದ್ದಾನೆ. ಅವರನ್ನು ಬಿಟ್ಟುಬಿಡುವುದಲ್ಲದೇ ನಮ್ಮ ಸರ್ವಸ್ವದಿಂದಲೂ ಅವರ ಅಭಿವೃದ್ಧಿಗೆ ಪ್ರಯತ್ನಪಡಬೇಕು.

12133017a ಯಸ್ಯ ಹ್ಯೇತೇ ಸಂಪ್ರರುಷ್ಟಾ ಮಂತ್ರಯಂತಿ ಪರಾಭವಮ್|
12133017c ನ ತಸ್ಯ ತ್ರಿಷು ಲೋಕೇಷು ತ್ರಾತಾ ಭವತಿ ಕಶ್ಚನ||

ಯಾರಕುರಿತು ಬ್ರಾಹ್ಮಣರು ರೋಷಗೊಂಡು ಅವನ ಪರಾಭವಕ್ಕೆ ಯೋಚಿಸುವರೋ ಅವನನ್ನು ಮೂರು ಲೋಕಗಳಲ್ಲಿ ಯಾರೂ ರಕ್ಷಿಸಲಿಕ್ಕಾಗುವುದಿಲ್ಲ.

12133018a ಯೋ ಬ್ರಾಹ್ಮಣಾನ್ಪರಿಭವೇದ್ವಿನಾಶಂ ವಾಪಿ ರೋಚಯೇತ್|
12133018c ಸೂರ್ಯೋದಯ ಇವಾವಶ್ಯಂ[547] ಧ್ರುವಂ ತಸ್ಯ ಪರಾಭವಃ||

ಬಾಹ್ಮಣರನ್ನು ಕಾಡುವವನು ಮತ್ತು ಅವರ ವಿನಾಶವನ್ನು ಬಯಸುವವನ ಪರಾಭವವು ಅವಶ್ಯವಾಗಿ ಸೂರ್ಯೋದಯದಷ್ಟೇ ನಿಶ್ಚಿತವಾದುದು.

12133019a ಇಹೈವ ಫಲಮಾಸೀನಃ ಪ್ರತ್ಯಾಕಾಂಕ್ಷತಿ ಶಕ್ತಿತಃ[548]|
12133019c ಯೇ ಯೇ ನೋ ನ ಪ್ರದಾಸ್ಯಂತಿ ತಾಂಸ್ತಾನ್ಸೇನಾಭಿಯಾಸ್ಯತಿ||

ಇಲ್ಲಿಯೇ ಇದ್ದುಕೊಂಡು ಶಕ್ತಿಯಾದಷ್ಟು ಫಲವನ್ನು ನಿರೀಕ್ಷಿಸುತ್ತಿರಬೇಕು[549]. ಯಾರು ಕೊಡುವುದಿಲ್ಲವೋ ಅಂಥವರ ಮೇಲೆ

---

[547] ಸೂರ್ಯೋದಯ ಇವ ಧ್ವಾಂತೇ ಎಂಬ ಪಾಠಾಂತರವಿದೆ (ಭಾರತ ದರ್ಶನ).

[548] ಪ್ರತ್ಯಾಕಾಂಕ್ಷೇತ ಸರ್ವಶಃ ಎಂಬ ಪಾಠಾಂತರವಿದೆ (ಭಾರತ ದರ್ಶನ).

[549] ಇಲ್ಲಿಯೇ ಇದ್ದುಕೊಂಡು ದಾರಿಹೋಕರಿಂದ ಹಣದ ಸುಲಿಗೆಯನ್ನು

ಮಾತ್ರ ಆಕ್ರಮಣ ಮಾಡಬೇಕು.

12133020a ಶಿಷ್ಟ್ಯರ್ಥಂ ವಿಹಿತೋ ದಂಡೋ ನ ವಧಾರ್ಥಂ ವಿನಿಶ್ಚಯಃ[550]।
12133020c ಯೇ ಚ ಶಿಷ್ಟಾನ್ಪ್ರಬಾಧಂತೇ ಧರ್ಮಸ್ತೇಷಾಂ ವಧಃ ಸ್ಮೃತಃ॥

ದುಷ್ಟರನ್ನು ಶಿಕ್ಷಿಸುವ ಸಲುವಾಗಿಯೇ ದಂಡವು ವಿಹಿತವಾಗಿದೆ.
ವಧೆಗಾಗಿ ಅದನ್ನು ಬಳಸಬಾರದು. ಶಿಷ್ಟರನ್ನು ಯಾರು
ಬಾಧಿಸುತ್ತಾರೋ ಅವರನ್ನು ವಧಿಸುವುದೇ ಧರ್ಮವೆಂದು ಹೇಳಿದ್ದಾರೆ.

12133021a ಯೇ ಹಿ ರಾಷ್ಟ್ರೋಪರೋಧೇನ ವೃತ್ತಿಂ[551] ಕುರ್ವಂತಿ ಕೇ ಚನ।
12133021c ತದೇವ ತೇಽನು ಮೀಯಂತೇ ಕುಣಪಂ ಕೃಮಯೋ ಯಥಾ॥

ರಾಷ್ಟ್ರವನ್ನು ಹಾಳುಮಾಡುವ ವೃತ್ತಿಯಲ್ಲಿರುವವರು ಹೆಣಕ್ಕೆ
ಮುತ್ತಿರುವ ಕೃಮಿಗಳಂತೆ ನಾಶವಾಗುತ್ತಾರೆ.

12133022a ಯೇ ಪುನರ್ಧರ್ಮಶಾಸ್ತ್ರೇಣ ವರ್ತೇರನ್ನಿಹ ದಸ್ಯವಃ।
12133022c ಅಪಿ ತೇ ದಸ್ಯವೋ ಭೂತ್ವಾ ಕ್ಷಿಪ್ರಂ ಸಿದ್ಧಿಮವಾಪ್ನುಯುಃ॥

ದಸ್ಯುಗಳಾಗಿದ್ದರೂ ಪುನಃ ದರ್ಮಶಾಸ್ತ್ರಗಳಲ್ಲಿರುವಂತೆ ವರ್ತಿಸಿದರೆ
ಅವರು ದಸ್ಯುಗಳಾಗಿದ್ದುಕೊಂಡೂ ಬೇಗನೆ ಸಿದ್ಧಿಯನ್ನು
ಹೊಂದುತ್ತಾರೆ.””

12133023 ಭೀಷ್ಮ ಉವಾಚ।
12133023a ತತ್ಸರ್ವಮುಪಚಕ್ರುಸ್ತೇ ಕಾಪವ್ಯಸ್ಯಾನುಶಾಸನಮ್।

ಮಾಡಬೇಕು (ಭಾತರ ದರ್ಶನ).

550 ನ ವೃದ್ಧ್ಯರ್ಥಂ ವಿನಿಶ್ಚಯಃ ಎಂಬ ಪಾಠಾಂತರವಿದೆ (ಭಾರತ ದರ್ಶನ).

551 ವೃದ್ಧಿಂ ಎಂಬ ಪಾಠಾಂತರವಿದೆ (ಭಾರತ ದರ್ಶನ).

12133023c ವೃತ್ತಿಂ[552] ಚ ಲೇಭಿರೇ ಸರ್ವೇ ಪಾಪೇಭ್ಯಶ್ಚಾಪ್ಯುಪಾರಮನ್‌॥

ಭೀಷ್ಮನು ಹೇಳಿದನು: "ಅವರೆಲ್ಲರು ಕಾಪವ್ಯನ ಅನುಶಾಸನದಂತೆಯೇ ನಡೆದುಕೊಂಡರು. ಅವರೆಲ್ಲರೂ ವೃತ್ತಿಗಳನ್ನು ಪಡೆದುಕೊಂಡು ಪಾಪಗಳಿಂದಲೂ ವಿಮುಕ್ತರಾದರು.

12133024a ಕಾಪವ್ಯಃ ಕರ್ಮಣಾ ತೇನ ಮಹತೀಂ ಸಿದ್ಧಿಮಾಪ್ತವಾನ್‌।
12133024c ಸಾಧೂನಾಮಾಚರನ್‌ ಕ್ಷೇಮಂ ದಸ್ಯೂನ್ಪಾಪಾನ್ನಿವರ್ತಯನ್‌॥

ಕಾಪವ್ಯನು ಸಾಧುಗಳಿಗೆ ಕ್ಷೇಮವನ್ನುಂಟುಮಾಡುತ್ತಿದ್ದುದರಿಂದ ಮತ್ತು ದಸ್ಯುಗಳನ್ನು ಪಾಪಕರ್ಮಗಳಿಂದ ವಿಮುಖರನ್ನಾಗಿ ಮಾಡಿದ್ದುದರಿಂದ ಮಹಾ ಸಿದ್ಧಿಯನ್ನು ಪಡೆದುಕೊಂಡನು.

12133025a ಇದಂ ಕಾಪವ್ಯಚರಿತಂ ಯೋ ನಿತ್ಯಮನುಕೀರ್ತಯೇತ್‌।
12133025c ನಾರಣ್ಯೇಭ್ಯಃ ಸ ಭೂತೇಭ್ಯೋ ಭಯಮಾರ್ಚ್ಛೇತ್ಕದಾ ಚನ॥

ಈ ಕಾಪವ್ಯಚರಿತವನ್ನು ನಿತ್ಯವೂ ಕೀರ್ತನೆಮಾಡುವವನು ಅರಣ್ಯವಾಸೀ ಪ್ರಾಣಿಗಳಿಂದ ಕಿಂಚಿತ್ತೂ ಭಯವುಂಟಾಗುವುದಿಲ್ಲ.

12133026a ಭಯಂ ತಸ್ಯ ನ ಮರ್ತ್ಯೇಭ್ಯೋ ನಾಮರ್ತ್ಯೇಭ್ಯಃ ಕಥಂ ಚನ[553]‌।
12133026c ನ ಸತೋ ನಾಸತೋ[554] ರಾಜನ್ಸ ಹ್ಯರಣ್ಯೇಷು ಗೋಪತಿಃ॥

ಭಾರತ! ಅವನಿಗೆ ಮರ್ತ್ಯರಿಂದಲೂ ಅಮಾನುಷರಿಂದಲೂ ಎಂದೂ

---

[552] ವೃದ್ಧಿಂ ಎಂಬ ಪಾಠಾಂತರವಿದೆ (ಭಾರತ ದರ್ಶನ).

[553] ನ ಭಯಂ ತಸ್ಯ ಭೂತೇಭ್ಯಃ ಸರ್ವೇಭ್ಯಶ್ಚೈವ ಭಾರತ‌। ಎಂಬ ಪಾಠಾಂತರವಿದೆ (ಭಾರತ ದರ್ಶನ).

[554] ನಾಸತೋ ವಿದ್ಯತೇ ಎಂಬ ಪಾಠಾಂತರವಿದೆ (ಭಾರತ ದರ್ಶನ).

ಭಯವಿರುವುದಿಲ್ಲ. ರಾಜನ್! ಅಂಥವನು ಅರಣ್ಯಕ್ಕೇ ಅಧಿಪತಿಯಾಗಬಹುದು.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಕಾಪವ್ಯಚರಿತೇ ತ್ರಿಸ್ತ್ರಿಂಶಾತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಕಾಪವ್ಯಚರಿತ ಎನ್ನುವ ನೂರಾಮೂವತ್ಮೂರನೇ ಅಧ್ಯಾಯವು.

೧೩೪

ರಾಜನು ಯಾವ ಮಾರ್ಗದಿಂದ ಕೋಶವನ್ನು ತುಂಬಿಸಿಕೊಳ್ಳಬೇಕು ಎನ್ನುವುದರ ಕುರಿತಾದ ಬ್ರಹ್ಮಗೀತೆ (1-10).

12134001 ಭೀಷ್ಮ ಉವಾಚ|
12134001a ಅತ್ರ ಗಾಥಾ ಬ್ರಹ್ಮಗೀತಾಃ ಕೀರ್ತಯಂತಿ ಪುರಾವಿದಃ|
12134001c ಯೇನ ಮಾರ್ಗೇಣ ರಾಜಾನಃ ಕೋಶಂ ಸಂಜನಯಂತಿ ಚ||

ಭೀಷ್ಮನು ಹೇಳಿದನು: “ರಾಜನು ಯಾವ ಮಾರ್ಗದಿಂದ ಕೋಶವನ್ನು ತುಂಬಿಸಿಕೊಳ್ಳಬೇಕು ಎನ್ನುವುದರ ಕುರಿತು ಹಿಂದಿನದನ್ನು ತಿಳಿದವರು ಈ ಬ್ರಹ್ಮಗೀತೆಯ ಕೀರ್ತನೆಯನ್ನು ಮಾಡುತ್ತಾರೆ.

12134002a ನ ಧನಂ ಯಜ್ಞಶೀಲಾನಾಂ ಹಾರ್ಯಂ ದೇವಸ್ವಮೇವ ತತ್|
12134002c ದಸ್ಯೂನಾಂ ನಿಷ್ಕೃಯಾಣಾಂ ಚ ಕ್ಷತ್ರಿಯೋ ಹರ್ತುಮರ್ಹತಿ||

ಯಜ್ಞಶೀಲರ ಧನವನ್ನು ಅಪಹರಿಸಬಾರದು. ದೇವರ ಸ್ವತ್ತನ್ನೂ

ಅಪಹರಿಸಬಾರದು. ಕ್ಷತ್ರಿಯನಾದವನು ದಸ್ಯುಗಳ ಮತ್ತು ವರ್ಣಾಶ್ರಮ ಯುಕ್ತ ಕರ್ಮಗಳನ್ನು ಮಾಡದೇ ಇರುವವರ ಧನವನ್ನು ಅಪಹರಿಸಬಹುದು.

12134003a ಇಮಾಃ ಪ್ರಜಾಃ ಕ್ಷತ್ರಿಯಾಣಾಂ ರಕ್ಷ್ಯಾ ಶ್ಚಾದ್ಯಾಶ್ಚ[555] ಭಾರತ|
12134003c ಧನಂ ಹಿ ಕ್ಷತ್ರಿಯಸ್ಯೇಹ ದ್ವಿತೀಯಸ್ಯ ನ ವಿದ್ಯತೇ||

ಭಾರತ! ಕ್ಷತ್ರಿಯರು ರಕ್ಷಿಸಬೇಕೆಂದೇ ಈ ಪ್ರಜೆಗಳಿದ್ದಾರೆ. ಇವರೇ ಕ್ಷತ್ರಿಯರಿಗೆ ಸೇರಿದ ಧನ. ಬೇರೆ ಯಾರಿಗೂ ಅವರು ಸೇರಿಲ್ಲ.

12134004a ತದಸ್ಯ ಸ್ಯಾದ್ಬಲಾರ್ಥಂ ವಾ ಧನಂ ಯಜ್ಞಾರ್ಥಮೇವ ವಾ|
12134004c ಅಭೋಗ್ಯಾ ಹ್ಯೋಷಧೀಶ್ಚಿತ್ತ್ವಾ ಭೋಗ್ಯಾ ಏವ ಪಚಂತ್ಯುತ||

ಆದರೆ ತನ್ನದೇ ಆಗಿರುವ ಧನವನ್ನು ರಾಜನು ಸೈನ್ಯದ ಸಂಗ್ರಹಕ್ಕಾಗಿಯಾಗಲೀ ಯಜ್ಞಮಾಡುವುದಕ್ಕಾಗಲೀ ಉಪಯೋಗಿಸಿಕೊಳ್ಳಬೇಕು. ಭತ್ತ-ಗೋಧಿ ಮೊದಲಾದ ಹುಲ್ಲಿನ ಪೈರುಗಳಲ್ಲಿ ತಿನ್ನಲು ಯೋಗ್ಯವಲ್ಲದವುಗಳನ್ನು ಬಿಟ್ಟು ಭೋಗ್ಯವಾದ ಧಾನ್ಯಗಳನ್ನೇ ಬಳಸಬೇಕು.

12134005a ಯೋ ವೈ ನ ದೇವಾನ್ನ ಪಿತೃನ್ನ ಮರ್ತ್ಯಾನ್ ಹವಿಷಾರ್ಚತಿ|
12134005c ಆನಂತಿಕಾಂ ತಾಂ ಧನಿತಾಮಾಹುರ್ವೇದವಿದೋ ಜನಾಃ||

ದೇವತೆಗಳನ್ನು, ಪಿತೃಗಳನ್ನು ಮತ್ತು ಅತಿಥಿಗಳನ್ನು ತೃಪ್ತಿಗೊಳಿಸದೇ ಇರುವವನಲ್ಲಿರುವ ಧನವು ವ್ಯರ್ಥವಾದುದೆಂದು ವೇದವಿದರು ಹೇಳುತ್ತಾರೆ.

---

[555] ರಾಜ್ಯಭೋಗಾಶ್ಚ ಎಂಬ ಪಾಠಾಂತರವಿದೆ (ಭಾರತ ದರ್ಶನ).

12134006a ಹರೇತ್ತದ್ಧ್ರವಿಣಂ ರಾಜನ್ ಧಾರ್ಮಿಕಃ ಪೃಥಿವೀಪತಿಃ|
12134006c ನ ಹಿ ತತ್ ಪ್ರೀಣಯೇಲ್ಲೋಕಾನ್ನ ಕೋಶಂ ತದ್ವಿಧಂ ನೃಪಃ||

ರಾಜನ್! ಧಾರ್ಮಿಕ ಪೃಥಿವೀಪತಿಯು ಅಂಥಹ ವ್ಯರ್ಥವದ
ಧನವನ್ನು ಕಸಿದುಕೊಂಡು ಅದರ ಮೂಲಕ ಪ್ರಜೆಗಳಿಗೆ
ಅನುಕೂಲಗಳನ್ನು ಮಾಡಿಕೊಟ್ಟು ಪ್ರೀತಗೊಳಿಸಬೇಕು. ತನ್ನ
ಕೋಶವನ್ನು ತುಂಬಿಸಿಕೊಳ್ಳುವುದಕ್ಕೆ ರಾಜನು ಇವನ್ನು ಬಳಸಬಾರದು.

12134007a ಅಸಾಧುಭ್ಯೋ ನಿರಾದಾಯ ಸಾಧುಭ್ಯೋ ಯಃ ಪ್ರಯಚ್ಛತಿ|
12134007c ಆತ್ಮಾನಂ ಸಂಕ್ರಮಂ ಕೃತ್ವಾ ಮನ್ಯೇ[556] ಧರ್ಮವಿದೇವ ಸಃ||

ತನ್ನನ್ನೇ ಸೇತುವನ್ನಾಗಿಸಿಕೊಂಡು ದುಷ್ಟರಿಂದ ಧನವನ್ನು
ತೆಗೆದುಕೊಂಡು ಸತ್ಪುರುಷರಿಗೆ ನೀಡುವ ರಾಜನು
ಸಂಪೂರ್ಣಧರ್ಮವನ್ನು ತಿಳಿದವನಾಗಿರುತ್ತಾನೆ.

[557]12134008a ಔದ್ಭಿಜ್ಜಾ ಜಂತವಃ ಕೇ ಚಿದ್ಯುಕ್ತವಾಚೋ ಯಥಾ ತಥಾ[558]|
12134008c ಅನಿಷ್ಟತಃ ಸಂಭವಂತಿ ತಥಾಯಜ್ಞಃ ಪ್ರತಾಯತೇ[559]||

ತರು-ಗುಲ್ಮಾದಿಗಳು ಮತ್ತು ಕೆಲವು ಜಂತುಗಳು ತಾವಾಗಿಯೇ
ಹುಟ್ಟಿಕೊಳ್ಳುವಂತೆ ಯಜ್ಞಕ್ಕೆ ಅನಿಷ್ಟ ಜನರು ತಾವಾಗಿಯೇ

---

556 ಕೃತ್ಸ್ನ (ಭಾರತ ದರ್ಶನ).

557 ಭಾರತ ದರ್ಶನದಲ್ಲಿ ಇದಕ್ಕೆ ಮೊದಲು ಈ ಶ್ಲೋಕಾರ್ಧವಿದೆ: ತಥಾ ತಥಾ ಜಯೇಲ್ಲೋಕಾನ್ಯುಕ್ತ್ವಾ ಹ್ಯೇವ ಯಥಾ ಯಥಾ|

558 ಉದ್ಭಿಜ್ಜಾ ಜಂತವೋ ಯದ್ವಚ್ಛುಕ್ಲಜೀವಾ ಯಥಾ ಯಥಾ| (ಭಾರತ ದರ್ಶನ).

559 ಅನಿಮಿತ್ತಾತ್ಸಂಭವಂತಿ ತಥಾ ಯಜ್ಞಃ ಪ್ರಜಾಯತೇ| (ಭಾರತ ದರ್ಶನ).

ಹುಟ್ಟಿಕೊಳ್ಳುತ್ತಾರೆ.

12134009a ಯಥ್ಯೈವ ದಂಶಮಶಕಂ ಯಥಾ ಚಾಂಡಪಿಪೀಲಿಕಮ್|
12134009c ಸ್ಯೈವ ವೃತ್ತಿರಯಜ್ಞೇಷು ತಥಾ ಧರ್ಮೋ ವಿಧೀಯತೇ||

ನೊಣ ಮೊದಲಾದ ಕೀಟಗಳು ಮತ್ತು ಇರುವೆಗಳೊಡನೆ ಹೇಗೋ ಹಾಗೆ ಯಜ್ಞವಿರೋಧಿಗಳ ಕುರಿತೂ ನಡೆದುಕೊಳ್ಳಬೇಕು ಎಂದು ಧರ್ಮಶಾಸನವಿದೆ.

12134010a ಯಥಾ ಹ್ಯಕಸ್ಮಾದ್ಭವತಿ ಭೂಮೌ ಪಾಂಸುತೃಣೋಲಪಮ್[560]|
12134010c ತಥೈವೇಹ ಭವೇದ್ಧರ್ಮಃ ಸೂಕ್ಷ್ಮಃ ಸೂಕ್ಷ್ಮತರೋಽಪಿ ಚ||

ಅಕಸ್ಮಾತ್ತಾಗಿ ಭೂಮಿಯ ಮೇಲಾಗುವ ಧೂಳು ಅಥವಾ ಹುಲ್ಲಿನಂತೆ ಧರ್ಮವೂ ಕೂಡ ಸೂಕ್ಷ್ಮಕ್ಕಿಂತಲೂ ಅತಿ ಸೂಕ್ಷ್ಮವಾಗಿದೆ."

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಚತುಸ್ತ್ರಿಂಶಾತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ನೂರಾಮೂವತ್ನಾಲ್ಕನೇ ಅಧ್ಯಾಯವು.

೧೩೫

ಶಕುಲಾಖ್ಯಾನ

ಮುಂದೆ ಬರುವ ಸಂಕಟದ ಕುರಿತು ಸಾವಧಾನದಿಂದಿರಲು

[560] ಪಾಂಸುವಿಲೋಲಿತಃ (ಭಾರತ ದರ್ಶನ).

ದೂರದರ್ಶೀ, ತತ್ಕಾಲಜ್ಞ ಮತ್ತು ದೀರ್ಘಸೂತ್ರೀ – ಈ ಮೂರು ಮೀನುಗಳ ದೃಷ್ಟಾಂತ (1-23).

12135001 ಭೀಷ್ಮ ಉವಾಚ|

[561]12135001a ಅತ್ರೈವ ಚೇದಮವ್ಯಗ್ರಃ ಶೃಣ್ವಾಖ್ಯಾನಮನುತ್ತಮಮ್|
12135001c ದೀರ್ಘಸೂತ್ರಂ ಸಮಾಶ್ರಿತ್ಯ ಕಾರ್ಯಾಕಾರ್ಯವಿನಿಶ್ಚಯೇ||

ಭೀಷ್ಮನು ಹೇಳಿದನು: "ಏನನ್ನು ಮಾಡಬೇಕು ಮತ್ತು ಮಾಡಬಾರದು ಎನ್ನುವುದನ್ನು ನಿಶ್ಚಯಿಸುವಾಗ ದೀರ್ಘಸೂತ್ರಿಯಾಗಿರುವವನ ಕುರಿತಾದ ಒಂದು ಸುಂದರ ಉಪಾಖ್ಯಾನವನ್ನು ಹೇಳುತ್ತೇನೆ. ನೀನು ಸ್ವಸ್ಥಚಿತ್ತನಾಗಿ ಕೇಳು.

12135002a ನಾತಿಗಾಧೇ ಜಲಸ್ಥಾಯೇ ಸುಹೃದಃ ಶಕುಲಾಸ್ತ್ರಯಃ|
12135002c ಪ್ರಭೂತಮತ್ಸ್ಯೇ ಕೌಂತೇಯ ಬಭೂವುಃ ಸಹಚಾರಿಣಃ||

ಕೌಂತೇಯ! ಅತಿಯಾಗಿ ಆಳವಾಗಿರದ ಒಂದು ಕೆರೆಯಲ್ಲಿ ಅನೇಕ

---

[561] ಗೀತಾ ಪ್ರೆಸ್ ಸಂಪುಟದಲ್ಲಿ ಇದಕ್ಕೆ ಮೊದಲು ಈ ಒಂದು ಶ್ಲೋಕವಿದೆ: ಅನಾಗತವಿಧಾತಾ ಚ ಪರ್ಯುತ್ಪನ್ನಮತಿಶ್ಚ ಯಃ| ದ್ವಾವೇವ ಸುಖಮೇಧೇತೇ ದೀರ್ಘಸೂತ್ರೀ ವಿನಶ್ಯತಿ|| ಅರ್ಥಾತ: ಸಂಕಟವು ಬರುವುದಕ್ಕೆ ಮೊದಲೇ ತನ್ನನ್ನು ಉಳಿಸಿಕೊಳ್ಳುವ ಉಪಾಯವನ್ನು ಮಾಡಿಟ್ಟುಕೊಂದಿರುವವನನ್ನು ಅನಾಗತವಿಧಾತಾ ಎಂದು ಕರೆಯುತ್ತಾರೆ. ಸರಿಯಾದ ಸಮಯದಲ್ಲಿಯೇ ಆತ್ಮರಕ್ಷಣೆಯ ಉಪಾಯವು ಹೊಳೆಯುವವನಿಗೆ ಪ್ರತ್ಯುತ್ಪನ್ನಮತಿ ಎಂದು ಕರೆಯುತ್ತಾರೆ. ಈ ಎರಡು ಪ್ರಕಾರದ ಜನರು ಮಾತ್ರ ತಮ್ಮ ಸುಖದ ಉನ್ನತಿಯನ್ನು ಮಾಡಿಕೊಳ್ಳುತ್ತಾರೆ. ಆದರೆ ಕಾರ್ಯದಲ್ಲಿ ಅನಾವಶ್ಯಕ ವಿಳಂಬವನ್ನು ಮಾಡುವ ದೀರ್ಘಸೂತ್ರಿಯು ನಾಶಹೊಂದುತ್ತಾನೆ.

ಮೀನುಗಳು ವಾಸಿಸುತ್ತಿದ್ದವು. ಅವುಗಳಲ್ಲಿ ಮೂರು ಕಾರ್ಯಕುಶಲ
ಮೀನುಗಳೂ ಸೇರಿಕೊಂಡಿದ್ದವು. ಅವು ಸದಾ ಒಟ್ಟಾಗಿ
ಸಂಚರಿಸುತ್ತಿದ್ದವು ಮತ್ತು ಪರಸ್ಪರ ಮೈತಿಭಾವವನ್ನು ಹೊಂದಿದ್ದವು.

12135003a ಅತ್ಯೈಕಃ ಪ್ರಾಪ್ತಕಾಲಜ್ಞೋ ದೀರ್ಘದರ್ಶೀ ತಥಾಪರಃ|
12135003c ದೀರ್ಘಸೂತ್ರಶ್ಚ ತತ್ರೈಕಸ್ತ್ರಯಾಣಾಂ ಜಲಚಾರಿಣಾಮ್||

ಆ ಮೂರು ಮೀನುಗಳಲ್ಲಿ ಒಂದು ಪ್ರಾಪ್ತಕಾಲಜ್ಞನಾಗಿತ್ತು[562].
ಇನ್ನೊಂದು ದೀರ್ಘದರ್ಶಿಯಾಗಿತ್ತು[563], ಮತ್ತು ಇನ್ನೊಂದು
ದೀರ್ಘಸೂತ್ರನಾಗಿತ್ತು[564].

12135004a ಕದಾ ಚಿತ್ತಜ್ಜಲಸ್ಥಾಯಂ ಮತ್ಸ್ಯಬಂಧಾಃ ಸಮಂತತಃ|
12135004c ನಿಃಸ್ರಾವಯಾಮಾಸುರಥೋ ನಿಮ್ನೇಷು ವಿವಿಧೈರ್ಮುಖೈಃ||

ಒಮ್ಮೆ ಬೆಸ್ತರು ಆ ಜಲಾಶಯಕ್ಕೆ ನಾಲ್ಕೂ ಕಡೆಗಳಿಂದ ಕೋಡಿಗಳನ್ನು
ತೋಡಿ ಅನೇಕ ಕಡೆಗಳಿಂದ ಅದರ ನೀರನ್ನು ಸುತ್ತಲಿದ್ದ
ಕೆಳಭೂಮಿಗಳಿಗೆ ಹಾಯಿಸತೊಡಗಿದರು.

12135005a ಪ್ರಕ್ಷೀಯಮಾಣಂ ತಂ ಬುದ್ಧ್ವಾ ಜಲಸ್ಥಾಯಂ ಭಯಾಗಮೇ|
12135005c ಅಬ್ರವೀದ್ದೀರ್ಘದರ್ಶೀ ತು ತಾವುಭೌ ಸುಹೃದೌ ತದಾ||

---

562 ಪ್ರತ್ಯುತ್ಪನ್ನಮತಿ ಅಥವಾ ಸರಿಯಾದ ಸಮಯದಲ್ಲಿ ಆತ್ಮರಕ್ಷಣೆಯ ಉಪಾಯವು ಹೊಳೆಯುವವನು.

563 ಸಂಕಟವು ಬರುವುದಕ್ಕೆ ಮೊದಲೇ ತನ್ನನ್ನು ಉಳಿಸಿಕೊಳ್ಳುವ ಉಪಾಯವನ್ನು ಮಾಡಿಟ್ಟುಕೊಳ್ಳುವವನು.

564 ಕಾರ್ಯದಲ್ಲಿ ಅನಾವಶ್ಯಕ ವಿಳಂಬವನ್ನು ಮಾಡುವವನು.

ಜಲಾಶಯದ ನೀರು ಕಡಿಮೆಯಾಗುತ್ತಿರುವುದನ್ನು ನೋಡಿ ಭಯವುಂಟಾಗಲಿದೆಯೆಂದು ತಿಳಿದು ದೀರ್ಘದರ್ಶಿಯು ತನ್ನ ಆ ಇಬ್ಬರು ಮಿತ್ರರಿಗೆ ಹೇಳಿತು:

12135006a ಇಯಮಾಪತ್ಸಮುತ್ಪನ್ನಾ ಸರ್ವೇಷಾಂ ಸಲಿಲೌಕಸಾಮ್|
12135006c ಶೀಘ್ರಮನ್ಯತ್ರ ಗಚ್ಚಾಮಃ ಪಂಥಾ ಯಾವನ್ನ ದುಷ್ಯತಿ||

“ಇಲ್ಲಿರುವ ಸರ್ವ ಜಲಚರ ಪ್ರಾಣಿಗಳಿಗೂ ಆಪತ್ತುಬಂದೊದಗಿದೆ ಎಂದು ಅನಿಸುತ್ತಿದೆ. ನಮಗೆ ಹೊರಗೋಗುವ ಮಾರ್ಗವು ದೂಷಿತವಾಗುವರೊಳಗೆ ಶೀಘ್ರದಲ್ಲಿಯೇ ಬೇರೆ ಎಲ್ಲಿಯಾದರೂ ಹೋಗೋಣ.

12135007a ಅನಾಗತಮನರ್ಥಂ ಹಿ ಸುನಯೈರ್ಯಃ ಪ್ರಬಾಧತೇ|
12135007c ನ ಸ ಸಂಶಯಮಾಪ್ನೋತಿ ರೋಚತಾಂ ವಾಂ ವ್ರಜಾಮಹೇ||

ಮುಂದಾಗಬಹುದಾದ ಸಂಕಟವನ್ನು ಅದು ಆಗುವ ಮೊದಲೇ ಉತ್ತಮ ನೀತಿಯನ್ನುಪಯೋಗಿಸಿ ಕಳೆದುಕೊಳ್ಳುವನಿಗೆ ಪ್ರಾಣಹೋಗುವ ಸಂಶಯದಲ್ಲಿ ಬೀಳುವುದಿಲ್ಲ. ನಿಮಗೆ ನನ್ನ ಈ ಮಾತು ಸರಿಯೆಂದು ಅನಿಸಿದರೆ ಬನ್ನಿ. ಇನ್ನೊಂದು ಜಲಾಶಯಕ್ಕೆ ಹೋಗೋಣ.”

12135008a ದೀರ್ಘಸೂತ್ರಸ್ತು ಯಸ್ತತ್ರ ಸೋಽಬ್ರವೀತ್ಸಮ್ಯಗುಚ್ಯತೇ|
12135008c ನ ತು ಕಾರ್ಯಾ ತ್ವರಾ ಯಾವದಿತಿ ಮೇ ನಿಶ್ಚಿತಾ ಮತಿಃ||

ಆಗ ಅಲ್ಲಿದ್ದ ದೀರ್ಘಸೂತ್ರಿಯು ಹೇಳಿತು: “ನೀನು ಸರಿಯಾದುದನ್ನೇ ಹೇಳಿದ್ದೀಯೆ. ಆದರೆ ನಮಗೆ ಈಗ ಅವಸರ ಮಾಡಬಾರದು ಎಂದು ನನ್ನ ಬುದ್ಧಿಯು ನಿಶ್ಚಿತವಾಗಿ ಹೇಳುತ್ತಿದೆ.”

12135009a ಅಥ ಸಂಪ್ರತಿಪತ್ತಿಜ್ಞಃ ಪ್ರಾಬ್ರವೀದ್ದೀರ್ಘದರ್ಶಿನಮ್।
12135009c ಪ್ರಾಪ್ತೇ ಕಾಲೇ ನ ಮೇ ಕಿಂ ಚಿನ್ನ್ಯಾಯತಃ ಪರಿಹಾಸ್ಯತೇ॥

ಆಗ ಪ್ರತ್ಯುತ್ಪನ್ನಮತಿಯು ದೀರ್ಘದರ್ಶಿಯಲ್ಲಿ ಹೇಳಿತು: "ಕಾಲವು ಪ್ರಾಪ್ತವಾದಾಗ ನನ್ನ ಬುದ್ಧಿಯು ಯಾವುದಾದರೂ ಉಪಾಯವನ್ನು ಹುಡುಕುವುದರಲ್ಲಿ ಎಂದೂ ಅಸಫಲವಾಗುವುದಿಲ್ಲ."

12135010a ಏವಮುಕ್ತೋ ನಿರಾಕ್ರಾಮದ್ದೀರ್ಘದರ್ಶೀ ಮಹಾಮತಿಃ।
12135010c ಜಗಾಮ ಸ್ರೋತಸ್ಯೇಕೇನ ಗಂಭೀರಸಲಿಲಾಶಯಮ್॥

ಇದನ್ನು ಕೇಳಿ ಮಹಾಮತಿ ದೀರ್ಘದರ್ಶಿಯು ಅಲ್ಲಿಂದ ತಪ್ಪಿಸಿಕೊಂಡು ಒಂದು ಕೋಡಿಯ ಮೂಲಕ ಅನ್ಯ ಆಳವಾಗಿದ್ದ ಜಲಾಶಯಕ್ಕೆ ಹೊರಟು ಹೋಯಿತು.

12135011a ತತಃ ಪ್ರಸ್ರುತತೋಯಂ ತಂ ಸಮೀಕ್ಷ್ಯ ಸಲಿಲಾಶಯಮ್।
12135011c ಬಬಂಧುರ್ವಿವಿಧೈರ್ಯೋಗೈರ್ಮತ್ಸ್ಯಾನ್ಮತ್ಸ್ಯೋಪಜೀವಿನಃ॥

ಮೀನುಗಾರಿಕೆಯಿಂದಲೇ ಜೀವನ ನಡೆಸುತ್ತಿದ್ದ ಆ ಬೆಸ್ತರು ಜಲಾಶಯದ ನೀರು ಕಡಿಮೆಯಾಗುತ್ತಿದ್ದನ್ನು ನೋಡಿ ವಿವಿಧ ಉಪಾಯಗಳಿಂದ ಅಲ್ಲಿದ್ದ ಮೀನುಗಳನ್ನು ಬಂಧಿಸಿದರು.

12135012a ವಿಲೋಡ್ಯಮಾನೇ ತಸ್ಮಿಂಸ್ತು ಸ್ರುತತೋಯೇ ಜಲಾಶಯೇ।
12135012c ಅಗಚ್ಚದ್ ಗ್ರಹಣಂ ತತ್ರ ದೀರ್ಘಸೂತ್ರಃ ಸಹಾಪರೈಃ॥

ಹರಿದುಹೋಗಿ ನೀರು ಕಡಿಮೆಯಾದ ಆ ಜಲಾಶಯವನ್ನು ಸೋಸುತ್ತಿದ್ದಾಗ ಇತರರೊಂದಿಗೆ ದೀರ್ಘಸೂತ್ರೀ ಮೀನೂ ಕೂಡ ಬಲೆಯಲ್ಲಿ ಸಿಕ್ಕಿಕೊಂಡಿತು.

12135013a ಉದ್ದಾನಂ ಕ್ರಿಯಮಾಣಂ ಚ ಮತ್ಸ್ಯಾನಾಂ ವೀಕ್ಷ್ಯ ರಜ್ಜುಭಿಃ।
12135013c ಪ್ರವಿಶ್ಯಾಂತರಮನ್ಯೇಷಾಮಗ್ರಸತ್ ಪ್ರತಿಪತ್ತಿಮಾನ್॥

ಮೀನುಗಳಿಂದ ತುಂಬಿದ್ದ ಆ ಬಲೆಯನ್ನು ಹಗ್ಗಗಳನ್ನೆಳೆದು ಮೇಲಕ್ಕೆತ್ತುವಾಗ ಪ್ರತ್ಯುತ್ಪನ್ನಮತಿ ಮೀನೂ ಕೂಡ ಇತರ ಮೀನುಗಳೊಡನೆ ಆ ಬಲೆಯನ್ನು ಪ್ರವೇಶಿಸಿತ್ತು.

12135014a ಗ್ರಸ್ತಮೇವ ತದುದ್ದಾನಂ ಗೃಹೀತ್ವಾಸ್ತ ತಥೈವ ಸಃ।
12135014c ಸರ್ವಾನೇವ ತು ತಾಂಸ್ತತ್ರ ತೇ ವಿದುರ್ಗ್ರಥಿತಾ ಇತಿ॥

ಬಾಯಿಯಿಂದ ಕಚ್ಚಿಕೊಳ್ಳಲು ಯೋಗ್ಯವಾಗಿದ್ದ ಆ ಬಲೆಯ ತಂತುವನ್ನು ಕಚ್ಚಿಹಿಡಿದು ಅದೂ ಕೂಡ ಇತರ ಮೀನುಗಳಂತೆ ಬಲೆಯಲ್ಲಿ ಬಂಧಿತಗೊಂಡಂತೆ ತೋರುತ್ತಿತ್ತು.

12135015a ತತಃ ಪ್ರಕ್ಷಾಲ್ಯಮಾನೇಷು ಮತ್ಸ್ಯೇಷು ವಿಮಲೇ ಜಲೇ।
12135015c ತ್ಯಕ್ತ್ವಾ ರಜ್ಜುಂ ವಿಮುಕ್ತೋಽಭೂಚ್ಚೀಘ್ರಂ ಸಂಪ್ರತಿಪತ್ತಿಮಾನ್॥

ಅನಂತರ ಆ ಮೀನುಗಳನ್ನು ಶುದ್ಧ ನೀರಿನಲ್ಲಿ ತೊಳೆಯುವಾಗ ಪ್ರತ್ಯುತ್ಪನ್ನಮತಿ ಮೀನು ಬಲೆಯನ್ನು ಬಿಟ್ಟು ಶೀಘ್ರದಲ್ಲಿಯೇ ಶುದ್ಧ ನೀರಿನ ಕೊಳದಲ್ಲಿ ಸೇರಿಕೊಂಡುಬಿಟ್ಟಿತು.

12135016a ದೀರ್ಘಸೂತ್ರಸ್ತು ಮಂದಾತ್ಮಾ ಹೀನಬುದ್ಧಿರಚೇತನಃ।
12135016c ಮರಣಂ ಪ್ರಾಪ್ತವಾನ್ಮೂಢೋ ಯಥೈವೋಪಹತೇಂದ್ರಿಯಃ॥

ಹೀನಬುದ್ಧಿ ಮಂದಾತ್ಮಾ ಅಚೇತನ ಮೂಢ ದೀರ್ಘಸೂತ್ರನಾದರೋ ಇಂದ್ರಿಯಗಳು ನಷ್ಟಹೋದಾಗ ನಷ್ಟವಾಗುವಂತೆ ಮರಣವನ್ನಪ್ಪಿತು.

12135017a ಏವಂ ಪ್ರಾಪ್ತತಮಂ ಕಾಲಂ ಯೋ ಮೋಹಾನ್ನಾವಬುಧ್ಯತೇ।

12135017c ಸ ವಿನಶ್ಯತಿ ವೈ ಕ್ಷಿಪ್ರಂ ದೀರ್ಘಸೂತ್ರೋ ಯಥಾ ಋಷಃ||

ಹೀಗೆ ಮೋಹಿತನಾಗಿ ತನಗೆ ಬಂದೊದಗುವ ಆಪತ್ತಿನ ಕಾಲವನ್ನು ತಿಳಿಯದೇ ಇರುವವನು ಆ ದೀರ್ಘಸೂತ್ರೀ ಮೀನಿನಂತೆ ಕ್ಷಿಪ್ರವಾಗಿ ನಾಶಹೊಂದುತ್ತಾನೆ.

12135018a ಆದೌ ನ ಕುರುತೇ ಶ್ರೇಯಃ ಕುಶಲೋಽಸ್ಮೀತಿ ಯಃ ಪುಮಾನ್|
12135018c ಸ ಸಂಶಯಮವಾಪ್ನೋತಿ ಯಥಾ ಸಂಪ್ರತಿಪತ್ತಿಮಾನ್||

ತಾನು ಅತ್ಯಂತ ಕುಶಲನು ಮತ್ತು ಮೊದಲಿನಿಂದಲೇ ತನ್ನನ್ನು ಅಪಾಯದಿಂದ ಪಾರುಗೊಳಿಸುವ ಉಪಾಯವನ್ನು ಮಾಡಿಕೊಳ್ಳುವುದಿಲ್ಲ ಎಂದಿರುವ ಮನುಷ್ಯನು ಪ್ರತ್ಯುತ್ಪನ್ನಮತಿ ಮೀನಿನಂತೆ ಪ್ರಾಣಸಂಶಯ ಪರಿಸ್ಥಿತಿಯಲ್ಲಿ ಬೀಳುತ್ತಾನೆ.

12135019a ಅನಾಗತವಿಧಾನಂ ತು ಯೋ ನರಃ ಕುರುತೇ ಕ್ಷಮಮ್|
12135019c ಶ್ರೇಯಃ ಪ್ರಾಪ್ನೋತಿ ಸೋಽತ್ಯರ್ಥಂ ದೀರ್ಘದರ್ಶೀ ಯಥಾ ಹ್ಯಸೌ[565]||

ಸಂಕಟವು ಬಂದೊದಗುವುದಕ್ಕೆ ಮೊದಲೇ ತನ್ನ ಸುರಕ್ಷಣೆಯ ಉಪಾಯವನ್ನು ಮಾಡಿಕೊಳ್ಳುವವನು ಶ್ರೇಯಸ್ಸನ್ನು ಪಡೆದುಕೊಳ್ಳುತ್ತಾನೆ.

12135020a ಕಲಾಃ ಕಾಷ್ಠಾ ಮುಹೂರ್ತಾಶ್ಚ ದಿನಾ ನಾಡ್ಯಃ ಕ್ಷಣಾ ಲವಾಃ|
12135020c ಪಕ್ಷಾ ಮಾಸಾಶ್ಚ ಋತವಸ್ತುಲ್ಯಾಃ ಸಂವತ್ಸರಾಣಿ ಚ||

---

[565] ಅನಾಗತವಿಧಾತಾ ಚ ಪ್ರತ್ಯುತ್ಪನ್ನಮತಿಶ್ಚ ಯಃ| ದ್ವಾವೇವ ಸುಖಮೇಧೇತೇ ದೀರ್ಘಸೂತ್ರೋ ವಿನಶ್ಯತಿ|| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12135021a ಪೃಥಿವೀ ದೇಶ ಇತ್ಯುಕ್ತಃ ಕಾಲಃ ಸ ಚ ನ ದೃಶ್ಯತೇ|
12135021c ಅಭಿಪ್ರೇತಾರ್ಥಸಿದ್ಧ್ಯರ್ಥಂ ನ್ಯಾಯತೋ ಯಚ್ಚ ತತ್ತಥಾ[566]||

ಕಲಾ, ಕಾಷ್ಠಾ, ಮುಹೂರ್ತ, ದಿನ, ರಾತ್ರಿ, ಕ್ಷಣ, ಲವ, ಪಕ್ಷ, ಮಾಸ, ಋತು, ಸಂವತ್ಸರಗಳು ಇವುಗಳನ್ನು ಕಾಲವೆನ್ನುತ್ತಾರೆ. ಭೂಮಿಯನ್ನು ದೇಶ ಎನ್ನುತ್ತಾರೆ. ಆದರೆ ಕಾಲವು ಕಾಣಿಸುವುದಿಲ್ಲ. ಅಭೀಷ್ಟ ಮನೋರಥದ ಸಿದ್ಧಿಗಾಗಿ ದೇಶ ಮತ್ತು ಕಾಲಗಳ ಕುರಿತು ವಿಚಾರಿಸಿ ಅದರಂತೆ ನಡೆದುಕೊಳ್ಳುವುದು ನ್ಯಾಯತರವಾದುದು.

12135022a ಏತೌ ಧರ್ಮಾರ್ಥಶಾಸ್ತ್ರೇಷು ಮೋಕ್ಷಶಾಸ್ತ್ರೇಷು ಚರ್ಷಿಭಿಃ|
12135022c ಪ್ರಧಾನಾವಿತಿ ನಿರ್ದಿಷ್ಟೌ ಕಾಮೇಶಾಭಿಮತೌ ನೃಣಾಮ್||

ಋಷಿಗಳು ಧರ್ಮಶಾಸ್ತ್ರ, ಅರ್ಥಶಾಸ್ತ್ರ ಮತ್ತು ಮೋಕ್ಷಶಾಸ್ತ್ರಗಳಲ್ಲಿ ಈ ದೇಶ-ಕಾಲಗಳನ್ನೇ ಕಾರ್ಯಸಿದ್ಧಿಯ ಪ್ರಧಾನ ಉಪಾಯಗಳೆಂದು ಹೇಳಿದ್ದಾರೆ. ಮನುಷ್ಯರ ಕಾಮನಸಿದ್ಧಿಗೂ ದೇಶ-ಕಾಲಗಳೇ ಪ್ರಧಾನವೆಂಬ ಅಭಿಪ್ರಾಯವಿದೆ.

12135023a ಪರೀಕ್ಷ್ಯ ಕಾರೀ ಯುಕ್ತಸ್ತು ಸಮ್ಯಕ್ಸಮುಪಪಾದಯೇತ್|
12135023c ದೇಶಕಾಲಾವಭಿಪ್ರೇತೌ ತಾಭ್ಯಾಂ ಫಲಮವಾಪ್ನುಯಾತ್||

ಚೆನ್ನಾಗಿ ಯೋಚಿಸಿ ಪರೀಕ್ಷಿಸಿ ಕೆಲಸಮಾಡುವವನು ಮತ್ತು ಸತತ ಸಾವಧಾನದಿಂದಿರುವವನು ಅಭೀಷ್ಟ ದೇಶ-ಕಾಲಗಳನ್ನು ಸರಿಯಾಗಿ

---

[566] ಕಾಷ್ಠಾಃ ಕಲಾ ಮುಹೂರ್ತಾಶ್ಚ ದಿವಾ ರಾತ್ರಿಸ್ತಥಾ ಲವಾಃ| ಮಾಸಾಃ ಪಕ್ಷಾಃ ಷಡೃತವಃ ಕಲ್ಪಃ ಸಂವತ್ಸರಾಸ್ತಥಾ|| ಪೃಥಿವೀ ದೇಶಇ ತ್ಯುಕ್ತಃ ಕಾನಃ ಸ ಚ ನ ಕೃಶ್ಯತೇ| ಅಭಿಪ್ರೇತಾರ್ಥಸಿದ್ಧ್ಯರ್ಥಂ ಧ್ಯಾಯತೇ ಯಚ್ಚ ತತ್ತಥಾ|| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಉಪಯೋಗಿಸಿಕೊಳ್ಳುತ್ತಾನೆ ಮತ್ತು ಅವುಗಳ ಸಹಯೋಗದಿಂದ
ಇಚ್ಛಾನುಸಾರ ಫಲವನ್ನು ಪಡೆದುಕೊಳ್ಳುತ್ತಾನೆ.”

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಶಾಕುಲೋಪಾಖ್ಯಾನೇ ಪಂಚತ್ರಿಂಶಾತ್ಯಧಿಕಶತತಮೋऽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಶಾಕುಲೋಪಾಖ್ಯಾನ ಎನ್ನುವ
ನೂರಾಮೂವತ್ತೈದನೇ ಅಧ್ಯಾಯವು.

೧೩೬

ಮಾರ್ಜರ-ಮೂಷಕ ಸಂವಾದ

ಶತ್ರುಗಳಿಂದ ಮುತ್ತಲ್ಪಟ್ಟ ರಾಜನ ಕರ್ತವ್ಯದ ಕುರಿತು ಬೆಕ್ಕು ಮತ್ತು ಇಲಿಯ ಸಂವಾದ (1-211).

12136001 ಯುಧಿಷ್ಠಿರ ಉವಾಚ|
12136001a ಸರ್ವತ್ರ ಬುದ್ಧಿಃ ಕಥಿತಾ ಶ್ರೇಷ್ಠಾ ತೇ ಭರತರ್ಷಭ|
12136001c ಅನಾಗತಾ ತಥೋತ್ಪನ್ನಾ ದೀರ್ಘಸೂತ್ರಾ ವಿನಾಶಿನೀ||

ಯುಧಿಷ್ಠಿರನು ಹೇಳಿದನು: “ಭರತರ್ಷಭ! ನೀನು ಎಲ್ಲ
ಸಂದರ್ಭಗಳಲ್ಲಿ ಅನಾಗತ (ಸಂಕಟವು ಬರುವುದರ ಮೊದಲೇ
ಆತ್ಮರಕ್ಷಣೆಯ ವ್ಯವಸ್ಥೆಯನ್ನು ಮಾಡಿಕೊಳ್ಳುವ) ಮತ್ತು ಪ್ರತ್ಯುತ್ಪನ್ನ
(ಸಮಯ ಬಂದಾಗ ತನ್ನನ್ನು ಉಳಿಸಿಕೊಳ್ಳುವ ಉಪಾಯವನ್ನು
ಕಂಡುಕೊಳ್ಳುವ) ಬುದ್ಧಿಯೇ ಶ್ರೇಷ್ಠವೆಂದು ಹೇಳಿದ್ದೀಯೆ. ಮತ್ತು

ಆಲಸ್ಯದಿಂದ ಕಾರ್ಯಕ್ಕೆಗೊಳ್ಳುವುದರಲ್ಲಿ ವಿಲಂಬಮಾಡುವ ಬುದ್ಧಿಯು ವಿನಾಶಕಾರೀ ಎಂದೂ ಹೇಳಿದ್ದೀಯೆ.

12136002a ತದಿಚ್ಛಾಮಿ ಪರಾಂ ಬುದ್ಧಿಂ ಶ್ರೋತುಂ ಭರತಸತ್ತಮ|
12136002c ಯಥಾ ರಾಜನ್ನ ಮುಹ್ಯೇತ ಶತ್ರುಭಿಃ ಪರಿವಾರಿತಃ||
12136003a ಧರ್ಮಾರ್ಥಕುಶಲ ಪ್ರಾಜ್ಞ ಸರ್ವಶಾಸ್ತ್ರವಿಶಾರದ|
12136003c ಪೃಚ್ಛಾಮಿ ತ್ವಾಂ ಕುರುಶ್ರೇಷ್ಠ ತನ್ಮೇ ವ್ಯಾಖ್ಯಾತುಮರ್ಹಸಿ||

ಭರತಸತ್ತಮ! ಈಗ ನಾನು ಶತ್ರುಗಳಿಂದ ಪರಿವಾರಿತನಾದ ರಾಜನನ್ನೂ ಕೂಡ ಮೋಹಗೊಳಿಸದೇ ಇರುವ ಪರಮ ಬುದ್ಧಿಯ ಕುರಿತು ಕೇಳ ಬಯಸುತ್ತೇನೆ. ಧರ್ಮಾರ್ಥಕುಶಲ! ಪ್ರಾಜ್ಞ! ಸರ್ವಶಾಸ್ತ್ರವಿಶಾರದ! ಕುರುಶ್ರೇಷ್ಠ! ನಿನ್ನನ್ನು ಕೇಳುತ್ತಿದ್ದೇನೆ. ಇದನ್ನು ನನಗೆ ಹೇಳಬೇಕು.

12136004a ಶತ್ರುಭಿರ್ಬಹುಭಿರ್ಗ್ರಸ್ತೋ ಯಥಾ ವರ್ತೇತ ಪಾರ್ಥಿವಃ|
12136004c ಏತದಿಚ್ಛಾಮ್ಯಹಂ ಶ್ರೋತುಂ ಸರ್ವಮೇವ ಯಥಾವಿಧಿ||

ಅನೇಕ ಶತ್ರುಗಳ ಆಕ್ರಮಣಕ್ಕೊಳಗಾದ ಪಾರ್ಥಿವನು ಹೇಗೆ ವರ್ತಿಸಬೇಕು? ಇದನ್ನು ಸಂಪೂರ್ಣವಾಗಿ ಯಥಾವಿಧಿಯಾಗಿ ಕೇಳ ಬಯಸುತ್ತೇನೆ.

12136005a ವಿಷಮಸ್ಥಂ ಹಿ ರಾಜಾನಂ ಶತ್ರವಃ ಪರಿಪಂಥಿನಃ|
12136005c ಬಹವೋಽಪ್ಯೇಕಮುದ್ಧರ್ತುಂ ಯತಂತೇ ಪೂರ್ವತಾಪಿತಾಃ||

ರಾಜನು ಸಂಕಟದಲ್ಲಿ ಸಿಲುಕಿದಾಗ ಅವನಿಂದ ಹಿಂದೆ ಪೀಡಿತರಾಗಿದ್ದ ಅನೇಕ ಶತ್ರುಗಳು ಒಂದಾಗಿ ಆ ಅಸಹಾಯಕ ರಾಜನನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಾರೆ.

12136006a ಸರ್ವತಃ ಪ್ರಾರ್ಥ್ಯಮಾನೇನ ದುರ್ಬಲೇನ ಮಹಾಬಲೈಃ।
12136006c ಏಕೇನೈವಾಸಹಾಯೇನ ಶಕ್ಯಂ ಸ್ಥಾತುಂ ಕಥಂ ಭವೇತ್॥

ಅನೇಕ ಮಹಾಬಲಶಾಲೀ ಶತ್ರುಗಳು ಓರ್ವ ದುರ್ಬಲ ರಾಜನನ್ನು
ಎಲ್ಲ ಕಡೆಗಳಿಂದ ಮುತ್ತಿಗೆ ಹಾಕಲು ಸಿದ್ಧರಾದಾಗ ಏಕಮಾತ್ರ ಆ
ಅಸಹಾಯಕ ರಾಜನು ಹೇಗೆ ಅವರನ್ನು ಎದುರಿಸಲು ಶಕ್ಯನಾಗುತ್ತಾನೆ?

12136007a ಕಥಂ ಮಿತ್ರಮರಿಂ ಚೈವ ವಿಂದೇತ ಭರತರ್ಷಭ।
12136007c ಚೇಷ್ಟಿತವ್ಯಂ ಕಥಂ ಚಾತ್ರ ಶತ್ರೋರ್ಮಿತ್ರಸ್ಯ ಚಾಂತರೇ॥

ಭರತರ್ಷಭ! ರಾಜನಾದವನು ಹೇಗೆ ತನ್ನ ಮಿತ್ರ ಮತ್ತು ಶತ್ರುವನ್ನು
ತನ್ನ ವಶಪಡಿಸಿಕೊಳ್ಳುತ್ತಾನೆ? ಮತ್ತು ಆ ಶತ್ರು-ಮಿತ್ರರ ಮಧ್ಯೆ ಅವನು
ಹೇಗೆ ವರ್ತಿಸಬೇಕಾಗುತ್ತದೆ?

12136008a ಪ್ರಜ್ಞಾತಲಕ್ಷಣೇ ರಾಜನ್ನಮಿತ್ರೇ ಮಿತ್ರತಾಂ ಗತೇ।
12136008c ಕಥಂ ನು ಪುರುಷಃ ಕುರ್ಯಾತ್ಕಿಂ ವಾ ಕೃತ್ವಾ ಸುಖೀ ಭವೇತ್॥

ರಾಜನ್! ಮೊದಲು ಮಿತ್ರನ ಲಕ್ಷಣಗಳನ್ನು ಹೊಂದಿದ್ದವನು
ಶತ್ರುವಾಗಿ ಬಂದರೆ ಅವನೊಡನೆ ಯಾವುದೇ ಪುರುಷನು ಹೇಗೆ
ನಡೆದುಕೊಳ್ಳಬೇಕು? ಅಥವಾ ಯಾವುದನ್ನು ಮಾಡಿ ಅವನು
ಸುಖಿಯಾಗಿರಬಲ್ಲನು?

12136009a ವಿಗ್ರಹಂ ಕೇನ ವಾ ಕುರ್ಯಾತ್ಸಂಧಿಂ ವಾ ಕೇನ ಯೋಜಯೇತ್।
12136009c ಕಥಂ ವಾ ಶತ್ರುಮಧ್ಯಸ್ಥೋ ವರ್ತೇತಾಬಲವಾನಿತಿ॥

ಯಾರೊಂದಿಗೆ ಯುದ್ಧಮಾಡಬೇಕು? ಅಥವಾ ಯಾರೊಂದಿಗೆ
ಸಂಧಿಯನ್ನು ಮಾಡಿಕೊಳ್ಳಬೇಕು? ಅಥವಾ ಬಲವಾನ್ ಪುರುಷನು

ಶತ್ರುಗಳ ಮಧ್ಯೆ ಸೇರಿಕೊಂಡಿದ್ದರೆ ಅವನೊಂದಿಗೆ ಹೇಗೆ ನಡೆದುಕೊಳ್ಳಬೇಕು?

12136010a ಏತದ್ಧ್ಯೆ ಸರ್ವಕೃತ್ಯಾನಾಂ ಪರಂ ಕೃತ್ಯಂ ಪರಂತಪ|
12136010c ನೈತಸ್ಯ ಕಶ್ಚಿದ್ವಕ್ತಾಸ್ತಿ ಶ್ರೋತಾ ಚಾಪಿ ಸುದುರ್ಲಭಃ||
12136011a ಋತೇ ಶಾಂತನವಾದ್ಭೀಷ್ಮಾತ್ಸತ್ಯಸಂಧಾಜ್ಜಿತೇಂದ್ರಿಯಾತ್|
12136011c ತದನ್ವಿಷ್ಯ ಮಹಾಬಾಹೋ ಸರ್ವಮೇತದ್ವದಸ್ವ ಮೇ||

ಪರಂತಪ! ಮಹಾಬಾಹೋ! ಇದು ಸರ್ವಕಾರ್ಯಗಳಲ್ಲಿಯೂ ಶ್ರೇಷ್ಠವಾದುದು. ಸತ್ಯಸಂಧ ಜಿತೇಂದ್ರಿಯ ಶಾಂತನವ ಭೀಷ್ಮನಲ್ಲದೇ ಬೇರೆ ಯಾರೂ ಇದರ ಕುರಿತು ಹೇಳಲಾರರು. ಇದನ್ನು ಕೇಳುವವರೂ ದುರ್ಲಭವೇ ಸರಿ. ಆದುದರಿಂದ ಅದನ್ನು ಅನುಸಂಧಾನ ಮಾಡಿ ಸರ್ವವನ್ನೂ ನನಗೆ ಹೇಳು."

12136012 ಭೀಷ್ಮ ಉವಾಚ|
12136012a ತ್ವದ್ಯುಕ್ತೋಽಯಮನುಪ್ರಶ್ನೋ ಯುಧಿಷ್ಠಿರ ಗುಣೋದಯಃ|
12136012c ಶೃಣು ಮೇ ಪುತ್ರ ಕಾರ್ತ್ಸ್ನ್ಯೇನ ಗುಹ್ಯಮಾಪತ್ಸು ಭಾರತ||

ಭೀಷ್ಮನು ಹೇಳಿದನು: "ಭಾರತ! ಯುಧಿಷ್ಠಿರ! ನೀನು ಕೇಳಿದ ಈ ವಿಸ್ತಾರ ಪ್ರಶ್ನೆಯು ಗುಣಪ್ರದವಾಗಿದೆ. ಪುತ್ರ! ಗುಹ್ಯವಾದ ಇದನ್ನು ನನ್ನಿಂದ ಸಂಪೂರ್ಣವಾಗಿ ಕೇಳು.

12136013a ಅಮಿತ್ರೋ ಮಿತ್ರತಾಂ ಯಾತಿ ಮಿತ್ರಂ ಚಾಪಿ ಪ್ರದುಷ್ಯತಿ|
12136013c ಸಾಮರ್ಥ್ಯಯೋಗಾತ್ಕಾರ್ಯಾಣಾಂ ತದ್ಗತ್ಯಾ ಹಿ ಸದಾ ಗತಿಃ[567]||

[567] ಅನಿತ್ಯಾ ವೈ ಸದಾ ಗತಿಃ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಕಾರ್ಯಗಳ ಸಾಮರ್ಥ್ಯಯೋಗಗಳಿಂದ ಅಮಿತ್ರನು ಮಿತ್ರನಾಗುತ್ತಾನೆ ಮತ್ತು ಮಿತ್ರನೂ ಕೂಡ ದ್ವೇಷಿಯಾಗುತ್ತಾನೆ. ಅದು ಸದಾ ಒಂದೇ ರೀತಿಯಾಗಿರುವುದಿಲ್ಲ.

12136014a ತಸ್ಮಾದ್ವಿಶ್ವಸಿತವ್ಯಂ ಚ ವಿಗ್ರಹಂ ಚ ಸಮಾಚರೇತ್|
12136014c ದೇಶಂ ಕಾಲಂ ಚ ವಿಜ್ಞಾಯ ಕಾರ್ಯಾಕಾರ್ಯವಿನಿಶ್ಚಯೇ||

ಆದುದರಿಂದ ದೇಶ-ಕಾಲಗಳನ್ನು ತಿಳಿದುಕೊಂಡು ಕರ್ತವ್ಯ-ಅಕರ್ತವ್ಯಗಳನ್ನು ನಿಶ್ಚಯಿಸಿ ಕೆಲವರೊಂದಿಗೆ ವಿಶ್ವಾಸವನ್ನಿಡಬೇಕು ಮತ್ತು ಇನ್ನು ಕೆಲವರೊಂದಿಗೆ ಯುದ್ಧಮಾಡಬೇಕು.

12136015a ಸಂಧಾತವ್ಯಂ ಬುಧ್ಯೈರ್ನಿತ್ಯಂ ವ್ಯವಸ್ಯಂ ಚ ಹಿತಾರ್ಥಿಭಿಃ|
12136015c ಅಮಿತ್ರೈರಪಿ ಸಂಧೇಯಂ ಪ್ರಾಣಾ ರಕ್ಷ್ಯಾ ಶ್ಚ ಭಾರತ||

ಭಾರತ! ಹಿತಾರ್ಥಿ ವಿದ್ವಾಂಸರೊಂದಿಗೆ ಸಂಧಿ ಮಾಡಿಕೊಳ್ಳಬೇಕು. ಪ್ರಾಣವನ್ನು ರಕ್ಷಿಸಿಕೊಳ್ಳಲು ಶತ್ರುಗಳೊಂದಿಗೂ ಸಂಧಿಯನ್ನು ಮಾಡಿಕೊಳ್ಳಬೇಕಾಗುತ್ತದೆ.

12136016a ಯೋ ಹ್ಯಮಿತ್ರೈರ್ನರೋ ನಿತ್ಯಂ ನ ಸಂದಧ್ಯಾದಪಂಡಿತಃ|
12136016c ನ ಸೋಽರ್ಥಮಾಪ್ನುಯಾತ್ಕಿಂ ಚಿತ್ ಫಲಾನ್ಯಪಿ ಚ ಭಾರತ||

ಭಾರತ! ತನ್ನ ಶತ್ರುಗಳೊಡನೆ ಎಂದೂ ಸಂಧಿಯನ್ನು ಮಾಡಿಕೊಳ್ಳದೇ ಇರುವ ಅಪಂಡಿತ ನರನು ತನ್ನ ಉದ್ದೇಶಗಳನ್ನು ಪೂರ್ಯೆಸಿಕೊಳ್ಳಲಾರನು ಮತ್ತು ಯಾವ ಫಲವನ್ನೂ ಪಡೆದುಕೊಳ್ಳಲಾರನು.

12136017a ಯಸ್ತ್ವಮಿತ್ರೇಣ ಸಂಧತ್ತೇ ಮಿತ್ರೇಣ ಚ ವಿರುಧ್ಯತೇ|

12136017c ಅರ್ಥಯುಕ್ತಿಂ ಸಮಾಲೋಕ್ಯ ಸುಮಹದ್ವಿಂದತೇ ಫಲಮ್‌||

ಅರ್ಥಯುಕ್ತಿಯನ್ನು ನೋಡಿಕೊಂಡು ಯಾರು ಅಮಿತ್ರರೊಂದಿಗೆ
ಸಂಧಿಯನ್ನು ಮಾಡಿಕೊಳ್ಳುತ್ತಾನೋ ಮತ್ತು ಮಿತ್ರರನ್ನು
ವಿರೋಧಿಸುತ್ತಾನೋ ಅವನು ಮಹಾ ಫಲವನ್ನು ಪಡೆದುಕೊಳ್ಳುತ್ತಾನೆ.

12136018a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್‌|
12136018c ಮಾರ್ಜಾರಸ್ಯ ಚ ಸಂವಾದಂ ನ್ಯಗ್ರೋಧೇ ಮೂಷಕಸ್ಯ ಚ||

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಒಂದು
ವಟವೃಕ್ಷದಲ್ಲಿ ವಾಸಿಸುತ್ತಿದ್ದ ಬೆಕ್ಕು ಮತ್ತು ಇಲಿಯ ಸಂವಾದವನ್ನು
ಉದಾಹರಿಸುತ್ತಾರೆ.

12136019a ವನೇ ಮಹತಿ ಕಸ್ಮಿಂಶ್ಚಿನ್ನ್ಯಗ್ರೋಧಃ ಸುಮಹಾನಭೂತ್‌|
12136019c ಲತಾಜಾಲಪರಿಚ್ಛನ್ನೋ ನಾನಾದ್ವಿಜಗಣಾಯುತಃ||

ಯಾವುದೋ ಒಂದು ಮಹಾವನದಲ್ಲಿ ವಿಶಾಲ ವಟವೃಕ್ಷವೊಂದಿತ್ತು.
ಅದು ಲತಾಸಮೂಹಗಳಿಂದ ಮುಚ್ಚಿತ್ತು ಮತ್ತು ನಾನಾ
ಪಕ್ಷಿಗಣಗಳಿಂದ ಸುಶೋಭಿತವಾಗಿತ್ತು.

12136020a ಸ್ಕಂಧವಾನ್ಮೇಘಸಂಕಾಶಃ ಶೀತಚ್ಛಾಯೋ ಮನೋರಮಃ|
12136020c ವೈರಂತ್ಯಮಭಿತೋ[568] ಜಾತಸ್ತರುರ್ವ್ಯಾಲಮೃಗಾಕುಲಃ||

ಅನೇಕ ರೆಂಬೆಗಳಿಂದ ಕೂಡಿದ್ದ ಆ ವೃಕ್ಷವು ಮೇಘದಂತೆ ಮನೋರಮ
ನೆರಳನ್ನು ನೀಡುತ್ತಿತ್ತು. ವನದ ಸಮೀಪದಲ್ಲಿದ್ದ ಕಾರಣ ಅನೇಕ ಸರ್ಪ

[568] ಅರಣ್ಯಮಭಿಮತೋ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್‌).

ಮತ್ತು ಪಶುಗಳಿಗೆ ಆಶ್ರಯವಾಗಿತ್ತು.

12136021a ತಸ್ಯ ಮೂಲಂ ಸಮಾಶ್ರಿತ್ಯ ಕೃತ್ವಾ ಶತಮುಖಂ ಬಿಲಮ್|
12136021c ವಸತಿ ಸ್ಮ ಮಹಾಪ್ರಾಜ್ಞಃ ಪಲಿತೋ ನಾಮ ಮೂಷಕಃ||

ಅದರ ಬುಡವನ್ನು ಆಶ್ರಯಿಸಿ ನೂರು ಬಾಗಿಲುಗಳ ಬಿಲವನ್ನು ಮಾಡಿಕೊಂಡು ಪಲಿತ ಎಂಬ ಹೆಸರಿನ ಮಹಾಪ್ರಾಜ್ಞ ಇಲಿಯು ವಾಸಿಸುತ್ತಿತ್ತು.

12136022a ಶಾಖಾಶ್ಚ ತಸ್ಯ ಸಂಶ್ರಿತ್ಯ ವಸತಿ ಸ್ಮ ಸುಖಂ ಪುರಃ|
12136022c ಲೋಮಶೋ ನಾಮ ಮಾರ್ಜಾರಃ ಪಕ್ಷಿಸತ್ತ್ವವಸಾದಕಃ[569]||

ಅದರ ಶಾಖೆಗಳನ್ನು ಆಶ್ರಯಿಸಿ ಮೊದಲಿನಿಂದಲೇ ಲೋಮಶ ಎಂಬ ಹೆಸರಿನ ಬೆಕ್ಕೊಂದು ಸುಖವಾಗಿ ವಾಸಿಸುತ್ತಿತ್ತು. ಅದು ಅಲ್ಲಿದ್ದ ಪಕ್ಷಿಗಳನ್ನೇ ತಿಂದುಕೊಂಡಿತ್ತು.

12136023a ತತ್ರ ಚಾಗತ್ಯ ಚಂಡಾಲೋ ವೈರಂತ್ಯಕೃತಕೇತನಃ|
12136023c ಅಯೋಜಯತ್ತಮುನ್ಮಾಥಂ ನಿತ್ಯಮಸ್ತಂ ಗತೇ ರವೌ||
12136024a ತತ್ರ ಸ್ನಾಯುಮಯಾನ್ ಪಾಶಾನ್ಯಥಾವತ್ಸಂನಿಧಾಯ ಸಃ|
12136024c ಗೃಹಂ ಗತ್ವಾ ಸುಖಂ ಶೇತೇ ಪ್ರಭಾತಾಮೇತಿ ಶರ್ವರೀಮ್||

ಅದೇ ವನದಲ್ಲಿ ಓರ್ವ ಚಂಡಾಲನೂ ಮನೆಮಾಡಿಕೊಂಡು ವಾಸಿಸುತ್ತಿದ್ದನು. ಅವನು ಪ್ರತಿದಿನ ಸೂರ್ಯಾಸ್ತವಾದ ಬಳಿಕ ಅಲ್ಲಿ ಹೋಗಿ ಬಲೆಯನ್ನು ಬೀಸುತ್ತಿದ್ದನು ಮತ್ತು ಅದರ ಹಗ್ಗಗಳನ್ನು ಯಥಾವತ್ತಾಗಿ ಬಿಗಿದು ಮನೆಗೆ ಬಂದು ಸುಖವಾಗಿ ರಾತ್ರಿ

569 ಪಕ್ಷಿಸಂಘಾತಖಾದಕಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಮಲಗುತ್ತಿದ್ದನು ಮತ್ತು ಬೆಳಿಗ್ಗೆ ಅಲ್ಲಿಗೆ ಹೋಗುತ್ತಿದ್ದನು.

12136025a ತತ್ರ ಸ್ಮ ನಿತ್ಯಂ ಬಧ್ಯಂತೇ ನಕ್ತಂ ಬಹುವಿಧಾ ಮೃಗಾಃ|
12136025c ಕದಾ ಚಿತ್ತತ್ರ ಮಾರ್ಜಾರಸ್ತ್ವಪ್ರಮತ್ತೋಽಪ್ಯಬಧ್ಯತ||

ರಾತ್ರಿಯಲ್ಲಿ ಆ ಬಲೆಯಲ್ಲಿ ನಿತ್ಯವೂ ಬಹುವಿಧದ ಮೃಗಗಳು
ಸಿಕ್ಕಿಕೊಳ್ಳುತ್ತಿದ್ದವು. ಒಮ್ಮೆ ಅಪ್ರಮತ್ತವಾಗಿದ್ದ ಆ ಬೆಕ್ಕೂ ಬಲೆಯೊಳಗೆ
ಸಿಕ್ಕಿಹಾಕಿಕೊಂಡಿತು.

12136026a ತಸ್ಮಿನ್ಬದ್ಧೇ ಮಹಾಪ್ರಾಜ್ಞಃ ಶತ್ರೌ ನಿತ್ಯಾತತಾಯಿನಿ|
12136026c ತಂ ಕಾಲಂ ಪಲಿತೋ ಜ್ಞಾತ್ವಾ ವಿಚಚಾರ ಸುನಿರ್ಭಯಃ||

ನಿತ್ಯವೂ ಆತತಾಯಿ ಶತ್ರುವಿನಂತಿದ್ದ ಆ ಬೆಕ್ಕು ಬಲೆಯೊಳಗೆ
ಸಿಕ್ಕಿಹಾಕಿಕೊಂಡಿದುದನ್ನು ತಿಳಿದ ಮಹಾಪ್ರಾಜ್ಞ ಪಲಿತನು
ನಿರ್ಭಯನಾಗಿ ಅಲ್ಲಿ ಸಂಚರಿಸತೊಡಗಿದನು.

12136027a ತೇನಾನುಚರತಾ ತಸ್ಮಿನ್ವನೇ ವಿಶ್ವಸ್ತಚಾರಿಣಾ|
12136027c ಭಕ್ಷಂ ವಿಚರಮಾಣೇನ ನಚಿರಾದ್ದೃಷ್ಟಮಾಮಿಷಮ್||

ಆ ವನದಲ್ಲಿ ವಿಶ್ವಸ್ತನಾಗಿ ಆಹಾರವನ್ನು ಹುಡುಕುತ್ತಾ ತಿರುಗಾಡುತ್ತಿದ್ದ
ಅದು ಬಹಳ ಸಮಯದ ನಂತರ ಬಲೆಯ ಮೇಲೆ ಹರಡಿದ್ದ
ಮಾಂಸವನ್ನು ನೋಡಿತು.

12136028a ಸ ತಮುನ್ಮಾಥಮಾರುಹ್ಯ ತದಾಮಿಷಮಭಕ್ಷಯತ್|
12136028c ತಸ್ಯೋಪರಿ ಸಪತ್ನಸ್ಯ ಬದ್ಧಸ್ಯ ಮನಸಾ ಹಸನ್||

ಆ ಬಲೆಯನ್ನೇರಿ ಅದು ಮಾಂಸವನ್ನು ತಿನ್ನತೊಡಗಿತು. ಅದರ
ಮೇಲೇರಿ ಮಾಂಸವನ್ನು ತಿನ್ನುತ್ತಿದ್ದ ಅದು ತನ್ನ ಶತ್ರುವಿನ ಕುರಿತು

ಮನಸ್ಸಿನಲ್ಲಿಯೇ ನಗುತ್ತಿತ್ತು.

12136029a ಆಮಿಷೇ ತು ಪ್ರಸಕ್ತಃ ಸ ಕದಾ ಚಿದವಲೋಕಯನ್|
12136029c ಅಪಶ್ಯದಪರಂ ಘೋರಮಾತ್ಮನಃ ಶತ್ರುಮಾಗತಮ್||

ಅಷ್ಟರಲ್ಲಿಯೇ ಅದರ ದೃಷ್ಟಿಯು ಬೇರೊಂದುಕಡೆ ಬಿದ್ದಿತು. ಅದು ಇನ್ನೊಂದು ಭಯಂಕರ ಶತ್ರುವು ಅಲ್ಲಿಗೆ ಬರುತ್ತಿರುವುದನ್ನು ನೋಡಿತು.

12136030a ಶರಪ್ರಸೂನಸಂಕಾಶಂ ಮಹೀವಿವರಶಾಯಿನಮ್|
12136030c ನಕುಲಂ ಹರಿಕಂ ನಾಮ ಚಪಲಂ ತಾಮ್ರಲೋಚನಮ್||

ಸರಕಂಡೇ ಹೂವಿನ ಬಣ್ಣದ ಆ ಹರಿಕ ಎಂಬ ಹೆಸರಿನ ಚಪಲ ಮುಂಗುಸಿಯು ನೆಲದಲ್ಲಿ ಬಿಲವನ್ನು ಮಾಡಿಕೊಂಡು ಮಲಗುತ್ತಿತ್ತು. ಅದರ ಕಣ್ಣುಗಳು ತಾಮ್ರದಂತೆ ಕೆಂಪಾಗಿದ್ದವು.

12136031a ತೇನ ಮೂಷಕಗಂಧೇನ ತ್ವರಮಾಣಮುಪಾಗತಮ್|
12136031c ಭಕ್ಷಾರ್ಥಂ ಲೇಲಿಹದ್ವಕ್ತ್ರಂ ಭೂಮಾವೂರ್ಧ್ವಮುಖಂ ಸ್ಥಿತಮ್||

ಇಲಿಯ ವಾಸನೆಯಿಂದ ಅತ್ಯಂತ ಅವಸರದಲ್ಲಿ ಅದನ್ನು ತಿನ್ನಲು ನಾಲಿಗೆಯನ್ನು ಚಪ್ಪರಿಸುತ್ತಾ ಆ ಮುಂಗುಸಿಯು ಮೇಲೆ ಮುಖಮಾಡಿಕೊಂಡು ನಿಂತಿತು.

12136032a ಶಾಖಾಗತಮರಿಂ ಚಾನ್ಯದಪಶ್ಯತ್ಕೋಟರಾಲಯಮ್|
12136032c ಉಲೂಕಂ ಚಂದ್ರಕಂ ನಾಮ ತೀಕ್ಷ್ಣತುಂಡಂ ಕ್ಷಪಾಚರಮ್||

ಆಗ ಇಲಿಯು ಮರದ ರೆಂಬೆಯಮೇಲೆ ಕೊಟರೆಯಲ್ಲಿ ವಾಸಿಸುತ್ತಿದ್ದ ಇನ್ನೊಂದು ಶತ್ರು ಚಂದ್ರಕ ಎಂಬ ಹೆಸರಿನ ಗೂಬೆಯನ್ನು ನೋಡಿತು. ರಾತ್ರಿ ಸಂಚರಿಸುತ್ತಿದ್ದ ಆ ಪಕ್ಷಿಯ ಕೊಕ್ಕು ತೀಕ್ಷ್ಣವಾಗಿತ್ತು.

12136033a ಗತಸ್ಯ ವಿಷಯಂ ತಸ್ಯ ನಕುಲೋಲೂಕಯೋಸ್ತದಾ|
12136033c ಅಥಾಸ್ಯಾಸೀದಿಯಂ ಚಿಂತಾ ತತ್ಪ್ರಾಪ್ಯ ಸುಮಹದ್ಭಯಮ್||

ಮುಂಗುಸಿ ಮತ್ತು ಗೂಬೆ ಇಬ್ಬರಿಗೂ ಆಹಾರವಾಗಿದ್ದ ಆ ಇಲಿಗೆ
ಅತ್ಯಂತ ಭಯವುಂಟಾಯಿತು. ಅದು ಈ ರೀತಿ ಚಿಂತಿಸತೊಡಗಿತುಃ

12136034a ಆಪದ್ಯಸ್ಯಾಂ ಸುಕಷ್ಟಾಯಾಂ ಮರಣೇ ಸಮುಪಸ್ಥಿತೇ|
12136034c ಸಮಂತಾದ್ಭಯ ಉತ್ಪನ್ನೇ ಕಥಂ ಕಾರ್ಯಂ ಹಿತೈಷಿಣಾ||

“ಅಯ್ಯೋ! ಈ ಅತ್ಯಂತ ಕಷ್ಟದಲ್ಲಿ ಮರಣವು ಸಮೀಪವಾಗಿಬಿಟ್ಟಿದೆ!
ಎಲ್ಲ ಕಡೆಗಳಿಂದಲೂ ಭಯವು ಉತ್ಪನ್ನವಾಗಿಬಿಟ್ಟಿದೆ. ಈಗ ನನ್ನ
ಹಿತವನ್ನು ಬಯಸಿ ನಾನು ಏನನ್ನು ಮಾಡಬೇಕು?”

12136035a ಸ ತಥಾ ಸರ್ವತೋ ರುದ್ಧಃ ಸರ್ವತ್ರ ಸಮದರ್ಶನಃ|
12136035c ಅಭವದ್ಭಯಸಂತಪ್ತಶ್ಚಕ್ರೇ ಚೇಮಾಂ ಪರಾಂ ಗತಿಮ್[570]||

ಹೀಗೆ ಎಲ್ಲ ಕಡೆಗಳಿಂದ ಅದರ ಮಾರ್ಗವು ಮುಚ್ಚಿಕೊಂಡಿತ್ತು. ಸರ್ವತ್ರ
ಭಯವೊಂದೇ ಕಾಣುತ್ತಿತ್ತು. ಆ ಭಯದಿಂದ ಸಂತಪ್ತಗೊಂಡ ಆ
ಇಲಿಯು ಈ ಪರಮ ಗತಿಯನ್ನು ತಲುಪಿ ಯೋಚಿಸಿತುಃ

12136036a ಆಪದ್ವಿನಾಶಭೂಯಿಷ್ಠಾ ಶತ್ಯೈಕೀಯಂ ಚ ಜೀವಿತಮ್|
12136036c ಸಮಂತಸಂಶಯಾ ಚೇಯಮಸ್ಮಾನಾಪದುಪಸ್ಥಿತಾ||

“ಆಪತ್ತಿನಲ್ಲಿ ಸಿಲುಕಿಕೊಂಡು ನಾಶವಾಗಬಹುದಾದ
ಪರಿಸ್ಥಿತಿಯಲ್ಲಿಯೂ ಕೂಡ ಜೀವವನ್ನು ಉಳಿಸಿಕೊಳ್ಳಲು
ಪ್ರಯತ್ನಿಸಬೇಕು. ಇಂದು ಎಲ್ಲಕಡೆಗಳಿಂದಲೂ ನನ್ನ ಪ್ರಾಣಕ್ಕೆ

---

570 ಚ ಪರಮಾಂ ಮತಿಮ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಸಂಶಯವುಂಟಾಗುತ್ತಿದೆ. ಆದುದರಿಂದ ನಾನು ಅತ್ಯಂತ ಭಾರೀ ಆಪತ್ತಿನಲ್ಲಿ ಸಿಲುಕಿಕೊಂಡುಬಿಟ್ಟಿದ್ದೇನೆ.

12136037a ಗತಂ ಹಿ ಸಹಸಾ ಭೂಮಿಂ ನಕುಲೋ ಮಾಂ ಸಮಾಪ್ನುಯಾತ್|
12136037c ಉಲೂಕಶ್ಚೇಹ ತಿಷ್ಠಂತಂ ಮಾರ್ಜಾರಃ ಪಾಶಸಂಕ್ಷಯಾತ್||

ಒಮ್ಮೆಲೇ ನೆಲದ ಮೇಲೆ ಹಾರಿ ಹೋದರೆ ಮುಂಗುಸಿಯು ನನ್ನನ್ನು ಹಿಡಿದುಕೊಂಡುಬಿಡುತ್ತದೆ. ಇಲ್ಲಿಯೇ ನಿಂತುಕೊಂಡರೆ ಗೂಬೆಯು ಹಿಡಿದುಕೊಂಡುಬಿಡುತ್ತದೆ. ಈ ಬಲೆಯನ್ನು ಕತ್ತರಿಸಿ ಒಳಗೆ ನುಸುಳಿಕೊಂಡರೆ ಬೆಕ್ಕು ನನ್ನನ್ನು ಬಿಡುವುದಿಲ್ಲ.

12136038a ನ ತ್ವೇವಾಸ್ಮದ್ವಿಧಃ ಪ್ರಾಜ್ಞಃ ಸಂಮೋಹಂ ಗಂತುಮರ್ಹತಿ|
12136038c ಕರಿಷ್ಯೇ ಜೀವಿತೇ ಯತ್ನಂ ಯಾವದುಚ್ಛ್ವಾಸನಿಗ್ರಹಮ್[571]||

ಆದರೂ ನನ್ನಂತಹ ಪ್ರಾಜ್ಞನು ಗಾಬರಿಗೊಳ್ಳಬಾರದು. ಉಸಿರಾಟವು ಇರುವವರೆಗೆ ಜೀವಿತವಾಗಿರಲು ಪ್ರಯತ್ನಿಸಬೇಕು.

12136039a ನ ಹಿ ಬುದ್ಧ್ಯನ್ವಿತಾಃ ಪ್ರಾಜ್ಞಾ ನೀತಿಶಾಸ್ತ್ರವಿಶಾರದಾಃ|
12136039c ಸಂಭ್ರಮಂತ್ಯಾಪದಂ[572] ಪ್ರಾಪ್ಯ ಮಹತೋಽರ್ಥಾನವಾಪ್ಯ ಚ[573]||

ಬುದ್ಧಿವಂತ, ಪ್ರಾಜ್ಞ ನೀತಿಶಾಸ್ತ್ರವಿಶಾರದನು ಆಪತ್ತು ಬಂದೊದಗಿದಾಗ, ಅದು ಏಷ್ಟೇ ಮಹಾ ಅನರ್ಥಕಾರಿಯಾಗಿರಲಿ, ಗಾಬರಿಗೊಳ್ಳುವುದಿಲ್ಲ.

---

571 ಯಾವದ್ಯುಕ್ತ್ಯಾ ಪ್ರತಿಗ್ರಹಾತ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

572 ನಿಮಜ್ಜತ್ಯಾಪದಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

573 ಮಹತೀಂ ದಾರುಣಾಮಪಿ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136040a ನ ತ್ವನ್ಯಾಮಿಹ ಮಾರ್ಜಾರಾದ್ಗತಿಂ ಪಶ್ಯಾಮಿ ಸಾಂಪ್ರತಮ್|
12136040c ವಿಷಮಸ್ಥೋ ಹ್ಯಯಂ ಜಂತುಃ ಕೃತ್ಯಂ ಚಾಸ್ಯ ಮಹನ್ಮಯಾ||

ಈಗ ಈ ಬೆಕ್ಕಿನ ಸಹಾಯವನ್ನು ಪಡೆಯುವುದನ್ನು ಬಿಟ್ಟು ನನಗೆ ಬೇರೆ ಯಾವ ಮಾರ್ಗವೂ ಕಾಣುತ್ತಿಲ್ಲ. ನನ್ನ ಕಡು ಶತ್ರುವಾಗಿದ್ದರೂ ಈ ಪ್ರಾಣಿಯು ಸ್ವಯಂ ಸಂಕಟದಲ್ಲಿ ಸಿಕ್ಕಿಕೊಂಡಿದೆ. ನನ್ನಿಂದ ಇದಕ್ಕೂ ಮಹಾ ಉಪಕಾರವಾಗಬಲ್ಲದು.

12136041a ಜೀವಿತಾರ್ಥೀ ಕಥಂ ತ್ವದ್ಯ ಪ್ರಾರ್ಥಿತಃ ಶತ್ರುಭಿಸ್ತ್ರಿಭಿಃ|
12136041c ತಸ್ಮಾದಿಮಮಹಂ ಶತ್ರುಂ ಮಾರ್ಜಾರಂ ಸಂಶ್ರಯಾಮಿ ವೈ||

ಮೂರು ಶತ್ರುಗಳು ನನ್ನ ಮೇಲೆ ಗುರಿಯನ್ನಿಟ್ಟಿರುವಾಗ ಇಂದು ನಾನು ಹೇಗೆ ನನ್ನ ಜೀವವನ್ನು ಉಳಿಸಿಕೊಳ್ಳಬಹುದು? ಆದುದರಿಂದ ಇಂದು ನಾನು ನನ್ನ ಶತ್ರು ಈ ಬೆಕ್ಕನ್ನೇ ಆಶ್ರಯಿಸುತ್ತೇನೆ.

12136042a ಕ್ಷತ್ರವಿದ್ಯಾಂ ಸಮಾಶ್ರಿತ್ಯ ಹಿತಮಸ್ಯೋಪಧಾರಯೇ[574]|
12136042c ಯೇನೇಮಂ ಶತ್ರುಸಂಘಾತಂ ಮತಿಪೂರ್ವೇಣ ವಂಚಯೇ||

ಕ್ಷತ್ರವಿದ್ಯೆಯನ್ನು ಆಶ್ರಯಿಸಿ ಇದರ ಹಿತಗಳನ್ನು ಅಥಮಾಡಿಕೊಳ್ಳುತ್ತೇನೆ. ಈ ಬುದ್ಧಿಯನ್ನುಪಯೋಗಿಸಿ ಶತ್ರುಸಮುದಾಯವನ್ನು ವಂಚಿಸಿ ನನ್ನನ್ನು ನಾನು ಉಳಿಸಿಕೊಳ್ಳುತ್ತೇನೆ.

12136043a ಅಯಮತ್ಯಂತಶತ್ರುರ್ಮೇ ವೈಷಮ್ಯಂ ಪರಮಂ ಗತಃ|
12136043c ಮೂಢೋ ಗ್ರಾಹಯಿತುಂ ಸ್ವಾರ್ಥಂ ಸಂಗತ್ಯಾ ಯದಿ ಶಕ್ಯತೇ||

---

574 ನೀತಿಶಾಸ್ತ್ರಂ ಸಮಾಶ್ರಿತ್ಯ ಹಿತಮಸ್ಯೋಪವರ್ಣಯೇ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಈ ಬೆಕ್ಕು ನನ್ನ ಅತ್ಯಂತ ಶತ್ರುವಾಗಿದ್ದರೂ ಈ ಸಮಯದಲ್ಲಿ ಪರಮ ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದೆ. ಶಕ್ಯವಾದರೆ ಈ ಮೂಢನನ್ನು ಸಂಗತಿಯ ಮೂಲಕ ಸ್ವಾರ್ಥವನ್ನು ಸಾಧಿಸಿಕೊಳ್ಳಲು ಒಪ್ಪಿಸುತ್ತೇನೆ.

12136044a ಕದಾ ಚಿದ್ವ್ಯಸನಂ ಪ್ರಾಪ್ಯ ಸಂಧಿಂ ಕುರ್ಯಾನ್ಮಯಾ ಸಹ|
12136044c ಬಲಿನಾ ಸಂನಿವಿಷ್ಟಸ್ಯ ಶತ್ರೋರಪಿ ಪರಿಗ್ರಹಃ|
12136044e ಕಾರ್ಯ ಇತ್ಯಾಹುರಾಚಾರ್ಯಾ ವಿಷಮೇ ಜೀವಿತಾರ್ಥಿನಾ||

ವ್ಯಸನದಲ್ಲಿ ಸಿಲುಕಿದುದರಿಂದ ನನ್ನೊಂದಿಗೆ ಸಂಧಿಯನ್ನೂ ಮಾಡಿಕೊಳ್ಳಬಹುದೇನೋ! ಆಚಾರ್ಯರ ಹೇಳಿಕೆಯಂತೆ ಸಂಕಟವು ಬಂದೊದಗಿದಾಗ ಜೀವ ರಕ್ಷಣೆಯನ್ನು ಬಯಸುವವನು ಬಲಶಾಲಿಯಾಗಿದ್ದರೂ ತನ್ನ ನಿಕಟವರ್ತೀ ಶತ್ರುವಿನೊಂದಿಗೆ ಸೇರಿಕೊಳ್ಳುತ್ತಾನೆ.

12136045a ಶ್ರೇಯಾನ್ ಹಿ ಪಂಡಿತಃ ಶತ್ರುರ್ನ ಚ ಮಿತ್ರಮಪಂಡಿತಮ್|
12136045c ಮಮ ಹ್ಯಮಿತ್ರೇ ಮಾರ್ಜಾರೇ ಜೀವಿತಂ ಸಂಪ್ರತಿಷ್ಠಿತಮ್||

ವಿದ್ವಾನ್ ಶತ್ರುವೂ ಶ್ರೇಯಸ್ಸನ್ನುಂಟುಮಾಡಬಲ್ಲನು. ಮತ್ತು ಮೂರ್ಖ ಮಿತ್ರನೂ ಶ್ರೇಯಸ್ಕರನಾಗದೇ ಇರಬಹುದು. ನನ್ನ ಜೀವಿತವಾದರೋ ಶತ್ರುವಾಗಿರುವ ಈ ಬೆಕ್ಕಿನ ಮೇಲೆಯೇ ಅವಲಂಬಿಸಿದೆ.

12136046a ಹಂತ್ಯೈನಂ ಸಂಪ್ರವಕ್ಷ್ಯಾಮಿ ಹೇತುಮಾತ್ಮಾಭಿರಕ್ಷಣೇ|
12136046c ಅಪೀದಾನೀಮಯಂ ಶತ್ರುಃ ಸಂಗತ್ಯಾ ಪಂಡಿತೋ ಭವೇತ್||

ಸರಿ! ಈಗ ನಾನು ಇದಕ್ಕೆ ಆತ್ಮರಕ್ಷಣೆಗೆ ಒಂದು ಯುಕ್ತಿಯನ್ನು ಹೇಳುತ್ತೇನೆ. ಈ ಶತ್ರುವು ಈ ಸಮಯದಲ್ಲಿ ನನ್ನ ಸಂಗತಿಯಿಂದ ಪಂಡಿತನಾಗುವ ಸಂಭವವಿದೆ. ವಿವೇಕದಿಂದ ಕಾರ್ಯಕ್ಕೈಗೊಳ್ಳಬೇಕು.”

[575]12136047a ತತೋಽರ್ಥಗತಿತತ್ತ್ವಜ್ಞಃ ಸಂಧಿವಿಗ್ರಹಕಾಲವಿತ್|
12136047c ಸಾಂತ್ವಪೂರ್ವಮಿದಂ ವಾಕ್ಯಂ ಮಾರ್ಜಾರಂ ಮೂಷಕೋಽಬ್ರವೀತ್||

ಅನಂತರ ಆ ಅರ್ಥಗತಿತತ್ತ್ವಜ್ಞ, ಸಂಧಿ-ವಿಗ್ರಹ ಕಾಲವನ್ನು ತಿಳಿದಿದ್ದ ಇಲಿಯು ಬೆಕ್ಕಿಗೆ ಸಾಂತ್ವಪೂರ್ವಕವಾದ ಈ ಮಾತನ್ನಾಡಿತು:

12136048a ಸೌಹೃದೇನಾಭಿಭಾಷೇ ತ್ವಾ ಕಚ್ಚಿನ್ಮಾರ್ಜಾರ ಜೀವಸಿ|
12136048c ಜೀವಿತಂ ಹಿ ತವೇಚ್ಚಾಮಿ ಶ್ರೇಯಃ ಸಾಧಾರಣಂ ಹಿ ನೌ||

“ಬೆಕ್ಕೇ! ನಾನು ನಿನ್ನೊಂದಿಗೆ ಸೌಹಾರ್ದತೆಯಿಂದ ಮಾತನಾಡುತ್ತಿದ್ದೇನೆ. ನೀನು ಜೀವಿತವಾಗಿದ್ದೀಯೆ ತಾನೇ? ನೀನೂ ಜೀವಂತವಾಗಿರಬೇಕೆಂದೇ ನಾನು ಇಚ್ಛಿಸುತ್ತೇನೆ. ಏಕೆಂದರೆ ಇದರಿಂದ ನಮಗಿಬ್ಬರಿಗೂ ಒಂದೇ ರೀತಿಯಲ್ಲಿ ಶ್ರೇಯಸ್ಸನ್ನುಂಟುಮಾಡುತ್ತದೆ.

12136049a ನ ತೇ ಸೌಮ್ಯ ವಿಷತ್ತವ್ಯಂ ಜೀವಿಷ್ಯಸಿ ಯಥಾ ಪುರಾ[576]|
12136049c ಅಹಂ ತ್ವಾಮುದ್ಧರಿಷ್ಯಾಮಿ ಪ್ರಾಣಾನ್ವಹ್ಯಾಂ ಹಿ ತೇ ಕೃತೇ||

ಸೌಮ್ಯ! ವಿಷಾದಿಸಬೇಡ. ಹಿಂದಿನಂತೆಯೇ ನೀನು ಬದುಕಬಹುದು. ನನ್ನ ಪ್ರಾಣಗಳನ್ನು ನೀನು ತೆಗೆದುಕೊಳ್ಳದೇ ಇದ್ದರೆ ನಾನು ನಿನ್ನನ್ನು ಪಾರುಗೊಳಿಸುತ್ತೇನೆ.

---

[575] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಶ್ಲೋಕಾರ್ಧವಿದೆ: ಏವಂ ವಿಚಿಂತಯಾಮಾಸ ಮೂಷಿಕಃ ಶತ್ರುಚೇಷ್ಟಿತಮ್|

[576] ನ ತೇ ಸೌಮ್ಯ ಭಯಂ ಕಾರ್ಯಂ ಜೀವಿಷ್ಯಸಿ ಯಥಾಸುಖಮ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136050a ಅಸ್ತಿ ಕಶ್ಚಿದುಪಾಯೋಽತ್ರ ಪುಷ್ಕಲಃ[577] ಪ್ರತಿಭಾತಿ ಮಾಮ್|
12136050c ಯೇನ ಶಕ್ಯಸ್ತ್ವಯಾ ಮೋಕ್ಷಃ ಪ್ರಾಪ್ತುಂ ಶ್ರೇಯೋ ಯಥಾ ಮಯಾ||

ನಿನ್ನನ್ನು ಬಿಡುಗಡೆಗೊಳಿಸುವ ಮತ್ತು ನನಗೂ
ಶ್ರೇಯಸ್ಸನ್ನುಂಟುಮಾಡುವ ಒಂದು ಪುಷ್ಕಲ ಉಪಾಯವು ನನಗೆ
ಹೊಳೆಯುತ್ತಿದೆ.

12136051a ಮಯಾ ಹ್ಯುಪಾಯೋ ದೃಷ್ಟೋಽಯಂ ವಿಚಾರ್ಯ ಮತಿಮಾತ್ಮನಃ|
12136051c ಆತ್ಮಾರ್ಥಂ ಚ ತ್ವದರ್ಥಂ ಚ ಶ್ರೇಯಃ ಸಾಧಾರಣಂ ಹಿ ನೌ||

ನನ್ನ ಮನಸ್ಸಿನಲ್ಲಿಯೇ ವಿಚಾರಿಸಿ ಈ ಉಪಾಯವನ್ನು
ಕಂಡುಕೊಂಡಿದ್ದೇನೆ. ಇದರಿಂದ ನನಗೂ ಮತ್ತು ನಿನಗೂ ಸಮಾನವಾದ
ಶ್ರೇಯಸ್ಸುಂಟಾಗುತ್ತದೆ.

12136052a ಇದಂ ಹಿ ನಕುಲೋಲೂಕಂ ಪಾಪಬುದ್ಧ್ಯಭಿತಃ ಸ್ಥಿತಮ್|
12136052c ನ ಧರ್ಷಯತಿ ಮಾರ್ಜಾರ ತೇನ ಮೇ ಸ್ವಸ್ತಿ ಸಾಂಪ್ರತಮ್||

ಬೆಕ್ಕೇ! ನೋಡು. ಈ ಮುಂಗುಸಿ ಮತ್ತು ಗೂಬೆಗಳೆರಡೂ
ಪಾಪಬುದ್ಧಿಯಿಂದ ಇಲ್ಲಿ ನಿಂತಿವೆ. ನನ್ನ ಮೇಲೆಯೇ ಕಣ್ಣಿಟ್ಟಿವೆ. ಅವು
ನನ್ನ ಮೇಲೆ ಆಕ್ರಮಣ ಮಾಡದೇ ಇರುವ ವರೆಗೆ ನಾನು
ಸುರಕ್ಷಿತನಾಗಿದ್ದೇನೆ.

12136053a ಕೂಜಂಶ್ಚ ಪಲನೇತ್ರೋಽಯಂ ಕೌಶಿಕೋ ಮಾಂ ನಿರೀಕ್ಷತೇ|
12136053c ನಗಶಾಖಾಗ್ರಹಸ್ತಿಷ್ಠಂಸ್ತಸ್ಯಾಹಂ ಭೃಶಮುದ್ವಿಜೇ||

ಈ ಚಂಚಲ ನೇತ್ರಗಳ ಪಾಪೀ ಉಲೂಕವು ಮರದ ರೆಂಬೆಯಮೇಲೆ

---

577 ದುಷ್ಕರಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಕುಳಿತು ಹೂ ಹೂ ಎನ್ನುತ್ತಾ ನನ್ನನ್ನೇ ದುರುಗುಟ್ಟಿ ನೋಡುತ್ತಿದೆ. ಇದರಿಂದ ನನಗೆ ಅತ್ಯಂತ ಭಯವಾಗುತ್ತಿದೆ.

12136054a ಸತಾಂ ಸಾಪ್ತಪದಂ ಸಖ್ಯಂ ಸವಾಸೋ ಮೇಽಸಿ ಪಂಡಿತಃ|
12136054c ಸಾಂವಾಸ್ಯಕಂ ಕರಿಷ್ಯಾಮಿ ನಾಸ್ತಿ ತೇ ಮೃತ್ಯುತೋ ಭಯಮ್‌||

ಏಳು ಹೆಜ್ಜೆ ಜೊತೆಯಾಗಿ ನಡೆದರೂ ಸತ್ಪುರುಷರಲ್ಲಿ ಸಖ್ಯವಾಗಿಹೋಗುತ್ತದೆ. ನಾವಾದರೋ ಸದಾ ಜೊತೆಗೆ ಇದ್ದೇವೆ. ಆದುದರಿಂದ ಪಂಡಿತನಾದ ನೀನು ನನಗೆ ಮಿತ್ರನೇ ಆಗಿರುವೆ. ನಾನು ಮಿತ್ರೋಚಿತ ಧರ್ಮವನ್ನು ಅವಶ್ಯವಾಗಿ ಆಚರಿಸುತ್ತೇನೆ. ಆದುದರಿಂದ ನೀನು ಈಗ ಯಾವುದಕ್ಕೂ ಭಯಪಡಬೇಕಾಗಿಲ್ಲ.

12136055a ನ ಹಿ ಶಕ್ನೋಷಿ ಮಾರ್ಜಾರ ಪಾಶಂ ಚೇತ್ತುಂ ವಿನಾ ಮಯಾ|
12136055c ಅಹಂ ಚೇತ್ಸ್ಯಾಮಿ ತೇ ಪಾಶಂ ಯದಿ ಮಾಂ ತ್ವಂ ನ ಹಿಂಸಸಿ||

ಬೆಕ್ಕೇ! ನನ್ನ ಸಹಾಯವಿಲ್ಲದೇ ನೀನು ಈ ಬಲೆಯ ಪಾಶವನ್ನು ಕಡಿದುಕೊಳ್ಳಲಾರೆ. ನನ್ನನ್ನು ನೀನು ಹಿಂಸಿಸದೇ ಇದ್ದರೆ ನಾನು ಈ ಪಾಶವನ್ನು ಕಡಿದುಹಾಕುತ್ತೇನೆ.

12136056a ತ್ವಮಾಶ್ರಿತೋ ನಗಸ್ಯಾಗ್ರಂ ಮೂಲಂ ತ್ವಹಮುಪಾಶ್ರಿತಃ|
12136056c ಚಿರೋಷಿತಾವಿಹಾವಾಂ ವೈ ವೃಕ್ಷೇಽಸ್ಮಿನ್ವಿದಿತಂ ಹಿ ತೇ||

ನೀನು ಈ ವೃಕ್ಷದ ಮೇಲೆ ವಾಸಿಸುತ್ತೀಯೆ ಮತ್ತು ನಾನಾದರೋ ಇದರ ಬುಡದಲ್ಲಿ ವಾಸಿಸುತ್ತೇನೆ. ಹೀಗೆ ನಾವಿಬ್ಬರೂ ದೀರ್ಘಕಾಲದಿಂದ ಈ ವೃಕ್ಷದ ಆಶ್ರಯದಲ್ಲಿದ್ದೇವೆ. ಇದು ನಿನಗೂ ತಿಳಿದಿದ್ದೇ ಆಗಿದೆ.

12136057a ಯಸ್ಮಿನ್ನಾಶ್ವಸತೇ ಕಶ್ಚಿದ್ಯಶ್ಚ ನಾಶ್ವಸತೇ ಕ್ವ ಚಿತ್‌|

12136057c ನ ತೌ ಧೀರಾಃ ಪ್ರಶಂಸಂತಿ ನಿತ್ಯಮುದ್ವಿಗ್ನಚೇತಸೌ||

ಯಾರ ಮೇಲೂ ವಿಶ್ವಾಸವನ್ನಿಡದವನು ಮತ್ತು ಯಾರೂ ವಿಶ್ವಾಸವನ್ನಿಡದವನು ಇಬ್ಬರೂ ನಿತ್ಯ ಉದ್ವಿಗ್ನಚೇತಸರು ಎಂದು ಧೀರರು ಹೇಳುತ್ತಾರೆ.

12136058a ತಸ್ಮಾದ್ವಿವರ್ಧತಾಂ ಪ್ರೀತಿಃ ಸತ್ಯಾ ಸಂಗತಿರಸ್ತು ನೌ|
12136058c ಕಾಲಾತೀತಮಪಾರ್ಥಂ ಹಿ ನ ಪ್ರಶಂಸಂತಿ ಪಂಡಿತಾಃ||

ಆದುದರಿಂದ ನಮ್ಮೊಳಗೆ ಸದಾ ಪ್ರೀತಿಯಿರಲಿ ಮತ್ತು ಸತ್ಯ ಸಂಗತಿಯಿರಲಿ. ಆಪತ್ತಿನ ಕಾಲವು ಕಳೆದುಹೋದ ನಂತರ ಪಂಡಿತರು ಇದರ ಕುರಿತು ಮಾತನಾಡುವುದಿಲ್ಲ.

12136059a ಅರ್ಥಯುಕ್ತಿಮಿಮಾಂ ತಾವದ್ಯಥಾಭೂತಾಂ ನಿಶಾಮಯ|
12136059c ತವ ಜೀವಿತಮಿಚ್ಛಾಮಿ ತ್ವಂ ಮಮೇಚ್ಚಸಿ ಜೀವಿತಮ್||

ನಮ್ಮಿಬ್ಬರ ಪ್ರಯೋಜನಕಾರಿಯಾಗುವ ಈ ಯುಕ್ತಿಯನ್ನು ಯಥಾರ್ಥರೂಪದಲ್ಲಿ ಕೇಳು. ನೀನು ಜೀವಿತವಿರಬೇಕೆಂದು ಬಯಸುತ್ತೇನೆ. ಮತ್ತು ನಾನೂ ಜೀವಿತವಿರಬೇಕೆಂದು ಬಯಸುತ್ತೇನೆ.

12136060a ಕಶ್ಚಿತ್ತರತಿ ಕಾಷ್ಠೇನ ಸುಗಂಭೀರಾಂ ಮಹಾನದೀಮ್|
12136060c ಸ ತಾರಯತಿ ತತ್ಕಾಷ್ಠಂ ಸ ಚ ಕಾಷ್ಠೇನ ತಾರ್ಯತೇ||

ಅತ್ಯಂತ ಗಂಭೀರವಾದ ಮಹಾನದಿಯನ್ನು ಕಟ್ಟಿಗೆಯ ತುಂಡಿನ ಮೂಲಕ ದಾಟುವವನೂ ಆ ಕಟ್ಟಿಗೆಯನ್ನು ದಾಟಿಸುತ್ತಾನೆ ಮತ್ತು ಆ ಕಟ್ಟಿಗೆಯೂ ಅವನನ್ನು ದಾಟಿಸುತ್ತದೆ.

12136061a ಈದೃಶೋ ನೌ ಸಮಾಯೋಗೋ ಭವಿಷ್ಯತಿ ಸುನಿಸ್ತರಃ|

12136061c ಅಹಂ ತ್ವಾಂ ತಾರಯಿಷ್ಯಾಮಿ ತ್ವಂ ಚ ಮಾಂ ತಾರಯಿಷ್ಯಸಿ||

ಹೀಗೆ ನಮ್ಮಿಬ್ಬರ ಈ ಸಂಯೋಗವು ಸ್ಥಿರವಾಗಿರುವುದು. ನಾನು ನಿನ್ನನ್ನು ಈ ಸಂಕಟದಿಂದ ಪಾರುಮಾಡುತ್ತೇನೆ. ನೀನೂ ಕೂಡ ನನ್ನನ್ನು ಪಾರುಮಾಡುತ್ತೀಯೆ.”

12136062a ಏವಮುಕ್ತ್ವಾ ತು ಪಲಿತಸ್ತದರ್ಥಮುಭಯೋರ್ಹಿತಮ್|
12136062c ಹೇತುಮದ್ ಗ್ರಹಣೀಯಂ ಚ ಕಾಲಾಕಾಂಕ್ಷೀ ವ್ಯಪೈಕ್ಷತ||

ಹೀಗೆ ಪಲಿತನು ಇಬ್ಬರಿಗೂ ಹಿತಕರವಾದ, ಯುಕ್ತಿಯುಕ್ತವಾದ ಮತ್ತು ಒಪ್ಪಿಕೊಳ್ಳಲು ಯೋಗ್ಯವಾದ ಮಾತನ್ನು ಹೇಳಿ ಉತ್ತರಕ್ಕಾಗಿ ಪ್ರತೀಕ್ಷೆ ಮಾಡುತ್ತಾ ಆ ಬೆಕ್ಕನ್ನು ನೋಡತೊಡಗಿತು.

12136063a ಅಥ ಸುವ್ಯಾಹೃತಂ ತಸ್ಯ ಶ್ರುತ್ವಾ ಶತ್ರುರ್ವಿಚಕ್ಷಣಃ|
12136063c ಹೇತುಮದ್ಗ್ರಹಣೀಯಾರ್ಥಂ ಮಾರ್ಜಾರೋ ವಾಕ್ಯಮಬ್ರವೀತ್||

ತನ್ನ ಆ ಶತ್ರುವಿನ ಯುಕ್ತಿಯುಕ್ತ ಮತ್ತು ಸ್ವೀಕರಿಸಲು ಯೋಗ್ಯವಾದ ಸುಂದರ ಭಾಷಣವನ್ನು ಕೇಳಿ ಬೆಕ್ಕು ಮಾತನಾಡಿತು.

12136064a ಬುದ್ಧಿಮಾನ್ವಾಕ್ಯಸಂಪನ್ನಸ್ತದ್ವಾಕ್ಯಮನುವರ್ಣಯನ್|
12136064c ತಾಮವಸ್ಥಾಮವೇಕ್ಷ್ಯಾಂತ್ಯಾಂ ಸಾಮ್ನೈವ ಪ್ರತ್ಯಪೂಜಯತ್||

ಅದು ಬುದ್ಧಿಶಾಲಿಯಾಗಿತ್ತು. ವಾಕ್ಯಸಂಪನ್ನವಾಗಿತ್ತು. ಮೊದಲೇ ಅದು ತನ್ನ ಮನಸ್ಸಿನಲ್ಲಿಯೇ ಇಲಿಯ ಮಾತನ್ನು ಮೆಲಕು ಹಾಕಿ ನಂತರ ತನ್ನ ದಶೆಯನ್ನು ನೋಡಿಕೊಂಡು ಸಾಮನೀತಿಯಿಂದಲೇ ಆ ಇಲಿಯನ್ನು ಪ್ರಶಂಸಿಸಿತು.

12136065a ತತಸ್ತೀಕ್ಷ್ಣಾಗ್ರದಶನೋ ವೈಡೂರ್ಯಮಣಿಲೋಚನಃ|

12136065c ಮೂಷಕಂ ಮಂದಮುದ್ವೀಕ್ಷ್ಯ ಮಾರ್ಜಾರೋ ಲೋಮಶೋಽಬ್ರವೀತ್‌॥

ಅನಂತರ ತೀಕ್ಷ್ಣವಾದುರುಹಲ್ಲುಗಳಿದ್ದ ವೈಡೂರ್ಯದ ಮಣಿಯಂಥಹ ಕಣ್ಣುಗಳಿದ್ದ ಲೋಮಶ ಬೆಕ್ಕು ಇಲಿಯಮೇಲೆ ಮಂದದೃಷ್ಟಿಯನ್ನು ಹಾಯಿಸಿ ಹೇಳಿತು:

12136066a ನಂದಾಮಿ ಸೌಮ್ಯ ಭದ್ರಂ ತೇ ಯೋ ಮಾಂ ಜೀವಂತಮಿಚ್ಛಸಿ|
12136066c ಶ್ರೇಯಶ್ಚ ಯದಿ ಜಾನೀಷೇ ಕ್ರಿಯತಾಂ ಮಾ ವಿಚಾರಯ‌॥

“ಸೌಮ್ಯ! ನಿನಗೆ ಮಂಗಳವಾಗಲಿ! ನಾನು ಜೀವಂತವಾಗಿರಬೇಕೆಂದು ನೀನು ಇಚ್ಛಿಸುತ್ತೀಯೆ ಎನ್ನುವುದನ್ನು ತಿಳಿದು ಸಂತೋಷವಾಗುತ್ತಿದೆ. ನಮ್ಮ ಶ್ರೇಯಸ್ಸಿನ ಉಪಾಯವಿದೆಯಾದರೆ ಅದನ್ನು ಮಾಡು. ಅದರಲ್ಲಿ ವಿಚಾರಿಸಬೇಡ.

12136067a ಅಹಂ ಹಿ ದೃಢಮಾಪನ್ನಸ್ತ್ವಮಾಪನ್ನತರೋ ಮಯಾ|
12136067c ದ್ವಯೋರಾಪನ್ನಯೋಃ ಸಂಧಿಃ ಕ್ರಿಯತಾಂ ಮಾ ವಿಚಾರಯ[578]‌॥

ನಾನು ಭಾರೀ ವಿಪತ್ತಿನಲ್ಲಿ ಸಿಲುಕಿಕೊಂಡಿದ್ದೇನೆ ಮತ್ತು ನೀನೂ ಕೂಡ ಮಹಾ ಸಂಕಟದಲ್ಲಿ ಬಿದ್ದಿದ್ದೀಯೆ. ಈ ರೀತಿ ಆಪತ್ತಿನಲ್ಲಿರುವ ನಾವಿಬ್ಬರೂ ಸಂಧಿಮಾಡಿಕೊಳ್ಳಬೇಕು. ಅದರಲ್ಲಿ ವಿಚಾರಿಸಬೇಕಾದ್ದಿಲ್ಲ.

12136068a ವಿಧತ್ಸ್ವ ಪ್ರಾಪ್ತಕಾಲಂ ಯತ್ಕಾರ್ಯಂ ಸಿಧ್ಯತು ಚಾವಯೋಃ[579]|
12136068c ಮಯಿ ಕೃಚ್ಛ್ರಾದ್ವಿನಿರ್ಮುಕ್ತೇ ನ ವಿನಂಕ್ಷ್ಯತಿ ತೇ ಕೃತಮ್‌॥

---

578 ಮಾ ಚಿರಾಯ ಚ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

579 ಸಿದ್ಧಿಕರಂ ವಿಭೋ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಕಾಲವು ಪ್ರಾಪ್ತವಾದಾಗ ನಿನ್ನ ಅಭೀಷ್ಟಗಳ ಸಿದ್ಧಿಗಾಗಿ ಏನೇ ಕಾರ್ಯವಿದ್ದರೂ ಅದನ್ನು ನಾನು ಮಾಡುತ್ತೇನೆ. ನಾನು ಈ ಸಂಕಟದಿಂದ ಮುಕ್ತನಾದರೆ ನೀನು ಮಾಡಿದ ಈ ಉಪಕಾರವು ನಷ್ಟವಾಗಿಹೋಗುವುದಿಲ್ಲ. ನಾನು ಇದಕ್ಕೆ ಪ್ರತ್ಯುಪಕಾರವನ್ನು ಖಂಡಿತಾ ಮಾಡುತ್ತೇನೆ.

12136069a ನ್ಯಸ್ತಮಾನೋಽಸ್ಮಿ ಭಕ್ತೋಽಸ್ಮಿ ಶಿಷ್ಯಸ್ತ್ವದ್ಧಿತಕೃತ್ತಥಾ|
12136069c ನಿದೇಶವಶವರ್ತೀ ಚ ಭವಂತಂ ಶರಣಂ ಗತಃ||

ಈ ಸಮಯದಲ್ಲಿ ನನ್ನ ಮನಸ್ಸು ಭಗ್ನವಾಗಿಬಿಟ್ಟಿದೆ. ನಾನು ನಿನ್ನ ಭಕ್ತ ಮತ್ತು ಶಿಷ್ಯನಾಗಿಬಿಟ್ಟಿದ್ದೇನೆ. ನಿನಗೆ ಹಿತವಾದುದನ್ನೇ ಮಾಡುತ್ತೇನೆ. ಮತ್ತು ಸದಾ ನಿನ್ನ ಆಜ್ಞೆಯ ಅಧೀನನಾಗಿರುತ್ತೇನೆ. ನಾನು ಎಲ್ಲ ರೀತಿಯಲ್ಲಿಯೂ ನಿನ್ನ ಶರಣು ಬಂದಿದ್ದೇನೆ.”

12136070a ಇತ್ಯೇವಮುಕ್ತಃ ಪಲಿತೋ ಮಾರ್ಜಾರಂ ವಶಮಾಗತಮ್|
12136070c ವಾಕ್ಯಂ ಹಿತಮುವಾಚೇದಮಭಿನೀತಾರ್ಥಮರ್ಥವತ್||

ಬೆಕ್ಕು ಹೀಗೆ ಹೇಳಲು ತನ್ನ ಉದ್ದೇಶವನ್ನು ಚೆನ್ನಾಗಿ ಅರಿತಿದ್ದ ಪಲಿತನು ಅಭಿಪ್ರಾಯಪೂರ್ಣವಾದ ಮತ್ತು ಹಿತವಾದ ಈ ಮಾತನ್ನಾಡಿತು:

12136071a ಉದಾರಂ ಯದ್ಭವಾನಾಹ ನೈತಚ್ಚಿತ್ರಂ ಭವದ್ವಿಧೇ|
12136071c ವಿದಿತೋ ಯಸ್ತು ಮಾರ್ಗೋ ಮೇ ಹಿತಾರ್ಥಂ ಶೃಣು ತಂ ಮಮ||

“ನೀನಾಡಿದ ಈ ಉದಾರತಾಪೂರ್ಣ ಮಾತು ನಿನ್ನಂತಹ ಬುದ್ಧಿವಂತನಿಗೆ ಹೊಸತೇನೂ ಅಲ್ಲ. ನಮ್ಮಿಬ್ಬರ ಹಿತಾರ್ಥವಾಗಿ ನಾನು ಯಾವ ಮಾರ್ಗವನ್ನು ಕಂಡುಕೊಂಡಿದ್ದೇನೆ ಅದನ್ನು ಕೇಳು.

12136072a ಅಹಂ ತ್ವಾನುಪ್ರವೇಕ್ಷ್ಯಾಮಿ ನಕುಲಾನ್ಮೇ ಮಹದ್ಭಯಮ್|
12136072c ತ್ರಾಯಸ್ವ ಮಾಂ ಮಾ ವಧೀಶ್ಚ ಶಕ್ತೋಽಸ್ಮಿ ತವ ಮೋಕ್ಷಣೇ||

ಈ ಮುಂಗುಸಿಯಿಂದ ನನಗೆ ಮಹಾ ಭಯವಾಗುತ್ತಿದೆ. ಆದುದರಿಂದ ನಾನು ನಿನ್ನ ಜೊತೆಗೇ ಈ ಬಲೆಯನ್ನು ಪ್ರವೇಶಿಸುತ್ತೇನೆ. ಆದರೆ ಭೋ! ನನ್ನನ್ನು ನೀನು ಕೊಲ್ಲಬೇಡ. ಜೀವಂತವಾಗಿರಲು ಬಿಡು. ಏಕೆಂದರೆ ಜೀವಂತವಾಗಿದ್ದರೆ ಮಾತ್ರ ನಾನು ನಿನ್ನನ್ನು ರಕ್ಷಿಸಲು ಸಮರ್ಥನಾಗುತ್ತೇನೆ.

12136073a ಉಲೂಕಾಚ್ಚೈವ ಮಾಂ ರಕ್ಷ ಕ್ಷುದ್ರಃ ಪ್ರಾರ್ಥಯತೇ ಹಿ ಮಾಮ್|
12136073c ಅಹಂ ಚೇತ್ಸ್ಯಾಮಿ ತೇ ಪಾಶಾನ್ಸಖೇ ಸತ್ಯೇನ ತೇ ಶಪೇ||

ಅಲ್ಲಿ ನೀಚ ಗೂಬೆಯೂ ಕೂಡ ನನ್ನ ಪ್ರಾಣಗಳ ಗ್ರಾಹಕನಾಗಿ ನಿಂತಿದ್ದಾನೆ. ಇದರಿಂದಲೂ ನೀನು ನನ್ನನ್ನು ಉಳಿಸು. ಸಖಾ! ನಾನು ಶಪಥಮಾಡಿ ನಿನಗೆ ಹೇಳುತ್ತಿದ್ದೇನೆ; ನಾನು ನಿನ್ನ ಈ ಬಂಧನವನ್ನು ಕಡಿದು ಹಾಕುತ್ತೇನೆ.”

12136074a ತದ್ವಚಃ ಸಂಗತಂ ಶ್ರುತ್ವಾ ಲೋಮಶೋ ಯುಕ್ತಮರ್ಥವತ್|
12136074c ಹರ್ಷಾದುದ್ವೀಕ್ಷ್ಯ ಪಲಿತಂ ಸ್ವಾಗತೇನಾಭ್ಯಪೂಜಯತ್||

ಇಲಿಯ ಆ ಯುಕ್ತಿಯುಕ್ತ ಅರ್ಥಪೂರ್ಣ ಸುಸಂಗತ ಮಾತನ್ನು ಕೇಳಿ ಲೋಮಶನು ಹರ್ಷದಿಂದ ಪಲಿತನನ್ನು ನೋಡಿ ಸ್ವಾಗತಿಸಿ ಪ್ರಶಂಸಿಸಿತು.

12136075a ಸ ತಂ ಸಂಪೂಜ್ಯ ಪಲಿತಂ ಮಾರ್ಜಾರಃ ಸೌಹೃದೇ ಸ್ಥಿತಃ|
12136075c ಸುವಿಚಿಂತ್ಯಾಬ್ರವೀದ್ಧೀರಃ ಪ್ರೀತಸ್ತ್ವರಿತ ಏವ ಹಿ||

ಹೀಗೆ ಪಲಿತನನ್ನು ಪ್ರಶಂಸಿಸಿ ಸೌಹಾರ್ದತೆಯಲ್ಲಿದ್ದ ಧೀರ ಬೆಕ್ಕು ಚೆನ್ನಾಗಿ ಯೋಚಿಸಿ ಪ್ರೀತನಾಗಿ ತ್ವರೆಮಾಡಿ ಹೀಗೆ ಹೇಳಿತು:

12136076a ಕ್ಷಿಪ್ರಮಾಗಚ್ಚ ಭದ್ರಂ ತೇ ತ್ವಂ ಮೇ ಪ್ರಾಣಸಮಃ ಸಖಾ|
12136076c ತವ ಪ್ರಾಜ್ಞ ಪ್ರಸಾದಾದ್ಧಿ ಕ್ಷಿಪ್ರಂ ಪ್ರಾಪ್ಸ್ಯಾಮಿ ಜೀವಿತಮ್||

“ಬೇಗನೇ ಬಾ. ನಿನಗೆ ಮಂಗಳವಾಗಲಿ. ನೀನು ನನ್ನ ಪ್ರಾಣಸಖನಿಗೆ ಸಮನಾಗಿರುವೆ. ಪ್ರಾಜ್ಞ! ನಿನ್ನ ಪ್ರಸಾದದಿಂದ ನಾನು ಬೇಗನೇ ಜೀವದಿಂದ ಉಳಿಯಬಲ್ಲೆ.

12136077a ಯದ್ಯದೇವಂಗತೇನಾದ್ಯ ಶಕ್ಯಂ ಕರ್ತುಂ ಮಯಾ ತವ|
12136077c ತದಾಜ್ಞಾಪಯ ಕರ್ತಾಹಂ ಸಂಧಿರೇವಾಸ್ತು ನೌ ಸಖೇ||

ಸಖಾ! ಈ ದಶೆಯಲ್ಲಿರುವ ಸೇವಕನಾದ ನನ್ನಿಂದ ನಿನಗೆ ಆಗಬೇಕಾದ ಎಲ್ಲ ಕೆಲಸಗಳನ್ನೂ ಮಾಡಿಸಿಕೊಳ್ಳಬಲ್ಲೆ. ನನಗೆ ಆಜ್ಞೆಯನ್ನು ನೀಡು. ಅವಶ್ಯವಾಗಿ ನಾನು ಅದನ್ನು ನಡೆಸಿಕೊಡುತ್ತೇನೆ. ನಮ್ಮಿಬ್ಬರಲ್ಲಿ ಸಂಧಿಯು ಇರಬೇಕು.

12136078a ಅಸ್ಮಾತ್ತೇ ಸಂಶಯಾನ್ಮುಕ್ತಃ ಸಮಿತ್ರಗಣಬಾಂಧವಃ|
12136078c ಸರ್ವಕಾರ್ಯಾಣಿ ಕರ್ತಾಹಂ ಪ್ರಿಯಾಣಿ ಚ ಹಿತಾನಿ ಚ||

ಈ ಸಂಕಟದಿಂದ ಪಾರಾದ ನಂತರ ನಾನು ನನ್ನ ಎಲ್ಲ ಮಿತ್ರ-ಬಾಂಧವ ಗಣಗಳೊಂದಿಗೆ ನಿನಗೆ ಪ್ರಿಯವಾದ ಮತ್ತು ಹಿತವಾದ ಎಲ್ಲ ಕಾರ್ಯಗಳನ್ನೂ ಮಾಡಿಕೊಂಡಿರುತ್ತೇನೆ.

12136079a ಮುಕ್ತಶ್ಚ ವ್ಯಸನಾದಸ್ಮಾತ್ಸ್ಸಮ್ಯಾಹಮಪಿ ನಾಮ ತೇ|

12136079c ಪ್ರೀತಿಮುತ್ಪಾದಯೇಯಂ ಚ ಪ್ರತಿಕರ್ತುಂ ಚ ಶಕ್ನುಯಾಮ್[580]॥

ಸೌಮ್ಯ! ಈ ವಿಪತ್ತಿನಿಂದ ಪಾರಾದ ನಂತರ ನಾನೂ ಕೂಡ ನಿನ್ನ ಹೃದಯದಲ್ಲಿ ಪ್ರೀತಿಯನ್ನುಂಟುಮಾಡುತ್ತೇನೆ. ನೀನು ನನಗೆ ಪ್ರಿಯಕರನು. ಅದಕ್ಕೆ ನಾನೂ ಕೂಡ ಪ್ರತ್ಯುಪಕಾರವನ್ನು ಮಾಡುವಂತಾಗಲಿ.”

[581]12136080a ಗ್ರಾಹಯಿತ್ವಾ ತು ತಂ ಸ್ವಾರ್ಥಂ ಮಾರ್ಜಾರಂ ಮೂಷಕಸ್ತದಾ|
12136080c ಪ್ರವಿವೇಶ ಸುವಿಸ್ರಬ್ಧಃ ಸಮ್ಯಗರ್ಥಾಂಶ್ಚಚಾರ ಹ[582]॥

ತನ್ನ ಸ್ವಾರ್ಥದ ಮಾತನ್ನು ಬೆಕ್ಕು ಸ್ವೀಕರಿಸುವಂತೆ ಮಾಡಿ ಆ ಇಲಿಯು ಬೆಕ್ಕಿನ ಮೇಲೆ ವಿಶ್ವಾಸವನ್ನಿಟ್ಟು ತನ್ನ ಉಪಾಯವನ್ನು ಕಾರ್ಯಗತಗೊಳಿಸಿತು.

12136081a ಏವಮಾಶ್ವಾಸಿತೋ ವಿದ್ವಾನ್ಮಾರ್ಜಾರೇಣ ಸ ಮೂಷಕಃ|
12136081c ಮಾರ್ಜಾರೋರಸಿ ವಿಸ್ರಬ್ಧಃ ಸುಷ್ವಾಪ ಪಿತೃಮಾತೃವತ್॥

ವಿದ್ವಾನ್ ಬೆಕ್ಕಿನಿಂದ ಹೀಗೆ ಆಶ್ವಾಸಿತನಾದ ಇಲಿಯು ತಂದೆ-ತಾಯಿಯ ಮಡಿಲಿನಂತೆ ಆ ಬೆಕ್ಕಿನ ಎದೆಯಮೇಲೆ ನಿರ್ಭಯನಾಗಿ ಮಲಗಿತು.

---

[580] ಪ್ರೀತಿಕರ್ತುಶ್ಚ ಸತ್ಕ್ರಿಯಾಮ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[581] ಗೀತಾ ಪ್ರೆಸ್ ನಲ್ಲಿ ಇದರ ಮೊದಲು ಒಂದು ಅಧಿಕ ಶ್ಲೋಕವಿದೆ: ಪ್ರತ್ಯುಪಕುರ್ವನ್ ಬಹ್ವಪಿ ನ ಭಾತಿ ಪೂರ್ವೋಪಕಾರಿಣಾ ತುಲ್ಯಃ| ಏಕಃ ಕರೋತಿ ಹಿ ಕೃತೇ ನಿಷ್ಕಾರಣಮೇವ ಕುರುತೇಽನ್ಯಃ॥

[582] ಪ್ರವಿವೇಶ ತು ವಿಶ್ರಮ್ಯ ಕ್ರೋಡಮಸ್ಯ ಕೃತಾಗಸಃ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136082a ಲೀನಂ ತು ತಸ್ಯ ಗಾತ್ರೇಷು ಮಾರ್ಜಾರಸ್ಯಾಥ ಮೂಷಕಮ್|
12136082c ತೌ ದೃಷ್ಟ್ವಾ ನಕುಲೋಲೂಕೌ ನಿರಾಶೌ ಜಗ್ಮತುರ್ಗೃಹಾನ್||

ಬೆಕ್ಕಿನ ಅಂಗಗಳಲ್ಲಿ ಅಡಗಿಕೊಂಡ ಇಲಿಯನ್ನು ನೋಡಿ ಮುಂಗುಸಿ ಮತ್ತು ಗೂಬೆ ಎರಡೂ ನಿರಾಶಗೊಂಡವು.

[583]12136083a ಲೀನಸ್ತು ತಸ್ಯ ಗಾತ್ರೇಷು ಪಲಿತೋ ದೇಶಕಾಲವಿತ್|
12136083c ಚಿಚ್ಚೇದ ಪಾಶಾನ್ನೃಪತೇ ಕಾಲಾಕಾಂಕ್ಷೀ ಶನೈಃ ಶನೈಃ||

ನೃಪತೇ! ಬೆಕ್ಕಿನ ಶರೀರದಲ್ಲಿ ಅಡಗಿಕೊಂಡ್ದ ದೇಶಕಾಲವಿದು ಕಾಲಾಕಾಂಕ್ಷೀ ಪಲಿತನು ಮೆಲ್ಲ ಮೆಲ್ಲನೇ ಬಲೆಯ ಪಾಶಗಳನ್ನು ಕಡಿದುಹಾಕಿದನು.

12136084a ಅಥ ಬಂಧಪರಿಕ್ಲಿಷ್ಟೋ ಮಾರ್ಜಾರೋ ವೀಕ್ಷ್ಯ ಮೂಷಕಮ್|
12136084c ಚಿಂದಂತಂ ವೈ ತದಾ ಪಾಶಾನತ್ವರಂತಂ ತ್ವರಾನ್ವಿತಃ||
12136085a ತಮತ್ವರಂತಂ ಪಲಿತಂ ಪಾಶಾನಾಂ ಚೇದನೇ ತದಾ|
12136085c ಸಂಚೋದಯಿತುಮಾರೇಭೇ ಮಾರ್ಜಾರೋ ಮೂಷಕಂ ತದಾ||

ಆ ಬಂಧನದಿಂದ ಪೀಡಿತನಾಗಿ ಬಿಡಿಸಿಕೊಳ್ಳುವ ಅವಸರದಲ್ಲಿದ್ದ ಬೆಕ್ಕು

---

[583] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಮೂರು ಶ್ಲೋಕಗಳಿವೆ: ತಥೈವ ತೌ ಸುಸಂತ್ರಸ್ತೌ ದೃಢಮಾಗತತಂದ್ರಿತೌ| ದೃಷ್ಟ್ವಾ ತಯೋಃ ಪರಾಂ ಪ್ರೀತಿಂ ವಿಸ್ಮಯಂ ಪರಮಂ ಗತೌ|| ಬಲಿನೌ ಮತಿಮಂತೌ ಚ ಸುವೃತ್ತೌ ಚಾಪ್ಯುಪಾಸಿತೌ| ಅಶಕ್ತೌ ತು ನಯಾತ್ತಸ್ಮಾತ್ಸಂಪ್ರಧರ್ಷಯಿತುಂ ಬಲಾತ್|| ಕಾರ್ಯಾರ್ಥಂ ಕೃತಸಂಧೀ ತೌ ದೃಷ್ಟ್ವಾ ಮಾರ್ಜಾರಮೂಷಿಕೌ| ಉಲೂಕನಕುಲೌ ತೂರ್ಣಂ ಜಗ್ಮತುಸ್ತೌ ಸ್ವಮಾಲಯಮ್|| ಆದರೆ ಪುಣೆಯ ಪರಿಷ್ಕೃತ ಸಂಪುಟದಲ್ಲಿ ಈ ಶ್ಲೋಕಗಳು ಮುಂದೆ ಬರುತ್ತವೆ.

ಇಲಿಯು ಮೆಲ್ಲ ಮೆಲ್ಲನೇ ಪಾಶಗಳನ್ನು ಕಡಿಯುತ್ತಿರುವುದನ್ನು ನೋಡಿತು. ಆಗ ತ್ವರೆಮಾಡದೇ ಪಾಶಗಳನ್ನು ಕಡಿಯುತ್ತಿದ್ದ ಇಲಿ ಪಲಿತನನ್ನು ತ್ವರೆಮಾಡಲು ಪ್ರಚೋದಿಸುತ್ತಾ ಬೆಕ್ಕು ಹೀಗೆ ಹೇಳಿತು:

12136086a ಕಿಂ ಸೌಮ್ಯ ನಾಭಿತ್ವರಸೇ ಕಿಂ ಕೃತಾರ್ಥೋ೯ಽವಮನ್ಯಸೇ|
12136086c ಚಿಂಧಿ ಪಾಶಾನಮಿತ್ರಘ್ನ ಪುರಾ ಶ್ವಪಚ ಏತಿ ಸಃ||

“ಸೌಮ್ಯ! ನೀನು ಏಕೆ ತ್ವರೆಮಾಡುತ್ತಿಲ್ಲ? ನಿನ್ನ ಕೆಲಸವು ಆಯಿತೆಂದು ಈಗ ನನ್ನನ್ನು ಅಪಮಾನಿಸುತ್ತಿದ್ದೀಯಾ? ಅಮಿತ್ರಘ್ನ! ಆ ಚಂಡಾಲನು ಬರುವ ಮೊದಲೇ ಈ ಪಾಶಗಳನ್ನು ಕತ್ತರಿಸು!”

12136087a ಇತ್ಯುಕ್ತಸ್ತ್ವರತಾ ತೇನ ಮತಿಮಾನ್ಪಲಿತೋಽಬ್ರವೀತ್|
12136087c ಮಾರ್ಜಾರಮಕೃತಪ್ರಜ್ಞಂ ವಶ್ಯಮಾತ್ಮಹಿತಂ ವಚಃ||

ಅವಸರಲ್ಲಿದ್ದ ಬೆಕ್ಕಿನ ಈ ಮಾತನ್ನು ಕೇಳಿ ಮತಿಮಾನ್ ಪಲಿತನು ಅಕೃತಪ್ರಜ್ಞ ಆ ಬೆಕ್ಕಿಗೆ ತನಗೆ ಹಿತಕರವೂ ಲಾಭದಾಯಕವೂ ಆದ ಈ ಮಾತನ್ನು ಹೇಳಿತು:

12136088a ತೂಷ್ಣೀಂ ಭವ ನ ತೇ ಸೌಮ್ಯ ತ್ವರಾ ಕಾರ್ಯಾ ನ ಸಂಭ್ರಮಃ|
12136088c ವಯಮೇವಾತ್ರ ಕಾಲಜ್ಞಾ ನ ಕಾಲಃ ಪರಿಹಾಸ್ಯತೇ||

“ಸೌಮ್ಯ! ಸುಮ್ಮನಿರು. ನೀನು ಅವಸರ ಮಾಡಬಾರದು. ಗಾಬರಿಗೊಳ್ಳುವುದಕ್ಕೆ ಕಾರಣವೇನೂ ಇಲ್ಲ. ನಾನು ಸಮಯವನ್ನು ಚೆನ್ನಾಗಿ ಬಲ್ಲೆ. ಸರಿಯಾದ ಕಾಲಬಂದಾಗ ನಾನು ಎಂದೂ ತಪ್ಪುವುದಿಲ್ಲ.

12136089a ಅಕಾಲೇ ಕೃತ್ಯಮಾರಬ್ಧಂ ಕರ್ತುಂ ನಾರ್ಥಾಯ ಕಲ್ಪತೇ|

12136089c ತದೇವ ಕಾಲ ಆರಬ್ಧಂ ಮಹತೇಽರ್ಥಾಯ ಕಲ್ಪತೇ||

ಅಕಾಲದಲ್ಲಿ ಆರಂಭಿಸಿದ ಕಾರ್ಯವು ಮಾಡುವವನಿಗೆ ಲಾಭದಾಯಕವಾಗುವುದಿಲ್ಲ ಮತ್ತು ಅದನ್ನೇ ಉಪಯುಕ್ತ ಸಮಯದಲ್ಲಿ ಆರಂಭಿಸಿದರೆ ಮಹಾ ಫಲವು ಸಿದ್ಧಿಸುತ್ತದೆ.

12136090a ಅಕಾಲವಿಪ್ರಮುಕ್ತಾನ್ಮೇ ತ್ವತ್ತ ಏವ ಭಯಂ ಭವೇತ್|
12136090c ತಸ್ಮಾತ್ಕಾಲಂ ಪ್ರತೀಕ್ಷಸ್ವ ಕಿಮಿತಿ ತ್ವರಸೇ ಸಖೇ||

ಸಖೇ! ಸಮಯಕ್ಕೆ ಮೊದಲೇ ನೀನು ಈ ಬಲೆಯಿಂದ ವಿಮುಕ್ತನಾದರೆ ನನಗೆ ನಿನ್ನಿಂದಲೇ ಭಯವು ಉತ್ಪನ್ನವಾಗಬಹುದು. ಆದುದರಿಂದ ಇನ್ನೂ ಸ್ವಲ್ಪ ಹೊತ್ತು ಪ್ರತೀಕ್ಷೆಯಲ್ಲಿರು. ಏಕೆ ನೀನು ಈ ರೀತಿ ಅವಸರಮಾಡುತ್ತಿರುವೆ?

12136091a ಯಾವತ್ಪಶ್ಯಾಮಿ ಚಂಡಾಲಮಾಯಾಂತಂ ಶಸ್ತ್ರಪಾಣಿನಮ್|
12136091c ತತಶ್ಚೇತ್ಸ್ಯಾಮಿ ತೇ ಪಾಶಂ ಪ್ರಾಪ್ತೇ ಸಾಧಾರಣೇ ಭಯೇ||

ಶಸ್ತ್ರವನ್ನು ಹಿಡಿದು ಚಂಡಾಲನು ಬರುತ್ತಿರುವುದನ್ನು ನೋಡಿದ ಮತ್ತು ನನಗೆ ನಿನ್ನಿಂದ ಭಯವು ಕಡಿಮೆಯಾದ ಕೂಡಲೇ ಶೀಘ್ರವಾಗಿ ನಾನು ಈ ಬಂಧನವನ್ನು ಕಡಿದು ಹಾಕುತ್ತೇನೆ.

12136092a ತಸ್ಮಿನ್ಕಾಲೇ ಪ್ರಮುಕ್ತಸ್ತ್ವಂ ತರುಮೇವಾಧಿರೋಹಸಿ|
12136092c ನ ಹಿ ತೇ ಜೀವಿತಾದನ್ಯತ್ಕಿಂ ಚಿತ್ಕೃತ್ಯಂ ಭವಿಷ್ಯತಿ||

ಬಿಡುಗಡೆ ಹೊಂದಿದ ಕೂಡಲೇ ನೀನು ವೃಕ್ಷವನ್ನೇರುತ್ತೀಯೆ. ನಿನ್ನ ಜೀವದ ರಕ್ಷಣೆಯಲ್ಲದೇ ಆಗ ನಿನಗೆ ಬೇರಾವ ಕಾರ್ಯವನ್ನು ಮಾಡುವುದೂ ಇರುವುದಿಲ್ಲ.

12136093a ತತೋ ಭವತ್ಯತಿಕ್ರಾಂತೇ ತ್ರಸ್ತೇ ಭೀತೇ ಚ ಲೋಮಶ|
12136093c ಅಹಂ ಬಿಲಂ ಪ್ರವೇಕ್ಷ್ಯಾಮಿ ಭವಾನ್ ಶಾಖಾಂ ಗಮಿಷ್ಯತಿ||

ಲೋಮಶ! ಭಯದಿಂದ ನಡುಗಿ ಆಕ್ರಾಂತನಾಗಿ ನೀನು ಓಡುವಾಗ
ನಾನು ಬಿಲದಲ್ಲಿ ನುಸುಳಿಕೊಳ್ಳುತ್ತೇನೆ ಮತ್ತು ನೀನು ಮರದ
ರೆಂಬೆಗಳನ್ನೇರಿ ಕುಳಿತುಕೋ!"

12136094a ಏವಮುಕ್ತಸ್ತು ಮಾರ್ಜಾರೋ ಮೂಷಕೇಣಾತ್ಮನೋ ಹಿತಮ್|
12136094c ವಚನಂ ವಾಕ್ಯತತ್ತ್ವಜ್ಞೋ ಜೀವಿತಾರ್ಥೀ ಮಹಾಮತಿಃ||

ಇಲಿಯು ಹೀಗೆ ಹೇಳಲು ವಾಕ್ಯತತ್ತ್ವಜ್ಞ ಮತ್ತು ಜೀವಿತಾರ್ಥೀ
ಮಹಾಮತಿ ಬೆಕ್ಕು ತನಗೆ ಹಿತಕರವಾದ ಮಾತನ್ನಾಡತೊಡಗಿತು.

12136095a ಅಥಾತ್ಮಕೃತ್ಯತ್ವರಿತಃ ಸಮ್ಯಕ್ ಪ್ರಶ್ರಯಮಾಚರನ್|
12136095c ಉವಾಚ ಲೋಮಶೋ ವಾಕ್ಯಂ ಮೂಷಕಂ ಚಿರಕಾರಿಣಮ್||

ತನ್ನ ಕೆಲಸವು ಬೇಗನೇ ಆಗಬೇಕೆಂದಿದ್ದ ಲೋಮಶನು ಒಳ್ಳೆಯ
ವಿನಯತೆಯನ್ನು ಬಳಸಿ ತಡಮಾಡುತ್ತಿದ್ದ ಇಲಿಗೆ ಈ ಮಾತನ್ನಾಡಿದನು:

12136096a ನ ಹ್ಯೇವಂ ಮಿತ್ರಕಾರ್ಯಾಣಿ ಪ್ರೀತ್ಯಾ ಕುರ್ವಂತಿ ಸಾಧವಃ|
12136096c ಯಥಾ ತ್ವಂ ಮೋಕ್ಷಿತಃ ಕೃಚ್ಛ್ರಾತ್ತ್ವರಮಾಣೇನ ವೈ ಮಯಾ||

"ಸಾಧು ಜನರು ಮಿತ್ರರ ಕಾರ್ಯಗಳನ್ನು ಅತ್ಯಂತ ಪ್ರೀತಿ-
ಪ್ರಸನ್ನತೆಗಳಿಂದ ಮಾಡುತ್ತಾರೆ. ನಿನ್ನ ಹಾಗೆ ಮಾಡುವುದಿಲ್ಲ.
ನಾನಾದರೋ ತ್ವರೆಮಾಡಿ ನಿನ್ನನ್ನು ಸಂಕಟದಿಂದ ಉಳಿಸಿದ್ದೆ.

12136097a ತಥ್ಯೇವ ತ್ವರಮಾಣೇನ ತ್ವಯಾ ಕಾರ್ಯಂ ಹಿತಂ ಮಮ|
12136097c ಯತ್ನಂ ಕುರು ಮಹಾಪ್ರಾಜ್ಞ ಯಥಾ ಸ್ವಸ್ತ್ಯಾವಯೋರ್ಭವೇತ್||

ಹಾಗೆಯೇ ನನಗೆ ಹಿತವಾದ ಕಾರ್ಯದಲ್ಲಿಯೂ ನೀನು ತ್ವರೆಮಾಡಬೇಕು. ಮಹಾಪ್ರಾಜ್ಞ! ನಾವಿಬ್ಬರೂ ಸುರಕ್ಷಿತರಾಗಿರುವಂತೆ ಪ್ರಯತ್ನಮಾಡು.

12136098a ಅಥ ವಾ ಪೂರ್ವವೈರಂ ತ್ವಂ ಸ್ಮರನ್ಕಾಲಂ ವಿಕರ್ಷಸಿ|
12136098c ಪಶ್ಯ ದುಷ್ಕೃತಕರ್ಮತ್ವಂ ವ್ಯಕ್ತಮಾಯುಃಕ್ಷಯೋ ಮಮ[584]||

ಅಥವಾ ನಮ್ಮ ಪೂರ್ವವೈರವನ್ನು ಸ್ಮರಿಸಿಕೊಂಡು ನೀನು ಸಮಯ ಕಳೆಯುತ್ತಿರುವೆಯಾದರೆ ನಿನ್ನ ಈ ದುಷ್ಕರ್ಮದಿಂದ ನನ್ನ ಆಯಸ್ಸು ಕ್ಷೀಣವಾಗುತ್ತಿರುವುದನ್ನು ನೋಡು.

12136099a ಯಚ್ಚ ಕಿಂ ಚಿನ್ಮಯಾಜ್ಞಾನಾತ್ಪುರಸ್ತಾದ್ವಿಪ್ರಿಯಂ ಕೃತಮ್|
12136099c ನ ತನ್ಮನಸಿ ಕರ್ತವ್ಯಂ ಕ್ಷಮಯೇ ತ್ವಾಂ ಪ್ರಸೀದ ಮೇ||

ಈ ಮೊದಲು ಅಜ್ಞಾನದಿಂದ ನಿನಗೆ ಅಪ್ರಿಯವಾದುದನ್ನು ಏನಾದರೂ ನಾನು ಮಾಡಿದರೆ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬಾರದು. ಅದನ್ನು ಕ್ಷಮಿಸಿ ನನ್ನ ಮೇಲೆ ಕರುಣೆತೋರು."

12136100a ತಮೇವಂವಾದಿನಂ ಪ್ರಾಜ್ಞಃ ಶಾಸ್ತ್ರವಿದ್ಬುದ್ಧಿಸಂಮತಃ|
12136100c ಉವಾಚೇದಂ ವಚಃ ಶ್ರೇಷ್ಠಂ ಮಾರ್ಜಾರಂ ಮೂಷಕಸ್ತದಾ||

ಈ ರೀತಿ ಮಾತನಾಡುತ್ತಿದ್ದ ಬೆಕ್ಕಿಗೆ ಪ್ರಾಜ್ಞ ಶಾಸ್ತ್ರವಿದು ಬುದ್ಧಿಸಂಮತ ಇಲಿಯು ಈ ಶ್ರೇಷ್ಠ ಮಾತನ್ನಾಡಿತು:

12136101a ಶ್ರುತಂ ಮೇ ತವ ಮಾರ್ಜಾರ ಸ್ವಮರ್ಥಂ ಪರಿಗೃಹ್ಣತಃ|
12136101c ಮಮಾಪಿ ತ್ವಂ ವಿಜಾನೀಹಿ ಸ್ವಮರ್ಥಂ ಪರಿಗೃಹ್ಣತಃ||

---

[584] ವ್ಯಕ್ತಮಾಯುಃಕ್ಷಯಂ ತವ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

“ಬೆಕ್ಕೇ! ನಿನ್ನ ಸ್ವಾರ್ಥಸಿದ್ಧಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಏನೆಲ್ಲ ನೀನು ಹೇಳಿದೆಯೋ ಅದನ್ನು ನಾನು ಕೇಳಿದೆ ಮತ್ತು ನಾನೂ ಕೂಡ ನನ್ನ ಒಳಿತನ್ನು ಎದುರಿಟ್ಟುಕೊಂಡು ಏನೆಲ್ಲ ಹೇಳಿದೆನೋ ಅದನ್ನು ನೀನೂ ಕೂಡ ಚೆನ್ನಾಗಿ ಅರ್ಥಮಾಡಿಕೊಂಡಿರುವೆ.

12136102a ಯನ್ಮಿತ್ರಂ ಭೀತವತ್ಸಾಧ್ಯಂ ಯನ್ಮಿತ್ರಂ ಭಯಸಂಹಿತಮ್|
12136102c ಸುರಕ್ಷಿತಂ ತತಃ ಕಾರ್ಯಂ ಪಾಣಿಃ ಸರ್ಪಮುಖಾದಿವ||

ಭಯಗೊಂಡವನೊಂದಿಗೆ ಮಿತ್ರನಾದವನು ಮತ್ತು ಸ್ವಯಂ ಭಯಭೀತನಾಗಿ ಅವನ ಮಿತ್ರನಾಗಿರುವವನು – ಇವರಿಬ್ಬರ ರಕ್ಷಣೆಯೂ ಆಗಬೇಕು. ಮತ್ತು ಹಾವಿನ ಹೆಡೆಯ ಮುಂದೆ ಕೈಯಾಡಿಸಿ ಅದನ್ನು ಆಟವಾಡಿಸುವಂತೆ ಇಬ್ಬರ ಕಾರ್ಯವನ್ನೂ ಸುರಕ್ಷಿತವಾಗಿದ್ದುಕೊಂಡೇ ಮಾಡಬೇಕು.

12136103a ಕೃತ್ವಾ ಬಲವತಾ ಸಂಧಿಮಾತ್ಮಾನಂ ಯೋ ನ ರಕ್ಷತಿ|
12136103c ಅಪಥ್ಯಮಿವ ತದ್ಭುಕ್ತಂ ತಸ್ಯಾನರ್ಥಾಯ ಕಲ್ಪತೇ||

ಬಲಶಾಲಿಯೊಂದಿಗೆ ಸಂಧಿಮಾಡಿಕೊಂಡು ಯಾರು ತನ್ನ ರಕ್ಷಣೆಯ ಕುರಿತು ಯೋಚಿಸುವುದಿಲ್ಲವೋ ಅವನ ಆ ಸಂಬಂಧವು ಅಪಥ್ಯ ಆಹಾರವನ್ನು ಸೇವಿಸಿದಂತೆ ಹಿತಕರವಾಗಿರುವುದಿಲ್ಲ.

12136104a ನ ಕಶ್ಚಿತ್ಕಸ್ಯ ಚಿನ್ಮಿತ್ರಂ ನ ಕಶ್ಚಿತ್ಕಸ್ಯ ಚಿತ್ಸುಹೃತ್[585]|

---

[585] ನ ಕಶ್ಚಿತ್ಕಸ್ಯಚಿನ್ಮಿತ್ರಂ ನ ಕಶ್ಚಿತ್ಕಸ್ಯಚಿದ್ರಿಪುಃ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[586]12136104c ಅರ್ಥೈರರ್ಥಾ ನಿಬಧ್ಯಂತೇ ಗಜೈರ್ವನಗಜಾ ಇವ||

ಯಾರೂ ಯಾರ ಮಿತ್ರನೂ ಅಲ್ಲ ಮತ್ತು ಯಾರೂ ಯಾರ ಅಸುಹೃದಯನೂ ಅಲ್ಲ. ಸಾಕಿದ ಆನೆಯನ್ನು ಬಳಸಿ ಕಾಡಾನೆಯನ್ನು ಬಂಧಿಸುವಂತೆ ಅರ್ಥದಿಂದಲೇ ಅರ್ಥವನ್ನು ಸಾಧಿಸುತ್ತಾರೆ.

12136105a ನ ಹಿ ಕಶ್ಚಿತ್ಕೃತೇ ಕಾರ್ಯೇ ಕರ್ತಾರಂ ಸಮವೇಕ್ಷತೇ|
12136105c ತಸ್ಮಾತ್ಸರ್ವಾಣಿ ಕಾರ್ಯಾಣಿ ಸಾವಶೇಷಾಣಿ ಕಾರಯೇತ್||

ಕಾರ್ಯವು ಮುಗಿದ ಮೇಲೆ ಆ ಕಾರ್ಯವನ್ನು ಮಾಡಿದವನನ್ನು ಯಾರೂ ತಿರುಗಿ ನೋಡುವುದಿಲ್ಲ. ಆದುದರಿಂದ ಎಲ್ಲ ಕಾರ್ಯಗಳನ್ನೂ ಸ್ವಲ್ಪ ಉಳಿಸಿಯೇ ಮಾಡಬೇಕು.

12136106a ತಸ್ಮಿನ್ಕಾಲೇಽಪಿ ಚ ಭವಾನ್ದಿವಾಕೀರ್ತಿಭಯಾನ್ವಿತಃ|
12136106c ಮಮ ನ ಗ್ರಹಣೇ ಶಕ್ತಃ ಪಲಾಯನಪರಾಯಣಃ||

ಚಂಡಾಲನು ಬಂದ ಸಮಯದಲ್ಲಿ ನೀನು ಅವನ ಭಯದಿಂದ ಪೀಡಿತನಾಗಿ ಓಡಿ ಹೋಗುತ್ತೀಯೆ. ಆಗ ನೀನು ನನ್ನನ್ನು ಹಿಡಿಯಲು ಶಕ್ಯನಾಗುವುದಿಲ್ಲ.

12136107a ಚಿನ್ನಂ ತು ತಂತುಬಾಹುಲ್ಯಂ ತಂತುರೇಕೋಽವಶೇಷಿತಃ|
12136107c ಚೇತ್ಸ್ಯಾಮ್ಯಹಂ ತದಪ್ಯಾಶು ನಿರ್ವೃತೋ ಭವ ಲೋಮಶ||

ನಾನು ಅನೇಕ ತಂತುಗಳನ್ನು ಕಡಿದುಹಾಕಿದ್ದೇನೆ. ಒಂದೇ ಒಂದು ತಂತುವನ್ನು ಬಿಟ್ಟಿದ್ದೇನೆ. ಅದನ್ನೂ ಕೂಡ ಶೀಘ್ರದಲ್ಲಿಯೇ

---

[586] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಶ್ಲೋಕಾರ್ಧವಿದೆ: ಅರ್ಥತಸ್ತು ನಿಬದ್ಧ್ಯಂತೇ ಮಿತ್ರಾಣಿ ರಿಪವಸ್ತಥಾ|

ತುಂಡರಿಸುತ್ತೇನೆ. ಆದುದರಿಂದ ಲೋಮಶ! ನೀನು ಶಾಂತಿಯಿಂದಿರು. ಗಾಬರಿಪಡಬೇಡ.”

12136108a ತಯೋಃ ಸಂವದತೋರೇವಂ ತಥ್ಯೈವಾಪನ್ನಯೋರ್ದ್ವಯೋಃ|
12136108c ಕ್ಷಯಂ ಜಗಾಮ ಸಾ ರಾತ್ರಿರ್ಲೋಮಶಂ ಚಾವಿಶದ್ಭಯಮ್||

ಹೀಗೆ ಆಪತ್ತಿನಲ್ಲಿ ಸಿಲುಕಿದ್ದ ಅವರಿಬ್ಬರ ನಡುವೆ ಸಂವಾದವು ನಡೆಯುತ್ತಿರಲು ಆ ರಾತ್ರಿಯು ಕಳೆಯಿತು. ಆಗ ಲೋಮಶನನ್ನು ಭಯವು ಆವರಿಸಿತು.

12136109a ತತಃ ಪ್ರಭಾತಸಮಯೇ ವಿಕೃತಃ ಕೃಷ್ಣಪಿಂಗಲಃ|
12136109c ಸ್ಥೂಲಶ್ಚಿಗ್ವಿಕಟೋ[587] ರೂಕ್ಷಃ ಶ್ವಚಕ್ರಪರಿವಾರಿತಃ||
12136110a ಶಂಕುಕರ್ಣೋ ಮಹಾವಕ್ತ್ರಃ ಪಲಿತೋ[588] ಘೋರದರ್ಶನಃ|
12136110c ಪರಿಘೋ ನಾಮ ಚಂಡಾಲಃ ಶಸ್ತ್ರಪಾಣಿರದೃಶ್ಯತ||

ಅನಂತರ ಪ್ರಭಾತ ಸಮಯದಲ್ಲಿ ಪರಿಘ ಎಂಬ ಹೆಸರಿನ ಚಂಡಾಲನು ಶಸ್ತ್ರಗಳನ್ನು ಹಿಡಿದು ಕಾಣಿಸಿಕೊಂಡನು. ಅವನು ವಿಕಾರರೂಪಿಯೂ, ಕಪ್ಪು-ಹಳದೀ ವರ್ಣದವನೂ, ವಿಶಾಲ ನಿತಂಬವುಳ್ಳವನೂ, ಬೋಳುಮಂಡೆಯವನೂ, ಕ್ರೂರಿಯೂ ಆಗಿದ್ದನು. ನಾಯಿಗಳು ಅವನನ್ನು ಸುತ್ತುವರೆದು ಬರುತ್ತಿದ್ದವು. ಗೂಟದಂತಹ ಕಿವಿಗಳಿದ್ದ, ದೊಡ್ಡ ತಲೆಯ, ಬಿಳೀ ಮಂಡೆಯ ಅವನು ಘೋರನಾಗಿ ಕಾಣುತ್ತಿದ್ದನು.

12136111a ತಂ ದೃಷ್ಟ್ವಾ ಯಮದೂತಾಭಂ ಮಾರ್ಜಾರಸ್ತ್ರಸ್ತಚೇತನಃ|

---

587 ಸ್ಥೂಲಶ್ಚಿಗ್ ವಿಕೃತೋ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

588 ಮಲಿನೋ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136111c ಉವಾಚ ಪಲಿತಂ ಭೀತಃ ಕಿಮಿದಾನೀಂ ಕರಿಷ್ಯಸಿ||

ಯಮದೂತನಂತಿದ್ದ ಅವನನ್ನು ನೋಡಿ ಬೆಕ್ಕಿನ ಚಿತ್ತವು ಭಯದಿಂದ ವ್ಯಾಕುಲಗೊಂಡಿತು. ಭೀತನಾಗಿ ಅದು ಪಲಿತನಿಗೆ ಹೇಳಿದನು: "ಈಗ ಏನು ಮಾಡುವೆ?"

12136112a ಅಥ ಚಾಪಿ ಸುಸಂತ್ರಸ್ತೌ ತಂ ದೃಷ್ಟ್ವಾ ಘೋರದರ್ಶನಮ್[589]|
12136112c ಕ್ಷಣೇನ ನಕುಲೋಲೂಕೌ ನೈರಾಶ್ಯಂ ಜಗ್ಮತುಸ್ತದಾ||

ಘೋರವಾಗಿ ಕಾಣುತ್ತಿದ್ದ ಅವನನ್ನು ನೋಡಿ ಹೆದರಿದ ಮುಂಗುಸಿ-ಗೂಬೆಗಳೂ ಕೂಡ ಕ್ಷಣದಲ್ಲಿಯೇ ನಿರಾಶರಾಗಿ ಹೊರಟುಹೋದವು.

12136113a ಬಲಿನೌ ಮತಿಮಂತೌ ಚ ಸಂಘಾತಂ ಚಾಪ್ಯುಪಾಗತೌ|
12136113c ಅಶಕ್ಯೌ ಸುನಯಾತ್ತಸ್ಮಾತ್ಸಂಪ್ರಧರ್ಷಯಿತುಂ ಬಲಾತ್||

ಬಲಶಾಲಿಗಳೂ ಮತಿಮಂತರೂ ಆಗಿದ್ದ ಆ ಮುಂಗುಸಿ-ಗೂಬೆಗಳೆರಡೂ ಒಟ್ಟಾಗಿ ಇಲಿಯನ್ನು ಆಕ್ರಮಣಿಸಲು ಅಲ್ಲಿಗೆ ಬಂದಿದ್ದವು. ಆದರೆ ಇಲಿಯ ಉತ್ತಮ ಉಪಾಯದಿಂದ ಬಲವನ್ನುಪಯೋಗಿಸಿ ಅದನ್ನು ಆಕ್ರಮಣಿಸಲು ಅವರಿಗೆ ಶಕ್ಯವಾಗಲಿಲ್ಲ.

12136114a ಕಾರ್ಯಾರ್ಥಂ ಕೃತಸಂಧೀ ತೌ ದೃಷ್ಟ್ವಾ ಮಾರ್ಜಾರಮೂಷಕೌ|
12136114c ಉಲೂಕನಕುಲೌ ತೂರ್ಣಂ ಜಗ್ಮತುಃ ಸ್ವಂ ಸ್ವಮಾಲಯಮ್||

ಕಾರ್ಯಸಿದ್ಧಿಗಾಗಿ ಬೆಕ್ಕು-ಇಲಿಗಳೆರಡೂ ಸಂಧಿಯನ್ನು ಮಾಡಿಕೊಂಡಿದ್ದುದನ್ನು ನೋಡಿ ಗೂಬೆ ಮತ್ತು ಮುಂಗುಸಿಗಳು

589 ಘೋರಸಂಕುಲಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ತಕ್ಷಣವೇ ತಮ್ಮ ತಮ್ಮ ಮನೆಗಳಿಗೆ ತೆರಳಿದವು.

12136115a ತತಶ್ಚಿಚ್ಚೀದ ತಂ ತಂತುಂ ಮಾರ್ಜಾರಸ್ಯ ಸ ಮೂಷಕಃ|
12136115c ವಿಪ್ರಮುಕ್ತೋಽಥ ಮಾರ್ಜಾರಸ್ತಮೇವಾಭ್ಯಪತದ್ರುಮಮ್||

ಆಗ ಇಲಿಯು ಬೆಕ್ಕಿನ ಬಲೆಯ ತಂತುವನ್ನು ತುಂಡುಮಾಡಿತು.
ವಿಮುಕ್ತನಾದ ಬೆಕ್ಕು ಕೂಡಲೇ ಓಡಿಹೋಗಿ ಮರವನ್ನೇರಿತು.

12136116a ಸ ಚ ತಸ್ಮಾದ್ಭಯಾನ್ಮುಕ್ತೋ ಮುಕ್ತೋ ಘೋರೇಣ ಶತ್ರುಣಾ|
12136116c ಬಿಲಂ ವಿವೇಶ ಪಲಿತಃ ಶಾಖಾಂ ಭೇಜೇ[590] ಚ ಲೋಮಶಃ||

ಘೋರ ಶತ್ರುವಾದ ಬೆಕ್ಕಿನ ಭಯದಿಂದಲೂ ಮುಕ್ತನಾದ ಪಲಿತನು
ಬಿಲವನ್ನು ಹೊಕ್ಕಿತು. ಲೋಮಶನು ರೆಂಬೆಯನ್ನೇರಿದನು.

12136117a ಉನ್ಮಾಥಮಪ್ಯಥಾದಾಯ ಚಂಡಾಲೋ ವೀಕ್ಷ್ಯ ಸರ್ವಶಃ|
12136117c ವಿಹತಾಶಃ ಕ್ಷಣೇನಾಥ ತಸ್ಮಾದ್ದೇಶಾದಪಾಕ್ರಮತ್|
12136117e ಜಗಾಮ ಚ ಸ್ವಭವನಂ ಚಂಡಾಲೋ ಭರತರ್ಷಭ||

ಭರತರ್ಷಭ! ಚಂಡಾಲನು ಆ ಬಲೆಯನ್ನು ಮೇಲೆ ಕೆಳಗೆ ಮಾಡಿ

590 ಲೇಭೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).



ಎಲ್ಲಕಡೆ ನೋಡಿ, ಹತಾಶನಾಗಿ ಕ್ಷಣದಲ್ಲಿಯೇ ಆ ಪ್ರದೇಶದಿಂದ ಹೊರಟು ಸ್ವಭವನಕ್ಕೆ ತೆರಳಿದನು.

12136118a ತತಸ್ತಸ್ಮಾದ್ಭಯಾನ್ಮುಕ್ತೋ ದುರ್ಲಭಂ ಪ್ರಾಪ್ಯ ಜೀವಿತಮ್|
12136118c ಬಿಲಸ್ಥಂ ಪಾದಪಾಗ್ರಸ್ಥಃ ಪಲಿತಂ ಲೋಮಶೋಽಬ್ರವೀತ್||

ಅನಂತರ ಆ ಭಯದಿಂದ ಮುಕ್ತನಾದ ಮತ್ತು ದುರ್ಲಭವಾದ ಜೀವಿತವನ್ನು ಪಡೆದುಕೊಂಡ ಲೋಮಶನು ಮರದ ಮೇಲಿನಿಂದಲೇ ಬಿಲದಲ್ಲಿದ್ದ ಇಲಿಗೆ ಹೇಳಿತು:

12136119a ಅಕೃತ್ವಾ ಸಂವಿದಂ ಕಾಂ ಚಿತ್ಸಹಸಾಹಮುಪಪ್ಲುತಃ|
12136119c ಕೃತಜ್ಞಂ ಕೃತಕಲ್ಯಾಣಂ ಕಚ್ಚಿನ್ಮಾಂ ನಾಭಿಶಂಕಸೇ||

“ನನ್ನೊಡನೆ ಮಾತನಾಡದೆಯೇ ನೀನು ಏಕೆ ಒಮ್ಮಿಂದೊಮ್ಮೆಲೇ ಹಾರಿ ಬಿಲವನ್ನು ಸೇರಿಕೊಂಡುಬಿಟ್ಟೆ? ನಾನಾದರೋ ನಿನಗೆ ಅತ್ಯಂತ ಕೃತಜ್ಞನಾಗಿದ್ದೇನೆ. ನಾನೂ ಕೂಡ ನಿನಗೆ ಕಲ್ಯಾಣವಾದುದನ್ನೇ ಮಾಡಿದ್ದೇನೆ. ನಿನಗೆ ನನ್ನ ಮೇಲೆ ಸ್ವಲ್ಪವೂ ಶಂಕೆಯಿಲ್ಲ ತಾನೇ?

12136120a ಗತ್ವಾ ಚ ಮಮ ವಿಶ್ವಾಸಂ ದತ್ತ್ವಾ ಚ ಮಮ ಜೀವಿತಮ್|
12136120c ಮಿತ್ರೋಪಭೋಗಸಮಯೇ ಕಿಂ ತ್ವಂ ನೈವೋಪಸರ್ಪಸಿ||

ಆಪತ್ತಿನ ಸಮಯದಲ್ಲಿ ನೀನು ನನ್ನ ಮೇಲೆ ವಿಶ್ವಾಸವನ್ನಿಟ್ಟು ನನಗೆ ಜೀವಿತವನ್ನು ಕೊಟ್ಟೆ. ಮಿತ್ರತ್ವದ ಸುಖವನ್ನು ಪಡೆಯುವ ಈ ಸಮಯದಲ್ಲಿ ನೀನು ನನ್ನ ಬಳಿ ಏಕೆ ಬರುತ್ತಿಲ್ಲ?

12136121a ಕೃತ್ವಾ ಹಿ ಪೂರ್ವಂ ಮಿತ್ರಾಣಿ ಯಃ ಪಶ್ಚಾನ್ನಾನುತಿಷ್ಠತಿ|
12136121c ನ ಸ ಮಿತ್ರಾಣಿ ಲಭತೇ ಕೃಚ್ಛ್ರಾಸ್ವಾಪತ್ಸು ದುರ್ಮತಿಃ||

ಮೊದಲು ಮಿತ್ರನಾಗಿ ನಂತರ ಬದಲುವ ದುರ್ಮತಿಗೆ ಆಪತ್ತಿನ
ಸಮಯದಲ್ಲಿ ಅವನಿಗೆ ಆ ಮಿತ್ರರು ದೊರೆಯುವುದಿಲ್ಲ.

12136122a ತತ್ಕೃತೋಽಹಂ[591] ತ್ವಯಾ ಮಿತ್ರಂ ಸಾಮರ್ಥ್ಯಾದಾತ್ಮನಃ ಸಖೇ|
12136122c ಸ ಮಾಂ ಮಿತ್ರತ್ವಮಾಪನ್ನಮುಪಭೋಕ್ತುಂ ತ್ವಮರ್ಹಸಿ||

ಸಖಾ! ನೀನು ನಿನ್ನ ಶಕ್ತ್ಯಾನುಸಾರ ನನಗೆ ಉಪಕಾರವನ್ನು ಮಾಡಿದೆ
ಮತ್ತು ನಾನು ನಿನ್ನ ಮಿತ್ರನಾಗಿಬಿಟ್ಟಿದ್ದೇನೆ. ಆದುದರಿಂದ ನನ್ನೊಡನೆ
ಇದ್ದುಕೊಂಡು ನೀನು ಈ ಮೈತ್ರಿಯ ಸುಖವನ್ನು ಅನುಭವಿಸಬೇಕು.

12136123a ಯಾನಿ ಮೇ ಸಂತಿ ಮಿತ್ರಾಣಿ ಯೇ ಚ ಮೇ ಸಂತಿ ಬಾಂಧವಾಃ|
12136123c ಸರ್ವೇ ತ್ವಾಂ ಪೂಜಯಿಷ್ಯಂತಿ ಶಿಷ್ಯಾ ಗುರುಮಿವ ಪ್ರಿಯಮ್||

ನನಗಿರುವ ಎಲ್ಲ ಮಿತ್ರರೂ ಮತ್ತು ಬಾಂಧವರೆಲ್ಲರೂ ನಿನ್ನನ್ನು ಪ್ರಿಯ
ಗುರುವನ್ನು ಶಿಷ್ಯರಂತೆ ಪೂಜಿಸುತ್ತಾರೆ.

12136124a ಅಹಂ ಚ ಪೂಜಯಿಷ್ಯೇ ತ್ವಾಂ ಸಮಿತ್ರಗಣಬಾಂಧವಮ್|
12136124c ಜೀವಿತಸ್ಯ ಪ್ರದಾತಾರಂ ಕೃತಜ್ಞಃ ಕೋ ನ ಪೂಜಯೇತ್||

ನಾನೂ ಕೂಡ ಮಿತ್ರ-ಬಾಂಧವ ಗಣಗಳೊಂದಿಗೆ ನಿನ್ನನ್ನು
ಪೂಜಿಸುತ್ತೇನೆ. ಕೃತಜ್ಞನಾದ ಯಾರು ತಾನೇ ಜೀವಿತವನ್ನು
ನೀಡಿದವನನ್ನು ಪೂಜಿಸುವುದಿಲ್ಲ?

12136125a ಈಶ್ವರೋ ಮೇ ಭವಾನಸ್ತು ಶರೀರಸ್ಯ ಗೃಹಸ್ಯ ಚ|
12136125c ಅರ್ಥಾನಾಂ ಚೈವ ಸರ್ವೇಷಾಮನುಶಾಸ್ತಾ ಚ ಮೇ ಭವ||

---

[591] ಸತ್ಕೃತೋಽಹಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ನೀನು ನನ್ನ ಶರೀರದ, ಗೃಹದ, ಸ್ವತ್ತುಗಳ ಮತ್ತು ಎಲ್ಲವುಗಳ ಈಶ್ವರನಾಗು. ನೀನು ನನ್ನ ಅನುಶಾಸಕನೂ ಆಗು.

12136126a ಅಮಾತ್ಯೋ ಮೇ ಭವ ಪ್ರಾಜ್ಞ ಪಿತೇವ ಹಿ ಪ್ರಶಾಧಿ ಮಾಮ್|
12136126c ನ ತೇಽಸ್ತಿ ಭಯಮಸ್ಮತ್ತೋ ಜೀವಿತೇನಾತ್ಮನಃ ಶಪೇ||

ಪ್ರಾಜ್ಞ! ನೀನು ನನ್ನ ಅಮಾತ್ಯನಾಗು. ತಂದೆಯಂತೆಯೇ ನೀನು ನನಗೆ ಉಪದೇಶವನ್ನು ನೀಡು. ನಾನು ನನ್ನ ಜೀವದ ಮೇಲೆ ಆಣೆಯನ್ನಿಟ್ಟು ಹೇಳುತ್ತಿದ್ದೇನೆ – ನಿನಗೆ ನಮ್ಮಿಂದ ಯಾವ ರೀತಿಯ ಭಯವೂ ಇಲ್ಲ.

12136127a ಬುದ್ಧ್ಯಾ ತ್ವಮುಶನಾಃ ಸಾಕ್ಷಾದ್ಬಲೇ ತ್ವಧಿಕೃತಾ ವಯಮ್|
12136127c ತ್ವನ್ಮಂತ್ರಬಲಯುಕ್ತೋ ಹಿ ವಿಂದೇತ ಜಯಮೇವ ಹ[592]||

ಬುದ್ಧಿಯಲ್ಲಿ ನೀನು ಸಾಕ್ಷಾತ್ ಶುಕ್ರಾಚಾರ್ಯನಂತಿದ್ದೀಯೆ. ಬಲದಲ್ಲಿ ನೀನು ನನ್ನನ್ನೂ ಮೀರಿಸಿದ್ದೀಯೆ. ನಿನ್ನಲ್ಲಿ ಮಂತ್ರಿತ್ವದ ಬಲವಿದೆ. ನಿನ್ನಲ್ಲಿ ಜಯವೂ ಇದೆ.”

12136128a ಏವಮುಕ್ತಃ ಪರಂ ಸಾಂತ್ವಂ ಮಾರ್ಜಾರೇಣ ಸ ಮೂಷಕಃ|
12136128c ಉವಾಚ ಪರಮಾರ್ಥಜ್ಞಃ ಶ್ಲಕ್ಷ್ಣಮಾತ್ಮಹಿತಂ ವಚಃ||

ಈ ರೀತಿ ಬೆಕ್ಕು ಪರಮ ಸಾಂತ್ವನದ ಮಾತನ್ನಾಡಲು ಪರಮಾರ್ಥಜ್ಞ ಇಲಿಯು ಮಧುರವಾಣಿಯಲ್ಲಿ ತನಗೆ ಹಿತವಾದ ಈ ಮಾತನ್ನಾಡಿತು:

12136129a ಯದ್ಭವಾನಹ ತತ್ಸರ್ವಂ ಮಯಾ ತೇ ಲೋಮಶ ಶ್ರುತಮ್|
12136129c ಮಮಾಪಿ ತಾವದ್ ಬ್ರುವತಃ ಶೃಣು ಯತ್ಪ್ರತಿಭಾತಿ ಮಾಮ್||

[592] ದತ್ತಾ ಜೀವಿತಮದ್ಯ ಮೇ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

“ಲೋಮಶ! ನೀನು ಹೇಳಿದುದೆಲ್ಲವನ್ನೂ ನಾನು ಕೇಳಿದೆ. ಈಗ ನನ್ನ ಬುದ್ಧಿಗೆ ಏನು ಹೊಳೆಯುತ್ತಿದೆಯೋ ಅದನ್ನು ಹೇಳುತ್ತೇನೆ. ಕೇಳು.

12136130a ವೇದಿತವ್ಯಾನಿ ಮಿತ್ರಾಣಿ ಬೋದ್ಧವ್ಯಾಶ್ಚಾಪಿ ಶತ್ರವಃ|
12136130c ಏತತ್ಸೂಕ್ಷ್ಮಂ ಲೋಕೇಽಸ್ಮಿನ್ ದೃಶ್ಯತೇ ಪ್ರಾಜ್ಞಸಂಮತಮ್‌॥

ಮಿತ್ರರನ್ನು ಅರ್ಥಮಾಡಿಕೊಳ್ಳಬೇಕು. ಮತ್ತು ಶತ್ರುಗಳನ್ನೂ ತಿಳಿದುಕೊಲ್ಲಬೇಕು. ಈ ಲೋಕದಲ್ಲಿ ಇದು ಸೂಕ್ಷ್ಮವಾದುದು ಎಂದು ಪ್ರಾಜ್ಞರ ಅಭಿಪ್ರಾಯವಿದೆ.

12136131a ಶತ್ರುರೂಪಾಶ್ಚ ಸುಹೃದೋ ಮಿತ್ರರೂಪಾಶ್ಚ ಶತ್ರವಃ|
12136131c ಸಾಂತ್ವಿತಾಸ್ತೇ[593] ನ ಬುಧ್ಯಂತೇ ರಾಗಲೋಭವಶಂ ಗತಾಃ‌॥

ಮಿತ್ರರು ಶತ್ರುಗಳಾಗಬಹುದು ಮತ್ತು ಶತ್ರುಗಳು ಮಿತ್ರರಾಗಬಹುದು. ಆದರೆ ಶಾಂತಿಯ ಸಮಯದಲ್ಲಿ ರಾಗಲೋಭವಶರಾದ ಅವರನ್ನು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ.

12136132a ನಾಸ್ತಿ ಜಾತ್ಯಾ ರಿಮುರ್ನಾಮ ಮಿತ್ರಂ ನಾಮ ನ ವಿದ್ಯತೇ|
12136132c ಸಾಮರ್ಥ್ಯಯೋಗಾಜ್ಜಾಯಂತೇ ಮಿತ್ರಾಣಿ ರಿಪವಸ್ತಥಾ‌॥

ಹುಟ್ಟಿನಿಂದ ಯಾರೂ ಶತ್ರುವೆಂದಾಗಲೀ ಅಥವಾ ಮಿತ್ರನೆಂದಾಗಲೀ ಇರುವುದಿಲ್ಲ. ಸಾಮರ್ಥ್ಯಯೋಗದಿಂದ ಮಿತ್ರರಾಗುತ್ತಾರೆ ಮತ್ತು ಶತ್ರುಗಳೂ ಆಗುತ್ತಾರೆ.

12136133a ಯೋ ಯಸ್ಮಿನ್ಜೀವತಿ ಸ್ವಾರ್ಥಂ ಪಶ್ಯೇತ್ತಾವತ್ಸ ಜೀವತಿ[594]|

---

593 ಸಂಧಿತಾಸ್ತೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

594 ಪಶ್ಯೇತ್ ಪೀಡಾಂ ನ ಜೀವತಿ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136133c ಸ ತಸ್ಯ ತಾವನ್ಮಿತ್ರಂ ಸ್ಯಾದ್ಯಾವನ್ನ ಸ್ಯಾದ್ವಿಪರ್ಯಯಃ||

ಯಾರು ಮತ್ತೊಬ್ಬನು ಜೀವಿಸಿರುವವರೆಗೆ ತನ್ನ ಸ್ವಾರ್ಥವನ್ನು ನೋಡಿಕೊಂಡು ಜೀವಿಸುತ್ತಾನೋ ಅವನು ಅವನ ಮಿತ್ರನಾಗಿರುತ್ತಾನೆ. ಅದು ವ್ಯತ್ಯಾಸವಾದಕೂಡಲೇ ಆ ಮೈತ್ರಿಯು ಅಳಿದುಹೋಗುತ್ತದೆ.

12136134a ನಾಸ್ತಿ ಮೈತ್ರೀ ಸ್ಥಿರಾ ನಾಮ ನ ಚ ಧ್ರುವಮಸೌಹೃದಮ್|
12136134c ಅರ್ಥಯುಕ್ತ್ಯಾ ಹಿ ಜಾಯಂತೇ ಮಿತ್ರ್ಯಾಣಿ ರಿಪವಸ್ತಥಾ||

ಮೈತ್ರಿಯು ಸ್ಥಿರವಾದುದಲ್ಲ. ಶತ್ರುತ್ವವೂ ಕೂಡ ಸದಾ ಸ್ಥಿರವಾಗಿರುವಂಥಹುದಲ್ಲ. ಸ್ವಾರ್ಥದ ಸಂಬಂಧದಿಂದ ಮಿತ್ರರು ಮತ್ತು ಶತ್ರುಗಳಾಗುತ್ತಿರುತ್ತಾರೆ.

12136135a ಮಿತ್ರಂ ಚ ಶತ್ರುತಾಮೇತಿ ಕಸ್ಮಿಂಶ್ಚಿತ್ಕಾಲಪರ್ಯಯೇ|
12136135c ಶತ್ರುಶ್ಚ ಮಿತ್ರತಾಮೇತಿ ಸ್ವಾರ್ಥೋ ಹಿ ಬಲವತ್ತರಃ||

ಕಾಲಪರ್ಯಾಯದಿಂದಾಗಿ ಕೆಲವೊಮ್ಮೆ ಮಿತ್ರುವು ಶತ್ರುವಾಗುತ್ತಾನೆ ಮತ್ತು ಶತ್ರುವೂ ಮಿತ್ರನಾಗುತ್ತಾನೆ. ಏಕೆಂದರೆ ಸ್ವಾರ್ಥವು ಬಲವತ್ತರವಾದುದು.

12136136a ಯೋ ವಿಶ್ವಸತಿ ಮಿತ್ರೇಷು ನ ಚಾಶ್ವಸತಿ ಶತ್ರುಷು|
12136136c ಅರ್ಥಯುಕ್ತಿಮವಿಜ್ಞಾಯ ಚಲಿತಂ ತಸ್ಯ ಜೀವಿತಮ್||

ಅರ್ಥಯುಕ್ತಿಯನ್ನು ತಿಳಿಯದೇ ಕೇವಲ ಮಿತ್ರರಲ್ಲಿ ವಿಶ್ವಾಸವನ್ನಿಡುವ ಮತ್ತು ಕೇವಲ ಶತ್ರುಗಳಲ್ಲಿ ವಿಶ್ವಾಸವಿಡದೇ ಇರುವವನ ಜೀವನವು ಚಂಚಲವಾಗಿರುತ್ತದೆ.

12136137a ಅರ್ಥಯುಕ್ತಿಮವಿಜ್ಞಾಯ ಯಃ ಶುಭೇ ಕುರುತೇ ಮತಿಮ್|

12136137c ಮಿತ್ರೇ ವಾ ಯದಿ ವಾ ಶತ್ರೌ ತಸ್ಯಾಪಿ ಚಲಿತಾ ಮತಿಃ[595]||

ಅರ್ಥಯುಕ್ತಿಯನ್ನು ತಿಳಿದುಕೊಳ್ಳದೇ ಯಾರು ಮಿತ್ರರಲ್ಲಿಯಾಗಲೀ ಶತ್ರುವಿನಲ್ಲಿಯಾಗಲೀ ಕೇವಲ ಶುಭ ವಿಚಾರವನ್ನೇ ಇಟ್ಟುಕೊಂಡಿರುತ್ತಾನೋ ಅವನ ಬುದ್ಧಿಯೂ ಚಂಚಲವಾಗಿರುತ್ತದೆ.

12136138a ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇಽಪಿ ನ ವಿಶ್ವಸೇತ್|
12136138c ವಿಶ್ವಾಸಾದ್ಭಯಮುತ್ಪನ್ನಂ ಮೂಲಾನ್ಯಪಿ ನಿಕೃಂತತಿ||

ವಿಶ್ವಾಸಪಾತ್ರನಲ್ಲದವನಲ್ಲಿ ಎಂದೂ ವಿಶ್ವಾಸವನ್ನಿಡಬಾರದು. ಮತ್ತು ವಿಶ್ವಾಸಪಾತ್ರನಾದವನಲ್ಲಿಯೂ ಅಧಿಕವಾಗಿ ವಿಶ್ವಾಸವನ್ನಿಡಬಾರದು. ಏಕೆಂದರೆ ವಿಶ್ವಾಸದಿಂದ ಉತ್ಪನ್ನವಾಗುವ ಭಯವು ಮೂಲವನ್ನೇ ಕಡಿದುಹಾಕುತ್ತದೆ.

12136139a ಅರ್ಥಯುಕ್ತ್ಯಾ ಹಿ ದೃಶ್ಯಂತೇ ಪಿತಾ ಮಾತಾ ಸುತಾಸ್ತಥಾ|
12136139c ಮಾತುಲಾ ಭಾಗಿನೇಯಾಶ್ಚ ತಥಾ ಸಂಬಂಧಿಬಾಂಧವಾಃ||

ತಂದೆ-ತಾಯಿ, ಪುತ್ರ, ಮಾವ, ಅಳಿಯ ಮೊದಲಾದ ಸಂಬಂಧಗಳು ಮತ್ತು ಬಂದು-ಬಾಂಧವರು ಇವರೆಲ್ಲರಲ್ಲಿ ಸ್ವಾರ್ಥದ ಸಂಬಂಧದಿಂದಲೇ ಸ್ನೇಹವುಂಟಾಗುತ್ತದೆ.

12136140a ಪುತ್ರಂ ಹಿ ಮಾತಾಪಿತರು ತ್ಯಜತಃ ಪತಿತಂ ಪ್ರಿಯಮ್|

---

[595] ಈ ಎರಡು ಶ್ಲೋಕಗಳ ಪಾಠಾಂತರವು ಈ ರೀತಿಯಿದೆ: ಯೋ ವಿಶ್ವಸಿತಿ ಮಿತ್ರೇಷು ನ ವಿಶ್ವಸಿತಿ ಶತ್ರುಷು| ಅರ್ಥಯುಕ್ತಿಮವಿಜ್ಞಾಯ ಯಃ ಪ್ರೀತೌ ಕುರುತೇ ಮನಃ|| ಮಿತ್ರೋ ವಾ ಯದಿ ವಾ ಶತ್ರೌ ತಸ್ಯಾಪಿ ಚಲಿತಾ ಮತಿಃ| (ಗೀತಾ ಪ್ರೆಸ್).

12136140c ಲೋಕೋ ರಕ್ಷತಿ ಚಾತ್ಮಾನಂ ಪಶ್ಯ ಸ್ವಾರ್ಥಸ್ಯ ಸಾರತಾಮ್‌॥

ಪತಿತನಾಗಿದ್ದರೆ ತಮ್ಮ ಪ್ರಿಯ ಪುತ್ರನನ್ನೂ ತಂದೆ-ತಾಯಿಗಳು
ತ್ಯಜಿಸುತ್ತಾರೆ. ಎಲ್ಲರೂ ತಮ್ಮ ತಮ್ಮ ರಕ್ಷಣೆಯನ್ನೇ ಮಾಡಿಕೊಳ್ಳಲು
ಬಯಸುತ್ತಾರೆ. ನೋಡು. ಸ್ವಾರ್ಥವೇ ಈ ಜಗತ್ತಿನ ಸಾರವೆನ್ನಬಹುದು.

12136141a ತಂ ಮನ್ಯೇ ನಿಕೃತಿಪ್ರಜ್ಞಂ ಯೋ ಮೋಕ್ಷಂ ಪ್ರತ್ಯನಂತರಮ್‌|
12136141c ಕೃತ್ಯಂ ಮೃಗಯಸೇ ಕರ್ತುಂ ಸುಖೋಪಾಯಮಸಂಶಯಮ್‌॥

ಬಂಧನದಿಂದ ಬಿಡುಗಡೆ ಹೊಂದಿದ ನಂತರ ನೀನು ಏಕೆ ಹೀಗೆ
ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಲು ಹೊರಟಿರುವೆ?
ನಾವಿಬ್ಬರೂ ಪರಸ್ಪರರ ಉಪಕಾರಕ್ಕೆ ಪ್ರತೀಕಾರವನ್ನು ಮಾಡಿಯಾಗಿದೆ.
ಆದರೂ ಏಕೆ ಈಗ ನನಗೆ ಸುಖವನ್ನುಂಟುಮಾಡುವುದಕ್ಕೆ
ಅವಕಾಶವನ್ನು ಹುಡುಕುತ್ತಿರುವೆ?

12136142a ಅಸ್ಮಿನ್ನಿಲಯ ಏವ ತ್ವಂ ನ್ಯಗ್ರೋಧಾದವತಾರಿತಃ|
12136142c ಪೂರ್ವಂ ನಿವಿಷ್ಟಮುನ್ಮಾಥಂ ಚಪಲತ್ವಾನ್ನ ಬುದ್ಧವಾನ್‌॥

ನೀನು ಇದೇ ಸ್ಥಳದಲ್ಲಿ ನ್ಯಗ್ರೋಧ ವೃಕ್ಷದಿಂದ ಇಳಿದು, ಮೊದಲೇ
ಹಾಸಿದ್ದ ಬಲೆಯಲ್ಲಿ, ಚಪಲತೆಯ ಕಾರಣದಿಂದ ಅದರ ಕುರಿತು
ಧ್ಯಾನವನ್ನಿಡದೇ ಅದರಲ್ಲಿ ಸಿಕ್ಕಿಕೊಂಡೆ.

12136143a ಆತ್ಮನಶ್ಚಪಲೋ ನಾಸ್ತಿ ಕುತೋಽನ್ಯೇಷಾಂ ಭವಿಷ್ಯತಿ|
12136143c ತಸ್ಮಾತ್ಸರ್ವಾಣಿ ಕಾರ್ಯಾಣಿ ಚಪಲೋ ಹಂತ್ಯಸಂಶಯಮ್‌॥

ಚಪಲನಾದವನು ತನಗೆ ಒಳ್ಳೆಯದಾಗುವುದನ್ನೇ ಮಾಡದಿರುವಾಗ
ಇನ್ನೊಬ್ಬನಿಗೆ ಹೇಗೆ ತಾನೇ ಒಳಿತನ್ನು ಮಾಡುತ್ತಾನೆ? ಆದುದರಿಂದ

ಚಪಲನಾದವನು ಸರ್ವಕಾರ್ಯಗಳನ್ನೂ ನಾಶಗೊಳಿಸುತ್ತಾನೆ
ಎನ್ನುವುದರಲ್ಲಿ ಸಂಶಯವಿಲ್ಲ.

12136144a ಬ್ರವೀತಿ ಮಧುರಂ ಕಂ ಚಿತ್ಪ್ರಿಯೋ ಮೇ ಹ ಭವಾನಿತಿ|
12136144c ತನ್ಮಿಥ್ಯಾಕರಣಂ ಸರ್ವಂ ವಿಸ್ತರೇಣಾಪಿ ಮೇ ಶೃಣು||

“ನನಗೆ ನೀನು ಅತ್ಯಂತ ಪ್ರಿಯನಾಗಿದ್ದೀಯೆ” ಎಂದು ನೀನು
ಹೇಳುತ್ತಿರುವುದೂ ನೀನು ಮಾಡುತ್ತಿರುವ ಮೋಡಿ. ಇದು ಹೇಗೆಂದು
ವಿಸ್ತಾರವಾಗಿ ನನ್ನಿಂದ ಕೇಳು.

12136145a ಕಾರಣಾತ್ಪ್ರಿಯತಾಮೇತಿ ದ್ವೇಷ್ಯೋ ಭವತಿ ಕಾರಣಾತ್|
12136145c ಅರ್ಥಾರ್ಥೀ ಜೀವಲೋಕೋಽಯಂ ನ ಕಶ್ಚಿತ್ಕಸ್ಯ ಚಿತ್ಪ್ರಿಯಃ||

ಕಾರಣದಿಂದಲೇ ಪ್ರೀತಿಪಾತ್ರನಾಗುತ್ತಾನೆ ಮತ್ತು ಕಾರಣದಿಂದಲೇ
ದ್ವೇಷವುಂಟಾಗುತ್ತದೆ. ಈ ಜೀವ-ಜಗತ್ತು ಸ್ವಾರ್ಥದಿಂದಲೇ
ನಡೆಯುತ್ತದೆ. ಯಾರೂ ಯಾರ ಪ್ರಿಯನೂ ಅಲ್ಲ.

12136146a ಸಖ್ಯಂ ಸೋದರಯೋರ್ಭ್ರಾತ್ರೋರ್ದಂಪತ್ಯೋರ್ವಾ ಪರಸ್ಪರಮ್|
12136146c ಕಸ್ಯ ಚಿನ್ನಾಭಿಜಾನಾಮಿ ಪ್ರೀತಿಂ ನಿಷ್ಕಾರಣಾಮಿಹ||

ಸಹೋದರರ ನಡುವಿನ ಸಖ್ಯ, ಮತ್ತು ಪತಿ-ಪತ್ನಿಯರ ಪರಸ್ಪರ ಪ್ರೇಮ
ಇವೂ ಕೂಡ ಸ್ವಾರ್ಥವಶವೇ ಆಗಿವೆ. ಈ ಜಗತ್ತಿನಲ್ಲಿ ಯಾರ
ಪ್ರೀತಿಯನ್ನೂ ನಿಷ್ಕಾರಣವೆಂದು ಯಾರೂ ತಿಳಿದುಕೊಳ್ಳುವುದಿಲ್ಲ.

12136147a ಯದ್ಯಪಿ ಭ್ರಾತರಃ ಕ್ರುದ್ಧಾ ಭಾರ್ಯಾ ವಾ ಕಾರಣಾಂತರೇ|
12136147c ಸ್ವಭಾವತಸ್ತೇ ಪ್ರೀಯಂತೇ ನೇತರಃ ಪ್ರೀಯತೇ ಜನಃ||

ಕಾರಣಾಂತರದಿಂದ ಸಹೋದರನು ಅಥವಾ ಪತ್ನಿಯು

ಕುಪಿತರಾಗಬಹುದು. ಆದರೂ ಅವರು ಸ್ವಭಾವತಃ ಪರಸ್ಪರರಲ್ಲಿ
ಪ್ರೀತಿಮಾಡುವಂತೆ ಇತರರು ಅವರೊಡನೆ ಪ್ರೀತಿಮಾಡುವುದಿಲ್ಲ.

12136148a ಪ್ರಿಯೋ ಭವತಿ ದಾನೇನ ಪ್ರಿಯವಾದೇನ ಚಾಪರಃ|
12136148c ಮಂತ್ರಹೋಮಜಪೈರನ್ಯಃ ಕಾರ್ಯಾರ್ಥಂ ಪ್ರೀಯತೇ ಜನಃ||

ಕೊಡುವುದರಿಂದ ಪ್ರಿಯರಾಗುತ್ತಾರೆ. ಪ್ರೀತಿಯ
ಮಾತನ್ನಾಡುವುದರಿಂದ ಪ್ರಿಯರಾಗುತ್ತಾರೆ. ಅನ್ಯರು ಕಾರ್ಯಸಿದ್ಧಿಗಾಗಿ
ಮಂತ್ರಹೋಮಜಪಗಳಿಂದ ಜನರನ್ನು ಪ್ರೀತಿಸುತ್ತಾರೆ.

12136149a ಉತ್ಪನ್ನೇ ಕಾರಣೇ ಪ್ರೀತಿರ್ನಾಸ್ತಿ ನೌ ಕಾರಣಾಂತರೇ|
12136149c ಪ್ರಧ್ವಸ್ತೇ ಕಾರಣಸ್ಥಾನೇ ಸಾ ಪ್ರೀತಿರ್ವಿನಿವರ್ತತೇ||

ಯಾವುದೋ ಕಾರಣದಿಂದ ಉತ್ಪನ್ನವಾದ ಪ್ರೀತಿಯು ಆ ಕಾರಣವು
ಮುಗಿದ ನಂತರ ಇರುವುದಿಲ್ಲ. ಆ ಕಾರಣದ
ಸ್ಥಾನನಷ್ಟವಾದೊಡನೆಯೇ ಅದರಿಂದಾಗಿ ಮಾಡಿದ ಪ್ರೀತಿಯೂ ಕೂಡ
ಸ್ವತಃ ನಿವೃತ್ತವಾಗಿಬಿಡುತ್ತದೆ.

12136150a ಕಿಂ ನು ತತ್ಕಾರಣಂ ಮನ್ಯೇ ಯೇನಾಹಂ ಭವತಃ ಪ್ರಿಯಃ|
12136150c ಅನ್ಯತ್ರಾಭ್ಯವಹಾರಾರ್ಥಾತ್ತತ್ರಾಪಿ ಚ ಬುಧಾ ವಯಮ್||

ಇನ್ನು ನನ್ನನ್ನು ಆಹಾರವನ್ನಾಗಿ ತಿನ್ನುವುದರ ಹೊರತಾಗಿ ಬೇರೆ ಯಾವ
ಕಾರಣವು ಉಳಿದುಕೊಂಡಿದೆಯೆಂದು ನಾನು ನಿನಗೆ ನನ್ನ ಮೇಲೆ
ಪ್ರೀತಿಯಿಂದೆಯೆಂದು ತಿಳಿದುಕೊಳ್ಳಲಿ? ಈಗ ನಿನ್ನಲ್ಲಿರುವ
ಸ್ವಾರ್ಥವನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ.

12136151a ಕಾಲೋ ಹೇತುಂ ವಿಕುರುತೇ ಸ್ವಾರ್ಥಸ್ತಮನುವರ್ತತೇ|

12136151c ಸ್ವಾರ್ಥಂ ಪ್ರಾಜ್ಞೋಽಭಿಜಾನಾತಿ ಪ್ರಾಜ್ಞಂ ಲೋಕೋಽನುವರ್ತತೇ॥

ಕಾಲವು ಕಾರಣದ ಸ್ವರೂಪವನ್ನು ಬದಲಾಯಿಸುತ್ತದೆ. ಮತ್ತು ಸ್ವಾರ್ಥವು ಆ ಕಾಲದ ಅನುಸರಣೆಯನ್ನು ಮಾಡುತ್ತಿರುತ್ತದೆ. ಪ್ರಾಜ್ಞರು ಆ ಸ್ವಾರ್ಥವನ್ನು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಲೋಕವು ಪ್ರಾಜ್ಞರನ್ನು ಅನುಸರಿಸುತ್ತದೆ.

12136152a ನ ತ್ವೀದೃಶಂ ತ್ವಯಾ ವಾಚ್ಯಂ ವಿದುಷಿ ಸ್ವಾರ್ಥಪಂಡಿತೇ|
12136152c ಅಕಾಲೇಽವಿಷಮಸ್ಥಸ್ಯ[596] ಸ್ವಾರ್ಥಹೇತುರಯಂ ತವ॥

ಪ್ರಾಜ್ಞನಾದ ನಾನು ನಿನ್ನ ಈ ಸ್ವಾರ್ಥವನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಆದುದರಿಂದ ನೀನು ನನ್ನಲ್ಲಿ ಇಂತಹ ಮಾತುಗಳನ್ನಾಡಬಾರದು. ಕಷ್ಟದಲ್ಲಿ ಸಿಲುಕಿಕೊಂಡಿರದೇ ಇದ್ದರೂ ಅಕಾಲದಲ್ಲಿ ನೀನು ನನ್ನ ಮೇಲೆ ತೋರಿಸುವ ಈ ಪ್ರೀತಿಗೆ ಸ್ವಾರ್ಥವೇ ಕಾರಣವು.

12136153a ತಸ್ಮಾನ್ನಾಹಂ ಚಲೇ ಸ್ವಾರ್ಥಾತ್ಸುಸ್ಥಿತಃ ಸಂಧಿವಿಗ್ರಹೇ|
12136153c ಅಭ್ರಾಣಾಮಿವ ರೂಪಾಣಿ ವಿಕುರ್ವಂತಿ ಕ್ಷಣೇ ಕ್ಷಣೇ॥

ಆದುದರಿಂದ ನಾನೂ ಕೂಡ ನನ್ನ ಸ್ವಾರ್ಥ್ಯದಿಂದ ವಿಚಲಿತನಾಗುವುದಿಲ್ಲ. ಸಂಧಿ ಮತ್ತು ವಿಗ್ರಹಗಳ ವಿಷಯದಲ್ಲಿ ನನ್ನ ವಿಚಾರವು ಸುನಿಶ್ಚಿತವಾಗಿದೆ. ಮಿತ್ರತಾ ಮತ್ತು ಶತ್ರುತ್ವದ ರೂಪಗಳು ಮೋಡಗಳಂತೆ ಕ್ಷಣ ಕ್ಷಣಕ್ಕೂ ಬದಲಾಗುತ್ತಿರುತ್ತವೆ.

12136154a ಅದ್ಯೈವ ಹಿ ರಿಪುರ್ಭೂತ್ವಾ ಪುನರದ್ಯೈವ ಸೌಹೃದಮ್|

---

596 ಅಕಾಲೇ ಹಿ ಸಮರ್ಥಸ್ಯ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136154c ಪುನಶ್ಚ ರಿಪುರದ್ಯೈವ ಯುಕ್ತೀನಾಂ ಪಶ್ಯ ಚಾಪಲಮ್‌॥

ಇಂದೇ ನೀನು ನನ್ನ ಶತ್ರುವಾಗಿದ್ದು ಪುನಃ ಇಂದೇ ನನ್ನ ಮಿತ್ರನೂ ಆಗಬಲ್ಲೆ. ಮತ್ತು ಅದರ ನಂತರ ಇಂದೇ ಪುನಃ ನನ್ನ ಶತ್ರುವೂ ಆಗಬಲ್ಲೆ. ಈ ಸ್ವಾರ್ಥ್ಯದ ಸಂಬಂಧವು ಎಷ್ಟು ಚಂಚಲ ಎನ್ನುವುದನ್ನು ನೋಡು.

12136155a ಆಸೀತ್ತಾವತ್ತು ಮೈತ್ರೀ ನೌ ಯಾವದ್ಧೇತುರಭೂತ್ಪುರಾ|
12136155c ಸಾ ಗತಾ ಸಹ ತೇನೈವ ಕಾಲಯುಕ್ತೇನ ಹೇತುನಾ‌॥

ಮೊದಲು ಉಪಯುಕ್ತ ಕಾರಣವಿದ್ದಾಗ ನಮ್ಮಿಬ್ಬರ ನಡುವೆ ಮೈತ್ರಿಯುಂಟಾಗಿತ್ತು. ಆದರೆ ಕಾಲವು ಉಪಸ್ಥಿತ ಗೊಳಿಸಿದ್ದ ಆ ಕಾರಣವು ನಿವೃತ್ತವಾದುದರ ಜೊತೆಗೆ ನಮ್ಮ ಮೈತ್ರಿಯೂ ಹೊರಟು ಹೋಯಿತು.

12136156a ತ್ವಂ ಹಿ ಮೇಽತ್ಯಂತತಃ ಶತ್ರುಃ[597] ಸಾಮರ್ಥ್ಯಾನ್ಮಿತ್ರತಾಂ ಗತಃ|
12136156c ತತ್ ಕೃತ್ಯಮಭಿನಿರ್ವೃತ್ತಂ ಪ್ರಕೃತಿಃ ಶತ್ರುತಾಂ ಗತಾ‌॥

ನನ್ನ ಅತ್ಯಂತ ಶತ್ರುವಾಗಿದ್ದ ನೀನು ವಿಶೇಷ ಪ್ರಯೋಜನದ ಕಾರಣದಿಂದ ನನ್ನ ಮಿತ್ರನಾಗಿದ್ದೆ. ಆ ಪ್ರಯೋಜನವು ಸಿದ್ಧಿಯಾದ ನಂತರ ನಿನ್ನ ಪ್ರಕೃತಿಯು ಪುನಃ ಸಹಜ ಶತ್ರುಭಾವವನ್ನೇ ಹೊಂದಿದೆ.

12136157a ಸೋಽಹಮೇವಂ ಪ್ರಣೀತಾನಿ ಜ್ಞಾತ್ವಾ ಶಾಸ್ತ್ರಾಣಿ ತತ್ತ್ವತಃ|
12136157c ಪ್ರವಿಶೇಯಂ ಕಥಂ ಪಾಶಂ ತ್ವತ್ಕೃತಂ ತದ್ವದಸ್ವ ಮೇ‌॥

ಇಲ್ಲದಿದ್ದರೆ ಶಾಸ್ತ್ರಗಳನ್ನು ತತ್ತ್ವತಃ ತಿಳಿದುಕೊಂಡಿದ್ದ ನಾನು ಹೇಗೆ

---

597 ತ್ವಂ ಹಿ ಮೇ ಜಾತಿತಃ ಶತ್ರುಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ತಾನೇ ನಿನ್ನೊಡನೆ ಬಲೆಯನ್ನು ಪ್ರವೇಶಿಸುತ್ತಿದ್ದೆ? ನೀನೇ ನನಗೆ ಹೇಳು.

12136158a ತ್ವದ್ವೀರ್ಯೇಣ ವಿಮುಕ್ತೋಽಹಂ ಮದ್ವೀರ್ಯೇಣ ತಥಾ ಭವಾನ್|
12136158c ಅನ್ಯೋನ್ಯಾನುಗ್ರಹೇ ವೃತ್ತೇ ನಾಸ್ತಿ ಭೂಯಃ ಸಮಾಗಮಃ||

ನಿನ್ನ ವೀರ್ಯದಿಂದ ನಾನು ವಿಮುಕ್ತನಾಗಿದ್ದೇನೆ. ನನ್ನ ವೀರ್ಯದಿಂದ ನೀನೂ ಮುಕ್ತನಾಗಿದ್ದೀಯೆ. ಅನ್ಯೋನ್ಯರಿಗೆ ಅನುಗ್ರಹ ಮಾಡಿ ಮುಗಿದಮೇಲೆ ಮತ್ತೆ ಒಂದಾಗುವುದು ಬೇಡ.

12136159a ತ್ವಂ ಹಿ ಸೌಮ್ಯ ಕೃತಾರ್ಥೋಽದ್ಯ ನಿರ್ವೃತ್ತಾರ್ಥಾಸ್ತಥಾ ವಯಮ್|
12136159c ನ ತೇಽಸ್ತ್ಯನ್ಯನ್ಮಯಾ ಕೃತ್ಯಂ ಕಿಂ ಚಿದನ್ಯತ್ರ ಭಕ್ಷಣಾತ್||

ಸೌಮ್ಯ! ಇಂದು ನೀನು ಕೃತಾರ್ಥನಾಗಿದ್ದೀಯೆ. ಮತ್ತು ನನ್ನ ಉದ್ದೇಶವೂ ಕೂಡ ಸಿದ್ಧಿಯಾಯಿತು. ಆದುದರಿಂದ ನನ್ನನ್ನು ತಿನ್ನುವುದರ ಹೊರತಾಗಿ ಬೇರೆ ಯಾವ ಪ್ರಯೋಜನವೂ ನಿನಗೆ ಈಗ ಸಿದ್ಧಿಯಾಗುವಂಥಹುದಿಲ್ಲ.

12136160a ಅಹಮನ್ನಂ ಭವಾನ್ಭೋಕ್ತಾ ದುರ್ಬಲೋಽಹಂ ಭವಾನ್ಬಲೀ|
12136160c ನಾವಯೋರ್ವಿದ್ಯತೇ ಸಂಧಿರ್ನಿಯುಕ್ತೇ ವಿಷಮೇ ಬಲೇ||

ನಾನು ಅನ್ನ ಮತ್ತು ತಿನ್ನುವವನು ನೀನು. ನಾನು ದುರ್ಬಲ ಮತ್ತು ನೀನು ಬಲಶಾಲಿ. ಬಲದಲ್ಲಿ ವ್ಯತ್ಯಾಸವಿರುವ ನಮ್ಮಿಬ್ಬರ ನಡುವೆ ಸಂಧಿಯು ಯುಕ್ತವಾದುದು ಎಂದು ಅನಿಸುವುದಿಲ್ಲ.

12136161a ಸಂಮನ್ಯೇಽಹಂ ತವ ಪ್ರಜ್ಞಾಂ ಯನ್ಮೋಕ್ಷಾತ್ಪ್ರತ್ಯನಂತರಮ್|
12136161c ಭಕ್ಷ್ಯಂ ಮೃಗಯಸೇ ನೂನಂ ಸುಖೋಪಾಯಮಸಂಶಯಮ್||

ನಾನು ನಿನ್ನ ವಿಚಾರವನ್ನು ತಿಳಿದುಕೊಂಡುಬಿಟ್ಟಿದ್ದೇನೆ.

ನಿಶ್ಚಯವಾಗಿಯೂ ನೀನು ಬಲೆಯಿಂದ ತಪ್ಪಿಸಿಕೊಂಡ ನಂತರದಿಂದ
ನಿನಗೆ ಸಹಜವಾದ ಉಪಾಯ ಮತ್ತು ಪ್ರಯತ್ನಗಳಿಂದ ಆಹಾರವನ್ನು
ಹುಡುಕುತ್ತಿದ್ದೀಯೆ.

12136162a ಭಕ್ಷ್ಯಾರ್ಥಮೇವ ಬದ್ಧಸ್ತ್ವಂ ಸ ಮುಕ್ತಃ ಪ್ರಸೃತಃ ಕ್ಷುಧಾ|
12136162c ಶಾಸ್ತ್ರಜ್ಞಮಭಿಸಂಧಾಯ ನೂನಂ ಭಕ್ಷಯಿತಾದ್ಯ ಮಾಮ್||
12136163a ಜಾನಾಮಿ ಕ್ಷುಧಿತಂ ಹಿ ತ್ವಾಮಾಹಾರಸಮಯಶ್ಚ ತೇ|
12136163c ಸ ತ್ವಂ ಮಾಮಭಿಸಂಧಾಯ ಭಕ್ಷ್ಯಂ ಮೃಗಯಸೇ ಪುನಃ||

ಆಹಾರವನ್ನು ಹುಡುಕುತ್ತಿರುವಾಗಲೇ ನೀನು ಆ ಬಲೆಯಲ್ಲಿ
ಸಿಕ್ಕಿಹಾಕಿಕೊಂಡಿದ್ದೆ ಮತ್ತು ಅದರಿಂದ ಬಿಡುಗಡೆ ಹೊಂದಿ ಈಗ ಇನ್ನೂ
ಹಸಿವೆಯಿಂದ ಪೀಡಿತನಾಗಿದ್ದೀಯೆ. ನಿಶ್ಚಯವಾಗಿಯೂ ಈಗ ನಿನ್ನ
ಶಾಸ್ತ್ರೀಯ ಬುದ್ಧಿಯನ್ನು ಉಪಯೋಗಿಸಿ ನನ್ನನ್ನು ತಿಂದುಬಿಡುತ್ತೀಯೆ.
ನಿನಗೆ ಹಸಿವೆಯಾಗಿದೆ ಮತ್ತು ಇದು ನಿನ್ನ ಭೋಜನದ ಸಮಯವೆಂದು
ನನಗೆ ಗೊತ್ತಿದೆ. ಆದುದರಿಂದ ಪುನಃ ನನ್ನೊಂದಿಗೆ
ಸಂಧಿಮಾಡಿಕೊಂಡು ನಿನಗಾಗಿ ಭೋಜನವನ್ನು ಹುಡುಕುತ್ತಿದ್ದೀಯೆ.

12136164a ಯಚ್ಚಾಪಿ ಪುತ್ರದಾರಂ ಸ್ವಂ ತತ್ಸಂನಿಸೃಜಸೇ ಮಯಿ|
12136164c ಶುಶ್ರೂಷಾಂ ನಾಮ ಮೇ ಕರ್ತುಂ ಸಖೇ ಮಮ ನ ತತ್ಕ್ಷಮಮ್||

ಸಖೇ! ನಿನ್ನ ಹೆಂಡತಿ-ಮಕ್ಕಳೊಂದಿಗೆ ನನ್ನ ಶುಶ್ರೂಷೆಮಾಡುವೆಯೆಂದು
ಏನು ನೀನು ಹೇಳುತ್ತಿರುವೆಯೋ ಅದು ನನ್ನ ಯೋಗದಲ್ಲಿಲ್ಲ.

12136165a ತ್ವಯಾ ಮಾಂ ಸಹಿತಂ ದೃಷ್ಟ್ವಾ ಪ್ರಿಯಾ ಭಾರ್ಯಾ ಸುತಾಶ್ಚ ಯೇ|
12136165c ಕಸ್ಮಾನ್ನಾಂ ತೇ ನ ಖಾದೇಯುರ್ಹೃಷ್ಟಾಃ ಪ್ರಣಯಿನಸ್ತ್ವಯಿ||

ನಿನ್ನಲ್ಲಿ ಪ್ರೀತಿಯನ್ನಿಟ್ಟಿರುವ ನಿನ್ನ ಪ್ರಿಯ ಪತ್ನಿ ಮತ್ತು ಮಕ್ಕಳು

ನಿನ್ನೊಂದಿಗೆ ನನ್ನನ್ನು ನೋಡಿ ಹರ್ಷಿತರಾಗಿ ನನ್ನನ್ನು ತಿನ್ನದೇ ಹೇಗೆ ಇರುತ್ತಾರೆ?

12136166a ನಾಹಂ ತ್ವಯಾ ಸಮೇಷ್ಯಾಮಿ ವೃತ್ತೋ ಹೇತುಃ ಸಮಾಗಮೇ|
12136166c ಶಿವಂ ಧ್ಯಾಯಸ್ವ ಮೇಽತ್ರಸ್ಥಃ ಸುಕೃತಂ ಸ್ಮರ್ಯತೇ ಯದಿ||

ಈಗ ನಾನು ನಿನ್ನೊಂದಿಗೆ ಬರುವುದಿಲ್ಲ. ನಮ್ಮಿಬ್ಬರ ಸಮಾಗಮದ ಉದ್ದೇಶವು ಪೂರ್ತಿಯಾಗಿ ಹೋಯಿತು. ಒಂದುವೇಳೆ ನಿನಗೆ ನನ್ನ ಶುಭ ಕರ್ಮದ ಸ್ಮರಣೆಯಿದ್ದರೆ ನೀನು ಸ್ವಯಂ ಸ್ವಸ್ಥನಾಗಿದ್ದುಕೊಂಡು ನನ್ನ ಕಲ್ಯಾಣದ ಕುರಿತೂ ಚಿಂತನೆಯನ್ನು ಮಾಡು.

12136167a ಶತ್ರೋರನ್ನಾದ್ಯಭೂತಃ ಸನ್ ಕ್ಲಿಷ್ಟಸ್ಯ ಕ್ಷುಧಿತಸ್ಯ ಚ|
12136167c ಭಕ್ಷ್ಯಂ ಮೃಗಯಮಾಣಸ್ಯ ಕಃ ಪ್ರಾಜ್ಞೋ ವಿಷಯಂ ವ್ರಜೇತ್||

ದುಷ್ಟನಾಗಿರುವ, ಕಷ್ಟದಲ್ಲಿ ಸಿಲುಕಿರುವ, ಹಸಿದಿರುವ ಮತ್ತು ಆಹಾರವನ್ನು ಹುಡುಕುತ್ತಿರುವ ಮತ್ತು ತನ್ನ ಶತ್ರುವಾಗಿರುವವನ ಎದುರಿಗೆ ಬುದ್ಧಿವಂತನಾದವನು ಹೇಗೆ ತಾನೇ ಹೋಗುತ್ತಾನೆ?

12136168a ಸ್ವಸ್ತಿ ತೇಽಸ್ತು ಗಮಿಷ್ಯಾಮಿ ದೂರಾದಪಿ ತವೋದ್ವಿಜೇ|
12136168c ನಾಹಂ ತ್ವಯಾ ಸಮೇಷ್ಯಾಮಿ ನಿರ್ವೃತೋ ಭವ ಲೋಮಶ[598]||

ಲೋಮಶ! ನಿನಗೆ ಮಂಗಳವಾಗಲಿ. ನಾನೀಗ ಹೋಗುತ್ತೇನೆ. ದೂರದಿಂದಲೂ ನನಗೆ ನಿನ್ನ ಭಯವಾಗುತ್ತಿದೆ. ನಾನು ನಿನ್ನೊಡನೆ ಬರುವುದಿಲ್ಲ. ನೀನು ನಿರ್ವೃತ್ತನಾಗು.

---

598 ವಿಶ್ವಸ್ತಂ ವಾ ಪ್ರಮತ್ತಂ ವಾ ಏದತೇವ ಕೃತಂ ಭವೇತ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136169a ಬಲವತ್ಸಂನಿಕರ್ಷೋ ಹಿ ನ ಕದಾ ಚಿತ್ ಪ್ರಶಸ್ಯತೇ|
[599]12136169c ಪ್ರಶಾಂತಾದಪಿ ಮೇ ಪ್ರಾಜ್ಞ ಭೇತವ್ಯಂ ಬಲಿನಃ ಸದಾ||

ದುರ್ಬಲನಿಗೆ ಬಲಶಾಲಿಯ ಹತ್ತಿರ ಇರುವುದು ಎಂದೂ ಚೆನ್ನಾಗಿರುವುದಿಲ್ಲ. ಪ್ರಾಜ್ಞ! ಪ್ರಶಾಂತನಾಗಿದ್ದರೂ ಬಲಶಾಲಿಯಿಂದ ನನಗೆ ಸದಾ ಭಯವಾಗುತ್ತದೆ.

12136170a ಯದಿ ತ್ವರ್ಥೇನ ಮೇ ಕಾರ್ಯಂ ಬ್ರೂಹಿ ಕಿಂ ಕರವಾಣಿ ತೇ|
12136170c ಕಾಮಂ ಸರ್ವಂ ಪ್ರದಾಸ್ಯಾಮಿ ನ ತ್ವಾತ್ಮಾನಂ ಕದಾ ಚನ||

ನಿನಗೆ ನನ್ನಿಂದ ಏನಾದರೂ ಆಗಬೇಕಾದರೆ ಹೇಳು ನಿನಗೆ ನಾನು ಏನು ಮಾಡಬೇಕು? ಬಯಸಿದ ಎಲ್ಲವನ್ನೂ ಕೊಡುತ್ತೇನೆ. ಆದರೆ ನನ್ನ ಪ್ರಾಣವನ್ನು ಎಂದೂ ಕೊಡುವುದಿಲ್ಲ.

12136171a ಆತ್ಮಾರ್ಥೇ ಸಂತತಿಸ್ತ್ಯಾಜ್ಯಾ ರಾಜ್ಯಂ ರತ್ನಂ ಧನಂ ತಥಾ|
12136171c ಅಪಿ ಸರ್ವಸ್ವಮುತ್ಸೃಜ್ಯ ರಕ್ಷೇದಾತ್ಮಾನಮಾತ್ಮನಾ||

ತನ್ನ ರಕ್ಷಣೆಗಾಗಿ ಸಂತತಿ, ರಾಜ್ಯ, ರತ್ನ, ಧನ ಎಲ್ಲವನ್ನೂ ತ್ಯಜಿಸಬಹುದು. ಆದರೆ ತನ್ನ ಸರ್ವಸ್ವವನ್ನು ತ್ಯಜಿಸಿದರೂ ಸ್ವಯಂ ತನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

12136172a ಐಶ್ವರ್ಯಧನರತ್ನಾನಾಂ ಪ್ರತ್ಯಮಿತ್ರೇಽಪಿ ತಿಷ್ಠತಾಮ್|
12136172c ದೃಷ್ಟ್ವಾ ಹಿ ಪುನರಾವೃತ್ತಿರ್ಜೀವತಾಮಿತಿ ನಃ ಶ್ರುತಮ್||

ಜೀವಂತವಾಗಿದ್ದರೆ ಶತ್ರುವು ತನ್ನ ಅಧಿಕಾರದಕ್ಕೆ ತೆಗೆದುಕೊಂಡಿರುವ

---

[599] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕಾರ್ಧವಿದೆ: ಯದಿ ತ್ವಂ ಸುಕೃತಂ ವೇತ್ಸಿ ತತ್ಸಖ್ಯಮನುಸಾರಯ|

ಐಶ್ವರ್ಯ, ಧನ-ರತ್ನಗಳನ್ನು ಪುನಃ ಹಿಂತೆಗೆದುಕೊಳ್ಳಬಹುದು ಎಂದು ಕೇಳಿದ್ದೇವೆ. ಇದನ್ನು ಪ್ರತ್ಯಕ್ಷವಾಗಿ ನೋಡಿದ್ದೇವೆ ಕೂಡ.

12136173a ನ ತ್ವಾತ್ಮನಃ ಸಂಪ್ರದಾನಂ ಧನರತ್ನವದಿಷ್ಯತೇ|
12136173c ಆತ್ಮಾ ತು ಸರ್ವತೋ ರಕ್ಷ್ಯೋ ದಾರ್ಯೈರಪಿ ಧನ್ಯೈರಪಿ||

ಧನ-ರತ್ನಗಳಂತೆ ತನ್ನ ಪ್ರಾಣವನ್ನೂ ಶತ್ರುವಿಗೆ ಕೊಡುವುದು ಸರಿಯಲ್ಲ. ಧನ-ರತ್ನಗಳನ್ನು ನೀಡಿಯಾದರೂ ತನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

12136174a ಆತ್ಮರಕ್ಷಿತತಂತ್ರಾಣಾಂ ಸುಪರೀಕ್ಷಿತಕಾರಿಣಾಮ್|
12136174c ಆಪದೋ ನೋಪಪದ್ಯಂತೇ ಪುರುಷಾಣಾಂ ಸ್ವದೋಷಜಾಃ||

ಆತ್ಮರಕ್ಷಣೆಯಲ್ಲಿ ತತ್ಪರನಾಗಿರುವ ಮತ್ತು ಚೆನ್ನಾಗಿ ಪರೀಕ್ಷಾಪೂರ್ವಕ ನಿರ್ಣಯಿಸಿ ಕಾರ್ಯಮಾಡುವವನಿಗೆ ತನ್ನದೇ ದೋಷದಿಂದ ಉತ್ಪನ್ನವಾಗಬಹುದಾದ ಆಪತ್ತುಗಳು ಪ್ರಾಪ್ತವಾಗುವುದಿಲ್ಲ.

12136175a ಶತ್ರೂನ್ಸಮ್ಯಗ್ವಿಜಾನಂತಿ ದುರ್ಬಲಾ ಯೇ ಬಲೀಯಸಃ|
12136175c ತೇಷಾಂ ನ ಚಾಲ್ಯತೇ ಬುದ್ಧಿರಾತ್ಮಾರ್ಥಂ ಕೃತನಿಶ್ಚಯಾ||

ತನ್ನ ಬಲಶಾಲೀ ಶತ್ರುವನ್ನು ಚೆನ್ನಾಗಿ ತಿಳಿದುಕೊಂಡಿರುವ ದುರ್ಬಲನ ಶಾಸ್ತ್ರಾರ್ಥಜ್ಞಾನದಿಂದ ಸ್ಥಿರವಾಗಿರುವ ಬುದ್ಧಿಯು ಎಂದೂ ವಿಚಲಿತವಾಗುವುದಿಲ್ಲ.”

12136176a ಇತ್ಯಭಿವ್ಯಕ್ತಮೇವಾಸೌ ಪಲಿತೇನಾವಭರ್ತ್ಸಿತಃ|
12136176c ಮಾರ್ಜಾರೋ ವ್ರೀಡಿತೋ ಭೂತ್ವಾ ಮೂಷಕಂ ವಾಕ್ಯಮಬ್ರವೀತ್||

ಪಲಿತನು ಈ ರೀತಿ ಸ್ಪಷ್ಟರೂಪದಲ್ಲಿ ತನ್ನ ಕಟ್ಟುನಿಟ್ಟಿನ ಅಭಿವ್ಯಕ್ತವನ್ನು

ಹೇಳಲು ನಾಚಿಕೊಂಡ ಬೆಕ್ಕು ಇಲಿಗೆ ಹೀಗೆ ಹೇಳಿತು:

[600]12136177a ಸಂಮನ್ಯೇಽಹಂ ತವ ಪ್ರಜ್ಞಾಂ ಯಸ್ತ್ವಂ ಮಮ ಹಿತೇ ರತಃ|
12136177c ಉಕ್ತವಾನರ್ಥತತ್ತ್ವೇನ ಮಯಾ ಸಂಛಿನ್ನದರ್ಶನಃ||

“ನನ್ನ ಹಿತದಲ್ಲಿಯೇ ನಿರತನಾಗಿರುವ ನಿನ್ನ ಪ್ರಜ್ಞೆಯನ್ನು ನಾನು ಸಮ್ಮಾನಿಸುತ್ತೇನೆ. ನೀನು ಯಥಾರ್ಥರೂಪದಲ್ಲಿ ಶಾಸ್ತ್ರಗಳ ಸಾರವನ್ನೇ ಹೇಳಿದ್ದೀಯೆ. ನನ್ನ ಮತ್ತು ನಿನ್ನ ವಿಚಾರಗಳಲ್ಲಿ ಸಂಪೂರ್ಣ ಹೊಂದಾಣಿಕೆಯಿದೆ.

12136178a ನ ತು ಮಾಮನ್ಯಥಾ ಸಾಧೋ ತ್ವಂ ವಿಜ್ಞಾತುಮಿಹಾರ್ಹಸಿ|
12136178c ಪ್ರಾಣಪ್ರದಾನಜಂ ತ್ವತ್ತೋ ಮಮ ಸೌಹೃದಮಾಗತಮ್||

ಸಾಧೋ! ಆದರೆ ನೀನು ನನ್ನನ್ನು ತಪ್ಪುತಿಳಿದುಕೊಳ್ಳಬಾರದು. ನಾನು ನಿನಗಿಂತ ಭಿನ್ನವಾಗಿಲ್ಲ. ನನ್ನ ಪ್ರಾಣವನ್ನು ನೀಡಿದ ನಿನ್ನ ಮೇಲೆ ನನಗೆ ಅತ್ಯಂತ ಸೌಹಾರ್ದತೆಯುಂಟಾಗಿದೆ.

12136179a ಧರ್ಮಜ್ಞೋಽಸ್ಮಿ ಗುಣಜ್ಞೋಽಸ್ಮಿ ಕೃತಜ್ಞೋಽಸ್ಮಿ ವಿಶೇಷತಃ|
12136179c ಮಿತ್ರೇಷು ವತ್ಸಲಶ್ಚಾಸ್ಮಿ ತ್ವದ್ವಿಧೇಷು[601] ವಿಶೇಷತಃ||

ನಾನು ಧರ್ಮವನ್ನು ತಿಳಿದುಕೊಂಡಿದ್ದೇನೆ ಮತ್ತು ಗುಣಗಳನ್ನೂ ತಿಳಿದುಕೊಂಡಿದ್ದೇನೆ. ವಿಶೇಷವಾಗಿ ಕೃತಜ್ಞನೂ ಆಗಿದ್ದೇನೆ. ಮಿತ್ರರಲ್ಲಿ, ಅದರಲ್ಲೂ ವಿಶೇಷವಾಗಿ ನಿನ್ನಂಥವರಲ್ಲಿ ವಾತ್ಸಲ್ಯವುಳ್ಳವನೂ

---

[600] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕಾರ್ಧವಿದೆ: ಸತ್ಯಂ ಶಪೇ ತ್ವಯಾಹಂ ವೈ ಮಿತ್ರದ್ರೋಹೋ ವಿಗರ್ಹಿತಃ|

[601] ತ್ವದ್ಭಕ್ತಶ್ಚ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಆಗಿದ್ದೇನೆ.

12136180a ತನ್ಮಾಮೇವಂಗತೇ ಸಾಧೋ ನ ಯಾವಯಿತುಮರ್ಹಸಿ|
12136180c ತ್ವಯಾ ಹಿ ಯಾವ್ಯಮಾನೋಽಹಂ ಪ್ರಾಣಾನ್ಜಹ್ಯಾಂ ಸಬಾಂಧವಃ||

ಸಾಧೋ! ಆದುದರಿಂದ ನೀನು ಮೊದಲಿನಂತೆಯೇ ಮತ್ತೊಮ್ಮೆ ನನ್ನೊಡನೆ ವರ್ತಿಸು, ನನ್ನೊಟ್ಟಿಗೇ ಬಾ. ಬೇಕಾದರೆ ನಾನು ಬಾಂಧವರೊಂದಿಗೆ ನಿನಗಾಗಿ ನನ್ನ ಪ್ರಾಣವನ್ನೂ ತ್ಯಜಿಸಬಲ್ಲೆನು.

12136181a ಧಿಕ್ ಶಬ್ದೋ ಹಿ[602] ಬುಧ್ಯೈರ್ದ್ಯಷ್ಟೋ ಮದ್ವಿಧೇಷು ಮನಸ್ವಿಷು|
12136181c ಮರಣಂ ಧರ್ಮತತ್ತ್ವಜ್ಞ ನ ಮಾಂ ಶಂಕಿತುಮರ್ಹಸಿ||

ಧರ್ಮತತ್ತ್ವಜ್ಞ! ವಿದ್ವಾಂಸರು ನನ್ನಂಥಹ ಮನಸ್ವಿಗಳಿಗೆ ಧಿಕ್ಕಾರ ಎಂಬ ಶಬ್ಧವನ್ನೇ ಬಳಸುತ್ತಾರೆ. ನನ್ನಿಂದ ನಿನಗೆ ಮರಣವಾಗುತ್ತದೆಯೆಂದು ನೀನು ಶಂಕಿಸಬಾರದು.”

12136182a ಇತಿ ಸಂಸ್ತೂಯಮಾನೋ ಹಿ ಮಾರ್ಜಾರೇಣ ಸ ಮೂಷಕಃ|
12136182c ಮನಸಾ ಭಾವಗಂಭೀರಂ ಮಾರ್ಜಾರಂ ವಾಕ್ಯಮಬ್ರವೀತ್||

ಮಾರ್ಜಾರನಿಂದ ಈ ರೀತಿ ಸಂಸ್ತುತಿಸಲ್ಪಟ್ಟರೂ ಇಲಿಯು ಮನಸ್ಸಿನಲ್ಲಿ ಗಂಭೀರಭಾವವನ್ನು ತಾಳಿ ಬೆಕ್ಕಿಗೆ ಹೇಳಿತು:

12136183a ಸಾಧುರ್ಭವಾನ್ ಶ್ರುತಾರ್ಥೋಽಸ್ಮಿ ಪ್ರೀಯತೇ ನ ಚ ವಿಶ್ವಸೇ|
12136183c ಸಂಸ್ತವೈರ್ವಾ ಧನೌಘೈರ್ವಾ ನಾಹಂ ಶಕ್ಯಃ ಪುನಸ್ತ್ವಯಾ||

“ಅಯ್ಯಾ! ನೀನು ಅತ್ಯಂತ ಸಾಧುಸ್ವಭಾವದವನು. ನಿನ್ನ ಈ ಮಾತನ್ನು

602 ವಿಶ್ರಂಭೋ ಹಿ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ನಾನು ಕೇಳಿದೆ. ಅದರಿಂದ ನಾನು ಪ್ರಸನ್ನನಾಗಿದ್ದೇನೆ. ಆದರೆ ನಿನ್ನ ಮೇಲೆ ವಿಶ್ವಾಸವನ್ನಿಡಲಾರೆ. ನೀನು ನನ್ನನ್ನು ಎಷ್ಟೇ ಸ್ತುತಿಸಿದರೂ ಧನವನ್ನಿತ್ತರೂ ನಾನು ಈಗ ನಿನ್ನೊಂದಿಗೆ ಒಡನಾಡಲಾರೆ.

12136184a ನ ಹ್ಯಮಿತ್ರವಶಂ ಯಾಂತಿ ಪ್ರಾಜ್ಞೋ ನಿಷ್ಕಾರಣಂ ಸಖೇ|
12136184c ಅಸ್ಮಿನ್ನರ್ಥೇ ಚ ಗಾಥೇ ದ್ವೇ ನಿಬೋಧೋಶನಸಾ ಕೃತೇ||

ಸಖೇ! ಪ್ರಾಜ್ಞನಾದವನು ನಿಷ್ಕಾರಣವಾಗಿ ತನ್ನ ಶತ್ರುವಿನ ವಶಕ್ಕೆ ಬರುವುದಿಲ್ಲ. ಈ ವಿಷಯದಲ್ಲಿ ಶುಕ್ರಾಚಾರ್ಯನು ಎರಡು ಗಾಥೆಗಳನ್ನು ಹೇಳಿದ್ದಾನೆ.

12136185a ಶತ್ರುಸಾಧಾರಣೇ ಕೃತ್ಯೇ ಕೃತ್ವಾ ಸಂಧಿಂ ಬಲೀಯಸಾ|
12136185c ಸಮಾಹಿತಶ್ಚರೇದ್ಯುಕ್ತ್ಯಾ ಕೃತಾರ್ಥಶ್ಚ ನ ವಿಶ್ವಸೇತ್||

ತಾನು ಮತ್ತು ತನ್ನ ಶತ್ರುವು ಒಟ್ಟಿಗೇ ಒಂದೇ ಸಂಕಟದಲ್ಲಿ ಸಿಲುಕಿಕೊಂಡಾಗ ನಿರ್ಬಲನು ಸಬಲ ಶತ್ರುವಿನೊಂದಿಗೆ ಕೂಡಿ ಅತ್ಯಂತ ಸಾವಧಾನದಿಂದ ಮತ್ತು ಯುಕ್ತಿಯಿಂದ ತನ್ನ ಕೆಲಸವನ್ನು ಪೂರೈಸಿಕೊಳ್ಳಬೇಕು ಮತ್ತು ಕೆಲಸವಾದ ನಂತರ ಆ ಶತ್ರುವಿನ ಮೇಲೆ ವಿಶ್ವಾಸವನ್ನಿಡಬಾರದು.

[603]12136186a ತಸ್ಮಾತ್ಸರ್ವಾಸ್ವವಸ್ಥಾಸು ರಕ್ಷೇಜ್ಜೀವಿತಮಾತ್ಮನಃ|
12136186c ದ್ರವ್ಯಾಣಿ ಸಂತತಿಶ್ಚೈವ ಸರ್ವಂ ಭವತಿ ಜೀವತಃ||

---

603 ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು, ಶುಕ್ರಾಚಾರ್ಯನ ಎರಡನೇ ಗಾಥೆಯನ್ನು ಸೂಚಿಸುವ ಈ ಒಂದು ಅಧಿಕ ಶ್ಲೋಕವಿದೆ: ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್| ನಿತ್ಯಂ ವಿಶ್ವಾಸಯೇದನ್ಯಾನ್ಪರೇಷಾಂ ತು ನ ವಿಶ್ವಸೇತ್||

ಆದುದರಿಂದ ಸರ್ವಾವಸ್ಥೆಗಳಲ್ಲಿಯೂ ತನ್ನ ಜೀವವನ್ನು ರಕ್ಷಿಸಿಕೊಳ್ಳಬೇಕು. ಏಕೆಂದರೆ ಜೀವವೊಂದಿದ್ದರೆ ಸಂಪತ್ತು ಮತ್ತು ಸಂತತಿ ಎಲ್ಲವೂ ದೊರೆಯಬಹುದು.

12136187a ಸಂಕ್ಷೇಪೋ ನೀತಿಶಾಸ್ತ್ರಾಣಾಮವಿಶ್ವಾಸಃ ಪರೋ ಮತಃ|
12136187c ನೃಷು ತಸ್ಮಾದವಿಶ್ವಾಸಃ ಪುಷ್ಕಲಂ ಹಿತಮಾತ್ಮನಃ||

ನೀತಿಶಾಸ್ತ್ರಗಳನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಯಾರೊಡನೆಯೂ ವಿಶ್ವಾಸವನ್ನಿಡದೇ ಇರುವುದೇ ಉತ್ತಮವು. ಆದುದರಿಂದ ಇನ್ನೊಬ್ಬರೊಂದಿಗೆ ವಿಶ್ವಾಸವನ್ನಿಡದೇ ಇರುವುದೇ ತನಗೆ ಪುಷ್ಕಲ ಹಿತವನ್ನೀಯುತ್ತದೆ.

12136188a ವಧ್ಯಂತೇ ನ ಹ್ಯವಿಶ್ವಸ್ತಾಃ ಶತ್ರುಭಿರ್ದುರ್ಬಲಾ ಅಪಿ|
12136188c ವಿಶ್ವಸ್ತಾಸ್ತ್ವಾಶು ವಧ್ಯಂತೇ ಬಲವಂತೋಽಪಿ ದುರ್ಬಲೈಃ||

ವಿಶ್ವಾಸವನ್ನಿಡದೇ ಸಾವಧಾನದಿಂದಿರುವವರು ದುರ್ಬಲರಾದರೂ ಶತ್ರುವಿನಿಂದ ಹತರಾಗುವುದಿಲ್ಲ. ಆದರೆ ವಿಶ್ವಾಸವಿಟ್ಟಿರುವ ಬಲವಂತನನ್ನು ದುರ್ಬಲರೂ ವಧಿಸಬಲ್ಲರು.

12136189a ತ್ವದ್ವಿಧೇಭ್ಯೋ ಮಯಾ ಹ್ಯಾತ್ಮಾ ರಕ್ಷ್ಯೋ ಮಾರ್ಜಾರ ಸರ್ವದಾ|
12136189c ರಕ್ಷ ತ್ವಮಪಿ ಚಾತ್ಮಾನಂ ಚಂಡಾಲಾಜ್ಜಾತಿಕಿಲ್ಬಿಷಾತ್||

ಬೆಕ್ಕೇ! ನಿನ್ನಂಥವರಿಂದ ಸದಾ ನನ್ನನ್ನು ರಕ್ಷಿಸಿಕೊಳ್ಳಬೇಕು. ಮತ್ತು ನೀನೂ ಕೂಡ ನಿನ್ನ ಜನ್ಮಜಾತ ಶತ್ರು ಚಂಡಾಲನಿಂದ ನಿನ್ನನ್ನು ರಕ್ಷಿಸಿಕೋ.”

12136190a ಸ ತಸ್ಯ ಬ್ರುವತಸ್ತ್ವೇವಂ ಸಂತ್ರಾಸಾಜ್ಜಾತಸಾಧ್ವಸಃ|

12136190c ಸ್ವಬಿಲಂ ಹಿ[604] ಜವೇನಾಶು ಮಾರ್ಜಾರಃ ಪ್ರಯಯೌ ತತಃ||

ಇಲಿಯು ಹೀಗೆ ಹೇಳುತ್ತಿದ್ದಾಗ ಚಂಡಾಲನ ಹೆಸರನ್ನು ಕೇಳಿದ ಕೂಡಲೇ ಬೆಕ್ಕು ಭಯಭೀತಗೊಂಡಿತು ಮತ್ತು ವೇಗದಿಂದ ತನ್ನ ಮನೆಯೆಡೆಗೆ ಓಡಿ ಹೋಯಿತು.

12136191a ತತಃ ಶಾಸ್ತ್ರಾರ್ಥತತ್ತ್ವಜ್ಞೋ ಬುದ್ಧಿಸಾಮರ್ಥ್ಯಮಾತ್ಮನಃ|
12136191c ವಿಶ್ರಾವ್ಯ ಪಲಿತಃ ಪ್ರಾಜ್ಞೋ ಬಿಲಮನ್ಯಜ್ಜಗಾಮ ಹ||

ಅನಂತರ ಶಾಸ್ತ್ರಾರ್ಥತತ್ತ್ವಜ್ಞ ಪ್ರಾಜ್ಞ ಪಲಿತನು ತನ್ನ ಬುದ್ಧಿಸಾಮಾರ್ಥ್ಯವನ್ನು ತೋರಿಸಿ ತನ್ನ ಬಿಲಕ್ಕೆ ಹೊರಟುಹೋಯಿತು.

12136192a ಏವಂ ಪ್ರಜ್ಞಾವತಾ ಬುದ್ಧ್ಯಾ ದುರ್ಬಲೇನ ಮಹಾಬಲಾಃ|
12136192c ಏಕೇನ ಬಹವೋಽಮಿತ್ರಾಃ ಪಲಿತೇನಾಭಿಸಂಧಿತಾಃ||
12136193a ಅರಿಣಾಪಿ ಸಮರ್ಥೇನ ಸಂಧಿಂ ಕುರ್ವೀತ ಪಂಡಿತಃ|
12136193c ಮೂಷಕಶ್ಚ ಬಿಡಾಲಶ್ಚ ಮುಕ್ತಾವನ್ಯೋನ್ಯಸಂಶ್ರಯಾತ್||

ಈ ರೀತಿ ದುರ್ಬಲನೂ ಮತ್ತು ಒಬ್ಬಂಟಿಗನೂ ಆಗಿದ್ದೂ ಬುದ್ಧಿವಂತ ಪಲಿತ ಇಲಿಯು ತನ್ನ ಬುದ್ಧಿ ಬಲದಿಂದ ತನಗಿಂತಲೂ ಹೆಚ್ಚು ಪ್ರಬಲವಾಗಿದ್ದ ಶತ್ರುಗಳನ್ನು ದೂರಮಾಡಿಕೊಂಡಿತು. ಆದುದರಿಂದ ಆಪತ್ತಿನಲ್ಲಿ ಪಂಡಿತನು ಶತ್ರುವಿನೊಂದಿಗೂ ಸಂಧಿಯನ್ನು ಮಾಡಿಕೊಳ್ಳಬೇಕು. ಇಲಿ ಮತ್ತು ಬೆಕ್ಕು ಅನ್ಯೋನ್ಯರನ್ನು ಆಶ್ರಯಿಸಿ ಆಪತ್ತಿನಿಂದ ಮುಕ್ತರಾದರು.

12136194a ಇತ್ಯೇಷ ಕ್ಷತ್ರಧರ್ಮಸ್ಯ ಮಯಾ ಮಾರ್ಗೋಽನುದರ್ಶಿತಃ|

---

[604] ಶಾಖಿಂ ಹಿತ್ವಾ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136194c ವಿಸ್ತರೇಣ ಮಹೀಪಾಲ ಸಂಕ್ಷೇಪೇಣ ಪುನಃ ಶೃಣು||

ಮಹೀಪಾಲ! ಈ ದೃಷ್ಟಾಂತದಿಂದ ನಾನು ನಿನಗೆ ಕ್ಷತ್ರಧರ್ಮದ ಮಾರ್ಗವನ್ನು ವಿಸ್ತಾರವಾಗಿ ತೋರಿಸಿಕೊಟ್ಟಿದ್ದೇನೆ. ಈಗ ಸಂಕ್ಷಿಪ್ತವಾಗಿ ಪುನಃ ಕೇಳು.

12136195a ಅನ್ಯೋನ್ಯಕೃತವೈರೌ ತು ಚಕ್ರತುಃ ಪ್ರೀತಿಮುತ್ತಮಾಮ್|
12136195c ಅನ್ಯೋನ್ಯಮಭಿಸಂಧಾತುಮಭೂಚ್ಚೈವ ತಯೋರ್ಮತಿಃ||

ಬೆಕ್ಕು ಮತ್ತು ಇಲಿ ಅನ್ಯೋನ್ಯರ ಬದ್ಧವೈರಿಗಳಾಗಿದ್ದರೂ ಉತ್ತಮ ಪ್ರೀತಿಯಿಂದಲೇ ನಡೆದುಕೊಂಡರು. ಅನ್ಯೋನ್ಯರೊಡನೆ ಸಂಧಿಮಾಡಿಕೊಳ್ಳುವ ಬುದ್ಧಿಯು ಅವರಲ್ಲಿ ಹುಟ್ಟಿಕೊಂಡಿತು.

12136196a ತತ್ರ ಪ್ರಾಜ್ಞೋಽಭಿಸಂಧತ್ತೇ ಸಮ್ಯಗ್ಬುದ್ಧಿಬಲಾಶ್ರಯಾತ್|
12136196c ಅಭಿಸಂಧೀಯತೇ ಪ್ರಾಜ್ಞಃ ಪ್ರಮಾದಾದಪಿ ಚಾಬುಧೈಃ||

ಇಂತಹ ಸಮಯದಲ್ಲಿ ಪ್ರಾಜ್ಞನಾದವನು ಉತ್ತಮ ಬುದ್ಧಿಬಲದ ಸಹಾಯದಿಂದ ಶತ್ರುವನ್ನು ದೂರಮಾಡಿಕೊಳ್ಳಬೇಕು. ಇದೇ ರೀತಿಯಲ್ಲಿ ಪ್ರಾಜ್ಞನು ಸಾವಧಾನದಿಂದ ಇಲ್ಲದಿದ್ದರೆ ಇನ್ನೊಬ್ಬ ಬುದ್ಧಿವಂತನಿಂದ ನಾಶಹೊಂದುತ್ತಾನೆ.

12136197a ತಸ್ಮಾದಭೀತವದ್ಭೀತೋ ವಿಶ್ವಸ್ತವದವಿಶ್ವಸನ್|
12136197c ನ ಹ್ಯಪ್ರಮತ್ತಶ್ಚಲತಿ ಚಲಿತೋ ವಾ ವಿನಶ್ಯತಿ||

ಆದುದರಿಂದ ಭಯಭೀತನಾಗಿದ್ದರೂ ನಿರ್ಭಯನಂತೆ ಮತ್ತು ವಿಶ್ವಾಸವಿಲ್ಲದಿದ್ದರೂ ವಿಶ್ವಾಸವನ್ನಿಟ್ಟಿರುವವನಂತೆ ಇರಬೇಕು. ಎಂದೂ ಅಸಾವಧಾನತೆಯಿಂದ ನಡೆಯಬಾರದು. ಹಾಗಿದ್ದರೆ ನಷ್ಟವನ್ನು

ಹೊಂದುತ್ತಾನೆ.

12136198a ಕಾಲೇನ ರಿಪುಣಾ ಸಂಧಿಃ ಕಾಲೇ ಮಿತ್ರೇಣ ವಿಗ್ರಹಃ|
12136198c ಕಾರ್ಯ ಇತ್ಯೇವ ತತ್ತ್ವಜ್ಞಾಃ[605] ಪ್ರಾಹುರ್ನಿತ್ಯಂ ಯುಧಿಷ್ಠಿರ||

ಯುಧಿಷ್ಠಿರ! ಕಾಲಕ್ಕನುಗುಣವಾಗಿ ಶತ್ರುವಿನೊಂದಿಗೂ ಸಂಧಿಯನ್ನು ಮಾಡಿಕೊಳ್ಳಬೇಕು ಮತ್ತು ಮಿತ್ರನೊಂದಿಗೂ ಯುದ್ಧ ಮಾಡಬೇಕು. ತತ್ತ್ವಜ್ಞರು ಸದಾ ಇದನ್ನೇ ಹೇಳುತ್ತಾರೆ.

12136199a ಏವಂ ಮತ್ವಾ ಮಹಾರಾಜ ಶಾಸ್ತ್ರಾರ್ಥಮಭಿಗಮ್ಯ ಚ|
12136199c ಅಭಿಯುಕ್ತೋಽಪ್ರಮತ್ತಶ್ಚ ಪ್ರಾಗ್ಭಯಾದ್ಭೀತವಚ್ಚರೇತ್||

ಮಹಾರಾಜ! ಹೀಗೆ ಶಾಸ್ತ್ರಾರ್ಥವನ್ನು ಮನದಟ್ಟುಮಾಡಿಕೊಂಡು ಅಪ್ರಮತ್ತನಾಗಿದ್ದುಕೊಂಡು ಆಪತ್ತು ಬರುವ ಮೊದಲೇ ಭಯವಿಲ್ಲದಿದ್ದರೂ ಭಯಭೀತನಾದಂತೆ ವರ್ತಿಸಬೇಕು.

12136200a ಭೀತವತ್ಸಂವಿಧಿಃ ಕಾರ್ಯಃ ಪ್ರತಿಸಂಧಿಸ್ತಥೈವ ಚ|
12136200c ಭಯಾದುತ್ಪದ್ಯತೇ ಬುದ್ಧಿರಪ್ರಮತ್ತಾಭಿಯೋಗಜಾ||

ಬಲಶಾಲೀ ಶತ್ರುವಿನ ಮುಂದೆ ಭಯಗೊಂಡವನಂತೆ ಇರಬೇಕು. ಅದೇ ರೀತಿಯಲ್ಲಿ ಅವನೊಂದಿಗೆ ಸಂಧಿಯನ್ನೂ ಮಾಡಿಕೊಳ್ಳಬೇಕು. ಸಾವಧಾನದಿಂದಿರುವ ಪುರುಷನು ಉದ್ಯೋಗಶೀಲನಾಗಿದ್ದರೆ ಸ್ವಯಂ ಅವನಲ್ಲಿ ಸಂಕಟದಿಂದ ಪಾರಾಗುವ ಬುದ್ಧಿಯು ಉತ್ಪನ್ನವಾಗುತ್ತದೆ.

12136201a ನ ಭಯಂ ವಿದ್ಯತೇ ರಾಜನ್ ಭೀತಸ್ಯಾನಾಗತೇ ಭಯೇ|
12136201c ಅಭೀತಸ್ಯ ತು ವಿಸ್ರಂಭಾತ್ಸುಮಹಜ್ಜಾಯತೇ ಭಯಮ್||

---

605 ಸಂಧಿಜ್ಞಾಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ರಾಜನ್! ಭಯವುಂಟಾಗುವುದಕ್ಕೆ ಮೊದಲೇ ಅದರ ಕುರಿತು ಸಶಂಕಿತನಾಗಿರುವವನಿಗೆ ಪ್ರಾಯಶಃ ಭಯದ ಸನ್ನಿವೇಶವೇ ಬರುವುದಿಲ್ಲ. ಆದರೆ ನಿಃಶಂಕನಾಗಿ ಇನ್ನೊಬ್ಬರ ಮೇಲೆ ವಿಶ್ವಾಸವನ್ನಿಡುವವನಿಗೆ ಒಮ್ಮಿಂದೊಮ್ಮೆಲೇ ಅತಿ ದೊಡ್ಡ ಭಯವನ್ನು ಎದುರಿಸಬೇಕಾಗಿ ಬರುತ್ತದೆ.

12136202a ನ ಭೀರುರಿತಿ ಚಾತ್ಯಂತಂ[606] ಮಂತ್ರೋಽದೇಯಃ ಕಥಂ ಚನ|
12136202c ಅವಿಜ್ಞಾನಾದ್ಧಿ ವಿಜ್ಞಾತೇ ಗಚ್ಛೇದಾಸ್ಪದದರ್ಶಿಷು||

ತನಗೆ ಭಯವಿಲ್ಲ ಎಂದು ತಿಳಿದಿರುವವನಿಗೆ ಯಾವುದೇ ಸಲಹೆಯನ್ನು ನೀಡಬಾರದು. ಏಕೆಂದರೆ ಅವನು ಇನ್ನೊಬ್ಬರ ಸಲಹೆಯನ್ನು ಕೇಳುವುದೇ ಇಲ್ಲ. ಭಯವೇನೆಂದು ತಿಳಿಯದೇ ಇರುವವನಿಗಿಂತ ಭಯವನ್ನು ತಿಳಿದವನೇ ಸರಿ. ಏಕೆಂದರೆ ಅವನು ಅದರಿಂದ ತಪ್ಪಿಸಿಕೊಳ್ಳುವ ಉಪಾಯವನ್ನು ತಿಳಿಯಲು ಪರಿಣಾಮದರ್ಶಿಗಳ ಬಳಿ ಹೋಗುತ್ತಾನೆ.

12136203a ತಸ್ಮಾದಭೀತವದ್ ಭೀತೋ ವಿಶ್ವಸ್ತವದವಿಶ್ವಸನ್|
12136203c ಕಾರ್ಯಾಣಾಂ ಗುರುತಾಂ ಬುದ್ಧ್ವಾ ನಾನೃತಂ ಕಿಂ ಚಿದಾಚರೇತ್||

ಆದುದರಿಂದ ಭೀತನಾಗಿದ್ದರೂ ಭಯವಿಲ್ಲದವಂತೆ ಇರಬೇಕಾಗುತ್ತದೆ. ವಿಶ್ವಾಸವಿಲ್ಲದಿದ್ದರೂ ವಿಶ್ವಾಸವಿರುವವನಂತೆ ಇರಬೇಕಾಗುತ್ತದೆ. ಏಕೆಂದರೆ ಕಠಿಣತೆಯನ್ನು ನೋಡಿಕೊಂಡು ಯಾರೂ ಎಂದೂ ಮಿಥ್ಯಾಚರಣೆಯನ್ನು ಮಾಡಬಾರದು.

---

606 ಅಭೀಶ್ಚರತಿ ಯೋ ನಿತ್ಯಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12136204a ಏವಮೇತನ್ಮಯಾ ಪ್ರೋಕ್ತಮಿತಿಹಾಸಂ ಯುಧಿಷ್ಠಿರ|
12136204c ಶ್ರುತ್ವಾ ತ್ವಂ ಸುಹೃದಾಂ ಮಧ್ಯೇ ಯಥಾವತ್ಸಮುಪಾಚರ||

ಯುಧಿಷ್ಠಿರ! ಹೀಗೆ ನಾನು ನಿನಗೆ ಈ ಇತಿಹಾಸವನ್ನು ಹೇಳಿದ್ದೇನೆ. ಇದನ್ನು ಕೇಳಿ ನೀನು ಸುಹೃದಯರ ಮಧ್ಯೆ ಯಥಾಯೋಗ್ಯವಾಗಿ ನಡೆದುಕೋ.

12136205a ಉಪಲಭ್ಯ ಮತಿಂ ಚಾಗ್ರ್ಯಾಮರಿಮಿತ್ರಾಂತರಂ ತಥಾ|
12136205c ಸಂಧಿವಿಗ್ರಹಕಾಲಂ ಚ ಮೋಕ್ಷೋಪಾಯಂ ತಥಾಪದಿ||

ಶ್ರೇಷ್ಠ ಬುದ್ಧಿಯನ್ನು ಆಶ್ರಯಿಸಿ ಶತ್ರು-ಮಿತ್ರರ ನಡುವಿನ ಭೇದ, ಸಂಧಿ-ವಿಗ್ರಹಗಳ ಕಾಲ ಮತ್ತು ಆಪತ್ತಿನಲ್ಲಿ ಬಿಡುಗಡೆಹೊಂದುವ ಉಪಾಯವನ್ನು ತಿಳಿದುಕೋ.

12136206a ಶತ್ರುಸಾಧಾರಣೇ ಕೃತ್ಯೇ ಕೃತ್ವಾ ಸಂಧಿಂ ಬಲೀಯಸಾ|
12136206c ಸಮಾಗಮಂ ಚರೇದ್ಯುಕ್ತ್ಯಾ ಕೃತಾರ್ಥೋ ನ ಚ ವಿಶ್ವಸೇತ್||

ತನ್ನ ಮತ್ತು ಶತ್ರುವಿನ ಪ್ರಯೋಜನವು ಒಂದೇ ಸಮನಾಗಿದ್ದರೆ ಬಲಶಾಲೀ ಶತ್ರುವಿನೊಂದಿಗೆ ಸಂಧಿಯನ್ನು ಮಾಡಿಕೊಂಡು ಅವನೊಂದಿಗೆ ಸೇರಿ ಯುಕ್ತಿಪೂರ್ವಕವಾಗಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕು ಮತ್ತು ಕಾರ್ಯವು ಪೂರ್ಣವಾದ ನಂತರ ಪುನಃ ಅವನ ಮೇಲೆ ಎಂದೂ ವಿಶ್ವಾಸವನ್ನು ಇಡಬಾರದು.

12136207a ಅವಿರುದ್ಧಾಂ ತ್ರಿವರ್ಗೇಣ ನೀತಿಮೇತಾಂ ಯುಧಿಷ್ಠಿರ|
12136207c ಅಭ್ಯುತ್ತಿಷ್ಠ ಶ್ರುತಾದಸ್ಮಾದ್ಭೂಯಸ್ತ್ವಂ ರಂಜಯನ್ ಪ್ರಜಾಃ||

ಯುಧಿಷ್ಠಿರ! ಈ ನೀತಿಯು ಧರ್ಮ-ಅರ್ಥ-ಕಾಮ ಈ ತ್ರಿವರ್ಗಗಳಿಗೆ

ಅನುಕೂಲವಾಗಿದೆ. ನೀನು ಈ ನೀತಿಯನ್ನು ಆಶ್ರಯಿಸು. ನನ್ನನ್ನು ಕೇಳಿ ಪುನಃ ಪ್ರಜೆಗಳನ್ನು ರಂಜಿಸಲು ಎದ್ದೇಳು.

12136208a ಬ್ರಾಹ್ಮಣೈಶ್ಚಾಪಿ ತೇ ಸಾರ್ಧಂ ಯಾತ್ರಾ ಭವತು ಪಾಂಡವ|
12136208c ಬ್ರಾಹ್ಮಣಾ ಹಿ ಪರಂ ಶ್ರೇಯೋ ದಿವಿ ಚೇಹ ಚ ಭಾರತ||

ಪಾಂಡವ! ಭಾರತ! ನಿನ್ನ ಜೀವನ ಯಾತ್ರೆಯು ಬ್ರಾಹ್ಮಣರೊಂದಿಗೆ ಸಾಗಲಿ. ಬ್ರಾಹ್ಮಣರು ಇಹದಲ್ಲಿ ಮತ್ತು ಪರಲೋಕದಲ್ಲಿ ಪರಮ ಶ್ರೇಯಸ್ಸನ್ನು ನೀಡುತ್ತಾರೆ.

12136209a ಏತೇ ಧರ್ಮಸ್ಯ ವೇತ್ತಾರಃ ಕೃತಜ್ಞಾಃ ಸತತಂ ಪ್ರಭೋ|
12136209c ಪೂಜಿತಾಃ ಶುಭಕರ್ಮಾಣಃ ಪೂರ್ವಜಿತ್ಯಾ[607] ನರಾಧಿಪ||

ಪ್ರಭೋ! ನರಾಧಿಪ! ಧರ್ಮವನ್ನು ತಿಳಿದಿರುವ ಇವರು ಸತತವೂ ಕೃತಜ್ಞರಾಗಿರುತ್ತಾರೆ. ಪೂಜಿಸಿದರೆ ಅವರು ನಿನ್ನ ಶುಭಕಾರಕರೂ ಶುಭಚಿಂತಕರೂ ಆಗುತ್ತಾರೆ.

12136210a ರಾಜ್ಯಂ ಶ್ರೇಯಃ ಪರಂ ರಾಜನ್ಯಶಃ ಕೀರ್ತಿಂ ಚ ಲಪ್ಸ್ಯಸೇ|
12136210c ಕುಲಸ್ಯ ಸಂತತಿಂ ಚೈವ ಯಥಾನ್ಯಾಯಂ ಯಥಾಕ್ರಮಮ್||

ರಾಜನ್! ಬ್ರಾಹ್ಮಣರನು ಸತ್ಕರಿಸುವುದರಿಂದ ನೀನು ಯಥಾನ್ಯಾಯವಾಗಿ ಮತ್ತು ಯಥಾಕ್ರಮವಾಗಿ ರಾಜ್ಯ, ಪರಮ ಶ್ರೇಯಸ್ಸು, ಯಶಸ್ಸು, ಕೀರ್ತಿ ಮತ್ತು ಕುಲದ ಸಂತತಿಯನ್ನೂ ಪಡೆದುಕೊಳ್ಳುತ್ತೀಯೆ.

12136211a ದ್ವಯೋರಿಮಂ ಭಾರತ ಸಂಧಿವಿಗ್ರಹಂ

---

[607] ಪೂಜಯೇತ್ ತಾನ್ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಸುಭಾಷಿತಂ ಬುದ್ಧಿವಿಶೇಷಕಾರಿತಮ್|
12136211c ತಥಾನ್ವವೇಕ್ಷ್ಯ ಕ್ಷಿತಿಪೇನ ಸರ್ವದಾ
ನಿಷೇವಿತವ್ಯಂ ನೃಪ ಶತ್ರುಮಂಡಲೇ||

ಭಾರತ! ನೃಪ! ಈ ಸುಭಾಷಿತವು ಸಂಧಿ ಮತ್ತು ವಿಗ್ರಹಗಳ ಜ್ಞಾನ ಮತ್ತು ವಿಶೇಷ ಬುದ್ಧಿಯನ್ನು ನೀಡುತ್ತದೆ. ಇದನ್ನು ಚೆನ್ನಾಗಿ ತಿಳಿದುಕೊಂಡು ಕ್ಷಿತಿಪನು ಸರ್ವದಾ ಶತ್ರುಮಂಡಲದಲ್ಲಿ ಇದರಂತೆ ನಡೆದುಕೊಳ್ಳಬೇಕು."

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಮಾರ್ಜಾರಮೂಷಿಕಸಂವಾದೇ ಷಟ್ತ್ರಿಂಶಾತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಮಾರ್ಜಾರಮೂಷಿಕಸಂವಾದ ಎನ್ನುವ ನೂರಾಮೂವತ್ತಾರನೇ ಅಧ್ಯಾಯವು.

೧೩೭

ಬ್ರಹ್ಮದತ್ತ-ಪೂಜನೀ ಸಂವಾದ

ಶತ್ರುವಿನೊಂದಿಗೆ ಸದಾ ಸಾವಧಾನದಿಂದ ಇರುವುದರ ಕುರಿತು ರಾಜಾ ಬ್ರಹ್ಮದತ್ತ ಮತ್ತು ಪಕ್ಷೀ ಪೂಜನೀಯರ ಸಂವಾದ (1-109).

12137001 ಯುಧಿಷ್ಠಿರ ಉವಾಚ|
12137001a ಉಕ್ತೋ ಮಂತ್ರೋ ಮಹಾಬಾಹೋ ನ ವಿಶ್ವಾಸೋಽಸ್ತಿ ಶತ್ರುಷು|
12137001c ಕಥಂ ಹಿ ರಾಜಾ ವರ್ತೇತ ಯದಿ ಸರ್ವತ್ರ ನಾಶ್ವಸೇತ್||

ಯುಧಿಷ್ಠಿರನು ಹೇಳಿದನು: "ಮಹಾಬಾಹೋ! ಶತ್ರುವಿನ ಮೇಲೆ ವಿಶ್ವಾಸವನ್ನಿಡಬಾರದು ಎಂಬ ಸಲಹೆಯನ್ನು ನೀನು ನೀಡಿದ್ದೀಯೆ. ಎಲ್ಲರೊಡನೆಯೂ ಅವಿಶ್ವಾಸದಿಂದಲೇ ಇರಬೇಕಾದರೆ ರಾಜನು ಹೇಗೆ ನಡೆದುಕೊಳ್ಳಬೇಕು?

12137002a ವಿಶ್ವಾಸಾದ್ಧಿ ಪರಂ ರಾಜ್ಞೋ ರಾಜನ್ನುತ್ಪದ್ಯತೇ ಭಯಮ್|
12137002c ಕಥಂ ವೈ ನಾಶ್ವಸನ್ರಾಜಾ ಶತ್ರೂನ್ ಜಯತಿ ಪಾರ್ಥಿವ||

ರಾಜನ್! ಪಾರ್ಥಿವ! ವಿಶ್ವಾಸದಿಂದ ರಾಜನಿಗೆ ಪರಮ ಭಯವುಂಟಾಗುವುದಾದರೆ ವಿಶ್ವಾಸವನ್ನಿಡದೇ ಅವನು ಶತ್ರುಗಳ ಮೇಲೆ ಜಯವನ್ನು ಹೇಗೆ ಸಾಧಿಸಬಹುದು?

12137003a ಏತನ್ಮೇ ಸಂಶಯಂ ಚಿಂಧಿ ಮನೋ ಮೇ ಸಂಪ್ರಮುಹ್ಯತಿ|
12137003c ಅವಿಶ್ವಾಸಕಥಾಮೇತಾಮುಪಶ್ರುತ್ಯ ಪಿತಾಮಹ||

ಪಿತಾಮಹ! ಅವಿಶ್ವಾಸದ ಕುರಿತಾದ ಈ ಕಥೆಯನ್ನು ಕೇಳಿ ನನ್ನ ಬುದ್ಧಿಯನ್ನು ಮೋಹವು ಮುಚ್ಚಿಬಿಟ್ಟಿದೆ. ನನ್ನ ಈ ಸಂಶಯವನ್ನು ಹೋಗಲಾಡಿಸು."

12137004 ಭೀಷ್ಮ ಉವಾಚ|
12137004a ಶೃಣು ಕೌಂತೇಯ ಯೋ ವೃತ್ತೋ ಬ್ರಹ್ಮದತ್ತನಿವೇಶನೇ|
12137004c ಪೂಜನ್ಯಾ ಸಹ ಸಂವಾದೋ ಬ್ರಹ್ಮದತ್ತಸ್ಯ ಪಾರ್ಥಿವ||

ಭೀಷ್ಮನು ಹೇಳಿದನು: "ಕೌಂತೇಯ! ಪಾರ್ಥಿವ! ಬ್ರಹ್ಮದತ್ತನ ಭವನದಲ್ಲಿ ನಡೆದ ಬ್ರಹ್ಮದತ್ತ ಮತ್ತು ಪೂಜನಿಯ ಸಂವಾದವನ್ನು ಕೇಳು.

12137005a ಕಾಂಪಿಲ್ಯೇ ಬ್ರಹ್ಮದತ್ತಸ್ಯ ಅಂತಃಪುರನಿವಾಸಿನೀ|
12137005c ಪೂಜನೀ ನಾಮ ಶಕುನೀ ದೀರ್ಘಕಾಲಂ ಸಹೋಷಿತಾ||

ಕಾಂಪಿಲ್ಯದಲ್ಲಿ ಬ್ರಹ್ಮದತ್ತನ ಅಂತಃಪುರದಲ್ಲಿ ಪೂಜನೀ ಎಂಬ ಹೆಸರಿನ ಹಕ್ಕಿಯು ಬಹಳಕಾಲದಿಂದ ವಾಸಿಸುತ್ತಿತ್ತು[608].

12137006a ರುತಜ್ಞಾ ಸರ್ವಭೂತಾನಾಂ ಯಥಾ ವೈ ಜೀವಜೀವಕಃ|
12137006c ಸರ್ವಜ್ಞಾ ಸರ್ವಧರ್ಮಜ್ಞಾ ತಿರ್ಯಗ್ಯೋನಿಗತಾಪಿ ಸಾ||

ಆ ಪಕ್ಷಿಯು ಜೀವಜೀವಕ ಪಕ್ಷಿಯಂತೆ ಸರ್ವಭೂತಗಳ ಮಾತನ್ನು ತಿಳಿಯುವಂಥವಳಾಗಿದ್ದಳು. ಕೀಳು ಯೋನಿಯಲ್ಲಿ ಜನಿಸಿದ್ದರೂ ಅದು ಸರ್ವಜ್ಞಳೂ ಸರ್ವಧರ್ಮಜ್ಞಳೂ ಆಗಿದ್ದಳು.

12137007a ಅಭಿಪ್ರಜಾತಾ ಸಾ ತತ್ರ ಪುತ್ರಮೇಕಂ ಸುವರ್ಚಸಮ್|
12137007c ಸಮಕಾಲಂ ಚ ರಾಜ್ಞೋಽಪಿ ದೇವ್ಯಾಃ ಪುತ್ರೋ ವ್ಯಜಾಯತ||

ಅಲ್ಲಿ ಅದು ಒಂದು ಸುವರ್ಚಕ ಪುತ್ರನಿಗೆ ಜನ್ಮವಿತ್ತಳು. ಅದೇ ಸಮಯದಲ್ಲಿ ರಾಜನೂ ಕೂಡ ರಾಣಿಯಲ್ಲಿ ಓರ್ವ ಪುತ್ರನನ್ನು ಹುಟ್ಟಿಸಿದನು.

[609]12137008a ಸಮುದ್ರತೀರಂ ಗತ್ವಾ ಸಾ ತ್ವಾಜಹಾರ ಫಲದ್ವಯಮ್|
12137008c ಪುಷ್ಟ್ಯರ್ಥಂ ಚ ಸ್ವಪುತ್ರಸ್ಯ ರಾಜಪುತ್ರಸ್ಯ ಚೈವ ಹ||

---

608 ಬ್ರಹ್ಮದತ್ತ-ಪೂಜನಿಯರ ಈ ಕಥೆಯು ಮುಂದೆ ಹರಿವಂಶದ ಅಧ್ಯಾಯ ೨೦ರಲ್ಲಿ ಬರುತ್ತದೆ.

609 ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಶ್ಲೋಕಾರ್ಧವಿದೆ:
ತಯೋರರ್ಥೇ ಕೃತಜ್ಞಾ ಸಾ ಖೇಚರೀ ಪೂಜನೀ ಸದಾ|

ಪೂಜನಿಯು ಸಮುದ್ರತೀರಕ್ಕೆ ಹೋಗಿ ತನ್ನ ಪುತ್ರನ ಮತ್ತು ರಾಜಪುತ್ರನ ಪುಷ್ಟಿಗಾಗಿ ಎರಡು ಫಲಗಳನ್ನು ತೆಗೆದುಕೊಂಡು ಬಂದಳು.

12137009a ಫಲಮೇಕಂ ಸುತಾಯಾದಾದ್ರಾಜಪುತ್ರಾಯ ಚಾಪರಮ್|
12137009c ಅಮೃತಾಸ್ವಾದಸದೃಶಂ ಬಲತೇಜೋವಿವರ್ಧನಮ್|
12137009e ತತ್ರಾಗಚ್ಚತ್ಪರಾಂ ವೃದ್ಧಿಂ ರಾಜಪುತ್ರಃ ಫಲಾಶನಾತ್||

ಅಮೃತದ ರುಚಿಯಂತಿದ್ದ ಮತ್ತು ಬಲ-ತೇಜಸ್ಸುಗಳನ್ನು ವೃದ್ಧಿಗೊಳಿಸುತ್ತಿದ್ದ ಆ ಒಂದು ಫಲವನ್ನು ತನ್ನ ಮಗನಿಗೂ ಇನ್ನೊಂದನ್ನು ರಾಜಪುತ್ರನಿಗೂ ಕೊಟ್ಟಳು. ಆ ಹಣ್ಣನ್ನು ತಿಂದು ರಾಜಪುತ್ರನು ಪರಮ ವೃದ್ಧಿಯನ್ನು ಹೊಂದಿದನು.

12137010a ಧಾತ್ರ್ಯಾ ಹಸ್ತಗತಶ್ಚಾಪಿ ತೇನಾಕ್ರೀಡತ ಪಕ್ಷಿಣಾ|
12137010c ಶೂನ್ಯೇ ತು ತಮುಪಾದಾಯ ಪಕ್ಷಿಣಂ ಸಮಜಾತಕಮ್|
12137010e ಹತ್ವಾ ತತಃ ಸ ರಾಜೇಂದ್ರ ಧಾತ್ರ್ಯಾ ಹಸ್ತಮುಪಾಗಮತ್||

ಧಾತ್ರಿಯು ಅವನನ್ನು ಎತ್ತಿಕೊಂಡಿದ್ದರೂ ಅವನು ಪಕ್ಷಿಯೊಂದಿಗೆ ಆಡತೊಡಗಿದನು. ರಾಜೇಂದ್ರ! ತನ್ನ ಜೊತೆಗೇ ಹುಟ್ಟಿದ್ದ ಆ ಪಕ್ಷಿಯನ್ನು ಯಾರೂ ಇಲ್ಲದ ಸ್ಥಾನಕ್ಕೆ ಕೊಂಡೊಯ್ದು ರಾಜಕುಮಾರನು ಅದನ್ನು ಕೊಂದು ಹಾಕಿದನು ಮತ್ತು ನಂತರ ಧಾತ್ರಿಯ ಗೋದಿಯಲ್ಲಿ ಬಂದನು.

12137011a ಅಥ ಸಾ ಶಕುನೀ ರಾಜನ್ನಾಗಮತ್ ಫಲಹಾರಿಕಾ|
12137011c ಅಪಶ್ಯನ್ನಿಹತಂ ಪುತ್ರಂ ತೇನ ಬಾಲೇನ ಭೂತಲೇ||

ರಾಜನ್! ಪಕ್ಷಿ ಪೂಜನಿಯು ಫಲವನ್ನು ತೆಗೆದುಕೊಂಡು ಹಿಂದಿರುಗಲು

ರಾಜಕುಮಾರನಿಂದ ಹತನಾದ ತನ್ನ ಪುತ್ರನನ್ನು ನೆಲದಮೇಲೆ ನೋಡಿದಳು.

12137012a ಬಾಷ್ಪಪೂರ್ಣಮುಖೀ ದೀನಾ ದೃಷ್ಟ್ವಾ ಸಾ ತು ಹತಂ ಸುತಮ್|
12137012c ಪೂಜನೀ ದುಃಖಸಂತಪ್ತಾ ರುದತೀ ವಾಕ್ಯಮಬ್ರವೀತ್||

ಸುತನು ಹತನಾದುದನ್ನು ನೋಡಿ ದೀನಳಾದ ಅವಳ ಮುಖದ ಮೇಲೆ ಕಣ್ಣೀರು ಸುರಿಯಿತು. ದುಃಖಸಂತಪ್ತಳಾದ ಪೂಜನಿಯು ಅಳುತ್ತಾ ಈ ಮಾತನ್ನಾಡಿದಳು:

12137013a ಕ್ಷತ್ರಿಯೇ ಸಂಗತಂ ನಾಸ್ತಿ ನ ಪ್ರೀತಿರ್ನ ಚ ಸೌಹೃದಮ್|
12137013c ಕಾರಣೇ ಸಂಭಜಂತೀಹ[610] ಕೃತಾರ್ಥಾಃ ಸಂತ್ಯಜಂತಿ ಚ||

“ಕ್ಷತ್ರಿಯನಿಗೆ ಸಂಬಂಧವನ್ನು ನಿಭಾಯಿಸುವ ಭಾವನೆಯು ಇರುವುದಿಲ್ಲ. ಅವನಲ್ಲಿ ಪ್ರೀತಿಯೂ ಇರುವುದಿಲ್ಲ ಮತ್ತು ಸೌಹಾರ್ದತೆಯೂ ಇರುವುದಿಲ್ಲ. ಯಾವುದೇ ಕಾರಣದಿಂದ ಮಾತ್ರ ಅವನು ಇತರರನ್ನು ಪ್ರೀತಿಸುತ್ತಾನೆ. ಆ ಕಾರಣವು ಸಿದ್ಧವಾದ ನಂತರ ಅವರನ್ನು ತ್ಯಜಿಸಿಬಿಡುತ್ತಾನೆ.

12137014a ಕ್ಷತ್ರಿಯೇಷು ನ ವಿಶ್ವಾಸಃ ಕಾರ್ಯಃ ಸರ್ವೋಪಘಾತಿಷು|
12137014c ಅಪಕೃತ್ಯಾಪಿ ಸತತಂ ಸಾಂತ್ವಯಂತಿ ನಿರರ್ಥಕಮ್||

ಸರ್ವರಿಗೂ ಅಪಘಾತವನ್ನೆಸಗುವ ಕ್ಷತ್ರಿಯರಲ್ಲಿ ವಿಶ್ವಾಸವನ್ನಿಡಬಾರದು. ಸತತವೂ ಅಪಕೃತ್ಯಗಳನ್ನು ಮಾಡುತ್ತಿದ್ದರೂ ನಿರರ್ಥಕವಾದ ಸಾಂತ್ವನವನ್ನು ನೀಡುತ್ತಿರುತ್ತಾರೆ.

---

610 ಕಾರಣಾತ್ ಸಾಂತ್ವಯತ್ಯೇತೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).



12137015a ಅಹಮಸ್ಯ ಕರೋಮ್ಯದ್ಯ ಸದೃಶೀಂ ವೈರಯಾತನಾಮ್।
12137015c ಕೃತಘ್ನಸ್ಯ ನೃಶಂಸಸ್ಯ ಭೃಶಂ ವಿಶ್ವಾಸಘಾತಿನಃ॥

ಇಂದು ನಾನು ಈ ಕೃತಘ್ನ, ಅತ್ಯಂತ ಕ್ರೂರಿ ಮತ್ತು ವಿಶ್ವಾಸಘಾತಿಯ

ವೈರಯಾತನೆಯ ಪ್ರತೀಕಾರವನ್ನು ಮಾಡಿಯೇ ಮಾಡುತ್ತೇನೆ.

12137016a ಸಹಸಂಜಾತವೃದ್ಧಸ್ಯ ತಥೈವ ಸಹಭೋಜಿನಃ|
12137016c ಶರಣಾಗತಸ್ಯ ಚ ವಧಸ್ತ್ರಿವಿಧಂ ಹ್ಯಸ್ಯ ಕಿಲ್ಬಿಷಮ್||

ಒಟ್ಟಿಗೇ ಹುಟ್ಟಿ ಬೆಳೆದು ಒಟ್ಟಿಗೇ ಊಟಮಾಡುವ ಮತ್ತು ಶರಣಾಗತನಾಗಿರುವವನ ವಧೆಯನ್ನು ಮಾಡುವವನಿಗೆ ಮೂರುವಿಧದ ಪಾಪಗಳು ತಗಲುತ್ತವೆ.”

12137017a ಇತ್ಯುಕ್ತ್ವಾ ಚರಣಾಭ್ಯಾಂ ತು ನೇತ್ರೇ ನೃಪಸುತಸ್ಯ ಸಾ|
12137017c ಭಿತ್ತ್ವಾ ಸ್ವಸ್ಥಾ ತತ ಇದಂ ಪೂಜನೀ ವಾಕ್ಯಮಬ್ರವೀತ್||

ಹೀಗೆ ಹೇಳಿ ಅವಳು ತನ್ನ ಎರಡೂ ಕಾಲುಗಳ ಪಂಜುಗಳಿಂದ ರಾಜಕುಮಾರನ ಎರಡೂ ಕಣ್ಣುಗಳನ್ನು ಕಿತ್ತು ಹಾಕಿದಳು. ಅನಂತರ ಅಲ್ಲಿ ನಿಂತು ಪೂಜನಿಯು ಈ ಮಾತನ್ನಾಡಿದಳು:

12137018a ಇಚ್ಚಯೈವ ಕೃತಂ ಪಾಪಂ ಸದ್ಯ ಏವೋಪಸರ್ಪತಿ|
12137018c ಕೃತಪ್ರತಿಕ್ರಿಯಂ ತೇಷಾಂ ನ ನಶ್ಯತಿ ಶುಭಾಶುಭಮ್||

“ಈ ಜಗತ್ತಿನಲ್ಲಿ ಸ್ವೇಚ್ಛೆಯಿಂದ ಪಾಡಿದ ಪಾಪದ ಫಲವು ತತ್ಕಾಲದಲ್ಲಿಯೇ ಕರ್ತಾರನಿಗೆ ದೊರೆಯುತ್ತದೆ. ಯಾವ ಪಾಪಕೃತ್ಯಕ್ಕೆ ಪ್ರತೀಕಾರವು ದೊರೆಯುತ್ತದೆಯೋ ಆ ಶುಭಾಶುಭ ಕರ್ಮವು ನಷ್ಟವಾಗಿಹೋಗುವುದಿಲ್ಲ.

12137019a ಪಾಪಂ ಕರ್ಮ ಕೃತಂ ಕಿಂ ಚಿನ್ನ ತಸ್ಮಿನ್ಯದಿ ವಿದ್ಯತೇ|
12137019c ನಿಪಾತ್ಯತೇಽಸ್ಯ ಪುತ್ರೇಷು ನ ಚೇತ್ಪೌತ್ರೇಷು ನಪ್ತೃಷು||

ಒಂದು ವೇಳೆ ಇಲ್ಲಿ ಮಾಡಿದ ಪಾಪಕರ್ಮಕ್ಕೆ ಯಾವುದೂ ಫಲವು

ಕರ್ತನಿಗೆ ದೊರಕಿದುದು ಕಾಣಿಸದೇ ಇದ್ದರೂ ಅವನ ಪುತ್ರ-ಪೌತ್ರರಿಗೆ ಮತ್ತು ಬಾಂಧವರಿಗೆ ಅದರ ಫಲವನ್ನು ಭೋಗಿಸಬೇಕಾಗುತ್ತದೆ ಎಂದು ತಿಳಿಯಬೇಕು.”

12137020 ಬ್ರಹ್ಮದತ್ತ ಉವಾಚ|
12137020a ಅಸ್ತಿ ವೈ ಕೃತಮಸ್ಮಾಭಿರಸ್ತಿ ಪ್ರತಿಕೃತಂ ತ್ವಯಾ|
12137020c ಉಭಯಂ ತತ್ಸಮೀಭೂತಂ ವಸ ಪೂಜನಿ ಮಾ ಗಮಃ||

ಬ್ರಹ್ಮದತ್ತನು ಹೇಳಿದನು: “ನಾವು ನಿನಗೆ ಅಪರಾಧವನ್ನೆಸಗಿದ್ದೆವು ಮತ್ತು ಅದಕ್ಕೆ ನೀನು ಪ್ರತೀಕಾರವನ್ನು ಮಾಡಿಯಾಯಿತು. ಈಗ ನಮ್ಮಿಬ್ಬರ ಕಾರ್ಯವೂ ಸರಿಸಮವಾಯಿತು. ಆದುದರಿಂದ ನೀನು ಇಲ್ಲಿಯೇ ಇರು. ಬೇರೆ ಎಲ್ಲಿಯೂ ಹೋಗಬೇಡ!”

12137021 ಪೂಜನ್ಯುವಾಚ|
12137021a ಸಕೃತ್ಕೃತಾಪರಾಧಸ್ಯ ತತ್ರೈವ ಪರಿಲಂಬತಃ|
12137021c ನ ತದ್ಬುಧಾಃ ಪ್ರಶಂಸಂತಿ ಶ್ರೇಯಸ್ತತ್ರಾಪಸರ್ಪಣಮ್||

ಪೂಜನಿಯು ಹೇಳಿದಳು: “ಅಪರಾಧಗೈದವನ ಆಶ್ರಯವನ್ನೇ ಅವಲಂಬಿಸಿರುವುದನ್ನು ವಿದ್ವಾಂಸರು ಪ್ರಶಂಸಿಸುವುದಿಲ್ಲ. ಅಲ್ಲಿಂದ ಹೋಗುವುದರಲ್ಲಿಯೇ ಶ್ರೇಯಸ್ಸಿದೆ.

12137022a ಸಾಂತ್ವೇ ಪ್ರಯುಕ್ತೇ ನೃಪತೇ ಕೃತವೈರೇ ನ ವಿಶ್ವಸೇತ್|
12137022c ಕ್ಷಿಪ್ರಂ ಪ್ರಬಧ್ಯತೇ[611] ಮೂಢೋ ನ ಹಿ ವೈರಂ ಪ್ರಶಾಮ್ಯತಿ||

ನೃಪತೇ! ಅಪರಾಧಗೈದವನು ಸಮಾಧಾನದ ನುಡಿಗಳನ್ನಾಡಿದರೂ

[611] ಕ್ಷಿಪ್ರಂ ಸ ವಧ್ಯತೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಅವನ ಮೇಲೆ ವಿಶ್ವಾಸವನ್ನಿಡಬಾರದು. ಅದರಿಂದ ವೈರವಂತೂ
ಕಡಿಮೆಯಾಗುವುದಿಲ್ಲ. ಮತ್ತು ಆ ಮೂಢನು ಬೇಗನೇ
ಬಾಧೆಗೊಳಗಾಗುತ್ತಾನೆ.

12137023a ಅನ್ಯೋನ್ಯಂ ಕೃತವೈರಾಣಾಂ ಪುತ್ರಪೌತ್ರಂ ನಿಗಚ್ಚತಿ|
12137023c ಪುತ್ರಪೌತ್ರೇ ವಿನಷ್ಟೇ ತು ಪರಲೋಕಂ ನಿಗಚ್ಚತಿ||

ಅನ್ಯೋನ್ಯರು ಸಾಧಿಸುವ ವೈರವು ಪುತ್ರಪೌತ್ರರನ್ನು ಬಾಧಿಸುತ್ತದೆ.
ಪುತ್ರಪೌತ್ರರು ನಷ್ಟವಾದರೆ ಪರಲೋಕವು ತಪ್ಪಿಹೋಗುತ್ತದೆ.

12137024a ಸರ್ವೇಷಾಂ ಕೃತವೈರಾಣಾಮವಿಶ್ವಾಸಃ ಸುಖಾವಹಃ|
12137024c ಏಕಾಂತತೋ ನ ವಿಶ್ವಾಸಃ ಕಾರ್ಯೋ ವಿಶ್ವಾಸಘಾತಕಃ||

ವೈರಿಗಳೆಲ್ಲರ ಮೇಲೂ ವಿಶ್ವಾಸವನ್ನಿಡದೇ ಇರುವುದು ಸುಖವನ್ನು
ತರುತ್ತದೆ. ವಿಶ್ವಾಸಘಾತಕನಮೇಲಂತೂ ವಿಶ್ವಾಸವನ್ನೇ ಇಡಬಾರದು.

12137025a ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇಽಪಿ ನ ವಿಶ್ವಸೇತ್|
12137025c ಕಾಮಂ ವಿಶ್ವಾಸಯೇದನ್ಯಾನ್ ಪರೇಷಾಂ ತು ನ ವಿಶ್ವಸೇತ್||

ವಿಶ್ವಾಸಪಾತ್ರನಲ್ಲದವನ ಮೇಲೆ ವಿಶ್ವಾಸವನ್ನಿಡಬಾರದು. ವಿಶ್ವಾಸಕ್ಕೆ
ಪಾತ್ರನಾದವನಲ್ಲಿಯೂ ಅತ್ಯಂತ ವಿಶ್ವಾಸವನ್ನಿಡಬಾರದು. ಏಕೆಂದರೆ
ವಿಶ್ವಾಸದಿಂದ ಉತ್ಪನ್ನವಾಗುವ ಭಯವು ವಿಶ್ವಾಸವನ್ನಿಟ್ಟವನ
ಮೂಲವನ್ನೇ ಕಡಿದುಹಾಕುತ್ತದೆ. ತನ್ನ ಮೇಲೆ ಇತರರು
ವಿಶ್ವಾಸನವನ್ನಿಟ್ಟರೂ ಇತರರ ಮೇಲೆ ವಿಶ್ವಾಸವನ್ನಿಡಬಾರದು.

12137026a ಮಾತಾ ಪಿತಾ ಬಾಂಧವಾನಾಂ ವರಿಷ್ಠೌ
ಭಾರ್ಯಾ ಜರಾ ಬೀಜಮಾತ್ರಂ ತು ಪುತ್ರಃ|

12137026c ಭ್ರಾತಾ ಶತ್ರುಃ ಕ್ಲಿನ್ನಪಾಣಿರ್ವಯಸ್ಯ
ಆತ್ಮಾ ಹ್ಯೇಕಃ ಸುಖದುಃಖಸ್ಯ ವೇತ್ತಾ||

ತಂದೆತಾಯಿಗಳು ಬಾಂಧವರಲ್ಲಿಯೇ ಶ್ರೇಷ್ಠರು. ಭಾರ್ಯೆಯು ವೃದ್ಧಾಪ್ಯ ಸ್ವರೂಪಳು. ಪುತ್ರನು ಬೀಜಮಾತ್ರನು. ಭ್ರಾತನು ಶತ್ರುವು. ಮತ್ತು ಮಿತ್ರನು ಅವನ ಕೈ ಒದ್ದೆಯಾಗಿರುವವರೆಗೆ ಮಾತ್ರ ಮಿತ್ರನು. ಕೇವಲ ಆತ್ಮವೇ ಸುಖ ಮತ್ತು ದುಃಖವನ್ನು ಭೋಗಿಸುವುದು ಎಂದು ಹೇಳಿದ್ದಾರೆ[612].

12137027a ಅನ್ಯೋನ್ಯಕೃತವೈರಾಣಾಂ ನ ಸಂಧಿರುಪಪದ್ಯತೇ|
12137027c ಸ ಚ ಹೇತುರತಿಕ್ರಾಂತೋ ಯದರ್ಥಮಹಮಾವಸಮ್||

ಅನ್ಯೋನ್ಯರಲ್ಲಿ ವೈರವುಂಟಾದಾಗ ಸಂಧಿಮಾಡಿಕೊಳ್ಳುವುದು ಸರಿಯಲ್ಲ. ಯಾವ ಉದ್ದೇಶದಿಂದ ನಾನು ಇಲ್ಲಿ ವಾಸಮಾಡಿಕೊಂಡಿದ್ದೆನೋ ಅದು ಪೂರ್ಣವಾಯಿತು.

12137028a ಪೂಜಿತಸ್ಯಾರ್ಥಮಾನಾಭ್ಯಾಂ ಜಂತೋಃ ಪೂರ್ವಾಪಕಾರಿಣಃ|

---

612 ಸ್ವಾಭಾವಿಕ ಸ್ನೇಹವಿರುವುದರಿಂದ ತಂದೆ ತಾಯಿಗಳು ಬಾಂಧವಗಣಗಳಲ್ಲಿಯೇ ಶ್ರೇಷ್ಠರು. ಪತ್ನಿಯು ವೀಯನಾಶಕಳಾದುದರಿಂದ ವೃದ್ಧಾವಸ್ಥೆಯ ಮೂರ್ತಿಮಾನ ರೂಪಳು. ಪುತ್ರನು ತನ್ನದೇ ಅಂಶದಿಂದ ಹುಟ್ಟಿದವನು. ಸಹೋದರನು ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲುದಾರನಾದುದರಿಂದ ಶತ್ರುವಿಗೆ ಸಮಾನನು. ಮಿತ್ರನು ಅವನ ಕೈ ಒದ್ದೆಯಾಗಿರುವವರೆಗೆ ಅರ್ಥಾತ್ ಅವನ ಸ್ವಾರ್ಥವು ಸಿದ್ಧಿಯಾಗುವವರೆಗೆ ಮಿತ್ರನಾಗಿರುತ್ತಾನೆ. ಕೇವಲ ಆತ್ಮವೇ ಸುಖ ಮತ್ತು ದುಃಖಗಳನ್ನು ಭೋಗಿಸುವಂಥಹುದು ಎಂದು ಹೇಳುತ್ತಾರೆ (ಗೀತಾ ಪ್ರೆಸ್).

12137028c ಚೇತೋ ಭವತ್ಯವಿಶ್ವಸ್ತಂ ಪೂರ್ವಂ ತ್ರಾಸಯತೇ ಬಲಾತ್[613]॥

ಮೊದಲು ಅಪಕಾರ ಮಾಡಿದ ಜಂತುವನ್ನು ದಾನ-ಮಾನಗಳಿಂದ ಪೂಜಿಸಿದರೂ ಅದರ ಚೇತನವು ವಿಶ್ವಸ್ತವಾಗಿರುವುದಿಲ್ಲ. ಹಿಂದಿನ ಬಲವು ಅದನ್ನು ಬೆದರಿಸುತ್ತಿರುತ್ತದೆ.

12137029a ಪೂರ್ವಂ ಸಂಮಾನನಾ ಯತ್ರ ಪಶ್ಚಾಚ್ಚೈವ ವಿಮಾನನಾ|
12137029c ಜಹ್ಯಾತ್ತಂ ಸತ್ತ್ವವಾನ್ವಾಸಂ ಸಂಮಾನಿತವಿಮಾನಿತಃ[614]॥

ಮೊದಲು ಎಲ್ಲಿ ಸನ್ಮಾನವು ದೊರಕಿತ್ತೋ ನಂತರ ಅಲ್ಲಿಯೇ ಅಪಮಾನವಾದಾಗ ಸಮ್ಮಾನಿತನಾಗಿ ನಂತರ ಅಪಮಾನಿತನಾದ ಆ ಸತ್ತ್ವವಾನನು ಅಲ್ಲಿ ವಾಸಮಾಡಿಕೊಂಡಿರಬಾರದು.

12137030a ಉಷಿತಾಸ್ಮಿ ತವಾಗಾರೇ ದೀರ್ಘಕಾಲಮಹಿಂಸಿತಾ[615]|
12137030c ತದಿದಂ ವೈರಮುತ್ಪನ್ನಂ ಸುಖಮಾಸ್ಸ್ವ ವ್ರಜಾಮ್ಯಹಮ್॥

ನಾನು ನಿನ್ನ ಭವನದಲ್ಲಿ ದೀರ್ಘಕಾಲದಿಂದ ಹಿಂಸೆಗೊಳಗಾಗಿದೇ ವಾಸಿಸಿಕೊಂಡಿದ್ದೆ. ಆದರೆ ಈಗ ಈ ವೈರವು ಉತ್ಪನ್ನವಾಗಿಬಿಟ್ಟಿತು. ಆದುದರಿಂದ ನಾನು ಸುಖವಾಗಿಯೇ ಇಲ್ಲಿಂದ ಹೊರಟುಹೋಗುತ್ತೇನೆ.”

---

613 ಮನೋ ಭವತ್ಯವಿಶ್ವಸ್ತಂ ಕರ್ಮ ತ್ರಾಸಯತೇಽಬಲಾನ್| ಎಂಬ ಪಾಠಾಂತರವಿದೆ(ಗೀತಾ ಪ್ರೆಸ್).

614 ಜಹ್ಯಾತ್ತತ್ಸತ್ತ್ವವಾನ್ ಸ್ಥಾನಂ ಶತ್ರೋಃ ಸಮ್ಮನಿತೋಽಪಿಸನ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

615 ದೀರ್ಘಕಾಲಂ ಸಮರ್ಚಿತಾ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12137031 ಬ್ರಹ್ಮದತ್ತ ಉವಾಚ|
12137031a ಯತ್ಕೃತೇ ಪ್ರತಿಕುರ್ಯಾದ್ವೈ ನ ಸ ತತ್ರಾಪರಾಧ್ನುಯಾತ್|
12137031c ಅನೃಣಸ್ತೇನ ಭವತಿ ವಸ ಪೂಜನಿ ಮಾ ಗಮಃ||

ಬ್ರಹ್ಮದತ್ತನು ಹೇಳಿದನು: "ಪೂಜನಿ! ಒಬ್ಬನ ಅಪರಾಧದ
ಪ್ರತೀಕಾರವಾಗಿ ಇನ್ನೊಬ್ಬನೂ ಅಪರಾಧವನ್ನೆಸಗಿದರೆ ಅದನ್ನು
ಅಪರಾಧವೆಂದು ಎಣಿಸಲಾಗುವುದಿಲ್ಲ. ಇದರಿಂದ ಮೊದಲು
ಅಪರಾಧವನ್ನೆಸಗಿದವನು ಋಣಮುಕ್ತನಾಗಿಹೋಗುತ್ತಾನೆ.
ಆದುದರಿಂದ ನೀನು ಇಲ್ಲಿಯೇ ಇರು. ಹೋಗಬೇಡ."

12137032 ಪೂಜನ್ಯುವಾಚ|
12137032a ನ ಕೃತಸ್ಯ ನ ಕರ್ತುಶ್ಚ ಸಖ್ಯಂ ಸಂಧೀಯತೇ ಪುನಃ|
12137032c ಹೃದಯಂ ತತ್ರ ಜಾನಾತಿ ಕರ್ತುಶ್ಚೈವ ಕೃತಸ್ಯ ಚ||

ಪೂಜನಿಯು ಹೇಳಿದಳು: "ಯಾರಿಗೆ ಅಪಕಾರವನ್ನು
ಮಾಡಲಾಗಿದೆಯೋ ಮತ್ತು ಯಾರು ಅಪಕಾರವನ್ನು ಮಾಡಿದ್ದಾನೋ
ಅವರಿಬ್ಬರ ನಡುವೆ ಸಖ್ಯ ಮತ್ತು ಒಡನಾಟವು ಪುನಃ ಆಗುವುದಿಲ್ಲ.
ಅಪರಾಧಮಾಡಿದವನ ಮತ್ತು ಅಪರಾಧವಾದವನ ಇಬ್ಬರ
ಹೃದಯಗಳಲ್ಲಿಯೂ ಈ ವಿಷಯವು ಕುಟುಕುತ್ತಿರುತ್ತದೆ."

12137033 ಬ್ರಹ್ಮದತ್ತ ಉವಾಚ|
12137033a ಕೃತಸ್ಯ ಚೈವ ಕರ್ತುಶ್ಚ ಸಖ್ಯಂ ಸಂಧೀಯತೇ ಪುನಃ|
12137033c ವೈರಸ್ಯೋಪಶಮೋ ದೃಷ್ಟಃ ಪಾಪಂ ನೋಪಾಶ್ನುತೇ ಪುನಃ||

ಬ್ರಹ್ಮದತ್ತನು ಹೇಳಿದನು: "ಪ್ರತೀಕಾರವನ್ನೆಸಗಿದ ನಂತರ ವೈರವು
ಶಾಂತವಾಗಿಬಿಡುತ್ತದೆ ಮತ್ತು ಅಪಕಾರವನ್ನು ಮಾಡಿದವನಿಗೆ ಆ

ಪಾಪದ ಫಲವನ್ನೂ ಭೋಗಿಸಬೇಕಾಗುವುದಿಲ್ಲ. ಆದುದರಿಂದ ಅಪರಾಧ ಮಾಡಿದ ಮತ್ತು ಸಹಿಸಿಕೊಂಡ ಇಬ್ಬರ ನಡುವೆಯೂ ಪುನಃ ಸಖ್ಯ-ಒಡನಾಟಗಳು ನಡೆಯಬಹುದು.”

12137034 ಪೂಜನ್ಯುವಾಚ|
12137034a ನಾಸ್ತಿ ವೈರಮುಪಕ್ರಾಂತಂ ಸಾಂತ್ವಿತೋಽಸ್ಮೀತಿ ನಾಶ್ವಸೇತ್|
12137034c ವಿಶ್ವಾಸಾದ್ಧ್ಯತೇ ಬಾಲಸ್ತಸ್ಮಾಚ್ಛ್ರೇಯೋ ಹ್ಯದರ್ಶನಮ್[616]||

ಪೂಜನಿಯು ಹೇಳಿದಳು: “ವೈರವು ಎಂದೂ ಶಾಂತವಾಗುವುದಿಲ್ಲ. ಶತ್ರುವು ನನಗೆ ಸಾಂತ್ವನವನ್ನಿತ್ತಿದ್ದಾನೆ ಎಂದು ತಿಳಿದು ಅವನ ಮೇಲೆ ಎಂದೂ ವಿಶ್ವಾಸವನ್ನಿಡಬಾರದು. ಈ ಬಾಲತನದಿಂದ ಶ್ರೇಯಸ್ಸಾಗಿದ್ದುದು ಕಾಣುವುದಿಲ್ಲ.

12137035a ತರಸಾ ಯೇ ನ ಶಕ್ಯಂತೇ ಶಸ್ತ್ರೈಃ ಸುನಿಶಿತೈರಪಿ|
12137035c ಸಾಮ್ನಾ ತೇ ವಿನಿಗೃಹ್ಯಂತೇ ಗಜಾ ಇವ ಕರೇಣುಭಿಃ||

ಹರಿತ ಖಡ್ಗದಿಂದಲೂ ವಶಮಾಡಿಕೊಳ್ಳಲಾರದವರನ್ನೂ ಕೂಡ, ಆನೆಯನ್ನು ಆನೆಯನ್ನು ಬಳಸಿಯೇ ವಶಪಡಿಸಿಕೊಳ್ಳುವಂತೆ ಸಿಹಿಮಾತುಗಳಿಂದ ಬಂಧಿಸುತ್ತಾರೆ.”

12137036 ಬ್ರಹ್ಮದತ್ತ ಉವಾಚ|
12137036a ಸಂವಾಸಾಜ್ಜಾಯತೇ ಸ್ನೇಹೋ ಜೀವಿತಾಂತಕರೇಷ್ವಪಿ|
12137036c ಅನ್ಯೋನ್ಯಸ್ಯ ಚ ವಿಶ್ವಾಸಃ ಶ್ವಪಚೇನ ಶುನೋ ಯಥಾ||

---

616 ವಿಶ್ವಾಸಾದ್ ವಧ್ಯತೇ ಲೋಕೇ ತಸ್ಮಾಚ್ಛ್ರೈಯೋಽಪ್ಯದರ್ಶನಮ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಬ್ರಹ್ಮದತ್ತನು ಹೇಳಿದನು: “ಶ್ವಪಚ[617]ನೊಂದಿಗೆ ನಾಯಿಯು ಹೇಗೋ ಹಾಗೆ ಒಟ್ಟಿಗೇ ವಾಸಿಸುವುದರಿಂದ ಜೀವದ ಅಂತಕನೊಂದಿಗೂ ಸ್ನೇಹವಾಗಿಬಿಡುತ್ತದೆ ಮತ್ತು ಪರಸ್ಪರರಲ್ಲಿ ವಿಶ್ವಾಸವೂ ಮೂಡುತ್ತದೆ.

12137037a ಅನ್ಯೋನ್ಯಕೃತವೈರಾಣಾಂ ಸಂವಾಸಾನ್ಮೃದುತಾಂ ಗತಮ್|
12137037c ನೈವ ತಿಷ್ಠತಿ ತದ್ವೈರಂ ಪುಷ್ಕರಸ್ಥಮಿವೋದಕಮ್||

ಒಟ್ಟಿಗೇ ವಾಸಿಸುವುದರಿಂದ ಅನ್ಯೋನ್ಯರಿಗೆ ಮಾಡಿದುದರ ವೈರವೂ ಕೂಡ ಮೃದುವಾಗಿ ಬಿಡುತ್ತದೆ. ಕಮಲದ ದಳದ ಮೇಲೆ ಬಿದ್ದ ನೀರಿನಂತೆ ಆ ವೈರವು ಅಲ್ಲಿ ನಿಂತುಕೊಳ್ಳುವುದಿಲ್ಲ.”

12137038 ಪೂಜನ್ಯುವಾಚ|
12137038a ವೈರಂ ಪಂಚಸಮುತ್ಥಾನಂ ತಚ್ಚ ಬುಧ್ಯಂತಿ ಪಂಡಿತಾಃ|
12137038c ಸ್ತ್ರೀಕೃತಂ ವಾಸ್ತುಜಂ ವಾಗ್ಜಂ ಸಸಪತ್ನಾಪರಾಧಜಮ್||

ಪೂಜನಿಯು ಹೇಳಿದಳು: “ವೈರವು ಐದು ಕಾರಣಗಳಿಂದ ಉತ್ಪನ್ನವಾಗುತ್ತದೆ ಎಂದು ಪಂಡಿತರು ತಿಳಿದಿದ್ದಾರೆ: ಸ್ತ್ರೀಗಾಗಿ, ಮನೆ/ಸ್ವತ್ತಿಗಾಗಿ, ಕಠೋರ ಮಾತಿನಿಂದಾಗಿ, ಜಾತಿಗತ ದ್ವೇಷದಿಂದಾಗಿ ಮತ್ತು ಹಿಂದೆ ಮಾಡಿದ್ದ ಅಪರಾಧದಿಂದಾಗಿ.

12137039a ತತ್ರ ದಾತಾ ನಿಹಂತವ್ಯಃ ಕ್ಷತ್ರಿಯೇಣ ವಿಶೇಷತಃ|
12137039c ಪ್ರಕಾಶಂ ವಾಪ್ರಕಾಶಂ ವಾ ಬುದ್ಧ್ವಾ ದೇಶಬಲಾದಿಕಮ್||

ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದಾನಮಾಡಿದವನನ್ನು, ಅದರಲ್ಲೂ ವಿಶೇಷವಾಗಿ ಕ್ಷತ್ರಿಯನನ್ನು ಕೊಲ್ಲಬಾರದು. ಅಪರಾಧದ

[617] ನಾಯಿಯ ಮಾಂಸವನ್ನು ತಿನ್ನುವವನು.

ಮಹತ್ವ ಅಥವಾ ಲಘುತ್ವವನ್ನು ಬುದ್ಧಿಯಿಂದ ಪರಿಶೀಲಿಸಿದ ನಂತರವೇ ಕಾರ್ಯಕ್ಕೆಗೊಳ್ಳಬೇಕು.

12137040a ಕೃತವ್ಯೈರೇ ನ ವಿಶ್ವಾಸಃ ಕಾರ್ಯಸ್ತ್ವಿಹ ಸುಹೃದ್ಯಪಿ|
12137040c ಚನ್ನಂ ಸಂತಿಷ್ಠತೇ ವೈರಂ ಗೂಢೋಽಗ್ನಿರಿವ ದಾರುಷು||

ಯಾರು ವೈರವನ್ನು ಕಟ್ಟಿಕೊಂಡಿದ್ದಾರೋ ಅವರು ಸುಹೃದರಾಗಿದ್ದರೂ ಅವರಲ್ಲಿ ವಿಶ್ವಾಸವನ್ನಿಡಬಾರದು. ಕಟ್ಟಿಗೆಯಲ್ಲಿ ಬೆಂಕಿಯು ಅಡಗಿಕೊಂಡಿರುವಂತೆ ಅವರಲ್ಲಿ ವೈರವು ಅಡಗಿಕೊಂಡಿರುತ್ತದೆ.

12137041a ನ ವಿತ್ತೇನ ನ ಪಾರುಷ್ಯೈರ್ನ ಸಾಂತ್ವೇನ ನ ಚ ಶ್ರುತ್ಯೈಃ|
12137041c ವೈರಾಗ್ನಿಃ ಶಾಮ್ಯತೇ ರಾಜನ್ನೌರ್ವಾಗ್ನಿರಿವ ಸಾಗರೇ||

ರಾಜನ್! ಸಾಗರದಲ್ಲಿರುವ ಔರ್ವಾಗ್ನಿ[618]ಯಂತೆ ವೈರಾಗ್ನಿಯು ವಿತ್ತದಿಂದ, ಕಠೋರತೆಯಿಂದ, ಸಾಂತ್ವನದಿಂದ ಮತ್ತು ಬುದ್ಧಿಹೇಳುವುದರಿಂದ ಶಾಂತವಾಗುವುದಿಲ್ಲ.

12137042a ನ ಹಿ ವೈರಾಗ್ನಿರುದ್ಭೂತಃ ಕರ್ಮ ವಾಪ್ಯಪರಾಧಜಮ್|
12137042c ಶಾಮ್ಯತ್ಯದಗ್ಧ್ವಾ ನೃಪತೇ ವಿನಾ ಹ್ಯೇಕತರಕ್ಷಯಾತ್||

ನೃಪತೇ! ಒಂದು ಪಕ್ಷವನ್ನು ಸುಟ್ಟು ಭಸ್ಮಮಾಡದೇ ವೈರಾಗ್ನಿಯು ತಣ್ಣಗಾಗುವುದಿಲ್ಲ ಮತ್ತು ಅಪರಾಧಜನಿತ ಕರ್ಮವೂ ಒಂದು ಪಕ್ಷವನ್ನು ಸಂಹಾರಮಾಡದೇ ಶಾಂತವಾಗುವುದಿಲ್ಲ.

12137043a ಸತ್ಕೃತಸ್ಯಾರ್ಥಮಾನಾಭ್ಯಾಂ ಸ್ಯಾತ್ತು ಪೂರ್ವಾಪಕಾರಿಣಃ|
12137043c ನೈವ ಶಾಂತಿರ್ನ ವಿಶ್ವಾಸಃ ಕರ್ಮ ತ್ರಾಸಯತೇ ಬಲಾತ್||ಲ್

---

618 ಔರ್ವಾಗ್ನಿಯ ಕುರಿತು ಹರಿವಂಶದ ಅಧ್ಯಾಯ 45ರಲ್ಲಿ ಬರುತ್ತದೆ.

ಮೊದಲು ಅಪಕಾರವನ್ನಿಸಗಿದವನನ್ನು ಅಪಕೃತ ವ್ಯಕ್ತಿಯು ಧನಮಾನಗಳಿಂದ ಸತ್ಕರಿಸಿದರೂ ಅವನ ಶತ್ರುವಿನ ಮೇಲೆ ವಿಶ್ವಾಸವನ್ನಿಡಬಾರದು. ಏಕೆಂದರೆ ತಾನು ಮಾಡಿದ ಪಾಪಕರ್ಮವು ದುರ್ಬಲರನ್ನು ಹೆದರಿಸುತ್ತಲೇ ಇರುತ್ತದೆ.

12137044a ನೈವಾಪಕಾರೇ ಕಸ್ಮಿಂಶ್ಚಿದಹಂ ತ್ವಯಿ ತಥಾ ಭವಾನ್|
12137044c ವಿಶ್ವಾಸಾದುಷಿತಾ ಪೂರ್ವಂ ನೇದಾನೀಂ ವಿಶ್ವಸಾಮ್ಯಹಮ್||

ಇದೂವರೆಗೆ ಎಂದೂ ನಾನು ನಿನ್ನ ಕುರಿತು ಅಪರಾಧವನ್ನೆಸಗಿಲ್ಲ ಮತ್ತು ನೀನೂ ಕೂಡ ನನಗೆ ಯಾವ ಹಾನಿಯನ್ನೂ ಉಂಟುಮಾಡಿಲ್ಲ. ಆದುದರಿಂದ ನಾನು ನಿನ್ನ ಭವನದಲ್ಲಿ ವಾಸಿಸುತ್ತಿದ್ದೆ. ಆದರೆ ಈಗ ನಾನು ನಿನ್ನ ಮೇಲೆ ವಿಶ್ವಾಸವನ್ನಿಡಲಾರೆ.”

12137045 ಬ್ರಹ್ಮದತ್ತ ಉವಾಚ|
12137045a ಕಾಲೇನ ಕ್ರಿಯತೇ ಕಾರ್ಯಂ ತಥೈವ ವಿವಿಧಾಃ ಕ್ರಿಯಾಃ|
12137045c ಕಾಲೇನೈವ ಪ್ರವರ್ತಂತೇ ಕಃ ಕಸ್ಯೇಹಾಪರಾಧ್ಯತಿ||

ಬ್ರಹ್ಮದತ್ತನು ಹೇಳಿದನು: “ಕಾಲವೇ ಎಲ್ಲವನ್ನೂ ಮಾಡುತ್ತದೆ ಮತ್ತು ಕಾಲದಿಂದಲೇ ವಿವಿಧ ಕ್ರಿಯೆಗಳು ನಡೆಯುತ್ತವೆ. ಕಾಲವೇ ಎಲ್ಲವನ್ನೂ ನಡೆಸುತ್ತಿರುವಾಗ ಯಾರು ಯಾರಿಗೆ ಅಪರಾಧವನ್ನೆಸಗುತ್ತಾರೆ?

12137046a ತುಲ್ಯಂ ಚೋಭೇ ಪ್ರವರ್ತೇತೇ ಮರಣಂ ಜನ್ಮ ಚೈವ ಹ|
12137046c ಕಾರ್ಯತೇ ಚೈವ ಕಾಲೇನ ತನ್ನಿಮಿತ್ತಂ ಹಿ ಜೀವತಿ||

ಮರಣ ಮತ್ತು ಜನ್ಮ ಇವೆರಡೂ ಒಂದೇ ಸಮನಾಗಿ ನಡೆಯುತ್ತಿರುತ್ತವೆ ಮತ್ತು ಕಾಲವೇ ಇವುಗಳನ್ನುಂಟುಮಾಡುತ್ತಿರುತ್ತದೆ. ಆದುದರಿಂದ ಪ್ರಾಣಿಯು ಜೀವಿತವಾಗಿರಲಾರದು.

12137047a ಬಧ್ಯಂತೇ[619] ಯುಗಪತ್ಕೇ ಚಿದೇಕ್ಯೈಕಸ್ಯ ನ ಚಾಪರೇ|
12137047c ಕಾಲೋ ದಹತಿ ಭೂತಾನಿ ಸಂಪ್ರಾಪ್ಯಾಗ್ನಿರಿವೇಂಧನಮ್‌||

ಕೆಲವರು ಒಟ್ಟಾಗಿ ಸಾಯುತ್ತಾರೆ ಮತ್ತೆ ಇನ್ನು ಕೆಲವರು ಒಬ್ಬೊಬ್ಬರಾಗಿ ಸಾಯುತ್ತಾರೆ. ಕೆಲವರು ಬಹಳ ಕಾಲದವರೆಗೆ ಸಾಯುವುದೇ ಇಲ್ಲ. ಬೆಂಕಿಯು ಕಟ್ಟಿಗೆಗೆ ಹತ್ತಿಕೊಂಡು ಅದನ್ನು ಸುಟ್ಟುಬಿಡುವಂತೆ ಕಾಲವೇ ಸಮಸ್ತ ಪ್ರಾಣಿಗಳನ್ನೂ ಸುಟ್ಟುಬಿಡುತ್ತದೆ.

12137048a ನಾಹಂ ಪ್ರಮಾಣಂ ನೈವ ತ್ವಮನ್ಯೋನ್ಯಕರಣೇ ಶುಭೇ|
12137048c ಕಾಲೋ ನಿತ್ಯಮುಪಾಧತ್ತೇ ಸುಖಂ ದುಃಖಂ ಚ ದೇಹಿನಾಮ್‌||

ಶುಭೇ! ಅನ್ಯೋನ್ಯರಿಗೆ ಮಾಡಿದ ಅಪರಾಧಗಳಲ್ಲಿ ನೀನೂ ಯಥಾರ್ಥ ಕಾರಣಳಲ್ಲ ಮತ್ತು ನಾನೂ ವಾಸ್ತವಿಕ ಕಾರಣನಲ್ಲ. ಕಾಲವೇ ಸದಾ ಸಮಸ್ತ ದೇಹಧಾರಿಗಳಿಗೆ ಸುಖ-ದುಃಖಗಳನ್ನು ನೀಡುತ್ತಿರುತ್ತದೆ.

12137049a ಏವಂ ವಸೇಹ ಸಸ್ನೇಹಾ ಯಥಾಕಾಲಮಹಿಂಸಿತಾ[620]|
12137049c ಯತ್ಕೃತಂ ತಚ್ಚ ಮೇ ಕ್ಷಾಂತಂ ತ್ವಂ ಚೈವ ಕ್ಷಮ ಪೂಜನಿ‌||

ಪೂಜನಿ! ನೀನಗೆ ಬೇಕಾದಷ್ಟು ಸಮಯ ಇಲ್ಲಿ ಸ್ನೇಹದಿಂದ ವಾಸಮಾಡಿಕೊಂಡಿರು. ನಾನು ನಿನ್ನನ್ನು ಹಿಂಸಿಸುವುದಿಲ್ಲ. ನೀನು ಮಾಡಿದುದನ್ನು ನಾನು ಕ್ಷಮಿಸಿದ್ದೇನೆ. ನೀನೂ ಕೂಡ ನನ್ನಿಂದಾದುದನ್ನು ಕ್ಷಮಿಸಿ ಬಿಡು.”

12137050 ಪೂಜನ್ಯುವಾಚ|

---

619 ವಧ್ಯಂತೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

620 ಯಥಾಕಾಮಮಹಿಂಸಿತಾ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12137050a ಯದಿ ಕಾಲಃ ಪ್ರಮಾಣಂ ತೇ ನ ವೈರಂ ಕಸ್ಯ ಚಿದ್ಭವೇತ್।
12137050c ಕಸ್ಮಾತ್ತ್ವಪಚಿತಿಂ ಯಾಂತಿ ಬಾಂಧವಾ ಬಾಂಧವೇ ಹತೇ॥

ಪೂಜನಿಯು ಹೇಳಿದಳು: "ಒಂದುವೇಳೆ ಕಾಲವೇ ಎಲ್ಲಕ್ಕೂ ಕಾರಣವಾಗಿದ್ದರೆ ಯಾರಿಗೆ ಯಾರೊಡನೆಯೂ ವೈರವೇ ಆಗುತ್ತಿರಲಿಲ್ಲ. ಆದರೂ ಬಾಂಧವರು ಹತರಾದಾಗ ಅವರ ಬಾಂಧವರು ಏಕೆ ಪ್ರತೀಕಾರವನ್ನೆಸಗುತ್ತಾರೆ?

12137051a ಕಸ್ಮಾದ್ದೇವಾಸುರಾಃ ಪೂರ್ವಮನ್ಯೋನ್ಯಮಭಿಜಘ್ನಿರೇ।
12137051c ಯದಿ ಕಾಲೇನ ನಿರ್ಯಾಣಂ ಸುಖದುಃಖೇ ಭವಾಭವೌ॥

ಕಾಲವೇ ಮೃತ್ಯು-ಜನ್ಮ, ಸುಖ-ದುಃಖ, ಉನ್ನತಿ-ಅವನತಿಗಳನ್ನು ನೀಡುತ್ತದೆಯಾದರೆ ಪೂರ್ವಕಾಲದಲ್ಲಿ ದೇವತೆಗಳು ಮತ್ತು ಅಸುರರು ಏಕೆ ಅನ್ಯೋನ್ಯರನ್ನು ಸಂಹರಿಸಿದರು?

12137052a ಭಿಷಜೋ ಭೇಷಜಂ ಕರ್ತುಂ ಕಸ್ಮಾದಿಚ್ಚಂತಿ ರೋಗಿಣೇ।
12137052c ಯದಿ ಕಾಲೇನ ಪಚ್ಯಂತೇ ಭೇಷಜೈಃ ಕಿಂ ಪ್ರಯೋಜನಮ್॥

ಕಾಲವೇ ಎಲ್ಲವನ್ನೂ ಮಾಡುತ್ತದೆ ಎಂದಾದರೆ ವೈದ್ಯರು ರೋಗಿಗಳಿಗೆ ಚಿಕಿತ್ಸೆಗಳನ್ನು ಮಾಡಲು ಏಕೆ ಇಚ್ಛಿಸುತ್ತಿದ್ದರು? ಮತ್ತು ಚಿಕಿತ್ಸೆಯಿಂದ ಪ್ರಯೋಜನವಾದರೂ ಏಕಾಗುತ್ತಿತ್ತು?

12137053a ಪ್ರಲಾಪಃ ಕ್ರಿಯತೇ ಕಸ್ಮಾತ್ಸುಮಹಾನ್ ಶೋಕಮೂರ್ಚಿತೈಃ।
12137053c ಯದಿ ಕಾಲಃ ಪ್ರಮಾಣಂ ತೇ ಕಸ್ಮಾದ್ಧರ್ಮೋ ಽಸ್ತಿ ಕರ್ತ್ಯಷು॥

ಕಾಲವೇ ಎಲ್ಲಕ್ಕೂ ಪ್ರಮಾಣವೆಂದಾದರೆ ಶೋಕಮೂರ್ಛಿತರಾದವರು ಏಕೆ ಪ್ರಲಾಪಮಾಡುತ್ತಾರೆ? ಮತ್ತು ಕರ್ಮಮಾಡುವವರಿಗೆ

ಧರ್ಮಪಾಲನೆಯ ನಿಯಮವು ಏಕಿದೆ?

12137054a ತವ ಪುತ್ರೋ ಮಮಾಪತ್ಯಂ ಹತವಾನ್ ಹಿಂಸಿತೋ ಮಯಾ[621]|
12137054c ಅನಂತರಂ ತ್ವಯಾ ಚಾಹಂ ಬಂಧನೀಯಾ ಮಹೀಪತೇ[622]||

ಮಹೀಪತೇ! ನಿನ್ನ ಮಗನು ನನ್ನ ಮಗನನ್ನು ಕೊಂದನು ಮತ್ತು ನಾನು ಅವನನ್ನು ಹಿಂಸಿಸಿದೆ. ಅನಂತರ ನೀನು ನನ್ನನ್ನು ಬಂಧಿಸುತ್ತೀಯೆ.

12137055a ಅಹಂ ಹಿ ಪುತ್ರಶೋಕೇನ ಕೃತಪಾಪಾ ತವಾತ್ಮಜೇ|
12137055c ತಥಾ ತ್ವಯಾ ಪ್ರಹರ್ತವ್ಯಂ ಮಯಿ ತತ್ತ್ವಂ ಚ ಮೇ ಶೃಣು||

ಪುತ್ರಶೋಕದಿಂದ ಸಂತಪ್ತಳಾಗಿ ನಾನು ನಿನ್ನ ಪುತ್ರನ ಮೇಲೆ ಹೇಗೆ ಪಾಪಕೃತ್ಯವನ್ನೆಸಗಿದೆನೋ ಹಾಗೆ ನೀನೂ ಕೂಡ ನನ್ನನ್ನು ಪ್ರಹರಿಸಬಹುದು. ಇಲ್ಲಿ ತತ್ತ್ವಾರ್ಥವೇನು ಎನ್ನುವುದನ್ನು ಕೇಳು.

12137056a ಭಕ್ಷಾರ್ಥಂ ಕ್ರೀಡನಾರ್ಥಂ ವಾ ನರಾ ವಾಂಚಂತಿ ಪಕ್ಷಿಣಃ|
12137056c ತೃತೀಯೋ ನಾಸ್ತಿ ಸಂಯೋಗೋ ವಧಬಂಧಾದೃತೇ ಕ್ಷಮಃ||

ಮನುಷ್ಯನು ತಿನ್ನುವುದಕ್ಕಾಗಿ ಅಥವಾ ಆಡುವುದಕ್ಕಾಗಿ ಪಕ್ಷಿಯನ್ನು ಬಯಸುತ್ತಾನೆ. ವಧಿಸಲು ಅಥವಾ ಬಂಧನದಲ್ಲಿಡುವ ಹೊರತಾಗಿ ಬೇರೆ ಯಾವ ಮೂರನೆಯ ಪ್ರಕಾರದ ಸಂಪರ್ಕವೂ ಪಕ್ಷಿ ಮತ್ತು ಮನುಷ್ಯರಲ್ಲಿ ಕಾಣುವುದಿಲ್ಲ.

12137057a ವಧಬಂಧಭಯಾದೇಕೇ ಮೋಕ್ಷತಂತ್ರಮುಪಾಗತಾಃ|

---

621 ಸ ಹತೋ ಮಯಾ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

622 ಅನಂತರಂ ತ್ವಯಾಹಂ ಚ ಹಂತವ್ಯಾ ಹಿ ನರಾಧಿಪ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12137057c ಮರಣೋತ್ಪಾತಜಂ ದುಃಖಮಾಹುರ್ಧರ್ಮವಿದೋ ಜನಾಃ||

ಈ ವಧೆ ಮತ್ತು ಬಂಧನದ ಭಯದಿಂದ ಮುಮುಕ್ಷುಗಳು ಮೋಕ್ಷತಂತ್ರದ ಆಶ್ರಯವನ್ನು ಪಡೆಯುತ್ತಾರೆ. ಏಕೆಂದರೆ ಮರಣ-ಜನನಗಳು ದುಃಖವನ್ನುಂಟುಮಾಡುತ್ತವೆ ಎಂದು ಧರ್ಮವಿದ ಜನರು ಹೇಳುತ್ತಾರೆ.

12137058a ಸರ್ವಸ್ಯ ದಯಿತಾಃ ಪ್ರಾಣಾಃ ಸರ್ವಸ್ಯ ದಯಿತಾಃ ಸುತಾಃ|
12137058c ದುಃಖಾದುದ್ವಿಜತೇ ಸರ್ವಃ ಸರ್ವಸ್ಯ ಸುಖಮೀಪ್ಸಿತಮ್||

ಸರ್ವರಿಗೂ ಪ್ರಾಣವು ಪ್ರಿಯವಾಗಿರುತ್ತದೆ ಮತ್ತು ಸರ್ವರಿಗೂ ತಮ್ಮ ಸುತರು ಪ್ರಿಯರಾಗಿರುತ್ತಾರೆ. ಸರ್ವರೂ ದುಃಖವಾದಾಗ ಉದ್ವಿಗ್ನರಾಗುತ್ತಾರೆ ಮತ್ತು ಸರ್ವರೂ ಸುಖವಾಗಬೇಕೆಂದು ಬಯಸುತ್ತಾರೆ.

12137059a ದುಃಖಂ ಜರಾ ಬ್ರಹ್ಮದತ್ತ ದುಃಖಮರ್ಥವಿಪರ್ಯಯಃ|
12137059c ದುಃಖಂ ಚಾನಿಷ್ಟಸಂವಾಸೋ ದುಃಖಮಿಷ್ಟವಿಯೋಗಜಮ್||

ಬ್ರಹ್ಮದತ್ತ! ವೃದ್ಧಾಪ್ಯವು ದುಃಖ, ಅರ್ಥನಾಶವು ದುಃಖ, ಅಪ್ರಿಯರೊಂದಿಗೆ ಇರುವುದು ದುಃಖ ಮತ್ತು ಪ್ರಿಯಜನರ ಅಗಲುವಿಕೆಯು ದುಃಖ.

12137060a ವೈರಬಂಧಕೃತಂ ದುಃಖಂ ಹಿಂಸಾಜಂ ಸ್ತ್ರೀಕೃತಂ ತಥಾ[623]|

---

[623] ವಧಬಂಧಕೃತಂ ದುಃಖಂ ಸ್ತ್ರೀಕೃತಂ ಸಹಜಂ ತಥಾ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12137060c ದುಃಖಂ ಸುಖೇನ[624] ಸತತಂ ಜನಾದ್ವಿಪರಿವರ್ತತೇ||

ವೈರ ಮತ್ತು ಬಂಧನದಿಂದ ದುಃಖವಾಗುತ್ತದೆ. ಸ್ತ್ರೀಯಕಾರಣದಿಂದ ಉಂಟಾಗುವ ಹಿಂಸೆಯು ದುಃಖ. ಸತತವಾಗಿದ್ದ ಸುಖವು ನಷ್ಟವಾದಾಗಲೂ ದುಃಖವಾಗುತ್ತದೆ.

12137061a ನ ದುಃಖಂ ಪರದುಃಖೇ ವೈ ಕೇ ಚಿದಾಹುರಬುದ್ಧಯಃ|
12137061c ಯೋ ದುಃಖಂ ನಾಭಿಜಾನಾತಿ ಸ ಜಲ್ಪತಿ ಮಹಾಜನೇ||

ಕೆಲವು ಮೂಢರು ಪರದುಃಖವು ದುಃಖವಲ್ಲವೆಂದು ಹೇಳುತ್ತಾರೆ. ಆದರೆ ದುಃಖವನ್ನು ತಿಳಿಯದವರು ಮಾತ್ರ ಅಂಥಹ ಮಾತನ್ನು ಮಹಾಜನರಮುಂದೆ ಹೇಳುತ್ತಾರೆ.

12137062a ಯಸ್ತು ಶೋಚತಿ ದುಃಖಾರ್ತಃ ಸ ಕಥಂ ವಕ್ತುಮುತ್ಸಹೇತ್|
12137062c ರಸಜ್ಞಃ ಸರ್ವದುಃಖಸ್ಯ ಯಥಾತ್ಮನಿ ತಥಾ ಪರೇ||

ದುಃಖಾರ್ತನಾಗಿ ಶೋಕಿಸುವವನು ಮತ್ತು ತನ್ನ ಮತ್ತು ಇತರರೆಲ್ಲರ ದುಃಖದ ರಸವನ್ನು ಅರ್ಥಮಾಡಿಕೊಂಡಿರುವವನು ಹೇಗೆ ತಾನೇ ಈ ರೀತಿ ಹೇಳಬಲ್ಲನು?

12137063a ಯತ್ಕೃತಂ ತೇ ಮಯಾ ರಾಜಂಸ್ತ್ವಯಾ ಚ ಮಮ ಯತ್ಕೃತಮ್|
12137063c ನ ತದ್ವರ್ಷಶತೈಃ ಶಕ್ಯಂ ವ್ಯಪೋಹಿತುಮರಿಂದಮ||

ರಾಜನ್! ಅರಿಂದಮ! ನೀನು ನನಗೆ ಮಾಡಿದ ಅಪರಾಧ ಮತ್ತು ನಾನು ಪ್ರತೀಕಾರವನ್ನೆಸಗಿದುದು ಇವುಗಳನ್ನು ನೂರು

---

[624] ಸುತೇನ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ವರ್ಷಗಳಾದರೂ ಮರೆಯಲು ಸಾಧ್ಯವಾಗುವುದಿಲ್ಲ.

12137064a ಆವಯೋಃ ಕೃತಮನ್ಯೋನ್ಯಂ ತತ್ರ ಸಂಧಿರ್ನ ವಿದ್ಯತೇ|
12137064c ಸ್ಮೃತ್ವಾ ಸ್ಮೃತ್ವಾ ಹಿ ತೇ ಪುತ್ರಂ ನವಂ ವೈರಂ ಭವಿಷ್ಯತಿ||

ಹೀಗೆ ಪರಸ್ಪರರಿಗೆ ಅಪಕಾರವನ್ನೆಸಗಿದ ಕಾರಣದಿಂದ ಈಗ ಮತ್ತೊಮ್ಮೆ ನಮ್ಮಿಬ್ಬರ ನಡುವೆ ಒಡನಾಟವು ಸಾಧ್ಯವಿಲ್ಲ. ನಿನ್ನ ಪುತ್ರನಿಗಾದುದನ್ನು ಪುನಃ ಪುನಃ ನೆನಪಿಸಿಕೊಂಡು ನಿನ್ನ ವೈರವು ಹೊಸತಾಗಿಯೇ ಇರುತ್ತದೆ.

12137065a ವೈರಮಂತಿಕಮಾಸಜ್ಯ ಯಃ ಪ್ರೀತಿಂ ಕರ್ತುಮಿಚ್ಚತಿ|
12137065c ಮೃನ್ಮಯಸ್ಯೇವ ಭಗ್ನಸ್ಯ ತಸ್ಯ ಸಂಧಿರ್ನ ವಿದ್ಯತೇ||

ಮಣ್ಣಿನ ಗಡಿಗೆಯು ಒಡೆದುಹೋದನಂತರ ಅದನ್ನು ಪುನಃ ಹೇಗೆ ಜೋಡಿಸಲು ಆಗುವುದಿಲ್ಲವೋ ಹಾಗೆ ಮರಣಾಂತಿಕ ವೈರವಿದ್ದವರಲ್ಲಿ ಪುನಃ ಪ್ರೀತಿಯನ್ನು ಬಯಸಿದರೂ ಅದು ಅಸಂಭವವಾಗುತ್ತದೆ.

12137066a ನಿಶ್ಚಿತಶಾಸ್ತ್ರಾರ್ಥಜ್ಞೈರವಿಶ್ವಾಸಃ ಸುಖೋದಯಃ[625]|
12137066c ಉಶನಾಶ್ಚಾಥ ಗಾಥೇ ದ್ವೇ ಪ್ರಹ್ರಾದಾಯಾಬ್ರವೀತ್ ಪುರಾ||

ಅವಿಶ್ವಾಸದಿಂದ ಸುಖವುಂಟಾಗುತ್ತದೆ ಎನ್ನುವುದು ಶಾಸ್ತ್ರಜ್ಞರ ನಿಶ್ಚಯವಾಗಿದೆ. ಹಿಂದೆ ಉಶನ ಶುಕ್ರಾಚಾರ್ಯನು ಪ್ರಹ್ರಾದನಿಗೆ ಈ ಎರಡು ಗಾಥೆಗಳನ್ನು ಹೇಳಿದ್ದನು:

12137067a ಯೇ ವೈರಿಣಃ ಶ್ರದ್ದಧತೇ ಸತ್ಯೇ ಸತ್ಯೇತರೇಽಪಿ ವಾ|

---

[625] ನಿಶ್ಚಯಃ ಸರ್ವಶಾಸ್ತ್ರೇಷು ವಿಶ್ವಾಸಶ್ಚಾಸುಖೋದಯಃ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12137067c ತೇ ಶ್ರದ್ದಧಾನಾ ವಧ್ಯಂತೇ ಮಧು ಶುಷ್ಕತೃಣ್ಯೈರ್ಯಥಾ||

ಒಣಗಿದ ಹುಲ್ಲನ್ನು ಮುಚ್ಚಿದ್ದ ಬಾವಿಯ ಮೇಲೆ ಇಟ್ಟಿದ್ದ ಮಧುವನ್ನು ತರಲು ಹೋಗುವವನು ಸತ್ತುಹೋಗುವಂತೆ ವೈರಿಯ ಸುಳ್ಳು ಅಥವಾ ಸತ್ಯ ಮಾತಿನ ಮೇಲೆ ವಿಶ್ವಾಸವನ್ನಿಡುವವನೂ ಕೂಡ ಹತನಾಗುತ್ತಾನೆ.

12137068a ನ ಹಿ ವೈರಾಣಿ ಶಾಮ್ಯಂತಿ ಕುಲೇಷ್ವಾ ದಶಮಾದ್ಯುಗಾತ್|
12137068c ಆಖ್ಯಾತಾರಶ್ಚ ವಿದ್ಯಂತೇ ಕುಲೇ ಚೇದ್ವಿದ್ಯತೇ ಪುಮಾನ್||

ಒಂದು ಕುಲದಲ್ಲಿ ಯಾವುದಾದರೂ ವೈರವುಂಟಾದರೆ ಅದು ಹತ್ತು ತಲೆಮಾರುಗಳ ವರೆಗೂ ಇರುತ್ತದೆ. ಅದನ್ನು ಹೇಳಿಕೊಳ್ಳುವವರು ಇರುತ್ತಾರೆ. ಕುಲದಲ್ಲಿ ಒಬ್ಬ ಪುರುಷನೂ ಇಲ್ಲದಂತಾಗುವವರೆಗೆ ಅದು ಇರುತ್ತದೆ.

12137069a ಉಪಗುಹ್ಯ ಹಿ ವೈರಾಣಿ ಸಾಂತ್ವಯಂತಿ ನರಾಧಿಪಾಃ[626]|
12137069c ಅಥೈನಂ ಪ್ರತಿಪಿಂಷಂತಿ ಪೂರ್ಣಂ ಘಟಮಿವಾಶ್ಮನಿ||

ನರಾಧಿಪರು ವೈರಗಳನ್ನು ಮುಚ್ಚಿಟ್ಟುಕೊಂಡು ಸಾಂತ್ವನದ ಮಾತುಗಳನ್ನಾಡುತ್ತಿರುತ್ತಾರೆ. ಅನಂತರ ಅವಕಾಶವನ್ನು ನೋಡಿಕೊಂಡು ನೀರುತುಂಬಿದ ಮಣ್ಣಿನ ಕೊಡವನ್ನು ಬಂಡೆಗಲ್ಲಿಗೆ ಬಡಿದು ಚೂರು ಚೂರು ಮಾಡುವಂತೆ ಪುಡಿಮಾಡಿಬಿಡುತ್ತಾರೆ.

12137070a ಸದಾ ನ ವಿಶ್ವಸೇದ್ರಾಜನ್ಪಾಪಂ ಕೃತ್ವೇಹ ಕಸ್ಯ ಚಿತ್|
12137070c ಅಪಕೃತ್ಯ ಪರೇಷಾಂ ಹಿ ವಿಶ್ವಾಸಾದ್ದುಃಖಮಶ್ನುತೇ||

---

626 ಉಪಗೃಹ್ಯ ತು ವೈರಾಣಿ ಸಾಂತ್ವಯಂತಿ ನರಾಧಿಪ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ರಾಜನ್! ಅಪರಾಧವನ್ನೆಸಗಿ ಅವನ ಮೇಲೆಯೇ ಪುನಃ
ವಿಶ್ವಾಸವನ್ನಿಡಬಾರದು. ಇತರರಿಗೆ ಅಪರಾಧವನ್ನೆಸಗಿ ಪುನಃ ಅವರ
ಮೇಲೆ ವಿಶ್ವಾಸವನ್ನಿಡುವವರು ದುಃಖವನ್ನು
ಅನುಭವಿಸಬೇಕಾಗುತ್ತದೆ.”

12137071 ಬ್ರಹ್ಮದತ್ತ ಉವಾಚ|
12137071a ನಾವಿಶ್ವಾಸಾಚ್ಚಿನ್ವತೇಽರ್ಥಾನ್ನೇಹಂತೇ ಚಾಪಿ ಕಿಂ ಚನ|
12137071c ಭಯಾದೇಕತರಾನ್ನಿತ್ಯಂ ಮೃತಕಲ್ಪಾ ಭವಂತಿ ಚ||

ಬ್ರಹ್ಮದತ್ತನು ಹೇಳಿದನು: “ಅವಿಶ್ವಾಸದಿಂದ ಮನುಷ್ಯನು ತನ್ನ
ಉದ್ದೇಶಗಳನ್ನು ಎಂದೂ ಪೂರೈಸಿಕೊಳ್ಳಲಾರನು.
ಭಯವೊಂದರಿಂದಲೇ ಇದ್ದರೆ ಅವನು ಮೃತಕಲ್ಪನಾಗಿಬಿಡುತ್ತಾನೆ.”

12137072 ಪೂಜನ್ಯುವಾಚ|
12137072a ಯಸ್ಯೇಹ ವ್ರಣಿನೌ ಪಾದೌ ಪದ್ಭ್ಯಾಂ ಚ ಪರಿಸರ್ಪತಿ|
12137072c ಕ್ಷಣ್ಯೇತೇ ತಸ್ಯ ತೌ ಪಾದೌ ಸುಗುಪ್ತಮಭಿಧಾವತಃ||

ಪೂಜನಿಯು ಹೇಳಿದಳು: “ಎರಡೂ ಕಾಲುಗಳಲ್ಲಿ
ಗಾಯವಾಗಿರುವವನು ಕಾಲ್ನಡುಗೆಯಲ್ಲಿ ಹೋದರೆ ಅವನು ಎಷ್ಟೇ
ಸಾವಕಾಶವಾಗಿ ನಡೆದರೂ ಅವನ ಕಾಲಿನ ಗಾಯಗಳು
ಹೆಚ್ಚಾಗುತ್ತವೆಯೇ ಹೊರತು ಕಡಿಮೆಯಾಗುವುದಿಲ್ಲ.

12137073a ನೇತ್ರಾಭ್ಯಾಂ ಸರುಜಾಭ್ಯಾಂ ಯಃ ಪ್ರತಿವಾತಮುದೀಕ್ಷತೇ|
12137073c ತಸ್ಯ ವಾಯುರುಜಾತ್ಯರ್ಥಂ ನೇತ್ರಯೋರ್ಭವತಿ ಧ್ರುವಮ್||

ಕಣ್ಣಿನ ರೋಗವಿರುವವನು ಗಾಳಿಗೆ ಎದುರಾಗಿ ನೋಡುತ್ತಿದ್ದರೆ ಗಾಳಿಯ
ಹೊಡೆತದಿಂದ ಅವನ ಕಣ್ಣುಗಳಿಗೆ ನಿಶ್ಚಯವಾಗಿಯೂ ಹೆಚ್ಚಿನ

ಪೀಡೆಯಾಗುತ್ತದೆ.

12137074a ದುಷ್ಟಂ ಪಂಥಾನಮಾಶ್ರಿತ್ಯ ಯೋ ಮೋಹಾದಭಿಪದ್ಯತೇ|
12137074c ಆತ್ಮನೋ ಬಲಮಜ್ಞಾತ್ವಾ ತದಂತಂ ತಸ್ಯ ಜೀವಿತಮ್||

ತನ್ನ ಬಲವನ್ನು ಅರ್ಥಮಾಡಿಕೊಳ್ಳದೇ ಮೋಹವಶನಾಗಿ ದುಷ್ಟ ಮಾರ್ಗದಲ್ಲಿ ಹೋಗುವವನ ಜೀವನವು ಅಲ್ಲಿಯೇ ಸಮಾಪ್ತವಾಗುತ್ತದೆ.

12137075a ಯಸ್ತು ವರ್ಷಮವಿಜ್ಞಾಯ ಕ್ಷೇತ್ರಂ ಕೃಷತಿ ಮಾನವಃ|
12137075c ಹೀನಂ ಪುರುಷಕಾರೇಣ ಸಸ್ಯಂ ನೈವಾಪ್ನುತೇ ಪುನಃ||

ಮಳೆಬೀಳುವ ಸಮಯವನ್ನು ತಿಳಿದುಕೊಳ್ಳದೇ ಹೊಲದಲ್ಲಿ ಕೃಷಿಮಾಡುವ ಮನುಷ್ಯನ ಪುರುಷಾರ್ಥವು ವ್ಯರ್ಥವಾಗಿಹೋಗುತ್ತದೆ. ಹಾಗೆ ಬಿತ್ತುವುದರಿಂದ ಬೆಳೆಯು ಪುನಃ ಬೆಳೆಯುವುದಿಲ್ಲ.

12137076a ಯಶ್ಚ ತಿಕ್ತಂ ಕಷಾಯಂ ವಾಪ್ಯಾಸ್ವಾದವಿಧುರಂ ಹಿತಮ್[627]|
12137076c ಆಹಾರಂ ಕುರುತೇ ನಿತ್ಯಂ ಸೋಽಮೃತತ್ವಾಯ ಕಲ್ಪತೇ||

ಯಾರು ನಿತ್ಯವೂ ತನ್ನ ರುಚಿಗೆ ತಕ್ಕಂತೆ ಖಾರ, ಕಹಿ ಅಥವಾ ಸ್ವಾದಿಷ್ಟವಾದ ಆಹಾರವನ್ನು ಸೇವಿಸುತ್ತಾನೋ ಅದೇ ಅವನಿಗೆ ಅಮೃತಕಲ್ಪವಾಗುತ್ತದೆ.

12137077a ಪಥ್ಯಂ ಭುಕ್ತ್ವಾ ನರೋ ಲೋಭಾದ್ಯೋಽನ್ಯದಶ್ನಾತಿ ಭೋಜನಮ್|
12137077c ಪರಿಣಾಮಮವಿಜ್ಞಾಯ ತದಂತಂ ತಸ್ಯ ಜೀವಿತಮ್||

---

627 ಯಸ್ತು ತಿಕ್ತಂ ಕಷಾಯಂ ವಾ ಸ್ವಾದು ವಾ ಮಧುರಂ ಹಿತಮ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಆದರೆ ಪರಿಣಾಮವನ್ನು ತಿಳಿದುಕೊಳ್ಳದೇ ಲೋಭದಿಂದ ಪಥ್ಯವನ್ನು ಬಿಟ್ಟು ಅಪಥ್ಯ ಭೋಜನವನ್ನು ಮಾಡುವ ನರನ ಜೀವವು ಅಲ್ಲಿಯೇ ಅಂತ್ಯವಾಗಿಬಿಡುತ್ತದೆ.

12137078a ದೈವಂ ಪುರುಷಕಾರಶ್ಚ ಸ್ಥಿತಾವನ್ಯೋನ್ಯಸಂಶ್ರಯಾತ್|
12137078c ಉದಾತ್ತಾನಾಂ ಕರ್ಮ ತಂತ್ರಂ[628] ದೈವಂ ಕ್ಲೀಬಾ ಉಪಾಸತೇ||

ದೈವ ಮತ್ತು ಪುರುಷಾರ್ಥ ಇವೆರಡೂ ಅನ್ಯೋನ್ಯ ಆಶ್ರಯಿಸಿಕೊಂಡಿರುತ್ತವೆ. ಆದರೆ ಉದಾರ ಬುದ್ಧಿಯುಳ್ಳವರು ಕರ್ಮದ ತಂತ್ರವನ್ನು ಬಳಸುತ್ತಾರೆ ಮತ್ತು ದುರ್ಬಲರು ದೈವದ ಭರವಸೆಯಲ್ಲಿಯೇ ಇರುತ್ತಾರೆ.

12137079a ಕರ್ಮ ಚಾತ್ಮಹಿತಂ ಕಾರ್ಯಂ ತೀಕ್ಷ್ಣಂ ವಾ ಯದಿ ವಾ ಮೃದು|
12137079c ಗೃಹ್ಯತೇಽಕರ್ಮಶೀಲಸ್ತು ಸದಾನರ್ಥ್ಯೈರಕಿಂಚನಃ||

ಕಠೋರವಾಗಿರಲಿ ಅಥವಾ ಮೃದುವಾಗಿರಲಿ, ತನಗೆ ಹಿತವಾದ ಕರ್ಮವನ್ನು ಮಾಡುತ್ತಿರಬೇಕು. ಕರ್ಮವನ್ನು ಬಿಟ್ಟು ಕುಳಿತುಕೊಳ್ಳುವವನು ನಿರ್ಧನಿಕನಾಗಿ ಸದಾ ಅನರ್ಥಗಳಿಗೆ ಗುರಿಯಾಗುತ್ತಾನೆ.

12137080a ತಸ್ಮಾತ್ಸಂಶಯಿತೇಽಪ್ಯರ್ಥೇ ಕಾರ್ಯ ಏವ ಪರಾಕ್ರಮಃ|
12137080c ಸರ್ವಸ್ವಮಪಿ ಸಂತ್ಯಜ್ಯ ಕಾರ್ಯಮಾತ್ಮಹಿತಂ ನರೈಃ||

ಆದುದರಿಂದ ಕಾಲ, ದೈವ ಮತ್ತು ಸ್ವಭಾವ ಇವುಗಳ ಮೇಲಿನ ಭರವಸೆಯನ್ನು ಬಿಟ್ಟು ಪರಾಕ್ರಮದಿಂದಲೇ ಕಾರ್ಯಮಾಡಬೇಕು.

---

628 ಉದಾರಾಣಾಂ ತು ಸತ್ಕರ್ಮ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಮನುಷ್ಯನು ಸರ್ವಸ್ವವನ್ನೂ ಪಣವನ್ನಾಗಿಟ್ಟು ತನ್ನ ಹಿತಕ್ಕಾಗಿ ಕಾರ್ಯಕ್ಕೈಗೊಳ್ಳಬೇಕಾಗುತ್ತದೆ.

12137081a ವಿದ್ಯಾ ಶೌರ್ಯಂ ಚ ದಾಕ್ಷ್ಯಂ ಚ ಬಲಂ ಧೈರ್ಯಂ ಚ ಪಂಚಮಮ್।
12137081c ಮಿತ್ರಾಣಿ ಸಹಜಾನ್ಯಾಹುರ್ವರ್ತಯಂತೀಹ ಯೈರ್ಬುಧಾಃ॥

ವಿದ್ಯೆ, ಶೌರ್ಯ, ದಕ್ಷತೆ, ಬಲ ಮತ್ತು ಐದನೆಯ ಧೈರ್ಯ ಇವು ಮನುಷ್ಯನ ಸಹಜ ಮಿತ್ರರೆಂದು ಹೇಳುತ್ತಾರೆ. ವಿದ್ವಾಂಸರು ಇವುಗಳ ಮೂಲಕವೇ ಎಲ್ಲ ಕೆಲಸಗಳನ್ನೂ ಮಾಡುತ್ತಾರೆ.

12137082a ನಿವೇಶನಂ ಚ ಕುಪ್ಯಂ ಚ ಕ್ಷೇತ್ರಂ ಭಾರ್ಯಾ ಸುಹೃಜ್ಜನಃ।
12137082c ಏತಾನ್ಯುಪಚಿತಾನ್ಯಾಹುಃ[629] ಸರ್ವತ್ರ ಲಭತೇ ಪುಮಾನ್॥

ಮನೆ, ಚಿನ್ನ-ಬೆಳ್ಳಿಗಳನ್ನು ಬಿಟ್ಟು ಇತರ ಲೋಹಗಳು, ಹೊಲ, ಹೆಂಡತಿ, ಸುಹೃಜ್ಜನರು ಇವರೆಲ್ಲರೂ ಉಪಮಿತ್ರರೆಂದು ಹೇಳುತ್ತಾರೆ. ಇವುಗಳನ್ನು ಮನುಷ್ಯನು ಸಂಪಾದಿಸಿಕೊಳ್ಳಬಹುದು.

12137083a ಸರ್ವತ್ರ ರಮತೇ ಪ್ರಾಜ್ಞಃ ಸರ್ವತ್ರ ಚ ವಿರೋಚತೇ।
12137083c ನ ವಿಭೀಷಯತೇ ಕಂ ಚಿದ್ಭೀಷಿತೋ ನ ಬಿಭೇತಿ ಚ॥

ಪ್ರಾಜ್ಞನು ಸರ್ವತ್ರ ಆನಂದಿಸುತ್ತಾನೆ. ಮತ್ತು ಸರ್ವತ್ರ ವಿರಾಜಿಸುತ್ತಾನೆ. ಅವನನ್ನು ಯಾವುದೂ ಬೆದರಿಸುವುದಿಲ್ಲ ಮತ್ತು ಯಾರ ಬೆದರಿಕೆಗೂ ಅವನು ಹೆದರುವುದಿಲ್ಲ.

12137084a ನಿತ್ಯಂ ಬುದ್ಧಿಮತೋ ಹ್ಯರ್ಥಃ ಸ್ವಲ್ಪಕೋಽಪಿ ವಿವರ್ಧತೇ।
12137084c ದಾಕ್ಷ್ಯೇಣ ಕುರುತೇ ಕರ್ಮ ಸಂಯಮಾತ್ ಪ್ರತಿತಿಷ್ಠತಿ॥

---

[629] ಏತಾನ್ಯುಪಹಿತಾನ್ಯಾಹುಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಬುದ್ಧಿವಂತನಲ್ಲಿ ಸ್ವಲ್ಪವೇ ಧನವಿದ್ದರೂ ಅದು ನಿತ್ಯವೂ
ವರ್ಧಿಸುತ್ತಿರುತ್ತದೆ. ದಕ್ಷತೆಯಿಂದ ಮತ್ತು ಸಂಯಮದಿಂದ
ಕರ್ಮಗಳನ್ನು ಮಾಡುವ ಅವನು ಪ್ರತಿಷ್ಠಿತನಾಗುತ್ತಾನೆ.

12137085a ಗೃಹಸ್ನೇಹಾವಬದ್ಧಾನಾಂ ನರಾಣಾಮಲ್ಪಮೇಧಸಾಮ್|
12137085c ಕುಸ್ತ್ರೀ ಖಾದತಿ ಮಾಂಸಾನಿ ಮಾಳುಮಾ ಸೇಗವಾಮಿವ||

ಗೃಹಸ್ನೇಹದಲ್ಲಿಯೇ ಇರುವ ಮಂದಬುದ್ಧಿ ಮನುಷ್ಯನ ಮಾಂಸವನ್ನು,
ಚೇಳಿನ ಮರಿಗಳು ತಾಯಿಚೇಳನ್ನೇ ತಿಂದುಹಾಕುವಂತೆ, ಕುಟಿಲ
ಸ್ತ್ರೀಯು ತಿಂದುಬಿಡುತ್ತಾಳೆ.

12137086a ಗೃಹಂ ಕ್ಷೇತ್ರಾಣಿ ಮಿತ್ರಾಣಿ ಸ್ವದೇಶ ಇತಿ ಚಾಪರೇ|
12137086c ಇತ್ಯೇವಮವಸೀದಂತಿ ನರಾ ಬುದ್ಧಿವಿಪರ್ಯಯೇ||

ಬುದ್ಧಿಯು ವಿಪರೀತಗೊಂಡಾಗ ನರರು ಮನೆ, ಹೊಲ, ಮಿತ್ರರು,
ಸ್ವದೇಶ ಮೊದಲಾದವುಗಳ ಕುರಿತು ಚಿಂತಾಗ್ರಸ್ತರಾಗಿ ಸದಾ
ದುಃಖದಲ್ಲಿಯೇ ಇರುತ್ತಾರೆ.

12137087a ಉತ್ಪತೇತ್ಸರುಜಾದ್ದೇಶಾದ್ವ್ಯಾಧಿದುರ್ಭಿಕ್ಷಪೀಡಿತಾತ್|
12137087c ಅನ್ಯತ್ರ ವಸ್ತುಂ ಗಚ್ಚೇದ್ವಾ ವಸೇದ್ವಾ ನಿತ್ಯಮಾನಿತಃ||

ತನ್ನ ಜನ್ಮಸ್ಥಾನವು ರೋಗ ಮತ್ತು ದುರ್ಭಿಕ್ಷದಿಂದ ಪೀಡಿತವಾದರೆ
ಆತ್ಮರಕ್ಷಣೆಗಾಗಿ ಆ ಸ್ಥಳವನ್ನೂ ಬಿಟ್ಟು ಬೇರೆ ಕಡೆ ಹೋಗಬೇಕು. ಅಲ್ಲಿ
ಇರಲೇಬೇಕಾದರೂ ಸಮ್ಮಾನಿತನಾಗಿರಬೇಕು.

12137088a ತಸ್ಮಾದನ್ಯತ್ರ ಯಾಸ್ಯಾಮಿ ವಸ್ತುಂ ನಾಹಮಿಹೋತ್ಸಹೇ|
12137088c ಕೃತಮೇತದನಾಹಾರ್ಯಂ ತವ ಪುತ್ರೇಣ ಪಾರ್ಥಿವ||

ಪಾರ್ಥಿವ! ನಿನ್ನ ಪುತ್ರನೊಡನೆ ನಾನು ದುಷ್ಟಳಾಗಿ
ನಡೆದುಕೊಂಡಿದ್ದೇನೆ. ಆದುದರಿಂದ ನಾನು ಇಲ್ಲಿ ಇರುವ ಸಾಹಸವನ್ನು
ಮಾಡುವುದಿಲ್ಲ. ಬೇರೆ ಎಲ್ಲಿಯಾದರೂ ಹೊರಟುಹೋಗುತ್ತೇನೆ.

12137089a ಕುಭಾರ್ಯಾಂ ಚ ಕುಪುತ್ರಂ ಚ ಕುರಾಜಾನಂ ಕುಸೌಹೃದಮ್|
12137089c ಕುಸಂಬಂಧಂ ಕುದೇಶಂ ಚ ದೂರತಃ ಪರಿವರ್ಜಯೇತ್||

ಕುಭಾರ್ಯೆಯನ್ನು, ಕುಪುತ್ರನನ್ನು, ಕುರಾಜನನ್ನು, ಕುಸೌಹೃದನನ್ನು,
ಕುಸಂಬಂಧವನ್ನು ಮತ್ತು ಕುದೇಶವನ್ನು ದೂರದಿಂದಲೇ
ವರ್ಜಿಸಬೇಕು.

12137090a ಕುಮಿತ್ರೇ[630] ನಾಸ್ತಿ ವಿಶ್ವಾಸಃ ಕುಭಾರ್ಯಾಯಾಂ ಕುತೋ ರತಿಃ|
12137090c ಕುರಾಜ್ಯೇ ನಿರ್ವೃತಿರ್ನಾಸ್ತಿ ಕುದೇಶೇ ನ ಪ್ರಜೀವ್ಯತೇ||

ಕುಮಿತ್ರನಲ್ಲಿ ವಿಶ್ವಾಸವಿರುವುದಿಲ್ಲ. ಕುಭಾರ್ಯೆಯಲ್ಲಿ ಎಲ್ಲಿಯ ಸುಖ?
ಕುರಾಜ್ಯದಲ್ಲಿ ಶಾಂತಿಯಿರುವುದಿಲ್ಲ ಮತ್ತು ಕುದೇಶದಲ್ಲಿ ಜೀವಿಸಲು
ಸಾಧ್ಯವಿಲ್ಲ.

12137091a ಕುಮಿತ್ರೇ ಸಂಗತಂ ನಾಸ್ತಿ ನಿತ್ಯಮಸ್ಥಿರಸೌಹೃದೇ|
12137091c ಅವಮಾನಃ ಕುಸಂಬಂಧೇ ಭವತ್ಯರ್ಥವಿಪರ್ಯಯೇ||

ಕುಮಿತ್ರನೊಡನೆಯ ಸಂಬಂಧವು ಸ್ಥಿರವಾಗಿರುವುದಿಲ್ಲ. ಅವನೊಡನೆ
ಸದಾ ಸೌಹಾರ್ದತೆಯಿಂದಿರುವುದು ಅಸಂಭವ. ಯಾವ ಸಂಬಂಧವು
ದೂಷಿತವಾಗಿರುವುದೋ ಅಲ್ಲಿ ಸ್ವಾರ್ಥದಲ್ಲಿ ವ್ಯತ್ಯಾಸಬಂದಾಗ
ಅಪಮಾನವಾಗತೊಡಗುತ್ತದೆ.

---

[630] ಕುಪುತ್ರೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12137092a ಸಾ ಭಾರ್ಯಾ ಯಾ ಪ್ರಿಯಂ ಬ್ರೂತೇ ಸ ಪುತ್ರೋ ಯತ್ರ ನಿರ್ವೃತಿಃ|
12137092c ತನ್ಮಿತ್ರಂ ಯತ್ರ ವಿಶ್ವಾಸಃ ಸ ದೇಶೋ ಯತ್ರ ಜೀವ್ಯತೇ||

ಪ್ರಿಯಮಾತನ್ನಾಡುವ ಪತ್ನಿಯು ಶ್ರೇಷ್ಠಳು. ಸುಖವನ್ನೀಡುವ ಪುತ್ರನೇ ಶ್ರೇಷ್ಠನು. ಯಾರಲ್ಲಿ ವಿಶ್ವಾಸವನ್ನಿಡಬಹುದೇ ಅವನೇ ಮಿತ್ರನು. ಮತ್ತು ಎಲ್ಲಿ ಜೀವನವನ್ನು ನಡೆಸಬಹುದೋ ಆ ದೇಶವು ಉತ್ತಮವು.

12137093a ಯತ್ರ ನಾಸ್ತಿ ಬಲಾತ್ಕಾರಃ ಸ ರಾಜಾ ತೀವ್ರಶಾಸನಃ|
12137093c ನ ಚೈವ ಹ್ಯಭಿಸಂಬಂಧೋ ದರಿದ್ರಂ ಯೋ ಬುಭೂಷತಿ[631]||

ಎಲ್ಲಿ ಬಲಾತ್ಕಾರವಿಲ್ಲವೋ, ಯಾವುದೇ ಪ್ರಕಾರದ ಭಯವಿಲ್ಲವೋ ಮತ್ತು ಎಲ್ಲಿ ದರಿದ್ರನು ವೃದ್ಧಿಹೊಂದುತ್ತಾನೋ ಆ ದೇಶದ ತೀವ್ರಶಾಸನ ರಾಜನು ಶ್ರೇಷ್ಠನು.

12137094a ಭಾರ್ಯಾ ದೇಶೋಽಥ ಮಿತ್ರಾಣಿ ಪುತ್ರಸಂಬಂಧಿಬಾಂಧವಾಃ|
12137094c ಏತತ್ಸರ್ವಂ ಗುಣವತಿ ಧರ್ಮನೇತ್ರೇ ಮಹೀಪತೌ||

ಯಾವ ದೇಶದ ರಾಜನು ಗುಣವಂತನೂ ಧರ್ಮಪರಾಯಣನೂ ಆಗಿರುತ್ತಾನೋ ಅಲ್ಲಿ ಸ್ತ್ರೀ, ಪುತ್ರ, ಮಿತ್ರ, ಸಂಬಂಧಿಗಳು ಮತ್ತು ದೇಶ ಎಲ್ಲವೂ ಉತ್ತಮ ಗುಣಗಳಿಂದ ಸಂಪನ್ನವಾಗಿರುತ್ತವೆ.

12137095a ಅಧರ್ಮಜ್ಞಸ್ಯ ವಿಲಯಂ ಪ್ರಜಾ ಗಚ್ಚಂತ್ಯನಿಗ್ರಹಾತ್|
12137095c ರಾಜಾ ಮೂಲಂ ತ್ರಿವರ್ಗಸ್ಯ ಅಪ್ರಮತ್ತೋಽನುಪಾಲಯನ್||

ಧರ್ಮವನ್ನು ತಿಳಿಯದ ರಾಜನ ಅತ್ಯಾಚಾರಗಳಿಂದ ಪ್ರಜೆಗಳು

---

631 ಭೀರೇವ ನಾಸ್ತಿ ಸಂಬಂಧೋ ದರಿದ್ರಂ ಯೋ ಬುಭೂಷತೇ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ನಾಶವಾಗುತ್ತಾರೆ. ರಾಜನೇ ಧರ್ಮ-ಅರ್ಥ-ಕಾಮ ಈ ತ್ರಿವರ್ಗಗಳ ಮೂಲ. ಆದುದರಿಂದ ರಾಜನಾದವನು ಅಪ್ರಮತ್ತನಾಗಿದ್ದುಕೊಂಡು ಪ್ರಜಾಪಾಲನೆಯನ್ನು ಮಾಡಬೇಕು.

12137096a ಬಲಿಷಡ್ಭಾಗಮುದ್ಧೃತ್ಯ ಬಲಿಂ ತಮುಪಯೋಜಯೇತ್|
12137096c ನ ರಕ್ಷತಿ ಪ್ರಜಾಃ ಸಮ್ಯಗ್ಯಃ ಸ ಪಾರ್ಥಿವತಸ್ಕರಃ||

ಪ್ರಜೆಗಳ ಆದಾಯದ ಆರನೆಯ ಒಂದು ಭಾಗವನ್ನು ಕರದ ರೂಪದಲ್ಲಿ ಪಡೆದುಕೊಂಡು ಅದನ್ನು ತಾನೇ ಉಪಭೋಗಿಸುವ ಮತ್ತು ಪ್ರಜೆಗಳನ್ನು ಸರಿಯಾಗಿ ಪಾಲಿಸದ ರಾಜನು ರಾಜರಲ್ಲಿಯೇ ಕಳ್ಳನೆಂದೆನಿಸಿಕೊಳ್ಳುತ್ತಾನೆ.

12137097a ದತ್ತ್ವಾ ಭಯಂ ಯಃ ಸ್ವಯಮೇವ ರಾಜಾ
ನ ತತ್ ಪ್ರಮಾಣಂ ಕುರುತೇ ಯಥಾವತ್|
12137097c ಸ ಸರ್ವಲೋಕಾದುಪಲಭ್ಯ ಪಾಪಮ್
ಅಧರ್ಮಬುದ್ಧಿರ್ನಿರಯಂ ಪ್ರಯಾತಿ||

ಪ್ರಜೆಗಳಿಗೆ ಅಭಯದಾನವನ್ನು ನೀಡಿ ಧನದ ಲೋಭದಿಂದಾಗಿ ಸ್ವಯಂ ತಾನೇ ಅದನು ಪಾಲಿಸದೇ ಇರುವ ಪಾಪಬುದ್ಧಿ ರಾಜನು ಸಂಪೂರ್ಣ ಜಗತ್ತಿನ ಪಾಪವನ್ನು ಪಡೆದುಕೊಂಡು ನರಕಕ್ಕೆ ಹೋಗುತ್ತಾನೆ.

12137098a ದತ್ತ್ವಾ ಭಯಂ ಯಃ ಸ್ಮ ರಾಜಾ ಪ್ರಮಾಣಂ ಕುರುತೇ ಸದಾ|
12137098c ಸ ಸರ್ವಸುಖಿಕೃಚ್ಛ್ಲೇಯಃ ಪ್ರಜಾ ಧರ್ಮೇಣ ಪಾಲಯನ್||

ಅಭಯವನ್ನು ನೀಡಿ ಧರ್ಮಪೂರ್ವಕವಾಗಿ ಪ್ರಜಾಪಾಲನೆ ಮಾಡುತ್ತಾ ತನ್ನನ್ನು ತಾನು ಆ ಪ್ರತಿಜ್ಞೆಯನ್ನು ಸತ್ಯವನ್ನಾಗಿಸುವ ರಾಜನು ಸರ್ವರಿಗೂ ಸುಖವನ್ನು ನೀಡುವವನು ಎಂದು ತಿಳಿಯಲಾಗುತ್ತದೆ.

12137099a ಪಿತಾ ಮಾತಾ ಗುರುರ್ಗೋಪ್ತಾ ವಹ್ನಿರ್ವೈಶ್ರವಣೋ ಯಮಃ|
12137099c ಸಪ್ತ ರಾಜ್ಞೋ ಗುಣಾನೇತಾನ್ಮನುರಾಹ ಪ್ರಜಾಪತಿಃ||

ಪ್ರಜಾಪತಿ ಮನುವು ಹೇಳಿದ ರಾಜನ ಏಳು ಗುಣಗಳ ಪ್ರಕಾರ ರಾಜನು ಪಿತಾ, ಮಾತಾ, ಗುರು, ರಕ್ಷಕ, ಅಗ್ನಿ, ಕುಬೇರ, ಮತ್ತು ಯಮರಿಗೆ ಸಮಾನನು.

12137100a ಪಿತಾ ಹಿ ರಾಜಾ ರಾಷ್ಟ್ರಸ್ಯ ಪ್ರಜಾನಾಂ ಯೋಽನುಕಂಪಕಃ|
12137100c ತಸ್ಮಿನ್ಮಿಥ್ಯಾಪ್ರಣೀತೇ ಹಿ ತಿರ್ಯಗ್ಗಚ್ಚತಿ ಮಾನವಃ||

ರಾಷ್ಟ್ರದ ಪ್ರಜೆಗಳ ಅನುಕಂಪಕನಾದ ರಾಜನು ಪಿತನಿಗೆ ಸಮಾನನು. ಅವನ ಕುರಿತಾಗಿ ಮಿಥ್ಯಾಭಾವವನ್ನು ಪ್ರದರ್ಶಿಸಿದ ಮಾನವನು ತಿರ್ಯಗ್ಯೋನಿಯಲ್ಲಿ ಜನ್ಮತಾಳುತ್ತಾನೆ.

12137101a ಸಂಭಾವಯತಿ ಮಾತೇವ ದೀನಮಭ್ಯವಪದ್ಯತೇ|
12137101c ದಹತ್ಯಗ್ನಿರಿವಾನಿಷ್ಟಾನ್ಯಮಯನ್ ಭವತೇ ಯಮಃ||

ಅವನು ದೀನ-ದುಃಖಿಗಳನ್ನೂ ನೋಡಿಕೊಳ್ಳುತ್ತಾನಾದುದರಿಂದ ಮಾತೆಗೆ ಸಮಾನನು. ಅನಿಷ್ಟ ಜನರನ್ನು ಸುಡುತ್ತಿರುವುದರಿಂದ ಅವನು ಅಗ್ನಿಯ ಸಮಾನನು ಮತ್ತು ದುಷ್ಟರನ್ನು ನಿಯಂತ್ರಿಸುವುದರಿಂದ ಅವನು ಯಮನ ಸಮಾನನು.

12137102a ಇಷ್ಟೇಷು ವಿಸೃಜತ್ಯರ್ಥಾನ್ಕುಬೇರ ಇವ ಕಾಮದಃ|
12137102c ಗುರುರ್ಧರ್ಮೋಪದೇಶೇನ ಗೋಪ್ತಾ ಚ ಪರಿಪಾಲನಾತ್||

ಇಷ್ಟಜನರರಿಗೆ ಬಯಸಿದಷ್ಟು ಧನವನ್ನು ಹಂಚುವುದರಿಂದ ಅವನು ಕುಬೇರನು. ಧರ್ಮೋಪದೇಶವನ್ನು ಮಾಡುವುದರಿಂದ ಗುರು ಮತ್ತು

ಪರಿಪಾಲನೆಮಾಡುವುದರಿಂದ ರಕ್ಷಕನಾಗುತ್ತಾನೆ.

12137103a ಯಸ್ತು ರಂಜಯತೇ ರಾಜಾ ಪೌರಜಾನಪದಾನ್ಗುಣೈಃ|
12137103c ನ ತಸ್ಯ ಭ್ರಶ್ಯತೇ ರಾಜ್ಯಂ ಗುಣಧರ್ಮಾನುಪಾಲನಾತ್||

ಯಾವ ರಾಜನು ತನ್ನ ಗುಣಗಳಿಂದ ನಗರ-ಗ್ರಾಮೀಣ ಪ್ರಜೆಗಳನ್ನು
ರಂಜಿಸುತ್ತಾನೋ ಅವನ ಗುಣಧರ್ಮಗಳ ಅನುಪಾಲನೆಯಿಂದ
ಅವನು ರಾಜ್ಯದಿಂದ ಭ್ರಷ್ಟನಾಗುವುದಿಲ್ಲ.

12137104a ಸ್ವಯಂ ಸಮುಪಜಾನನ್ ಹಿ ಪೌರಜಾನಪದಕ್ರಿಯಾಃ|
12137104c ಸ ಸುಖಂ ಮೋದತೇ ಭೂಪ ಇಹ ಲೋಕೇ ಪರತ್ರ ಚ||

ಪುರದ ಮತ್ತು ಗ್ರಾಮಗಳ ನಾಗರೀಕರನ್ನು ಸ್ವಯಂ ತಾನೇ
ಗೌರವಿಸುವುದನ್ನು ತಿಳಿದುಕೊಂಡಿರುವ ಭೂಪನು ಇಹದಲ್ಲಿ ಮತ್ತು
ಪರಲೋಕದಲ್ಲಿ ಸುಖವನ್ನು ಹೊಂದುತ್ತಾನೆ.

12137105a ನಿತ್ಯೋದ್ವಿಗ್ನಾಃ ಪ್ರಜಾ ಯಸ್ಯ ಕರಭಾರಪ್ರಪೀಡಿತಾಃ|
12137105c ಅನರ್ಥೈರ್ವಿಪ್ರಲುಪ್ಯಂತೇ ಸ ಗಚ್ಚತಿ ಪರಾಭವಮ್||

ಕರಭಾರದಿಂದ ಪೀಡಿತರಾಗಿ ಯಾರ ಪ್ರಜೆಗಳು ನಿತ್ಯವೂ
ಉದ್ವಿಗ್ನರಾಗಿರುತ್ತಾರೋ ಮತ್ತು ಅನರ್ಥಗಳಿಂದ
ಪೀಡಿತರಾಗಿರುತ್ತಾರೋ ಆ ರಾಜನು ಪರಾಭವವನ್ನು ಹೊಂದುತ್ತಾನೆ.

12137106a ಪ್ರಜಾ ಯಸ್ಯ ವಿವರ್ಧಂತೇ ಸರಸೀವ ಮಹೋತ್ಪಲಮ್|
12137106c ಸ ಸರ್ವಯಜ್ಞಫಲಭಾಗ್ರಾಜಾ ಲೋಕೇ ಮಹೀಯತೇ||

ಸರೋವರದಲ್ಲಿರುವ ಕಮಲಗಳಂತೆ ಯಾರ ಪ್ರಜೆಗಳು
ವೃದ್ಧಿಹೊಂದುತ್ತಾರೋ ಆ ರಾಜನು ಸರ್ವ ಯಜ್ಞಗಳ ಫಲದ

ಭಾಗಿಯಾಗುತ್ತಾನೆ ಮತ್ತು ಸ್ವರ್ಗಲೋಕದಲ್ಲಿ ಮೆರೆಯುತ್ತಾನೆ.

12137107a ಬಲಿನಾ ವಿಗ್ರಹೋ ರಾಜನ್ನ ಕಥಂ ಚಿತ್ ಪ್ರಶಸ್ಯತೇ|
12137107c ಬಲಿನಾ ವಿಗೃಹೀತಸ್ಯ ಕುತೋ ರಾಜ್ಯಂ ಕುತಃ ಸುಖಮ್||

ರಾಜನ್! ಬಲಶಾಲಿಯೊಡನೆ ಯುದ್ಧಮಾಡುವುದು ಎಂದೂ ಪ್ರಶಂಸಿಸಲ್ಪಡುವುದಿಲ್ಲ. ಬಲಶಾಲಿಯೊಡನೆ ಯುದ್ಧಮಾಡುವವನಿಗೆ ಎಲ್ಲಿಯ ರಾಜ್ಯ ಮತ್ತು ಎಲ್ಲಿಯ ಸುಖ?""

12137108 ಭೀಷ್ಮ ಉವಾಚ|
12137108a ಸೈವಮುಕ್ತ್ವಾ ಶಕುನಿಕಾ ಬ್ರಹ್ಮದತ್ತಂ ನರಾಧಿಪಮ್|
12137108c ರಾಜಾನಂ ಸಮನುಜ್ಞಾಪ್ಯ ಜಗಾಮಾಥೇಪ್ಸಿತಾಂ ದಿಶಮ್||

ಭೀಷ್ಮನು ಹೇಳಿದನು: "ನರಾಧಿಪ ಬ್ರಹ್ಮದತ್ತನಿಗೆ ಹೀಗೆ ಹೇಳಿ ಆ ಪಕ್ಷಿಯು ರಾಜನ ಅನುಮತಿಯನ್ನು ಪಡೆದು ಬಯಸಿದ ದಿಕ್ಕಿನಲ್ಲಿ ಹೊರಟುಹೋಯಿತು.

12137109a ಏತತ್ತೇ ಬ್ರಹ್ಮದತ್ತಸ್ಯ ಪೂಜನ್ಯಾ ಸಹ ಭಾಷಿತಮ್|
12137109c ಮಯೋಕ್ತಂ ಭರತಶ್ರೇಷ್ಠ ಕಿಮನ್ಯಚ್ಛ್ರೋತುಮಿಚ್ಚಸಿ||

ಭರತಶ್ರೇಷ್ಠ! ಪಕ್ಷಿ ಪೂಜನಿಯೊಡನೆ ಬ್ರಹ್ಮದತ್ತನ ಈ ಸಂಭಾಷಣೆಯನ್ನು ನಾನು ಹೇಳಿದ್ದೇನೆ. ಇನ್ನೂ ಏನನ್ನು ಕೇಳಲು ಬಯಸುತ್ತೀಯೆ?"

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ
ಬ್ರಹ್ಮದತ್ತಪೂಜನ್ಯೋಃಸಂವಾದೇ
ಸಪ್ತತ್ರಿಂಶಾತ್ಯಧಿಕಶತತಮೋಽಧ್ಯಾಯಃ||

ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಬ್ರಹ್ಮದತ್ತಪೂಜನ್ಯೋಃ ಸಂವಾದ ಎನ್ನುವ ನೂರಾಮೂವತ್ತೇಳನೇ ಅಧ್ಯಾಯವು.

೧೩೮

ಕಣಿಕ-ಶತ್ರುಂತಪ ಸಂವಾದ

ಭಾರದ್ವಾಜ ಕಣಿಕನಿಂದ ಸೌವೀರ ದೇಶದ ರಾಜ ಶತ್ರುಂತಪನಿಗೆ ಕೂಟನೀತಿಯ ಉಪದೇಶ (1-70).

12138001 ಯುಧಿಷ್ಠಿರ ಉವಾಚ|
12138001a ಯುಗಕ್ಷಯಾತ್ಪರಿಕ್ಷೀಣೇ ಧರ್ಮೇ ಲೋಕೇ ಚ ಭಾರತ|
12138001c ದಸ್ಯುಭಿಃ ಪೀಡ್ಯಮಾನೇ ಚ ಕಥಂ ಸ್ಥೇಯಂ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಭಾರತ! ಪಿತಾಮಹ! ಯುಗಕ್ಷಯದಲ್ಲಿ ಲೋಕದಲ್ಲಿ ಧರ್ಮವು ಕ್ಷೀಣಿಸಿ ದಸ್ಯುಗಳ ಪೀಡೆಗೊಳಗಾದಾಗ ಹೇಗಿರಬೇಕು?"

12138002 ಭೀಷ್ಮ ಉವಾಚ|
12138002a ಹಂತ ತೇ ಕಥಯಿಷ್ಯಾಮಿ ನೀತಿಮಾಪತ್ಸು ಭಾರತ|
12138002c ಉತ್ಸಜ್ಯಾಪಿ ಘೃಣಾಂ ಕಾಲೇ ಯಥಾ ವರ್ತೇತ ಭೂಮಿಪಃ||

ಭೀಷ್ಮನು ಹೇಳಿದನು: "ಭಾರತ! ನಿಲ್ಲು! ಅಂತಹ ಆಪತ್ತಿನ ಕಾಲದಲ್ಲಿ ಭೂಮಿಪನು ಕರುಣೆಯನ್ನು ತೊರೆದು ವರ್ತಿಸಬೇಕಾದ ನೀತಿಯನ್ನು ನಿನಗೆ ಹೇಳುತ್ತೇನೆ.

12138003a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್।
12138003c ಭರದ್ವಾಜಸ್ಯ ಸಂವಾದಂ ರಾಜ್ಞಃ ಶತ್ರುಂತಪಸ್ಯ ಚ॥

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ರಾಜ
ಶತ್ರುಂತಪನೊಡನೆ ಭರದ್ವಾಜನು ನಡೆಸಿದ ಸಂವಾದವನ್ನು
ಉದಾಹರಿಸುತ್ತಾರೆ.

12138004a ರಾಜಾ ಶತ್ರುಂತಪೋ ನಾಮ ಸೌವೀರಾಣಾಂ ಮಹಾರಥಃ।
12138004c ಕಣಿಂಕಮುಪಸಂಗಮ್ಯ ಪಪ್ರಚ್ಛಾರ್ಥವಿನಿಶ್ಚಯಮ್॥

ಸೌವೀರರ ರಾಜ ಶತ್ರುಂತಪ ಎಂಬ ಹೆಸರಿನ ಮಹಾರಥನು ಕಣಿಂಕನ
ಬಳಿಸಾರಿ ತನ್ನ ಕರ್ತವ್ಯವನ್ನು ನಿಶ್ಚಯಿಸಲು ಪ್ರಶ್ನಿಸಿದನುಃ

12138005a ಅಲಬ್ಧಸ್ಯ ಕಥಂ ಲಿಪ್ಸಾ ಲಬ್ಧಂ ಕೇನ ವಿವರ್ಧತೇ।
12138005c ವರ್ಧಿತಂ ಪಾಲಯೇತ್ಕೇನ ಪಾಲಿತಂ ಪ್ರಣಯೇತ್ಕಥಮ್॥

“ದೊರಕದ ವಸ್ತುವನ್ನು ಹೇಗೆ ಪಡೆದುಕೊಳ್ಳಬಹುದು?
ಪಡೆದುಕೊಂಡಿದುದನ್ನು ಹೇಗೆ ವೃದ್ಧಿಗೊಳಿಸಿಕೊಳ್ಳಬಹುದು?
ವೃದ್ಧಿಯಾದ ದ್ರವ್ಯವನ್ನು ಹೇಗೆ ರಕ್ಷಿಸಿಕೊಳ್ಳಬೇಕು? ಮತ್ತು ಹಾಗೆ
ಸುರಕ್ಷಿತವಾಗಿರಿಸಿಕೊಂಡ ಧನವನ್ನು ಹೇಗೆ
ಸದುಪಯೋಗಮಾಡಿಕೊಳ್ಳಬೇಕು?”

12138006a ತಸ್ಯೈ ವಿನಿಶ್ಚಯಾರ್ಥಂ ಸ ಪರಿಪೃಷ್ಟಾರ್ಥನಿಶ್ಚಯಃ।
12138006c ಉವಾಚ ಬ್ರಾಹ್ಮಣೋ ವಾಕ್ಯಮಿದಂ ಹೇತುಮದುತ್ತರಮ್॥

ಶಾಸ್ತ್ರಗಳ ತಾತ್ಪರ್ಯವನ್ನು ನಿಶ್ಚಿತರೂಪದಲ್ಲಿ ತಿಳಿದಿದ್ದ ಅವನು ತನ್ನ
ಕರ್ತವ್ಯವನ್ನು ನಿಶ್ಚಯಿಸಲು ಈ ರೀತಿ ಪ್ರಶ್ನಿಸಲು ಬ್ರಾಹ್ಮಣನು

ಯುಕ್ತಿಯುಕ್ತ ಉತ್ತಮ ಮಾತನ್ನಾಡಲು ಪ್ರಾರಂಭಿಸಿದನು.

12138007a ನಿತ್ಯಮುದ್ಯತದಂಡಃ ಸ್ಯಾನ್ನಿತ್ಯಂ ವಿವೃತಪೌರುಷಃ|
12138007c ಅಚ್ಚಿದ್ರಶ್ಚಿದ್ರದರ್ಶೀ ಚ ಪರೇಷಾಂ ವಿವರಾನುಗಃ||

“ರಾಜನು ನಿತ್ಯವೂ ದಂಡವನ್ನು ನೀಡಲು ಉದ್ಯತನಾಗಿರಬೇಕು ಮತ್ತು ನಿತ್ಯವೂ ಪೌರುಷವನ್ನು ತೋರಿಸುತ್ತಿರಬೇಕು. ತನ್ನ ದುರ್ಬಲತೆಯನ್ನು ತೋರಿಸಿಕೊಳ್ಳಬಾರದು. ಶತ್ರುಗಳ ದುರ್ಬಲತೆಯನ್ನು ಹುಡುಕುತ್ತಿರಬೇಕು ಮತ್ತು ಅವರಲ್ಲಿ ದುರ್ಬಲತೆಯು ಕಂಡಕೂಡಲೇ ಅವರನ್ನು ಆಕ್ರಮಣಿಸಬೇಕು.

12138008a ನಿತ್ಯಮುದ್ಯತದಂಡಸ್ಯ ಭೃಶಮುದ್ವಿಜತೇ ಜನಃ|
12138008c ತಸ್ಮಾತ್ಸರ್ವಾಣಿ ಭೂತಾನಿ ದಂಡೇನೈವ ಪ್ರರೋಧಯೇತ್[632]||

ಸದಾ ದಂಡವನ್ನು ನೀಡಲು ಉದ್ಯತನಾಗಿರುವ ರಾಜನಿಗೆ ಪ್ರಜೆಗಳು ಹೆದರುತ್ತಾರೆ. ಆದುದರಿಂದ ಸಮಸ್ತ ಪ್ರಾಣಿಗಳನ್ನೂ ದಂಡದಿಂದಲೇ ವಶದಲ್ಲಿಟ್ಟುಕೊಳ್ಳಬೇಕು.

12138009a ಏವಮೇವ ಪ್ರಶಂಸಂತಿ ಪಂಡಿತಾಸ್ತತ್ತ್ವದರ್ಶಿನಃ|
12138009c ತಸ್ಮಾಚ್ಚತುಷ್ಪಯೇ ತಸ್ಮಿನ್ ಪ್ರಧಾನೋ ದಂಡ ಉಚ್ಯತೇ||

ಈ ರೀತಿಯಲ್ಲಿ ತತ್ತ್ವದರ್ಶೀ ಪಂಡಿತರು ದಂಡವನ್ನೇ ಪ್ರಶಂಸಿಸುತ್ತಾರೆ. ಆದುದರಿಂದ ಸಾಮ-ದಾನ ಮೊದಲಾದ ನಾಲ್ಕು ಉಪಾಯಗಳಲ್ಲಿ ದಂಡವೇ ಪ್ರಧಾನವೆಂದು ಹೇಳುತ್ತಾರೆ.

12138010a ಚಿನ್ನಮೂಲೇ ಹ್ಯಧಿಷ್ಠಾನೇ ಸರ್ವೇ ತಜ್ಜೀವಿನೋ ಹತಾಃ|

---

[632] ಪ್ರಸಾಧಯೇತ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12138010c ಕಥಂ ಹಿ ಶಾಖಾಸ್ತಿಷ್ಠೇಯುಶ್ಚಿನ್ನಮೂಲೇ ವನಸ್ಪತೌ||

ಮೂಲವೇ ನಾಶವಾಗಿಹೋದಮೇಲೆ ಅದನ್ನು ಆಶ್ರಯಿಸಿರುವ ಸರ್ವ ಶತ್ರುಗಳೂ ಹತರಾಗುತ್ತಾರೆ. ವೃಕ್ಷದ ಬೇರನ್ನೇ ಕತ್ತರಿಸಿದ ಮೇಲೆ ಅದರ ಶಾಖೆಗಳು ಹೇಗೆ ಇರಬಹುದು?

12138011a ಮೂಲಮೇವಾದಿತಶ್ಚಿಂದ್ಯಾತ್ಪರಪಕ್ಷಸ್ಯ ಪಂಡಿತಃ|
12138011c ತತಃ ಸಹಾಯಾನ್ಪಕ್ಷಂ ಚ ಸರ್ವಮೇವಾನುಸಾರಯೇತ್||

ಪಂಡಿತನಾದವನು ಮೊದಲು ಶತ್ರುಪಕ್ಷದ ಮೂಲವನ್ನೇ ಕಿತ್ತೊಗೆಯಬೇಕು. ಅನಂತರ ಅವರ ಸಹಾಯಕರು ಮತ್ತು ಪಕ್ಷಪಾತಿಗಳನ್ನೂ ಕೂಡ ಅವರ ಮೂಲವನ್ನು ಅನುಸರಿಸುವಂತೆ ಮಾಡಬೇಕು.

12138012a ಸುಮಂತ್ರಿತಂ ಸುವಿಕ್ರಾಂತಂ ಸುಯುದ್ಧಂ ಸುಪಲಾಯಿತಮ್|
12138012c ಆಪದಾಂ ಪದಕಾಲೇಷು ಕುರ್ಯಿತ ನ ವಿಚಾರಯೇತ್||

ಆಪತ್ತಿನ ಕಾಲದಲ್ಲಿ ರಾಜನು ಉತ್ತಮ ಸಮಾಲೋಚನೆ, ಉತ್ತಮ ಪರಾಕ್ರಮ ಮತ್ತು ಉತ್ಸಾಹಪೂರ್ವಕ ಯುದ್ಧ ಹಾಗೂ ಅವಶ್ಯವಾದರೆ ಉತ್ತಮರೀತಿಯಲ್ಲಿ ಪಲಾಯನವನ್ನೂ ಮಾಡಬೇಕು. ಅವಶ್ಯ ಕರ್ಮವನ್ನು ಮಾಡಬೇಕು. ತುಂಬಾ ವಿಚಾರಿಸಬಾರದು.

12138013a ವಾಙ್ಮಾತ್ರೇಣ ವಿನೀತಃ ಸ್ಯಾದ್ಧೃದಯೇನ ಯಥಾ ಕ್ಷುರಃ|
12138013c ಶ್ಲಕ್ಷ್ಣಪೂರ್ವಾಭಿಭಾಷೀ ಚ ಕಾಮಕ್ರೋಧೌ ವಿವರ್ಜಯೇತ್||

ಮಾತಿನಲ್ಲಿ ಮಾತ್ರ ವಿನೀತನಾಗಿರಬೇಕು. ಹೃದಯದಲ್ಲಿ ಕ್ಷೌರಿಕನ ಕತ್ತಿಯಂತೆ ಹರಿತನಾಗಿರಬೇಕು. ಮೊದಲು ಕಾಮಕ್ರೋಧಗಳನ್ನು

ವರ್ಜಿಸಬೇಕು ಮತ್ತು ನಸುನಗುತ್ತಾ ಮಧುರವಾಗಿ ಮಾತನಾಡಬೇಕು.

12138014a ಸಪತ್ನಸಹಿತೇ ಕಾರ್ಯೇ ಕೃತ್ವಾ ಸಂಧಿಂ ನ ವಿಶ್ವಸೇತ್|
12138014c ಅಪಕ್ರಾಮೇತ್ತತಃ ಕ್ಷಿಪ್ರಂ ಕೃತಕಾರ್ಯೋ ವಿಚಕ್ಷಣಃ||

ಶತ್ರುವಿನೊಂದಿಗೆ ಸಂಧಿಯನ್ನು ಮಾಡಿಕೊಂಡರೂ ಅವನ ಮೇಲೆ ವಿಶ್ವಾಸವನ್ನಿಡಬಾರದು. ತನ್ನ ಕಾರ್ಯವು ಆದ ನಂತರ ಬುದ್ಧಿವಂತನು ಬೇಗನೇ ಅಲ್ಲಿಂದ ಹೊರಟುಹೋಗಬೇಕು.

12138015a ಶತ್ರುಂ ಚ ಮಿತ್ರರೂಪೇಣ ಸಾಂತ್ವೇನ್ಯೈವಾಭಿಸಾಂತ್ವಯೇತ್|
12138015c ನಿತ್ಯಶಶ್ಚೋದ್ವಿಜೇತ್ತಸ್ಮಾತ್ಸರ್ಪಾದ್ವೇಶ್ಮಗತಾದಿವ||

ಶತ್ರುವನ್ನು ಮಿತ್ರರೂಪದಲ್ಲಿ ಸಾಂತ್ವನದ ಮಾತುಗಳಿಂದ ಸಂತವಿಸುತ್ತಿದ್ದರೂ ಮನೆಯ ಒಳಹೊಕ್ಕ ಸರ್ಪದಂತೆ ನಿತ್ಯವೂ ಅವನ ಕುರಿತು ಉದ್ವೇಗದಿಂದಿರಬೇಕು.

12138016a ಯಸ್ಯ ಬುದ್ಧಿಂ ಪರಿಭವೇತ್ತಮತೀತೇನ ಸಾಂತ್ವಯೇತ್|
12138016c ಅನಾಗತೇನ ದುಷ್ಪ್ರಜ್ಞಂ ಪ್ರತ್ಯುತ್ಪನ್ನೇನ ಪಂಡಿತಮ್||

ಸಂಕಟದಲ್ಲಿ ಪರಿತಪಿಸುತ್ತಿರುವವನಿಗೆ ಹಿಂದೆ ನಡೆದ ವಿಷಯಗಳನ್ನು ಹೇಳಿ ಸಂತವಿಸಬೇಕು. ಪಂಡಿತನಾದವನು ಅಷ್ಟೊಂದು ಪ್ರಜ್ಞೆಯಿಲ್ಲದಿರುವವನನ್ನು ಮುಂದಾಗುವ ಲಾಭದ ಆಸೆಗಳನ್ನು ತೋರಿಸಿ ಸಂತವಿಸಬೇಕು.

12138017a ಅಂಜಲಿಂ ಶಪಥಂ ಸಾಂತ್ವಂ ಪ್ರಣಮ್ಯ ಶಿರಸಾ ವದೇತ್|
12138017c ಅಶ್ರುಪ್ರಪಾತನಂ ಚೈವ ಕರ್ತವ್ಯಂ ಭೂತಿಮಿಚ್ಚತಾ||

ಐಶ್ವರ್ಯವನ್ನು ಬಯಸುವ ರಾಜನು ಸಮಯವನ್ನು ನೋಡಿಕೊಂಡು

ಶತ್ರುವಿನ ಎದಿರು ಕೈಜೋಡಿಸಿ, ಆಣೆಯಿಟ್ಟು, ಆಶ್ವಾಸನೆಯನ್ನು
ನೀಡಬೇಕು ಮತ್ತು ಶಿರಸಾ ನಮಸ್ಕರಿಸಿ ಮಾತನಾಡಬೇಕು. ಅಷ್ಟೇ
ಅಲ್ಲದೆ ಅವನಿಗೆ ಕಣ್ಣೀರನ್ನೂ ಸುರಿಸಬೇಕಾಗುತ್ತದೆ.

12138018a ವಹೇದಮಿತ್ರಂ ಸ್ಕಂಧೇನ ಯಾವತ್ಕಾಲವಿಪರ್ಯಯಃ|
12138018c ಅಥೈನಮಾಗತೇ ಕಾಲೇ ಭಿಂದ್ಯಾದ್ಘಟಮಿವಾಶ್ಮನಿ||

ಎಲ್ಲಿಯ ವರೆಗೆ ಕಾಲವು ಬದಲಾಗಿ ತನಗೆ
ಅನುಕೂಲವಾಗುವುದಿಲ್ಲವೋ ಅಲ್ಲಿಯ ವರೆಗೆ ಶತ್ರುವನ್ನು ಹೆಗಲ
ಮೇಲೆ ಕೂರಿಸಿಕೊಂಡು ಹೋಗಬೇಕಾದರೆ ಅದನ್ನೂ ಮಾಡಬೇಕು.
ಆದರೆ ಅನುಕೂಲ ಸಮಯವು ಬಂದಾಗ ಗಡಿಗೆಯನ್ನು ಬಂಡೆಯ
ಮೇಲೆ ಕುಕ್ಕಿ ಒಡೆಯುವಂತೆ ಅವನನ್ನು ನಾಶಗೊಳಿಸಬೇಕು.

12138019a ಮುಹೂರ್ತಮಪಿ ರಾಜೇಂದ್ರ ತಿಂದುಕಾಲಾತವಜ್ಜ್ವಲೇತ್|
12138019c ನ ತುಷಾಗ್ನಿರಿವಾನರ್ಚಿರ್ಧೂಮಾಯೇತ ನರಶ್ಚಿರಮ್||

ರಾಜೇಂದ್ರ! ಒಂದು ಕ್ಷಣಕ್ಕಾದರೂ ಶತ್ರುವಿನ ಮುಂದೆ ತುಂಬಿಗಿಡವು
ಜೋರಾಗಿ ಹತ್ತಿ ಉರಿಯುವಂತೆ ಪ್ರತಾಪವನ್ನು ತೋರಿಸಬೇಕು.
ಮನುಷ್ಯನು ಹೆಚ್ಚು ಸಮಯಗಳವರೆಗೆ ತೌಡಿಗೆ ತಾಗಿದ ಅಗ್ನಿಯಂತೆ
ಪ್ರಜ್ವಲಿಸದೇ ಕೇವಲ ಹೊಗೆಯನ್ನು ತೋರಿಸುವಂತಿರಬಾರದು.

12138020a ನಾನರ್ಥಕೇನಾರ್ಥವತ್ತ್ವಂ[633] ಕೃತಘ್ನೇನ ಸಮಾಚರೇತ್|
12138020c ಅರ್ಥೇ ತು ಶಕ್ಯತೇ ಭೋಕ್ತುಂ ಕೃತಕಾರ್ಯೋಽವಮನ್ಯತೇ|
12138020e ತಸ್ಮಾತ್ಸರ್ವಾಣಿ ಕಾರ್ಯಾಣಿ ಸಾವಶೇಷಾಣಿ ಕಾರಯೇತ್||

---

[633] ನಾನಾರ್ಥಿಕೋಽರ್ಥಸಂಬಂಧಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಉದ್ದೇಶಗಳನ್ನಿಟ್ಟುಕೊಂಡಿರುವವನು ಕೃತಘ್ನನೊಡನೆ ಆರ್ಥಿಕ ಸಂಬಂಧವನ್ನು ಇಟ್ಟುಕೊಳ್ಳಬಾರದು. ಆರ್ಥಿಯಿಂದ ಕೆಲಸಮಾಡಿಸಿಕೊಳ್ಳುವುದು ಸುಲಭ. ಆದರೆ ಒಮ್ಮೆ ಕೆಲಸವಾಯಿತೆಂದರೆ ಅದೇ ಆರ್ಥಿಯು ಕೆಲಸಮಾಡಿಕೊಟ್ಟವನನ್ನು ಅಪೇಕ್ಷಿಸಬಹುದು. ಆದುದರಿಂದ ಇತರರ ಎಲ್ಲ ಕೆಲಸಗಳನ್ನೂ ಸ್ವಲ್ಪ ಉಳಿಸಿಯೇ ಮಾಡಬೇಕು.

12138021a ಕೋಕಿಲಸ್ಯ ವರಾಹಸ್ಯ ಮೇರೋಃ ಶೂನ್ಯಸ್ಯ ವೇಶ್ಮನಃ|
12138021c ವ್ಯಾಡಸ್ಯ ಭಕ್ತಿಚಿತ್ರಸ್ಯ[634] ಯಚ್ಚ್ರೇಷ್ಠಂ ತತ್ ಸಮಾಚರೇತ್||

ಕೋಗಿಲೆ, ಹಂದಿ, ಮೇರು ಪರ್ವತ, ಶೂನ್ಯಗೃಹ, ಹಾವು ಮತ್ತು ಭಕ್ತಿಚಿತ್ರ ಇವುಗಳಲ್ಲಿ ಯಾವ ಗುಣವು ಶ್ರೇಷ್ಠವಾಗಿರುವುದೋ ಅದನ್ನೇ ಆಚರಿಸಬೇಕು.

12138022a ಉತ್ಥಾಯೋತ್ಥಾಯ ಗಚ್ಚೇಚ್ಚ ನಿತ್ಯಯುಕ್ತೋ ರಿಪೋರ್ಗೃಹಾನ್|
12138022c ಕುಶಲಂ ಚಾಪಿ ಪೃಚ್ಚೇತ ಯದ್ಯಪ್ಯಕುಶಲಂ ಭವೇತ್||

ನಿತ್ಯವೂ ಎದ್ದವನು ಶತ್ರುವಿನ ಮನೆಗೆ ಹೋಗಿ ಅವನಿಗೆ ಅಕುಶಲವು ನಡೆಯುತ್ತಿದ್ದರೂ ಸಾವಧಾನದಿಂದ ಅವನ ಕುಶಲವನ್ನು ಕೇಳುತ್ತಿರಬೇಕು.

12138023a ನಾಲಸಾಃ ಪ್ರಾಪ್ನುವಂತ್ಯರ್ಥಾನ್ನ ಕ್ಲೀಬಾ ನ ಚ ಮಾನಿನಃ|
12138023c ನ ಚ ಲೋಕರವಾದ್ಭೀತಾ ನ ಚ ಶಶ್ವತ್ ಪ್ರತೀಕ್ಷಿಣಃ||

ಆಲಸಿ, ಹೇಡಿಗಳು, ಅಭಿಮಾನಿಗಳು, ಜನರ ಮಾತಿಗೆ ಹೆದರುವವರು

634 ನಟಸ್ಯ ಭಕ್ತಿಮಿತ್ರಸ್ಯ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಮತ್ತು ಸಮಯವನ್ನೇ ಕಾಯುತ್ತಾ ಕುಳಿತಿರುವವರು ತಮ್ಮ ಅಭೀಷ್ಟ ಸಿದ್ಧಿಗಳನ್ನು ಪಡೆದುಕೊಳ್ಳುವುದಿಲ್ಲ.

12138024a ನಾಸ್ಯ ಚಿದ್ರಂ ಪರೋ ವಿದ್ಯಾದ್ವಿದ್ಯಾಚ್ಚಿದ್ರಂ ಪರಸ್ಯ ತು|
12138024c ಗೂಹೇತ್ಕೂರ್ಮ ಇವಾಂಗಾನಿ ರಕ್ಷೇದ್ವಿವರಮಾತ್ಮನಃ||

ತನ್ನ ನ್ಯೂನತೆಗಳನ್ನು ಶತ್ರುವಿಗೆ ತೋರಿಸಬಾರದು ಆದರೆ ಶತ್ರುವಿನ ನ್ಯೂನತೆಗಳನ್ನು ತಿಳಿದುಕೊಂಡಿರಬೇಕು. ಆಮೆಯು ತನ್ನ ಅಂಗಗಳನ್ನು ಒಳಗೆ ಎಳೆದುಕೊಂಡು ರಕ್ಷಿಸಿಕೊಂಡಿರುವಂತೆ ತನ್ನ ನ್ಯೂನತೆಗಳನ್ನು ಮುಚ್ಚಿಕೊಂಡಿರಬೇಕು.

12138025a ಬಕವಚ್ಚಿಂತಯೇದರ್ಥಾನ್ಸಿಂಹವಚ್ಚ ಪರಾಕ್ರಮೇತ್|
12138025c ವೃಕವಚ್ಚಾವಲುಂಪೇತ ಶಶವಚ್ಚ[635] ವಿನಿಷ್ಪತೇತ್||

ಬಕಪಕ್ಷಿಯಂತೆ ಏಕಾಗ್ರಚಿತ್ತನಾಗಿ ಕರ್ತವ್ಯವಿಷಯದ ಕುರಿತು ಚಿಂತಿಸಬೇಕು. ಸಿಂಹದಂತೆ ಪರಾಕ್ರಮವನ್ನು ಪ್ರಕಟಿಸಬೇಕು. ತೋಳದಂತೆ ಒಮ್ಮಿಂದೊಮ್ಮೆಲೇ ಆಕ್ರಮಣ ಮಾಡಿ ಶತ್ರುವಿನ ಧನವನ್ನು ಕಸಿದುಕೊಳ್ಳಬೇಕು ಮತ್ತು ಮೊಲದಂತೆ ಶತ್ರುವಿನ ಮೇಲೆ ಕುಪ್ಪಳಿಸಬೇಕು.

12138026a ಪಾನಮಕ್ಷಾಸ್ತಥಾ ನಾರ್ಯೋ ಮೃಗಯಾ ಗೀತವಾದಿತಮ್|
12138026c ಏತಾನಿ ಯುಕ್ತ್ಯಾ ಸೇವೇತ ಪ್ರಸಂಗೋ ಹ್ಯತ್ರ ದೋಷವಾನ್||

ಪಾನ, ದ್ಯೂತ, ನಾರಿಯರು, ಬೇಟೆ ಮತ್ತು ಗೀತ-ವಾದ್ಯಗಳು ಇವುಗಳನ್ನು ಸಂಯಮಪೂರ್ವಕ ಅನಾಸಕ್ತಭಾವದಿಂದ ಸೇವಿಸಬೇಕು.

---

635 ಶರವಚ್ಚ ಎಂಬ ಪಠಾಂತರವಿದೆ (ಗೀತಾ ಪ್ರೆಸ್).

ಏಕೆಂದರೆ ಇವುಗಳಲ್ಲಿನ ಆಸಕ್ತಿಯು ಅನಿಷ್ಟಕಾರಕವು.

12138027a ಕುರ್ಯಾತ್ತೃಣಮಯಂ ಚಾಪಂ ಶಯೀತ ಮೃಗಶಾಯಿಕಾಮ್|
12138027c ಅಂಧಃ ಸ್ಯಾದಂಧವೇಲಾಯಾಂ ಬಾಧಿರ್ಯಮಪಿ ಸಂಶ್ರಯೇತ್||

ಧನುಸ್ಸನ್ನು ತೃಣಮಯವನ್ನಾಗಿ ಮಾಡಬೇಕು. ಜಿಂಕೆಯಂತೆ ಜಾಗರೂಕನಾಗಿದ್ದು ನಿದ್ರಿಸಬೇಕು. ಅಂಧನಾಗಿರಬೇಕಾದ ವೇಳೆಯಲ್ಲಿ ಅಂಧನಾಗಿರಬೇಕು. ಸಮಯಕ್ಕೆ ಅನುಸಾರವಾಗಿ ಕಿವುಡನ ಭಾವವನ್ನೂ ಸ್ವೀಕರಿಸಬೇಕು.

12138028a ದೇಶಂ ಕಾಲಂ ಸಮಾಸಾದ್ಯ ವಿಕ್ರಮೇತ ವಿಚಕ್ಷಣಃ|
12138028c ದೇಶಕಾಲಾಭ್ಯತೀತೋ ಹಿ ವಿಕ್ರಮೋ ನಿಷ್ಫಲೋ ಭವೇತ್||

ಬುದ್ಧಿಶಾಲಿಯು ದೇಶ ಕಾಲಗಳನ್ನು ನೋಡಿಕೊಂಡು ವಿಕ್ರಮವನ್ನು ತೋರಿಸಬೇಕು. ದೇಶಕಾಲಗಳನ್ನು ಮೀರಿ ಮಾಡಿದ ವಿಕ್ರಮವು ನಿಷ್ಫಲವಾಗುತ್ತದೆ.

12138029a ಕಾಲಾಕಾಲೌ ಸಂಪ್ರಧಾರ್ಯ ಬಲಾಬಲಮಥಾತ್ಮನಃ|
12138029c ಪರಸ್ಪರಬಲಂ ಜ್ಞಾತ್ವಾ ತಥಾತ್ಮಾನಂ ನಿಯೋಜಯೇತ್||

ಕಾಲಾಕಾಲಗಳನ್ನು ಮತ್ತು ತನ್ನ ಬಲಾಬಲಗಳನ್ನು ನೋಡಿಕೊಂಡೇ ಮತ್ತು ಶತ್ರುವಿನ ಬಲವನ್ನೂ ತಿಳಿದುಕೊಂಡು ತನ್ನನ್ನು ಯುದ್ಧ ಅಥವಾ ಸಂಧಿಯಲ್ಲಿ ತೊಡಗಿಸಿಕೊಳ್ಳಬೇಕು.

12138030a ದಂಡೇನೋಪನತಂ ಶತ್ರುಂ ಯೋ ರಾಜಾ ನ ನಿಯಚ್ಚತಿ|
12138030c ಸ ಮೃತ್ಯುಮುಪಗೂಹ್ಯಾಸ್ತೇ ಗರ್ಭಮಶ್ವತರೀ ಯಥಾ||

ನತಮಸ್ತಕನಾದ ಶತ್ರುವನ್ನು ದಂಡದಿಂದ ನಾಶಪಡಿಸದ ರಾಜನು

ಮೃತ್ಯುವನ್ನು ಗರ್ಭಧಾರಣೆ ಮಾಡುವ ಹೇಸರಗತ್ತೆಯಂತೆ
ಮೃತ್ಯುವನ್ನು ಆಮಂತ್ರಿಸುತ್ತಾನೆ.

12138031a ಸುಪುಷ್ಪಿತಃ ಸ್ಯಾದಫಲಃ ಫಲವಾನ್ ಸ್ಯಾದ್ದುರಾರುಹಃ|
12138031c ಆಮಃ ಸ್ಯಾತ್ಪಕ್ವಸಂಕಾಶೋ ನ ಚ ಶೀರ್ಯೇತ ಕಸ್ಯ ಚಿತ್||

ನೀತಿಜ್ಞ ರಾಜನು ಚೆನ್ನಾಗಿ ಹೂವುಗಳು ತುಂಬಿದ ಆದರೆ
ಹಣ್ಣುಗಳಿಲ್ಲದ ವೃಕ್ಷದಂತಿರಬೇಕು. ಫಲವು ಬಂದರೂ ಇನ್ನೂ
ಕಾಯಾಗಿದ್ದ ಹಾಗೆ ಕಾಣಿಸಬೇಕು. ತಾನೂ ಎಂದೂ
ಶಿಥಿಲನಾದವನಂತೆ ತೋರಬಾರದು.

12138032a ಆಶಾಂ ಕಾಲವತೀಂ ಕುರ್ಯಾತ್ತಾಂ ಚ ವಿಘ್ನೇನ ಯೋಜಯೇತ್|
12138032c ವಿಘ್ನಂ ನಿಮಿತ್ತತೋ ಬ್ರೂಯಾನ್ನಿಮಿತ್ತಂ ಚಾಪಿ ಹೇತುತಃ||

ರಾಜನು ಶತ್ರುವಿನ ಆಶಯಗಳನ್ನು ಪೂರ್ಣಗೊಳಿಸುವಲ್ಲಿ
ವಿಲಂಬಮಾಡಬೇಕು. ಏನಾದರೂ ವಿಘ್ನಗಳನ್ನು ತಂದೊಡ್ಡಬೇಕು. ಆ
ವಿಘ್ನಕ್ಕೆ ಯಾವುದಾದರೂ ಕಾರಣವನ್ನು ಹೇಳಬೇಕು. ಆದರೆ ಆ
ಕಾರಣವು ಚೆನ್ನಾಗಿ ಯೋಚಿಸಿದ್ದಾಗಿರಬೇಕು.

12138033a ಭೀತವತ್ಸಂವಿಧಾತವ್ಯಂ ಯಾವದ್ ಭಯಮನಾಗತಮ್|
12138033c ಆಗತಂ ತು ಭಯಂ ದೃಷ್ಟ್ವಾ ಪ್ರಹರ್ತವ್ಯಮಭೀತವತ್||

ಭಯವುಂಟಾಗದ ವರೆಗೆ ಭಯದಲ್ಲಿರುವವನಂತೆಯೇ
ತೋರಿಸಿಕೊಂಡು ಭಯವುಂಟಾಗದ ಹಾಗೆ ಪ್ರಯತ್ನಿಸುತ್ತಿರಬೇಕು.
ಆದರೆ ಭಯವು ಬರುತ್ತಿರುವುದನ್ನು ನೋಡಿ ನಿರ್ಭೀತನಾಗಿ ಶತ್ರುವನ್ನು
ಪ್ರಹರಿಸಬೇಕು.

12138034a ನ ಸಂಶಯಮನಾರುಹ್ಯ ನರೋ ಭದ್ರಾಣಿ ಪಶ್ಯತಿ|
12138034c ಸಂಶಯಂ ಪುನರಾರುಹ್ಯ ಯದಿ ಜೀವತಿ ಪಶ್ಯತಿ||

ಪ್ರಾಣದ ಸಂಶವಿದ್ದಾಗ ಆ ಸಂಕಟವನ್ನು ಸ್ವೀಕರಿಸದೇ ಮನುಷ್ಯನು
ಒಳಿತನ್ನು ಕಾಣುವುದಿಲ್ಲ. ಪ್ರಾಣಸಂಕಟದಿಂದ ತನ್ನನ್ನು
ಉಳಿಸಿಕೊಂಡರೆ ಮಾತ್ರ ಮುಂದೆ ತನ್ನ ಉಳಿತನ್ನು ಕಾಣಬಹುದು.

12138035a ಅನಾಗತಂ ವಿಜಾನೀಯಾದ್ಯಚ್ಚೀದ್ ಭಯಮುಪಸ್ಥಿತಮ್|
12138035c ಪುನರ್ವ್ಯದ್ಧಿಕ್ಷಯಾತ್ಕಿಂ ಚಿದಭಿವೃತ್ತಂ ನಿಶಾಮಯೇತ್||

ಮುಂದಾಗಲಿರುವ ಸಂಕಟವನ್ನು ಮೊದಲೇ ತಿಳಿದುಕೊಳ್ಳಲು
ಪ್ರಯತ್ನಿಸಬೇಕು ಮತ್ತು ಭಯಬಂದೊದಗಿದಾಗ ಅದನ್ನು ಮುಚ್ಚಿಡಲು
ಪ್ರಯತ್ನಿಸಬಾರದು. ಮುಚ್ಚಿಡಲ್ಪಟ್ಟ ಭಯವೂ ಪುನಃ
ಹೆಚ್ಚಾಗಬಹುದು. ಆದುದರಿಂದ ಭಯವು ಎಂದೂ ಮುಗಿದಿಲ್ಲ ಎಂದೇ
ಯೋಚಿಸಿ ಜಾಗೃತನಾಗಿರಬೇಕು.

12138036a ಪ್ರತ್ಯುಪಸ್ಥಿತಕಾಲಸ್ಯ ಸುಖಸ್ಯ ಪರಿವರ್ಜನಮ್|
12138036c ಅನಾಗತಸುಖಾಶಾ ಚ ನೈಷ ಬುದ್ಧಿಮತಾಂ ನಯಃ||

ಬಂದಿರುವ ಸುಖದ ಕಾಲವನ್ನು ಪರಿತ್ಯಜಿಸಿ ಮುಂದೆ ಬರುವ
ಸುಖವನ್ನು ಆಶಿಸುವುದು ಬುದ್ಧಿವಂತರ ನೀತಿಯಲ್ಲ.

12138037a ಯೋಽರಿಣಾ ಸಹ ಸಂಧಾಯ ಸುಖಂ ಸ್ವಪಿತಿ ವಿಶ್ವಸನ್|
12138037c ಸ ವೃಕ್ಷಾಗ್ರಪ್ರಸುಪ್ತೋ ವಾ ಪತಿತಃ ಪ್ರತಿಬುಧ್ಯತೇ||

ಶತ್ರುವಿನೊಂದಿಗೆ ಸಂಧಿಮಾಡಿಕೊಂದು ವಿಶ್ವಾಸದಿಂದ ಸುಖವಾಗಿ
ಮಲಗುವವನು ಮರದ ರೆಂಬೆಯ ಮೇಲೆ ಮಲಗಿ ನಿದ್ದೆ

ಮಾಡಿದವನಂತೆ. ಕೆಳಗೆ ಬಿದ್ದಾಗಲೇ ಅವನಿಗೆ ಎಚ್ಚರವಾಗುತ್ತದೆ.

12138038a ಕರ್ಮಣಾ ಯೇನ ತೇನೇಹ ಮೃದುನಾ ದಾರುಣೇನ ವಾ|
12138038c ಉದ್ಧರೇದ್ದೀನಮಾತ್ಮಾನಂ ಸಮರ್ಥೋ ಧರ್ಮಮಾಚರೇತ್||

ಮನುಷ್ಯನು ಮೃದುವಾಗಿರಲಿ ಕಠೋರನಾಗಿರಲಿ ಯಾವುದೇ
ಉಪಾಯದಿಂದಲೂ ದೀನದಶೆಯಿಂದ ತನ್ನನ್ನು ಉದ್ಧರಿಸಿಕೊಳ್ಳಬೇಕು.
ಇದರ ನಂತರ ಸಮರ್ಥನಾಗಿ ಧರ್ಮವನ್ನು ಆಚರಿಸಬಹುದು.

12138039a ಯೇ ಸಪತ್ನಾಃ ಸಪತ್ನಾನಾಂ ಸರ್ವಾಂಸ್ತಾನಪವರ್ತಯೇತ್|
12138039c ಆತ್ಮನಶ್ಚಾಪಿ ಬೋದ್ಧವ್ಯಾಶ್ಚಾರಾಃ ಪ್ರಣಿಹಿತಾಃ ಪರೈಃ||

ಶತ್ರುಗಳ ಸೇವೆಯನ್ನೂ ಮಾಡಬೇಕಾಗುತ್ತದೆ. ತನ್ನ ಮೇಲೆ ಶತ್ರುಗಳು
ಕಳುಹಿಸಿರುವ ಗುಪ್ತಚರರನ್ನೂ ಗುರುತಿಸುವ ಪ್ರಯತ್ನಮಾಡುತ್ತಿರಬೇಕು.

12138040a ಚಾರಃ ಸುವಿಹಿತಃ ಕಾರ್ಯ ಆತ್ಮನೋಽಥ ಪರಸ್ಯ ಚ|
12138040c ಪಾಷಂಡಾಂಸ್ತಾಪಸಾದೀಂಶ್ಚ ಪರರಾಷ್ಟ್ರಂ ಪ್ರವೇಶಯೇತ್||

ತನ್ನ ಮತ್ತು ಶತ್ರುಗಳ ರಾಜ್ಯಗಳಲ್ಲಿ ಯಾರಿಗೂ ಪರಿಚಯವಿರದವನ್ನು
ಗುಪ್ತಚರರನ್ನಾಗಿ ನಿಯೋಜಿಸಬೇಕು. ಪರರಾಷ್ಟ್ರಗಳಿಗೆ
ಪಾಖಂಡವೇಷಧಾರೀ ಮತ್ತು ತಪಸ್ವೀ ಮೊದಲಾದವರನ್ನು
ಗುಪ್ತಚರರನ್ನಾಗಿ ಕಳುಹಿಸಬೇಕು.

12138041a ಉದ್ಯಾನೇಷು ವಿಹಾರೇಷು ಪ್ರಪಾಸ್ವಾವಸಥೇಷು ಚ|
12138041c ಪಾನಾಗಾರೇಷು ವೇಶೇಷು ತೀರ್ಥೇಷು ಚ ಸಭಾಸು ಚ||

ಆ ಗುಪ್ತಚರರು ಉದ್ಯಾನಗಳಲ್ಲಿ, ವಿಹಾರಗಳಲ್ಲಿ, ಯಾಗಶಾಲೆಗಳಲ್ಲಿ,
ವಸತಿಗೃಹಗಳಲ್ಲಿ, ಪಾನಾಗಾರಗಳಲ್ಲಿ, ಪ್ರವೇಶದ್ವಾರಗಳಲ್ಲಿ,

ತೀರ್ಥಸ್ಥಾನಗಳಲ್ಲಿ ಮತ್ತು ಸಭಾಭವನಗಳಲ್ಲಿ ತಿರುಗಾಡುತ್ತಿರಬೇಕು.

12138042a ಧರ್ಮಾಭಿಚಾರಿಣಃ ಪಾಪಾಶ್ಚಾರಾ ಲೋಕಸ್ಯ ಕಂಟಕಾಃ|
12138042c ಸಮಾಗಚ್ಚಂತಿ ತಾನ್ ಬುದ್ಧ್ವಾ ನಿಯಚ್ಚೇಚ್ಚಮಯೇದಪಿ||

ಕಪಟ ಧರ್ಮಚಾರಿಗಳು, ಪಾಪಾತ್ಮರು, ಲೋಕಕಂಟಕರು ಅಂಥಹ ಸ್ಥಳಗಳಲ್ಲಿ ಸೇರುತ್ತಾರೆ. ಅವರನ್ನು ಗುರುತಿಸಿ ಶಿಕ್ಷಿಸಿಯಾದರೂ ಶಾಂತರನ್ನಾಗಿಸಬೇಕು.

12138043a ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾಪಿ ವಿಶ್ವಸೇತ್|
12138043c ವಿಶ್ವಸ್ತಂ ಭಯಮನ್ವೇತಿ ನಾಪರೀಕ್ಷ್ಯ ಚ ವಿಶ್ವಸೇತ್||

ವಿಶ್ವಾಸಪಾತ್ರನಲ್ಲದವನ ಮೇಲೆ ವಿಶ್ವಾಸವನ್ನಿಡಬಾರದು.
ವಿಶ್ವಾಸಪಾತ್ರನಾಗಿರುವವನಲ್ಲಿಯೂ ಅಧಿಕ ವಿಶ್ವಾಸವನ್ನಿಡಬಾರದು.
ಏಕೆಂದರೆ ಅಧಿಕ ವಿಶ್ವಾಸದಿಂದ ಭಯವುತ್ಪನ್ನವಾಗುತ್ತದೆ.
ಆದುದರಿಂದ ಪರೀಕ್ಷಿಸದೇ ಯಾರ ಮೇಲೂ ವಿಶ್ವಾಸವನ್ನಿಡಬಾರದು.

12138044a ವಿಶ್ವಾಸಯಿತ್ವಾ ತು ಪರಂ ತತ್ತ್ವಭೂತೇನ ಹೇತುನಾ|
12138044c ಅಥಾಸ್ಯ ಪ್ರಹರೇತ್ಕಾಲೇ ಕಿಂ ಚಿದ್ವಿಚಲಿತೇ ಪದೇ||

ತತ್ತ್ವಭೂತ ಕಾರಣದಿಂದ ಶತ್ರುವಿನಲ್ಲಿ ವಿಶ್ವಾಸವನ್ನು ಹುಟ್ಟಿಸಿ ಅವನು ಸ್ವಲ್ಪವಾದರೂ ದುರ್ಬಲನಾದುದು ಕಂಡುಬಂದರೆ ಆಗಲೇ ಅವನನ್ನು ಪ್ರಹರಿಸಬೇಕು.

12138045a ಅಶಂಕ್ಯಮಪಿ ಶಂಕೇತ ನಿತ್ಯಂ ಶಂಕೇತ ಶಂಕಿತಾತ್|
12138045c ಭಯಂ ಹಿ ಶಂಕಿತಾಜ್ಜಾತಂ[636] ಸಮೂಲಮಪಿ ಕೃಂತತಿ||

---

[636] ಭಯಂ ಹ್ಯಶಂಕಿತಾಜ್ಜಾತಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಶಂಕೆಗೆ ಯೋಗ್ಯರಲ್ಲದಿದ್ದವರನ್ನೂ ಶಂಕಿಸಬೇಕು.
ಶಂಕಿಸಬೇಕಾದವರನ್ನಂತೂ ನಿತ್ಯವೂ ಶಂಕಿಸಬೇಕು.
ಶಂಕಿತರಿಂದಾಗುವ ಭಯವೇ ಸಮೂಲವಾಗಿ ನಾಶಪಡಿಸುತ್ತದೆ.

12138046a ಅವಧಾನೇನ ಮೌನೇನ ಕಾಷಾಯೇಣ ಜಟಾಜಿನೈಃ|
12138046c ವಿಶ್ವಾಸಯಿತ್ವಾ ದ್ವೇಷ್ಟಾರಮವಲುಂಪೇದ್ಯಥಾ ವೃಕಃ||

ಮನೋಯೋಗವನ್ನು ತೋರಿಸಿ, ಮೌನದಿಂದಿದ್ದು,
ಕಾಷಾಯವಸ್ತ್ರವನ್ನುಟ್ಟು, ಜಟಾಜಿನಗಳನ್ನು ಧರಿಸಿ, ಶತ್ರುವಿನ
ವಿಶ್ವಾಸವನ್ನು ಪಡೆದುಕೊಂಡು ನಂತರ ಅವಕಾಶ ಸಿಕ್ಕಿದಾಗ ಹಸಿದ
ತೋಳದಂತೆ ಅವನನ್ನು ಆಕ್ರಮಣಿಸಬೇಕು.

12138047a ಪುತ್ರೋ ವಾ ಯದಿ ವಾ ಭ್ರಾತಾ ಪಿತಾ ವಾ ಯದಿ ವಾ ಸುಹೃತ್|
12138047c ಅರ್ಥಸ್ಯ ವಿಘ್ನಂ ಕುರ್ವಾಣಾ ಹಂತವ್ಯಾ ಭೂತಿವರ್ಧನಾಃ||

ಪುತ್ರ, ಭ್ರಾತಾ, ಪಿತ, ಅಥವಾ ಮಿತ್ರ ಯಾರೇ ಆಗಲೀ ಅರ್ಥಪ್ರಾಪ್ತಿಗೆ
ವಿಘ್ನವನ್ನುಂಟುಮಾಡುವವರಾದರೆ ಐಶ್ವರ್ಯವನ್ನು ಬಯಸುವ
ರಾಜನು ಅವಶ್ಯವಾಗಿ ಅವರನ್ನು ಸಂಹರಿಸಬೇಕು.

12138048a ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ|
12138048c ಉತ್ಪಥಪ್ರತಿಪನ್ನಸ್ಯ ದಂಡೋ ಭವತಿ ಶಾಸನಮ್||

ಗುರುವೇ ಆಗಿದ್ದರೂ ಸೊಕ್ಕಿನಿಂದ ಕರ್ತವ್ಯ ಮತ್ತು ಅಕರ್ತವ್ಯಗಳನ್ನು
ತಿಳಿಯದೇ ತಪ್ಪು ಮಾರ್ಗದಲ್ಲಿ ಹೋಗುತ್ತಿರುವವನಾದರೆ ಅವನಿಗೂ
ಕೂಡ ದಂಡವನ್ನು ವಿಧಿಸಬೇಕು. ದಂಡವು ಅವನನ್ನು ಸರಿ ಮಾರ್ಗಕ್ಕೆ
ತರುತ್ತದೆ.

12138049a ಪ್ರತ್ಯುತ್ಥಾನಾಭಿವಾದಾಭ್ಯಾಂ ಸಂಪ್ರದಾನೇನ ಕಸ್ಯ ಚಿತ್|
12138049c ಪ್ರತಿಪುಷ್ಕಲಘಾತೀ ಸ್ಯಾತ್ತೀಕ್ಷ್ಣತುಂಡ ಇವ ದ್ವಿಜಃ|

ಶತ್ರುವು ಆಗಮಿಸಿದಾಗ ಎದ್ದು ಅವನನ್ನು ಸ್ವಾಗತಿಸಬೇಕು. ನಮಸ್ಕರಿಸಿ ಏನಾದರೂ ಉಪಹಾರವನ್ನು ನೀಡಬೇಕು. ಈ ರೀತಿ ಮೊದಲು ಅವನನ್ನು ತನ್ನ ವಶದಲ್ಲಿ ತಂದುಕೊಳ್ಳಬೇಕು. ಅನಂತರ ತೀಕ್ಷ್ಣ ಕೊಕ್ಕುಳ್ಳ ಪಕ್ಷಿಯು ಮರದಲ್ಲಿದ್ದ ಹಣ್ಣುಗಳಿಲ್ಲವನ್ನೂ ಕುಕ್ಕಿ ಗಾಯಗೊಳಿಸುವಂತೆ ಅವನ ಎಲ್ಲ ಸಾಧನ-ಸಾಧ್ಯತೆಗಳನ್ನೂ ಆಘಾತಗೊಳಿಸಬೇಕು.

12138050a ನಾಚ್ಚಿತ್ತ್ವಾ ಪರಮರ್ಮಾಣಿ ನಾಕೃತ್ವಾ ಕರ್ಮ ದಾರುಣಮ್|
12138050c ನಾಹತ್ವಾ ಮತ್ಸ್ಯಘಾತೀವ ಪ್ರಾಪ್ನೋತಿ ಪರಮಾಂ ಶ್ರಿಯಮ್||

ಮೀನು ಹಿಡಿಯುವ ಬೆಸ್ತನಂತೆ ರಾಜನಾದವನು ಇನ್ನೊಬ್ಬರ ಮರ್ಮವನ್ನು ಸೀಳದೇ, ಅತ್ಯಂತ ಕ್ರೂರಕರ್ಮವನ್ನು ಮಾಡದೇ, ಮತ್ತು ಅನೇಕರ ಪ್ರಾಣಗಳನ್ನು ತೆಗೆದುಕೊಳ್ಳದೇ ಮಹಾ ಸಂಪತ್ತನ್ನು ಪಡೆದುಕೊಳ್ಳಲಾರನು.

12138051a ನಾಸ್ತಿ ಜಾತ್ಯಾ ರಿಪುರ್ನಾಮ ಮಿತ್ರಂ ನಾಮ ನ ವಿದ್ಯತೇ|
12138051c ಸಾಮರ್ಥ್ಯಯೋಗಾಜ್ಜಾಯಂತೇ ಮಿತ್ರಾಣಿ ರಿಪವಸ್ತಥಾ||

ಹುಟ್ಟಿನಿಂದಲೇ ಯಾರೂ ಮಿತ್ರ ಅಥವಾ ಶತ್ರುವಾಗಿರುವುದಿಲ್ಲ. ಸಾಮರ್ಥ್ಯಯೋಗದಿಂದಲೇ ಮಿತ್ರರು ಮತ್ತು ಶತ್ರುಗಳು ಉತ್ಪನ್ನರಾಗುತ್ತಿರುತ್ತಾರೆ.

12138052a ಅಮಿತ್ರಂ ನೈವ ಮುಂಚೇತ ಬ್ರುವಂತಂ ಕರುಣಾನ್ಯಪಿ|
12138052c ದುಃಖಿಂ ತತ್ರ ನ ಕುರ್ವೀತ ಹನ್ಯಾತ್ಪೂರ್ವಾಪಕಾರಿಣಮ್||

ಅಮಿತ್ರನನ್ನು, ಅವನು ಕರುಣಾಜನಕವಾಗಿ ಕೇಳಿಕೊಂಡರೂ, ಬಿಟ್ಟುಬಿಡಬಾರದು. ಹಿಂದೆ ಅಪಕಾರ ಮಾಡಿದವನನ್ನು ಅವಶ್ಯವಾಗಿ ಕೊಲ್ಲಬೇಕು ಮತ್ತು ಅದರ ಕುರಿತು ದುಃಖಿಸಬಾರದು.

12138053a ಸಂಗ್ರಹಾನುಗ್ರಹೇ ಯತ್ನಃ ಸದಾ ಕಾರ್ಯೋ ಽನಸೂಯತಾ|
12138053c ನಿಗ್ರಹಶ್ಚಾಪಿ ಯತ್ನೇನ ಕರ್ತವ್ಯೋ ಭೂತಿಮಿಚ್ಚತಾ||

ಐಶ್ವರ್ಯವನ್ನು ಬಯಸುವ ರಾಜನು ದೋಷದೃಷ್ಟಿಯನ್ನು ಪರಿತ್ಯಜಿಸಿ ಸದಾ ಜನರನ್ನು ತನ್ನ ಪಕ್ಷದಲ್ಲಿ ಸೇರಿಸಿಕೊಳ್ಳುತ್ತಿರಬೇಕು ಮತ್ತು ಇತರರ ಮೇಲೆ ಅನುಗ್ರಹ ತೋರಿಸುವಲ್ಲಿ ಯತ್ನಶೀಲನಾಗಿರಬೇಕು. ಶತ್ರುಗಳ ನಿಗ್ರಹವನ್ನೂ ಪ್ರಯತ್ನಪೂರ್ವಕವಾಗಿಯೇ ಮಾಡಬೇಕು.

12138054a ಪ್ರಹರಿಷ್ಯನ್ಪ್ರಿಯಂ ಬ್ರೂಯಾತ್ಪ್ರಹೃತ್ಯಾಪಿ ಪ್ರಿಯೋತ್ತರಮ್|
12138054c ಅಪಿ ಚಾಸ್ಯ ಶಿರಶ್ಚಿತ್ತ್ವಾ ರುದ್ಯಾಚ್ಚೋ ಽಚೇದಥಾಪಿ ವಾ||

ಪ್ರಹರಿಸಲು ಸಿದ್ಧನಾಗಿರುವಾಗಲೂ ಪ್ರಿಯ ಮಾತನ್ನಾಡಬೇಕು. ಪ್ರಹರಿಸದ ನಂತರವೂ ಪ್ರಿಯವಾದುದನ್ನೇ ಹೇಳಬೇಕು. ಖಡ್ಗದಿಂದ ಶತ್ರುವಿನ ಶಿರವನ್ನು ತುಂಡರಿಸಿದರೂ ಅವನಿಗಾಗಿ ಶೋಕಿಸಬಾರದು ಮತ್ತು ರೋದಿಸಬಾರದು.

12138055a ನಿಮಂತ್ರಯೇತ ಸಾಂತ್ವೇನ ಸಂಮಾನೇನ ತಿತಿಕ್ಷಯಾ|
12138055c ಆಶಾಕಾರಣಮಿತ್ಯೇತತ್ ಕರ್ತವ್ಯಂ ಭೂತಿಮಿಚ್ಚತಾ||

ಐಶ್ವರ್ಯವನ್ನು ಬಯಸುವ ರಾಜನು ಮಧುರ ವಚನದಿಂದ ಇನ್ನೊಬ್ಬರನ್ನು ಸಮ್ಮಾನಿಸಿ ಸಹನಶೀಲನಾಗಿ ಜನರನ್ನು ತನ್ನ ಬಳಿ ಬರಲು ನಿಮಂತ್ರಿಸಬೇಕು. ಇದೇ ಜನರ ಆರಾಧನೆ ಮತ್ತು ಸಾಮಾನ್ಯ ಜನತೆಯ ಸಮ್ಮಾನವು. ಇದನ್ನು ಅವಶ್ಯವಾಗಿ ಮಾಡಬೇಕು.

12138056a ನ ಶುಷ್ಕವೈರಂ ಕುರ್ಯಿತ ನ ಬಾಹುಭ್ಯಾಂ ನದೀಂ ತರೇತ್|
12138056c ಅಪಾರ್ಥಕಮನಾಯುಷ್ಯಂ ಗೋವಿಷಾಣಸ್ಯ ಭಕ್ಷಣಮ್|
12138056e ದಂತಾಶ್ಚ ಪರಿಹೃಷ್ಯಂತೇ ರಸಶ್ಚಾಪಿ ನ ಲಭ್ಯತೇ||

ಶುಷ್ಕವೈರವನ್ನು ಮಾಡಬಾರದು. ಎರಡೂ ಬಾಹುಗಳಿಂದ ಈಜಿ ನದಿಯನ್ನು ದಾಟಬಾರದು. ಇದು ನಿರರ್ಥಕ ಮತ್ತು ಆಯುನಾಶಕ ಕರ್ಮವು. ಇದು ನಾಯಿಯು ಗೋವಿನ ಕೋಡನ್ನು ತಿನ್ನುವಂತಹ ಕರ್ಮವು. ಇದರಿಂದ ನಾಯಿಯ ಹಲ್ಲು ಸವೆಯುವುದೇ ಹೊರತು ಅದಕ್ಕೆ ಯಾವ ರಸವೂ ದೊರೆಯುವುದಿಲ್ಲ.

12138057a ತ್ರಿವರ್ಗೇ ತ್ರಿವಿಧಾ ಪೀಡಾನುಬಂಧಾಸ್ತ್ರಯ ಏವ ಚ|
12138057c ಅನುಬಂಧವಧೌ ಜ್ಞಾತ್ವಾ ಪೀಡಾಂ ಹಿ ಪರಿವರ್ಜಯೇತ್||

ಧರ್ಮ-ಅರ್ಥ-ಕಾಮ ಈ ಮೂರು ಪುರುಷಾರ್ಥಗಳ ಸೇವನೆಯಲ್ಲಿ ಲೋಭ, ಮೂರ್ಖತನ ಮತ್ತು ದುರ್ಬಲತೆ – ಈ ಮೂರು ಪ್ರಕಾರದ ಬಾಧೆ/ಪೀಡೆಗಳುಂಟಾಗುತ್ತವೆ. ಇವುಗಳ ಫಲವೂ ಮೂರು ಪ್ರಕಾರವಾಗಿವೆ: ಶಾಂತಿ, ಸರ್ವಹಿತಕಾರೀ ಕರ್ಮ ಮತ್ತು ಉಪಭೋಗ. ಈ ಫಲಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು ಮತ್ತು ಪೀಡೆಗಳನ್ನು ತೊರೆಯಬೇಕು.

12138058a ಋಣಶೇಷೋಽಗ್ನಿಶೇಷಶ್ಚ ಶತ್ರುಶೇಷಸ್ತಥೈವ ಚ|
12138058c ಪುನಃ ಪುನರ್ವಿವರ್ಧೇತ ಸ್ವಲ್ಪೋಽಪ್ಯನಿವಾರಿತಃ||

ಋಣ, ಅಗ್ನಿ ಮತ್ತು ಶತ್ರುಗಳು ಸ್ವಲ್ಪವಾದರೂ ಉಳಿದುಕೊಂಡರೆ ಅದು ಪುನಃ ಪುನಃ ವೃದ್ಧಿಯಾಗುತ್ತಲೇ ಇರುತ್ತದೆ. ಆದುದರಿಂದ ಇವುಗಳಲ್ಲಿ ಯಾವುದನ್ನೂ ಉಳಿಸಬಾರದು.

12138059a ವರ್ಧಮಾನಮೃಣಂ ತಿಷ್ಠತ್ಪರಿಭೂತಾಶ್ಚ ಶತ್ರವಃ|
12138059c ಆವಹಂತ್ಯನಯಂ ತೀವ್ರಂ ವ್ಯಾಧಯಶ್ಚಾಪ್ಯುಪೇಕ್ಷಿತಾಃ||

ಹೆಚ್ಚಾಗುತ್ತಿರುವ ಋಣ, ತಿರಸ್ಕೃತ ಶತ್ರುವು ಜೀವಿತವಿರುವುದು ಮತ್ತು ಉಪೇಕ್ಷಿತ ರೋಗವು ಉಳಿದುಕೊಂಡಿರುವುದು – ಈ ಮೂರರಿಂದಲೂ ತೀವ್ರ ಭಯವುಂಟಾಗುತ್ತದೆ.

12138060a ನಾಸಮ್ಯಕ್ಕೃತಕಾರೀ ಸ್ಯಾದಪ್ರಮತ್ತಃ ಸದಾ ಭವೇತ್|
12138060c ಕಂಟಕೋಽಪಿ ಹಿ ದುಶ್ಚಿನ್ನೋ ವಿಕಾರಂ ಕುರುತೇ ಚಿರಮ್||

ಯಾವುದೇ ಕೆಲಸವನ್ನು ಪೂರ್ಣಗೊಳಿಸದೇ ಇರಬಾರದು ಮತ್ತು ಸದಾ ಸಾವಧಾನದಿಂದ ಇರಬೇಕು. ಶರೀರಕ್ಕೆ ಚುಚ್ಚಿಕೊಂಡ ಸಣ್ಣ ಮುಳ್ಳನ್ನೂ ಕೂಡ ಸಂಪೂರ್ಣವಾಗಿ ತೆಗಿಯದೇ ಇದ್ದರೆ ಅದು ಬಹಳ ಕಾಲದವರೆಗೆ ವಿಕಾರವನ್ನುಂಟುಮಾಡಬಲ್ಲದು.

12138061a ವಧೇನ ಚ ಮನುಷ್ಯಾಣಾಂ ಮಾರ್ಗಾಣಾಂ ದೂಷಣೇನ ಚ|
12138061c ಆಕರಾಣಾಂ ವಿನಾಶೈಶ್ಚ ಪರರಾಷ್ಟ್ರಂ ವಿನಾಶಯೇತ್||

ಮನುಷ್ಯರನ್ನು ವಧಿಸಿ, ಮಾರ್ಗಗಳನ್ನು ನಾಶಪಡಿಸಿ, ಮನೆಗಳನ್ನು ವಿನಾಶಗೊಳಿಸಿ ಪರರಾಷ್ಟ್ರವನ್ನು ಧ್ವಂಸಗೊಳಿಸಬೇಕು.

12138062a ಗೃಧ್ರದೃಷ್ಟಿರ್ಬಕಾಲೀನಃ ಶ್ವಚೇಷ್ಟಃ ಸಿಂಹವಿಕ್ರಮಃ|
12138062c ಅನುದ್ವಿಗ್ನಃ ಕಾಕಶಂಕೀ ಭುಜಂಗಚರಿತಂ ಚರೇತ್||

ರಾಜನು ಹದ್ದಿನಂತೆ ದೂರದವರೆಗೂ ದೃಷ್ಟಿಯನ್ನು ಹಾಯಿಸಬೇಕು. ಬಕಪಕ್ಷಿಯಂತೆ ಲಕ್ಷ್ಯದ ಮೇಲೇ ದೃಷ್ಟಿಯನ್ನಿಟ್ಟಿರಬೇಕು. ನಾಯಿಯಂತೆ ಎಚ್ಚೆತ್ತಿರಬೇಕು ಮತ್ತು ಸಿಂಹದಂತೆ ಪರಕ್ರಮವನ್ನು ತೋರಿಸಬೇಕು.

ಮನಸ್ಸಿನಲ್ಲಿ ಉದ್ವಿಗ್ನನಾಗಿರಬಾರದು. ಕಾಗೆಯಂತೆ ಶಂಕೆಯಿಂದಿದ್ದು ಇನ್ನೊಬ್ಬರ ವರ್ತನೆಗಳನ್ನು ನೋಡುತ್ತಿರಬೇಕು ಮತ್ತು ಸರ್ಪದಂತೆ ಶತ್ರುವಿನ ಛಿದ್ರವನ್ನು ನೋಡಿಕೊಂಡು ಅವಸರ ಸಿಕ್ಕೊಡನೆಯೇ ಆಕ್ರಮಣಮಾಡಬೇಕು.

[637]12138063a ಶ್ರೇಣೀಮುಖ್ಯೋಪಜಾಪೇಷು ವಲ್ಲಭಾನುನಯೇಷು ಚ|
12138063c ಅಮಾತ್ಯಾನ್ ಪರಿರಕ್ಷೇತ ಭೇದಸಂಘಾತಯೋರಪಿ||

ರಾಜನು ತನ್ನ ಅಮಾತ್ಯರನ್ನು ಶ್ರೇಣಿಮುಖ್ಯರಲ್ಲುಂಟಾಗುವ ಭೇದಗಳಿಂದ ಮತ್ತು ಮಿತ್ರರು ತಮ್ಮ ಕಡೆ ಸೆಳೆದುಕೊಳ್ಳುವ ಭೇದನೀತಿಗಳಿಂದ ಹಾಗೂ ಪರಸ್ಪರರ ಭೇದಗಳಿಂದುಂಟಾಗುವ ಜಗಳಗಳಿಂದ ರಕ್ಷಿಸಿಕೊಳ್ಳಬೇಕು.

12138064a ಮೃದುರಿತ್ಯವಮನ್ಯಂತೇ ತೀಕ್ಷ್ಣ ಇತ್ಯುದ್ವಿಜಂತಿ ಚ|
12138064c ತೀಕ್ಷ್ಣಕಾಲೇ ಚ ತೀಕ್ಷ್ಣಃ ಸ್ಯಾನ್ಮೃದುಕಾಲೇ ಮೃದುರ್ಭವೇತ್||

ರಾಜನು ಸದಾ ಮೃದುವಾಗಿದ್ದರೆ ಅವನನ್ನು ಅವಹೇಳನ ಮಾಡುತ್ತಾರೆ. ಸದಾ ತೀಕ್ಷ್ಣವಾಗಿದ್ದರೆ ಜನರು ಉದ್ವಿಗ್ನರಾಗುತ್ತಾರೆ. ಆದುದರಿಂದ ಅವನು ಕಠೋರನಾಗಿರಬೇಕಾದ ಸಮಯದಲ್ಲಿ ಕಠೋರನಾಗಿರಬೇಕು ಮತ್ತು ಮೃದುವಾಗಿರಬೇಕಾದ ಸಮಯದಲ್ಲಿ ಮೃದುವಾಗಿರಬೇಕು.

12138065a ಮೃದುನಾ ಸುಮೃದುಂ ಹಂತಿ ಮೃದುನಾ ಹಂತಿ ದಾರುಣಮ್|

---

637 ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ:
ಶೂರಮಂಜಲಿಪಾತೇನ ಭೀರುಂ ಭೇದೇನ ಭೇದಯೇತ್|
ಲುಬ್ಧಮರ್ಥಪ್ರದಾನೇನ ಸಮಂ ತುಲ್ಯೇನ ವಿಗ್ರಹಃ||

12138065c ನಾಸಾಧ್ಯಂ ಮೃದುನಾ ಕಿಂ ಚಿತ್ತಸ್ಮಾತ್ತೀಕ್ಷ್ಣತರಂ ಮೃದು||

ಬುದ್ಧಿವಂತ ರಾಜನು ಮೃದುಸ್ವಭಾವದ ಶತ್ರುಗಳನ್ನು ಮೃದುವಾಗಿದ್ದುಕೊಂಡೇ ನಾಶಗೊಳಿಸುತ್ತಾನೆ. ಮೃದುವಾದ ಉಪಾಯದಿಂದಲೇ ದಾರುಣ ಶತ್ರುವನ್ನೂ ಕೊಲ್ಲಬಲ್ಲನು. ಕೋಮಲ ಉಪಾಯದಿಂದ ಯಾವುದೂ ಅಸಾಧ್ಯವಲ್ಲ. ಆದುದರಿಂದ ಮೃದುವಾಗಿರುವುದೇ ಅತ್ಯಂತ ತೀಕ್ಷ್ಣವಾಗಿರುತ್ತದೆ.

12138066a ಕಾಲೇ ಮೃದುರ್ಯೋ ಭವತಿ ಕಾಲೇ ಭವತಿ ದಾರುಣಃ|
12138066c ಸ ಸಾಧಯತಿ ಕೃತ್ಯಾನಿ ಶತ್ರೂಂಶ್ಚೈವಾಧಿತಿಷ್ಠತಿ||

ಯಾರು ಸಮಯಬಂದಾಗ ಮೃದುವಾಗುತ್ತಾನೋ ಮತ್ತು ಸಮಯಬಂದಾಗ ಕಠೋರನಾಗುತ್ತಾನೋ ಅವನು ತನ್ನ ಎಲ್ಲ ಕಾರ್ಯಗಳಲ್ಲಿಯೂ ಯಶಸ್ವಿಯಾಗುತ್ತಾನೆ ಮತ್ತು ಶತ್ರುವಿನ ಮೇಲೂ ಅಧಿಕಾರವನ್ನು ಪಡೆದುಕೊಳ್ಳುತ್ತಾನೆ.

12138067a ಪಂಡಿತೇನ ವಿರುದ್ಧಃ ಸನ್ದೂರೇಽಸ್ಮೀತಿ ನ ವಿಶ್ವಸೇತ್|
12138067c ದೀರ್ಘೌ ಬುದ್ಧಿಮತೋ ಬಾಹೂ ಯಾಭ್ಯಾಂ ಹಿಂಸತಿ ಹಿಂಸಿತಃ||

ವಿದ್ವಾಂಸನ ವಿರುದ್ಧವಾಗಿದ್ದುಕೊಂಡು ನಾನು ಅವನಿಂದ ದೂರವಿದ್ದೇನೆ ಎಂದು ತಿಳಿದು ನಿಶ್ಚಿಂತನಾಗಬಾರದು. ಏಕೆಂದರೆ ಬುದ್ಧಿವಂತನ ಬಾಹುಗಳು ಬಹಳ ಉದ್ದವಾಗಿರುತ್ತವೆ. ಆದುದರಿಂದ ಗಾಯಗೊಂಡ ಬುದ್ಧಿವಂತನು ತನ್ನ ವಿಶಾಲ ಬಾಹುಗಳಿಂದ ದೂರದಿಂದಲೂ ಶತ್ರುವನ್ನು ನಾಶಗೊಳಿಸಬಲ್ಲನು.

12138068a ನ ತತ್ತರೇದ್ಯಸ್ಯ ನ ಪಾರಮುತ್ತರೇನ್
ನ ತದ್ಧರೇದ್ಯತ್ ಪುನರಾಹರೇತ್ ಪರಃ|

12138068c ನ ತತ್ಪ್ರನೇದ್ಯಸ್ಯ ನ ಮೂಲಮುತ್ಪ್ರನೇನ್
ನ ತಂ ಹನ್ಯಾದ್ಯಸ್ಯ ಶಿರೋ ನ ಪಾತಯೇತ್‖

ಯಾವ ನದಿಯಲ್ಲಿ ಇಳಿಯಲಿಕ್ಕಾಗುವುದಿಲ್ಲವೋ ಆ ನದಿಯನ್ನು ದಾಟುವ ಸಾಹಸವನ್ನು ಮಾಡಬಾರದು. ಶತ್ರುವು ಪುನಃ ಬಲವನ್ನುಪಯೋಗಿಸಿ ಹಿಂದೆ ಕಸಿದುಕೊಳ್ಳುವ ವಸ್ತುವನ್ನು ಅಪಹರಿಸಬಾರದು. ಸಮೂಲವಾಗಿ ಕಿತ್ತೊಗೆಯಲು ಸಾಧ್ಯವಿಲ್ಲದ ಮರವನ್ನು ಅಥವಾ ಶತ್ರುವನ್ನು ನಾಶಪಡಿಸಲು ಪ್ರಯತ್ನಿಸಬಾರದು. ಮತ್ತು ಯಾರ ಮಸ್ತಕವನ್ನು ಕತ್ತರಿಸಿ ನೆಲದಮೇಲೆ ಬೀಳಿಸಲು ಸಾಧ್ಯವಿಲ್ಲವೋ ಆ ವೀರನನ್ನು ಆಕ್ರಮಣಿಸಬಾರದು.

12138069a ಇತೀದಮುಕ್ತಂ ವೃಜಿನಾಭಿಸಂಹಿತಂ
ನ ಚೈತದೇವಂ ಪುರುಷಃ ಸಮಾಚರೇತ್|
12138069c ಪರಪ್ರಯುಕ್ತಂ ತು ಕಥಂ ನಿಶಾಮಯೇದ್
ಅತೋ ಮಯೋಕ್ತಂ ಭವತೋ ಹಿತಾರ್ಥಿನಾ‖

ನಾನು ಉಪದೇಶಿಸಿದ ಈ ಪಾಪಪೂರ್ಣನಡತೆಯನ್ನು ಸಮರ್ಥ ರಾಜನು ಸಂಪತ್ತಿನ ಸಮಯದಲ್ಲಿ ಎಂದೂ ಆಚರಿಸಬಾರದು. ಆದರೆ ಶತ್ರುವು ಇದೇ ರೀತಿಯ ವರ್ತನೆಯಿಂದ ತನ್ನ ಮೇಲೆ ಆಪತ್ತನ್ನು ತಂದೊಡ್ಡಿದರೆ ಅದಕ್ಕೆ ಪ್ರತೀಕಾರವಾಗಿ ಅವನು ಇದೇ ಉಪಾಯಗಳನ್ನು ಏಕೆ ಬಳಸಬಾರದು? ಆದುದರಿಂದ ನಿನ್ನ ಹಿತವನ್ನು ಬಯಸಿ ನಾನು ನಿನಗೆ ಇದನ್ನು ಹೇಳಿದ್ದೇನೆ.”

12138070a ಯಥಾವದುಕ್ತಂ ವಚನಂ ಹಿತಂ ತದಾ
ನಿಶಮ್ಯ ವಿಪ್ರೇಣ ಸುವೀರರಾಷ್ಟ್ರಿಯಃ|

12138070c ತಥಾಕರೋದ್ವಾಕ್ಯಮದೀನಚೇತನಃ
ಶ್ರಿಯಂ ಚ ದೀಪ್ತಾಂ ಬುಭುಜೇ ಸಬಾಂಧವಃ||

ಹೀಗೆ ಹೇಳಿದ ವಿಪ್ರನ ಹಿತ ಮಾತನ್ನು ಕೇಳಿ ಸುವೀರರಾಷ್ಟ್ರದ ರಾಜನು ಅದನ್ನು ಯಥೋಚಿತವಾಗಿ ಪಾಲಿಸಿದನು ಮತ್ತು ಅದರಿಂದ ಬಂಧು-ಬಾಂಧವರೊಡನೆ ಉಜ್ವಲ ರಾಜಲಕ್ಷ್ಮಿಯನ್ನು ಉಪಭೋಗಿಸಿದನು.”

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕಣಿಕೋಪದೇಶೇ ಅಷ್ಟತ್ರಿಂಶಾತ್ಯಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕಣಿಕೋಪದೇಶ ಎನ್ನುವ
ನೂರಾಮೂವತ್ತೆಂಟನೇ ಅಧ್ಯಾಯವು.

೧೩೯

ವಿಶ್ವಾಮಿತ್ರ-ಶ್ವಪಚ ಸಂವಾದ

ಭಯಂಕರ ಸಂಕಟಕಾಲದಲ್ಲಿ ಬ್ರಾಹ್ಮಣನು ಹೇಗೆ ಜೀವನ ನಿರ್ವಹಣೆ ಮಾಡಬೇಕು ಎನ್ನುವುದರ ಕುರಿತು ವಿಶ್ವಾಮಿತ್ರ-ಚಾಂಡಾಲರ ಸಂವಾದ (1-94).

12139001 ಯುಧಿಷ್ಠಿರ ಉವಾಚ|
12139001a ಹೀನೇ ಪರಮಕೇ ಧರ್ಮೇ ಸರ್ವಲೋಕಾತಿಲಂಘಿನಿ|
12139001c ಅಧರ್ಮೇ ಧರ್ಮತಾಂ ನೀತೇ ಧರ್ಮೇ ಚಾಧರ್ಮತಾಂ ಗತೇ||
12139002a ಮರ್ಯಾದಾಸು ಪ್ರಭಿನ್ನಾಸು ಕ್ಷುಭಿತೇ ಧರ್ಮನಿಶ್ಚಯೇ|

12139002c ರಾಜಭಿಃ ಪೀಡಿತೇ ಲೋಕೇ ಚೋರ್ಯೈರ್ವಾಪಿ ವಿಶಾಂ ಪತೇ॥
12139003a ಸರ್ವಾಶ್ರಮೇಷು ಮೂಢೇಷು ಕರ್ಮಸೂಪಹತೇಷು ಚ।
12139003c ಕಾಮಾನ್ಮೋಹಾಚ್ಚ ಲೋಭಾಚ್ಚ ಭಯಂ ಪಶ್ಯತ್ಸು ಭಾರತ॥
12139004a ಅವಿಶ್ವಸ್ತೇಷು ಸರ್ವೇಷು ನಿತ್ಯಭೀತೇಷು ಪಾರ್ಥಿವ।
12139004c ನಿಕೃತ್ಯಾ ಹನ್ಯಮಾನೇಷು ವಂಚಯತ್ಸು ಪರಸ್ಪರಮ್॥
12139005a ಸಂಪ್ರದೀಪ್ತೇಷು ದೇಶೇಷು ಬ್ರಾಹ್ಮಣ್ಯೇ ಚಾಭಿಪೀಡಿತೇ।
12139005c ಅವರ್ಷತಿ ಚ ಪರ್ಜನ್ಯೇ ಮಿಥೋ ಭೇದೇ ಸಮುತ್ಥಿತೇ॥
12139006a ಸರ್ವಸ್ಮಿನ್ದಸ್ಯುಸಾದ್ಭೂತೇ ಪೃಥಿವ್ಯಾಮುಪಜೀವನೇ।
12139006c ಕೇನ ಸ್ವಿದ್ ಬ್ರಾಹ್ಮಣೋ ಜೀವೇಜ್ಜಘನ್ಯೇ ಕಾಲ ಆಗತೇ॥

ಯುಧಿಷ್ಠಿರನು ಹೇಳಿದನು: "ವಿಶಾಂಪತೇ! ಭಾರತ! ಪಾರ್ಥಿವ! ಎಲ್ಲರೂ ಧರ್ಮವನ್ನು ಉಲ್ಲಂಘಿಸುತ್ತಿರುವುದರಿಂದ ಧರ್ಮವು ಕ್ಷೀಣಿಸುತ್ತಿರುವಾಗ, ಅಧರ್ಮವನ್ನು ಧರ್ಮವೆಂದೂ ಧರ್ಮವನ್ನು ಅಧರ್ಮವೆಂದೂ ಜನರು ತಿಳಿದುಕೊಂಡಿರುವಾಗ, ಎಲ್ಲ ಕಟ್ಟುಪಾಡುಗಳೂ ಒಡೆದುಹೋದಾಗ, ಧರ್ಮದ ನಿಶ್ಚಯವು ಡೋಲಾಯಮಾನವಾಗುವಾಗ, ಜನರು ರಾಜ ಮತ್ತು ಕಳ್ಳರಿಂದ ಪೀಡಿತರಾದಾಗ, ಎಲ್ಲ ಆಶ್ರಮಗಳಲ್ಲಿರುವವರೂ ಮೂಢರಾಗಿ ಕರ್ಮಗಳಿಂದ ಲುಪ್ತರಾದಾಗ, ಕಾಮ-ಮೋಹ-ಲೋಭಗಳಿಂದ ಭಯವೇ ಕಾಣಿಸಿಕೊಂಡಾಗ, ಎಲ್ಲರಲ್ಲಿಯೂ ಅವಿಶ್ವಾಸವೇ ಇದ್ದಾಗ ಮತ್ತು ನಿತ್ಯವೂ ಭೀತಿಯಿರುವಾಗ, ಜನರು ಮೋಸದಿಂದ ಕೊಲ್ಲುತ್ತಿರುವಾಗ ಮತ್ತು ಪರಸ್ಪರರನ್ನು ವಂಚಿಸುತ್ತಿರುವಾಗ, ದೇಶದಲ್ಲೆಲ್ಲಾ ಬೆಂಕಿಯು ಸುಡುತ್ತಿರುವಾಗ, ಬ್ರಾಹ್ಮಣರು ಪೀಡಿತರಾಗಿರುವಾಗ, ಮಳೆಯು ಸುರಿಯದೇ ಇರುವಾಗ ಮತ್ತು ಮಿಥ್ಯ

ಭೇದಗಳು ಉಂಟಾದಾಗ, ಎಲ್ಲೆಲ್ಲಿಯೂ ದಸ್ಯುಗಳೇ ತುಂಬಿಕೊಂಡಾಗ
ಮತ್ತು ಭೂಮಿಯ ಮೇಲೆ ಉಪಜೀವನವನ್ನು ಮಾಡುವುದೇ
ಕಷ್ಟವಾದಾಗ, ಅಂಥಹ ಅಧಮ ಸಮಯದಲ್ಲಿ ಬ್ರಾಹ್ಮಣನು ಯಾವ
ಉಪಾಯದಿಂದ ಜೀವನಿರ್ವಹಣೆಯನ್ನು ಮಾಡಬೇಕು?

12139007a ಅತಿತ್ಯಕ್ಷುಃ ಪುತ್ರಪೌತ್ರಾನನುಕ್ರೋಶಾನ್ನರಾಧಿಪ|
12139007c ಕಥಮಾಪತ್ಸು ವರ್ತೇತ ತನ್ಮೇ ಬ್ರೂಹಿ ಪಿತಾಮಹ||

ನರಾಧಿಪ! ಪಿತಾಮಹ! ಇಂಥಹ ಆಪತ್ತಿನಲ್ಲಿ ಸಿಲುಕಿಕೊಂಡ
ಬ್ರಾಹ್ಮಣನು ದಯಾವಶನಾಗಿ ತನ್ನ ಪುತ್ರ-ಪೌತ್ರರನ್ನು
ಪರಿತ್ಯಜಿಸಲಾರದೇ ಇದ್ದಾಗ ಅವನು ಹೇಗೆ ಜೀವನವನ್ನು
ನಡೆಸಬೇಕು? ಇದನ್ನು ನನಗೆ ಹೇಳು.

12139008a ಕಥಂ ಚ ರಾಜಾ ವರ್ತೇತ ಲೋಕೇ ಕಲುಷತಾಂ ಗತೇ|
12139008c ಕಥಮರ್ಥಾಚ್ಚ ಧರ್ಮಾಚ್ಚ ನ ಹೀಯೇತ ಪರಂತಪ||

ಪರಂತಪ! ಲೋಕವು ಕಲುಷಿತಗೊಂಡಾಗ, ಅರ್ಥ ಮತ್ತು ಧರ್ಮಗಳು
ಕ್ಷೀಣಿಸದಂತೆ ರಾಜನು ಹೇಗೆ ನಡೆದುಕೊಳ್ಳಬೇಕು?"

12139009 ಭೀಷ್ಮ ಉವಾಚ|
12139009a ರಾಜಮೂಲಾ ಮಹಾರಾಜ ಯೋಗಕ್ಷೇಮಸುವೃಷ್ಟಯಃ|
12139009c ಪ್ರಜಾಸು ವ್ಯಾಧಯಶ್ಚೈವ ಮರಣಂ ಚ ಭಯಾನಿ ಚ||

ಭೀಷ್ಮನು ಹೇಳಿದನು: "ಮಹಾರಾಜ! ಪ್ರಜೆಗಳ ಯೋಗಕ್ಷೇಮ,
ಉತ್ತಮ ಮಳೆ, ವ್ಯಾಧಿ, ಮೃತ್ಯು ಮತ್ತು ಭಯ ಇವೆಲ್ಲವಕ್ಕೆ ಮುಖ್ಯ
ಕಾರಣನು ರಾಜನೇ ಆಗಿರುತ್ತಾನೆ.

12139010a ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚ ಭರತರ್ಷಭ|
12139010c ರಾಜಮೂಲಾನಿ ಸರ್ವಾಣಿ ಮಮ ನಾಸ್ತ್ಯತ್ರ ಸಂಶಯಃ||

ಭರತರ್ಷಭ! ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಈ ಎಲ್ಲ ಯುಗಗಳಿಗೂ ರಾಜನೇ ಮೂಲ ಎನ್ನುವುದರಲ್ಲಿ ನನಗೆ ಸಂಶಯವೇ ಇಲ್ಲ.

12139011a ತಸ್ಮಿಂಸ್ತ್ವಭ್ಯಾಗತೇ ಕಾಲೇ ಪ್ರಜಾನಾಂ ದೋಷಕಾರಕೇ|
12139011c ವಿಜ್ಞಾನಬಲಮಾಸ್ಥಾಯ ಜೀವಿತವ್ಯಂ ತದಾ ಭವೇತ್||

ಪ್ರಜೆಗಳಲ್ಲಿ ದೋಷಕಾರಕವಾದ ಇಂಥಹ ಕಾಲವು ಬಂದಾಗ ವಿಜ್ಞಾನಬಲವನ್ನು ಉಪಯೋಗಿಸಿ ಜೀವನವನ್ನು ನಿರ್ವಹಿಸಬೇಕು.

12139012a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12139012c ವಿಶ್ವಾಮಿತ್ರಸ್ಯ ಸಂವಾದಂ ಚಂಡಾಲಸ್ಯ ಚ ಪಕ್ಕಣೇ||

ಇದಕ್ಕೆ ಸಂಬಂಧಿಸಿದಂತೆ ಪುರಾತನ ಇತಿಹಾಸವಾದ ಚಾಂಡಾಲನ ಮನೆಯಲ್ಲಿ ವಿಶ್ವಾಮಿತ್ರ ಮತ್ತು ಚಾಂಡಾಲನ ನಡುವೆ ನಡೆದ ಸಂವಾದವನ್ನು ಉದಾಹರಿಸುತ್ತಾರೆ.

12139013a ತ್ರೇತಾದ್ವಾಪರಯೋಃ ಸಂಧೌ ಪುರಾ ದೈವವಿಧಿಕ್ರಮಾತ್|
12139013c ಅನಾವೃಷ್ಟಿರಭೂದ್ ಘೋರಾ ರಾಜನ್ ದ್ವಾದಶವಾರ್ಷಿಕೀ||

ರಾಜನ್! ಹಿಂದೆ ದೈವವಿಧಿಕ್ರಮದಂತೆ ತ್ರೇತ ಮತ್ತು ದ್ವಾಪರಗಳ ಸಂಧಿಯಲ್ಲಿ ಹನ್ನೆರಡು ವರ್ಷಗಳ ಘೋರ ಅನಾವೃಷ್ಟಿ[638]ಯು

[638] ಬರಗಾಲ

ಉಂಟಾಯಿತು.

12139014a ಪ್ರಜಾನಾಮಭಿವೃದ್ಧಾನಾಂ ಯುಗಾಂತೇ ಪರ್ಯುಪಸ್ಥಿತೇ।
12139014c ತ್ರೇತಾನಿರ್ಮೋಕ್ಷಸಮಯೇ ದ್ವಾಪರಪ್ರತಿಪಾದನೇ॥

ತ್ರೇತಾಯುಗವು ಮುಗಿಯುತ್ತಿರುವಾಗ ಮತ್ತು ದ್ವಾಪರ ಯುಗವು ಕಾಲಿಡುತ್ತಿರುವಾಗ, ಪ್ರಜೆಗಳ ಸಂಖ್ಯೆಯು ಹೆಚ್ಚಾಗಿತ್ತು ಮತ್ತು ಯುಗಾಂತವು ಸಮೀಪಿಸಿತ್ತು.

12139015a ನ ವವರ್ಷ ಸಹಸ್ರಾಕ್ಷಃ ಪ್ರತಿಲೋಮೋಽಭವದ್ಗುರುಃ।
12139015c ಜಗಾಮ ದಕ್ಷಿಣಂ ಮಾರ್ಗಂ ಸೋಮೋ ವ್ಯಾವೃತ್ತಲಕ್ಷಣಃ॥

ಸಹಸ್ರಾಕ್ಷನು ಮಳೆಸುರಿಸಲಿಲ್ಲ. ಗುರುವು ವಕ್ರಿಯಾದನು. ಚಂದ್ರನು ವಿಕೃತನಾಗಿ ದಕ್ಷಿಣಮಾರ್ಗದಲ್ಲಿ ಹೊರಟು ಹೋದನು.

12139016a ನಾವಶ್ಯಾಯೋಽಪಿ ರಾತ್ರ್ಯಂತೇ ಕುತ ಏವಾಭ್ರರಾಜಯಃ।
12139016c ನದ್ಯಃ ಸಂಕ್ಷಿಪ್ತತೋಯೌಘಾಃ ಕ್ವ ಚಿದಂತರ್ಗತಾಭವನ್॥

ಬೆಳಗಿನ ಮಂಜೂ ಇರಲಿಲ್ಲ, ಮೋಡಗಳು ಎಲ್ಲಿಂದ ಉತ್ಪನ್ನವಾಗುತ್ತಿದ್ದವು? ನದಿಗಳು ಬತ್ತಿಹೋಗಿದ್ದವು ಮತ್ತು ಎಷ್ಟೋ ನದಿಗಳು ಅದೃಶ್ಯವಾಗಿಬಿಟ್ಟಿದ್ದವು.

12139017a ಸರಾಂಸಿ ಸರಿತಶ್ಚೈವ ಕೂಪಾಃ ಪ್ರಸ್ರವಣಾನಿ ಚ।
12139017c ಹತತ್ವಿಟ್ಕಾನ್ಯಲಕ್ಷ್ಯಂತ ನಿಸರ್ಗಾದ್ದೈವಕಾರಿತಾತ್॥

ಸರೋವರಗಳು, ನದಿಗಳು, ಬಾವಿಗಳು ಮತ್ತು ಕಾರಂಜಿಗಳು ದೈವದ ಕಾರಣದಿಂದ ಅಥವಾ ಸ್ವಾಭಾವಿಕ ಅನಾವೃಷ್ಟಿಯಿಂದ ನೀರಿಲ್ಲದೇ ಕಾಣುತ್ತಲೇ ಇರಲಿಲ್ಲ.

12139018a ಉಪಶುಷ್ಕಜಲಸ್ಥಾಯಾ ವಿನಿವೃತ್ತಸಭಾಪ್ರಪಾ|
12139018c ನಿವೃತ್ತಯಜ್ಞಸ್ವಾಧ್ಯಾಯಾ ನಿರ್ವಷಟ್ಕಾರಮಂಗಲಾ||
12139019a ಉತ್ಸನ್ನಕೃಷಿಗೋರಕ್ಷಾ ನಿವೃತ್ತವಿಪಣಾಪಣಾ|
12139019c ನಿವೃತ್ತಪೂಗಸಮಯಾ ಸಂಪ್ರನಷ್ಟಮಹೋತ್ಸವಾ||

ಸಣ್ಣ ಸಣ್ಣ ಜಲಾಶಯಗಳು ಒಣಗಿಹೋದವು. ಪಾನೀಯಶಾಲೆಗಳು ಮುಚ್ಚಲ್ಪಟ್ಟವು. ಯಜ್ಞ-ಸ್ವಾಧ್ಯಾಯಗಳು ನಿಂತುಹೋದವು. ವಷಟ್ಕಾರ-ಮಂಗಲಕಾರ್ಯಗಳು ಇಲ್ಲವಾದವು. ಕೃಷಿ ಮತ್ತು ಗೋರಕ್ಷೆಗಳು ನಿಂತುಬಿಟ್ಟವು. ಸಂತೆ-ಮಾರುಕಟ್ಟೆಗಳು ನಿಂತುಹೋದವು. ಕೂಟಸಮಾರಂಭಗಳು ನಿಂತುಹೋದವು. ಮಹೋತ್ಸವಗಳು ನಷ್ಟವಾದವು.

12139020a ಅಸ್ಥಿಕಂಕಾಲಸಂಕೀರ್ಣಾ ಹಾಹಾಭೂತಜನಾಕುಲಾ|
12139020c ಶೂನ್ಯಭೂಯಿಷ್ಠನಗರಾ ದಗ್ಧಗ್ರಾಮನಿವೇಶನಾ||

ಅಸ್ಥಿಗಳ ರಾಶಿಗಳು ಕಾಣಿಸಿಕೊಂಡವು. ಜನರಲ್ಲಿ ಹಾಹಾಕಾರವುಂಟಾಯಿತು. ನಗರಗಳು ಶೂನ್ಯವಾದವು ಮತ್ತು ಗ್ರಾಮನಿವೇಶನಗಳು ಸುಟ್ಟುಹೋದವು.

12139021a ಕ್ವ ಚಿಚ್ಛ್ವೋರೈಃ ಕ್ವ ಚಿಚ್ಚಸ್ತ್ರೈಃ ಕ್ವ ಚಿದ್ರಾಜಭಿರಾತುರೈಃ|
12139021c ಪರಸ್ಪರಭಯಾಚ್ಚೈವ ಶೂನ್ಯಭೂಯಿಷ್ಠನಿರ್ಜನಾ||

ಕೆಲವೆಡೆ ಕಳ್ಳಕಾಕರಿಂದ, ಕೆಲವೆಡೆ ಶಸ್ತ್ರಗಳಿಂದ ಮತ್ತು ಇನ್ನು ಕೆಲವೆಡೆ ರಾಜರಿಂದ ಪೀಡಿತರಾದ ಜನರ ಪರಸ್ಪರ ಭಯದಿಂದ ಭೂಮಿಯು ನಿರ್ಜನಗೊಂಡು ಶೂನ್ಯವಾಗಿಬಿಟ್ಟಿತ್ತು.

12139022a ಗತದ್ಯೈವತಸಂಕಲ್ಪಾ ವೃದ್ಧಬಾಲವಿನಾಕೃತಾ|

12139022c ಗೋಜಾವಿಮಹಿಷ್ಯೈರ್ಹನಾ ಪರಸ್ಪರಹರಾಹರಾ||

ದೈವಸಂಕಲ್ಪಗಳು ಹೊರಟು ಹೋಗಿ ವೃದ್ಧ-ಬಾಲಕರು ಇಲ್ಲದಂತಾಗಿ
ಮತ್ತು ಗೋವುಗಳು-ಕುರಿಗಳು ಮತ್ತು ಎಮ್ಮೆಗಳು ಇಲ್ಲವಂತಾಗಿ
ಪ್ರಾಣಿಗಳು ಹಸಿವೆಯಿಂದ ಪರಸ್ಪರರನ್ನು ಸಂಹರಿಸತೊಡಗಿದವು.

12139023a ಹತವಿಪ್ರಾ ಹತಾರಕ್ಷಾ ಪ್ರನಷ್ಟೌಷಧಿಸಂಚಯಾ|
12139023c ಶ್ಯಾವಭೂತನರಪ್ರಾಯಾ[639] ಬಭೂವ ವಸುಧಾ ತದಾ||

ವಿಪ್ರರು ಹತರಾಗಿದ್ದರು. ರಕ್ಷಕರೂ ಹತರಾಗಿದ್ದರು.
ಔಷಧಿಸಂಚಯಗಳೂ ನಷ್ಟವಾಗಿದ್ದವು. ಆಗ ವಸುಧೆಯು ನರರ
ಹಾಹಾಕಾರದಿಂದ ತುಂಬಿಹೋಗಿತ್ತು.

12139024a ತಸ್ಮಿನ್ ಪ್ರತಿಭಯೇ ಕಾಲೇ ಕ್ಷೀಣೇ ಧರ್ಮೇ ಯುಧಿಷ್ಠಿರ|
12139024c ಬಭ್ರಮುಃ ಕ್ಷುಧಿತಾ ಮರ್ತ್ಯಾಃ ಖಾದಂತಃ ಸ್ಮ ಪರಸ್ಪರಮ್||

ಯುಧಿಷ್ಠಿರ! ಇಂತಹ ಭಯಂಕರ ಸಮಯದಲ್ಲಿ ಧರ್ಮವು
ಕ್ಷೀಣಿಸುತ್ತಿರಲು ಹಸಿವೆಯಿಂದ ಪೀಡಿತರಾದ ಮನುಷ್ಯರು
ಪರಸ್ಪರರನ್ನೇ ತಿನ್ನತೊಡಗಿದರು.

12139025a ಋಷಯೋ ನಿಯಮಾಂಸ್ತ್ಯಕ್ತ್ವಾ ಪರಿತ್ಯಕ್ತಾಗ್ನಿದೈವತಾಃ|
12139025c ಆಶ್ರಮಾನ್ಸಂಪರಿತ್ಯಜ್ಯ ಪರ್ಯಧಾವನ್ನಿತಸ್ತತಃ||

ಋಷಿಗಳು ನಿಯಮಗಳನ್ನು ತ್ಯಜಿಸಿ, ಅಗ್ನಿದೇವತೆಯನ್ನು ಪರಿತ್ಯಜಿಸಿ,
ಆಶ್ರಮಗಳನ್ನು ಪರಿತ್ಯಜಿಸಿ ಅಲ್ಲಲ್ಲಿ ಓಡ ತೊಡಗಿದರು.

---

[639] ಸರ್ವಭೂತರುತಪ್ರಾಯಾ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12139026a ವಿಶ್ವಾಮಿತ್ರೋಽಥ ಭಗವಾನ್ಮಹರ್ಷಿರನಿಕೇತನಃ|
12139026c ಕ್ಷುಧಾ ಪರಿಗತೋ ಧೀಮಾನ್ಸಮಂತಾತ್ಪರ್ಯಧಾವತ||

ಅನಿಕೇತನ[640] ಭಗವಾನ್ ಮಹರ್ಷಿ ವಿಶ್ವಾಮಿತ್ರನೂ ಕೂಡ
ಹಸಿವೆಯಿಂದ ಪೀಡಿತನಾಗಿ ಎಲ್ಲಕಡೆ ಓಡುತ್ತಿದ್ದನು.

[641]12139027a ಸ ಕದಾ ಚಿತ್ಪರಿಪತನ್ ಶ್ವಪಚಾನಾಂ ನಿವೇಶನಮ್|
12139027c ಹಿಂಸ್ರಾಣಾಂ ಪ್ರಾಣಿಹಂತೃಣಾಮಾಸಸಾದ ವನೇ ಕ್ವ ಚಿತ್||

ಒಮ್ಮೆ ಅವನು ಪರಿತಪಿಸುತ್ತಾ ವನದಲ್ಲಿ ಪ್ರಾಣಿಗಳನ್ನು ಕೊಲ್ಲುವ
ಹಿಂಸಕ ಚಾಂಡಾಲರ ಬಸದಿಯನ್ನು ಹೇಗೋ ತಲುಪಿದನು.

12139028a ವಿಭಿನ್ನಕಲಶಾಕೀರ್ಣಂ ಶ್ವಚರ್ಮಾಚ್ಛಾದನಾಯುತಮ್|
12139028c ವರಾಹಖರಭಗ್ನಾಸ್ಥಿಕಪಾಲಘಟಸಂಕುಲಮ್||

ಅಲ್ಲಿ ಒಡೆದ ಮಡಕೆಗಳು ಹರಡಿಕೊಂಡಿದ್ದವು. ನಾಯಿಯ
ಚರ್ಮಗಳನ್ನು ಸುಲಿಯುವ ಉಪಕರಣಗಳಿದ್ದವು. ಹಂದಿ ಮತ್ತು
ಕತ್ತೆಗಳ ಎಲುಬುಗಳು ಮತ್ತು ತಲೆಬುರುಡೆಗಳು ಹರಡಿಕೊಂಡಿದ್ದವು.

12139029a ಮೃತಚೇಲಪರಿಸ್ತೀರ್ಣಂ ನಿರ್ಮಾಲ್ಯಕೃತಭೂಷಣಮ್|
12139029c ಸರ್ಪನಿರ್ಮೋಕಮಾಲಾಭಿಃ ಕೃತಚಿಹ್ನಕುಟೀಮಠಮ್||

ಮೃತರ ಶರೀರಗಳಿಂದ ಕಳಚಿದ ವಸ್ತ್ರಗಳನ್ನು ಎಲ್ಲೆಲ್ಲಿಯೂ

---

[640] ಗುರುತೇ ಸಿಗದಂತಾಗಿದ್ದ?

[641] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ತ್ಯಕ್ತ್ವಾ ದಾರಾಂಶ್ಚ ಪುತ್ರಾಂಶ್ಚ ಕಸ್ಮಿಂಶ್ಚ ಜನಸಂಸಧಿ| ಭಕ್ಷ್ಯಾಭಕ್ಷ್ಯಸಮೋ ಭೂತ್ವಾ ನಿರಗ್ನಿರನಿಕೇತನಃ||

ಹರಡಲಾಗಿತ್ತು. ಮತ್ತು ಆ ಶವಗಳಿಂದ ತೆಗೆದಿದ್ದ
ಹೂಮಾಲೆಗಳಿಂದಲೂ ಅಲಂಕರಿಸಲಾಗಿತ್ತು. ಚಾಂಡಾಲರ ಮನೆಗಳು
ಸರ್ಪಗಳ ಪೊರೆಗಳಿಂದಲೂ ವಿಭೂಷಿತಗೊಂಡಿದ್ದವು ಮತ್ತು
ಚಿತ್ರಿತವಾಗಿದ್ದವು.

12139030a ಉಲೂಕಪಕ್ಷಧ್ವಜಿಭಿರ್ದೇವತಾಯತನೈರ್ವೃತಮ್|
12139030c ಲೋಹಘಂಟಾಪರಿಷ್ಕಾರಂ ಶ್ವಯೂಥಪರಿವಾರಿತಮ್||

ಅಲ್ಲಿದ್ದ ಯಾವುದೋ ದೇವಾಲಯದಿಂದ ಗೂಬೆಯ ಕೂಗು
ಕೇಳಿಬರುತ್ತಿತ್ತು. ಲೋಹದ ಪಾತ್ರೆಗಳನ್ನು ಜೋಡಿಸಿಡಲಾಗಿತ್ತು.
ನಾಯಿಗಳ ಹಿಂಡುಗಳು ಮನೆಗಳಲ್ಲಿ ಸೇರಿಕೊಂಡಿದ್ದವು.

12139031a ತತ್ ಪ್ರವಿಶ್ಯ ಕ್ಷುಧಾವಿಷ್ಟೋ ಗಾಧೇಃ ಪುತ್ರೋ ಮಹಾನೃಷಿಃ|
12139031c ಆಹಾರಾನ್ವೇಷಣೇ ಯುಕ್ತಃ ಪರಂ ಯತ್ನಂ ಸಮಾಸ್ಥಿತಃ||

ಆ ಬಸದಿಯನ್ನು ಪ್ರವೇಶಿಸಿ ಹಸಿವೆಯಿಂದ ಪೀಡಿತನಾಗಿದ್ದ ಗಾಧಿಯ
ಪುತ್ರ ಮಹಾನೃಷಿಯು ಆಹಾರವನ್ನು ಹುಡುಕುತ್ತಾ ಪರಮ ಯತ್ನವನ್ನು
ಮಾಡಿದನು.

12139032a ನ ಚ ಕ್ವ ಚಿದವಿಂದತ್ಸ ಭಿಕ್ಷಮಾಣೋಽಪಿ ಕೌಶಿಕಃ|
12139032c ಮಾಂಸಮನ್ನಂ ಮೂಲಫಲಮನ್ಯದ್ವಾ ತತ್ರ ಕಿಂ ಚನ||

ಭಿಕ್ಷೆಬೇಡುತ್ತಿದ್ದ ಕೌಶಿಕನಿಗೆ ಅಲ್ಲಿ ಮಾಂಸವಾಗಲೀ, ಅನ್ನವಾಗಲೀ,
ಫಲ-ಮೂಲಗಳಾಗಲೀ ದೊರಕಲಿಲ್ಲ.

12139033a ಅಹೋ ಕೃಚ್ಛ್ರಂ ಮಯಾ ಪ್ರಾಪ್ತಮಿತಿ ನಿಶ್ಚಿತ್ಯ ಕೌಶಿಕಃ|
12139033c ಪಪಾತ ಭೂಮೌ ದೌರ್ಬಲ್ಯಾತ್ತಸ್ಮಿಂಶ್ಚಂಡಾಲಪಕ್ಕಣೇ||

“ಅಯ್ಯೋ! ಎಂತಹ ಕಷ್ಟವು ಬಂದೊದಗಿತು?” ಎಂದು ಯೋಚಿಸುತ್ತಾ ಕೌಶಿಕನು ದೌರ್ಬಲ್ಯದ ಕಾರಣದಿಂದ ಆ ಚಾಂಡಾಲರ ಬಸದಿಯಲ್ಲಿಯೇ ನೆಲದ ಮೇಲೆ ಬಿದ್ದುಬಿಟ್ಟನು.

12139034a ಚಿಂತಯಾಮಾಸ ಸ ಮುನಿಃ ಕಿಂ ನು ಮೇ ಸುಕೃತಂ ಭವೇತ್|
12139034c ಕಥಂ ವೃಥಾ ನ ಮೃತ್ಯುಃ ಸ್ಯಾದಿತಿ ಪಾರ್ಥಿವಸತ್ತಮ||

ಪಾರ್ಥಿವಸತ್ತಮ! “ನನಗೆ ಹೇಗೆ ಒಳಿತಾಗಬಹುದು? ಹೇಗೆ ವೃಥಾ ನನ್ನ ಮೃತ್ಯುವಾಗಬಾರದು?” ಎಂದು ಅವನು ಯೋಚಿಸಿದನು.

12139035a ಸ ದದರ್ಶ ಶ್ವಮಾಂಸಸ್ಯ ಕುತಂತೀಂ ವಿತತಾಂ ಮುನಿಃ|
12139035c ಚಂಡಾಲಸ್ಯ ಗೃಹೇ ರಾಜನ್ನದ್ಯಃ ಶಸ್ತ್ರಹತಸ್ಯ ಚ||

ರಾಜನ್! ಅಷ್ಟರಲ್ಲಿಯೇ ಅವನು ಚಾಂಡಾಲನ ಮನೆಯಲ್ಲಿ ಆಗಷ್ಟೇ ಶಸ್ತ್ರದಿಂದ ಕೊಂದಿದ್ದ ನಾಯಿಯ ಮೊಣಕಾಲಿನ ಭಾಗದ ಒಂದು ದೊಡ್ಡ ತುಂಡು ಬಿದ್ದುದನ್ನು ನೋಡಿದನು.

12139036a ಸ ಚಿಂತಯಾಮಾಸ ತದಾ ಸ್ತೇಯಂ ಕಾರ್ಯಮಿತೋ ಮಯಾ|
12139036c ನ ಹೀದಾನೀಮುಪಾಯೋಽನ್ಯೋ ವಿದ್ಯತೇ ಪ್ರಾಣಧಾರಣೇ||

“ಈ ಮಾಂಸವನ್ನು ಇಲ್ಲಿಂದ ಕದ್ದುಕೊಂಡು ಹೋಗುತ್ತೇನೆ ಏಕೆಂದರೆ ಈ ಸಮಯದಲ್ಲಿ ನನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳಲು ಬೇರೆ ಯಾವ ಉಪಾಯವೂ ಇಲ್ಲವಾಗಿದೆ” ಎಂದು ಅವನು ಯೋಚಿಸಿದನು.

12139037a ಆಪತ್ಸು ವಿಹಿತಂ ಸ್ತೇಯಂ ವಿಶಿಷ್ಟಸಮಹೀನತಃ|
12139037c ಪರಂ ಪರಂ ಭವೇತ್ಪೂರ್ವಮಸ್ತೇಯಮಿತಿ ನಿಶ್ಚಯಃ||

“ಆಪತ್ಕಾಲದಲ್ಲಿ ಪ್ರಾಣರಕ್ಷಣೆಗಾಗಿ ಬ್ರಾಹ್ಮಣನಿಗೆ ಶ್ರೇಷ್ಠ, ಸಮಾನ

ಮತ್ತು ಹೀನ ಮನುಷ್ಯರ ಮನೆಯಿಂದ ಕಳ್ಳತನ ಮಾಡುವುದು
ಉಚಿತವೇ ಆಗಿದೆ. ಇದು ಶಾಸ್ತ್ರದ ನಿಶ್ಚಿತ ವಿಧಾನ.

12139038a ಹೀನಾದಾದೇಯಮಾದೌ ಸ್ಯಾತ್ಸಮಾನಾತ್ತದನಂತರಮ್|
12139038c ಅಸಂಭವಾದಾದದೀತ ವಿಶಿಷ್ಟಾದಪಿ ಧಾರ್ಮಿಕಾತ್||

ಮೊದಲು ಹೀನ ಪುರುಷನ ಮನೆಯಿಂದ ಭಕ್ಷ್ಯ ಪದಾರ್ಥವನ್ನು
ಕದಿಯಬೇಕು. ಅದರಿಂದ ಅವನ ಉದ್ದೇಶವು ಪೂರ್ಣವಾಗದೇ
ಇದ್ದರೆ ಸಮಾನ ವ್ಯಕ್ತಿಯ ಮನೆಯಿಂದ ವಸ್ತುವನ್ನು ಕದಿಯಬೇಕು.
ಅಲ್ಲಿಯೂ ಕೂಡ ಅಭೀಷ್ಟಸಿದ್ಧಿಯಾಗದೇ ಇದ್ದರೆ ತನಗಿಂತಲೂ ವಿಶಿಷ್ಠ
ಧರ್ಮಾತ್ಮ ಪುರುಷನಲ್ಲಿಂದ ಅವನು ಖಾದ್ಯ ವಸ್ತುವನ್ನು
ಅಪಹರಿಸಬಹುದು.

12139039a ಸೋಽಹಮಂತಾವಸಾನಾನಾಂ ಹರಮಾಣಃ ಪರಿಗ್ರಹಾತ್|
12139039c ನ ಸ್ತೇಯದೋಷಂ ಪಶ್ಯಾಮಿ ಹರಿಷ್ಯಾಮ್ಯೇತದಾಮಿಷಮ್||

ಆದುದರಿಂದ ಈ ಚಾಂಡಲರ ಮನೆಯಿಂದ ಈ ನಾಯಿಯ
ಮಾಂಸವನ್ನು ಕದ್ದೇಬಿಡುತ್ತೇನೆ. ಇಲ್ಲಿ ಯಾರಿಂದಲಾದರೂ ದಾನವನ್ನು
ಕೇಳಿ ಪಡೆಯುವುದಕ್ಕಿಂತ ಹೆಚ್ಚಿನ ದೋಷವು ಈ ಕದಿಯುವುದರಿಂದ
ನನಗೆ ಕಾಣುತ್ತಿಲ್ಲ. ಆದುದರಿಂದ ಅವಶ್ಯವಾಗಿ ಇದನ್ನು
ಅಪಹರಿಸುತ್ತೇನೆ.”

12139040a ಏತಾಂ ಬುದ್ಧಿಂ ಸಮಾಸ್ಥಾಯ ವಿಶ್ವಾಮಿತ್ರೋ ಮಹಾಮುನಿಃ|
12139040c ತಸ್ಮಿನ್ದೇಶೇ ಪ್ರಸುಷ್ಟಾಪ ಪತಿತೋ ಯತ್ರ ಭಾರತ||

ಭಾರತ! ಈ ನಿಶ್ಚಯವನ್ನು ಮಾಡಿ ಮಹಾಮುನಿ ವಿಶ್ವಾಮಿತ್ರನು
ಚಾಂಡಾಲರು ವಾಸಿಸುತ್ತಿದ್ದ ಅದೇ ಸ್ಥಾನದಲ್ಲಿಯೇ

ಮಲಗಿಕೊಂಡುಬಿಟ್ಟನು.

12139041a ಸ ವಿಗಾಢಾಂ ನಿಶಾಂ ದೃಷ್ಟ್ವಾ ಸುಪ್ತೇ ಚಂಡಾಲಪಕ್ಕಣೇ|
12139041c ಶನೈರುತ್ಥಾಯ ಭಗವಾನ್ ಪ್ರವಿವೇಶ ಕುಟೀಮಠಮ್||

ಗಾಢ ಅಂಧಕಾರಯುಕ್ತ ರಾತ್ರಿಯಾಗಲು ಮತ್ತು ಚಾಂಡಲರ ಬಸದಿಯ ಎಲ್ಲರೂ ನಿದ್ರಿಸುತ್ತಿರಲು ಭಗವಾನ್ ವಿಶ್ವಾಮಿತ್ರನು ಮೆಲ್ಲನೇ ಎದ್ದು ಆ ಚಾಂಡಾಲನ ಮನೆಯನ್ನು ಪ್ರವೇಶಿಸಿದನು.

12139042a ಸ ಸುಪ್ತ ಏವ ಚಂಡಾಲಃ ಶ್ಲೇಷ್ಮಾಪಿಹಿತಲೋಚನಃ|
12139042c ಪರಿಭಿನ್ನಸ್ವರೋ ರೂಕ್ಷ ಉವಾಚಾಪ್ರಿಯದರ್ಶನಃ||

ಮಲಗಿದ್ದಂತೆ ತೋರುತ್ತಿದ್ದ ಚಾಂಡಾಲನ ಕಣ್ಣುಗಳು ಕೊಳೆಯಿಂದ ಮುಚ್ಚಿಕೊಂಡಿದ್ದವು. ಆದರೆ ಅವನು ಎಚ್ಚೆತ್ತಿದ್ದನು. ನೋಡಲು ಭಯಾನಕನಾಗಿದ್ದ ಸ್ವಭಾವತಃ ಕ್ರೂರಿಯಾಗಿ ಕಾಣುತ್ತಿದ್ದ ಅವನು ಒಳಗೆ ಬಂದ ಮುನಿಯನ್ನು ನೋಡಿ ಗಡಸು ಸ್ವರದಲ್ಲಿ ಹೇಳಿದನುಃ

12139043a ಕಃ ಕುತಂತೀಂ ಘಟ್ಟಯತಿ ಸುಪ್ತೇ ಚಂಡಾಲಪಕ್ಕಣೇ|
12139043c ಜಾಗರ್ಮಿ ನಾವಸುಪ್ತೋಽಸ್ಮಿ ಹತೋಽಸೀತಿ ಚ ದಾರುಣಃ||
12139044a ವಿಶ್ವಾಮಿತ್ರೋಽಹಮಿತ್ಯೇವ ಸಹಸಾ ತಮುವಾಚ ಸಃ|
12139044c ಸಹಸಾಭ್ಯಾಗತಭಯಃ ಸೋದ್ವೇಗಸ್ತೇನ ಕರ್ಮಣಾ||

“ಅರೇ! ಚಾಂಡಾಲರ ಮನೆಗಳಲ್ಲಿ ಎಲ್ಲರೂ ಮಲಗಿಬಿಟ್ಟಿದ್ದಾರೆ. ಮತ್ತೆ ಯಾರು ಇಲ್ಲಿ ಬಂದು ನಾಯಿಯ ಮಾಂಸವನ್ನು ಕದಿಯುವ ಯತ್ನವನ್ನು ಮಾಡುತ್ತಿದ್ದಾನೆ? ನಾನು ಎಚ್ಚೆತ್ತಿದ್ದೇನೆ. ನಿದ್ರೆಮಾಡುತ್ತಿಲ್ಲ. ಈಗ ನೀನು ಹತನಾದಂತೆಯೇ!” ಅವನ ಮಾತನ್ನು ಕೇಳಿ ಭಯದಿಂದ ಗಾಬರಿಗೊಂಡ ವಿಶ್ವಾಮಿತ್ರನು ತಾನು ಮಾಡುತ್ತಿರುವ ಕೆಲಸದಿಂದ

ಉದ್ವಿಗ್ನನಾಗಿ “ನಾನು ವಿಶ್ವಾಮಿತ್ರ!” ಎಂದು ಹೇಳಿದನು.

[642]12139045a ಚಂಡಾಲಸ್ತದ್ವಚಃ ಶ್ರುತ್ವಾ ಮಹರ್ಷೇರ್ಭಾವಿತಾತ್ಮನಃ|
12139045c ಶಯನಾದುಪಸಂಭ್ರಾಂತ ಇಯೇಷೋತ್ಪತಿತುಂ ತತಃ||

ಭಾವಿತಾತ್ಮ ಮಹರ್ಷಿಯ ಆ ಮಾತನ್ನು ಕೇಳಿ ಚಾಂಡಾಲನು ಗಾಬರಿಗೊಂಡು ಕೂಡಲೇ ಹಾಸಿಗೆಯಿಂದ ಮೇಲೆದ್ದು ಋಷಿಯ ಬಳಿ ಹೋದನು.

12139046a ಸ ವಿಸೃಜ್ಯಾಶ್ರು ನೇತ್ರಾಭ್ಯಾಂ ಬಹುಮಾನಾತ್ ಕೃತಾಂಜಲಿಃ|
12139046c ಉವಾಚ ಕೌಶಿಕಂ ರಾತ್ರೌ ಬ್ರಹ್ಮನ್ಕಿಂ ತೇ ಚಿಕೀರ್ಷಿತಮ್||

ಅವನು ಆದರದೊಂದಿಗೆ ಕೈಮುಗಿದು ಕಣ್ಣೀರು ಸುರಿಸುತ್ತಾ ಕೌಶಿಕನಿಗೆ ಇಂತೆಂದನುಃ “ಬ್ರಹ್ಮನ್! ಈ ರಾತ್ರಿಯಲ್ಲಿ ಇಲ್ಲಿ ನೀನು ಏನು ಮಾಡುತ್ತಿರುವೆ?”

12139047a ವಿಶ್ವಾಮಿತ್ರಸ್ತು ಮಾತಂಗಮುವಾಚ ಪರಿಸಾಂತ್ವಯನ್|
12139047c ಕ್ಷುಧಿತೋಽಹಂ ಗತಪ್ರಾಣೋ ಹರಿಷ್ಯಾಮಿ ಶ್ವಜಾಘನೀಮ್||

ವಿಶ್ವಾಮಿತ್ರನಾದರೋ ಮಾತಂಗನನ್ನು ಸಮಾಧಾನಪಡಿಸುತ್ತಾ ಹೇಳಿದನುಃ “ನಾನು ಹಸಿದಿದ್ದೇನೆ. ಪ್ರಾಣಹೋಗುತ್ತಿದೆ. ಈ ನಾಯಿಯ ಮಾಂಸವನ್ನು ಕದಿಯುತ್ತಿದ್ದೇನೆ.

---

642 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆಃ ವಿಶ್ವಾಮಿತ್ರೋಽಹಮಾಯುಷ್ಮನ್ನಾಗತೋಽಹಂ ಬುಭುಕ್ಷಿತಃ| ಮಾವಧೀರ್ಮಮ ಸದ್ಬುದ್ಧೇ ಯದಿ ಸಮ್ಯಕ್ ಪ್ರಪಶ್ಯಸಿ||

12139048a ಅವಸೀದಂತಿ ಮೇ ಪ್ರಾಣಾಃ ಸ್ಮೃತಿರ್ಮೇ[643] ನಶ್ಯತಿ ಕ್ಷುಧಾ|
[644]12139048c ಸ್ವಧರ್ಮಂ ಬುಧ್ಯಮಾನೋಽಪಿ ಹರಿಷ್ಯಾಮಿ ಶ್ವಜಾಘನೀಮ್‌॥

ನನ್ನ ಪ್ರಾಣಗಳು ಕುಸಿಯುತ್ತಿವೆ. ಹಸಿವೆಯಿಂದ ನನ್ನ ಸ್ಮರಣಶಕ್ತಿಯು ಕುಂಠಿತವಾಗುತ್ತಿದೆ. ಸ್ವಧರ್ಮವನ್ನು ತಿಳಿದಿದ್ದರೂ ಈ ನಾಯಿಯ ಮಾಂಸವನ್ನು ಕದಿಯುತ್ತಿದ್ದೇನೆ.

12139049a ಅಟನ್‌ ಭೈಕ್ಷಂ ನ ವಿಂದಾಮಿ ಯದಾ ಯುಷ್ಮಾಕಮಾಲಯೇ|
12139049c ತದಾ ಬುದ್ಧಿಃ ಕೃತಾ ಪಾಪೇ ಹರಿಷ್ಯಾಮಿ ಶ್ವಜಾಘನೀಮ್‌॥

ನಿಮ್ಮ ಮನೆಗಳಲ್ಲಿ ಸುತ್ತಾಡಿದರೂ ನನಗೆ ಭಿಕ್ಷವು ದೊರೆಯಲಿಲ್ಲ. ಆಗ ಈ ನಾಯಿಯ ಮಾಂಸವನ್ನು ಕದಿಯುವ ಪಾಪಬುದ್ಧಿಯನ್ನು ಮಾಡಿದೆನು.

12139050a ತೃಷಿತಃ ಕಲುಷಂ ಪಾತಾ ನಾಸ್ತಿ ಹ್ರೀರಶನಾರ್ಥಿನಃ|
12139050c ಕ್ಷುದ್ಧರ್ಮಂ ದೂಷಯತ್ಯತ್ರ ಹರಿಷ್ಯಾಮಿ ಶ್ವಜಾಘನೀಮ್‌॥

ಆಹಾರವನ್ನು ಅರಸುತ್ತಿರುವವನಿಗೆ ಕಲುಷಿತ ಅಹಾರದಿಂದಲಾದರೂ ತೃಪ್ತಿಯಾದರೆ ಅದರಲ್ಲಿ ದೋಷವೇನಿಲ್ಲ. ಈ ಹಸಿವೆಯ ಧರ್ಮವನ್ನು ದೂಷಿಸುತ್ತಾ ನಾನು ಈ ನಾಯಿಯ ಮಾಂಸವನ್ನು ಕದಿಯುತ್ತಿದ್ದೇನೆ.

12139051a ಅಗ್ನಿರ್ಮುಖಂ ಪುರೋಧಾಶ್ಚ ದೇವಾನಾಂ ಶುಚಿಪಾದ್ವಿಭುಃ|
12139051c ಯಥಾ ಸ ಸರ್ವಭುಗ್ಬ್ರಹ್ಮಾ ತಥಾ ಮಾಂ ವಿದ್ಧಿ ಧರ್ಮತಃ‌॥

---

643 ಶ್ರುತಿರ್ಮೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

644 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಅಧಿಕ ಶ್ಲೋಕಾರ್ಧವಿದೆ:
ದುರ್ಬಲೋ ನಷ್ಟಸಂಜ್ಞಶ್ಚ ಭಕ್ಷ್ಯಾಭಕ್ಷ್ಯವಿವರ್ಜಿತಃ|

ದೇವತೆಗಳ ಮುಖನಾದ ಅಗ್ನಿಯು ಪುರೋಹಿತನು. ಪವಿತ್ರ ದ್ರವ್ಯವನ್ನೇ ಪರಿಗ್ರಹಿಸುತ್ತಾನೆ. ಆ ಪ್ರಭುವು ಹೇಗೆ ಸರ್ವಭಕ್ಷಿಯೋ ಹಾಗೆ ನಾನೂ ಕೂಡ ಸರ್ವಭಕ್ಷಿಯಾಗುತ್ತೇನೆ. ಆದುದರಿಂದ ನೀನು ಧರ್ಮತಃ ನನ್ನನ್ನು ಬ್ರಾಹ್ಮಣನೆಂದೇ ತಿಳಿದುಕೋ.”

12139052a ತಮುವಾಚ ಸ ಚಂಡಾಲೋ ಮಹರ್ಷೇ ಶೃಣು ಮೇ ವಚಃ|
12139052c ಶ್ರುತ್ವಾ ತಥಾ ಸಮಾತಿಷ್ಠ ಯಥಾ ಧರ್ಮಾನ್ನ ಹೀಯಸೇ||

ಆಗ ಚಾಂಡಾಲನು ಅವನಿಗೆ ಹೇಳಿದನು: “ಮಹರ್ಷೇ! ನನ್ನ ಮಾತನ್ನು ಕೇಳು. ಅದನ್ನು ಕೇಳಿ ನಿನ್ನ ಧರ್ಮವು ನಷ್ಟವಾಗದ ರೀತಿಯಲ್ಲಿ ಮಾಡು.

[645]12139053a ಮೃಗಾಣಾಮಧಮಂ ಶ್ವಾನಂ ಪ್ರವದಂತಿ ಮನೀಷಿಣಃ|
12139053c ತಸ್ಯಾಪ್ಯಧಮ ಉದ್ದೇಶಃ ಶರೀರಸ್ಯೋರುಜಾಘನೀ||

ನಾಯಿಯು ಪ್ರಾಣಿಗಳಲ್ಲಿಯೇ ಅಧಮಪ್ರಾಣಿ ಎಂದು ಮನೀಷಿಣರು ಹೇಳುತ್ತಾರೆ. ನಾಯಿಯ ಶರೀರದಲ್ಲಿಯೂ ಮೊಣಕಾಲಿನ ಭಾಗವು ಅಧಮವಾದುದು.

12139054a ನೇದಂ ಸಮ್ಯಗ್ ವ್ಯವಸಿತಂ ಮಹರ್ಷೇ ಕರ್ಮ ವೈ ಕೃತಮ್|
12139054c ಚಂಡಾಲಸ್ವಸ್ಯ ಹರಣಮಭಕ್ಷ್ಯಸ್ಯ ವಿಶೇಷತಃ||

ಮಹರ್ಷೇ! ನಿನ್ನ ಈ ನಿಶ್ಚಯವು ಸರಿಯಾದುದಲ್ಲ. ಚಾಂಡಾಲನ ಧನವನ್ನು, ಅದರಲ್ಲೂ ವಿಶೇಷವಾಗಿ ಅಭಕ್ಷ್ಯ ಪದಾರ್ಥವನ್ನು ಅಪಹರಿಸುವುದು ಧರ್ಮದೃಷ್ಟಿಯಲ್ಲಿ ಅತ್ಯಂತ ನಿಂದನೀಯವು.

---

[645] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಶ್ಲೋಕಾರ್ಧವಿದೆ: ಧರ್ಮಂ ವಾಪಿ ವಿಪ್ರರ್ಷೇ ಶೃಣು ಯತ್ತೇ ಬ್ರುವೀಮ್ಯಹಮ್|

12139055a ಸಾಧ್ವನ್ಯಮನುಪಶ್ಯ ತ್ವಮುಪಾಯಂ ಪ್ರಾಣಧಾರಣೇ|
12139055c ನ ಮಾಂಸಲೋಭಾತ್ತಪಸೋ ನಾಶಸ್ತೇ ಸ್ಯಾನ್ಮಹಾಮುನೇ||

ಮಹಾಮುನೇ! ನಿನ್ನ ಪ್ರಾಣರಕ್ಷಣೆಗಾಗಿ ಅನ್ಯ ಉಪಾಯವನ್ನು ನೋಡಿಕೊಳ್ಳಬೇಕು. ಮಾಂಸದ ಲೋಭದಿಂದ ನಿನ್ನ ತಪಸ್ಸು ನಾಶವಾಗಬಾರದು.

12139056a ಜಾನತೋಽವಿಹಿತೋ ಮಾರ್ಗೋ ನ ಕಾರ್ಯೋ ಧರ್ಮಸಂಕರಃ|
12139056c ಮಾ ಸ್ಮ ಧರ್ಮಂ ಪರಿತ್ಯಾಕ್ಷೀಸ್ತ್ವಂ ಹಿ ಧರ್ಮವಿದುತ್ತಮಃ||

ಧರ್ಮಮಾರ್ಗವನ್ನು ನೀನು ತಿಳಿದಿದ್ದೀಯೆ. ಧರ್ಮಸಂಕರದ ಕಾರ್ಯವನ್ನು ಮಾಡಬೇಡ. ಧರ್ಮವನ್ನು ಪರಿತ್ಯಜಿಸಬೇಡ. ಏಕೆಂದರೆ ನೀನು ಧರ್ಮವಿದುಗಳಲ್ಲಿಯೇ ಉತ್ತಮನು.”

12139057a ವಿಶ್ವಾಮಿತ್ರಸ್ತತೋ ರಾಜನ್ನಿತ್ಯುಕ್ತೋ ಭರತರ್ಷಭ|
12139057c ಕ್ಷುಧಾರ್ತಃ ಪ್ರತ್ಯುವಾಚೇದಂ ಪುನರೇವ ಮಹಾಮುನಿಃ||

ಭರತರ್ಷಭ! ರಾಜನ್! ಚಾಂಡಲನು ಹೀಗೆ ಹೇಳಲು ಹಸಿವೆಯಿಂದ ಬಳಲಿದ್ದ ಮಹಾಮುನಿ ವಿಶ್ವಾಮಿತ್ರನು ಪುನಃ ಹೀಗೆ ಉತ್ತರಿಸಿದನುಃ

12139058a ನಿರಾಹಾರಸ್ಯ ಸುಮಹಾನ್ಮಮ ಕಾಲೋಽಭಿಧಾವತಃ|
12139058c ನ ವಿದ್ಯತೇಽಭ್ಯುಪಾಯಶ್ಚ ಕಶ್ಚಿನ್ಮೇ ಪ್ರಾಣಧಾರಣೇ||

ನಿರಾಹಾರನಾಗಿ ನಾನು ಆಹಾರವನ್ನು ಹುಡುಕುತ್ತಾ ಬಹಳ ಕಾಲದಿಂದ ಅಲ್ಲಿಂದಿಲ್ಲಿಗೆ ಓಡುತ್ತಿದ್ದೇನೆ. ಆದರೆ ನನ್ನ ಪ್ರಾಣಗಳ ರಕ್ಷಣೆಗೆ ಯಾವ ಉಪಾಯವೂ ದೊರಕಲಿಲ್ಲ.

12139059a ಯೇನ ತೇನ ವಿಶೇಷೇಣ ಕರ್ಮಣಾ ಯೇನ ಕೇನ ಚಿತ್|

12139059c ಅಭ್ಯುಜ್ಜೀವೇತ್ಸೀದಮಾನಃ ಸಮರ್ಥೋ ಧರ್ಮಮಾಚರೇತ್‌॥

ಸಾಯುತ್ತಿರುವವನು ಯಾವುದಾದರೂ ವಿಶೇಷ ಕರ್ಮದಿಂದ ಮತ್ತು ಯಾವುದರಿಂದಲಾದರೂ ತನ್ನ ಜೀವವನ್ನು ಉಳಿಸಿಕೊಂಡರೆ ಅವನು ಧರ್ಮವನ್ನು ಆಚರಿಸಲು ಸಮರ್ಥನಾಗುತ್ತಾನೆ.

12139060a ಐಂದ್ರೋ ಧರ್ಮಃ ಕ್ಷತ್ರಿಯಾಣಾಂ ಬ್ರಾಹ್ಮಣಾನಾಮಥಾಗ್ನಿಕಃ|
12139060c ಬ್ರಹ್ಮವಹ್ನಿರ್ಮಮ ಬಲಂ ಭಕ್ಷ್ಯಾಮಿ ಸಮಯಂ ಕ್ಷುಧಾ[646]‌॥

ಇಂದ್ರನ ಪಾಲನಾರೂಪ ಧರ್ಮವು ಕ್ಷತ್ರಿಯರ ಧರ್ಮ. ಮತ್ತು ಅಗ್ನಿಯ ಸರ್ವಭಕ್ಷಿತ್ವ ಗುಣವು ಬ್ರಾಹ್ಮಣರ ಗುಣ. ನನ್ನ ಬಲವು ದೇವರೂಪೀ ಅಗ್ನಿಯು. ಆದುದರಿಂದ ನಾನು ಹಸಿವೆಗಾಗಿ ಎಲ್ಲವನ್ನೂ ಭಕ್ಷಿಸುತ್ತೇನೆ.

12139061a ಯಥಾ ಯಥಾ ವೈ ಜೀವೇದ್ಧಿ ತತ್ಕರ್ತವ್ಯಮಪೀಡಯಾ[647]|
12139061c ಜೀವಿತಂ ಮರಣಾಚ್ಛ್ರೇಯೋ ಜೀವನ್‌ ಧರ್ಮಮವಾಪ್ನುಯಾತ್‌॥

ಯಾವ್ಯಾವುದರಿಂದ ಜೀವವುಳಿಯುವುದೋ ಆ ಕರ್ಮಗಳನ್ನು ನಾಚಿಕೊಳ್ಳದೇ ಮಾಡಬೇಕು. ಮರಣಕ್ಕಿಂತಲೂ ಜೀವಿತವಾಗಿರುವುದು ಶ್ರೇಯಸ್ಕರವು. ಜೀವವಿದ್ದರೆ ಧರ್ಮವನ್ನು ಪಡೆದುಕೊಳ್ಳಬಹುದು.

12139062a ಸೋಽಹಂ ಜೀವಿತಮಾಕಾಂಕ್ಷನ್ನಭಕ್ಷಸ್ಯಾಪಿ ಭಕ್ಷಣಮ್‌|
12139062c ವ್ಯವಸ್ಯೇ ಬುದ್ಧಿಪೂರ್ವಂ ವೈ ತದ್ಭವಾನನುಮನ್ಯತಾಮ್‌‌॥

ಆದುದರಿಂದ ನಾನು ಜೀವನದ ಆಕಾಂಕ್ಷೆಯನ್ನಿಟ್ಟುಕೊಂಡು ಅಭಕ್ಷ್ಯ ಪದಾರ್ಥವನ್ನೂ ಭಕ್ಷಿಸುವ ಬುದ್ಧಿಪೂರ್ವಕ ನಿಶ್ಚಯವನ್ನು

---

646 ಶಮಯನ್‌ ಕ್ಷುಧಾಮ್‌| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್‌).

647 ತತ್ಕರ್ತವ್ಯಮಹೇಲಯಾ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್‌).

ಮಾಡಿದ್ದೇನೆ. ಅದನ್ನು ನೀನು ಅನುಮೋದಿಸು.

12139063a ಜೀವನ್ ಧರ್ಮಂ ಚರಿಷ್ಯಾಮಿ[648] ಪ್ರಣೋತ್ಸ್ಯಾಮ್ಯಶುಭಾನಿ ಚ|
12139063c ತಪೋಭಿರ್ವಿದ್ಯಯಾ ಚೈವ ಜ್ಯೋತೀಂಷೀವ ಮಹತ್ತಮಃ||

ಮೊದಲು ಜೀವನ ಧರ್ಮವನ್ನು ಆಚರಿಸುತ್ತೇನೆ. ಅನಂತರ ಮಹತ್ತಮ ತಪಸ್ಸು ಮತ್ತು ವಿದ್ಯೆಯ ಮೂಲಕ ಸೂರ್ಯಚಂದ್ರರು ಕತ್ತಲೆಯನ್ನು ಹೋಗಲಾಡಿಸುವಂತೆ ಎಲ್ಲ ಅಶುಭಕರ್ಮಗಳನ್ನೂ ನಾಶಪಡಿಸುತ್ತೇನೆ.”

12139064 ಶ್ವಪಚ ಉವಾಚ|
12139064a ನೈತತ್ಖಾದನ್ ಪ್ರಾಪ್ಸ್ಯಸೇ ಪ್ರಾಣಮನ್ಯಂ
ನಾಯುರ್ದೀರ್ಘಂ ನಾಮೃತಸ್ಯೇವ ತೃಪ್ತಿಮ್|
12139064c ಭಿಕ್ಷಾಮನ್ಯಾಂ ಭಿಕ್ಷ ಮಾ ತೇ ಮನೋಽಸ್ತು
ಶ್ವಭಕ್ಷಣೇ ಶ್ವಾ ಹ್ಯಭಕ್ಷೋ ದ್ವಿಜಾನಾಮ್||

ಶ್ವಪಚನು ಹೇಳಿದನು: “ಇದನ್ನು ತಿನ್ನುವುದರಿಂದ ಅತಿ ದೊಡ್ಡ ಆಯುಸ್ಸೇನೂ ದೊರಕುವುದಿಲ್ಲ. ಇದರಿಂದ ಪ್ರಾಣಶಕ್ತಿಯೂ ದೊರೆಯುವುದಿಲ್ಲ ಮತ್ತು ಅಮೃತಕ್ಕೆ ಸಮಾನ ತೃಪ್ತಿಯೂ ಉಂಟಾಗುವುದಿಲ್ಲ. ಆದುದರಿಂದ ನೀನು ಬೇರೆ ಏನನ್ನಾದರೂ ಭಿಕ್ಷಾರೂಪದಲ್ಲಿ ಕೇಳು. ನಾಯಿಯ ಮಾಂಸವನ್ನು ತಿನ್ನುವ ಮನಸ್ಸುಮಾಡಬಾರದು. ದ್ವಿಜರಿಗೆ ನಾಯಿಯು ಅಭಕ್ಷ್ಯವಾದುದು.”

12139065 ವಿಶ್ವಾಮಿತ್ರ ಉವಾಚ|
12139065a ನ ದುರ್ಭಿಕ್ಷೇ ಸುಲಭಂ ಮಾಂಸಮನ್ಯಚ್

---

648 ಬಲವಂತಂ ಕರಿಷ್ಯಾಮಿ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಚ್ವಪಾಕ ನಾನ್ನಂ ನ ಚ ಮೇಽಸ್ತಿ ವಿತ್ತಮ್|
12139065c ಕ್ಷುಧಾರ್ತಶ್ಚಾಹಮಗತಿರ್ನಿರಾಶಃ
ಶ್ವಮಾಂಸೇ ಚಾಸ್ಮಿನ್ ಷಡ್ರಸಾನ್ನಾಧು ಮನ್ಯೇ||

ವಿಶ್ವಾಮಿತ್ರನು ಹೇಳಿದನು: "ಶ್ವಪಾಕ! ದುರ್ಭಿಕ್ಷವು ನಡೆಯುತ್ತಿರುವಾಗ ಅನ್ಯ ಅನ್ನ ಅಥವಾ ಮಾಂಸವು ಸುಲಭವಾಗಿ ದೊರೆಯುವುದಿಲ್ಲ ಎಂದು ನನಗೆ ತಿಳಿದಿದೆ. ನನ್ನಲ್ಲಿ ಧನವೂ ಇಲ್ಲ. ಕ್ಷುಧಾರ್ತನಾಗಿದ್ದೇನೆ. ನಿರಾಶ್ರಯನೂ ನಿರಾಶನೂ ಆಗಿದ್ದೇನೆ. ಈ ನಾಯಿಯ ಮಾಂಸದಿಂದಲೇ ನನಗೆ ಷಡ್ರಸ ಭೋಜನದ ಆನಂದವು ಪ್ರಾಪ್ತವಾಗುತ್ತದೆ ಎಂದು ನನಗನ್ನಿಸುತ್ತಿದೆ."

12139066 ಶ್ವಪಚ ಉವಾಚ|
12139066a ಪಂಚ ಪಂಚನಖಾ ಭಕ್ಷ್ಯಾ ಬ್ರಹ್ಮಕ್ಷತ್ರಸ್ಯ ವೈ ದ್ವಿಜ|
12139066c ಯದಿ ಶಾಸ್ತ್ರಂ ಪ್ರಮಾಣಂ ತೇ ಮಾಭಕ್ಷ್ಯೇ ಮಾನಸಂ ಕೃಥಾಃ||

ಶ್ವಪಚನು ಹೇಳಿದನು: "ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಐದು ಉಗುರಿರುವ ಐದು ಪ್ರಾಣಿಗಳು ಆಪತ್ಕಾಲದಲ್ಲಿ ಭಕ್ಷ್ಯಯೋಗ್ಯವೆಂದು ಹೇಳಿದ್ದಾರೆ. ಶಾಸ್ತ್ರದ ಪ್ರಮಾಣವನ್ನು ಸ್ವೀಕರಿಸುವೆಯಾದರೆ ನೀನು ಅಭಕ್ಷ್ಯ ಪದಾರ್ಥದ ಕಡೆ ಮನಗೊಡಬಾರದು."

12139067 ವಿಶ್ವಾಮಿತ್ರ ಉವಾಚ|
12139067a ಅಗಸ್ತ್ಯೇನಾಸುರೋ ಜಗ್ಧೋ ವಾತಾಪಿಃ ಕ್ಷುಧಿತೇನ ವೈ|
12139067c ಅಹಮಾಪದ್ಗತಃ ಕ್ಷುಬ್ಧೋ ಭಕ್ಷಯಿಷ್ಯೇ ಶ್ವಜಾಘನೀಮ್||

ವಿಶ್ವಾಮಿತ್ರನು ಹೇಳಿದನು: "ಹಸಿದಿದ್ದ ಅಗಸ್ತ್ಯನು ವಾತಾಪಿ ಎಂಬ ಹೆಸರಿನ ಅಸುರನನ್ನು ತಿಂದಿದ್ದನು. ನಾನಾದರೋ ಹಸಿವೆಯಿಂದ

ಮಹಾ ಆಪತ್ತಿನಲ್ಲಿ ಸಿಲುಕಿಕೊಂಡಿದ್ದೇನೆ. ಆದುದರಿಂದ ನಾಯಿಯ ಮೊಣಕಾಲನ್ನು ನಾನು ಅವಶ್ಯವಾಗಿ ತಿನ್ನುತ್ತೇನೆ.”

12139068 ಶ್ವಪಚ ಉವಾಚ|
12139068a ಭಿಕ್ಷಾಮನ್ಯಾಮಾಹರೇತಿ ನ ಚೈತತ್ಕರ್ತುಮರ್ಹಸಿ|
12139068c ನ ನೂನಂ ಕಾರ್ಯಮೇತದ್ಧ್ಯೇ ಹರ ಕಾಮಂ ಶ್ವಜಾಘನೀಮ್||

ಶ್ವಪಚನು ಹೇಳಿದನು: “ನೀನು ಅನ್ಯ ಭಿಕ್ಷೆಯನ್ನು ತೆಗೆದುಕೊಂಡು ಹೋಗು. ಹೀಗೆ ಮಾಡಬಾರದು. ಬೇಕಾದರೆ ಈ ನಾಯಿಯ ಮೊಣಕಾಲನ್ನು ತೆಗೆದುಕೊಂಡು ಹೋಗು. ಆದರೆ ಇದನ್ನು ಭಕ್ಷಿಸಬಾರದು.”

12139069 ವಿಶ್ವಾಮಿತ್ರ ಉವಾಚ|
12139069a ಶಿಷ್ಟಾ ವೈ ಕಾರಣಂ ಧರ್ಮೇ ತದ್ವೃತ್ತಮನುವರ್ತಯೇ|
12139069c ಪರಾಂ ಮೇಧ್ಯಾಶನಾದೇತಾಂ ಭಕ್ಷ್ಯಾಂ ಮನ್ಯೇ ಶ್ವಜಾಘನೀಮ್||

ವಿಶ್ವಾಮಿತ್ರನು ಹೇಳಿದನು: “ಶಿಷ್ಟರೇ ಧರ್ಮಕ್ಕೆ ಕಾರಣರು. ನಾನೂ ಅವರ ಶಿಷ್ಟಾಚಾರವನ್ನೇ ಅನುಸರಿಸುತ್ತೇನೆ. ಆದುದರಿಂದ ಈ ನಾಯಿಯ ಮೊಣಕಾಲನ್ನೇ ಪವಿತ್ರ ಭೋಜನದ ಸಮವೆಂದೂ ಭಕ್ಷಣೀಯವೆಂದೂ ತಿಳಿಯುತ್ತೇನೆ.”

12139070 ಶ್ವಪಚ ಉವಾಚ|
12139070a ಅಸತಾ ಯತ್ಸಮಾಚೀರ್ಣಂ ನ ಸ ಧರ್ಮಃ ಸನಾತನಃ|
12139070c ನಾವೃತ್ತಮನುಕಾರ್ಯಂ ವೈ ಮಾ ಚಲೀನಾನೃತಂ ಕೃಥಾಃ||

ಶ್ವಪಚನು ಹೇಳಿದನು: “ಅಸಾಧು ಪುರುಷನು ಮಾಡಿದ ಅನುಚಿತ ಕಾರ್ಯವು ಸನಾತನ ಧರ್ಮವೆನಿಸಿಕೊಳ್ಳುವುದಿಲ್ಲ. ಆದುದರಿಂದ

ನೀನು ಇಲ್ಲಿ ಅಯೋಗ್ಯಕರ್ಮವನ್ನೆಸಗಬೇಡ. ಯಾವುದೋ ನೆಪವನ್ನು ಹೇಳಿಕೊಂಡು ಪಾಪವನ್ನೆಸಗಲು ಮುಂದಾಗಬೇಡ.”

12139071 ವಿಶ್ವಾಮಿತ್ರ ಉವಾಚ|
12139071a ನ ಪಾತಕಂ ನಾವಮತಮೃಷಿಃ ಸನ್ಕರ್ತುಮರ್ಹಸಿ|
12139071c ಸಮೌ ಚ ಶ್ವಮೃಗೌ ಮನ್ಯೇ ತಸ್ಮಾದ್ ಭಕ್ಷ್ಯಾ ಶ್ವಜಾಘನೀ||

ವಿಶ್ವಾಮಿತ್ರನು ಹೇಳಿದನು: “ಯಾವ ಶ್ರೇಷ್ಠ ಋಷಿಗೂ ಪಾತಕ ಅಥವಾ ನಿಂದನೀಯವಾದ ಇಂತಹ ಕರ್ಮವನ್ನೆಸಗಲು ಸಾಧ್ಯವಿಲ್ಲ. ನಾಯಿ ಮತ್ತು ಮೃಗ ಇವೆರಡೂ ಪಶುಗಳೇ ಆದುದರಿಂದ ನನ್ನ ಮತದಲ್ಲಿ ಸಮಾನವಾಗಿವೆ. ಆದುದರಿಂದ ನಾನು ಈ ನಾಯಿಯ ಮೊಣಕಾಲಭಾಗವನ್ನು ಅವಶ್ಯವಾಗಿ ತಿನ್ನುತ್ತೇನೆ.”

12139072 ಶ್ವಪಚ ಉವಾಚ|
12139072a ಯದ್ಬ್ರಾಹ್ಮಣಾರ್ಥೇ ಕೃತಮರ್ಥಿತೇನ
ತೇನರ್ಷಿಣಾ ತಚ್ಚ ಭಕ್ಷ್ಯಾಧಿಕಾರಮ್|
12139072c ಸ ವೈ ಧರ್ಮೋ ಯತ್ರ ನ ಪಾಪಮಸ್ತಿ
ಸರ್ವೈರುಪಾಯೈರ್ಹಿ ಸ ರಕ್ಷಿತವ್ಯಃ||

ಶ್ವಪಚನು ಹೇಳಿದನು: “ಬ್ರಾಹ್ಮಣರು ಪ್ರಾರ್ಥಿಸಿಕೊಂಡಾಗ ಋಷಿ ಅಗಸ್ತ್ಯನು ವಾತಾಪಿಯನ್ನು ಭಕ್ಷಿಸಿದ್ದನು. ಪಾಪವಿಲ್ಲದಿರುವುದೇ ಧರ್ಮವು. ಬ್ರಾಹ್ಮಣನು ಗುರುವು. ಆದುದರಿಂದ ಸರ್ವೋಪಾಯಗಳಿಂದ ಅವನನ್ನು ಮತ್ತು ಅವನ ಧರ್ಮವನ್ನು ರಕ್ಷಿಸಬೇಕು.”

12139073 ವಿಶ್ವಾಮಿತ್ರ ಉವಾಚ|

12139073a ಮಿತ್ರಂ ಚ ಮೇ ಬ್ರಾಹ್ಮಣಶ್ಚಾಯಮಾತ್ಮಾ
ಪ್ರಿಯಶ್ಚ ಮೇ ಪೂಜ್ಯತಮಶ್ಚ ಲೋಕೇ|
12139073c ತಂ ಭರ್ತುಕಾಮೋಽಹಮಿಮಾಂ ಹರಿಷ್ಯೇ
ನೃಶಂಸಾನಾಮೀದೃಶಾನಾಂ ನ ಬಿಭ್ಯೇ||

ವಿಶ್ವಾಮಿತ್ರನು ಹೇಳಿದನು: "ಈ ಬ್ರಾಹ್ಮಣ ಶರೀರವು ನನ್ನ ಮಿತ್ರ. ಇಡೀ ಜಗತ್ತಿನಲ್ಲಿ ಇದು ನನಗೆ ಅತ್ಯಂತ ಪ್ರಿಯವೂ ಆದರಣೀಯವೂ ಆಗಿದೆ. ಇದನ್ನು ಜೀವಿತವಿರಿಸಿಕೊಳ್ಳಲು ನಾನು ಈ ನಾಯಿಯ ಮೊಣಕಾಲಿನ ಭಾಗವನ್ನು ಕೊಂಡೊಯ್ಯ ಬಯಸುತ್ತೇನೆ. ಆದುದರಿಂದ ಇಂತಹ ಹಿಂಸಾಕರ್ಮದಿಂದ ನನಗೆ ಸ್ವಲ್ಪವೂ ಭಯವಾಗುತ್ತಿಲ್ಲ."

12139074 ಶ್ವಪಚ ಉವಾಚ|
12139074a ಕಾಮಂ ನರಾ ಜೀವಿತಂ ಸಂತ್ಯಜಂತಿ
ನ ಚಾಭಕ್ಷ್ಯೈಃ ಪ್ರತಿಕುರ್ವಂತಿ ತತ್ರ|
12139074c ಸರ್ವಾನ್ಕಾಮಾನ್ ಪ್ರಾಪ್ನುವಂತೀಹ ವಿದ್ವನ್
ಪ್ರಿಯಸ್ವ ಕಾಮಂ ಸಹಿತಃ ಕ್ಷುಧಾ ವೈ||

ಶ್ವಪಚನು ಹೇಳಿದನು: "ವಿದ್ವನ್! ಉತ್ತಮ ಪುರುಷನು ತನ್ನ ಪ್ರಾಣಗಳನ್ನು ತ್ಯಜಿಸಬಾರದಾದರೂ ಎಂದೂ ಅಭಕ್ಷ್ಯವನ್ನು ಭಕ್ಷಿಸುವ ವಿಚಾರವನ್ನು ಮಾಡಬಾರದು. ಇದರಿಂದಲೇ ಅವರು ತಮ್ಮ ಸರ್ವಕಾಮನೆಗಳನ್ನು ಪೂರೈಸಿಕೊಳ್ಳುತ್ತಾರೆ. ಆದುದರಿಂದ ನೀನೂ ಕೂಡ ಹಸಿವೆಯಿಂದಲೇ ಉಪವಾಸದ ಮೂಲಕ ನಿನ್ನ ಮನೋಕಾಮನೆಗಳನ್ನು ಪೂರೈಸಿಕೋ."

12139075 ವಿಶ್ವಾಮಿತ್ರ ಉವಾಚ|

12139075a ಸ್ಥಾನೇ ತಾವತ್ಸಂಶಯಃ ಪ್ರೇತ್ಯಭಾವೇ
ನಿಃಸಂಶಯಂ ಕರ್ಮಣಾಂ ವಾ ವಿನಾಶಃ|
12139075c ಅಹಂ ಪುನರ್ವರ್ತ ಇತ್ಯಾಶಯಾತ್ಮಾ
ಮೂಲಂ ರಕ್ಷನ್ ಭಕ್ಷಯಿಷ್ಯಾಮ್ಯಭಕ್ಷ್ಯಮ್‌||

ವಿಶ್ವಾಮಿತ್ರನು ಹೇಳಿದನು: "ಉಪವಾಸಮಾಡಿ ಪ್ರಾಣವು ಹೊರಟುಹೋದರೆ ನಂತರ ಏನಾಗುತ್ತದೆ? ಇದು ಸಂಶಯಯುಕ್ತವಾದ ವಿಷಯ. ಆದರೆ ಹೀಗೆ ಮಾಡುವುದರಿಂದ ಪುಣ್ಯಕರ್ಮಗಳ ವಿನಾಶವಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಆದುದರಿಂದ ನಾನು ಜೀವನರಕ್ಷಣೆಯ ನಂತರ ಪುನಃ ಪ್ರತಿದಿನ ವ್ರತ ಮತ್ತು ಶಮ, ದಮ ಮೊದಲಾದವುಗಳಲ್ಲಿ ತತ್ಪರನಾಗಿ ಪಾಪಕರ್ಮಗಳ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆ. ಈ ಸಮಯದಲ್ಲಂತೂ ಧರ್ಮದ ಮೂಲವಾದ ಶರೀರವನ್ನು ರಕ್ಷಿಸಿಕೊಳ್ಳುವುದು ಅವಶ್ಯಕವಾಗಿದೆ. ಆದುದರಿಂದ ನಾನು ಈ ಅಭಕ್ಷ್ಯ ಪದಾರ್ಥವನ್ನು ತಿನ್ನುತ್ತೇನೆ.

12139076a ಬುದ್ಧ್ಯಾತ್ಮಕೇ ವ್ಯಸ್ತಮಸ್ತೀತಿ ತುಷ್ಟೋ
ಮೋಹಾದೇಕತ್ವಂ ಯಥಾ ಚರ್ಮ ಚಕ್ಷುಃ|
12139076c ಯದ್ಯಪ್ಯೇನಃ ಸಂಶಯಾದಾಚರಾಮಿ
ನಾಹಂ ಭವಿಷ್ಯಾಮಿ ಯಥಾ ತ್ವಮೇವ‌||

ಈ ನಾಯಿಯ ಮಾಂಸಸೇವನೆಯು ಎರಡು ಪ್ರಕಾರದಲ್ಲಾಗಬಹುದು: ಬುದ್ಧಿ ಮತ್ತು ವಿಚಾರಪೂರ್ವಕವಾಗಿ ಒಂದು ಮತ್ತು ಇನ್ನೊಂದು ಅಜ್ಞಾನ ಹಾಗೂ ಆಸಕ್ತಿಪೂರ್ವಕವಾಗಿ. ಮೊದಲನೆಯ ಪ್ರಕಾರದಂತೆ ಧರ್ಮದ ಮೂಲ ಮತ್ತು ಜ್ಞಾನಪ್ರಾಪ್ತಿಗೆ ಸಾಧಕವಾದ ಶರೀರದ ರಕ್ಷಣೆಯಲ್ಲಿ ಪುಣ್ಯವಿದೆ. ಈ ವಿಷಯವು ಸ್ಪಷ್ಟವಾಗಿದೆ. ಇದೇ ತರಹ

ಮೋಹ ಮತ್ತು ಆಸಕ್ತಿಪೂರ್ವಕ ಕರ್ಮದಲ್ಲಿ ಪ್ರವೃತ್ತನಾಗುವುದರಿಂದ
ಆಗುವ ದೋಷಗಳೂ ಸ್ಪಷ್ಟವಾಗಿವೆ. ಒಂದುವೇಳೆ ನಾನು
ಸಂಶಯಯುಕ್ತನಾಗಿಯೇ ಈ ಕಾರ್ಯವನ್ನು ಮಾಡಲು
ಹೊರಟಿರುವೆನಾದರೂ ನನಗೆ ಈ ನಾಯಿಯ ಮಾಂಸವನ್ನು ತಿಂದು
ನಿನ್ನಂತೆ ನಾನು ಚಾಂಡಾಲನಾಗುವುದಿಲ್ಲ ಎಂಬ ದೃಢ ವಿಶ್ವಾಸವಿದೆ.”

12139077 ಶ್ವಪಚ ಉವಾಚ।
12139077a ಪತನೀಯಮಿದಂ ದುಃಖಮಿತಿ ಮೇ ವರ್ತತೇ ಮತಿಃ।
12139077c ದುಷ್ಕೃತೀ ಬ್ರಾಹ್ಮಣಂ ಸಂತಂ ಯಸ್ತ್ವಾಮಹಮುಪಾಲಭೇ॥

ಶ್ವಪಚನು ಹೇಳಿದನು: “ಈ ನಾಯಿಯ ಮಾಂಸವನ್ನು ತಿನ್ನುವುದು
ನಿನಗೆ ದುಃಖದಾಯಕ ಪತನವಾಗುತ್ತದೆ ಎಂದು ನನಗನ್ನಿಸುತ್ತದೆ.
ಆದುದರಿಂದ ಪಾಪಿಯಾದರೂ ನಾನು ಉತ್ತಮ ಬ್ರಾಹ್ಮಣನಾದ ನಿನಗೆ
ಮತ್ತೆ ಮತ್ತೆ ಹೇಳುತ್ತಿದ್ದೇನೆ. ಈ ರೀತಿ ನಾನು ನಿನಗೆ ಧರ್ಮದ
ಉಪದೇಶವನ್ನು ಮಾಡುವುದು ಅವಶ್ಯವಾಗಿಯೂ ಧೂರ್ತತನವೇ
ಸರಿ.”

12139078 ವಿಶ್ವಾಮಿತ್ರ ಉವಾಚ।
12139078a ಪಿಬಂತ್ಯೇವೋದಕಂ ಗಾವೋ ಮಂಡೂಕೇಷು ರುವತ್ಸ್ವಪಿ।
12139078c ನ ತೇऽಧಿಕಾರೋ ಧರ್ಮೇऽಸ್ತಿ ಮಾ ಭೂರಾತ್ಮಪ್ರಶಂಸಕಃ॥

ವಿಶ್ವಾಮಿತ್ರನು ಹೇಳಿದನು: “ಕಪ್ಪೆಗಳು ಗೊಟರುಹಾಕುತ್ತಿದ್ದರೂ
ಗೋವುಗಳು ಕೆರೆಯಲ್ಲಿ ನೀರನ್ನು ಕುಡಿಯುತ್ತವೆ. ಧರ್ಮೋಪದೇಶವನ್ನು
ಮಾಡುವ ಯಾವ ಅಧಿಕಾರವೂ ನಿನಗಿಲ್ಲ. ಆದುದರಿಂದ ನೀನು
ನಿನ್ನದೇ ಪ್ರಶಂಸೆಯನ್ನು ಮಾಡಿಕೊಳ್ಳಬೇಡ!”

12139079 ಶ್ವಪಚ ಉವಾಚ|

12139079a ಸುಹೃದ್ ಭೂತ್ವಾನುಶಾಸ್ಮಿ ತ್ವಾ ಕೃಪಾ ಹಿ ತ್ವಯಿ ಮೇ ದ್ವಿಜ|
12139079c ತದೇವಂ ಶ್ರೇಯ ಆಧತ್ಸ್ವ ಮಾ ಲೋಭಾಚ್ಚ್ವನಮಾದಿಥಾಃ||

ಶ್ವಪಚನು ಹೇಳಿದನು: "ದ್ವಿಜ! ನಾನು ನಿನ್ನ ಹಿತೈಷೀ ಮತ್ತು ಸ್ನೇಹಿತನಾಗಿ ನಿನಗೆ ಈ ಧರ್ಮಾಚರಣೆಯ ಸಲಹೆಯನ್ನು ನೀಡುತ್ತಿದ್ದೇನೆ. ಏಕೆಂದರೆ ನನಗೆ ನಿನ್ನಮೇಲೆ ದಯೆಯುಂಟಾಗಿದೆ. ಈ ಕಲ್ಯಾಣಕಾರೀ ಮಾತನ್ನು ಸ್ವೀಕರಿಸು. ಲೋಭದಿಂದ ಈ ನಾಯಿಯ ಮಾಂಸವನ್ನು ಕೊಂಡೊಯ್ಯಬೇಡ."

12139080 ವಿಶ್ವಾಮಿತ್ರ ಉವಾಚ|

12139080a ಸುಹೃನ್ಮೇ ತ್ವಂ ಸುಖೇಪ್ಸುಶ್ಚೇದಾಪದೋ ಮಾಂ ಸಮುದ್ಧರ|
12139080c ಜಾನೇಽಹಂ ಧರ್ಮತೋಽತ್ಮಾನಂ ಶ್ವಾನೀಮುತ್ಸೃಜ ಜಾಘನೀಮ್||

ವಿಶ್ವಾಮಿತ್ರನು ಹೇಳಿದನು: "ನೀನು ನನ್ನ ಸ್ನೇಹಿತನಾಗಿದ್ದರೆ ಮತ್ತು ನನಗೆ ಸುಖವನ್ನು ನೀಡಲು ಬಯಸಿದ್ದರೆ ಈ ಆಪತ್ತಿನಿಂದ ನನ್ನನ್ನು ಉದ್ಧರಿಸು. ನಾನು ನನ್ನ ಧರ್ಮವನ್ನು ಅರಿತಿದ್ದೇನೆ. ನೀನು ಈ ನಾಯಿಯ ಮೊಣಕಾಲ ಭಾಗವನ್ನು ನನಗೆ ಕೊಟ್ಟುಬಿಡು. ಸಾಕು."

12139081 ಶ್ವಪಚ ಉವಾಚ|

12139081a ನೈವೋತ್ಸಹೇ ಭವತೇ ದಾತುಮೇತಾಂ
ನೋಪೇಕ್ಷಿತುಂ ಹ್ರಿಯಮಾಣಂ ಸ್ವಮನ್ನಮ್|
12139081c ಉಭೌ ಸ್ಯಾವಃ ಸ್ವಮಲೇನಾವಲಿಪ್ತೌ
ದಾತಾಹಂ ಚ ತ್ವಂ ಚ ವಿಪ್ರ ಪ್ರತೀಚ್ಚನ್||

ಶ್ವಪಚನು ಹೇಳಿದನು: "ಈ ಅಭಕ್ಷ್ಯವಸ್ತುವನ್ನು ನಿನಗೆ ಕೊಡಲು

ಬಯಸುವುದಿಲ್ಲ ಮತ್ತು ನೀನು ಈ ಅನ್ನವನ್ನು ಅಪಹರಿಸುವುದನ್ನೂ ಉಪೇಕ್ಷಿಸುವುದಿಲ್ಲ. ಇದನ್ನು ನೀಡುವ ನಾನು ಮತ್ತು ತೆಗೆದುಕೊಳ್ಳುವ ಬ್ರಾಹ್ಮಣ ನೀನು ಇಬ್ಬರೂ ಪಾಪಲಿಪ್ತರಾಗಿ ನರಕದಲ್ಲಿ ಬೀಳುತ್ತೇವೆ.”

12139082 ವಿಶ್ವಾಮಿತ್ರ ಉವಾಚ|
12139082a ಅದ್ಯಾಹಮೇತದ್ವ್ಯಜಿನಂ ಕರ್ಮ ಕೃತ್ವಾ
ಜೀವಂಶ್ಚರಿಷ್ಯಾಮಿ ಮಹಾಪವಿತ್ರಮ್|
12139082c ಪ್ರಪೂತಾತ್ಮಾ ಧರ್ಮಮೇವಾಭಿಪತ್ಸ್ಯೇ
ಯದೇತಯೋರ್ಗುರು ತದ್ವ್ಯೆ ಬ್ರವೀಹಿ||

ವಿಶ್ವಾಮಿತ್ರನು ಹೇಳಿದನು: “ಇಂದು ನಾನು ಈ ಪಾಪಕರ್ಮವನ್ನು ಮಾಡಿಯೂ ಜೀವಿತನಾಗಿ ಉಳಿದರೆ ಪರಮ ಪವಿತ್ರ ಧರ್ಮದ ಅನುಷ್ಠಾನವನ್ನು ಮಾಡುತ್ತೇನೆ. ಅದರಿಂದ ನನ್ನ ತನುಮನಗಳು ಪವಿತ್ರವಾಗುವವು ಮತ್ತು ನಾನು ಧರ್ಮದ ಫಲವನ್ನೇ ಪಡೆದುಕೊಳ್ಳುತ್ತೇನೆ. ಜೀವಿತನಾಗಿದ್ದು ಧರ್ಮಾಚರಣೆಯನ್ನು ಮಾಡುವುದು ಮತ್ತು ಉಪವಾಸ ಮಾಡಿ ಪ್ರಾಣವನ್ನು ಕೊಡುವುದು – ಈ ಎರಡರಲ್ಲಿ ಯಾವುದು ದೊಡ್ಡದು ಎನ್ನುವುದನ್ನು ನನಗೆ ಹೇಳು.”

12139083 ಶ್ವಪಚ ಉವಾಚ|
12139083a ಆತ್ಮೈವ ಸಾಕ್ಷೀ ಕಿಲ ಲೋಕಕೃತ್ಯೇ[649]
ತ್ವಮೇವ ಜಾನಾಸಿ ಯದತ್ರ ದುಷ್ಟಮ್|
12139083c ಯೋ ಹ್ಯಾದ್ರಿಯೇದ್ ಭಕ್ಷ್ಯಮಿತಿ ಶ್ವಮಾಂಸಂ
ಮನ್ಯೇ ನ ತಸ್ಯಾಸ್ತಿ ವಿವರ್ಜನೀಯಮ್||

[649] ಕುಲಧರ್ಮಕೃತ್ಯೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಶ್ವಪಚನು ಹೇಳಿದನು: “ಯಾವ ಜನರಿಗೆ ಯಾವ ಕಾರ್ಯವು ಧರ್ಮ
ಎನ್ನುವುದಕ್ಕೆ ಆತ್ಮವೇ ಸಾಕ್ಷಿಯು. ಈ ಅಭಕ್ಷ್ಯವನ್ನು
ತಿನ್ನುವುದರಲ್ಲಿರುವ ಪಾಪವನ್ನು ನೀನೂ ಕೂಡ ತಿಳಿದಿದ್ದೀಯೆ. ನನ್ನ
ಅನಿಸಿಕೆಯಂತೆ ನಾಯಿಯ ಮಾಂಸವನ್ನು ಭಕ್ಷಣೀಯ ಎಂದು
ಆದರಿಸುವವನಿಗೆ ಸಂಸಾರದಲ್ಲಿ ಯಾವುದೂ ತ್ಯಾಜ್ಯವಿಲ್ಲ.”

12139084 ವಿಶ್ವಾಮಿತ್ರ ಉವಾಚ|
12139084a ಉಪಾದಾನೇ ಖಾದನೇ ವಾಸ್ಯ ದೋಷಃ
ಕಾರ್ಯೋ ನ್ಯಾಯ್ಯೈರ್ನಿತ್ಯಮತ್ರಾಪವಾದಃ|
12139084c ಯಸ್ಮಿನ್ನ ಹಿಂಸಾ ನಾನೃತೇ ವಾಕ್ಯಲೇಶೋ
ಭಕ್ಷ್ಯಕ್ರಿಯಾ ತತ್ರ ನ ತದ್ ಗರೀಯಃ||

ವಿಶ್ವಾಮಿತ್ರನು ಹೇಳಿದನು: “ನಿನ್ನಿಂದ ದಾನವನ್ನು ಸ್ವೀಕರಿಸುವುದು
ಮತ್ತು ಅಭಕ್ಷ್ಯ ವಸ್ತುವನ್ನು ತಿನ್ನುವುದು ಇವೆರಡೂ
ದೋಷಯುಕ್ತವಾದುದು ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೂ
ತಿನ್ನದೇ ಇರುವುದರಿಂದ ಪ್ರಾಣಹೋಗುವ ಸಂಭವವಿರುವಾಗ ಈ
ವಿಷಯದಲ್ಲಿ ಶಾಸ್ತ್ರಗಳಲ್ಲಿ ಸದಾ ಅಪವಾದ ವಚನಗಳೇ
ದೊರೆಯುತ್ತವೆ. ಇದರಲ್ಲಿ ಹಿಂಸೆ ಮತು ಅಸತ್ಯದ ದೋಷಗಳಂತೂ
ಇಲ್ಲವೇ ಇಲ್ಲ ಮತ್ತು ಲೇಶಮಾತ್ರ ನಿಂದಾರೂಪ ದೋಷವಿದೆ.
ಪ್ರಾಣಹೋಗುವ ಸಮಯದಲ್ಲಿಯೂ ಅಭಕ್ಷ್ಯ-ಭಕ್ಷಣವನ್ನು ನಿಷೇಧಿಸುವ
ಮಾತು ಆದರಣೀಯವಲ್ಲ.”

12139085 ಶ್ವಪಚ ಉವಾಚ|
12139085a ಯದ್ಯೇಷ ಹೇತುಸ್ತವ ಖಾದನಸ್ಯ
ನ ತೇ ವೇದಃ ಕಾರಣಂ ನಾನ್ಯಧರ್ಮಃ|

12139085c ತಸ್ಮಾದಭಕ್ಷ್ಯೇ ಭಕ್ಷಣಾದ್ವಾ ದ್ವಿಜೇಂದ್ರ
ದೋಷಂ ನ ಪಶ್ಯಾಮಿ ಯಥೇದಮಾತ್ಥ॥

ಶ್ವಪಚನು ಹೇಳಿದನು: "ದ್ವಿಜೇಂದ್ರ! ಈ ಅಭಕ್ಷ್ಯವನ್ನು ತಿನ್ನುವುದಕ್ಕಿಂತ ನಿನಗೆ ಪ್ರಾಣರಕ್ಷಣೆಯೇ ಪ್ರಧಾನವಾದರೆ ನಿನಗೆ ವೇದಗಳು ಪ್ರಮಾಣವಲ್ಲವೆಂದೂ ಶ್ರೇಷ್ಠ ಪುರುಷರ ಆಚರಣೆಯು ಧರ್ಮವಲ್ಲವೆಂದೂ ಆದಂತಾಯಿತು. ಆದುದರಿಂದ ನಾನು ನಿನಗೋಕ್ಷರ ಭಕ್ಷ್ಯವಸ್ತುವನ್ನು ತಿನ್ನದೇ ಇರುವುದರಿಂದ ಅಥವಾ ಅಭಕ್ಷ್ಯ ವಸ್ತುವನ್ನು ತಿನ್ನುವುದರಿಂದ ಯಾವ ದೋಷವನ್ನೂ ಕಾಣುತ್ತಿಲ್ಲ. ಇಲ್ಲಿ ಈ ಮಾಂಸಕ್ಕಾಗಿ ನಿನ್ನ ಮಹಾ ಆಗ್ರಹವನ್ನು ನೋಡಿದ್ದೇನೆ."

12139086 ವಿಶ್ವಾಮಿತ್ರ ಉವಾಚ|
12139086a ನ ಪಾತಕಂ ಭಕ್ಷಣಮಸ್ಯ ದೃಷ್ಟಂ
ಸುರಾಂ ಪೀತ್ವಾ ಪತತೀತೀಹ ಶಬ್ದಃ|
12139086c ಅನ್ಯೋನ್ಯಕರ್ಮಾಣಿ ತಥಾ ತಥೈವ
ನ ಲೇಶಮಾತ್ರೇಣ ಕೃತ್ಯಂ ಹಿನಸ್ತಿ॥

ವಿಶ್ವಾಮಿತ್ರನು ಹೇಳಿದನು: "ಅಭಕ್ಷ್ಯ ವಸ್ತುವನ್ನು ತಿನ್ನುವುದರಿಂದ ಬ್ರಹ್ಮಹತ್ಯಾದಿ ಮಹಾ ಪಾತಕಗಳು ತಗಲುತ್ತವೆ ಎಂದು ಯಾವ ಶಾಸ್ತ್ರವಚನವೂ ಇಲ್ಲ. ಮದ್ಯಸೇವನೆಯಿಂದ ಬ್ರಾಹ್ಮಣನು ಪತಿತನಾಗುತ್ತಾನೆ ಎಂಬ ಶಾಸ್ತ್ರವಾಕ್ಯವು ಸ್ಪಷ್ಟವಾಗಿದೆ ಹೌದು. ಆದುದರಿಂದ ಬ್ರಾಹ್ಮಣರಿಗೆ ಸುರಾಪಾನವು ಅವಶ್ಯ ತ್ಯಾಜ್ಯವು. ಇತರ ಕರ್ಮಗಳು ಹೇಗೆ ನಿಷಿದ್ಧವೋ ಹಾಗೆ ಅಭಕ್ಷ್ಯ-ಭಕ್ಷಣವೂ ನಿಷಿದ್ಧವೇ. ಆಪತ್ತಿನ ಸಮಯದಲ್ಲಿ ಒಂದು ಸಲ ಮಾಡಿದ ಯಾವುದೇ ಸಾಮಾನ್ಯ ಪಾಪವು ಅವನು ಆಜೀವನ ಪರ್ಯಂತ ಮಾಡಿದ ಪುಣ್ಯಕರ್ಮಗಳನ್ನು

ನಾಶಗೊಳಿಸುವುದಿಲ್ಲ.”

12139087 ಶ್ವಪಚ ಉವಾಚ|
12139087a ಅಸ್ಥಾನತೋ ಹೀನತಃ ಕುತ್ಸಿತಾದ್ವಾ
ತಂ ವಿದ್ವಾಂಸಂ ಬಾಧತೇ ಸಾಧುವೃತ್ತಮ್|
12139087c ಸ್ಥಾನಂ ಪುನರ್ಯೋ ಲಭತೇ ನಿಷಂಗಾತ್
ತೇನಾಪಿ ದಂಡಃ ಸಹಿತವ್ಯ ಏವ||

ಶ್ವಪಚನು ಹೇಳಿದನು: “ಅಯೋಗ್ಯ ಸ್ಥಾನದಲ್ಲಿದ್ದುಕೊಂಡು ಅನುಚಿತ ಕರ್ಮವನ್ನು ಮಾಡುವ ಹಾಗೂ ನಿಂದಿತ ಪುರುಷನಿಂದ ನಿಷಿದ್ಧ ವಸ್ತುವನ್ನು ತೆಗೆದುಕೊಳ್ಳುವ ವಿದ್ವಾಂಸನಿಗೆ ಅವನ ಸದಾಚಾರವೇ ಹಾಗೆ ಮಾಡುವುದನ್ನು ತಡೆಯುತ್ತದೆ. ಆದರೆ ಯಾರು ಪುನಃ ಪುನಃ ಅತ್ಯಂತ ಆಗ್ರಹದಿಂದ ನಾಯಿಯ ಮಾಂಸವನ್ನು ಸ್ವೀಕರಿಸುತ್ತಾನೋ ಅವನಿಗೇ ಅದರ ದಂಡವನ್ನೂ ಸಹಿಸಬೇಕಾಗುತ್ತದೆ.””

12139088 ಭೀಷ್ಮ ಉವಾಚ|
12139088a ಏವಮುಕ್ತ್ವಾ ನಿವವೃತೇ ಮಾತಂಗಃ ಕೌಶಿಕಂ ತದಾ|
12139088c ವಿಶ್ವಾಮಿತ್ರೋ ಜಹಾರ್ಯೈವ ಕೃತಬುದ್ಧಿಃ ಶ್ವಜಾಘನೀಮ್||

ಭೀಷ್ಮನು ಹೇಳಿದನು: “ಹೀಗೆ ಹೇಳಿ ಮಾತಂಗನು ಕೌಶಿಕನನ್ನು ತಡೆಯುವುದರಿಂದ ಹಿಂದೆಸರಿದನು. ವಿಶ್ವಾಮಿತ್ರನು ನಾಯಿಯ ಮೊಣಕಾಲಭಾಗವನ್ನು ತೆಗೆದುಕೊಂಡು ಹೋಗುವ ನಿಶ್ಚಯವನ್ನು ಮಾಡಿಬಿಟ್ಟಿದ್ದನು.

12139089a ತತೋ ಜಗ್ರಾಹ ಪಂಚಾಂಗೀಂ[650] ಜೀವಿತಾರ್ಥೀ ಮಹಾಮುನಿಃ|
12139089c ಸದಾರಸ್ತಾಮುಪಾಕೃತ್ಯ ವನೇ ಯಾತೋ ಮಹಾಮುನಿಃ||

ಜೀವಿತಾರ್ಥಿಯಾದ ಮಹಾಮುನಿಯು ಆ ಮಾಂಸದ ತುಂಡನ್ನು
ತೆಗೆದುಕೊಂಡನು. ಪತ್ನಿಯೊಂದಿಗೆ ಅದನ್ನು ಸೇವಿಸಲು
ಮಹಾಮುನಿಯು ವನಕ್ಕೆ ತೆರಳಿದನು.

[651]12139090a ಏತಸ್ಮಿನ್ನೇವ ಕಾಲೇ ತು ಪ್ರವವರ್ಷಾಥ ವಾಸವಃ|
12139090c ಸಂಜೀವಯನ್ ಪ್ರಜಾಃ ಸರ್ವಾ ಜನಯಾಮಾಸ ಚೌಷಧೀಃ||

ಅದೇ ಸಮಯದಲ್ಲಿ ವಾಸವನು ಮಳೆಸುರಿಸಿದನು. ಪ್ರಜೆಗಳೆಲ್ಲವನ್ನೂ
ಸಂಜೀವನಗೊಳಿಸಿ ಔಷಧಿಗಳನ್ನೂ ಹುಟ್ಟಿಸಿದನು.

12139091a ವಿಶ್ವಾಮಿತ್ರೋಽಪಿ ಭಗವಾಂಸ್ತಪಸಾ ದಗ್ಧಕಿಲ್ಬಿಷಃ|
12139091c ಕಾಲೇನ ಮಹತಾ ಸಿದ್ಧಿಮವಾಪ ಪರಮಾದ್ಭುತಾಮ್||

ಭಗವಾನ್ ವಿಶ್ವಾಮಿತ್ರನೂ ಕೂಡ ತಪಸ್ಸಿನಿಂದ ಪಾಪಗಳನ್ನು ಸುಟ್ಟು
ಮಹಾ ಸಮಯದ ನಂತರ ಪರಮಾದ್ಭುತ ಸಿದ್ಧಿಯನ್ನು

---

[650] ಸ ಶ್ವಾಂಗಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[651] ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಮೂರು ಅಧಿಕ ಶ್ಲೋಕಗಳಿವೆ: ಅಥಾಸ್ಯ ಬುದ್ಧಿರಭವದ್ವಿಧಿನಾಹಂ ಸ್ವಜಾಘನೀಮ್| ಭಕ್ಷ್ಯಾಮಿ ಯಥಾಕಾಮಂ ಪೂರ್ವಂ ಸಂತರ್ಪ್ಯ ದೇವತಾಃ|| ತತೋಽಗ್ನಿಮುಪಸಂಹೃತ್ಯ ಬ್ರಾಹ್ಮೇಣ ವಿಧಿನಾ ಮುನಿಃ| ಐಂದ್ರಾಗ್ನೇಯೇನ ವಿಧಿನಾ ಚರುಂ ಶ್ರಪಯತ್ ಸ್ವಯಮ್|| ತತಃ ಸಮಾರಭತ್ಕರ್ಮ ದೈವಂ ಪಿತ್ರ್ಯಂಚ ಭಾರತ| ಆಹೂಯ ದೇವಾನಿಂದ್ರಾದೀನ್ ಭಾಗಂ ಭಾಗಂ ವಿಧಿಕ್ರಮಾತ್||

ಪಡೆದುಕೊಂಡನು.

[652]12139092a ಏವಂ ವಿದ್ವಾನದೀನಾತ್ಮಾ ವ್ಯಸನಸ್ಥೋ ಜಿಜೀವಿಷುಃ|
12139092c ಸರ್ವೋಪಾಯೈರುಪಾಯಜ್ಞೋ ದೀನಮಾತ್ಮಾನಮುದ್ಧರೇತ್||

ಹೀಗೆ ಸಂಕಟದಲ್ಲಿ ಬಿದ್ದು ಜೀವದ ರಕ್ಷಣೆಯನ್ನು ಬಯಸುವ ವಿದ್ವಾನನು ದೀನಚಿತ್ತನಾಗದೇ ಯಾವುದಾದರೂ ಉಪಾಯವನ್ನು ಹುಡುಕಬೇಕು ಮತ್ತು ಎಲ್ಲ ಉಪಾಯಗಳಿಂದ ತನ್ನನ್ನು ತಾನು ಆಪತ್ಕಾಲದಿಂದ ಉದ್ಧರಿಸಿಕೊಳ್ಳಬೇಕು.

12139093a ಏತಾಂ ಬುದ್ಧಿಂ ಸಮಾಸ್ಥಾಯ ಜೀವಿತವ್ಯಂ ಸದಾ ಭವೇತ್|
12139093c ಜೀವನ್ಪುಣ್ಯಮವಾಪ್ನೋತಿ ನರೋ ಭದ್ರಾಣಿ ಪಶ್ಯತಿ||

ಈ ಬುದ್ಧಿಯನ್ನು ಆಶ್ರಯಿಸಿ ಜೀವಿತವಾಗಿರಲು ಪ್ರಯತ್ನಿಸಬೇಕು. ಏಕೆಂದರೆ ಜೀವಿತವಾಗಿರುವ ಪುರುಷನು ಪುಣ್ಯ ಮಾಡುವ ಅವಕಾಶವನ್ನು ಪಡೆದುಕೊಳ್ಳುತ್ತಾನೆ ಮತ್ತು ಕಲ್ಯಾಣದ ಭಾಗಿಯಾಗುತ್ತಾನೆ.

12139094a ತಸ್ಮಾತ್ತ್ವಂತೇಯ ವಿದುಷಾ ಧರ್ಮಾಧರ್ಮವಿನಿಶ್ಚಯೇ|
12139094c ಬುದ್ಧಿಮಾಸ್ಥಾಯ ಲೋಕೇಽಸ್ಮಿನ್ವರ್ತಿತವ್ಯಂ ಯತಾತ್ಮನಾ||

ಕೌಂತೇಯ! ಆದುದರಿಂದ ತನ್ನ ಮನಸ್ಸನ್ನು ವಶದಲ್ಲಿರಿಸಿಕೊಂಡಿರುವ ವಿದ್ವಾನನು ಈ ಜಗತ್ತಿನಲ್ಲಿ ಧರ್ಮ ಮತ್ತು ಅಧರ್ಮಗಳ

---

652 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ಸ ಸಂಹೃತ್ಯ ಚ ತತ್ಕರ್ಮ ಅನಾಸ್ವಾಧ್ಯ ಚ ದದ್ದವಿಃ| ತೋಷಯಾಮಾಸ ದೇವಾಂಶ್ಚ ಪಿತೄಂಶ್ಚ ದ್ವಿಜಸತ್ತಮಃ||

ನಿರ್ಣಯವನ್ನು ಮಾಡಲು ತನ್ನದೇ ವಿಶುದ್ಧ ಬುದ್ಧಿಯನ್ನು ಆಶ್ರಯಿಸಿ ಯಥಾಯೋಗ್ಯವಾಗಿ ನಡೆದುಕೊಳ್ಳಬೇಕು.”

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ವಿಶ್ವಾಮಿತ್ರಶ್ವಪಚಸಂವಾದೇ
ಏಕೋನಚತ್ವಾರಿಂಶದಧಿಕಶತತಮೋऽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ವಿಶ್ವಾಮಿತ್ರಶ್ವಪಚಸಂವಾದ ಎನ್ನುವ
ನೂರಾಮೂವತ್ತೊಂಭತ್ತನೇ ಅಧ್ಯಾಯವು.

೧೪೦

ಆಪತ್ಕಾಲದಲ್ಲಿ ರಾಜನ ಧರ್ಮನಿಶ್ಚಯ ಮತ್ತು ಉತ್ತಮ ಬ್ರಾಹ್ಮಣರ ಸೇವೆಯ ಆದೇಶ (1-37).

12140001 ಯುಧಿಷ್ಠಿರ ಉವಾಚ|
12140001a ಯದಿದಂ ಘೋರಮುದ್ದಿಷ್ಟಮಶ್ರದ್ಧೇಯಮಿವಾನೃತಮ್|
12140001c ಅಸ್ತಿ ಸ್ವಿದ್ದಸ್ಯುಮರ್ಯಾದಾ ಯಾಮಹಂ ಪರಿವರ್ಜಯೇ||

ಯುಧಿಷ್ಠಿರನು ಹೇಳಿದನು: “ಮಹಾಪುರುಷರಿಗೇ ಇಂತಹ ಭಯಂಕರ ಕರ್ಮವನ್ನು ಸಂಕಟಕಾಲದಲ್ಲಿ ಕರ್ತವ್ಯವೆಂದು ವಿಹಿಸಿರುವಾಗ ದುರಾಚಾರೀ ದಸ್ಯುಗಳ ದುಷ್ಕರ್ಮಗಳಿಗೆ ಯಾವ ಸೀಮೆಯು ಉಳಿದುಕೊಂಡಿದೆ? ಯಾವುದನ್ನು ನಾನು ಸದಾ ಪರಿತ್ಯಜಿಸಬೇಕು?

12140002a ಸಂಮುಹ್ಯಾಮಿ ವಿಷೀದಾಮಿ ಧರ್ಮೋ ಮೇ ಶಿಥಿಲೀಕೃತಃ|
12140002c ಉದ್ಯಮಂ ನಾಧಿಗಚ್ಛಾಮಿ ಕುತಶ್ಚಿತ್ ಪರಿಚಿಂತಯನ್||

ನಿನ್ನಿಂದ ಈ ಉಪಾಖ್ಯಾನವನ್ನು ಕೇಳಿ ನಾನು ಮೋಹಿತನೂ ವಿಷಾದಗ್ರಸ್ತನೂ ಆಗಿದ್ದೇನೆ. ನೀನು ನನ್ನಲ್ಲಿರುವ ಧರ್ಮವಿಷಯಕ ಉತ್ಸಾಹವನ್ನು ಶಿಥಿಲಮಾಡಿಬಿಟ್ಟೆ! ಎಷ್ಟೇ ಆಲೋಚಿಸಿದರೂ ನನಗೆ ಧರ್ಮದ ಕುರಿತಾದ ಉತ್ಸಾಹವನ್ನು ಪಡೆದುಕೊಳ್ಳಲಾಗುತ್ತಿಲ್ಲ.”

12140003 ಭೀಷ್ಮ ಉವಾಚ|
12140003a ನೈತಚ್ಚುದ್ಧಾಗಮಾದೇವ[653] ತವ ಧರ್ಮಾನುಶಾಸನಮ್|
12140003c ಪ್ರಜ್ಞಾಸಮವತಾರೋಽಯಂ ಕವಿಭಿಃ ಸಂಭೃತಂ ಮಧು||

ಭೀಷ್ಮನು ಹೇಳಿದನು: “ನಾನು ಕೇವಲ ಆಗಮಗಳನ್ನು ಕೇಳಿ ನಿನಗೆ ಧರ್ಮಾನುಶಾಸನವನ್ನು ನೀಡುತ್ತಿಲ್ಲ. ದುಂಬಿಗಳು ಅನೇಕ ಸ್ಥಳಗಳಿಂದ ಅನೇಕ ಹೂವುಗಳಿಂದ ರಸವನ್ನು ಸಂಗ್ರಹಿಸುವಂತೆ ವಿದ್ವಾಂಸರು ಇಲ್ಲಿ ನಾನಾ ಪ್ರಕಾರದ ಬುದ್ಧಿ-ವಿಚಾರಗಳ ಸಂಕಲನವನ್ನು ಮಾಡಿದ್ದಾರೆ.

12140004a ಬಹ್ವ್ಯಃ ಪ್ರತಿವಿಧಾತವ್ಯಾಃ ಪ್ರಜ್ಞಾ ರಾಜ್ಞಾ ತತಸ್ತತಃ|
12140004c ನೈಕಶಾಖೇನ ಧರ್ಮೇಣ ಯಾತ್ರೈಷಾ ಸಂಪ್ರವರ್ತತೇ||

ರಾಜನಾದವನು ಬೇರೆ ಬೇರೆ ಕಡೆಗಳಿಂದ ಮತ್ತು ನಾನಾ ತರಹದ ಮನುಷ್ಯರಿಂದ ಭಿನ್ನ ಭಿನ್ನ ಪ್ರಕಾರದ ಬುದ್ಧಿಗಳನ್ನು ಕಲಿಯಬೇಕು. ಅವನು ಒಂದೇ ಒಂದು ಶಾಖೆಯ ಧರ್ಮವನ್ನು ಹಿಡಿದು ಕುಳಿತುಕೊಳ್ಳಬಾರದು. ಯಾವ ರಾಜನಲ್ಲಿ ಸಂಕಟದ ಸಮಯದಲ್ಲಿ ಈ ಬುದ್ಧಿಯು ಸ್ಫುರಿತಗೊಳ್ಳುವುದೋ ಅವನು ಆತ್ಮರಕ್ಷಣೆಗಾಗಿ

[653] ನೈತಚ್ಛೃತ್ವಾಗಮಾऽऽಗಮಾದೇವ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಯಾವುದಾದರೂ ಉಪಾಯವನ್ನು ಹುಡುಕಿಕೊಳ್ಳುತ್ತಾನೆ.

12140005a ಬುದ್ಧಿಸಂಜನನಂ ರಾಜ್ಞಾಂ ಧರ್ಮಮಾಚರತಾಂ ಸದಾ|
12140005c ಜಯೋ ಭವತಿ ಕೌರವ್ಯ ತದಾ ತದ್ವಿದ್ಧಿ ಮೇ ವಚಃ||

ಕೌರವ್ಯ! ಧರ್ಮ ಮತ್ತು ಸತ್ಪುರುಷರ ಆಚಾರ – ಬುದ್ಧಿಯಿಂದಲೇ ಪ್ರಕಟವಾಗುತ್ತವೆ ಮತ್ತು ಸದಾ ಅದರಿಂದಲೇ ತಿಳಿಯುತ್ತದೆ. ನನ್ನ ಈ ಮಾತನ್ನು ನೀನು ಚೆನ್ನಾಗಿ ಅರ್ಥಮಾಡಿಕೋ.

12140006a ಬುದ್ಧಿಶ್ರೇಷ್ಠಾ ಹಿ ರಾಜಾನೋ ಜಯಂತಿ ವಿಜಯೈಷಿಣಃ|
12140006c ಧರ್ಮಃ ಪ್ರತಿವಿಧಾತವ್ಯೋ ಬುದ್ಧ್ಯಾ ರಾಜ್ಞಾ ತತಸ್ತತಃ||

ಏಕೆಂದರೆ ವಿಜಯದಲ್ಲಿ ಅಭಿಲಾಷೆಯನ್ನಿಟ್ಟಿರುವ ರಾಜರಿಗೆ ಶ್ರೇಷ್ಠ ಬುದ್ಧಿಯೇ ಜಯವನ್ನು ನೀಡುತ್ತದೆ. ರಾಜನಾದವನು ಇಲ್ಲಿ-ಅಲ್ಲಿಂದ ಬುದ್ಧಿಶಿಕ್ಷಣವನ್ನು ಪಡೆದುಕೊಂಡು ಧರ್ಮವನ್ನು ಚೆನ್ನಾಗಿ ಆಚರಿಸಬೇಕು.

12140007a ನೈಕಶಾಖೇನ ಧರ್ಮೇಣ ರಾಜ್ಞಾಂ ಧರ್ಮೋ ವಿಧೀಯತೇ|
12140007c ದುರ್ಬಲಸ್ಯ ಕುತಃ ಪ್ರಜ್ಞಾ ಪುರಸ್ತಾದನುದಾಹೃತಾ||

ಒಂದೇ ಶಾಖೆಯ ಧರ್ಮದಿಂದ ರಾಜನ ಧರ್ಮವು ನಿರ್ವಹಿಸುವುದಿಲ್ಲ. ಒಂದೇ ಶಾಖೆಯ ಬುದ್ಧಿಯ ಶಿಕ್ಷಣವನ್ನು ಪಡೆದ ದುರ್ಬಲ ರಾಜನಿಗೆ ಪೂರ್ಣ ಪ್ರಜ್ಞೆಯು ಹೇಗೆ ತಾನೇ ಬರುತ್ತದೆ?

12140008a ಅದ್ವೈಧಜ್ಞಃ ಪಥಿ ದ್ವೈಧೇ ಸಂಶಯಂ ಪ್ರಾಪ್ತುಮರ್ಹತಿ|
12140008c ಬುದ್ಧಿದ್ವೈಧಂ ವೇದಿತವ್ಯಂ ಪುರಸ್ತಾದೇವ ಭಾರತ||

ಭಾರತ! ಒಂದೇ ಧರ್ಮ ಅಥವಾ ಕರ್ಮವು ಒಂದು ಸಮಯದಲ್ಲಿ

ಧರ್ಮವೆನಿಸಿಕೊಳ್ಳುತ್ತದೆ ಮತ್ತು ಇನ್ನೊಂದು ಸಮಯದಲ್ಲಿ ಅಧರ್ಮವೆಂದೆನಿಸಿಕೊಳ್ಳುತ್ತದೆ. ಇದನ್ನು ದ್ವೈಧ ಎಂದು ಕರೆಯುತ್ತಾರೆ. ಈ ದ್ವೈಧವನ್ನು ತಿಳಿಯದವನು ದ್ವೈಧವನ್ನು ತಲುಪಿದಾಗ ಸಂಶಯಕ್ಕೊಳಗಾಗುತ್ತಾನೆ. ಆದುದರಿಂದ ಬುದ್ಧಿಯ ಮೂಲಕ ಈ ದ್ವೈಧವನ್ನು ಮೊದಲೇ ತಿಳಿದುಕೊಂಡಿರಬೇಕು.

12140009a ಪಾರ್ಶ್ವತಃಕರಣಂ ಪ್ರಜ್ಞಾ ವಿಷೂಚೀ ತ್ವಾಪಗಾ ಇವ[654]|
12140009c ಜನಸ್ತೂಚ್ಚಾರಿತಂ ಧರ್ಮಂ ವಿಜಾನಾತ್ಯನ್ಯಥಾನ್ಯಥಾ||

ಪ್ರಾಜ್ಞನು ಪ್ರತ್ಯೇಕ ಕಾರ್ಯಗಳನ್ನೂ ಗುಪ್ತವಾಗಿಯೇ ಪ್ರಾರಂಭಿಸಿ ನಂತರ ಅದನ್ನು ಸರ್ವತ್ರ ಪ್ರಕಾಶಗೊಳಿಸಬೇಕು. ಇಲ್ಲದಿದ್ದರೆ ಅವನು ಆಚರಿಸುವ ಧರ್ಮವನ್ನು ಜನರು ಅನ್ಯಥಾ ತಿಳಿದುಕೊಳ್ಳುತ್ತಾರೆ.

12140010a ಸಮ್ಯಗ್ವಿಜ್ಞಾನಿನಃ[655] ಕೇ ಚಿನ್ಮಿಥ್ಯಾವಿಜ್ಞಾನಿನೋಽಪರೇ|
12140010c ತದ್ವೈ ಯಥಾತಥಂ ಬುದ್ಧ್ವಾ ಜ್ಞಾನಮಾದದತೇ ಸತಾಮ್||

ಕೆಲವರು ಉತ್ತಮ ಜ್ಞಾನಿಗಳಾಗಿರುತ್ತಾರೆ ಮತ್ತು ಇನ್ನು ಕೆಲವರು ಮಿಥ್ಯ ಜ್ಞಾನಿಗಳಾಗಿರುತ್ತಾರೆ. ರಾಜನಾದವನು ಈ ವಿಷಯವನ್ನು ಚೆನ್ನಾಗಿ ತಿಳಿದುಕೊಂಡು ಸತ್ಯಜ್ಞಾನಸಂಪನ್ನ ಸತ್ಪುರುಷರಿಂದಲೇ ಜ್ಞಾನವನ್ನು ಪಡೆದುಕೊಳ್ಳಬೇಕು.

12140011a ಪರಿಮುಷ್ಣಂತಿ ಶಾಸ್ತ್ರಾಣಿ ಧರ್ಮಸ್ಯ ಪರಿಪಂಥಿನಃ|

---

654 ಪ್ರಾಜ್ಞೋ ವಿಷ್ಟಂಭಿತ್ವಾ ಪ್ರಕಾರಯೇತ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

655 ಅಮಿಥ್ಯಾಜ್ಞಾನಿನಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12140011c ವೈಷಮ್ಯಮರ್ಥವಿದ್ಯಾನಾಂ ನೈರರ್ಥ್ಯಾತ್[656] ಖ್ಯಾಪಯಂತಿ ತೇ॥

ಧರ್ಮದ್ರೋಹಿಗಳು ಶಾಸ್ತ್ರಗಳನ್ನು ಕೊಳ್ಳೆಹೊಡೆಯುತ್ತಾರೆ. ಅರ್ಥವಿದ್ಯೆಯ ವೈಷಮ್ಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಮಿಥ್ಯಪ್ರಚಾರ ಮಾಡುತ್ತಾರೆ.

12140012a ಆಜಿಜೀವಿಷವೋ ವಿದ್ಯಾಂ ಯಶಸ್ಕಾಮಾಃ ಸಮಂತತಃ|
12140012c ತೇ ಸರ್ವೇ ನರಪಾಪಿಷ್ಠಾ ಧರ್ಮಸ್ಯ ಪರಿಪಂಥಿನಃ॥

ಜೀವನ ಉದ್ಯೋಗಕ್ಕಾಗಿ ವಿದ್ಯೆಯನ್ನು ಕಲಿಯುವವರು, ಸರ್ವತ್ರ ಯಶಸ್ಸನ್ನು ಗಳಿಸಲು ವಿದ್ಯೆಯನ್ನು ಪಡೆದುಕೊಳ್ಳುವವರು ಮತ್ತು ಮನೋವಾಂಛಿತ ಪದಾರ್ಥಗಳನ್ನು ಪಡೆದುಕೊಳ್ಳಲು ವಿದ್ಯೆಯನ್ನು ಕಲಿಯುವವರು – ಅವರೆಲ್ಲರೂ ಪಾಪಿಷ್ಠ ನರರು ಮತ್ತು ಧರ್ಮದ್ರೋಹಿಗಳು.

12140013a ಅಪಕ್ವಮತಯೋ ಮಂದಾ ನ ಜಾನಂತಿ ಯಥಾತಥಮ್|
12140013c ಸದಾ ಹ್ಯಶಾಸ್ತ್ರಕುಶಲಾಃ ಸರ್ವತ್ರಾಪರಿನಿಷ್ಠಿತಾಃ॥

ಬುದ್ಧಿಯು ಪರಿಪಕ್ವವಾಗಿಲ್ಲದ ಮಂದಮತಿ ಜನರು ಯಥಾರ್ಥ ತತ್ತ್ವವನ್ನು ತಿಳಿಯಲಾರರು. ಶಾಸ್ತ್ರಜ್ಞಾನದಲ್ಲಿ ನಿಪುಣರಾಗಿರದೇ ಸರ್ವತ್ರ ಅಸಂಗತ ಯುಕ್ತಿಯನ್ನೇ ಅವರು ಅವಲಂಬಿಸಿರುತ್ತಾರೆ.

12140014a ಪರಿಮುಷ್ಣಂತಿ ಶಾಸ್ತ್ರಾಣಿ ಶಾಸ್ತ್ರದೋಷಾನುದರ್ಶಿನಃ|
12140014c ವಿಜ್ಞಾನಮಥ ವಿದ್ಯಾನಾಂ[657] ನ ಸಮ್ಯಗಿತಿ ವರ್ತತೇ॥

---

656 ನಿರರ್ಥಾಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

657 ವಿಜ್ಞಾನಮರ್ಥವಿದ್ಯಾನಾಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಯಾವಾಗಲೂ ಶಾಸ್ತ್ರಗಳಲ್ಲಿ ದೋಷವನ್ನೇ ಹುಡುಕುವ ಜನರು ಶಾಸ್ತ್ರಗಳ ಮರ್ಯಾದೆಯನ್ನು ಕದಿಯುತ್ತಾರೆ ಮತ್ತು ಈ ವಿಜ್ಞಾನ ವಿದ್ಯೆಯು ಉತ್ತಮವಾದುದಲ್ಲ ಎಂದೂ ಹೇಳುತ್ತಾರೆ.

12140015a ನಿಂದಯಾ ಪರವಿದ್ಯಾನಾಂ ಸ್ವಾಂ ವಿದ್ಯಾಂ ಖ್ಯಾಪಯಂತಿ ಯೇ|
12140015c ವಾಗಸ್ತ್ರಾ ವಾಕ್ಚುರೀಮತ್ತ್ವಾ ದುಗ್ಧವಿದ್ಯಾಫಲಾ ಇವ|

ಯಾರ ಮಾತೇ ಅಸ್ತ್ರವಾಗಿರುವುದೋ ಮತ್ತು ಯಾರ ಮಾತು ಬಾಣದಂತೆ ತಗಲುವುದೋ ಅವರು ವಿದ್ಯೆಯ ಫಲ ತತ್ತ್ವಜ್ಞಾನಕ್ಕೇ ವಿದ್ರೋಹಗೈಯುತ್ತಾರೆ. ಇಂಥಹ ಜನರು ಇನ್ನೊಬ್ಬರ ವಿದ್ಯೆಯನ್ನು ನಿಂದಿಸಿ ತಮ್ಮ ವಿದ್ಯೆಯ ಶ್ರೇಷ್ಠತೆಯನ್ನು ಮಿಥ್ಯವಾಗಿ ಪ್ರಚಾರಮಾಡುತ್ತಾರೆ.

12140015e ತಾನ್ವಿದ್ಯಾವಣಿಜೋ ವಿದ್ಧಿ ರಾಕ್ಷಸಾನಿವ ಭಾರತ||
12140016a ವ್ಯಾಜೇನ ಕೃತ್ಸ್ನೋ ವಿದಿತೋ ಧರ್ಮಸ್ತೇ ಪರಿಹಾಸ್ಯತೇ|

ಭಾರತ! ಇಂಥಹ ಜನರು ವಿದ್ಯೆಯನ್ನು ವ್ಯಾಪಾರಮಾಡುವವರು ಮತ್ತು ರಾಕ್ಷಸ ಸಮಾನ ಪರದ್ರೋಹಿಗಳು ಎಂದು ತಿಳಿದುಕೋ. ಅವರ ಆಡಂಬರಗಳಿಂದ ನೀನು ಸತ್ಪುರುಷರಿಂದ ಪ್ರತಿಪಾದಿಸಿದ ಆಚಾರ ಧರ್ಮಗಳು ನಷ್ಟವಾಗಿಬಿಡುತ್ತವೆ.

12140016c ನ ಧರ್ಮವಚನಂ ವಾಚಾ ನ ಬುದ್ಧ್ಯಾ ಚೇತಿ ನಃ ಶ್ರುತಮ್||
12140017a ಇತಿ ಬಾರ್ಹಸ್ಪತಂ ಜ್ಞಾನಂ ಪ್ರೋವಾಚ ಮಘವಾ ಸ್ವಯಮ್|

ಕೇವಲ ಮಾತಿನಿಂದ ಅಥವಾ ಕೇವಲ ಬುದ್ಧಿಯಿಂದ ಧರ್ಮದ ನಿಶ್ಚಯವಾಗುವುದಿಲ್ಲ ಎಂದು ನಾವು ಕೇಳಿದ್ದೇವೆ. ಶಾಸ್ತ್ರವಚನ ಮತ್ತು ತರ್ಕ ಇವೆರಡರ ಸಮುಚ್ಚಯದಿಂದ ಅದರ ನಿರ್ಣಯವಾಗುತ್ತದೆ.

ಇದೇ ಸ್ವಯಂ ಇಂದ್ರನು ಹೇಳಿದ ಬೃಹಸ್ಪತಿಯ ಮತ.

12140017c ನ ತ್ವೇವ ವಚನಂ ಕಿಂ ಚಿದನಿಮಿತ್ತಾದಿಹೋಚ್ಯತೇ॥
12140018a ಸ್ವವಿನೀತೇನ ಶಾಸ್ತ್ರೇಣ ವ್ಯವಸ್ಯಂತಿ ತಥಾಪರೇ|

ವಿದ್ವಾನ್ ಪುರುಷನು ಅಕಾರಣವಾಗಿ ಏನನ್ನೂ ಹೇಳುವುದಿಲ್ಲ ಮತ್ತು ಅನ್ಯ ಅನೇಕ ಜನರು ಚೆನ್ನಾಗಿ ಕಲಿತುಕೊಂಡ ಶಾಸ್ತ್ರದ ಅನುಸಾರವಾಗಿ ನಡೆದುಕೊಳ್ಳುವ ಪ್ರಯತ್ನವನ್ನೂ ಮಾಡುವುದಿಲ್ಲ.

12140018c ಲೋಕಯಾತ್ರಾಮಿಹೈಕೇ ತು ಧರ್ಮಮಾಹುರ್ಮನೀಷಿಣಃ॥
12140019a ಸಮುದ್ದಿಷ್ಟಂ ಸತಾಂ ಧರ್ಮಂ ಸ್ವಯಮೂಹೇನ್ನ ಪಂಡಿತಃ|

ಈ ಜಗತ್ತಿನಲ್ಲಿ ಕೆಲವು ಮನೀಷಿಗಳು ಶಿಷ್ಟ ಪುರುಷರು ನಡೆದುಕೊಳ್ಳುವ ರೀತಿಯನ್ನೇ ಧರ್ಮವೆಂದು ಹೇಳುತ್ತಾರೆ. ಆದರೆ ವಿದ್ವಾನ್ ಪುರುಷನು ಸ್ವಯಂ ತಾನೇ ಊಹಿಸಿಕೊಂಡು ಸತ್ಪುರುಷರ ಶಾಸ್ತ್ರವಿಹಿತ ಧರ್ಮವನ್ನು ನಿಶ್ಚಯಿಸಿಕೊಳ್ಳಬೇಕು.

12140019c ಅಮರ್ಷಾಚ್ಚಾಸ್ತ್ರಸಂಮೋಹಾದವಿಜ್ಞಾನಾಚ್ಚ ಭಾರತ॥
12140020a ಶಾಸ್ತ್ರಂ ಪ್ರಾಜ್ಞಸ್ಯ ವದತಃ ಸಮೂಹೇ ಯಾತ್ಯದರ್ಶನಮ್|

ಭಾರತ! ಬುದ್ಧಿವಂತನಾಗಿದ್ದರೂ ಶಾಸ್ತ್ರವನ್ನು ಸರಿಯಾಗಿ ತಿಳಿಯದೇ ಮೋಹಬದ್ಧನಾಗಿ ಶಾಸ್ತ್ರದ ಕುರಿತು ಜೋರಾಗಿ ಪ್ರವಚನ ಮಾಡುವುದರಿಂದ ಲೋಕಸಮಾಜದಲ್ಲಿ ಯಾವ ಪ್ರಭಾವವೂ ಬೀಳುವುದಿಲ್ಲ.

12140020c ಆಗತಾಗಮಯಾ ಬುದ್ಧ್ಯಾ ವಚನೇನ ಪ್ರಶಸ್ಯತೇ॥
12140021a ಅಜ್ಞಾನಾಜ್ಞಾನಹೇತುತ್ವಾದ್ವಚನಂ ಸಾಧು ಮನ್ಯತೇ|

ವೇದ-ಶಾಸ್ತ್ರಗಳು ಅನುಮೋದಿಸುವ ತರ್ಕಯುಕ್ತ ಬುದ್ಧಿಯ ಮಾತೇ ಜನರಿಗೆ ಮನದಟ್ಟಾಗುತ್ತದೆ. ಕೆಲವರು ತಿಳಿಯದೇ ಇದ್ದ ವಿಷಯವನ್ನು ತಿಳಿಯಲು ಕೇವಲ ತರ್ಕವೇ ಶ್ರೇಷ್ಠವೆಂದು ಅಭಿಪ್ರಾಯಪಡುತ್ತಾರೆ. ಆದರೆ ಇದು ಅವರ ಅಜ್ಞಾನವನ್ನು ತೋರಿಸುತ್ತದೆ.

12140021c ಅನಪಾಹತಮೇವೇದಂ ನೇದಂ ಶಾಸ್ತ್ರಮಪಾರ್ಥಕಮ್‌॥
12140022a ದೈತೇಯಾನುಶನಾಃ ಪ್ರಾಹ ಸಂಶಯಚ್ಛೇದನೇ ಪುರಾ|

ಕೇವಲ ತರ್ಕಕ್ಕೆ ಪ್ರಧಾನತೆಯನ್ನು ನೀಡಿ ಅಮುಕ ಯುಕ್ತಿಯಿಂದ ಶಾಸ್ತ್ರದ ಈ ಮಾತನ್ನು ಅಪಾರ್ಥಮಾಡಿಕೊಳ್ಳುತ್ತಾರೆ. ಈ ಸಂಶಯವನ್ನು ತೆಗೆದುಹಾಕುವುದಕ್ಕಾಗಿಯೇ ಹಿಂದೆ ಉಶನನು ದೈತ್ಯರಿಗೆ ಈ ಮಾತನ್ನು ಹೇಳಿದ್ದನು.

12140022c ಜ್ಞಾನಮವ್ಯಪದೇಶ್ಯಂ ಹಿ ಯಥಾ ನಾಸ್ತಿ ತಥೈವ ತತ್‌॥
12140023a ತೇನ ತ್ವಂ ಚಿನ್ನಮೂಲೇನ ಕಂ ತೋಷಯಿತುಮರ್ಹಸಿ|

ಸಂಶಯಾತ್ಮಕವಾದ ಜ್ಞಾನವು ಇದ್ದರೂ ಒಂದೇ ಮತ್ತು ಇಲ್ಲದಿದ್ದರೂ ಒಂದೇ. ಆದುದರಿಂದ ನೀನು ಆ ಸಂಶಯದ ಮೂಲವನ್ನೇ ಛೇದಿಸಿ ದೂರ ಎಸೆ.

12140023c ಅತಥ್ಯವಿಹಿತಂ ಯೋ ವಾ ನೇದಂ ವಾಕ್ಯಮುಪಾಶ್ನುಯಾತ್‌॥
12140024a ಉಗ್ರಾಯ್ಯೈವ ಹಿ ಸೃಷ್ಟೋಽಸಿ ಕರ್ಮಣೇ ನ ತ್ವವೇಕ್ಷಸೇ|

ನನ್ನ ಈ ನೀತಿಯುಕ್ತ ಮಾತುಗಳನ್ನು ನೀನು ಸ್ವೀಕರಿಸದೇ ಇದ್ದರೆ ಅದು ಉಚಿತವಲ್ಲ. ಏಕೆಂದರೆ ನೀನು ಉಗ್ರ ಕರ್ಮಕ್ಕಾಗಿಯೇ ವಿಧಾತನಿಂದ ಸೃಷ್ಟಿಸಲ್ಪಟ್ಟಿದ್ದೀಯೆ. ಈ ವಿಷಯದ ಕುರಿತು ನಿನ್ನ ದೃಷ್ಟಿಯು ಹಾಯುತ್ತಿಲ್ಲ.

12140024c ಅಂಗೇಮಾಮನ್ವವೇಕ್ಷಸ್ವ ರಾಜನೀತಿಂ ಬುಭೂಷಿತುಮ್|
12140024e ಯಯಾ ಪ್ರಮುಚ್ಯತೇ ತ್ವನ್ಯೋ ಯದರ್ಥಂ ಚ ಪ್ರಮೋದತೇ||

ನನ್ನ ಕಡೆ ನೋಡು! ನಾನು ಏನು ಮಾಡಿದ್ದೇನೆನ್ನುವುದನ್ನು ನೋಡು! ಭೂಮಂಡಲದ ರಾಜ್ಯವನ್ನು ಪಡೆದುಕೊಳ್ಳುವ ಇಚ್ಛೆಯಿದ್ದ ಕ್ಷತ್ರಿಯ ರಾಜರೊಂದಿಗೆ ನಾನು ಅವರು ಸಂಸಾರಬಂಧನದಿಂದ ಮುಕ್ತರಾಗುವಂತೆಯೇ ನಡೆದುಕೊಂಡಿದ್ದೇನೆ. ಆದರೂ ನನ್ನ ಈ ಕೃತ್ಯವನ್ನು ಇತರರು ಅನುಮೋದಿಸುತ್ತಿರಲಿಲ್ಲ. ನನ್ನನ್ನು ಕ್ರೂರಿ ಮತ್ತು ಹಿಂಸಕನೆಂದು ಕರೆಯುತ್ತಿದ್ದರು.

12140025a ಅಜೋಽಶ್ವಃ ಕ್ಷತ್ರಮಿತ್ಯೇತತ್ ಸದೃಶಂ ಬ್ರಹ್ಮಣಾ ಕೃತಮ್|
12140025c ತಸ್ಮಾನ್ನತೀಕ್ಷ್ಣಭೂತಾನಾಂ ಯಾತ್ರಾ ಕಾ ಚಿತ್ ಪ್ರಸಿಧ್ಯತಿ||

ಆಡು, ಕುದುರೆ ಮತ್ತು ಕ್ಷತ್ರಿಯ – ಈ ಮೂವರನ್ನೂ ಬ್ರಹ್ಮನು ಒಂದೇ ರೀತಿಯಲ್ಲಿ ಮಾಡಿದ್ದಾನೆ. ಇವುಗಳ ಮೂಲಕ ಸಮಸ್ತ ಪ್ರಾಣಿಗಳ ಪುನಃ ಪುನಃ ಯಾವುದಾದರೂ ಜೀವನಯಾತ್ರೆಯು ಸಿದ್ಧಿಯಾಗುತ್ತಿರುತ್ತದೆ.

12140026a ಯಸ್ತ್ವವಧ್ಯವಧೇ ದೋಷಃ ಸ ವಧ್ಯಸ್ಯಾವಧೇ ಸ್ಮೃತಃ|
12140026c ಏಷ್ಯೈವ ಖಲು ಮರ್ಯಾದಾ ಯಾಮಯಂ ಪರಿವರ್ಜಯೇತ್||

ಅವಧ್ಯನನ್ನು ವಧಿಸುವುದರಲ್ಲಿ ಯಾವ ದೋಷವಿದೆಯೆಂದು ಹೇಳುತ್ತಾರೋ ಅದೇ ವಧ್ಯನನ್ನು ವಧಿಸದೇ ಇರುವುದರಲ್ಲಿಯೂ ಇದೆ. ಆ ದೋಷವೇ ಅಕರ್ತವ್ಯದ ಮರ್ಯಾದೆಯು. ಇದನ್ನು ಕ್ಷತ್ರಿಯ ರಾಜನು ಪರಿತ್ಯಜಿಸಬಾರದು.

12140027a ತಸ್ಮಾತ್ತೀಕ್ಷ್ಣಃ ಪ್ರಜಾ ರಾಜಾ ಸ್ವಧರ್ಮೇ ಸ್ಥಾಪಯೇದುತ|
12140027c ಅನ್ಯೋನ್ಯಂ ಭಕ್ಷಯಂತೋ ಹಿ ಪ್ರಚರೇಯುರ್ವ್ಯಕಾ ಇವ||

ಆದುದರಿಂದ ತೀಕ್ಷ್ಣಸ್ವಭಾವದ ರಾಜನೇ ಪ್ರಜೆಗಳನ್ನು ಅವರವರ ಧರ್ಮಗಳಲ್ಲಿ ಸ್ಥಾಪಿತಗೊಳಿಸಬಲ್ಲನು. ಅನ್ಯಥಾ ಪ್ರಜಾವರ್ಗದ ಸರ್ವ ಜನರೂ ತೋಳಗಳಂತೆ ಒಬ್ಬರು ಇನ್ನೊಬ್ಬರನ್ನು ಭಕ್ಷಿಸುತ್ತಾ ತಿರುಗಾಡುತ್ತಿರುತ್ತಾರೆ.

12140028a ಯಸ್ಯ ದಸ್ಯುಗಣಾ ರಾಷ್ಟ್ರೇ ಧ್ವಾಂಕ್ಷಾ ಮತ್ಸ್ಯಾನ್ ಜಲಾದಿವ|
12140028c ವಿಹರಂತಿ ಪರಸ್ವಾನಿ ಸ ವೈ ಕ್ಷತ್ರಿಯಪಾಂಸನಃ||

ಯಾರ ರಾಷ್ಟ್ರದಲ್ಲಿ ದಸ್ಯುಗಣಗಳು ನೀರಿನಿಂದ ಮೀನನ್ನು ಹಿಡಿದು ತಿನ್ನುವ ಬಕಪಕ್ಷಿಯಂತೆ ಪರರ ಧನವನ್ನು ಅಪರಹರಿಸುತ್ತಿರುತ್ತಾರೋ ಆ ರಾಜನು ನಿಶ್ಚಯವಾಗಿಯೂ ಕ್ಷತ್ರಿಯಕುಲಕ್ಕೆ ಕಲಂಕನು.

12140029a ಕುಲೀನಾನ್ ಸಚಿವಾನ್ ಕೃತ್ವಾ ವೇದವಿದ್ಯಾಸಮನ್ವಿತಾನ್|
12140029c ಪ್ರಶಾಧಿ ಪೃಥಿವೀಂ ರಾಜನ್ ಪ್ರಜಾ ಧರ್ಮೇಣ ಪಾಲಯನ್||

ರಾಜನ್! ಉತ್ತಮ ಕುಲದಲ್ಲಿ ಜನಿಸಿದ, ಮತ್ತು ವೇದವಿದ್ಯಾಸಂಪನ್ನ ಪುರುಷರನ್ನೇ ಮಂತ್ರಿಗಳನ್ನಾಗಿಸಿಕೊಂಡು ಪ್ರಜೆಗಳನ್ನು ಧರ್ಮಪೂರ್ವಕವಾಗಿ ಪಾಲಿಸುತ್ತಾ ನೀನು ಈ ಪೃಥ್ವಿಯನ್ನು ಆಳು.

12140030a ವಿಹೀನಜಮಕರ್ಮಾಣಂ ಯಃ ಪ್ರಗೃಹ್ಣಾತಿ ಭೂಮಿಪಃ|
12140030c ಉಭಯಸ್ಯಾವಿಶೇಷಜ್ಞಸ್ತದ್ವೈ ಕ್ಷತ್ರಂ ನಪುಂಸಕಮ್||

ಸತ್ಕರ್ಮರಹಿತನಾದ ನ್ಯಾಯಶೂನ್ಯ ಮತ್ತು ಕಾರ್ಯಸಾಧನೆಯ ಉಪಾಯಗಳನ್ನು ತಿಳಿಯದಿರುವ ಪುರುಷನನ್ನು ಸಚಿವನ ರೂಪದಲ್ಲಿ ಸ್ವೀಕರಿಸುವ ರಾಜನು ನಪುಂಸಕನೇ ಸರಿ.

12140031a ನೈವೋಗ್ರಂ ನೈವ ಚಾನುಗ್ರಂ ಧರ್ಮೇಣೇಹ ಪ್ರಶಸ್ಯತೇ|

12140031c ಉಭಯಂ ನ ವ್ಯತಿಕ್ರಾಮೇದುಗ್ರೋ ಭೂತ್ವಾ ಮೃದುರ್ಭವ||

ರಾಜಧರ್ಮದ ಪ್ರಕಾರ ಕೇವಲ ಉಗ್ರಭಾವವನ್ನಾಗಲೀ ಅಥವಾ ಕೇವಲ ಮೃದುಭಾವವನ್ನಾಗಲೀ ಪ್ರಶಂಸಿಸುವುದಿಲ್ಲ. ಆದರೆ ಅವೆರಡರಲ್ಲಿ ಯಾವುದನ್ನೂ ಪರಿತ್ಯಜಿಸಬಾರದು. ಆದುದರಿಂದ ನೀನು ಮೊದಲು ಉಗ್ರನಾಗಿದ್ದುಕೊಂಡು ನಂತರ ಮೃದುವಾಗು.

12140032a ಕಷ್ಟಃ ಕ್ಷತ್ರಿಯಧರ್ಮೋಽಯಂ ಸೌಹೃದಂ ತ್ವಯಿ ಯತ್ ಸ್ಥಿತಮ್|
12140032c ಉಗ್ರೇ ಕರ್ಮಣಿ ಸೃಷ್ಟೋಽಸಿ ತಸ್ಮಾದ್ರಾಜ್ಯಂ ಪ್ರಶಾಧಿ ವೈ||

ಕ್ಷತ್ರಿಯ ಧರ್ಮವು ಕಷ್ಟಸಾಧ್ಯವು. ನಿನ್ನ ಮೇಲೆ ನನ್ನ ಸ್ನೇಹವಿದೆ. ಆದುದರಿಂದ ಹೇಳುತ್ತಿದ್ದೇನೆ. ವಿಧಾತನು ನಿನ್ನನ್ನು ಉಗ್ರಕರ್ಮಕ್ಕಾಗಿಯೇ ಹುಟ್ಟಿಸಿದ್ದಾನೆ. ಆದುದರಿಂದ ನೀನು ನಿನ್ನ ಧರ್ಮದಲ್ಲಿಯೇ ಸ್ಥಿತನಾಗಿದ್ದುಕೊಂಡು ರಾಜ್ಯ ಶಾಸನವನ್ನು ಮಾಡು.

12140033a ಅಶಿಷ್ಟನಿಗ್ರಹೋ ನಿತ್ಯಂ ಶಿಷ್ಟಸ್ಯ ಪರಿಪಾಲನಮ್|
12140033c ಇತಿ ಶಕ್ರೋಽಬ್ರವೀದ್ಧೀಮಾನಾಪತ್ಸು ಭರತರ್ಷಭ||

ಭರತರ್ಷಭ! ಆಪತ್ಕಾಲದಲ್ಲಿಯೂ ಸದಾ ದುಷ್ಟರ ದಮನ ಮತ್ತು ಶಿಷ್ಟರ ಪರಿಪಾಲನೆಯನ್ನು ಮಾಡಬೇಕು ಎಂದು ಬುದ್ಧಿಮಾನ್ ಶುಕ್ರಾಚಾರ್ಯನು ಹೇಳಿದ್ದಾನೆ.”

12140034 ಯುಧಿಷ್ಠಿರ ಉವಾಚ |
12140034a ಅಸ್ತಿ ಸ್ವಿದ್ದಸ್ಯುಮರ್ಯಾದಾ ಯಾಮನ್ಯೋ ನಾತಿಲಂಘಯೇತ್|
12140034c ಪೃಚ್ಛಾಮಿ ತ್ವಾಂ ಸತಾಂ ಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: “ಸತ್ಪುರುಷರಲ್ಲಿ ಶ್ರೇಷ್ಠ! ಪಿತಾಮಹ! ಈ

ಜಗತ್ತಿನಲ್ಲಿ ಬೇರೆ ಯಾವುದೂ ಉಲ್ಲಂಘನ ಮಾಡಲಾರದ ಮರ್ಯಾದೆಯೊಂದಿದ್ದರೆ ಅದರ ಕುರಿತು ಕೇಳ ಬಯಸುತ್ತೇನೆ. ಅದರ ಕುರಿತು ನನಗೆ ಹೇಳು.”

12140035 ಭೀಷ್ಮ ಉವಾಚ |
12140035a ಬ್ರಾಹ್ಮಣಾನೇವ ಸೇವೇತ ವಿದ್ಯಾವೃದ್ಧಾಂಸ್ತಪಸ್ವಿನಃ|
12140035c ಶ್ರುತಚಾರಿತ್ರವೃತ್ತಾಢ್ಯಾನ್ ಪವಿತ್ರಂ ಹ್ಯೇತದುತ್ತಮಮ್॥

ಭೀಷ್ಮನು ಹೇಳಿದನು: “ವಿದ್ಯಾವೃದ್ಧನೂ ತಪಸ್ವಿಯೂ ಶಾಸ್ತ್ರಜ್ಞಾನ ಮತ್ತು ಉತ್ತಮ ಚಾರಿತ್ರವಂತನೂ ಸದಾಚಾರ ಸಂಪನ್ನನೂ ಆದ ಬ್ರಾಹ್ಮಣನ ಸೇವೆಮಾಡುವುದೇ ಪರಮ ಉತ್ತಮ ಮತ್ತು ಪವಿತ್ರ ಕಾರ್ಯವು.

12140036a ಯಾ ದೇವತಾಸು ವೃತ್ತಿಸ್ತೇ ಸಾಸ್ತು ವಿಪ್ರೇಷು ಸರ್ವದಾ|
12140036c ಕ್ರುದ್ಧ್ಯರ್ಹಿ ವಿಪ್ರೈಃ ಕರ್ಮಾಣಿ ಕೃತಾನಿ ಬಹುಧಾ ನೃಪ॥

ನೃಪ! ದೇವತೆಗಳ ಕುರಿತು ನಿನ್ನ ವರ್ತನೆಯು ಹೇಗಿದೆಯೋ ಅದೇ ಭಾವ ಮತ್ತು ವರ್ತನೆಗಳು ಬ್ರಾಹ್ಮಣರ ಕುರಿತೂ ಸದಾ ಇರಬೇಕು. ಏಕೆಂದರೆ ಕ್ರೋಧದಿಂದ ತುಂಬಿದ ಬ್ರಾಹ್ಮಣರು ಅನೇಕ ಪ್ರಕಾರದ ಅದ್ಭುತ ಕರ್ಮಗಳನ್ನು ಮಾಡಿದ್ದಾರೆ.

12140037a ತೇಷಾಂ ಪ್ರೀತ್ಯಾ ಯಶೋ ಮುಖ್ಯಮಪ್ರೀತ್ಯಾ ತು ವಿಪರ್ಯಯಃ|
12140037c ಪ್ರೀತ್ಯಾ ಹ್ಯಮೃತವದ್ವಿಪ್ರಾಃ ಕ್ರುದ್ಧಾಶ್ಚೈವ ಯಥಾ ವಿಷಮ್॥

ಬ್ರಾಹ್ಮಣರ ಪ್ರಸನ್ನತೆಯಿಂದ ಶ್ರೇಷ್ಠ ಯಶಸ್ಸಿನ ವಿಸ್ತಾರವಾಗುತ್ತದೆ. ಅವರ ಅಪ್ರಸನ್ನತೆಯಿಂದ ಮಹಾ ಭಯವು ಪ್ರಾಪ್ತವಾಗುತ್ತದೆ. ಪ್ರಸನ್ನರಾದರೆ ಬ್ರಾಹ್ಮಣರು ಅಮೃತ ಸಮಾನ

ಜೀವನದಾಯಕರಾಗುತ್ತಾರೆ ಮತ್ತು ಕುಪಿತರಾದರೆ ವಿಷ ಸಮಾನ ಭಯಂಕರರಾಗಿಬಿಡುತ್ತಾರೆ.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಚತ್ವಾರಿಂಶದಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ನೂರಾನಲ್ವತ್ತನೇ ಅಧ್ಯಾಯವು.

೧೪೧

ಕಪೋತ-ಲುಬ್ಧಕ ಸಂವಾದ

ಶರಣಾಗತರ ರಕ್ಷಣೆಯ ಕುರಿತಾಗಿ ಕಪೋತ-ಲುಬ್ಧಕರ ಸಂವಾದಕಥನದ ಪ್ರಾರಂಭ (1-5). ಭಿರುಗಾಳಿ-ಮಳೆಗೆ ಸಿಲುಕಿ ಪೀಡಿತನಾದ ವ್ಯಾಧನು ಪಾರಿವಾಳಗಳು ವಾಸಿಸುತ್ತಿದ್ದ ಮರದ ಬುಡಕ್ಕೆ ಶರಣಾಗತನಾಗಿ ಬಂದುದು (6-27).

12141001 ಯುಧಿಷ್ಠಿರ ಉವಾಚ|
12141001a ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ|
12141001c ಶರಣಂ ಪಾಲಯಾನಸ್ಯ ಯೋ ಧರ್ಮಸ್ತಂ ವದಸ್ವ ಮೇ||

ಯುಧಿಷ್ಠಿರನು ಹೇಳಿದನು: “ಪಿತಾಮಹ! ಮಹಾಪ್ರಾಜ್ಞ! ಸರ್ವಶಾಸ್ತ್ರವಿಶಾರದ! ಶರಣಾಗತನನ್ನು ಪರಿಪಾಲಿಸುವವನಿಗೆ ಯಾವ ಧರ್ಮವು ಪ್ರಾಪ್ತವಾಗುತ್ತದೆ ಎನ್ನುವುದನ್ನು ನನಗೆ ಹೇಳು.”

12141002 ಭೀಷ್ಮ ಉವಾಚ|

12141002a ಮಹಾನ್ ಧರ್ಮೋ ಮಹಾರಾಜ ಶರಣಾಗತಪಾಲನೇ|
12141002c ಅರ್ಹಃ ಪ್ರಷ್ಟುಂ ಭವಾಂಶ್ಚೈವ ಪ್ರಶ್ನಂ ಭರತಸತ್ತಮ||

ಭೀಷ್ಮನು ಹೇಳಿದನು: "ಮಹಾರಾಜ! ಭರತಸತ್ತಮ!
ಶರಣಾಗತಪಾಲನೆಯು ಮಹಾನ್ ಧರ್ಮವು. ಈ ಪ್ರಶ್ನೆಯನ್ನು ಕೇಳಲು
ನೀನು ಅರ್ಹನಾಗಿರುವೆ.

12141003a ನೃಗಪ್ರಭೃತಯೋ[658] ರಾಜನ್ ರಾಜಾನಃ ಶರಣಾಗತಾನ್|
12141003c ಪರಿಪಾಲ್ಯ ಮಹಾರಾಜ ಸಂಸಿದ್ಧಿಂ ಪರಮಾಂ ಗತಾಃ||

ರಾಜನ್! ಮಹಾರಾಜ! ನೃಗನೇ ಮೊದಲಾದ ರಾಜರು
ಶರಣಾಗತರನ್ನು ಪರಿಪಾಲಿಸಿ ಪರಮ ಸಂಸಿದ್ಧಿಯನ್ನು
ಪಡೆದುಕೊಂಡರು.

12141004a ಶ್ರೂಯತೇ ಹಿ ಕಪೋತೇನ ಶತ್ರುಃ ಶರಣಮಾಗತಃ|
12141004c ಪೂಜಿತಶ್ಚ ಯಥಾನ್ಯಾಯಂ ಸ್ವೈಶ್ಚ ಮಾಂಸೈರ್ನಿಮಂತ್ರಿತಃ||

ಪಾರಿವಾಳವೊಂದು ಶರಣಾಗತನಾದ ಶತ್ರುವನ್ನು ಯಥಾನ್ಯಾಯವಾಗಿ
ಸತ್ಕರಿಸಿ ತನ್ನ ಮಾಂಸವನ್ನೇ ತಿನ್ನಲು ಆಮಂತ್ರಿಸಿತು ಎಂದು
ಕೇಳಿದ್ದೇವೆ."

12141005 ಯುಧಿಷ್ಠಿರ ಉವಾಚ|
12141005a ಕಥಂ ಕಪೋತೇನ ಪುರಾ ಶತ್ರುಃ ಶರಣಮಾಗತಃ|
12141005c ಸ್ವಮಾಂಸೈರ್ಭೋಜಿತಃ ಕಾಂ ಚ ಗತಿಂ ಲೇಭೇ ಸ ಭಾರತ||

ಯುಧಿಷ್ಠಿರನು ಹೇಳಿದನು: "ಭಾರತ! ಹಿಂದೆ ಪಾರಿವಾಳವು

---

658 ಶಿಬಿಪ್ರಭೃತಯೋ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಶರಣಾಗತನಾದ ಶತ್ರುವಿಗೆ ಹೇಗೆ ತನ್ನ ಮಾಂಸವನ್ನೇ ಉಣ್ಣಿಸಿತು ಮತ್ತು ಹೀಗೆ ಮಾಡಿದ ಅದಕ್ಕೆ ಯಾವ ಸದ್ಗತಿಯು ಪ್ರಾಪ್ತವಾಯಿತು?”

12141006 ಭೀಷ್ಮ ಉವಾಚ|
12141006a ಶೃಣು ರಾಜನ್ ಕಥಾಂ ದಿವ್ಯಾಂ ಸರ್ವಪಾಪಪ್ರಣಾಶಿನೀಮ್|
12141006c ನೃಪತೇರ್ಮುಚುಕುಂದಸ್ಯ ಕಥಿತಾಂ ಭಾರ್ಗವೇಣ ಹ||

ಭೀಷ್ಮನು ಹೇಳಿದನು: “ರಾಜನ್! ನೃಪತಿ ಮುಚುಕುಂದನಿಗೆ ಭಾರ್ಗವನು[659] ಹೇಳಿದ್ದ ಈ ಸರ್ವಪಾಪಪ್ರಣಾಶಿನೀ ದಿವ್ಯ ಕಥೆಯನ್ನು ಕೇಳು.

12141007a ಇಮಮರ್ಥಂ ಪುರಾ ಪಾರ್ಥ ಮುಚುಕುಂದೋ ನರಾಧಿಪಃ|
12141007c ಭಾರ್ಗವಂ ಪರಿಪಪ್ರಚ್ಚ ಪ್ರಣತೋ ಭರತರ್ಷಭ||

ಪಾರ್ಥ! ಭರತರ್ಷಭ! ಹಿಂದೆ ನರಾಧಿಪ ಮುಚುಕುಂದನು ಭಾರ್ಗವನಿಗೆ ನಮಸ್ಕರಿಸಿ ಇದೇ ಪ್ರಶ್ನೆಯನ್ನು ಕೇಳಿದ್ದನು.

12141008a ತಸ್ಮೈ ಶುಶ್ರೂಷಮಾಣಾಯ ಭಾರ್ಗವೋಽಕಥಯತ್ಕಥಾಮ್|
12141008c ಇಯಂ ಯಥಾ ಕಪೋತೇನ ಸಿದ್ಧಿಃ ಪ್ರಾಪ್ತಾ ನರಾಧಿಪ||

ಕೇಳಲು ಉತ್ಸುಕನಾಗಿದ್ದ ನರಾಧಿಪನಿಗೆ ಭಾರ್ಗವನು ಸಿದ್ಧಿಯನ್ನು ಪಡೆದುಕೊಂಡ ಪಾರಿವಾಳದ ಈ ಕಥೆಯನ್ನು ಹೇಳಿದನು.

12141009a ಧರ್ಮನಿಶ್ಚಯಸಂಯುಕ್ತಾಂ ಕಾಮಾರ್ಥಸಹಿತಾಂ ಕಥಾಮ್|
12141009c ಶೃಣುಷ್ವಾವಹಿತೋ ರಾಜನ್ ಗದತೋ ಮೇ ಮಹಾಭುಜ||

---

659 ಭಾರ್ಗವ ಪರಶುರಾಮ (ಗೀತಾ ಪ್ರೆಸ್).

ರಾಜನ್! ಮಹಾಭುಜ! ಧರ್ಮನಿಶ್ಚಯಸಂಯುಕ್ತವಾದ ಮತ್ತು ಕಾಮಾರ್ಥಸಹಿತವಾದ ಈ ಕಥೆಯನ್ನು ಹೇಳುತ್ತೇನೆ. ಸಮಾಹಿತನಾಗಿ ಕೇಳು.

12141010a ಕಶ್ಚಿತ್ ಕ್ಷುದ್ರಸಮಾಚಾರಃ ಪೃಥಿವ್ಯಾಂ ಕಾಲಸಂಮತಃ|
12141010c ಚಚಾರ ಪೃಥಿವೀಂ ಪಾಪೋ ಘೋರಃ ಶಕುನಿಲುಬ್ಧಕಃ||

ಯಾವುದೋ ಒಂದು ಮಹಾವನದಲ್ಲಿ ಓರ್ವ ಹಕ್ಕಿಗಳನ್ನು ಹಿಡಿಯುವ ವ್ಯಾಧನು ಸಂಚರಿಸುತ್ತಿದ್ದನು. ಅವನು ಪಾಪಿಯೂ ಘೋರನೂ ಆಗಿದ್ದು ಭೂಮಿಯ ಮೇಲಿನ ಕಾಲನಂತೆಯೇ ತೋರುತ್ತಿದ್ದನು.

12141011a ಕಾಕೋಲ ಇವ ಕೃಷ್ಣಾಂಗೋ ರೂಕ್ಷಃ ಪಾಪಸಮಾಹಿತಃ[660]|
12141011c ಯವಮಧ್ಯಃ ಕೃಶಗ್ರೀವೋ ಹ್ರಸ್ವಪಾದೋ ಮಹಾಹನುಃ[661]||

ಅವನ ಶರೀರವು ಕಾಕೋಲ ಕಾಗೆಯಂತೆ ಕಪ್ಪಾಗಿತ್ತು. ಕಠೋರನಾಗಿದ್ದನು ಮತ್ತು ಪಾಪಸಮಾಹಿತನಾಗಿದ್ದನು. ಅವನ ಹೊಟ್ಟೆಯು ದೊಡ್ಡದಾಗಿತ್ತು. ಕತ್ತು ಸಣ್ಣದಾಗಿತ್ತು. ಕಾಲುಗಳು ಸಣ್ಣಗಾಗಿದ್ದವು ಮತ್ತು ಅವನ ಹಲ್ಲುಗಳು ದೊಡ್ಡವಾಗಿದ್ದವು.

12141012a ನೈವ ತಸ್ಯ ಸುಹೃತ್ಕಶ್ಚಿನ್ನ ಸಂಬಂಧೀ ನ ಬಾಂಧವಃ|
12141012c ಸ ಹಿ ತೈಃ ಸಂಪರಿತ್ಯಕ್ತಸ್ತೇನ ಘೋರೇಣ ಕರ್ಮಣಾ||

ಅವನಿಗೆ ಸ್ನೇಹಿತರ್ಯಾರೂ ಇರಲಿಲ್ಲ. ಸಂಬಂಧಿ-ಬಾಂಧವರೂ

---

660 ರಕ್ತಾಕ್ಷಃ ಕಾಲಸಮ್ಮಿತಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

661 ದೀರ್ಘಜಂಘೋ ಹ್ರಸ್ವಪಾದೋ ಮಹಾವಕ್ತ್ರೋ ಮಹಾಹನುಃ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಇರಲಿಲ್ಲ. ಅವನ ಘೋರ ಕರ್ಮಗಳಿಂದಾಗಿ ಎಲ್ಲರೂ ಅವನನ್ನು ಪರಿತ್ಯಜಿಸಿದ್ದರು.

[662]12141013a ಸ ವೈ ಕ್ಷಾರಕಮಾದಾಯ ದ್ವಿಜಾನ್ ಹತ್ವಾ ವನೇ ಸದಾ|
12141013c ಚಕಾರ ವಿಕ್ರಯಂ ತೇಷಾಂ ಪತಂಗಾನಾಂ ನರಾಧಿಪ||

ನರಾಧಿಪ! ಪ್ರತಿದಿನ ಅವನು ಬಲೆಯನ್ನು ತೆಗೆದುಕೊಂಡು ವನಕ್ಕೆ ಹೋಗಿ ಅನೇಕ ಪಕ್ಷಿಗಳನ್ನು ಕೊಂದು ಆ ಪಕ್ಷಿಗಳನ್ನು ಮಾರುಕಟ್ಟೆಯಲ್ಲಿ ಮಾರುತ್ತಿದ್ದನು.

12141014a ಏವಂ ತು ವರ್ತಮಾನಸ್ಯ ತಸ್ಯ ವೃತ್ತಿಂ ದುರಾತ್ಮನಃ|
12141014c ಅಗಮತ್ಸುಮಹಾನ್ಕಾಲೋ ನ ಚಾಧರ್ಮಮಬುಧ್ಯತ||

ಆ ದುರಾತ್ಮನು ಬಹಳ ಕಾಲದ ವರೆಗೆ ಹೀಗೆಯೇ ತನ್ನ ವೃತ್ತಿಯು ನಡೆಸಿಕೊಂಡು ಬಂದನು. ಆದರೂ ಅವನಿಗೆ ತನ್ನ ಅಧರ್ಮದ ಕುರಿತು ಅರಿವೆಯೇ ಮೂಡಲಿಲ್ಲ.

12141015a ತಸ್ಯ ಭಾರ್ಯಾ ಸಹಾಯಸ್ಯ ರಮಮಾಣಸ್ಯ ಶಾಶ್ವತಮ್|
12141015c ದೈವಯೋಗವಿಮೂಢಸ್ಯ ನಾನ್ಯಾ ವೃತ್ತಿರರೋಚತ||

ಸದಾ ತನ್ನ ಪತ್ನಿಯೊಡನೆ ಸಂಚರಿಸುತ್ತಿದ್ದ ಆ ವ್ಯಾಧನು

---

662 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಎರಡು ಅಧಿಕ ಶ್ಲೋಕಗಳಿವೆ: ನರಃ ಪಾಪಸಮಾಚಾರಸ್ತ್ಯಕ್ತವ್ಯೋ ದೂರತೋ ಬುಧೈಃ| ಆತ್ಮಾನಂ ಯೋಽಭಿಸಂಧತ್ತೇ ಸೋಽನ್ಯಸ್ಯ ಸ್ಯಾತ್ಕಥಂ ಹಿತಃ|| ಯೇ ನೃಶಂಸಾ ದುರಾತ್ಮಾನಃ ಪ್ರಾಣಿಪ್ರಾಣಹರಾ ನರಾಃ| ಉದ್ವೇಜನೀಯಾ ಭೂತಾನಾಂ ವ್ಯಾಲಾ ಇವ ಭವಂತಿ ತೇ||

ದೈವಯೋಗದಿಂದ ಎಂಥಹ ವಿಮೂಢನಾಗಿದ್ದನೆಂದರೆ ಅವನಿಗೆ ಬೇರೆ ಯಾವ ವೃತ್ತಿಯೂ ಹಿಡಿಸುತ್ತಿರಲಿಲ್ಲ.

12141016a ತತಃ ಕದಾ ಚಿತ್ತಸ್ಯಾಥ ವನಸ್ಥಸ್ಯ ಸಮುದ್ಗತಃ|
12141016c ಪಾತಯನ್ನಿವ ವೃಕ್ಷಾಂಸ್ತಾನ್ಸುಮಹಾನ್ವಾತಸಂಭ್ರಮಃ||

ಅನಂತರ ಒಂದು ದಿನ ಅವನು ವನದಲ್ಲಿ ಸಂಚರಿಸುತ್ತಿದ್ದಾಗ ನಾಲ್ಕೂ ಕಡೆಗಳಿಂದ ಜೋರಾದ ಭಿರುಗಾಳಿಯು ಬೀಸತೊಡಗಿತು. ಗಾಳಿಯ ಪ್ರಚಂಡ ವೇಗದಿಂದ ಸಮಸ್ತ ವೃಕ್ಷಗಳು ಕೆಳಗುರುಳುತ್ತವೆಯೋ ಎಂದು ತೋರುತ್ತಿತ್ತು.

12141017a ಮೇಘಸಂಕುಲಮಾಕಾಶಂ ವಿದ್ಯುನ್ಮಂಡಲಮಂಡಿತಮ್|
12141017c ಸಂಚನ್ನಂ ಸುಮುಹೂರ್ತೇನ ನೌಸ್ಥಾನೇನೇವ ಸಾಗರಃ||
12141018a ವಾರಿಧಾರಾಸಮೂಹೈಶ್ಚ ಸಂಪ್ರಹೃಷ್ಟಃ ಶತಕ್ರತುಃ|
12141018c ಕ್ಷಣೇನ ಪೂರಯಾಮಾಸ ಸಲಿಲೇನ ವಸುಂಧರಾಮ್||

ಮಿಂಚಿನ ಮಂಡಲಗಳ ಮಧ್ಯೆ ಆಕಾಶದಲ್ಲಿ ಮೇಘಸಂಕುಲಗಳು ಕಾಣಿಸಿಕೊಂಡವು. ಕ್ಷಣದಲ್ಲಿಯೇ ಸಮುದ್ರದಲ್ಲಿ ನಾವೆಗಳು ತುಂಬಿಕೊಳ್ಳುವಂತೆ ಶತಕ್ರತುವು ಸಂಪ್ರಹೃಷ್ಟನಾಗಿ ಧಾರಕಾರ ಮಳೆಯ ಸಮೂಹಗಳಿಂದ ಕ್ಷಣಮಾತ್ರದಲ್ಲಿ ಭೂಮಿಯನ್ನು ತುಂಬಿಸಿಬಿಟ್ಟನು.

12141019a ತತೋ ಧಾರಾಕುಲೇ ಲೋಕೇ[663] ಸಂಭ್ರಮನ್ನಷ್ಟಚೇತನಃ|
12141019c ಶೀತಾರ್ತಸ್ತದ್ವನಂ ಸರ್ವಮಾಕುಲೇನಾಂತರಾತ್ಮನಾ||

ಹೀಗೆ ಲೋಕದಲ್ಲಿ ಧಾರಾಕಾರ ಮಳೆಯು ಸುರಿಯುತ್ತಿರಲು ವ್ಯಾಧನು

[663] ಕಾಲೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಛಳಿಯಿಂದ ಪೀಡಿತನಾಗಿ ನಷ್ಟಚೇತನನಾದನು ಮತ್ತು ವ್ಯಾಕುಲನಾಗಿ ವನದಲ್ಲೆಲ್ಲಾ ತಿರುಗಾಡತೊಡಗಿದನು.

12141020a ನೈವ ನಿಮ್ನಂ ಸ್ಥಲಂ ವಾಪಿ ಸೋಽವಿಂದತ ವಿಹಂಗಹಾ|
12141020c ಪೂರಿತೋ ಹಿ ಜಲೌಘೇನ ಮಾರ್ಗಸ್ತಸ್ಯ ವನಸ್ಯ ವೈ||

ಅವನು ನಡೆಯುತ್ತಿದ್ದ ಆ ವನ ಮಾರ್ಗವು ನೀರಿನಲ್ಲಿ ಮುಳುಗಿಹೋಗಿತ್ತು. ಅವನಿಗೆ ತಗ್ಗು-ಎತ್ತರವು ಎಲ್ಲಿ ಎಂದು ಏನೂ ತಿಳಿಯುವಂತಿರಲಿಲ್ಲ.

12141021a ಪಕ್ಷಿಣೋ ವಾತವೇಗೇನ ಹತಾ ಲೀನಾಸ್ತದಾಭವನ್|
12141021c ಮೃಗಾಃ ಸಿಂಹಾ ವರಾಹಾಶ್ಚ ಸ್ಥಲಾನ್ಯಾಶ್ರಿತ್ಯ ತಸ್ಥಿರೇ||

ಭಿರುಗಾಳಿಯ ವೇಗಕ್ಕೆ ಸಿಲುಕಿ ಹಲವಾರು ಪಕ್ಷಿಗಳು ಹತಗೊಂಡು ಕೆಳಗೆ ಬಿದ್ದವು. ಕೆಲವೊಂದಿಷ್ಟು ತಮ್ಮ ಗೂಡುಗಳಲ್ಲಿ ಅಡಗಿಕೊಂಡವು. ಸಿಂಹ-ವರಾಹ ಮೊದಲಾದ ಮೃಗಗಳು ಗುಹೆಗಳನ್ನು ಆಶ್ರಯಿಸಿ ನಿಂತುಕೊಂಡವು.

12141022a ಮಹತಾ ವಾತವರ್ಷೇಣ ತ್ರಾಸಿತಾಸ್ತೇ ವನೌಕಸಃ|
12141022c ಭಯಾರ್ತಾಶ್ಚ ಕ್ಷುಧಾರ್ತಾಶ್ಚ ಬಭ್ರಮುಃ ಸಹಿತಾ ವನೇ||

ಭಾರೀ ಚಂಡಮಾರುತ ಮತ್ತು ಮಳೆಯಿಂದ ಆತಂಕಕ್ಕೊಳಗಾದ ವನೌಕಸ ಜೀವಜಂತುಗಳು ಭಯ ಮತ್ತು ಹಸಿವೆಯಿಂದ ಪೀಡಿತಗೊಂಡು ಹಿಂಡು ಹಿಂಡಾಗಿ ವನದಲ್ಲಿ ಸುತ್ತುವರೆಯುತ್ತಿದ್ದವು.

12141023a ಸ ತು ಶೀತಹತೈರ್ಗಾತ್ರೈರ್ಜಗಾಮೈವ ನ ತಸ್ಥಿವಾನ್|

[664]12141023c ಸೋಽಪಶ್ಯದ್ವನಷಂಡೇಷು ಮೇಘನೀಲಂ ವನಸ್ಪತಿಮ್‌||

ಛಳಿಯಿಂದ ಅಂಗಾಗಗಳೆಲ್ಲವೂ ನಡುಗುತ್ತಿದ್ದ ಆ ವ್ಯಾಧನು ನಡೆಯಲಾರನಾಗಿದ್ದನು ಮತ್ತು ಎಲ್ಲಿಯೂ ನಿಲ್ಲಲೂ ಅವನಿಗೆ ಕಷ್ಟವಾಗುತ್ತಿತ್ತು. ಇದೇ ಅವಸ್ಥೆಯಲ್ಲಿ ಅವನು ವೃಕ್ಷಸಮೂಹಗಳ ಮಧ್ಯದಲ್ಲಿ ಒಂದು ಮೇಘನೀಲ ವೃಕ್ಷವನ್ನು ಕಂಡನು.

[665]12141024a ತಾರಾಢ್ಯಂ ಕುಮುದಾಕಾರಮಾಕಾಶಂ ನಿರ್ಮಲಂ ಚ ಹ|
12141024c ಮೇಘೈರ್ಮುಕ್ತಂ ನಭೋ ದೃಷ್ಟ್ವಾ ಲುಬ್ಧಕಃ ಶೀತವಿಹ್ವಲಃ‌||
12141025a ದಿಶೋಽವಲೋಕಯಾಮಾಸ ವೇಲಾಂ ಚೈವ ದುರಾತ್ಮವಾನ್|
12141025c ದೂರೇ ಗ್ರಾಮನಿವೇಶಶ್ಚ ತಸ್ಮಾದ್ದೇಶಾದಿತಿ ಪ್ರಭೋ|
12141025e ಕೃತಬುದ್ಧಿರ್ವನೇ ತಸ್ಮಿನ್ವಸ್ತುಂ ತಾಂ ರಜನೀಂ ತದಾ‌||

ಪ್ರಭೋ! ತಾರೆಗಳಿಂದ ತುಂಬಿದ್ದ ಅತ್ಯಂತ ನಿರ್ಮಲ ಆಕಾಶವು ವಿಕಸಿತ ಕುಮುದಕುಸುಮಗಳಿಂದ ಸುಶೋಭಿತ ಸರೋವರದಂತೆ

---

[664] ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಎರಡೂವರೆ ಅಧಿಕ ಶ್ಲೋಕಗಳಿವೆ: ದದರ್ಶ ಪತಿತಾಂ ಭೂಮೌ ಕಪೋತೀಂ ಶೀತವಿಹ್ವಲಾಮ್| ದೃಷ್ಟ್ವಾ ssತ್ಮೋಽಪಿ ಹಿ ಪಪಾತ್ಮಾ ಸತಾಂ ಪಂಜರಕೇಽಕ್ಷಿಪತ್| ಸ್ವಯಂ ದುಃಖಾಭಿಭೂತೋಽಪಿ ದುಃಖಮೇವಾಕರೋತ್ಪರೇ‌|| ಪಾಪಾತ್ಮಾ ಪಾಪಕಾರಿತ್ವಾತ್ ಪಾಪಮೆವ ಚಕಾರ ಸಃ|

[665] ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಎರಡು ಅಧಿಕ ಶ್ಲೋಕಗಳಿವೆ: ಸೇವ್ಯಮಾನಂ ವಿಹಂಗೈಃಶ್ಚಾಯಾವಾಸಫಲಾರ್ಥಿಭಿಃ| ಧಾತ್ರಾ ಪರೋಪಕಾರಾಯ ಸ ಸಾಧುರಿವ ನಿರ್ಮಿತಃ‌|| ಅಥಾಭವತ್ ಕ್ಷಣೇನೈವ ವಿಯದ್ವಿಮಲತಾರಕಮ್| ಮಹತ್ಸರ ಇವೋತ್ಫುಲ್ಲಂ ಕುಮುದನ್ಮುರಿತೋದಕಮ್‌||

ತೋರುತ್ತಿತ್ತು. ಆಕಾಶವು ಮೇಘಗಳಿಂದ ಮುಕ್ತವಾದುದನ್ನು ನೋಡಿ ಛಳಿಯಿಂದ ನಡುಗುತ್ತಿದ್ದ ಆ ವ್ಯಾಧನು ಎಲ್ಲದಿಕ್ಕುಗಳಲ್ಲಿಯೂ ಕಣ್ಣುಹಾಯಿಸಿ ಗಾಢ ಅಂಧಕಾರದಿಂದ ತುಂಬಿದ್ದ ರಾತ್ರಿಯನ್ನು ಕಂಡು ತನ್ನ ನಿವಾಸ ಗ್ರಾಮವು ಇಲ್ಲಿಂತ ಅತಿ ದೂರದಲ್ಲಿದೆ ಎಂದು ಮನದಲ್ಲಿಯೇ ಯೋಚಿಸಿ, ಅಲ್ಲಿಯೇ ಉಳಿದು ಆ ರಾತ್ರಿಯನ್ನು ವನದಲ್ಲಿಯೇ ಕಳೆಯುವ ಮನಸ್ಸುಮಾಡಿದನು.

12141026a ಸೋಽಂಜಲಿಂ ಪ್ರಯತಃ ಕೃತ್ವಾ ವಾಕ್ಯಮಾಹ ವನಸ್ಪತಿಮ್|
12141026c ಶರಣಂ ಯಾಮಿ ಯಾನ್ಯಸ್ಮಿನ್ ದೈವತಾನೀಹ ಭಾರತ||

ಭಾರತ! ಕೈಮುಗಿದು ನಮಸ್ಕರಿಸಿ ಅವನು ಆ ವೃಕ್ಷಕ್ಕೆ "ಈ ವೃಕ್ಷದಲ್ಲಿರುವ ದೇವತೆಗಳ ಶರಣುಹೊಗುತ್ತೇನೆ" ಎಂದು ಹೇಳಿದನು.

12141027a ಸ ಶಿಲಾಯಾಂ ಶಿರಃ ಕೃತ್ವಾ ಪರ್ಣಾನ್ಯಾಸ್ತೀರ್ಯ ಭೂತಲೇ|
12141027c ದುಃಖೇನ ಮಹತಾವಿಷ್ಟಸ್ತತಃ ಸುಷ್ವಾಪ ಪಕ್ಷಿಹಾ||

ಹೀಗೆ ಹೇಳಿ ನೆಲದ ಮೇಲೆ ಎಲೆಗಳನ್ನು ಹಾಸಿ ಒಂದು ಶಿಲೆಯ ಮೇಲೆ ತಲೆಯನ್ನಿಟ್ಟು ಮಹಾ ದುಃಖದಿಂದ ಮಲಗಿದ ಆ ಪಕ್ಷಿವ್ಯಾಧನು ನಿದ್ರಿಸಿದನು."

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕಪೋತಲುಬ್ಧಕಸಂವಾದೋಪಕ್ರಮೇ
ಏಕಚತ್ವಾರಿಂಶದಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕಪೋತಲುಬ್ಧಕಸಂವಾದೋಪಕ್ರಮ ಎನ್ನುವ
ನೂರಾನಲ್ವತ್ತೊಂದನೇ ಅಧ್ಯಾಯವು.

೧೪೨[666]

ಪಾರಿವಾಳವು ತನ್ನ ಭಾರ್ಯೆಯ ಗುಣಗಾನವನ್ನು ಮಾಡುವುದು ಮತ್ತು ಪತಿವ್ರತೆಯ ಪ್ರಶಂಸೆ (1-12). ಕಪೋತಿಯು ಶರಣಾಗತ ವ್ಯಾಧನ ಸೇವೆಗೈಯಲು ಪತಿಯಲ್ಲಿ ಕೇಳಿಕೊಂಡಿದುದು (13-20). ಪಾರಿವಾಳದ ಅತಿಥಿಸತ್ಕಾರ ಮತ್ತು ವ್ಯಾಧನಿಗಾಗಿ ತನ್ನ ಶರೀರವನ್ನು ಪರಿತ್ಯಜಿಸುವುದು (21-44).

12142001 ಭೀಷ್ಮ ಉವಾಚ|
12142001a ಅಥ ವೃಕ್ಷಸ್ಯ ಶಾಖಾಯಾಂ ವಿಹಂಗಃ ಸಸುಹೃಜ್ಜನಃ|
12142001c ದೀರ್ಘಕಾಲೋಷಿತೋ ರಾಜಂಸ್ತತ್ರ ಚಿತ್ರತನೂರುಹಃ||

ಭೀಷ್ಮನು ಹೇಳಿದನು: "ರಾಜನ್! ಆ ವೃಕ್ಷದ ರೆಂಬೆಯ ಮೇಲೆ ಬಹಳ ಕಾಲದಿಂದ ಒಂದು ಪಾರಿವಾಳವು ತನ್ನ ಸುಹೃದಯರೊಂದಿಗೆ ನಿವಾಸಿಸುತ್ತಿತ್ತು. ಅದರ ಶರೀರದ ರೋಮಗಳು ಬಣ್ಣಬಣ್ಣದ್ದಾಗಿದ್ದವು.

12142002a ತಸ್ಯ ಕಾಲ್ಯಂ ಗತಾ ಭಾರ್ಯಾ ಚರಿತುಂ ನಾಭ್ಯವರ್ತತ|
12142002c ಪ್ರಾಪ್ತಾಂ ಚ ರಜನೀಂ ದೃಷ್ಟ್ವಾ ಸ ಪಕ್ಷೀ ಪರ್ಯತಪ್ಯತ||

ಮುಂಜಾನೆಯೇ ಹೊರಗೆ ತಿರುಗಾಡಲು ಹೋಗಿದ್ದ ಅದರ ಪತ್ನಿಯು ಇನ್ನೂ ಹಿಂದಿರುಗಿರಲಿಲ್ಲ. ರಾತ್ರಿಯಾದುದನ್ನು ನೋಡಿ ಆ ಪಕ್ಷಿಯು ಅವಳಿಗಾಗಿ ಪರಿತಪಿಸಿತು.

---

666 ಗೀತಾ ಪ್ರೆಸ್ ಗೋರಖಪುರದ ಸಂಪುಟದಲ್ಲಿ ಈ ಅಧ್ಯಾಯವು ಮೂರು ಅಧ್ಯಾಯಗಳಲ್ಲಿ ಬರುತ್ತದೆ.

12142003a ವಾತವರ್ಷಂ ಮಹಚ್ಚಾಸೀನ್ನ ಚಾಗಚ್ಚತಿ ಮೇ ಪ್ರಿಯಾ|
12142003c ಕಿಂ ನು ತತ್ಕಾರಣಂ ಯೇನ ಸಾದ್ಯಾಪಿ ನ ನಿವರ್ತತೇ||

“ಭಿರುಗಾಳಿ ಮತ್ತು ಅತಿ ದೊಡ್ಡ ಮಳೆಯು ಸುರಿಯಿತು. ನನ್ನ ಪ್ರಿಯೆಯೂ ಇನ್ನೂ ಹಿಂದುರಿಗಿ ಬಂದಿಲ್ಲ. ಯಾವ ಕಾರಣದಿಂದ ಅವಳು ಇನ್ನೂ ಹಿಂದುರಗಲಿಲ್ಲ?

12142004a ಅಪಿ ಸ್ವಸ್ತಿ ಭವೇತ್ತಸ್ಯಾಃ ಪ್ರಿಯಾಯಾ ಮಮ ಕಾನನೇ|
12142004c ತಯಾ ವಿರಹಿತಂ ಹೀದಂ ಶೂನ್ಯಮದ್ಯ ಗೃಹಂ ಮಮ||

ನನ್ನ ಪ್ರಿಯೆಯು ಈ ಕಾನನದಲ್ಲಿ ಕುಶಲದಿಂದಿದ್ದಾಳೆಯೇ? ಅವಳಿಲ್ಲದೇ ನನ್ನ ಈ ಮನೆಯು ಇಂದು ಶೂನ್ಯವಾಗಿದೆ.

[667]12142005a ಯದಿ ಸಾ ರಕ್ತನೇತ್ರಾಂತಾ ಚಿತ್ರಾಂಗೀ ಮಧುರಸ್ವರಾ|
12142005c ಅದ್ಯ ನಾಭ್ಯೇತಿ ಮೇ ಕಾಂತಾ ನ ಕಾರ್ಯಂ ಜೀವಿತೇನ ಮೇ||

ಆ ರಕ್ತನೇತ್ರಾಂತಾ, ಚಿತ್ರಾಂಗೀ, ಮಧುಸ್ವರಾ, ನನ್ನ ಕಾಂತೆಯು ಇಂದು ಬರದೇ ಇದ್ದರೆ ನಾನು ಬದುಕಿರುವುದರಿಂದ ಏನು ಪ್ರಯೋಜನ?

[668]12142006a ಪತಿಧರ್ಮರತಾ ಸಾಧ್ವೀ ಪ್ರಾಣೇಭ್ಯೋಽಪಿ ಗರೀಯಸೀ|

---

667 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಎರಡು ಅಧಿಕ ಶ್ಲೋಕಗಳಿವೆ: ಪುತ್ರಪೌತ್ರವಧೂಭೃತ್ಯೈರಾಕೀರ್ಣಮಪಿ ಸರ್ವತಃ| ಭಾರ್ಯಾಹೀನಂ ಗೃಹಸ್ಥಸ್ಯ ಶೂನ್ಯಮೇವ ಗೃಹಂ ಭವೇತ್|| ನ ಗೃಹಂ ಗೃಹಮಿತ್ಯಾಹುರ್ಗೃಹಿಣೀ ಗೃಹಮುಚ್ಯತೇ| ಗೃಹಂ ತು ಗೃಹಿಣೀಹೀನಮನರಣ್ಯಸದೃಶಂ ಮತಮ್||

668 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಮೂರು ಅಧಿಕ ಶ್ಲೋಕಗಳಿವೆ: ನ

12142006c ಸಾ ಹಿ ಶ್ರಾಂತಂ ಕ್ಷುಧಾರ್ತಂ ಚ ಜಾನೀತೇ ಮಾಂ ತಪಸ್ವಿನೀ||

ಪತಿಧರ್ಮರತಳಾಗಿದ್ದ ಆ ಸಾಧ್ವಿಯು ನನಗೆ ಪ್ರಾಣಕ್ಕಿಂತಲೂ ಹೆಚ್ಚಿನದಾಗಿದ್ದಳು. ನಾನು ಬಳಲಿದ್ದೇನೆ ಮತ್ತು ಹಸಿದಿದ್ದೇನೆ ಎಂದು ಆ ತಪಸ್ವಿನಿಯು ತಿಳಿದಿದ್ದಾಳೆ.

12142007a ಅನುರಕ್ತಾ ಹಿತಾ ಚೈವ ಸ್ನಿಗ್ಧಾ ಚೈವ ಪತಿವ್ರತಾ|
12142007c ಯಸ್ಯ ವೈ ತಾದೃಶೀ ಭಾರ್ಯಾ ಧನ್ಯಃ ಸ ಮನುಜೋ ಭುವಿ||

ಆ ಪತಿವ್ರತೆಯು ನನ್ನಲ್ಲಿಯೇ ಅನುರಕ್ತಳಾಗಿದ್ದಾಳೆ. ನನ್ನ ಹಿತವನ್ನೇ ಬಯಸುತ್ತಾಳೆ. ನನ್ನಲ್ಲಿ ಪರಮ ಸ್ನೇಹವನ್ನಿಟ್ಟುಕೊಂಡಿದ್ದಾಳೆ. ಅಂಥವಳನ್ನು ಭಾರ್ಯೆಯಾಗಿ ಹೊಂದಿದ ಮನುಷ್ಯನು ಈ ಭುವಿಯಲ್ಲಿಯೇ ಧನ್ಯನು.

[669]12142008a ಭಾರ್ಯಾ ಹಿ ಪರಮೋ ನಾಥಃ[670] ಪುರುಷಸ್ಯೇಹ ಪಠ್ಯತೇ|

ಭುಂಕ್ತೇಮಯ್ಯಭುಂಕ್ತೇ ಯಾ ನಾಸ್ನಾತೇ ಸ್ನಾತಿ ಸುವ್ರತಾ| ನಾತಿಷ್ಠತ್ಯುಪತಿಷ್ಠೇತ ಶೇತೇ ಚ ಶಯಿತೇ ಮಯಿ|| ಹೃಷ್ಟೇ ಭವತಿ ಸಾ ಹೃಷ್ಟಾ ದುಃಖಿತೇ ಮಯಿ ದುಃಖಿತಾ| ಪ್ರೋಷಿತೇ ದೀನವದನಾ ಕ್ರುದ್ಧೇ ಚ ಪ್ರಿಯವಾದಿನೀ|| ಪತಿವ್ರತಾ ಪತಿಗತಿಃ ಪತಿಪ್ರಿಯಹಿತೇ ರತಾ| ಯಸ್ಯ ಸ್ಯಾತ್ತಾದೃಶೀ ಭಾರ್ಯಾ ಧನ್ಯಃ ಸ ಪುರುಷೋ ಭುವಿ||

669 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಎರಡು ಅಧಿಕ ಶ್ಲೋಕಗಳಿವೆ: ವೃಕ್ಷಮೂಲೇಽಪಿ ದಯಿತಾ ಯಸ್ಯ ತಿಷ್ಠತಿ ತದ್ಗೃಹಮ್| ಪ್ರಾಸಾದೋಽಪಿ ತಯಾ ಹೀನಃ ಕಾಂತಾರ ಇತಿ ನಿಶ್ಚಿತಮ್|| ಧರ್ಮಾರ್ಥಕಾಮಕಾಲೇಷು ಭಾರ್ಯಾ ಪುಂಸಃ ಸಹಾಯಿನೀ| ವಿದೇಶಗಮನೇ ಚಾಸ್ಯ ಸೈವ ವಿಶ್ವಾಸಕಾರಿಕಾ||

670 ಹ್ಯರ್ಥಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12142008c ಅಸಹಾಯಸ್ಯ ಲೋಕೇಽಸ್ಮಿಽಲ್ಲೋಕಯಾತ್ರಾಸಹಾಯಿನೀ||

ಭಾರ್ಯೆಯೇ ಪುರುಷನ ಪರಮ ನಾಥಳು ಎಂದು ಹೇಳುತ್ತಾರೆ. ಈ ಲೋಕದಲ್ಲಿರುವ ಅಸಹಾಯಕರಿಗೆ ಪತ್ನಿಯೇ ಲೋಕಯಾತ್ರೆಯಲ್ಲಿ ಸಹಾಯಕಳಾಗಿರುತ್ತಾಳೆ.

12142009a ತಥಾ ರೋಗಾಭಿಭೂತಸ್ಯ ನಿತ್ಯಂ ಕೃಚ್ಚ್ರಗತಸ್ಯ ಚ|
12142009c ನಾಸ್ತಿ ಭಾರ್ಯಾಸಮಂ ಕಿಂ ಚಿನ್ನರಸ್ಯಾರ್ತಸ್ಯ ಭೇಷಜಮ್||

ರೋಗಪೀಡಿತನಾಗಿ ನಿತ್ಯವೂ ಕಷ್ಟದಲ್ಲಿರುವ ಆರ್ತನಿಗೆ ಪತ್ನಿಯ ಸಮನಾದ ಚಿಕಿತ್ಸೆಯು ಬೇರೆ ಯಾವುದೂ ಇಲ್ಲ.

12142010a ನಾಸ್ತಿ ಭಾರ್ಯಾಸಮೋ ಬಂಧುರ್ನಾಸ್ತಿ ಭಾರ್ಯಾಸಮಾ ಗತಿಃ|
12142010c ನಾಸ್ತಿ ಭಾರ್ಯಾಸಮೋ ಲೋಕೇ ಸಹಾಯೋ ಧರ್ಮಸಾಧನಃ[671]||

ಭಾರ್ಯೆಯ ಸಮನಾದ ಬಂಧುವಿಲ್ಲ. ಭಾರ್ಯೆಯ ಸಮನಾದ ಗತಿಯಿಲ್ಲ. ಲೋಕದಲ್ಲಿ ಧರ್ಮಸಾಧನೆಗೆ ಭಾರ್ಯೆಯ ಸಮನಾದ ಸಹಾಯಕರಿಲ್ಲ.”

12142011a ಏವಂ ವಿಲಪತಸ್ತಸ್ಯ ದ್ವಿಜಸ್ಯಾರ್ತಸ್ಯ ತತ್ರ ವೈ|
12142011c ಗೃಹೀತಾ ಶಕುನಘ್ನೇನ ಭಾರ್ಯಾ ಶುಶ್ರಾವ ಭಾರತೀಮ್||

---

671 ಇದರ ನಂತರ ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ಯಸ್ಯ ಭಾರ್ಯಾ ಗೃಹೇ ನಾಸ್ತಿ ಸಾಧ್ವೀ ಚ ಪ್ರಿಯವಾದಿನೀ| ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಮ್|| ಗೀತಾ ಪ್ರೆಸ್ ನಲ್ಲಿ ಇದರ ನಂತರ ಇನ್ನೊಂದು ಅಧ್ಯಾಯವು ಪ್ರಾರಂಭವಾಗುತ್ತದೆ. ಆದರೆ ಪುಣೆಯ ಸಂಪುಟದಲ್ಲಿ ಎರಡು ಅಧ್ಯಾಯಗಳನ್ನು ಒಂದೇ ಅಧ್ಯಾಯದಲ್ಲಿ ನೀಡಲಾಗಿದೆ.

ಹೀಗೆ ವಿಲಪಿಸುತ್ತಿದ್ದ ಪಕ್ಷಿಯ ಆರ್ತ ಸ್ವರವನ್ನು ಹಕ್ಕಿಹಿಡಿಯುವ ವ್ಯಾಧನ ಬಲೆಯಲ್ಲಿ ಸಿಕ್ಕಿಬಿದ್ದಿದ್ದ ಪಾರಿವಾಳದ ಪತ್ನಿಯು ಕೇಳಿದಳು.

12142012a ನ ಸಾ ಸ್ತ್ರೀತ್ಯಭಿಭಾಷಾ ಸ್ಯಾದ್ಯಸ್ಯಾ ಭರ್ತಾ ನ ತುಷ್ಯತಿ|
12142012c ಅಗ್ನಿಸಾಕ್ಷಿಕಮಪ್ಯೇತದ್ಭರ್ತಾ ಹಿ ಶರಣಂ ಸ್ತ್ರಿಯಃ[674]||

“ಯಾರ ಕುರಿತು ಪತಿಯು ಸಂತುಷ್ಟನಾಗಿಲ್ಲವೋ ಆ ಸ್ತ್ರೀಯನ್ನು ಸ್ತ್ರೀಯೆಂದು ಪರಿಗಣಿಸಬಾರದು. ಅಗ್ನಿಯನ್ನು ಸಾಕ್ಷಿಯಾಗಿರಿಸಿಕೊಂಡು ಯಾರೊಡನೆ ಸ್ತ್ರೀಯ ವಿವಾಹವಾಗಿದೆಯೋ ಅವನೇ ಅವಳ ಪತಿ ಮತ್ತು ಶರಣ್ಯನು.”

12142013a ಇತಿ ಸಂಚಿಂತ್ಯ ದುಃಖಾರ್ತಾ ಭರ್ತಾರಂ ದುಃಖಿತಂ ತದಾ|
12142013c ಕಪೋತೀ ಲುಬ್ಧಕೇನಾಥ ಯತ್ತಾ ವಚನಮಬ್ರವೀತ್||

ಹೀಗೆ ಆಲೋಚಿಸಿ ವ್ಯಾಧನ ಬಲೆಯಲ್ಲಿ ಸಿಕ್ಕಿಬಿದ್ದಿದ್ದ ದುಃಖಾರ್ತ ಕಪೋತಿಯು ದುಃಖಿತನಾಗಿದ್ದ ತನ್ನ ಪತಿಗೆ ಹೀಗೆ ಹೇಳಿದಳು:

12142014a ಹಂತ ವಕ್ಷ್ಯಾಮಿ ತೇ ಶ್ರೇಯಃ ಶ್ರುತ್ವಾ ಚ ಕುರು ತತ್ತಥಾ|

---

672 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ಕಪೋತ್ಯುವಾಚ| ಅಹೋಽತೀವ ಸುಭಾಗ್ಯಾಹಂ ಯಸ್ಯಾ ಮೇ ದಯಿತಃ ಪತಿಃ| ಅಸತೋ ವಾ ಸತೋ ವಾಪಿ ಗುಣಾನೇವಂ ಪ್ರಭಾಷತೇ||

673 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕಾರ್ಧವಿದೆ: ತುಷ್ಟೇ ಭರ್ತರಿ ನಾರೀಣಾಂ ತುಷ್ಟಾಃ ಸ್ಯುಃ ಸರ್ವದೇವತಾಃ||

674 ಇದರ ನಂತರ ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ದಾವಾಗ್ನಿನೇವ ನಿರ್ದಗ್ಧಾ ಸಪುಷ್ಪಸ್ತವಕಾ ಲತಾ| ಭಸ್ಮೀಭವತಿ ಸಾ ನಾರೀ ಯಸ್ಯಾ ಭರ್ತಾ ನ ತುಷ್ಯತಿ||

12142014c ಶರಣಾಗತಸಂತ್ರಾತಾ ಭವ ಕಾಂತ ವಿಶೇಷತಃ||

“ನಿಲ್ಲು! ನಿನಗೆ ಶ್ರೇಯಸ್ಕರವಾದುದನ್ನು ಹೇಳುತ್ತೇನೆ. ಅದನ್ನು ಕೇಳಿ ಅದರಂತೆಯೇ ಮಾಡು. ಕಾಂತ! ಈಗ ಇಲ್ಲಿ ಕಷ್ಟದಲ್ಲಿ ಸಿಲುಕಿ ಶರಣಾಗತನಾಗಿರುವ ಇವನನ್ನು ವಿಶೇಷವಾಗಿ ರಕ್ಷಿಸು!

12142015a ಏಷ ಶಾಕುನಿಕಃ ಶೇತೇ ತವ ವಾಸಂ ಸಮಾಶ್ರಿತಃ|
12142015c ಶೀತಾರ್ತಶ್ಚ ಕ್ಷುಧಾರ್ತಶ್ಚ ಪೂಜಾಮಸ್ಮೈ ಪ್ರಯೋಜಯ||

ಹಕ್ಕಿ ಹಿಡಿಯುವ ವ್ಯಾಧನು ಇಲ್ಲಿ ಛಳಿ-ಹಸಿವೆಗಳಿಂದ ಆರ್ತನಾಗಿ ನಿನ್ನ ವಾಸಸ್ಥಾನವನ್ನೇ ಆಶ್ರಯಿಸಿ ಮಲಗಿದ್ದಾನೆ. ನೀನು ಇವನನ್ನು ಸತ್ಕರಿಸುವವನಾಗು.

12142016a ಯೋ ಹಿ ಕಶ್ಚಿದ್ದ್ವಿಜಂ ಹನ್ಯಾದ್ಗಾಂ ವಾ ಲೋಕಸ್ಯ ಮಾತರಮ್|
12142016c ಶರಣಾಗತಂ ಚ ಯೋ ಹನ್ಯಾತ್ತುಲ್ಯಂ ತೇಷಾಂ ಚ ಪಾತಕಮ್||

ಯಾರು ದ್ವಿಜನನ್ನು, ಲೋಕಮಾತೆ ಗೋವನ್ನು ಅಥವಾ ಶರಣಾಗತನನ್ನು ಕೊಲ್ಲುತ್ತಾನೋ ಅವನಿಗೆ ಒಂದೇ ಸಮನಾದ ಪಾಪವು ತಗಲುತ್ತದೆ.

12142017a ಯಾಸ್ಮಾಕಂ ವಿಹಿತಾ ವೃತ್ತಿಃ ಕಾಪೋತೀ ಜಾತಿಧರ್ಮತಃ|
12142017c ಸಾ ನ್ಯಾಯ್ಯಾತ್ಮವತಾ ನಿತ್ಯಂ ತ್ವದ್ವಿಧೇನಾಭಿವರ್ತಿತುಮ್||

ಜಾತಿಧರ್ಮಕ್ಕನುಸಾರವಾಗಿ ನಮಗೆ ಕಾಪೋತೀ ವೃತ್ತಿಯು ವಿಹಿತವಾಗಿದೆ. ನಿನ್ನಂತಹ ಆತ್ಮವಂತನು ನಿತ್ಯವೂ ಆ ವೃತ್ತಿಯನ್ನು ಪರಿಪಾಲಿಸಬೇಕು.

12142018a ಯಸ್ತು ಧರ್ಮಂ ಯಥಾಶಕ್ತಿ ಗೃಹಸ್ಥೋ ಹ್ಯನುವರ್ತತೇ|

12142018c ಸ ಪ್ರೇತ್ಯ ಲಭತೇ ಲೋಕಾನಕ್ಷಯಾನಿತಿ ಶುಶ್ರುಮ॥

ಯಥಾಶಕ್ತಿ ತನ್ನ ಧರ್ಮವನ್ನು ಪಾಲಿಸುವ ಗೃಹಸ್ಥನು ಮರಣಾನಂತರ ಅಕ್ಷಯ ಲೋಕಗಳನ್ನು ಪಡೆದುಕೊಳ್ಳುತ್ತಾನೆ ಎಂದು ಕೇಳಿದ್ದೇವೆ.

12142019a ಸ ತ್ವಂ ಸಂತಾನವಾನದ್ಯ ಪುತ್ರವಾನಪಿ ಚ ದ್ವಿಜ|
12142019c ತತ್ಸ್ವದೇಹೇ ದಯಾಂ ತ್ಯಕ್ತ್ವಾ ಧರ್ಮಾರ್ಥೌ ಪರಿಗೃಹ್ಯ ವೈ|
12142019e ಪೂಜಾಮಸ್ಯೈ ಪ್ರಯುಂಕ್ಷ್ವ ತ್ವಂ ಪ್ರೀಯೇತಾಸ್ಯ ಮನೋ ಯಥಾ[675]॥

ದ್ವಿಜ! ಇಂದು ನೀನು ಸಂತಾನವಂತನೂ ಪುತ್ರವಂತನೂ ಆಗಿದ್ದೀಯೆ. ಆದುದರಿಂದ ನಿನ್ನ ದೇಹದ ಮೇಲಿನ ದಯೆಯನ್ನು ತೊರೆದು ಧರ್ಮಾರ್ಥಗಳನ್ನು ಸ್ವೀಕರಿಸಿ ಇವನ ಮನಸ್ಸು ಪ್ರಸನ್ನಗೊಳ್ಳುವ ರೀತಿಯಲ್ಲಿ ಸತ್ಕರಿಸು.”

12142020a ಇತಿ ಸಾ ಶಕುನೀ ವಾಕ್ಯಂ ಕ್ಷಾರಕಸ್ಥಾ ತಪಸ್ವಿನೀ|
12142020c ಅತಿದುಃಖಾನ್ವಿತಾ ಪ್ರೋಚ್ಯ ಭರ್ತಾರಂ ಸಮುದೈಕ್ಷತ[676]॥

ಆ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದ ತಪಸ್ವಿನೀ ಹೆಣ್ಣು ಪಕ್ಷಿಯು ಅತಿ ದುಃಖಾನ್ವಿತಳಾಗಿ ಹೀಗೆ ಹೇಳಿ ತನ್ನ ಪತಿಯ ಕಡೆ ನೋಡತೊಡಗಿದಳು.

12142021a ಸ ಪತ್ನ್ಯಾ ವಚನಂ ಶ್ರುತ್ವಾ ಧರ್ಮಯುಕ್ತಿಸಮನ್ವಿತಮ್|

---

675 ಇದರ ನಂತರ ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ:
ಮತ್ಕೃತೇ ಮಾ ಚ ಸಂತಾಪಂ ಕುರ್ವೀರ್ಥಾಸ್ತ್ವಂ ವಿಹಂಗಮ|
ಶರೀರಯಾತ್ರಾಕೃತ್ಯರ್ಥಮನ್ಯಾನ್ ದಾರಾನುಪೈಷ್ಯಸಿ॥

676 ಇದರ ನಂತರ ಗೀತಾ ಪ್ರೆಸ್ ನಲ್ಲಿ ಇನ್ನೊಂದು ಅಧ್ಯಾಯವು ಪ್ರಾರಂಭವಾಗುತ್ತದೆ.

12142021c ಹರ್ಷೇಣ ಮಹತಾ ಯುಕ್ತೋ ಬಾಷ್ಪವ್ಯಾಕುಲಲೋಚನಃ||

ಪತ್ನಿಯ ಆ ಧರ್ಮಯುಕ್ತಿಸಮನ್ವಿತ ಮಾತನ್ನು ಕೇಳಿ
ಗಂಡುಪಾರಿವಾಳವು ಮಹಾ ಹರ್ಷಯುಕ್ತಗೊಂಡು ಕಣ್ಣೀರು ತುಂಬಿ
ವ್ಯಾಕುಲಲೋಚನನಾದನು.

12142022a ತಂ ವೈ ಶಾಕುನಿಕಂ ದೃಷ್ಟ್ವಾ ವಿಧಿದೃಷ್ಟೇನ ಕರ್ಮಣಾ|
12142022c ಪೂಜಯಾಮಾಸ ಯತ್ನೇನ ಸ ಪಕ್ಷೀ ಪಕ್ಷಿಜೀವಿನಮ್||

ಆ ಪಕ್ಷಿಯು ಪಕ್ಷಿಗಳನ್ನು ಹಿಂಸಿಸಿ ಜೀವಿಸುತ್ತಿದ್ದ ವ್ಯಾಧನನ್ನು ನೋಡಿ
ವಿಧಿದೃಷ್ಟ ಕರ್ಮಗಳಿಂದ ಪ್ರಯತ್ನಪಟ್ಟು ಪೂಜಿಸತೊಡಗಿತು.

12142023a ಉವಾಚ ಚ ಸ್ವಾಗತಂ ತೇ ಬ್ರೂಹಿ ಕಿಂ ಕರವಾಣ್ಯಹಮ್|
12142023c ಸಂತಾಪಶ್ಚ ನ ಕರ್ತವ್ಯಃ ಸ್ವಗೃಹೇ ವರ್ತತೇ ಭವಾನ್||

ಅವನು ಹೇಳಿದನು: "ನಿನಗೆ ಸ್ವಾಗತ. ಹೇಳು ನಾನು ನಿನಗೆ ಏನು
ಮಾಡಲಿ? ಸಂತಾಪಪಡಬೇಡ. ನೀನು ಈಗ ನಿನ್ನದೇ ಮನೆಯಲ್ಲಿ
ಇದ್ದೀಯೆ.

12142024a ತದ್ ಬ್ರವೀತು ಭವಾನ್ ಕ್ಷಿಪ್ರಂ ಕಿಂ ಕರೋಮಿ ಕಿಮಿಚ್ಛಸಿ|
12142024c ಪ್ರಣಯೇನ ಬ್ರವೀಮಿ ತ್ವಾಂ ತ್ವಂ ಹಿ ನಃ ಶರಣಾಗತಃ||

ಆದುದರಿಂದ ಬೇಗ ಹೇಳು. ನಿನಗೆ ಏನು ಬೇಕು? ನಾನೇನು ಮಾಡಲಿ?
ನಾನು ಅತಿ ಪ್ರೀತಿಯಿಂದ ಕೇಳುತ್ತಿದ್ದೇನೆ. ಏಕೆಂದರೆ ನೀನು ನಮ್ಮ
ಮನೆಗೆ ಬಂದಿದ್ದೀಯೆ.

12142025a ಶರಣಾಗತಸ್ಯ ಕರ್ತವ್ಯಮಾತಿಥ್ಯಮಿಹ ಯತ್ನತಃ|
12142025c ಪಂಚಯಜ್ಞಪ್ರವೃತ್ತೇನ ಗೃಹಸ್ಥೇನ ವಿಶೇಷತಃ||

ಮನೆಗೆ ಬಂದಿರುವ ಅತಿಥಿಗೆ ಪ್ರಯತ್ನಪೂರ್ವಕ ಸತ್ಕಾರವನ್ನು ಎಲ್ಲರೂ ಮಾಡಬೇಕಿಂದಿದ್ದರೂ ಪಂಚಯಜ್ಞದ ಅಧಿಕಾರಿಯಾದ ಗೃಹಸ್ಥನಿಗೆ ಇದು ಪ್ರಧಾನ ಧರ್ಮವು.

12142026a ಪಂಚಯಜ್ಞಾಂಸ್ತು ಯೋ ಮೋಹಾನ್ನ ಕರೋತಿ ಗೃಹಾಶ್ರಮೀ|
12142026c ತಸ್ಯ ನಾಯಂ ನ ಚ ಪರೋ ಲೋಕೋ ಭವತಿ ಧರ್ಮತಃ||

ಗೃಹಸ್ಥಾಶ್ರಮದಲ್ಲಿದ್ದುಕೊಂಡೂ ಮೋಹದಿಂದ ಪಂಚಯಜ್ಞಗಳನ್ನು ಅನುಷ್ಠಾನಮಾಡದ ಗೃಹಸ್ಥನಿಗೆ ಧರ್ಮದ ಅನುಸಾರ ಈ ಲೋಕವೂ ಮತ್ತು ಪರ ಲೋಕವೂ ದೊರಕುವುದಿಲ್ಲ.

12142027a ತದ್ ಬ್ರೂಹಿ ತ್ವಂ ಸುವಿಸ್ರಬ್ಧೋ ಯತ್ತ್ವಂ ವಾಚಾ ವದಿಷ್ಯಸಿ|
12142027c ತತ್ಕರಿಷ್ಯಾಮ್ಯಹಂ ಸರ್ವಂ ಮಾ ತ್ವಂ ಶೋಕೇ ಮನಃ ಕೃಥಾಃ||

ಆದುದರಿಂದ ನೀನು ಪೂರ್ಣ ವಿಶ್ವಾಸದಿಂದ ನನ್ನಲ್ಲಿ ನಿನ್ನ ಮನಸ್ಸನ್ನು ತಿಳಿಸು. ನೀನು ಏನು ಹೇಳುತ್ತೀಯೋ ಅವೆಲ್ಲವನ್ನೂ ನಾನು ಮಾಡುತ್ತೇನೆ. ಆದುದರಿಂದ ನೀನು ಮನಸ್ಸಿನಲ್ಲಿ ಶೋಕಿಸಬೇಡ.”

12142028a ತಸ್ಯ ತದ್ವಚನಂ ಶ್ರುತ್ವಾ ಶಕುನೇರ್ಲುಬ್ಧಕೋಽಬ್ರವೀತ್|
12142028c ಬಾಧತೇ ಖಿಲು ಮಾ ಶೀತಂ ಹಿಮತ್ರಾಣಂ ವಿಧೀಯತಾಮ್||

ಪಕ್ಷಿಯ ಆ ಮಾತನ್ನು ಕೇಳಿ ವ್ಯಾಧನು “ಛಳಿಯು ನನ್ನನ್ನು ಅತಿಯಾಗಿ ಬಾಧಿಸುತ್ತಿದೆ. ಛಳಿಯನ್ನು ಹೋಗಲಾಡಿಸುವಂತೆ ಏನಾದರೂ ಮಾಡು” ಎಂದನು.

12142029a ಏವಮುಕ್ತಸ್ತತಃ ಪಕ್ಷೀ ಪರ್ಣಾನ್ಯಾಸ್ತೀರ್ಯ ಭೂತಲೇ|
12142029c ಯಥಾಶುಷ್ಕಾಣಿ ಯತ್ನೇನ ಜ್ವಲನಾರ್ಥಂ ದ್ರುತಂ ಯಯೌ||

ಅವನು ಹೀಗೆ ಹೇಳಲು ಪಕ್ಷಿಯು ನೆಲದ ಮೇಲೆ ಬಹಳಷ್ಟು ಎಲೆಗಳನ್ನು ತಂದು ಹಾಕಿತು ಮತ್ತು ಬೆಂಕಿಯನ್ನು ಹೊತ್ತಿಸಲು ತನ್ನ ರೆಕ್ಕೆಗಳನ್ನು ಬೀಸಿ ಆ ಎಲೆಗಳನ್ನು ಒಣಗಿಸಿತು.

12142030a ಸ ಗತ್ವಾಂಗಾರಕರ್ಮಾಂತಂ ಗೃಹೀತ್ವಾಗ್ನಿಮಥಾಗಮತ್|
12142030c ತತಃ ಶುಷ್ಕೇಷು ಪರ್ಣೇಷು ಪಾವಕಂ ಸೋಽಭ್ಯದೀದಿಪತ್||

ಅವನು ಕುಲುಮೆಯವನಲ್ಲಿಗೆ ಹೋಗಿ ಬೆಂಕಿಯನ್ನು ತಂದು ಅದನ್ನು ಒಣಗಿದ ಎಲೆಗಳ ಮೇಲಿಟ್ಟು ಅಲ್ಲಿ ಅಗ್ನಿಯನ್ನು ಪ್ರಜ್ವಲಿಸಿತು.

12142031a ಸುಸಂದೀಪ್ತಂ ಮಹತ್ ಕೃತ್ವಾ ತಮಾಹ ಶರಣಾಗತಮ್|
12142031c ಪ್ರತಾಪಯ ಸುವಿಸ್ರಬ್ಧಂ ಸ್ವಗಾತ್ರಾಣ್ಯಕುತೋಭಯಃ||

ಹೀಗೆ ಅಗ್ನಿಯನ್ನು ದೊಡ್ಡದಾಗಿ ಪ್ರಜ್ವಲಿಸಿ ಪಕ್ಷಿಯು ಶರಣಾಗತನಿಗೆ ಹೇಳಿತು: "ಈಗ ನಿನಗೆ ಯಾವ ರೀತಿಯ ಭಯವೂ ಇಲ್ಲ. ನಿಶ್ಚಿಂತನಾಗಿ ನಿನ್ನ ಎಲ್ಲ ಅಂಗಾಗಗಳನ್ನೂ ಚೆನ್ನಾಗಿ ಕಾಯಿಸಿಕೋ."

12142032a ಸ ತಥೋಕ್ತಸ್ತಥೇತ್ಯುಕ್ತ್ವಾ ಲುಬ್ಧೋ ಗಾತ್ರಾಣ್ಯತಾಪಯತ್|
12142032c ಅಗ್ನಿಪ್ರತ್ಯಾಗತಪ್ರಾಣಸ್ತತಃ ಪ್ರಾಹ ವಿಹಂಗಮಮ್[677]||

ಹಾಗೆಯೇ ಆಗಲೆಂದು ಹೇಳಿ ವ್ಯಾಧನು ತನ್ನ ಶರೀರವನ್ನು ಕಾಯಿಸಿಕೊಂಡನು. ಅಗ್ನಿಯ ಹತ್ತಿರ ಕುಳಿತಿದ್ದ ಅವನಿಗೆ ಪ್ರಾಣವು ಪುನಃ ಬಂದಂತಾಯಿತು. ಆಗ ಅವನು ಪಕ್ಷಿಗೆ ಹೇಳಿದನು:

---

677 ಇದರ ನಂತರ ಗೀತಾ ಪ್ರೆಸ್ ಗೋರಖಪುರದ ಸಂಪುಟದಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ಹರ್ಷೇಣ ಮಹತಾಽಽವಿಷ್ಟೋ ವಾಕ್ಯಂ ವ್ಯಾಕುಲಲೋಚನಃ| ತಥೇಮಂ ಶಕುನಿಂ ದೃಷ್ಟ್ವಾ ವಿಧಿದೃಷ್ಟೇನ ಕರ್ಮಣಾ||

12142033a ದತ್ತಮಾಹಾರಮಿಚ್ಛಾಮಿ ತ್ವಯಾ ಕ್ಷುದ್ಬಾಧತೇ ಹಿ ಮಾಮ್।
12142033c ತದ್ವಚಃ ಸ ಪ್ರತಿಶ್ರುತ್ಯ ವಾಕ್ಯಮಾಹ ವಿಹಂಗಮಃ॥
12142034a ನ ಮೇಽಸ್ತಿ ವಿಭವೋ ಯೇನ ನಾಶಯಾಮಿ ತವ ಕ್ಷುಧಾಮ್।
12142034c ಉತ್ಪನ್ನೇನ ಹಿ ಜೀವಾಮೋ ವಯಂ ನಿತ್ಯಂ ವನೌಕಸಃ॥
12142035a ಸಂಚಯೋ ನಾಸ್ತಿ ಚಾಸ್ಮಾಕಂ ಮುನೀನಾಮಿವ ಕಾನನೇ।


“ಹಸಿವೆಯು ನನ್ನನ್ನು ಬಾಧಿಸುತ್ತಿದೆ. ನೀನು ನೀಡುವ ಆಹಾರವನ್ನು ಬಯಸುತ್ತೇನೆ.” ಅವನ ಆ ಮಾತನ್ನು ಕೇಳಿ ಪಕ್ಷಿಯು ಹೇಳಿತು: “ನಿನ್ನ ಹಸಿವೆಯನ್ನು ನಾಶಪಡಿಸಲು ನನ್ನಲ್ಲಿ ಸಂಪತ್ತಿಲ್ಲ. ನಾನು ಒಂದು ವನವಾಸೀ ಪಕ್ಷಿ. ನಿತ್ಯವೂ ವನೌಕಸ ಉತ್ಪತ್ತಿಗಳಿಂದಲೇ ನಾವು ಜೀವಿಸುತ್ತೇವೆ. ಕಾನನದಲ್ಲಿರುವ ಮುನಿಗಳಂತೆ ನಮ್ಮಲ್ಲಿ ಯಾವ ಭೋಜನ ಸಂಗ್ರಹವೂ ಇಲ್ಲ.”

12142035c ಇತ್ಯುಕ್ತ್ವಾ ಸ ತದಾ ತತ್ರ ವಿವರ್ಣವದನೋಽಭವತ್॥
12142036a ಕಥಂ ನು ಖಲು ಕರ್ತವ್ಯಮಿತಿ ಚಿಂತಾಪರಃ ಸದಾ।
12142036c ಬಭೂವ ಭರತಶ್ರೇಷ್ಠ ಗರ್ಹಯನ್ ವೃತ್ತಿಮಾತ್ಮನಃ॥

ಹೀಗೆ ಹೇಳಿ ಆ ಪಾರಿವಾಳದ ಮುಖವು ಸ್ವಲ್ಪ ಉದಾಸಗೊಂಡಿತು. ಈಗ ನಾನು ಏನು ಮಾಡಬೇಕು ಎಂದು ಚಿಂತಾಪರನಾದನು. ಭರತಶ್ರೇಷ್ಠ! ಅವನು ತನ್ನ ಕಪೋತೀ ವೃತ್ತಿಯನ್ನು ನಿಂದಿಸತೊಡಗಿದನು.

12142037a ಮುಹೂರ್ತಾಲ್ಲಬ್ಧಸಂಜ್ಞಸ್ತು ಸ ಪಕ್ಷೀ ಪಕ್ಷಿಘಾತಕಮ್।
12142037c ಉವಾಚ ತರ್ಪಯಿಷ್ಯೇ ತ್ವಾಂ ಮುಹೂರ್ತಂ ಪ್ರತಿಪಾಲಯ॥

ಸ್ವಲ್ಪವೇ ಸಮಯದಲ್ಲಿ ಅದಕ್ಕೆ ಏನೋ ನೆನಪಾಯಿತು. ಪಕ್ಷಿಯು



ಪಕ್ಷಿಘಾತಕನಿಗೆ ಹೇಳಿತು: “ಒಂದು ಕ್ಷಣ ನಿಲ್ಲು. ನಿನ್ನನ್ನು ತೃಪ್ತಿಗೊಳಿಸುತ್ತೇನೆ.”

12142038a ಇತ್ಯುಕ್ತ್ವಾ ಶುಷ್ಕಪರ್ಣ್ಯೈಃ ಸ ಸಂಪ್ರಜ್ವಾಲ್ಯ ಹುತಾಶನಮ್|
12142038c ಹರ್ಷೇಣ ಮಹತಾ ಯುಕ್ತಃ ಕಪೋತಃ ಪುನರಬ್ರವೀತ್||

ಹೀಗೆ ಹೇಳಿ ಆ ಪಕ್ಷಿಯು ಒಣಗಿದ ಎಲೆಗಳಿಂದ ಪುನಃ ಅಗ್ನಿಯನ್ನು ಪ್ರಜ್ವಲಿತಗೊಳಿಸಿ ಅತ್ಯಂತ ಹರ್ಷದಿಂದ ವ್ಯಾಧನಿಗೆ ಹೇಳಿತು:

12142039a ದೇವಾನಾಂ ಚ ಮುನೀನಾಂ ಚ ಪಿತೃಣಾಂ ಚ ಮಹಾತ್ಮನಾಮ್|
12142039c ಶ್ರುತಪೂರ್ವೋ ಮಯಾ ಧರ್ಮೋ ಮಹಾನತಿಥಿಪೂಜನೇ||

“ದೇವತೆಗಳ, ಮುನಿಗಳ, ಮತ್ತು ಮಹಾತ್ಮ ಪಿತೃಗಳ ಪೂಜೆಗಿಂತಲೂ ಅತಿಥಿಪೂಜನವು ಮಹಾ ಧರ್ಮವೆಂದು ಹಿಂದೆ ನಾನು ಕೇಳಿದ್ದೇನೆ[678].

12142040a ಕುರುಷ್ವಾನುಗ್ರಹಂ ಮೇಽದ್ಯ ಸತ್ಯಮೇತದ್ ಬ್ರವೀಮಿ ತೇ|
12142040c ನಿಶ್ಚಿತಾ ಖಲು ಮೇ ಬುದ್ಧಿರತಿಥಿಪ್ರತಿಪೂಜನೇ||

ಇಂದು ನೀನು ನನ್ನನ್ನು ಅನುಗ್ರಹಿಸು. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಅತಿಥಿಪೂಜನೆಯ ಕುರಿತು ಇಂದು ನನ್ನ ಬುದ್ಧಿಯು ನಿಶ್ಚಯಿಸಿಬಿಟ್ಟಿದೆ.”

12142041a ತತಃ ಸತ್ಯಪ್ರತಿಜ್ಞೋ ವೈ ಸ ಪಕ್ಷೀ ಪ್ರಹಸನ್ನಿವ|
12142041c ತಮಗ್ನಿಂ ತ್ರಿಃ ಪರಿಕ್ರಮ್ಯ ಪ್ರವಿವೇಶ ಮಹೀಪತೇ||

---

678 ನಾನು ಋಷಿಗಳು, ದೇವತೆಗಳು, ಪಿತೃಗಳು ಮತ್ತು ಮಹಾತ್ಮರ ಬಾಯಿಂದ ಅತಿಥಿಪೂಜೆಯು ಮಹಾ ಧರ್ಮವೆಂದು ಈ ಮೊದಲೇ ಕೇಳಿದ್ದೇನೆ (ಗೀತಾ ಪ್ರೆಸ್ ಗೋರಖಪುರ ಸಂಪುಟ).

ಮಹೀಪತೇ! ಅನಂತರ ಅತಿಥಿಪೂಜೆಯ ಸತ್ಯಪ್ರತಿಜ್ಞೆಯನ್ನು ಮಾಡಿದ ಆ ಪಕ್ಷಿಯು ನಗುನಗುತ್ತಲೇ ಮೂರು ಬಾರಿ ಪ್ರದಕ್ಷಿಣೆ ಮಾಡಿ ಅಗ್ನಿಯನ್ನು ಪ್ರವೇಶಿಸಿತು.

12142042a ಅಗ್ನಿಮಧ್ಯಂ ಪ್ರವಿಷ್ಟಂ ತಂ ಲುಬ್ಧೋ ದೃಷ್ಟ್ವಾ ಥ ಪಕ್ಷಿಣಮ್|
12142042c ಚಿಂತಯಾಮಾಸ ಮನಸಾ ಕಿಮಿದಂ ನು ಕೃತಂ ಮಯಾ||

ಅಗ್ನಿಮಧ್ಯವನ್ನು ಪ್ರವೇಶಿಸಿದ ಆ ಪಕ್ಷಿಯನ್ನು ನೋಡಿದ ವ್ಯಾಧನು "ಇದೇನು ಮಾಡಿಬಿಟ್ಟೆ!" ಎಂದು ಮನಸ್ಸಿನಲ್ಲಿಯೇ ಚಿಂತಿಸತೊಡಗಿದನು.

12142043a ಅಹೋ ಮಮ ನೃಶಂಸಸ್ಯ ಗರ್ಹಿತಸ್ಯ ಸ್ವಕರ್ಮಣಾ|
12142043c ಅಧರ್ಮಃ ಸುಮಹಾನ್ ಘೋರೋ ಭವಿಷ್ಯತಿ ನ ಸಂಶಯಃ||

"ಅಯ್ಯೋ! ನನ್ನದೇ ಕ್ರೂರ ಕರ್ಮದಿಂದ ನಿಂದಿತನಾದ ನನ್ನಿಂದ ಮಹಾ ಘೋರ ಅಧರ್ಮವು ನಡೆದುಹೋಯಿತು. ಇದರಲ್ಲಿ ಸಂಶಯವೇ ಇಲ್ಲ."

12142044a ಏವಂ ಬಹುವಿಧಂ ಭೂರಿ ವಿಲಲಾಪ ಸ ಲುಬ್ಧಕಃ|
12142044c ಗರ್ಹಯನ್ ಸ್ವಾನಿ ಕರ್ಮಾಣಿ ದ್ವಿಜಂ ದೃಷ್ಟ್ವಾ ತಥಾಗತಮ್||

ಪಕ್ಷಿಯ ಆ ಅವಸ್ಥೆಯನ್ನು ನೋಡಿ ಹೀಗೆ ಬಹುವಿಧದಲ್ಲಿ ತನ್ನ ಕರ್ಮಗಳನ್ನು ನಿಂದಿಸುತ್ತಾ ವ್ಯಾಧನು ಅತಿಯಾಗಿ ವಿಲಪಿಸಿದನು."

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕಪೋತಲುಬ್ಧಕಸಂವಾದೇ
ದ್ವಾಚತ್ವಾರಿಂಶದಧಿಕಶತತಮೋಽಧ್ಯಾಯಃ||

ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕಪೋತಲುಬ್ಧಕಸಂವಾದ ಎನ್ನುವ
ನೂರಾನಲ್ವತ್ತೆರಡನೇ ಅಧ್ಯಾಯವು.

೧೪೨

ವ್ಯಾಧನ ವೈರಾಗ್ಯ (1-10).

12143001 ಭೀಷ್ಮ ಉವಾಚ|
12143001a ತತಸ್ತಂ ಲುಬ್ಧಕಃ ಪಶ್ಯನ್ ಕೃಪಯಾಭಿಪರಿಪ್ಲುತಃ|
12143001c ಕಪೋತಮಗ್ನೌ ಪತಿತಂ ವಾಕ್ಯಂ ಪುನರುವಾಚ ಹ||

ಭೀಷ್ಮನು ಹೇಳಿದನು: "ಕೃಪೆಯಿಂದ ವ್ಯಾಕುಲನಾದ ವ್ಯಾಧನು ಅಗ್ನಿಯಲ್ಲಿ ಬಿದ್ದ ಪಾರಿವಾಳವನ್ನು ನೋಡಿ ಪುನಃ ಈ ಮಾತನ್ನಾಡಿದನು:

12143002a ಕಿಮೀದೃಶಂ ನೃಶಂಸೇನ ಮಯಾ ಕೃತಮಬುದ್ಧಿನಾ|
12143002c ಭವಿಷ್ಯತಿ ಹಿ ಮೇ ನಿತ್ಯಂ ಪಾತಕಂ ಹೃದಿ ಜೀವತಃ[679]||

"ಅಯ್ಯೋ! ಕ್ರೂರಿಯೂ ಮೂಢನೂ ಆದ ನಾನು ಇದೇನು ಮಾಡಿಬಿಟ್ಟೆ! ಏಕೆಂದರೆ ನಿತ್ಯವೂ ಪಾಪವು ನನ್ನ ಹೃದಯದಲ್ಲಿ ಜೀವಿಸಿದೆ.

12143003a ಸ ವಿನಿಂದನ್ನಥಾತ್ಮಾನಂ ಪುನಃ ಪುನರುವಾಚ ಹ|

---

679 ಕೃತಜೀವಿನಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್, ಗೋರಖಪುರ ಸಂಪುಟ).

12143003c ಧಿಙ್ಮಾಮಸ್ತು[680] ಸುದುರ್ಬುದ್ಧಿಂ ಸದಾ ನಿಕೃತಿನಿಶ್ಚಯಮ್|

ಹೀಗೆ ಪುನಃ ಪುನಃ ತನ್ನನ್ನು ನಿಂದಿಸಿಕೊಳ್ಳುತ್ತಾ ಹೀಗೆ ಹೇಳಿದನು: "ಸದಾ ಮೋಸವನ್ನೇ ನಿಶ್ಚಯಿಸಿರುವ ನನ್ನಂಥಹ ಅತಿ ದುರ್ಬುದ್ಧಿಗೆ ಧಿಕ್ಕಾರ!

12143003e ಶುಭಂ ಕರ್ಮ ಪರಿತ್ಯಜ್ಯ ಯೋಽಹಂ ಶಕುನಿಲುಬ್ಧಕಃ||
12143004a ನೃಶಂಸಸ್ಯ ಮಮಾದ್ಯಾಯಂ ಪ್ರತ್ಯಾದೇಶೋ ನ ಸಂಶಯಃ|
12143004c ದತ್ತಃ ಸ್ವಮಾಂಸಂ ದದತಾ ಕಪೋತೇನ ಮಹಾತ್ಮನಾ||

ಶುಭಕರ್ಮವನ್ನು ಪರಿತ್ಯಜಿಸಿ ನಾನು ಪಕ್ಷಿಗಳನ್ನು ಹಿಡಿಯುವ ವ್ಯಾಧನಾದೆ. ಇಂದು ಕ್ರೂರನಾಗಿರುವ ನನಗೆ ತನ್ನ ಮಾಂಸವನ್ನಿತ್ತು ಮಹಾತ್ಮ ಪಾರಿವಾಳವು ಉಪದೇಶವನ್ನು ನೀಡಿದೆ ಎನ್ನುವುದರಲ್ಲಿ ಸಂಶಯವಿಲ್ಲ.

12143005a ಸೋಽಹಂ ತ್ಯಕ್ಷ್ಯೇ ಪ್ರಿಯಾನ್ ಪ್ರಾಣಾನ್ ಪುತ್ರದಾರಂ ವಿಸೃಜ್ಯ ಚ|
12143005c ಉಪದಿಷ್ಟೋ ಹಿ ಮೇ ಧರ್ಮಃ ಕಪೋತೇನಾತಿಧರ್ಮಿಣಾ||

ಈಗ ನಾನು ಪತ್ನೀ ಪುತ್ರರನ್ನು ಬಿಟ್ಟು ನನ್ನ ಪ್ರಾಣಗಳನ್ನೂ ತ್ಯಜಿಸುತ್ತೇನೆ. ಅತಿಧರ್ಮಿ ಪಾರಿವಾಳವು ನನಗೆ ಧರ್ಮವನ್ನು ಉಪದೇಶಿಸಿದೆ.

12143006a ಅದ್ಯ ಪ್ರಭೃತಿ ದೇಹಂ ಸ್ವಂ ಸರ್ವಭೋಗ್ಯೈರ್ವಿವರ್ಜಿತಮ್|
12143006c ಯಥಾ ಸ್ವಲ್ಪಂ ಜಲಂ ಗ್ರೀಷ್ಮೇ ಶೋಷಯಿಷ್ಯಾಮ್ಯಹಂ ತಥಾ||

ಇಂದಿನಿಂದ ನಾನು ಸರ್ವಭೋಗಗಳನ್ನೂ ವರ್ಜಿಸಿ ನನ್ನ ದೇಹವನ್ನು

---

680 ಅವಿಶ್ವಾಸ್ಯಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಗ್ರೀಷ್ಮ ಋತುವಿನಲ್ಲಿ ಸಣ್ಣ ಕೊಳದಲ್ಲಿ ಸ್ವಲ್ಪವೇ ನೀರಿರುವಂತೆ ಶೋಷಿಸುತ್ತೇನೆ.

12143007a ಕ್ಷುತ್ಪಿಪಾಸಾತಪಸಹಃ ಕೃಶೋ ಧಮನಿಸಂತತಃ|
12143007c ಉಪವಾಸ್ಯೆರ್ಬಹುವಿಧೈಶ್ಚರಿಷ್ಯೇ ಪಾರಲೌಕಿಕಮ್||

ಹಸಿವು-ಬಾಯಾರಿಕೆ-ಬಿಸಿಲನ್ನು ಸಹಿಸಿಕೊಂಡು ನರಗಳು ಕಾಣಿಸಿಕೊಳ್ಳುವಷ್ಟು ಕೃಶನಾಗುತ್ತೇನೆ. ಪಾರಲೌಕಿಕ ಸುಖವನ್ನು ನೀಡುವ ಬಹುವಿಧದ ಉಪವಾಸಗಳನ್ನಾಚರಿಸುತ್ತೇನೆ.

12143008a ಅಹೋ ದೇಹಪ್ರದಾನೇನ ದರ್ಶಿತಾತಿಥಿಪೂಜನಾ|
12143008c ತಸ್ಮಾದ್ಧರ್ಮಂ ಚರಿಷ್ಯಾಮಿ ಧರ್ಮೋ ಹಿ ಪರಮಾ ಗತಿಃ|
12143008e ದೃಷ್ಟೋ ಹಿ ಧರ್ಮೋ ಧರ್ಮಿಷ್ಠೈರ್ಯಾದೃಶೋ ವಿಹಗೋತ್ತಮೇ||

ಆಹಾ! ಈ ಪಕ್ಷಿಯು ತನ್ನ ದೇಹವನ್ನಿತ್ತು ಅತಿಥಿಪೂಜನೆಯನ್ನು ತೋರಿಸಿಕೊಟ್ಟಿದೆ. ಆದುದರಿಂದ ನಾನೂ ಕೂಡ ಧರ್ಮದ ಆಚರಣೆಯನ್ನು ಮಾಡುತ್ತೇನೆ. ಏಕೆಂದರೆ ಧರ್ಮವೇ ಪರಮ ಗತಿಯು. ಆ ಧರ್ಮಿಷ್ಠ ಶ್ರೇಷ್ಠ ಪಕ್ಷಿಯು ಯಾವ ಧರ್ಮವನ್ನು ತೋರಿಸಿದೆಯೋ ಅದೇ ಧರ್ಮವನ್ನು ನಾನೂ ಕೂಡ ನಡೆಸುತ್ತೇನೆ.”

12143009a ಏವಮುಕ್ತ್ವಾ ವಿನಿಶ್ಚಿತ್ಯ ರೌದ್ರಕರ್ಮಾ ಸ ಲುಬ್ಧಕಃ|
12143009c ಮಹಾಪ್ರಸ್ಥಾನಮಾಶ್ರಿತ್ಯ ಪ್ರಯಯೌ ಸಂಶಿತವ್ರತಃ||

ಹೀಗೆ ಹೇಳಿ ಧರ್ಮಾಚರಣೆಯ ನಿಶ್ಚಯವನ್ನು ಮಾಡಿ ಆ ರೌದ್ರ ಕರ್ಮಿ ವ್ಯಾಧನು ಕಠೋರ ವ್ರತವನ್ನು ಆಶ್ರಯಿಸಿ ಮಹಾಪ್ರಸ್ಥಾನದ ಪಥದಲ್ಲಿ ಹೊರಟುಹೋದನು.

12143010a ತತೋ ಯಷ್ಟಿಂ ಶಲಾಕಾಶ್ಚ ಕ್ಷಾರಕಂ ಪಂಜರಂ ತಥಾ|
12143010c ತಾಂಶ್ಚ ಬದ್ಧಾ ಕಪೋತಾನ್ ಸ ಸಂಪ್ರಮುಚ್ಯೋತ್ಸಸರ್ಜ ಹ||

ಹೊರಡುವಾಗ ಅವನು ತನ್ನ ಪಂಜರದಲ್ಲಿ ಬಂಧಿಯಾಗಿದ್ದ ಪಾರಿವಾಳವನ್ನು ಮುಕ್ತಗೊಳಿಸಿ ತನ್ನ ಕೋಲು, ಈಟಿ, ಬಲೆ ಮತ್ತು ಪಂಜರಗಳನ್ನು ಅಲ್ಲಿಯೇ ಬಿಟ್ಟುಬಿಟ್ಟನು.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಲುಬ್ಧಕೋಪರತೌ ತ್ರಿಸ್ಚತ್ವಾರಿಂಶದಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಲುಬ್ಧಕೋಪರತಿ ಎನ್ನುವ ನೂರಾನಲ್ವತ್ಮೂರನೇ ಅಧ್ಯಾಯವು.

೧೪೪

ಹೆಣ್ಣು ಪಾರಿವಾಳದ ವಿಲಾಪ ಮತ್ತು ಅಗ್ನಿಪ್ರವೇಶ; ಎರಡೂ ಪಾರಿವಾಳಗಳಿಗೂ ಸ್ವರ್ಗಲೋಕಪ್ರಾಪ್ತಿ (1-12).

12144001 ಭೀಷ್ಮ ಉವಾಚ|
12144001a ತತೋ ಗತೇ ಶಾಕುನಿಕೇ ಕಪೋತೀ ಪ್ರಾಹ ದುಃಖಿತಾ|
12144001c ಸಂಸ್ಮೃತ್ಯ ಭರ್ತಾರಮಥೋ ರುದತೀ ಶೋಕಮೂರ್ಚಿತಾ||

ಭೀಷ್ಮನು ಹೇಳಿದನು: “ವ್ಯಾಧನು ಹೊರಟುಹೋದನಂತರ ಶೋಕಮೂರ್ಛಿತಳಾದ ಕಪೋತಿಯು ಪತಿಯನ್ನು ಸ್ಮರಿಸಿಕೊಳ್ಳುತ್ತಾ ದುಃಖದಿಂದ ರೋದಿಸತೊಡಗಿದಳು:

12144002a ನಾಹಂ ತೇ ವಿಪ್ರಿಯಂ ಕಾಂತ ಕದಾ ಚಿದಪಿ ಸಂಸ್ಮರೇ|

12144002c ಸರ್ವಾ ವೈ ವಿಧವಾ ನಾರೀ ಬಹುಪುತ್ರಾಪಿ ಖೇಚರ|

“ಕಾಂತ! ಖೇಚರ! ನೀನು ನನಗೆ ಎಂದೂ ಅಪ್ರಿಯವನ್ನು ಮಾಡಿದುದು ನೆನಪಿಲ್ಲ. ಅನೇಕ ಪುತ್ರರಿಗೆ ತಾಯಿಯಾಗಿದ್ದರೂ ವಿಧವೆ ನಾರಿಯು ದುಃಖದಲ್ಲಿ ಮುಳುಗಿ ಹೋಗುತ್ತಾಳೆ.

12144002e ಶೋಚ್ಯಾ ಭವತಿ ಬಂಧೂನಾಂ ಪತಿಹೀನಾ ಮನಸ್ವಿನೀ॥
12144003a ಲಾಲಿತಾಹಂ ತ್ವಯಾ ನಿತ್ಯಂ ಬಹುಮಾನಾಚ್ಚ ಸಾಂತ್ವಿತಾ|

ಪತಿಹೀನ ಮನಸ್ವಿನಿಯು ಬಂಧುಗಳಿಗೆ ಶೋಚನೀಯಳಾಗುತ್ತಾಳೆ. ನಿತ್ಯವೂ ನೀನು ನನ್ನನ್ನು ಲಾಲಿಸಿದೆ ಮತ್ತು ಬಹಳ ಆದರದಿಂದ ನನ್ನನ್ನು ಸಂತವಿಸುತ್ತಿದ್ದೆ.

12144003c ವಚನೈರ್ಮಧುರೈಃ ಸ್ನಿಗ್ಧೈರಸಕೃತ್ಸುಮನೋಹರೈಃ॥
12144004a ಕಂದರೇಷು ಚ ಶೈಲಾನಾಂ ನದೀನಾಂ ನಿರ್ಝರೇಷು ಚ|
12144004c ದ್ರುಮಾಗ್ರೇಷು ಚ ರಮ್ಯೇಷು ರಮಿತಾಹಂ ತ್ವಯಾ ಪ್ರಿಯ॥
12144005a ಆಕಾಶಗಮನೇ ಚೈವ ಸುಖಿತಾಹಂ ತ್ವಯಾ ಸುಖಮ್|

ನೀನು ಸ್ನೇಹಯುಕ್ತ ಸುಖವನ್ನೀಡುವ ಮನೋಹರ ಮಧುರ ವಚನಗಳಿಂದ ನನ್ನನ್ನು ಆನಂದಗೊಳಿಸಿದೆ. ನಾನು ನಿನ್ನೊಡನೆ ಪರ್ವತಗಳ ಗುಹೆಗಳಲ್ಲಿ, ನದೀತಟಗಳಲ್ಲಿ, ಜಲಪಾತಗಳ ಬಳಿ ಮತ್ತು ವೃಕ್ಷಗಳ ಸುರಮ್ಯ ಶಿಖರಗಳ ಮೇಲೆ ರಮಿಸಿದೆನು. ಆಕಾಶಯಾತ್ರೆಯಲ್ಲಿಯೂ ಕೂಡ ನಾನು ಸದಾ ನಿನ್ನೊಡನೆ ಸುಖವಾಗಿ ಸಂಚರಿಸುತ್ತಿದ್ದೆ.

12144005c ವಿಹೃತಾಸ್ಮಿ ತ್ವಯಾ ಕಾಂತ ತನ್ಮೇ ನಾದ್ಯಾಸ್ತಿ ಕಿಂ ಚನ॥
12144006a ಮಿತಂ ದದಾತಿ ಹಿ ಪಿತಾ ಮಿತಂ ಮಾತಾ ಮಿತಂ ಸುತಃ|

12144006c ಅಮಿತಸ್ಯ ತು ದಾತಾರಂ ಭರ್ತಾರಂ ಕಾ ನ ಪೂಜಯೇತ್‌||

ಕಾಂತ! ನಿನ್ನೊಡನೆ ನಾನು ಎಷ್ಟು ವಿಹರಿಸಿದ್ದೆನೋ ಇಂದು ಅವೆಲ್ಲವೂ ಇಲ್ಲವಾಗಿದೆ. ನಾರಿಗೆ ತಂದೆ, ತಾಯಿ ಮತ್ತು ಮಕ್ಕಳು ಮಿತವಾದ ಸುಖವನ್ನೇ ನೀಡಬಲ್ಲರು. ಕೇವಲ ಪತಿಯು ಅವಳಿಗೆ ಅಪರಿಮಿತ ಸುಖವನ್ನು ನೀಡುತ್ತಾನೆ. ಅಂಥಹ ಪತಿಯನ್ನು ಯಾವ ನಾರಿಯು ತಾನೇ ಪೂಜಿಸುವುದಿಲ್ಲ?

12144007a ನಾಸ್ತಿ ಭರ್ತೃಸಮೋ ನಾಥೋ ನ ಚ ಭರ್ತೃಸಮಂ ಸುಖಮ್‌|
12144007c ವಿಸೃಜ್ಯ ಧನಸರ್ವಸ್ವಂ ಭರ್ತಾ ವೈ ಶರಣಂ ಸ್ತ್ರಿಯಾಃ‌||

ಪತಿಯ ಸಮನಾದ ನಾಥನಿಲ್ಲ. ಪತಿಗೆ ಸಮನಾದ ಸುಖವಿಲ್ಲ. ಸರ್ವ ಧನವನ್ನು ಬಿಟ್ಟು ಸ್ತ್ರೀಯರು ಪತಿಯನ್ನೇ ಆಶ್ರಯಿಸಿರುತ್ತಾರೆ.

12144008a ನ ಕಾರ್ಯಮಿಹ ಮೇ ನಾಥ ಜೀವಿತೇನ ತ್ವಯಾ ವಿನಾ|
12144008c ಪತಿಹೀನಾಪಿ ಕಾ ನಾರೀ ಸತೀ ಜೀವಿತುಮುತ್ಸಹೇತ್‌||

ನಾಥ! ನೀನಿಲ್ಲದೇ ನನಗಿಲ್ಲಿ ಜೀವಿಸಿದ್ದು ಮಾಡಬೇಕಾದ್ದಾದರೂ ಏನಿದೆ? ಪತಿವಿಹೀನಳಾದ ಯಾವ ಸತೀ ನಾರಿಯು ಜೀವಿತವಾಗಿರಲು ಬಯಸುತ್ತಾಳೆ?”

12144009a ಏವಂ ವಿಲಪ್ಯ ಬಹುಧಾ ಕರುಣಂ ಸಾ ಸುದುಃಖಿತಾ|
12144009c ಪತಿವ್ರತಾ ಸಂಪ್ರದೀಪ್ತಂ ಪ್ರವಿವೇಶ ಹುತಾಶನಮ್‌||

ಹೀಗೆ ಅನೇಕ ರೀತಿಯಲ್ಲಿ ಕರುಣಾಜನಕವಾಗಿ ವಿಲಪಿಸಿ ಸುದುಃಖಿತಳಾದ ಆ ಪತಿವ್ರತೆಯು ಪ್ರಜ್ವಲಿಸುತ್ತಿದ್ದ ಅಗ್ನಿಯನ್ನು ಪ್ರವೇಶಿಸಿದಳು.

12144010a ತತಶ್ಚಿತ್ರಾಂಬರಧರಂ ಭರ್ತಾರಂ ಸಾನ್ವಪಶ್ಯತ|
12144010c ವಿಮಾನಸ್ಥಂ ಸುಕೃತಿಭಿಃ ಪೂಜ್ಯಮಾನಂ ಮಹಾತ್ಮಭಿಃ||

ಅಲ್ಲಿ ಅವಳು ವಿಮಾನಸ್ಥನಾಗಿದ್ದ ಸುಕೃತ ಮಹಾತ್ಮರಿಂದ ಪೂಜಿಸಲ್ಪಡುತ್ತಿದ್ದ ಮತ್ತು ಬಣ್ಣಬಣ್ಣದ ವಸ್ತ್ರವನ್ನು ಧರಿಸಿದ್ದ ತನ್ನ ಪತಿಯನ್ನು ನೋಡಿದಳು.

12144011a ಚಿತ್ರಮಾಲ್ಯಾಂಬರಧರಂ ಸರ್ವಾಭರಣಭೂಷಿತಮ್|
12144011c ವಿಮಾನಶತಕೋಟೀಭಿರಾವೃತಂ ಪುಣ್ಯಕೀರ್ತಿಭಿಃ||

ಅವನು ಬಣ್ಣ ಬಣ್ಣದ ಮಾಲೆ-ವಸ್ತ್ರಗಳನ್ನು ಧರಿಸಿದ್ದನು. ಸರ್ವಾಭರಣಭೂಷಿತನಾಗಿದ್ದನು. ಪುಣ್ಯಕೀರ್ತಿಗಳ ನೂರುಕೋಟಿ ವಿಮಾನಗಳು ಅವನ ಸುತ್ತಲೂ ಇದ್ದವು.

12144012a ತತಃ ಸ್ವರ್ಗಗತಃ ಪಕ್ಷೀ ಭಾರ್ಯಯಾ ಸಹ ಸಂಗತಃ|
12144012c ಕರ್ಮಣಾ ಪೂಜಿತಸ್ತೇನ ರೇಮೇ ತತ್ರ ಸ ಭಾರ್ಯಯಾ||

ಅನಂತರ ಆ ಪಕ್ಷಿಯು ಪತ್ನಿಯೊಡನೆ ಸ್ವರ್ಗಕ್ಕೆ ಹೋಯಿತು. ತನ್ನ ಸತ್ಕರ್ಮಗಳಿಂದ ಪೂಜಿಸಲ್ಪಟ್ಟು ಅಲ್ಲಿ ಅವನು ಪತ್ನಿಯೊಡನೆ ರಮಿಸಿದನು.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಕಪೋತಸ್ವರ್ಗಗಮನೇ ಚತುಶ್ಚತ್ವಾರಿಂಶದಧಿಕಶತತಮೋऽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಕಪೋತಸ್ವರ್ಗಗಮನ ಎನ್ನುವ ನೂರಾನಲ್ವತ್ನಾಲ್ಕನೇ ಅಧ್ಯಾಯವು.

೧೪೫

ವ್ಯಾಧನಿಗೆ ಸ್ವರ್ಗಲೋಕಪ್ರಾಪ್ತಿ (1-18).

12145001 ಭೀಷ್ಮ ಉವಾಚ|
12145001a ವಿಮಾನಸ್ಥೌ ತು ತೌ ರಾಜಽಲ್ಲುಬ್ಧಕೋ ವೈ ದದರ್ಶ ಹ|
12145001c ದೃಷ್ಟ್ವಾ ತೌ ದಂಪತೀ ದುಃಖಾದಚಿಂತಯತ ಸದ್ಗತಿಮ್||

ಭೀಷ್ಮನು ಹೇಳಿದನು: "ರಾಜನ್! ಅವರಿಬ್ಬರೂ
ವಿಮಾನಸ್ಥರಾಗಿದ್ದುದನ್ನು ವ್ಯಾಧನು ನೋಡಿದನು. ಆ ದಂಪತಿಗಳನ್ನು
ನೋಡಿ ದುಃಖದಿಂದ ಅವನು ಸದ್ಗತಿಯ ಕುರಿತು ಚಿಂತಿಸತೊಡಗಿದನು.

12145002a ಕೀದೃಶೇನೇಹ[681] ತಪಸಾ ಗಚ್ಛೇಯಂ ಪರಮಾಂ ಗತಿಮ್|
12145002c ಇತಿ ಬುದ್ಧ್ಯಾ ವಿನಿಶ್ಚಿತ್ಯ ಗಮನಾಯೋಪಚಕ್ರಮೇ||
12145003a ಮಹಾಪ್ರಸ್ಥಾನಮಾಶ್ರಿತ್ಯ ಲುಬ್ಧಕಃ ಪಕ್ಷಿಜೀವನಃ|
12145003c ನಿಶ್ಚೇಷ್ಟೋ ಮಾರುತಾಹಾರೋ ನಿರ್ಮಮಃ ಸ್ವರ್ಗಕಾಂಕ್ಷಯಾ||

ನಾನೂ ಕೂಡ ಇಂತಹ ತಪಸ್ಸನ್ನಾಚರಿಸಿ ಪರಮಗತಿಯನ್ನು
ಪಡೆದುಕೊಳ್ಳುತ್ತೇನೆ ಎಂದು ಬುದ್ಧಿಯಿಂದ ನಿಶ್ಚಯಿಸಿ ಪಕ್ಷಿಗಳನ್ನು
ಹಿಡಿದು ಜೀವನ ನಡೆಸುತ್ತಿದ್ದ ಆ ವ್ಯಾಧನು
ಮಹಾಪ್ರಸ್ಥಾನವನ್ನಾಶ್ರಯಿಸಿ ಹೊರಟನು. ಅವನು ನಿಶ್ಚೇಷ್ಟನಾದನು.
ಕೇವಲ ಗಾಳಿಯನ್ನೇ ಸೇವಿಸಿದನು. ಸ್ವರ್ಗದ ಆಕಾಂಕ್ಷೆಯಿಂದ
ಮಮಕಾರವನ್ನು ತೊರೆದನು.

---

681 ಈದೃಶೇನೈವ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12145004a ತತೋಽಪಶ್ಯತ್ಸುವಿಸ್ತೀರ್ಣಂ ಹೃದ್ಯಂ ಪದ್ಮವಿಭೂಷಿತಮ್।
12145004c ನಾನಾದ್ವಿಜಗಣಾಕೀರ್ಣಂ ಸರಃ ಶೀತಜಲಂ ಶುಭಮ್।

ನಂತರ ಅವನು ಕಮಲಗಳಿಂದ ವಿಭೂಷಿತವಾಗಿದ್ದ ಒಂದು ವಿಸ್ತಾರವಾದ ಮನೋಹರ ಸರೋವರವನ್ನು ಕಂಡನು. ನಾನಾ ಪ್ರಕಾರದ ಜಲಪಕ್ಷಿಗಳು ಅಲ್ಲಿ ಕಲರವವನ್ನುಂಟುಮಾಡುತ್ತಿದ್ದವು. ಆ ಸರೋವರದಲ್ಲಿ ಶುಭ ಶೀತಜಲವಿತ್ತು.

12145004e ಪಿಪಾಸಾರ್ತೋಽಪಿ ತದ್ದೃಷ್ಟ್ವಾ ತೃಪ್ತಃ ಸ್ಯಾನ್ನಾತ್ರ ಸಂಶಯಃ॥
12145005a ಉಪವಾಸಕೃಶೋಽತ್ಯರ್ಥಂ ಸ ತು ಪಾರ್ಥಿವ ಲುಬ್ಧಕಃ।
12145005c ಉಪಸರ್ಪತ ಸಂಹೃಷ್ಟಃ ಶ್ವಾಪದಾಧ್ಯುಷಿತಂ ವನಮ್॥
12145006a ಮಹಾಂತಂ ನಿಶ್ಚಯಂ ಕೃತ್ವಾ ಲುಬ್ಧಕಃ ಪ್ರವಿವೇಶ ಹ।
12145006c ಪ್ರವಿಶನ್ನೇವ ಚ ವನಂ ನಿಗೃಹೀತಃ ಸ ಕಂಟಕೈಃ॥
12145007a ಸ ಕಂಟಕವಿಭುಗ್ನಾಂಗೋ ಲೋಹಿತಾರ್ದ್ರೀಕೃತಚ್ಛವಿಃ।

ಪಾರ್ಥಿವ! ಆ ಸರೋವರವು ಬಾಯಾರಿಕೆಯಿಂದ ಎಷ್ಟೇ ಪೀಡಿತನಾದವನಿಗೂ ನೋಡಿದ ಮಾತ್ರಕ್ಕೇ ತೃಪ್ತನಾಗುವಂತಿತ್ತು. ಆ ವ್ಯಾಧನಾದರೋ ಉಪವಾಸದಿಂದ ಅತ್ಯಂತ ದುರ್ಬಲನಾಗಿಬಿಟ್ಟಿದ್ದನು. ಆದರೂ ಅವನು ಸರೋವರದ ಕಡೆ ದೃಷ್ಟಿಯನ್ನೂ ಹಾಯಿಸದೇ ಅತ್ಯಂತ ಹರ್ಷದೊಂದಿಗೆ ಕ್ರೂರ ಪ್ರಾಣಿಗಳಿಂದ ತುಂಬಿದ್ದ ವನವನ್ನು ಪ್ರವೇಶಿಸಿದನು. ಮಹಾ ಅಂತ್ಯದ ನಿಶ್ಚಯವನ್ನು ಮಾಡಿ ವ್ಯಾಧನು ಆ ವನವನ್ನು ಪ್ರವೇಶಿಸಿದನು. ಪ್ರವೇಶಿಸುತ್ತಲೇ ಮುಳ್ಳಿನ ಪೊದೆಗಳಲ್ಲಿ ಸಿಲುಕಿಹಾಕಿಕೊಂಡನು. ಮುಳ್ಳುಗಳಿಂದ ಅವನ ಶರೀರವೆಲ್ಲಾ ಗಾಯಗೊಂಡು ರಕ್ತಸುರಿಯಲು ಪ್ರಾರಂಭಿಸಿತು.

12145007c ಬಭ್ರಾಮ ತಸ್ಮಿನ್ವಿಜನೇ ನಾನಾಮೃಗಸಮಾಕುಲೇ॥
12145008a ತತೋ ದ್ರುಮಾಣಾಂ ಮಹತಾಂ ಪವನೇನ ವನೇ ತದಾ।
12145008c ಉದತಿಷ್ಠತ ಸಂಘರ್ಷಾತ್ಸುಮಹಾನ್ ಹವ್ಯವಾಹನಃ॥
12145009a ತದ್ವನಂ ವೃಕ್ಷಸಂಕೀರ್ಣಂ ಲತಾವಿಟಪಸಂಕುಲಮ್।
12145009c ದದಾಹ ಪಾವಕಃ ಕ್ರುದ್ಧೋ ಯುಗಾಂತಾಗ್ನಿಸಮಪ್ರಭಃ॥

ನಾನಾಮೃಗ ಸಂಕುಲಗಳಿಂದ ತುಂಬಿದ್ದ ಆ ನಿರ್ಜನ ವನದಲ್ಲಿ ಅವನು ಅಲಿಂದಿಲ್ಲಿಗೆ ಸುತ್ತಾಡತೊಡಗಿದನು. ಅಷ್ಟರಲ್ಲಿಯೇ ಪ್ರಚಂಡ ಗಾಳಿಯು ಬೀಸಿ ವನದಲ್ಲಿದ್ದ ದೊಡ್ಡ ದೊಡ್ಡ ಮರಗಳು ಒಂದಕ್ಕೊಂದು ತಾಗಿ ಅತಿ ದೊಡ್ಡ ಕಾಡಾಗ್ನಿಯು ಹುಟ್ಟಿಕೊಂಡಿತು. ಬೆಂಕಿಯ ದೊಡ್ಡ ದೊಡ್ಡ ಜ್ವಾಲೆಗಳು ಮೇಲೇಳತೊಡಗಿದವು. ಪ್ರಲಯಕಾಲದ ಸಂವರ್ತಕ ಅಗ್ನಿಯಂತೆ ಪ್ರಜ್ವಲಿಸುತ್ತಿದ್ದ ಆ ಕುಪಿತ ಅಗ್ನಿದೇವನು ಲತೆಗಳು, ಪೊದೆಗಳು ಮತ್ತು ವೃಕ್ಷಗಳಿಂದ ವ್ಯಾಪ್ತವಾಗಿದ್ದ ಆ ವನವನ್ನು ಸುಡಲು ತೊಡಗಿದನು.

12145010a ಸಜ್ವಾಲೈಃ ಪವನೋದ್ಧೂತೈರ್ವಿಸ್ಫುಲಿಂಗೈಃ ಸಮನ್ವಿತಃ।
12145010c ದದಾಹ ತದ್ವನಂ ಘೋರಂ ಮೃಗಪಕ್ಷಿಸಮಾಕುಲಮ್॥

ಗಾಳಿಯಿಂದ ಮೇಲೆದ್ದ ಕಿಡಿಗಳಿಂದ ಮತ್ತು ಜ್ವಾಲೆಗಳಿಂದ ಸಮನ್ವಿತನಾದ ಅಗ್ನಿಯು ಘೋರ ಮೃಗಪಕ್ಷಿಗಳಿಂದ ಕೂಡಿದ್ದ ಆ ವನವನ್ನು ಸುಟ್ಟನು.

12145011a ತತಃ ಸ ದೇಹಮೋಕ್ಷಾರ್ಥಂ ಸಂಪ್ರಹೃಷ್ಟೇನ ಚೇತಸಾ।
12145011c ಅಭ್ಯಧಾವತ ಸಂವೃದ್ಧಂ ಪಾವಕಂ ಲುಬ್ಧಕಸ್ತದಾ॥

ಆಗ ದೇಹಮೋಕ್ಷಕ್ಕಾಗಿ ಪ್ರಹೃಷ್ಟ ಚೇತನನಾದ ವ್ಯಾಧನು ಜೋರಾಗಿ

ಉರಿಯುತ್ತಿದ್ದ ಬೆಂಕಿಯ ಕಡೆ ಓಡಿದನು.

12145012a ತತಸ್ತೇನಾಗ್ನಿನಾ ದಗ್ಧೋ ಲುಬ್ಧಕೋ ನಷ್ಟಕಿಲ್ಬಿಷಃ|
12145012c ಜಗಾಮ ಪರಮಾಂ ಸಿದ್ಧಿಂ ತದಾ ಭರತಸತ್ತಮ||

ಭರತಸತ್ತಮ! ಆ ಅಗ್ನಿಯಿಂದ ಸುಟ್ಟ ವ್ಯಾಧನು ಪಾಪಗಳನ್ನು ಕಳೆದುಕೊಂಡು ಪರಮ ಸಿದ್ಧಿಯನ್ನು ಪಡೆದುಕೊಂಡನು.

12145013a ತತಃ ಸ್ವರ್ಗಸ್ಥಮಾತ್ಮಾನಂ ಸೋಽಪಶ್ಯದ್ವಿಗತಜ್ವರಃ|
12145013c ಯಕ್ಷಗಂಧರ್ವಸಿದ್ಧಾನಾಂ ಮಧ್ಯೇ ಭ್ರಾಜಂತಮಿಂದ್ರವತ್||

ಅನಂತರ ತಾನು ವಿಗತಜ್ವರನಾಗಿ ಸ್ವರ್ಗಸ್ಥನಾಗಿ ಯಕ್ಷಗಂಧರ್ವಸಿದ್ಧರ ಮಧ್ಯೆ ಇಂದ್ರನಂತೆ ಹೊಳೆಯುತ್ತಿರುವುದನ್ನು ಕಂಡನು.

12145014a ಏವಂ ಖಲು ಕಪೋತಶ್ಚ ಕಪೋತೀ ಚ ಪತಿವ್ರತಾ|
12145014c ಲುಬ್ಧಕೇನ ಸಹ ಸ್ವರ್ಗಂ ಗತಾಃ ಪುಣ್ಯೇನ ಕರ್ಮಣಾ||

ಹೀಗೆ ಆ ಧರ್ಮಾತ್ಮ ಪಾರಿವಾಳ, ಅವನ ಪತಿವ್ರತಾ ಪತ್ನಿ, ಮತ್ತು ವ್ಯಾಧ ಈ ಮೂವರೂ ಒಟ್ಟಿಗೇ ತಮ್ಮ ಪುಣ್ಯಕರ್ಮಗಳ ಬಲದಿಂದ ಸ್ವರ್ಗಲೋಕವನ್ನು ಸೇರಿದರು.

12145015a ಯಾಪಿ ಚ್ಯೈವಂವಿಧಾ ನಾರೀ ಭರ್ತಾರಮನುವರ್ತತೇ|
12145015c ವಿರಾಜತೇ ಹಿ ಸಾ ಕ್ಷಿಪ್ರಂ ಕಪೋತೀವ ದಿವಿ ಸ್ಥಿತಾ||

ಈ ರೀತಿ ತನ್ನ ಪತಿಯನ್ನು ಅನುಸರಿಸುವ ಸ್ತ್ರೀಯು ಆ ಕಪೋತಿಯಂತೆ ಶೀಘ್ರದಲ್ಲಿಯೇ ಸ್ವರ್ಗಲೋಕದಲ್ಲಿ ತನ್ನ ತೇಜಸ್ಸಿನಿಂದ ಪ್ರಕಾಶಿಸುತ್ತಾಳೆ.

12145016a ಏವಮೇತತ್ಪುರಾ ವೃತ್ತಂ ಲುಬ್ಧಕಸ್ಯ ಮಹಾತ್ಮನಃ|
12145016c ಕಪೋತಸ್ಯ ಚ ಧರ್ಮಿಷ್ಠಾ ಗತಿಃ ಪುಣ್ಯೇನ ಕರ್ಮಣಾ||

ಹಿಂದೆ ಇದು ಹೀಗೆಯೇ ನಡೆಯಿತು. ಮಹಾತ್ಮ, ವ್ಯಾಧ ಮತ್ತು ಧರ್ಮಿಷ್ಠ ಪಾರಿವಾಳಗಳು ಪುಣ್ಯ ಕರ್ಮಗಳಿಂದ ಉತ್ತಮ ಗತಿಯನ್ನು ಪಡೆದುಕೊಂಡರು.

12145017a ಯಶ್ಚೇದಂ ಶೃಣುಯಾನ್ನಿತ್ಯಂ ಯಶ್ಚೇದಂ ಪರಿಕೀರ್ತಯೇತ್|
12145017c ನಾಶುಭಂ ವಿದ್ಯತೇ ತಸ್ಯ ಮನಸಾಪಿ ಪ್ರಮಾದ್ಯತಃ||

ನಿತ್ಯವೂ ಇದನ್ನು ಯಾರು ಕೇಳುತ್ತಾರೋ ಮತ್ತು ಇದನ್ನು ವರ್ಣಿಸುತ್ತಾರೋ ಅವರಿಬ್ಬರು ಮನಸ್ಸಿನಲ್ಲಿ ಹುಟ್ಟಿದ ಪ್ರಮಾದಗಳಿಂದಲೂ ಅಶುಭವನ್ನು ಹೊಂದುವುದಿಲ್ಲ.

12145018a ಯುಧಿಷ್ಠಿರ ಮಹಾನೇಷ ಧರ್ಮೋ ಧರ್ಮಭೃತಾಂ ವರ|
12145018c ಗೋಘ್ನೇಷ್ವಪಿ ಭವೇದಸ್ಮಿನ್ನಿಷ್ಕೃತಿಃ ಪಾಪಕರ್ಮಣಃ|
12145018e ನಿಷ್ಕೃತಿರ್ನ ಭವೇತ್ತಸ್ಮಿನ್ಯೋ ಹನ್ಯಾಚ್ಚರಣಾಗತಮ್[682]||

ಯುಧಿಷ್ಠಿರ! ಧರ್ಮಭೃತರಲ್ಲಿ ಶ್ರೇಷ್ಠ! ಈ ಶರಣಾಗತ ಪಾಲನೆಯು ಮಹಾ ಧರ್ಮವು. ಇದರಿಂದ ಗೋವಧೆಯನ್ನು ಮಾಡಿದ ಪುರುಷನಿಗೂ ಪಾಪದ ಪ್ರಾಯಶ್ಚಿತ್ತವಾಗುತ್ತದೆ. ಶರಣಾಗತನನ್ನು ವಧಿಸುವವನು ಎಂದೂ ಪಾಪದಿಂದ ಮುಕ್ತನಾಗುವುದಿಲ್ಲ.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಲುಬ್ಧಕಸ್ವರ್ಗಗಮನೇ ಪಂಚಚತ್ವಾರಿಂಶದಧಿಕಶತತಮೋऽಧ್ಯಾಯಃ||

---

682 ಇದರ ನಂತರ ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ:
ಇತಿಹಾಸಮಿಮಂ ಶ್ರುತ್ವಾ ಪುಣ್ಯಂ ಪಾಪಪ್ರಣಾಶನಮ್| ನ
ದುರ್ಗತಿಮವಾಪ್ನೋತಿ ಸ್ವರ್ಗಲೋಕಂ ಚ ಗಚ್ಛತಿ||

ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಲುಬ್ಧಕಸ್ವರ್ಗಗಮನ ಎನ್ನುವ ನೂರಾನಲ್ವತ್ತೈದನೇ ಅಧ್ಯಾಯವು.

೧೪೬

ಇಂದ್ರೋತ-ಪಾರಿಕ್ಷಿತೀಯ ಸಂವಾದ

ಇಂದ್ರೋತನು ತಿಳಿಯದೇ ಬ್ರಹ್ಮಹತ್ಯಾದೋಷವನ್ನು ಪಡೆದುಕೊಂಡ ಜನಮೇಜಯನನ್ನು ನಿಂದಿಸಿದುದು (1-18).

12146001 ಯುಧಿಷ್ಠಿರ ಉವಾಚ|
12146001a ಅಬುದ್ಧಿಪೂರ್ವಂ ಯಃ ಪಾಪಂ ಕುರ್ಯಾದ್ಭರತಸತ್ತಮ|
12146001c ಮುಚ್ಯತೇ ಸ ಕಥಂ ತಸ್ಮಾದೇನಸಸ್ತದ್ವದಸ್ವ ಮೇ||

ಯುಧಿಷ್ಠಿರನು ಹೇಳಿದನು: "ಭರತಸತ್ತಮ! ತಿಳಿಯದೇ ಪಾಪಕಾರ್ಯವನ್ನು ಮಾಡಿದರೆ ಅದರಿಂದ ಹೇಗೆ ಮುಕ್ತಿಯನ್ನು ಪಡೆಯಬಹುದು ಎನ್ನುವುದನ್ನು ನನಗೆ ಹೇಳು."

12146002 ಭೀಷ್ಮ ಉವಾಚ|
12146002a ಅತ್ರ ತೇ ವರ್ಣಯಿಷ್ಯೇಽಹಮಿತಿಹಾಸಂ ಪುರಾತನಮ್|
12146002c ಇಂದ್ರೋತಃ ಶೌನಕೋ ವಿಪ್ರೋ ಯದಾಹ ಜನಮೇಜಯಮ್||

ಭೀಷ್ಮನು ಹೇಳಿದನು: "ಈ ವಿಷಯದಲ್ಲಿ ಪುರಾತನ ಇತಿಹಾಸವಾದ ಶೌನಕ[683] ವಿಪ್ರ ಇಂದ್ರೋತನು ಜನಮೇಜಯನಿಗೆ ಹೇಳಿದುದನ್ನು

683 ಶುನಕನ ವಂಶದಲ್ಲಿ ಹುಟ್ಟಿದವನು.

ಉದಾಹರಿಸುತ್ತಾರೆ.

12146003a ಆಸೀದ್ರಾಜಾ ಮಹಾವೀರ್ಯಃ ಪಾರಿಕ್ಷಿಜ್ಜನಮೇಜಯಃ|
12146003c ಅಬುದ್ಧಿಪೂರ್ವಂ ಬ್ರಹ್ಮಹತ್ಯಾ ತಮಾಗಚ್ಚನ್ಮಹೀಪತಿಮ್||

ಪರೀಕ್ಷಿತನ ಮಗ ಜನಮೇಜಯ.[684]ನೆಂಬ ಮಹಾವೀರ್ಯ
ರಾಜನಿದ್ದನು. ಆ ಮಹೀಪತಿಯು ತಿಳಿಯದೆಯೇ
ಬ್ರಹ್ಮಹತ್ಯಾದೋಷವನ್ನು ತಂದುಕೊಂಡನು.

12146004a ತಂ ಬ್ರಾಹ್ಮಣಾಃ ಸರ್ವ ಏವ ತ್ಯಜುಃ ಸಪುರೋಹಿತಾಃ|
12146004c ಜಗಾಮ ಸ ವನಂ ರಾಜಾ ದಹ್ಯಮಾನೋ ದಿವಾನಿಶಮ್||

ಆಗ ಪುರೋಹಿತರೂ ಸೇರಿ ಬ್ರಾಹ್ಮಣರೆಲ್ಲರೂ ಅವನನ್ನು ತ್ಯಜಿಸಿದರು.
ದಿನರಾತ್ರಿ ಸುಡುತ್ತಿದ್ದ ರಾಜನು ವನಕ್ಕೆ ತೆರಳಿದನು.

12146005a ಸ ಪ್ರಜಾಭಿಃ ಪರಿತ್ಯಕ್ತಶ್ಚ ಕಾರ ಕುಶಲಂ ಮಹತ್|
12146005c ಅತಿವೇಲಂ ತಪಸ್ತೇಪೇ ದಹ್ಯಮಾನಃ ಸ ಮನ್ಯುನಾ||

ಪ್ರಜೆಗಳಿಂದಲೂ ಪರಿತ್ಯಕ್ತನಾದ ಅವನು ಮಹಾ ಶುಭಕರ್ಮವನ್ನು
ಮಾಡಿದನು. ದುಃಖದಿಂದ ಸುಡುತ್ತಿದ್ದರೂ ಅವನು ದೀರ್ಘಕಾಲದ
ವರೆಗೆ ತಪಸ್ಸನ್ನು ತಪಿಸಿದನು.

[685]12146006a ತತ್ರೇತಿಹಾಸಂ ವಕ್ಷ್ಯಾಮಿ ಧರ್ಮಸ್ಯಾಸ್ಯೋಪಬೃಂಹಣಮ್|

---

[684] ಇಲ್ಲಿ ಹೇಳಿರುವ ಪರೀಕ್ಷಿತ ಮತ್ತು ಜನಮೇಜಯರು ಅಭಿಮನ್ಯುವಿನ ಪುತ್ರ ಪೌತ್ರರಲ್ಲ.

[685] ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ:
ಬ್ರಹ್ಮಹತ್ಯಾಪನೋದಾರ್ಥಮಪೃಚ್ಛದ್ ಬ್ರಾಹ್ಮಣಾನ್ ಬಹೂನ್|

12146006c ದಹ್ಯಮಾನಃ ಪಾಪಕೃತ್ಯಾ ಜಗಾಮ ಜನಮೇಜಯಃ॥
12146007a ವರಿಷ್ಯಮಾಣ ಇಂದ್ರೋತಂ ಶೌನಕಂ ಸಂಶಿತವ್ರತಮ್|

ನಾನು ಹೇಳುವ ಈ ಇತಿಹಾಸವು ಧರ್ಮವನ್ನು ವೃದ್ಧಿಸುತ್ತದೆ. ತನ್ನ ಪಾಪಕರ್ಮದಿಂದ ಸುಡುತ್ತಿದ್ದ ಜನಮೇಜಯನು ಸಂಶಿತವ್ರತ ಶೌನಕ ಇಂದ್ರೋತನ ಬಳಿ ಹೋದನು.

12146007c ಸಮಾಸಾದ್ಯೋಪಜಗ್ರಾಹ ಪಾದಯೋಃ ಪರಿಪೀಡಯನ್॥
12146008a ತತೋ ಭೀತೋ ಮಹಾಪ್ರಾಜ್ಞೋ ಜಗರ್ಹೇ ಸುಭೃಶಂ ತದಾ|
12146008c ಕರ್ತಾ ಪಾಪಸ್ಯ ಮಹತೋ ಭ್ರೂಣಹಾ ಕಿಮಿಹಾಗತಃ॥
12146009a ಕಿಂ ತವಾಸ್ಮಾಸು ಕರ್ತವ್ಯಂ ಮಾ ಮಾ ಸ್ಪ್ರಾಕ್ಷೀಃ ಕಥಂ ಚನ|
12146009c ಗಚ್ಚ ಗಚ್ಚ ನ ತೇ ಸ್ಥಾನಂ ಪ್ರೀಣಾತ್ಯಸ್ಮಾನಿಹ ಧ್ರುವಮ್॥

ಕೂಡಲೇ ಅವನು ಮುನಿಯ ಪಾದಗಳನ್ನು ಹಿಡಿದುಕೊಂಡು ಮೆಲ್ಲ ಮೆಲ್ಲನೆ ಒತ್ತತೊಡಗಿದನು. ಭೀತನಾದ ಅವನನ್ನು ಮಹಾಪ್ರಾಜ್ಞನು ಬಹಳವಾಗಿ ನಿಂದಿಸಿದನು. "ನೀನಾದರೋ ಮಹಾ ಪಾಪವನ್ನು ಮಾಡಿದವನು. ಭ್ರೂಣಹತ್ಯೆಯನ್ನು ಮಾಡಿದವನೇ! ಇಲ್ಲಿಗೆ ಏಕೆ ಬಂದೆ? ನಮ್ಮಲ್ಲಿ ನಿನಗೆ ಯಾವ ಕೆಲಸವಿದೆ? ನನ್ನನ್ನು ಯಾವುದೇ ರೀತಿಯಲ್ಲಿಯೂ ಮುಟ್ಟದಿರು! ಹೊರಟು ಹೋಗು! ನೀನು ಇಲ್ಲಿರುವುದು ನಿಶ್ಚಯವಾಗಿಯೂ ನಮಗೆ ಇಷ್ಟವಾಗುವುದಿಲ್ಲ.

12146010a ರುಧಿರಸ್ಯೇವ ತೇ ಗಂಧಃ ಶವಸ್ಯೇವ ಚ ದರ್ಶನಮ್|
12146010c ಅಶಿವಃ ಶಿವಸಂಕಾಶೋ ಮೃತೋ ಜೀವನ್ನಿವಾಟಸಿ॥

ಪರ್ಯಟನ್ ಪೃಥಿವೀಂ ಕೃತ್ಸ್ನಾಂ ದೇಶೇ ದೇಶೇ ನರಾಧಿಪಃ॥

ನಿನ್ನಿಂದ ರಕ್ತದ ವಾಸನೆಯು ಬರುತ್ತಿದೆ. ಶವದಂತೆಯೇ
ತೋರುತ್ತಿದ್ದೀಯೆ. ಮಂಗಲನಂತಿದ್ದರೂ ಅಮಂಗಲನಾಗಿದ್ದೀಯೆ.
ಮೃತನಾಗಿದ್ದರೂ ಜೀವವಿರುವವನಂತೆ ತಿರುಗಾಡುತ್ತಿದ್ದೀಯೆ.

12146011a ಅಂತರ್ಮೃತ್ಯುರಶುದ್ಧಾತ್ಮಾ[686] ಪಾಪಮೇವಾನುಚಿಂತಯನ್|
12146011c ಪ್ರಬುಧ್ಯಸೇ ಪ್ರಸ್ವಪಿಷಿ ವರ್ತಸೇ ಚರಸೇ ಸುಖೀ||

ಅಶುದ್ಧಾತ್ಮಾ! ಒಳಗಿಂದ ನೀನು ಮೃತನಾಗಿದ್ದೀಯೆ. ಪಾಪದ ಕುರಿತೇ
ಚಿಂತಿಸುತ್ತಾ ಎಚ್ಚರಿರುತ್ತೀಯೆ ಮತ್ತು ನಿದ್ರಿಸುತ್ತೀಯೆ. ಇದರಿಂದಲೇ
ಸುಖಿಯಂತೆ ಸಂಚರಿಸುತ್ತಿದ್ದೀಯೆ.

12146012a ಮೋಘಂ ತೇ ಜೀವಿತಂ ರಾಜನ್ ಪರಿಕ್ಲಿಷ್ಟಂ ಚ ಜೀವಸಿ|
12146012c ಪಾಪಾಯೈವ ಚ ಸೃಷ್ಟೋಽಸಿ ಕರ್ಮಣೇ ಹ ಯವೀಯಸೇ||

ರಾಜನ್! ನಿನ್ನ ಜೀವನವು ವ್ಯರ್ಥವಾದುದು ಮತ್ತು ಕಷ್ಟದಿಂದ
ಜೀವಿಸುತ್ತಿದ್ದೀಯೆ. ಪಾಪಕ್ಕಾಗಿಯೇ ನೀನು ಹುಟ್ಟಿದ್ದೀಯೆ.
ಪಾಪಕರ್ಮಕ್ಕಾಗಿಯೇ ನಿನ್ನ ಜನ್ಮವಾಗಿದೆ.

12146013a ಬಹು ಕಲ್ಯಾಣಮಿಚ್ಚಂತ ಈಹಂತೇ ಪಿತರಃ ಸುತಾನ್|
12146013c ತಪಸಾ ದೇವತೇಜ್ಯಾಭಿರ್ವಂದನೇನ ತಿತಿಕ್ಷಯಾ||

ತಂದೆ-ತಾಯಿಗಳು ತಪಸ್ಸು, ದೇವಪೂಜೆ, ನಮಸ್ಕಾರ ಮತ್ತು ಕ್ಷಮೆ
ಮೊದಲಾದವುಗಳ ಮೂಲಕ ಪುತ್ರನನ್ನು ಪಡೆಯಲು ಬಯಸುತ್ತಾರೆ
ಮತ್ತು ಪುತ್ರನಿಗೆ ಪರಮ ಕಲ್ಯಾಣವನ್ನು ಇಚ್ಛಿಸುತ್ತಾರೆ.

12146014a ಪಿತೃವಂಶಮಿಮಂ ಪಶ್ಯ ತ್ವತ್ಕೃತೇ ನರಕಂ ಗತಮ್|

---

[686] ಬ್ರಹ್ಮಮೃತ್ಯುರಶುದ್ಧಾತ್ಮಾ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12146014c ನಿರರ್ಥಾಃ ಸರ್ವ ಏವೈಷಾಮಾಶಾಬಂಧಾಸ್ತ್ವದಾಶ್ರಯಾಃ||

ಆದರೆ ನೋಡು! ನಿನ್ನಿಂದಾಗಿ ನಿನ್ನ ಪಿತೃವಂಶವು ನರಕಕ್ಕೆ ಹೋಗಿದೆ. ನಿನ್ನ ಕುರಿತು ಅವರು ಏನೆಲ್ಲ ಆಶಯಗಳನ್ನು ಕಟ್ಟಿಕೊಂಡಿದ್ದರೋ ಆ ಎಲ್ಲ ಆಶಯಗಳೂ ವ್ಯರ್ಥವಾಗಿಬಿಟ್ಟವು.

12146015a ಯಾನ್ಪೂಜಯಂತೋ ವಿಂದಂತಿ ಸ್ವರ್ಗಮಾಯುರ್ಯಶಃ ಸುಖಮ್[687]|
12146015c ತೇಷು ತೇ ಸತತಂ ದ್ವೇಷೋ ಬ್ರಾಹ್ಮಣೇಷು ನಿರರ್ಥಕಃ||

ಯಾರನ್ನು ಪೂಜಿಸಿ ಜನರು ಸ್ವರ್ಗ, ಆಯಸ್ಸು, ಯಶಸ್ಸು ಮತ್ತು ಸುಖವನ್ನು ಪಡೆದುಕೊಳ್ಳುತ್ತಾರೋ ಆ ಬ್ರಾಹ್ಮಣರನ್ನೇ ನೀನು ಸದಾ ದ್ವೇಷಿಸುತ್ತಿದ್ದೀಯೆ.

12146016a ಇಮಂ ಲೋಕಂ ವಿಮುಚ್ಯ ತ್ವಮವಾಙ್ಮೂರ್ಧಾ ಪತಿಷ್ಯಸಿ|
12146016c ಅಶಾಶ್ವತೀಃ ಶಾಶ್ವತೀಶ್ಚ ಸಮಾಃ ಪಾಪೇನ ಕರ್ಮಣಾ||

ಈ ಲೋಕವನ್ನು ಬಿಟ್ಟಮೇಲೆ ನೀನು ನಿನ್ನ ಪಾಪಕರ್ಮಗಳ ಫಲವಾಗಿ ಅನಂತ ವರ್ಷಗಳ ವರೆಗೆ ತಲೆ ಕೆಳಗಾಗಿ ನರಕದಲ್ಲಿ ಬಿದ್ದಿರುತ್ತೀಯೆ.

12146017a ಅದ್ಯಮಾನೋ ಜಂತುಗೃಧ್ನೈಃ ಶಿತಿಕಂಠೈರಯೋಮುಖೈಃ|
12146017c ತತೋಽಪಿ ಪುನರಾವೃತ್ತಃ ಪಾಪಯೋನಿಂ ಗಮಿಷ್ಯಸಿ||

ಅಲ್ಲಿ ಲೋಹದ ಕೊಕ್ಕುಳ್ಳ ಹದ್ದುಗಳು ಮತ್ತು ನವಿಲುಗಳು ನಿನ್ನನ್ನು ಕುಕ್ಕಿ-ಕುಕ್ಕಿ ಪೀಡಿಸುತ್ತವೆ. ನೀನು ನರಕದಿಂದ ಹಿಂದಿರುಗಿದ ನಂತರವೂ ನೀನು ಪಾಪಯೋನಿಯಲ್ಲಿ ಜನ್ಮತಾಳುತ್ತೀಯೆ.

---

687 ಪ್ರಜಾಃ (ಗೀತಾ ಪ್ರೆಸ್).

12146018a ಯದಿದಂ ಮನ್ಯಸೇ ರಾಜನ್ನಾಯಮಸ್ತಿ ಪರಃ ಕುತಃ|
12146018c ಪ್ರತಿಸ್ಮಾರಯಿತಾರಸ್ತ್ವಾಂ ಯಮದೂತಾ ಯಮಕ್ಷಯೇ||

ರಾಜನ್! ಈ ಲೋಕದಲ್ಲಿಯೇ ಪಾಪದ ಫಲವು ದೊರಕದಿದ್ದಾಗ ಪರಲೋಕದ ಅಸ್ತಿತ್ವವಾದರೂ ಏನು ಎಂದು ನೀನು ಯೋಚಿಸುತ್ತಿರಬಹುದು. ಯಮಲೋಕದಲ್ಲಿ ಯಮದೂತರು ನಿನಗೆ ಈ ವಿಷಯದ ಕುರಿತು ನೆನಪಿಸುತ್ತಾರೆ.””

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ
ಇಂದ್ರೋತಪಾರಿಕ್ಷಿತೀಯಸಂವಾದೇ
ಷಟ್ಚತ್ವಾರಿಂಶದಧಿಕಶತತಮೋऽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಇಂದ್ರೋತಪಾರಿಕ್ಷಿತೀಯಸಂವಾದ ಎನ್ನುವ ನೂರಾನಲ್ವತ್ತಾರನೇ ಅಧ್ಯಾಯವು.

೧೪೭

ಬ್ರಹ್ಮಹತ್ಯೆಯ ಅಪರಾಧೀ ಜನಮೇಜಯನಿಗೆ ಇಂದ್ರೋತ ಮುನಿಯು ಆಶ್ರಯವನ್ನಿತ್ತಿದುದು (1-22).

12147001 ಭೀಷ್ಮ ಉವಾಚ|
12147001a ಏವಮುಕ್ತಃ ಪ್ರತ್ಯುವಾಚ ತಂ ಮುನಿಂ ಜನಮೇಜಯಃ|
12147001c ಗರ್ಹ್ಯಂ ಭವಾನ್ಗರ್ಹಯತಿ ನಿಂದ್ಯಂ ನಿಂದತಿ ಮಾ ಭವಾನ್||
12147002a ಧಿಕ್ಕಾರ್ಯಂ ಮಾ[688] ಧಿಕ್ಕುರುತೇ ತಸ್ಮಾತ್ತ್ವಾಹಂ ಪ್ರಸಾದಯೇ|

[688] ಮಾಂ (ಗೀತಾ ಪ್ರೆಸ್).

ಭೀಷ್ಮನು ಹೇಳಿದನು: "ಹೀಗೆ ಹೇಳಲು ಜನಮೇಜಯನು ಮುನಿಗೆ ಉತ್ತರಿಸಿದನು: "ತಿರಸ್ಕೃತನನ್ನು ನೀನು ತಿರಸ್ಕರಿಸುತ್ತಿದ್ದೀಯೆ. ನಿಂದನೀಯನನ್ನು ನೀನು ನಿಂದಿಸುತ್ತಿದ್ದೀಯೆ. ಧಿಕ್ಕರಿಸಬೇಡ. ನನ್ನನ್ನು ಧಿಕ್ಕರಿಸುತ್ತಿರುವ ನಿನ್ನನ್ನು ನಾನು ಪ್ರಸನ್ನಗೊಳಿಸ ಬಯಸುತ್ತೇನೆ.

12147002c ಸರ್ವಂ ಹೀದಂ ಸ್ವಕೃತಂ[689] ಮೇ ಜ್ವಲಾಮ್ಯಗ್ನಾವಿವಾಹಿತಃ||
12147003a ಸ್ವಕರ್ಮಾಣ್ಯಭಿಸಂಧಾಯ ನಾಭಿನಂದತಿ ಮೇ ಮನಃ|

ಇವೆಲ್ಲವೂ ನಾನೇ ಮಾಡಿಕೊಂಡಿದ್ದಾಗಿದೆ. ಇದರಿಂದಾಗಿಯೇ ನನ್ನೊಳಗೆ ಅಗ್ನಿಯನ್ನು ಇಟ್ಟಿದ್ದಾರೋ ಎನ್ನುವಂತೆ ನಾನು ಸುಡುತ್ತಿದ್ದೇನೆ. ನನ್ನದೇ ಕೃತ್ಯಗಳನ್ನು ನೆನಪಿಸಿಕೊಂಡು ನನ್ನ ಮನವು ಪ್ರಸನ್ನವಾಗುತ್ತಿಲ್ಲ.

12147003c ಪ್ರಾಪ್ತಂ ನೂನಂ ಮಯಾ ಘೋರಂ ಭಯಂ ವೈವಸ್ವತಾದಪಿ||
12147004a ತತ್ತು ಶಲ್ಯಮನಿರ್ಹತ್ಯ ಕಥಂ ಶಕ್ಷ್ಯಾಮಿ ಜೀವಿತುಮ್|
12147004c ಸರ್ವಮನ್ಯೂನ್ವಿನೀಯ ತ್ವಮಭಿ ಮಾ ವದ ಶೌನಕ||

ನಿಜವಾಗಿಯೂ ನನಗೆ ವೈವಸ್ವತ ಯಮನಿಂದಲೂ ಘೋರ ಭಯವು ಪ್ರಾಪ್ತವಾಗಲಿಕ್ಕಿದೆ. ಈ ಮುಳ್ಳನ್ನು ನನ್ನ ಹೃದಯದಿಂದ ಕಿತ್ತೊಗೆಯದೇ ನಾನು ಹೇಗೆ ತಾನೇ ಜೀವಿಸಿರಬಲ್ಲೆನು? ಶೌನಕ! ಸರ್ವಕ್ರೋಧಗಳನ್ನೂ ತ್ಯಜಿಸಿ ನನ್ನ ಉದ್ಧಾರದ ಯಾವುದಾದರೂ ಉಪಾಯವನ್ನು ಹೇಳು.

12147005a ಮಹಾನಸಂ ಬ್ರಾಹ್ಮಣಾನಾಂ ಭವಿಷ್ಯಾಮ್ಯರ್ಥವಾನ್ಪುನಃ[690]|

---

689 ದುಷ್ಕೃತಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

690 ಮಹಾನಾಸಂ ಬ್ರಾಹ್ಮಣಾನಾಂ ಭೂಯೋ ವಕ್ಷ್ಯಾಮಿ ಸಾಂಪ್ರತಮ್|

12147005c ಅಸ್ತು ಶೇಷಂ ಕುಲಸ್ಯಾಸ್ಯ ಮಾ ಪರಾಭೂದಿದಂ ಕುಲಮ್‌॥

ಭವಿಷ್ಯದಲ್ಲಿ ಪುನಃ ನಾನು ಉದ್ದೇಶಪೂರ್ವಕವಾಗಿ ಬ್ರಾಹ್ಮಣರ ಮಹಾನ್ ಭಕ್ತನಾಗುತ್ತೇನೆ. ನನ್ನ ಈ ಕುಲವು ಸ್ವಲ್ಪವಾದರೂ ಉಳಿದುಕೊಳ್ಳಲಿ. ಈ ಕುಲವು ಸಂಪೂರ್ಣವಾಗಿ ನಾಶವಾಗದಿರಲಿ.

12147006a ನ ಹಿ ನೋ ಬ್ರಹ್ಮಶಪ್ತಾನಾಂ ಶೇಷೋ ಭವಿತುಮರ್ಹತಿ|
12147006c ಶ್ರುತೀರಲಭಮಾನಾನಾಂ ಸಂವಿದಂ ವೇದನಿಶ್ಚಯಾತ್‌॥
12147007a ನಿರ್ವಿದ್ಯಮಾನಃ ಸುಭೃಶಂ ಭೂಯೋ ವಕ್ಷ್ಯಾಮಿ ಸಾಂಪ್ರತಮ್‌|
12147007c ಭೂಯಶ್ಚೈವಾಭಿನಂಕ್ಷಂತಿ ನಿರ್ಧರ್ಮಾ ನಿರ್ಜಪಾ ಇವ‌॥

ಬ್ರಾಹ್ಮಣರ ಶಾಪದಿಂದ ನಮ್ಮ ಕುಲವು ಸ್ವಲ್ಪವೂ ಉಳಿಯುವುದಿಲ್ಲ. ನನ್ನ ಈ ಪಾಪದ ಕಾರಣದಿಂದ ಸಮಾಜದಲ್ಲಿ ನನಗೆ ಪ್ರಶಂಸೆಯೂ ದೊರೆಯುತ್ತಿಲ್ಲ ಮತ್ತು ಸಜಾತೀಯ ಬಂಧುಗಳೊಂದಿಗೆ ಬೆರೆಯುವಂತೆಯೂ ಇಲ್ಲ. ಆದುದರಿಂದ ಅತ್ಯಂತ ಖೇದ ಮತ್ತು ವಿರಕ್ತಿಯನ್ನು ಹೊಂದಿ ವೇದಗಳ ನಿಶ್ಚಯಾತ್ಮಕ ಜ್ಞಾನವಿರುವ ನಿನ್ನಂಥಹ ಬ್ರಾಹ್ಮಣರಿಗೆ ಪುನಃ ಹೇಳುತ್ತೇನೆ: ನಿರ್ಜನ ಸ್ಥಾನದಲ್ಲಿರುವ ಯೋಗಿಗಳು ಪಾಪಿಪುರುಷರನ್ನು ಹೇಗೆ ರಕ್ಷಿಸುವರೋ ಹಾಗೆ ನೀವೂ ಕೂಡ ನಿಮ್ಮ ದಯೆಯಿಂದ ನನ್ನಂತಹ ದುಃಖೀ ಮನುಷ್ಯನ ರಕ್ಷಣೆಯನ್ನು ಮಾಡಬೇಕು.

12147008a ಅರ್ವಾಕ್ಚ ಪ್ರತಿತಿಷ್ಠಂತಿ ಪುಲಿಂದಶಬರಾ ಇವ|
12147008c ನ ಹ್ಯಯಜ್ಞಾ ಅಮುಂ ಲೋಕಂ ಪ್ರಾಪ್ನುವಂತಿ ಕಥಂ ಚನ‌॥

ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ತಮ್ಮ ಪಾಪದ ಕಾರಣದಿಂದ ಯಜ್ಞದ ಅಧಿಕಾರದಿಂದ
ವಂಚಿತರಾದವರು ಪುಲಿಂದರು ಮತ್ತು ಶಬರರಂತೆ ನರಕದಲ್ಲಿಯೇ
ಬಿದ್ದಿರುತ್ತಾರೆ. ಅವರು ಪರಲೋಕದಲ್ಲಿ ಯಾವುದೇ ಉತ್ತಮ ಗತಿಯನ್ನು
ಪಡೆಯುವುದಿಲ್ಲ.

12147009a ಅವಿಜ್ಞಾಯ್ಯೈವ ಮೇ ಪ್ರಜ್ಞಾಂ ಬಾಲಸ್ಯೇವ ಸುಪಂಡಿತಃ|
12147009c ಬ್ರಹ್ಮನ್ ಪಿತೇವ ಪುತ್ರೇಭ್ಯಃ ಪ್ರತಿ ಮಾಂ ವಾಂಚ ಶೌನಕ||

ಬ್ರಹ್ಮನ್! ಶೌನಕ! ನೀನು ಪ್ರಾಜ್ಞ ಮತ್ತು ನಾನು ಮೂರ್ಖ. ನೀನು ನನ್ನ
ಬಾಲಬುದ್ಧಿಯನ್ನು ತಿಳಿದುಕೊಂಡು ತಂದೆಯು ಪುತ್ರನ ಮೇಲೆ
ಸ್ವಭಾವತಃ ಸಂತುಷ್ಟನಾಗುವಂತೆ ನನ್ನ ಮೇಲೂ ಪ್ರಸನ್ನನಾಗು.”

12147010 ಶೌನಕ ಉವಾಚ |
12147010a ಕಿಮಾಶ್ಚರ್ಯಂ ಯತಃ ಪ್ರಾಜ್ಞೋ ಬಹು ಕುರ್ಯಾದ್ಧಿ ಸಾಂಪ್ರತಮ್[691]|
12147010c ಇತಿ ವೈ ಪಂಡಿತೋ ಭೂತ್ವಾ ಭೂತಾನಾಂ ನೋಪತಪ್ಯತಿ[692]||

ಶೌನಕನು ಹೇಳಿದನು: “ಅತ್ಯಂತ ಪ್ರಾಜ್ಞನಾದವನು
ಸಾಂಪ್ರತವಾದುದನ್ನು ಮಾಡಿದರೆ ಅದರಲ್ಲಿ ಆಶ್ಚರ್ಯವೇನಿದೆ?
ಇದನ್ನು ತಿಳಿದ ಪಂಡಿತನು ಪ್ರಾಣಿಗಳ ಕುರಿತು ಪರಿತಪಿಸುವುದಿಲ್ಲ.

12147011a ಪ್ರಜ್ಞಾಪ್ರಾಸಾದಮಾರುಹ್ಯ ಅಶೋಚ್ಯಃ ಶೋಚತೇ ಜನಾನ್|
12147011c ಜಗತೀಸ್ಥಾನಿವಾದ್ರಿಸ್ಥಃ ಪ್ರಜ್ಞಯಾ ಪ್ರತಿಪಶ್ಯತಿ[693]||

---

[691] ಕಿಮಾಶ್ಚರ್ಯಂ ಯದಪ್ರಜ್ಞೋ ಬಹು ಕುರ್ಯಾದಸಾಂಪ್ರತಮ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[692] ನಾನುಕುಪ್ಯತೇ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[693] ಪ್ರತಿಪತ್ಸ್ಯತಿ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ವಿಶುದ್ಧ ಬುದ್ಧಿಯ ಅಟ್ಟವನ್ನೇರಿ ಸ್ವಯಂ ಶೋಕರಹಿತನಾಗಿದ್ದುಕೊಂಡು ಇತರ ದುಃಖೀ ಮನುಷ್ಯರಿಗಾಗಿ ಶೋಕಿಸುವವನು ಪರ್ವತ ಶಿಖರವನ್ನೇರಿ ಪರ್ವತದ ಸುತ್ತಲಿರುವ ಎಲ್ಲವನ್ನೂ ನೋಡುವಂತೆ ತನ್ನ ಜ್ಞಾನಬಲದಿಂದ ಎಲ್ಲವನ್ನೂ ತಿಳಿದುಕೊಳ್ಳುತ್ತಾನೆ.

12147012a ನ ಚೋಪಲಭತೇ ತತ್ರ ನ ಚ ಕಾರ್ಯಾಣಿ ಪಶ್ಯತಿ[694]।
12147012c ನಿರ್ವಿಣ್ಣಾತ್ಮಾ ಪರೋಕ್ಷೋ ವಾ ಧಿಕ್ಕೃತಃ ಸರ್ವಸಾಧುಷು[695]॥

ಸರ್ವಸಾಧುಗಳಿಂದ ವಿರಕ್ತನಾದ ಮತ್ತು ಅವರ ದೃಷ್ಟಿಪಥದಿಂದ ದೂರವಿರುವ ಅಥವಾ ಅವರಿಂದ ಧಿಕ್ಕರಿಸಲ್ಪಟ್ಟವನಿಗೆ ಜ್ಞಾನವು ಉಪಲಬ್ಧವಾಗುವುದಿಲ್ಲ ಮತ್ತು ಅವನ ಯಾವ ಕಾರ್ಯವೂ ನಡೆಯುವುದಿಲ್ಲ.

12147013a ವಿದಿತ್ವೋಭಯತೋ ವೀರ್ಯಂ ಮಾಹಾತ್ಮ್ಯಂ ವೇದ ಆಗಮೇ।
12147013c ಕುರುಷ್ವೇಹ ಮಹಾಶಾಂತಿಂ ಬ್ರಹ್ಮಾ ಶರಣಮಸ್ತು ತೇ॥

ವೇದ ಮತ್ತು ಆಗಮಗಳು ಹೇಳಿರುವ ಬ್ರಾಹ್ಮಣರ ವೀರ್ಯ ಮತ್ತು ಮಹಾತ್ಮೆಗಳನ್ನು ನೀನು ತಿಳಿದಿದ್ದೀಯೆ. ಇಲ್ಲಿ ಮಹಾಶಾಂತಿಯಿಂದ ಬ್ರಾಹ್ಮಣರು ನಿನಗೆ ನೆಲೆಯನ್ನು ನೀಡುವಂತೆ ಪ್ರಯತ್ನಿಸು.

12147014a ತದ್ವೈ ಪಾರತ್ರಿಕಂ ಚಾರು ಬ್ರಾಹ್ಮಣಾನಾಮಕುಪ್ಯತಾಮ್।
12147014c ಅಥ ಚೇತ್ತಪ್ಯಸೇ ಪಾಪ್ಯೈರ್ಧರ್ಮಂ ಚೇದನುಪಶ್ಯಸಿ॥

---

694 ನ ಚೋಲಭ್ಯತೇ ತೇನ ನ ಚಾಶ್ಚರ್ಯಾಣಿ ಕುರ್ವತೇ। ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

695 ಪೂರ್ವಸಾಧುಷು ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಕ್ರೋಧರಹಿತನಾಗಿ ಬ್ರಾಹ್ಮಣರಿಗೆ ಮಾಡುವ ಸೇವೆಯು ಪಾರಲೌಕಿಕ ಲಾಭಕ್ಕೆ ಕಾರಣವಾಗುತ್ತದೆ. ನಿನ್ನ ಪಾಪಗಳಿಗೆ ಪಶ್ಚಾತ್ತಾಪ ಪಡುತ್ತಿರುವೆಯಾದರೆ ನಿನ್ನ ದೃಷ್ಟಿಯು ನಿರಂತರವಾಗಿ ಧರ್ಮದ ಮೇಲೆಯೇ ಇರಲಿ.”

12147015 ಜನಮೇಜಯ ಉವಾಚ |
12147015a ಅನುತಪ್ಯೇ ಚ ಪಾಪೇನ ನ ಚಾಧರ್ಮಂ ಚರಾಮ್ಯಹಮ್|
12147015c ಬುಭೂಷುಂ ಭಜಮಾನಂ ಚ ಪ್ರತಿವಾಂಚಾಮಿ[696] ಶೌನಕ||

ಜನಮೇಜಯನು ಹೇಳಿದನು: “ಶೌನಕ! ನನ್ನ ಪಾಪಗಳಿಗೆ ಪಶ್ಚಾತ್ತಾಪಪಡುತ್ತಿದ್ದೇನೆ. ಅಧರ್ಮದಲ್ಲಿ ನಡೆದುಕೊಳ್ಳುವುದಿಲ್ಲ. ನನ್ನ ಕಲ್ಯಾಣವನ್ನೇ ಬಯಸುತ್ತೇನೆ. ಭರವಸೆಯನ್ನು ನೀಡುತ್ತಿದ್ದೇನೆ.”

12147016 ಶೌನಕ ಉವಾಚ |
12147016a ಚಿತ್ತ್ವಾ ಸ್ತಂಭಂ[697] ಚ ಮಾನಂ ಚ ಪ್ರೀತಿಮಿಚ್ಚಾಮಿ ತೇ ನೃಪ|
12147016c ಸರ್ವಭೂತಹಿತೇ ತಿಷ್ಠ ಧರ್ಮಂ ಚೈವ ಪ್ರತಿಸ್ಮರ||

ಶೌನಕನು ಹೇಳಿದನು: “ನೃಪ! ನಾನು ನಿನ್ನ ನಿಲುವು ಮತ್ತು ಮಾನವನ್ನು ಛೇದಿಸಿ ನಿನಗೆ ಪ್ರಿಯವಾದುದನ್ನು ಮಾಡುತ್ತೇನೆ. ನೀನು ಧರ್ಮವನ್ನು ಸದಾ ಸ್ಮರಿಸುತ್ತಾ ಸರ್ವಭೂತಗಳ ಹಿತದ ಸಾಧನೆಯನ್ನು ಮಾಡು.

12147017a ನ ಭಯಾನ್ನ ಚ ಕಾರ್ಪಣ್ಯಾನ್ನ ಲೋಭಾತ್ತ್ವಾಮುಪಾಹ್ವಯೇ|

---

696 ಪ್ರೀತಿಮಾನ್ ಭವ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

697 ದಂಭಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12147017c ತಾಂ ಮೇ ದೇವಾ ಗಿರಂ ಸತ್ಯಾಂ ಶೃಣ್ವಂತು ಬ್ರಾಹ್ಮಣೈಃ ಸಹ||

ನಾನು ನಿನ್ನನ್ನು ಭಯದಿಂದಾಗಲೀ ಕಾರ್ಪಣ್ಯದಿಂದಾಗಲೀ ಅಥವಾ ಲೋಭದಿಂದಾಗಲೀ ಸ್ವೀಕರಿಸುತ್ತಿಲ್ಲ. ನೀನು ಈ ಬ್ರಾಹ್ಮಣರೊಂದಿಗೆ ದೈವೀ ವಾಣಿಯಂತಿರುವ ನನ್ನ ಈ ಸತ್ಯಮಾತನ್ನು ಕೇಳು.

12147018a ಸೋಽಹಂ ನ ಕೇನ ಚಿಚ್ಚಾರ್ಥೀ ತ್ವಾಂ ಚ ಧರ್ಮಮುಪಾಹ್ವಯೇ|
12147018c ಕ್ರೋಶತಾಂ ಸರ್ವಭೂತಾನಾಮಹೋ ಧಿಗಿತಿ ಕುರ್ವತಾಮ್||

ನಾನು ನಿನ್ನಿಂದ ಯಾವ ವಸ್ತುವನ್ನೂ ಬಯಸುತ್ತಿಲ್ಲ. ಸರ್ವಭೂತಗಳೂ ನಿನ್ನನ್ನು ಕೂಗಿ ಧಿಕ್ಕರಿಸುತ್ತಿದ್ದರೂ ಕೇವಲ ಧರ್ಮದ ಕಾರಣದಿಂದಾಗಿ ನಿನ್ನನ್ನು ಇಲ್ಲಿ ಸ್ವಾಗತಿಸುತ್ತಿದ್ದೇನೆ.

12147019a ವಕ್ಷ್ಯಂತಿ ಮಾಮಧರ್ಮಜ್ಞಾ ವಕ್ಷ್ಯಂತ್ಯಸುಹೃದೋ ಜನಾಃ|
12147019c ವಾಚಸ್ತಾಃ ಸುಹೃದಃ ಶ್ರುತ್ವಾ ಸಂಜ್ವರಿಷ್ಯಂತಿ ಮೇ ಭೃಶಮ್||

ಜನರು ನನ್ನನ್ನು ಅಧರ್ಮಜ್ಞನೆಂದು ಹೇಳುವರು. ನನ್ನ ಸುಹೃದ್ ಜನರು ನನ್ನನ್ನು ತ್ಯಜಿಸುತ್ತಾರೆ. ನಾನು ನಿನಗೆ ನೀಡುವ ಧರ್ಮೋಪದೇಶವನ್ನು ಕೇಳಿ ನನ್ನ ಸುಹೃದಯರು ಅತ್ಯಂತ ರೋಷದಿಂದ ಉರಿಯುತ್ತಾರೆ.

12147020a ಕೇ ಚಿದೇವ ಮಹಾಪ್ರಾಜ್ಞಾಃ ಪರಿಜ್ಞಾಸ್ಯಂತಿ ಕಾರ್ಯತಾಮ್|
12147020c ಜಾನೀಹಿ ಮೇ ಕೃತಂ ತಾತ ಬ್ರಾಹ್ಮಣಾನ್ ಪ್ರತಿ ಭಾರತ||

ಭಾರತ! ಯಾರಾದರೂ ಮಹಾಪ್ರಾಜ್ಞರೇ ನನ್ನ ಈ ಕಾರ್ಯವನ್ನು ಅರ್ಥಮಾಡಿಕೊಳ್ಳಬಲ್ಲರು. ಬ್ರಾಹ್ಮಣರಿಗೆ ಒಳ್ಳೆಯದನ್ನು ಮಾಡಬೇಕೆನ್ನುವುದೇ ನನ್ನ ಈ ಕಾರ್ಯದ ಉದ್ದೇಶವಾಗಿದೆ. ಇದನ್ನು

ನೀನು ಚೆನ್ನಾಗಿ ತಿಳಿದುಕೋ.

12147021a ಯಥಾ ತೇ ಮತ್ಕೃತೇ ಕ್ಷೇಮಂ ಲಭೇರಂಸ್ತತ್ತಥಾ ಕುರು|
12147021c ಪ್ರತಿಜಾನೀಹಿ ಚಾದ್ರೋಹಂ ಬ್ರಾಹ್ಮಣಾನಾಂ ನರಾಧಿಪ||

ಬ್ರಾಹ್ಮಣರು ನನ್ನಲ್ಲಿ ಹೇಗೆ ಕ್ಷೇಮವಾಗಿದ್ದಾರೋ ಹಾಗೆ ನೀನೂ ಅವರ ಕ್ಷೇಮವನ್ನು ನೋಡಿಕೋ. ನರಾಧಿಪ! ಬ್ರಾಹ್ಮಣರ ಕುರಿತು ದ್ರೋಹವನ್ನೆಸಗುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡು.”

12147022 ಜನಮೇಜಯ ಉವಾಚ |
12147022a ನೈವ ವಾಚಾ ನ ಮನಸಾ ನ ಪುನರ್ಜಾತು ಕರ್ಮಣಾ|
12147022c ದ್ರೋಗ್ಧಾಸ್ಮಿ ಬ್ರಾಹ್ಮಣಾನ್ವಿಪ್ರ ಚರಣಾವೇವ ತೇ ಸ್ಪೃಶೇ||

ಜನಮೇಜಯನು ಹೇಳಿದನು: “ವಿಪ್ರ! ನಿನ್ನ ಚರಣಗಳನ್ನು ಮುಟ್ಟಿ ಶಪಥಮಾಡುತ್ತಿದ್ದೇನೆ – ವಾಚಾ, ಮನಸಾ ಅಥವ ಕರ್ಮಗಳಿಂದ ಬ್ರಾಹ್ಮಣರಿಗೆ ದ್ರೋಹವನ್ನೆಸಗುವುದಿಲ್ಲ!”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಇಂದ್ರೋತಪಾರಿಕ್ಷಿತೀಯೇ ಸಪ್ತಚತ್ವಾರಿಂಶದಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಇಂದ್ರೋತಪಾರಿಕ್ಷಿತೀಯ ಎನ್ನುವ ನೂರಾನಲ್ವತ್ತೇಳನೇ ಅಧ್ಯಾಯವು.

೧೪೮

ಇಂದ್ರೋತನು ಜನಮೇಜಯನಿಗೆ ಉಪದೇಶವನ್ನಿತ್ತು ಅವನಿಂದ

ಅಶ್ವಮೇಧ ಯಜ್ಞವನ್ನು ಮಾಡಿಸುವುದು ಮತ್ತು ಜನಮೇಜಯನು ತನ್ನ ರಾಜ್ಯವನ್ನು ಪುನಃ ಪ್ರವೇಶಿಸುವುದು (1-35).

12148001 ಶೌನಕ ಉವಾಚ |

12148001a ತಸ್ಮಾತ್ತೇಽಹಂ ಪ್ರವಕ್ಷ್ಯಾಮಿ ಧರ್ಮಮಾವೃತ್ತಚೇತಸೇ|
12148001c ಶ್ರೀಮಾನ್ಮಹಾಬಲಸ್ತುಷ್ಟೋ ಯಸ್ತ್ವಂ ಧರ್ಮಮವೇಕ್ಷಸೇ|

ಶೌನಕನು ಹೇಳಿದನು: "ರಾಜನ್! ನಿನ್ನ ಪ್ರತಿಜ್ಞೆಯನ್ನು ನೋಡಿದರೆ ನಿನ್ನ ಮನಸ್ಸು ಪಾಪದಿಂದ ನಿವೃತ್ತವಾಯಿತೆಂದು ತಿಳಿಯುತ್ತದೆ. ಆದುದರಿಂದ ನಾನು ನಿನಗೆ ಧರ್ಮದ ಉಪದೇಶವನ್ನು ನೀಡುತ್ತೇನೆ. ಏಕೆಂದರೆ ನೀನು ಶ್ರೀಸಂಪನ್ನನೂ ಮಹಾ ಬಲಶಾಲಿಯೂ ಮತ್ತು ಸಂತುಷ್ಟನೂ ಆಗಿರುವೆ. ಮತ್ತು ನೀನು ಧರ್ಮದ ಮೇಲೆಯೇ ದೃಷ್ಟಿಯನ್ನಿಟ್ಟಿರುವೆ.

12148001e ಪುರಸ್ತಾದ್ದಾರುಣೋ ಭೂತ್ವಾ ಸುಚಿತ್ರತರಮೇವ ತತ್||
12148002a ಅನುಗೃಹ್ಣಂತಿ ಭೂತಾನಿ ಸ್ವೇನ ವೃತ್ತೇನ ಪಾರ್ಥಿವ|

ಪಾರ್ಥಿವ! ಮೊದಲು ಕಠೋರನಾಗಿದ್ದುಕೊಂಡು ನಂತರ ಕೋಮಲ ಭಾವವನ್ನು ತಾಳಿ ತನ್ನ ಸದ್ವ್ಯವಹಾರಗಳಿಂದ ಸಮಸ್ತ ಜೀವಿಗಳಿಗೆ ಅನುಗ್ರಹವನ್ನು ನೀಡುವುದು ಅತ್ಯಂತ ಆಶ್ಚರ್ಯಕರವಾದುದು.

12148002c ಕೃತ್ಸ್ನೋ ನೂನಂ ಸದಸತೀ[698] ಇತಿ ಲೋಕೋ ವ್ಯವಸ್ಯತಿ|
12148002e ಯತ್ರ ತ್ವಂ ತಾದೃಶೋ ಭೂತ್ವಾ ಧರ್ಮಮದ್ಯಾನುಪಶ್ಯಸಿ||

ತುಂಬಾ ಸಮಯ ರಾಜನು ತೀಕ್ಷ್ಣವಾಗಿಯೇ ಇದ್ದರೆ ಎಲ್ಲವನ್ನೂ ಸುಟ್ಟು

---

[698] ಕೃತ್ಸಂ ನೂನಂ ಸ ದಹತಿ (ಗೀತಾ ಪ್ರೆಸ್).

ಭಸ್ಮಮಾಡುತ್ತಾನೆ ಎಂದು ಲೋಕದ ಅಭಿಪ್ರಾಯವಾಗಿದೆ. ಆದರೆ ನೀನು ಹಾಗಿದ್ದರೂ ಧರ್ಮದ ಮೇಲೆ ನಿನ್ನ ಲಕ್ಷ್ಯವನ್ನಿಟ್ಟಿರುವೆ ಎನ್ನುವುದು ಅಲ್ಪ ಆಶ್ಚರ್ಯದ ವಿಷಯವೇನೂ ಅಲ್ಲ.

12148003a ಹಿತ್ವಾ ಸುರುಚಿರಂ ಭಕ್ಷ್ಯಂ ಭೋಗಾಂಶ್ಚ ತಪ ಆಸ್ಥಿತಃ|
12148003c ಇತ್ಯೇತದಪಿ ಭೂತಾನಾಮದ್ಭುತಂ[699] ಜನಮೇಜಯ||

ಜನಮೇಜಯ! ನೀನು ದೀರ್ಘಕಾಲದಿಂದ ಭಕ್ಷ್ಯ-ಭೋಜ್ಯಾದಿ ಪದಾರ್ಥಗಳನ್ನು ಪರಿತ್ಯಜಿಸಿ ತಪಸ್ಸಿನಲ್ಲಿ ನಿರತನಾಗಿರುವೆಯೆಂದರೆ ಇದು ಜೀವಿಗಳಿಗೆ ಅದ್ಭುತವಾದುದೇ ಸರಿ.

12148004a ಯೋ ದುರ್ಬಲೋ[700] ಭವೇದ್ದಾತಾ ಕೃಪಣೋ ವಾ ತಪೋಧನಃ|
12148004c ಅನಾಶ್ಚರ್ಯಂ ತದಿತ್ಯಾಹುರ್ನಾತಿದೂರೇ ಹಿ ವರ್ತತೇ||

ಧನಸಂಪನ್ನನು ದಾನಿಯಾಗಿರುವುದರಲ್ಲಿ ಅಥವಾ ದರಿದ್ರನು ತಪೋಧನನಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಇಂಥವರಿಗೆ ದಾನ ಮತ್ತು ತಪಸ್ಸುಗಳು ಅಧಿಕ ಕಠಿಣವಾದವುಗಳಲ್ಲ.

12148005a ಏತದೇವ ಹಿ ಕಾರ್ಪಣ್ಯಂ ಸಮಗ್ರಮಸಮೀಕ್ಷಿತಮ್|
12148005c ತಸ್ಮಾತ್ಸಮೀಕ್ಷ್ಯೈವ ಸ್ಯಾದ್ಭವೇತ್ತಸ್ಮಿಂಸ್ತತೋ ಗುಣಃ||

ಸಮಗ್ರವಾಗಿ ವಿಚಾರಿಸದೇ ಕಾರ್ಯವನ್ನು ಆರಂಭಿಸುವುದು ಕಾರ್ಪಣ್ಯತೆ. ಆದುದರಿಂದ ಎಲ್ಲವನ್ನೂ ಸಮೀಕ್ಷಿಸಿ

---

699 ಇತ್ಯೇತದಭಿಭೂತಾನಾಮದ್ಭುತಂ (ಗೀತಾ ಪ್ರೆಸ್).

700 ಯೋಽದುರ್ಲಭೋ (ಗೀತಾ ಪ್ರೆಸ್). ಇದೇ ಇಲ್ಲಿ ಸರಿಯಾದುದೆಂದು ನನ್ನ ಅಭಿಪ್ರಾಯ.

ಕಾರ್ಯಕ್ಕೈಗೊಳ್ಳುವುದರಲ್ಲಿಯೇ ಉತ್ತಮ ಗುಣವಿದೆ.

12148006a ಯಜ್ಞೋ ದಾನಂ ದಯಾ ವೇದಾಃ ಸತ್ಯಂ ಚ ಪೃಥಿವೀಪತೇ|
12148006c ಪಂಚೈತಾನಿ ಪವಿತ್ರಾಣಿ ಷಷ್ಠಂ ಸುಚರಿತಂ ತಪಃ||

ಪೃಥಿವೀಪತೇ! ಯಜ್ಞ, ದಾನ, ದಯೆ, ವೇದಗಳು ಮತ್ತು ಸತ್ಯ ಈ ಐದನ್ನು ಪವಿತ್ರವೆಂದು ಹೇಳಲಾಗಿದೆ. ಇದರ ಜೊತೆ ಸುಚರಿತವಾದ ತಪಸ್ಸೂ ಕೂಡ ಆರನೆಯ ಪವಿತ್ರ ಕರ್ಮವೆಂದು ಹೇಳಲಾಗಿದೆ.

12148007a ತದೇವ ರಾಜ್ಞಾಂ ಪರಮಂ ಪವಿತ್ರಂ ಜನಮೇಜಯ|
12148007c ತೇನ ಸಮ್ಯಗ್ಗೃಹೀತೇನ ಶ್ರೇಯಾಂಸಂ ಧರ್ಮಮಾಪ್ನ್ಯಸಿ||

ಜನಮೇಜಯ! ರಾಜರಿಗೆ ಇವೇ ಪರಮ ಪವಿತ್ರವಾದವುಗಳು. ಇವುಗಳನ್ನು ಚೆನ್ನಾಗಿ ಆಚರಣೆಗೆ ತರುವುದರಿಂದ ನೀನು ಶ್ರೇಯಸ್ಸನ್ನೂ ಧರ್ಮವನ್ನೂ ಪಡೆದುಕೊಳ್ಳುತ್ತೀಯೆ.

12148008a ಪುಣ್ಯದೇಶಾಭಿಗಮನಂ ಪವಿತ್ರಂ ಪರಮಂ ಸ್ಮೃತಮ್|
12148008c ಅಪಿ ಹ್ಯುದಾಹರಂತೀಮಾ ಗಾಥಾ ಗೀತಾ ಯಯಾತಿನಾ||

ಪುಣ್ಯ ತೀರ್ಥಗಳಿಗೆ ಯಾತ್ರೆಮಾಡುವುದನ್ನೂ ಪರಮ ಪವಿತ್ರವೆಂದು ಪರಿಗಣಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಯಯಾತಿಯು ಹಾಡಿದ ಈ ಗಾಥೆಯನ್ನು ಉದಾಹರಿಸುತ್ತಾರೆ.

12148009a ಯೋ ಮರ್ತ್ಯಃ ಪ್ರತಿಪದ್ಯೇತ ಆಯುರ್ಜೀವೇತ ವಾ ಪುನಃ|
12148009c ಯಜ್ಞಮೇಕಾಂತತಃ ಕೃತ್ವಾ ತತ್ಸಂನ್ಯಸ್ಯ ತಪಶ್ಚರೇತ್||

ದೀರ್ಘ ಕಾಲದ ಜೀವನವನ್ನು ಬಯಸುವವನು ಯತ್ನಪೂರ್ವಕ ಯಜ್ಞವನ್ನು ಮಾಡಬೇಕು ಮತ್ತು ನಂತರ ಅದನ್ನು ತ್ಯಜಿಸಿ

ತಪಸ್ಸನ್ನಾಚರಿಸಬೇಕು.

12148010a ಪುಣ್ಯಮಾಹುಃ ಕುರುಕ್ಷೇತ್ರಂ ಸರಸ್ವತ್ಯಾಂ ಪೃಥೂದಕಮ್[701]|
12148010c ಯತ್ರಾವಗಾಹ್ಯ ಪೀತ್ವಾ ವಾ ನೈವಂ ಶ್ವೋಮರಣಂ ತಪೇತ್||

ಕುರುಕ್ಷೇತ್ರ, ಸರಸ್ವತೀ ನದಿ ಮತ್ತು ಪೃಥೂದಕಗಳನ್ನು ಪುಣ್ಯಕರವೆಂದು ಹೇಳುತ್ತಾರೆ. ಅವುಗಳಲ್ಲಿ ಸ್ನಾನಮಾಡಿದವರಿಗೆ ಮತ್ತು ಅವುಗಳ ನೀರನ್ನು ಕುಡಿದವರಿಗೆ ಮುಂದಾಗುವ ಮರಣವು ಭಯವಿರುವುದಿಲ್ಲ.

12148011a ಮಹಾಸರಃ ಪುಷ್ಕರಾಣಿ ಪ್ರಭಾಸೋತ್ತರಮಾನಸೇ|
12148011c ಕಾಲೋದಂ ತ್ವೇವ ಗಂತಾಸಿ ಲಬ್ಧಾಯುರ್ಜೀವಿತೇ ಪುನಃ||
12148012a ಸರಸ್ವತೀದೃಷದ್ವತ್ಯೌ ಸೇವಮಾನೋಽನುಸಂಚರೇಃ[702]|
12148012c ಸ್ವಾಧ್ಯಾಯಶೀಲಃ ಸ್ಥಾನೇಷು ಸರ್ವೇಷು ಸಮುಪಸ್ಪೃಶೇಃ||

ಮಹಾಸರೋವರ ಪುಷ್ಕರ, ಪ್ರಭಾಸ, ಉತ್ತರ ಮಾನಸ, ಕಾಲೋದಕ, ಸರಸ್ವತೀ ಮತ್ತು ದೃಷದ್ವತಿಗಳನ್ನು ಸೇವಿಸುತ್ತಾ ಸಂಚರಿಸಿದರೆ ನಿನಗೆ ಪುನಃ ಜೀವನದಲ್ಲಿ ದೀರ್ಘಾಯುವು ಪ್ರಾಪ್ತವಾಗುತ್ತದೆ. ಈ ಎಲ್ಲ ತೀರ್ಥಸ್ಥಾನಗಳಲ್ಲಿ ಸ್ವಾಧ್ಯಾಯಶೀಲನಾಗಿ ಸ್ನಾನಮಾಡಬೇಕು.

12148013a ತ್ಯಾಗಧರ್ಮಂ ಪವಿತ್ರಾಣಾಂ ಸಂನ್ಯಾಸಂ ಪರಮಬ್ರವೀತ್[703]|
12148013c ಅತ್ರಾಪ್ಯುದಾಹರಂತೀಮಾ ಗಾಥಾಃ ಸತ್ಯವತಾ ಕೃತಾಃ||

---

701 ಪುಣ್ಯಮಾಹುಃ ಕುರುಕ್ಷೇತ್ರಂ ಕುರುಕ್ಷೇತ್ರಾತ್ ಸರಸ್ವತೀಂ| (ಗೀತಾ ಪ್ರೆಸ್) ಮತ್ತು ಇದರ ನಂತರ ಇನ್ನೊಂದು ಅಧಿಕ ಶ್ಲೋಕಾರ್ಧವಿದೆ: ಸರಸ್ವತ್ಯಾಶ್ಚ ತೀರ್ಥಾನಿ ತೀರ್ಥೇಭ್ಯಶ್ಚ ಪೃಥೂದಕಮ್||

702 ಸಂಗಮೋ ಮಾನಸಃ ಸರಃ (ಗೀತಾ ಪ್ರೆಸ್).

703 ಮನರಬ್ರವೀತ್ (ಗೀತಾ ಪ್ರೆಸ್).

ಸರ್ವತ್ಯಾಗರೂಪ ಸಂನ್ಯಾಸವೇ ಪರಮ ಪವಿತ್ರವೆಂದು ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಸತ್ಯವಾನನು ರಚಿಸಿದ ಈ ಗಾಥೆಯನ್ನು ಉದಾಹರಿಸುತ್ತಾರೆ.

12148014a ಯಥಾ ಕುಮಾರಃ ಸತ್ಯೋ ವೈ ನ ಪುಣ್ಯೋ ನ ಚ ಪಾಪಕೃತ್|
12148014c ನ ಹ್ಯಸ್ತಿ ಸರ್ವಭೂತೇಷು ದುಃಖಮಸ್ಮಿನ್ಕುತಃ ಸುಖಮ್||

ಬಾಲಕರು ರಾಗ-ದ್ವೇಷಗಳಿಂದ ಶೂನ್ಯರಾಗಿರುವ ಕಾರಣ ಸದಾ ಸತ್ಯಪರಾಯಣರಾಗಿಯೇ ಇರುತ್ತಾರೆ. ಅವರು ಪುಣ್ಯವನ್ನೂ ಮಾಡುವುದಿಲ್ಲ ಮತ್ತು ಪಾಪವನ್ನೂ ಮಾಡುವುದಿಲ್ಲ. ಈ ಲೋಕದಲ್ಲಿ ಸರ್ವಜೀವಿಗಳಿಗೂ ದುಃಖವೇ ಇಲ್ಲದಿರುವಾಗ ಸುಖವೆಲ್ಲಿಂದ?

12148015a ಏವಂ ಪ್ರಕೃತಿಭೂತಾನಾಂ ಸರ್ವಸಂಸರ್ಗಯಾಯಿನಾಮ್|
12148015c ತ್ಯಜತಾಂ ಜೀವಿತಂ ಪ್ರಾಯೋ ವಿವೃತೇ ಪುಣ್ಯಪಾತಕೇ||

ಈ ಸುಖ ಮತ್ತು ದುಃಖಗಳೆರಡೂ ಸರ್ವ ಸಂಸರ್ಗದೋಷಗಳನ್ನು ಸ್ವೀಕರಿಸಿ ಅವುಗಳನ್ನು ಅನುಸರಿಸಿ ನಡೆಯುವ ಪ್ರಕೃತಿಸ್ಥ ಪ್ರಾಣಿಗಳ ಧರ್ಮಗಳು. ಮಮತೆ ಮತ್ತು ಅಹಂಕಾರಾದಿಗಳೊಂದಿಗೆ ಎಲ್ಲವನ್ನೂ ತ್ಯಾಗಮಾಡಿದವರಿಗೆ ಪುಣ್ಯ ಮತ್ತು ಪಾಪಗಳೆಲ್ಲವೂ ನಿವೃತ್ತವಾಗಿರುತ್ತವೆ. ಅಂಥವರ ಜೀವನವೇ ಕಲ್ಯಾಣಮಯವಾದುದು.

12148016a ಯತ್ತ್ವೇವ ರಾಜ್ಞೋ ಜ್ಯಾಯೋ ವೈ ಕಾರ್ಯಾಣಾಂ ತದ್ವದಾಮಿ ತೇ|
12148016c ಬಲೇನ ಸಂವಿಭಾಗೈಶ್ಚ ಜಯ ಸ್ವರ್ಗಂ ಪುನೀಷ್ವ ಚ||

ಈಗ ನಾನು ರಾಜನ ಶ್ರೇಷ್ಠ ಕಾರ್ಯಗಳ ಕುರಿತು ಹೇಳುತ್ತೇನೆ. ಧರ್ಮಯುಕ್ತ ಬಲ ಮತ್ತು ದಾನಗಳ ಮೂಲಕ ಸ್ವರ್ಗಲೋಕವನ್ನು ಜಯಿಸು.

12148017a ಯಸ್ಯೈವಂ ಬಲಮೋಜಶ್ಚ ಸ ಧರ್ಮಸ್ಯ ಪ್ರಭುರ್ನರಃ|
12148017c ಬ್ರಾಹ್ಮಣಾನಾಂ ಸುಖಾರ್ಥಂ ತ್ವಂ ಪರ್ಯೇಹಿ ಪೃಥಿವೀಮಿಮಾಮ್||

ಯಾರಲ್ಲಿ ಬಲ ಮತ್ತು ಓಜಸ್ಸುಗಳಿವೆಯೋ ಅವನೇ
ಧರ್ಮಾಚರಣೆಯಲ್ಲಿ ಸಮರ್ಥನಾಗುತ್ತಾನೆ. ಬ್ರಾಹ್ಮಣರ
ಸುಖಕ್ಕಾಗಿಯೇ ನೀನು ಈ ಪೃಥ್ವಿಯನ್ನು ಪಾಲಿಸು.

12148018a ಯಥ್ಯೈವ್ಯೈನಾನ್ ಪುರಾಕ್ಷೈಪ್ಸೀಸ್ತಥ್ಯೈವ್ಯೈನಾನ್ ಪ್ರಸಾದಯ|
12148018c ಅಪಿ ಧಿಕ್ಕೃಯಮಾಣೋಽಪಿ ತ್ಯಜ್ಯಮಾನೋಽಪ್ಯನೇಕಧಾ||
12148019a ಆತ್ಮನೋ ದರ್ಶನಂ ವಿದ್ವನ್ನಾಹಂತಾಸ್ಮೀತಿ ಮಾ ಕ್ರುಧಃ|
12148019c ಘಟಮಾನಃ ಸ್ವಕಾರ್ಯೇಷು ಕುರು ನೈಃಶ್ರೇಯಸಂ ಪರಮ್||

ಹಿಂದೆ ಹೇಗೆ ಈ ಬ್ರಾಹ್ಮಣರನ್ನು ನೀನು ಆಕ್ಷೇಪಿಸಿದ್ದೆಯೋ ಅದೇ ರೀತಿ
ಈಗ ಅವರನ್ನು ಪ್ರಸನ್ನಗೊಳಿಸು. ಅವರು ನಿನ್ನನ್ನು ಧಿಕ್ಕರಿಸಿ ಅನೇಕ
ಬಾರಿ ತ್ಯಜಿಸಿದ್ದರೂ ನೀನು ನಿನ್ನ ಆತ್ಮದೃಷ್ಟಿಯನ್ನಿಟ್ಟುಕೊಂಡು ಇನ್ನು
ಬ್ರಾಹ್ಮಣರನ್ನು ಕ್ರೋಧಿತನಾಗಿ ಕೊಲ್ಲುವುದಿಲ್ಲ ಎಂದು ನಿಶ್ಚಯಿಸು.
ನಿನ್ನ ಕರ್ತವ್ಯಪಾಲನೆಗಾಗಿ ಸಂಪೂರ್ಣ ಪ್ರಯತ್ನಪಡುತ್ತಾ ಪರಮ
ಕಲ್ಯಾಣದ ಸಾಧನೆಯನ್ನು ಮಾಡು.

12148020a ಹಿಮಾಗ್ನಿಘೋರಸದೃಶೋ ರಾಜಾ ಭವತಿ ಕಶ್ಚನ|
12148020c ಲಾಂಗಲಾಶನಿಕಲ್ಪೋ ವಾ ಭವತ್ಯನ್ಯಃ ಪರಂತಪ||

ಪರಂತಪ! ಕೆಲವು ರಾಜರು ಹಿಮದಂತೆ ಶೀತಲರಾಗಿರುತ್ತಾರೆ.
ಕೆಲವರು ಅಗ್ನಿಯಂತೆ ತಾಪವುಳ್ಳವರಾಗಿರುತ್ತಾರೆ. ಇನ್ನು ಕೆಲವರು
ಯಮರಾಜನಂತೆ ಘೋರರಾಗಿರುತ್ತಾರೆ. ಕೆಲವರು ಕಳೆಯನ್ನು
ಮೂಲಸಹಿತ ಕಿತ್ತೊಗೆಯುವ ನೇಗಿಲಿನಂತಿರುತ್ತಾರೆ. ಇನ್ನು ಕೆಲವು

ರಾಜರು ಪಾಪಚಾರಿಗಳ ಮೇಲೆ ಅಕಸ್ಮಾತ್ತಾಗಿ ಬೀಳುವ
ಸಿಡಿಲಿನಂತಿರುತ್ತಾರೆ.

12148021a ನ ನಿಃಶೇಷೇಣ ಮಂತವ್ಯಮಚಿಕಿತ್ಸ್ಯೇನ[704] ವಾ ಪುನಃ|
12148021c ನ ಜಾತು ನಾಹಮಸ್ಮೀತಿ ಪ್ರಸಕ್ತವ್ಯಮಸಾಧುಷು||

ಎಂದೂ ನನ್ನ ಅಭಾವವು ಉಂಟಾಗದಿರಲೆಂದು ರಾಜನು ದುಷ್ಟ
ಪುರುಷರೊಡನೆ ಸಂಬಂಧವೆನ್ನೆಂದೂ ಇಟ್ಟುಕೊಂಡಿರಬಾರದು.
ಅವರೊಂದಿಗೆ ಯಾವ ಮಂತ್ರಾಲೋಚನೆಯನ್ನೂ ಮಾಡಬಾರದು
ಮತ್ತು ಪುನಃ ಅವರೊಂದಿಗೆ ಉತ್ತಮವಾಗಿ ವ್ಯವಹರಿಸಲೂ ಬಾರದು.

12148022a ವಿಕರ್ಮಣಾ ತಪ್ಯಮಾನಃ ಪಾದಾತ್ಪಾಪಸ್ಯ ಮುಚ್ಯತೇ|
12148022c ನೈತತಕಾರ್ಯಂ ಪುನರಿತಿ ದ್ವಿತೀಯಾತ್ಪರಿಮುಚ್ಯತೇ|
12148022e ಚರಿಷ್ಯೇ ಧರ್ಮಮೇವೇತಿ ತೃತೀಯಾತ್ಪರಿಮುಚ್ಯತೇ[705]||

ದುಷ್ಕರ್ಮವನ್ನು ಮಾಡಿದವನು ಪಶ್ಚಾತ್ತಾಪ ಪಟ್ಟರೆ ಪಾಪದಿಂದ
ಮುಕ್ತರಾಗುತ್ತಾರೆ. ಎರಡನೇ ಬಾರಿ ದುಷ್ಕರ್ಮವನ್ನು ಮಾಡಿದರೆ
“ಇನ್ನು ನಾನು ಇದನ್ನು ಮಾಡುವುದಿಲ್ಲ” ಎಂದು ಪ್ರತಿಜ್ಞೆ
ಮಾಡುವುದರಿಂದ ಪಾಪಮುಕ್ತನಾಗುತ್ತಾನೆ. ಮೂರನೆ ಬಾರಿ
ದುಷ್ಕರ್ಮವನ್ನು ಮಾಡಿದರೆ “ಇನ್ನು ಮುಂದೆ ಧರ್ಮವನ್ನೇ
ಆಚರಿಸುತ್ತೇನೆ” ಎಂದು ಶಪಥ ಮಾಡುವುದರಿಂದ

---

704 ಗಂತವ್ಯಮವಿಚ್ಛಿನ್ನೇನ (ಗೀತಾ ಪ್ರೆಸ್).

705 ಇದರ ನಂತರ ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕಾರ್ಧವಿದೆ:
ಶುಚಿಸ್ತೀರ್ಥಾನ್ಯನುಚರನ್ ಬಹುತ್ವಾತ್ಪರಿಮುಚ್ಯತೇ|

ಪಾಪಮುಕ್ತನಾಗುತ್ತಾನೆ.

12148023a ಕಲ್ಯಾಣಮನುಮಂತವ್ಯಂ ಪುರುಷೇಣ ಬುಭೂಷತಾ|
12148023c ಯೇ ಸುಗಂಧೀನಿ ಸೇವಂತೇ ತಥಾಗಂಧಾ ಭವಂತಿ ತೇ|
12148023e ಯೇ ದುರ್ಗಂಧೀನಿ ಸೇವಂತೇ ತಥಾಗಂಧಾ ಭವಂತಿ ತೇ||

ಅಭಿವೃದ್ಧಿಯನ್ನು ಬಯಸುವ ಪುರುಷನು ಕಲ್ಯಾಣಕಾರೀ ಕರ್ಮಗಳನ್ನು ಮಾಡಬೇಕು. ಸುಗಂಧಿತ ಪದಾರ್ಥಗಳನ್ನು ಸೇವಿಸುವವರ ದೇಹದಿಂದ ಸುಗಂಧವು ಹೊರಹೊಮ್ಮುತ್ತದೆ ಮತ್ತು ಸದಾ ದುರ್ಗಂಧವನ್ನು ಸೇವಿಸುವವರ ಶರೀರದಿಂದ ದುರ್ಗಂಧವೇ ಪಸರಿಸುತ್ತದೆ.

12148024a ತಪಶ್ಚರ್ಯಾಪರಃ ಸದ್ಯಃ ಪಾಪಾದ್ಧಿ ಪರಿಮುಚ್ಯತೇ|
12148024c ಸಂವತ್ಸರಮುಪಾಸ್ಯಾಗ್ನಿಮಭಿಶಸ್ತಃ ಪ್ರಮುಚ್ಯತೇ|
12148024e ತ್ರೀಣಿ ವರ್ಷಾಣ್ಯುಪಾಸ್ಯಾಗ್ನಿಂ ಭ್ರೂಣಹಾ ವಿಪ್ರಮುಚ್ಯತೇ||

ತಪಸ್ಸಿನಲ್ಲಿ ತತ್ಪರನಾದ ಮನುಷ್ಯನು ತಕ್ಷಣವೇ ಪಾಪಗಳಿಂದ ಮುಕ್ತನಾಗುತ್ತಾನೆ. ಒಂದು ವರ್ಷದ ಪರ್ಯಂತ ಅಗ್ನಿಹೋತ್ರವನ್ನು ಮಾಡುವ ಕಲಂಕಿತ ಪುರುಷನು ತನ್ನ ಮೇಲಿರುವ ಕಲಂಕದಿಂದ ಮುಕ್ತನಾಗುತ್ತಾನೆ. ಮೂರು ವರ್ಷಗಳು ಅಗ್ನಿಯ ಉಪಾಸನೆಯನ್ನು ಮಾಡಿದರೆ ಭ್ರೂಣಹತ್ಯಾ ಪಾಪದಿಂದಲೂ ಮುಕ್ತನಾಗುತ್ತಾನೆ.

[706]12148025a ಯಾವತಃ ಪ್ರಾಣಿನೋ ಹನ್ಯಾತ್ತಜ್ಜಾತೀಯಾನ್ ಸ್ವಭಾವತಃ|

---

[706] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಮಹಾಸರಃ ಪುಷ್ಕರಾಣಿ ಪ್ರಭಾಸೋತ್ತರಮಾನಸೇ| ಅಭ್ಯೇತ್ಯ ಯೋಜನಶತಂ

12148025c ಪ್ರಮೀಯಮಾಣಾನುನ್ಮೋಚ್ಯ ಭ್ರೂಣಹಾ[707] ವಿಪ್ರಮುಚ್ಯತೇ॥

ಪ್ರಾಣಿಗಳ ಹತ್ಯೆಮಾಡುವವನು ಎಷ್ಟು ಪ್ರಾಣಿಗಳನ್ನು ವಧಿಸಿದ್ದನೋ ಅದೇ ಜಾತಿಯ ಅಷ್ಟೇ ಪ್ರಾಣಿಗಳನ್ನು ಮೃತ್ಯುವಿನಿಂದ ಉಳಿಸಿದ್ದೇ ಆದರೆ ಪ್ರಾಣಿಗಳನ್ನು ಕೊಂದ ಪಾಪದಿಂದ ಮುಕ್ತನಾಗುತ್ತಾನೆ.

12148026a ಅಪಿ ವಾಪ್ಸು ನಿಮಜ್ಜೇತ ತ್ರಿರ್ಜಪನ್ನಘಮರ್ಷಣಮ್|
12148026c ಯಥಾಶ್ವಮೇಧಾವಭೃಥಸ್ತಥಾ ತನ್ಮನುರಬ್ರವೀತ್॥

ಅಘಮರ್ಷಣ ಮಂತ್ರ[708]ವನ್ನು ಜಪಿಸುತ್ತಾ ಮೂರು ಬಾರಿ ನೀರಿನಲ್ಲಿ

ಭ್ರೂಣಹಾ ವಿಪ್ರಮುಚ್ಯತೇ॥

[707] ಪ್ರಾಣಿಹಾ (ಗೀತಾ ಪ್ರೆಸ್). ಇದೇ ಇಲ್ಲಿ ಸೂಕ್ತವಾಗಿದೆ ಎಂದೆನಿಸುತ್ತದೆ.

[708] https://soundcloud.com/dr-harisha-b-s/10-1
ಅಘಮರ್ಷಣ ಮಂತ್ರಃ ಅಘ=ನ ಗಚ್ಛಂತೀತಿ ಅಘಾಃ ನಮ್ಮನ್ನು ಬಿಟ್ಟು ಹೋಗದೇ ಇರುವುದು. ನಾವು ಮಾಡಿದ ಪಾಪಗಳು. ಪರಿಹರಿಸಿಕೊಳ್ಳದ ಹೊರತು ನಮ್ಮನ್ನು ಬಿಟ್ಟು ಹೋಗದೇ ಇರುವವು. ತೇಷಾಂ ಮರ್ಷಣಂ ಅವುಗಳನ್ನು ಹೊಡೆದೋಡಿಸುವ ಮಂತ್ರ ಅಘಮರ್ಷಣ ಮಂತ್ರ. ಋತಂ ಚ ಸತ್ಯಂಚೇತಿ ಸೂಕ್ತಸ್ಯ ಅಘಮರ್ಷಣ ಋಷಿಃ ಇತಿ ಶಿರಸಿ| ಅನುಷ್ಟುಪ್ ಛಂದಃ ಇತಿ ಮುಖೇ| ಭಾವವೃತ್ತೋ ದೇವತಾ ಇತಿ ಹೃದಯೇ| ಪಾಪ ಪುರುಷ ವಿಸರ್ಜನೇ ವಿನಿಯೋಗಃ ಇತಿ ನಮನಮ್| ಓಂ ಋತಂ ಚ ಸತ್ಯಂ ಚಾಭೀದ್ಧಾತ್ತಪಸೋಽಧ್ಯಜಾಯತ| ತತೋ ರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ॥ ಸಮುದ್ರಾದರ್ಣವಾದಧಿ ಸಂವತ್ಸರೋ ಅಜಾಯತ| ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ॥ ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್| ದಿವಂ ಚ ಪೃಥಿವೀಂ

ಮುಳುಗುವವನಿಗೆ ಅಶ್ವಮೇಧ ಯಜ್ಞದ ಅವಭೃತ ಸ್ನಾನದ ಫಲವು ದೊರೆಯುತ್ತದೆ ಎಂದು ಮನುವು ಹೇಳಿದ್ದಾನೆ.

12148027a ಕ್ಷಿಪ್ರಂ ಪ್ರಣುದತೇ ಪಾಪಂ ಸತ್ಕಾರಂ ಲಭತೇ ತಥಾ|
12148027c ಅಪಿ ಚೈನಂ ಪ್ರಸೀದಂತಿ ಭೂತಾನಿ ಜಡಮೂಕವತ್‌||

ಅಘಮರ್ಷಣ ಮಂತ್ರವನ್ನು ಜಪಿಸುವವನು ಶೀಘ್ರದಲ್ಲಿಯೇ ತನ್ನ ಪಾಪಗಳನ್ನು ಕಳೆದುಕೊಳ್ಳುತ್ತಾನೆ ಮತ್ತು ಅವನಿಗೆ ಸರ್ವತ್ರ ಸತ್ಕಾರವು ದೊರೆಯುತ್ತದೆ. ಅವನ ಕುರಿತು ಜಡ ಮತ್ತು ಮೂಕ ಎಲ್ಲ ಭೂತಗಳೂ ಪ್ರಸನ್ನಗೊಳ್ಳುತ್ತವೆ.

12148028a ಬೃಹಸ್ಪತಿಂ ದೇವಗುರುಂ ಸುರಾಸುರಾಃ
ಸಮೇತ್ಯ ಸರ್ವೇ ನೃಪತೇಽನ್ವಯುಂಜನ್‌|
12148028c ಧರ್ಮೇ ಫಲಂ ವೇತ್ಥ ಕೃತೇ ಮಹರ್ಷೇ
ತಥೇತರಸ್ಮಿನ್ನರಕೇ ಪಾಪಲೋಕೇ||
12148029a ಉಭೇ ತು ಯಸ್ಯ ಸುಕೃತೇ ಭವೇತಾಂ
ಕಿಂ ಸ್ವಿತ್ತಯೋಸ್ತತ್ರ ಜಯೋತ್ತರಂ ಸ್ಯಾತ್‌|
12148029c ಆಚಕ್ಷ್ವ ನಃ ಕರ್ಮಫಲಂ ಮಹರ್ಷೇ
ಕಥಂ ಪಾಪಂ ನುದತೇ ಪುಣ್ಯಶೀಲಃ||

ಒಮ್ಮೆ ಎಲ್ಲ ದೇವತೆಗಳು ಮತ್ತು ಅಸುರರು ಅತಿ ಆದರದಿಂದ ದೇವಗುರು ಬೃಹಸ್ಪತಿಯ ಬಳಿ ಹೋಗಿ ಕೇಳಿದರು: "ಮಹರ್ಷೇ! ನೀನು ಧರ್ಮಫಲವನ್ನು ತಿಳಿದಿರುವೆ. ಮತ್ತು ಎಂಥವರಿಗೆ ನರಕದ

ಚಾಂತರಿಕ್ಷಮಥೋ ಸ್ವಃ||

ಪಾಪಲೋಕವು ದೊರೆಯುತ್ತದೆ ಎನ್ನುವುದನ್ನೂ ನೀನು ತಿಳಿದಿದ್ದೀಯೆ. ಆದರೆ ಯಾರಿಗೆ ಸುಖ ಮತ್ತು ದುಃಖ ಎರಡೂ ಸಮನಾಗಿರುವವೋ ಅವನು ಪುಣ್ಯ-ಪಾಪಗಳ ಫಲವನ್ನು ಜಯಿಸುತ್ತಾನೆಯೇ? ಮಹರ್ಷೇ! ನಮಗೆ ಕರ್ಮಫಲಗಳನ್ನು ವರ್ಣಿಸು ಮತ್ತ ಪುಣ್ಯಶೀಲನು ಪಾಪಗಳನ್ನು ಹೇಗೆ ಕಳೆದುಕೊಳ್ಳುತ್ತಾನೆ ಎನ್ನುವದನ್ನೂ ಹೇಳು.”

12148030 ಬೃಹಸ್ಪತಿರುವಾಚ |

12148030a ಕೃತ್ವಾ ಪಾಪಂ ಪೂರ್ವಮಬುದ್ಧಿಪೂರ್ವಂ
ಪುಣ್ಯಾನಿ ಯಃ ಕುರುತೇ ಬುದ್ಧಿಪೂರ್ವಮ್|
12148030c ಸ ತತ್ಪಾಪಂ ನುದತೇ ಪುಣ್ಯಶೀಲೋ
ವಾಸೋ ಯಥಾ ಮಲಿನಂ ಕ್ಷಾರಯುಕ್ತ್ಯಾ||

ಬೃಹಸ್ಪತಿಯು ಹೇಳಿದನು: “ಮೊದಲು ತಿಳಿಯದೆಯೇ ಪಾಪವನ್ನು ಮಾಡಿ ನಂತರ ಬುದ್ಧಿಪೂರ್ವಕವಾಗಿ ಪುಣ್ಯಕರ್ಮಗಳನ್ನು ಮಾಡಿದರೆ ಆ ಪುಣ್ಯಶೀಲನು ಕ್ಷಾರವನ್ನು ಬಳಸಿ ಬಟ್ಟೆಯಲ್ಲಿಯ ಕೊಳೆಯನ್ನು ತೊಳೆಯುವಂತೆ ತನ್ನ ಪಾಪವನ್ನು ತೊಳೆದುಕೊಳ್ಳುತ್ತಾನೆ.

12148031a ಪಾಪಂ ಕೃತ್ವಾ ನ ಮನ್ಯೇತ ನಾಹಮಸ್ಮೀತಿ ಪೂರುಷಃ|
12148031c ಚಿಕೀರ್ಷೇದೇವ ಕಲ್ಯಾಣಂ ಶ್ರದ್ದಧಾನೋಽನಸೂಯಕಃ||

ಪಾಪವನ್ನೆಸಗಿ ಅಭಿಮಾನಪಡಬಾರದು. ಪೌರುಷವನ್ನು ತೋರಿಸಬಾರದು. ಇನ್ನಾದರೂ ಶ್ರದ್ಧಾಪೂರ್ವಕನಾಗಿ ಅನಸೂಯಕನಾಗಿ ಕಲ್ಯಾಣಯುಕ್ತ ಕರ್ಮಗಳನ್ನೇ ಮಾಡಬೇಕು.

12148032a ಚಿದ್ರಾಣಿ ವಸನಸ್ಯೇವ ಸಾಧುನಾ ವಿವೃಣೋತಿ ಯಃ|
12148032c ಯಃ ಪಾಪಂ ಪುರುಷಃ ಕೃತ್ವಾ ಕಲ್ಯಾಣಮಭಿಪದ್ಯತೇ||

ಸತ್ಪುರುಷರ ವಸ್ತ್ರಗಳಲ್ಲಿರುವ ಛಿದ್ರಗಳನ್ನು ಮುಚ್ಚುವವನು ಮತ್ತು ಪಾಪಕರ್ಮಗಳನ್ನು ಮಾಡಿ ನಂತರವಾದರೂ ಕಲ್ಯಾಣ ಕರ್ಮಗಳನ್ನೆಸಗುವನು ಇಬ್ಬರೂ ಪಾಪರಹಿತರಾಗುತ್ತಾರೆ.

12148033a ಯಥಾದಿತ್ಯಃ ಪುನರುದ್ಯಂಸ್ತಮಃ ಸರ್ವಂ ವ್ಯಪೋಹತಿ|
12148033c ಕಲ್ಯಾಣಮಾಚರನ್ನೇವಂ ಸರ್ವಂ ಪಾಪಂ ವ್ಯಪೋಹತಿ||

ಆದಿತ್ಯನು ಹೇಗೆ ಉದಯವಾಗಿ ಸರ್ವ ಕತ್ತಲೆಯನ್ನೂ ಹೋಗಲಾಡಿಸುತ್ತಾನೋ ಹಾಗೆ ಕಲ್ಯಾಣಕರ ಕರ್ಮಗಳನ್ನು ಮಾಡಿದರೆ ಸರ್ವ ಪಾಪಗಳೂ ಕಳೆದುಹೋಗುತ್ತವೆ.""

12148034 ಭೀಷ್ಮ ಉವಾಚ |
12148034a ಏವಮುಕ್ತ್ವಾ ಸ ರಾಜಾನಮಿಂದ್ರೋತೋ ಜನಮೇಜಯಮ್|
12148034c ಯಾಜಯಾಮಾಸ ವಿಧಿವದ್ವಾಜಿಮೇಧೇನ ಶೌನಕಃ||

ಭೀಷ್ಮನು ಹೇಳಿದನು: "ರಾಜಾ ಜನಮೇಜಯನಿಗೆ ಹೀಗೆ ಹೇಳಿ ಶೌನಕ ಇಂದ್ರೋತನು ಅವನಿಂದ ವಿಧಿವತ್ತಾಗಿ ಅಶ್ವಮೇಧ ಯಜ್ಞವನ್ನು ಮಾಡಿಸಿದನು.

12148035a ತತಃ ಸ ರಾಜಾ ವ್ಯಪನೀತಕಲ್ಮಷಃ
ಶ್ರಿಯಾ ಯುತಃ ಪ್ರಜ್ವಲಿತಾಗ್ನಿರೂಪಯಾ|
12148035c ವಿವೇಶ ರಾಜ್ಯಂ ಸ್ವಮಮಿತ್ರಕರ್ಶನೋ
ದಿವಂ ಯಥಾ ಪೂರ್ಣವಪುರ್ನಿಶಾಕರಃ||

ಅನಂತರ ಆ ರಾಜನು ದೋಷಗಳನ್ನು ಕಳೆದುಕೊಂಡು ಶ್ರೀಯಿಂದ ಕೂಡಿದವನಾಗಿ ಅಗ್ನಿರೂಪದಲ್ಲಿ ಪ್ರಜ್ವಲಿಸಿದನು. ಆ ಅಮಿತ್ರಕರ್ಶನನು ಪೂರ್ಣಿಮೆಯ ಚಂದ್ರನು ದಿವವನ್ನು ಹೇಗೋ ಹಾಗೆ ತನ್ನ ರಾಜ್ಯವನ್ನು

ಪ್ರವೇಶಿಸಿದನು.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಇಂದ್ರೋತಪಾರಿಕ್ಷಿತೀಯೇ
ಅಷ್ಟಾಚತ್ವಾರಿಂಶದಧಿಕಶತತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಇಂದ್ರೋತಪಾರಿಕ್ಷಿತೀಯ ಎನ್ನುವ ನೂರಾನಲ್ವತ್ತೆಂಟನೇ ಅಧ್ಯಾಯವು.

೧೪೯

ಗೃಧ್ರಜಂಬುಕ ಸಂವಾದ

ಮೃತನಾದವನ ಪುನರ್ಜೀವನ ಪ್ರಾಪ್ತಿಯ ವಿಷಯದಲ್ಲಿ ಓರ್ವ ಬಾಲಕನು ಜೀವಿತನಾಗುವ ಕಥೆ; ಅಲ್ಲಿ ಹದ್ದು ಮತ್ತು ನರಿಯ ಸಂವಾದ (1-117).

[709]12149001 ಭೀಷ್ಮ ಉವಾಚ|
12149001a ಶೃಣು ಪಾರ್ಥ ಯಥಾವೃತ್ತಮಿತಿಹಾಸಂ ಪುರಾತನಮ್|
12149001c ಗೃಧ್ರಜಂಬುಕಸಂವಾದಂ ಯೋ ವೃತ್ತೋ ವೈದಿಶೇ[710] ಪುರಾ||

---

[709] ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ಯುಧಿಷ್ಠಿರ ಉವಾಚ| ಕಚ್ಚಿತ್ಪ್ರಿತಾಮಹೇನಾಸೀಚ್ಛ್ರುತಂ ವಾ ದೃಷ್ಟಮೇವ ಚ| ಕಚ್ಚಿನ್ಮೃತ್ಯೋ ಮೃತೋ ರಾಜನ್ ಪುನರುಜ್ಜೀವಿತೋಽಭವತ್||

[710] ನೈಮಿಷೇ (ಗೀತಾ ಪ್ರೆಸ್).

ಭೀಷ್ಮನು ಹೇಳಿದನು: "ಪಾರ್ಥ! ಹಿಂದೆ ವಿದಿಶದಲ್ಲಿ ನಡೆದ ಪುರಾತನ ಇತಿಹಾಸವಾದ ಹದ್ದು ಮತ್ತು ನರಿಯ ಸಂವಾದವನ್ನು ನಡೆದಂತೆ ಕೇಳು.

[711]12149002a ದುಃಖಿತಾಃ ಕೇ ಚಿದಾದಾಯ ಬಾಲಮಪ್ರಾಪ್ತಯೌವನಮ್|
12149002c ಕುಲಸರ್ವಸ್ವಭೂತಂ ವೈ ರುದಂತಃ ಶೋಕವಿಹ್ವಲಾಃ||

ಇನ್ನೂ ಯೌವನವನ್ನು ಪಡೆಯದಿದ್ದ ಕುಲದ ಸರ್ವಸ್ವವಾಗಿದ್ದ ಬಾಲಕನನ್ನು ಎತ್ತಿಕೊಂಡು ಅವನ ಕೆಲವು ದುಃಖಿತ ಜನರು ಶೋಕವಿಹ್ವಲರಾಗಿ ರೋದಿಸುತ್ತಿದ್ದರು.

12149003a ಬಾಲಂ ಮೃತಂ ಗೃಹೀತ್ವಾಥ ಶ್ಮಶಾನಾಭಿಮುಖಾಃ ಸ್ಥಿತಾಃ|
12149003c ಅಂಕೇನಾಂಕಂ ಚ ಸಂಕ್ರಮ್ಯ ರುರುದುರ್ಭೂತಲೇ ತದಾ[712]||

ಆ ಮೃತ ಬಾಲಕನನ್ನು ಎತ್ತಿಕೊಂಡು ಅವರು ಶ್ಮಶಾನದ ಕಡೆ ಹೊರಟರು. ಅಲ್ಲಿ ಹೋಗಿ ಅವನನ್ನು ನೆಲದ ಮೇಲೆ ಇಟ್ಟುಕೊಂಡು ಅತ್ಯಂತ ದುಃಖಿತರಾಗಿ ರೋದಿಸಿದರು.

[713]12149004a ತೇಷಾಂ ರುದಿತಶಬ್ದೇನ ಗೃಧ್ರೋಽಭ್ಯೇತ್ಯ ವಚೋಽಬ್ರವೀತ್|

---

711 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ಕಸ್ಯಾಚಿದ್ಬ್ರಾಹ್ಮಣಸ್ಯಾಸೀದ್ದುಃಖಿಲಬ್ಧಃ ಸುತೋ ಮೃತಃ| ಬಾಲ ಏವ ವಿಶಾಲಾಕ್ಷೋ ಬಾಲಗ್ರಹನಿಪೀಡಿತಃ||

712 ರುರುದುರ್ಭೃಶದುಃಖಿತಾಃ (ಗೀತಾ ಪ್ರೆಸ್).

713 ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ಶೋಚಂತಸ್ತಸ್ಯ ಪೂರ್ವೋಕ್ತಾನ್ ಭಾಷಿತಾಂಶ್ಚಾಸಕೃತ್ ಪುನಃ| ತಂ ಬಾಲಂ ಭೂತಲೇ ಕ್ಷಿಪ್ಯ ಪ್ರತಿಗಂತುಂ ನ ಶಕ್ನುಯುಃ||

12149004c ಏಕಾತ್ಮಕಮಿಮಂ ಲೋಕೇ ತ್ಯಕ್ತ್ವಾ ಗಚ್ಚತ ಮಾಚಿರಮ್‌||
12149005a ಇಹ ಪುಂಸಾಂ ಸಹಸ್ರಾಣಿ ಸ್ತ್ರೀಸಹಸ್ರಾಣಿ ಚೈವ ಹಿ|
12149005c ಸಮಾನೀತಾನಿ ಕಾಲೇನ ಕಿಂ ತೇ ವೈ ಜಾತ್ವಬಾಂಧವಾಃ||

ಅವರ ರೋದನ ಶಬ್ಧವನ್ನು ಕೇಳಿ ಅಲ್ಲಿಗೆ ಬಂದ ಹದ್ದೊಂದು ಅವರಿಗೆ ಈ ಮಾತನ್ನಾಡಿತು: "ಈ ಲೋಕದಲ್ಲಿ ನಿಮಗಿರುವ ಈ ಒಬ್ಬನೇ ಮಗನನ್ನು ಇಲ್ಲಿ ಬಿಟ್ಟು ಹೊರಟು ಹೋಗಿರಿ. ತಡಮಾಡಬೇಡಿ. ಇಲ್ಲಿಗೆ ಕಾಲನು ಸಹಸ್ರಾರು ಸ್ತ್ರೀ-ಪುರುಷರನ್ನು ತರುತ್ತಾನೆ ಮತ್ತು ಅವರೆಲ್ಲರ ಬಂಧು ಬಾಂಧವರೂ ಅವರನ್ನು ಇಲ್ಲಿಯೇ ಬಿಟ್ಟು ಹೊರಟು ಹೋಗುತ್ತಾರೆ.

12149006a ಸಂಪಶ್ಯತ ಜಗತ್ಸರ್ವಂ ಸುಖದುಃಖೈರಧಿಷ್ಠಿತಮ್‌|
12149006c ಸಂಯೋಗೋ ವಿಪ್ರಯೋಗಶ್ಚ ಪರ್ಯಾಯೇಣೋಪಲಭ್ಯತೇ||

ಈ ಜಗತ್ತೆಲ್ಲವೂ ಸುಖ-ದುಃಖಗಳಿಂದ ವ್ಯಾಪ್ತವಾಗಿದೆ ನೋಡಿ! ಇಲ್ಲಿ ಎಲ್ಲರ ಸಂಯೋಗ-ವಿಯೋಗಗಳು ಮತ್ತೆ ಮತ್ತೆ ನಡೆಯುತ್ತಲೇ ಇರುತ್ತವೆ.

12149007a ಗೃಹೀತ್ವಾ ಯೇ ಚ ಗಚ್ಚಂತಿ ಯೇಽನುಯಾಂತಿ ಚ ತಾನ್ಮೃತಾನ್‌|
12149007c ತೇಽಪ್ಯಾಯುಷಃ ಪ್ರಮಾಣೇನ ಸ್ವೇನ ಗಚ್ಚಂತಿ ಜಂತವಃ||

ಮೃತರನ್ನು ಶ್ಮಶಾನಕ್ಕೆ ತೆಗೆದುಕೊಂಡು ಹೋಗುವವರು ಮತ್ತು ಶ್ಮಶಾನಕ್ಕೆ ತೆಗೆದುಕೊಂಡು ಹೋಗದೇ ಇರುವವರು ಎಲ್ಲ ಜೀವಜಂತುಗಳೂ ತಮ್ಮ ಆಯಸ್ಸು ಪೂರ್ಣವಾದ ಕೂಡಲೇ ಈ ಜಗತ್ತಿನಿಂದ ಹೊರಟು ಹೋಗುತ್ತಾರೆ.

12149008a ಅಲಂ ಸ್ಥಿತ್ವಾ ಶ್ಮಶಾನೇಽಸ್ಮಿನ್‌ ಗೃಧ್ರಗೋಮಾಯುಸಂಕುಲೇ|

12149008c ಕಂಕಾಲಬಹುಲೇ ಘೋರೇ ಸರ್ವಪ್ರಾಣಿಭಯಂಕರೇ||

ಹದ್ದು-ನರಿಗಳ ಸಂಕುಲಗಳಿಂದ ಕೂಡಿರುವ, ಸರ್ವಪ್ರಾಣಿಗಳಿಗೂ ಭಯಂಕರವಾಗಿರುವ ಮತ್ತು ಅನೇಕ ಕಂಕಾಲಗಳಿರುವ ಈ ಘೋರ ಶ್ಮಶಾನದಲ್ಲಿ ನಿಂತುಕೊಳ್ಳಬೇಡಿ.

12149009a ನ ಪುನರ್ಜೀವಿತಃ ಕಶ್ಚಿತ್ಕಾಲಧರ್ಮಮುಪಾಗತಃ|
12149009c ಪ್ರಿಯೋ ವಾ ಯದಿ ವಾ ದ್ವೇಷ್ಯಃ ಪ್ರಾಣಿನಾಂ ಗತಿರೀದೃಶೀ||

ಪ್ರಿಯನಾಗಿರಲಿ ಅಥವಾ ದ್ವೇಷಿಯಾಗಿರಲಿ, ಕಾಲಧರ್ಮವನ್ನು ಸೇರಿದವರು ಪುನಃ ಜೀವಿತರಾಗುವುದಿಲ್ಲ. ಎಲ್ಲ ಪ್ರಾಣಿಗಳಿಗೂ ಇದೇ ಗತಿ.

12149010a ಸರ್ವೇಣ ಖಲು ಮರ್ತವ್ಯಂ ಮರ್ತ್ಯಲೋಕೇ ಪ್ರಸೂಯತಾ|
12149010c ಕೃತಾಂತವಿಹಿತೇ ಮಾರ್ಗೇ ಕೋ ಮೃತಂ ಜೀವಯಿಷ್ಯತಿ||

ಈ ಮರ್ತ್ಯಲೋಕದಲ್ಲಿ ಹುಟ್ಟಿದ ಎಲ್ಲರೂ ಸಾಯಲೇಬೇಕಲ್ಲವೇ? ಕೃತಾಂತನು ವಿಧಿಸಿದ ಮಾರ್ಗದಲ್ಲಿ ಹೋದ ಮೃತನನ್ನು ಯಾರು ತಾನೇ ಜೀವಿತಗೊಳಿಸಬಲ್ಲರು?

12149011a ಕರ್ಮಾಂತವಿಹಿತೇ ಲೋಕೇ ಚಾಸ್ತಂ ಗಚ್ಚತಿ ಭಾಸ್ಕರೇ|
12149011c ಗಮ್ಯತಾಂ ಸ್ವಮಧಿಷ್ಠಾನಂ ಸುತಸ್ನೇಹಂ ವಿಸೃಜ್ಯ ವೈ||

ಭಾಸ್ಕರನು ಅಸ್ತನಾಗುತ್ತಿದ್ದಾನೆ. ಜನರು ತಮ್ಮ ದಿನದ ಕೆಲಸಗಳನ್ನು ಮುಗಿಸಿ ನಿವೃತ್ತರಾಗುತ್ತಿದ್ದಾರೆ. ನೀವೂ ಕೂಡ ನಿಮ್ಮ ಸುತಸ್ನೇಹವನ್ನು ಬಿಟ್ಟು ನಿಮ್ಮ ಮನೆಗಳಿಗೆ ಹೊರಟು ಹೋಗಿರಿ.”

12149012a ತತೋ ಗೃಧ್ರವಚಃ ಶ್ರುತ್ವಾ ವಿಕ್ರೋಶಂತಸ್ತದಾ ನೃಪ|

12149012c ಬಾಂಧವಾಸ್ತೇಽಭ್ಯಗಚ್ಚಂತ ಪುತ್ರಮುತ್ಸೃಜ್ಯ ಭೂತಲೇ॥

ನೃಪ! ಹದ್ದಿನ ಆ ಮಾತನ್ನು ಕೇಳಿ ಜೋರಾಗಿ ಅಳುತ್ತಾ ಆ ಬಾಂಧವರು ಪುತ್ರನನ್ನು ನೆಲದ ಮೇಲೆಯೇ ಬಿಟ್ಟು ಹೊರಟು ಹೋಗಲು ಸಿದ್ಧರಾದರು.

[714]12149013a ವಿನಿಶ್ಚಿತ್ಯಾಥ ಚ ತತಃ ಸಂತ್ಯಜಂತಃ ಸ್ವಮಾತ್ಮಜಮ್|
12149013c ನಿರಾಶಾ ಜೀವಿತೇ ತಸ್ಯ ಮಾರ್ಗಮಾರುಹ್ಯ ಧಿಷ್ಠಿತಾಃ॥

ತಮ್ಮ ಆ ಮಗನ ಜೀವಿತದಲ್ಲಿ ನಿರಾಶರಾಗಿ ದುಃಖಿತರಾಗಿ ಅಲ್ಲಿಂದ ಹೊರಡಲು ನಿಶ್ಚಯಿಸಿ ಹೊರಟರು.

12149014a ಧ್ವಾಂಕ್ಷಭ್ರಸಮವರ್ಣಸ್ತು[715] ಬಿಲಾನ್ನಿಃಸೃತ್ಯ ಜಂಬುಕಃ|
12149014c ಗಚ್ಚಮಾನಾನ್ಸ್ಮ ತಾನಾಹ ನಿರ್ಘೃಣಾಃ ಖಲು ಮಾನವಾಃ॥

ಆಗ ಮೋಡದ ಬಣ್ಣದ ನರಿಯೊಂದು ತನ್ನ ಬಿಲದಿಂದ ಹೊರಬಂದು ಹೊರಡುತ್ತಿದ್ದ ಅವರಿಗೆ ಹೇಳಿತು: "ಮನುಷ್ಯರೇ! ನೀವೆಷ್ಟು ನಿರ್ದಯಿಗಳು!

12149015a ಆದಿತ್ಯೋಽಯಂ ಸ್ಥಿತೋ ಮೂಢಾಃ ಸ್ನೇಹಂ ಕುರುತ ಮಾ ಭಯಮ್|
12149015c ಬಹುರೂಪೋ ಮುಹೂರ್ತಶ್ಚ ಜೀವೇತಾಪಿ ಕದಾ ಚನ॥

ಮೂಢರೇ! ಸೂರ್ಯನು ಇನ್ನೂ ಮುಳುಗಿಲ್ಲ! ಭಯಪಡಬೇಡಿ.

---

[714] ಇದಕ್ಕೆ ಮೊದಲು ಗೀತಾ ಪ್ರೆಸ್ ನಲ್ಲಿ ಈ ಒಂದು ಅಧಿಕ ಶ್ಲೋಕವಿದೆ: ವಿನಿಶ್ಚಿತ್ಯಾಥ ಚ ತದಾ ವಿಕೋಶಂತಸ್ತತಸ್ತತಃ| ಮೃತಮಿತ್ಯೇವ ಗಚ್ಛಂತೋ ನಿರಾಶಾಸ್ತಸ್ಯ ದರ್ಶನೇ॥

[715] ಧ್ವಾಂಕ್ಷಪಕ್ಷಸವರ್ಣಸ್ತು ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಮಗುವಿಗೆ ಸ್ನೇಹವನ್ನು ತೋರಿಸಿ. ಅನೇಕ ಪ್ರಕಾರದ ಮುಹೂರ್ತಗಳು ಬರುತ್ತಿರುತ್ತವೆ. ಯಾವುದೋ ಶುಭ ಗಳಿಗೆಯಲ್ಲಿ ಇವನು ಜೀವಿತನೂ ಆಗಬಹುದು.

12149016a ಯೂಯಂ ಭೂಮೌ ವಿನಿಕ್ಷಿಪ್ಯ ಪುತ್ರಸ್ನೇಹವಿನಾಕೃತಾಃ|
12149016c ಶ್ಮಶಾನೇ ಪುತ್ರಮುತ್ಸೃಜ್ಯ ಕಸ್ಮಾದ್ಗಚ್ಛಥ ನಿರ್ಘೃಣಾಃ||

ನೀವು ಎಂಥಹ ನಿರ್ದಯಿಗಳು! ಪುತ್ರಸ್ನೇಹವನ್ನು ತ್ಯಜಿಸಿ ಈ ಪುತ್ರನನ್ನು ಶ್ಮಶಾನ ಭೂಮಿಗೆ ತಂದು ಹಾಕಿಬಿಟ್ಟಿರಿ! ಇವನನ್ನು ಇಲ್ಲಿ ಬಿಟ್ಟು ಎಲ್ಲಿ ಹೋಗುತ್ತಿದ್ದೀರಿ?

12149017a ನ ವೋಽಸ್ತ್ಯಸ್ಮಿನ್ಸುತೇ ಸ್ನೇಹೋ ಬಾಲೇ ಮಧುರಭಾಷಿಣಿ|
12149017c ಯಸ್ಯ ಭಾಷಿತಮಾತ್ರೇಣ ಪ್ರಸಾದಮುಪಗಚ್ಛಥ||

ಈ ಮಧುರ ಭಾಷಿಣೀ ಬಾಲಕನ ಮೇಲೆ ನಿಮಗೆ ಸ್ವಲ್ಪವೂ ಸುತಸ್ನೇಹವಿಲ್ಲವೆಂದು ತೋರುತ್ತಿದೆ. ಕೇವಲ ಯಾರ ತೊದಲು ಮಾತಿನಿಂದಲೇ ನೀವು ಸಂತೋಷಪಡುತ್ತಿದ್ದರೋ ಆ ಬಾಲಕನೇ ಇವನಲ್ಲವೇ?

12149018a ನ ಪಶ್ಯಥ[716] ಸುತಸ್ನೇಹಂ ಯಾದೃಶಃ ಪಶುಪಕ್ಷಿಣಾಮ್|
12149018c ನ ಯೇಷಾಂ ಧಾರಯಿತ್ವಾ ತಾನ್ ಕಶ್ಚಿದಸ್ತಿ ಫಲಾಗಮಃ||
12149019a ಚತುಷ್ಪಾತ್ ಪಕ್ಷಿಕೀಟಾನಾಂ ಪ್ರಾಣಿನಾಂ ಸ್ನೇಹಸಂಗಿನಾಮ್|
12149019c ಪರಲೋಕಗತಿಸ್ಥಾನಾಂ ಮುನಿಯಜ್ಞಕ್ರಿಯಾ ಇವ||

ಪಶುಪಕ್ಷಿಗಳಲ್ಲಿ ಯಾವರೀತಿಯ ಸುತಸ್ನೇಹವಿದೆಯೆಂಬುದನ್ನು ನೀವು

---

[716] ತೇ ಪಶ್ಯತ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ನೋಡಿಲ್ಲವೇ? ಪುತ್ರಸ್ನೇಹವನ್ನು ಧಾರಣೆಮಾಡಿರುವ ಅವರಿಗೆ ಯಾವ ಫಲವೂ ದೊರಕುವುದಿಲ್ಲ. ಯಜ್ಞಕ್ರಿಯೆಗಳನ್ನು ಮಾಡುವ ಮುನಿಗಳಿಗೆ ಪರಲೋಕದಲ್ಲಿ ದೊರಕುವ ಫಲವು ಸ್ನೇಹಸಂಗಿಗಳಾದ ಪಕ್ಷಿಕೀಟಾದಿ ಪ್ರಾಣಿಗಳಿಗೆ ದೊರೆಯಲಾರದು.

12149020a ತೇಷಾಂ ಪುತ್ರಾಭಿರಾಮಾಣಾಮಿಹ ಲೋಕೇ ಪರತ್ರ ಚ|
12149020c ನ ಗುಣೋ ದೃಶ್ಯತೇ ಕಶ್ಚಿತ್ ಪ್ರಜಾಃ ಸಂಧಾರಯಂತಿ ಚ||

ಪುತ್ರರಲ್ಲಿ ಸ್ನೇಹವನ್ನಿಟ್ಟುಕೊಳ್ಳುವ ಆ ಪಶುಪಕ್ಷಿಗಳಿಗೆ ಇಹ ಮತ್ತು ಪರಲೋಕದಲ್ಲಿ ಸಂತಾನ ಪಾಲನೆಯ ಯಾವ ಲಾಭವೂ ಕಾಣುವುದಿಲ್ಲ. ಆದರೂ ಅವು ತಮ್ಮ ಸಂತಾನಗಳನ್ನು ರಕ್ಷಿಸುತ್ತವೆ.

12149021a ಅಪಶ್ಯತಾಂ ಪ್ರಿಯಾನ್ ಪುತ್ರಾನ್ನೈಷಾಂ ಶೋಕೋಽನುತಿಷ್ಠತಿ|
12149021c ನ ಚ ಪುಷ್ಣಂತಿ ಸಂವೃದ್ಧಾಸ್ತೇ ಮಾತಾಪಿತರೌ ಕ್ವ ಚಿತ್||

ದೊಡ್ಡವರಾದ ನಂತರ ತಮ್ಮ ಮಾತಾ-ಪಿತೃಗಳ ಪಾಲನ-ಪೋಷಣೆಯನ್ನು ಮಾಡದೇ ಇದ್ದರೂ ಕೂಡ ಅವರು ತಮ್ಮ ಪ್ರೀತಿಯ ಮಕ್ಕಳನ್ನು ನೋಡದೇ ಇದ್ದರೆ ಅವರ ಶೋಕವು ನಿಲ್ಲುವುದಿಲ್ಲ.

12149022a ಮಾನುಷಾಣಾಂ ಕುತಃ ಸ್ನೇಹೋ ಯೇಷಾಂ ಶೋಕೋ ಭವಿಷ್ಯತಿ|
12149022c ಇಮಂ ಕುಲಕರಂ ಪುತ್ರಂ ಕಥಂ ತ್ಯಕ್ತ್ವಾ ಗಮಿಷ್ಯಥ||

ಆದರೆ ಮನುಷ್ಯರಲ್ಲಿ ಇಷ್ಟೊಂದು ಸ್ನೇಹವು ಎಲ್ಲಿಂದ ಎಂದು ಅವರಿಗೆ ಅಷ್ಟೊಂದು ಶೋಕವುಂಟಾಗುತ್ತದೆ? ಇವನು ನಿಮ್ಮ ಕುಲಕರ ಪುತ್ರನು. ಇವನನ್ನು ಬಿಟ್ಟು ನೀವು ಎಲ್ಲಿಗೆ ಹೋಗುತ್ತಿದ್ದೀರಿ?

12149023a ಚಿರಂ ಮುಂಚತ ಬಾಷ್ಪಂ ಚ ಚಿರಂ ಸ್ನೇಹೇನ ಪಶ್ಯತ|

12149023c ಏವಂವಿಧಾನಿ ಹೀಷ್ಟಾನಿ ದುಸ್ತ್ಯಜಾನಿ ವಿಶೇಷತಃ||

ಇವನಿಗಾಗಿ ಇನ್ನೂ ಸ್ವಲ್ಪ ಹೊತ್ತು ಕಣ್ಣೀರು ಸುರಿಸಿರಿ ಮತ್ತು ಇನ್ನೂ ಸ್ವಲ್ಪ ಹೊತ್ತು ಇವನನ್ನು ಸ್ನೇಹದಿಂದ ನೋಡಿರಿ. ಏಕೆಂದರೆ ಇಂತಹ ಪ್ರಿಯ ಸಂತಾನವನ್ನು ಬಿಟ್ಟು ಹೋಗುವುದು ಅತ್ಯಂತ ಕಷ್ಟವಾಗುತ್ತದೆ.

12149024a ಕ್ಷೀಣಸ್ಯಾರ್ಥಾಭಿಯುಕ್ತಸ್ಯ ಶ್ಮಶಾನಾಭಿಮುಖಸ್ಯ ಚ|
12149024c ಬಾಂಧವಾ ಯತ್ರ ತಿಷ್ಠಂತಿ ತತ್ರಾನ್ಯೋ ನಾವತಿಷ್ಠತೇ||

ಶರೀರವು ಕ್ಷೀಣವಾಗುತ್ತಿರುವ, ದರಿದ್ರನಾಗಿರುವ ಮತ್ತು ಶ್ಮಶಾನಾಭಿಮುಖನಾಗಿರುವವನ ಬಳಿ ಅವನ ಬಾಂಧವರು ನಿಂತುಕೊಳ್ಳುತ್ತಾರೆಯೇ ಹೊರತು ಬೇರೆ ಯಾರೂ ಅಲ್ಲಿರುವುದಿಲ್ಲ.

12149025a ಸರ್ವಸ್ಯ ದಯಿತಾಃ ಪ್ರಾಣಾಃ ಸರ್ವಃ ಸ್ನೇಹಂ ಚ ವಿಂದತಿ|
12149025c ತಿರ್ಯಗ್ಯೋನಿಷ್ವಪಿ ಸತಾಂ ಸ್ನೇಹಂ ಪಶ್ಯತ ಯಾದೃಶಮ್||

ಸರ್ವರಿಗೂ ಅವರವರ ಪ್ರಾಣಗಳು ಇಷ್ಟವಾಗಿರುತ್ತವೆ ಮತ್ತು ಎಲ್ಲರೂ ಇತರರ ಸ್ನೇಹವನ್ನು ಬಯಸುತ್ತಾರೆ. ತಿರ್ಯಗ್ಯೋನಿಗಳಲ್ಲಿರುವ ಪ್ರಾಣಿಗಳಲ್ಲಿಯೂ ತಮ್ಮ ಸಂತಾನಗಳ ಮೇಲೆ ಎಂತಹ ಪ್ರೇಮವಿರುತ್ತದೆ ಎನ್ನುವುದನ್ನು ನೋಡಿರಿ.

12149026a ತ್ಯಕ್ತ್ವಾ ಕಥಂ ಗಚ್ಚೀಥೇಮಂ ಪದ್ಮಲೋಲಾಯತಾಕ್ಷಕಮ್|
12149026c ಯಥಾ ನವೋದ್ವಾಹಕೃತಂ ಸ್ನಾನಮಾಲ್ಯವಿಭೂಷಿತಮ್||

ಸ್ನಾನ-ಮಾಲ್ಯಾ ವಿಭೂಷಿತನಾಗಿ ಹೊಸ ಮದುಮಗನಂತೆ ಕಾಣುವ ಈ ಪದ್ಮಲೋಲಾಯತಾಕ್ಷ[717]ನನ್ನು ಬಿಟ್ಟು ಹೇಗೆ ತಾನೇ

[717] ಕಮಲದ ದಳದಳಗಳಂತಹ ವಿಶಾಲ ಮತ್ತು ಚಂಚಲ ಕಣ್ಣುಗಳಿರುವ

ಹೋಗುತ್ತಿರುವಿರಿ?””

12149027 ಭೀಷ್ಮ ಉವಾಚ |
12149027a ಜಂಬುಕಸ್ಯ ವಚಃ ಶ್ರುತ್ವಾ ಕೃಪಣಂ ಪರಿದೇವತಃ|
12149027c ನ್ಯವರ್ತಂತ ತದಾ ಸರ್ವೇ ಶವಾರ್ಥಂ ತೇ ಸ್ಮ ಮಾನುಷಾಃ||

ಭೀಷ್ಮನು ಹೇಳಿದನು: “ಕೃಪಣನಾಗಿ ಪರಿವೇದಿಸುತ್ತಿದ್ದ ನರಿಯ ಆ ಮಾತನ್ನು ಕೇಳಿ ಆ ಎಲ್ಲ ಮನುಷ್ಯರೂ ಶವದ ಬಳಿ ಹಿಂದಿರುಗಿದರು.

12149028 ಗೃಧ್ರ ಉವಾಚ |
12149028a ಅಹೋ ಧಿಕ್ಸುನೃಶಂಸೇನ ಜಂಬುಕೇನಾಲ್ಪಮೇಧಸಾ|
12149028c ಕ್ಷುದ್ರೇಣೋಕ್ತಾ ಹೀನಸತ್ತ್ವಾ ಮಾನುಷಾಃ ಕಿಂ ನಿವರ್ತಥ||

ಹದ್ದು ಹೇಳಿತು: “ಅಯ್ಯೋ! ಈ ಕ್ಷುದ್ರ ಅಲ್ಪಬುದ್ಧಿಯ ಕ್ರೂರ ನರಿಗೆ ಧಿಕ್ಕಾರ! ಇದರ ಮಾತನ್ನು ಕೇಳಿ ಹೀನಸತ್ತ್ವರಾದ ಈ ಮನುಷ್ಯರು ಹಿಂದಿರುಗಿಬಿಟ್ಟರಲ್ಲಾ!

12149029a ಪಂಚಭೂತಪರಿತ್ಯಕ್ತಂ ಶೂನ್ಯಂ ಕಾಷ್ಠತ್ವಮಾಗತಮ್|
12149029c ಕಸ್ಮಾಚ್ಚೋಚಥ ನಿಶ್ಚೇಷ್ಟಮಾತ್ಮಾನಂ ಕಿಂ ನ ಶೋಚಥ||

ಪಂಚಭೂತಗಳಿಂದ ಪರಿತ್ಯಕ್ತನಾದ ಇವನು ಒಣ ಕಟ್ಟಿಗೆಯಂತಾಗಿಬಿಟ್ಟಿದ್ದಾನೆ. ನೀವು ಇವನಿಗಾಗಿ ಏಕೆ ಶೋಕಿಸುತ್ತಿರುವಿರಿ? ಒಂದು ದಿನ ನಿಮ್ಮದೂ ಇದೇ ಅವಸ್ಥೆಯಾಗುವುದು. ನಿಮ್ಮ ಕುರಿತು ಏಕೆ ಶೋಕಿಸುವುದಿಲ್ಲ?

12149030a ತಪಃ ಕುರುತ ವೈ ತೀವ್ರಂ ಮುಚ್ಯಧ್ವಂ ಯೇನ ಕಿಲ್ಬಿಷಾತ್|
12149030c ತಪಸಾ ಲಭ್ಯತೇ ಸರ್ವಂ ವಿಲಾಪಃ ಕಿಂ ಕರಿಷ್ಯತಿ||

ತೀವ್ರ ತಪಸ್ಸನ್ನಾಚರಿಸಿರಿ. ಅದರಿಂದ ನೀವು ಪಾಪಮುಕ್ತರಾಗುತ್ತೀರಿ. ತಪಸ್ಸಿನಿಂದ ಎಲ್ಲವನ್ನೂ ಪಡೆದುಕೊಳ್ಳಬಹುದು. ಏಕೆ ವಿಲಪಿಸುತ್ತಿದ್ದೀರಿ?

12149031a ಅನಿಷ್ಟಾನಿ ಚ ಭಾಗ್ಯಾನಿ ಜಾನೀತ ಸಹ ಮೂರ್ತಿಭಿಃ|
12149031c ಯೇನ ಗಚ್ಚತಿ ಲೋಕೋಽಯಂ[718] ದತ್ತ್ವಾ ಶೋಕಮನಂತಕಮ್||

ಅನಿಷ್ಟಗಳು ಮತ್ತು ಭಾಗ್ಯಗಳು ಶರೀದೊಂದಿಗೇ ಹುಟ್ಟುತ್ತವೆ. ಕೊನೆಯಿಲ್ಲದ ಶೋಕವನ್ನಿತ್ತು ಇವನು ಈ ಲೋಕವನ್ನು ಬಿಟ್ಟು ಹೊರಟುಹೋಗಿದ್ದಾನೆ.

12149032a ಧನಂ ಗಾಶ್ಚ ಸುವರ್ಣಂ ಚ ಮಣಿರತ್ನಮಥಾಪಿ ಚ|
12149032c ಅಪತ್ಯಂ ಚ ತಪೋಮೂಲಂ ತಪೋಯೋಗಾಚ್ಚ ಲಭ್ಯತೇ||

ಧನ, ಗೋವುಗಳು, ಸುವರ್ಣ, ಮಣಿ-ರತ್ನಗಳು ಮತ್ತು ಸಂತಾನ ಇವುಗಳಿಗೆ ತಪಸ್ಸೇ ಮೂಲವು. ತಪೋಯೋಗದಿಂದಲೇ ಇವು ದೊರೆಯುತ್ತವೆ.

12149033a ಯಥಾಕೃತಾ ಚ ಭೂತೇಷು ಪ್ರಾಪ್ಯತೇ ಸುಖದುಃಖಿತಾ|
12149033c ಗೃಹೀತ್ವಾ ಜಾಯತೇ ಜಂತುರ್ದುಃಖಾನಿ ಚ ಸುಖಾನಿ ಚ||

ಹಿಂದೆ ಮಾಡಿದ ಕರ್ಮಗಳ ಅನುಸಾರ ಸುಖ-ದುಃಖಿಗಳನ್ನು ಪಡೆದುಕೊಂಡೇ ಜೀವಿಯು ಹುಟ್ಟುತ್ತಾನೆ ಮತ್ತು ತನ್ನ ಕರ್ಮಾನುಸಾರ ಸುಖ-ದುಃಖಿಗಳನ್ನು ಅನುಭವಿಸಿ ಹೊರಟುಹೋಗುತ್ತಾನೆ.

12149034a ನ ಕರ್ಮಣಾ ಪಿತುಃ ಪುತ್ರಃ ಪಿತಾ ವಾ ಪುತ್ರಕರ್ಮಣಾ|

---

718 ಬಾಲೋಽಯಂ (ಗೀತಾ ಪ್ರೆಸ್).

12149034c ಮಾರ್ಗೇಣಾನ್ಯೇನ ಗಚ್ಛಂತಿ ತ್ಯಕ್ತ್ವಾ ಸುಕೃತದುಷ್ಕೃತೇ॥

ತಂದೆಯ ಕರ್ಮದೊಂದಿಗೆ ಮಗನಿಗೆ ಮತ್ತು ಮಗನ ಕರ್ಮದೊಂದಿಗೆ ತಂದೆಯ ಯಾವ ಸಂಬಂಧವೂ ಇಲ್ಲ. ತಮ್ಮ ತಮ್ಮ ಪಾಪ-ಪುಣ್ಯಗಳ ಬಂಧನದಲ್ಲಿ ಬಂಧಿಸಲ್ಪಟ್ಟು ಜೀವಗಳು ಕರ್ಮಾನುಸಾರ ವಿಭಿನ್ನ ಮಾರ್ಗಗಳಲ್ಲಿ ಹೋಗುತ್ತಿರುತ್ತವೆ.

12149035a ಧರ್ಮಂ ಚರತ ಯತ್ನೇನ ತಥಾಧರ್ಮಾನ್ನಿವರ್ತತ[719]।
12149035c ವರ್ತಧ್ವಂ ಚ ಯಥಾಕಾಲಂ ದೈವತೇಷು ದ್ವಿಜೇಷು ಚ॥

ನೀವು ಪ್ರಯತ್ನಪಟ್ಟು ಧರ್ಮದಲ್ಲಿಯೇ ನಡೆದುಕೊಳ್ಳಿ. ಅಧರ್ಮದಿಂದ ಹಿಂದೆಸರಿಯಿರಿ. ದೇವತೆಗಳು ಮತ್ತು ದ್ವಿಜರ ಸೇವೆಯಲ್ಲಿ ಯಥಾಕಾಲ ತತ್ಪರರಾಗಿರಿ.

12149036a ಶೋಕಂ ತ್ಯಜತ ದೈನ್ಯಂ ಚ ಸುತಸ್ನೇಹಾನ್ನಿವರ್ತತ।
12149036c ತ್ಯಜ್ಯತಾಮಯಮಾಕಾಶೇ ತತಃ ಶೀಘ್ರಂ ನಿವರ್ತತ॥

ಶೋಕ ಮತ್ತು ದೀನತೆಗಳನ್ನು ತ್ಯಜಿಸಿ ಸುತಸ್ನೇಹದಿಂದ ನಿವೃತ್ತರಾಗಿರಿ. ಇವನನ್ನು ಇದೇ ಶೂನ್ಯ ಸ್ಥಳದಲ್ಲಿ ಬಿಟ್ಟು ಶೀಘ್ರವಾಗಿ ಹಿಂದೆಹೋಗಿ.

12149037a ಯತ್ಕರೋತಿ ಶುಭಂ ಕರ್ಮ ತಥಾಧರ್ಮಂ[720] ಸುದಾರುಣಮ್।
12149037c ತತ್ಕರ್ತ್ರೈವ ಸಮಶ್ನಾತಿ ಬಾಂಧವಾನಾಂ ಕಿಮತ್ರ ಹಿ॥

ಶುಭ ಮತ್ತು ದಾರುಣ ಕರ್ಮಗಳನ್ನು ಮಾಡಿದರೆ ಅದರ ಫಲವನ್ನು ಕರ್ಮವನ್ನು ಮಾಡಿದವನೇ ಅನುಭವಿಸುತ್ತಾನೆ. ಅದರಲ್ಲಿ

---

719 ನ ಚಾಧರ್ಮೇ ಮನಃ ಕೃಥಾಃ। (ಗೀತಾ ಪ್ರೆಸ್).

720 ತಥಾ ಕರ್ಮ (ಗೀತಾ ಪ್ರೆಸ್).

ಬಾಂಧವರೇನು ಮಾಡಬಲ್ಲರು?

12149038a ಇಹ ತ್ಯಕ್ತ್ವಾ ನ ತಿಷ್ಠಂತಿ ಬಾಂಧವಾ ಬಾಂಧವಂ ಪ್ರಿಯಮ್|
12149038c ಸ್ನೇಹಮುತ್ಸೃಜ್ಯ ಗಚ್ಚಂತಿ ಬಾಷ್ಪಪೂರ್ಣಾವಿಲೇಕ್ಷಣಾಃ||

ಬಾಂಧವರು ತಮ್ಮ ಪ್ರಿಯ ಬಾಂಧವನನ್ನು ಇಲ್ಲಿ ಇಟ್ಟು ಇಲ್ಲಿಯೇ ನಿಂತುಕೊಳ್ಳುವುದಿಲ್ಲ. ಸ್ನೇಹವನ್ನು ಬಿಟ್ಟು ಕಣ್ಣುಗಳಲ್ಲಿ ಕಣ್ಣೀರನ್ನು ತುಂಬಿಸಿಕೊಂಡು ಹೊರಟು ಹೋಗುತ್ತಾರೆ.

12149039a ಪ್ರಾಜ್ಞೋ ವಾ ಯದಿ ವಾ ಮೂರ್ಖಃ ಸಧನೋ ನಿರ್ಧನೋಽಪಿ ವಾ|
12149039c ಸರ್ವಃ ಕಾಲವಶಂ ಯಾತಿ ಶುಭಾಶುಭಸಮನ್ವಿತಃ||

ಪ್ರಾಜ್ಞನಾಗಿರಲಿ ಅಥವಾ ಮೂರ್ಖನಾಗಿರಲೀ, ಧನಿಕನಾಗಿರಲಿ ಅಥವಾ ದರಿದ್ರನಾಗಿರಲಿ, ಎಲ್ಲರೂ ತಮ್ಮ ಶುಭಾಶುಭ ಕರ್ಮಫಲಗಳೊಂದಿಗೆ ಕಾಲವಶರಾಗುತ್ತಾರೆ.

12149040a ಕಿಂ ಕರಿಷ್ಯಥ ಶೋಚಿತ್ವಾ ಮೃತಂ ಕಿಮನುಶೋಚಥ|
12149040c ಸರ್ವಸ್ಯ ಹಿ ಪ್ರಭುಃ ಕಾಲೋ ಧರ್ಮತಃ ಸಮದರ್ಶನಃ||

ಶೋಕಿಸಿ ನೀವು ಏನು ಮಾಡಬಲ್ಲಿರಿ? ಈ ಮೃತನಿಗಾಗಿ ಏಕೆ ಶೋಕಿಸುತ್ತಿರುವಿರಿ? ಸರ್ವರಿಗೂ ಕಾಲನೇ ಪ್ರಭುವು ಮತ್ತು ಕಾಲನು ಧರ್ಮತಃ ಎಲ್ಲರ ಮೇಲೂ ಸಮಾನ ದೃಷ್ಟಿಯನ್ನಿಟ್ಟಿರುತ್ತಾನೆ.

12149041a ಯೌವನಸ್ಥಾಂಶ್ಚ ಬಾಲಾಂಶ್ಚ ವೃದ್ಧಾನ್ಗರ್ಭಗತಾನಪಿ|
12149041c ಸರ್ವಾನಾವಿಶತೇ ಮೃತ್ಯುರೇವಂಭೂತಮಿದಂ ಜಗತ್||

ಈ ಮೃತ್ಯುವು ಯುವಕರನ್ನು, ಬಾಲಕರನ್ನು, ವೃದ್ಧರನ್ನು ಮತ್ತು ಗರ್ಭದಲ್ಲಿರುವವರನ್ನು ಎಲ್ಲರನ್ನೂ ಪ್ರವೇಶಿಸುತ್ತಾನೆ. ಈ ಜಗತ್ತಿನ ಎಲ್ಲ

ಜೀವಿಗಳ ದಶೆಯೂ ಇದೇ ಆಗಿರುತ್ತದೆ.”

12149042 ಜಂಬುಕ ಉವಾಚ |

12149042a ಅಹೋ ಮಂದೀಕೃತಃ ಸ್ನೇಹೋ ಗೃಧ್ರೇಣೇಹಾಲ್ಪಮೇಧಸಾ|
12149042c ಪುತ್ರಸ್ನೇಹಾಭಿಭೂತಾನಾಂ ಯುಷ್ಮಾಕಂ ಶೋಚತಾಂ ಭೃಶಮ್‌||

ನರಿಯು ಹೇಳಿತು: “ಅಯ್ಯೋ! ಈ ಮಂದಬುದ್ಧಿ ಹದ್ದು ನಿಮ್ಮ ಸ್ನೇಹವನ್ನು ಶಿಥಿಲಗೊಳಿಸಿಬಿಟ್ಟಿತು! ನೀವಾದರೋ ಪುತ್ರಸ್ನೇಹದಿಂದ ತುಂಬಿದವರಾಗಿ ಅತ್ಯಂತ ಶೋಕದಿಂದಿದ್ದೀರಿ.

12149043a ಸಮ್ಯೈಃ ಸಮ್ಯಕ್‌ ಪ್ರಯುಕ್ತೈಶ್ಚ ವಚನೈಃ ಪ್ರಶ್ರಯೋತ್ತರೈಃ|
12149043c ಯದ್ಗಚ್ಚತ ಜಲಸ್ಥಾಯಂ ಸ್ನೇಹಮುತ್ಸೃಜ್ಯ ದುಸ್ತ್ಯಜಮ್‌||

ಹದ್ದಿನ ಉತ್ತಮ ಯುಕ್ತಿಗಳಿಂದ ಕೂಡಿದ ನ್ಯಾಯಸಂಗತ ಮತ್ತು ವಿಶ್ವಾಸೋತ್ಪಾದಕ ವಚನಗಳಿಂದ ಪ್ರಭಾವಿತರಾಗಿ ಇವರೆಲ್ಲರೂ ತ್ಯಜಿಸಲು ಕಷ್ಟವಾದ ಸ್ನೇಹವನ್ನು ಪರಿತ್ಯಜಿಸಿ ಹೊರಟು ಹೋಗುತ್ತಿದ್ದಾರಲ್ಲಾ! ಇದೆಂಥಹ ಆಶ್ಚರ್ಯವು!

12149044a ಅಹೋ ಪುತ್ರವಿಯೋಗೇನ ಮೃತಶೂನ್ಯೋಪಸೇವನಾತ್‌|
12149044c ಕ್ರೋಶತಾಂ ವೈ ಭೃಶಂ ದುಃಖಿಂ ವಿವತ್ಸಾನಾಂ ಗವಾಮಿವ‌||
12149045a ಅದ್ಯ ಶೋಕಂ ವಿಜಾನಾಮಿ ಮಾನುಷಾಣಾಂ ಮಹೀತಲೇ|
12149045c ಸ್ನೇಹಂ ಹಿ ಕರುಣಂ ದೃಷ್ಟ್ವಾ ಮಮಾಪ್ಯಶ್ರೂಣ್ಯಥಾಗಮನ್‌‌||

ಅಯ್ಯೋ! ಪುತ್ರವಿಯೋಗದಿಂದ ಪೀಡಿತರಾಗಿ ಮೃತಕರ ಈ ಶೂನ್ಯ ಸ್ಥಾನಕ್ಕೆ ಬಂದು ಅತ್ಯಂತ ದುಃಖದಿಂದ ರೋದಿಸುತ್ತಿರುವ ಈ ಭೂತಲವಾಸೀ ಮನುಷ್ಯರ ಹೃದಯದಲ್ಲಿ ಕರುವಿಲ್ಲದ ಗೋವಿನಂತೆ ಎಷ್ಟೊಂದು ದುಃಖವಾಗುತ್ತಿರಲಿಕ್ಕಿಲ್ಲ? ಇದರ ಅನುಭವವು ಇಂದು

ನನಗೆ ಆಗುತ್ತಿದೆ. ಏಕೆಂದರೆ ಇವರ ಸ್ನೇಹದ ನೆಪದಿಂದ ನನ್ನ ಕಣ್ಣುಗಳಿಂದಲೂ ಕಣ್ಣೀರು ಸುರಿಯುತ್ತಿದೆ!

12149046a ಯತ್ನೋ ಹಿ ಸತತಂ ಕಾರ್ಯಃ ಕೃತೋ ದೈವೇನ ಸಿಧ್ಯತಿ|
12149046c ದೈವಂ ಪುರುಷಕಾರಶ್ಚ ಕೃತಾಂತೇನೋಪಪದ್ಯತೇ||

ಅಭೀಷ್ಟಸಿದ್ಧಿಗಾಗಿ ಸದಾ ಪ್ರಯತ್ನಪಡುತ್ತಲೇ ಇರಬೇಕು. ಆಗ ದೈವಯೋಗದಿಂದ ಅದರ ಸಿದ್ಧಿಯಾಗುತ್ತದೆ. ದೈವ ಮತ್ತು ಪುರುಷಾರ್ಥ ಎರಡೂ ಕಾಲದಿಂದಲೇ ಸಂಪನ್ನವಾಗುತ್ತವೆ.

12149047a ಅನಿರ್ವೇದಃ ಸದಾ ಕಾರ್ಯೋ ನಿರ್ವೇದಾದ್ಧಿ ಕುತಃ ಸುಖಮ್|
12149047c ಪ್ರಯತ್ನಾತ್ ಪ್ರಾಪ್ಯತೇ ಹ್ಯರ್ಥಃ ಕಸ್ಮಾದ್ಗಚ್ಚಥ ನಿರ್ದಯಾಃ||

ಖೇದ ಮತ್ತು ಶಿಥಿಲತೆಗೆ ಎಂದೂ ಮನಸ್ಸಿನಲ್ಲಿ ಸ್ಥಾನವನ್ನೀಡಬಾರದು. ಖೇದವಿದ್ದರೆ ಸುಖವೆಲ್ಲಿಂದ ಬರುತ್ತದೆ? ಪ್ರಯತ್ನದಿಂದಲೇ ಅಭಿಲಾಷೆಗಳು ಪೂರ್ಣಗೊಳ್ಳುತ್ತವೆ. ಆದುದರಿಂದ ನೀವು ಈ ಬಾಲಕನ ರಕ್ಷಣೆಯ ಪ್ರಯತ್ನವನ್ನು ಬಿಟ್ಟು ನಿರ್ದಯಿಗಳಾಗಿ ಎಲ್ಲಿಗೆ ಹೋಗುತ್ತಿರುವಿರಿ?

12149048a ಆತ್ಮಮಾಂಸೋಪವೃತ್ತಂ ಚ ಶರೀರಾರ್ಧಮಯೀಂ ತನುಮ್|
12149048c ಪಿತೄಣಾಂ ವಂಶಕರ್ತಾರಂ ವನೇ ತ್ಯಕ್ತ್ವಾ ಕ್ವ ಯಾಸ್ಯಥ||

ಈ ಬಾಲಕನು ನಿಮ್ಮದೇ ರಕ್ತ-ಮಾಂಸಗಳಿಂದ ಮಾಡಲ್ಪಟ್ಟಿದ್ದಾನೆ. ನಿಮ್ಮ ಅರ್ಧಶರೀರದ ಸಮಾನನಾಗಿದ್ದಾನೆ ಮತ್ತು ಪಿತೃಗಳ ವಂಶವೃದ್ಧಿಮಾಡುವವನಾಗಿದ್ದಾನೆ. ಇವನನ್ನು ವನದಲ್ಲಿ ಬಿಟ್ಟು ಎಲ್ಲಿಗೆ ಹೋಗುತ್ತಿದ್ದೀರಿ?

12149049a ಅಥ ವಾಸ್ತಂ ಗತೇ ಸೂರ್ಯೇ ಸಂಧ್ಯಾಕಾಲ ಉಪಸ್ಥಿತೇ|
12149049c ತತೋ ನೇಷ್ಯಥ ವಾ ಪುತ್ರಮಿಹಸ್ಥಾ ವಾ ಭವಿಷ್ಯಥ||

ಆಗಲಿ! ಎಲ್ಲಿಯವರಿಗೆ ಸೂರ್ಯಾಸ್ತವಾಗುವುದಿಲ್ಲವೋ ಮತ್ತು ಸಂಧ್ಯಾಕಾಲವು ಉಪಸ್ಥಿತವಾಗುವುದೋ ಅಲ್ಲಿಯವರೆಗಾದರೂ ನೀವು ಇಲ್ಲಿ ನಿಲ್ಲಿ. ನಂತರ ನಿಮ್ಮ ಈ ಪುತ್ರನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಅಥವಾ ಇಲ್ಲಿಯೇ ಬಿಟ್ಟು ಹೋಗಿ.”

12149050 ಗೃಧ್ರ ಉವಾಚ |
12149050a ಅದ್ಯ ವರ್ಷಸಹಸ್ರಂ ಮೇ ಸಾಗ್ರಂ ಜಾತಸ್ಯ ಮಾನುಷಾಃ|
12149050c ನ ಚ ಪಶ್ಯಾಮಿ ಜೀವಂತಂ ಮೃತಂ ಸ್ತ್ರೀಪುಂನಪುಂಸಕಮ್||

ಹದ್ದು ಹೇಳಿತು: “ಮನುಷ್ಯರೇ! ನಾನು ಹುಟ್ಟಿ ಇಂದಿಗೆ ಒಂದು ಸಾವಿರ ವರ್ಷಕ್ಕಿಂತಲೂ ಹೆಚ್ಚಾಗಿದೆ. ಆದರೆ ನಾನು ಎಂದೂ ಯಾವುದೇ ಸ್ತ್ರೀ-ಪುರುಷ ಅಥವಾ ನಪುಂಸಕನು ಮರಣಾನಂತರ ಜೀವಿತನಾದುದನ್ನು ಕಂಡಿಲ್ಲ.

12149051a ಮೃತಾ ಗರ್ಭೇಷು ಜಾಯಂತೇ ಮ್ರಿಯಂತೇ ಜಾತಮಾತ್ರಕಾಃ|
12149051c ವಿಕ್ರಮಂತೋ ಮ್ರಿಯಂತೇ ಚ ಯೌವನಸ್ಥಾಸ್ತಥಾಪರೇ||

ಕೆಲವರು ಗರ್ಭದಲ್ಲಿಯೇ ಸತ್ತುಹೋಗುತ್ತಾರೆ. ಕೆಲವರು ಹುಟ್ಟುತ್ತಲೇ ಸತ್ತುಹೋಗುತ್ತಾರೆ. ಕೆಲವರು ನಡೆಯಲು ಬಂದಾಗ ಸಾಯುತ್ತಾರೆ. ಇನ್ನು ಕೆಲವರು ಯೌವನಾವಸ್ಥೆಯಲ್ಲಿ ಸತ್ತು ಹೋಗುತ್ತಾರೆ.

12149052a ಅನಿತ್ಯಾನೀಹ ಭಾಗ್ಯಾನಿ ಚತುಷ್ಪಾತ್ಪಕ್ಷಿಣಾಮಪಿ|

12149052c ಜಂಗಮಾಜಂಗಮಾನಾಂ[721] ಚಾಪ್ಯಾಯುರಗ್ರೇಽವತಿಷ್ಠತೇ॥

ಈ ಲೋಕದಲ್ಲಿ ಪಶುಪಕ್ಷಿಗಳ ಭಾಗ್ಯಗಳೂ ಅನಿತ್ಯವಾದವು. ಸ್ಥಾವರ ಜಂಗಮಗಳ ಜೀವನದಲ್ಲಿಯೂ ಆಯಸ್ಸು ಪ್ರಧಾನವಾಗಿರುತ್ತದೆ.

12149053a ಇಷ್ಟದಾರವಿಯುಕ್ತಾಶ್ಚ ಪುತ್ರಶೋಕಾನ್ವಿತಾಸ್ತಥಾ।
12149053c ದಹ್ಯಮಾನಾಃ ಸ್ಮ ಶೋಕೇನ ಗೃಹಂ ಗಚ್ಚಂತಿ ನಿತ್ಯದಾ॥

ಪ್ರಿಯ ಪತ್ನಿಯ ವಿಯೋಗದಿಂದ ಮತ್ತು ಪುತ್ರಶೋಕದಿಂದ ಸಂತಪ್ತರಾದ ಎಷ್ಟೊಂದು ಪ್ರಾಣಿಗಳು ಪ್ರತಿದಿನ ಶೋಕಾಗ್ನಿಯಲ್ಲಿ ಸುಡುತ್ತಾ ಈ ಶ್ಮಶಾನದಿಂದ ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ!

12149054a ಅನಿಷ್ಟಾನಾಂ ಸಹಸ್ರಾಣಿ ತಥೇಷ್ಟಾನಾಂ ಶತಾನಿ ಚ।
12149054c ಉತ್ಸೃಜ್ಯೇಹ ಪ್ರಯಾತಾ ವೈ ಬಾಂಧವಾ ಭೃಶದುಃಖಿತಾಃ॥

ಎಷ್ಟೋ ಬಾಂಧವರು ಅತ್ಯಂತ ದುಃಖಿತರಾಗಿ ಇಲ್ಲಿ ಸಾವಿರಾರು ಅಪ್ರಿಯ ಮತ್ತು ನೂರಾರು ಪ್ರಿಯ ವ್ಯಕ್ತಿಗಳನ್ನು ಬಿಟ್ಟು ಹೊರಟುಹೋಗಿದ್ದಾರೆ.

12149055a ತ್ಯಜ್ಯತಾಮೇಷ ನಿಸ್ತೇಜಾಃ ಶೂನ್ಯಃ ಕಾಷ್ಠತ್ವಮಾಗತಃ।
12149055c ಅನ್ಯದೇಹವಿಷಕ್ತೋ ಹಿ ಶಾವಂ ಕಾಷ್ಠಮುಪಾಸತೇ॥
12149056a ಭ್ರಾಂತಜೀವಸ್ಯ ವೈ ಬಾಷ್ಪಂ ಕಸ್ಮಾದ್ಧಿತ್ವಾ ನ ಗಚ್ಚಥ।
12149056c ನಿರರ್ಥಕೋ ಹ್ಯಯಂ ಸ್ನೇಹೋ ನಿರರ್ಥಶ್ಚ ಪರಿಗ್ರಹಃ॥

ಈ ಮೃತ ಬಾಲಕನು ತೇಜೋಹೀನನಾಗಿ ಒಣಗಿದ ಕಟ್ಟಿಗೆಯಂತೆ ಆಗಿಬಿಟ್ಟಿದ್ದಾನೆ. ಇವನ ಜೀವವು ಇನ್ನೊಂದು ಶರೀರದಲ್ಲಿ

---

721 ಜಂಗಮಾನಾಂ ನಗಾನಾಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಆಸಕ್ತವಾಗಿದೆ. ಈ ನಿಷ್ಕ್ರಾಣ ಬಾಲಕನ ಶವವು ಕಟ್ಟಿಗೆಯಂತೆ ಆಗಿಬಿಟ್ಟಿದೆ. ನೀವುಗಳು ಇವನನ್ನು ಇಲ್ಲಿಯೇ ಬಿಟ್ಟು ಏಕೆ ಹೊರಟುಹೋಗುತ್ತಿಲ್ಲ? ನಿಮ್ಮ ಈ ಸ್ನೇಹವು ನಿರರ್ಥಕವಾದುದು ಮತ್ತು ಈ ಪರಿಶ್ರಮದಲ್ಲಿ ಯಾವ ಫಲವೂ ಇಲ್ಲ.

12149057a ನ ಚಕ್ಷುಭ್ರ್ಯಾಂ ನ ಕರ್ಣಾಭ್ಯಾಂ ಸಂಶೃಣೋತಿ ಸಮೀಕ್ಷತೇ|
12149057c ತಸ್ಮಾದೇನಂ ಸಮುತ್ಸೃಜ್ಯ ಸ್ವಗೃಹಾನ್ಗಚ್ಚತಾಶು ವೈ||

ಇವನು ಕಣ್ಣುಗಳಿಂದ ನೋಡುತ್ತಿಲ್ಲ ಮತ್ತು ಕಿವಿಗಳಿಂದ ಕೇಳುತ್ತಿಲ್ಲ. ಆದುದರಿಂದ ನೀವು ಇವನನ್ನು ಇಲ್ಲಿಯೇ ಬಿಟ್ಟು ನಿಮ್ಮ ಮನೆಗಳಿಗೆ ಏಕೆ ತೆರಳುತ್ತಿಲ್ಲ?

12149058a ಮೋಕ್ಷಧರ್ಮಾಶ್ರಿತ್ಯೈರ್ವಾಕ್ಯೈರ್ಹೇತುಮದ್ಭಿರನಿಷ್ಠುರೈಃ|
12149058c ಮಯೋಕ್ತಾ ಗಚ್ಚತ ಕ್ಷಿಪ್ರಂ ಸ್ವಂ ಸ್ವಮೇವ ನಿವೇಶನಮ್||

ನನ್ನ ಈ ಮಾತು ಬಹಳ ನಿಷ್ಠುರವಾದುದೆಂದು ತೋರುತ್ತದೆ. ಆದರೂ ಇದು ಹೇತುಗರ್ಭಿತವಾಗಿದೆ ಮತ್ತು ಮೋಕ್ಷಧರ್ಮದ ಕುರಿತಾಗಿದೆ. ಆದುದರಿಂದ ಇದನ್ನು ಒಪ್ಪಿಕೊಂಡು ನನ್ನ ಮಾತಿನಂತೆ ನೀವೆಲ್ಲರೂ ನಿಮ್ಮ ನಿಮ್ಮ ಮನೆಗಳಿಗೆ ತೆರಳಿರಿ.

12149059a ಪ್ರಜ್ಞಾವಿಜ್ಞಾನಯುಕ್ತೇನ ಬುದ್ಧಿಸಂಜ್ಞಾಪ್ರದಾಯಿನಾ|
12149059c ವಚನಂ ಶ್ರಾವಿತಾ ರೂಕ್ಷಂ ಮಾನುಷಾಃ ಸಂನಿವರ್ತತ||

ಮನುಷ್ಯರೇ! ನಾನು ಪ್ರಜ್ಞೆ ಮತ್ತು ವಿಜ್ಞಾನಯುಕ್ತವಾದ ಮತ್ತು ಇತರರಿಗೂ ಬುದ್ಧಿಸಂಜ್ಞೆಗಳನ್ನು ನೀಡುವ ಮಾತನಾಡುತ್ತಿದ್ದೇನೆ. ಕಠೋರವಾದ ನನ್ನ ಈ ಮಾತನ್ನು ಕೇಳಿ ಹಿಂದಿರುಗಿರಿ.”

[722]12149060 ಜಂಬುಕ ಉವಾಚ |

12149060a ಇಮಂ ಕನಕವರ್ಣಾಭಂ ಭೂಷಣೈಃ ಸಮಲಂಕೃತಮ್|
12149060c ಗೃಧ್ರವಾಕ್ಯಾತ್ಕಥಂ ಪುತ್ರಂ ತ್ಯಜಧ್ವಂ ಪಿತೃಪಿಂಡದಮ್||

ನರಿಯು ಹೇಳಿತು: "ಬಂಗಾರದ ವರ್ಣದಿಂದ ಕೂಡಿರುವ ಮತ್ತು ಭೂಷಣಗಳಿಂದ ಸಮಲಂಕೃತನಾಗಿರುವ ಹಾಗೂ ಪಿತೃಪಿಂಡಗಳನ್ನು ನೀಡುವ ಈ ಪುತ್ರನನ್ನು ಹದ್ದಿನ ಮಾತನ್ನು ಕೇಳಿ ಹೇಗೆ ತಾನೇ ಬಿಟ್ಟುಹೋಗುತ್ತಿದ್ದೀರಿ?

12149061a ನ ಸ್ನೇಹಸ್ಯ ವಿರೋಧೋಽಸ್ತಿ ವಿಲಾಪರುದಿತಸ್ಯ ವೈ|
12149061c ಮೃತಸ್ಯಾಸ್ಯ ಪರಿತ್ಯಾಗಾತ್ತಾಪೋ ವೈ ಭವಿತಾ ಧ್ರುವಮ್||

ಈ ಮೃತ ಬಾಲಕನನ್ನು ಇಲ್ಲಿ ಬಿಟ್ಟು ಹೋಗುವುದರಿಂದ ನಿಮ್ಮ ಸ್ನೇಹವೇನೂ ಕಡಿಮೆಯಾಗುವುದಿಲ್ಲ ಮತ್ತು ನಿಮ್ಮ ಈ ರೋದನ-ವಿಲಾಪಗಳು ನಿಂತುಹೋಗುವುದಿಲ್ಲ. ಬದಲಾಗಿ ನಿಮ್ಮ ಸಂತಾಪವು ನಿಶ್ಚಯವಾಗಿ ಇನ್ನೂ ಹೆಚ್ಚಾಗುತ್ತದೆ.

12149062a ಶ್ರೂಯತೇ ಶಂಬುಕೇ ಶೂದ್ರೇ ಹತೇ ಬ್ರಾಹ್ಮಣದಾರಕಃ|
12149062c ಜೀವಿತೋ ಧರ್ಮಮಾಸಾದ್ಯ ರಾಮಾತ್ಸತ್ಯಪರಾಕ್ರಮಾತ್||

ಸತ್ಯಪರಾಕ್ರಮೀ ರಾಮನು ಶಂಬುಕ ಎಂಬ ಹೆಸರಿನ ಶೂದ್ರನನ್ನು ಕೊಂದನಂತರ ಆ ಧರ್ಮದ ಪ್ರಭಾವದಿಂದ ಓರ್ವ ಮೃತ ಬ್ರಾಹ್ಮಣ

---

[722] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಅಧಿಕ ಶ್ಲೋಕವಿದೆ: ಶೋಕೋದ್ವಿಗುಣತಾಂ ಯಾತ್ ದೃಷ್ಟ್ವಾ ಸ್ಮೃತ್ವಾ ಚ ಚೇಷ್ಟಿತಮ್| ಇತ್ಯೇತದ್ವಚನಂ ಶ್ರುತ್ವಾ ಸಂನಿವೃತ್ತಾಸ್ತು ಮಾನುಷಾಃ| ಅಪಶ್ಯತ್ತಂ ತದಾ ಸುಪ್ತಂ ದ್ರುತಮಾಗತ್ಯ ಜಂಬುಕಃ||

ಪುತ್ರನು ಜೀವಿತನಾದನೆಂದು ಕೇಳಿದ್ದೇವೆ.

12149063a ತಥಾ ಶ್ವೇತಸ್ಯ ರಾಜರ್ಷೇರ್ಬಾಲೋ ದಿಷ್ಟ್ಯಾಂತಮಾಗತಃ|
12149063c ಶ್ವೋಽಭೂತೇ ಧರ್ಮನಿತ್ಯೇನ ಮೃತಃ ಸಂಜೀವಿತಃ ಪುನಃ||

ಹಾಗೆಯೇ ರಾಜರ್ಷಿ ಶ್ವೇತನ ಬಾಲಕನು ತೀರಿಕೊಂಡಿದ್ದನು. ಆದರೆ ಧರ್ಮನಿಷ್ಠ ಶ್ವೇತನು ಅವನನ್ನು ಪುನಃ ಜೀವಿತಗೊಳಿಸಿದ್ದನು.

12149064a ತಥಾ ಕಶ್ಚಿದ್ಭವೇತ್ಸಿದ್ಧೋ ಮುನಿರ್ವಾ ದೇವತಾಪಿ ವಾ|
12149064c ಕೃಪಣಾನಾಮನುಕ್ರೋಶಂ ಕುರ್ಯಾದ್ವೋ ರುದತಾಮಿಹ||

ಹೀಗೆಯೇ ಯಾರಾದರೂ ಸಿದ್ಧ ಮುನಿ ಅಥವಾ ದೇವತೆಯು ದೊರಕಿದರೆ ದುಃಖದಿಂದ ರೋದಿಸುತ್ತಿರುವ ನಿಮ್ಮ ಮೇಲೆ ದಯೆಯನ್ನುಂಟುಮಾಡಬಹುದು.””

12149065 ಭೀಷ್ಮ ಉವಾಚ |
12149065a ಇತ್ಯುಕ್ತಾಃ ಸಂನ್ಯವರ್ತಂತ ಶೋಕಾರ್ತಾಃ ಪುತ್ರವತ್ಸಲಾಃ|
12149065c ಅಂಕೇ ಶಿರಃ ಸಮಾಧಾಯ ರುರುದುರ್ಬಹುವಿಸ್ತರಮ್||

ಭೀಷ್ಮನು ಹೇಳಿದನು: “ನರಿಯು ಹೀಗೆ ಹೇಳಲು ಪುತ್ರವತ್ಸಲ ಬಾಂಧವರು ಶೋಕದಿಂದ ಪೀಡಿತರಾಗಿ ಹಿಂದಿರುಗಿದರು ಮತ್ತು ಬಾಲಕನ ತಲೆಯನ್ನು ತಮ್ಮ ತೊಡೆಯಮೇಲಿಟ್ಟುಕೊಂಡು ಜೋರಾಗಿ ರೋದಿಸತೊಡಗಿದರು.

[723]12149066 ಗೃಧ್ರ ಉವಾಚ |

---

723 ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಶ್ಲೋಕಾರ್ಧವಿದೆ: ತೇಷಾಂ ರುದಿತಶಬ್ದೇನ ಗೃಧ್ರೋಽಭ್ಯೇತ್ಯ ವಚೋಽಬ್ರವೀತ್|

12149066a ಅಶ್ರುಪಾತಪರಿಕ್ಲಿನ್ನಃ ಪಾಣಿಸ್ಪರ್ಶನಪೀಡಿತಃ।
12149066c ಧರ್ಮರಾಜಪ್ರಯೋಗಾಚ್ಚ ದೀರ್ಘಾಂ ನಿದ್ರಾಂ ಪ್ರವೇಶಿತಃ॥

ಹದ್ದು ಹೇಳಿತು: "ನಿಮ್ಮ ಕಣ್ಣೀರಿನಿಂದ ತೋಯಿಸುತ್ತಿರುವ ಮತ್ತು ನೀವು ಕೈಗಳಿಂದ ಒತ್ತುತ್ತಿರುವ ಈ ಬಾಲಕನು ಧರ್ಮರಾಜನ ಪ್ರಯೋಗದಿಂದ ದೀರ್ಘನಿದ್ರೆಯನ್ನು ಪ್ರವೇಶಿಸಿಬಿಟ್ಟಿದ್ದಾನೆ.

12149067a ತಪಸಾಪಿ ಹಿ ಸಂಯುಕ್ತೋ ನ ಕಾಲೇ ನೋಪಹನ್ಯತೇ[724]।
12149067c ಸರ್ವಸ್ನೇಹಾವಸಾನಂ[725] ತದಿದಂ ತತ್ ಪ್ರೇತಪತ್ತನಮ್॥

ತಪಸ್ಸಿನಿಂದ ಸಂಯುಕ್ತರಾಗಿರುವವರೂ ಕಾಲವನ್ನು ಮೀರಲಾರರು. ಈ ಪ್ರೇತಪಟ್ಟಣದಲ್ಲಿ ಎಲ್ಲ ಸ್ನೇಹಗಳೂ ಕೊನೆಗೊಳ್ಳುತ್ತವೆ.

12149068a ಬಾಲವೃದ್ಧಸಹಸ್ರಾಣಿ ಸದಾ ಸಂತ್ಯಜ್ಯ ಬಾಂಧವಾಃ।
12149068c ದಿನಾನಿ ಚೈವ ರಾತ್ರೀಶ್ಚ ದುಃಖಿಂ ತಿಷ್ಠಂತಿ ಭೂತಲೇ॥

ಭೂತಲದಲ್ಲಿ ಸಹಸ್ರಾರು ಬಾಲಕರು ಮತ್ತು ವೃದ್ಧರನ್ನು ಸದಾ ತ್ಯಜಿಸಿ ಬಾಂಧವರು ದಿನ ರಾತ್ರಿ ದುಃಖಿಪಡುತ್ತಿರುತ್ತಾರೆ.

12149069a ಅಲಂ ನಿರ್ಬಂಧಮಾಗಮ್ಯ ಶೋಕಸ್ಯ ಪರಿವಾರಣಮ್।
12149069c ಅಪ್ರತ್ಯಯಂ ಕುತೋ ಹ್ಯಸ್ಯ ಪುನರದ್ಯೇಹ ಜೀವಿತಮ್॥

ಪುನಃ ಪುನಃ ಹಿಂದಿರುಗಿ ಬಂದು ಶೋಕಪಡುವುದರಿಂದ ಶೋಕವು ಕಡಿಮೆಯಾಗುವುದಿಲ್ಲ. ಇನ್ನು ಇವನು ಜೀವಿತಗೊಳ್ಳುವ ಯಾವ ಭರವಸೆಯೂ ಇಲ್ಲವಾಗಿದೆ. ಇಂದು ಇವನ ಪುನರ್ಜೀವನವು ಹೇಗೆ

---

724 ಧನವಂತೋ ಮಹಾಧಿಯಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

725 ಸರ್ವೇ ಮೃತ್ಯುವಶಂ ಯಾಂತಿ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಸಾಧ್ಯವಿದೆ?

12149070a ನೈಷ ಜಂಬುಕವಾಕ್ಯೇನ ಪುನಃ ಪ್ರಾಪ್ಸ್ಯತಿ ಜೀವಿತಮ್|
12149070c ಮೃತಸ್ಯೋತ್ಸೃಷ್ಟದೇಹಸ್ಯ ಪುನರ್ದೇಹೋ ನ ವಿದ್ಯತೇ||

ನರಿಯ ಮಾತಿನಿಂದ ಇವನು ಪುನಃ ಜೀವವನ್ನು
ಪಡೆದುಕೊಳ್ಳುವುದಿಲ್ಲ. ಒಮ್ಮೆ ದೇಹವನ್ನು ಬಿಟ್ಟುಹೋದ ಜೀವವು
ಪುನಃ ಆ ದೇಹವನ್ನು ಸೇರುವುದಿಲ್ಲ.

12149071a ನ ವೈ ಮೂರ್ತಿಪ್ರದಾನೇನ ನ ಜಂಬುಕಶತೈರಪಿ|
12149071c ಶಕ್ಯೋ ಜೀವಯಿತುಂ ಹ್ಯೇಷ ಬಾಲೋ ವರ್ಷಶತೈರಪಿ||

ನೂರಾರು ನರಿಗಳು ತಮ್ಮ ಶರೀರವನ್ನು ಬಲಿಕೊಟ್ಟರೂ ನೂರು
ವರ್ಷಗಳಾದರೂ ಈ ಬಾಲಕನ್ನು ಜೀವಿತಗೊಳಿಸಲು ಶಕ್ಯವಿಲ್ಲ.

12149072a ಅಪಿ ರುದ್ರಃ ಕುಮಾರೋ ವಾ ಬ್ರಹ್ಮಾ ವಾ ವಿಷ್ಣುರೇವ ವಾ|
12149072c ವರಮಸ್ಮೈ ಪ್ರಯಚ್ಛೇಯುಸ್ತತೋ ಜೀವೇದಯಂ ಶಿಶುಃ||

ರುದ್ರ, ಕುಮಾರ ಕಾರ್ತಿಕೇಯ ಅಥವಾ ಬ್ರಹ್ಮ ಅಥವಾ ವಿಷ್ಣು ಇವನಿಗೆ
ವರವನ್ನಿತ್ತರೆ ಈ ಶಿಶುವು ಪುನಃ ಜೀವಿತಗೊಳ್ಳಬಹುದು.

12149073a ನ ಚ ಬಾಷ್ಪವಿಮೋಕ್ಷೇಣ ನ ಚಾಶ್ವಾಸಕೃತೇನ ವೈ|
12149073c ನ ದೀರ್ಘರುದಿತೇನೇಹ ಪುನರ್ಜೀವೋ ಭವಿಷ್ಯತಿ||

ಕಣ್ಣೀರು ಸುರಿಸುವುದರಿಂದ ಅಥವಾ ದೀರ್ಘ
ನಿಟ್ಟುಸಿರುಬಿಡುವುದರಿಂದ ಅಥವಾ ಬಹಳ ಹೊತ್ತು
ಅಳುತ್ತಿರುವುದರಿಂದ ಇವನು ಪುನಃ ಜೀವಿತನಾಗುವುದಿಲ್ಲ.

12149074a ಅಹಂ ಚ ಕ್ರೋಷ್ಟುಕಶ್ಚೈವ ಯೂಯಂ ಚೈವಾಸ್ಯ ಬಾಂಧವಾಃ|

12149074c ಧರ್ಮಾಧರ್ಮೌ ಗೃಹೀತ್ವೇಹ ಸರ್ವೇ ವರ್ತಾಮಹೇಽಧ್ವನಿ||

ನಾನು, ಈ ನರಿ ಮತ್ತು ಇವನ ಬಾಂಧವರಾದ ನೀವು ಎಲ್ಲರೂ ಧರ್ಮ ಮತ್ತು ಅಧರ್ಮವನ್ನು ಹೊತ್ತು ಇಲ್ಲಿ ನಮ್ಮ ನಮ್ಮ ದಾರಿಯಲ್ಲಿ ಸಾಗುತ್ತಿದ್ದೇವೆ.

12149075a ಅಪ್ರಿಯಂ ಪರುಷಂ ಚಾಪಿ ಪರದ್ರೋಹಂ ಪರಸ್ತ್ರಿಯಮ್|
12149075c ಅಧರ್ಮಮನೃತಂ ಚೈವ ದೂರಾತ್ ಪ್ರಾಜ್ಞೋ ನಿವರ್ತಯೇತ್||

ಪ್ರಾಜ್ಞನಾದವನು ಅಪ್ರಿಯವಾದುದನ್ನು, ಕಠೋರತೆಯನ್ನು, ಪರದ್ರೋಹವನ್ನು, ಪರಸ್ತ್ರೀಯನ್ನು, ಅಧರ್ಮವನ್ನು ಮತ್ತು ಸುಳ್ಳನ್ನು ದೂರದಿಂದಲೇ ತಡೆಯಬೇಕು.

12149076a ಸತ್ಯಂ ಧರ್ಮಂ ಶುಭಂ ನ್ಯಾಯ್ಯಂ ಪ್ರಾಣಿನಾಂ ಮಹತೀಂ ದಯಾಮ್|
12149076c ಅಜಿಹ್ಮತ್ವಮಶಾಠ್ಯಂ ಚ ಯತ್ನತಃ ಪರಿಮಾರ್ಗತ||

ಸತ್ಯ, ಧರ್ಮ, ಶುಭ, ನ್ಯಾಯ, ಪ್ರಾಣಿಗಳ ಮೇಲೆ ಅತಿ ದೊಡ್ಡ ದಯೆ, ಕುಟಿಲತೆಯಿಲ್ಲದಿರುವುದು, ಶಠತ್ವದ ತ್ಯಾಗ ಇವುಗಳನ್ನು ಪ್ರಯತ್ನಪೂರ್ವಕವಾಗಿ ಅನುಸರಿಸಬೇಕು.

12149077a ಮಾತರಂ ಪಿತರಂ ಚೈವ ಬಾಂಧವಾನ್ಸುಹೃದಸ್ತಥಾ|
12149077c ಜೀವತೋ ಯೇ ನ ಪಶ್ಯಂತಿ ತೇಷಾಂ ಧರ್ಮವಿಪರ್ಯಯಃ||

ತಾಯಿ-ತಂದೆಯರು, ಬಾಂಧವರು ಮತ್ತು ಸುಹೃದರು ಜೀವಿಸಿರುವಾಗ ಆವರನ್ನು ಚೆನ್ನಾಗಿ ನೋಡಿಕೊಳ್ಳದೇ ಇರುವವರಿಗೆ ಧರ್ಮಹಾನಿಯುಂಟಾಗುತ್ತದೆ.

12149078a ಯೋ ನ ಪಶ್ಯತಿ ಚಕ್ಷುರ್ಭ್ಯಾಂ ನೇಂಗತೇ ಚ ಕಥಂ ಚನ|

12149078c ತಸ್ಯ ನಿಷ್ಠಾವಸಾನಾಂತೇ ರುದಂತಃ ಕಿಂ ಕರಿಷ್ಯಥ||

ಕಣ್ಣುಗಳಿಂದ ನೋಡದ ಮತ್ತು ಅಂಗಾಂಗಗಳನ್ನೂ ಹಂದಾಡಿಸದೇ ಇರುವವನ ಜೀವನವು ಅಂತ್ಯವಾಗಲು ನೀವು ರೋದಿಸಿ ಏನು ತಾನೇ ಮಾಡಬಲ್ಲಿರಿ?""

12149079 ಭೀಷ್ಮ ಉವಾಚ |
12149079a ಇತ್ಯುಕ್ತಾಸ್ತಂ ಸುತಂ ತ್ಯಕ್ತ್ವಾ ಭೂಮೌ ಶೋಕಪರಿಪ್ಲುತಾಃ|
12149079c ದಹ್ಯಮಾನಾಃ ಸುತಸ್ನೇಹಾತ್ ಪ್ರಯಯುರ್ಬಾಂಧವಾ ಗೃಹಾನ್||

ಭೀಷ್ಮನು ಹೇಳಿದನು: "ಹದ್ದು ಹೀಗೆ ಹೇಳಲು ಶೋಕದಲ್ಲಿ ಮುಳುಗಿಹೋಗಿದ್ದ ಬಂಧುಗಳು ತಮ್ಮ ಪುತ್ರನನ್ನು ನೆಲದ ಮೇಲೆ ಮಲಗಿಸಿ ಅವನ ಮೇಲಿನ ಸ್ನೇಹದಿಂದ ಸುಡುತ್ತಾ ತಮ್ಮ ಮನೆಗಳ ಕಡೆ ಹೊರಟರು.

12149080 ಜಂಬುಕ ಉವಾಚ |
12149080a ದಾರುಣೋ ಮರ್ತ್ಯಲೋಕೋಽಯಂ ಸರ್ವಪ್ರಾಣಿವಿನಾಶನಃ|
12149080c ಇಷ್ಟಬಂಧುವಿಯೋಗಶ್ಚ ತಥೈವಾಲ್ಪಂ ಚ ಜೀವಿತಮ್||

ನರಿಯು ಹೇಳಿತು: "ಈ ಮರ್ತ್ಯಲೋಕವು ಅತ್ಯಂತ ದಾರುಣವಾದುದು. ಇಲ್ಲಿ ಸಮಸ್ತ ಪ್ರಾಣಿಗಳ ನಾಶವೇ ನಡೆಯುತ್ತದೆ. ಪ್ರಿಯ ಬಂಧುಜನರಿಗೆ ವಿಯೋಗದ ಕಷ್ಟವೂ ಪ್ರಾಪ್ತವಾಗುತ್ತದೆ. ಇಲ್ಲಿಯ ಜೀವನವು ಅತಿ ಅಲ್ಪವಾದುದು.

12149081a ಬಹ್ವಲೀಕಮಸತ್ಯಂ ಚ ಪ್ರತಿವಾದಾಪ್ರಿಯಂವದಮ್|
12149081c ಇಮಂ ಪ್ರೇಕ್ಷ್ಯ ಪುನರ್ಭಾವಂ ದುಃಖಶೋಕಾಭಿವರ್ಧನಮ್||
12149082a ನ ಮೇ ಮಾನುಷಲೋಕೋಽಯಂ ಮುಹೂರ್ತಮಪಿ ರೋಚತೇ|

ಈ ಲೋಕದಲ್ಲಿ ಎಲ್ಲವೂ ಅಸತ್ಯ ಮತ್ತು ಅತ್ಯಂತ ಕಹಿಯಾದುದು. - ವಿರುದ್ಧವಾಗಿ ಮಾತನಾಡುವವರು ಬಹಳಷ್ಟು ಇದ್ದಾರೆ. ಆದರೆ ಪ್ರಿಯವಾಗಿ ಮಾತನಾಡುವವರು ಬಹಳ ವಿರಳ. ಇಲ್ಲಿಯ ಭಾವವು ಶೋಕ ಮತ್ತು ದುಃಖಗಳನ್ನು ಹೆಚ್ಚಿಸುವಂತಹುದು. ಇದನ್ನು ನೋಡಿ ನನಗೆ ಈ ಮನುಷ್ಯಲೋಕವು ಒಂದು ಮುಹೂರ್ತಕಾಲವೂ ಇಷ್ಟವಾಗುವುದಿಲ್ಲ.

12149082c ಅಹೋ ಧಿಗ್ಗೃಧ್ರವಾಕ್ಯೇನ ಸಂನಿವರ್ತಥ ಮಾನುಷಾಃ||
12149083a ಪ್ರದೀಪ್ತಾಃ ಪುತ್ರಶೋಕೇನ ಯಥ್ಯೈವಾಬುದ್ಧಯಸ್ತಥಾ|
12149083c ಕಥಂ ಗಚ್ಚಥ ಸಸ್ನೇಹಾಃ ಸುತಸ್ನೇಹಂ ವಿಸೃಜ್ಯ ಚ|
12149083E ಶ್ರುತ್ವಾ ಗೃಧ್ರಸ್ಯ ವಚನಂ ಪಾಪಸ್ಯೇಹಾಕೃತಾತ್ಮನಃ||

ಅಯ್ಯೋ! ಮನುಷ್ಯರಿಗೆ ಧಿಕ್ಕಾರ! ಪಾಪಿಯೂ, ಅಕೃತಾತ್ಮನೂ ಆದ ಈ ಹದ್ದಿನ ಮಾತನ್ನು ಕೇಳಿ ಪುತ್ರಶೋಕದಿಂದ ಪೀಡಿತರಾದ ನೀವು ಬುದ್ಧಿಯಿಲ್ಲದವರಂತೆ ಹೊರಟುಹೋಗುತ್ತಿದ್ದೀರಿ! ಸುತಸ್ನೇಹವನ್ನು ಬಿಟ್ಟು ಸ್ನೇಹವುಳ್ಳವರಾದ ನೀವು ಎಲ್ಲಿಗೆ ಹೋಗುತ್ತಿದ್ದೀರಿ?

12149084a ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್|
12149084c ಸುಖದುಃಖಾನ್ವಿತೇ ಲೋಕೇ ನೇಹಾಸ್ತ್ಯೇಕಮನಂತಕಮ್||

ಸುಖದ ನಂತರ ದುಃಖವೂ ದುಃಖದ ನಂತರ ಸುಖವೂ ಬರುತ್ತಿರುತ್ತದೆ. ಸುಖ ಮತ್ತು ದುಃಖಗಳು ನಿರಂತರವಾಗಿ ನಡೆಯುತ್ತಿರುವ ಈ ಲೋಕದಲ್ಲಿ ಸುಖ ಅಥವಾ ದುಃಖವು ಒಂದೇ ಇರುವುದಿಲ್ಲ.

12149085a ಇಮಂ ಕ್ಷಿತಿತಲೇ ನ್ಯಸ್ಯ ಬಾಲಂ ರೂಪಸಮನ್ವಿತಮ್|

12149085c ಕುಲಶೋಕಾಕರಂ[726] ಮೂಢಾಃ ಪುತ್ರಂ ತ್ಯಕ್ತ್ವಾ ಕ್ವ ಯಾಸ್ಯಥ||
12149086a ರೂಪಯೌವನಸಂಪನ್ನಂ ದ್ಯೋತಮಾನಮಿವ ಶ್ರಿಯಾ|

ಈ ರೂಪಸಮನ್ವಿತ ಬಾಲಕನು ನಿಮ್ಮ ಕುಲದ ಶೋಭೆಯನ್ನು
ಹೆಚ್ಚಿಸುವವನು. ರೂಪಯೌವನ ಸಂಪನ್ನನು. ಅಗ್ನಿಯ ಕಾಂತಿಯಿಂದ
ಹೊಳೆಯುತ್ತಿರುವನು. ಮೂಢರೇ! ಈ ಬಾಲಕನನ್ನು ನೆಲದ ಮೇಲೆ
ಇರಿಸಿ ನೀವು ಎಲ್ಲಿಗೆ ಹೋಗುತ್ತಿದ್ದೀರಿ?

12149086c ಜೀವಂತಮೇನಂ ಪಶ್ಯಾಮಿ ಮನಸಾ ನಾತ್ರ ಸಂಶಯಃ||
12149087a ವಿನಾಶಶ್ಚಾಪ್ಯನಹೋ ಽಸ್ಯ ಸುಖಿಂ ಪ್ರಾಪ್ಸ್ಯಥ ಮಾನುಷಾಃ|

ಮನುಷ್ಯರೇ! ನಾನು ನನ್ನ ಮನಸ್ಸಿನಲ್ಲಿ ಇವನು
ಜೀವಂತನಾಗಿರುವನೆಂದೇ ಕಾಣುತ್ತಿದ್ದೇನೆ. ಇದರಲ್ಲಿ ಸಂಶಯವಿಲ್ಲ.
ಇವನ ನಾಶವಾಗಿಲ್ಲ. ನಿಮಗೆ ಅವಶ್ಯವಾಗಿಯೂ ಸುಖವುಂಟಾಗುತ್ತದೆ.

12149087c ಪುತ್ರಶೋಕಾಗ್ನಿದಗ್ಧಾನಾಂ ಮೃತಮಪ್ಯದ್ಯ ವಃ ಕ್ಷಮಮ್||
12149088a ದುಃಖಸಂಭಾವನಾಂ[727] ಕೃತ್ವಾ ಧಾರಯಿತ್ವಾ ಸ್ವಯಂ ಸುಖಿಮ್|
12149088c ತ್ಯಕ್ತ್ವಾ ಗಮಿಷ್ಯಥ ಕ್ವಾದ್ಯ ಸಮುತ್ಸೃಜ್ಯಾಲ್ಪಬುದ್ಧಿವತ್||

ಪುತ್ರಶೋಕಾಗ್ನಿಯಲ್ಲಿ ಬೆಂದು ಸ್ವಯಂ ನೀವೂ ಮೃತರಾದವರಂತೆ
ಆಗಿಬಿಟ್ಟಿದ್ದೀರಿ. ಆದುದರಿಂದ ಈ ರೀತಿ ನೀವು ಹಿಂದಿರುಗಿ
ಹೋಗುವುದು ಉಚಿತವಲ್ಲ. ಇವನಿಗೆ ದುಃಖವನ್ನಿತ್ತು ಸ್ವಯಂ ನೀವು
ಸುಖವನ್ನು ಪಡೆದುಕೊಂಡು ಇವನನ್ನು ಇಂದು ಇಲ್ಲಿಯೇ ಬಿಟ್ಟು

---

[726] ಕುಲಶೋಭಾಕರಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[727] ಸುಖಿಸಂಭಾವನಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಅಲ್ಪಬುದ್ಧಿಯವರಂತೆ ಎಲ್ಲಿಗೆ ಹೋಗುತ್ತಿದ್ದೀರಿ?””

12149089 ಭೀಷ್ಮ ಉವಾಚ|
12149089a ತಥಾ ಧರ್ಮವಿರೋಧೇನ ಪ್ರಿಯಮಿಥ್ಯಾಭಿಧ್ಯಾಯಿನಾ|
12149089c ಶ್ಮಶಾನವಾಸಿನಾ ನಿತ್ಯಂ ರಾತ್ರಿಂ ಮೃಗಯತಾ ತದಾ||
12149090a ತತೋ ಮಧ್ಯಸ್ಥತಾಂ ನೀತಾ ವಚನೈರಮೃತೋಪಮೈಃ|
12149090c ಜಂಬುಕೇನ ಸ್ವಕಾರ್ಯಾರ್ಥಂ ಬಾಂಧವಾಸ್ತಸ್ಯ ಧಿಷ್ಠಿತಾಃ||

ಭೀಷ್ಮನು ಹೇಳಿದನು: “ಆ ನರಿಯು ಸದಾ ಶ್ಮಶಾನ ಭೂಮಿಯಲ್ಲಿಯೇ ವಾಸಿಸುತ್ತಿತ್ತು ಮತ್ತು ತನ್ನ ಕಾರ್ಯಸಾಧನೆಗೆ ರಾತ್ರಿಯಾಗುವುದನ್ನೇ ಕಾಯುತ್ತಿತ್ತು. ಆದುದರಿಂದ ಅದು ಧರ್ಮವಿರೋಧೀ, ಸುಳ್ಳು ಮತ್ತು ಅಮೃತಸಮಾನ ಮಾತನ್ನಾಡಿ ಆ ಬಾಲಕನ ಬಾಂಧವರನ್ನು ಮಧ್ಯದಲ್ಲಿಯೇ ಹಿಡಿದಿಟ್ಟುಕೊಂಡಿತ್ತು. ಅವರು ಹೊರಟು ಹೋಗುತ್ತಲೂ ಇರಲಿಲ್ಲ ಮತ್ತು ಅಲ್ಲಿಯೇ ನಿಲ್ಲುತ್ತಲೂ ಇರಲಿಲ್ಲ. ಅಂತ್ಯದಲ್ಲಿ ಅವರಿಗೆ ಅಲ್ಲಿಯೇ ನಿಲ್ಲಬೇಕಾಯಿತು.

12149091 ಗೃಧ್ರ ಉವಾಚ|
12149091a ಅಯಂ ಪ್ರೇತಸಮಾಕೀರ್ಣೋ ಯಕ್ಷರಾಕ್ಷಸಸೇವಿತಃ|
12149091c ದಾರುಣಃ ಕಾನನೋದ್ದೇಶಃ ಕೌಶಿಕ್ಯೈರಭಿನಾದಿತಃ||

ಹದ್ದು ಹೇಳಿತು: “ಈ ಪ್ರದೇಶವು ಪ್ರೇತಗಳಿಂದ ತುಂಬಿಕೊಂಡಿದೆ. ಯಕ್ಷ ರಾಕ್ಷಸರು ಇಲ್ಲಿಗೆ ಬರುತ್ತಿರುತ್ತಾರೆ. ಹಲವಾರು ಗೂಬೆಗಳು ಕೂಗಿ ಕರೆಯುತ್ತಿವೆ. ಆದುದರಿಂದ ಈ ಕಾನನ ಪ್ರದೇಶವು ಅತ್ಯಂತ ದಾರುಣವಾಗಿದೆ.

12149092a ಭೀಮಃ ಸುಘೋರಶ್ಚ ತಥಾ ನೀಲಮೇಘಸಮಪ್ರಭಃ|

12149092c ಅಸ್ಮಿನ್ ಶವಂ ಪರಿತ್ಯಜ್ಯ ಪ್ರೇತಕಾರ್ಯಾಣ್ಯುಪಾಸತ||

ಭಯಂಕರವಾದ ಘೋರವಾದ ಮತ್ತು ನೀಲಮೇಘದ ಸಮನಾದ ಕತ್ತಲೆಯು ಕವಿಯುತ್ತಿದೆ. ಈ ಶವವನ್ನು ಇಲ್ಲಿಯೇ ಬಿಟ್ಟು ನೀವು ಪ್ರೇತಕಾರ್ಯಗಳಲ್ಲಿ ತೊಡಗಿರಿ.

12149093a ಭಾನುರ್ಯಾವನ್ನ ಯಾತ್ಯಸ್ತಂ ಯಾವಚ್ಚ ವಿಮಲಾ ದಿಶಃ|
12149093c ತಾವದೇನಂ ಪರಿತ್ಯಜ್ಯ ಪ್ರೇತಕಾರ್ಯಾಣ್ಯುಪಾಸತ||

ಸೂರ್ಯನು ಮುಳುಗುವುದರೊಳಗೆ ಮತ್ತು ದಿಕ್ಕುಗಳು ನಿರ್ಮಲವಾಗಿರುವಾಗಿರುವಾಗಲೇ ಇವನನ್ನು ಇಲ್ಲಿಯೇ ಬಿಟ್ಟು ಪ್ರೇತಕಾರ್ಯಗಳಲ್ಲಿ ತೊಡಗಿರಿ.

12149094a ನದಂತಿ ಪರುಷಂ ಶ್ಯೇನಾಃ ಶಿವಾಃ ಕ್ರೋಶಂತಿ ದಾರುಣಾಃ|
12149094c ಮೃಗೇಂದ್ರಾಃ ಪ್ರತಿನಂದಂತಿ ರವಿರಸ್ತಂ ಚ ಗಚ್ಚತಿ||

ಇಲ್ಲಿ ತೋಳಗಳು ಕ್ರೂರವಾಗಿ ಕೂಗುತ್ತಿವೆ. ನರಿಗಳು ದಾರುಣವಾಗಿ ಕೂಗುತ್ತಿವೆ. ಮೃಗೇಂದ್ರ ಸಿಂಹಗಳು ಗರ್ಜಿಸುತ್ತಿವೆ. ರವಿಯು ಅಸ್ತಂಗತನಾಗುತ್ತಿದ್ದಾನೆ.

12149095a ಚಿತಾಧೂಮೇನ ನೀಲೇನ ಸಂರಜ್ಯಂತೇ ಚ ಪಾದಪಾಃ|
12149095c ಶ್ಮಶಾನೇ ಚ ನಿರಾಹಾರಾಃ ಪ್ರತಿನಂದಂತಿ ದೇಹಿನಃ||

ಚಿತೆಯ ಕಪ್ಪು ಹೊಗೆಗಳಿಂದ ಇಲ್ಲಿರುವ ವೃಕ್ಷಗಳೂ ಅದೇ ಬಣ್ಣವನ್ನು ಹೊಂದಿವೆ. ಶ್ಮಶಾನದಲ್ಲಿರುವ ನಿರಾಹಾರ ಪ್ರಾಣಿಗಳು ಗರ್ಜಿಸುತ್ತಿವೆ.

12149096a ಸರ್ವೇ ವಿಕ್ರಾಂತವೀರ್ಯಾಶ್ಚ[728] ಅಸ್ಮಿನ್ ದೇಶೇ ಸುದಾರುಣಾಃ|
12149096c ಯುಷ್ಮಾನ್ ಪ್ರಧರ್ಷಯಿಷ್ಯಂತಿ ವಿಕೃತಾ ಮಾಂಸಭೋಜನಾಃ||

ಈ ದಾರುಣ ಪ್ರದೇಶದಲ್ಲಿರುವ ಎಲ್ಲ ಪ್ರಾಣಿಗಳೂ ವಿಕ್ರಾಂತವೀರ್ಯವುಳ್ಳವುಗಳಾಗಿವೆ. ಮಾಂಸಾಹಾರಿಗಳಾದ ಈ ವಿಕೃತ ಪ್ರಾಣಿಗಳು ನಿಮ್ಮನ್ನು ಬೆದರಿಸುತ್ತಿವೆ.

12149097a ದೂರಾಚ್ಚಾಯಂ[729] ವನೋದ್ದೇಶೋ ಭಯಮತ್ರ ಭವಿಷ್ಯತಿ|
12149097c ತ್ಯಜ್ಯತಾಂ ಕಾಷ್ಠಭೂತೋಽಯಂ ಮೃಷ್ಯತಾಂ ಚಾಂಬುಕಂ ವಚಃ||

ಈ ವನಪ್ರದೇಶವು ಕ್ರೂರಮೃಗಗಳಿಂದ ತುಂಬಿಕೊಂಡಿದೆ. ಇನ್ನು ಇಲ್ಲಿ ನಿಮಗೆ ಅತ್ಯಂತ ದೊಡ್ಡ ಭಯವನ್ನು ಎದುರಿಸಬೇಕಾಗುತ್ತದೆ. ಈ ಬಾಲಕನಾದರೋ ಈಗ ಕಟ್ಟಿಗೆಯಂತಾಗಿಬಿಟ್ಟಿದ್ದಾನೆ. ಇವನನ್ನು ಬಿಟ್ಟುಬಿಡಿ ಮತ್ತು ನರಿಯ ಮಾತಿನ ಲೋಭಕ್ಕೆ ಸಿಲುಕಿಕೊಳ್ಳಬೇಡಿ.

12149098a ಯದಿ ಜಂಬುಕವಾಕ್ಯಾನಿ ನಿಷ್ಫಲಾನ್ಯನೃತಾನಿ ಚ|
12149098c ಶ್ರೋಷ್ಯಥ ಭ್ರಷ್ಟವಿಜ್ಞಾನಾಸ್ತತಃ ಸರ್ವೇ ವಿನಂಕ್ಷ್ಯಥ||

ಒಂದು ವೇಳೆ ನೀವು ವಿವೇಕಭ್ರಷ್ಟರಾಗಿ ನರಿಯ ಸುಳ್ಳು ಮತ್ತು ನಿಷ್ಫಲ ಮಾತುಗಳನ್ನು ಕೇಳುತ್ತಾ ಇದ್ದರೆ ಎಲ್ಲರೂ ನಾಶವಾಗಿ ಹೋಗುತ್ತೀರಿ.”

12149099 ಜಂಬುಕ ಉವಾಚ|
12149099a ಸ್ಥೀಯತಾಂ ನೇಹ ಭೇತವ್ಯಂ ಯಾವತ್ತಪತಿ ಭಾಸ್ಕರಃ|
12149099c ತಾವದಸ್ಮಿನ್ಸುತಸ್ನೇಹಾದನಿರ್ವೇದೇನ ವರ್ತತ||

---

728 ವಿಕ್ರಾಂತದೇಹಾಶ್ಚ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

729 ಕ್ರೂರಶ್ಚಾಯಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12149100a ಸ್ವೈರಂ ರುದತ ವಿಸ್ರಬ್ಧಾಃ ಸ್ವೈರಂ ಸ್ನೇಹೇನ ಪಶ್ಯತ|
[730]12149100c ಸ್ಥೀಯತಾಂ ಯಾವದಾದಿತ್ಯಃ ಕಿಂ ವಃ ಕ್ರವ್ಯಾದಭಾಷಿತೈಃ||

ನರಿಯು ಹೇಳಿತು: "ನಿಲ್ಲಿ! ಹೆದರಬೇಡಿ! ಎಲ್ಲಿಯವರೆಗೆ ಭಾಸ್ಕರನು ಬೆಳಕನ್ನು ನೀಡುತ್ತಾನೋ ಅಲ್ಲಿಯವರೆಗೆ ನೀವು ಸ್ವಲ್ಪವೂ ಹೆದರಬೇಕಾಗಿಲ್ಲ. ಅಲ್ಲಿಯವರೆಗೆ ಈ ಬಾಲಕನ ಮೇಲಿರುವ ನಿಮ್ಮ ಸ್ನೇಹವನ್ನು ತೋರಿಸಿ ಮಮತಾಪೂರ್ಣರಾಗಿ ನಡೆದುಕೊಳ್ಳಿ. ನಿರ್ಭಯರಾಗಿ ದೀರ್ಘಕಾಲದವರೆಗೆ ಸ್ನೇಹದೃಷ್ಟಿಯಿಂದ ನೋಡಿರಿ ಮತ್ತು ಬೇಕಾದಷ್ಟು ರೋದಿಸಿರಿ. ಆದಿತ್ಯನು ಕಾಣುವವರೆಗೆ ಇಲ್ಲಿಯೇ ನಿಲ್ಲಿ. ಈ ಮಾಂಸಾಹಾರೀ ಹದ್ದಿನ ಮಾತಿನಿಂದೇನಾಗಬೇಕಾಗಿದೆ?

12149101a ಯದಿ ಗೃಧ್ರಸ್ಯ ವಾಕ್ಯಾನಿ ತೀವ್ರಾಣಿ ರಭಸಾನಿ ಚ|
12149101c ಗೃಹ್ಣೀತ ಮೋಹಿತಾತ್ಮಾನಃ ಸುತೋ ವೋ ನ ಭವಿಷ್ಯತಿ||

ಒಂದು ವೇಳೆ ನೀವು ಈ ಹದ್ದಿನ ತೀವ್ರವೂ ರಭಸವೂ ಆದ ಮಾತುಗಳನ್ನು ಸ್ವೀಕರಿಸಿ ಮೋಹಿತಾತ್ಮರಾದರೆ ನಿಮ್ಮ ಈ ಸುತನಿಗೆ ಭವಿಷ್ಯವೇ ಇಲ್ಲದಂತಾಗುತ್ತದೆ.""

12149102 ಭೀಷ್ಮ ಉವಾಚ|
12149102a ಗೃಧ್ರೋಽನಸ್ತಮಿತೇ ತ್ವಾಹ ಗತೇಽಸ್ತಮಿತಿ ಜಂಬುಕಃ|
12149102c ಮೃತಸ್ಯ ತಂ ಪರಿಜನಮೂಚತುಸ್ತೌ ಕ್ಷುಧಾನ್ವಿತೌ||

---

730 ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ದಾರುಣೇಽಸ್ಮಿನ್ವನೋದ್ದೇಶೇ ಭಯಂ ವೋ ನ ಭವಿಷ್ಯತಿ| ಅಯಂ ಸೌಮ್ಯೋ ವನೋದ್ದೇಶೇ ಪಿತೄಣಾಂ ನಿಧನಾಕರಃ||

ಭೀಷ್ಮನು ಹೇಳಿದನು: "ಆ ಹದ್ದು ಮತ್ತು ನರಿಗಳು ಹಸಿದಿದ್ದವು ಮತ್ತು ತಮ್ಮ ಉದ್ದೇಶ ಸಾಧನೆಗಾಗಿ ಮೃತಕನ ಬಂಧುಗಳೊಂದಿಗೆ ಹೀಗೆ ಮಾತನಾಡುತ್ತಿದ್ದವು. ಹದ್ದು ಸೂರ್ಯಾಸ್ತವಾಗಿ ಹೋಯಿತು ಎಂದು ಹೇಳುತ್ತಿತ್ತು ಮತ್ತು ನರಿಯು ಇನ್ನೂ ಸೂರ್ಯಾಸ್ತವಾಗಿಲ್ಲ ಎಂದು ಹೇಳುತ್ತಿತ್ತು.

12149103a ಸ್ವಕಾರ್ಯದಕ್ಷಿಣೌ ರಾಜನ್ ಗೃಧ್ರೋ ಜಂಬುಕ ಏವ ಚ|
12149103c ಕ್ಷುತ್ಪಿಪಾಸಾಪರಿಶ್ರಾಂತೌ ಶಾಸ್ತ್ರಮಾಲಂಬ್ಯ ಜಲ್ಪತಃ||

ರಾಜನ್! ಹದ್ದು ಮತ್ತು ನರಿ ತಮ್ಮ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವುದರಲ್ಲಿ ಕಂಕಣಬದ್ಧರಾಗಿದ್ದರು. ಅವರಿಬ್ಬರನ್ನೂ ಹಸಿವು ಬಾಯಾರಿಕೆಗಳು ಕಾಡುತ್ತಿದ್ದವು ಮತ್ತು ಇಬ್ಬರೂ ಶಾಸ್ತ್ರಗಳನ್ನು ಆಧರಿಸಿ ಮಾತನಾಡುತ್ತಿದ್ದವು.

12149104a ತಯೋರ್ವಿಜ್ಞಾನವಿದುಷೋರ್ವ್ಯಯೋರ್ಜಂಬುಕಪತ್ರಿಣೋಃ[731]|
12149104c ವಾಕ್ಯೈರಮೃತಕಲ್ಪೈರ್ಹಿ ಪ್ರಾತಿಷ್ಠಂತ ವ್ರಜಂತಿ ಚ||

ಅವುಗಳಲ್ಲಿ ಒಂದು ನರಿಯಾಗಿತ್ತು ಮತ್ತು ಇನ್ನೊಂದು ಪಕ್ಷಿಯಾಗಿತ್ತು. ಅವೆರಡೂ ಜ್ಞಾನದ ಮಾತುಗಳನ್ನು ತಿಳಿದಿದ್ದವು. ಆ ಇಬ್ಬರ ಅಮೃತರೂಪೀ ಮಾತುಗಳಿಂದ ಪ್ರಭಾವಿತರಾಗಿ ಆ ಮೃತಕನ ಮನುಷ್ಯ ಬಾಂಧವರು ಒಮ್ಮೆ ಅಲ್ಲಿಯೇ ನಿಲ್ಲುತ್ತಿದ್ದರು ಮತ್ತು ಕೆಲವೊಮ್ಮೆ ಹಿಂದಿರುಗಿ ಹೋಗುತ್ತಿದ್ದರು.

12149105a ಶೋಕದೈನ್ಯಸಮಾವಿಷ್ಟಾ ರುದಂತಸ್ತಸ್ಥಿರೇ ತದಾ|

---

731 ಮೃಗಪತತ್ರಿಣೋಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12149105c ಸ್ವಕಾರ್ಯಕುಶಲಾಭ್ಯಾಂ ತೇ ಸಂಭ್ರಾಮ್ಯಂತೇ ಹ ನೈಪುಣಾತ್॥

ಶೋಕ ಮತ್ತು ದೈನ್ಯತೆಯಿಂದ ಆವಿಷ್ಟರಾಗಿ ಅವರು ರೋದಿಸುತ್ತಾ ಅಲ್ಲಿಯೇ ನಿಂತುಕೊಂಡರು. ತಮ್ಮ ತಮ್ಮ ಕಾರ್ಯಸಿದ್ಧಿಯನ್ನು ಮಾಡಿಕೊಳ್ಳುವುದರಲ್ಲಿ ಕುಶಲರಾಗಿದ್ದ ಹದ್ದು ಮತ್ತು ನರಿಗಳು ನಿಪುಣತೆಯಿಂದ ಅವರನ್ನು ಚಕ್ರದಂತೆ ತಿರುಗಿಸುತ್ತಿದ್ದರು.

12149106a ತಥಾ ತಯೋರ್ವಿವದತೋರ್ವಿಜ್ಞಾನವಿದುಷೋರ್ದ್ವಯೋಃ|
12149106c ಬಾಂಧವಾನಾಂ ಸ್ಥಿತಾನಾಂ ಚ ಉಪಾತಿಷ್ಠತ ಶಂಕರಃ॥
12149107a ತತಸ್ತಾನಾಹ ಮನುಜಾನ್ವರದೋಽಸ್ಮೀತಿ ಶೂಲಭೃತ್|

ಜ್ಞಾನ-ವಿಜ್ಞಾನದ ವಿಷಯಗಳನ್ನು ತಿಳಿದಿದ್ದ ಆ ಎರಡೂ ಜಂತುಗಳ ನಡುವೆ ಈ ರೀತಿ ವಾದ-ವಿವಾದವು ನಡೆಯುತ್ತಿದ್ದಾಗ ಮೃತಕನ ಬಾಂಧವರು ಅಲ್ಲಿಯೇ ನಿಂತಿದ್ದರು. ಇಷ್ಟರಲ್ಲಿಯೇ ದೇವಿಯಿಂದ ಪ್ರೇರಿತನಾದ ದೇವ ಶಂಕರನು ಅವರ ಎದಿರು ಪ್ರಕಟನಾದನು. ಅವನ ಕಣ್ಣುಗಳು ಕರುಣಾರಸದಿಂದ ಒದ್ದೆಯಾಗಿತ್ತು. ವರದಾಯಕ ಶಂಕರನು ಆ ಮನುಷ್ಯರಿಗೆ "ನಿಮಗೆ ವರವನ್ನು ನೀಡುತ್ತೇನೆ" ಎಂದು ಹೇಳಿದನು.

12149107c ತೇ ಪ್ರತ್ಯೂಚುರಿದಂ ವಾಕ್ಯಂ ದುಃಖಿತಾಃ ಪ್ರಣತಾಃ ಸ್ಥಿತಾಃ॥
12149108a ಏಕಪುತ್ರವಿಹೀನಾನಾಂ ಸರ್ವೇಷಾಂ ಜೀವಿತಾರ್ಥಿನಾಮ್|
12149108c ಪುತ್ರಸ್ಯ ನೋ ಜೀವದಾನಾಜ್ಜೀವಿತಂ ದಾತುಮರ್ಹಸಿ॥

ಆಗ ಆ ದುಃಖಿತ ಮನುಷ್ಯರು ಭಗವಂತನಿಗೆ ಪ್ರಣಮಿಸಿ ಎದ್ದು ನಿಂತು ಹೀಗೆ ಹೇಳಿದರು: "ಪ್ರಭೋ! ಈ ಒಬ್ಬನೇ ಮಗನಿಂದ ವಿಹೀನರಾಗಿ ನಾವು ಮೃತರಾದಂತೆಯೇ ಆಗಿಬಿಟ್ಟಿದ್ದೇವೆ. ನೀನು ನಮ್ಮ ಈ ಪುತ್ರನನ್ನು ಜೀವಿತಗೊಳಿಸಿ ಜೀವನಾರ್ಥಿಗಳಾದ ನಮ್ಮೆಲ್ಲರಿಗೂ

ಜೀವನದಾನದ ಕೃಪೆ ಮಾಡು.”

12149109a ಏವಮುಕ್ತಃ ಸ ಭಗವಾನ್ವಾರಿಪೂರ್ಣೇನ ಪಾಣಿನಾ[732]।
12149109c ಜೀವಂ ತಸ್ಮೈ ಕುಮಾರಾಯ ಪ್ರಾದಾದ್ವರ್ಷಶತಾಯ ವೈ॥

ನೀರು ತುಂಬಿದ ಕಣ್ಣುಗಳುಳ್ಳ ಅವರು ಭಗವಂತನಿಗೆ ಹೀಗೆ ಹೇಳಲು ಅವನು ಆ ಬಾಲಕನನ್ನು ಜೀವಿತಗೊಳಿಸಿದನು ಮತ್ತು ಅವನಿಗೆ ನೂರು ವರ್ಷಗಳ ಆಯುಷ್ಯವನ್ನು ದಯಪಾಲಿಸಿದನು.

12149110a ತಥಾ ಗೋಮಾಯುಗೃಧ್ರಾಭ್ಯಾಮದದತ್ ಕ್ಷುದ್ವಿನಾಶನಮ್।
12149110c ವರಂ ಪಿನಾಕೀ ಭಗವಾನ್ಸರ್ವಭೂತಹಿತೇ ರತಃ॥

ಇಷ್ಟೇ ಅಲ್ಲದೇ ಸರ್ವಭೂತಹಿತಕಾರೀ ಪಿನಾಕಪಾಣೀ ಭಗವಾನ್ ಶಿವನು ಹದ್ದು ಮತ್ತು ನರಿಗಳಿಗೆ ಅವರ ಹಸಿವೆಯು ನೀಗುವಂತೆ ವರವನ್ನಿತ್ತನು.

12149111a ತತಃ ಪ್ರಣಮ್ಯ ತಂ ದೇವಂ ಶ್ರೇಯೋ[733]ಹರ್ಷಸಮನ್ವಿತಾಃ।
12149111c ಕೃತಕೃತ್ಯಾಃ ಸುಖಿಂ ಹೃಷ್ಟಾಃ ಪ್ರಾತಿಷ್ಠಂತ ತದಾ ವಿಭೋ॥

ವಿಭೋ! ಆಗ ಅವರೆಲ್ಲರೂ ಶ್ರೇಯ-ಹರ್ಷಗಳಿಂದ ಉಲ್ಲಸಿತರಾಗಿ ಕೃತಕೃತ್ಯರಾಗಿ ಮಹಾದೇವನನ್ನು ಪ್ರಣಮಿಸಿದರು ಮತ್ತು ಸುಖ ಹಾಗೂ ಪ್ರಸನ್ನತೆಗಳೊಂದಿಗೆ ಅಲ್ಲಿಂದ ಹೊರಟರು.

12149112a ಅನಿರ್ವೇದೇನ ದೀರ್ಘೇಣ ನಿಶ್ಚಯೇನ ಧ್ರುವೇಣ ಚ।

---

732 ಚಕ್ಷುಷಾ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್). ಇಲ್ಲಿ ಇದೇ ಸರಿಯೆಂದು ತೋರುತ್ತದೆ.

733 ಪ್ರಾಯೋ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).



12149112c ದೇವದೇವಪ್ರಸಾದಾಚ್ಚ ಕ್ಷಿಪ್ರಂ ಫಲಮವಾಪ್ಯತೇ॥

ವೇದನೆಗಳಿಗೊಳಗಾಗದೇ ದೃಢ ಮತ್ತು ಪ್ರಬಲ ನಿಶ್ಚಯದಿಂದ
ಪ್ರಯತ್ನಮಾಡಿದರೆ ದೇವಾಧಿದೇವನ ಪ್ರಸಾದದಿಂದ ಬೇಗನೇ
ಫಲವನ್ನು ಪಡೆದುಕೊಳ್ಳುತ್ತಾರೆ.

12149113a ಪಶ್ಯ ದೇವಸ್ಯ ಸಂಯೋಗಂ ಬಾಂಧವಾನಾಂ ಚ ನಿಶ್ಚಯಮ್।
12149113c ಕೃಪಣಾನಾಂ ಹಿ ರುದತಾಂ ಕೃತಮಶ್ರುಪ್ರಮಾರ್ಜನಮ್॥
12149114a ಪಶ್ಯ ಚಾಲ್ಪೇನ ಕಾಲೇನ ನಿಶ್ಚಯಾನ್ವೇಷಣೇನ ಚ।

ದೈವಸಂಯೋಗ ಮತ್ತು ಆ ಬಂಧು-ಬಾಂಧವರ ದೃಢ ನಿಶ್ಚಯವನ್ನು
ನೋಡು! ಇದರಿಂದಾಗಿ ಸ್ವಲ್ಪವೇ ಸಮಯದಲ್ಲಿ
ದೀನತಾಪೂರ್ವಕವಾಗಿ ರೋದಿಸುತ್ತಿದ್ದ ಆ ಮನುಷ್ಯರ ಕಣ್ಣೀರನ್ನು
ಒರೆಸಲಾಯಿತು. ಇದು ಅವರು ನಿಶ್ಚಯಪೂರ್ವಕವಾಗಿ ಮಾಡಿದ
ಅನುಸಂಧಾನ ಮತ್ತು ಪ್ರಯತ್ನದ ಫಲವು.

12149114c ಪ್ರಸಾದಂ ಶಂಕರಾತ್ಪ್ರಾಪ್ಯ ದುಃಖಿತಾಃ ಸುಖಮಾಪ್ನುವನ್॥
12149115a ತೇ ವಿಸ್ಮಿತಾಃ ಪ್ರಹೃಷ್ಟಾಶ್ಚ ಪುತ್ರಸಂಜೀವನಾತ್ಪುನಃ।

ಶಂಕರನ ಕೃಪೆಯಿಂದಾಗಿ ಆ ದುಃಖಿತ ಜನರು ಸುಖವನ್ನು
ಪಡೆದುಕೊಂಡರು. ಪುತ್ರನು ಪುನರ್ಜೀವಿತನಾದ ಆ ಆಶ್ಚರ್ಯವನ್ನು
ಕಂಡು ಪ್ರಹೃಷ್ಟರೂ ವಿಸ್ಮಿತರೂ ಆದರು.

12149115c ಬಭೂವುರ್ಭರತಶ್ರೇಷ್ಠ ಪ್ರಸಾದಾಚ್ಚಂಕರಸ್ಯ ವೈ॥
12149116a ತತಸ್ತೇ ತ್ವರಿತಾ ರಾಜನ್ ಶ್ರುತ್ವಾ ಶೋಕಮಘೋದ್ಭವಮ್।
12149116c ವಿವಿಶುಃ ಪುತ್ರಮಾದಾಯ ನಗರಂ ಹೃಷ್ಟಮಾನಸಾಃ॥

ಭರತಶ್ರೇಷ್ಠ! ರಾಜನ್! ಶಂಕರನ ಪ್ರಸಾದದಿಂದ ಆ ಎಲ್ಲರೂ ಪುತ್ರಶೋಕವನ್ನು ತ್ಯಜಿಸಿ ಪ್ರಸನ್ನಚಿತ್ತರಾಗಿ ಪುತ್ರನನ್ನು ಜೊತೆಯಲ್ಲಿ ಕರೆದುಕೊಂಡು ತಮ್ಮ ನಗರವನ್ನು ಪ್ರವೇಶಿಸಿದರು.

12149116E ಏಷಾ ಬುದ್ಧಿಃ ಸಮಸ್ತಾನಾಂ ಚಾತುರ್ವರ್ಣ್ಯೇ ನಿದರ್ಶಿತಾ
12149117a ಧರ್ಮಾರ್ಥಮೋಕ್ಷಸಂಯುಕ್ತಮಿತಿಹಾಸಮಿಮಂ ಶುಭಮ್|
12149117c ಶ್ರುತ್ವಾ ಮನುಷ್ಯಃ ಸತತಮಿಹ ಪ್ರೇತ್ಯ ಚ ಮೋದತೇ||

ಚಾತುರ್ವರ್ಣ್ಯದವರೆಲ್ಲರಿಗೂ ಇದು ಬುದ್ಧಿ ಪ್ರದರ್ಶಕವಾಗಿದೆ. ಧರ್ಮ, ಅರ್ಥ ಮತ್ತು ಮೋಕ್ಷಯುಕ್ತವಾದ ಈ ಶುಭ ಇತಿಹಾಸವನ್ನು ಸದಾ ಕೇಳುವುದರಿಂದ ಮನುಷ್ಯನು ಇಹ ಮತ್ತು ಪರಲೋಕಗಳಲ್ಲಿ ಆನಂದವನ್ನು ಅನುಭವಿಸುತ್ತಾನೆ."

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಗೃಧ್ರಗೋಮಾಯುಸಂವಾದೇ ಕುಮಾರಸಂಜೀವನೇ ಏಕೋನಪಂಚಾಶದಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಗೃಧ್ರಗೋಮಾಯುಸಂವಾದೇ ಕುಮಾರಸಂಜೀವನ ಎನ್ನುವ ನೂರಾನಲ್ವತ್ತೊಂಭತ್ತನೇ ಅಧ್ಯಾಯವು.

೧೫೦

ಶಲ್ಮಲಿ-ಪವನ ಸಂವಾದ

ನಾರದನು ಶಾಲ್ಮಲೀ ವೃಕ್ಷವನ್ನು ಪ್ರಶಂಸಿಸಿ ಪ್ರಶ್ನಿಸಿದುದು ಮತ್ತು

ಅದರ ಅಹಂಕಾರವನ್ನು ಕಂಡು ನಿಂದಿಸಿದುದು (1-36).

[734]12150001 ಭೀಷ್ಮ ಉವಾಚ|
12150001a ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್|
12150001c ಸಂವಾದಂ ಭರತಶ್ರೇಷ್ಠ ಶಲ್ಮಲೇಃ ಪವನಸ್ಯ ಚ||

ಭೀಷ್ಮನು ಹೇಳಿದನು: "ಭರತಶ್ರೇಷ್ಠ! ಇದಕ್ಕೆ ಸಂಬಂಧಿಸಿದಂತೆ

---

[734] ಗೀತಾ ಪ್ರೆಸ್ ನಲ್ಲಿ ಈ ಒಂದು ಅಧ್ಯಾಯವನ್ನು ಎರಡು ಅಧ್ಯಾಯಗಳನ್ನಾಗಿ ನೀಡಲಾಗಿದೆ. ೧-೧೯ ಶ್ಲೋಕಗಳು ಒಂದು ಅಧ್ಯಾಯವಾದರೆ ೨೦-೩೬ ಶ್ಲೋಕಗಳು ಇನ್ನೊಂದು ಅಧ್ಯಾಯವಾಗಿದೆ. ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಯುಧಿಷ್ಠಿರನ ಪ್ರಶ್ನೆಯನ್ನೊಡಗೂಡಿದ ಈ ಮೂರು ಅಧಿಕ ಶ್ಲೋಕಗಳಿವೆ: ಯುಧಿಷ್ಠಿರ ಉವಾಚ| ಬಲಿನಃ ಪ್ರತ್ಯಮಿತ್ರಸ್ಯ ನಿತ್ಯಮಾಸನ್ನವರ್ತಿನಃ| ಉಪಕಾರಾಪಕಾರಾಭ್ಯಾಂ ಸಮರ್ಥಸ್ಯೋದ್ಯತಸ್ಯ ಚ|| ಮೋಹಾದ್ವಿಕತ್ಥನಾಮಾತ್ಯೈರಸಾರೋಽಲ್ಪಬಲೋ ಲಘುಃ| ವಾಗ್ಭಿರಪ್ರತಿರೂಪಾಭಿರಭಿದ್ರುಹಾ ಪಿತಾಮಹ|| ಆತ್ಮನೋ ಬಲಮಾಸ್ಥಾಯ ಕಥಂ ವರ್ತೇತ ಮಾನವಃ| ಆಗಚ್ಛತೋಽತಿಕ್ರುದ್ಧಸ್ಯ ತಸ್ಯೋದ್ಧರಣಕಾಮ್ಯಯಾ|| ಅರ್ಥಾತ್ – ಯುಧಿಷ್ಠಿರನು ಹೇಳಿದನು: "ಬಲವಂತ, ನಿತ್ಯ ನಿಕಟವರ್ತಿ, ಉಪಕಾರ ಮತ್ತು ಅಪಕಾರಮಾಡುವುದರಲ್ಲಿ ಸಮರ್ಥ ಹಾಗೂ ನಿತ್ಯವೂ ಉದ್ಯೋಗಶೀಲ ಶತ್ರುವಿನೊಡನೆ ಯಾರಾದರೂ ಅಲ್ಪ ಬಲಶಾಲೀ, ಸಾರವಿಲ್ಲದ ಮತ್ತು ಎಲ್ಲ ವಿಷಯಗಳಲ್ಲಿಯೂ ಸ್ವಲ್ಪವೇ ಸಾಮರ್ಥ್ಯವಿರುವ ಮನುಷ್ಯನು ಮೋಹವಶನಾಗಿ ಜಂಬ ಕೊಚ್ಚಿಕೊಳ್ಳುತ್ತಾ ಅಯೋಗ್ಯ ಮಾತನಾಡಿ ವೈರವನ್ನು ಕಟ್ಟಿಕೊಂಡರೆ ಆ ಬಲವಾನ್ ಶತ್ರುವು ಅತ್ಯಂತ ಕುಪಿತನಾಗಿ ಆ ದುರ್ಬಲ ಮನುಷ್ಯನನ್ನು ಕಿತ್ತೊಗೆಯಲು ಆಕ್ರಮಣಿಸಿದರೆ ಆಗ ಆ ಆಕ್ರಾಂತ ಮನುಷ್ಯನು ತನ್ನದೇ ಬಲದ ಮೇಲೆ ಭರವಸೆಯನ್ನಿಟ್ಟು ಹೇಗೆ ಆ ಆಕ್ರಮಣಕಾರಿಯೊಡನೆ ವರ್ತಿಸಬೇಕು?

ಪುರಾತನ ಇತಿಹಾಸವಾದ ಪವನ ಮತ್ತು ಶಾಲ್ಮಲೀ[735] ವೃಕ್ಷಗಳ ನಡುವಿನ ಸಂವಾದವನ್ನು ಉದಾಹರಿಸುತ್ತಾರೆ.

12150002a ಹಿಮವಂತಂ ಸಮಾಸಾದ್ಯ ಮಹಾನಾಸೀದ್ವನಸ್ಪತಿಃ|
12150002c ವರ್ಷಪೂಗಾಭಿಸಂವೃದ್ಧಃ ಶಾಖಾಸ್ಕಂಧಪಲಾಶವಾನ್‌||

ಹಿಮಾಲಯ ಪರ್ವತದ ಮೇಲೆ ಒಂದು ಅತೀ ದೊಡ್ಡ ವೃಕ್ಷವಿತ್ತು. ಅದು ಅನೇಕ ವರ್ಷಗಳಿಂದ ಬೆಳೆದು ಪ್ರಬಲವಾಗಿತ್ತು. ಅದರ ಬುಡ, ಶಾಖೆಗಳು ಮತ್ತು ಎಲೆಗಳು ಸಮೃದ್ಧವಾಗಿದ್ದವು.

12150003a ತತ್ರ ಸ್ಮ ಮತ್ತಾ ಮಾತಂಗಾ ಧರ್ಮಾರ್ತಾಃ[736]
ಶ್ರಮಕರ್ಶಿತಾಃ|
12150003c ವಿಶ್ರಮಂತಿ ಮಹಾಬಾಹೋ ತಥಾನ್ಯಾ ಮೃಗಜಾತಯಃ‌||

ಮಹಾಬಾಹೋ! ಅದರ ಕೆಳಗೆ ಅನೇಕ ಮದಿಸಿದ ಆನೆಗಳು ಮತ್ತು ಹಾಗೆಯೆ ಅನ್ಯ ಮೃಗಜಾತಿಗಳು ಬಿಸಿಲಿನಿಂದ ಆರ್ತರಾಗಿ ಮತ್ತು ಬಳಲಿಕೆಯಿಂದ ಪೀಡಿತರಾಗಿ ವಿಶ್ರಮಿಸುತ್ತಿದ್ದವು.

12150004a ನಲ್ವಮಾತ್ರಪರೀಣಾಹೋ ಘನಚ್ಛಾಯೋ ವನಸ್ಪತಿಃ|
12150004c ಶುಕಶಾರಿಕಸಂಘುಷ್ಟಃ ಫಲವಾನ್ಪುಷ್ಪವಾನಪಿ‌||

ಆ ವೃಕ್ಷದ ಎತ್ತರವು ನಾಲ್ಕುನೂರು ಮೊಳಗಳಿದ್ದವು. ಅದರ ನೆರಳು ಅತಿ ದೊಡ್ಡದಾಗಿಯೂ ದಟ್ಟವಾಗಿಯೂ ಇತ್ತು. ಅದರ ಮೇಲೆ ಗಿಳಿಗಳು

---

[735] ಬೂರುಗದ ಮರ https://kn.wikipedia.org/s/9s9 .

[736] ಘರ್ಮಾರ್ತಾಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್). ಇಲ್ಲಿ ಇದೇ ಶಬ್ಧವು ಸರಿಯೆಂದು ತೋರುತ್ತದೆ.

ಮತ್ತು ಮೈನಾ ಪಕ್ಷಿಗಳು ಗೂಡುಕಟ್ಟಿದ್ದವು. ಆ ವೃಕ್ಷವು ಫಲ ಮತ್ತು ಹೂವುಗಳಿರಡರಿಂದಲೂ ತುಂಬಿತ್ತು.

12150005a ಸಾರ್ಥಿಕಾ ವಣಿಜಶ್ಚಾಪಿ ತಾಪಸಾಶ್ಚ ವನೌಕಸಃ|
12150005c ವಸಂತಿ ವಾಸಾನ್ಮಾರ್ಗಸ್ಥಾಃ ಸುರಮ್ಯೇ ತರುಸತ್ತಮೇ||

ದಲಗಳೊಂದಿಗೆ ಸಂಚರಿಸುತ್ತಿದ್ದ ವರ್ತಕರು, ವನೌಕಸ ತಾಪಸರೂ ಮತ್ತು ಇತರ ಪ್ರಯಾಣಿಕರೂ ಆ ರಮ್ಯ ವೃಕ್ಷಶ್ರೇಷ್ಠನ ಕೆಳಗೆ ತಂಗುತ್ತಿದ್ದರು.

12150006a ತಸ್ಯಾ ತಾ ವಿಪುಲಾಃ ಶಾಖಾ ದೃಷ್ಟ್ವಾ ಸ್ಕಂಧಾಂಶ್ಚ ಸರ್ವತಃ|
12150006c ಅಭಿಗಮ್ಯಾಬ್ರವೀದೇನಂ ನಾರದೋ ಭರತರ್ಷಭ||

ಭರತರ್ಷಭ! ಎಲ್ಲಕಡೆ ಹರಡಿದ್ದ ಅದರ ಆ ವಿಪುಲ ಶಾಖೆಗಳನ್ನೂ ಮತ್ತು ಬುಡವನ್ನೂ ನೋಡಿ ನಾರದನು ಆಗಮಿಸಿ ಅದಕ್ಕೆ ಇಂತೆಂದನುಃ

12150007a ಅಹೋ ನು ರಮಣೀಯಸ್ತ್ವಮಹೋ ಚಾಸಿ ಮನೋರಮಃ|
12150007c ಪ್ರೀಯಾಮಹೇ ತ್ವಯಾ ನಿತ್ಯಂ ತರುಪ್ರವರ ಶಲ್ಮಲೇ||

“ಅಹೋ ಶಲ್ಮಲೇ! ನೀನು ಅತ್ಯಂತ ರಮಣೀಯನೂ ಮನೋಹರನೂ ಆಗಿರುವೆ. ತರುಪ್ರವರ! ನಿನ್ನಿಂದ ನಮಗೆ ಸದಾ ಪ್ರಸನ್ನತೆಯೇ ಉಂಟಾಗುತ್ತದೆ.

12150008a ಸದ್ಯೈವ ಶಕುನಾಸ್ತಾತ ಮೃಗಾಶ್ಚಾಧಸ್ತಥಾ ಗಜಾಃ|
12150008c ವಸಂತಿ ತವ ಸಂಹೃಷ್ಟಾ ಮನೋಹರತರಾಸ್ತಥಾ||

ಅಯ್ಯಾ! ಮನೋಹರ ವೃಕ್ಷವೇ! ನಿನ್ನ ಶಾಖೆಗಳ ಮೇಲೆ ಸದಾ ಅನೇಕ ಪಕ್ಷಿಗಳು ಮತ್ತು ಕೆಳಗೆ ಅನೇಕಾನೇಕ ಮೃಗಗಳು ಮತ್ತು ಆನೆಗಳು

ಪ್ರಸನ್ನತಾ ಪೂರ್ವಕವಾಗಿ ತಂಗುತ್ತಿರುತ್ತವೆ.

12150009a ತವ ಶಾಖಾ ಮಹಾಶಾಖ ಸ್ಕಂಧಂ ಚ ವಿಪುಲಂ ತಥಾ|
12150009c ನ ವೈ ಪ್ರಭಗ್ನಾನ್ಪಶ್ಯಾಮಿ ಮಾರುತೇನ ಕಥಂ ಚನ||

ಮಹಾಶಾಖಾ! ನಿನ್ನ ಶಾಖೆಗಳನ್ನು ಮತ್ತು ದಪ್ಪನಾದ ಬುಡವನ್ನು ವಾಯುದೇವನು ಎಂದೂ ಮುರಿಯಲಿಲ್ಲ ಎನ್ನುವುದನ್ನು ನೋಡುತ್ತಿದ್ದೇನೆ.

12150010a ಕಿಂ ನು ತೇ ಮಾರುತಸ್ತಾತ ಪ್ರೀತಿಮಾನಥ ವಾ ಸುಹೃತ್|
12150010c ತ್ವಾಂ ರಕ್ಷತಿ ಸದಾ ಯೇನ ವನೇಽಸ್ಮಿನ್ಪವನೋ ಧ್ರುವಮ್||

ಅಯ್ಯಾ! ಈ ವನದಲ್ಲಿ ನಿನ್ನನ್ನು ಪವನನು ನಿಶ್ಚಿತರೂಪದಲ್ಲಿ ರಕ್ಷಿಸುತ್ತಿದ್ದಾನೆಂದರೆ ಮಾರುತನು ನಿನ್ನ ಮೇಲೆ ವಿಶೇಷವಾಗಿ ಪ್ರೀತಿಯನ್ನಿಟ್ಟಿದ್ದಾನೆಯೇ ಅಥವಾ ಅವನು ನಿನ್ನ ಮಿತ್ರನೇ?

12150011a ವಿವಾನ್ ಹಿ.[737] ಪವನಃ ಸ್ಥಾನಾದ್ವೃಕ್ಷಾನುಚ್ಚಾವಚಾನಪಿ|
12150011c ಪರ್ವತಾನಾಂ ಚ ಶಿಖರಾಣ್ಯಾಚಾಲಯತಿ ವೇಗವಾನ್||

ಪವನನು ಎಷ್ಟು ವೇಗಶಾಲಿಯೆಂದರೆ ಚಿಕ್ಕ-ದೊಡ್ಡ ಮರಗಳನ್ನೇನು ಪರ್ವತಗಳ ಶಿಖರಗಳನ್ನು ಕೂಡ ಅವುಗಳ ಸ್ಥಾನಗಳಿಂದ ಅಲ್ಲಾಡಿಸಿಬಿಡುತ್ತಾನೆ.

12150012a ಶೋಷಯತ್ಯೇವ ಪಾತಾಲಂ ವಿವಾನ್ಗಂಧವಹಃ ಶುಚಿಃ|
12150012c ಹ್ರದಾಂಶ್ಚ ಸರಿತಶ್ಚೈವ ಸಾಗರಾಂಶ್ಚ ತಥೈವ ಹ||

[737] ಭಗವಾನ್ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಗಂಧವಾಹೀ ಪವಿತ್ರ ವಾಯುವು ಪಾತಾಲ, ಸರೋವರ, ನದಿಗಳು
ಮತ್ತು ಸಮುದ್ರಗಳನ್ನೂ ಕೂಡ ಒಣಗಿಸಿಬಿಡಬಲ್ಲನು.

12150013a ತ್ವಾಂ ಸಂರಕ್ಷೇತ ಪವನಃ ಸಖಿತ್ವೇನ ನ ಸಂಶಯಃ|
12150013c ತಸ್ಮಾದ್ಬಹಲಶಾಖೋಽಸಿ ಪರ್ಣವಾನ್ಪುಷ್ಪವಾನಪಿ||

ನಿನ್ನ ಮೇಲಿನ ಸಖಿತ್ವದಿಂದ ಪವನನು ನಿನ್ನನ್ನು ರಕ್ಷಿಸುತ್ತಿದ್ದಾನೆ
ಎನ್ನುವುದರಲ್ಲಿ ಸಂಶಯವಿಲ್ಲ. ಆದುದರಿಂದಲೇ ನೀನು ಬಲವತ್ತಾದ
ರೆಂಬೆಗಳಿಂದ ಕೂಡಿದ್ದೀಯೆ ಮತ್ತು ಎಲೆ-ಪುಷ್ಪಗಳಿಂದ
ಸಮೃದ್ಧನಾಗಿದ್ದೀಯೆ.

12150014a ಇದಂ ಚ ರಮಣೀಯಂ ತೇ ಪ್ರತಿಭಾತಿ ವನಸ್ಪತೇ|
12150014c ಯದಿಮೇ ವಿಹಗಾಸ್ತಾತ ರಮಂತೇ ಮುದಿತಾಸ್ತ್ವಯಿ||

ಅಯ್ಯಾ ವನಸ್ಪತೇ! ನೀನು ಅತ್ಯಂತ ರಮಣೀಯನಾಗಿ ಕಾಣುತ್ತಿದ್ದೀಯೆ.
ನಿನ್ನ ಮೇಲೆ ಪಕ್ಷಿಗಳು ಸಂತೋಷದಿಂದ ರಮಿಸುತ್ತಿವೆ.

12150015a ಏಷಾಂ ಪೃಥಕ್ಸಮಸ್ತಾನಾಂ ಶ್ರೂಯತೇ ಮಧುರಃ ಸ್ವರಃ|
12150015c ಪುಷ್ಪಸಂಮೋದನೇ ಕಾಲೇ ವಾಶತಾಂ ಸುಮನೋಹರಮ್||

ವಸಂತ ಋತುವಿನಲ್ಲಿ ಮನೋರಮವಾಗಿ ಕೂಗುವ ಈ ಪಕ್ಷಿಗಳ
ಪ್ರತ್ಯೇಕವಾದ ಮತ್ತು ಒಟ್ಟಾದ ಮಧುರ ಸ್ವರಗಳು ಕೇಳಿಬರುತ್ತವೆ.

12150016a ತಥೇಮೇ ಮುದಿತಾ ನಾಗಾಃ ಸ್ವಯೂಥಕುಲಶೋಭಿನಃ|
12150016c ಘರ್ಮಾರ್ತಾಸ್ತ್ವಾಂ ಸಮಾಸಾದ್ಯ ಸುಖಿಂ ವಿಂದಂತಿ ಶಲ್ಮಲೇ||

ಶಲ್ಮಲೇ! ತಮ್ಮ ಯೂಥಕುಲದಲ್ಲಿ ಸುಶೋಭಿತ ಗಜರಾಜನು
ಘೀಳಿಡುತ್ತಾ ಬಿಸಿಲಿನಿಂದ ಪೀಡಿತನಾಗಿ ನಿನ್ನ ಬಳಿಬಂದು ಸುಖವನ್ನು

ಹೊಂದುತ್ತಾನೆ.

12150017a ತಥೈವ ಮೃಗಜಾತೀಭಿರನ್ಯಾಭಿರುಪಶೋಭಸೇ|
12150017c ತಥಾ ಸಾರ್ಥಾಧಿವಾಸ್ಯೈಶ್ಚ ಶೋಭಸೇ ಮೇರುವದ್ಭುಮ||

ವೃಕ್ಷವೇ! ಹೀಗೆಯೇ ಇತರ ಜಾತಿಗಳ ಪಶುಗಳೂ ಕೂಡ ನಿನ್ನ ಶೋಭೆಯನ್ನು ಹೆಚ್ಚಿಸುತ್ತವೆ. ನೀನು ಎಲ್ಲರ ನಿವಾಸಸ್ಥಾನವಾಗಿರುವ ಕಾರಣದಿಂದ ಮೇರುಪರ್ವತದಂತೆ ಶೋಭಿಸುತ್ತೀಯೆ.

12150018a ಬ್ರಾಹ್ಮಣೈಶ್ಚ ತಪಃಸಿದ್ಧೈಸ್ತಾಪಸೈಃ ಶ್ರಮಣೈರಪಿ|
12150018c ತ್ರಿವಿಷ್ಟಪಸಮಂ ಮನ್ಯೇ ತವಾಯತನಮೇವ ಹ||

ಬ್ರಾಹ್ಮಣರಿಂದಲೂ, ತಪಃಸಿದ್ಧ ತಾಪಸರೂ, ಶ್ರಮಣರೂ[738] ಕೂಡಿರುವ ನಿನ್ನ ಈ ಸ್ಥಾನವು ನನಗೆ ಸ್ವರ್ಗದ ಸಮಾನವಾಗಿ ತೋರುತ್ತಿದೆ.

12150019a ಬಂಧುತ್ವಾದಥ ವಾ ಸಖ್ಯಾಚ್ಚಲ್ಮಲೇ ನಾತ್ರ ಸಂಶಯಃ|
12150019c ಪಾಲಯತ್ಯೇವ ಸತತಂ ಭೀಮಃ ಸರ್ವತ್ರಗೋಽನಿಲಃ||

ಶಲ್ಮಲೇ! ಬಂಧುತ್ವದಿಂದ ಅಥವಾ ಸಖ್ಯದಿಂದ ಸರ್ವತ್ರಗ ಭೀಮ ಅನಿಲನು ಸತತನೂ ನಿನ್ನನ್ನು ಪಾಲಿಸುತ್ತಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ.

12150020a ನ್ಯಗ್ಭಾವಂ ಪರಮಂ ವಾಯೋಃ ಶಲ್ಮಲೇ ತ್ವಮುಪಾಗತಃ|
12150020c ತವಾಹಮಸ್ಮೀತಿ ಸದಾ ಯೇನ ರಕ್ಷತಿ ಮಾರುತಃ||

---

738 ಭಿಕ್ಷುಗಳು, ಯಾಚಕರು, ಧ್ಯಾನಪರ ಯೋಗಿಗಳು.

ಶಲ್ಮಲೇ! ನೀನು ವಾಯುವಿನ ಎದಿರು ಅತ್ಯಂತ ವಿನಮ್ರನಾಗಿ "ನಾನು ನಿನ್ನವನೇ ಆಗಿದ್ದೇನೆ" ಎಂದು ಹೇಳುತ್ತಿರಬಹುದು. ಆದುದರಿಂದಲೇ ಮಾರುತನು ಸದಾ ನಿನ್ನನ್ನು ರಕ್ಷಿಸುತ್ತಿರಬಹುದು.

12150021a ನ ತಂ ಪಶ್ಯಾಮ್ಯಹಂ ವೃಕ್ಷಂ ಪರ್ವತಂ ವಾಪಿ ತಂ ದೃಢಮ್|
12150021c ಯೋ ನ ವಾಯುಬಲಾದ್ಭಗ್ನಃ ಪೃಥಿವ್ಯಾಮಿತಿ ಮೇ ಮತಿಃ||

ವಾಯುವಿನ ಬಲದಿಂದ ಭಗ್ನವಾಗದ ಯಾವ ದೃಢ ವೃಕ್ಷವನ್ನಾಗಲೀ ಪರ್ವತವನ್ನಾಗಲೀ ಈ ಭೂಮಿಯಲ್ಲಿ ನೋಡಿಲ್ಲ ಎಂದು ನನ್ನ ಮತ.

12150022a ತ್ವಂ ಪುನಃ ಕಾರಣೈರ್ನೂನಂ ಶಲ್ಮಲೇ ರಕ್ಷ್ಯಸೇ ಸದಾ|
12150022c ವಾಯುನಾ ಸಪರೀವಾರಸ್ತೇನ ತಿಷ್ಠಸ್ಯಸಂಶಯಮ್||

ಶಲ್ಮಲೇ! ಅವಶ್ಯವಾಗಿಯೂ ಯಾವುದೋ ಕಾರಣದಿಂದ ಪ್ರೇರಿತನಾಗಿ ವಾಯುದೇವನು ನಿಶ್ಚಿತರೂಪದಲ್ಲಿ ಸಪರಿವಾರ ನಿನ್ನ ರಕ್ಷಣೆಯನ್ನು ಮಾಡುತ್ತಿದ್ದಾನೆ. ಇದರಿಂದಲೇ ನೀನು ಹೀಗೆ ನಿಂತಿದ್ದೀಯೆ ಎನ್ನುವುದರಲ್ಲಿ ಸಂದೇಹವೇ ಇಲ್ಲ."

12150023 ಶಲ್ಮಲಿರುವಾಚ|
12150023a ನ ಮೇ ವಾಯುಃ ಸಖಾ ಬ್ರಹ್ಮನ್ನ ಬಂಧುರ್ನ ಚ ಮೇ ಸುಹೃತ್|
12150023c ಪರಮೇಷ್ಠೀ ತಥಾ ನೈವ ಯೇನ ರಕ್ಷತಿ ಮಾನಿಲಃ||

ಶಲ್ಮಲಿಯು ಹೇಳಿತು: "ಬ್ರಹ್ಮನ್! ವಾಯುವು ನನ್ನ ಸಖಿನೂ ಅಲ್ಲ, ಬಂಧುವೂ ಅಲ್ಲ, ಸುಹೃದನೂ ಅಲ್ಲ. ನನ್ನನ್ನು ರಕ್ಷಿಸಲು ಆ ಅನಿಲನು ಪರಮೇಷ್ಠಿ ಬ್ರಹ್ಮನೂ ಅಲ್ಲ.

12150024a ಮಮ ತೇಜೋಬಲಂ ವಾಯೋರ್ಭೀಮಮಪಿ ಹಿ ನಾರದ|
12150024c ಕಲಾಮಷ್ಟಾದಶೀಂ ಪ್ರಾಣೈರ್ನ ಮೇ ಪ್ರಾಪ್ನೋತಿ ಮಾರುತಃ||

ನಾರದ! ನನ್ನ ತೇಜೋಬಲವು ವಾಯುವಿಗಿಂತ ಭಯಂಕರವಾಗಿದೆ. ವಾಯುವು ನನ್ನ ಪ್ರಾಣಶಕ್ತಿಯ ಹದಿನೆಂಟರಲ್ಲಿ ಒಂದು ಅಂಶದಷ್ಟನ್ನೂ ಹೊಂದಿಲ್ಲ.

12150025a ಆಗಚ್ಚನ್ಪರಮೋ[739] ವಾಯುರ್ಮಯಾ ವಿಷ್ಟಂಭಿತೋ ಬಲಾತ್|
12150025c ರುಜನ್ ದ್ರುಮಾನ್ಪರ್ವತಾಂಶ್ಚ ಯಚ್ಚಾನ್ಯದಪಿ ಕಿಂ ಚನ||

ವಾಯುವ ಪರಮ ಬಲದಿಂದ ವೃಕ್ಷ, ಪರ್ವತ ಮತ್ತು ಇತರ ವಸ್ತುಗಳನ್ನು ಮುರಿಯುತ್ತಾ ನನ್ನ ಬಳಿ ಬಂದಾಗ ನಾನು ಬಲದಿಂದ ಅವನ ವೇಗವನ್ನು ತಡೆಯುತ್ತೇನೆ.

12150026a ಸ ಮಯಾ ಬಹುಶೋ ಭಗ್ನಃ ಪ್ರಭಂಜನ್ಪ್ರೈ ಪ್ರಭಂಜನಃ|
12150026c ತಸ್ಮಾನ್ನ ಬಿಭ್ಯೇ ದೇವರ್ಷೇ ಕ್ರುದ್ಧಾದಪಿ ಸಮೀರಣಾತ್||

ದೇವರ್ಷೇ! ಈ ರೀತಿ ನಾನು ಧ್ವಂಸಮಾಡುವ ವಾಯುವಿನ ಗತಿಯನ್ನು ಅನೇಕ ಬಾರಿ ತಡೆದಿದ್ದೇನೆ. ಅದರಿಂದ ಅವನು ಕುಪಿತನಾದರೂ ನನಗೆ ಅವನ ಭಯವಿಲ್ಲ."

12150027 ನಾರದ ಉವಾಚ|
12150027a ಶಲ್ಮಲೇ ವಿಪರೀತಂ ತೇ ದರ್ಶನಂ ನಾತ್ರ ಸಂಶಯಃ|
12150027c ನ ಹಿ ವಾಯೋರ್ಬಲೇನಾಸ್ತಿ ಭೂತಂ ತುಲ್ಯಬಲಂ ಕ್ವ ಚಿತ್||

ನಾರದನು ಹೇಳಿದನು: "ಶಲ್ಮಲೇ! ಈ ವಿಷಯದಲ್ಲಿ ನಿನ್ನ ದೃಷ್ಟಿಯು ವಿಪರೀತವಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಏಕೆಂದರೆ ವಾಯುವಿನ ಬಲದ ಸಮಾನ ಯಾವ ಜೀವಿಯ ಬಲವೂ ಇಲ್ಲ.

---

[739] ಪರುಷೋ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12150028a ಇಂದ್ರೋ ಯಮೋ ವೈಶ್ರವಣೋ ವರುಣಶ್ಚ ಜಲೇಶ್ವರಃ|
12150028c ನ ತೇಽಪಿ ತುಲ್ಯಾ ಮರುತಃ ಕಿಂ ಪುನಸ್ತ್ವಂ ವನಸ್ಪತೇ||

ವನಸ್ಪತೇ! ಇಂದ್ರ, ಯಮ, ವೈಶ್ರವಣ ಕುಬೇರ ಮತ್ತು ಜಲೇಶ್ವರ ವರುಣ ಇವರೂ ಕೂಡ ವಾಯುವಿನ ಸಮಾನ ಬಲಶಾಲಿಗಳಲ್ಲ. ಇನ್ನು ನಿನ್ನಂತಹ ಸಾಧಾರಣ ವೃಕ್ಷವೇನು?

12150029a ಯದ್ಧಿ ಕಿಂ ಚಿದಿಹ ಪ್ರಾಣಿ ಶಲ್ಮಲೇ ಚೇಷ್ಟತೇ ಭುವಿ|
12150029c ಸರ್ವತ್ರ ಭಗವಾನ್ವಾಯುಶ್ಚೇಷ್ಟಾಪ್ರಾಣಕರಃ ಪ್ರಭುಃ||

ಶಲ್ಮಲೇ! ಭುವಿಯಲ್ಲಿ ಯಾವ ಜೀವಿಯೂ ಸ್ವಲ್ಪವಾದರೂ ಚಲಿಸುತ್ತಿದೆ ಎಂದರೆ ಆ ಚಲನಾಶಕ್ತಿ ಮತ್ತು ಜೀವವನ್ನು ನೀಡುವವನು ಸರ್ವತ್ರ ಸಾಮರ್ಥ್ಯಶಾಲೀ ಪ್ರಭು ಭಗವಾನ್ ವಾಯುವೇ ಆಗಿದ್ದಾನೆ.

12150030a ಏಷ ಚೇಷ್ಟಯತೇ ಸಮ್ಯಕ್ ಪ್ರಾಣಿನಃ ಸಮ್ಯಗಾಯತಃ|
12150030c ಅಸಮ್ಯಗಾಯತೋ ಭೂಯಶ್ಚೇಷ್ಟತೇ ವಿಕೃತೋ ನೃಷು||

ಇವನು ಸರಿಯಾಗಿ ಪ್ರಾಣವೇ ಮೊದಲಾದ ರೂಪಗಳಲ್ಲಿ ವಿಸ್ತರಿತನಾದಾಗ ಸಮಸ್ತ ಪ್ರಾಣಿಗಳಲ್ಲಿಯೂ ಚಲನೆಯುಂಟಾಗುತ್ತದೆ ಮತ್ತು ಇವನು ಸರಿಯಾಗಿ ಕೆಲಸಮಾಡದಿದ್ದರೆ ಪ್ರಾಣಿಗಳ ಶರೀರದಲ್ಲಿ ವಿಕೃತಿಯುಂಟಾಗುತ್ತದೆ.

12150031a ಸ ತ್ವಮೇವಂವಿಧಂ ವಾಯುಂ ಸರ್ವಸತ್ತ್ವಭೃತಾಂ ವರಮ್|
12150031c ನ ಪೂಜಯಸಿ ಪೂಜ್ಯಂ ತಂ ಕಿಮನ್ಯದ್ಬುದ್ಧಿಲಾಘವಾತ್||

ಸರ್ವಸತ್ತ್ವಗಳಲ್ಲಿಯೇ ಶ್ರೇಷ್ಠ ಪೂಜ್ಯ ವಾಯುವನ್ನು ಈ ರೀತಿ ನೀನು ಗೌರವಿಸುವುದಿಲ್ಲವೆಂದಾದರೆ ಇದು ನಿನ್ನ ಬುದ್ಧಿಯ ಲಘುತ್ವವಲ್ಲದೇ

ಇನ್ನೇನು?

12150032a ಅಸಾರಶ್ಚಾಸಿ ದುರ್ಬುದ್ಧೇ ಕೇವಲಂ ಬಹು ಭಾಷಸೇ|
12150032c ಕ್ರೋಧಾದಿಭಿರವಚ್ಚನ್ನೋ ಮಿಥ್ಯಾ ವದಸಿ ಶಲ್ಮಲೇ||

ಶಲ್ಮಲೇ! ದುರ್ಬುದ್ಧೇ! ನೀನು ಸಾರಹೀನನು. ಕೇವಲ ಅತಿಯಾಗಿ ಮಾತನಾಡುತ್ತೀಯೆ. ಕ್ರೋಧ ಮೊದಲಾದ ದುರ್ಗುಣಗಳಿಂದ ಪ್ರೇರಿತನಾಗಿ ಸುಳ್ಳು ಹೇಳುತ್ತಿದ್ದೀಯೆ.

12150033a ಮಮ ರೋಷಃ ಸಮುತ್ಪನ್ನಸ್ತ್ವಯ್ಯೇವಂ ಸಂಪ್ರಭಾಷತಿ|
12150033c ಬ್ರವೀಮ್ಯೇಷ ಸ್ವಯಂ ವಾಯೋಸ್ತವ ದುರ್ಭಾಷಿತಂ ಬಹು||

ನೀನು ಈ ರೀತಿ ಮಾತನಾಡುವುದರಿಂದ ನನ್ನ ಮನದಲ್ಲಿ ರೋಷವುಂಟಾಗಿದೆ. ಸ್ವಯಂ ನಾನೇ ವಾಯುವಿಗೆ ನಿನ್ನ ಈ ದುರ್ವಚನಗಳನ್ನು ತಿಳಿಸುತ್ತೇನೆ.

12150034a ಚಂದನೈಃ ಸ್ಪಂದನೈಃ[740] ಶಾಲೈಃ ಸರಲೈರ್ದೇವದಾರುಭಿಃ|
12150034c ವೇತಸೈರ್ಬಂಧನೈಶ್ಚಾಪಿ ಯೇ ಚಾನ್ಯೇ ಬಲವತ್ತರಾಃ||
12150035a ತೈಶ್ಚಾಪಿ ನೈವಂ ದುರ್ಬುದ್ಧೇ ಕ್ಷಿಪ್ತೋ ವಾಯುಃ ಕೃತಾತ್ಮಭಿಃ|
12150035c ತೇ ಹಿ ಜಾನಂತಿ ವಾಯೋಶ್ಚ ಬಲಮಾತ್ಮನ ಏವ ಚ||
12150036a ತಸ್ಮಾತ್ತೇ ವೈ ನಮಸ್ಯಂತಿ ಶ್ವಸನಂ ದ್ರುಮಸತ್ತಮಾಃ|
12150036c ತ್ವಂ ತು ಮೋಹಾನ್ನ ಜಾನೀಷೇ ವಾಯೋರ್ಬಲಮನಂತಕಮ್[741]||

---

[740] ಸ್ಯಂದನೈಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್). ಇಲ್ಲಿ ಈ ಶಬ್ಧವೇ ಸರಿಯಾಗಿ ತೋರುತ್ತದೆ. ಸ್ಯಂದನ ಎಂದರೆ ತಿನಿಷವೃಕ್ಷ ಅಥವಾ ನೆಮ್ಮಿ ಗಿಡ.
[741] ಇದರ ನಂತರ ಗೀತಾ ಪ್ರೆಸ್ ನಲ್ಲಿ ಈ ಒಂದು ಶ್ಲೋಕಾರ್ಧವಿದೆ: ಏವಂ ತಸ್ಮಾದ್ಗಮಿಷ್ಯಾಮಿ ಸಕಾಶಂ ಮಾತರಿಷ್ವನಃ||

ಚಂದನ, ನೆಮ್ಮಿಗಿಡ, ಶಾಲ, ಸರಲ, ದೇವದಾರು, ಬಾಗಿರುವ ಬೆತ್ತ, ಮತ್ತು ಅನ್ಯ ಬಲವತ್ತರ ಕೃತಾತ್ಮ ವೃಕ್ಷಗಳೂ ವಾಯುವನ್ನು ನಿನ್ನಂತೆ ಆಕ್ಷೇಪಿಸುವುದಿಲ್ಲ. ದುರ್ಬುದ್ಧೇ! ಅವರು ವಾಯುವಿನ ಮತ್ತು ತಮ್ಮ ಬಲವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದುದರಿಂದ ಆ ಶ್ರೇಷ್ಠ ವೃಕ್ಷಗಳು ವಾಯುದೇವನ ಎದಿರು ತಲೆಬಾಗುತ್ತಾರೆ. ನೀನಾದರೋ ಮೋಹಪರವಶನಾಗಿ ವಾಯುವಿನ ಅನಂತ ಬಲವನ್ನು ತಿಳಿದುಕೊಂಡಿಲ್ಲ.””

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಪವನಶಾಲ್ಮಲಿಸಂವಾದೇ ಪಂಚಾಶದಧಿಕಶತಮೋಽಧ್ಯಾಯಃ॥
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಪವನಶಾಲ್ಮಲಿಸಂವಾದ ಎನ್ನುವ ನೂರಾಐವತ್ತನೇ ಅಧ್ಯಾಯವು.

೧೫೧

ನಾರದನ ಮಾತುಗಳನ್ನು ಕೇಳಿ ವಾಯುವು ಶಾಲ್ಮಲಿಯನ್ನು ಬೆದರಿಸುವುದು ಮತ್ತು ಶಾಲ್ಮಲಿಯು ಮನಸ್ಸಿನಲ್ಲಿಯೇ ಯೋಚಿಸಿದುದು (1-18). ಶಾಲ್ಮಲಿಯು ಸೋಲನ್ನು ಸ್ವೀಕರಿಸಿದುದು ಮತ್ತು ಬಲಶಾಲಿಯೊಂದಿಗೆ ವೈರವನ್ನು ಕಟ್ಟಿಕೊಳ್ಳಬಾರದೆಂಬ ಉಪದೇಶ (19-34).

[742]12151001 ಭೀಷ್ಮ ಉವಾಚ|

[742] ಗೀತಾ ಪ್ರೆಸ್ ನಲ್ಲಿ ಈ ಅಧ್ಯಾಯವೂ ಕೂಡ ಎರಡು ಅಧ್ಯಾಯಗಳನ್ನಾಗಿ

12151001a ಏವಮುಕ್ತ್ವಾ ತು ರಾಜೇಂದ್ರ ಶಲ್ಮಲಿಂ ಬ್ರಹ್ಮವಿತ್ತಮಃ|
12151001c ನಾರದಃ ಪವನೇ ಸರ್ವಂ ಶಲ್ಮಲೇರ್ವಾಕ್ಯಮಬ್ರವೀತ್||

ಭೀಷ್ಮನು ಹೇಳಿದನು: "ರಾಜೇಂದ್ರ! ಶಾಲ್ಮಲಿಗೆ ಹೀಗೆ ಹೇಳಿ ಬ್ರಹ್ಮವಿತ್ತಮ ನಾರದನು ಪವನನಿಗೆ ಶಾಲ್ಮಲಿಯ ಮಾತುಗಳೆಲ್ಲವನ್ನೂ ಹೇಳಿದನು.

12151002a ಹಿಮವತ್ಪೃಷ್ಠಜಃ ಕಶ್ಚಿಚ್ಚಲ್ಮಲಿಃ ಪರಿವಾರವಾನ್|
12151002c ಬೃಹನ್ಮೂಲೋ ಬೃಹಚ್ಚಾಖಃ ಸ ತ್ವಾಂ ವಾಯೋಽವಮನ್ಯತೇ||

"ವಾಯೋ! ಹಿಮಾಲಯದ ಪೃಷ್ಠಭಾಗದಲ್ಲಿ ಅತಿದೊಡ್ಡ ಪರಿವಾರಯುಕ್ತವಾದ ಒಂದು ಶಾಲ್ಮಲೀ ವೃಕ್ಷವಿದೆ. ದೊಡ್ಡ ಬುಡವಿರುವ ಮತ್ತು ವಿಶಾಲ ಶಾಖೆಗಳಿರುವ ಆ ವೃಕ್ಷವು ನಿನ್ನನ್ನು ಅಪಮಾನಿಸುತ್ತಿದೆ.

12151003a ಬಹೂನ್ಯಾಕ್ಷೇಪಯುಕ್ತಾನಿ ತ್ವಾಮಾಹ ವಚನಾನಿ ಸಃ|
12151003c ನ ಯುಕ್ತಾನಿ ಮಯಾ ವಾಯೋ ತಾನಿ ವಕ್ತುಂ ತ್ವಯಿ ಪ್ರಭೋ||

ಪ್ರಭೋ! ವಾಯೋ! ಅವನು ನಿನ್ನ ವಿಷಯದಲ್ಲಿ ಅನೇಕ ಆಕ್ಷೇಪಯುಕ್ತ ಮಾತುಗಳನ್ನಾಡಿದ್ದಾನೆ. ಅವುಗಳನ್ನು ನಿನ್ನ ಎದಿರು ಹೇಳುವುದು ಉಚಿತವಲ್ಲ.

12151004a ಜಾನಾಮಿ ತ್ವಾಮಹಂ ವಾಯೋ ಸರ್ವಪ್ರಾಣಭೃತಾಂ ವರಮ್|
12151004c ವರಿಷ್ಠಂ ಚ ಗರಿಷ್ಠಂ ಚ ಕ್ರೋಧೇ ವೈವಸ್ವತಂ ಯಥಾ||

ಕೊಡಲಾಗಿದೆ. ಶ್ಲೋಕ ೧-೧೮ ಒಂದು ಅಧ್ಯಾಯ ಮತ್ತು ೧೯-೩೪ ಇನ್ನೊಂದು ಅಧ್ಯಾಯ.

ವಾಯೋ! ನಾನು ನಿನ್ನನ್ನು ಅರಿತಿದ್ದೇನೆ. ನೀನು ಸಮಸ್ತ ಪ್ರಾಣಭೃತರಲ್ಲಿ ಶ್ರೇಷ್ಠನು. ವರಿಷ್ಠನು ಮತ್ತು ಗರಿಷ್ಠನು. ಕ್ರೋಧದಲ್ಲಿ ನೀನು ವೈವಸ್ವತನ ಸಮನಾಗಿದ್ದೀಯೆ.”

12151005a ಏವಂ ತು ವಚನಂ ಶ್ರುತ್ವಾ ನಾರದಸ್ಯ ಸಮೀರಣಃ|
12151005c ಶಲ್ಮಲಿಂ ತಮುಪಾಗಮ್ಯ ಕ್ರುದ್ಧೋ ವಚನಮಬ್ರವೀತ್||

ನಾರದನ ಈ ಮಾತನ್ನು ಕೇಳಿ ಸಮೀರಣನು ಕ್ರುದ್ಧನಾಗಿ ಶಾಲ್ಮಲೀ ವೃಕ್ಷದ ಬಳಿಬಂದು ಈ ಮಾತನ್ನಾಡಿದನುಃ

12151006a ಶಲ್ಮಲೇ ನಾರದೇ ಯತ್ತತ್ತ್ವಯೋಕ್ತಂ ಮದ್ವಿಗರ್ಹಣಮ್|
12151006c ಅಹಂ ವಾಯುಃ ಪ್ರಭಾವಂ ತೇ ದರ್ಶಯಾಮ್ಯಾತ್ಮನೋ ಬಲಮ್||

“ಶಾಲ್ಮಲೀ! ನೀನು ನಾರದನ ಎದಿರು ನನ್ನ ನಿಂದನೆಯನ್ನು ಮಾಡಿದ್ದೀಯೆ. ನಾನು ವಾಯು. ನಿನಗೆ ನನ್ನ ಬಲ ಮತ್ತು ಪ್ರಭಾವಗಳನ್ನು ತೋರಿಸುತ್ತೇನೆ.

12151007a ನಾಹಂ ತ್ವಾ ನಾಭಿಜಾನಾಮಿ[743] ವಿದಿತಶ್ಚಾಸಿ ಮೇ ದ್ರುಮ|
12151007c ಪಿತಾಮಹಃ ಪ್ರಜಾಸರ್ಗೇ ತ್ವಯಿ ವಿಶ್ರಾಂತವಾನ್ ಪ್ರಭುಃ||

ವೃಕ್ಷವೇ! ನೀನು ನನಗೆ ಗೊತ್ತಿಲ್ಲವೆಂದೇನಿಲ್ಲ. ನಾನು ನಿನ್ನನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಪಿತಾಮಹನು ಪ್ರಜೆಗಳನ್ನು ಸೃಷ್ಟಿಸುವಾಗ ನಿನ್ನ ನೆರಳಿನಲ್ಲಿ ವಿಶ್ರಾಂತಿಯನ್ನು ಪಡೆದಿದ್ದನು.

12151008a ತಸ್ಯ ವಿಶ್ರಮಣಾದೇವ ಪ್ರಸಾದೋ ಯಃ ಕೃತಸ್ತವ|
12151008c ರಕ್ಷ್ಯಸೇ ತೇನ ದುರ್ಬುದ್ಧೇ ನಾತ್ಮವೀರ್ಯಾದ್ದ್ರುಮಾಧಮ||

---

[743] ಅಹಂ ತ್ವಾಮಭಿಜಾನಾಮಿ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ದುರ್ಬುದ್ಧೇ! ವೃಕ್ಷಗಳಲ್ಲಿ ಅಧಮ! ಅವನು ನಿನ್ನ ಕೆಳಗೆ
ವಿಶ್ರಾಂತಿಹೊಂದಿದುರಿಂದಲೇ ನಾನು ನಿನ್ನ ಮೇಲೆ ಕೃಪೆಯನ್ನು
ತೋರಿಸಿದ್ದೆ ಮತ್ತು ಇದೇ ನಿನ್ನ ರಕ್ಷೆಯಾಗಿತ್ತು. ನೀನು ನಿನ್ನ
ವೀರ್ಯದಿಂದ ರಕ್ಷಿಸಲ್ಪಟ್ಟಿಲ್ಲ.

12151009a ಯನ್ಮಾ ತ್ವಮವಜಾನೀಷೇ ಯಥಾನ್ಯಂ ಪ್ರಾಕೃತಂ ತಥಾ|
12151009c ದರ್ಶಯಾಮ್ಯೇಷ ಆತ್ಮಾನಂ ಯಥಾ ಮಾಮವಭೋತ್ಸ್ಯಸೇ[744]||

ಅನ್ಯ ಸಾಮಾನ್ಯರಂತೆ ನೀನು ನನ್ನನ್ನು
ಅಪಮಾನಿಸಿರುವೆಯಾದುದರಿಂದ ನಾನು ನಿನಗೆ ನನ್ನ ಆ ರೂಪವನ್ನು
ತೋರಿಸುತ್ತೇನೆ ಯಾವುದರಿಂದ ನೀನು ನನ್ನನ್ನು ಪುನಃ
ಅಪಮಾನಿಸುವುದಿಲ್ಲ.”

12151010a ಏವಮುಕ್ತಸ್ತತಃ ಪ್ರಾಹ ಶಲ್ಮಲಿಃ ಪ್ರಹಸನ್ನಿವ|
12151010c ಪವನ ತ್ವಂ ವನೇ ಕ್ರುದ್ಧೋ ದರ್ಶಯಾತ್ಮಾನಮಾತ್ಮನಾ||

ಪವನನ ಆ ಮಾತನ್ನು ಕೇಳಿ ಶಾಲ್ಮಲಿಯು ನಗುತ್ತಾ ಹೇಳಿತು: “ಪವನ!
ಕ್ರುದ್ಧನಾಗಿ ಸ್ವಯಂ ನೀನು ನಿನ್ನ ಎಲ್ಲ ಶಕ್ತಿಯನ್ನೂ ತೋರಿಸು!

12151011a ಮಯಿ ವೈ ತ್ಯಜ್ಯತಾಂ ಕ್ರೋಧಃ ಕಿಂ ಮೇ ಕ್ರುದ್ಧಃ ಕರಿಷ್ಯಸಿ|
12151011c ನ ತೇ ಬಿಭೇಮಿ ಪವನ ಯದ್ಯಪಿ ತ್ವಂ ಸ್ವಯಂಪ್ರಭುಃ[745]||

---

[744] ಯಥಾ ಮಾಂ ನಾವಮನ್ಯಸೇ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[745] ಗೀತಾ ಪ್ರೆಸ್ ನಲ್ಲಿ ಇದರ ನಂತರ ಈ ಅಧಿಕ ಶ್ಲೋಕಗಳಿವೆ:
ಬಲಾಧಿಕೋಽಹಂ ತ್ವತ್ತಶ್ಚ ನ ಭೀಃ ಕಾರ್ಯಾ ಮಯಾ ತವ| ಯೇ ತು ಬುದ್ಧ್ಯಾ ಹಿ ಬಲಿನಸ್ತೇ ಭವಂತಿ ಬಲೀಯಸಃ| ಪ್ರಾಣಮಾತ್ರಬಲಾ ಯೇ ವೈ ನೈವ ತೇ ಬಲಿನೋ ಮತಾಃ||

ಪವನ! ನಿನ್ನ ಕ್ರೋಧವನ್ನು ನನ್ನ ಮೇಲೆ ಸುರಿಸು. ನೀನು ಕ್ರುದ್ಧನಾಗಿ
ನನಗೇನು ಮಾಡಬಲ್ಲೆ? ನೀನು ನನಗಿಂತ ಹೆಚ್ಚು
ಪ್ರಭಾವಶಾಲಿಯಾಗಿದ್ದರೂ ನಾನು ನಿನಗೆ ಹೆದರುವುದಿಲ್ಲ."

12151012a ಇತ್ಯೇವಮುಕ್ತಃ ಪವನಃ ಶ್ವ ಇತ್ಯೇವಾಬ್ರವೀದ್ವಚಃ|
12151012c ದರ್ಶಯಿಷ್ಯಾಮಿ ತೇ ತೇಜಸ್ತತೋ ರಾತ್ರಿರುಪಾಗಮತ್||

ಇದನ್ನು ಕೇಳಿದ ಪವನನು ಹೇಳಿದನು: "ಆಯಿತು! ನಾಳೆ ನಾನು ನಿನಗೆ
ನನ್ನ ಪರಾಕ್ರಮವನ್ನು ತೋರಿಸುತ್ತೇನೆ." ಅಷ್ಟರಲ್ಲಿಯೇ
ರಾತ್ರಿಯಾಯಿತು.

12151013a ಅಥ ನಿಶ್ಚಿತ್ಯ ಮನಸಾ ಶಲ್ಮಲಿರ್ವಾತಕಾರಿತಮ್|
12151013c ಪಶ್ಯಮಾನಸ್ತದಾತ್ಮಾನಮಸಮಂ ಮಾತರಿಶ್ವನಃ||

ಆಗ ಶಾಲ್ಮಲಿಯು ವಾಯುವು ಮಾಡಲಿರುವ ಕೃತ್ಯವನ್ನು ತನ್ನ
ಮನಸ್ಸಿನಲ್ಲಿಯೇ ಯೋಚಿಸಿ ವಾಯುವಿಗೆ ಸಮನಾದ ಬಲಶಾಲಿಯು
ತಾನು ಅಲ್ಲವೆಂದು ತಿಳಿದು ಯೋಚಿಸಿದನು:

12151014a ನಾರದೇ ಯನ್ಮಯಾ ಪ್ರೋಕ್ತಂ ಪವನಂ ಪ್ರತಿ ತನ್ಮೃಷಾ|
12151014c ಅಸಮರ್ಥೋ ಹ್ಯಹಂ ವಾಯೋರ್ಬಲೇನ ಬಲವಾನ್ ಹಿ ಸಃ||

"ನಾನು ನಾರದನ ಮುಂದೆ ಏನೆಲ್ಲ ಹೇಳಿದ್ದೆನೋ ಅವು ಸುಳ್ಳಿನ
ಮಾತಾಗಿದ್ದವು. ನಾನು ವಾಯುವನ್ನು ಎದುರಿಸಲು
ಅಸಮರ್ಥನಾಗಿದ್ದೇನೆ ಏಕೆಂದರೆ ಅವನು ನನಗಿಂತಲೂ ಹೆಚ್ಚಿನ
ಬಲಶಾಲಿಯು.

12151015a ಮಾರುತೋ ಬಲವಾನ್ನಿತ್ಯಂ ಯಥೈನಂ ನಾರದೋಽಬ್ರವೀತ್|

12151015c ಅಹಂ ಹಿ ದುರ್ಬಲೋಽನ್ಯೇಭ್ಯೋ ವೃಕ್ಷೇಭ್ಯೋ ನಾತ್ರ ಸಂಶಯಃ||
12151016a ಕಿಂ ತು ಬುದ್ಧ್ಯಾ ಸಮೋ ನಾಸ್ತಿ ಮಮ ಕಶ್ಚಿದ್ವನಸ್ಪತಿಃ|

ನಾರದನು ಹೇಳಿದಂತೆ ವಾಯುವು ನಿತ್ಯ ಬಲಶಾಲಿಯು. ನಾನಾದರೋ ಇತರ ವೃಕ್ಷಗಳಿಗಿಂತಲೂ ದುರ್ಬಲನು. ಇದರಲ್ಲಿ ಸಂಶಯವಿಲ್ಲ. ಆದರೆ ಬುದ್ಧಿಯಲ್ಲಿ ಬೇರೆ ಯಾವ ವೃಕ್ಷವೂ ನನ್ನ ಸಮನಾಗಿಲ್ಲ.

12151016c ತದಹಂ ಬುದ್ಧಿಮಾಸ್ಥಾಯ ಭಯಂ ಮೋಕ್ಷ್ಯೇ ಸಮೀರಣಾತ್||
12151017a ಯದಿ ತಾಂ ಬುದ್ಧಿಮಾಸ್ಥಾಯ ಚರೇಯುಃ ಪರ್ಣಿನೋ ವನೇ|
12151017c ಅರಿಷ್ಟಾಃ ಸ್ಯುಃ ಸದಾ ಕ್ರುದ್ಧಾತ್ಪವನಾನ್ನಾತ್ರ ಸಂಶಯಃ||

ನಾನು ಬುದ್ಧಿಯನ್ನು ಆಶ್ರಯಿಸಿ ಸಮೀರಣನ ಭಯದಿಂದ ಮುಕ್ತನಾಗುತ್ತೇನೆ. ವನದಲ್ಲಿರುವ ಇತರ ವೃಕ್ಷಗಳೂ ಕೂಡ ತಮ್ಮ ಬುದ್ಧಿಯನ್ನು ಆಶ್ರಯಿಸಿದರೆ ನಿಸ್ಸಂದೇಹವಾಗಿ ಕುಪಿತ ವಾಯುವಿನಿಂದ ಅವರಿಗೆ ಯಾವ ಅನಿಷ್ಟವೂ ಆಗಲಾರದು.

12151018a ತೇಽತ್ರ ಬಾಲಾ ನ ಜಾನಂತಿ ಯಥಾ ನೈನಾನ್ಸಮೀರಣಃ|
12151018c ಸಮೀರಯೇತ ಸಂಕ್ರುದ್ಧೋ ಯಥಾ ಜಾನಾಮ್ಯಹಂ ತಥಾ||

ಆದರೆ ಅವರು ಮೂರ್ಖರು. ವಾಯುವು ಕುಪಿತನಾಗಿ ಹೇಗೆ ಅವರನ್ನು ಸದೆಬಡಿಯುತ್ತಾನೆ ಎನ್ನುವುದನ್ನು ತಿಳಿಯಲಾರರು. ನಾನು ಇವೆಲ್ಲವನ್ನೂ ಚೆನ್ನಾಗಿ ತಿಳಿದುಕೊಂಡಿದ್ದೇನೆ.”

12151019a ತತೋ ನಿಶ್ಚಿತ್ಯ ಮನಸಾ ಶಲ್ಮಲಿಃ ಕ್ಷುಭಿತಸ್ತದಾ|
12151019c ಶಾಖಾಃ ಸ್ಕಂಧಾನ್ ಪ್ರಶಾಖಾಶ್ಚ ಸ್ವಯಮೇವ ವ್ಯಶಾತಯತ್||

ಮನಸ್ಸಿನಲ್ಲಿ ಈ ರೀತಿ ನಿಶ್ಚಯಿಸಿ ಶಾಲ್ಮಲಿಯು ಕ್ಷುಭಿತನಾಗಿ ಸ್ವಯಂ

ತಾನೇ ತನ್ನ ಶಾಖೆಗಳನ್ನೂ, ರೆಂಬೆಗಳನ್ನೂ, ಉಪಶಾಖೆಗಳನ್ನೂ ಕೆಳಗೆ ಬೀಳಿಸಿಬಿಟ್ಟನು.

12151020a ಸ ಪರಿತ್ಯಜ್ಯ ಶಾಖಾಶ್ಚ ಪತ್ರಾಣಿ ಕುಸುಮಾನಿ ಚ|
12151020c ಪ್ರಭಾತೇ ವಾಯುಮಾಯಾಂತಂ ಪ್ರತ್ಯೈಕ್ಷತ ವನಸ್ಪತಿಃ||

ಆ ವೃಕ್ಷವು ರೆಂಬೆಗಳನ್ನೂ, ಎಲೆ-ಕುಸುಮಗಳನ್ನೂ ಬೀಳಿಸಿ ಬೆಳಗಾಗುವಾಗ ವಾಯುವು ಬರುವುದನ್ನು ನಿರೀಕ್ಷಿಸಿದನು.

12151021a ತತಃ ಕ್ರುದ್ಧಃ ಶ್ವಸನ್ವಾಯುಃ ಪಾತಯನ್ವೈ ಮಹಾದ್ರುಮಾನ್|
12151021c ಆಜಗಾಮಾಥ ತಂ ದೇಶಂ ಸ್ಥಿತೋ ಯತ್ರ ಸ ಶಲ್ಮಲಿಃ||

ಆಗ ವಾಯುವು ಕ್ರುದ್ಧನಾಗಿ ಏದುಸಿರುಬಿಡುತ್ತಾ ಮಹಾವೃಕ್ಷಗಳನ್ನು ಬೀಳಿಸುತ್ತಾ ಶಾಲ್ಮಲಿಯು ಇದ್ದ ಪ್ರದೇಶಕ್ಕೆ ಆಗಮಿಸಿದನು.

12151022a ತಂ ಹೀನಪರ್ಣಂ ಪತಿತಾಗ್ರಶಾಖಂ
ವಿಶೀರ್ಣಪುಷ್ಪಂ ಪ್ರಸಮೀಕ್ಷ್ಯ ವಾಯುಃ|
12151022c ಉವಾಚ ವಾಕ್ಯಂ ಸ್ಮಯಮಾನ ಏನಂ
ಮುದಾ ಯುತಂ ಶಲ್ಮಲಿಂ ರುಗ್ಣಶಾಖಿಮ್||

ಎಲೆಗಳಿಂದ ರಹಿತನಾಗಿದ್ದ, ಮುಖ್ಯ ಶಾಖೆಗಳು ಕೆಳಗೆ ಬಿದ್ದಿದ್ದ, ಪುಷ್ಪಗಳನ್ನು ನೆಲದ ಮೇಲೆ ಹಾಸಿದ್ದ ಮತ್ತು ರೆಂಬೆಗಳು ಕತ್ತರಿಸಲ್ಪಟ್ಟ ಆ ವೃಕ್ಷವನ್ನು ನೋಡಿ ವಾಯುವು ಮುದಿತನಾಗಿ ಮುಗುಳ್ನಗುತ್ತಾ ಹೇಳಿದನುಃ

12151023a ಅಹಮಪ್ಯೇವಮೇವ ತ್ವಾಂ ಕುರ್ವಾಣಃ ಶಲ್ಮಲೇ ರುಷಾ|
12151023c ಆತ್ಮನಾ ಯತ್ ಕೃತಂ ಕೃತ್ಸ್ನಂ ಶಾಖಾನಾಮಪಕರ್ಷಣಮ್||

12151024a ಹೀನಪುಷ್ಪಾಗ್ರಶಾಖಸ್ತ್ವಂ ಶೀರ್ಣಾಂಕುರಪಲಾಶವಾನ್|
12151024c ಆತ್ಮದುರ್ಮಂತ್ರಿತೇನೇಹ ಮದ್ವೀರ್ಯವಶಗೋಽಭವಃ||

“ಶಾಲ್ಮಲೇ! ನಾನೂ ಕೂಡ ರೋಷಗೊಂಡು ನಿನ್ನನ್ನು ಹೀಗೆಯೇ ಮಾಡಬೇಕೆಂದಿದ್ದೆ. ಸ್ವಯಂ ನೀನೇ ಈ ಕಷ್ಟ ಕೆಲಸವನ್ನು ಮಾಡಿಕೊಂಡುಬಿಟ್ಟಿದ್ದೀಯೆ. ನಿನ್ನ ರೆಂಬೆಗಳು ಕೆಳಗೆ ಬಿದ್ದುಬಿಟ್ಟಿವೆ. ಹೂವುಗಳು, ಎಲೆಗಳು, ಮೊಗ್ಗುಗಳು ಮತ್ತು ಅಂಕುರಗಳು ಎಲ್ಲವೂ ನಾಶವಾಗಿಬಿಟ್ಟಿವೆ. ನೀನು ನಿನ್ನದೇ ದುರ್ಬುದ್ಧಿಯಿಂದ ಈ ವಿಪತ್ತನ್ನು ತಂದುಕೊಂಡಿದ್ದೀಯೆ. ನಿನಗೆ ನನ್ನ ಬಲವೀರ್ಯಗಳ ಬಲಿಯಾಗಬೇಕಾಯಿತು.”

12151025a ಏತಚ್ಛ್ರುತ್ವಾ ವಚೋ ವಾಯೋಃ ಶಲ್ಮಲಿರ್ವ್ರೀಡಿತಸ್ತದಾ|
12151025c ಅತಪ್ಯತ ವಚಃ ಸ್ಮೃತ್ವಾ ನಾರದೋ ಯತ್ತದಾಬ್ರವೀತ್||

ವಾಯುವಿನ ಈ ಮಾತನ್ನು ಕೇಳಿ ಶಾಲ್ಮಲಿಯು ಲಜ್ಜಿತಗೊಂಡು ನಾರದನು ಹೇಳಿದ್ದ ಮಾತುಗಳನ್ನು ಸ್ಮರಿಸಿಕೊಂಡು ಪಶ್ಚಾತ್ತಾಪ ಪಟ್ಟಿತು.

12151026a ಏವಂ ಯೋ ರಾಜಶಾರ್ದೂಲ ದುರ್ಬಲಃ ಸನ್ಬಲೀಯಸಾ|
12151026c ವೈರಮಾಸಜ್ಜತೇ ಬಾಲಸ್ತಪ್ಯತೇ ಶಲ್ಮಲಿರ್ಯಥಾ||

ರಾಜಶಾರ್ದೂಲ! ಇದೇ ರೀತಿಯಲ್ಲಿ ಸ್ವಯಂ ದುರ್ಬಲನಾಗಿದ್ದು ಬಲಶಾಲಿಯೊಂದಿಗೆ ವೈರವನ್ನು ಕಟ್ಟಿಕೊಳ್ಳುವ ಮೂರ್ಖನು ಶಾಲ್ಮಲಿಯಂತೆ ಪಶ್ಚಾತ್ತಾಪಪಡಬೇಕಾಗುತ್ತದೆ.

12151027a ತಸ್ಮಾದ್ವೈರಂ ನ ಕುರ್ವೀತ ದುರ್ಬಲೋ ಬಲವತ್ತರೈಃ|
12151027c ಶೋಚೇದ್ಧಿ ವೈರಂ ಕುರ್ವಾಣೋ ಯಥಾ ವೈ ಶಲ್ಮಲಿಸ್ತಥಾ||

ಆದುದರಿಂದ ದುರ್ಬಲನು ಬಲವತ್ತರವಾದವರೊಡನೆ ವೈರವನ್ನು ಕಟ್ಟಿಕೊಳ್ಳಬಾರದು. ಹಾಗೆ ವೈರವನ್ನು ಕಟ್ಟಿಕೊಳ್ಳುವವನು ಶಾಲ್ಮಲಿಯಂತೆ ಶೋಚನೀಯ ಸ್ಥಿತಿಯನ್ನು ಹೊಂದುತ್ತಾನೆ.

12151028a ನ ಹಿ ವೈರಂ ಮಹಾತ್ಮಾನೋ ವಿವೃಣ್ವಂತ್ಯಪಕಾರಿಷು|
12151028c ಶನೈಃ ಶನೈರ್ಮಹಾರಾಜ ದರ್ಶಯಂತಿ ಸ್ಮ ತೇ ಬಲಮ್‌||

ಮಹಾರಾಜ! ಮಹಾಮನಸ್ವೀ ಪುರುಷನು ತನ್ನನ್ನು ಅವಹೇಳನ ಮಾಡುವವನ ಮೇಲೆ ವೈರಭಾವವನ್ನು ಪ್ರಕಟಿಸುವುದಿಲ್ಲ. ಅವರು ನಿಧಾನವಾಗಿ ತಮ್ಮ ಬಲವನ್ನು ತೋರಿಸುತ್ತಾರೆ.

12151029a ವೈರಂ ನ ಕುರ್ಮೀತ ನರೋ ದುರ್ಬುದ್ಧಿರ್ಬುದ್ಧಿಜೀವಿನಾ|
12151029c ಬುದ್ಧಿರ್ಬುದ್ಧಿಮತೋ ಯಾತಿ ತೂಲೇಷ್ವಿವ[746] ಹುತಾಶನಃ‌||

ದುರ್ಬುದ್ಧಿ ನರನು ಬುದ್ಧಿಜೀವಿಯೊಡನೆ ವೈರವನ್ನು ಮಾಡಬಾರದು. ಏಕೆಂದರೆ ಹತ್ತಿಯ ರಾಶಿಯನ್ನು ಹುತಾಶನನು ಹೇಗೋ ಹಾಗೆ ಬುದ್ಧಿಮಾನನ ಬುದ್ಧಿಯು ಸುಡುತ್ತದೆ.

12151030a ನ ಹಿ ಬುದ್ಧ್ಯಾ ಸಮಂ ಕಿಂ ಚಿದ್ವಿದ್ಯತೇ ಪುರುಷೇ ನೃಪ|
12151030c ತಥಾ ಬಲೇನ ರಾಜೇಂದ್ರ ನ ಸಮೋಽಸ್ತೀತಿ ಚಿಂತಯೇತ್‌||

ರಾಜೇಂದ್ರ! ನೃಪ! ಪುರುಷನಲ್ಲಿ ಬುದ್ಧಿಯ ಸಮಾನ ಬೇರೆ ಯಾವುದೂ ಇಲ್ಲ. ಜಗತ್ತಿನಲ್ಲಿ ಬುದ್ಧಿಬಲದಿಂದ ಯುಕ್ತನಾಗಿರುವವನನ್ನು ಎದುರಿಸುವ ಬೇರೆ ಯಾವ ಪುರುಷನೂ ಇಲ್ಲ.

---

[746] ತೃಣೇಷ್ವಿವ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12151031a ತಸ್ಮಾತ್ ಕ್ಷಮೇತ ಬಾಲಾಯ ಜಡಾಯ ಬಧಿರಾಯ[747] ಚ|
12151031c ಬಲಾಧಿಕಾಯ ರಾಜೇಂದ್ರ ತದ್ದ್ರುಷ್ಟಂ ತ್ವಯಿ ಶತ್ರುಹನ್||

ರಾಜೇಂದ್ರ! ಶತ್ರುಹನ್! ಆದುದರಿಂದ ಬಾಲಕ, ಜಡ, ಕಿವುಡ ಮತ್ತು ಬಲದಲ್ಲಿ ತನಗಿಂತಲೂ ಅಧಿಕನಾಗಿರುವವನು – ಇವರೆಲ್ಲರೂ ಮಾಡಿದ ಪ್ರತಿಕೂಲ ಕರ್ಮಗಳನ್ನು ಕ್ಷಮಿಸಿಬಿಡಬೇಕು. ಈ ಕ್ಷಮಾಭಾವವನ್ನು ನಿನ್ನಲ್ಲಿ ಕಾಣುತ್ತಿದ್ದೇನೆ.

12151032a ಅಕ್ಷೌಹಿಣ್ಯೋ ದಶೈಕಾ ಚ ಸಪ್ತ ಚೈವ ಮಹಾದ್ಯುತೇ|
12151032c ಬಲೇನ ನ ಸಮಾ ರಾಜನ್ನರ್ಜುನಸ್ಯ ಮಹಾತ್ಮನಃ||

ಮಹಾದ್ಯುತೇ! ರಾಜನ್! ಹದಿನೆಂಟು ಅಕ್ಷೌಹಿಣೀ ಸೇನೆಯೂ ಮಹಾತ್ಮಾ ಅರ್ಜುನನ ಸಮನಾಗಿರಲಿಲ್ಲ.

12151033a ಹತಾಸ್ತಾಶ್ಚೈವ ಭಗ್ನಾಶ್ಚ ಪಾಂಡವೇನ ಯಶಸ್ವಿನಾ|
12151033c ಚರತಾ ಬಲಮಾಸ್ಥಾಯ ಪಾಕಶಾಸನಿನಾ ಮೃಧೇ||

ಪಾಂಡು ಮತ್ತು ಇಂದ್ರರ ಯಶಸ್ವೀ ಪುತ್ರನು ತನ್ನ ಬಲವನ್ನಾಶ್ರಯಿಸಿ ಇಲ್ಲಿ ರಣದಲ್ಲಿ ಸಂಚರಿಸುತ್ತಿದ್ದ ಸಮಸ್ತ ಸೇನೆಗಳನ್ನೂ ಸದೆಬಡಿದು ನಾಶಗೊಳಿಸಿದನು.

12151034a ಉಕ್ತಾಸ್ತೇ ರಾಜಧರ್ಮಾಶ್ಚ ಆಪದ್ಧರ್ಮಾಶ್ಚ ಭಾರತ|
12151034c ವಿಸ್ತರೇಣ ಮಹಾರಾಜ ಕಿಂ ಭೂಯಃ ಪ್ರಬ್ರವೀಮಿ ತೇ||

ಭಾರತ! ಮಹಾರಾಜ! ನಾನು ನಿನಗೆ ರಾಜಧರ್ಮ ಮತ್ತು ಆಪದ್ಧರ್ಮಗಳ ಕುರಿತು ವಿಸ್ತಾರವಾಗಿ ಹೇಳಿದ್ದೇನೆ. ನಿನಗೆ ಇನ್ನೂ

---

[747] ಜಡಾಂಧಬಧಿರಾಯ ಚ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಏನನ್ನು ಹೇಳಬೇಕು?”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಪವನಶಾಲ್ಮಲಿಸಂವಾದೇ ಏಕಪಂಚಾಶದಧಿಕಶತಮೋಽಧ್ಯಾಯಃ॥
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಪವನಶಾಲ್ಮಲಿಸಂವಾದ ಎನ್ನುವ ನೂರಾಐವತ್ತೊಂದನೇ ಅಧ್ಯಾಯವು.

೧೫೨

ಸಮಸ್ತ ಪಾಪಗಳಿಗೆ ಲೋಭವೇ ಕಾರಣವೆಂದು ಹೇಳುವುದು ಮತ್ತು ಶಿಷ್ಟ ಪುರುಷರ ವರ್ಣನೆ (1-32).

12152001 ಯುಧಿಷ್ಠಿರ ಉವಾಚ|
12152001a ಪಾಪಸ್ಯ ಯದಧಿಷ್ಠಾನಂ ಯತಃ ಪಾಪಂ ಪ್ರವರ್ತತೇ|
12152001c ಏತದಿಚ್ಛಾಮ್ಯಹಂ ಜ್ಞಾತುಂ ತತ್ತ್ವೇನ ಭರತರ್ಷಭ॥

ಯುಧಿಷ್ಠಿರನು ಹೇಳಿದನು: “ಭರತರ್ಷಭ! ಪಾಪದ ಅಧಿಷ್ಠಾನ[748]ವೇನು ಮತ್ತು ಯಾವುದರಿಂದ ಅದು ಹುಟ್ಟುತ್ತದೆ ಎನ್ನುವುದನ್ನು ಯಥಾರ್ಥರೂಪದಲ್ಲಿ ತಿಳಿಯಲು ಬಯಸುತ್ತೇನೆ.”

12152002 ಭೀಷ್ಮ ಉವಾಚ|
12152002a ಪಾಪಸ್ಯ ಯದಧಿಷ್ಠಾನಂ ತಚ್ಚೃಣುಷ್ವ ನರಾಧಿಪ|
12152002c ಏಕೋ ಲೋಭೋ ಮಹಾಗ್ರಾಹೋ ಲೋಭಾತ್ಪಾಪಂ ಪ್ರವರ್ತತೇ॥

[748] ವಾಸಸ್ಥಾನ.

ಭೀಷ್ಮನು ಹೇಳಿದನು: "ನರಾಧಿಪ! ಪಾಪದ ಅಧಿಷ್ಠಾನವಿದೆ. ಅದನ್ನು ಕೇಳು. ಏಕಮಾತ್ರ ಲೋಭವೇ ಪಾಪದ ಅಧಿಷ್ಠಾನವು. ಮನುಷ್ಯನು ಮುಂದೆಹೋಗುವುದನ್ನು ಹಿಡಿದು ತಡೆಯುವುದೇ ಅದು. ಲೋಭದಿಂದಲೇ ಪಾಪವು ಹುಟ್ಟುತ್ತದೆ.

12152003a ಅತಃ ಪಾಪಮಧರ್ಮಶ್ಚ ತಥಾ ದುಃಖಮನುತ್ತಮಮ್|
12152003c ನಿಕೃತ್ಯಾ ಮೂಲಮೇತದ್ಧಿ ಯೇನ ಪಾಪಕೃತೋ ಜನಾಃ||

ಲೋಭದಿಂದಲೇ ಪಾಪ, ಅಧರ್ಮ ಮತ್ತು ಮಹಾ ದುಃಖದ ಉತ್ಪತ್ತಿಯಾಗುತ್ತದೆ. ಮೋಸ ಮತ್ತು ಕಪಟತನದ ಮೂಲ ಕಾರಣವೂ ಲೋಭವೇ. ಇದರ ಕಾರಣದಿಂದಲೇ ಮನುಷ್ಯರು ಪಾಪಾಚಾರಿಗಳಾಗುತ್ತಾರೆ.

12152004a ಲೋಭಾತ್ಕ್ರೋಧಃ ಪ್ರಭವತಿ ಲೋಭಾತ್ಕಾಮಃ ಪ್ರವರ್ತತೇ|
12152004c ಲೋಭಾನ್ಮೋಹಶ್ಚ ಮಾಯಾ ಚ ಮಾನಸ್ತಂಭಃ ಪರಾಸುತಾ||

ಲೋಭದಿಂದ ಕ್ರೋಧವುಂಟಾಗುತ್ತದೆ. ಲೋಭದಿಂದ ಕಾಮವು ಹುಟ್ಟುತ್ತದೆ. ಲೋಭದಿಂದ ಮೋಹ, ಮಾಯೆ, ಅಭಿಮಾನ, ಉದ್ದಂಡತೆ ಮತ್ತು ಪರಾಧೀನತೆ ಮೊದಲಾದ ದೋಷಗಳು ಪ್ರಕಟವಾಗುತ್ತವೆ.

12152005a ಅಕ್ಷಮಾ ಹ್ರೀಪರಿತ್ಯಾಗಃ ಶ್ರೀನಾಶೋ ಧರ್ಮಸಂಕ್ಷಯಃ|
12152005c ಅಭಿಧ್ಯಾಪ್ರಜ್ಞತಾ ಚೈವ ಸರ್ವಂ ಲೋಭಾತ್ ಪ್ರವರ್ತತೇ||

ಅಸಹನಶೀಲತೆ, ನಿರ್ಲಜ್ಜತೆ, ಸಂಪತ್ತಿನಾಶ, ಧರ್ಮಕ್ಷಯ, ಚಿಂತೆ ಮತ್ತು ಅಪಯಶ – ಇವೆಲ್ಲವೂ ಲೋಭದಿಂದಲೇ ಉಂಟಾಗುತ್ತವೆ.

12152006a ಅನ್ಯಾಯಶ್ಚಾವಿತರ್ಕಶ್ಚ[749] ವಿಕರ್ಮಸು ಚ ಯಾಃ ಕ್ರಿಯಾಃ|
12152006c ಕೂಟ[750]ವಿದ್ಯಾದಯಶ್ಚೈವ ರೂಪೈಶ್ವರ್ಯಮದಸ್ತಥಾ||
12152007a ಸರ್ವಭೂತೇಷ್ವವಿಶ್ವಾಸಃ ಸರ್ವಭೂತೇಷ್ವನಾರ್ಜವಮ್|
12152007c ಸರ್ವಭೂತೇಷ್ವಭಿದ್ರೋಹಃ ಸರ್ವಭೂತೇಷ್ವಯುಕ್ತತಾ[751]|

ಲೋಭದಿಂದ ಅನ್ಯಾಯ, ತರ್ಕವಿಲ್ಲದಿರುವಿಕೆ, ಶಾಸ್ತ್ರವಿರುದ್ಧ ಕರ್ಮಗಳ ಪ್ರವೃತ್ತಿ, ಪಂಗಡ-ವಿದ್ಯೆ-ರೂಪ ಮತ್ತು ಐಶ್ವರ್ಯ ಮದ, ಸಮಸ್ತ ಪ್ರಾಣಿಗಳ ಮೇಲೂ ಅವಿಶ್ವಾಸ, ಸರ್ವಪ್ರಾಣಿಗಳೊಂದಿಗೂ ಕುಟಿಲತೆಯಿಂದ ವರ್ತಿಸುವುದು, ಸರ್ವಭೂತಗಳ ಮೇಲೂ ದ್ರೋಹ, ಮತ್ತು ಸರ್ವಭೂತಗಳ ತಿರಸ್ಕಾರ ಇವೇ ಮೊದಲಾದ ಪಾಪಗಳು ಉಂಟಾಗುವವು.

12152007e ಹರಣಂ ಪರವಿತ್ತಾನಾಂ ಪರದಾರಾಭಿಮರ್ಶನಮ್||
12152008a ವಾಗ್ವೇಗೋ ಮಾನಸೋ ವೇಗೋ ನಿಂದಾವೇಗಸ್ತಥೈವ ಚ|
12152008c ಉಪಸ್ಥೋದರಯೋರ್ವೇಗೋ ಮೃತ್ಯುವೇಗಶ್ಚ ದಾರುಣಃ||
12152009a ಈರ್ಷ್ಯಾವೇಗಶ್ಚ ಬಲವಾನ್ಮಿಥ್ಯಾವೇಗಶ್ಚ ದುಸ್ತ್ಯಜಃ|
12152009c ರಸವೇಗಶ್ಚ ದುರ್ವಾರಃ ಶ್ರೋತ್ರವೇಗಶ್ಚ ದುಃಸಹಃ||
12152010a ಕುತ್ಸಾ ವಿಕತ್ಥಾ ಮಾತ್ಸರ್ಯಂ ಪಾಪಂ ದುಷ್ಕರಕಾರಿತಾ|
12152010c ಸಾಹಸಾನಾಂ ಚ ಸರ್ವೇಷಾಮಕಾರ್ಯಾಣಾಂ ಕ್ರಿಯಾಸ್ತಥಾ||

ಪರಧನದ ಅಪಹರಣ, ಪರಸ್ತ್ರೀಯೊಡನೆ ಬಲಾತ್ಕಾರ, ವೇಗವಾಗಿ

---

749 ಅತ್ಯಾಗಶ್ಚಾತಿತರ್ಷಶ್ಚ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

750 ಕುಲ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

751 ಸರ್ವಭೂತೇಷ್ವಸತ್ಕೃತಿಃ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಮಾತನಾಡುವುದು, ವೇಗವಾಗಿ ಯೋಚಿಸುವುದು, ನಿಂದಿಸುವ ವಿಶೇಷ ಪ್ರವೃತ್ತಿ, ಜನನೇಂದ್ರಿಯದ ವೇಗ, ಹೊಟ್ಟೆಯ ವೇಗ, ಮೃತ್ಯುವಿನ ಭಯಂಕರ ವೇಗ ಅರ್ಥಾತ್ ಆತ್ಮಹತ್ಯೆ, ಈರ್ಷೆಯ ಪ್ರಬಲ ವೇಗ, ಸುಳ್ಳಿನ ದುರ್ಜಯ ವೇಗ, ಅನಿವಾರ್ಯ ರಸನೇಂದ್ರಿಯದ ವೇಗ, ದುಃಸ್ಸಹ ಶ್ರೋತ್ರೇಂದ್ರಿಯದ ವೇಗ, ಘೃಣ, ಆತ್ಮಪ್ರಶಂಸನೆ, ಮಾತ್ಸರ್ಯ, ಪಾಪ, ದುಷ್ಕರ ಕರ್ಮಗಳ ಪ್ರವೃತ್ತಿ, ಅಯೋಗ್ಯ ಕರ್ಮಗಳನ್ನು ಮಾಡುವುದು ಇವೆಲ್ಲವುಗಳ ಕಾರಣವೂ ಲೋಭವೇ.

12152011a ಜಾತೌ ಬಾಲ್ಯೇಽಥ ಕೌಮಾರೇ ಯೌವನೇ ಚಾಪಿ ಮಾನವಃ|
12152011c ನ ಸಂತ್ಯಜತ್ಯಾತ್ಮಕರ್ಮ ಯನ್ನ ಜೀರ್ಯತಿ ಜೀರ್ಯತಃ||
12152012a ಯೋ ನ ಪೂರಯಿತುಂ ಶಕ್ಯೋ ಲೋಭಃ ಪ್ರಾಪ್ತಾ ಕುರೂದ್ವಹ|
12152012c ನಿತ್ಯಂ ಗಂಭೀರತೋಯಾಭಿರಾಪಗಾಭಿರಿವೋದಧಿಃ|

ಕುರೂದ್ವಹ! ಮನುಷ್ಯನು ಹುಟ್ಟುವಾಗ, ಬಾಲ್ಯಾವಸ್ಥೆಯಲ್ಲಿ, ಕುಮಾರಾವಸ್ಥೆಯಲ್ಲಿ ಮತ್ತು ಯೌವನದಲ್ಲಿ ಲೋಭದ ಕಾರಣದಿಂದಲೇ ತನ್ನ ಪಾಪ ಕರ್ಮಗಳನ್ನು ತ್ಯಜಿಸಲು ಅಸಮರ್ಥನಾಗುತ್ತಾನೆ ಮತ್ತು ಮನುಷ್ಯನ ವೃದ್ಧಾಪ್ಯದಲ್ಲಿಯೂ ಲೋಭವು ಜೀರ್ಣವಾಗುವುದಿಲ್ಲ. ತುಂಬಿಹರಿಯುವ ನದಿಗಳು ಸೇರಿಕೊಂಡರೂ ಸಮುದ್ರವು ಹೇಗೆ ತುಂಬುವುದಿಲ್ಲವೋ ಹಾಗೆ ಎಷ್ಟೇ ಪದಾರ್ಥಗಳ ಲಾಭವಾದರೂ ಲೋಭದ ಹೊಟ್ಟೆಯು ಎಂದೂ ತುಂಬುವುದಿಲ್ಲ.

12152012e ನ ಪ್ರಹೃಷ್ಯತಿ ಲಾಭೈರ್ಯೋ ಯಶ್ಚ ಕಾಮ್ಯೈರ್ನ ತೃಪ್ಯತಿ||
12152013a ಯೋ ನ ದೇವೈರ್ನ ಗಂಧರ್ವೈರ್ನಾಸುರೈರ್ನ ಮಹೋರಗೈಃ|
12152013c ಜ್ಞಾಯತೇ ನೃಪ ತತ್ತ್ವೇನ ಸರ್ವೈರ್ಭೂತಗಣೈಸ್ತಥಾ|

ಲೋಭಿಯು ಅತಿಯಾದ ಲಾಭವನ್ನು ಪಡೆದುಕೊಂಡರೂ

ಸಂತುಷ್ಟನಾಗುವುದಿಲ್ಲ. ಕಾಮಭೋಗಗಳಿಂದ ಅವನು ಎಂದೂ
ತೃಪ್ತನಾಗುವುದಿಲ್ಲ. ನೃಪ! ದೇವತೆಗಳಾಗಲೀ ಗಂಧರ್ವರಾಗಲೀ,
ಅಸುರರರಾಗಲೀ, ಮಹಾ ಉರಗಗಳಾಗಲೀ ಮತ್ತು
ಸರ್ವಭೂತಗಣಗಳೇ ಆಗಲೀ ಲೋಭದ ಸ್ವರೂಪವನ್ನು
ಯಥಾರ್ಥವಾಗಿ ತಿಳಿದುಕೊಳ್ಳಲಾರರು.

12152013e ಸ ಲೋಭಃ ಸಹ ಮೋಹೇನ ವಿಜೇತವ್ಯೋ ಜಿತಾತ್ಮನಾ॥
12152014a ದಂಭೋ ದ್ರೋಹಶ್ಚ ನಿಂದಾ ಚ ಪೈಶುನ್ಯಂ ಮತ್ಸರಸ್ತಥಾ|
12152014c ಭವಂತ್ಯೇತಾನಿ ಕೌರವ್ಯ ಲುಬ್ಧಾನಾಮಕೃತಾತ್ಮನಾಮ್॥

ಕೌರವ್ಯ! ಯಾರು ತನ್ನ ಇಂದ್ರಿಯಗಳನ್ನು ನಿಯಂತ್ರಿಸಿಕೊಂಡಿದ್ದಾನೋ
ಆ ಪುರುಷನು ಮೋಹಸಹಿತ ಲೋಭವನ್ನೂ ಗೆಲ್ಲಬೇಕು. ದಂಭ,
ದ್ರೋಹ, ನಿಂದೆ, ಚಾಡಿಹೇಳುವುದು, ಮತ್ತು ಮಾತ್ಸರ್ಯ – ಈ ಎಲ್ಲ
ದೋಷಗಳೂ ಅಜಿತಾತ್ಮ ಲೋಭಿಗಳಲ್ಲಿಯೇ ಇರುತ್ತವೆ.

12152015a ಸುಮಹಾಂತ್ಯಪಿ ಶಾಸ್ತ್ರಾಣಿ ಧಾರಯಂತಿ ಬಹುಶ್ರುತಾಃ|
12152015c ಚೇತ್ತಾರಃ ಸಂಶಯಾನಾಂ ಚ ಕ್ಲಿಶ್ಯಂತೀಹಾಲ್ಪಬುದ್ಧಯಃ॥

ಬಹುಶ್ರುತ ವಿದ್ವಾಂಸರು ದೊಡ್ಡ ದೊಡ್ಡ ಶಾಸ್ತ್ರಗಳನ್ನೂ ಬಾಯಿಪಾಠ
ಮಾಡಿಕೊಳ್ಳುತ್ತಾರೆ. ಎಲ್ಲರ ಶಂಕೆಗಳನ್ನೂ ನಿವಾರಿಸುತ್ತಾರೆ. ಆದರೆ
ಲೋಭಕ್ಕೆ ಒಳಗಾದರೆ ಅವರು ಬುದ್ಧಿಯನ್ನು ಕಳೆದುಕೊಂಡು
ಕಷ್ಟಪಡುತ್ತಾರೆ.

12152016a ದ್ವೇಷಕ್ರೋಧಪ್ರಸಕ್ತಾಶ್ಚ ಶಿಷ್ಟಾಚಾರಬಹಿಷ್ಕೃತಾಃ|
12152016c ಅಂತಃಕ್ಷುರಾ ವಾಙ್ಮಧುರಾಃ ಕೂಪಾಶ್ಚನ್ನಾಸ್ತೃಣೈರಿವ|
12152016e ಧರ್ಮವೈತಂಸಿಕಾಃ ಕ್ಷುದ್ರಾ ಮುಷ್ಣಂತಿ ಧ್ವಜಿನೋ ಜಗತ್॥

ದ್ವೇಷ-ಕ್ರೋಧಗಳಲ್ಲಿ ಸಿಲುಕಿ ಶಿಷ್ಟಾಚಾರಗಳನ್ನು ಬಿಟ್ಟುಬಿಡುತ್ತಾರೆ ಮತ್ತು ಮೇಲಿಂದ ಸಿಹಿಮಾತುಗಳನ್ನಾಡಿ ಒಳಗಿನಿಂದ ಅತ್ಯಂತ ಕಠೋರರಾಗಿಬಿಡುತ್ತಾರೆ. ಅವರ ಪರಿಸ್ಥಿತಿಯು ಹುಲ್ಲುಗಳಿಂದ ಮುಚ್ಚಲ್ಪಟ್ಟ ಬಾವಿಯಂತಾಗಿಬಿಡುತ್ತದೆ. ಧರ್ಮದ ಹೆಸರಿನಲ್ಲಿ ಅವರು ಪ್ರಪಂಚಕ್ಕೇ ಮೋಸಮಾಡುತ್ತಾರೆ. ಆ ಕ್ಷುದ್ರ ಮನುಷ್ಯರು ಧರ್ಮಧ್ವಜಿಗಳಾಗಿ ಜಗತ್ತಿನ ಲೂಟಿಮಾಡುತ್ತಾರೆ.

12152017a ಕುರ್ವತೇ ಚ ಬಹೂನ್ಮಾರ್ಗಾಂಸ್ತಾಂಸ್ತಾನ್ ಹೇತುಬಲಾಶ್ರಿತಾಃ|
12152017c ಸರ್ವಂ ಮಾರ್ಗಂ ವಿಲುಂಪಂತಿ ಲೋಭಾಜ್ಞಾನೇಷು ನಿಷ್ಠಿತಾಃ||

ಯುಕ್ತಿಬಲವನ್ನಾಶ್ರಯಿಸಿ ಅನೇಕ ಅಸತ್ಯಮಾರ್ಗಗಳನ್ನು ತಂದೊಡ್ಡುತ್ತಾರೆ ಮತ್ತು ಲೋಭ-ಅಜ್ಞಾನಗಳಲ್ಲಿ ಮುಳುಗಿ ಸತ್ಪುರುಷರು ಸ್ಥಾಪಿಸಿದ ಮಾರ್ಗಗಳನ್ನು ನಾಶಮಾಡುತ್ತಾರೆ.

12152018a ಧರ್ಮಸ್ಯಾಹ್ರಿಯಮಾಣಸ್ಯ ಲೋಭಗ್ರಸ್ತೈರ್ದುರಾತ್ಮಭಿಃ|
12152018c ಯಾ ಯಾ ವಿಕ್ರಿಯತೇ ಸಂಸ್ಥಾ ತತಃ ಸಾಭಿಪ್ರಪದ್ಯತೇ||

ಲೋಭಗ್ರಸ್ತ ದುರಾತ್ಮರು ಅಪಹರಿಸಿ ವಿಕೃತಗೊಳಿಸಿದ ಧರ್ಮದ ಆಯಾ ಅಂಶಗಳು ಅದೇ ರೂಪಗಳಲ್ಲಿ ಪ್ರಚಲಿತವಾಗಿಬಿಡುತ್ತದೆ.

12152019a ದರ್ಪಃ ಕ್ರೋಧೋ ಮದಃ ಸ್ವಪ್ನೋ ಹರ್ಷಃ ಶೋಕೋಽತಿಮಾನಿತಾ|
12152019c ತತ ಏವ ಹಿ ಕೌರವ್ಯ ದೃಶ್ಯಂತೇ ಲುಬ್ಧಬುದ್ಧಿಷು|

ಕೌರವ್ಯ! ಲೋಭದಲ್ಲಿ ಮುಳುಗಿರುವವರಲ್ಲಿ ದರ್ಪ, ಕ್ರೋಧ, ಮದ, ದುಃಸ್ವಪ್ನ, ಹರ್ಷ, ಶೋಕ ಮತ್ತು ಅತಿ ಅಭಿಮಾನ ಇವೆಲ್ಲ ದೋಷಗಳೂ ಕಂಡುಬರುತ್ತವೆ.

12152019e ಏತಾನಶಿಷ್ಟಾನ್ಬುಧ್ಯಸ್ವ ನಿತ್ಯಂ ಲೋಭಸಮನ್ವಿತಾನ್||

12152020a ಶಿಷ್ಟಾಂಸ್ತು ಪರಿಪೃಚ್ಛೇಥಾ ಯಾನ್ವಕ್ಷ್ಯಾಮಿ ಶುಚಿವ್ರತಾನ್।

ಸದಾ ಲೋಭದಲ್ಲಿ ಮುಳುಗಿರುವವರನ್ನು ಅಶಿಷ್ಟರೆಂದು ತಿಳಿ. ಶಿಷ್ಟ ಪುರುಷರಲ್ಲಿಯೇ ನಿನ್ನ ಶಂಕೆಗಳನ್ನು ಕೇಳಬೇಕು. ಪವಿತ್ರ ನಿಯಮಗಳನ್ನು ಪಾಲಿಸುವ ಆ ಶಿಷ್ಟ ಪುರುಷರ ಪರಿಚಯವನ್ನು ನಿನಗೆ ನೀಡುತ್ತೇನೆ.

12152020c ಯೇಷು ವೃತ್ತಿಭಯಂ[752] ನಾಸ್ತಿ ಪರಲೋಕಭಯಂ ನ ಚ॥
12152021a ನಾಮಿಷೇಷು ಪ್ರಸಂಗೋऽಸ್ತಿ ನ ಪ್ರಿಯೇಷ್ವಪ್ರಿಯೇಷು ಚ।

ಇವರಿಗೆ ವೃತ್ತಿಭಯವಿರುವುದಿಲ್ಲ. ಪರಲೋಕದ ಭಯವೂ ಇರುವುದಿಲ್ಲ. ಅವರಿಗೆ ಭೋಗಗಳಲ್ಲಿ ಆಸಕ್ತಿಯಿರುವುದಿಲ್ಲ ಮತ್ತು ಪ್ರಿಯ-ಅಪ್ರಿಯ ಸಂಗತಿಗಳೇ ಇರುವುದಿಲ್ಲ.

12152021c ಶಿಷ್ಟಾಚಾರಃ ಪ್ರಿಯೋ ಯೇಷು ದಮೋ ಯೇಷು ಪ್ರತಿಷ್ಠಿತಃ॥
12152022a ಸುಖಂ ದುಃಖಿಂ ಪರಂ ಯೇಷಾಂ ಸತ್ಯಂ ಯೇಷಾಂ ಪರಾಯಣಮ್।

ಅವರಿಗೆ ಶಿಷ್ಟಾಚಾರವು ಪ್ರಿಯವಾಗಿರುತ್ತದೆ. ಅವರಲ್ಲಿ ಇಂದ್ರಿಯಸಂಯಮವಿರುತ್ತದೆ. ಅವರಿಗೆ ಸುಖ-ದುಃಖಿಗಳು ಸಮಾನವಾಗಿರುತ್ತವೆ. ಸತ್ಯವೇ ಅವರ ಪರಮ ಆಶ್ರಯವಾಗಿರುತ್ತದೆ.

12152022c ದಾತಾರೋ ನ ಗೃಹೀತಾರೋ ದಯಾವಂತಸ್ತಥೈವ ಚ॥
12152023a ಪಿತೃದೇವಾತಿಥೇಯಾಶ್ಚ ನಿತ್ಯೋದ್ಯುಕ್ತಾಸ್ತಥೈವ ಚ।

ಅವರು ಕೊಡುತ್ತಾರೆ; ತೆಗೆದುಕೊಳ್ಳುವುದಿಲ್ಲ. ಅವರು ಸ್ವಭಾವದಲ್ಲಿಯೇ ದಯಾವಂತರಾಗಿರುತ್ತಾರೆ. ಅವರು ದೇವತೆಗಳು, ಪಿತೃಗಳು ಮತ್ತು ಅತಿಥಿಗಳ ಸೇವಕರಾಗಿರುತ್ತಾರೆ ಮತ್ತು ಸತ್ಕರ್ಮ ಮಾಡುವುದರಲ್ಲಿ

---

[752] ಯೇಷ್ವಾವೃತ್ತಿಭಯಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಸದಾ ಉದ್ಯತರಾಗಿರುತ್ತಾರೆ.

12152023c ಸರ್ವೋಪಕಾರಿಣೋ ಧೀರಾಃ ಸರ್ವಧರ್ಮಾನುಪಾಲಕಾಃ||
12152024a ಸರ್ವಭೂತಹಿತಾಶ್ಚೈವ ಸರ್ವದೇಯಾಶ್ಚ ಭಾರತ|

ಭಾರತ! ಆ ಧೀರರು ಸರ್ವೋಪಕಾರಿಗಳಾಗಿರುತ್ತಾರೆ.
ಸರ್ವಧರ್ಮಗಳನ್ನೂ ಪಾಲಿಸುವವರಾಗಿರುತ್ತಾರೆ. ಸರ್ವಭೂತಗಳ
ಹಿತದಲ್ಲಿಯೇ ಇರುತ್ತಾರೆ ಮತ್ತು ಸರ್ವವನ್ನೂ ಕೊಡುವವರಾಗಿರುತ್ತಾರೆ.

12152024c ನ ತೇ ಚಾಲಯಿತುಂ ಶಕ್ಯಾ ಧರ್ಮವ್ಯಾಪಾರಪಾರಗಾಃ||
12152025a ನ ತೇಷಾಂ ಭಿದ್ಯತೇ ವೃತ್ತಂ ಯತ್ಪುರಾ ಸಾಧುಭಿಃ ಕೃತಮ್|

ಅವರನ್ನು ಸತ್ಕರ್ಮಗಳಿಂದ ವಿಚಲಿತರನ್ನಾಗಿ ಮಾಡಲಿಕ್ಕಾಗುವುದಿಲ್ಲ.
ಅವರು ಕೇವಲ ಧರ್ಮಾನುಷ್ಠಾನಗಳಲ್ಲಿ ತತ್ಪರರಾಗಿರುತ್ತಾರೆ. ಹಿಂದಿನ
ಶ್ರೇಷ್ಠ ಪುರುಷರು ಪಾಲಿಸುತ್ತಿದ್ದ ಸದಾಚಾರಗಳನ್ನೇ ಅವರೂ
ಪಾಲಿಸುತ್ತಾರೆ. ಅವರ ಈ ಆಚಾರವು ಎಂದೂ ನಷ್ಟವಾಗುವುದಿಲ್ಲ.

12152025c ನ ತ್ರಾಸಿನೋ ನ ಚಪಲಾ ನ ರೌದ್ರಾಃ ಸತ್ಪಥೇ ಸ್ಥಿತಾಃ||
12152026a ತೇ ಸೇವ್ಯಾಃ ಸಾಧುಭಿರ್ನಿತ್ಯಂ ಯೇಷ್ವಹಿಂಸಾ ಪ್ರತಿಷ್ಠಿತಾ|

ಅವರು ಯಾರನ್ನೂ ಹೆದರಿಸುವುದಿಲ್ಲ. ಚಪಲತೆಯನ್ನು
ತೋರಿಸುವುದಿಲ್ಲ. ಅವರ ಸ್ವಭಾವವು ಯಾರಿಗೂ
ಭಯಂಕರವಾಗಿರುವುದಿಲ್ಲ. ಅವರು ಸದಾ ಸತ್ಪಥದಲ್ಲಿಯೇ ಇರುತ್ತಾರೆ.
ಅವರಲ್ಲಿ ಅಹಿಂಸೆಯು ನಿತ್ಯವೂ ಪ್ರತಿಷ್ಠಿತಗೊಂಡಿರುತ್ತದೆ. ಅಂಥಹ
ಸಾಧುಪುರುಷರ ಸೇವೆಯನ್ನು ಮಾಡು.

12152026c ಕಾಮಕ್ರೋಧವ್ಯಪೇತಾ ಯೇ ನಿರ್ಮಮಾ ನಿರಹಂಕೃತಾಃ|

12152026e ಸುವ್ರತಾಃ ಸ್ಥಿರಮರ್ಯಾದಾಸ್ತಾನುಪಾಸ್ಸ್ವ ಚ ಪೃಚ್ಚ ಚ॥

ಯಾರು ಕಾಮ-ಕ್ರೋಧರಹಿತರಾಗಿರುವರೋ, ಮಮತೆ ಮತ್ತು ಅಹಂಕಾರ ಶೂನ್ಯರಾಗಿರುವರೋ, ಉತ್ತಮ ವ್ರತವನ್ನು ಪಾಲಿಸುತ್ತಿರುವರೋ ಮತ್ತು ಧರ್ಮಮರ್ಯಾದೆಯನ್ನು ಸ್ಥಿರವಾಗಿ ಉಳಿಸಿಕೊಳ್ಳುವರೋ ಆ ಮಹಾಪುರುಷರ ಸಂಗವನ್ನು ಮಾಡಿಕೋ. ಅವರಲ್ಲಿ ನಿನ್ನ ಸಂದೇಹಗಳನ್ನು ಕೇಳಿಕೋ.

12152027a ನ ಗವಾರ್ಥಂ[753] ಯಶೋರ್ಥಂ ವಾ ಧರ್ಮಸ್ತೇಷಾಂ ಯುಧಿಷ್ಠಿರ|
12152027c ಅವಶ್ಯಕಾರ್ಯ ಇತ್ಯೇವ ಶರೀರಸ್ಯ ಕ್ರಿಯಾಸ್ತಥಾ॥

ಯುಧಿಷ್ಠಿರ! ಯಾರಿಗೆ ಧರ್ಮಪಾಲನೆಯು ಧನಕ್ಕಾಗಿ ಅಥವಾ ಕೀರ್ತಿಗಾಗಿ ಇಲ್ಲವೋ ಅವರು ಶಾರೀರಕ ಕ್ರಿಯಗಳನ್ನು ಅವಶ್ಯಕ ಕರ್ತವ್ಯಗಳೆಂದೇ ತಿಳಿದು ಮಾಡುತ್ತಾರೆ.

12152028a ನ ಭಯಂ ಕ್ರೋಧಚಾಪಲ್ಯಂ ನ ಶೋಕಸ್ತೇಷು ವಿದ್ಯತೇ|
12152028c ನ ಧರ್ಮಧ್ವಜಿನಶ್ಚೈವ ನ ಗುಹ್ಯಂ ಕಿಂ ಚಿದಾಸ್ಥಿತಾಃ॥

ಯಾರಲ್ಲಿ ಭಯ, ಕ್ರೋಧ, ಚಾಪಲ್ಯ ಮತ್ತು ಶೋಕಗಳಿರುವುದಿಲ್ಲವೋ ಅವರು ಧರ್ಮಧ್ವಜಿಗಳು ಅಂದರೆ ಪಾಖಂಡಿಗಳಾಗಿರುವುದಿಲ್ಲ. ಅವರು ಯಾವುದೇ ಗೋಪನೀಯ ಪಾಖಂಡಪೂರ್ಣ ಧರ್ಮವನ್ನು ಆಚರಿಸುತ್ತಿರುವುದಿಲ್ಲ.

12152029a ಯೇಷ್ವಲೋಭಸ್ತಥಾಮೋಹೋ ಯೇ ಚ ಸತ್ಯಾರ್ಜವೇ ರತಾಃ|
12152029c ತೇಷು ಕೌಂತೇಯ ರಜ್ಯೇಥಾ ಯೇಷ್ವತಂದ್ರೀಕೃತಂ ಮನಃ॥

---

753 ಧನಾರ್ಥಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಕೌಂತೇಯ! ಯಾರಲ್ಲಿ ಲೋಭ-ಮೋಹಗಳ ಅಭಾವವಿರುವುದೋ, ಯಾರು ಸತ್ಯ ಮತ್ತು ಸರಳತೆಯಲ್ಲಿ ಸ್ಥಿತರಾಗಿರುವರೋ ಮತ್ತು ಎಂದೂ ಸದಾಚಾರಗಳಿಂದ ಭ್ರಷ್ಟರಾಗದ ಪುರುಷರೊಂದಿಗೆ ನೀನು ಸ್ನೇಹವನ್ನಿಟ್ಟುಕೊಳ್ಳಬೇಕು.

12152030a ಯೇ ನ ಹೃಷ್ಯಂತಿ ಲಾಭೇಷು ನಾಲಾಭೇಷು ವ್ಯಥಂತಿ ಚ|
12152030c ನಿರ್ಮಮಾ ನಿರಹಂಕಾರಾಃ ಸತ್ತ್ವಸ್ಥಾಃ ಸಮದರ್ಶಿನಃ||
12152031a ಲಾಭಾಲಾಭೌ ಸುಖಿದುಃಖೇ ಚ ತಾತ
ಪ್ರಿಯಾಪ್ರಿಯೇ ಮರಣಂ ಜೀವಿತಂ ಚ|
12152031c ಸಮಾನಿ ಯೇಷಾಂ ಸ್ಥಿರವಿಕ್ರಮಾಣಾಂ
ಬುದ್ಧಾತ್ಮನಾಂ ಸತ್ತ್ವಮವಸ್ಥಿತಾನಾಮ್||
12152032a ಸುಖಪ್ರಿಯೈಸ್ತಾನ್ಸುಮಹಾಪ್ರತಾಪಾನ್
ಯತ್ತೋಽಪ್ರಮತ್ತಶ್ಚ ಸಮರ್ಥಯೇಥಾಃ[754]|
12152032c ದೈವಾತ್ಸರ್ವೇ ಗುಣವಂತೋ ಭವಂತಿ
ಶುಭಾಶುಭಾ ವಾಕ್ಪ್ರಲಾಪಾ ಯಥೈವ||

ಅಯ್ಯಾ! ಯಾರು ಲಾಭವಾದಾಗ ಹರ್ಷಿತರಾಗುವುದಿಲ್ಲವೋ ಮತ್ತು ನಷ್ಟವಾದಾಗ ವ್ಯಥಿತರಾಗುವುದಿಲ್ಲವೋ ಆ ನಿರ್ಮಮ, ನಿರಹಂಕಾರ, ಸತ್ತ್ವಸ್ಥ ಸಮದರ್ಶಿಗಳು; ಹಾಗೂ ಯಾರಿಗೆ ಲಾಭ-ನಷ್ಟಗಳು, ಸುಖ-ದುಃಖಿಗಳು, ಪ್ರಿಯ-ಅಪ್ರಿಯಗಳು ಮತ್ತು ಮರಣ-ಜೀವಿತಗಳು ಸಮಾನವಾಗಿರುವವೋ ಆ ಸುದೃಢ ಪರಾಕ್ರಮಿ, ಆತ್ಮಬುದ್ಧಿಶಾಲೀ,

---

754 ಧರ್ಮಪ್ರಿಯಾಂಸ್ತಾನ್ ಸುಮಹಾನುಭಾವಾನ್ ದಾಂತೋಽಪ್ರಮತ್ತಶ್ಚ ಸಮರ್ಚಯೇಥಾಃ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಸತ್ತ್ವದಲ್ಲಿಯೇ ನೆಲೆಸಿರುವವರೂ ಆದ ಸುಖಪ್ರಿಯ ಮಹಾಪ್ರತಾಪವಾನ್, ಅಪ್ರಮತ್ತರು ಸಮರ್ಥರು. ಇವರೆಲ್ಲರೂ ದೈವದಿಂದಲೇ ಗುಣವಂತರಾಗಿರುತ್ತಾರೆ. ಶುಭ-ಅಶುಭಗಳ ಕುರಿತು ಅವರ ಮಾತುಗಳು ಯಥಾರ್ಥವಾಗಿರುತ್ತವೆ. ಅನ್ಯರು ಕೇವಲ ವಾರ್ತಾಲಾಪಮಾಡುತ್ತಿರುತ್ತಾರೆ.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಆಪನ್ಮೂಲಭೂತದೋಷಕಥನೇ
ದ್ವಾಪಂಚಾಶದಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಆಪನ್ಮೂಲಭೂತದೋಷಕಥನ ಎನ್ನುವ ನೂರಾಐವತ್ತೆರಡನೇ ಅಧ್ಯಾಯವು.

೧೫೩

ಅಜ್ಞಾನ ಮತ್ತು ಮೋಹಗಳ ಪರಸ್ಪರ ಕಾರಣ ಸಂಬಂಧದ ವರ್ಣನೆ (1-14).

12153001 ಯುಧಿಷ್ಠಿರ ಉವಾಚ|
12153001a ಅನರ್ಥಾನಾಮಧಿಷ್ಠಾನಮುಕ್ತೋ ಲೋಭಃ ಪಿತಾಮಹ|
12153001c ಅಜ್ಞಾನಮಪಿ ವೈ ತಾತ ಶ್ರೋತುಮಿಚ್ಛಾಮಿ ತತ್ತ್ವತಃ||

ಯುಧಿಷ್ಠಿರನು ಹೇಳಿದನು: “ಪಿತಾಮಹ! ಅನರ್ಥಗಳ ಮೂಲವು ಲೋಭವೆಂದು ನೀನು ಹೇಳಿದೆ. ಅಜ್ಞಾ! ಅಜ್ಞಾನದ ಕುರಿತೂ ತತ್ತ್ವತಃ ಕೇಳ ಬಯಸುತ್ತೇನೆ.”

12153002 ಭೀಷ್ಮ ಉವಾಚ|
12153002a ಕರೋತಿ ಪಾಪಂ ಯೋಽಜ್ಞಾನಾನ್ನಾತ್ಮನೋ ವೇತ್ತಿ ಚ ಕ್ಷಮಮ್[755]|
12153002c ಪ್ರದ್ವೇಷ್ಟಿ ಸಾಧುವೃತ್ತಾಂಶ್ಚ ಸ ಲೋಕಸ್ಯೈತಿ ವಾಚ್ಯತಾಮ್||

ಭೀಷ್ಮನು ಹೇಳಿದನು: "ಅಜ್ಞಾನದಿಂದ ಯಾರು ಪಾಪವನ್ನೆಸಗುತ್ತಾರೋ ಅವರು ತಮ್ಮನ್ನು ತಾವು ಮತ್ತು ತಮ್ಮ ಕ್ಷಮ್ಯತೆಯನ್ನು ತಿಳಿದುಕೊಂಡಿರುವುದಿಲ್ಲ. ಅವರು ಸಾಧುಜನರ ವರ್ತನೆಗಳನ್ನು ಅರ್ಥಮಾಡಿಕೊಂಡಿರುವುದಿಲ್ಲ ಮತ್ತು ಲೋಕದಲ್ಲಿ ಜನರು ಅವರ ಕುರಿತು ನಿಂದನೀಯ ಮಾತುಗಳನ್ನಾಡುತ್ತಾರೆ.

12153003a ಅಜ್ಞಾನಾನ್ನಿರಯಂ ಯಾತಿ ತಥಾಜ್ಞಾನೇನ ದುರ್ಗತಿಮ್|
12153003c ಅಜ್ಞಾನಾತ್ ಕ್ಲೇಶಮಾಪ್ನೋತಿ ತಥಾಪತ್ಸು ನಿಮಜ್ಜತಿ||

ಅಜ್ಞಾನದಿಂದ ಜೀವವು ನರಕಕ್ಕೆ ಹೋಗುತ್ತದೆ. ಅಜ್ಞಾನದಿಂದ ದುರ್ಗತಿಯನ್ನು ಹೊಂದುತ್ತಾರೆ. ಅಜ್ಞಾನದಿಂದ ಕ್ಲೇಶಗಳಿಗೊಳಗಾಗುತ್ತಾರೆ. ಆಪತ್ತುಗಳಲ್ಲಿ ಮುಳುಗಿಬಿಡುತ್ತಾರೆ."

12153004 ಯುಧಿಷ್ಠಿರ ಉವಾಚ|
12153004a ಅಜ್ಞಾನಸ್ಯ ಪ್ರವೃತ್ತಿಂ ಚ ಸ್ಥಾನಂ ವೃದ್ಧಿಂ ಕ್ಷಯೋದಯೌ|
12153004c ಮೂಲಂ ಯೋಗಂ ಗತಿಂ ಕಾಲಂ ಕಾರಣಂ ಹೇತುಮೇವ ಚ||
12153005a ಶ್ರೋತುಮಿಚ್ಛಾಮಿ ತತ್ತ್ವೇನ ಯಥಾವದಿಹ ಪಾರ್ಥಿವ|
12153005c ಅಜ್ಞಾನಪ್ರಭವಂ ಹೀದಂ ಯದ್ದುಃಖಮುಪಲಭ್ಯತೇ||

ಯುಧಿಷ್ಠಿರನು ಹೇಳಿದನು: "ಪಾರ್ಥಿವ! ಅಜ್ಞಾನದ ಉತ್ಪತ್ತಿ, ಸ್ಥಿತಿ,

---

755 ಕ್ಷಯಮ್ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ವೃದ್ಧಿ, ಕ್ಷಯ, ಉದಯ, ಮೂಲ, ಯೋಗ, ಗತಿ, ಕಾಲ, ಕಾರಣ ಮತ್ತು ಹೇತುಗಳನ್ನು ತತ್ತ್ವವತ್ತಾಗಿ ಕೇಳಬಯಸುತ್ತೇನೆ. ಉಪಲಬ್ಧವಾಗುವ ದುಃಖಗಳು ಅಜ್ಞಾನದಿಂದಲೇ ಹುಟ್ಟುತ್ತವೆ.”

12153006 ಭೀಷ್ಮ ಉವಾಚ|
12153006a ರಾಗೋ ದ್ವೇಷಸ್ತಥಾ ಮೋಹೋ ಹರ್ಷಃ ಶೋಕೋಽಭಿಮಾನಿತಾ|
12153006c ಕಾಮಃ ಕ್ರೋಧಶ್ಚ ದರ್ಪಶ್ಚ ತಂದ್ರೀರಾಲಸ್ಯಮೇವ ಚ||
12153007a ಇಚ್ಚಾ ದ್ವೇಷಸ್ತಥಾ ತಾಪಃ ಪರವೃದ್ಧ್ಯುಪತಾಪಿತಾ|
12153007c ಅಜ್ಞಾನಮೇತನ್ನಿರ್ದಿಷ್ಟಂ ಪಾಪಾನಾಂ ಚೈವ ಯಾಃ ಕ್ರಿಯಾಃ||

ಭೀಷ್ಮನು ಹೇಳಿದನು: “ರಾಗ, ದ್ವೇಷ, ಮೋಹ, ಹರ್ಷ, ಶೋಕ, ಅಭಿಮಾನ, ಕಾಮ, ಕ್ರೋಧ, ದರ್ಪ, ಆಯಾಸ, ಆಲಸ್ಯ, ಇಚ್ಛೆ, ವೈರ, ತಾಪ, ಇನ್ನೊಬ್ಬರ ಉನ್ನತಿಯನ್ನು ನೋಡಿ ಉರಿಯುವುದು ಮತ್ತು ಪಾಪಾಚಾರಗಳನ್ನೆಸಗುವುದು – ಇವೆಲ್ಲವುಗಳನ್ನೂ ಅಜ್ಞಾನವೆಂದೇ ಹೇಳಿದ್ದಾರೆ.

12153008a ಏತಯಾ ಯಾ ಪ್ರವೃತ್ತಿಶ್ಚ ವೃದ್ಧ್ಯಾದೀನ್ಯಾಂಶ್ಚ ಪೃಚ್ಚಸಿ|
12153008c ವಿಸ್ತರೇಣ ಮಹಾಬಾಹೋ ಶೃಣು ತಚ್ಚ ವಿಶಾಂ ಪತೇ||

ವಿಶಾಂಪತೇ! ಈ ಅಜ್ಞಾನದ ಉತ್ಪತ್ತಿ ಮತ್ತು ವೃದ್ಧಿ ಮೊದಲಾದವುಗಳ ಕುರಿತು ಕೇಳಿದ್ದೀಯೆ. ಮಹಾಬಾಹೋ! ಇವುಗಳನ್ನು ವಿಸ್ತಾರವಾಗಿ ಕೇಳು.

12153009a ಉಭಾವೇತೌ ಸಮಫಲೌ ಸಮದೋಷೌ ಚ ಭಾರತ|
12153009c ಅಜ್ಞಾನಂ ಚಾತಿಲೋಭಶ್ಚಾಪ್ಯೇಕಂ ಜಾನೀಹಿ ಪಾರ್ಥಿವ||

ಭಾರತ! ಪಾರ್ಥಿವ! ಅಜ್ಞಾನ ಮತ್ತು ಅತಿಲೋಭ – ಇವೆರಡೂ

ಒಂದೇ ಎಂದು ತಿಳಿ. ಏಕೆಂದರೆ ಅವುಗಳ ಪರಿಣಾಮ ಮತ್ತು ದೋಷಗಳು ಒಂದೇ ಆಗಿವೆ.

12153010a ಲೋಭಪ್ರಭವಮಜ್ಞಾನಂ ವೃದ್ಧಂ ಭೂಯಃ ಪ್ರವರ್ಧತೇ|
12153010c ಸ್ಥಾನೇ ಸ್ಥಾನಂ ಕ್ಷಯೇ ಕ್ಷೈಣ್ಯಮುಪೈತಿ ವಿವಿಧಾಂ ಗತಿಮ್‌||

ಲೋಭದಿಂದಲೇ ಅಜ್ಞಾನವು ಪ್ರಕಟವಾಗುತ್ತದೆ. ಲೋಭವು ಹೆಚ್ಚಾಗುವುದರಿಂದ ಅಜ್ಞಾನವೂ ಹೆಚ್ಚಾಗುತ್ತದೆ. ಎಲ್ಲಿಯವರೆಗೆ ಲೋಭವಿರುವುದೋ ಅಲ್ಲಿಯವರಿಗೆ ಅಜ್ಞಾನವೂ ಇರುತ್ತದೆ ಮತ್ತು ಯಾವಾಗ ಲೋಭವು ಕ್ಷಯವಾಗುವುದೋ ಆಗ ಅಜ್ಞಾನವೂ ಕ್ಷೀಣವಾಗುತ್ತದೆ. ಅಜ್ಞಾನ ಮತ್ತು ಲೋಭಗಳ ಕಾರಣದಿಂದಲೇ ಜೀವಿಯು ನಾನಾ ಪ್ರಕಾರದ ಯೋನಿಗಳಲ್ಲಿ ಜನ್ಮತಾಳುತ್ತದೆ.

12153011a ಮೂಲಂ ಲೋಭಸ್ಯ ಮಹತಃ[756] ಕಾಲಾತ್ಮಗತಿರೇವ ಚ|
12153011c ಚಿನ್ನೇಽಚ್ಚಿನ್ನೇ ತಥಾ ಲೋಭೇ ಕಾರಣಂ ಕಾಲ ಏವ ಹಿ‌||

ಕಾಲಸ್ವರೂಪ ಅಜ್ಞಾನವೇ ಲೋಭದ ಮಹಾ ಮೂಲ. ಲೋಭವನ್ನು ತುಂಡು-ತುಂಡುಮಾಡುವ ಕಾರಣವೂ ಕಾಲವೇ.

12153012a ತಸ್ಯಾಜ್ಞಾನಾತ್ತು ಲೋಭೋ ಹಿ ಲೋಭಾದಜ್ಞಾನಮೇವ ಚ|
12153012c ಸರ್ವೇ ದೋಷಾಸ್ತಥಾ ಲೋಭಾತ್ತತಸ್ಮಾಲ್ಲೋಭಂ ವಿವರ್ಜಯೇತ್‌||

ಅಜ್ಞಾನದಿಂದ ಲೋಭವುಂಟಾಗುತ್ತದೆ ಮತ್ತು ಲೋಭದಿಂದ ಅಜ್ಞಾನವುಂಟಾಗುತ್ತದೆ. ಲೋಭದಿಂದಲೇ ಸರ್ವ ದೋಷಗಳೂ ಹುಟ್ಟಿಕೊಳ್ಳತ್ತವೆ. ಆದುದರಿಂದ ಲೋಭವನ್ನು ವರ್ಜಿಸಬೇಕು.

---

[756] ಮೂಲಂ ಲೋಭಸ್ಯ ಮೋಹೋ ವೈ (ಗೀತಾ ಪ್ರೆಸ್‌).

12153013a ಜನಕೋ ಯುವನಾಶ್ವಶ್ಚ ವೃಷಾದರ್ಭಿಃ ಪ್ರಸೇನಜಿತ್|
12153013c ಲೋಭಕ್ಷಯಾದ್ದಿವಂ ಪ್ರಾಪ್ತಾಸ್ತಥ್ಯೈವಾನ್ಯೇ ಜನಾಧಿಪಾಃ||

ಜನಕ, ಯುವನಾಶ್ವ, ವೃಷಾದರ್ಭಿ, ಪ್ರಸೇನಜಿತ್ ಮತ್ತು ಅನ್ಯ ಜನಾಧಿಪರು ಲೋಭವನ್ನು ಕಳೆದುಕೊಂಡೇ ದಿವ್ಯಲೋಕಗಳನ್ನು ಪಡೆದುಕೊಂಡರು.

12153014a ಪ್ರತ್ಯಕ್ಷಂ ತು ಕುರುಶ್ರೇಷ್ಠ ತ್ಯಜ ಲೋಭಮಿಹಾತ್ಮನಾ|
12153014c ತ್ಯಕ್ತ್ವಾ ಲೋಭಂ ಸುಖಂ ಲೋಕೇ ಪ್ರೇತ್ಯ ಚಾನುಚರಿಷ್ಯಸಿ||

ಕುರುಶ್ರೇಷ್ಠ! ನೀನು ಈಗಲೇ ಪ್ರತ್ಯಕ್ಷವಾಗಿ ಕಾಣುವ ಈ ಲೋಭವನ್ನು ತೊರೆ. ಲೋಭವನ್ನು ತ್ಯಜಿಸಿ ಈ ಲೋಕದಲ್ಲಿ ಸುಖವನ್ನೂ ಮತ್ತು ಪರಲೋಕದಲ್ಲಿ ಆನಂದವನ್ನೂ ಪಡೆದುಕೊಳ್ಳುತ್ತೀಯೆ.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಅಜ್ಞಾನಮಹಾತ್ಮ್ಯೇ ತ್ರ್ಯಪಂಚಾಶದಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಅಜ್ಞಾನಮಹಾತ್ಮ್ಯ ಎನ್ನುವ ನೂರಾಐವತ್ಮೂರನೇ ಅಧ್ಯಾಯವು.

೧೫೪

ಮನಸ್ಸು ಮತ್ತು ಇಂದ್ರಿಯಗಳ ಸಂಯಮರೂಪ ದಮೆಯ ಮಹಾತ್ಮ್ಯೆ (1-28).

12154001 ಯುಧಿಷ್ಠಿರ ಉವಾಚ|

12154001a ಸ್ವಾಧ್ಯಾಯಕೃತಯತ್ನಸ್ಯ ಬ್ರಾಹ್ಮಣಸ್ಯ[757] ಪಿತಾಮಹ|
12154001c ಧರ್ಮಕಾಮಸ್ಯ ಧರ್ಮಾತ್ಮನ್ಕಿಂ ನು ಶ್ರೇಯ ಇಹೋಚ್ಯತೇ||

ಯುಧಿಷ್ಠಿರನು ಹೇಳಿದನು: "ಧರ್ಮಾತ್ಮಾ! ಪಿತಾಮಹ! ಸ್ವಾಧ್ಯಾಯದಲ್ಲಿ ಯತ್ನಶೀಲನಾಗಿರುವ ಮತ್ತು ಧರ್ಮವನ್ನಾಚರಿಸಲು ಬಯಸುವ ಬ್ರಾಹ್ಮಣನಿಗೆ ಇಲ್ಲಿ ಯಾವುದು ಶ್ರೇಯವೆಂದು ಹೇಳಲಾಗಿದೆ?

12154002a ಬಹುಧಾದರ್ಶನೇ ಲೋಕೇ ಶ್ರೇಯೋ ಯದಿಹ ಮನ್ಯಸೇ|
12154002c ಅಸ್ಮಿಂಸ್ತಲ್ಲೋಕೇ ಪರೇ ಚೈವ ತನ್ಮೇ ಬ್ರೂಹಿ ಪಿತಾಮಹ||

ಪಿತಾಮಹ! ಇಲ್ಲಿ ಇದು ಶ್ರೇಯಸ್ಸು ಎನ್ನುವ ಅನೇಕ ದರ್ಶನಗಳು ಈ ಲೋಕದಲ್ಲಿವೆ. ಆದರೆ ನೀನು ಈ ಲೋಕ ಮತ್ತು ಪರಲೋಕಗಳಲ್ಲಿ ಯಾವುದನ್ನು ಶ್ರೇಯಸ್ಸೆಂದು ತಿಳಿದಿದ್ದೀಯೋ ಅದನ್ನು ನನಗೆ ಹೇಳು.

12154003a ಮಹಾಮಯಂ ಧರ್ಮಪಥೋ ಬಹುಶಾಖಶ್ಚ ಭಾರತ|
12154003c ಕಿಂ ಸ್ವಿದೇವೇಹ ಧರ್ಮಾಣಾಮನುಷ್ಠೇಯತಮಂ ಮತಮ್||

ಭಾರತ! ಧರ್ಮದ ಈ ಮಾರ್ಗವು ಅತ್ಯಂತ ದೊಡ್ಡದು. ಇದಕ್ಕೆ ಅನೇಕ ಕವಲುಗಳಿವೆ. ಈ ಧರ್ಮಗಳಲ್ಲಿ ಯಾವುದು ಸರ್ವೋತ್ತಮವಾದುದು ಮತ್ತು ಅನುಷ್ಠಾನಯೋಗ್ಯವಾದುದು ಎಂದು ಹೇಳಲಾಗಿದೆ?

12154004a ಧರ್ಮಸ್ಯ ಮಹತೋ ರಾಜನ್ಬಹುಶಾಖಸ್ಯ ತತ್ತ್ವತಃ|

---

[757] ಸ್ವಾಧ್ಯಾಯೇ ಕೃತಯತ್ನಸ್ಯ ನರಸ್ಯ ಚ ಪಿತಾಮಹ| (ಗೀತಾ ಪ್ರೆಸ್).

12154004c ಯನ್ಮೂಲಂ ಪರಮಂ ತಾತ ತತ್ಸರ್ವಂ ಬ್ರೂಹ್ಯತಂದ್ರಿತಃ[758]॥

ರಾಜನ್! ತತ್ತ್ವತಃ ಅನೇಕ ಶಾಖೆಗಳಿರುವ ಈ ಮಹಾ ಧರ್ಮದ ಪರಮ ಮೂಲವು ಯಾವುದು? ಆಯಾಸಗೊಳ್ಳದೇ ಅವೆಲ್ಲವನ್ನೂ ಹೇಳು.”

12154005 ಭೀಷ್ಮ ಉವಾಚ|
12154005a ಹಂತ ತೇ ಕಥಯಿಷ್ಯಾಮಿ ಯೇನ ಶ್ರೇಯಃ ಪ್ರಪತ್ಸ್ಯಸೇ|
12154005c ಪೀತ್ವಾಮೃತಮಿವ ಪ್ರಾಜ್ಞೋ ಜ್ಞಾನತೃಪ್ತೋ ಭವಿಷ್ಯಸಿ॥

ಭೀಷ್ಮನು ಹೇಳಿದನು: “ನಿಲ್ಲು. ನಿನಗೆ ನಾನು ಹೇಳುತ್ತೇನೆ. ಅದರಿಂದ ನೀನು ಶ್ರೇಯಸ್ಸನ್ನು ಪಡೆದುಕೊಳ್ಳಬಹುದು. ಅಮೃತವನ್ನು ಕುಡಿದರೆ ಹೇಗೆ ಪೂರ್ಣ ತೃಪ್ತಿಯಾಗುತ್ತದೆಯೋ ಹಾಗೆ ಪ್ರಾಜ್ಞನಾದ ನೀನು ಇದನ್ನು ಕೇಳಿ ಜ್ಞಾನತೃಪ್ತನಾಗುತ್ತೀಯೆ.

12154006a ಧರ್ಮಸ್ಯ ವಿಧಯೋ ನೈಕೇ ತೇ ತೇ ಪ್ರೋಕ್ತಾ ಮಹರ್ಷಿಭಿಃ|
12154006c ಸ್ವಂ ಸ್ವಂ ವಿಜ್ಞಾನಮಾಶ್ರಿತ್ಯ ದಮಸ್ತೇಷಾಂ ಪರಾಯಣಮ್॥

ಮಹರ್ಷಿಗಳು ತಮ್ಮ ತಮ್ಮ ಜ್ಞಾನದ ಅನುಸಾರ ಧರ್ಮದ ಒಂದಲ್ಲ ಅನೇಕ ವಿಧಿಗಳನ್ನು ಹೇಳಿದ್ದಾರೆ. ದಮೆ[759]ಯೇ ಅವೆಲ್ಲವುಗಳ ಆಧಾರವಾಗಿದೆ.

12154007a ದಮಂ ನಿಃಶ್ರೇಯಸಂ ಪ್ರಾಹುರ್ವೃದ್ಧಾ ನಿಶ್ಚಯದರ್ಶಿನಃ|

---

758 ಬ್ರೂಹ್ಯಶೇಷತಃ (ಗೀತಾ ಪ್ರೆಸ್).

759 ಮನೋನಿಗ್ರಹ ಅಥವಾ ಸಂಯಮ ಮತ್ತು ಇಂದ್ರಿಯ ನಿಗ್ರಹ ಅಥವಾ ಸಂಯಮ.

12154007c ಬ್ರಾಹ್ಮಣಸ್ಯ ವಿಶೇಷೇಣ ದಮೋ ಧರ್ಮಃ ಸನಾತನಃ||

ನಿಶ್ಚಯದಶೀರ್ ವೃದ್ಧರು ದಮೆಯೇ ಅತ್ಯಂತ ಶ್ರೇಯಸ್ಕರವಾದುದು ಎಂದು ಹೇಳುತ್ತಾರೆ. ವಿಶೇಷವಾಗಿ ದಮೆಯು ಬ್ರಾಹ್ಮಣರ ಸನಾತನ ಧರ್ಮವು.

12154008a ನಾದಾಂತಸ್ಯ[760] ಕ್ರಿಯಾಸಿದ್ಧಿರ್ಯಥಾವದುಪಲಭ್ಯತೇ|
12154008c ದಮೋ ದಾನಂ ತಥಾ ಯಜ್ಞಾನಧೀತಂ ಚಾತಿವರ್ತತೇ||

ದಮೆಯ ಕಾರಣದಿಂದಲೇ ಅವನಿಗೆ ಅವನ ಶುಭ ಕರ್ಮಗಳ ಯಥಾಪ್ರಕಾರ ಸಿದ್ಧಿ ಪ್ರಾಪ್ತವಾಗುತ್ತದೆ. ಆದುದರಿಂದ ದಮೆಯು ದಾನ, ಯಜ್ಞ ಮತ್ತು ಸ್ವಾಧ್ಯಾಯಕ್ಕಿಂತಲೂ ಹೆಚ್ಚಿನದು.

12154009a ದಮಸ್ತೇಜೋ ವರ್ಧಯತಿ ಪವಿತ್ರಂ ಚ ದಮಃ ಪರಮ್|
12154009c ವಿಪಾಪ್ಮಾ ತೇಜಸಾ ಯುಕ್ತಃ ಪುರುಷೋ ವಿಂದತೇ ಮಹತ್||

ದಮೆಯು ತೇಜಸ್ಸನ್ನು ವರ್ಧಿಸುತ್ತದೆ. ದಮೆಯು ಪರಮ ಪವಿತ್ರವಾದುದು. ದಮೆಯಿಂದ ಪಾಪರಹಿತನಾದ ತೇಜೋಯುಕ್ತ ಪುರುಷನು ಪರಮಪದವನ್ನು ಪಡೆದುಕೊಳ್ಳುತ್ತಾನೆ.

12154010a ದಮೇನ ಸದೃಶಂ ಧರ್ಮಂ ನಾನ್ಯಂ ಲೋಕೇಷು ಶುಶ್ರುಮ|
12154010c ದಮೋ ಹಿ ಪರಮೋ ಲೋಕೇ ಪ್ರಶಸ್ತಃ ಸರ್ವಧರ್ಮಿಣಾಮ್||

ದಮೆಯ ಸದೃಶವಾದ ಬೇರೆ ಯಾವ ಧರ್ಮವನ್ನೂ ನಾವು ಲೋಕಗಳಲ್ಲಿ ಕೇಳಿಲ್ಲ. ಲೋಕದಲ್ಲಿ ದಮೆಯೇ ಪರಮ ಧರ್ಮವು. ಇದು

[760] ದಮಾತ್ತಸ್ಯ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಸರ್ವಧರ್ಮಿಗಳಿಗೂ ಪ್ರಶಸ್ತವಾದುದು.

12154011a ಪ್ರೇತ್ಯ ಚಾಪಿ ಮನುಷ್ಯೇಂದ್ರ ಪರಮಂ ವಿಂದತೇ ಸುಖಮ್|
12154011c ದಮೇನ ಹಿ ಸಮಾಯುಕ್ತೋ ಮಹಾಂತಂ ಧರ್ಮಮಶ್ನುತೇ||

ಮನುಷ್ಯೇಂದ್ರ! ದಮೆಯಿಂದ ಮರಣಾನಂತರವೂ ಪರಮ ಸುಖವನ್ನು ಪಡೆದುಕೊಳ್ಳುತ್ತಾನೆ. ದಮೆಯಿಂದ ಸಮಾಯುಕ್ತನಾದವನು ಮಹಾ ಪರಮ ಧರ್ಮವನ್ನು ಪಡೆದುಕೊಳ್ಳುತ್ತಾನೆ.

12154012a ಸುಖಂ ದಾಂತಃ ಪ್ರಸ್ವಪಿತಿ ಸುಖಂ ಚ ಪ್ರತಿಬುಧ್ಯತೇ|
12154012c ಸುಖಂ ಪರ್ಯೇತಿ ಲೋಕಾಂಶ್ಚ ಮನಶ್ಚಾಸ್ಯ ಪ್ರಸೀದತಿ||

ಮನಸ್ಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿದ ದಾಂತನು ಸುಖವಾಗಿಯೇ ಮಲಗುತ್ತಾನೆ, ಎಚ್ಚೆತ್ತಿರುವಾಗಲೂ ಸುಖವಾಗಿರುತ್ತಾನೆ ಮತ್ತು ಸುಖವಾಗಿಯೇ ಲೋಕಕಾರ್ಯಗಳಲ್ಲಿ ತೊಡಗಿರುತ್ತಾನೆ. ಅವನ ಮನಸ್ಸೂ ಕೂಡ ಪ್ರಸನ್ನವಾಗಿರುತ್ತದೆ.

12154013a ಅದಾಂತಃ ಪುರುಷಃ ಕ್ಲೇಶಮಭೀಕ್ಷ್ಣಂ ಪ್ರತಿಪದ್ಯತೇ|
12154013c ಅನರ್ಥಾಂಶ್ಚ ಬಹೂನನ್ಯಾನ್ ಪ್ರಸೃಜತ್ಯಾತ್ಮದೋಷಜಾನ್||

ಮನಸ್ಸು ಮತ್ತು ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿರದ ಅದಾಂತ ಪುರುಷನು ನಿರಂತರವಾಗಿ ಕ್ಲೇಶಗಳನ್ನು ಅನುಭವಿಸುತ್ತಾನೆ. ತನ್ನದೇ ದೋಷದಿಂದ ಇನ್ನೂ ಅನೇಕ ಅನರ್ಥಗಳನ್ನು ಸೃಷ್ಟಿಸಿಕೊಳ್ಳುತ್ತಾನೆ.

12154014a ಆಶ್ರಮೇಷು ಚತುರ್ಷ್ವಾಹುರ್ದಮಮೇವೋತ್ತಮಂ ವ್ರತಮ್|
12154014c ತಸ್ಯ ಲಿಂಗಾನಿ ವಕ್ಷ್ಯಾಮಿ ಯೇಷಾಂ ಸಮುದಯೋ ದಮಃ||

ನಾಲ್ಕು ಆಶ್ರಮದವರಿಗೂ ದಮೆಯೇ ಉತ್ತಮ ವ್ರತವೆಂದು

ಹೇಳಲಾಗಿದೆ. ಈಗ ನಾನು ದಮೆಯು ಉದಯವಾಗಿರುವವನಲ್ಲಿ ಕಾಣುವ ಲಕ್ಷಣಗಳನ್ನು ಹೇಳುತ್ತೇನೆ.

12154015a ಕ್ಷಮಾ ಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್।
12154015c ಇಂದ್ರಿಯಾವಜಯೋ ದಾಕ್ಷ್ಯಂ ಮಾರ್ದವಂ ಹ್ರೀರಚಾಪಲಮ್॥
12154016a ಅಕಾರ್ಪಣ್ಯಮಸಂರಂಭಃ ಸಂತೋಷಃ ಪ್ರಿಯವಾದಿತಾ।
12154016c ಅವಿವಿತ್ಸಾನಸೂಯಾ ಚಾಪ್ಯೇಷಾಂ ಸಮುದಯೋ ದಮಃ॥

ಕ್ಷಮೆ, ಧೀರತೆ, ಅಹಿಂಸೆ, ಸಮತಾ, ಸತ್ಯವಾದಿತ್ವ, ಸರಳತೆ, ಇಂದ್ರಿಯ ವಿಜಯ, ದಕ್ಷತೆ, ಕೋಮಲತೆ, ಲಜ್ಜೆ, ಸ್ಥಿರತೆ, ಉದಾರತೆ, ಕ್ರೋಧವಿಲ್ಲದಿರುವುದು, ಸಂತೋಷ, ಪ್ರಿಯ ಮಾತು, ಯಾರಿಗೂ ಕಷ್ಟವನ್ನುಂಟುಮಾಡದೇ ಇರುವುದು, ಮತ್ತು ಇನ್ನೊಬ್ಬರ ದೋಷಗಳನ್ನು ಹುಡುಕದಿರುವುದು – ಈ ಸದ್ಗುಣಗಳು ಕಾಣಿಸಿಕೊಂಡರೆ ಅದನ್ನೇ ದಮೆ ಎಂದು ಹೇಳಬಹುದು.

12154017a ಗುರುಪೂಜಾ ಚ ಕೌರವ್ಯ ದಯಾ ಭೂತೇಷ್ವಪೈಶುನಮ್।
12154017c ಜನವಾದೋಽಮೃಷಾವಾದಃ ಸ್ತುತಿನಿಂದಾವಿವರ್ಜನಮ್॥
12154018a ಕಾಮಃ ಕ್ರೋಧಶ್ಚ ಲೋಭಶ್ಚ ದರ್ಪಃ ಸ್ತಂಭೋ ವಿಕತ್ಥನಮ್।
12154018c ಮೋಹ ಈರ್ಷ್ಯಾವಮಾನಶ್ಚೇತ್ಯೇತದ್ದಾಂತೋ ನ ಸೇವತೇ॥

ಕೌರವ್ಯ! ದಾಂತನಲ್ಲಿ ಗುರುಜನರ ಕುರಿತು ಆದರದ ಭಾವ, ಸಮಸ್ತ ಪ್ರಾಣಿಗಳ ಮೇಲೆ ದಯೆ ಮತ್ತು ಯಾರನ್ನೂ ನಿಂದಿಸದೇ ಇರುವ ಸ್ವಭಾವಗಳಿರುತ್ತವೆ. ಕಾಮ, ಕ್ರೋಧ, ಲೋಭ, ದರ್ಪ, ಜಡತೆ, ಜಂಬ ಕೊಚ್ಚಿಕೊಳ್ಳುವುದು, ಮೋಹ, ಈರ್ಷ್ಯೆ, ಅಪಮಾನ ಈ ದುರ್ಗುಣಗಳು ದಾಂತನ ಬಳಿಯೂ ಸುಳಿಯುವುದಿಲ್ಲ.

12154019a ಅನಿಂದಿತೋ ಹ್ಯಕಾಮಾತ್ಮಾ ಥಾಲ್ಪೇಚ್ಛೋಽಥಾನಸೂಯಕಃ|
12154019c ಸಮುದ್ರಕಲ್ಪಃ ಸ ನರೋ ನ ಕದಾ ಚನ ಪೂರ್ಯತೇ||

ಮನಸ್ಸು ಮತ್ತು ಇಂದ್ರಿಯಗಳನ್ನು
ನಿಯಂತ್ರಣದಲ್ಲಿಟ್ಟುಕೊಂಡಿರುವವನಿಗೆ ನಿಂದೆಯುಂಟಾಗುವುದಿಲ್ಲ.
ಅವನ ಮನಸ್ಸಿನಲ್ಲಿ ಯಾವ ಕಾಮನೆಗಳೂ ಹುಟ್ಟುವುದಿಲ್ಲ. ಅವನು
ಸಣ್ಣ ಸಣ್ಣ ವಸ್ತುಗಳಿಗಾಗಿ ಇನ್ನೊಬ್ಬರ ಎದಿರು ಕೈ ಚಾಚುವುದಿಲ್ಲ
ಅಥವಾ ತುಚ್ಛ ವಿಷಯ-ಸುಖಗಳ
ಅಭಿಲಾಷೆಯನ್ನಿಟ್ಟುಕೊಂಡಿರುವುದಿಲ್ಲ. ಇನ್ನೊಬ್ಬರ ದೋಷಗಳನ್ನು
ನೋಡುವುದಿಲ್ಲ. ಅವನು ಸಮುದ್ರದಂತೆ ಅಗಾಧವಾಗಿಯೂ
ಗಂಭೀರನಾಗಿಯೂ ಇರುತ್ತಾನೆ. ಸಮುದ್ರವು ಹೇಗೆ ಅನಂತ
ಜಲರಾಶಿಯನ್ನು ಪಡೆದುಕೊಂಡೂ ತುಂಬಿ ಉಕ್ಕುವುದಿಲ್ಲವೋ ಹಾಗೆ
ಅವನೂ ಕೂಡ ನಿರಂತರ ಧರ್ಮಸಂಚಯದಿಂದ ತೃಪ್ತಿಯನ್ನೇ
ಹೊಂದುವುದಿಲ್ಲ.

12154020a ಅಹಂ ತ್ವಯಿ ಮಮ ತ್ವಂ ಚ ಮಯಿ ತೇ ತೇಷು ಚಾಪ್ಯಹಮ್|
12154020c ಪೂರ್ವಸಂಬಂಧಿಸಂಯೋಗಾನ್ನೈತದ್ದಾಂತೋ ನಿಷೇವತೇ||

“ನಾನು ನಿನ್ನೊಡನೆ ಸ್ನೇಹದಿಂದಿದ್ದೇನೆ, ನೀನು ನನ್ನಲ್ಲಿ
ಸ್ನೇಹದಿಂದಿದ್ದೀಯೆ, ಅವರು ನನ್ನಲ್ಲಿ ಅನುರಕ್ತರಾಗಿದ್ದಾರೆ ಮತ್ತು ನಾನು
ಅವರಲ್ಲಿ” ಈ ರೀತಿಯ ಪೂರ್ವ ಸಂಬಂಧ-ಸಂಯೋಗಗಳನ್ನು
ದಾಂತನು ಯೋಚಿಸುವುದಿಲ್ಲ.

12154021a ಸರ್ವಾ ಗ್ರಾಮ್ಯಸ್ತಥಾರಣ್ಯಾ ಯಾಶ್ಚ ಲೋಕೇ ಪ್ರವೃತ್ತಯಃ|
12154021c ನಿಂದಾಂ ಚೈವ ಪ್ರಶಂಸಾಂ ಚ ಯೋ ನಾಶ್ರಯತಿ ಮುಚ್ಯತೇ||

ಲೋಕದಲ್ಲಿ ಗ್ರಾಮೀಣರ ಮತ್ತು ವನವಾಸಿಗಳ ಸರ್ವಪ್ರವೃತ್ತಿಗಳನ್ನು ಮತ್ತು ನಿಂದೆ-ಪ್ರಶಂಸೆಗಳನ್ನು ಆಶ್ರಯಿಸಿದೇ ಇರುವವರು ಮೋಕ್ಷವನ್ನು ಹೊಂದುತ್ತಾರೆ.

12154022a ಮೈತ್ರೋಽಥ ಶೀಲಸಂಪನ್ನಃ ಸುಸಹಾಯಪರಶ್ಚ ಯಃ[761]|
12154022c ಮುಕ್ತಶ್ಚ ವಿವಿಧೈಃ ಸಂಗೈಸ್ತಸ್ಯ ಪ್ರೇತ್ಯ ಮಹತ್ ಫಲಮ್||

ಮೈತ್ರೀಭಾವವಿರುವ, ಶೀಲಸಂಪನ್ನ, ಇತರರಿಗೆ ಸಹಾಯಮಾಡುವ, ವಿವಿಧ ಸಂಗಗಳಿಂದ ಮುಕ್ತನಾಗಿರುವವನಿಗೆ ಮರಣಾನಂತರ ಮಹಾ ಫಲವು ದೊರೆಯುತ್ತದೆ.

12154023a ಸುವೃತ್ತಃ ಶೀಲಸಂಪನ್ನಃ ಪ್ರಸನ್ನಾತ್ಮಾತ್ಮವಿದ್ಬುಧಃ|
12154023c ಪ್ರಾಪ್ಯೇಹ ಲೋಕೇ ಸತ್ಕಾರಂ ಸುಗತಿಂ ಪ್ರತಿಪದ್ಯತೇ||

ಸದಾಚಾರೀ, ಶೀಲಸಂಪನ್ನ, ಪ್ರಸನ್ನಾತ್ಮಾ, ಆತ್ಮಜ್ಞಾನವಿರುವವನು ಈ ಲೋಕದಲ್ಲಿ ಸತ್ಕಾರಗಳನ್ನು ಪಡೆದು ಮರಣಾನಂತರ ಸದ್ಗತಿಯನ್ನು ಹೊಂದುತ್ತಾನೆ.

12154024a ಕರ್ಮ ಯಚ್ಚುಭಮೇವೇಹ ಸದ್ಭಿರಾಚರಿತಂ ಚ ಯತ್|
12154024c ತದೇವ ಜ್ಞಾನಯುಕ್ತಸ್ಯ ಮುನೇರ್ಧರ್ಮೋ ನ ಹೀಯತೇ||

ಯಾವುದನ್ನು ಶುಭಕರ್ಮವೆಂದು ಹೇಳಲಾಗಿದೆಯೋ ಮತ್ತು ಸತ್ಪುರುಷರು ಹೇಗೆ ನಡೆದುಕೊಂಡಿದ್ದರೋ ಅದೇ ಜ್ಞಾನಯುಕ್ತ ಮುನಿಯ ಧರ್ಮ. ಅದರಿಂದ ಅವನ ಧರ್ಮವು ಎಂದೂ ನಷ್ಟವಾಗುವುದಿಲ್ಲ.

---

[761] ಪ್ರಸನ್ನಾತ್ಮಾಽತ್ಮವಿಚ್ಚ ಯಃ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12154025a ನಿಷ್ಕ್ರಮ್ಯ ವನಮಾಸ್ಥಾಯ ಜ್ಞಾನಯುಕ್ತೋ ಜಿತೇಂದ್ರಿಯಃ|
12154025c ಕಾಲಾಕಾಂಕ್ಷೀ ಚರನ್ನೇವಂ ಬ್ರಹ್ಮಭೂಯಾಯ ಕಲ್ಪತೇ||

ಮನೆಯಿಂದ ಹೊರಟು ಅರಣ್ಯವನ್ನು ಸೇರಿ ಮೃತ್ಯುಕಾಲವನ್ನೇ ಪ್ರತೀಕ್ಷಿಸುತ್ತಾ ಸಂಚರಿಸುವ ಜ್ಞಾನಯುಕ್ತ ಜಿತೇಂದ್ರಿಯನು ಬ್ರಹ್ಮಭಾವವನ್ನು ಹೊಂದಲು ಸಮರ್ಥನಾಗುತ್ತಾನೆ.

12154026a ಅಭಯಂ ಯಸ್ಯ ಭೂತೇಭ್ಯೋ ಭೂತಾನಾಮಭಯಂ ಯತಃ|
12154026c ತಸ್ಯ ದೇಹಾದ್ವಿಮುಕ್ತಸ್ಯ ಭಯಂ ನಾಸ್ತಿ ಕುತಶ್ಚನ||

ಅನ್ಯ ಜೀವಿಗಳಿಗೆ ಅಭಯದಾಯಕನಾದ ಮತ್ತು ಅನ್ಯ ಜೀವಿಗಳಿಗೆ ಭಯಪಡದ ಆ ದೇಹಾಭಿಮಾನರಹಿತ ಮಹಾತ್ಮನಿಗೆ ಎಲ್ಲಿಂದಲೂ ಭಯವಿರುವುದಿಲ್ಲ.

12154027a ಅವಾಚಿನೋತಿ ಕರ್ಮಾಣಿ ನ ಚ ಸಂಪ್ರಚಿನೋತಿ ಹ|
12154027c ಸಮಃ ಸರ್ವೇಷು ಭೂತೇಷು ಮೈತ್ರಾಯಣಗತಿಶ್ಚರೇತ್||

ಅವನು ಪ್ರಾರಬ್ಧ ಕರ್ಮಗಳನ್ನು ಕ್ಷೀಣಿಸಿಕೊಳ್ಳುತ್ತಾನೆ ಮತ್ತು ಹೊಸ ಕರ್ಮಗಳನ್ನು ಸಂಪಾದಿಸಿಕೊಳ್ಳುವುದಿಲ್ಲ. ಸರ್ವ ಭೂತಗಳಲ್ಲಿಯೂ ಸಮಭಾವವನ್ನಿರಿಸಿ ಎಲ್ಲರ ಮಿತ್ರರಂತೆ ಅಭಯದಾನ ನೀಡುತ್ತಾ ಸಂಚರಿಸುತ್ತಾನೆ.

12154028a ಶಕುನೀನಾಮಿವಾಕಾಶೇ ಜಲೇ ವಾರಿಚರಸ್ಯ ವಾ|
12154028c ಯಥಾ ಗತಿರ್ನ ದೃಶ್ಯೇತ ತಥಾ ತಸ್ಯ ನ ಸಂಶಯಃ||

ಆಕಾಶದಲ್ಲಿ ಹಾರುವ ಪಕ್ಷಿಗಳ ಮತ್ತು ನೀರಿನಲ್ಲಿ ಸಂಚರಿಸುವ ಜಲಚರ ಜಂತುಗಳ ಪಾದಚಿಹ್ನೆಯು ಹೇಗೆ ಕಾಣಲು ಸಿಗುವುದಿಲ್ಲವೋ ಹಾಗೆ

ಜ್ಞಾನಿಯ ಗತಿಯನ್ನು ತಿಳಿದುಕೊಳ್ಳಲೂ ಸಾಧ್ಯವಾಗುವುದಿಲ್ಲ. ಇದರಲ್ಲಿ ಸಂಶಯವೇ ಇಲ್ಲ.

12154029a ಗೃಹಾನುತ್ಸೃಜ್ಯ ಯೋ ರಾಜನ್ಮೋಕ್ಷಮೇವಾಭಿಪದ್ಯತೇ|
12154029c ಲೋಕಾಸ್ತೇಜೋಮಯಾಸ್ತಸ್ಯ ಕಲ್ಪಂತೇ ಶಾಶ್ವತೀಃ ಸಮಾಃ||

ರಾಜನ್! ಮನೆಯನ್ನು ತೊರೆದು ಮೋಕ್ಷವನ್ನು ಅರಸಿ ಹೋಗುವವನಿಗೆ ಅನಂತ ವರ್ಷಗಳ ದಿವ್ಯ ತೇಜೋಮಯ ಲೋಕವು ಪ್ರಾಪ್ತವಾಗುತ್ತದೆ.

12154030a ಸಂನ್ಯಸ್ಯ ಸರ್ವಕರ್ಮಾಣಿ ಸಂನ್ಯಸ್ಯ ವಿಧಿವತ್ತಪಃ|
12154030c ಸಂನ್ಯಸ್ಯ ವಿವಿಧಾ ವಿದ್ಯಾಃ ಸರ್ವಂ ಸಂನ್ಯಸ್ಯ ಚೈವ ಹ||
12154031a ಕಾಮೇಷು ಚಾಪ್ಯನಾವೃತ್ತಃ ಪ್ರಸನ್ನಾತ್ಮಾತ್ಮವಿಚ್ಚುಚಿಃ|
12154031c ಪ್ರಾಪ್ಯೇಹ ಲೋಕೇ ಸತ್ಕಾರಂ ಸ್ವರ್ಗಂ ಸಮಭಿಪದ್ಯತೇ||

ಸರ್ವಕರ್ಮಗಳನ್ನೂ ತ್ಯಾಗಮಾಡಿ, ತಪಸ್ಸನ್ನೂ ತ್ಯಾಗಮಾಡಿ, ವಿವಿಧ ವಿದ್ಯೆಗಳನ್ನೂ ತ್ಯಾಗಮಾಡಿ , ಮತ್ತು ಸರ್ವವನ್ನೂ ತ್ಯಾಗಮಾಡಿ, ಕಾಮಗಳನ್ನು ತೊರೆದು ಪ್ರಸನ್ನಾತ್ಮನೂ ಶುಚಿಯೂ ಆಗಿರುವವನಿಗೆ ಈ ಲೋಕದಲ್ಲಿ ಸತ್ಕಾರ ಮತ್ತು ಪರಲೋಕದಲ್ಲಿ ಸ್ವರ್ಗವು ದೊರೆಯುತ್ತದೆ.

12154032a ಯಚ್ಚ ಪೈತಾಮಹಂ ಸ್ಥಾನಂ ಬ್ರಹ್ಮರಾಶಿಸಮುದ್ಭವಮ್|
12154032c ಗುಹಾಯಾಂ ಪಿಹಿತಂ ನಿತ್ಯಂ ತದ್ದಮೇನಾಭಿಪದ್ಯತೇ||

ಬ್ರಹ್ಮರಾಶಿಯಿಂದ ಉತ್ಪನ್ನನಾಗಿರುವ ಪಿತಾಮಹ ಬ್ರಹ್ಮನ ಉತ್ತಮ ಧಾಮವು ಹೃದಯಗುಹೆಯಲ್ಲಿ ಅಡಗಿಕೊಂಡಿದೆ. ಅದನ್ನು ದಮೆಯಿಂದಲೇ ನಿತ್ಯವೂ ಪಡೆದುಕೊಳ್ಳಬಹುದು.

12154033a ಜ್ಞಾನಾರಾಮಸ್ಯ ಬುದ್ಧಸ್ಯ ಸರ್ವಭೂತಾವಿರೋಧಿನಃ|

12154033c ನಾವೃತ್ತಿಭಯಮಸ್ತೀಹ ಪರಲೋಕೇ ಭಯಂ ಕುತಃ||

ಯಾವ ಪ್ರಾಣಿಯೊಡನೆಯೂ ವಿರೋಧವಿಲ್ಲದ ಮತ್ತು ಜ್ಞಾನಸ್ವರೂಪ ಆತ್ಮನಲ್ಲಿ ರಮಿಸುತ್ತಿರುವ ಜ್ಞಾನಿಗೆ ಈ ಲೋಕದಲ್ಲಿ ಪುನಃ ಜನ್ಮತಾಳುವ ಭಯವಿರುವುದಿಲ್ಲ. ಹಾಗಿರುವಾಗ ಅವನಿಗೆ ಪರಲೋಕದ ಭಯವು ಎಲ್ಲಿಂದ?

12154034a ಏಕ ಏವ ದಮೇ ದೋಷೋ ದ್ವಿತೀಯೋ ನೋಪಪದ್ಯತೇ|
12154034c ಯದೇನಂ ಕ್ಷಮಯಾ ಯುಕ್ತಮಶಕ್ತಂ ಮನ್ಯತೇ ಜನಃ||

ದಮೆಯಲ್ಲಿ ಒಂದೇ ಒಂದು ದೋಷವಿದೆ. ಎರಡನೆಯದು ಇಲ್ಲ. ಅದು ಏನೆಂದರೆ ಕ್ಷಮಾಶೀಲನಾಗಿರುವುದರ ಕಾರಣದಿಂದ ಅವನನ್ನು ಜನರು ಅಸಮರ್ಥನೆಂದು ತಿಳಿದುಕೊಳ್ಳುತ್ತಾರೆ.

12154035a ಏತಸ್ಯ ತು ಮಹಾಪ್ರಾಜ್ಞ ದೋಷಸ್ಯ ಸುಮಹಾನ್ಗುಣಃ|
12154035c ಕ್ಷಮಾಯಾಂ ವಿಪುಲಾ ಲೋಕಾಃ ಸುಲಭಾ ಹಿ ಸಹಿಷ್ಣುನಾ||

ಮಹಾಪ್ರಾಜ್ಞ! ಇದೊಂದು ದೋಷವೇ ಅದರ ಮಹಾಗುಣವಾಗಿದೆ. ಕ್ಷಮೆಯಿಂದ ಸಹಿಷ್ಣುವಿಗೆ ವಿಪುಲ ಲೋಕಗಳು ಸುಲಭವಾಗುತ್ತವೆ.

12154036a ದಾಂತಸ್ಯ ಕಿಮರಣ್ಯೇನ ತಥಾದಾಂತಸ್ಯ ಭಾರತ|
12154036c ಯತ್ರೈವ ಹಿ ವಸೇದ್ದಾಂತಸ್ತದರಣ್ಯಂ ಸ ಆಶ್ರಮಃ||

ಭಾರತ! ಸಂಯಮಿಯು ಅರಣ್ಯಕ್ಕೆ ಹೋಗುವ ಅವಶ್ಯಕತೆಯಾದರೂ ಏನಿದೆ? ಮತ್ತು ಅಸಂಯಮಿಯು ಅರಣ್ಯಕ್ಕೆ ಹೋಗುವುದರಿಂದ ಲಾಭವಾದರೂ ಏನಿದೆ? ಸಂಯಮಿಯು ಎಲ್ಲಿಯೇ ಇರಲಿ ಅದೇ ಅವನಿಗೆ ವನ ಮತ್ತು ಆಶ್ರಮವು.””

12154037 ವೈಶಂಪಾಯನ ಉವಾಚ|
12154037a ಏತದ್ ಭೀಷ್ಮಸ್ಯ ವಚನಂ ಶ್ರುತ್ವಾ ರಾಜಾ ಯುಧಿಷ್ಠಿರಃ|
12154037c ಅಮೃತೇನೇವ ಸಂತೃಪ್ತಃ ಪ್ರಹೃಷ್ಟಃ ಸಮಪದ್ಯತ||

ವೈಶಂಪಾಯನನು ಹೇಳಿದನು: "ಭೀಷ್ಮನ ಈ ಮಾತನ್ನು ಕೇಳಿ ರಾಜಾ ಯುಧಿಷ್ಠಿರನು ಅಮೃತವನ್ನು ಕುಡಿದವನಂತೆಯೇ ಸಂತೃಪ್ತನಾಗಿ ಪ್ರಹೃಷ್ಟನಾದನು.

12154038a ಪುನಶ್ಚ ಪರಿಪಪ್ರಚ್ಚ ಭೀಷ್ಮಂ ಧರ್ಮಭೃತಾಂ ವರಮ್|
12154038c ತಪಃ ಪ್ರತಿ ಸ ಚೋವಾಚ ತಸ್ಮೈ ಸರ್ವಂ ಕುರೂದ್ವಹ||

ಕರೂದ್ವಹ! ಅವನು ಪುನಃ ಧರ್ಮಭೃತರಲ್ಲಿ ಶ್ರೇಷ್ಠ ಭೀಷ್ಮನಲ್ಲಿ ತಪಸ್ಸಿನ ಕುರಿತು ಕೇಳಿದನು. ಆಗ ಭೀಷ್ಮನು ಅವನಿಗೆ ಈ ವಿಷಯದಲ್ಲಿ ಎಲ್ಲವನ್ನೂ ಹೇಳಿದನು.

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ದಮಕಥನೇ ಚತುಷ್ಪಂಚಾಶದಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ದಮನಕಥನ ಎನ್ನುವ ನೂರಾಐವತ್ನಾಲ್ಕನೇ ಅಧ್ಯಾಯವು.

೧೫೫

ತಪಸ್ಸಿನ ಮಹಿಮೆ (1-13).

12155001 ಭೀಷ್ಮ ಉವಾಚ|
12155001a ಸರ್ವಮೇತತ್ತಪೋಮೂಲಂ ಕವಯಃ ಪರಿಚಕ್ಷತೇ|
12155001c ನ ಹ್ಯತಪ್ತತಪಾ ಮೂಢಃ ಕ್ರಿಯಾಫಲಮವಾಪ್ನುತೇ||

ಭೀಷ್ಮನು ಹೇಳಿದನು: "ಈ ಎಲ್ಲವುಗಳ ಮೂಲವೂ ತಪಸ್ಸೆಂದು ವಿದ್ವಾಂಸರು ಹೇಳುತ್ತಾರೆ. ತಪಸ್ಸನ್ನು ಮಾಡದ ಮೂಢನಿಗೆ ಶುಭ ಕರ್ಮಗಳ ಫಲವು ದೊರೆಯುವುದಿಲ್ಲ.

12155002a ಪ್ರಜಾಪತಿರಿದಂ ಸರ್ವಂ ತಪಸ್ಯೈವಾಸೃಜತ್ ಪ್ರಭುಃ|
12155002c ತಥೈವ ವೇದಾನ್ ಋಷಯಸ್ತಪಸಾ ಪ್ರತಿಪೇದಿರೇ||

ಪ್ರಭು ಪ್ರಜಾಪತಿಯು ತಪಸ್ಸಿನಿಂದಲೇ ಈ ಎಲ್ಲವನ್ನೂ ಸೃಷ್ಟಿಸಿದನು. ಹಾಗೆಯೇ ಋಷಿಗಳು ತಪಸ್ಸಿನಿಂದಲೇ ವೇದಗಳನ್ನು ಪಡೆದುಕೊಂಡರು.

12155003a ತಪಸೋ ಹ್ಯಾನುಪೂರ್ವ್ಯೇಣ ಫಲಮೂಲಾನಿಲಾಶನಾಃ[762]|
12155003c ತ್ರೀಽಲ್ಲೋಕಾಂಸ್ತಪಸಾ ಸಿದ್ಧಾಃ ಪಶ್ಯಂತಿ ಸುಸಮಾಹಿತಾಃ||

ಫಲ, ಮೂಲಗಳು ಮತ್ತು ಅನ್ನಗಳನ್ನು ಕ್ರಮೇಣವಾಗಿ ತಪಸ್ಸಿನಿಂದಲೇ ಸೃಷ್ಟಿಸಲಾಯಿತು. ತಪಸ್ಸಿನಿಂದ ಸಿದ್ಧರಾದ ಏಕಾಗ್ರಚಿತ್ತ ಮಹಾತ್ಮರು ಮೂರು ಲೋಕಗಳನ್ನೂ ಪ್ರತ್ಯಕ್ಷ ನೋಡುತ್ತಾರೆ.

12155004a ಔಷಧಾನ್ಯಗದಾದೀನಿ ತಿಸ್ರೋ ವಿದ್ಯಾಶ್ಚ ಸಂಸ್ಕೃತಾಃ[763]|
12155004c ತಪಸ್ಯೈವ ಹಿ ಸಿಧ್ಯಂತಿ ತಪೋಮೂಲಂ ಹಿ ಸಾಧನಮ್||

ಔಷಧ, ಆರೋಗ್ಯ ಮೊದಲಾದವುಗಳು, ಮೂರು ವಿದ್ಯೆಗಳು ಮತ್ತು ಸತ್ಕರ್ಮಗಳು ತಪಸ್ಸಿನಿಂದಲೇ ಸಿದ್ಧಿಸುತ್ತವೆ. ಏಕೆಂದರೆ ಸಾಧನೆಗಳ ಮೂಲವೇ ತಪಸ್ಸು.

---

762 ತಪಸ್ಯೈವ ಸಸರ್ಜಾನ್ನಂ ಫಲಮೂಲಾನಿ ಯಾನಿ ಚ| (ಗೀತಾ ಪ್ರೆಸ್).

763 ಔಷಧಾನ್ಯಗದಾದೀನಿ ಕ್ರಿಯಾಶ್ಚ ವಿವಿಧಾಸ್ತಥಾ| (ಗೀತಾ ಪ್ರೆಸ್).

12155005a ಯದ್ದುರಾಪಂ ದುರಾಮ್ನಾಯಂ ದುರಾಧರ್ಷಂ ದುರುತ್ಸಹಮ್|
12155005c ಸರ್ವಂ ತತ್ತಪಸಾ ಶಕ್ಯಂ ತಪೋ ಹಿ ದುರತಿಕ್ರಮಮ್[764]||

ಪಡೆಯಲು ಕಷ್ಟಕರವಾಗಿರುವ, ಸುರಕ್ಷಿತವಾಗಿಟ್ಟುಕೊಳ್ಳಿರಲು
ಅಸಾಧ್ಯವಾಗಿರುವ, ಸಹಿಸಲು ಕಷ್ಟಕರವಾಗಿರುವ ಮತ್ತು
ನೆರವೇರಿಸಲು ಕಷ್ಟವಾದ ಎಲ್ಲವೂ ತಪಸ್ಸಿನಿಂದ ಶಕ್ಯವಾಗುತ್ತದೆ.
ಏಕೆಂದರೆ ತಪಸ್ಸನ್ನು ಅತಿಕ್ರಮಿಸಲು ಸಾಧ್ಯವಿಲ್ಲ.

12155006a ಸುರಾಪೋಽಸಂಮತಾದಾಯೀ ಭ್ರೂಣಹಾ ಗುರುತಲ್ಪಗಃ|
12155006c ತಪಸ್ಯೇವ ಸುತಪ್ತೇನ ನರಃ ಪಾಪಾದ್ವಿಮುಚ್ಯತೇ||

ಸುರಾಪಾನಮಾಡಿದ, ಸಮ್ಮತಿಯಿಲ್ಲದೇ ಪರರ ವಸ್ತುವನ್ನು
ತೆಗೆದುಕೊಂಡ, ಭ್ರೂಣಹತ್ಯೆಮಾಡಿದ, ಮತ್ತು ಗುರುಪತ್ನಿಯೊಡನೆ
ಮಲಗಿದ ನರನು ಚೆನ್ನಾಗಿ ತಪಿಸಿದ ತಪಸ್ಸಿನ ಮೂಲಕವೇ ತನ್ನ
ಪಾಪದಿಂದ ಮುಕ್ತನಾಗುತ್ತಾನೆ.

12155007a ತಪಸೋ ಬಹುರೂಪಸ್ಯ ತೈಸ್ತೈರ್ದ್ವಾರೈಃ ಪ್ರವರ್ತತಃ|
12155007c ನಿವೃತ್ತ್ಯಾ ವರ್ತಮಾನಸ್ಯ ತಪೋ ನಾನಶನಾತ್ಪರಮ್||

ತಪಸ್ಸಿಗೆ ಬಹುರೂಪಗಳಿವೆ ಮತ್ತು ಬೇರೆ ಬೇರೆ ಜನರು ಬೇರೆ ಬೇರೆ
ಮಾರ್ಗಗಳನ್ನು ಬಳಸಿ ತಪಸ್ಸನ್ನಾಚರಿಸುತ್ತಾರೆ. ಆದರೆ
ನಿವೃತ್ತಿಮಾರ್ಗದವರಿಗೆ ಉಪವಾಸಕ್ಕಿಂತ ದೊಡ್ಡದಾದ ತಪಸ್ಸಿಲ್ಲ.

12155008a ಅಹಿಂಸಾ ಸತ್ಯವಚನಂ ದಾನಮಿಂದ್ರಿಯನಿಗ್ರಹಃ|

---

[764] ಯದ್ದುರಾಪಂ ಭವೇತ್ಕಿಂಚಿತ್ತತ್ಸರ್ವಂ ತಪಸೋ ಭವೇತ್|
ಐಶ್ವರ್ಯಮೃಷಯಃ ಪ್ರಾಪ್ತಾಸ್ತಪಸ್ಯೇವ ನ ಸಂಶಯಃ|| (ಗೀತಾ ಪ್ರೆಸ್).

12155008c ಏತೇಭ್ಯೋ ಹಿ ಮಹಾರಾಜ ತಪೋ ನಾನಶನಾತ್ ಪರಮ್‌॥

ಮಹಾರಾಜ! ಅಹಿಂಸೆ, ಸತ್ಯವಚನ, ದಾನ, ಮತ್ತು ಇಂದ್ರಿಯನಿಗ್ರಹ – ಇವುಗಳಿಗೂ ಹೆಚ್ಚಿನ ತಪಸ್ಸುಗಳಿವೆ. ಆದರೆ ಉಪವಾಸಕ್ಕಿಂತ ದೊಡ್ಡ ತಪಸ್ಸು ಇಲ್ಲ.

12155009a ನ ದುಷ್ಕರತರಂ ದಾನಾನ್ನಾತಿಮಾತರಮಾಶ್ರಮಃ|
12155009c ತ್ರೈವಿದ್ಯೇಭ್ಯಃ ಪರಂ ನಾಸ್ತಿ ಸಂನ್ಯಾಸಃ ಪರಮಂ ತಪಃ‌॥

ದಾನಕ್ಕಿಂತ ಹೆಚ್ಚು ದುಷ್ಕರವಾದ ಕರ್ಮವಿಲ್ಲ. ತಾಯಿಗಿಂತ ದೊಡ್ಡ ಆಶ್ರಯವಿಲ್ಲ. ಮೂರು ವೇದಗಳಿಗಿಂತ ಹೆಚ್ಚಿನ ವಿದ್ಯೆಯಿಲ್ಲ ಮತ್ತು ಸಂನ್ಯಾಸಕ್ಕಿಂತ ಪರಮ ತಪಸ್ಸಿಲ್ಲ.

12155010a ಇಂದ್ರಿಯಾಣೀಹ ರಕ್ಷಂತಿ ಧನಧಾನ್ಯಾಭಿಗುಪ್ತಯೇ[765]|
12155010c ತಸ್ಮಾದರ್ಥೇ ಚ ಧರ್ಮೇ ಚ ತಪೋ ನಾನಶನಾತ್ಪರಮ್‌॥

ಇಲ್ಲಿ ಧನ-ಧಾನ್ಯಗಳನ್ನು ರಕ್ಷಿಸಿಕೊಳ್ಳಲು ಇಂದ್ರಿಯಗಳನ್ನು ನಿಗ್ರಹಿಸಿಕೊಳ್ಳುತ್ತಾರೆ. ಆದರೆ ಧರ್ಮ ಮತ್ತು ಅರ್ಥ ಇವೆರಡರ ಸಿದ್ಧಿಗೂ ತಪಸ್ಸೇ ಶ್ರೇಷ್ಠ ಸಾಧನವು ಮತ್ತು ಉಪವಾಸಕ್ಕಿಂತ ದೊಡ್ಡ ತಪಸ್ಸು ಇನ್ನೊಂದಿಲ್ಲ.

12155011a ಋಷಯಃ ಪಿತರೋ ದೇವಾ ಮನುಷ್ಯಾ ಮೃಗಸತ್ತಮಾಃ[766]|
12155011c ಯಾನಿ ಚಾನ್ಯಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ‌॥

---

765 ಸ್ವರ್ಗಧರ್ಮಾಭಿಗುಪ್ತಯೇ (ಗೀತಾ ಪ್ರೆಸ್). ಇಲ್ಲಿ ಇದೇ ಸರಿಯೆಂದು ತೋರುತ್ತದೆ.

766 ಮೃಗಪಕ್ಷಿಣಃ (ಗೀತಾ ಪ್ರೆಸ್). ಇಲ್ಲಿ ಇದೇ ಸರಿಯೆಂದು ತೋರುತ್ತದೆ.

12155012a ತಪಃಪರಾಯಣಾಃ ಸರ್ವೇ ಸಿಧ್ಯಂತಿ ತಪಸಾ ಚ ತೇ|
12155012c ಇತ್ಯೇವಂ ತಪಸಾ ದೇವಾ ಮಹತ್ತ್ವಂ ಚಾಪ್ಯವಾಪ್ನುವನ್[767]||

ಋಷಿಗಳು, ಪಿತೃಗಳು, ದೇವತೆಗಳು, ಮನುಷ್ಯರು, ಮೃಗಪಕ್ಷಿಗಳು, ಮತ್ತು ಅನ್ಯ ಸ್ಥಾವರ-ಚರ ಭೂತಗಳು ಎಲ್ಲರೂ ತಪಸ್ಸಿನಲ್ಲಿಯೇ ತತ್ಪರರಾಗಿದ್ದಾರೆ. ತಪಸ್ಸಿನಿಂದಲೇ ಅವರಿಗೆ ಸಿದ್ಧಿಯುಂಟಾಗುತ್ತದೆ. ಇದೇ ರೀತಿಯಲ್ಲಿ ತಪಸ್ಸಿನಿಂದಲೇ ದೇವತೆಗಳು ಮಹತ್ತ್ವವನ್ನು ಪಡೆದುಕೊಂಡರು.

12155013a ಇಮಾನೀಷ್ಟವಿಭಾಗಾನಿ ಫಲಾನಿ ತಪಸಾ ಸದಾ|
12155013c ತಪಸಾ ಶಕ್ಯತೇ ಪ್ರಾಪ್ತುಂ ದೇವತ್ವಮಪಿ ನಿಶ್ಚಯಾತ್||

ಭಿನ್ನ ಭಿನ್ನ ಅಭೀಷ್ಟಗಳು ತಪಸ್ಸಿನಿಂದಲೇ ಸುಲಭವಾಗುತ್ತವೆ. ನಿಶ್ಚಯವಾಗಿಯೂ ತಪಸ್ಸಿನಿಂದ ದೇವತ್ವವನ್ನೂ ಪಡೆದುಕೊಳ್ಳಬಹುದು.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ತಪಃಪ್ರಶಂಸಾಯಾಂ ಪಂಚಪಂಚಾಶದಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ತಪಃಪ್ರಶಂಸಾ ಎನ್ನುವ ನೂರಾಐವತ್ತೈದನೇ ಅಧ್ಯಾಯವು.

೧೫೬

ಸತ್ಯದ ಲಕ್ಷಣ, ಸ್ವರೂಪ ಮತ್ತು ಮಹಿಮೆಯ ವರ್ಣನೆ (1-26).

[767] ಪ್ರತಿಪೇದಿರೇ (ಗೀತಾ ಪ್ರೆಸ್).

12156001 ಯುಧಿಷ್ಠಿರ ಉವಾಚ|
12156001a ಸತ್ಯಂ ಧರ್ಮೇ ಪ್ರಶಂಸಂತಿ ವಿಪ್ರರ್ಷಿಪಿತೃದೇವತಾಃ|
12156001c ಸತ್ಯಮಿಚ್ಚಾಮ್ಯಹಂ ಶ್ರೋತುಂ ತನ್ಮೇ ಬ್ರೂಹಿ ಪಿತಾಮಹ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ವಿಪ್ರರ್ಷಿಗಳು, ಪಿತೃಗಳು ಮತ್ತು ದೇವತೆಗಳು ಧರ್ಮದಲ್ಲಿ ಸತ್ಯವನ್ನೇ ಪ್ರಶಂಸಿಸುತ್ತಾರೆ. ಸತ್ಯದ ಕುರಿತು ಕೇಳಲು ಬಯಸುತ್ತೇನೆ. ಅದರ ಕುರಿತು ಹೇಳು.

12156002a ಸತ್ಯಂ ಕಿಂಲಕ್ಷಣಂ ರಾಜನ್ಕಥಂ ವಾ ತದವಾಪ್ಯತೇ|
12156002c ಸತ್ಯಂ ಪ್ರಾಪ್ಯ ಭವೇತ್ಕಿಂ ಚ ಕಥಂ ಚೈವ ತದುಚ್ಯತೇ||

ರಾಜನ್! ಸತ್ಯದ ಲಕ್ಷಣವೇನು? ಅದನ್ನು ಹೇಗೆ ಪಡೆದುಕೊಳ್ಳಬಹುದು? ಸತ್ಯವನ್ನು ಪಾಲಿಸುವುದರಲ್ಲಿ ಯಾವ ಲಾಭವಿದೆ? ಅದು ಹೇಗಿರುತ್ತದೆ ಎಂದು ಹೇಳುತ್ತಾರೆ?"

12156003 ಭೀಷ್ಮ ಉವಾಚ|
12156003a ಚಾತುರ್ವರ್ಣ್ಯಸ್ಯ ಧರ್ಮಾಣಾಂ ಸಂಕರೋ ನ ಪ್ರಶಸ್ಯತೇ|
12156003c ಅವಿಕಾರಿತಮಂ ಸತ್ಯಂ ಸರ್ವವರ್ಣೇಷು ಭಾರತ||

ಭೀಷ್ಮನು ಹೇಳಿದನು: "ಭಾರತ! ನಾಲ್ಕೂ ವರ್ಣದವರ ಸಮ್ಮಿಶ್ರಣವನ್ನು ಉತ್ತಮವೆಂದು ಹೇಳುವುದಿಲ್ಲ. ನಿರ್ವಿಕಾರ ಸತ್ಯವು ಸರ್ವವರ್ಣದವರಲ್ಲಿಯೂ ಇದೆ.

12156004a ಸತ್ಯಂ ಸತ್ಸು ಸದಾ ಧರ್ಮಃ ಸತ್ಯಂ ಧರ್ಮಃ ಸನಾತನಃ|
12156004c ಸತ್ಯಮೇವ ನಮಸ್ಯೇತ ಸತ್ಯಂ ಹಿ ಪರಮಾ ಗತಿಃ||

ಸತ್ಪುರುಷರ ಧರ್ಮವು ಸದಾ ಸತ್ಯವೇ ಆಗಿದೆ. ಸತ್ಯವು ಸನಾತನ

ಧರ್ಮವು. ಸತ್ಯಕ್ಕೇ ನಮಸ್ಕರಿಸಬೇಕು ಏಕೆಂದರೆ ಸತ್ಯವೇ ಪರಮ ಗತಿಯು.

12156005a ಸತ್ಯಂ ಧರ್ಮಸ್ತಪೋ ಯೋಗಃ ಸತ್ಯಂ ಬ್ರಹ್ಮ ಸನಾತನಮ್।
12156005c ಸತ್ಯಂ ಯಜ್ಞಃ ಪರಃ ಪ್ರೋಕ್ತಃ ಸತ್ಯೇ ಸರ್ವಂ ಪ್ರತಿಷ್ಠಿತಮ್॥

ಸತ್ಯವೇ ಧರ್ಮ, ತಪಸ್ಸು ಮತ್ತು ಯೋಗವು. ಸತ್ಯವು ಸನಾತನ ಬ್ರಹ್ಮವು. ಸತ್ಯವನ್ನು ಪರಮ ಯಜ್ಞವೆಂದು ಹೇಳುತ್ತಾರೆ. ಸತ್ಯದಲ್ಲಿಯೇ ಎಲ್ಲವೂ ಪ್ರತಿಷ್ಠಿತಗೊಂಡಿವೆ.

12156006a ಆಚಾರಾನಿಹ ಸತ್ಯಸ್ಯ ಯಥಾವದನುಪೂರ್ವಶಃ।
12156006c ಲಕ್ಷಣಂ ಚ ಪ್ರವಕ್ಷ್ಯಾಮಿ ಸತ್ಯಸ್ಯೇಹ ಯಥಾಕ್ರಮಮ್॥

ಈಗ ನಾನು ಸತ್ಯದ ಆಚಾರ ಮತ್ತು ಲಕ್ಷಣಗಳನ್ನು ಯಥಾವತ್ತಾಗಿ ಹೇಳುತ್ತೇನೆ.

12156007a ಪ್ರಾಪ್ಯತೇ ಹಿ ಯಥಾ ಸತ್ಯಂ ತಚ್ಚ ಶ್ರೋತುಂ ತ್ವಮರ್ಹಸಿ।
12156007c ಸತ್ಯಂ ತ್ರಯೋದಶವಿಧಂ ಸರ್ವಲೋಕೇಷು ಭಾರತ॥

ಹಾಗೆಯೇ ಸತ್ಯವು ಹೇಗೆ ಪ್ರಾಪ್ತವಾಗುತ್ತದೆ ಎನ್ನುವುದನ್ನೂ ನೀನು ಕೇಳಬೇಕು. ಭಾರತ! ಸರ್ವಲೋಕಗಳಲ್ಲಿ ಸತ್ಯವು ಈ ಹದಿಮೂರು ವಿಧಗಳಲ್ಲಿದೆ.

12156008a ಸತ್ಯಂ ಚ ಸಮತಾ ಚೈವ ದಮಶ್ಚೈವ ನ ಸಂಶಯಃ।
12156008c ಅಮಾತ್ಸರ್ಯಂ ಕ್ಷಮಾ ಚೈವ ಹ್ರೀಸ್ತಿತಿಕ್ಷಾನಸೂಯತಾ॥
12156009a ತ್ಯಾಗೋ ಧ್ಯಾನಮಥಾರ್ಯತ್ವಂ ಧೃತಿಶ್ಚ ಸತತಂ ಸ್ಥಿರಾ।
12156009c ಅಹಿಂಸಾ ಚೈವ ರಾಜೇಂದ್ರ ಸತ್ಯಾಕಾರಾಸ್ತ್ರಯೋದಶ॥

ರಾಜೇಂದ್ರ! ಸತ್ಯ, ಸಮತಾ, ದಮೆ, ಅಮಾತ್ಸರ್ಯ, ಕ್ಷಮೆ, ಲಜ್ಜೆ, ಸಹನಶೀಲನೆ, ಅನಸೂಯತೆ, ತ್ಯಾಗ, ಧ್ಯಾನ, ಆರ್ಯತ್ವ ಅಂದರೆ ಶ್ರೇಷ್ಠ ಆಚರಣೆ, ಸತತ ಸ್ಥಿರತೆಯಿಂದಿರುವ ಧೃತಿ, ಮತ್ತು ಅಹಿಂಸಾ – ಈ ಹದಿಮೂರು ಸತ್ಯದ ಆಕಾರಗಳು.

12156010a ಸತ್ಯಂ ನಾಮಾವ್ಯಯಂ ನಿತ್ಯಮವಿಕಾರಿ ತಥೈವ ಚ|
12156010c ಸರ್ವಧರ್ಮಾವಿರುದ್ಧಂ ಚ ಯೋಗೇನೈತದವಾಪ್ಯತೇ॥

ನಿತ್ಯವೂ ಒಂದೇ ಆಗಿದ್ದು, ಅವಿನಾಶಿಯೂ ಅವಿಕಾರಿಯೂ ಆಗಿರುವುದೇ ಸತ್ಯ. ಸರ್ವಧರ್ಮಗಳಿಗೂ ಅವಿರೋಧವಾಗಿರುವ ಯೋಗದಿಂದಲೇ ಸತ್ಯದ ಪ್ರಾಪ್ತಿಯಾಗುತ್ತದೆ.

12156011a ಆತ್ಮನೀಷ್ಟೇ ತಥಾನಿಷ್ಟೇ ರಿಪೌ ಚ ಸಮತಾ ತಥಾ|
12156011c ಇಚ್ಛಾದ್ವೇಷಕ್ಷಯಂ ಪ್ರಾಪ್ಯ ಕಾಮಕ್ರೋಧಕ್ಷಯಂ ತಥಾ॥

ತನ್ನ ಇಷ್ಟವಾಗಿರುವವರಲ್ಲಿ ಮತ್ತು ಅನಿಷ್ಟ ಶತ್ರುಗಳಲ್ಲಿ ಸಮನಾಗಿರುವುದೇ ಸಮತೆಯು. ಇಚ್ಛೆ (ರಾಗ), ದ್ವೇಷ ಹಾಗೂ ಕಾಮ-ಕ್ರೋಧಗಳನ್ನು ಕಳೆದುಕೊಳ್ಳುವುದೇ ಸಮತೆಯನ್ನು ಪಡೆದುಕೊಳ್ಳುವ ಉಪಾಯವು.

12156012a ದಮೋ ನಾನ್ಯಸ್ಪೃಹಾ ನಿತ್ಯಂ ಧೈರ್ಯಂ ಗಾಂಭೀರ್ಯಮೇವ ಚ|
12156012c ಅಭಯಂ ಕ್ರೋಧಶಮನಂ[768] ಜ್ಞಾನೇನೈತದವಾಪ್ಯತೇ॥

ಬೇರೆಯವರ ವಸ್ತುಗಳನ್ನು ಬಯಸದೇ ಇರುವುದು, ಸದಾ

---

[768] ರೋಗಶಮನಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್). ಆದರೆ ಇಲ್ಲ ಕ್ರೋಧಶಮನಂ ಎನ್ನುವುದೇ ಸರಿಯೆಂದು ತೋರುತ್ತದೆ.

ಗಂಭೀರವಾಗಿರುವುದು ಮತ್ತು ಧೈರ್ಯದಿಂದಿರುವುದು, ಭಯವನ್ನು ತ್ಯಜಿಸುವುದು ಮತ್ತು ಕ್ರೋಧವನ್ನು ತಣಿಸಿಕೊಳ್ಳುವುದು ಇವೆಲ್ಲವೂ ದಮೆಯ ಲಕ್ಷಣಗಳು. ಇದು ಜ್ಞಾನದಿಂದ ಪ್ರಾಪ್ತವಾಗುತ್ತದೆ.

12156013a ಅಮಾತ್ಸರ್ಯಂ ಬುಧಾಃ ಪ್ರಾಹುರ್ದಾನಂ ಧರ್ಮೇ ಚ ಸಂಯಮಮ್।
12156013c ಅವಸ್ಥಿತೇನ ನಿತ್ಯಂ ಚ ಸತ್ಯೇನಾಮತ್ಸರೀ ಭವೇತ್॥

ದಾನ-ಧರ್ಮಗಳನ್ನು ಮಾಡುವಾಗ ಮನಸ್ಸನ್ನು ಸಂಯಮದಲ್ಲಿಟ್ಟುಕೊಳ್ಳುವುದನ್ನೇ ಅಮಾತ್ಸರ್ಯ ಎಂದು ತಿಳಿದವರು ಹೇಳುತ್ತಾರೆ. ನಿತ್ಯವೂ ಸತ್ಯಪಾಲನೆಯಿಂದಲೇ ಮನುಷ್ಯನು ಅಮತ್ಸರಿಯಾಗುತ್ತಾನೆ.

12156014a ಅಕ್ಷಮಾಯಾಃ ಕ್ಷಮಾಯಾಶ್ಚ ಪ್ರಿಯಾಣೀಹಾಪ್ರಿಯಾಣಿ ಚ।
12156014c ಕ್ಷಮತೇ ಸರ್ವತಃ ಸಾಧುಃ ಸಾಧ್ವಾಪ್ನೋತಿ ಚ ಸತ್ಯವಾನ್॥

ಪ್ರಿಯವಾಗಿರಲೀ ಮತ್ತು ಅಪ್ರಿಯವಾಗಿರಲೀ ಅಕ್ಷಮ್ಯವಾದವುಗಳನ್ನೂ ಕ್ಷಮಿಸುವುದೇ ಕ್ಷಮೆ. ಸತ್ಯವಂತ ಸಾಧುವಿಗೇ ಕ್ಷಮೆಯು ಪ್ರಾಪ್ತವಾಗುತ್ತದೆ.

12156015a ಕಲ್ಯಾಣಂ ಕುರುತೇ ಗಾಢಂ ಹ್ರೀಮಾನ್ನ ಶ್ಲಾಘತೇ ಕ್ವ ಚಿತ್[769]।
12156015c ಪ್ರಶಾಂತವಾಙ್ಮನಾ ನಿತ್ಯಂ ಹ್ರೀಸ್ತು ಧರ್ಮಾದವಾಪ್ಯತೇ॥

ಗಾಢವಾದ ಕಲ್ಯಾಣವನ್ನು ಮಾಡಿಯೂ ತನ್ನನ್ನು ತಾನು ಹೊಗಳಿಕೊಳ್ಳದಿರುವವನೇ ಲಜ್ಜಾವಂತನು. ಪ್ರಶಾಂತ ಮಾತು-

[769] ಕಲ್ಯಾಣಂ ಕುರುತೇ ಬಾಢಂ ಧೀಮಾನ್ನ ಗ್ಲಾಯತೇ ಕ್ವಚಿತ್। ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಮನಸ್ಸುಗಳಿಂದ ಮತ್ತು ಧರ್ಮದಿಂದ ಲಜ್ಜೆಯು ಪ್ರಾಪ್ತವಾಗುತ್ತದೆ.

12156016a ಧರ್ಮಾರ್ಥಹೇತೋಃ ಕ್ಷಮತೇ ತಿತಿಕ್ಷಾ ಕ್ಷಾಂತಿರುಚ್ಯತೇ|
12156016c ಲೋಕಸಂಗ್ರಹಣಾರ್ಥಂ ತು ಸಾ ತು ಧೈರ್ಯೇಣ ಲಭ್ಯತೇ||

ಧರ್ಮಾರ್ಥಗಳಿಗಾಗಿ ಕಷ್ಟಗಳನ್ನು ಸಹಿಸಿಕೊಳ್ಳುವುದನ್ನೇ ತಿತಿಕ್ಷಾ ಅಥವಾ ಸಹನಶೀಲತೆ ಎನ್ನುತ್ತಾರೆ. ಲೋಕಸಂಗ್ರಹಣಾರ್ಥವಾಗಿ ಅದನ್ನು ಪಾಲಿಸಬೇಕು. ಅದು ಧೈರ್ಯದಿಂದ ಉಪಲಬ್ಧವಾಗುತ್ತದೆ.

12156017a ತ್ಯಾಗಃ ಸ್ನೇಹಸ್ಯ ಯಸ್ತ್ಯಾಗೋ ವಿಷಯಾಣಾಂ ತಥೈವ ಚ|
12156017c ರಾಗದ್ವೇಷಪ್ರಹೀಣಸ್ಯ ತ್ಯಾಗೋ ಭವತಿ ನಾನ್ಯಥಾ||

ವಿಷಯಗಳ ಕುರಿತಾದ ಸ್ನೇಹವನ್ನು ತ್ಯಜಿಸುವುದೇ ತ್ಯಾಗವು. ರಾಗ-ದ್ವೇಷಗಳನ್ನು ಕಳೆದುಕೊಳ್ಳುವುದರಿಂದಲೇ ತ್ಯಾಗದ ಸಿದ್ಧಿಯಾಗುತ್ತದೆ. ಅನ್ಯಥಾ ಇಲ್ಲ.

12156018a ಆರ್ಯತಾ ನಾಮ ಭೂತಾನಾಂ ಯಃ ಕರೋತಿ ಪ್ರಯತ್ನತಃ|
12156018c ಶುಭಂ ಕರ್ಮ ನಿರಾಕಾರೋ ವೀತರಾಗತ್ವಮೇವ ಚ||

ಪ್ರಾಣಿಗಳ ಹಿತಕ್ಕಾಗಿ ಪ್ರಯತ್ನಪೂರ್ವಕವಾಗಿ ಶುಭ ಕರ್ಮಗಳನ್ನು ನಿರಾಕಾರನಾಗಿ ಮಾಡುತ್ತಿರುವುದಕ್ಕೇ ಆರ್ಯತಾ ಎಂಬ ಹೆಸರು. ಇದು ಅನುರಾಗವನ್ನು ತೊರೆಯುವುದರಿಂದಲೇ ಪ್ರಾಪ್ತವಾಗುತ್ತದೆ.

12156019a ಧೃತಿರ್ನಾಮ ಸುಖೇ ದುಃಖೇ ಯಥಾ ನಾಪ್ನೋತಿ ವಿಕ್ರಿಯಾಮ್|
12156019c ತಾಂ ಭಜೇತ ಸದಾ ಪ್ರಾಜ್ಞೋ ಯ ಇಚ್ಛೇದ್ಭೂತಿಮಾತ್ಮನಃ||

ಸುಖ ಅಥವಾ ದುಃಖವೊದಗಿದಾಗ ಮನೋವಿಕಾರಹೊಂದದೇ ಇರುವುದರ ಹೆಸರು ಧೃತಿ. ತನ್ನ ಉನ್ನತಿಯನ್ನು ಬಯಸುವ ಪ್ರಾಜ್ಞನು

ಸದಾ ತನ್ನಲ್ಲಿ ಧೃತಿಯನ್ನಿಟ್ಟುಕೊಂಡಿರಬೇಕು.

12156020a ಸರ್ವಥಾ ಕ್ಷಮಿಣಾ ಭಾವ್ಯಂ ತಥಾ ಸತ್ಯಪರೇಣ ಚ|
12156020c ವೀತಹರ್ಷಭಯಕ್ರೋಧೋ ಧೃತಿಮಾಪ್ನೋತಿ ಪಂಡಿತಃ||

ಸರ್ವಥಾ ಕ್ಷಮಿಯಾಗಿರಬೇಕು ಮತ್ತು ಸತ್ಯ ತತ್ಪರನಾಗಿರಬೇಕು. ಹರ್ಷ-ಭಯ-ಕ್ರೋಧಗಳನ್ನು ಕಳೆದುಕೊಂಡ ಪಂಡಿತನು ಧೃತಿಯನ್ನು ಹೊಂದುತ್ತಾನೆ.

12156021a ಅದ್ರೋಹಃ ಸರ್ವಭೂತೇಷು ಕರ್ಮಣಾ ಮನಸಾ ಗಿರಾ|
12156021c ಅನುಗ್ರಹಶ್ಚ ದಾನಂ ಚ ಸತಾಂ ಧರ್ಮಃ ಸನಾತನಃ||

ಮನಸ್ಸು, ಮಾತು ಮತ್ತು ಕರ್ಮಗಳಿಂದ ಸರ್ವಭೂತಗಳಿಗೂ ದ್ರೋಹವನ್ನೆಸಗದೇ ಇರುವುದು, ದಯೆ ಮತ್ತು ದಾನ ಇವು ಸತ್ಪುರುಷರ ಸನಾತನ ಧರ್ಮವು.

12156022a ಏತೇ ತ್ರಯೋದಶಾಕಾರಾಃ ಪೃಥಕ್ಸತ್ತ್ವೈಕಲಕ್ಷಣಾಃ|
12156022c ಭಜಂತೇ ಸತ್ಯಮೇವೇಹ ಬೃಂಹಯಂತಿ ಚ ಭಾರತ||

ಭಾರತ! ಈ ಹದಿಮೂರು ಆಕಾರಗಳ ಪ್ರತ್ಯೇಕ ಪ್ರತ್ಯೇಕ ಧರ್ಮಗಳು ಸತ್ಯದ ಲಕ್ಷಣಗಳೇ ಆಗಿವೆ. ಇವುಗಳು ಸತ್ಯವನ್ನೇ ಆಶ್ರಯಿಸಿವೆ ಮತ್ತು ಸತ್ಯವನ್ನೇ ವೃದ್ಧಿಸುತ್ತವೆ.

12156023a ನಾಂತಃ ಶಕ್ಯೋ ಗುಣಾನಾಂ ಹಿ ವಕ್ತುಂ ಸತ್ಯಸ್ಯ ಭಾರತ|
12156023c ಅತಃ ಸತ್ಯಂ ಪ್ರಶಂಸಂತಿ ವಿಪ್ರಾಃ ಸಪಿತೃದೇವತಾಃ||

ಭಾರತ! ಸತ್ಯದ ಅನಂತ ಗುಣಗಳನ್ನು ಹೇಳಲು ಶಕ್ಯವಿಲ್ಲ. ಆದುದರಿಂದ ಪಿತೃಗಳು ಮತ್ತು ದೇವತೆಗಳೊಂದಿಗೆ ವಿಪ್ರರು ಸತ್ಯವನ್ನು

ಪ್ರಶಂಸಿಸುತ್ತಾರೆ.

12156024a ನಾಸ್ತಿ ಸತ್ಯಾತ್ಪರೋ ಧರ್ಮೋ ನಾನೃತಾತ್ಪಾತಕಂ ಪರಮ್|
12156024c ಸ್ಥಿತಿರ್ಹಿ ಸತ್ಯಂ ಧರ್ಮಸ್ಯ ತಸ್ಮಾತ್ಸತ್ಯಂ ನ ಲೋಪಯೇತ್||

ಸತ್ಯಕ್ಕಿಂತಲೂ ಪರಮ ಧರ್ಮವಿಲ್ಲ. ಸುಳ್ಳಿಗಿಂತ ಪರಮ ಪಾತಕವಿಲ್ಲ. ಸತ್ಯವೇ ಧರ್ಮದ ಸ್ಥಿತಿಯು. ಆದುದರಿಂದ ಸತ್ಯವನ್ನು ಎಂದೂ ಲೋಪಗೊಳಿಸಬಾರದು.

12156025a ಉಪೈತಿ ಸತ್ಯಾದ್ದಾನಂ ಹಿ ತಥಾ ಯಜ್ಞಾಃ ಸದಕ್ಷಿಣಾಃ|
12156025c ವ್ರತಾಗ್ನಿಹೋತ್ರಂ ವೇದಾಶ್ಚ ಯೇ ಚಾನ್ಯೇ ಧರ್ಮನಿಶ್ಚಯಾಃ||

ದಾನ, ದಕ್ಷಿಣಾಯುಕ್ತ ಯಜ್ಞಗಳು, ವ್ರತಾಗ್ನಿಹೋಮಗಳು, ವೇದಗಳು ಮತ್ತು ಅನ್ಯ ಧರ್ಮನಿಶ್ಚಯಗಳಿಂದ ದೊರೆಯುವ ಫಲವನ್ನು ಸತ್ಯದಿಂದಲೇ ಪಡೆದುಕೊಳ್ಳಬಹುದು.

12156026a ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್|
12156026c ಅಶ್ವಮೇಧಸಹಸ್ರಾದ್ಧಿ ಸತ್ಯಮೇವಾತಿರಿಚ್ಯತೇ[770]||

ಸಹಸ್ರ ಅಶ್ವಮೇಧಗಳ ಫಲ ಮತ್ತು ಸತ್ಯ ಇವೆರಡರ ತುಲನೆ ಮಾಡಿದರೆ ನಿಶ್ಚಯವಾಗಿಯೂ ಸಹಸ್ರ ಅಶ್ವಮೇಧಗಳಿಗಿಂತ ಸತ್ಯವೇ ಹೆಚ್ಚಿನದಾಗಿರುತ್ತದೆ.”

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಸತ್ಯಪ್ರಶಂಸಾಯಾಂ ಷಟ್ಪಂಚಾಶದಧಿಕಶತಮೋಽಧ್ಯಾಯಃ||

[770] ಸತ್ಯಮೇವ ವಿಶಿಷ್ಯತೇ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

೧೫೭

ಕಾಮ, ಕ್ರೋಧ ಮೊದಲಾದ ಹದಿಮೂರು ದೋಷಗಳ ನಿರೂಪಣೆ ಮತ್ತು ಅವುಗಳ ನಾಶದ ಉಪಾಯ (1-18).

12157001 ಯುಧಿಷ್ಠಿರ ಉವಾಚ|
12157001a ಯತಃ ಪ್ರಭವತಿ ಕ್ರೋಧಃ ಕಾಮಶ್ಚ ಭರತರ್ಷಭ|
12157001c ಶೋಕಮೋಹೌ ವಿವಿತ್ಸಾ[771] ಚ ಪರಾಸುತ್ವಂ ತಥಾ ಮದಃ||
12157002a ಲೋಭೋ ಮಾತ್ಸರ್ಯಮೀರ್ಷ್ಯಾ ಚ ಕುತ್ಸಾಸೂಯಾ ಕೃಪಾ ತಥಾ|
12157002c ಏತತ್ಸರ್ವಂ ಮಹಾಪ್ರಾಜ್ಞ ಯಾಥಾತಥ್ಯೇನ ಮೇ ವದ||

ಯುಧಿಷ್ಠಿರನು ಹೇಳಿದನು: "ಭರತರ್ಷಭ! ಮಹಾಪ್ರಾಜ್ಞ! ಕ್ರೋಧ, ಕಾಮ, ಶೋಕ, ಮೋಹ, ಪಡೆದುಕೊಳ್ಳಬೇಕೆನ್ನುವ ಆಸೆ, ಇತರರನ್ನು ಕೊಲ್ಲುವ ಇಚ್ಛೆ, ಮದ, ಲೋಭ, ಮಾತ್ಸರ್ಯ, ಈರ್ಷ್ಯೆ, ನಿಂದನೆ, ದೋಷದೃಷ್ಟಿ ಮತ್ತು ಕಂಜೂಸಿ (ದೈನ್ಯಭಾವ) ಈ ದೋಷಗಳು ಎಲ್ಲಿಂದ ಉತ್ಪನ್ನವಾಗುತ್ತವೆ? ಇವೆಲ್ಲವನ್ನೂ ನನಗೆ ತಿಳಿಯುವಂತೆ ಯಥಾವತ್ತಾಗಿ ಹೇಳು."

---

[771] ವಿಧಿತ್ಸಾ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್). ವಿವಿತ್ಸಾ ಎಂದರೆ ಪಡೆದುಕೊಳ್ಳಬೇಕೆನ್ನುವ ಆಸೆ (ಜಿ.ಎನ್, ಚಕ್ರವರ್ತಿ, ಸಂಸ್ಕೃತ-ಕನ್ನಡ ನಿಘಂಟು) ಮತ್ತು ವಿಧಿತ್ಸಾ ಎಂದರೆ ಶಾಸ್ತ್ರಗಳ ವಿರುದ್ಧ ಹೋಗುವುದು. ಮುಂದಿನ ಶ್ಲೋಕ ೯ನ್ನು ನೋಡಿದರೆ ವಿಧಿತ್ಸಾ ಎನ್ನುವುದೇ ಸರಿಯೆಂದು ತೋರುತ್ತದೆ.

12157003 ಭೀಷ್ಮ ಉವಾಚ|
12157003a ತ್ರಯೋದಶೈತೇಽತಿಬಲಾಃ ಶತ್ರವಃ ಪ್ರಾಣಿನಾಂ ಸ್ಮೃತಾಃ|
12157003c ಉಪಾಸತೇ ಮಹಾರಾಜ ಸಮಸ್ತಾಃ ಪುರುಷಾನಿಹ||

ಭೀಷ್ಮನು ಹೇಳಿದನು: "ಮಹಾರಾಜ! ಈ ಹದಿಮೂರನ್ನು ಪ್ರಾಣಿಗಳ ಅತಿಬಲಶಾಲೀ ಶತ್ರುಗಳೆಂದು ಹೇಳಲಾಗಿದೆ. ಇವು ಇಲ್ಲಿ ಮನುಷ್ಯರನ್ನು ಎಲ್ಲ ಕಡೆಗಳಿಂದ ಮುತ್ತಿಕೊಂಡಿರುತ್ತವೆ.

12157004a ಏತೇ ಪ್ರಮತ್ತಂ ಪುರುಷಮಪ್ರಮತ್ತಾ ನುದಂತಿ[772] ಹಿ|
12157004c ವೃಕಾ ಇವ ವಿಲುಂಪಂತಿ ದೃಷ್ಟ್ವೈವ ಪುರುಷೇತರಾನ್||

ಇವು ಪ್ರಮತ್ತವಾಗಿದ್ದುಕೊಂಡು ಅಪ್ರಮತ್ತ ಪುರುಷನನ್ನು ಪೀಡಿಸುತ್ತವೆ. ಅಂಥಹ ಪುರುಷರನ್ನು ನೋಡಿದೊಡನೆಯೇ ಇವು ತೋಳಗಳಂತೆ ಬಲಪೂರ್ವಕವಾಗಿ ಅವನ ಮೇಲೆ ಬೀಳುತ್ತವೆ.

12157005a ಏಭ್ಯಃ ಪ್ರವರ್ತತೇ ದುಃಖಮೇಭ್ಯಃ ಪಾಪಂ ಪ್ರವರ್ತತೇ|
12157005c ಇತಿ ಮರ್ತ್ಯೇ ವಿಜಾನೀಯಾತ್ಸತತಂ ಭರತರ್ಷಭ||

ಭರತರ್ಷಭ! ಇವುಗಳಿಂದಲೇ ದುಃಖವುಂಟಾಗುತ್ತದೆ ಮತ್ತು ಇವುಗಳ ಪ್ರೇರಣೆಯಿಂದಲೇ ಮನುಷ್ಯನು ಪಾಪಕರ್ಮಗಳನ್ನೆಸಗುತ್ತಾನೆ. ಮನುಷ್ಯರು ಸದಾ ಇದನ್ನು ಗಮನದಲ್ಲಿಟ್ಟುಕೊಂಡಿರಬೇಕು.

12157006a ಏತೇಷಾಮುದಯಂ ಸ್ಥಾನಂ ಕ್ಷಯಂ ಚ ಪುರುಷೋತ್ತಮ|
12157006c ಹಂತ ತೇ ವರ್ತಯಿಷ್ಯಾಮಿ ತನ್ಮೇ ನಿಗದತಃ ಶೃಣು[773]||

---

[772] ಪುರುಷಮಪ್ರಮತ್ತಾಸ್ತುದಂತಿ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[773] ಏತೇಷಾಮುದಯಂ ಸ್ಥಾನಂ ಕ್ಷಯಂ ಚ ಪೃಥಿವೀಪತೇ| ಹಂತ ತೇ

ಪುರುಷೋತ್ತಮ! ನಿಲ್ಲು! ಇವುಗಳ ಉದಯ ಸ್ಥಾನ ಮತ್ತು ಕ್ಷಯಗಳ ಕುರಿತು ಹೇಳುತ್ತೇನೆ[774]. ನಾನು ಹೇಳುವುದನ್ನು ಕೇಳು.

12157007a ಲೋಭಾತ್ ಕ್ರೋಧಃ ಪ್ರಭವತಿ ಪರದೋಷೈರುದೀರ್ಯತೇ|
12157007c ಕ್ಷಮಯಾ ತಿಷ್ಠತೇ ರಾಜನ್ ಶ್ರೀಮಾಂಶ್ಚ[775] ವಿನಿವರ್ತತೇ||

ರಾಜನ್! ಶ್ರೀಮಾನ್! ಲೋಭದಿಂದ ಕ್ರೋಧವುಂಟಾಗುತ್ತದೆ ಮತ್ತು ಇತರರ ದೋಷಗಳನ್ನು ನೋಡುವುದರಿಂದ ಕ್ರೋಧವು ಹೆಚ್ಚಾಗುತ್ತದೆ. ಕ್ಷಮೆಯಿಂದ ಕ್ರೋಧವು ನಿಂತುಕೊಳ್ಳುತ್ತದೆ ಮತ್ತು ಕ್ಷಮೆಯಿಂದಲೇ ಹಿಂದಿರುಗುತ್ತದೆ.

12157008a ಸಂಕಲ್ಪಾಜ್ಜಾಯತೇ ಕಾಮಃ ಸೇವ್ಯಮಾನೋ ವಿವರ್ಧತೇ|
[776]12157008c ಅವದ್ಯದರ್ಶನಾದ್ವ್ಯೇತಿ ತತ್ತ್ವಜ್ಞಾನಾಚ್ಚ ಧೀಮತಾಮ್||

ಕಾಮವು ಸಂಕಲ್ಪದಿಂದ ಹುಟ್ಟುತ್ತದೆ ಮತ್ತು ಅದರ

ಕಥಯಿಷ್ಯಾಮಿ ಕ್ರೋಧಸ್ಯೋತ್ಪತ್ತಿಮಾದಿತಃ|| ಯಥಾತತ್ತ್ವಂ ಕ್ಷಿತಿಪತೇ ತದಿಹೈಕಮನಾಃ ಶೃಣು| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[774] ಈ ಮುಂದಿನ ಶ್ಲೋಕಗಳಲ್ಲಿ ಕುತ್ಸ ಮತ್ತು ಮೋಹ ಇವುಗಳ ನಿರೂಪಣೆಗಳಿಲ್ಲ. ಆದರೆ ಗೀತಾ ಪ್ರೆಸ್ ನಲ್ಲಿ ಮೋಹದ ನಿರೂಪಣೆಯಿದೆ. ಕುತ್ಸದ ನಿರೂಪಣೆಯಿಲ್ಲ.

[775] ಕ್ಷಮಯಾ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

[776] **ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದೂವರೆ ಅಧಿಕ ಶ್ಲೋಕವಿದೆ:** ಯದಾ ಪ್ರಾಜ್ಞೋ ವಿರಮತೇ ತದಾ ಸದ್ಯಃ ಪ್ರಣಶ್ಯತಿ|| ಪರಾಸುತಾ ಕ್ರೋಧಲೋಭಾದಭ್ಯಾಸಾಚ್ಚ ಪ್ರವರ್ತತೇ| ದಯಯಾ ಸರ್ವಭೂತಾನಾಂ ನಿರ್ವೇದಾತ್ಸಾ ನಿವರ್ತತೇ||

ಸೇವೆಗೈಯುವುದರಿಂದ ಹೆಚ್ಚಾಗುತ್ತದೆ. ಧೀಮತರ ತತ್ತ್ವಜ್ಞಾನದಿಂದ ಮತ್ತು ಕಾಮವನ್ನು ಅವಲೋಕಿಸದೇ ಇರುವುದರಿಂದ ಅದು ನಷ್ಟವಾಗುತ್ತದೆ.

[777]12157009a ವಿರುದ್ಧಾನಿ ಹಿ ಶಾಸ್ತ್ರಾಣಿ ಪಶ್ಯಂತೀಹಾಲ್ಪಬುದ್ಧಯಃ|
12157009c ವಿವಿತ್ಸಾ ಜಾಯತೇ ತತ್ರ ತತ್ತ್ವಜ್ಞಾನಾನ್ನಿವರ್ತತೇ[778]||

ಧರ್ಮ ವಿರುದ್ಧ ಶಾಸ್ತ್ರಗಳನ್ನು ಅವಲೋಕಿಸುವ ಅಲ್ಪಬುದ್ಧಿಗಳಲ್ಲಿ ಅನುಚಿತ ಕರ್ಮಗಳನ್ನೆಸಗುವ ವಿವಿತ್ಸತೆಯು ಉತ್ಪನ್ನವಾಗುತ್ತದೆ. ಅದು ತತ್ತ್ವಜ್ಞಾನದಿಂದ ನಿವೃತ್ತಗೊಳ್ಳುತ್ತದೆ.

12157010a ಪ್ರೀತೇಃ ಶೋಕಃ ಪ್ರಭವತಿ ವಿಯೋಗಾತ್ತಸ್ಯ ದೇಹಿನಃ|
12157010c ಯದಾ ನಿರರ್ಥಕಂ ವೇತ್ತಿ ತದಾ ಸದ್ಯಃ ಪ್ರಣಶ್ಯತಿ||

ಪ್ರಿಯವಾದ ಜೀವಿಯ ವಿಯೋಗದಿಂದ ಶೋಕವುಂಟಾಗುತ್ತದೆ. ಶೋಕವು ನಿರರ್ಥಕವಾದುದು ಎಂದು ತಿಳಿದುಕೊಂಡಾಗ ಕೂಡಲೇ ಶೋಕದ ಶಾಂತಿಯಾಗಿಬಿಡುತ್ತದೆ.

12157011a ಪರಾಸುತಾ ಕ್ರೋಧಲೋಭಾದಭ್ಯಾಸಾಚ್ಚ ಪ್ರವರ್ತತೇ|

---

[777] ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಅಜ್ಞಾನಪ್ರಭವೋ ಮೋಹಃ ಪಾಪಾಭ್ಯಾಸಾತ್ ಪ್ರವರ್ತತೇ| ಯದಾ ಪ್ರಾಜ್ಞೇಷು ರಮತೇ ತದಾ ಸದ್ಯಃ ಪ್ರಣಶ್ಯತಿ|| ಮೋಹವು ಹದಿಮೂರು ದೋಷಗಳಲ್ಲಿ ಸೇರಿಕೊಂಡಿರುವುದರಿಂದ ಈ ಶ್ಲೋಕವು ಅಗತ್ಯವಿದೆ ಎಂದು ತೋರುತ್ತದೆ.

[778] ವಿರುದ್ಧಾನೀಹ ಶಾಸ್ತ್ರಾಣಿ ಯೇ ಪಶ್ಯಂತಿ ಕುರೂದ್ವಹ| ವಿಧಿತ್ಸಾ ಜಾಯತೇ ತೇಷಾಂ ತತ್ತ್ವಜ್ಞಾನಾನ್ನಿವರ್ತತೇ|| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12157011c ದಯಯಾ ಸರ್ವಭೂತಾನಾಂ ನಿರ್ವೇದಾತ್ಸಾ ನಿವರ್ತತೇ॥

ಕ್ರೋಧ, ಲೋಭ ಮತ್ತು ಅಭ್ಯಾಸದ ಕಾರಣಗಳಿಂದಾಗಿ ಪರಾಸುತಾ ಅರ್ಥಾತ್ ಇತರರನ್ನು ಕೊಲ್ಲುವ ಇಚ್ಛೆಯುಂಟಾಗುತ್ತದೆ. ಸಮಸ್ತ ಪ್ರಾಣಿಗಳ ಮೇಲೆ ದಯೆ ಮತ್ತು ವೈರಾಗ್ಯವುಂಟಾಗುವುದರಿಂದ ಅದು ನಿವೃತ್ತವಾಗಿಬಿಡುತ್ತದೆ.

12157012a ಸತ್ತ್ವತ್ಯಾಗಾತ್ತು ಮಾತ್ಸರ್ಯಮಹಿತಾನಿ ಚ ಸೇವತೇ|
12157012c ಏತತ್ತು ಕ್ಷೀಯತೇ ತಾತ ಸಾಧೂನಾಮುಪಸೇವನಾತ್॥

ಅಯ್ಯಾ! ಸತ್ಯದ ತ್ಯಾಗ ಮತ್ತು ಅಹಿತರ ಸಂಗದೋಷದಿಂದ ಮಾತ್ಸರ್ಯವುಂಟಾಗುತ್ತದೆ. ಸತ್ಪುರುಷರ ಸೇವವೆಯಿಂದ ಮಾತ್ಸರ್ಯವು ಕ್ಷೀಣಿಸುತ್ತದೆ.

12157013a ಕುಲಾಜ್ಞಾನಾತ್ತಥೈಶ್ವರ್ಯಾನ್ಮದೋ ಭವತಿ ದೇಹಿನಾಮ್|
12157013c ಏಭಿರೇವ ತು ವಿಜ್ಞಾತೈರ್ಮದಃ ಸದ್ಯಃ ಪ್ರಣಶ್ಯತಿ॥

ತನ್ನ ಉತ್ತಮ ಕುಲ, ಜ್ಞಾನ ಮತ್ತು ಐಶ್ವರ್ಯದಿಂದ ಜೀವಿಗಳಿಗೆ ಮದವುಂಟಾಗುತ್ತದೆ. ಇದರ ಯಥಾರ್ಥ ಸ್ವರೂಪವನ್ನು ತಿಳಿದುಕೊಂಡಾಗ ಇದೂ ಕೂಡ ಕೂಡಲೇ ನಾಶವಾಗಿಬಿಡುತ್ತದೆ.

12157014a ಈರ್ಷ್ಯಾ ಕಾಮಾತ್ ಪ್ರಭವತಿ ಸಂಘರ್ಷಾಚ್ಚೈವ[779] ಭಾರತ|
12157014c ಇತರೇಷಾಂ ತು ಮರ್ತ್ಯಾನಾಂ[780] ಪ್ರಜ್ಞಯಾ ಸಾ ಪ್ರಣಶ್ಯತಿ॥

---

779 ಸಂಹರ್ಷಾಚ್ಚೈವ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್). ಇದೇ ಇಲ್ಲಿ ಸರಿಯೆಂದು ತೋರುತ್ತದೆ.

780 ಸತ್ತ್ವಾನಾಂ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಭಾರತ! ಕಾಮದಿಂದ ಮತ್ತು ಇತರರ ಹರ್ಷಗಳಿಂದ ಈರ್ಷ್ಯೆಯುಂಟಾಗುತ್ತದೆ. ಮರ್ತ್ಯರ ಕುರಿತಾದ ಪ್ರಚ್ಛೆಯಿಂದ ಇದು ನಾಶವಾಗುತ್ತದೆ.

12157015a ವಿಭ್ರಮಾಲ್ಲೋಕಬಾಹ್ಯಾನಾಂ ದ್ವೇಷ್ಯೈರ್ವಾಕ್ಯೈರಸಂಗತೈಃ|
12157015c ಕುತ್ಸಾ ಸಂಜಾಯತೇ ರಾಜನ್ನುಪೇಕ್ಷಾಭಿಃ[781] ಪ್ರಶಾಮ್ಯತಿ||

ರಾಜನ್! ಲೋಕಬಹಿಷ್ಕೃತ ಅಸಂಗತರ ದ್ವೇಷಪೂರ್ಣ ಭ್ರಮಿಕ ಮಾತುಗಳನ್ನು ಕೇಳುವುದರಿಂದ ನಿಂದಿಸುವ ಅಭ್ಯಾಸವುಂಟಾಗುತ್ತದೆ. ಅವರನ್ನು ಉಪೇಕ್ಷಿಸುವುದರಿಂದ ಅದು ನಾಶವಾಗುತ್ತದೆ.

12157016a ಪ್ರತಿಕರ್ತುಮಶಕ್ಯಾಯ ಬಲಸ್ಥಾಯಾಪಕಾರಿಣೇ|
12157016c ಅಸೂಯಾ ಜಾಯತೇ ತೀವ್ರಾ ಕಾರುಣ್ಯಾದ್ವಿನಿವರ್ತತೇ||

ತಮಗೆ ಅಪಕಾರವನ್ನೆಸಗಿದ ಬಲಶಾಲಿಗಳಿಗೆ ಪ್ರತೀಕಾರವನ್ನೆಸಗಲು ಅಶಕ್ಯರಾದಾಗ ಅಸೂಯೆಯು ಹುಟ್ಟುತ್ತದೆ. ತೀವ್ರ ಕಾರುಣ್ಯದಿಂದ ಅದು ಹಿಂದೆ ಸರಿಯುತ್ತದೆ.

12157017a ಕೃಪಣಾನ್ಸತತಂ ದೃಷ್ಟ್ವಾ ತತಃ ಸಂಜಾಯತೇ ಕೃಪಾ|
12157017c ಧರ್ಮನಿಷ್ಠಾಂ ಯದಾ ವೇತ್ತಿ ತದಾ ಶಾಮ್ಯತಿ ಸಾ ಕೃಪಾ||

ಸತತವೂ ಕೃಪಣರನ್ನು ನೋಡುವುದರಿಂದ ಕೃಪಣತ್ವವು ಹುಟ್ಟುತ್ತದೆ. ಧರ್ಮನಿಷ್ಠರ ಉದಾರತೆಯನ್ನು ತಿಳಿದುಕೊಂಡಾಗ ಕೃಪಣತೆಯು ನಾಶವಾಗುತ್ತದೆ.

---

781 ರಾಜನ್ ಲೋಕಾನ್ ಪ್ರೇಕ್ಷ್ಯಾಭಿಶಾಮ್ಯತಿ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12157018a[782] ಏತಾನ್ಯೇವ ಜಿತಾನ್ಯಾಹುಃ ಪ್ರಶಮಾಚ್ಚ ತ್ರಯೋದಶ|
12157018c ಏತೇ ಹಿ ಧಾರ್ತರಾಷ್ಟ್ರಾಣಾಂ ಸರ್ವೇ ದೋಷಾಸ್ತ್ರಯೋದಶ|
12157018e ತ್ವಯಾ ಸರ್ವಾತ್ಮನಾ ನಿತ್ಯಂ ವಿಜಿತಾ ಜೇಷ್ಯಸೇ ಚ ತಾನ್[783]||

ಈ ಹದಿಮೂರು ದೋಷಗಳನ್ನು ಶಾಂತಿಯ ಮೂಲಕ ಗೆಲ್ಲಬಹುದು ಎಂದು ಹೇಳುತ್ತಾರೆ. ಧಾರ್ತರಾಷ್ಟ್ರರಲ್ಲಿ ಈ ಎಲ್ಲ ಹದಿಮೂರು ದೋಷಗಳೂ ಇದ್ದವು. ನಿತ್ಯವೂ ಸರ್ವಾತ್ಮನಾಗಿರುವ ನೀನು ಇವರೆಲ್ಲರನ್ನೂ ಗೆದ್ದಿರುವೆ."

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಲೋಭನಿರೂಪಣೇ ಸಪ್ತಪಂಚಾಶದಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಲೋಭನಿರೂಪಣೆ ಎನ್ನುವ ನೂರಾಐವತ್ತೇಳನೇ ಅಧ್ಯಾಯವು.

೧೫೮

ನೃಶಂಸ ಅಥವಾ ಕ್ರೂರಿಯ ಲಕ್ಷಣಗಳು (1-13).

12158001 ಯುಧಿಷ್ಠಿರ ಉವಾಚ|

---

782 ಗೀತಾ ಪ್ರೆಸ್ ನಲ್ಲಿ ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ಅಜ್ಞಾನಪ್ರಭವೋ ಲೋಭೋ ಭೂತಾನಾಂ ದೃಶ್ಯತೇ ಸದಾ| ಅಸ್ಥಿರತ್ವಂ ಚ ಭೋಗಾನಾಂ ದೃಷ್ಟ್ವಾ ಜ್ಞಾತ್ವಾ ನಿವರ್ತತೇ||

783 ತ್ವಯಾ ಸತ್ಯಾರ್ಥಿನಾ ನಿತ್ಯಂ ವಿಜಿತಾ ಜ್ಯೇಷ್ಠಸೇವನಾತ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12158001a ಆನೃಶಂಸ್ಯಂ ವಿಜಾನಾಮಿ ದರ್ಶನೇನ ಸತಾಂ ಸದಾ|
12158001c ನೃಶಂಸಾನ್ನ ವಿಜಾನಾಮಿ ತೇಷಾಂ ಕರ್ಮ ಚ ಭಾರತ||

ಯುಧಿಷ್ಠಿರನು ಹೇಳಿದನು: "ಭಾರತ! ಸದಾ ಸತ್ಪುರುಷರ ದರ್ಶನದಿಂದ ಕೋಮಲವಾಗಿ ವರ್ತಿಸುವವರ ಕುರಿತು ತಿಳಿದಿದ್ದೇನೆ. ಆದರೆ ಕ್ರೂರಿಯಾಗಿರುವವರ ಮತ್ತು ಅವರ ಕರ್ಮಗಳ ಕುರಿತು ನನಗೆ ತಿಳಿದಿಲ್ಲ.

12158002a ಕಂಟಕಾನ್ಯೂಪಮಗ್ನಿಂ ಚ ವರ್ಜಯಂತಿ ಯಥಾ ನರಾಃ|
12158002c ತಥಾ ನೃಶಂಸಕರ್ಮಾಣಂ ವರ್ಜಯಂತಿ ನರಾ ನರಮ್||

ಮುಳ್ಳು, ಬಾವಿ ಮತ್ತು ಅಗ್ನಿಯನ್ನು ಹೇಗೆ ವರ್ಜಿಸುತ್ತಾರೋ ಹಾಗೆ ನರರು ಕ್ರೂರ ಕರ್ಮಗಳನ್ನೆಸಗುವ ಮನುಷ್ಯರನ್ನೂ ವರ್ಜಿಸುತ್ತಾರೆ.

12158003a ನೃಶಂಸೋ ಹ್ಯಧಮೋ ನಿತ್ಯಂ ಪ್ರೇತ್ಯ ಚೇಹ ಚ ಭಾರತ|
12158003c ತಸ್ಮಾದ್ಬ್ರೂಹಿ ಕೌರವ್ಯ ತಸ್ಯ ಧರ್ಮವಿನಿಶ್ಚಯಮ್||

ಭಾರತ! ಕೌರವ್ಯ! ಕ್ರೂರಿಗಳು ನಿತ್ಯವೂ ಇಲ್ಲಿ ಮತ್ತು ಮರಣಾನಂತರವೂ ಅಧಮರಾಗಿಯೇ ಇರುತ್ತಾರೆ. ಆದುದರಿಂದ ಅಂಥವರ ಧರ್ಮವಿನಿಶ್ಚಯವನ್ನು ಹೇಳು."

12158004 ಭೀಷ್ಮ ಉವಾಚ|
12158004a ಸ್ಪೃಹಾಸ್ಯಾಂತರ್ಹಿತಾ ಚೈವ ವಿದಿತಾರ್ಥಾ ಚ ಕರ್ಮಣಾ[784]|

---

[784] ಸ್ಪೃಹಾ ಸ್ಯಾದ್ ಗರ್ಹಿತಾ ಚೈವ ವಿಧಿತ್ಸಾ ಚೈವ ಕರ್ಮಣಾಮ್| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

12158004c ಆಕ್ರೋಷ್ಟಾ ಕ್ರುಶ್ಯತೇ ಚೈವ ಬಂಧಿತಾ ಬಧ್ಯತೇ ಚ ಯಃ[785]||
12158005a ದತ್ತಾನುಕೀರ್ತಿರ್ವಿಷಮಃ ಕ್ಷುದ್ರೋ ನೈಕೃತಿಕಃ ಶಠಃ|
12158005c ಅಸಂಭೋಗೀ[786] ಚ ಮಾನೀ ಚ ತಥಾ ಸಂಗೀ ವಿಕತ್ಥನಃ||
12158006a ಸರ್ವಾತಿಶಂಕೀ ಪರುಷೋ[787] ಬಾಲಿಶಃ ಕೃಪಣಸ್ತಥಾ|
12158006c ವರ್ಗಪ್ರಶಂಸೀ ಸತತಮಾಶ್ರಮದ್ವೇಷಸಂಕರೀ||
12158007a ಹಿಂಸಾವಿಹಾರೀ ಸತತಮವಿಶೇಷಗುಣಾಗುಣಃ|
12158007c ಬಹ್ವಲೀಕೋಽಮನಸ್ವೀ ಚ ಲುಬ್ಧೋಽತ್ಯರ್ಥಂ ನೃಶಂಸಕೃತ್||

ಭೀಷ್ಮನು ಹೇಳಿದನು: “ಮನಸ್ಸಿನಲ್ಲಿ ಅತ್ಯಂತ ಗಾಢ
ಆಸೆಗಳನ್ನಿಟ್ಟುಕೊಂಡಿರುವ, ಕುತ್ಸಿತ ಕೆಲಸಗಳನ್ನು ಮಾಡಬಯಸುವ,
ಇತರರನ್ನು ನಿಂದಿಸುವ ಮತ್ತು ಇತರರ ನಿಂದನೆಗೊಳಗಾಗುವ,
ಇತರರಿಂದ ಬಂಧಿತನಾಗಿರುವ ಮತ್ತು ಇತರರನ್ನು ಬಂಧಿಸುವ, ತಾನು
ಮಾಡಿದ ದಾನಗಳ ಕುರಿತು ಮತ್ತೆ ಮತ್ತೆ ಹೇಳಿಕೊಳ್ಳುವ, ಕ್ಷುದ್ರ,
ನೀಚಕರ್ಮಗಳನ್ನೆಸಗುವ, ಶಠ, ಅಸಂಭೋಗೀ, ಅತಿಮಾನವಂತ,
ವಿಷಯಾಸಕ್ತ, ಜಂಬಕೊಚ್ಚಿಕೊಳ್ಳುವ, ಎಲ್ಲರನ್ನೂ ಅತಿಯಾಗಿ
ಶಂಕಿಸುವ, ಕ್ರೂರವಾಗಿ ಮಾತನಾಡುವ, ಮೂಢ, ಕೃಪಣ, ತನ್ನದೇ
ವರ್ಗದವರನ್ನು ಪ್ರಶಂಸಿಸುವ, ಆಶ್ರಮದ್ವೇಷಿಯಾಗಿ ಸತತವೂ
ವರ್ಣಸಂಕರಗಳನ್ನುಂಟುಮಾಡುವ, ಹಿಂಸಾವಿಹಾರೀ, ಸತತವೂ
ಗುಣ-ಅವಗುಣಗಳನ್ನು ಸಮಾನವೆಂದು ತಿಳಿದುಕೊಳ್ಳುವ, ಅತಿಯಾಗಿ
ಸುಳ್ಳುಹೇಳುವ, ಉದಾರ ಮನಸ್ಸಿಲ್ಲದ, ಲುಬ್ಧ – ಮನುಷ್ಯನು ಕ್ರೂರ

---

785 ವಂಚಿತೋ ಬುಧ್ಯತೇ ಸ ಚ| ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

786 ಅಸಂವಿಭಾಗೀ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

787 ಪುರುಷೋ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಕರ್ಮಿಯೆಂದು ಹೇಳಿದ್ದಾರೆ.

12158008a ಧರ್ಮಶೀಲಂ ಗುಣೋಪೇತಂ ಪಾಪ ಇತ್ಯವಗಚ್ಚತಿ|
12158008c ಆತ್ಮಶೀಲಾನುಮಾನೇನ[788] ನ ವಿಶ್ವಸಿತಿ ಕಸ್ಯ ಚಿತ್||

ಅವನು ಧರ್ಮಶೀಲ ಗುಣೋಪೇತರನ್ನೇ ಪಾಪಿಗಳೆಂದು ಅಪಮಾನಿಸುತ್ತಾನೆ. ತನ್ನ ಸ್ವಭಾವವನ್ನೇ ಆದರ್ಶವೆಂದು ತಿಳಿದು ಯಾರ ಮೇಲೂ ವಿಶ್ವಾಸನವನ್ನಿಟ್ಟಿರುವುದಿಲ್ಲ.

12158009a ಪರೇಷಾಂ ಯತ್ರ ದೋಷಃ ಸ್ಯಾತ್ತದ್ಗುಹ್ಯಂ ಸಂಪ್ರಕಾಶಯೇತ್|
12158009c ಸಮಾನೇಷ್ವೇವ ದೋಷೇಷು ವೃತ್ತ್ಯರ್ಥಮುಪಘಾತಯೇತ್||

ಇತರರ ಅವಹೇಳನವಾಗುತ್ತದೆಯೆಂದರೆ ಅವರ ಗುಪ್ತ ದೋಷಗಳನ್ನೂ ಬಹಿರಂಗಗೊಳಿಸಿಬಿಡುತ್ತಾನೆ. ಅವನ ಮತ್ತು ಇತರರ ಅಪರಾಧಗಳು ಒಂದೇ ಆಗಿದ್ದರೂ ತನ್ನ ವೃತ್ತಿಗಾಗಿ ಇತರರನ್ನು ನಾಶಪಡಿಸುತ್ತಾನೆ.

12158010a ತಥೋಪಕಾರಿಣಂ ಚೈವ ಮನ್ಯತೇ ವಂಚಿತಂ ಪರಮ್|
12158010c ದತ್ತ್ವಾಪಿ ಚ ಧನಂ ಕಾಲೇ ಸಂತಪತ್ಯುಪಕಾರಿಣೇ||

ತನಗೆ ಉಪಕಾರಮಾಡಿದವರನ್ನೂ ತನ್ನ ಪರಮ ವಂಚನೆಯ ಜಾಲದಲ್ಲಿ ಇರಿಸಿಕೊಳ್ಳುತ್ತಾನೆ. ಅವರಿಗೆ ಧನವನ್ನಿತ್ತಿದ್ದರೂ ಬಹುಕಾಲದ ವರೆಗೆ ಪಶ್ಚಾತ್ತಾಪಪಡುತ್ತಿರುತ್ತಾನೆ.

12158011a ಭಕ್ಷ್ಯಂ ಭೋಜ್ಯಮಥೋ ಲೇಹ್ಯಂ ಯಚ್ಚಾನ್ಯತ್ಸಾಧು ಭೋಜನಮ್|
12158011c ಪ್ರೇಕ್ಷಮಾಣೇಷು ಯೋಽಶ್ನೀಯಾನ್ನೃಶಂಸ ಇತಿ ತಂ ವಿದುಃ||

---

[788] ಆತ್ಮಶೀಲಪ್ರಮಾಣೇನ ಎಂಬ ಪಾಠಾಂತರವಿದೆ (ಗೀತಾ ಪ್ರೆಸ್).

ಭಕ್ಷ್ಯ, ಭೋಜ್ಯ, ಲೇಹಗಳು, ಮತ್ತು ಅನ್ಯ ಉತ್ತಮ ಭೋಜನವನ್ನು ಇನ್ನೊಬ್ಬರು ನೋಡುತ್ತಿದ್ದರೂ ಅವರಿಗೆ ಕೊಡದೇ ತಾನೊಬ್ಬನೇ ತಿನ್ನುವವನನ್ನು ಕ್ರೂರಿ ಎಂದು ತಿಳಿಯಬೇಕು.

12158012a ಬ್ರಾಹ್ಮಣೇಭ್ಯಃ ಪ್ರದಾಯಾಗ್ರಂ ಯಃ ಸುಹೃದ್ಭಿಃ ಸಹಾಶ್ನುತೇ|
12158012c ಸ ಪ್ರೇತ್ಯ ಲಭತೇ ಸ್ವರ್ಗಮಿಹ ಚಾನಂತ್ಯಮಶ್ನುತೇ||

ಮೊದಲು ಬ್ರಾಹ್ಮಣರಿಗೆ ಕೊಟ್ಟು ನಂತರ ಸುಹೃದಯರೊಂದಿಗೆ ಊಟ ಮಾಡುವವನು ಇಲ್ಲಿ ಅನಂತ ಸುಖವನ್ನು ಭೋಗಿಸುತ್ತಾನೆ ಮತ್ತು ಮರಣಾನಂತರ ಸ್ವರ್ಗಲೋಕವನ್ನು ಪಡೆಯುತ್ತಾನೆ.

12158013a ಏಷ ತೇ ಭರತಶ್ರೇಷ್ಠ ನೃಶಂಸಃ ಪರಿಕೀರ್ತಿತಃ|
12158013c ಸದಾ ವಿವರ್ಜನೀಯೋ ವೈ ಪುರುಷೇಣ ಬುಭೂಷತಾ||

ಭರತಶ್ರೇಷ್ಠ! ಹೀಗೆ ನಿನಗೆ ನೃಶಂಸನ ಕುರಿತು ಹೇಳಿದ್ದೇನೆ. ಕಲ್ಯಾಣವನ್ನು ಬಯಸುವ ಪುರುಷನು ಸದಾ ನೃಶಂಸರನ್ನು ವರ್ಜಿಸಬೇಕು."

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ನೃಶಂಸಾಖ್ಯಾನೇ ಅಷ್ಟಪಂಚಾಶದಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ನೃಶಂಸಾಖ್ಯಾನ ಎನ್ನುವ ನೂರಾಐವತ್ತೆಂಟನೇ ಅಧ್ಯಾಯವು.

೧೫೯

ನಾನಾ ವಿಧದ ಪಾಪಗಳು ಮತ್ತು ಅವುಗಳ ಪ್ರಾಯಶ್ಚಿತ್ತಗಳ ವರ್ಣನೆ

12159001 ಭೀಷ್ಮ ಉವಾಚ|
12159001a ಕೃತಾರ್ಥೋ[789] ಯಕ್ಷ್ಯಮಾಣಶ್ಚ ಸರ್ವವೇದಾಂತಗಶ್ಚ ಯಃ|
12159001c ಆಚಾರ್ಯಪಿತೃಭಾರ್ಯಾರ್ಥಂ[790] ಸ್ವಾಧ್ಯಾಯಾರ್ಥಮಥಾಪಿ ವಾ||
12159002a ಏತೇ ವೈ ಸಾಧವೋ ದೃಷ್ಟಾ ಬ್ರಾಹ್ಮಣಾ ಧರ್ಮಭಿಕ್ಷವಃ|
12159002c ಅಸ್ವೇಭ್ಯೋ[791] ದೇಯಮೇತೇಭ್ಯೋ ದಾನಂ ವಿದ್ಯಾವಿಶೇಷತಃ[792]||

ಭೀಷ್ಮನು ಹೇಳಿದನು: "ಯಜ್ಞಮಾಡಲು ಇಚ್ಛಿಸುವ,
ಸರ್ವವೇದಾಂಗಗಳನ್ನೂ ಕಲಿತಿರುವ ಕೃತಾರ್ಥ ಧರ್ಮಭಿಕ್ಷು ಸಾಧು
ಬ್ರಾಹ್ಮಣರನ್ನು ಹುಡುಕಿ ನಮ್ಮಂಥವರು ಆಚಾರ್ಯ-
ಪಿತೃಕರ್ಮಗಳಿಗೆ, ಅಥವಾ ಸ್ವಾಧ್ಯಾಯಕ್ಕೆ, ವಿಶೇಷವಾಗಿ
ವಿದ್ಯಾರ್ಜನೆಗೆ, ದಾನಮಾಡಬೇಕು.

12159003a ಅನ್ಯತ್ರ ದಕ್ಷಿಣಾ ಯಾ ತು ದೇಯಾ ಭರತಸತ್ತಮ|
12159003c ಅನ್ಯೇಭ್ಯೋ ಹಿ ಬಹಿರ್ವೇದ್ಯಾಂ ನಾಕೃತಾನ್ನಂ ವಿಧೀಯತೇ||

ಭರತಸತ್ತಮ! ಅನ್ಯ ಸನ್ನಿವೇಶಗಳಲ್ಲಿ ಬ್ರಾಹ್ಮಣರಿಗೆ ಕೇವಲ
ದಕ್ಷಿಣೆಗಳನ್ನು ನೀಡಬೇಕು. ಅನ್ಯರಿಗೂ ಯಜ್ಞವೇದಿಯ ಹೊರಗೆ
ಅಕ್ಕಿಯನ್ನು ನೀಡುವ ವಿಧಾನವಿದೆ.

12159004a ಸರ್ವರತ್ನಾನಿ ರಾಜಾ ಚ ಯಥಾರ್ಹಂ ಪ್ರತಿಪಾದಯೇತ್|

---

789 ಹೃತಾರ್ಥೋ (ಗೀತಾ ಪ್ರೆಸ್).

790 ಆಚಾರ್ಯಪಿತೃಕಾರ್ಯಾರ್ಥಂ (ಗೀತಾ ಪ್ರೆಸ್).

791 ನಿಃಸ್ವೇಭ್ಯೋ (ಗೀತಾ ಪ್ರೆಸ್).

792 ವಿದ್ಯಾ ಚ ಭಾರತ (ಗೀತಾ ಪ್ರೆಸ್).

12159004c ಬ್ರಾಹ್ಮಣಾಶ್ಚೈವ ಯಜ್ಞಾಶ್ಚ ಸಹಾನ್ನಾಃ[793] ಸಹದಕ್ಷಿಣಾಃ[794]॥

ರಾಜನು ಯಥಾರ್ಹವಾಗಿ ಸರ್ವ ರತ್ನಗಳನ್ನೂ ದಾನಮಾಡಬೇಕು. ಏಕೆಂದರೆ ಬ್ರಾಹ್ಮಣರೇ ದಕ್ಷಿಣಾಯುಕ್ತ ಅನ್ನಯುಕ್ತ ಯಜ್ಞಗಳು.

12159005a ಯಸ್ಯ ತ್ರೈವಾರ್ಷಿಕಂ ಭಕ್ತಂ ಪರ್ಯಾಪ್ತಂ ಭೃತ್ಯವೃತ್ತಯೇ|
12159005c ಅಧಿಕಂ ವಾಪಿ ವಿದ್ಯೇತ ಸ ಸೋಮಂ ಪಾತುಮರ್ಹತಿ॥

ಯಾವ ಬ್ರಾಹ್ಮಣನಲ್ಲಿ ತನ್ನ ಕುಟುಂಬಜನರ ಭರಣ-ಪೋಷಣೆಗೆ ಮೂರು ವರ್ಷಗಳಿಗೆ ಸಾಕಾಗುವಷ್ಟು ಅಥವಾ ಅದಕ್ಕಿಂತಲೂ ಅಧಿಕ ಧನವಿರುವುದೋ ಅವನು ಸೋಮಪಾನಕ್ಕೆ ಅಧಿಕಾರಿಯಾಗುತ್ತಾನೆ. ಅವನು ಸೋಮಯಾಗವನ್ನು ಕೈಗೊಳ್ಳಬೇಕು.

12159006a ಯಜ್ಞಶ್ಚೇತ್ ಪ್ರತಿವಿದ್ಧಃ ಸ್ಯಾದಂಗೇನೈಕೇನ ಯಜ್ವನಃ|
12159006c ಬ್ರಾಹ್ಮಣಸ್ಯ ವಿಶೇಷೇಣ ಧಾರ್ಮಿಕೇ ಸತಿ ರಾಜನಿ॥
12159007a ಯೋ ವೈಶ್ಯಃ ಸ್ಯಾದ್ಬಹುಪಶುರ್ಹೀನಕ್ರತುರಸೋಮಪಃ|
12159007c ಕುಟುಂಬಾತ್ತಸ್ಯ ತದ್ದ್ರವ್ಯಂ ಯಜ್ಞಾರ್ಥಂ ಪಾರ್ಥಿವೋ ಹರೇತ್॥

ಧಾರ್ಮಿಕ ರಾಜನಿದ್ದರೂ ಯಾರಾದರೂ ಯಜ್ಞಕರ್ತನ, ವಿಶೇಷವಾಗಿ ಬ್ರಾಹ್ಮಣನ ಯಜ್ಞವು – ಅದು ಸೋಮಯಜ್ಞವಾಗಿಲ್ಲದಿದ್ದರೆ - ದ್ರವ್ಯದ ಅಭಾವದಿಂದ ನಿಂತುಹೋದರೆ ರಾಜನು ತನ್ನ ದೇಶದಲ್ಲಿರುವ ಅನೇಕ ಪಶುಗಳನ್ನು ಹೊಂದಿದ ವೈಭವಯುಕ್ತ ವೈಶ್ಯನ ಕುಟುಂಬದಿಂದ ಆ

---

[793] ಯಜ್ಞಾಶ್ಚ (ಗೀತಾ ಪ್ರೆಸ್).

[794] ಅನ್ಯೋನ್ಯಂ ವಿಭವಾಚಾರಾ ಯಜಂತೇ ಗುಣತಃ ಸದಾ| ಎಂಬ ಅಧಿಕ ಶ್ಲೋಕವಿದೆ (ಗೀತಾ ಪ್ರೆಸ್).

ಧನವನ್ನು ಬ್ರಾಹ್ಮಣನಿಗೆ ಕೊಡಿಸಬೇಕು.

12159008a ಆಹರೇದ್ವೈಶ್ಮತಃ ಕಿಂ ಚಿತ್ಕಾಮಂ ಶೂದ್ರಸ್ಯ ದ್ರವ್ಯತಃ|
12159008c ನ ಹಿ ವೈಶ್ಮನಿ ಶೂದ್ರಸ್ಯ ಕಶ್ಚಿದಸ್ತಿ ಪರಿಗ್ರಹಃ||

ಆದರೆ ರಾಜನು ತನ್ನ ಇಚ್ಛೆಯಂತೆ ಶೂದ್ರನ ಮನೆಯಿಂದ ಸ್ವಲ್ಪವೂ ಧನವನ್ನು ತೆಗೆದುಕೊಳ್ಳಬಾರದು. ಏಕೆಂದರೆ ಯಜ್ಞಗಳಲ್ಲಿ ಶೂದ್ರರಿಗೆ ಸ್ವಲ್ಪವೂ ಅಧಿಕಾರವಿಲ್ಲ.

12159009a ಯೋಽನಾಹಿತಾಗ್ನಿಃ ಶತಗುರಯಜ್ವಾ ಚ ಸಹಸ್ರಗುಃ|
12159009c ತಯೋರಪಿ ಕುಟುಂಬಾಭ್ಯಾಮಾಹರೇದವಿಚಾರಯನ್||

ಒಂದು ನೂರು ಗೋವುಗಳಿದ್ದೂ ಅಗ್ನಿಹೋತ್ರ ಮಾಡದೇ ಇರುವ ಮತ್ತು ಸಾವಿರ ಗೋವುಗಳಿದ್ದೂ ಯಜ್ಞವನ್ನು ಮಾಡದೇ ಇರುವ ವೈಶ್ಯನ ಕುಟುಂಬದಿಂದ ರಾಜನು ವಿಚಾರಿಸದೆಯೇ ಧನವನ್ನು ತೆಗೆದುಕೊಳ್ಳಬಹುದು.

12159010a ಅದಾತೃಭ್ಯೋ ಹರೇನ್ನಿತ್ಯಂ ವ್ಯಾಖ್ಯಾಪ್ಯ ನೃಪತಿಃ ಪ್ರಭೋ[795]|
12159010c ತಥಾ ಹ್ಯಾಚರತೋ ಧರ್ಮೋ ನೃಪತೇಃ ಸ್ಯಾದಥಾಖಿಲಃ||

ಪ್ರಭೋ! ಧನವಿದ್ದರೂ ದಾನಮಾಡದಿರುವವರಿಂದ ಅವರ ದೋಷವನ್ನು ವ್ಯಾಖ್ಯಾಯಿಸಿ ನೃಪತಿಯು ಎಂದೂ ಧನವನ್ನು ಧರ್ಮಕಾರ್ಯಕ್ಕಾಗಿ ಪಡೆದುಕೊಳ್ಳಬಹುದು. ಇದರಿಂದ ನೃಪತಿಗೆ ಸಂಪೂರ್ಣ ಧರ್ಮಪ್ರಾಪ್ತಿಯಾಗುತ್ತದೆ.

12159011a ತಥೈವ ಸಪ್ತಮೇ ಭಕ್ತೇ ಭಕ್ತಾನಿ ಷಡನಶ್ನತಾ|

---

[795] ಸದಾ (ಗೀತಾ ಪ್ರೆಸ್).

12159011c ಅಶ್ವಸ್ತನವಿಧಾನೇನ ಹರ್ತವ್ಯಂ ಹೀನಕರ್ಮಣಃ|

ಅನ್ನದ ಅಭಾವದ ಕಾರಣದಿಂದ ಆರು ಹೊತ್ತು ಊಟಮಾಡದೇ ಇದ್ದ ಬ್ರಾಹ್ಮಣನು ಯಾರಾದರೂ ಹೀನ ಕರ್ಮಿಗಳಿಂದ ಅವನ ಏಳನೇ ಹೊತ್ತಿನ ಊಟಕ್ಕಾಗುವಷ್ಟನ್ನು ಅಪಹರಿಸಬಹುದು.

12159011e ಖಿಲಾತ್ ಕ್ಷೇತ್ರಾತ್ತಥಾಗಾರಾದ್ಯತೋ ವಾಮ್ಯುಪಪದ್ಯತೇ||
12159012a ಆಖ್ಯಾತವ್ಯಂ ನೃಪಸ್ಯೈತತ್ಪೃಚ್ಚತೋಽಪೃಚ್ಚತೋಽಪಿ ವಾ|

ಕಣದಿಂದ, ಹೊಲದಿಂದ ಅಥವಾ ಗುಡಾಣದಿಂದ ಎಲ್ಲಿ ದೊರಕೊತ್ತದೋ ಅಲ್ಲಿಂದ ಅವನು ಊಟಕ್ಕೆ ಸಾಕಾಗುವಷ್ಟು ಮಾತ್ರವನ್ನೇ ಅಪಹರಿಸಿಕೊಂಡು, ರಾಜನು ಕೇಳಲಿ ಅಥವಾ ಕೇಳದಿರಲಿ, ಅವನ ಬಳಿ ಈ ವಿಷಯವನ್ನು ಹೇಳಿಕೊಳ್ಳಬೇಕು.

12159012c ನ ತಸ್ಯೈ ಧಾರಯೇದ್ದಂಡಂ ರಾಜಾ ಧರ್ಮೇಣ ಧರ್ಮವಿತ್||
12159013a ಕ್ಷತ್ರಿಯಸ್ಯ ಹಿ ಬಾಲಿಶ್ಯಾದ್ ಬ್ರಾಹ್ಮಣಃ ಕ್ಲಿಶ್ಯತೇ ಕ್ಷುಧಾ|

ಧರ್ಮದ ಪ್ರಕಾರ ಧರ್ಮವಿದು ರಾಜನು ಅವನನ್ನು ದಂಡಿಸಬಾರದು. ಏಕೆಂದರೆ ಕ್ಷತ್ರಿಯನ ಮೂರ್ಖತನದಿಂದಲೇ ಬ್ರಾಹ್ಮಣನು ಹಸಿವೆಯ ಕಷ್ಟವನ್ನು ಅನುಭವಿಸುತ್ತಾನೆ.

12159013c ಶ್ರುತಶೀಲೇ ಸಮಾಜ್ಞಾಯ ವೃತ್ತಿಮಸ್ಯ ಪ್ರಕಲ್ಪಯೇತ್|
12159013e ಅಥೈನಂ ಪರಿರಕ್ಷೇತ ಪಿತಾ ಪುತ್ರಮಿವೌರಸಮ್||

ಅವನ ವಿದ್ಯೆ-ಶೀಲಗಳನ್ನು ತಿಳಿದುಕೊಂಡು ರಾಜನು ಅವನಿಗೆ ವೃತ್ತಿಯನ್ನು ಕಲ್ಪಿಸಿಕೊಡಬೇಕು. ಪಿತನು ಔರಸ ಪುತ್ರನನ್ನು ಹೇಗೆ ಪಾಲಿಸುತ್ತಾನೋ ಹಾಗೆ ಅವನನ್ನು ರಕ್ಷಿಸಬೇಕು.

12159014a ಇಷ್ಟಿಂ ವೈಶ್ವಾನರೀಂ ನಿತ್ಯಂ ನಿರ್ವಪೇದಬ್ದಪರ್ಯಯೇ|
12159014c ಅವಿಕಲ್ಪಃ ಪುರಾಧರ್ಮೋ ಧರ್ಮವಾದ್ಯೈಸ್ತು ಕೇವಲಮ್[796]||

ಪ್ರತಿವರ್ಷ ಮಾಡಬೇಕಾದ ಆಗ್ರಾಯಣ ಮೊದಲಾದ ಯಜ್ಞಗಳನ್ನು ಮಾಡಲಿಕ್ಕಾಗದೇ ಇದ್ದರೆ ಅದರ ಬದಲಾಗಿ ಪ್ರತಿದಿನ ವೈಶ್ವಾನರೀ ಇಷ್ಟಿಯನ್ನು ಮಾಡಬೇಕು. ಮುಖ್ಯ ಕರ್ಮದ ಸ್ಥಾನದಲ್ಲಿ ಮಾಡುವ ಗೌಣ ಕರ್ಮಗಳನ್ನು ಅನುಕಲ್ಪ ಎನ್ನುತ್ತಾರೆ. ಧರ್ಮಜ್ಞರು ಹೇಳಿರುವ ಅನುಕಲ್ಪವೂ ಪರಮ ಧರ್ಮವೆನಿಸಿಕೊಳ್ಳುತ್ತದೆ.

12159015a ವಿಶ್ವೈಸ್ತು ದೇವೈಃ ಸಾಧ್ಯೈಶ್ಚ ಬ್ರಾಹ್ಮಣೈಶ್ಚ ಮಹರ್ಷಿಭಿಃ|
12159015c ಆಪತ್ಸು ಮರಣಾದ್ಭೀತೈರ್ಲಿಂಗಪ್ರತಿನಿಧಿಃ[797] ಕೃತಃ||

ಏಕೆಂದರೆ ವಿಶ್ವೇದೇವರು, ಸಾಧ್ಯರು, ಬ್ರಾಹ್ಮಣರು ಮತ್ತು ಮಹರ್ಷಿಗಳು ಮರಣಭಯದಿಂದ ಆಪತ್ಕಾಲದಲ್ಲಿ ಪ್ರತ್ಯೇಕ ವಿಧಿಗಳಿಗೂ ಪ್ರತಿವಿಧಿಗಳನ್ನು ಮಾಡಿದ್ದಾರೆ.

12159016a ಪ್ರಭುಃ ಪ್ರಥಮಕಲ್ಪಸ್ಯ ಯೋಽನುಕಲ್ಪೇನ ವರ್ತತೇ|
12159016c ನ ಸಾಂಪರಾಯಿಕಂ ತಸ್ಯ ದುರ್ಮತೇರ್ವಿದ್ಯತೇ ಫಲಮ್||

ಮುಖ್ಯವಿಧಿಯನ್ನು ಮಾಡುವ ಸಾಮರ್ಥ್ಯವಿದ್ದರೂ ಗೌಣವಿಧಿಯನ್ನು ನಡೆಸುವ ದುರ್ಬುದ್ಧಿಯು ಪಾರಲೌಕಿಕ ಫಲಗಳನ್ನು ಪಡೆಯುವುದಿಲ್ಲ.

---

796 ಅನುಕಲ್ಪಃ ಪರೋಧರ್ಮೋ ಧರ್ಮವಾದ್ಯೈಸ್ತು ಕೇವಲಮ್| (ಗೀತಾ ಪ್ರೆಸ್).

797 ಮರಣಾದ್ಭೀತ್ಯೈರ್ವಿಧಿಃ ಪ್ರತಿನಿಧೀಕೃತಃ| (ಗೀತಾ ಪ್ರೆಸ್).

12159017a ನ ಬ್ರಾಹ್ಮಣಾನ್ವೇದಯೇತ ಕಶ್ಚಿದ್ರಾಜನಿ ಮಾನವಃ[798]|
12159017c ಅವೀರ್ಯೋ ವೇದನಾದ್ವಿದ್ಯಾತ್ಸುವೀರ್ಯೋ ವೀರ್ಯವತ್ತರಮ್[799]||

ಬ್ರಾಹ್ಮಣ ಮನುಷ್ಯನು ಎಂದೂ ತನ್ನ ಕಷ್ಟಗಳನ್ನು ರಾಜನಲ್ಲಿ ಹೇಳಿಕೊಳ್ಳಬಾರದು. ಏಕೆಂದರೆ ರಾಜನ ವೀರ್ಯಕ್ಕಿಂತ ಬ್ರಾಹ್ಮಣನ ಸ್ವವೀರ್ಯವೇ ಬಲವತ್ತರವಾದುದು.

12159018a ತಸ್ಮಾದ್ರಾಜ್ಞಾ ಸದಾ ತೇಜೋ ದುಃಸಹಂ ಬ್ರಹ್ಮವಾದಿನಾಮ್|
12159018c ಮಂತಾ[800] ಶಾಸ್ತಾ ವಿಧಾತಾ ಚ ಬ್ರಾಹ್ಮಣೋ ದೇವ ಉಚ್ಯತೇ|

ಆದುದರಿಂದ ಬ್ರಹ್ಮವಾದಿಗಳ ತೇಜಸ್ಸು ರಾಜರಿಗೆ ಸದಾ ದುಃಸ್ಸಹವಾದುದು. ಬ್ರಾಹ್ಮಣನು ಈ ಜಗತ್ತಿನ ಕರ್ತಾ, ಶಾಸಕ, ವಿಧಾತಾ ಮತ್ತು ದೇವನೆಂದು ಹೇಳುತ್ತಾರೆ.

12159018e ತಸ್ಮಿನ್ನಾಕುಶಲಂ ಬ್ರೂಯಾನ್ನ ಶುಕ್ತಾಮೀರಯೇದ್ಗಿರಮ್[801]||
12159019a ಕ್ಷತ್ರಿಯೋ ಬಾಹುವೀರ್ಯೇಣ ತರತ್ಯಾಪದಮಾತ್ಮನಃ|
12159019c ಧನೇನ ವೈಶ್ಯಃ ಶೂದ್ರಶ್ಚ ಮಂತ್ರೈರ್ಹೋಮೈಶ್ಚ ವೈ ದ್ವಿಜಃ||

ಆದುದರಿಂದ ಅವನೊಂದಿಗೆ ಅಕುಶಲ ಮಾತನ್ನಾಡಬಾರದು. ಕಠೋರವಾದ ಮಾತನ್ನಾಡಬಾರದು. ಕ್ಷತ್ರಿಯನು ತನ್ನ ಬಾಹುವೀರ್ಯದಿಂದ, ವೈಶ್ಯರ ಮತ್ತು ಶೂದ್ರದ ಧನದಿಂದ ಮತ್ತು

---

798 ವೇದವಿತ್ (ಗೀತಾ ಪ್ರೆಸ್).

799 ಸ್ವವೀರ್ಯಾದ್ರಾಜವೀರ್ಯಾಚ್ಚ ಸ್ವವೀರ್ಯಂ ಬಲವತ್ತರಮ್| (ಗೀತಾ ಪ್ರೆಸ್).

800 ಕರ್ತಾ (ಗೀತಾ ಪ್ರೆಸ್).

801 ಶುಷ್ಕಾಮೀರಯೇದ್ಗಿರಮ್| (ಗೀತಾ ಪ್ರೆಸ್).

ದ್ವಿಜರ ಮಂತ್ರ ಮತ್ತು ಹೋಮಗಳಿಂದ ತನಗೊದಗಿದ ವಿಪತ್ತಿನಿಂದ ಪಾರಾಗಬಲ್ಲನು.

12159020a ನ ವೈ ಕನ್ಯಾ ನ ಯುವತಿರ್ನಾಮಂತ್ರೋ ನ ಚ ಬಾಲಿಶಃ|
12159020c ಪರಿವೇಷ್ಟಾಗ್ನಿಹೋತ್ರಸ್ಯ ಭವೇನ್ನಾಸಂಸ್ಕೃತಸ್ತಥಾ|

ಕನ್ಯೆ, ಯುವತಿ, ಮಂತ್ರಗಳನ್ನು ತಿಳಿಯದವನು, ಮೂರ್ಖ ಮತ್ತು ಸಂಸ್ಕಾರಹೀನನಿಗೆ ಅಗ್ನಿಯಲ್ಲಿ ಹವನ ಮಾಡುವ ಅಧಿಕಾರವಿಲ್ಲ.

12159020e ನರಕೇ ನಿಪತಂತ್ಯೇತೇ ಜುಹ್ವಾನಾಃ ಸ ಚ ಯಸ್ಯ ತತ್[802]||
12159021a ಪ್ರಾಜಾಪತ್ಯಮದತ್ತ್ವಾಶ್ವಮಗ್ನ್ಯಧೇಯಸ್ಯ ದಕ್ಷಿಣಾಮ್|
12159021c ಅನಾಹಿತಾಗ್ನಿರಿತಿ ಸ ಪ್ರೋಚ್ಯತೇ ಧರ್ಮದರ್ಶಿಭಿಃ||

ಅವರು ಹವನ ಮಾಡಿದರೆ ಸ್ವಯಂ ನರಕದಲ್ಲಿ ಬೀಳುತ್ತಾರಲ್ಲದೇ ಯಾರಿಗಾಗಿ ಹವನ ಮಾಡಿದರೋ ಅವರೂ ಕೂಡ ನರಕದಲ್ಲಿ ಬೀಳುತ್ತಾರೆ. ಅಗ್ನಿಹೋತ್ರವನ್ನು ಆರಂಭಿಸಿ ಪ್ರಜಾಪತಿ ದೇವತೆಗೆ ಅವಶ್ಯರೂಪ ದಕ್ಷಿಣೆ-ದಾನಗಳನ್ನು ನೀಡದಿದ್ದರೆ ಧರ್ಮದರ್ಶಿಗಳು ಅವನನ್ನು ಅನಾಹಿತಾಗ್ನಿ[803] ಎಂದು ಕರೆಯುತ್ತಾರೆ.

12159022a ಪುಣ್ಯಾನ್ಯನ್ಯಾನಿ ಕುರ್ವೀತ ಶ್ರದ್ದಧಾನೋ ಜಿತೇಂದ್ರಿಯಃ|
12159022c ಅನಾಪ್ತದಕ್ಷಿಣೈರ್ಯಜ್ಞೈರ್ನ ಯಜೇತ ಕಥಂ ಚನ||

---

802 ಇದರ ನಂತರ ಈ ಒಂದು ಶ್ಲೋಕಾರ್ಧವಿದೆ: ತಸ್ಮಾದ್ವೈತಾನಕುಶಲೋ ಹೋತಾ ಸ್ಯಾದ್ವೇದಪಾರಗಃ| (ಗೀತಾ ಪ್ರೆಸ್).

803 ದಕ್ಷಿಣೆಗಳನ್ನು ಕೊಡದೇ ಅಗ್ನಿಸ್ಥಾಪನೆ ಮಾಡಿಸಿಕೊಳ್ಳುವುದು ವ್ಯರ್ಥ (ಗೀತಾ ಪ್ರೆಸ್).

ಮನುಷ್ಯನು ಯಾವುದೇ ಅನ್ಯ ಪುಣ್ಯ ಕರ್ಮಗಳನ್ನೇ ಮಾಡಲಿ ಅವುಗಳನ್ನು ಶ್ರದ್ಧೆಯಿಂದ ಜಿತೇಂದ್ರಿಯನಾಗಿದ್ದುಕೊಂಡು ಮಾಡಬೇಕು. ಪರ್ಯಾಪ್ತ ದಕ್ಷಿಣೆಗಳನ್ನು ಕೊಡದೇ ಯಾವುದೇ ಯಜ್ಞವನ್ನು ಮಾಡಬಾರದು.

12159023a ಪ್ರಜಾಃ ಪಶೂಂಶ್ಚ ಸ್ವರ್ಗಂ ಚ ಹಂತಿ ಯಜ್ಞೋ ಹ್ಯದಕ್ಷಿಣಃ|
12159023c ಇಂದ್ರಿಯಾಣಿ ಯಶಃ ಕೀರ್ತಿಮಾಯುಶ್ಚಾಸ್ಯೋಪಕೃಂತತಿ||

ದಕ್ಷಿಣೆಗಳಿಲ್ಲದ ಯಜ್ಞವು ಪ್ರಜೆ-ಪಶುಗಳನ್ನು ನಾಶಗೊಳಿಸುತ್ತದೆ ಮತ್ತು ಸ್ವರ್ಗಮಾರ್ಗದಲ್ಲಿ ವಿಘ್ನವನ್ನುಂಟುಮಾಡುತ್ತದೆ. ಅಷ್ಟೇ ಅಲ್ಲದೇ ಅದು ಇಂದ್ರಿಯಗಳು, ಯಶಸ್ಸು, ಕೀರ್ತಿ, ಮತ್ತು ಆಯುಸ್ಸನ್ನು ಕ್ಷೀಣಗೊಳಿಸುತ್ತದೆ.

12159024a ಉದಕ್ಯಾ ಹ್ಯಾಸತೇ ಯೇ ಚ ಯೇ ಚ ಕೇ ಚಿದನಗ್ನಯಃ|
12159024c ಕುಲಂ[804] ಚಾಶ್ರೋತ್ರಿಯಂ ಯೇಷಾಂ ಸರ್ವೇ ತೇ ಶೂದ್ರಧರ್ಮಿಣಃ[805]||

ರಜಸ್ವಲೆಯೊಡನೆ ಸಂಭೋಗಮಾಡುವ, ಮನೆಯಲ್ಲಿ ಅಗ್ನಿಯನ್ನು ಸ್ಥಾಪಿಸಿಕೊಂಡಿರದ, ಮತ್ತು ಅವೈದಿಕ ರೀತಿಯಲ್ಲಿ ಹವನ ಮಾಡುವ ಬ್ರಾಹ್ಮಣರೆಲ್ಲರೂ ಶೂದ್ರಧರ್ಮಿಗಳೇ.

12159025a ಉದಪಾನೋದಕೇ ಗ್ರಾಮೇ ಬ್ರಾಹ್ಮಣೋ ವೃಷಲೀಪತಿಃ|
12159025c ಉಷಿತ್ವಾ ದ್ವಾದಶ ಸಮಾಃ ಶೂದ್ರಕರ್ಮೇಹ ಗಚ್ಛತಿ||

ಒಂದೇ ಬಾವಿಯಿರುವ ಗ್ರಾಮದಲ್ಲಿ ಹನ್ನೆರಡು ವರ್ಷಗಳು ವಾಸಿಸುವ

---

804 ಹೋಮಂ (ಗೀತಾ ಪ್ರೆಸ್).

805 ಪಾಪಕರ್ಮಿಣಃ| (ಗೀತಾ ಪ್ರೆಸ್).

ಮತ್ತು ಶೂದ್ರ ಕನ್ಯೆಯನ್ನು ವಿವಾಹವಾದ ಬ್ರಾಹ್ಮಣನು ಶೂದ್ರಕರ್ಮಿಯೇ ಆಗುತ್ತಾನೆ.

12159026a ಅನಾರ್ಯಾಂ[806] ಶಯನೇ ಬಿಭ್ರದುಜ್ಜ್ಞಿಭ್ರಚ್ಚ ಯೋ
ದ್ವಿಜಾಮ್[807]|
12159026c ಅಬ್ರಾಹ್ಮಣೋ ಮನ್ಯಮಾನ[808]ಸ್ತೃಣೇಷ್ವಾಸೀತ ಪೃಷ್ಠತಃ|
12159026e ತಥಾ ಸ ಶುಧ್ಯತೇ ರಾಜನ್ ಶೃಣು ಚಾತ್ರ ವಚೋ ಮಮ||

ಅನಾರ್ಯೆಯೊಡನೆ ಸಮಾಗಮ ಮಾಡಿದವನು, ಬಡ್ಡಿಯಿಂದ ಜೀವನ ನಡಿಸುತ್ತಿರುವವನು ಮತ್ತು ಬ್ರಾಹ್ಮಣರನ್ನು ಅಬ್ರಾಹ್ಮಣರೆಂದು ತಿಳಿಯುವವನು ಹುಲ್ಲಿನ ಮೇಲೆ ಬಿಸಿಲಿನಲ್ಲಿ ಸೂರ್ಯನ ಕಡೆಗೆ ಬೆನ್ನುಮಾಡಿಕೊಂಡು ಕುಳಿತುಕೊಳ್ಳಬೇಕು. ಅದರಿಂದ ಅವನು ಶುದ್ಧನಾಗುತ್ತಾನೆ. ರಾಜನ್! ನನ್ನ ಮಾತನ್ನು ಕೇಳು.

12159027a ಯದೇಕರಾತ್ರೇಣ ಕರೋತಿ ಪಾಪಂ
ಕೃಷ್ಣಂ ವರ್ಣಂ[809] ಬ್ರಾಹ್ಮಣಃ ಸೇವಮಾನಃ|
12159027c ಸ್ಥಾನಾಸನಾಭ್ಯಾಂ ವಿಚರನ್ಪ್ರತೀ ಸಂಸ್
ತ್ರಿಭಿರ್ವರ್ಷೈಃ ಶಮಯೇದಾತ್ಮಪಾಪಮ್||

---

806 ಅಭಾರ್ಯಾಂ (ಗೀತಾ ಪ್ರೆಸ್).

807 ಕಷಾಯಪಃ (ಭಾರತ ದರ್ಶನ).

808 ಅಬ್ರಾಹ್ಮಣ ಇವ ವಂದಿತ್ವಾ (ಭಾರತ ದರ್ಶನ).

809 ನಿಕೃಷ್ಟವರ್ಣಂ ಎಂಬ ಪಾಠಾಂತರವಿದೆ. ಆದರೆ ಮೂರು ಪಾದಗಳಲ್ಲಿಯೂ ಹನ್ನೊಂದು ಅಕ್ಷರಗಳಿರುವುದರಿಂದ ಈ ಎರಡನೆಯ ಪಾದದಲ್ಲಿಯೂ ಹನ್ನೊಂದು ಅಕ್ಷರವೇ ಇರಬೇಕು. ಆದುದರಿಂದ ಕೃಷ್ಣಂ ವರ್ಣಂ ಎನ್ನುವುದೇ ಶುದ್ಧಪಾಠವೆಂದು ತೋರುತ್ತದೆ (ಭಾರತ ದರ್ಶನ).

ಬ್ರಾಹ್ಮಣನು ಒಂದು ರಾತ್ರಿಯಾದರೂ ನೀಚವರ್ಣದವರ ಸೇವೆಯನ್ನು
ಮಾಡಿದರೆ ಅಥವಾ ಜೊತೆಯಲ್ಲಿ ಒಂದೇ ಆಸನದಲ್ಲಿಯೇ
ಕುಳಿತುಕೊಂಡಿದ್ದರೆ ಅವನು ಮೂರು ವರ್ಷಗಳು ವ್ರತಸ್ಥನಾಗಿದ್ದು
ದೇಶಪರ್ಯಟನೆ ಮಾಡಿ ತನ್ನ ಪಾಪವನ್ನು ಕಳೆದುಕೊಳ್ಳಬೇಕು.

12159028a ನ ನರ್ಮಯುಕ್ತಂ ವಚನಂ ಹಿನಸ್ತಿ
ನ ಸ್ತ್ರೀಷು ರಾಜನ್ನ ವಿವಾಹಕಾಲೇ|
12159028c ನ ಗುರ್ವರ್ಥೇ ನಾತ್ಮನೋ ಜೀವಿತಾರ್ಥೇ
ಪಂಚಾನೃತಾನ್ಯಾಹುರಪಾತಕಾನಿ||

ರಾಜನ್! ಹಾಸ್ಯದಲ್ಲಿ ನುಡಿದ ಸುಳ್ಳು ಪಾಪವನ್ನುಂಟುಮಾಡುವುದಿಲ್ಲ.
ವಿನೋದದಲ್ಲಿ, ಸ್ತ್ರೀಯರೊಡನೆಯ ಸಂಭಾಷಣೆಯಲ್ಲಿ,
ವಿವಾಹಕಾಲದಲ್ಲಿ, ಆಚಾರ್ಯನ ಸಲುವಾಗಿ ಮತ್ತು ತನ್ನ
ಪ್ರಾಣರಕ್ಷಣೆಗಾಗಿ ಹೇಳುವ ಈ ಐದು ಬಗೆಯ ಸುಳ್ಳುಗಳು
ಪಾಪವನ್ನುಂಟುಮಾಡುವುದಿಲ್ಲವೆಂದು ಹೇಳುತ್ತಾರೆ.

12159029a ಶ್ರದ್ದಧಾನಃ ಶುಭಾಂ ವಿದ್ಯಾಂ ಹೀನಾದಪಿ ಸಮಾಚರೇತ್|
12159029c ಸುವರ್ಣಮಪಿ ಚಾಮೇಧ್ಯಾದಾದದೀತೇತಿ ಧಾರಣಾ||

ಹೀನವರ್ಣದರೂ ಉತ್ತಮ ವಿದ್ಯೆಯನ್ನು ಶ್ರದ್ಧೆಯಿಂದಲೇ
ಕಲಿಯಬೇಕು. ಚಿನ್ನವು ಅಪವಿತ್ರ ಸ್ಥಳದಲ್ಲಿಯೇ ಇದ್ದರೂ ಸ್ವಲ್ಪವೂ
ವಿಚಾರಮಾಡದೇ ಅದನ್ನು ತೆಗೆದುಕೊಳ್ಳಬೇಕು.

12159030a ಸ್ತ್ರೀರತ್ನಂ ದುಷ್ಕುಲಾಚ್ಚಾಪಿ ವಿಷಾದಪ್ಯಮೃತಂ ಪಿಬೇತ್|
12159030c ಅದುಷ್ಟಾ ಹಿ ಸ್ತ್ರಿಯೋ ರತ್ನಮಾಪ ಇತ್ಯೇವ ಧರ್ಮತಃ||

ದುಷ್ಕುಲದಲ್ಲಿ ಹುಟ್ಟಿದ್ದರೂ ಉತ್ತಮ ಸ್ತ್ರೀಯನ್ನು ಪರಿಗ್ರಹಿಸಬೇಕು.

ರತ್ನವು ಎಲ್ಲಿಯೇ ಯಾರಲ್ಲಿಯೇ ಇದ್ದರೂ ಅದನ್ನು
ಪಡೆದುಕೊಳ್ಳಬಹುದು. ನೀರು ಹೀನಸ್ಥಳದಲ್ಲಿದ್ದರೂ ಅದನ್ನು
ಕುಡಿಯಬಹುದು. ಏಕೆಂದರೆ ಸ್ತ್ರೀಯರು, ರತ್ನ ಮತ್ತು ನೀರು
ಯಾವಾಗಲೂ ಧರ್ಮತಃ ದೂಷಣೀಯಗಳಲ್ಲ.

12159031a ಗೋಬ್ರಾಹ್ಮಣಹಿತಾರ್ಥಂ ಚ ವರ್ಣಾನಾಂ ಸಂಕರೇಷು ಚ|
12159031c ಗೃಹ್ಣೀಯಾತ್ತು ಧನುರ್ವೈಶ್ಯಃ ಪರಿತ್ರಾಣಾಯ ಚಾತ್ಮನಃ||

ಗೋ-ಬ್ರಾಹ್ಮಣರ ಹಿತಕ್ಕಾಗಿ, ವರ್ಣಸಂಕರವನ್ನು ತಡೆಯುವುದಕ್ಕೆ
ಮತ್ತು ಆತ್ಮರಕ್ಷಣೆಗೆ ವೈಶ್ಯನು ಶಸ್ತ್ರಗಳನ್ನು ಹಿಡಿಯಬಹುದು.

12159032a ಸುರಾಪಾನಂ ಬ್ರಹ್ಮಹತ್ಯಾ ಗುರುತಲ್ಪಮಥಾಪಿ ವಾ|
12159032c ಅನಿರ್ದೇಶ್ಯಾನಿ ಮನ್ಯಂತೇ ಪ್ರಾಣಾಂತಾನೀತಿ ಧಾರಣಾ||

ಸುರಾಪಾನ, ಬ್ರಹ್ಮಹತ್ಯೆ ಮತ್ತು ಗುರುಪತ್ನೀಸಮಾಗಮ – ಇವುಗಳಿಗೆ
ಯಾವುದೇ ಪ್ರಾಯಶ್ಚಿತ್ತಗಳನ್ನು ಹೇಳಿಲ್ಲ[810]. ಪ್ರಾಣಾಂತವೇ ಇದಕ್ಕೆ
ಪ್ರಾಯಶ್ಚಿತ್ತವೆಂದು ತಿಳಿಯುತ್ತಾರೆ.

12159033a ಸುವರ್ಣಹರಣಂ ಸ್ತೈನ್ಯಂ ವಿಪ್ರಾಸಂಗಶ್ಚ ಪಾತಕಮ್|
12159033c ವಿಹರನ್ಮದ್ಯಪಾನಂ ಚಾಪ್ಯಗಮ್ಯಾಗಮನಂ ತಥಾ||
12159034a ಪತಿತೈಃ ಸಂಪ್ರಯೋಗಾಚ್ಚ ಬ್ರಾಹ್ಮಣ್ಯೈರ್ಯೋನಿತಸ್ತಥಾ|
12159034c ಅಚಿರೇಣ ಮಹಾರಾಜ ತಾದೃಶೋ ವೈ ಭವತ್ಯುತ||

---

[810] ಅನಿರ್ದೇಶ್ಯಾನಿ ಎನ್ನುವುದಕ್ಕೆ ವ್ಯಾಖ್ಯಾನಕಾರರು ಬುದ್ಧಿಪೂರ್ವಕಾನಿ ಕೃತಾನಿ ಚೇತ್ ಎಂದು ಅರ್ಥಮಾಡಿದ್ದಾರೆ. ತಿಳಿಯದೇ ಮಾಡಿದರೆ ಪ್ರಾಯಶ್ಚಿತ್ತವದೆ ಬುದ್ಧಿಪೂರ್ವಕವಾಗಿ ಮಾಡಿದರೆ ಮರಣಾಂತವೇ ಪ್ರಾಯಶ್ಚಿತ್ತ (ಭಾರತ ದರ್ಶನ).

ಸುವರ್ಣಹರಣ, ಅಮೂಲ್ಯವಸ್ತುಗಳನ್ನು ಕದಿಯುವುದು, ಬ್ರಾಹ್ಮಣರ ಧನವನ್ನು ಅಪಹರಿಸುವುದು ಇವು ಮಹಾಪಾತಕಗಳು. ಮಹಾರಾಜ! ಮದ್ಯಪಾನ, ಅಯೋಗ್ಯಳೊಂದಿಗೆ ಸಂಭೋಗಮಾಡುವುದು, ಪತಿತರೊಡನೆ ಸಂಪರ್ಕ, ಬ್ರಾಹ್ಮಣೇತರನಾಗಿದ್ದುಕೊಂಡು ಬ್ರಾಹ್ಮಣಸ್ತ್ರೀಯೊಡನೆ ಕೂಡುವುದು – ಇಂತಹ ಸ್ವೇಚ್ಛಾಚಾರಗಳಿಂದ ಮನುಷ್ಯನು ಬೇಗನೆ ಪತಿತನಾಗುತ್ತಾನೆ.

12159035a ಸಂವತ್ಸರೇಣ ಪತತಿ ಪತಿತೇನ ಸಹಾಚರನ್|
12159035c ಯಾಜನಾಧ್ಯಾಪನಾದ್ಯೌನಾನ್ನ ತು ಯಾನಾಸನಾಶನಾತ್||

ಒಂದು ವರ್ಷಗಳ ಕಾಲ ಪತಿತನೊಡನೆ ಒಡನಾಟ ಮಾಡುವುದರಿಂದ, ಅವನಿಂದ ಯಜ್ಞವನ್ನು ಮಾಡಿಸುವುದರಿಂದ ಅಥವಾ ಅವನಿಗೆ ವೇದಾಧ್ಯಯನ ಮಾಡಿಸುವುದರಿಂದ ಅಥವಾ ಅವನೊಂದಿಗೆ ವಿವಾಹಸಂಬಂಧವನ್ನು ಮಾಡಿಕೊಳ್ಳುವುದರಿಂದ ತಾನೂ ಪತಿತನಾಗುತ್ತಾನೆ.

12159036a ಏತಾನಿ ಚ ತತೋಽನ್ಯಾನಿ ನಿರ್ದೇಶ್ಯಾನೀತಿ ಧಾರಣಾ|
12159036c ನಿರ್ದೇಶ್ಯಕೇನ ವಿಧಿನಾ ಕಾಲೇನಾವ್ಯಸನೀ ಭವೇತ್||

ಈ ಪಾಪಗಳಿಗೆ ಪ್ರಾಯಶ್ಚಿತ್ತಗಳೇ ಇಲ್ಲವೆಂದು ಹೇಳಿದ್ದಾರೆ. ಅನ್ಯ ಪಾಪಗಳಿಗೆ ಹೇಳಿದ ಪ್ರಾಯಶ್ಚಿತ್ತಗಳನ್ನು ಮಾಡಿಕೊಂಡರೆ ಪಾಪವ್ಯಸನದಿಂದ ಮುಕ್ತನಾಗುತ್ತಾನೆ. ಪುನಃ ಆ ಪಾಪಗಳನ್ನು ಮಾಡದೇ ಇದ್ದರೆ ಶುದ್ಧನಾಗುತ್ತಾನೆ.

12159037a ಅನ್ನಂ ತಿರ್ಯಘ್ನ ಹೋತವ್ಯಂ[811] ಪ್ರೇತಕರ್ಮಣ್ಯಪಾತಿತೇ|
12159037c ತ್ರಿಷು ತ್ವೇತೇಷು ಪೂರ್ವೇಷು ನ ಕುರ್ಯಾತ ವಿಚಾರಣಾಮ್||

ಹಿಂದೆ ಹೇಳಿದ ಈ ಮೂರು ಮಹಾಪಾತಕಗಳನ್ನು ಮಾಡಿದವನ ಮರಣಾನಂತರದ ಪ್ರೇತಕರ್ಮಗಳನ್ನು ಮಾಡದೇ ಅವನ ಅನ್ನ ಮತ್ತು ಧನಗಳನ್ನು, ಏನೂ ವಿಚಾರಮಾಡದೇ, ತೆಗೆದುಕೊಳ್ಳಬೇಕು.

12159038a ಅಮಾತ್ಯಾನ್ವಾ ಗುರೂನ್ವಾಪಿ ಜಹ್ಯಾದ್ಧರ್ಮೇಣ ಧಾರ್ಮಿಕಃ|
12159038c ಪ್ರಾಯಶ್ಚಿತ್ತಮಕುರ್ವಾಣೈರ್ನ್ಯತ್ಯೈರರ್ಹತಿ ಸಂವಿದಮ್||

ಧಾರ್ಮಿಕ ರಾಜನು ತನ್ನ ಅಮಾತ್ಯರಾಗಲೀ ಪುರೋಹಿತರಾಗಲೀ ಪತಿತರಾದರೆ ಅವರನ್ನೂ ಧಾರ್ಮಿಕವಾಗಿ ತ್ಯಜಿಸಬೇಕು. ತಾವು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವವರೆಗೂ ಅವರೊಂದಿಗೆ ಮಾತನ್ನೂ ಆಡಕೂಡದು.

12159039a ಅಧರ್ಮಕಾರೀ ಧರ್ಮೇಣ ತಪಸಾ ಹಂತಿ ಕಿಲ್ಬಿಷಮ್|
12159039c ಬ್ರುವನ್ಸ್ತೇನ ಇತಿ ಸ್ತೇನಂ ತಾವತ್ಪ್ರಾಪ್ನೋತಿ ಕಿಲ್ಬಿಷಮ್|
12159039e ಅಸ್ತೇನಂ ಸ್ತೇನ ಇತ್ಯುಕ್ತ್ವಾ ದ್ವಿಗುಣಂ ಪಾಪಮಾಪ್ನುಯಾತ್||

ಅಧರ್ಮಕಾರಿಯು ಧರ್ಮ ಮತ್ತು ತಪಸ್ಸುಗಳಿಂದ ತನ್ನ ಪಾಪವನ್ನು ಕಳೆದುಕೊಳ್ಳುತ್ತಾನೆ. ಕಳ್ಳನನ್ನು ತೋರಿಸಿ "ಇವನು ಕಳ್ಳ" ಎಂದು ಹೇಳಿದವನು ಕಳ್ಳನ ಪಾಪಕ್ಕೆ ಸಮನಾದ ಪಾಪವನ್ನೇ ಹೊಂದುತ್ತಾನೆ. ಕಳ್ಳನಲ್ಲದವನನ್ನು "ಕಳ್ಳ" ಎಂದು ಹೇಳಿದವನಿಗೆ ಕಳ್ಳನ ಪಾಪಕ್ಕಿಂತಲೂ ಇಮ್ಮಡಿಯಾದ ಪಾಪವು ತಗಲುತ್ತದೆ.

---

811 ಅನ್ನಂ ವೀರ್ಯಃ ಗ್ರಹೀತವ್ಯಂ (ಭಾರತ ದರ್ಶನ/ಗೀತಾ ಪ್ರೆಸ್).

12159040a ತ್ರಿಭಾಗಂ ಬ್ರಹ್ಮಹತ್ಯಾಯಾಃ ಕನ್ಯಾ ಪ್ರಾಪ್ನೋತಿ ದುಷ್ಯತೀ|
12159040c ಯಸ್ತು ದೂಷಯಿತಾ ತಸ್ಯಾಃ ಶೇಷಂ ಪ್ರಾಪ್ನೋತಿ ಕಿಲ್ಬಿಷಮ್||

ದೂಷಿತಳಾದ ಕನ್ಯೆಯು ಬ್ರಹ್ಮಹತ್ಯೆಯ ನಾಲ್ಕನೇ ಮೂರು ಭಾಗಗಳ
ಪಾಪವನ್ನು ಪಡೆದುಕೊಳ್ಳುತ್ತಾಳೆ. ಅವಳನ್ನು ದೂಷಿತಗೊಳಿಸಿದವನು
ಉಳಿದ ಪಾಪವನ್ನು ಪಡೆದುಕೊಳ್ಳುತ್ತಾನೆ.

12159041a ಬ್ರಾಹ್ಮಣಾಯಾವಗೂರ್ಯೇಹ ಸ್ಪೃಷ್ಟ್ವಾ ಗುರುತರಂ ಭವೇತ್|
12159041c ವರ್ಷಾಣಾಂ ಹಿ ಶತಂ ಪಾಪಃ ಪ್ರತಿಷ್ಠಾಂ ನಾಧಿಗಚ್ಚತಿ||
12159042a ಸಹಸ್ರಂ ತ್ವೇವ ವರ್ಷಾಣಾಂ ನಿಪಾತ್ಯ ನರಕೇ ವಸೇತ್|

ಈ ಲೋಕದಲ್ಲಿ ಬ್ರಾಹ್ಮಣನನ್ನು ನಿಂದಿಸುವ ಮತ್ತು ನೂಕಿ
ಬೀಳಿಸುವವನಿಗೆ ಅತಿ ದೊಡ್ಡ ಪಾಪವು ತಗಲುತ್ತದೆ. ಅಂತಹ ಪಾಪಿಗೆ
ನೂರಾರು ವರ್ಷಗಳ ಪರ್ಯಂತ ನೆಲೆಯೇ ದೊರಕುವುದಿಲ್ಲ.
ಸಹಸ್ರಾರು ವರ್ಷಗಳ ಪರ್ಯಂತ ನರಕದಲ್ಲಿಯೇ ಬಿದ್ದಿರಬೇಕಾಗುತ್ತದೆ.

12159042c ತಸ್ಮಾನ್ನೈವಾವಗೂರ್ಯಾದ್ಧಿ ನೈವ ಜಾತು ನಿಪಾತಯೇತ್||
12159043a ಶೋಣಿತಂ ಯಾವತಃ ಪಾಂಸೂನ್ಸಂಗೃಹ್ಣೀಯಾದ್ವಿಜಕ್ಷತಾತ್|
12159043c ತಾವತೀಃ ಸ ಸಮಾ ರಾಜನ್ನರಕೇ ಪರಿವರ್ತತೇ||

ರಾಜನ್! ಆದುದರಿಂದ ಬ್ರಾಹ್ಮಣರನ್ನು ನಿಂದಿಸಬಾರದು ಮತ್ತು
ಅವರನ್ನು ದೂಡಿ ಕೆಳಕ್ಕುರುಳಿಸಬಾರದು. ಬ್ರಾಹ್ಮಣನ ಗಾಯದಿಂದ
ಕೆಳಕ್ಕೆ ಬಿದ್ದ ರಕ್ತವು ಎಷ್ಟು ಧೂಳಿನ ಕಣಗಳನ್ನು ನೆನೆಸುತ್ತದೆಯೋ
ಅಷ್ಟು ಸಂಖ್ಯೆಯ ವರ್ಷಗಳು ಅವನನ್ನು ಗಾಯಗೊಳಿಸಿದವನು
ನರಕದಲ್ಲಿ ಬಿದ್ದಿರಬೇಕಾಗುತ್ತದೆ.

12159044a ಭ್ರೂಣಹಾಹವಮಧ್ಯೇ ತು ಶುಧ್ಯತೇ ಶಸ್ತ್ರಪಾತಿತಃ|

12159044c ಆತ್ಮಾನಂ ಜುಹುಯಾದ್ವಹ್ನೌ ಸಮಿದ್ಧೇ ತೇನ ಶುಧ್ಯತಿ||

ಭ್ರೂಣಹತ್ಯೆಯನ್ನು ಮಾಡಿದವನು ಯುದ್ಧದಲ್ಲಿ ಶಸ್ತ್ರಪ್ರಹಾರದಿಂದ ಬಿದ್ದಾಗ ಶುದ್ಧನಾಗುತ್ತಾನೆ. ಅಥವಾ ಪ್ರಜ್ವಲಿತ ಅಗ್ನಿಯಲ್ಲಿ ಆತ್ಮಾರ್ಪಣೆಮಾಡಿಕೊಳ್ಳುವುದರಿಂದಲೂ ಶುದ್ಧನಾಗುತ್ತಾನೆ.

12159045a ಸುರಾಪೋ ವಾರುಣೀಮುಷ್ಣಾಂ ಪೀತ್ವಾ ಪಾಪಾದ್ವಿಮುಚ್ಯತೇ|
12159045c ತಯಾ ಸ ಕಾಯೇ ನಿರ್ದಗ್ಧೇ ಮೃತ್ಯುನಾ ಪ್ರೇತ್ಯ ಶುಧ್ಯತಿ|
12159045e ಲೋಕಾಂಶ್ಚ ಲಭತೇ ವಿಪ್ರೋ ನಾನ್ಯಥಾ ಲಭತೇ ಹಿ ಸಃ||

ಸುರಾಪಾನಮಾಡಿದವನು ಕುದಿಯುತ್ತಿರುವ ಮದ್ಯವನ್ನು ಕುಡಿಯುವುದರಿಂದ ಪಾಪಮುಕ್ತನಾಗುತ್ತಾನೆ. ಕುದಿಯುತ್ತಿರುವ ಮದ್ಯದಿಂದ ಶರೀರವು ಸುಟ್ಟು ಮರಣವನ್ನಪ್ಪುವುದರಿಂದಲೂ ಅವನು ಶುದ್ಧನಾಗುತ್ತಾನೆ. ಇದರಿಂದ ಆ ವಿಪ್ರನಿಗೆ ಉತ್ತಮ ಲೋಕಗಳು ದೊರೆಯುತ್ತವೆ. ಅನ್ಯಥಾ ಇಲ್ಲ.

12159046a ಗುರುತಲ್ಪಮಧಿಷ್ಠಾಯ ದುರಾತ್ಮಾ ಪಾಪಚೇತನಃ|
12159046c ಸೂರ್ಮೀಂ ಜ್ವಲಂತೀಮಾಶ್ಲಿಷ್ಯ ಮೃತ್ಯುನಾ ಸ ವಿಶುಧ್ಯತಿ||

ಗುರುಪತ್ನಿಯೊಡನೆ ಸಮಾಗಮ ಮಾಡಿದ ಪಾಪಚೇತನ ದುರಾತ್ಮನು ಕಾದ ಲೋಹದ ಸ್ತ್ರೀಪ್ರತಿಮೆಯನ್ನು ಆಲಂಗಿಸಿ ಮೃತ್ಯುವನ್ನು ಹೊಂದುವುದರಿಂದ ಶುದ್ಧನಾಗುತ್ತಾನೆ.

12159047a ಅಥ ವಾ ಶಿಶ್ನವೃಷಣಾವಾದಾಯಾಂಜಲಿನಾ ಸ್ವಯಮ್|
12159047c ನೈರೃತೀಂ ದಿಶಮಾಸ್ಥಾಯ ನಿಪತೇತ್ಸ ತ್ವಜಿಹ್ಮಗಃ||

ಅಥವಾ ಶಿಶ್ನ-ವೃಷಣಗಳನ್ನು ಕತ್ತರಿಸಿ ಬೊಗಸೆಯಲ್ಲಿಟ್ಟುಕೊಂಡು

ಪ್ರಾಣ ಹೋಗುವವರೆಗೂ ನೈಋತ್ಯದಿಕ್ಕಿನಲ್ಲಿ ನಡೆದುಹೋಗುತ್ತಾ ಬೀಳಬೇಕು. ಆಗ ಅವನು ಶುದ್ಧನಾಗುತ್ತಾನೆ.

12159048a ಬ್ರಾಹ್ಮಣಾರ್ಥೇ ऽಪಿ ವಾ ಪ್ರಾಣಾನ್ಸಂತ್ಯಜೇತ್ತೇನ ಶುಧ್ಯತಿ|
12159048c ಅಶ್ವಮೇಧೇನ ವಾಪೀಷ್ಟ್ವಾ ಗೋಮೇಧೇನಾಪಿ ವಾ ಪುನಃ|
12159048e ಅಗ್ನಿಷ್ಟೋಮೇನ ವಾ ಸಮ್ಯಗಿಹ ಪ್ರೇತ್ಯ ಚ ಪೂಯತೇ||

ಅಥವಾ ಬ್ರಾಹ್ಮಣನಿಗಾಗಿ ಪ್ರಾಣವನ್ನು ತೊರೆದರೂ ಗುರುತಲ್ಪಗನು ಶುದ್ಧನಾಗುತ್ತಾನೆ. ಅಶ್ವಮೇಧ ಅಥವಾ ಗೋಮೇಧ ಅಥವಾ ಅಗ್ನಿಷ್ಟೋಮ ಯಾಗವನ್ನು ಮಾಡಿಯೂ ಗುರುತಲ್ಪಗನು ಪಾಪದಿಂದ ಮುಕ್ತನಾಗಿ ಇಹ ಮತ್ತು ಪರಲೋಕಗಳಲ್ಲಿ ಪೂಜಿತನಾಗುತ್ತಾನೆ.

12159049a ತಥೈವ ದ್ವಾದಶ ಸಮಾಃ ಕಪಾಲೀ ಬ್ರಹ್ಮಹಾ ಭವೇತ್|
12159049c ಬ್ರಹ್ಮಚಾರೀ ಚರೇದ್ ಭೈಕ್ಷಂ ಸ್ವಕರ್ಮೋದಾಹರನ್ಮುನಿಃ||
12159050a ಏವಂ ವಾ ತಪಸಾ ಯುಕ್ತೋ ಬ್ರಹ್ಮಹಾ ಸವನೀ ಭವೇತ್|

ಇದೇ ರೀತಿ ಬ್ರಹ್ಮಹತ್ಯೆಯನ್ನು ಮಾಡಿದವನು ಅವನ ಕಪಾಲವನ್ನು ಹಿಡಿದು "ನಾನು ಬ್ರಹ್ಮಘಾತಕ" ಎಂದು ಹೇಳಿಕೊಳ್ಳುತ್ತಾ ಹನ್ನೆರಡು ವರ್ಷಗಳು ತ್ರಿಕಾಲ ಸ್ನಾನಮಾಡುತ್ತಾ ಬ್ರಹ್ಮಚಾರಿಯಾಗಿ ಮುನಿಧರ್ಮವನ್ನಾಚರಿಸುತ್ತಾ ಭೈಕ್ಷ್ಯವೃತ್ತಿಯನ್ನು ನಡೆಸಿಕೊಂಡು ಸಂಚರಿಸುತ್ತಿರಬೇಕು. ಹೀಗೆ ಮಾಡುವುದರಿಂದ ಅಥವಾ ಕಠಿಣ ತಪಸ್ಸನ್ನಾಚರಿಸುವುದರಿಂದ ಬ್ರಹ್ಮಘಾತಿಯು ಮಹಾಪಾಪದಿಂದ ಮುಕ್ತನಾಗುತ್ತಾನೆ.

12159050c ಏವಂ ವಾ ಗರ್ಭಮಜ್ಞಾತಾ ಚಾತ್ರೇಯೀಂ ಯೋಽಭಿಗಚ್ಚತಿ[812]|
12159050e ದ್ವಿಗುಣಾ ಬ್ರಹ್ಮಹತ್ಯಾ ವೈ ಆತ್ರೇಯೀವ್ಯಸನೇ ಭವೇತ್||

ತಿಳಿಯದೇ ಗರ್ಭಿಣೀ ಸ್ತ್ರೀಯನ್ನು ಕೊಂದವನು ಬ್ರಹ್ಮಹತ್ಯಾ ಪಾಪದ ಎರಡು ಪಟ್ಟಿನ ಪಾಪವನ್ನು ಆ ಗರ್ಭಿಣೀ ಸ್ತ್ರೀಯ ನಿಧನದಿಂದ ಹೊಂದುತ್ತಾನೆ.

12159051a ಸುರಾಪೋ ನಿಯತಾಹಾರೋ ಬ್ರಹ್ಮಚಾರೀ ಕ್ಷಮಾಚರಃ[813]|
12159051c ಊರ್ಧ್ವಂ ತ್ರಿಭ್ಯೋಽಥ ವರ್ಷೇಭ್ಯೋ ಯಜೇತಾಗ್ನಿಷ್ಟುತಾ ಪರಮ್|
12159051e ಋಷಭೈಕಸಹಸ್ರಂ ಗಾ ದತ್ತ್ವಾ ಶುಭಮವಾಪ್ನುಯಾತ್||

ಸುರಾಪಾನಮಾಡಿದವನು ನಿಯತಾಹಾರಿಯಾಗಿ ಬ್ರಹ್ಮಚಾರಿಯಾಗಿ ಮೂರುವರ್ಷಗಳು ಕ್ಷಮಾಚಾರಿಯಾಗಿರಬೇಕು. ಅನಂತರ ಅಗ್ನಿಷ್ಟುದ್ಯಾಗವನ್ನು[814] ಮಾಡಬೇಕು. ಯಜ್ಞದಕ್ಷಿಣೆಯಾಗಿ ಒಂದು ಸಾವಿರ ಹೋರಿಗಳನ್ನಾಗಲೀ ಒಂದು ಸಾವಿರ ಹಸುಗಳನ್ನಾಗಲೀ ದಾನಮಾಡಬೇಕು.

12159052a ವೈಶ್ಯಂ ಹತ್ವಾ ತು ವರ್ಷೇ ದ್ವೇ ಋಷಭೈಕಶತಾಶ್ಚ ಗಾಃ|
12159052c ಶೂದ್ರಂ ಹತ್ವಾಬ್ದಮೇವೈಕಮೃಷಭೈಕಾದಶಾಶ್ಚ ಗಾಃ||

ವೈಶ್ಯನನ್ನು ಕೊಂದವನು ಎರಡು ವರ್ಷ ಈ ರೀತಿ ವ್ರತಸ್ಥನಾಗಿದ್ದು ಅಗ್ನಿಷ್ಟುದ್ಯಾಗವನ್ನು ಮಾಡಿ ಒಂದು ನೂರು ಹೋರಿಗಳನ್ನಾಗಲೀ

---

812 ಏವಂ ತು ಸಮಭಿಜ್ಞಾತಾಮಾತ್ರೇಯೀಂ ವಾ ನಿಪಾತಯೇತ್| (ಭಾರತ ದರ್ಶನ/ಗೀತಾ ಪ್ರೆಸ್).

813 ಕ್ಷಿತೀಶಯಃ| (ಭಾರತ ದರ್ಶನ/ಗೀತಾ ಪ್ರೆಸ್).

814 ಅಗ್ನಿಷ್ಟೋಮ (ಗೀತಾ ಪ್ರೆಸ್).

ಒಂದು ನೂರು ಗೋವುಗಳನ್ನಾಗಲೀ ದಾನಮಾಡಬೇಕು. ಶೂದ್ರನನ್ನು ಕೊಂದವನು ಇದೇ ನಿಯಮದಿಂದ ಒಂದು ವರ್ಷಪರ್ಯಂತ ಬ್ರಹ್ಮಚರ್ಯವನ್ನು ಪಾಲಿಸಿ ಅನಂತರ ಅಗ್ನಿಷ್ಟುದ್ಯಾಗವನ್ನು ಮಾಡಿ ಒಂದು ಹೋರಿಯನ್ನೂ ನೂರು ಹಸುಗಳನ್ನೂ ದಾನಮಾಡಬೇಕು.

12159053a ಶ್ವಬರ್ಬರಖರಾನ್ ಹತ್ವಾ ಶೌದ್ರಮೇವ ವ್ರತಂ ಚರೇತ್|
12159053c ಮಾರ್ಜಾರಚಾಷಮಂಡೂಕಾನ್ಕಾಕಂ ಭಾಸಂ ಚ ಮೂಷಕಮ್||
12159054a ಉಕ್ತಃ ಪಶುಸಮೋ ಧರ್ಮೋ ರಾಜನ್ ಪ್ರಾಣಿನಿಪಾತನಾತ್|

ನಾಯಿ, ಹಂದಿ ಕತ್ತೆಗಳನ್ನು ಕೊಂದರೂ ಶೂದ್ರವಧೆಯ ಪ್ರಾಯಶ್ಚಿತ್ತವನ್ನೇ ಮಾಡಿಕೊಳ್ಳಬೇಕು. ರಾಜನ್! ಬೆಕ್ಕು, ನವಿಲು, ಕಾಗೆ, ಹಾವು, ಇಲಿ – ಇವುಗಳನ್ನು ಕೊಂದರೆ ಇತರ ಪಶುವಧೆಗೆ ಸಮಾನ ಪಾಪವೇ ಪ್ರಾಪ್ತವಾಗುತ್ತದೆ ಎಂದು ಹೇಳಿದ್ದಾರೆ.

12159054c ಪ್ರಾಯಶ್ಚಿತ್ತಾನ್ಯಥಾನ್ಯಾನಿ ಪ್ರವಕ್ಷ್ಯಾಮ್ಯನುಪೂರ್ವಶಃ||
12159055a ತಲ್ಪೇ ಚಾನ್ಯಸ್ಯ ಚೌರ್ಯೇ ಚ[815] ಪೃಥಕ್ಸಂವತ್ಸರಂ ಚರೇತ್|
12159055c ತ್ರೀಣಿ ಶ್ರೋತ್ರಿಯಭಾರ್ಯಾಯಾಂ ಪರದಾರೇ ತು ದ್ವೇ ಸ್ಮೃತೇ||
12159056a ಕಾಲೇ ಚತುರ್ಥೇ ಭುಂಜಾನೋ ಬ್ರಹ್ಮಚಾರೀ ವ್ರತೀ ಭವೇತ್|
12159056c ಸ್ಥಾನಾಸನಾಭ್ಯಾಂ ವಿಹರೇತ್ತ್ರಿರಹ್ನೋಽಭ್ಯುದಿತಾದಪಃ|
12159056e ಏವಮೇವ ನಿರಾಚಾಂತೋ ಯಶ್ಚಾಗ್ನೀನಪವಿಧ್ಯತಿ||

ಇತರ ಪ್ರಾಯಶ್ಚಿತ್ತಗಳನ್ನು ಅನುಕ್ರಮವಾಗಿ ಹೇಳುತ್ತೇನೆ. ಇರುವೆ-ಗೊದ್ದ ಮೊದಲಾದವುಗಳು ಕಾಲಿಗೆ ಸಿಕ್ಕಿ ಸತ್ತರೆ ಅಂತಹ ಪಾಪವು ಕೇವಲ ಪಶ್ಚಾತ್ತಾಪದಿಂದ ಪರಿಹಾರವಾಗುತ್ತದೆ. ಇತರ ಪ್ರಾಣಿಗಳನ್ನು

[815] ಅಲ್ಪೇ ಪಾಪ್ಯಥ ಶೋಚೇತ (ಭಾರತ ದರ್ಶನ).

ಕೊಂದರೆ ಹಿಂದೆ ಹೇಳಿದಂತೆ ಒಂದು ವರ್ಷಗಳ ಪ್ರಾಯಶ್ಚಿತ್ತವನ್ನು ನಡೆಸಬೇಕು. ಶ್ರೋತ್ರೀಯನ ಪತ್ನಿಯೊಡನೆ ಸಮಾಗಮ ಮಾಡಿದರೆ ಮೂರು ವರ್ಷಗಳು ಮತ್ತು ಪರಸ್ತ್ರೀಯೊಂದಿಗೆ ಸಮಾಗಮ ಮಾಡಿದರೆ ಎರಡು ವರ್ಷಗಳು ಬ್ರಹ್ಮಚರ್ಯವ್ರತದಿಂದಿದ್ದು, ದಿನದ ನಾಲ್ಕನೇ ಯಾಮದಲ್ಲಿ ಒಮ್ಮೆ ಮಾತ್ರ ಊಟಮಾಡಬೇಕು.[816] ತನಗಾಗಿ ಪ್ರತ್ಯೇಕ ಸ್ಥಾನಾಸನಗಳನ್ನು ಕಲ್ಪಿಸಿಕೊಂಡು[817] ಪ್ರಪಂಚಪರ್ಯಟನೆ ಮಾಡುತ್ತಿರಬೇಕು. ಇದರಿಂದಲೇ ಅವನು ಆ ಪಾಪಗಳನ್ನು ನಿವಾರಿಸಿಕೊಳ್ಳಬಹುದು. ಅಗ್ನಿಯನ್ನು ಅಪವಿತ್ರಗೊಳಿಸಿದವನಿಗೂ ಇದೇ ಪ್ರಾಯಶ್ಚಿತ್ತವನ್ನು ಹೇಳಿದ್ದಾರೆ.

12159057a ತ್ಯಜತ್ಯಕಾರಣೇ ಯಶ್ಚ ಪಿತರಂ ಮಾತರಂ ತಥಾ[818]|
12159057c ಪತಿತಃ ಸ್ಯಾತ್ಸ ಕೌರವ್ಯ ತಥಾ ಧರ್ಮೇಷು ನಿಶ್ಚಯಃ|
12159058a ಗ್ರಾಸಾಚ್ಚಾದನಮತ್ಯರ್ಥಂ ದದ್ಯಾದಿತಿ ನಿದರ್ಶನಮ್||

ಕೌರವ್ಯ! ಅಕಾರಣವಾಗಿ ತಂದೆ-ತಾಯಿಯರನ್ನು ತ್ಯಜಿಸಿದವನು ಪತಿತನಾಗುತ್ತಾನೆ ಎನ್ನುವುದು ಧರ್ಮದ ನಿಶ್ಚಯವು. ಪಿತ್ರಾರ್ಜಿತ ಆಸ್ತಿಯಿಂದ ಅವನಿಗೆ ಊಟ-ಬಟ್ಟೆಗೆ ಸಾಕಾಗುವಷ್ಟನ್ನೇ

---

816 ಆಪಸ್ತಂಬಧರ್ಮಸೂತ್ರದಲ್ಲಿ ಕಾಲೇ ಚತುರ್ಥೇ ಎನ್ನುವುದಕ್ಕೆ ನಾಲ್ಕನೆಯ ಭೋಜನ ಕಾಲದಲ್ಲಿ ಎಂದರೆ ಇಂದು ಮಧ್ಯಾಹ್ನ ಊಟಮಾಡಿದರೆ ಇಂದು ನಾಳಿನ ರಾತ್ರಿಯಲ್ಲಿ ಊಟಮಾಡುವುದು (ಭಾರತ ದರ್ಶನ).

817 ಸ್ಥಾನಾಸನಾಭ್ಯಾಂ ಎನ್ನುವುದಕ್ಕೆ ಹಗಲಿನಲ್ಲಿ ನಿಂತಿರುವುದು ಮತ್ತು ರಾತ್ರಿಯಲ್ಲಿ ಕುಳಿತಿರುವುದು ಎಂದೂ ವ್ಯಾಖ್ಯಾನಮಾಡಿದ್ದಾರೆ (ಭಾರತ ದರ್ಶನ).

818 ಗುರುಮ್| (ಭಾರತ ದರ್ಶನ).

ಕೊಡಬೇಕೆಂದು ನಿದರ್ಶನವಿದೆ.

12159058c ಭಾರ್ಯಾಯಾಂ ವ್ಯಭಿಚಾರಿಣ್ಯಾಂ ನಿರುದ್ಧಾಯಾಂ ವಿಶೇಷತಃ|
12159058e ಯತ್ಪುಂಸಾಂ ಪರದಾರೇಷು ತಚ್ಚೈನಾಂ ಚಾರಯೇದ್ವ್ರತಮ್||

ಪತ್ನಿಯು ವ್ಯಭಿಚಾರಮಾಡಿ ನಂತರ ಅದನ್ನು ನಿಲ್ಲಿಸಿದ್ದೇ ಆದರೆ ಪರಸ್ತ್ರೀಗಮನ ಮಾಡಿದ ಪುರುಷನಿಗೆ ಹೇಳಿರುವ ಪ್ರಾಯಶ್ಚಿತ್ತವನ್ನೇ ಅವಳೂ ಆಚರಿಸಬೇಕು.

12159059a ಶ್ರೇಯಾಂಸಂ ಶಯನೇ ಹಿತ್ವಾ ಯಾ ಪಾಪೀಯಾಂಸಮೃಚ್ಛತಿ|
12159059c ಶ್ವಭಿಸ್ತಾಂ ಖಾದಯೇದ್ರಾಜಾ ಸಂಸ್ಥಾನೇ ಬಹುಸಂವೃತೇ||

ಪತಿಯನ್ನು ಪರಿತ್ಯಜಿಸಿ ಬೇರೆ ಪಾಪಿಯೊಡನೆ ಶಯ್ಯಾಸುಖವನ್ನು ಅನುಭವಿಸಿದವಳನ್ನು ರಾಜನಾದವನು ವಿಶಾಲ ಮೈದಾನದಲ್ಲಿ ನಿಲ್ಲಿಸಿ ನಾಯಿಗಳಿಂದ ಕಚ್ಚಿಸಬೇಕು.

12159060a ಪುಮಾಂಸಂ ಬಂಧಯೇತ್ಪ್ರಾಜ್ಞಃ ಶಯನೇ ತಪ್ತ ಆಯಸೇ|
12159060c ಅಪ್ಯಾದಧೀತ ದಾರೂಣಿ ತತ್ರ ದಹ್ಯೇತ ಪಾಪಕೃತ್||
12159061a ಏಷ ದಂಡೋ ಮಹಾರಾಜ ಸ್ತ್ರೀಣಾಂ ಭರ್ತ್ಯವ್ಯತಿಕ್ರಮೇ|
12159061c ಸಂವತ್ಸರಾಭಿಶಸ್ತಸ್ಯ ದುಷ್ಟಸ್ಯ ದ್ವಿಗುಣೋ ಭವೇತ್||
12159062a ದ್ವೇ ತಸ್ಯ ತ್ರೀಣಿ ವರ್ಷಾಣಿ ಚತ್ವಾರಿ ಸಹಸೇವಿನಃ|
12159062c ಕುಚರಃ ಪಂಚ ವರ್ಷಾಣಿ ಚರೇದ್ಭೈಕ್ಷಂ ಮುನಿವ್ರತಃ||

ಹೀಗೆ ವ್ಯಭಿಚಾರ ಮಾಡಿದ ಪುರುಷರನ್ನು ಪ್ರಾಜ್ಞ ರಾಜನು ಕಾಯಿಸಿದ ಕಬ್ಬಿಣದ ಮಂಚದಲ್ಲಿ ಮಲಗಿಸಿ ಮೇಲೆ ಕಟ್ಟಿಗೆಯನ್ನಿಟ್ಟು ಬೆಂಕಿ ಹೊತ್ತಿಸಿ ಸುಡಬೇಕು. ಪತಿಯನ್ನು ತಿರಸ್ಕರಿಸಿ ಪರಪುರುಷನನ್ನು ಸೇರುವ ಸ್ತ್ರೀಗೂ ಇದೇ ಶಿಕ್ಷೆಯೇ ವಿಹಿತವಾಗಿದೆ. ಒಂದು ವರ್ಷದ ವರೆಗೂ ಈ

ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳದೇ ಇದ್ದರೆ ಅವರು ಎರಡುಪಟ್ಟು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೆ. ಎರಡು, ಮೂರು, ನಾಲ್ಕು, ಅಥವಾ ಐದು ವರ್ಷಗಳು ಪತಿತನ ಸಹವಾಸದಲ್ಲಿದ್ದರೆ ಅಷ್ಟೇ ವರ್ಷಗಳ ಪರ್ಯಂತ ಮುನಿವ್ರತನಾಗಿ ಭೂಮಿಯಲ್ಲಿ ಅಲೆದಾಡುತ್ತಾ ಭಿಕ್ಷಾಟನೆ ಮಾಡಬೇಕು.

12159063a ಪರಿವಿತ್ತಿಃ ಪರಿವೇತ್ತಾ ಯಯಾ ಚ ಪರಿವಿದ್ಯತೇ|
12159063c ಪಾಣಿಗ್ರಾಹಶ್ಚ ಧರ್ಮೇಣ ಸರ್ವೇ ತೇ ಪತಿತಾಃ ಸ್ಮೃತಾಃ||

ಅಣ್ಣನ ಮದುವೆಯಾಗುವುದಕ್ಕೆ ಮೊದಲೇ ತಮ್ಮನು ಮದುವೆಯಾದರೆ ಅಣ್ಣನನ್ನು ಪರಿವಿತ್ತಿ ಎಂದೂ ತಮ್ಮನನ್ನು ಪರಿವೇತ್ತಾ ಎಂದೂ ಕರೆಯುತ್ತಾರೆ. ತಮ್ಮನ ಪತ್ನಿಯನ್ನು ಪರಿವೇದನೀಯಾ ಎಂದೂ ಕರೆಯುತ್ತಾರೆ. ಧರ್ಮತಃ ಇವರೆಲ್ಲರೂ ಪತಿತರೇ ಆಗುತ್ತಾರೆ.

12159064a ಚರೇಯುಃ ಸರ್ವ ಏವೈತೇ ವೀರಹಾ ಯದ್ವ್ರತಂ ಚರೇತ್|
12159064c ಚಾಂದ್ರಾಯಣಂ ಚರೇನ್ಮಾಸಂ ಕೃಚ್ಚ್ರಂ ವಾ ಪಾಪಶುದ್ಧಯೇ||

ಈ ಮೂವರೂ ಯಜ್ಞಹೀನ ಬ್ರಾಹ್ಮಣನಿಗೆ ಹೇಳಿದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಅಥವಾ ಒಂದು ತಿಂಗಳು ಚಾಂದ್ರಾಯಣ ವ್ರತವನ್ನಾಗಲೀ ಕೃಚ್ಛ್ರವ್ರತವನ್ನಾಗಲೀ ಆಚರಿಸಬೇಕು.

12159065a ಪರಿವೇತ್ತಾ ಪ್ರಯಚ್ಚೇತ ಪರಿವಿತ್ತಾಯ ತಾಂ ಸ್ನುಷಾಮ್|
12159065c ಜ್ಯೇಷ್ಠೇನ ತ್ವಭ್ಯನುಜ್ಞಾತೋ ಯವೀಯಾನ್ ಪ್ರತ್ಯನಂತರಮ್|
12159065e ಏನಸೋ ಮೋಕ್ಷಮಾಪ್ನೋತಿ ಸಾ ಚ ತೌ ಚೈವ ಧರ್ಮತಃ||

ಪರಿವೇತ್ತ (ತಮ್ಮ) ನು ಪರಿವೇತ್ತಿಗೆ (ಅಣ್ಣನಿಗೆ) ತಾನು ಪಾಣಿಗ್ರಹಣ ಮಾಡಿಕೊಂಡವಳನ್ನು ಸೊಸೆಯ ರೂಪದಲ್ಲಿ ಅರ್ಪಿಸಬೇಕು. ಅಣ್ಣನ

ಅನುಮತಿಯನ್ನು ಪಡೆದು ನಂತರ ಅವಳನ್ನು ಪತ್ನಿಯನ್ನಾಗಿ ಸ್ವೀಕರಿಸಬೇಕು. ಹೀಗೆ ಮಾಡಿದರೆ ಮೂವರೂ ಧರ್ಮಾನುಸಾರವಾಗಿ ಪಾಪಮುಕ್ತರಾಗುತ್ತಾರೆ.

12159066a ಅಮಾನುಷೀಷು ಗೋವರ್ಜಮನಾವೃಷ್ಟಿರ್ನ ದುಷ್ಯತಿ|
12159066c ಅಧಿಷ್ಠಾತಾರಮತ್ತಾರಂ ಪಶೂನಾಂ ಪುರುಷಂ ವಿದುಃ||

ಪ್ರಾಣಿಜಾತಿಯಲ್ಲಿ ಗೋವೊಂದನ್ನು ಬಿಟ್ಟು ಉಳಿದ ಪ್ರಾಣಿಗಳಿಗೆ ಹಿಂಸೆಮಾಡಿದರೆ ಮನುಷ್ಯನು ಪಾಪಿಯಾಗುವುದಿಲ್ಲ. ಏಕೆಂದರೆ ಮನುಷ್ಯನು ಪ್ರಾಣಿಗಳಿಗೆ ಆಶ್ರಯದಾತನೆಂದೂ ಅವುಗಳ ಭಕ್ಷಕನೆಂದೂ ವಿದ್ವಾಂಸರು ತಿಳಿದಿದ್ದಾರೆ.

12159067a ಪರಿಧಾಯೋರ್ಧ್ವವಾಲಂ ತು ಪಾತ್ರಮಾದಾಯ ಮೃನ್ಮಯಮ್||
12159067c ಚರೇತ್ಸಪ್ತ ಗೃಹಾನ್ ಭೈಕ್ಷಂ ಸ್ವಕರ್ಮ ಪರಿಕೀರ್ತಯನ್|
12159068a ತತ್ರೈವ ಲಬ್ಧಭೋಜೀ ಸ್ಯಾದ್ವಾದಶಾಹಾತ್ಸ ಶುಧ್ಯತಿ||
12159068c ಚರೇತ್ಸಂವತ್ಸರಂ ಚಾಪಿ ತದ್ವ್ರತಂ ಯನ್ನಿರಾಕೃತಿ||

ಗೋವಧೆಯನ್ನು ಮಾಡಿದವನು ಚಮರೀಮೃಗದ ಪುಚ್ಛವನ್ನು ಮೇಲ್ಮುಖವಾಗಿ ಕಟ್ಟಿಕೊಂಡು ಮಣ್ಣಿನ ಮಡಿಕೆಯನ್ನು ಹಿಡಿದು “ನಾನು ಗೋವಧೆಯನ್ನು ಮಾಡಿದವನು” ಎಂದು ಹೇಳಿಕೊಳ್ಳುತ್ತಾ ಏಳು ಮನೆಗಳಿಗೆ ಭಿಕ್ಷೆಗಾಗಿ ಹೋಗಬೇಕು. ಆ ಏಳು ಮನೆಗಳಲ್ಲಿ ಎಷ್ಟು ಭಿಕ್ಷವು ಸಿಗುವುದೋ ಅಷ್ಟನ್ನೇ ಊಟಮಾಡಬೇಕು. ಹೀಗೆ ಹನ್ನೆರಡು ದಿವಸಗಳವರೆಗೆ ಮಾಡಿದರೆ ಗೋವನ್ನು ಕೊಂದವನು ಆ ಮಹಾಪಾಪದಿಂದ ವಿಮುಕ್ತನಾಗುತ್ತಾನೆ. ಹೆಚ್ಚು ಗೋವುಗಳನ್ನು ವಧಿಸಿದ್ದರೆ ಒಂದು ವರ್ಷಗಳ ಕಾಲ ಈ ವ್ರತವನ್ನು

ಆಚರಿಸುವುದರಿಂದ ಪಾಪಮುಕ್ತನಾಗುತ್ತಾನೆ.

12159069a ಭವೇತ್ತು ಮಾನುಷೇಷ್ವೇವಂ ಪ್ರಾಯಶ್ಚಿತ್ತಮನುತ್ತಮಮ್|
12159069c ದಾನಂ ವಾದಾನಸಕ್ತೇಷು ಸರ್ವಮೇವ ಪ್ರಕಲ್ಪಯೇತ್|
12159069e ಅನಾಸ್ತಿಕೇಷು ಗೋಮಾತ್ರಂ ಪ್ರಾಣಮೇಕಂ[819] ಪ್ರಚಕ್ಷತೇ||

ಇದು ಮನುಷ್ಯರಲ್ಲಿ ಅನುತ್ತಮವಾದ ಪ್ರಾಯಶ್ಚಿತ್ತ ವಿಧಿಯು. ದಾನನೀಡಲು ಶಕ್ತರಾದವರಿಗೆ ಮಹಾದಾನಗಳ ಮೂಲಕ ಪಾಪಗಳನ್ನು ಪರಿಹರಿಸಿಕೊಳ್ಳುವ ವಿಧಿಯೂ ಇದೆ. ಆದರೆ ಈ ಎಲ್ಲ ಪ್ರಾಯಶ್ಚಿತ್ತಗಳನ್ನೂ ವಿಚಾರಿಸಿ ಮಾಡಿಕೊಳ್ಳಬೇಕು. ಅನಾಸ್ತಿಕರು ಒಂದು ಗೋದಾನದಿಂದ ಗೋವಧೆಯ ಪ್ರಾಯಶ್ಚಿತ್ತವನ್ನು ಮಾಡಿಕೊಂಡಂತಾಗುತ್ತದೆ.

12159070a ಶ್ವವರಾಹಮನುಷ್ಯಾಣಾಂ ಕುಕ್ಕುಟಸ್ಯ ಖರಸ್ಯ ಚ|
12159070c ಮಾಂಸಂ ಮೂತ್ರಪುರೀಷಂ ಚ ಪ್ರಾಶ್ಯ ಸಂಸ್ಕಾರಮರ್ಹತಿ||

ನಾಯಿ, ಹಂದಿ, ಮನುಷ್ಯ, ಕೋಳಿ, ಕತ್ತೆ – ಇವುಗಳ ಮಾಂಸ-ಮೂತ್ರ-ಮಲಗಳನ್ನು ಸೇವಿಸಿದ ಬ್ರಾಹ್ಮಣನು ಪುನಃ ಉಪನಯನ ಸಂಸ್ಕಾರವನ್ನು ಮಾಡಿಕೊಳ್ಳಬೇಕು.

12159071a ಬ್ರಾಹ್ಮಣಸ್ಯ ಸುರಾಪಸ್ಯ ಗಂಧಮಾಘ್ರಾಯ ಸೋಮಪಃ|
12159071c ಅಪಸ್ತ್ರ್ಯಹಂ ಪಿಬೇದುಷ್ಣಾಸ್ತ್ರ್ಯಹಮುಷ್ಣಂ ಪಯಃ ಪಿಬೇತ್|
12159071e ತ್ರ್ಯಹಮುಷ್ಣಂ ಘೃತಂ ಪೀತ್ವಾ ವಾಯುಭಕ್ಷೋ ಭವೇತ್ತ್ರ್ಯಹಮ್||

ಸೋಮಯಾಗವನ್ನು ಮಾಡಿ ಸೋಮವನ್ನು ಕುಡಿದ ಬ್ರಾಹ್ಮಣನು

---

819 ದಾನಮೇಕಂ (ಭಾರತ ದರ್ಶನ).

ಮದ್ಯದ ವಾಸನೆಯನ್ನು ಆಘ್ರಾಣಿಸಿದರೂ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಮೂರು ದಿನ ಬಿಸಿಯಾದ ನೀರನ್ನು ಕುಡಿಯ ಬೇಕು. ಇನ್ನು ಮೂರು ದಿನ ಬಿಸಿಯಾದ ಹಾಲನ್ನು ಕುಡಿಯಬೇಕು. ನಂತರ ಮೂರು ದಿನ ವಾಯುಭಕ್ಷನಾಗಿರಬೇಕು.

12159072a ಏವಮೇತತ್ಸಮುದ್ದಿಷ್ಟಂ ಪ್ರಾಯಶ್ಚಿತ್ತಂ ಸನಾತನಮ್|
12159072c ಬ್ರಾಹ್ಮಣಸ್ಯ ವಿಶೇಷೇಣ ತತ್ತ್ವಜ್ಞಾನೇನ ಜಾಯತೇ[820]||

ಈ ಎಲ್ಲ ಸನಾತನ ಪ್ರಾಯಶ್ಚಿತ್ತಗಳನ್ನೂ ವಿಶೇಷವಾಗಿ ತತ್ತ್ವಜ್ಞಾನೀ ಬ್ರಾಹ್ಮಣನಿಗೆ ಧರ್ಮಶಾಸ್ತ್ರಗಳಲ್ಲಿ ಹೇಳಲಾಗಿದೆ.””

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಪ್ರಾಯಶ್ಚಿತ್ತೀಯೇ ಏಕೋನಷಷ್ಟ್ಯಧಿಕಶತಮೋऽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಪ್ರಾಯಶ್ಚಿತ್ತ ಎನ್ನುವ ನೂರಾಐವತ್ತೊಂಭತ್ತನೇ ಅಧ್ಯಾಯವು.

೧೬೦

ಖಡ್ಗೋತ್ಪತ್ತಿ

ಖಡ್ಗದ ಉತ್ಪತ್ತಿ ಮತ್ತು ಅದರ ಪರಂಪರಾಮಹಿಮೆಯ ವರ್ಣನೆ (1-87).

12160001 ವೈಶಂಪಾಯನ ಉವಾಚ|

820 ಯದಜ್ಞಾನೇನ ಸಂಭವೇತ್| (ಭಾರತ ದರ್ಶನ).

12160001a ಕಥಾಂತರಮಥಾಸಾದ್ಯ ಖಡ್ಗಯುದ್ಧವಿಶಾರದಃ|
12160001c ನಕುಲಃ ಶರತಲ್ಪಸ್ಥಮಿದಮಾಹ ಪಿತಾಮಹಮ್||

ವೈಶಂಪಾಯನನು ಹೇಳಿದನು: "ಕಥಾಪ್ರಸಂಗದ ಸಮಾಪ್ತಿಯ ಸಮಯದಲ್ಲಿ ಖಡ್ಗಯುದ್ಧವಿಶಾರದ ನಕುಲನು ಶರತಲ್ಪದಮೇಲಿದ್ದ ಪಿತಾಮಹನಿಗೆ ಹೇಳಿದನು:

12160002a ಧನುಃ ಪ್ರಹರಣಂ ಶ್ರೇಷ್ಠಮಿತಿ ವಾದಃ[821] ಪಿತಾಮಹ|
12160002c ಮತಸ್ತು ಮಮ ಧರ್ಮಜ್ಞ ಖಡ್ಗ ಏವ ಸುಸಂಶಿತಃ||

"ಪಿತಾಮಹ! ಧರ್ಮಜ್ಞ! ಧನುಸ್ಸೇ ಶ್ರೇಷ್ಠವಾದ ಪ್ರಹರಣವೆಂದು ವಾದವಿದೆ. ಆದರೆ ಹರಿತ ಖಡ್ಗವೇ ಶ್ರೇಷ್ಠ ಪ್ರಹರಣವೆಂದು ನನಗೆ ಅನಿಸುತ್ತದೆ.

12160003a ವಿಶೀರ್ಣೇ ಕಾರ್ಮುಕೇ ರಾಜನ್ಭ್ರಕ್ಷೀಣೇಷು ಚ ವಾಜಿಷು|
12160003c ಖಡ್ಗೇನ ಶಕ್ಯತೇ ಯುದ್ಧೇ ಸಾಧ್ವಾತ್ಮಾ ಪರಿರಕ್ಷಿತುಮ್||

ರಾಜನ್! ಯುದ್ಧದಲ್ಲಿ ಧನುಸ್ಸು ತುಂಡಾಗಿ ಕುದುರೆಗಳೂ ನಷ್ಟವಾದಾಗ ಖಡ್ಗದಿಂದ ತನ್ನನ್ನು ರಕ್ಷಿಸಿಕೊಳ್ಳಲು ಶಕ್ಯವಾಗುತ್ತದೆ.

12160004a ಶರಾಸನಧರಾಂಶ್ಚೈವ ಗದಾಶಕ್ತಿಧರಾಂಸ್ತಥಾ|
12160004c ಏಕಃ ಖಡ್ಗಧರೋ ವೀರಃ ಸಮರ್ಥಃ ಪ್ರತಿಬಾಧಿತುಮ್||

ಖಡ್ಗಧರ ವೀರನೊಬ್ಬನೇ ಧನುರ್ಧಾರಿಯನ್ನೂ, ಗದೆ-ಶಕ್ತಿ ಧರರನ್ನೂ ಎದುರಿಸಲು ಸಮರ್ಥನಾಗುತ್ತಾನೆ.

---

821 ಶ್ರೇಷ್ಠಮತೀವಾತ್ರ (ಗೀತಾ ಪ್ರೆಸ್).

12160005a ಅತ್ರ ಮೇ ಸಂಶಯಶ್ಚೈವ ಕೌತೂಹಲಮತೀವ ಚ|
12160005c ಕಿಂ ಸ್ವಿತ್ಪ್ರಹರಣಂ ಶ್ರೇಷ್ಠಂ ಸರ್ವಯುದ್ಧೇಷು ಪಾರ್ಥಿವ||

ಪಾರ್ಥಿವ! ಈ ವಿಷಯದಲ್ಲಿ ನನಗೆ ಸಂಶಯವೂ ಅತೀವ
ಕುತೂಹಲವೂ ಉಂಟಾಗಿದೆ. ಸರ್ವಯುದ್ಧಗಳಲ್ಲಿ ಯಾವ ಆಯುಧವು
ಶ್ರೇಷ್ಠವಾದುದು?

12160006a ಕಥಂ ಚೋತ್ಪಾದಿತಃ ಖಡ್ಗಃ ಕಸ್ಯಾರ್ಥಾಯ ಚ ಕೇನ ವಾ|
12160006c ಪೂರ್ವಾಚಾರ್ಯಂ ಚ ಖಡ್ಗಸ್ಯ ಪ್ರಬ್ರೂಹಿ ಪ್ರಪಿತಾಮಹ||

ಪ್ರಪಿತಾಮಹ! ಖಡ್ಗವು ಹೇಗೆ ಮತ್ತು ಯಾವ ಕಾರಣಕ್ಕಾಗಿ
ಉತ್ಪನ್ನವಾಯಿತು? ಯಾರಿಂದ ಉತ್ಪನ್ನವಾಯಿತು? ಖಡ್ಗಯುದ್ಧದ
ಪ್ರಥಮ ಆಚಾರ್ಯನು ಯಾರಾಗಿದ್ದನು? ಇದನ್ನು ಹೇಳು.”

12160007a ತಸ್ಯ ತದ್ವಚನಂ ಶ್ರುತ್ವಾ ಮಾದ್ರೀಪುತ್ರಸ್ಯ ಧೀಮತಃ|
12160007c ಸರ್ವಕೌಶಲಸಂಯುಕ್ತಂ ಸೂಕ್ಷ್ಮಚಿತ್ರಾರ್ಥವಚ್ಚುಭಮ್||
12160008a ತತಸ್ತಸ್ಯೋತ್ತರಂ ವಾಕ್ಯಂ ಸ್ವರವರ್ಣೋಪಪಾದಿತಮ್|
12160008c ಶಿಕ್ಷಾನ್ಯಾಯೋಪಸಂಪನ್ನಂ ದ್ರೋಣಶಿಷ್ಯಾಯ ಪೃಚ್ಚತೇ||
12160009a ಉವಾಚ ಸರ್ವಧರ್ಮಜ್ಞೋ ಧನುರ್ವೇದಸ್ಯ ಪಾರಗಃ|
12160009c ಶರತಲ್ಪಗತೋ ಭೀಷ್ಮೋ ನಕುಲಾಯ ಮಹಾತ್ಮನೇ||

ಧೀಮತ ಮಾದ್ರೀಪುತ್ರನ ಸರ್ವಕೌಶಲಯುಕ್ತವೂ ಸೂಕ್ಷ್ಮವೂ
ಚಿತ್ರಾರ್ಥವುಳ್ಳದ್ದೂ ಮತ್ತು ಆ ಶುಭ ಮಾತನ್ನು ಕೇಳಿ
ಶರತಲ್ಪಗತಾನಾಗಿದ್ದ ಧನುರ್ವೇದಪಾರಂಗತ ಸರ್ವಧರ್ಮಜ್ಞ
ಭೀಷ್ಮನು ಶಿಕ್ಷಣವನ್ನು ಪಡೆದಿದ್ದ ದ್ರೋಣಶಿಷ್ಯನ ಪ್ರಶ್ನೆಗೆ
ಸ್ವರವರ್ಣಗಳಿಂದ ಕೂಡಿದ ಉತ್ತರವನ್ನು ನೀಡುತ್ತಾ ಮಹಾತ್ಮಾ

ನಕುಲನಿಗೆ ಹೇಳಿದನು:

12160010a ತತ್ತ್ವಂ ಶೃಣುಷ್ವ ಮಾದ್ರೇಯ ಯದೇತತ್ಪರಿಪೃಚ್ಚಸಿ|
12160010c ಪ್ರಬೋಧಿತೋಽಸ್ಮಿ ಭವತಾ ಧಾತುಮಾನಿವ ಪರ್ವತಃ||

“ಮಾದ್ರೇಯ! ನೀನು ಕೇಳಿದ ಪ್ರಶ್ನೆಯ ತತ್ತ್ವವನ್ನು ಕೇಳು. ಗೈರಿಕಾದಿ ಧಾತುಗಳಿಂದ ಕೂಡಿದ ಪರ್ವತದಂತೆ ಮಲಗಿದ್ದ ನಾನು ನಿನ್ನ ಈ ಪ್ರಶ್ನೆಯಿಂದ ಎಚ್ಚೆತ್ತಿದ್ದೇನೆ.

12160011a ಸಲಿಲೈಕಾರ್ಣವಂ ತಾತ ಪುರಾ ಸರ್ವಮಭೂದಿದಮ್|
12160011c ನಿಷ್ಪ್ರಕಂಪನನಾಕಾಶಮನಿರ್ದೇಶ್ಯಮಹೀತಲಮ್||

ಅಯ್ಯಾ! ಪೂರ್ವಕಾಲದಲ್ಲಿ ಈ ಸಂಪೂರ್ಣ ಜಗತ್ತೂ ನೀರಿನ ಒಂದೇ ಮಹಾಸಾಗರದ ರೂಪದಲ್ಲಿತ್ತು. ಆಗ ಇದಕ್ಕೆ ಕಂಪನವೆನ್ನುವುದಿಲ್ಲವಾಗಿತ್ತು. ಆಕಾಶವೆನ್ನುವುದೂ ಇರಲಿಲ್ಲ. ಭೂಮಿಯೂ ಇರಲಿಲ್ಲ.

12160012a ತಮಃಸಂವೃತಮಸ್ಪರ್ಶಮತಿಗಂಭೀರದರ್ಶನಮ್|
12160012c ನಿಃಶಬ್ದಂ ಚಾಪ್ರಮೇಯಂ ಚ ತತ್ರ ಜಜ್ಞೇ ಪಿತಾಮಹಃ||

ಎಲ್ಲವೂ ಅಂಧಕಾರದಿಂದ ಆವೃತವಾಗಿತ್ತು. ಶಬ್ದ-ಸ್ಪರ್ಶಗಳ ಅನುಭವವೂ ಆಗುತ್ತಿರಲಿಲ್ಲ. ಆ ಏಕಾರ್ಣವು ಗಂಭೀರವಾಗಿ ಕಾಣುತ್ತಿತ್ತು. ಅದಕ್ಕೆ ಯಾವ ಸೀಮೆಯೂ ಇರಲಿಲ್ಲ. ಅದರಲ್ಲಿಯೇ ಪಿತಾಮಹ ಬ್ರಹ್ಮನ ಜನ್ಮವಾಯಿತು.

12160013a ಸೋಽಸೃಜದ್ವಾಯುಮಗ್ನಿಂ ಚ ಭಾಸ್ಕರಂ ಚಾಪಿ ವೀರ್ಯವಾನ್|
12160013c ಆಕಾಶಮಸೃಜಚ್ಚೋರ್ಧ್ವಮಧೋ ಭೂಮಿಂ ಚ ನೈರೃತಿಮ್||

ಆ ವೀರ್ಯವಾನ ಬ್ರಹ್ಮನು ವಾಯು, ಅಗ್ನಿ ಮತ್ತು ಭಾಸ್ಕರರನ್ನು ಸೃಷ್ಟಿಸಿದನು. ಆಕಾಶ, ಮೇಲೆ, ಕೆಳಗೆ, ಭೂಮಿ ಮತ್ತು ರಾಕ್ಷಸಸಮೂಹಗಳನ್ನೂ ಸೃಷ್ಟಿಸಿದನು.

12160014a ನಭಃ ಸಚಂದ್ರತಾರಂ ಚ ನಕ್ಷತ್ರಾಣಿ ಗ್ರಹಾಂಸ್ತಥಾ|
12160014c ಸಂವತ್ಸರಾನಹೋರಾತ್ರಾನೃತೂನಥ ಲವಾನ್ ಕ್ಷಣಾನ್||

ಚಂದ್ರ-ತಾರೆಗಳಿಂದ ಯುಕ್ತವಾದ ಆಕಾಶ, ನಕ್ಷತ್ರಗಳು, ಗ್ರಹಗಳು, ಸಂವತ್ಸರಗಳು, ಹಗಲು-ರಾತ್ರಿಗಳು, ಋತುಗಳು, ಲವಗಳು ಮತ್ತು ಕ್ಷಣಗಳನ್ನೂ ಸೃಷ್ಟಿಸಿದನು.

12160015a ತತಃ ಶರೀರಂ ಲೋಕಸ್ಥಂ ಸ್ಥಾಪಯಿತ್ವಾ ಪಿತಾಮಹಃ|
12160015c ಜನಯಾಮಾಸ ಭಗವಾನ್ಪುತ್ರಾನುತ್ತಮತೇಜಸಃ||
12160016a ಮರೀಚಿಮೃಷಿಮತ್ರಿಂ ಚ ಪುಲಸ್ತ್ಯಂ ಪುಲಹಂ ಕ್ರತುಮ್|
12160016c ವಸಿಷ್ಠಾಂಗಿರಸೌ ಚೋಭೌ ರುದ್ರಂ ಚ ಪ್ರಭುಮೀಶ್ವರಮ್||

ಅನಂತರ ಭಗವಾನ್ ಪಿತಾಮಹನು ಲೌಕಿಕ ಶರೀರವನ್ನು ಧಾರಣೆಮಾಡಿ ಅನುತ್ತಮ ತೇಜಸ್ವೀ ಪುತ್ರರನ್ನು ಹುಟ್ಟಿಸಿದನು. ಋಷಿಗಳಾದ ಮರೀಚಿ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಅಂಗಿರಸ ಹಾಗೂ ಪ್ರಭು ಈಶ್ವರ ರುದ್ರರನ್ನು ಸೃಷ್ಟಿಸಿದನು.

12160017a ಪ್ರಾಚೇತಸಸ್ತಥಾ ದಕ್ಷಃ ಕನ್ಯಾಃ ಷಷ್ಟಿಮಜೀಜನತ್|
12160017c ತಾ ವೈ ಬ್ರಹ್ಮರ್ಷಯಃ ಸರ್ವಾಃ ಪ್ರಜಾರ್ಥಂ ಪ್ರತಿಪೇದಿರೇ||

ಪ್ರಾಚೇತಸ ದಕ್ಷನು ಅರವತ್ತು ಕನ್ಯೆಯರನ್ನು ಹುಟ್ಟಿಸಿದನು. ಪ್ರಜೆಗಳ ಉತ್ಪತ್ತಿಗಾಗಿ ಅವರೆಲ್ಲರನ್ನೂ ಬ್ರಹ್ಮರ್ಷಿಗಳು ಪತ್ನೀರೂಪದಲ್ಲಿ ಪಡೆದುಕೊಂಡರು.

12160018a ತಾಭ್ಯೋ ವಿಶ್ವಾನಿ ಭೂತಾನಿ ದೇವಾಃ ಪಿತೃಗಣಾಸ್ತಥಾ।
12160018c ಗಂಧರ್ವಾಪ್ಸರಸಶ್ಚೈವ ರಕ್ಷಾಂಸಿ ವಿವಿಧಾನಿ ಚ॥
12160019a ಪತತ್ರಿಮೃಗಮೀನಾಶ್ಚ ಪ್ಲವಂಗಾಶ್ಚ ಮಹೋರಗಾಃ।
12160019c ನಾನಾಕೃತಿಬಲಾಶ್ಚಾನ್ಯೇ ಜಲಕ್ಷಿತಿವಿಚಾರಿಣಃ॥
12160020a ಔದ್ಭಿದಾಃ ಸ್ವೇದಜಾಶ್ಚೈವ ಅಂಡಜಾಶ್ಚ ಜರಾಯುಜಾಃ।
12160020c ಜಜ್ಞೇ ತಾತ ತಥಾ ಸರ್ವಂ ಜಗತ್ ಸ್ಥಾವರಜಂಗಮಮ್॥

ಅವರಿಂದಲೇ ಸಮಸ್ತ ಪ್ರಾಣಿಗಳು, ದೇವತೆಗಳು, ಪಿತೃಗಳು, ಗಂಧರ್ವರು, ಅಪ್ಸರೆಯರು, ವಿವಿಧ ರಾಕ್ಷಸರು, ಪಕ್ಷಿಗಳು, ಮೃಗಗಳು, ಮೀನುಗಳು, ವಾನರರು, ಮಹೋರಗಗಳು, ನಾನಾ ಆಕೃತಿ-ಬಲಗಳುಳ್ಳ ನೀರು-ಆಕಾಶಗಾಮಿಗಳು, ಉದ್ಭಿದ-ಸ್ವೇದಜ-ಅಂಡಜ ಮತ್ತು ಜರಾಯುಜ ಪ್ರಾಣಿಗಳು ಹುಟ್ಟಿದವು. ಹೀಗೆ ಜಗತ್ತಿನ ಸ್ಥಾವರ-ಜಂಗಮಗಳೆಲ್ಲವೂ ಉತ್ಪನ್ನವಾದವು.

12160021a ಭೂತಸರ್ಗಮಿಮಂ ಕೃತ್ವಾ ಸರ್ವಲೋಕಪಿತಾಮಹಃ।
12160021c ಶಾಶ್ವತಂ ವೇದಪಠಿತಂ ಧರ್ಮಂ ಚ ಯುಯುಜೇ ಪುನಃ॥

ಈ ಭೂತಸೃಷ್ಟಿಯನ್ನು ಮಾಡಿ ಸರ್ವಲೋಕಪಿತಾಮಹನು ಅವುಗಳ ಮೇಲೆ ಪುನಃ ವೇದೋಕ್ತ ಸನಾತನ ಧರ್ಮದ ಪಾಲನೆಯ ಭಾರವನ್ನು ಹೊರಿಸಿದನು.

12160022a ತಸ್ಮಿನ್ಧರ್ಮೇ ಸ್ಥಿತಾ ದೇವಾಃ ಸಹಾಚಾರ್ಯಪುರೋಹಿತಾಃ।
12160022c ಆದಿತ್ಯಾ ವಸವೋ ರುದ್ರಾಃ ಸಸಾಧ್ಯಾ ಮರುದಶ್ವಿನಃ॥

ಆಚಾರ್ಯಪುರೋಹಿತಗಣಗಳೊಂದಿಗೆ ದೇವತೆಗಳು, ಆದಿತ್ಯರು, ವಸುಗಳು, ರುದ್ರರು, ಸಾಧ್ಯರು, ಮರುದ್ಗಣಗಳು ಮತ್ತು ಅಶ್ವಿನೀ

ಕುಮಾರರು – ಇವರು ಆ ಸನಾತನ ಧರ್ಮದಲ್ಲಿ ಪ್ರತಿಷ್ಠಿತರಾದರು.

12160023a ಭೃಗ್ವತ್ರ್ಯಂಗಿರಸಃ ಸಿದ್ಧಾಃ ಕಾಶ್ಯಪಶ್ಚ ತಪೋಧನಃ|
12160023c ವಸಿಷ್ಠಗೌತಮಾಗಸ್ತ್ಯಾಸ್ತಥಾ ನಾರದಪರ್ವತೌ||
12160024a ಋಷಯೋ ವಾಲಖಿಲ್ಯಾಶ್ಚ ಪ್ರಭಾಸಾಃ ಸಿಕತಾಸ್ತಥಾ|
12160024c ಘೃತಾಚಾಃ ಸೋಮವಾಯವ್ಯಾ ವೈಖಾನಸಮರೀಚಿಪಾಃ||
12160025a ಅಕೃಷ್ಟಾಶ್ಚೈವ ಹಂಸಾಶ್ಚ ಋಷಯೋಽಥಾಗ್ನಿಯೋನಿಜಾಃ|
12160025c ವಾನಪ್ರಸ್ಥಾಃ ಪೃಶ್ನಯಶ್ಚ ಸ್ಥಿತಾ ಬ್ರಹ್ಮಾನುಶಾಸನೇ||

ಸಿದ್ಧರಾಗಿದ್ದ ಭೃಗು, ಅತ್ರಿ ಮತ್ತು ಅಂಗಿರಸರು, ತಪೋಧನ ಕಾಶ್ಯಪರು, ವಸಿಷ್ಠ-ಗೌತಮ-ಅಗಸ್ತ್ಯರು, ನಾರದ-ಪರ್ವತರು, ವಾಲಖಿಲ್ಯ ಋಷಿಗಳು, ಪ್ರಭಾಸ, ಸಿಕತ, ಘೃತಾಚರು[822], ಸೋಮಪರು[823], ವಾಯವ್ಯರು[824], ಮರೀಚಿಪರು[825], ವೈಖಾನಸರು, ಅಕೃಷ್ಟರು[826], ಹಂಸರು[827], ಅಗ್ನಿಯೋನಿಜ ಋಷಿಗಳು, ವಾನಪ್ರಸ್ಥರು ಮತ್ತು ಪೃಶ್ನಯರು ಬ್ರಹ್ಮನ ಅನುಶಾಸನದಂತೆ ಸನಾತನ ಧರ್ಮವನ್ನು ಪಾಲಿಸತೊಡಗಿದರು.

12160026a ದಾನವೇಂದ್ರಾಸ್ತ್ವತಿಕ್ರಮ್ಯ ತತ್ಪ್ರಿತಾಮಹಶಾಸನಮ್|

---

822 ತುಪ್ಪವನ್ನೇ ತಿಂದುಕೊಂಡು ಇರುವವರು (ಗೀತಾ ಪ್ರೆಸ್).

823 ಸೋಮವನ್ನು ಕುಡಿಯುವವರು (ಗೀತಾ ಪ್ರೆಸ್).

824 ಗಾಳಿಯನ್ನೇ ಕುಡಿದುಕೊಂಡಿರುವವರು (ಗೀತಾ ಪ್ರೆಸ್).

825 ಸೂರ್ಯನ ಕಿರಣಗಳನ್ನೇ ಕುಡಿದುಕೊಂಡಿರುವವರು (ಗೀತಾ ಪ್ರೆಸ್).

826 ಬಿತ್ತಿ-ಬೆಳೆಸದೇ ಇರುವ ಧಾನ್ಯಗಳನ್ನು ತಿಂದುಕೊಂಡಿರುವವರು (ಗೀತಾ ಪ್ರೆಸ್).

827 ಸಂನ್ಯಾಸಿಗಳು (ಗೀತಾ ಪ್ರೆಸ್).

12160026c ಧರ್ಮಸ್ಯಾಪಚಯಂ ಚಕ್ರುಃ ಕ್ರೋಧಲೋಭಸಮನ್ವಿತಾಃ||

ಆದರೆ ದಾನವೇಂದ್ರರು ಪಿತಾಮಹನ ಶಾಸನವನ್ನು ಉಲ್ಲಂಘಿಸಿ
ಕ್ರೋಧಲೋಭಸಮನ್ವಿತರಾಗಿ ಧರ್ಮಕ್ಕೆ
ಹಾನಿಯನ್ನುಂಟುಮಾಡತೊಡಗಿದರು.

12160027a ಹಿರಣ್ಯಕಶಿಪುಶ್ಚೈವ ಹಿರಣ್ಯಾಕ್ಷೋ ವಿರೋಚನಃ|
12160027c ಶಂಬರೋ ವಿಪ್ರಚಿತ್ತಿಶ್ಚ ಪ್ರಹ್ರಾದೋ ನಮುಚಿರ್ಬಲಿಃ||
12160028a ಏತೇ ಚಾನ್ಯೇ ಚ ಬಹವಃ ಸಗಣಾ ದೈತ್ಯದಾನವಾಃ|
12160028c ಧರ್ಮಸೇತುಮತಿಕ್ರಮ್ಯ ರೇಮಿರೇಽಧರ್ಮನಿಶ್ಚಯಾಃ||

ಹಿರಣ್ಯಕಶಿಪು, ಹಿರಣ್ಯಾಕ್ಷ, ವಿರೋಚನ, ಶಂಬರ, ವಿಪ್ರಚಿತ್ತಿ, ಪ್ರಹ್ರಾದ,
ನಮುಚಿ, ಬಲಿ ಮತ್ತು ಅನ್ಯ ಅನೇಕ ದೈತ್ಯದಾನವರು ತಮ್ಮ
ಗಣಗಳೊಂದಿಗೆ ಧರ್ಮಮರ್ಯಾದೆಗಳನ್ನು ಉಲ್ಲಂಗಿಸಿ
ಅಧರ್ಮನಿಶ್ಚಯಿಗಳಾಗಿ ರಮಿಸತೊಡಗಿದರು.

12160029a ಸರ್ವೇ ಸ್ಮ ತುಲ್ಯಜಾತೀಯಾ ಯಥಾ ದೇವಾಸ್ತಥಾ ವಯಮ್|
12160029c ಇತ್ಯೇವಂ ಹೇತುಮಾಸ್ಥಾಯ ಸ್ಪರ್ಧಮಾನಾಃ ಸುರರ್ಷಿಭಿಃ||

“ನಾವು ಮತ್ತು ದೇವತೆಗಳು ಒಂದೇ ಜಾತಿಯವರು; ಆದುದರಿಂದ
ದೇವತೆಗಳು ಹೇಗಿರುವರೋ ಹಾಗೆಯೇ ನಾವೂ ಇದ್ದೇವೆ” ಎಂದು
ಜಾತೀಯ ಧರ್ಮವನ್ನು ಆಶ್ರಯಿಸಿ ದೈತ್ಯಗಣಗಳು ಸುರರು ಮತ್ತು
ಋಷಿಗಳೊಂದಿಗೆ ಸ್ಪರ್ಧಿಸತೊಡಗಿದರು.

12160030a ನ ಪ್ರಿಯಂ ನಾಪ್ಯನುಕ್ರೋಶಂ ಚಕ್ರುರ್ಭೂತೇಷು ಭಾರತ|
12160030c ತ್ರೀನುಪಾಯಾನತಿಕ್ರಮ್ಯ ದಂಡೇನ ರುರುಧುಃ ಪ್ರಜಾಃ|
12160030e ನ ಜಗ್ಮುಃ ಸಂವಿದಂ ತೈಶ್ಚ ದರ್ಪಾದಸುರಸತ್ತಮಾಃ||

ಭಾರತ! ಅವರು ಪ್ರಾಣಿಗಳಿಗೆ ಪ್ರಿಯರಾಗಿರಲಿಲ್ಲ ಮತ್ತು ದಯಾವಂತರಾಗಿರಲಿಲ್ಲ. ಅವರು ಸಾಮ-ದಾನ-ಭೇದ ಈ ಮೂರು ಉಪಾಯಗಳನ್ನೂ ಅತಿಕ್ರಮಿಸಿ ಕೇವಲ ದಂಡದ ಮೂಲಕ ಪ್ರಜೆಗಳನ್ನು ಪೀಡಿಸತೊಡಗಿದರು. ಆ ಅಸುರಸತ್ತಮರು ದರ್ಪದಿಂದ ಆ ಪ್ರಜೆಗಳೊಂದಿಗೆ ಮಾತನ್ನೂ ಆಡುತ್ತಿರಲಿಲ್ಲ.

12160031a ಅಥ ವೈ ಭಗವಾನ್ ಬ್ರಹ್ಮಾ ಬ್ರಹ್ಮರ್ಷಿಭಿರುಪಸ್ಥಿತಃ|
12160031c ತದಾ ಹಿಮವತಃ ಪೃಷ್ಠೇ ಸುರಮ್ಯೇ ಪದ್ಮತಾರಕೇ||
12160032a ಶತಯೋಜನವಿಸ್ತಾರೇ ಮಣಿಮುಕ್ತಾಚಯಾಚಿತೇ|

ಆಗ ಭಗವಾನ್ ಬ್ರಹ್ಮನು ಬ್ರಹ್ಮರ್ಷಿಗಳೊಂದಿಗೆ ಹಿಮಾಲಯದ ಸುರಮ್ಯ ಶತಯೋಜನ ವಿಸ್ತಾರದ ಮಣಿಮುತ್ತುಗಳಿಂದ ವ್ಯಾಪಿತವಾದ ಪದ್ಮತಾರಕ ಶಿಖರದ ಮೇಲೆ ಕುಳಿತಿದ್ದನು.

12160032c ತಸ್ಮಿನ್ಗಿರಿವರೇ ಪುತ್ರ ಪುಷ್ಪಿತದ್ರುಮಕಾನನೇ|
12160032e ತಸ್ಥೌ ಸ ವಿಬುಧಶ್ರೇಷ್ಠೋ ಬ್ರಹ್ಮಾ ಲೋಕಾರ್ಥಸಿದ್ಧಯೇ||

ಪುತ್ರ! ಪುಷ್ಪಿತವೃಕ್ಷಕಾನನಗಳಿಂದ ಕೂಡಿದ್ದ ಆ ಶ್ರೇಷ್ಠ ಗಿರಿಶಿಖರದ ಮೇಲೆ ಸುರಶ್ರೇಷ್ಠ ಬ್ರಹ್ಮನು ಲೋಕಾರ್ಥಸಿದ್ಧಿಗಾಗಿ ತಂಗಿದ್ದನು.

12160033a ತತೋ ವರ್ಷಸಹಸ್ರಾಂತೇ ವಿತಾನಮಕರೋತ್ ಪ್ರಭುಃ|
12160033c ವಿಧಿನಾ ಕಲ್ಪದೃಷ್ಟೇನ ಯಥೋಕ್ತೇನೋಪಪಾದಿತಮ್||
12160034a ಋಷಿಭಿರ್ಯಜ್ಞಪಟುಭಿರ್ಯಥಾವತ್ಕರ್ಮಕರ್ತೃಭಿಃ|
12160034c ಮರುದ್ಭಿಃ[828] ಪರಿಸಂಸ್ತೀರ್ಣಂ ದೀಪ್ಯಮಾನೈಶ್ಚ ಪಾವಕೈಃ||

[828] ಸಮಿದ್ಭಿಃ (ಗೀತಾ ಪ್ರೆಸ್).

12160035a ಕಾಂಚನೈರ್ಯಜ್ಞಭಾಂಡೈಶ್ಚ ಭ್ರಾಜಿಷ್ಣುಭಿರಲಂಕೃತಮ್|
12160035c ವೃತಂ ದೇವಗಣೈಶ್ಚೈವ ಪ್ರಬಭೌ ಯಜ್ಞಮಂಡಲಮ್||
12160036a ತಥಾ ಬ್ರಹ್ಮರ್ಷಿಭಿಶ್ಚೈವ ಸದಸ್ಯೈರುಪಶೋಭಿತಮ್|

ಸಹಸ್ರಾರು ವರ್ಷಗಳ ನಂತರ ಪ್ರಭು ಬ್ರಹ್ಮನು ಶಾಸ್ತ್ರೋಕ್ತ
ವಿಧಿಯನ್ನನುಸರಿಸಿ ಅಲ್ಲಿ ಒಂದು ಯಜ್ಞವನ್ನು ಆರಂಭಿಸಿದನು.
ಋಷಿಗಳು ಮತ್ತು ಯಜ್ಞಪಟುಗಳು ಅದರಲ್ಲಿ ಯಥಾವತ್ತಾಗಿ
ಕರ್ಮಕರ್ತೃಗಳಾಗಿದ್ದರು. ಸಮಿತ್ತುಗಳು ಹರಡಿಕೊಂಡಿದ್ದವು. ಅಗ್ನಿಗಳು
ಉರಿಯುತ್ತಿದ್ದವು. ಕಾಂಚನದ ಯಜ್ಞಪಾತ್ರೆಗಳ ಹೊಳೆಯುವಿಕೆಯಿಂದ
ಯಜ್ಞಮಂಟಪವು ಶೋಭಿಸುತ್ತಿತ್ತು. ಆ ಯಜ್ಞಮಂಡಲವು ಶ್ರೇಷ್ಠ
ದೇವತೆಗಳಿಂದ ಮತ್ತು ಸಭಾಸದ ಮಹರ್ಷಿಗಳಿಂದ
ಸುಶೋಭಿತಗೊಂಡಿತ್ತು.

12160036c ತತ್ರ ಘೋರತಮಂ ವೃತ್ತಮೃಷೀಣಾಂ ಮೇ ಪರಿಶ್ರುತಮ್||
12160037a ಚಂದ್ರಮಾ ವಿಮಲಂ ವ್ಯೋಮ ಯಥಾಭ್ಯುದಿತತಾರಕಮ್|
12160037c ವಿದಾರ್ಯಾಗ್ನಿಂ ತಥಾ ಭೂತಮುತ್ಥಿತಂ ಶ್ರೂಯತೇ ತತಃ||

ಅಲ್ಲಿ ಒಂದು ಅತ್ಯಂತ ಘೋರ ಘಟನೆಯು ನಡೆಯಿತು. ಅದರ ಕುರಿತು
ನಾನು ಋಷಿಗಳಿಂದಲೇ ಕೇಳಿದ್ದೇನೆ. ವಿಮಲ ಆಕಾಶದಲ್ಲಿ
ನಕ್ಷತ್ರಗಳೊಂದಿಗೆ ಚಂದ್ರಮನು ಹೇಗೆ ಉದಯಿಸುತ್ತಾನೋ ಹಾಗೆ
ಕಿಡಿಗಳು ಹರಡಿಕೊಂಡಿದ್ದ ಆ ಅಗ್ನಿಯಲ್ಲಿ ಒಂದು ಭೂತವು
ಪ್ರಕಟವಾಯಿತೆಂದು ಕೇಳಿದ್ದೇವೆ.

12160038a ನೀಲೋತ್ಪಲಸವರ್ಣಾಭಂ ತೀಕ್ಷ್ಣದಂಷ್ಟ್ರಂ ಕೃಶೋದರಮ್|
12160038c ಪ್ರಾಂಶು ದುರ್ದರ್ಶನಂ ಚೈವಾಪ್ಯತಿತೇಜಸ್ತಥೈವ ಚ||

ಅದರ ಶರೀರದ ಬಣ್ಣವು ನೀಲಕಮಲದಂತೆ ಶ್ಯಾಮವರ್ಣದ್ದಾಗಿತ್ತು. ಅದು ತೀಕ್ಷ್ಣದಂಷ್ಟ್ರವೂ, ಅದರ ಉದರವು ಅತ್ಯಂತ ಕೃಶವಾಗಿಯೂ ಇತ್ತು. ಅದು ಅತ್ಯಂತ ಎತ್ತರವಾಗಿಯೂ ಪರಮ ದರ್ಧರ್ಷವಾಗಿಯೂ ಮತ್ತು ಅಮಿತ ತೇಜಸ್ವಿಯಾಗಿಯೂ ತೋರುತ್ತಿತ್ತು.

12160039a ತಸ್ಮಿನ್ನುತ್ಪತಮಾನೇ ಚ ಪ್ರಚಚಾಲ ವಸುಂಧರಾ|
12160039c ತತ್ರೋರ್ಮಿಕಲಿಲಾವರ್ತಶ್ಚುಕ್ಷುಭೇ ಚ ಮಹಾರ್ಣವಃ||

ಅದು ಉತ್ಪತ್ತಿಯಾಗುವಾಗ ವಸುಂಧರೆಯು ನಡುಗಿದಳು. ಸಮುದ್ರವು ಕ್ಷೋಭೆಗೊಂಡು ಅದರಲ್ಲಿ ಮಹಾ ಅಲೆಗಳು ಸುಳಿಗಳು ಹುಟ್ಟಿಕೊಂಡವು.

12160040a ಪೇತುರುಲ್ಕಾ ಮಹೋತ್ಪಾತಾಃ ಶಾಖಾಶ್ಚ ಮುಮುಚುರ್ದ್ರುಮಾಃ|
12160040c ಅಪ್ರಸನ್ನಾ ದಿಶಃ ಸರ್ವಾಃ ಪವನಶ್ಚಾಶಿವೋ ವವೌ|
12160040e ಮುಹುರ್ಮುಹುಶ್ಚ ಭೂತಾನಿ ಪ್ರಾವ್ಯಥಂತ ಭಯಾತ್ತಥಾ||

ಆಕಾಶದಿಂದ ಉಲ್ಕೆಗಳು ಬಿದ್ದವು. ಮಹೋತ್ಪಾತಗಳು ಪ್ರಕಟವಾದವು. ವೃಕ್ಷಗಳು ತಮ್ಮ ರೆಂಬೆಗಳನ್ನು ಉದುರಿಸತೊಡಗಿದವು. ಎಲ್ಲ ದಿಕ್ಕುಗಳೂ ಅಪ್ರಸನ್ನಗೊಂಡು ಅಮಂಗಲಸೂಚಕ ಗಾಳಿಯು ಬೀಸತೊಡಗಿತು. ಪ್ರಾಣಿಗಳು ಬಾರಿಬಾರಿಗೂ ಸಂಕಟಪಡುತ್ತಿದ್ದವು.

12160041a ತತಃ ಸುತುಮುಲಂ ದೃಷ್ಟ್ವಾ ತದದ್ಭುತಮುಪಸ್ಥಿತಮ್|
12160041c ಮಹರ್ಷಿಸುರಗಂಧರ್ವಾನುವಾಚೇದಂ ಪಿತಾಮಹಃ||

ಆ ಭಯಂಕರ ತುಮುಲಗಳನ್ನು ಮತ್ತು ಉತ್ಪನ್ನವಾಗಿದ್ದ ಆ ಅದ್ಭುತಭೂತವನ್ನು ನೋಡಿ ಪಿತಾಮಹನು ಸುರಗಂಧರ್ವರೊಡನಿದ್ದ

ಮಹರ್ಷಿಗಳಿಗೆ ಹೇಳಿದನು:

12160042a ಮಯ್ಯೈತಚ್ಚಿಂತಿತಂ ಭೂತಮಸಿರ್ನಾಮ್ಯೈಷ ವೀರ್ಯವಾನ್|
12160042c ರಕ್ಷಣಾರ್ಥಾಯ ಲೋಕಸ್ಯ ವಧಾಯ ಚ ಸುರದ್ವಿಷಾಮ್||

“ನಾನೇ ಈ ಭೂತದ ಕುರಿತು ಚಿಂತನೆಮಾಡಿದ್ದೆನು. ಇದು ಅಸಿ ಎಂಬ ಹೆಸರಿನ ವೀರ್ಯವಾನ್ ಆಯುಧವು. ಇದು ಲೋಕದ ರಕ್ಷಣೆಗಾಗಿ ಮತ್ತು ಸುರದ್ವೇಷಿಗಳ ವಧೆಗಾಗಿ ಉತ್ಪನ್ನವಾಗಿದೆ.”

12160043a ತತಸ್ತದ್ರೂಪಮುತ್ಸೃಜ್ಯ ಬಭೌ ನಿಸ್ತ್ರಿಂಶ ಏವ ಸಃ|
12160043c ವಿಮಲಸ್ತೀಕ್ಷ್ಣಧಾರಶ್ಚ ಕಾಲಾಂತಕ ಇವೋದ್ಯತಃ||

ಆಗ ಆ ಭೂತವು ತನ್ನ ರೂಪವನ್ನು ತ್ಯಜಿಸಿ ಮೂವತ್ತು ಅಂಗುಲಕ್ಕಿಂತಲೂ ಸ್ವಲ್ಪ ದೊಡ್ಡದಾದ ಖಡ್ಗದ ರೂಪದಲ್ಲಿ ಪ್ರಕಾಶಿತಗೊಂಡಿತು. ಅದರ ಅಲಗು ಅತ್ಯಂತ ತೀಕ್ಷ್ಣವಾಗಿತ್ತು. ಫಳಫಳನೆ ಹೊಳೆಯುತ್ತಿದ್ದ ಆ ಖಡ್ಗವು ಕಾಲಾಂತಕನು ಮೇಲೇರುತ್ತಿರುವಂತೆ ತೋರುತ್ತಿತ್ತು.

12160044a ತತಸ್ತಂ ಶಿತಿಕಂಠಾಯ ರುದ್ರಾಯರ್ಷಭಕೇತವೇ|
12160044c ಬ್ರಹ್ಮಾ ದದಾವಸಿಂ ದೀಪ್ತಮಧರ್ಮಪ್ರತಿವಾರಣಮ್||

ಆಗ ಬ್ರಹ್ಮನು ಅಧರ್ಮವನ್ನು ತಡೆಯಲು ಶಕ್ಯವಾಗಿ ಬೆಳಗುತ್ತಿದ್ದ ಆ ಖಡ್ಗವನ್ನು ಋಷಭಕೇತು ಶಿತಿಕಂಠ ರುದ್ರನಿಗೆ ನೀಡಿದನು.

12160045a ತತಃ ಸ ಭಗವಾನ್ರುದ್ರೋ ಬ್ರಹ್ಮರ್ಷಿಗಣಸಂಸ್ತುತಃ|
12160045c ಪ್ರಗೃಹ್ಯಾಸಿಮಮೇಯಾತ್ಮಾ ರೂಪಮನ್ಯಚ್ಚ ಕಾರ ಹ||
12160046a ಚತುರ್ಬಾಹುಃ ಸ್ಪೃಶನ್ಮೂರ್ಧ್ನಾ ಭೂಸ್ಥಿತೋಽಪಿ ನಭಸ್ತಲಮ್|

ಬ್ರಹ್ಮರ್ಷಿಗಣಗಳಿಂದ ಸ್ತುತಿಸಲ್ಪಡಲು ಭಗವಾನ್ ರುದ್ರನು ಆಗ ಆ ಅಮೇಯಾತ್ಮ ಖಡ್ಗವನ್ನು ಹಿಡಿದು ಅನ್ಯ ರೂಪವನ್ನು ಧರಿಸಿದನು. ಚತುರ್ಬಾಹುವಾದ ಅವನು ಭೂಮಿಯ ಮೇಲೆ ನಿಂತಿದ್ದರೂ ಅವನ ನೆತ್ತಿಯು ನಭಸ್ತಲವನ್ನು ಮುಟ್ಟುವಂತಿತ್ತು.

12160046c ಊರ್ಧ್ವದೃಷ್ಟಿರ್ಮಹಾಲಿಂಗೋ ಮುಖಾಜ್ಜ್ವಾಲಾಃ ಸಮುತ್ಸೃಜನ್।
12160046e ವಿಕುರ್ವನ್ಬಹುಧಾ ವರ್ಣಾನ್ನೀಲಪಾಂಡುರಲೋಹಿತಾನ್॥

ಊರ್ಧ್ವದೃಷ್ಟಿಯನ್ನಿಟ್ಟಿದ್ದ ಆ ಮಹಾಲಿಂಗನು ಬಾಯಿಯಿಂದ ಅಗ್ನಿಜ್ವಾಲೆಗಳನ್ನು ಉಗುಳುತ್ತಿದ್ದನು. ಕಪ್ಪು, ಬಿಳಿ, ಕೆಂಪು ಮೊದಲಾದ ಬಣ್ಣಗಳನ್ನು ಪ್ರಕಟಿಸುತ್ತಿದ್ದನು.

12160047a ಬಿಭ್ರತ್ಕೃಷ್ಣಾಜಿನಂ ವಾಸೋ ಹೇಮಪ್ರವರತಾರಕಮ್।
12160047c ನೇತ್ರಂ ಚೈಕಂ ಲಲಾಟೇನ ಭಾಸ್ಕರಪ್ರತಿಮಂ ಮಹತ್।
12160047e ಶುಶುಭಾತೇ ಚ ವಿಮಲೇ ದ್ವೇ ನೇತ್ರೇ ಕೃಷ್ಣಪಿಂಗಲೇ॥

ರುದ್ರನು ಆ ಸಮಯದಲ್ಲಿ ಸುವರ್ಣಮಯ ತಾರೆಗಳಿಂದ ಕೂಡಿದ ಕೃಷ್ಣಾಜಿನವನ್ನೇ ವಸ್ತ್ರವಾಗಿ ಧರಿಸಿದ್ದನು. ಸೂರ್ಯಸದೃಶವಾದ ಕಣ್ಣನ್ನು ಹಣೆಯಲ್ಲಿ ಧರಿಸಿದ್ದನು. ಉಳಿದೆರಡು ಕಣ್ಣುಗಳು ಕಪ್ಪು ಮತ್ತು ಕಂದುಹಳದೀಬಣ್ಣ ಮಿಶ್ರಿತ ಬಣ್ಣದಿಂದ ನಿರ್ಮಲವಾಗಿ ಪ್ರಕಾಶಿಸುತ್ತಿದ್ದವು.

12160048a ತತೋ ದೇವೋ ಮಹಾದೇವಃ ಶೂಲಪಾಣಿರ್ಭಗಾಕ್ಷಿಹಾ।
12160048c ಸಂಪ್ರಗೃಹ್ಯ ತು ನಿಸ್ತ್ರಿಂಶಂ ಕಾಲಾರ್ಕಾನಲಸಂನಿಭಮ್॥
12160049a ತ್ರಿಕೂಟಂ ಚರ್ಮ ಚೋದ್ಯಮ್ಯ ಸವಿದ್ಯುತಮಿವಾಂಬುದಮ್।
12160049c ಚಚಾರ ವಿವಿಧಾನ್ಮಾರ್ಗಾನ್ಮಹಾಬಲಪರಾಕ್ರಮಃ।

12160049e ವಿಧುನ್ವನ್ನಸಿಮಾಕಾಶೇ ದಾನವಾಂತಚಿಕೀರ್ಷಯಾ||

ಅನಂತರ ಭಗನ ಕಣ್ಣುಗಳನ್ನು ಕಿತ್ತಿದ್ದ ಮಹಾಬಲ ಪರಾಕ್ರಮಿ ದೇವ ಮಹಾದೇವ ಶೂಲಪಾಣಿಯು ಕಾಲ ಮತ್ತು ಅಗ್ನಿಸಮಾನ ತೇಜಸ್ಸಿನ ಆ ಖಡ್ಗವನ್ನು ಮತ್ತು ಮಿಂಚಿನಿಂದೊಡಗೂಡಿದ ಮೋಡದಂತೆ ಹೊಳೆಯುತ್ತಿದ್ದ ಮೂರುಕೋನೆಗಳಿದ್ದ ಗುರಾಣಿಯನ್ನೂ ಹಿಡಿದು ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತಾ ದಾನವರನ್ನು ಅಂತ್ಯಗೊಳಿಸಲು ಬಯಸಿ ಖಡ್ಗವನ್ನು ಆಕಾಶದಲ್ಲಿ ತಿರುಗಿಸತೊಡಗಿದನು.

12160050a ತಸ್ಯ ನಾದಂ ವಿನದತೋ ಮಹಾಹಾಸಂ ಚ ಮುಂಚತಃ|
12160050c ಬಭೌ ಪ್ರತಿಭಯಂ ರೂಪಂ ತದಾ ರುದ್ರಸ್ಯ ಭಾರತ||

ಭಾರತ! ಆಗ ಜೋರಾಗಿ ಗರ್ಜಿಸುತ್ತಿದ್ದ ಮತ್ತು ಮಹಾ ಅಟ್ಟಹಾಸಗೈಯುತ್ತಿದ್ದ ರುದ್ರನ ಸ್ವರೂಪವು ಅತ್ಯಂತ ಭಯಂಕರವಾಗಿ ತೋರುತ್ತಿತ್ತು.

12160051a ತದ್ರೂಪಧಾರಿಣಂ ರುದ್ರಂ ರೌದ್ರಕರ್ಮ ಚಿಕೀರ್ಷವಃ|
12160051c ನಿಶಮ್ಯ ದಾನವಾಃ ಸರ್ವೇ ಹೃಷ್ಟಾಃ ಸಮಭಿದುದ್ರುವುಃ||

ರೌದ್ರಕರ್ಮವನ್ನೆಸಗಲು ಆ ರೌದ್ರ ರೂಪವನ್ನು ಧರಿಸಿದ್ದ ರುದ್ರನನ್ನು ನೋಡಿ ಸರ್ವ ದಾನವರೂ ಹೃಷ್ಟರಾಗಿ ಅವನ ಮೇಲೆ ಎರಗಿದರು.

12160052a ಅಶ್ಮಭಿಶ್ಚಾಪ್ಯವರ್ಷಂತ ಪ್ರದೀಪ್ತೈಶ್ಚ ತಥೋಲ್ಮುಕೈಃ|
12160052c ಘೋರೈಃ ಪ್ರಹರಣೈಶ್ಚಾನ್ಯೈಃ ಶಿತಧಾರೈರಯೋಮುಖೈಃ||

ಕೆಲವರು ರುದ್ರನ ಮೇಲೆ ಕಲ್ಲಿನ ಮಳೆಗರೆದರು. ಕೆಲವರು ಪ್ರಜ್ವಲಿಸುತ್ತಿದ್ದ ಪಂಜುಗಳನ್ನು ಅವನ ಮೇಲೆ ಸುರಿದರು. ಕೆಲವರು

ಸುಘೋರ ಅಸ್ತ್ರ-ಶಸ್ತ್ರಗಳಿಂದ ಅವನನ್ನು ಪ್ರಹರಿಸಿದರು. ಇನ್ನು ಕೆಲವರು ತೀಕ್ಷ್ಣ ಅಲಗುಗಳಿದ್ದ ಲೋಹನಿರ್ಮಿತ ಆಯುಧಗಳಿಂದ ರುದ್ರನನ್ನು ಪ್ರಹರಿಸಿದರು.

12160053a ತತಸ್ತದ್ದಾನವಾನೀಕಂ ಸಂಪ್ರಣೇತಾರಮಚ್ಯುತಮ್|
12160053c ರುದ್ರಖಡ್ಗಬಲೋದ್ಧೂತಂ ಪ್ರಚಚಾಲ ಮುಮೋಹ ಚ||

ಆಗ ದೇವಸೇನಾಪತಿಯ ಕಾರ್ಯವನ್ನು ನಿಶ್ಚಲನಾಗಿ ನಿರ್ವಹಿಸುತ್ತಾ ಖಡ್ಗವನ್ನೆತ್ತಿ ನಿಂತಿದ್ದ ಬಲಶಾಲೀ ಅಚ್ಯುತ ರುದ್ರನನ್ನು ನೋಡಿ ದಾನವಸೇನೆಯು ತತ್ತರಿಸಿ ಭ್ರಾಂತಗೊಂಡಿತು.

12160054a ಚಿತ್ರಂ ಶೀಘ್ರತರತ್ವಾಚ್ಚ ಚರಂತಮಸಿಧಾರಿಣಮ್|
12160054c ತಮೇಕಮಸುರಾಃ ಸರ್ವೇ ಸಹಸ್ರಮಿತಿ ಮೇನಿರೇ||

ಶೀಘ್ರವಾಗಿ ಕಾಲುಹಾಕಿ ವಿಚಿತ್ರ ಗತಿಯಲ್ಲಿ ಸಂಚರಿಸುತ್ತಿದ್ದ ಆ ಏಕಮಾತ್ರ ಖಡ್ಗಧಾರೀ ರುದ್ರನನ್ನು ಆ ಎಲ್ಲ ಅಸುರರೂ ಸಹಸ್ರ ರುದ್ರರಿರುವರೋ ಎಂದು ಅಂದುಕೊಳ್ಳತೊಡಗಿದರು.

12160055a ಚಿಂದನ್ ಭಿಂದನ್ರುಜನ್ ಕೃಂತನ್ದಾರಯನ್ ಪ್ರಮಥನ್ನಪಿ|
12160055c ಅಚರದ್ದೈತ್ಯಸಂಘೇಷು ರುದ್ರೋಽಗ್ನಿರಿವ ಕಕ್ಷಗಃ||

ಒಣಗಿದ ಹುಲ್ಲಿನ ರಾಶಿಯನ್ನು ಹೊಕ್ಕ ಅಗ್ನಿಯಂತೆ ರುದ್ರನು ಶತ್ರುಸಮುದಾಯದಲ್ಲಿ ದೈತ್ಯರನ್ನು ಕೊಲ್ಲುತ್ತಾ, ಕಡಿಯುತ್ತಾ, ಗರ್ಜಿಸಿ ಹೊಡೆಯುತ್ತಾ, ಗಾಯಗೊಳಿಸಿ ಕತ್ತರಿಸುತ್ತಾ ಹಾಗೂ ಸೀಳುತ್ತಾ ಕೆಳಕ್ಕುರುಳಿಸಿ ಸಂಚರಿಸುತ್ತಿದ್ದನು.

12160056a ಅಸಿವೇಗಪ್ರರುಗ್ಣಾಸ್ತೇ[829] ಚಿನ್ನಬಾಹೂರುವಕ್ಷಸಃ|
12160056c ಸಂಪ್ರಕೃತ್ತೋತ್ತಮಾಂಗಾಶ್ಚ[830] ಪೇತುರುರ್ವ್ಯಾಂ ಮಹಾಸುರಾಃ||

ಖಡ್ಗದ ವೇಗದಿಂದ ಬಾಹುಗಳು ಮತ್ತು ತೊಡೆಗಳು ತುಂಡಾಗಿ ಮತ್ತು ಎದೆಗಳು ಸೀಳಿ ಅವರು ಗಾಯಗೊಂಡರು. ಶಿರಸ್ಸುಗಳು ಕತ್ತರಿಸಿ ಮಹಾಸುರವು ಭೂಮಿಯ ಮೇಲೆ ಬಿದ್ದರು.

12160057a ಅಪರೇ ದಾನವಾ ಭಗ್ನಾ ರುದ್ರಘಾತಾವಪೀಡಿತಾಃ[831]|
12160057c ಅನ್ಯೋನ್ಯಮಭಿನರ್ದಂತೋ ದಿಶಃ ಸಂಪ್ರತಿಪೇದಿರೇ||

ಇತರ ದಾನವರು ರುದ್ರನ ಖಡ್ಗಪ್ರಹಾರದಿಂದುಂಟಾದ ಗಾಯಗಳಿಂದ ಪೀಡಿತರಾಗಿ ಅನ್ಯೋನ್ಯರನ್ನು ಕರೆಯುತ್ತಾ ದಿಕ್ಕಾಪಾಲಾಗಿ ಓಡಿ ಹೋದರು.

12160058a ಭೂಮಿಂ ಕೇ ಚಿತ್ಪ್ರವಿವಿಶುಃ ಪರ್ವತಾನಪರೇ ತಥಾ|
12160058c ಅಪರೇ ಜಗ್ಮುರಾಕಾಶಮಪರೇಽಂಭಃ ಸಮಾವಿಶನ್||

ಕೆಲವರು ಭೂಮಿಯನ್ನು ಪ್ರವೇಶಿಸಿದರು. ಇನ್ನು ಕೆಲವರು ಪರ್ವತಗಳಲ್ಲಿ ಅಡಗಿಕೊಂಡರು. ಕೆಲವರು ಆಕಾಶಕ್ಕೆ ಹಾರಿದರು ಮತ್ತು ಇನ್ನು ಅನೇಕ ದಾನವರು ನೀರನ್ನು ಪ್ರವೇಶಿಸಿದರು.

12160059a ತಸ್ಮಿನ್ಮಹತಿ ಸಂವೃತ್ತೇ ಸಮರೇ ಭೃಶದಾರುಣೇ|
12160059c ಬಭೌ ಭೂಮಿಃ ಪ್ರತಿಭಯಾ ತದಾ ರುಧಿರಕರ್ದಮಾ||

---

829 ಅಸಿವೇಗಪ್ರಭಗ್ನಾಸ್ತೇ (ಗೀತಾ ಪ್ರೆಸ್).

830 ಸಂಪ್ರಕೀರ್ಣಾಂತ್ರಗಾತ್ರಾಶ್ಚ (ಗೀತಾ ಪ್ರೆಸ್).

831 ಖಡ್ಗಪಾತಾವಪೀಡಿತಾಃ| (ಗೀತಾ ಪ್ರೆಸ್).

ಅಲ್ಲಿ ಅತ್ಯಂತ ದಾರುಣ ಮಾಹಾ ಯುದ್ಧವು ಆರಂಭವಾಗಲು
ಭೂಮಿಯ ಮೇಲೆ ರಕ್ತ ಮತ್ತು ಮಾಂಸಗಳ ಕೆಸರು ತುಂಬಿಕೊಂಡಿತು.
ಅದರಿಂದ ಅದು ಅತ್ಯಂತ ಭಯಂಕರವಾಗಿ ಕಾಣುತ್ತಿತ್ತು.

12160060a ದಾನವಾನಾಂ ಶರೀರೈಶ್ಚ ಮಹದ್ಭಿಃ ಶೋಣಿತೋಕ್ಷಿತೈಃ|
12160060c ಸಮಾಕೀರ್ಣಾ ಮಹಾಬಾಹೋ ಶೈಲೈರಿವ ಸಕಿಂಶುಕೈಃ||

ಮಹಾಬಾಹೋ! ರಕ್ತದಿಂದ ತೋಯ್ದು ಕೆಳಗಿ ಬಿದ್ದ ದಾನವರ ಮಹಾ
ಶರೀರಗಳಿಂದ ಭೂಮಿಯು ಪಲಾಶಪುಷ್ಪಗಳಿಂದ ಕೂಡಿದ
ಪರ್ವತಶಿಖರಗಳಿಂದ ಆಚ್ಛಾದಿತಗೊಂಡಂತೆ ಕಾಣುತ್ತಿತ್ತು.

12160061a ರುಧಿರೇಣ ಪರಿಕ್ಲಿನ್ನಾ ಪ್ರಬಭೌ ವಸುಧಾ ತದಾ|
12160061c ರಕ್ತಾರ್ದ್ರವಸನಾ ಶ್ಯಾಮಾ ನಾರೀವ ಮದವಿಹ್ವಲಾ||

ರಕ್ತದಿಂದ ತೋಯ್ದುಹೋಗಿದ್ದ ವಸುಧೆಯು ಆಗ ಕೆಂಪುವಸ್ತ್ರವನ್ನುಟ್ಟಿದ್ದ
ಮದವಿಹ್ವಲ ಶ್ಯಾಮವರ್ಣದ ಸ್ತ್ರೀಯಂತೆ ತೋರುತ್ತಿದ್ದಳು.

12160062a ಸ ರುದ್ರೋ ದಾನವಾನ್ ಹತ್ವಾ ಕೃತ್ವಾ ಧರ್ಮೋತ್ತರಂ ಜಗತ್|
12160062c ರೌದ್ರಂ ರೂಪಂ ವಿಹಾಯಾಶು ಚಕ್ರೇ ರೂಪಂ ಶಿವಂ ಶಿವಃ||

ದಾನವರನ್ನು ವಧಿಸಿ ಜಗತ್ತಿನಲ್ಲಿ ಧರ್ಮಪ್ರಧಾನತೆಯನ್ನು ಸ್ಥಾಪಿಸಿ
ಭಗವಾನ್ ರುದ್ರನು ಆ ರೌದ್ರ ರೂಪವನ್ನು ತ್ಯಜಿಸಿದನು ಮತ್ತು ಶಿವನು
ತನ್ನ ಕಲ್ಯಾಣಕಾರೀ ಮಂಗಲಮಯ ರೂಪದಿಂದ ಶೋಭಿಸಿದನು.

12160063a ತತೋ ಮಹರ್ಷಯಃ ಸರ್ವೇ ಸರ್ವೇ ದೇವಗಣಾಸ್ತಥಾ|
12160063c ಜಯೇನಾದ್ಭುತಕಲ್ಪೇನ ದೇವದೇವಮಥಾರ್ಚಯನ್||

ಆಗ ಎಲ್ಲ ಮಹರ್ಷಿಗಳೂ ಸರ್ವದೇವಗಣಗಳೂ ಆ ಅದ್ಭುತ

ವಿಜಯದಿಂದ ಸಂತುಷ್ಟರಾಗಿ ದೇವದೇವನನ್ನು ಪೂಜಿಸಿದರು.

12160064a ತತಃ ಸ ಭಗವಾನ್ರುದ್ರೋ ದಾನವಕ್ಷತಜೋಕ್ಷಿತಮ್|
12160064c ಅಸಿಂ ಧರ್ಮಸ್ಯ ಗೋಪ್ತಾರಂ ದದೌ ಸತ್ಕೃತ್ಯ ವಿಷ್ಣವೇ||

ಅನಂತರ ಭಗವಾನ್ ರುದ್ರನು ದಾನವರ ರಕ್ತದಿಂದ
ತೋಯ್ದುಹೋಗಿದ್ದ ಆ ಖಡ್ಗವನ್ನು ಧರ್ಮರಕ್ಷಕ ವಿಷ್ಣುವಿಗೆ ಸತ್ಕರಿಸಿ
ನೀಡಿದನು.

12160065a ವಿಷ್ಣುರ್ಮರೀಚಯೇ ಪ್ರಾದಾನ್ಮರೀಚಿರ್ಭಗವಾಂಶ್ಚ ತಮ್|
12160065c ಮಹರ್ಷಿಭ್ಯೋ ದದೌ ಖಡ್ಗಮೃಷಯೋ ವಾಸವಾಯ ತು||

ವಿಷ್ಣುವು ಮರೀಚಿಗೆ, ಮರೀಚಿಯು ಮಹರ್ಷಿಗಳಿಗೆ ಮತ್ತು
ಮಹರ್ಷಿಗಳು ಆ ಖಡ್ಗವನ್ನು ಇಂದ್ರನಿಗೆ ನೀಡಿದರು.

12160066a ಮಹೇಂದ್ರೋ ಲೋಕಪಾಲೇಭ್ಯೋ ಲೋಕಪಾಲಾಸ್ತು ಪುತ್ರಕ|
12160066c ಮನವೇ ಸೂರ್ಯಪುತ್ರಾಯ ದದುಃ ಖಡ್ಗಂ ಸುವಿಸ್ತರಮ್||

ಪುತ್ರಕ! ಅನಂತರ ಮಹೇಂದ್ರನು ಲೋಕಪಾಲಕರಿಗೆ ಮತ್ತು
ಲೋಕಪಾಲಕರು ಸೂರ್ಯಪುತ್ರ ಮನುವಿಗೆ ಆ ವಿಶಾಲ
ಖಡ್ಗವನ್ನಿತ್ತರು.

12160067a ಊಚುಶ್ಚೈನಂ ತಥೈವಾದ್ಯಂ ಮಾನುಷಾಣಾಂ ತ್ವಮೀಶ್ವರಃ|
12160067c ಅಸಿನಾ ಧರ್ಮಗರ್ಭೇಣ ಪಾಲಯಸ್ವ ಪ್ರಜಾ ಇತಿ||

ಖಡ್ಗವನ್ನಿತ್ತು ಅವರು ಮನುವಿಗೆ ಹೇಳಿದರುಃ "ನೀನು ಮನುಷ್ಯರ
ಈಶ್ವರನು. ಆದುದರಿಂದ ಈ ಧರ್ಮಗರ್ಭಿತ ಖಡ್ಗದಿಂದ ಪ್ರಜೆಗಳನ್ನು
ಪಾಲಿಸು.

12160068a ಧರ್ಮಸೇತುಮತಿಕ್ರಾಂತಾಃ ಸೂಕ್ಷ್ಮಸ್ಥೂಲಾರ್ಥಕಾರಣಾತ್।
12160068c ವಿಭಜ್ಯ ದಂಡಂ ರಕ್ಷ್ಯಾಃ ಸ್ಯುರ್ಧರ್ಮತೋ ನ ಯದೃಚ್ಛಯಾ॥
12160069a ದುರ್ವಾಚಾ ನಿಗ್ರಹೋ ದಂಡೋ ಹಿರಣ್ಯಬಹುಲಸ್ತಥಾ।
12160069c ವ್ಯಂಗನಂ ಚ ಶರೀರಸ್ಯ ವಧೋ ವಾನಲ್ಪಕಾರಣಾತ್॥
12160070a ಅಸೇರೇತಾನಿ ರೂಪಾಣಿ ದುರ್ವಾಚಾದೀನಿ ನಿರ್ದಿಶೇತ್।

ಯಾರು ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಸುಖಕ್ಕಾಗಿ
ಧರ್ಮಸೇತುವನ್ನು ಅತಿಕ್ರಮಿಸುವರೋ ಅವರಿಗೆ ಪ್ರತ್ಯೇಕ
ಪ್ರತ್ಯೇಕವಾಗಿ ದಂಡಗಳನ್ನಿತ್ತು ಧರ್ಮಪೂರ್ವಕವಾಗಿ ಸಮಸ್ತ
ಪ್ರಜೆಗಳನ್ನು ರಕ್ಷಿಸು. ಯಾರಮೇಲೂ ಸ್ವೇಚ್ಛಾಚಾರವನ್ನು ನಡೆಸಬೇಡ.
ಕಟುವಚನದಿಂದ ಅಪರಾಧಿಯನ್ನು ನಿಗ್ರಹಿಸುವುದಕ್ಕೆ ವಾಗ್ದಂಡ
ಎಂದು ಹೇಳುತ್ತಾರೆ. ಅಪರಾಧಿಯಿಂದ ಅಧಿಕ ಸುವರ್ಣವನ್ನು
ವಸೂಲಿಮಾಡುವುದನ್ನು ಅರ್ಥದಂಡ ಎನ್ನುತ್ತಾರೆ. ಶರೀರದ
ಯಾವುದಾದರೂ ಅಂಗವನ್ನು ಕತ್ತರಿಸುವುದನ್ನು ಕಾಯದಂಡ ಎಂದು
ಹೇಳುತ್ತಾರೆ. ಯಾವುದೇ ಮಹಾ ಅಪರಾಧದ ಕಾರಣದಿಂದ
ಅಪರಾಧಿಯನ್ನು ವಧಿಸುವುದಾದರೆ ಅದನ್ನು ಪ್ರಾಣದಂಡ ಎಂದು
ಹೇಳುತ್ತಾರೆ. ಈ ನಾಲ್ಕೂ ದಂಡಗಳೂ ಖಡ್ಗದ ದುರ್ನಿವಾರ ಅಥವಾ
ದುರ್ಧರ್ಷ ರೂಪಗಳು.

12160070c ಅಸೇರೇವ ಪ್ರಮಾಣಾನಿ ಪರಿಮಾಣವ್ಯತಿಕ್ರಮಾತ್॥
12160071a ಅಧಿಸೃಜ್ಯಾಥ ಪುತ್ರಂ ಸ್ವಂ ಪ್ರಜಾನಾಮಧಿಪಂ ತತಃ।
12160071c ಮನುಃ ಪ್ರಜಾನಾಂ ರಕ್ಷಾರ್ಥಂ ಕ್ಷುಪಾಯ ಪ್ರದದಾವಸಿಮ್॥
12160072a ಕ್ಷುಪಾಜ್ಜಗ್ರಾಹ ಚೇಕ್ಷ್ವಾಕುರಿಕ್ಷ್ವಾಕೋಶ್ಚ ಪುರೂರವಾಃ।

ಪ್ರಜೆಗಳು ಧರ್ಮವನ್ನು ಉಲ್ಲಂಘಿಸಿದಾಗ ಖಡ್ಗಪ್ರಮಾಣಿತವಾದ ಈ

ದಂಡವನ್ನು ಯಥಾಯೋಗ್ಯವಾಗಿ ಪ್ರಯೋಗಿಸಿ ಧರ್ಮವನ್ನು ರಕ್ಷಿಸಬೇಕು." ಹೀಗೆ ಹೇಳಿ ಲೋಕಪಾಲಕರು ತಮ್ಮ ಪುತ್ರ ಪ್ರಜಾಪಾಲಕ ಮನುವನ್ನು ಬೀಳ್ಕೊಟ್ಟರು. ನಂತರ ಮನುವು ಪ್ರಜಾರಕ್ಷಣೆಗಾಗಿ ಆ ಖಡ್ಗವನ್ನು ಕ್ಷುಪಕನಿಗೆ ಕೊಟ್ಟನು. ಕ್ಷುಪನಿಂದ ಇಕ್ಷ್ವಾಕು ಮತ್ತು ಇಕ್ಷ್ವಾಕುವಿನಿಂದ ಪುರೂರವನು ಆ ಖಡ್ಗವನ್ನು ಪಡೆದುಕೊಂಡರು.

12160072c ಆಯುಶ್ಚ ತಸ್ಮಾಲ್ಲೇಭೇ ತಂ ನಹುಷಶ್ಚ ತತೋ ಭುವಿ||
12160073a ಯಯಾತಿರ್ನಹುಷಾಚ್ಚಾಪಿ ಪೂರುಸ್ತಸ್ಮಾಚ್ಚ ಲಬ್ಧವಾನ್|

ಪುರೂರವನಿಂದ ಆಯು, ಆಯುವಿನಿಂದ ನಹುಷ, ನಹುಷನಿಂದ ಯಯಾತಿ, ಮತ್ತು ಯಯಾತಿಯಿಂದ ಪೂರುವು ಈ ಖಡ್ಗವನ್ನು ಭೂತಲದಲ್ಲಿ ಪಡೆದುಕೊಂಡರು.

12160073c ಆಮೂರ್ತರಯಸಸ್ತಸ್ಮಾತ್ತತೋ ಭೂಮಿಶಯೋ ನೃಪಃ||
12160074a ಭರತಶ್ಚಾಪಿ ದೌಃಷಂತಿರ್ಲೇಭೇ ಭೂಮಿಶಯಾದಸಿಮ್|

ಪೂರುವಿನಿಂದ ಅಮೂರ್ತರಯ, ಅಮೂರ್ತರಯನಿಂದ ನೃಪ ಭೂಮಿಶಯ ಮತ್ತು ಭೂಮಿಶಯನಿಂದ ಈ ಖಡ್ಗವನ್ನು ದುಷ್ಯಂತಕುಮಾರ ಭರತನು ಪಡೆದುಕೊಂಡನು.

12160074c ತಸ್ಮಾಚ್ಚ ಲೇಭೇ ಧರ್ಮಜ್ಞೋ ರಾಜನ್ವೈಡಬಿಡಸ್ತಥಾ[832]||
12160075a ತತಶ್ಚೈಡಬಿಡಾಲ್ಲೇಭೇ[833] ಧುಂಧುಮಾರೋ ಜನೇಶ್ವರಃ|

---

[832] ರಾಜನ್ವೈಲವಿಲಸ್ತಥಾ| (ಗೀತಾ ಪ್ರೆಸ್).

[833] ತತಸ್ತ್ವೈಲವಿಲಾಲ್ಲೇಭೇ| (ಗೀತಾ ಪ್ರೆಸ್).

ರಾಜನ್! ಅವನಿಂದ ಧರ್ಮಜ್ಞ ಐಡಬಿಡನು ಆ ಖಡ್ಗವನ್ನು ಪಡೆದನು. ಅನಂತರ ಐಡಬಿಡನಿಂದ ಜನೇಶ್ವರ ಧುಂಧುಮಾರನು ಪಡೆದುಕೊಂಡನು.

12160075c ಧುಂಧುಮಾರಾಚ್ಚ ಕಾಂಬೋಜೋ ಮುಚುಕುಂದಸ್ತತೋಽಲಭತ್‌॥
12160076a ಮುಚುಕುಂದಾನ್ಮರುತ್ತಶ್ಚ ಮರುತ್ತಾದಪಿ ರೈವತಃ।
12160076c ರೈವತಾದ್ಯುವನಾಶ್ವಶ್ಚ ಯುವನಾಶ್ವಾತ್ತತೋ ರಘುಃ॥
12160077a ಇಕ್ಷ್ವಾಕುವಂಶಜಸ್ತಸ್ಮಾದ್ಧರಿಣಾಶ್ವಃ ಪ್ರತಾಪವಾನ್‌।
12160077c ಹರಿಣಾಶ್ವಾದಸಿಂ ಲೇಭೇ ಶುನಕಃ ಶುನಕಾದಪಿ॥
12160078a ಉಶೀನರೋ ವೈ ಧರ್ಮಾತ್ಮಾ ತಸ್ಮಾದ್ಭೋಜಾಃ ಸಯಾದವಾಃ।
12160078c ಯದುಭ್ಯಶ್ಚ ಶಿಬಿರ್ಲೇಭೇ ಶಿಬೇಶ್ಚಾಪಿ ಪ್ರತರ್ದನಃ॥
12160079a ಪ್ರತರ್ದನಾದಷ್ಟಕಶ್ಚ ರುಶದಶ್ವೋಽಷ್ಟಕಾದಪಿ[834]।

ಧುಂಧುಮಾರನಿಂದ ಕಾಂಬೋಜ, ಕಾಂಬೋಜನಿಂದ ಮುಚುಕುಂದ, ಮುಚುಕುಂದನಿಂದ ಮರುತ್ತ, ಮರುತ್ತನಿಂದ ರೈವತ, ರೈವತನಿಂದ ಯುವನಾಶ್ವ, ಯುವನಾಶ್ವನಿಂದ ಇಕ್ಷ್ವಾಕುವಂಶೀ ರಘು, ರಘುವಿನಿಂದ ಪ್ರತಾಪವಾನ್ ಹರಿಣಾಶ್ವ, ಹರಿಣಾಶ್ವನಿಂದ ಶುನಕ, ಶುನಕನಿಂದ ಧರ್ಮಾತ್ಮಾ ಉಶೀನರ, ಉಶೀನರನಿಂದ ಯದುವಂಶೀ ಭೋಜ, ಯದುವಂಶೀಯನಿಂದ ಶಿಬಿ, ಶಿಬಿಯಿಂದ ಪ್ರತರ್ದನ, ಪ್ರತರ್ದನನಿಂದ ಅಷ್ಟಕ, ಅಷ್ಟಕನಿಂದ ರುಶದಶ್ವನು ಈ ಖಡ್ಗವನ್ನು ಪಡೆದುಕೊಂಡನು.

12160079c ರುಶದಶ್ವಾದ್ಭರದ್ವಾಜೋ[835] ದ್ರೋಣಸ್ತಸ್ಮಾತ್ಕೃಪಸ್ತತಃ।

---

[834] ಪೃಷದಶ್ವೋಽಷ್ಟಕಾದಪಿ। (ಗೀತಾ ಪ್ರೆಸ್).

[835] ಪೃಷದಶ್ವಾದ್ಭರದ್ವಾಜೋ (ಗೀತಾ ಪ್ರೆಸ್).

12160079e ತತಸ್ತ್ವಂ ಭ್ರಾತೃಭಿಃ ಸಾರ್ಧಂ ಪರಮಾಸಿಮವಾಪ್ತವಾನ್‌॥

ರುಶದಶ್ವನಿಂದ ಭರದ್ವಾಜ ವಂಶೀಯ ದ್ರೋಣನೂ ನಂತರ ದ್ರೋಣನಿಂದ ಕೃಪನೂ ಖಡ್ಗವಿದ್ಯೆಯನ್ನು ಪಡೆದುಕೊಂಡರು. ನಂತರ ಕೃಪನಿಂದ ಸಹೋದರರೊಂದಿಗೆ ನೀನು ಈ ಪರಮ ಖಡ್ಗವನ್ನು ಪಡೆದುಕೊಂಡೆ.

12160080a ಕೃತ್ತಿಕಾಶ್ಚಾಸ್ಯ ನಕ್ಷತ್ರಮಸೇರಗ್ನಿಶ್ಚ ದೈವತಮ್‌|
12160080c ರೋಹಿಣ್ಯೋ ಗೋತ್ರಮಸ್ಯಾಥ ರುದ್ರಶ್ಚ ಗುರುರುತ್ತಮಃ‌॥

ಖಡ್ಗದ ನಕ್ಷತ್ರವು ಕೃತ್ತಿಕಾ. ಅಗ್ನಿಯು ಅದರ ದೇವತೆ. ಗೋತ್ರವು ರೋಹಿಣೀ ಮತ್ತು ಅದರ ಉತ್ತಮ ಗುರುವು ರುದ್ರದೇವನು.

12160081a ಅಸೇರಷ್ಟೌ ಚ ನಾಮಾನಿ ರಹಸ್ಯಾನಿ ನಿಬೋಧ ಮೇ‌|
12160081c ಪಾಂಡವೇಯ ಸದಾ ಯಾನಿ ಕೀರ್ತಯಽಲ್ಲಭತೇ ಜಯಮ್‌॥
12160082a ಅಸಿರ್ವಿಶಸನಃ ಖಡ್ಗಸ್ತೀಕ್ಷ್ಣವರ್ತ್ಮಾ ದುರಾಸದಃ‌|
12160082c ಶ್ರೀಗರ್ಭೋ ವಿಜಯಶ್ಚೈವ ಧರ್ಮಪಾಲಸ್ತಥೈವ ಚ‌॥

ಪಾಂಡವೇಯ! ಖಡ್ಗಕ್ಕೆ ಎಂಟು ರಹಸ್ಯ ನಾಮಗಳಿವೆ. ಅವನ್ನು ನನ್ನಿಂದ ಕೇಳು. ಆ ನಾಮಗಳ ಕೀರ್ತನೆಯಿಂದ ಕೀರ್ತಿ-ಜಯಗಳು ದೊರೆಯುತ್ತವೆ: (೧) ಅಸಿ (೨) ವಿಶಸನ (೩) ಖಡ್ಗ (೪) ತೀಕ್ಷ್ಣಧಾರ (೫) ದುರಾಸದ (೬) ಶ್ರೀಗರ್ಭ (೭) ವಿಜಯ (೮) ಧರ್ಮಪಾಲ.

12160083a ಅಗ್ರ್ಯಃ ಪ್ರಹರಣಾನಾಂ ಚ ಖಡ್ಗೋ ಮಾದ್ರವತೀಸುತ‌|
12160083c ಮಹೇಶ್ವರಪ್ರಣೀತಶ್ಚ ಪುರಾಣೇ ನಿಶ್ಚಯಂ ಗತಃ‌॥

ಮಾದ್ರವತೀಸುತ! ಆಯುಧಗಳಲ್ಲಿ ಖಡ್ಗವು ಅಗ್ರಣೀಯವು.

ಮಹೇಶ್ವರನು ಮೊದಲು ಇದನ್ನು ಉಪಯೋಗಿಸಿದ್ದನು. ಪುರಾಣದಲ್ಲಿ ಇದನ್ನು ನಿಶ್ಚಯಿಸಲಾಗಿದೆ.

12160084a ಪೃಥುಸ್ತೂತ್ಪಾದಯಾಮಾಸ ಧನುರಾದ್ಯಮರಿಂದಮ|
12160084c ತೇನೇಯಂ ಪೃಥಿವೀ ಪೂರ್ವಂ ವೈನ್ಯೇನ ಪರಿರಕ್ಷಿತಾ[836]||

ಅರಿಂದಮ! ಧನುಸ್ಸನ್ನು ಮೊದಲು ಉತ್ಪಾದಿಸಿದವನು ಪೃಥುವು. ವೇನನ ಮಗ ಪೃಥುವು ಅದರಿಂದಲೇ ಹಿಂದೆ ಈ ಭೂಮಿಯನ್ನು ರಕ್ಷಿಸಿದನು.

12160085a ತದೇತದಾರ್ಷಂ ಮಾದ್ರೇಯ ಪ್ರಮಾಣಂ ಕರ್ತುಮರ್ಹಸಿ|
12160085c ಅಸೇಶ್ಚ ಪೂಜಾ ಕರ್ತವ್ಯಾ ಸದಾ ಯುದ್ಧವಿಶಾರದೈಃ||

ಮಾದ್ರೇಯ! ಆದುದರಿಂದ ಯುದ್ಧವಿಶಾರದರಿಗೆ ಸದಾ ಖಡ್ಗವನ್ನು ಪೂಜಿಸುವುದು ಕರ್ತವ್ಯವಾಗಿದೆ. ಇದು ಮಹರ್ಷಿಗಳ ಅಭಿಮತವಾಗಿದೆ. ನೀನೂ ಕೂಡ ಇದನ್ನು ಮಾಡಬೇಕು.

12160086a ಇತ್ಯೇಷ ಪ್ರಥಮಃ ಕಲ್ಪೋ ವ್ಯಾಖ್ಯಾತಸ್ತೇ ಸುವಿಸ್ತರಃ|
12160086c ಅಸೇರುತ್ಪತ್ತಿಸಂಸರ್ಗೋ ಯಥಾವದ್ಭರತರ್ಷಭ||

ಭರತರ್ಷಭ! ಹೀಗೆ ನಾನು ಖಡ್ಗದ ಉತ್ಪತ್ತಿ ಪ್ರಸಂಗವನ್ನು ವಿಸ್ತಾರವಾಗಿ ಯಥಾವತ್ತಾಗಿ ಹೇಳಿದ್ದೇನೆ. ಇದರಿಂದ ಎಲ್ಲ ಆಯುಧಗಳಿಗಿಂತಲೂ ಖಡ್ಗವೇ ಶ್ರೇಷ್ಠ ಮತ್ತು ಪ್ರಥಮ ಆಯುಧವೆಂದು ಸ್ಪಷ್ಟವಾಗುತ್ತದೆ.

---

[836] ತೇನೇಯಂ ಪೃಥಿವೀ ದುಗ್ಧಾ ಸಸ್ಯಾನಿ ಸುಬಹೂನ್ಯಪಿ| ಧರ್ಮೇಣ ಚ ಯಥಾಪೂರ್ವಂ ವೈನ್ಯೇನ ಪರಿರಕ್ಷಿತಾ|| (ಗೀತಾ ಪ್ರೆಸ್).

12160087a ಸರ್ವಥೈತದಿಹ ಶ್ರುತ್ವಾ ಖಿಡ್ಗಸಾಧನಮುತ್ತಮಮ್|
12160087c ಲಭತೇ ಪುರುಷಃ ಕೀರ್ತಿಂ ಪ್ರೇತ್ಯ ಚಾನಂತ್ಯಮಶ್ನುತೇ||

ಖಿಡ್ಗಪ್ರಾಪ್ತಿಯ ಈ ಉತ್ತಮ ಪ್ರಸಂಗವನ್ನು ಸಂಪೂರ್ಣವಾಗಿ ಕೇಳಿದ ಪುರುಷನು ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಅಕ್ಷಯ ಪುಣ್ಯ ಲೋಕಗಳನ್ನು ಪಡೆದುಕೊಳ್ಳುತ್ತಾನೆ.””

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಖಿಡ್ಗೋತ್ಪತ್ತಿಕಥನೇ ಷಷ್ಟ್ಯಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಖಿಡ್ಗೋತ್ಪತ್ತಿಕಥನ ಎನ್ನುವ ನೂರಾಅರವತ್ತನೇ
ಅಧ್ಯಾಯವು.

೧೬೧

ಧರ್ಮಾರ್ಥಕಾಮಗಳ ವಿಷಯದಲ್ಲಿ ವಿದುರ-ಪಾಂಡವರ ಪ್ರತ್ಯೇಕ ವಿಚಾರಗಳು ಮತ್ತು ಅಂತ್ಯದಲ್ಲಿ ಯುಧಿಷ್ಠಿರನ ನಿರ್ಣಯ (1-48).

12161001 ವೈಶಂಪಾಯನ ಉವಾಚ|
12161001a ಇತ್ಯುಕ್ತವತಿ ಭೀಷ್ಮೇ ತು ತೂಷ್ಣೀಂಭೂತೇ ಯುಧಿಷ್ಠಿರಃ|
12161001c ಪಪ್ರಚ್ಛಾವಸರಂ ಗತ್ವಾ[837] ಭ್ರಾತೄನ್ವಿದುರಪಂಚಮಾನ್||

ವೈಶಂಪಾಯನನು ಹೇಳಿದನು: “ಹೀಗೆ ಹೇಳಿ ಭೀಷ್ಮನು ಸುಮ್ಮನಾಗಲು ಯುಧಿಷ್ಠಿರನು ಆ ಸಮಯದಲ್ಲಿ ತನ್ನ ಐವರು

837 ಪಪ್ರಚ್ಛಾವಸಥಂ ಗತ್ವಾ (ಗೀತಾ ಪ್ರೆಸ್).

ಸಹೋದರರು ಮತ್ತು ವಿದುರನ ಬಳಿಸಾರಿ ಕೇಳಿದನುಃ

12161002a ಧರ್ಮೇ ಚಾರ್ಥೇ ಚ ಕಾಮೇ ಚ ಲೋಕವೃತ್ತಿಃ ಸಮಾಹಿತಾ|
12161002c ತೇಷಾಂ ಗರೀಯಾನ್ಕತಮೋ ಮಧ್ಯಮಃ ಕೋ ಲಘುಶ್ಚ ಕಃ||

“ಜನರ ಪ್ರವೃತ್ತಿಯು ಸಾಮಾನ್ಯವಾಗಿ ಧರ್ಮ, ಅರ್ಥ, ಮತ್ತು ಕಾಮಗಳಲ್ಲಿಯೇ ನೆಲೆಸಿದೆ. ಈ ಮೂರರಲ್ಲಿ ಗರಿಷ್ಠವಾದುದು ಯಾವುದು? ಮಧ್ಯಮವಾದುದು ಯಾವುದು? ಮತ್ತು ಕನಿಷ್ಠವಾದುದು ಯಾವುದು?

12161003a ಕಸ್ಮಿಂಶ್ಚಾತ್ಮಾ ನಿಯಂತವ್ಯಸ್ತ್ರಿವರ್ಗವಿಜಯಾಯ ವೈ|
12161003c ಸಂತುಷ್ಟಾ ನೈಷ್ಠಿಕಂ ವಾಕ್ಯಂ ಯಥಾವದ್ವಕ್ತುಮರ್ಹಥ||

ಧರ್ಮ-ಅರ್ಥ-ಕಾಮಗಳೆಂಬ ಈ ತ್ರಿವರ್ಗವನ್ನು
ಜಯಿಸಲಿಚ್ಛಿಸುವವನು ಯಾವುದರ ಮೇಲೆ ಮನಸ್ಸನ್ನಿಡಬೇಕು?
ಹರ್ಷೋತ್ಸಾಹಗಳಿಂದ ಕೂಡಿರುವ ನೀವು ಯಥಾವತ್ತಾಗಿ ಈ ಪ್ರಶ್ನೆಗೆ
ಉತ್ತರವನ್ನು ನೀಡಬೇಕು ಮತ್ತು ನಿಮಗೆ ಸಂಪೂರ್ಣ ನಿಷ್ಠೆಯಿದ್ದ
ವಿಷಯವನ್ನೇ ಹೇಳಬೇಕು.”

12161004a ತತೋಽರ್ಥಗತಿತತ್ತ್ವಜ್ಞಃ ಪ್ರಥಮಂ ಪ್ರತಿಭಾನವಾನ್|
12161004c ಜಗಾದ ವಿದುರೋ ವಾಕ್ಯಂ ಧರ್ಮಶಾಸ್ತ್ರಮನುಸ್ಮರನ್||

ಆಗ ಮೊದಲು ಅರ್ಥಗತಿತತ್ತ್ವಜ್ಞ ಪ್ರತಿಭಾವಂತ ವಿದುರನು
ಧರ್ಮಶಾಸ್ತ್ರಗಳನ್ನು ಸ್ಮರಿಸಿಕೊಂಡು ಈ ಮಾತನ್ನಾಡಿದನುಃ

12161005a ಬಾಹುಶ್ರುತ್ಯಂ ತಪಸ್ತ್ಯಾಗಃ ಶ್ರದ್ಧಾ ಯಜ್ಞಕ್ರಿಯಾ ಕ್ಷಮಾ|
12161005c ಭಾವಶುದ್ಧಿರ್ದಯಾ ಸತ್ಯಂ ಸಂಯಮಶ್ಚಾತ್ಮಸಂಪದಃ||

“ಅನೇಕ ಶಾಸ್ತ್ರಗಳ ಅನುಶೀಲನೆ, ತಪಸ್ಸು, ತ್ಯಾಗ, ಶ್ರದ್ಧೆ, ಯಜ್ಞಕರ್ಮಗಳು, ಕ್ಷಮೆ, ಭಾವಶುದ್ಧಿ, ದಯೆ, ಸತ್ಯ ಮತ್ತು ಸಂಯಮಗಳು ಆತ್ಮಸಂಪತ್ತುಗಳು.

12161006a ಏತದೇವಾಭಿಪದ್ಯಸ್ವ ಮಾ ತೇ ಭೂಚ್ಚಲಿತಂ ಮನಃ|
12161006c ಏತನ್ಮೂಲೌ ಹಿ ಧರ್ಮಾರ್ಥಾವೇತದೇಕಪದಂ ಹಿತಮ್||

ನೀನು ಇವುಗಳನ್ನೇ ಸಾಧಿಸು. ಇವುಗಳಿಂದ ನಿನ್ನ ಮನಸ್ಸು ವಿಚಲಿತವಾಗದಿರಲಿ. ಇವೇ ಧರ್ಮಾರ್ಥಗಳಿಗೆ ಮೂಲಕಾರಣಗಳಾಗಿವೆ. ನನ್ನ ಅಭಿಪ್ರಾಯದಲ್ಲಿ ಇದೇ ಒಂದು ಪರಮ ಹಿತಕರವಾದುದು.

12161007a ಧರ್ಮೇಣೈವರ್ಷಯಸ್ತೀರ್ಣಾ ಧರ್ಮೇ ಲೋಕಾಃ ಪ್ರತಿಷ್ಠಿತಾಃ|
12161007c ಧರ್ಮೇಣ ದೇವಾ ದಿವಿಗಾ[838] ಧರ್ಮೇ ಚಾರ್ಥಃ ಸಮಾಹಿತಃ||

ಧರ್ಮದಿಂದಲೇ ಋಷಿಗಳು ಸಂಸಾರಸಾಗರವನ್ನು ಪಾರುಮಾಡಿದ್ದಾರೆ. ಧರ್ಮದ ಮೇಲೆಯೇ ಲೋಕಗಳೆಲ್ಲವೂ ಪ್ರತಿಷ್ಠಿತವಾಗಿವೆ. ಧರ್ಮದಿಂದಲೇ ದೇವತೆಗಳು ದಿವಿಗರಾದರು ಮತ್ತು ಧರ್ಮದಲ್ಲಿಯೇ ಅರ್ಥವೂ ಒಳಗೊಂಡಿದೆ.

12161008a ಧರ್ಮೋ ರಾಜನ್ಗುಣಶ್ರೇಷ್ಠೋ ಮಧ್ಯಮೋ ಹ್ಯರ್ಥ ಉಚ್ಯತೇ|
12161008c ಕಾಮೋ ಯವೀಯಾನಿತಿ ಚ ಪ್ರವದಂತಿ ಮನೀಷಿಣಃ|
12161008e ತಸ್ಮಾದ್ಧರ್ಮಪ್ರಧಾನೇನ ಭವಿತವ್ಯಂ ಯತಾತ್ಮನಾ[839]||

---

[838] ವವೃಧುಃ (ಗೀತಾ ಪ್ರೆಸ್).

[839] ಇದರ ನಂತರದ ಅಧಿಕ ಅರ್ಧಶ್ಲೋಕಃ ತಥಾ ಚ ಸರ್ವಭೂತೇಷು ವರ್ತಿತವ್ಯಂ ಯಥಾತ್ಮನಿ| (ಗೀತಾ ಪ್ರೆಸ್).

ರಾಜನ್! ಧರ್ಮವೇ ಶ್ರೇಷ್ಠ ಗುಣವು. ಅರ್ಥವು ಮಧ್ಯಮ ಎಂದು ಹೇಳಿದ್ದಾರೆ. ಕಾಮವು ಇವೆರಡಕ್ಕಿಂತಲೂ ಹೀನವಾದುದು ಎಂದು ಮನೀಷಿಣರು ಹೇಳುತ್ತಾರೆ. ಆದುದರಿಂದ ಯತಾತ್ಮನಾಗಿದ್ದುಕೊಂಡು ಧರ್ಮವನ್ನೇ ತನ್ನ ಪ್ರಧಾನ ಧ್ಯೇಯವನ್ನಾಗಿರಿಸಿಕೊಳ್ಳಬೇಕು."

12161009a ಸಮಾಪ್ತವಚನೇ ತಸ್ಮಿನ್ನರ್ಥಶಾಸ್ತ್ರವಿಶಾರದಃ|
12161009c ಪಾರ್ಥೋ ವಾಕ್ಯಾರ್ಥತತ್ತ್ವಜ್ಞೋ ಜಗೌ ವಾಕ್ಯಮತಂದ್ರಿತಃ[840]||

ಆ ಅರ್ಥಶಾಸ್ತ್ರವಿಶಾರದನು ತನ್ನ ಮಾತನ್ನು ಮುಗಿಸಲು ವಾಕ್ಯಾರ್ಥತತ್ತ್ವಜ್ಞನಾದ ಪಾರ್ಥನು ಆಲಸ್ಯವಿಲ್ಲದೇ ಈ ಮಾತನ್ನಾಡಿದನು:

12161010a ಕರ್ಮಭೂಮಿರಿಯಂ ರಾಜನ್ನಿಹ ವಾರ್ತ್ತಾ ಪ್ರಶಸ್ಯತೇ|
12161010c ಕೃಷಿವಾಣಿಜ್ಯಗೋರಕ್ಷ್ಯಂ ಶಿಲ್ಪಾನಿ ವಿವಿಧಾನಿ ಚ||

"ರಾಜನ್! ಇದು ಕರ್ಮಭೂಮಿಯು. ಇಲ್ಲಿ ಜೀವನಕ್ಕೆ ಸಾಧನಭೂತ ಕರ್ಮಗಳನ್ನೇ ಪ್ರಶಂಸಿಸುತ್ತಾರೆ. ಕೃಷಿ, ವಾಣಿಜ್ಯ, ಗೋರಕ್ಷೆ, ವಿವಿಧ ಶಿಲ್ಪಗಳು ಇವೆಲ್ಲವೂ ಜೀವನಕ್ಕೆ ಸಾಧನಭೂತ ಕರ್ಮಗಳಾಗಿವೆ.

12161011a ಅರ್ಥ ಇತ್ಯೇವ ಸರ್ವೇಷಾಂ ಕರ್ಮಣಾಮವ್ಯತಿಕ್ರಮಃ|
12161011c ನ ಋತೇಽರ್ಥೇನ ವರ್ತೇತೇ ಧರ್ಮಕಾಮಾವಿತಿ ಶ್ರುತಿಃ||

ಅರ್ಥವೇ ಸಮಸ್ತ ಕರ್ಮಗಳ ಮರ್ಯಾದೆಗಳನ್ನು ಪಾಲಿಸಲು ಸಹಾಯಕವಾಗುತ್ತದೆ. ಅರ್ಥವಿಲ್ಲದೇ ಧರ್ಮ-ಕಾಮಗಳೂ

---

[840] ಪಾರ್ಥೋ ಧರ್ಮಾರ್ಥತತ್ತ್ವಜ್ಞೋ ಜಗೌ ವಾಕ್ಯಂ ಪ್ರಚೋದಿತಃ| (ಗೀತಾ ಪ್ರೆಸ್).

ಸಿದ್ಧಿಸುವುದಿಲ್ಲ ಎಂದು ಶ್ರುತಿವಾಕ್ಯವಿದೆ.

12161012a ವಿಜಯೀ[841] ಹ್ಯರ್ಥವಾನ್ಧರ್ಮಮಾರಾಧಯಿತುಮುತ್ತಮಮ್|
12161012c ಕಾಮಂ ಚ ಚರಿತುಂ ಶಕ್ತೋ ದುಷ್ಪ್ರಾಪಮಕೃತಾತ್ಮಭಿಃ||

ಇಂದ್ರಿಯ ವಿಜಯೀ ಅರ್ಥವಾನನು ಧರ್ಮವನ್ನು ಉತ್ತಮವಾಗಿ
ಆರಾಧಿಸಲು ಶಕ್ತನಾಗುತ್ತಾನೆ. ಅಕೃತಾತ್ಮರೂ ಕೂಡ
ಅರ್ಥವಾನರಾಗಿದ್ದರೆ ಪಡೆಯಲು ಕಷ್ಟವಾದ ಕಾಮನೆಗಳನ್ನೂ
ಪೂರೈಸಿಕೊಳ್ಳಲು ಶಕ್ತರಾಗುತ್ತಾರೆ.

12161013a ಅರ್ಥಸ್ಯಾವಯವಾವೇತೌ ಧರ್ಮಕಾಮಾವಿತಿ ಶ್ರುತಿಃ|
12161013c ಅರ್ಥಸಿದ್ಧ್ಯಾ ಹಿ ನಿರ್ವೃತ್ತಾವುಭಾವೇತೌ ಭವಿಷ್ಯತಃ||

ಧರ್ಮ ಮತ್ತು ಕಾಮಗಳು ಅರ್ಥದ ಎರಡು ಅವಯವಗಳೆಂದು
ಶ್ರುತಿಗಳು ಹೇಳುತ್ತವೆ. ಅರ್ಥಸಿದ್ಧಿಯಿಂದ ಇವೆರಡರ ನಿವೃತ್ತಿಯೂ
ಆಗುತ್ತದೆ.

12161014a ಉದ್ಭೃತಾರ್ಥಂ ಹಿ ಪುರುಷಂ ವಿಶಿಷ್ಟತರಯೋನಯಃ|
12161014c ಬ್ರಹ್ಮಾಣಮಿವ ಭೂತಾನಿ ಸತತಂ ಪರ್ಯುಪಾಸತೇ||

ಸರ್ವಭೂತಗಳೂ ಸತತವೂ ಬ್ರಹ್ಮನನ್ನೇ ಉಪಾಸಿಸುವಂತೆ ಉತ್ತಮ
ಜಾತಿಯ ಮನುಷ್ಯರು ಸದಾ ಧನವಾನ ಪುರುಷನನ್ನೇ ಗೌರವಿಸುತ್ತಾರೆ.

12161015a ಜಟಾಜಿನಧರಾ ದಾಂತಾಃ ಪಂಕದಿಗ್ಧಾ ಜಿತೇಂದ್ರಿಯಾಃ|
12161015c ಮುಂಡಾ ನಿಸ್ತಂತವಶ್ಚಾಪಿ ವಸಂತ್ಯರ್ಥಾರ್ಥಿನಃ ಪೃಥಕ್||

---

[841] ವಿಷಯೈಃ (ಗೀತಾ ಪ್ರೆಸ್).

ಜಟಾಜಿನಧರರು, ದಾಂತರು, ಕೆಸರನ್ನು ಬಳಿದುಕೊಂಡಿರುವ
ಜಿತೇಂದ್ರಿಯರು, ಸಂನ್ಯಾಸಿಗಳು, ನೈಷ್ಠಿಕ ಬ್ರಹ್ಮಚಾರಿಗಳು ಇವರೆಲ್ಲರೂ
ಧನದ ಮೇಲಿನ ಅಭಿಲಾಷೆಯಿಂದ ಪ್ರತ್ಯೇಕ ಆಶ್ರಮಗಳನ್ನು
ಕಲ್ಪಿಸಿಕೊಂಡಿರುತ್ತಾರೆ.

12161016a ಕಾಷಾಯವಸನಾಶ್ಚಾನ್ಯೇ ಶ್ಮಶ್ರುಲಾ ಹ್ರೀಸುಸಂವೃತಾಃ[842]|
12161016c ವಿದ್ವಾಂಸಶ್ಚೈವ ಶಾಂತಾಶ್ಚ ಮುಕ್ತಾಃ ಸರ್ವಪರಿಗ್ರಹೈಃ||
12161017a ಅರ್ಥಾರ್ಥಿನಃ ಸಂತಿ ಕೇ ಚಿದಪರೇ ಸ್ವರ್ಗಕಾಂಕ್ಷಿಣಃ|
12161017c ಕುಲಪ್ರತ್ಯಾಗಮಾಶ್ಚೈಕೇ ಸ್ವಂ ಸ್ವಂ ಮಾರ್ಗಮನುಷ್ಠಿತಾಃ||

ಸರ್ವಪರಿಗ್ರಹಗಳಿಂದ ಮುಕ್ತರಾದ ಕಾಷಾಯವಸ್ತ್ರಗಳನ್ನು ಧರಿಸಿದ,
ಗಡ್ಡ-ಮೀಸೆಗಳನ್ನು ಬೆಳೆಸಿರುವ ಸಂಕೋಚಶೀಲ, ಶಾಂತ ವಿದ್ವಾಂಸರೂ
ಕೂಡ ಹಣದ ಸಂಪಾದನೆಯಲ್ಲಿಯೇ ಆಸಕ್ತರಾಗಿರುತ್ತಾರೆ.
ಕುಲಪರಂಪರಾಗತ ನಿಯಮಗಳನ್ನು ಪಾಲಿಸುತ್ತಾ ತಮ್ಮ ತಮ್ಮ
ವರ್ಣಾಶ್ರಮಗಳ ಧರ್ಮಗಳನ್ನು ಪಾಲಿಸುವ ಇವರೆಲ್ಲರೂ
ಧನಾರ್ಥಿಗಳೇ ಆಗಿರುತ್ತಾರೆ.

12161018a ಆಸ್ತಿಕಾ ನಾಸ್ತಿಕಾಶ್ಚೈವ ನಿಯತಾಃ ಸಂಯಮೇ ಪರೇ|
12161018c ಅಪ್ರಜ್ಞಾನಂ ತಮೋಭೂತಂ ಪ್ರಜ್ಞಾನಂ ತು ಪ್ರಕಾಶತಾ||

ಆಸ್ತಿಕರೂ ಇದ್ದಾರೆ. ನಾಸ್ತಿಕರೂ ಇದ್ದಾರೆ. ಸಂಯಮ-ನಿಯಮ
ಪರಾಯಣರೂ ಇದ್ದಾರೆ. ಅವರೆಲ್ಲರೂ ಧನಾಭಿಲಾಷಿಗಳೇ ಆಗಿದ್ದಾರೆ.
ನನ್ನ ಅಭಿಪ್ರಾಯದಲ್ಲಿ ಅರ್ಥದ ಪ್ರಾಧಾನ್ಯತೆಯನ್ನು
ಮನಗಾಣದಿರುವುದು ತಮೋಮಯ ಅಜ್ಞಾನವು. ಅರ್ಥದ

---

842 ಹ್ರೀನಿಷೇವಣಃ (ಗೀತಾ ಪ್ರೆಸ್/ಭಾರತ ದರ್ಶನ).

ಪ್ರಾಧಾನ್ಯತೆಯನ್ನು ಮನಗಾಣುವುದೇ ಪ್ರಕಾಶಮಯ ಪ್ರಜ್ಞಾನವು.

12161019a ಭೃತ್ಯಾನ್ಭೋಗ್ಯೈರ್ವಿಷೋ ದಂಡ್ಯೈರ್ಯೋ ಯೋಜಯತಿ ಸೋಽರ್ಥವಾನ್|
12161019c ಏತನ್ಮತಿಮತಾಂ ಶ್ರೇಷ್ಠ ಮತಂ ಮಮ ಯಥಾತಥಮ್|
12161019e ಅನಯೋಸ್ತು ನಿಬೋಧ ತ್ವಂ ವಚನಂ ವಾಕ್ಯಕಂಠಯೋಃ||

ಭೃತ್ಯರನ್ನು ಭೋಗೋಪಭೋಗಗಳಿಂದ ಸಲಹುವ ಮತ್ತು ಶತ್ರುಗಳನ್ನು ದಂಡಪ್ರಯೋಗದಿಂದ ತನ್ನ ಅಧೀನರನ್ನಾಗಿಸಿಕೊಳ್ಳುವವನೇ ಧನವಂತನು. ಮತಿಮತರಲ್ಲಿ ಶ್ರೇಷ್ಠ! ಇದು ನನ್ನ ಯಥಾವತ್ತಾದ ಅಭಿಪ್ರಾಯವಾಗಿದೆ. ಈಗ ಈ ಇಬ್ಬರು ತಮ್ಮಂದಿರು ಮಾತನಾಡಲು ಕುತೂಹಲವುಳ್ಳವರಾಗಿದ್ದಾರೆ. ಅವರ ಮಾತುಗಳು ಈಗಾಗಲೇ ಕಂಠದವರೆಗೆ ಬಂದುಬಿಟ್ಟಿವೆ. ಅವರು ಹೇಳುವ ಮಾತುಗಳನ್ನು ಕೇಳು.”

12161020a ತತೋ ಧರ್ಮಾರ್ಥಕುಶಲೌ ಮಾದ್ರೀಪುತ್ರಾವನಂತರಮ್|
12161020c ನಕುಲಃ ಸಹದೇವಶ್ಚ ವಾಕ್ಯಂ ಜಗದತುಃ ಪರಮ್||

ಅನಂತರ ಧರ್ಮಾರ್ಥಕುಶಲರಾದ ಮಾದ್ರೀಪುತ್ರರಾದ ನಕುಲ-ಸಹದೇವರು ಈ ಉತ್ತಮ ಮಾತುಗಳನ್ನಾಡಿದರುಃ

12161021a ಆಸೀನಶ್ಚ ಶಯಾನಶ್ಚ ವಿಚರನ್ನಪಿ ಚ ಸ್ಥಿತಃ|
12161021c ಅರ್ಥಯೋಗಂ ದೃಢಂ ಕುರ್ಯಾದ್ಯೋಗೈರುಚ್ಚಾವಚೈರಪಿ||

“ಮನುಷ್ಯನು ಕುಳಿತಿರುವಾಗಲೂ, ಮಲಗಿರುವಾಗಲೂ, ತಿರುಗಾಡುತ್ತಿರುವಾಗಲೂ, ನಿಂತಿರುವಾಗಲೂ – ಎಲ್ಲ ಸಮಯಗಳಲ್ಲಿಯೂ ಬಗೆ ಬಗೆಯ ಮಾರ್ಗಗಳಿಂದ ಧನಸಂಗ್ರಹವನ್ನೇ ದೃಢನಾಗಿ ಮಾಡುತ್ತಿರಬೇಕು.

12161022a ಅಸ್ಮಿಂಸ್ತು ವೈ ಸುಸಂವೃತ್ತೇ[843] ದುರ್ಲಭೇ ಪರಮಪ್ರಿಯೇ|
12161022c ಇಹ ಕಾಮಾನವಾಪ್ನೋತಿ ಪ್ರತ್ಯಕ್ಷಂ ನಾತ್ರ ಸಂಶಯಃ||

ಧನವು ಪರಮಪ್ರಿಯವಾಗಿದ್ದರೂ ಅತ್ಯಂತ ದುರ್ಲಭವು. ಅಂತಹ ಧನವು ಪ್ರಾಪ್ತವಾದರೆ ಮನುಷ್ಯನು ಇಲ್ಲಿ ಎಲ್ಲ ಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ. ಇದು ಪ್ರತ್ಯಕ್ಷವು. ಇದರಲ್ಲಿ ಯಾವ ಸಂಶಯವೂ ಇಲ್ಲ.

12161023a ಯೋಽರ್ಥೋ ಧರ್ಮೇಣ ಸಂಯುಕ್ತೋ ಧರ್ಮೋ ಯಶ್ಚಾರ್ಥಸಂಯುತಃ|
12161023c ಮಧ್ವಿವಾಮೃತಸಂಯುಕ್ತಂ ತಸ್ಮಾದೇತೌ ಮತಾವಿಹ||

ಧನವು ಧರ್ಮಯುಕ್ತವಾಗಿರಬೇಕು ಮತ್ತು ಧರ್ಮವೂ ಧನಯುಕ್ತವಾಗಿರಬೇಕು. ಇದೇ ಅಮೃತಯುಕ್ತವಾಗಿರುವುದು. ಆದುದರಿಂದ ಇವೆರಡೂ ಮುಖ್ಯವಾದವುಗಳು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

12161024a ಅನರ್ಥಸ್ಯ ನ ಕಾಮೋಽಸ್ತಿ ತಥಾರ್ಥೋಽಧರ್ಮಿಣಃ ಕುತಃ|
12161024c ತಸ್ಮಾದುದ್ವಿಜತೇ ಲೋಕೋ ಧರ್ಮಾರ್ಥಾದ್ಯೋ ಬಹಿಷ್ಕೃತಃ||

ನಿರ್ಧನನಿಗೆ ಯಾವ ಕಾಮನೆಗಳೂ ಪೂರ್ಣವಾಗುವುದಿಲ್ಲ. ಹಾಗೆಯೇ ಧರ್ಮಹೀನನಾದವನಿಗೆ ಅರ್ಥವಾದರೂ ಹೇಗೆ ಲಭಿಸೀತು? ಧರ್ಮಯುಕ್ತ ಐಶ್ವರ್ಯದಿಂದ ವಂಚಿತನಾದವನ ವಿಷಯದಲ್ಲಿ ಲೋಕವೇ ಉದ್ವಿಗ್ನವಾಗುತ್ತದೆ.

12161025a ತಸ್ಮಾದ್ಧರ್ಮಪ್ರಧಾನೇನ ಸಾಧ್ಯೋಽರ್ಥಃ ಸಂಯತಾತ್ಮನಾ|

---

[843] ವಿನಿರ್ವೃತ್ತೇ (ಗೀತಾ ಪ್ರೆಸ್/ಭಾರತ ದರ್ಶನ).

12161025c ವಿಶ್ವಸ್ತೇಷು ಚ ಭೂತೇಷು ಕಲ್ಪತೇ ಸರ್ವ ಏವ ಹಿ||

ಆದುದರಿಂದ ಮನುಷ್ಯನು ಸಂಯತಾತ್ಮನಾಗಿ ಧರ್ಮವನ್ನೇ
ಪ್ರಧಾನವಾಗಿಟ್ಟುಕೊಂಡು ಅರ್ಥಸಂಗ್ರಹಣೆಯನ್ನು ಮಾಡಬೇಕು.
ಧರ್ಮಪರಾಯಣನಲ್ಲಿ ಎಲ್ಲಪ್ರಾಣಿಗಳೂ ವಿಶ್ವಾಸದಿಂದಿರುತ್ತವೆ. ಈ
ವಿಶ್ವಾಸವನ್ನು ಗಳಿಸಿದ ನಂತರ ಎಲ್ಲ ಇಷ್ಟಾರ್ಥಗಳನ್ನೂ
ಸಾಧಿಸಿಕೊಳ್ಳಬಹುದು.

12161026a ಧರ್ಮಂ ಸಮಾಚರೇತ್ಪೂರ್ವಂ ತಥಾರ್ಥಂ ಧರ್ಮಸಂಯುತಮ್|
12161026c ತತಃ ಕಾಮಂ ಚರೇತ್ಪಶ್ಚಾತ್ಸಿದ್ಧಾರ್ಥಸ್ಯ ಹಿ ತತ್ಫಲಮ್||

ಮೊದಲು ಧರ್ಮದಿಂದ ನಡೆದುಕೊಳ್ಳಬೇಕು. ಅನಂತರ
ಧರ್ಮಸಂಯುತ ಧನವನ್ನು ಸಂಗ್ರಹಿಸಬೇಕು. ಅನಂತರ
ಕಾಮನೆಗಳನ್ನು ಪೂರೈಸಿಕೊಳ್ಳಬೇಕು. ಹೀಗೆ ತ್ರಿವರ್ಗವನ್ನೂ
ಸಂಗ್ರಹಿಸುವುದರಿಂದ ಮನುಷ್ಯನು ಸಿದ್ಧಾರ್ಥನಾಗುತ್ತಾನೆ.”

12161027a ವಿರೇಮತುಸ್ತು ತದ್ವಾಕ್ಯಮುಕ್ತ್ವಾ ತಾವಶ್ವಿನೋಃ ಸುತೌ|
12161027c ಭೀಮಸೇನಸ್ತದಾ ವಾಕ್ಯಮಿದಂ ವಕ್ತುಂ ಪ್ರಚಕ್ರಮೇ||

ಅಶ್ವಿನೀದೇವತೆಗಳ ಮಕ್ಕಳು ಈ ಮಾತನ್ನಾಡಿ ವಿರಮಿಸಿದ ನಂತರ
ಭೀಮಸೇನನು ಈ ಮಾತನ್ನಾಡಲು ಪ್ರಾರಂಭಿಸಿದನು:

12161028a ನಾಕಾಮಃ ಕಾಮಯತ್ಯರ್ಥಂ ನಾಕಾಮೋ ಧರ್ಮಮಿಚ್ಛತಿ|
12161028c ನಾಕಾಮಃ ಕಾಮಯಾನೋಽಸ್ತಿ ತಸ್ಮಾತ್ಕಾಮೋ ವಿಶಿಷ್ಯತೇ||

“ಕಾಮವಿಲ್ಲದೇ ಇರುವವನು ಅರ್ಥವನ್ನೂ ಬಯಸುವುದಿಲ್ಲ.
ಧರ್ಮವನ್ನೂ ಇಚ್ಛಿಸುವುದಿಲ್ಲ. ಯಾವ ಕಾಮನೆಗಳನ್ನೂ

ಅಪೇಕ್ಷಿಸುವುದಿಲ್ಲ. ಆದುದರಿಂದ ಕಾಮವೇ ಧರ್ಮಾರ್ಥಗಳಿಗಿಂತಲೂ ಶ್ರೇಷ್ಠವಾದುದು.

12161029a ಕಾಮೇನ ಯುಕ್ತಾ ಋಷಯಸ್ತಪಸ್ಯೇವ ಸಮಾಹಿತಾಃ|
12161029c ಪಲಾಶಫಲಮೂಲಾಶಾ ವಾಯುಭಕ್ಷಾಃ ಸುಸಂಯತಾಃ||

ಕಾಮಯುಕ್ತರಾಗಿಯೇ ಋಷಿಗಳು ಸಮಾಹಿತರಾಗಿದ್ದು ತಪಸ್ಸನ್ನು ತಪಿಸುತ್ತಾರೆ. ಪಲಾಶ-ಫಲ-ಮೂಲಗಳನ್ನು ತಿಂದುಕೊಂಡು ವಾಯುಭಕ್ಷಿಗಳಾಗಿ ಸುಸಂಯತರಾಗಿರುತ್ತಾರೆ.

12161030a ವೇದೋಪವಾದೇಷ್ವಪರೇ[844] ಯುಕ್ತಾಃ ಸ್ವಾಧ್ಯಾಯಪಾರಗಾಃ|
12161030c ಶ್ರಾದ್ಧಯಜ್ಞಕ್ರಿಯಾಯಾಂ ಚ ತಥಾ ದಾನಪ್ರತಿಗ್ರಹೇ||

ಕಾಮನೆಯಿಂದಲೇ ಇತರರು ಸ್ವಾಧ್ಯಾಯಮಾಡಿ ವೇದೋಪವೇದಗಳ ಪಾರಂಗತರಾಗುತ್ತಾರೆ. ಶ್ರಾದ್ಧ-ಯಜ್ಞಕ್ರಿಯೆಗಳನ್ನೂ ಮಾಡುತ್ತಾರೆ ಮತ್ತು ದಾನ-ಪ್ರತಿಗ್ರಹಗಳನ್ನು ಕೈಗೊಳ್ಳುತ್ತಾರೆ.

12161031a ವಣಿಜಃ ಕರ್ಷಕಾ ಗೋಪಾಃ ಕಾರವಃ ಶಿಲ್ಪಿನಸ್ತಥಾ|
12161031c ದೈವಕರ್ಮಕೃತಶ್ಚೈವ ಯುಕ್ತಾಃ ಕಾಮೇನ ಕರ್ಮಸು||

ಕಾಮಯುಕ್ತರಾಗಿಯೇ ವರ್ತಕರು, ಕೃಷಿಕರು, ಗೋಪಾಲಕರು, ಕಾರ್ಮಿಕರು, ಶಿಲ್ಪಿಗಳು, ದೈವಕರ್ಮವನ್ನು ಮಾಡುವವರು ಎಲ್ಲರೂ ತಮ್ಮ ತಮ್ಮ ಕರ್ಮಗಳಲ್ಲಿ ತೊಡಗಿರುತ್ತಾರೆ.

12161032a ಸಮುದ್ರಂ ಚಾವಿಶಂತ್ಯನ್ಯೇ ನರಾಃ ಕಾಮೇನ ಸಂಯುತಾಃ|
12161032c ಕಾಮೋ ಹಿ ವಿವಿಧಾಕಾರಃ ಸರ್ವಂ ಕಾಮೇನ ಸಂತತಮ್||

---

[844] ವೇದೋಪವೇದೇಷ್ವಪರೇ (ಗೀತಾ ಪ್ರೆಸ್/ಭಾರತ ದರ್ಶನ).

ಕಾಮಯುಕ್ತರಾದ ಅನ್ಯ ಮನುಷ್ಯರು ಸಮುದ್ರದಲ್ಲಿಯೂ
ಮುಳುಗುತ್ತಾರೆ. ಕಾಮವು ವಿವಿಧಾಕಾರದಲ್ಲಿದೆ. ಎಲ್ಲವೂ
ಕಾಮದಿಂದಲೇ ವ್ಯಾಪ್ತವಾಗಿದೆ.

12161033a ನಾಸ್ತಿ ನಾಸೀನ್ನಾಭವಿಷ್ಯದ್ಭೂತಂ ಕಾಮಾತ್ಮಕಾತ್ಪರಮ್|
12161033c ಏತತ್ಸಾರಂ ಮಹಾರಾಜ ಧರ್ಮಾರ್ಥಾವತ್ರ ಸಂಶ್ರಿತೌ||

ಮಹಾರಾಜ! ಕಾಮನೆಯಿಲ್ಲದ ಪ್ರಾಣಿಯು ಈ ಪ್ರಪಂಚದಲ್ಲಿ ಈಗಲೂ
ಇಲ್ಲ, ಹಿಂದೆಯೂ ಇರಲಿಲ್ಲ ಮತ್ತು ಮುಂದೆಯೂ ಇರುವುದಿಲ್ಲ.
ತ್ರಿವರ್ಗದಲ್ಲಿ ಕಾಮವೇ ಸಾರವು. ಧರ್ಮಾರ್ಥಗಳಿರಡೂ ಕಾಮದಲ್ಲಿ
ಅಡಕವಾಗಿವೆ.

12161034a ನವನೀತಂ ಯಥಾ ದಧ್ನಸ್ತಥಾ ಕಾಮೋಽರ್ಥಧರ್ಮತಃ|
12161034c ಶ್ರೇಯಸ್ತೈಲಂ ಚ ಪಿಣ್ಯಾಕಾದ್ಧೃತಂ ಶ್ರೇಯ ಉದಶ್ವಿತಃ||
12161035a ಶ್ರೇಯಃ ಪುಷ್ಪಫಲಂ ಕಾಷ್ಠಾತ್ಕಾಮೋ ಧರ್ಮಾರ್ಥಯೋರ್ವರಃ|
12161035c ಪುಷ್ಪತೋ ಮಧ್ವಿವ ರಸಃ ಕಾಮಾತ್ಸಂಜಾಯತೇ ಸುಖಮ್[845]||

ಬೆಣ್ಣೆಯು ಹೇಗೆ ಮೊಸರಿನ ಸಾರವೋ ಹಾಗೆ ಕಾಮವು
ಧರ್ಮಾರ್ಥಗಳ ಸಾರವು. ಎಣ್ಣೆಯು ಹೇಗೆ ಹಿಂಡಿಗಿಂತ ಶ್ರೇಷ್ಠವೋ,
ತುಪ್ಪವು ಹೇಗೆ ಮಜ್ಜಿಗೆಗಿಂತ ಶ್ರೇಷ್ಠವೋ, ಕಟ್ಟಿಗೆಗಳಿಗಿಂತಲೂ ಫಲ-
ಪುಷ್ಪಗಳು ಹೇಗೆ ಶ್ರೇಷ್ಠವೋ ಹಾಗೆ ಕಾಮವು

---

[845] ಪುಷ್ಪತೋ ಮಧ್ವಿವ ರಸಃ ಕಾಮ ಆಭ್ಯಾಂ ತಥಾ ಸ್ಮೃತಃ| ಕಾಮೋ ಧರ್ಮಾರ್ಥಯೋರ್ಯೋನಿಃ ಕಾಮಶ್ಚಾಥ ತದಾತ್ಮಕಃ|| (ಗೀತಾ ಪ್ರೆಸ್/ಭಾರತ ದರ್ಶನ).

ಧರ್ಮಾರ್ಥಗಳಿಗಿಂತಲೂ ಶ್ರೇಷ್ಠವು. ಪುಷ್ಪದಲ್ಲಿರುವ ರಸದಿಂದ ಜೇನುತುಪ್ಪವು ಹೇಗೆ ಉಂಟಾಗುತ್ತದೆಯೋ ಹಾಗೆ ಕಾಮದಿಂದ ಸುಖವುಂಟಾಗುತ್ತದೆ.

[846]12161036a ಸುಚಾರುವೇಷಾಭಿರಲಂಕೃತಾಭಿರ್
ಮದೋತ್ಕಟಾಭಿಃ ಪ್ರಿಯವಾದಿನೀಭಿಃ|
12161036c ರಮಸ್ವ ಯೋಷಾಭಿರುಪೇತ್ಯ ಕಾಮಂ
ಕಾಮೋ ಹಿ ರಾಜಂಸ್ತರಸಾಭಿಪಾತೀ||

ರಾಜನ್! ಕಾಮವನ್ನೇ ಆಶ್ರಯಿಸಿ ನೀನು ಸುಂದರ ವೇಷ-ಭೂಷಣಗಳನ್ನು ಧರಿಸು. ಅಲಂಕೃತರಾದ ಸುಂದರ ಪ್ರಿಯವಾದಿನೀ ಮದೋತ್ಕಟ ಯುವತಿಯರೊಡನೆ ಯಥೇಚ್ಛವಾಗಿ ವಿಹರಿಸು. ಧರ್ಮಾರ್ಥಗಳಿಗಿಂತಲೂ ಕಾಮವೇ ನಮ್ಮ ಪರಮಶ್ರೇಷ್ಠ ಪುರುಷಾರ್ಥವಾಗಲಿ.

12161037a ಬುದ್ಧಿರ್ಮಮೈಷಾ ಪರಿಷತ್ ಸ್ಥಿತಸ್ಯ
ಮಾ ಭೂದ್ವಿಚಾರಸ್ತವ ಧರ್ಮಪುತ್ರ|

---

[846] ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ನಾಕಾಮತೋ ಬ್ರಾಹ್ಮಣಾಃ ಸ್ವನ್ನಮರ್ಥಾನ್ನಾಕಮತೋ ದದತಿ ಬ್ರಾಹ್ಮಣೇಭ್ಯಃ| ನಾಕಾಮತೋ ವಿವಿಧಾ ಲೋಕಚೇಷ್ಟಾ ತಸ್ಮಾತ್ಕಾಮಃ ಪ್ರಾಕ್ತ್ರಿವರ್ಗಸ್ಯ ದೃಷ್ಟಃ|| ಅರ್ಥಾತ್: ಕಾಮನೆಯಿಲ್ಲದೇ ಬ್ರಾಹ್ಮಣರು ಒಳ್ಳೆಯ ಭೋಜನವನ್ನು ಮಾಡುವುದಿಲ್ಲ. ಕಾಮನೆಯಿಲ್ಲದೇ ಯಾರೂ ಬ್ರಾಹ್ಮಣರಿಗೆ ದಾನಮಾಡುವುದಿಲ್ಲ. ಕಾಮನೆಯಿಲ್ಲದೇ ವಿವಿಧ ಲೋಕವ್ಯವಹಾರಗಳೂ ನಡೆಯುವುದಿಲ್ಲ. ಆದುದರಿಂದ ತ್ರಿವರ್ಗದಲ್ಲಿ ಕಾಮಕ್ಕೇ ಅಗ್ರಸ್ಥಾನವನ್ನು ಕೊಟ್ಟಿರುವುದು ಕಾಣುತ್ತದೆ (ಗೀತಾ ಪ್ರೆಸ್/ಭಾರತ ದರ್ಶನ).

12161037c ಸ್ಯಾತ್ಸಂಹಿತಂ ಸದ್ಭಿರಫಲ್ಗುಸಾರಂ
ಸಮೇತ್ಯ ವಾಕ್ಯಂ ಪರಮಾನೃಶಂಸ್ಯಮ್‌॥

ಧರ್ಮಪುತ್ರ! ಬಹುವಾಗಿ ಆಲೋಚಿಸಿ ನಾನು ಈ ನಿಶ್ಚಯಕ್ಕೆ ಬಂದಿದ್ದೇನೆ. ನೀನು ಈ ವಿಷಯದಲ್ಲಿ ಪುನಃ ವಿಚಾರಮಾಡಬೇಕಾದ ಅವಶ್ಯಕತೆಯೇ ಇಲ್ಲ. ನನ್ನ ಈ ಮಾತು ಉತ್ತಮವಾದುದು, ಕೋಮಲವಾದುದು, ಶ್ರೇಷ್ಠವಾದುದು, ಸತ್ತ್ವಯುಕ್ತವಾದುದು, ಸಾರಯುಕ್ತವಾದುದು, ನಿಷ್ಠುರತೆಯಿಂದ ವಿಹೀನವಾದುದು. ಶ್ರೇಷ್ಠಪುರುಷರೂ ಅಂಗೀಕರಿಸಬಹುದಾದುದು.

12161038a ಧರ್ಮಾರ್ಥಕಾಮಾಃ ಸಮಮೇವ ಸೇವ್ಯಾ
ಯಸ್ತ್ವೇಕಸೇವೀ ಸ ನರೋ ಜಘನ್ಯಃ|
12161038c ದ್ವಯೋಸ್ತು ದಕ್ಷಂ ಪ್ರವದಂತಿ ಮಧ್ಯಂ
ಸ ಉತ್ತಮೋ ಯೋ ನಿರತಸ್ತ್ರಿವರ್ಗೇ‌॥

ಧರ್ಮ-ಅರ್ಥ-ಕಾಮಗಳನ್ನು ಸಮಾನವಾಗಿಯೇ ಆಚರಿಸಬೇಕು. ಒಂದನ್ನೇ ಸೇವಿಸುವ ಮನುಷ್ಯನು ಅಧಮನು. ಎರಡು ಪುರುಷಾರ್ಥಗಳಲ್ಲಿ ಆಸಕ್ತನಾದವನು ಮಧ್ಯಮನು[847]. ಮೂರು ಪುರುಷಾರ್ಥಗಳಲ್ಲಿಯೂ ಸಮಾನ ಆಸಕ್ತಿಯಿರುವವನು ಉತ್ತಮನು.”

12161039a ಪ್ರಾಜ್ಞಃ ಸುಹೃಚ್ಚಂದನಸಾರಲಿಪ್ತೋ
ವಿಚಿತ್ರಮಾಲ್ಯಾಭರಣೈರುಪೇತಃ|

---

[847] ಧರ್ಮಾರ್ಥಗಳಲ್ಲಿ ಸಾಮರ್ಥ್ಯವು ಅರ್ಥಕ್ಕೆ ಕಾರಣವಾದುದರಿಂದ ಅದು ಮಧ್ಯಮವು. ಅರ್ಥಕ್ಕಿಂತಲೂ ಕಾಮವು ಶ್ರೇಷ್ಠ ಎನ್ನುವುದು ಸಿದ್ಧವಾಗಿಯೇ ಇದೆ.

12161039c ತತೋ ವಚಃ ಸಂಗ್ರಹವಿಗ್ರಹೇಣ
ಪ್ರೋಕ್ತ್ವಾ ಯವೀಯಾನ್ವಿರರಾಮ ಭೀಮಃ||

ಚಂದನಸಾರಲೇಪಿತನಾಗಿದ್ದ ಪ್ರಾಜ್ಞ ಸುಹೃದ ವಿಚಿತ್ರ
ಮಾಲ್ಯಾಭರಣಭೂಷಿತ ಭೀಮನು ವೀರ ಸೋದರರೊಡನೆ
ಧರ್ಮಾರ್ಥಕಾಮಗಳ ವಿಷಯವನ್ನು ಸಂಕ್ಷೇಪವಾಗಿಯೂ
ವಿಸ್ತಾರವಾಗಿಯೂ ಹೇಳಿ ವಿರಮಿಸಿದನು.

12161040a ತತೋ ಮುಹೂರ್ತಾದಥ ಧರ್ಮರಾಜೋ
ವಾಕ್ಯಾನಿ ತೇಷಾಮನುಚಿಂತ್ಯ ಸಮ್ಯಕ್|
12161040c ಉವಾಚ ವಾಚಾವಿತಥಂ ಸ್ಮಯನ್ ವೈ
ಬಹುಶ್ರುತೋ ಧರ್ಮಭೃತಾಂ ವರಿಷ್ಠಃ||

ಅನಂತರ ಮುಹೂರ್ತಮಾತ್ರದಲ್ಲಿ ಬಹುಶ್ರುತ ಧರ್ಮಭೃತರಲ್ಲಿ
ವರಿಷ್ಠ ಧರ್ಮರಾಜನು ಅವರ ಮಾತುಗಳನ್ನು ಚೆನ್ನಾಗಿ ಆಲೋಚಿಸಿ
ಮುಗುಳ್ನಗುತ್ತಾ ಯಥಾರ್ಥವಾದ ಈ ಮಾತುಗಳನ್ನಾಡಿದನು:

12161041a ನಿಃಸಂಶಯಂ ನಿಶ್ಚಿತಧರ್ಮಶಾಸ್ತ್ರಾಃ
ಸರ್ವೇ ಭವಂತೋ ವಿದಿತಪ್ರಮಾಣಾಃ|
12161041c ವಿಜ್ಞಾತುಕಾಮಸ್ಯ ಮಮೇಹ ವಾಕ್ಯಮ್
ಉಕ್ತಂ ಯದ್ವೈ ನೈಷ್ಠಿಕಂ ತಚ್ಚ್ರುತಂ ಮೇ|
12161041e ಇಹ ತ್ವವಶ್ಯಂ ಗದತೋ ಮಮಾಪಿ
ವಾಕ್ಯಂ ನಿಬೋಧಧ್ವಮನನ್ಯಭಾವಾಃ||

ನೀವೆಲ್ಲರೂ ನಿಃಸಂಶಯವಾಗಿಯೂ ಧರ್ಮಶಾಸ್ತ್ರಗಳಲ್ಲಿ
ನಿಶ್ಚಿತವಾಗಿರುವ ಪ್ರಮಾಣಗಳಿಂದ ತಿಳಿಯಬಹುದಾದ ವಿಷಯಗಳನ್ನೇ

ಹೇಳಿದ್ದೀರಿ. ಇದರ ಕುರಿತು ನಿಮ್ಮ ನಿಶ್ಚಿತ ಅಭಿಪ್ರಾಯಗಳನ್ನು ತಿಳಿಯಬೇಕೆಂದಿದ್ದೆ. ಅದರಂತೆ ನೀವೆಲ್ಲರೂ ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಖಚಿತಪಡಿಸಿರುವಿರಿ. ಅವೆಲ್ಲವನ್ನೂ ನಾನು ಕೇಳಿದೆ. ನಾನು ಇದೇ ವಿಷಯದ ಕುರಿತು ಕೆಲವು ಮಾತುಗಳನ್ನು ಆಡುತ್ತೇನೆ. ನೀವೆಲ್ಲರೂ ಅನನ್ಯಚಿತ್ತರಾಗಿ ಕೇಳಿರಿ.

12161042a ಯೋ ವೈ ನ ಪಾಪೇ ನಿರತೋ ನ ಪುಣ್ಯೇ
ನಾರ್ಥೇ ನ ಧರ್ಮೇ ಮನುಜೋ ನ ಕಾಮೇ|
12161042c ವಿಮುಕ್ತದೋಷಃ ಸಮಲೋಷ್ಟಕಾಂಚನಃ
ಸ ಮುಚ್ಯತೇ ದುಃಖಿಸುಖಾರ್ಥಸಿದ್ಧೇಃ||

ಪಾಪ ಅಥವಾ ಪುಣ್ಯಕರ್ಮಗಳಲ್ಲಿ ತೊಡಗದೇ ಇರುವ, ಧರ್ಮ-ಅರ್ಥ-ಕಾಮಗಳಲ್ಲಿ ಆಸಕ್ತನಾಗಿರದ ಮನುಷ್ಯನು ದೋಷವಿಮುಕ್ತನಾಗುತ್ತಾನೆ. ಲೋಷ್ಟ-ಕಾಂಚನಗಳನ್ನು ಸಮನಾಗಿ ಕಾಣುವವನು ಸುಖ-ದುಃಖದಾಯಕವಾದ ಅರ್ಥಸಿದ್ಧಿಯಿಂದಲೂ ಮುಕ್ತನಾಗುತ್ತಾನೆ.

12161043a ಭೂತಾನಿ ಜಾತೀಮರಣಾನ್ವಿತಾನಿ
ಜರಾವಿಕಾರೈಶ್ಚ ಸಮನ್ವಿತಾನಿ|
12161043c ಭೂಯಶ್ಚ ತೈಸ್ತೈಃ ಪ್ರತಿಬೋಧಿತಾನಿ
ಮೋಕ್ಷಂ ಪ್ರಶಂಸಂತಿ ನ ತಂ ಚ ವಿದ್ಮಃ||

ಪೂರ್ವಜನ್ಮಗಳ ಸ್ಮರಣೆಗಳನ್ನಿಟ್ಟುಕೊಂಡಿರುವ, ವೃದ್ಧಾಪ್ಯ-ವಿಕಾರಗಳಿಂದ ಕೂಡಿರುವ, ಸಾಂಸಾರಿಕ ದುಃಖಿಗಳಿಂದ ಪೀಡಿಸಲ್ಪಟ್ಟು ಸದಾ ಅವುಗಳಿಂದ ಎಚ್ಚರಗೊಳಿಸಲ್ಪಡುತ್ತಿರುವವರು ಮೋಕ್ಷವನ್ನೇ

ಪ್ರಶಂಸಿಸುತ್ತಾರೆ. ಆದರೆ ಮೋಕ್ಷವೆನ್ನುವುದು ನಮಗೂ ತಿಳಿಯದಾಗಿದೆ.

12161044a ಸ್ನೇಹೇ ನಬದ್ಧಸ್ಯ ನ ಸಂತಿ ತಾನೀತ್ಯ್[848]
ಏವಂ ಸ್ವಯಂಭೂರ್ಭಗವಾನುವಾಚ|
12161044c ಬುಧಾಶ್ಚ ನಿರ್ವಾಣಪರಾ ವದಂತಿ
ತಸ್ಮಾನ್ನ ಕುರ್ಯಾತ್ ಪ್ರಿಯಮಪ್ರಿಯಂ ಚ||

ಸ್ನೇಹಯುಕ್ತನಾಗಿರುವವನಿಗೆ ಮುಕ್ತಿಯಿಲ್ಲ ಎಂದು ಸ್ವಯಂಭೂ ಭಗವಂತನೇ ಹೇಳಿದ್ದಾನೆ. ಸ್ನೇಹಶೂನ್ಯರಾದ ಜ್ಞಾನಿಗಳು ಮೋಕ್ಷವನ್ನು ಹೊಂದುತ್ತಾರೆ. ಆದುದರಿಂದ ಮೋಕ್ಷಾರ್ಥಿಗಳು ಯಾರಿಗೂ ಪ್ರಿಯವನ್ನಾಗಲೀ ಅಪ್ರಿಯವನ್ನಾಗಲೀ ಮಾಡಬಾರದು.

12161045a ಏತತ್ ಪ್ರಧಾನಂ ನ ತು ಕಾಮಕಾರೋ
ಯಥಾ ನಿಯುಕ್ತೋಽಸ್ಮಿ ತಥಾ ಚರಾಮಿ|
12161045c ಭೂತಾನಿ ಸರ್ವಾಣಿ ವಿಧಿರ್ನಿಯುಂಕ್ತೇ
ವಿಧಿರ್ಬಲೀಯಾನಿತಿ ವಿತ್ತ ಸರ್ವೇ||

ಈ ವಿಚಾರವೇ ಮೋಕ್ಷಪ್ರಾಪ್ತಿಗೆ ಪ್ರಧಾನ ಉಪಾಯವು. ಪ್ರಾಣಿಯು ತನ್ನ ಇಚ್ಛೆಯಂತೆಯೇ ನಡೆಯಲು ಸಾಧ್ಯವಿಲ್ಲ. ಬ್ರಹ್ಮನು ನನ್ನನ್ನು ಯಾವ ಕಾರ್ಯದಲ್ಲಿ ನಿಯೋಜಿಸಿದ್ದಾನೆಯೋ ಅದೇ ಕಾರ್ಯವನ್ನು ನಾನು ಶ್ರದ್ಧೆಯಿಂದ ಮಾಡುತ್ತೇನೆ. ವಿಧಿಯು ಎಲ್ಲರನ್ನೂ ಭಿನ್ನ-ಭಿನ್ನ ಕಾರ್ಯಗಳಲ್ಲಿ ನಿಯೋಜಿಸಿರುತ್ತಾನೆ. ಆದುದರಿಂದ ನೀವೆಲ್ಲರೂ ವಿಧಿಯೇ ಪ್ರಬಲನೆಂದು ತಿಳಿಯಿರಿ.

---

[848] ಸ್ನೇಹೇನ ಯುಕ್ತಸ್ಯ ನ ಚಾಸ್ತಿ ಮುಕ್ತಿ (ಗೀತಾ ಪ್ರೆಸ್/ಭಾರತ ದರ್ಶನ).

12161046a ನ ಕರ್ಮಣಾಪ್ನೋತ್ಯನವಾಪ್ಯಮರ್ಥಂ
ಯದ್ಭಾವಿ ಸರ್ವಂ ಭವತೀತಿ ವಿತ್ತ|
12161046c ತ್ರಿವರ್ಗಹೀನೋಽಪಿ ಹಿ ವಿಂದತೇಽರ್ಥಂ
ತಸ್ಮಾದಿದಂ ಲೋಕಹಿತಾಯ ಗುಹ್ಯಮ್||

ಮನುಷ್ಯನು ಎಷ್ಟೇ ಮತ್ತು ಯಾವುದೇ ಕಾರ್ಯವನ್ನು ಮಾಡಿದರೂ ತಾನು ಯಾವುದನ್ನು ಎಷ್ಟು ಪ್ರಮಾಣದಲ್ಲಿ ಪಡೆದುಕೊಳ್ಳಬೇಕು ಎಂದು ವಿಧಿಯು ನಿಶ್ಚಯಿಸಿರುತ್ತದೆಯೋ ಅಷ್ಟನ್ನೇ ಪಡೆದುಕೊಳ್ಳಬಹುದು. ಅದಕ್ಕಿಂತಲೇ ಹೆಚ್ಚು ಅಥವಾ ಕಡಿಮೆ ಪಡೆದುಕೊಳ್ಳಲಾರನು. ವಿಧಿನಿಯಮದಂತೆ ಯಾವುದು ಹೇಗೆ ಆಗಬೇಕೆಂದಿರುವುದೋ ಅದು ಹಾಗೆಯೇ ಆಗುವುದೆನ್ನುವುದನ್ನು ನೀವೆಲ್ಲರೂ ತಿಳಿಯಿರಿ. ಧರ್ಮಾರ್ಥಕಾಮಗಳಲ್ಲಿ ಯಾವುದನ್ನೂ ಆಶ್ರಯಿಸದೇ ಇರುವವನೂ ಕೂಡ ವಿಧಿಯ ಅನುಗ್ರಹವಿದ್ದರೆ ಅರ್ಥವನ್ನು ಪಡೆದುಕೊಳ್ಳಬಲ್ಲನು. ಆದುದರಿಂದ ಅತ್ಯಂತ ನಿಗೂಢವಾದ ಮೋಕ್ಷಮಾರ್ಗವನ್ನು ಲೋಕಹಿತಕ್ಕಾಗಿ ಆಶ್ರಯಿಸಬೇಕು.”

12161047a ತತಸ್ತದಗ್ರ್ಯಂ ವಚನಂ ಮನೋನುಗಂ
ಸಮಸ್ತಮಾಜ್ಞಾಯ ತತೋಽತಿಹೇತುಮತ್|
12161047c ತದಾ ಪ್ರಣೇದುಶ್ಚ ಜಹರ್ಷಿರೇ ಚ ತೇ
ಕುರುಪ್ರವೀರಾಯ ಚ ಚಕ್ರುರಂಜಲೀನ್||

ಆ ಉತ್ತಮವಾದ ಮನಸ್ಸಿಗೆ ಹಿಡಿಸುವಂತಹ ಯುಕ್ತಿಯುಕ್ತವಾದ ಮಾತನ್ನು ಕೇಳಿ ಅದರ ಸಂಪೂರ್ಣತತ್ತ್ವವನ್ನು ತಿಳಿದುಕೊಂಡ ಭೀಮಾದಿಗಳು ಹರ್ಷೋದ್ಗಾರಮಾಡುತ್ತಾ ಬದ್ಧಾಂಜಲಿಗಳಾಗಿ ಕುರುಪ್ರವೀರನನ್ನು ಪ್ರಣಮಿಸಿದರು.

12161048a ಸುಚಾರುವರ್ಣಾಕ್ಷರಶಬ್ದಭೂಷಿತಾಂ
ಮನೋನುಗಾಂ ನಿರ್ಧುತವಾಕ್ಯಕಂಟಕಾಮ್|
12161048c ನಿಶಮ್ಯ ತಾಂ ಪಾರ್ಥಿವ ಪಾರ್ಥಭಾಷಿತಾಂ
ಗಿರಂ ನರೇಂದ್ರಾಃ ಪ್ರಶಶಂಸುರೇವ ತೇ|
12161048e ಪುನಶ್ಚ ಪಪ್ರಚ್ಚ ಸರಿದ್ವರಾಸುತಂ
ತತಃ ಪರಂ ಧರ್ಮಮಹೀನಸತ್ತ್ವಃ||

ಯುಧಿಷ್ಠಿರನಾಡಿದ ಆ ಮನೋಜ್ಞವಾದ, ಸ್ವರ-ವ್ಯಂಜನಗಳಿಂದ ಅಲಂಕೃತವಾಗಿದ್ದ, ಮನಸ್ಸನ್ನು ಮುಟ್ಟುವಂತಹ ದೋಷರಹಿತ ಮಾತನ್ನು ಕೇಳಿ ಅಲ್ಲಿ ನೆರೆದಿದ್ದ ರಾಜರೆಲ್ಲರೂ ಪ್ರಶಂಸಿಸಿದರು. ಅನಂತರ ಪುನಃ ಯುಧಿಷ್ಠಿರನು ಧರ್ಮರಹಸ್ಯಗಳನ್ನು ತಿಳಿಯಲು ಗಂಗಾಪುತ್ರ ಮಹಾಸತ್ತ್ವಶಾಲೀ ಭೀಷ್ಮನನ್ನು ಪ್ರಶ್ನಿಸಿದನು.

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಷಡ್ಜಗೀತಾಯಾಂ ಏಕಷಷ್ಟ್ಯಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಷಡ್ಜಗೀತಾ ಎನ್ನುವ ನೂರಾಅರವತ್ತೊಂದನೇ ಅಧ್ಯಾಯವು.

೧೬೨

ಕೃತಘ್ನಗೌತಮೋಪಾಖ್ಯಾನ

ಮಿತ್ರನಾಗಲು ಯೋಗ್ಯನಾದ ಪುರುಷನ ಲಕ್ಷಣಗಳು ಮತ್ತು ಕೃತಘ್ನ ಗೌತಮನ ಕಥೆಯ ಪ್ರಾರಂಭ (1-49).

12162001 ಯುಧಿಷ್ಠಿರ ಉವಾಚ |

12162001a ಪಿತಾಮಹ ಮಹಾಪ್ರಾಜ್ಞ ಕುರೂಣಾಂ ಕೀರ್ತಿವರ್ಧನ|
12162001c ಪ್ರಶ್ನಂ ಕಂ ಚಿತ್ಪ್ರವಕ್ಷ್ಯಾಮಿ ತನ್ಮೇ ವ್ಯಾಖ್ಯಾತುಮರ್ಹಸಿ||

ಯುಧಿಷ್ಠಿರನು ಹೇಳಿದನು: "ಪಿತಾಮಹ! ಮಹಾಪ್ರಾಜ್ಞ! ಕುರುಗಳ ಕೀರ್ತಿವರ್ಧನ! ನಾನು ಇನ್ನೂ ಕೆಲವು ಪ್ರಶ್ನೆಗಳನ್ನಿಡುತ್ತೇನೆ. ಅವುಗಳ ಕುರಿತು ಹೇಳಬೇಕು.

12162002a ಕೀದೃಶಾ ಮಾನವಾಃ ಸೌಮ್ಯಾಃ ಕೈಃ ಪ್ರೀತಿಃ ಪರಮಾ ಭವೇತ್|
12162002c ಆಯತ್ಯಾಂ ಚ ತದಾತ್ವೇ ಚ ಕೇ ಕ್ಷಮಾಸ್ತಾನ್ವದಸ್ವ ಮೇ||

ಸೌಮ್ಯ ಸ್ವಭಾವದ ಮನುಷ್ಯರು ಹೇಗಿರುತ್ತಾರೆ? ಯಾರೊಂದಿಗೆ ಪರಮ ಪ್ರೀತಿಯಿಂದಿರಬೇಕು? ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ಎಂಥಹ ಮನುಷ್ಯರು ಉಪಕಾರ ಮಾಡಲು ಸಮರ್ಥರಾಗಿರುತ್ತಾರೆ? ಅದರ ಕುರಿತು ನನಗೆ ಹೇಳು.

12162003a ನ ಹಿ ತತ್ರ ಧನಂ ಸ್ಫೀತಂ ನ ಚ ಸಂಬಂಧಿಬಾಂಧವಾಃ|
12162003c ತಿಷ್ಠಂತಿ ಯತ್ರ ಸುಹೃದಸ್ತಿಷ್ಠಂತೀತಿ ಮತಿರ್ಮಮ||

ಸುಹೃದರ ಸ್ಥಾನವನ್ನು ಸಮೃದ್ಧ ಧನವಾಗಲೀ ಮತ್ತು ಸಂಬಂಧಿ ಬಾಂಧವರಾಗಲೀ ತುಂಬಲಾರರು ಎಂದು ನನ್ನ ಅಭಿಪ್ರಾಯ.

12162004a ದುರ್ಲಭೋ ಹಿ ಸುಹೃಚ್ಛ್ರೋತಾ ದುರ್ಲಭಶ್ಚ ಹಿತಃ ಸುಹೃತ್|
12162004c ಏತದ್ಧರ್ಮಭೃತಾಂ ಶ್ರೇಷ್ಠ ಸರ್ವಂ ವ್ಯಾಖ್ಯಾತುಮರ್ಹಸಿ||

ಶಾಸ್ತ್ರಗಳನ್ನು ತಿಳಿದಿರುವ ಸ್ನೇಹಿತನು ದುರ್ಲಭನು ಮತ್ತು ಹಿತಕಾರೀ ಸ್ನೇಹಿತನೂ ದುರ್ಲಭನೇ. ಧರ್ಮಭೃತರಲ್ಲಿ ಶ್ರೇಷ್ಠ! ಈ ಎಲ್ಲ

ಪ್ರಶ್ನೆಗಳಿಗೂ ವ್ಯಾಖ್ಯಾನಮಾಡಬೇಕು.”

12162005 ಭೀಷ್ಮ ಉವಾಚ |
12162005a ಸಂಧೇಯಾನ್ಪುರುಷಾನ್ರಾಜನ್ನಸಂಧೇಯಾಂಶ್ಚ ತತ್ತ್ವತಃ|
12162005c ವದತೋ ಮೇ ನಿಬೋಧ ತ್ವಂ ನಿಖಿಲೇನ ಯುಧಿಷ್ಠಿರ||

ಭೀಷ್ಮನು ಹೇಳಿದನು: “ರಾಜನ್! ಯುಧಿಷ್ಠಿರ! ಯಾರೊಡನೆ ಮೈತ್ರಿಯನ್ನು ಮಾಡಿಕೊಳ್ಳಬೇಕು ಮತ್ತು ಯಾರನ್ನು ಮಿತ್ರನನ್ನಾಗಿ ಮಾಡಿಕೊಳ್ಳಬಾರದು ಇದರ ಕುರಿತು ತತ್ತ್ವತಃ ಹೇಳುತ್ತೇನೆ. ಅದನ್ನು ಸಂಪೂರ್ಣವಾಗಿ ಮನವಿಟ್ಟು ಕೇಳು.

12162006a ಲುಬ್ಧಃ ಕ್ರೂರಸ್ತ್ಯಕ್ತಧರ್ಮಾ ನಿಕೃತಃ ಶಠ ಏವ ಚ|
12162006c ಕ್ಷುದ್ರಃ ಪಾಪಸಮಾಚಾರಃ ಸರ್ವಶಂಕೀ ತಥಾಲಸಃ||
12162007a ದೀರ್ಘಸೂತ್ರೋಽನೃಜುಃ ಕಷ್ಟೋ[849] ಗುರುದಾರಪ್ರಧರ್ಷಕಃ|
12162007c ವ್ಯಸನೇ ಯಃ ಪರಿತ್ಯಾಗೀ ದುರಾತ್ಮಾ ನಿರಪತ್ರಪಃ||
12162008a ಸರ್ವತಃ ಪಾಪದರ್ಶೀ ಚ ನಾಸ್ತಿಕೋ ವೇದನಿಂದಕಃ|
12162008c ಸಂಪ್ರಕೀರ್ಣೇಂದ್ರಿಯೋ ಲೋಕೇ ಯಃ ಕಾಮನಿರತಶ್ಚರೇತ್||
12162009a ಅಸತ್ಯೋ ಲೋಕವಿದ್ವಿಷ್ಟಃ ಸಮಯೇ ಚಾನವಸ್ಥಿತಃ|
12162009c ಪಿಶುನೋಽಥಾಕೃತಪ್ರಜ್ಞೋ ಮತ್ಸರೀ ಪಾಪನಿಶ್ಚಯಃ||
12162010a ದುಃಶೀಲೋಽಥಾಕೃತಾತ್ಮಾ ಚ ನೃಶಂಸಃ ಕಿತವಸ್ತಥಾ|
12162010c ಮಿತ್ರೈರರ್ಥಕೃತೀ[850] ನಿತ್ಯಮಿಚ್ಚತ್ಯರ್ಥಪರಶ್ಚ ಯಃ||

---

849 ಕ್ರುಷ್ಟೋ (ಗೀತಾ ಪ್ರೆಸ್).

850 ಮಿತ್ರೈರಪಕೃತಿಃ (ಗೀತಾ ಪ್ರೆಸ್).

12162011a ವಹತಶ್ಚ[851] ಯಥಾಶಕ್ತಿ ಯೋ ನ ತುಷ್ಯತಿ ಮಂದಧೀಃ|
12162011c ಅಮಿತ್ರಮಿವ ಯೋ ಭುಂಕ್ತೇ ಸದಾ ಮಿತ್ರಂ ನರರ್ಷಭ||
12162012a ಅಸ್ಥಾನಕ್ರೋಧನೋ ಯಶ್ಚ ಅಕಸ್ಮಾಚ್ಚ ವಿರಜ್ಯತೇ|
12162012c ಸುಹೃದಶ್ಚೈವ ಕಲ್ಯಾಣಾನಾಶು ತ್ಯಜತಿ ಕಿಲ್ಬಿಷೀ||
12162013a ಅಲ್ಪೇಽಪ್ಯಪಕೃತೇ ಮೂಢಸ್ತಥಾಜ್ಞಾನಾತ್ಕೃತೇಽಪಿ ಚ|
12162013c ಕಾರ್ಯೋಪಸೇವೀ ಮಿತ್ರೇಷು ಮಿತ್ರದ್ವೇಷೀ ನರಾಧಿಪ||
12162014a ಶತ್ರುರ್ಮಿತ್ರಮುಖೋ ಯಶ್ಚ ಜಿಹ್ಮಪ್ರೇಕ್ಷೀ ವಿಲೋಭನಃ|
12162014c ನ ರಜ್ಯತಿ ಚ ಕಲ್ಯಾಣೇ ಯಸ್ತ್ಯಜೇತ್ ತಾದೃಶಂ ನರಮ್||
12162015a ಪಾನಪೋ ದ್ವೇಷಣಃ ಕ್ರೂರೋ ನಿರ್ಘೃಣಃ ಪರುಷಸ್ತಥಾ|
12162015c ಪರೋಪತಾಪೀ ಮಿತ್ರಧ್ರುಕ್ತಥಾ ಪ್ರಾಣಿವಧೇ ರತಃ||
12162016a ಕೃತಘ್ನಶ್ಚಾಧಮೋ ಲೋಕೇ ನ ಸಂಧೇಯಃ ಕಥಂ ಚನ|
12162016c ಚಿದ್ರಾನ್ವೇಷೀ ನ ಸಂಧೇಯಃ ಸಂಧೇಯಾನಪಿ ಮೇ ಶೃಣು||

ನರರ್ಷಭ! ಲೋಭಿ, ಕ್ರೂರ, ಅಧರ್ಮಿ, ಕಪಟಿ, ಶಠ, ಕ್ಷುದ್ರ,
ಪಾಪಾಚಾರೀ, ಎಲ್ಲರನ್ನೂ ಶಂಕಿಸುವ, ಆಲಸಿ, ದೀರ್ಘಸೂತ್ರೀ, ಕುಟಿಲ,
ಕಷ್ಟಕರ, ಗುರುಪತ್ನಿಯನ್ನು ಉಲ್ಲಂಘಿಸಿದ, ಸಂಕಟದ ಸಮಯದಲ್ಲಿ
ಬಿಟ್ಟು ಹೋಗುವ, ದುರಾತ್ಮ, ನಿರ್ಲಜ್ಜ, ಎಲ್ಲ ಕಡೆ ಪಾಪದೃಷ್ಟಿಯನ್ನೇ
ಬೀರುವ, ನಾಸ್ತಿಕ, ವೇದನಿಂದಕ, ಇಂದ್ರಿಯಗಳನ್ನು ಸ್ವಚ್ಛಂದವನ್ನಾಗಿಸಿ
ಜಗತ್ತಿನಲ್ಲಿ ಕಾಮನಿರತನಾಗಿ ಸಂಚರಿಸುವ, ಅಸತ್ಯ, ಎಲ್ಲರ ದ್ವೇಷಕ್ಕೂ
ಪಾತ್ರನಾದ, ತನ್ನ ಪ್ರತಿಜ್ಞೆಯಂತೆ ನಡೆದುಕೊಳ್ಳದೇ ಇರುವ,
ಚಾಡಿಹೇಳುವ, ಅಪವಿತ್ರ ಬುದ್ಧಿಯುಳ್ಳ, ಅಸೂಯೆಪಡುವ,
ಪಾಪಪೂರ್ಣ ವಿಚಾರಗಳನ್ನಿಟ್ಟುಕೊಂಡಿರುವ, ಕೆಟ್ಟ ನಡತೆಯುಳ್ಳ,

[851] ದದತಶ್ಚ (ಗೀತಾ ಪ್ರೆಸ್).

ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡಿಲ್ಲದ, ಕ್ರೂರಿ, ಧೂರ್ತ,
ಮಿತ್ರರಿಗೆ ಅಪಕಾರವನ್ನೆಸಗುವ, ನಿತ್ಯವೂ ಪರರ ಧನವನ್ನು ಬಯಸುವ,
ಯಥಾಶಕ್ತಿಯಾಗಿ ಕೊಡುವವನ ಮೇಲೂ ಸಂತುಷ್ಟನಾಗಿರದ,
ಮಂದಬುದ್ಧಿ, ಮಿತ್ರರನ್ನೂ ಧೈರ್ಯದಿಂದ ವಿಚಲಿತರನ್ನಾಗಿ ಮಾಡುವ,
ಸಾವಧಾನವಿಲ್ಲದ, ಅಕಾರಣವಾಗಿ ಸಿಟ್ಟಾಗುವ, ಅಕಸ್ಮಾತ್ತಾಗಿ
ವಿರೋಧಿಯಾಗಿ ಕಲ್ಯಾಣಕಾರೀ ಮಿತ್ರರನ್ನೂ ಶೀಘ್ರದಲ್ಲಿಯೇ
ಬಿಟ್ಟುಬಿಡುವ, ತಿಳಿಯದೇ ಅಲ್ಪ ಅಪರಾಧವನ್ನು ಮಾಡಿದ್ದರೂ
ಮಿತ್ರನಿಗೆ ಅನಿಷ್ಟವನ್ನುಂಟುಮಾಡುವ, ತನ್ನ ಸ್ವಾರ್ಥಸಾಧನೆಗಾಗಿ
ಮೈತ್ರಿಯನ್ನು ಇಟ್ಟುಕೊಳ್ಳುವ, ವಾಸ್ತವವಾಗಿಯೂ
ಮಿತ್ರದ್ವೇಷಿಯಾಗಿರುವ, ಬಾಯಲ್ಲಿ ಮೈತ್ರಿಯ ಮಾತನಾಡುತ್ತಾ ಒಳಗೆ
ಶತ್ರುಭಾವವನ್ನಿಟ್ಟುಕೊಂಡಿರುವ, ಕುಟಿಲ ದೃಷ್ಟಿಯಿಂದ ನೋಡುವ,
ವಿಪರೀತದಶೀ, ಯಾವಾಗಲೂ ಹಿತಕಾರಿಯಾಗಿರುವ ಮಿತ್ರನನ್ನೂ
ತ್ಯಜಿಸುವ, ಕುಡುಕ, ದ್ವೇಷೀ, ಕ್ರೋಧೀ, ನಿರ್ದಯೀ, ಕ್ರೂರ, ಇತರರನ್ನು
ಪೀಡಿಸುವ, ಮಿತ್ರದ್ರೋಹೀ, ಪ್ರಾಣಿಗಳನ್ನು ಹಿಂಸಿಸುವ, ಕೃತಘ್ನ, ನೀಚ
- ಇಂಥವರೊಂದಿಗೆ ಸಂಸಾರದಲ್ಲಿ ಎಂದೂ ಮೈತ್ರಿಯನ್ನು
ಮಾಡಿಕೊಳ್ಳಬಾರದು. ಇನ್ನೊಬ್ಬರಲ್ಲಿ ದುರ್ಬಲತೆಯನ್ನೇ
ಹುಡುಕುವವನೊಂದಿಗೂ ಎಂದೂ ಮೈತ್ರಿಯನ್ನು
ಮಾಡಿಕೊಳ್ಳಬಾರದು. ಈಗ ಮೈತ್ರಿಗೆ ಯೋಗ್ಯರಾದ ಪುರುಷರ ಕುರಿತು
ಕೇಳು.

12162017a ಕುಲೀನಾ ವಾಕ್ಯಸಂಪನ್ನಾ ಜ್ಞಾನವಿಜ್ಞಾನಕೋವಿದಾಃ|

12162017c ಮಿತ್ರಜ್ಞಾಶ್ಚ[852] ಕೃತಜ್ಞಾಶ್ಚ ಸರ್ವಜ್ಞಾಃ ಶೋಕವರ್ಜಿತಾಃ[853]॥
12162018a ಮಾಧುರ್ಯಗುಣಸಂಪನ್ನಾಃ ಸತ್ಯಸಂಧಾ ಜಿತೇಂದ್ರಿಯಾಃ।
12162018c ವ್ಯಾಯಾಮಶೀಲಾಃ ಸತತಂ ಭೃತಪುತ್ರಾಃ ಕುಲೋದ್ಗತಾಃ[854]॥
12162019a ರೂಪವಂತೋ ಗುಣೋಪೇತಾಸ್ತಥಾಲುಬ್ಧಾ ಜಿತಶ್ರಮಾಃ।
12162019c ದೋಷೈರ್ವಿಯುಕ್ತಾಃ ಪ್ರಥಿತೈಸ್ತೇ ಗ್ರಾಹ್ಯಾಃ ಪಾರ್ಥಿವೇನ ಹ॥

ಕುಲೀನ, ವಾಕ್ಯಸಂಪನ್ನ, ಜ್ಞಾನವಿಜ್ಞಾನಕೋವಿದ, ಮಿತ್ರಜ್ಞ, ಕೃತಜ್ಞ, ಸರ್ವಜ್ಞ, ಶೋಕವರ್ಜಿತ, ಮಾದುರ್ಯಗುಣಸಂಪನ್ನ, ಸತ್ಯಸಂಧ, ಜಿತೇಂದ್ರಿಯ, ವ್ಯಾಯಾಮಶೀಲ, ಸತತವೂ ಪತ್ನೀ-ಪುತ್ರರನ್ನು ಪಾಲಿಸುವ, ಕುಲವನ್ನು ಉದ್ಧರಿಸುವ, ರೂಪವಂತ, ಗುಣೋಪೇತ, ಅಲುಬ್ಧ, ಜಿತಶ್ರಮಿ, ದೋಷಗಳಿಂದ ವಿಮುಕ್ತನಾದ ಮತ್ತು ಲೋಕದಲ್ಲಿ ಪ್ರಸಿದ್ಧನಾದವನೊಂದಿಗೆ ರಾಜನು ಮಿತ್ರತ್ವವನ್ನು ಕಲ್ಪಿಸಿಕೊಳ್ಳಬೇಕು.

12162020a ಯಥಾಶಕ್ತಿಸಮಾಚಾರಾಃ ಸಂತಸ್ತುಷ್ಯಂತಿ ಹಿ ಪ್ರಭೋ।
12162020c ನಾಸ್ಥಾನೇ ಕ್ರೋಧವಂತಶ್ಚ ನ ಚಾಕಸ್ಮಾದ್ವಿರಾಗಿಣಃ॥
12162021a ವಿರಕ್ತಾಶ್ಚ ನ ರುಷ್ಯಂತಿ ಮನಸಾಪ್ಯರ್ಥಕೋವಿದಾಃ।
12162021c ಆತ್ಮಾನಂ ಪೀಡಯಿತ್ವಾಪಿ ಸುಹೃತ್ಕಾರ್ಯಪರಾಯಣಾಃ।
12162021e ನ ವಿರಜ್ಯಂತಿ ಮಿತ್ರೇಭ್ಯೋ ವಾಸೋ ರಕ್ತಮಿವಾವಿಕಮ್॥
12162022a ದೋಷಾಂಶ್ಚ ಲೋಭಮೋಹಾದೀನರ್ಥೇಷು ಯುವತಿಷ್ವಥ।
12162022c ನ ದರ್ಶಯಂತಿ ಸುಹೃದಾಂ ವಿಶ್ವಸ್ತಾ ಬಂಧುವತ್ಸಲಾಃ॥
12162023a ಲೋಷ್ಟಕಾಂಚನತುಲ್ಯಾರ್ಥಾಃ ಸುಹೃತ್ಸ್ವಶಠಬುದ್ಧಯಃ।

---

852 ಸನ್ಮಿತ್ರಾಶ್ಚ (ಗೀತಾ ಪ್ರೆಸ್).

853 ಲೋಭವರ್ಜಿತಾಃ (ಗೀತಾ ಪ್ರೆಸ್).

854 ಕುಲಪುತ್ರಾಃ ಕುಲೋದ್ದಹಾಃ। (ಗೀತಾ ಪ್ರೆಸ್).

12162023c ಯೇ ಚರಂತ್ಯನಭೀಮಾನಾ ನಿಸೃಷ್ಟಾರ್ಥ ವಿಭೂಷಣಾಃ|
12162023e ಸಂಗೃಹ್ಣಂತಃ ಪರಿಜನಂ ಸ್ವಾಮ್ಯರ್ಥ ಪರಮಾಃ ಸದಾ||
12162024a ಈದೃಶ್ಯೈಃ ಪುರುಷಶ್ರೇಷ್ಠೈಃ ಸಂಧಿಂ ಯಃ ಕುರುತೇ ನೃಪಃ|
12162024c ತಸ್ಯ ವಿಸ್ತೀರ್ಯತೇ ರಾಷ್ಟ್ರಂ ಜ್ಯೋತ್ಸ್ನಾ ಗ್ರಹಪತೇರಿವ||

ಪ್ರಭೋ! ಯಥಾಶಕ್ತಿನಡೆದುಕೊಳ್ಳುವ, ಸದಾ ತೃಪ್ತಿಯಿಂದಿರುವ, ಕಾರಣವಿಲ್ಲದೇ ಕೋಪಗೊಳ್ಳದಿರುವ, ಅಕಸ್ಮಾತ್ತಾಗಿ ಸ್ನೇಹವನ್ನು ತ್ಯಜಿಸದೇ ಇರುವ, ಮನಸ್ಸಿನಲ್ಲಿ ಉದಾಸೀನರಾದರೂ ರೋಷಗೊಳ್ಳದ, ಅರ್ಥದ ತತ್ತ್ವವನ್ನು ತಿಳಿದುಕೊಂಡಿರುವ, ತಮ್ಮನ್ನು ತಾವೇ ಕಷ್ಟದಲ್ಲಿ ಬಿದ್ದು ಹಿತೈಷಿಯ ಕಾರ್ಯಸಿದ್ಧಿಯನ್ನು ಮಾಡುವ, ಕೆಂಪುಬಣ್ಣದ ವಸ್ತ್ರವು ಹೇಗೆ ತನ್ನ ಬಣ್ಣವನ್ನು ಬಿಡುವುದಿಲ್ಲವೋ ಹಾಗೆ ಮಿತ್ರನನ್ನೂ ಬಿಡದಿರದ, ಕ್ರೋಧವಶನಾಗಿ ಮಿತ್ರನಿಗೆ ಅನರ್ಥವನ್ನುಂಟುಮಾಡದ, ಲೋಭ-ಮೋಹಗಳ ವಶನಾಗಿ ಮಿತ್ರನ ಯುವತಿಯರ ಮೇಲೇ ಆಸಕ್ತನಾಗಿರದ, ಮಿತ್ರನ ವಿಶ್ವಾಸಪಾತ್ರನೂ, ಧರ್ಮಾನುರಕ್ತನೂ ಆಗಿರುವ, ಲೋಷ್ಟ-ಕಾಂಚನಗಳನ್ನು ಒಂದೇ ಸಮನಾಗಿ ಕಾಣುವ, ಮಿತ್ರರಮೇಲೆ ಸುಸ್ಥಿರ ಬುದ್ಧಿಯನ್ನಿಟ್ಟಿರುವ, ಸರ್ವರೊಂದಿಗೂ ಪ್ರಮಾಣಭೂತ ಶಾಸ್ತ್ರಗಳ ಅನುಸಾರವಾಗಿ ವರ್ತಿಸುವ, ಪ್ರಾರಬ್ಧವಶ ಪ್ರಾಪ್ತವಾದ ಧನದಲ್ಲಿಯೇ ಸಂತುಷ್ಟನಾಗಿರುವ, ಕುಟುಂಬದವರೊಂದಿಗೆ ಸದಾ ಮಿತ್ರ ಮತ್ತು ಸ್ವಾಮಿಯ ಕಾರ್ಯಸಾಧನೆಗಳಲ್ಲಿ ತತ್ಪರನಾಗಿರುವ ಶ್ರೇಷ್ಠ ಪುರುಷರೊಂದಿಗೆ ರಾಜನು ಮೈತ್ರಿಯನ್ನಿಟ್ಟುಕೊಂಡಿರಬೇಕು. ಅಂಥವರ ರಾಜ್ಯವು ಪೂರ್ಣಿಮೆಯ ಚಂದ್ರನಂತೆ ವೃದ್ಧಿಯಾಗುತ್ತದೆ.

12162025a ಶಾಸ್ತ್ರನಿತ್ಯಾ ಜಿತಕ್ರೋಧಾ ಬಲವಂತೋ ರಣಪ್ರಿಯಾಃ|

12162025c ಕ್ಷಾಂತಾಃ ಶೀಲಗುಣೋಪೇತಾಃ ಸಂಧೇಯಾಃ ಪುರುಷೋತ್ತಮಾಃ||

ನಿತ್ಯವೂ ಶಾಸ್ತ್ರಗಳ ಸ್ವಾಧ್ಯಾಯದಲ್ಲಿ ನಿರತರಾಗಿರುವ, ಜಿತಕ್ರೋಧ, ಬಲವಂತ, ರಣಪ್ರಿಯ, ಕ್ಷಮಾಶೀಲ, ಶೀಲಗುಣೋಪೇತ ಪುರುಷೋತ್ತಮರು ಮಿತ್ರರಾಗಿರಲು ಯೋಗ್ಯರು.

12162026a ಯೇ ಚ ದೋಷಸಮಾಯುಕ್ತಾ ನರಾಃ ಪ್ರೋಕ್ತಾ ಮಯಾನಘ|
12162026c ತೇಷಾಮಪ್ಯಧಮೋ ರಾಜನ್ ಕೃತಘ್ನೋ ಮಿತ್ರಘಾತಕಃ|
12162026e ತ್ಯಕ್ತವ್ಯಃ ಸ ದುರಾಚಾರಃ ಸರ್ವೇಷಾಮಿತಿ ನಿಶ್ಚಯಃ||

ಅನಘ! ನಾನು ಯಾವ ದೋಷಸಮಾಯುಕ್ತ ನರರ ಕುರಿತು ಹೇಳಿದೆನೋ ಅವರಲ್ಲಿಯೇ ಅತ್ಯಂತ ಅಧಮನು ಕೃತಘ್ನ ಮತ್ತು ಮಿತ್ರಘಾತಕನು. ಈ ದುರಾಚಾರಿಯನ್ನು ಎಲ್ಲರಕ್ಕಿಂತಲೂ ದೂರವಿಡಬೇಕು. ಇದು ಎಲ್ಲ ಶಾಸ್ತ್ರಗಳ ನಿಶ್ಚಯವು."

12162027 ಯುಧಿಷ್ಠಿರ ಉವಾಚ|
12162027a ವಿಸ್ತರೇಣಾರ್ಥಸಂಬಂಧಂ ಶ್ರೋತುಮಿಚ್ಛಾಮಿ ಪಾರ್ಥಿವ|
12162027c ಮಿತ್ರದ್ರೋಹೀ ಕೃತಘ್ನಶ್ಚ ಯಃ ಪ್ರೋಕ್ತಸ್ತಂ ಚ ಮೇ ವದ||

ಯುಧಿಷ್ಠಿರನು ಹೇಳಿದನು: "ಪಾರ್ಥಿವ! ಮಿತ್ರದ್ರೋಹೀ ಮತ್ತು ಕೃತಘ್ನ ಎಂದು ನೀನು ಹೇಳಿದೆಯಲ್ಲ ಅದರ ಯಥಾರ್ಥ ಇತಿಹಾಸವೇನು? ಇದರ ಅರ್ಥಸಂಬಂಧವನ್ನು ವಿಸ್ತಾರದಿಂದ ಕೇಳಬೇಕೆಂದು ಬಯಸುತ್ತೇನೆ. ಅದರ ಕುರಿತು ನನಗೆ ಹೇಳು."

12162028 ಭೀಷ್ಮ ಉವಾಚ|
12162028a ಹಂತ ತೇ ವರ್ತಯಿಷ್ಯೇಽಹಮಿತಿಹಾಸಂ ಪುರಾತನಮ್|
12162028c ಉದೀಚ್ಯಾಂ ದಿಶಿ ಯದ್ವೃತ್ತಂ ಮ್ಲೇಚ್ಛೇಷು ಮನುಜಾಧಿಪ||

ಭೀಷ್ಮನು ಹೇಳಿದನು: "ಮನುಜಾಧಿಪ! ನಿಲ್ಲು! ನಿನಗೆ ನಾನು ಉತ್ತರ ದಿಕ್ಕಿನ ಮ್ಲೇಚ್ಛ ದೇಶದಲ್ಲಿ ನಡೆದ ಈ ಪುರಾತನ ಇತಿಹಾಸವನ್ನು ಹೇಳುತ್ತೇನೆ.

12162029a ಬ್ರಾಹ್ಮಣೋ ಮಧ್ಯದೇಶೀಯಃ ಕೃಷ್ಣಾಂಗೋ[855] ಬ್ರಹ್ಮವರ್ಜಿತಃ|
12162029c ಗ್ರಾಮಂ ಪ್ರೇಕ್ಷ್ಯ ಜನಾಕೀರ್ಣಂ[856] ಪ್ರಾವಿಶದ್ ಭೈಕ್ಷಕಾಂಕ್ಷಯಾ||

ವೇದವರ್ಜಿತನಾದ ಮಧ್ಯದೇಶೀಯ ಕೃಷ್ಣಾಂಗ ಬ್ರಾಹ್ಮಣನೋರ್ವನು ಜನಸಂಪನ್ನ ಗ್ರಾಮವನ್ನು ನೋಡಿ ಭಿಕ್ಷೆಗಾಗಿ ಅದನ್ನು ಪ್ರವೇಶಿಸಿದನು.

12162030a ತತ್ರ ದಸ್ಯುರ್ಧನಯುತಃ ಸರ್ವವರ್ಣವಿಶೇಷವಿತ್|
12162030c ಬ್ರಹ್ಮಣ್ಯಃ ಸತ್ಯಸಂಧಶ್ಚ ದಾನೇ ಚ ನಿರತೋಽಭವತ್||

ಅಲ್ಲಿ ಸರ್ವವರ್ಣದವರ ವಿಶೇಷಗಳನ್ನೂ ತಿಳಿದಿದ್ದ ಧನವಾನ ದಸ್ಯುವೋರ್ವನಿದ್ದನು. ಅವನು ಬ್ರಹ್ಮಣ್ಯನೂ, ಸತ್ಯಸಂಧನೂ, ದಾನಪರಾಯಣನೂ ಆಗಿದ್ದನು.

12162031a ತಸ್ಯ ಕ್ಷಯಮುಪಾಗಮ್ಯ ತತೋ ಭಿಕ್ಷಾಮಯಾಚತ|
12162031c ಪ್ರತಿಶ್ರಯಂ ಚ ವಾಸಾರ್ಥಂ ಭಿಕ್ಷಾಂ ಚೈವಾಥ ವಾರ್ಷಿಕೀಮ್||
12162032a ಪ್ರಾದಾತ್ತಸ್ಮೈ ಸ ವಿಪ್ರಾಯ ವಸ್ತ್ರಂ ಚ ಸದೃಶಂ ನವಮ್|
12162032c ನಾರೀಂ ಚಾಪಿ ವಯೋಪೇತಾಂ ಭರ್ತ್ರಾ ವಿರಹಿತಾಂ ತದಾ||

ಬ್ರಾಹ್ಮಣನು ಅವನ ಮನೆಗೆ ಹೋಗಿ ಭಿಕ್ಷೆಯನ್ನು ಬೇಡಿದನು. ದಸ್ಯುವು

---

[855] ಕಶ್ಚಿದ್ ವೈ (ಗೀತಾ ಪ್ರೆಸ್).

[856] ಗ್ರಾಮಂ ವೃದ್ಧಿಯುತಂ ವೀಕ್ಷ್ಯ (ಗೀತಾ ಪ್ರೆಸ್).

ಬ್ರಾಹ್ಮಣನಿಗೆ ವಾಸಿಸಲು ಮನೆ, ಒಂದು ವರ್ಷಕ್ಕೆ ಸಾಕಾಗುವಷ್ಟು ಭಿಕ್ಷೆ, ಹೊಸ ವಸ್ತ್ರಗಳು, ಮತ್ತು ಅವನ ಸೇವೆಯಲ್ಲಿ ಪತಿಯನ್ನು ಬಿಟ್ಟಿದ್ದ ಓರ್ವ ಯುವತಿ ದಾಸಿಯನ್ನೂ ನೀಡಿದನು.

12162033a ಏತತ್ಸಂಪ್ರಾಪ್ಯ ಹೃಷ್ಟಾತ್ಮಾ ದಸ್ಯೋಃ ಸರ್ವಂ ದ್ವಿಜಸ್ತದಾ|
12162033c ತಸ್ಮಿನ್ಗೃಹವರೇ ರಾಜಂಸ್ತಯಾ ರೇಮೇ ಸ ಗೌತಮಃ||

ರಾಜನ್! ದಸ್ಯುವಿನಿಂದ ಈ ಎಲ್ಲವನ್ನೂ ಪಡೆದುಕೊಂಡು ದ್ವಿಜ ಗೌತಮನು ಹೃಷ್ಟಾತ್ಮನಾಗಿ ಆ ಸುಂದರ ಮನೆಯಲ್ಲಿ ದಾಸಿಯೊಂದಿಗೆ ಆನಂದದಿಂದ ಇರತೊಡಗಿದನು.

12162034a ಕುಟುಂಬಾರ್ಥೇಷು ದಸ್ಯೋಃ ಸ[857] ಸಾಹಾಯ್ಯಂ
ಚಾಪ್ಯಥಾಕರೋತ್|
12162034c ತತ್ರಾವಸತ್ಸೋಽಥ ವರ್ಷಾಃ ಸಮೃದ್ಧೇ ಶಬರಾಲಯೇ|
12162034e ಬಾಣವೇಧ್ಯೇ ಪರಂ ಯತ್ನಮಕರೋಚ್ಚೈವ ಗೌತಮಃ||

ಅವನು ದಸ್ಯುವಿನ ಕುಟುಂಬಕ್ಕೂ ಸ್ವಲ್ಪ ಸಹಾಯವನ್ನು ಮಾಡತೊಡಗಿದನು. ಆ ಸಮೃದ್ಧ ಶಬರಾಲಯದಲ್ಲಿ ಅವನು ಅನೇಕ ವರ್ಷಗಳು ವಾಸಿಸಿದನು ಮತ್ತು ಆ ಗೌತಮನು ಬಾಣಪ್ರಯೋಗಮಾಡಿ ಲಕ್ಷ್ಯವನ್ನು ಭೇದಿಸುವುದನ್ನು ಪ್ರಯತ್ನಪಟ್ಟು ಅಭ್ಯಾಸಮಾಡಿಕೊಂಡನು.

12162035a ವಕ್ರಾಂಗಾಂಸ್ತು ಸ ನಿತ್ಯಂ ವೈ[858] ಸರ್ವತೋ
ಬಾಣಗೋಚರೇ|
12162035c ಜಘಾನ ಗೌತಮೋ ರಾಜನ್ಯಥಾ ದಸ್ಯುಗಣಸ್ತಥಾ||

---

857 ಕುಟುಂಬಾರ್ಥಂ ಚ ದಾಸ್ಯಾಶ್ಚ (ಗೀತಾ ಪ್ರೆಸ್).

858 ಚಕ್ರಾಂಗಾನ್ಸ ಚ ನಿತ್ಯಂ ವೈ (ಗೀತಾ ಪ್ರೆಸ್).

ರಾಜನ್! ದಸ್ಯುಗಣದಂತೆ ಗೌತಮನೂ ಕೂಡ ನಿತ್ಯವೂ ಎಲ್ಲಕಡೆ ಸುತ್ತಾಡಿ ಬಾಣಕ್ಕೆ ಸಿಗುವ ಹಂಸಗಳನ್ನು ಕೊಲ್ಲುತ್ತಿದ್ದನು.

12162036a ಹಿಂಸಾಪರೋ ಘೃಣಾಹೀನಃ ಸದಾ ಪ್ರಾಣಿವಧೇ ರತಃ|
12162036c ಗೌತಮಃ ಸಂನಿಕರ್ಷೇಣ ದಸ್ಯುಭಿಃ ಸಮತಾಮಿಯಾತ್||

ಹಿಂಸಾಪರನಾಗಿ ಸ್ವಲ್ಪವೂ ದಯೆಯಿಲ್ಲದವನಾಗಿ ಆ ಗೌತಮನು ಸದಾ ಪ್ರಾಣಿವಧೆಯಲ್ಲಿಯೇ ನಿರತನಾದನು. ದಸ್ಯುಗಳ ಸಂಪರ್ಕದಲ್ಲಿದ್ದ ಅವನೂ ಕೂಡ ಅವರಂತೆಯೇ ಸಂಪೂರ್ಣವಾಗಿ ದಸ್ಯುವೇ ಆಗಿಬಿಟ್ಟನು.

12162037a ತಥಾ ತು ವಸತಸ್ತಸ್ಯ ದಸ್ಯುಗ್ರಾಮೇ ಸುಖಂ ತದಾ|
12162037c ಅಗಚ್ಚನ್ಬಹವೋ ಮಾಸಾ ನಿಘ್ನತಃ ಪಕ್ಷಿಣೋ ಬಹೂನ್||

ಹಾಗೆಯೇ ಅನೇಕ ಪಕ್ಷಿಗಳನ್ನು ಕೊಲ್ಲುತ್ತಾ ಅವನು ಆ ದಸ್ಯುಗ್ರಾಮದಲ್ಲಿ ಸುಖವಾಗಿ ವಾಸಿಸುತ್ತಿರಲು ಅನೇಕ ಮಾಸಗಳೇ ಕಳೆದುಹೋದವು.

12162038a ತತಃ ಕದಾ ಚಿದಪರೋ ದ್ವಿಜಸ್ತಂ ದೇಶಮಾಗಮತ್|
12162038c ಜಟೀ ಚೀರಾಜಿನಧರಃ ಸ್ವಾಧ್ಯಾಯಪರಮಃ ಶುಚಿಃ||

ಆಗ ಒಮ್ಮೆ ಯಾವನೋ ಒಬ್ಬ ಅನ್ಯ ಬ್ರಾಹ್ಮಣನು ಆ ಪ್ರದೇಶಕ್ಕೆ ಆಗಮಿಸಿದನು. ಅವನು ಜಟೆ ಚೀರ-ಜಿನಗಳನ್ನು ಧರಿಸಿದ್ದನು. ಸ್ವಾಧ್ಯಾಯಿಯಾದ ಅವನು ಪರಮ ಶುಚಿಯಾಗಿದ್ದನು.

12162039a ವಿನೀತೋ ನಿಯತಾಹಾರೋ ಬ್ರಹ್ಮಣ್ಯೋ ವೇದಪಾರಗಃ|
12162039c ಸಬ್ರಹ್ಮಚಾರೀ ತದ್ದೇಶ್ಯಃ ಸಖಾ ತಸ್ಯೈವ ಸುಪ್ರಿಯಮ್|
12162039e ತಂ ದಸ್ಯುಗ್ರಾಮಮಗಮದ್ಯತ್ರಾಸೌ ಗೌತಮೋಽಭವತ್||

ಅವನು ವಿನೀತನೂ, ನಿಯತಾಹಾರಿಯೂ, ಬ್ರಹ್ಮಣ್ಯನೂ ಮತ್ತು ವೇದಪಾರಂಗತನೂ ಆಗಿದ್ದನು. ಆ ಬ್ರಹ್ಮಚಾರಿಯು ಗೌತಮನ ಊರಿನವನೇ ಆಗಿದ್ದನು ಮತ್ತು ಅವನಿಗೆ ಪ್ರಿಯನಾದ ಸಖನೂ ಆಗಿದ್ದನು. ಅವನು ಗೌತಮನು ಎಲ್ಲಿ ವಾಸಿಸುತ್ತಿದ್ದನೋ ಅದೇ ದಸ್ಯುಗ್ರಾಮಕ್ಕೆ ಆಗಮಿಸಿದನು.

12162040a ಸ ತು ವಿಪ್ರಗೃಹಾನ್ವೇಷೀ ಶೂದ್ರಾನ್ನಪರಿವರ್ಜಕಃ|
12162040c ಗ್ರಾಮೇ ದಸ್ಯುಜನಾಕೀರ್ಣೇ ವ್ಯಚರತ್ಸರ್ವತೋದಿಶಮ್||

ಶೂದ್ರರ ಅನ್ನವನ್ನು ಪರಿತ್ಯಜಿಸಿದ್ದ ಅವನು ವಿಪ್ರರ ಮನೆಯನ್ನು ಹುಡುಕುತ್ತಾ ಆ ದಸ್ಯುಜನರು ತುಂಬಿದ್ದ ಆ ಗ್ರಾಮದಲ್ಲಿ ಎಲ್ಲ ಕಡೆ ಸುತ್ತಾಡುತ್ತಿದ್ದನು.

12162041a ತತಃ ಸ ಗೌತಮಗೃಹಂ ಪ್ರವಿವೇಶ ದ್ವಿಜೋತ್ತಮಃ|
12162041c ಗೌತಮಶ್ಚಾಪಿ ಸಂಪ್ರಾಪ್ತಸ್ತಾವನ್ಯೋನ್ಯೇನ ಸಂಗತೌ||

ಆಗ ಆ ದ್ವಿಜೋತ್ತಮನು ಗೌತಮನ ಮನೆಯನ್ನು ಪ್ರವೇಶಿಸಿದನು. ಅಷ್ಟರಲ್ಲಿಯೇ ಗೌತಮನೂ ಕೂಡ ಬೇಟೆಯಾಡಿ ಮನೆಗೆ ತಲುಪಿದ್ದನು. ಅಲ್ಲಿ ಪರಸ್ಪರರ ಭೇಟಿಯಾಯಿತು.

12162042a ವಕ್ರಾಂಗಭಾರಹಸ್ತಂ[859] ತಂ ಧನುಷ್ಪಾಣಿಂ ಕೃತಾಗಸಮ್[860]|
12162042c ರುಧಿರೇಣಾವಸಿಕ್ತಾಂಗಂ ಗೃಹದ್ವಾರಮುಪಾಗತಮ್||
12162043a ತಂ ದೃಷ್ಟ್ವಾ ಪುರುಷಾದಾಭಮಪಧ್ವಸ್ತಂ ಕ್ಷಯಾಗತಮ್|

---

859 ಚಕ್ರಾಂಗಭಾರಸ್ಕಂಧಂ (ಗೀತಾ ಪ್ರೆಸ್).

860 ಧೃತಾಯುಧಮ್| (ಗೀತಾ ಪ್ರೆಸ್).

12162043c ಅಭಿಜ್ಞಾಯ ದ್ವಿಜೋ ವ್ರೀಡಾಮಗಮದ್ವಾಕ್ಯಮಾಹ ಚ॥

ಮನೆಯ ದ್ವಾರದಲ್ಲಿದ್ದ ಅವನು ಹಂಸಗಳ ಮೃತದೇಹಗಳನ್ನು ಹಿಡಿದಿದ್ದನು. ಧನುಷ್ಪಾಣಿಯಾಗಿದ್ದನು ರಕ್ತದಿಂದ ಅವನ ಶರೀರವು ತೋಯ್ದುಹೋಗಿತ್ತು. ನರಭಕ್ಷಕಣಂತೆ ಕಾಣುತ್ತಿದ್ದ ಅವನು ಬ್ರಾಹ್ಮಣತ್ವದಿಂದ ಭ್ರಷ್ಟನಾಗಿಬಿಟ್ಟಿದ್ದನು. ಅವನನ್ನು ಆ ಅವಸ್ಥೆಯಲ್ಲಿ ನೋಡಿದ ಬ್ರಾಹ್ಮಣನು ಅವನನ್ನು ಗುರುತಿಸಿ ಬಹಳ ಲಜ್ಜಿತನಾಗಿ ಅವನಿಗೆ ಈ ರೀತಿ ಹೇಳಿದನು:

12162044a ಕಿಮಿದಂ ಕುರುಷೇ ಮೌಢ್ಯಾದ್ವಿಪ್ರಸ್ತ್ವಂ ಹಿ ಕುಲೋದ್ಗತಃ|
12162044c ಮಧ್ಯದೇಶಪರಿಜ್ಞಾತೋ ದಸ್ಯುಭಾವಂ ಗತಃ ಕಥಮ್॥

“ಮೂಢತನದಿಂದ ನೀನು ಇದೇನು ಮಾಡುತ್ತಿರುವೆ? ನೀನಾದರೋ ಮಧ್ಯದೇಶದ ವಿಖ್ಯಾತ ಮತ್ತು ಕುಲೀನ ಬ್ರಾಹ್ಮಣನಾಗಿದ್ದೆ. ಇಲ್ಲಿ ದಸ್ಯುಭಾವವನ್ನು ಹೇಗೆ ಪಡೆದುಕೊಂಡೆ?

12162045a ಪೂರ್ವಾನ್ಸ್ಮರ ದ್ವಿಜಾಗ್ರ್ಯಾಂಸ್ತಾನ್ಪ್ರಖ್ಯಾತಾನ್ವೇದಪಾರಗಾನ್|
12162045c ಯೇಷಾಂ ವಂಶೇऽಭಿಜಾತಸ್ತ್ವಮೀದೃಶಃ ಕುಲಪಾಂಸನಃ॥

ಯಾರ ವಂಶದಲ್ಲಿ ನೀನು ಹುಟ್ಟಿದ್ದೆಯೋ ಆ ಪೂರ್ವಜ ಪ್ರಖ್ಯಾತ ವೇದಪಾರಂಗತ ದ್ವಿಜಾಗ್ರರನ್ನು ಸ್ಮರಿಸಿಕೋ! ಅಂಥವರ ಕುಲದಲ್ಲಿ ಹುಟ್ಟಿದ ನೀನು ಈ ರೀತಿ ಕುಲಪಾಂಸಕನಾಗಿಬಿಟ್ಟೆಯಲ್ಲ!

12162046a ಅವಬುಧ್ಯಾತ್ಮನಾತ್ಮಾನಂ ಸತ್ಯಂ ಶೀಲಂ ಶ್ರುತಂ ದಮಮ್|
12162046c ಅನುಕ್ರೋಶಂ ಚ ಸಂಸ್ಮೃತ್ಯ ತ್ಯಜ ವಾಸಮಿಮಂ ದ್ವಿಜ॥

ಈಗಲಾದರೂ ನಿನ್ನನ್ನು ನೀನು ಗುರುತಿಸಿಕೊಳ್ಳು! ನೀನು ದ್ವಿಜ.

ಆದುದರಿಂದ ದ್ವಿಜೋಚಿತ ಸತ್ಯ, ಶೀಲ, ಶಾಸ್ತ್ರಜ್ಞಾನ, ಸಂಯಮ, ಅನುಕ್ರೋಶ ಇವುಗಳನ್ನು ನೆನಪಿಸಿಕೊಂಡು ಈ ನಿವಾಸಸ್ಥಾನವನ್ನು ತೊರೆ.”

12162047a ಏವಮುಕ್ತಃ ಸ ಸುಹೃದಾ ತದಾ ತೇನ ಹಿತೈಷಿಣಾ|
12162047c ಪ್ರತ್ಯುವಾಚ ತತೋ ರಾಜನ್ವಿನಿಶ್ಚಿತ್ಯ ತದಾರ್ತವತ್‌||

ರಾಜನ್! ತನ್ನ ಹಿತೈಷೀ ಸುಹೃದನು ಹೀಗೆ ಹೇಳಲು ಆರ್ತನಾಗಿ ಯೋಚಿಸಿ ಗೌತಮನು ಇಂತೆಂದನುಃ

12162048a ಅಧನೋಽಸ್ಮಿ ದ್ವಿಜಶ್ರೇಷ್ಠ ನ ಚ ವೇದವಿದಪ್ಯಹಮ್‌|
12162048c ವೃತ್ತ್ಯರ್ಥಮಿಹ[861] ಸಂಪ್ರಾಪ್ತಂ ವಿದ್ಧಿ ಮಾಂ ದ್ವಿಜಸತ್ತಮ‌||

“ದ್ವಿಜಶ್ರೇಷ್ಠ! ನಾನು ನಿರ್ಧನನು ಮತ್ತು ವೇದಗಳನ್ನೂ ಅರಿತವನಲ್ಲ. ದ್ವಿಜಸತ್ತಮ! ವೃತ್ತಿಗೋಸ್ಕರವಾಗಿ ನಾನು ಇಲ್ಲಿಗೆ ಬಂದಿದ್ದೆನು ಎಂದು ತಿಳಿ.

12162049a ತ್ವದ್ದರ್ಶನಾತ್ತು ವಿಪ್ರರ್ಷೇ ಕೃತಾರ್ಥಂ ವೇದ್ಮ್ಯಹಂ ದ್ವಿಜ|
12162049c ಆತ್ಮಾನಂ ಸಹ ಯಾಸ್ಯಾವಃ ಶ್ವೋ ವಸಾದ್ಯೇಹ ಶರ್ವರೀಮ್‌[862]‌||

ವಿಪ್ರರ್ಷೇ! ದ್ವಿಜ! ನಿನ್ನ ದರ್ಶನದಿಂದ ಇಂದು ನಾನು ಕೃತಾರ್ಥನಾದೆನು. ಇಂದಿನ ರಾತ್ರಿಯನ್ನು ಇಲ್ಲಿಯೇ ಕಳೆಯಬೇಕು.

---

[861] ವಿತಾರ್ಥಮಿಹ (ಗೀತಾ ಪ್ರೆಸ್).

[862] ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆಃ ಸ ತತ್ರ ನ್ಯವಸದ್ವಿಪ್ರೋ ಘೃಣೀ ಕಿಂಚಿದಸಂಸ್ಪೃಷನ್‌| ಕ್ಷುದಸ್ಚಂದ್ಯಮಾನೋಽಪಿ ಭೋಜನಂ ನಾಭ್ಯನಂದತ‌|| (ಗೀತಾ ಪ್ರೆಸ್).

ನಾಳೆ ಬೆಳಿಗ್ಗೆ ಇಬ್ಬರೂ ಒಟ್ಟಿಗೇ ಹೊರಡೋಣ.””

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕೃತಘ್ನೋಪಾಖ್ಯಾನೇ ದ್ವಾಷಷ್ಟ್ಯಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕೃತಘ್ನೋಪಾಖ್ಯಾನ ಎನ್ನುವ
ನೂರಾಅರವತ್ತೆರಡನೇ ಅಧ್ಯಾಯವು.

೧೬೩

ಗೌತಮನು ಸಮುದ್ರದ ಕಡೆ ಪ್ರಯಾಣಬೆಳೆಸುವುದು, ಸಂಜೆ ಒಂದು ದಿವ್ಯ ಬಕಪಕ್ಷಿಗಳ ರಾಜ ರಾಜಧರ್ಮನ ಮನೆಯಲ್ಲಿ ಅತಿಥಿಯಾಗಿ ಉಳಿಯುವುದು (1-23).

12163001 ಭೀಷ್ಮ ಉವಾಚ|
12163001a ತಸ್ಯಾಂ ನಿಶಾಯಾಂ ವ್ಯುಷ್ಟಾಯಾಂ ಗತೇ ತಸ್ಮಿನ್ದ್ವಿಜೋತ್ತಮೇ|
12163001c ನಿಷ್ಕ್ರಮ್ಯ ಗೌತಮೋಽಗಚ್ಚತ್ಸಮುದ್ರಂ ಪ್ರತಿ ಭಾರತ||

ಭೀಷ್ಮನು ಹೇಳಿದನು: “ಭಾರತ! ರಾತ್ರಿಯು ಕಳೆಯಲು ಆ ದ್ವಿಜೋತ್ತಮನು ಹೊರಟು ಹೋಗನು ಮತ್ತು ಗೌತಮನೂ ಕೂಡ ಹೊರಟು ಸಮುದ್ರದ ಕಡೆ ಪ್ರಯಾಣಬೆಳೆಸಿದನು.

12163002a ಸಾಮುದ್ರಕಾನ್ಸ ವಣಿಜಸ್ತತೋಽಪಶ್ಯತ್ ಸ್ಥಿತಾನ್ಪಥಿ|
12163002c ಸ ತೇನ ಸಾರ್ಥೇನ ಸಹ ಪ್ರಯಯೌ ಸಾಗರಂ ಪ್ರತಿ||

ಮಾರ್ಗದಲ್ಲಿ ಸಮುದ್ರದ ಹತ್ತಿರ ಕೆಲವು ವಣಿಜರು ತಂಗಿದ್ದುದನ್ನು ನೋಡಿದನು. ಅವರ ಜೊತೆಗೂಡಿ ಅವನು ಸಾಗರದ ಕಡೆ

ಪ್ರಯಾಣಿಸಿದನು.

12163003a ಸ ತು ಸಾರ್ಥೋ ಮಹಾರಾಜ ಕಸ್ಮಿಂಶ್ಚಿದ್ಗಿರಿಗಹ್ವರೇ|
12163003c ಮತ್ತೇನ ದ್ವಿರದೇನಾಥ ನಿಹತಃ ಪ್ರಾಯಶೋಽಭವತ್||

ಮಹಾರಾಜ! ಯಾವುದೋ ಒಂದು ಗಿರಿಯ ಗುಹೆಯಲ್ಲಿ ತಂಗಿದ್ದ ಆ ವೈಶ್ಯರನ್ನು ಒಂದು ಮದಿಸಿದ ಆನೆಯು ಆಕ್ರಮಣಿಸಿ ದಳದ ಬಹಳಷ್ಟು ಮಂದಿ ಹತರಾದರು.

12163004a ಸ ಕಥಂ ಚಿತ್ತತಸ್ತಸ್ಮಾತ್ಸಾರ್ಥಾನ್ಮುಕ್ತೋ ದ್ವಿಜಸ್ತದಾ|
12163004c ಕಾಂದಿಗ್ಭೂತೋ ಜೀವಿತಾರ್ಥೀ ಪ್ರದುದ್ರಾವೋತ್ತರಾಂ ದಿಶಮ್||

ಹೇಗೋ ಮಾಡಿ ಆ ದ್ವಿಜನು ದಳದಿಂದ ವಿಮುಕ್ತನಾಗಿ ಜೀವನವನ್ನು ಉಳಿಸಿಕೊಳ್ಳಲು ಯಾವ ದಿಕ್ಕಿನಲ್ಲಿ ಹೋಗಬೇಕು ಎಂದು ನಿರ್ಣಯಿಸಿ ಉತ್ತರ ದಿಕ್ಕಿನ ಕಡೆ ಓಡಿದನು.

12163005a ಸ ಸರ್ವತಃ ಪರಿಭ್ರಷ್ಟಃ ಸಾರ್ಥಾದ್ದೇಶಾತ್ತಥಾರ್ಥತಃ|
12163005c ಏಕಾಕೀ ವ್ಯದ್ರವತ್ತತ್ರ ವನೇ ಕಿಂಪುರುಷೋ ಯಥಾ||

ವರ್ತಕರ ದಳವನ್ನೂ ಬಿಟ್ಟು ಏಕಾಕಿಯಾದ ಅವನು ಆ ದೇಶದಿಂದ ಭ್ರಷ್ಟನಾಗಿ, ಕಿಂಪುರುಷನೋ ಎನ್ನುವಂತೆ ಓರ್ವನೇ ವನದಲ್ಲಿ ತಿರುಗಾಡತೊಡಗಿದನು.

12163006a ಸ ಪಂಥಾನಮಥಾಸಾದ್ಯ ಸಮುದ್ರಾಭಿಸರಂ ತದಾ|
12163006c ಆಸಸಾದ ವನಂ ರಮ್ಯಂ ಮಹತ್ಪುಷ್ಪಿತಪಾದಪಮ್[863]||

[863] ದಿವ್ಯಂ ಪುಷ್ಪಿತಪಾದಪಮ್| (ಗೀತಾ ಪ್ರೆಸ್).

ಅಲ್ಲಿ ಅವನಿಗೆ ಸಮುದ್ರದ ಕಡೆ ಹೋಗುವ ಮಾರ್ಗವು ದೊರಕಲು ಅದೇ ಮಾರ್ಗವನ್ನು ಹಿಡಿದು ಅನೇಕ ಪುಷ್ಪಭರಿತ ಮರಗಳಿಂದ ಕೂಡಿದ್ದ ಒಂದು ರಮ್ಯ ವನಕ್ಕೆ ಬಂದನು.

12163007a ಸರ್ವರ್ತುಕೈರಾಮ್ರವನೈಃ ಪುಷ್ಪಿತೈರುಪಶೋಭಿತಮ್|
12163007c ನಂದನೋದ್ದೇಶಸದೃಶಂ ಯಕ್ಷಕಿನ್ನರಸೇವಿತಮ್||

ಸರ್ವಋತುಗಳಲ್ಲಿಯೂ ಹೂಬಿಡುವ ಮಾವಿನ ಮರಗಳ ಸಾಲಿನಿಂದ ಅದು ಶೋಭಿಸುತ್ತಿತ್ತು. ಯಕ್ಷ-ಕಿನ್ನರರು ಬಳಸುತ್ತಿದ್ದ ಆ ವನವು ನಂದನವನದಂತೆ ತೋರುತ್ತಿತ್ತು.

12163008a ಶಾಲತಾಲಧವಾಶ್ವತ್ಥತ್ವಚಾಗುರುವನೈಸ್ತಥಾ[864]|
12163008c ಚಂದನಸ್ಯ ಚ ಮುಖ್ಯಸ್ಯ ಪಾದಪೈರುಪಶೋಭಿತಮ್|
12163008e ಗಿರಿಪ್ರಸ್ಥೇಷು ರಮ್ಯೇಷು ಶುಭೇಷು ಸುಸುಗಂಧಿಷು||
12163009a ಸಮಂತತೋ ದ್ವಿಜಶ್ರೇಷ್ಠಾ ವಲ್ಗು ಕೂಜಂತಿ ತತ್ರ ವೈ|
12163009c ಮನುಷ್ಯವದನಾಸ್ತ್ವನ್ಯೇ ಭಾರುಂಡಾ ಇತಿ ವಿಶ್ರುತಾಃ|
12163009e ಭೂಲಿಂಗಶಕುನಾಶ್ಚಾನ್ಯೇ ಸಮುದ್ರಂ ಸರ್ವತೋಽಭವನ್[865]||

ಶಾಲ, ತಾಲ, ಧವಾ, ಅಶ್ವತ್ಥ, ಅಗುರುವಿನ ವನ, ಹಾಗೂ ಶ್ರೇಷ್ಠ ಚಂದನ ವೃಕ್ಷಗಳು ಆ ವನಕ್ಕೆ ಶೋಭೆನೀಡುತ್ತಿದ್ದವು. ಅಲ್ಲಿಯ ರಮಣೀಯ ಮತ್ತು ಸುಗಂಧಿತ ಪರ್ವತ ತಪ್ಪಲು ಪ್ರದೇಶಗಳಲ್ಲಿ ಎಲ್ಲಕಡೆ ಉತ್ತಮೋತ್ತಮ ಪಕ್ಷಿಗಳು ಕಲರವ ಮಾಡುತ್ತಿದ್ದವು. ಕೆಲವು ಮನುಷ್ಯನ ಮುಖವುಳ್ಳ ಭಾರುಂಡ ಎಂಬ ಪಕ್ಷಿಗಳಿದ್ದವು. ಇನ್ನು ಕೆಲವು

---

[864] ಶಾಲೈಸ್ತಾಲೈಸ್ತಮಾಲೈಶ್ಚ ಕಾಲಾಗುರುವನೈಸ್ತಥಾ| (ಗೀತಾ ಪ್ರೆಸ್).

[865] ಸಮುದ್ರಾಃ ಪರ್ವತೋದ್ಭವಾಃ|| (ಗೀತಾ ಪ್ರೆಸ್).

ಸಮುದ್ರದ ಸುತ್ತಲೂ ಇರುವ ಭೂಲಿಂಗಪಕ್ಷಿಗಳು ಇದ್ದವು.

12163010a ಸ ತಾನ್ಯತಿಮನೋಜ್ಞಾನಿ ವಿಹಂಗಾಭಿರುತಾನಿ ವೈ|
12163010c ಶೃಣ್ವನ್ಸುರಮಣೀಯಾನಿ ವಿಪ್ರೋಽಗಚ್ಚತ ಗೌತಮಃ||

ಪಕ್ಷಿಗಳ ಆ ಮಧುರ ಮನೋಹರ ಮತ್ತು ರಮಣೀಯ ಕಲರವಗಳನ್ನು ಕೇಳುತ್ತಾ ವಿಪ್ರ ಗೌತಮನು ಮುಂದೆ ನಡೆದನು.

12163011a ತತೋಽಪಶ್ಯತ್ಸುರಮ್ಯೇ ಸ ಸುವರ್ಣಸಿಕತಾಚಿತೇ|
12163011c ದೇಶಭಾಗೇ ಸಮೇ ಚಿತ್ರೇ ಸ್ವರ್ಗೋದ್ದೇಶಸಮಪ್ರಭೇ||
12163012a ಶ್ರಿಯಾ ಜುಷ್ಟಂ ಮಹಾವೃಕ್ಷಂ ನ್ಯಗ್ರೋಧಂ ಪರಿಮಂಡಲಮ್|
12163012c ಶಾಖಾಭಿರನುರೂಪಾಭಿರ್ಭೂಷಿತಂ ಚತ್ರಸಂನಿಭಮ್||

ಆಗ ಅವನಿಗೆ ಚಿನ್ನದ ಮರಳಿನ ರಾಶಿಗಳಿಂದ ಸಮಾವೃತವಾಗಿದ್ದ ಒಂದು ಸಮತಲ ಸುರಮ್ಯ ಸ್ಥಳವು ಸಿಕ್ಕಿತು. ಸುಖದಾಯಕವಾದ ಆ ಸ್ಥಳವು ವಿಚಿತ್ರವಾಗಿಯೂ ಸ್ವರ್ಗಕ್ಕೆ ಸಮನಾಗಿಯೂ ಇತ್ತು. ಅಲ್ಲಿ ಮಂಡಲಾಕಾರದ ಅತ್ಯಂತ ಕಾಂತಿಯುಕ್ತವಾದ ಒಂದು ಆಲದ ಮಹಾವೃಕ್ಷವನ್ನು ಕಂಡನು. ತಕ್ಕುದಾದ ದೊಡ್ಡ ದೊಡ್ಡ ರೆಂಬೆಗಳಿಂದ ಕೂಡಿದ್ದ ಆ ವೃಕ್ಷವು ತೆರೆದಿಟ್ಟ ಛತ್ರಿಯಂತೆಯೇ ತೋರುತ್ತಿತ್ತು.

12163013a ತಸ್ಯ ಮೂಲಂ ಸುಸಂಸಿಕ್ತಂ ವರಚಂದನವಾರಿಣಾ|
12163013c ದಿವ್ಯಪುಷ್ಪಾನ್ವಿತಂ ಶ್ರೀಮತ್ಪಿತಾಮಹಸದೋಪಮಮ್||

ಅದರ ಬುಡವು ಶ್ರೇಷ್ಠ ಚಂದನದ ನೀರಿನಿಂದ ಒದ್ದೆಯಾಗಿತ್ತು. ಪಿತಾಮಹ ಬ್ರಹ್ಮನ ಸಭೆಯಂತೆ ಶೋಭಾಯಮಾನವಾಗಿದ್ದ ಆ ಆಲದ ಮರವು ದಿವ್ಯ ಪುಷ್ಪಗಳಿಂದ ಕೂಡಿತ್ತು.

12163014a ತಂ ದೃಷ್ಟ್ವಾ ಗೌತಮಃ ಪ್ರೀತೋ ಮುನಿಕಾಂತಮನುತ್ತಮಮ್[866]|
12163014c ಮೇಧ್ಯಂ ಸುರಗೃಹಪ್ರಖ್ಯಂ ಪುಷ್ಪಿತೈಃ ಪಾದಪೈರ್ವೃತಮ್|
12163014e ತಮಾಗಮ್ಯ ಮುದಾ ಯುಕ್ತಸ್ತಸ್ಯಾಧಸ್ತಾದುಪಾವಿಶತ್||

ಮನಸ್ಸಿಗೆ ಆಹ್ಲಾದಕರವಾಗಿದ್ದ ಆ ಅನುತ್ತಮ ವೃಕ್ಷವನ್ನು ನೋಡಿ
ಗೌತಮನು ಪ್ರೀತನಾದನು. ಸುಪುಷ್ಪಿತ ವೃಕ್ಷಗಳಿಂದ
ಸುತ್ತುವರೆಯಲ್ಪಟ್ಟಿದ್ದ ಆ ಆಲದಮರವು ಪವಿತ್ರ ದೇವಗೃಹಕ್ಕೆ
ಸಮಾನವಾಗಿತ್ತು. ಗೌತಮನು ಆ ವೃಕ್ಷದ ಸಮೀಪ ಹೋಗಿ
ಆಶ್ಚರ್ಯದಿಂದ ನೋಡುತ್ತಾ ಅದರ ಕೆಳಗೆ ಕುಳಿತುಕೊಂಡನು.

12163015a ತತ್ರಾಸೀನಸ್ಯ ಕೌರವ್ಯ ಗೌತಮಸ್ಯ ಸುಖಿಃ ಶಿವಃ|
12163015c ಪುಷ್ಪಾಣಿ ಸಮುಪಸ್ಪೃಶ್ಯ ಪ್ರವವಾವನಿಲಃ ಶುಚಿಃ|
12163015e ಹ್ಲಾದಯನ್ಸರ್ವಗಾತ್ರಾಣಿ ಗೌತಮಸ್ಯ ತದಾ ನೃಪ||

ಕೌರವ್ಯ! ನೃಪ! ಗೌತಮನು ಅಲ್ಲಿ ಕುಳಿತುಕೊಳ್ಳಲು ಸುಖಕರ ಮತ್ತು
ಮಂಗಳಮಯನಾದ ಶುಭ ಶುಚಿ ಅನಿಲನು ಹೂವುಗಳನ್ನು ಸ್ಪರ್ಶಿಸಿ
ಗೌತಮನ ಸರ್ವಾಂಗಗಳನ್ನೂ ಆಹ್ಲಾದಗೊಳಿಸುತ್ತಾ
ಮಂದಮಂದವಾಗಿ ಅವನ ಮೇಲೆ ಬೀಸತೊಡಗಿದನು.

12163016a ಸ ತು ವಿಪ್ರಃ ಪರಿಶ್ರಾಂತಃ ಸ್ಪೃಷ್ಟಃ ಪುಣ್ಯೇನ ವಾಯುನಾ|
12163016c ಸುಖಿಮಾಸಾದ್ಯ ಸುಷ್ವಾಪ ಭಾಸ್ಕರಶ್ಚಾಸ್ತಮಭ್ಯಗಾತ್||

ಪುಣ್ಯ ವಾಯುವಿನ ಸ್ಪರ್ಶದಿಂದ ಪರಿಶ್ರಾಂತನಾಗಿದ್ದ ವಿಪ್ರನು
ಸುಖಿವನ್ನು ಹೊಂದಿ ಅಲ್ಲಿಯೇ ಮಲಗಿಬಿಟ್ಟನು. ಅಷ್ಟರಲ್ಲಿಯೇ

[866] ಮನಃಕಾಂತಮನುತ್ತಮಮ್| (ಗೀತಾ ಪ್ರೆಸ್).

ಸೂರ್ಯನೂ ಮುಳುಗಿದನು.

12163017a ತತೋಽಸ್ತಂ ಭಾಸ್ಕರೇ ಯಾತೇ ಸಂಧ್ಯಾಕಾಲ ಉಪಸ್ಥಿತೇ|
12163017c ಆಜಗಾಮ ಸ್ವಭವನಂ ಬ್ರಹ್ಮಲೋಕಾತ್ಖಗೋತ್ತಮಃ||

ಭಾಸ್ಕರನು ಮುಳುಗಿ ಸಂಧ್ಯಾಕಾಲವಾಗಲು ಬ್ರಹ್ಮಲೋಕದಿಂದ
ಪಕ್ಷಿಶ್ರೇಷ್ಠನು ಬ್ರಹ್ಮಲೋಕದಿಂದ ತನ್ನ ಮನೆಗೆ ಹಿಂದಿರುಗಿದನು.

12163018a ನಾಡೀಜಂಘ ಇತಿ ಖ್ಯಾತೋ ದಯಿತೋ ಬ್ರಹ್ಮಣಃ ಸಖಾ|
12163018c ಬಕರಾಜೋ ಮಹಾಪ್ರಾಜ್ಞಃ ಕಶ್ಯಪಸ್ಯಾತ್ಮಸಂಭವಃ||

ನಾಡೀಜಂಘ ಎಂದು ಖ್ಯಾತನಾಗಿದ್ದ ಅವನು ಬ್ರಹ್ಮನ ಸಖಿನಾಗಿದ್ದನು.
ಕಶ್ಯಪನ ಮಗನಾಗಿದ್ದ ಅವನು ಬಕಪಕ್ಷಿಗಳ ರಾಜನೂ ಆಗಿದ್ದನು.

12163019a ರಾಜಧರ್ಮೇತಿ ವಿಖ್ಯಾತೋ ಬಭೂವಾಪ್ರತಿಮೋ ಭುವಿ|
12163019c ದೇವಕನ್ಯಾಸುತಃ ಶ್ರೀಮಾನ್ವಿದ್ವಾನ್ದೇವಪತಿಪ್ರಭಃ||

ಅವನು ರಾಜಧರ್ಮನೆಂದು ವಿಖ್ಯಾತನಾಗಿ ಭುವಿಯಲ್ಲಿಯೇ
ಅಪ್ರತಿಮನೆನಿಸಿಕೊಂಡಿದ್ದನು. ದೇವಕನ್ಯೆಯ ಸುತನಾಗಿದ್ದ ಆ
ಶ್ರೀಮಾನನು ವಿದ್ವತ್ತನ್ನೂ ದೇವಪತಿಯ ಕಾಂತಿಯನ್ನೂ ಹೊಂದಿದ್ದನು.

12163020a ಮೃಷ್ಟಹಾಟಕಸಂಚನ್ನೋ ಭೂಷಣೈರರ್ಕಸಂನಿಭೈಃ|
12163020c ಭೂಷಿತಃ ಸರ್ವಗಾತ್ರೇಷು ದೇವಗರ್ಭಃ ಶ್ರಿಯಾ ಜ್ವಲನ್||

ಅವನು ಅಂಗಾಂಗಗಳಲ್ಲಿ ಸೂರ್ಯನಂತೆ ಹೊಳೆಯುತ್ತಿದ್ದ
ಭೂಷಣಗಳನ್ನು ಧರಿಸಿದ್ದನು. ಆ ದೇವಗರ್ಭನು ತನ್ನ ಸರ್ವ
ಅಂಗಾಂಗಗಳಲ್ಲಿಯೂ ದಿವ್ಯ ಆಭರಣಗಳನ್ನು ಧರಿಸಿ
ದಿವ್ಯಕಾಂತಿಯಿಂದ ದೇದೀಪ್ಯಮಾನನಾಗಿದ್ದನು.

12163021a ತಮಾಗತಂ ದ್ವಿಜಂ ದೃಷ್ಟ್ವಾ ವಿಸ್ಮಿತೋ ಗೌತಮೋಽಭವತ್|
12163021c ಕ್ಷುತ್ಪಿಪಾಸಾಪರೀತಾತ್ಮಾ ಹಿಂಸಾರ್ಥೀ ಚಾಪ್ಯವೈಕ್ಷತ||

ಆಗಮಿಸಿದ ಪಕ್ಷಿಯನ್ನು ನೋಡಿ ಗೌತಮನು ವಿಸ್ಮಿತನಾದನು. ಹಸಿವು-ಬಾಯಾರಿಕೆಗಳಿಂದ ಬಳಲಿದ್ದ ಅವನು ಆ ಪಕ್ಷಿಯನ್ನು ಕೊಲ್ಲುವ ಇಚ್ಛೆಯಿಂದ ಅವನ ಕಡೆ ನೋಡಿದನು.

12163022 ರಾಜಧರ್ಮೋವಾಚ|
12163022a ಸ್ವಾಗತಂ ಭವತೇ ವಿಪ್ರ ದಿಷ್ಟ್ಯಾ ಪ್ರಾಪ್ತೋಽಸಿ ಮೇ ಗೃಹಮ್|
12163022c ಅಸ್ತಂ ಚ ಸವಿತಾ ಯಾತಃ ಸಂಧ್ಯೇಯಂ ಸಮುಪಸ್ಥಿತಾ||

ರಾಜಧರ್ಮನು ಹೇಳಿದನು: "ವಿಪ್ರ! ನಿನಗೆ ಸ್ವಾಗತ! ಒಳ್ಳೆಯದಾಯಿತು ನೀನು ನನ್ನ ಮನೆಗೆ ಬಂದಿದ್ದೀಯೆ. ಸೂರ್ಯನೂ ಮುಳುಗಿದ್ದಾನೆ. ಸಾಯಂಕಾಲವಾಗಿಬಿಟ್ಟಿದೆ.

12163023a ಮಮ ತ್ವಂ ನಿಲಯಂ ಪ್ರಾಪ್ತಃ ಪ್ರಿಯಾತಿಥಿರನಿಂದಿತಃ|
12163023c ಪೂಜಿತೋ ಯಾಸ್ಯಸಿ ಪ್ರಾತರ್ವಿಧಿದೃಷ್ಟೇನ ಕರ್ಮಣಾ||

ನೀನು ನನ್ನ ಮನೆಗೆ ಬಂದಿರುವ ಪ್ರೀತಿಯ ಮತ್ತು ಉತ್ತಮ ಅತಿಥಿಯು. ಬೆಳಿಗ್ಗೆ ನಾನು ವಿಧಿವತ್ತಾದ ಕರ್ಮಗಳಿಂದ ನಿನ್ನನ್ನು ಪೂಜಿಸಿದ ನಂತರ ನೀನು ಹೊರಡಬಹುದು.""

ಇತಿ ಶ್ರೀಮಹಾಭಾರತೇ ಶಾಂತಿ ಪರ್ವಣಿ ಆಪದ್ಧರ್ಮ ಪರ್ವಣಿ ಕೃತಘ್ನೋಪಾಖ್ಯಾನೇ ತ್ರಿಷಷ್ಟ್ಯಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿ ಪರ್ವದಲ್ಲಿ ಆಪದ್ಧರ್ಮ ಪರ್ವದಲ್ಲಿ ಕೃತಘ್ನೋಪಾಖ್ಯಾನ ಎನ್ನುವ ನೂರಾಅರವತ್ಮೂರನೇ

೧೬೪

ರಾಜಧರ್ಮನು ಗೌತಮನನ್ನು ಸತ್ಕರಿಸಿದುದು; ಅವನ ಸೂಚನೆಯಂತೆ ಧನವನ್ನರಸಿಬಂದಿದ್ದ ಗೌತಮನು ರಾಜಧರ್ಮನ ಮಿತ್ರ ರಾಕ್ಷಸರಾಜ ವಿರೂಪಾಕ್ಷನ ನಗರಕ್ಕೆ ಹೋದುದು (1-23).

12164001 ಭೀಷ್ಮ ಉವಾಚ|
12164001a ಗಿರಂ ತಾಂ ಮಧುರಾಂ ಶ್ರುತ್ವಾ ಗೌತಮೋ ವಿಸ್ಮಿತಸ್ತದಾ|
12164001c ಕೌತೂಹಲಾನ್ವಿತೋ ರಾಜನ್ರಾಜಧರ್ಮಾಣಮೈಕ್ಷತ||

ಭೀಷ್ಮನು ಹೇಳಿದನು: "ರಾಜನ್! ಪಕ್ಷಿಯ ಮಧುರ ವಾಣಿಯನ್ನು ಕೇಳಿದ ಗೌತಮನು ವಿಸ್ಮಿತನಾದನು. ಕುತೂಹಲಗೊಂಡ ಅವನು ರಾಜಧರ್ಮನನ್ನು ವೀಕ್ಷಿಸಿದನು.

12164002 ರಾಜಧರ್ಮೋವಾಚ|
12164002a ಭೋಃ ಕಶ್ಯಪಸ್ಯ ಪುತ್ರೋಽಹಂ ಮಾತಾ ದಾಕ್ಷಾಯಣೀ ಚ ಮೇ|
12164002c ಅತಿಥಿಸ್ತ್ವಂ ಗುಣೋಪೇತಃ ಸ್ವಾಗತಂ ತೇ ದ್ವಿಜರ್ಷಭ||

ರಾಜಧರ್ಮನು ಹೇಳಿದನು: "ಭೋ! ದ್ವಿಜರ್ಷಭ! ಕಶ್ಯಪನ ಪುತ್ರನು ನಾನು. ನನ್ನ ಮಾತೆಯು ದಾಕ್ಷಾಯಣಿಯು. ನೀನು ಗುಣವಂತ ಅತಿಥಿಯಾಗಿರುವೆ. ನಿನಗೆ ಸ್ವಾಗತವು.""

12164003 ಭೀಷ್ಮ ಉವಾಚ|
12164003a ತಸ್ಮೈ ದತ್ತ್ವಾ ಸ ಸತ್ಕಾರಂ ವಿಧಿದೃಷ್ಟೇನ ಕರ್ಮಣಾ|
12164003c ಶಾಲಪುಷ್ಪಮಯೀಂ ದಿವ್ಯಾಂ ಬೃಸೀಂ ಸಮುಪಕಲ್ಪಯತ್||



ಭೀಷ್ಮನು ಹೇಳಿದನು: "ಹೀಗೆ ಹೇಳಿ ರಾಜಧರ್ಮನು
ಶಾಸ್ತ್ರವಿಧಿಗನುಸಾರವಾಗಿ ಅವನನ್ನು ಸತ್ಕರಿಸಿದನು. ಶಾಲವೃಕ್ಷದ
ಹೂವನ್ನು ಹಾಸಿ ದಿವ್ಯ ಆಸನವನ್ನು ರಚಿಸಿ ಅವನಿಗೆ ಕುಳಿತುಕೊಳ್ಳಲು
ನೀಡಿದನು.

12164004a ಭಗೀರಥರಥಾಕ್ರಾಂತಾನ್ದೇಶಾನ್ಗಂಗಾನಿಷೇವಿತಾನ್|
12164004c ಯೇ ಚರಂತಿ ಮಹಾಮೀನಾಸ್ತಾಂಶ್ಚ ತಸ್ಯಾನ್ವಕಲ್ಪಯತ್||

ಭಗೀರಥನ ರಥವು ಹೋಗಿದ್ದ ಪ್ರದೇಶದಲ್ಲಿ ಹರಿಯುತ್ತಿದ ಗಂಗೆಯಲ್ಲಿ
ಸಂಚರಿಸುತ್ತಿದ್ದ ಮೀನುಗಳನ್ನು ತಂದು ರಾಜಧರ್ಮನು ಗೌತಮನಿಗೆ
ಭೋಜನದ ವ್ಯವಸ್ಥೆಯನ್ನು ಮಾಡಿದನು.

12164005a ವಹ್ನಿಂ ಚಾಪಿ ಸುಸಂದೀಪ್ತಂ ಮೀನಾಂಶ್ಚೈವ ಸುಪೀವರಾನ್|
12164005c ಸ ಗೌತಮಾಯಾತಿಥಯೇ ನ್ಯವೇದಯತ ಕಾಶ್ಯಪಃ||

ಕಾಶ್ಯಪ ರಾಜಧರ್ಮನು ಚೆನ್ನಾಗಿ ಅಗ್ನಿಯನ್ನು ಹೊತ್ತಿಸಿ ದೊಡ್ಡ ದೊಡ್ಡ
ಮೀನುಗಳನ್ನು ಇಟ್ಟು ಅತಿಥಿ ಗೌತಮನಿಗೆ ನಿವೇದಿಸಿದನು.

12164006a ಭುಕ್ತವಂತಂ ಚ ತಂ ವಿಪ್ರಂ ಪ್ರೀತಾತ್ಮಾನಂ ಮಹಾಮನಾಃ|
12164006c ಕ್ಲಮಾಪನಯನಾರ್ಥಂ ಸ ಪಕ್ಷಾಭ್ಯಾಮಭ್ಯವೀಜಯತ್||

ಆ ಮೀನುಗಳನ್ನು ಬೇಯಿಸಿ ತಿಂದು ಅವನ ಅಂತರಾತ್ಮವು ತೃಪ್ತವಾದ
ನಂತರ ಆ ಮಹಾತಪಸ್ವೀ ಪಕ್ಷಿಯು ಅವನ ಆಯಾಸವನ್ನು
ದೂರಗೊಳಿಸಲು ತನ್ನ ರೆಕ್ಕೆಗಳಿಂದ ಗಾಳಿಬೀಸತೊಡಗಿದನು.

12164007a ತತೋ ವಿಶ್ರಾಂತಮಾಸೀನಂ ಗೋತ್ರಪ್ರಶ್ನಮಪೃಚ್ಚತ|
12164007c ಸೋಽಬ್ರವೀದ್ಗೌತಮೋಽಸ್ಮೀತಿ ಬ್ರಾಹ್ಮ ನಾನ್ಯದುದಾಹರತ್||

ವಿಶ್ರಾಂತಿಪಡೆದು ಎದ್ದು ಕುಳಿತಿದ್ದಾಗ ರಾಜಧರ್ಮನು ಅವನ ಗೋತ್ರವನ್ನು ಪ್ರಶ್ನಿಸಿದನು. "ಗೌತಮ ಗೋತ್ರದ ಬ್ರಾಹ್ಮಣನು" ಎಂದು ಹೇಳಿ ಅದಕ್ಕಿಂತಲೂ ಹೆಚ್ಚಿನ ಏನನ್ನೂ ಅವನು ಹೇಳಲಿಲ್ಲ.

12164008a ತಸ್ಮೈ ಪರ್ಣಮಯಂ ದಿವ್ಯಂ ದಿವ್ಯಪುಷ್ಪಾಧಿವಾಸಿತಮ್|
12164008c ಗಂಧಾಢ್ಯಂ ಶಯನಂ ಪ್ರಾದಾತ್ಸ ಶಿಶ್ಯೇ ತತ್ರ ವೈ ಸುಖಮ್||

ನಂತರ ಪಕ್ಷಿಯು ಅವನಿಗೆ ಎಲೆಗಳನ್ನು ಹಾಸಿ ದಿವ್ಯಪುಷ್ಪಗಳ ಸುವಾಸನೆಯಿಂದ ಕೂಡಿದ ದಿವ್ಯ ಹಾಸಿಗೆಯನ್ನು ಅವನಿಗೆ ನೀಡಿದನು. ಗೌತಮನು ಅದರ ಮೇಲೆ ಸುಖಪೂರ್ವಕವಾಗಿ ನಿದ್ರಿಸಿದನು.

12164009a ಅಥೋಪವಿಷ್ಟಂ ಶಯನೇ ಗೌತಮಂ ಬಕರಾಟ್ತದಾ[867]|
12164009c ಪಪ್ರಚ್ಚ ಕಾಶ್ಯಪೋ ವಾಗ್ಮೀ ಕಿಮಾಗಮನಕಾರಣಮ್||

ಅವನು ಹಾಸಿಗೆಯ ಮೇಲೆ ಕುಳಿತುಕೊಂಡಾಗ ಕಾಶ್ಯಪ ವಾಗ್ಮೀ ಬಕರಾಜನು ಗೌತಮನನ್ನು ಅಲ್ಲಿಗೆ ಆಗಮಿಸಿದುದರ ಕಾರಣವನ್ನು ಕೇಳಿದನು.

12164010a ತತೋಽಬ್ರವೀದ್ಗೌತಮಸ್ತಂ ದರಿದ್ರೋಽಹಂ ಮಹಾಮತೇ|
12164010c ಸಮುದ್ರಗಮನಾಕಾಂಕ್ಷೀ ದ್ರವ್ಯಾರ್ಥಮಿತಿ ಭಾರತ||

ಭಾರತ! ಗೌತಮನು ಅವನಿಗೆ ಹೇಳಿದನು: "ಮಹಾಮತೇ! ನಾನು ದರಿದ್ರನು. ದ್ರವ್ಯವನ್ನು ಅರಸಿ ಸಮುದ್ರತೀರಕ್ಕೆ ಹೋಗಲು ಬಯಸಿ ಹೊರಟಿದ್ದೇನೆ."

12164011a ತಂ ಕಾಶ್ಯಪೋಽಬ್ರವೀತ್ಪ್ರೀತೋ ನೋತ್ಕಂಠಾಂ ಕರ್ತುಮರ್ಹಸಿ|

---

867 ಧರ್ಮರಾಟ್ ತದಾ (ಗೀತಾ ಪ್ರೆಸ್).

12164011c ಕೃತಕಾರ್ಯೋ ದ್ವಿಜಶ್ರೇಷ್ಠ ಸದ್ರವ್ಯೋ ಯಾಸ್ಯಸೇ ಗೃಹಾನ್‌॥

ಕಾಶ್ಯಪನು ಅವನಿಗೆ ಹೇಳಿದನು: "ದ್ವಿಜಶ್ರೇಷ್ಠ! ಅಲ್ಲಿಯವರೆಗೆ ಹೋಗಬೇಕಾಗಿಲ್ಲ. ಇಲ್ಲಿಯೇ ನಿನ್ನ ಕೆಲಸವು ಆಗುವುದು. ನೀನು ಇಲ್ಲಿಂದಲೇ ಧನವನ್ನು ತೆಗೆದುಕೊಂಡು ನಿನ್ನ ಮನೆಗೆ ಹಿಂದಿರುಗು!

12164012a ಚತುರ್ವಿಧಾ ಹ್ಯರ್ಥಗತಿರ್ಬೃಹಸ್ಪತಿಮತಂ ಯಥಾ|
12164012c ಪಾರಂಪರ್ಯಂ ತಥಾ ದೈವಂ ಕರ್ಮ ಮಿತ್ರಮಿತಿ ಪ್ರಭೋ॥

ಪ್ರಭೋ! ಬೃಹಸ್ಪತಿಯ ಮತದಂತೆ ನಾಲ್ಕು ಪ್ರಕಾರಗಳಲ್ಲಿ ಅರ್ಥಸಿದ್ಧಿಯಾಗುತ್ತದೆ: ಪಾರಂಪರಿಕವಾಗಿ, ಪ್ರಾರಬ್ಧದ ಅನುಕೂಲದಿಂದಾಗಿ, ಧನವನ್ನು ಉದ್ದೇಶಿಸಿ ಮಾಡಿದ ಕರ್ಮದಿಂದ ಮತ್ತು ಮಿತ್ರನ ಸಹಯೋಗದಿಂದ.

12164013a ಪ್ರಾದುರ್ಭೂತೋಽಸ್ಮಿ ತೇ ಮಿತ್ರಂ ಸುಹೃತ್ತ್ವಂ ಚ ಮಮ ತ್ವಯಿ|
12164013c ಸೋಽಹಂ ತಥಾ ಯತಿಷ್ಯಾಮಿ ಭವಿಷ್ಯಸಿ ಯಥಾರ್ಥವಾನ್‌॥

ನಾನು ನಿನ್ನ ಮಿತ್ರನಾಗಿಬಿಟ್ಟಿದ್ದೇನೆ. ನನಗೆ ನಿನ್ನ ಮೇಲೆ ಸೌಹಾರ್ದತೆಯು ಹೆಚ್ಚಾಗಿದೆ. ಆದುದರಿಂದ ನೀನು ಅರ್ಥವಾನನಾಗುವಂತೆ ಪ್ರಯತ್ನಿಸುತ್ತೇನೆ."

12164014a ತತಃ ಪ್ರಭಾತಸಮಯೇ ಸುಖಂ ಪೃಷ್ಟ್ವಾ ಬ್ರವೀದಿದಮ್‌|
12164014c ಗಚ್ಚ ಸೌಮ್ಯ ಪಥಾನೇನ ಕೃತಕೃತ್ಯೋ ಭವಿಷ್ಯಸಿ॥
12164015a ಇತಸ್ತ್ರಿಯೋಜನಂ ಗತ್ವಾ ರಾಕ್ಷಸಾಧಿಪತಿರ್ಮಹಾನ್‌|
12164015c ವಿರೂಪಾಕ್ಷ ಇತಿ ಖ್ಯಾತಃ ಸಖಾ ಮಮ ಮಹಾಬಲಃ॥

ಅನಂತರ ಪ್ರಭಾತಸಮಯದಲ್ಲಿ ಬ್ರಾಹ್ಮಣನ ಸುಖದ ಕುರಿತು ಕೇಳಿ

ಪಕ್ಷಿಯು ಇದನ್ನು ಹೇಳಿದನು: "ಸೌಮ್ಯ! ಇದೇ ದಾರಿಯಲ್ಲಿ ಹೋಗು. ಕೃತಕೃತ್ಯನಾಗುತ್ತೀಯೆ. ಇಲ್ಲಿಂದ ಮೂರು ಯೋಜನೆಯಲ್ಲಿ ನನ್ನ ಸಖ ಮಹಾಬಲ ವಿರೂಪಾಕ್ಷ ಎಂದು ಖ್ಯಾತನಾದ ಮಹಾನ್ ರಾಕ್ಷಸಾಧಿಪನಿದ್ದಾನೆ.

12164016a ತಂ ಗಚ್ಚ ದ್ವಿಜಮುಖ್ಯ ತ್ವಂ ಮಮ ವಾಕ್ಯಪ್ರಚೋದಿತಃ|
12164016c ಕಾಮಾನಭೀಪ್ಸಿತಾಂಸ್ತುಭ್ಯಂ ದಾತಾ ನಾಸ್ತ್ಯತ್ರ ಸಂಶಯಃ||

ದ್ವಿಜಮುಖ್ಯ! ಅವನಲ್ಲಿಗೆ ನೀನು ಹೋಗು. ಅವನು ನನ್ನ ಮಾತಿನಂತೆ ನಿನಗೆ ಬೇಕಾದಷ್ಟು ಧನವನ್ನು ಕೊಡುತ್ತಾನೆ ಮತ್ತು ಮನೋವಾಂಛಿತ ಕಾಮನೆಗಳೆಲ್ಲವನ್ನೂ ಪೂರೈಸುತ್ತಾನೆ. ಅದರಲ್ಲಿ ಸಂಶಯವಿಲ್ಲ."

12164017a ಇತ್ಯುಕ್ತಃ ಪ್ರಯಯೌ ರಾಜನ್ಗೌತಮೋ ವಿಗತಕ್ಲಮಃ|
12164017c ಫಲಾನ್ಯಮೃತಕಲ್ಪಾನಿ ಭಕ್ಷಯನ್ಸ್ವಾ ಯಥೇಷ್ಟತಃ||
12164018a ಚಂದನಾಗುರುಮುಖ್ಯಾನಿ ತ್ವಕ್ಪತ್ರಾಣಾಂ ವನಾನಿ ಚ|
12164018c ತಸ್ಮಿನ್ಪಥಿ ಮಹಾರಾಜ ಸೇವಮಾನೋ ದ್ರುತಂ ಯಯೌ||

ರಾಜನ್! ಮಹಾರಾಜ! ಅವನು ಹೀಗೆ ಹೇಳಲು ಗೌತಮನು ಅಲ್ಲಿಂದ ಹೊರಟನು. ಅವನ ಎಲ್ಲ ಆಯಾಸಗಳೂ ದೂರವಾಗಿದ್ದವು. ಮಾರ್ಗದಲ್ಲಿ ಅವನು ಚಂದನ ಮತ್ತು ಅಗುರುಗಳ ವೃಕ್ಷಗಳು ಪ್ರಧಾನವಾಗಿದ್ದ ತೇಜಪತ್ತಿಗಳ ವನದಲ್ಲಿ ವಿಶ್ರಮಿಸಿ, ಇಚ್ಛಾನುಸಾರವಾಗಿ ಅಮೃತಸಮಾನ ಮಧುರ ಫಲಗಳನ್ನು ತಿನ್ನುತ್ತಾ ಅತಿ ವೇಗದಿಂದ ಮುಂದೆ ನಡೆದನು.

12164019a ತತೋ ಮೇರುವ್ರಜಂ ನಾಮ ನಗರಂ ಶೈಲತೋರಣಮ್|
12164019c ಶೈಲಪ್ರಾಕಾರವಪ್ರಂ ಚ ಶೈಲಯಂತ್ರಾರ್ಗಲಂ ತಥಾ||

ನಂತರ ಅವನು ಮೇರುವ್ರಜ ಎಂಬ ಹೆಸರಿನ ನಗರವನ್ನು ತಲುಪಿದನು. ಶೈಲಗಳೇ ಅದಕ್ಕೆ ತೋರಣವಾಗಿದ್ದವು. ಶೈಲಗಳೇ ಅದಕ್ಕೆ ಕೋಟೆಗಳಾಗಿದ್ದವು. ಶೈಲಯಂತ್ರಗಳನ್ನು ಹೊಂದಿತ್ತು.

12164020a ವಿದಿತಶ್ಚಾಭವತ್ತಸ್ಯ ರಾಕ್ಷಸೇಂದ್ರಸ್ಯ ಧೀಮತಃ|
12164020c ಪ್ರಹಿತಃ ಸುಹೃದಾ ರಾಜನ್ಪ್ರೀಯತಾ ವೈ ಪ್ರಿಯಾತಿಥಿಃ||

ಗೌತಮನು ಧೀಮತ ರಾಕ್ಷಸೇಂದ್ರ ವಿರೂಪಾಕ್ಷನಿಗೆ ಸೇವಕರ ಮೂಲಕ ಈ ಸೂಚನೆಯನ್ನು ಕಳುಹಿಸಿದನು: "ರಾಜನ್! ನಿನ್ನ ಮಿತ್ರನು ತನ್ನ ಓರ್ವ ಪ್ರಿಯ ಅತಿಥಿಯನ್ನು ನಿನ್ನ ಬಳಿ ಕಳುಹಿಸಿದ್ದಾನೆ. ಅವನ ಮೇಲೆ ಅವನು ಅತಿ ಪ್ರಸನ್ನನಾಗಿದ್ದಾನೆ."

12164021a ತತಃ ಸ ರಾಕ್ಷಸೇಂದ್ರಃ ಸ್ವಾನ್ ಪ್ರೇಷ್ಯಾನಾಹ ಯುಧಿಷ್ಠಿರ|
12164021c ಗೌತಮೋ ನಗರದ್ವಾರಾಚ್ಚೀಘ್ರಮಾನೀಯತಾಮಿತಿ||

ಯುಧಿಷ್ಠಿರ! ಈ ಸಮಾಚರವು ಸಿಗುತ್ತಲೇ ರಾಕ್ಷಸೇಂದ್ರನು ತನ್ನ ಸೇವಕರಿಗೆ "ಗೌತಮನನ್ನು ನಗರದ್ವಾರದಿಂದ ಶೀಘ್ರವೇ ಕರೆದುಕೊಂಡು ಬನ್ನಿ" ಎಂದು ಹೇಳಿದನು.

12164022a ತತಃ ಪುರವರಾತ್ತಸ್ಮಾತ್ಪುರುಷಾಃ ಶ್ವೇತವೇಷ್ಟನಾಃ[868]|
12164022c ಗೌತಮೇತ್ಯಭಿಭಾಷಂತಃ ಪುರದ್ವಾರಮುಪಾಗಮನ್||

ಅವನ ಆದೇಶವು ಸಿಗುತ್ತಲೇ ಬಿಳೀವಸ್ತ್ರಗಳನ್ನುಟ್ಟಿದ್ದ ರಾಜಸೇವಕರು ಗೌತಮನನ್ನು ಕರೆಯುತ್ತಾ ಪುರದ್ವಾರಕ್ಕೆ ಆಗಮಿಸಿದರು.

12164023a ತೇ ತಮೂಚುರ್ಮಹಾರಾಜ ಪ್ರೇಷ್ಯಾ ರಕ್ಷಃಪತೇರ್ದ್ವಿಜಮ್|

868 ಶ್ಯೇನಚೇಷ್ಟನಾಃ (ಗೀತಾ ಪ್ರೆಸ್).

12164023c ತ್ವರಸ್ವ ತೂರ್ಣಮಾಗಚ್ಚ ರಾಜಾ ತ್ವಾಂ ದ್ರಷ್ಟುಮಿಚ್ಚತಿ||

ಮಹಾರಾಜ! ರಾಜನು ಕಳುಹಿಸಿದ ರಕ್ಷಪತಿಗಳು ಬ್ರಾಹ್ಮಣನಿಗೆ ಹೇಳಿದರು: "ತ್ವರೆಮಾಡಬೇಕು. ಬೇಗನೇ ಬರಬೇಕು. ರಾಜನು ನಿನ್ನನ್ನು ನೋಡಬಯಸುತ್ತಾನೆ.

12164024a ರಾಕ್ಷಸಾಧಿಪತಿರ್ವೀರೋ ವಿರೂಪಾಕ್ಷ ಇತಿ ಶ್ರುತಃ|
12164024c ಸ ತ್ವಾಂ ತ್ವರತಿ ವೈ ದ್ರಷ್ಟುಂ ತತ್ಕ್ಷಿಪ್ರಂ ಸಂವಿಧೀಯತಾಮ್||

ವೀರ ವಿರೂಪಾಕ್ಷನೆಂದು ಖ್ಯಾತನಾಗಿರುವ ರಾಕ್ಷಸಾಧಿಪನು ನಿನ್ನನ್ನು ನೋಡಲು ತ್ವರೆಮಾಡುತ್ತಿದ್ದಾನೆ. ಆದುದರಿಂದ ಅವನನ್ನು ಕ್ಷಿಪ್ರವಾಗಿ ಭೇಟಿಮಾಡಬೇಕು."

12164025a ತತಃ ಸ ಪ್ರಾದ್ರವದ್ವಿಪ್ರೋ ವಿಸ್ಮಯಾದ್ವಿಗತಕ್ಲಮಃ|
12164025c ಗೌತಮೋ ನಗರದ್ಧಿಂ ತಾಂ ಪಶ್ಯನ್ಪರಮವಿಸ್ಮಿತಃ||

ಕರೆಯನ್ನು ಕೇಳಿದ ಕೂಡಲೇ ವಿಸ್ಮಯವಾಗಿ ಗೌತಮನ ಆಯಾಸವು ಕಳೆದುಹೋಯಿತು. ಆ ಸಮೃದ್ಧ ನಗರಿಯನ್ನು ಕಂಡು ಅವನು ಪರಮ ವಿಸ್ಮಿತನಾದನು.

12164026a ತೈರೇವ ಸಹಿತೋ ರಾಜ್ಞೋ ವೇಶ್ಮ ತೂರ್ಣಮುಪಾದ್ರವತ್|
12164026c ದರ್ಶನಂ ರಾಕ್ಷಸೇಂದ್ರಸ್ಯ ಕಾಂಕ್ಷಮಾಣೋ ದ್ವಿಜಸ್ತದಾ||

ರಾಕ್ಷಸೇಂದ್ರನನ್ನು ಕಾಣಲು ಉತ್ಸುಕನಾಗಿ ಆ ಬ್ರಾಹ್ಮಣನು ಸೇವಕರೊಂದಿಗೆ ಶೀಘ್ರವಾಗಿಯೇ ರಾಜಭವನವನ್ನು ತಲುಪಿದನು."

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕೃತಘ್ನೋಪಾಖ್ಯಾನೇ ಚತುಃಷಷ್ಟ್ಯಧಿಕಶತಮೋಽಧ್ಯಾಯಃ||

ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕೃತಘ್ನೋಪಾಖ್ಯಾನ ಎನ್ನುವ
ನೂರಾಅರವತ್ನಾಲ್ಕನೇ ಅಧ್ಯಾಯವು.

೧೬೪

ಗೌತಮನು ರಾಕ್ಷಸರಾಜನಲ್ಲಿಂದ ಸುವರ್ಣರಾಶಿಯನ್ನು ತೆಗೆದುಕೊಂಡು ಹಿಂದಿರುಗಿದುದು ಮತ್ತು ತನ್ನ ಮಿತ್ರ ಬಕನನ್ನು ಕೊಂದು ತಿನ್ನುವುದರ ಕುರಿತು ಆಲೋಚಿಸಿದುದು (1-31).

12165001 ಭೀಷ್ಮ ಉವಾಚ|
12165001a ತತಃ ಸ ವಿದಿತೋ ರಾಜ್ಞಃ ಪ್ರವಿಶ್ಯ ಗೃಹಮುತ್ತಮಮ್|
12165001c ಪೂಜಿತೋ ರಾಕ್ಷಸೇಂದ್ರೇಣ ನಿಷಸಾದಾಸನೋತ್ತಮೇ||

ಭೀಷ್ಮನು ಹೇಳಿದನು: "ರಾಜನಿಗೆ ವಿಷಯವು ತಿಳಿದನಂತರ ಗೌತಮನು ಆ ಉತ್ತಮ ಗೃಹವನ್ನು ಪ್ರವೇಶಿಸಿ ರಾಕ್ಷಸೇಂದ್ರನಿಂದ ಪೂಜಿತನಾಗಿ ಉತ್ತಮ ಆಸನದಲ್ಲಿ ಕುಳಿತುಕೊಂಡನು.

12165002a ಪೃಷ್ಟಶ್ಚ ಗೋತ್ರಚರಣಂ ಸ್ವಾಧ್ಯಾಯಂ ಬ್ರಹ್ಮಚಾರಿಕಮ್|
12165002c ನ ತತ್ರ ವ್ಯಾಜಹಾರಾನ್ಯದ್ಗೋತ್ರಮಾತ್ರಾದೃತೇ ದ್ವಿಜಃ||

ವಿರೂಪಾಕ್ಷನು ಗೌತಮನಿಗೆ ಅವನ ಗೋತ್ರ, ಶಾಖೆ, ಮತ್ತು ಬ್ರಹ್ಮಚರ್ಯಪಾಲನ ಪೂರ್ವಕ ಮಾಡಿದ್ದ ಸ್ವಾಧ್ಯಾಯದ ಕುರಿತು ಕೇಳಿದನು. ಆದರೆ ದ್ವಿಜನು ತನ್ನ ಗೋತ್ರವಲ್ಲದೇ ಬೇರೆ ಯಾವ ವಿಷಯವನ್ನೂ ಹೇಳಲಿಲ್ಲ.

12165003a ಬ್ರಹ್ಮವರ್ಚಸಹೀನಸ್ಯ ಸ್ವಾಧ್ಯಾಯವಿರತಸ್ಯ ಚ|

12165003c ಗೋತ್ರಮಾತ್ರವಿದೋ ರಾಜಾ ನಿವಾಸಂ ಸಮಪೃಚ್ಛತ॥

ಬಹ್ಮವರ್ಚಸಹೀನ, ಸ್ವಾಧ್ಯಾಯವಿರತ, ಗೋತ್ರಮಾತ್ರವನ್ನೇ ಅರಿತಿದ್ದ ಆ ಬ್ರಾಹ್ಮಣನಿಗೆ ರಾಜನು ಅವನ ವಾಸಸ್ಥಾನದ ಕುರಿತು ಕೇಳಿದನು:

12165004a ಕ್ವ ತೇ ನಿವಾಸಃ ಕಲ್ಯಾಣ ಕಿಂಗೋತ್ರಾ ಬ್ರಾಹ್ಮಣೀ ಚ ತೇ|
12165004c ತತ್ತ್ವಂ ಬ್ರೂಹಿ ನ ಭೀಃ ಕಾರ್ಯಾ ವಿಶ್ರಮಸ್ವ[869] ಯಥಾಸುಖಮ್॥

“ಕಲ್ಯಾಣ! ನಿನ್ನ ನಿವಾಸಸ್ಥಾನವು ಎಲ್ಲಿದೆ? ನಿನ್ನ ಪತ್ನಿಯು ಯಾವ ಗೋತ್ರದವಳು? ಸರಿಯಾಗಿ ಹೇಳು. ಭಯಪಡಬೇಡ. ವಿಶ್ರಮಿಸಿ ಯಥಾಸುಖವಾಗಿ ಹೇಳು.”

12165005 ಗೌತಮ ಉವಾಚ|
12165005a ಮಧ್ಯದೇಶಪ್ರಸೂತೋಽಹಂ ವಾಸೋ ಮೇ ಶಬರಾಲಯೇ|
12165005c ಶೂದ್ರಾ ಪುನರ್ಭೂರ್ಭಾರ್ಯಾ ಮೇ ಸತ್ಯಮೇತದ್ಬ್ರವೀಮಿ ತೇ॥

ಗೌತಮನು ಹೇಳಿದನು: “ನಾನು ಮಧ್ಯದೇಶದಲ್ಲಿ ಹುಟ್ಟಿದವನು. ವಾಸಿಸುವುದು ಶಬರಾಲಯದಲ್ಲಿ. ಮತ್ತೆ ನನ್ನ ಭಾರ್ಯೆಯು ಶೂದ್ರಳು. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ.””

12165006 ಭೀಷ್ಮ ಉವಾಚ|
12165006a ತತೋ ರಾಜಾ ವಿಮಮೃಶೇ ಕಥಂ ಕಾರ್ಯಮಿದಂ ಭವೇತ್|
12165006c ಕಥಂ ವಾ ಸುಕೃತಂ ಮೇ ಸ್ಯಾದಿತಿ ಬುದ್ಧ್ಯನ್ವಚಿಂತಯತ್॥

ಭೀಷ್ಮನು ಹೇಳಿದನು: “ಆಗ ಈಗ ಹೇಗೆ ಕಾರ್ಯನಿರ್ವಹಿಸಬೇಕು ಎಂದು ರಾಜನು ವಿಮರ್ಶಿಸಿದನು. ನನಗೆ ಪುಣ್ಯವು ಹೇಗೆ

---

869 ವಿಶ್ವಸಸ್ವ (ಗೀತಾ ಪ್ರೆಸ್).

ಪ್ರಾಪ್ತವಾಗಬಲ್ಲದು ಎಂದು ಬುದ್ಧಿಪೂರ್ವಕವಾಗಿ ಯೋಚಿಸಿದನು.

12165007a ಅಯಂ ವೈ ಜನನಾದ್ವಿಪ್ರಃ ಸುಹೃತ್ತಸ್ಯ ಮಹಾತ್ಮನಃ|
12165007c ಸಂಪ್ರೇಷಿತಶ್ಚ ತೇನಾಯಂ ಕಾಶ್ಯಪೇನ ಮಮಾಂತಿಕಮ್||
12165008a ತಸ್ಯ ಪ್ರಿಯಂ ಕರಿಷ್ಯಾಮಿ ಸ ಹಿ ಮಾಮಾಶ್ರಿತಃ ಸದಾ|
12165008c ಭ್ರಾತಾ ಮೇ ಬಾಂಧವಶ್ಚಾಸೌ ಸಖಾ ಚ ಹೃದಯಂಗಮಃ||

“ಜನ್ಮದಿಂದ ಇವನು ವಿಪ್ರನು ಮತ್ತು ಆ ಮಹಾತ್ಮಾ ರಾಜಧರ್ಮನ ಸಖನು. ಆ ಕಶ್ಯಪಕುಮಾರನೇ ಇವನನ್ನು ನನ್ನಲ್ಲಿಗೆ ಕಳುಹಿಸಿದ್ದಾನೆ. ಅದುದರಿಂದ ಅವನ ಪ್ರಿಯಕಾರ್ಯವನ್ನು ಅವಶ್ಯ ಮಾಡುತ್ತೇನೆ. ಅವನು ಸದಾ ನನ್ನ ಮೇಲೆ ಭರವಸೆಯನ್ನಿಟ್ಟಿದ್ದಾನೆ ಮತ್ತು ಅವನು ನನ್ನ ಭ್ರಾತಾ, ಬಾಂಧವ ಮತ್ತು ಹಾರ್ದಿಕ ಮಿತ್ರನೂ ಹೌದು.

12165009a ಕಾರ್ತ್ತಿಕ್ಯಾಮದ್ಯ ಭೋಕ್ತಾರಃ ಸಹಸ್ರಂ ಮೇ ದ್ವಿಜೋತ್ತಮಾಃ|
12165009c ತತ್ರಾಯಮಪಿ ಭೋಕ್ತಾ ವೈ ದೇಯಮಸ್ಮೈ ಚ ಮೇ ಧನಮ್[870]||

ಇಂದು ಕಾರ್ತೀಕ ಪೂರ್ಣಿಮೆ. ಇಂದು ಸಹಸ್ರಾರು ದಿಜೋತ್ತಮರು ನನ್ನಲ್ಲಿ ಭೋಜನ ಮಾಡುತ್ತಾರೆ. ಅವರೊಂದಿಗೆ ಇವನೂ ಕೂಡ ಇಲ್ಲಿ ಭೋಜನ ಮಾಡುತ್ತಾನೆ. ಅವರಂತೆ ಇವನಿಗೂ ಕೂಡ ಧನವನ್ನು ನೀಡಿದರಾಯಿತು.”

12165010a ತತಃ ಸಹಸ್ರಂ ವಿಪ್ರಾಣಾಂ ವಿದುಷಾಂ ಸಮಲಂಕೃತಮ್|
12165010c ಸ್ನಾತಾನಾಮನುಸಂಪ್ರಾಪ್ತಮಹತಕ್ಷೌಮವಾಸಸಾಮ್||

---

870 ಇದರ ನಂತರ ಈ ಒಂದು ಅಧಿಕ ಶ್ಲೋಕವಿದೆ: ಸ ಚಾದ್ಯ ದಿವಸಃ ಪುಣ್ಯೋ ಹ್ಯತಿಥಿಶ್ಚಾಯಮಾಗತಃ| ಸಂಕಲ್ಪಿತಂಚೈವ ಧನಂ ಕಿಂ ವಿಚಾರ್ಯಮತಃ ಪರಂ|| (ಗೀತಾ ಪ್ರೆಸ್).

ಆಗ ಅಲ್ಲಿಗೆ ಸಹಸ್ರಾರು ವಿದ್ವಾಂಸ ವಿಪ್ರರು ಸ್ನಾನಮಾಡಿ ರೇಷ್ಮೆ ವಸ್ತ್ರಗಳನ್ನುಟ್ಟು ಅಲಂಕಾರಮಾಡಿಕೊಂಡು ಅಲ್ಲಿಗೆ ಆಗಮಿಸಿದರು.

12165011a ತಾನಾಗತಾನ್ದ್ವಿಜಶ್ರೇಷ್ಠಾನ್ವಿರೂಪಾಕ್ಷೋ ವಿಶಾಂ ಪತೇ|
12165011c ಯಥಾರ್ಹಂ ಪ್ರತಿಜಗ್ರಾಹ ವಿಧಿದೃಷ್ಟೇನ ಕರ್ಮಣಾ||

ವಿಶಾಂಪತೇ! ಆಗಮಿಸಿದ ಆ ದ್ವಿಜಶ್ರೇಷ್ಠರನ್ನು ವಿರೂಪಾಕ್ಷನು ಯಥಾರ್ಹವಾಗಿ ವಿಧಿಪೂರ್ವಕವಾಗಿ ಸ್ವಾಗತಿಸಿ ಸತ್ಕರಿಸಿದನು.

12165012a ಬೃಸ್ಯಸ್ತೇಷಾಂ ತು ಸಂನ್ಯಸ್ತಾ ರಾಕ್ಷಸೇಂದ್ರಸ್ಯ ಶಾಸನಾತ್|
12165012c ಭೂಮೌ ವರಕುಥಾಸ್ತೀರ್ಣಾಃ[871] ಪ್ರೇಷ್ಯೈರ್ಭರತಸತ್ತಮ||

ಭರತಸತ್ತಮ! ರಾಕ್ಷಸೇಂದ್ರನ ಆಜ್ಞೆಯಂತೆ ಸೇವಕರು ಅಲ್ಲಿ ನೆಲದ ಮೇಲೆ ಕುಶದ ಶ್ರೇಷ್ಠ ಆಸನಗಳನ್ನು ಹಾಸಿದರು.

12165013a ತಾಸು ತೇ ಪೂಜಿತಾ ರಾಜ್ಞಾ ನಿಷಣ್ಣಾ ದ್ವಿಜಸತ್ತಮಾಃ|
[872]12165013c ವ್ಯರಾಜಂತ ಮಹಾರಾಜ ನಕ್ಷತ್ರಪತಯೋ ಯಥಾ||

ಮಹಾರಾಜ! ಕುಳಿತುಕೊಂಡ ದ್ವಿಜಸತ್ತಮರನ್ನು ಪೂಜಿಸಿದ ರಾಜನು ಆಗ ನಕ್ಷತ್ರಪತಿ ಚಂದ್ರನಂತೆ ಕಂಗೊಳಿಸುತ್ತಿದ್ದನು.

12165014a ತತೋ ಜಾಂಬೂನದಾಃ ಪಾತ್ರೀರ್ವಜ್ರಾಂಕಾ ವಿಮಲಾಃ ಶುಭಾಃ|

---

[871] ವರಕುಶಾಃ ಸ್ತೀರ್ಣಾಃ (ಗೀತಾ ಪ್ರೆಸ್).

[872] ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ:
ತಿಲದರ್ಭೋದಕವಿನಾಥ ಅರ್ಚಿತಾ ವಿಧಿವದ್ದ್ವಿಜಾಃ| ವಿಶ್ವೇದೇವಾಃ ಸಪಿತರಃ ಸಾಗ್ನಯಶ್ಚೋಪಕಲ್ಪಿತಾಃ| ವಿಲಿಪ್ತಾಃ ಪುಶ್ಪವಂತಶ್ಚ ಸುಪ್ರಚಾರಾಃ ಸುಪೂಜಿತಾಃ|| (ಗೀತಾ ಪ್ರೆಸ್).

12165014c ವರಾನ್ನಪೂರ್ಣಾ ವಿಪ್ರೇಭ್ಯಃ ಪ್ರಾದಾನ್ಮಧುಘೃತಾಪ್ಲುತಾಃ||

ಅನಂತರ ಅವನು ವಜ್ರಗಳನ್ನು ಹುದುಗಿಸಿದ್ದ ಬಂಗಾರದ ಸ್ವಚ್ಛ ಸುಂದರ ತಟ್ಟೆಗಳಲ್ಲಿ ತುಪ್ಪದಿಂದ ತಯಾರಿಸಿದ್ದ ಸಿಹಿಭಕ್ಷ್ಯವನ್ನು ಇಟ್ಟು ಬ್ರಾಹ್ಮಣರಿಗೆ ನೀಡಿದನು.

12165015a ತಸ್ಯ ನಿತ್ಯಂ ತಥಾಷಾಢ್ಯಾಂ ಮಾಘ್ಯಾಂ ಚ ಬಹವೋ ದ್ವಿಜಾಃ|
12165015c ಈಪ್ಸಿತಂ ಭೋಜನವರಂ ಲಭಂತೇ ಸತ್ಕೃತಂ ಸದಾ||

ಅವನಲ್ಲಿ ನಿತ್ಯವೂ ಆಷಾಢ ಮತ್ತು ಮಾಘಮಾಸಗಳ ಪೂರ್ಣಿಮೆಗಳಂದು ಅನೇಕ ದ್ವಿಜರು ಸತ್ಕಾರಪೂರ್ವಕ ತಮ್ಮ ಇಚ್ಛಾನುಸಾರವಾಗಿ ಉತ್ತಮ ಭೋಜನವನ್ನು ಮಾಡುತ್ತಿದ್ದರು.

12165016a ವಿಶೇಷತಸ್ತು ಕಾರ್ತಿಕ್ಯಾಂ ದ್ವಿಜೇಭ್ಯಃ ಸಂಪ್ರಯಚ್ಚತಿ|
12165016c ಶರದ್ವ್ಯುಪಾಯೇ ರತ್ನಾನಿ ಪೌರ್ಣಮಾಸ್ಯಾಮಿತಿ ಶ್ರುತಿಃ||

ವಿಶೇಷವಾಗಿ ಕಾರ್ತಿಕ ಪೂರ್ಣಿಮೆಯಂದು ಶರದೃತುವು ಸಮಾಪ್ತವಾಗುವಾಗ ಅವನು ಬ್ರಾಹ್ಮಣರಿಗೆ ರತ್ನಗಳ ದಾನ ನೀಡುತ್ತಿದ್ದನು ಎಂದು ಕೇಳಿದ್ದೇವೆ.

12165017a ಸುವರ್ಣಂ ರಜತಂ ಚೈವ ಮಣೀನಥ ಚ ಮೌಕ್ತಿಕಮ್|
12165017c ವಜ್ರಾಣ್ಯಹಾಧನಾಂಶ್ಚೈವ ವೈಡೂರ್ಯಾಜಿನರಾಂಕವಾನ್||
12165018a ರತ್ನರಾಶೀನ್ವಿನಿಕ್ಷಿಪ್ಯ ದಕ್ಷಿಣಾರ್ಥೇ ಸ ಭಾರತ|
12165018c ತತಃ ಪ್ರಾಹ ದ್ವಿಜಶ್ರೇಷ್ಠಾನ್ವಿರೂಪಾಕ್ಷೋ ಮಹಾಯಶಾಃ||
12165019a ಗೃಹ್ಣೀತ ರತ್ನಾನ್ಯೇತಾನಿ ಯಥೋತ್ಸಾಹಂ ಯಥೇಷ್ಟತಃ|
12165019c ಯೇಷು ಯೇಷು ಚ ಭಾಂಡೇಷು ಭುಕ್ತಂ ವೋ ದ್ವಿಜಸತ್ತಮಾಃ|
12165019e ತಾನ್ಯೇವಾದಾಯ ಗಚ್ಚಧ್ವಂ ಸ್ವವೇಶ್ಮಾನೀತಿ ಭಾರತ||

ಭಾರತ! ಭೋಜನಾನಂತರ ಬ್ರಾಹ್ಮಣರ ಸಮಕ್ಷಮದಲ್ಲಿ ಅನೇಕ ಚಿನ್ನ, ಬೆಳ್ಳಿ, ಮಣಿ, ಮುತ್ತು, ಬಹುಮೂಲ್ಯ ವಜ್ರ, ವೈಡೂರ್ಯ, ರಂಕುಮೃಗದ ಚರ್ಮ ಮತ್ತು ರತ್ನಗಳ ರಾಶಿಗಳನ್ನು ಮಾಡಿ ಮಹಾಬಲಿ ವಿರೂಪಾಕ್ಷನು ಆ ಶ್ರೇಷ್ಠ ಬ್ರಾಹ್ಮಣರಿಗೆ ಹೇಳಿದನು: "ದ್ವಿಜವರರೇ! ನೀವು ನಿಮ್ಮ ಇಚ್ಛೆ ಮತ್ತು ಉತ್ಸಾಹಗಳಿಗೆ ತಕ್ಕಂತೆ ಈ ರತ್ನಗಳನ್ನು ತೆಗೆದುಕೊಂಡು ಹೋಗಿ ಮತ್ತು ಯಾವ ಹರಿವಾಣಗಳಲ್ಲಿ ನೀವು ಭೋಜನವನ್ನು ಮಾಡಿದ್ದೀರೋ ಅವುಗಳನ್ನೂ ನಿಮ್ಮ ಮನೆಗಳಿಗೆ ಕೊಂಡೊಯ್ಯಿರಿ."

12165020a ಇತ್ಯುಕ್ತವಚನೇ ತಸ್ಮಿನ್ರಾಕ್ಷಸೇಂದ್ರೇ ಮಹಾತ್ಮನಿ|
12165020c ಯಥೇಷ್ಟಂ ತಾನಿ ರತ್ನಾನಿ ಜಗೃಹುರ್ಬ್ರಾಹ್ಮಣರ್ಷಭಾಃ||

ಮಹಾತ್ಮ ರಾಕ್ಷಸೇಂದ್ರನು ಹೀಗೆ ಹೇಳಲು ಬ್ರಾಹ್ಮರ್ಷಭರು ಯಥೇಷ್ಟ ರತ್ನಗಳನ್ನು ತೆಗೆದುಕೊಂಡು ಹೋದರು.

12165021a ತತೋ ಮಹಾರ್ಹೈಸ್ತೇ ಸರ್ವೇ ರತ್ನೈರಭ್ಯರ್ಚಿತಾಃ ಶುಭೈಃ|
12165021c ಬ್ರಾಹ್ಮಣಾ ಮೃಷ್ಟವಸನಾಃ ಸುಪ್ರೀತಾಃ ಸ್ಮ ತದಾಭವನ್||

ಆಗ ಆ ಮಹಾರ್ಹ ಸುಂದರ ರತ್ನಗಳಿಂದ ಪೂಜಿತರಾದ ಉಜ್ವಲ ವಸ್ತ್ರಧಾರೀ ಬ್ರಾಹ್ಮಣರೆಲ್ಲರೂ ಪ್ರೀತಮನಸ್ಕರಾದರು.

12165022a ತತಸ್ತಾನ್ರಾಕ್ಷಸೇಂದ್ರಶ್ಚ ದ್ವಿಜಾನಾಹ ಪುನರ್ವಚಃ|
12165022c ನಾನಾದಿಗಾಗತಾನ್ರಾಜನ್ರಾಕ್ಷಸಾನ್ ಪ್ರತಿಷಿಧ್ಯ ವೈ||
12165023a ಅಧ್ಯೈಕದಿವಸಂ ವಿಪ್ರಾ ನ ವೋಽಸ್ತೀಹ ಭಯಂ ಕ್ವ ಚಿತ್|
12165023c ರಾಕ್ಷಸೇಭ್ಯಃ ಪ್ರಮೋದಧ್ವಮಿಷ್ಟತೋ ಯಾತ ಮಾಚಿರಮ್||

ರಾಜನ್! ಅನಂತರ ರಾಕ್ಷಸರಾಜ ವಿರೂಪಾಕ್ಷನು ನಾನಾ ದೇಶಗಳಿಂದ

ಬಂದಿದ್ದ ರಾಕ್ಷಸರಿಗೆ ಹಿಂಸೆಯನ್ನು ನಿಷೇಧಿಸಿ ಬ್ರಾಹ್ಮಣರಿಗೆ ಹೇಳಿದನು: "ವಿಪ್ರಗಣವೇ! ಇಂದು ಒಂದು ದಿನ ನಿಮಗೆ ರಾಕ್ಷಸರಿಂದ ಯಾವ ರೀತಿಯ ಭಯವೂ ಇರುವುದಿಲ್ಲ. ಆದುದರಿಂದ ಆನಂದಿಸಿ ಮತ್ತು ಶೀಘ್ರವೇ ನಿಮ್ಮ ಅಭೀಷ್ಟ ಸ್ಥಳಗಳಿಗೆ ಹೊರಟುಹೋಗಿರಿ. ವಿಲಂಬಮಾಡಬೇಡಿ!"

12165024a ತತಃ ಪ್ರದುದ್ರುವುಃ ಸರ್ವೇ ವಿಪ್ರಸಂಘಾಃ ಸಮಂತತಃ|
12165024c ಗೌತಮೋಽಪಿ ಸುವರ್ಣಸ್ಯ ಭಾರಮಾದಾಯ ಸತ್ವರಃ||
12165025a ಕೃಚ್ಛ್ರಾತ್ಸಮುದ್ವಹನ್ವೀರ ನ್ಯಗ್ರೋಧಂ ಸಮುಪಾಗಮತ್|
12165025c ನ್ಯಷೀದಚ್ಚ ಪರಿಶ್ರಾಂತಃ ಕ್ಲಾಂತಶ್ಚ ಕ್ಷುಧಿತಶ್ಚ ಹ||

ಇದನ್ನು ಕೇಳಿ ಎಲ್ಲ ಬ್ರಾಹ್ಮಣ ಸಮುದಾಯವೂ ಎಲ್ಲ ದಿಕ್ಕುಗಳಲ್ಲಿ ಓಡಿ ಹೋಯಿತು. ಗೌತಮನೂ ಕೂಡ ಸುವರ್ಣದ ಭಾರವನ್ನು ಹೊತ್ತು ಅತ್ಯಂತ ಕಷ್ಟದಿಂದ ಎದ್ದೂ ಬಿದ್ದೂ ಬೇಗ ಬೇಗನೆ ನಡೆಯುತ್ತಾ ನ್ಯಗ್ರೋಧ ವೃಕ್ಷವನ್ನು ತಲುಪಿದನು. ಆಯಾಸಗೊಂಡು ಅಲ್ಲಿಯೇ ಕುಳಿತುಕೊಂಡನು. ಅವನು ಹಸಿದಿದ್ದನು ಮತ್ತು ಆಯಾಸಗೊಂಡಿದ್ದನು.

12165026a ತತಸ್ತಮಭ್ಯಗಾದ್ರಾಜನ್ರಾಜಧರ್ಮಾ ಖಗೋತ್ತಮಃ|
12165026c ಸ್ವಾಗತೇನಾಭ್ಯನಂದಚ್ಚ ಗೌತಮಂ ಮಿತ್ರವತ್ಸಲಃ||

ರಾಜನ್! ಆಗ ಅಲ್ಲಿಗೆ ಖಗೋತ್ತಮ ಮಿತ್ರವತ್ಸಲ ರಾಜಧರ್ಮನು ಆಗಮಿಸಿ ಗೌತಮನನ್ನು ಸ್ವಾಗತಿಸಿ ಅಭಿನಂದಿಸಿದನು.

12165027a ತಸ್ಯ ಪಕ್ಷಾಗ್ರವಿಕ್ಷೇಪ್ಯೈಃ ಕ್ಲಮಂ ವ್ಯಪನಯತ್ಖಗಃ|
12165027c ಪೂಜಾಂ ಚಾಪ್ಯಕರೋದ್ಧೀಮಾನ್ಫೋಜನಂ ಚಾಪ್ಯಕಲ್ಪಯತ್||

ಆ ಧೀಮಾನ್ ಪಕ್ಷಿಯು ತನ್ನ ರೆಕ್ಕೆಗಳ ತುದಿಗಳನ್ನು ಚಲಿಸಿ ಅವನಿಗೆ

ಗಾಳಿ ಬೀಸಿ ಅವನ ಎಲ್ಲ ಆಯಾಸವನ್ನೂ ದೂರಮಾಡಿದನು. ಅನಂತರ ಅವನನ್ನು ಪೂಜಿಸಿ ಅವನಿಗೆ ಭೋಜನದ ವ್ಯವಸ್ಥೆಯನ್ನೂ ಮಾಡಿದನು.

12165028a ಸ ಭುಕ್ತವಾನ್ಸುವಿಶ್ರಾಂತೋ ಗೌತಮೋಽಚಿಂತಯತ್ತದಾ|
12165028c ಹಾಟಕಸ್ಯಾಭಿರೂಪಸ್ಯ ಭಾರೋಽಯಂ ಸುಮಹಾನ್ಮಯಾ|
12165028e ಗೃಹೀತೋ ಲೋಭಮೋಹಾದ್ವೈ ದೂರಂ ಚ ಗಮನಂ ಮಮ||

ಊಟಮಾಡಿ ವಿಶ್ರಾಂತಿಪಡೆದ ಗೌತಮನು ಈ ರೀತಿ ಯೋಚಿಸತೊಡಗಿದನು: "ಮೋಹ-ಲೋಭಗಳಿಂದ ನಾನು ಈ ಮಹಾ ಭಾರವಾದ ಸುಂದರ ಚಿನ್ನದ ಗಂಟನ್ನು ಎತ್ತಿಕೊಂಡು ಬಂದೆ! ಇನ್ನೂ ನನಗೆ ಬಹಳ ದೂರ ಹೋಗಬೇಕಾಗಿದೆ.

12165029a ನ ಚಾಸ್ತಿ ಪಥಿ ಭೋಕ್ತವ್ಯಂ ಪ್ರಾಣಸಂಧಾರಣಂ ಮಮ|
12165029c ಕಿಂ ಕೃತ್ವಾ ಧಾರಯೇಯಂ ವೈ ಪ್ರಾಣಾನಿತ್ಯಭ್ಯಚಿಂತಯತ್||

ಮಾರ್ಗದಲ್ಲಿ ನನ್ನ ಪ್ರಾಣಗಳನ್ನು ಉಳಿಸುವಂತೆ ತಿನ್ನಲು ಏನೂ ಎಲ್ಲ. ಏನನ್ನು ಮಾಡಿ ನಾನು ನನ್ನ ಪ್ರಾಣಗಳನ್ನು ಉಳಿಸಿಕೊಳ್ಳಬಲ್ಲೆನು?" ಹೀಗೆ ಅವನು ಚಿಂತಾಮಗ್ನನಾದನು.

12165030a ತತಃ ಸ ಪಥಿ ಭೋಕ್ತವ್ಯಂ ಪ್ರೇಕ್ಷಮಾಣೋ ನ ಕಿಂ ಚನ|
12165030c ಕೃತಘ್ನಃ ಪುರುಷವ್ಯಾಘ್ರ ಮನಸೇದಮಚಿಂತಯತ್||
12165031a ಅಯಂ ಬಕಪತಿಃ ಪಾರ್ಶ್ವೇ ಮಾಂಸರಾಶಿಃ ಸ್ಥಿತೋ ಮಮ|
12165031c ಇಮಂ ಹತ್ವಾ ಗೃಹೀತ್ವಾ ಚ ಯಾಸ್ಯೇಽಹಂ ಸಮಭಿದ್ರುತಮ್||

ಪುರುಷವ್ಯಾಘ್ರ! ಮಾರ್ಗದಲ್ಲಿ ಅವನಿಗೆ ತಿನ್ನಲು ಏನೂ ಇಲ್ಲವೆನ್ನುವುದನ್ನು ಕಂಡ ಆ ಕೃತಘ್ನನು ಮನಸ್ಸಿನಲ್ಲಿಯೇ ಈ ರೀತಿ ಯೋಚಿಸಿದನು: "ಈ ಮಾಂಸರಾಶಿ ಬಕಪತಿಯು ನನ್ನ ಹತ್ತಿರವೇ

ಇದ್ದಾನಲ್ಲಾ! ಇವನನ್ನೇ ಕೊಂದು ತೆಗೆದುಕೊಂಡು ಇಲ್ಲಿಂದ ಬೇಗನೇ ಹೊರಡುತ್ತೇನೆ!””

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕೃತಘ್ನೋಪಾಖ್ಯಾನೇ ಪಂಚಷಷ್ಟ್ಯಧಿಕಶತಮೋಽಧ್ಯಾಯಃ||

ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕೃತಘ್ನೋಪಾಖ್ಯಾನ ಎನ್ನುವ
ನೂರಾಅರವತ್ತೈದನೇ ಅಧ್ಯಾಯವು.

೧೬೬

ಕೃತಘ್ನ ಗೌತಮನು ಮಿತ್ರ ರಾಜಧರ್ಮನನ್ನು ವಧಿಸಿದುದು ಮತ್ತು ರಾಕ್ಷಸರಿಂದ ಅವನ ಹತ್ಯೆ; ಕೃತಘ್ನನ ಮಾಂಸವು ಅಭಕ್ಷ್ಯವೆಂದು ಹೇಳಿದುದು (1-25).

12166001 ಭೀಷ್ಮ ಉವಾಚ|
12166001a ಅಥ ತತ್ರ ಮಹಾರ್ಚಿಷ್ಮಾನಲೋ ವಾತಸಾರಥಿಃ|
12166001c ತಸ್ಯಾವಿದೂರೇ ರಕ್ಷಾರ್ಥಂ ಖಗೇಂದ್ರೇಣ ಕೃತೋಽಭವತ್||

ಭೀಷ್ಮನು ಹೇಳಿದನು: “ಆಗ ಅಲ್ಲಿಯೇ ಸ್ವಲ್ಪ ದೂರದಲ್ಲಿ ಗೌತಮನ ರಕ್ಷಣೆಗಾಗಿ ಖಗೇಂದ್ರನು ಅಗ್ನಿಯನ್ನು ಹೊತ್ತಿಸಿದ್ದನು. ಗಾಳಿಯ ಸಹಾಯದಿಂದ ಆ ಬೆಂಕಿಯು ಕಿಡಿಗಳನ್ನು ಹಾರಿಸುತ್ತಾ ಪ್ರಜ್ವಲಿತವಾಗಿ ಉರಿಯುತ್ತಿತ್ತು.

12166002a ಸ ಚಾಪಿ ಪಾರ್ಶ್ವೇ ಸುಷ್ವಾಪ ವಿಶ್ವಸ್ತೋ ಬಕರಾಟ್ತದಾ|
12166002c ಕೃತಘ್ನಸ್ತು ಸ ದುಷ್ಟಾತ್ಮಾ ತಂ ಜಿಘಾಂಸುರಜಾಗರತ್||

12166003a ತತೋಽಲಾತೇನ ದೀಪ್ತೇನ ವಿಶ್ವಸ್ತಂ ನಿಜಘಾನ ತಮ್|
12166003c ನಿಹತ್ಯ ಚ ಮುದಾ ಯುಕ್ತಃ ಸೋಽನುಬಂಧಂ ನ ದೃಷ್ಟವಾನ್||

ಬಕರಾಜನಾದರೋ ವಿಶ್ವಾಸದಿಂದ ಬೆಂಕಿಯ ಹತ್ತಿರವೇ
ಮಲಗಿಕೊಂಡಿದ್ದನು. ದುಷ್ಟಾತ್ಮಾ ಕೃತಘ್ನನಾದರೋ ಅವನನ್ನು
ಕೊಲ್ಲಲು ಬಯಸಿ ಎದ್ದು ಉರಿಯುತ್ತಿದ್ದ ಕೊಳ್ಳಿಯಿಂದ ವಿಶ್ವಾಸದಿಂದ
ಮಲಗಿದ್ದ ಅವನನ್ನು ಕೊಂದನು. ಅವನನ್ನು ಕೊಂದು
ಸಂತೋಷಗೊಂಡನು. ಅದರಿಂದಾಗಿ ಅವನು ಕಟ್ಟಿಕೊಂಡಿದ್ದ
ಪಾಪವನ್ನು ಅವನು ಕಾಣಲಿಲ್ಲ.

12166004a ಸ ತಂ ವಿಪಕ್ಷರೋಮಾಣಂ ಕೃತ್ವಾಗ್ನಾವಪಚತ್ತದಾ|
12166004c ತಂ ಗೃಹೀತ್ವಾ ಸುವರ್ಣಂ ಚ ಯಯೌ ದ್ರುತತರಂ ದ್ವಿಜಃ||

ಸತ್ತ ಆ ಪಕ್ಷಿಯ ರೆಕ್ಕೆ-ರೋಮಗಳನ್ನು ಸುಲಿದು, ಅಗ್ನಿಯಲ್ಲಿ ಬೇಯಿಸಿ
ಜೊತೆಯಲ್ಲಿ ತೆಗೆದುಕೊಂಡು ಚಿನ್ನದ ಭಾರವನ್ನು ಹೊತ್ತು ಆ
ಬ್ರಾಹ್ಮಣನು ಬೇಗ ಬೇಗನೇ ಅಲ್ಲಿಂದ ಹೊರಟು ಹೋದನು.

[873]12166005a ತತೋಽನ್ಯಸ್ಮಿನ್ಗತೇ ಚಾಹ್ನಿ ವಿರೂಪಾಕ್ಷೋಽಬ್ರವೀತ್ಸುತಮ್|
12166005c ನ ಪ್ರೇಕ್ಷೇ ರಾಜಧರ್ಮಾಣಮದ್ಯ ಪುತ್ರ ಖಿಗೋತ್ತಮಮ್||

ಎರಡನೇ ದಿನವೂ ಕಳೆಯಲು ವಿರೂಪಾಕ್ಷನು ತನ್ನ ಮಗನಿಗೆ

---

[873] ಇದಕ್ಕೆ ಮೊದಲು ಈ ಒಂದು ಅಧಿಕ ಶ್ಲೋಕವಿದೆ: ತತೋ ದಾಕ್ಷಾಯಣೀಪುತ್ರಂ ನಾಗತಂ ತಂ ತು ಭಾರತ| ವಿರೂಪಾಕ್ಷಶ್ಚಿಂತಯನ್ವೈ ಹೃದಯೇನ ವಿದೂಯತಾ|| ಅರ್ಥಾತ್: ಭಾರತ! ಆ ದಿನ ದಾಕ್ಷಾಯಣಿಯ ಪುತ್ರ ರಾಜಧರ್ಮನು ಬರದೇ ಇದ್ದುದನ್ನು ನೋಡು ವಿರೂಪಾಕ್ಷನು ವ್ಯಾಕುಲ ಹೃದಯಿಯಾಗಿ ಚಿಂತಿಸತೊಡಗಿದನು. (ಗೀತಾ ಪ್ರೆಸ್).

ಹೇಳಿದನು: "ಪುತ್ರ! ಖಗೋತ್ತಮ ರಾಜಧರ್ಮನನ್ನು ಇಂದು ಕೂಡ ಕಾಣುತ್ತಿಲ್ಲ.

12166006a ಸ ಪೂರ್ವಸಂಧ್ಯಾಂ ಬ್ರಹ್ಮಾಣಂ ವಂದಿತುಂ ಯಾತಿ ಸರ್ವದಾ|
12166006c ಮಾಂ ಚಾದೃಷ್ಟ್ವಾ ಕದಾ ಚಿತ್ಸ ನ ಗಚ್ಚತಿ ಗೃಹಾನ್ಖಗಃ||

ಆ ಪಕ್ಷಿಯು ಪ್ರತಿದಿನ ಬೆಳಿಗ್ಗೆ ಬ್ರಹ್ಮನನ್ನು ವಂದಿಸಲು ಹೋಗುತ್ತಿದ್ದನು ಮತ್ತು ಅಲ್ಲಿಂದ ಹಿಂದಿರುವಾಗ ನನ್ನನ್ನು ಭೇಟಿಮಾಡದೇ ಮನೆಗೆ ಹೋಗುತ್ತಿರಲಿಲ್ಲ.

12166007a ಉಭೇ ದ್ವಿರಾತ್ರಂ ಸಂಧ್ಯೇ ವೈ ನಾಭ್ಯಗಾತ್ಸ ಮಮಾಲಯಮ್|
12166007c ತಸ್ಮಾನ್ನ ಶುಧ್ಯತೇ ಭಾವೋ ಮಮ ಸ ಜ್ಞಾಯತಾಂ ಸುಹೃತ್||

ಇಂದಿಗೆ ಎರಡು ಸಂಧ್ಯೆಗಳು ಕಳೆದವು. ಆದರೂ ಅವನು ನನ್ನ ಮನೆಗೆ ಬರಲಿಲ್ಲ. ಆದುದರಿಂದ ನನ್ನ ಮನಸ್ಸಿನಲ್ಲಿ ಸಂದೇಹವುಂಟಾಗಿದೆ. ನೀನು ನನ್ನ ಮಿತ್ರನ ಕುರಿತು ತಿಳಿದುಕೊಂಡು ಬಾ.

12166008a ಸ್ವಾಧ್ಯಾಯೇನ ವಿಯುಕ್ತೋ ಹಿ ಬ್ರಹ್ಮವರ್ಚಸವರ್ಜಿತಃ|
12166008c ತಂ ಗತಸ್ತತ್ರ ಮೇ ಶಂಕಾ ಹನ್ಯಾತ್ತಂ ಸ ದ್ವಿಜಾಧಮಃ||

ಆ ದ್ವಿಜಾಧಮನು ಸ್ವಾಧ್ಯಾಯರಹಿತನಾಗಿದ್ದನು ಮತ್ತು ಬ್ರಹ್ಮವರ್ಚಸ್ಸಿನಲ್ಲಿ ಶೂನ್ಯನಾಗಿದ್ದನು. ಅವನ ಮೇಲೆಯೇ ನನ್ನ ಶಂಕೆಯಿದೆ. ಅವನೇ ನನ್ನ ಮಿತ್ರನನ್ನು ಕೊಂದಿರಬಹುದು.

12166009a ದುರಾಚಾರಸ್ತು ದುರ್ಬುದ್ಧಿರಿಂಗಿತೈರ್ಲಕ್ಷಿತೋ ಮಯಾ|
12166009c ನಿಷ್ಕ್ರಿಯೋ ದಾರುಣಾಕಾರಃ ಕೃಷ್ಣೋ ದಸ್ಯುರಿವಾಧಮಃ||

ಲಕ್ಷಣಗಳಿಂದ ಅವನು ನನಗೆ ದುರಾಚಾರಿ ದುರ್ಬುದ್ಧಿ ಮತ್ತು

ದಯಾಹೀನ ಎಂದು ಅನಿಸಿತ್ತು. ಅವನು ಆಕಾರದಲ್ಲಿಯೇ ಅತ್ಯಂತ ಭಯಾನಕ ದುಷ್ಟ ದಸ್ಯುವಿನಂತೆ ಅಧಮನಾಗಿ ಕಾಣುತ್ತಿದ್ದನು.

12166010a ಗೌತಮಃ ಸ ಗತಸ್ತತ್ರ ತೇನೋದ್ವಿಗ್ನಂ ಮನೋ ಮಮ|
12166010c ಪುತ್ರ ಶೀಘ್ರಮಿತೋ ಗತ್ವಾ ರಾಜಧರ್ಮನಿವೇಶನಮ್|
12166010e ಜ್ಞಾಯತಾಂ ಸ ವಿಶುದ್ಧಾತ್ಮಾ ಯದಿ ಜೀವತಿ ಮಾಚಿರಮ್||

ಆ ಗೌತಮನು ಇಲ್ಲಿಂದ ಹೊರಟು ಅಲ್ಲಿಗೇ ಹೋಗಿದ್ದನು. ಆದುದರಿಂದ ನನ್ನ ಮನಸ್ಸು ಉದ್ವಿಗ್ನಗೊಂಡಿದೆ. ಪುತ್ರ! ಶೀಘ್ರವೇ ಇಲ್ಲಿಂದ ರಾಜಧರ್ಮನ ಮನೆಗೆ ಹೋಗು. ಆ ವಿಶುದ್ಧಾತ್ಮನು ಜೀವಂತ ಇದ್ದಾನೋ ಇಲ್ಲವೋ ಎಂದು ತಿಳಿದುಕೊಂಡು ಬಾ. ವಿಲಂಬಮಾಡಬೇಡ.”

12166011a ಸ ಏವಮುಕ್ತಸ್ತ್ವರಿತೋ ರಕ್ಷೋಭಿಃ ಸಹಿತೋ ಯಯೌ|
12166011c ನ್ಯಗ್ರೋಧಂ ತತ್ರ ಚಾಪಶ್ಯತ್ಕಂಕಾಲಂ ರಾಜಧರ್ಮಣಃ||

ಇದನ್ನು ಕೇಳಿ ಅವನು ತ್ವರೆಮಾಡಿ ರಾಕ್ಷಸರೊಂದಿಗೆ ನ್ಯಗ್ರೋಧದ ಬಳಿ ಬಂದನು. ಅಲ್ಲಿ ಅವನು ರಾಜಧರ್ಮನ ರೆಕ್ಕೆಗಳು, ಎಲುಬುಗಳು ಮತ್ತು ಕಾಲುಗಳ ರಾಶಿಯನ್ನು ನೋಡಿದನು.

12166012a ಸ ರುದನ್ನಗಮತ್ಪುತ್ರೋ ರಾಕ್ಷಸೇಂದ್ರಸ್ಯ ಧೀಮತಃ|
12166012c ತ್ವರಮಾಣಃ ಪರಂ ಶಕ್ತ್ಯಾ ಗೌತಮಗ್ರಹಣಾಯ ವೈ||

ರಾಕ್ಷಸೇಂದ್ರನ ಆ ಧೀಮಂತ ಪುತ್ರನು ರೋದಿಸತೊಡಗಿದನು ಮತ್ತು ಪರಮ ಶಕ್ತಿಯಿಂದ ಆ ಗೌತಮನನ್ನು ಹಿಡಿಯಲು ತ್ವರೆಮಾಡಿದನು.

12166013a ತತೋಽವಿದೂರೇ ಜಗೃಹುರ್ಗೌತಮಂ ರಾಕ್ಷಸಾಸ್ತದಾ|

12166013c ರಾಜಧರ್ಮಶರೀರಂ ಚ ಪಕ್ಷಾಸ್ಥಿಚರಣೋಂಯ್ಥಿತಮ್‌||

ಅನಂತರ ಅನತಿದೂರದಲ್ಲಿಯೇ ಆ ರಾಕ್ಷಸರು ಗೌತಮನನ್ನು ಹಿಡಿದರು. ಅವನ ಜೊತೆಯಲ್ಲಿ ರೆಕ್ಕೆ-ಎಲುಬು-ಕಾಲುಗಳಿಲ್ಲದ ರಾಜಧರ್ಮನ ಶರೀರವನ್ನೂ ಹಿಡಿದರು.

12166014a ತಮಾದಾಯಾಥ ರಕ್ಷಾಂಸಿ ದ್ರುತಂ ಮೇರುವ್ರಜಂ ಯಯುಃ|
12166014c ರಾಜ್ಞಶ್ಚ ದರ್ಶಯಾಮಾಸುಃ ಶರೀರಂ ರಾಜಧರ್ಮಣಃ|
12166014e ಕೃತಘ್ನಂ ಪುರುಷಂ ತಂ ಚ ಗೌತಮಂ ಪಾಪಚೇತಸಮ್‌||

ಗೌತಮನನ್ನು ಹಿಡಿದುಕೊಂಡು ಆ ರಾಕ್ಷಸರು ಶೀಘ್ರವೇ ಮೇರುವ್ರಜಕ್ಕೆ ಹೋದರು. ಅಲ್ಲಿ ಅವರು ರಾಜನಿಗೆ ರಾಜಧರ್ಮನ ಮೃತ ಶರೀರವನ್ನು ತೋರಿಸಿದರು ಮತ್ತು ಪಾಪಾಚಾರೀ ಕೃತಘ್ನ ಗೌತಮನನ್ನು ಎದಿರು ನಿಲ್ಲಿಸಿದರು.

12166015a ರುರೋದ ರಾಜಾ ತಂ ದೃಷ್ಟ್ವಾ ಸಾಮಾತ್ಯಃ ಸಪುರೋಹಿತಃ|
12166015c ಆರ್ತನಾದಶ್ಚ ಸುಮಹಾನಭೂತ್ತಸ್ಯ ನಿವೇಶನೇ‌||
12166016a ಸಸ್ತ್ರೀಕುಮಾರಂ ಚ ಪುರಂ ಬಭೂವಾಸ್ವಸ್ಥಮಾನಸಮ್‌|

ಅವನನ್ನು ನೋಡಿ ರಾಜನು ಅಮಾತ್ಯ-ಪುರೋಹಿತರೊಂದಿಗೆ ರೋದಿಸಿದನು. ಅವನ ಮನೆಯಲ್ಲಿ ಸ್ತ್ರೀ-ಕುಮಾರರ ಜೋರಾದ ಆರ್ತನಾದದಿಂದ ಪುರವೇ ಅಸ್ವಸ್ಥಮಾನಸವಾಯಿತು.

12166016c ಅಥಾಬ್ರವೀನ್ನೃಪಃ ಪುತ್ರಂ ಪಾಪೋಽಯಂ ವಧ್ಯತಾಮಿತಿ‌||
12166017a ಅಸ್ಯ ಮಾಂಸೈರಿಮೇ ಸರ್ವೇ ವಿಹರಂತು ಯಥೇಷ್ಟತಃ|
12166017c ಪಾಪಾಚಾರಃ ಪಾಪಕರ್ಮಾ ಪಾಪಾತ್ಮಾ ಪಾಪನಿಶ್ಚಯಃ|
12166017e ಹಂತವ್ಯೋಽಯಂ ಮಮ ಮತಿರ್ಭವದ್ಭಿರಿತಿ ರಾಕ್ಷಸಾಃ‌||

ಆಗ ಆ ನೃಪನು ತನ್ನ ಮಗನಿಗೆ ಈ ಪಾಪಿಯನ್ನು ವಧಿಸು ಎಂದು ಹೇಳಿದನು. "ಇವನ ಮಾಂಸವನ್ನು ಸರ್ವ ರಾಕ್ಷಸರೂ ಯಥೇಷ್ಟವಾಗಿ ಉಪಯೋಗಿಸಲಿ. ರಾಕ್ಷಸರೇ! ಇವನು ಪಾಪಾಚಾರಿ, ಪಾಪಕರ್ಮಿ ಮತ್ತು ಪಾಪಾತ್ಮನು. ಇವನ ಎಲ್ಲ ಸಾಧನಗಳೂ ಪಾಪಮಯವೇ ಆಗಿವೆ. ಆದುದರಿಂದ ನೀವು ಇವನನ್ನು ವಧಿಸಬೇಕು. ಇದು ನನ್ನ ಮತ."

12166018a ಇತ್ಯುಕ್ತಾ ರಾಕ್ಷಸೇಂದ್ರೇಣ ರಾಕ್ಷಸಾ ಘೋರವಿಕ್ರಮಾಃ|
12166018c ನೈಚ್ಚಂತ ತಂ ಭಕ್ಷಯಿತುಂ ಪಾಪಕರ್ಮಾಯಮಿತ್ಯುತ||

ರಾಕ್ಷಸೇಂದ್ರನು ಹೀಗೆ ಹೇಳಲು ಘೋರವಿಕ್ರಮಿ ರಾಕ್ಷಸರು ಆ ಪಾಪಕರ್ಮಿಯನ್ನು ತಿನ್ನಲು ಬಯಸಲಿಲ್ಲ.

12166019a ದಸ್ಯೂನಾಂ ದೀಯತಾಮೇಷ ಸಾಧ್ವದ್ಯ ಪುರುಷಾಧಮಃ|
12166019c ಇತ್ಯೂಚುಸ್ತಂ ಮಹಾರಾಜ ರಾಕ್ಷಸೇಂದ್ರಂ ನಿಶಾಚರಾಃ||
12166020a ಶಿರೋಭಿಶ್ಚ ಗತಾ ಭೂಮಿಮೂಚೂ ರಕ್ಷೋಗಣಾಧಿಪಮ್|
12166020c ನ ದಾತುಮರ್ಹಸಿ ತ್ವಂ ನೋ ಭಕ್ಷಣಾಯಾಸ್ಯ ಕಿಲ್ಬಿಷಮ್||

ಮಹಾರಾಜ! ಆ ನಿಶಾಚರರು ರಾಕ್ಷಸರಾಜನಿಗೆ ಇಂತೆಂದರು: "ಪ್ರಭೋ! ಈ ನರಾಧಮನ ಮಾಂಸವನ್ನು ದಸ್ಯುಗಳಿಗೆ ಕೊಡಬೇಕು. ಇವನ ಪಾಪವನ್ನು ತಿನ್ನಲು ನಮಗೆ ಕೊಡಬೇಡ." ಹೀಗೆ ಸಮಸ್ತ ರಾಕ್ಷಸರೂ ರಾಕ್ಷಸರಾಜನ ಚರಣಗಳಲ್ಲಿ ತಲೆಗಳನ್ನಿಟ್ಟು ಪ್ರಾರ್ಥಿಸಿದರು.

12166021a ಏವಮಸ್ತ್ವಿತಿ ತಾನಾಹ ರಾಕ್ಷಸೇಂದ್ರೋ ನಿಶಾಚರಾನ್|
12166021c ದಸ್ಯೂನಾಂ ದೀಯತಾಮೇಷ ಕೃತಘ್ನೋಽದ್ಯೈವ ರಾಕ್ಷಸಾಃ||

ಇದನ್ನು ಕೇಳಿ ರಾಕ್ಷಸರಾಜನು ಆ ನಿಶಾಚರರಿಗೆ ಹೇಳಿದನು:

“ರಾಕ್ಷಸರೇ! ಹಾಗೆಯೇ ಆಗಲಿ! ಈ ಕೃತಘ್ನನನ್ನು ಇಂದೇ ದಸ್ಯುಗಳಿಗೆ ನೀಡಬೇಕು!”

12166022a ಇತ್ಯುಕ್ತೇ ತಸ್ಯ ತೇ ದಾಸಾಃ ಶೂಲಮುದ್ಗರಪಾಣಯಃ|
12166022c ಚಿತ್ತ್ವಾ ತಂ ಖಂಡಶಃ ಪಾಪಂ ದಸ್ಯುಭ್ಯಃ ಪ್ರದದುಸ್ತದಾ||

ರಾಜನು ಹೀಗೆ ಹೇಳಲು ಅವನ ದಾಸರು ಶೂಲ-ಮುದ್ಗರಗಳನ್ನು ಹಿಡಿದು ಆ ಪಾಪಿಯನ್ನು ಕಡಿದು ತುಂಡು ತುಂಡು ಮಾಡಿ ದಸ್ಯುಗಳಿಗೆ ನೀಡಿದರು.

12166023a ದಸ್ಯವಶ್ಚಾಪಿ ನೈಚ್ಛಂತ ತಮತ್ತುಂ ಪಾಪಕಾರಿಣಮ್|
12166023c ಕ್ರವ್ಯಾದಾ ಅಪಿ ರಾಜೇಂದ್ರ ಕೃತಘ್ನಂ ನೋಪಭುಂಜತೇ||

ರಾಜೇಂದ್ರ! ಆ ದಸ್ಯುಗಳೂ ಕೂಡ ಆ ಪಾಪಕಾರಿಣಿಯ ಮಾಂಸವನ್ನು ತಿನ್ನಲು ಬಯಸಲಿಲ್ಲ. ಮಾಂಸಾಹಾರೀ ಜೀವಜಂತುಗಳೂ ಕೂಡ ಕೃತಘ್ನನ ಮಾಂಸವನ್ನು ತಿನ್ನುವುದಿಲ್ಲ.

12166024a ಬ್ರಹ್ಮಘ್ನೇ ಚ ಸುರಾಪೇ ಚ ಚೋರೇ ಭಗ್ನವ್ರತೇ ತಥಾ|
12166024c ನಿಷ್ಕೃತಿರ್ವಿಹಿತಾ ರಾಜನ್ ಕೃತಘ್ನೇ ನಾಸ್ತಿ ನಿಷ್ಕೃತಿಃ||

ರಾಜನ್! ಬ್ರಹ್ಮಘ್ನ, ಕುಡುಕ, ಕಳ್ಳ ಮತ್ತು ವ್ರತಭಂಗಮಾಡುವವರಿಗೆ ಶಾಸ್ತ್ರಗಳಲ್ಲಿ ಪ್ರಾಯಶ್ಚಿತ್ತ ವಿಧಿಗಳಿವೆ. ಆದರೆ ಕೃತಘ್ನನಿಗೆ ಉದ್ಧಾರಹೊಂದಲು ಯಾವ ಉಪಾಯವನ್ನೂ ಹೇಳಿಲ್ಲ.

12166025a ಮಿತ್ರದ್ರೋಹೀ ನೃಶಂಸಶ್ಚ ಕೃತಘ್ನಶ್ಚ ನರಾಧಮಃ|
12166025c ಕ್ರವ್ಯಾದ್ಯೈಃ ಕೃಮಿಭಿಶ್ಚಾನ್ಯೈರ್ನ ಭುಜ್ಯಂತೇ ಹಿ ತಾದೃಶಾಃ||

ಮಿತ್ರದ್ರೋಹೀ, ನೃಶಂಸ, ಕೃತಘ್ನ ಮತ್ತು ನರಾಧಮ – ಇಂತಹ

ಮನುಷ್ಯರ ಮಾಂಸವನ್ನು ಮಾಂಸಭಕ್ಷೀ ಜೀವ-ಜಂತುಗಳೂ ಮತ್ತು ಹುಳಗಳೂ ತಿನ್ನುವುದಿಲ್ಲ.”

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕೃತಘ್ನೋಪಾಖ್ಯಾನೇ ಷಷ್ಟ್ಯಧಿಕಶತಮೋಽಧ್ಯಾಯಃ॥

ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕೃತಘ್ನೋಪಾಖ್ಯಾನ ಎನ್ನುವ
ನೂರಾಅರವತ್ತಾರನೇ ಅಧ್ಯಾಯವು.

೧೬೭

ರಾಜಧರ್ಮ ಮತ್ತು ಗೌತಮರು ಪುನಃ ಜೀವಿತರಾಗುವುದು (1-24).

12167001 ಭೀಷ್ಮ ಉವಾಚ|
12167001a ತತಶ್ಚಿತಾಂ ಬಕಪತೇಃ ಕಾರಯಾಮಾಸ ರಾಕ್ಷಸಃ|
12167001c ರತ್ನೈರ್ಗಂಧೈಶ್ಚ ಬಹುಭಿರ್ವಸ್ತ್ರೈಶ್ಚ ಸಮಲಂಕೃತಾಮ್॥

ಭೀಷ್ಮನು ಹೇಳಿದನು: “ಅನಂತರ ವಿರೂಪಾಕ್ಷನು ಬಕರಾಜನಿಗೆ ಒಂದು ಚಿತೆಯನ್ನು ಸಿದ್ಧಗೊಳಿಸಿದನು. ಅದನ್ನು ಅನೇಕ ರತ್ನಗಳಿಂದ, ಸುಗಂಧಿತ ಚಂದನಗಳಿಂದ ಮತ್ತು ವಸ್ತ್ರಗಳಿಂದ ಅಲಂಕರಿಸಲಾಗಿತ್ತು.

12167002a ತತ್ರ ಪ್ರಜ್ವಾಲ್ಯ ನೃಪತೇ ಬಕರಾಜಂ ಪ್ರತಾಪವಾನ್|
12167002c ಪ್ರೇತಕಾರ್ಯಾಣಿ ವಿಧಿವದ್ರಾಕ್ಷಸೇಂದ್ರಶ್ಚಕಾರ ಹ॥

ನೃಪತೇ! ಅದರ ಮೇಲೆ ಬಕರಾಜನನ್ನಿಟ್ಟು ಚಿತೆಯನ್ನು ಪ್ರಜ್ವಲಿಸಿ ಪ್ರತಾಪವಾನ್ ರಾಕ್ಷಸೇಂದ್ರನು ವಿಧಿವತ್ತಾಗಿ ಅವನ ಪ್ರೇತಕಾರ್ಯಗಳನ್ನು ನಡೆಸಿದನು.

12167003a ತಸ್ಮಿನ್ಕಾಲೇಽಥ ಸುರಭಿರ್ದೇವೀ ದಾಕ್ಷಾಯಣೀ ಶುಭಾ|
12167003c ಉಪರಿಷ್ಟಾತ್ತತಸ್ತಸ್ಯ ಸಾ ಬಭೂವ ಪಯಸ್ವಿನೀ||

ಆ ಸಮಯದಲ್ಲಿ ದಿವ್ಯ ಧೇನು ದಕ್ಷಕನ್ಯೆ ಸುರಭಿಯು ಅಲ್ಲಿಗೆ ಬಂದು ಆಕಾಶದಲ್ಲಿ ನೇರವಾಗಿ ಚಿತೆಯ ಮೇಲೆ ನಿಂತುಕೊಂಡಳು.

12167004a ತಸ್ಯಾ ವಕ್ತ್ರಾಚ್ಚ್ಯುತಃ ಫೇನಃ ಕ್ಷೀರಮಿಶ್ರಸ್ತದಾನಘ|
12167004c ಸೋಽಪತದ್ವೈ ತತಸ್ತಸ್ಯಾಂ ಚಿತಾಯಾಂ ರಾಜಧರ್ಮಣಃ||

ಅವಳ ಮುಖದಿಂದ ಬಿದ್ದ ಧೂಮಮಿಶ್ರಿತ ಹಾಲಿನ ನೊರೆಯು ಕೆಳಗೆ ಬಿದ್ದು ರಾಜಧರ್ಮನ ಚಿತೆಯ ಮೇಲೆ ಬಿದ್ದಿತು.

12167005a ತತಃ ಸಂಜೀವಿತಸ್ತೇನ ಬಕರಾಜಸ್ತದಾನಘ|
12167005c ಉತ್ಪತ್ಯ ಚ ಸಮೇಯಾಯ ವಿರೂಪಾಕ್ಷಂ ಬಕಾಧಿಪಃ||

ಅನಘ! ಅದರಿಂದ ಆಗ ಬಕರಾಜನು ಜೀವಿತಗೊಂಡು ಮೇಲೆದ್ದನು ಮತ್ತು ವಿರೂಪಾಕ್ಷನನ್ನು ಕೂಡಿದನು.

12167006a ತತೋಽಭ್ಯಯಾದ್ದೇವರಾಜೋ ವಿರೂಪಾಕ್ಷಪುರಂ ತದಾ|
12167006c ಪ್ರಾಹ ಚೇದಂ ವಿರೂಪಾಕ್ಷಂ ದಿಷ್ಟ್ಯಾ ಯಂ ಜೀವತೀತ್ಯುತ||

ಆಗ ದೇವರಾಜ ಇಂದ್ರನು ವಿರೂಪಾಕ್ಷನ ಪುರಕ್ಕೆ ಬಂದನು ಮತ್ತು ವಿರೂಪಾಕ್ಷನಿಗೆ ಹೇಳಿದನು: "ಅದೃಷ್ಟವಶಾತ್ ನಿನ್ನಿಂದಾಗಿ ಬಕರಾಜನು ಜೀವಿತನಾದನು."

12167007a ಶ್ರಾವಯಾಮಾಸ ಚೇಂದ್ರಸ್ತಂ ವಿರೂಪಾಕ್ಷಂ ಪುರಾತನಮ್|
12167007c ಯಥಾ ಶಾಪಃ ಪುರಾ ದತ್ತೋ ಬ್ರಹ್ಮಣಾ ರಾಜಧರ್ಮಣಃ||

ಇಂದ್ರನು ಆಗ ವಿರೂಪಾಕ್ಷನಿಗೆ ಹಿಂದೆ ರಾಜಧರ್ಮನಿಗೆ ಬ್ರಹ್ಮನಿತ್ತಿದ್ದ

ಶಾಪದ ಘಟನೆಯನ್ನು ಹೇಳಿದನು.

12167008a ಯದಾ ಬಕಪತೀ ರಾಜನ್ ಬ್ರಹ್ಮಾಣಂ ನೋಪಸರ್ಪತಿ|
12167008c ತತೋ ರೋಷಾದಿದಂ ಪ್ರಾಹ ಬಕೇಂದ್ರಾಯ ಪಿತಾಮಹಃ||

ರಾಜನ್! ಒಮ್ಮೆ ಬಕರಾಜನು ಬ್ರಹ್ಮಸಭೆಯಲ್ಲಿ ಉಪಸ್ಥಿತನಾಗಿರಲಿಲ್ಲ. ಆಗ ಪಿತಾಮಹನು ರೋಷದಿಂದ ಬಕೇಂದ್ರನಿಗೆ ಹೀಗೆ ಹೇಳಿದ್ದನು:

12167009a ಯಸ್ಮಾನ್ಮೂಢೋ ಮಮ ಸದೋ ನಾಗತೋಽಸೌ ಬಕಾಧಮಃ|
12167009c ತಸ್ಮಾದ್ವಧಂ ಸ ದುಷ್ಟಾತ್ಮಾ ನಚಿರಾತ್ಸಮವಾಪ್ಸ್ಯತಿ||

“ಆ ಮೂರ್ಖ ಬಕಾಧಮನು ನನ್ನ ಸಭೆಗೆ ಬರಲಿಲ್ಲ. ಆದುದರಿಂದ ಶೀಘ್ರವೇ ಆ ದುಷ್ಟಾತ್ಮನಿಗೆ ವಧೆಯ ಕಷ್ಟವನ್ನು ಅನುಭವಿಸಬೇಕಾಗುತ್ತದೆ!”

12167010a ತದಾಯಂ ತಸ್ಯ ವಚನಾನ್ನಿಹತೋ ಗೌತಮೇನ ವೈ|
12167010c ತೇನೈವಾಮೃತಸಿಕ್ತಶ್ಚ ಪುನಃ ಸಂಜೀವಿತೋ ಬಕಃ||

ಬ್ರಹ್ಮನ ಆ ಮಾತಿನಂತೆಯೇ ಗೌತಮನು ಅವನನ್ನು ವಧಿಸಿದನು ಮತ್ತು ಬ್ರಹ್ಮನು ಪುನಃ ಅಮೃತವನ್ನು ಸಿಂಪಡಿಸಿ ರಾಜಧರ್ಮನಿಗೆ ಜೀವದಾನವನ್ನು ನೀಡಿದನು.

12167011a ರಾಜಧರ್ಮಾ ತತಃ ಪ್ರಾಹ ಪ್ರಣಿಪತ್ಯ ಪುರಂದರಮ್|
12167011c ಯದಿ ತೇಽನುಗ್ರಹಕೃತಾ ಮಯಿ ಬುದ್ಧಿಃ ಪುರಂದರ|
12167011e ಸಖಾಯಂ ಮೇ ಸುದಯಿತಂ ಗೌತಮಂ ಜೀವಯೇತ್ಯುತ||

ಆಗ ರಾಜಧರ್ಮನು ಪುರಂದರನನ್ನು ನಮಸ್ಕರಿಸಿ ಹೇಳಿದನು: “ಪುರಂದರ! ನನ್ನಮೇಲೆ ಅನುಗ್ರಹವನ್ನು ಮಾಡುವ ಬುದ್ಧಿಯಿದ್ದರೆ

ನನ್ನ ಪ್ರೀತಿಯ ಸಖಿ ಗೌತಮನು ಜೀವಿಸಲಿ!”

12167012a ತಸ್ಯ ವಾಕ್ಯಂ ಸಮಾಜ್ಞಾಯ ವಾಸವಃ ಪುರುಷರ್ಷಭ|
12167012c ಸಂಜೀವಯಿತ್ವಾ ಸಖ್ಯೇ ವೈ ಪ್ರಾದಾತ್ತಂ ಗೌತಮಂ ತದಾ||

ಪುರುಷರ್ಷಭ! ಅವನ ಮಾತನ್ನು ತಿಳಿದ ವಾಸವನು ಗೌತಮನನ್ನು ಪುನಃ ಜೀವಗೊಳಿಸಿ ಸಖಿನಿಗಿತ್ತನು.

12167013a ಸಭಾಂಡೋಪಸ್ಕರಂ ರಾಜಂಸ್ತಮಾಸಾದ್ಯ ಬಕಾಧಿಪಃ|
12167013c ಸಂಪರಿಷ್ವಜ್ಯ ಸುಹೃದಂ ಪ್ರೀತ್ಯಾ ಪರಮಯಾ ಯುತಃ||

ರಾಜನ್! ಪಾತ್ರೆಗಳು ಮತ್ತು ಸುವರ್ಣ ಮೊದಲಾದ ಎಲ್ಲ ಸಾಮಾಗ್ರಿಸಹಿತ ಪ್ರಿಯ ಸುಹೃದ ಗೌತಮನನ್ನು ಪಡೆದ ಬಕರಾಜನು ಅತ್ಯಂತ ಪ್ರೇಮದಿಂದ ಅವನನ್ನು ಹೃದಯಪೂರ್ವಕವಾಗಿ ಆಲಂಗಿಸಿದನು.

12167014a ಅಥ ತಂ ಪಾಪಕರ್ಮಾಣಂ ರಾಜಧರ್ಮಾ ಬಕಾಧಿಪಃ|
12167014c ವಿಸರ್ಜಯಿತ್ವಾ ಸಧನಂ ಪ್ರವಿವೇಶ ಸ್ವಮಾಲಯಮ್||

ಆಗ ಬಕರಾಜ ರಾಜಧರ್ಮನು ಆ ಪಾಪಚಾರಿಯನ್ನು ಧನಸಹಿತ ಬೀಳ್ಕೊಟ್ಟು ತನ್ನ ಮನೆಯನ್ನು ಪ್ರವೇಶಿಸಿದನು.

12167015a ಯಥೋಚಿತಂ ಚ ಸ ಬಕೋ ಯಯೌ ಬ್ರಹ್ಮಸದಸ್ತದಾ|
12167015c ಬ್ರಹ್ಮಾ ಚ ತಂ ಮಹಾತ್ಮಾನಮಾತಿಥ್ಯೇನಾಭ್ಯಪೂಜಯತ್||

ನಂತರ ಬಕನು ಯಥೋಚಿತವಾಗಿ ಬ್ರಹ್ಮಸದನಕ್ಕೆ ಹೋದನು. ಬ್ರಹ್ಮನೂ ಕೂಡ ಆ ಮಹಾತ್ಮನ ಅತಿಥಿಸತ್ಕಾರವನ್ನು ನಡೆಸಿದನು.

12167016a ಗೌತಮಶ್ಚಾಪಿ ಸಂಪ್ರಾಪ್ಯ ಪುನಸ್ತಂ ಶಬರಾಲಯಮ್|

12167016c ಶೂದ್ರ್ಯಾಯಾಂ ಜನಯಾಮಾಸ ಪುತ್ರಾನ್ ದುಷ್ಕೃತಕಾರಿಣಃ||

ಗೌತಮನೂ ಕೂಡ ಶಬರಾಲಯಕ್ಕೆ ಹೋಗಿ ಪುನಃ ಅಲ್ಲಿಯೇ ವಾಸಿಸತೊಡಗಿದನು. ಅಲ್ಲಿ ಅವನು ಶೂದ್ರಕನ್ಯೆಯಲ್ಲಿಯೇ ಪಾಪಚಾರೀ ಪುತ್ರರನ್ನು ಹುಟ್ಟಿಸಿದನು.

12167017a ಶಾಪಶ್ಚ ಸುಮಹಾಂಸ್ತಸ್ಯ ದತ್ತಃ ಸುರಗಣೈಸ್ತದಾ|
12167017c ಕುಕ್ಷೌ ಪುನರ್ಭ್ರಾಂ ಭಾರ್ಯಾಯಾಂ ಜನಯಿತ್ವಾ ಚಿರಾತ್ಸುತಾನ್|
12167017e ನಿರಯಂ ಪ್ರಾಪ್ಸ್ಯತಿ ಮಹತ್ ಕೃತಘ್ನೋಽಯಮಿತಿ ಪ್ರಭೋ||

ಆಗ ಸುರಗಣಗಳು ಗೌತಮನಿಗೆ ಮಹಾ ಶಾಪವನ್ನಿತ್ತರು: "ಇವನು ಕೃತಘ್ನನು. ಇತರ ಪತಿಗಳನ್ನು ಸ್ವೀಕರಿಸುವ ಶೂದ್ರಕನ್ಯೆಯ ಹೊಟ್ಟೆಯಲ್ಲಿ ಅನೇಕ ಸಮಯದವರೆಗೆ ಪುತ್ರರನ್ನು ಹುಟ್ಟಿಸುತ್ತಿದ್ದಾನೆ. ಈ ಪಾಪದ ಕಾರಣದಿಂದ ಇವನು ನರಕದಲ್ಲಿ ಬೀಳುತ್ತಾನೆ."

12167018a ಏತತ್ಪ್ರಾಹ ಪುರಾ ಸರ್ವಂ ನಾರದೋ ಮಮ ಭಾರತ|
12167018c ಸಂಸ್ಮೃತ್ಯ ಚಾಪಿ ಸುಮಹದಾಖ್ಯಾನಂ ಪುರುಷರ್ಷಭ|
12167018e ಮಯಾಪಿ ಭವತೇ ಸರ್ವಂ ಯಥಾವದುಪವರ್ಣಿತಮ್||

ಭಾರತ! ಇವೆಲ್ಲವನ್ನೂ ಹಿಂದೆ ನನಗೆ ನಾರದನು ಹೇಳಿದನು. ಪುರುಷರ್ಷಭ! ಈ ಸುಮಹದಾಖ್ಯಾನವನ್ನು ನೆನಪಿಸಿಕೊಂಡು ನಿನಗೆ ಯಥಾವತ್ತಾಗಿ ಸರ್ವವನ್ನೂ ಹೇಳಿದ್ದೇನೆ.

12167019a ಕುತಃ ಕೃತಘ್ನಸ್ಯ ಯಶಃ ಕುತಃ ಸ್ಥಾನಂ ಕುತಃ ಸುಖಮ್|
12167019c ಅಶ್ರದ್ಧೇಯಃ ಕೃತಘ್ನೋ ಹಿ ಕೃತಘ್ನೇ ನಾಸ್ತಿ ನಿಷ್ಕೃತಿಃ||

ಕೃತಘ್ನನಿಗೆ ಎಲ್ಲಿಯ ಯಶಸ್ಸು? ಅವನಿಗೆ ಹೇಗೆ ಸ್ಥಾನ ಸುಖಗಳು

ದೊರೆಯುತ್ತವೆ? ಕೃತಘ್ನನು ವಿಶ್ವಾಸಕ್ಕೆ ಯೋಗ್ಯನಾಗುವುದಿಲ್ಲ. ಕೃತಘ್ನನ ಉದ್ಧಾರಕ್ಕಾಗಿ ಶಾಸ್ತ್ರಗಳಲ್ಲಿಯೂ ಯಾವ ಪ್ರಾಯಶ್ಚಿತ್ತಗಳೂ ಇಲ್ಲ.

12167020a ಮಿತ್ರದ್ರೋಹೋ ನ ಕರ್ತವ್ಯಃ ಪುರುಷೇಣ ವಿಶೇಷತಃ|
12167020c ಮಿತ್ರಧ್ರುಜ್ನೈರಯಂ ಘೋರಮನಂತಂ ಪ್ರತಿಪದ್ಯತೇ||

ಪುರುಷನು ವಿಶೇಷವಾಗಿ ಮಿತ್ರದ್ರೋಹವನ್ನು ಮಾಡಬಾರದು. ಮಿತ್ರದ್ರೋಹಿಯು ಅನಂತಕಾಲದ ವರೆಗೆ ಘೋರ ನರಕದಲ್ಲಿ ಬೀಳುತ್ತಾನೆ.

12167021a ಕೃತಜ್ಞೇನ ಸದಾ ಭಾವ್ಯಂ ಮಿತ್ರಕಾಮೇನ ಚಾನಘ|
12167021c ಮಿತ್ರಾತ್ ಪ್ರಭವತೇ ಸತ್ಯಂ ಮಿತ್ರಾತ್ ಪ್ರಭವತೇ ಬಲಮ್[874]|
[875]12167021e ಸತ್ಕಾರ್ಯೈರುತ್ತಮೈರ್ಮಿತ್ರಂ ಪೂಜಯೇತ ವಿಚಕ್ಷಣಃ||

ಅನಘ! ಸದಾ ಕೃತಜ್ಞನಾಗಿರಬೇಕು. ಮಿತ್ರನ ಇಚ್ಛೆಯನ್ನರಿಸಿಕೊಂಡಿರಬೇಕು. ಏಕೆಂದರೆ ಮಿತ್ರನಿಂದ ಸರ್ವವೂ ದೊರೆಯುತ್ತದೆ. ಮಿತ್ರನಿಂದ ಬಲವೂ ದೊರೆಯುತ್ತದೆ. ಆದುದರಿಂದ ಬುದ್ಧಿವಂತನು ಉತ್ತಮ ಸತ್ಕಾರಗಳಿಂದ ಮಿತ್ರನನ್ನು ಪೂಜಿಸಬೇಕು.

12167022a ಪರಿತ್ಯಾಜ್ಯೋ ಬುಧೈಃ ಪಾಪಃ ಕೃತಘ್ನೋ ನಿರಪತ್ರಪಃ|
12167022c ಮಿತ್ರದ್ರೋಹೀ ಕುಲಾಂಗಾರಃ ಪಾಪಕರ್ಮಾ ನರಾಧಮಃ||

---

874 ಮಿತ್ರಾತ್ ಪೂಜಾಂ ಲಭೇತ ಚ|| (ಗೀತಾ ಪ್ರೆಸ್).

875 ಇದಕ್ಕೆ ಮೊದಲು ಈ ಒಂದು ಶ್ಲೋಕಾರ್ಧವಿದೆ: ಮಿತ್ರಾದ್ ಭೋಗಾಂಶ್ಚ ಭುಂಜೀತ ಮಿತ್ರೇಣಾಪತ್ಸು ಮುಚ್ಯತೇ| (ಗೀತಾ ಪ್ರೆಸ್).

ಪಾಪಿ, ಕೃತಘ್ನ, ನಿರ್ಲಜ್ಜ, ಮಿತ್ರದ್ರೋಹೀ, ಕುಲಾಂಗಾರ ಮತು
ಪಾಪಕರ್ಮಿ ನರಾಧಮನನ್ನು ವಿದ್ವಾಂಸರು ಸದಾ ಪರಿತ್ಯಜಿಸುತ್ತಾರೆ.

12167023a ಏಷ ಧರ್ಮಭೃತಾಂ ಶ್ರೇಷ್ಠ ಪ್ರೋಕ್ತಃ ಪಾಪೋ ಮಯಾ ತವ|
12167023c ಮಿತ್ರದ್ರೋಹೀ ಕೃತಘ್ನೋ ವೈ ಕಂ ಭೂಯಃ ಶ್ರೋತುಮಿಚ್ಚಸಿ||

ಧರ್ಮಭೃತರಲ್ಲಿ ಶ್ರೇಷ್ಠ! ಹೀಗೆ ನಾನು ನಿನಗೆ ಪಾಪೀ, ಮಿತ್ರದ್ರೋಹೀ
ಕೃತಘ್ನನ ಕುರಿತು ಹೇಳಿದೆ. ಇನ್ನೂ ಏನನ್ನು ಕೇಳಲು
ಬಯಸುತ್ತೀಯೆ?””

12167024 ವೈಶಂಪಾಯನ ಉವಾಚ|
12167024a ಏತಚ್ಛ್ರುತ್ವಾ ತದಾ ವಾಕ್ಯಂ ಭೀಷ್ಮೇಣೋಕ್ತಂ ಮಹಾತ್ಮನಾ|
12167024c ಯುಧಿಷ್ಠಿರಃ ಪ್ರೀತಮನಾ ಬಭೂವ ಜನಮೇಜಯ||

ವೈಶಂಪಾಯನನು ಹೇಳಿದನು: “ಜನಮೇಜಯ! ಮಹಾತ್ಮ
ಭೀಷ್ಮನಾಡಿದ ಈ ಮಾತನ್ನು ಕೇಳಿ ಯುಧಿಷ್ಠಿರನು
ಪ್ರೀತಮನಸ್ಕನಾದನು.”

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಣಿ
ಕೃತಘ್ನೋಪಾಖ್ಯಾನೇ ಸಪ್ತಷಷ್ಟ್ಯಧಿಕಶತಮೋಽಧ್ಯಾಯಃ||
ಇದು ಶ್ರೀಮಹಾಭಾರತದಲ್ಲಿ ಶಾಂತಿಪರ್ವದಲ್ಲಿ
ಆಪದ್ಧರ್ಮಪರ್ವದಲ್ಲಿ ಕೃತಘ್ನೋಪಾಖ್ಯಾನ ಎನ್ನುವ
ನೂರಾಅರವತ್ತೇಳನೇ ಅಧ್ಯಾಯವು.
ಇತಿ ಶ್ರೀ ಮಹಾಭಾರತೇ ಶಾಂತಿಪರ್ವಣಿ ಆಪದ್ಧರ್ಮಪರ್ವಃ|
ಇದು ಶ್ರೀ ಮಹಾಭಾರತದಲ್ಲಿ ಶಾಂತಿಪರ್ವದಲ್ಲಿ

ಆಪದ್ಧರ್ಮಪರ್ವವು|
ಇದೂವರೆಗಿನ ಒಟ್ಟು ಮಹಾಪರ್ವಗಳು – ೧೧/೧೮,
ಉಪಪರ್ವಗಳು-೮೫/೧೦೦, ಅಧ್ಯಾಯಗಳು-೧೪೯೫/೧೯೯೫,
ಶ್ಲೋಕಗಳು-೫೬೦೮೦/೭೩೭೮೪